ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಆಣೆ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71 1 [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಸಂಪುಟ ೧೫] SADHVI : TUESDAY 1—1—1957 ಮೈಸೂರು : ಮಂಗಳವಾರ ೧—೧—೧೯೫೭ [ಸಂಚಿಕೆ : ೧೫೮

ಮಧ್ಯಪ್ರದೇಶದ ಮುಖ್ಯಮಂತ್ರಿ ರವಿಶಂಕರ ಶುಕ್ಲರ ನಿಧನ

೧೫ ಗೆಜೆಟೆಡ್ ಅಧಿಕಾರಿಗಳ ಹುಟ್ಟಿದ ತಾರೀಖಿನಲ್ಲಿ ವ್ಯತ್ಯಾಸ

ವಿಧಾನ ಸಭೆಯಲ್ಲಿ ವಿವರಣೆ

ಬೆಂಗಳೂರು ೧

ವಿಧಾನ ಸಭೆಯಲ್ಲಿ ನೆನ್ನೆ ಶ್ರೀ ಬಿ ಪಿ ನಾಗರಾಜಮೂರ್ತಿಯವರ ಪ್ರಶ್ನೆಗೆ ಮುಖ್ಯ ಸಚಿವರು ಉತ್ತರವನ್ನಿತ್ತು, ೧೯೫೨ರಿಂದೀಚೆಗೆ ೩೧೫ ಗೆಜೆಟೆಡ್ ಅಧಿಕಾರಿಗಳ ಹುಟ್ಟಿದ ತಾರೀಖುಗಳನ್ನು ಬದಲಾಯಿಸಿತೆಂದು ಸೂಚಿಸಿದರು ಜನ್ಮ ಪತ್ರಿಕೆ, ಸ್ಕೂಲಿನ ರಿಜಿಸ್ಟರು ಮುಂತಾದ ಎಲ್ಲಾ ದಾಖಲೆಗಳನ್ನೂ ಪರಿಶೀಲಿಸಿದನಂತರ ಬದಲಾವಣೆ ಮಾಡಲಾಯಿತೆಂದು ಅವರು ಹೇಳಿದರು ಇತರ ಅನೇಕ ಉಪ ಪ್ರಶ್ನೆಗಳಾದುವು ಶ್ರೀ ಚೆನ್ನಿಗರಾಮಯ್ಯನವರು ಉತ್ತರವಿತ್ತರು ಯಾವ ಅಧಿಕಾರಿಗಳು ತಪ್ಪು ತಾರೀಖುಗಳನ್ನು ಕೊಟ್ಟಿರುವರೆಂಬುದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಿಳಿಸಲಾಗುವುದಿಲ್ಲವೆಂದು ಸಚಿವರು ತಿಳಿಸಿದರು

ಮಂತ್ರಿಮಂಡಲದ ನೀತಿಗನುಸಾರವಾಗಿ ಪ್ರತಿಯೊಂದು ವಿಷಯವನ್ನೂ ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತಿರುವುದು, ಹಲವು ಸಂದರ್ಭಗಳಲ್ಲಿ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆ ಹಲವನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆ ಇತರ ವಿದ್ಯಮಾನಗಳಲ್ಲಿ ಪುನರ್ಪರಿಶೀಲನೆಯಾಗುವುವು ಎಂದು ಸಚಿವರು ತಿಳಿಸಿದರು

ಸುಂದರಿ ಕೃಷ್ಣಸ್ವಾಮಿಯವರಿಗೆ ದೆಹಲಿಯಲ್ಲಿ ಹುದ್ದೆ

ಬೆಂಗಳೂರು ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಸುಂದರಿ ಕೃಷ್ಣಸ್ವಾಮಿಯವರು ದೆಹಲಿ ವಿಶ್ವವಿದ್ಯಾಲಯದ ಮಿರಾಂಡಾ ಮಹಿಳಾ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲಾಗಿದೆ ಅವರು ದೆಹಲಿಗೆ ಸಧ್ಯದಲ್ಲೇ ತಮ್ಮ ಪುತ್ರಿಯರೊಡನೆ ತೆರಳಲಿರುವರು

ಬಾವಿಗೆ ಬಿದ್ದು ವಿದ್ಯಾರ್ಥಿಯ ಆತ್ಮಹತ್ಯೆ

[illegible] ರಸ್ತೆಯಲ್ಲಿರುವ ಕ್ಯಾತನಹಳ್ಳಿ [illegible] ಗಯ್ಯನವರ ವಿದ್ಯಾರ್ಥಿ ನಿಲಯದ ಬಾವಿಯಲ್ಲಿ ಮೊನ್ನೆ ನಿಲಯಕ್ಕೆ ಭೋಜನಕ್ಕಾಗಿ ಸೇರಿದ್ದ ಗಂಗಣ್ಣ ಎಂಬ ೨೦ ವರ್ಷದ ತರುಣನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ತಿಳಿದಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಂಗೀತ ೭-೧೫ ಮತ್ತು ೯-೫ ಆರ್ ಗೋಪಾಲ್-ದೇವರ ನಾಮ [illegible] ಪಿ ಪಾಠ ಮಧ್ಯಾಹ್ನ ೧೨ ಸಂಗೀತ [illegible] ರಿಕಾರ್ಡ್. ೧ ಟಿ ಆರ್. ಗೋಪಾಲ [illegible] ಯನ ೧-೫೦ ಸಂಗೀತ ೨-೧೫ ಸಂಗೀತ [illegible] ಸಂಜೆ ೫-೩೦ ಮತ್ತು ೮ ಎಂ [illegible] ನಂಜುಂಡಪ್ಪ-ನಾಗಸ್ವರ ೭-೫ [illegible] ಸಂಗೀತ ೭-೨೦ ರಿಕಾರ್ಡ್, ೭-೩೦ [illegible] ತ್ತು ನಮ್ಮವರು ೮-೩೦ ರಾಷ್ಟ್ರೀಯ ಕಾರ್ಯಕ್ರಮ [illegible] ೯-೫೦ ರಿಕಾರ್ಡ್ ೯-೧೫ ಕೌಸಲ್ಯ [illegible] ರಾಜೇಶ್ವರ್ ಹಿಂದೂಸ್ಥಾನಿ ಸಂಗೀತ

ಉಪಾಧ್ಯಾಯರಿಗೆ ಹೆಚ್ಚು ವೇತನ

ವಿಧಾನ ಸಭೆಯಲ್ಲಿ ವಿದ್ಯಾ ಮಂತ್ರಿಗಳ ಹೇಳಿಕೆ

ಬೆಂಗಳೂರು ೧

ಈ ದಿನದಿಂದ ಸಂಸ್ಥಾನದ ಎಲ್ಲಾ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಲಾಗುವುದೆಂದು ವಿದ್ಯಾ ಮಂತ್ರಿ ಶ್ರೀ [illegible] ಪ್ಪನವರು ವಿಧಾನ ಸಭೆಯಲ್ಲಿ ನೆನ್ನೆ ತಿಳಿಸಿದರು ಮೈಸೂರು ಉಪಾಧ್ಯಾಯರ ಸಂಬಳಗಳು ಬಹಳ ಕಡಿಮೆಯಾಗಿರುವುದೆಂಬ ವಿಷಯವು ಸರ್ಕಾರಕ್ಕೆ ಗೊತ್ತಿರುವುದಾಗಿ ಅವರು ಹೇಳಿದರು

ರವಿಶಂಕರ ಶುಕ್ಲರವರ ನಿಧನ

ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳು

ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳೂ ಹಿರಿಯ ಕಾಂಗ್ರೆಸ್ ನಾಯಕರೂ ಆದ ರವಿಶಂಕರ ಶುಕ್ಲರವರು ನೆನ್ನೆ ಮಧ್ಯಾಹ್ನ ೪ ಗಂಟೆ ಹೊತ್ತಿನಲ್ಲಿ ದೆಹಲಿಯ ಲೋಕಸಭಾ ಸದಸ್ಯ ಪಂಡಿತ ಗೋವಿಂದದಾಸರ ನಿವಾಸದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಮೊನ್ನೆ ಸಂಜೆವರೆಗೂ ಅವರು ಆರೋಗ್ಯವಾಗಿದ್ದರು ಮಧ್ಯ ರಾತ್ರಿಯಲ್ಲಿ ಇನ್‌ಫ್ಲೂಯೆಂಜ ಪರಿಣಾಮವಾಗಿ ವಿಪರೀತ ಜ್ವರ ಬಂದು ನ್ಯೂಮೋನಿಯಾಕೆ ತಿರುಗಿ ಬೆಳಗ್ಗೆ [illegible] ಅವರ ದೇಹಸ್ಥಿತಿಯು ಕೆಟ್ಟಿತು ಅವರು ಮಧ್ಯ ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿಯ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಹೋಗಿದ್ದರು ಅವರ ಕಳೇಬರವನ್ನು ಭೋಪಾಲಿಗೆ ಕೊಂಡಯ್ಯಲಾಗಿದೆ ರಾಷ್ಟ್ರಾಧ್ಯಕ್ಷರೂ, ಕೇಂದ್ರ ಮಂತ್ರಿಗಳಾದ ಪಂತ್ ಮುರಾರ್ಜಿ ದೇಸಾಯ್ ಜಗಜೀವನರಾಂ ಮುಂತಾದವರೂ ಮತ್ತಿತರರೂ ಅವರಿಗೆ ಅಂತ್ಯ ಗೌರವವನ್ನು ಸಲ್ಲಿಸಿದರು ಭೋಪಾಲಿನಲ್ಲಿ ಈ ದಿನ ಪ್ರಭುತ್ವ ಮರ್ಯಾದೆಯೊಡನೆ ಅಂತ್ಯ ಸಂಸ್ಕಾರವನ್ನು ನಡೆಸಲಾಗುವುದು ಅವರಿಗೆ ಪತ್ನಿ, ೬ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುವರು ಮೃತರಿಗೆ ೮೦ ವರ್ಷ ವಯಸ್ಸು

ದಕ್ಷಿಣ ಸುಮಾತ್ರಾದಲ್ಲಿ ಯುದ್ಧ ಪರಿಸ್ಥಿತಿಯ ಘೋಷಣೆ

ದಕ್ಷಿಣ ಸುಮಾತ್ರಾದಲ್ಲಿ ಯುದ್ಧ ಮತ್ತು ಮುತ್ತಿಗೆ ಪರಿಸ್ಥಿತಿಯುಂಟಾಗಿರುವುದೆಂದು ಇಂಡೋನೇಷ್ಯಾ ಅಧ್ಯಕ್ಷ ಸುಕರ್ನೋರವರು ಘೋಷಣೆ ಹೊರಡಿಸಿರುವುದಾಗಿ ವರದಿಯಾಗಿದೆ

ಅಣು ಬಾಂಬು ಪರೀಕ್ಷೆ ಪ್ರತಿಭಟಿಸಲು ಉಪವಾಸ

ಅಣು ಮತ್ತು ಜಲಜನಕ ಬಾಂಬುಗಳನ್ನು ಪರೀಕ್ಷಾರ್ಥವಾಗಿ ಸಿಡಿಸುವುದನ್ನು ಪ್ರತಿಭಟಿಸಲು ಸ್ವಿಟ್ಸರ್ಲೆಂಡಿನ ಲಾಸೇನ್ ನಗರದಲ್ಲಿ ಫ್ರೆಂಚ್ ದೇಶಸ್ಥ ಆಲ್ಫ್ರೆಡ್ ನತೋರ್ ಎಂಬ ೬೫ ವರ್ಷದ ತತ್ವಜ್ಞಾನಿಯೊಬ್ಬರು ಅಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ ಇದೇ ರೀತಿ ಪಶ್ಚಿಮ ಜರ್ಮನಿಯ ಮ್ಯೂನಿಚ್ ನಗರದಲ್ಲಿ ವಿಲ್ಹೆಂ ವಾನ್ ಆರ್ಬ್‌ಟರ್‌ರವರು ಉಪವಾಸ ಮಾಡುತ್ತಿದ್ದಾರೆ

ಜೂನ್‌ನಲ್ಲಿ ಚೌ ಎನ್ ಲೈ ಮತ್ತು ಐಸೆನ್‌ಹೋವರ್ ಸಮಾಗಮ

ಈ ವರ್ಷದ ಮಧ್ಯ ಭಾಗದಲ್ಲಿ ಬ್ರಿಟನ್ನಿನ ಪ್ರಧಾನಿ ಈಡನ್, ಅಮೆರಿಕದ ಅಧ್ಯಕ್ಷ ಐಸೆನ್‌ಹೋವರ್, ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ಫ್ರೆಂಚ್ ಪ್ರಧಾನಿ ಗೈಮೋಲೆ ಮತ್ತು ಚೀಣದ ಪ್ರಧಾನಿ ಚೌ ಎನ್ ಲೈಯವರ ಭೇಟಿಯಾಗಬಹುದೆಂದು ಲಂಡನ್ನಿನ ವಾರ್ತೆಯೊಂದು ತಿಳಿಸಿದೆ ಪೂರ್ವ ಪಶ್ಚಿಮ ರಾಷ್ಟ್ರಗಳ ನಡುವೆ ತಿಕ್ಕಾಟಕ್ಕೆ ಕಾರಣಗಳನ್ನು ಕಂಡುಹಿಡಿದು ಪರಿಣಾಮಗಳನ್ನು ನಿವಾರಣೆ ಮಾಡುವುದೇ ಭೇಟಿಯ ಉದ್ದಿಷ್ಟವೆಂದೂ ಅದಕ್ಕೆ ಮುಂಚಿತವಾಗಿ ಈಡನ್ ಮತ್ತು ಬುಲ್ಗಾನಿನ್ನರ ಸಂಭಾಷಣೆಯು ಮಾಸ್ಕೋವಿನಲ್ಲಿ ಬರುವ ಏಪ್ರಿಲ್ಲಿನಲ್ಲಿ ಆಗುವುದೆಂದೂ ವರದಿಯಾಗಿದೆ ಈಡನ್ನರು ಇನ್ನೆರಡು ತಿಂಗಳಲ್ಲಿ ಅಮೆರಿಕಾ ಅಧ್ಯಕ್ಷರನ್ನು ಸಂದರ್ಶಿಸುವರು ಸೂಯೆಜ್ ಕಾಲುವೆ ಪ್ರಕರಣವು ತೊಲಗಿ ವಿಶ್ವದ ನಾನಾ ಕಡೆಗಳ ಸಮಸ್ಯೆಗಳು ಅಗ್ರನಾಯಕರುಗಳ ಭೇಟಿಯಿಂದ ಬಗೆಹರಿಯುವುವೆಂದು ಆಶಿಸಲಾಗಿದೆ

ಮೈಸೂರು ಗವರ್ನರರಿಂದ ವಾಸುದೇವಾಚಾರ್ಯರ ಗುಣಗಾನ

ಮದ್ರಾಸಿನ ಕಲಾಕ್ಷೇತ್ರದಲ್ಲಿ ಶ್ರೀಮತಿ ರುಕ್ಮಿಣಿದೇವಿಯವರು ಸಿದ್ಧಗೊಳಿಸಿರುವ ಸೀತಾ ಸ್ವಯಂವರ ಎಂಬ ನೃತ್ಯ ನಾಟಕ ಪ್ರದರ್ಶನದಲ್ಲಿ ಕಳೆದ ಶುಕ್ರವಾರ ಮೈಸೂರು ಗವರ್ನರ್ ಶ್ರೀ ಜಯಚಾಮರಾಜ ಒಡೆಯರವರು ಅಧ್ಯಕ್ಷತೆ ವಹಿಸಿದ್ದರು ಈ ಪ್ರದರ್ಶನಕ್ಕೆ ಕೃತಿಗಳನ್ನು ಒದಗಿಸಿರುವ ಸಂಗೀತಶಾಸ್ತ್ರ ವಿಶಾರದ ಶ್ರೀ ಕೆ ವಾಸುದೇವಾಚಾರ್ಯರನ್ನು ಗವರ್ನರರು ಅಭಿನಂದಿಸಿ, ಅವರು ಸಂಗೀತ ಮತ್ತು ಸಾಹಿತ್ಯಗಳಲ್ಲಿ ವಿಶೇಷ ಪಾಂಡಿತ್ಯ ಹೊಂದಿರುವರಲ್ಲದೆ ಕಲಾ ಪೂರ್ಣ ಕಾವ್ಯಗಳನ್ನೂ ಸಹ ರಚಿಸಬಲ್ಲರೆಂದೂ, ಅವರಲ್ಲಿ ಹೊಸಹೊಸ ಕೃತಿಗಳನ್ನು ಸೃಷ್ಟಿಸುವ ಅಸಾಧಾರಣ ಶಕ್ತಿಯು ಇರುವುದೆಂದೂ ಸೂಚಿಸಿದರು ಶ್ರೀಮತಿ ರುಕ್ಮಿಣಿದೇವಿಯವರ ಕಾರ್ಯ ಚಟುವಟಿಕೆಗಳನ್ನೂ ಗವರ್ನರರು ಪ್ರಶಂಸಿಸಿದರು ಡಾ॥ ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ಸ್ವಾಗತ ಭಾಷಣ ಮಾಡಿದರು

ಕನ್ಯಕಾಪರಮೇಶ್ವರಿ ಸಹಕಾರ ಸಂಘದ ಅಧಿಕಾರ ವರ್ಗ

ನಗರದ ಕನ್ಯಕಾಪರಮೇಶ್ವರಿ ಸೊಸೈಟಿಯ ಡೈರೆಕ್ಟರುಗಳ ಸಭೆಯು ಮೊನ್ನೆ ಸೇರಿ ನೂತನ ಅಧಿಕಾರವರ್ಗದ ಚುನಾವಣೆ ನಡೆಸಿತು ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷರಾಗಿಯೂ, ಶ್ರೀ ಕೆ ಆರ್ ತಿಮ್ಮರಾಯಶೆಟ್ಟರು ಉಪಾಧ್ಯಕ್ಷರಾಗಿಯೂ, ಶ್ರೀ ಟಿ ಅಶ್ವತ್ಥನಾರಾಯಣಶೆಟ್ಟರು ಖಜಾಂಚಿ ಮತ್ತು ಶ್ರೀ ಚಿನ್ನಸ್ವಾಮಿಶೆಟ್ಟರು ಲೀಗಲ್ ಅಡ್ವೈಸರ್ ಆಗಿಯೂ ಆರಿಸಲ್ಪಟ್ಟರು

○ ಅಮೆರಿಕಾ ವಿಮಾನ ಬಲದ ಒಂದು ವಿಮಾನವು ಸೌದಿ ಅರೇಬಿಯದ ದಹ್ರಾನ್ ಎಂಬಲ್ಲಿ ನೆನ್ನೆ ಮುಂಜಾನೆ ಮುರಿದುಬಿದ್ದು ೧೫ ಮಂದಿ ಸೈನಿಕರು ಮೃತಪಟ್ಟರು ೬ ಜನರು ಪಾರಾಗಿರುತ್ತಾರೆ

ನೌಕರರ ವೇತನ ಹೆಚ್ಚಿಸುವ ಪ್ರಶ್ನೆ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೧

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸರ್ಕಾರಿ ನೌಕರರ ಸಂಬಳದ ವಿಚಾರವನ್ನು ಪ್ರಸ್ತಾಪಿಸಿ, ೧೦೦ ರೂ ಗಿಂತ ಕಡಿಮೆ ಸಂಬಳ ಬರುವವರಿಗೆ ಸರ್ಕಾರದವರು ಹೊರಡಿಸಲಿರುವ ಹೊಸ ಆಜ್ಞೆಯ ಪರಿಣಾಮವಾಗಿ ಹೆಚ್ಚಿನ ಸೌಲಭ್ಯವು ದೊರೆಯುವುದೆಂದೂ, ಸರ್ಕಾರದವರು ವಹಿಸಲಿರುವ ೪ ಕೋಟಿ ರೂ ಹೆಚ್ಚಿನ ವೆಚ್ಚದಲ್ಲಿ ಶೇಕಡ ೯೦ ಜನರಿಗೆ ಅನುಕೂಲವಾಗುವುದೆಂದೂ ಹೇಳಿದರು ಕನಿಷ್ಠವಾಗಿ ಒಬ್ಬನಿಗೆ ಒಟ್ಟು ೫೦ ರೂ ವರೆಗೆ ವೇತನ ದೊರೆಯುವುದೆಂದೂ ಐ ಎ ಎಸ್ ಅಧಿಕಾರಿಗಳನ್ನು ಬಿಟ್ಟು ಮಿಕ್ಕವರ ಪರಮಾವಧಿ ಸಂಬಳವು ೧,೫೦೦ ರೂ ಆಗಬಹುದಾಗಿಯೂ ಗೊತ್ತಾಗಿದೆ ಹೊಸ ಸ್ಕೇಲುಗಳು ಇಂದಿನಿಂದ ಜಾರಿಗೆ ಬರಲಿವೆ ಮಂತ್ರಿಮಂಡಲವು ಈ ದಿನ ಸೇರಿ [illegible] ನಿರ್ಧಾರ ಕೈಗೊಳ್ಳಲಿದೆ

ಅಂಚೆ ಮತ್ತು ತಂತಿ ನೌಕರರ ಮುಷ್ಕರ ಸಧ್ಯಕ್ಕಿಲ್ಲ

ಸಧ್ಯದಲ್ಲೇ ಮಹಾ ಚುನಾವಣೆಗಳು ನಡೆಯಲಿರುವ ಕಾರಣಕ್ಕಾಗಿ ತಮ್ಮ ನೇರ ಕಾರ್ಯಾಚರಣೆಯನ್ನು ಕೂಡಲೇ ಕೈಗೊಳ್ಳಬಾರದೆಂದು ಹೈದರಾಬಾದಿನಲ್ಲಿ ಸೇರಿದ್ದ ಅಂಚೆ ಮತ್ತು ತಂತಿ ಇಲಾಖಾ ನೌಕರರ ರಾಷ್ಟ್ರೀಯ ಸಮ್ಮೇಳನದ ಮಂಡಲಿಯು ನೆನ್ನೆ ನಿರ್ಧರಿಸಿತು

ಇಂದಿನಿಂದ ವಿಶ್ವವಿದ್ಯಾಲಯಕ್ಕೆ ಸ್ವಯಂ ಆಡಳಿತ

ಮೈಸೂರು ೧

ಮೈಸೂರು ವಿಶ್ವವಿದ್ಯಾಲಯವು ಇಂದಿನಿಂದ ಸ್ವಯಂ ಆಡಳಿತವನ್ನು ಹೊಂದಿರುತ್ತದೆ ಈ ಸಂಬಂಧವಾಗಿ ಕಳೆದ ಶಾಸನಸಭಾಧಿವೇಶನದಲ್ಲಿ ಮಸೂದೆಯೊಂದು ಅಂಗೀಕೃತವಾಗಿತ್ತು ಹೊಸ ಏರ್ಪಾಡಿನ ಪ್ರಕಾರ ವಿಶ್ವವಿದ್ಯಾಲಯದ ಕೌನ್ಸಿಲ್ಲು ಸಿಂಡಿಕೇಟಾಗಿ ಮಾರ್ಪಾಡಾಗುವುದು

ಸಾಯಿಬಾಬಾ ವಿಗ್ರಹದ ಪ್ರತಿಷ್ಠೆ

ನಗರದ ತ್ಯಾಗರಾಜಾ ರಸ್ತೆಯಲ್ಲಿ ನೂತನವಾಗಿ ನಿರ್ಮಿತವಾಗಿರುವ ಸಾಯಿಬಾಬಾ ಮಂದಿರದಲ್ಲಿ ಬರುವ ಮಾರ್ಚಿ ೪ ರಂದು ಶ್ರೀ ಸಾಯಿಬಾಬಾರವರ ವಿಗ್ರಹದ ಪ್ರತಿಷ್ಠಾಪನೆಯನ್ನು ಮಾಡಲಾಗುವುದು ಅದರ ಅಂಗವಾಗಿ ಏಳು ದಿನಗಳ ಕಾರ್ಯಕ್ರಮವನ್ನು ಹಾಕಲಾಗಿದೆ ಮೊದಲನೇ ದಿನದ ಕಾರ್ಯಕ್ರಮದಲ್ಲಿ ಗವರ್ನರರು ಭಾಗವಹಿಸುವರು ಈ ಉತ್ಸವವನ್ನು ನೆರವೇರಿಸಲು ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ ಮಂದಿರದ ಆಡಳಿತ ಮಂಡಲಿಯ ಅಧ್ಯಕ್ಷ ಡಾ॥ ಎಂ ಎಲ್ ಮರಿಸ್ವಾಮಿ ಶ್ರೀ ಇ ಪಿ ನಂಜಪ್ಪ ಮತ್ತು ಪುಟ್ಟಯ್ಯನವರುಗಳು ಪತ್ರಿಕಾ ಪ್ರತಿನಿಧಿಗಳನ್ನು ಬರಮಾಡಿಕೊಂಡು ಅವರಿಗೆ ಕಟ್ಟಡವನ್ನು ತೋರಿಸಿದುದಲ್ಲದೆ ಆ ಮೂಲಕ ಸಾರ್ವಜನಿಕ ಸಹಕಾರವನ್ನು ಕೋರಿದರು

ಸಂಸ್ಥಾನದ ಆಯವ್ಯಯ ಅಂದಾಜಿನ ಅಂಗೀಕಾರ

ಟೀಕೆಗಳಿಗೆ ಹಣಕಾಸಿನ ಸಚಿವರ ಉತ್ತರ

ಬೆಂಗಳೂರು ೩೧

ಕಳೆದ ನವೆಂಬರ್ ೧ರಿಂದ ೯ನು ತಿಂಗಳಿಗಾಗಿ ೫೫ ಕೋಟಿ ರೂ ಗಳ ವೆಚ್ಚಕ್ಕೆ ಸಂಬಂಧಿಸಿದ ಅಪ್ರೋಪ್ರಿಯೇಷನ್ ಮಸೂದೆಯನ್ನು ವಿಧಾನ ಸಭೆಯು ಮೊನ್ನೆ ಅಂಗೀಕರಿಸಿತು

ಸದಸ್ಯರ ಟೀಕೆಗಳಿಗೆ ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ಉತ್ತರ ... ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಬಗ್ಗೆ ಆತಂಕಪಡಬೇಕಾದ ಅಗತ್ಯವಿಲ್ಲವೆಂದೂ, ಅದು ಉತ್ತಮವಾಗಿರುವುದೆಂದೂ ತಿಳಿಸಿದರು

ಮಾಧವನ್ ನಾಯರ್ ಸಮಿತಿಯ ಶಿಫಾರಸಿನ ಪ್ರಕಾರ ಸರಕಾರದ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಲು ಆಲೋಚಿಸಲಾಗುತ್ತಿದೆ, ಹೊಸ ಸಂಸ್ಥಾನದ ಉತ್ಪವದಿಂದ ಹೊಸ ಆಡಳಿತ ಮತ್ತು ಮಾನವೀಯ ಸಮಸ್ಯೆಗಳು ಹುಟ್ಟಿದುವು, ಆ ಪೈಕಿ ಸಂಬಳದ ಮಟ್ಟದ ಪ್ರಶ್ನೆಯೂ ಸೇರಿರುವುದು, ಎಲ್ಲರಿಗೂ ಒಂದೇ ಸಮನಾದ ಸರ್ವಿಸ್ ನಿಬಂಧನೆಗಳನ್ನು ರಚಿಸಲಾಗುತ್ತಿದೆ, ಒಂದೇ ಸಮನಾದ ತೆರಿಗೆ ಶಾಸನವನ್ನು ಸಿದ್ಧಗೊಳಿಸುವುದಕ್ಕಾಗಿ ಹಣಕಾಸಿನ ಇಲಾಖಾ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಲಾಗಿರುವುದು ದ್ವಿತೀಯ ಯೋಜನೆಯ ಪುನರ್ಪರಿಶೀಲನೆಗೆ ಅವಕಾಶವಿದೆ–ಎಂದು ಅವರು ತಿಳಿಸಿದರು.

ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಜೆ ಎಂ ಇಮಾಮರು ಮಾತನಾಡಿ, ಕಾಂಗ್ರೆಸ್ ಸರ್ಕಾರಗಳು ಮಾಡುತ್ತಿರುವ ತಪ್ಪುಗಳನ್ನು ತಿದ್ದಿಕೊಳ್ಳುತ್ತಿಲ್ಲವೆಂದು ಆಕ್ಷೇಪಿಸಿದರು ಇನ್ನು ಮುಂದೆ ಕೇಂದ್ರದ ಗ್ರಾಂಟುಗಳ ಬಗ್ಗೆ ಭರವಸೆಯಿಡಬಾರದೆಂದೂ, ಹಣಕಾಸಿನ ಸ್ಥಿತಿಯನ್ನು ಸರ್ಕಾರದವರು ಸರಿಪಡಿಸಿಕೊಳ್ಳಬೇಕೆಂದೂ ಸೂಚಿಸಿದರು ಹಳೇ ಮೈಸೂರಿನ ದ್ವಿತೀಯ ಯೋಜನೆಯು ೮೦ ಕೋಟಿ ಮತ್ತು ನೂತನ ಸಂಸ್ಥಾನದ್ದು ೧೫೦ ಕೋಟಿ ರೂ ಆಗುವುವೆಂದೂ, ಕೇಂದ್ರ ಸರ್ಕಾರದವರು ಗ್ರಾಂಟು ಕೊಡದಿದ್ದರೆ ಹಳೇ ಮೈಸೂರಿನ ಅಭಿವೃದ್ಧಿ ಕಾರ್ಯಗಳಿಗೆ, ೧ ಕೋಟಿ ರೂ ಮಾತ್ರ ಇದ್ದು ಉಳಿದ ಹಣವನ್ನು ಸಾಲ ಅಥವಾ ತೆರಿಗೆಗಳಿಂದ ಎತ್ತಬೇಕಾದ ಸ್ಥಿತಿಯಿರುವುದೆಂದೂ ಸೂಚಿಸಿದರು

ಶ್ರೀ ಶ್ರೀನಿವಾಸಯ್ಯಂಗಾರ್ಯವರು ಮಾತನಾಡಿ, ಸರ್ಕಾರದವರು ಬಾಕಿಯಿರುವ ತೆರಿಗೆಗಳನ್ನು ಪ್ರಭಾವಗಳಿಗೆ ಅಂಜದೆ ವಸೂಲು ಮಾಡಿಕೊಳ್ಳುವುದು ಅಗತ್ಯವೆಂದು ಪ್ರತಿಪಾದಿಸಿದರು

ಶ್ರೀ ಎಸ್ ಆರ್. ನಾಗಪ್ಪಶೆಟ್ಟರು ಗ್ರಾಮ ಕೈಗಾರಿಕಾ ಯೋಜನೆಯನ್ನು ರದ್ದುಗೊಳಿಸಬೇಕೆಂದು ಸಲಹೆ ಮಾಡಿ, ಸಂಸ್ಥಾನದಲ್ಲಿ ವೆಟರಿನರಿ ಕಾಲೇಜನ್ನು ತೆರೆಯಬೇಕೆಂದು ಸೂಚಿಸಿದರು.

ಗೋವಾದಲ್ಲಿ ದುರಾಡಳಿತ ಪರಿಶೀಲನೆಗಾಗಿ ವಿಶ್ವ ಸಂಸ್ಥೆಗೆ ಕರೆ

ಗೋವಾದಲ್ಲಿ ಪೋರ್ಚುಗೀಸರು ನಡೆಸುತ್ತಿರುವ ಆಡಳಿತದ ಪರಿಶೀಲನೆಗಾಗಿ ಮೂರು ಸದಸ್ಯರುಳ್ಳ ಸಮಿತಿಯೊಂದನ್ನು ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರು ಕಳುಹಿಸಬೇಕೆಂದು ಗೋವಾ ರಾಷ್ಟ್ರೀಯ ಸಂಘದ ಅಧ್ಯಕ್ಷ ಜೆ. ಎಂ ಡಿಸೌಜಾರವರು ಮನವಿ ಮಾಡಿಕೊಂಡಿರುತ್ತಾರೆ ಗೋವಾ ಪ್ರಜೆಗಳನ್ನು ಅದರಲ್ಲಿ ಮುಖ್ಯವಾಗಿ ರಾಷ್ಟ್ರೀಯರನ್ನು ಸಮಿತಿಯವರು ಭೇಟಿ ಮಾಡಿ ಅಲ್ಲಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕೆಂದು ಅವರು ಕೋರಿರುವರು. ಗೋವಾ ಜನರು ೪೫೦ ವರ್ಷಗಳ ಪೋರ್ಚುಗೀಸರ ದಾಸ್ಯದ ಆಡಳಿತದಿಂದ ವಿಮುಕ್ತರಾಗಲು ಮತ್ತು ತಾಯಿನಾಡಾದ ಭಾರತದಲ್ಲಿ ಸೇರಲು ಕಾತರರಾಗಿರುವರೆಂದು ಅವರು ಹೇಳಿರುವರು

ಹರಿಕಥೆ

ಚಾಮುಂಡಿಪುರಂ ಅರಳೀಕಟ್ಟೆ ರಾಮಮಂದಿರ (ಕುರುಬರ ಸಂಘ) ದಲ್ಲಿ ವಿದ್ವಾನ್ ಹೆಬ್ಬೆಟ್ಟ ಶಾಮಣ್ಣನವರಿಂದ ನಾಳೆಯಿಂದ ಪ್ರತಿ ದಿನ ಸಾಯಂಕಾಲ ೭ ಗಂಟೆಗೆ "ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ ಸರ್ವರೂ ಭಾಗಿಗಳಾಗಬೇಕಾಗಿ ಕೋರಿದೆ.

ವಿಶ್ವ ಸಂಸ್ಥೆ ಸಭೆಯಲ್ಲಿ ನೆಹರೂರವರ ಭಾಷಣ



ನ್ಯೂಯಾರ್ಕ್ ನಗರದಲ್ಲಿರುವ ವಿಶ್ವ ಸಂಸ್ಥೆಗೆ ಅವರ ಭೇಟಿ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ವೇದಿಕೆಯ ಮೇಲಿರುವರು

ಅಖಿಲ ಭಾರತ ಇಂಗ್ಲಿಷ್ ಉಪಾಧ್ಯಾಯರ ಸಮ್ಮೇಳನ

ಧಾರವಾಡದಲ್ಲಿ ಮೂರು ದಿನಗಳಿಂದ ನಡೆದ ಅಖಿಲ ಭಾರತ ಇಂಗ್ಲಿಷ್ ಉಪಾಧ್ಯಾಯರ ಸಮ್ಮೇಳನವು ಮೊನ್ನೆ ಮುಕ್ತಾಯವಾಯಿತು. ಡಾ॥ ಪಿ ಎಫ್. ದಸ್ತೂರ್‌ರವರು ಅಧ್ಯಕ್ಷತೆ ವಹಿಸಿದ್ದರು ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣ ಮಟ್ಟದಲ್ಲಿ ಇಂಗ್ಲಿಷ್ ಭಾಷೆಯು ಕಡ್ಡಾಯವಾಗಿರಬೇಕೆಂದೂ, ಮಾಧ್ಯಮಿಕ ಶಾಲೆಯಲ್ಲಿ ಅದನ್ನು ಕಡೆಯ ಪಕ್ಷ ೬ ವರ್ಷಗಳ ವರೆಗಾದರೂ ಹೇಳಿಕೊಡಬೇಕೆಂದೂ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ೧ ವರ್ಷದ ಪ್ರೀ ಯೂನಿವರ್ಸಿಟಿ ತರಗತಿ ಮತ್ತು ಮೂರು ವರ್ಷಗಳ ಪದವಿ ತರಗತಿಗಳಿರಬೇಕೆಂದು ಸೂಚಿಸಲಾಯಿತು

ಕೇಡಿಗಳ ಬಂಧನ

ಕೊಳ್ಳೇಗಾಲದ ಸಿದ್ದಪ್ಪನ ಮಗ ಸ್ವಾಮಿ ಎಂಬ ಹುಡುಗನು ಕಳೆದ ಶನಿವಾರ ಹಾರ್ಡ್ವಿಕ್ ಪ್ರೌಢಶಾಲೆ ಬಳಿ ಅನುಮಾನಾಸ್ಪದವಾಗಿ ಓಡಿಹೋಗುತ್ತಿದ್ದಾಗ ಲಕ್ಷ್ಮೀಪುರದ ಪೋಲೀಸು ಸಬ್ ಇನ್ಸ್ಪೆಕ್ಟರು ಅವನನ್ನು ಬಂಧಿಸಿದರು ಅವನ ಬಳಿ ದೊರೆತ ಮೂರು ಟವಲುಗಳು ಕೃಷ್ಣಮೂರ್ತಿಪುರದ ಆಸ್ಪತ್ರೆಗೆ ಸೇರಿದುವೆಂದು ಗುರುತಿಸಲಾಗಿದೆ ಕನ್ನೇಗೌಡನಕೊಪ್ಪಲಿನವನೆಂದು ಹೇಳಲಾದ ೨೦ ವರ್ಷದ ಮೂಗನೊಬ್ಬನು ರೈಲ್ವೆ ವರ್ಕ್‌ಷಾಪ್ ಗೋಡೆ ಹಾರಿ ಎರಡು ಕಬ್ಬಿಣದ ಸಲಾಕಿಗಳನ್ನು ಅಪಹರಿಸುತ್ತಿದ್ದಾಗ ವಾಚ್ ಅಂಡ್ ವಾರ್ಡಿನವರು ಅವನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು

ಕ್ಯಾಲೆಂಡರ್ ಸ್ವೀಕಾರ

ನಗರದ ಕಾಗದ ಮತ್ತು ಸ್ಟೇಷನರಿ ವ್ಯಾಪಾರಿಗಳಾದ ಶ್ರೀ ಆರ್ ಕೃಷ್ಣಸ್ವಾಮಿಯವರು ಕಳುಹಿಸಿರುವ ನೂತನ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ

ಕೆ. ಯತಿರಾಜುಲು ನಾಯ್ಡುರವರ ನಿಧನ

ವಾಣಿವಿಲಾಸ ಮೊಹಲ್ಲಾದಲ್ಲಿದ್ದ, ಅರಮನೆ ಕೋಟೆಗಳ ನಿವೃತ್ತ ಸೂಪರಿಂಟೆಂಡೆಂಟರಾದ ಶ್ರೀ ಕೆ. ಯತಿರಾಜಲು ನಾಯ್ಡುರವರು ಬಹು ದಿನಗಳಿಂದಲೂ ರೋಗ ಪೀಡಿತರಾಗಿದ್ದು, ಕಳೆದ ಶುಕ್ರವಾರ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೩ ವರ್ಷ ವಯಸ್ಸಾಗಿತ್ತು ಮೃತರ ಆತ್ಮಕ್ಕೆ ಶಾಂತಿ ಕೋರಿ, ಬಂಧು ಮಿತ್ರರಿಗೆ ಅನುತಾಪವನ್ನು ಸೂಚಿಸುತ್ತೇವೆ.

1957 : 1957
ಶುಭಾಶಯ!
ಮೂರ್ತಿ ಮಾರ್ಟ್
ನೂರಡಿ ರಸ್ತೆ ಮೈಸೂರು

Edited, Printed and Published by A. R. Nagarajan at Sadhvi Press, D Subbiah Road, Mysore

ಚೀಣಾ ಕಮ್ಯೂನಿಸ್ಟರಿಂದ ಟಿಟೋರವರ ಖಂಡನೆ

ಚೀಣದ ಕಮ್ಯೂನಿಸ್ಟ್ ಪಕ್ಷವು ಹೇಳಿಕೆಯೊಂದನ್ನಿತ್ತು, ಮಾರ್ಷಲ್ ಟಿಟೋರವರ ವರ್ತನೆಯನ್ನು ಖಂಡಿಸಿ, ರಷ್ಯದ ಕಮ್ಯೂನಿಸ್ಟ್ ನಾಯಕತ್ವವನ್ನು ಎತ್ತಿಹಿಡಿದಿದೆ ಟಿಟೋರವರ ವರ್ತನೆಯಿಂದ ಕಮ್ಯೂನಿಸ್ಟರ ಚಳುವಳಿಯಲ್ಲಿ ಒಡಕುಂಟಾಗುವುದೆಂದು ಚೀಣಾ ಪಕ್ಷವು ಅಭಿಪ್ರಾಯಪಟ್ಟಿರುತ್ತದೆ.

ಕೈ ಕಸಬು ವಾರಾಚರಣೆ ಮುಂದಕ್ಕೆ

ಇದೇ ತಿಂಗಳು ೫ನೇ ತಾರೀಕು ಆರಂಭವಾಗಬೇಕಾಗಿದ್ದ ಕೈ ಕಸಬಿನ ವಾರಾಚರಣೆ ಮತ್ತು ಪ್ರದರ್ಶನವು ೧೫ ನೇ ತಾರೀಕಿನಿಂದ ೨೧ರವರೆಗೆ ವಸ್ತು ಪ್ರದರ್ಶನದ ಕಟ್ಟಡದಲ್ಲಿ ನಡೆಯುವುದು.

ಧನುರ್ಮಾಸ ಪೂಜೆ

ಕೃಷ್ಣರಾಜವನದಲ್ಲಿರುವ ಆತ್ಮಾರಾಮ ಮಂದಿರದಲ್ಲಿ ಧನುರ್ಮಾಸ ಪೂಜಾ ಮಹೋತ್ಸವವು ಕಳೆದ ತಿಂಗಳು ೧೬ರಿಂದ ಆರಂಭವಾಗಿ, ಇದೇ ೧೪ ನೇ ತಾರೀಕು ಬೆಳಗ್ಗೆ ಮಹಾ ಮಂಗಳಾರತಿಯೊಡನೆ ಮುಕ್ತಾಯವಾಗಲಿದೆ ಭಕ್ತರು ಈ ಸೇವೆಗೆ ನೆರವಾಗಿ ಭಾಗವಹಿಸುವಂತೆ ಪ್ರಾರ್ಥಿಸಲಾಗಿದೆ

SRI GAYATHRI
TALKIES
Convey their New Year Greetings to all their Patrons and Present
M G M's Thrilling Picture
RANSOM
From to-day as New Year's Special Attraction
Starring – Glenn Ford and Dona Reed

ಮುತ್ತೋಜಿರಾವ್ ಸಿಂಧ್ಯರವರ ನಿ

ಡಿ ಎ ಜಿ ಯವರಾದ ಶ್ರೀ ಮುತ್ತೋ ವ್ ಸಿಂಧ್ಯರವರು ಕಳೆದ ೨೯ ನೇ ತಾರೀ ಮೃತ್ತರಾದರು ಅವರು ಅನೇಕ ವರ್ಷ ಮೈಸೂರಿನಲ್ಲಿದ್ದರು

Hullo !
Wish you a happy New Year!
H S. VENKATA RAO,
B A , B.L. B
(Astro-Palmist)

ಗೃಹಕೃತ್ಯದ ನೋಟೀಸ್

ಹೆಗ್ಗಡದೇವನಕೋಟೆ ತಾಲ್ಲೂಕು ಹಂಪ ರದ ಹೋಬಳಿ ಕೋಳಗಾಲ ಗ್ರಾಮದಲ್ಲಿ ಮೂಡ್ಲಪ್ಪನವರ ಮಗ ಪುಟ್ಟಯ್ಯನು ಕ ಲಕ ಸಮಸ್ತ ಜನಗಳಿಗೂ ತಿಳಿಯಪಡಿಸು ನೆಂದರೆ:—

ಈ ಕೆಳಗೆ ಷೆಡ್ಯೂಲಿನಲ್ಲಿ ಕಂಡ ಸ್ಥಿರಸ್ವ ಗಳು ನಮ್ಮಗಳ ಅವಿಭಕ್ತ ಕುಟುಂಬಕ್ಕೆ ಸ್ವತ್ತುಗಳಾಗಿರುತ್ತೆ. ಅದಾಗ್ಯೂ ಸಹ ನನ್ನ ನವರಾದ ಮೈಸೂರು ಸಿಟಿ ಕೃಷ್ಣರಾಜ ಲ್ಲಾ ಮಾಧವಾಚಾರ್ ರಸ್ತೆ ಯಲ್ಲಿ 2029ನೇ ನಂಬರು ಮನೆಯಲ್ಲಿರುವ ಬಸಪ್ಪ ಪ್ಪ ಎಂಬುವರು ನನಗೂ,ನನ್ನ ಮಕ್ಕಳಿಗೂ ಮೋಸ ಮಾಡಬೇಕೆಂಬ ಇರಾದೆಯಿಂದನನ್ನ ನುಮತಿ ಇಲ್ಲದೆ ಷೆಡ್ಯೂಲು ಸ್ವತ್ತುಗಳನ್ನು ಭಾರ ಮಾಡುತ್ತಾರೆಂದು ತಿಳಿಯಬಂದಿರು ಆದ ಪ್ರಯುಕ್ತ ನನ್ನ ಇರಾದೆ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಆಧಾರ, ಭೋಗ್ಯ ವ ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕ

ಷೆಡ್ಯೂಲ್ :–ಹೆಗ್ಗಡದೇವನಕೋಟೆ ತಾ ಕು ಹಂಪಾಪುರದ ಹೋಬಳಿ ಕೋಳಗಾ ದಾಖ್ಲೆ ಚಟ್ಟನಹಳ್ಳಿ ಗ್ರಾಮಕ್ಕೆ ಸೇರಿದ ಖು

ಸರ್ವೆ ನಂಬರು	ವಿಸ್ತೀರ್ಣ	ಆ
14/1	ಎಕರೆ 4 ಗುಂಟೆ 1	3.
29	6–17	4.
30/1	2–29	2.
32/2	4–37	4.

ಡಿಟೋ ತಾಲ್ಲೂಕು ಹೊಸಹುಂಡಿ ಗ್ರಾಮ ಸೇರಿದ ಹರಿ ಸರ್ವೆ ನಂಬರು 170, ವಿಸ್ತೀ ಎಕರೆ 1 ಗುಂಟೆ 35, ಆಕಾರ 11.0 0

ಕೋಳಗಾಲದ ಗ್ರಾಮದಲ್ಲಿರುವ ಎ ಹೆಂಚಿನ ಮನೆಗಳು ಮತ್ತು ಮೈಸೂರು ಕೃಷ್ಣರಾಜ ಮೊಹಲ್ಲಾ ಮಾಧವಾಚಾರ್ ಯಲ್ಲಿರುವ ಪೂರ್ವಕ್ಕೆ ಚಿಲ್ಲರೆ ಅಂಗಡಿ ದಾ ನವರ ಮನೆ, ಪಶ್ಚಿಮಕ್ಕೆ ಚಿಕ್ಕರಾಮ ಮನೆ, ಉತ್ತರಕ್ಕೆ ದಾವೂದ್ ಸಾಬರು ಯವರ ಮನೆ, ದಕ್ಷಿಣಕ್ಕೆ ಮಾಧವಾ ರಸ್ತೆ–ಈ ಮಧ್ಯೆ ಇರುವ ಮುನಿಸಿಪಲ್ ನಂಬರು 2029 ಉಳ್ಳ ಆರೆ ಮಹಡಿ ಹೆಂಚಿನ ಮನೆ.

ಮೈಸೂರು (ರುಜು) ಪುಟ್ಟ
26–9–56 ಕೋಳಗಾ

ಕೃಷ್ಣಾ ಮಿಲ್ ರವೆ ಬಹಳ ಪ್ರಸಿದ್ಧ

ಸಣ್ಣ ರವೆ ಮಣಕ್ಕೆ 7–8–0, 8–0–0 : ಮೈದಾಹಿಟ್ಟು 7–8–0, 8 0-0
ಮಾಡಿಯಂ ರವೆ 8–0–0, 8–8–0 : ಕಡ್ಲೆಹಿಟ್ಟು 5–12.0, 6–8-0
ಚಿರೋಟಿ ರವೆ 9–0–0, 10–0–0 : ಗೋಧಿ ಹಿಟ್ಟು 6–8–0, 8–0-0
ಬಿಳಿ ಗೋಧಿ ರೂ. ಗೆ 2 ಸೇರು
ಹೊಸ ವರುಷದ ವಂದನೆಗಳು
ಕೃಷ್ಣಾ ಸೋಜಿ ಡಿಪೊ,
ಮೋತಿಖಾನೆ ಬಿಲ್ಡಿಂಗ್ಸ್, .. ಸಂತೆಪೇಟೆ, ಮೈಸೂರು

ಹೊಸ ವರ್ಷದ ಶುಭಾಶಯಗಳು!
ನಮ್ಮ ಹಿತೈಷಿಗಳಿಗೂ ಮತ್ತು ಮಾನ್ಯ ಗಿರಾಕಿಗಳಿಗೂ ಹೊಸ ವರ್ಷದ
ಶುಭಾಶಯಗಳನ್ನು ಕೋರುತ್ತೇವೆ
ಇಂದ್ರ ಕೆಫೆ
ಸಯ್ಯಾಜಿರಾವ್ ರೋಡ್, ಮೈಸೂರು.

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ ೩ ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : WEDNESDAY 2—1—1957 ಮೈಸೂರು : ಬುಧವಾರ ೨—೧—೧೯೫೭ [ಸಂಚಿಕೆ : ೧೪೯

ಕೆಳ ದರ್ಜೆಯ ನೌಕರರಿಗೆ ಹೆಚ್ಚು ಸಂಬಳದ ಬಗ್ಗೆ ಆಜ್ಞೆ

ಮೈಸೂರು ಸರ್ಕಾರದ ನೌಕರರಿಗೆ ಹೆಚ್ಚಿನ ಸಂಬಳಸಾರಿಗೆಗಳು

ನೆನ್ನೆ ಸಂಜೆ ಸರ್ಕಾರದ ನಿರ್ಧಾರದ ಪ್ರಕಟಣೆ

ಬೆಂಗಳೂರು ೨

ಸಂಸ್ಥಾನ ಸರ್ಕಾರದವರು ನೆನ್ನೆ ಸಂಜೆ ತಮ್ಮ ನೌಕರರುಗಳ ಸಂಬಳ ಮತ್ತು ತುಟ್ಟಿಭತ್ಯಗಳ ಹೊಸ ಆಜ್ಞೆಯನ್ನು ಹೊರಡಿಸಿದರು ಅದ ಮುಂಚೆ ೮ ಗಂಟೆ ಕಾಲ ಮಂತ್ರಿಮಂಡಲದ ಸಭೆಯು ನಡೆದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಪತ್ರಿಕಾ ಪ್ರತಿನಿಧಿಗಳಿಗೆ ಸರ್ಕಾರದ ನಿರ್ಧಾರವನ್ನು ತಿಳಿಸಿದರು ಈ ಸಮಸ್ಯೆಯನ್ನು ಮಾನವೀಯ ದೃಷ್ಟಿಯಿಂದ ಪರಿಹರಿಸಲಾಗಿರುವುದೆಂದು ಅವರು ಹೇಳಿ, ನೂತನ ಸಂಸ್ಥಾನದ ಐಕ್ಯತೆಯ ಸಾಧನೆಗೆ ನೌಕರರು ನೆರವಾಗಬೇಕೆಂದು ಕೋರಿದರು

ತುಟ್ಟಿ ಭತ್ಯವೂ ಸೇರಿ, ಕನಿಷ್ಟವಾಗಿ ಪ್ರತಿ ನೌಕರನು ನಗರಗಳಲ್ಲಿ ೫೦ ಮತ್ತು ಇತರ ಕಡೆಗಳಲ್ಲಿ ೪೫ ರೂ ಪಡೆಯುವನು ಗೆಜೆಟೆಡ್ ಅಧಿಕಾರಿಗಳ ಕನಿಷ್ಠ ಮತ್ತು ಪರಮಾವಧಿ ಸಂಬಳವನ್ನು ಗೊತ್ತುಪಡಿಸಲಾಗಿದೆ ಅದರ ಪ್ರಕಾರ ಅವರಿಗೆ ೧,೨೦೦-೫೦-೧,೫೦೦ ರೂ ಅನ್ನು ಪರಮಾವಧಿಯಾಗಿ ಕೊಡಲಾಗುವುದು ಕನಿಷ್ಠವನ್ನು ೨೦೦-೧೫-೩೫೦ ರೂ ಗೆ ಗೊತ್ತುಪಡಿಸಿದೆ ಸರ್ಕಾರದ ನಿರ್ಧಾರಗಳು ಈ ರೀತಿ ಇವೆ

ಜವಾನರಿಗೆ ೧೪ ಮತ್ತು ೧೮ ರೂ ನಿಂದ ೨೫ ರೂ ಗ ಸಂಬಳ ಹೆಚ್ಚಿಸಿ ನಗರಗಳಲ್ಲಿದ್ದರೆ ೨೫, ಇತರ ಕಡೆ ೨೦ ರೂ ತುಟ್ಟಿಭತ್ಯವನ್ನು ಕೊಡಲಾಗುವುದು

ಪೋಲೀಸು ಕಾನ್‌ಸ್ಟೆಬಲ್ಲುಗಳಿಗೆ ೨೨-೧/೨-೩೭ ಸ್ಕೇಲಿನಿಂದ ೩೦-೧/೨-೪೦ ರೂ

ತುಟ್ಟಿಭತ್ಯವು ಎಲ್ಲಾ ನೌಕರರಿಗೂ ಕನಿಷ್ಠ ಮತ್ತು ಪರಮಾವಧಿಯು ೫೦ ರೂ ಇದ್ದು ಮುಂದೆ ೨೦ ಮತ್ತು ೭೫ ರೂ ಆಗಲಿದೆ

ಪ್ರತಿ ಇಲಾಖೆಯಲ್ಲಿ ಪ್ರತಿ ಹುದ್ದೆಯ ಸಂಬಳದ ದರ್ಜೆಯನ್ನೂ ಪುನರ್ವಿಮರ್ಶಿಸಲಾಗಿದೆ ಪ್ರಾರಂಭಿಕ ಸಂಬಳವನ್ನು ಗೊತ್ತುಪಡಿಸುವಾಗ ವೇಜನ್ನು ಮಂಜೂರು ಮಾಡಲಾಗಿದೆ ಹೊಸ ಸ್ಕೇಲಿನಲ್ಲಿ ಮೂರು ವರ್ಷ ಸರ್ವೀಸ್ಸಿಗಾಗಿ ೧ ಮತ್ತು ಹೆಚ್ಚಿನ ಅವಧಿಗಾಗಿ ೨ ಬಡ್ತಿಗಳ ಪ್ರತಿ ನೌಕರನಿಗೂ ಮುಂದಿನ ಸಂಬಳ ಈಗಲೇ ಸಿಗುವುದು

ದರ ಪ್ರಕಾರ ನಾನ್ ಗೆಜೆಟೆಡ್ ನೌಕರರಿಗ ರೂ ಗೆ ಕಡಿಮೆ ಇಲ್ಲದಂತೆ ಒಟ್ಟು ೨೫ ಒಂದು ಬಡ್ತಿಯೂ, ಗೆಜೆಟೆಡ್ ನೌಕರ ರೂ ದೊರೆಯುವುವು.

ಜೆಟೆಡ್ ನೌಕರರ ಸಂಬಳವನ್ನು ವಿಮರ್ಶಿ ೩೦ ರ ಪ್ರಮಾಣಕ್ಕೆ ಷಾರದಂತೆ ಪಡಿಸಲಾಗಿದೆ. ಅವರ ಭತ್ಯಗಳನ್ನು ಕನಿಷ್ಠಾಂಶವನ್ನು ಸೂಚಿಸಲಾ

ಹೊಸ ಪ್ರಮಾಣದ ಸಂಬಳವನ್ನು ಅಂಗೀಕರಿ ಅಥವಾ ಬಿಡಲು ಪ್ರತಿ ನೌಕರನಿಗೂ ಅವಕಾಶ ಕೊಡಲಾಗುವುದು ಅದೇ ಆಜ್ಞೆಯು ನಿರ್ಧಾರ

ಶೇಕ್ದಾರರುಗಳ ತುಟ್ಟಿಭತ್ಯವನ್ನು ೨೦ ರೂ ಗೆ ಕಡಿಮೆ ಇದ್ದವರಿಗೆ ೪ ರೂ. ೪೦ರ ಒಳಗೆ ಇದ್ದರೆ ೫ ರೂ. ಮತ್ತು ಮೇಲ್ಪಟ್ಟು ಇದ್ದರೆ ೬ ರೂ ನಂತೆ ಕೊಡಲಾಗುವುದು

ಉಪಾಧ್ಯಾಯರ ಸಂಬಳದ ಪ್ರಮಾಣ

ಪದವೀಧರರಿಗೆ ೭೫ ೫ ೯೦ ೬ ೧೨೦ ೧೦ ೧೫೦ ರೂ (ಬಿ ಟಿ. ಮತ್ತು ಬಿ ಇಡಿಗಳಿಗೆ ೨೦೦). ಮಾಧ್ಯಮಿಕ ಶಾಲೆಗಳ ಎಸ್ ಎಸ್ ಎಲ್ ಸಿ ಉಪಾಧ್ಯಾಯರಿಗೆ (ತರಪೇತಾದವರು ಮತ್ತು ಇಲ್ಲದವರು) ೫೦-೩-೬೨-೪-೧೦೦ ರೂ. ಪ್ರಾಥಮಿಕ ಶಾಲಾ ನಾನ್ ಎಸ್ ಎಸ್ ಎಲ್ ಸಿ ಶಿಕ್ಷಣ ಪಡೆದವರಿಗೆ ೪೦-೨ ೫೦-೩-೭೦ ಮತ್ತು ಇಲ್ಲದವರಿಗೆ ೩೦-೧-೪೦-೨-೬೦

ವಿಶ್ವವಿದ್ಯಾಲಯದ ಅಧ್ಯಾಪಕರುಗಳ ವೇತನದ ಬಗ್ಗೆ ತೀರ್ಮಾನವು ವಿಶ್ವವಿದ್ಯಾಲಯಕ್ಕೆ ಸೇರಿದೆ

ಅಸಿಸ್ಟೆಂಟ್ ಸರ್ಜನ್ (ಎಂ ಬಿ ಬಿ ಎಸ್) ೨೫೦-೨೦ ೩೫೦ ೨೫-೫೦೦ ರೂ ಎಲ್ ಎಂ ಪಿ ಆದವರಿಗೆ ೯೦-೫-೧೨೦-೨ ೧೮೦-೧೦ ೨೫೦ ರೂ ದಾದಿಯರಿಗೆ ೮೫-೫ ೧೧೦-೬-೧೫೦ ರೂ.

ಮರಾಮತ್ತು ಇಲಾಖೆ ಸೂಪರ್‌ವೈಸರುಗಳಿಗೆ--೧೫೦ ೧೦ ೩೦೦ ರೂ, ಓವರ್‌ಸೀಯರುಗಳಿಗೆ ೧೨೦-೧೦-೨೦೦ ರೂ ಡ್ರಾಫ್ಟ್ಸ್‌ಮೆನ್ನುಗಳಿಗೆ ೧ನೇ ಗ್ರೇಡು ೧೫೦-೧೦-೨೫೦, ೨ನೇ ಗ್ರೇಡು ೧೨೦-೭೦-೨೦೦ ೩ನೇ ಗ್ರೇಡು ೭೦-೫-೯೦-೬-೧೫೦

ಪೋಲೀಸು ಇನ್ಸ್‌ಪೆಕ್ಟರುಗಳಿಗೆ ೧೭೫-೧೦-೨೫೫ E. B. ೧೦-೩೭೫ ರೂ, ಸಬ್ ಇನ್ಸ್‌ಪೆಕ್ಟರರಿಗೆ ೮೦ ೫-೧೦೦ ೮ ೧೬೦ ೧೦ ೨೦೦ ರೂ

ರೆವಿನ್ಯೂ ಇನ್ಸ್‌ಪೆಕ್ಟರುಗಳ ಸಂಬಳವು ತಿರುವಾಂಕೂರು ಮತ್ತು ಮದ್ರಾಸು ಸ್ಕೇಲಿಗಿಂತ ಹೆಚ್ಚಿದೆ. ಮೋಜಣಿದಾರರು ಮುಂತಾದವರಿಗೆ ಬೊಂಬಾಯಿಗಿಂತ ಹೆಚ್ಚು ಸಂಬಳ ಅರಣ್ಯ ಇಲಾಖೆಯಲ್ಲಿ ೧ ಮತ್ತು ೨ನೇ ದರ್ಜೆ ರೇಂಜರಿಗೆ ಬೊಂಬಾಯಿ ಮಟ್ಟದ ಸಂಬಳ

ಆರೋಗ್ಯ ಇಲಾಖೆಯ ಇನ್ಸ್‌ಪೆಕ್ಟರಿಗೆ ೧ ಮತ್ತು ೨ನೇ ಗ್ರೇಡಿನವರಿಗೆ ಮದ್ರಾಸು ಸ್ಕೇಲಿಗಿಂತ ಉತ್ತಮ ಪಶು ವೈದ್ಯ ಇಲಾಖೆಯವರಿಗೆ ಬೊಂಬಾಯಿನವರಿಗಿಂತ ಕೊಂಚ ಮೇಲು ವಿದ್ಯುಚ್ಛಕ್ತಿ ಇಲಾಖೆ ಆಪರೇಟರುಗಳು ಬೊಂಬಾಯಿನವರಿಗಿಂತ ಹೆಚ್ಚು ಪಡೆಯುವರು ಅಬ್ಕಾರಿ ಇಲಾಖೆಯವರು ಮದ್ರಾಸು ಮತ್ತು ತಿರುವಾಂಕೂರಿನವರಂತೆ ಪಡೆಯುವರು

ಪದವೀಧರ ಉಪಾಧ್ಯಾಯರುಗಳಿಗೆ ಕೊಡುವಂತೆ ಪಂಡಿತರು ಮತ್ತು ಮುನ್ಷಿಗಳಿಗೆ ಸಂಬಳ ಕೊಡುವುದು ಒಂದು ವಿಶೇಷ

ಈ ಎಲ್ಲ ನಿರ್ಧಾರಗಳಿಂದ ವರ್ಷವೊಂದಕ್ಕೆ ೪ ಕೋಟಿ ರೂ ವೆಚ್ಚ ಹೆಚ್ಚುವುದು ಶೇಕಡ ೯೦ ಮಂದಿಗ ಹೊಸ ಸೌಲಭ್ಯವು ದೊರೆಯುವುದು.

ಸ್ಥಳೀಯ ಸಂಸ್ಥೆಗಳು ಸ್ವನಿಧಾನವಿದ್ದರೆ ಇದೇ ಮಟ್ಟವನ್ನು ತಮ್ಮ ನೌಕರರಿಗೆ ಕೊಡಬಹುದೆಂದು ತಿಳಿಸಲಾಗಿದೆ

ನೌಕರರಿಗೆ ಇದುವರೆಗೆ ಕೊಡಲಾಗುತ್ತಿದ್ದ ತಾತ್ಕಾಲಿಕ ಪರಿಹಾರವನ್ನು ಈ ತಿಂಗಳಿಂದ ತಪ್ಪಿಸಲಾಗುವುದು.

ಪ್ರೈಯರ್ ಗ್ರೇಡು ಹಿಂದೆ ಇದ್ದು ಪರಮಾವಧಿ ಸಂಬಳ ಪಡೆಯುತ್ತಿರುವವರಿಗೆ ೩ ಬಡ್ತಿಗಳನ್ನೀಯಲಾಗುವುದು

ಸರ್ಕಾರಿ ಸಹಾಯ ಪಡೆವ ಶಾಲಾ ಅಧ್ಯಾಪಕರುಗಳ ಸಂಬಳದ ಬಗ್ಗೆ ಪರಿಶೀಲನೆ ಮಾಡಲಾಗುವುದು

ಸರ್ಕಾರಿ ಕಾರ್ಖಾನೆಗಳಲ್ಲಿರುವವರ ಸಂಬಳದ ವಿಚಾರವನ್ನು ಪರಿಶೀಲಿಸಲು ಪ್ರತ್ಯೇಕ ಸಮಿತಿಯನ್ನು ರಚಿಸಲಾಗುವುದು

ನೂತನ ಮೈಸೂರಿನ ಚುನಾವಣಾ ಕ್ಷೇತ್ರಗಳು

ನಗರ ಮತ್ತು ಜಿಲ್ಲೆಯ ವಿಭಾಗಗಳು

ಬೆಂಗಳೂರು ೨

ಲೋಕ ಸಭೆ ಮತ್ತು ಸಂಸ್ಥಾನದ ವಿಧಾನ ಸಭಾ ಚುನಾವಣಾ ಕ್ಷೇತ್ರಗಳನ್ನು ಗೊತ್ತುಪಡಿಸಿ, ಪ್ರಕಟಣೆಯೊಂದನ್ನು ಹೊರಡಿಸಲಾಗಿದೆ ಲೋಕ ಸಭೆಗೆ ಒಟ್ಟು ೨೬ ಸ್ಥಾನಗಳಿವೆ ಹಿಂದೆ ಕೊಡಗಿಗೆ ಇದ್ದ ಲೋಕಸಭಾ ಸದಸ್ಯ ಸ್ಥಾನವು ಇರುವುದಿಲ್ಲ ತಿಪಟೂರಿಗೆ ಪ್ರತ್ಯೇಕ ಸ್ಥಾನವನ್ನು ಹೊಸದಾಗಿ ಕಲ್ಪಿಸಲಾಗಿದೆ ಹೊಸ ವಿಭಾಗದ ಪ್ರಕಾರ ಹಾಸನ, ಮಂಡ್ಯ ಜಿಲ್ಲೆಗಳೂ ಪೂರ್ಣವಾಗಿ ಒಂದೊಂದು ಚುನಾವಣಾ ಕ್ಷೇತ್ರಗಳಾಗುವುವು

ವಿಧಾನ ಸಭಾ ಕ್ಷೇತ್ರಗಳನ್ನು ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಈ ರೀತಿ ಗೊತ್ತುಪಡಿಸಲಾಗಿದೆ:—

೨, ೪ರಿಂದ ೧೭, ೧೯ರಿಂದ ೨೯ ಡಿವಿಜನ್‌ಗಳು-ಮೈಸೂರು ನಗರ

೨೦ರಿಂದ ೨೭, ೩೦ರಿಂದ ೩೩, ೩೫ರಿಂದ ೩೭ ಮತ್ತು ೪೦ ಡಿವಿಜನ್ನುಗಳು ಸೇರಿ ಮೈಸೂರು ಉತ್ತರ ಕ್ಷೇತ್ರ

ನಗರದ ೧, ೩, ೧೮, ೨೮, ೨೯, ೩೪, ೩೮ ಮತ್ತು ೩೯ ಡಿವಿಜನ್‌ಗಳು, ಜಯಪುರ ಮತ್ತು ಇಲವಾಲ ಹೋಬಳಿ ಮತ್ತು ಮೈಸೂರು ಕಸಬಾ ಸರ್ಕಲ್ ಸೇರಿ ೧ ಕ್ಷೇತ್ರ

ಕೊಳ್ಳೇಗಾಲ ಫಿರ್ಕಾ ಬಿಟ್ಟು, ತಾಲ್ಲೂಕು-ಪಾಳಯಂ ಕ್ಷೇತ್ರ

ಯಳಂದೂರು ತಾಲ್ಲೂಕು, ಕೊಳ್ಳೇಗಾಲ ಫಿರ್ಕಾ, ತಲಕಾಡು, ಸೋಸಲೆ ಮತ್ತು ಬನ್ನೂರು ಹೋಬಳಿ ಸೇರಿ ಕೊಳ್ಳೇಗಾಲ ಕ್ಷೇತ್ರ ೨

ಟಿ ನರಸೀಪುರ ಮತ್ತು ಮೂಗೂರು ಹೋಬಳಿಗಳು, ಮೈಸೂರು ತಾಲ್ಲೂಕಿನ ವರುಣ ಹೋಬಳಿ ಮತ್ತು ಮೈಸೂರು ಹೋಬಳಿಯ ಮಂಡಕಳ್ಳಿ ಫಿರ್ಕಾ ಸೇರಿ—ಟಿ ನರಸೀಪುರ ಕ್ಷೇತ್ರ ೨

ಇದಲ್ಲದೆ ನಂಜನಗೂಡು, ಬಿಳಿಗೆರೆ, ಚಾಮರಾಜನಗರ (೨), ಗುಂಡ್ಲುಪೇಟೆ, ಹುಣಸೂರು (೨), ಕೃಷ್ಣರಾಜನಗರ ಮತ್ತು ಪಿರಿಯಾಪಟ್ಟಣ ಕ್ಷೇತ್ರಗಳೂ ಇವೆ

ಸಂಸ್ಥಾನದಲ್ಲಿ ಮೇ ತಿಂಗಳು ವಿನೋಬಾಭಾವೆಯವರ ಪ್ರವಾಸ

ಆಚಾರ್ಯ ವಿನೋಬಾಭಾವೆಯವರು ಬರುವ ಮೇ ತಿಂಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವರೆಂದು ಗೊತ್ತಾಗಿದೆ. ಅವರ ಸಂಚಾರವು ಮಂಗಳೂರಿನಲ್ಲಿ ಆರಂಭವಾಗಲಿದೆ ಅದೇ ಸಂದರ್ಭದಲ್ಲಿ ಹರಿಹರದಲ್ಲಿ ಸರ್ವೋದಯ ಸಮ್ಮೇಳನವೊಂದು ನಡೆಯಬಹುದು.

ಕಾಳಿಯ ಪ್ರೀತ್ಯರ್ಥವಾಗಿ ನರಬಲಿ

ರಾಜಾಸ್ಥಾನದ ಬಿಲ್ವಾರ್ ಜಿಲ್ಲೆಯ ಗರಾರ್ ಮೂಲ ಎಂಬ ಗ್ರಾಮದಲ್ಲಿರುವ ಕಾಳಿ ದೇವಸ್ಥಾನದ ಪೂಜಾರಿಯು ನೊನ್ನೆ ಬೆಳಗ್ಗೆ ಗುಡಿಯ ಬಾಗಿಲನ್ನು ತೆಗೆದೊಡನೆಯೇ ದೇವರ ಮುಂದೆ ದೊಡ್ಡ ತಟ್ಟೆಯೊಂದರಲ್ಲಿ ಒಬ್ಬ ಮನುಷ್ಯನ ತಲೆ ಮತ್ತು ಒಂದು ಹೋತದ ತಲೆಗಳನ್ನು ಇಟ್ಟಿದ್ದುದನ್ನು ಕಂಡು ಮೂರ್ಛಿತನಾದನೆಂದು ವರದಿಯಾಗಿದೆ ದೇವರಿಗೆ ಈ ಕಾಣಿಕೆಗಳನ್ನು ಅರ್ಪಿಸಿದವನನ್ನು ಪೋಲೀಸರು ಹುಡುಕುತ್ತಿರುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಪಿಟೀಲು ಮತ್ತು ಸೆಲ್ಲೊ. ೭-೧೫ ಟಿ. ಸುಂದರರಾಜಯ್ಯಂಗಾರ್—ದೇವರ ನಾಮ ೭-೩೦ ಮತ್ತು ೮-೧೫ ಕೆ. ಎಸ್. ನಾರಾಯಣಾಚಾರ್—ಕಾವ್ಯ ವಾಚನ ಮಧ್ಯಾಹ್ನ ೧೨ ಟಿ. ಸುಂದರರಾಜಯ್ಯಂಗಾರ್—ಸಂಗೀತ ೧೨-೩೦ ಎಸ್. ವಿ ಶ್ರೀನಿವಾಸಯ್ಯಂಗಾರ್—ವೀಣೆ ೧ ಲಲಿತ ಶಿವರಾಂ ಉಭಯಕರ್—ಹಿಂದೂಸ್ಥಾನಿ ಸಂಗೀತ. ೧ ೫೦ ಪಿಟೀಲು ಮತ್ತು ಸೆಲ್ಲೊ ೨-೧೫ ಸಂಗೀತ ಕಛೇರಿ. ಸಂಜೆ ೫-೩೦ ಹಿಂದೂಸ್ಥಾನಿ ಸಂಗೀತ ೬-೫ ವಿರಾಮ ಸಂಗೀತ ೬ ೨೦ ಜಾನಪದ ಗೀತೆ ೭-೩೦ ತಾಳ ವಾದ್ಯ ಕಛೇರಿ ೮ ವೀಣಾ ವಾದನ. ೮-೩೦ ನಿಮ್ಮ ಮೆಚ್ಚಿನ ಗೀತೆ ೯-೧೫ ಭಾಷಣ. ೯-೩೦ ನಾಟಕ ೧೦.೧೫ ಗಾನ ಲಹರಿ

ಸರ್ಕಾರಿ ಮಟ್ಟದ ಸಂಬಳಕ್ಕಾಗಿ ಅರಮನೆ ನೌಕರರ ಒತ್ತಾಯ

ಅರಮನೆಯ ಕೆಳ ದರ್ಜೆ ನೌಕರರ ಸಭೆಯು ಮೊನ್ನೆ ನಡೆದು, ನೌಕರರಿಗೆ ಕೊಡಲಾಗುತ್ತಿರುವ ಸಂಬಳವು ತೀರಾ ಕಡಿಮೆಯೆಂದೂ, ಸರ್ಕಾರಿ ನೌಕರರಿಗೆ ದೊರೆಯುತ್ತಿರುವ ಮಟ್ಟಕ್ಕೆ ತಮ್ಮ ಸಂಬಳವನ್ನು ಹೆಚ್ಚಿಸಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು ಈ ಬಗ್ಗೆ ಮಹಾರಾಜರ ಕಾರ್ಯದರ್ಶಿಯವರಲ್ಲಿ ನಿಯೋಗ ಹೋಗಲೂ ಮತ್ತು ನೌಕರರ ಸಂಘವೊಂದನ್ನು ಸ್ಥಾಪಿಸಲೂ ನಿರ್ಧರಿಸಲಾಯಿತು

○ಕಾಶಿ ಬಳಿ ಇರುವ ಸಾರನಾಥದಲ್ಲಿ ಟಿಬೆಟ್ಟಿನವರ ದೇವಾಲಯವೊಂದನ್ನು ನಿರ್ಮಿಸಲು ದಲೈಲಾಮಾರವರು ಒಪ್ಪಿರುತ್ತಾರೆ. ೨ ಲಕ್ಷ ರೂ ನಿಂದ ಅದನ್ನು ನಿರ್ಮಿಸಲಾಗುವುದು. ಟಿಬೆಟ್ಟಿನಿಂದ ಬುದ್ಧ ದೇವನ ಪ್ರತಿಮೆಯನ್ನು ತಂದು ಪ್ರತಿಷ್ಠಿಸಲಾಗುವುದು

ಸಮಾಜವಾದಿ ಪಕ್ಷದವರ ಸಮ್ಮೇಳನ

ಮಧ್ಯ ಪ್ರದೇಶದ ಪ್ರತಾಪ್‌ಗಡನಗರದಲ್ಲಿ ಭಾರತದ ಸಮಾಜವಾದಿಗಳ ವಾರ್ಷಿಕ ಅಧಿವೇಶನವು ಮೊನ್ನೆ ನಡೆದು, ಮಹಾ ಚುನಾವಣೆಗಳಲ್ಲಿ ಇತರ ಪಕ್ಷಗಳೊಡನೆ ಚುನಾವಣಾ ಸಖ್ಯವನ್ನು ನಡೆಸಬಾರದೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಿತು. ದೇಶದಲ್ಲಿ ನಿರುದ್ಯೋಗ ಮತ್ತು ಬಡತನಗಳ ಬಗ್ಗೆ ಸಮ್ಮೇಳನವು ಆತಂಕವನ್ನು ವ್ಯಕ್ತಪಡಿಸಿ, ಸರ್ವಾಧಿಕಾರತ್ವವನ್ನು ಕೊನೆಗಾಣಿಸಿ ಸಮಾನ ಮತ್ತು ಸುಖೀ ಸಮಾಜವನ್ನು ಕಲ್ಪಿಸುವುದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು, ಇದನ್ನು ಸಾಧಿಸಲು ವೈಯಕ್ತಿಕ ಮತ್ತು ಸಾಮೂಹಿಕ ಕಾನೂನು ಭಂಗ ಚಳುವಳಿ ನಡೆಸುವುದು ಅಗತ್ಯವೆಂದು ಸೂಚಿಸಿತು. ಕಾಮನ್‌ವೆಲ್ತಿನಿಂದ ಭಾರತವು ಹೊರಕ್ಕೆ ಬರಬೇಕೆಂದೂ ಸೂಚಿಸಲಾಯಿತು.

ಗ್ರಾಮಾಂತರ ಸಂಸಾರಗಳಿಗೆ ತಲಾ ೨೮೩ ರೂ. ಸಾಲ

ರಿಸರ್ವ್ ಬ್ಯಾಂಕಿನ ಅಖಿಲ ಭಾರತ ಗ್ರಾಮಾಂತರ ಸಾಲದ ಸರ್ವೇಕ್ಷಣ ಸಮಿತಿಯೊಂದ ನಡೆಸಿದ ಪರಿಶೀಲನೆ ಪ್ರಕಾರ ಗ್ರಾಮಗಳ ಕೃಷಿ ಸಂಸಾರದಲ್ಲಿ ಸಂಸಾರಕ್ಕೆ [illegible] ರೂ ಸಾಲ ಇರುವುದೆಂದು ವ್ಯಕ್ತವಾಗಿದೆ. ಶೇಕಡ [illegible] ಸಂಸಾರಗಳು ಸಾಲದಲ್ಲಿ ತೊಳಲುತ್ತಿವೆ. ಬೇಸಾಯಗಾರರಲ್ಲೇ ಇದು ಹೆಚ್ಚಾಗಿದೆ. ಪ್ರತಿ ಭಾರತೀಯ ಸಂಸಾರದ ವಾರ್ಷಿಕ ವರಮಾನವು [illegible] ರೂ.

ಕಥಾ ಕಾಲಕ್ಷೇಪ

ಮೈಸೂರು ಮಂಡಿ ಮೊಹಲ್ಲಾ ಕಟೀರ್ ರೋಡಿನಲ್ಲಿರುವ ಶ್ರೀ ಕರಿ ಮಲ್ಲಣ್ಣನವರ ಧರ್ಮ ಕುಟೀರದಲ್ಲಿ ಭದ್ರಾವತಿ ಶ್ರೀ ವೆಂಕಟೇಶದಾಸರಿಂದ ಪ್ರತಿ ದಿನ ಸಂಜೆ ೭ ಗಂಟೆಗೆ ಬಸವೇಶ್ವರ ವಿಜಯ ಎಂಬ ಶಿವಕಥೆ ಮತ್ತು ಇತರ ಕಥೆಗಳು ೧೫ ದಿನಗಳ ಪರ್ಯಂತ ನಡೆಯುವುವು.

ಕಾವ್ಯ ವಾಚನ ಸ್ಪರ್ಧೆ

ಮಂಡ್ಯದ ಕರ್ನಾಟಕ ಸಂಘದ ಆಶ್ರಯದಲ್ಲಿ ಕಳೆದ ಶನಿವಾರ ಕುವೆಂಪುರವರ ಶ್ರೀ ರಾಮಾಯಣ ದರ್ಶನ ಕಾವ್ಯ ವಾಚನ ಸ್ಪರ್ಧೆಯು ನಡೆಯಿತು. ನೂತನ ಮೈಸೂರಿನ ನಾನಾ ಸಂಸ್ಥೆಗಳ ಪ್ರತಿನಿಧಿಗಳೂ, ಇತರರೂ ಭಾಗವಹಿಸಿದ್ದರು. ನಗರದಲ್ಲಿರುವ ಶ್ರೀ ವಾಲ್ಮೀಕಿ ಗಮಕ ಪಾಠಶಾಲಾ ವಿದ್ಯಾರ್ಥಿನಿಯರು ಪರ್ಯಾಯ ಪಾರಿತೋಷಕವನ್ನೂ, ಪ್ರಥಮ ಸ್ಥಾನವನ್ನೂ ಗಳಿಸಿರುವರು.

ಹಿಂದಿ ಪ್ರೊಫೆಸರರ ಭಾಷಣ

ನಗರದ ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ, ಅಲಹಾಬಾದ್ ವಿಶ್ವವಿದ್ಯಾಲಯ ಹಿಂದೀ ವಿಭಾಗದ ಅಧ್ಯಕ್ಷರಾದ ಡಾ|| ಧೀರೇಂದ್ರವರ್ಮ ಮತ್ತು ಮಧ್ಯ ಪ್ರದೇಶ ವಿಶ್ವವಿದ್ಯಾಲಯದ ಹಿಂದಿ ಪ್ರೊಫೆಸರ್ ಶ್ರೀ ವಿನಯಮೋಹನ ಶರ್ಮರವರು ನಗರದ ಹಿಂದೀ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ನಾಳೆ ಬೆಳಗ್ಗೆ ೮|| ಗಂಟೆಗೆ ಭಾಷಣ ಮಾಡುವರು. ಸರ್ವರಿಗೂ ಆಹ್ವಾನವಿದೆ.

ಶುಭಾಶಯ

ನ್ಯೂ ಇಂಡಿಯಾ ಅಷ್ಯೂರೆನ್ಸ್ ಕಂಪೆನಿಯ ಇನ್ಸ್‌ಪೆಕ್ಟರಾದ ಶ್ರೀ ಎಂ. ಎನ್ ಜಯಸಿಂಹರವರು ಮತ್ತು ದೇವರಾಜ ಮಾರ್ಕೆಟ್ಟಿನಲ್ಲಿರುವ ಸೌಭಾಗ್ಯ ಸ್ಟೋರ್ಸಿನ ಮಾಲೀಕರಾದ ಶ್ರೀ ಎನ್ ಗೋಪಾಲರಾಯರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳಿಗಾಗಿ ಕೃತಜ್ಞತೆಯನ್ನು ಸೂಚಿಸುತ್ತೇವೆ.

ಪ್ರಧಾನಿ ನೆಹರೂರವರಿಗೆ ನ್ಯೂಯಾರ್ಕ್ ನಗರಪಿತೃ ಸತ್ಕಾರ



ಪ್ರಧಾನಿ ನೆಹರೂರವರು ನ್ಯೂಯಾರ್ಕಿನಲ್ಲಿ ಭಾರತದ ರಾಯಭಾರಿ ಕಚೇರಿಯ ಔತಣ ಕೂಟದಲ್ಲಿ ಭಾಗವಹಿಸಿದಾಗ ತೆಗೆದ ಚಿತ್ರ. ಅಲ್ಲಿನ ಸ್ಥಳೀಯ ಕಲಾವಿದರೊಬ್ಬರು ಚಿತ್ರವೊಂದನ್ನು ಅವರಿಗೆ ಅರ್ಪಿಸುತ್ತಿರುವರು

ಹೋಟೇಲುಗಳು ಅನ್ನಸತ್ರಗಳಂತೆ ಸೇವೆ ಮಾಡಬೇಕು

ಮದ್ರಾಸಿನಲ್ಲಿ ಮೈಸೂರು ಗವರ್ನರರ ಭಾಷಣ

ಮದ್ರಾಸಿನಲ್ಲಿ ಶ್ರೀ ಕೆ ಸೀತಾರಾಮಯ್ಯರವರ ದಾಸಪ್ರಕಾಶ ಭವನದಲ್ಲಿ ಕಳೆದ ಶನಿವಾರ ಮೈಸೂರಿನ ಗವರ್ನರ್ ಶ್ರೀ ಜಯಚಾಮರಾಜ ಒಡೆಯರವರು ಶ್ರೀ ರಾಯರ ತಂದೆ ಗೋವಿಂದದಾಸರ ಭಾವಚಿತ್ರವನ್ನು ಅನಾವರಣ ಮಾಡಿದರು. ಶ್ರೀ ಸೀತಾರಾಮಯ್ಯನವರು ಗವರ್ನರರನ್ನು ಪೂರ್ಣಕುಂಭದೊಡನೆ ಸ್ವಾಗತಿಸಿದರು.

ಗವರ್ನರರು ತಮ್ಮ ಭಾಷಣದಲ್ಲಿ ದಾಸಪ್ರಕಾಶ ಹೋಟೇಲು ಜನಪ್ರಿಯವಾಗುತ್ತಿರುವುದಕ್ಕಾಗಿ ಸಂತೋಷವನ್ನು ಸೂಚಿಸಿದರು. ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಕೈಗೊಂಡಿರುವ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಗಳಲ್ಲಿ [illegible] ಬಂದಿದೆಯೆಂದೂ, ಇದರಿಂದ [illegible] ಅಭಿವೃದ್ಧಿಗೆ ಅವಕಾಶವಾಗುವುದೆಂದೂ, ಮಾಲೀಕರುಗಳು ಸೂಕ್ತ ರೀತಿಯಲ್ಲಿ ಜನಸೇವೆ ಮಾಡಬೇಕೆಂದೂ ತಿಳಿಸಿದರು. ಹೋಟೇಲುಗಳು ಅನ್ನಸತ್ರಗಳ ಸ್ಥಾನವನ್ನು ವಹಿಸಬೇಕೆಂದು ಸಲಹೆ ಮಾಡಿದರು.

ಕ್ಯಾಲೆಂಡರ್, ಸ್ವೀಕಾರ

ನಗರದ ಶ್ರೀ ರಾಮಪೇಟೆಯಲ್ಲಿರುವ ರಾಜಾ [illegible] ವರ್ಕ್ಸಿನವರು ಕಳುಹಿರುವ ನೂತನ ವರ್ಷದ ಇಂಗ್ಲಿಷ್ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

SHEE GANESH
TALKIES
PICNIC
(Cinemascope & Technicolor)
Extended for 2 more days

From 5—1—1957
VALUE FOR MONEY
(Technicolor & Vistavision)

Edited, Printed and Published by A R Nagarajan at Sadhvi Press, 1' Subbiu Road, Mysore

ತೋಳ ಮತ್ತು ಕುರಿಗಳ ಸ್ನೇಹ

ಕುರಿಯು ಪರಮ ವೈರಿಯೆಂದು ಪರಿಗಣಿಸುವ ತೋಳವು ಕುರಿಗಳೊಡನೆ ಸ್ನೇಹ ಬೆಳೆಸಿ ಸುದ್ದಿಯು ವರದಿಯಾಗಿದೆ. ಗುಲ್ಬರ್ಗಾ ಬ ಮಲಘಟ್ಟ ಎಂಬ ಹಳ್ಳಿಯಲ್ಲಿ ಕಳೆದ ಹಲವು ದಿನಗಳಿಂದಲೂ, ಪಕ್ಕದ ಕಾಡೊಂದರಿಂದ ಒಂದು ತೋಳವು ಬಂದು ಕುರಿ ಮಂದೆ ಮತ್ತು ನಾಯಿಯೊಡನೆ ಇದ್ದು ಸಂಜೆಯಾಗುತ್ತಲೇ ಕಾಡಿಗೆ ಹಿಂದಿರುಗುತ್ತಿದೆಯೆಂದು ಗೊತ್ತಾಗಿದೆ. ಇದುವರೆಗೆ ತೋಳನಿಂದ ಯಾವ ಪ್ರಾಣಿಗೂ ಬಾಧೆಯಾಗಿಲ್ಲ.

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತ
ಇಂದೇ ಭೇಟಿ ಕೊಡಿ
ಕೆ ಎಸ್. ಲಕ್ಷ್ಮಣ ಐಯ್ಯಂಗಾರ್
ಅಂಡ್ ಸನ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

Central Food Technological Research Institute, Mysore

TENDER NOTIFICATION

Sealed tenders are invited from furniture makers for "Making and Supplying laboratory furniture for the new Processing Wing of the Central Food Technological Research Institute Mysore

The detailed specifications relating to the work could be obtained from the Director Central Food Technological Research Institute Mysore during Office hours on payment of a sum of Rs 5 per set. The approximate value of the work is Rs 9,000 and a tender deposit of Rs. 450 has to be paid along with the tender.

The tender in duplicate along with the tender deposit paid in cash or by Bank Draft at the Office of the Institute will have to be sent so as to reach the Director, Central Food Technological Research Institute, V V Mohalla P O Mysore before 12 Noon on Saturday 12th January 1957

The tenders received will be opened by the Director Central Food Technological Research Institute, Mysore, at his office on the same day at 12-30 P M in the presence of the tenderers or their representatives who may be present at the time

The final decision regarding the disposal of the tender rests with the Council of Scientific and Industrial Research New Delhi The Director reserves the right not to accep the lowest or any of the tenders without assigning any reaso therefor

A W De SOUZA
Administrative Officer

ಲಕ್ಷ್ಮಿ
2-1-57 ರಿಂದ ಅಮೋಘ ಪ್ರಾರಂಭ . ಪ್ರತಿದಿನ 3 ಆಟಗಳು
ಜೆಮಿನಿ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ
ಕೆ ಬಿ ಸುಂದರಾಂಬಾಳ್, ಜೆಮಿನಿ ಗಣೇಶ್, ಎಂ ಕೆ ರಾಧಾ, ಕುಚಲ ಕುಮಾರಿ ಪಾತ್ರವಹಿಸಿರುವ
★ ಅವ್ವೈಯಾರ್
ಅತಿ ಶೀಘ್ರದಲ್ಲಿಯೇ ನಿರೀಕ್ಷಿಸಿರಿ : ಸತಿ ಸಾವಿತ್ರಿ
(ತೆಲುಗು ಚಿತ್ರ)

ಚಾಮುಂಡೇಶ್ವರಿ ಟಾಕೀಸ್
3 1 57 ರಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿರುವ 3ನೇ ವಾರ
ಗಮನಿಸಿ – ಮ್ಯಾಟಿನಿ 2—40 1ನೇ ಆಟ 6- 20, 2ನೇ ಆಟ 10 ಘಂಟೆಗೆ
★ ಮಾದರಕುಲ ಮಾಣಿಕ್ಯಂ
ನಟವರ್ಗ ಜೆಮಿನಿ ಗಣೇಶ್, ಸಾವಿತ್ರಿ, ನಾಗೇಶ್ವರರಾವ್, ಅಂಜಲಿದೇವಿ, ತಂಗವೇ
ಎಂ ಎನ್ ರಾಜಂ, ರಂಗಾರಾವ್, ಕನ್ನಾಂಬ, ಸಾರಂಗಪಾಣಿ, ಫ್ರೆಂಡ್ ರಾಮಸ್ವಾಮಿ
[AN EMERALD RELE



ಅತ್ಯುತ್ತಮ ಧಾತುಪುಷ್ಟಿಕ ಸಿದ್ಧೌಷಧ.
[illegible] ನಂಜನಗೂಡು [illegible]

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಆಣೆ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 ಅ[illegible]ಟ್
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಸಂಪುಟ . ೧೫] SADHVI : THURSDAY 3—1—1957 ಮೈಸೂರು : ಗುರುವಾರ ೩—೧—೧೯೫೭ : [ಸಂಚಿಕೆ : ೦೬೦

ಅಧ್ಯಕ್ಷ ನಾಸೆರರಿಂದ ಈಜಿಪ್ಟ್-ಬ್ರಿರ್ಟ ಒಪ್ಪಂದ ರದ್ದು

ಇಂದೂರು ಕಾಂಗ್ರೆಸ್ ಅಧಿವೇಶನ

ಅಖಂಡ ಜ್ಯೋತಿಯ ಮೆರವಣಿಗೆ

ಇಂದೂರಿನಲ್ಲಿ ಲಕ್ಷ್ಮೀಬಾಯಿ ನಗರದಲ್ಲಿ ಸೇರಲಿರುವ ೬೨ನೇ ಕಾಂಗ್ರೆಸ್ ಅಧಿವೇಶನಕ್ಕಾಗಿ ನಿನ್ನೆ ಅಧ್ಯಕ್ಷ ಢೇಬರ್‌ರವರು ವಿಶೇಷ ರೈಲಿನಲ್ಲಿ ಆಗಮಿಸಿದರು. ಅವರಿಗೆ ವೈಭವಪೂರಿತ ಸ್ವಾಗತ ದೊರೆಯಿತು.

ಜೋಡಿ ಎತ್ತುಗಳನ್ನು ಕಟ್ಟಿದ ವಿಶೇಷ ರಥದಲ್ಲಿ ಅಖಂಡ ಜ್ಯೋತಿಯ ಮೆರವಣಿಗೆ ನಡೆಯಿತು. ಅಧ್ಯಕ್ಷ ಢೇಬರರು ಅದರ [illegible] ವಹಿಸಿದ್ದರು. ದಾರಿಯುದ್ದಕ್ಕೂ ಹಾರಗಳನ್ನು ಅವರಿಗೆ ಅರ್ಪಿಸಲಾಯಿತು. ಮಧ್ಯಪ್ರದೇಶ ಮುಖ್ಯ ಮಂತ್ರಿ ಶುಕ್ಲರವರ ನಿಧ[illegible] ಅಧ್ಯಕ್ಷರ ಮೆರವಣಿಗೆಯನ್ನು ಈ ಸಾರಿ [illegible] ಮಾಡಲಾಯಿತು.

ಮೆರವಣಿಗೆಯ ಅಗ್ರಭಾಗದಲ್ಲಿ ೧,೫೦೦ ಸ್ವಯಂಸೇವಕರು ಅಶ್ವಾರೋಹಿಗಳಾಗಿ ಹೊರಟರು. [illegible] ರೈತರು ಭಜನೆ ಮಾಡುತ್ತ ತೆರಳಿದರು. [illegible] ಗುಡ್ಡಗಾಡಿನ ವೇಷ ಧರಿಸಿದ ಭೀಲರು [illegible] ಮಿಲಿಟರಿ ರೀತಿಯ ವಾದ್ಯವನ್ನು ಬಾರಿಸುತ್ತಾ ನಡೆದರು. ಅದರಲ್ಲಿ ಸ್ವಯಂಸೇವಕ ಬಾಲಿಕೆಯರೂ ಸೇರಿದ್ದರು. ಮೆರವಣಿಗೆ ಉದ್ದಕ್ಕೂ ತಳಿರುತೋರಣ ಸ್ವಾಗತದ ಕಮಾನುಗಳನ್ನು ಹಾಕಲಾಗಿ[illegible] ಗಂಟೆ ಕಾಲ ನಡೆದ ಈ ಮೆರವಣಿಗೆಯನ್ನು [illegible] ಲಕ್ಷ ಜನರು ನೋಡಿದರು.

ಅಧಿವೇಶನವು ಸೇರುವ ಸ್ಥಳದಲ್ಲಿ ೬೩ ಅಡಿ ಎತ್ತರದ ಬಾಗಿಲಿನಲ್ಲಿ, ಝಾನ್ಸಿ ಲಕ್ಷ್ಮೀಬಾಯಿ [illegible] ಖಡ್ಗವನ್ನು ಹಿಡಿದು ಕುದುರೆಯ ಮೇಲೆ ಕುಳಿತಿರುವ ಪೂರ್ಣಾಕಾರದ ವಿಗ್ರಹ [illegible] ಘೋಷಿಸುತ್ತಿದೆ. ಇಂದೂರನ್ನು ನಿರ್ಮಾಣ ಮಾಡಿದ ರಾಣಿ ಅಹಲ್ಯಾಬಾಯಿ ಹೋಳ್ಕರರ ಹೆಸರನ್ನು ದ್ವಾರಕ್ಕೆ ಇಡಲಾಗಿದೆ. ಮತ್ತೊಂದು ಬಾಗಿಲಿಗೆ ಪ್ರಸಿದ್ಧ ಕ್ರಾಂತಿಕಾರರಾದ ಚಂದ್ರಶೇಖರ ಆಜಾದರ ಹೆಸರು ಇದೆ. ೪೦೦ ಎಕರೆ [illegible] ಪ್ರದೇಶದ ಅಧಿವೇಶನ ಸ್ಥಳಕ್ಕೆ ಒಟ್ಟು [illegible] ಬಾಗಿಲುಗಳಿವೆ.

[illegible] ಅಧಿವೇಶನವು ಸೇರುವ ಸ್ಥಳದಲ್ಲಿ [illegible] ಜನರು ಕೂಡಬಹುದು.

ಕಲ್ಕತ್ತದಲ್ಲಿ ಲೋಕಸಭಾ ಸದಸ್ಯನ ದಸ್ತಗಿರಿ

ಕಲ್ಕತ್ತದಲ್ಲಿ ಇತ್ತೀಚೆಗೆ ಬಟ್ಟೆ ವರ್ತಕರ ಹ[illegible] ನಡೆದ ಸಂದರ್ಭದಲ್ಲಿ ಅಂಗಡಿಗಳವರು [illegible]ಗಳನ್ನು ಹಾಕುವಂತೆ ಬಲವಂತಪಡಿಸಿದರೆಂಬ ಆಪಾದನೆಗಾಗಿ ಲೋಕಸಭೆಯ ಸ್ವತಂತ್ರ ಸದಸ್ಯ ಶ್ರೀ ಮೋಹಿತಕುಮಾರಮೈತ್ರ ಮತ್ತು [illegible] ಮಂದಿಯನ್ನು ಪೊಲೀಸರು ಬಂಧಿಸಿ[illegible] ದಿನದಿಂದ ಸುಮಾರು ೧೧,೦೦೦ ಬಟ್ಟೆ [illegible] ಮುಚ್ಚಿವೆ. ೧೫,೦೦೦ ಬಟ್ಟೆ ವ್ಯಾಪಾರಿಗಳು ಮುಷ್ಕರ ನಡೆಸುತ್ತಿರುವರು. [illegible] ಲಕ್ಷ ಮಂದಿ ಕೆಲಸಕ್ಕೆ ಹೋಗಿ[illegible] ಮಾರಾಟತೆರಿಗೆಯನ್ನು ಮೂಲಸ್ಥಾನದಲ್ಲಿ ತೆಗೆದುಕೊಳ್ಳದೆ ತಮ್ಮಿಂದ ವಸೂಲು ಮಾಡುತ್ತಿರುವುದನ್ನು ಅವರು ಪ್ರತಿಭಟಿಸುತ್ತಿರುವರು.

ಸಂಸ್ಥಾನದಲ್ಲಿ ಒಂದೇ ವಿಧದ ವಿದ್ಯಾಭ್ಯಾಸ

ವ್ಯವಸ್ಥೆಗಾಗಿ ಸಮಿತಿಯೊಂದರ ರಚನೆ

ಬೆಂಗಳೂರು ೩

ಸಂಸ್ಥಾನದಲ್ಲೆಲ್ಲಾ ಒಂದೇ ರೀತಿಯ ವಿದ್ಯಾಭ್ಯಾಸದ ಏರ್ಪಾಡಿಗೆ ಸರ್ಕಾರದವರು ಕ್ರಮ ಕೈಗೊಂಡಿರುತ್ತಾರೆ. ಸಂಸ್ಥಾನದ ಎಲ್ಲಾ ಮಟ್ಟಗಳಲ್ಲೂ ಅನ್ವಯಿಸ[illegible] ತಕ್ಕ ವ್ಯವಸ್ಥೆಯನ್ನು ಸೂಚಿಸುವುದಕ್ಕಾಗಿ [illegible] ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು [illegible]ಗಿದೆ. ಅದರಲ್ಲಿ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ವೈಸ್ ಛಾನ್ಸಲರುಗಳು, ಸಂಸ್ಥಾನದ ವಿದ್ಯಾಧಿಕಾರಿಗಳು, ಧಾರವಾಡದ ಪ್ರೊ|| ಗೋಕಾಕ್, ಬೆಂಗಳೂರಿನ ಡಾ|| ಸಂದೀಮರ್, ಮಂಗಳೂರಿನ ಶ್ರೀ ಸಿ. ಎ. ಲೋಬೊ, ಕೊಡಗಿನ ಶ್ರೀ [illegible] ಬೆಂಗಳೂರು [illegible] ಮತ್ತು ರಾಯಚೂರು ಡಿ. ಡಿ. ಪಿ. ಐ. [illegible] ಮತ್ತು ಗುಲ್ಬರ್ಗದ ಶ್ರೀ ಎಸ್. ಕೃಷ್ಣರಾಯರು ಸದಸ್ಯರಾಗಿರುವರು. ಶಿಕ್ಷಣ [illegible] ಸಮಿತಿ ಕಾರ್ಯದರ್ಶಿ.

ಉತ್ತರ ಕರ್ನಾಟಕದಲ್ಲಿ ಬಸ್ಸುಗಳ ರಾಷ್ಟ್ರೀಕರಣ

ಧಾರವಾಡ, ಬೆಳಗಾಂ, ಕಾರವಾರ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಎಲ್ಲಾ ಬಸ್ಸುಗಳನ್ನೂ ಮೈಸೂರು ಸರ್ಕಾರದವರು ಮೊನ್ನೆ ತಮ್ಮ ವಶಕ್ಕೆ ತೆಗೆದುಕೊಂಡರು. ಈ ಸಂಬಂಧವಾಗಿ ಬೆಳಗಾವಿನಲ್ಲಿ ಡಿವಿಜನಲ್ ಕಮೀಷನರ್ ಶ್ರೀ ಕೆ. ಪಿ. ರಾಮನಾಥಯ್ಯನವರ ಕಛೇರಿಯಲ್ಲಿ ಸಮಾರಂಭವೊಂದು ನಡೆಯಿತು. ಅಲ್ಲಿ ಒಟ್ಟು ೬೦೦ ಬಸ್ಸುಗಳನ್ನು ತೆಗೆದುಕೊಳ್ಳಲಾಗಿದೆ.

ನಗರ್ಲೆ ರೇಂಜ್ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ವಾರ್ಷಿಕೋತ್ಸವ

ನಗರ್ಲೆ ರೇಂಜಿನ ಪ್ರಾಥಮಿಕ ಶಾಲಾ ಅಧ್ಯಾಪಕರುಗಳ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ನಂಜನಗೂಡಿನ ರೆಸಿಡೆನ್ಸಿ ಭವನದಲ್ಲಿ ನಡೆಯುವುದು. ಮೈಸೂರಿನ ಡಿ. ಡಿ. ಪಿ. ಐ. ಯವರಾದ ಶ್ರೀ ಟಿ. ವಾಸುದೇವಯ್ಯನವರು ಅಧ್ಯಕ್ಷತೆ ವಹಿಸುವರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಜೆಚ್. ಎ. ಶ್ರೀರಂಗರಾಜುರವರು ಭಾಷಣ ಮಾಡುವರು.

ವಿಶ್ವವಿದ್ಯಾಲಯದ ಸಿಂಡಿಕೇಟಿಗೆ ನಾಮಕರಣ

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸದಸ್ಯರನ್ನು ಛಾನ್ಸಲರರು ಈ ರೀತಿ ನಾಮಕರಣ ಮಾಡಿರುತ್ತಾರೆ. ನೆನ್ನೆಯಿಂದ ಇದು ಜಾರಿಗೆ ಬರುವುದು. ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್, ವಿದ್ಯಾಧಿಕಾರಿಗಳು, ಮಹಾರಾಜಾ, ಸೆಂಟ್ರಲ್, ಬಿ. ಎಂ. ಎಸ್. ಇಂಜನಿಯರಿಂಗ್ ಮತ್ತು ಮೈಸೂರು ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರುಗಳು, ಶ್ರೀಗಳಾದ ಎಲ್. ಸಿದ್ದಪ್ಪ, ಮಾಜಿ ಮಂತ್ರಿ ಮಹಮ್ಮದ್ ಷರೀಫ್, ಡಾ|| ನಾಗನಗೌಡ, ಎಂ. ಪಿ. ಎಲ್. ಶಾಸ್ತ್ರಿ, ಕೆ. ವಿ. ಶಂಕರೇಗೌಡ, ಓ. ವೀರಬಸಪ್ಪ, ಬಿ. ರಾಚಯ್ಯ ಮತ್ತು ಎಚ್. ಶಿವಪ್ಪ. ಹೊಸ ಶಾಸನದ ಪ್ರಕಾರ ಸಿಂಡಿಕೇಟಿಗೆ ಚುನಾವಣೆಗಳು ಮುಂದೆ ನಡೆಯಲಿವೆ.

ಬ್ರಿಟನ್ನಿನೊಡನೆ ಈಜಿಪ್ಟ್ ಒಪ್ಪಂದದ ರದ್ದು

ಸೂಯೆಜ್ಜಿಗೆ ಬ್ರಿಟಿಷ್ ಸೈನ್ಯ ಬರಲು ಅವಕಾಶವಿಲ್ಲ

ಈಜಿಪ್ಟು ೩|| ವರ್ಷಗಳ ಹಿಂದೆ ಬ್ರಿಟನ್ನಿನೊಡನೆ ಮಾಡಿಕೊಂಡಿದ್ದ ಒಪ್ಪಂದವನ್ನು ಅಧ್ಯಕ್ಷ ನಾಸರ್‌ರವರು ನೆನ್ನೆ ರದ್ದುಗೊಳಿಸಿದರು. ಹಲವು ಜರೂರಾತಿ ಸಂದರ್ಭಗಳಲ್ಲಿ ಸೂಯೆಜ್ ಕಾಲುವೆ ಪ್ರದೇಶಕ್ಕೆ ಬ್ರಿಟಿಷ್ ಸೈನ್ಯಗಳನ್ನು ಕಳುಹಿಸಲು ಒಪ್ಪಂದದ ಪ್ರಕಾರ ಅವಕಾಶವಿದ್ದಿತು. ಬ್ರಿಟನ್ನು ಈಜಿಪ್ಟಿನ ಮೇಲೆ ಧಾಳಿ ನಡೆಸಿದ ಮೇಲೆ ಈ ಒಪ್ಪಂದವು ನಿರರ್ಥಕವಾಗಿದೆಯೆಂದು ನಾಸರ್‌ರವರು ತಿಳಿಸಿರುತ್ತಾರೆ. ಈ ಒಪ್ಪಂದವನ್ನು ಏಕಮುಖವಾಗಿ ರದ್ದುಪಡಿಸುವ ಹಕ್ಕು ಈಜಿಪ್ಟಿಗೆ ಇರುವುದಿಲ್ಲವೆಂದು ಬ್ರಿಟನ್ನಿನ ವಿದೇಶಾಂಗ ಅಧಿಕಾರಿಯೊಬ್ಬರು ಹೇಳುವರು.

ಕಾಶ್ಮೀರದ ಬಗ್ಗೆ ಪಾಕಿಸ್ತಾನದ ವಿದೇಶಾಂಗ ಮಂತ್ರಿಯ ಬೆದರಿಕೆ

ನಿರಾಶ್ರಿತರು ಅಲ್ಲಿಗೆ ನುಗ್ಗಿ ಚಳುವಳಿ ನಡೆಸುವ ಸೂಚನೆ

ಕಾಶ್ಮೀರದ ಪ್ರಶ್ನೆಯನ್ನು ಭದ್ರತಾ ಸಮಿತಿಯು ಆದಷ್ಟು ಬೇಗನೆ ಪರಿಶೀಲಿಸಬೇಕೆಂದು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್‌ಖಾನ್ ನೂನರು ನೆನ್ನೆ ಸಮಿತಿ ಅಧ್ಯಕ್ಷ ರಾಮುಲೋರವರಿಗೆ ಪತ್ರ ಬರೆದು, ಈ ವಿಚಾರವಾಗಿ ಗುಡ್ಡಗಾಡಿನವರ ತಾಳ್ಮೆ ಮೀರಿರುವುದೆಂದೂ ಲಕ್ಷಾಂತರ ಕಾಶ್ಮೀರಿ ನಿರಾಶ್ರಿತರಲ್ಲಿ ಅಶಾಂತಿ ಮೂಡಿರುವುದೆಂದೂ ಸೂಚಿಸಿದರು. ಕಾಶ್ಮೀರದಲ್ಲಿ ಜನಮತಗಣನೆಯನ್ನು ನೆಹರೂರವರು ವಿರೋಧಿಸುವುದನ್ನೂ, ಕಾಶ್ಮೀರವನ್ನು ಭಾರತದಲ್ಲಿ ಐಕ್ಯಗೊಳಿಸಲು ಭಾರತ ಸರ್ಕಾರವು ಕ್ರಮ ಕೈಗೊಳ್ಳುತ್ತಿರುವುದನ್ನೂ ಸಮಿತಿಯ ಗಮನಕ್ಕೆ ತಂದು, ಈ ವಿಚಾರವನ್ನು ಇತ್ಯರ್ಥಪಡಿಸದಿದ್ದರೆ ಭಯಂಕರ ಪರಿಣಾಮವುಂಟಾಗುವುದೆಂದು ಹೇಳಿರುವರು.

ಕಾಶ್ಮೀರದ ನಿರಾಶ್ರಿತರು ತಮ್ಮ ಹಕ್ಕು ಸಾಧನೆಗಾಗಿ ಕಾಲ ವಿಳಂಬವಿಲ್ಲದೆ ಸಂಸ್ಥಾನಕ್ಕೆ ಹಿಂದಿರುಗಲು ಇಚ್ಛೆಸುತ್ತಿರುವರೆಂದೂ, ಸೀಸ್‌ಫೈರ್ ರೇಖೆಯನ್ನು ದಾಟಿ ಕಾಶ್ಮೀರದೊಳಗೆ ಪ್ರವೇಶಿಸಿ, ಕಾಶ್ಮೀರಿಗಳ ಸ್ವಯಂ ನಿರ್ಣಯಾಧಿಕಾರವನ್ನು ಪಡೆದುಕೊಳ್ಳಲು ಸಾಮೂಹಿಕ ಶಾಂತಿಯುತ ಚಳುವಳಿಯನ್ನು ನಡೆಸಲು ಆಲೋಚಿಸುತ್ತಿರುವರೆಂದೂ ನೂನರು ತಿಳಿಸಿರುತ್ತಾರೆ.

ಪೂರ್ವ ಪ್ರಷ್ಯದಲ್ಲೂ ಕಮ್ಯೂನಿಸ್ಟರ ವಿರುದ್ಧದ ಗಲಭೆ

ಪೋಲೆಂಡು ಆಡಳಿತ ನಡೆಸುತ್ತಿರುವ ಪೂರ್ವ ಪ್ರಷ್ಯದ ಭಾಗದಲ್ಲಿ ಕಮ್ಯೂನಿಸ್ಟರ ವಿರೋಧದ ಪ್ರದರ್ಶನಗಳು ಆಗುತ್ತಿವೆಯೆಂದು ವರದಿಯಾಗಿದೆ. ಪುಂಡುತನಗಳೂ ನಡೆದುದಾಗಿ ಹೇಳಲಾಗಿದೆ.

ಕಾರು-ಲಾರಿ ಡಿಕ್ಕಿಯಲ್ಲಿ ನಿಜಲಿಂಗಪ್ಪನವರಿಗೆ ಗಾಯ

ಇಂದೂರಿನ ಪ್ರಯಾಣದ ರದ್ದು

ಸ್ವಂ.ಸು ತಂತಿ] ಬೆಂಗಳೂರು ೩

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಇಂದೂರು ಕಾಂಗ್ರೆಸ್ ಅಧಿವೇಶನಕ್ಕಾಗಿ ಹೊರಡಲು ಮೋಟಾರಿನಲ್ಲಿ ವಿಮಾನ ನಿಲ್ದಾಣಕ್ಕೆ ಈ ಬೆಳಿಗ್ಗೆ ತೆರಳುತ್ತಿದ್ದಾಗ ದಾರಿಯಲ್ಲಿ ಲಾರಿಯೊಂದಕ್ಕೂ, ಅವರ ಕಾರಿಗೂ ಡಿಕ್ಕಿಯಾಗಿ ಶ್ರೀ ನಿಜಲಿಂಗಪ್ಪ, ಅವರ ಅಳಿಯ ಶ್ರೀ ಪರಮೇಶ್ವರಪ್ಪ, ಗುಬ್ಬೆಪ್ಪ ಹಳ್ಳಿಕೇರಿ ಮತ್ತು ಚೌಡಪ್ಪರೆಡ್ಡಿಯವರುಗಳಿಗೆ ಅಲ್ಪಸ್ವಲ್ಪ ಗಾಯವಾಯಿತು.

ಎಲ್ಲರಿಗೂ ಚಿಕಿತ್ಸೆ ನಡೆಸಲಾಯಿತು. ನಿಜಲಿಂಗಪ್ಪನವರ ತಲೆಗೆ ಪೆಟ್ಟು ಬಿದ್ದಿದೆ.

ಶ್ರೀಗಳಾದ ವಿ. ವೆಂಕಟಪ್ಪನವರೂ ಮತ್ತು ಎಚ್. ಚನ್ನಯ್ಯನವರೂ ಇಂದೂರಿಗೆ ಪ್ರಯಾಣ ಬೆಳೆಸಿದರು. ಶ್ರೀ ನಿಜಲಿಂಗಪ್ಪನವರ ಪ್ರಯಾಣ ರದ್ದಾಯಿತು.

ನೂತನ ವೇತನದ ದರ್ಜೆಯಿಂದ ಹೊಸಬರಿಗೆ ಅನುಕೂಲ

ನಾನ್ ಗೆಜೆಟೆಡ್ ನೌಕರರಲ್ಲಿ ಅತೃಪ್ತಿ

ಬೆಂಗಳೂರು ೩

ಸರ್ಕಾರದವರು ಮೊನ್ನೆ ಹೊರಡಿಸಿದ ಸಂಬಳದ ಪುನರ್ವಿಮರ್ಶೆ ಆಜ್ಞೆಯಿಂದ ಹೊಸದಾಗಿ ಕೆಲಸಕ್ಕೆ ಸೇರುವವರು ಮತ್ತು ನಿವೃತ್ತರಾಗಲಿರುವ ಹಲವರಿಗೆ ಮಾತ್ರ ಅನುಕೂಲವಾಗಿದೆಯೆಂದೂ, ಸೇವೆಯ ಮಧ್ಯಕಾಲದಲ್ಲಿರುವ, ತರಪೇತಾದ ನೌಕರರಿಗೆ ತೀರಾ ನಿರಾಶೆಯಾಗಿದೆಯೆಂದೂ ನಾನ್ ಗೆಜೆಟೆಡ್ ನೌಕರರ ಸಂಘದವರು ಹೇಳಿಕೆಯೊಂದರಲ್ಲಿ ತಿಳಿಸಿರುತ್ತಾರೆ. ಹಲವು ವಿದ್ಯಮಾನಗಳಲ್ಲಿ ನೌಕರರು ತಮ್ಮ ತಾತ್ಕಾಲಿಕ ಪರಿಹಾರಕ್ಕಿಂತಲೂ ಕಡಿಮೆ ಪಡೆಯಬೇಕಾಗುವುದೆಂದೂ ಸೂಚಿಸಲಾಗಿದೆ. ಕೆಲವರಿಗೆ ತಾತ್ಕಾಲಿಕ ಪರಿಹಾರದ ಮೊತ್ತದ ಮೇಲೆ ಹಲವು ಆಣೆಗಳು ಲಭ್ಯವಾಗುವುವೆಂದು ತಿಳಿಸಲಾಗಿದೆ. ಸಂಬಳದ ಕನಿಷ್ಠ ದರ್ಜೆಯನ್ನು ಹೆಚ್ಚಿಸುವುದನ್ನು ಸ್ವಾಗತಿಸಲಾಗಿದೆ.

ಅಂಚೆ ಮತ್ತು ತಂತಿ ನೌಕರರಿಂದ ಸಂಬಳದ ನಿರಾಕರಣೆ

ಮೈಸೂರು ೩

ಎರಡನೇ ಸಂಬಳ ಸಮಿತಿಯನ್ನು ರಚಿಸದಿರುವುದಕ್ಕಾಗಿಯೂ ಮತ್ತು ಹೆಚ್ಚು ತುಟ್ಟಿಭತ್ಯ ಕೊಡುವಂತೆ ಒತ್ತಾಯಪಡಿಸಲೂ ನೆನ್ನೆ ನಗರದ ಅಂಚೆ ಮತ್ತು ತಂತಿ ನೌಕರರಾರೂ ಸಂಬಳವನ್ನು ಸ್ವೀಕರಿಸದೆ ಪ್ರತಿಭಟನೆಯನ್ನು ಸೂಚಿಸಿದರು. ಟೆಲಿಫೋನ್ ಎಕ್ಸ್‌ಚೇಂಜ್ ಆವರಣದಲ್ಲಿ ಸಂಬಳದ ಮುಷ್ಕರ ದಿನಾಚರಣೆಯನ್ನು ನಡೆಸಲಾಯಿತು. ಶ್ರೀ ಬಿ. ಕೆ. ರಾಮನಾಥ್‌ರವರು ಅಧ್ಯಕ್ಷತೆ ವಹಿಸಿದ್ದರು.

ಅಂಚೆ ಮತ್ತು ತಂತಿ ನೌಕರರ ಅಖಿಲ ಭಾರತ ಸಂಘದ ನೀತಿಗೆ ಹೃತ್ಪೂರ್ವಕ ಬೆಂಬಲ ಸೂಚಿಸಿ, ಸಂಘವು ಕೊಡುವ ಆಜ್ಞೆಗಳನ್ನು ಪಾಲಿಸುವ ಬಗ್ಗೆ ನೌಕರರು ಪ್ರತಿಜ್ಞೆ ತೊಡುವರೆಂದು ತಿಳಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಜಿಲ್ಲೆಯ ಚುನಾವಣಾ ಕ್ಷೇತ್ರಗಳು

ಬೆಂಗಳೂರು ೩

ಮೈಸೂರು ಶಾಸನ ಸಭೆಯ ಚುನಾವಣಾ ಕ್ಷೇತ್ರಗಳನ್ನು ಜಿಲ್ಲೆಯಲ್ಲೂ ಮತ್ತು ಇತರ ಕಡೆ ಈ ರೀತಿ ವಿಂಗಡಿಸಲಾಗಿದೆ:—

ನಂಜನಗೂಡು ಕ್ಷೇತ್ರ— ನಂಜನಗೂಡು ಮತ್ತು ಹುಲ್ಲಹಳ್ಳಿ ಹೋಬಳಿಗಳು, ಚಿಕ್ಕಯ್ಯನ ಛತ್ರದ ಹೋಬಳಿಯ ಹಲವು ಹಳ್ಳಿಗಳು. ಬಿಳಿಗೆರೆ ಕ್ಷೇತ್ರ—ಬಿಳಿಗೆರೆ ಮತ್ತು ದೊಡ್ಡ ಕವಲಂದೆ ಹೋಬಳಿಗಳು ಮತ್ತು ಚಿಕ್ಕಯ್ಯನ ಛತ್ರದ ಹೋಬಳಿಯ ಇತರ ಹಳ್ಳಿಗಳು.

ಚಾಮರಾಜನಗರ ಕ್ಷೇತ್ರ— ಚಾಮರಾಜನಗರ ತಾಲ್ಲೂಕು ಪೂರ್ಣವಾಗಿ.

ಗುಂಡ್ಲುಪೇಟೆ ಕ್ಷೇತ್ರ— ತಾಲ್ಲೂಕು ಪೂರ್ಣ

ಹುಣಸೂರು ಕ್ಷೇತ್ರ— ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳು, ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ಹೋಬಳಿ ಮತ್ತು ಚುಂಚನಕಟ್ಟೆ ಹೋಬಳಿಯ ಹೊಸೂರು ಸರ್ಕಲ್. ಕೃಷ್ಣರಾಜನಗರ ಕ್ಷೇತ್ರ- ಹೊಸೂರು ಸರ್ಕಲ್ ಬಿಟ್ಟು ಮಿಕ್ಕ ತಾಲ್ಲೂಕು. ಪಿರಿಯಾಪಟ್ಟಣ ಕ್ಷೇತ್ರ- ರಾವಂದೂರು ಹೋಬಳಿ ಬಿಟ್ಟು ಮಿಕ್ಕ ತಾಲ್ಲೂಕು, ವಿರಾಜಪೇಟೆ ತಾಲ್ಲೂಕಿನ ಅಮ್ಮತ್ತಿನಾಡ್ ಮತ್ತು ಸೋಮವಾರ ಪೇಟೆಯ [illegible] ಹೋಬಳಿ

ಮಂಡ್ಯ ಜಿಲ್ಲೆ : ಕೃಷ್ಣರಾಜಪೇಟೆ- ಶೀಳನೆರೆ ಹೋಬಳಿ ಬಿಟ್ಟು ಕೃಷ್ಣರಾಜಪೇಟೆ ತಾಲ್ಲೂಕು ಪಾಂಡವಪುರ-ಶೀಳನೆರೆ ಹೋಬಳಿ ಮತ್ತು ಪಾಂಡವಪುರ ತಾಲ್ಲೂಕು. ಶ್ರೀರಂಗಪಟ್ಟಣ-ಕೊತ್ತತ್ತಿ ಹೋಬಳಿ ಮತ್ತು ಶ್ರೀರಂಗಪಟ್ಟಣ ತಾಲ್ಲೂಕು. ಮಂಡ್ಯ-ಕೊತ್ತತ್ತಿ ಹೋಬಳಿ ಬಿಟ್ಟು ಉಳಿದ ತಾಲ್ಲೂಕು. ಮಳವಳ್ಳಿ-ಚಿಕ್ಕರಸಿನಕೆರೆ ಹೋಬಳಿ ಮತ್ತು ಮಳವಳ್ಳಿ ತಾಲ್ಲೂಕು. ಮದ್ದೂರು-ಚಿಕ್ಕರಸಿನಕೆರೆ ಹೋಬಳಿ ಬಿಟ್ಟು ಉಳಿದ ತಾಲ್ಲೂಕು ಮತ್ತು ನಾಗಮಂಗಲ ತಾಲ್ಲೂಕಿನ ದೇವಲಾಪುರ [illegible] ಸರ್ಕಲ್. ನಾಗಮಂಗಲ-ದೇವಲಾಪುರಂ [illegible] ಸರ್ಕಲ್ ಬಿಟ್ಟು ಉಳಿದ ತಾಲ್ಲೂಕು.

ಸಂಸ್ಥಾನದಲ್ಲಿ ಒಟ್ಟು [illegible] ಚುನಾವಣಾ ಸ್ಥಾನಗಳಿವೆ ಈ ಪೈಕಿ [illegible] ರಿಸರ್ವ್ ಆದುವು.

ಸಾರ್ ಪ್ರದೇಶ ಪುನಃ ಜರ್ಮನಿಗೆ

ಯೂರೋಪಿನ ಅಂತರರಾಷ್ಟ್ರೀಯ ವ್ಯಾಜ್ಯಗಳ ಪೈಕಿ ಅತ್ಯಂತ ಕಠಿಣ ಪ್ರಸಂಗಗಳನ್ನುಂಟು ಮಾಡಿದ್ದ ಪ್ರಶ್ನೆಗಳಲ್ಲಿ ಒಂದಾದ ಸಾರ್ ಪ್ರದೇಶದ ಆಡಳಿತದ ವಿವಾದವು ಮೊನ್ನೆ ಕೊನೆಗೊಂಡಿತು. ಆ ಪ್ರದೇಶವನ್ನು ಫ್ರಾನ್ಸು ಜರ್ಮನಿಗೆ ಒಪ್ಪಿಸಿತು. ಈ ಬಗ್ಗೆ ಸಂತೋಷ ಸೂಚಿಸಲು ಅಲ್ಲಿ ಚರ್ಚ್ ಗಂಟೆಗಳನ್ನು ಬಾರಿಸಲಾಯಿತು; ಸೈರನ್ನುಗಳು ಕೂಗಿದುವು; ಮತ್ತು ಬಾಣಬಿರುಸುಗಳನ್ನು ಹಾರಿಸಲಾಯಿತು.

ಕಳ್ಳ ಮತದಾನ ತಪ್ಪಿಸಲು ಹೊಸ ಕ್ರಮ

ಬರುವ ಮಹಾ ಚುನಾವಣೆಗಳಲ್ಲಿ ಕಳ್ಳ ಮತದಾನಗಳಾಗುವುದನ್ನು ತಪ್ಪಿಸಲು ಭಾರತದ ಮುಖ್ಯ ಚುನಾವಣಾ ಕಮಿಷನರರು ಹೊಸ ಸೂಚನೆಗಳನ್ನು ಕೊಡಲಿದ್ದಾರೆ. ಪ್ರತಿ ಓಟರನೂ ನ್ಯಾಯವಾಗಿ ಮತದಾನ ಕೊಡತಕ್ಕವನೇ ಎಂಬುದನ್ನು ಪೋಲಿಂಗ್ ಬೂತುಗಳಲ್ಲಿ ಪರೀಕ್ಷಿಸಲಾಗುವುದು. ಓಟು ಚೀಟಿ ಕೊಡುವ ಮುಂಚೆ ಓಟುದಾರನ ರುಜು ಅಥವಾ ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳಲಾಗುವುದೆಂದೂ, ಇದರಿಂದ ಅಕ್ರಮಗಳು ತಪ್ಪಲು ಸಾಧ್ಯವೆಂದೂ ಹೇಳಲಾಗಿದೆ.

ಆರತಕ್ಷತೆ

ನಗರದ [illegible] ಆಸ್ಪತ್ರೆಯಲ್ಲಿರುವ [illegible] ಶ್ರೀ ಪಿ. ವೆಂಕಟರಾಮಯ್ಯ [illegible] ಶ್ರೀ ಪಿ. ಲಕ್ಷ್ಮಣರಾಯರಿಗೆ ಬೆಂಗಳೂರಿನ ಜವಾಹಿರಿ ವರ್ತಕರಾದ ಶ್ರೀ ಟಿ. [illegible] ಕುಮಾರಿ ಸೌ|| [illegible] ವಿವಾಹ ನಡೆಸಿದ ಸಂದರ್ಭದಲ್ಲಿ ಕಳೆದ ಭಾನುವಾರ ನಗರದಲ್ಲಿ ಆರತಕ್ಷತೆಯನ್ನು ಏರ್ಪಡಿಸಿದ್ದರು

ಕಾಂಗ್ರೆಸ್ ಉಮೇದುವಾರರ ವಿರುದ್ಧ ಸಂಸ್ಥೆ ಸದಸ್ಯರ ಸ್ಪರ್ಧೆ

ಬಿಹಾರಿನ ೧೨ ಜಿಲ್ಲೆಗಳ ಸುಮಾರು ೧,೦೦೦ ಮಂದಿ ಕಾಂಗ್ರೆಸ್ ಕಾರ್ಯಕರ್ತರು ಪಾಟ್ನಾದಲ್ಲಿ ಸಭೆಸೇರಿ, ಬರುವ ಮಹಾ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ಸಿನ ಅಧಿಕೃತ ಉಮೇದುವಾರರ ವಿರುದ್ಧವಾಗಿ ಸಂಸ್ಥೆಯ ಸದಸ್ಯರುಗಳನ್ನು ನಿಲ್ಲಿಸಬೇಕೆಂದು ನಿರ್ಧರಿಸಿದರು. ಇದಕ್ಕಾಗಿ ಜೆ. ಎನ್. ಸಿಂಗ್ ಎಂಬ ಶಾಸನಸಭಾ ಸದಸ್ಯರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಕಾಂಗ್ರೆಸ್ಸಿನಲ್ಲಿರುವ ಲಂಚಕೋರತನ, ಸರ್ವಾಧಿಕಾರತ್ವ ಮುಂತಾದುವನ್ನು ಎದುರಿಸಲು ಈ ರೀತಿ ನಿರ್ಧಾರ ಕೈಗೊಳ್ಳಲಾಗಿದೆ.

ಸ್ವತಂತ್ರ ಚುನಾವಣೆಗಳಿಗಾಗಿ ಜನಸಂಘದ ಕರೆ

ಭಾರತೀಯ ಜನ ಸಂಘದ ಐದನೇ ವಾರ್ಷಿಕಾಧಿವೇಶನವು ಕಳೆದ ಶನಿವಾರ ಆರಂಭವಾಗಿ ರಾಷ್ಟ್ರದಲ್ಲಿ ಸ್ವತಂತ್ರ ಮತ್ತು ನ್ಯಾಯವಾದ ಚುನಾವಣೆಗಳನ್ನು ನಡೆಸಬೇಕೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ರಾಷ್ಟ್ರೀಯತೆಯನ್ನು ಬೆಳೆಸಲು ಒಂದೇ ಸಂಸ್ಕೃತಿಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಯಿತು ಸಂಸ್ಕೃತ ಭಾಷೆಯನ್ನು ಅಭ್ಯಸಿಸುವಂತಾಗಬೇಕೆಂದು ತಿಳಿಸಲಾಯಿತು ಸ್ಥಳ ಸನ್ನಿವೇಶಕ್ಕೆ ತಕ್ಕಂತೆ ಚುನಾವಣೆ [illegible]ಗಳನ್ನು ಬೆಳೆಸಬಹುದೆಂದು ಅಭಿಪ್ರಾಯಪಡಲಾಯಿತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ಕ್ಕೆ ಕ್ಲಾರಿಯೊನೆಟ್ ೭-೧೫ ಆರ್. ಲೀಲಾ-ಗೀತಾವಳಿ ೭-೩೦ ಹಿಂದಿ ವಾರ್ತೆ ೭-೪೫ ಉದಯ ಸಂಗೀತ. ಮಧ್ಯಾಹ್ನ ೧೨ ಕ್ಕೆ ಕನ್ಯಾಸ್ವಾಮಿನಾಥ-ಸಂಗೀತ. ೧೨-೩೦ ವಾದ್ಯವೃಂದ ೧೨-೪೫ ವನಿತಾವಿಹಾರ. ೧-೩೦ ಕ್ಲಾರಿಯೊನೆಟ್. ೨-೧೫ ಗಾಯನ ಸಂಜೆ ೫-೩೦ ಸಂಗೀತ ಕಛೇರಿ. ೬-೧೫ ವಿನೋದ ಸಂಗೀತ ೬-೩೦ ನೃತ್ಯ ಸಂಗೀತ ೭-೩೦ ರೇಡಿಯೊ ಸಂದರ್ಶನ-ಪರಿಚಯ ಪ್ರಸಂಗ [illegible] ದ್ವಾರಂ ನರಸಿಂಹರಾವ್ ಪಿಟೀಲು-[illegible] ದೆಹಲಿಯಿಂದ [illegible] ಸಂಧ್ಯಾ-ನಾಟಕ ಗೀತೆ [illegible] ತರಂಗ. [illegible] ಚಿತ್ರ ಸಂಗೀತ. [illegible] ಭಾವ ಗೀತೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು ಕೊಯಮುತ್ತೂರು ಸಣ್ಣ	೨೬	೧೨	೦	೨೯	೧೨	೦
[illegible]	೨೫	೪	೦	೨೮	೦	೦
ಕೆಂಬತಿ	೨೬	೮	೦	೨೨	೧೨	೦
ಕಡ್ಲೆ	೨೬	೧೨	೦			
ರಾಗಿ	೨೭	೩	೦	೪೪	೩	೦
ಜೋಳ	೪೧	೧೪	೦	೪೪	೧೨	೦
ಕಲೆಕಾಯಿ	೧೬	೮	೦	೨೪	೬	೦
ಹುಚ್ಚೆಳ್ಳು	೪೦	೧೪	೦	೪೫	೦	೦
ಹರಳುಬೀಜ	೪೫	೦	೦	೪೫	೧೨	೦
ಹುರುಳಿ	೨೪	೦	೦	೨೫	೧೨	೦
ಹಲಸಂದೆ	೪೩	೩	೦	೫೫	೦	೦
ಹೆಸರು	೪೫	೪	೦	೫೩	೦	೦
ತೊಗರಿ	೩೬	೦	೦			
ಉದ್ದು	೬೨	೩	೦			
ಕಡಲೆ	೪೫	೩	೦			
ಸೆಣಬಿನ ಬೀಜ	೩೫	೩	೦	೩೬	೧೨	೦
ಧನಿಯ	೨೫	೦	೦	೨೬	೬	೦
ಮೆಣಸಿನಕಾಯಿ	೯	೮	೦	೨೧	೦	೦
ಹುಣಸೇಹಣ್ಣು	೩	೧	೦	೪	೧೪	೦
ಸೀಗೆಕಾಯಿ	೮	೦	೦			

ಅಪ್ಪಟವಾದ
ಹಸುವಿನ ಹಾಲು
ದರ : ಪೌಂಡು 1ಕ್ಕೆ 0-3-6
1/2 ಪೌಂಡಿಗೆ 0-1-9
ನಿಮ್ಮ ಮನೆಗಳಿಗೇ ತರಿದುಕೊಡಲಾಗುತ್ತೆ.
ಒಂದೇ ಭೇಟಿ ಕೊಟ್ಟು ಪರೀಕ್ಷಿಸಿ
ಗೋಕುಲ ಡೈರಿ ಫಾರಂ,
(ಬ್ರಾಂಚ್) ಅಂಬಳೆ ಅಣ್ಣಯ್ಯ ಪಂಡಿತರ
ಛತ್ರದ ಹಿಂಭಾಗ,
ನೂರಡಿ ರಸ್ತೆ, ಮೈಸೂರು.

ಪೌರಸಭಾಧಿವೇಶನ

ನಂಜನಗೂಡು ೩

ಇಲ್ಲಿನ ಪುರಸಭೆಯು ಕಳೆದ ೩೦ನೇ ತಾರೀಕು ಶ್ರೀ ಕೆ. ವೆಂಕಟಸುಬ್ಬರವರ ಅಧ್ಯಕ್ಷತೆಯಲ್ಲಿ ನಡೆಯಿತು. ಟವನ್ನಿನಲ್ಲಿ ಮೈಸೂರು ಬ್ಯಾಂಕಿನ ಶಾಖೆಯೊಂದನ್ನು ಏರ್ಪಡಿಸುವಂತಾಗಬೇಕೆಂದು ಶ್ರೀ ಬಿ ಎ ಬಾಲಸುಬ್ರಹ್ಮಣ್ಯಂರವರು ಕೋರಿದರು.

ಇಲ್ಲಿನ ಅಂಚೆ ಕಛೇರಿಯಲ್ಲಿ ಭಾನುವಾರದ ಎಕ್ಸ್‌ಪ್ರೆಸ್ ಡೆಲಿವರಿ ಮತ್ತು ಕ್ಲಿಯರೆನ್ಸ್ ಅನ್ನು ಏರ್ಪಡಿಸುವಂತೆ ಇಲಾಖೆಯವರನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ದನಗಳ ಜಾತ್ರೆಯನ್ನು ನಡೆಸಲು ೫೦೦ ರೂ.ಗಳನ್ನೂ, ಸೊಳ್ಳೆ ಕಾಟ ತಪ್ಪಿಸಲು ೫೦೦ ರೂ. ಅನ್ನೂ ಮಂಜೂರು ಮಾಡಲಾಯಿತು

ಟವನ್ನಿನಲ್ಲಿ ಕ್ರೀಡಾಂಗಣವನ್ನು ಏರ್ಪಡಿಸುವಂತೆ ಆಗಬೇಕೆಂದು ಶ್ರೀ ಎಲ್. ನಾಗಪ್ಪನವರು ಸಲಹೆ ಮಾಡಿದರು.

ಹಂಗೇರಿಗೆ ಚೌರವರ ಭೇಟಿ

[illegible] ಪೋಲೆಂಡ್ ಮತ್ತು ಅಫ್ಘಾನಿಸ್ತಾನಗಳಿಗೆ ಭೇಟಿ ಕೊಡಲಿರುವ ಚೀಣದ ಪ್ರಧಾನಿ ಚೌ ಎನ್ ಲೈಯವರು ಹಂಗೇರಿಗೂ ಹೋಗಬಹುದೆಂದು ಹೇಳಲಾಗಿದೆ. ಹಂಗೇರಿಯಲ್ಲಿ ವಿರಸ ಪರಿಸ್ಥಿತಿಯನ್ನು ಕೊನೆಗಾಣಿಸಲು ಅಲ್ಲಿಗೆ ಚೌರವರ ಭೇಟಿಯಿಂದ ಸಾಧ್ಯವಾಗುವುದೆಂದು ನೆಹರೂರವರು ನಂಬಿರುತ್ತಾರೆಂದು ಹೇಳಲಾಗಿದೆ. ಚೌರವರು ಪುನಃ ಭಾರತಕ್ಕೆ ಬರಲಿರುವರು.

○ ಪುದುಚೇರಿಯಲ್ಲಿ ಇತ್ತೀಚೆಗೆ ಒಬ್ಬ ಮಹಿಳೆಯು ಏಕಕಾಲದಲ್ಲಿ ಹಡೆದ ಐದು ಮಕ್ಕಳ ಪೈಕಿ ೩ ಮೃತಪಟ್ಟವು ಇನ್ನೊಂದು ಅಸ್ವಾವಸ್ಥೆಯಲ್ಲಿದೆ

WANTED

A young hand with under-graduate and Senior Grade Typewriting qualifications Apply to :-

Mangalore Ganesha
Beedi Works,
Santhepet, Mysore

Edited, Printed and Published by A. R. Nagarajan at Sadhvi Press, D. Subbiah Road, Mysore

ಚೀಣಾ ಪ್ರಧಾನಿ ಚೌ ಎನ್ ಲೈ ಯವರು ಸ್ವದೇಶಕ್ಕೆ ವಾಪಸ್

ಚೀಣದ ಪ್ರಧಾನಿ ಚೌ ಎನ್ ಲೈಯವ ರತ ಮತ್ತು ಇತರ ದಕ್ಷಿಣ ಏಷ್ಯಾ ರಾಜ್ಯ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಪೀಕಿಂಗಿಗೆ ತೆರಳಿದರು. ಪ್ರಧಾನಿ ನೆಹ ರೊಡನೆ ಅವರು ಭಕ್ರಾ-ನಾಂಗಲ್ ಯೋ ಸ್ಥಳಕ್ಕೆ ಭೇಟಿಯಿತ್ತರು. ಅದು ಭಾರತ ತ್ಯಂತ ದೊಡ್ಡ ಯೋಜನೆಯಾಗುವುದಲ್ಲದೆ, ವಿಖ್ಯಾತವೂ ಆಗುವುದೆಂದು ಅವರು ಅಲ್ಲಿಗೆ ತಮ್ಮ ಭೇಟಿಯು ತುಂಬಾ ಉಪ ವಾಗಿದ್ದಿತೆಂದೂ, ಅದರಿಂದ ಅನೇಕ ವಿ ನ್ನು ಅರಿಯಬಹುದೆಂದೂ ತಿಳಿಸಿದರು. ಮತ್ತು ಚೀಣಗಳು ವಿಶ್ವ ಶಾಂತಿ ಮತ್ತು ದರ್ಗಗಳ ಸಲುವಾಗಿ ಜಂಟಿ ಕ್ರಮ ಜರು ದೆಂದೂ, ಉಭಯ ರಾಷ್ಟ್ರಗಳ ನಡುವೆ ಯಾವ ತಿಕ್ಕಾಟವೂ ಬರುವುದಿಲ್ಲವೆಂದು ಭರವಸೆ ಕೊಡುವುದಾಗಿಯೂ ಅವರು ದರು.

ರಣಜಿತ್ ಟಾಕೀಸ
4—1—57ರಿಂದ : ಅಮೋಘ
ಪ್ರತಿ ದಿನ ಮೂರು ಪ್ರದರ್ಶನಗಳು
ಬ್ಲ್ಯಾಕ್ ಅಂಡ್ ವೈಟ್ ಮೂವಿಸ್
ಪಾ
ಕೆ
★ ಟ್ ★
ಮಾ
ರ್
ತಾರಾಗಣ:- ದೇವ್ ಆನಂದ್, ಗೀತಾಬಾ
ನಾದಿರಾ, ಗೋಪ್ ಮತ್ತಿತರರು
ಇಂಪಾದ ಸಂಗೀತದಿಂದಲೂ, ಮನಸೆ
ನೃತ್ಯಗಳಿಂದಲೂ ಮತ್ತು ರೋಮಾ
ದೃಶ್ಯಗಳಿಂದಲೂ ಕೂಡಿರುವ ಈ ಚಿತ್ರ
ವನ್ನು ನೋಡಲು ಮರೆಯಬೇಡಿ

Central Food Technological Research Institute, Myso

TENDER NOTIFICATION

Sealed tenders are invited from furniture dealers making and supplying office furniture for the gene use of the Institute.

The detailed specifications and connected drawi relating to the work could be obtained from the Admi trative Officer, Central Food Technological Resea Institute, V. V. Mohalla, Mysore, during Office hours payment of a sum of Rs. 5 per set. The approximate va of the work is Rs. 8,000 and a tender deposit of Rs. 400 to be paid along with the tender.

The completed tender in duplicate along with the ten deposit paid in cash or by Bank Draft at the Office of Institute, will have to be sent so as to reach the undersig before 4 P.M. on Tuesday the 15th January 1957.

The tenders received will be opened by the undersig at his office on the same day at 4-30 P.M. in the presence the tenderers or their representatives who may be pres at the time.

The final decision regarding the disposal of the ten rests with the Council of Scientific and Industrial Resea New Delhi. The Director of the Institute reserves right not to accept the lowest or any of the tenders with assigning any reason therefor.

A. W. De SOU
Administrative O

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು : ಫೋನ್ 446

ಸಂಪುಟ : ೧೫] SADHVI : FRIDAY 4—1—1957 ಮೈಸೂರು : ಶುಕ್ರವಾರ ೪—೧—೧೯೫೭ : [ಸಂಚಿಕೆ : ೦೧

ರಷ್ಯದ ಶಸ್ತ್ರ ಸನ್ಯಾಸ ಯೋಜನೆಗೆ ತ್ರಿರಾಷ್ಟ್ರಗಳ ತಿರಸ್ಕಾ

ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆ

ನೆಹರೂರವರಿಂದ ದೇಶೀಯ ಸಮಾಜವಾದದ ಪ್ರತಿಪಾದನೆ

ಲಕ್ಷ್ಮೀಬಾಯಿನಗರ ೪

ಕಾಂಗ್ರೆಸ್ ಅಧಿವೇಶನದ ವಿಷಯನಿಯಾಮಕ ಸಮಿತಿಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಹಾ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ಸು ಹೊರಡಿಸಲಿರುವ ಕರಡು ಪ್ರಣಾಳಿಕೆಯನ್ನು ಮಂಡಿಸಿದರು ಕಾರ್ಯಕಾರಿ ಸಮಿತಿಯು ವು ಹಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿದ್ದರು. ಪಂಡಿತ ಪಂತರು ಅನುಮೋದಿಸಿದರು

ನೆಹರೂರವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸಿನ ಗುರಿಯು ಭಾರತೀಯ ವಿಧಾನವುಳ್ಳ ಸಮಾಜವನ್ನು ಸಾಧಿಸುವುದೇ ಆಗಿದೆಯೆಂದೂ, ಅದನ್ನು ಶಾಂತಿಯುತವಾಗಿಯೂ, ಪ್ರಜಾಸತ್ತಾತ್ಮಕವಾಗಿ ನಡೆಸಬೇಕೆಂಬುದೇ ಕಾಂಗ್ರೆಸ್ಸಿನ ಅಪೇಕ್ಷೆಯೆಂದೂ ಹೇಳಿದರು. ಕಮ್ಯೂನಿಸಂ ತತ್ವದಲ್ಲಿ ಪ್ರಜಾಸತ್ತಾತ್ಮಕ ವಿಧಾನವಿರುವುದಿಲ್ಲವೆಂದು ಹೇಳಿ, ಹಂಗೆರಿ ಘಟನೆಗಳನ್ನು ಉದಹರಿಸಿದರು. ಅಲ್ಲಿ ಕಮ್ಯೂನಿಸ್ಟರ ಸಮಾಜವಾದವು ಹೊರಗಿನಿಂದ ಹೊರಿಸಲ್ಪಟ್ಟುದೇ ಅಲ್ಲಿನ ವಿಷಾದಕರ ಘಟನೆಗಳಿಗೆ ಕಾರಣವಾಯಿತೆಂದು ಅಭಿಪ್ರಾಯಪಟ್ಟರು.

ಇಡೀ ವಿಶ್ವವು ಭಾರತದ ಕಡೆ ನೋಡುತ್ತಿರುವುದೆಂದೂ, ಇಲ್ಲಿನ ಪ್ರಗತಿ ಬಗ್ಗೆ ಸ್ನೇಹಿತರು ಪ್ರಶಂಸೆ ಮಾಡುತ್ತಿರುವರೆಂದೂ, ಇತರರು ಅಸೂಯೆಪಡುತ್ತಿರುವರೆಂದೂ, ದೇಶದ ಬಡತನವನ್ನು ಹೋಗಲಾಡಿಸಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದೂ, ಪ್ರಗತಿಯ ಸಾಧನೆಗೆ ಬೇರೆ ಸಮೀಪದ ದಾರಿಯಿಲ್ಲವೆಂದೂ ಹೇಳಿದರು.

ನೆಹರೂರವರು ತಮ್ಮ ಭಾಷಣದಲ್ಲಿ ಭಾರತೀಯ ಕಮ್ಯೂನಿಸ್ಟರು ಮತ್ತು ಸಮಾಜವಾದಿಗಳು ವಿದೇಶೀಯ ಸಮಾಜವಾದವನ್ನು ಬಿಗಿಯಾಗಿ ಹಿಡಿದುಕೊಂಡರೆ ಫಲ ಸಿಗುವುದಿಲ್ಲವೆಂದೂ, ಭಾರತದಲ್ಲಿ ಸ್ವದೇಶೀಯ ಸಮಾಜವಾದವು ಬೆಳೆಯಬೇಕೆಂದೂ ನುಡಿದರು. ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ಸಭ್ಯ ಮಾರ್ಗವನ್ನೇ ಅವಲಂಬಿಸಬೇಕೆಂದು ಹೇಳಿದರು.

ಪಂಡಿತ ನೆಹರೂರವರು ಕವಿ ಮಹಮದ್ ಇಕ್ಬಾಲ್ ಸಾರೆಜಹಾ ಸೆ ಅಚ್ಛಾ ಹಿಂದೂಸ್ತಾನ್ ಹಮಾರಾ ಎಂಬ ಕವನವನ್ನೂ ಹಾಡಿದರು.

ಸಂಬಳದ ಹೊಸ ಸ್ಕೇಲುಗಳ ಬಗ್ಗೆ ೧ ವಾರದಲ್ಲಿ ಪ್ರಕಟಣೆ

ಸಂಸ್ಥಾನ ಸರ್ಕಾರದವರು ನೌಕರರಿಗೆ ನೂತನವಾಗಿ ಕೊಡಲಿರುವ ಸಂಬಳದ ಸ್ಕೇಲುಗಳ ಬಗ್ಗೆ ೧ ವಾರದಲ್ಲಿ ಅಧಿಕೃತ ಪ್ರಕಟಣೆಯನ್ನು ಹೊರಡಿಸಲಿರುವರೆಂದು ಗೊತ್ತಾಗಿದೆ. ಹೊಸ ಸ್ಕೇಲುಗಳನ್ನು ಜಾರಿಗೆ ತರುವ ಸಂಬಂಧದಲ್ಲಿ ಅನೇಕ ವಿವರಗಳ ಪರಿಶೀಲನೆ ಮತ್ತು ನಿರ್ಧಾರಗಳು ಅವಶ್ಯಕವಾಗಿ, ಈ ಕಾರಣದಿಂದ ಸರ್ಕಾರದ ಆಜ್ಞೆ ಹೊರಬೀಳುವುದು ಸ್ವಲ್ಪ ವಿಳಂಬವಾಗಲಿದೆಯೆಂದು ಹೇಳಲಾಗಿದೆ.

ದೇಶದ ಐಕ್ಯತೆಗಾಗಿ ಎಲ್ಲರೂ ಪ್ರಯತ್ನಿಸಬೇಕು

ಕಾಂಗ್ರೆಸ್ ವಿಷಯ ನಿಯಾಮಕ ಸಮಿತಿಯಲ್ಲಿ ಅಧ್ಯಕ್ಷ ಢೇಬರರ ಭಾಷಣ

ಲಕ್ಷ್ಮೀಬಾಯಿನಗರ ೪

ಭಾರತ ರಾಷ್ಟ್ರೀಯ ಮಹಾ ಸಭೆಯ ೬೨ನೇ ಅಧಿವೇಶನದ ಸಂಬಂಧವಾದ ಕಾರ್ಯಕ್ರಮಗಳು ನೆನ್ನೆ ಇಂದೂರಿನ ಲಕ್ಷ್ಮೀಬಾಯಿನಗರದಲ್ಲಿ ಉಪಕ್ರಮವಾದುವು

ಬೆಳಗ್ಗೆ ಅಧ್ಯಕ್ಷ ಢೇಬರ್‌ರವರು ೭೦ ಅಡಿ ಎತ್ತರದ ಸ್ತಂಭದ ಮೇಲೆ ಕಾಂಗ್ರೆಸ್ ಧ್ವಜವನ್ನು ಆರೋಹಣ ಮಾಡಿದರು. ಅವರು ಮಾತನಾಡಿ ಮುಂದೆ ಬರುವ ಮಹಾ ಚುನಾವಣೆಗಳಲ್ಲಿ ಓಟುಗಳಿಸುವುದೇ ಕಾಂಗ್ರೆಸ್ಸಿನ ಧ್ಯೇಯವಲ್ಲವೆಂದೂ, ವಿಶ್ವದ ವಿಚಾರಗಳನ್ನು ಜನತೆಗೆ ಅರಿವು ಮಾಡಿಕೊಡುವುದು ಅದರ ಗುರಿಯೆಂದೂ ತಿಳಿಸಿ, ೭೦ ವರ್ಷಗಳಿಂದಲೂ ಸೇವೆ ಮತ್ತು ತ್ಯಾಗಗಳ ಸಂಕೇತವಾಗಿರುವ ಧ್ವಜವು ಮುಂದೆಯೂ ಸಂಸ್ಥೆಗೆ ಚೇತನವೀಯಲೆಂದು ಹಾರೈಸಿದರು.

ಮಧ್ಯಾಹ್ನ ಅಧಿವೇಶನದ ವಿಷಯ ನಿಯಾಮಕ ಸಮಿತಿ ಸಭೆಯು ಸೇರಿತು. ಅಧ್ಯಕ್ಷರು ಪೀಠಿಕಾ ಭಾಷಣ ಮಾಡಿ, ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯೇ ಅಧಿವೇಶನವು ಪರಿಶೀಲಿಸುವ ಮುಖ್ಯ ವಿಷಯವಾಗಿರುವುದೆಂದು ತಿಳಿಸಿದರು ಕಳೆದ ವರ್ಷ ಸಂಸ್ಥಾನ ಪುನರ್ವಿಂಗಡಣೆ ಮತ್ತು ದ್ವಿತೀಯ ಪಂಚ ವಾರ್ಷಿಕ ಯೋಜನೆಯಂತಹ ಮುಖ್ಯ ಘಟನೆಗಳು ಆದುವೆಂದು ಅವರು ಹೇಳಿ,ದೇಶದಲ್ಲಿ ಐಕ್ಯತೆಯು ಮೂಡಬೇಕೆಂದು ತಿಳಿಸಿದರು. ನೆಹರೂರವರ ನಾಯಕತ್ವದಲ್ಲಿ ಭಾರತವು ವಿಶ್ವ ಶಾಂತಿಗಾಗಿ ದುಡಿದು ಖ್ಯಾತಿ ಪಡೆದಿರುವುದೆಂದು ಸೂಚಿಸಿದರು.

೧೮೫೭ರ ಕ್ರಾಂತಿ ಉತ್ಸವಕ್ಕೆ ಸಂಬಂಧಿಸಿದ ಮತ್ತು ರವಿಶಂಕರಶುಕ್ಲ ಮುಂತಾದ ನಾಯಕರ ನಿಧನಕ್ಕಾಗಿ ಸಂತಾಪ ಸೂಚನೆ ನಿರ್ಣಯಗಳನ್ನು ಅಧ್ಯಕ್ಷರು ಮಂಡಿಸಿ, ಅವು ಅಂಗೀಕರಿಸಲ್ಪಟ್ಟುವು.

ಎಸ್. ಕೆ. ಪಾಟೀಲರು ಕಾಂಗ್ರೆಸ್ಸಿನ ಸಹಕಾರ ಕಾಮನ್‌ವೆಲ್ತಿನ ಗುರಿಗೆ ಸಮಾಜವಾದಿ ಎಂಬ ಪದವನ್ನು ಸೇರಿಸುವ ನಿರ್ಣಯವನ್ನು ಸೂಚಿಸಿದರು. ಅದು ಅಂಗೀಕಾರ ಪಡೆಯಿತು.

ಸರ್ಕಾರಿ ಸಾಬೂನು ಕಾರ್ಖಾನೆ ಕೆಲಸಗಾರರಿಂದ ಮುಷ್ಕರದ ನಿರ್ಧಾರ

ಬೆಂಗಳೂರಿನ ಸರ್ಕಾರಿ ಸಾಬೂನು ಕಾರ್ಖಾನೆಯಲ್ಲಿರುವ ಕಾರ್ಮಿಕರು ಮುಷ್ಕರ ಹೂಡಲು ಸರ್ವಾನುಮತದಿಂದ ನಿರ್ಧರಿಸಿರುತ್ತಾರೆ. ಸರ್ಕಾರಿ ಕಾರ್ಖಾನೆಗಳಲ್ಲಿರುವ ನೌಕರರಿಗೆ ತಾತ್ಕಾಲಿಕವಾಗಿ ದೊರೆಯುತ್ತಿದ್ದ ಶೇಕಡ ೧೦ರ ವಿಶೇಷ ಸಂಬಳವನ್ನು ತಪ್ಪಿಸಿರುವುದೇ ಇದಕ್ಕೆ ಕಾರಣ. ಈ ಬಗ್ಗೆ ಕಳೆದ ೩೧ನೇ ತಾರೀಖು ಮತದಾನ ತೆಗೆದುಕೊಂಡು, ಕಾರ್ಖಾನೆಯ ೧೭೦ ಮಂದಿ ಕಾರ್ಮಿಕರೂ ಮುಷ್ಕರ ನಡೆಸುವುದಕ್ಕೆ ಸಮ್ಮತಿ ಸೂಚಿಸಿರುತ್ತಾರೆ.

ವಿಶ್ವ ಶಾಂತಿ ಸಾಧನೆಗಾಗಿ ಪಂಚಶೀಲದ ಪಾಲನೆ ಅಗತ್ಯ

ಮಿಲಿಟರಿ ಒಪ್ಪಂದಗಳ ರದ್ದಿಗೆ ಕಾಂಗ್ರೆಸ್ ಸಮಿತಿ ಕರೆ

ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸುವ ಸಲುವಾಗಿ ಕಾರ್ಯಕಾರಿ ಸಮಿತಿಯು ಅಂಗೀಕರಿಸಿರುವ ವಿದೇಶಾಂಗ ನೀತಿಯ ನಿರ್ಣಯದ ಪ್ರಕಾರ ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ಪರಿಹಾರಕ್ಕೆ ಹೊಸ ನೀತಿ ಮತ್ತು ಧೈರ್ಯಯುತ ಮಾರ್ಗಾವಲಂಬನೆಯು ಅಗತ್ಯವೆಂದು ಸೂಚಿಸಲಾಗಿದೆ ಶಸ್ತ್ರಾಸ್ತ್ರಗಳ ಬಲವನ್ನು ನಂಬಬಾರದೆಂದೂ, ಭಯ ಮತ್ತು ಸಂಶಯಗಳಿಗೆ ಎಡೆಯಾಗಿರುವ ಮಿಲಿಟರಿ ಕೂಟಗಳನ್ನು ರದ್ದು ಮಾಡಬೇಕೆಂದೂ ತಿಳಿಸಲಾಗಿದೆ. ಶಾಂತಿ ಸಾಧನೆಗಾಗಿ ಪಂಚಶೀಲ ತತ್ವಗಳ ಪಾಲನೆ ಅಗತ್ಯವೆಂದು ಸೂಚಿಸಿ, ಭಾರತದ ನೀತಿಯು ಎಲ್ಲ ರಾಷ್ಟ್ರಗಳೊಡನೆ ಸ್ನೇಹ ಮತ್ತು ನಿರೀಕ್ಷ್ಯ ಮನೋಭಾವದಿಂದೊಡಗೂಡಿದೆಯೆಂದು ನಿರ್ಣಯವು ತಿಳಿಸಿದೆ ನೆಹರೂರವರು ಈಜಿಪ್ಟ್ ಮತ್ತು ಹಂಗೆರಿ ಬಗ್ಗೆ ಹೊಂದಿರುವ ನೀತಿಯನ್ನು ಅನುಮೋದಿಸಲಾಗಿದೆ.

ತಿರುವನಂತಪುರದಲ್ಲಿ ಪೋಲೀಸರ ಲಾಠಿ ಪ್ರಹಾರ

ತಿರುವನಂತಪುರದಲ್ಲಿ ಹೈಕೋರ್ಟು ಶಾಖೆಯ ಚಳುವಳಿಯು ನೆನ್ನೆ ಹಿಂಸಾತ್ಮಕವಾಗಿ ಪರಿಣಮಿಸಿದುದರಿಂದ ಅಲ್ಲಿ ೧೫ ದಿನಗಳ ಕಾಲ ಪ್ರತಿಬಂಧಕಾಜ್ಞೆಯನ್ನು ವಿಧಿಸಿ, ಸಭೆ ನಡೆಸುವುದನ್ನು ನಿಷೇಧಿಸಲಾಗಿದೆ. ಸಂಜೆ ನಡೆಯಬೇಕಾಗಿದ್ದ ಸಭೆಯಲ್ಲಿ ಜನರನ್ನು ಚದುರಿಸಲೆತ್ನಿಸಿದಾಗ ಕಲ್ಲುಗಳನ್ನು ಬೀರಲಾಯಿತೆಂದೂ, ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿದರೆಂದೂ ವರದಿಯಾಗಿದೆ. ಬೆಳಗ್ಗೆ ಅಲ್ಲಿನ ಸರ್ಕಾರಿ ಭವನದ ಮುಂದೆ ಜನರ ಗುಂಪು ಸೇರಿ ಕಲ್ಲುಗಳನ್ನು ಬೀರಿದಾಗ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ೧೫ ಮಂದಿ ಪೋಲೀಸರು ಮತ್ತು ೧೨ ಜನರಿಗೆ ಕಲ್ಲು ಮತ್ತು ಲಾಠಿ ಪೆಟ್ಟಿನಿಂದ ಗಾಯವಾಗಿದೆ ೩೩ ಜನ ಸ್ವಯಂಸೇವಕರನ್ನೂ, ಇತರ ೧೨ ಮಂದಿಯನ್ನೂ ಬಂಧಿಸಲಾಗಿದೆ.

ಮಧ್ಯ ಪ್ರದೇಶದ ಮುಖ್ಯ ಮಂತ್ರಿ ಸ್ಥಾನಕ್ಕೆ ಕಟ್ಜು

ಭಾರತದ ರಕ್ಷಣಾ ಮಂತ್ರಿಯಾಗಿರುವ ಕೆ ಎ. ಕಟ್ಜುರವರು ಮಧ್ಯ ಪ್ರದೇಶದ ಮುಖ್ಯ ಮಂತ್ರಿಯಾಗಲಿರುವರೆಂದು ಹೇಳಲಾಗಿದೆ. ರವಿಶಂಕರ ಶುಕ್ಲರವರ ನಿಧನದ ಪರಿಣಾಮವಾಗಿ ಸ್ಥಾನವು ತೆರವಾಗಿ, ಈಗ ಮಂಡಲೋಯ್‌ರವರು ತಾತ್ಕಾಲಿಕ ಮುಖ್ಯ ಮಂತ್ರಿಯಾಗಿರುವರು.

○ಮಹಬೂಬ್‌ನಗರದ ಬಳಿ ಕಳೆದ ವರ್ಷ ಆದ ರೈಲು ದುರಂತಕ್ಕೆ ಚೀಫ್ ಇಂಜನಿಯರ್, ಡೆಪ್ಯುಟಿ ಚೀಫ್ ಮತ್ತು ಡಿವಿಜನ್ ಇಂಜನಿಯರುಗಳು ಕಾರಣರೆಂದು ತನಿಖೆ ನಡೆಸಿದ ಜಸ್ಟಿಸ್ ಎಸ್. ಟಿ. ದೇಸಾಯಿಯವರು ಅಭಿಪ್ರಾಯ ಸೂಚಿಸಿರುತ್ತಾರೆ.

ವಿಶ್ವ ಸಂಸ್ಥೆಯ ಮೂಲಕ ಶಸ್ತ್ರ ಸನ್ಯಾಸಕ್ಕೆ ತ್ರಿರಾಷ್ಟ್ರಗಳ

ರಷ್ಯಾ ಸಲಹೆಗೆ ತಿರಸ್ಕಾರ

ವಿಶ್ವ ಸಂಸ್ಥೆಯ ಎಲ್ಲೆಕಟ್ಟಿನೊಳಗೆ ಶಸ್ತ್ರ ಸನ್ಯಾಸ ಸಮಸ್ಯೆಯನ್ನು ಬಗೆಹರಿಸಲು ರಷ್ಯ ಪ್ರಯತ್ನಿಸಬೇಕೆಂದು ಬ್ರಿಟನ್, ಅಮೆರಿಕ ಮ ಫ್ರಾನ್ಸುಗಳು ಸೂಚಿಸಿವೆ. ಅದಕ್ಕಾಗಿ ಪಂಚ ಮಹಾ ರಾಷ್ಟ್ರಗಳ ಸಮ್ಮೇಳನದ ಅಗತ್ಯವೆಂದೂ ಅವು ತಿಳಿಸಿವೆ ಈ ಬಗ್ಗೆ ಉನ್ನ ದರ್ಜೆ ನಾಯಕರ ಸಭೆಗೆ ಇದು ಸಮಯವಲ್ಲವೆಂದೂ ಅಭಿಪ್ರಾಯಪಡಲಾಗಿದೆ. ರಷ್ಯವು ಗ್ರ ನಾಯಕರ ಸಭೆಗೆ ಸೂಚಿಸಿದ್ದಿತು.

ನಗರ ಮತ್ತು ಜಿಲ್ಲೆಯಲ್ಲಿ ಕಾಂಗ್ರೆಸ್ ಉಮೇದುವಾರರು

ಮಹಾ ಚುನಾವಣೆ ಸಂಬಂಧವಾಗಿ ಕಾಂ ಸ್ಸಿನ ಪರವಾಗಿ ಮೈಸೂರು ನಗರ ಮತ್ತು ಜಿ ಯಿಂದ ಕೆಳಗೆ ಕಂಡವರನ್ನು ಪ್ರಾದೇಶಿಕ ಕಾ ಗ್ರೆಸ್ ಚುನಾವಣಾ ಸಮಿತಿಯು ಉಮೇದುವಾರರಾಗಿ ಆರಿಸಿರುವುದಾಗಿ ತಿಳಿದುಬಂದಿದೆ:—

ನಗರ-ದಕ್ಷಿಣ: ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್, ಉತ್ತರ: ಜನಾಬ್ ಮಹಮದ್ ಖಲೀಲುಲ್ಲಾ. ತಾಲ್ಲೂಕು: ಶ್ರೀ ಕೆ. ಪುಟ್ಟಸ್ವಾಮಿ; ನಂಜನಗೂಡು: ಶ್ರೀ ಪಿ ಮಹದೇವಯ್ಯ; ಬಿಳಿಗೆರೆ : ಶ್ರೀ ಪ್ರಭುಸ್ವಾಮಿ; ಚಾಮರಾಜನಗರ ರಿಸರ್ವ್: ಶ್ರೀ ನೇರಳೆ ಮಾದಯ್ಯ; ಹುಣಸೂರು ಹೆಗ್ಗಡದೇವನಕೋಟೆ: ಶ್ರೀ ಡಿ. ದೇವರಾಜ ಅರಸ್ ಮತ್ತು ಎನ್. ರಾಚಯ್ಯ; ಗುಂಡ್ಲುಪೇಟೆ : ಶ್ರೀ ಹೆಚ್. ಕೆ. ಶಿವರುದ್ರಪ್ಪ; ಟಿ. ನರಸೀಪುರ : ಶ್ರೀ ಮರಿಗೌಡ ಅಥವಾ ಟಿ. ಪಿ ಬೋರಯ್ಯ ಮತ್ತು ಶ್ರೀಮತಿ ಕೆಂಪಮ್ಮ (ರಿಸರ್ವ್); ಕೊಳ್ಳೇಗಾಲ: ಶ್ರೀ ವೆಂಕಟರಮಣೇಗೌಡ; ಕೃಷ್ಣರಾಜನಗರ: ಶ್ರೀ ಹೆಚ್. ಎಂ. ಚನ್ನಬಸಪ್ಪ.

ಉಮೇದುವಾರರ ಆಯ್ಕೆ ಬಗ್ಗೆ ಅಸಮಾಧಾನ ಸೂಚಿಸಲು ಕಾಂ|| ಕಾರ್ಯಕರ್ತರ ಸಭೆ

ಮಹಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರುಗಳನ್ನು ಆರಿಸಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಲು ನಾಳಿದ್ದು ಮಧ್ಯಾಹ್ನ ೧ ಘಂಟೆಗೆ ಬೆಂಗಳೂರು ಕಾರ್ಪೊರೇಷನ್ ಕಛೇರಿ ಬಳಿ ಇರುವ ದೇವಾಂಗ ಸಂಘದ ಕಟ್ಟಡದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಶ್ರೀ ಪಿ. ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಫೋಟೋಗ್ರಾಫಿಕ್ ಸ್ಟುಡಿಯೋವಿನಲ್ಲಿ ಬೆಂಕಿ ಆಕಸ್ಮಿಕ

ನಗರದ ಶ್ರೀರಾಮಪೇಟೆಯಲ್ಲಿರುವ ಶ್ರೀ ವಸಂತ ಸ್ಟುಡಿಯೋವಿನಲ್ಲಿ ನೆನ್ನೆ ಮುಂಜಾನೆ ವಿದ್ಯುಚ್ಛಕ್ತಿ ಷಾರ್ಟ್‌ಸರ್ಕ್ಯೂಟಿನಿಂದ ಬೆಂಕಿಯುಂಟಾಗಿ ಸುಮಾರು ೧,೫೦೦ ರೂ. ನಷ್ಟು ಸಾಮಾನುಗಳು ನಷ್ಟವಾದುವು. ಅಗ್ನಿಶಾಮಕ ದಳದವರು ಸಕಾಲದಲ್ಲಿ ಹೋಗಿ ಬೆಂಕಿಯನ್ನು ಹತೋಟಿಗೆ ತಂದರು.

ವಿದ್ಯುಚ್ಛಕ್ತಿ ಬಳಕೆಗಾರರ ಮುಷ್ಕರ

[illegible] ಬಳಿ [illegible] ಡರ್ ಎಂಬಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯೊಂದು ಬಳಕೆಗಾರರ ಬೇಡಿಕೆಗಳನ್ನು ಪೂರೈಸಲಿಲ್ಲವೆಂದು ಪ್ರತಿಭಟಿಸಲು [illegible] ಜನರು ಕಳೆದ ೧ ರಿಂದ ವಿದ್ಯುಚ್ಛಕ್ತಿಯ ಉಪಯೋಗವನ್ನು ನಿಲ್ಲಿಸಿ, ಸೀಮೆಯೆಣ್ಣೆ ದೀಪಗಳನ್ನು ಉರಿಸಲು ಆರಂಭಿಸಿರುತ್ತಾರೆ [illegible] ಜನರು [illegible] ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಿ [illegible] ಕಂಪೆನಿಯವರು [illegible] ಆಣೆ ದರವನ್ನು [illegible] ಮಾಡಲಾಗಿದೆ

ಭಿಕ್ಷುಕರ ಸಮ್ಮೇಳನ

[illegible] ರವರು ಭಿಕ್ಷುಕರ ಸಮ್ಮೇಳನ [illegible] ಸಮ್ಮೇಳನದ [illegible] ಭಿಕ್ಷುಕರೂ ಬೌದ್ಧ ಭಿಕ್ಷುಗಳೂ ಭಾಗವಹಿಸುವ [illegible] ಭಿಕ್ಷುಕರು ತಮ್ಮ ಉದ್ಯೋಗವನ್ನು ಬಿಟ್ಟು [illegible] ಗೌರವಯುತ ಜೀವನ ನಡೆಸಿ [illegible] ಯಿಂದಲೇ ಕಾಲಯಾಪನೆ ಮಾಡಲು ಅಲ್ಲಿ ಬೌದ್ಧರು ಪ್ರತಿಜ್ಞೆ ತೊಟ್ಟಿರುವುದನ್ನು [illegible] ಗುರ್ತಿಸಿ

ಜಿಲ್ಲಾ ಸೈನಿಕರು ಮತ್ತು ನಾವಿಕರ ಸಮಿತಿ

ಮೈಸೂರು ಜಿಲ್ಲೆಯ [illegible] ಸೈನಿಕರು ನಾವಿಕರು ಮತ್ತು ವೈಮಾನಿಕರ ಸಮಿತಿಯೊಂದನ್ನು [illegible] ದ ಜಿಲ್ಲಾ ಕಚೇರಿಯಲ್ಲಿ [illegible] ಮೈಸೂರು [illegible] ರುವ [illegible] ಸಂಘಕ್ಕೆ ಒಂದು [illegible] ಹೆಸರುಗಳನ್ನು ರಿಜಿಸ್ಟರು ಮಾಡಿಸಿಕೊಳ್ಳಬಹುದೆಂದೂ, [illegible] ತಮ್ಮ ಹಿಂದಿನ ಸರ್ವಿಸ್ [illegible] ಕುಂದುಕೊರತೆಗಳ [illegible] ವ್ಯವಹಾರ ನಡೆಸಿ, [illegible] ಅವರುಗಳಿಗೆ ಸಹಾಯ [illegible]

ನಗರಕ್ಕೆ [illegible] ಭೇಟಿ

[illegible] ವಿದ್ಯುತ್ [illegible] ನೇತೃತ್ವದಲ್ಲಿ [illegible] ಸಂಜೆ [illegible] ಹಾಲಿನಲ್ಲಿ ಸ್ವಾಗತವನ್ನೇರ್ಪಡಿಸಿದ್ದಾರೆ ವಿದ್ಯುನ್ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸುವರು ಮಾರನೇ ದಿನ ಅವರು ಹಲವರು ಪ್ರಮುಖ ಸಂಸ್ಥೆಗಳಿಗೆ ಭೇಟಿ ಕೊಡುವರು

ಸ್ಟಾಕ್‌ಹೋಮಿನಲ್ಲಿ ಹೊಸ ವರ್ಷದ ವಿನೋದದಲ್ಲಿ ಗಲಭೆ

ಹೊಸ ವರ್ಷದ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಸ್ಟಾಕ್‌ಹೋಮಿನ ಜನರು ಮದ್ಯ ಕುಡಿದ ಅಮಲಿನಲ್ಲಿ ಹಿಂಸಾ ಪ್ರದರ್ಶನಗಳನ್ನು ನಡೆಸಿದರೆಂದೂ ಪೋಲೀಸರು ಖಡ್ಗಗಳನ್ನು ಝಳಪಿಸಿ ಅವರನ್ನು ಚದುರಿಸಬೇಕಾಯಿತೆಂದೂ ವರದಿಯಾಗಿದೆ ಉರಿಯುವ ಪಂಜುಗಳನ್ನು ರಸ್ತೆಗಳಲ್ಲಿ ಎಸೆದೂ ಸಮಾಧಿಗಳನ್ನು ಒಡೆದೂ ಅವರು [illegible] ಮಾಡಿದರು ಅನೇಕರಿಗೆ ಗಾಯವಾಗಿದೆ [illegible] ಮಂದಿಯನ್ನು ಬಂಧಿಸಲಾಗಿದೆ

ಅಖಿಲ ಮೈಸೂರು ಬ್ಯಾಡ್ಮಿಂಟನ್ ಟೆನ್ನಿಸ್ ಪಂದ್ಯ

ಮೈಸೂರು ಸೌತ್ ಯೂತ್ಸ್ ಸ್ಪೋರ್ಟ್ಸ್ ಕ್ಲಬ್ಬಿನವರು ನಡೆಸುತ್ತಿದ್ದ ಬ್ಯಾಡ್ಮಿಂಟನ್ ಟೆನ್ನಿಸ್ ಟೂರ್ನಮೆಂಟು ಕಳೆದ ಮಂಗಳವಾರ ಮುಕ್ತಾಯವಾಯಿತು ಕ್ಲಬ್ಬಿನ ಅಧ್ಯಕ್ಷ ಶ್ರೀ ಬಿ ವಿ [illegible] ರವರು ವಿಜಯಿಗಳಿಗೆ ರಜತ ಪಾತ್ರೆಗಳನ್ನು ಹಂಚಿದರು ಕೆ ಎಂ ಪಿ ಪಿ ಟಿ [illegible] ಜೆ ಕೆ ಮಾಧವರಾವ್‌ರವರು ಸಿಂಗಲ್ಸ್ ಫೈನಲ್ಲಿನಲ್ಲಿ ಚರಿಸ್ಪರ್ಧಾಳ್ತ್ರಮವರನ್ನೂ ಅದೇ [illegible] ಆರ್ [illegible] ಮತ್ತು [illegible] ನಾರಾಯಣರು [illegible] ಫೈನಲ್ಲಿನಲ್ಲಿ [illegible] ಮತ್ತು [illegible] ರವರನ್ನೂ ಸೋಲಿಸಿದರು

ಜೀವನದ ಹರ್ಷವನ್ನು ಸವಿಯಿರಿ

[illegible]

ವೃದ್ಧರಿಗೆ ಯೌವನ

ಯುವಕರಿಗೆ ಅಸಮಾನ ಶಕ್ತಿ

ಆರೋಗ್ಯ, ಐಶ್ವರ್ಯ, ದೀರ್ಘಾಯುಷ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನು ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಶೆ ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟು ಹೋಗಿ [illegible] ನಿಶ್ಶಕ್ತಿ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಶುಕ್ಲಸ್ಖಲನ, ಮೂಲವ್ಯಾಧಿ, [illegible] ಸಿಫಿಲಿಸ್, ಗೊನೋರಿಯಾ, [illegible] ವಾಯು ಮತ್ತು [illegible] ರೋಗಗಳಿಗೂ [illegible] ಅವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ|| [illegible] ರವರನ್ನು ([illegible]) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ [illegible] ರಿಂದ 8 ರವರೆಗೆ ಭೇಟಿ ಮಾಡಿರಿ [illegible] ಸ್ತ್ರೀ ಪುರುಷರಿಬ್ಬರ [illegible] ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವ [illegible] ಸೂಚನೆ [illegible] ಕೊಡಲಾಗುವುದು

ಅವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ

ರಾಣಾ ಮೆಡಿಕಲ್ ಹಾಲ್,

ಲೇನ್ ನಂ 1/41 ಅಶೋಕಾ ರಸ್ತೆ,

(ಮೈಸೂರು ಬ್ಯಾಂಕ್ ಬಳಿ ಖಾಲಿ ಜಾಗದಿಂದ ಮೂರನೇ ಕಟ್ಟಡ)

ಮೈಸೂರು

ಮಹಾ ಗುಜರಾತು ವಾದಿಗಳ ಗಲಭೆ; ಪೋಲೀಸರ ಲಾಠಿಪ್ರಹಾರ

ಗುಜರಾತಿನ ಆನಂದ್ ಎಂಬಲ್ಲಿ ಸೇರಿದ್ದ ಪ್ರಾಂತೀಯ ಯುವಕರ ಕಾಂಗ್ರೆಸ್ ಕೂಟದ ಮೇಲೆ ಕಳೆದ ಮಂಗಳವಾರ ಮಹಾ ಗುಜರಾತ್ ಪ್ರದರ್ಶನಕಾರರು ಕಲ್ಲು ಮುಂತಾದುವನ್ನು ಬೀರಿದರೆಂದೂ, ಅವರನ್ನು ಚದುರಿಸಲು ಪೋಲೀಸರು ಲಾಠಿ ಪ್ರಹಾರ ಮಾಡಿದರೆಂದೂ ವರದಿಯಾಗಿದೆ ನಗರದಲ್ಲಿ ವಿದ್ಯುಚ್ಛಕ್ತಿ ಸರಬರಾಜನ್ನು ಕಡಿದು ಹಾಕಲಾಗಿ ಊರಿನಲ್ಲೂ, ಸುತ್ತಮುತ್ತಲ ಗ್ರಾಮಗಳಲ್ಲೂ ಕತ್ತಲು ಕವಿದಿತ್ತು [illegible] ಮಂದಿಯ ಬಂಧನವಾಗಿದೆ

ತಿರುವನಂತಪುರದ ಮೇಯರ್ ಮತ್ತು ಲೋಕಸಭಾ ಸದಸ್ಯರ ಬಂಧನ

ತಿರುವನಂತಪುರದಲ್ಲಿ ಹೈಕೋರ್ಟಿನ ಶಾಖೆ [illegible] ಸಂಬಂಧವಾಗಿ ಸಾರ್ವಜನಿಕ ರಕ್ಷಣಾ [illegible] ಸೂಚಿಸಿದ ಪ್ರಕಾರ ಅಲ್ಲಿನ ಮೇಯರ್ [illegible] ಲೋಕಸಭಾ ಸದಸ್ಯ [illegible] ನಾರಾಯಣ [illegible] ಮತ್ತು ಇತರ ನಾಲ್ವರನ್ನು ಬಂಧಿಸಲಾಗಿದೆ ಸರ್ಕಾರಿ ಕಚೇರಿ ಮುಂದೆ ಭಾರಿ ಜನ ಸಮೂಹವು ಪ್ರದರ್ಶನ ನಡೆಸಿದಾಗ ದಸ್ತಗಿರಿಗಳಾದುವು

ಪೂನಂ ಆರ್ಟ್ಸ್ ಸಂಘ

[illegible] ಮಹಲ್ಲಿನಲ್ಲಿರುವ ಪೂನಂ ಆರ್ಟ್ಸ್ [illegible] ವಾರ್ಷಿಕೋತ್ಸವವು ಕಳೆದ [illegible] ರೀತು ಪುರಸಭಾ ಸದಸ್ಯರಾದ ಶ್ರೀ ಟಿ ನರಸಿಂಹ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಮಹಾಜನ ಪ್ರೌಢಶಾಲೆಯ [illegible] ನೆರವೇರಿತು ಈ ಸಂದರ್ಭದಲ್ಲಿ ನಾಟಕ [illegible] ಪಾತ್ರಾಭಿನಯವಲ್ಲದೆ, [illegible] ರವರ ವಾದ್ಯಗೋಷ್ಠಿ [illegible] ಏರ್ಪಾಡಾಗಿದ್ದಿತು

ಅಪ್ಪಟವಾದ

ಹಸುವಿನ ಹಾಲು

ದರ ಪೌಂಡು 1ಕ್ಕೆ 0 3-6

1 2 ಪೌಂಡಿಗೆ 0 1-9

ನಿಮ್ಮ ಎದುರಿಗೇ ಕರೆದುಕೊಡಲಾಗುತ್ತ

ಇಂದೇ ಭೇಟಿ [illegible] ಪರೀಕ್ಷಿಸಿರಿ

ಗೋಕುಲ ಡೈರಿ ಫಾರಂ,

(ಬ್ರಾಂಚ್) ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ,

ನೂರಡಿ ರಸ್ತೆ ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ಜನಮತಗಣನೆ ನಡೆಸದಿದ್ದರೆ ಕಾಶ್ಮೀರಕ್ಕೆ ೧೦ ಲಕ್ಷ ಮುಸ್ಲಿಮರ ಪ್ರವೇಶ?

ನಿರ್ದಿಷ್ಟ ಕಾಲದಲ್ಲಿ ನಿಷ್ಪಕ್ಷಪಾತವೂ, ನ್ಯಾಯವೂ ಆದ ರೀತಿಯಲ್ಲಿ ಕಾಶ್ಮೀರದಲ್ಲಿ ಜನಮತಗಣನೆ ನಡೆಸದಿದ್ದರೆ ೧೦ ಲಕ್ಷ ನಿಶ್ಶಸ್ತ್ರ ಸ್ವಯಂಸೇವಕರು ಭಾರತದೊಳಗೆ ನುಗ್ಗುವರೆಂದು ಪಾಕಿಸ್ತಾನದಲ್ಲಿರುವ ಖಾಕ್ಸಾರ್ ಸಂಘದ ನಾಯಕ ಅಲ್ಲಾಮ ಮಶ್ರಿಕಿಯವರು ಬೆದರಿಕೆ ಹಾಕಿರುತ್ತಾರೆ ಭಾರತಕ್ಕೆ ಈ ವರ್ಷವು ಅತ್ಯಂತ ಅಪತ್ಕಾರಕವಾಗಿ ಪರಿಣಮಿಸುವುದೆಂದೂ ಅವರು ಹೇಳಿರುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದಿಲ್ರುಬಾ ೭-೧೫ ಮತ್ತು ೮ ೧೫ ಎಲ್ ಎಸ್ [illegible] ಸಂಗೀತ ೧೨ ೩೦ ಸುಗಮ ಸಂಗೀತ ೧೨ ೪೫ ಬಾಲಗೀತ್ ೧-೫೦ ದಿಲ್ರುಬಾ ಸಂಜೆ ೫-೩೦ [illegible] ನಾಗಮ್ಮ-ಸಂಗೀತ ೬-೫ [illegible] ಸಂಗೀತ ೬ ೨೦ ವಚನಗಾಯನ ೭-೩೦ [illegible] ಪ್ರಸಂಗ ೮ ೩೦ ರೇಡಿಯೋ ನ್ಯೂಸ್‌ರೀಲ್ [illegible] ದೆಹಲಿ ರಿಲೆ ೮-೪೦ ಪ್ರಸಾರ ಗೀತೆ ೯-೧೫ [illegible] ಕಥಾನಕ ೯-೩೦ ರಾಷ್ಟ್ರೀಯ [illegible] ಕಾರ್ಯಕ್ರಮ ದೆಹಲಿ ರಿಲೆ

○ ಇಂದೂರಿನ ಲಕ್ಷ್ಮೀಬಾಯಿನಗರದಲ್ಲಿ ಕಾಂಗ್ರೆಸ್ ಅಧಿವೇಶನವು ಸೇರಿರುವಸ್ಥಳದಲ್ಲಿ [illegible] ಗಳ್ಳರು ಅಸಂಖ್ಯಾತವಾಗಿ ಸೇರಿರುವರೆಂದೂ [illegible] ಏಳು ಮಂದಿಯನ್ನು ಬಂಧಿಸಲಾಗಿದೆಯೆಂದೂ ವರದಿಯಾಗಿದೆ

ಒಲಂಪಿಯಾ

4-1-57ರಿಂದ ಅಮೋಘ 5ನೇ ವಾ

★ **ನ್ಯೂ ಡೆಲ್ಲಿ** ★

11 1 57ರಿಂದ [illegible] ಅಮರಶಾಹಿಕಾರ್

ನಯಾ ಅಂದಾಜ್

ಪಾತ್ರ: ಮೀನಾಕುಮಾರಿ, ಕಿಶೋರ್

SRI GAYATHRI

TALKIES

From 4 1 57 For 3 days

M G M's

THE SWAN

(Cinemascope & Technicolor

With Grace Kelly & Louis Jourdan

Morning Shows on Sat & Sun

LAS VEGAS STORY

ಬಟ್ಟೆಗಳ ಶುಭ್ರತೆಗೆ

ಅಶೋಕ ನಂ. 908 ಮತ್ತು **ಅಶೋಕ ನಂ. 44**

ಸಾಬೂನುಗಳನ್ನೇ ಉಪಯೋಗಿಸಿರಿ

ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು.

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

4- 1 57 ರಿಂದ ಜಯಭೇರಿ 2ನೇ ವಾರ

[illegible] ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ

ಭಕ್ತ ಮಾರ್ಕಂಡೇಯ

ಚಿತ್ರ - [illegible] ರಘುರಾಮಯ್ಯ ಮಾಸ್ಟರ್ ಆನಂದ್,

[illegible] ಸಿಂಹ ಬಿ ಕೆ ಮಾಧವರಾವ್

JOTHI ELECTRIC LAUNDRY

NAZARBAD, MYSORE

Central Office — NEW STATUE SQUARE

GRAND REDUCTION IN DRY CLEANING RATES

Woollen Coats Rs 1-8-0 per piece

Woollen Pants Rs 1-0-0 per piece

Silk Sarees Rs 1 8-0 per saree

Real Dry cleaning with American Triplex Dry cleaning Machine

Public Patronage is solicited

ABIDS NEW YEAR GRAND AUCTION SALE

On Sunday 6 1—57 At 10 A M : At the Showrooms

Gents CYCLES, ELECTRIC STOVE in good condition, DECCA RADIO in working order PERAMBULATORS, MINI MOTOR with fittings One set of four rims for van CARRUM BOARD Musical Instrument such as TABLAS & HARMONIUM, Books of general knowledge and Literature, and good collection of Furniture such as DOUBLE DOOR ALMIRAH CAMP COTS teak wood BENCHES, brand new CANE CHAIRS spring cushion SOFA SUITES, DINING TABLE, PING PONG TABLE in two pieces STOOLS, CASH TABLES, EASY CHAIRS, wooden & Rattan CRADLES and many other useful articles

View on Saturday between 3 and 6 P M

Statue Square Mysore Phone No 473

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಅದ್ಭುತ ಔಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
[illegible]ದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು -2

ಸ್ತಕ ೧೫] SADHVI : SATURDAY 5—1—1957 ಮೈಸೂರು : ಶನಿವಾರ ೫—೧—೧೯೫೭ [ಸಂಚಿಕೆ : [illegible]

ಪಾಕಿಸ್ತಾನಿಗಳ ಸವಾಲು ಎದುರಿಸಲು ಕಾಶ್ಮೀರ ಸಿದ್ಧ

ಂತರರಾಷ್ಟ್ರ ಘರ್ಷಣೆ ಮತ್ತು ತ ಯುದ್ಧ ತಪ್ಪಿಸಲು ಕ್ರಮ

ಪಂಚಶೀಲ ತತ್ವದ ಅನುಸರಣೆಗೆ ಇಂದೂರು ಕಾಂಗ್ರೆಸ್ಸಿನ ಕರೆ

ಲಕ್ಷ್ಮೀಬಾಯಿನಗರ ೩

[illegible]ದೂರಿನ ಲಕ್ಷ್ಮೀಬಾಯಿ ನಗರದಲ್ಲಿ ಸೇರಿ[illegible]ಸ್ ಮಹಾಧಿವೇಶನದ ವಿಷಯ ನಿ[illegible] ಸಮಿತಿಯು ನೆನ್ನೆ ಭಾರತದ ವಿದೇ[illegible]ನೀತಿಯ ವಿಚಾರದ ನಿರ್ಣಯವೊಂದ[illegible] ಕರಿಸಿತು ಅಂತರರಾಷ್ಟ್ರೀಯ ವ್ಯವ[illegible] ಹೋರಾಟಗಳನ್ನೂ ಮತ್ತು ಶೀತ [illegible]ವನ್ನೂ ತಪ್ಪಿಸಲು ಪಂಚಶೀಲ ತತ್ವದ [illegible] ಅಗತ್ಯವೆಂದು ಸಮಿತಿಯು ಸೂ[illegible] ಬಂಗಾಳಾ ಮುಖ್ಯ ಮಂತ್ರಿ [illegible] ನಿರ್ಣಯವನ್ನು ಮಂಡಿಸಿ ರಷ್ಯಾ ಮ[illegible] ಪ್ರಂಚರು ಹಂಗೆರಿ ಮತ್ತು ಈಜ[illegible] ಸ್ವಾತಂತ್ರ್ಯ ದಾಹವನ್ನು ಅಡಗಿಸ[illegible] ಘಟನಾವಳಿಗಳಿಂದ[illegible] ಹೇಳಿದರು ಈ [illegible] ಘಟನೆಗಳಿಂದ ಮಿಲಿಟರಿ ಭಾವನೆಯ [illegible] ಸಂಶಯ ಮತ್ತು ಭಯದಿಂದ ಕಂ[illegible] ವ್ಯಕ್ತವಾಗಿರುವುದೆಂದು ಅವರು ಸೂ[illegible]ರಾಜಿ ದೇಸಾಯಿಯವರು ನಿರ್ಣಯ[illegible] ದಿಸಿ, ಜಗತ್ತಿನ ಸಮಸ್ಯೆಗಳನ್ನು [illegible] ಯುದ್ಧವು ನಿರರ್ಥಕವೆಂದು ಹೇಳಿದ[illegible] ಹೂತು ಚರ್ಚೆಯಾದನಂತರ ನಿರ್ಣ[illegible] ಸರ್ವಾನುಮತದಿಂದ ಅಂಗೀಕೃತವಾ[illegible]ತು

ಚುನಾವಣೆ ಪ್ರಣಾಳಿಕೆ ನಿರ್ಣಯದ ಅಂಗೀಕಾರ

ಮೊನ್ನೆ ಪ್ರಧಾನಿ ನೆಹರೂರವರು ಮಂಡಿಸಿದ [illegible] ಪ್ರಣಾಳಿಕೆ ನಿರ್ಣಯವನ್ನು ನೆನ್ನೆ [illegible] ಚರ್ಚಿಸಲಾಯಿತು ೩೩ ತಿದ್ದು[illegible] ಸೂಚಿಸಲಾಗಿದ್ದಿತು ಅವೆಲ್ಲವೂ [illegible]ವು ಅಥವಾ ತಿರಸ್ಕೃತವಾದುವು ಕಾ[illegible] ಸಮಿತಿಯ ಪರವಾಗಿ ನಂದಾರವರು [illegible] ತಿದ್ದುಪಡಿಯನ್ನು ಸೂಚಿಸಿ, ಜನಾ[illegible] ಆರ್ಥಿಕ ಸ್ಥಿತಿಯನ್ನು ಉತ್ತಮಪ[illegible] ಮತ್ತು ಮನೆ ನಿವೇಶನ ಮತ್ತು ಉಚಿತ [illegible] ಸೌಕರ್ಯ ಕಲ್ಪಿಸಲೂ ಏರ್ಪಾ[illegible]ಮ ತಿಳಿಸಿದರು ಅದು ಅಂಗೀಕೃತ [illegible]

[illegible] ಸದಸ್ಯರು ಚರ್ಚೆಯಲ್ಲಿ ಭಾಗವ[illegible] ಮಾಜಿ ಕೇಂದ್ರ ಮಂತ್ರಿ ಗಾಡ್ಗಿಲ್ಲರ[illegible] ಪ್ರಜೆಗಳ ಮುಂದೆ ಕೇವಲ ಪ್ರಜಾ[illegible] ಸರ್ಕಾರದ ಸ್ಥಾಪನೆಯ ಗುರಿಯೊಂ[illegible] ಕೊಟ್ಟಿರುವ ಭರವಸೆಯಿಲ್ಲದೆ, ರಾಜ[illegible] ಮಾಜಿಕ ಮತ್ತು ಆರ್ಥಿಕ [illegible] ದರೆಗೆ ಕ್ರಮ ಕೈಗೊಂಡು ಎಲ್ಲರ [illegible] ತೃಪ್ತಿಯಾಗುವಂತೆ ಮಾಡಬೇಕೆಂ[illegible] ಸಮಾಜವಾದಿ ಧ್ಯೇಯವನು [illegible] ಕಾಂಗ್ರೆಸ್ಸಿನವರು [illegible] ವನ್ನು ಅವರು ಟೀಕಿಸಿ, ಇಂತ[illegible] ಸಮಾಜವಾದದಿಂದ ಪ್ರಯೋಜನವಿಲ್ಲ [illegible]ವರು

ಪಾಕಿಸ್ತಾನದ ಸವಾಲನ್ನು ಎದುರಿಸಲು ಕಾಶ್ಮೀರಿಗಳ ನಿರ್ಧಾರ

ಕಾಶ್ಮೀರಕ್ಕೆ ಗುಡ್ಡಗಾಡಿನ ಜನರು ಪ್ರವೇಶಿಸಲಿರುವರೆಂಬ ವಿಚಾರವಾಗಿ ಜಗತ್ತಿನ ಸಮಿತಿಗೆ ಪಾಕಿಸ್ತಾನದ ವಿದೇಶ [illegible] ಖಾನರು ಬರೆದ ಪತ್ರದಲ್ಲಿ [illegible] ಬೆದರಿಕೆಯನ್ನು [illegible] ಸಭೆಯಲ್ಲಿ [illegible] ತಂತ್ರ್ಯವನ್ನು [illegible] ವೃಷ್ಟಿಯಲ್ಲಿ [illegible] ಯಕರ್ತರ ಸಭೆಯಲ್ಲಿ [illegible]

ಚಿನ್ನದ ಗಣಿಯಲ್ಲಿ ೧೧॥ ಸಾವಿರ ಕಾರ್ಮಿಕರ ಮುಷ್ಕರ

ಮೈಸೂರ [illegible] ಚಿನ್ನದ ಗಣಿಗಳು ಮತ್ತು ವಿದ್ಯುಚ್ಛಕ್ತಿ [illegible]ಟ್ಟು ೧೧,೫೦೦ ಕಾರ್ಮಿಕರು [illegible] ಬೋನಸ್ಸನ್ನು ಕೊಡದ [illegible] ಕೈಗಾರಿಕಾ ನ್ಯಾಯ ಮಂಡಲದವರು ಕೊಟ್ಟಿರುವ ತೀರ್ಪನ್ನು ಕೂಡಲೆ ಜಾರಿಗೆ ತರುವಂತೆ ಒತ್ತಾಯಪಡಿಸಲುವಾಗಿ ನೆನ್ನೆ ಮುಷ್ಕರವನ್ನು ಹೂಡಿದರು ಗಣಿಯೊಳಗೆ ಕೆಲಸ ಮಾಡುವ ಪಂಪು ಡ್ರೈವರುಗಳು, ವೈಂಡಿಂಗ್ ಮಿಷನ್ ಡ್ರೈವರುಗಳು ಮತ್ತು ಜಾಡಮಾಲಿಗಳು ಮುಷ್ಕರದಲ್ಲಿ ಸೇರಿರುವರು ಜನರುಗಳು ೧ ಮೈಲಿಯುದ್ದದ ಮೆರವಣಿಗೆಯನ್ನೂ ನಡೆಸಿದರು ನಂದೀದುರ್ಗ ಗಣಿ ಕಾರ್ಮಿಕರಿಗೆ [illegible] ತಿಂಗಳು ಚಾಂಪಿಯನ್ ರೀಫಿನ ಕಾರ್ಮಿಕರಿಗೆ ೨॥ ತಿಂಗಳು ಮತ್ತು ಮೈಸೂರು ಗಣಿಗಳವರಿಗೆ ೪ ತಿಂಗಳ ಬೋನಸ್ಸನ್ನೂ ಅವರ ಜೊತೆಗೆ ಒಂದು ತಿಂಗಳ ತುಟ್ಟಿ ಭತ್ಯವನ್ನೂ ಕೊಡುವಂತೆ ತೀರ್ಪಿನಲ್ಲಿ ಸೂಚಿಸಲಾಗಿತ್ತು ಇದರಿಂದ ಕೆಲಸಗಾರರಿಗೆ ೬೨ ಲಕ್ಷರೂ ಬರಬೇಕಾಗುವುದು

ಕಾಶಿಯಲ್ಲಿ ಮೈಸೂರಿನ ಗವರ್ನರರು

ಮೈಸೂರಿನ ಗವರ್ನರರು ತಮ್ಮ ಪರಿವಾರ ಸಮೇತ ಕಾಶಿಯನ್ನು ನೆನ್ನೆ ತಲುಪಿದರು ಅವರು ಗಂಗೆಯಲ್ಲಿ ಸ್ನಾನ ಮಾಡಿ, ವಿಶ್ವನಾಥ ದೇವಾಲಯದಲ್ಲಿ ದರ್ಶನ ಪಡೆದು, [illegible]ಗಳನ್ನು ನೋಡಿದರು ಅನ್ನಪೂರ್ಣ ದೇವಾಲಯದಲ್ಲಿ ದೇವರ ಸಂದರ್ಶನ ಮಾಡಿ ನೆನ್ನೆ ರಾತ್ರಿ ಅವರು ಅಲಹಾಬಾದಿಗೆ ಪ್ರಯಾಣ ಬೆಳೆಸಿದರು

ನಾಗಪುರದ [illegible] ಜನರಿಗೆ ಕಾಂಗ್ರೆಸ್ಸು [illegible] ಗಳನ್ನು [illegible] ಬೇಕೆಂದೂ ತಿಳಿಸಿದರು [illegible] ಮತದಿಂದ ಅಂಗೀಕೃತವಾಯಿತು

ಕಾಸರಗೋಡಿಗೆ ಬದಲು ಕೇರಳಕ್ಕೆ ಪ್ರತಿಫಲ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಸೂಚನೆ

ಕಾಸರಗೋಡು ಪ್ರದೇಶವನ್ನು ಕೇರಳ ಸರ್ಕಾರದವರು ಮೈಸೂರಿಗೆ ಒಪ್ಪಿಸಿದರೆ ಅದಕ್ಕೆ ಪ್ರತಿಯಾಗಿ ಕೇರಳದ ೧ ಲಕ್ಷ ಸಂಸಾರದವರಿಗೆ ಆಶ್ರಯ ಕೊಡಲು ತಾವು ಸಿದ್ಧವಾಗಿರುವುದಾಗಿ ಮೈಸೂರಿನ ಮುಖ್ಯ ಮಂತ್ರಿಯವರು ಸೂಚನೆಯಿತ್ತಿರುವರೆಂದು ತಿಳಿದುಬಂದಿದೆ ಮುಖ್ಯ ಮಂತ್ರಿಯವರನ್ನು ಕಾಸರಗೋಡು ಕನ್ನಡ ಏಕೀಕರಣ ಸಮಿತಿ ಅಧ್ಯಕ್ಷ ಶ್ರೀ ಉಮೇಶರಾವ್ ರವರು ಮತ್ತು ಇತರರು ಭೇಟಿ ಮಾಡಿದಾಗ ಅವರಿಗೆ ತಮ್ಮ ಸಲಹೆಯನ್ನು [illegible] ತಿಳಿಸಿದರೆಂದು ಹೇಳಲಾಗಿದೆ ಕಾಸರಗೋಡನ್ನು ಮೈಸೂರಿಗೆ ಸೇರಿಸಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಏಕೀಕರಣ ಸಮಿತಿಯವರು ಮುಖ್ಯ ಮಂತ್ರಿಯವರಿಗೆ ಮನವಿಯೊಂದನ್ನು ಸಲ್ಲಿಸಿದರು

ಮಾಲ್ಡೀವ್ ದ್ವೀಪದಲ್ಲಿ ಬ್ರಿಟಿಷ್ ವಿಮಾನ ನೆಲೆ

[illegible] ಸಮುದ್ರದಲ್ಲಿರುವ ಮಾಲ್ಡಿವ್ ದ್ವೀಪದಲ್ಲಿ ಬ್ರಿಟಿಷ್ ಸರ್ಕಾರದವರು ವಿಮಾನ ನೆಲೆಯೊಂದನ್ನು ಏರ್ಪಡಿಸಲಿರುವರು ಈ ಬಗ್ಗೆ ದ್ವೀಪದ ಸರ್ಕಾರಕ್ಕೂ ಬ್ರಿಟಿಷ್ ಪ್ರಭುತ್ವಕ್ಕೂ ಮಾತುಕತೆಗಳು ನಡೆದಿವೆ ಆಸ್ಟ್ರೇಲಿಯಾ, ನ್ಯೂಜಿಲೆಂಡು ಮತ್ತು ಪೂರ್ವ ಏಷ್ಯಗಳಿಗೆ ಬ್ರಿಟಿಷ್ ಸೈನಿಕ ವಿಮಾನಗಳು ಹೋಗಬೇಕಾದರೆ ಮಧ್ಯದಲ್ಲಿ ಇಳಿಯಲು ಈ ನೆಲೆಯನ್ನು ಉಪಯೋಗಿಸಲಾಗುವುದು ಆ ದ್ವೀಪವು ೧ ಮೈಲಿ ಉದ್ದ, ಮುಕ್ಕಾಲು ಮೈಲಿ ಅಗಲವಿದೆ ಅಲ್ಲಿ ೫೦೦ ಜನರು ಇರುವರು ಹಿಂದಿನ ಯುದ್ಧದಲ್ಲಿ ಅಲ್ಲಿ ನೆಲೆಯೊಂದನ್ನು ಏರ್ಪಡಿಸಲಾಗಿತ್ತು

ಮಧ್ಯ ಪೂರ್ವಕ್ಕೆ ಅಮೆರಿಕಾ ಸೇನೆ ರವಾನೆಗೆ ಪ್ರತಿಭಟನೆ

ಮಧ್ಯ ಪೂರ್ವದಲ್ಲಿ ಕಮ್ಯೂನಿಸ್ಟರ ಪ್ರಾಬಲ್ಯವನ್ನು ಮುರಿಯಲು ಅಮೆರಿಕವು ತನ್ನ ಸೈನ್ಯ ಕಳುಹುವ ಪ್ರಯತ್ನಕ್ಕೆ ಜೋರ್ಡಾನಿನ ಪ್ರಧಾನಿ [illegible]ಲೇಮಾನ್ ನಾಬುಲ್ಸಿಯವರು ಅಮೆರಿಕಾ ಸರ್ಕಾರಕ್ಕೆ ಪ್ರತಿಭಟನೆ ಸೂಚಿಸಿರುವರೆಂದು ವರದಿಯಾಗಿದೆ ಇದರಿಂದ ಅರಬ್ ರಾಜ್ಯಗಳ ವ್ಯವಹಾರದಲ್ಲಿ ಅಮೆರಿಕವು ಅತಿಕ್ರಮ ಪ್ರವೇಶ ಮಾಡಿದಂತಾಗುವುದೆಂದು ಆಕ್ಷೇಪಿಸಲಾಗಿದೆ.

ಸರ್ಕಾರಿ ಕೈಗಾರಿಕೆಗಳಲ್ಲಿ ನೌಕರರ ವೇತನ ಹೆಚ್ಚಿಸಲು ಮನವಿ

ಮೈಸೂರು ಸರ್ಕಾರದ ಕಾರ್ಖಾನೆಗಳ ನೌಕರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಬುಧವಾರ ನಡೆದು ನೌಕರರ ಸಂಬಂಧ [illegible] ಹಿಡಿಸಬೇಕೆಂದೂ, ಅದುವರೆಗೆ [illegible] ಕಳೆದ ಆಗಸ್ಟಿನಿಂದ ಕೂಡಲೆ [illegible] ೧೦ರಷ್ಟು ಹೆಚ್ಚಿಸಬೇಕೆಂದೂ [illegible] ನಿರ್ಣಯವನ್ನು ಅಂಗೀಕರಿಸಲಾಯಿತು

ಇಂದೂರಿನಲ್ಲಿ ಪಂಚಾಯಿತಿ ಸಮ್ಮೇಳನ

ಕಾಂಗ್ರೆಸ್ಸಿನ ಅಧಿವೇಶನದ ಅಂಗವಾಗಿ ಇಂದೂರಿನ ಲಕ್ಷ್ಮೀಬಾಯಿ ನಗರದಲ್ಲಿ ಮೊನ್ನೆ ಮಧ್ಯ ಪ್ರದೇಶದ ಪಂಚಾಯಿತಿ ಸಮ್ಮೇಳನವನ್ನು ನಡೆಸಲಾಯಿತು ಪ್ರಧಾನಿ ನೆಹರೂರವರು ಭಾಷಣ ಮಾಡಿ ಪಂಚಾಯಿತಿ ಪದ್ಧತಿಯು ದಕ್ಷತೆಯಿಂದ ನಡೆದರೆ ಭಾರತದಲ್ಲಿ ಪ್ರಜಾಸತ್ತೆಯು ಯಶಸ್ವಿಯಾಗುವುದೆಂದು ತಿಳಿಸಿದರು ಪಂಚಾಯಿತಿಗಳು ಪ್ರಜಾಸತ್ತೆಯ ಮೂಲ ಸ್ಥಾನವೆಂದೂ, ಅವು ನ್ಯಾಯವಾಗಿಯೂ ಪಕ್ಷಪಾತ ರಹಿತವಾಗಿಯೂ ನಡೆದುಕೊಳ್ಳಬೇಕೆಂದೂ ಸೂಚಿಸಿದರು ಸಮ್ಮೇಳನದಲ್ಲಿ ೯,೦೦೦ ಪ್ರತಿನಿಧಿಗಳು ಭಾಗವಹಿಸಿದ್ದರು ಮಧ್ಯ ಪ್ರದೇಶದ ಉಪ ಮಂತ್ರಿ ಜಗಮೋಹನ ದಾಸರು ಸ್ವಾಗತ ಭಾಷಣ ಮಾಡಿದರು ಮುಖ್ಯ ಮಂತ್ರಿ ಮಾಂಡಲೋಯ್‌ರವರು ಮಾತನಾಡಿ, ಎಲ್ಲಾ ಪಂಚಾಯಿತಿಗಳೂ ದ್ವಿತೀಯ ಯೋಜನೆ ಕಾರ್ಯಸಾಧನೆಗೆ ಸಹಾಯ ಮಾಡಬೇಕೆಂದು ಸೂಚಿಸಿದರು

ಬಂಗಾಳಾ ಮಾಜಿ ಮಂತ್ರಿ ಟಿ. ಸಿ. ಗೋಸ್ವಾಮಿಯವರ ನಿಧನ

ಬಂಗಾಳದ ಮಾಜಿ ಮಂತ್ರಿ ಟಿ ಸಿ ಗೋಸ್ವಾಮಿಯವರು ಮೊನ್ನೆ ಮುಂಜಾನೆ ಕಲ್ಕತ್ತದಲ್ಲಿ ನಿಧನ ಹೊಂದಿದರು ಅವರಿಗೆ ೫೮ ವರ್ಷ ವಯಸ್ಸಾಗಿತ್ತು ೧೯[illegible]ರಿಂದ [illegible]ರವರೆಗೆ ಅವರು ಬಂಗಾಳದ ಹಣಕಾಸಿನ ಮಂತ್ರಿಯಾಗಿದ್ದರು ಮೃತರು ದೇಶಬಂಧು ಚಿತ್ತರಂಜನದಾಸರ ಬಲಗೈನಂತೆ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದರು

ಅಹಮದಾಬಾದಿನಲ್ಲಿ ಸಹಸ್ರಾರು ವಿದ್ಯಾರ್ಥಿಗಳ ಮುಷ್ಕರ

ಮಹಾ ಗುಜರಾತಿನ ಜನತಾ ಪರಿಷತ್ತಿನ ೯ ಮಂದಿ ಪ್ರಮುಖ ಕಾರ್ಯಕರ್ತರ ದಸ್ತಗಿರಿಗಾಗಿ ಪ್ರತಿಭಟಿಸಲು ಅಹಮದಾಬಾದಿನಲ್ಲಿ ಶಾಲಾ ಕಾಲೇಜುಗಳ ಅನೇಕ ಸಹಸ್ರ ವಿದ್ಯಾರ್ಥಿಗಳು ನೆನ್ನೆ ತರಗತಿಗಳಿಗೆ ಹೋಗದೆ ನಿಂತುಬಿಟ್ಟರು ಊರಿನ ಮುಖ್ಯ ಬೀದಿಗಳಲ್ಲಿರುವ ಅಂಗಡಿಗಳನ್ನು ಮುಚ್ಚಲಾಯಿತು ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು

ನಗರದಲ್ಲಿ ಚುನಾವಣಾ ಪ್ರದರ್ಶನ

ಮೈಸೂರು ಜಿಲ್ಲಾಧಿಕಾರಿಗಳು ಇದೇ ೯ನೇ ತಾರೀಕು ಬೆಳಿಗ್ಗೆ ೯ ಗಂಟೆಯಿಂದ ಮಧ್ಯಾಹ್ನ ೨ರವರೆಗೆ ಲಕ್ಷ್ಮೀಪುರದ ಮಾಧ್ಯಮಿಕ ಶಾಲೆಯಲ್ಲಿ ಚುನಾವಣಾ ಪ್ರದರ್ಶನವನ್ನು ನಡೆಸುವರು ನಾನಾ ರಾಜಕೀಯ ಪಕ್ಷಗಳವರು ಅದನ್ನು ವೀಕ್ಷಿಸುವರು

ಸಟ್ಟಾ ಜೂಜಾಟಕ್ಕಾಗಿ ದಂಡ

ಪುಟ್ಟಸ್ವಾಮಿ ಮತ್ತು ಬಚ್ಚಾಸಾಬ್ ಎಂಬುವರು ಸಟ್ಟಾ ಜೂಜಾಡುತ್ತಿದ್ದುದನ್ನು ಪೋಲೀಸರು ಪತ್ತೆಹಚ್ಚಿ ಅವರಿಂದ ರೂ ೨-೬-೦ ಅನ್ನು ವಶಪಡಿಸಿಕೊಂಡು, ಅವರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ತಲಾ ೧೫ ರೂ ದಂಡ ವಿಧಿಸಲಾಗಿದೆ

ಪಶ್ಚಿಮ ಪಾಕಿಸ್ತಾನದ ಮುಖ್ಯ ಮಂತ್ರಿಯವರಲ್ಲಿ ಅವಿಶ್ವಾಸ

ಪಶ್ಚಿಮ ಪಾಕಿಸ್ತಾನದ ಮುಖ್ಯ ಮಂತ್ರಿ ಡಾ॥ ಸಾಹೇಬರಲ್ಲಿ ಅವಿಶ್ವಾಸ ಸೂಚಕ ನಿರ್ಣಯವನ್ನು ಅಲ್ಲಿನ ಶಾಸನ ಸಭೆಯಲ್ಲಿ ಗುಲಾಂ ಆಲಿ ಅಲ್ಲಾನಾರವರು ತಂದಿರುತ್ತಾರೆ ಬರುವ ಮಾರ್ಚಿ ತಿಂಗಳಲ್ಲಿ ಸಭೆಯು ಸೇರಿದಾಗ ಅದನ್ನು ಪರಿಶೀಲಿಸಲಾಗುವುದು

ಮುಂದಿನ ಕಾಂಗ್ರೆಸ್ ಅಧಿವೇಶನ ಅಸ್ಸಾಮಿನಲ್ಲಿ

ಅಸ್ಸಾಮಿನ ಕಾಂಗ್ರೆಸ್ ಸಮಿತಿಯು ಇತ್ತ ಆಹ್ವಾನವನ್ನು ಮನ್ನಿಸಿ ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಅಲ್ಲಿ ನಡೆಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ

ಕಮ್ಯೂನಿಸ್ಟ್ ಪಕ್ಷದವರ ಚುನಾವಣಾ ಘೋಷಣೆ

ದ್ವಿತೀಯ ಪಂಚ ವಾರ್ಷಿಕ ಯೋಜನೆಯನ್ನು ರಾಷ್ಟ್ರೀಯ ದೃಷ್ಟಿಯಲ್ಲಿ ಬದಲವಣೆ ಮಾಡುವಂತೆ ಹೋರಾಟ ನಡೆಸುವುದೇ ತಮ್ಮ ಮುಖ್ಯ ಗುರಿಯೆಂದು ಭಾರತದ ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಪ್ರಣಾಳಿಕೆಯು ಘೋಷಿಸಿದೆ ೧೧೦ ಸಾವಿರ ಪದಗಳುಳ್ಳ ಈ ಘೋಷಣೆಯು ದ್ವಿತೀಯ ಯೋಜನೆಯ ಉದ್ದೇಶವನ್ನೂ ಗುರಿಯನ್ನೂ ಮೆಚ್ಚಿದೆ ಪರವಾನಗಿ ಕರಾರಾವಧಿಯನ್ನು ಗೊತ್ತುಪಡಿಸಬೇಕೆಂದೂ ಸ್ವಿಗಳ ಲಾಭದ ಮೇಲೂ ಮತ್ತು ಬಂಡವಾಳದ ಲಾಭದ ಮೇಲೂ ಹೆಚ್ಚು ತೆರಿಗೆ ಹಾಕಬೇಕೆಂದೂ ಸೂಚಿಸಲಾಗಿದೆ ಕಾರ್ಮಿಕರಿಗೆ ಕನಿಷ್ಠ ಸಂಬಳ ಗೊತ್ತುಪಡಿಸಲು ಪಕ್ಷವು ಶ್ರಮಿಸಲಿದೆ ಪ್ರೈವೇಟ್ ಕಂಪನಿಯ ಒಡೆತನಗಳು ಇನ್ನು ಪ್ರಯತ್ನಿಸುವುದು

ಉಪನ್ಯಾಸಗಳು

ಬೆಂಗಳೂರು ವಿದ್ಯಾ ಶಾಲೆ [illegible] ದ ಮೈಸೂರು ಶಾಖೆಯ [illegible] ಸಂಸ್ಕೃತ ಮಹಾ ಪಾಠಶಾಲೆಯ [illegible] ಶ್ರೀ ಎನ್ ಅನಂತ [illegible] ರಿಂದ ಶ್ರೀ [illegible] ಯವರ [illegible] ಸಂಜೆ ಶ್ರೀ ಎಸ್ ವಿ [illegible] ಭಟ್ಟರಿಂದ ಪಂಚತಂತ್ರ ಮತ್ತು ಮಂಗಳವಾರ ಸಂಜೆ ಶ್ರೀ ಟಿ ಎಸ್ ಗೋಪಾಲರಿಂದ ಪುರಂದರದಾಸ ಎಂಬ ವಿಷಯವಾಗಿ ಉಪನ್ಯಾಸಗಳನ್ನೇರ್ಪಡಿಸಿರುವರು ಮಂಡಲದ ಅಧ್ಯಕ್ಷ ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಅಧ್ಯಕ್ಷತೆ ವಹಿಸುವರು

ನೂತನ ವರ್ಷದ ಶುಭಾಶಯ

ಕಲ್ಕತ್ತದಲ್ಲಿ ಭಾರತ ಸರ್ಕಾರದ ಉದ್ಯೋಗದಲ್ಲಿರುವ ಮೈಸೂರಿನ ಶ್ರೀ ಸಿ ಆನಂದರಾವ ರಾಯರು ಮತ್ತು ಕೋಲ್ಹಾಪುರದಲ್ಲಿ ಹೊಸದಾಗಿ ತೆರೆಯಲ್ಪಟ್ಟಿರುವ ಶ್ರೀ ರಾಮಕೃಷ್ಣ ಕೆಫೆಯ ಶ್ರೀ ರಾಮಕೃಷ್ಣಹೊಳ್ಳರವರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ಕ್ಯಾಲೆಂಡರ್ ಸ್ವೀಕಾರ

ನಗರದ ಶ್ರೀರಾಮಪೇಟೆಯ ಶ್ರೀ ಸ್ವಾಮಿ ಜ್ಯೂಯಲರಿ ಮಾರ್ಟಿನ ಮಾಲೀಕರಾದ ಶ್ರೀ ಎಂ ವಿ ಸುಬ್ರಹ್ಮಣ್ಯಶೆಟ್ಟಿಯವರು ಕಳುಹಿಸಿರುವ ಸಾಯಿಬಾಬಾ [illegible] ರಂಗೋಲಿ ಡೈಮಂಡಿನ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ

ಸಂತಾಪ ಸೂಚನೆ

ಹಸರುವಾಸಿ ವ್ಯಾಪಾರಿಗಳಾದ ಶ್ರೀ ಬಿ ಮೃತ್ಯುಂಜಯನವರ ಸಹೋದರರಾದ ಶ್ರೀ ವೆಂಕಟಪ್ಪನವರ ನಿಧನಕ್ಕಾಗಿ ನಗರದ ತೆಂಗಿನ ಕಾಯಿ ವರ್ತಕರ ಸಂಘದವರು ತಮ್ಮ ಸಂತಾಪವನ್ನು ಸೂಚಿಸಿರುತ್ತಾರೆ

SREE GANESH
TALKIES
[illegible]
VALUE FOR MONEY
(A Vistavision Technicolor)
Starring [illegible] (Comedy star [illegible]) and Diana Dors (Britain's No 1 Glamour Girl)

ಕಾಂಗ್ರೆಸ್ ಅಧಿವೇಶನದಲ್ಲಿ ಸಸ್ಯಾಹಾರಕ್ಕೆ ಮಾತ್ರ ಅವಕಾಶ

ಇಂದೂರಿನಲ್ಲಿ ಸೇರಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಕಂಟ್ರಾಕ್ಟುದಾರರು ಮಾಂಸ ಮೀನು ಮೊಟ್ಟೆ ಮುಂತಾದ ಆಹಾರಗಳ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಅಧಿವೇಶನದ ಸ್ವಾಗತ ಸಮಿತಿಯವರು ಸಾಮಾನ್ಯವಾಗಿ ಸಸ್ಯಾಹಾರವನ್ನು ಮಾತ್ರ ಏರ್ಪಡಿಸುವರು ಆದರೆ ಮಾಂಸಾಹಾರಿಗಳಿಗಾಗಿ ಅಂಗಡಿಗಳವರು ಅದನ್ನು ಒದಗಿಸಲು ಅವಕಾಶ ಕೊಡಲಾಗುತ್ತಿತ್ತು ಅದನ್ನು ಈ ಸಾರಿ ತಪ್ಪಿಸಲಾಗಿದೆ ಇಂದೂರಿನಲ್ಲಿ ಹೆಚ್ಚು ಸಸ್ಯಾಹಾರಿ ಜೈನ ವರ್ಗದವರು ಇರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ನ್ಯೂ ಗಿನಿ ಗುಡ್ಡಗಾಡಿನವರಲ್ಲಿ ಯುದ್ಧ

ಆಸ್ಟ್ರೇಲಿಯದ ಅಧೀನದಲ್ಲಿರುವ ನ್ಯೂಗಿನಿ ದ್ವೀಪದ ಎತ್ತರದ ಗುಡ್ಡಗಾಡಿನ ಜನರಲ್ಲಿ ಭಯಂಕರ ಯುದ್ಧವು ನಡೆದು,ವಿಪರೀತ ಸಾವು ನೋವುಗಳಾಗಿರುವುವೆಂದು ವರದಿ ಬಂದಿದೆ ನ್ಯೂಗಿನಿ ದ್ವೀಪದ ಮತ್ತೊಂದು ಭಾಗ ಡಚ್ಚರ ಆಡಳಿತ ಭಾಗದಲ್ಲಿ ಕದನವು ನಡೆಯುತ್ತಿದೆ

೧೧೮ ಮಂದಿ ನಾಗಾ ದಂಗೆಕೋರರ ಶರಣಾಗತಿ

ಕಳೆದ ತಿಂಗಳು ಅಸ್ಸಾಮಿನಲ್ಲಿ ೧೧೮ಕ್ಕಿಂತಲೂ ಹೆಚ್ಚು ನಾಗ ದಂಗೆಕೋರರು ಶರಣಾಗತರಾಗಿ ಬಂದಿರುವರೆಂದು ವರದಿಯಾಗಿದೆ ಸೈನಿಕರು ದಂಗೆಕೋರರಿಂದ ೯೦ ಆಯುಧಗಳನ್ನು ವಶಪಡಿಸಿಕೊಂಡಿರುತ್ತಾರೆ ಇತ್ತೀಚೆಗೆ ದಂಗೆಕೋರರು ಇಬ್ಬರನ್ನು ಹೊಡೆದು ಹಾಕಿ ಲೂಟಿ ಮುಂತಾದವನ್ನು ನಡೆಸಿದ್ದರು

ಹಣ್ಣು ಕೊಡದಿದ್ದುದಕ್ಕಾಗಿ ಯುವತಿಯ ನಾಸಿಕಾ ಛೇದನ

ತನು ಇಷ್ಟಪಟ್ಟ ತರಕಾರಿಯನ್ನು ಆಕೆಯು ಬೇರೊಬ್ಬನಿಗೆ ಕೊಟ್ಟು ಮಾರಾಟ ಮಾಡಲು ನಿಶ್ಚಯಿಸಿದುದರಿಂದ ಕೋಪಗೊಂಡ ಮೋಬಯಿನ ಬದ್ರ್ ಷಾ ಒಮರ್ ಸಿ ಎಂಬ ಹಣ್ಣಿನ ವ್ಯಾಪಾರಿ ಯುವತಿಯ ಮೂಗನ್ನು ಕುಯ್ದುದಕ್ಕಾಗಿ ಅವನನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆ ಅವನನ್ನು ೨೫೦ ರೂ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ

ಮಧ್ಯ ಭಾರತದಲ್ಲಿ ೧೯೫೭ ಹೆಬ್ಬಾಗಿಲುಗಳು

ಕಾಂಗ್ರೆಸ್ ಅಧಿವೇಶನಕ್ಕಾಗಿ ಬರುವವರನ್ನು ಸ್ವಾಗತಿಸಲು ಮಧ್ಯಭಾರತಪ್ರಾಂತದ ರಸ್ತೆಗಳಲ್ಲಿ ೧೯೫೭ ಹೆಬ್ಬಾಗಿಲುಗಳನ್ನು ನಿರ್ಮಿಸಲಾಗಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು

ಕೊಯಮತ್ತೂರು ಸಣ್ಣ	೩೬	೧೩	೦	೪೦	೩	೦
ರತ್ನಚೂಡಿ	೩೫	೧೪	೦	೩೮	೮	೦
ಸೇಲಂ ಸಣ್ಣ	೩೬	೧೩	೦	೩೮	೮	೦
ಕಡ್ಡಿ	೩೮	೦	೦	೩೮	೧೪	೦
ಕಿಂಬೂತ	೩೬	೧೦	೦	೩೮	೬	೦
ರಾಗಿ	೩೮	೧೦	೦	೪೪	೮	೦
ಜೋಳ	೪೪	೮	೦	೪೬	೦	೦
ಕಬ್ಬು	೪೦	೧೦	೦			
ಕಡಲೆಕಾಯಿ	೧೬	೬	೦	೨೪	೦	೦
ಹರಳುಬೀಜ	೪೫	೦	೦	೪೬	೧೩	೦
ಹೊಂಗೆಬೀಜ	೩೪	೧೪	೦	೩೫	೦	೦
ಹುಚ್ಚೆಳ್ಳು	೪೪	೮	೦	೪೬	೮	೦
ಹುರುಳಿ	೩೪	೮	೦	೩೮	೧೦	೦
ಹೆಸರು	೪೫	೩	೦	೫೧	೮	೦
ಹಲಸಂದೆ	೪೬	೮	೦	೫೫	೮	೦
ಉದ್ದು	೫೬	೧೦	೦	೬೪	೪	೦
ತೊಗರಿ	೪೮	೦	೦			
ಕಡಲೆ	೪೮	೧೩	೦			
ಸೆಣಬಿನ ಬೀಜ	೪	೬	೦	೪೭	೦	೦
ಧನಿಯ	೨೪	೧೪	೦	೨೬	೧೦	೦
ಮೆಣಸಿನಕಾಯಿ	೧೦	೧೦	೦	೨೧	೧೦	೦
ಹುಣಸೆಹಣ್ಣು	೫	೩	೦	೬	೫	೦
[illegible]	೮	೩	೦			
ತೆಂಗಿನಕಾಯಿ ೧೦೦೦	೧೫೮	೦	೦	೨೦೪	೮	೦

ವಿದ್ಯಾರ್ಥಿಗಳ ಪ್ರಾಮಾಣಿಕತೆ ಪರೀಕ್ಷೆ

ಕಾರವಾರ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಹಚಕಡ್ ಎಂಬ ಊರಿನ ಮೂಲ ಶಿಕ್ಷಣ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರಾಮಾಣಿಕತೆಯನ್ನು ಅರಿಯುವ ಸಲುವಾಗಿ ಒಂದು ಪರೀಕ್ಷೆಯನ್ನು ನಡೆಸಲಾಯಿತು ಸಹಕಾರ ಸಂಘವೊಂದನ್ನು ರಚಿಸಿ, ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಶಾಯಿ, ಕಾಗದ ಸೀಸದಕಡ್ಡಿ ಮುಂತಾದುವುಗಳನ್ನು ಬೀಗ ಹಾಕದೆ ಇಟ್ಟು ಅವುಗಳನ್ನು ಯಾರುಬೇಕಾದರೂ ಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು ಅಲ್ಲಿ ಮಾರಾಟಗಾರರಾರೂ ಇರಲಿಲ್ಲ ವಿದ್ಯಾರ್ಥಿಗಳು ಸಾಮಾನುಗಳನ್ನು ಕೊಂಡು ಅವಕ್ಕೆ ಕೊಡಬೇಕಾದ ದುಡ್ಡನ್ನು ಹಾಕಿದ್ದರು ಪರೀಕ್ಷಾ ಅವಧಿಯು ಮುಗಿದಮೇಲೆ ಮಾರಾಟವಾದ ವಸ್ತುಗಳಿಗೆ ತಕ್ಕಷ್ಟು ದುಡ್ಡು ಅಲ್ಲಿಡಲ್ಪಟ್ಟಿದ್ದಿತು

ಶ್ರೀರಾಂಪೇಟೆ ಕನ್ಯಕಾಪರಮೇಶ್ವರಿ ದೇವಸ್ಥಾನದ ಅಧಿಕಾರ ವರ್ಗ

ನಗರದ ಶ್ರೀರಾಂಪೇಟೆಯಲ್ಲಿರುವ ಶ್ರೀಮತ್ಕನ್ಯಕಾಪರಮೇಶ್ವರಿ ದೇವಸ್ಥಾನದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ನಡೆದು,ಶ್ರೀ ದಂತಿ ಅನಂತರಾಮಶೆಟ್ಟರು ಅಧ್ಯಕ್ಷರಾಗಿಯೂ, ಶ್ರೀ ಕೆ ಆರ್ ರಾಮಕೃಷ್ಣಶೆಟ್ಟರು ಉಪಾಧ್ಯಕ್ಷರಾಗಿಯೂ ಶ್ರೀ ಸಿ ಎಸ್ ವೆಂಕಟರಮಣಶೆಟ್ಟರು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಎ ಎಲ್. ಸುಂದರನಾರಾಯಣಶೆಟ್ಟರು ಸಹಾಯಕ ಕಾರ್ಯದರ್ಶಿಗಳಾಗಿಯೂ ಆಯ್ಕೆಯಾಗಿರುತ್ತಾರೆ ವಾಸವೀ ನಿಲಯದ ದಾತೃಗಳಾದ ಶ್ರೀ ಎನ್ ಕೆ ಸುಬ್ಬಯ್ಯಶೆಟ್ಟರನ್ನು ಗೌರವಾಧ್ಯಕ್ಷರಾಗಿ ಆರಿಸಲಾಗಿದೆ

ಸಂಸ್ಥಾನದ ಚುನಾವಣಾ ನ್ಯಾಯಮಂಡಲದ ಅಧ್ಯಕ್ಷರು

ಶ್ರೀ ವಿ ಚನ್ನಪ್ಪನವರ ಸ್ಥಾನದಲ್ಲಿ, ಬಳ್ಳಾರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಭೀಮಯ್ಯನವರನ್ನು ಸಂಸ್ಥಾನದ ಚುನಾವಣಾ ನ್ಯಾಯ ಮಂಡಲದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ

ಕೈಗಾರಿಕಾ ನ್ಯಾಯಮಂಡಲಕ್ಕೆ ಜೀವದಾನ

ಶ್ರೀ ವಿ ವೇಣುಗೋಪಾಲ ಮುದಲಿಯಾರರು ಅಧ್ಯಕ್ಷರು ಮತ್ತು ಶ್ರೀಗಳಾದ ಡಿ ಹೆಚ್ ಚಂದ್ರಶೇಖರಯ್ಯ ಮತ್ತು ಕೆ ಶಾಮರಾಜಯ್ಯಂಗಾರ್ಯರು ಸದಸ್ಯರಾಗಿರುವ ಕೈಗಾರಿಕಾ ನ್ಯಾಯ ಮಂಡಲದ ಅಧಿಕಾರಾವಧಿಯನ್ನು ಮುಂದೆ ತಿಳಿಸುವವರೆಗೆ ಹೆಚ್ಚಿಸಲಾಗಿದೆ

ಉತ್ತಮವಾದ ಕಟ್ಟಡದ ಪ್ಲಾನುಗಳುಮತ್ತು ಬ್ಲೂಪ್ರಿಂಟ್
ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್ ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದಕ್ಕೂ
ಗಾಯತ್ರಿ ಟಾಕೀಸ್ ಎದುರು
ಹ್ಯಾಟ್ ಅಂಗಡಿಯಲ್ಲಿ
ಬಿ ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿರಿ
ವಾರದ ರಜ . ಸೋಮವಾರ

Edited, Printed and Published by A R Nagarajan at Sadhvi Press, D Subbial Road, Mysore

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನಾಗಸ್ವರ ೭-೧೫ ಪತ್ರ
೮-೧೫ ಹೆಚ್ ಉಮಾದೇವಿ-ಕನ್ನಡ ಗೀತೆಗ
೭-೩೦ ರಿಕಾರ್ಡು ೮-೩೦ ಟಿ ಎಸ್ ಕಾ
ಚಾರ್ ಮತ್ತು ಎ ವಿ ಕೃಷ್ಣಮಾಚಾರ್-
ದ್ಯ ಓಟೀಲು ೯-೩೦ ಬಾಲಜಗತ್ ಮ
ಹ್ನ ೧೨ ಮತ್ತು ೨-೧೫ ಸಿ ವಿ ನಾಗರಾಜ
ಸಂಗೀತ ೧೨-೩೦ ವಾದ್ಯವೃಂದ ೧
ಮೆಚ್ಚಿನ ಗೀತೆಗಳು ೧ ೫೦ ಮತ್ತು ೯-೩೦
ಎಸ್ ವಿಜಯರಾಘವ-ಸಂಗೀತ. ಸಂ
ಪಾಶ್ಚಾತ್ಯ ಸಂಗೀತ ೫-೩೦ ಮತ್ತು ೧೦
ಶ್ರೀನಿವಾಸಯ್ಯಂಗಾರ್-ಗೋಟುವಾದ್ಯ ೬
ವಿರಾಮ ಸಂಗೀತ ೭-೨೦ ರಿಕಾರ್ಡು ೭
ಗಾಯನ ೮ ಎರಡು ಕೀರ್ತನೆಗಳು ೮
ಪಂಚವಾರ್ಷಿಕ ಯೋಜನೆ ಪ್ರಗತಿ-ಚ
೮-೫೦ ಮತ್ತು ೯-೧೫ ರಿಕಾರ್ಡು

ಆಯುರ್ವೇದ ಪ್ರೇಮಿಗಳೇ ತ್ವರೆ ಮಾಡಿರಿ!
ಅಪೂರ್ವ ವೈದ್ಯ ಗ್ರಂಥಗಳು ಕನ್ನಡ ಭಾಷೆ ಪರಿವರ್ತಿತವಾಗಿವೆ !!
ಉತ್ತಮ ಕಾಗದ-ಬೆಲೆ ಸುಲಭ-ಅಂದವಾದ ಮುದ್ರಣ
ಅಷ್ಟಾಂಗ ಹೃದಯ ಸಂಹಿತಾ
ಸಾದಾ ಕ್ಯಾಲಿಕೊ
ಪ್ರತಿ ಪ್ರತಿ
೧ನೆಯ ಭಾಗ
ಸೂತ್ರಸ್ಥಾನ ೬ ೮ ೦ ೭
೨ ಮತ್ತು ೩ನೆಯ ಭಾಗಗಳು
ಶಾರೀರ ಮತ್ತು ನಿದಾನ ಸ್ಥಾನಗಳು
೫ ೦ ೦ ೬
೪ ಮತ್ತು ೫ನೆಯ ಭಾಗಗಳು
ಚಿಕಿತ್ಸಾ ಮತ್ತು ಕಲ್ಪ ಸ್ಥಾನಗಳು
೬ ೦ ೦ ೭
೨, ೩, ೪ ಮತ್ತು ೫ ಭಾಗಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧೦ ೦ ೦ ೧೧
ಅಗದ ತಂತ್ರ : ೨ ೦ ೦ ೩
ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿಯೂ ಚಿಕಿತ್ಸಕರಿಗೆ ಹಾವು, ಚೇಳು ಮೊದಲಾದ ವಿಷಜಂತುಗಳ ಬಾಧೆಯನ್ನು ಪರಿಹರಿಸಲೂ ಸಹಾಯಕವಾದ ಪ್ರಾಮಾಣ್ಯ ಗ್ರಂಥವು
ಪ್ರಸೂತಿ ತಂತ್ರ .
ಸ್ತ್ರೀರೋಗ ಮತ್ತು ಕೌಮಾರ ಭೃತ್ಯಗಳನ್ನೊಳಗೊಂಡ ಈ ಪುಸ್ತಕವು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿಯೂ, ವೈದ್ಯರಿಗೆ ಪ್ರಾಮಾಣಿಕ ಗ್ರಂಥವಾಗಿಯೂ, ಸ್ತ್ರೀಯರಿಗೂ, ಗರ್ಭಿಣಿಯರಿಗೂ, ಬಾಲಹಿತೈಷಿಗಳಿಗೂ ಉಪದೇಶಕ ಅಪೂರ್ವ ಗ್ರಂಥವು.
ಎನ್. ಎಲ್. ಭಟ್ಟಾಚಾರ್ಯ,
ಆ॥ ವಿ, ಆ॥ ರತ್ನ
ನಿವೃತ್ತ ಅಧ್ಯಾಪಕ ಮತ್ತು ಚಿಕಿತ್ಸಕ,
ಗವ॥ ಆಯುರ್ವೇದ ಮಹಾ ಪಾಠಶಾಲಾ
ಮೈಸೂರು
ದೊರೆಯುವ ಸ್ಥಳ: ಭಾರದ್ವಾಜ ವೈದ್ಯಶಾಲಾ
VI ಮೇನ್, ವಾಣಿವಿಲಾಸ ಮೊಹಲ್ಲಾ
ಮೈಸೂರು

THE CHAMPION METROPOLITAN COLLEGE OF COMMERCE
"Co-operators Home" 100 Road Mysore
GRADUATES AND UNDERGRADUATES may now join a new batch of students who are being admitted for COST & WORKS ACCOUNTANCY classes
M. S PUTTANNA, *Vice Principal*
P SUBBARAYA SASTRY *Principal*

RAGOTINE
FINE RAGI MALT - An Ideal Food Beverage
FINE RAGI MALT Contains energizing extracts of
WHEAT & MALTED RAGI
FINE CHEMICAL WORKS, MYSORE

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 6 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ . ೧೫] SADHVI : SUNDAY 6-1-1957 ಮೈಸೂರು : ಭಾನುವಾರ ೬—೧—೧೯೫೭ [ಸಂಚಿಕೆ : ೧೬೩

ಸರ್ವೋದಯ ಸಮಾಜಕ್ಕಾಗಿ ಕಾಂಗ್ರೆಸ್ ಅಧ್ಯಕ್ಷರ ಕರೆ

ರ್ವೋದಯ ಸಿದ್ಧಾಂತವೇ ಸಮಾ ವಾದದ ಅಸ್ತಿಭಾರವಾಗಬೇಕು

ಂಗ್ರೆಸ್ ಮಹಾಧಿವೇಶನದಲ್ಲಿ ಢೇಬರರ ಅಧ್ಯಕ್ಷ ಭಾಷಣ

ಲಕ್ಷ್ಮೀಬಾಯಿನಗರ ೬

ಭಾರತದ ರಾಷ್ಟ್ರೀಯ ಮಹಾ ಸಭೆಯ ನೇ ಅಧಿವೇಶನವು ನೆನ್ನೆ ಮಧ್ಯಾಹ್ನ ಇಲ್ಲಿ ರಂಭವಾಯಿತು ಯು ಎನ್ ಢೇಬರ್‌ರವರು ಅಧ್ಯಕ್ಷತೆ ವಹಿಸಿದ್ದರು.

ಅವರು ತಮ್ಮ ಭಾಷಣದಲ್ಲಿ ಭಾರತೀಯರು ನ್ನು ಸರ್ವ ಶಕ್ತಿಗಳನ್ನೂ ಮಾತೃಭೂಮಿಯ ಗೆ ಅರ್ಪಿಸಬೇಕೆಂದು ತಿಳಿಸಿದರು ನೂ ವರ್ಷಗಳ ಹಿಂದೆ ಭಾರತದಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಮತ್ತು ವೀರರ ಪುಣ್ಯ ಸ್ಮರಣೆ ಮಾಡಿ ಅಧ್ಯಕ್ಷರು ರಾಷ್ಟ್ರದ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಅವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು —

ಮಹಾತ್ಮ ಗಾಂಧಿಯವರು ಸತ್ಯಾಗ್ರಹ ತತ್ವವನ್ನು ಪ್ರತಿಪಾದಿಸಿ ಆ ಮೂಲಕ ಅತ್ಯಂತ ಅಮೂಲ್ಯವಾದ ಉಪದೇಶವಿತ್ತರು ಸತ್ಯಾಗ್ರಹ ತತ್ವದಂತೆ ನಮ್ಮ ಗುರಿ ಅದರ ಸಾಧನೆ ಮಾರ್ಗವೂ ಪರಿಶುದ್ಧವಿರಬೇಕು ನಾವು ಒಂದು ವರ್ಗದ ಅಭ್ಯುದಯಕ್ಕಾಗಿ ಹೋರಾಟ ನಡೆಸುವ ಭಾವನೆಯನ್ನು ಬಿಡಬೇಕು ಈ ಗುರಿಯನ್ನು ಶಾಂತಿ, ಪ್ರೇಮ ಮತ್ತು ಸಹಕಾರ ಮಾರ್ಗಗಳಿಂದ ಸಾಧಿಸಬೇಕು

ಸ್ವಾತಂತ್ರ್ಯವು ಬಂದನಂತರ ದೇಶವು ಸಾಧಿಸಿದ ಕಾರ್ಯಗಳು ವಿಶ್ವದ ಇತಿಹಾಸದಲ್ಲಿ ಅದ್ವಿತೀಯವಾಗಿವೆ ಸ್ವರಾಜ್ಯ ಸಾಧನೆಯಲ್ಲಿ ಅಪಾರ ಸೇವೆ ಮತ್ತು ತ್ಯಾಗ ಮಾಡಿರುವ ಕಾಂಗ್ರೆಸ್ಸು ರಾಷ್ಟ್ರೀಯ ಆಶೋತ್ತರಗಳನ್ನು ಈಗ ಸಾಧಿಸಬೇಕಾಗಿದೆ

ಗಾಂಧಿಜಿಯವರ ನೂತನ ಆರ್ಥಿಕ-ಸಾಮಾಜಿಕ ವ್ಯವಸ್ಥೆಯ ಗುರಿಯನ್ನು ಭಾರತೀಯರು ಈಗಲು ಸಾಧ್ಯವಾಗದಿದ್ದರೂ, ಅವರ ಸರ್ವೋದಯ ಸಿದ್ಧಾಂತವನ್ನು ನಮ್ಮ ಸಮಾಜವಾದವು ಅನುಸರಿಸುವುದು ಅಗತ್ಯ

ಬಂಡವಾಳಶಾಹಿಯನ್ನು ತೊಡೆದುಹಾಕಲು ವ್ಯಕ್ತಿ ಸ್ವಾತಂತ್ರ್ಯ ವಿರುದ್ಧವೆಂಬುದೇ ಸಮಾಜವಾದದ ಮುಖ್ಯ ವಾದವಾಗಬಾರದು ರಾಷ್ಟ್ರಗಳಲ್ಲಿ ಬೇರೆ ವಿಧಾನಗಳಿಂದ ಪ್ರಗತಿ ಸಾಧಿಸಲಾಗಿದೆ ಭಾರತದಲ್ಲಿ ಈ ಯೋಜನೆಗೆ ಮಧ್ಯ ಕಾಲದ ಆರ್ಥಿಕ ವ್ಯವಸ್ಥೆ ಇರಬೇಕು ಜಮೀನುದಾರಿ ಪದ್ಧತಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಗೆ ಅಳವಡಿಸಬೇಕು ವ್ಯವಸಾಯ, ವಿಪರೀತ ನಿರುದ್ಯೋಗ, ಹೆಚ್ಚುತ್ತಿರುವ ಪ್ರಜಾ ಸಂಖ್ಯೆ, ಅತ್ಯಂತ ಕಡಿಮೆ ಜೀವನದ ಮಟ್ಟ ಮುಂತಾದುವ ಗಮನದಲ್ಲಿಟ್ಟು ಹೊಸ ಆರ್ಥಿಕ ವ್ಯವಸ್ಥೆ ರೂಪಿಸಬೇಕು

ದೇಶಕ್ಕಾಗಿ ಪೂರ್ಣ ಪ್ರಮಾಣದ ಯೋಜನೆ ಸಂಘಟಿತ ವ್ಯವಸ್ಥಾತ್ಮಕ ಉ

ಫಿಲೊಮಿನಾ ಕಾಲೇಜು ಅಧ್ಯಾಪಕರ ಮುಷ್ಕರದ ನೋಟೀಸು

ಮೈಸೂರು ೬

ಕಳೆದ ನವೆಂಬರ್ ೨೭ನೇ ತಾರೀಕು ನಗರದ ಸೇಂಟ್ ಫಿಲೊಮಿನ ಕಾಲೇಜು ಅಧ್ಯಾಪಕರುಗಳು ತಮ್ಮ ಬೇಡಿಕೆಗಳ ಬಗ್ಗೆಯೂ ಪ್ರಿನ್ಸಿಪಾಲರ ವರ್ತನೆ ಬಗ್ಗೆಯೂ ಒಂದು ದಿನದ ಮುಷ್ಕರವನ್ನು ಹೂಡಿ ಮಾರನೇ ದಿನ ಪ್ರಿನ್ಸಿಪಾಲರ ಕ್ಷಮಾಪಣೆ ಮತ್ತು ಭರವಸೆಯ ಮೇರೆಗೆ ಮುಷ್ಕರವನ್ನು ನಿಲ್ಲಿಸಿದ್ದರು ಅವರ ಬೇಡಿಕೆಗಳನ್ನು ಪ್ರಿನ್ಸಿಪಾಲರು ಈಡೇರಿಸಲು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದರಿಂದ ಕಾಲೇಜಿನ ೨೦ ಜನ ಅಧ್ಯಾಪಕರುಗಳು ಪ್ರಿನ್ಸಿಪಾಲರಿಗೆ ಮೊನ್ನೆ ನೋಟೀಸು ಕೊಟ್ಟು ಕ್ರಿಸ್‌ಮಸ್ ರಜವು ಮುಗಿದನಂತರ ತಾರೀಖು ಆರಂಭವಾಗುವ ತರಗತಿಗಳನ್ನು ತಮ್ಮ ಬೇಡಿಕೆಗಳು ಈಡೇರುವವರೆಗೂ ನಡೆಸಲು ತಮಗೆ ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ

೬೩ ಜನ ಅಲ್ಜೀರಿಯನ್ನರ ಕೊಲೆ

ಉತ್ತರ ಅಲ್ಜೀರಿಯದ ಕೌಮ್ಮನ್ ಕಣಿವೆಯಲ್ಲಿ ಮೊನ್ನೆ ನಡೆದ ಕದನಗಳಲ್ಲಿ ಫ್ರೆಂಚ್ ಸೈನಿಕರು ೬೩ ಅಲ್ಜೀರಿಯನ್ನರನ್ನು ಕೊಲೆ ಮಾಡಿರುವರೆಂದು ವರದಿಯಾಗಿದೆ

ಪ್ರಯೋಗ, ಎಲ್ಲ ವಸ್ತುಗಳ ಶೇಖರಣೆ ಮತ್ತು ಸರಿಯಾದ ಮಾರ್ಗದಲ್ಲಿ ಅವುಗಳ ವಿನಿಯೋಗ ಅದಕ್ಕೆ ಬಿಡ್ಡಿಗಳನ್ನು ಮೊಟಕು ಮಾಡುವುದು ಮತ್ತು ಹೊಸ ಸಮಾಜ ರಚನೆಯ ಅವಶ್ಯಕತೆಯನ್ನು ಅಂಗೀಕರಿಸುವುದು ಈ ನಾಲ್ಕು ಅಂಶಗಳ ಅರಿವು ಅಗತ್ಯ

ಭಾರತದ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಲು ವಿದೇಶೀ ಸಹಾಯದ ನಿರೀಕ್ಷೆ ಸರಿಯಲ್ಲ ವಿದೇಶೀ ಸಹಾಯವು ಅಪೇಕ್ಷಣೀಯವಾದರೂ, ರಾಷ್ಟ್ರದ ಘನತೆಗೆ ಅಪಚಾರ ತರುವಂತಿರಬಾರದು ಭಾರತದ ಐಕ್ಯತೆ ಮತ್ತು ಅಭ್ಯುದಯಕ್ಕೆ ಕಂಟಕವಾದ ಸಾಮಾಜಿಕ ವರ್ತನೆಗಳು, ಹಳೆಯ ಕಾಲದ ವ್ಯವಸ್ಥೆ ಮತ್ತು ಕಷ್ಟಪಡದೆ ಜೀವನ ನಡೆಸಬೇಕೆಂಬ ಮನೋಭಾವ ಇವುಗಳು ನಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿವೆ

ಹಂಗೆರಿ ಮತ್ತು ಈಜಿಪ್ಟಿನ ಘಟನೆಗಳು ಮಾನವೀಯತೆಯ ಅತ್ಯಾಚಾರವಾಗಿವೆ ಈಜಿಪ್ಟಿನ ಮೇಲೆ ಇಸ್ರೇಲು ಆಕ್ರಮಣ ನಡೆಸಲು ಆಂಗ್ಲೋ ಫ್ರೆಂಚರ ಬೆಂಬಲವಿದ್ದಿತು ಹಂಗೆರಿಯಲ್ಲಿ ಜನ ಸಾಮಾನ್ಯರು ತಮ್ಮ ಸ್ವಾತಂತ್ರ್ಯದ ರಕ್ಷಣೆಗಾಗಿ ನಡೆಸಿದ ಹೋರಾಟದ ದಮನದ ಪ್ರಕರಣವೂ ಆಗಿದೆ ಈಗಿನ ಪಾರಿಭಾಷಿಕ ಮತ್ತು ವೈಜ್ಞಾನಿಕ ಯುಗದಲ್ಲೂ ಸ್ವಾತಂತ್ರ್ಯಕಾಂಕ್ಷೆಯು ದಮನ ಮಾಡಲಾರದಂತಹ ಶಕ್ತಿಯಾಗಿರುವುದು ಕಂಡುಬರುತ್ತದೆ

ಕಾಂಗ್ರೆಸ್ಸು ಮುಂದಿನ ಮಹಾ ಚುನಾವಣೆಯಲ್ಲಿ ಭಾಗವಹಿಸಲಿದೆ ಈ ಸಂಸ್ಥೆಯು ಜನರ ತಿಳುವಳಿಕೆಯ ಸಾಧನವಾಗಿದೆ ಭಾರತೀಯರು ಈ ಸಂದರ್ಭದಲ್ಲಿ ತಮ್ಮ ಪರಂಪರೆ ಸಂಸ್ಕೃತಿಗ ತಕ್ಕಂತೆ ನಡೆದುಕೊಂಡು ಕಾಂಗ್ರೆಸ್ಸಿನ ಪ್ರಯತ್ನವನ್ನು ಸಫಲಗೊಳಿಸಲೆಂದು ಹಾರೈಸುತ್ತೇನೆ.

ಶಾಸನ ಸಭೆಗೆ ಕಾಂಗ್ರೆಸ್ ಉಮೇದುವಾರರು

ರಾಮನಗರದಲ್ಲಿ ಹನುಮಂತಯ್ಯನವರಿಗೆ ಸ್ಥಾನ

ಬೆಂಗಳೂರು ೫

ವಿಧಾನ ಸಭೆ ಮತ್ತು ಲೋಕ ಸಭೆಗಳಿಗೆ ಕಾಂಗ್ರೆಸ್ ಉಮೇದುವಾರರ ಪಟ್ಟಿಯನ್ನು ಈ ತಿಂಗಳು ೧೧ನೇ ತಾರೀಖು ಪ್ರಕಟಿಸಲಾಗುವುದೆಂದು ಹೇಳಲಾಗಿದೆ ಅಭ್ಯರು ಪ್ರಕಟಣೆಗೆ ಮುಂಚೆ ಸಂಸ್ಥಾನದ ಚುನಾವಣಾ ಸಮಿತಿಯು ಪುನರ್ ಪರಿಶೀಲಿಸಿದೆ ಆರಿಸಲ್ಪಟ್ಟಿರುವವರ ಪೈಕಿ ಕೆಳಗಿನವರು ಇರುವರು ಗೃಹಮಂತ್ರಿ ಶ್ರೀ ಎಂ ವಿ ರಾಮರಾವ್ ತುಮಕೂರು ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ ರಾಮನಗರ ಮಾಜಿ ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್ ಹೊಳೆನರಸೀಪುರ ಎಸ್ ಸುಬ್ಬಮ್ಮಾಸ್ತಿ ಗೌಡ ಚಂದ್ರಶೇಖರಪುರ, ಮೂಡಲಗಿರಿಗೌಡ ಕುಣಿಗಲ್ ಶ್ರೀ ಟಿ ಮರಿಯಪ್ಪ - ನಾಗಮಂಗಲ

ಮಧ್ಯ ಪೂರ್ವಕ್ಕೆ ಅಮೆರಿಕಾ ಸೈನ್ಯದ ರವಾನೆ

ಕಾಂಗ್ರೆಸ್ಸಿನ ಅಪ್ಪಣೆಗಾಗಿ ಐಸೆನ್‌ಹೋವರರ ಕರೆ

ಮಧ್ಯ ಪೂರ್ವದ ಯಾವುದೇ ರಾಷ್ಟ್ರವಾದರೂ ತನ್ನ ಅಸ್ತಿತ್ವ, ಭದ್ರತೆ ಮತ್ತು ರಾಜಕೀಯ ಸ್ವಾತಂತ್ರ್ಯದ ರಕ್ಷಣೆಗಾಗಿ ಅಮೆರಿಕದ ಮಿಲಿಟರಿ ಶಕ್ತಿಯ ಸಹಾಯವನ್ನು ಬೇಡಿದರೆ ಅದನ್ನೊದಗಿಸಲು ಅವಕಾಶವು ಬೇಕೆಂದು ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರು ನೆನ್ನೆ ಕಾಂಗ್ರೆಸ್ ಜಂಟಿ ಸಭೆಯಲ್ಲಿ ಕೇಳಿದರು ಕಮ್ಯೂನಿಸ್ಟ್ ರಾಷ್ಟ್ರವು ನಡೆಸಬಹುದಾದ ಸಶಸ್ತ್ರ ಆಕ್ರಮಣವನ್ನು ಆ ಮೂಲಕ ತಡೆಗಟ್ಟಬೇಕೆಂದು ಐಸೆನ್‌ಹೋವರರು ತಿಳಿಸಿದರು ಇದಕ್ಕಾಗಿ ಅವರು ಅಸಾಧಾರಣ ಜಂಟಿ ಸಭೆಯನ್ನು ಕರೆದಿದ್ದರು ರಷ್ಯದ ನಾಯಕರು ಆಕ್ರಮಣ ನಡೆಸಲು ಮೊದಲು ಆರಂಭಿಸದಿದ್ದರೆ ರಷ್ಯಕ್ಕೆ ಅಮೆರಿಕದಿಂದ ಭಯವೇನೂ ಇರುವುದಿಲ್ಲವೆಂದು ಅವರು ನುಡಿದರು

ಜೂಜಿನಲ್ಲಿ ಪತ್ನಿಯನ್ನು ಸೋತ ಪ್ರಸಂಗ

ಉತ್ತರ ಪ್ರದೇಶದ ಮೊರಾದಾಬಾದಿನಲ್ಲಿ ಒಬ್ಬಾತನು ತನ್ನ ಪತ್ನಿಯನ್ನು ಪಣವಾಗಿಟ್ಟು ಜೂಜಾಡಿ, ಸೋತನೆಂದು ವರದಿಯಾಗಿದೆ. ಪತ್ನಿಯನ್ನಲ್ಲದೆ ಎರಡು ಮಕ್ಕಳನ್ನೂ ಗೆದ್ದವನಿಗೆ ಒಪ್ಪಿಸಲಾಯಿತು ಮಕ್ಕಳನ್ನು ತಾನು ಜೂಜಿನಲ್ಲಿ ಪಡೆಯಲಿಲ್ಲವೆಂದು ಅವನು ಅವನ್ನು ಅಲ್ಲಿನ ಆರ್ಯ ಸಮಾಜದ ಅನಾಥಾಶ್ರಮದಲ್ಲಿ ಬಿಟ್ಟಿರುತ್ತಾನೆ ಅವರ ಮಾತಾಪಿತೃಗಳಿರುವ ಮಕ್ಕಳನ್ನು ಅನಾಥರೆಂದು ಸ್ವೀಕರಿಸುವುದು ಆಶ್ರಮದವರಿಗೆ ಸಮಸ್ಯೆಯಾಗಿದೆ

○ ಚಾಮುಂಡಿಪುರದ ಸಿಮೆಂಟ್ ಬ್ಯಾಂಕಿನ ಹತ್ತಿರ ವಾಸವಾಗಿರುವ ರಕೋರ್ಟು ಟೈಪಿಸ್ಟರಾದ ಶ್ರೀ ರಾಮಾನುಜಯ್ಯನವರ ಮನೆಯಲ್ಲಿ ಮೊನ್ನೆ ಮಧ್ಯಾಹ್ನ ಬೀಗ ಹೊಡೆದಿದ್ದ ವ ಬೆಲೆ ಬಾಳುವ ವಸ್ತು ಸಾಮಾನುಗಳನ್ನು ಅಪಹರಿಸಿರುವರು

ಕಾಂಗ್ರೆಸ್ ಉಮೇದುವಾರರ ಪಟ್ಟಿ ಪುನರ್ವಿಮರ್ಶೆಯಾಗಬೇಕು

ಕಾರ್ಯಕರ್ತರ ಸಭೆಯಲ್ಲಿ ನಿರ್ಣಯ

ಸ್ವಂ ಸು ಫೋ] ಬೆಂಗಳೂರು ೬

ಮಹಾ ಚುನಾವಣೆಗಳಿಗೆ ಕಾಂಗ್ರೆಸ್ ಉಮೇದುವಾರರುಗಳನ್ನು ಆರಿಸಿರುವ ಬಗ್ಗೆ ಅಸಮಾಧಾನಗೊಂಡಿರುವ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಈ ದಿನ ಮಧ್ಯಾಹ್ನ ಶ್ರೀ ಪಿ ಆರ್ ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ ಹನುಮಂತಯ್ಯ, ಟಿ ಸಿದ್ಧಲಿಂಗಯ್ಯ, ವಿ ಎಸ್ ಕೃಷ್ಣಯ್ಯರ್, ಟಿ ಎಸ್. ಸುಬ್ಬಣ್ಣ, ಪಳನಿಯಪ್ಪ ಮುಂತಾದ ೨೦೦ ಜನರು ಭಾಗವಹಿಸಿದ್ದರು

ಅಧ್ಯಕ್ಷರು ಭಾಷಣ ಮಾಡಿ, ಉಮೇದುವಾರರ ಆಯ್ಕೆಯು ಅಸಮರ್ಪಕವಾಗಿದೆಯೆಂದೂ, ೨೦-೩೫ ವರ್ಷ ಸಂಸ್ಥೆಗೆ ಸೇವೆ ಸಲ್ಲಿಸಿರುವವರನ್ನು ಕಡೆಗಣಿಸಿ, ಹೊಸದಾಗಿ ಸೇರಿರುವವರಿಗೆ ಸ್ಥಾನಗಳನ್ನು ಕೊಡಲಾಗಿದೆಯೆಂದೂ ತಿಳಿಸಿ, ಶ್ರೀ ಹನುಮಂತಯ್ಯನವರ ಮೇಲಿನ ಅವಿಶ್ವಾಸದ ಸಮಯದಲ್ಲಿ ಚುನಾವಣಾ ಸಮಿತಿಯವರು, ಅವಿಶ್ವಾಸಕ್ಕೆ ರುಜು ಹಾಕಿದವರಿಗೆ ಉಮೇದುವಾರಿಕೆ ಕೊಡುವುದಾಗಿ ತಿಳಿಸಿದ್ದರೆಂದೂ ಹೇಳಿದರು.

ಈಗಿನ ಪಟ್ಟಿಯನ್ನು ಪುನರ್ವಿಮರ್ಶಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು

ವಿಧಾನ ಸೌಧದ ತನಿಖೆ ಸಮಿತಿ ವರದಿ

ವಿಧಾನ ಸೌಧ ಕಟ್ಟಡದ ಖರ್ಚಿನ ಬಗ್ಗೆ ಶ್ರೀ ಪಿ ವಿ .ದೇವ್‌ರವರ ಅಧ್ಯಕ್ಷತೆಯಲ್ಲಿ ನೇಮಕವಾಗಿರುವ ಸಮಿತಿಯು ತನ್ನ ೨೦೦ ಪುಟಗಳ ವರದಿಯನ್ನು ಈ ದಿನ ಪ್ರಕಟಿಸಿತು ಕಟ್ಟಡದ ಬಗ್ಗೆ ಹಲವಾರು ಲೋಪದೋಷಗಳನ್ನು ವ್ಯಕ್ತಪಡಿಸಲಾಗಿದೆ. ಉದ್ಯಾನವನ, ಮರಮುಟ್ಟುಗಳು ಮುಂತಾದುವಕ್ಕಾಗಿ ಖರ್ಚು ಮಾಡಬೇಕೆಂದಿರುವ ೩೫ ಲಕ್ಷ ರೂ. ಗಳನ್ನು ಜೋತಾ ಮಾಡುವಂತೆ ಸಮಿತಿಯವರು ಸೂಚಿಸಿರುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಪಿಟೀಲುವಾದನ ೭ ೧೫ ಹೆಚ್. ಎಲ್ ಲಲಿತಮ್ಮಣ್ಣಿ—ದೇವರನಾಮ ೭-೩೦ ಗಾನವಿಹಾರ ೮-೧೫ ಉದಯ ಸಂಗೀತ ಮಧ್ಯಾಹ್ನ ೧೨ ಹೆಚ್ ಎಲ್ ಲಲಿತಮ್ಮಣ್ಣಿ—ಸಂಗೀತ. ೧೨-೩೦ ಜಿ ಎನ್ ಸುಬ್ರಹ್ಮಣ್ಯಂ-ವೀಣೆ ೧ ಗಾನಮಂಜರಿ ೧-೫೦ ಪಿಟೀಲು ವಾದನ ೨-೧೫ ಸಂಗೀತ ಕಛೇರಿ ಸಂಜೆ ೫-೩೦ ವೀಣಾವಾದನ ೬ ೫ ವಿರಾಮ ಸಂಗೀತ. ೬-೩೦ ಜಾನಪದಗೀತೆ ೭-೩೦ ವಿಜಯಾ ಉಗ್ರಪ್ಪನ್ ಹಿಂದಿ ಭಜನೆ ೮ ವಿ. ವಸಂತ್—ಹಿಂದಿ ಗೀತೆ ೮-೧೫ ಕುರುತು ತಿಪ್ಪಯ್ಯ—ಕಥಾನಕ ೮-೩೦ ಸಂಗೀತ ೯-೧೫ ಭಾಷಣ ೯-೩೦ ಕಥಾ ಕಾಲಕ್ಷೇಪ

ಪಾಕೆಟ್ ಕ್ಯಾಲೆಂಡರುಗಳ ಸ್ವೀಕಾರ

ಸಂತಾನ ಸಿಂಧೂರದ ತಯಾರಕರಾದ ಶ್ರೀ ಎ ರಾಮಸ್ವಾಮಿ ಅಯ್ಯರ್ ಸನ್ ಅಂಡ ಕಂಪೆನಿಯವರು ಕಳುಹಿಸಿರುವ ಪಾಕೆಟ್ ಮತ್ತು ಫ್ಯಾನ್ಸಿ ಕ್ಯಾಲೆಂಡರುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ವಾರ ಭವಿಷ್ಯ

[illegible] ರಿಂದ [illegible] ರವರೆಗೆ

ಮೇಷ:- ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಅಪ್ತರಿಂದ ವಂಚನೆ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ನೌಕರಿಯಲ್ಲಿ ನಿರುತ್ಸಾಹ. ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ವೃಷಭ: ಆರೋಗ್ಯ ಚೆನ್ನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ಸ್ಥಳಾಂತರ. ಕೈಗೊಂಡ ಕಾರ್ಯಗಳಿಗೆ ವಿಘ್ನ. ಪ್ರವಾಸ ಬೇಡ.

ಮಿಥುನ:- ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಉತ್ಸಾಹ. ಶುಭ ಕಾರ್ಯಗಳು ಜರುಗುವುವು

ಕರ್ಕ:- ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ನಿರುತ್ಸಾಹ. ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ.

ಸಿಂಹ: ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು. ಅಪ್ತರಿಂದ ಅಸಹಕಾರ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ಉದ್ಯೋಗದಲ್ಲಿ ತಿರುಗಾಟ. ಅಪಘಾತ ಭಯ

ಕನ್ಯಾ:- ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಪ್ರವಾಸ ಸುಖಕರವಾಗಿರುವುದು.

ತುಲಾ:- ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಶುಭ ಕಾರ್ಯಗಳು ಜರುಗುವುವು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ. ಕಾರ್ಯೋತ್ಸಾಹ. ವಿದ್ವಜ್ಜನರ ಪರಿಚಯ.

ವೃಶ್ಚಿಕ:- ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಅಲ್ಪ ಪ್ರಗತಿ. ಉದ್ಯೋಗದಲ್ಲಿ ಅನಿರೀಕ್ಷಿತ ಘಟನೆಗಳು. ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಧನು:- ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಉದ್ಯೋಗದಲ್ಲಿ ಬದಲಾವಣೆ. ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು. ಕೈಗೊಂಡ ಕಾರ್ಯಗಳಿಗೆ ಹಾನಿ ಸಂಭವ

ಮಕರ:- ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ. ನೂತನ ಪರಿಚಯಗಳು.

ಕುಂಭ:- ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ಉದ್ಯೋಗದಲ್ಲಿ ಸಮಸ್ಯೆ. ಮಂಗಳ ಕಾರ್ಯಗಳು ಜರುಗುವುವು. ಪ್ರಯಾಣ ಯೋಗ.

ಮೀನ:- ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ಕಿರುಕುಳ. ವೃಥಾ ವೈಮನಸ್ಯ. ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ.

ಕಳೆದ ವರ್ಷ ೬ ಲಕ್ಷ ಸೈಕಲ್ ತಯಾರಿಕೆ

ಕಳೆದ ವರ್ಷ ಭಾರತದಲ್ಲಿ ೬,೧೦,೦೦೦ ಸೈಕಲ್ಲುಗಳನ್ನು ತಯಾರಿಸಲಾಯಿತೆಂದು ಹೇಳಲಾಗಿದೆ. ಹಿಂದಿನ ವರ್ಷದಲ್ಲಿ [illegible] ಮತ್ತು ಅದರ ಹಿಂದಿನ ವರ್ಷದಲ್ಲಿ [illegible] ಸೈಕಲ್ಲುಗಳನ್ನು ತಯಾರಿಸಲಾಗಿತ್ತು. ಸಣ್ಣ ಪ್ರಮಾಣದಲ್ಲಿ ತಯಾರಾದ ಸೈಕಲ್ಲುಗಳ ಸಂಖ್ಯೆಯು ಇದರಲ್ಲಿ ಸೇರಿಲ್ಲ. ದೇಶದಲ್ಲಿ ಒಟ್ಟು [illegible] ಸೈಕಲ್ ತಯಾರಿಕಾ ಕಂಪೆನಿಗಳಿವೆ.

ಈ ವರ್ಷಾಂತ್ಯದೊಳಗೆ ಕೃತಕ ಚಂದ್ರ ಪರ್ಯಟನ

ಅಮೆರಿಕದ ವಿಜ್ಞಾನಿಗಳು ಈ ವರ್ಷಾಂತ್ಯದಲ್ಲಿ ಪಶ್ಚಿಮದಲ್ಲಿ ಉದಯಿಸಿ, ಪೂರ್ವದಲ್ಲಿ ಮುಳುಗುವ ಚಂದ್ರನಂತಹ ಉಪಗ್ರಹವೊಂದನ್ನು ಅಂತರಿಕ್ಷದಲ್ಲಿ ಬಿಡುವರು. ಭಾರತೀಯರು ಅದನ್ನು [illegible] ನಿಮಿಷಗಳವರೆಗೆ ಸಂಜೆ ಅಥವಾ ಮುಂಜಾನೆ ಹೊತ್ತಿನಲ್ಲಿ ನೋಡಬಹುದು. [illegible] ಮೈಲಿ ಎತ್ತರದಲ್ಲಿ ದಿನಕ್ಕೆ [illegible] ಬಾರಿ [illegible] ಸುತ್ತಲೂ ಸುತ್ತುವುದೆಂದು [illegible] ಗಿದೆ. ಅಂತರಿಕ್ಷ [illegible] ಉಪಗ್ರಹಗಳನ್ನು [illegible] ವೀಕ್ಷಣೆ ಮತ್ತು [illegible] ಚಿತ್ರ ತೆಗೆದುಕೊಳ್ಳಲು ಉತ್ತರ ಪ್ರದೇಶದ ನೈನಿತಾಲ್‌ನಲ್ಲಿ ಒಂದು ವಿಶೇಷ ಕ್ಯಾಮರಾವನ್ನು ಸ್ಥಾಪಿಸಲಾಗುವುದು.

ವಿದೇಶ ಪ್ರವಾಸ ಪ್ರಮಾಣ ತಗ್ಗಿಸಲು ಕ್ರಮ

ಕಳೆದ ೧ನೇ ತಾರೀಕಿನಿಂದ ವಿದೇಶೀ ಪ್ರವಾಸ ಹೋಗುವವರಿಗೆ ವಿದೇಶೀ ನಾಣ್ಯ ವಿನಿಮಯವು ದೊರೆಯದಂತೆ ಕ್ರಮ ಕೈಗೊಳ್ಳಲು ರಿಸರ್ವ್ ಬ್ಯಾಂಕಿನವರು ಬ್ಯಾಂಕುಗಳಿಗೆ ಸೂಚನೆಯಿತ್ತಿರುವರು. ವಿದ್ಯಾರ್ಥಿಗಳಿಗೂ ಇದು ಅನ್ವಯಿಸುವುದು. ಭಾರತಕ್ಕೆ ಅತ್ಯವಶ್ಯಕವಾದ ಮತ್ತು ಇಲ್ಲಿ ದೊರೆಯದ ವಿದ್ಯಾಭ್ಯಾಸಕ್ಕೆ ಮಾತ್ರ ವಿದೇಶೀ ನಾಣ್ಯಗಳ ಸೌಲಭ್ಯವನ್ನೀಯಲಾಗುವುದು

ಗೋವಾಕ್ಕೆ ಪಾಕಿಸ್ತಾನದ ವ್ಯಾಪಾರಿ ಮಂಡಲ

ಗೋವಾದೊಡನೆ ನಿಕಟವಾದ ವ್ಯಾಪಾರ ಸಂಬಂಧವನ್ನು ಹೊಂದಿ ಭಾರತದ ದಿಗ್ಬಂಧನವನ್ನು ಮುರಿಯುವ ಉದ್ದೇಶದಿಂದ ಅಲ್ಲಿಗೆ ಪಾಕಿಸ್ತಾನದ ವ್ಯಾಪಾರಿ ಮಂಡಲವೊಂದು ಹೊರಟಿರುವುದೆಂದು ಗೋವಾ ರೇಡಿಯೋವು ತಿಳಿಸಿದೆ

ನಿಶ್ಶಕ್ತಿ ಪ್ರದರ್ಶನಕ್ಕೆ ನೆಹರೂರವರ ವಿರೋಧ

ಗಾಂಧೀಜಿಯವರು ಹಂತಕನ ಕೈಲಿ ಮಡಿದಿರುವುದೇ ಮುಂತಾದ ರಾಷ್ಟ್ರೀಯ ದುರ್ಘಟನೆಗಳ ಬಗ್ಗೆ ಜನರು ನಿಟ್ಟುಸಿರು ಬಿಟ್ಟು 'ಹಾಯ್' "ಹಾಯ್" ಎಂದು ಹೇಳುವುದನ್ನು ನೆಹರೂರವರು ಟೀಕಿಸಿರುತ್ತಾರೆ. ಗಾಂಧೀಜಿಯವರು ಜೀವಂತರಾಗಿದ್ದರೆ ಈ ಜನರ ಬಗ್ಗೆ ಅವರು ಏನನ್ನುತ್ತಿದ್ದರೆಂದು ನೆಹರೂರವರು ಪ್ರಶ್ನಿಸಿದ್ದಾರೆ. ಹಳೇ ಮುದುಕಿಯರು ಮಾತ್ರ ಹಾಗೆ ಮಾಡುವರೆಂದೂ, ಇತರರಿಗೆ ಅದು ಸಲ್ಲದೆಂದೂ ಹೇಳಿರುತ್ತಾರೆ

ಹಿಂದಿ ಪ್ರೊಫೆಸರರುಗಳಿಗೆ ಸನ್ಮಾನ

ಅಲಹಾಬಾದು ವಿಶ್ವವಿದ್ಯಾಲಯದ ಹಿಂದಿ ಪ್ರೊಫೆಸರ್ ಶ್ರೀ ಧೀರೇಂದ್ರ ವರ್ಮರವರ ಗೌರವಾರ್ಥವಾಗಿ ಮೊನ್ನೆ ನಗರದ ಉಪಾಧ್ಯಾಯರ ಶಿಕ್ಷಣ ಕಾಲೇಜಿನ ಹಿಂದಿ ಶಿಕ್ಷಕ ಮತ್ತು ವಿದ್ವತ್ ತರಗತಿಗಳ ವಿದ್ಯಾರ್ಥಿಗಳು ಸಮಾರಂಭವೊಂದನ್ನು ಏರ್ಪಡಿಸಿದ್ದರು ಮಹಾರಾಜಾ ಕಾಲೇಜಿನ ಹಿಂದಿ ಉಪಪ್ರಾಧ್ಯಾಪಕ ಶ್ರೀ ಎಚ್. ನಾಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ ಮತ್ತು ಸ್ವಾಗತ ಭಾಷಣವಾದನಂತರ, ಹಿಂದಿ ಅಧ್ಯಾಪಕರಾದ ಶ್ರೀ ಶ್ರೀನಿವಾಸರಾಘವಾಚಾರ್ಯರು ಕಾಲೇಜಿನಲ್ಲಿ ನಡೆಯುತ್ತಿರುವ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು. ಶ್ರೀ ವರ್ಮರವರು ಉಪಾಧ್ಯಾಯರ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಕುರಿತು ಭಾಷಣ ಮಾಡಿದರು ಅಧ್ಯಕ್ಷರ ಭಾಷಣಾನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ನೂರಿನ ಅಂಗಡಿ ಶ್ರೀ ಬಿ. ಕೆಂಚಪ್ಪನವರ ಮನೆ ಮುಂಭಾಗದಲ್ಲಿ ಹಾಕಿರುವ ಚಪ್ಪರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ವಿ|| ಭದ್ರಾವತಿ ವೆಂಕಟೇಶದಾಸರಿಂದ " ರಾಜಸೂಯಯಾಗ " ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಆಹ್ವಾನವುಂಟು.

ಐಸೆನ್ಹೋವರರೊಡನೆ ಪ್ರಧಾನಿ ನೆಹರೂ

ನೆಹರೂರವರು ಅಮೆರಿಕಾ ಅಧ್ಯಕ್ಷ ಐಸೆನ್ಹೋವರರೊಡನೆ ವಾಷಿಂಗ್ಟನ್ನಿನಲ್ಲಿ ಆಪ್ತರು ಮಾತುಕತೆ ನಡೆಸುತ್ತಿರುವುದು

ಉಪಾಧ್ಯಾಯರ ಪರಿಸ್ಥಿತಿ ಜವಾನರುಗಳಿಗಿಂತ ಕೇಡು

ಪ್ರಧಾನಿ ನೆಹರೂರವರ ಪರಿತಾಪ

ಭಾರತದಲ್ಲಿ ಉಪಾಧ್ಯಾಯರ ಸಂಬಳದ ಸ್ಥಿತಿಯು ದೆಹಲಿಯಲ್ಲಿರುವ ಸರ್ಕಾರಿ ಜವಾನರುಗಳಿಗಿಂತಲೂ ಕಡೆಯಾಗಿರುವುದೆಂದು ಪ್ರಧಾನಿ ನೆಹರೂರವರು ಹೇಳಿ, ಅದನ್ನು ಕಂಡು ತಮಗೆ ನಾಚಿಕೆಯಾಗಿದೆಯೆಂದೂ, ಮಕ್ಕಳ ನಡತೆಯನ್ನು ರೂಪಿಸುವ ಉಪಾಧ್ಯಾಯರ ಸ್ಥಿತಿಯು ಉತ್ತಮವಾಗಿಲ್ಲದಿರುವುದಕ್ಕೆ ತಮಗೆ ವಿಷಾದವಾಗಿದೆಯೆಂದೂ ನೆಹರೂರವರು ಸೂಚಿಸಿರುತ್ತಾರೆ.

ಚರ್ಚಾ ಸ್ಪರ್ಧಿಗಳ ಕೂಟ

ನಗರದ ಕಿಲ್ಲೆ ಮೊಹಲ್ಲಾ ಕುಮಾರ ನಿಲಯದಲ್ಲಿ ಕನ್ನಡ ನಾಡಿನ ವಿವಿಧ ಜಿಲ್ಲೆಗಳ ಚರ್ಚಾ ಸ್ಪರ್ಧಿಗಳ ಕೂಟವೊಂದನ್ನು ಕಳೆದ ತಿಂಗಳು ಸ್ಥಾಪಿಸಲಾಯಿತು. ಚರ್ಚೆ ಮಾಡಲಿಚ್ಛಿಸುವವರು ಅದರಲ್ಲಿ ಸೇರಬಹುದು ಪ್ರತಿ ಜಿಲ್ಲೆಗೂ ಒಬ್ಬೊಬ್ಬನನ್ನು ಪ್ರತಿನಿಧಿಯಾಗಿ ತೆಗೆದುಕೊಳ್ಳಲಾಗಿದೆ. ಮೈಸೂರು ಜಿಲ್ಲೆಯ ಪರವಾಗಿ ಸಿ. ಎಸ್. ವಿಶ್ವನಾಥ್‌ರವರು ಪ್ರತಿನಿಧಿಯಾಗಿರುವರು

ಅಬ್ಕಾರಿ ಸಚಿವರಿಂದ ಕಾಂಗ್ರೆಸ್ ಕಾರ್ಯಕರ್ತರ ಭೇಟಿ

ಇದೇ ೮ನೇ ತಾರೀ ೮ ಕು ಮಂಗಳವಾರ ಸಾಯಂಕಾಲ ೭ ಘಂಟೆಗೆ ಸಂಸ್ಥಾನದ ಅಬ್ಕಾರಿ, ಹಾಗೂ ಗ್ರಾಮಾಂತರ ಕೈಗಾರಿಕಾ ಮಂತ್ರಿಗಳಾದ ಶ್ರೀ ಜಗನ್ನಾಥರಾವ್ ಚಂದರ್ಕಿಯವರು ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿ ಮಾಡುವರು. ಕಾರ್ಯಕರ್ತರೆಲ್ಲರೂ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ದಯಮಾಡಿಸಬೇಕೆಂದು ಸಮಿತಿಯ ಅಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ಕೋರಿರುತ್ತಾರೆ.

ಶಾರದಾ ಪೂಜೆ

ನಗರದ ಅಶೋಕಪುರದಲ್ಲಿರುವ ಅದಿಕರ್ನಾಟಕ ವಿದ್ಯಾರ್ಥಿ ನಿಲಯದಲ್ಲಿ ಶ್ರೀಶಾರದಾ ಪೂಜೆಯನ್ನು ಮೊನ್ನೆ ಮಹಾರಾಜಾ ಕಾಲೇಜಿನ ಅರ್ಥಶಾಸ್ತ್ರದ ಅಧ್ಯಾಪಕ ಶ್ರೀ ಜೆ. ಬಿಲ್ಲಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಭಜನೆ, ಪ್ರಾರ್ಥನೆ ಮುಂತಾದುವು ನಡೆದುವು ವಾರ್ಡನ್ ಶ್ರೀ ಎಲ್ ರಾಚಯ್ಯನವರು ಹಾಸ್ಟಲಿನ ವರದಿಯನ್ನು ಒಪ್ಪಿಸಿದರು. ಕಾರ್ಯದರ್ಶಿಯವರಿಂದ ವಂದನಾರ್ಪಣೆಯಾದನಂತರ ಸಭೆಯು ರಾಷ್ಟ್ರಗೀತೆಯೊಡನೆ ಕೊನೆಗೊಂಡಿತು.



Edited, Printed and Published by A. R. Nagarajan at Sadhvi Press, D. Subbiah Road, Mysore

ಉನ್ನತ ಮಟ್ಟದಲ್ಲಿ ಚುನಾವ
ನಡೆಸಬೇಕು

ಕಾಂಗ್ರೆಸ್ಸಿನವರಿಗೆ ವಿಷಯನಿಯಾಮ
ಸಮಿತಿ ಸೂಚನೆ

ಇಂದೂರಿನ ಲಕ್ಷ್ಮೀಬಾಯಿ ನಗರದಲ್ಲಿ
ರುವ ಕಾಂಗ್ರೆಸ್ ಅಧಿವೇಶನದ ವಿಷಯ ನಿ
ಮಕ ಸಮಿತಿಯು ಮೊನ್ನೆ ನಡೆದಾಗ ಲಾಲ್
ಹದ್ದೂರ್ ಶಾಸ್ತ್ರಿಯವರು ಕಾಂಗ್ರೆಸ್ ಚುನಾ
ಣೆ ಚಳುವಳಿ ಬಗ್ಗೆ ನಿರ್ಣಯವೊಂದನ್ನು ಮಂ
ಸಿ, ಕಾಂಗ್ರೆಸ್ಸಿನವರು ಉನ್ನತ ಮಟ್ಟದಲ್ಲಿ
ನ್ನು ನಡೆಸಬೇಕೆಂದು ಸೂಚಿಸಿದರು. ಎದು
ಪಕ್ಷದ ಉಮೇದುವಾರರನ್ನು ಖಂಡಿಸಬಾರ
ದೂ, ತೆಗಳಬಾರದೆಂದೂ ಅವರು ಹೇಳಿ
ಶ್ರೀಮನ್ನಾರಾಯಣರವರು ಮಾತನಾ
ಕಾಂಗ್ರೆಸ್ಸಿನವರು ಕ್ರೀಡಾಗಾರರಂತೆ ಸ್ಫೂ
ಯಿಂದ ನಡೆದುಕೊಳ್ಳಬೇಕೆಂದು ತಿಳಿಸಿದರು
ನಿರ್ಣಯವು ಸರ್ವಾನುಮತದಿಂದ ಒಪ್ಪಲ್ಪಟ್ಟಿ
ನೆಹರೂರವರು ಭಾಷಣ ಮಾಡಿ ಅನಪೇಕ್ಷ
ಯ ಪಂಗಡಗಳೊಡನೆ ಕಾಂಗ್ರೆಸ್ಸಿನವರು ಸೇ
ಆತ್ಮರಕ್ಷಣೆಯ ದೃಷ್ಟಿಯನ್ನು ತೋರಿದು ಚು
ವಣೆಯನ್ನು ಬಿರುಸಾಗಿ ನಡೆಸಬೇಕೆಂದು ಹೇ
ದರು.

ಅದಾದ ಮೇಲೆ ಎರಡು ಖಾಸಗೀ ನಿರ್ಣ
ಗಳನ್ನು ಮಂಡಿಸಲಾಯಿತು. ವರ್ಷಕ್ಕೆ
ರೂ. ಗಿಂತ ಕಡಿಮೆ ವರಮಾನ ಬರುವವರಿ
ಚಿತ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಬೇ
ದೂ, ಭೂ ಕಂದಾಯವನ್ನು ಪಡೆಯುವ
ಪದ್ಧತಿಯನ್ನು ರದ್ದುಗೊಳಿಸಿ, ಅದಕ್ಕೆ ಪ್ರತಿ
ವ್ಯವಸಾಯ ವರಮಾನ ತೆರಿಗೆಯನ್ನು ವಿಧಿ
ಕೆಂದೂ ಮತ್ತು ವರ್ಷಕ್ಕೆ ೧,೫೦೦ ರೂ.
ಕಡಿಮೆ ವ್ಯವಸಾಯ ವರಮಾನವಿರುವ
ಭೂ ಕಂದಾಯವನ್ನೇ ವಿಧಿಸಬಾರದೆಂದೂ
ಚಿಸಲಾಗಿದ್ದಿತು. ಶ್ರೀ ಗುಲ್ಜಾರಿಲಾಲ್ ನ
ರವರು ಉತ್ತರವಿತ್ತು, ಅಭಿವೃದ್ಧಿ ಯೋಜ
ನ್ನು ಕೈಗೊಳ್ಳಬೇಕಾಗಿರುವ ಈ ಕಾಲದ
ಮುಖ ವರಮಾನವಾದ ಭೂ ಕಂದಾಯ
ರದ್ದು ಮಾಡುವುದು ಸಾಧ್ಯವಿಲ್ಲವೆಂದೂ, ಸ
ಹಿಕ ಅಭಿವೃದ್ಧಿ ಯೋಜನೆ ಮೂಲಕವ
ಗಾರರ ಸ್ಥಿತಿಗತಿಗಳನ್ನು ಉತ್ತಮಪಡಿಸ
ವುದೆಂದೂ ತಿಳಿಸಿದರು. ಎರಡು ನಿರ್ಣಯ
ವಾಪಸಾದುವು. ಅಲ್ಲಿಗೆ ವಿಷಯ ನಿಯಾಮ
ಮಿತಿಯು ಮುಕ್ತಾಯವಾಯಿತು.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗ
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯು
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯ
ಅಂಡ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾ
ಅಶೋಕ ರಸ್ತೆ, ಮೈಸೂರು (Estd. 19

ರಿಜಿಸ್ಟರ್ ನಂ. 792

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಸಂಪುಟ : ೧೫] SADHVI : MONDAY 7—1—1957 ಮೈಸೂರು : ಸೋಮವಾರ ೭—೧—೧೯೫೭ : [ಸಂಚಿಕೆ : ೧೬೪

ಮಧ್ಯಪೂರ್ವಕ್ಕೆ ಅಮೆರಿಕಾ ಸೇನೆ ರವಾನೆಗೆ ನೆಹ್ರೂ ಆಕ್ಷೇಪ

ಭಾರತ ಮತ್ತು ರಷ್ಯಗಳ ಶಾಂತಿ ಸಾಧನಾ ಧ್ಯೇಯ

ಸತ್ಕಾರ ಸಮಾರಂಭದಲ್ಲಿ ರಷ್ಯಾ ನಿಯೋಗದವರ ಭಾಷಣ

ಮೈಸೂರು ೬

ನಗರಕ್ಕೆ ನೆನ್ನೆ ಆಗಮಿಸಿದ ರಷ್ಯದ ನಿಯೋಗ ದ ಗೌರವಾರ್ಥವಾಗಿ ಇಂಡೋ-ಸೋವಿಯಟ್ ಂಸ್ಕೃತಿಕ ಸಂಘದವರು ಸತ್ಕಾರ ಸಮಾರಂಭ ದನ್ನು ಟೌನ್‌ಹಾಲಿನಲ್ಲಿ ಏರ್ಪಡಿಸಿದ್ದರು. ದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಎಸ್. ಭಾರತಿಯವರಿಂದ ಪ್ರಾರ್ಥನೆ ಾದನಂತರ ಸಂಘದ ಅಧ್ಯಕ್ಷರಾದ ಶ್ರೀ ಡಿ. ವಿ. ಮೂರ್ತಿಯವರು ಸ್ವಾಗತ ಭಾಷಣ ಮಾಡಿ, ರತಕ್ಕೂ ರಷ್ಯಕ್ಕೂ ಬಹಳ ಕಾಲದಿಂದ ುವ ಸ್ನೇಹಸೌಹಾರ್ದ ಮತ್ತು ಶಾಂತಿ ಸಾಧ ಯ ಗುರಿಯನ್ನು ವಿವರಿಸಿ, ಈ ಬಾಂಧವ್ಯವು ಮ್ಮೂ ಹೆಚ್ಚಾಗಿ ಬೆಳೆದು ವಿಶ್ವ ಶಾಂತಿಗೆ ಸಹ ಯಾಗಲೆಂದು ಹಾರೈಸಿದರು. ನಗರದ ಅ ಕ ಸಂಘ ಸಂಸ್ಥೆಗಳ ಪರವಾಗಿ ಅತಿಥಿಗಳಿಗೆ ಪುಷ್ಪಹಾರಗಳನ್ನೂ, ಪಾರಿತೋಷಕಗಳನ್ನೂ ಡಲಾಯಿತು

ನಿಯೋಗದವರ ಪರವಾಗಿ ನಾಯಕರೂ ಮ ವಿದ್ಯಾ ಮಂತ್ರಿಗಳೂ ಆದ ಅಫಾನಾಸೆಂಕೊ ರು ಮಾತನಾಡಿ, ತಮ್ಮ ನಿಯೋಗಕ್ಕೆ ಭಾರ ಲ್ಲೆಲ್ಲಾ ದೊರೆಯುತ್ತಿರುವ ಸ್ವಾಗತಕ್ಕಾಗಿ ಕೃ ತೆಯನ್ನು ಸಲ್ಲಿಸಿದರು. ಪಂಚ ಶೀಲ ತತ್ವಗ ಸ್ಫೂರ್ತಿಯಿಂದ ಪ್ರೇರಿತವಾಗಿರುವ ಭಾರತ ತ್ತು ರಷ್ಯಗಳಿಗೆ ಇರುವ ಗಾಢವಾದ ಮೈತ್ರಿ ತ್ತು ಭ್ರಾತೃಭಾವವು ವಿಶ್ವ ಶಾಂತಿ ಸಾಧನೆಗೆ ಕಾರಿಯಾಗುವುದೆಂದು ಅವರು ನುಡಿದರು. ದಲ್ಲಿ ಭಾರತ ಸಂಸ್ಕೃತಿಯ ಬಗ್ಗೆ ಇರುವ ವಿ ಮಾನ್ಯತೆಯನ್ನು ಅವರು ವಿವರಿಸಿ, ಉಭ ರಾಷ್ಟ್ರಗಳ ಸಂಸ್ಕೃತಿ ವಿನಿಮಯದಿಂದ ಪ ರ ಉನ್ನತಿಗೆ ಸಹಾಯವಾಗುವುದೆಂದು ನು ು. ಪಂಡಿತ ನೆಹರೂರವರ ನಾಯಕತ್ವದ ಾರತವು ರಚನಾತ್ಮಕ ಮಾರ್ಗದಲ್ಲಿ ಮುನ್ನ ಡುತ್ತಿರುವುದಕ್ಕಾಗಿ ಅವರು ಅಭಿನಂದನೆ ಸಲ್ಲಿಸಿದರು.

ಕ್ಷರು ತಮ್ಮ ಭಾಷಣದಲ್ಲಿ ರಷ್ಯಾ ಮತ್ತು ಗಳ ಪರಸ್ಪರ ಸಾಂಸ್ಕೃತಿಕ ನಿಯೋಗಗ ಮಯದಿಂದ ಹೆಚ್ಚಿನ ಅರಿವು ಉಂಟಾಗು ದೆಂದೂ, ಇದರಿಂದ ಎರಡು ರಾಷ್ಟ್ರಗಳ ಮೈ ಬಹಳ ಅನುಕೂಲವಾಗುವುದೆಂದೂ ನುಡಿ ಭಾರತ ಸ್ವಾತಂತ್ರ್ಯ ಸಾಧನೆಗೆ ಮುಂಚೆ ವಿಚಾರವು ಭಾರತಕ್ಕೆ ಅಷ್ಟಾಗಿ ತಿಳಿದಿರ ಂದು ಅವರು ಹೇಳಿದರು. ಭಾರತವು ಅ ತ್ಮಕ ರೀತಿಯಲ್ಲೂ, ರಷ್ಯವು ಬೇರೆ ವಿಧಾ ನ ಕ್ರಾಂತಿಯನ್ನು ನಡೆಸಿರುವುದಾದರೂ ಎರಡು ರಾಷ್ಟ್ರಗಳೂ ವಿಶ್ವ ಶಾಂತಿ ಸಾಧನೆ ಮಾನ ಗುರಿಯನ್ನು ಹೊಂದಿವೆಯೆಂದ ತಿಳಿಸಿ. ಈ ಕಾರ್ಯದಲ್ಲಿ ಸಂಸ್ಕೃತಿ ಗಗಳು ವಿಶೇಷ ಪಾತ್ರವನ್ನು ವಹಿಸಬಲ್ಲ ತೋದರು

ಭಾವಿಗೆ ಬಿದ್ದ ಮಹಿಳೆಯ ರಕ್ಷಣೆ

ಮೈಸೂರು ೬

ನಗರದ ಕೃಷ್ಣರಾಜ ವನದಲ್ಲಿರುವ ನಿವೃತ್ತ ಅಂಚೆ ನೌಕರರಾದ ಶ್ರೀ ಎಸ್ ಲಕ್ಷ್ಮಯ್ಯನವರ ಪುತ್ರಿ, ೩೫ ವರ್ಷದ ಪುಟ್ಟತಾಯಮ್ಮ ಎಂಬುವರ ಮನೆ ಭಾವಿಗೆ ಬಿದ್ದು ಒಂದು ಗಂಟೆಯನಂತರ ರಕ್ಷಿಸಲ್ಪಟ್ಟರೆಂದು ತಿಳಿದುಬಂದಿದೆ. ಮೊನ್ನೆ ಬೆಳಿಗ್ಗೆ ೯-೩೦ ಗಂಟೆ ವೇಳೆ ಅವರು ನೀರು ಸೇದುತ್ತಿದ್ದಾಗ ಹಗ್ಗದ ಒಂದು ಗಂಟು ರಾಟೆಯ ತಿರುಗಣಿಗೆ ಸಿಕ್ಕಿಕೊಂಡಿದ್ದುದನ್ನು ಸರಿಪಡಿಸಲು ಅವರು ಕಟ್ಟೆಯ ಮೇಲೆ ಹತ್ತಿದಾಗ, ಆಕಸ್ಮಾತ್ ಕೈ ಜಾರಿ ಒಳಕ್ಕೆ ಬಿದ್ದುಬಿಟ್ಟರು. ಅವರು ಮುಳುಗಿ ನೀರು ಕುಡಿದಾಗ ಬಾಯಿಯಿಂದ ಹೊರ ಬಂದ ಶಬ್ದ ಕೇಳಿ, ಅವರ ಮಗಳು ಗಾಬರಿಯಿಂದ ಕೂಗಿಕೊಳ್ಳಲಾಗಿ, ಅಕ್ಕಪಕ್ಕದ ಮನೆಯವರೂ, ಇತರರೂ ಸೇರಿ ಭಾವಿಯಲ್ಲಿ ಬಿದ್ದಾಕೆಯು ನೀರಿನ ಮೇಲೆ ಅಡ್ಡಲಾಗಿ ಮಲಗಿ ತೇಲುತ್ತಿದ್ದುದನ್ನು ಕಂಡು ಹಗ್ಗವನ್ನು ಒಳಕ್ಕೆ ಬಿಟ್ಟು, ಅದನ್ನು ಆಕೆಯು ಹಿಡಿದುಕೊಳ್ಳುವಂತೆ ಮಾಡಿ ಮೇಲಕ್ಕೆ ಎತ್ತಿ ರಕ್ಷಿಸಿದರು

ಅರಮನೆ ನೌಕರರ ಸಭೆ

ಅರಮನೆಯ ನೌಕರರ ಬಹಿರಂಗ ಸಭೆಯು ನೆನ್ನೆ ಅರಮನೆ ಕಛೇರಿ ಆವರಣದಲ್ಲಿ ನಡೆಯಿತು. ಶ್ರೀ ಬಿ ಎಸ್. ಚಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ದೇವತಾ ಪ್ರಾರ್ಥನೆ ಮತ್ತು ಲಾವಣಿಗಳಾದನಂತರ ಶ್ರೀಮನ್ಮಹಾರಾಜರು ಮತ್ತು ಅವರ ಕುಟುಂಬ ವರ್ಗದವರಿಗೆ ಶ್ರೇಯಸ್ಸನ್ನೂ, ಸುಖ ಪ್ರಯಾಣದ ಹಾರೈಕೆಯನ್ನೂ ಕೋರಲಾಯಿತು ನೌಕರರ ಸಂಬಳ ಸಾರಿಗೆಗಳನ್ನು ಸರ್ಕಾರದ ನೌಕರರ ಮಟ್ಟಕ್ಕೆ ಹೆಚ್ಚಿಸಬೇಕೆಂದು ಹುಜೂರು ಕಾರ್ಯದರ್ಶಿಯವರಿಗೆ ಒಪ್ಪಿಸಲಾಗಿರುವ ಮನವಿ ಪತ್ರಕ್ಕೆ ಅವರಿಂದ ಉತ್ತರವನ್ನು ನಿರೀಕ್ಷಿಸಲು ೧೫ನೇ ತಾರೀಕು ಹುಜೂರು ಕಾರ್ಯದರ್ಶಿಯವರನ್ನು ಭೇಟಿ ಮಾಡಬೇಕೆಂದು ಗೊತ್ತುಪಡಿಸಲಾಯಿತು. ನೌಕರರ ಸಂಘವನ್ನು ಸ್ಥಾಪಿಸಲು ಸಭೆಯು ಒಪ್ಪಿತು.

ವಿದುಷಿ ಚೊಕ್ಕಮ್ಮನವರ ಗಾಯನ, ಶ್ರೀ ಪಿ ಕಾಳಿಂಗರಾವ್ ಮತ್ತು ಪಾರ್ಟಿಯವರಿಂದ ಜನಪದ ಗೀತೆ, ಕುಮಾರಿ ನಂದಿನಿಯವರಿಂದ ಭರತ ನಾಟ್ಯ ಮುಂತಾದ ಮನರಂಜನೆಯ ಕಾರ್ಯಕ್ರಮಗಳು ಏರ್ಪಾಡಾಗಿದ್ದುವು.

ನಿಯೋಗದಲ್ಲಿ ಕೆಳಗೆ ಕಂಡವರು ಇರುವರು:- ಮಿII ಅಫಾನೊಸೆಂಕೊ, ಎ ಕೆ. ಕ್ರಾಸಿಂ (ಅಣು ಶಕ್ತಿ ಕೇಂದ್ರದ ಡೈರೆಕ್ಟರ್), ಮನ್ನಾನೊವ್ (ಟಾಷ್ಕೆಂಟಿನ ಸಾಮೂಹಿಕ ವ್ಯವಸಾಯ ಕೇಂದ್ರದ ಅಧ್ಯಕ್ಷರು), ಎ. ಜೆ. ಸಿನೆಟ್‌ಸ್ಕಿ (ಮೋಟಾರು ತಯಾರಿಕಾ ಸಂಸ್ಥೆಯ ಡೈರೆಕ್ಟರ್), ಎ. ಐ. ಕಲಿಯನಾವ್ (ಭಾರತೀಯ ಕಲಾ ಸಂಶೋಧಕರು), ಜಿ. ಎಂ. ಅಬ್ದುಲ್ ರಸಿದೊವ್ (ಉಜ್ಬೆಕ್ಕಿನ ಉಪಾಧ್ಯಕ್ಷರು) ಮತ್ತು ಶ್ರೀಮತಿ ಯೂಲಿಯಾ ಎಫ್ ಕೊಸಿಯಾಚಿನ (ಸಂಸ್ಕೃತಿ ಸಂಘದ ಉಪಾಧ್ಯಕ್ಷೆ).

ರಷ್ಯದ ನಿಯೋಗದವರಿಗೆ ಕೃಷ್ಣರಾಜಸಾಗರದ ಅಧಿಕಾರಿಗಳಿಂದ ಅಪಚಾರ

ಮೈಸೂರು ೬

ನೆನ್ನೆ ನಗರಕ್ಕೆ ಆಗಮಿಸಿದ ರಷ್ಯಾ ನಿಯೋಗದವರು ಇಲ್ಲಿಗೆ ಬರಲು ಮುಕ್ಕಾಲು ಗಂಟೆ ಸಾವಕಾಶವಾಯಿತು ಇದಕ್ಕೆ ಕೃಷ್ಣರಾಜಸಾಗರದ ಅಧಿಕಾರಿಗಳ ವರ್ತನೆಯೇ ಕಾರಣವೆಂದು ತಿಳಿದುಬಂದಿದೆ ನೆನ್ನೆ ಅಲ್ಲಿಗೆ, ಸಚಿವರಾದ ಶ್ರೀ ಚಂದಾಚಾರಿಯವರು ಬರುವರೆಂಬ ನೆಪದ ಮೇಲೆ ಅಲ್ಲಿನ ಅಧಿಕಾರಿಗಳು ಬೃಂದಾವನ ತೋಟದಿಂದ ಕಟ್ಟೆ ಮೇಲಕ್ಕೆ ಹೋಗುವ ರಸ್ತೆಯ ಸಂಚಾರವನ್ನು ಮುಕ್ಕಾಲು ಗಂಟೆ ಕಾಲ ಬಂದು ಮಾಡಿದ್ದರು. ಮಂತ್ರಿಗಳು ಬರುವುದರಿಂದ ಏಕಮುಖ ಸಂಚಾರವಿರುವ ಆ ರಸ್ತೆಯಲ್ಲಿ ಬೇರೆ ವಾಹನಗಳನ್ನು ಬಿಡುವುದಿಲ್ಲವೆಂದು ಅವರು ಹೇಳಿ ಅತಿಥಿಗಳ ಕಾರುಗಳನ್ನು ತಡೆದು ನಿಲ್ಲಿಸಿದರು.

ತಮ್ಮ ದೇಶಕ್ಕೆ ಇಂತಹ ಅತಿಥಿಗಳು ಬಂದಾಗ ಮಂತ್ರಿಗಳಿಗಿಂತಲೂ ಅತಿಥಿಗಳಿಗೆ ಮೊದಲು ಮಾನ್ಯತೆ ಕೊಡುವುದಾಗಿ ನಿಯೋಗದ ನಾಯಕರು ಹೇಳಿದರೂ ಕೇಳಲಿಲ್ಲ. ಮೈಸೂರಿನ ಸಭೆಯಲ್ಲಿ ಮತ್ತೊಬ್ಬ ಮಂತ್ರಿಗಳು ಭಾಗವಹಿಸಲು ಕಾದಿರುವರೆಂದು ಹೇಳಿದರೂ ಪ್ರಯೋಜನವಾಗಲಿಲ್ಲ. ಮುಕ್ಕಾಲು ಗಂಟೆಯಾದರೂ ಮಂತ್ರಿಗಳು ಬಾರದೆ ಆಗತಾನೆ ಅವರು ಮೈಸೂರಿನಿಂದ ಹೊರಟಿರುವರೆಂಬ ಸುದ್ದಿ ಬಂದುದರಿಂದ ಒಂದು ಕ್ಷಣದಲ್ಲಿ ಹೊರಟುಹೋಗುವಂತೆ ಅಧಿಕಾರಿಗಳು ನಿಯೋಗದವರಿಗೆ ಹೇಳಿ ಅವರ ಕಾರುಗಳು ಹೋಗಲು ಮುಂದೆ ಬಿಟ್ಟರು. ನಿಯೋಗದವರಿಗೆ ಮಾತ್ರವೇ ಅಲ್ಲದೆ ಅಲ್ಲಿಗೆ ಬಂದಿದ್ದ ಇತರ ಅನೇಕ ಪ್ರೇಕ್ಷಕರಿಗೂ ಇದರಿಂದ ತೊಂದರೆಯಾಯಿತು. ನಗರದ ಟೌನ್‌ಹಾಲಿನಲ್ಲಿ ನೆರೆದಿದ್ದ ಸಾವಿರಾರು ಜನರು ಮುಕ್ಕಾಲು ಗಂಟೆ ವೃಥಾ ಕಾಯಬೇಕಾಯಿತು.

ಕಾರುಗಳು ಮುಂದೆ ಹೋಗಲು ಅಧಿಕಾರಿಗಳು ಅವಕಾಶ ಕೊಟ್ಟಾಗ ರಷ್ಯದ ನಿಯೋಗದವರು "ಎಲ್ಲಿ ನಿಮ್ಮ ಮಂತ್ರಿಗಳು ಇನ್ನೂ ಬರಲೇ ಇಲ್ಲವಲ್ಲಾ ?" ಎಂದು ಕೇಳಲಾಗಿ ಅಧಿಕಾರಿಗಳು ಮೌನದಿಂದಿದ್ದರು

[ಈ ವಿಷಯವು ನಮ್ಮ ಸಂಸ್ಥಾನಕ್ಕಾಗಲೀ, ಸಂಬಂಧಪಟ್ಟ ಸಚಿವರಿಗಾಗಲೀ ಗೌರವತರತಕ್ಕದ್ದಲ್ಲ. ಹೊರ ರಾಷ್ಟ್ರದ ಮಂತ್ರಿಗಳಿಗೆ ಇಲ್ಲಿನ ಸಣ್ಣ ಅಧಿಕಾರಿಗಳ ವರ್ತನೆಯಿಂದ ಆಗಿರುವ ಅಪಚಾರವು ಅಂತರ ರಾಷ್ಟ್ರೀಯ ಪರಿಣಾಮವನ್ನುಂಟು ಮಾಡತಕ್ಕದ್ದಾಗಿರುತ್ತದೆ ಈ ವಿಷಯವನ್ನು ಸರ್ಕಾರದವರು ಕೂಡಲೇ ವಿಚಾರಿಸಿ, ತಕ್ಕ ಬಂದೋಬಸ್ತು ಮಾಡುವುದು ಸೂಕ್ತವಾಗಿದೆ.]

ಚಿನ್ನದ ಗಣಿ ಮುಷ್ಕರ ಕಾನೂನುಬಾಹಿರ

ಕೋಲಾರದ ಚಿನ್ನದ ಗಣಿಗಳ ೧೧॥ ಸಾವಿರ ಕಾರ್ಮಿಕರು ಮೊನ್ನೆ ಹೂಡಿದ ಮುಷ್ಕರವನ್ನು ನ್ಯಾಯಬಾಹಿರವೆಂದು ಘೋಷಿಸಲಾಗಿದೆ. ಕೈಗಾರಿಕಾ ನ್ಯಾಯ ಮಂಡಲವು ಇತ್ತಿರುವ ತೀರ್ಪಿನ ವಿರುದ್ಧವಾಗಿ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಅಪೀಲು ಮಾಡಿರುತ್ತಾರೆ.

ಬೆಂಗಳೂರು ಜಾಡಮಾಲಿಗಳ ಮುಷ್ಕರ ಮತ್ತು ಮೆರವಣಿಗೆ

ತಾತ್ಕಾಲಿಕ ಪರಿಹಾರ ಕೊಡದಿದ್ದಲ್ಲಿ ಅಸಮಾಧಾನ

ಸ್ವಂ.ಸು. ಫೋನ್] ಬೆಂಗಳೂರು ೬

ಸರ್ಕಾರಿ ನೌಕರರಿಗೆ ಕಳೆದ ಆಗಸ್ಟಿನಿಂದ ಕೊಡುತ್ತಿದ್ದ ತಾತ್ಕಾಲಿಕ ಪರಿಹಾರ ಭತ್ಯವನ್ನು ತಮಗೂ ಪೌರಸಭೆಯವರು ಕೊಡಲಿಲ್ಲವೆಂಬ ಕಾರಣಕ್ಕಾಗಿ ಈ ದಿನ ಇಲ್ಲಿನ ೧,೨೦೦ ಮಂದಿ ಪೌರಸಭಾ ಜಾಡಮಾಲಿಗಳು ಮುಷ್ಕರ ಹೂಡಿ ಮೆರವಣಿಗೆ ನಡೆಸಿದರು. ಈ ಬಗ್ಗೆ ಪೌರಸಭೆಯವರು ಸರ್ಕಾರದ ವಿವರಣೆ ಕೇಳಿ, ಪೌರಸಭೆಯವರು ಅದನ್ನು ಕೊಡಬಹುದೆಂದು ಸರ್ಕಾರದಿಂದ ಉತ್ತರ ಬಂದಿತ್ತು. ಈ ವಿಚಾರವನ್ನು ಜಾಡಮಾಲಿಗಳಿಗೆ ಕಳೆದ ಶನಿವಾರ ತಿಳಿಸಲಾಗಿದ್ದಿತಾದರೂ ಅವರುಗಳು ಇಂದು ಮುಷ್ಕರ ನಡೆಸಿದರು.

○ ಖಾಸಗಿ ವೈದ್ಯರುಗಳ ನಿಯೋಗವೊಂದು ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರನ್ನು ಈ ದಿನ ಭೇಟಿ ಮಾಡಿ ಮನವಿ ಮಾಡಿಕೊಂಡ ಮೇಲೆ ಎಲ್. ಎಂ. ಪಿ. ವೈದ್ಯರುಗಳಿಗೆ ಮದ್ರಾಸಿನಂತೆ ವೇತನ ಕೊಡುವ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಸಚಿವರು ಭರವಸೆಯಿತ್ತರು.

○ ಕೇಂದ್ರ ಸರ್ಕಾರದವರು ಸಂಸ್ಥಾನಕ್ಕೆ ೫ ಕಾರ್ಮಿಕರ ಶಿಕ್ಷಣ ಸಂಸ್ಥೆಗಳನ್ನು ವಹಿಸಿಕೊಟ್ಟಿರುತ್ತಾರೆ. ಅವುಗಳ ಅಭಿವೃದ್ಧಿಗಾಗಿ ಸರ್ಕಾರದವರು ೬ ಲಕ್ಷ ರೂ. ಯೋಜನೆಯನ್ನು ಸಿದ್ಧಗೊಳಿಸಿರುವರು. ಮೈಸೂರಿನಲ್ಲೊಂದು ಸಂಸ್ಥೆಯನ್ನು ಏರ್ಪಡಿಸಲಾಗುವುದು.

ಮಧ್ಯ ಪೂರ್ವಕ್ಕೆ ಅಮೆರಿಕಾ ಸೈನ್ಯ ರವಾನೆಗೆ ನೆಹರೂ ವಿರೋಧ

ಕಾಂಗ್ರೆಸ್ ಅಧಿವೇಶನದಲ್ಲಿ ಹೇಳಿಕೆ

ಕಾಂಗ್ರೆಸ್ ಮಹಾಧಿವೇಶನದಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಾತನಾಡಿ, ಬ್ರಿಟನ್ನಿನ ಪ್ರಭಾವವು ಮಧ್ಯಪೂರ್ವದಲ್ಲಿ ಕ್ಷೀಣಿಸಿದ ಪರಿಣಾಮವಾಗಿ ಪಶ್ಚಿಮ ಏಷ್ಯದಲ್ಲಿ ಉಂಟಾಗಿರುವ (ಪವರ್ ವ್ಯಾಕ್ಯೂಂ) ಪರಿಸ್ಥಿತಿಯನ್ನು ಸರಿಪಡಿಸಲು ಅಮೆರಿಕವು ಆ ಪ್ರದೇಶಕ್ಕೆ ಸೈನ್ಯವನ್ನು ಕಳುಹಲು ಅಧ್ಯಕ್ಷ ಐಸೆನ್‌ಹೋವರರು ಇಟ್ಟುಕೊಂಡಿರುವ ಯೋಜನೆಯನ್ನು ವಿರೋಧಿಸಿ, ಮಧ್ಯ ಪೂರ್ವದಲ್ಲಿ ಬಲಾಬಲಗಳ ಸಮತೂಲನಕ್ಕೆ ಈ ಮಾರ್ಗವನ್ನು ಅನುಸರಿಸುವುದರಿಂದ ವಿಶ್ವ ಶಾಂತಿಗೆ ಅಪಾಯವುಂಟಾಗುವುದೆಂದು ಹೇಳಿರುತ್ತಾರೆ. ಮಿಲಿಟರಿ ಒಪ್ಪಂದ ಮತ್ತು ಸ್ಥಾನಗಳ ಉಪಯೋಗದ ಬೆದರಿಕೆಗಳಿಂದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲವೆಂದೂ, ಆಯಾ ಪ್ರದೇಶದವರ ಸ್ವಶಕ್ತಿ ಮತ್ತು ಪ್ರಗತಿಯಿಂದಲೇ ಈ ಕೆಲಸವು ನಡೆಯಬೇಕೆಂದೂ ಅವರು ತಿಳಿಸಿರುತ್ತಾರೆ ಒಂದು ಹಿರಿಯ ರಾಷ್ಟ್ರವು ತನ್ನ ಶಕ್ತಿಯನ್ನು ಝಳಪಿಸಿದರೆ, ಮತ್ತೊಂದೂ ಸಹ ಅದೇ ರೀತಿ ಮಾಡುವುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಸೀನಾಯ್‌ನಿಂದ ಇಸ್ರೇಲಿ ಸೈನ್ಯದ ವಾಪಸಿಗೆ ಅಮೆರಿಕದ ಕ್ರಮ

ಈಜಿಪ್ಟಿನ ಸೀನಾಯ್ ಪ್ರದೇಶದಿಂದ ಇಸ್ರೇಲು ತನ್ನ ಸೈನ್ಯಗಳನ್ನು ವಾಪಸು ಕರೆಸಿಕೊಳ್ಳುವಂತೆ ಒತ್ತಾಯ ತರಲು ಅಮೆರಿಕವು ಇಸ್ರೇಲಿನ ವಿರುದ್ಧವಾಗಿ ಆರು ಬಗೆಗಳಲ್ಲಿ ಆರ್ಥಿಕ ಕ್ರಮ ಕೈಗೊಳ್ಳುತ್ತಲಿದೆಯೆಂದು ನ್ಯೂಯಾರ್ಕ್ ಪೋಸ್ಟ್ ಪತ್ರಿಕೆಯು ತಿಳಿಸಿದೆ. ಇಸ್ರೇಲಿಗೆ ನೀಡಲಾಗಿದ್ದ ತಾಂತ್ರಿಕ ಸಹಾಯಕ್ಕೆ ತಡೆ, ೨ ಕೋಟಿ ಡಾಲರ್ ಹಣ ಸಹಾಯ ಒದಗಿಸದಿರುವುದು, ೭॥ ಕೋಟಿ ಡಾಲರ್ ಸಾಲವನ್ನು ಇಸ್ರೇಲಿನ ನೀರಾವರಿ ಸೌಕರ್ಯಕ್ಕಾಗಿ ಆಮದು-ರಫ್ತು ಬ್ಯಾಂಕು ಕೊಡುವ ಬಗ್ಗೆ ಸಂಧಾನ ಮಂಡಲಿಯನ್ನು ಕಳುಹಿಸದಿರುವುದು ಇವೇ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ವ್ಯಕ್ತಪಟ್ಟಿದೆ.

ಚೀನಾ ನಗರಗಳ ಮೇಲೆ ರಾಷ್ಟ್ರೀಯರ ಹಸ್ತ ಪತ್ರಿಕೆಗಳು

ರಾಷ್ಟ್ರೀಯ ಚೀನದ ವಿಮಾನಗಳು ಕಳೆದ ಗುರುವಾರ ಮುಖ್ಯ ಭೂಮಿಯ [illegible] ನಗರಗಳ ಮೇಲೆ ಕೋಟ್ಯಾಂತರ ಹಸ್ತ ಪತ್ರಿಕೆಗಳನ್ನು ಚೆಲ್ಲಿ ಹಿಂದಿರುಗಿರುತ್ತವೆ. ಈಗ ಅಲ್ಲಿರುವ ಆಡಳಿತದವರ ವಿರುದ್ಧವಾಗಿ ಏಳಬೇಕೆಂದು ಹಸ್ತ ಪತ್ರಿಕೆಗಳಲ್ಲಿ ಸೂಚಿಸಲಾಗಿದೆ.

"ವಿಶ್ವಪ್ರಜೆ"ಯ ಉಪವಾಸ

ವಿಶ್ವದ ಪ್ರಜೆಯೆಂದು ಕರೆದುಕೊಳ್ಳುತ್ತಿರುವ ಗ್ಯಾರಿ ಡೇವಿಸ್ ಎಂಬಾತನು ಮೊನ್ನೆ ಆಮ್‌ಸ್ಟರ್‌ಡಾಂ ನಗರದಲ್ಲಿ ಉಪವಾಸವನ್ನು ಆರಂಭಿಸಿದ್ದಾನೆ. ಆತನು ಹಾಲೆಂಡಿನಲ್ಲಿರಲು ಅವಕಾಶ ನೀಡಬೇಕೇ ಎಂಬ ವಿಷಯವನ್ನು ಡಚ್ಚ್ ಅಧಿಕಾರಿಗಳು ಪರಿಶೀಲಿಸುತ್ತಿರುವರು. ಈತನು ತನ್ನ [illegible] ರಹದಾರಿ ಯಾವುದೂ ಇಲ್ಲದೆ ಆಮ್‌ಸ್ಟರ್‌ಡಾಂ ನಗರಕ್ಕೆ ಹೋದನೆಂದು ಹೇಳಲಾಗಿದೆ. ಆದರೆ ವಿಶ್ವ ಸರ್ಕಾರವಕ್ಕೆ [illegible] ರಹದಾರಿ ಚೀಟಿಯನ್ನು ಆತನು ತಾನೇ ಸೃಷ್ಟಿಸಿಕೊಂಡಿರುವನು. ಆತನು [illegible] ಪ್ರವೇಶಿಸಲು ಅವಕಾಶ ಕೊಡಲಿಲ್ಲ.

ಎಲ್. ಎಂ. ಪಿ. ವಿದ್ಯಾರ್ಥಿಗಳ ಸಹಾನುಭೂತಿ ಮುಷ್ಕರ

ಸರ್ಕಾರದವರು ಹೊರಡಿಸಿರುವ ನೌಕರರ ಸಂಬಳದ ಪುನರ್ವಿಮರ್ಶೆ ಆಜ್ಞೆಯಲ್ಲಿ ಎಲ್. ಎಂ. ಪಿ. ವೈದ್ಯರುಗಳಿಗೆ ಅತೃಪ್ತಿಜನಕರವಾದ ಸೌಲಭ್ಯಗಳನ್ನು ಕಲ್ಪಿಸದಿರುವ ಬಗ್ಗೆ ವೈದ್ಯರುಗಳಿಗೆ ಸಹಾನುಭೂತಿ ತೋರಿಸಲು ಬೆಂಗಳೂರಿನ ಮೆಡಿಕಲ್ ಶಾಲೆಯ ವಿದ್ಯಾರ್ಥಿಗಳು ಕಳೆದ ಶುಕ್ರವಾರ ಮುಷ್ಕರ ನಡೆಸಿದರು. ವೈದ್ಯರುಗಳ ಪ್ರತಿನಿಧಿಗಳು ಸಂಸ್ಥಾನದ ವೈದ್ಯಾಧಿಕಾರಿಗಳಾದ ಶ್ರೀ ವೆಂಕಟಸುಬ್ಬರಾಯರಿಗೆ ಮನವಿಯೊಂದನ್ನು ಸಲ್ಲಿಸಿ ತಮಗೆ ಆಗಿರುವ ಅನ್ಯಾಯವನ್ನು ಪರಿಹರಿಸಿಕೊಡುವಂತೆ ಕೋರಿರುವರು.

ಹೆಚ್. ಅನಂತಸ್ವಾಮಿರಾಯರ ನಿಧನ

ಅರಮನೆಯ ನಿವೃತ್ತ ಮೋಕ್ತೇಸರರಾದ ಶ್ರೀ ಹೆಚ್. ಅನಂತಸ್ವಾಮಿರಾಯರು ಈ ದಿನ ಬೆಳಗಿನ ಝಾವ ೪ ಘಂಟೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ೭೦ ವರ್ಷ ವಯಸ್ಸಾಗಿದ್ದಿತು. ಅವರಿಗೆ ೪ ಜನ ಗಂಡು ಮಕ್ಕಳೂ, ೨ ಹೆಣ್ಣು ಮಕ್ಕಳೂ ಇರುವರು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧುವರ್ಗದವರಿಗೆ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತೇವೆ.

SRI GAYATHRI
TALKIES
From 7-1-57 . Daily 3 Show
M.G.M's
It's Always Fair Weather
(In Cinemascope & Color)
With :- Gene Kelly and
Cyd Charisse

ಇಂದೂರು ಕಾಂಗ್ರೆಸ್ ಅಧಿವೇಶನ

ಇಂದೂರಿನ [illegible] ಕಾಂಗ್ರೆಸ್ಸಿನ [illegible]ನೇ ಅಧಿವೇಶನದ [illegible] ಸಾವಿರ ಜನರು [illegible] ಭಾಗವಹಿಸಿದರು. ಅನೇಕರು ನಂತರ [illegible] ಢೇಬರರು ಅಧಿವೇಶನದ ಅಧ್ಯಕ್ಷರಾಗಿರುವುದು ಇದು ಮೂರನೇ ಬಾರಿ.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಕನ್ನಯಲಾಲ್‌ರವರು ಪ್ರತಿನಿಧಿಗಳನ್ನು ಸ್ವಾಗತಿಸಿ ದೇಶದಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ಅದೇ ರಾಷ್ಟ್ರದ ಸಂಪತ್ತೆಂದು ಅವರು ತಿಳಿಸಿದರು.

ಢೇಬರರ ಭಾಷಣಾನಂತರ ಸಂತಾಪ ಸೂಚಕ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ನೆಹರೂರವರು ಚುನಾವಣಾ ಪ್ರಣಾಳಿಕೆ ನಿರ್ಣಯವನ್ನು ಮಂಡಿಸಿದರು. ಅವರು ಭಾಷಣ ಮಾಡಿ, ಸಮಾಜದಲ್ಲಿ ವರ್ಗಗಳಿಗೆ ಪ್ರೋತ್ಸಾಹ ವಿಧಾನವನ್ನು ಕೈಗೊಳ್ಳಬಾರದೆಂದು ತಿಳಿಸಿದರು. ಕಾಂಗ್ರೆಸ್ಸು ಪ್ರಜಾಸತ್ತಾತ್ಮಕ ರೀತಿಯಿಂದಲೇ ವರ್ತಿಸಬೇಕೆಂದು ತಿಳಿಸಿದರು. ಪಂತರು ಅನುಮೋದಿಸಿದರು. ನಿರ್ಣಯವು ಅಂಗೀಕೃತವಾಯಿತು.

ಸಮಾಜವಾದಿಗಳ ಚುನಾವಣೆ ಪ್ರಚಾರದ ವೈಖರಿ

ಭಾರತದ ಸಮಾಜವಾದಿ ಪಕ್ಷದವರು ನಡೆಸುವ ಚುನಾವಣೆ ಪ್ರಚಾರದಲ್ಲಿ ಓಟರುಗಳು ತಮ್ಮ ಪಕ್ಷದವರಿಗೇ ಮತದಾನ ಮಾಡಬೇಕು, ಅಥವಾ ಯಾರಿಗೂ ಮಾಡಬಾರದೆಂದು ಕೋರುವರೆಂದು ವರದಿಯಾಗಿದೆ. ಪಕ್ಷದವರು ಲೋಕಸಭೆಯ [illegible] ಮತ್ತು [illegible] ಶಾಸನಸಭೆಗಳ [illegible] ಸ್ಥಾನಗಳಿಗೆ ಸ್ಪರ್ಧಿಸುವರು.

ಅಮೆರಿಕದಲ್ಲಿ ಸಂಚಾರ ಅಪಘಾತಗಳಿಂದ ೪೦ ಸಾವಿರ ಮರಣ

ಕಳೆದ ವರ್ಷ ಅಮೆರಿಕದಲ್ಲಿ ಸಂಚಾರದ ಅಪಘಾತಗಳಿಂದ ೪೦,೦೦೦ ಜನರು ಮೃತಪಟ್ಟರೆಂದು ವರದಿಯಾಗಿದೆ. ಇದೇ ಅತ್ಯಂತ ಹೆಚ್ಚು [illegible] ಸಂಖ್ಯೆಗಿಂತ ಕಳೆದ [illegible] ಲಿನಲ್ಲಿ [illegible] ಹೆಚ್ಚಾಗಿ ಮಡಿದಿರುವರು.

ಸಿಹ್ಮಳದಲ್ಲಿ ಟರ್ಮಿನಲ್ ಟ್ಯಾಕ್ಸ್

ಸಿಂಹಳದಿಂದ ವಿಮಾನ ಅಥವಾ ಸಮುದ್ರದ ಮೂಲಕ ಹೋಗುವ ಜನರ ಮೇಲೆ ತಲಾ [illegible] ರೂ ಟರ್ಮಿನಲ್ ತೆರಿಗೆಯನ್ನು ಅಲ್ಲಿನ ಸರ್ಕಾರದವರು ವಿಧಿಸಲು ಆಲೋಚಿಸಿರುತ್ತಾರೆ.

ಸಂಕ್ಷಿಪ್ತ ಷಟ್‌ಸ್ಥಲ ಲಿಂಗ ಪೂಜಾ ವಿಧಿ

[illegible] ಎ. ಜಿ. ನಂಜುಂಡಾರಾಧ್ಯರು ಮೇಲ್ಕಂಡ ಹೆಸರಿನ ಚಿಕ್ಕ ಪುಸ್ತಕವೊಂದನ್ನು ರಚಿಸಿ. ಶ್ರೀ ಶಿವರಾತ್ರೀಶ್ವರ ಗುರುಕುಲ ಸಾಧಕ ವಿದ್ಯಾರ್ಥಿ ಸಂಘದವರು ಅದನ್ನು ಪ್ರಕಟಿಸಿರುತ್ತಾರೆ. ಇದನ್ನು ಸುತ್ತೂರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರಿಗೆ ಅರ್ಪಿಸಲಾಗಿದೆ. ಲಿಂಗ ಪೂಜಾ ವಿಧಿಗಳನ್ನೂ, ಹಲವಾರು ಶಿವ ಸ್ತೋತ್ರಗಳನ್ನೂ, ಮಂತ್ರಗಳನ್ನೂ ಅದರಲ್ಲಿ ಕೊಡಲಾಗಿದೆ. ಬೆಲೆ ೨ ಆಣೆ.

ಕಳ್ಳತನ ಮಾಡುತ್ತಿದ್ದಾಗ ಕೇಡಿಯ ಬಂಧನ

ಚಾಮುಂಡಿಪುರದಲ್ಲಿರುವ ರೈಲ್ವೆ ನೌಕರ ಶ್ರೀ ಆರ್. ಎ. [illegible]ರವರ ಮನೆಗೆ ಮೊನ್ನೆ ರಾತ್ರಿ ರಾಮು ಎಂಬ ಕಳ್ಳನು ಹೆಂಚು ತೆಗೆದು ಒಳಗಿಳಿದಿದ್ದಾಗ ಅಕ್ಕಪಕ್ಕದ ಮನೆಯವರು ಅವನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿರುವರು. ಮನೆಯವರು ಊರಿನಲ್ಲಿರಲಿಲ್ಲವೆಂದು ಗೊತ್ತಾಗಿದೆ. ಚಾಮುಂಡಿಪುರದಲ್ಲಿ ಕಳ್ಳತನಗಳು ಇತ್ತೀಚೆಗೆ ಬಹಳ ಹೆಚ್ಚಾಗಿವೆ.

ನೆಹರೂರವರಿಗೆ ಡಲ್ಲೆಸ್‌ರವರ ಸತ್ಕಾರ

ಪ್ರಧಾನಿ ನೆಹರೂರವರ ಅಮೆರಿಕಾ ಭೇಟಿಯ ಕಾಲದಲ್ಲಿ ಅಲ್ಲಿನ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ಅವರಿಗೆ ಸತ್ಕಾರವನ್ನೇರ್ಪಡಿಸಿದಾಗ ತೆಗೆದ ಚಿತ್ರ

ಲಂಡನ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ವಿದ್ವಾಂಸರಿಗೆ ಹುದ್ದೆ

ಲಂಡನ್ ವಿಶ್ವವಿದ್ಯಾಲಯದವರು ಪಿ. ಎಲ್. ಜೋಷಿ ಎಂಬ ಸಂಸ್ಕೃತ ವ್ಯಾಕರಣ ಪಂಡಿತರಿಗೆ [illegible] ವರ್ಷದ ಅವಧಿಗಾಗಿ ಅಧ್ಯಾಪಕ ಹುದ್ದೆಯೊಂದನ್ನು ಕೊಡಲು ಮುಂದೆ ಬಂದಿದ್ದಾರೆ. ಅವರು ಪೂನಾ ನಗರದಲ್ಲಿರುವ ಡೆಕ್ಕನ್ ರಿಸರ್ಚ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವರು. ಅವರು ಬರುವ ಜೂನ್ ತಿಂಗಳಲ್ಲಿ ಲಂಡನ್ನಿಗೆ ತೆರಳುವರು.

ಮಧ್ಯ ಪೂರ್ವಕ್ಕೆ ಅಮೆರಿಕದಿಂದ ಅಣು ಫಿರಂಗಿ ?

ಭೂ ಮಧ್ಯ ಸಮುದ್ರದಲ್ಲಿರುವ ಅಮೆರಿಕದ ೬ನೇ ನೌಕಾ ಬಲದ ಯೋಧರ ಉಪಯೋಗಕ್ಕಾಗಿ ಅಮೆರಿಕವು ಅಣು ಫಿರಂಗಿಗಳನ್ನು ಒದಗಿಸಲಿರುವುದೆಂದು ವರದಿಯಾಗಿದೆ. ಆದರೆ ಅಮೆರಿಕದ ಉನ್ನತಾಧಿಕಾರಿಗಳು ಈ ಸುದ್ದಿ ಬಗ್ಗೆ ಮೌನವನ್ನು ತಾಳಿರುತ್ತಾರೆ. ಈ ವಿಚಾರವು ಅತ್ಯಂತ ಗಹನವಾದುದರಿಂದ ಅಮೆರಿಕಾ ಅಧ್ಯಕ್ಷರು ವಿನಃ ಬೇರೆಯವರು ಏನನ್ನೂ ಹೇಳುವಂತಿಲ್ಲ.

ನೈಲ್ ಕಣಿವೆಯಲ್ಲಿ ಅಮೆರಿಕದ ಭಾರಿ ಅಭಿವೃದ್ಧಿ ಕ್ರಮ

ಉತ್ತರ ಆಫ್ರಿಕದ ಒಣಭಾಗವನ್ನು ಫಲವತ್ತುಗೊಳಿಸಲು ನೈಲ್ ನದಿಯ ಅಭಿವೃದ್ಧಿ ಯೋಜನೆಯನ್ನು ಅಮೆರಿಕಾ ಅಧ್ಯಕ್ಷ ಐಸನ್‌ಹೋವರರು ಪರಿಶೀಲಿಸುತ್ತಿರುವರೆಂದೂ, ಆ ಮೂಲಕ ಮಧ್ಯ ಪ್ರದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಅವರು ಆಲೋಚಿಸಿರುವರೆಂದೂ ವರದಿಯಾಗಿದೆ. ಅನೇಕ ಅಣೆಕಟ್ಟುಗಳು, ನೀರಾವರಿ ಕಾಂಗಾರಿ ಮತ್ತು ವಿದ್ಯುತ್ಕಾರ್ಖಾನೆಗಳ ನಿರ್ಮಾಣವನ್ನು ಮಾಡಲು ಸಹಾಯ ನೀಡಲಾಗುವುದು. ಮಧ್ಯ ಪೂರ್ವದಲ್ಲಿ ಕಮ್ಯೂನಿಸ್ಟರ ಆಕ್ರಮಣವನ್ನು ತಡೆಗಟ್ಟಲು ಅಮೆರಿಕವು ಆರ್ಥಿಕ ಯೋಜನೆಯನ್ನು ಕೈಗೊಂಡು ಈ ಕಾರ್ಯಕ್ರಮಗಳನ್ನು ನಡೆಸಲಿದೆ. ಅದರಿಂದ ಈಜಿಪ್ಟು, ಸುಡಾನು, ಅಬಿಸೀನಿಯಾ, ಉಗಾಂಡಾ, ಟ್ಯಾಂಗನೀಕಾ ಮುಂತಾದ ರಾಜ್ಯಗಳಲ್ಲಿ ಪ್ರಗತಿ ಸಾಧನೆಗೆ ದಾರಿಯಾಗಬಹುದು.

St. PHILOMENA'S COLLEGE
Mysore Dated 7-1-57

St. Philomena's College re-opens after the Christmas Vacation on Tuesday, 8th January 1957.

ಪ್ರಾದೇಶಿಕ ಕಾಂಗ್ರೆಸ್ಸಿಗರಲ್ಲಿ ಸೌಹಾರ್ದ ಅಗತ್ಯ

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಹನುಮಂತಯ್ಯನವರ ಭಾಷಣ

ಬೆಂಗಳೂ

ಮಹಾ ಚುನಾವಣೆ ಸಂಬಂಧದಲ್ಲಿ ಕಾ ಸ್ ಉಮೇದುವಾರರ ಆಯ್ಕೆ ಬಗ್ಗೆ ಸಂಸ ಪಕ್ಷದ ಚುನಾವಣಾ ಮಂಡಲಿಯವರು ಅನು ಸಿರುವ ನೀತಿ ಬಗ್ಗೆ ಅತೃಪ್ತಿಯನ್ನು ಸೂಚಿ ಸಲುವಾಗಿ ನೆನ್ನೆ ಇಲ್ಲಿ ಸೇರಿದ್ದ ಸಭೆಯಲ್ಲಿ ಮ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಷಣ ಮಾಡಿ ಈ ರೀತಿ ತಿಳಿಸಿದರು :—

ಕಾಂಗ್ರೆಸ್ಸು ಓಟಿನಿಂದಾಗಲೀ, ಅಥವಾ ನಗಳಿಂದಲಾಗಲೀ ಬೆಳೆದ ಸಂಸ್ಥೆಯಲ್ಲ. ಸತ್ಯ ಮತ್ತು ನಿಷ್ಠೆಗಳಿಂದ ಕೂಡಿದ ಆದ್ಯ ಲದಿಂದ ಬೆಳೆದುಬಂದಿದೆ. ಸಂಸ್ಥಾನದ ಕಾ ಸ್ಸಿನಲ್ಲಿ ಈಗ ಅಸತ್ಯ, ಮೋಸ, ಸ್ವಾರ್ಥ ಅಂಕುರಿಸಿವೆ. ಸಂಸ್ಥಾನದ ಪ್ರಮುಖರಾದ ಗಳು ನಿಜಲಿಂಗಪ್ಪ, ಪಿ. ವೆಂಕಟಪ್ಪ ಎಸ್. ಚನ್ನಯ್ಯನವರು ಉದಾರ ಮನಸ್ಸಿ ವರ್ತಿಸಿ ಪಕ್ಷದಲ್ಲಿ ಏಕಪಕ್ಷೀಯವಾದ, ಹಂಗಡದ ಪ್ರಾಬಲ್ಯವನ್ನು ಬೆಳೆಯಗೊಡ ಮಾಡಿ ದೇಶಾಭ್ಯುದಯವನ್ನು ಸಾಧಿಸಲಿ.

ನಾನು ಸ್ಥಾನಗಳನ್ನು ಆಕ್ರಮಿಸಿಕೊಳ್ಳು ದು ಅವರು ಶಂಕಿಸಬೇಕಾಗಿಲ್ಲ. ಕಾಂಗ್ರೆಸ್ ಸ್ಥೆಯಲ್ಲಿ ಸತ್ಯ ಮತ್ತು ಸ್ನೇಹ ಸೌಹಾರ್ದ ಕೂಡಿದ ವಾತಾವರಣವನ್ನು ಕಲ್ಪಿಸಲು ಶ್ರಮಿಸೋಣ, ಈ ಗುರಿಯ ಸಾಧನೆಗಾಗಿ ಮೊದಲು ಆಹುತಿಯಾಗಲು ಸಿದ್ಧ. ಕಾಂ ಶುದ್ಧೀಕರಣವೇ ನನ್ನ ಆಸೆಯಾಗಿದೆ. ಮೆಂಟಿಗಾಗಲೀ, ಶಾಸನ ಸಭೆಗಾಗಲೀ ಕಾಲ ನಾನು ಸ್ಪರ್ಧಿಸಬಾರದೆಂದು ನಾಯಕರು ಸ್ನೇಹಭಾವದಿಂದ ನನಗೆ ಆದನ್ನು ಪಾಲಿಸಲು ನಾನು ಸಿದ್ಧನಿದ್ದೇನೆ.

ಅಮೆರಿಕದಲ್ಲಿ ಲೈಂಗಿಕ ಸ್ವೇಚ್ಛಾವರ್ತನೆ

ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾ ದ ಪ್ರೊಫೆಸರ್ ಪಿತ್ರಿಮ್ ಸೊರೋಕಿ "ಅಮೆರಿಕನ್ ಸೆಕ್ಸ್ ರೆವೊಲ್ಯೂಷನ್" ಎಂ ಥದಲ್ಲಿ ಸೂಚಿಸಿರುವಂತೆ ಆ ದೇಶದಲ್ಲಿ ಅರಾಜಕತೆಯು ಉಂಟಾಗುತ್ತಿರುವುದ ಪ್ರಾಚೀನ ಗ್ರೀಸ್ ಮತ್ತು ರೋಂ ನ ಆದ ದುರ್ಗತಿ ಕಡೆಗೆ ಅಮೆರಿಕವು ಹೊ ರುವುದೆಂದೂ ವ್ಯಕ್ತವಾಗಿದೆ. ಲೈಂಗಿಕ ಯು ಅಮೆರಿಕದ ನಾಗರಿಕತೆಯ ಎ ಕ್ಕೂ ವ್ಯಾಪಿಸಿದೆಯೆಂದೂ ಅವರು ರು. ಲಂಚಗುಳಿತನ ಮತ್ತು ದಗಾಬಾ ಇಲ್ಲೂ ಈ ವ್ಯವಹಾರವು ಹರಡಿರುವುದ ರು ಬೇಳಿ, ಮುಖ್ಯಮುಖ್ಯ ಹುದ್ದೆಗಳ ಕವಾಗುವವರೂ ಸಹ ಅನೇಕ ವೇ ಅನೈತಿಕ ವ್ಯಾಪಾರದಲ್ಲಿ ತೊಡಗಿರು ಆಪಾದಿಸಿರುತ್ತಾರೆ.

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು.

Edited, Printed and Pub
by A. R. Nagarajan at S
Press, D Subbiah Road, M

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : TUESDAY 8—1—1957 ಮೈಸೂರು : ಮಂಗಳವಾರ ೮—೧—೧೯೫೭ : [ಸಂಚಿಕೆ : [illegible]

ಯೆಮೆನ್ ಊರುಗಳ ಮೇಲೆ ಬ್ರಿಟಿಷ್ ವಿಮಾನ ಧಾಳಿ ?

ಯೆಮೆನ್ ನಗರಗಳ ಮೇಲೆ ಬ್ರಿಟಿಷರ ಧಾಳಿಯೇ ?

ಅರೇಬಿಯದ ದಕ್ಷಿಣ ಭಾಗದಲ್ಲಿರುವ ಯೆಮೆನ್ ರಾಜ್ಯದ ನಗರಗಳ ಮೇಲೆ ಬ್ರಿಟನ್ನಿನ ವಿಮಾನ[illegible] ಮತ್ತು ಟ್ಯಾಂಕುಗಳು ಧಾಳಿ ನಡೆಸುತ್ತಿರುವುದಾಗಿ ಪಶ್ಚಿಮ ಜರ್ಮನಿಯ ರಾಜಧಾನಿ [illegible] ನಗರದಲ್ಲಿರುವ ಯೆಮೆನ್ ರಾಯಭಾರಿ ಕ[illegible]ರಿಯು ತಿಳಿಸಿರುತ್ತದೆ.

ಆದರೆ ಬ್ರಿಟನ್ನಿನ ವಸಾಹತು ಇಲಾಖಾ [illegible]ರಿಯು ಹೊರಡಿಸಿರುವ ಪ್ರಕಟಣೆ ಪ್ರಕಾರ [illegible] ರಾಜ್ಯದಿಂದ ಬ್ರಿಟಿಷರ ಆಶ್ರಿತ ರಾಜ್ಯದ ಏಡೆನ್ ಪ್ರದೇಶಕ್ಕೆ 'ಅತಿಕ್ರಮ ಪ್ರವೇಶ ಮಾಡಿದವರ' ವಿರುದ್ಧವಾಗಿ ಕಾರ್ಯಾಚರಣೆ ನಡೆಸಲಾಗುತ್ತಿರುವುದೆಂದು ಗೊತ್ತಾಗಿದೆ. ಯೆ[illegible] ರಾಜ್ಯದಲ್ಲಿ ಬ್ರಿಟಿಷ್ ಪಡೆಗಳು ಕಾರ್ಯಾಚರಣೆ ನಡೆಸುತ್ತಿಲ್ಲವೆಂದೂ ತಿಳಿಸಲಾಗಿದೆ.

ಕಾಂಗ್ರೆಸ್ ಅಧಿವೇಶನದ ಮುಕ್ತಾಯ

೧ ಲಕ್ಷ ಜನರ ಕೂಟ

ಇಂದೂರಿನ ಲಕ್ಷ್ಮೀಬಾಯಿನಗರದಲ್ಲಿ ಸೇರಿದ್ದ [illegible]ಗ್ರೆಸ್ ಅಧಿವೇಶನವು ಮೊನ್ನೆ ಮುಕ್ತಾಯವಾಯಿತು. ಅಧ್ಯಕ್ಷ ಢೇಬರರು ಭಾಷಣ ಮಾಡಿ, ದೇಶದಲ್ಲಿ ಸಮಾಜವಾದಿ ಸಹಕಾರ ಕಾಮನ್‌ವೆಲ್ತ್ ಒಂದನ್ನು ಸ್ಥಾಪಿಸುವ ಬಗ್ಗೆ ಕಾಂಗ್ರೆಸ್ಸು ಪೂರ್ಣ ನಂಬಿಕೆ ಹೊಂದಿರುವುದಾಗಿ ತಿಳಿಸಿದರು. ಕಾಂಗ್ರೆಸ್ ಪ್ರತಿನಿಧಿಗಳು ಚುನಾವಣಾ ಪ್ರಣಾಳಿಕೆಯಲ್ಲಿರುವ ಸಂದೇಶವನ್ನು ಪ್ರತಿ ಪಟ್ಟಣ ಮತ್ತು ಗ್ರಾಮಕ್ಕೂ ಒಯ್ಯಬೇಕೆಂದೂ, ಕಾಂಗ್ರೆಸ್ಸು ಉರುಳಿದರೆ ದೇಶವನ್ನು ಉಳಿಸುವ ಬೇರೆ ಯಾವ ಪಕ್ಷವಿಲ್ಲವೆಂಬುದರ ಅರಿವುಂಟುಮಾಡಿಕೊಡಬೇಕೆಂದೂ ತಿಳಿಸಿದರು.

ಕಾಂಗ್ರೆಸ್ ಚುನಾವಣಾ ಘೋಷಣೆಯಲ್ಲಿ ನಮೂದಿಸಿರುವ ನೂತನ ಭಾರತದ ಚಿತ್ರವು ಜನರಿಗೆ ಬೇಡವಾದರೆ ಒಂದು ಓಟೂ ಸಹ ಕಾಂಗ್ರೆಸ್ಸಿಗೆ ಬೇಡವೆಂದು ಅವರು ಹೇಳಿದರು. ಕಾಂಗ್ರೆಸ್ಸಿಗೆ ಚುನಾವಣೆಗಳು ಜನರ ಓಟು ಪಡೆಯುವ [illegible] ವ್ಯಾಪಾರವಲ್ಲವೆಂದೂ, ಸಮಾನತೆ ಮತ್ತು ಭ್ರಾತೃತ್ವಭಾವದ ಆಧಾರದ ಮೇಲೆ ಹೊಸ ಸಮಾಜದ ರಚನೆ ಸಂದೇಶ ಬೀರಲು ಒಂದು ಅವಕಾಶವೆಂದೂ ಅವರು ನುಡಿದರು.

ಅಧಿವೇಶನಕ್ಕೆ ೪,೦೦೦ ಮಂದಿ ಪ್ರತಿನಿಧಿಗಳ [illegible] ೧,೧೦೦ ಜನರು ಬಂದಿದ್ದರು. ಹೊರಗಡೆಯಿಂದ [illegible],೦೦೦ ಜನರೂ, ಸ್ಥಳೀಯರು ೧ ಲಕ್ಷ ಮಂದಿಯೂ ಭಾಗವಹಿಸಿದ್ದರು.

ನಾಳೆ ಸಾಮೂಹಿಕ ಯೋಜನೆ ಗೋಷ್ಠಿಯ ಆರಂಭ

ಬೆಂಗಳೂರಿನಲ್ಲಿ ನಾಳೆಯಿಂದ ೧೫ನೇ ತಾರೀಖಿನ ವರೆಗೆ ೪ನೇ ಪ್ರಾದೇಶಿಕ ಸಾಮೂಹಿಕ ಯೋಜನಾ ಗೋಷ್ಠಿಯು ಸೇರುವುದು. [illegible] ಮತ್ತು ಇತರ ಕಡೆಗಳ ೩೩ ಕಲೆಕ್ಟರುಗಳು, [illegible] ಮಂದಿ ಅಭಿವೃದ್ಧಿ ಅಧಿಕಾರಿಗಳು, ಅನೇಕ [illegible] ಕಾರ್ಯಕರ್ತರು ಭಾಗವಹಿಸುವರು. ಸಾ[illegible]ಕ ಯೋಜನಾ ಕಾರ್ಯದಲ್ಲಿ ಪಂಚಾಯಿತಿಗಳು ಮುಂತಾದ ಪ್ರಜಾ ಸಂಸ್ಥೆಗಳ ಪಾತ್ರವನ್ನು [illegible] ಅಲ್ಲಿ ಪರಿಶೀಲಿಸಲಾಗುವುದು.

ಪಾಕಿಸ್ತಾನದಲ್ಲಿ ವಿದೇಶೀ ಶಸ್ತ್ರಾಸ್ತ್ರಗಳ ಸಂಗ್ರಹ

ಭಾರತದ ಪ್ರತಿಕ್ರಿಯೆಯ ಬಗ್ಗೆ ನೆಹರೂರವರ ಹೇಳಿಕೆ

ಲಕ್ಷ್ಮೀಬಾಯಿನಗರದಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನದ ಮುಕ್ತಾಯ ಸಮಾರಂಭದಲ್ಲಿ ನೆಹರೂರವರು ಭಾಷಣ ಮಾಡಿ, ಪಾಕಿಸ್ತಾನವು ವಿದೇಶೀ ಶಸ್ತ್ರ ಸಹಾಯವನ್ನು ಪಡೆದುಕೊಳ್ಳುತ್ತಾ ಹೋದರೆ ಭಾರತವು [illegible] ಕೊಳ್ಳಲು [illegible] ಸೈನಿಕ ಸಹಾಯದ [illegible] ಪಾಕಿಸ್ತಾನದ [illegible] ನಾಡಿನ [illegible] ಈ ಶಸ್ತ್ರಾಸ್ತ್ರಗಳನ್ನು ಪಡೆದಿ[illegible] ಡೆ ಹೇಳುತ್ತಾ [illegible] ವೆಂದು [illegible] ರವರು ಹೇಳಿದ[illegible] ನೆರೆ ನಾಡು [illegible] ಶಸ್ತ್ರ ಶೇಖರಣೆ ಮಾಡುತ್ತಿರುವಾಗ [illegible] ಳಿತುಕೊಳ್ಳಲಾಗುವುದಿಲ್ಲವೆಂದು [illegible] ಸಿ, ಈ ಶಸ್ತ್ರಾಸ್ತ್ರಗಳನ್ನು ಭಾರತದ ವಿರುದ್ಧ [illegible] ಬಳಸಲಾಗುವುದೆಂದು ಪಾಕಿಸ್ತಾನದಲ್ಲಿ [illegible]ಚಾರ ನಡೆದಿರುವುದಾಗಿ ತಿಳಿಸಿದರು.

ಕಾಂಗ್ರೆಸ್ ಅಧಿವೇಶನದಲ್ಲಿ ಹುಲಿ ನರಿ ಪ್ರದರ್ಶನ

ಇಂದೂರು ಕಾಂಗ್ರೆಸ್ ಅಧಿವೇಶನದ ಸಂಬಂಧವಾಗಿ ನಡೆದ ಗ್ರಾಮ ಕೈಗಾರಿಕಾ ಪ್ರದರ್ಶನಕ್ಕೆ ಅಧ್ಯಕ್ಷ ಢೇಬರ್‌ರವರು ಭೇಟಿ ಕೊಟ್ಟಾಗ ಅವರಿಗೆ ಹೆಣ್ಣು ಹುಲಿ ಮರಿಯೊಂದನ್ನು ತೋರಿಸಲಾಯಿತು. ಅವರು ಅದರ ಮೈ ಸವರಿ ಪೂಮಾಲೆಯನ್ನು ಹಾಕಿ, ಝಾನ್ಸಿ ರಾಣಿ ಲಕ್ಷ್ಮೀಬಾಯಿಯ ಹೆಸರನ್ನು ಅದಕ್ಕೆ ಇಟ್ಟರು. ಅಧಿವೇಶನದ ಮುಖ್ಯ ಹೆಬ್ಬಾಗಿಲಿನಲ್ಲಿ ಸ್ಥಾಪಿಸಲ್ಪಟ್ಟಿರುವ ಝಾನ್ಸಿ ರಾಣಿಯ [illegible] ಅಡಿ ಎತ್ತರದ ವಿಗ್ರಹದ ಬಳಿ ಅದನ್ನು ಇಡಲಾಗುವುದು.

ಅಂತರ ಸಂಸ್ಥಾನ ಕಲೆಕ್ಟರುಗಳ ಸಭೆ

ಅಂತರ ಸಂಸ್ಥಾನ ಕಲೆಕ್ಟರುಗಳು ಮತ್ತು ಇಲಾಖೆಗಳ ಅಧಿಕಾರಿಗಳ ಸಭೆಯು ನಾಳೆಯಿಂದ ೧೫ನೇ ತಾರೀಕಿನ ವರೆಗೆ ಬೆಂಗಳೂರಿನಲ್ಲಿ ಸೇರುವುದು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೊನೆಟ್ ೭-೧೫ [illegible] ೮-೧೫ ಕೆ. ಆರ್. ಲೀಲಾವತಿ-ದೇವರ ನಾಮ. ೮-೩೦ ಹಿಂದಿ ಪಾಠ [illegible] ಎಸ್. ಅನಂತಪದ್ಮನಾಭರಾವ್-ವೀಣೆ ೧೨-೩೦ ರಿಕಾರ್ಡು. ೧ ಕೆ. ಆರ್. ಲೀಲಾವತಿ-ಸಂಗೀತ ೧-೩೦ ಕ್ಲಾರಿಯೊನೆಟ್ ೩ [illegible] ಸಂಗೀತ ಕಛೇರಿ. ಸಂಜೆ ೫-೩೦ ಮತ್ತು [illegible] ಎಂ. ಮುನಿವೆಂಕಟಪ್ಪ-ನಾಗಸ್ವರ. ೬-೩ ವಿರಾಮ ಸಂಗೀತ. ೬-೩೦ ರಿಕಾರ್ಡು. ೭-೩೦ ನಾವು ಮತ್ತು ನಮ್ಮವರು ೮-೩೦ ರಾಷ್ಟ್ರೀಯ ಕಾರ್ಯಕ್ರಮ. ೮ ೫೦ ರಿಕಾರ್ಡು ೯ ೧೫ ಎಂ. ಎ. ನರಸಿಂಹಾಚಾರ್-ಸಂಗೀತ

ಹಂಗೆರಿ ಪರಿಸ್ಥಿತಿ ತನಿಖೆಗೆ ವಿಶ್ವಸಂಸ್ಥೆ ವಿಶೇಷ ಸಮಿತಿ

ಹ್ಯಾಮರ್‌ಷೀಲ್ಡರ ಸೂಚನೆ

ವಿಶ್ವ ಸಂಸ್ಥೆಯ ಸಾಧಾರಣ ಸಭೆಗೆ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಷೀಲ್ಡರು ಸೂಚನೆಯೊಂದನ್ನು ಕಳುಹಿಸಿ, ಹಂಗೆರಿ ಪರಿಸ್ಥಿತಿ ಬಗ್ಗೆ ತನಿಖೆ ನಡೆಸಲು ವಿಶೇಷ ಸಮಿತಿಯ ರಚನೆಯಾಗಬೇಕೆಂದು ಕೇಳಿರುತ್ತಾರೆ. ಹಂಗೆರಿಯಲ್ಲಿ ನಡೆಯುವ ಘಟನೆಗಳನ್ನೆಲ್ಲಾ ಪರಿಶೀಲಿಸುತ್ತಿರಲು ಈ ಸಮಿತಿಯು ಅವಶ್ಯವೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಹಂಗೆರಿಯಿಂದ [illegible] ನಿರಾಶ್ರಿತರು ತಿಳಿಸಬಹುದಾದ ವಿಚಾರಗಳನ್ನೂ ಸಮಿತಿಯು ಗಮನಕ್ಕೆ ತೆಗೆದುಕೊಳ್ಳಬೇಕೆಂದೂ, [illegible] ವಿಶ್ವ ಸಂಸ್ಥೆಯ ಪ್ರತಿನಿಧಿಗಳು ನೇರವಾಗಿ ತಾವೇ ಪರಿಶೀಲನೆ ನಡೆಸಲು ಅವಕಾಶ [illegible]ಗಿಲ್ಲವೆಂದೂ, ಅಥವಾ ಅಂತಹ ಪರಿಶೀಲನೆಗೆ ಸಂಬಂಧಪಟ್ಟ ಸರಕಾರಗಳು ಸಹಕಾರ ನೀಡಿಲ್ಲವೆಂದೂ ಅವರು ತಿಳಿಸಿ [illegible] ಹಂಗೆರಿ ನಿರಾಶ್ರಿತರ ಅಭಿ[illegible] ಪಡೆಯುವುದು [illegible] ಮಾರ್ಗ ಉಳಿದಿರುವುದೆಂದೂ ಅವರು ಸೂಚಿಸಿರುತ್ತಾರೆ.

ನೆಹರೂ ನಿವಾಸಕ್ಕೆ ಅತಿಕ್ರಮ ಪ್ರವೇಶಕ್ಕಾಗಿ ಸಜಾ

ಕಳೆದ ೧ನೇ ತಾರೀಕು ರಾತ್ರಿ ನೆಹರೂರವರ ನಿವಾಸಕ್ಕೆ ಅತಿಕ್ರಮ ಪ್ರವೇಶ ಮಾಡಿದ ಗಣೇಶ ಎಂಬ ಮೈಸೂರು ಸಂಸ್ಥಾನದವನಿಗೆ ದೆಹಲಿ ನ್ಯಾಯಾಧೀಶರು ೬ ತಿಂಗಳ ಸಜಾವನ್ನು ವಿಧಿಸಿರುತ್ತಾರೆ. ತಾನು ನಿರುದ್ಯೋಗಿಯೆಂದೂ, ಉದ್ಯೋಗ ಹುಡುಕುತ್ತಿರುವುದಾಗಿಯೂ ಅವನು ಕೋರ್ಟಿನಲ್ಲಿ ಹೇಳಿಕೆಯಿತ್ತಿದ್ದನು.

ಪೂರ್ವ ಜರ್ಮನಿಯಲ್ಲಿ ರಷ್ಯದ ಸೇನೆ ಇರುವ ಬಗ್ಗೆ ಒಪ್ಪಂದ

ಪೂರ್ವ ಜರ್ಮನಿ ಪ್ರಧಾನಿ ಓಟ್ಟೊ ಗ್ರೋಟವಾಲ್ ಮತ್ತು ರಷ್ಯದ ಪ್ರಧಾನಿ ಬುಲ್ಗಾನಿನ್‌ರಿಗೆ ಮಾತುಕತೆಗಳು ನಡೆದು, ಉಭಯ ರಾಷ್ಟ್ರಗಳಿಗೂ ಒಪ್ಪಂದವಾಗಿ ಪೂರ್ವ ಜರ್ಮನಿಯಲ್ಲಿ ರಷ್ಯಾ ಸೈನ್ಯಗಳನ್ನು ಮುಂದುವರಿಸಲು ಇಬ್ಬರು ಪ್ರಧಾನಿಗಳೂ ಸಮ್ಮತಿಸಿರುತ್ತಾರೆ. ಆರ್ಥಿಕ ವಿಷಯಗಳು ಮತ್ತು ಉಭಯ ರಾಯಭಾರ ಕಚೇರಿಗಳನ್ನು ಏರ್ಪಡಿಸುವ ಬಗ್ಗೆಯೂ ಒಪ್ಪಂದಗಳಾಗಿವೆ.

ಬೆಂಗಳೂರು ಪೌರಸಭಾ ಕೆಳ ದರ್ಜೆ ನೌಕರರ ಮುಷ್ಕರ ಮುಕ್ತಾಯ

ಬೆಂಗಳೂರು ಪುರಸಭೆಯ ಜಾಡಮಾಲಿಗಳು, ಆರೋಗ್ಯ, ತೋಟ ಮತ್ತು ಇಂಜನಿಯರಿಂಗ್ ಇಲಾಖೆಗಳ ಕೆಳ ದರ್ಜೆ ನೌಕರರು ತಾತ್ಕಾಲಿಕ ಪರಿಹಾರದ ಬೇಡಿಕೆ ಸಂಬಂಧವಾಗಿ ನೆನ್ನೆ ಮುಷ್ಕರ ಹೂಡಿದ್ದರು. ಅದರಲ್ಲಿ ೩,೬೦೦ ಜನರು ಭಾಗವಹಿಸಿದ್ದರು. [illegible] ವಾರದಲ್ಲಿ ಅವರುಗಳ [illegible] ಪರಿಹರಿಸುವುದೆಂದು ಕಮಿಷನರ್ ಶ್ರೀ ಮಹಮದ್ ಅಹಮದ್‌ರವರು ಇತ್ತ ಭರವಸೆ ಮೇಲೆ ನೆನ್ನೆ ಮಧ್ಯಾಹ್ನ ಮುಷ್ಕರವು ಮುಕ್ತಾಯವಾಯಿತು.

ಫಿಲೊಮಿನಾ ಕಾಲೇಜು ಅಧ್ಯಾಪಕರ ಮುಷ್ಕರದ ಆರಂಭ

ತುಟ್ಟಿ ಭತ್ಯದ ಬೇಡಿಕೆಗೆ ಒತ್ತಾಯ

ಮೈಸೂರು ೮

ತಮಗೆ ತುಟ್ಟಿಭತ್ಯವನ್ನು ಕೊಡುವಂತೆ ಪದೇ ಪದೇ ಒತ್ತಾಯ ಮಾಡಿದರೂ ಅದನ್ನು ಗಣನೆಗೆ ತೆಗೆದುಕೊಳ್ಳದಿರುವುದಕ್ಕಾಗಿ ಪ್ರತಿಭಟಿಸಲು ಈ ದಿನ ಇಲ್ಲಿನ ಸೇಂಟ್ ಫಿಲೊಮಿನಾ ಕಾಲೇಜಿನ ೩೦ ಜನ ಉಪಾಧ್ಯಾಯರುಗಳು ಮುಷ್ಕರವನ್ನು ಆರಂಭಿಸಿದರು. ಕಾಲೇಜು ಆರಂಭವಾಗಿ ೧೦ ವರ್ಷಗಳಾದರೂ ಇನ್ನೂ ತುಟ್ಟಿಭತ್ಯವನ್ನು ಕೊಡುತ್ತಲೇ ಇಲ್ಲವೆಂದೂ, ವಿಶ್ವವಿದ್ಯಾಲಯದವರಿಂದ ಕಾಲೇಜಿಗೆ ವಿಶೇಷವಾಗಿ ಸಹಾಯ ದ್ರವ್ಯವು ಬರುತ್ತಿರುವುದೆಂದೂ ಅವರುಗಳು ಕಾಲೇಜು ಪ್ರಿನ್ಸಿಪಾಲರಿಗೆ ಕೊಟ್ಟಿರುವ ಮುಷ್ಕರದ ನೋಟೀಸಿನಲ್ಲಿ ತಿಳಿಸಿ, ಇತರ ಎಲ್ಲಾ ಅಫಿಲಿಯೇಟೆಡ್ ಕಾಲೇಜುಗಳಲ್ಲಿ ತುಟ್ಟಿಭತ್ಯವನ್ನು ಕೊಡುತ್ತಿರುವ ಬಗ್ಗೆ ಅವರ ಗಮನವನ್ನು ಸೆಳೆದಿರುತ್ತಾರೆ.

ಕ್ರಿಸ್ಮಸ್ ಹಬ್ಬದ ರಜಾ ದಿನಗಳು ಮುಗಿದ ನಂತರ ಈ ದಿನ ಕಾಲೇಜು ಪುನಃ ಆರಂಭವಾಯಿತು. ಹಲವು ವಿದ್ಯಾರ್ಥಿಗಳು ತರಗತಿಗಳಿಗೆ ಹೋಗಿದ್ದರು. [illegible]ಯಲ್ಲಿ ಒಟ್ಟು [illegible] ಮಂದಿಯ ಪೈಕಿ [illegible] ಅಧ್ಯಾಪಕರು ಕರ್ತವ್ಯದಲ್ಲಿ ತೊಡಗಿರುವರೆಂದು ಕಾಲೇಜಿನ ಪ್ರಿನ್ಸಿಪಾಲ್ ಫಾದರ್ ಆಡಿಯೊರವರು ತಿಳಿಸಿರುತ್ತಾರೆ.

ಮುಷ್ಕರ ಹೂಡಿರುವ ಅಧ್ಯಾಪಕರುಗಳ ಪರವಾಗಿ ಶ್ರೀಗಳು ಎಂ. ಕೆ. ರಾಜಗೋಪಾಲ್ ಮತ್ತು ಎಂ. ಗೋಪಾಲಕೃಷ್ಣ ಅಡಿಗರವರು ಹೊರಡಿಸಿರುವ ಹೇಳಿಕೆ ಪ್ರಕಾರ, ೩೩ ಮಂದಿ ಅಧ್ಯಾಪಕರು ಕೆಲಸಕ್ಕೆ ಹಾಜರಾಗಿಲ್ಲ. ತರಗತಿಗಳಿಗೆ ಹೆಚ್ಚು ವಿದ್ಯಾರ್ಥಿಗಳು ಹೋಗಿರಲಿಲ್ಲವೆಂದೂ, ಹೋದವರಲ್ಲಿ ಅನೇಕರು ಹೊರಗೆ ಬಂದು ಇತರರೊಡನೆ ಸಭೆ ನಡೆಸಿ, ಅಧ್ಯಾಪಕರ ಬೇಡಿಕೆ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರೆಂದೂ ತಿಳಿಸಲಾಗಿದೆ.

ಅಧ್ಯಾಪಕರುಗಳಿಗೆ ವಿಶ್ವವಿದ್ಯಾಲಯದ ರಿಜಿಸ್ಟ್ರಾರರು ಪತ್ರ ಬರೆದು ತಮ್ಮನ್ನು ಈ ಮಧ್ಯಾಹ್ನ ಕಾಣುವಂತೆ ಸೂಚಿಸಿರುವ ಮೇರೆ ಅವರುಗಳು ರಿಜಿಸ್ಟ್ರಾರರನ್ನು ಭೇಟಿ ಮಾಡಲಿರುವರು.

ಮಾಸ್ಕೊವಿನಲ್ಲಿ ಚೌ ಎನ್ ಲೈ

ಚೀಣದ ಪ್ರಧಾನಿ ಚೌ ಎನ್ ಲೈಯವರು ರಷ್ಯಾ ನಾಯಕರೊಡನೆ ಮಾತುಕತೆ ನಡೆಸಲು ನೆನ್ನೆ ಮಾಸ್ಕೊ ನಗರವನ್ನು ತಲಪಿದರು. ಅವರನ್ನು ರಷ್ಯಾ ಅಧ್ಯಕ್ಷ ವೊರೊಶಿಲೊವ್ ಮತ್ತು ಇತರ ನಾಯಕರು ಸ್ವಾಗತಿಸಿದರು. ಚೌರವರು ಮಾತನಾಡಿ, ರಷ್ಯವು ಚೀಣದ ಸ್ವಾತಂತ್ರ್ಯದ ಹೋರಾಟಕ್ಕೆ ದಾರಿ [illegible]ತೆಂದೂ. ಈಗ ಸಹಾಯ ನೀಡುತ್ತಿರುವುದಾಗಿಯೂ ಹೇಳಿದರು.

೧೫,೦೦೦ ಹರಿಜನರು ಬೌದ್ಧ ಮತಕ್ಕೆ

ಅಹಮದ್‌ನಗರದ ಬಳಿ ಕೊಂಡೆ ಎಂಬಲ್ಲಿ ಕಳೆದ ವಾರ ೧೫ ಸಾವಿರ ನಿಮ್ನ ವರ್ಗದ ಜನರು ಬೌದ್ಧ ಮತವನ್ನವಲಂಬಿಸಿದರು.

ಒಪ್ಪಿದ ನಿಯೋಗದವರಿಗೆ ನಾ[illegible]ಬೆಯ ಸತ್ಕಾರ

ಮೈಸೂರು

[illegible] ಸೂಚ[illegible] ಮೈಸೂರು [illegible] ಪವ ಗುರಾ ಲಿಸ್ಟಗಳು [illegible] ಪ್ರವೃತ್ತಿ ಒಗ ಮೆಚ್ಚಿಗೆಯನ್ನು ಸೂಚಿಸಿದ [illegible] ತ ಪ್ರ ತನ ಸಂಸ್ಕೃತಿಯಲ್ಲಿ ರಷ್ಯನರು [illegible] ವಿಶೇಷವಾದ ತಂತ್ರವನ್ನು [illegible] ವಿವರ ಎಂದು [illegible] ಸಂಸ್ಕೃತಿ [illegible] ಸೂಚಿಸಿದ [illegible] ರಷ್ಯದಲ್ಲಿ [illegible] ವ ಪ್ರಗ ಪರ ಕಾರ್ಯಗಳ ವಿಚಾರದಲ್ಲಿ [illegible] ಜನಾಂಗ [illegible] ನುಡಿದು ತಮ್ಮ ದೇಶ [illegible]

ಭದ್ರತಾ ಸಮಿತಿಯಲ್ಲಿ [illegible]ರದ ಪ್ರಶ್ನೆ ಪರಿಶೀಲನ

[illegible] ದ್ವಾರಾ ಗಿ ಪ್ರಕಟಿಸಲಾ[illegible] ಪಾಕಿಸ್ತಾನ [illegible] ವನ್ನು ಎದು ಸಲ [illegible] ದಿವಸ [illegible] ಗೊತ್ತಾಗಿದೆ

ಸೂಯೆಜ್ ಕಾಲುವೆ ಕೆಲಸದಲ್ಲಿ ಆಂಗ್ಲೋ-ಫ್ರೆಂಚರ ಹಡಗುಗಳಿಗೆ ಅವಕಾಶವಿಲ್ಲ

ಸೂಯೆಜ್ ಕಾಲುವೆಯನ್ನು ಹಡ[illegible] ರಕ್ಕೆ ಸುಗಮ ಮಾಡಲು [illegible] ತೆಗೆ[illegible] ವ ಕೆಲಸದಲ್ಲಿ ನಿಯೋಜಿಸಬೇಕೆಂದಿದ್ದ [illegible] ಟಿಷ್ ಮತ್ತು ಫ್ರೆಂಚ್ ಹಡಗುಗಳಿಗೆ ಅವಕಾಶವಿಲ್ಲವೆಂದು ವಿಶ್ವ[illegible] ರ್ಯದರ್ಶಿ [illegible] ಲಂಡನ್ನಿನ [illegible] ಕೆ ಸಮ್ಮತಿ [illegible] ಮಾಡುತ್ತಿದ್ದುವು [illegible]

ಫಾರ್ಮೋಸಾದಲ್ಲಿ ಅಮೆರಿಕದ ಭಾರಿ ವಿಮಾನ ಪತನ

ಫಾರ್ಮೋಸಾದಲ್ಲಿ [illegible] ಅಮೆರಿಕ[illegible]ದವರು [illegible] ವುದು

[illegible]

ಕಾಂಗ್ರೆಸ್ ಉಮೇದುವಾರಿಕೆ ಬಗ್ಗೆ ಅತೃಪ್ತಿಗೊಂಡವರ ಸಮಿತಿ

ಕಾರ್ಯಕರ್ತರ ಸಭೆಯಲ್ಲಿ ತೀರ್ಮಾನ

ಬೆಂಗಳೂರು ೮

ಪ್ರದೇಶಿಕ ಕಾಂಗ್ರೆಸ್ ಚುನಾವಣಾ ಸಮಿತಿಯವರು ಒದಗುವ ಚುನಾವಣೆಗೆ ಉಮೇದುವಾರರನ್ನು ಆರಿಸುವ ವಿಧಾನಕ್ಕಾಗಿ ಪ್ರತಿಭಟನೆ ಸೂಚಿಸಲು ಮೊನ್ನೆ ಶ್ರೀ [illegible] ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯ[illegible] ವಚನದಿಂದ [illegible] ಪಥವನ್ನು ಮಾಡಿ [illegible] ಕೇಂದ್ರ ಸಮಿತಿಯು ಅದನ್ನು ಗಮನಿಸಿ ಮರ್ಳಿಸಬೇಕೆಂದೂ ಸೂಚಿಸುವ ನಿರ್ಣಯವನ್ನು ಅಂಗೀಕರಿಸಿತು ಶ್ರೀ ಸಿ ಆರ್ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಟ್ಟು [illegible] ಜನರುಳ್ಳ [illegible] ಸಮಿತಿಯೊಂದನ್ನು ಸ್ಥಾಪಿಸಲಾಯಿತು ಪರಿಸ್ಥಿತಿಯನ್ನು ಪರಿಶೀಲಿಸಲು [illegible] ಸಂಸ್ಥಾನದ ಕಾರ್ಯಕರ್ತರ [illegible] ನಿರ್ಧರಿಸುವ [illegible] ಯಲ್ಲಿ ಕೆಳಗೆ ಕಂಡವರು ಇರುವರು —

ಶ್ರೀಮತಿ ತ್ರಿಪುರಸುಂದರಮ್ಮ, ಶ್ರೀಗಳಾದ ಎನ್ [illegible] ಎಂ ಕೆ ಪೆರುಮಾಳ್ ಎಂ [illegible] ಕೆ ಎಸ್ ಸುಬ್ಬಣ್ಣ [illegible] ವೈ ಎಂ ಚಂದ್ರಶೇಖರ [illegible] ಟಿ ಎಸ್ [illegible] ಎಂ ಕೆ ಶಿವ ನಂದ[illegible]

ಮಹಿಳೆಯರ ಮತ್ತು ಅಲ್ಪ ಸಂಖ್ಯಾತರಿಗೂ [illegible] ನಗಳನ್ನು [illegible] ಕಾಂಗ್ರೆಸ್ ಗಮನಕ್ಕೆ ತರಲು [illegible] ಯಿತು

[illegible] ವಿ ಕರಿಯಪ್ಪ [illegible] ವನಂಜೆ [illegible] ಮುಂತಾದವರು [illegible] ಬಗ್ಗೆ ಅತೃಪ್ತಿಯನ್ನು ಸೂಚಿಸಿದರು

ಈ ವರ್ಷ ಸಂಸ್ಥಾನಕ್ಕೆ ೧೦ ವಿಸ್ತರಣಾ ಕೇಂದ್ರಗಳು

[illegible] ವರ್ಷದಲ್ಲಿ [illegible] ಸಂಸ್ಥಾನದ ಹೊಸದಾಗಿ ೧೦ ರಾಷ್ಟ್ರೀಯ [illegible] ಕೇಂದ್ರಗಳನ್ನು ಏರ್ಪಡಿಸಲು [illegible] ದ ಸಂಸ್ಥಾನದಲ್ಲಿ ೮ ಕೇಂದ್ರಗಳು ಇರುವುವು

ಅಲಹಾಬಾದಿನಲ್ಲಿ ಮೈಸೂರಿನ ಗವರ್ನರರು

ಮೈಸೂರಿನ ಗವರ್ನರ್ ಶ್ರೀ ಜಯಚಾಮರಾಜ ಒಡೆಯರವರು ಕಳೆದ ಶನಿವಾರ ಅಲಹಾಬಾದಿಗೆ [illegible] ಸಮೇತ ತಲುಪಿ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದರು ನಂತರ ಬೊಂಬಾಯಿಗೆ ಪ್ರಯಾಣ ಮಾಡಿದರು

ಮೈಸೂರು ಮತ್ತು ಬೆಂಗಳೂರು ಇಂಜನಿಯರಿಂಗ್ ಕಾಲೇಜುಗಳಿಗೆ ಟ್ರಸ್ಟ್

ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಮತ್ತು ಬೆಂಗಳೂರಿನ ಬಿ ಎಂ ಎಸ್ ಕಾಲೇಜುಗಳ ಮೇಲ್ವಿಚಾರಣೆಗಾಗಿ ಒಂದೊಂದು ಟ್ರಸ್ಟ್‌ಗಳನ್ನು ಮೈಸೂರು ಸರ್ಕಾರದವರು ಏರ್ಪಡಿಸಲಿರುವರೆಂದು ಗೊತ್ತಾಗಿದೆ ಅವುಗಳಲ್ಲಿ ಭಾರತ ಸರ್ಕಾರ, ಮೈಸೂರು ಸರ್ಕಾರ ಮತ್ತು [illegible]ಗಳ ಆಡಳಿತ ವರ್ಗದ ಪ್ರತಿನಿಧಿಗಳಿರುವರು ಕೇಂದ್ರ ಸರ್ಕಾರದವರಲ್ಲದೆ ಮೈಸೂರು ಸರ್ಕಾರದವರೂ ಸಹ ಈ ಸಂಸ್ಥೆಗಳಿಗೆ ಹೆಚ್ಚಿನ ಗ್ರಾಂಟನ್ನು ಕೊಡಲಿರುವರು

ಅಮೆರಿಕಾ ಪಾರ್ಲಿಮೆಂಟಿನ ಭಾರತೀಯ ಸದಸ್ಯರೊಡನೆ ನೆಹ್ರೂ ಭೇ

ಅಮೆರಿಕಾ ಪಾರ್ಲಿಮೆಂಟಿಗೆ ಚುನಾಯಿತರಾಗಿರುವ ಪ್ರಥಮ ಭಾರತೀಯ ಸದಸ್ಯರೂ ಪ್ರ ನ್ಯಾಯಾಧೀಶರೂ ಆದ ದಲಿಪ್ ಸೌಂದ್‌ರೊಡನೆ ನೆಹರೂರವರು ಸಂಭಾಷಿಸುತ್ತಿರುವು

ಎಲ್ ಎಂ ಪಿ ವೈದ್ಯರುಗಳ ಸಭೆ

ಮೈಸೂರು ೮

ಸರ್ಕಾರದ ನೌಕರರ ಸಂಬಳ ಮತ್ತು ಭತ್ಯದ ಪುನರ್ ಪರಿಶೀಲನೆ ಸಂಬಂಧವಾಗಿ ಹೊರಡಿಸಲಾಗಿರುವ ಆಜ್ಞೆಯನ್ನು ಪರಿಶೀಲಿಸಲು ಮೊನ್ನೆ ಡಾ|| ರಾಮಾಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಗರದ ಎಲ್ ಎಂ ಪಿ ವೈದ್ಯರುಗಳ ಸಭೆಯು ನಡೆಯಿತು ವೈದ್ಯರುಗಳ ಸಂಬಳವನ್ನು ವೈದ್ಯ ಪದವೀಧರ ನೌಕರರ ವೇತನದ ಮಟ್ಟಕ್ಕೆ ತರಬೇಕೆಂದು ಕೋರಲಾಯಿತು ಎಲ್ ಎಂ ಪಿ ಯವರಿಗೆ ೧೫೦–೫–೨೦೦ ಅಥವಾ ೧೫೦ ರಿಂದ ೩೦೦ ರೂ ಗ್ರೇಡನ್ನು ಗೊತ್ತುಪಡಿಸಬೇಕೆಂದು ಮನವಿ ಮಾಡಿಕೊಳ್ಳಲಾಯಿತು ಸರ್ಕಾರದ ಆಜ್ಞೆ ಬಗ್ಗೆ ಅತೃಪ್ತಿಯನ್ನು ಸೂಚಿಸಲಾಯಿತಲ್ಲದೆ ದಂತ[illegible]ಯರಿಗೆ ಕೊಟ್ಟಿರುವ ಸಂಬಳಕ್ಕೂ ಎಲ್ ಎಂ ಪಿ ವೈದ್ಯರುಗಳ ಸಂಬಳಕ್ಕೂ ಕೇವಲ ೫ ರೂ ವ್ಯತ್ಯಾಸವಿರುವುದನ್ನು ಕಂಡು ವಿಷಾದ ಸೂಚಿಸಲಾಯಿತು ಅಲ್ಲದೆ ಪಶು ವೈದ್ಯರಿಗೆ ಅವರ ಡಿಪ್ಲೊಮಾವರೆಗೂ ದರೂ ೧೫೦ ರಿಂದ ೨೦೦ ರೂ ಕೊಟ್ಟಿರುವುದನ್ನು ಸರ್ಕಾರದ ಗಮನಕ್ಕೆ ತರಲಾಯಿತು ಈ ಸಂಬಂಧವಾಗಿ ಡಾ|| ಕೆ ರಾಮಾಶಾಸ್ತ್ರಿಯವರು ಅಧ್ಯಕ್ಷರಾಗಿರುವ ಸಮಿತಿಯೊಂದನ್ನು ರಚಿಸಲಾಯಿತು ಅದರಲ್ಲಿ ಶ್ರೀಮತಿ ಎ ಶಾರದಮ್ಮ, ಟಿ ಎಲ್ ಸೀತಾರಾಮಯ್ಯ ವೆಂಕಟಸುಬ್ಬರಾವ್ ಮತ್ತು ಪದ್ಮನಾಭ ಮತ್ತು ಕಮ್ಮೀನರ್ ಶ್ರೀ ಕೆ ಸುಬ್ಬಣ್ಣನವರು ಇರುವರು

ಸಮಾಜವಾದಿ ಪಕ್ಷದವರ ಉಮೇದುವಾರಿಕೆ

ಸಮಾಜವಾದಿ ಪಕ್ಷದ ಪರ ಉಮೇದುವಾರರಾಗಬಯಸುವವರು ನಾಳೆಯೊಳಗಾಗಿ ತಮ್ಮ ಅರ್ಜಿಗಳನ್ನು ಸಮಿತಿಯ ಕಛೇರಿ ಇರುವ ನೋಟಿಖಾನೆ ಕಟ್ಟಡದ ಒನೇ ನಂಬರು ಕೊಠಡಿಗೆ ತಲುಪಿಸಬೇಕೆಂದೂ ಮೂರನೇ ದಿನ ಕಾರ್ಯಕರ್ತರ ಸಭೆಯು ನಡೆಯುವುದೆಂದೂ ತಿಳಿಸಲಾಗಿದೆ

EFFICIENT COACHING FOR
Inter, H. E. L. H. E. G.,-Eng.
B.A , B.Sc - Eng
H. S. NARAYANA,
MA BT
(First Class First Rank-Prize Winner)
905/10 III Cross N R Gardens
MYSORE

೨೦ ಲಕ್ಷ ಟನ್ ಧಾನ್ಯ ಸಂಗ್ರ

ಆಹಾರಾಭಾವ ಒದಗುವ ಚಿಹ್ನೆಗಳು [illegible] ಬರುವ ಮುಂಚಿತವಾಗಿಯೇ ೨೦ ಲಕ್ಷ [illegible] ಧಾನ್ಯವನ್ನು ಸಂಗ್ರಹಿಸುವುದೇ ಭಾರತ ಸ[illegible]ರದ ಗುರಿಯೆಂದು ಕೇಂದ್ರ ಆಹಾರ ಉಪ[illegible] ಶ್ರೀ ಎಂ ವಿ ಕೃಷ್ಣಪ್ಪನವರು ತಿಳಿಸಿರುತ್ತಾ[illegible] ಬೆಳೆಯುವವರಿಗೆ ನಷ್ಟವಾಗುವ ಮಟ್ಟಿಗೆ [illegible]ಯು ಇಳಿಯುವುದಾದರೆ ಆಂಧ್ರ, ಬಂಗಾ[illegible] ಮಧ್ಯ ಪ್ರದೇಶ ಮತ್ತು ಮದ್ರಾಸಗಳಲ್ಲಿ ಧಾ[illegible]ವನ್ನು ಕೊಳ್ಳಲು ಈಗಾಗಲೇ ಸೂಚನೆ [illegible]ಲಾಗಿದೆಯೆಂದೂ ಅವರು ಹೇಳಿರುವರು [illegible] ಭಾರತದಲ್ಲಿ ೪ ಲಕ್ಷ ಟನ್ ಅಕ್ಕಿಯನ್ನು [illegible]ಯೊಳಗೆ ಸಂಗ್ರಹಿಸಲಾಗುವುದೆಂದೂ ಬರ್ಮಾ[illegible]ದ ೫ ಲಕ್ಷ ಟನ್ ಮತ್ತು ಅಮೆರಿಕದಿಂದ ೨ [illegible] ಟನ್ ಅಕ್ಕಿಯನ್ನು ಆಮದು ಮಾಡಿಕೊಳ್ಳ[illegible]ವುದೆಂದೂ ಅವರು ನುಡಿದಿರುತ್ತಾರೆ

ಹ್ಯಾಮರ್‌ಶೀಲ್ಡರಿಗೆ ಹಂಗೇ ಸರ್ಕಾರದ ಆಹ್ವಾನ

ಈ ವರ್ಷದ ವಸಂತಋತುವಿನಲ್ಲಿ ಹಂಗೇ[illegible] ಭೇಟಿ ಕೊಡುವಂತೆ ಅಲ್ಲಿನ ಸರ್ಕಾರದವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ|| ಹ್ಯಾಮರ್‌ಶೀಲ್ಡರಿಗೆ ಆಹ್ವಾನವನ್ನಿತ್ತಿರುವುದು ವರದಿಯಾಗಿದೆ

Graded Exercises for Beginners in Typewriting
REVISED ENLARGED SECOND EDITION
(By K Seetharama Rao Principal B g t College of Commerce Mysore)
Contains m rk d passages for practising and developing speed exercises on tabular Statements and manuscript letters
Price 0 14 Please ask for a copy

ಅವನನ್ನು ನೋಡಿರಿ
★ ಅವನ ಮೂಗು ಬಾಧಿಸುತ್ತಿದೆ ಅಥವಾ [illegible] ಗಂಟಲಿನಲ್ಲಿ ಶೀತವಾಗಿದೆ
★ ಅವನು ಹಾಸಿಗೆಯಿಂದ ಎದ್ದು [illegible] ಅಥವಾ ಕಿಟಕಿಯ ಬಳಿಗೆ ಓಡುವನು
★ ಅವನು ದಿಗ್ಭ್ರಾಂತನಾಗುವನು ಮತ್ತು [illegible] ರಾಡಲು ಒದ್ದಾಡುವನು
★ ಅವನ ಉಬ್ಬಸವು ತುಂಬಾ ಕಠಿಣ[illegible] ಮತ್ತು ಅತಿ ಶೀಘ್ರವಾದುದು
★ ಅವನ ನಿಶ್ವಾಸವು ತುಂಬಾ ಕಠಿಣ ಹಾಗೂ [illegible] ವಾದುದು
★ ಅವನು ಕೆಮ್ಮುವ ಹಾಗೆ ತಲ್ಲಣಿಸುವನು
★ ಅವನ ತುಟಿಗಳು ಬಿಳಿಚಿಕೊಂಡಿವೆ
★ ಅವನ ಮುಖವೇ ಒಂದು ಕಥೆಯನ್ನು [illegible]ವುದು
ಅದೇ ಆಸ್ತಮ
ದಾರುಣ ಮತ್ತು ಕಾತುರತೆಯು ಒಂದು
ಕಣ್ಣೀರಿನ ಅಗತ್ಯ ಅಳವಾದ [illegible]
ಆಸೆ ಮತ್ತು ಹರ್ಷಕ್ಕೆ ಬದಲಿಸುವ
ಕವಿರಾಜ ಪಂಡಿತ
ಮುಗಾರ್ ದತ್ತ ಶರ್ಮ
ವೈದ್ಯ ವಾಚಸ್ಪತಿ ಜಗದ್ವಿಖ್ಯಾತ
ನವರತ್ನ - ಕಲ್ಪ
ಕಂಡುಹಿಡಿದವರು
ವಕ್ರ ವ್ಯಥೆಯರ್ ಮತ್ತು ಹವಳ [illegible]
ಅನುಕೂಲ ನವರತ್ನಗಳಿಂದ [illegible]
ಉಚಿತ ಸಾಹಿತ್ಯಕ್ಕೆ ಬರೆಯಿರಿ
NAVRATNA KALPA PHARMACI
JULLUNDUR CITY (I

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ.
ದರಗಳಿಗೆ ಬರೆಯಿರಿ.

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಚಿಕಿತ್ಸಕ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀ [illegible] ರಸ್ತೆ,
ಬೆಂಗಳೂರು-2

ಟ · ೦೫] SADHVI : WEDNESDAY 9—1—1957 ಮೈಸೂರು : ಬುಧವಾರ ೯—೧—೧೯೫೭ [ಸಂಚಿಕೆ : ೦೬೬

ಕರ್ನಾಟಕದ ರೈತರಿಗೆ ೧| ಲಕ್ಷ ಜಮೀನ್ದಾರರ ನೋಟೀಸು

ಸರ್ಕಾರಿ ಕಾರ್ಖಾನೆಗಳ
ಕರರಿಗೆ ಹೆಚ್ಚಿನ ಸಂಬಳವಿಲ್ಲ

**ಜೂರಿಯನ್ನು ಹೆಚ್ಚಿಸಲು ಪ್ರಯತ್ನಿಸ
ವುದೆಂದು ಕಾರ್ಮಿಕ ಸಚಿವರ ಸೂಚನೆ**

ಮೈಸೂರು ೯

ಸರ್ಕಾರಿ ಕಾರ್ಖಾನೆಗಳಲ್ಲಿ ಕೆಲಸ ಮಾಡು ವ ಕಾರ್ಮಿಕರಿಗೆ ನಾನ್ ಗೆಜೆಟೆಡ್ ನೌಕರ ತೆ ಸಂಬಳವನ್ನು ಹೆಚ್ಚಿಸುವ ಉದ್ದೇಶವು ಸ ರಕ್ಕೆ ಇರುವುದಿಲ್ಲ ಕೆಳ ದರ್ಜೆ ನೌಕರರಂ ಕಾರ್ಮಿಕರನ್ನು ಪರಿಗಣಿಸಲಾಗುವುದಿಲ್ಲ ತ ವರಮಾನವನ್ನು ಹೆಚ್ಚಿಸಿಕೊಳ್ಳಲು ಕಾರ್ಮಿ ು ಹೆಚ್ಚಿನ ಮಜೂರಿಗಾಗಿ ಬೇಡಿಕೆಗಳನ್ನು ಸ ಬಹುದು-ಎಂಬುದಾಗಿ ಕಾರ್ಮಿಕ ಸಚಿವ ಜಗನ್ನಾಥರಾವ್ ಚಂಡ್ರಿಕೀಯವರು ನೆನ್ನೆ ತಿಳಿಸಿದರು

ಮಜೂರಿ ನಿಗದಿ ಮಾಡಲು ಸರ್ಕಾರದವರು ಮ ಸಮಿತಿಯನ್ನು ನೇಮಿಸುವರೆಂದು ಅವ ಹೇಳಿದರು ಭದ್ರಾವತಿ ಕಾರ್ಖಾನೆಯ ಉ ಹರಣೆಯನ್ನು ಕೊಟ್ಟು, ಅಲ್ಲಿನ ಕಾರ್ಮಿಕರಿ ಸರ್ಕಾರದ ಕೆಳ ದರ್ಜೆ ನೌಕರರಿಗಿಂತಲೂ ಚ್ಚಿನ ವರಮಾನವು ದೊರೆಯುತ್ತಿದೆಯೆಂದು ು ತಿಳಿಸಿ ಅದೇ ಮಾರ್ಗವನ್ನು ಇತರ ಕಾ ರ್ಖಾನೆಗಳೂ ಅನುಸರಿಸಬಹುದೆಂದು ಸೂಚಿಸಿ ು

ಸಚಿವ ಶ್ರೀ ಚಂಡ್ರಿಕೀಯವರು ನೆನ್ನೆ ಜಿಲ್ಲಾ ಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರೊಡನೆ ಮಾಲೋಚನೆ ನಡೆಸಿ ತಮ್ಮ ಇಲಾಖೆಗಳಿಗೆ ಬಂಧಪಟ್ಟ ವಿಷಯಗಳ ಮೇಲೆ ವಿಚಾರ ವಿ ನಿಮಯ ಮಾಡಿದರು ಜಿಲ್ಲಾ ಕಾಂಗ್ರೆಸ್ ಅ ಕ್ಷರಾದ ಶ್ರೀ ಕೆ ಪುಟ್ಟಸ್ವಾಮಿಯವರು ಅವ ು ಸ್ವಾಗತಿಸಿದರು

ನ ನಿರೋಧವನ್ನು ಸಂಸ್ಥಾನದಲ್ಲಿ ಸಂಪೂ ವಾಗಿ ಜಾರಿಗೆ ತರಲು ಇರುವ ತೊಂದರೆಗಳ ಅವರು ವಿಶದವಾಗಿ ವಿವರಿಸಿದರು ಇದರಿಂ ಕೋಟಿ ರೂ ನಷ್ಟವೂ ಸಹ ಸರ್ಕಾರದ ಕ್ಕಸಕ್ಕೆ ಉಂಟಾಗುವುದೆಂದು ತಿಳಿಸಿದರು ಆ ೂ ಸಹ ಕಾಂಗ್ರೆಸ್ಸಿನ ಧ್ಯೇಯದಂತೆ ಕಾಲಕ್ರ ಲ್ಲಿ ಸಂಪೂರ್ಣ ಪಾನ ನಿರೋಧವು ಆಚರ ಬರಲೇಬೇಕಾಗಿರುವುದೆಂದೂ ಅವರು ನುಡಿ

ನ ನಿರೋಧವು ಜಾರಿಯಲ್ಲಿರುವ ಕೊಳ್ಳೇ ಮುಂತಾದ ಕಡೆಗಳ ಜನರು ಹಳೇ ಮೈ ು ಪ್ರಾಂತದ ಎಲ್ಲೆಯೊಳಗೆ ಬಂದು ಷವಾಗಿ ಮದ್ಯ ಪಾನ ಮಾಡಿ ಇಲ್ಲಿನ ಜನ ಮೃದಿಗೆ ಭಂಗವುಂಟುಮಾಡುತ್ತಿರುವ ಅಂಶ ಅವರ ಗಮನಕ್ಕೆ ತರಲಾಗಿ, ಪಾನ ನಿರೋ ಪ್ರದೇಶಗಳ ಪಕ್ಕದಲ್ಲಿರುವ ಬೆಲ್ಟ್ ಏರಿ ಯಲ್ಲಿ ಮದ್ಯದ ಅಂಗಡಿಗಳು ಇರದಂತೆ ಮಾ ಮಾಡುವುದಾಗಿ ಸಚಿವರು ತಿಳಿಸಿದರು

ಸೂರು ತಾಲ್ಲೂಕು ಜೋಡಿ ಉತ್ತನಹ ಮದಲ್ಲಿ ನೂರಾರು ಈಚಲ ಮರಗಳನ್ನು ವಾಗಿ ಕಡಿದು ವ್ಯವಸಾಯ ಮಾಡಲು ಇನಾಂದಾರರು ತೊಡಗಿರುವ ಅಂಶವನ್ನು ಗೆ ತಿಳಿಸಲಾಗಿ ಈ ವಿಷಯವನ್ನು ತನಿಖೆ ಮಾಡುವುದಾಗಿ ಸೂಚಿಸಿದರು

ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯವಾಗುವಂತೆ ಪ್ರತ್ಯೇಕವಾದ ಬ್ಯಾಂಕಿಂಗ್ ಸೌಲಭ್ಯವನ್ನು ಕಲ್ಪಿಸುವುದಾಗಿಯೂ ಅವರು ನುಡಿದರು

ನಗರದಲ್ಲಿ ಮಾದರಿ ಚುನಾವಣೆ

ಮೈಸೂರು ೯

ಇಂದು ಮೈಸೂರು ನಗರ ಕ್ಷೇತ್ರದಿಂದ ನಡೆದ ಮಾದರಿ ಚುನಾವಣೆಯಲ್ಲಿ ವಿಧಾನ ಸಭೆಗೆ ೧೯೬ ಮಂದಿಯೂ ಮತ್ತು ಲೋಕಸಭೆಗೆ ಅಷ್ಟೇ ಮಂದಿಯೂ ಮತದಾನ ಮಾಡಿದರು ಮತದಾನವು ಬೆಳಿಗ್ಗೆ ೯ರಿಂದ ೨ ಘಂಟೆ ವರೆಗೆ ನಗರದ ಲಕ್ಷ್ಮೀಪುರದ ಮಾಧ್ಯಮಿಕ ಶಾಲೆಯಲ್ಲಿ ನಡೆಯಿತು ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಾಲ್ಕು ಜನರಲ್ಲಿ ಶ್ರೀವತ್ಸ ಪುಷ್ಪವಲ್ಲಿ ಎಂಬುವರಿಗೆ ಕುದುರೆ, ಇ ಲೋಮರ್ ಎಂಬುವರಿಗೆ [illegible] ಚೆಟ್ಟಿಯ್ಯ ಎಂಬಾತನಿಗೆ ಜಿಂಕೆ ಮತ್ತು ಅನಂತರಾಮಯ್ಯ ಎಂಬಾತನಿಗೆ ವಿಮಾನದ ಚಿನ್ಹೆಗಳನ್ನು ಕೊಡಲಾಗಿತ್ತು ಮತದಾನದ ಪೆಟ್ಟಿಗೆಯನ್ನು ಒಡೆಯಲು ಸಾಧ್ಯವಾಗದ ರೀತಿ ಬಂದೋಬಸ್ತು ಮಾಡಿರುವ ನೂತನ ವಿಧಾನವನ್ನು [illegible]ಸಭಾ ಕಮೀಷನರರು ಪ್ರದರ್ಶಿಸಿ ತೋರಿಸಿದರು

ಮೈಸೂರಿನ ನೂತನ ಡಿ ಐ ಜಿ ಯವರು

ಬೆಂಗಳೂರು ಪೋಲೀಸ ಅಧಿಕಾರಿಯಾದ ಶ್ರೀ ಎಂ ಪಿ ದಿಲ್ [illegible]ಲಿಂಯವರನ್ನು ಮೈಸೂರು ವಿಭಾಗದ ಡಿ ಐ ಜಿ ಯವರನ್ನಾಗಿ ನೇಮಿಸಲಾಗಿದೆ ಶ್ರೀ ಮುತ್ತೋಜಿರಾವ್ ಸಿಂಧ್ಯರವರ ಬೆಂಗಳೂರಿಗೆ ಹೋದಾಗಿನಿಂದಲೂ ಆ ಸ್ಥಾನಕ್ಕೆ ಯಾರನ್ನೂ ನೇಮಿಸಿರಲಿಲ್ಲ

೪೦ ವರ್ಷದ ಯೋಗಿಯಿಂದ ೪ ದಿನಗಳ ಸಜೀವ ಸಮಾಧಿ

ಗುಂಟೂರಿನ ಯೋಗಾನಂದಸ್ವಾಮಿ ಎಂಬ ೪೦ ವರ್ಷ ವಯಸ್ಸಿನ ಯತಿಯೊಬ್ಬರು ಮೊನ್ನೆ ಬೆಳಿಗ್ಗೆ ೬ [illegible] ಗಂಟೆಯಿಂದ ೯೬ ಗಂಟೆಗಳ ಕಾಲದ ಸಜೀವ ಸಮಾಧಿಗಾಗಿ ಒಂದು ಕುಳಿಯನ್ನು ಪ್ರವೇಶಿಸಿದರೆಂದು ವರದಿಯಾಗಿದೆ ಸಮಾಧಿಯನ್ನು ಹೊಗುವ ಮುನ್ನ ಅವರು ಆತ್ಮಶುದ್ಧಿಗಾಗಿ ೪೦ ದಿನಗಳ ಪರ್ಯಂತ ಸ್ನಾನ ಪಾಠ ಮೌನ ಮತ್ತು ನಿರಶನವ್ರತವನ್ನು ಕೈಗೊಂಡು ಮುಗಿಸಿದ್ದರು ಮೊನ್ನೆ ಬೆಳಗಿನ ಜಾವ ಯತಿಯು ದೇವರ ಧ್ಯಾನ ಮಾಡಿ, ೨೦ ಘನ ಅಡಿ ಆಳದ ಕುಳಿಯ ಪ್ರದಕ್ಷಿಣೆ ಮಾಡಿ ಅದನ್ನು ಪ್ರವೇಶಿಸಿ ವ್ಯಾಘ್ರಾಸನದ ಮೇಲೆ ಕುಳಿತರು ಅಲ್ಲಿ ನೆರೆದ್ದ ಸಹಸ್ರಾರು ಜನರ ಪೈಕಿ ಹಲವರು ಧೂಪ ದೀಪಾರ್ತಿಗಳನ್ನು ಬೆಳಗಿ, ಪ್ರಾರ್ಥನೆಯನ್ನು ನಡೆಸಿದನಂತರ ಹಳ್ಳದ ಮೇಲೆ ಹಲಗೆಯನ್ನಿಟ್ಟು ಮಣ್ಣಿನಿಂದ ಮುಚ್ಚಲಾಯಿತು

ಸ್ವಾಮಿ ಯೋಗಾನಂದರವರು ನಾಲ್ಕು ವರ್ಷಗಳ ಹಿಂದೆ ೧೨೦ ಘಂಟೆಗಳ ಕಾಲ ಸಜೀವ ಸಮಾಧಿಯನ್ನು ಯಶಸ್ವಿಯಾಗಿ ಪೂರೈಸಿದ್ದರೆಂದೂ, ಇತ್ತೀಚಿಗೆ ಕೈಗೊಂಡಿದ್ದ ಉಪವಾಸದ ಪರಿಣಾಮವಾಗಿ ಅವರು ಶಕ್ತಿ ಕುಂದದೆ ಹಸನ್ಮುಖಿಯಾಗಿದ್ದರೆಂದೂ ಹೇಳಲಾಗಿದೆ

ಪುನಃ ನೌಕರರ ವೇತನದ ಪುನರ್ವಿಮರ್ಶೆ ?

ಬೆಂಗಳೂರು ೯

ಕಳೆದ ೧ನೇ ತಾರೀಖು ಸರ್ಕಾರದವರು ಪ್ರಕಟಿಸಿದ ನೌಕರರ ವೇತನದ ಪುನರ್ವಿಮರ್ಶಿತ ಆಜ್ಞೆಯ ಬಗ್ಗೆ ಹಲವು ವರ್ಗದವರಿಗೆ ಅತೃಪ್ತಿಯಿರುವುದನ್ನು ಗಮನಿಸಿ ಸರ್ಕಾರದವರು ಮತ್ತೆ ಅದನ್ನು ಪರಿಶೀಲಿಸುವರೆಂದೂ, ಹಳೇ ಮೈಸೂರು ನೌಕರರ ಪೈಕಿ ಯಾವ ಸೌಲಭ್ಯವೂ ಈಗ ದೊರಕದಿರುವವರ ಸಂಬಳದ ವಿಚಾರವನ್ನು ಮತ್ತೆ ಪರಿಶೀಲಿಸಲಾಗುವುದೆಂದೂ ಗೊತ್ತಾಗಿದೆ ಹಳೇ ಮೈಸೂರಿನ ಎಲ್ಲ ನೌಕರರಿಗೂ ಸಂಬಳ ಹೆಚ್ಚಿಸಬೇಕೆಂಬುದೇ ಸರ್ಕಾರದ ಉದ್ದಿಷ್ಟವೆಂದು ಹೇಳಲಾಗಿದೆ ಈ ವಾರಾಂತ್ಯದಲ್ಲಿ ಕಳೆದ ೧ ನೇ ತಾರೀಕಿನ ಆಜ್ಞೆಯನ್ನು ವಿಮರ್ಶಿಸಲಾಗುವುದು

ಯೆಮೆನ್ ಧಾಳಿಯಲ್ಲಿ ಬ್ರಿಟಿಷರ ಟ್ಯಾಂಕು ಮತ್ತು ವಿಮಾನ ನಾಶ

ಯೆಮೆನ್ ಮೇಲೆ ಆಕ್ರಮಣ ಧಾಳಿಯಲ್ಲಿ ಬ್ರಿಟಿಷರ ೧೮ ಟ್ಯಾಂಕುಗಳು ಮತ್ತು ೩ ಬಾಂಬರ್ ವಿಮಾನಗಳು ನಾಶವಾದುವೆಂದೂ ೧೭೩ ಮಂದಿ ಯೆಮೆನ್ ಯೋಧರು ಮೃತಪಟ್ಟಿರುವುದಾಗಿಯೂ ಪಶ್ಚಿಮ ಜರ್ಮನಿಯಲ್ಲಿರುವ ಯೆಮೆನ್ ರಾಯಭಾರಿ ಕಛೇರಿಯು ತಿಳಿಸಿದೆ ಈ ಆಕ್ರಮಣದ ವಿಚಾರವನ್ನು ವಿಶ್ವ ಸಂಸ್ಥೆಯಲ್ಲಿ ಯೆಮೆನ್ ಪ್ರತಿನಿಧಿಯು ತರಲಿರುವರು ಅರಬ್ ರಾಷ್ಟ್ರಗಳು ಅವಕ್ಕೆ ಬೆಂಬಲ ನೀಡುವುವು ತನ್ನ ಆಶ್ರಿತ ಸಂಸ್ಥಾನವಾದ ಏಡನ್ನಿನೊಳಗಿರುವ ಹಲವು ಪ್ರದೇಶಗಳನ್ನು ಯೆಮೆನ್ನು ಆಕ್ರಮಿಸಿಕೊಂಡಿರುವುದಾಗಿ ಬ್ರಿಟಿಷರು ತಿಳಿಸಿ ಈ ಬಗ್ಗೆ ಪ್ರತಿಭಟಿಸಿರುತ್ತಾರೆ

ಫಿಲೋಮಿನಾ ಕಾಲೇಜು ಉಪಾಧ್ಯಾಯರುಗಳ ಮುಷ್ಕರ

ಮೈಸೂರು ೯

ನೆನ್ನೆ ಆರಂಭವಾದ ಸೇಂಟ್ ಫಿಲೋಮಿನಾ ಕಾಲೇಜು ಉಪಾಧ್ಯಾಯರುಗಳ ಮುಷ್ಕರವು ಇಂದೂ ಮುಂದುವರಿಯಿತು ಕಾಲೇಜು ತರಗತಿಗಳಿಗೆ ಈ ದಿನ ಹೆಚ್ಚು ಹುಡುಗರು ಹೋಗಲಿಲ್ಲವೆಂದು ಗೊತ್ತಾಗಿದೆ ಬೆಳಿಗ್ಗೆ ತರಗತಿಗಳು ನಡೆದುವು

ನೆನ್ನೆ ಮುಷ್ಕರನಿರತ ಉಪಾಧ್ಯಾಯರ ಪ್ರತಿನಿಧಿಗಳು ವಿಶ್ವವಿದ್ಯಾಲಯದ ರಿಜಿಸ್ಟ್ರಾರರನ್ನು ಭೇಟಿ ಮಾಡಿದ್ದರು ಈ ಭೇಟಿಯು ಯಾವ ಪರಿಣಾಮವೂ ಆಗಿಲ್ಲವೆಂದು ಹೇಳಲಾಗಿದೆ ನೆನ್ನೆ ಕೆಲಸಕ್ಕೆ ಹಾಜರಾದ ಉಪಾಧ್ಯಾಯರ ಸಂಖ್ಯೆಯು ೧೫ ಎಂದು ತಿಳಿದುಬಂದಿದೆ

ಡಿ ಸುಬ್ಬಯ್ಯ ರಸ್ತೆಯಲ್ಲಿ ಕಳ್ಳತನಗಳು

ನಗರದ ಡಿ ಸುಬ್ಬಯ್ಯ ರಸ್ತೆಯಲ್ಲಿ ದಿನೇ ದಿನೇ ಕಳ್ಳತನಗಳು ಹೆಚ್ಚುತ್ತಿವೆ ನೆನ್ನೆ ರಾತ್ರಿ ಸಾಧ್ವಿ ಪತ್ರಿಕಾಲಯದಲ್ಲಿ ಸುಮಾರು ೧೦೦ ರೂ ಬೆಲೆ ಬಾಳುವ ಒಂದು ದೊಡ್ಡ ಹಂಡೆ ಮತ್ತು ಒಂದು [illegible] ಕಳುವಾಗಿವೆ ಪಕ್ಕದ ಮನೆಯಲ್ಲಿ ಮೊನ್ನೆ ಹಲವು ಪಾತ್ರೆ ಪದಾರ್ಥಗಳು ಕಳುವಾಗಿವೆಯಲ್ಲದೆ ನೆನ್ನೆಯೂ ಕಳ್ಳತನದ ಪ್ರಯತ್ನ ನಡೆದಿದೆ ಅದೇ ರಸ್ತೆಯಲ್ಲಿರುವ ಪುರಸಭಾ ಸದಸ್ಯ ಶ್ರೀ ಸಿ ಎಸ್. ನಾರಾಯಣರಾವ್ ಮತ್ತು ಅವರ ಅಕ್ಕಪಕ್ಕದ ಎರಡು ಮೂರು ಮನೆಗಳಲ್ಲಿ ಕಳೆದ ಎರಡು ರಾತ್ರಿಗಳಲ್ಲಿ ಹಲವಾರು ಸಣ್ಣಪುಟ್ಟ ಸಾಮಾನುಗಳ ಅಪಹಾರವಾಗಿದೆಯೆಂದೂ ಗೊತ್ತಾಗಿದೆ ಲಕ್ಷ್ಮೀಪುರದ ಪೋಲೀಸರು ತನಿಖೆ ನಡೆಸುತ್ತಿದ್ದಾರೆ

ಕರ್ನಾಟಕದ ಜಮೀನ್ದಾರರಿಂದ ಗೇಣಿದಾರರಿಗೆ ಕ್ವಿಟ್ ನೋಟೀಸು

ಬೊಂಬಾಯಿ ಗೇಣಿ ಶಾಸನದ ಬಗ್ಗೆ ಚರ್ಚೆಗಾಗಿ ದೆಹಲಿಗೆ ರೆವಿನ್ಯೂ ಮಂತ್ರಿ

ಸ್ವಂ ಸು ಪ್ರೋ] ಬೆಂಗಳೂರು ೯

ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ ಪಾಟೀಲರು ದೆಹಲಿಗೆ ತೆರಳಿರುತ್ತಾರೆ ಅವರು ಕೇಂದ್ರ ಪ್ಲಾನಿಂಗ್ ಕಮೀಷನ್ನಿನವರೊಡನೆ ಬೊಂಬಾಯಿ ೧೯ ಗೇಣಿ ಶಾಸನದ ವಿಚಾರವಾಗಿ ಚರ್ಚಿಸಲಿರುವರು ಈ ಶಾಸನವು ಬರುವ ಮಾರ್ಚಿ ಅಖೈರಿಗೆ ಜಾರಿಗೆ ಬರುವುದು ಉಳುವವನಿಗೇ ಭೂಮಿ ಯೆಂಬುದೇ ಶಾಸನದ ಧ್ಯೇಯ

ಅಲ್ಲಿನ ೧೨೦ ಸಾವಿರ ಜಮೀನುದಾರರು ತಮ್ಮ ಗೇಣಿದಾರರಿಗೆ ಕ್ವಿಟ್ ನೋಟೀಸನ್ನು ಕೊಟ್ಟಿರುತ್ತಾರೆ ಈ ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ರೆವಿನ್ಯೂ ಸಚಿವರು ದೆಹಲಿಗೆ ಹೋಗಿರುವರು ಶಾಸನದ ಅವಧಿಯನ್ನು ಇನ್ನೂ ಹೆಚ್ಚಿಸುವ ಬಗ್ಗೆ ಅವರು ದೆಹಲಿಯಲ್ಲಿ ಸಮಾಲೋಚನೆ ನಡೆಸುವರು

ಅಂತರ ಸಂಸ್ಥಾನ ವಿಸ್ತರಣಾ ಯೋಜನೆ ಗೋಷ್ಠಿ

ಅಂತರ ಸಂಸ್ಥಾನ ಸಾಮೂಹಿಕ ಯೋಜನೆ, ಮತ್ತು ವಿಸ್ತರಣ ಯೋಜನೆ ಅಧಿಕಾರಿಗಳು ಮತ್ತು ಕಲೆಕ್ಟರುಗಳ ಸಭೆಯು ಈ ದಿನ ಇಲ್ಲಿ ಸೇರಿತ್ತು ಸುಮಾರು ೧೪೦ ಮಂದಿ ಭಾಗವಹಿಸಿದ್ದರು ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಸ್ ರುದ್ರಪ್ಪನವರು ಆರಂಭ ಭಾಷಣ ಮಾಡಿ ದೇಶದಲ್ಲಿ ಬಡತನದ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ ೭ ೧೫ ಎಂ. ಜಾನಕಿ ದೇವರ ನಾಮ ೭ ೩೦ ಮತ್ತು ೮-೧೫ ಪಿ. ಸತ್ಯವತಿ—ಕಾವ್ಯ ವಾಚನ ಮಧ್ಯಾಹ್ನ ೧೨ ಎಂ ಜಾನಕಿ-ಸಂಗೀತ ೧-೩೦ ಹೆಚ್ ಎ. ರಾಮರಾವ್ ಪಿಟೀಲು ೧ ಹಿಂದ್ವಾಲ್ ಚನ್ನಬಸಪ್ಪ-ಸಂಗೀತ ೧-೫೦ ವೀಣೆ ೨ ೧೫ ಗಾಯನ ಸಂಜೆ ೫-೩೦ ಎಂ ಪಿ ನಾಗಮುತ್ತು-ನಾಗಸ್ವರ ೬ ೫ ವಿರಾಮ ಸಂಗೀತ ೬ ೨೦ ಜಾನಪದ ಗೀತೆ ೭ ೩೦ ತಾಳ ವಾದ್ಯ ಕಛೇರಿ ೮ ಹೆಚ್ ಎ ರಾಮರಾವ್-ಪಿಟೀಲು ೮ ೩೦ ನಿಮ್ಮ ಮೆಚ್ಚಿನ ಗೀತೆಗಳು ೯ ೧೫ ಇಂಗ್ಲಿಷ್ ಭಾಷಣ ೯ ೩೦ ರಾಷ್ಟ್ರೀಯ ಕಾರ್ಯಕ್ರಮ ನಾಟಕ

○ ಬಿಹಾರಿನ ಮಾಧ್ಯಮಿಕ ಶಾಲಾ ಉಪಾಧ್ಯಾಯರುಗಳ ಹಲವಾರು ಬೇಡಿಕೆಗಳನ್ನು ಬರುವ ತಿಂಗಳು ೭ರೊಳಗೆ ಸರ್ಕಾರದವರು ಸಲ್ಲಿಸದಿದ್ದರೆ ಅಂದಿನಿಂದ ಆ ಪ್ರಾಂತದ ೧,೦೦೦ ಮಾಧ್ಯಮಿಕ ಶಾಲೆಗಳ ೧೨ ೦೦೦ ಉಪಾಧ್ಯಾಯರು ಮುಷ್ಕರ ಹೂಡುವುದಾಗಿ ಅವರುಗಳ ಸಂಘದ ಅಧ್ಯಕ್ಷರ ತಿಳಿಸಿರುತ್ತಾರೆ

ರಾಷ್ಟ್ರಾಧ್ಯಕ್ಷರಿಗೆ ಪ್ರಾಥಮಿಕ ಶಾಲಾ ಉಪಾಧ್ಯಾಯರ ಮನವಿ

ಮೈಸೂರು ಸಂಸ್ಥಾನ ಶಾಖಾ ಸಭೆಯ ನಿರ್ಧಾರ

ಬೆಂಗಳೂರು ೮

ಅಖಿಲ ಭಾರತ ಪ್ರಾಥಮಿಕ ಶಾಲಾ ಉಪಾಧ್ಯಾಯರ ಮೈಸೂರು ಶಾಖೆಯವರು ಪ್ರಾಥಮಿಕ ಶಾಲಾ ಉಪಾಧ್ಯಾಯರ ಪರಿಸ್ಥಿತಿ ಮತ್ತು ಅವರ ಗಳ [illegible]ನ್ನು ಪರಿಶೀಲಿಸಿ [illegible] ರಾಷ್ಟ್ರಾಧ್ಯಕ್ಷರಿಗೆ ಮನವಿಯೊಂದನ್ನು ಸಲ್ಲಿಸಲು ಈ ಶಾಖೆಯವರು ನೆನ್ನೆ ನಡೆ[illegible] ನೇ ವಾರ್ಷಿಕ ಪ್ರಣಾಳಿಕೆ ದಿನಾಚರಣೆಯ [illegible] ಮನವಿ ಪತ್ರವೊಂದನ್ನು ಸಿದ್ಧಗೊಳಿಸಲಾಯಿತು

ಬಲವಂತದ ಪಾನ ನಿರೋಧಕ್ಕೆ ನೆಹರೂ ವಿರೋಧ

ಇಂದೂರು ಕಾಂಗ್ರೆಸ್ ಅಧಿವೇಶನದಲ್ಲಿ ನೆಹರೂರವರು ಮಾತನಾಡಿ ಈ ಕೂಡಲೇ ಸಾರ್ವತ್ರಿಕವಾಗಿ ಪಾನ ನಿರೋಧವನ್ನು ಜಾರಿಗೆ ತರುವುದು ದುಸ್ತರವೆಂದು ತಿಳಿಸಿರುತ್ತಾರೆ ಒಂದೊಂದು ಪ್ರಾಂತದಲ್ಲೂ ಒಂದೊಂದು ರೀತಿಯಲ್ಲಿ ಪರಿಸ್ಥಿತಿಯು ಇರುವುದರಿಂದಲೂ, ಪಾನ ನಿರೋಧವನ್ನು ಬಲವಂತದಿಂದ ಜಾರಿ ಮಾಡುವುದು ತರವಲ್ಲವೆಂದೂ ಅವರು ಹೇಳಿರುವರು

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸಗಳ ಅಂಗವಾಗಿ ನಾಳೆಯಿಂದ ೧೧ನೇ ತಾರೀಕಿನವರೆಗೆ ನಿತ್ಯವೂ ಸಂಜೆ ೬॥ ಗಂಟೆಗೆ ಶ್ರೀ ಎಸ್ ವಿ ರಂಗಣ್ಣನವರಿಂದ ಟ್ರಾಜಿಡಿ ಎಂಬ ಪಾಶ್ಚಾತ್ಯ ಗಂಭೀರ ನಾಟಕ ನಾಟಕ ಕರ್ತೃಗಳ ರಚನೋದ್ದೇಶದಂತೆ ಎಂಬ ವಿಚಾರವಾಗಿ ಉಪನ್ಯಾಸಗಳನ್ನು ಮಹಾರಾಜಾ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ

೩,೦೦೦ ವಿದ್ಯುಚ್ಛಕ್ತಿ ಮಗ್ಗಗಳ ಸ್ಥಾಪನೆಗೆ ವ್ಯವಸ್ಥೆ

ಮುಂಬಯಿ ಕೇರಳ ರಾಜಸ್ಥಾನ, ಬಿಹಾರ್ ಮತ್ತು ಮಧ್ಯ ಪ್ರದೇಶಗಳಲ್ಲಿ ೩,೦೦೦ ವಿದ್ಯುಚ್ಛಕ್ತಿ ಮಗ್ಗಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಮಂಜೂರಾತಿ ಕೊಟ್ಟಿರುವರು ಒಟ್ಟು ೩೫,೦೦೦ ವಿದ್ಯುಚ್ಛಕ್ತಿ ಮಗ್ಗಗಳ ಸ್ಥಾಪನೆಯ ಯೋಜನೆಯ ಅಂಗವಾಗಿ ಇದನ್ನು ಕೈಗೊಳ್ಳಲಾಗಿದೆ. ದ್ವಿತೀಯ ಯೋಜನೆಯಲ್ಲಿ ೧೭೦ ಕೋಟಿ ಗಜ ಹೆಚ್ಚು ಬಟ್ಟೆಯ ಉತ್ಪತ್ತಿ ಅಂಗವಾಗಿ, ಕೈ ಮಗ್ಗಗಳಿಂದ ೩೦ ಕೋಟಿ ಗಜ ಬಟ್ಟೆಯನ್ನು ತಯಾರಿಸಲಾಗುವುದು

"ಭಕ್ತ ಶ್ರೀ ಗೋವಿಂದದಾಸರು"

ಮದರಾಸಿನ ದಾಸಪ್ರಕಾಶ ಹೊಟೇಲಿನ ಮಾಲೀಕರಾದ ಶ್ರೀ ಕೆ ಸೀತಾರಾಮರಾಯರ ಪಿತೃವರ್ಯರಾದ ದಿವಂಗತ ಭಕ್ತ ಶ್ರೀ ಗೋವಿಂದದಾಸರ ಭಾವಚಿತ್ರದ ಅನಾವರಣೋತ್ಸವವನ್ನು ಈಗ್ಗೆ ಸ್ವಲ್ಪ ದಿನಗಳ ಹಿಂದೆ ಶ್ರೀಮನ್ಮಹಾರಾಜರು ನೆರವೇರಿಸಿದ ಸಂದರ್ಭದಲ್ಲಿ ಪ್ರಕಟವಾದ ಶ್ರೀ ದಾಸರ ಜೀವನವನ್ನು ಕುರಿತು ಅವರ ಮಿತ್ರ ಪಂಡಿತ ರಾಘವೇಂದ್ರ ಬಲ್ಲಾಳರಿಂದ ರಚಿತವಾದ ಮೇಲ್ಕಂಡ ಶಿರೋನಾಮೆಯ ಒಂದು ಕಿರು ಗ್ರಂಥವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ ಶ್ರೀ ದಾಸರ ಧರ್ಮಪರಾಯಣತೆ ಅಮೋಘ ದೈವಭಕ್ತಿಗಳನ್ನು ಈ ಕೃತಿಯಲ್ಲಿ ರಸವತ್ತಾಗಿ ನಿರೂಪಿಸಲಾಗಿದೆ

SRI GAYATHRI
TALKIES
From 9-1-57 For 2 days
M G M s Powerful Drama
VALLEY OF THE KINGS
(In Technicolor)
Starring Robert Taylor
and [illegible] Parker
NEXT CHANGE
GENTLEMEN MARRY BRUNETTES

[illegible] Printed and Published
R Nagarajan at Sadhvi
Press, D Subbiah Road, Mysore

ನಂಜನಗೂಡಿಗೆ ಗ್ರಾಮ ಕೈಗಾರಿಕಾ ಸಚಿವರ ಭೇಟಿ

ನಂಜನಗೂಡು ೭

ಸಂಸ್ಥಾನದ ಪಾನ ನಿರೋಧ ಮತ್ತು ಗ್ರಾಮ ಕೈಗಾರಿಕಾ ಸಚಿವರಾದ ಶ್ರೀ ಜಗನ್ನಾಥರಾವ್ ಚಂಡರ್ಕಿಯವರು ಕೇಂದ್ರ ಸರ್ಕಾರದ ಸಾಮೂಹಿಕ ಅಭಿವೃದ್ಧಿ ಯೋಜನೆ ಇಲಾಖಾ ಕಾರ್ಯದರ್ಶಿ ಜಿ ಎಫ್. ಮನ್ನಾಡಿ ಮತ್ತು ಜಿಲ್ಲಾಧಿಕಾರಿ ಶ್ರೀ ಡಿ ಆರ್ ಚನ್ನರುದ್ರಯ್ಯನವರೊಡನೆ ಇಲ್ಲಿಗೆ ಭೇಟಿಯಿತ್ತರು ಅವರನ್ನು ಪೌರಸಭಾಧ್ಯಕ್ಷ ಶ್ರೀ ಕೆ ವೆಂಕಟಸುಬ್ಬಯ್ಯರವರು ಭೇಟಿ ಮಾಡಿ, ಟವನ್ನಿನಲ್ಲಿ ಒಂದು ಹುರಿ ಕಾರ್ಖಾನೆಯನ್ನು ಏರ್ಪಡಿಸಬೇಕೆಂದು ಮನವಿ ಮಾಡಿಕೊಂಡರು ಮುಚ್ಚಲಾಗಿರುವ ಕಾಗದದ ಕಾರ್ಖಾನೆಯನ್ನು ಸರ್ಕಾರದವರು ನಡೆಸಬೇಕೆಂದೂ ಅವರು ಕೋರಿದರು ಪರಿಹಾರ ಕಾರ್ಯದ ಅಂಗವಾಗಿ ಕೇಂದ್ರದಿಂದ ಬಂದಿರುವ ೧,೦೦೦ ಪಲ್ಲ ಅಕ್ಕಿಯನ್ನು ೩ ಸೇರಿನಂತೆ ಬಿಕರಿ ಮಾಡಿಸುವಂತೆಯೂ ಅವರು ಅರಿಕೆ ಮಾಡಿದರು ಬದನವಾಳಿಗೆ ತೆರಳಿ ಅಲ್ಲಿನ ಖಾದಿ ಕೇಂದ್ರಕ್ಕೆ ಭೇಟಿಯಿತ್ತರು ಅಲ್ಲಿರುವ ಚರಖಗಳ ಬದಲು ಹೆಚ್ಚುಹೆಚ್ಚಾಗಿ ಅಂಬರ್ ಚರಖಗಳಿಂದ ಕೆಲಸ ಮಾಡಿಸುವಂತೆ ಅವರು ಸೂಚಿಸಿದರು ಸಚಿವರು ಅನಂತರ ಗುಂಡ್ಲುಪೇಟೆಗೆ ಹೋಗಿ ಅಲ್ಲಿನ ರಾಷ್ಟ್ರೀಯ ವಿಸ್ತರಣಾ ಕ್ಷೇತ್ರಕ್ಕೆ ಭೇಟಿಯಿತ್ತರು

ನ್ಯಾಯಾಧೀಶರ ಮೇಲೆ ಪಾದರಕ್ಷಾ ಪ್ರಯೋಗಕ್ಕಾಗಿ ಸಜಾ

ಕಲ್ಕತ್ತೆಯ ನ್ಯಾಯಾಧೀಶರೊಬ್ಬರ ಮೇಲೆ ಸಾಧನಚಂದ ಹಲಧರ ಎಂಬ ಆಪಾದಿತನು ಪಾದರಕ್ಷಾ ಪ್ರಯೋಗ ಮಾಡಿದುದಕ್ಕಾಗಿ ಅವನಿಗೆ ೬ ತಿಂಗಳ ಕಠಿಣ ಸಜಾ ವಿಧಿಸಲಾಗಿದೆ ತನ್ನ ಮೇಲಿನ ಮೊಕದ್ದಮೆಯು ನಿಧಾನವಾಗುತ್ತಿರುವುದಕ್ಕಾಗಿ ಅವನು ಸಿಟ್ಟುಗೊಂಡು ಆ ದಿನವೇ ಮುಗಿಸುವಂತೆ ಒತ್ತಾಯ ಮಾಡಲು ನ್ಯಾಯಾಧೀಶರು ಅವನು ಕೂಗಾಡದಂತೆ ಸೂಚಿಸಿದಾಗ ಅವನು ಪಾದರಕ್ಷಾ ಪ್ರಯೋಗ ಮಾಡಿದನು

ರಷ್ಯಾ ನಿಯೋಗದವರಿಗೆ ಮಹಾರಾಜರ ಭಾವಚಿತ್ರದ ಅರ್ಪಣೆ

ಶಿವಮೊಗ್ಗ ಜಿಲ್ಲೆಯ ಕೂಡಲಿಯ ಶ್ರೀ ಕೆ ಎಂ ಅನಂತಯ್ಯನವರು ಬರೆದಿದ್ದ ಶ್ರೀಮನ್ಮಹಾರಾಜರ ಭಾವಚಿತ್ರವನ್ನು ಮೊನ್ನೆ ನಗರಕ್ಕೆ ಆಗಮಿಸಿದ್ದ ರಷ್ಯಾ ಸಾಂಸ್ಕೃತಿಕ ನಿಯೋಗದವರಿಗೆ ಶ್ರೀ ಹೆಚ್. ಸಂಪತ್ಕುಮಾರರವರು ಒಪ್ಪಿಸಿದರು ಅದಕ್ಕೆ ಪ್ರತಿಯಾಗಿ ನಿಯೋಗದವರು ಅವರಿಗೆ ೩೦ ರೂ. ಬಹುಮಾನವಿತ್ತರು

ಜನಸಂಘದವರ ಉಮೇದುವಾರಿಕೆ

ಈ ಸಾರಿಯ ಮಹಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಿಂದ ವಿಧಾನ ಮತ್ತು ಲೋಕಸಭೆಗಳಿಗೆ ಜನಸಂಘದ ಪರವಾಗಿ ನಿಲ್ಲುವವರಿಂದ ಉಮೇದುವಾರಿಕೆ ಅರ್ಜಿಗಳನ್ನು ಈ ಮಾಹೆ ೧೬ರಂದು ನಡೆಯುವ ಜಿಲ್ಲಾ ಚುನಾವಣಾ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುವುದು

ಯಾಂತ್ರಿಕ ಜೀವನವನ್ನು ಅನುಸರಿಸದಂತೆ ನೆಹರೂ ಸಲಹೆ

ವಿದೇಶಗಳಿಂದ ಹಿಂದಿರುಗಿದ ಹಲವು ಭಾರತೀಯರು ನಮ್ಮ ದೇಶದಲ್ಲಿ ಅಲ್ಲಿನಂತೆ ಸಣ್ಣಪುಟ್ಟ ಕೆಲಸಗಳಿಗೂ ಯಂತ್ರಗಳ ಸಹಾಯವಿಲ್ಲದಿರುವುದಕ್ಕಾಗಿ ಆತಂಕಪಡುತ್ತಾರೆ ಇದಕ್ಕಾಗಿ ನಮ್ಮಲ್ಲಿ ನಿರುದ್ಯೋಗವನ್ನುಂಟುಮಾಡಿ ನಮ್ಮ ಜನಜೀವನವನ್ನು ತಲೆಕೆಳಗು ಮಾಡುವಂತಹ ರೀತಿಯಲ್ಲಿ ಯಂತ್ರೋಪಕರಣಗಳನ್ನು ತಂದು ಅವರನ್ನು ತೃಪ್ತಿಪಡಿಸಲು ನಾನು ಒಪ್ಪುವುದಿಲ್ಲ ಅಮೆರಿಕ ಮತ್ತು ಕೆನಡಗಳಲ್ಲಿ ಜೀವನವು ಬಹಳ ಯಾಂತ್ರಿಕವಾಗಿರುವುದರಿಂದ ಅದಕ್ಕೆ ಭಾರತೀಯರು ಮಾರುಹೋಗಬಾರದು—ಎಂಬುದಾಗಿ ಪ್ರಧಾನಿ ನೆಹರೂರವರು ಇತ್ತೀಚೆಗೆ ಕೆನಡಾ ದೇಶದಲ್ಲಿ ಪ್ರವಾಸ ಮಾಡಿದಾಗ ಅಲ್ಲಿನ ಭಾರತೀಯರಿಗೆ ಹಿತೋಕ್ತಿಯನ್ನಿತ್ತರು

ಶುಭಾಶಯ

ಕಾಶಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಮೈಸೂರಿನ ವಿದ್ಯಾರ್ಥಿ ಶ್ರೀ ಟಿ ಸಿ ಶಿವಶಂಕರರವರು ಕಳುಹಿಸಿರುವ ನೂತನ ವರ್ಷದ ಶುಭಾಶಯಕ್ಕಾಗಿ ಕೃತಜ್ಞತೆಯನ್ನು ಸೂಚಿಸುತ್ತೇವೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಭತ್ತ						
ಕೊಯಮುತ್ತೂರು ಸಣ್ಣ	೨೮	೦	೦	೩೧	೬	೦
ರಷ್ನಚೂರಿ	೨೬	೦	೦	೨೯	೨	೦
ಕಡ್ಡಿ	೨೬	೧೪	೦	೨೮	೧೦	೦
ಸೇಲಂ ಸಣ್ಣ	೨೪	೪	೦	೨೮	೧೪	೦
ರಾಗಿ	೩೧	೨	೦	೩೬	೬	೦
ಜೋಳ	೩೨	೨	೦	೩೬	೧೦	೦
ಕಡಲೆಕಾಯಿ	೧೪	೮	೦	೨೫	೪	೦
ಹುಚ್ಚೆಳ್ಳು	೩೬	೦	೦	೪೪	೮	೦
ಹರಳು ಬೀಜ	೪೬	೧೪	೦	೪೮	೬	೦
ಹುರುಳಿ	೨೦	೧೦	೦	೨೬	೮	೦
ಹೆಸರು	೪೮	೦	೦	೫೨	೦	೦
ಹಲಸಂದೆ	೩೫	೧೪	೦	೫೫	೮	೦
ಉದ್ದು	೬೩	೪	೦			
ಧನಿಯ	೨೪	೪	೦	೨೬	೧೦	೦
ಸೆಣಬಿನ ಬೀಜ	೩೬	೦	೦	೪೦	೧೨	೦
ಹುಣಸೇಹಣ್ಣು	೨	೧೧	೦	೬	೬	೦
ಸೀಗೇಕಾಯಿ	೮	೦	೦			
ಮೆಣಸಿನಕಾಯಿ	೧೧	೧೨	೦	೨೩	೦	೦

ಕಪಿಲ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್
ನಂಜನಗೂಡು

ದಿನವೊಂದಕ್ಕೆ ರೂ 2-8 0 ಯಿಂದ ರೂ 3-0-0 ರ ವರೆಗೆ ಮಜೂರಿ ಮೇಲೆ ಅನುಭವವುಳ್ಳ ನೇಯ್ಗೆಯವರು ಬೇಕಾಗಿದ್ದಾರೆ ಎಸ್. ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿರುವ ಹುಡುಗರಿಗೆ ತರಪೇತನ್ನು ಸಹಾ ಕೊಡಲಾಗುವುದು ಕೆಳಗಿನ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳಬಹುದು ಅಥವಾ ಖುದ್ದಾಗಿ ಬಂದು ಕಾಣಬಹುದು

ಕಪಿಲ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್,
ನಂಜನಗೂಡು

ಚಾಮುಂಡೇಶ್ವರಿ ಟಾಕೀಸ್
10-1 57 ರಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿರುವ 4ನೇ ವಾರ
ಗಮನಿಸಿ —ಮ್ಯಾಟಿನಿ 2—40, 1ನೇ ಆಟ 6—20, 2ನೇ ಆಟ 10 ಘಂಟೆಗೆ
★ ಮಾದರಕುಲ ಮಾಣಿಕ್ಯಂ ★
ನಟವರ್ಗ — ಜೆಮಿನಿ ಗಣೇಶ್, ಸಾವಿತ್ರಿ, ನಾಗೇಶ್ವರರಾವ್ ಅಂಜಲಿದೇವಿ, ತಂಗವೇಲು,
ಎಂ ಎನ್ ರಾಜಂ, ರಂಗಾರಾವ್, ಕಣ್ಣಾಂಬ, ಸಾರಂಗಪಾಣಿ, ಫ್ರೆಂಡ್ ರಾಮಸ್ವಾಮಿ
['N EMERALD RELEASE

ಅಸ್ವಾನ್ ಅಣೆಕಟ್ಟು ನಿರ್ಮಾ
ಕ್ರುಪ್ಸ್ ಕಂಪೆನಿ ದ್ರವ್ಯ ಸಹಾ

ನೈಲ್ ನದಿಯ ಮೇಲೆ ಈಜಿಪ್ಟ್ ಸ
ದವರು ಅಸ್ವಾನ್ ಎಂಬಲ್ಲಿ ನಿರ್ಮಿಸಬೇಕೆ
ವ ಭಾರಿ ಅಣೆಕಟ್ಟಿನ ನಿರ್ಮಾಣಕ್ಕೆ ಬೇ
ದ್ರವ್ಯ ಸಹಾಯವನ್ನು ತಾವು ಒದಗಿಸಲು
ವಾಗಿರುವುದಾಗಿ ಪಶ್ಚಿಮ ಜರ್ಮನಿಯ ಪ್ರ
ದ್ಧ ಕ್ರುಪ್ಸ್ ಕಂಪೆನಿಯವರು ತಿಳಿಸಿರುತ್ತಾ

ಧ್ವನಿ ವರ್ಧಕದಿಂದ ತೊಂದ

ಚಾಮರಾಜನಗರದ ಹೊಟೇಲೊಂದ
ಕ್ಕವೂ ಬೆಳಗಿನ ಝಾವ ೪॥ ಗಂಟೆಯಿಂ
ತ್ರಿ ೧೧ ರವರೆಗೆ ರೇಡಿಯೋ ಮತ್ತು ಧ್ವನಿ
ಕವನ್ನು ಹಾಕಲಾಗುತ್ತಿದೆ ಇದರಿಂದ
ತುಂಬಾ ತೊಂದರೆಯಾಗಿದೆ ಈ ವಿಚಾ
ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ
ಕೆ ಮಾಡಲಾಗಿದೆ. ಈಗಲಾದರೂ ಈ ಬ
ಮನವಿತ್ತು ಜನರ ತೊಂದರೆಯನ್ನು ನಿವಾ
ಬೇಕು—ಎಂಬುದಾಗಿ ಅಲ್ಲಿನ ನಿವಾಸಿಯೊ
ಪತ್ರ ಬರೆದು ತಿಳಿಸಿದ್ದಾರೆ

ಕ್ಯಾಲೆಂಡರ್ ಸ್ವೀಕಾರ

ನಗರದ ಹಳೇ ಅಗ್ರಹಾರದ ಆಯುರ್ವೇ
ಮಾಲೀಕರಾದ ಶ್ರೀ ವೆಂಕಟರಾಯರೂ ಪ
ಪಂಚಾಚಾರ್ಯ ಪ್ರಭಾ ಪತ್ರಿಕೆಯವರೂ
ಹಿಸಿಕೊಟ್ಟಿರುವ ನೂತನ ವರ್ಷದ ಕ್ಯಾಲೆಂ
ಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

SRI KANYAKAPARAMESWARI
CO-OPERATIVE SOCIETY, LTD,
MYSORE

WANTED

Applications are invited for
post of a Clerk temporarily fo
period of 3 months on a pay
Rs. 30 and D A of Rs 30
month The applicants should h
passed (1) S S. L C. and
Examination in Co operat
training held by the Governm
or the Mysore Co-operative Ins
titute.

Preference will be given to ex
rienced persons

Applications in the form pr
cribed by P S. C. for non gazett
posts should reach this Soc
latest by 15 1 1957.

P. Gopalakrishna S
President

ಗೃಹಕೃತ್ಯದ ನೋಟೀಸಿಗೆ ಜವಾ

ಹೆಗ್ಗಡದೇವನಕೋಟೆ ತಾಲ್ಲೂಕು ಹಂ
ರದ ಹೋಬಳಿ ಕೋಳಗಾಲದಲ್ಲಿರುವ ಮ
ಪ್ಪನವರ ಮಗ ಪುಟ್ಟಯ್ಯನು 1-1-19
ಸಾಧ್ವಿ ಪತ್ರಿಕೆಯ ಸಂಚಿಕೆಯಲ್ಲಿ,
ಕಂಡ ಖುಷ್ಕಿ ಮತ್ತು ತರಿ ಜಮೀನುಗಳ
ತ್ತು ಮೈಸೂರಿನಲ್ಲಿ ಮಧ್ವಾಚಾರ್ ರಸ್ತೆ
ನಾನು ವಾಸ ಮಾಡುತ್ತಿರುವ ಮನೆಯೂ
ಭಕ್ತ ಕುಟುಂಬಕ್ಕೆ ಸೇರಿದುವುಗಳೆಂದೂ,
ಹಕ್ಕು ಇರುತ್ತೆಂದೂ ವಗೈರೆ ಒಂದು ನೋ
ನ್ನು ಫಾಯಿಷ್ ಮಾಡಿರುತ್ತಾನೆ

ಈ ಮೂಲಕ ಪುಟ್ಟಯ್ಯನ ಅಣ್ಣನಾದ,
ಲಿಂಗಪ್ಪನಾದ ನಾನು, ಸಮಸ್ತ ಜನಗ
ತಿಳಿಯಪಡಿಸುವುದೇನೆಂದರೆ :—

ಪುಟ್ಟಯ್ಯನು ಬಯಾನಿಸಿರುವುದೆಲ್ಲಾ
ಸದರಿ ಸ್ವತ್ತುಗಳು ನನ್ನ ಸ್ವಯಾರ್ಜಿತವಾ
ಗಳು ನಾವು ಇಬ್ಬರೂ ಅವಿಭಕ್ತ ಕುಟು
ದವರಲ್ಲ ಸದರಿ ಸ್ವತ್ತುಗಳ ಮೇಲೆ ಪುಟ್ಟ
ನಿಗೆ ಯಾವ ವಿಧವಾದ ಹಕ್ಕುಬಾಧ್ಯತೆಯೂ
ಲ್ಲ ದುರಾಲೋಚನೆಯಿಂದ ಮೇಲ್ಕಂಡ
ಯಾನಿಸಿರುತ್ತಾನೆ ನಾನು ಈ ಬಾಬ್ತು
ವಿದ್ದಲ್ಲಿ ಮುಂದಿನ ಕ್ರಮವನ್ನು ಜರುಗಿಸುವ
ದತ್ತೇನೆ

ಮೈಸೂರು { ಬಸವಲಿ
ತಾ॥ 7 1.57 {

ರಿಜಿಸ್ಟರ್ ನಂ. 792

ಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಾಧ್ವಿ ದಿನ ಪತ್ರಿಕೆಗೆ
ಮ್ಮ ಜಾಹಿರಾತುಗಳನ್ನು
ಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

. ೧೫] SADHVI : THURSDAY 10—1—1957 ಮೈಸೂರು : ಗುರುವಾರ ೧೦—೧—೧೯೫೭ : [ಸಂಚಿಕೆ : ೧೬೬

ಟನ್ನಿನ ಪ್ರಧಾನಿ ಆಂತೋನಿ ಈಡನ್ನರ ರಾಜೀನಾಮೆ

ನರಿ ೨೮ ರಿಂದ ಸಂಸ್ಥಾನದ ಮಹಾ ಚುನಾವಣೆ

ಬೆಂಗಳೂರು ೧೦

ಸ್ಥಾನದಲ್ಲಿ ಮಹಾಚುನಾವಣೆಗಳು ಬರು ಗಳು ೨೮ರಿಂದ ಆರಂಭವಾಗಿ ಮಾರ್ಚಿ ೧೨ ನಡೆಯುವುವೆಂದು ತಿಳಿದುಬಂದಿದೆ ೬ ೮೦೦೦ ಪೋಲಿಂಗ್ ಬೂತುಗಳನ್ನೂ, ,೦೦೦ ಬ್ಯಾಲಟ್ ಪೆಟ್ಟಿಗೆಗಳನ್ನೂ ಏರ್ಪ ಾಗುವುದೆಂದು ಹೇಳಲಾಗಿದೆ ಈ ಸಂಬಂ ಗವರ್ನರರು ಇದೇ ತಿಂಗಳು ೧೯ ನೇ ಕ ಪ್ರಕಟಣೆಯೊಂದನ್ನು ಹೊರಡಿಸಲಿರು

ಚಿನ್ನದ ಗಣಿ ಕಾರ್ಮಿಕರ ಮುಷ್ಕರ ಮುಕ್ತಾಯ

೪೦ಂದ ಚಿನ್ನದ ಗಣಿಗಳ ಪೈಕಿ ಚಾಂಪಿ ರೀಫ್ ಮತ್ತು ಮೈಸೂರು ಗಣಿಗಳ ಮ ದ್ಯುತ್ಶಕ್ತಿ ಶಾಖೆಯ ಒಟ್ಟು ೧೧ ಸಾವಿರ ಕರು ನಡೆಸುತ್ತಿದ್ದ ಮುಷ್ಕರವು ನೆನ್ನೆ ಪ್ರದೇಶಿಕ ಕಾರ್ಮಿಕ ಕಮಿಷನರರ ಯ ಪ್ರಕಾರ ಮುಕ್ತಾಯಗೊಂಡಿತು ನೇ ವರ್ಷದ ಬೋನಸ್ಸಿನ ಬಗ್ಗೆ ಕೈಗಾ ನ್ಯಾಯಮಂಡಲದ ತೀರ್ಪಿನ ಪಾಲನೆಗೆ ಯ ಪಡಿಸಲು ಅವರು ಮುಷ್ಕರ ಹೂಡಿ

ಹರೂರವರ ವಿರುದ್ಧವಾಗಿ ತಪ್ಪೆಯವರ ಸ್ಪರ್ಧೆ

ಕಸಭೆಗೆ ಪ್ರಧಾನಿ ನೆಹರೂರವರು ಸ್ಪ ವ ಅಲಹಾಬಾದ್ ಕ್ಷೇತ್ರದಲ್ಲಿ ನಡೆಯುವ ವಣೆಯಲ್ಲಿ ಅಖಿಲ ಭಾರತ ಹಿಂದೂ ರಾ ದ ಪ್ರಧಾನ ಕಾರ್ಯದರ್ಶಿ ಶ್ರೀ ಎಲ್ ಜಿ. ವರು ಉಮೇದುವಾರರಾಗಿ ನಿಲ್ಲುವರು

ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನ

ಸೂರು ಸಂಸ್ಥಾನದ ಗ್ರಾಮಾಧಿಕಾರಿಗಳ ಳನವು ಈ ತಿಂಗಳು ೧೯ನೇ ತಾರೀಖು ಬೆಂಗಳೂರಿನಲ್ಲಿ ಸೇರುವುದು ಶಾಸನ ಸದಸ್ಯರಾದ ಶ್ರೀ ಕೆ ಪಟ್ಟಾಭಿರಾಮರವ ಧ್ಯಕ್ಷತೆ ವಹಿಸುವರು ಮುಖ್ಯ ಮಂತ್ರಿ ಶ್ರೀ ಂಗಪ್ಪನವರು ಅದರ ಆರಂಭೋತ್ಸವವ ರವೇರಿಸುವಂತೆ ಪ್ರಾರ್ಥಿಸಲಾಗಿದೆ

ದಾರರ ಅಚ್ಚಿನ ಪಟ್ಟಿ ಪ್ರಕಟಣೆ

ಸೂರು ನಗರ ಮತ್ತು ತಾಲ್ಲೂಕಿಗೆ ಸಂ ಟ್ಟಂತೆ ಅಚ್ಚಾದ ಮತದಾರರ ಪಟ್ಟಿಗಳ ತಾಲ್ಲೂಕು ಕಛೇರಿ ಮತ್ತು ಪುರಸಭಾ ಕ ಗಳಲ್ಲಿ ಇಂದು ಪ್ರಕಟಪಡಿಸಲಾಗಿದೆ.

ಕೊಳ್ಳೇಗಾಲ ತಾಲ್ಲೂಕಿಗೂ ಗಡಿ ಸಿಬ್ಬಂದಿ ಶಾಸನದ ವ್ಯಾಪ್ತಿ

ಸ್ಥಾನದ ಅಂಗಡಿ ಮತ್ತು ಸಿಬ್ಬಂದಿ ಶಾ ನ್ನು ಕೊಳ್ಳೇಗಾಲ ತಾಲ್ಲೂಕಿಗೂ ವಿಸ್ತರಿಸಿ ಕಸವನ್ನು ಮೈಸೂರು ವಿಭಾಗದ ಇನ್ಸ್ಪೆ ಅಧಿಕಾರ ವ್ಯಾಪ್ತಿಗೆ ಒಳಪಡಿಸಲಾಗಿದೆ ಸರ್ಕಾರಿ ಪ್ರಕಟಣೆಯೊಂದು ತಿಳಿಯು ದೆ

ಬ್ರಿಟಿಷ್ ಪ್ರಧಾನಿ ಈಡನ್ನರ ರಾಜೀನಾಮೆ

ಸೂಯೆಜ್ ಬಿಕ್ಕಟ್ಟಿನ ಸಂಬಂಧವಾಗಿ ಹತಾಶತನೆಯು ಪ್ರಕರಣ

ಬ್ರಿಟನ್ನಿನ ಪ್ರಧಾನ ಮಂತ್ರಿ ಅಂತೋನಿ ಈಡನ್ನರು ನೆನ್ನೆ ರಾಜೀನಾಮೆಯನ್ನಿತ್ತರು ಸೂಯೆಜ್ ಬಿಕ್ಕಟ್ಟಿನ ವಿಚಾರದಲ್ಲಿ ಹಲವಾರು ವಾರಗಳಲ್ಲಿ ಉಂಟಾಗಿದ್ದ ವಿವಾದದ ಪರಿಣಾಮವಾಗಿ ಅವರು ರಾಜೀನಾಮೆಯೀಯಬೇಕಾಯಿತು ನೆನ್ನೆ ಅವರು ಇದ್ದಕ್ಕಿದ್ದಂತೆಯೇ ತಮ್ಮ ಮಂತ್ರಿಮಂಡಲದ ಸಭೆಯನ್ನು ಕರೆದು ನಂತರ ರಾಣಿಯವರಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದರು

ರಾಣಿಯವರು ಅದನ್ನು ಅಂಗೀಕರಿಸಿದ್ದಾರೆ ಪ್ರಾಯಶಃ ಲಾರ್ಡ್ ಪ್ರಿವಿಸೀಲರಾದ ಆರ್ ಎ ಬಟ್ಲರ್‌ರವರು ಅವರ ಸ್ಥಾನಕ್ಕೆ ಬರುವರೆಂದು ಹೇಳಲಾಗಿದೆ

ಈಡನ್ನರು ಹೇಳಿಕೆಯೊಂದನ್ನಿತ್ತು, ತಾವು ಜಮೈಕಾದಿಂದ ವಾಪಸು ಬಂದಮೇಲೆ ತಮ್ಮ ಕರ್ತವ್ಯದಲ್ಲಿ ತೊಡಗುವ ಶಕ್ತಿ ಇರವುದೆಂಬ ಆಸೆಯು ಈಡೇರಿಲ್ಲವೆಂದೂ, ಆದ್ದರಿಂದ ತಾವು ಪ್ರಧಾನಿಯಾಗಿ ಮುಂದುವರಿಯುವುದು ಸರಿಯಲ್ಲವೆಂದೂ ತಿಳಿಸಿರುತ್ತಾರೆ ಅವರ ವೈದ್ಯರು ಹೊರಡಿಸಿರುವ ಪ್ರಕಟಣೆ ಪ್ರಕಾರ, ಈಡನ್ನರ ದೇಹಸ್ಥಿತಿಯು ಈಗ ಉಲ್ಬಣಗೊಂಡಿರುವುದೆಂದು ಗೊತ್ತಾಗಿದೆ ಈಡನ್ನರ ರಾಜೀನಾಮೆ ಸುದ್ದಿಯು ಅಲ್ಲಿನ ಪ್ರಜೆಗಳನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದೆ

ನಗರಕ್ಕೆ ಗವರ್ನರರು ವಾಪಸು

ಮದ್ರಾಸು, ಕಲ್ಕತ್ತಾ, ಕಾಶಿ, ಅಲಹಾಬಾದು ಮತ್ತು ಬೊಂಬಾಯಿಗಳಲ್ಲಿ ಪ್ರವಾಸ ಮುಗಿಸಿಕೊಂಡು ಗವರ್ನರ್ ಶ್ರೀ ಜಯಚಾಮರಾಜ ಒಡೆಯರರು ಮೊನ್ನೆ ಬೆಂಗಳೂರಿಗೆ ಹಿಂದಿರುಗಿ, ಈ ಮಧ್ಯಾಹ್ನ ನಗರಕ್ಕೆ ಆಗಮಿಸಿದರು

ಐನ್‌ಸ್ಟೈನರವರ ಬಗ್ಗೆ ಉಪನ್ಯಾಸ

ಯುವರಾಜಾ ಕಾಲೇಜು ಪ್ರಿನ್ಸಿಪಾಲರಾದ ಡಾ॥ ಎಲ್ ಸೀಬಯ್ಯನವರು ಶಾರದಾವಿಲಾಸ ಪ್ರೌಢಶಾಲೆಯಲ್ಲಿ ನಾಳೆ ಸಂಜೆ ೫ ೩೦ ಗಂಟೆಗೆ ಪ್ರಸಿದ್ಧ ಭೌತ ಶಾಸ್ತ್ರ ವಿದ್ವಾಂಸ 'ಆಲ್ಬರ್ಟ್ ಐನ್‌ಸ್ಟೈನ್" ಅವರ ಜೀವನ ಸಾಧನೆಗಳನ್ನು ಕುರಿತು ಉಪನ್ಯಾಸ ಮಾಡುವರು ನಗರದ ಎಲ್ಲಾ ಶಾಲೆಗಳ ಎಸ್. ಎಸ್ ಎಲ್. ಸಿ ತರಗತಿ ವಿದ್ಯಾರ್ಥಿಗಳು ಬಂದು ಉಪನ್ಯಾಸದಿಂದ ಪ್ರಯೋಜನ ಪಡೆಯಬೇಕಾಗಿ ಕೋರಿದೆ

ಸರ್ಕಾರದಿಂದಲೇ ಹಿಂದಿ ಪರೀಕ್ಷೆಗಳ ವ್ಯವಸ್ಥೆ

ಸಂಸ್ಕೃತ ಮತ್ತು ಸಂಗೀತ ಪರೀಕ್ಷೆಗಳನ್ನು ನಡೆಸುತ್ತಿರುವಂತೆಯೇ ಹಿಂದಿ ಪರೀಕ್ಷೆಗಳನ್ನೂ ಸರ್ಕಾರದವರೇ ನಡೆಸಬೇಕೆಂದು ವಿದ್ಯಾ ಇಲಾಖಾಧಿಕಾರಿಗಳು ಮಾಡಿರುವ ಶಿಫಾರಸನ್ನು ಸರ್ಕಾರದವರು ತತ್ವಶಃ ಒಪ್ಪಿರುವರು ಪರೀಕ್ಷೆಯ ಶುಲ್ಕದಲ್ಲಿ ವೆಚ್ಚವಾಗಿ ಉಳಿದ ಮೊಬಲಗನ್ನು ಹಿಂದಿ ಶಿಕ್ಷಣ ಸಂಸ್ಥೆಗಳಿಗೆ ಗ್ರಾಂಟಾಗಿ ಒಪ್ಪಿಸಲಾಗುವುದು

ಇತಿಹಾಸದಿಂದ ಪಾಠ ಕಲಿಯಿರಿ

ವಿದ್ಯಾರ್ಥಿಗಳಿಗೆ ಸಚಿವ ಚಂದ್ರಿಕೀಯವರ ಹಿತೋಕ್ತಿ

ಮೈಸೂರು ೧೦

ಸಂಸ್ಥಾನದ ಕಾರ್ಮಿಕ ಸಚಿವರಾದ ಶ್ರೀ ಜಗನ್ನಾಥರಾವ್ ಚಂದ್ರಿಕೀಯವರು ಮೊನ್ನೆ ಇಲ್ಲಿನ ಮಹಾರಾಜಾ ಕಾಲೇಜಿನ ಇತಿಹಾಸ ಸಂಘದ ಆಶ್ರಯದಲ್ಲಿ ಭಾಷಣ ಮಾಡಿ, ವಿದ್ಯಾರ್ಥಿಗಳು ಹಿಂದಿನ ಇತಿಹಾಸದಿಂದ ಪಾಠವನ್ನು ಕಲಿಯಬೇಕೆಂದು ತಿಳಿಸಿದರು ಈಗ ದೇಶದಲ್ಲಿ ಹೊಸ ರೀತಿಯ ಸಮಾಜರಚನೆಯಾಗುತ್ತಿರುವುದೆಂದೂ, ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ಕೆಲಸ ಮಾಡಬೇಕಾಗಿದೆಯೆಂದೂ ಅವರು ಹೇಳಿದರು ನಾಯಕರು ಸಮಸ್ಯೆಗಳನ್ನು ಸೃಷ್ಟಿಸುವುದರಲ್ಲಿಯೇ ತೊಡಗಿರುವರೆಂದೂ, ಅದಕ್ಕೆ ವಿದ್ಯಾರ್ಥಿಗಳು ತಕ್ಕ ಪರಿಹಾರಗಳನ್ನು ಕಂಡುಹಿಡಿಯಬೇಕೆಂದೂ ಅವರು ಹೇಳಿ ಭವಿಷ್ಯದ ಸಮಾಜದ ರಚನೆಗೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಸೂಚಿಸಿದರು

ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾದ ಶ್ರೀ ಎಸ್ ಶ್ರೀಕಂಠಶಾಸ್ತ್ರಿಯವರು ಸ್ವಾಗತ ಭಾಷಣ ಮಾಡಿದರು

ಸಂಸ್ಥಾನಕ್ಕೆಲ್ಲಾ ಒಂದೇ ಕೈಗಾರಿಕಾ ನ್ಯಾಯಮಂಡಲ

ಕೈಗಾರಿಕಾ ವ್ಯಾಜ್ಯಗಳ ತಿದ್ದುಪಡಿ ಶಾಸನದ ಪ್ರಕಾರ ಸರ್ಕಾರದವರು ಸಂಸ್ಥಾನಕ್ಕೆಲ್ಲಾ ಒಂದೇ ಕೈಗಾರಿಕಾ ನ್ಯಾಯಮಂಡಲವನ್ನು ರಚಿಸಲು ನಿರ್ಧರಿಸಿರುತ್ತಾರೆ ಹುಬ್ಬಳ್ಳಿ ಮತ್ತು ಬೆಂಗಳೂರುಗಳಲ್ಲಿ ಒಂದೊಂದು ಕಾರ್ಮಿಕ ಕೋರ್ಟನ್ನು ರಚಿಸಲಾಗುವುದು

ಕೃಷ್ಣ ದೀಕ್ಷಿತರ ನಿಧನ

ಹಳೇ ಅಗ್ರಹಾರದಲ್ಲಿ ವಾಸವಾಗಿದ್ದ ಪುರೋಹಿತ ಶ್ರೀ ಕೃಷ್ಣ ದೀಕ್ಷಿತರು ಹಲವಾರು ದಿನಗಳಿಂದ ಅಸ್ವಸ್ಥರಾಗಿದ್ದು ನೆನ್ನೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಕೋಟೆಯ ನವಗ್ರಹ ಗುಡಿಯಲ್ಲಿ ಅರ್ಚಕರಾಗಿಯೂ ಇದ್ದರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧುಮಿತ್ರರಿಗೆ ಹೃತ್ಪೂರ್ವಕ ಅನುಕಂಪವನ್ನು ಸೂಚಿಸುತ್ತೇವೆ

ವಿಶ್ವಸಂಸ್ಥೆಗೆ ಯೆಮೆನ್ ರಾಜ್ಯದ ದೂರು

ದಕ್ಷಿಣ ಅರೇಬಿಯದ ಯೆಮೆನ್ ರಾಜ್ಯವು ವಿಶ್ವ ಸಂಸ್ಥೆಗೆ ಮನವಿ ಮಾಡಿ, ಬ್ರಿಟಿಷರ ಆಕ್ರಮಣದ ವಿರುದ್ಧವಾಗಿ ಸಹಾಯ ನೀಡುವಂತೆ ಕೋರಿರುತ್ತದೆಂದು ಕೈರೋ ರೇಡಿಯೋವು ತಿಳಿಸಿದೆ ಯೆಮೆನ್ ನಗರಗಳ ಮೇಲೆ ಬ್ರಿಟಿಷರ ವಿಮಾನ ಧಾಳಿಗಳು ಇನ್ನೂ ಆಗುತ್ತಿರುವುವೆಂದೂ, ಬ್ರಿಟನ್ನಿನ ಅಧೀನದಲ್ಲಿರುವ ಏಡನ್ ಪ್ರಜೆಗಳು ಬ್ರಿಟಿಷರ ಅನೇಕ ಟ್ಯಾಂಕುಗಳನ್ನು ನಾಶಪಡಿಸಿರುವುದಾಗಿಯೂ ವರದಿಯಾಗಿದೆ

ಯೆಮೆನ್ನಿನ ಸೈನ್ಯಗಳು ಮತ್ತು ಇತರ ಯೋಧರು ಏಡನ್ನಿನ ಗಡಿಯನ್ನು ಉಲ್ಲಂಘಿಸಿರುತ್ತಾರೆಯಾಗಿಯೂ, ಕಳೆದ ೧೧ ದಿನಗಳಿಂದಲೂ ಏಡನ್ ಗ್ರಾಮಗಳ ಮೇಲೆ ಧಾಳಿ ಮಾಡಲಾಗುತ್ತಿರುವುದೆಂದೂ ಬ್ರಿಟನ್ನಿನ ಅಧಿಕಾರಿಗಳು ತಿಳಿಸಿರುತ್ತಾರೆ

ಫ್ರೆಂಚರು ಅಲ್ಜೀರಿಯದ ಮೇಲೆ ಅಧಿಪತ್ಯವನ್ನು ತ್ಯಜಿಸುವುದಿಲ್ಲ

ಪ್ರಧಾನಿ ಗೈಮೋಲೆಯವರ ಪ್ರತ್ಯುಕ್ತಿ

ಅಲ್ಜೀರಿಯವನ್ನು ಫ್ರಾನ್ಸು ಯಾವ ಕಾಲಕ್ಕೂ ಬಿಟ್ಟುಕೊಡುವುದಿಲ್ಲವೆಂದು ಫ್ರೆಂಚ್ ಪ್ರಧಾನಿ ಗೈಮೋಲೆಯವರು ತಿಳಿಸಿರುತ್ತಾರೆ. ಅಲ್ಲಿ ಸೀಸ್‌ಫೈರ್ ಆದ ಮೂರು ತಿಂಗಳೊಳಗೆ ಸ್ವತಂತ್ರ ಚುನಾವಣೆಗಳನ್ನು ನಡೆಸಲು ಫ್ರೆಂಚ್ ಸರ್ಕಾರವು ಸಿದ್ಧವಾಗಿರುವುದಾಗಿಯೂ ಅವರು ಹೇಳಿರುತ್ತಾರೆ ವಿಶ್ವ ಸಂಸ್ಥೆಯು ಅಲ್ಜೀರಿಯಾ ಪ್ರಶ್ನೆಯನ್ನು ಪರಿಶೀಲಿಸಲು ತಕ್ಕ ಅರ್ಹತೆ ಪಡೆದಿಲ್ಲವೆಂದೂ, ಈ ವಿಚಾರದಲ್ಲಿ ವಿಶ್ವ ಸಂಸ್ಥೆಯು ಮಾಡಬಹುದಾದ ನಿರ್ಣಯವನ್ನು ಫ್ರಾನ್ಸು ಗಮನಿಸುವುದಿಲ್ಲವೆಂದೂ ಮೋಲೆಯವರು ಸೂಚಿಸಿರುವರು, ಅಲ್ಜೀರಿಯದ ಐರೋಪ್ಯರು ಮತ್ತು ಮುಸ್ಲಿಮರು ಸಹಬಾಳ್ವೆಯಿಂದ ಇದ್ದು ಒಬ್ಬರನ್ನೊಬ್ಬರು ದಮನ ಮಾಡದಿರುವ ಬಗ್ಗೆ ಸೂಕ್ತ ಭರವಸೆ ಹೊಂದುವುದೇ ಈಗಿನ ಸಮಸ್ಯೆಯಾಗಿರುವುದೆಂದೂ ಅವರು ಹೇಳಿದ್ದಾರೆ ಅಲ್ಜೀರಿಯದಲ್ಲಿ ೧೨ ಲಕ್ಷ ಐರೋಪ್ಯರೂ, ೮೦ ಲಕ್ಷ ಮುಸ್ಲಿಮರೂ ಇರುವರು.

ಸೂಯೆಜ್ ಕಾಲುವೆ ಬಗ್ಗೆ ವಿಶ್ವ ಸಂಸ್ಥೆ ಮೂಲಕವೇ ಸಂಧಾನ

ವಿಶ್ವಸಂಸ್ಥೆಯ ಚೌಕಟ್ಟಿನೊಳಗೆ ಮಾತ್ರ ಸೂಯೆಜ್ ಕಾಲುವೆ ಭವಿಷ್ಯದ ಇತ್ಯರ್ಥಕ್ಕೆ ಸಂಧಾನ ನಡೆಸಲು ಈಜಿಪ್ಟ್ ಸಿದ್ಧವಾಗಿರುವುದೆಂದು ಅಲ್ಲಿನ ವಾರ್ತಾ ಇಲಾಖಾ ಡೈರೆಕ್ಟರ್ ಜನರಲ್ಲರಾದ ಕರ್ನಲ್ ಸಯ್ಯದ್ ಅಬ್ದುಲ್ ಖಾದಿರ್‌ರವರು ತಿಳಿಸಿರುತ್ತಾರೆ ಬ್ರಿಟನ್ ಮತ್ತು ಫ್ರಾನ್ಸುಗಳೊಡನೆ ಈ ಬಗ್ಗೆ ಸಂಧಾನ ನಡೆಸುವುದಿಲ್ಲವೆಂದೂ ಅವರು ಹೇಳಿರುವರು ಆಂಗ್ಲೋ-ಫ್ರೆಂಚರು ಆಕ್ರಮಣ ನಡೆಸಿರುವರೆಂದೂ, ಸೂಯೆಜ್ ಕಾಲುವೆ ಬಗ್ಗೆ ಶಾಂತಿಯುತವಾದ ಇತ್ಯರ್ಥಕ್ಕಾಗಿ ಮಾತುಕತೆ ನಡೆಯುತ್ತಿದ್ದಾಗಲೇ ಈಜಿಪ್ಟಿನ ಮೇಲೆ ಧಾಳಿ ನಡೆಸಲು ಆ ಎರಡು ರಾಷ್ಟ್ರಗಳು ಹಿಂದೆಯೇ ನಿರ್ಧರಿಸಿಕೊಂಡಿದ್ದುವೆಂದೂ ಅವರು ಹೇಳಿರುವರು.

ತಿರುವನಂತಪುರ ಪೌರಸಭಾಧ್ಯಕ್ಷ ಚುನಾವಣೆಗೆ ಬಹಿಷ್ಕಾರ

ಹೈಕೋರ್ಟು ಚಳುವಳಿಯ ಪ್ರತಿಧ್ವನಿ

ತಿರುವನಂತಪುರದಲ್ಲಿ ಹೈಕೋರ್ಟಿನ ಪೀಠದ ಚಳುವಳಿಯ ಬಿಸಿಯು ಅಲ್ಲಿನ ಪೌರಸಭೆಗೂ ವ್ಯಾಪಿಸಿರುವುದಾಗಿ ಗೊತ್ತಾಗಿದೆ. ಅಲ್ಲಿನ ಮೇಯರರ ಚುನಾವಣೆಯು ಮೊನ್ನೆ ನಡೆಯಬೇಕಾಗಿದ್ದು, ೪೦ ಜನ ಸದಸ್ಯರ ಪೈಕಿ ಒಬ್ಬರೂ ಹಾಜರಾಗದೆ ಬಹಿಷ್ಕಾರ ಹಾಕಿರುತ್ತಾರೆ ಈಗಿನ ಮೇಯರ್ ಪೊನ್ನಾರ ಶ್ರೀಧರ್‌ರವರನ್ನು ಜೈಲಿನಲ್ಲಿಡಲಾಗಿದೆ. ಅವರ ಮೇಲೆ ೭ ಸಿವಿಲ್ ಸಂಬಂಧವಾಗಿ ಮೊಕದ್ದಮೆ ಹೂಡಲಾಗಿದೆ ಸದಸ್ಯರ ಸ್ಥಾನಗಳಲ್ಲಿ "ಮೇಯರರ ಚುನಾವಣೆಗೆ ಬಹಿಷ್ಕಾರ ಹಾಕುತ್ತೇವೆ, ಪ್ರತಿಬಂಧಕಾಜ್ಞೆ ಹೋಗಲಿ, ಹೈಕೋರ್ಟಿನ ಚಳುವಳಿಗೆ ಜಯವಾಗಲಿ'' ಎಂಬ ಬೋರ್ಡುಗಳನ್ನು ಇಡಲಾಗಿತ್ತು. ಚಳುವಳಿ ಸಂಬಂಧವಾಗಿ ಹಲವು ಪೌರಸಭಾ ಸದಸ್ಯರೂ ಬಂಧನದಲ್ಲಿರುವರು

ಚಿಕ್ಕಮಗಳೂರು ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನಾ ಸಭೆ

ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಅತೃಪ್ತಿಯನ್ನು ಸೂಚಿಸಲು ಚಿಕ್ಕಮಗಳೂರಿನಲ್ಲಿ ಮೊನ್ನೆ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಶ್ರೀ ಬಿ ಪಿ ಬಸಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿತ್ತು. ಮೂರನೇ ಎರಡು ಭಾಗದಷ್ಟು ಹಳಬರನ್ನೂ, ಒಂದು ಭಾಗದಷ್ಟು ಹೊಸಬರನ್ನೂ ತೆಗೆದುಕೊಳ್ಳುವಂತೆ ಹೈಕಮಾಂಡಿನವರು ಕೊಟ್ಟಿರುವ ಆದೇಶವನ್ನು ಸ್ಥಳೀಯ ಚುನಾವಣೆ ಸಮಿತಿಯು ಪಾಲಿಸಿಲ್ಲವೆಂದು ಒತ್ತಾಯಪಡಿಸಲಾಯಿತು ಸಭೆಯಲ್ಲಿ ಶ್ರೀ ಸಿದ್ದಲಿಂಗಪ್ಪ, ವೆಂಕಟಪ್ಪ, ಎಸ್ ಚನ್ನಯ್ಯ ಮುಂತಾದವರನ್ನು ಟೀಕಿಸಲಾಗಿ ಸ್ವಲ್ಪ ಗಲಾಟೆಯೂ ನಡೆದು, ಹಲವರು ಸಭಾತ್ಯಾಗ ಮಾಡಿದರು ಸೂಕ್ತ ಕ್ರಮ ಜರುಗಿಸುವ ಬಗ್ಗೆ ಶ್ರೀ ಬಿ. ಪಿ. ಬಸಪ್ಪಶೆಟ್ಟಿ ಮತ್ತು ಇತರ ೪ ಜನರುಳ್ಳ ಸಮಿತಿಯೊಂದನ್ನು ರಚಿಸಲಾಯಿತು

ನೆಹರೂ ನಂತರ ಯಾರು ?

ಪ್ರಶ್ನೆಯ ಬಗ್ಗೆ ಪ್ರಧಾನಿ ನೆಹರೂರವರ ಜಿಗುಪ್ಸೆ

ಈ ಸಾರಿಯ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಧಾನಿ ನೆಹರೂರವರ ನಂತರ ಯಾರು ಭಾರತವನ್ನು ಸುಗಮವಾಗಿ ಕೊಂಡೊಯ್ಯುವರೆಂಬ ಪ್ರಶ್ನೆಗೆ ವಿಶೇಷ ಪ್ರಾಮುಖ್ಯತೆಯು ಬಂದಿತ್ತು ಕಾಂಗ್ರೆಸ್ಸಿನವರು ಹೊರಡಿಸಿರುವ ಪುಸ್ತಕವೊಂದರಲ್ಲಿ ಈ ವಿಚಾರವು ಪ್ರಸ್ತಾಪಿಸಲ್ಪಟ್ಟು, ನೆಹರೂರವರು ವಿರಮಿಸಿದರೆ ಅವರ ಮಾರ್ಗದರ್ಶನದಲ್ಲಿ ಸಮಿತಿಯೊಂದು ಈ ಕೆಲಸವನ್ನು ನಿರ್ವಹಿಸುವುದೆಂದು ತಿಳಿಸಲ್ಪಟ್ಟಿದೆ.

ನೆಹರೂರವರು ಈ ವಿಚಾರವನ್ನು ಪ್ರಸ್ತಾಪಿಸಿ ಪ್ರಜಾಸತ್ತೆಯ ಯುಗದಲ್ಲಿ ಇಂತಹ ಪ್ರಶ್ನೆಗಳಿಗೆ ಅವಕಾಶವಿಲ್ಲವೆಂದೂ ಈಗ ಕೈಗೊಂಡಿರುವ ವಿದೇಶಾಂಗ ನೀತಿಯನ್ನು ಮುಂದೆ ಅವಲಂಬಿಸಲು ತಮ್ಮ ನಂತರ ಬೇರೆಯವರಾರೂ ಇರುವದಿಲ್ಲವೆಂದು ಹೇಳುವುದು ಸರಿಯಲ್ಲವೆಂದೂ ತಿಳಿಸಿರುತ್ತಾರೆ

ಕ್ಯಾಲೆಂಡರ್ ಸ್ವೀಕಾರ

ಬೆಂಗಾಲ್ ಲ್ಯಾಂಪ್ ವರ್ಕ್ಸ್ ಸಂಸ್ಥೆಯ ಸ್ಥಳೀಯ ಪ್ರತಿನಿಧಿಗಳು ಕಳುಹಿಸಿಕೊಟ್ಟಿರುವ ಭಾರತದ ಭೂಪಟದಿಂದ ಕೂಡಿದ ನವ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

SRI KANYAKAPARAMESWARI
CO-OPERATIVE SOCIETY, LTD ,
MYSORE

WANTED

Applications are invited for undertaking the "Daily Audit" of Accounts of this Society (Both Banking and Stores Sections) for one year on a lumpsum remuneration of Rs. 250 The selected candidate will have to work for approximately 3 hours daily for one year during the working hours of the Society

Preference will be given to qualified and experienced persons.

Applicants should furnish detailed information regarding their age, qualifications, experience etc. Last date for receiving applications is 15 1 57

P Gopalakrishna Setty
President

ಯುದ್ಧ ನಡೆದರೆ ಅಮೆರಿಕದಿಂದ ಅಣು ಶಸ್ತ್ರ ಪ್ರಯೋಗ

ಅಮೆರಿಕಾ ವಿಮಾನ ಇಲಾಖಾಧಿಕಾರಿಯ ಸ್ಪಷ್ಟೋಕ್ತಿ

ಯುದ್ಧವು ಸಂಭವಿಸಿದರೆ ಅಮೆರಿಕವು ಅಣು ಶಸ್ತ್ರಾಸ್ತ್ರಗಳನ್ನು ಬಳಸುವುದಿಲ್ಲವೆಂದು ಭಾವಿಸುವುದು ಭ್ರಾಂತಿಯೆಂದು ಅಲ್ಲಿನ ವಿಮಾನ ಬಲದ ಕಾರ್ಯದರ್ಶಿ ಡೊನಾಲ್ಡ್ ಕ್ವಾರಲ್ಸ್‌ರವರು ತಿಳಿಸಿರುತ್ತಾರೆ ರಷ್ಯವು ಸ್ವಾರ್ಥಕ್ಕಾಗಿ ಪಾಶವೀ ವೃತ್ತಿಯನ್ನು ಅವಲಂಬಿಸಲು ಹಿಂದುಮುಂದು ನೋಡಿಲ್ಲವೆಂದು ಅವರು ಹೇಳಿ, ಅಣು ಶಸ್ತ್ರಾಸ್ತ್ರವುಳ್ಳ ರಾಷ್ಟ್ರಗಳು ಅತ್ಯುತ್ತಮ ಆಯುಧಗಳನ್ನು ಬದಿಗಿಟ್ಟು ಯುದ್ಧದಲ್ಲಿ ಸೋಲನ್ನು ಅಪ್ಪಲು ತಯಾರಿಲ್ಲವೆಂದೂ ಸ್ಪಷ್ಟಪಡಿಸಿರುವರು

ಬಾಗ್ದಾದ್ ರಕ್ಷಣಾ ಒಪ್ಪಂದ ಕೂಟಕ್ಕೆ ಅಮೆರಿಕಾ ಸೇರುವುದಿಲ್ಲ

ವಿದೇಶಾಂಗ ಮಂತ್ರಿ ಡಲ್ಲೆಸ್ಸರ ಹೇಳಿಕೆ

ಬಾಗ್ದಾದ್ ರಕ್ಷಣಾ ಕೌಲಿನ ಕೂಟಕ್ಕೆ ಅಮೆರಿಕವು ಸೇರುವ ಯೋಚನೆಯೇ ಇಲ್ಲವೆಂದು ಅಲ್ಲಿನ ವಿದೇಶಾಂಗ ಮಂತ್ರಿ ಜಾರ್ಜ್ ಫಾಸ್ಟರ್ ಡಲ್ಲೆಸ್‌ರವರು ತಿಳಿಸಿರುತ್ತಾರೆ ಅಲ್ಲಿನ ಪ್ರತಿನಿಧಿ ಸಭೆಯ ವಿದೇಶಾಂಗ ವ್ಯವಹಾರ ಸಮಿತಿಯಲ್ಲಿ ಅವರು ಸಾಕ್ಷ್ಯವಿತ್ತು ಇದರಿಂದ ಮಧ್ಯಪೂರ್ವದಲ್ಲಿ ಬಿಕ್ಕಟ್ಟು ಮತ್ತಷ್ಟು ಹೆಚ್ಚುವುದೆಂದು ಅಭಿಪ್ರಾಯಪಟ್ಟಿರುವರು

ಎಲ್. ಎಸ್. ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವವರಿಗೆ ಸೂಚನೆ

ಮಾಧ್ಯಮಿಕ ಶಾಲಾ ನಾಲ್ಕನೇ ತರಗತಿಯ ವಾರ್ಷಿಕ ಪರೀಕ್ಷೆ ಅಥವಾ ೮ನೇ ಪ್ರಾಥಮಿಕ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ವಿದ್ಯಾರ್ಥಿನಿಯರು ತಾವು ವಾಸಿಸುವ ಪ್ರದೇಶದ ಜಿಲ್ಲಾ ವಿದ್ಯಾಧಿಕಾರಿಗಳ ಮೂಲಕ ಅರ್ಜಿಗಳನ್ನು ಹಾಕಿಕೊಳ್ಳಬೇಕೆಂದು ಸೂಚಿಸಿ ವಿದ್ಯಾ ಇಲಾಖಾಧಿಕಾರಿಗಳು ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ ಈ ಬಗ್ಗೆ ಅನುಮತಿ ಕೊಡುವ ವಿಚಾರವನ್ನು ವಿದ್ಯಾ ಇಲಾಖಾಧಿಕಾರಿಗಳು ಪರಿಶೀಲಿಸಿ ನಿರ್ಧರಿಸುವರು

೨೬ ಮಂದಿ ಗೋವಾ ರಾಷ್ಟ್ರೀಯರಿಗೆ ೨೨ ವರ್ಷ ಸಜಾ

ಗೋವಾ ಮಿಲಿಟರಿ ನ್ಯಾಯಮಂಡಲವೊಂದು ಅಲ್ಲಿನ ೨೬ ಜನ ರಾಷ್ಟ್ರೀಯರಿಗೆ ೨ರಿಂದ ೨೨ ವರ್ಷದವರೆಗೆ ಕಠಿಣ ಸಜಾ ವಿಧಿಸಿರುತ್ತದೆ

ಗೃಹಕೃತ್ಯದ ನೋಟೀಸು

ಮೈಸೂರು ಹಳ್ಳದಕೇರಿಯ 2860 ನೇ ನಂಬರು ಮನೆಯಲ್ಲಿರುವ ಜಯಲಕ್ಷಮ್ಮನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಮೈಸೂರು ಅಶೋಕ ರಸ್ತೆಯಲ್ಲಿರುವ 18/1 ನೇ ನಂಬರು ಮನೆಯನ್ನು ಶ್ರೀ ಕೆ. ಓ ಧನ್ಯಕುಮಾರಯ್ಯನವರಿಂದ ನಮ್ಮ ಯಜಮಾನರಾದ ವಿ ರಾಮರಾಯರು ನೆಡಿ ಪಾತ್ರಕ್ಕೆ ತಮ್ಮ ಮೊದಲನೇ ಕುಟುಂಬ ರತ್ನಮ್ಮನವರ ಹೆಸರಿಗೆ ಭೋಗ್ಯ ಮಾಡಿಸಿ ಈಗ ಮನೆಯನ್ನು ಪರಭಾರೆ ಮಾಡುವ ತರದೂದಿನಲ್ಲಿರುವರೆಂದು ತಿಳಿದುಬರುತ್ತದೆ. ಈ ಮನೆಯಲ್ಲಿ ನನಗೂ ಸಹಾ ಹಕ್ಕಿರುವುದರಿಂದ ನನ್ನ ಅನುಮತಿಯಿಲ್ಲದೆ ಅದನ್ನು ಯಾರಾದರೂ ಪರಭಾರೆ ಮಾಡಿಸಿಕೊಂಡರೆ ಅದು ಊರ್ಜಿತವಾಗತಕ್ಕದ್ದಲ್ಲ ಎಲ್ಲಾ ಕಷ್ಟನಷ್ಟಗಳಿಗೂ ಅವರೇ ಜವಾಬ್ದಾರರಾಗಬೇಕಾಗುತ್ತದೆ

ಜಯಲಕ್ಷ್ಮಮ್ಮ

Edited, Printed and Published by A R. Nagarajan at Sadhvi Press, D. Subbiah Road, Mysore

ಬರುವ ವಾರ ಪ್ರಾದೇಶಿಕ ಕಾಂಗ್ರೆಸ್ ಸ್ಪರ್ಧಿಗಳ ಪಟ್ಟಿ

ಬೆಂಗಳೂರು ೯

ಚುನಾವಣೆಗಳಲ್ಲಿ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಭ್ಯರ್ಥಿಗಳ ಆಖೈರು ಪಟ್ಟಿಯನ್ನು ಕೇಂದ್ರ ಸಮಿತಿಯವರು ಬರುವ ವಾರ ಪ್ರಕಟಿಸಲಿರುವರೆಂದು ತಿಳಿದುಬಂದಿದೆ. ನೆನ್ನೆ ಇಲ್ಲಿಗೆ ಹಿಂದಿರುಗಿದ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಈ ವಿಚಾರವನ್ನು ತಿಳಿಸಿದರು ಅವರು ಎರಡು ದಿನಗಳನಂತರ ಇದೇ ಸಂದರ್ಭದಲ್ಲಿ ದೆಹಲಿಗೆ ಹೋಗಲಿದ್ದಾರೆ

ನೆಹರೂರವರಿಗೆ ಐಸೆನ್‌ಹೋವರರ ವೈಯಕ್ತಿಕ ಸಂದೇಶ

ಮಧ್ಯ ಪೂರ್ವದಲ್ಲಿ ಅಮೆರಿಕವು ಅನುಸರಿಸಬೇಕೆಂದಿರುವ ಹೊಸ ನೀತಿಯ ವಿಚಾರವಾಗಿ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರು ಪ್ರಧಾನಿ ನೆಹರೂರವರಿಗೆ ವೈಯಕ್ತಿಕ ಪತ್ರ ಬರೆದಿರುವರು ಅದರ ವಿವರಗಳೇನೆಂಬುದನ್ನು ವ್ಯಕ್ತಪಡಿಸಿಲ್ಲ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗಾಂಧಿ ಕಥಾವಳಿ. ೭-೧೫ ಎಸ್. ರಾಮಚಂದ್ರರಾವ್-ದೇವರ ನಾಮ. ೭-೩೦ ಹಿಂದಿ ಪಾಠ. ೮-೧೫ ಎಂ ಎ ರತ್ನ-ವಚನ ಗಾನ ಮಧ್ಯಾಹ್ನ ೧೨ ಎಸ್ ಬಿ ಶ್ರೀರಂಗಮ್ಮ-ಗಾಯನ ೧೨-೩೦ ವಾದ್ಯ ವೃಂದ. ೧೨-೪೫ ವನಿತಾ ವಿಹಾರ ೧-೫೦ ಗೋಟು ವಾದ್ಯ ೨-೧೫ ಸಂಗೀತ ಸಂಜೆ ೫-೩೦ ಎಸ್. ಬಿ ಶ್ರೀರಂಗಮ್ಮ-ಗಾಯನ ೬-೫ ವಿರಾಮ ಸಂಗೀತ ೬ ೩೦ ಕನ್ನಡ ಗೀತೆ ೭ ೩೦ ಸರ್ಕಾರದ ಹಣಕಾಸಿನ ವ್ಯವಸ್ಥೆ-ಭಾಷಣ ೮ ಮದ್ರಾಸಿನಿಂದ : ಮದುರೆ ಮಣಿ ಅಯ್ಯರ್ ಮತ್ತು ಟಿ ಎಸ್ ವೆಂಬು ಅಯ್ಯರ್-ಸಂಗೀತ ೯-೧೫ ರಸ ಮಂಜರಿ-ಸಂಸ್ಕೃತ ಕಾರ್ಯಕ್ರಮ ೧೦-೧೫ ಉರ್ದು ಗೀತೆ

EFFICIENT COACHING FOR
Inter, H. E. L., H. E. G.-Eng.
B.A., B.Sc. - Eng.
H. S. NARAYANA,
M A.,B T
(First Class First Rank Prize Winner)
905/40, III Cross, N R Gardens,
(Vidyaranyapuram)
MYSORE

ಬೆಂಗಳೂರು ರೇಡಿಯೋವಿನಲ್ಲಿ ಸಪ್ತಾಹ ಕಾರ್ಯಕ್ರಮ

ಬೆಂಗಳೂರು ರೇಡಿಯೋವಿನವರು ಇದೇ ತಿಂಗಳು ೧೩ರಿಂದ ೧೯ರ [illegible] ರೇಡಿಯೋ ಸಪ್ತಾಹವನ್ನು ಏರ್ಪಡಿಸಿರುತ್ತಾರೆ. ವಿಶೇಷ ನಾಟಕ, ಅಂತರ ವಿಶ್ವವಿದ್ಯಾಲಯ ವಾಕ್ಪಟುತ್ವದ ಸ್ಪರ್ಧೆ, ಕವಿ ಸಮ್ಮೇಳನ ಮುಂತಾದುವು ನಡೆಯುವುವು ಶ್ರೀರಂಗರವರ ಸಂಧ್ಯಾಕಾಲ, ಕೈಲಾಸಂರವರ ನ್ಯಾತ್ರ ಗಂಡ, ಹಿರಣ್ಣಯ್ಯನವರ ಎಚ್ಚಮನಾಯಕ ಮುಂತಾದ ನಾಟಕಗಳು; ಕೆ ವಿ ಪುಟ್ಟಪ್ಪ, ಪಿ ಟಿ. ನರಸಿಂಹಾಚಾರ್, ವಿ ರಾಮಚಂದ್ರರಾವ್, ಗೋಪಾಲಕೃಷ್ಣ ಅಡಿಗ ಮುಂತಾದ ಕವಿಗಳ ಗೋಷ್ಠಿಯೂ ನಡೆಯುವುವು

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮುತ್ತು

ಕೊಯಮುತ್ತೂರು ಸಣ್ಣ	೨೬	೧೪	೦	೩೨	೮
ರತ್ನಚೂಡಿ	೨೮	೨	೦	೨೯	೪
ಸೇಲಂ ಸಣ್ಣ	೨೪	೬	೦	೩೦	೦
ಕಡ್ಡಿ	೨೮	೦	೦	೨೮	೧೨
ಕೆಂಬೂತಿ	೨೪	೮	೦	೨೫	೧೪
ಕಾರು	೨೬	೪	೦	೨೫	೪
ರಾಗಿ	೩೧	೧೪	೦	೩೪	೧೦
ಜೋಳ	೩೬	೪	೦	೩೮	೪
ಕಡಲೆಕಾಯಿ	೧೮	೧೨	೦	೨೫	೪
ಹುಚ್ಚೆಳ್ಳು	೩೯	೪	೦	೪೮	೪
ಹರಳುಬೀಜ	೪೮	೦	೦		
ತೊಗರಿ	೨೩	೮	೦	೨೬	೩
ಹೆಸರು	೪೭	೦	೦	೫೨	೧೦
ಅವರೆ	೪೪	೦	೦		
ಉದ್ದು	೬೧	೦	೦	೬೩	೦
ಕಲಸಂದೆ	೪೦	೦	೦	೨೪	೪
ಸೊಣಬಿನ ಬೀಜ	೩೯	೦	೦	೪೩	೨
ಧನಿಯ	೨೪	೬	೦	೨೬	೨
ಹುಣಸೇಹಣ್ಣು	೩	೨	೦	೪	೧೩
ಮೆಣಸಿನಕಾಯಿ	೧೦	೦	೦	೨೨	೦
ತೆಂಗಿನಕಾಯಿ	೪	೦	೦	೧೦	೦

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು.
ಅಶೋಕ ರಸ್ತೆ, ಮೈಸೂರು (Estd 1911)

ಒಲಿಂಪಿಯಾ ★
11 1 57ರಿಂದ · ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ಭಾವೋದ್ರೇಕ,ಹಾಗೂ ಹಾಸ್ಯ ಮತ್ತು ಸಂಗೀತಮಯ ಸಾಮಾಜಿಕ ಚಿತ್ರ ಕೆ. ಅಮರನಾಥ್‌ರವರ
★ ನಯಾ ಅಂದಾಜ್ ★
ಪಾತ್ರ: — ಮೀನಾಕುಮಾರಿ, ಕಿಶೋರ್ ಕುಮಾರ್, ಪ್ರಾಣ್ ಮತ್ತು ಜಾನಿವಾಕರ್
ಸಂಗೀತ . ಒ. ಪಿ. ನಯ್ಯಾರ್

ಅಮೋಘವಾದ ಹರಾಜು ಮಾರಾಟ
ಈ ಸುಸಮಯವನ್ನು ಕಳೆದುಕೊಳ್ಳಬೇಡಿ !
13-1-57ನೇ . ಭಾನುವಾರ ಬೆಳಿಗ್ಗೆ 10 ಘಂಟೆಗೆ : ಷೋರೂಂ ಬಳಿ

ಫ್ಯಾನ್ಸಿ ಎಲೆಕ್ಟ್ರೋಪ್ಲೇಟೆಡ್ ಸ್ಟ್ಯಾಂಡಿಗೆ ಅಳವಡಿಸಿರುವ-3 ಸ್ಪೀಡುಗಳಲ್ಲಿ ಸುತ್ತುವಂತಹ ಜಿ. ಇ ಸಿ. ಎಲೆಕ್ಟ್ರಿಕ್ ಟೇಬಲ್ ಫ್ಯಾನ್, ವಿದ್ಯುಚ್ಛಕ್ತಿಯಿಂದ ನಡೆಯುವ ಅಲ್ಬಿಯನ್ ಕಾಫಿ ಪುಡಿ ಯಂತ್ರ, ಕಾಫಿ ಬೀಜ ಹುರಿಯುವ ದೊಡ್ಡ ಯಂತ್ರ, ಬಾಗಿಲುಗಳನ್ನೊಳಗೊಂಡ ಮರದ ಚೌಕಟ್ಟು, ಫ್ಯಾನ್ಸಿ ಪೌಡರ್ ಡಬ್ಬಗಳು, ವ್ಯವಹಾರ ಜ್ಞಾನ ಮತ್ತು ಸಾಹಿತ್ಯಾಭ್ಯಾಸಕ್ಕನುಕೂಲವಾದ ಪುಸ್ತಕಗಳು, ತೇಗದ ಮರದ ಎರಡು ಬಾಗಿಲುಗಳುಳ್ಳ ಅಲ್ಮೈರಾ, ಹೊಸಾಹೊಸ ಚಿತ್ರದ ಕುರ್ಚಿಗಳು, ಸ್ಪ್ರಿಂಗ್ ಕುರ್ಚಿ ಸೋಫಾ ಸೆಟ್ಟುಗಳು, ಮರದ ಊಟದ ಮೇಜು, ಮರದ ತೊಟ್ಟಿಲು, ತೇಗದ ಮರದ ಕೈಯುಳ್ಳ ಕುರ್ಚಿಗಳು ಮತ್ತು ಹಲವಾರು ಉಪಯುಕ್ತ ಸಾಮಾನುಗಳನ್ನೊಳಗೊಂಡ ಮರಮುಟ್ಟುಗಳು. ಶನಿವಾರ ಮಧ್ಯಾಹ್ನ 3 ರಿಂದ 6ರ ವರೆಗೆ ಪರೀಕ್ಷಿಸಬಹುದು

ಹರಾಜು ಮಾರಾಟ ಮಾಡುವವರು -: ಆಬಿದ್ಸ್ :- ಸಯ್ಯಾಜಿ ಚೌಕ ಮೈಸೂರು

ಲಕ್ಷ್ಮಿ ★
ಮಕರ ಸಂಕ್ರಾಂತಿ ವಿಶೇಷ ಆಗಮನ · 12—1—57ರಿಂದ ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಆಟಗಳು
ವರಲಕ್ಷ್ಮಿ ಪಿಕ್ಚರ್ಸ್‌ರವರ, ನಾಗೇಶ್ವರರಾವ್, ಎಸ್ ವರಲಕ್ಷ್ಮಿ, ವಿ. ನಾಗಯ್ಯ, ಎಸ್ ವಿ. ರಂಗರಾವ್, ಸೂರಿಬಾಬು, ರೇಲಂಗಿ, ಋಷ್ಯೇಂದ್ರ
ಮಣಿ ಮುಂತಾದವರು ನಟಿಸಿರುವ ತೆಲುಗು ಚಿತ್ರ
● ಸತಿ ಸಾವಿತ್ರಿ ●
ಕಡೇ 2 ದಿನಗಳು ಮಾತ್ರ ಜೆಮಿನಿಯ ತಮಿಳು ಚಿತ್ರ " ಅವ್ವೈಯಾರ್ "

ರಿಜಿಷ್ಟರ್ ನಂ. 792

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು · ಫೋನ್ 446

ಇಂದಿನ ಪತ್ರಿಕೆ 3 ಪುಟ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಸಂಚಾಲಕರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಂಪುಟ : ೧೫] SADHVI : FRIDAY 11—1—1957 ಮೈಸೂರು : ಶುಕ್ರವಾರ ೧೧—೧—೧೯೫೭ : [ಸಂಚಿಕೆ : ೧೬೮

ಬ್ರಿಟನ್ನಿನ ಪ್ರಧಾನಿಯಾಗಿ ಮ್ಯಾಕ್‌ಮಿಲನ್ನರ ನೇಮಕ

ಶ್ವವಿದ್ಯಾಲಯದ ಅಧ್ಯಾಪಕರ ಸಂಬಳದ ಪುನರ್ವಿಮರ್ಶೆ

ಂ. ಪು. ತಂತಿ] ಬೆಂಗಳೂರು ೧೧

ಮೈಸೂರು ವಿಶ್ವವಿದ್ಯಾಲಯದ ಉಪಾಧ್ಯಾಯರ ಸಂಬಳದ ಮಟ್ಟವನ್ನು ಪುನರ್ವಿಮರ್ಶಿಸುವ ವಿಚಾರವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿರುವರು ಈ ಬಗ್ಗೆ ವಿಶ್ವವಿದ್ಯಾಲಯದವರು ಸರ್ಕಾರಕ್ಕೆ ಹಲವು ಸಲಹೆಗಳನ್ನು ಕಳುಹಿಸಿರುವರು

ಗವರ್ನರರಿಂದ ರಿಪಬ್ಲಿಕ್ ದಿನದ ಸೆಲ್ಯೂಟ್ ಸ್ವೀಕಾರ

ಇದೇ ತಿಂಗಳು ೨೬ ನೇ ತಾರೀಖು ಬೆಳಿಗ್ಗೆ ನ ರೇಸ್‌ಕೋರ್ಸಿನಲ್ಲಿ ನಡೆಯುವ ರಿಪಬ್ಲಿಕ್ ದಿನೋತ್ಸವದಲ್ಲಿ ಗವರ್ನರರು ಭಾಗವಹಿಸಿ ಸೆಲ್ಯೂಟನ್ನು ಸ್ವೀಕರಿಸುವರು ಆಗ ಪೆರೇಡೂ ನಡೆಯುವುದು ಸಂಜೆ ಅವರು ಅರಮನೆಯಲ್ಲಿ ಉಪಾಹಾರಕೂಟವನ್ನು ಏರ್ಪಡಿಸುವರು

೦ [illegible]ಸಿನ ಅಂಚೆ ಮತ್ತು ತಂತಿ ಇಲಾಖಾ ಮಂತ್ರಿ [illegible]ಗಿರುವವರು ಈ ತಿಂಗಳು ೧೮ಕ್ಕೆ ಇಲ್ಲಿಗೆ ಆಗಮಿಸಿ, ಮಾರನೇ ದಿನ ಬೊಂಬಾಯಿಗೆ ತೆರಳುವರು

೦ ಡೆನ್ಮಾರ್ಕಿನ ನಿಯೋಗವೊಂದು ಈ ತಿಂಗಳು ೧೯ನೇ ತಾರೀಖು ಇಲ್ಲಿಗೆ ಆಗಮಿಸಲಿದೆ

ಐ ಎ ಎಸ್ ಮತ್ತು ಐ ಪಿ ಎಸ್. ಅಧಿಕಾರಿಗಳ ಸಂಖ್ಯೆ

ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಪಿ ವಿ ಆರ್ ರಾಯರು ಇದೇ ೧೫ನೇ ತಾರೀಖು ದೆಹಲಿಗೆ ತೆರಳಿ ಕೇಂದ್ರದ ಅಧಿಕಾರಿಗಳೊಡನೆ ಭಾರತದ ಆಡಳಿತ ಸರ್ವಿಸ್ ಮತ್ತು ಪೊಲೀಸು ಅಧಿಕಾರಿಗಳಾಗಿ ನೇಮಿಸಲಾಗುವ ಮೈಸೂರಿನವರ ಸಂಖ್ಯೆಯನ್ನು ಗೊತ್ತುಪಡಿಸುವ ವಿಚಾರವನ್ನು ಚರ್ಚಿಸುವರು

ಮೈಸೂರು ಇನಾಂ ಡೆಪ್ಯುಟಿ ಕಮಿಷನರರ ವರ್ಗ

ಮೈಸೂರು ಇನಾಂ ರದ್ದಿಯಾತಿ ವಿಶೇಷ ಡೆಪ್ಯುಟಿ ಕಮಿಷನರರಾದ ಶ್ರೀ ಮಹಮದ್ ಸಿರಾಜುದ್ದೀನ್ ಮೆಕ್ಕೆಯವರನ್ನು ಲ್ಯಾಂಡ್ ರಿಕಾರ್ಡ್ಸ್ ಮತ್ತು ಸರ್ವೆ ಸೆಟಲ್‌ಮೆಂಟ್ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲಾಗಿದೆ. ಅವರ ಬದಲು, ಸರ್ವೆ ಸೆಟಲ್‌ಮೆಂಟ್ ಸೂಪರಿಂಟೆಂಡೆಂಟರಾದ ಶ್ರೀ ಗೋಪಾಲರಾಜ ಅರಸರನ್ನು ನೇಮಕ ಮಾಡಲಾಗಿದೆ

ಹಂಗೆರಿ ಪ್ರಶ್ನೆ ತನಿಖೆಗಾಗಿ ವಿಶ್ವಸಂಸ್ಥೆಯ ಪಂಚ ರಾಷ್ಟ್ರ ಸಮಿತಿ

ಹಂಗೆರಿ ಪರಿಸ್ಥಿತಿಯ ಬಗ್ಗೆ ತನಿಖೆ ನಡೆಸಲು ಆಸ್ಟ್ರೇಲಿಯಾ, ಡೆನ್ಮಾರ್ಕ್, ಟ್ಯುನೀಸಿಯಾ, ಉರುಗ್ವೆ ಮತ್ತು ಸಿಂಹಳ. ಈ ಐದು ರಾಷ್ಟ್ರಗಳ ಪ್ರತಿನಿಧಿಗಳುಳ್ಳ ವಿಶೇಷ ಸಮಿತಿಯನ್ನು ವಿಶ್ವ ಸಂಸ್ಥೆಯ ಸಾಧಾರಣ ಸಭೆಯು ನೇಮಿಸಲಿದೆ ೨೪ ರಾಷ್ಟ್ರಗಳು ಈ ಬಗ್ಗೆ ಸೂಚನೆ ಕೊಟ್ಟಿದ್ದು ಹಂಗೇರಿ ಮತ್ತು ರಷ್ಯಗಳು ತನಿಖೆಯಲ್ಲಿ ಸಹಕಾರ ನೀಡುವಂತೆ ಕೋರಲಾಗಿದೆ.

ಬ್ರಿಟನ್ನಿನ ನೂತನ ಪ್ರಧಾನಿ ಸ್ಥಾನಕ್ಕೆ ಹೆರಾಲ್ಡ್ ಮ್ಯಾಕ್‌ಮಿಲನ್

ಬ್ರಿಟನ್ನಿನ ಹಣಕಾಸಿನ ಮಂತ್ರಿ ಹೆರಾಲ್ಡ್ ಮ್ಯಾಕ್‌ಮಿಲನ್‌ರವರು ಬ್ರಿಟನ್ನಿನ ಪ್ರಧಾನಿಯಾಗಿ ನೇಮಿಸಲ್ಪಟ್ಟಿರುತ್ತಾರೆ ರಾಣಿ ಎಲಿಜಬೆತ್‌ರವರು ನೆನ್ನೆ ಅವರನ್ನು ಆಹ್ವಾನಿಸಿ ನೂತನ ಸರ್ಕಾರವನ್ನು ರಚಿಸುವಂತೆ ಕೋ[illegible] ಅವರು ಅದಕ್ಕೊಪ್ಪಿದರು [illegible] ಮಾಜಿ ಪ್ರಧಾನಿ ವಿನ್ಸ್‌ಟನ್ ಚರ್ಚಿಲ್ಲರೊಡನೆ ಈ ವಿಚಾರವಾಗಿ [illegible] ಸಲಹೆ ಪಡೆದರು ಸೂಯೆಜ್ ಪ್ರಶ್ನೆ ವಿಚಾರವಾಗಿ ಮಂತ್ರಿಮಂಡಲದಲ್ಲಿ [illegible] ಮತ್ತು [illegible] ಆಕ್ರಮಣವನ್ನು ಒಪ್ಪಲಿಲ್ಲ [illegible] ದು ಹೇಳಲಾಗಿದೆ

ಅನಾರೋಗ್ಯದಿಂದ ನಿವೃತ್ತರಾದ ಈಡನ್ನರಿಗೆ ಲಾರ್ಡ್ ಪದವಿಯನ್ನು ನೀಡುವ ಸಂಭವವಿದೆ.

ಜಾರ್ಡಾನ್ ಗಡಿ ಬಳಿ ಇಸ್ರೇಲ್ ಸೈನ್ಯ ಜಮಾವಣೆ

ಜಾರ್ಡಾನಿನ ಗಡಿ ಬಳಿ ಇಸ್ರೇಲು ತನ್ನ ಸೈನ್ಯಗಳನ್ನು ಸೇರಿಸುತ್ತಿರುವುದಾಗಿ ಜಾರ್ಡಾನಿನ ಪ್ರತಿನಿಧಿಯು ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ನೆನ್ನೆ ಆಪಾದಿಸಿದರು ಇಸ್ರೇಲಿನವರಿಂದ ಆಕ್ರಮಣವಾಗುವ ಮುಂಚೆ ಈ ವಿಚಾರವನ್ನು ಸಂಸ್ಥೆಯ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರ ಗಮನಕ್ಕೆ ತರುವಂತೆ ಜಾರ್ಡಾನು ತನ್ನ ಪ್ರತಿನಿಧಿಗೆ ಸೂಚಿಸಿತು

ವಿದ್ಯಾ ಸದನದ ವಾರ್ಷಿಕೋತ್ಸವ

ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಂ ಪಿ ಸುಬ್ಬಪ್ಪನವರ ನೇತೃತ್ವದಲ್ಲಿ ನಡೆಯುತ್ತಿರುವ ಶ್ರೀಚಾಮುಂಡಾಂಬಿಕಾ ವಿದ್ಯಾ ಸದನದ ವಾರ್ಷಿಕೋತ್ಸವವನ್ನು ನಾಳಿದ್ದು ಮಧ್ಯಾಹ್ನ ೩ ಗಂಟೆಗೆ ಪೌರಸಭಾಧ್ಯಕ್ಷರಾದ ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ರಾಮಾನುಜಾ ರಸ್ತೆಯ ೪ ನೇ ಕ್ರಾಸಿನಲ್ಲಿರುವ ಶಾಲೆಯಲ್ಲಿ ನೆರವೇರಿಸಲಾಗುವುದು

೨೦ರಂದು ಎಲ್ ಎಂ ಪಿ ಗಳ ಬೇಡಿಕೆ ದಿನಾಚರಣೆ

ಎಲ್ ಎಂ ಪಿ ವೈದ್ಯರು ಮತ್ತು ಆರೋಗ್ಯ ಅಧಿಕಾರಿಗಳ ಸಂಘದ ಜರೂರು ಸಭೆಯು ನೆನ್ನೆ ಬೆಂಗಳೂರಿನಲ್ಲಿ ನಡೆದು, ಎಲ್. ಎಂ. ಪಿ. ವೈದ್ಯರುಗಳಿಗೆ ಹೆಚ್ಚಿನ ಸಂಬಳವನ್ನು ಕೊಡಬೇಕೆಂದೂ, ೧೦ ವರ್ಷ ಸರ್ವಿಸ್ ಆದವರನ್ನು ೧ನೇ ವರ್ಗದ ಅಸಿಸ್ಟೆಂಟ್ ಸರ್ಜನ್ನರಾಗಿಯೂ ಮತ್ತು ಆರೋಗ್ಯಾಧಿಕಾರಿಗಳನ್ನು ಎರಡನೇ ವರ್ಗದ ಅಧಿಕಾರಿಗಳ ದರ್ಜೆಗೂ ಏರಿಸಬೇಕೆಂದೂ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ತಿಂಗಳು ೨೦ನೇ ತಾರೀಖು ಎಲ್. ಎಂ. ಪಿ. ಮತ್ತು ಆರೋಗ್ಯಾಧಿಕಾರಿಗಳ ದಿನಾಚರಣೆಯನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು ಸಂಸ್ಥಾನಾದ್ಯಂತ ೨೦೦ ಮಂದಿ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದರು

ಕಾಲೇಜು ಅಧ್ಯಾಪಕರ ಮುಷ್ಕರಕ್ಕೆ ವಿದ್ಯಾರ್ಥಿಗಳ ಸಹಾನುಭೂತಿ

ಮೈಸೂರು ೧೧

ನಗರದ ಸೇಂಟ್ ಫಿಲೋಮಿನಾ ಕಾಲೇಜಿನ ಅಧ್ಯಾಪಕ ವರ್ಗದವರು ತಮ್ಮ ಮುಷ್ಕರವನ್ನು ಇಂದು ಮುಂದುವರಿಸಿದರು. ಕಾಲೇಜಿನ ಬಳಿ ಪೊಲೀಸರು ಕಾವಲಿದ್ದಾರೆ. ಆದರೆ ಘಟನೆಗಳೇನೂ ನಡೆಯಲಿಲ್ಲವೆಂದೂ, ೨೧ ಮಂದಿ ಉಪಾಧ್ಯಾಯರು ಕೆಲಸಕ್ಕೆ ಹಾಜರಾಗಿದ್ದಾರೆಂದೂ ಪ್ರಿನ್ಸಿಪಾಲರು ಈ ದಿನ ತಿಳಿಸಿದರು.

ಕಾಲೇಜಿನ ವಿದ್ಯಾರ್ಥಿಗಳಲ್ಲಿ ಅನೇಕರು ಸಹಾನುಭೂತಿಗಾಗಿ ಮುಷ್ಕರ ಹೂಡಿರುವರಲ್ಲದೆ ನೆನ್ನೆ ಪಿಕೆಟಿಂಗ್ ಸಹ ನಡೆಸಿದರು ಅವರುಗಳು ಮೆರವಣಿಗೆಯಲ್ಲಿ ನೆನ್ನೆ ಬಿಷಪ್ಪರ ಮನೆಗೆ ಹೋಗಿದ್ದರು ನೆನ್ನೆಯೂ ಮೆರವಣಿಗೆ ಮಾಡಿ ವೈಸ್‌ಚಾನ್ಸಲರನ್ನು ಭೇಟಿ ಮಾಡಲು ವಿದ್ಯಾರ್ಥಿಗಳು ಕ್ರಾಫರ್ಡ್ ಭವನಕ್ಕೆ ಹೋಗಿದ್ದರು. ಆದರೆ ವೈಸ್‌ಚಾನ್ಸಲರು ಊರಿನಲ್ಲಿರಲಿಲ್ಲವಾದ ಕಾರಣ ಮನವಿ ಪತ್ರವೊಂದನ್ನು ಅವರಿಗೆ ರವಾನಿಸಲಾಯಿತು ಕಾಲೇಜಿನ ಆವರಣಕ್ಕೆ ಪೊಲೀಸರನ್ನು ಕರೆಸಿರುವುದಕ್ಕಾಗಿ ವಿದ್ಯಾರ್ಥಿಗಳು ಖಂಡನೆ ಸೂಚಿಸಿದ್ದಾರೆ.

ಈ ದಿನ ಒಂದು ತರಗತಿಯು ನಡೆಯುತ್ತಿರುವುದಾಗಿಯೂ ಅಲ್ಲಿ ಪೊಲೀಸರು ಕಾವಲಿರುವರೆಂದೂ ಹೇಳಲಾಗಿದೆ

ಕಾಲೇಜಿನ ಆಸ್ತಿಪಾಸ್ತಿಗಳಿಗೆ ನೆನ್ನೆ ನಷ್ಟಪಡಿಸಲಾಗಿರುವುದೆಂದೂ ವರದಿಯಾಗಿದೆ

ಕಾವ್ಯ ವಾಚನ

ಜಯನಗರದಲ್ಲಿರುವ ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ಏಕಾದಶಿ ಪ್ರಯುಕ್ತ ನಾಳೆ ಸಂಜೆ ೬॥ ಗಂಟೆಗೆ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ 'ದ್ರೌಪದಿ ಸ್ವಯಂವರ'ದ ವಾಚನವೂ ಮತ್ತು ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳಿಂದ ವ್ಯಾಖ್ಯಾನವೂ ನಡೆಯುವುವು.

ಕಾಶ್ಮೀರದ ಬಗ್ಗೆ ಪಾಕಿಸ್ತಾನದ ವಾದಕ್ಕೆ ಬ್ರಿಟನ್ನಿನ ಬೆಂಬಲ ?

ಭದ್ರತಾ ಸಮಿತಿಯಲ್ಲಿ ಪಾಕಿಸ್ತಾನವು ತರಲಿರುವ ಕಾಶ್ಮೀರದ ಪ್ರಶ್ನೆಗೆ ಬ್ರಿಟನ್ನು ಬೆಂಬಲ ನೀಡಲಿದೆಯೆಂದೂ, ಆದರೆ ಅಮೇರಿಕವು ಈ ಬಗ್ಗೆ ನಿರ್ಣಯವನ್ನು ಸೂಚಿಸಬೇಕು ಅಥವಾ ಅನುಮೋದಿಸಬೇಕೆಂದು ಮಾತ್ರ ಬ್ರಿಟನ್ನು ಪರಿಗಣಿಸುತ್ತಿರುವುದೆಂದೂ ಕರಾಚಿಯ ಟೈಮ್ಸ್ ಪತ್ರಿಕೆಯು ತಿಳಿಸಿದೆ ಉಭಯ ಪಕ್ಷಗಳವರಿಗೂ ಒಪ್ಪಂದದ ಮೂಲಕ ಸಮಸ್ಯೆಯ ಇತ್ಯರ್ಥಕ್ಕಾಗಿ ಬ್ರಿಟನ್ನು ದೆಹಲಿ ಮತ್ತು ವಾಷಿಂಗ್ಟನ್ನಿನೊಡನೆ ಸಮಾಲೋಚಿಸುತ್ತಿರುವುದಾಗಿ ಪತ್ರಿಕೆಯು ಹೇಳಿದೆ ಕಾಶ್ಮೀರವನ್ನು ಇದೇ ೨೬ರಂದು ಭಾರತದಲ್ಲಿ ಐಕ್ಯಗೊಳಿಸುವ ಕ್ರಮವನ್ನು ನಿಲ್ಲಿಸಬೇಕೆಂದೂ ಮತ್ತು ಮೂರನೇ ಪಕ್ಷದ ಸಮ್ಮುಖ (ಅಂದರೆ ತಟಸ್ಥ ಸಣ್ಣ ರಾಷ್ಟ್ರವಾಗಕೂಡದು) ಕಾಶ್ಮೀರದಲ್ಲಿ ಜನಮತ ಗಣನೆ ಕುರಿತು ಕೂಡಲೇ ಮಾತುಕತೆ ನಡೆಸಬೇಕೆಂದೂ ಬ್ರಿಟನ್ನು ನೆಹರೂರವರನ್ನು ಒಪ್ಪಿಸಲು ಆಲೋಚಿಸುತ್ತಿರುವುದಾಗಿ ಗೊತ್ತಾಗಿದೆ

ಕೆರೆಗೆ ಬಸ್ಸು ಮಗುಚಿ ಇಬ್ಬರ ಮರಣ

ಬೆಂಗಳೂರು ಬಳಿ ಅಪಘಾತ

ಬೆಂಗಳೂರು ೧೧

ಕೊಳ್ಳೇಗಾಲದಿಂದ ಇಲ್ಲಿಗೆ ಬರಲು ನೆನ್ನೆ ಹೊರಟಿದ್ದ ಬಸ್ಸೊಂದು ಕಾನಕಾನಹಳ್ಳಿ ಮಾರ್ಗದಲ್ಲಿ ಸೋಮನಹಳ್ಳಿ ಬಳಿ ಕೆರೆಗೆ ಮಗುಚಿಕೊಂಡ ಪರಿಣಾಮವಾಗಿ ಇಬ್ಬರು ಮೃತಪಟ್ಟರು. ಅದರಲ್ಲಿ ೩೦ ಮಂದಿ ಪ್ರಯಾಣಿಕರಿದ್ದರು. ಏಳು ಅಡಿ ನೀರಿದ್ದ ಕೆರೆಯಲ್ಲಿ ಬಸ್ಸು ಮುಳುಗಿದ್ದರೂ ಇತರರು ಪಾರಾಗಿರುವುದು ಆಶ್ಚರ್ಯ. ಮತ್ತೊಂದು ಬಸ್ಸಿನ ಡ್ರೈವರ್ ಸಿದ್ದೋಜಿರಾವ್ ಚವಣ್ ಎಂಬುವನೂ, ಇನ್ನೊಬ್ಬ ಡ್ರೈವರ್ ನಂಜಪ್ಪ ಎಂಬುವನೂ ಆ ಪ್ರದೇಶದ ಬಳಿ ಇದ್ದರು ಅವರು ಓಡಿಬಂದು ನೀರಿನಲ್ಲಿ ಈಜಿಕೊಂಡುಹೋಗಿ ಜನರನ್ನು ರಕ್ಷಿಸುವುದರಲ್ಲಿ ತೊಡಗಿದರು ೪೦೦ ಜನ ಗ್ರಾಮಸ್ಥರೂ, ಬೆಂಗಳೂರು ಪೊಲೀಸರೂ ಬಂದು ಸಹಾಯ ಮಾಡಿದರು ಸತ್ತವರಿಬ್ಬರೂ ಮುಸ್ಲಿಮರು. ಒಬ್ಬರು ಕೊಳ್ಳೇಗಾಲದ ಸೈಯದ್ ಅಹಮದ್ ಎಂಬುವರು. ಅವರು ರೇಷ್ಮೆ ವ್ಯಾಪಾರಕ್ಕಾಗಿ ಹೊರಟಿದ್ದರು. ಮತ್ತೊಬ್ಬರಾರೆಂಬುದು ಗೊತ್ತಿಲ್ಲ. ಒಬ್ಬ ಬ್ರಾಹ್ಮಣ ವಿಧವೆಯು ಇನ್ನೂ ಪತ್ತೆಯಾಗಿಲ್ಲವೆಂದು ಹೇಳಲಾಗಿದೆ. ಬಸ್ಸು ಮಳವಳ್ಳಿಯ ಶ್ರೀ ಎಂ. ವಿ. ವೆಂಕಟಪ್ಪನವರದು ಡ್ರೈವರನು ಮಿತಿಮೀರಿದ ವೇಗದಲ್ಲಿ ಓಡಿಸಿದುದರಿಂದ ಆಕಸ್ಮಿಕ ನಡೆಯಿತೆಂದು ಹೇಳಲಾಗಿದೆ.

ಬ್ರಿಟಿಷ್ ಆಕ್ರಮಣದ ವಿರುದ್ಧ ಯೆಮೆನ್ನಿಗೆ ರಷ್ಯಾ ನೆರವು

ಬ್ರಿಟನ್ನು ಯೆಮೆನ್ ಮೇಲೆ ನಡೆಸುತ್ತಿರುವ ಆಕ್ರಮಣವನ್ನು ತಡೆಗಟ್ಟಲು ರಷ್ಯದ ಸ್ವಯಂಸೇವಕರನ್ನು ಯೆಮೆನ್ನು ಆಹ್ವಾನಿಸುವುದಾಗಿ ಬಾನ್ ನಗರದಲ್ಲಿರುವ ಯೆಮೆನ್ ರಾಯಭಾರಿಯು ತಿಳಿಸಿರುತ್ತಾರೆ ಬ್ರಿಟನ್ನು ನಡೆಸಿರುವ ಆಕ್ರಮಣದ ವಿವರಗಳನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರಿಗೆ ಅರಬ್ ಲೀಗಿನ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ.

ಕಡಿಮೆ ಸಂಬಳದ ನೌಕರರಿಗಾಗಿ ಕೇಂದ್ರದಿಂದ ೨೦ ಕೋಟಿ ರೂ.

ನಾನಾ ಪ್ರಾಂತಗಳಲ್ಲಿ ಕಡಿಮೆ ಸಂಬಳ ಬರುವ ನೌಕರರಿಗಾಗಿ ಕೇಂದ್ರ ಸರ್ಕಾರದವರು ೧೯-೨೦ ಕೋಟಿ ರೂಗಳನ್ನು ಒದಗಿಸಲಿರುವರೆಂದು ವರದಿಯಾಗಿದೆ ಅವರುಗಳ ಸಂಬಳವನ್ನು ಹೆಚ್ಚಿಸುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿರುತ್ತಾರೆ.

ರಿಸರ್ವ್ ಬ್ಯಾಂಕಿನ ಹೊಸ ಗವರ್ನರ್

ರಾಜೀನಾಮೆಯಿತ್ತ ಬಿ ರಾಮರಾಯರ ಸ್ಥಾನದಲ್ಲಿ ಭಾರತದ ರಿಸರ್ವ್ ಬ್ಯಾಂಕಿನ ಗವರ್ನರರನ್ನಾಗಿ ಶ್ರೀ ಕೆ. ಜಿ. ಅಂಬೆಗಾಂವ್‌ಕರ್‌ರವರನ್ನು ನೇಮಿಸಲಾಗಿದೆ.

ಮಂಡ್ಯದಲ್ಲಿ ೩ ಕೋಟಿ ರೂ. ಕಾಗದದ ಕಾರ್ಖಾನೆಗೆ ಅನುಮತಿ

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ದೊರೆಯುವ ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿ ಕಾಗದವನ್ನು ತಯಾರಿಸಲು ೩ ಕೋಟಿ ರೂಗಳ ವೆಚ್ಚದಲ್ಲಿ ಕಾರ್ಖಾನೆಯನ್ನು ಏರ್ಪಡಿಸಲು ಖಾಸಗಿ ಸಂಸ್ಥೆಯೊಂದಕ್ಕೆ ಭಾರತ ಸರ್ಕಾರದವರು ಅನುಮತಿಯಿತ್ತಿರುವರೆಂದು ವರದಿಯಾಗಿದೆ ತಿಂಗಳಿಗೆ ೧,೦೦೦ ಟನ್ ಕಾಗದವನ್ನು ಕಾರ್ಖಾನೆಯಲ್ಲಿ ಉತ್ಪತ್ತಿ ಮಾಡಬಹುದೆಂದು ಹೇಳಲಾಗಿದೆ ಕೈಗಾರಿಕಾ ಕಾರ್ಪೋರೇಷನ್ನಿನಿಂದ ೮೫ ಲಕ್ಷ ರೂ ಸಹಾಯ ದೊರೆಯುವ ನಿರೀಕ್ಷೆಯಿದೆ ಸಂಸ್ಥೆಯನ್ನು ಸ್ಥಾಪಿಸಲಿರುವವರು ೫೦ ಲಕ್ಷ ರೂಗಳ ಬಂಡವಾಳ ಹಾಕುವರು ಜರ್ಮನ್ ಸಂಸ್ಥೆಯೊಂದು ಯಂತ್ರ ಮುಂತಾದುವನ್ನು ಒದಗಿಸಲಿದೆ ಸರ್ಕಾರದವರು ೩೦ ಲಕ್ಷ ರೂಗಳನ್ನು ಕೊಡಲಿದ್ದಾರೆ

ಸಕ್ಕರೆ ಕಾರ್ಖಾನೆಗೆ ಸಾಕಾದಷ್ಟು ಕಲ್ಲಿದ್ದಿಲು ಸರಬರಾಜು ಬಗ್ಗೆ ರೈಲ್ವೆ ಬೋರ್ಡಿನವರು ಭರವಸೆಯಿತ್ತೊಡನೆ ಕಾಗದದ ಕಾರ್ಖಾನೆಯು ಆರಂಭವಾಗುವುದು ೨ ವರ್ಷಗಳನಂತರ ಉತ್ಪತ್ತಿ ಕೆಲಸವು ಆರಂಭವಾಗುವುದು

ಸಂತೋಷ ಸಮಾರಂಭ

ಮಂಡ್ಯದ ಕರ್ನಾಟಕ ಸಂಘದ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಕಾವ್ಯವಾಚನ ಸ್ಪರ್ಧೆಗಳಲ್ಲಿ, ನಗರದಲ್ಲಿರುವ ಶ್ರೀ ವಾಲ್ಮೀಕಿ ಗಮಕ ಪಾಠಶಾಲಾ ವಿದ್ಯಾರ್ಥಿನಿಯರು ಭಾಗವಹಿಸಿ ಸಂಸ್ಥಾ ಬಹುಮಾನ ಮತ್ತು ವೈಯಕ್ತಿಕ ಪ್ರಥಮ ಬಹುಮಾನಗಳನ್ನು ಪಡೆದ ಸಂಬಂಧವಾಗಿ ಸಂತೋಷ ಸಮಾರಂಭವೊಂದನ್ನು ಶಾಲಾ ವಿದ್ಯಾರ್ಥಿಗಳು ನಾಳೆ ಸಂಜೆ ೫॥ ಗಂಟೆಗೆ ಮಹಾರಾಣಿ ಪ್ರೌಢಶಾಲೆಯಲ್ಲಿ ಏರ್ಪಡಿಸಿರುತ್ತಾರೆ ಶ್ರೀ ಆಗರಂ ರಂಗಯ್ಯನವರು ಅಧ್ಯಕ್ಷತೆ ವಹಿಸುವರು ಡಾ॥ ಪಿ॥ ಎಂ ಜಿ ನಂಜುಂಡಾರಾಧ್ಯರು ಭಾಷಣ ಮಾಡುವರು ಕಲಾಭಿಮಾನಿಗಳೆಲ್ಲರಿಗೂ ಸ್ವಾಗತವಿದೆ

ಭಾರತಕ್ಕೆ ಎಣ್ಣೆ ಹಡಗು

ಪಶ್ಚಿಮ ಹಡಗು ಸಂಸ್ಥೆಯೊಂದರಿಂದ ಭಾರತವು ೧೦,೨೦೦ ಟನ್ನಿನ ಕೋಯಾಕ್ರಿಸ್ಟಿನಾ ಎಂಬ ಎಣ್ಣೆ ಹಡಗನ್ನು ೮೫ ಲಕ್ಷ ರೂಗೆ ಕೊಂಡುಕೊಂಡಿದೆ ಅದನ್ನು ರಾಟರ್‌ಡಾಂ ನಗರದಲ್ಲಿ ಭಾರತದ ಅಧಿಕಾರಿಗಳಿಗೆ ಒಪ್ಪಿಸಲಾಯಿತು ಇಂತಹ ಹಡಗನ್ನು ಭಾರತವು ಕೊಂಡಿರುವುದು ಇದೇ ಮೊದಲು ಅದಕ್ಕೆ ದೇಶ ಸೇವಕ ಎಂದು ಹೆಸರಿಡಲಾಗಿದೆ ೫ ವರ್ಷಗಳಿಂದ ಅದು ಸಂಚಾರ ಮಾಡುತ್ತಿದೆ

ಅಂತರ ಕಾಲೇಜು ಕನ್ನಡ ಚರ್ಚಾಕೂಟ

ಡಿ ಬನುಮಯ್ಯ ಕಾಮರ್ಸ್ ಕಾಲೇಜು ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಶ್ರೀ ಎಂ ನರಸಿಂಹಯ್ಯನವರ ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾಕೂಟವು ಕಾಲೇಜಿನಲ್ಲಿ ನಡೆಯುವುದು ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ನಿನ ಪ್ರಿನ್ಸಿಪಾಲ್ ಡಾ॥ ಎಂ ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು

ಕ್ಷೇತ್ರೋತ್ಸವ

ಚಾಮರಾಜನಗರದ ಬಳಿ ಹರದನಹಳ್ಳಿ ರಸ್ತೆಯಲ್ಲಿರುವ ಶ್ರೀ ಆರ್ ನಾರಾಯಣಸ್ವಾಮಿನಾಯ್ಡುರವರ ತೋಟದಲ್ಲಿ ಕಳೆದ ಶನಿವಾರ ವ್ಯವಸಾಯ ಕ್ಷೇತ್ರೋತ್ಸವವನ್ನು ವಿಸ್ತರಣಾ ಶಾಖೆಯ ಅಧಿಕಾರಿಗಳು ಏರ್ಪಡಿಸಿದ್ದರು ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಆರ್. ಚನ್ನರುದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಎ. ಗೋಪಾಲರವರು ಸ್ವಾಗತ ಭಾಷಣ ಮಾಡಿದರು ವ್ಯವಸಾಯ ಇನ್ಸ್‌ಪೆಕ್ಟರ್ ಶ್ರೀ ಪದ್ಮರಾಜಯ್ಯನವರು ವಂದನಾರ್ಪಣೆ ಮಾಡಿದರು

ಕಾಶಿಗೆ ಮೈಸೂರು ವಿದ್ಯಾರ್ಥಿಗಳ ಭೇಟಿ

ಸ್ವಂ ಸು] ಕಾಶಿ ೩೧

ಮೈಸೂರಿನ ಉಪಾಧ್ಯಾಯರ ಕಾಲೇಜಿನ ಬಿ ಇಡಿ. ತರಗತಿಯ ೨೫ ವಿದ್ಯಾರ್ಥಿವಿದ್ಯಾರ್ಥಿನಿಯರುಗಳೂ ಮತ್ತು ಅಧ್ಯಾಪಕರೂ ಇಲ್ಲಿಗೆ ಆಗಮಿಸಿ, ಸಾರನಾಥ, ವಿಶ್ವವಿದ್ಯಾಲಯ ಮತ್ತು ಶ್ರೀ ವಿಶ್ವನಾಥ, ಶ್ರೀ ಅನ್ನಪೂರ್ಣ ಮಂದಿರಗಳು, ಹಾಗೂ ಗಂಗಾ ನದಿಯ ವಿವಿಧ ಘಟ್ಟ ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟರು ಇಲ್ಲಿರುವ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಟಿ ಸಿ ಶಾಂತರಾಜುರವರು ತಂಡದವರನ್ನು ಸ್ವಾಗತಿಸಿ ಸತ್ಕರಿಸಿದರು

೧೨ ಪೌಂಡು ತೂಕದ ಹುಂಜಕ್ಕೆ ರಾಷ್ಟ್ರಾಧ್ಯಕ್ಷರಿಂದ ಪ್ರಶಸ್ತಿ

ಪಿ ಇಡಿ ರೋಜೇರಿಯೊ ಎಂಬುವರ ರ್ಹೋಡ್ ದ್ವೀಪದ ೨ ವರ್ಷದ ಕೆಂಪು ಹುಂಜಕ್ಕೆ ರಾಷ್ಟ್ರಾಧ್ಯಕ್ಷರು ಬೆಳ್ಳಿಯ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ ಅದು ೧೨ ಪೌಂಡು ತೂಕವಿದೆ ಅದಕ್ಕೆ ನಗದು ಬಹುಮಾನವನ್ನೂ ಸಹ ಕೊಡಲಾಯಿತು ಹಿಂದಿನ ಬಾರಿಯೂ ಅದೇ ಹುಂಜಕ್ಕೆ ಬಹುಮಾನ ಬಂದಿತ್ತು

ಗೋವಾ ಮತ್ತು ಪಾಕಿಸ್ತಾನಗಳ ವಿಮಾನ ಸಂಚಾರ ಪುನರಾರಂಭ

ಗೋವಾ, ಡಾಮನ್ ಮತ್ತು ಡಯೂಗಳಿಗೂ, ಪಾಕಿಸ್ತಾನಕ್ಕೂ ಬರುವ ಭಾನುವಾರದಿಂದ ವಿಮಾನ ಸಂಚಾರವು ಪುನಃ ಆರಂಭವಾಗುವುದೆಂದು ಹೇಳಲಾಗಿದೆ ಅದನ್ನು ಯಾವಾಗ ನಿಲ್ಲಿಸಲಾಗಿತ್ತೆಂಬುದು ಗೊತ್ತಾಗಿಲ್ಲ ಭಾರತದ ಪ್ರದೇಶದ ಮೇಲೆ ಹಾರಾಟ ನಡೆಸಿದರೆ ತೀವ್ರ ಕ್ರಮ ಜರುಗಿಸಲಾಗುವುದೆಂದು ಹಿಂದೆ ಎಚ್ಚರಿಕೆ ಕೊಡಲಾಗಿತ್ತು

ಸೈಕಲ್ ಮತ್ತು ಡೈನಮೊಗಳ ಪತ್ತೆ

ನಗರದ ಕೃಷ್ಣರಾಜ ಪೋಲೀಸರು ಹಲವು ಬೈಸಿಕಲ್ಲುಗಳು ಮತ್ತು ಡೈನಮೊಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡಿರುವರು ಮಾಲೀಕರು ಹೋಗಿ ಅವನ್ನು ಗುರುತಿಸಬಹುದು

ಕ್ಯಾಲೆಂಡರ್ ಸ್ವೀಕಾರ

ಕನ್ನಾನೂರಿನ ಚಿ ಸೋಲಿ ಹೊಸೈರಿ ಸಂಸ್ಥೆಯವರೂ, ನಗರದ ಚಾಮುಂಡಿಪುರಂನಲ್ಲಿರುವ ಅಂಬಿಕಾ ಎಲೆಕ್ಟ್ರಿಕ್ ಲಾಂಡ್ರಿಯವರೂ ನಜರ್‌ಬಾದಿನ ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿಯವರೂ ಕಳುಹಿಸಿರುವ ನವ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ.

ವಯಸ್ಕರ ಶಿಕ್ಷಣ ಶಿಬಿರದ ಆರಂಭೋತ್ಸವ

ಹೆಗ್ಗಡದೇವನಕೋಟೆ ತಾಲ್ಲೂಕು ಪುಸ್ತಕ ಭಂಡಾರ ಅಧಿಕಾರಿಗಳ ಮತ್ತು ವಯಸ್ಕರ ಶಿಕ್ಷಣ ತರಗತಿ ಉಪಾಧ್ಯಾಯರ ಶಿಕ್ಷಣ ಶಿಬಿರದ ಆರಂಭೋತ್ಸವವನ್ನು ನಾಳೆದ್ದು ಮಧ್ಯಾಹ್ನ ೪ ಗಂಟೆಗೆ ಹೆಗ್ಗಡದೇವನಕೋಟೆಯಲ್ಲಿ ಶ್ರೀ ಎಸ್. ಎಸ್ ವೆಂಕಟಾಚಾರ್‌ರವರು ನೆರವೇರಿಸುವರು ಶ್ರೀ ಶಂಕರನಾರಾಣಪ್ಪನವರು ಅಧ್ಯಕ್ಷತೆ ವಹಿಸುವರು

ಪೋಲೆಂಡು ಮಂತ್ರಿಯ ಉಚ್ಚಾಟನೆ

ಪೋಲೆಂಡಿನ ವ್ಯವಸಾಯ ಮಂತ್ರಿ ಅಂತೋನಿ ಕೂಲಿ ಗೌಸಿಯವರನ್ನು ಅವರ ಸ್ಥಾನದಿಂದ ತೆಗೆದುಹಾಕಿ, ಬೇರೊಬ್ಬರನ್ನು ನೇಮಿಸಲಾಗಿದೆ

ಸಂಬಳದ ಪುನರ್ವಿಮರ್ಶೆಗಾಗಿ ಹೋಬಳಿ ಉಪಾಧ್ಯಾಯರ ಸಭೆಯ ಕೋರಿಕೆ

ಮೈಸೂರು ಕಸಬಾ ಹೋಬಳಿ ಪ್ರಾಥಮಿಕ ಉಪಾಧ್ಯಾಯರ ಸಂಘದ ಮಾಹೆಯಾನ ಸಭೆಯು ಕಾಸ್ಲೂರ್ ರೇಂಜ್ ವಿದ್ಯಾಧಿಕಾರಿಗಳಾದ ಶ್ರೀ ಬಿ ಪ್ರಹ್ಲಾದರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘದ ಕಾರ್ಯದರ್ಶಿ ಶ್ರೀ ಎಸ್ ಕೃಷ್ಣಪ್ಪನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ ಭಾರತ ವಾಚನವೂ, ಶ್ರೀ ಟಿ ಆರ್ ಶ್ರೀನಿವಾಸಾಚಾರ್ಯರು ಮತ್ತು ಶ್ರೀ ಎಂ ಎಸ್. ನಾರಾಯಣರಾಯರಿಂದ ಭಾಷಣಗಳೂ ಆದುವು ವಿಮರ್ಶಿತ ಸಂಬಳಸಾರಿಗೆಗಳನ್ನು ಪ್ರಕಟಿಸಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ವೃಂದಕ್ಕೆ ಹೆಚ್ಚುವರಿ ಸಂಬಳ ಬರುವಂತೆ ಮಾಡಿದ್ದಕ್ಕಾಗಿ ಸಂಘವು ಸರ್ಕಾರವನ್ನು ಅಭಿನಂದಿಸಿ ದೀರ್ಘ ಕಾಲ ಸೇವೆ ಸಲ್ಲಿಸುತ್ತಿರುವ ಉಪಾಧ್ಯಾಯರುಗಳಿಗೆ ಈಗಿನ ಹೊಸ ಸ್ಕೇಲುಗಳಿಂದ ಪರಿಹಾರ ದ್ರವ್ಯಕ್ಕಿಂತ ಕಡಿಮೆ ಸಂಬಳ ಬರುವುದೆಂದೂ, ೧-೧ ೫೭ರಲ್ಲಿ ಕೊಟ್ಟಂತೆ ೫ ಇಂಕ್ರಿಮೆಂಟ್‌ಗಳಿಗೆ ಕಡಿಮೆ ಇಲ್ಲದಂತೆ ಮಂಜೂರು ಮಾಡಬೇಕೆಂದೂ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು ಹಳ್ಳಿ ಮತ್ತು ಪಟ್ಟಣಗಳ ಜೀವನ ಮಟ್ಟವು ಒಂದೇ ಸಮನಾಗಿರುವ ಪ್ರಯುಕ್ತ ಪಟ್ಟಣದ ನೌಕರರಿಗೆ ಕೊಡುವಂತೆ ೨೮ ರೂ ತುಟ್ಟಿಭತ್ಯವನ್ನು ಗ್ರಾಮಾಂತರಗಳಲ್ಲಿರುವ ಉಪಾಧ್ಯಾಯರಿಗೂ ಕೊಡಬೇಕೆಂದೂ, ಹೊಸ ಸ್ಕೇಲುಗಳನ್ನು ಜಾರಿಗೆ ತರುವ ಮುನ್ನ ೧-೧ ೫೭ಕ್ಕೆ ಬರಬೇಕಾಗಿರುವ ಇಂಕ್ರಿಮೆಂಟ್‌ಗಳನ್ನು ಕೊಟ್ಟು ಅನಂತರ ವೈಟೇಜುಗಳನ್ನು ಕೊಡಬೇಕೆಂದೂ ಕೋರಲಾಯಿತು

ಕಪಿಲ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್

ನಂಜನಗೂಡು

ದಿನವೊಂದಕ್ಕೆ ರೂ 2-8-0 ಯಿಂದ ರೂ. 3-0-0 ರ ವರೆಗೆ ಮಜೂರಿ ಮೇಲೆ ಅನುಭವವುಳ್ಳ ನೇಯ್ಗೆಯವರು ಬೇಕಾಗಿದ್ದಾರೆ ಎಸ್. ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿರುವ ಹುಡುಗರಿಗೆ ತರಪೇತನ್ನು ಸಹಾ ಕೊಡಲಾಗುವುದು ಕೆಳಗಿನ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳಬಹುದು ಅಥವಾ ಖುದ್ದಾಗಿ ಬಂದು ಕಾಣಬಹುದು

ಕಪಿಲ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್,
ನಂಜನಗೂಡು

Edited, Printed and Published by A. R. Nagarajan at Sadhvi Press, D Subbiah Road, Mysore

ಶನಿ ಮಹಾತ್ಮೆ ಕಥೆ

ನಗರದಲ್ಲಿರುವ ಶ್ರೀ ಕಾಳಿಕಾಂಬಾ ಕಮ್ಮ ಶ್ವರ ದೇವಸ್ಥಾನದಲ್ಲಿ ನಾಳೆ ಸಂಜೆ ೪ ಗಂ ತಲಕಾಡು ಶ್ರೀ ಮಾಯಿಗೌಡರು ಶನೇಶ್ವರ ಹಾತ್ಮೆ ಕಥೆಯ ವಾಚನ ಮಾಡುವರು. ಹಿರಣ್ಣಯ್ಯನವರಿಂದ ವ್ಯಾಖ್ಯಾನವು ನಡೆ ವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದಿಲ್ರುಬಾ ೭ ೧೫ ಪ ೮-೧೫ ಎಂ ಆರ್ ಶ್ರೀನಿವಾಸರಾಘವಾಚಾ ದೇವರ ನಾಮ ೭-೩೦ ರಿಕಾರ್ಡು ಮಧ್ಯಾ ೧೨ ಎಂ ಆರ್ ಶ್ರೀನಿವಾಸರಾಘವಾಚಾರ್ ಗೀತ ೧೨-೩೦ ರಿಕಾರ್ಡು ೧೨-೪೫ ಬಾಲ ರ್ ೧-೫೦ ದಿಲ್ರುಬಾ ಸಂಜೆ ೫-೩೦ ಮತ್ತ ಬಿ ಎಂ ಶಿವಪ್ಪ-ಸಂಗೀತ ೬-೫ ವಿರಾಮ ಗೀತ ೬ ೨೦ ಭಜನಗಾನ ೭-೩೦ ರಾಷ್ಟ್ರ ಯ ಅಭಿವೃದ್ಧಿ ಕಾರ್ಯದಲ್ಲಿ ಇಂಜನಿಯ ಪಾತ್ರ-ಕನ್ನಡ ಭಾಷಣ ೮-೩೦ ಹಿರಾಕು ಯೋಜನೆ ವಿಚಾರ-ದೆಹಲಿ ರಿಲೆ. ೯-೧೫ ಲುರಿ-ಕನ್ನಡ ಕಥೆ. ೯-೩೦ ರಾಷ್ಟ್ರೀಯ ಗೀತ

೯ ಕನ್ಯಕಾಪರಮೇಶ್ವರೀ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು
(ಪ್ರಭಾ ಟಾಕೀಸ್ ಹತ್ತಿರ)

ಬಟ್ಟೆ ಹರಾಜು

ಈ ಸೊಸೈಟಿಯಲ್ಲಿ ಬಿನ್ನಿ ರಗ್ಸ್, ಬಿನ್ನಿ ಟ ಟಿಂಗ್ಸ್, ಬಿನ್ನಿ ಷರಟಿಂಗ್ಸ್, ಬಿನ್ನಿ ಟಿಕಿ ಲ್ಸ್ ಮತ್ತು ಇತರೆ ವಾಯಿಲ್ಸ್, ಕೋಟಿಂಗ್ಸ್, ಚಿಂಟ್ಸ್, ಷರಟಿಂಗ್ಸ್, ಇಮಿಟೇಷನ್ ಸಿ ಸಾರೀಸ್, ಇತ್ಯಾದಿ ತರಹೇವಾರಿ ಬಟ್ಟೆಗಳ ತಾ॥12 1-1957ರ ಲಾಗಾಯತು ಪ್ರತಿ ಬೆಳಿಗ್ಗೆ 10 ಘಂಟೆಯಿಂದ 1 ಘಂಟೆ ವರೆವಿಗೂ ಮಧ್ಯಾಹ್ನ 3 ಘಂಟೆಯಿಂದ 6 ಘಂಟೆ ವರೆವಿ ಹರಾಜು ಮಾಡಲಾಗುತ್ತೆ. ಬಿಡ್‌ದಾರರು ಪೈರು ಬಿಡ್ ಮಂಜೂರು ಆದಕೂಡಲೇ ಬಿ ಹಣವನ್ನು ತಕ್ಷಣ ಪೂರ್ತಿ ಪಾವತಿ ಮಾ ಮಾಲನ್ನು ಪಡೆಯಬೇಕು ಯಾವ ಬಿಡ್ಡ ಗಳೀ ಕಾರಣ ತಿಳಿಸದೆ ತಿರಸ್ಕರಿಸುವ ಅಧಿ ವನ್ನು ಕಾದಿಡಲಾಗಿದೆ

ಎನ್ ರಾಮಸ್ವಾ
ಕಾರ್ಯದರ್ಶಿ

ಸದರನ್ ರೈಲ್ವೆ

ನೋಟೀಸ್

ಇದೇ 1957ನೇ ಜನವರಿ 16ನೇ ತಾ॥ ಬುಧವಾರದಿಂದ ಆರಂಭವಾಗಿ, ಮೈಸೂ ಮತ್ತು ನಂಜನಗೂಡು ಟೌನುಗಳ ನಡು ಪ್ರತಿ ಪೂರ್ಣಿಮೆ ದಿನಗಳಲ್ಲೂ ಕೆಳಗೆ ಕ ವೇಳೆಗಳಲ್ಲಿ ವಿಶೇಷ ರೈಲು ಹೋಗಿ ವಾ ಬರುವುದು.

ಪೂರ್ಣಿಮೆ ದಿನದ ಸ್ಪೆಷಲ್ ನಂ. 1

ಮೈಸೂರಿನಿಂದ ಹೊರಡುವುದು ಬೆಳಿಗ್ಗೆ
ನಂಜನಗೂಡು ಟೌನನ್ನು ಸೇರುವುದು ಬೆಳಿಗ್ಗೆ 8-3

ಪೂರ್ಣಿಮೆ ದಿನದ ಸ್ಪೆಷಲ್ ನಂ.

ನಂಜನಗೂಡು ಟೌನಿನಿಂದ ಹೊರಡುವುದು ಮಧ್ಯಾಹ್ನ 12-3
ಮೈಸೂರನ್ನು ತಲುಪುವುದು ಮಧ್ಯಾಹ್ನ 13-3

ಮೇಲ್ಕಂಡ ವಿಶೇಷ ರೈಲು ಚಾಮ ಪುರಂ, ಮೈಸೂರು ಸೌತ್, ಕಡಕೊಳ ತಾಂಡವಪುರ ನಿಲ್ದಾಣಗಳಲ್ಲಿ ನಿಲ್ಲುವುದು.

ಡಿವಿಜನಲ್ ಸೂಪರಿಂಟೆಂಡೆಂಟ್,
ಮೈಸೂರು

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

11 1 57ನೆಯ ಶುಕ್ರವಾರದಿಂದ : ಅಮೋಘವಾದ 3 ನೆಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು

ಭಕ್ತ ಮಾರ್ಕಂಡೇಯ

ಪಾತ್ರ - ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ರಘುರಾಮಯ್ಯ, ಮಾಸ್ಟರ್ ಆನಂದ್, ಬೇಬಿ ಉಮಾ, ಪದ್ಮಿನಿ ಪ್ರಿಯದರ್ಶಿನಿ, ಬಾಲಸರಸ್ವತಿ, ನರಸಿಂಹರಾಜು, ಡಿಕ್ಕಿ ಮಾಧವರಾವ್

4 ವಾರಗಳ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನೂ ಮನ್ನಾ ಮಾಡಲಾಗಿದೆ

ಲಕ್ಷ್ಮಿ ★

ಮಕರ ಸಂಕ್ರಾಂತಿ ವಿಶೇಷ ಆಕರ್ಷಣೆ
ವರಲಕ್ಷ್ಮಿ ಪಿಕ್ಚರ್ಸ್‌ನವರ, ನಾಗೇಶ್ವರರಾವ್, ಮಣಿ ಮುಂತಾದವರು ನಟಿಸಿರುವ ತೆಲುಗು ಚಿತ್ರ
(೨ ವಾರಗಳು ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಪಾಸುಗಳನ್ನೂ ಮನ್ನಾ ಮಾಡಲಾಗಿದೆ)

12—1—57ರಿಂದ ಅಮೋಘ ಪ್ರಾರಂಭ · ಪ್ರತಿ ದಿನ ಮೂರು ಆಟಗಳು
ವರಲಕ್ಷ್ಮಿ, ವಿ ನಾಗಯ್ಯ, ಎಸ್ ವಿ. ರಂಗರಾವ್, ಸೂರಿಬಾಬು, ರೇಲಂಗಿ, ಯ

✱ ಸತೀ ಸಾವಿತ್ರಿ ✱

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೧೫] SADHVI : SATURDAY 12—1—1957 ಮೈಸೂರು : ಶನಿವಾರ ೧೨—೧—೧೯೫೭ : [ಸಂಚಿಕೆ : ೧೬೯

ಗಡಿ ಬಳಿ ಭಾರತ ಸೈನ್ಯಗಳು : ಪಾಕಿಸ್ತಾನದ ಆರೋಪ

ಮಾಜಿ ಮಂತ್ರಿಗಳಿಗೆಲ್ಲಾ ಕಾಂಗ್ರೆಸ್ ಉಮೇದುವಾರಿಕೆ

ಬೆಂಗಳೂರು ೧೧

ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪರವಾ ಉಮೇದುವಾರರಾಗಲು ಪಕ್ಷದ ಮಾಜಿ ಮಂ ಗಳನ್ನೆಲ್ಲಾ ಆರಿಸಲು ಕಾಂಗ್ರೆಸ್ ಹೈಕಮಾಂ ನಿರ್ಧರಿಸಿರುವುದಾಗಿ ವರದಿಯಾಗಿದೆ ಅಲ್ಲದೆ ರ ಪ್ರಮುಖ ಶಾಸನಸಭಾ ಸದಸ್ಯರನ್ನೂ ನಿ ಸಲಾಗುವುದೆಂದು ಹೇಳಲಾಗಿದೆ

ಅಂತಿಮವಾಗಿ ಪಟ್ಟಿಯನ್ನು ಸಿದ್ಧಗೊಳಿಸುವುದ ಮುಂಚೆ ಕೇಂದ್ರ ಚುನಾವಣಾ ಸಮಿತಿಯು ಪ್ರಾದೇಶಿಕ ಪ್ರತಿನಿಧಿಗಳನ್ನು ಒಬ್ಬೊಬ್ಬ ಗಿ ಕರೆಸಿ ಚರ್ಚಿಸುವರೆಂದು ಗೊತ್ತಾಗಿದೆ.

ಈಗ ಸಿದ್ಧಗೊಳಿಸಲಾಗಿರುವ ಪಟ್ಟಿಯ ಬಗ್ಗೆ ಬಂದಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲು ಪ್ರಾದೇಶಿಕ ಚುನಾವಣಾ ಸಮಿತಿಯು ನೆನ್ನೆ ರಾ ನಡೆದಿತು ಹೈಕಮಾಂಡಿನವರ ಅಭಿಪ್ರಾ ಯವನ್ನೂ ಪ್ರಾದೇಶಿಕ ಸಮಿತಿಯವರದನ್ನೂ ಬ ಅಂತರವಿರುವುದೆಂದು ಹೇಳಲಾಗಿದೆ

ಅಂತರ ಕರ್ನಾಟಕ ವಿದ್ಯಾರ್ಥಿನಿಲಯಗಳ ಕನ್ನಡ ಚರ್ಚಾ ಸ್ಪರ್ಧೆ

ನ ವೈಸ್‌ರಾಯ್ ರಸ್ತೆಯಲ್ಲಿರುವ ಶಾರ ನಿಕೇತನ ವಿದ್ಯಾರ್ಥಿನಿಲಯದ ಸ್ಥಾಪಕರಾ ಶ್ರೀ ಎಸ್ ಕೃಷ್ಣಸ್ವಾಮಿರಾಯರ ಸ್ಮಾರಕಾ ವಾಗಿ ಅಖಿಲ ಕರ್ನಾಟಕ ಅಂತರ ವಿದ್ಯಾರ್ಥಿ ನಿಲಯಗಳ ಕನ್ನಡ ಚರ್ಚಾ ಸ್ಪರ್ಧೆಯನ್ನು ನಿ ಲಯದಲ್ಲಿ ಶ್ರೀ ಶಾರದಾ ಯೂನಿಯನ್ನಿನವರು ಸಂಜೆ ೫ ಗಂಟೆಗೆ ಏರ್ಪಡಿಸಿರುವರು ಯು ರಾಜ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸೀಬಯ್ಯನವರು ಅಧ್ಯಕ್ಷತೆ ವಹಿಸುವರು ರಿಗೂ ಆಹ್ವಾನವುಂಟು

ಸಹಾಯಾರ್ಥ ನಾಟಕಾಭಿನಯ

ಬೆಳಗೊಳದ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಸಂಘದವರು ನಾಳೆ ಸಂಜೆ ೬॥ ಗಂಟೆಗೆ ನಗರದ ಟೌನ್‌ಹಾಲಿನಲ್ಲಿ ರಾಜಯೋಗ ಎಂಬ ನಾಟಕವನ್ನು, ಎಂ. ಸಿ. ಕಾಲೊನಿಯ ಶ್ರೀ ರಾಮ ಮಂದಿರದ ಕ ಡದ ಸಹಾಯಾರ್ಥವಾಗಿ ಅಭಿನಯಿಸುವರು ರ ಪೌರಸಭೆಯ ಮಾಜಿ ಅಧ್ಯಕ್ಷ ಶ್ರೀ ಎ. ಕೃ ಮೂರ್ತಿರಾಯರು ಅಧ್ಯಕ್ಷತೆ ವಹಿಸುವರು. ಮ ಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಗಾಂಧಿಜಿಯವರ ಭಾವಚಿತ್ರದ ಅನಾವರಣೋತ್ಸವ

ರಮಾವಿಲಾಸ ಅಗ್ರಹಾರದಲ್ಲಿ ಶ್ರೀ ಅಂಬಳೆ ಸುಬ್ರಹ್ಮಣ್ಯಅಯ್ಯರ್‌ರವರ ಮನೆ ಮಹಡಿಮೇಲೆ ವ ಗಾಂಧಿವಿಚಾರ ಪರಿಷತ್ತು ಕಛೇರಿಯಲ್ಲಿ ಸಂಜೆ ೫॥ ಗಂಟೆಗೆ ಗಾಂಧಿಜಿಯವರ ಭಾ ಚಿತ್ರದ ಅನಾವರಣೋತ್ಸವವನ್ನು ನಗರದ ಅ ಡ್ವೊಕೇಟರಾದ ಶ್ರೀ ಎಂ ಎ ದೊರೆಸ್ವಾಮಿ ಐ ಯಂಗಾರ್ಯರು ನೆರವೇರಿಸುವರು ಶ್ರೀ ಎ ನಿವಾಸಮೂರ್ತಿಯವರು ಅಧ್ಯಕ್ಷತೆ ವಹಿಸು ಸರ್ವರಿಗೂ ಆಹ್ವಾನವಿದೆ

ಅರಕೆರೆಯಲ್ಲಿ ಶಾಲಾ ಶಂಕುಸ್ಥಾಪನೆ ಮತ್ತು ಪ್ರಾರಂಭೋತ್ಸವ

ಗವರ್ನರರ ವರ್ತನೆ ಬಗ್ಗೆ ಟೀಕೆ

ಮೈಸೂರು ೧೧

ಶ್ರೀರಂಗಪಟ್ಟಣದ ತಾಲ್ಲೂಕು ಅರಕೆರೆಯಲ್ಲಿ ಮೊನ್ನೆ, ಶಾಸನಸಭಾ ವಿರೋಧ ಪಕ್ಷದ ನಾಯಕರಾದ ಶ್ರೀ ಜೆ ಎಂ ಇಮಾಮರು ಸರ್ಕಾರಿ ಪ್ರೌಢಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು ಮದ್ರಾಸಿನ ಮಾಜಿ ಮಂತ್ರಿಯೂ ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರೂ ಆದ ಶ್ರೀ ಕೆ ಆರ್ ಕಾರಂತರು ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯ ಕಟ್ಟಡದ ಶಂಕುಸ್ಥಾಪನೆಯನ್ನೂ ಶಾಸನ ಸಭಾ ಸದಸ್ಯರಾದ ಶ್ರೀ ಕೆ ಪಟ್ಟಾಭಿರಾಮಯ್ಯನವರು ಸರ್ಕಾರಿ ಮಾಧ್ಯಮಿಕ ಶಾಲಾ ಕಟ್ಟಡದ ಪ್ರಾರಂಭೋತ್ಸವವನ್ನೂ ಅದೇ ಸಮಯದಲ್ಲಿ ನೆರವೇರಿಸಿದರು ತುಮಕೂರಿನ ಶ್ರೀ ಬಿ ಹುಚ್ಚೇಗೌಡರು ಅಧ್ಯಕ್ಷತೆ ವಹಿಸಿದ್ದರು ಸ್ಥಳೀಯ ಸಮಿತಿ ಅಧ್ಯಕ್ಷ ಶ್ರೀ ಚಿಕ್ಕೇಗೌಡರು ಸ್ವಾಗತ ಭಾಷಣ ಮಾಡಿದರು

ಶ್ರೀ ಇಮಾಮರು ತಮ್ಮ ಭಾಷಣದಲ್ಲಿ ರಾಜ್ಯಾಂಗದ ವಿಧಿಯ ಪ್ರಕಾರ, ಮಕ್ಕಳಿಗೆ ೧೪ ವರ್ಷಗಳ ತನಕ ಉಚಿತ ವಿದ್ಯಾಭ್ಯಾಸವನ್ನು ಸರ್ಕಾರದವರು ಕಲ್ಪಿಸಬೇಕೆಂದೂ, ಸಂಸ್ಥಾನದಲ್ಲಿ ಆ ಕರ್ತವ್ಯವನ್ನು ನಿರ್ವಹಿಸಿಲ್ಲವೆಂದೂ ತಿಳಿಸಿದರು. ತಾವು ನಡೆಸಿದ ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಲು ಗವರ್ನರರು ಮೊದಲು ಒಪ್ಪಿ, ನಂತರ ಆಡಳಿತ ಪಕ್ಷದವರ ಪ್ರಭಾವದಿಂದ ನಿರಾಕರಿಸಿದುದನ್ನು ಟೀಕಿಸಿದರು ಗವರ್ನರರು ಪಕ್ಷಾತೀತರೆಂದೂ ಮಂತ್ರಿಗಳೂ ಆಡಳಿತ ವರ್ಗದವರೂ ಹಾಗೆಯೇ ಇರಬೇಕೆಂದೂ ಅವರು ಸೂಚಿಸಿದರು.

ಶ್ರೀ ಕೆ ಪಟ್ಟಾಭಿರಾಮಯ್ಯನವರು ಮಾತನಾಡಿ, ಸರ್ಕಾರದ ಸಹಾಯಕ್ಕಾಗಿ ಕಾಯದೆ ಅರಕೆರೆಯ ಮಹಾಜನರು ತಮ್ಮ ಮಕ್ಕಳ ಪುರೋಭಿವೃದ್ಧಿಗೆ ಕೈಗೊಂಡಿರುವ ಕಾರ್ಯಕ್ರಮಕ್ಕಾಗಿ ಅವರನ್ನು ಅಭಿನಂದಿಸಿದರು ಸರ್ಕಾರದ ಸಹಾಯ ದೊರೆಯದಿದ್ದುದಕ್ಕೆ ಆಡಳಿತ ಪಕ್ಷದ ತಂತ್ರವೇ ಕಾರಣವೆಂದೂ ಅವರು ಹೇಳಿದರು

ಶ್ರೀ ಕೆ ಆರ್ ಕಾರಂತರು ತಮ್ಮ ಭಾಷಣದಲ್ಲಿ ಆಡಳಿತ ಪಕ್ಷದವರು ಸ್ವಾರ್ಥಕ್ಕಾಗಿ ಇಡೀ ದೇಶವನ್ನೇ ಉಪಯೋಗಿಸುತ್ತಿರುವರೆಂದೂ, ಎಲ್ಲೆಲ್ಲೂ ಲಂಚ, ವಂಚನೆ ಮತ್ತು ಮೋಸವು ತಾಂಡವವಾಡುತ್ತಿರುವುದಾಗಿ ವರದಿಗಳು ಬರುತ್ತಿವೆಯೆಂದೂ ಹೇಳಿ, ಜನ ಸಾಮಾನ್ಯರು ಎಚ್ಚೆತ್ತು ಈ ದುಷ್ಪ್ರವೃತ್ತಿಗಳನ್ನು ತಪ್ಪಿಸಬೇಕೆಂದು ತಿಳಿಸಿದರು

ಮೊದಲು ಶ್ರೀಮತಿ ಶಾಂತರಾಜಮ್ಮಣ್ಣಿಯವರಿಂದ ಪ್ರಾರ್ಥನ ನಡೆಯಿತು ಆ॥ ವಿ॥ ಬಿ ದೇವೇಂದ್ರಪ್ಪನವರ ಗಾಯನ ಮತ್ತು ಕುಮಾರಿ ಶಾರದಾರವರಿಂದ ನೃತ್ಯಗಳೂ ಏರ್ಪಾಡಾಗಿದ್ದುವು

ಕಾಂಗ್ರೆಸ್ ಉಮೇದುವಾರರ ಆಯ್ಕೆ

ಮುಖ್ಯ ಮಂತ್ರಿ ಚುನಾವಣಾ ಸಮಿತಿ ಅಧ್ಯಕ್ಷರ ಬಳಿ ಕಾರ್ಯಕರ್ತರ ನಿಯೋಗ

ಬೆಂಗಳೂರು ೧೧

ಕಾಂಗ್ರೆಸ್ ಉಮೇದುವಾರರ ಆಯ್ಕೆ ಬಗ್ಗೆ ಅತೃಪ್ತಿ ಸೂಚಿಸಲು ಇಲ್ಲಿ ಕಳೆದ ಭಾನುವಾರ ಸೇರಿದ್ದ ಕಾರ್ಯಕರ್ತರ ಸಮ್ಮೇಳನದ ಪರವಾಗಿ ಶ್ರೀ ಪಿ ಆರ್ ರಾಮಯ್ಯ ಮತ್ತು ಶ್ರೀ ಎಸ್ ಕರಿಯಪ್ಪನವರು ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಮೈಸೂರು ಪ್ರಾದೇಶಿಕ ಚುನಾವಣಾ ಸಮಿತಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಬಳಿ ನಿಯೋಗ ಹೋಗಿದ್ದರು ಚುನಾವಣಾ ಸಮಿತಿಯು ಆರಿಸಿರುವ ಸ್ಪರ್ಧಿಗಳಲ್ಲಿ ಅನೇಕರು ಸರಿಯಾದವರಲ್ಲವೆಂದೂ ಅರ್ಹರಾದವರನ್ನು ಕೈ ಬಿಡಲಾಗಿದೆಯೆಂದೂ ನಿಯೋಗದವರು ತಿಳಿಸಿದುದಾಗಿ ಗೊತ್ತಾಗಿದೆ ಚುನಾವಣೆಗಳನಂತರ ಅಧಿಕಾರವನ್ನು ಆಕ್ರಮಿಸಿಕೊಳ್ಳುವ ದೃಷ್ಟಿಯಿಂದ ಪಟ್ಟಿಯನ್ನು ಸಿದ್ಧಗೊಳಿಸಲಾಗಿರುವುದೆಂದೂ ವೈಯಕ್ತಿಕ ಅರ್ಹತೆ ಮತ್ತು ಒಳ್ಳೆಯ ಕೀರ್ತಿ ಪಡೆದವರನ್ನೇ ಆರಿಸಬೇಕೆಂದೂ, ಕಾಂಗ್ರೆಸ್ಸಿನಲ್ಲಿ ಐಕ್ಯತೆಯನ್ನು ಸಾಧಿಸುವುದೆ ಮುಖ್ಯ ಧ್ಯೇಯವಾಗಿರಬೇಕೆಂದೂ ಅವರುಗಳು ಒತ್ತಾಯಪಡಿಸಿದುದಾಗಿ ಹೇಳಲಾಗಿದೆ

ಯೆಮೆನ್ನಿನ ಮೇಲೆ ಬಾಂಬು ಧಾಳಿಯಿಂದ ನೂರಾರು ಮರಣ

ಏಡನ್ನಿನಿಂದ ೩೫ ಸಾವಿರ ಯೆಮೆನ್ನಿನವರ ಪರಾರಿ

ಪಶ್ಚಿಮ ಜರ್ಮನಿಯ ರಾಜಧಾನಿ ಬಾನ್ ನಗರದಲ್ಲಿರುವ ಯೆಮೆನ್ ದೇಶದ ರಾಯಭಾರ ಕಛೇರಿಯು ಹೇಳಿಕೆ ಹೊರಡಿಸಿ, ಬ್ರಿಟಿಷರು ಯೆಮೆನ್ ರಾಜ್ಯದ ಪಟ್ಟಣಗಳ ಮೇಲೆ ಬಾಂಬು ಧಾಳಿ ಮಾಡುತ್ತಿರುವರೆಂದೂ, ನೂರಾರು ಜನರು ಮಡಿದಿರುವರೆಂದೂ ತಿಳಿಸಿರುತ್ತದೆ

ಏಡನ್ ಆಫ್ರಿಕ ಪ್ರದೇಶದಿಂದ ೩೫ ಸಾವಿರ ಜನರು ಪರಾರಿಯಾಗಿದ್ದಾರೆ ಯೆಮೆನ್ನರ ಹೋರಾಟದಲ್ಲಿ ಈಜಿಪ್ಟ್ ಜನರನ್ನು ಸೇರಿಸಿಕೊಳ್ಳಲು ಪ್ರಯತ್ನವಾಗುತ್ತಿದೆ

ಆಂಡಾಳ್ ದಿನಾಚರಣೆ

ನಗರದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಹಿಳಾ ಸದನದಲ್ಲಿ ನಾಳೆ ಸಂಜೆ ೫ ೩೦ ಗಂಟೆಗೆ ಶ್ರೀ ಆಂಡಾಳ್ ದಿನಾಚರಣೆಯು ಶ್ರೀ ಹೆಚ್ ಆರ್. ರಂಗಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನೆರವೇರುವುದು ಆ ಸಂದರ್ಭದಲ್ಲಿ ಶ್ರೀಮತಿ ರಾಜಂ ಶೇಷಾದ್ರಿ ಅವರಿಂದ ತಿರುಪ್ಪಾವೈ" ಹಾಡುಗಾರಿಕೆಯನ್ನು ಏರ್ಪಡಿಸಲಾಗಿದೆ

ರಹದಾರಿಯಿಲ್ಲದೆ ರೇಡಿಯೋ ಇಟ್ಟುಕೊಂಡಿದ್ದುದಕ್ಕೆ ಜುಲ್ಮಾನೆ

ನಗರದ ಹೊಸಕೇರಿಯ ಶ್ರೀ ಸಿ ನಂಜಪ್ಪ ಎಂಬುವರು ರಹದಾರಿ ಇಲ್ಲದೆ ರೇಡಿಯೋ ಇಟ್ಟುಕೊಂಡಿದ್ದುದನ್ನು ವೈರ್‌ಲೆಸ್ ಇನ್ಸ್‌ಪೆಕ್ಟರ್ ಶ್ರೀ ಸಾಲಪ್ಪನವರು ಪತ್ತೆ ಹಚ್ಚಿ ಹೂಡಿದ್ದ ಮೊಕದ್ದಮೆಯಲ್ಲಿ ಮೊನ್ನೆ ನಗರ ನ್ಯಾಯಾಧೀಶರು ಆಪಾದಿತರಿಗೆ ೩೦ ರೂ ಜುಲ್ಮಾನೆಯನ್ನು ವಿಧಿಸಿದರು.

ನೌಕರರ ಸಂಬಳದ ಪಟ್ಟಿಯಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ

ಸರ್ಕಾರಕ್ಕೆ ೧೦ ೧೫ ಲಕ್ಷ ರೂ. ಹೆಚ್ಚು ವೆಚ್ಚ

ಸ್ವಂ ಸು ಫೋ॥] ಬೆಂಗಳೂರು ೧೧

ಸಂಬಳದ ಪುನರ್ವಿಮರ್ಶೆ ಆಜ್ಞೆ ಸಂಬಂಧವಾಗಿ ಹಲವು ನೌಕರರಿಗೆ ಕೇವಲ ಕೆಲವಾರು ಆಣೆಗಳಷ್ಟು ಹೆಚ್ಚು ವರಮಾನ ಬರುವುದಷ್ಟೆ. ಅಂತಹವರ ಸಂಬಳವನ್ನು ಹೆಚ್ಚಿಸಲು ಸರ್ಕಾರದವರು ಪರ್ಯಾಲೋಚಿಸುತ್ತಿರುವರು. ಈ ದಿನ ಮಧ್ಯಾಹ್ನ ಮಂತ್ರಿಮಂಡಲವು ಸೇರಿ ಈ ವಿಚಾರವನ್ನು ಚರ್ಚಿಸುವುದು ಹೊಸ ಬದಲಾವಣೆ ಪ್ರಕಾರ ಸಂಬಳವು ಗಣನೀಯವಾಗಿ ಹೆಚ್ಚಿಸಲ್ಪಡದವರಿಗೆ ಕಲಾ ೩ ರೂ. ಹೆಚ್ಚಾಗಿ ಸಿಗುವ ಸಂಭವವಿದೆ. ಇದರಿಂದ ಸರ್ಕಾರಕ್ಕೆ ೧೦-೧೫ ಲಕ್ಷ ರೂ ಹೆಚ್ಚು ವೆಚ್ಚವಾಗುವುದೆಂದು ಹೇಳಲಾಗಿದೆ

ಗಡಿ ಬಳಿ ಭಾರತದ ಸೈನ್ಯ ಶೇಖರಣೆಯೇ ?

ಪಾಕಿಸ್ತಾನದ ವಾರ್ತಾ ಮಂತ್ರಿಯ ಕೊಕ್ಕೆ

ಭಾರತದ ವಿರುದ್ಧವಾಗಿ ಪಾಕಿಸ್ತಾನವು ತನ್ನ ನ್ಯಾಯವಾದ ಬೇಡಿಕೆಗಳನ್ನು ಮುಂದಿಡದೆ ಇರುವಂತೆ ಮತ್ತು ಸ್ವತಂತ್ರ ವಿದೇಶಾಂಗ ನೀತಿ ಹೊಂದದಂತೆ ಮಾಡುವ ಉದ್ದೇಶದಿಂದ ಪಾಕಿಸ್ತಾನದ ಗಡಿ ಬಳಿ ಭಾರತದ ಸೈನ್ಯಗಳನ್ನು ಶೇಖರಿಸಲಾಗಿದೆಯೆಂದು ಅಲ್ಲಿನ ವಾರ್ತಾ ಮಂತ್ರಿ ಸರ್ದಾರ್ ಅಮೀರ್ ಅಜಾಂಖಾನರವರು ಆಪಾದಿಸಿರುತ್ತಾರೆ. ಕಾಶ್ಮೀರದ ಪ್ರಶ್ನೆ ಬಗ್ಗೆ ಭದ್ರತಾ ಸಮಿತಿಯಲ್ಲಿ ಚರ್ಚೆಯ ದಿನವು ಸಮೀಪಿಸುತ್ತಿರುವಂತೆಲ್ಲಾ ಪಾಕಿಸ್ತಾನದ ನಾಯಕರು ಮತ್ತು ಸರ್ಕಾರಿ ಪತ್ರಿಕರು ಯುದ್ಧ ಪ್ರಚಾರವನ್ನು ವಿಶೇಷವಾಗಿ ಮಾಡುತ್ತಿರುವರು

ರಾವಲ್ಪಿಂಡಿ ಬಳಿ ರಿಸಾಲ್ಪುರದಲ್ಲಿ ನೆನ್ನೆ ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ಅಲ್ಲಿನ ವಿಮಾನ ಬಲದ ಕೇಡೆಟ್ಟುಗಳನ್ನುದ್ದೇಶಿಸಿ ಭಾಷಣ ಮಾಡಿ ಭಾರತದೊಡನೆ ಪಾಕಿಸ್ತಾನದ ಸಂಬಂಧವು ಸರಿಯಾಗಿಲ್ಲದಿರುವುದರಿಂದ ಅವರುಗಳು ಎಲ್ಲಾ ಪರಿಸ್ಥಿತಿಗೂ ಸದಾ ಸಿದ್ಧರಾಗಿರಬೇಕೆಂದು ತಿಳಿಸಿದರು

ಕಾಶ್ಮೀರ ಪ್ರಶ್ನೆಯನ್ನು ಭದ್ರತಾ ಸಮಿತಿಯು ಸರಿಯಾಗಿ ಪರಿಶೀಲಿಸದಿದ್ದರೆ ಕಾಶ್ಮೀರಕ್ಕೆ ಅನೇಕ ಗುಡ್ಡಗಾಡಿನವರು ಪ್ರವೇಶಿಸುವರೆಂದು ಪಾಕಿಸ್ತಾನದ ರೇಡಿಯೊ ತಿಳಿಸಿದೆ.

ಸಂಸ್ಥಾನದಲ್ಲಿ ಈಗಿನ ಗೇಣಿ ಶಾಸನಗಳಿಗೆ ೧ ವರ್ಷ ಜೀವದಾನ

ಕೇಂದ್ರ ಯೋಜನಾ ಮಂಡಲಿಯವರ ಸೂಚನೆ

ಸ್ವಂ ಸು ಫೋ॥] ಬೆಂಗಳೂರು ೧೧

ಸಂಸ್ಥಾನದ ೪ ವಿಭಾಗಗಳಲ್ಲಿ ಈಗ ಜಾರಿಯಲ್ಲಿರುವ ಗೇಣಿ ಶಾಸನಗಳನ್ನು ಇನ್ನೂ ಒಂದು ವರ್ಷ ಮುಂದುವರಿಸುವ ಬಗ್ಗೆ ಕೇಂದ್ರದ ಯೋಜನಾ ಮಂಡಲಿಯವರು ಸಂಸ್ಥಾನ ಸರ್ಕಾರಕ್ಕೆ ಸೂಚನೆಯಿತ್ತಿರುವರೆಂದು ವರದಿಯಾಗಿದೆ

ಸಹಕಾರ ಸಂಸ್ಥೆಗಳಲ್ಲಿ ಲಕ್ಷಾಂತರ ರೂ. ದುರುಪಯೋಗ

ತನಿಖೆಗಾಗಿ ಸಚಿವ ಭೀಮಪ್ಪನಾಯಕರ ಆಜ್ಞೆ

ಬೆಂಗಳೂರು ೧೧

ಸಂಸ್ಥಾನದ ಹಲವಾರು ಸಹಕಾರ ಸಂಸ್ಥೆಗಳಲ್ಲಿ ಲಕ್ಷಾಂತರ ರೂಪಾಯಿಗಳ ದುರುಪಯೋಗವಾಗಿರುವ ಹಲವಾರು ನಿದರ್ಶನಗಳು ಗೊತ್ತಾಗಿ ಈ ಬಗ್ಗೆ ತನಿಖೆ ನಡೆಸಲು ಬೊಂಬಾಯಿಯ ನಿವೃತ್ತ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆಯೆಂದು ವರದಿಯಾಗಿದೆ. ಸಹಕಾರ ಮಂತ್ರಿ ಭೀಮಪ್ಪನಾಯಕರು ಈ ವಿಚಾರವನ್ನು ತಿಳಿಸಿ, ಈ ರೀತಿ ದುರುಪಯೋಗವಾಗಿರುವ ವಿದ್ಯಮಾನಗಳ ಬಗ್ಗೆ ತಮಗೆ ವರದಿ ಬಂದಿರುವುದಾಗಿಯೂ ಅವರಲ್ಲಿ ಎಷ್ಟು ಸಂಸ್ಥೆಗಳು ಮತ್ತು ಜನರು ಈ ಕೆಲಸದಲ್ಲಿ ತೊಡಗಿರುವರೆಂಬುದನ್ನೂ ತಿಳಿಸಲಾಗಿದೆಯೆಂದೂ, ಮುಂದೆ ಹಣ ವಸೂಲಾತಿ ಮುಂತಾದ ಕ್ರಮದ ವಿಚಾರವನ್ನು ಸೂಚಿಸಲಾಗಿದೆಯೆಂದೂ ತಿಳಿಸಿರುತ್ತಾರೆ

ಸಾರ್ವಜನಿಕರಿಗೆ ಮುಖ್ಯ ಮಂತ್ರಿಗಳ ಭೇಟಿ ಕಾಲದ ಬದಲಾವಣೆ

ಮುಖ್ಯ ಮಂತ್ರಿಗಳು ಬೆಂಗಳೂರಿನಲ್ಲಿರುವಾಗ ಸಾರ್ವಜನಿಕರಿಗೆ ನಿತ್ಯವೂ ಸಂಜೆ [illegible] ರಿಂದ [illegible] ಗಂಟೆವರೆಗೂ ಶನಿವಾರಗಳಲ್ಲಿ ಬೆಳಿಗ್ಗೆ ೧೧ ರಿಂದ ೧೨ ರವರೆಗೂ ಭೇಟಿ ಕೊಡಲಿದ್ದು, ಅತ್ಯಂತ ಅವಸರದ ವೇಳೆಯಲ್ಲಿ ಆಗತ್ಯವಿದ್ದಾಗ ವಿಧಾನಸೌಧದಲ್ಲಿ ಮಧ್ಯಾಹ್ನ ೧ ಗಂಟೆನಂತರ ಭೇಟಿ ಕೊಡುವರು

ವರ್ತಕರಿಂದ "ಸ್ವಾತಂತ್ರ್ಯ ಪಕ್ಷ"ದ ಸ್ಥಾಪನೆ

ಕಾಂಗ್ರೆಸ್ ಸರ್ಕಾರದ ಆರ್ಥಿಕ ರಹದಾರಿ ಮತ್ತು ಅತಿ ಸಮಾಜವಾದಿ ಧೋರಣೆ ಮತ್ತು ಕಾರ್ಯಕ್ರಮಗಳನ್ನು ವಿರೋಧಿಸುವ ಸಲುವಾಗಿ ಸ್ವಾತಂತ್ರ್ಯ ಪಕ್ಷ ಎಂಬುದನ್ನು ನೆನ್ನೆ ಇಲ್ಲಿ ಸೇರಿದ್ದ ವಾಣಿಜ್ಯೋದ್ಯಮಿಗಳು ಮತ್ತು ವರ್ತಕರ ಸಭೆಯಲ್ಲಿ ಸ್ಥಾಪಿಸಲಾಯಿತು. ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಶ್ರೀ ಡಿ ಎಸ್ ಮೊಹಂತಿಯವರು ಸಭೆಯನ್ನು ಕರೆದಿದ್ದರು. ಹೊಸ ಪಕ್ಷವನ್ನು ರಚಿಸುವುದು ಚುನಾವಣೆ ಕಾಲದಲ್ಲಿ ಸಾಧ್ಯವಿಲ್ಲವೆಂದೂ, ರಾಜಕೀಯ ಅತ್ಯವಶ್ಯವಾಗುವುದೆಂದೂ ಶ್ರೀ ಬಿ ಎಸ್ ಗುಪ್ತರವರು ತಿಳಿಸಿದರು

ಬ್ರಿಟನ್ನಿನಲ್ಲಿ ಮಹಾ ಚುನಾವಣೆಗೆ ಕಾರ್ಮಿಕ ಪಕ್ಷದ ಒತ್ತಾಯ

ಅಂತೋನಿ ಈಡನ್ನರ ರಾಜೀನಾಮೆ ಸಂಬಂಧವಾಗಿ ಬ್ರಿಟನ್ನಿನಲ್ಲಿ ಮಹಾ ಚುನಾವಣೆಗಳನ್ನು ನಡೆಸಬೇಕೆಂದು ಕಾರ್ಮಿಕ ಪಕ್ಷದ ಉಪನಾಯಕ ಜೇಮ್ಸ್ ಗ್ರಿಫಿತ್ಸ್‌ರವರು ಸೂಚಿಸಿರುತ್ತಾರೆ. ಮಹಾ ಚುನಾವಣೆಗಳು ನಡೆದರೆ ಕಾರ್ಮಿಕ ಪಕ್ಷವೇ ಜಯಗಳಿಸುವುದೆಂದು ಮಾಜಿ ಪ್ರಧಾನಿ ಅಟ್ಲಿಯವರು ತಿಳಿಸಿರುತ್ತಾರೆ

ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ವಿಘ್ನೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಈ ರಾತ್ರಿ ೮ ಘಂಟೆಗೆ ಶ್ರೀ ಪಿ. ಆರ್ ಸುಬ್ಬರಾಮಯ್ಯನವರು ಭಕ್ತ ರಾಮದಾಸ್ ಎಂಬ ಹರಿಕಥೆಯನ್ನು ನಡೆಸುವರು.

ರುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಫ್ರೂಟಿಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು
[illegible] ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ
(ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ

ಕರ್ನಾಟಕದ ವಿದ್ಯುಚ್ಛಕ್ತಿ ಬೋರ್ಡು ಆಡಳಿತ ಸರ್ಕಾರಕ್ಕೆ

ಮೈಸೂರಿನಲ್ಲಿ ಸ್ವತಂತ್ರವಾಗಿರುವ ಬೊಂಬಾಯಿ ಪ್ರದೇಶದ ವಿದ್ಯುಚ್ಛಕ್ತಿ ಬೋರ್ಡಿನ ಆಡಳಿತವನ್ನು ಸಂಸ್ಥಾನ ಸರ್ಕಾರದವರು ತಮ್ಮ ವಶಕ್ಕೆ ಬರುವ ಮಾರ್ಚಿ ಯೊಳಗೆ ತೆಗೆದುಕೊಳ್ಳುವರೆಂದೂ ಅವಕ್ಕೆ ತಕ್ಕ ಪರಿಹಾರವನ್ನು ಬೋರ್ಡಿನವರಿಗೆ ಕೊಡಲಾಗುವುದೆಂದೂ ಪುರಾಮತ್ತು ಮಂತ್ರಿ ಎಚ್. ಕೆ ವೀರಣ್ಣಗೌಡರು ತಿಳಿಸಿರುತ್ತಾರೆ. ನಗರದಲ್ಲಿ ವಿದ್ಯುಚ್ಛಕ್ತಿ ಬೋರ್ಡಿನವರು ವಿದ್ಯುತ್ತನ್ನು ಯೂನಿಟ್ಟಿಗೆ ೧೦ ಆಣೆಯಂತೆ ಒದಗಿಸುತ್ತಿರುವರೆಂದು ಹೇಳಲಾಗಿದೆ

ಗುಂಡ್ಲುಪೇಟೆ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ವಾರ್ಷಿಕೋತ್ಸವ

ಮೇಲ್ಕಂಡ ಸಂಘದ ವಾರ್ಷಿಕೋತ್ಸವವು ಕಳೆದ ೬ನೇ ತಾರೀಕು ಮೈಸೂರು ಡಿ ಡಿ ಪಿ ಐ ಶ್ರೀ ಟಿ ವಾಸುದೇವಯ್ಯನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ರೇಂಜ್ ವಿದ್ಯಾಧಿಕಾರಿಗಳು ಸ್ವಾಗತ ಭಾಷಣ ಮಾಡಿದರು. ಗ್ರಾಮಕಲಾ ಪ್ರದರ್ಶನ ಸಂಗೀತ, ಫ್ಯಾನ್ಸಿ ಡ್ರೆಸ್ ಪ್ರದರ್ಶನಗಳು ನಡೆದುವು. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೆಚ್ ವಿ ಶ್ರೀರಂಗರಾಜುರವರು ವೃತ್ತಿ ಶಿಕ್ಷಣ ದೈಹಿಕ ಶಿಕ್ಷಣವನ್ನು ಕುರಿತು ವಿಚಾರವಾಗಿ ಭಾಷಣ ಮಾಡಿದರು. ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಭಾ ಸದಸ್ಯ ಶ್ರೀ ಹೆಚ್ ಕೆ. ಶಿವರುದ್ರಪ್ಪನವರು ಭಾಷಣ ಮಾಡಿದರು

ಕಾರ್ಯದರ್ಶಿ ಶ್ರೀ ಟಿ ರಂಗಸ್ವಾಮಯ್ಯನವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯಿಂದ ಸಮಾರಂಭವು ಮುಕ್ತಾಯವಾಯಿತು.

ಮೈಸೂರು ಪೇಟೆ ಧಾರಣೆ

ಬಂಗಾರ ಕೆನೆ ಮತ್ತು

ಜಯಮುಕ್ತಾ ಸಣ್ಣ	೨೮	೮	೦	೩೩	೨	೦
ರತ್ನಚೂಡಿ	೨೭	೪	೦	೨೯	೧೪	೦
ಆನೆಕೊಂಬಿನ ಸಣ್ಣ	೨೮	೨	೦			
ಕೋಲಂ ಸಣ್ಣ	೨೯		೨	೨೯	೮	೦
ರಾಗಿ	೨೯	೬	೦	೩೫	೧೦	೦
ಜೋಳ	೩೬	೪	೦	೩೮	೪	೦
ಕಡಲೆಕಾಯಿ	೧೭	೦	೦	೨೫	೬	೦
[illegible]	೪೭	೦	೦			
ಉಚ್ಚೆಳ್ಳು	೩೯	೦	೦	೪೪	೮	೦
ಹುರುಳಿ	೨೪	೪	೦	೨೭	೧೨	೦
ಹೆಸರು	೪೬	೦	೦	೫೦	೧೦	೦
ಕಡಲೆಬೇಳೆ	೪೧	೧೪	೦	೫೫	೦	೦
ಉದ್ದು	೫೯	೧೪	೦			
ಅವರೆ	೪೮	೧೪	೦			
ತೊಗರಿ	೩೯	೧೨	೦			
ಧನಿಯ	೨೫	೧೨	೦	೨೮	೪	೦
[illegible] ಬೀಜ	೪೦	೨	೦	೪೭	೨	೦
ಹುಣಸೇಹಣ್ಣು	೨	೦	೦	೫	೫	೦
ಸೀಗೆಕಾಯಿ	೬	೦	೦	೮	೨	೦
ಮೆಣಸಿನಕಾಯಿ	೧೦	೧೪	೦	೧೯	೧೨	೦

CHANGE OF NAME

I, K R Narasimhan, T No. 1126 Skilled artisan of Paint shop in the Southern Railway Workshop, Mysore South have changed my name from "K. R Narasimhan" to "K R Narasimha Iyengar" on my own desire

K R Narasimha Iyengar,

11—1—57

ಸಮಾಜವಾದಿಗಳಿಂದ ನಿರ್ಮೂಲೀಕರಣ ಕಾರ್ಯ

ಭಾರತದ ಸಮಾಜವಾದಿ ಪಕ್ಷದವರು ಹೊರಡಿಸಿರುವ ಚುನಾವಣಾ ಘೋಷಣೆಯಲ್ಲಿ ಅವರ ಪಕ್ಷಕ್ಕೆ ಚುನಾವಣೆಗಳಲ್ಲಿ ಬಹುಮತ ಬರದಿದ್ದರೆ ಪಕ್ಷದ ಸದಸ್ಯರು ಬೇರೆ ವಿಧಾನದ ಕಾರ್ಯಕ್ರಮಗಳನ್ನು ಕೈಗೊಳ್ಳುವರೆಂದು ತಿಳಿಸಲಾಗಿದೆ. ಅನಕ್ಷರತೆಯನ್ನು ತೊಡೆದುಹಾಕಲು ೧೦ ವರ್ಷದ ಯೋಜನೆ, ವಾರ್ಧಾ ಮಾದರಿಯ ಕಕ್ಕಸ್ಸುಗಳ ರಚನೆ ಮುಂತಾದ ನಿರ್ಮೂಲೀಕರಣ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ

ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷಾಲಂಕಾರ

ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ನಾಳೆ ಭೋಗಿಹಬ್ಬದ ಪ್ರಯುಕ್ತ ಎಲ್ಲಾ ದೇವರುಗಳಿಗೂ ಅಭಿಷೇಕ, ಅಲಂಕಾರ ಮತ್ತು ವಿಶೇಷ ಪೂಜೆಗಳನ್ನು ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೧ ರವರೆಗೆ ದೇವಸ್ಥಾನದ ನೌಕರರೂ ಮತ್ತು ಭಕ್ತರೂ ಸೇರಿ ನಡೆಸುವರು.

ಪೂಣಚ್ಚರವರಿಂದ ಕೈ ಕಸಬು ವಸ್ತುಗಳ ಪ್ರದರ್ಶನಾರಂಭ

ಇದೇ ೧೫ನೇ ತಾರೀಕಿನಿಂದ ೨೧ ರವರೆಗೆ ನಗರದ ವಸ್ತು ಪ್ರದರ್ಶನದ ಕಟ್ಟಡದಲ್ಲಿ ನಡೆಯುವ ಅಖಿಲ ಭಾರತ ಕೈಕಸಬು ಸಪ್ತಾಹದ ಅಂಗವಾಗಿ ಗುಡಿಕೈಗಾರಿಕಾ ಕೆಲಸಗಾರರ ಸಮ್ಮೇಳನವೊಂದು ನಡೆಯುವುದು ಕೈಕಸಬು ವಸ್ತುಗಳ ಪ್ರದರ್ಶನವೂ ಏರ್ಪಾಡಾಗಿದೆ. ಅದರ ಆರಂಭೋತ್ಸವವನ್ನು ೧೫ನೇ ತಾರೀಕು ಕೈಗಾರಿಕಾ ಮಂತ್ರಿ ಶ್ರೀ ಸಿ ಎಂ ಪೂಣಚ್ಚರವರು ನೆರವೇರಿಸುವರು ಸರ್ವರಿಗೂ ಸ್ವಾಗತವಿದೆ

ಹಿಂದಿ ತರಗತಿಗಳು

ನಗರದ ಹೊಸಕೇರಿ ಸೀತಾರಾಮರಾಯರ ರಸ್ತೆಯಲ್ಲಿರುವ ಹಿಂದಿ ಸಾಹಿತ್ಯ ಸಮಿತಿಯ ಆಶ್ರಯದಲ್ಲಿ ೫೭ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ಸಂಸ್ಥಾನದ ಹಿಂದಿಸಾಹಿತ್ಯ ಪರಿಷತ್ತಿನ ಪ್ರಥಮಾ, ಮಧ್ಯಮಾ, ಉತ್ತಮಾ, ಸಾಹಿತ್ಯಪ್ರವೇಶಿಕಾ ಮತ್ತು ಹಿಂದಿ ಸಾಹಿತ್ಯ ಪ್ರವೀಣಾ ಮುಂತಾದ ಪರೀಕ್ಷೆಗಳಿಗೆ ಈ ತಿಂಗಳು ೧೬ ರಿಂದ ತರಗತಿಗಳನ್ನು ನಡೆಸಲಾಗುವುದು ಹಿಂದಿ ವಿದ್ಯಾರ್ಥಿಗಳು ಬಂದು ಸೇರಬಹುದು

ಉತ್ತರಾಯನ ಪುಣ್ಯಕಾಲದ ಪೂಜೆ ಸೇವೆ

ನಗರದ ವಿದ್ಯಾರಣ್ಯಪುರದಲ್ಲಿರುವ ಶ್ರೀ [illegible] ಕಾಶ್ರಮದಲ್ಲಿ ನಾಳೆಯಿಂದ ೧೬ರ ವರೆಗೆ ನಿತ್ಯವೂ ಶ್ರೀ ಕೃಷ್ಣ ಚೈತನ್ಯರವರು ದೇಶದ ಕಲ್ಯಾಣ ಮತ್ತು ಭಕ್ತರ ಕ್ಷೇಮಾರ್ಥವಾಗಿ ಅಭಿಷೇಕ ಅರ್ಚನಾದಿಗಳನ್ನು ಉತ್ತರಾಯನ ಪುಣ್ಯಕಾಲದ ಸಲುವಾಗಿ ನಡೆಸುವರು ಭಕ್ತಾದಿಗಳು ಸೇವೆ ಸಲ್ಲಿಸಲು ಏರ್ಪಾಡು ಮಾಡಲಾಗಿದೆ.

SREE GANESH
TALKIES
Gala Release on : 12-1-57
THAT CERTAIN FEELING
(Vistavision & Technicolor)
With -Bob Hope and
Eva Marie Saint

Edited, Printed and Published by A R Nagaraju at Sadhvi Press, D Subbiah Road, Mysore

ದಕಾಯಿತರಿಂದ ಒಬ್ಬನ ಕೊ

ನಾಲ್ವರ ನಾಸಿಕ ಛೇದನ

ಗ್ವಾಲಿಯರ್ ಬಳಿ ಪಿರೇಬಾ ಎಂಬ ಹಳ್ಳಿಯಲ್ಲಿ ಕಳೆದ ಮಂಗಳವಾರ ರಾತ್ರಿ ದಕಾಯಿ ಧಾಳಿ ಮಾಡಿ, ಒಬ್ಬ ಚೌಕಿದಾರನನ್ನು ಗು ಹೊಡೆದು ಕೊಂದು, ಒಬ್ಬ ಪಾಡಮಾಲಿ ಸೇರಿ ನಾಲ್ವರ ಮೂಗನ್ನು ಕುಯ್ದು ಹಾಕಿ ದಾಗಿ ವರದಿ ಯಾಗಿದೆ.

ಹರಿಕಥೆ

ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾ ಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ರಾತ್ರಿ ೮ ಗಂಟೆಗೆ ವೇ|| ಬ್ರಹ್ಮಶ್ರೀ ವೇಣು ಪಾಲದಾಸರಿಂದ ಭಕ್ತಗಾಲವ ಚರಿತ್ರೆ ಎಂ ರಿಕಥೆಯು ಏರ್ಪಾಡಾಗಿದೆ.

ಚಾಯಿಕಾಯಿ ಹಲಗೆಗಳು
ಉತ್ತಮವಾದ ಚಾಯಿಕಾಯಿ ಹಲಗೆಗ
ದೊರೆಯುತ್ತವೆ ಕೆಳಗೆ ಕಂಡ ವಿಳಾಸದಲ್ಲಿ
ಚಾರಿಸಿ:—
ಸಾಧ್ವಿ ಆಫೀಸ್, ಮೈಸೂರು

ಉತ್ತಮವಾದ ಕಟ್ಟಡದ
ಪ್ಲಾನುಗಳುಮತ್ತು ಬ್ಲೂಪ್ರಿಂಟ್
ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್
ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದಕ್ಕ
ಗಾಯತ್ರಿ ಟಾಕೀಸ್ ಎದುರು
ಹ್ಯಾಟ್ ಅಂಗಡಿಯಲ್ಲಿ
ಬಿ ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿ
ವಾರದ ರಜ : ಸೋಮವಾರ

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಕು
ವಿಶ್ವ ವಿಖ್ಯಾತವಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 59
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಇವರು ಸಕಾಲಕ್ಕೆ ಸಂಯೋಗ ಸ್ವರಸದಲ್ಲಿರುವ
ಪಿಯೂಷದಲ್ಲಿ ಸಂಶೋಧಿಸುವರು
ನವರತ್ನ — ಕಲ್ಪ
ಉಪಯೋಗಗಳು
ಇದು ವಜ್ರ, ಕೆಂಪು, ಮುತ್ತು, ಹವಳ,
ಗೋಮೇಧಿಕ, ನೀಲ, ಪಚ್ಚ ರಾಗಿಣಿ ಮತ್ತು
ಶಿಲಿ ಮುಂತಾದ 9 ಅಮೂಲ್ಯ ಹರಳುಗ
ಯೋಗ. ಇದರಿಂದ ನರಗಳ ದೌರ್ಬಲ್ಯ,
ಕ ಸಂಬಂಧದ ವ್ಯಾಧಿಗಳು,
ರಕ್ತದೋಷ, ಮೂಲವ್ಯಾಧಿ, ಮಾಲಿನ್ಯ,
ಮೂತ್ರ, ಅಸ್ತಮಾ ಮತ್ತು ನಿಮ್ಮ ಇತರ
ಸಾಧನ್ನ ಹಾಗೂ ತೀವ್ರವಾದ ವಾಯು
ಸಂಪೂರ್ಣವಾಗಿಗುಣ ಹೊಂದುವುದು
ಆರೋಗ್ಯದಾಯಕ ಔಷಧ ಇದೊಂದೇ
ವಿಶಾಖಪಟ್ಟಣ, ರಾಜಮಹೇಂದ್ರಿ, ಗುಂ
ಬೆಜವಾಡ, ಮದ್ರಾಸು, ಬೆಂಗಳೂರು,
ತ್ತೂರು, ಕುಧುರೆ ತಿರುಚನಾಪಳ್ಳಿ, ಸೇಲಂ,
ರ್ನಾಕುಲಂ, ಕೊಟ್ಟಾಯಂ, ತ್ರಿವೇಂದ್ರಂ,
ಲ್ಲೇರಿ ಪಾಂಡಿಚೆರಿ, ಕುಂಭಕೋಣ
ಹೈದರಾಬಾದುಗಳ ವಿಳಾಸ ಮತ್ತು ಇತರ
ಸಾಹಿತ್ಯಗಳಿಗೆ ಬರೆಯಿರಿ –
NAVRATNA KALPA PHARMACY,
JULLUNDUR CITY (India)

THE CHAMPION METROPOLITAN COLLEGE OF COMMERCE
"Co-operators' Home" 100' Road Mysore
GRADUATES AND UNDERGRADUATES may now join a new batch of students who are being admitted for COST & WORKS ACCOUNTANCY classes
M. S PUTTANNA, Vice Principal
P SUBBARAYA SASTRY Principal

ಲಕ್ಷ್ಮಿ ★ ಚಿತ್ರ
ಮಕರ ಸಂಕ್ರಾಂತಿ ವಿಶೇಷ ಆಕರ್ಷಣೆ
ವರಲಕ್ಷ್ಮಿ, ಪಿಕ್ಚರ್ಸ್‌ರವರ ನಾಗೇಶ್ವರರಾವ್, ಎಸ್ ವರಲಕ್ಷ್ಮಿ, ವಿ ನಾಗಯ್ಯ, ಎಸ್ ವಿ. ರಂಗರಾವ್, ಸೂರಿಬಾಬು, ರೇಲಂಗಿ, ಋಷ್ಯೇಂದ್ರ ಮಣಿ ಮುಂತಾದವರು ನಟಿಸಿರುವ ತೆಲುಗು ಚಿತ್ರ
12—1—57 ರಿಂದ ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಆಟಗಳು
✱ ಸತೀ ಸಾವಿತ್ರಿ ✱
([illegible] ಗಳು ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಪಾಸುಗಳನ್ನೂ ಮನ್ನಾ ಮಾಡಲಾಗಿದೆ)

ರಿಜಿಸ್ಟರ್ ನಂ. 792

ಸತ್ಯನಾರಾಯಣ
ರೈಸ್ ಮಿಲ್
ಶಿವರಾಂಪೇಟೆ, ಮೈಸೂರು
(ರಾಜಕಮಲ್ ಟಾಕೀಸ್ ಹತ್ತಿರ)
★
ಈಗ ಸುಗ್ಗಿ ಕಾಲ-ನಮ್ಮ ಮಿಲ್ಲಿನ
ಲ್ಲಿ ಸೊಗಸಾಗಿ, ಸರಿಯಾದ
ಅಳತೆಗೆ ಅಕ್ಕಿ ಇಳಿಸು
ತ್ತೇವೆ ಪರೀಕ್ಷಿಸಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
★
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71|1. [illegible]
ಶ್ರೀ [illegible] ಬಳಿ,
ಬೆಂಗಳೂರು-2

ಸಂಪುಟ : ೧೫] SADHVI : TUESDAY 15—1—1957 ಮೈಸೂರು : ಮಂಗಳವಾರ ೧೫—೧—೧೯೫೭ : [ಸಂಚಿಕೆ : ೧೭

ಕ್ರಾಫರ್ಡ್ ಭವನದ ಬಳಿ ೫೦೦ ವಿದ್ಯಾರ್ಥಿಗಳ ಪ್ರದರ್ಶನ

ಜಯಪುರದ ಅಂಚೆ ಅಧಿಕಾರಿಗೆ ೨ ವರ್ಷ ಕಠಿಣ ಸಜಾ

೧.೭೮ ಲಕ್ಷ ರೂ. ದುರುಪಯೋಗದ ಆಪಾದನೆ

ಜಯಪುರದ ಪ್ರಧಾನ ಅಂಚೆ ಕಛೇರಿಯ ಸೂಪರ್‌ವೈಸರರೊಬ್ಬರು ಸೇವಿಂಗ್ಸ್ ಬ್ಯಾಂಕ್ ಕಾಗದಪತ್ರಗಳನ್ನು ಬದಲಾಯಿಸಿ ರುಜುಗಳ ಫೋರ್ಜರಿ ಮಾಡಿದುದಕ್ಕಾಗಿ ಎರಡು ವರ್ಷ ಕಠಿಣ ಸಜಾ ಮತ್ತು ೯ ಸಾವಿರ ರೂ. ದಂಡ, ತಪ್ಪಿದರೆ ಮತ್ತೊಂದು ವರ್ಷ ಕಠಿಣ ಸಜಾ ಶಿಕ್ಷೆ ವಿಧಿಸಲ್ಪಟ್ಟಿರುವರು. ಅವರು ಹಲವು ಡಿಪಾಸಿಟರುಗಳ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ಒಂದೂ ಮುಕ್ಕಾಲು ಲಕ್ಷ ರೂ ಗಳನ್ನು ಅಕ್ರಮವಾಗಿ ಪಡೆದಿದ್ದರೆಂದು ಆಪಾದಿಸಲಾಗಿತ್ತು

ಒಳ್ಳೆಯ ಆಹಾರ ಕೊಡದುದಕ್ಕೆ ಕಪಿಗಳ ಉಪವಾಸ ಮುಷ್ಕರ

ಹಾಂಕಾಂಗಿನಿಂದ ಹಾಲೆಂಡಿಗೆ ವಿಮಾನದಲ್ಲಿ ಕೊಂಡೊಯ್ಯಲಾಗುತ್ತಿದ್ದ ೩೦ ಕಪಿಗಳನ್ನು ಕಳೆದವಾರ ಕಲ್ಕತ್ತೆಯ ಡಂಡಂ ವಿಮಾನ ನಿಲ್ದಾಣದಲ್ಲಿ ತಡೆದು, ಬೋನುಗಳಲ್ಲಿ ಕೂಡಿಟ್ಟು, ಸರಿಯಾದ ಆಹಾರವನ್ನು ಕೊಡದಿದ್ದ ಪ್ರಯುಕ್ತ ಅವುಗಳು ಅಂದಿನಿಂದ ಆಹಾರವನ್ನೇ ತೆಗೆದುಕೊಳ್ಳದೆ ಮುಷ್ಕರ ಹೂಡಿವೆಯೆಂದು ವರದಿಯಾಗಿದೆ ಇವನ್ನು ಪರಿಶೀಲಿಸಿದ ವೈದ್ಯರು ಅವುಗಳಿಗೆ ಉತ್ತಮವಾದ ಆಹಾರವನ್ನು ಒದಗಿಸಬೇಕೆಂದು ಸಲಹೆ ಮಾಡಿರುವರು

ಪ್ರೊ|| ಟಾಯ್ನ್‌ಬಿಯವರ ಉಪನ್ಯಾಸ

ವಿಶ್ವವಿಖ್ಯಾತ ಇತಿಹಾಸಜ್ಞರಾದ ಪ್ರೊ|| ಆರ್ನಾಲ್ಡ್ ಜೆ ಟಾಯ್ನ್‌ಬಿಯವರು ಈ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ.ಎ. ಹಾಲಿನಲ್ಲಿ "ಇತಿಹಾಸದಿಂದ ನಾವು ಏನ ಕಲಿಯಬಲ್ಲೆವೇ" ಎಂಬ ವಿಷಯವಾಗಿ ಭಾಷಣ ಮಾಡುವರು.

ಹಿಂದೀ ತರಗತಿಗಳು

ಏಪ್ರಿಲ್ ಮಾಹೆಯಲ್ಲಿ ನಡೆಯುವ ಮೈಸೂರು ಹಿಂದೀ ಸಾಹಿತ್ಯ ಪರಿಷತ್, ಬೆಂಗಳೂರು-ಇವರ ಪ್ರಥಮಾ, ಮಾಧ್ಯಮಾ, ಉತ್ತಮಾ, ಸಾಹಿತ್ಯ ಪ್ರವೇಶಿಕ ಮತ್ತು ಹಿಂದಿ ಸಾಹಿತ್ಯ ಪ್ರವೀಣ ಮುಂತಾದ ಪರೀಕ್ಷೆಗಳಿಗೆ ನಗರದ ಮಾದರೀ ಶಾಲೆಯಲ್ಲಿರುವ ಸೇವಾ ಸಂಘದ ಆಶ್ರಯದಲ್ಲಿ ನಾಳೆಯಿಂದ ತರಗತಿಗಳನ್ನು ಏರ್ಪಡಿಸಲಾಗಿದೆ ಅಪೇಕ್ಷಿಸುವವರು ಕೂಡಲೇ ಸೇರಬಹುದೆಂದು ತಿಳಿಸಲಾಗಿದೆ

ಗೌರ್ನರವರ ಕಾರ್ಯದರ್ಶಿಗಳಿಂದ ಅಧಿಕಾರ ಸ್ವೀಕಾರ

ಶ್ರೀಮನ್ಮಹಾರಾಜರ ಕಾರ್ಯದರ್ಶಿಗಳೂ ಮತ್ತು ಹುಜೂರು ಕಾರ್ಯದರ್ಶಿಗಳೂ ಆದ ಶ್ರೀಗಳವ ಸಫಿ ದಾರಾಷಾ ಮತ್ತು ಜೆ. ಬಿ. ಮಲ್ಲಾರಾಧ್ಯರವರು ಗೌರ್ನರರ ಕಾರ್ಯದರ್ಶಿಯಾಗಿ ನೇಮಕರಾಗಿರುವ ಶ್ರೀ ಹೆಚ್.ಎ ವಾಲ್ಕೀಗಾರರಿಗೆ ೧೬ನೇ ತಾರೀಕು ಛಾರ್ಜು ವಹಿಸಿಕೊಡುವರೆಂದು ತಿಳಿದುಬಂದಿದೆ

ಹಿರಾಕುಡ್ ಜಲಾಶಯದ ಆರಂಭೋತ್ಸವ

ಪ್ರಧಾನಿ ನೆಹರೂರವರ ಮೆಚ್ಚಿಗೆ

ಒರಿಸ್ಸಾ ಸಂಸ್ಥಾನಕ್ಕೆ ಅತ್ಯಂತ ಪ್ರಯೋಜನಕರವಾದ ಮತ್ತು ಭಾರತದ ಪ್ರಮುಖ ನೀರಾವರಿ ಯೋಜನೆಗಳಲ್ಲೊಂದಾದ ಹಿರಾಕುಡ್ ಅಣೆಕಟ್ಟಿನ ಆರಂಭೋತ್ಸವವನ್ನು ಮೊನ್ನೆ ಪ್ರಧಾನಿ ನೆಹರೂರವರು ನೆರವೇರಿಸಿದರು ಆಗ ಅವರು ಭಾಷಣ ಮಾಡಿ, ಸಮಾಜವಾದದ ಗುರಿ ಸಾಧನೆಯ ಮಹಾ ಕಾರ್ಯದಲ್ಲಿ ಹಿರಾಕುಡ್ ನಿರ್ಮಾಣದಿಂದ ನಮಗೆ ಪೂರ್ಣ ಭರವಸೆಯುಂಟಾಗಿದೆಯೆಂದೂ, ಈ ಕಾರ್ಯದಲ್ಲಿ ಶ್ರಮಿಸಿದ ಕೆಲಸಗಾರರಿಂದ ನಾವು ಸ್ಫೂರ್ತಿ ಹೊಂದಿರುವುದಾಗಿಯೂ ತಿಳಿಸಿ, ಮುಂದಿನ ಪೀಳಿಗೆ ಇವರಿಗಾಗಿ ಕೃತಜ್ಞರಾಗಿರುವರೆಂದೂ ನುಡಿದರು

ಒರಿಸ್ಸಾ ಸಂಸ್ಥಾನದ ಮುಖ್ಯ ಮಂತ್ರಿ ಹರೆಕೃಷ್ಣ ಮೆಹತಾಬರು, ಪದೇಪದೇ ಕ್ಷಾಮಡಾಮರಗಳಿಂದ ನರಳುತ್ತಿದ್ದ ಸಂಸ್ಥಾನಕ್ಕೆ ಈ ಅಣೆಕಟ್ಟಿನಿಂದ ಆಗುವ ಉಪಯೋಗವನ್ನು ವಿವರಿಸಿ ತಮ್ಮ ಪೂರ್ವಜರು ನಿರ್ಮಿಸಿರುವ ಸ್ಮಾರಕಗಳೆಲ್ಲವನ್ನೂ ಇದು ಮೀರಿಸುವುದೆಂದು ಹೇಳಿದರು

ಒರಿಸ್ಸಾದ ಸಂಬಲಪುರದ ಹತ್ತಿರ ೧೦೦ ಕೋಟಿ ರೂ ಖರ್ಚಿನಲ್ಲಿ ಮಹಾ ನದಿಗೆ ಅಡ್ಡವಾಗಿ ನಿರ್ಮಿಸಲಾಗಿರುವ ಈ ಅಣೆಕಟ್ಟು ೧೬ ಮೈಲಿ ಉದ್ದವಾಗಿದೆ ಮಣ್ಣನ್ನುಪಯೋಗಿಸಿ ಕಟ್ಟಿರುವ ಅಣೆಕಟ್ಟುಗಳಲ್ಲಿ ಭಾರತಕ್ಕೇ ಅಲ್ಲದೆ ಪ್ರಪಂಚಕ್ಕೇ ಇದು ದೊಡ್ಡದು. ಇದು ೨೦೦ ಅಡಿ ಎತ್ತರವಿದೆ. ಇದರ ಜಲಾಶಯವು ಸುಮಾರು ೨೮೮ ಚ ಮೈಲಿ ವಿಸ್ತೀರ್ಣವಾಗಿ, ೪೦೦ ಮೈಲಿ ಸುತ್ತಳತೆಯುಳ್ಳದ್ದಾಗಿದೆ ತುಂಗಭದ್ರಾ ಅಣೆಕಟ್ಟಿನ ಎರಡರಷ್ಟು, ಭವಾನಿ ಅಣೆಕಟ್ಟಿನ ೩ರಷ್ಟು ನೀರು ಇದರಲ್ಲಿ ಹಿಡಿಯುವುದು

ಇದರಿಂದ ೨೦ ಲಕ್ಷ ಎಕರೆಗಳಿಗೂ ಹೆಚ್ಚು ಭೂಮಿಯು ಸಾಗುವಳಿಯಾಗುವುದು ಅಲ್ಲದೆ ೧,೨೩,೦೦೦ ಕಿಲೊವಾಟಿನಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗಿ ಸಿಮೆಂಟ್, ಅಲ್ಯೂಮಿನಿಯಂ, ಉಕ್ಕು ಮುಂತಾದ ಕೈಗಾರಿಕೆಗಳ ಸ್ಥಾಪನೆಗೆ ಸಹಾಯಕವಾಗುವುದು

೩೦ ಸಾವಿರಕ್ಕೂ ಹೆಚ್ಚಿನ ಕಾರ್ಮಿಕರು ಈ ಕೆಲಸಕ್ಕಾಗಿ ಸುಮಾರು ೬ ವರ್ಷಗಳಿಗೂ ಮೀರಿ ದುಡಿದಿದ್ದಾರೆ. ಈ ಕೆಲಸವೆಲ್ಲಾ ಭಾರತೀಯ ಇಂಜನಿಯರುಗಳಿಂದಲೇ ನೆರವೇರಿಸಲ್ಪಟ್ಟಿದೆ

ಉಪನ್ಯಾಸ

ನಗರದ ಮಹಾರಾಜಾ ಕಾಲೇಜು ಮನಶ್ಶಾಸ್ತ್ರ ಪ್ರಾಧ್ಯಾಪಕರಾದ ಡಾ|| ಬಿ. ಕುಪ್ಪುಸ್ವಾಮಿಯವರು ನಾಳೆ ಮಧ್ಯಾಹ್ನ ೩ ಗಂಟೆಗೆ ಶಾರದಾವಿಲಾಸ ಲಾ ಕಾಲೇಜಿನ ಮೂಟ್ ಕ್ಲಬ್ಬಿನ ಆಶ್ರಯದಲ್ಲಿ, ಲಾ ಕಾಲೇಜು ಆವರಣದಲ್ಲಿ "ದಿ ಸೈಕಾಲಜಿ ಆಫ್ ಕ್ರೈಂ' ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಪ್ರಮುಖ ವಕೀಲರೂ, ಶಾಸನಸಭೆಯ ಮಾಜಿ ಅಧ್ಯಕ್ಷರೂ ಆದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅಗ್ರಾಸನ ವಹಿಸುವರು

ಮಹಿಳೆಗಾಗಿ ಜಗಳದಲ್ಲಿ ಮೂವರ ಕೊಲೆ

ತಿರುನಲ್ವೇಲಿ ಬಳಿ ಗಂಗೈಕೊಂಡನ್ ಎಂಬ ಒಂದು ಹಳ್ಳಿಯಲ್ಲಿ ಕಳೆದ ನಾಲ್ಕನೇ ತಾರೀಕು ಒಬ್ಬ ಮಹಿಳೆಗಾಗಿ ಜಗಳ ನಡೆದು, ಮೂವರ ಕೊಲೆಯಾದ ಪ್ರಸಂಗವು ವರದಿಯಾಗಿದೆ ಅಯ್ಯನಾರ್ ಊತ್ತಲು ಎಂಬ ಗ್ರಾಮದ ಅರುಣಾಚಲಂ ಎಂಬುವನನ್ನು ವಿವಾಹವಾದ ಪೇಚ್ಚಿ ಅಮ್ಮಾಳ್ ಎಂಬಾಕೆಯನ್ನು ಯಾರೋ ಪುಸಲಾಯಿಸಿ, ಪರುತ್ತಿಕುಳಂ ಎಂಬಲ್ಲಿಗೆ ಕರೆತರಲಾಗಿ, ಅಲ್ಲಿ ಆಕೆಗೂ ಮುತ್ತಯ್ಯತೇವರ್ ಎಂಬುವನಿಗೂ ಅಕ್ರಮ ಸಂಬಂಧ ಬೆಳೆದು, ಇದು ಅರುಣಾಚಲನಿಗೆ ತಿಳಿಯಿತೆಂದು ಹೇಳಲಾಗಿದೆ. ಇವರಿಬ್ಬರಿಗೂ ವೈಮನಸ್ಯ ಬೆಳೆದು ಕಳೆದ ೬ನೇ ತಾರೀಕು, ಮುತ್ತಯ್ಯತೇವರನು ಇಲ್ಲದಿದ್ದ ಸಮಯದಲ್ಲಿ ಅರುಣಾಚಲಂ, ಮತ್ತು ಪೇಚ್ಚಿ ಅಮ್ಮಾಳ ಸಹೋದರ ಪೂವಯ್ಯತೇವರ್‌ರವರು ಪರುತ್ತಿ ಕುಳಮ್ಮಿಗೆ ಬಂದು ಆಕೆಯನ್ನು ವಾಪಸು ಕರೆದುಕೊಂಡುಹೋಗುತ್ತಿದ್ದಾಗ ಮುತ್ತಯ್ಯತೇವರ್ ಮತ್ತು ಅವನ ಬಂಧು ದೊರೈಪಾಂಡ್ಯತೇವರ್ ಎಂಬುವರು ಹಿಂಬಾಲಿಸಲಾಗಿ, ಮಾರ್ಗ ಮಧ್ಯದ ಒಂದು ಕೆರೆ ಏರಿ ಮೇಲೆ ಎರಡು ಪಕ್ಷಗಳಿಗೂ ಜಗಳವಾಗಿ ಅರುಣಾಚಲಂ, ದೊರೈಪಾಂಡ್ಯನ್ ಕೊಲ್ಲಲ್ಪಟ್ಟರು ಅಲ್ಲಿಂದ ತಪ್ಪಿಸಿಕೊಂಡು ಓಡಿದ ಪೂವಯ್ಯತೇವರನನ್ನು ಅಟ್ಟಿಸಿಕೊಂಡು ಹೋಗಿ ಸಮೀಪದ ಒಂದು ಕೇರಿಯಲ್ಲಿ ಕೊಲೆ ಮಾಡಲಾಯಿತು

ಜಮೀನಿಗಾಗಿ ರಾಜಕೀಯ ಸಂತ್ರಸ್ತರ ಉಪವಾಸ

ಕೊಯಮತ್ತೂರಿನ ರಾಜಕೀಯ ಸಂತ್ರಸ್ತರಾದ ಅಬ್ದುಲ್ ವಹಾಬ್, ಎಂ. ಅಬ್ದುಲ್ ರಹಮಾನ್, ಟಿ ಅಪ್ಪುಸ್ವಾಮಿ ಮತ್ತು ಅಪ್ಪಾಸ್ವಾಮಿ ಎಂಬುವರು ತಮಗೆ ವೇದಪತಿ ಗ್ರಾಮದ ಕೆರೆ ಅಂಗಳದಲ್ಲಿ ಜಮೀನನ್ನು ಕೊಡಬೇಕೆಂದು ಬೇಡಿಕೆಯನ್ನು ಸಲ್ಲಿಸಿ ಕಳೆದ ಬುಧವಾರದಿಂದ ಅಲ್ಲಿನ ಕಲೆಕ್ಟರರ ಕಛೇರಿ ಮುಂದೆ ಉಪವಾಸವನ್ನು ಆರಂಭಿಸಿರುವರು ಅವರು ಕೇಳಿದ ಜಮೀನುಗಳನ್ನು ಕೊಡುವ ಬಗ್ಗೆ ಇರುವ ತೊಂದರೆಗಳನ್ನು ಕಲೆಕ್ಟರರು ವಿವರಿಸಿ, ಬೇರೆ ಕಡೆ ಕೊಡುವುದಾಗಿ ತಿಳಿಸಿದುದನ್ನು ಅವರು ನಿರಾಕರಿಸಿ, ತಮ್ಮ ಬೇಡಿಕೆಗಳು ಈಡೇರುವವರೆಗೆ ಉಪವಾಸವನ್ನು ಮುಂದುವರಿಸಲು ನಿರ್ಧರಿಸಿರುವರು

ಪ್ರಾಯೋಗಿಕ ಚುನಾವಣೆ

ನಗರದ ಬಳ್ಳಿಕಟ್ಟೆಗೆ ಮಿಸಲಿನಲ್ಲಿರುವ ಬಾಲಕರ ಪ್ರಾಥಮಿಕ ಶಾಲೆಯಲ್ಲಿ ನಾಳೆ ಬೆಳಗ್ಗೆ ೯ರಿಂದ ೧೨ ಗಂಟೆವರೆಗೆ ಪೌರಸಭಾ ಕಮೀಷನರರು ಪ್ರಾಯೋಗಿಕ ಚುನಾವಣೆಯನ್ನು ನಡೆಸುವರು

ಚಿಗಟೇರಿ ಮುರಿಗೆಪ್ಪನವರ ನಿಧನ

ದಾವಣಗೆರೆಯ ಪ್ರಮುಖ ವಾಣಿಜ್ಯೋದ್ಯಮಿಗಳೂ ಮತ್ತು ಪರೋಪಕಾರಿಗಳೂ ಆದ ಶ್ರೀ ಚಿಗಟೇರಿ ಮುರಿಗೆಪ್ಪನವರು ಕಳೆದ ಶನಿವಾರ ಮದ್ರಾಸ್ ಬೀಚಿನಲ್ಲಿ ಹೋಗುತ್ತಿದ್ದಾಗ ಹೃದಯಸ್ತಂಭನದಿಂದ ತಮ್ಮ ೬೦ನೇ ವಯಸ್ಸಿನಲ್ಲಿ ಮೃತಪಟ್ಟರೆಂದು ವರದಿಯಾಗಿದೆ.

ತಮ್ಮ ಹಕ್ಕನ್ನು ಸೂಪರ್‌ಸೀಡ್ ಮಾಡಿದುದಕ್ಕೆ ಅಧ್ಯಾಪಕರ ರಿಟ್ ಅರ್ಜಿ

ಸ್ವಂ ಸು ಸಂ.] ಬೆಂಗಳೂರು ೧

೧೯೪೯ನೇ ಇಸವಿಯಿಂದಲೂ ತಮ್ಮ ಬಡ್ತಿ ಕ್ಕನ್ನು ಬದಿಗೊತ್ತಿರುವುದರಿಂದ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡಬೇಕೆಂದು ಕೋ ಶ್ರೀ ರಾಮಶರ್ಮ ಎಂಬ ಕೋಲಾರದ ಜಿಲ್ಲಾ ಬೋರ್ಡು ಪ್ರೌಢ ಶಾಲಾ ಉಪಾಧ್ಯಾಯರ ಟ್ ಅರ್ಜಿಯನ್ನು ಹೈಕೋರ್ಟಿನಲ್ಲಿ ನ್ಯಾಯಾಧೀಶರುಗಳಾದ ಶ್ರೀ ಪದ್ಮನಾಭಯ್ಯ ಮತ್ತು ಶ್ರೀ ಹೊಂಬೇಗೌಡರು ಅಡ್ಮಿಟ್ ಮಾಡಿಕೊಂಡರು

ಕೇಂದ್ರ ಸರ್ಕಾರದ ಯೋಜನಾ ಇಲಾಖಾ ಸಲಹೆಗಾರರ ಆಗಮನ

ಕೇಂದ್ರ ಸರ್ಕಾರದ ಯೋಜನಾ ಇಲಾಖೆಯ ಸಲಹೆಗಾರರಾದ ಶ್ರೀ ಎಸ್. ವಿ ರಾಮಮೂರ್ತಿಯವರು ಈ ಬೆಳಿಗ್ಗೆ ಇಲ್ಲಿಗೆ ಆಗಮಿಸಿದರು. ಅವರು ಸಂಸ್ಥಾನದ ನಾನಾ ಇಲಾಖೆಗಳ ಮುಖ್ಯಾಧಿಕಾರಿಗಳು ಮತ್ತು ಕಾರ್ಯದರ್ಶಿಗಳೊಡನೆ ೧೯೫೭-೫೮ನೇ ಸಾಲಿನ ಸಂಸ್ಥಾನದ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾತುಕತೆ ನಡೆಸಿದರು. ನಾಳೆ ಮತ್ತು ನಾಳಿದ್ದು ಸಂಭಾಷಣೆಗಳು ಮುಂದುವರಿಯುವುವು.

ದೆಹಲಿಗೆ ಕಡಿದಾಳ್ ಮಂಜಪ್ಪನವರ ಪ್ರಯಾಣ

ಅಖಿಲ ಭಾರತ ಎಜುಕೇಷನ್ ಬೋರ್ಡ್ ಸಭೆಯಲ್ಲಿ ಭಾಗವಹಿಸಲು ಶ್ರೀ ಕಡಿದಾಳ್ ಮಂಜಪ್ಪನವರು ಇಂದು ದೆಹಲಿಗೆ ತೆರಳಿದರು ಅವರು ಶುಕ್ರವಾರ ವಾಪಸಾಗುವರು

ಕ್ರಾಫರ್ಡ್ ಭವನದ ಮುಂದೆ ವಿದ್ಯಾರ್ಥಿಗಳ ಪ್ರದರ್ಶನ

ಮೈಸೂರು ೧೫

ಈ ದಿನ ಮಧ್ಯಾಹ್ನ ಕ್ರಾಫರ್ಡ್ ಭವನದಲ್ಲಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯು ನಡೆಯುತ್ತಿದ್ದಾಗ ಯುವರಾಜಾ, ಹಾಗೂ ಶಾರದಾ ವಿಲಾಸ ಕಾಲೇಜುಗಳ ಸುಮಾರು ೫೦೦ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ, ಘೋಷಣೆಗಳನ್ನು ಕೂಗುತ್ತಾ ಗಣಿತ ಶಾಸ್ತ್ರದ ಪರೀಕ್ಷೆಯಲ್ಲಿ ಎಂದಿನಂತೆ ಮೂರನೇಎರಡು ಭಾಗದ ಪ್ರಶ್ನೆಗಳಿಗೆ ಉತ್ತರ ಕೊಡಲು ತಮಗೆ ಅವಕಾಶ ಕಲ್ಪಿಸಬೇಕೆಂದು ಕೋರಿದರು ೬ ಪೂರ್ಣ ಪ್ರಶ್ನೆಗಳಿಗೆ ಉತ್ತರ ಕೊಡುವಂತೆ ಹೊಸದಾಗಿ ಜಾರಿಗಿರುವ ಆಜ್ಞೆಯಿಂದ ತಮಗೆ ಉಂಟಾಗಿರುವ ತೊಂದರೆಗಳನ್ನು ಅವರು ಸಿಂಡಿಕೇಟಿನ ಸದಸ್ಯರುಗಳಾದ ಶ್ರೀಗಳು ನಾಗಪ್ಪನವರು, ಎಸ್ ಬಿ ಮೋಂದಾತೆ, ಎಂ. ಪಿ ಎಲ್. ಶಾಸ್ತ್ರಿ ಮುಂತಾದವರುಗಳಿಗೆ ವಿವರಿಸಿದರು ಅವರು ಈ ವಿಷಯವನ್ನು ಸಭೆಯಲ್ಲಿ ಪರಿಶೀಲಿಸಿ ಸೂಕ್ತವಾದ ಏರ್ಪಾಡು ಮಾಡುವುದಾಗಿ ತಿಳಿಸಿದಮೇಲೆ ವಿದ್ಯಾರ್ಥಿಗಳು ಹಿಂದಿರುಗಿದರು

○ ಭಾರತದ ಪ್ರಮುಖ ಕೈಗಾರಿಕೋದ್ಯಮಿಗಳು ಕೊಲಂಬೊವಿನಲ್ಲಿ ೧೦ ಕೋಟಿ ರೂ. ಬಂಡವಾಳದಿಂದ ಒಂದು ತೈಲ ಶುದ್ಧೀಕರಣ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಸಿಂಹಳ ಸರ್ಕಾರದೊಡನೆ ವ್ಯವಹಾರ ನಡೆಸುತ್ತಿರುವರು.

ಸಂಸ್ಥಾನಗಳ ನೌಕರರ ಸಂಬಳ ಹೆಚ್ಚಿಸಲು ಕೇಂದ್ರದ ನೆರವು

ಮದರಾಸು, ಆಂಧ್ರ, ಮೈಸೂರು, ಕೇರಳ, ಮಧ್ಯ ಪ್ರದೇಶ, ಬಿಹಾರ್ ಮತ್ತು ಒರಿಸ್ಸಾ ಸಂಸ್ಥಾನಗಳಲ್ಲಿ ಕೆಳದರ್ಜೆ ನೌಕರರ ಸಂಬಳದ ಮಟ್ಟವನ್ನು ಹೆಚ್ಚಿಸಲು ಕೇಂದ್ರ ಸರ್ಕಾರದಿಂದ ಸಹಾಯವನ್ನು ಕೇಳಲಾಗಿರುವುದೆಂದೂ, ಆ ಬಗ್ಗೆ ಅವಶ್ಯಕವಾದ ನೆರವು ನೀಡಲು ಎಷ್ಟು ಮಟ್ಟಿನ ಹಣ ಬೇಕಾಗುವುದೆಂಬುವನ್ನೂ ಮತ್ತು ಇತರ ವಿವರಗಳನ್ನೂ ಸಂಸ್ಥಾನಗಳಿಂದ ಕೇಳಲಾಗಿರುವುದೆಂದೂ ಕೇಂದ್ರ ಸರ್ಕಾರದ ಹಣಕಾಸಿನ ಸಚಿವ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಕಟ್ಟುನಿಟ್ಟಾದ ಮಿತವ್ಯಯವನ್ನು ಜಾರಿಗೆ ತರುವ ಉದ್ದಿಶ್ಯದಿಂದ ಮೂರು ಮತ್ತು ನಾಲ್ಕನೇ ದರ್ಜೆಗಳ ನೌಕರರಾದ ಗುಮಾಸ್ತರು ಮತ್ತು ಜವಾನಿಗಳನ್ನು ಹೊಸದಾಗಿ ನೇಮಿಸಿಕೊಳ್ಳಬಾರದೆಂದು ತಿಳಿಸಿರುವುದಾಗಿಯೂ ಹೇಳಲಾಗಿದೆ

ಸಮಗ್ರ ಕೊರಿಯದಲ್ಲಿ ಸ್ವತಂತ್ರ ಚುನಾವಣೆಗೆ ವಿಶ್ವಸಂಸ್ಥೆ ಕರೆ

ಸಮಗ್ರ ಕೊರಿಯದಲ್ಲಿ ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ಚುನಾವಣೆಗಳನ್ನು ನಡಸಬೇಕೆಂದು ಸಂಸ್ಥೆಯ ಸಾಧಾರಣ ಸಮಿತಿಯು ನಿರ್ಣಯವನ್ನು ೫೭ ಓಟುಗಳಿಂದ ಅಂಗೀಕರಿಸಿತು ೯ ರಾಷ್ಟ್ರಗಳು ತಟಸ್ಥವಾಗಿದ್ದುವು

ಭಾವಸಾರ ಕ್ಷತ್ರಿಯರ ಸಮ್ಮೇಳನ

ಇದೇ ೧೭, ೧೮ ಮತ್ತು ೧೯ನೇ ತಾರೀಕುಗಳಲ್ಲಿ ನಗರದಲ್ಲಿ ಸೇರುವ ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾ ಸಭೆಯ ೧೫ನೇ ಅಧಿವೇಶನದ ಆಹ್ವಾನ ಪತ್ರಿಕೆಗಳನ್ನು ಸಾಧ್ಯವಾದಷ್ಟು ಎಲ್ಲಾ ಕಡೆಗಳಿಗೂ ರವಾನಿಸಿರುತ್ತೆ. ಒಂದು ವೇಳೆ ತಲಪದೆ ಇರಬಹುದಾದರೆ ಇದೇ ಆಹ್ವಾನವೆಂದು ತಿಳಿದು ಅಧಿವೇಶನದಲ್ಲಿ ಭಾಗವಹಿಸಬೇಕಾಗಿ ಸಮ್ಮೇಳನದ ಸ್ವಾಗತ ಸಮಿತಿ ಕಾರ್ಯದರ್ಶಿಗಳು ಕೋರಿರುತ್ತಾರೆ

ವೀರಶೈವರ ಸಮ್ಮೇಳನ ಮುಂದಕ್ಕೆ

ಸೊಲಾಪುರದಲ್ಲಿ ಈ ತಿಂಗಳು ನಡೆಬೇಕಾಗಿದ್ದ ಅಖಿಲ ಭಾರತ ವೀರಶೈವ ಮಹಾ ಸಭೆಯ ೨೨ನೇ ಅಧಿವೇಶನವು ಏಪ್ರಿಲ್ ಕಡೆಯ ವಾರ ಅಥವಾ ಮೇ ಆದಿಯಲ್ಲಿ ನಡೆಯುವುದೆಂದು ಅಲ್ಲಿನ ಸ್ವಾಗತ ಸಮಿತಿ ಅಧ್ಯಕ್ಷರು ತಿಳಿಸಿರುತ್ತಾರೆ

ತಿರುವನಂತಪುರದಲ್ಲಿ ಕೋರ್ಟುಗಳಿಗೆ ವಕೀಲರ ಬಹಿಷ್ಕಾರ

ತಿರುವನಂತಪುರದಲ್ಲಿ ಕೇರಳದ ಹೈಕೋರ್ಟಿನ ಒಂದು ಖಾಯಂ ಶಾಖೆಯನ್ನು ಸ್ಥಾಪಿಸುವ ವಿಷಯವನ್ನು ತೃಪ್ತಿಕರವಾಗಿ ಪರಿಹರಿಸುವವರೆಗೆ ಅಲ್ಲಿನ ವಕೀಲರೆಲ್ಲರೂ ಕೋರ್ಟುಗಳಿಗೆ ಹೋಗಬಾರದೆಂದು ಅವರ ಸಂಘವು ಇತ್ತ ಕರೆಯನ್ನು ಮನ್ನಿಸಿ ಎಲ್ಲ ವಕೀಲರುಗಳೂ ಬರುವ ವಾರದಿಂದ ಕೋರ್ಟುಗಳಿಗೆ ಹೋಗಬಾರದೆಂದು ನಿರ್ಧರಿಸಿರುವರು

ಬಾಲಕರ ಧೂಮಪಾನ ತಡೆಯಲು ವಿಶೇಷ ಕ್ರಮ

೧೬ ವರ್ಷಕ್ಕೆ ಕಮ್ಮಿ ವಯಸ್ಸಿನ ಬಾಲಕರು ಬೀಡಿ ಸಿಗರೇಟು ವಗೈರೆ ಸೇದುವುದನ್ನು ಕಂಡರೆ ಶಾಲಾ ಅಧ್ಯಾಪಕರು ಮತ್ತು ಪೋಲೀಸರು ಬಾಲಕರಿಂದ ಅವುಗಳನ್ನು ಕಿತ್ತುಕೊಂಡು ನಾಶಪಡಿಸಲು ಈ ತಿಂಗಳಿಂದ ಅಧಿಕಾರವೀಯುವ ಆಜ್ಞೆಯೊಂದನ್ನು ಪಶ್ಚಿಮ ಬಂಗಾಳಾ ಸರ್ಕಾರದವರು ಜಾರಿ ಮಾಡಿದ್ದಾರೆ

ಉಪಾಧ್ಯಾಯರ ಬೇಡಿಕೆಗಳು

ಮರಿಮಲ್ಲಪ್ಪನವರ ಪ್ರಾಕ್ಟೀಸಿಂಗ್ ಸ್ಕೂಲ್ ಮತ್ತು ಮಿಡಲ್ ಸ್ಕೂಲ್ ಉಪಾಧ್ಯಾಯರ ಸಂಘದ ಸದಸ್ಯರು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಕೆ ಬಸವಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಶುಕ್ರವಾರ ಸಭೆ ಸೇರಿ ಸರ್ಕಾರದವರು ಪುನರ್ವಿಮರ್ಶೆ ಮಾಡಿರುವ ಉಪಾಧ್ಯಾಯರ ಸಂಬಳ ಸ್ಕೇಲುಗಳು ಆ ವೃತ್ತಿಗೆ ಒಪ್ಪುವಂತೆ ಆಕರ್ಷಕವಾಗಿಲ್ಲವೆಂದು ಅತೃಪ್ತಿಯನ್ನು ವ್ಯಕ್ತಪಡಿಸಿದರು ಮಾಧ್ಯಮಿಕ ಮತ್ತು ಪ್ರೌಢಶಾಲೆಯ ಉಪಾಧ್ಯಾಯರುಗಳ ಸಂಬಳಗಳನ್ನು ಉತ್ತಮಪಡಿಸಲು ಹಲವು ನಿರ್ಣಯಗಳನ್ನು ಮಾಡಿ ಎಜುಕೇಷನ್ ಫೆಡರೇಷನ್ನಿನ ಕಾರ್ಯದರ್ಶಿಗಳಿಗೂ, ನಾನ್ ಗೆಜೆಟೆಡ್ ನೌಕರರ ಸಂಘದವರಿಗೂ ಕಳುಹಿಸಿಕೊಟ್ಟಿರುವರು

ತ್ವರ ಮಾಡಿರಿ!
19-1-57 ರಂದು ಮುಕ್ತಾಯವಾಗುವ
ರೇಡಿಯೊ ಸಪ್ತಾಹಕ್ಕಾಗಿ
ಮರ್ಫಿ
ರೇಡಿಯೊಗಳನ್ನು
ರಿಯಾಯಿತಿ ದರದಲ್ಲಿ ಕೊಳ್ಳಿರಿ
— ಅಧಿಕೃತ ಮಾರಾಟಗಾರರು —
ಆಬಿದ್ ಅಂಡ್ ಕೋ,
ಫೋನ್ 173 ಸಯ್ಯಾಜಿ ಚೌಕ ಮೈಸೂರು

ಸಾಧುವಿನ ೯೬ ಘಂಟೆಗಳ ಸಜೀವ ಸಮಾಧಿ ಯತ್ನ ವಿಫಲ

ಗುಂಟೂರಿನಲ್ಲಿ ಕಳೆದ ಸೋಮವಾರ ನಾಲ್ಕು ದಿನಗಳ ಸಜೀವ ಸಮಾಧಿಗಾಗಿ ಕುಳಿಯನ್ನು ಪ್ರವೇಶಿಸಿದ ಯೋಗಾನಂದಸ್ವಾಮಿ ಎಂಬುವರು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗದೆ, ೫೭ ಘಂಟೆಗಳ ಕಾಲ ಮಾತ್ರ ಸಮಾಧಿಯಲ್ಲಿದ್ದು ಕಳೆದ ಬುಧವಾರ ಬಹಿರ್ಮುಖರಾದರೆಂದು ವರದಿಯಾಗಿದೆ ಅಲ್ಲಿನ ಭೂಗುಣದ ಪರಿಣಾಮವಾಗಿ ಅವರ ಪ್ರಯತ್ನವು ವಿಫಲವಾಯಿತೆಂದೂ, ಅವರಿಗೆ ನಿಶ್ಶಕ್ತಿಯುಂಟಾಗಿ ಹಣ್ಣಿನ ರಸವನ್ನು ಸೇವಿಸುತ್ತಿರುವರೆಂದೂ ಹೇಳಲಾಗಿದೆ

ಸಾಂಸ್ಕೃತಿಕ ಕಾರ್ಯಕ್ರಮ

ನಗರದ ರಮಾವಿಲಾಸ ಅಗ್ರಹಾರದ ಲಕ್ಷ್ಮೀಕಲ್ಯಾಣ ಮಂದಿರದಲ್ಲಿರುವ ಕರ್ನಾಟಕ ಸಂಘದ ಆವರಣದಲ್ಲಿ ನಾಳೆ ಸಂಜೆ ೬ ಘಂಟೆಗೆ, ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ನ ಭದ್ರಯ್ಯನವರಿಂದ ಉಪನ್ಯಾಸವೂ ಮತ್ತು ಶ್ರೀಮತಿ ಗೌರಮ್ಮ ನಾಗರಾಜ್‌ರವರಿಂದ ಕಾವ್ಯವಾಚನವೂ ಏರ್ಪಾಡಾಗಿವೆ ಸರ್ವರಿಗೂ ಪ್ರವೇಶವಿದೆ

ಜಿಲ್ಲಾ ಕೈ ಕಸಬುದಾರರ ಸಮ್ಮೇಳನದ ಆರಂಭೋತ್ಸವ

ಇಂದಿನಿಂದ ಭಾರತಾದ್ಯಂತ ಆಚರಿಸಲ್ಪಡುವ ಕೈ ಕಸಬುಗಳ ದ್ವಿತೀಯ ಸಪ್ತಾಹದ ಅಂಗವಾಗಿ ನಡೆಯುವ ಮೈಸೂರು ಜಿಲ್ಲೆಯ ಕುಶಲ ಕಲೆಗಾರರ ಮತ್ತು ಕೈ ಕಸಬುದಾರರ ಸಮ್ಮೇಳನ ಮತ್ತು ಕೈ ಕಸಬುಗಳ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನಾಳೆ ಮಧ್ಯಾಹ್ನ ೩ ಗಂಟೆಗೆ ಕೈಗಾರಿಕಾ ಸಚಿವ ಶ್ರೀ ಸಿ ಎಂ ಪೂಣಚ್ಚರವರು ದಸರಾ ವಸ್ತು ಪ್ರದರ್ಶನದ ಕಟ್ಟಡದಲ್ಲಿ ನೆರವೇರಿಸುವರು

ಅಪ್ಪಟವಾದ
ಹಸುವಿನ ಹಾಲು
ದರ ಪೌಂಡು 1ಕ್ಕೆ 0 3 6
ಅರ್ಧ ಪೌಂಡಿಗೆ 0 1 9
ನಿಮ್ಮ ಎದುರಿಗೇ ಕರೆದುಕೊಡಲಾಗುತ್ತೆ
ಇಂದೇ ಭೇಟಿ ಕೊಟ್ಟು ಪರೀಕ್ಷಿಸಿರಿ
ಕಾಲ ಬೆಳಿಗ್ಗೆ 5-30ರಿಂದ 9 30
ಮಧ್ಯಾಹ್ನ 3ರಿಂದ 6-30
ಗೋಕುಲ ಡೈರಿ ಫಾರಂ,
(ಬ್ರಾಂಚ್) ಚಿಂಬಳಿ ಅಣ್ಣಯ್ಯ ಪಂಡಿತರ
ಛತ್ರದ ಹಿಂಭಾಗ,
ನೂರಡಿ ರಸ್ತೆ, ಮೈಸೂರು

ಹಿಂದಿ ಪರೀಕ್ಷೆಗಳು

ಮಹಾಚುನಾವಣೆಗಳ ಸಲುವಾಗಿ ವಿಶ್ವ
ನಿಲಯ ಮತ್ತು ಇತರ ಪರೀಕ್ಷೆಗಳನ್ನು
ದುವರಿಸಿರುವ ಸಂದರ್ಭದಲ್ಲಿ ದಕ್ಷಿಣ ಭಾರತ
ದಿ ಪ್ರಚಾರ ಸಭೆಯವರೂ ತಮ್ಮ ಪರೀಕ್ಷಾ
ಗಳನ್ನು ಬದಲಾಯಿಸಿರುತ್ತಾರೆ ಫೆಬ್ರವರಿ
ಮತ್ತು ೨೪ರ ಬದಲು ೧೬ನೇ ತಾರೀಕಿನಿಂದ
ರೀಕ್ಷೆಗಳನ್ನು ನಡೆಸಲಾಗುವುದು. ಪ್ರವೀಣ,
ಶಾರದಾ ಪರೀಕ್ಷೆಗಳು ೧೬ನೇ ತಾರೀಖು
ತ್ತು ಪ್ರಥಮಾ, ಮಾಧ್ಯಮಾ ಮತ್ತು ರಾಷ್ಟ್ರ
ಷಾ ಪರೀಕ್ಷೆಗಳು ೧೭ರಂದು ನಡೆಯುತ್ತ

ಮೈಸೂರಿನಲ್ಲಿ ಪ್ರತಿ ತಿಂಗಳ
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದವರು,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ 5
—ಭೇಟಿಯ ಕಾಲ:—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲ್ಕಂಡ ವಿಷಯವನ್ನು ಗಮನಿಸಿ
ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ವಂತದಲ್ಲಿಯ
ವಿಮಾನದಲ್ಲಿ ಸಂಚರಿಸುತ್ತಾರೆ
ನವರತ್ನ — ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಪವಳ,
ಗೋಮೇಧಿಕ, ನೀಲ, ಪದ್ಮರಾಗ ಮತ್ತು
ಸ್ತ ಶಿಲೆ ಈ 9 ಅಮೂಲ್ಯ ಹರಳುಗಳ ಸಂಯೋ
ನಿಮ್ಮ ಎಲ್ಲಾ ಸಾಮಾನ್ಯ ಹಾಗೂ ತೀವ್ರವಾದ
ಯಿಲೆಗಳಿಗೂ ಅತ್ಯುತ್ತಮ ಆರೋಗ್ಯದಾಯ
ದ ಔಷಧಿ ಇದೊಂದೇ ಉಚಿತ ಸಾಹಿತ್ಯಗಳಿ
ಬರೆಯಿರಿ.
NAVRATNA KALPA PHARMACY,
JULLUNDUR CITY (India)

Edited, Printed and Publish
by A. R. Nagarajan at Sadh
Press, D. Subbiah Road, Mys

Central Food Technological Research Institute

TENDER NOTIFICATION

Sealed Tenders are invited from Established Building Contractors with experience of over ten years for constructing a Foundry and Smithy Shed in the premises of the Institute at an approximate cost of Rs 30,000 Tender Papers consisting of 3 sets of bill of quantities and one set of drawings can be had from the Chief Architect and town Planning Officer of the Government of Mysore, New Public Offices, Bangalore-2, on payment of Rs 5 per set

Completed Tenders in duplicate together with an earnest deposit of Rs 750 strictly in Cash or by Bank Draft should be delivered to the undersigned at Central Food Technological Research Institute, V V Mohalla P O, Mysore, so as to reach him before 1 P M on Tuesday the 22nd January 1957 Tenders received will be opened the same day at 4 30 P M in the presence of the Contractors or their representatives who may be present at that time.

The Director of the Institute reserves the right to accept or reject the lowest or any tender without assigning any reason therefor The work will have to be completed in all respects within 4 months from the date of award, failing which, the Director reserves the right to levy a penalty of Rs 15 per day for any extra time taken

A W De SOUZA,
Administrative Officer

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಮೆಂಬರು : ಐ ಎಸ್, ಓ ಎಂ ಎ

ಟೆಲಿಫೋನ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ. ಅಂಡ್ ಬ್ರದರ್ಸ್
ಇಂಡಿಯಾ ಬ್ಯಾಂಕ್ ಎದುರು
ಮೈಸೂರು : ಫೋನ್ 446

ಸಂಪುಟ : ೧೫] SADHVI : WEDNESDAY 16—1—1957 ಮೈಸೂರು : ಬುಧವಾರ ೧೬—೧—೧೯೫೭ . [ಸಂಚಿಕೆ : ೧೭೨

ಫಿಲೊಮಿನಾ ಕಾಲೇಜು ಅಧ್ಯಾಪಕರ ಮುಷ್ಕರ ಸಮಾಪ್ತಿ

ಲೊಮಿನಾ ಕಾಲೇಜು ಅಧ್ಯಾಪಕರ ಮುಷ್ಕರ ಮುಕ್ತಾಯ

ಪೂರ್ತಿ ತುಟ್ಟಿ ಭತ್ಯ ಕೊಡಲು ಅಧಿಕಾರಿಗಳ ಒಪ್ಪಿಗೆ

ಮೈಸೂರು ೧೫

ತಮ್ಮ ಬೇಡಿಕೆಗಳು ಇತ್ಯರ್ಥವಾಗದಿದ್ದುದ ಕ್ಕಾಗಿ ಪ್ರತಿಭಟಿಸಿ ಕಳೆದ ಒಂದು ವಾರದಿಂದಲೂ ಷ್ಕರ ಹೂಡಿದ್ದ ನಗರದ ಸೇಂಟ್ ಫಿಲೊಮಿ ಕಾಲೇಜಿನ ಅಧ್ಯಾಪಕರು, ಪೂರ್ಣ ತುಟ್ಟಿ ತ್ಯವನ್ನು ಕೊಡಲು ಕಾಲೇಜು ಅಧಿಕಾರಿಗಳು ನ್ನೆ ಒಪ್ಪಿದಮೇಲೆ ಇಂದು ಮುಷ್ಕರವನ್ನು ಮುಕ್ತಾಯಗೊಳಿಸಿ ತಮ್ಮ ಕೆಲಸಗಳ ಮೇಲೆ ಹಾಜರಾದರು ತರಗತಿಗಳು ಎಂದಿನಂತೆ ನಡೆ ಯುತ್ತಿವೆ

ನೆನ್ನೆ ಮಧ್ಯಾಹ್ನ ಕಾಲೇಜು ಪ್ರಿನ್ಸಿಪಾಲರೊ ನೆ ಮುಷ್ಕರಗಾರರು ನಡೆಸಿದ ಸಂಧಾನದಲ್ಲಿ ತಿಂಗಳಿಂದ ಸಂಬಳದೊಡನೆ ಪೂರ್ಣ ತುಟ್ಟಿ ತ್ಯವನ್ನು ಕೊಡುವುದಾಗಿಯೂ ಮತ್ತು ಕಳೆದ ರ್ ಜನವರಿಯಿಂದ ಇಲ್ಲಿಯವರೆಗೆ ಅರ್ಧ ತು ಭತ್ಯದಂತೆ ಬಾಕಿಯನ್ನು ಕೊಡುವುದಾಗಿ ಒಪ್ಪಂದವಾಯಿತು. ಮುಷ್ಕರದಲ್ಲಿ ಭಾಗ ಸಿದ ವಿದ್ಯಾರ್ಥಿಗಳ ಮೇಲಾಗಲೀ ಅಥವಾ ಧ್ಯಾಪಕರ ಮೇಲಾಗಲೀ ಯಾವ ಕ್ರಮವನ್ನೂ ಗೊಳ್ಳುವುದಿಲ್ಲವೆಂದು ಸಹ ಲಿಖಿತ ಮೂಲಕ ಚನ ನೀಡಲಾಯಿತು

ಉಪಾಧ್ಯಾಯರು ಮುಷ್ಕರ ಹೂಡಿದ್ದ ವಿಷ ವನ್ನು ನೆನ್ನೆ ವಿಶ್ವವಿದ್ಯಾಲಯದ ಸಿಂಡಿಕೇ ಸಭೆಯು ಪರಿಶೀಲಿಸಿ, ಉಪಾಧ್ಯಾಯರು ತಲೇ ಮುಷ್ಕರ ನಿಲ್ಲಿಸಬೇಕೆಂದು ಕೋರುವ ರ್ಣಯವೊಂದನ್ನು ಅಂಗೀಕರಿಸಿತು ಈ ಬಗ್ಗೆ ವೆ ನಡೆಸಲು ಶ್ರೀಗಳಾದ ಎಂ. ಪಿ ಎಲ್. ಸ್ತ್ರಿ, ಮಹಮದ್ ಷರೀಫ್ ಮತ್ತು ಕೆ ವಿ ಕರೇಗೌಡರನ್ನೊಳಗೊಂಡ ಸಮಿತಿಯೊಂದ ಷ ಸಭೆಯು ರಚಿಸಿತು. ಎಲ್ಲಾ ಖಾಸಗಿ ಲೇಜುಗಳ ಅಧ್ಯಾಪಕರ ಸ್ಥಿತಿಗತಿಗಳ ಬಗ್ಗೆ ಪ ನಡೆಸಲು ಬೇರೆ ಸಮಿತಿಯೊಂದನ್ನು ಪ್ಲೇ ರಚಿಸಲು ಯೋಚಿಸಲಾಗುತ್ತಿದೆಯೆಂ ಹೇಳಲಾಗಿದೆ

ಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ೧೫ ಎಂ. ವಿ. ಮಾಲತಿ-ದೇವರ ನಾಮಗಳು ೮-೧೫ ಎಂ ಆರ್. ಗೌತಮ್- ಮುನ ಮಧ್ಯಾಹ್ನ ೧೨ ಎಂ. ವಿ. ವರಾಹಾ ಮಿ-ಗೋಟುವಾದ್ಯ ೧-೩೦ ಎಂ. ವಿ ಲತಿ ಗಾಯನ, ೧ ಮತ್ತು ಸಂಜೆ ೫-೩೦ ಎ ಸಹಜಾದ್-ಸಿತಾರ್ ೧-೪೫ ರಂಗಪ್ಪ- ಕಲು ೨-೧೫ ಅಲತ್ತೂರು ಸಹೋದರರು- ಮುನ ಸಂಜೆ ೫ ಅಖಿಲ ಭಾರತ ಸಂಗೀತ ಕ್ರಮದಿಂದ ೬ ೩೦ ಜಾನಪದ ಗೀತೆಗಳು ೦ ಗ್ರಾಮಸ್ಥರಿಗಾಗಿ. ೭-೩೦ ನಾಳೆ ವಾದ್ಯ ೦ ೮ ಆರ್. ಕೆ ಶ್ರೀಕಂಠನ್- ಸಂಗೀತ ಭಾಷಣ ೯-೩೦ ಸಂಗೀತ ಸಭೆ: ಹಿಂ ಸ್ತಾನಿ ಸಂಗೀತ ಕಛೇರಿ

ಇನ್ನು ೨-೩ ದಿನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ

ಬೆಂಗಳೂರು ೧೫

ಮಹಾ ಚುನಾವಣೆಗಳಿಗೆ ಮೈಸೂರು ಸಂಸ್ಥಾನದಿಂದ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವುದರಲ್ಲಿ ಕೇಂದ್ರ ಚುನಾವಣಾ ಸಮಿತಿಯವರು ಹಲವು ವಿವಾದಾತ್ಮಕ ವ್ಯಕ್ತಿಗಳ ಬಗ್ಗೆ ಆರೋಪ ಪ್ರತ್ಯಾರೋಪಗಳನ್ನು ಪರಿಶೀಲಿಸುತ್ತಿದ್ದಾರೆಂದೂ, ಅದು ಮುಗಿದನಂತರ ಪ್ರಾದೇಶಿಕ ಮಂಡಲಿಯ ಸಲಹೆ ಪಡೆದು ಇನ್ನು ೨-೩ ದಿನಗಳಲ್ಲಿ ಪಟ್ಟಿಯನ್ನು ಪ್ರಕಟಿಸುವರೆಂದೂ ಪ್ರದೇಶ ಚುನಾವಣಾ ಸಮಿತಿ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆನ್ನೆ ತಿಳಿಸಿದರು ಶೇಕಡ ೯೫ರಷ್ಟು ಪಟ್ಟಿಯು ಮುಗಿದಿದೆಯೆಂದೂ, ಇದರಲ್ಲಿ ಮಾಜಿ ಮಂತ್ರಿಗಳೆಲ್ಲರಿಗೂ ಅವಕಾಶ ಕೊಡಬೇಕೆಂಬ ತತ್ವವೇನೂ ಇಲ್ಲವೆಂದೂ, ಅಭ್ಯರ್ಥಿಗಳ ಅರ್ಹತೆಯೇ ಮುಖ್ಯವೆಂದೂ ಅವರು ತಿಳಿಸಿ, ಚುನಾವಣಾ ಪ್ರಚಾರಕ್ಕಾಗಿ ಎ ಐ ಸಿ. ಸಿ ಯಿಂದ ಧನ ಸಹಾಯ ಪಡೆಯಲು ಇನ್ನು ೨-೩ ದಿನಗಳೊಳಗೆ ತಾವು ದೆಹಲಿಗೆ ತೆರಳುವುದಾಗಿ ಹೇಳಿದರು.

ಮಹಾ ಚುನಾವಣೆಗೆ ಉಮೇದುವಾರಿಕೆ ಸಲ್ಲಿಸಲು ಕಡೇ ದಿನ

ಮಹಾ ಚುನಾವಣೆಗಳ ಸಂಬಂಧದಲ್ಲಿ, ಬಂಗಾಳಾ ಪ್ರಾಂತ್ಯವನ್ನು ಬಿಟ್ಟು ಉಳಿದ ಎಲ್ಲ ಸಂಸ್ಥಾನಗಳಲ್ಲೂ ಪ್ರಾಂತೀಯ ಅಸೆಂಬ್ಲಿ ಮತ್ತು ಪಾರ್ಲಿಮೆಂಟು ಕ್ಷೇತ್ರಗಳಿಗೆ ಉಮೇದುವಾರಿಕೆಗಳನ್ನು ಸಲ್ಲಿಸಲು ಇದೇ ೨೯ನೇ ತಾರೀಖು ಕಡೆಯ ದಿನವೆಂದುಗೊತ್ತುಪಡಿಸಲಾಗಿದೆಯೆಂದು ವರದಿಯಾಗಿದೆ ಉಮೇದುವಾರಿಕೆ ಪತ್ರಗಳನ್ನು ಫೆಬ್ರವರಿ ೧ರಂದು ತನಿಖೆ ಮಾಡಲಾಗುವುದು ಮತ್ತು ವಾಪಸು ಪಡೆಯಲು ೪ನೇ ತಾರೀಖು ಕಡೆಯ ದಿನ ಮೇಲ್ಕಂಡ ಎಲ್ಲ ಪ್ರಾಂತ್ಯಗಳಲ್ಲೂ ಫೆಬ್ರವರಿ ೨೫ ರಂದು ಚುನಾವಣೆಯು ಆರಂಭವಾಗಿ ಮಾರ್ಚಿ ೩೧ ರೊಳಗೆ ಮುಗಿಯುವುವು. ಮಾರ್ಚಿ ೩೧ ರೊಳಗೆ ಫಲಿತಾಂಶಗಳು ಪ್ರಕಟವಾಗುವುವು.

ನಿಶ್ಶಸ್ತ್ರೀಕರಣದ ಬಗ್ಗೆ ವಿಶ್ವ ಸಂಸ್ಥೆಯ ವಿಶೇಷ ಸಭೆಗಾಗಿ ರಷ್ಯದ ಕರೆ

ನಿಶ್ಶಸ್ತ್ರೀಕರಣದ ಬಗ್ಗೆ ಅಮೆರಿಕವು ನೀಡಿರುವ ಹೊಸ ಸಲಹೆಯಂತೆ, ಅಣು ಶಸ್ತ್ರಗಳನ್ನು ಅಂತರ ರಾಷ್ಟ್ರೀಯ ಹತೋಟಿಗೊಳಪಡಿಸುವ ಗುರಿಯ ವಿಷಯವಾಗಿ ಚರ್ಚಿಸಲು ವಿಶ್ವಸಂಸ್ಥೆಯ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ರಷ್ಯವು ಸೂಚಿಸಿರುವುದಾಗಿ ಗೊತ್ತಾಗಿದೆ.

ಕೃಷ್ಣರಾಜಸಾಗರದ ಬೃಂದಾವನಕ್ಕೆ ಹೆಚ್ಚಿನ ಪ್ರವೇಶ ಶುಲ್ಕ

ಕೃಷ್ಣರಾಜಸಾಗರದ ಬೃಂದಾವನಕ್ಕೆ ಹೋಗುವ ಪ್ರೇಕ್ಷಕರಿಗೆ ವಿಧಿಸಲಾಗಿದ್ದ ತಲಾ ೨ ಆಣೆ ಪ್ರವೇಶ ಶುಲ್ಕವನ್ನು ನೆನ್ನೆಯಿಂದ ೩ ಆಣೆಗೆ ಹೆಚ್ಚಿಸಲಾಗಿರುವುದೆಂದು ಗೊತ್ತಾಗಿದೆ ಮೋಟಾರು ಕಾರು ಮತ್ತು ಬಸ್ಸುಗಳ ಶುಲ್ಕವನ್ನು ಕ್ರಮವಾಗಿ ೧॥ ರೂ. ಇಂದ ೨ ರೂ ಮತ್ತು ೨ ರೂ ಇಂದ ೪ ರೂ. ಗಳಿಗೆ ಹೆಚ್ಚಿಸಲಾಗಿದೆ.

ಭದ್ರಾವತಿ ಕಾಗದದ ಕಾರ್ಖಾನೆ ಸರ್ಕಾರದ ವಶಕ್ಕೆ

ಬೆಂಗಳೂರು ೧೫

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಕಳೆದ ಶುಕ್ರವಾರ ಭದ್ರಾವತಿಗೆ ಭೇಟಿ ಕೊಟ್ಟಾಗ ಅಲ್ಲಿನ ಕಾಗದದ ಕಾರ್ಖಾನೆಯ ಆಡಳಿತವನ್ನು ಸರ್ಕಾರದವರೇ ವಹಿಸಿಕೊಳ್ಳುವರೆಂದು ಕಾರ್ಮಿಕರ ನಿಯೋಗವೊಂದಕ್ಕೆ ತಿಳಿಸಿದುದಾಗಿ ಗೊತ್ತಾಗಿದೆ ಕೈಗಾರಿಕಾ ಸಚಿವರು ಇದೇ ೧೭ನೇ ತಾರೀಖು ಭದ್ರಾವತಿಗೆ ತೆರಳಿ ಈ ವಿಷಯವನ್ನು ಅಂತ್ಯವಾಗಿ ಇತ್ಯರ್ಥಪಡಿಸುವರೆಂದೂ ಹೇಳಲಾಗಿದೆ

ಕಾಶ್ಮೀರಕ್ಕೆ ವಿಶ್ವಸಂಸ್ಥೆ ಸೈನ್ಯ ಕಳುಹಲು ಪಾಕಿಸ್ತಾನದ ಒತ್ತಾಯ

ವಿಶ್ವಸಂಸ್ಥೆಯಲ್ಲಿ ಕಾಶ್ಮೀರದ ಬಗ್ಗೆ ನಡೆಯುವ ಚರ್ಚೆಯಲ್ಲಿ ಭಾಗವಹಿಸಲು ತೆರಳಿರುವ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರು ನೆನ್ನೆ ಪ್ರಪಂಚ ಸಂಸ್ಥೆಯ ಬಾತ್ಮೀದಾರರೊಡನೆ ಮಾತನಾಡುತ್ತಾ, ಕಾಶ್ಮೀರದಲ್ಲಿ ಯುದ್ಧವು ಆಗುವ ಸಂಭವವಿರುವುದರಿಂದ ವಿಶ್ವಸಂಸ್ಥೆಯು ಈ ಸನ್ನಿವೇಶದಲ್ಲಿ ಧೈರ್ಯದಿಂದ ವರ್ತಿಸಬೇಕೆಂದೂ, ಸಂಸ್ಥಾನದಲ್ಲಿ ಜನಮತಾಭಿಪ್ರಾಯ ಸಂಗ್ರಹಣೆಗೆ ಅನುಕೂಲಿಸುವಂತೆ ಅಲ್ಲಿರುವ ಭಾರತ ಮತ್ತು ಪಾಕಿಸ್ತಾನಗಳ ಸೈನ್ಯಗಳನ್ನು ಹಿಂದಕ್ಕೆ ಕಳುಹಿಸಿ, ಪ್ರಪಂಚ ಸಂಸ್ಥೆಯ ಪೊಲೀಸ್ ಪಡೆಯನ್ನು ಅಲ್ಲಿಗೆ ರವಾನಿಸಬೇಕೆಂದೂ ನುಡಿದರು ಪಾಕಿಸ್ತಾನದ ನಿರ್ಮಾಣಕ್ಕೆ ನೆಹರೂರವರು ಮೊದಲಿನಿಂದಲೂ ವಿರೋಧವಾಗಿದ್ದು, ಈಗ ಅದನ್ನು ನಿರ್ನಾಮ ಮಾಡುವ ನೀತಿಯನ್ನು ಅವರು ಹೊಂದಿರುವರೆಂದು ನೂನರು ಆಪಾದಿಸಿದರು. ಪಾಕಿಸ್ತಾನವನ್ನು ಭಯಗೊಳಿಸಲು ಭಾರತವು ಉದ್ದೇಶಪಟ್ಟಿದ್ದರೆ ಪೂರ್ವ ಪಾಕಿಸ್ತಾನದ ಮೇಲೆ ಅದು ಧಾಳಿಯನ್ನೇಕೆ ನಡೆಸಿಲ್ಲವೆಂದು ಬಾತ್ಮೀದಾರರೊಬ್ಬರು ಕೇಳಿದ ಪ್ರಶ್ನೆಗೆ ಅವರು ಉತ್ತರವಿತ್ತು, ಪೂರ್ವ ಪಾಕಿಸ್ತಾನದ ಮೇಲೆ ಆಕ್ರಮಣವಾದರೆ ಆಗ ಭಾರಿ ಯುದ್ಧವೇ ನಡೆದು ಪಶ್ಚಿಮ ಪಾಕಿಸ್ತಾನದಲ್ಲಿ ಅದು ಇತ್ಯರ್ಥಗೊಳ್ಳುತ್ತದೆಂದು ನುಡಿದರು.

ಏಡನ್ನಿನಲ್ಲಿ ಬ್ರಿಟಿಷ್ ಸೈನ್ಯ ಶೇಖರಣೆ

ಏಡನ್ನಿನಲ್ಲಿ ಯೆಮೆನ್ ಗಡಿ ಬಳಿ ಬ್ರಿಟಿಷ್ ಸೈನ್ಯಗಳು ಬಹು ಹೆಚ್ಚಾಗಿ ಶೇಖರಿಸಲ್ಪಟ್ಟಿರುವುವೆಂದು ವರದಿಗಳು ಬಂದಿರುವುದಾಗಿ ಕೈರೋದಲ್ಲಿರುವ ಯೆಮೆನ್ ರಾಯಭಾರಿ ರಹಮಾನ್ ಅಬಶಾಲಿಬ್‌ರವರು ತಿಳಿಸಿರುತ್ತಾರೆ ಬ್ರಿಟಿಷ್ ಟ್ಯಾಂಕುಗಳು ಹರಿಬ್ ನಗರದಲ್ಲಿ ಅನೇಕ ಮನೆಗಳನ್ನೂ, ಒಂದು ಕೋಟೆಯನ್ನೂ ನಾಶಪಡಿಸಿದುದಲ್ಲದೆ, ಬ್ರಿಟಿಷ್ ವಿಮಾನಗಳು ನಗರಗಳ ಮೇಲೆ ಧಾಳಿ ಮಾಡಿರುವುವೆಂದೂ ಹೇಳಲಾಗಿದೆ. ಯೆಮೆನ್ನಿನವರ ಸಹಾಯಕ್ಕಾಗಿ ಇದುವರೆಗೆ ೫,೦೦೦ ಈಜಿಪ್ಷಿನವರು ಸ್ವಯಂಸೇವಕರಾಗಿ ಮುಂದೆ ಬಂದಿರುತ್ತಾರೆ

ಸಂಸ್ಥಾನಕ್ಕೆ ನೆಹರೂ ಮತ್ತು ಢೇಬರರ ಭೇಟಿ

ಬೆಂಗಳೂರು ೧೫

ಬರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ಸಂಸ್ಥಾನದಲ್ಲಿ ಪ್ರಚಾರ ನಡೆಸಲು ಪ್ರಧಾನಿ ನೆಹರೂರವರೂ, ಕಾಂಗ್ರೆಸ್ ಅಧ್ಯಕ್ಷ ಢೇಬರರೂ ಮತ್ತು ಇತರ ಪ್ರಮುಖ ನಾಯಕರೂ ಬರುವ ತಿಂಗಳು ಎರಡನೇ ವಾರದಲ್ಲಿ ಇಲ್ಲಿಗೆ ಭೇಟಿ ಕೊಡುವರೆಂದು ಹೇಳಲಾಗಿದೆ.

೫ ಸಾವಿರ ಮಂದಿ ದೆಹಲಿ ಉಪಾಧ್ಯಾಯರ ಉಪವಾಸ

ತಮ್ಮ ಸಂಬಳಗಳನ್ನು ಏರಿಸಬೇಕೆಂದೂ ಮತ್ತು ತಮ್ಮಲ್ಲಿ ಖಾಯಂ ಆಗಿಲ್ಲದಿರುವ ಅನೇಕರನ್ನು ಖಾಯಂಗೊಳಿಸಬೇಕೆಂದೂ ಕೋರಿ ಕಳೆದ ಶನಿವಾರ ದೆಹಲಿಯ ೫,೦೦೦ ಮಂದಿ ಉಪಾಧ್ಯಾಯರು ಒಂದು ದಿವಸದ ಪ್ರತಿಭಟನಾ ಉಪವಾಸ ಮಾಡಿದರು. ಅದರೆ ಅವರು ಅಂದು ಕೆಲಸಗಳಿಗೆ ಹಾಜರಾಗಿದ್ದರು ಅವರುಗಳಲ್ಲಿ ಕೇವಲ ೩೮ ಮಂದಿ ಮಾತ್ರ ಖಾಯಂ ಆಗಿದ್ದಾರೆ ಉಳಿದವರನ್ನು ಖಾಯಂಗೊಳಿಸಲು ಅವರ ಸಂಘವು ಕಳೆದ ೧೦ ವರ್ಷಗಳಿಂದಲೂ ಹೋರಾಡುತ್ತಿದೆ.

ರಾಜಕೀಯದಿಂದ ಮಂತ್ರಿ ಎ. ಬಿ. ಶೆಟ್ಟಿಯವರ ನಿವೃತ್ತಿ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮಂಗಳೂರಿನಲ್ಲಿ ಭಾಷಣ ಮಾಡುತ್ತಾ, ದಕ್ಷಿಣ ಕನ್ನಡದವರಾದ ಆರೋಗ್ಯ ಮಂತ್ರಿ ಶ್ರೀ ಎ ಬಿ ಶೆಟ್ಟಿಯವರು ರಾಜಕೀಯದಿಂದ ನಿವೃತ್ತರಾಗುವುದಾಗಿ ತಿಳಿಸಿದರು. ಶ್ರೀ ಎ ಬಿ ಶೆಟ್ಟಿಯವರು ಸಧ್ಯದಲ್ಲೇ ನಡೆಯಲಿರುವ ಮಹಾ ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲವೆಂದು ಅವರು ತಿಳಿಸಿದರು.

ಚುಂಚನಕಟ್ಟೆ ದನಗಳ ಪ್ರದರ್ಶನದ ಬಹುಮಾನ ವಿನಿಯೋಗ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಾಳೆ ಮಧ್ಯಾಹ್ನ ಚುಂಚನಕಟ್ಟೆಯ ದನಗಳ ಪ್ರದರ್ಶನದಲ್ಲಿ ಬಹುಮಾನ ವಿನಿಯೋಗ ಮಾಡುವರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ. ವೆಂಕಟಪ್ಪನವರು ಅಧ್ಯಕ್ಷತೆ ವಹಿಸುವರು.

ದಾರಿಗರನ್ನು ಅಡ್ಡ ಹಾಕಿ ಒಬ್ಬನ ಕೊಲೆ

ಸ್ವಂ. ವ] ನಂಜನಗೂಡು ೧೫

ಈ ತಾಲ್ಲೂಕಿನ ಹಳೇಪುರ ರಸ್ತೆಯಲ್ಲಿ ಮೊನ್ನೆ ರಾತ್ರಿ ತಮಟೆ ಮಾದಶೆಟ್ಟಿ ಮತ್ತು ಪುಟ್ಟಶೆಟ್ಟಿ ಎಂಬುವರು ಬರುತ್ತಿದ್ದಾಗ ಐವರು ದುರಾತ್ಮರು ದೊಣ್ಣೆ ಮತ್ತು ಮಚ್ಚುಗಳಿಂದ ಮಾದಶೆಟ್ಟಿಯನ್ನು ಹೊಡೆಯಲಾಗಿ ಅವನು ಸ್ಥಳದಲ್ಲೇ ಮೃತಪಟ್ಟನೆಂದು ವರದಿಯಾಗಿದೆ. ಮತ್ತೊಬ್ಬನಿಗೆ ಪೆಟ್ಟುಬಿದ್ದು ಆಸ್ಪತ್ರೆಗೆ ಸೇರಿಸಲಾಗಿದೆ ಹೆಂಗಸಿನ ವಿಷಯವೇ ಕೊಲೆಗೆ ಕಾರಣವೆಂದು ಹೇಳಲಾಗಿದೆ ಎ ಎಸ್ ಪಿ ತಿಮ್ಮೇಗೌಡರು ಇನ್ಸ್‌ಪೆಕ್ಟರ್ ಶ್ರೀ ಕೃಷ್ಣಪ್ಪ ಮತ್ತು ಸಬ್ ಇನ್ಸ್‌ಪೆಕ್ಟರ್ ಶ್ರೀ ಶ್ರೀನಿವಾಸಮೂರ್ತಿಯವರೊಡನೆ ಸ್ಥಳಕ್ಕೆ ತೆರಳಿ ತನಿಖೆ ನಡೆಸಿದರು.

ಮೂರು ಭಾಗವಾಗಿ ಪಶ್ಚಿಮ ಪಾಕಿಸ್ತಾನದ ವಿಂಗಡಣೆ

ಪಶ್ಚಿಮ ಪಾಕಿಸ್ತಾನದ ವಿವಿಧ ಪ್ರದೇಶಗಳನ್ನು ಒಂದೇ ಆಡಳಿತಕ್ಕೆ ಒಳಪಡಿಸಿರುವುದರಿಂದ ಅಲ್ಲಿ ಆಡಳಿತವು ಬಹಳ ಹದಗೆಟ್ಟಿರುವುದೆಂದೂ, ಈ ಕಾರಣದಿಂದ ಅದನ್ನು ಮೂರು ಭಾಗವಾಗಿ ವಿಂಗಡಿಸುವ ಆಲೋಚನೆಯನ್ನು ಪಾಕಿಸ್ತಾನದ ಕೇಂದ್ರ ಸರ್ಕಾರದವರು ಮಾಡಿರುವರೆಂದೂ ವರದಿಯಾಗಿದೆ

ಜೀವ ವಿಮೆ ಹಣಕ್ಕಾಗಿ ತಾಯಿಯ ಕೊಲೆ ಮಾಡಿದವನಿಗೆ ಫಾಸಿ

ತನ್ನ ತಾಯಿಯು ಮಾಡಿದ ಜೀವ ವಿಮೆ ಹಣ [illegible] ಸಾವಿರ ಡಾಲರುಗಳನ್ನು ಪಡೆಯುವ ಸಲುವಾಗಿ [illegible] ಆಕೆಯು ವಿಮಾನವೊಂದರಲ್ಲಿ ಪ್ರಯಾಣ ಮಾಡುತ್ತಿದ್ದಾಗ ಸಿಡಿಯುವ ಬಾಂಬೊಂದನ್ನಿಟ್ಟು, ಆ ವಿಮಾನದ ಎಲ್ಲ ಪ್ರಯಾಣಿಕರ ಮರಣಕ್ಕೂ ಕಾರಣನಾದ ಜಾಕ್ ಗಿಲ್ಬರ್ಟ್ ಗ್ರಹಾಂ ಎಂಬುವನನ್ನು ಕಳೆದ ವಾರ ಅಮೆರಿಕದ ಕ್ಯಾನನ್ ಸಿಟಿ ಎಂಬಲ್ಲಿ ಗಲ್ಲಿಗೆ ಹಾಕಲಾಯಿತು ಆತನಿಗೆ ಇಬ್ಬರು ಮಕ್ಕಳಿದ್ದರು

ಶಾರದಾಮಣಿ ದಿನಾಚರಣೆ

ನಗರದ ಮಹಿಳಾ ಸದನದಲ್ಲಿ ಕಳೆದ ಶುಕ್ರವಾರ ಶಾರದಾಮಣಿ ದಿನಾಚರಣೆಯು ಶ್ರೀಮತಿ ರತ್ನಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು ಸಾಮೂಹಿಕ ಪ್ರಾರ್ಥನೆ ಮತ್ತು ಆರತಿ ಭಜನೆಗಳ ನಂತರ ಸದನದ ಅಧ್ಯಕ್ಷಿಣಿ ಶ್ರೀಮತಿ ಹೆಚ್ [illegible] ಕಾಂತಮ್ಮನವರು ಸ್ವಾಗತ ಭಾಷಣ ಮಾಡಿದರು [illegible] ಭಕ್ತರು ಭಾಷಣ ಮಾಡಿ, ಶಾರದಾಮಣಿಯವರ ಅಮೋಘ ಮಹಿಮೆಗಳನ್ನು ದೃಷ್ಟಾಂತಗಳ ಮೂಲಕ ವಿವರಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು

ತರುಣ [illegible] ಸಂಘದ ಸ್ಥಾಪನೆ

ಚಾಮರಾಜನಗರದ ತಾಲ್ಲೂಕ ದೊಡ್ಡರಾಯಪೇಟೆ ಗ್ರಾಮದಲ್ಲಿ ರಾಷ್ಟ್ರೀಯ ವಿಸ್ತರಣ ಯೋಜನ ಸಮಿತಿಯವರು ಕಳೆದ [illegible] ನಾಲ್ಕು ದಿವಸ ಗ್ರಾಮಸೇವಾ ಶಿಬಿರವನ್ನು ಏರ್ಪಡಿಸಿದ್ದರು [illegible] ನೇ ತಾರೀಕು [illegible] ಜನರ [illegible] ಗಳ ತರುಣರ [illegible] ಸಂಘವನ್ನು ಸ್ಥಾಪನ ಮಾಡಲಾಯಿತು.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd)1911

ಗಮಕ ಕಲಾರಾಧನಾ ಮಹೋತ್ಸವ

ಚಾಮರಾಜನಗರ ೧೩

ಗಮಕ ವಿದ್ವಾನ್ ಶ್ರೀ ಎಸ್. ಕೆ ರಾಮಸ್ವಾಮಿಯವರು ವರ್ಷಂಪ್ರತಿ ನಡೆಸಿಕೊಂಡು ಬರುವ ಗಮಕ ಕಲಾರಾಧನೆಯನ್ನು ಈ ವರ್ಷವೂ ಕಳೆದ ೬ ೭ ಮತ್ತು ೮ನೇ ತಾರೀಕುಗಳಲ್ಲಿ ಇಲ್ಲಿನ ಚಾಮುಂಡೇಶ್ವರಿ ಧರ್ಮಶಾಲೆಯಲ್ಲಿ ನಡೆಸಲಾಯಿತು ೬ನೇ ತಾರೀಕು ಸಂಜೆ ಸಮಾರಂಭವು ಜೆ. ಎಸ್ ಇಂಟರ್‌ಮೀಡಿಯೇಟ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಸ್ಥಳೀಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಅಳಸಿಂಗ್ರಾಚಾರ್ಯರು ವಾಲ್ಮೀಕಿ ರಾಮಾಯಣ ಮಹಾಕಾವ್ಯದ ಬಗ್ಗೆ ಉಪನ್ಯಾಸ ಮಾಡಿದರು. ನಂತರ ಶ್ರೀ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರಿಂದ ವ್ಯಾಖ್ಯಾನವೂ, ಶ್ರೀಮತಿ ಲಲಿತಮ್ಮ ಅನಂತರಾಮಯ್ಯನವರಿಂದ ವಾಚನವೂ ನಡೆಯಿತು.

ಮಾರನೇ ದಿನದ ಕಾರ್ಯಕ್ರಮವು ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಅಳಸಿಂಗ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಎಸ್ ವಿ ರಂಗಣ್ಣನವರು ಕುಮಾರವ್ಯಾಸನ ವ್ಯಕ್ತಿತ್ವದ ಬಗ್ಗೆ ಭಾಷಣ ಮಾಡಿದರು ಗಮಕ ವಿದುಷಿ ಶ್ರೀಮತಿ ಆರ್ ಚಂದ್ರ ಲಕ್ಷ್ಮಣಮೂರ್ತಿಯವರು ಕಾವ್ಯ ವಾಚನ ಮಾಡಿದರು

೮ನೇ ತಾರೀಖು ಬೆಳಗಿನ ಸಭೆಯು ಯಳಂದೂರಿನ ಅಮಲ್ದಾರ್ [illegible] ಕೆಂಪರಾಜೆ ಅರಸ್‌ರವರ ಅಧ್ಯಕ್ಷತೆಯಲ್ಲಿ ಸೇರಿತು ಶ್ರೀಮತಿ ಆರ್ ಚಂದ್ರ ಲಕ್ಷ್ಮಣಮೂರ್ತಿಯವರಿಂದ ವಾಚನ, ಶ್ರೀ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಯವರಿಂದ ವ್ಯಾಖ್ಯಾನಗಳಾದುವು ಅದೇ ಸಂಜೆ ನಡೆದ ಸಭೆಗೆ ಸ್ಥಳೀಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕರಾದ ಶ್ರೀ ಸಂಪತ್ಕುಮಾರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು

ಗಮಕ ವಿದ್ವಾನ್ ಎಚ್ ಕೆ ರಾಮಸ್ವಾಮಿಯವರಿಂದ ಕಾವ್ಯ ವಾಚನವೂ ಶ್ರೀಮತಿ ಆರ್ ಚಂದ್ರ ಲಕ್ಷ್ಮಣಮೂರ್ತಿಯವರಿಂದ ವಚನಗಾನವೂ [illegible] ವಿದುಷಿ ಶ್ರೀಮತಿ ರುಕ್ಮಿಣಮ್ಮನವರಿಂದ ಸೂಕ್ತ ಪಕ್ಕವಾದ್ಯಗಳೊಡನೆ ಸುಶ್ರಾವ್ಯ ಸಂಗೀತವೂ ಏರ್ಪಾಡಾಗಿತ್ತು

ಅಪ್ಪಟವಾದ
ಹಸುವಿನ ಹಾಲು
ದರ ಪೌಂಡು 1ಕ್ಕೆ 0 3 6
ಅರ್ಧ ಪೌಂಡಿಗೆ 0 1 9
ನಿಮ್ಮ ಎದುರಿಗೇ ಕರೆದುಕೊಡಲಾಗುತ್ತೆ
ಇಂದೇ ಭೇಟಿ ಕೊಟ್ಟು ಪರೀಕ್ಷಿಸಿ
ಕಾಲ ಬೆಳಿಗ್ಗೆ 5-30ರಿಂದ 9 30
ಮಧ್ಯಾಹ್ನ 3ರಿಂದ 6-30
ಗೋಕುಲ ಡೈರಿ ಫಾರಂ,
(ಬ್ರಾಂಚ್) ಅಂಬಳೆ ಅಣ್ಣಯ್ಯ ಪಂಡಿತರ
ಛತ್ರದ ಹಿಂಭಾಗ,
ನೂರಡಿ ರಸ್ತೆ, ಮೈಸೂರು

ತಿಂಗಳುಗಟ್ಟಲೆ ಉಪವಾಸ ಮಾಡುವ ಶಕ್ತಿ ನೀಡುವ ಫಲ

ಕುರುಕ್ಷೇತ್ರದಲ್ಲಿ ಸಮಾವೇಶಗೊಂಡಿರುವ ಆಯುರ್ವೇದ ಸಮ್ಮೇಳನದ ಅಧ್ಯಕ್ಷತೆ ವಹಿಸಿರುವ ವೈದ್ಯರತ್ನ ಕವಿರಾಜ ಪ್ರತಾಪಸಿಂಗ್ ಎಂಬುವರು ಗೃಸ್ತಿಕ ಎಂಬ ಒಂದು ಅಪೂರ್ವ ಜಾತಿಯ ಫಲವನ್ನು ಪ್ರದರ್ಶಿಸಿ, ಆ ಹಣ್ಣನ್ನು ಒಂದು ಸಾರಿ ಸೇವಿಸಿದರೆ ಅದರಿಂದ ಎರಡು ತಿಂಗಳಿಗೂ ಮಿಗಿಲಾಗಿ ಆಗುವಷ್ಟು ಆಹಾರಾಂಶವು ಒದಗುವುದೆಂದೂ, ಅದನ್ನು ಸೇವಿಸಿದ ಮನುಷ್ಯನು ಎರಡು ತಿಂಗಳಿಗೂ ಹೆಚ್ಚಾಗಿ ಆಹಾರವಿಲ್ಲದೆ ಇರಬಹುದೆಂದೂ ತಿಳಿಸಿರುವರು ಸಾಧುಗಳೂ ಮತ್ತು ಋಷಿಗಳೂ ತಿಂಗಳುಗಟ್ಟಲೆ ಏಕಾಗ್ರ ಚಿತ್ತತೆಯಿಂದ ಧ್ಯಾನಾಸಕ್ತರಾಗಿರಲು ಅನುಕೂಲಿಸುವಂತಾಗಲು ಈ ಫಲವನ್ನು ಸೇವಿಸುತ್ತಿದ್ದರೆಂದೂ, ಅದರ ರುಚಿಯು ಆಲೂಗೆಡ್ಡೆಯ ರುಚಿಯನ್ನು ಹೋಲುವುದೆಂದೂ ತಿಳಿಸಲಾಗಿದೆ. ಈ ಫಲವೃಕ್ಷವು ಹಿಮಾಲಯಾ ತಪ್ಪಲಿನ ಅಲ್ಮೋರಾ ಜಿಲ್ಲೆಯಲ್ಲಿ ಹೇರಳವಾಗಿ ಬೆಳೆಯುವುದೆಂದೂ ಅದರ ಒಂದು ಸಸಿಯನ್ನು ರಾಷ್ಟ್ರಪತಿ ಭವನದ ಮೊಗಲ್ ಉದ್ಯಾನವನದಲ್ಲಿ ತಾವು ನೆಟ್ಟಿರುವುದಾಗಿಯೂ ಕವಿರಾಜ ಪ್ರತಾಪಸಿಂಗರು ತಿಳಿಸಿರುವರು

ಅಕ್ಬರ್ ಚಕ್ರವರ್ತಿಯ ನಾಲ್ಕನೇ ಶತಮಾನೋತ್ಸವ

ವಿಶ್ವವಿದ್ಯಾಲಯದ ಇತಿಹಾಸ ಗೋಷ್ಠಿಯ ಆಶ್ರಯದಲ್ಲಿ ಕಳೆದ ಶುಕ್ರವಾರ ಮಹಾರಾಜಾ ಕಾಲೇಜಿನಲ್ಲಿ ಅಕ್ಬರ್ ಚಕ್ರವರ್ತಿಯ ನಾಲ್ಕನೇ ಶತಮಾನ ದಿನಾಚರಣೆಯು ನೆರವೇರಿತು. ಗೋಷ್ಠಿಯ ಅಧ್ಯಕ್ಷ ಡಾ|| ಶ್ರೀಕಂಠಶಾಸ್ತ್ರಿಯವರು ಅಗ್ರಾಸನವನ್ನು ವಹಿಸಿದ್ದರು ಡಾ|| ಬಿ ಶೇಖ್ ಅಲಿಯವರು ಉದ್ಘಾಟನಾ ಭಾಷಣ ಮಾಡಿದ ನಂತರ, ಶ್ರೀಗಳಾದ ರಾಮಲಿಂಗಪ್ಪ, ಬದರಿನಾಥ್, ಸಿದ್ದಲಿಂಗಯ್ಯ, ವಸಂತರಾವ್, ಹಡಕ್ಕರಪ್ಪಶೆಟ್ಟರ್ ಮತ್ತು ಶ್ರೀಮತಿಯವರಾದ ಫರಾತ್ ಜಹಾ ಮತ್ತು ಸರೋಜಾರವರು ಮಾತನಾಡಿ ಅಕ್ಬರನ ಜೀವನವನ್ನು ವಿವರಿಸಿದರು

ಗೃಹಕೃತ್ಯದ ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :-

ಶ್ರೀರಂಗಪಟ್ಟಣದ ತಾಲ್ಲೂಕು ಅರಕೆರೆ ಹೋಬಳಿ ಮಂಡ್ಯ ಕೊಪ್ಪಲು ಗ್ರಾಮದಲ್ಲಿ 482 483 ನೇ ಸರ್ವೆ ನಂಬರಿನ ಜಮೀನು ನನಗೂ, ನಮ್ಮ ತಾಯಿಗೂ, ನನ್ನ ತಂಗಿಗೂ ಸೇರಿರುವ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿ ನನ್ನ ತಾಯಿಯವರ ಮ್ಯಾನೇಜ್‌ಮೆಂಟಿನಲ್ಲಿರುತ್ತೆ. ನಮಗೆ ಆಗದ ಕೆಲವರು ನಮಗೆ ಮೋಸಪಡಿಸಿ, ಕಿರುಕುಳ ಉಂಟುಮಾಡಿ ವೃಥಾ ವ್ಯವಹಾರಕ್ಕೆ ಎಳೆಯುವ ಉದ್ದೇಶದಿಂದ ಏನೂ ತಿಳಿಯದ ನನ್ನ ತಮ್ಮ ಎಸ್ ಆರ್ ರಾಮಸ್ವಾಮಿ ಉರುಫ್ ಗುಂಡ ಎಂಬುವನನ್ನು ಪುಸಲಾಯಿಸಿ ಅವನಿಂದ ಈ ಜಮೀನನ್ನು ಪರಭಾರೆ ಮಾಡಿಸಿಕೊಳ್ಳಲು ಏರ್ಪಾಡು ಮಾಡುತ್ತಿರುವರೆಂಬ ಸಮಾಚಾರ ತಿಳಿಯಬರುತ್ತೆ ಸದರಿ ನನ್ನ ತಮ್ಮನಿಗೆ ಯಾವ ರೀತಿಯಲ್ಲೂ ಪರಭಾರೆ ಮಾಡಲು ಯಾವ ಕಾರಣವೂ ಇಲ್ಲ ಮತ್ತು ಹಕ್ಕೂ ಇಲ್ಲ. ಯಾರಾದರೂ ಸದರಿ ಜಮೀನನ್ನು ಅವನಿಂದ ಪರಭಾರೆ ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ಎಲ್ಲರಿಗೂ ತಿಳುವಳಿಕೆ ಬಗ್ಗೆ ಪ್ರಕಟಪಡಿಸಿರುತ್ತೆ. ಹಾಗೇನಾದರೂ ಅವನಿಂದ ಪರಭಾರೆ ಮಾಡಿಸಿಕೊಂಡಲ್ಲಿ ಅದರ ಕಷ್ಟನಷ್ಟಗಳಿಗೆ ಅವರೇ ಜವಾಬ್ದಾರರು

ಎಸ್. ಆರ್ ನಾಗರಾಜ,
(S/o ಲೇಟ್ ಎಸ್ ರಾಮಾನುಜಯ್ಯಂಗಾರ್)
ಕ್ಲಾರ್ಕ್, ಪೋಸ್ಟ್ ಆಫೀಸ್,
ವಾಣೀವಿಲಾಸ ಮೊಹಲ್ಲಾ
ಮೈಸೂರು
14 1 57

Edited, Printed and Published by A R. Nagarajan at Sadhvi Press, D. Subbiah Road, Mysore

ಚಾಮುಂಡಾಂಬಿಕಾ ವಿದ್ಯಾ ಸ
ವಾರ್ಷಿಕೋತ್ಸವ

ನಗರದ ರಾಮಾನುಜಾ ರಸ್ತೆಯ ೪ನೇ ಸಿನಲ್ಲಿರುವ ಶ್ರೀ ಚಾಮುಂಡಾಂಬಿಕಾ ವಿದ್ಯಾ ಘದ ವಾರ್ಷಿಕೋತ್ಸವವು ಕಳೆದ ಭಾನುವಾ ರಸಭಾಧ್ಯಕ್ಷ ಶ್ರೀ ಎಸ್ ಸಂಜೀವಯ್ಯನವ ಧ್ಯಕ್ಷತೆಯಲ್ಲಿ ನೆರವೇರಿತು ಟ್ರೈನಿಂಗ್ ಲೇಜಿನ ಸಂಸ್ಕೃತ ಪಂಡಿತರಾದ ಶ್ರೀ ಎಂ ಮಾನುಜಾಚಾರ್ಯರು ತಾವೇ ರಚಿಸಿದ್ದ ತ ಪದ್ಯ ಮಾಲಿಕೆಯನ್ನು ಪಠಿಸಿದರು ರಾಜಾ ಕಾಲೇಜಿನ ಅರ್ಥ ಶಾಸ್ತ್ರದ ಪ್ರಾಧ್ಯಾ ಪಕರಾದ ಡಾ|| ಜಿ. ಟಿ. ಕೃಷ್ಣಪ್ಪನವರು ಹ ಶಾಲೆಗಳ ಅವಶ್ಯಕತೆಯನ್ನು ಒತ್ತಿ ಶಾಲೆಯ ವ್ಯವಸ್ಥಾಪಕರಾದ ಶ್ರೀ ಎಂ ಬ್ಬಪ್ಪನವರ ಅನುಭವ ಮತ್ತು ಉತ್ತಮ ಬೋ ನಾಕ್ರಮಗಳನ್ನು ಪ್ರಶಂಸಿಸಿದರು ಶಾಲೆ ವಿದ್ಯಾರ್ಥಿನಿ ಶ್ರೀಮತಿ ಎಲ್ ಕಾಂತಾಮಣಿ ವರ ಸಂಗೀತವೂ ಮತ್ತು ಶ್ರೀಯುತ ತ್ಯಾಗರಾ ಮತ್ತು ತಾರಾನಾಥ್‌ರವರ ಭಾರತ ಸ ಸುಶ್ರಾವ್ಯವಾಗಿ ಜರುಗಿದುವು ಪೋಷಕರ ವಾಗಿ ಶ್ರೀ ನಂಜುಂಡಶಾಸ್ತ್ರಿಗಳು ಶ್ರೀ ಎಂ ಸಿ ಬ್ಬಪ್ಪನವರ ಸೇವೆ ಮತ್ತು ಸಾಮರ್ಥ್ಯಗಳ ಶ್ಲಾಘಿಸಿದರು ಅಧ್ಯಕ್ಷರ ಭಾಷಣಾನಂತ ವಂದನಾರ್ಪಣೆ ಮತ್ತು ರಾಷ್ಟ್ರ ಗೀತೆಯೊಡನೆ ಮಾರಂಭವು ಮುಕ್ತಾಯಗೊಂಡಿತು.

ತ್ವರೆ ಮಾಡಿರಿ
19 1-57 ರಂದು ಮುಕ್ತಾಯವಾಗುವ
ರೇಡಿಯೊ ಸಪ್ತಾಹಕ್ಕಾಗಿ
ಬುಷ್
ರೇಡಿಯೊಗಳನ್ನು
ರಿಯಾಯಿತಿ ದರದಲ್ಲಿ ಕೊಳ್ಳಿರಿ
- ಅಧಿಕೃತ ಮಾರಾಟಗಾರರು :-
ಸಂಪತ್ ಬ್ರದರ್ಸ್,
ರೇಡಿಯೊ ಡೀಲರ್ಸ್,
"ಬುಷ್ ಹೌಸ್", 594 ಕಾಲೇಜ್ ರಸ್ತೆ,
ಮೈಸೂರು

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಕು
ವಿಶ್ವ ವಿಖ್ಯಾತರಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 5
— ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲ್ಕಂಡ ವಿಷಯವನ್ನು ಗಮನಿಸಿ
ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ [illegible]
[illegible]
ನವರತ್ನ — ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಹವಳ, ಗೋಮೇಧಿಕ, ನೀಲ, ಪಚ್ಚ ರಾಗಿಣಿ ಮತ್ತು ಸೇರಿ ಮಾಡಿದ 9 ಅಮೂಲ್ಯ ಹರಳುಗಳ ಯೋಗ ಇದರಿಂದ ನರಗಳ ದೌರ್ಬಲ್ಯ, ರ್ ಸಂಬಂಧದ ವ್ಯಾಧಿಗಳು, ರಕ್ತದೋಷ, ಮೂಲವ್ಯಾಧಿ, ಮೂತ್ರ, ಅಸ್ತಮಾ ಮತ್ತು ಇನ್ನು ಇತರ ಸಾಮಾನ್ಯ ಹಾಗೂ ತೀವ್ರವಾದ ಕಾಯಿಲೆ ಸಂಪೂರ್ಣವಾಗಿ ಗುಣ ಹೊಂದುವುವು. ಅಶಕ್ತ ಆರೋಗ್ಯದಾಯಕ ಔಷಧಿ ಇದೊಂದೇ ಸಾಹಿತ್ಯಗಳಿಗಾಗಿ ಬರೆಯಿರಿ.
NAVRATNA KALPA PHARMACY,
JULLUNDUR CITY (India)

ಚಾಮುಂಡೇಶ್ವರಿ ಟಾಕೀಸ್
17-1 57 ರಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿರುವ ೨ನೇ ವಾರ
ಗಮನಿಸಿ —ಮ್ಯಾಟಿನಿ 2—40, 1ನೇ ಆಟ 6— 20, ೨ನೇ ಆಟ 10 ಘಂಟೆಗೆ
★ ಮಾದರಕುಲ ಮಾಣಿಕ್ಯಂ ★
ನಟವರ್ಗ: [illegible] ಗಣೇಶ್, ಸಾವಿತ್ರಿ, ನಾಗೇಶ್ವರರಾವ್, ಅಂಜಲಿದೇವಿ, ತಂಗವೇಲು,
ಎಂ ಎನ್ ರಾಜಂ, ರಂಗಾರಾವ್, ಕನ್ನಾಂಬ ಸಾರಂಗಪಾಣಿ, ಫ್ರೆಂಡ್ ರಾಮಸ್ವಾಮಿ
[AN EMERALD RELEASE



ಟೆಲಿಫೋನ್ ನಂ. 793

ಸತ್ಯನಾರಾಯಣ
ರೈಸ್ ಮಿಲ್
ಶಿವರಾಂಪೇಟೆ, ಮೈಸೂರು
ರಾಜಕಮಲ್ ಟಾಕೀಸ್ ಹತ್ತಿರ)
★
ಗ ಸುಗ್ಗಿ ಕಾಲ—ನಮ್ಮ ಮಿಲ್ಲಿನ
ಲ್ಲಿ ಸೊಗಸಾಗಿ, ಸರಿಯಾದ
ಅ ತಿಗೆ ಅಕ್ಕಿ ಇಳಿಸಲು
ಶೀಘ್ರವೇ ಪರೀಕ್ಷಿಸಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
★
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71|1 ಅವಿನ್ಯೂ ರೋಡ್
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು—2

ುಟ : ೧೫] SADHVI : THURSDAY 17—1—1957 ಮೈಸೂರು : ಗುರುವಾರ ೧೭—೧—೧೯೫೭ : [ಸಂಚಿಕೆ : ೧೭೩

ಕಾಶ್ಮೀರಕ್ಕೆ ವಿಶ್ವ ಸೈನ್ಯ ಕಳುಹಲು ಪಾಕಿಸ್ತಾನದ ಕರೆ -

ೇಶೀ ಭಾವನೆಯು ಹೆಚ್ಚಾಗಿ ಬೆಳೆಯಬೇಕು

ಕಸಬುಗಳ ಸಪ್ತಾಹದಲ್ಲಿ ಸಚಿವ ಪೂಣಚ್ಚರವರ ಭಾಷಣ

ಮೈಸೂರು ೧೬

ಖಿಲ ಭಾರತ ಕೈ ಕಸಬುಗಳ ಎರಡನೇ ಸ
ಹದ ಅಂಗವಾಗಿ ನೆನ್ನೆ ವಸ್ತು ಪ್ರದರ್ಶನಾಲ
ದಲ್ಲಿ ಮೈಸೂರು ಜಿಲ್ಲೆಯ ಕುಶಲ ಕಲೆ ವು
ಕೈ ಕಸಬುಗಾರರ ಸಮ್ಮೇಳನ ಮತ್ತು ವ
ಪ್ರದರ್ಶನದ ಆರಂಭೋತ್ಸವವನ್ನು ಕೈಗಾರಿ
ಸಚಿವ ಶ್ರೀ ಪೂಣಚ್ಚರವರು ನೆರವೇರಿಸಿ, ಸಾ
ಜನಿಕರಲ್ಲಿ ಸ್ವದೇಶೀ ಭಾವನೆಯು ಹೆಚ್ಚಾಗಿ
ಬೆಳೆಯಬೇಕೆಂದು ತಿಳಿಸಿದರು. ವ್ಯವಸಾ
ಪ್ರಧಾನವಾಗಿರುವ ನಮ್ಮ ದೇಶದಲ್ಲಿ ಜನರ
ಜೀವನದ ಆವಶ್ಯಕತೆಗಳನ್ನು ಪೂರೈಸಲು
ಕಲೆ ಮತ್ತು ಕೈಗಾರಿಕೆಗಳ ಬೆಳವಣಿಗೆ
ಅಗತ್ಯವೆಂದು ಅವರು ಸೂಚಿಸಿದರು. ನ
ದೇಶದಲ್ಲಿ ತಯಾರಾದ ವಸ್ತುಗಳನ್ನೇ ಉಪ
ಯೋಗಿಸುವ ಪದ್ಧತಿಯು ಹೆಚ್ಚಿ, ವಿದೇಶೀ ಮಾ
ಲ ವ್ಯಾಮೋಹವು ತಗ್ಗಬೇಕೆಂದು ಅವರು
ಸಿದರು. ಕೈ ಕಸಬುಗಳ ಅಭಿವೃದ್ಧಿಗಾಗಿ
ದವರು ಸೂಕ್ತವಾದ ನೆರವು ನೀಡುವ
ಯೂ ಅವರು ಭರವಸೆಯಿತ್ತರು

ವಲ ಶ್ರೀಮತಿ ಶಾಂತರಾಜಮ್ಮಣ್ಣಿಯವ
ಪ್ರಾರ್ಥನೆಯಾದನಂತರ ವಿದುಷಿ ಚೊಕ್ಕ
ಮತ್ತು ವೃಂದದವರಿಂದ ಗಾಯನವಾದ
ಗ್ರಾಮಾಂತರ ಕೈಗಾರಿಕಾ ಯೋಜನೆಯ
ಂಟೆಂಡೆಂಟ್ ಶ್ರೀ ಮುದ್ದುಲಿಂಗಯ್ಯನವ
ಸ್ವಾಗತ ಭಾಷಣ ಮಾಡಿ ಸಪ್ತಾಹದ ಉದ್ದೇ
ವಿವರಿಸಿ, ಗ್ರಾಮ ಕೈಗಾರಿಕೆಗಳಿಗೆ ಉ
ನೀಡುವ ಈ ಪ್ರಯತ್ನದಲ್ಲಿ ಎಲ್ಲರೂ ಸ
ಸಬೇಕೆಂದು ಕೋರಿದರು. ಸಣ್ಣ ಕೈಗಾರಿ
ಗೆ ಹಲವು ಬಗೆಯ ಸೌಲಭ್ಯಗಳನ್ನು ಕಲ್ಪಿ
ಸಲು ಚಿವರಲ್ಲಿ ಮನವಿಗಳನ್ನು ಸಲ್ಲಿಸಲಾ

ಸಿ ಗೋಪಾಲಕೃಷ್ಣಶೆಟ್ಟಿರಿಂದ ವಂದ
ನೆಯಾದನಂತರ ರಾಷ್ಟ್ರಗೀತೆಯೊಡನೆ
ಂಭವು ಮುಗಿಯಿತು
ನೇ ತಾರೀಖಿನವರೆಗೆ ಪ್ರತಿ ದಿನ ಮ
ಗಂಟೆಯಿಂದ ಪ್ರದರ್ಶನವು ತೆರೆಯ
ತ್ತದೆ ಸರ್ವರಿಗೂ ಉಚಿತ ಪ್ರವೇಶವುಂ
ೀಯ ಮತ್ತು ಗ್ರಾಮಾಂತರದಲ್ಲಿ ತ
ದ ವಸ್ತುಗಳನ್ನು ಅದರಲ್ಲಿಡಲಾಗಿದೆ
ಮತ್ತು ನೇ ತಾರೀಖುಗಳಲ್ಲಿ ಪ್ರತಿ
ಗ್ರಾಮ ಕೈಗಾರಿಕೆಗಳ ಚಲನಚಿತ್ರ ಪ್ರದ
ನಗಳನ್ನು ಸಹ ಏರ್ಪಡಿಸಲಾಗಿದೆ. ಮಹಾ
ಇವುಗಳನ್ನು ವೀಕ್ಷಿಸಿ ದೇಶೀಯ ಕೈ
ಗೆ ಉತ್ತೇಜನವೀಯಬೇಕೆಂದು ಕೋ

ವಿಲಾಸ ಅಗ್ರಹಾರದಲ್ಲಿರುವ ಗಾಂಧಿ
ಪರಿಷತ್ತಿನ ಆಶ್ರಯದಲ್ಲಿ ನಾಳೆ ಸಂಜ
ಎಂ ದತ್ತರವರ "ಫಿಲಾಸಫಿಕಲ್
ಆಫ್ ಸೋಷಿಯಲ್ ರೆವೊಲ್ಯೂಷನ್"
ಧಾರವಾದ ಗೋಷ್ಠಿಯನ್ನು ಶ್ರೀ ಎಂ
ನಾಚಾರ್ಯರು ನಡೆಸುವರು

ಕಾಶ್ಮೀರಕ್ಕೆ ವಿಶ್ವಸಂಸ್ಥೆ ಸೈನ್ಯ ಕಳುಹಲು ಪಾಕಿಸ್ತಾನದ ಕರೆ

ಭದ್ರತಾ ಸಮಿತಿಯಲ್ಲಿ ಪಾಕಿಸ್ತಾನ ವಿದೇಶಾಂಗ ಮಂತ್ರಿಯ ಒತ್ತಾಯ

ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ನೆನ್ನೆ ಕಾಶ್ಮೀರದ ಪ್ರಶ್ನೆಯ ಚರ್ಚೆ ಆರಂಭವಾದಾಗ, ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನ್ ಮಾತನಾಡಿ, ಕಾಶ್ಮೀರದ ಭವಿಷ್ಯದ ನಿರ್ಧಾರವು ಜನಮತಗಣನೆ ಮೂಲಕವೇ ಆಗುವಂತೆ ಸಮಿತಿಯು ಪ್ರಸ್ತಾಪಿಸಬೇಕೆಂದೂ, ಕಾಶ್ಮೀರದ ರಾಜ್ಯಾಂಗ ಸಭೆಯ ನಿರ್ಧಾರವನ್ನು ಭಾರತವು ಅಂಗೀಕರಿಸದಂತೆ ಸಮಿತಿಯು ಸೂಚಿಸಬೇಕೆಂದೂ ಕೋರಿದರು

ಈ ಸಮಸ್ಯೆಯನ್ನು ಪರಿಹರಿಸಲು ಕಾಶ್ಮೀರಕ್ಕೆ ವಿಶ್ವಸಂಸ್ಥೆಯ ಸೈನ್ಯಗಳನ್ನು ತಕ್ಷಣವೇ ಕಳುಹಿಸಬೇಕೆಂದು ಪಾಕಿಸ್ತಾನವು ಸೂಚಿಸಿ ಅಲ್ಲಿರುವ ಭಾರತ, ಪಾಕಿಸ್ತಾನ ಮತ್ತು ಇತರ ಸೈನ್ಯ ಬಲಗಳನ್ನು ವಿಸರ್ಜಿಸಬೇಕೆಂದು ಒತ್ತಾಯಪಡಿಸಿತು ಜನಮತಗಣನೆಗೆ ಅಧಿಕಾರಿ ನೇಮಕಕ್ಕೆ ದಿನವನ್ನು ಗೊತ್ತುಪಡಿಸುವಂತೆಯೂ ಪಾಕಿಸ್ತಾನವು ಸೂಚಿಸಿತು

ಕಾಶ್ಮೀರದಲ್ಲಿ ಜನಮತಗಣನೆಗೆ ನೆಹರೂರವರು ಒಪ್ಪಿದರೆ ಪಾಕಿಸ್ತಾನವು ಭಾರತದೊಡನೆ ಯುದ್ಧ ಮತ್ತು ಆಕ್ರಮಣ ನಿರೋಧದ ಒಪ್ಪಂದವನ್ನು ಮಾಡಿಕೊಂಡು ಭಾರತದ ಮೇಲೆ ಯಾರಿಂದಲಾದರೂ ಧಾಳಿಯಾದರೆ ಅದು ತನ್ನ ಮೇಲೆ ಆದಂತೆಯೇ ಭಾವಿಸುವುದೆಂದು ಸರ್ ಫಿರೋಜ್ ಖಾನರು ಹೇಳಿ, ಭದ್ರತಾ ಸಮಿತಿಯು ಶಾಂತಿಯುತ ಒಪ್ಪಂದಕ್ಕೆ ಅವಕಾಶ ಕಲ್ಪಿಸದಿದ್ದರೆ ಪರಿಣಾಮವೇನಾಗುವುದೆಂಬುದನ್ನು ಹೇಳಲು ಸಾಧ್ಯವಿಲ್ಲವೆಂದು ನುಡಿದರು

ಕರಾಚಿಯಲ್ಲಿ ನೆಹರೂರವರ ಪ್ರತಿಮೆಯ ದಹನ

ಕರಾಚಿಯ ವಿದ್ಯಾರ್ಥಿಗಳು ನೆನ್ನೆ ಕಾಶ್ಮೀರ ಪ್ರತಿಭಟನಾ ದಿನಾಚರಣೆಯನ್ನು ನಡೆಸಿ ಅಲ್ಲಿರುವ ಭಾರತೀಯ ಹೈ ಕಮಿಷನರರ ಕಛೇರಿ ಮುಂದೆ "ಕಾಶ್ಮೀರ ನಮ್ಮದು" ಎಂದು ಕೂಗಿದರು ನಂತರ ವಿಶ್ವಸಂಸ್ಥೆಯ ಸುದ್ದಿ ಕೇಂದ್ರದ ಎದುರಿನಲ್ಲಿ ನೆಹರೂ ಮತ್ತು ಕಾಶ್ಮೀರದ ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರ ಪ್ರತಿಮೆಗಳ ದಹನ ಮಾಡಿದರು. ಸುದ್ದಿ ಕೇಂದ್ರದ ಮೇಲೆ ಕಲ್ಲು ಬೀರಲಾಯಿತೆಂದೂ ಹೇಳಲಾಗಿದೆ ಅದರಲ್ಲಿ ೨,೦೦೦ ವಿದ್ಯಾರ್ಥಿಗಳು ಸೇರಿದ್ದರು

ತಿ ನಂ ಶ್ರೀಕಂಠಯ್ಯನವರಿಗೆ ಸನ್ಮಾನ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದು ಮೈಸೂರಿಗೆ ಹಿಂದಿರುಗಿರುವ ಕನ್ನಡ ಪ್ರಾಧ್ಯಾಪಕ ತಿ ನಂ ಶ್ರೀಕಂಠಯ್ಯನವರ ಗೌರವಾರ್ಥವಾಗಿ ನಾಳೆ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳೂ, ಅಧ್ಯಾಪಕರೂ ಸಂತೋಷ ಸಮಾರಂಭವನ್ನು ಏರ್ಪಡಿಸಿರುವರು ಸರ್ವರಿಗೂ ಸ್ವಾಗತವಿದೆ

ಪಾಕಿಸ್ತಾನದ ಬೆದರಿಕೆಗಳಿಗೆ ಭಾರತವು ಜಗ್ಗುವುದಿಲ್ಲ

ಕಲ್ಕತ್ತೆಯಲ್ಲಿ ಪ್ರಧಾನಿ ನೆಹರೂರವರ ಘೋಷಣೆ

ಕಲ್ಕತ್ತದಲ್ಲಿ ನೆನ್ನೆ ನೆಹರೂರವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಕಾಶ್ಮೀರಕ್ಕೆ ಹಾನಿ ತರುವ ಯಾವ ಪ್ರಯತ್ನವನ್ನೂ ಭಾರತವು ಸಹಿಸುವುದಿಲ್ಲವೆಂದು ಸೂಚಿಸಿದರು ಕಾಶ್ಮೀರದ ಪ್ರಶ್ನೆಯ ಇತ್ಯರ್ಥಕ್ಕೆ ಪಾಕಿಸ್ತಾನವು ಕೈಗೊಳ್ಳುವ ವಿಧಾನವನ್ನು ಭಾರತವು ತೀವ್ರವಾಗಿ ವಿರೋಧಿಸುವುದೆಂದೂ ಅವರು ಹೇಳಿದರು

ಪಾಕಿಸ್ತಾನದ ಪತ್ರಿಕೆಗಳೂ, ನಾಯಕರೂ ನಡೆಸುತ್ತಿರುವ ಅಪಪ್ರಚಾರಕ್ಕಾಗಿ ಅವರು ಅಸಹ್ಯಪಟ್ಟು, ಅವರ ಬೆದರಿಕೆಗಳಿಗೆ ಭಾರತವು ಎಳ್ಳಷ್ಟೂ ಜಗ್ಗುವುದಿಲ್ಲವೆಂದು ನುಡಿದರು ಪಾಕಿಸ್ತಾನದೊಡನೆ ಸ್ನೇಹವನ್ನು ಬಯಸುವುದಾದರೂ ಅದಕ್ಕೆ ಕಾಶ್ಮೀರವನ್ನು ಕಾಣಿಕೆಯಾಗಿ ಅರ್ಪಿಸಲು ತಾವು ಎಂದಿಗೂ ಒಪ್ಪುವುದಿಲ್ಲವೆಂದೂ ಸಹ ಅವರು ಘೋಷಿಸಿದರು.

ಆಲಿಕಲ್ಲು ಮಳೆಯಿಂದ ೧೦ ಸಾವಿರ ದನಗಳ ನಾಶ

ದರ್ಭಾಂಗ ಮತ್ತು ಸಹರ್ಸ ಜಿಲ್ಲೆಗಳಲ್ಲಿ ೧,೦೦೦ ಚದರಮೈಲಿ ಪ್ರದೇಶದಲ್ಲಿ ಬಿದ್ದ ಭಾರಿ ಆಲಿಕಲ್ಲು ಮಳೆಯ ಪೆಟ್ಟಿನಿಂದ ಹತ್ತು ಸಾವಿರ ದನಕರುಗಳು ಸಾವಿಗೀಡಾದುವೆಂದು ತಿಳಿದು ಬಂದಿದೆ ಇದಲ್ಲದೆ ೨,೦೦೦ ಮಣ್ಣಿನ ಮನೆಗಳೂ ಸಹ ಬಿದ್ದುಹೋಗಿವೆ

ಕದಿಯುತ್ತಿದ್ದಾಗ ಕಳ್ಳರ ಬಂಧನ

ನಗರದ ಶ್ರೀನಿವಾಸ ಅಗ್ರಹಾರದಲ್ಲಿ ವಾಸವಾಗಿರುವ ಶ್ರೀ ನಂಜುಂಡಾರಾಧ್ಯ ಎಂಬ ರೈಲ್ವೆ ವರ್ಕ್‌ಷಾಪ್ ಉದ್ಯೋಗಿಯೊಬ್ಬರ ಮನೆಯಲ್ಲಿ ಮಂಡಿ ಮೊಹಲ್ಲಾ ನಿವಾಸಿ ಮೈಕೇಲ್ ಉರುಫ್ ರಾಜು ಎಂಬಾತನು ನೆನ್ನೆ ಬೆಳಗ್ಗೆ ಕದಿಯುತ್ತಿದ್ದನನ್ನು ಅಕ್ಕಪಕ್ಕದವರು ಪತ್ತೆ ಹಚ್ಚಿ ಅವನನ್ನು ಪೋಲೀಸರಿಗೆ ಹಿಡಿದುಕೊಟ್ಟರು ಅವನಿಂದ ೧ ಗಡಿಯಾರ ಮತ್ತು ಫೌಂಟೆನ್ ಪೆನ್ನನ್ನು ವಶಪಡಿಸಿಕೊಳ್ಳಲಾಯಿತು ಮನೆಯವರು ನಂಜನಗೂಡಿಗೆ ಹೋಗಿದ್ದರು.

ತಿ ಸುಬ್ಬಯ್ಯ ರಸ್ತೆಯಲ್ಲಿ ಹಾರ್ಡ್ವಿಕ್ ಶಾಲೆಯ ಬಳಿ ಇಂದು ಬೆಳಗಿನ ಜಾವ ಕಳ್ಳನೊಬ್ಬನನ್ನು ಪತ್ತೆ ಹಚ್ಚಿ ಪೋಲೀಸರಿಗೆ ಹಿಡಿದುಕೊಡಲಾಯಿತು ಅವನು ಕೊಯಮತ್ತೂರಿನ ಕಡೆಯವನೆಂದು ಹೇಳಲಾಗಿದೆ

ಕೈ ಕಸಬು ವಸ್ತುಗಳ ಮಾರಾಟದಲ್ಲಿ ರಿಯಾಯಿತಿ

ಕೈ ಕಸಬುಗಳ ಸಪ್ತಾಹದ ಸಂಬಂಧವಾಗಿ ನಗರದ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನಲ್ಲಿ ಮಾರಾಟವಾಗುವ ಕೈ ಕಸಬಿನ ಪದಾರ್ಥಗಳಿಗೆ ಈ ತಿಂಗಳು ೨೨ನೇ ತಾರೀಖಿನವರೆಗೆ ರೂ ಗೆ ಒಂದೂವರೆ ಆಣೆ ರಿಯಾಯಿತಿ ಕೊಡಲಾಗುವುದು

೨,೦೦೦ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಗಣಿತದ ಪ್ರಶ್ನೆ ಸಂಬಂಧವಾಗಿ ಪ್ರತಿಭಟನೆ

ಸ್ವಂ ಸು ಸಂಸ್ಥೆ] ಬೆಂಗಳೂರು ೧೬

ಪರೀಕ್ಷೆಗಳ ಗಣಿತದ ಪ್ರಶ್ನೆ ಪತ್ರಿಕೆಯಲ್ಲಿ ಅಮುಖ್ಯ ಪ್ರಶ್ನೆಗಳಿಗೆ ಉತ್ತರ ಬರೆಯಬೇಕೆಂದು ವಿಧಾಯಕವಾಗಿರುವುದನ್ನು ಪ್ರತಿಭಟಿಸಿ ಇಲ್ಲಿನ ಸರ್ಕಾರಿ ಇಂಟರ್‌ಮೀಡಿಯೆಟ್ ಕಾಲೇಜಿನ ಸುಮಾರು ಎರಡು ಸಹಸ್ರ ವಿದ್ಯಾರ್ಥಿಗಳು ಈ ದಿನ ಮುಷ್ಕರವನ್ನು ಹೂಡಿದರು. ಹಲವು ಇಂಜನಿಯರಿಂಗ್ ವಿದ್ಯಾರ್ಥಿಗಳೂ ಮುಷ್ಕರದಲ್ಲಿ ಭಾಗವಹಿಸಿದ್ದರು ವಿದ್ಯಾರ್ಥಿಗಳೊಡನೆ ಕಾಲೇಜು ಪ್ರಿನ್ಸಿಪಾಲರು ನಡೆಸಿದ ಸಂಧಾನವು ವಿಫಲವಾಯಿತು ನೆನ್ನೆಯೂ ಮುಷ್ಕರ ನಡೆಯಿತು

ಬೆಂಗಳೂರಿನ ನೂತನ ಮೇಯರ್ ಮತ್ತು ಉಪ ಮೇಯರರು

ಬೆಂಗಳೂರು ೧೬

ಇಲ್ಲಿನ ಕಾರ್ಪೊರೇಷನ್ನಿನ ಮೇಯರರಾಗಿ, ಕಾಂಗ್ರೆಸ್ ಉಮೇದುವಾರರಾದ ಶ್ರೀ ಜಗನ್ನಾಥಾಯಿ ದೇವಿದಾಸ್‌ರವರನ್ನು ನೆನ್ನೆ ಅವಿರೋಧವಾಗಿ ಆರಿಸಲಾಯಿತು ಕಾಂಗ್ರೆಸ್ ಪಕ್ಷದ ಶ್ರೀ ಎಸ್ ಕೃಷ್ಣರಾವ್ ಶಿರ್ವಾಲ್‌ರವರು ಸಮಾಜವಾದಿ ಉಮೇದುವಾರರಾದ ಶ್ರೀ ಕೆ ಎಲ್ ರಾಮಕೃಷ್ಣರಾಯರನ್ನು ೫೦ ೧೩ ಓಟುಗಳಿಂದ ಸೋಲಿಸಿ ಉಪ ಮೇಯರ್ ಸ್ಥಾನಕ್ಕೆ ಆರಿಸಲ್ಪಟ್ಟರು

ಅಂಗಡಿ ಮಾಲೀಕರಿಗೆ ದಂಡ

ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆಗಾಗಿ ಕೆಳಗೆ ಕಂಡ ಅಂಗಡಿಗಳ ಮಾಲೀಕರಿಗೆ ಮುಂದೆ ಕಂಡಂತೆ ದಂಡ ವಿಧಿಸಲಾಗಿದೆ — ಮಾನಂದವಾಡಿ ರಸ್ತೆ ಮಹಮದೀಯ ಹೋಟೇಲಿನ ಶ್ರೀ ಟಿ ಕೆ ಮೂಸ, ರವೆ ಬೀದಿ ಕಬ್ಬಿಣದ ಅಂಗಡಿಯ ಶ್ರೀ ಮಹಮದ್ ಗೌಸ್, ತ್ಯಾಗರಾಜ ರಸ್ತೆಯ ರಂಗನಾಥ ಫುಟ್‌ವೇರ್ ಷಾಪಿನ ಶ್ರೀ ತಿಮ್ಮಯ್ಯನವರಿಗೆ ತಲಾ ೫ ರೂ, ಜಗನ್ಮೋಹನ ಭವನ ಬೀದಿ ಬೀಡಿ ಅಂಗಡಿಯ ಶ್ರೀ ಎ ಸಿ ಅಬ್ದುಲ್ಲಾ, ಸಾಡೆ ರೋಡಿನ ಚಹಾ ಅಂಗಡಿ ಶ್ರೀ ಮಹಮದ್‌ರವರಿಗೆ ತಲಾ ೧೦ ರೂ, ವಾಣಿವಿಲಾಸ ರಸ್ತೆ ಗೀತಾ ಸೋಪು ಕಾರ್ಖಾನೆಯ ಶ್ರೀ ತಿಮ್ಮಯ್ಯ, ದೇವರಾಜ ಮಾರ್ಕೆಟ್ ಚೌಕದ ಬೀಡಿ ಅಂಗಡಿ ಶ್ರೀ ಅಬ್ದುಲ್ ಗಫೂರ್ ಮತ್ತು ಚಾಮುಂಡೇಶ್ವರಿ ಟಾಕೀಸ್ ಹಿಂಭಾಗದ ಬೀಡಿ ಅಂಗಡಿಯ ಶ್ರೀ ಅಬು ಕುಟ್ಟಿಯವರಿಗೆ ತಲಾ ೧೫ ರೂ ದಂಡ

ಅಣಕು ಸೆಷನ್ಸ್ ಮೊಕದ್ದಮೆ

ನಗರದಲ್ಲಿರುವ ಶಾರದಾವಿಲಾಸ ಲಾ ಕಾಲೇಜಿನ ಮೂಟ್ ಕ್ಲಬ್ಬಿನ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಅಣಕು ಕೊಲೆ ಸೆಷನ್ಸ್ ಮೊಕದ್ದಮೆಯೊಂದನ್ನು ಏರ್ಪಡಿಸಲಾಗಿದೆ ಶ್ರೀ ಕೆ ನರಹರಿರಾಯರು ನ್ಯಾಯಾಧೀಶರಾಗಿರುವರು ಶ್ರೀ ಎ ಶ್ರೀನಿವಾಸಯ್ಯನವರನ್ನು ಅಪಾದಿತರ ಸ್ಥಾನದಲ್ಲಿ ನಿಲ್ಲಿಸಲಾಗುವುದು ಪ್ರಾಸಿಕ್ಯೂಷನ್ ಪರ ಶ್ರೀ ಟಿ ಎನ್ ಸುಬ್ಬರಾಯರೂ, ಅಪಾದಿತರ ಪರ ಶ್ರೀ ಸಿ. ಎಸ್ ಬಾಲಕೃಷ್ಣಗೌಡರೂ ವಕಾಲತ್ತು ವಹಿಸುವರು ಸಾಕ್ಷಿಗಳೂ, ಮಹಜರುದಾರರೂ, ಜೂರರುಗಳೂ ಇರುವರು ಸರ್ವರೂ ಇದನ್ನು ವೀಕ್ಷಿಸಲು ಅವಕಾಶವಿದೆ

ಹಾಸನ-ಮಂಗಳೂರು ರೈಲು ರಸ್ತೆ ನಿರ್ಮಾಣದ ಪ್ರಶ್ನೆ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಅಭಿಪ್ರಾಯ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮಂಗಳೂರಿನಲ್ಲಿ ಮಾತನಾಡಿ ಹಾಸನ-ಮಂಗಳೂರು ರೈಲು ರಸ್ತೆ ಕೆಲಸವನ್ನು ನಿರ್ದಿಷ್ಟ ಕಾಲವರೆಗೆ ಮುಂದೂಡಲು ಸಾಧ್ಯವಿಲ್ಲವೆಂದೂ, ಈ ವಿಚಾರವಾಗಿ ಇಡೀ ಕರ್ನಾಟಕವೇ ಒತ್ತಾಯ ಮಾಡುತ್ತಿರುವುದೆಂದೂ ತಿಳಿಸಿರುತ್ತಾರೆ. ಬೇಲೂರು ಅಥವಾ ಮೂಡಿಗೆರೆ ಮೂಲಕ ರಸ್ತೆಯನ್ನು ನಿರ್ಮಿಸುವ ಬಗ್ಗೆ ಸರ್ವೆ ಕೆಲಸ ನಡೆಯಲು ಅಡ್ಡಿಯಾಗಿರುವುದಕ್ಕೆ ಸ್ಥಳೀಯ ಭಿನ್ನಾಭಿಪ್ರಾಯವು ಕಾರಣವಾಗಿರಬಹುದೆಂದು ಅವರು ಭಾವಿಸಿರುತ್ತಾರೆ.

ಕಡೂರು ಹಾಸನ ಮತ್ತು ಮೈಸೂರುಗಳ ಕಡೆಯ ಘಟ್ಟದ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಕೇಂದ್ರದ ಸಹಾಯದಿಂದ ತೆಗೆದುಕೊಳ್ಳಲಾಗುವುದೆಂದು ಅವರು ಹೇಳಿರುವರು.

ಸಂಸ್ಥಾನದಲ್ಲಿ ಒಂದೇ ಸಮನಾದ ವಿದ್ಯುಚ್ಛಕ್ತಿ ದರಗಳು

ಬೊಂಬಾಯಿ ಕರ್ನಾಟಕ ಭಾಗವನ್ನು ಬಿಟ್ಟು ಉಳಿದ ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ದರಗಳನ್ನು ಒಂದೇ ಸಮ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿರುತ್ತಾರೆ.

ಮಹಿಳಾ ನೌಕರರ ವಸತಿ ಗೃಹ

ನಗರದಲ್ಲಿ ನೌಕರರಾಗಿರುವ ಮಹಿಳೆಯರಿಗಾಗಿ ಈ ತಿಂಗಳು ೧೫ರಿಂದ ಒಂದು ವಸತಿ ಗೃಹ ಪ್ರಾರಂಭಿಸಲಾಗುವುದು. ನ್ಯಾಯವಾದ ದರದಲ್ಲಿ ಊಟ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸಲಾಗುವುದು. ಸೇರಬಯಸುವವರು ತಮ್ಮ ಸಂಸ್ಥೆ ಅಥವಾ ಕಛೇರಿ ಮುಖ್ಯಾಧಿಕಾರಿಯ ಮೂಲಕ ಅರ್ಜಿಗಳನ್ನು ಈ ತಿಂಗಳು ೧೦ನೇ ತಾರೀಖಿನೊಳಗೆ ಕಳುಹಿಸಿ ಕೆಂಡು ನೌಕರಿಯ ವಿಳಾಸ ತಿಳಿಸಬೇಕೆಂದೂ ನಗರದ ವಿವೇಕಾನಂದ ಮೊಹಲ್ಲಾ ೧ನೇ ಕ್ರಾಸ್ ರಸ್ತೆಯ ಮಹಿಳಾ ಸಮಿತಿಯ ಗೌರವ ಕಾರ್ಯದರ್ಶಿ ಶ್ರೀಮತಿ ಸುಶೀಲಾ ದಾತೆಯವರು ಪ್ರಕಟಿಸಿರುತ್ತಾರೆ.

ಬಟ್ಟೆ ವರ್ತಕರ ಸಂಘದ ಅಧಿಕಾರ ವರ್ಗ

ನಗರದ ಬಟ್ಟೆ ವರ್ತಕರ ಸಂಘದ ಆಡಳಿತ ಸಮಿತಿ ಸಭೆಯು ಕಳೆದ ಭಾನುವಾರ ಸೇರಿ ಅಧಿಕಾರವರ್ಗದ ಚುನಾವಣೆಯನ್ನು ನಡೆಸಿತು. ಶ್ರೀ ಆರ್ ಎಸ್ ನಾಗಪ್ಪಶೆಟ್ಟರು ಅಧ್ಯಕ್ಷರಾಗಿಯೂ ಶ್ರೀ ಪಿ ಎಸ್ ರಾಜಾರಾಮರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಎ ಎಲ್ ಸುಂದರ ನಾರಾಯಣಶೆಟ್ಟರು ಕಾರ್ಯದರ್ಶಿ ಮತ್ತು ಶ್ರೀ ನೂರ್‌ಮಹಮದ್‌ಸಾಹೇಬರು ಜಂಟಿ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ನರಸಿಂಹರಾಜ ಮೊಹಲ್ಲಾ ಚೌಕದಲ್ಲಿ ಹಾಲ್ಟ್ ಬೋರ್ಡಿನ ಅವಶ್ಯಕತೆ

ನಗರದ ನರಸಿಂಹರಾಜ ಮೊಹಲ್ಲಾ ಬಜಾರ್ ರಸ್ತೆ ಚೌಕದಲ್ಲಿರುವ ವರ್ತಕರಾದ ಶ್ರೀ ಎಂ ಇನುಲ್ಲಾ ಖಾನ್‌ರವರು ಪತ್ರವೊಂದನ್ನು ಬರೆದು, ಸದರಿ ಚೌಕದಲ್ಲಿ ಇತ್ತೀಚೆಗೆ ವಾಹನಗಳ ಸಂಚಾರವು ಹೆಚ್ಚಾಗಿರುವುದರಿಂದ ಅನಾಹುತಗಳಾಗುವ ಸಂಭವವಿರುವುದೆಂದೂ, ಇದನ್ನು ತಪ್ಪಿಸಲು ಪೌರಸಭೆಯವರು ಆ ಚೌಕದಲ್ಲಿ ಹಾಲ್ಟ್ ಬೋರ್ಡನ್ನು ಹಾಕಿಸುವುದು ಅಗತ್ಯವೆಂದೂ ತಿಳಿಸುತ್ತಾರೆ.

ತ್ರಿಲಿಂಗೋಪಾಸನ

ಶ್ರೀ ಜಿ ಟಿ. ತಳ್ಳುಲಯ್ಯ ದೀಕ್ಷಿತರು ಮೇಲ್ಕಂಡ ಶಿರೋನಾಮೆಯುಳ್ಳ ಚಿಕ್ಕ ಪುಸ್ತಕವೊಂದನ್ನು ರಚಿಸಿರುತ್ತಾರೆ. ಮದನಪಲ್ಲಿಯ ಶ್ರೀ ಶಿವಯೋಗಾಲಯದವರು ಇದರ ಪ್ರಕಾಶಕರು. ಇದನ್ನು ದೀಕ್ಷಿತರ ಪತ್ನಿ ಶ್ರೀಮತಿ ಜಿ ಅಕ್ಕಯ್ಯಮ್ಮನವರ ಷಷ್ಟ್ಯಬ್ದಿ ಪೂರ್ತಿಯ ನೆನಪಿಗಾಗಿ ಅರ್ಪಿಸಲಾಗಿದೆ. ತ್ರಿಲಿಂಗೋಪಾಸನದ ಧಾರ್ಮಿಕ ಭಾವಗಳನ್ನು ಸಂಕ್ಷೇಪವಾಗಿ ಇದರಲ್ಲಿ ಕೊಡಲಾಗಿದೆ. ಶ್ರೀ ಎ ಜಿ ನಂಜುಂಡಾರಾಧ್ಯರು ಇದರ ಪರಿಷ್ಕರಣ ಕಾರ್ಯದಲ್ಲಿ ಸಹಾಯಕರಾಗಿದ್ದಾರೆ. ಬೆಲೆ ೬ ಆಣೆ

ಮೇ ತಿಂಗಳಿಂದ ಸಂಸ್ಥಾನದಲ್ಲಿ ವಿನೋಬಾಜಿಯವರ ಪ್ರವಾಸ

ಮೈಸೂರು ೧೭

ಆಚಾರ್ಯ ವಿನೋಬಾಭಾವೆಯವರು ಇದೇ ಮೇ ತಿಂಗಳು ೧ ಅಥವಾ ೨ರಿಂದ ಮೈಸೂರು ಸಂಸ್ಥಾನದಲ್ಲಿ ಪ್ರವಾಸವನ್ನು ಆರಂಭಿಸುವರು. ಅದಕ್ಕಾಗಿ ಅವರು ಕಾಸರಗೋಡಿಗೆ ಬಂದು ಮಂಗಳೂರು ಜಿಲ್ಲೆಯಲ್ಲಿ ಸಂಚರಿಸಿ, ಕೊಡಗಿನ ಮೂಲಕ ಮೈಸೂರಿಗೆ ಬರುವ ನಿರೀಕ್ಷೆಯಿದೆ. ಮಧ್ಯದಲ್ಲಿ ಪಿರಿಯಾಪಟ್ಟಣ ಮತ್ತು ಹುಣಸೂರು ತಾಲ್ಲೂಕುಗಳನ್ನು ಸಂದರ್ಶಿಸುವರು. ಇಲ್ಲಿಂದ ಬೆಂಗಳೂರು ಕಡೆ ಪ್ರಯಾಣ ಮಾಡಲಿರುವರೆಂದು ಹೇಳಲಾಗಿದೆ. ಕಳೆದ ವಾರ ಹುಣಸೂರು ತಾಲ್ಲೂಕಿನ ಪ್ರಮುಖರು ಸಭೆ ನಡೆಸಿ ತಮ್ಮ ಪ್ರಾಂತಕ್ಕೆ ವಿನೋಬಾಜಿಯವರನ್ನು ಆಹ್ವಾನಿಸಿ, ಅವರ ಭೂದಾನ ಚಳುವಳಿಯನ್ನು ಯಶಸ್ವಿಗೊಳಿಸಲು ನಿರ್ಧರಿಸಿರುತ್ತಾರೆ.

ಗಂಧದೆಣ್ಣೆ ಕಾರ್ಖಾನೆ ಕಾರ್ಮಿಕರಿಗೆ ಕೈಗಾರಿಕಾ ಸಚಿವರ ಭರವಸೆ

ಕೈಗಾರಿಕಾ ಮಂತ್ರಿ ಶ್ರೀ ಸಿ ಎಂ. ಪೂಣಚ್ಚರವರು ನೆನ್ನೆ ಇಲ್ಲಿನ ಸರ್ಕಾರಿ ಗಂಧದೆಣ್ಣೆ ಕಾರ್ಖಾನೆ ಕಾರ್ಮಿಕರ ಸಂಘಕ್ಕೆ ಭೇಟಿಯಿತ್ತರು. ಕಾರ್ಮಿಕರ ಬೇಡಿಕೆಗಳ ವಿಚಾರವನ್ನು ಸಂಘದ ಅಧ್ಯಕ್ಷರು ಅವರಿಗೆ ವಿವರಿಸಿ, ಅವುಗಳನ್ನು ಈಡೇರಿಸಿಕೊಡಬೇಕೆಂದು ಕೋರಿದರು. ಸರ್ಕಾರಿ ಕಾರ್ಖಾನೆ ನೌಕರರುಗಳ ಸಂಬಳ, ತುಟ್ಟಿ ಭತ್ಯ ಮುಂತಾದ ವಿಷಯಗಳನ್ನು ಪರಿಶೀಲಿಸಲು ಸರ್ಕಾರದವರು ಸಮಿತಿಯೊಂದನ್ನು ರಚಿಸಿರುವುದಾಗಿಯೂ, ವರದಿಯು ಬಂದನಂತರ ಸರ್ಕಾರದವರು ನಿರ್ಧಾರವನ್ನು ಆದಷ್ಟು ಬೇಗನೆ ಕೈಗೊಳ್ಳುವುದಾಗಿಯೂ ಸಚಿವರು ಭರವಸೆಯಿತ್ತರು.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು						
ಕೊಯಮುತ್ತೂರು ಸಣ್ಣ	೩೭	೧೦	೦	೪೦	೧೪	೦
ರತ್ನಚೂಡಿ	೩೭	೩	೦	೩೮	೧೪	೦
ಕೆಂಬೂತಿ	೩೭	೧೨	೦	೩೮	೬	೦
ಸೇಲಂ ಸಣ್ಣ	೩೭	೪	೦	೩೮	೦	೦
ಕಡ್ಡಿ	೩೭	೩	೦	೩೯	೪	೦
ಕಾರು ಸಣ್ಣ	೩೭	೦	೦			
ರಾಗಿ	೪೧	೧೨	೦	೪೫	೧೦	೦
ಜೋಳ	೪೫	೪	೦	೪೯	೦	೦
ಕಂಬು	೪೦	೧೨	೦			
ನವಣೆ	೧೯	೪	೦			
ಕಡಲೆಕಾಯಿ	೧೪	೪	೦	೨೪	೧೦	೦
ಹರಳುಬೀಜ	೪೫	೦	೦	೪೬	೧೦	೦
ಹುಚ್ಚೆಳ್ಳು	೪೦	೦	೦	೪೪	೧೦	೦
ಹೊಂಗೆಬೀಜ	೨೪	೧೪	೦			
ಹುರುಳಿ	೨೪	೦	೦	೨೭	೧೪	೦
ಹೆಸರು	೪೯	೪	೦	೫೧	೬	೦
ಹಲಸಂದೆ	೪೫	೩	೦	೫೭	೧೪	೦
ಧನಿಯ	೩೩	೪	೦	೩೫	೧೪	೦
ಅವರೆ	೪೯	೩	೦			
ಸೆಣಬಿನ ಬೀಜ	೪೪	೪	೦	೪೫	೪	೦
ತೊಗರಿ	೪೯	೧೪	೦	೫೧	೧೦	೧
ಹುಣಸೇಹಣ್ಣು	೩	೩	೦	೫	೨	೦
ಸೀಗೆಕಾಯಿ	೭	೦	೦	೪	೧೪	೦
ಮೆಣಸಿನಕಾಯಿ	೧೦	೬	೦	೨೦	೧೦	೦
ತೆಂಗಿನಕಾಯಿ ೧೦೦೦	೧೫೫	೮	೦	೧೬೫	೦	೦

ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗೆ

ಬೇಸಿಗೆ ರಜದಲ್ಲಿ ತರಗತಿಗಳು

ಈ ಬಾರಿ ದೀರ್ಘ ಕಾಲ ಬೇಸಿಗೆ ರಜ ಬಂದಿರುವುದರಿಂದ ಮಕ್ಕಳು ಕಾಲ ಕಳೆದು ಪಾಠಗಳನ್ನು ಮರೆಯದಿರಲೆಂದು ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗಾಗಿ 4 ತಿಂಗಳು ಕಾಲ ವಿಶೇಷ ತರಗತಿಗಳು ನಡೆಯುವಂತೆ ಏರ್ಪಡಿಸಲಾಗಿದೆ. ಪೋಷಕರು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವರೆಂದು ಆಶಿಸಲಾಗಿದೆ.

ತರಗತಿಗಳು ನಡೆಯುವ ಕಾಲ
7-30ರಿಂದ 11-30
ಆಫೀಸ್ ತೆರೆದಿರುವ ಕಾಲ
ಬೆಳಿಗ್ಗೆ 7 30ರಿಂದ 11-30
ಮಧ್ಯಾಹ್ನ 4ರಿಂದ 8-30

ಸಿಟಿ ಟ್ಯುಟೋರಿಯಲ್ ಕಾಲೇಜ್
ಹಳೇ ಅಗ್ರಹಾರ, ಮೈಸೂರು
(ಹೈಸ್ಕೂಲು ತರಗತಿಗಳೂ ಶೀಘ್ರದಲ್ಲೇ ಪ್ರಾರಂಭವಾಗುವುವು)

ಭಾರತ ಮತ್ತು ಪಾಕಿಸ್ತಾನಗಳ ವ್ಯಾಪಾರ ಮಾತುಕತೆ ಆರಂಭ

ಭಾರತ ಮತ್ತು ಪಾಕಿಸ್ತಾನಗಳ ವಾಣಿಜ್ಯ ಸಮ್ಮೇಳನವು ಮೊನ್ನೆ ದೆಹಲಿಯಲ್ಲಿ ಆರಂಭವಾಯಿತು. ಪಾಕಿಸ್ತಾನದ ವಾಣಿಜ್ಯ ಮಂತ್ರಿ ಅಬ್ದುಲ್ ಮನ್ಸೂರ್ ಅಹಮದ್‌ರವರು ಮಾತನಾಡಿ ಎರಡು ರಾಷ್ಟ್ರಗಳ ನಡುವೆ ೧ ವರ್ಷದ ಅವಧಿಗೆ ವ್ಯಾಪಾರದ ಒಪ್ಪಂದವನ್ನು ನಡೆಸುವುದರಿಂದ ಉಭಯರಿಗೂ ಪ್ರಯೋಜನವಿಲ್ಲವೆಂದೂ, ಮೂರು ವರ್ಷಗಳಿಗಾದರೂ ಒಪ್ಪಂದವಾಗಬೇಕೆಂದೂ ಸಲಹೆ ಮಾಡಿದರು. ಭಾರತದ ವಾಣಿಜ್ಯ ಮಂತ್ರಿ ಮೊರಾರ್ಜಿ ದೇಸಾಯಿಯವರು ಪಾಕಿಸ್ತಾನದ ನಿಯೋಗವನ್ನು ಸ್ವಾಗತಿಸಿ, ಉಭಯರ ಸಹಕಾರವು ಅಗತ್ಯವೆಂಬುದು ಸೂಯೆಜ್ ಬಿಕ್ಕಟ್ಟಿನಿಂದ ವ್ಯಕ್ತವಾಗುವುದಾಗಿ ನುಡಿದರು.

ಸೀನಾಯ್ ಪ್ರದೇಶ ವಿಶ್ವಸಂಸ್ಥೆ ಸೈನ್ಯಗಳ ವಶಕ್ಕೆ

ಇಸ್ರೇಲಿ ಸೈನಿಕರ ಪೂರ್ಣ ವಾಪಸಾತಿ

ಈಜಿಪ್ಟಿನ ಸೀನಾಯ್ ಪರ್ಯಾಯ ದ್ವೀಪದಿಂದ ಇಸ್ರೇಲಿ ಸೈನ್ಯಗಳು ನೆನ್ನೆ ಪೂರ್ಣವಾಗಿ ವಾಪಸಾಗಿರುವುವು. ಆ ಪ್ರದೇಶವನ್ನು ವಿಶ್ವಸಂಸ್ಥೆ ದಳದ ವಶಕ್ಕೆ ಒಪ್ಪಿಸಲಾಗಿದೆ. ಪರ್ಯಾಯ ದ್ವೀಪದ ದಕ್ಷಿಣ ಭಾಗಕ್ಕೆ ಭಾರತೀಯ ಪಡೆಗಳು ಹೋಗಿವೆ. ಸೀನಾಯ್ ಪ್ರದೇಶದಿಂದ ಬಿಟ್ಟುಹೋಗುವುದಿಲ್ಲವೆಂದು ಮೊದಲು ಇಸ್ರೇಲು ಹೇಳುತ್ತಿದ್ದಿತು.

ಸರ್ಕಾರಿ ನೌಕರರು ಚುನಾವಣೆಗಳಲ್ಲಿ ಪಕ್ಷ ವಹಿಸಕೂಡದು

ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ಬರುವ ಮಹಾ ಚುನಾವಣೆಗಳಲ್ಲಿ ನೌಕರರು ರಾಜಕೀಯ ಪಕ್ಷಗಳ ಜೊತೆಗೆ ಸೇರಿ ಕೆಲಸ ಮಾಡಕೂಡದೆಂದೂ, ಅಥವಾ ಇನ್ನಾವ ವಿಧವಾದ ಬೆಂಬಲವನ್ನೂ ಕೊಡಬಾರದೆಂದೂ ಸೂಚಿಸಿರುತ್ತಾರೆ. ನಿಷ್ಪಕ್ಷಪಾತವಾದ ಚುನಾವಣೆಗಳನ್ನು ನಡೆಸುವಂತೆ ಕೋರಲಾಗಿದೆ.

ಗೃಹಕೃತ್ಯದ ನೋಟೀಸು

ಗುಂಡ್ಲುಪೇಟೆ ತಾಲ್ಲೂಕು ಕಸಬಾ ಹೋಬಳಿ ಆಲತ್ತೂರಿನಲ್ಲಿರುವ ಬೊಳ್ಳಿ ಲಿಂಗೇಗೌಡನ ಮಗಳು ಕಾಳಮ್ಮನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಈ ಕೆಳಗಿನ ಷೆಡ್ಯೂಲಿನಲ್ಲಿ ಕಂಡ ನಮ್ಮ ಪಿತ್ರಾರ್ಜಿತವಾದ ಸ್ವತ್ತುಗಳು ನನ್ನ ಅನುಭವ ಸ್ವಾಧೀನದಲ್ಲೇ ಲಾಗಾಯ್ತಿನಿಂದಲೂ ಇವೆ. ಇವುಗಳಿಗೆ ಮೇಲ್ಕಂಡ ಲಿಂಗೇಗೌಡನ ಹೆಣ್ಣು ಮಕ್ಕಳಾದ ಲಿಂಗಮ್ಮ, ಸಿದ್ದಮ್ಮ ಮತ್ತು ನಾನು ಸಹ ಸಂಪೂರ್ಣ ಹಕ್ಕುದಾರರಾಗಿದ್ದೇವೆ. ಕೌತಿ ನಮ್ಮ ಸಹೋದರ ಬೊಳ್ಳಿ ಸಿದ್ದೇಗೌಡನಿಗೆ ಗಂಡು ಅಥವಾ ಹೆಣ್ಣು ಮಕ್ಕಳಿಲ್ಲ. ಇವನ ಹೆಂಡತಿ ಕೊಡಸೋಗೆ ನಿಂಗೇಗೌಡನ ಮಗಳು ದೊಡ್ಡಮ್ಮನೆಂಬುವಳು ನಮಗಾಗದವರ ದುರ್ಬೋಧನೆಗೆ ಒಳಪಟ್ಟು, ತನಗೇನೊಂದೂ ಹಕ್ಕಿಲ್ಲವಾದ ನಮ್ಮ ಈ ಸ್ವತ್ತುಗಳನ್ನು ಪರಭಾರೆ ಮಾಡುವ ತರನೂದಿನಲ್ಲಿದ್ದಾಳೆ. ಹಾಗೆ ಯಾರಾದರೂ ಪರಭಾರೆ ಮಾಡಿಸಿಕೊಂಡಲ್ಲಿ ಅಂತಹವು ಎಂದಿಗೂ ಊರ್ಜಿತವಾಗತಕ್ಕದ್ದಲ್ಲವೆಂದು ಈ ಮೂಲಕ ತಿಳಿಸಿದೆ.

ಷೆಡ್ಯೂಲು:— ಇದೇ ಆಲತ್ತೂರಿನಲ್ಲಿರುವುದು-ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಸರ್ಕಾರೀ ಬೀದಿ, ಪಶ್ಚಿಮಕ್ಕೆ ಚಿಲುವೇಗೌಡನ ಮನೆ, ಉತ್ತರಕ್ಕೆ ಎ ಬಿ ಕೆಂಪೇಗೌಡರ ಮನೆ-ಈ ಮಧ್ಯೆ ಇರುವ ಹನ್ನೆರಡು ಅಂಕಣ ಮನೆ ಮತ್ತು ಖಾಲಿ ಜಾಗ. ಇದೇ ಆಲತ್ತೂರಿನಲ್ಲಿರುವುದು-ರೆವಿನ್ಯೂ ಸರ್ವೆ ನಂಬರು ಒಂಭತ್ತು, ವಿಸ್ತೀರ್ಣ 8 0, ಆಕಾರ 7.0.0 ಉಳ್ಳ ಪೂರಾ ಸ್ವತ್ತು. ಇದಕ್ಕೆ ಚಕ್ಕುಬಂದಿ-ಪೂರ್ವಕ್ಕೆ ಕೌಲಂದೆ ವೀರಮ್ಮನ ಹೊಲ, ದಕ್ಷಿಣಕ್ಕೆ ದೇವಯ್ಯ ರಾಮಯ್ಯ, ಬೈರೆಗೌಡ ಇವರ ಜಮಾನು, ಪಶ್ಚಿಮಕ್ಕೆ ಬೈರೇಗೌಡರು ಚನ್ನೇಗೌಡರು ಇವರ ಜಮಾನು ಮತ್ತು ಉತ್ತರಕ್ಕೆ ಸರ್ಕಾರಿ ಓಣಿ.

ಕಾಳಮ್ಮನ ಎಡಗೈ ಹೆಬ್ಬೆರಳಿನ ರುಜು

೧೩ನೇ ವಯಸ್ಸಿನಲ್ಲೇ ಕಾಲೇಜು ಸೇರಿದ ಬಾಲಕ

ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಕೇವಲ ೧೩ ನೆಯ ವರ್ಷ ವಯಸ್ಸಿನ ಬಾಲಕನು ಶಿಕ್ಷಣವನ್ನಾರಂಭಿಸಿದ ವಿದ್ಯಾರ್ಥಿಯಾಗಿ ಬ್ಬನಿದ್ದಾನೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಕಾಲೇಜಿಗೆ ಸೇರಿರುವ ಫ್ರೆಡ್‌ಸ್ಯಾಂ ಎಂಬ ಬಾಲಕನು ತನ್ನ ಮೂರನೆಯ ವಯಸ್ಸಿನಲ್ಲೇ ಬರಹವನ್ನು ಕಲಿತನು. ಇದಲ್ಲದೆ ಅವನು ಈಗ ಎರಡು ವರ್ಷಗಳ ಅವಧಿಯಲ್ಲಿ ಅರು ತರಗತಿಗಳನ್ನು ದಾಟಿದ್ದನು. ವಿಜ್ಞಾನ ಗಣಿತ ಮುಂತಾದುವುಗಳಲ್ಲಿಯೂ ಸಹ ಅವನು ಮುಂದಿದ್ದಾನೆ. ಒಟ್ಟಿಗೆ ೩ ಚದುರಂಗದ ಆಟಗಳನ್ನು ಆಡಿ ಗೆಲ್ಲಬಲ್ಲನು. ಈಗ ಈ ವಿದ್ಯಾರ್ಥಿಯು ತನ್ನ ವ್ಯಾಸಂಗಕ್ಕೆ ಸಂಬಂಧಿಸಿದ ಜ್ಞಾನವನ್ನು ಅರಿಸಿಕೊಂಡಿದ್ದಾನೆ.

ದ್ವಿತೀಯ ಯೋಜನೆಗೆ ಗಾಳಿಪಟಗಳ ಪ್ರಚಾರ

ಭಾರತದ ದ್ವಿತೀಯ ಯೋಜನೆ ವಿಷಯವನ್ನು ಜನತೆಯಲ್ಲಿ ಪ್ರಚುರಗೊಳಿಸಲು ರಾಜಸ್ಥಾನ ಸರ್ಕಾರದವರು ೧ ಲಕ್ಷ ಗಾಳಿಪಟಗಳ ಮೇಲೆ ಅವನ್ನು ಮುದ್ರಿಸಿ ಅವುಗಳನ್ನು ಜಯಪುರದ ನಾಗರಿಕರಿಗೆ ಉಚಿತವಾಗಿ ಮನೆಮನೆಗೆ ಮೊನ್ನೆ ಗಾಳಿಪಟದ ಹಬ್ಬದ ಸಂದರ್ಭದಲ್ಲಿ ಹಂಚಿದರೆಂದು ವರದಿಯಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ ೭-೧೫ ಎಸ್. ವಸುಮತಿ ದೇವರ ನಾಮ ೮-೧೫ ರೆಕಾರ್ಡು. ಮಧ್ಯಾಹ್ನ ೧೨ ಎಸ್ ಕೆ. ವಸುಮತಿ-ಸಂಗೀತ ೧೨-೩೦ ವಾದ್ಯ ವೃಂದ ೧೨-೪೫ ವಸಿಷ್ಠ ಹಾರ ೧-೫೦ ಆರ್. ಎ. ದೊರೆಸ್ವಾಮಿ ವೀಣೆ ೨-೧೫ ರೆಕಾರ್ಡು. ಸಂಜೆ ೫ ಭಾರತ ಸಂಗೀತ ಕಾರ್ಯಕ್ರಮ. ೫-೩೦ ಆರ್ ಎ ದೊರೆಸ್ವಾಮಿ-ವೀಣೆ. ೬ ೫ ವಿರಾಮ ಗೀತ ೬-೩೦ ನೃತ್ಯ ಗೀತೆ. ೭-೩೦ ಪ್ರ ಆ ಟಿ.ಎ ಸ್ವಾಮಿನಾಥಪಿಳ್ಳೆ-ಕೊಳಲು ೯ ರೆಕಾರ್ಡು. ೯-೩೦ ಕೈಲಾಸಂ ನಾಟಕ ಮ್ಯಾಪ್ರ ಗಂಡ

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಕು
ವಿಶ್ವ ವಿಖ್ಯಾತವಾಗಿರುವ
ನ ವ ರ ತ್ನ-ಕ ಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲ್ಕಂಡ ವಿಷಯವನ್ನು ಗಮನಿಸಿ
ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ವ ಆದಲ್ಲಿ
ವಿಮಾನದಲ್ಲಿ ಸಂಚರಿಸುವರು
ನ ವ ರ ತ್ನ — ಕ ಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಪವಳ, ಗೋಮೇಧಿಕ, ನೀಲ, ಪಚ್ಚ ರಾಗಿಣಿ ಮುತ್ತು ಸ್ವ ತಿಲಕ ಈ 9 ಅಮೂಲ್ಯ ಹರಳುಗಳ ಸಂಮಿಶ್ರಣ ತಮ್ಮ ಎಲ್ಲಾ ಸಾಮಾನ್ಯ ಹಾಗೂ ತೀವ್ರ ವ್ಯಾಧಿಗಳಿಗೂ ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ. ಉಚಿತ ಸಾಹಿತ್ಯಕ್ಕೆ ಬರೆಯಿರಿ
NAVRATNA KALPA PHARMA
JULLUNDUR CITY (Ind

Edited, Printed and Publ
by A. R. Nagarajan at S
Press, D. Subbiah Road, M

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೫] SADHVI : FRIDAY 18—1—1957 ಮೈಸೂರು : ಶುಕ್ರವಾರ ೧೮—೧—೧೯೫೭ : [ಸಂಚಿಕೆ : ೧೬೪

ಆಜಾದ್ ಕಾಶ್ಮೀರದಲ್ಲಿ ಭಾರಿ ಪ್ರಮಾಣದ ಸೈನ್ಯ ಸಂಗ್ರಹ

ಣಿತ ಪರೀಕ್ಷೆ ಪ್ರಶ್ನೆ ಪತ್ರಿಕೆ

ದ್ಯಾರ್ಥಿಗಳ ಕೋರಿಕೆಗೆ ಮನ್ನಣೆ

ಮೈಸೂರು ೧೮

ಣಿತ ಪ್ರಶ್ನೆಗಳಲ್ಲಿ ಒಟ್ಟು ಆರು ಪೂರ್ಣ ಗಳಿಗೆ ಉತ್ತರ ಬರೆಯಬೇಕೆಂದು ವಿಧಾಯ ಮಾಡಿದ್ದುದನ್ನು ಪ್ರತಿಭಟಿಸಲು ಇಂದು ಇಲ್ಲಿ ಯುವರಾಜಾ ಕಾಲೇಜು ವಿದ್ಯಾರ್ಥಿಗಳು ಷ್ಕರ ಆರಂಭಿಸಿ ಸ್ವಲ್ಪ ಹೊತ್ತಿನಲ್ಲೇ ಮು ಮುಗಿಸಿದರು. ಆರು ಪ್ರಶ್ನೆಗಳಿಗೆ ಉತ್ತ ರಿಸುವುದರ ಬದಲು ೧೦೦ ಅಂಕಗಳು ಬ ವ್ವರ ಮಟ್ಟಿಗೆ ಪ್ರಶ್ನೆ ಅಥವ ಉಪ ಪ್ರಶ್ನೆಗ ಉತ್ತರ ಬರೆಯಬಹುದೆಂದು ಸಿಂಡಿಕೇಟಿನ ನಿರ್ಧರಿಸಿರುತ್ತಾರೆ. ಕಾಲೇಜಿನ ಪ್ರಿನ್ಸಿಪಾ . ಎಲ್ ಸೀಬಯ್ಯನವರು ವಿದ್ಯಾರ್ಥಿ ಈ ಅಂಶವನ್ನು ತಿಳಿಸಿದನಂತರ ಮುಷ್ಕರ ಗೊಂಡಿತು. ಶಾರದಾವಿಲಾಸ ಕಾಲೇ ಳಿಯೂ ವಿದ್ಯಾರ್ಥಿಗಳು ಸೇರಿ ಮುಷ್ಕರ ವ ಪ್ರಯತ್ನದಲ್ಲಿದ್ದರೆಂದೂ, ಅಷ್ಟರಲ್ಲಿ ಸುದ್ದಿಯು ಮುಟ್ಟಿತೆಂದೂ ತಿಳಿದು ದೆ

ದಾವಣಗೆರೆಗೆ ಗವರ್ನರರು

ರ್ನರ್ ಶ್ರೀ ಜಯಚಾಮರಾಜ ಒಡೆಯರ ಸ ಟ್ರೈನಿನಲ್ಲಿ ದಾವಣಗೆರೆಗೆ ಪ್ರಯಾ ಮಾಡುವರು. ಅವರು ಬೆಂಗಳೂರು ಮತ್ತು ತುಮಕೂರುಗಳಿಗೂ ಹೋಗುವ ಸಂಭವ

ಜಾ ಸಮಾಜವಾದಿ ಪಕ್ಷದ ಉಮೇದುವಾರರು

ಬೆಂಗಳೂರು ೧೮

ಸ್ಥಾನದ ಪ್ರಜಾ ಸಮಾಜವಾದಿ ಪಕ್ಷದವ ಲೋಕಸಭೆ ಮತ್ತು ವಿಧಾನ ಸಭೆಗೆ ತಮ್ಮ ವಾರರ ಪ್ರಥಮ ಪಟ್ಟಿಯನ್ನು ಪ್ರಕ ತ್ತಾರೆ. ಬೆಂಗಳೂರು ದಕ್ಷಿಣದಿಂದ ಶ್ರೀ ವಲಿಂಗಯ್ಯನವರೂ, ಮೈಸೂರು ಜಿಲ್ಲೆ ಶ್ರೀ ಎಂ. ಎಸ್ ಗುರುಪಾದಸ್ವಾಮಿ ರೂ ಲೋಕಸಭೆಗೆ ಸ್ಪರ್ಧಿಸುವರು.

ಧಾನ ಸಭೆಗೆ ನಗರದ ದಕ್ಷಿಣ ಭಾಗದಿಂದ ದಾಂತ ಹೆಮ್ಮಿಗೆ ಮತ್ತು ಉತ್ತರದಿಂದ ಕೆ ಪುಟ್ಟಯ್ಯನವರೂ, ಕೃಷ್ಣರಾಜನಗ ಶ್ರೀ ಸಿ ಎಲ್. ವೀರಣ್ಣಯ್ಯನವರೂ ರು

ಸೂರು ರೇಡಿಯೋ ನಾಳೆ ಕಾರ್ಯಕ್ರಮ

ಗ್ಗೆ ೭-೫ ಸಿತಾರ್ ೭-೧೫ ಆರ್ ವೇದ ವರ ನಾಮ ೭-೩೦ ರೆಕಾರ್ಡು ೮ ೧೫ ಭಾರತ ಸಂಗೀತ ಕಾರ್ಯಕ್ರಮ. ಮಧ್ಯಾ ಆರ್ ವೇದವಲ್ಲಿ-ಸಂಗೀತ ೧೨-೩೦ ವೃಂದ. ೧೨-೪೫ ಬಾಲ ಜಗತ್. ೧ ೫೦ ಕೆಸಾಂಬಿ-ಸಂಗೀತ ಸಂಜೆ ೫ ನಾಟ ವಿ ಮ ಸಂಗೀತ ೬-೩೦ ವಚನ -೩೦ ಪ್ರಸಂಗ ೮ ರಸ ಮಂಜರಿ ರೇಡಿಯೋ ನ್ಯೂಸ್ ರೀಲ್. ೮-೪೦ ರ ಗೀತೆ. ೯-೧೫ ಕಾವ್ಯ ಧಾರೆ-ಸ್ವಯಂ ೯-೩೦ ರಾಷ್ಟ್ರೀಯ ಸಂಗೀತ ಕಾರ್ಯ ದೆಹಲಿ ಪುನಃಪ್ರಸಾರ

ಆಜಾದ್ ಕಾಶ್ಮೀರದಲ್ಲಿ ಭಾರಿ ಸೇನಾ ಸಂಗ್ರಹಣೆ

ಆಜಾದ್ ಕಾಶ್ಮೀರದಲ್ಲಿ ಭಾರಿ ಸೇನಾ ಸಂಗ್ರಹಣೆಯಾಗಿ, ಪೂರ್ಣ ಸಜ್ಜಾಗಿರುವ ೪೫ ಬಟಾಲಿಯನ್ನುಗಳು ಅಲ್ಲಿ ಇರುವುದಾಗಿ ಭಾರತ ಸರ್ಕಾರಕ್ಕೆ ವರದಿಗಳು ಬಂದಿರುತ್ತವೆಂದು ಗೊತ್ತಾಗಿದೆ. ಭಾರತ ಪಾಕಿಸ್ತಾನದ ಗಡಿ ಬಳಿ ಒಬ್ಬನಾದರೂ ತಮ್ಮ ಸೈನಿಕನಿಲ್ಲವೆಂದು ಪಾಕಿಸ್ತಾನದ ಮಂತ್ರಿಯು ತಿಳಿಸಿದ್ದರೂ ಜಮ್ಮು ಗಡಿಯುದ್ದಕ್ಕೂ ಮತ್ತು ಆಚೆಗೂ ಪಾಕಿಸ್ತಾನದ ಸೈನ್ಯಗಳೂ ಮತ್ತು ಆಧುನಿಕ ರಸ್ತೆಗಳೂ ಇರುವುದಾಗಿಯೂ, ಅವುಗಳ ನೆಲೆಯು ಭಾರತಕ್ಕೆ ಹಲವು ಮೈಲಿ ದೂರ ಮಾತ್ರವಿರುವುದಾಗಿಯೂ ಗೊತ್ತಾಗಿದೆ. ಭಾರತ ಸರ್ಕಾರದವರು ಆ ಪ್ರದೇಶದಲ್ಲಿ ಎಂತಹ ಪರಿಸ್ಥಿತಿಯನ್ನಾದರೂ ಎದುರಿಸಲು ಸಿದ್ಧವಾಗಿರುವರೆಂದೂ ಹೇಳಲಾಗಿದೆ

ಕರ್ನಾಟಕ ಪ್ರದೇಶದಿಂದ ಕಾಂಗ್ರೆಸ್ ಅಭ್ಯರ್ಥಿಗಳು

ಲೋಕಸಭೆಗೆ ಕರ್ಮಾರ್‌ಕರ್ ಮತ್ತು ದಾತಾರ್‌ರವರ ಹೆಸರುಗಳು

ವಿಧಾನ ಸಭೆಗೆ ಸಿ. ಜೆ ಅಂಬಲಿ, ಕಂಠಿ ಮತ್ತು ಪೂಣಚ್ಚ

ಲೋಕಸಭೆ ಮತ್ತು ಮೈಸೂರು ವಿಧಾನ ಸಭಾ ಚುನಾವಣೆಗಾಗಿ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ಸಿನ ಪರವಾಗಿ ನಿಲ್ಲುವ ಉಮೇದುವಾರರ ಪಟ್ಟಿಯನ್ನು ಕೇಂದ್ರ ಚುನಾವಣಾ ಸಮಿತಿಯವರು ನೆನ್ನೆ ಪ್ರಕಟಿಸಿದರು. ಹೊಸಬರೊಬ್ಬರನ್ನು ಬಿಟ್ಟು, ಮಿಕ್ಕವರೆಲ್ಲರೂ ಈಗಿನ ಸದಸ್ಯರೇ ಲೋಕಸಭೆಗೆ ನಿಲ್ಲಿಸಲ್ಪಟ್ಟಿದ್ದಾರೆ. ಆ ಪೈಕಿ ಕೇಂದ್ರ ಮಂತ್ರಿಗಳಾದ ಡಿ ಪಿ ಕರ್ಮಾರ್‌ಕರ್ ಮತ್ತು ಬಿ ಎ. ದಾತಾರ್‌ರವರೂ, ಜೋಕಿಂ ಆಳ್ವ, ಟಿ ಆರ್ ನೆಸ್ವಿ ಮತ್ತು ಶ್ರೀನಿವಾಸ ಮಲ್ಯರವರೂ ಇರುವರು

ವಿಧಾನಸಭೆಗೆ ಶ್ರೀಗಳಾದ ಸಿ ಜೆ ಅಂಬಲಿ, ಬಿ ಡಿ ಜತ್ತಿ, ಎಸ್ ಆರ್ ಕಂಠಿ, ಸಿ. ಎಂ. ಪೂಣಚ್ಚ, ಕೆ ಮಲ್ಲಪ್ಪ, ಕೆ ಎಫ್ ಪಾಟೀಲ್ ರವರು ನಿಂತಿರುವರು. ಆರು ಮಂದಿ ಮಹಿಳೆಯರನ್ನೂ, ೪ ಮಂದಿ ಮುಸ್ಲಿಮರನ್ನೂ ನಿಲ್ಲಿಸಲಾಗಿದೆ

ಮಹದೇವಯ್ಯನವರ ಮೇಲೆ ಮಹಿಳೆಯ ಅರ್ಜಿ ವಜಾ

ಮೈಸೂರು ೧೮

ಮೇಜರ್ ಮಹದೇವಯ್ಯನವರ ಮೇಲೆ ಬೆಂಗಳೂರಿನ ತುಳಸೀ ತೋಟದ ನಿವಾಸಿ ಶಕುಂತಲಾ ಎಂಬಾಕೆಯು ಮಾಹೆಯಾನಾ ೩೦೦ ರೂ ಜೀವನಾಂಶಕ್ಕಾಗಿ ಹಾಕಿದ್ದ ಅರ್ಜಿಯನ್ನು ನೆನ್ನೆ ಇಲ್ಲಿನ ನಗರ ನ್ಯಾಯಾಧೀಶರು ತಿರಸ್ಕರಿಸಿದರು. ಅರ್ಜಿಯು ಕ್ರಮಬದ್ಧವಾಗಿಲ್ಲವೆಂದು ಕಾರಣ ಕೊಡಲಾಯಿತು. ಅರ್ಜಿದಾರಳ ಪರ ವಕೀಲರು ತಮ್ಮ ಬೇಡಿಕೆಗಳಿಗಾಗಿ ಒತ್ತಾಯ ಮಾಡುತ್ತಿಲ್ಲವೆಂದು ಹೇಳಿದುದರ ಮೇರೆ ಈ ರೀತಿ ಆಜ್ಞೆ ಮಾಡಲಾಯಿತು

ಸಹಕಾರ ಸಂಘಗಳಲ್ಲಿ ೧೬॥ ಲಕ್ಷ ರೂ. ದುರುಪಯೋಗ

ಬೆಂಗಳೂರು ೧೮

ಸಂಸ್ಥಾನದ ಸಹಕಾರ ಮಂತ್ರಿ ಶ್ರೀ ಎ ಭೀಮಪ್ಪನಾಯಕರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ೩೮೦ ಸಹಕಾರ ಸಂಘಗಳಲ್ಲಿ ೧೦,೫೯,೦೦೦ ರೂ ವರೆಗೆ ಹಣದ ದುರುಪಯೋಗವಾಗಿರುವುದೆಂದೂ, ಬೆಳಗಾಂ ಜಿಲ್ಲೆಯಲ್ಲೇ ೬॥ ಲಕ್ಷ ರೂ ಹೋಗಿರುವುದೆಂದೂ ತಿಳಿಸಿದರು. ಈ ಅಪರಾಧಗಳನ್ನೆಸಗಿದವರ ಮೇಲೆ ಕ್ರಮ ಜರುಗಿಸಲಾಗುವುದೆಂದೂ, ಮತ್ತು ಸಂಘಗಳಿಗೆ ಆದ ನಷ್ಟವನ್ನು ಭರ್ತಿ ಮಾಡಲು ಆಸ್ತಿಗಳನ್ನು ಜಪ್ತಿ ಮಾಡಿಸಲಾಗುವುದೆಂದೂ ಅವರು ಹೇಳಿದರು

ಸರ್ಕಾರದವರು ತಮ್ಮ ಸರಕುಗಳನ್ನು ಇನ್ನು ಮುಂದೆ ಸಹಕಾರ ಸಂಘಗಳ ಮೂಲಕ ಮಾರುವರೆಂದೂ, ಏಜನ್ಸಿ ಪದ್ಧತಿಗಳನ್ನು ಕಾಲಕ್ರಮದಲ್ಲಿ ರದ್ದುಗೊಳಿಸುವರೆಂದೂ ತಿಳಿಸಿದರು. ತಾಲ್ಲೂಕುಗಳಲ್ಲಿರುವ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಮಾರ್ಕೆಟಿಂಗ್ ಸಂಘಗಳೆಂದು ಕರೆಯಲಾಗುವುದು. ಪ್ರತಿಯೊಂದರಲ್ಲೂ ೨೦ ಸಾವಿರ ರೂ ಬೆಲೆಯ ಸಾಮಾನು ಇರುವ ಗೋಡೌನು ಇರುವುದು. ಎಲ್ಲಾ ಸಹಕಾರ ಸಂಘಗಳಲ್ಲೂ ಇನ್ನು ಮುಂದೆ ಸರ್ಕಾರವು ಶೇಕಡ ೫೧ರಷ್ಟು ಪಾಲನ್ನು ಹೊಂದುತ್ತದೆ ಎಂದು ಅವರು ಹೇಳಿದರು

ಎಂ. ಎಲ್. ನಂಜರಾಜೆ ಅರಸರ ಉಪವಾಸ ವ್ರತ

ಬೆಂಗಳೂರು ೧೮

ಮೈಸೂರು ಜಿಲ್ಲಾ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಎಂ ಎಲ್ ನಂಜರಾಜೆ ಅರಸುರವರು ಬರುವ ಸೋಮವಾರದಿಂದ ಇಲ್ಲಿ ಪ್ರದೇಶ ಕಾಂಗ್ರೆಸ್ ಕಛೇರಿ ಮುಂಭಾಗದಲ್ಲಿ ಅನಿರ್ದಿಷ್ಟ ಕಾಲದ ಉಪವಾಸವನ್ನು ನಡೆಸಲು ನಿರ್ಧರಿಸಿರುವುದಾಗಿ ವರದಿಯಾಗಿದೆ. ಅವರು ಅಧ್ಯಕ್ಷ ಢೇಬರರಿಗೆ ಪತ್ರ ಬರೆದು ಇಲ್ಲಿನ ಕಾಂಗ್ರೆಸ್ ಪರಿಸ್ಥಿತಿಯನ್ನು ವಿವರಿಸಿ, ಅದಕ್ಕಾಗಿ ಅತೀವ ತ್ಯಾಗ ಮಾಡಬೇಕಾಗಿರುವುದೆಂದು ತಿಳಿಸಿರುತ್ತಾರೆ. ಶ್ರೀ ಅರಸುರವರು ಕೃಷ್ಣರಾಜನಗರ ತಾಲ್ಲೂಕಿನಿಂದ ಸಂಸ್ಥಾನದ ವಿಧಾನ ಸಭೆಗೆ ಕಾಂಗ್ರೆಸ್ ಪಕ್ಷದ ಉಮೇದುವಾರಿಕೆಗಾಗಿ ಅರ್ಜಿ ಸಲ್ಲಿಸಿದ್ದರು. ಕಳೆದ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಪರ ನಿಂತಿದ್ದು ಸಾಲಿಗ್ರಾಮದ ಶ್ರೀ ಎಸ್. ಹೆಚ್. ತಮ್ಮಯ್ಯನವರಿಂದ ಸೋಲಿಸಲ್ಪಟ್ಟಿದ್ದರು. ಶ್ರೀ ಅರಸುರವರು ಇತ್ತೀಚೆಗೆ ಮೈಸೂರಿನಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ವಿಚಾರಗಳನ್ನು ಕುರಿತು ನಾಯಕರಿಗೆ ತಿಳಿಸಲು ದೆಹಲಿಗೆ ಹೋಗಿದ್ದರು

ವಿಧಾನಸಭೆಗೆ ಜೆ ಬಿ ಮಲ್ಲಾರಾಧ್ಯರ ಸ್ಪರ್ಧೆ

ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ ಜೆ. ಬಿ. ಮಲ್ಲಾರಾಧ್ಯರು ಟಿ ನರಸೀಪುರ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಲಿರುವರೆಂದೂ, ಅವರಿಗೆ ಪ್ರಜಾ ಸಮಾಜವಾದಿ ಪಕ್ಷದ ಬೆಂಬಲವಿರುವುದೆಂದೂ ತಿಳಿದುಬಂದಿದೆ

ಸಂಬಳದ ಮಟ್ಟದ ಬಗ್ಗೆ ಈ ದಿನ ಆಖೈರು ನಿರ್ಧಾರ

ಮಂತ್ರಿಮಂಡಲದಲ್ಲಿ ಪರಿಶೀಲನೆ

ಸ್ವಂ.ವ. ತಂತಿ] ಬೆಂಗಳೂರು ೧೮

ಮಂತ್ರಿಮಂಡಲದ ಸಭೆಯು ಈ ಸಂಜೆ ಸೇರಿ ಸಂಬಳದ ಮಟ್ಟವನ್ನು ಗೊತ್ತುಪಡಿಸುವ ಬಗ್ಗೆ ಆಖೈರು ನಿರ್ಧಾರವನ್ನು ಕೈಗೊಳ್ಳಲಿರುವುದು ಗೊತ್ತಾಗಿದೆ

೦ಲಾ ಕಮೀಷನ್ನಿನ ಮುಂದೆ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಬೇರ್ಪಡಿಕೆ ಬಗ್ಗೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ದಿನ ಸಾಕ್ಷ್ಯ ನುಡಿದು, ಹೈಕೋರ್ಟ್ ಜಡ್ಜುಗಳ ನೇಮಕದ ಬಗ್ಗೆ ಕಾರ್ಯಾಂಗದವರ ಮಾತಿಗೆ ಮನ್ನಣೆಯಿರಬೇಕೆಂದೂ, ಶ್ರೇಷ್ಠ ನ್ಯಾಯಾಧೀಶರ ಸ್ಥಾನಕ್ಕೆ ಸಂಸ್ಥಾನದ ಹೊರಗಿನವರನ್ನು ನೇಮಿಸಬಾರದೆಂದೂ ತಿಳಿಸಿದರು. ಸಂಸ್ಥಾನದ ಸಬಾರ್ಡಿನೇಟ್ ನ್ಯಾಯಾಧೀಶರುಗಳ ಸ್ಥಾನಕ್ಕೆ ಸಿವಿಲ ಭಾರತ ವರ್ಗದ ಅಧಿಕಾರಿಗಳನ್ನು ನೇಮಿಸಬೇಕೆಂದೂ ಅವರು ಸಲಹೆ ಮಾಡಿದರು.

ಗಂಧದ ಕರಂಡಕ್ಕೆ ೧,೦೦೧ ರೂ. ಜರತಾರಿ ಹಾರಕ್ಕೆ ೪೦೦ ರೂ.

ಮೈಸೂರು ೧೮

ಅಖಿಲ ಭಾರತ ಭಾವಸಾರ ಕ್ಷತ್ರಿಯ ಸಮ್ಮೇಳನದ ಅಂಗವಾಗಿ ಇಂದು ನಡೆದ ವಿದ್ಯಾರ್ಥಿ ಸಮ್ಮೇಳನದಲ್ಲಿ ಸಭಾಪತಿ ಶ್ರೀ ಆರ್. ಚನ್ನಿಗರಾಮಯ್ಯನವರಿಗೆ ಅರ್ಪಿಸಲಾದ ಗಂಧದ ಕರಂಡವನ್ನೂ, ಜರತಾರಿ ಹಾರವನ್ನೂ ಅವರ ಇಚ್ಛೆಯ ಪ್ರಕಾರ ಹರಾಜು ಹಾಕಲಾಗಿ, ಕರಂಡವನ್ನು ೧,೦೦೧ರೂ ಗೆ ಕೆ. ಎಸ್ ಸುಂದರರಾಯರೂ, ಹಾರವನ್ನು ೪೦೦ ರೂ ಗೆ ಶ್ರೀ ಪಿ ಎಸ್ ರಾಜಾರಾಮರಾಯರೂ ಕೊಂಡುಕೊಂಡರು. ಈ ಹಣವನ್ನು ಭಾವಸಾರ ಕ್ಷತ್ರಿಯರ ವಿದ್ಯಾಭ್ಯಾಸಕ್ಕಾಗಿ ಕೊಡಲಾಗುವುದು.

ಹುಲ್ಲು ಮೆದೆಗೆ ಬೆಂಕಿ ಹಾಕಿದ ಆಪಾದನೆ

ಸೆಷನ್ಸ್ ಕೋರ್ಟಿನಲ್ಲಿ ಶಿಕ್ಷೆ ಖಾಯಂ

ಮೈಸೂರು ೧೮

ನಂಜನಗೂಡು ತಾಲ್ಲೂಕು ಹದಿನಾರು ಗ್ರಾಮದ, ಲಿಂಗಾಯತ ಕೋಮಿನ ಕರಿಯಣ್ಣ ಮತ್ತು ಸಣ್ಣಯ್ಯ ಎಂಬುವರು ಪರಿವಾರದ ಕೋಮಿನ ಯಜಮಾನ್ ಸಿದ್ದನಾಯಕ ವಗೈರೆಯವರಿಗೆ ಸೇರಿದ ಸುಮಾರು ೫೦೦ ರೂ ಬೆಲೆ ಬಾಳುವ ರಾಗಿ ಹುಲ್ಲು ಮೆದೆಗೆ ಬೆಂಕಿ ಹಚ್ಚಿಸಿದರೆಂದು ನಂಜನಗೂಡು ಪೋಲೀಸರು ಅಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತರಿಗೆ ತಲಾ ಎರಡು ತಿಂಗಳ ಕಠಿಣ ಸಜಾ ಮತ್ತು ೫೫ ರೂ ದಂಡ, ತಪ್ಪಿದರೆ ಮತ್ತೆ ೧೫ ದಿನ ಸಾದಾ ಸಜಾ ವಿಧಿಸಲಾಗಿತ್ತು. ಆಪಾದಿತರು ಇಲ್ಲಿನ ಸೆಷನ್ಸ್ ಕೋರ್ಟಿನಲ್ಲಿ ಅಪೀಲು ಹೂಡಲಾಗಿ ನ್ಯಾಯಾಧೀಶರಾದ ಶ್ರೀ ಮುನಿಸ್ವಾಮಯ್ಯನವರು ಇಂದು ತೀರ್ಪಿತ್ತು ಕೆಳಗಿನ ಕೋರ್ಟಿನ ಶಿಕ್ಷೆಯನ್ನು ಖಾಯಂ ಮಾಡಿರುವರು.

ಅಖಿಲ ಭಾರತ ಭಾವಸಾರ ಕ್ಷತ್ರಿಯರ ೧೫ನೆಯ ಸಮ್ಮೇಳನ

ರಾಜ್ಯಪಾಲರಿಂದ ಆರಂಭೋತ್ಸವ

ಮೈಸೂರು ೧೨

ಸಂಸ್ಥಾನದ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ನೆನ್ನೆ ವಸ್ತು ಪ್ರದರ್ಶನಶಾಲೆಯಲ್ಲಿ ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾ ಸಭೆಯ ೧೫ನೆಯ ಅಧಿವೇಶನದ ಆರಂಭೋತ್ಸವವನ್ನು ನೆರವೇರಿಸಿದರು. ಭರತಖಂಡದ ನಾನಾ ಕಡೆಗಳಿಂದ ಸುಮಾರು ೨೦೦ ಜನ ಪ್ರತಿನಿಧಿಗಳೂ ಸ್ಥಳೀಯ ಸ್ಥಳಗಳ ಮಾನ್ಯ ಮಹಿಳೆಯರೂ, ಮಹನೀಯರೂ ಬಂದಿದ್ದರು.

ಶ್ರೀಮತಿಗಳಾದ ನರ್ಮದಾ ಮತ್ತು ಚಂದ್ರಭಾಗಾ ರವರಿಂದ ಪ್ರಾರ್ಥನೆಯಾದನಂತರ ಶ್ರೀಮತಿ ರುಕ್ಮಿಣಿ ಮತ್ತು ವೃಂದದವರಿಂದ ಗಾನಗೋಷ್ಠಿಯೂ, ಕುಮಾರಿ ಭಾರತಿಯವರಿಂದ ಕನ್ನಡ ಗೀತೆಗಳೂ ಆದುವು.

ಕಾರ್ಯದರ್ಶಿಗಳಾದ ಶ್ರೀ ರಾಜಾರಾಯರು ಸ್ವಾಗತವನ್ನು ಬಯಸಿದನಂತರ, ಶ್ರೀ ಯು. ಎಲ್ ರಾಮಚಂದ್ರರಾಯರು ರಾಜ್ಯಪಾಲರಿಗೆ ಬಿನ್ನವತ್ತಳೆಯನ್ನು ಓದಿ ಬೆಳ್ಳಿಯ ಪಾಂಡುರಂಗವಿಠ್ಠಲ ವಿಗ್ರಹದೊಡನೆ ಒಪ್ಪಿಸಿದರು. ಬಡವರಾದ ತಮ್ಮ ಜನಾಂಗದವರಿಗೆ ರಾಜ್ಯಪಾಲರು ಉದಾರವಾಗಿ ಭೂದಾನವನ್ನು ನೀಡಿ ಉಪಕಾರ ಮಾಡಬೇಕೆಂದು ಅವರು ಬಿನ್ನವತ್ತಳೆಯಲ್ಲಿ ಕೋರಿದ್ದರು.

ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ಭಾವಸಾರ ಕ್ಷತ್ರಿಯ ಜನಾಂಗದವರ ದೇಶಾಭಿಮಾನ ಮತ್ತು ರಾಷ್ಟ್ರೀಯ ಭಾವನೆಗಳಿಗಾಗಿ ಮೆಚ್ಚಿಗೆಯನ್ನು ಸೂಚಿಸಿದರು. ಅವರು ಮುಂದೆ ಮಾತನಾಡಿ ಈ ರೀತಿ ನುಡಿದರು.-

ದೇಶದ ಎಲ್ಲ ಜನರ ಎಲ್ಲ ರೀತಿಯ ಅಭಿವೃದ್ಧಿಯನ್ನು ನಿರಂತರವೂ ಆಲೋಚಿಸುತ್ತ ಅದಕ್ಕೆ ತಕ್ಕ ರೀತಿಯಲ್ಲಿ ಕಾರ್ಯ ವಿಧಾನಗಳನ್ನು ರೂಪಿಸಿಕೊಂಡುಹೋಗುವುದೇ ಉತ್ತಮವಾದ ಆದರ್ಶವೆಂದು ನಮ್ಮ ಭಾವನೆ. ಇಂತಹ ಆದರ್ಶದಲ್ಲಿ ಎಲ್ಲ ಸಮಾಜ, ಪಂಗಡಗಳ ಹಿತವೂ ಸಂಘಟಿತ ರೂಪದಲ್ಲಿ ಯಾವ ಸಂಶಯವೂ ಇಲ್ಲ

ಕ್ಷಣಕ್ಷಣವೂ ಬಗೆಬಗೆಯ ಘಾತಪಾತಗಳಿಂದಲೂ, ಬೇರ್ಪಾಟುಗಳಿಂದಲೂ ಶಿಥಿಲವಾಗದಿರಲೆಂಬಂತೆ ಪ್ರಗತಿಪಥದಲ್ಲಿ ಸಾಗುತ್ತಿರುವ ಇಂದಿನ ಭಾರತದ ಜಾಗೃತಿಗೆ ಭದ್ರತೆಯ ಪ್ರಜಾಕೋಟಿಯೇ ಕಾರಣವಾಗಿದೆ ಎನ್ನಬಹುದು. ದೇಶದ ನಾಯಕರೂ, ಆಡಳಿತದ ಸೂತ್ರವನ್ನು ಹಿಡಿದವರೂ ಪುರೋಗಾಮಿಗಳಾಗಿ ದೇಶವನ್ನು ಮುಂದಕ್ಕೆ ಒಯ್ಯುತ್ತಿರುವುದೇನೋ ನಿಜವೆ. ಆದರೆ ಅವರ ಸಮಸಮಕ್ಕೆ ನಡೆಯುವ ಜನತೆ ಇಲ್ಲದೆಹೋದರೆ ಆ ಪುರೋಗಾಮಿಗಳ ಪ್ರಯತ್ನ ಜಯಪ್ರದವಾಗುವುದು ಕಷ್ಟವಾದೀತು. ಅಂತೆಯೇ ಎಚ್ಚೆತ್ತ ಜನಸ್ತೋಮವೂ ನಾಡಿನ ಏಳಿಗೆಗೆ ದುಡಿಯುವ ಅಧಿಕಾರ ವರ್ಗದವರೊಡನೆ ಸಹಕರಿಸಬೇಕು. ಹೀಗೆ ಸಹಕಾರ ಮನೋಭಾವದಿಂದ ರಾಷ್ಟ್ರ ಕಲ್ಯಾಣಕ್ಕಾಗಿ ದುಡಿಯುವುದಕ್ಕೆ ಮೊದಲು ಜನ ಒಂದುಗೂಡಬೇಕು. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ತಿಳಿಯಬೇಕು. ಒಂದು ಸಮಾಜಕ್ಕೆ ಸೇರಿದವರೊ, ಒಂದು ಪ್ರಾಂತಕ್ಕೆ ಸೇರಿದವರೊ, ಒಂದು ಧರ್ಮಕ್ಕೆ ಸೇರಿದವರೊ ಒಟ್ಟಾಗಿ ಕಲೆತು ತಮ್ಮ ಹಿತವನ್ನೂ ಸಮಗ್ರ ರಾಷ್ಟ್ರದ ಹಿತವನ್ನೂ ಸಾಧಿಸಲು ಪ್ರಯತ್ನಿಸಬೇಕು. ಅಖಂಡ ಭಾರತದ ಹಿತವನ್ನು ಮರೆಯದೆ, ಸಮಷ್ಟಿ ರಾಷ್ಟ್ರದ ಸಂಘಟನೆಯ ಕಲ್ಪನೆಗೆ ಭಂಗಬಾರದೆ, ದೇಶದ ಒಟ್ಟಿನ ಶುಭವನ್ನು ತಮ್ಮ ತಮ್ಮ ಮತ, ಧರ್ಮ, ಸಮಾಜ, ಪಕ್ಷ ಮುಂತಾದುವುಗಳ ಶುಭವನ್ನು ಕೋರಿ ಸತ್ಯನಿಷ್ಠೆಯಿಂದಲೂ, ಧರ್ಮಬುದ್ಧಿಯಿಂದಲೂ ಇಂತಹ ಸಂಘಗಳು ಕೆಲಸ ಮಾಡುವುದು ಒಳ್ಳೆಯದು

ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಕನಿಷ್ಠಾಂಶ ಸಂಬಳ

ಕೇಂದ್ರ ವಿದ್ಯಾ ಮಂತ್ರಿ ಮೌಲಾನಾ ಆಜಾದರು ಪ್ರಾಥಮಿಕ ಶಾಲಾ ಉಪಾಧ್ಯಾಯರ ಮೂಲ ಸಂಬಳದ ಕನಿಷ್ಠಾಂಶವನ್ನು ಗೊತ್ತುಪಡಿಸಲು ಸರ್ಕಾರದವರು ಪ್ರಯತ್ನಿಸುತ್ತಿರುವರೆಂದು ತಿಳಿಸಿರುತ್ತಾರೆ. ಉಪಾಧ್ಯಾಯರುಗಳಿಗೆ ಕೊಡುತ್ತಿರುವ ವೇತನದ ಬಗ್ಗೆ ತಮಗೆ ತೃಪ್ತಿಯಾಗಿಲ್ಲವೆಂದೂ, ಸದ್ಯದಲ್ಲೇ ಹೊಸ ಮಟ್ಟದ ಸಂಬಳವನ್ನು ಕೊಡಲಾಗುವುದೆಂದೂ ಅವರು ತಿಳಿಸಿರುತ್ತಾರೆ.

ಅಮೆರಿಕದ ಮಧ್ಯಪ್ರಾಚ್ಯ ನೀತಿಯ ಬಗ್ಗೆ ರಷ್ಯದ ಟೀಕೆ

ಅಮೆರಿಕವು ಮಧ್ಯಪ್ರಾಚ್ಯದಲ್ಲಿ ಕೈಗೊಳ್ಳಬೇಕೆಂದಿರುವ ಕ್ರಮಗಳನ್ನು ಕುರಿತು ರಷ್ಯವು ಟೀಕಿಸುತ್ತಾ, ಈ ಕ್ರಮದಿಂದ ಆ ಪ್ರದೇಶದಲ್ಲಿ ಶಾಂತಿ ಮತ್ತು ಅರಬ್ಬರ ಸ್ವಾತಂತ್ರ್ಯ ರಕ್ಷಣೆಯಾಗುವ ಬದಲು ವಿಪರೀತ ಅನರ್ಥಗಳಿಗೆ ಕಾರಣವಾಗಬಹುದೆಂದು ನುಡಿದಿದೆ. ಹಿಂದೆ ಈಜಿಪ್ಟಿನಲ್ಲಿ ಆಕ್ರಮಣವನ್ನು ನಿಲ್ಲಿಸಲು ರಷ್ಯದೊಡನೆ ಮಧ್ಯೆ ಪ್ರವೇಶ ಮಾಡಲು ನಿರಾಕರಿಸಿದ ಅಮೆರಿಕವು ಇಂದು ಆ ಪ್ರದೇಶದಲ್ಲಿ ಬ್ರಿಟಿಷ್ ಮತ್ತು ಫ್ರೆಂಚರ ಬದಲು ತಾನೂ ಬೇರೂರಲು ಪ್ರಯತ್ನಿಸಿದೆಯೆಂದೂ, ಇದು ವಿಶ್ವಸಂಸ್ಥೆಯ ಪ್ರನಾಳಿಕೆಯ ಉಲ್ಲಂಘನೆಯಾಗುತ್ತದೆಂದೂ ಟಾಸ್ ವಾರ್ತಾ ಸಂಸ್ಥೆ ತಿಳಿಸಿದೆ

ಗುಂಡ್ಲುಪೇಟೆಯ ಹಿಂದಿ ಪ್ರಚಾರ ಮಂದಿರ

ಮೈಸೂರು ಹಿಂದಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗುಂಡ್ಲುಪೇಟೆಯ ಸರ್ಕಾರಿ ಬಾಲಕರ ಮಿಡಲ್ ಸ್ಕೂಲಿನ ಕಟ್ಟಡದಲ್ಲಿ ಒಂದು ಉಚಿತ ಹಿಂದೀ ತರಗತಿಯನ್ನು ಪ್ರಾರಂಭಿಸಲಾಗಿದೆ ಹಿಂದೀ ಭಾಷೆಯನ್ನು ಕಲಿಯಬಯಸುವವರು ಈ ತರಗತಿಗೆ ಪ್ರವೇಶ ಪಡೆಯಬಹುದು ಹೆಚ್ಚಿನ ವಿವರಗಳಿಗೆ ಶ್ರೀ ಕೆ ಆರ್. ನಾಗರಾಜು, ಹಿಂದೀ ಪ್ರಚಾರಕ, ಗುಂಡ್ಲುಪೇಟೆ. ಇವರನ್ನು ವಿಚಾರಿಸಬಹುದು

'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎಂಬ ನವಿವಚನೋಕ್ತಿಯಂತೆ ಎಲ್ಲರಿಗೂ ಅನ್ನ ವಸನ ವಸತಿಗಳ ಸೌಕರ್ಯವನ್ನು ಒದಗಿಸುವ ಸಲುವಾಗಿ ಐದೈದು ವರ್ಷಗಳ ಅವಧಿಯ ಯೋಜನೆಗಳನ್ನು ಕಾರ್ಯಗತ ಮಾಡಲಾಗುತ್ತಿದೆ. ಕೃಷಿ ಮತ್ತು ಕೈಗಾರಿಕೆ ಈ ಎರಡು ಕ್ಷೇತ್ರಗಳಲ್ಲಿ ಅಪ್ರತಿಮವಾದ ಪ್ರಗತಿಯನ್ನು ಸಾಧಿಸುವ ಪ್ರಯತ್ನದಲ್ಲಿ ದೇಶ ತೊಡಗಿದೆ ಈ ಸಂದರ್ಭದಲ್ಲಿ ಒಬ್ಬೊಬ್ಬನೂ ತನ್ನತನ್ನ ಶಕ್ತ್ಯನುಸಾರ ದುಡಿದು ಬಂದ ಪ್ರತಿಫಲದಲ್ಲಿ ಸರಿಪಾಲು ಕೊಂಡು ಒಟ್ಟು ರಾಷ್ಟ್ರದ ಸ್ವಾತಂತ್ರ್ಯವನ್ನೂ, ಶ್ರೇಯಸ್ಸನ್ನೂ ಸಾಧಿಸಬೇಕಾಗಿದೆ. ಹಿರಿಯ ನಾಯಕರ ನೇತೃತ್ವದಲ್ಲಿ ಸಂಘಟಿತರಾಗಿರುವ ನೀವುಗಳು ಅಲ್ಪ ವಿಷಯಗಳ ಜಂಜಡದಲ್ಲಿ ಸಿಕ್ಕಿ ತೊಳಲದೆ ದಿವ್ಯವೂ ಭವ್ಯವೂ ಆದ ಧ್ಯೇಯೋದ್ದೇಶಗಳಿಂದ ಪ್ರೇರಿತರಾಗಿ ಕಾರ್ಯತತ್ಪರರಾಗುವಿರೆಂಬ ಭರವಸೆ ನಮಗಿದೆ

ಶ್ರೀ ಮು ವೆಂಕಟರಾಯರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಗಿಯಿತು.

ಹಂಗೆರಿ ಕ್ರಾಂತಿಕಾರಿ ಮುಖಂಡನಿಗೆ ಗಲ್ಲು ಶಿಕ್ಷೆ

ಹಂಗೆರಿಯ ಕ್ರಾಂತಿಯಲ್ಲಿ ಭಾಗವಹಿಸಿದ ೨೦ ವರ್ಷದ ತರುಣ ಮುಖಂಡ ಇಸ್ಟ್ವಾನ್ ಹೊರ್ವಾತ್‌ರವರಿಗೆ ಅಲ್ಲಿನ ಮಿಲಿಟರಿ ನ್ಯಾಯಮಂಡಲಿಯು ಫಾಸಿ ಶಿಕ್ಷೆಯನ್ನು ವಿಧಿಸಿದೆ. ಕಳೆದ ತಿಂಗಳು ಅವರು ಸಶಸ್ತ್ರ ಪಡೆಯೊಡನೆ ಕಾರ್ಯಾಚರಣೆ ನಡೆಸಿದ್ದರು. ಇತರರಿಗೆ ೫ರಿಂದ ೧೦ ವರ್ಷದವರೆಗಿನ ಸಜಾ ವಿಧಿಸಲಾಗಿದೆ

ಅಮೆರಿಕದಲ್ಲಿ ಹೆಚ್ಚು ಅಣು ಶಸ್ತ್ರಾಸ್ತ್ರಗಳ ತಯಾರಿಕೆ

ಅಮೆರಿಕದ ಕಾಂಗ್ರೆಸ್ ಸಭೆಗಳಿಗೆ ಅಧ್ಯಕ್ಷ ಐಸೆನ್‌ಹೋವರರು ಕಳುಹಿಸಿರುವ ಆಯವ್ಯಯ ಸಂದೇಶದಲ್ಲಿ ತನಿಖೆ ಮೂಲಕ ಶಸ್ತ್ರಾಸ್ತ್ರಗಳ ಮೋತಾ ವ್ಯವಸ್ಥೆಗಾಗಿ ಅಂತರ ರಾಷ್ಟ್ರೀಯ ಒಪ್ಪಂದವಾಗುವವರೆಗೆ ಅಮೆರಿಕವು ಅಣು ಶಸ್ತ್ರಗಳನ್ನು ಹೆಚ್ಚುಹೆಚ್ಚಾಗಿ ಶೇಖರಿಸಬೇಕಾಗುವುದೆಂದು ತಿಳಿಸಿದ್ದಾರೆ. ೭,೧೮೦ ಕೋಟಿ ಡಾಲರಿನ ಆಯವ್ಯಯ ಅಂದಾಜಿನಲ್ಲಿ ೩,೮೦೦ ಕೋಟಿ ಡಾಲರನ್ನು ರಕ್ಷಣಾ ಬಾಬಿಗೆ ಒದಗಿಸಲಾಗಿದೆ. ಅದರಲ್ಲಿ ಕಳೆದ ವರ್ಷಕ್ಕಿಂತ ೨೦೦ ಕೋಟಿ ಡಾಲರ್ ಹೆಚ್ಚು ಹಣವನ್ನು ಒದಗಿಸಲಾಗಿದೆ.

ಚುನಾವಣೆಗಳಲ್ಲಿ ಆನೆಗಳ ನೆರವು

ಒರಿಸ್ಸಾ ಸಂಸ್ಥಾನದ ಫೂಲ್ಬಾನಿ ಜಿಲ್ಲೆಯ ಗುಡ್ಡ ಪ್ರದೇಶದಲ್ಲಿ ಚುನಾವಣೆಗಳನ್ನು ನಡೆಸಲು ಅಧಿಕಾರಿಗಳು ಎರಡು ಸರ್ಕಾರಿ ಆನೆಗಳನ್ನು ನೆರವಿಗೆ ಕರೆಸಿರುತ್ತಾರೆ. ಗುಡ್ಡ ಪ್ರದೇಶದಲ್ಲಿ ಜೀಪುಗಳನ್ನು ಓಡಾಡಿಸಲು ಸಾಧ್ಯವಿಲ್ಲ. ಆನೆಗಳು ಸಾಗಾಣಿಕೆ ಕೆಲಸವನ್ನು ನಡೆಸುವುವು.

ಮುಡುಕತೊರೆ ಮತ್ತು ಬೆಟ್ಟದಪುರ ಜಾತ್ರೆಗೆ ಹೋಗುವವರಿಗೆ ಸೂಚನೆ

ಕಾಲರಾ ವ್ಯಾಧಿಯು ಜಾತ್ರೆ ಸ್ಥಳಗಳಲ್ಲಿ ಹರಡಬಾರದೆಂಬ ಕಾರಣಕ್ಕಾಗಿ, ಬರುವ ತಿಂಗಳು ೯ರಿಂದ ನಡೆಯುವ ಮುಡುಕತೊರೆ ಜಾತ್ರೆಗೆ ಹೋಗುವವರಿಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ಸೂಚನೆಯೊಂದನ್ನಿತ್ತು, ಅವರುಗಳು ಜಾತ್ರೆಗೆ ಹೋಗುವ ಎರಡು ವಾರಗಳ ಮುಂಚೆ ಕಾಲರಾ ನಿರೋಧದ ಇನಾಕ್ಯುಲೇಷನ್ ಮಾಡಿಸಿಕೊಂಡು ಆ ಬಗ್ಗೆ ಸರ್ಟಿಫಿಕೇಟನ್ನು ಪಡೆದಿರಬೇಕೆಂದು ತಿಳಿಸಿರುತ್ತಾರೆ. ಫೆಬ್ರವರಿ ೧೫ರಿಂದ ಆರಂಭವಾಗುವ ಬೆಟ್ಟದಪುರದ ಜಾತ್ರೆಗೆ ಹೋಗುವವರಿಗೂ ಇದೇ ಮೇರೆ ಸೂಚನೆಯೀಯಲಾಗಿದೆ.

ಅನ್ನ ಸಂತರ್ಪಣೆ

'ಮಂಡಿ ಮೊಹಲ್ಲಾ ಬೇವಿನ ಕಾಳಮ್ಮನವರ ದೇವಸ್ಥಾನದಲ್ಲಿ ಕಳೆದ ಸೋಮವಾರ ಧನುರ್ಮಾಸ ಪೂಜೆ ಅಂಗವಾಗಿ ಅನ್ನ ಸಂತರ್ಪಣೆಯು ನಡೆಯಿತು. ಅದಕ್ಕಾಗಿ ನಾನಾ ರೀತಿಯಲ್ಲಿ ಸಹಾಯ ಮಾಡಿದವರಿಗೆಲ್ಲಾ ದೇವಸ್ಥಾನದಲ್ಲಿರುವ ವಿವೇಕಾನಂದ ಯುವಜನ ಸಂಘದವರು ಕೃತಜ್ಞತೆಯನ್ನು ಸೂಚಿಸಿರುವರು

ಮಾಘ ಮಹಾತ್ಮೆ ಪುರಾಣ ಶ್ರವಣ

ಅಶೋಕಾ ರಸ್ತೆಯ ಶ್ರೀ ಗಿರಿಜಾ ಮಂದಿರದಲ್ಲಿ ಮಕರ ಮಾಸ ಪ್ರಯುಕ್ತ ನಿತ್ಯವೂ ಸಂಜೆ ೭ ಗಂಟೆಗೆ ಶ್ರೀ ಮಾಘ ಮಹಾತ್ಮೆ ಪುರಾಣ ವಾಚನವನ್ನು ವೇ|| ಬ್ರಹ್ಮಶ್ರೀ ಅಶ್ವತ್ಥನಾರಾಯಣ ಶಾಸ್ತ್ರಿಗಳವರು ನಡೆಸುವರು. ಸರ್ವರಿಗೂ ಆಹ್ವಾನವಿದೆ.

ಈಜಿಪ್ಟಿನಲ್ಲಿ ಬ್ರಿಟಿಷ್, ಫ್ರೆಂ ಬ್ಯಾಂಕುಗಳ ರಾಷ್ಟ್ರೀಕರಣ

ಈಜಿಪ್ಟಿನಲ್ಲಿರುವ ಬ್ರಿಟಿಷ್ ಮತ್ತು ಫ್ರೆಂ ಬ್ಯಾಂಕುಗಳು ಮತ್ತು ವಿಮಾ ಸಂಸ್ಥೆಗಳ ನ್ನು ಕಳೆದ ಮಂಗಳವಾರ ರಾಷ್ಟ್ರೀಕರಣ ಡಲಾಯಿತೆಂದು ವರದಿಯಾಗಿದೆ. ಅಲ್ಲಿನ ದೇಶೀ ಬ್ಯಾಂಕುಗಳು ಮತ್ತು ವಿಮಾ ಸಂಸ್ಥೆ ಗಳನ್ನೂ ಕ್ರಮವಾಗಿ ಇನ್ನು ಐದು ವರ್ಷಗ ರಾಷ್ಟ್ರೀಕರಿಸಲಾಗುವುದೆಂದೂ, ಈ ಸಂಬಂಧ ಕಂಪೆನಿಗಳವರಿಗೆ ಯೋಗ್ಯ ಪರಿಹಾರ ಕೊಡ ಗುವುದೆಂದೂ ಹೇಳಲಾಗಿದೆ.

ಜಲಗರ್ಭದಿಂದ ಹಾರಿಸಬಹು ದಾದ ರಾಕೆಟ್

ಸಮುದ್ರದ ಜಲಗರ್ಭದಲ್ಲಿ ಚಲಿಸುತ್ತಿ ಸಬ್‌ಮೇರಿನ್‌ಗಳಿಂದ ೧,೫೦೦ ಮೈಲಿ ದೂ ವರೆಗೂ ಹಾರಿಸಬಹುದಾದಂತಹ ರಾಕೆಟ್ಟು ನ್ನು ತಯಾರಿಸಲು ಅಮೆರಿಕದ ನೌಕಾ ಪ ಸಿದ್ಧವಾಗಿರುವುದೆಂದು ವರದಿಯಾಗಿದೆ.

ಸಂಸ್ಕೃತ ಕಾಲೇಜು ಅಧ್ಯಾಪಕರ ಸಂಬಳ ಹೆಚ್ಚಿಸಲು ಮನವಿ

ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾ ಶಾಲೆಯ ಅಧ್ಯಾಪಕರ ಸಂಘದ ಸರ್ವ ಸದಸ್ಯ ಸಭೆಯು ಕಳೆದ ಭಾನುವಾರ ಶ್ರೀ ಡಿ. ವ ದೇವಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದು, ದ್ಯಾ ಇಲಾಖಾ ಉಪಾಧ್ಯಾಯರ ಸಂಬ ವ ಪುನರ್ವಿಮರ್ಶೆ ಆಜ್ಞೆ ವಿಚಾರವನ್ನು ಚ ಲಿಸಲಾಯಿತು. ಸಂಸ್ಕೃತ ಕಾಲೇಜಿನ ಅಧ್ಯಾ ಕರಿಗೆ ಶಾಲಾ ಪಂಡಿತರುಗಳ ಸಂಬಳದ ಸ್ಕೇ ನ ಬದಲು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಧ್ಯಾಪಕರ ಸಂಬಳವನ್ನು ಗೊತ್ತುಪಡಿಸಬೇ ದೂ ಕೋರುವ ನಿರ್ಣಯವನ್ನು ಅಂಗೀಕರಿ ಲಾಯಿತು.

ನೂರಡಿ ರಸ್ತೆಯಲ್ಲಿ ಮನೆ

ಕಾಶಿಪತಿ ಲಾಯದಲ್ಲಿ ಮಂಗಳೂರು ಹೆಂ
2 ಸಂಸಾರಕ್ಕನುಕೂಲವಾದ ಮತ್ತು ನಲ್ಲಿ,ಫ್ಲ
ಇರುವ 92'x18' ಜಾಗದ ಮೇಲಿದೆ. ಬೆ
ರೂ 6,500.

ಚಾಮುಂಡಿ ಮೊಹಲ್ಲಾ ಕೆ ಆರ್. ವನ
ನಲ್ಲಿ ದೀಪ ಫ್ಲಷ್, ಕಾಂಪೌಂಡ್ ಇರುವ
ಸಿ ಮನೆ ಬೆಲೆ ರೂ. 4,500.

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲಾ ಬಳಿ, ಮೈಸೂರು.

ಮೋತಿಲಾಲ್ ಟಾಕೀಸ್
18—1—57ರಿಂದ : ಅಮೋಘ ಪ್ರಾರಂ
ಮೆಹಬೂಬ್ ಪ್ರೊಡಕ್ಷನ್ಸ್‌ರವರ
ಅನ್ಮೋಲ್ ಘ
(ಹೊಸ ಪ್ರಿಂಟು)
ಪಾತ್ರ.- ನೂರ್‌ಜಹಾನ್, ಸುರೇಂದ್ರ
ಮತ್ತು ಸುರಯ್ಯ
ಸಂಗೀತ : ನೌಷದ್ ; ನಿರ್ದೇಶನ : ಮೆಹಬೂ

SRI GAYATH
TALKIES
From 18-1-57 : For 4 d
Walt Disney's
LADY & THE TRAM
(The first all-cartoon featur
in Cinemascope)
Also showing Walt Disney's
SWITZERLAND
The first people & places
(In Cinemascope & Color)

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
18-1-57ನೆಯ ಶುಕ್ರವಾರದಿಂದ : ಅಮೋಘವಾದ 4ನೆಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು
ಭಕ್ತ ಮಾರ್ಕಂಡೇಯ
ಪಾತ್ರ:- ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ರಘುರಾಮಯ್ಯ, ಮಾಸ್ಟರ್ ಆನಂದ್, ಬೇಬಿ ಉಮಾ. ಪದ್ಮಿನಿ ಪ್ರಿಯದರ್ಶಿನಿ, ಬಾಲಸರಸ್ವತಿ, ನರಸಿಂಹರಾಜು, ಡಿಕ್ಕಿ ಮಾಧವರಾವ್

Edited, Printed and Publish
by A. R. Nagarajan at Sad
Press, D. Subbiah Road, My

ರಣಜಿತ್ *
ದಿಗ್ದರ್ಶನ : ನರೇಂದ್ರಸೂರಿ
ಕಥೆ : ಬಿ ಎಸ್ ಜೋಹರ್
ಸಂಗೀತ : ಶಂಕರ್ ಜೈಕಿಷನ್
19—1—57ನೆ ಶನಿವಾರದಿಂದ : ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು
ಕಿಶೋರ್ ಕುಮಾರ್ ಮತ್ತು ಶಕೀಲಾ ನಟಿಸಿರುವ, ರೂಪ್ ಕಮಲ್ ಚಿತ್ರಾರವರ ಹಿಂದಿ ಚಿತ್ರ
★ ಬೇಗುನ್ಹ ★
—: ಸಹಾಯಕ ವರ್ಗ :—
ಮುಬಾರಕ್, ರಾಧಾಕಿಶನ್,
ರಾಜಾನೇನೆ, ಹೆಲನ್

ರಿಜಿಸ್ಟರ್ ನಂ. 792

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
★
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸ [illegible] ರಸ್ತೆ,
ಬೆಂಗಳೂರು-2

ಬಿಡಿ ಪ್ರತಿಗೆ 3 ಕಾಸು

ಸತ್ಯನಾರಾಯಣ
ರೈಸ್ ಮಿಲ್
ಶಿವರಾಂಪೇಟೆ, ಮೈಸೂರು
(ರಾಜಕಮಲ್ ಟಾಕೀಸ್ ಹತ್ತಿರ)
★
ಈಗ ಸುಗ್ಗಿ ಕಾಲ—ನಮ್ಮ ಮಿಲ್ಲಿನ
ಲ್ಲಿ ಸೊಗಸಾಗಿ, ಸರಿಯಾದ
ಅಳತೆಗೆ ಅಕ್ಕಿ [illegible]
ಶ್ರೀವಿ. [illegible]

ಪುಟ : ೦೫] SADHVI : SATURDAY 19—1—1957 ಮೈಸೂರು : ಶನಿವಾರ ೧೯—೧—೧೯೫೭ : [ಸಂಚಿಕೆ : ೦೭೫

ಫೆ|| ೨೫ರಿಂದ ಮಾರ್ಚಿ ೧೨ವರೆಗೆ ಮೈಸೂರು ಚುನಾವಣೆ

ಪುರುಷರ ಕಾರ್ಯಸಾಧನೆಗಳಿಗೆ ಸ್ತ್ರೀಯರ ನೆರವು ಅಗತ್ಯ

ಭಾವಸಾರಕ್ಷತ್ರಿಯ ಮಹಿಳಾಪರಿಷತ್ತಿನಲ್ಲಿ ಶ್ರೀಮನ್ಮಹಾರಾಣಿಯವರ ಭಾಷಣ

ಮೈಸೂರು ೧೯

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಿಳಾ ಪರಿಷತ್ತಿನ ಆರನೇ ಅಧಿವೇಶನದ ಆರಂಭೋತ್ಸವವನ್ನು ಶ್ರೀಮನ್ಮಹಾರಾಣಿ ಶ್ರೀ ತ್ರಿಪುರಸುಂದರಮ್ಮಣ್ಣಿಯವರು ಈ ದಿನ ನೆರವೇರಿಸಿ, ಪುರುಷರ ಕಾರ್ಯ ಸಾಧನೆಗಳಿಗೆಲ್ಲಾ ಸ್ತ್ರೀಯರ ನೆರವೇ ಮುಖ್ಯವೆಂದು ತಿಳಿಸಿದರು. ಅವರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು:—

ಒಂದು ದೇಶದಲ್ಲಿ ಪುರುಷರು ಮಾತ್ರ ವಿದ್ಯೆ, ನಾಗರಿಕತೆ ಮುಂತಾದ್ದರಲ್ಲಿ ಮುಂದುವರಿದು ಮಹಿಳೆಯರು ಮುಂದುವರಿಯದೆ ಇದ್ದರೆ ಆ ದೇಶ ಪ್ರಗತಿಪರವಾದ ದೇಶವೆನಿಸಲಾರದು. ಈ ಅಭಿಪ್ರಾಯವನ್ನೇ ಪುಷ್ಟೀಕರಿಸುವಂತೆ "ಯತ್ರನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ" ಎಂಬ ಪ್ರಾಚೀನ ಕವಿವಾಣಿಯೂ ಪ್ರಸಿದ್ಧವಾ

ರಚನಾತ್ಮಕ ಚಟುವಟಿಕೆಗಳು ಸರ್ವರಿಗೂ ಲಭಿಸುವುದಕ್ಕೆ ಅರ್ಹವಾದುದು. ಸ್ತ್ರೀಯಾಗಲಿ ಪುರುಷನಾಗಲಿ ಉನ್ನತ ಸಾಮರ್ಥ್ಯ ಹೊಂದಿ ಗೌರವಾರ್ಹರೆನಿಸುವರು. ಸಮಾಜ ಶಾಸ್ತ್ರದೃಷ್ಟಿಯಿಂದ ನೋಡಿದರೂ ದೇಶದಲ್ಲಿ ಆರ್ಥಿಕ ಅಭಿವೃದ್ಧಿಗೆ ಸ್ತ್ರೀಯರ ನೆರವು ಅತ್ಯಾವಶ್ಯಕ. ಸ್ತ್ರೀಯರು ಸಹಜವಾಗಿ ಕಲಾ ಕುಶಲೆಯರು ಆಗಿರುವಷ್ಟು ಕಲಾ ನಿಪುಣತೆ ಸಾಮಾನ್ಯವಾಗಿ ಪುರುಷರಲ್ಲಿರಲಾರದೆಂದು ಹೇಳಬಹುದು. ವ್ಯವಹಾರಿಕ ವಿಚಾರಗಳಲ್ಲೂ ಸ್ತ್ರೀಯರು ಕಡಿಮೆಯಿಲ್ಲ.

ಪ್ರಸಕ್ತ ಕಾಲದಲ್ಲಿ ಭಾರತದ ವಿಚಾರದಲ್ಲಿ ಪ್ರಪಂಚವು ಬಹಳ ಗೌರವವುಳ್ಳದ್ದಾಗಿದೆ. ಭಾರತ ಸಾಂಸ್ಕೃತಿಕ ನಿಯೋಗದಲ್ಲಿ ಹಲವರು ಮಹಿಳೆಯರು ಚೈನಾ, ರಷ್ಯಾ ಮುಂತಾದ ದೇಶಗಳಲ್ಲಿ ಸಂಚರಿಸಿ ಭಾರತದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಚೈನಾ ದೇಶದ ಮಹಿಳಾ ನಿಯೋಗದವರು ಭಾರತದಲ್ಲಿ ಸಂಚರಿಸಿ ನಮ್ಮ ಸಂಸ್ಕೃತಿಯನ್ನು ಮೆಚ್ಚಿ ಶ್ಲಾಘಿಸಿದ್ದಾರೆ. ಈ ರೀತಿ ಪರಸ್ಪರ ಪರಿಚಯ, ಸಂಸರ್ಗಗಳಿಂದ ಸ್ತ್ರೀಯರ ಸಮ್ಮಾನಗಳು ಉನ್ನತಿ ಹೊಂದುವುದೆಂಬುದರಲ್ಲಿ ಸಂಶಯವಿಲ್ಲ.

ಸ್ವಾಗತಾಧ್ಯಕ್ಷಿಣಿ ಶ್ರೀಮತಿ ಭಾಗೀರಥೀಬಾಯಿಯವರು ಬಿನ್ನವತ್ತಳೆಯನ್ನು ಬೆಳ್ಳಿಯ ಪಂಡುರಂಗವಿಠ್ಠಲ ವಿಗ್ರಹದೊಡನೆ ಶ್ರೀಮನ್ಮಹಾರಾಣಿಯವರಿಗೆ ಸಮರ್ಪಿಸಿದರು.

ಶ್ರೀಮತಿ ಗೌರಮ್ಮನವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭ ಮುಗಿಯಿತು.

ಇನ್ನು ಮುಂದೆ ರೈಲ್ವೆಗಳಲ್ಲಿ ಯಾವ ಹಂಗಾಮಿ ಅಥವಾ ಖಾಯಂ ಉದ್ಯೋಗಕ್ಕಾದರೂ [illegible]ರನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳು ಸೂಚನೆಯೊಂದನ್ನು ಕೊಟ್ಟಿದ್ದಾರೆ.

ಶ್ರೀಮನ್ಮಹಾರಾಣಿಯವರಾದ ಶ್ರೀ ತ್ರಿಪುರಸುಂದರಮ್ಮಣ್ಣಿಯವರು

ಭಾವಸಾರ ಕ್ಷತ್ರಿಯ ಮಹಿಳೆಯರ ಸಮ್ಮೇಳನದ ಆರಂಭೋತ್ಸವವನ್ನು ಇಂದು ನೆರವೇರಿಸಿದರು

ನೌಕರರ ಸಂಬಳದ ಬಗ್ಗೆ ಸಧ್ಯದಲ್ಲೇ ಆಜ್ಞೆ

ಕೇಂದ್ರದಿಂದ ೦||| ಕೋಟಿ ರೂ. ಸಹಾಯದ ನಿರೀಕ್ಷೆ

ಬೆಂಗಳೂರು ೧೯

ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಪತ್ರಿಕಾ ಪ್ರತಿನಿಧಿಗಳೊಡನೆ ನೆನ್ನೆ ಸಂಭಾಷಿಸಿ, ನೌಕರರ ನೂತನ ಸಂಬಳದ ಪಟ್ಟಿ ವಿಚಾರದಲ್ಲಿ ಸರ್ಕಾರದ ಆಜ್ಞೆಯು ಕೆಲವು ದಿನಗಳಲ್ಲೇ ಪ್ರಕಟವಾಗಲಿದೆಯೆಂದು ತಿಳಿಸಿದರು. ಸಂಬಳವನ್ನು ಹೆಚ್ಚಿಸದೇ ತುಟ್ಟಿ ಭತ್ಯವನ್ನು ಮಾತ್ರ ಹೆಚ್ಚಿಸುವಂತೆ ಕೇಂದ್ರದಿಂದ ಆದೇಶವೇನೂ ಬಂದಿಲ್ಲವೆಂದೂ, ನೌಕರರ ಸಂಬಳವನ್ನು ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರದವರು ವರ್ಷಕ್ಕೆ ೧|||ಕೋಟಿ ರೂ. ಸಹಾಯವನ್ನು ಕೊಡಲಿರುವರೆಂದೂ ಅವರು ನುಡಿದರು. ಈ ಸಂಬಂಧವಾಗಿ ಕೇಂದ್ರದವರು ಕೇಳಿರುವ ವಿವರಗಳನ್ನು ಒಪ್ಪಿಸಲು ಹಲವು ಅಂಕಿಅಂಶಗಳನ್ನು ಶೇಖರಿಸಲಾಗುತ್ತಿದೆಯೆಂದೂ ಅವರು ತಿಳಿಸಿದರು.

ಕೇಂದ್ರ ಸರ್ಕಾರದವರು ನೌಕರರ ಸಂಬಳದ ಪುನರ್ವಿಮರ್ಶೆಯಿಂದ ಆಗುವ ಹೆಚ್ಚು ವೆಚ್ಚದಲ್ಲಿ, ೬೦ ರೂ ವರೆಗೆ ಸಂಬಳ ಬರುವವರಿಗಾಗಿ ಶೇಕಡ ೬೬ ೨/೩ ಮತ್ತು ೬೦ರಿಂದ ೧೦೦ ರೂ. ಬರುವವರಿಗಾಗಿ ಶೇಕಡ ೩೩ ೧/೩ ರಷ್ಟು ಭಾಗವನ್ನು ವಹಿಸಲಿರುವರೆಂದು ಗೊತ್ತಾಗಿದೆ.

ಗುಂಡ್ಲುಪೇಟೆ ವಿದ್ಯಾರ್ಥಿ ಸಂಘದ ಸಭೆ

ನಗರದಲ್ಲಿರುವ ಗುಂಡ್ಲುಪೇಟೆ ವಿದ್ಯಾರ್ಥಿ ಸಂಘದ ವಾರ್ಷಿಕ ಸಭೆಯು ನಾಳೆ ಬೆಳಗ್ಗೆ ೯ ಗಂಟೆಗೆ ಮಹಾರಾಜಾ ಕಾಲೇಜಿನ ಕ್ಯಾಂಟೀನಿನಲ್ಲಿ ನಡೆಯುವುದು. ಶ್ರೀ ವಿ. ಪುಟ್ಟಮಾದಪ್ಪನವರು ಅಧ್ಯಕ್ಷತೆ ವಹಿಸುವರು. ಶ್ರೀ ಹ. ರಾ. ಸುಬ್ಬರಾಯರು ಭಾಷಣ ಮಾಡುವರು. ಸಂಘದ ಸದಸ್ಯರು ಬರಬೇಕೆಂದು ಪ್ರಾರ್ಥಿಸಲಾಗಿದೆ.

ತ್ಯಾಗರಾಜರ ಆರಾಧನೋತ್ಸವ

ಮೈಸೂರು ೧೯

ನಗರದ ಚಾಮುಂಡಿಪುರದಲ್ಲಿರುವ ಶ್ರೀ ಸರಸ್ವತಿ ಗಾನ ಕಲಾ ಮಂದಿರದ ಆಶ್ರಯದಲ್ಲಿ ನಾಳೆಯಿಂದ ತ್ಯಾಗರಾಜಸ್ವಾಮಿಯವರ ಆರಾಧನೆ ಅಂಗವಾಗಿ ನಿತ್ಯವೂ ಸಂಜೆ ೬||ಗಂಟೆಗೆ ಸಂಗೀತ ಕಛೇರಿಗಳನ್ನು ಏರ್ಪಡಿಸಲಾಗಿದೆ. ನಾಳೆ ಬೆಳಗ್ಗೆ ತ್ಯಾಗರಾಜರ ಪೂಜೆ ಮತ್ತು ಮಂದಿರದ ವಿದ್ಯಾರ್ಥಿಗಳಿಂದ ಸಂಗೀತವೂ, ಸಂಜೆ ವಿ|| ಟಿ. ಪುಟ್ಟಸ್ವಾಮಯ್ಯನವರ ಗಾಯನವೂ ನಡೆಯುವುವು.

ಲಕ್ಷ್ಮೀಪುರದಲ್ಲಿರುವ ಶ್ರೀ ತ್ಯಾಗರಾಜಸಂಗೀತ ವಿದ್ವತ್ಸಭೆಯ ಆಶ್ರಯದಲ್ಲಿ ನಾಳೆ ತ್ಯಾಗರಾಜರ ಆರಾಧನೆ ಅಂಗವಾಗಿ ಬೆಳಗ್ಗೆ ೧೧ ಗಂಟೆಗೆ ಪೂಜೆ, ತ್ಯಾಗರಾಜರ ಚರಿತ್ರಾ ಪಠಣ ಮತ್ತು ಸಂಜೆ ೬ಕ್ಕೆ ಸಂಗೀತ ಕಛೇರಿಗಳು ಹೊಯ್ಸಳ ಕರ್ನಾಟಕದ ವಿದ್ಯಾರ್ಥಿನಿಲಯದಲ್ಲಿ ನಡೆಯುವುವು.

ಬಕ್ಷಿ ಬಸಪ್ಪಾಜಿ ತೋಟದಲ್ಲಿರುವ ಶ್ರೀ ಗಾಯತ್ರಿ ಸಂಗೀತ ವಿದ್ಯಾಮಂದಿರದವರು ನಾಳೆಯಿಂದ ೨೭ರವರೆಗೆ ಆರಾಧನೆಯನ್ನು ನೆರವೇರಿಸುವರು. ನಿತ್ಯವೂ ಸಂಜೆ ೬ ಗಂಟೆಗೆ ಹರಿಕಥೆ, ಸಂಗೀತ, ಪೂಜೆಗಳು ಏರ್ಪಾಡಾಗಿವೆ. ನಾಳೆ ಮಧ್ಯಾಹ್ನ ೧೨ ಗಂಟೆಗೆ ವೇದಘೋಷವೂ, ಸಂಜೆ ೭ ಗಂಟೆಗೆ ವಿ|| ಕೆ. ಗುಂಡೂರಾಯರಿಂದ ರಾಮಾಂಜನೇಯ ಸಂವಾದ ಎಂಬ ಕಥೆಯೂ ಇವೆ.

ರಾಜೇಂದ್ರನಗರದ ೩ನೇ ಶಾಖೆಯಲ್ಲಿರುವ ಶ್ರೀ ಸರಸ್ವತಿ ಗಾನಕಲಾ ಮಂದಿರದಲ್ಲಿ ಉತ್ಸವವನ್ನು ನಾಳೆ ಸಂಜೆ ೫ ಗಂಟೆಗೆ ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಕಾಲೊನಿಯ ಇನ್ಸ್‌ಪೆಕ್ಟರ್ ಶ್ರೀ ಎ. ಎನ್. ಭೈರಪ್ಪನವರು ಆರಂಭಗೊಳಿಸುವರು. ಕಾರ್ಮಿಕ ಅಧಿಕಾರಿಗಳಾದ ಶ್ರೀ ಎಂ. ದ್ವಾರಕಾನಾಥ್‌ರವರು ಅಧ್ಯಕ್ಷತೆ ವಹಿಸುವರು. ವಿ|| ಟಿ. ಸಿ. ಬ್ಯಾಟರಾಯಪ್ಪ ಮತ್ತು ವಿ|| ಎಂ. ಹೆಚ್. ಅಂಜನಪ್ಪನವರ ಸಂಗೀತ ಕಛೇರಿಗಳು ಸೂಕ್ತ ಪಕ್ಕವಾದ್ಯಗಳೊಡನೆ ಜರುಗುವುವು.

ಕಿಲ್ಲೆ ಮೊಹಲ್ಲಾ ಶ್ರೀ ದತ್ತಾತ್ರೇಯ ಸಂಗೀತ ವಿದ್ಯಾಶಾಲೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ಡಿ. ರಾಜೇಂದ್ರರವರಿಂದ ವೀಣೆ ಮತ್ತು ವಿ|| ಬಿ. ಶ್ರೀಮತಿಯವರಿಂದ ಸಂಗೀತವೂ ಇವೆ.

ನಾಳೆ ಅಶೋಕಾ ರಸ್ತೆಯಲ್ಲಿ ನೀರಿರುವುದಿಲ್ಲ

ಅಶೋಕಾ ರಸ್ತೆ ಮತ್ತು ಜೈಲಿನವರೆಗೆ ಇರುವ ಕ್ರಾಸ್ ರಸ್ತೆಗಳಲ್ಲಿ ನೀರಿನ ಪೈಪು ಲೈನು ಕೆಲಸ ನಡೆಯುವುದರಿಂದ ನಾಳೆ ಬೆಳಗ್ಗೆ ೮ ರಿಂದ ಸಂಜೆ ೫ ರವರೆಗೆ ನೀರು ಸರಬರಾಜು ಇರುವುದಿಲ್ಲವೆಂದು ಪೌರಸಭಾ ಕಮೀಷನರರು ತಿಳಿಸಿರುತ್ತಾರೆ.

ಸಂಸ್ಥಾನದಲ್ಲಿ ಫೆಬ್ರವರಿ ೨೫ ರಿಂದ ಮಾರ್ಚಿ ೧೨ ರವರೆಗೆ ಚುನಾವಣೆ

ಬೆಂಗಳೂರು ೧೯

ಸಂಸ್ಥಾನದಲ್ಲಿ ಮಹಾ ಚುನಾವಣೆಗಳು ಬರುವ ತಿಂಗಳು ೨೫ ರಿಂದ ಆರಂಭವಾಗಿ ಮಾರ್ಚಿ ೧೨ರ ವರೆಗೆ ನಡೆಯುವುವೆಂದೂ, ಒಟ್ಟು ೧೨,೨೨೦ ಚುನಾವಣಾ ಕ್ಷೇತ್ರ, ೧,೦೦,೪೪,೦೦೦ ಓಟುಗಳು (ಅವುಗಳಲ್ಲಿ ೫೧,೪೭,೫೩೦ ಗಂಡಸರು ೪೮,೯೬,೪೭೦ ಹೆಂಗಸರು) ಇರುವರೆಂದೂ ಸಂಸ್ಥಾನದ ಚುನಾವಣಾಧಿಕಾರಿಗಳಾದ ಶ್ರೀ ಎಂ. ಕೆ. ವರದರಾಜ್‌ರವರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಒಟ್ಟು ೧೩,೩೦೦ ಓಟು ಪೆಟ್ಟಿಗೆಗಳನ್ನು ಈ ಸಾರಿ ಇಡಲಾಗುವುದು.

ವಿಧಾನ ಸಭೆಗೆ ೧೭೯ ಸ್ಥಾನಗಳೂ, ೩೯ ಮೀಸಲು ಸ್ಥಾನಗಳೂ ಇವೆ. ಲೋಕ ಸಭೆಗೆ ಒಟ್ಟು ೨೬ ಸ್ಥಾನಗಳಿರುವುವು. ಈ ಸಾರಿ ದಕ್ಷಿಣ ಕನ್ನಡ ಪ್ರದೇಶದಿಂದ ಗುಡ್ಡಗಾಡಿನವರಿಗಾಗಿ ೧ ಸ್ಥಾನವನ್ನು ಏರ್ಪಡಿಸಲಾಗಿದೆ- ಎಂಬುದಾಗಿ ಅವರು ತಿಳಿಸಿದರು.

ಆಡಳಿತ ವೆಚ್ಚದ ಖೋತಾಕ್ಕಾಗಿ ಆಮರಣಾಂತ ಉಪವಾಸ

ಗ್ರಾಮ ಪಂಚಾಯಿತಿ ರಾಜ್ಯದ ಸ್ಥಾಪನೆ ಮತ್ತು ಆಡಳಿತದ ವೆಚ್ಚದ ತೀವ್ರ ಖೋತಾಕ್ಕಾಗಿ ಒತ್ತಾಯಪಡಿಸಲು ಮದ್ರಾಸಿನ ಒಂದು ತಮಿಳು ಪತ್ರಿಕೆಯ ಸಂಪಾದಕ ಸಂಗು ಗಣೇಶ ಎಂಬ ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿನ ಪಾರ್ಥಸಾರಥಿ ದೇವಾಲಯದಲ್ಲಿ ಆಮರಣಾಂತ ಉಪವಾಸವನ್ನು ಕೈಗೊಂಡಿರುತ್ತಾರೆ. ಮದ್ರಾಸ್ ಸಂಸ್ಥಾನವನ್ನು ತಮಿಳುನಾಡು ಎಂದು ಕರೆಯಬೇಕೆಂದೂ ಅವರು ಕೇಳಿರುತ್ತಾರೆ

ಆಹಾರ ಸಂಶೋಧನಾಲಯಕ್ಕೆ ಬ್ರಿಟನ್ನಿನ ಯಂತ್ರ ಸಾಮಗ್ರಿ

ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ೧೫|| ಸಾವಿರ ಪೌಂಡು ವೆಚ್ಚದಲ್ಲಿ ಪ್ರಯೋಗ ಶಾಲಾ ಯಂತ್ರ, ಪರೀಕ್ಷಾ ಸಾಧನ, ವ್ಯವಸಾಯ ಟ್ರಾಕ್ಟರು ಮುಂತಾದುವುಗಳುಳ್ಳ ಯಂತ್ರ ಸಾಮಗ್ರಿಗಳನ್ನು ಬ್ರಿಟನ್ನಿನಿಂದ ತರಿಸಿಕೊಳ್ಳಲಾಗುವುದು. ಈ ಹಣವನ್ನು ಕೊಲೊಂಬೊ ಯೋಜನೆ ಅಂಗವಾಗಿ ಬ್ರಿಟನ್ನು ಭಾರತಕ್ಕೆ ಸಹಾಯವಾಗಿ ಕೊಡಲಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದೇವರನಾಮ. ೮-೧೫ ತ್ಯಾಗರಾಜರ ಆರಾಧನೋತ್ಸವ-ತಿರುಚ್ಚಿ ರಿಲೆ. ೧೦ ಬಾಲಜಗತ್. ಮಧ್ಯಾಹ್ನ ೧೨ ಹೆಚ್. ಆರ್. ಸೀತಾರಾಮಶಾಸ್ತ್ರಿ-ಸಂಗೀತ. ೧೨-೩೦ ವಾದ್ಯವೃಂದ. ೧ ನಿಮ್ಮ ಮೆಚ್ಚಿನ ಗೀತೆಗಳು. ೧-೫೦ ಬಸವೇಶ್ವರ ವಚನ. ೨-೧೫ ಮೀನಾಕ್ಷಿ ಸುಬ್ರಹ್ಮಣ್ಯಂ-ಸಂಗೀತ ಸಂಜೆ ೫ ಪಾಶ್ಚಾತ್ಯ ಸಂಗೀತ. ೫-೩೦ ಮತ್ತು ೧೦ ಎಂ. ಜೆ. ಶ್ರೀನಿವಾಸಯ್ಯಂಗಾರ್—ವೀಣೆ. ೬-೫ ವಿರಾಮ ಸಂಗೀತ ೬-೩೦ ರೆಕಾರ್ಡ್. ೮ ತ್ಯಾಗರಾಜ ಉತ್ಸವ-ತಿರುಚ್ಚಿ ರಿಲೆ ೯-೧೫ ಭಾಷಣ ೯-೩೦ ಹೆಚ್. ಆರ್. ಸೀತಾರಾಮಶಾಸ್ತ್ರಿ-ಸಂಗೀತ.

ಸಣ್ಣ ನಾಣ್ಯಗಳ ಬದಲು ನಯಾ ಪೈಸಾ

ಬರುವ ಏಪ್ರಿಲ್ ೧ರಿಂದ ೨ ಆಣೆ ಮತ್ತು [illegible] ದಕ್ಕೆ ಕಡಿಮೆಯಿರುವ ಬೆಲೆಯ ನಾಣ್ಯಗಳನ್ನು ಚಲಾವಣೆಯಿಂದ ವಾಪಸು ತೆಗೆದುಕೊಳ್ಳಲಾಗುವುದು. ಅವುಗಳ ಬದಲು ೧ ನಯಾ ಪೈಸಾ ೨ ನಯೇ ಪೈಸೆ,೫ ನಯೇ ಪೈಸೆ,೧೦ ನಯೇ ಪೈಸೆಗಳನ್ನು ಕೊಡಲಾಗುವುದು. ಅನಂತರ ೨೫ ಮತ್ತು ೫೦ ನಯೇ ಪೈಸೆಗಳನ್ನೂ, ಹೊಸ ರೂಪಾಯಿಯನ್ನೂ ಚಲಾವಣೆಗೆ ತರಲಾಗುವುದು. ರೂಪಾಯಿ,ಆಣೆ ಮತ್ತು ಪೈಗಳ ಬದಲು ಇನ್ನು ಮುಂದೆ ಸರ್ಕಾರಿ ಲೆಖ್ಖಾಚಾರದ ಪಟ್ಟಿಗಳಲ್ಲಿ ರೂಪಾಯಿ ಮತ್ತು ನಯೇ ಪೈಸೆಗಳನ್ನು ಮಾತ್ರ ನಮೂದು ಮಾಡಲಾಗುವುದೆಂದು ಕೇಂದ್ರ ಸರ್ಕಾರದವರು ತಿಳಿಯಪಡಿಸಿರುತ್ತಾರೆ.

ಬಹಿರಂಗ ಸ್ಥಳದಲ್ಲಿ ಗೂಢಚಾರನಿಗೆ ಗಲ್ಲು

ಇಸ್ರೇಲಿನ ಪರವಾಗಿ ಗೂಢಚರ್ಯೆ ನಡೆಸಿದ ಜೋರ್ಡಾನಿನ ಮಾಜಿ ಸೈನಿಕ ಅಬ್ದುಲ್ ಎಲ್ ಅಸ್ಗರ್ ಎಂಬುವನನ್ನು ಇಂದು ಜೋರ್ಡಾನಿನ ರಾಜಧಾನಿ ಅಮ್ಮಾನಿನಲ್ಲಿ ಬಹಿರಂಗವಾಗಿ ಗಲ್ಲಿಗೇರಿಸಲಾಗುವುದು. ಜೋರ್ಡಾನ್ ರಾಜ್ಯದ ಇತಿಹಾಸದಲ್ಲಿ ಬಹಿರಂಗ ಗಲ್ಲಾಗುವುದು ಇದೇ ಮೊದಲು

ತಿರುಪ್ಪಾವೈ ಸ್ಪರ್ಧೆಯಲ್ಲಿ ಮುಸ್ಲಿಂ ಬಾಲಕಿಯ ಜಯ

ಕರೂರಿನಲ್ಲಿ ನಡೆದ ತಿರುಪ್ಪಾವೈ ಸಂಗೀತ ಸ್ಪರ್ಧೆಯಲ್ಲಿ ಖತೀಜಾ ಬೀಬಿ ಎಂಬ ಮುಸ್ಲಿಂ ಬಾಲಕಿಯು ದ್ವಿತೀಯ ಬಹುಮಾನವನ್ನು ಪಡೆದಿರುತ್ತಾಳೆ.

ಮಂಡ್ಯದಲ್ಲಿ ಸಂಗೀತೋತ್ಸವ

ಈ ತಿಂಗಳು ಕಡೆಯ ವಾರದಲ್ಲಿ ಮಂಡ್ಯದ ಶ್ರೀ ಸದ್ಗುರು ಸಂಗೀತ ಪಾಠಶಾಲೆ ಮತ್ತು ಗಾನವಾಹಿನಿ ಪತ್ರಿಕೆಯ ವಾರ್ಷಿಕೋತ್ಸವ ಶ್ರೀ ತ್ಯಾಗರಾಜರು ಮತ್ತು ಪುರಂದರದಾಸರ ಪುಣ್ಯದಿನಾಚರಣೆಗಳನ್ನು ನೆರವೇರಿಸಲಾಗುವುದು. ಸಂಗೀತ ಕಲಾ ಪ್ರದರ್ಶನ, ರೂಪಕ, ಉಪನ್ಯಾಸ, ಕಥೆ, ನಾಟಕ ಮುಂತಾದುವನ್ನು ನಡೆಸಲಾಗುವುದು. ಮಹಾ ಜನರು ಉದಾರವಾಗಿ ಸಹಾಯ ಮಾಡುವಂತೆ ಸಂಸ್ಥೆಯ ವ್ಯವಸ್ಥಾಪಕರಾದ ಸಂ|| ವಿ|| ಕೆ. ಎಸ್ ಚಂದ್ರಶೇಖರಯ್ಯನವರು ಕೋರಿರುತ್ತಾರೆ

ಅನೂರಾಧಾ ಆರ್ಟಿಸ್ಟ್ಸ್

ಗೊಲ್ಲಗೇರಿಯಲ್ಲಿರುವ ಅನೂರಾಧಾ ಆರ್ಟಿಸ್ಟ್ಸ್‌ರವರು ಕಳೆದ ೧೪ನೇ ತಾರೀಕು ತಮ್ಮ ಸಂಘದ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ಕೆ. ಶಿವನಂಜಯ್ಯನವರ ಅಧ್ಯಕ್ಷತೆಯಲ್ಲಿ, ಶ್ರೀ ರಾಮಸಂಜೀವಯ್ಯನವರಿಂದ ಬರೆಯಲ್ಪಟ್ಟ 'ಸಮಾಜ ದುರಂತ' ಎಂಬ ನಾಟಕದ ರಿಹರ್ಸಲ್ ಸಮಾರಂಭವನ್ನು ನೆರವೇರಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಟಿ. ಎ ನಾರಾಯಣಮೂರ್ತಿಯವರು ವಂದನಾರ್ಪಣೆ ಮಾಡಿದರು

ಅಂತರ ವಿದ್ಯಾರ್ಥಿ ನಿಲಯ ಚರ್ಚಾ ಸ್ಪರ್ಧೆ

ಮೈಸೂರು ವೈಸ್‌ರಾಯ್ ರಸ್ತೆಯಲ್ಲಿರುವ ಶ್ರೀ ಶಾರದಾ ನಿಕೇತನ ವಿದ್ಯಾರ್ಥಿ ನಿಲಯದ ಶ್ರೀ ಶಾರದಾ ಯೂನಿಯನ್ನಿನ ಆಶ್ರಯದಲ್ಲಿ ಕಳೆದ ಭಾನುವಾರ ದಿವಂಗತ "ಕೃಷ್ಣಸ್ವಾಮಿರಾಯರ ಸ್ಮಾರಕ ಅಖಿಲ ಕರ್ನಾಟಕ ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆ"ಯು ನಡೆಯಿತು. ಯುವರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಲ್ ಸೀಬಯ್ಯನವರು ಅಧ್ಯಕ್ಷತೆ ವಹಿಸಿದ್ದರು "ಜಗತ್ತಿನ ಉದ್ಧಾರವಾಗುವುದು ಆಧ್ಯಾತ್ಮ ಸಾಧನೆಯಿಂದ, ವಿಜ್ಞಾನದಿಂದಲ್ಲ" ಎಂಬುದು ಚರ್ಚಾ ವಿಷಯವಾಗಿತ್ತು. ನಗರದ ೧೮ ವಿದ್ಯಾರ್ಥಿ ನಿಲಯಗಳ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ಪಂದ್ಯದ ಪಾರಿತೋಷಕವು ಶಾರದಾ ನಿಕೇತನ ವಿದ್ಯಾರ್ಥಿ ನಿಲಯಕ್ಕೆ [illegible] ಕ ಬಹುಮಾನಗಳು ಕೆಳಕಂಡ [illegible] ಕ್ರಮವಾಗಿ ಬಂದುವು. ಶ್ರೀಗಳಾದ ಜೆ ವಿ ನಾಯ್ಡು, ಜೆ ಕೆ. ನಾಯ್ಡು, ಸಿ. ಎಸ್ ವಿಶ್ವನಾಥ್, ಅಬ್ದುಲ್ ರಷೀದ್, ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀಮತಿ ಭಾಗೀರಥಿ

ಸಂಸ್ಥಾನದಲ್ಲಿ ೨ ಬಟ್ಟೆ ಮತ್ತು ೫ ಸಕ್ಕರೆ ಕಾರ್ಖಾನೆಗಳು

ಬೆಂಗಳೂರು ೧೯

ದ್ವಿತೀಯ ಯೋಜನೆ ಅವಧಿಯಲ್ಲಿ ಮೈಸೂರು ಸರ್ಕಾರದವರು ಬಿಜಾಪುರ ಮತ್ತು ಧಾರವಾಡದಲ್ಲಿ ತಲಾ ೫೦ ಲಕ್ಷ ರೂ ಬಂಡವಾಳವಿರುವ ಒಂದೊಂದು ಬಟ್ಟೆ ಕಾರ್ಖಾನೆಗಳನ್ನು ಏರ್ಪಡಿಸುವರೆಂದೂ, ಅವಕ್ಕೆ ಸಂಸ್ಥಾನ ಸರ್ಕಾರದಿಂದ ತಲಾ ೧೦ ಲಕ್ಷ ರೂ, ಸಾರ್ವಜನಿಕರಿಂದ ೧೦ ಲಕ್ಷ ರೂ ಮತ್ತು ಕೇಂದ್ರದವರಿಂದ ಉಳಿದ ಹಣವನ್ನು ಪಡೆಯಲಾಗುವುದೆಂದೂ ಸಹಕಾರ ಮಂತ್ರಿ ಶ್ರೀ ಎ ಭೀಮಪ್ಪನಾಯಕರು ತಿಳಿಸಿರುತ್ತಾರೆ

ತಲಾ ೮೦ ಲಕ್ಷ ರೂ ಬಂಡವಾಳವಿರುವ ೫ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪಾಂಡವಪುರ, ಸಂಕೇಶ್ವರ, ಕಂಪ್ಲಿ ಮತ್ತು ರಾಯಚೂರಿನ ಗಂಗಾವತಿ ಮತ್ತು ಹಿರಿಯೂರುಗಳಲ್ಲಿ ಏರ್ಪಡಿಸಲಾಗುವುದೆಂದೂ ಅವರು ತಿಳಿಸಿರುವರು

ನರಿ ಕಡಿದು ಮರಣ

ನಿತ್ಯವೂ ಬೆಳಗ್ಗೆ ಹೊತ್ತು ಗುಳ್ಳೆನರಿಯ ಮುಖವನ್ನು ನೋಡಿದರೆ ಶುಭವಾಗುವುದೆಂಬ ಪ್ರತೀತಿಯಿರುವುದಷ್ಟೆ. ಹಾಗೆಯೇ ಮಾಡಲು ಮದ್ರಾಸಿನ ಒಂದು ಮನೆಯಲ್ಲಿ ಗುಳ್ಳೆನರಿಯನ್ನು ಒಬ್ಬ ೩೦ ವರ್ಷದ ಜಮಿಾಲ್ ಅಹಮದ್ ಎಂಬ ಯುವಕನು ಸಾಕಿ ನಿತ್ಯವೂ ಅದನ್ನು ನೋಡುತ್ತಿದ್ದನು. ಮೊನ್ನೆ ಅವನನ್ನು ನರಿಯು ಕಡಿದು ವಿಷದ ಪರಿಣಾಮವಾಗಿ ಅವನು ಆಸ್ಪತ್ರೆಯಲ್ಲಿ ಮೃತಪಟ್ಟನು. ಆ ಊರಿನಲ್ಲಿ ಇನ್ನೂ [illegible] ಇದೇ ರೀತಿ ನರಿಗಳನ್ನು ಸಾಕುತ್ತಿರುವರು

ಕ್ಯಾಲೆಂಡರ್ ಸ್ವೀಕಾರ

[illegible] ಮದ್ರಾಸ್ ೨ ಇವರು, ಮತ್ತು ನಗರದ ಸ್ಟೇಟ್ಸ್ ಇಂಜನಿಯರಿಂಗ್ ಸಪ್ಲಯರು ಕಳುಹಿಸಿರುವ ಅಸೋಸಿಯೇಟೆಡ್ ಸಿಮೆಂಟ್ ಸಂಸ್ಥೆಯ ನೂತನ ವರ್ಷದ ಕ್ಯಾಲೆಂಡರುಗಳನ್ನು [illegible] ಕಳುಹಿಸಿರುವ ಕ್ಯಾಲೆಂಡರನ್ನೂ ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು		
ಕೆಂಪು ಮಸೂರಿ ಸಣ್ಣ	[illegible] ೦	೪೧ ೦ ೦
ರಕ್ತಚೂರಿ	೩೬ ೧೨ ೦	೩೮ ೧೨ ೦
ಕಡ್ಲಿ	೨೬ ೮ ೦	೩೯ ೦ ೦
ರಾಗಿ	೩೮ ೦ ೦	೪೮ ೧೨ ೦
ಜೋಳ	೪೫ ೮ ೦	೪೮ ೮ ೦
ಕಂಬು	೪೩ ೩ ೦	
ಕಡಲೆಕಾಯಿ	೧೬ ೪ ೦	೨೪ ೪ ೦
ಹುಚ್ಚೆಳ್ಳು	೪೧ ೦ ೦	೪೫ ೮ ೦
ಎಳ್ಳು	೮೬ ೦ ೦	
ಹರಳುಬೀಜ	೪೬ ೧೦ ೦	೪೭ ೦ ೦
ಹೊಂಗೆಬೀಜ	೨೪ ೮ ೦	೨೬ ೩ ೦
ಹುರುಳಿ	೩೫ ೮ ೦	೩೬ ೮ ೦
ಹೆಸರು	೪೯ ೦ ೦	೫೩ ೮ ೦
ಅಲಸಂದೆ	೪೪ ೦ ೦	೫೩ ೮ ೦
ಧನಿಯ	೩೧ ೩ ೦	೩೬ ೧೨ ೦
ಹುಣಿಸೇ ಬೀಜ	೪೩ ೦ ೦	೪೪ ೧೨ ೦
ತೊಗರಿ	೪೦ ೬ ೦	
ಹುಣಿಸೇಹಣ್ಣು	೩ ೧೨ ೦	೪ ೯ ೦
ಸೀಗೆಕಾಯಿ	೬ ೮ ೦	೭ ೧೨ ೦
ಮೆಣಸಿನಕಾಯಿ	೧೦ ೪ ೦	೨೦ ೧೦ ೦
ತೆಂಗಿನಕಾಯಿ ೧೦೦೦	೧೪೫ ೪ ೦	

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂಪ್ರಿಂಟ್

ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್
ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದಕ್ಕೂ
ಗಾಯತ್ರಿ ಟಾಕೀಸ್ ಎದುರು
[illegible] ಅಂಗಡಿ ಬಳಿ
ಬಿ. ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿ
ವಾರದ ರಜ : ಸೋಮವಾರ

ತಿರುವಾಂಕೂರು ಮಾಜಿ ಮುಖ್ಯಮಂತ್ರಿಯ ಬಂಧನ

ತಿರುವನಂತಪುರ ಸೆಕ್ರೆಟೇರಿಯಟ್ಟಿನ ಪೀರದ ಚಳುವಳಿ ಸಂಬಂಧವಾಗಿ ಅಲ್ಲಿನ ಮಾಜಿ ಮುಖ್ಯಮಂತ್ರಿ ಟಿ. ಕೆ ನಾರಾಯಣಪಿಳ್ಳೆಯವರನ್ನು ಕಳೆದ ಬುಧವಾರ ಬಂಧಿಸಲಾಯಿತು. ಅವರು ಸರ್ಕಾರಿ ಕಛೇರಿ ಮುಂದೆ ಪ್ರದರ್ಶನಕ್ಕಾಗಿ ತಂಡವನ್ನು ಕರೆದುಕೊಂಡುಹೋಗುತ್ತಿದ್ದರು. ಅವರೂ ಸೇರಿ, ಒಟ್ಟು ೬೬ ಜನರ ಮೇಲೆ ಪೊಲೀಸರು ಮೊಕದ್ದಮೆ ಹೂಡಿದ್ದಾರೆ. ಪ್ರತಿಬಂಧಕಾಜ್ಞೆಯ ಉಲ್ಲಂಘನೆಗಾಗಿ ೩೮ ಜನರನ್ನು ಬಂಧಿಸಲಾಗಿದೆ. ನೆಯ್ಯಾಟ್ಟಿಂಕರಾ ತಾಲ್ಲೂಕು ಕಛೇರಿ ಮುಂದೆ ಪಿಕೆಟಿಂಗ್ ಮಾಡಿದುದಕ್ಕಾಗಿ ಒಬ್ಬ ವಕೀಲರೂ ಸೇರಿ, ೮ ಜನರು ಬಂಧನಕ್ಕೊಳಗಾಗಿರುವರು

ಸಿರಿಯದ ಮೇಲೆ ಇರಾಕಿನ ಆಕ್ರಮಣದ ಪಿತೂರಿ

ಈಜಿಪ್ಟಿನ ರಾಜಧಾನಿ ಕೈರೋವಿನಲ್ಲಿ ಪ್ರಕಟವಾಗುತ್ತಿರುವ ಅಲ್ ಗೌಮೂರಿಯ ಎಂಬ ಪತ್ರಿಕೆಯು ಸಿರಿಯದ ಮೇಲೆ ಇರಾಕು ಆಕ್ರಮಣ ನಡೆಸುವ ಸಂಚು ಇದ್ದಿತೆಂದು ತಿಳಿಸಿದೆ

ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯಲ್ಲಿ ಅನ್ಯಾಯ ಬೇಡ

ಮುಂಬರುವ ಮಹಾ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಮಾಡುವುದರಲ್ಲಿ ಅಧಿಕ ಸಂಖ್ಯೆಯ ಹಿಂದುಳಿದ ಜನಾಂಗದವರಿಗೆ ಮೈಸೂರು ಜಿಲ್ಲೆಯಲ್ಲಿ ಅಭ್ಯರ್ಥಿ ಸ್ಥಾನವಿಲ್ಲವೆಂಬ ಕೂಗು ಎದ್ದಿದೆ. ಇದೇ ಕಾರಣಕ್ಕಾಗಿ ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಲವಾದ ಸೋಲು ಉಂಟಾಗಿರುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಎಲ್ಲಾ ಹಿಂದುಳಿದ ಜನಾಂಗಗಳ ಪರ ಹಿತರಕ್ಷಣೆ ಕಡೆ ಗಮನವಿಟ್ಟು, ಅಭ್ಯರ್ಥಿಗಳನ್ನು ಆಯ್ಕೆ ಮಾಡುವರೆಂದು ನಂಬುತ್ತೇನೆ ಎಂದು ವಕೀಲರಾದ ಶ್ರೀ ಎಂ ಲಿಂಗಯ್ಯನವರು ಬರೆದಿರುತ್ತಾರೆ

ಚರ್ಚಾ ಸ್ಪರ್ಧೆಗಳ ಸಂಘದ ಕಾರ್ಯಕಾರಿ ಸಮಿತಿ

ಕಿಲ್ಲೆ ಮೊಹಲ್ಲಾದಲ್ಲಿರುವ ಚರ್ಚಾ ಸ್ಪರ್ಧೆಗಳ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ೧೬ರಂದು ನಡೆದು ಪ್ರಸಕ್ತ ಸಾಲಿನ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು. ಶ್ರೀಗಳಾದ ಕೆ ಪಿ. ಶಿವಲಿಂಗಯ್ಯನವರು ಅಧ್ಯಕ್ಷರಾಗಿಯೂ, ಕೆ ಎಂ ಕುಲಕರ್ಣಿಯವರು ಉಪಾಧ್ಯಕ್ಷರಾಗಿಯೂ ಸಿ ಎಸ್ ವಿಶ್ವನಾಥ್ ಮತ್ತು ಶ್ರೀಮತಿ ಕೆ ಆರ್ ಲಕ್ಷ್ಮೀಬಾಯಿಯವರು ಕಾರ್ಯದರ್ಶಿಗಳಾಗಿಯೂ,ಶ್ರೀ ಅನಂತಪದ್ಮನಾಭರವರು ಕೋಶಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು

ಲಕ್ಷ್ಮಿ ಚಿತ್ರ
19-1 57 ರಿಂದ
ಅಮೋಘ 2ನೇ ವಾರ
ಪ್ರತಿದಿನ 3 ಆಟಗಳು

ಸತೀ ಸಾವಿತ್ರಿ

(ತೆಲುಗು)
ಪಾತ್ರ -ನಾಗೇಶ್ವರರಾವ್, ಎಸ್ ವಿ. ರಂಗರಾವ್, ವಿ ನಾಗಯ್ಯ, ರೇಲಂಗಿ, ಎಸ್ ವರಲಕ್ಷ್ಮಿ, ಪುಷ್ಪೇಂದ್ರಮಣಿ, ಮುಂತಾದವರು

ರುಚಿ ಮತ್ತು ಶುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ
(ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ)

Edited, Printed and Published by A. R. Nagarajan at Sadhvi Press, D Subbiah Road, Mysore

ಶ್ರೀಸೂಕ್ತಿ ಸುಧಾ ಸಾಗರ

ಶ್ರೀಮಚ್ಛಂಕರಾಚಾರ್ಯರ ಸೂಕ್ತಿ ಸು
ರೂಪಗಳಾದ ಸ್ತೋತ್ರಗಳನ್ನು ಮೇಲ್ಪಂ
ರೋನಾಮೆಯಲ್ಲಿ ಗ್ರಂಥರೂಪದಲ್ಲಿ ಮಂಗ
ನ ಡಾ|| ಎ ವಿ ಉಪಾಧ್ಯಾಯ ಮತ್ತು
ವೇದಿ ಎಸ್ ರಾಮಚಂದ್ರ ಮೂರ್ತಿ
ಸಂಪಾದಕೀಯಮಂಡಲಿಯ ಪರವಾಗಿ ಪ್ರ
ರುತ್ತಾರೆ ಅದನ್ನು ಶೃಂಗೇರಿ ಜಗದ್ಗುರು ಶ್ರೀ
ಅಭಿನವ ವಿದ್ಯಾತೀರ್ಥ ಸ್ವಾಮಿಗಳವರಿಗೆ
ರ್ಪಿಸಲಾಗಿದೆ ಪೂಜೆ ಮತ್ತು ಪಾರಾಯಣ
ದಲ್ಲಿ ಪರಮಾತ್ಮನ ವಿವಿಧರೂಪಗುಣಗಳನ್ನು
ರಿಸಲೂ,ಪಠಿಸಲೂ ಇದನ್ನು ಉಪಯೋಗಿ
ದು ಮಹಾ ಗಣೇಶ ಪಂಚರತ್ನ ಸ್ತೋತ್ರ
ರವಾ ಭುಜಂಗಾಷ್ಟಕ, ಷಟ್ಪದಿ ಸ್ತೋತ್ರ
ಕ್ಷೇತ್ರ ರತ್ನ ಮಾಲಿಕಾ, ಇತ್ಯಾದಿಗಳನ್ನು
ರ್ಥ ಸಹಿತ ಕೊಡಲಾಗಿದೆ ಬೆಲೆ ಆರಾಣೆ

ಚಾಯಿಕಾಯಿ ಹಲಗೆಗಳು

ಉತ್ತಮವಾದ ಚಾಯಿಕಾಯಿ ಹಲ
ದೊರೆಯುತ್ತವೆ ಕೆಳಗೆ ಕಂಡ ವಿಳಾಸದಲ್ಲಿ
ಚಾರಿಸಿ:-
ಸಾಧ್ವಿ ಆಫೀಸ್, ಮೈಸೂರು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗ
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯು
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರ
ಅಶೋಕ ರಸ್ತೆ, ಮೈಸೂರು (Estd 1911

ಆಯುರ್ವೇದ ಪ್ರೇಮಿಗಳೇ ತ್ವರೆ ಮಾಡಿರಿ !

ಅಪೂರ್ವ ವೈದ್ಯ ಗ್ರಂಥಗಳು ಕನ್ನಡ ಭಾಷೆ
ಪರಿವರ್ತಿತವಾಗಿವೆ !!
ಉತ್ತಮ ಕಾಗದ-ಬೆಲೆ ಸುಲಭ-ಅಂದವಾ
ಮುದ್ರಣ

ಅಷ್ಟಾಙ್ಗ ಹೃದಯ ಸಂಹಿತಾ

ಸಾದಾ ಕ್ಯಾಲಿ
ಪ್ರತಿ ಪ್ರ
೧ನೆಯ ಭಾಗ
ಸೂತ್ರಸ್ಥಾನ ೬ ೮ ೦ ೭
೨ ಮತ್ತು ೩ನೆಯ ಭಾಗಗಳು :
ಶಾರೀರ ಮತ್ತು ನಿದಾನ ಸ್ಥಾನಗಳು
೫ ೦ ೦ ೬
೪ ಮತ್ತು ೫ನೆಯ ಭಾಗಗಳು :
ಚಿಕಿತ್ಸಾ ಮತ್ತು ಕಲ್ಪ ಸ್ಥಾನಗಳು
೬ ೦ ೦ ೭
೨, ೩, ೪ ಮತ್ತು ೫ ಭಾಗಗಳನ್ನು ಒಟ್ಟಾಗಿ
ಕೊಳ್ಳುವವರಿಗೆ ೧೦ ೦ ೦ ೧೧
ಅಗದ ತಂತ್ರ : ೨ ೦ ೦ ೩

ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿ
ಚಿಕಿತ್ಸಕರಿಗೆ ಹಾವು, ಚೇಳು ಮೊದಲಾದ
ಜನ್ತುಗಳ ಬಾಧೆಯನ್ನು ಪರಿಹರಿಸಲೂ
ಯಕವಾದ ಪ್ರಾಮಾಣ್ಯ ಗ್ರಂಥವು

ಪ್ರಸೂತಿ ತಂತ್ರ :

ಸ್ತ್ರೀರೋಗ ಮತ್ತು ಕೌಮಾರ ಭೃತ್ಯಗ
ಳಗೊಂಡ ಈ ಪುಸ್ತಕವು ವಿದ್ಯಾರ್ಥಿಗಳಿಗೆ
ಪುಸ್ತಕವಾಗಿಯೂ, ವೈದ್ಯರಿಗೆ ಪ್ರಾಮಾ
ಗ್ರಂಥವಾಗಿಯೂ, ಸ್ತ್ರೀಯರಿಗೂ, ಗರ್ಭಿ
ಣಿಗೂ, ಬಾಲಹಿತೈಷಿಗಳಿಗೂ ಉಪದೇ
ಅಪೂರ್ವ ಗ್ರಂಥವು.

ಎಸ್. ಎಲ್. ಭಟ್ಟಾಚಾರ್ಯ,
ಅ|| ವಿ , ಅ||
ನಿವೃತ್ತ ಅಧ್ಯಾಪಕ ಮತ್ತು ಚಿಕಿತ್ಸಕ,
ಗಾ|| ಆಯುರ್ವೇದ ಮಹಾ ಪಾಠಶಾ
ಮೈಸೂರು
ದೊರೆಯುವ ಸ್ಥಳ:- ಭಾರದ್ವಾಜ ವೈದ್ಯ
VI ಮೇನ್, ವಾಣಿವಿಲಾಸ ಮೊಹಲ್ಲಾ
ಮೈಸೂರು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 6 ಕಾಸು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು . ಫೋನ್ 446

ಸಂಪುಟ : ೧೫] SADHVI : SUNDAY 20-1-1957 ಮೈಸೂರು : ಭಾನುವಾರ ೨೦—೧—೧೯೫೭ : [ಸಂಚಿಕೆ : ೧೩೬

ಅಮೆರಿಕದ ಮಧ್ಯಪೂರ್ವ ಯೋಜನೆಗೆ ಅರಬ್ಬರ ತಿರಸ್ಕಾರ

ಲೋಕಸಭೆ ಮತ್ತು ವಿಧಾನ ಸಭೆಗಳಿಗೆ ಚುನಾವಣಾ ವೇಳಾಪಟ್ಟಿ

ಮೈಸೂರು ೧೯

ಲೋಕ ಸಭೆಯ ಮೈಸೂರು ಜಿಲ್ಲಾ ಕ್ಷೇತ್ರ ಮತ್ತು ನಗರ ಮತ್ತು ತಾಲ್ಲೂಕುಗಳ ವಿಧಾನ ಸಭಾ ಕ್ಷೇತ್ರಗಳ ಚುನಾವಣೆ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿದೆ

ಲೋಕ ಸಭೆಯ ೧ ಸಾರ್ವತ್ರಿಕ ಮತ್ತು ೧ ಮೀಸಲು ಸ್ಥಾನಗಳಿಗೆ ನಾಮ ಪತ್ರಗಳನ್ನು ಇದೇ ತಿಂಗಳು ೨೯ನೇ ತಾರೀಕು ಮಧ್ಯಾಹ್ನ ೩ ಗಂಟೆಯೊಳಗೆ ಚುನಾವಣಾಧಿಕಾರಿಗಳು ಅಥವ ಸಹಾಯಕ ಚುನಾವಣಾಧಿಕಾರಿಗಳು ಸ್ವೀಕರಿಸುವರು ಫೆಬ್ರವರಿ ೧ನೇ ತಾರೀಕು ಪರಿಶೀಲನೆ, ೪ರಂದು ೩ ಗಂಟೆಯೊಳಗೆ ಉಮೇದುವಾರಿಕೆ ವಾಪಸಾತಿ ಸ್ಪರ್ಧೆಯು ಇದ್ದರೆ ಮುಂದೆ ಚುನಾವಣಾ ದಿನಗಳನ್ನು ಪ್ರಕಟಿಸಲಾಗುವುದು. ಉಮೇದುವಾರಿಕೆ ಪತ್ರಗಳನ್ನು ಚುನಾವಣಾ ಕಮಿಷನರ ಕಛೇರಿಯಲ್ಲಿ ಪಡೆಯಬಹುದು

ನಗರ ಪ್ರದೇಶದಿಂದ ೨ ಮತ್ತು ತಾಲ್ಲೂಕು ಪ್ರದೇಶದಿಂದ ೧—ಈ ರೀತಿ ಮೂರು ವಿಧಾನ ಸಭಾ ಸ್ಥಾನಗಳಿಗೂ ಇದೇ ವೇಳಾಪಟ್ಟಿಯನ್ನು ಗೊತ್ತುಪಡಿಸಲಾಗಿದೆ

ಉಮೇದುವಾರರಾಗಲಿ ಅಥವ ಅವರ ಹೆಸರನ್ನು ಸೂಚಿಸುವವರಾಗಲಿ ನಾಮಪತ್ರಗಳನ್ನು ಸಲ್ಲಿಸಬಹುದು.

ಮಹಮದ್ ಸೇಟರು ಸ್ವತಂತ್ರ ಉಮೇದುವಾರರು

ಮೈಸೂರು ನಗರದ ಉತ್ತರ ಕ್ಷೇತ್ರದಿಂದ ಶ್ರೀ ಮಹಮದ್ ಸೇಠರು ಶಾಸನ ಸಭೆಗೆ ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸಲಿರುವರು.

ಎಂ. ಸಿ. ಮಹದೇವಸ್ವಾಮಿಯವರು ಪಾರ್ಲಿಮೆಂಟ್ ಉಮೇದುವಾರರು

ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಮೈಸೂರು ಜಿಲ್ಲೆಯಿಂದ ಪಾರ್ಲಿಮೆಂಟಿಗೂ, ನಗರದ ದಕ್ಷಿಣ ಕ್ಷೇತ್ರದಿಂದ ವಿಧಾನಸಭೆಗೂ ಸ್ವತಂತ್ರವಾಗಿ ಸ್ಪರ್ಧಿಸಲಿರುವರು.

ಪಾಕಿಸ್ತಾನದ ನೀತಿ ಇಸ್ಲಾಂ ತತ್ವದ ಆಧಾರದ ಮೇಲೆ ನಿಂತಿಲ್ಲ

ಸಿರಿಯಾ ವಿದೇಶಾಂಗ ಮಂತ್ರಿಯ ಹೇಳಿಕೆ

ಸಿರಿಯದ ವಿದೇಶಾಂಗ ಮಂತ್ರಿ ಸಲಾಹ ಎಲ್ ಬಿತಾರ್‌ರವರು ದೆಹಲಿಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ಪಾಕಿಸ್ತಾನದ ನೀತಿಯು ಇಸ್ಲಾಂ ಧರ್ಮದ ಆಧಾರದ ಮೇಲೆ ನಿಂತಿಲ್ಲವೆಂದೂ, ಪಶ್ಚಿಮ ರಾಷ್ಟ್ರಗಳೊಡನೆ ಸೇರಿ ಕೆಲಸ ಮಾಡುವುದೇ ಅದರ ಗುರಿಯಾಗಿರುವುದೆಂದೂ ತಿಳಿಸಿದರು ಅದರಿಂದ ಶಾಂತಿ ಸಾಧನೆಯಾಗುವುದೆಂದು ಪಾಕಿಸ್ತಾನದವರು ಹೇಳುತ್ತಿರುವರು, ಆದರೆ ನಾವು ಅದನ್ನು ಒಪ್ಪುವುದಿಲ್ಲವೆಂದೂ ಅವರು ಹೇಳಿದರು. ಮತದ ಮೇಲೆ ರಾಜನೀತಿಯನ್ನು ನಿರ್ಧರಿಸುವುದಕ್ಕಿಂತ ಅವರು ರಾಷ್ಟ್ರೀಯತೆ, ಸಾಮ್ರಾಜ್ಯಶಾಹಿ ವಿರೋಧ ಮತ್ತು ತಾಟಸ್ಥ್ಯ ಭಾವನೆಗಳಿಗೆ ಹೆಚ್ಚು ಪ್ರಾಧಾನ್ಯ ನೀಡುವುದಾಗಿ ತಿಳಿಸಿದರು

ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನ

ರೆವಿನ್ಯೂ ಮಂತ್ರಿ ಎಂ. ಪಿ. ಪಾಟೀಲರಿಂದ ಆರಂಭೋತ್ಸವ

ಬೆಂಗಳೂರು ೨೦

ಸಂಸ್ಥಾನದ [illegible] ಗಳ ಸಮ್ಮೇಳನವು ನೆನ್ನೆ [illegible] ಪ್ರತಿನಿಧಿಗಳು [illegible] ದಸ್ಸರಿಂದ ಶ್ರೀ [illegible] ಅಧ್ಯಕ್ಷತೆ ವಹಿಸಿದರು [illegible] ಮಂತ್ರಿ ಶ್ರೀ ಎಂ. ಪಿ. ಪಾಟೀಲ [illegible] ನೆರವೇರಿಸಿದರು

ಸಮ್ಮೇಳನ [illegible] ಶ್ರೀ ಎಸ್. ಎಲ್. ನರಸಿಂಹಯ್ಯನವರು [illegible] ಮಾಡಿ ಸಂಸ್ಥಾನದಲ್ಲಿ [illegible] ಮಂದಿ ಗ್ರಾಮಾಧಿಕಾರಿಗಳು ಇರುವರೆಂದೂ ಅನೇಕರಿಗೆ ಮಾಹೆಯಾನ ೫ ರೂ ವರಮಾನವು ಬರುತ್ತಿದ್ದು ಅವರ ಜೀವನವು ಬಹಳ ಕಡಿಮೆ ಮಟ್ಟದಲ್ಲಿರುವುದೆಂದೂ ತಿಳಿಸಿದರು. ಗ್ರಾಮಾಧಿಕಾರಿಗಳು ಸರ್ಕಾರಿ ನೌಕರರು ಎಂಬ [illegible] ದರೂ ಅವರುಗಳು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರನ್ನಾಗಿ ಮಾಡಲಾಗಿರುವುದೆಂದು ಅವರು ನುಡಿದರು ನೂತನ ಸಂಸ್ಥಾನದ ರಚನೆಯ ಪರಿಣಾಮವಾಗಿ ಗ್ರಾಮಾಧಿಕಾರಿಗಳ ಸಂಭಾವನೆಯಲ್ಲಿರುವ ತಾರತಮ್ಯಗಳನ್ನು ವಿವರಿಸಿ, ಬೇಗನೆ ಗ್ರಾಮಾಧಿಕಾರಿಗಳ ಕುಂದು ಕೊರತೆಗಳು ಇತ್ಯರ್ಥವಾಗಬೇಕೆಂದೂ ಸೂಕ್ತ ಪರಿಹಾರವನ್ನಿತ್ತು ಗ್ರಾಮಾಧಿಕಾರಿಗಳ ಹಕ್ಕುಗಳನ್ನು ತೆಗೆದುಕೊಳ್ಳಬಹುದೆಂದೂ ಅವರು ಸೂಚಿಸಿದರು ತೋಟಿ ತಳವಾರರಿಗೆ ಸಂಬಳವನ್ನು ಕೊಡಲು ಏರ್ಪಾಡು ಮಾಡಬೇಕೆಂದು ಸಲಹೆ ಮಾಡಿದರು ಈ ತಿಂಗಳು ೩೦ರೊಳಗೆ ಅವರುಗಳ ಬೇಡಿಕೆಗಳು ಈಡೇರಬೇಕೆಂದೂ ತಿಳಿಸಿದರು

ರೆವಿನ್ಯೂ ಸಚಿವರು ತಮ್ಮ ಭಾಷಣದಲ್ಲಿ ಗ್ರಾಮಾಧಿಕಾರಿಗಳ ನಾನಾ ಸಮಸ್ಯೆಗಳನ್ನು ಸರ್ಕಾರದವರು ಪರಿಹರಿಸುವರೆಂದು ಭರವಸೆಯಿತ್ತರು. ತಲೆತಲಾಂತರದಿಂದ ಬಂದಿರುವ ಗ್ರಾಮಾಧಿಕಾರಿಗಳ ಪದ್ಧತಿಯು ಈಗಿನ ಗ್ರಾಮದ ಆರ್ಥಿಕ ವ್ಯವಸ್ಥೆಗೆ ಹೊಂದಿಕೊಳ್ಳುವ ವಿಚಾರವನ್ನು ಪ್ರಸ್ತಾಪಿಸಿ, ವಿವಿಧ ಸಂಸ್ಥಾನಗಳಲ್ಲಿರುವಂತೆ ಗ್ರಾಮಾಧಿಕಾರಿಗಳ ಸಂಬಳಸಾರಿಗೆ ಮೊದಲಾದ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದೆಂದು ಅವರು ಹೇಳಿದರು ನಾಲ್ಕು ಅಥವಾ ಐದು ಗ್ರಾಮಗಳಿಗೆ ಒಬ್ಬ ಪಟೇಲ ಮತ್ತು ಒಬ್ಬ ಶ್ಯಾನುಭೋಗರನ್ನು ನೇಮಿಸುವುದು ಉತ್ತಮವೆಂದು ಅವರು ಸಲಹೆ ಮಾಡಿದರು

ದ್ವಿತೀಯ ಯೋಜನೆ ಅಂಗವಾಗಿ ಪಂಚಾಯಿತಿಗಳಲ್ಲಿ ಪಟೇಲರು ಅಧ್ಯಕ್ಷರು ಮತ್ತು ಶ್ಯಾನುಭೋಗರು ಕಾರ್ಯದರ್ಶಿಯಾಗಿ ಸಂಭಾವನೆಯನ್ನು ಪಡೆಯುವರೆಂದೂ ಅವರು ತಿಳಿಸಿ ಗ್ರಾಮಾಧಿಕಾರಿಗಳ ಸಮಸ್ಯೆಯನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚಿಸುತ್ತಿರುವರೆಂದು ಹೇಳಿದರು

ತ್ಯಾಗರಾಜರ ಆರಾಧನೋತ್ಸವ

ಮೈಸೂರು ೨೦

ತ್ಯಾಗರಾಜ ಆರಾಧನೆ ಉತ್ಸವದ ಅಂಗವಾಗಿ ಕೆಳಗೆ ಕಂಡ ಕಾರ್ಯಕ್ರಮಗಳು ಏರ್ಪಾಡಾಗಿವೆ

ಚಾಮುಂಡಿಪುರದ ಶ್ರೀ ಸರಸ್ವತಿ ಗಾನ ಕಲಾ ಮಂದಿರದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಶ್ರೀ ಬಿ. ಎಂ. ಶಿವಪ್ಪನವರ ಸಂಗೀತ.

ಶ್ರೀ ಗಾಯತ್ರಿ ಸಂಗೀತ ವಿದ್ಯಾ ಮಂದಿರದಲ್ಲಿ ನಾಳೆ ಸಂಜೆ [illegible] ಮಂಡಲಿಯವರಿಂದ ಸಂಗೀತ ಮತ್ತು ವೇಷಪೋಷ

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ದತ್ತಾತ್ರೇಯ ಸಂಗೀತ ವಿದ್ಯಾ ಶಾಲೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ಗೆ ವಿ॥ ಬೆಳಕವಾಡಿ ಶ್ರೀನಿವಾಸಯ್ಯಂಗಾರ್ ಮತ್ತು ವಿ॥ ರಂಗಸ್ವಾಮಯ್ಯಂಗಾರ್‌ರಿಂದ ಗಾಯನ

ರಾಜೇಂದ್ರಪುರದ ೩ನೇ ಶಾಖೆಯಲ್ಲಿರುವ ಶ್ರೀ ಸರಸ್ವತಿ ಗಾನ ಕಲಾ ಮಂದಿರದಲ್ಲಿ ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೬॥ ಗಂಟೆಗೆ ವಿ॥ ಎಂ. ಬಿ. [illegible] ಮತ್ತು ೭॥ಗೆ ವಿ॥ ಎಂ. ಆರ್. ಕಲಾವತಿ ಮತ್ತು ರಾತ್ರಿ ೮ಕ್ಕೆ ಆ॥ ವಿ॥ ಎಸ್. ಎಂ. ಮರಿಯಪ್ಪನವರ ಸಂಗೀತ ಕಥೇಗಳು

ಜನಸಂಘದ ಉಮೇದುವಾರಿಕೆಗಳು

ಮಹಾ ಚುನಾವಣೆಗಳನ್ನಲ್ಲಿ ಜನಸಂಘದ ಪರವಾಗಿ ನಿಲ್ಲುವ ಉಮೇದುವಾರರ ಪಟ್ಟಿಯನ್ನು ನಗರ ಶಾಖೆಯವರು ನಾಳಿದ್ದು ಅಖೈರುಗೊಳಿಸುವರು ಸಂಘದ ಪರವಾಗಿ ಪ್ರಚಾರ ಮಾಡಲು ಅಧ್ಯಕ್ಷ ದೇವಪ್ರಸಾದ್ ಘೋಷ್, ಕಾರ್ಯದರ್ಶಿ ಅತಲ ಬಿಹಾರಿ ಬಾಜಪೈ, ಆಂಧ್ರದ ಗೋಪಾಲ ರಾವ್ ಠಾಕೂರ್ ಮತ್ತು ಮಧ್ಯ ಪ್ರದೇಶದ ದತ್ತೋಪಂತ ಠೇಂಗಡಿಯವರು ಆಗಮಿಸುವರೆಂದು ಗೊತ್ತಾಗಿದೆ

ಕೈ ಕಸಬುದಾರರ ಸಮ್ಮೇಳನ

ಅಖಿಲ ಭಾರತ ಕೈ ಕಸಬುಗಳ ದ್ವಿತೀಯ ಸಪ್ತಾಹದ ಅಂಗವಾಗಿ ನಗರದ ದಸರಾ ವಸ್ತು ಪ್ರದರ್ಶನದ ಕಟ್ಟಡದಲ್ಲಿ ಜಿಲ್ಲಾ ಕುಶಲ ಕೆಲಸಗಾರರು ಮತ್ತು ಕೈ ಕಸಬುದಾರರ ಸಮ್ಮೇಳನವು ನಾಳೆ ಸಂಜೆ ೫॥ ಗಂಟೆಗೆ ನಡೆಯುವುದು ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ಅಧ್ಯಕ್ಷತೆ ವಹಿಸಿ ಕುಶಲಕಲಾ ಪ್ರದರ್ಶನದಲ್ಲಿಟ್ಟಿರುವ ಉತ್ತಮ ವಸ್ತುಗಳಿಗೆ ಬಹುಮಾನ ವಿನಿಯೋಗ ಮಾಡುವರು

ಶ್ರೀ ಕೆ. ಪಟ್ಟಾಭಿರಾಮಯ್ಯರವರು ಭಾಷಣ ಮಾಡಿ ಗ್ರಾಮಾಧಿಕಾರಿಗಳ ಅನುವಂಶಿಕ ಹಕ್ಕಿಗೆ ಮನ್ನಣೆ ಕೊಡಬೇಕೆಂದೂ, ಅವರ ಸಮಸ್ಯೆಗಳನ್ನು ಬೇಗನೆ ಇತ್ಯರ್ಥಪಡಿಸಬೇಕೆಂದೂ, ಅವರದು 'ಎಲ್ಲಾ ಕೆಲಸ ಮತ್ತು ಯಾವ ಹಕ್ಕೂ ಇಲ್ಲ" ಎಂಬಂತಿದೆಯೆಂದೂ ಹೇಳಿದರು ದ್ವಿತೀಯ ಯೋಜನೆಯು ಫಲಪ್ರದವಾಗಬೇಕಾದರೆ ಗ್ರಾಮಾಧಿಕಾರಿಗಳಿಗೆ ನ್ಯಾಯವು ಸಲ್ಲಬೇಕೆಂದು ತಿಳಿಸಿದರು

ಅಮೆರಿಕದ ಮಧ್ಯ ಪ್ರಾಚ್ಯ ಯೋಜನೆಗೆ ಅರಬ್ಬರ ವಿರೋಧ

ಸಿರಿಯಾ, ಈಜಿಪ್ಟ್, ಸಾದಿ ಅರೇಬಿಯ ಮತ್ತು ಜೋರ್ಡಾನ್—ಈ ನಾಲ್ಕು ಅರಬ್ ರಾಷ್ಟ್ರಗಳ ಅಗ್ರ ನಾಯಕರ ಸಮ್ಮೇಳನವು ಮೊನ್ನೆ ಕೈರೋವಿನಲ್ಲಿ ನಡೆಯಿತು ಅಮೆರಿಕದ ಮಧ್ಯ ಪ್ರಾಚ್ಯ ನೀತಿಯನ್ನು ತಿರಸ್ಕರಿಸಲಾಗಿರುವುದೆಂದು ಅಧ್ಯಕ್ಷ ಐಸೆನ್‌ಹೋವರರಿಗೆ ಸೂಚಿಸಲು ಸಾದಿ ಅರೇಬಿಯಾ ದೊರೆಗೆ ಅಧಿಕಾರವೀಯಲಾಯಿತು. ಮಧ್ಯ ಪ್ರಾಚ್ಯದಲ್ಲಿ "ಶಕ್ತಿ ಶೂನ್ಯತೆ" ಯನ್ನು ನಿವಾರಿಸಲು ಅಲ್ಲಿಗೆ ಅಮೆರಿಕಾ ಸೈನ್ಯಗಳನ್ನು ಕಳುಹುವುದು ಅಮೆರಿಕದ ಉದ್ದೇಶವಾಗಿದೆ ತಮ್ಮ ರಾಜ್ಯಗಳು ಯಾವ ಪೂರ್ವ ಅಥವ ಪಶ್ಚಿಮ ರಾಷ್ಟ್ರಗಳೊಡನೆಯೂ ಮಿಲಿಟರಿ ಒಪ್ಪಂದ ಮಾಡಿಕೊಳ್ಳವೆ ಭಾರತದಂತೆ ರಚನಾತ್ಮಕ ತಾಟಸ್ಥ್ಯ ನೀತಿಯನ್ನು ಅನುಸರಿಸಲು ಅರಬ್ ನಾಯಕರು ನಿರ್ಧರಿಸಿರುತ್ತಾರೆ

ದೆಹಲಿಯಲ್ಲಿ ಸಿರಿಯಾ ಅಧ್ಯಕ್ಷರು

ಸಿರಿಯದ ಅಧ್ಯಕ್ಷರಾದ ಷುಕ್ರಿ ಎಲ್ ಕುವಾಟ್ಲಿಯವರು ಕಳೆದ ಗುರುವಾರ ಢಾಕಾದಿಂದ ದೆಹಲಿಗೆ ಆಗಮಿಸಿದರು ಅವರನ್ನು ರಾಷ್ಟ್ರಾಧ್ಯಕ್ಷರು ಉಪಾಧ್ಯಕ್ಷರು ಮತ್ತು ಪ್ರಧಾನ ಮಂತ್ರಿಗಳು ಸ್ವಾಗತಿಸಿದರು ಸಿರಿಯಾ ಅಧ್ಯಕ್ಷರು ರಾಷ್ಟ್ರಪತಿ ನಿವಾಸದಲ್ಲಿ ತಂಗಿರುವರು ಮೊನ್ನೆ ಅವರಿಗೆ ದೆಹಲಿ ಪೌರಸಭೆಯವರು ಮಾನಪತ್ರವನ್ನು ಅರ್ಪಿಸಿದರು ಸಿರಿಯಾ ಅಧ್ಯಕ್ಷರು ಉತ್ತರವಿತ್ತು ಶಕ್ತಿಶೂನ್ಯ ತತ್ವವನ್ನು ಟೀಕಿಸಿ, ಸಿರಿಯವು ಅಮೆರಿಕ ಅಥವಾ ರಷ್ಯಾ ರಾಷ್ಟ್ರಗಳ ಕೂಟಗಳಲ್ಲಿ ಯಾವುದಕ್ಕೂ ಸೇರುವುದಿಲ್ಲವೆಂದು ತಿಳಿಸಿದರು ಸಿರಿಯವು ರಷ್ಯದಿಂದ ಪಡೆದಿರುವ ಶಸ್ತ್ರಾಸ್ತ್ರಗಳು ದೇಶ ರಕ್ಷಣೆಗಾಗಿಯೇ ಎಂದು ಅವರು ಸ್ಪಷ್ಟಪಡಿಸಿದರು ನೆಹರೂರವರು ಮಾತನಾಡಿ ಅಂತರ ರಾಷ್ಟ್ರೀಯ ಕಮ್ಯೂನಿಸ್ಟ್ ಪಾರ್ಟಿಯು ಸಣ್ಣ ರಾಷ್ಟ್ರಗಳನ್ನು ಕಬಳಿಸುವುದೆಂಬುದು ಸರಿಯಲ್ಲವೆಂದೂ, ಏಷ್ಯಾ ರಾಷ್ಟ್ರಗಳಲ್ಲಿ ಹೊಸ ರಾಷ್ಟ್ರೀಯ ಸ್ಫೂರ್ತಿಯನ್ನು ಹಲವು ಹಿರಿಯ ರಾಷ್ಟ್ರಗಳು ಇನ್ನೂ ಮನಗಂಡಿಲ್ಲವೆಂದೂ ಹೇಳಿದರು.

ಆಟೋ ರಿಕ್ಷಾಗಳ ಮುಷ್ಕರ

ಪೋಲೀಸು ಕಾನ್‌ಸ್ಟೇಬಲನಿಂದ ಆದ ಅಪಮಾನಕ್ಕಾಗಿ ಪ್ರತಿಭಟಿಸಲು ನೆನ್ನೆ ಬೆಂಗಳೂರಿನಲ್ಲಿ ೩೦೦ ಆಟೋರಿಕ್ಷಾಗಳು ಕೆಲಸ ನಡೆಸದೆ ಮುಷ್ಕರ ಹೂಡಲಾಗಿ, ತೊಂದರೆಯಾಯಿತು ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸುವುದು ಮತ್ತು ವಿಪರೀತ ದರವನ್ನು ಹಾಕುವುದೇ ಮುಂತಾದುವನ್ನು ಪೊಲೀಸರು ತಮ್ಮ ಬಸ್ತಿನಲ್ಲಿಡಲು ಯತ್ನಿಸುವುದೇ ರಿಕ್ಷಾವಾಲಾರವರ ಸಿಟ್ಟಿಗೆ ಕಾರಣವೆಂದು ಹೇಳಲಾಗಿದೆ

ಕರಾಚಿಯಲ್ಲಿ ವಿದ್ಯಾರ್ಥಿಗಳು ಭಾರತದ ರಾಷ್ಟ್ರಧ್ವಜ ಮತ್ತು ಮುಖಂಡರುಗಳಿಗೆ ಅಪಮಾನ ಮಾಡಿರುವುದನ್ನು ಪ್ರತಿಭಟಿಸಲು ದೇಶದಾದ್ಯಂತ ಎಲ್ಲಾ ವಿದ್ಯಾರ್ಥಿಗಳೂ ಇದೇ ೨೩ನೇ ತಾರೀಕು ಸಾರ್ವತ್ರಿಕ ಮುಷ್ಕರ ನಡೆಸುವಂತೆ ಹಲವು ವಿದ್ಯಾರ್ಥಿ ಸಂಸ್ಥೆಗಳು ಕರೆಯುತ್ತಿವೆ

ವಾರ ಭವಿಷ್ಯ

ತಾ|| ೨೦-೧-೫೭ ರಿಂದ ೨೬-೧-೫೭ ರ ವರೆಗೆ

ಮೇಷ:—ಅನಿರೀಕ್ಷಿತ ಬದಲಾವಣೆ. ದೇಹಾಲಸ್ಯ. ಆರ್ಥಿಕ ಸಮಸ್ಯೆ. ನೌಕರರಿಗೆ ಅನುಕೂಲ. ವ್ಯಾಪಾರಸ್ಥರಿಗೆ ಸಾಮಾನ್ಯ ಫಲ. ಉದ್ಯೋಗಸ್ಥರಿಗೆ ಸ್ಥಳ[illegible]

ವೃಷಭ:—ಆರ್ಥಿಕ ಪರಿಸ್ಥಿತಿ ಉತ್ತಮ. ಅಧಿಕ ಧನವ್ಯಯ. ಕುಟುಂಬದಲ್ಲಿ ಅಶಾಂತಿ. ನೌಕರರಿಗೆ ಫಲ ದೊರೆಯದು. ಸ್ಥಳ ಬದಲಾವಣೆ. ವ್ಯಾಪಾರಿಗಳು ಹೊಸ ಉದ್ಯಮ ಕೈಗೊಳ್ಳದಿರಲಿ

ಮಿಥುನ:—ಶುಭಪ್ರದ ವಾರ. ತೃಪ್ತಿಕರ ಆರ್ಥಿಕ ಸ್ಥಿತಿ. ಸಂತೋಷ ಸಮಾರಂಭ. ನೂತನ ವಸ್ತುಗಳ ಕ್ರಯ. ರಾಜಕೀಯದಲ್ಲಿ ಜಯ. ಉದ್ಯೋಗದಲ್ಲಿ ಪ್ರಗತಿ

ಕರ್ಕ:—ಸ್ವೀಕೃತ ಕಾರ್ಯದಲ್ಲಿ ಜಯ. ಅಧಿಕ ಧನಲಾಭ. ಸಮಾಜದಲ್ಲಿ ಸ್ಥಾನಮಾನ. ಕೋರ್ಟ್ ಕಾರ್ಯದಲ್ಲಿ ಜಯ. ನೌಕರರಿಗೆ ಬಡ್ತಿ ಮತ್ತು ಪ್ರಶಂಸೆ. ವ್ಯಾಪಾರದಲ್ಲಿ ಸಾಮಾನ್ಯ ಸ್ಥಿತಿ.

ಸಿಂಹ:—ಸಮಸ್ಯೆಗಳ ಪರಿಹಾರ ಮತ್ತು ನೂತನ ಜೀವನಾರಂಭ. ಆರ್ಥಿಕ ಸ್ಥಿತಿ ತೃಪ್ತಿಕರ. ನೌಕರರು ಮತ್ತು ವ್ಯಾಪಾರಸ್ಥರಿಗೆ ಉತ್ತಮ ಪ್ರಗತಿ.

ಕನ್ಯಾ:—ಸಂಯಮ ವರ್ತನೆ ಅಗತ್ಯ. ಆರ್ಥಿಕ ಸ್ಥಿತಿ ತೃಪ್ತಿ. ಕೋರ್ಟ್ ಕಾರ್ಯದಲ್ಲಿ ಜಯ. ಹೊಸ ಉದ್ಯಮಗಳಲ್ಲಿ ಸ್ವಲ್ಪ ಮುಂದೆ ಹಾಕಬೇಕು

ತುಲಾ:—[illegible] ಮತ್ತು ಪತ್ನಿಯ ಆರೋಗ್ಯಕ್ಕೆ ಗಮನ ಕೊಡಿ. ಪ್ರವಾಸ ಯೋಗ.

ವೃಶ್ಚಿಕ:—ಅಧಿಕ ಧನಲಾಭ. ಸ್ಥಾನಮಾನ. ರಾಜಕೀಯದಲ್ಲಿ ಜಯ. ನೌಕರರಿಗೆ ಪ್ರಶಂಸೆ. ವ್ಯಾಪಾರದಲ್ಲಿ ಪ್ರಗತಿ. ಮನೆಯಲ್ಲಿ ಅಶಾಂತಿ.

ಧನು:—ಉತ್ತಮ ಆರೋಗ್ಯ ಮತ್ತು ಆರ್ಥಿಕ ಸ್ಥಿತಿ. ಉದ್ಯೋಗದಲ್ಲಿ [illegible] ಸ್ಥಾನಮಾನ. [illegible] ಉದ್ಯೋಗ ಕಲ್ಪನೆ. ನೌಕರರಿಗೆ [illegible]

ಮಕರ:—ಅನಾರೋಗ್ಯ. ಕುಟುಂಬದಲ್ಲಿ ಅಶಾಂತಿ. ಆರ್ಥಿಕ ಸಮಸ್ಯೆ. ವ್ಯಾಪಾರ ಸಾಮಾನ್ಯ. [illegible]

ಮೈಸೂರು ನಗರದ ಪುರಜನರಲ್ಲಿ ಮನವಿ

ವಾಣಿವಿಲಾಸ ನೀರು ಸರಬರಾಜು ಇಲಾಖೆಯಿಂದ ಲೈಸೆನ್ಸ್ ಪಡೆದಿರುವ ನಲ್ಲಿ ಕಂಟ್ರಾಕ್ಟರುಗಳಲ್ಲದೆ ಇತರೆ ಯಾವರು ಲೈಸೆನ್ಸ್ ಇಲ್ಲದೆ ಇರುವವರಿಂದ ಮನೆಗಳ ಮಾಲೀಕರು ತಮ್ಮ ಮನೆಗಳ ನಲ್ಲಿಯ ಕೆಲಸಗಳನ್ನು ಮಾಡಿಸುತ್ತಿರುವುದು ಇಲಾಖೆಯವರ ಮತ್ತು ನಮ್ಮ ಗಮನಕ್ಕೆ ಬಂದಿದೆ. ಇದು ಕಾನೂನಿಗೆ ವಿರೋಧವಾಗಿರುವುದರಿಂದ ಆ ತೆರದ ಕೆಲಸಗಳು ನಡೆಸುತ್ತಿರುವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸುವ ಸಂದರ್ಭ ಬಂದು ಇದರಿಂದ ಸಾರ್ವಜನಿಕರನ್ನು ತೊಂದರೆಗೆ ಈಡು ಮಾಡುವ ಸನ್ನಿವೇಶ ಒದಗುತ್ತಿದೆ.

ಆದುದರಿಂದ ಇಂತಹ ಪರಿಸ್ಥಿತಿಗೆ ಅವಕಾಶ ಕೊಡಬಾರದಾಗಿ ಸಾರ್ವಜನಿಕರನ್ನು ಪ್ರಾರ್ಥಿಸಲಾಗಿದೆ.

(ಸಹಿ) ಎ. ವಿಶ್ವನಾಥ್,
ಮುನಿಸಿಪಲ್ ಕಮಿಷನರ್

ಶುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟಿಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ
(ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ)

ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ಮತ್ತು ವಿದ್ವತ್ಸಭೆ

ಮೈಸೂರು ೧೯

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭೆಯ ಅಂಗವಾಗಿ ನೆನ್ನೆ ಭಾವಸಾರ ವಿದ್ಯಾರ್ಥಿಗಳ ಮತ್ತು ವಿದ್ವತ್ಸಭೆಯ ಪರಿಷತ್ತು [illegible] ನಡೆಯಿತು. ಸಭೆಯ [illegible] ಸಚಿವರಾದ ಶ್ರೀ ಆರ್. ಚನ್ನಿಗರಾಮಯ್ಯನವರು ಉದ್ಘಾಟನೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ ಹಿಂದುಳಿದವರು ಮುಂದೆ ಬರಬೇಕೆಂದೂ, ಅವರ ಪ್ರಗತಿ ಸಾಧನೆಗೆ ಇತರರು ಸಹಾಯ ಮಾಡಬೇಕೆಂದೂ ತಿಳಿಸಿದರು. ವಿದ್ಯಾರ್ಥಿಗಳು ಶಿಸ್ತಿನಿಂದ ವರ್ತಿಸಿ ದೇಶದ ಐಕ್ಯತೆ ಮತ್ತು ಭದ್ರತೆಗೆ ನೆರವಾಗಬೇಕೆಂದು ಸಚಿವರು ಕೋರಿದರು. ಮೊದಲು ಶ್ರೀ ಶೇಷಗಿರಿದಾಸರಿಂದ ಪ್ರಾರ್ಥನೆಯಾದನಂತರ ಶ್ರೀ ಎ ಎಂ ಶಂಕರರಾಯರು ಸ್ವಾಗತ ಭಾಷಣ ಮಾಡಿ, ಸಚಿವರಿಗೆ ಗಂಧದ ಕರಂಡವನ್ನು ಅರ್ಪಿಸಿದರು. ಶ್ರೀ ಸುತ್ತಾವೆಯವರು ವಂದನಾರ್ಪಣೆ ಮಾಡಿದರು.

ಕುಂಭ :—ಉತ್ಸಾಹಕರ ಕೆಲಸ. ಆರ್ಥಿಕ ಸ್ಥಿತಿ ತೃಪ್ತಿಕರ. ಕುಟುಂಬದಲ್ಲಿ ಸಂಯಮ ವರ್ತನೆ. ಸಂತೋಷ ಸಮಾರಂಭ. ನೌಕರರಿಗೆ ಬಡ್ತಿ. ವ್ಯಾಪಾರದಲ್ಲಿ ಅಭಿವೃದ್ಧಿ.

ಮೀನ: ಆರೋಗ್ಯ ಉತ್ತಮ. ಕುಟುಂಬದಲ್ಲಿ ಸಂತೋಷ. ಆರ್ಥಿಕ ಸ್ಥಿತಿ ತೃಪ್ತಿಕರ. ವ್ಯಾಪಾರದಲ್ಲಿ ಅಭಿವೃದ್ಧಿ. ನೌಕರರಿಗೆ ಪ್ರಶಂಸೆ ಮತ್ತು ಪ್ರಗತಿ. ಕೋರ್ಟ್ ಕಾರ್ಯ ಜಯ.

ಗಾಂಧಿ ವ್ಯಾಸಂಗ ಗೋಷ್ಠಿ

ವಾಣಿವಿಲಾಸ ಅಗ್ರಹಾರದಲ್ಲಿರುವ ಗಾಂಧಿ [illegible] ನಾಳೆ ಸಂಜೆ "[illegible] ಸಮಾಜ ಪರಿವರ್ತನೆ" ಎಂಬ [illegible] ವ್ಯಾಸಂಗ ಗೋಷ್ಠಿಯು ನಡೆಯುವುದು.

ಹೈದರಾಬಾದು ಕನ್ನಡ ಪ್ರದೇಶದ ಕಾಂಗ್ರೆಸ್ ಅಭ್ಯರ್ಥಿಗಳು

ಹೈದರಾಬಾದು ಕನ್ನಡ ಪ್ರದೇಶದಿಂದ ಕಾಂಗ್ರೆಸ್ ಸ್ಪರ್ಧಿಗಳನ್ನು ಕೇಂದ್ರ ಚುನಾವಣಾ ಸಮಿತಿಯವರು ಆರಿಸಿರುವ ಪ್ರಕಾರ, ಮಾಜಿ ಹೈದರಾಬಾದು ಮಂತ್ರಿ ಡಾ|| ಜೆ ಎಸ್. ಮೇಲ್ಕೋಟೆಯವರು ರಾಯಚೂರು ಜಿಲ್ಲೆಯಿಂದ ಲೋಕಸಭೆಗೆ ಸ್ಪರ್ಧಿಸುವರು. ಮೈಸೂರು ಮಂತ್ರಿ ಶ್ರೀ ಜಗನ್ನಾಥರಾವ್ ಚಂಡ್ರಿಕಿ, ಹೈದರಾಬಾದು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಅಣ್ಣಾರಾವ್ ಗಣಮುಖಿ, ವೀರೇಂದ್ರ ಪಾಟೀಲ್, ಮಾಜಿ ಉಪಮಂತ್ರಿ ವಿರೂಪಾಕ್ಷಪ್ಪ ಮುಂತಾದವರು ವಿಧಾನ ಸಭೆಗೆ ನಿಲ್ಲುವರು. ನಾಲ್ವರು ಮಹಿಳೆಯರೂ, ಮೂವರು ಮುಸಲ್ಮಾನರೂ ವಿಧಾನ ಸಭೆಗೆ ಕಾಂಗ್ರೆಸ್ ಪರವಾಗಿ ಸ್ಪರ್ಧಿಸುವರು.

ಕಾಶ್ಮೀರದಲ್ಲಿ ಭಾರತದ ಸೈನ್ಯ ಶೇಖರಣೆಯಿಲ್ಲ

ಕಾಶ್ಮೀರದಲ್ಲಿ ಭಾರತವು ತನ್ನ ಸೈನ್ಯಗಳನ್ನು ಶೇಖರಿಸುತ್ತಿರುವುದೆಂದು ಬಂದಿರುವ ವರದಿಗಳನ್ನು ಭಾರತ ಸರ್ಕಾರದ ಅಧಿಕಾರಿಗಳು ನಿರಾಕರಿಸಿರುತ್ತಾರೆ. ಗಡಿ ಬಳಿ ವಿಶ್ವಸಂಸ್ಥೆಯ ಅನೇಕ ವೀಕ್ಷಕರು ಇರುವುದಾಗಿಯೂ, ಹೆಚ್ಚುಹೆಚ್ಚಾಗಿ ಸೈನ್ಯಗಳ ಶೇಖರಣೆಯಾಗಿದ್ದರೆ ಅವರ ಗಮನಕ್ಕೆ ಬರುತ್ತಿತ್ತೆಂದೂ, ವಾಸ್ತವವಾಗಿಯೂ ಕಾಶ್ಮೀರದ ಸೇನಾ ಸಂಖ್ಯೆಯನ್ನು ಕಡಿಮೆ ಮಾಡಲಾಗಿರುವುದೆಂದೂ ಹೇಳಲಾಗಿದೆ.

Central Food Technological Research Institute,

MYSORE

Sealed tenders are invited for wiring and fixing Electric Light fittings etc in the first floor of the Development wing and the Pilot Plant and workshop wings of the New Technology Block being constructed in the Premises of the Cheluvamba Mansion. A set of specifications and quantities of the work proposed to be taken up now, along with a blue-print of the proposed lay-out may be had at the Office of the Institute, Mysore, on payment of a sum of Rs. 5. The total value of the work is estimated to be Rs 10,000.

Tenders, IN DUPLICATE written on the form supplied complete in all respects together with a tender deposit of Rs. 500 should be submitted so as to reach the Director, Central Food Technological Research Institute, Cheluvamba Mansion, Vani Vilas Mohalla P.O., Mysore, before 3 P.M. on Monday, the 4th February, 1957.

Tenders should be superscribed "Wiring and fixing Electric Light Fittings etc., to the First Floor of the Development wing and the Pilot Plant and Workshop wings of the New Technology Block.'

The tenders will be opened in the presence of the tenderers or their authorised representatives at 4 P.M. on Monday, the 4th February, 1957. The Director, Central Food Technological Research Insititute, Mysore, reserves the right not to accept the lowest or any of the tenders without assigning any reason therefor. In all matters the decision of the Director, Central Food Technological Research Institute, Mysore, will be final.

The tender deposit of the successful tenderer will be retained and that of the others returned after the tenders are decided upon. The work will have to be commenced immediately after the work order is issued and completed within six weeks.

V. SUBRAHMANYAN,
Director

ಬೆಂಗಳೂರು ರೇಡಿಯೊ ನಾಳೆ ಕಾರ್ಯ

ಬೆಳಗ್ಗೆ ೭-೫ ಸಿತಾರ್ ಮತ್ತು ಸೆಲ್ಲೊ. ೭-
ಬಿ. ಎಸ್. ನಾಗರತ್ನಮ್ಮ—ದೇವರನಾಮ. ೭-
ಗಾನವಿಹಾರ. ೮-೧೫ ತ್ಯಾಗರಾಜ ಉತ್ಸ
ರುಚ್ಚಿ ರಿಲೆ. ಮಧ್ಯಾಹ್ನ ೧೨ ಬಿ. ಎಸ್.
ಕ್ಷಮ್ಮ—ಸಂಗೀತ. ೧೨-೩೦ ಮತ್ತು ೧
ಬಿ. ಆರ್. ಶಾಮಾಚಾರ್—ಕೊಳಲು. ೧
ನಮಂಜರಿ ೨-೧೫ ಸಂಗೀತಕಥೇಂ
೫-೩೦ ಟಿ. ನಾಗಮ್ಮ—ಸಂಗೀತ ೬-೫ ವಿ
ಸಂಗೀತ. ೬-೨೦ ಜಾನಪದ ಗೀತೆ. ೭-
ಹಿಂದಿ ಗೀತೆ. ೮ ಯಕ್ಷಗಾನ : ಭೀಷ್ಮ
೮-೪೦ ಭಾಷಣ ೯-೩೦ ತ್ಯಾಗರಾಜ ಉತ್ಸ
ತಿರುಚ್ಚಿ ರಿಲೆ.

SRI GAYATH
TALKIES
LAST DAY
LADY & THE TRAM
From 21-1-57 : For 3
SLIGHTLY SCARLET
(Cinemascope and Technicol
With:- John Paine and
Arlene Dahl

ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿ
ಬೇಸಿಗೆ ರಜದಲ್ಲಿ ತರಗತಿಗಳ
ಈ ಬಾರಿ ದೀರ್ಘ ಕಾಲ ಬೇಸಿಗೆ
ಬಂದಿರುವುದರಿಂದ ಮಕ್ಕಳು ಕಾಲ
ಪಾಠಗಳನ್ನು ಮರೆಯದಿರಲೆಂದು
ಲ್ ಸ್ಕೂಲ್ ವಿದ್ಯಾರ್ಥಿಗಳಿಗಾಗಿ 4
ಳು ಕಾಲ ವಿಶೇಷ ತರಗತಿಗಳು ನಡೆ
ವಂತೆ ಏರ್ಪಡಿಸಲಾಗಿದೆ. ಪೋಷಕರು
ಅವಕಾಶವನ್ನು ಉಪಯೋಗಿಸಿಕೊಳ್ಳ
ರೆಂದು ಆಶಿಸಲಾಗಿದೆ.
ತರಗತಿಗಳು ನಡೆಯುವ ಕಾಲ :
7-30ರಿಂದ 11-
ಆಫೀಸ್ ತೆರೆದಿರುವ ಕಾಲ
ಬೆಳಗ್ಗೆ 7-30ರಿಂದ 11-
ಮಧ್ಯಾಹ್ನ 4ರಿಂದ 8-
ಸಿಟಿ ಟ್ಯುಟೋರಿಯಲ್ ಕಾಲೇ
ಹಳೇ ಅಗ್ರಹಾರ, ಮೈಸೂರು
(ಹೈಸ್ಕೂಲು ತರಗತಿಗಳೂ ಶೀಘ್ರದಲ್ಲೇ
ಪ್ರಾರಂಭವಾಗುವುವು)

ಸಂಪೂರ್ಣ ಆರೋಗ್ಯವನ್ನು
ಪಡೆಯಿರಿ !
ಒಂಭತ್ತು ಅಮೂಲ್ಯ ಹರಳುಗಳಲ್ಲಿನ ಸ್ವ
ಅನ್ಯ ಗುಣಗಳನ್ನು ಪ್ರಯೋಗ ಮಾಡುವುದ
ಉದ್ಭವಿಸಿದ ಮಹಾ ಶಕ್ತಿಯು ತನ್ನಗ
ಗೊಂಡು ವ್ಯಾಧಿ ನಿವಾರಿಸಬಲ್ಲ ಬಲಯು
ಧಾತುಗಳಿಂದ ಅತ್ಯು ಕೂಡಿದೆಯೆಂಬುದನ್ನು
ಹಿಡಿದಿರುವುದೇ ಆಯುರ್ವೇದ ಶಾಸ್ತ್ರದ
ಸಾಧನೆ.
ಪಂಡಿತ ದುರ್ಗಾದತ್ತ ಶರ್ಮಾ
ವೈದ್ಯ ವಾಚಸ್ಪತಿ
ಹೊಸ ಔಷಧಿ ಕಂಡುಹಿಡಿಯುವುದರಲ್ಲಿ
ಜಗದ್ವಿಖ್ಯಾತರಾಗಿರುವ ಇವರು
ವಿಶ್ವಕ್ಕೆ ನೀಡಿರುವ
ನವರತ್ನ-ಕಲ್ಪ
ಒಂಭತ್ತು ಅಮೂಲ್ಯ ಹರಳುಗಳ ಸಂ
'ವಜ್ರ, ಕೆಂಪು ಮುತ್ತು' ಹವಳ, ಪಚ್ಚೆ, ಗೋಮೇ
[illegible] ನೀಲ ಮತ್ತು ಪ್ರಶಸ್ತ [illegible]
ವಾಗಿ ವಿಷದಿಂದ ದೂರವಾದ ಮತ್ತು
[illegible] ಔಷಧ. ಎಲ್ಲ ವಯಸ್ಸಿನವರಿಂದಲೂ
ಋತುಮಾನದಲ್ಲೂ ಉಪಯೋಗಿಸಲು ಯೋ
-: ಈ ವ್ಯಾಧಿಗಳ ಶಾಶ್ವತ ಗುಣಕ್ಕಾಗಿ:-
★ ನರಗಳ ದೌರ್ಬಲ್ಯ
★ ಅಜೀರ್ಣ ರೋಗಗಳು
★ ಕೆಮ್ಮು
★ ಎಲಿಫೆಂಟಿಯಾಸಿಸ್
★ ನಾಶ ಪ್ರ
★ ಭಗಂದರ
★ ಮೂಲವ್ಯಾ
★ ಮತ್ತು
[illegible]
NAVRATNA KALPA PHARMAC
JULLUNDUR CITY (India)
Gram : NAVRATNA. Phone

Edited, Printed and Publi
by A. R. Nagarajan at S
Press, D. Subbiah Road, M

ರಿಜಿಸ್ಟರ್ ನಂ. 792

ಸತ್ಯನಾರಾಯಣ
ರೈಸ್ ಮಿಲ್
ಶಿವರಾಂಪೇಟೆ, ಮೈಸೂರು
(ವಾಚಕರುಗಳ ಆಕರ್ಷಣ ಪತ್ರಿಕೆ)
★
ಈಗ ಸುಗ್ಗಿ ಕಾಲ-ಪತ್ತ ಮಿಲ್ಲಿನ
ಲ್ಲಿ ಸೊಗಸಾಗಿ, ಸರಿಯಾದ
ಅಳತೆಗೆ ಅಕ್ಕಿ ಇಳಿಸು
ಶ್ರೀವಿ. ಪರೀಕ್ಷಿಸಿರಿ

ಬಿಡಿಯ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
★
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71|1, [illegible]
ಶ್ರೀರಾಮಾನುಜಾರ್ ಬೀದಿ,
ಬೆಂಗಳೂರು-2

ಂಪುಟ : ೧೫] SADHVI : MONDAY 21—1—1957 ಮೈಸೂರು : ಸೋಮವಾರ ೨೧—೧—೧೯೫೭ : [ಸಂಚಿಕೆ : ೧೭೬

ದ॥ ಆಫ್ರಿಕಾ ರೇವುಗಳಿಗೆ ಭಾರತದ ನೌಕೆಗಳ ಬಹಿಷ್ಕಾರ

ತಿ. ನಂ. ಶ್ರೀಕಂಠಯ್ಯನವರಿಗೆ ಸ್ವಾಗತ

ಮೈಸೂರು ೨೧

ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದು ಮೈಸೂರು ಮಹಾರಾಜಾ ಕಾಲೇಜಿಗೆ ಹಿಂದಿರುಗಿರುವ ಶ್ರೀ ತಿ.ನಂ. ಶ್ರೀಕಂಠಯ್ಯನವರ ಗೌರವಾರ್ಥವಾಗಿ ಮಹಾರಾಜಾ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಕಳೆದ ಶುಕ್ರವಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಪ್ರಿನ್ಸಿಪಾಲರಾದ ಶ್ರೀ ಸಿ. ಡಿ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿಗಳು ಜಿ ಎಸ್. ಸುನಂದಾ ಮತ್ತು ಜಿ ವಸುಧಾರವರಿಂದ ಪ್ರಾರ್ಥನೆಯಾದನಂತರ ಶ್ರೀಮತಿಗಳಾದ ಮಂಜುಳಾ ಮತ್ತು ಜಯಸೀತಾರವರು ಸುಶ್ರಾವ್ಯವಾಗಿ ಕನ್ನಡ ಗೀತೆಗಳನ್ನು ಹಾಡಿದರು ಶ್ರೀ ಟಿ. ಎಸ್. ಎಸ್. ಕೌಶಿಕ್‌ರವರು ಸಂಗೀತಮಯವಾಗಿ ಭಾರತ ವಾಚನ ಮಾಡಿದರು. ಶ್ರೀಗಳಾದ ತಿ. ಎಲ್. ನರಸಿಂಹಾಚಾರ್, ಎಸ್. ಪರಮೇಶ್ವರಭಟ್ಟ, ಯು. ಕೆ. ಸುಬ್ಬರಾಯಾಚಾರ್ ಮತ್ತು ಮಲ್ಲೇಶಯ್ಯನವರು ಶ್ರೀ ತಿ. ನಂ. ಶ್ರೀಕಂಠಯ್ಯನವರ ಗುಣಗಾನ ಮಾಡಿ ಅವರಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ನೀಡಿದರು.

ಶ್ರೀ ತಿ. ನಂ. ಶ್ರೀಯವರು ಸಮಾರಂಭಕ್ಕಾಗಿ ಧನ್ಯವಾದವನ್ನು ಸಲ್ಲಿಸಿ ನೂತನ ಕರ್ನಾಟಕ ಪ್ರಾಂತ ರಚನೆಯಾಗಿರುವ ಈ ಕಾಲದಲ್ಲಿ ಕರ್ನಾಟಕದ ಎಲ್ಲ ಭಾಗಗಳ ಜನರ ನಡೆನುಡಿ ಮತ್ತು ಇತರ ವ್ಯವಹಾರಗಳಲ್ಲಿ ಹೆಚ್ಚಿನ ಸಮ್ಮಿಳನ ಆಗಬೇಕೆಂದೂ, ಇದಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕೆಂದೂ ನುಡಿದರು.

ಅಧ್ಯಕ್ಷ ಭಾಷಣಾನಂತರ ವಂದನಾರ್ಪಣೆಯೊಡನೆ ಸಭೆ ಮುಗಿಯಿತು.

ವಾಲುಕೇಶ್ವರ ಭಾರತೀ ಸ್ವಾಮಿಗಳವರ ಜಯಂತಿ

ಶ್ರೀ ವಿದ್ಯಾಭಿನವ ವಾಲುಕೇಶ್ವರ ಭಾರತೀ ಸ್ವಾಮಿಗಳವರ ೮೩ನೇ ಜಯಂತಿ ಉತ್ಸವವನ್ನು ನಾಳೆಯಿಂದ ೧೫ ದಿವಸಗಳ ವರೆಗೆ ಸಂಸ್ಕೃತ ಪಾಠಶಾಲೆಯಲ್ಲಿರುವ ಶ್ರೀಗಳವರ ಮಂದಿರದಲ್ಲಿ ನಡೆಸಲಾಗುವುದು. ನಾಳೆ ಬೆಳಿಗ್ಗೆ ರುದ್ರಾಭಿಷೇಕ, ಮಹಾ ಪೂಜೆ ಇತ್ಯಾದಿಗಳೂ; ಸಂಜೆ ೭ ಗಂಟೆಗೆ ಸದ್ಗುರುವಿನ ಉಪದೇಶ ಎಂಬ ವಿಷಯ ಅ॥ ವಿ॥ ಎಸ್. ವಿಶ್ವಲಕ್ಷ್ಮಿಶಾಸ್ತ್ರಿಗಳವರಿಂದ ಉಪನ್ಯಾಸವೂ, ನಾಳಿದ್ದು ಸಂಜೆ ೭ಕ್ಕೆ ಶ್ರೀ ಕೇಶವಪುರದ ನರಸಿಂಹಾಚಾರ್ಯರು ಮತ್ತು ಶ್ರೀ ಶೇಷಗಿರಿರವರಿಂದ ಭಾರತ ವಾಚನವೂ ಇವೆ

ಭಾರತದಲ್ಲಿ ೩೩ ಹೊಸ ಕಾಗದದ ಕಾರ್ಖಾನೆಗಳು

ದ್ವಿತೀಯ ಯೋಜನೆ ಅಂಗವಾಗಿ ದೇಶದಲ್ಲಿ ಕಾಗದದ ಉತ್ಪತ್ತಿಯನ್ನು ದ್ವಿಗುಣಗೊಳಿಸಲು ಈಗಿರುವ ೨೧ ಕಾರ್ಖಾನೆಗಳ ಜೊತೆಗೆ ಇನ್ನೂ ೩೩ ಕಾರ್ಖಾನೆಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಅವುಗಳ ಪೈಕಿ ಒಂದು ನ್ಯೂಸ್ ಪ್ರಿಂಟ್ ಕಾರ್ಖಾನೆ

ಕರ್ನಾಟಕ ಹಿಂದಿ ಪ್ರಚಾರಕರ ಸಮ್ಮೇಳನ

ಮೈಸೂರು ರಾಜ್ಯಪಾಲರಿಂದ ಆರಂಭ

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜಒಡೆಯರವರು ಮೊನ್ನೆ ದಾವಣಗೆರೆಯಲ್ಲಿ ಅಖಿಲ ಕರ್ನಾಟಕ ಹಿಂದಿ ಪ್ರಚಾರಕರ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕನ್ನಡ ಓದುಬರಹವನ್ನು ತಿಳಿದ ಪ್ರತಿಯೊಬ್ಬನೂ ಹಿಂದಿ ಭಾಷೆಯನ್ನು ಕಲಿಯಬೇಕೆಂದು ಹೇಳಿದರು ಜ್ಞಾನಾರ್ಜನೆಗಾಗಿಯೇ ಭಾಷೆಯನ್ನು ಕಲಿಯುವುದೂ ಒಂದು ದೃಷ್ಟಿಯಿಂದ, ಇಂಗ್ಲಿಷ್ ಭಾಷೆಯ ಮೂಲಕ ಭಾರತೀಯರಿಗೆ ಇಡೀ ಪ್ರಪಂಚದ ಅಪಾರ ಜ್ಞಾನ ಭಂಡಾರವು ದೊರೆಯುವುದೆಂದೂ, ಸಂಸ್ಕೃತದ ಸಹಾಯದಿಂದ ಭಾರತೀಯ ದರ್ಶನ ಶಾಸ್ತ್ರವನ್ನು ತಿಳಿಯಲು ಸಾಧ್ಯವಾಗುವುದೆಂದೂ ಅವರು ಹೇಳಿ, ಭಾರತಕ್ಕೆ ಸಂಬಂಧಪಟ್ಟ ಮತ್ತು ಭಾರತೀಯ ಸಂಸ್ಕೃತಿಯ ವಿಚಾರವನ್ನು ಅರಿಯಲು ಸಾಧ್ಯವಾಗುವ ಹಿಂದಿಯನ್ನು ಭಾರತೀಯರೂ, ಪರದೇಶದವರೂ ಕಲಿಯಲು ಅವಕಾಶವಾಗುವಂತೆ ಆ ಭಾಷೆಯನ್ನು ಹಿಂದಿ ಪ್ರಚಾರಕರು ಬೆಳೆಸಬೇಕೆಂದೂ ಅವರು ನುಡಿದರು ಇದಲ್ಲದೆ ಇನ್ನೂ ಹಲವಾರು ದೃಷ್ಟಿಗಳಿಂದ ಹಿಂದಿ ಭಾಷೆಯ ಅಧ್ಯಯನಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಬೇಕೆಂದೂ, ಹಿಂದಿಯಲ್ಲಿ ಅಮೂಲ್ಯ ಗ್ರಂಥಗಳನ್ನು ರಚಿಸಬೇಕೆಂದೂ ಅವರು ಸೂಚಿಸಿದರು.

ಚುನಾವಣೆ ಕಾಲದಲ್ಲಿ ಮಂತ್ರಿಗಳಿಗೆ ಭತ್ಯವಿಲ್ಲ

ಲೋಕಸಭೆ ಮತ್ತು ಪ್ರಾಂತ ಶಾಸನ ಸಭೆಗಳಿಗೆ ಉಮೇದುವಾರಿಕೆಗಳನ್ನು ಸಲ್ಲಿಸಿದ ದಿನದಿಂದ ಪ್ರಾಂತ ಮಂತ್ರಿಗಳು ಪ್ರಯಾಣ ಮತ್ತು ದಿನ ಭತ್ಯಗಳನ್ನು ಪಡೆಯುವುದಿಲ್ಲವೆಂದು ಗೊತ್ತಾಗಿದೆ. ಚುನಾವಣಾ ಪ್ರವಾಸಗಳಲ್ಲಿ ಅಧಿಕಾರಿಗಳು ಮತ್ತು ಪೋಲೀಸರು ಮಂತ್ರಿಗಳೊಡನೆ ಹೋಗಬಾರದೆಂದೂ ನಿರ್ಧರಿಸಲಾಗಿದೆ

ಭಾರತದ ವಿದ್ಯುಚ್ಛಕ್ತಿ ಇಂಜನಿಯರುಗಳ ಸಮ್ಮೇಳನ

ಸ್ವಂ.ಸು. ತಂತಿ] ಬೆಂಗಳೂರು ೨೧

ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಶೀಲನೆಗಾಗಿ ದೇಶಾದ್ಯಂತ ಸುಮಾರು ೧೫೦ ಮಂದಿ ವಿದ್ಯುಚ್ಛಕ್ತಿ ಇಂಜನಿಯರುಗಳು ಇಂದು ಇಲ್ಲಿ ಸಮ್ಮೇಳನ ಸೇರಿದರು. ಕೇಂದ್ರ ಮಂತ್ರಿ ಗುಲ್ಜಾರಿಲಾಲ್ ನಂದಾರವರು ಆರಂಭೋತ್ಸವ ನಡೆಸಬೇಕಾಗಿದ್ದು ಅನಿವಾರ್ಯ ಕಾರಣದಿಂದ ಅವರು ಬರಲಿಲ್ಲವಾಗಿ, ಅವರ ಭಾಷಣವನ್ನು ಆರೋಗ್ಯ ಮಂತ್ರಿ ಶ್ರೀ ಎ ಬಿ. ಶೆಟ್ಟಿಯವರು ಓದಿದರು ೧೫೦ ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕಾಗುವ ಅಣು ಶಕ್ತಿ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ನಂದಾರವರು ತಿಳಿಸಿದರು.

ಭಾರತೀಯ ಕಮ್ಯೂನಿಸ್ಟರ ಮಾರ್ಗದಿಂದ ದೇಶಕ್ಕೆ ಅನರ್ಥ

ಪ್ರಧಾನಿ ನೆಹರೂರವರ ಭಾಷಣ

ಪ್ರಧಾನಿ ನೆಹರೂರವರು ನೆನ್ನೆ ಬೊಂಬಾಯಿಯಲ್ಲಿ ಚುನಾವಣೆಗಳ ಸಂಬಂಧವಾಗಿ ಕಾಂಗ್ರೆಸ್ ಪ್ರಚಾರವನ್ನು ಆರಂಭಗೊಳಿಸಿ ಭಾಷಣ ಮಾಡಿ, ಭಾರತೀಯ ಕಮ್ಯೂನಿಸ್ಟರು ದೇಶದಲ್ಲಿ ದ್ವೇಷ, ಅನೈಕ್ಯತೆ ಮತ್ತು ಅವ್ಯವಸ್ಥೆಯನ್ನುಂಟುಮಾಡುವುದರಲ್ಲಿ ತೊಡಗಿರುವರೆಂದು ತಿಳಿಸಿದರು. ಭಾರತದಲ್ಲಿ ಎಂದಿಗೂ ಕಾರ್ಮಿಕ-ರೈತ ಸರ್ವಾಧಿಕಾರಿ ರಾಜ್ಯತ್ವ ಬರುವುದಿಲ್ಲವೆಂದು ಅವರು ಹೇಳಿ, ಕಮ್ಯೂನಿಸ್ಟರ ನೀತಿಯಿಂದ ಅಂತರ್ಯುದ್ಧಕ್ಕೆ ದಾರಿಯಾಗಿ ರಾಷ್ಟ್ರದ ವಿನಾಶವಾಗುವುದೆಂದು ತಿಳಿಸಿದರು ಅಧಿಕಾರವನ್ನು ವಶಪಡಿಸಿಕೊಳ್ಳಲು ಕಮ್ಯೂನಿಸ್ಟರು ಬಲಪ್ರಯೋಗ ಮತ್ತು ಕೃತ್ರಿಮ ಮಾರ್ಗಗಳನ್ನು ಹಿಡಿಯಲು ಪ್ರಯತ್ನಿಸುತ್ತಿರುವರೆಂದೂ, ಇಂಥಹವರಿಂದ ಆಗುವಷ್ಟು ಹಾನಿಯನ್ನು ಹೊರಗಿನ ಯಾವ ಸೈನ್ಯವೂ ಭಾರತದ ಮೇಲೆ ಮಾಡದೆಂದೂ ಎಚ್ಚರಿಸಿದರು

ಎಲ್ಲ ಭಾಷೆಗಳಿಗೂ ಒಂದೇ ಲಿಪಿಗಾಗಿ ರಾಷ್ಟ್ರಾಧ್ಯಕ್ಷರ ಕರೆ

ಭಾರತದ ಎಲ್ಲಾ ಪ್ರಾದೇಶಿಕ ಭಾಷೆಗಳಿಗೂ ಒಂದೇ ಲಿಪಿಯಿರಬೇಕೆಂದು ಮೊನ್ನೆ ಕಲ್ಕತ್ತದಲ್ಲಿ ಭಾರತೀಯ ಹಿಂದಿ ಶಿಕ್ಷಣ ಪರಿಷತ್ತಿನ ೯ನೇ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತಾ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ತಿಳಿಸಿರುತ್ತಾರೆ. ಇದರಿಂದ ಭಾಷಾ ಸಮಸ್ಯೆಗಳು ಸುಗಮವಾಗುವುದಲ್ಲದೆ ಅನಕ್ಷರತೆಯ ಸಮಸ್ಯೆಯೂ ಪರಿಹಾರವಾಗುವುದೆಂದು ಅವರು ಹೇಳಿರುವರು

ರೈಲುಗಳಿಗೆ ಡಿಕ್ಕಿಯಾಗಿ ೧೨ ಜನರಿಗೆ ಗಾಯ

ಕಳೆದ ಬುಧವಾರ ಬಿಹಾರ-ಭಕ್ತಿಯಾರಪುರ ರೈಲು ಮಾರ್ಗದಲ್ಲಿ ಪಾಟ್ನಾ ಬಳಿ ಗೂಡ್ಸ್ ರೈಲು ಮತ್ತು ಪ್ರಯಾಣಿಕರ ಗಾಡಿಗೆ ಡಿಕ್ಕಿಯಾಗಿ ೧೦ ಮಂದಿ ಪ್ರಯಾಣಿಕರಿಗೂ, ಇಬ್ಬರು ಡ್ರೈವರುಗಳಿಗೂ ಗಾಯವಾಗಿದೆ. ಎರಡು ಇಂಜನ್ನುಗಳಿಗೂ, ಹಲವು ಗಾಡಿಗಳಿಗೂ ಜಖಂ ಆಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಕೊಳಲು: ೭-೧೫ ಜೆ. ಸಿ. ಅನ್ನಪೂರ್ಣ ಮತ್ತು ಜೆ. ಸಿ ಸರೋಜಮ್ಮ-ದೇವರನಾಮ. ೭ ೩೦ ಗಾನವಿಹಾರ. ೮-೧೫ ರಿಕಾರ್ಡು. ಮಧ್ಯಾಹ್ನ ೧೨ ವಿ. ಪರಿಮಳ-ವೀಣೆ. ೧೨-೪೫ ವನಿತಾವಿಹಾರ. ೧-೩೦ ಕೊಳಲು. ೨-೧೫ ಸಂಗೀತ ಸಂಜೆ ೫-೩೦ ಎಸ್. ಬಿ ಕೇಶವಮೂರ್ತಿ-ಸಂಗೀತ ೬-೫ ವಿರಾಮ ಸಂಗೀತ. ೬-೨೦ ಎಂ. ಆರ್. ರಾಮಕೃಷ್ಣ-ಕಾವ್ಯವಾಚನ, ೭-೩೦ ಸಂಸ್ಥಾನದ ಅಭಿವೃದ್ಧಿ ಯೋಜನೆ-ಭಾಷಣ ೮ ತಿರುಚ್ಚಿಯಿಂದ. ೮-೪೦ ಸರ್ಕಾರಿ ನೌಕರರು ಮತ್ತು ಚುನಾವಣೆ-ಚುನಾವಣಾ ಕಮೀಷನರ್ ಎಸ್. ಸುಕುಮಾರಸೇನರವರ ಭಾಷಣ. ೯-೧೫ ತ್ಯಾಗರಾಜ ಉತ್ಸವ-ತಿರುವೈಯ್ಯಾರ್ ರಿಲೆ.

ದಕ್ಷಿಣ ಆಫ್ರಿಕಾ ರೇವುಗಳಿಗೆ ಭಾರತದ ಹಡಗುಗಳ ಬಹಿಷ್ಕಾರ

ದಕ್ಷಿಣ ಆಫ್ರಿಕದ ಯಾವ ಬಂದರಿಗೂ ತಮ್ಮ ಹಡಗುಗಳು ಹೋಗಬಾರದೆಂದು ಭಾರತದ ಹಡಗು ಸಂಸ್ಥೆಯು ಸೂಚಿಸಿದೆ. ಭಾರತೀಯ ಹಡಗುಗಳಿಗೆ ಸೌಲಭ್ಯಗಳನ್ನು ನಿಲ್ಲಿಸಲಾಗುವುದೆಂದು ಆಫ್ರಿಕಾ ಸರ್ಕಾರದವರು ಹಾಕಿರುವ ಬೆದರಿಕೆಗಾಗಿ ಈ ಕ್ರಮವನ್ನು ಕೈಗೊಳ್ಳಲಾಗಿದೆ.

ನೆಹರೂರವರಿಂದ ಅಣು ರಿಯಾಕ್ಟರ್ ಯಂತ್ರದ ಆರಂಭ

ಬೊಂಬಾಯಿ ಬಳಿ ಟ್ರಾಂಬೆಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಇಡೀ ಏಷ್ಯದಲ್ಲೇ ಪ್ರಥಮವೆಂದು ಪರಿಗಣಿಸಲಾಗಿರುವ ಅಣು ರಿಯಾಕ್ಟರ್ ಯಂತ್ರದ ಆರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ ಏನೇ ಆದರೂ, ಎಂತಹ ಸಂದರ್ಭ ಒದಗಿದರೂ ಭಾರತವು ಅಣು ಶಕ್ತಿಯನ್ನು ದುಷ್ಟ ಕಾರ್ಯಗಳಿಗೆ ಉಪಯೋಗಿಸುವುದಿಲ್ಲವೆಂದು ಈಗಿನ ಸರ್ಕಾರದ ಪರವಾಗಿಯಲ್ಲದೆ ಮುಂದಿನ ಸರ್ಕಾರಗಳ ಪರವಾಗಿಯೂ ತಾವು ಭರವಸೆ ನೀಡುವುದಾಗಿ ಹೇಳಿದರು. ಯಂತ್ರದ ಆರಂಭೋತ್ಸವದಲ್ಲಿ ಭಾಗವಹಿಸಲು ವಿಶ್ವದ ನಾನಾ ಭಾಗಗಳಿಂದ ೧೦೦ ಮಂದಿ ವಿಜ್ಞಾನಿಗಳು ಬಂದಿದ್ದರು ಅಣು ಶಸ್ತ್ರಗಳ ಉಪಯೋಗವಾಗುವ ಯುದ್ಧವು ಜಗತ್ತಿನಲ್ಲಿ ಯಾರಿಗೂ ಬೇಡವೆಂಬ ಮನವರಿಕೆಯಾಗಿರುವುದೆಂದು ನೆಹರೂರವರು ನುಡಿದರು. ಯಂತ್ರಕ್ಕೆ 'ಅಪ್ಸರ' ಎಂದು ನಾಮಕರಣ ಮಾಡಿದರು. ಈಜುವ ಕೊಳದ ಆಕಾರದ ಜಲಾಶಯದಲ್ಲಿ ಅದನ್ನು ಸ್ಥಾಪಿಸಲಾಗಿದೆ.

ಲಾಯರ್ ಎಂ. ಎಸ್. ಶ್ರೀನಿವಾಸರಾಯರ ನಿಧನ

ಗುಂಡ್ಲುಪೇಟೆಯ ಅಮಲ್ದಾರ್ ಶ್ರೀ ರಾಮಣ್ಣನವರ ತಂದೆಯವರಾದ ಲಾಯರ್ ಶ್ರೀ ಎಂ. ಎಸ್. ಶ್ರೀನಿವಾಸರಾಯರು ಸೋನಾರ್ ಬೀದಿಯ ತಮ್ಮ ನಿವಾಸದಲ್ಲಿ ತಮ್ಮ ೭೫ನೇ ವಯಸ್ಸಿನಲ್ಲಿ ನೆನ್ನೆ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಉಪಾಧ್ಯಾಯರ ಕಾಲೇಜು ಸಂಘದ ದಿನಾಚರಣೆ

ನಗರದ ಉಪಾಧ್ಯಾಯರ ಕಾಲೇಜು ಸಂಘದ ದಿನಾಚರಣೆಯು ನಾಳೆ ಸಂಜೆ ೪॥ ಗಂಟೆಗೆ ವೈಸ್‌ಛಾನ್ಸೆಲರ್ ಡಾ॥ ಕೆ ವಿ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರುವುದು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳ ವಿನಿಯೋಗವೂ ಇದೆ.

ಬೆಂಗಳೂರಿಗೆ ನಾಳೆ ಸಿರಿಯಾ ಅಧ್ಯಕ್ಷರ ಭೇಟಿ

ಸಿರಿಯದ ಅಧ್ಯಕ್ಷ ಕುವಾಟ್ಲಿಯವರು ನಾಳೆ ಬೆಂಗಳೂರಿಗೆ ಆಗಮಿಸಿ ೩ ದಿವಸಗಳವರೆಗೆ ಇರುವರು. ಅವರು ನಾನಾ ಪ್ರಮುಖ ಸಂಸ್ಥೆಗಳಿಗೆ ಭೇಟಿ ಕೊಡುವರು.

○ಏಡನ್ ಆಶ್ರಿತ ರಾಜ್ಯದ ಪಕ್ಕದಲ್ಲಿರುವ ಹುಬೀಬ್ ಎಂಬ ಯೆಮೆನ್ ಗಡಿ ಪಟ್ಟಣವನ್ನು ಬ್ರಿಟಿಷ ಸೈನ್ಯ, ಟ್ಯಾಂಕು ಮತ್ತು ಫಿರಂಗಿಗಳು ಮುತ್ತಿವೆಯೆಂದು ಲಂಡನ್ನಿನಲ್ಲಿರುವ ಯೆಮೆನ್ ರಾಯಭಾರ ಕಛೇರಿಯು ತಿಳಿಸಿದೆ.

ತ್ಯಾಗರಾಜರ ಆರಾಧನೋತ್ಸವ

ಮೈಸೂರು ೨೧

ತ್ಯಾಗರಾಜರ ಆರಾಧನೋತ್ಸವದ ಅಂಗವಾಗಿ ನಗರದಲ್ಲಿ ಕೆಳಗೆ ಕಂಡ ಕಾರ್ಯಕ್ರಮಗಳಿವೆ -

ಚಾಮುಂಡಿಪುರದ ಶ್ರೀ ಸರಸ್ವತಿ ಗಾನಕಲಾ ಮಂದಿರದಲ್ಲಿ ನಾಳೆ ಸಂಜೆ ೬। ಗಂಟೆಗೆ ಶ್ರೀ ಬಿ ಜಿ ದಾಸರಿಂದ ಸಂಗೀತ ಭಕ್ತಿರಸ ಪ್ರಧಾನ ಎಂಬ ವಿಷಯವಾಗಿ ಭಾಷಣ ಮತ್ತು ೮। ವಿ॥ ಸ್ವರಮೂರ್ತಿ ವೆಂಕಟನಾರಾಯಣರಾಯರಿಂದ ಸಂಗೀತ

ಬಕ್ಷಿ ಬಸಪ್ಪಾಜಿ ತೋಟದಲ್ಲಿರುವ ಶ್ರೀ ಗಾಯತ್ರಿ ಸಂಗೀತ ವಿದ್ಯಾ ಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ವಿ॥ ಎಂ. ಸಿ ಚಿಕ್ಕಸ್ವಾಮಿಯವರ ಸಂಗೀತ

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ದತ್ತಾತ್ರೇಯ ಸಂಗೀತ ವಿದ್ಯಾ ಶಾಲೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ೮। ವಿ॥ ಬಿ ಎಂ ಶಿವಪ್ಪನವರ ಸಂಗೀತ

ರಾಜೇಂದ್ರನಗರದ ೭ನೇ ಶಾಖೆಯಲ್ಲಿರುವ ಶ್ರೀ ಸರಸ್ವತಿ ಗಾನಕಲಾ ಮಂದಿರದಲ್ಲಿ ನಾಳೆ ವರ್ತಮಾನ್ ಪತ್ರಿಕೆ ಸಂಪಾದಕ ಶ್ರೀ ಎಂ ಎನ್ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಂಜೆ ೫ ಗ ವಿ ಎಂ ಎಸ್ ಕುಮಾರಸ್ವಾಮಿಯವರಿಂದ ಸಂಗೀತ ಮತ್ತು ೬॥ಗೆ ಮಧುರ ಗಾನ ಕಲಾ ಮಂಡಳಿಯವರ ವಾದ್ಯಗೋಷ್ಠಿ ಮತ್ತು ರಾತ್ರಿ ೮ಕ್ಕೆ ವಿ। ಶ್ರೀ ನಂಜುಂಡದಾಸರಿಂದ ತ್ಯಾಗರಾಜರ ಜೀವನ ಚರಿತ್ರೆ ಕಥೆ.

ನ್ಯಾಷನಲ್ ಲೀಗಿನ ವಾರ್ಷಿಕೋತ್ಸವ

ನ್ಯಾಷನಲ್ ಲೀಗಿನ ವಿದ್ಯಾರ್ಥಿಗಳು ಕಳೆದ ಬುಧವಾರ ಯುವರಾಜಾ ಕಾಲೇಜಿನ ಪ್ರಿನ್ಸಿಪಾಲ್ ಡಾ॥ ಎಲ್ ಸೀಬಯ್ಯನವರ ಅಧ್ಯಕ್ಷತೆಯಲ್ಲಿ ವಾರ್ಷಿಕೋತ್ಸವವನ್ನು ಆಚರಿಸಿದರು ಕುಮಾರಿ ಅಲಮೇಲು ಮತ್ತು ಮಾಲತಿಯವರಿಂದ ಪ್ರಾರ್ಥನೆಯನಂತರ ಶ್ರೀ ಆರ್ ಎಲ್ ಕೆ ತಾತಾಚಾರ್‌ರವರು ಸ್ವಾಗತ ಬಯಸಿದರು ಕುಮಾರಿ ಸರೋಜರವರಿಂದ ವೀಣಾವಾದನವಾದ ಮೇಲೆ ಶ್ರೀ ಶಿವಪ್ರಸಾದ್ ಮತ್ತು ರ ಫಣೀಂದ್ರರವರಿಂದ ವಿಮುಕ್ತ್ಯಗಳಾದುವು ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಭಾಷಣಗಳಾದನಂತರ ಉಪಾಧ್ಯಾಯರ ಪರವಾಗಿ ಶ್ರೀ ಹೆಚ್ ಜಿ ಶಿತಿಕಂಠ ಶರ್ಮರವರು ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನು ಹೇಳಿದರು ಅಧ್ಯಕ್ಷರು ಐನ್‌ಸ್ಟೀನರ ಜೀವನ ಚರಿತ್ರೆಯನ್ನು ಕುರಿತು ಭಾಷಣ ಮಾಡಿದರು ಶ್ರೀ ನಾಗಭೂಷಣಾಚಾರ್ಯರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಚುನಾವಣಾಧಿಕಾರಿಗಳಿಂದ ತಾರತಮ್ಯ, ತ್ಯಾಗಿ ಜನಸಂಘದ ಪ್ರತಿಭಟನೆ

ಮಹಾ ಚುನಾವಣೆಗಳ ಸಂಬಂಧವಾಗಿ ನಗರದ ಚುನಾವಣಾಧಿಕಾರಿಗಳು ರಾಜಕೀಯ ಪಕ್ಷಗಳಲ್ಲಿ ತಾರತಮ್ಯವನ್ನು ಎಣಿಸುತ್ತಿರುವರೆಂದು ಇಲ್ಲಿನ ಜನ ಸಂಘದವರು ಪ್ರತಿಭಟನಾ ಪತ್ರವನ್ನು ಬರೆದಿರುತ್ತಾರೆ ಅದರ ನಕಲುಗಳನ್ನು ಕೇಂದ್ರ ಚುನಾವಣಾಧಿಕಾರಿಗಳಿಗೂ, ಸಂಸ್ಥಾನದ ಚುನಾವಣಾಧಿಕಾರಿಗಳಿಗೂ ಕಳುಹಲಾಗಿದೆ ಜನಸಂಘವು ರಾಷ್ಟ್ರೀಯ ಪಕ್ಷಗಳಲ್ಲೊಂದಾಗಿದ್ದರೂ ಚುನಾವಣೆ ಸಂಬಂಧದಲ್ಲಿ ಇತರ ಪಕ್ಷಗಳಿಗೆ ವಿಚಾರಗಳನ್ನು ತಿಳಿಸಿ, ಜನ ಸಂಘದವರಿಗೆ ಅದನ್ನು ಕೊಡಲಿಲ್ಲವೆಂಬುದೇ ಪ್ರತಿಭಟನೆಗೆ ಕಾರಣ.

Edited, Printed and Publ s by A. R Nagaraj at Sadhv Press, D Subbiai Road, Mysor

ಕೈ ಕಸಬು ಸಪ್ತಾಹದ ವಿವರಗಳು

ಮೈಸೂರು ೨೧

ಜಿಲ್ಲಾಧಿಕಾರಿ ಶ್ರೀ ಡಿ ಆರ್ ಚನ್ನರುದ್ರಯ್ಯನವರು ಮೊನ್ನೆ ಪತ್ರಿಕಾ ಸಮ್ಮೇಳನವನ್ನು ನಡೆಸಿ ಜಿಲ್ಲಾ ಕೈ ಕಸಬು ವಾರಾಚರಣೆ, ಕುಶಲ ಕಲೆಗಾರರು ಮತ್ತು ಕೈ ಕಸಬು ವಸ್ತುಗಳ ಪ್ರದರ್ಶನ, ಆ ವಸ್ತುಗಳಿಗೆ ಪ್ರೋತ್ಸಾಹ ಮುಂತಾದ ಬಗ್ಗೆ ವಿವರಗಳನ್ನು ತಿಳಿಸಿದರು ವಸ್ತು ಪ್ರದರ್ಶನಕ್ಕೆ ದಿನವಹಿ ೨೦೦೦ ಪ್ರೇಕ್ಷಕರು ಬರುತ್ತಿರುವರೆಂದೂ, ೫೦ ಮಂದಿ ತಮ್ಮ ವಸ್ತುಗಳನ್ನು ಪ್ರದರ್ಶಿಸಿರುವರೆಂದೂ ತಿಳಿಸಲಾಯಿತು

ಉತ್ತಮ ವಸ್ತುಗಳಿಗೆ ಒಟ್ಟು ೪೦ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ಕೊಡಲಾಗುವುದು ಅದಕ್ಕಾಗಿ ಸಾರ್ವಜನಿಕರು ೩೦೦ ರೂ. ಗಳನ್ನೂ, ಸರ್ಕಾರದವರು ೪೦೦ ರೂ. ಗಳನ್ನೂ ಕೊಟ್ಟಿರುವರು. ಬೊಂಬಿನಿಂದ ತಯಾರಾಗಿರುವ ವಸ್ತುಗಳು ಪ್ರದರ್ಶನದ ವಿಶೇಷ ಆಕರ್ಷಣೆಯಾಗಿವೆ ಮಹಾಜನರು ಕೈ ಕಸಬುಗಳನ್ನು ಹೆಚ್ಚಾಗಿ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಒಂದೇ ಸಮನೆ ಪ್ರಪಂಚದ ಸುತ್ತಲೂ ವಿಮಾನದ ಹಾರಾಟ

- ಪ್ರಪಂಚದ ಸುತ್ತಲೂ ಎಲ್ಲೂ ನಿಲ್ಲದೆ ಒಂದೇ ಸಮನಾಗಿ ೨೪,೩೨೫ ಮೈಲಿ ದೂರ ಮೂರು ಅಮೆರಿಕದ ಬಾಂಬರ್ ವಿಮಾನಗಳು ಹಾರಿ ಬಂದಿರುವುದಾಗಿ ವರದಿಯಾಗಿದೆ

ಶಾರದಾ ಪೂಜಾ

ಶ್ರೀ ಚಾಮುಂಡಾಂಬಿಕಾ ವಿದ್ಯಾ ಸದನದಲ್ಲಿ ಶಾರದಾ ಪೂಜೆಯು ಕಳೆದ ಶುಕ್ರವಾರ ಶ್ರೀ ಎಂ ರಾಮಾನುಜಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು ಅಧ್ಯಕ್ಷರು ಪಾಠಶಾಲೆಯ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು ಸ್ಕೂಲ್ ಫೈನಲ್ ಮತ್ತು ಇತರ ಹೈ ಸ್ಕೂಲ್ ತರಗತಿಗಳಿಗೆ ಸಾಕೆಂದಷ್ಟು ಮಂದಿ ವಿದ್ಯಾರ್ಥಿಗಳು ದೊರೆತಲ್ಲಿ ಫೆಬ್ರವರಿಯಿಂದಲೇ ತರಗತಿಗಳನ್ನು ತೆರೆಯಲಾಗುತ್ತದೆ

ಜೀವನದ ಹರ್ಷವನ್ನು ಸವಿಯಿರಿ

ಷಂಡರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ಐಶ್ವರ್ಯ ದೇಹದಾರ್ಢ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಶೆ ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿಗಳು ಷಂಡತ್ವ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ ಸಿಫಿಲಿಸ್, ಗೊನೋರಿಯಾ, ಪಾರ್ಶ್ವವಾಯು ಅಂಡ ವಾಯು ಮತ್ತು ಎಲ್ಲ ವಿಧವಾದ [illegible] ಮೂತ್ರ ರೋಗಗಳಿಗೂ ಕಾರಣವಾಗಿವೆ ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ॥ ರಾಜಾರವರನ್ನು (ಲೈಂಗಿಕ ಪ್ರವೀಣ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆಯ ವ್ಯಾಧಿಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು ನೂರಕ್ಕೆ ನೂರು ಖಾತರಿ ಕೊಡಲಾಗುವುದು

ಆವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾ

ರಾಜಾ ಮೆಡಿಕಲ್ ಹಾಲ್,
ಡೋರ್ ನಂ 1745 ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ ಬಾಲಿ ಹಾಗದಿಂದ
ಮೂರನೇ ಕಟ್ಟಡ)
ಮೈ ಸೂ ರು

ಈಜಿಪ್ಟಿನಿಂದ ಪೂರ್ಣ ವಾಪಸಾಗಲು ಇಸ್ರೇಲಿಗೆ ವಿಶ್ವ ಸಂಸ್ಥೆ ಕರೆ

ಈಜಿಪ್ಟಿನಿಂದ ಇಸ್ರೇಲು ಪೂರ್ಣವಾಗಿ ವಾಪಸಾಗಬೇಕೆಂದು ಮೊನ್ನೆ ವಿಶ್ವಸಂಸ್ಥೆಯ ಸಾಧಾರಣ ಸಭೆಯು ಸೂಚಿಸಿ ನಿರ್ಣಯವನ್ನು ಮಾಡಿತು ಈ ಬಗ್ಗೆ ಐದು ದಿನಗಳೊಳಗೆ ಸಂಸ್ಥೆಗೆ ಪ್ರಧಾನ ಕಾರ್ಯದರ್ಶಿಯು ವರದಿ ಮಾಡಬೇಕೆಂದೂ ಕೋರಲಾಯಿತು ಸಂಸ್ಥೆಯ ಹಿಂದಿನ ನಿರ್ಣಯಗಳನ್ನು ಇಸ್ರೇಲು ಮಾನ್ಯ ಮಾಡದಿರುವ ಬಗ್ಗೆ ವ್ಯಸನ ಮತ್ತು ಆತಂಕವನ್ನು ವ್ಯಕ್ತಪಡಿಸಲಾಯಿತು ನಿರ್ಣಯವನ್ನು ಇಸ್ರೇಲ್ ಮತ್ತು ಫ್ರಾನ್ಸುಗಳು ವಿರೋಧಿಸಿದುವು ನಿರ್ಣಯಕ್ಕೆ ೭೪ ರಾಷ್ಟ್ರಗಳು ಪರವಾಗಿಯೂ, ಕ್ಯೂಬ ಮತ್ತು ಕಾಸ್ಟರಿಕಾಗಳು ತಟಸ್ಥವಾಗಿಯೂ ಇದ್ದುವು. ಆದರೆ ಗಾಜಾ ಪ್ರದೇಶದಿಂದ ಇಸ್ರೇಲು ಸೈನ್ಯಗಳು ವಾಪಸಾಗುವುದಿಲ್ಲವೆಂದು ಹೇಳಲಾಗಿದೆ.

೧ ಲಕ್ಷ ಡಾಲರಿಗೆ ಮೆದುಳಿನ ವಿಮೆ

ಅಮೆರಿಕದ ಟೆಕ್ಸಾಸ್ ಉಕ್ಕಿನ ಕಾರ್ಖಾನೆಯೊಂದರ ಅಧಿಕಾರಿ ಲಾಯ್ಡ್ ಸಿ ಮಾರ್ಕಸ್ ಎಂಬುವರು ತಮ್ಮ ಮೆದುಳನ್ನು ೧ ಲಕ್ಷ ಡಾಲರಿಗೆ ವಿಮೆ ಮಾಡಿರುವರೆಂದು ಗೊತ್ತಾಗಿದೆ ತಮ್ಮ ಬುದ್ಧಿಶಕ್ತಿಯಿಂದಲೇ ತಮ್ಮ ಜೀವನ ನಿರ್ವಹಣೆಯಾಗುವುದರಿಂದ ತಾವು ಮಿದುಳಿನ ವಿಮೆ ಮಾಡಿರುವುದಾಗಿ ಅವರು ತಿಳಿಸಿರುತ್ತಾರೆ

ಅರಿಯಲೂರು ರೈಲು ದುರಂತಕ್ಕೆ ಮಳೆಯಲ್ಲದೆ ಅಧಿಕಾರಿಗಳೂ ಕಾರಣ

ಅರಿಯಲೂರು ಬಳಿ ಕಳೆದ ಡಿಸೆಂಬರ್ [illegible] ಆದ ರೈಲು ದುರಂತಕ್ಕೆ ಮಳೆ ಮತ್ತು ಅನಿರೀಕ್ಷಿತ ಪ್ರವಾಹಗಳು ಕಾರಣವಾಗಿರುವುದರ [illegible] ತನಿಖೆ ಅಧಿಕಾರಿಯು ತಿಳಿಸಿರುತ್ತಾರೆ ಡಿಸ್ಟ್ರಿಕ್ಟ್ ಇಂಜಿನಿಯರ್, ಗಸ್ತು ತಿರುಗುವವರು, ಸ್ಟೇಷನ್ ಮಾಸ್ಟರ್ ಮತ್ತು [illegible] ಮತ್ತು ಅವರ ಸಹಾಯಕರೂ ದುರಂತಕ್ಕೆ ಜವಾಬ್ದಾರರೆಂದು ಸೂಚಿಸಲಾಗಿದೆ. ಇದೇ [illegible] ಇಂಜಿನಿಯರಿಂಗ್ ಇಲಾಖೆ ಮೇಲೆ ದೋಷ ಹೊರಿಸುವುದು ಸರಿಯಲ್ಲವೆಂದು ಅಭಿಪ್ರಾಯ [illegible] ಗಿದೆ. ದುರಂತದಲ್ಲಿ ೧೫೦ ಮಂದಿ ಮೃತಪಟ್ಟಿದ್ದರು.

ಮಹಾಚುನಾವಣೆಯ ದಿನಗಳು

ದೇಶಾದ್ಯಂತ ಮಹಾ ಚುನಾವಣೆಗಳ ದಿನಗಳನ್ನು ಕೇಂದ್ರ ಚುನಾವಣಾ ಕಮಿಷನ್ನು ಗೊತ್ತುಪಡಿಸಿರುವ ಪ್ರಕಾರ ಪಂಜಾಬು ಮತ್ತು ಒರಿಸ್ಸಾ ಪ್ರಾಂತಗಳಲ್ಲಿ ಮೊದಲು ಚುನಾವಣೆಗಳು ಆರಂಭವಾಗಿ ಫೆಬ್ರವರಿ ೨೪ ರಿಂದ ನಡೆಯುವುವು ಮೈಸೂರು ಸಂಸ್ಥಾನದಲ್ಲಿ ೨೫, ೨೭, ೨೮ ಮತ್ತು ಮಾರ್ಚಿ ೧ ರಿಂದ [illegible] ನವರೆಗೆ ಪ್ರತಿ ದಿನವೂ ಬೆಳಿಗ್ಗೆ ೮ ಗಂಟೆಯಿಂದ ಮಧ್ಯಾಹ್ನ ೧ ಗಂಟೆ ಮತ್ತು ೨ ರಿಂದ ಸಂಜೆ [illegible] ವರೆಗೆ ನಡೆಯುವುವು

ಮೈಸೂರು ಚಿಟ್ ಫಂಡ್ಸ್ ಅಂಡ್ ಜನರಲ್ ಏಜನ್ಸೀಸ್
MYSORE CHIT FUNDS & GENERAL AGENCIES

ಕಂತುವಾರು ಆಧಾರದ ಮೇಲೆ

ನಿಮಗೆ ಹಣ ಬೇಕಾದರೆ

ಕೆಳಗೆ ಕಂಡ ವಿಷಯಗಳನ್ನು ಓದಿರಿ :—

ಕೇವಲ 0 12 0 ಆಣೆಯಿಂದ 1-4 0 ರೂ. ವರೆಗೆ ಮಾಹೆಯಾನಾ ಸರಾಸರಿ ಬಡ್ಡಿ

ಎಲ್ಲ ವರ್ಗಗಳ ವ್ಯಾಪಾರಿಗಳಿಗೂ ಬಹಳ ಲಾಭದಾಯಕ

ನಮ್ಮ ಹೊಸ ಚೀಟಿಗಳು 7-2-1957 ರಿಂದ ಆರಂಭವಾಗುವುವು

ಚೀಟಿ ಮೊಬಲಗು 600 ರೂ ನಿಂದ 4,500 ರೂ ವರೆಗೆ ಇದೆ

ಅದಕ್ಕೆ ಪ್ರತಿನಿತ್ಯದ ಕಂತು 1 8.0 ರೂ ನಿಂದ 10 ರೂ.

ಹೊಸ ಚೀಟಿ ಅನುಕ್ರಮಣಿಕೆಗಳು ಕೆಳಗಿನ ವರ್ಗಗಳಲ್ಲಿ ಇರುತ್ತವೆ

ವರ್ಗ	ದಿನ ಕಂತಿನ ಮೊಬಲಗು	ಒಟ್ಟು ಮೊಬಲಗು	ಕಂತುಗಳ ಅವಧಿ	ಪ್ರತಿ ಹರಾಜಿನ ಅವಧಿ
ಎ	ರೂ 10-0 0	ರೂ 4,500	15 ತಿಂಗಳು	ಮಾಹೆಯಾನಾ
ಬಿ	ರೂ. 7 8 0	ರೂ. 2,700	12	,,
ಸಿ.	ರೂ 5 0 0	ರೂ 1,800	12 ,	,,
ಡಿ	ರೂ. 2 8 0	ರೂ 1,000	13 ತಿಂಗಳು 10 ದಿನಗಳು	20 ದಿನಗಳು
ಇ	ರೂ 2 0 0	ರೂ 800	,,	,,
ಎಫ್	ರೂ 1 8 0	ರೂ 600	,,	,,

ಗಮನಿಸಿ.-ದಿನವಹಿ ಅಥವಾ ಮಾಹೆಯಾನಾ ಕಂತುಗಳನ್ನು ನಿಮ್ಮಲ್ಲೇ ಬಂದು ವಸೂಲು ಮಾಡುತ್ತೇವೆ

ರೇಡಿಯೋ ಸೆಂಟರ್ ಸೇಲ್ಸ್ ಮತ್ತು ಸರ್ವಿಸ್ಸಿಗೂ ಭೇಟಿ ಕೊಡಿ

ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಮತ್ತು ಸಂಜೆ 6 ರಿಂದ ರಾತ್ರಿ 9ರ ವರೆಗೆ ಮೊಖ್ತಾ ಬಂದು ಮಾತನಾಡಬಹುದು ಅಥವಾ ವಿವರಗಳಿಗೆ ಬರೆಯಬಹುದು

-: ನಮ್ಮ ಕಛೇರಿ :-



ದಿ ಮೈಸೂರು ಚಿಟ್ ಫಂಡ್ ಅಂಡ್ ಜನರಲ್ ಏಜನ್ಸೀಸ್
518/1 (ಮಹಡಿ) ಸೌರಭ್ಯಾ ಕಟ್ಟಡದಲ್ಲಿ · ಧನ್ವಂತರಿ ರಸ್ತೆ, ಮೈಸೂರು

ಬಟ್ಟೆಗಳ ಶುಭ್ರತೆಗೆ

ಅಶೋಕ ನಂ. 908 ಮತ್ತು ಅಶೋಕ ನಂ. 44

ಸಾಬೂನುಗಳನ್ನೇ ಉಪಯೋಗಿಸಿರಿ

ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು.

ಟೆಲಿಫೋನ್ ನಂ. 792

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಅರಡಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ಸಂಪುಟ : ೧೫] SADHVI : TUESDAY 22—I—1957 ಮೈಸೂರು : ಮಂಗಳವಾರ ೨೨—೧—೧೯೫೭ [ಸಂಚಿಕೆ : ೦೭೭

ವರ್ಣದ್ವೇಷ ತ್ಯಜಿಸಲು ದಕ್ಷಿಣ ಆಫ್ರಿಕಕ್ಕೆ ವಿಶ್ವಸಂಸ್ಥೆಯ ಕರೆ

ಕೈ ಕಸಬುಗಳ ಅಭಿವೃದ್ಧಿಗಾಗಿ ಸರ್ಕಾರದ ನೆರವು ಅಗತ್ಯ

ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು

ಮೈಸೂರು ೨೧

ಅಖಿಲ ಭಾರತ ಕೈ ಕಸಬುಗಳ ಎರಡನೇ ಸಪ್ತಾಹದ ಅಂಗವಾಗಿ ದಸರಾ ವಸ್ತು ಪ್ರದರ್ಶನ ಕಟ್ಟಡದಲ್ಲಿ ನೆನ್ನೆ ಕುಶಲ ಕೆಲಸಗಾರರ ಮತ್ತು ಕೈಕಸಬುದಾರರ ಸಮ್ಮೇಳನವು ನಡೆಯಿತು. ಸ್ವಾಗತಾಧ್ಯಕ್ಷರಾದ ಶ್ರೀ ಎಸ್ ಸಂಜೀವಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ಆಶಾ ರಾಯರಿಂದ ಪ್ರಾರ್ಥನೆಯಾದನಂತರ ಕೈಕಸಬುಗಳ ಅಭಿವೃದ್ಧಿಗೆ ಸಂಬಂಧಪಟ್ಟ ಈ ಕೆಳಗಿನ ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು

ಗಂಧದ ಮರ, ಶೀಗದ ಮರ, ದಂತ ಮುಂತಾದ ಪದಾರ್ಥಗಳನ್ನು ನಿಗದಿಯಾದ ಬೆಲೆಗಳಲ್ಲಿ ಮೈಸೂರು ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯದಲ್ಲಿಟ್ಟು ಕಸಬುದಾರರಿಗೆ ಸುಲಭ ಬೆಲೆಯಲ್ಲಿ ಸರ್ಕಾರದವರು ಕೊಡಿಸಲು ಏರ್ಪಾಡು ಮಾಡಬೇಕು. ತಯಾರಾದ ಪದಾರ್ಥಗಳಿಗೆ ಶೇಕಡ ೫೦ ರಿಂದ ೭೫ ರಷ್ಟು ಮೊಬಲಗನ್ನು ಮುಂಗಡವಾಗಿ ಕೊಟ್ಟು ಮಾಲ್ಕಂಡ ಶಾಲೆಯಲ್ಲಿ ಮಾರಾಟಕ್ಕೆ ಇಡಲು ಏರ್ಪಡಿಸಬೇಕು, ಈ ದೇಶದಲ್ಲಿ, ಹೊರಗಿನ ದೇಶಗಳಲ್ಲೂ ಕೈ ಕಸಬುಗಳ ಪದಾರ್ಥಗಳ ಬಗ್ಗೆ ಪ್ರಚಾರ ಕಾರ್ಯವನ್ನು ಏರ್ಪಡಿಸುವುದಲ್ಲದೆ ಸರ್ಕಾರದವರು ಮಾರಾಟದ ಕಾರ್ಯಾಲಯವನ್ನು ಸ್ಥಾಪಿಸಬೇಕು, ಹೊರದೇಶಗಳಲ್ಲಿ ಕೈ ಕಸಬುಗಳ ವಿಧಾನಗಳನ್ನು ಕಲಿಯಲು ನಿಯೋಗಗಳನ್ನು ಕಳುಹಿಸಬೇಕು. ಸಂಸ್ಥಾನದ ಕುಶಲ ಕಲೆ ಮತ್ತು ಗೃಹ ಕೈಗಾರಿಕೆಗಳ ಸರ್ವೆ ನಡೆಸಿ ಅದಕ್ಕೆ ಅಗತ್ಯವಾದ ಆರ್ಥಿಕ ನೆರವು ನೀಡಬೇಕು, ಬಳಪದ ಕಲ್ಲುಗಳ ಭೂಮಿಯಿಂದ ತೆಗೆದುಕೊಳ್ಳಲು ಈಗ ವಿಧಿಸುವ ರಕಮಾರಿ ಪದ್ಧತಿಯಿಂದ ಆ ಕೈಗಾರಿಕೆ ನಿರ್ನಾಮವಾಗುವ ಸ್ಥಿತಿಯುರುವುದರಿಂದ ಸರ್ಕಾರಿ ಶುಲ್ಕವನ್ನು ರದ್ದು ಮಾಡಿ ಈ ಕೈಗಾರಿಕೆಗೆ ಸಹಾಯ ನೀಡಬೇಕು, ಸರ್ಕಾರಿ ಡಿಪೋಗಳಲ್ಲಿ ಸುಲಭ ಬೆಲೆಗೆ ಮರಮುಟ್ಟುಗಳು ದೊರೆಯುವಂತೆ ಏರ್ಪಡಿಸಬೇಕು; ಉತ್ತಮವಾದ ನೂಲು ಮತ್ತು ಆಧುನಿಕ ಮಗ್ಗಗಳನ್ನು ಕೈ ಮಗ್ಗದವರಿಗೆ ಒದಗಿಸಿಕೊಡಬೇಕು, ಉಣ್ಣೆ ನೆಯ್ಗೆಯವರಿಗೆ ಉತ್ತಮವಾದ ಉಣ್ಣೆಯನ್ನು ದೊರಕಿಸಿಕೊಡುವುದಲ್ಲದೆ ಗ್ರಾಮಾಂತರಗಳಲ್ಲಿ ಫುಟ್ ರೂಲ್ ಮತ್ತು ಜಮಖಾನೆಗಳನ್ನು ಮಾಡಲು ಶಿಕ್ಷಣ ನೀಡಬೇಕು. ಚಾಪೆ ನೇಯುವವರ ಸಹಾಯಕ್ಕಾಗಿ ಸಣ್ಣ ಯಂತ್ರಗಳ ಮೂಲಕ ದಾರವನ್ನು ತೆಗೆಯಲು ಸೌಲಭ್ಯ ಕಲ್ಪಿಸಬೇಕು. ಇದಲ್ಲದೆ ಗ್ರಾಮಾಂತರದಲ್ಲಿರುವ ಇತರ ಸಣ್ಣ ಕೈಗಾರಿಕೆಯವರಿಗೆ ಸ್ವಂತ ಜವಾಬ್ದಾರಿ ಮೇಲೆ ಸಾಲ ಕೊಡಲೇರ್ಪಡಿಸಬೇಕು ಮತ್ತು ಕೈ ಕಸಬುಗಳ ಸಂಶೋಧನೆ ಮತ್ತು ನಮೂನೆ ತಯಾರಿ ಕೇಂದ್ರವನ್ನು ಏರ್ಪಡಿಸಬೇಕು

ಶ್ರೀಗಳಾದ ಎಂ. ವೀರಪ್ಪ, ಸೂರ್ಯನಾರಾಯಣ, ಗೋಪಾಲಕೃಷ್ಣ ಶೆಟ್ಟಿ, ಶ್ರೀಮತಿ ಸುಶೀಲಾಬಾಯಿ ಮತ್ತು ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಆರ್ ಚನ್ನರುದ್ರಯ್ಯನವರು ಭಾಷಣ ಮಾಡಿ ಕೈ ಕಸಬಿನ ಕೈಗಾರಿಕೆಗೆ ನೆರವು ನೀಡಲು ಹಲವು ಸಲಹೆಗಳನ್ನಿತ್ತರು. ಅಧ್ಯಕ್ಷರು ಈ ಕಾರ್ಯದಲ್ಲಿ ತೊಡಗಿರುವವರೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿ ಈ ಸಪ್ತಾಹದಿಂದ ಗೃಹ ಕೈಗಾರಿಕೆಗಳು ವೃದ್ಧಿ ಹೊಂದಿ ತನ್ಮೂಲಕ ಬಡ ಜನರ ಜೀವನೋಪಾಯಕ್ಕೆ ಸಹಾಯವಾಗಲೆಂದು ಹಾರೈಸಿದರು. ಕೈ ಕಸಬು ಪ್ರದರ್ಶನದಲ್ಲಿ ಭಾಗವಹಿಸಿ ಉತ್ತಮವಾದ ಪದಾರ್ಥಗಳನ್ನಿಟ್ಟವರಿಗೆ ಅವರು ಬಹುಮಾನಗಳನ್ನು ಹಂಚಿದರು

ಗ್ರಾಮ ಕೈಗಾರಿಕೆಗಳ ಸೂಪರಿಂಟೆಂಡೆಂಟ್ ಶ್ರೀ ಮುದ್ದುಲಿಂಗಯ್ಯನವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮ್ಮೇಳನವು ಮುಕ್ತಾಯವಾಯಿತು

ಮಧ್ಯ ಪೂರ್ವ ಸಮಸ್ಯೆ ಬಗ್ಗೆ ಮಿಲಿಟರಿ ನೀತಿಯು ಖಂಡನೆ

ನೆಹರೂ-ಕುವಾಟ್ಲಿಯವರ ಜಂಟಿ ಹೇಳಿಕೆ

ಸಿರಿಯಾದ ಅಧ್ಯಕ್ಷ ಕವಾಟ್ಲಿ ಮತ್ತು ಪ್ರಧಾನಿ ನೆಹರೂರವರು ನೆನ್ನೆ ಜಂಟಿ ಹೇಳಿಕೆಯೊಂದನ್ನು ಹೊರಡಿಸಿ ಈಜಿಪ್ಟ್ ಮತ್ತು ಗಾಜಾ ಪ್ರದೇಶದಿಂದ ಇಸ್ರೇಲಿ ಸೈನ್ಯಗಳ ವಾಪಸಾತಿಗೆ ಹೆಚ್ಚು ವಿಳಂಬವಾದರೆ ಹೊಸ ಅಪಾಯ ಸನ್ನಿವೇಶಗಳುಂಟಾಗುವುವೆಂದು ಎಚ್ಚರಿಕೆ ಇತ್ತರು. ಮಧ್ಯಪೂರ್ವದ ಸಮಸ್ಯೆಗಳ ಪರಿಹಾರಕ್ಕೆ ಮಿಲಿಟರಿ ನಡವಳಿಕೆಗಳನ್ನು ಅವರು ಟೀಕಿಸಿದರು. ಬಾಗ್ದಾದ್ ಕೌಲನ್ನು ಖಂಡಿಸಿ ಅಲ್ಜೀರಿಯದ ರಾಷ್ಟ್ರೀಯ ಹೋರಾಟಕ್ಕೆ ಬಲವಾದ ಬೆಂಬಲವನ್ನು ಇಬ್ಬರೂ ಸೂಚಿಸಿದರು. ಉಭಯ ನಾಯಕರೂ ಬಾಂಡುಂಗ್ ಸಮ್ಮೇಳನದ ತತ್ವದಲ್ಲಿ ನಂಬಿಕೆ ಸೂಚಿಸಿ ಅಂತರ ರಾಷ್ಟ್ರೀಯ ವಿಚಾರಗಳಲ್ಲಿ ಎರಡು ರಾಷ್ಟ್ರಗಳ ದೃಷ್ಟಿಯೂ ಒಂದೇ ಆಗಿರುವುದೆಂದೂ ತಿಳಿಸಿದರು. ಶಾಂತಿ ಮತ್ತು ಸೌಹಾರ್ದಕ್ಕೆ ನಿರ್ಲಿಪ್ತ ನೀತಿಯೇ ಸಹಾಯಕವೆಂದೂ ಅವರು ಹೇಳಿದರು

ಕಾಂಗ್ರೆಸ್ಸಿಗೆ ಬಿಹಾರ್ ಮಂತ್ರಿಯ ರಾಜೀನಾಮೆ

ಬಿಹಾರಿನ ನೀರಾವರಿ ಮಂತ್ರಿ ರಾಮಚರಿತ್ರ ಸಿಂಗ್‌ರವರು ತಮ್ಮ ಮಂತ್ರಿ ಪದವಿಗೂ, ಕಾಂಗ್ರೆಸ್ ಸದಸ್ಯತ್ವಕ್ಕೂ ರಾಜೀನಾಮೆಯಿತ್ತಿರುವರು. ಅವರು ಸ್ವತಂತ್ರರಾಗಿ ಚುನಾವಣೆಗೆ ನಿಲ್ಲುವರು. ಅವರಿಗೆ ೭೨ ವರ್ಷ ವಯಸ್ಸು

ಅಂತರ ಕಾಲೇಜು ಕ್ರೀಡಾ ಬಹುಮಾನ ವಿನಿಯೋಗ

ನಗರದ ಅಂತರ ಕಾಲೇಜು ಕ್ರೀಡಾ ಮತ್ತು ವ್ಯಾಯಾಮಗಳ ಬಹುಮಾನ ವಿನಿಯೋಗ ಸಮಾರಂಭವು ನಾಳೆ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜು ಕ್ರೀಡಾಂಗಣದಲ್ಲಿ ನೆರವೇರುವುದು. ವಿಧಾನ ಸಭಾಧ್ಯಕ್ಷರಾದ ಶ್ರೀ ಎಸ್ ಆರ್ ಕಂಠಿಯವರು ಅಧ್ಯಕ್ಷತೆ ವಹಿಸುವರು

ಪ್ರಾಂತಗಳ ಕಾಂಗ್ರೆಸ್ ಉಮೇದುವಾರಿಕೆಗಳ ಪಟ್ಟಿ ಸಿದ್ಧ

ಪಂಜಾಬು ಸಂಸ್ಥಾನವೊಂದನ್ನು ಬಿಟ್ಟು ಮಿಕ್ಕವುಗಳ ಕಾಂಗ್ರೆಸ್ ಉಮೇದುವಾರರ ಪಟ್ಟಿಗಳನ್ನು ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿಯವರು ಸಿದ್ಧಗೊಳಿಸಿರುವರೆಂದು ವರದಿಯಾಗಿದೆ. ನೆನ್ನೆ ಉತ್ತರ ಪ್ರದೇಶ, ರಾಜಸ್ಥಾನ ಮತ್ತು ದೆಹಲಿ ಪಟ್ಟಿಗಳನ್ನು ಅಖೈರುಗೊಳಿಸಲಾಯಿತು. ಇಂದು ಅವುಗಳನ್ನು ಪ್ರಕಟಿಸಲಾಗುವುದು. ರಾಜಸ್ಥಾನದಲ್ಲಿ ಈಗಿನ ಇಬ್ಬರು ಮಂತ್ರಿಗಳನ್ನೂ, ಒಬ್ಬ ಉಪ ಮಂತ್ರಿಯನ್ನೂ ಆರಿಸಿಲ್ಲ. ಕುಂಭರಾಮ ಆರ್ಯ ಎಂಬ ಮಾಜಿ ಮಂತ್ರಿಗೆ ಸ್ಥಾನ ಕೊಟ್ಟಿಲ್ಲ. ಮಾಜಿ ಮುಖ್ಯ ಮಂತ್ರಿ ಜೈ ನಾರಾಯಣ ವ್ಯಾಸರು ಲೋಕಸಭೆಗೆ ಸ್ಪರ್ಧಿಸುವರು. ಮುಖ್ಯ ಮಂತ್ರಿ ಸುಖಾಡಿಯಾರವರು ಶಾಸನ ಸಭೆಗೆ ನಿಲ್ಲುವರು

ಉತ್ತರ ಪ್ರದೇಶದಲ್ಲಿ ಪಂಡಿತ ಪಂತರನ್ನು ಬಿಟ್ಟು ಮಿಕ್ಕ ಕೇಂದ್ರ ಮಂತ್ರಿಗಳೆಲ್ಲಾ ಲೋಕಸಭಾ ಸ್ಥಾನಗಳಿಗೆ ಸ್ಪರ್ಧಿಸುವರು

ಪಂಜಾಬಿನಲ್ಲಿ ಅಕಾಲಿ ಸಿಕ್ಕರಿಗೆ ೨೮ ಮತ್ತು ದಾರೀವಾಲಾ ಗುಂಪಿನ ಸಿಕ್ಕರಿಗೆ ೫ ಸ್ಥಾನಗಳನ್ನೀಯಲಾಗುವುದು.

ಸಧ್ಯದಲ್ಲೇ ಗೋವಾ ಸತ್ಯಾಗ್ರಹಿಗಳ ಬಿಡುಗಡೆ

ಗೋವಾ ರೇಡಿಯೋವು ನೆನ್ನೆ ಪ್ರಸಾರ ಮಾಡಿ ಗೋವಾ ಮತ್ತು ಪೋರ್ಚುಗಲ್ಲುಗಳಲ್ಲಿ ಬಂಧಿತರಾಗಿರುವ ಭಾರತೀಯ ಸತ್ಯಾಗ್ರಹಿಗಳೆಲ್ಲರನ್ನೂ ಐದು ದಿನಗಳಲ್ಲಿ ಖುಲಾಸೆ ಮಾಡಲಾಗುವುದೆಂದು ತಿಳಿಸಿದೆ. ಎಷ್ಟು ಜನರನ್ನು ಬಿಡುಗಡೆ ಮಾಡಲಾಗುವುದೆಂದು ತಿಳಿಸಿಲ್ಲ. ಗೋವಾ ಜೈಲುಗಳಲ್ಲಿ ೮೫ ಮಂದಿ ಭಾರತೀಯರು ಇರುವರು. ಆ ಪೈಕಿ ಲೋಕಸಭಾ ಸದಸ್ಯ ಶ್ರೀ ದೀಪಕುಮಾರ ಚೌಧುರಿ, ಮಹಾರಾಷ್ಟ್ರ ಪಿ. ಎಸ್ ಪಿ ಮುಖಂಡರುಗಳಾದ ಎನ್ ಜಿ ಗೋರೆ ಮತ್ತು ಮಧು ಲಿಮಯೆ ಮತ್ತು ಬೊಂಬಾಯಿಯ ಶ್ರೀಮತಿ ಸಿಂಧು ದೇಶಪಾಂಡೆಯವರು ಇರುವರು. ಅವರೆಲ್ಲರನ್ನೂ ಭಾರತಕ್ಕೆ ಕಳುಹಲಾಗುವುದು

ಅರಮನೆ ನೌಕರರ ಸಂಘದ ಸಭೆ

ನಾಳೆ ಸಂಜೆ ೫॥ ಗಂಟೆಗೆ ನಗರದ ಸಹಕಾರ ಭವನದಲ್ಲಿ ಅರಮನೆ ನೌಕರರ ಸಂಘದವರು ಸಭೆಯೊಂದನ್ನು ಕರೆದಿದ್ದಾರೆ. ಪಿ ಎಸ್. ಪಿ. ಪಕ್ಷದ ಶ್ರೀ ಎಂ ಎಸ್ ಗುರುಪಾದಸ್ವಾಮಿ ಮತ್ತಿತರ ನಾಯಕರು ಅವರನ್ನುದ್ದೇಶಿಸಿ ಭಾಷಣ ಮಾಡುವರು

ಉಪನ್ಯಾಸ

ಮಹಾರಾಜಾ ಕಾಲೇಜು ಹಿಂದಿ ಸಾಹಿತ್ಯ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೪ ಗಂಟೆಗೆ ೩೭ ನೇ ನಂಬರಿನ ಕೊಠಡಿಯಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಮುಖ್ಯ ಕಾರ್ಯದರ್ಶಿ ಶ್ರೀ ಮೋಟೂರಿ ಸತ್ಯನಾರಾಯಣರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವರು

ವರ್ಣಭೇದ ನೀತಿ ತೊರೆಯಲು ದ. ಆಫ್ರಿಕಕ್ಕೆ ವಿಶ್ವಸಂಸ್ಥೆ ಕರೆ

ದಕ್ಷಿಣ ಆಫ್ರಿಕವು ತನ್ನ ವರ್ಣಭೇದ ನೀತಿಯನ್ನು ಸುಧಾರಿಸಬೇಕೆಂದೂ, ವಿಶ್ವಸಂಸ್ಥೆಗೆ ತನ್ನ ನಿಯೋಗವನ್ನು ಮತ್ತೆ ಕಳುಹಿಸಬೇಕೆಂದೂ ವಿಶ್ವಸಂಸ್ಥೆಯ ರಾಜಕೀಯ ಸಮಿತಿಯು ನೆನ್ನೆ ಸೂಚಿಸಿ ನಿರ್ಣಯ ಮಾಡಿತು. ವಿಶ್ವಸಂಸ್ಥೆಯ ಪ್ರನಾಳಿಕೆಯನ್ನು ಗೌರವಿಸಲು ಆಫ್ರಿಕವು ಇದುವರೆಗೆ ಪ್ರಯತ್ನಿಸದಿರುವುದಕ್ಕಾಗಿ ಸಮಿತಿಯು ವಿಷಾದವನ್ನು ಸೂಚಿಸಿತು. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯು ಈ ಬಗ್ಗೆ ದಕ್ಷಿಣ ಆಫ್ರಿಕಾ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸುವಂತೆಯೂ ಸೂಚಿಸಲಾಗಿದೆ

ಕಾಶ್ಮೀರದ ಸಮಸ್ಯೆ ಎಂಬುದೇ ಇಲ್ಲ

ವಿ ಕೆ ಕೃಷ್ಣಮೆನನ್ನರ ಹೇಳಿಕೆ

ನ್ಯೂಯಾರ್ಕಿನ ಟೆಲಿವಿಷನ್ ಭೇಟಿಯಲ್ಲಿ ನೆನ್ನೆ ಭಾರತದ ಮಂತ್ರಿ ವಿ ಕೆ ಕೃಷ್ಣಮೆನನ್ನರು ಮಾತನಾಡಿ ವಾಸ್ತವವಾಗಿ ಕಾಶ್ಮೀರದ ಸಮಸ್ಯೆ ಎಂಬುದೇ ಇಲ್ಲವೆಂದು ತಿಳಿಸಿರುತ್ತಾರೆ. ಕಾಶ್ಮೀರವು ಭಾರತವೇ ಆಗಿರುವುದೆಂದೂ ಅವರು ಹೇಳುವರು. ರಾಜ್ಯಾಂಗಬದ್ಧವಾಗಿಯೂ, ಬ್ರಿಟಿಷ್ ಪಾರ್ಲಿಮೆಂಟಿನ ಶಾಸನಕ್ಕನುಗುಣವಾಗಿಯೂ ಕಾಶ್ಮೀರವು ಭಾರತದಲ್ಲಿ ಸೇರಿರುವುದೆಂದೂ, ಅಲ್ಲಿ ಮಿಲಿಟರಿ ಪಿತೂರಿಯೇನೂ ಇಲ್ಲವೆಂದೂ ನುಡಿದಿರುತ್ತಾರೆ

ಅಫಿಲಿಯೇಟೆಡ್ ಕಾಲೇಜುಗಳ ಆಡಳಿತ ವ್ಯವಸ್ಥೆ ತನಿಖೆ

ಅಫಿಲಿಯೇಟೆಡ್ ಕಾಲೇಜುಗಳ ಆಡಳಿತವನ್ನು ವ್ಯವಸ್ಥೆಗೊಳಿಸುವ ವಿಚಾರದಲ್ಲಿ ಪರಿಶೀಲನೆ ನಡೆಸಲು ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟಿನವರು ಸಮಿತಿಯೊಂದನ್ನು ನೇಮಿಸುವ ಸಂಭವವಿದೆಯೆಂದು ತಿಳಿದುಬಂದಿದೆ. ನಾಳೆ ಸಿಂಡಿಕೇಟು ನಗರದಲ್ಲಿ ಸೇರಲಿದೆ. ಸೇಂಟ್ ಫಿಲೋಮಿನಾ ಕಾಲೇಜು ಅಧ್ಯಾಪಕರ ಮುಷ್ಕರದ ಬಗ್ಗೆ ತನಿಖೆಗಾಗಿ ಏರ್ಪಟ್ಟ ಸಮಿತಿಯವರು ಅಧ್ಯಾಪಕರುಗಳನ್ನೂ ಪ್ರಿನ್ಸಿಪಾಲರನ್ನೂ ಸಂಧಿಸಿ ಮಾತುಕತೆ ನಡೆಸಿದರು

ಮಹಾ ಚುನಾವಣೆಯಲ್ಲಿ ಬಿ ಸುಬ್ಬಣ್ಣನವರ ಸ್ಪರ್ಧೆ

ನಗರ ಸಭೆಯ ಮಾಜಿ ಸದಸ್ಯರಾದ ಶ್ರೀ ಬಿ. ಸುಬ್ಬಣ್ಣನವರು ಮೈಸೂರು ನಗರದ ಉತ್ತರ ಕ್ಷೇತ್ರದಿಂದ ಸಂಸ್ಥಾನ ಶಾಸನ ಸಭೆಗೆ ಸ್ಪರ್ಧಿಸುವರೆಂದು ತಿಳಿದುಬಂದಿದೆ

ಓಟರು ಪಟ್ಟಿಯಲ್ಲಿ ಬಿಟ್ಟ ಹೆಸರು ಸೇರಿಸಲು ಇನ್ನೂ ಅವಕಾಶ

ಓಟರು ಪಟ್ಟಿಗಳಲ್ಲಿ ಬಿಟ್ಟುಹೋದ ಹೆಸರುಗಳನ್ನು ಸೇರಿಸಲು ೫ ರೂ ಸ್ಟ್ಯಾಂಪು ಪೇಪರಿನಲ್ಲಿ ಕೇಂದ್ರ ಚುನಾವಣಾಧಿಕಾರಿಗಳಿಗೆ ಈ ತಿಂಗಳ ೨೫ರೊಳಗೆ ಅರ್ಜಿ ಸಲ್ಲಿಸಲು ಅವಕಾಶವಿದೆಯೆಂದೂ, ಹೆಸರು, ವಯಸ್ಸು ಇತ್ಯಾದಿ ಸಾಮಾನ್ಯ ಬದಲಾವಣೆಗಳನ್ನು ಜಿಲ್ಲಾ ಮುಖ್ಯ ಚುನಾವಣಾಧಿಕಾರಿಗಳೇ ಮಾಡಲಿರುವುದರಿಂದ ಈ ಬಗ್ಗೆ ಅವರಿಗೆ ಅರ್ಜಿ ಕಳುಹಬಹುದೆಂದೂ ತಿಳಿಸಲಾಗಿದೆ

ಪಾಕಿಸ್ತಾನದ ವಿದೇಶಾಂಗ ಮಂತ್ರಿ ನೂನರ ಪ್ರತಿಮೆ ದಹನ

ದಹಲಿಯಲ್ಲಿ ಮೊನ್ನೆ ಅಖಿಲಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ೨೦೦ ಸದಸ್ಯರು ಪಾಕಿಸ್ತಾನದ ಹೈಕಮಿಷನರರ ಕಛೇರಿ ಮುಂದೆ ಪ್ರದರ್ಶನ ನಡೆಸಿ, ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರ ಪ್ರತಿಮೆಯ ದಹನ ಮಾಡಿದರು ಕರಾಚಿಯಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನಾ ದಿನಾಚರಣೆಯನ್ನು ಖಂಡಿಸಲು ಪ್ರದರ್ಶನವನ್ನು ನಡೆಸಲಾಯಿತು ಕಾಶ್ಮೀರವು ಭಾರತದ ಭಾಗ, ಪಾಕಿಸ್ತಾನಿ ಪುಂಡುತನ ಉರುಳಲಿ, ಪಾಕಿಸ್ತಾನವು ಕಾಶ್ಮೀರದಿಂದ ಹೊರಡಬೇಕು ಎಂದು ತಿಳಿಸುವ ಭಿತ್ತಿ ಪತ್ರಗಳನ್ನು ಪ್ರದರ್ಶನಕಾರರು ಹಿಡಿದಿದ್ದರು ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರ ವ್ಯಂಗ್ಯ ಚಿತ್ರಗಳನ್ನೂ ಪ್ರದರ್ಶಿಸಲಾಯಿತು

ಮೈಸೂರಿನ ಅಧಿಕಾರಿಗೆ ವೀರಚಕ್ರ ಪ್ರಶಸ್ತಿ

ಮೈಸೂರಿನ ಸುಬೇದಾರ್ ಎ ಎಸ್ ಭೀಮಯ್ಯನವರ ಸಾಹಸವನ್ನು ಮೆಚ್ಚಿ ಮೂರನೇ ವರ್ಗದ ವೀರಚಕ್ರ ಪ್ರಶಸ್ತಿಯನ್ನು ಕೊಡಲಾಗಿ ಇದೇ ತಿಂಗಳು ೨೬ರಂದು ರಿಪಬ್ಲಿಕ್ ದಿನೋತ್ಸವದಲ್ಲಿ ಅದನ್ನು ಅವರಿಗೆ ಕೊಡಲಾಗುವುದು

ತ್ಯಾಗರಾಜ ಆರಾಧನೋತ್ಸವ

ತ್ಯಾಗರಾಜ ಆರಾಧನೆ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ಚಾಮುಂಡಿಪುರದ ಶ್ರೀ ಸರಸ್ವತೀ ಗಾನಕಲಾ ಮಂದಿರದಲ್ಲಿ ಡಾ ॥ ಬಿ ಆರ್ ನಾರಾಚೇಂದ್ರರ ವೇಣುವಾದನವು ನಡೆಯುವುದು

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ವಿಶ್ವಾಮಿತ್ರ ೩೨ ಸಂಗೀತ ವಿದ್ಯಾಶಾಲೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ವಿ॥ ಸ್ವರಮೂರ್ತಿ ನಾರಾಯಣರಾಯರ ಸಂಗೀತವು ಏರ್ಪಾಡಾಗಿದೆ

ಬೆಂಗಳೂರು ವಿದ್ಯಾರ್ಥಿನಿಗೆ ವೈಮಾನಿಕ ಶಿಕ್ಷಣ

ಬೆಂಗಳೂರು ಮಹಾರಾಣಿ ಕಾಲೇಜಿನ ಬಿ. ಎ. ತರಗತಿ ವಿದ್ಯಾರ್ಥಿನಿ ಶ್ರೀಮತಿ ಎ ಆರ್ ಪದ್ಮಿನಿಯವರು ಸರ್ಕಾರಿ ವಿಮಾನ ಶಾಲೆಯಲ್ಲಿ ವಿಮಾನ ಹಾರಾಟವನ್ನು ಅಭ್ಯಾಸ ಮಾಡುತ್ತಿರುವಳು. ಆಕೆಯು ಮೈಸೂರು ಸರ್ಕಾರದ ವಿದ್ಯಾ ಇಲಾಖಾ ಡೆಪ್ಯುಟಿ ಕಾರ್ಯದರ್ಶಿ ಶ್ರೀ ಎ ರಾಮಚಂದ್ರಯ್ಯನವರ ಮಗಳು ಮತ್ತು ಮದ್ರಾಸಿನ ಡಾ॥ ಪಿ ವರದರಾಜುಲು ನಾಯ್ಡುರವರ ಮೊಮ್ಮಗಳು ಆಕೆಯೊಡನೆ ಇನ್ನಿಬ್ಬರು ವಿದ್ಯಾರ್ಥಿನಿಯರೂ ಅದೇ ಶಿಕ್ಷಣ ಪಡೆಯುತ್ತಿರುವರು ಆಕೆಯು ಒಂದು ಬಾರಿ ಏಕಾಂಗಿಯಾಗಿ ವಿಮಾನ ಹಾರಾಟವನ್ನು ನಡೆಸಿರುತ್ತಾಳೆ

ಮೊಟ್ಟೆಯೊಳಗೆ ಮೊಟ್ಟೆ

ಬೆಂಗಳೂರಿನ ನಿವಾಸಿ ಶ್ರೀ ಎ ಎಂ ಏಕಾಂಬರಂರವರ ಮನೆಯಲ್ಲಿ ಕೋಳಿಯೊಂದು ಹಾಕಿದ ಮೊಟ್ಟೆಯಲ್ಲಿ ಮತ್ತೊಂದು ಮೊಟ್ಟೆಯು ಇದ್ದುದು ಗೊತ್ತಾಗಿದೆ ಮೊಟ್ಟೆಯನ್ನು ಬೇಯಿಸಿ ಅದನ್ನು ಕತ್ತರಿಸಲು ಹೋದಾಗ ಅದು ವಿಪರೀತ ಗಟ್ಟಿಯಾಗಿದ್ದುದರಿಂದ ಕಡೆಗೆ ಅದನ್ನು ಒಡೆದು ನೋಡಲಾಗಿ ಒಳಗೆ ಮತ್ತೊಂದು ಮೊಟ್ಟೆ ಇದ್ದುದು ಕಾಣಬಂದಿತೆಂದು ಹೇಳಲಾಗಿದೆ

ಮಾನ್ಯ ಮಿತ್ರರೇ !
ಚುನಾವಣೆ ಕಾಲದಲ್ಲಿ ನೂತನ ಮಾದರಿಯ
ಧ್ವನಿ ವರ್ಧಕ ಯಂತ್ರಗಳಿಗೂ,
ಇನ್ನು ಮುಂದೆ ಮೆಚ್ಚಿನ 1956ನೇ ಮಾಡಲ್
ಬುಷ್ ರೇಡಿಯೊ
[illegible]
ರೇಡಿಯೊ ಕ್ಲಿನಿಕ್,
"ಬುಷ್ ಹೌಸ್"
94 ಕಾಲೇಜ್ ರೋಡ್, ಮೈಸೂರು
ಒಡೆಯರು ಎ ಎಸ್ ಆನಂದ್,
[illegible] ಪುರಂ ಮೈಸೂರು

ಅಣಕು ಚುನಾವಣೆ

ನಂಜನಗೂಡು ೧೧

ಜಿಲ್ಲಾಧಿಕಾರಿಗಳಾದ ಶ್ರೀ ಡಿ ಆರ್ ಚನ್ನರುದ್ರಯ್ಯನವರು ಮತ್ತು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಚನ್ನರಾಜೆ ಅರಸಿನವರು ಇಲ್ಲಿನ ಬಾಲಕಿಯರ ಮಾಧ್ಯಮಿಕ ಶಾಲೆಯಲ್ಲಿ ಅಣಕು ಚುನಾವಣೆಗಳನ್ನು ಏರ್ಪಡಿಸಿದರು ಸುಮಾರು ೩೦೦ ಜನ ಅಧಿಕಾರಿಗಳು ಭಾಗವಹಿಸಿ, ಓಟು ಪೆಟ್ಟಿಗೆಗಳನ್ನು ಮೊಹರು ಮಾಡುವುದು ಮುಂತಾದುವನ್ನು ತಿಳಿದುಕೊಂಡರು ೬೦ ಜನರು ಓಟು ಮಾಡಿದರು

೨ ಸಂಸ್ಥಾನದ ವಿಧಾನ ಸಭೆಗೆ ಶ್ರೀ ಬಿ ವಿ ಬಾಲಸುಬ್ರಹ್ಮಣ್ಯಂರವರು ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸಲಿದ್ದಾರೆ

ಕುಂಕುಮ-ಬಳೆಗೆ ಸುಂಕದ ವಿನಾಯಿತಿಗಾಗಿ ಮನವಿ

ಗ್ವಾಲಿಯರ್ ವಿದ್ಯಾರ್ಥಿನಿಯರ ಸಂಘದ ನಿಯೋಗವೊಂದು ಅಲ್ಲಿನ ಮೇಯರರ ಬಳಿ ನಿಯೋಗ ಹೋಗಿ ಬಳೆ ಮತ್ತು ಕುಂಕುಮ ಮುಂತಾದ ಅವಶ್ಯಕ ಪದಾರ್ಥಗಳ ಮೇಲೆ ಆಕ್ಟ್ರಾಯಿ ತೆರಿಗೆಯನ್ನು ರದ್ದುಗೊಳಿಸಬೇಕೆಂದೂ ಅದರಿಂದ ಪೌರಸಭೆಗೆ ನಷ್ಟವಾದರೆ ಫೇಸ್ ಪೌಡರ್ ಕ್ರೀಂ, ಉಗುರು ಪಾಲಿಷ್ ಮತ್ತು ಲಿಪ್ ಸ್ಟಿಕ್ ಮುಂತಾದ ಅಲಂಕಾರ ವಸ್ತುಗಳ ಮೇಲೆ ತೆರಿಗೆಯನ್ನು ಹೆಚ್ಚಿಸಬಹುದೆಂದೂ ಮನವಿ ಮಾಡಿಕೊಂಡಿರುತ್ತಾರೆ ಅವರ ಅರಿಕೆಯನ್ನು ಪೌರಸಭೆಯ ಮುಂದೆ ಇಡಲಾಗುವುದೆಂದು ಮೇಯರರು ಭರವಸೆಯಿತ್ತಿರುವರು ವಿದ್ಯಾರ್ಥಿನಿಯರು ಕೊಟ್ಟ ಒಂದು ಜೊತೆ ಬಳೆಯನ್ನು ಮೇಯರರು ತೆಗೆದುಕೊಳ್ಳಲಿಲ್ಲ

ನೆಹರೂರವರಿಗೆ ಮದ್ರಾಸ್ ವಿಶ್ವವಿದ್ಯಾಲಯದ ಗೌರವ

ಮದ್ರಾಸು ವಿಶ್ವವಿದ್ಯಾಲಯದ ಶತಮಾನೋತ್ಸವ ಸಂದರ್ಭದಲ್ಲಿ ಪ್ರಧಾನಿ ನೆಹರೂರವರಿಗೆ ಇದೇ ತಿಂಗಳು ೨೮ನೇ ತಾರೀಖು ಗೌರವ ಪ್ರಶಸ್ತಿಯನ್ನೀಯಲಾಗುವುದು ಉತ್ಸವದ ಆರಂಭೋತ್ಸವವನ್ನು ಮೈಸೂರಿನ ರಾಜ್ಯಪಾಲರು ನೆರವೇರಿಸುವರು

ಎಸ್ ಆರ್ ಕಂಠಿಯವರ ಭಾಷಣ

ಸಂಸ್ಥಾನದ ವಿಧಾನ ಸಭಾಧ್ಯಕ್ಷರಾದ ಶ್ರೀ ಎಸ್ ಆರ್ ಕಂಠಿಯವರು ನಾಳೆ ಮಧ್ಯಾಹ್ನ ಗಂಟೆಗೆ ಇಲ್ಲಿನ ಮಹಾರಾಜಾ ಕಾಲೇಜಿನಲ್ಲಿ ಕೆಬ್ಬಳ್ಳಿ ವಿದ್ಯಾರ್ಥಿ ನಿಲಯದ ಸಂಘದ ಆಶ್ರಯದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವರು ಸಂಘದ ಅಧ್ಯಕ್ಷ ಶ್ರೀ ಜಿ ಎಸ್ ಹಾಲಪ್ಪನವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ

ಎಲೆಕ್ಟ್ರಿಕ್ ರೋಸ್ಟರು ಬಿಕರಿಗಿದೆ
ಕೆಲಸ ಮಾಡುತ್ತಿರುವ ಅತ್ಯಂತ ಹೊಸದಾದ ಭಾರತ್ ಎಲೆಕ್ಟ್ರಿಕ್ ರೋಸ್ಟರು ಬಿಕರಿಗೆ ಸಿದ್ಧವಾಗಿದೆ ಇವರಲ್ಲಿ ವಿಚಾರಿಸಿ —
ಸ್ಟೇಟ್ಸ್ ಇಂಜನಿಯರಿಂಗ್ ಕಂಪೆನಿ,
ಸ್ಟ್ಯಾಚ್ಯೂ ಸ್ಕ್ವೇರ್, ಮೈಸೂರು

ಸೈಟುಗಳು ಕ್ರಯಕ್ಕಿವೆ
ನಿರಂಜನ ಗಾರ್ಡನ್, ಪೋಸ್ಟಾಫೀಸ್ ರಸ್ತೆಯಲ್ಲಿ
50 + 4 1/2x60 ಕಾರ್ನರ್ ಸೈಟ್
ಹ್ಯಾಗಿನ್ಸ್ ಬಂಗ್ಲಾ ಬಳಿ, ಸಾಲೇ ರಸ್ತೆಯಲ್ಲಿ
60 x40 ಕಾಟೇಜ್ ಸೈಟು
ಆಕಾಶವಾಣಿ ಹಿಂದೆ ಯಾದವಗಿರಿಯಲ್ಲಿ
60 x40 , ಕಾಟೇಜ್ ಸೈಟು
ಒಂಟಿಕೊಪ್ಪಲು, ಪಾಠಶಾಲಾ ಮನೆ ಹಿಂಭಾಗದಲ್ಲಿ
60 x40 , ಕಾಟೇಜ್ ಸೈಟ್ಸ್
ಪ್ರತಿಯೊಂದಕ್ಕೂ ರೂ 1 250
ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ವಿಶ್ವಸಂಸ್ಥೆಗೆ ಷೇಕ್ ಅಬ್ದುಲ್ಲಾರವರ ಪತ್ರ

ಪಾಕಿಸ್ತಾನದ ನಿಯೋಗದಿಂದ ಪ್ರಕಟಣೆ

ಕಾಶ್ಮೀರದ ವಿಷಯವಾಗಿ, ಜೈಲಿನಲ್ಲಿರುವ ಮಾಜಿ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರು ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಬರೆದಿರುವರೆಂದು ಹೇಳಲಾದ ಪತ್ರವೊಂದನ್ನು ಸಂಸ್ಥೆಯಲ್ಲಿರುವ ಪಾಕಿಸ್ತಾನದ ನಿಯೋಗದವರು ಪ್ರಕಟಿಸಿ ಹಂಚಿರುತ್ತಾರೆ ಕಾಶ್ಮೀರದಲ್ಲಿ ಭಾರತದ ಕಾರ್ಯಕ್ರಮವು ಕಾಶ್ಮೀರಿಗಳ ಮೇಲೆ ವಂಚನೆಯಾಗಿದೆಯೆಂದೂ ಕಾಶ್ಮೀರಿಗಳ ಸ್ವಯಂ ನಿರ್ಣಯಾಧಿಕಾರವನ್ನು ಕಸಿದುಕೊಂಡು ಅಂತರರಾಷ್ಟ್ರೀಯ ಭರವಸೆ ಮತ್ತು ವಾಗ್ದಾನಗಳನ್ನು ಮುರಿದಂತಾಗಿದೆಯೆಂದೂ ಷೇಕ್ ಅಬ್ದುಲ್ಲಾರವರು ಅಭಿಪ್ರಾಯಪಟ್ಟಿರುವುದಾಗಿ ಆ ಪತ್ರದಲ್ಲಿ ಕಾಣಿಸಲಾಗಿದೆ ೪೦ ಲಕ್ಷ ಕಾಶ್ಮೀರಿಗಳು ಸ್ವತಂತ್ರ ವಾತಾವರಣದಲ್ಲಿ ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳಲು ನೆರವು ನೀಡಬೇಕೆಂದು ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳಿಗೆ ಪತ್ರವು ಮನವಿ ಮಾಡಿದೆ. ಈ ಸಮಸ್ಯೆಯು ಪರಿಹಾರವಾದ ಹೊರತು ಕಾಶ್ಮೀರದಲ್ಲಿ ಪ್ರಗತಿಯಾಗುವುದಿಲ್ಲವೆಂದೂ ತಿಳಿಸಲಾಗಿದೆ

ಭಾರತದಲ್ಲಿ ರಷ್ಯದ ರಕ್ಷಣಾ ಮಂತ್ರಿಯ ಪ್ರವಾಸ

ರಷ್ಯದ ರಕ್ಷಣಾ ಮಂತ್ರಿ ಮಾರ್ಷಲ್ ಜೂಕಾಫ್‌ರವರು ಇದೇ ತಿಂಗಳು ೨೪ನೇ ತಾರೀಖು ದೆಹಲಿಗೆ ಆಗಮಿಸಿ ಭಾರತದಲ್ಲಿ ೧೮ ದಿನಗಳ ಕಾಲ ಪ್ರವಾಸ ಮಾಡುವರು ಅವರು ದೆಹಲಿಯಲ್ಲಿ ನಡೆಯುವ ರಿಪಬ್ಲಿಕ್ ದಿನೋತ್ಸವದಲ್ಲಿ ಭಾಗವಹಿಸುವರು ಫೆಬ್ರವರಿ ೧ ರಂದು ಬೆಂಗಳೂರಿಗೂ ಭೇಟಿ ಕೊಡುವರು ದ್ವಿತೀಯ ಮಹಾಯುದ್ಧಾನಂತರ ರಷ್ಯದ ಪ್ರಥಮ ಮಿಲಿಟರಿ ನಾಯಕರು ಕಮ್ಯೂನಿಸ್ಟೇತರ ರಾಷ್ಟ್ರಕ್ಕೆ ಭೇಟಿ ಕೊಡುವುದು ಇದೇ ಮೊದಲು ಜುಕಾಫರು ರಷ್ಯದ ಅತ್ಯುನ್ನತ ಮಿಲಿಟರಿ ನಾಯಕರಾಗಿರುವರಲ್ಲದೆ, ವಿಶ್ವದ ದಂಡನಾಯಕರಲ್ಲೂ ಪ್ರಖ್ಯಾತರಾದವರು

The Cauvery Valley Paper Mills Ltd.,
(In Liquidation)
Statue Square, Mysore
FOR SALE
Offers are invited for the purchase of the following materials upto 5 P M on Wednesday the 30th January 1957
Pipe couplings, grease cups, bearings of various sizes, Gate Valves, Rubber, Canvas and hair beltings, Electric motors, starters, switches, insulated wires, shell verina grease, asbestos rope, asbestos powder, fireclay, China clay, Magnesia compound etc "
For terms and conditions of sale, please contact the undersigned Goods are open to inspection with prior engagement with the undersigned
S SANJEEVIAH
B A B.Com., B L
Y S LINGAIAH
B A B L.
Official Liquidators,
The Cauvery Valley Paper Mills Ltd,
(In Liquidation)
Clock Tower Square
Mysore
18 1 57

ಜಪಾನಿನಲ್ಲಿ ವಿನೋಬಾ ಭಾವೆಯವರ ಪಾದಯಾತ್ರೆ

ಆಚಾರ್ಯ ವಿನೋಬಾಭಾವೆಯವರು ಜಪಾನಿನಲ್ಲಿ ಪಾದಯಾತ್ರೆ ನಡೆಸಲು ಒಪ್ಪಿರುತ್ತಾರೆ ಭಾರತದಲ್ಲಿ ಪಾದಯಾತ್ರೆ ಮುಗಿದನಂತರ ಅವರು ಅಲ್ಲಿಗೆ ಹೋಗುವರು. ಈ ಸಂದರ್ಭದಲ್ಲಿ ಸ್ವಾಮಿ ಆನಂದಜಿ ಮತ್ತು ಒಬ್ಬ ಭಿಕ್ಷುಣಿಯವರು ಜಪಾನಿನಲ್ಲಿ ಪೂರ್ವಭಾವಿ ಕೆಲಸವನ್ನು ನಡೆಸುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಮುಖವೀಣೆ. ೭-೧೫ ಮಸ್ತ ೮-೧೫ ಎಸ್ ಮಹದೇವಪ್ಪ-ದೇವರನಾಮ ಮಧ್ಯಾಹ್ನ ೧೨ ಪಿ ಎಸ್ ರಂಗರಾವ್-ಪಿಟೀಲು ೧೨-೩೦ ರಿಕಾರ್ಡು ೧ ಎಸ್. ಮಹದೇವಪ್ಪ- ಸಂಗೀತ. ೧-೫೦ ಮುಖವೀಣೆ ೨-೧೫ ಸಂಗೀತ ಸಂಜೆ ೫ ೩೦ ಎಸ್ ಅಬ್ಬಾಯದಾಸ್-ನಾಗಸ್ವರ ೬-೫ ವಿರಾಮಸಂಗೀತ ೬-೩೦ ದೇವರನಾಮ ೭-೩೦ ನಾವು ಮತ್ತು ನಮ್ಮವರು ೮ ಹೊಸ ಕನ್ನಡ ಪಿತಾಮಹರು ೮ ೩೦ ನೇತಾಜಿಬೋಸ್ ಬಗ್ಗೆ ವಿಚಾರವೇದಿಕೆ ೯ ೩೦ ರಿಕಾರ್ಡು ೯ ೧೫ ಆರ್ ಎಸ್ ಕೇಶವಮೂರ್ತಿ-ವೀಣೆ

ಗೃಹಕೃತ್ಯದ ನೋಟೀಸು

ಮೈಸೂರು ಸಿಟಿ ವಾಣಿವಿಲಾಸ ಮೊಹಲ್ಲಾದಲ್ಲಿರುವ ಅರಸುಗಳ ಜಾತಿ ಕಗ್ಗಳದ ಪಟೇಲ್ ವೀರರಾಜ ಅರಸಿನವರ ಮಗಳು ಕೃಷ್ಣಾಜಮ್ಮಣ್ಣಿ ಆದ ನಾನು ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವುದೇನೆಂದರೆ -

ಮಂಡ್ಯ ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕು ದೊಡ್ಡ ಸ್ವಗೌಡನಪುರ ಹೋಬಳಿ ಕಗ್ಗಳ ಗ್ರಾಮದಲ್ಲಿರುವ ಹೊಸಹಟ್ಟಿ ಪಟೇಲ್ ವೀರರಾಜ ಅರಸಿನವರು ನನ್ನ ತಂದೆ ಇವರಿಗೆ ಇದ್ದ ಇಬ್ಬರು ಗಂಡು ಮಕ್ಕಳ ಪೈಕಿ ಒಬ್ಬರು ಸಂತಾನವಿಲ್ಲದೆಯೂ, ಎರಡನೆಯವರು ಅವಿವಾಹಿತರಾಗಿಯೂ 1932ರಲ್ಲೇ ಮೃತಪಟ್ಟರು ನನ್ನ ತಾಯಿ ಮತ್ತು ವೀರರಾಜ ಅರಸಿನವರ ಕುಟುಂಬ ಪಾರ್ವತಮ್ಮಣ್ಣಿಯವರು 194೦ರ ಸುಮಾರಿನಲ್ಲೇ ಮೃತಪಟ್ಟರು ನನ್ನ ತಂದೆ ವೀರರಾಜೇ ಅರಸಿನವರಿಗೆ 80 ವರ್ಷದ ವೃದ್ಧಾಪ್ಯವೂ, ತತ್ಸಂಬಂಧವಾಗಿ ಅಶಕ್ತತೆಯೂ, ಮರವೆಯೂ ಇರುತ್ತೆ ಅವರಿಗೆ ದೃಷ್ಟಿ ಬಹಳ ಮಟ್ಟಿಗೆ ಕಡಿಮೆ ಕಿವಿ ಕೇಳುವುದಿಲ್ಲ. ಇವರಿಗೆ ಕಗ್ಗಳ ಗ್ರಾಮದಲ್ಲಿ ಮನೆಗಳೂ ಜಮೀನುಗಳೂ, ಚರ ಸ್ವತ್ತುಗಳೂ ಸೇರಿ ಸುಮಾರು 20 ಸಾವಿರ ರೂಪಾಯಿಗಳ ಆಸ್ತಿ ಇರುತ್ತೆ ಕೆಲವು ಸ್ವಾರ್ಥಿಗಳ ದುಸ್ಸಲಹೆಗೆ ಈಡಾಗಿ, ಅರಳುಮರಳು ಕಾಲದಲ್ಲಿ ಮೇಲ್ಕಂಡ ಸ್ವತ್ತುಗಳನ್ನು ಬಹುಮಟ್ಟಿಗೆ ಪರಭಾರೆ ಮಾಡಿ,ಪೋ ಮಾಡಲು ಅವರು ಉದ್ಯುಕ್ತರಾಗಿರುತ್ತಾರೆಂ ತಿಳಿದುಬಂದಿದೆ.

ನನ್ನ ತಂದೆಯವರಿಗೆ ದೋಹಿತ್ರರು ಇರು ರೆ ಅವರಿಗೆ ನಾನೊಬ್ಬಳೇ ಜೀವಂತ ಸಂತಾ ನನಗೆ ಸದರಿ ಸ್ವತ್ತುಗಳ ಮೇಲೆ ಹಕ್ಕು ತ್ತೆ. ನನ್ನ ತಂದೆಯವರು ನನ್ನ ಎರಡನೇ ನನ್ನು ದತ್ತು ತೆಗೆದುಕೊಳ್ಳಲು ವಾಗ್ದಾನ ಡಿರುತ್ತಾರೆ ನಾವು ಆ ರೀತಿ ದತ್ತು ಕೊ ಯಾವಾಗಲೂ ಸಿದ್ಧರಾಗಿರುತ್ತೇವೆ ನನ್ನ ದೆಯವರಿಗೆ ಸ್ವತ್ತುಗಳನ್ನು ಪರಭಾರೆ ಮಾ ಯಾವ ಕಾರಣವೂ, ಅವಶ್ಯಕತೆಯೂ, ಹಕ್ಕೂ ಇರುವುದಿಲ್ಲ ಆ ರೀತಿ ಮಾಡಬಹು ಯಾವ ವ್ಯವಹಾರವೂ ನ್ಯಾಯವಾದ ದಾರಳಾದ ನನ್ನನ್ನು ಬದ್ಧಪಡಿಸುವುದಿಲ್ಲವೆಂ ಈ ಮೂಲಕ ಎಚ್ಚರಿಸಿರುತ್ತೇನೆ ಸ್ವತ್ತುಗಳ ವಿವರ.-

1 ಒಂದು ಹಳೇ ಮನೆ-ಲಗತ್ತಾದ ಕೊಟ್ಟಿ ಭಾವಿ ಹಿತ್ತಲು 2 ಒಂದು ಮಹಡಿ ಮನೆ 3 ರಿಗಾಲಿ ನಾಲೆ ಬೈಲಿನಲ್ಲಿ ಕಟ್ಟಿರುವ ಒಂದು ನೆ 4 ಪೂರಿಗಾಲಿ ನಾಲಾ ಬೈಲು ಕಗ್ಗ ಕೆಳಗಿನ ಗದ್ದೆಗಳು 5 ಕಗ್ಗಳ ಗ್ರಾಮಕ್ಕೆ ಸೇ ಖುಷ್ಕಿ ಜಮೀನು, ದನಗಳ ಹುಲ್ಲುಗಾವಲು ತ್ತು ನೀರಿನ ಕಟ್ಟೆ.

(ಸಹಿ) ಕೃಷ್ಣಾಜಮ್ಮ

[illegible] ನಂ. 792

ಸತ್ಯನಾರಾಯಣ
ರೈಸ್ ಮಿಲ್,
ಶಿವರಾಂಪೇಟೆ, ಮೈಸೂರು
(ರಾಯಲ್ ಟಾಕೀಸ್ ಹತ್ತಿರ)
★
ಈಗ ಸುಗ್ಗಿ ಕಾಲ–ಭತ್ತ ಮಿಲ್ಲಿನ
ಲ್ಲಿ ಸೊಗಸಾಗಿ, ಸರಿಯಾದ
ಅಳತೆಗೆ ಅಕ್ಕಿ ಇಳಿಸು
ತ್ತೇವೆ. ಪರೀಕ್ಷಿಸಿರಿ



ಬಿಡಿ ಪ್ರತಿ [illegible] 3 ಕಾಸು

ಬ್ರಾಂಕಾಲ್
[illegible]
★
[illegible]
ಸತ್ಯ ಅಂಡ್ ಕೋ.,
[illegible]
71/1 [illegible]
[illegible]
ಬೆಂಗಳೂರು-2

ಪುಟ : ೧೫] SADHVI : WEDNESDAY 23—1—1957 ಮೈಸೂರು : ಬುಧವಾರ ೨೩—೧—೧೯೫೭ : [ಸಂಚಿಕೆ : [illegible]

ಪಾಕಿಸ್ತಾನದ ವರ್ತನೆ ಖಂಡಿಸಿ ವಿದ್ಯಾರ್ಥಿಗಳ ಮುಷ್ಕರ

ನಗರದಲ್ಲಿ ನಾನಾ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಕಿಸ್ತಾನದಲ್ಲಿ ಭಾರತದ ಧ್ವಜ ಮತ್ತು ಯಕರ ಅಪಮಾನಕ್ಕಾಗಿ ಪ್ರತಿಭಟನೆ

ಮೈಸೂರು ೨೩

ಪಾಕಿಸ್ತಾನದಲ್ಲಿ ಇತ್ತೀಚೆಗೆ ನಡೆದ ಪ್ರತಿಭಟ ದಿನಾಚರಣೆಯ ಅಂಗವಾಗಿ ಕರಾಚಿಯಲ್ಲಿ ರತದ ರಾಷ್ಟ್ರಧ್ವಜ ಮತ್ತು ನಾಯಕರ ಬಗ್ಗೆ ಅಪಮಾನವನ್ನು ಪ್ರತಿಭಟಿಸಲು ಅಖಿಲ ರತ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಇತ್ತ ಕರೆ ಅನುಸಾರವಾಗಿ ಈ ದಿನ ನಗರದ ಹಲವಾ ಕಾಲೇಜು ವಿದ್ಯಾರ್ಥಿಗಳು ಮುಷ್ಕರ ಹೂಡಿ ರಗತಿಗಳಿಗೆ ಹೋಗದೆ ನಿಂತುಬಿಟ್ಟರು ನ್ಯಾಷ ಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿ ಎಲ್ಲಾ ವಿದ್ಯಾರ್ಥಿಗಳೂ ಮುಷ್ಕರದಲ್ಲಿ ಭಾಗ ಹಿಸಿದುದರಿಂದ ಅಲ್ಲಿ ತರಗತಿಗಳೇ ನಡೆಯ

ಶಾರದಾವಿಲಾಸ ಕಾಲೇಜಿನ ೬೦೦ ವಿದ್ಯಾ ರ್ಥಿಗಳೂ ಮುಷ್ಕರದಲ್ಲಿ ಭಾಗವಹಿಸಿದ್ದರು ಅವ ಸಭೆಯನ್ನು ನಡೆಸಿ ಪಾಕಿಸ್ತಾನದ ವಿದ್ಯಾ ರ್ಥಿಗಳ ವರ್ತನೆಯನ್ನು ಖಂಡಿಸಿದರು ಪಾಕಿ ಸ್ತಾನದ ಪ್ರಧಾನಿ ಸುಹ್ರಾವರ್ದಿಯವರ ಪ್ರತಿ ಕೃತಿಯನ್ನು ಸುಡಲಾಯಿತು ಬನುಮಯ್ಯನವರ [illegible]ರ್ಸ್ ಕಾಲೇಜಿನಲ್ಲೂ ತರಗತಿಗಳಲ್ಲಿ ಸ್ವಲ್ಪ ಹುಡುಗರು ಮಾತ್ರ ಇದ್ದರು ಮಿಕ್ಕವರು ಹೊ ಹೊರಟುಹೋದರು.

ಮೆಡಿಕಲ್, ಮಹಾರಾಣಿ, ಸೇಂಟ್ ಫಿಲೊಮಿನಾ ಮುಂತಾದ ಕಾಲೇಜುಗಳಲ್ಲಿ ತರಗತಿಗ ನಡೆದು ವಿದ್ಯಾರ್ಥಿಗಳು ಹೊರಬಂದಂತೆ ತಿ ಬಂದಿಲ್ಲ ಮಹಾರಾಜಾ ಕಾಲೇಜಿನಲ್ಲೂ ಯುವರಾಜಾ ಕಾಲೇಜಿನಲ್ಲೂ ತರಗತಿಗ ಬೆಳಗ್ಗೆ ನಡೆದುವು.

ಈ ಬೆಳಗ್ಗೆ ವಿದ್ಯಾರ್ಥಿಗಳು [illegible] ಮೆರವಣಿಗೆಯೊಂದನ್ನು ತೆಗೆದುಕೊಂ ಬೀದಿಗಳಲ್ಲಿ ಹೋದರು ಪಾಕಿಸ್ತಾನದವರ ರ್ತನೆಯನ್ನು ಖಂಡಿಸಲಾಯಿತು.

ಅರಮನೆ ಗ್ಯಾರೇಜ್ ಅಧಿಕಾರಿ ಗೋಪಾಲರಾವ್ ಅರಸರ ರಾಜೀನಾಮೆ

ಅರಮನೆ ಗ್ಯಾರೇಜಿನ ಅಧಿಕಾರಿಗಳೂ, ಚಾ ಮುಂಡಿ ಜಮಖಾನ [illegible] ಮೇಲ್ವಿಚಾರಕರೂ ಆದ ಶ್ರೀ ವಿ ಗೋಪಾಲರಾವ್ ಅರಸಿನವರು ತಮ್ಮ ದ್ದೆಗೆ ರಾಜೀನಾಮೆ ಕೊಟ್ಟಿರುವರೆಂದು ತಿಳಿ ದುಬಂದಿದೆ ಶ್ರೀ ಅರಸರು [illegible]ಯದಲ್ಲಿ ಸ್ಥಿರ ಗುವರೆಂದು ಹೇಳಲಾಗಿದೆ.

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸಗಳು

ಮೈಸೂರು ವಿಶ್ವವಿದ್ಯಾಲಯದ ವಿಶೇಷೋಪ ನ್ಯಾಸಗಳ ಅಂಗವಾಗಿ ಅಮೆರಿಕದ ಬಾಲ್ಟಿಮೋರ್ ನಗರದ ಜಾನ್ ಹಾಪ್ಕಿನ್ಸ್ ವಿ ಯ ಡಾ|| ಹೆರ್ಲೆ ಬಿ ಟೌಸಿಗ್‌ರವರು ಇಂ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಮತ್ತು ನಾಳಿದ್ದು ಸಂಜೆ ೫|| ಗಂಟೆಗೆ ಹೃ ರೋಗಗಳ ಬಗ್ಗೆ ಉಪನ್ಯಾಸಗಳನ್ನು ಡುವರು ಸರ್ವರಿಗೂ ಸ್ವಾಗತವಿದೆ

ನಗರದಲ್ಲಿ ಸಿರಿಯದ ಅಧ್ಯಕ್ಷರು

ಮೈಸೂರು ೨೩

ನೆನ್ನೆ ಬೆಂಗಳೂರಿಗೆ ಆಗಮಿಸಿದ ಸಿರಿಯಾ ಅಧ್ಯಕ್ಷರ ಅಪೇಕ್ಷೆಯಂತೆ ಕೃಷ್ಣರಾಜಸಾಗರದ ಬೃಂದಾವನದಲ್ಲಿ ವಿಶೇಷ ದೀಪೋತ್ಸವವನ್ನು ಏರ್ಪಡಿಸಲಾಗಿತ್ತು ಅವರು ಮತ್ತು ಅವರ ಪರಿವಾರದವರು ಸುಮಾರು ೨ ಗಂಟೆಗಳ ಕಾಲ ಅಲ್ಲಿ ವಿಹರಿಸಿ ಅನಂತರ ಮೈಸೂರಿಗೆ ಆಗಮಿಸಿದರು

ಇಂದು ಬೆಳಗ್ಗೆ ನಗರದಲ್ಲಿ ಮೃಗಾಲಯ ಮತ್ತು ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯಗಳಿಗೆ ಭೇಟಿಯಿತ್ತರು ಅವರೊಡನೆ ಸಂಸ್ಥಾನ ಸರ್ಕಾರದ ಪರವಾಗಿ ಸಚಿವ ಶ್ರೀ ಸಿ ಎಂ ಪೂಣಚ್ಚರವರು ಇದ್ದರು ಸಿರಿಯಾ ಅಧ್ಯಕ್ಷರಿಗೆ ದಂತದ ಆನೆಯನ್ನು ಕೆತ್ತಿದ್ದ ಸುಂದರವಾದ ಟೇಬಲ್ ಲ್ಯಾಂಪ್, ಗ್ರಾಮ ಜೀವನದ ದೃಶ್ಯವನ್ನು ರಚಿಸಲಾಗಿದ್ದ ಒಂದು ಮೇಜ, ಭಾರತದ ರಾಷ್ಟ್ರ ಸಂಕೇತವುಳ್ಳ ಒಂದು ಚಿತ್ರ ಮತ್ತು ಒಂದು ವಾಕಿಂಗ್ ಸ್ಟಿಕ್ಕನ್ನು ಬಹುಮಾನವಾಗಿ ಅರ್ಪಿಸಲಾಯಿತು ಸಿರಿಯದ ಅಧ್ಯಕ್ಷರು ೧,೮೦೦ ರೂ ಬೆಲೆ ಬಾಳುವ ಹಲವು ಕಲಾವಸ್ತುಗಳನ್ನು ಕೊಂಡುಕೊಂಡರು ಅನಂತರ ಕುವಾಟ್ಲೆಯವರು ಬೆಂಗಳೂರಿಗೆ ಹಿಂದಿರುಗಿದರು

ಕಳ್ಳತನಕ್ಕಾಗಿ ಸಜಾ

ರಾಜಾರಾಮ ಅಗ್ರಹಾರದಲ್ಲಿ ಕಳ್ಳತನ ನಡೆಸಿದನೆಂದು ದಸ್ತಗಿರಿ ಮಾಡಲ್ಪಟ್ಟ ಮೈಕೇಲ್ ಉರುಫ್ ರಾಜು ಎಂಬುವನ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನಗರದ ನ್ಯಾಯಾಧೀಶರು ಆಪಾದಿತನಿಗೆ ಎರಡು ತಕ್ಸೀರುಗಳಿಗಾಗಿ ತಲಾ ೩ ತಿಂಗಳ ಕಠಿಣ ಸಜಾವನ್ನು ವಿಧಿಸಿರುವರು ಎರಡು ಶಿಕ್ಷೆಗಳನ್ನೂ ಏಕಕಾಲದಲ್ಲಿ ಅನುಭವಿಸುವಂತೆ ಆಜ್ಞೆಯಾಗಿದೆ

ಬೇವಿನ ಮರದಲ್ಲಿ ಹಾಲು

ನಗರದ ಶಾಲಾ ಬೀದಿಯಲ್ಲಿ ಶ್ರೀ ಕೆ ಆರ್ ಯಲ್ಲಪ್ಪನವರ ಯಲ್ಲಮ್ಮತಾಯಿ ಗುಡಿಯಲ್ಲಿರುವ ಬೇವಿನ ಮರದಲ್ಲಿ ಹಾಲು ಸುರಿಯುತ್ತಿರುವುದೆಂದೂ, ಅದಕ್ಕೆ ಕೈಯೊಡ್ಡಿ ಕುಡಿದರೆ ಸಿಹಿಯಾಗಿದ್ದು ಪಾತ್ರೆಯಲ್ಲಿ ಹಿಡಿದು ಕುಡಿದರೆ ಕಹಿಯಾಗುತ್ತದೆಂದೂ ತಿಳಿದುಬಂದಿದೆ. ಅನೇಕರು ಈ ವಿಚಿತ್ರವನ್ನು ನೋಡಲು ಬರುತ್ತಿರುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಕ್ಲಾರಿಯೊನೆಟ್. ೭-೧೫ ಎ ಎಲ್ ಪ್ರಸನ್ನಕುಮಾರಿ-ದೇವರನಾಮ ೭-೩೦ ಮತ್ತು ೮-೧೫ ಹೆಚ್ ಕೆ. ರಾಮಸ್ವಾಮಿ-ಕಾವ್ಯವಾಚನ ಮಧ್ಯಾಹ್ನ ೧೨ ಎ ಎಲ್ ಪ್ರಸನ್ನಕುಮಾರಿ-ಸಂಗೀತ ೧೨-೩೦ ಹೆಚ್ ವಿ ಕೃಷ್ಣರಾವ್-ಪಿಟೀಲು ೧ ಕೆ ಎಸ್ ಮೋರೆ-ಹಿಂದೂಸ್ತಾನಿ ಸಂಗೀತ ೧-೫೦ ಕ್ಲಾರಿಯೊನೆಟ್ ೨-೧೫ ಸಂಗೀತ ಸಂಜೆ ೫ ೩೦ ಹಿಂದೂಸ್ತಾನಿ ಸಂಗೀತ ೬-೫ ವಿ ರಾಮಮೂರ್ತಿ ಗೀತ ೬-೨೦ ಜಾನಪದ ಗೀತೆಗಳು ೭-೩೦ ಮುಖ್ಯ ಚುನಾವಣಾಧಿಕಾರಿಯ ಭಾಷಣ-ಕನ್ನಡ ತರ್ಜುಮೆ ೮ ಹೆಚ್ ವಿ ಕೃಷ್ಣರಾವ್-ಪಿಟೀಲು ೮-೩೦ ನಿಮ್ಮ ಮೆಚ್ಚಿನ ಗೀತೆ ೯-೧೫ ಇಂಗ್ಲಿಷ್ ಭಾಷಣ. ೯-೩೦ ರಾಷ್ಟ್ರೀಯ ನಾಟಕ

ವಿಧಾನ ಸಭೆಯ ೧೨೫ ಸ್ಥಾನಗಳಿಗೆ ಪಿ.ಎಸ್.ಪಿ. ಅಭ್ಯರ್ಥಿಗಳು

ಬೆಂಗಳೂರು ೨೩

ಪ್ರಜಾ ಸಮಾಜವಾದಿ ಪಕ್ಷದವರು ವಿಧಾನ ಸಭೆಯ ೨೦೮ ಸ್ಥಾನಗಳ ಪೈಕಿ ೧೨೫ ಮತ್ತು ಲೋಕ ಸಭೆಯ ೨೩ ಸ್ಥಾನಗಳಿಗೆ ತಮ್ಮ ಉಮೇದುವಾರರನ್ನು ನಿಲ್ಲಿಸಲು ನಿರ್ಧರಿಸಿರುತ್ತಾರೆ

ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ಜೆ ಎಂ ಇಮಾಮರು ಲೋಕಸಭೆಗೆ ಚಿತ್ರದುರ್ಗ ಜಿಲ್ಲೆಯಿಂದಲೂ, ಶ್ರೀ ಬಿ ಪುಟ್ಟೇಗೌಡರು ತಿಪಟೂರಿನಿಂದಲೂ, ಶ್ರೀ ಎಂ. ಸಿ ಲಿಂಗೇಗೌಡರು ಮಂಡ್ಯದಿಂದಲೂ ನಿಲ್ಲುವರು

ಶ್ರೀ ಜೆ ಬಿ. ಮಲ್ಲಾರಾಧ್ಯರು ನಂಜನಗೂಡು ತಾಲ್ಲೂಕು ಬಿಳಿಗೆರೆ ಕ್ಷೇತ್ರದಿಂದ ವಿಧಾನ ಸಭೆಗೆ ಪಕ್ಷದ ಪರವಾಗಿ ನಿಲ್ಲುವರು ಮೈಸೂರು ಜಿಲ್ಲೆಯಿಂದ ಕೆಳಗೆ ಕಂಡವರು ವಿಧಾನ ಸಭೆಗೆ ಸ್ಪರ್ಧಿಸಲಿರುವರು —

ಕೊಳ್ಳೇಗಾಲ (೨)-ಶ್ರೀ ಕೆ ಪಿ ಶಾಂತಮೂರ್ತಿ ಮತ್ತು ಬಿ ಆರ್ ಪುಟ್ಟರಾಜ್ (ಮೀಸಲು), ಚಾಮರಾಜನಗರ (೨) ಶ್ರೀ ಯು ಎಂ. ಮಾದಪ್ಪ ಮತ್ತು ಬಿ ಬಸವಯ್ಯ (ಮೀಸಲು); ನಂಜನಗೂಡು ಶ್ರೀ ಬಿ ಎಲ್. ಎಸ್ ಆರಾಧ್ಯ, ಟಿ ನರಸೀಪುರ - ಶ್ರೀ ಎಸ್ ಶ್ರೀನಿವಾಸಯ್ಯಂಗಾರ್, ಮೈಸೂರು ತಾಲ್ಲೂಕು ಶ್ರೀ ಬಿ ಶ್ರೀಕಂಠಪ್ಪ, ಗುಂಡ್ಲುಪೇಟೆ-ಶ್ರೀಮತಿ ರತ್ನಮ್ಮ ಸುಬ್ಬಣ್ಣ

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ಶ್ರೀ ನಂಜಪ್ಪ ಸಾತಿಗ್, ಪಾಂಡವಪುರ-ಶ್ರೀ ಡಿ ಚನ್ನಯ್ಯ ಮಳವಳ್ಳಿ-ಶ್ರೀ ಬಿ ಪಿ ನಾಗರಾಜಮೂರ್ತಿ ಮದ್ದೂರು ಎಸ್. ಕೆ. ಚಿಕ್ಕಣ್ಣ, ನಾಗಮಂಗಲ-ಶ್ರೀ ಕೆ. ಮರಿಯಪ್ಪ

ಓಡುತ್ತಿದ್ದ ರೈಲಿನಲ್ಲಿ ಕೊಲೆ ಮತ್ತು ೮೦,೦೦೦ ರೂ. ದರೋಡೆ

ಉತ್ತರ ಪ್ರದೇಶದ [illegible] ಮತ್ತು [illegible] ನಡುವೆ ಮೊನ್ನೆ ಮಧ್ಯಾಹ್ನ ಓಡುತ್ತಿದ್ದ ರೈಲಿನಲ್ಲಿ ಆರು ಜನ [illegible] ದರೋಡೆ ನಡೆಸಿ, ಭಾರತದ 'ಸ್ಟೇಟ್' ಬ್ಯಾಂಕಿನ' ಸರಾಫ್ ರಾಮಕೃಷ್ಣ ಮಿಶ್ರ ಮತ್ತು ಕಾವಲುಗಾರ ಸ್ವಾಮಿದಯಾಳರ ಮೇಲೆ ಗುಂಡು ಹಾರಿಸಿ ಸ್ವಾಮಿದಯಾಳರನ್ನು ಕೊಂದು, [illegible] ಗೆ ಬಿಟ್ಟು [illegible] ಮೇಲೆಗೆ ಒತ್ತರಿಸಿ, ಅವರ ಬಳಿ ಇದ್ದ ೮೦,೦೦೦ ರೂ ಗಳನ್ನು ಅಪಹರಿಸಿರುತ್ತಾರೆ ಅವರು ಕಾವಲುಗಾರನ ಕೋವಿಯನ್ನೂ, ಮದ್ದನ್ನೂ ಹೊತ್ತುಕೊಂಡು ಹೋಗಿರುವರು

ಗೋವಾ ಜೈಲಿನಿಂದ ಭಾರತೀಯರ ಖುಲಾಸೆ

ಜಗನ್ನಾಥರಾವ್ ಜೋಷಿ, ಎನ್ ಜಿ ಗೋರೆ ಮಧು ಲಿಮಯೆ ಮತ್ತು ಇತರ ನಾಲ್ವರನ್ನು ಪೋರ್ಚುಗೀಸರು ಮೊನ್ನೆ ಬೆಳಗ್ಗೆ ಬಿಡುಗಡೆ ಮಾಡಿದರು ಅವರನ್ನು ಸ್ವಾಗತಿಸಲು ಬೆಳಗಾಮಿನಿಂದ ಜನಸಂಘದ ಕಾರ್ಯಕರ್ತರು ಗಡಿಗೆ ತೆರಳಿದ್ದಾರೆ ಬಂಧಿತರಿಗೆ ತಲಾ ೧೦ ವರ್ಷ ಸಜಾ ವಿಧಿಸಲಾಗಿತ್ತು

ಜೋರ್ಡಾನ್ ಮತ್ತು ಬ್ರಿಟನಿನ ನಡುವೆ ಒಪ್ಪಂದದ ರದ್ದು

[illegible]

ಬ್ರಿಟನ್ನಿನೊಡನೆ ಜೋರ್ಡಾನು [illegible] ತಿರುವ ಒಪ್ಪಂದವು ರದ್ದಾಗಿ [illegible] ತು ಎರಡು ರಾಷ್ಟ್ರಗಳ ನಡುವೆ [illegible] ಗುತ್ತದೆಂದು ಜೋರ್ಡಾನಿನ ಪ್ರಧಾನಿಯವರು ತಿಳಿಸಿರುತ್ತಾರೆ ಜೋರ್ಡಾನಿನಿಂದ ಬ್ರಿಟಿಷ್ ಸೈನ್ಯ ಪಡೆಗಳನ್ನು ಹಿಂದಕ್ಕೆ ಕರೆಸುವ ಮತ್ತು ಅಲ್ಲಿರುವ ಬ್ರಿಟಿಷ್ ನೆಲೆಗಳನ್ನು [illegible] ಮಾತುಕತೆಗಳು ನಡೆಯುವುವು ೧೯೪೮ ರಲ್ಲಿ ಆದ ಒಪ್ಪಂದದ ಪ್ರಕಾರ ವರ್ಷಂಪ್ರತಿ ೧೨ ಮಿ [illegible] ಪೌಂಡನ್ನು ಬ್ರಿಟನ್ನು ಜೋರ್ಡಾನಿಗೆ ಕೊಡುತ್ತಿತ್ತು. ಈಗ ಈಜಿಪ್ಟ್, ಸಿರಿಯಾ, ಸೌದಿ ಅರೇಬಿಯಾ, ಜೋರ್ಡಾನ್ ರಾಷ್ಟ್ರ [illegible] ಸಭೆ ನಡೆಸಿ ಬ್ರಿಟಿಷ್ ದ್ರವ್ಯ ಸಹಾಯದ ಬದಲು ಅರಬ್ ರಾಷ್ಟ್ರಗಳು ಜೋರ್ಡಾನಿಗೆ ಸಹಾಯ ನೀಡಬೇಕೆಂದು ನಿರ್ಧರಿಸಿದರು.

ಟೌನ್‌ಹಾಲ್ ಮೈದಾನದಲ್ಲಿ ವಿದ್ಯಾರ್ಥಿಗಳ ಸಭೆ

ಮೈಸೂರು ೨೩

ನಗರದ ನಾನಾ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಈ ಮಧ್ಯಾಹ್ನ ಟೌನ್‌ಹಾಲಿನಲ್ಲಿ ಶ್ರೀ ಸಿ ಎಸ್ ಅನಂತಪದ್ಮನಾಭನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪಾಕಿಸ್ತಾನದ ವಿದ್ಯಾರ್ಥಿಗಳ ವರ್ತನೆಯನ್ನು ಖಂಡಿಸಿ ನಿರ್ಣಯ ಮಾಡಿದರು. ಪಾಕಿಸ್ತಾನದೊಡನೆ ಭಾರತವು ರಾಜತಂತ್ರ ಸಂಬಂಧವನ್ನು ಕಡಿದುಕೊಳ್ಳಬೇಕೆಂದೂ ಸೂಚಿಸಲಾಯಿತು ಈ ಬೆಳಗ್ಗೆ [illegible] ಯದ ವಿದ್ಯಾರ್ಥಿಗಳು [illegible] ಗೆ ನಡೆಸಿದರು

ಕಾಂಗ್ರೆಸ್ ಉಮೇದುವಾರರ ಪಟ್ಟಿ ಬಗ್ಗೆ ವಿರೋಧ

[illegible] ಕಾಂಗ್ರೆಸ್ ಕಾರ್ಯಕರ್ತರ ಸಭೆ

ಬೆಂಗಳೂರು ೨೩

ಸಂಸ್ಥಾನದ ೧೫೦ ಮಂದಿ ಸಕ್ರಿಯ ಕಾಂಗ್ರೆಸ್ ಸದಸ್ಯರು-ಮಾಜಿ ಕಾಂಗ್ರೆಸ್ ಅಧ್ಯಕ್ಷರೂ ಮಾಜಿ ಮಂತ್ರಿಗಳೂ ಆದ ಶ್ರೀ ಕೆ ಸಿದ್ದಲಿಂಗಯ್ಯನವರ ನಿವಾಸದಲ್ಲಿ ಮೊನ್ನೆ ಸಭೆ ಸೇರಿ ಕಾಂಗ್ರೆಸ್ ಚುನಾವಣಾ ಸಮಿತಿಯವರು ಸೂಚಿಸಿರುವ ಕಾಂಗ್ರೆಸ್ ಉಮೇದುವಾರರ ಪಟ್ಟಿಯ ಬಗ್ಗೆ ದೀರ್ಘ ಚರ್ಚೆ ನಡೆಸಿದರು ಶಾಸನ ಸಭಾ ಸದಸ್ಯರಾದ ಶ್ರೀ ಎಸ್ ಶಿವಪ್ಪನವರು ಅಧ್ಯಕ್ಷತೆ ವಹಿಸಿದ್ದರು ಜನ ಬೆಂಬಲವಿಲ್ಲದಿರುವ ಮತ್ತು ಅನೇಕ ಆಕ್ಷೇಪಣೆಗಳಿಗೆ ಗುರಿಯಾಗಿರುವವರನ್ನು ಆರಿಸಲಾಗಿದೆಯೆಂದು ಹಲವು ಸದಸ್ಯರು ಟೀಕಿಸಿದರು ನಾಳಿದ್ದು ಪುನಃ ದೇವಾಂಗ ಸಂಘ ಭವನದಲ್ಲಿ ಶ್ರೀ ಪಿ ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಬೇಕೆಂದು ನಿರ್ಧರಿಸಲಾಯಿತು

ತ್ಯಾಗರಾಜರ ಆರಾಧನಾ ಸಂಗೀತೋತ್ಸವ

ಮೈಸೂರು ೨೨

ಕೊತ್ವಾಲ್ ರಾಮಯ್ಯನವರ ಬೀದಿ ಶ್ರೀ ಸೀತಾರಾಮ ಸೇವಾ ಸಮಾಜದಲ್ಲಿ ತ್ಯಾಗರಾಜರ ಆರಾಧನೋತ್ಸವದ ಅಂಗವಾಗಿ ವಿ|| ಎಸ್. ನಂಜುಂಡಸ್ವಾಮಿಯವರ ಗಾಯನವು ವಿ|| ಕಟ್ಟು ಪುತ್ತೂರ್ ಎ. ಕೃಷ್ಣಮೂರ್ತಿಯವರ ಪಿಟೀಲು ಮತ್ತು ವಿ|| ಆನಂದರಾಮರ ಮೃದಂಗದೊಡನೆ ಈ ಸಂಜೆ ೬|| ಗಂಟೆಗೆ ನಡೆಯುವುದು.

ಚಾಮುಂಡಿಪುರದ ಶ್ರೀ ಸರಸ್ವತಿ ಗಾನಕಲಾ ಮಂದಿರದ ಆಶ್ರಯದಲ್ಲಿ ತ್ಯಾಗರಾಜರ ಆರಾಧನೋತ್ಸವದ ಅಂಗವಾಗಿ ನಾಳೆ ಸಂಜೆ ೬|| ಗಂಟೆಗೆ ವಿ|| ಚೊಕ್ಕಮ್ಮಾಳ್ ಮತ್ತು ಪಾರ್ಟಿಯವರಿಂದ ಸಂಗೀತವಿದೆ.

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ದತ್ತಾತ್ರೇಯ ಸಂಗೀತ ವಿದ್ಯಾಶಾಲೆಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಶ್ರೀಮತಿ ಸಿ. ಎಸ್. ಜಗನ್ನಾಥರವರ ಸಂಗೀತವು ಏರ್ಪಾಡಾಗಿದೆ.

ಯೋಗಾಸನ ಪ್ರದರ್ಶನ ಮತ್ತು ಕೀರ್ತನೆ

ಶ್ರೀ ಸದ್ಗುರು ಸೇವಾ ಮಂಡಲಿಯವರು ಶ್ರೀ ವಾಲುಕೇಶ್ವರ ಭಾರತೀ ಸ್ವಾಮಿಗಳವರ ೮೩ನೇ ಜಯಂತಿ ಉತ್ಸವದ ಅಂಗವಾಗಿ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯ ಗುರುಗಳ ಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ಯೋಗಾಸನ ಪ್ರದರ್ಶನವನ್ನೂ, ನಾಳಿದ್ದಿನಿಂದ ೫ನೇ ತಾರೀಕಿನ ವರೆಗೆ ಪ್ರತಿ ಸಂಜೆ ೬|| ಗಂಟೆಗೆ ಬ್ರ|| ಶ್ರೀ ಶ್ರೀಪಾದ ಶಾಸ್ತ್ರಿಗಳವರಿಂದ ಕೀರ್ತನ ಕಾಲಕ್ಷೇಪಗಳನ್ನೂ ಏರ್ಪಡಿಸಿರುವರು.

ಪೊಂಗಲ್ ದಿನಾಚರಣೆ

ವಿಶ್ವವಿದ್ಯಾಲಯದ ತಮಿಳು ಸಂಘದ ಆಶ್ರಯದಲ್ಲಿ ಕಳೆದ ಶುಕ್ರವಾರ ಪೊಂಗಲ್ ದಿನಾಚರಣೆಯನ್ನು ನೆರವೇರಿಸಲಾಯಿತು. ಪ್ರೊ|| ಎಂ. ರಾಯಲ್ ಸಿಂಗರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಂ. ವಿ. ಜಂಬುನಾಥನ್ ಮತ್ತು ಆರ್. ಚಿನ್ನನಾಯಗರ್‌ರವರು ಭಾಷಣ ಮಾಡಿದರು. 'ಸಾಕ್ರಟೀಸ್" ಎಂಬ ನಾಟಕವನ್ನು ಅಭಿನಯಿಸಲಾಯಿತು. ಸಂಘದ ಕಾರ್ಯದರ್ಶಿ ಶ್ರೀ ಎಂ. ಮೋಹನರಾಜ್‌ರವರು ವಂದನಾರ್ಪಣೆ ಮಾಡಿದರು.

ಗಂಧದ ಮರದ ಕಳ್ಳತನಕ್ಕಾಗಿ ೧,೦೦೦ ರೂ. ದಂಡ

ಬಾಗೆಪಲ್ಲಿ ತಾಲ್ಲೂಕಿನ ತಂಗಡಿಗುಂಟೆಯ ಚಪ್ಪಾಸ್ವಾಮಪ್ಪ ಮತ್ತು ಅವನ ಸಂಗಡಿಗರು ೫,೦೦೦ ರೂ. ಬೆಲೆಯ ಗಂಧದ ಮರವನ್ನು ಕದ್ದು ಆಂಧ್ರಕ್ಕೆ ಸಾಗಿಸಿದುದಕ್ಕಾಗಿ ಅವರಿಗೆ ೧,೦೦೦ ರೂ. ದಂಡವನ್ನು ವಿಧಿಸಲಾಗಿದೆ.

ಕನ್ನಡ ನಾಡು-ನುಡಿ

ಸೇವಕ ಪತ್ರಿಕೆಯ ಸಂಪಾದಕರೂ, ಕನ್ನಡ ಭಾಷೆಯ ಸೇವಕರೂ ಆದ ಶ್ರೀ ಕೆ. ಅನಂತಸುಬ್ಬರಾಯರು ಮೇಲ್ಕಂಡ ಶಿರೋನಾಮೆಯುಳ್ಳ ಚಿಕ್ಕ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಅಕ್ಷರ-ಪುಸ್ತಕ, ಶೀಘ್ರಲಿಪಿ ಕನ್ನಡ ಟೈಪ್‌ರೈಟರ್‌ಗಳಿಗೆ ಸಂಬಂಧಪಟ್ಟ ಉಪಯುಕ್ತ ವಿಷಯಗಳನ್ನು ಅವರು ಅದರಲ್ಲಿ ಕೊಟ್ಟಿರುತ್ತಾರೆ.

ವಿಜಯ ಶಿಶು ವಿಹಾರ

ಕನ್ನೇಗೌಡನ ಕೊಪ್ಪಲು ಮೈಸೂರು

ಕಳೆದ 15–8–56ನೇ ತಾರೀಖು ಆರಂಭಿಸಲ್ಪಟ್ಟು ಯುಕ್ತ ನರ್ಸರಿ ಟೀಚರ್ಸ್ ಟ್ರೈನಿಂಗ್ ಆದ ಉಪಾಧ್ಯಾಯಿನಿಯರಿಂದ ನಡೆಸಿಕೊಂಡುಬರುತ್ತಿರುವ ಮೇಲ್ಕಂಡ ಶಿಶುವಿಹಾರವನ್ನು ಈ ತಿಂಗಳಿನಿಂದ ಮೊದಲಿದ್ದ ಮನೆಗಿಂತ ವಿಸ್ತಾರವೂ ಹೆಚ್ಚು ಗಾಳಿಬೆಳಕೂ ಇರುವ, ಮಕ್ಕಳ ಆಟ ಮತ್ತು ಕ್ರೀಡೆಗಳಿಗೆ ಹೆಚ್ಚು ಅನುಕೂಲವಾದ ಕಾಂಪೌಂಡು ಉಳ್ಳ ಡೋರ್ ನಂಬರು 2333ನೇ ಒಂಬರಿನ ದೊಡ್ಡ ಮನೆಗೆ ಬದಲಾಯಿಸಿರುತ್ತೆ. ಸುತ್ತಮುತ್ತಲಿನ ಮಹಾಜನರು ತಮ್ಮ ಮಕ್ಕಳನ್ನು ಸದರಿ ಶಿಶುವಿಹಾರಕ್ಕೆ ಸೇರಿಸಿ ಪ್ರಯೋಜನ ಪಡೆಯುವುದರ ಮೂಲಕ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಎಲ್ಸಿಯಮ್ಮ, ಎಸ್. ಶಾರದಮ್ಮ

ಜಂಟಿ ಕಾರ್ಯದರ್ಶಿಗಳು

ಜಿಲ್ಲಾ ಮತ್ತು ನಗರದ ಓಟುದಾರರ ಸಂಖ್ಯೆ

ಮೈಸೂರು ೨೩

ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಆರ್. ಚನ್ನರುದ್ರಯ್ಯನವರು ಪತ್ರಿಕಾ ಗೋಷ್ಠಿಯಲ್ಲಿ ಮೊನ್ನೆ ಮಾತನಾಡಿ, ಜಿಲ್ಲೆಯಲ್ಲಿ ೭,೪೯,೭೮೩ ಓಟುಗಳಿರುವವೆಂದು ತಿಳಿಸಿದರು. ಆ ಪೈಕಿ ೩,೯೧,೮೮೦ ಗಂಡಸರು ಮತ್ತು ೩,೫೭,೯೦೩ ಮಹಿಳೆಯರು.

ನಗರದ ದಕ್ಷಿಣ ಕ್ಷೇತ್ರದಲ್ಲಿ ೩೯,೮೦೩ ಓಟುಗಳ ಪೈಕಿ ೨೦,೮೫೯ ಪುರುಷರು ಮತ್ತು ೧೯,೧೪೪ ಸ್ತ್ರೀಯರಿರುವರು. ಉತ್ತರ ಕ್ಷೇತ್ರದಲ್ಲಿ ೩೮,೧೯೮ ಮಂದಿ ಓಟರುಗಳಲ್ಲಿ ೨೦,೦೬೪ ಗಂಡಸರು ಮತ್ತು ೧೮,೧೩೪ ಸ್ತ್ರೀಯರಿದ್ದಾರೆ.

ದಕ್ಷಿಣದಲ್ಲಿ ೩೮, ಉತ್ತರದಲ್ಲಿ ೩೭ ಮತ್ತು ತಾಲ್ಲೂಕಿನಲ್ಲಿ ೫೦ ಚುನಾವಣಾ ಕೇಂದ್ರಗಳಿರುತ್ತವೆ ಎಂಬುದಾಗಿ ಅವರು ಹೇಳಿದರು.

ಕ್ಯಾಲೆಂಡರ್ ಸ್ವೀಕಾರ

ನಗರದ ಇಂದ್ರಾ ಕೆಫೆ ಮತ್ತು ಬೊಂಬಾಯಿ ಇಂದ್ರ ಭವನದವರು, ಹೋಲ್‌ಸೇಲ್ ಬಟ್ಟೆ ವ್ಯಾಪಾರಿಗಳಾದ ರಿಕಬ್‌ಚಂದ್ ಮಿಠ್ಠಾಲಾಲ್ ಮತ್ತು ಕಂಪೆನಿಯವರು ಮತ್ತು ಜಗನ್ಮೋಹನ ಬಂಗ್ಲೆ ರಸ್ತೆಯಲ್ಲಿರುವ ರಾಜ ಭವನದವರು ಕಳುಹಿಸಿರುವ ನವವರ್ಷದ ಕ್ಯಾಲೆಂಡರುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಹೈದರಾಬಾದು ರಸ್ತೆಗಳಲ್ಲಿ ಪಟ ಹಾರಿಸಲು ನಿಷೇಧ

ಹೈದರಾಬಾದು ಮತ್ತು ಸಿಕಂದರಾಬಾದುಗಳಲ್ಲಿ ಪಟ ಹಾರಿಸುವುದನ್ನು ಅಲ್ಲಿನ ಪೋಲೀಸು ಕಮಿಷನರರು ನಿಷೇಧಿಸಿರುತ್ತಾರೆ. ಇದರಿಂದ ರಸ್ತೆ ಅಪಘಾತಗಳೂ, ಜಗಳಗಳೂ ಆಗುತ್ತಿದ್ದುದೇ ಈ ನಿಷೇಧಕ್ಕೆ ಕಾರಣ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು ಕೊಯಮುತ್ತೂರು ಸಣ್ಣ	೨೬	೪	೦	೩೧	೨	೦
ರತ್ನಚೂಡಿ	೨೬	೩	೦	೨೮	೧೦	೦
ಕೆಂಬೂತಿ	೨೫	೧೨	೦	೨೬	೦	೦
ಕಡ್ಡಿ	೨೬	೦	೦	೨೮	೪	೦
ಕಾರು	೨೫	೧೦	೦			
ರಾಗಿ	೩೨	೬	೦	೩೬	೮	೦
ಜೋಳ	೨೮	೧೦	೦	೩೬	೧೪	೦
ಕಡಲೆಕಾಯಿ	೧೮	೧೦	೦	೨೪	೧೪	೦
ಹುಚ್ಚೆಳ್ಳು	೪೩	೪	೦	೪೬	೧೪	೦
ಹರಳುಬೀಜ	೪೭	೦	೦	೪೭	೪	೦
ಹುರುಳಿ	೨೪	೩	೦	೨೭	೩	೦
ಹೆಸರು	೪೯	೩	೦	೫೩	೦	೦
ಹಲಸಂದೆ	೩೬	೮	೦	೫೦	೧೪	೦
ಧನಿಯ	೨೩	೮	೦	೨೫	೦	೦
ಅವರೆ	೪೫	೩	೦	೫೦	೦	೦
ಉದ್ದು	೬೪	೧೪	೦	೬೫	೧೨	೦
ಕಡಲೆ	೬೪	೦	೦	೫೧	೧೦	೦
ಸೆಣಬಿನ ಬೀಜ	೪೧	೧೦	೦	೪೬	೧೪	೦
ತೆಂಗಿನಕಾಯಿ	೬	೩	೦	೭	೪	೦
ಹುಣಸೇಹಣ್ಣು	೨	೪	೦	೪	೩	೦
ಮೆಣಸಿನಕಾಯಿ	೧೦	೦	೦	೩೧	೧೨	೦

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd. 1911.)

ಪೌರಸಭಾಧ್ಯಕ್ಷರು ಮತ್ತು ಸದಸ್ಯರ ಮೇಲೆ ಲೂಟಿ ಆಪಾದನೆ

ಕಳೆದ ತಿಂಗಳು ೬ನೇ ತಾರೀಕು ಕೋಲಾರ ಜಿಲ್ಲೆ ಮಂಚೇನಹಳ್ಳಿಯ ಶ್ರೀ ಎಂ. ನಾರಾಯಣರಾಯರಿಗೆ ಸೇರಿದ ಸುಮಾರು ೨,೦೦೦ ರೂಪಾಯಿ ಬೆಲೆಯ ಭತ್ತದ ಲೂಟಿಗಾಗಿ ವಾರಂಟು ಹೊರಡಿಸಲಾಗಿದ್ದ ಸಂಬಂಧದಲ್ಲಿ ಗ್ರಾಮದ ಪೌರಸಭಾ ಮುಖ್ಯಾಧಿಕಾರಿ ವೆಂಕಟರೆಡ್ಡಿಯವರು ತಾವಾಗಿಯೇ ಚಿಕ್ಕಬಳ್ಳಾಪುರ ನ್ಯಾಯಾಧೀಶರ ಮುಂದೆ ಹಾಜರಾದರು. ಅವರನ್ನು ಜಾಮೀನು ಮೇಲೆ ಬಿಡಲಾಯಿತು. ಈ ಸಂಬಂಧದಲ್ಲಿ ೩ ಜನ ಪೌರಸಭಾ ಸದಸ್ಯರೂ ಸೇರಿ ೨೭ ಜನರನ್ನು ಬಂಧಿಸಲಾಗಿದೆ. ನಾಳಿದ್ದು ಮೊಕದ್ದಮೆ ನಡೆಯುವುದು.

ಕೈ ಮಗ್ಗದವರಿಗೂ ಗೃಹ ವಸತಿ ಕ್ಷೇತ್ರ

ಕೈ ಮಗ್ಗದವರಿಗಾಗಿ ಮದ್ರಾಸ್ ಮತ್ತು ಮೈಸೂರಿನಲ್ಲಿ ಒಂದೊಂದು ಗೃಹ ವಸತಿ ಕ್ಷೇತ್ರದ ನಿರ್ಮಾಣದ ಯೋಜನೆಯನ್ನು ಭಾರತ ಸರ್ಕಾರದವರು ಅಂಗೀಕರಿಸಿರುತ್ತಾರೆ. ಅದಕ್ಕೆ ೧೮-೬೫ ಲಕ್ಷ ರೂ. ವೆಚ್ಚದ ಅಂದಾಜಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ೫೦ ಮನೆಗಳನ್ನು ನಿರ್ಮಿಸಲಾಗುವುದು.

ಚುನಾವಣೆ ಗುರುತು ಚೀಟಿ ಮೇಲೆ ಘೋಷಣೆಗಳು ಅಕ್ರಮ

ಓಟುಗಳಿಗೆ ಕೊಡಲಾಗುವ ಗುರುತು ಚೀಟಿಗಳ ಮೇಲೆ ಘೋಷಣೆಗಳನ್ನು ಬರೆಯುವುದು ಅಕ್ರಮವೆಂದೂ, ಅದರಿಂದ ಓಟು ಕ್ಷೇತ್ರದಲ್ಲಿ ಕ್ಯಾನ್ವಾಸ್ ಮಾಡಿದ ಅಪರಾಧವಾಗುವುದೆಂದೂ ಕೇಂದ್ರ ಚುನಾವಣಾ ಕಮಿಷನ್ನು ಸೂಚಿಸಿರುತ್ತದೆ.

READY FOR SALE
'INTERMEDIATE CHEMISTRY
AT A GLANCE"
by
R. PARTHASARATHY, M.Sc
Formerly, lecturer in Chemistry,
Saradavilas College, Mysore
(Copies available from :-
(1) R. Rajagopal, 307, D. Subbiah
Road, Mysore
(2) J. Nanumal and Sons, Book sellers
Avoid disappointment by buying
Your copy early

ಮೈಸೂರು ಸಬ್ ಡಿವಿಜನ್ ಆಫೀಸಿನಿಂದ

ಇಸ್ತಿಹಾರ್ನಾಮೆ
ನಂ. R. I. P. R. 262-C-846|53
ತಾ|| 17-1-57
(ಕಾಂಪಿಟೆಂಟ್ ಆಫೀಸರವರ ತಾ|| 2-1-57ನೇ ಮಹಜರ್ ಆರ್ಡರು ಮೇಲೆ)

ಮೈಸೂರು ಸಿಟಿ ಹೊಸ ಸಂತೇಪೇಟೆಯಲ್ಲಿರುವ ಮುನಿಸಿಪಲ್ ನಂ. 2203|23ನೇ ನಂಬರು ವಾಸದ ಕಟ್ಟಡ ಮತ್ತು ಇದಕ್ಕೆ ಸೇರಿದ ಅಂಗಡಿ ಮಳಿಗೆ ಸಹ ತಾ|| 4-2-57ರಲ್ಲೂ ಸ್ವತ್ತಿನ ಬಳಿ ದಿವ 11 ಗಂಟೆ ಲಾಗಾಯತು ಬಹಿರಂಗವಾಗಿ ಹರಾಜು ಮಾಡಿಸಲಾಗುತ್ತೆ. ಅಪೇಕ್ಷೆಯುಳ್ಳವರು ಭಹಸವಾಲು ಮೂಲಕ ಬಿಡ್ ಮಾಡಬಹುದು. ಹರಾಜು ಷರತ್ತುಗಳನ್ನು ಅಲಾಯಿದ ಈ ಆಫೀಸಿನ ನೋಟೀಸು ಬೋರ್ಡಿನಲ್ಲಿ ನೋಡಬಹುದು.

(ಸಹಿ) ಎಲ್. ಕರಿಯಪ್ಪಗೌಡ,
ರೆವಿನ್ಯೂ ಸಬ್ ಡಿವಿಜನ್ ಆಫೀಸರ್, ಮೈಸೂರು



" ತಮ್ಮ ನಂತರ ಯಾರು " ಎಂ
ಪ್ರಶ್ನೆ ಬಗ್ಗೆ ನೆಹರೂರವರ ಬೇ

ಭವಿಷ್ಯವು ತನ್ನನ್ನು ತಾನೇ ನೋಡಿಕೊಳ್ಳುವುದೆಂದು ಹೇಳಿಕೆ

ಪ್ರಧಾನಿ ನೆಹರೂರವರು ಬೊಂಬಾಯಿಯ ಭಾಷಣ ಮಾಡಿ, ತಮ್ಮ ನಂತರ ಯಾರು ಬ ಪ್ರಶ್ನೆಗೆ ಮತ್ತೊಮ್ಮೆ ಉತ್ತರವಿತ್ತು, ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದೆಂದು ಡಿದಿರುತ್ತಾರೆ. ಭವಿಷ್ಯವು ತನ್ನನ್ನು ತಾನೇ ಡಿಕೊಳ್ಳುವುದೆಂದೂ, ಈಗೇನೂ ಅದರ ಚಿಂತಿಸಬೇಕಾಗಿಲ್ಲವೆಂದೂ ಅವರು ಹೇಳಿ, ವು ಇನ್ನೂ ರಕ್ತ-ಮಾಂಸಗಳಿಂದ ಕೂಡಿ ಮಾಡಲು ಬಲವಾದ ಆಳಾಗಿರುವುದಾಗಿ ರುವರು. ಈ ಪ್ರಶ್ನೆಯ ಬಗ್ಗೆ ತಮಗೆ ಅನೇಕ ತ್ರಗಳು ಬಂದಿರುವುವೆಂದೂ, ಈ ಕೆಲಸದಲ್ಲಿ ದಗಿರುವವರಿಗೆ ಬೇರೆ ಉದ್ಯೋಗವೇನೂ ತಿ ಕಾಣುವುದಿಲ್ಲವೆಂದೂ ಅವರು ಹೇಳಿರುತ್ತಾ ಸ್ವಾತಂತ್ರ್ಯ ಬಂದ ೧೦-೧೫ ವರ್ಷಗಳಲ್ಲಿ ತವು ಬಲವಾದ ರಾಷ್ಟ್ರವಾಗಿ ಪ್ರಗತಿಯ ಯಲ್ಲಿ ನಡೆಯಬೇಕೆಂಬುದೇ ತಮ್ಮ ಉತ್ಕಟೇಚ್ಛೆಯೆಂದೂ ಅವರು ಸೂಚಿಸಿರುವರು.

ಚಾಮುಂಡೇಶ್ವರಿ

ಟಾಕೀಸ್
24-1-57 ರಿಂದ ಕಿಕ್ಕಿರಿದ ಜನಸ್ತೋಮ
ಪ್ರದರ್ಶಿತವಾಗುತ್ತಿರುವ 6ನೇ ವಾರ
ಮಾದರ ಕುಲ
ಮಾಣಿಕ್ಯಂ
ಪಾತ್ರ:- ಜೆಮಿನಿ ಗಣೇಶ, ನಾಗೇಶ್ವರರಾವ್,
ಅಂಜಲಿದೇವಿ, ಸಾವಿತ್ರಿ, ಎಂ. ಎನ್. ರಾಜ

ಮುನಿಸಿಪಲ್ ಆಫೀಸ್
ಮೈಸೂರು, ತಾ|| 7-1-1957

ಟೆಂಡರ್ ನೋಟಿಫಿಕೇಷನ್

ಸನ್ 1957-58ನೇ ಸಾಲಿಗೆ (ಅಂದರೆ 1-4-1957ರಿಂದ 31-3-58ರ ವರಿವಿಗೆ) ಈ ಕೆಳಗೆ ವಿವರಿಸಿರುವ ಬಾಬುಗಳಿಗಾಗಿ ಮೊಹರ ದ ಟೆಂಡರ್‌ಗಳನ್ನು (Sealed Tender) ತಾ|| 12-2-57ನೇ ಮಂಗಳವಾರ ಮಧ್ಯಾಹ್ನ 4 ಘಂಟೆ ವರಿವಿಗೂ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ಟೆಂಡರ್ ಡಿಪಾಜಿಟ್ಟನ್ನು ಮುನಿಸಿಪಲ್ ಖಜಾನೆಗೆ ಪಾವತಿ ಮಾಡಿ ಸದರಿ ಖಜಾನೆಯಿಂದ ಪಡೆದ ಸರ್ಟಿಫೈಡ್ ಚಲನ ಸಮೇ (certified challan) ಮೊಹರಾದ ಟೆಂಡರುಗಳನ್ನು ಪ್ರತಿ ಬಾಬಿಗೂ ಪ್ರತ್ಯೇಕವಾ ಯಾವ ಬಾಬಿಗಾಗಿ ಎಂದು ಕವರಿನ ಮೇ ನಮೂದಿಸಿ ಕಳುಹಿಸತಕ್ಕದ್ದು.

ಹೆಚ್ಚಿಗೆ ವಿವರಗಳನ್ನು ಆಫೀಸು ವೇಳೆ ಪಡೆಯಬಹುದು ಮತ್ತು ನೋಟೀಸ್ ಬೋ ನಲ್ಲಿಯೂ ಕಾಣಬಹುದು.

—: ವಿವರ :—

ಬಾಬು	ಡಿಪಾಜ
1 ತೆಂಗಿನ ಬರಲು ಕಡ್ಡಿ ಕುಕ್ಕೆ ವಗೈರೆ ಸಾಮಾನುಗಳನ್ನು ಸಪ್ಲೈ ಮಾಡುವುದು	ರೂ 1
2 ಕಾರು ಡ್ರಮ್ಮುಗಳು, ಆಯಿಲ್ ಡ್ರಮ್ಮುಗಳು, ಸಿಮೆಂಟ್, ಕಬ್ಬಿಣ ವಗೈರೆ ಸಾಮಾನುಗಳನ್ನು ರೈಲ್ವೆ ಸ್ಟೇಷನ್ ಗುಡ್ಸ್ ಷೆಡ್ಡಿನಿಂದ ಮುನಿಸಿಪಲ್ ಸ್ಟೋರಿಗೆ ಸಾಗಿಸುವುದು	ರೂ
3 ಮುನಿಸಿಪಲ್ ಎತ್ತುಗಳಿಗೆ ಲಾಳವನ್ನು ಕಟ್ಟುವುದು (ಉತ್ತಮವಾದ ಲಾಳ ಮತ್ತು ಇಂಗ್ಲಿಷ್ ಮೊಳೆಯನ್ನು ಉಪಯೋಗಿಸಿ)	ರೂ.

(ಸಹಿ) ಎ. ವಿಶ್ವನಾಥ್,
ಮುನಿಸಿಪಲ್ ಕಮಿಷನರ್,
ಸಿಟಿ ಮುನಿಸಿಪಾಲಿಟಿ, ಮೈಸೂ

Edited, Printed and Publish
by A. R. Nagarajan at Sadh
Press, D. Subbiah Road. Myso

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : THURSDAY 24—1—1957 ಮೈಸೂರು : ಗುರುವಾರ ೨೪—೧—೧೯೫೭ : [ಸಂಚಿಕೆ : ೧೬೯

ಕಾಶ್ಮೀರದಲ್ಲಿ ಪಾಕಿಸ್ತಾನ್ ಆಕ್ರಮಣದ ಬಗ್ಗೆ ತನಿಖೆಗೆ ಕರೆ

ಮೈಸೂರು ಶಾಸನ ಸಭೆಗೆ ಕಾಂ॥ ಉಮೇದುವಾರರು

ನೆನ್ನೆ ಸಂಜೆ ಪ್ರದೇಶ ಚುನಾವಣಾ ಸಮಿತಿ ಅಧ್ಯಕ್ಷರಿಂದ ಪಟ್ಟಿ ಪ್ರಕಟಣೆ

ಬೆಂಗಳೂರು ೨೩

ಈ ಕೆಳಗೆ ಕಂಡವರನ್ನು ಬರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ಸಂಸ್ಥಾನದ ವಿಧಾನ ಸಭೆಗೆ ಉಮೇದುವಾರರಾಗಿ ನಿಲ್ಲಿಸಲಾಗಿದೆ. ಈಗ ೧೫೫ ಮಂದಿಯ ಹೆಸರುಗಳನ್ನು ಸೂಚಿಸಲಾಗಿದೆ. ಇನ್ನೂ ೧೩ ಸ್ಥಾನಗಳಿಗೆ ಆರಿಸಬೇಕಾಗಿದೆ. ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ ಮತ್ತು ಶ್ರೀ ಟಿ ಸಿದ್ಧಲಿಂಗಯ್ಯನವರ ಉಮೇದುವಾರಿಕೆಗಳ ಬಗ್ಗೆ ಇನ್ನೂ ಇತ್ಯರ್ಥವಾಗಿಲ್ಲ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮೊಳಕಾಲ್ಮೂರು, ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಮಂಡ್ಯ, ಶ್ರೀ ಟಿ. ಸುಬ್ರಹ್ಮಣ್ಯರವರು ತುರುವೇಕೆರೆ ಕ್ಷೇತ್ರಗಳಿಂದ ಸ್ಪರ್ಧಿಸಲಿರುವರು. ಸಚಿವರುಗಳಾದ ಶ್ರೀಗಳು ಎಂ ವಿ ರಾಮರಾಯರು ತುಮಕೂರು, ಹೆಚ್. ಎಸ್. ರುದ್ರಪ್ಪ ಹೊನ್ನಾಳಿ, ಹೆಚ್. ಕೆ. ವೀರಣ್ಣಗೌಡ ಮದ್ದೂರು, ಆರ್ ಚನ್ನಿಗರಾಮಯ್ಯನವರು ಮಧುಗಿರಿ (ರಿಸರ್ವ್), ಕಡಿದಾಳ್ ಮಂಜಪ್ಪ-ಶೃಂಗೇರಿ ಮತ್ತು ಎ. ಭೀಮಪ್ಪನಾಯಕ್ ಜಗಳೂರು ಕ್ಷೇತ್ರಗಳಿಂದ ಸ್ಪರ್ಧಿಸುವರು. ಎಲ್ಲಾ ಮಾಜಿ ಮಂತ್ರಿಗಳಿಗೂ ಉಮೇದುವಾರಿಕೆ ಕೊಡಲಾಗಿದೆ.

ಮೈಸೂರು ನಗರ ಉತ್ತರ, ಚಾಮರಾಜನಗರ, ತರೀಕೆರೆ, ಕಡೂರು, ಗಂಡಸಿ, ಗುಬ್ಬಿ, ದಾವಣಗೆರೆ, ಹೊಸಕೋಟೆ (ಸಾಮಾನ್ಯ), ದೊಡ್ಡಬಳ್ಳಾಪುರ, ಬೆಂಗಳೂರು ದಕ್ಷಿಣ (ರಿಸರ್ವ್), ರಾಮನಗರ, ಚನ್ನಪಟ್ಟಣ ಕ್ಷೇತ್ರಗಳಿಗೆ ಉಮೇದುವಾರರನ್ನು ಇನ್ನೂ ಆರಿಸಿಲ್ಲ. ಆರಿಸಲ್ಪಟ್ಟಿರುವ ಉಮೇದುವಾರರ ಪೈಕಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಪಟ್ಟಿ ಈ ರೀತಿ ಇದೆ:—

ಮೈಸೂರು ನಗರ-ಶ್ರೀ ಕೆ. ಎಸ್. ಸೂರ್ಯನಾರಾಯಣ; ಮೈಸೂರು ಶ್ರೀ ಕೆ. ಪುಟ್ಟಸ್ವಾಮಿ, ಟಿ- ನರಸೀಪುರ-ಎಂ. ರಾಜಶೇಖರಮೂರ್ತಿ, ಕೊಳ್ಳೇಗಾಲ-ಶ್ರೀ ಬಿ. ಪಿ. ಬೋರಯ್ಯ, ಮೀಸಲು-ಶ್ರೀಮತಿ ಕೆಂಪಮ್ಮ; ಪಾಳ್ಯ-ಶ್ರೀ ಎಸ್. ಸಿ. ವಿರೂಪಾಕ್ಷಯ್ಯ; ನಂಜನಗೂಡು-ಶ್ರೀ ಪಿ. ಮಹದೇವಯ್ಯ; ಬಿಳಿಗಿರಿ-ಶ್ರೀ ಪ್ರಸನ್ನಸ್ವಾಮಿ; ಚಾಮರಾಜನಗರ ಮೀಸಲು ಶ್ರೀ ರಾಚಯ್ಯ; ಹುಣಸೂರು-ಶ್ರೀ ಡಿ. ದೇವರಾಜ ಅರಸ್; ಕೃಷ್ಣರಾಜನಗರ ಹೆಚ್.ಎಂ. ಚನ್ನಬಸಪ್ಪ.

ಮಂಡ್ಯ ಜಿಲ್ಲೆ—ಶ್ರೀರಂಗಪಟ್ಟಣ : ಶ್ರೀ ಎ. ಜಿ. ಬಂಡೀಗೌಡ; ಕೃಷ್ಣರಾಜಪೇಟೆ-ಎಂ. ಕೆ. ಬೊಮ್ಮೇಗೌಡ; ಪಾಂಡವಪುರ-ಶ್ರೀಮತಿ ದಮಯಂತಿ; ಮಂಡ್ಯ : ಶ್ರೀ ಎಸ್. ಚನ್ನಯ್ಯ, ಮಳವಳ್ಳಿ : ಶ್ರೀ ಹೆಚ್. ವಿ. ವೀರೇಗೌಡ ಮತ್ತು ಮೀಸಲು : ಶ್ರೀ ಮಲ್ಲಿಕಾರ್ಜುನಸ್ವಾಮಿ; ಮದ್ದೂರು-ಶ್ರೀ ಕೆ. ಹೆಚ್. ವೀರಣ್ಣಗೌಡ ಮತ್ತು ನಾಗಮಂಗಲ-ಶ್ರೀ ಟಿ. ಮರಿಯಪ್ಪ.

ಲೋಕ ಸಭೆಗೆ ಕಾಂಗ್ರೆಸ್ ಉಮೇದುವಾರರು

ಬೆಂಗಳೂರು ೨೩

ಲೋಕಸಭೆಗೆ ಹಳೇ ಸಂಸ್ಥಾನದ ಪ್ರಾದೇಶಿಕ ಕ್ಷೇತ್ರಗಳಿಂದ ಕೆಳಗೆ ಕಂಡವರನ್ನು ಕಾಂಗ್ರೆಸ್ ಉಮೇದುವಾರರಾಗಿ ಸೂಚಿಸಲಾಗಿದೆ:—

ಬಳ್ಳಾರಿ-ಶ್ರೀ ಟೇಕೂರು ಸುಬ್ರಹ್ಮಣ್ಯಂ; ಶಿವಮೊಗ್ಗ ಕೆ ಜಿ ಒಡೆಯರ್; ಹಾಸನ-ಶ್ರೀ ಹೆಚ್. ಸಿದ್ಧನಂಜಪ್ಪ; ಮಂಡ್ಯ-ಎಂ. ಕೆ. ಶಿವನಂಜಪ್ಪ; ಬೆಂಗಳೂರು ನಗರ-ಶ್ರೀ ಎನ್. ಕೇಶವಯ್ಯಂಗಾರ್ (ಇವರು ಹಳಬರು); ಮೈಸೂರು ಜಿಲ್ಲೆ ಶ್ರೀ ಎಂ ಶಂಕರಯ್ಯ ಮತ್ತು ಎಸ್.ಎಂ.ಸಿದ್ದಯ್ಯ (ಮೀಸಲು) ಚಿತ್ರದುರ್ಗ-ಶ್ರೀ ಎಸ್. ವಾಸುದೇವರಾವ್; ತುಮಕೂರು ಶ್ರೀ ಎಂ. ವಿ ಕೃಷ್ಣಪ್ಪ; ಕೋಲಾರ-ಶ್ರೀ ಕೆ ಸಿ ರೆಡ್ಡಿ ಮತ್ತು ಶ್ರೀ ದೊಡ್ಡತಿಮ್ಮಯ್ಯ (ಇವರು ಮಾತ್ರ ಹಳಬರು); ತಿಪಟೂರು-ಶ್ರೀ ಬಿ ಸಿ ನಂಜುಂಡಯ್ಯ ಅಥವಾ ಸಿ. ಆರ್. ಬಸಪ್ಪ-ಇವರುಗಳು ಹೊಸಬರು. ಬೆಂಗಳೂರು ಜಿಲ್ಲೆಯ ಪ್ರತಿನಿಧಿ ಯಾರೆಂಬುದು ಇನ್ನೂ ಗೊತ್ತಾಗಿಲ್ಲ.

ಬಳ್ಳಾರಿ ಮತ್ತು ಹೊಸಪೇಟೆಗಳಲ್ಲಿ ಆಕ್ಟ್ರಾಯ್ ವಿಧಾಯಕ

ಬಳ್ಳಾರಿ ಮತ್ತು ಹೊಸಪೇಟೆ ಪೌರಸಭೆಗಳಲ್ಲಿ ಈ ತಿಂಗಳು ೨೮ ರಿಂದ ಆಕ್ಟ್ರಾಯ್ ಸುಂಕವನ್ನು ವಿಧಿಸಲಾಗುವುದು. ಬಳ್ಳಾರಿ ಪೌರಸಭೆಗೆ ಅದರಿಂದ ೩ ಲಕ್ಷ ರೂ. ವರಮಾನ ಬರುವುದು

○ ರಷ್ಯದ ರಕ್ಷಣಾ ಮಂತ್ರಿ ಜುಕಾಫ್‌ರವರು ಬರುವ ತಿಂಗಳು ೧ ರಂದು ಇಲ್ಲಿಗೆ ಬರುವರು.

○ ಬರ್ಮಾ ವಿಮಾನ ಬಲದ ಸೌಹಾರ್ದ ನಿಯೋಗವೊಂದು ಈ ತಿಂಗಳು ೨೮ಕ್ಕೆ ಇಲ್ಲಿಗೆ ಆಗಮಿಸಲಿದೆ.

ಕಾಶ್ಮೀರದ ಹೊಸ ರಾಜ್ಯಾಂಗದ ಸಮಾರಂಭ

ನಾಳಿದ್ದು ಜಮ್ಮು ಮತ್ತು ಕಾಶ್ಮೀರದ ಹೊಸ ರಾಜ್ಯಾಂಗವನ್ನು ಜಾರಿಗೆ ತರಲು ಭಾರಿ ಸಮಾರಂಭವನ್ನು ಶ್ರೀನಗರದಲ್ಲಿ ಏರ್ಪಡಿಸಲಾಗಿದೆ. ಧ್ವಜಾರೋಹಣ, ಕವಾಯತು, ಮೆರವಣಿಗೆ, ಸಭೆ, ದೀಪೋತ್ಸವ, ಸಾಂಸ್ಕೃತಿಕ ಸಮಾರಂಭ ಮುಂತಾದುವು ಇವೆ. ಜಮ್ಮುವಿನಲ್ಲೂ ಇತರ ಕಡೆಗಳಲ್ಲೂ ಇದೇ ರೀತಿ ಸಮಾರಂಭಗಳು ಏರ್ಪಾಡಾಗಿವೆ

ಹರಿಕಥೆ

ಕೃಷ್ಣಮೂರ್ತಿಪುರದ ೧೮೩೩ನೇ ನಂಬರ್ ಶ್ರೀ ಗೋವಿಂದರಾಯರ ಮನೆಯಲ್ಲಿ ಶ್ರೀ ಪುರಂದರದಾಸರ ಆರಾಧನೆ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ವೇ|| ವೇಣುಗೋಪಾಲದಾಸರಿಂದ ಗಾಲವ ಚರಿತ್ರೆ ಎಂಬ ಹರಿಕಥೆಯು ಏರ್ಪಾಡಾಗಿದೆ. ಸರ್ವರಿಗೂ ಸ್ವಾಗತವಿದೆ.

ನೆನ್ನೆ ಸಂಜೆ ಪ್ರದೇಶ ಚುನಾವಣಾ ಸಮಿತಿ ಅಧ್ಯಕ್ಷರು ಉಮೇದುವಾರರ ಪಟ್ಟಿಯನ್ನು ಪ್ರಕಟಿಸಿದರು. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೆಂಕಟಪ್ಪನವರಿಗೆ ಸ್ಥಾನವನ್ನು ಇನ್ನೂ ಕಲ್ಪಿಸಿಲ್ಲ.

ಬೊಂಬಾಯಿಗೆ ಸಿರಿಯಾ ಅಧ್ಯಕ್ಷರ ಪ್ರಯಾಣ

ಅಪಘಾತದಲ್ಲಿ ಗಾಯಗೊಂಡ ಡ್ರೈವರಿಗೆ ೫೦೦ ರೂ ಬಹುಮಾನ

ಸ್ವಂ.ವ. ತಂತಿ] ಬೆಂಗಳೂರು ೨೩

ಸಿರಿಯಾದ ಅಧ್ಯಕ್ಷ ಕುವಾಟ್ಲಿಯವರು ಭಾರತದ ವಾರ್ತಾ ಮಂತ್ರಿ ಶ್ರೀ ಬಿ. ವಿ. ಕೇಸ್ಕರ್ ಮತ್ತು ತಮ್ಮ ಪರಿವಾರದೊಡನೆ ವಿಮಾನದಲ್ಲಿ ಈ ಬೆಳಗ್ಗೆ ಬೊಂಬಾಯಿಗೆ ತೆರಳಿದರು ಅವರನ್ನು ಸಚಿವರುಗಳಾದ ಶ್ರೀಗಳು ಕಡಿದಾಳ್ ಮಂಜಪ್ಪ, ಆರ್. ಚನ್ನಿಗರಾಮಯ್ಯ ಮತ್ತು ಮೇಯರ್ ಶ್ರೀ ಜಿನಾಭಾಯಿ ದೇವಿದಾಸ್ ಮುಂತಾದವರು ಬೀಳ್ಕೊಟ್ಟರು ಕುವಾಟ್ಲಿಯವರು ವಿಮಾನ ಬಲಗಳಿಂದ ಗೌರವ ರಕ್ಷೆ ಮತ್ತು ಸೆಲ್ಯೂಟ್ ಸ್ವೀಕರಿಸಿದರು. ಉಭಯ ರಾಷ್ಟ್ರಗಳ ಗೀತೆಗಳನ್ನು ನುಡಿಸಲಾಯಿತು

ನೆನ್ನೆ ಮೋಟಾರು ಅಪಘಾತದಲ್ಲಿ ಗಾಯಗೊಂಡ ಸರ್ಕಾರಿ ಡ್ರೈವರ್ ಬಾಬುವಿಗೆ ೫೦೦ ರೂ. ಗಳನ್ನು ಅಧ್ಯಕ್ಷರು ಬಹುಮಾನವಾಗಿ ಕೊಟ್ಟರು. ಪೆಟ್ಟು ಬಿದ್ದಿರುವ ಸಿರಿಯಾ ಫೋಟೋಗ್ರಾಫರುಗಳು ಗುಣಹೊಂದಲು ಇನ್ನೂ ೨ ತಿಂಗಳ ಕಾಲ ಹಿಡಿಯುವುದು.

ಸಚಿವರುಗಳಾದ ಕಡಿದಾಳ್ ಮಂಜಪ್ಪ, ಪೂಣಚ್ಚ ಮತ್ತು ಮೇಯರರಿಗೆ ಅಧ್ಯಕ್ಷರು ಸಾಂಕೇತಿಕ ಬಹುಮಾನಗಳನ್ನಿತ್ತರು.

○ ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಬರುವ ತಿಂಗಳು ೧೧ ಮತ್ತು ೧೨ ಮತ್ತು ಪ್ರಧಾನಿ ನೆಹರೂರವರು ೧೯ನೇ ತಾರೀಖು ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡುವರು.

ದೇಶದಲ್ಲೆಲ್ಲಾ ವಿದ್ಯಾರ್ಥಿಗಳ ಹರತಾಳ ಮತ್ತು ಪ್ರದರ್ಶನ

ಪಾಕಿಸ್ತಾನದಿಂದ ಆಕ್ರಮಿತವಾಗಿರುವ ಕಾಶ್ಮೀರದಿಂದ ಬಂದಿರುವ ಸುಮಾರು ೧೦೦ ಮಂದಿ ನಿರಾಶ್ರಿತರು ನೆನ್ನೆ ದೆಹಲಿಯಲ್ಲಿರುವ ಪಾಕಿಸ್ತಾನದ ಹೈ ಕಮಿಷನರರ ಕಛೇರಿ ಮುಂದೆ ಪ್ರದರ್ಶನ ನಡೆಸಿ, ಕಾಶ್ಮೀರದಲ್ಲಿ ಪಾಕಿಸ್ತಾನವು ನಡೆಸಿರುವ ಆಕ್ರಮಣಕ್ಕಾಗಿ ಪ್ರತಿಭಟನೆಯನ್ನು ಸೂಚಿಸಿದರು. ವಿದ್ಯಾರ್ಥಿ ಸಂಸ್ಥೆಗಳ ಕರೆಯಂತೆ ನಡೆದ ಈ ಪ್ರದರ್ಶನದಲ್ಲಿ ನಿರಾಶ್ರಿತರು 'ಕಾಶ್ಮೀರವು ನಮ್ಮದು' ಎಂದು ಕೂಗಿದರು. ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ತರಗತಿಗೆ ಹೋಗದೆ ಸಭೆ ನಡೆಸಿದರು ಪಾಕಿಸ್ತಾನವು ನಡೆಸಿರುವ ಆಕ್ರಮಣವನ್ನು ಖಂಡಿಸಿ, ಪಾಕಿಸ್ತಾನದ ವಿರುದ್ಧ ವಿಶ್ವಸಂಸ್ಥೆಯು ಕ್ರಮ ಜರುಗಿಸುವಂತೆ ಸೂಚಿಸಲಾಯಿತು. ಹೈದರಾಬಾದಿನಲ್ಲಿ ೨೦,೦೦೦ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗಲಿಲ್ಲ. ವಾರಂಗಲ್, ಲಕ್ನೋ, ಭೋಪಾಲ್, ಇಂದೂರು, ಅಲಹಾಬಾದು, ಚಂಡಿಗಡ್, ಬೆಂಗಳೂರು ಮತ್ತು ರಾಯಪುರಗಳಲ್ಲೂ ವಿದ್ಯಾರ್ಥಿಗಳ ಪ್ರದರ್ಶನ ಮತ್ತು ಮುಷ್ಕರಗಳಾದುವು ತಿರುವನಂತಪುರದಲ್ಲಿ ವಿದ್ಯಾರ್ಥಿಗಳ ಗುಂಪೊಂದು ಇಂಟರ್ ಕಾಲೇಜಿನ ಮೇಲೆ ಕಲ್ಲೆಸೆಯಲಾಗಿ ಅಶ್ರುವಾಯುವನ್ನು ಪ್ರಯೋಗಿಸಲಾಯಿತು.

ಮೋಟಾರು ಅಪಘಾತದಲ್ಲಿ ಸಿರಿಯದವರಿಗೆ ಗಾಯ

ಬೆಂಗಳೂರು ೨೩

ಸಿರಿಯದ ಅಧ್ಯಕ್ಷ ಕುವಾಟ್ಲಿಯವರ ಪರಿವಾರದವರೊಡನೆ ಆಗಮಿಸಿರುವ ಇಬ್ಬರು ಸಿರಿಯಾ ಫೋಟೋಗ್ರಾಫರುಗಳಿಗೆ ನೆನ್ನೆ ಕೆಂಗೇರಿಯಿಂದ ಈಚೆಗೆ ಆದ ಮೋಟಾರು-ಲಾರಿ ಅಪಘಾತದಲ್ಲಿ ವಿಪರೀತ ಗಾಯಗಳಾದುವು ಅವರು ಕುಳಿತಿದ್ದ ಸರ್ಕಾರಿ ಕಾರಿನ ಡ್ರೈವರ್ ಬಾಬುವಿಗೂ ಪೆಟ್ಟು ಬಿದ್ದಿತು. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು. ಅವರ ಸಾಮಾನ್ಯ ಸ್ಥಿತಿಯು ತೃಪ್ತಿಕರವಾಗಿದೆ. ಸಿರಿಯಾ ಅಧ್ಯಕ್ಷರು ಹಿಂದೂಸ್ತಾನ್ ವಿಮಾನ ಕಾರ್ಖಾನೆಗೆ ಭೇಟಿಯನ್ನು ರದ್ದು ಮಾಡಿ ಆಸ್ಪತ್ರೆಗೆ ಹೋಗಿ ಗಾಯಗೊಂಡವರನ್ನು ವಿಚಾರಿಸಿದರು. ಘಟನೆ ನಡೆದ ಸ್ಥಳದಲ್ಲಿ ವಿಪರೀತವಾಗಿ ರಕ್ತವು ಚೆಲ್ಲಿತ್ತೆಂದೂ ಹೇಳಲಾಗಿದೆ. ಕಾರಿಗೂ ಲಾರಿಗೂ ಬಲವಾದ ಡಿಕ್ಕಿಯಾಗಿ, ಕಾರಿನ ಮೇಲೆ ಲಾರಿಯು ನಿಂತಿತ್ತು

ಕಾಶ್ಮೀರದಲ್ಲಿ ಪಾಕಿಸ್ತಾನದ ಆಕ್ರಮಣವನ್ನು ಪರಿಶೀಲಿಸಬೇಕು

ಭದ್ರತಾ ಸಮಿತಿಗೆ ಭಾರತದ ಪ್ರತಿನಿಧಿ ಕೃಷ್ಣಮೆನನ್ನರ ಕರೆ

ಭದ್ರತಾ ಸಮಿತಿಯಲ್ಲಿ ನೆನ್ನೆ ಕಾಶ್ಮೀರದ ಪ್ರಶ್ನೆ ಬಗ್ಗೆ ಪುನಃ ಚರ್ಚೆಯು ಆರಂಭವಾಗಿ ಪಾಕಿಸ್ತಾನ ವಿದೇಶಾಂಗ ಮಂತ್ರಿ ನೂನರ ಭಾಷಣಕ್ಕೆ ಭಾರತದ ಪ್ರತಿನಿಧಿ ಕೃಷ್ಣಮೆನನ್ನರು ಉತ್ತರವಿತ್ತು, ಕಾಶ್ಮೀರದಲ್ಲಿ ಆಕ್ರಮಣ ಮತ್ತು ದಂಡಯಾತ್ರೆಯಾಗಿರುವುದನ್ನು ಭದ್ರತಾ ಸಮಿತಿಯವರು ಗಮನಿಸಬೇಕೆಂದೂ, ಕಾಶ್ಮೀರವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಪ್ರಶ್ನೆಯು ಇಲ್ಲವೆಂದೂ ತಿಳಿಸಿದರು. ಪಾಕಿಸ್ತಾನವು ಭಾರತದ ವಿರುದ್ಧವಾಗಿ ದ್ವೇಷವನ್ನು ಕಾರುತ್ತಿದೆಯೆಂದೂ, ಭಾರತದ ಮೇಲೆ ಆಕ್ರಮಣ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದೆಯೆಂದೂ ಅವರು ಹೇಳಿ, ಈ ವಿಚಾರದಲ್ಲಿ ಪಾಕಿಸ್ತಾನವು 'ಪವಿತ್ರ ಯುದ್ಧದ' ಮಾತುಗಳನ್ನಾಡುತ್ತಿರುವುದೆಂದು ತಿಳಿಸಿದರು. ಭಾರತವು ಧಾಳಿ ಮಾಡುವುದಿಲ್ಲವೆಂದೂ, ಆದರೆ ಭಾರತವು ಆತ್ಮರಕ್ಷಣೆಯನ್ನು ಮಾತ್ರ ಮಾಡಿಕೊಳ್ಳಲು ಸಿದ್ಧವಿರುವುದೆಂದೂ ಅವರು ಸೂಚಿಸಿದರು.

ಕಾಂಗ್ರೆಸ್ಸಿನ ಶಿಸ್ತನ್ನು ಪಾಲಿಸಲು ತೀವ್ರ ಎಚ್ಚರಿಕೆ

ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರಿಕೆ ದೊರೆಯದಿರುವ ಸದಸ್ಯರುಗಳಿಗೆಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ಎಚ್ಚರಿಕೆಯಿತ್ತು, ಅವರುಗಳು ಸಂಸ್ಥೆಯ ಶಿಸ್ತಿಗೆ ವಿರೋಧವಾಗಿ ಅಧಿಕೃತ ಕಾಂಗ್ರೆಸ್ ಉಮೇದುವಾರರ ಮೇಲೆ ಸ್ಪರ್ಧಿಸಿದರೆ ಅವರ ಬಗ್ಗೆ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ. ಇನ್ನು ಮುಂದೆ ಉಮೇದುವಾರಿಕೆ ಬಗ್ಗೆ ಯಾವ ವಿವಾದಗಳೂ ಇರಬಾರದೆಂದೂ, ಅಪೀಲುಗಳನ್ನೇನೂ ಕೇಳುವುದಿಲ್ಲವೆಂದೂ ಅವರು ತಿಳಿಸಿರುವರು.

ರಿಪಬ್ಲಿಕ್ ದಿನಾಚರಣೆ

ಮೈಸೂರು ೨೪

ನಗರದ ಪೌರಸಭೆಯ ಆಶ್ರಯದಲ್ಲಿ ನಾಳಿದ್ದು ರಿಪಬ್ಲಿಕ್ ದಿನೋತ್ಸವವನ್ನು ನೆರವೇರಿಸಲಾಗುವುದು ಅದರ ಅಂಗವಾಗಿ ಟೌನ್‌ಹಾಲ್ ಮೈದಾನದಲ್ಲಿ ಬೆಳಗ್ಗೆ ೯ ಗಂಟೆಗೆ ಧ್ವಜಾರೋಹಣವೂ, ಸಂಜೆ ೫|| ಗಂಟೆಗೆ ಬಹಿರಂಗ ಸಭೆಯೂ ನಡೆಯುವುವು

ನಗರದಲ್ಲಿ ಮಾರ್ಚಿ ೧೨ರಂದು ಚುನಾವಣೆ

ನಗರದ ದಕ್ಷಿಣ ಮತ್ತು ಉತ್ತರ ಕ್ಷೇತ್ರಗಳಲ್ಲೂ, ಮೈಸೂರು ತಾಲ್ಲೂಕಿನಲ್ಲೂ ಬರುವ ಮಾರ್ಚಿ ೧೨ನೇ ತಾರೀಕು ಚುನಾವಣೆಗಳು ನಡೆಯುವುವೆಂದು ತಿಳಿದುಬಂದಿದೆ.

ಕ್ಯಾಲೆಂಡರ್ ಸ್ವೀಕಾರ

ಮೆಸರ್ಸ್ ಹಿಂದೂಸ್ತಾನ್ ಲೀವರ್ಸ್ ಕಂಪೆನಿಯವರ ಮಂಗಳೂರಿನ ಪ್ರತಿನಿಧಿ ಶ್ರೀ ಬಿ ಆರ್ ಸತ್ಯನಾರಾಯಣರವರು ಕಳುಹಿಸಿಕೊಟ್ಟಿರುವ ನವ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಮೈಸೂರು ಟಾಯ್ಸ್ ಕಂಪೆನಿ

ಮೈಸೂರು ಟಾಯ್ಸ್ ಕಂಪೆನಿಯ ಶ್ರೀ ವೀರಪ್ಪನವರು ಕಳುಹಿಸಿರುವ ಬೊಂಬಿನ ಮೇಲೆ ಮಹಾತ್ಮಾಗಾಂಧಿಯವರ ಚಿತ್ರದಿಂದ ಕೂಡಿದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ದೇವಸ್ಥಾನಗಳಲ್ಲಿ ಧನ ಹೆಚ್ಚಿದರೆ ಭಕ್ತಿಗೆ ಕುಂದೆಂದು ವಿನೋಬಾಜಿ

ಶ್ರೀರಂಗದಲ್ಲಿ ಆಚಾರ್ಯ ವಿನೋಬಾ ಭಾವೆಯವರು ಮಾತನಾಡಿ, ದೇವಸ್ಥಾನಗಳಲ್ಲಿ ವಿಶೇಷವಾಗಿ, ಐಶ್ವರ್ಯ ಶೇಖರಣೆ ಮಾಡುವುದು ಸರಿಯಲ್ಲವೆಂದೂ, ಅದು ಜನರಲ್ಲಿ ಭಕ್ತಿಯನ್ನು ಹುಟ್ಟಿಸಲು ಅಡ್ಡಿಯಾಗಿರುವುದೆಂದೂ ತಿಳಿಸಿರುತ್ತಾರೆ ದೇಶದಲ್ಲಿ ನಾಸ್ತಿಕತೆಯು ಹರಡಲು ಆಸ್ತಿಕರೆಂದು ಹೇಳಿಸಿಕೊಳ್ಳುವವರಲ್ಲಿರುವ ಕೆಟ್ಟ ನಡತೆಯೇ ಕಾರಣವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ ರಾಮಾನುಜರು ತಮ್ಮಲ್ಲಿ ಹಣವಿಲ್ಲದಿದ್ದರೂ, ಉತ್ತಮ ಕೆಲಸವನ್ನು ನಡೆಸಿರುವುದಾಗಿಯೂ, ಹಾಗೆಯೇ ಶಂಕರಾಚಾರ್ಯರೂ ಮಾಡಿರುವರೆಂದೂ ವಿನೋಬಾರವರು ಹೇಳಿ ಅವರ ಪರಂಪರೆಯವರು ಐಶ್ವರ್ಯ ಸಂಗ್ರಹದಲ್ಲಿ ತೊಡಗಿರುವುದನ್ನು ಟೀಕಿಸಿದ್ದಾರೆ

ಹುಟ್ಟುವ ಮುಂಚೆ ಅತ್ತ ಮಗು

ಇಂಗ್ಲೆಂಡಿನ ಸಿಡ್‌ಮಾರ್ ಎಂಬ ಊರಿನ ಆಸ್ಪತ್ರೆಯಲ್ಲಿ ಒಬ್ಬ ಹೆಂಗಸು ಹಡೆದ ಮಗುವು ಹೊಟ್ಟೆಯಲ್ಲಿದ್ದಾಗಲೇ ಅತ್ತ ಶಬ್ದವನ್ನು ಮೂವರು ವೈದ್ಯರು ಕೇಳಿರುತ್ತಾರೆ ಎಲ್ಲೋ ಅತ್ರ್ಕೆ ಶಬ್ದವಾದುದಾಗಿಯೂ ಅವರು ಹೇಳಿರುತ್ತಾರೆ. ಮಗುವು ಆರೋಗ್ಯವಾಗಿದೆ ಮಗುವು ಹುಟ್ಟುವ ಮುಂಚೆಯೇ ಅಳುವುದೇ ಎಂಬ ಜಿಜ್ಞಾಸೆಯು ನೂರಾರು ವರ್ಷಗಳಿಂದ ಇದ್ದು ಇದು ಈಗ ವಾಸ್ತವವಾಗಿದೆ.

ಚಾಮರಾಜನಗರದ ವೀರಭದ್ರಸ್ವಾಮಿ ದೇವಸ್ಥಾನದ ಆಡಳಿತ

ಚಾಮರಾಜನಗರದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ ಸಂಸ್ಥೆಯಾಗಿದ್ದರೂ, ಅಲ್ಲಿ ಭಕ್ತರಿಂದ ದೇವರ ದರ್ಶನ, ಪೂಜೆ ಇತ್ಯಾದಿಗಳಿಗೆ ತೊಂದರೆಯಾಗಿದೆ. ದೇವಸ್ಥಾನದ ಅರ್ಚಕರು ಗುಡಿಯಲ್ಲಿ ಸಂಸಾರ ಸಮೇತರಾಗಿ ವಾಸವಾಗಿರುವುದೇ ಇದಕ್ಕೆ ಕಾರಣ-ಎಂಬುದಾಗಿ ಅಲ್ಲಿನ ಭಕ್ತರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ. ೭-೧೫ ಸೌಂದರ ಕೃಷ್ಣಮೂರ್ತಿ-ದೇವರ ನಾಮ ೭-೩೦ ಹಿಂದಿ ವಾರ್ತೆ ೮ ೧೫ ಉದಯ ಸಂಗೀತ. ಮಧ್ಯಾಹ್ನ ೧೨ ಸಂಗೀತ. ೧೨-೩೦ ವಾದ್ಯವೃಂದ ೧೨-೪೫ ವನಿತಾ ವಿಹಾರ. ೧-೩೦ ಗೋಟುವಾದ್ಯ. ೨-೧೫ ಸಂಗೀತ ಕಛೇರಿ ಸಂಜೆ ೫-೩೦ ವಿಜಯಲಕ್ಷ್ಮಿ ನಾಗ [illegible]-ಸಂಗೀತ. ೬-[illegible] ವಿರಾಮ ಸಂಗೀ [illegible] ತ್ಯ ಗೀತೆ ೭ ೬ ಪ್ರಸಂಗ ೮ ೬ [illegible] ತ್ತಿ ಮುರ್ತ- ಸಂಗೀತ. ೯-೧ [illegible] ಂಜರಿ. ೯-೩೦ ಅಖಿಲ ಭಾರತ ಕವಿ ಸಮ್ಮೇಳನ-ದೆಹಲಿ ರಿಲೆ

ಗ್ರಾಮಾಧಿಕಾರಿಗಳ ಸ್ಥಾನಮಾನವನ್ನು ನಿಗದಿಮಾಡುವುದು ಅಗತ್ಯ

ಸಂಸ್ಥಾನದ ಸಮ್ಮೇಳನದ ನಿರ್ಣಯ

ಬೆಂಗಳೂರು ೨೩

ಕಳೆದ ವಾರ ಇಲ್ಲಿ ಸೇರಿದ್ದ ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನವು ಗ್ರಾಮಾಧಿಕಾರಿಗಳನ್ನು ಸರ್ಕಾರಿ ಸಂಬಳದ ನೌಕರರಾಗಿ ಕಾಣಲಾಗುವುದೇ ಅಥವಾ ಇತರ ನಾಗರಿಕರಂತೆ ಅವರೂ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಲಾಗುವುದೇ ಎಂಬ ಬಗ್ಗೆ ಸರ್ಕಾರದವರು ನಿರ್ದಿಷ್ಟಗೊಳಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಿತು ಈಗ ಗ್ರಾಮಾಧಿಕಾರಿಗಳು ಚುನಾವಣೆಗಳಲ್ಲಿ ಸ್ಪರ್ಧಿಸುವಂತಿಲ್ಲ

ಗ್ರಾಮಾಧಿಕಾರಿಗಳ ಅನುವಂಶಿಕ ಹಕ್ಕುಗಳನ್ನು ಸರ್ಕಾರದವರು ತೆಗೆದುಕೊಂಡು, ಅವರುಗಳಿಗೆ ಪರಿಹಾರವಾಗಿ ೨೦ ವರ್ಷಗಳ ಪೋಟಿಗೆಯನ್ನು ಕೊಡಬೇಕೆಂದು ಒತ್ತಾಯಪಡಿಸಲಾಯಿತು

ಗ್ರಾಮಾಧಿಕಾರಿಗಳ ಬೇಡಿಕೆಗಳ ವಿಚಾರವಾಗಿ ಸರ್ಕಾರದ ಬಳಿ ನಿಯೋಗ ಹೋಗಲು ಶ್ರೀ ಎಸ್ ಎಲ್. ನರಸಿಂಹಯ್ಯನವರ ನೇತೃತ್ವದಲ್ಲಿ ೧೮ ಜನರುಳ್ಳ ಸಮಿತಿಯನ್ನು ನೇಮಿಸಲಾಯಿತು

ಅದರಂತೆ ನಿಯೋಗದವರು ಮುಖ್ಯ ಮಂತ್ರಿಯವರ ಬಳಿ ನೆನ್ನೆ ನಿಯೋಗ ಹೋಗಿದ್ದರು ಅವರುಗಳ ಬೇಡಿಕೆ ಬಗ್ಗೆ ಮುಖ್ಯ ಮಂತ್ರಿಯವರು ಸಹಾನುಭೂತಿಯನ್ನು ವ್ಯಕ್ತಪಡಿಸಿದರು

ಭಾರತ ಮತ್ತು ಪಾಕಿಸ್ತಾನಗಳಿಗೆ ವ್ಯಾಪಾರಿ ಒಪ್ಪಂದ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಮೂರು ವರ್ಷಗಳ ಅವಧಿಗೆ ಹೊಸ ವ್ಯಾಪಾರಿ ಒಪ್ಪಂದವಾಗಿ ನೆನ್ನೆ ಈ ಬಗ್ಗೆ ಎರಡು ರಾಷ್ಟ್ರ ಪ್ರತಿನಿಧಿಗಳೂ ಕೌಲಿಗೆ ರುಜು ಮಾಡಿದರು ಎರಡು ರಾಷ್ಟ್ರಗಳೂ ವ್ಯಾಪಾರವನ್ನು ಅತ್ಯಂತ ಹೆಚ್ಚಿನ ಪ್ರಾಶಸ್ತ್ಯ ರಾಷ್ಟ್ರದ ಭಾವನೆಯ ದೃಷ್ಟಿಯಿಂದ ನಡೆಸಲು ಅಂಗೀಕರಿಸಿವೆ ಪಾಕಿಸ್ತಾನಕ್ಕೆ ಭಾರತವು ೧ ಲಕ್ಷ ಟನ್ ಕಲ್ಲಿದ್ದಲು (ಈಗಿಗಿಂತಲೂ ೨೨ ೦೦೦ ಟನ್ನು ಹೆಚ್ಚು) ನ್ನು ಒದಗಿಸುವುದು ೧೦ ಬಂಗಾಳಿ ಮತ್ತು ೭ ಹಿಂದಿ ಅಥವಾ ಉರ್ದು ಚಲನಚಿತ್ರಗಳನ್ನು ಭಾರತದಿಂದ ಪಾಕಿಸ್ತಾನವು ಆಮದು ಮಾಡಿಕೊಳ್ಳಲಿದೆ ಪಾಕಿಸ್ತಾನದಿಂದ ಸೆಣಬು ಚರ್ಮ, ಮೀನು, ಕೋಳಿ ಮೊಟ್ಟೆ ಮತ್ತು ಕೋಳಿ, ಯಂತ್ರ ಸಾಮಗ್ರಿ, ಬೈಸಿಕಲ್, ಶಸ್ತ್ರ ಚಿಕಿತ್ಸಾ ಸಾಧನ ಮತ್ತು ಕ್ರೀಡಾ ಸಾಧನಗಳನ್ನು ಭಾರತವು ಆಮದು ಮಾಡಿಕೊಳ್ಳಲಿದೆ

ಯೆಮೆನ್ ಮೇಲೆ ಬ್ರಿಟನ್ನಿನ ದೂರು

ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಬ್ರಿಟನ್ನು ಮನವಿಯೊಂದನ್ನು ಸಲ್ಲಿಸಿ ಏಡನ್ನಿನ ಮೇಲೆ ಯೆಮೆನ್ ಸರ್ಕಾರವು ಸಶಸ್ತ್ರ ಆಕ್ರಮಣವನ್ನು ನಡೆಸಿರುವುದಾಗಿ ತಿಳಿಸಿದೆ. ಗಡಿ ಬಳಿ ಆದ ಘರ್ಷಣೆಗೆಲ್ಲಾ ಯೆಮೆನ್ ಸರ್ಕಾರವೇ ಹೊಣೆ ಹೊತ್ತಿರುವುದಾಗಿಯೂ ತಿಳಿಸಲಾಗಿದೆ

ತ್ಯಾಗರಾಜರ ಆರಾಧನೋತ್ಸವ

ಚಾಮುಂಡಿಪುರದಲ್ಲಿರುವ ಸರಸ್ವತಿ ಗಾನ ಕಲಾ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ತ್ಯಾಗರಾಜರ ಆರಾಧನೋತ್ಸವದ ಅಂಗವಾಗಿ ಶ್ರೀ ಜಿ ಆರ್ ದಾಸಪ್ಪನವರ ಸಂಗೀತವು ನಡೆಯುವುದು

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ದತ್ತಾತ್ರೇಯ ಸಂಗೀತ ವಿದ್ಯಾ ಶಾಲೆಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ವಿ|| ಬಿ. ಎಂ. ಮುನಿವೆಂಕಟಪ್ಪನವರ ಸಂಗೀತವು ಏರ್ಪಾಡಾಗಿದೆ

ಗಾಂಧಿ ವ್ಯಾಸಂಗ ಗೋಷ್ಠಿ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಾಳೆ ಸಂಜೆ "ಸಮಾಜ ಶಾಸ್ತ್ರದಲ್ಲಿ ಗಾಂಧಿ ದೃಷ್ಟಿ" ಎಂಬ ವಿಚಾರವಾಗಿ ಶ್ರೀ ಯಂ. ಮುದ್ದುಲಿಂಗಣ್ಣನವರು ವ್ಯಾಸಂಗಗೋಷ್ಠಿಯನ್ನು ನಡೆಸುವರು.

ದಕ್ಷಿಣ ಭಾರತದಲ್ಲಿ ಹಿಂದಿ ಪ್ರಚಾರಕ್ಕಾಗಿ ೬ ಕೋಟಿ ರೂ.

ಕೇಂದ್ರ ಸರ್ಕಾರಕ್ಕೆ ಸಂಸ್ಥಾನದ ಹಿಂದಿ ಪ್ರಚಾರಕರ ಮನವಿ

ದಾವಣಗೆರೆಯಲ್ಲಿ ಸೇರಿದ್ದ ಸಂಸ್ಥಾನದ ಹಿಂದಿ ಪ್ರಚಾರಕ ಸಮ್ಮೇಳನವು ನಿರ್ಣಯವೊಂದನ್ನು ಅಂಗೀಕರಿಸಿ, ೧೯೬೫ರೊಳಗೆ ಭಾರತಾದ್ಯಂತ ಹಿಂದಿಯನ್ನು ರಾಷ್ಟ್ರ ಭಾಷೆಯಾಗಿ ಮಾಡಲು ದ್ವಿತೀಯ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ೧೦ ಕೋಟಿ ರೂ ಗಳನ್ನು ತೆಗೆದಿಡಬೇಕೆಂದೂ, ಆ ಪೈಕಿ ೬ ಕೋಟಿಯನ್ನು ಕರ್ನಾಟಕ, ಆಂಧ್ರ, ಕೇರಳ ಮತ್ತು ತಮಿಳುನಾಡು ಮುಂತಾದ ಪ್ರಾಂತಗಳಲ್ಲಿ ವೆಚ್ಚ ಮಾಡಬೇಕೆಂದೂ ಸೂಚಿಸಿತು ಮೈಸೂರು ಹಿಂದಿ ರಿಯಾಸತ್ ಮತ್ತು ಕರ್ನಾಟಕ ಹಿಂದಿ ಪ್ರಚಾರ ಸಮಿತಿಯನ್ನು ಒಂದುಗೂಡಿಸಬೇಕೆಂದೂ, ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಹಿಂದಿಯನ್ನು ಕಡ್ಡಾಯ ಭಾಷೆಯಾಗಿ ಮಾಡಬೇಕೆಂದೂ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಿಂದಿ ಅಧ್ಯಾಪಕರನ್ನು ಪೂರ್ಣಕಾಲದ ಅಧ್ಯಾಪಕರನ್ನಾಗಿ ಮಾಡಬೇಕೆಂದೂ ಕೋರಲಾಯಿತು.

ಬಳ್ಳಾರಿ ವರ್ತಕರಿಂದ ಸುಂಕದ ವಿರುದ್ಧ ಹರತಾಳ

ಬಳ್ಳಾರಿಯಲ್ಲಿ ೨೯ರಿಂದ ವಿಧಿಸಲಾಗುವ ಪೌರಸಭಾ ಸುಂಕದ ವಿರೋಧವಾಗಿ ಮೊನ್ನೆ ಅಲ್ಲಿನ ಬಟ್ಟೆ ವರ್ತಕರು ಮತ್ತು ಇತರರು ಹರತಾಳವನ್ನು ನಡೆಸಿದರು ಮಧ್ಯಾಹ್ನ ಸಮಾಜವಾದಿ ಪಕ್ಷದವರು ಮತ್ತು ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿ ಪೌರಸಭೆಯ ನಿರ್ಧಾರವನ್ನು ಖಂಡಿಸುವ ಮನವಿಯೊಂದನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟರು

ಚಿಯಾಂಗರೊಡನೆ ದಕ್ಷಿಣ ಕೊರಿಯಾ ಅಧಿಕಾರಿ ಭೇಟಿ

ದಕ್ಷಿಣ ಕೊರಿಯದ ಮುಖ್ಯ ಸೇನಾಧಿಕಾರಿ ಜನರಲ್ ಕುರ್ ಲೀಯವರು ಫಾರ್ಮೋಸಾವಿಗೆ ಆಗಮಿಸಿ ರಾಷ್ಟ್ರೀಯ ಚೀಣದ ಅಧ್ಯಕ್ಷ ಚಿಯಾಂಗ್ ಕೈಷೇಕರೊಡನೆ ರಹಸ್ಯ ಸಮಾಲೋಚನೆ ನಡೆಸಿರುತ್ತಾರೆ ಅವರು ದಕ್ಷಿಣ ಫಾರ್ಮೋಸಾದಲ್ಲಿ ಮಿಲಿಟರಿ ನೆಲೆಗಳನ್ನು ಪರಿಶೀಲಿಸಿದರು

ವಿದ್ಯುಚ್ಛಕ್ತಿ ಕೈಗಡಿಯಾರ

ನ್ಯೂಯಾರ್ಕಿನ ಹ್ಯಾಮಿಲ್ಟನ್ ಗಡಿಯಾರದ ಕಂಪೆನಿಯವರು ಇದೇ ಮೊಟ್ಟಮೊದಲಾಗಿ ವಿದ್ಯುಚ್ಛಕ್ತಿ ಕೈ ಗಡಿಯಾರವನ್ನು ಮಾರಾಟಕ್ಕೆ ಕೊಟ್ಟಿರುತ್ತಾರೆ ಅದು ೧|| ವೋಲ್ಟಿನ ಬ್ಯಾಟರಿಯನ್ನು ಹೊಂದಿದೆ ಗಡಿಯಾರಕ್ಕೆ ೧೭೫ ಡಾಲರ್ ಬೆಲೆಯಾಗುವುದು

ನಾದಬ್ರಹ್ಮ ಸಂಗೀತ ಸಭಾ
ಮೈಸೂರು
3-2-1957 ನೇ ಭಾನುವಾರ
ಸಂಜೆ 5-30 ಘಂಟೆಗೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ಸಂ|| ವಿದ್ವಾನ್ ಬಿ. ಕೆ. ರಂಗಾಚಾರ್- ಹಾಡುಗಾರಿಕೆ
,, ಕಂಡದೇವಿ ಅಳಗಿರಿಸ್ವಾಮಿ- ಪಿಟೀಲು
,, ಪಾಲ್‌ಘಾಟ್ ರಘು- ಮೃದಂಗ
ಪ್ರವೇಶ ಧನ - ಗಂಡಸರಿಗೆ 1.8.0
ಹೆಂಗಸರಿಗೆ 1.0.0

Edited, Printed and Published by A. R. Nagarajan at Sadhvi Press, D Subbiah Road, Mysore

ಸ್ವತಂತ್ರರಾಗಿ ಸ್ಪರ್ಧಿಸಲು ಮದ್ರಾಸಿನ ಸಚಿವರ ನಿರ್ಧಾರ

ಮದ್ರಾಸಿನ ಮರಾಮತ್ತು ಮಂತ್ರಿ ರಾಮನಾಡಿನ ರಾಜರಾದ ಸೇತುಪತಿಯವರನ್ನು ಈ ಸಾರಿ ಕಾಂಗ್ರೆಸ್ ಉಮೇದುವಾರರಾಗಿ ಆರಿಸಿಲ್ಲ. ತಾವು ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸುವುದಾಗಿ ಅವರು ನೆಹರೂ ಮತ್ತು ಢೇಬರ್‌ರವರಿಗೆ ತಂತಿ ಮೂಲಕ ತಿಳಿಸಿರುತ್ತಾರೆ. ತಮ್ಮನ್ನು ಬಿಟ್ಟಿರುವುದರಿಂದ ತಮ್ಮ ಬಗ್ಗೆ ಕಳಂಕ ಬಂದಂತಾಗಿದೆಯೆಂದು ಅವರು ಹೇಳಿರುತ್ತಾರೆ ಮತ್ತೊಬ್ಬ ಮಂತ್ರಿ ಪರಮೇಶ್ವರನ್‌ರನ್ನೂ ಆರಿಸಿಲ್ಲ

ಅನಾಥಾಲಯದ ತೋಟದ ವ್ಯವಹಾರದಲ್ಲಿ ತಡೆ ಆಜ್ಞೆಯು ರದ್ದು

ನಗರದ ಸುಬ್ಬರಾಯನಕೆರೆ ಬಳಿ ಅನಾಥಾಲಯಕ್ಕೆ ಸೇರಿದಂತೆ ಇರುವ ತೋಟದಲ್ಲಿ ಸತ್ಯನಾರಾಯಣಸ್ವಾಮಿ ದೇವಸ್ಥಾನವನ್ನು ಕಟ್ಟಲು ಶ್ರೀ ನಾರಾಯಣಾಚಾರ್ಯ ಎಂಬುವರು ಪೌರಸಭೆಯಿಂದ ರಹದಾರಿ ಪಡೆದು ಅಸ್ತಿಭಾರ ಹಾಕುತ್ತಿದ್ದ ಸಂಬಂಧವಾಗಿ ಕೊಡಲಾಗಿದ್ದ ತಡೆ ಆಜ್ಞೆಯನ್ನು ನೆನ್ನೆ ಮುನ್ಸೀಫರು ರದ್ದು ಮಾಡಿದರು. ಈ ಬಗ್ಗೆ ಅನಾಥಾಲಯದವರು ಅಪೀಲು ಹೂಡಲಿರುವರೆಂದು ಗೊತ್ತಾಗಿದೆ

ಪಾರ್ಲಿಮೆಂಟಿಗೆ ಮಹಂತದೇವರುರವರ ಸ್ಪರ್ಧೆ

ನಗರದ ಸುಪ್ರಸಿದ್ಧ ವಕೀಲರಾದ ಶ್ರೀ ಎಂ. ಎಸ್ ಮಹಂತದೇವರುರವರು ಲೋಕ ಸಭೆಗೆ ಮೈಸೂರು ಜಿಲ್ಲೆಯಿಂದ ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸಲಿರುವರು

ಅಪ್ಪಟವಾದ
ಹಸುವಿನ ಹಾಲು
ಪೌಂಡು 1ಕ್ಕೆ 0 3 6 : ½ ಪೌಂಡಿಗೆ 0 1
ಇಂದೇ ಭೇಟಿ ಕೊಟ್ಟು ಪರೀಕ್ಷಿಸಿರಿ
ಕಾಲ : ಬೆಳಗ್ಗೆ 5-30ರಿಂದ 9 30
ಮಧ್ಯಾಹ್ನ 3 ರಿಂದ 6-30
ಗೋಕುಲ ಮಿಲ್ಕ್ ಡೈರಿ
ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾ
ನೂರಡಿ ರಸ್ತೆ ಮೈಸೂರು
ಶೀಘ್ರದಲ್ಲೇ ರಮಾವಿಲಾಸ ಅಗ್ರಹಾರದಲ್ಲಿ ಶಾಖೆಯೊಂದನ್ನು ತೆರೆಯಲಾಗುತ್ತ

SRI GAYATHRI
TALKIES
To-day only
RKO's
LIVING DESERT
From 25-1-57 : For 3 days
SOMEBODY UP THERE LIKES ME
With :- Paul Newman
Pier Angeli

ಬ್ರಾಹ್ಮಣ ಧರ್ಮ ಸಹಾಯ ಸಭಾ

ಮೈಸೂರು

ಮೈಸೂರು ದೊಡ್ಡಕೆರೆ ಏರಿ ಕೆಳಗೆ ಹರ್ಷ ದ್ರ ರಸ್ತೆಯಲ್ಲಿ ಈ ಸಭೆಯ ಅನಾಥಾ ತೋಟದಲ್ಲಿರುವ ದೊಡ್ಡ ಉತ್ತಮವಾದ ಹು ಸೇಮರದ ಫಸಲನ್ನು ತಾ|| 28-1-57ನೇ ಸೋಮವಾರ ಬೆಳಗ್ಗೆ 9 ಘಂಟೆಗೆ ಸ್ಥಳದಲ್ಲಿ ಹರಾ ಹಾಕಲಾಗುತ್ತೆ. ಬೇಕಾದವರು ಬಿಡ್ ಮಾ ಪಡೆಯಬಹುದು ಅದರ ನಿಯಮಗಳನ್ನು ನ್ನಲ್ಲಾಗಲೀ, ಸಭೆಯ ಕಛೇರಿಯಲ್ಲಾಗಲೀ ತಿಯಬಹುದು.

ಕೆ. ಶೇಷಾದ್ರಿ
ಗೌರವ ಕಾರ್ಯ

ಒಲಂಪಿಯಾ
25-1-57ರಿಂದ : ಅಮೋಘ ಪ್ರಾರಂ
ಸುಪ್ರಸಿದ್ಧ ತ.ರಾ.ಸು.ರವರ ಕಾದಂಬರಿ
ಹಂಸಗೀತೆಯೇ ವಿಶ್ವಭಾರತಿಯವರ,
ನಿಮ್ಮಿ, ಭರತ್ ಭೂಷಣ್, ಮನಮೋಹನಕೃಷ್ಣ, ಲೀಲಾಚಿಟ್ನೀಸ್ ಮತ್ತು ಓಂಪ್ರಕಾಶ್, ಪಾತ್ರವಹಿಸಿರುವ ★ ಬಸಂತ್ ಬಹಾರ್
25-1-57ರಿಂದ ಪ್ರತಿ ದಿನ ಬೆಳಗ್ಗೆ 10ರಿಂದ 12 ಘಂಟೆವರೆಗೆ ಮೇಲಿನ ತರಗತಿಗಳಿಗೆ ಟಿಕೇ
ಗಳನ್ನು ಮುಂಗಡವಾಗಿಯೇ ಕೊಡಲಾಗುತ್ತೆ.

ಟೆಲಿಫೋನ್. ನಂ. 792

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸ ಬಜಾರ್ ಬೀದಿ,
ಬೆಂಗಳೂರು-2

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೩] SADHVI : FRIDAY 25—1—1957 ಮೈಸೂರು : ಶುಕ್ರವಾರ ೨೫—೧—೧೯೫೭ : [ಸಂಚಿಕೆ : ೧೮೦

ಕಾಶ್ಮೀರ ರಾಜ್ಯಾಂಗ ಸಭೆ ಕ್ರಮಕ್ಕೆ ಪಶ್ಚಿಮ ರಾಷ್ಟ್ರಗಳ ತಡೆ

ರೈಲ್ವೆಯ ಹಣದ ಪೆಟ್ಟಿಗೆಯಿಂದ ೨,೭೦೦ ರೂ. ಮಾಯ

ಮೈಸೂರು ೨೪

ಕಳೆದ ತಿಂಗಳು ೨೦ನೇ ತಾರೀಕು ನಗರದ ರೈಲ್ವೆ ಸ್ಟೇಷನ್ನಿನಿಂದ ಮದ್ರಾಸಿಗೆ ರವಾನೆ ಮಾಡಲ್ಪಟ್ಟ ರೈಲ್ವೆ ಇಲಾಖೆಯ ಹಣದ ಪೆಟ್ಟಿಗೆಯಲ್ಲಿದ್ದ ೨,೭೦೦ ರೂ. ಮಾಯವಾಗಿರುವುದೇನೂ, ಈ ಬಗ್ಗೆ ಪೊಲೀಸರು ಹಲವರನ್ನು ಪ್ರಶ್ನಿಸಿರುವರೆಂದೂ ವರದಿಯಾಗಿದೆ. ಮದ್ರಾಸಿನಲ್ಲಿ ರೈಲ್ವೆ ಅಧಿಕಾರಿಗಳು ಹಣದ ಪೆಟ್ಟಿಗೆಯನ್ನು ಬಿಚ್ಚಿ ನೋಡುವಲ್ಲಿ ಮೇಲ್ಕಂಡ ಮೊಬಲಗು ಮಾಯವಾಗಿದ್ದುದು ಗೊತ್ತಾಗಿ, ಸಂಬಂಧಪಟ್ಟವರಿಗೆ ಅವರು ಕೂಡಲೇ ವಿಚಾರವನ್ನು ತಿಳಿಯಪಡಿಸಿದರು. ಹಣವು ಹೇಗೆ ಹೋಯಿತೆಂಬುದನ್ನು ತನಿಖೆ ನಡೆಸಲಾಗುತ್ತಿದೆ. ಇದುವರೆಗೂ ಯಾರೂ ಬಂಧಿಸಲ್ಪಟ್ಟಿಲ್ಲ.

ಅರಮನೆ ನೌಕರರ ಸಭೆ

ಅರಮನೆ ನೌಕರರ ಸಭೆಯು ಮೊನ್ನೆ ಸಹಕಾರ ಭವನದಲ್ಲಿ ನಡೆಯಿತು. ಲೋಕಸಭಾ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಪೌರಸಭಾ ಸದಸ್ಯ ಶ್ರೀ ಎಸ್. ಗೋವಿಂದಯ್ಯ, ಕಾರ್ಮಿಕ ಮುಂದಾಳುಗಳಾದ ಶ್ರೀ ಗರುಡಾಚಾರ್, ಶ್ರೀಗಳಾದ ಕೋದಂಡರಾಮಪಿಳ್ಳೆ, ವೇದಾಂತ ಹೆಮ್ಮಿಗೆ ಮತ್ತು ಎ. ಎಸ್. ನಾರಾಯಣಸ್ವಾಮಿಯವರು ಭಾಷಣ ಮಾಡಿ ನೌಕರರು ತಮ್ಮಲ್ಲಿ ಹೆಚ್ಚು ಸಂಘಟನೆಯನ್ನು ಮಾಡಿಕೊಳ್ಳುವಂತೆ ಸೂಚಿಸಿದರು. ಅಧ್ಯಕ್ಷರು ಮಾತನಾಡಿ, ನೌಕರರಿಗೆ ಕೊಡಲಾಗುತ್ತಿರುವ ಸಂಬಳದ ಮಟ್ಟವು ಬಹಳ ಕಡಿಮೆಯೆಂದೂ, ಸರ್ಕಾರಿ ನೌಕರರಿಗೆ ಸಂಬಳವನ್ನು ಹೆಚ್ಚಿಸಿರುವ ಮೇರೆ ರಾಜ್ಯಪಾಲರೂ ಅರಮನೆ ನೌಕರರಿಗೆ ಹೆಚ್ಚಿಸಬೇಕೆಂದೂ ಹೇಳಿದರು. ನಂತರ ಸಂಘದ ಅಧಿಕಾರವರ್ಗಕ್ಕೆ ಆಯ್ಕೆ ನಡೆದು, ವೀರವಾಣಿ ಸಂಪಾದಕ ಶ್ರೀ ಸೀತಾರಾಂರವರನ್ನು ಉಪಾಧ್ಯಕ್ಷರಾಗಿಯೂ, ಶ್ರೀ ಬಿ. ಎಲ್. ಚಂದ್ರಶೇಖರಯ್ಯ ಮತ್ತು ವೇದಾಂತ ಹೆಮ್ಮಿಗೆಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಮತ್ತು ಶ್ರೀ ಬಿ ರಂಗರಾಯರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು. ಅಧ್ಯಕ್ಷರನ್ನು ನಂತರ ಆರಿಸಲಾಗುವುದು.

ಕಾಂಗ್ರೆಸ್ಸಿನ ಪರ ಮಹಿಳಾ ಉಮೇದುವಾರರು

ಪ್ರದೇಶ ಕಾಂಗ್ರೆಸ್ಸಿನ ಪರವಾಗಿ ವಿಧಾನ ಸಭೆಗೆ ಕೆಳಗೆ ಕಂಡ ಮಹಿಳೆಯರನ್ನು ಉಮೇದುವಾರರಾಗಿ ನಿಲ್ಲಿಸಲಾಗಿದೆ:- ಚಾಮರಾಜಪೇಟೆಯಿಂದ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ, ಹೊಸಕೋಟೆ ರಿಸರ್ವ್‌ನಿಂದ ಶ್ರೀಮತಿ ರುಕ್ಮಿಣಮ್ಮ, ಬಳ್ಳಾರಿ ಜಿಲ್ಲೆಯ ಕುರುಗೋಡು ಕ್ಷೇತ್ರದಿಂದ ಶ್ರೀಮತಿ ಸರ್ವಮಂಗಳಮ್ಮ; ಹೊಸದುರ್ಗ ಶ್ರೀಮತಿ ಗಂಗಮ್ಮ; ಚಿಕ್ಕಬಳ್ಳಾಪುರ ಶ್ರೀಮತಿ ನೀಲಿಂಗಮ್ಮ; ಪಾಂಡವಪುರ ಶ್ರೀಮತಿ ದಯಾವಂತಿ ಬೋರೇಗೌಡ, ಕೊಳ್ಳೇಗಾಲ ರಿಸರ್ವ್ ಶ್ರೀಮತಿ ಕೆಂಪಮ್ಮ ಮತ್ತು ಶಿವಮೊಗ್ಗ-ಶ್ರೀಮತಿ ರತ್ನಮ್ಮ ಮಾಧವರಾವ್.

ಹಳ್ಳಿಗರೊಡನೆ ಘರ್ಷಣೆಯಲ್ಲಿ ಪೊಲೀಸರ ಕೊಲೆ

ಉತ್ತರ ಪ್ರದೇಶದ ಮೊರಾದಾಬಾದು ಜಿಲ್ಲೆಯ ಒಂದು ಹಳ್ಳಿಯಲ್ಲಿ ಕಳೆದ ಮಂಗಳವಾರ ಹಳ್ಳಿಗರಿಗೂ ಮತ್ತು ಪೊಲೀಸರಿಗೂ ಘರ್ಷಣೆಯಾಗಿ, ೮ ಜನರು ಮಡಿದು ೯ ಮಂದಿಗೆ ತೀವ್ರ ಗಾಯಗಳಾಗಿವೆ. ಇಬ್ಬರು ಸಬ್ ಇನ್ಸ್‌ಪೆಕ್ಟರು ಇಬ್ಬರು ಕಾನ್‌ಸ್ಟೇಬಲ್ಲುಗಳು ಹತಪಟ್ಟು, ೮ ಮಂದಿ ಪೊಲೀಸರಿಗೆ ಗಾಯವಾಗಿದೆ. ಒಬ್ಬ ಕೋವಿ ರಹದಾರಿ ಪಡೆದವನೂ ಕೊಲ್ಲಲ್ಪಟ್ಟಿದ್ದಾನೆ. ಕಳೆದ ೨೨ನೇ ತಾರೀಕು ಬಸ್ಸಿನ ಮೂಲಕ ಇಬ್ಬರು ಪ್ರಯಾಣ ಮಾಡುತ್ತಿದ್ದವರನ್ನು ತಾನೇ ದೇವರೆಂದು ಹೇಳಿಕೊಳ್ಳುತ್ತಿದ್ದ ಒಬ್ಬ ಸಾಧುವಿಗೆ ಪ್ರಣಾಮ ಮಾಡುವಂತೆ ಬಲಾತ್ಕಾರಪಡಿಸಿದಾಗ ಅವರು ತಿರಸ್ಕರಿಸಲಾಗಿ ಅವರನ್ನು ಹೊಡೆಯಲಾಯಿತೆಂದೂ, ಪೊಲೀಸರು ಈ ಬಗ್ಗೆ ದೂರು ಬಂದಮೇಲೆ ಅಲ್ಲಿಗೆ ಹೋದಾಗ ಅವರನ್ನೂ ಸಾಧುವಿನ ಹಿಂಬಾಲಕರು ಹೊಡೆದರೆಂದೂ, ಸ್ಥಳದಲ್ಲೇ ಮೂವರು ಮಡಿದರೆಂದೂ ಹೇಳಲಾಗಿದೆ. ಆದಾದಮೇಲೆ ಇನ್ನೊಂದು ಪೊಲೀಸು ಪಡೆ ಹೋದಾಗ ಅವರನ್ನೂ ಹೊಡೆದು ಶಸ್ತ್ರಾಸ್ತ್ರಗಳನ್ನು ಕಿತ್ತುಕೊಳ್ಳಲಾಯಿತು. ಹೆಚ್ಚು ಪೊಲೀಸು ಪಡೆಯು ಹೋಗಿ ೩೯ ಮಂದಿಯನ್ನು ಬಂಧಿಸಿದೆ.

ಗಫಾರ್ ಖಾನರಿಗೆ ೧೪,೦೦೦ ರೂ. ದಂಡ ಮತ್ತು ಕೋರ್ಟು ಏಳುವವರೆಗೆ ಸಜಾ

ಗಡಿನಾಡಿನ ಕೆಂಪು [illegible] ನಾಯಕರಾದ ಖಾನ್ ಅಬ್ದುಲ್ ಗಫಾರ್ ಖಾನರಿಗೆ ಪಶ್ಚಿಮ ಪಾಕಿಸ್ತಾನದ ಹೈಕೋರ್ಟಿನವರು ಕೋರ್ಟು ಏಳುವವರೆಗೆ ಸಜಾ ಮತ್ತು ೧೪,೦೦೦ ರೂ. ದಂಡವನ್ನು ವಿಧಿಸಿರುತ್ತಾರೆ. ಅವರ ಮೇಲೆ ರಾಜದ್ರೋಹ, ರಾಷ್ಟ್ರದ್ರೋಹ ಮತ್ತು ದ್ವೇಷ ಸಾಧನೆಯ ಅಪರಾಧಗಳನ್ನು ಹೊರಿಸಲಾಗಿತ್ತು. ಅವರು ಹಲವಾರು ಕಡೆ ಭಾಷಣ ಮಾಡಿದ್ದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ವಂದೇಮಾತರಂ ೬-೧೦ ಕಾರ್ಯಕ್ರಮ ವಿವರಣೆ ೬-೧೫ ಪಾಪಾ ಚೂಡಾಮಣಿ-ಸಂಗೀತ ೮-೧೫ ವಿ ಎ ಕಾಗಲಕರ್ ಹಿಂದೂಸ್ತಾನಿ ಸಂಗೀತ. ೯-೨೫ ರಿಂದ ೧೧-೩೦ರ ವರೆಗೆ ರಿಪಬ್ಲಿಕ್ ದಿನೋತ್ಸವದ ಪೆರೇಡು ಮತ್ತು ಸಾಂಸ್ಕೃತಿಕ ಕಾರ್ಯಕ್ರಮ-ದೆಹಲಿಯಲ್ಲಿ ವಿಮಾನದಲ್ಲಿ ಕುಳಿತು ವೀಕ್ಷಣೆ ಮಾಡುವವರಿಂದ ವಿವರಣೆ ಮಧ್ಯಾಹ್ನ ೧೨-೩೦ ಪ್ರಸಂಗ ೧೨-೪೫ ಬಾಲ ಜಗತ್. ೧-೩೦ ವಾದ್ಯವೃಂದ. ೩-೧೫ ಪಾಪಾ ಚೂಡಾಮಣಿ-ಸಂಗೀತ ಸಂಜೆ ೫ ಚಟ್ನೀ ೬-೫ ರಿಕಾರ್ಡು ೬-೨೦ ಮತ್ತು ೮-೧೫ ಬಿ. ಎಸ್. ರಾಮಾಚಾರ್-ಕನ್ನಡ ಗೀತೆ ೭-೩೦ ಬಿ. ಎಲ್. ದಾತಾರ್ ಭಾಷಣ-ಧಾರವಾಡದಲ್ಲಿ ೮ ಬೆಂಗಳೂರಿನಲ್ಲಿ ರಿಪಬ್ಲಿಕ್ ದಿನೋತ್ಸವ ೮-೩೦ ಪ್ರಸಂಗ ೯-೧೫ ರಿಪಬ್ಲಿಕ್ ದಿನದ ಸಂದೇಶ. ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಕಾಶ್ಮೀರ ರಾಜ್ಯಾಂಗ ಸಭೆಯ ಕಾರ್ಯಕ್ರಮಕ್ಕೆ ತಡೆ ಹಾಕಲು ಮನವಿ

ಭದ್ರತಾ ಸಮಿತಿಗೆ ಬ್ರಿಟನ್, ಅಮೆರಿಕಾ ಮತ್ತು ಇತರ ೩ ರಾಜ್ಯಗಳ ನಿರ್ಣಯ

ಭದ್ರತಾ ಸಮಿತಿಗೆ ಅಮೆರಿಕಾ, ಬ್ರಿಟನ್, ಆಸ್ಟ್ರೇಲಿಯಾ, ಕೊಲಂಬಿಯಾ, ಮತ್ತು ಕ್ಯೂಬಾ ರಾಷ್ಟ್ರಗಳು ನಿರ್ಣಯವೊಂದನ್ನು ಕಳುಹಿಸಿ, ಕಾಶ್ಮೀರ ರಾಜ್ಯಾಂಗ ಸಭೆಯು ಆ ಸಂಸ್ಥಾನದ ಭವಿಷ್ಯದ ಬಗ್ಗೆ ತೆಗೆದುಕೊಳ್ಳುವ ಕ್ರಮವು ಸಂಸ್ಥಾನದ ಈಗಿನ ಪರಿಸ್ಥಿತಿಯನ್ನು ಬದಲಾಯಿಸುವುದಿಲ್ಲವೆಂದು ಭದ್ರತಾ ಸಮಿತಿಯು ಸೂಚಿಸುವಂತೆ ಕೋರಿವೆ. ನೆನ್ನೆ ಸಮಿತಿಯಲ್ಲಿ ವಿ. ಕೆ. ಕೃಷ್ಣಮೆನನ್ನರು ಭಾಷಣ ಮುಗಿಸಿದನಂತರ ಈ ನಿರ್ಣಯವನ್ನು ಮಂಡಿಸಲಾಯಿತು. ವಿಶ್ವಸಂಸ್ಥೆಯ ಆಶ್ರಯದಲ್ಲಿ ಸ್ವತಂತ್ರ ಮತ್ತು ನಿಷ್ಪಕ್ಷಪಾತವಾದ ಪ್ರಜಾಸತ್ತಾತ್ಮಕ ರೀತಿಯ ಜನಮತಗಣನೆಯ ಮೂಲಕ ಕಾಶ್ಮೀರದ ಜನರು ತಮ್ಮ ಮತವನ್ನು ತಿಳಿಸಬೇಕೆಂದು ಹಿಂದೆ ಮಾಡಲಾಗಿರುವ ನಿರ್ಣಯಗಳ ಬಗ್ಗೆ ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳ ಗಮನವನ್ನು ನಿರ್ಣಯವು ಸೆಳೆದಿದೆ.

ಭಾರತ ವಾಚನ

ಜಯನಗರದಲ್ಲಿರುವ ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ನಾಳೆ ಸಂಜೆ ೭॥ ಗಂಟೆಗೆ ಶ್ರೀ [illegible] ಸುಬ್ರಹ್ಮಣ್ಯಶಾಸ್ತ್ರಿಗಳವರಿಂದ ಶ್ರೀ ಕೃಷ್ಣ ಸಂಧಾನ ಎಂಬ ಭಾರತ ವಾಚನ ಮತ್ತು ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನ ನಡೆಯುತ್ತವೆ.

ಫುಟ್‌ಬಾಲ್ ಸಮಿತಿಯ ಶಿಸ್ತಿನ ಕ್ರಮಕ್ಕೆ ಕೋರ್ಟಿನ ತಡೆ ಆಜ್ಞೆ

ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಎಂ. ಎಸ್. ತಿಮ್ಮಯ್ಯನವರ ಮೇಲೆ ನಗರದ ಫುಟ್‌ಬಾಲ್ ಸಮಿತಿಯು ವಿಶೇಷ ಸಭೆಯು ಕಳೆದ ತಿಂಗಳು ೨೩ರಲ್ಲಿ ಕೈಗೊಂಡಿದ್ದ ಶಿಸ್ತಿನ ಕ್ರಮವು ಸಂಸ್ಥೆಯ ನಿಬಂಧನೆಗಳಿಗೆ ಅನುಗುಣವಾಗಿಲ್ಲವೆಂದು ಶ್ರೀ ಎಂ. ಎಸ್. ತಿಮ್ಮಯ್ಯನವರು ಮುನ್ಸಿಫ್ ಕೋರ್ಟಿನಲ್ಲಿ ಹಾಕಿದ್ದ ಅರ್ಜಿ ಮೇರೆ ಸಮಿತಿಯವರ ನಿರ್ಧಾರಕ್ಕೆ ತಡೆ ಆಜ್ಞೆಯನ್ನು ಹಾಕಲಾಗಿದೆ. ಬರುವ ತಿಂಗಳು ಅರ್ಜಿಯನ್ನು ಪರಿಶೀಲಿಸಲಾಗುವುದು.

ತ್ಯಾಗರಾಜ ಆರಾಧನೋತ್ಸವ

ಚಾಮುಂಡಿಪುರದ ಶ್ರೀ ಸರಸ್ವತಿ ಗಾನ ಕಲಾ ಮಂದಿರದ ಆಶ್ರಯದಲ್ಲಿ ತ್ಯಾಗರಾಜ ಆರಾಧನೆ ಪ್ರಯುಕ್ತ ನಾಳೆ ಮತ್ತು ನಾಳಿದ್ದು ಸಂಜೆ ೬॥ ಗಂಟೆಗೆ ಕ್ರಮವಾಗಿ ವಿ॥ ಟಿ ಆರ್. ಶ್ರೀನಿವಾಸ ಮತ್ತು ವಿ॥ ತಿಟ್ಟೆ ಕೃಷ್ಣಯ್ಯಂಗಾರ್ಯರ ಸಂಗೀತ ಕಛೇರಿಗಳು ನಡೆಯುವುವು. ಈ ಸಂಜೆ ಜಿ. ಆರ್. ದಾಸಪ್ಪನವರ ಸಂಗೀತದ ಬದಲು ಶ್ರೀ ಎಸ್. ಕೃಷ್ಣಯ್ಯಂಗಾರ್ಯರಿಂದ ತ್ಯಾಗರಾಜರ ಬಗ್ಗೆ ಹರಿಕಥೆ ನಡೆಯುವುದು.

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ದತ್ತಾತ್ರೇಯ ಸಂಗೀತ ವಿದ್ಯಾಶಾಲೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ವಿ॥ ಬಿ ದೇವೇಂದ್ರಪ್ಪನವರ ಸಂಗೀತವು ಏರ್ಪಾಡಾಗಿದೆ.

ಹನುಮಂತಯ್ಯ ಮತ್ತು ವೆಂಕಟಪ್ಪನವರಿಗೆ ಉಮೇದುವಾರಿಕೆ

ಬೆಂಗಳೂರು ೨೪

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ರಾಮನಗರ ಕ್ಷೇತ್ರದಿಂದ ವಿಧಾನ ಸಭೆಗೆ ಕಾಂಗ್ರೆಸ್ ಪರವಾಗಿ ನಿಲ್ಲಲು ಆರಿಸಲ್ಪಟ್ಟಿರುವರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ. ವೆಂಕಟಪ್ಪನವರು ಚನ್ನಪಟ್ಟಣದಿಂದ ಸ್ಪರ್ಧಿಸುವರು

ಮಾಜಿ ಮಂತ್ರಿ ಶ್ರೀ ಟಿ. ಸಿದ್ಧಲಿಂಗಯ್ಯನವರು ದೊಡ್ಡಬಳ್ಳಾಪುರ ಅಥವಾ ಹೊಸಕೋಟೆ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಕೊಡಲಾಗಿದೆ.

ಸರ್ಕಾರಿ ಕೈಗಾರಿಕೆ ನೌಕರರ ಸಂಬಳದ ಸಮಿತಿಯ ರಚನೆ

ಸರ್ಕಾರಿ ಕೈಗಾರಿಕೆಗಳಲ್ಲಿರುವ ನೌಕರರ ಸಂಬಳ, ಮಜೂರಿ ಮುಂತಾದುವನ್ನು ಪುನರ್ವಿಮರ್ಶಿಸುವ ಬಗ್ಗೆ ಸರ್ಕಾರದವರು ಶ್ರೀಗಳಾದ ಡಿ. ಎಂ. ಮ್ಯಾಸ್ಕರೇನ್ಹ್ಯಾಸ್ (ಅಧ್ಯಕ್ಷರು), ಕೆ. ಟಿ. ಕರುಂಬಯ್ಯ, ಗಾಂಜಿ ವೀರಪ್ಪ ಮತ್ತು ಕೈಗಾರಿಕೆ, ಕಾರ್ಮಿಕ ಮತ್ತು ಹಣಕಾಸು ಇಲಾಖಾ ಪ್ರತಿನಿಧಿಗಳುಳ್ಳ ಸಮಿತಿಯೊಂದನ್ನು ರಚಿಸಿರುತ್ತಾರೆ. ಬರುವ ತಿಂಗಳೊಳಗೆ ಸಮಿತಿಯು ವರದಿಯನ್ನು ಒಪ್ಪಿಸುವಂತೆ ಸೂಚಿಸಲಾಗಿದೆ

ಅಲಮ್ಮನವರ ದಿನಾಚರಣೆ

ನಗರದ ಇಲವಾಲ ರಸ್ತೆಯಲ್ಲಿರುವ ಕುಂಬಾರಗರ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೧ ಗಂಟೆಗೆ ನಂಜನಗೂಡು ದೇವಿ ಅಲಮ್ಮನವರ ಸ್ಮಾರಕ ದಿನಾಚರಣೆಯನ್ನು ನೆರವೇರಿಸಲಾಗುವುದು. ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ಅಧ್ಯಕ್ಷತೆ ವಹಿಸುವರು

ನಾಳೆ ವೈದ್ಯ ಪರೀಕ್ಷಾ ಫಲಿತಾಂಶ

ವೈದ್ಯ ಪರೀಕ್ಷೆಗಳ ಫಲಿತಾಂಶಗಳನ್ನು ನಾಳೆ ಬೆಳಿಗ್ಗೆ ೯ ಗಂಟೆಗೆ ವಿಶ್ವವಿದ್ಯಾಲಯದವರು ಪ್ರಕಟಿಸುವರು

ಹರಿಕಥೆ

ಮೈಸೂರು ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ನಾಳೆ ರಾತ್ರಿ ೮ ಗಂಟೆಗೆ ವಿದ್ವಾನ್ ಶ್ರೀ ವೇಣುಗೋಪಾಲದಾಸರಿಂದ "ದಕ್ಷಯಜ್ಞ" ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಆಹ್ವಾನವುಂಟು.

ಸಂಗೀತ ಕಛೇರಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳಿದ್ದು ಮಧ್ಯಾಹ್ನ ೪॥ ಗಂಟೆಗೆ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ವಿ॥ ವಿ. ರಾಮರತ್ನಂರವರ ಸಂಗೀತ ಕಛೇರಿಯು ವಿ॥ ಎಸ್ ಮಹದೇವಪ್ಪನವರ ಪಿಟೀಲು ಮತ್ತು ವಿ॥ ಕೆ. ಹರಿಶ್ಚಂದ್ರರವರ ಮೃದಂಗದೊಡನೆ ನಡೆಯುವುದು.

ಸೂಚನೆ

ರಿಪಬ್ಲಿಕ್ ದಿನೋತ್ಸವದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ರಿಪಬ್ಲಿಕ್ ದಿನಾಚರಣೆ

ಮೈಸೂರು ೨೫

ರಾಜೇಂದ್ರ ನಗರದಲ್ಲಿ ನಾಳೆ ಬೆಳಿಗ್ಗೆ ೮ ಗಂಟೆಗೆ ರಿಪಬ್ಲಿಕ್ ದಿನೋತ್ಸವದ ಅಂಗವಾಗಿ ಲೋಕಸಭಾ ಸದಸ್ಯ ಶ್ರೀ ಎನ್. ರಾಚಯ್ಯನವರು ಧ್ವಜಾರೋಹಣ ಮಾಡುವರು. ಮಧ್ಯಾಹ್ನ ೩ ಗಂಟೆಗೆ ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ಅಧ್ಯಕ್ಷತೆ ವಹಿಸುವರು. ಸಮಾರಂಭವನ್ನು ಅಲ್ಲಿನ ನಿವಾಸಿಗಳ ಸಂಘದವರು ಏರ್ಪಡಿಸಿರುವರು

ಸುತ್ತೂರು ವಿದ್ಯಾರ್ಥಿ ನಿಲಯ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬॥ಗೆ ದಿನೋತ್ಸವವು ನಡೆಯುವುದು. ಮಹಾರಾಜಾ ಕಾಲೇಜಿನ ಪ್ರೊ॥ ಡಾ॥ ಕುಪ್ಪುಸ್ವಾಮಿಯವರು ಭಾಷಣ ಮಾಡುವರು. ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಶ್ರೀ ಎಚ್. ಜಿ. ನರೋನಾರವರು ಅಧ್ಯಕ್ಷತೆ ವಹಿಸುವರು. ಅದೇ ಸಮಯದಲ್ಲಿ ವಿದ್ಯಾರ್ಥಿ ನಿಲಯದಿಂದ ತೆರಳುವವರನ್ನು ಬೀಳ್ಕೊಡುವ ಸಮಾರಂಭವೂ ನಡೆಯುವುದು

ಕುಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ನಾಳೆ ಬೆಳಿಗ್ಗೆ ೮ ಗಂಟೆಗೆ ಉತ್ಸವವು ಶ್ರೀ ಹೆಚ್.ಎಲ್. ಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ಜರುಗುವುದು. ಧ್ವಜಾರೋಹಣವೂ ನಡೆಯುವುದು.

ನಾಳೆ ಪೌರಸಭೆಯ ಆಶ್ರಯದಲ್ಲಿ ಟೌನ್‌ಹಾಲ್ ಮೈದಾನದಲ್ಲಿ ಉತ್ಸವದ ಅಂಗವಾಗಿ ಬೆಳಿಗ್ಗೆ ಮತ್ತು ಸಂಜೆ ನಡೆಯುವ ಕಾರ್ಯಕ್ರಮಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸುವಂತೆ ನಗರ ಕಾಂಗ್ರೆಸ್ ಕಾರ್ಯದರ್ಶಿಗಳು ಕೋರಿರುತ್ತಾರೆ

ನ್ಯೂ ಸಯ್ಯಾಜೀರಾವ್ ರಸ್ತೆಯಲ್ಲಿರುವ ಹಿಂದಿ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ವಿಶ್ವತ್ತ ಪ್ರಾಧ್ಯಾಪಕರಾದ ಡಾ॥ ಎಂ ವಿ ಕೃಷ್ಣರಾಯರು ಭಾಷಣ ಮಾಡುವರು

ಪಾರ್ಲಿಮೆಂಟರಿ ಪದ್ಧತಿಗಳ ಬಗ್ಗೆ ಕಂಠಿಯವರ ಭಾಷಣ

ಮೈಸೂರು ೨೫

ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರು ಮೊನ್ನೆ ಇಲ್ಲಿನ ಕಬ್ಬಳ್ಳಿ ವಿದ್ಯಾರ್ಥಿ ನಿಲಯ ಸಂಘದ ಆಶ್ರಯದಲ್ಲಿ ಭಾಷಣ ಮಾಡಿ ಪಾರ್ಲಿಮೆಂಟರಿ ಸಂಪ್ರದಾಯಗಳನ್ನು ವಿವರಿಸಿದರು. ಭಾರತದಲ್ಲಿ ಈ ಸಂಸ್ಥೆಗಳು ಚೆನ್ನಾಗಿ ನಡೆಯಬೇಕಾದರೆ ಎರಡು ಪಕ್ಷಗಳು ಅವಶ್ಯಕವೆಂದೂ, ಈಗ ದೇಶದಲ್ಲಿ ಅಂತಹ ಪ್ರಭಾವಯುತ ವಿರೋಧ ಪಕ್ಷವಿಲ್ಲವೆಂದೂ, ತಿಳಿಸಿದರು. ವಿರೋಧ ಪಕ್ಷಕ್ಕೆ ಸಂಖ್ಯಾ ಬಲ ಮುಖ್ಯವಲ್ಲವೆಂದೂ, ತತ್ವದ ಬಗ್ಗೆ ಅದು ನಡೆಸುವ ಹೋರಾಟದ ಪ್ರಭಾವವೇ ಮುಖ್ಯವೆಂದೂ ಅವರು ಹೇಳಿದರು.

ಪ್ರಜಾಸತ್ತೆಯು ಸರಿಯಾಗಿ ಕೆಲಸ ಮಾಡಬೇಕಾದರೆ ಪರಸ್ಪರ ತಾಳ್ಮೆ ಬೇಕೆಂದು ಅವರು ನುಡಿದರು. ಭಾರತದಲ್ಲಿ ಪ್ರಜಾ ಪ್ರಭುತ್ವವು ಇನ್ನೂ ಬಾಲ್ಯಾವಸ್ಥೆಯಲ್ಲಿರುವುದರಿಂದ ಪಾರ್ಲಿಮೆಂಟು ತನ್ನ ಅಧಿಕಾರವನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇಕೆಂದು ಅವರು ಅಭಿಪ್ರಾಯಪಟ್ಟರು ಪ್ರಾಂತ ಶಾಸನ ಸಭೆಗಳ ವಿಚಾರವನ್ನು ಪ್ರಸ್ತಾಪಿಸಿ, ಅವುಗಳಲ್ಲಿ ಕೋಮುವಾರು ಮತ್ತು ಪ್ರದೇಶ ಭಾವನೆಗಳು ತುಂಬಿ ತುಳುಕಾಡುತ್ತಿರುವುವೆಂದು ಅವರು ವ್ಯಕ್ತಪಡಿಸಿದರು ಅದು ತಪ್ಪಿ ಪ್ರತಿಯೊಬ್ಬರೂ ರಾಷ್ಟ್ರಹಿತದ ದೃಷ್ಟಿಯಿಂದ ಕೆಲಸ ಮಾಡಬೇಕೆಂದೂ ಸೂಚಿಸಿದರು

ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ ಎಸ್ ಹಾಲಪ್ಪನವರು ಭಾಷಣ ಮಾಡಿ ಶ್ರೀ ಕಂಠಿಯವರನ್ನು ಸ್ವಾಗತಿಸಿದರು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು

ಕೊಯಮುತ್ತೂರುಸಣ್ಣ	೩೭	೬	೦	೪೩	೦	೦
ರತ್ನಚೂಡಿ	೨೩	೪	೦	೨೮	೧೨	೦
ಕಡ್ಡಿ	೨೩	೧೨	೦	೨೫	೨	೦
ಸೇಲಂ ಸಣ್ಣ	೨೮	೨	೦	೨೮	೪	೦
ರಾಗಿ	೩೪	೦	೦	೩೬	೪	೦
ಜೋಳ	೩೦	೨	೦	೩೦	೧೪	೦
ಕಂಬು	೩೨	೪	೦	೩೨	೮	೦
ಕಡಲೆಕಾಯಿ	೧೬	೧೨	೦	೨೫	೧೪	೦
ಎಳ್ಳು	೮೮	೨	೦			
ಹರಳುಬೀಜ	೪೫	೮	೦	೫೦	೧೦	೦
ಹುಚ್ಚೆಳ್ಳು	೪೧	೦	೦	೪೬	೨	೦
ಹೊಂಗೆಬೀಜ	೨೧	೦	೦	೨೨	೦	೦
ಕುಸುಬೆ	೨೩	೦	೦	೨೬	೨	೦
ಹೆಸರು	೪೩	೧೪	೦	೫೧	೦	೦
ಹಲಸಂದೆ	೩೬	೪	೦	೫೦	೪	೦
ಧನಿಯ	೨೪	೪	೦	೨೬	೦	೦
ಸಿಂಬಿನ ಬೀಜ	೪೪	೮	೦	೪೬	೧೨	೦
ಅವರೆ	೪೬	೦	೦	೪೭	೮	೦
ಸೀಗೆಕಾಯಿ	೫	೮	೦	೬	೧೦	೪
ಹುಣಸೇಹಣ್ಣು	೩	೦	೦	೪	೮	೦
ಮೆಣಸಿನಕಾಯಿ	೧೦	೦	೦	೨೧	೮	೦
ತೆಂಗಿನಕಾಯಿ ೧೧೦೦	೧೪೦	೦	೦	೨೨೫	೮	೦

ಉಪಾಧ್ಯಾಯರ ಕಾಲೇಜು ಸಂಘದ ದಿನಾಚರಣೆ

ಮೈಸೂರು ೨೫

ನಗರದ ಉಪಾಧ್ಯಾಯರುಗಳ ಕಾಲೇಜು ಸಂಘದ ದಿನಾಚರಣೆಯು ಕಳೆದ ಮಂಗಳವಾರ ವೈಸ್ ಚಾನ್ಸೆಲರ್ ಡಾ॥ ಕೆ ವಿ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದನಂತರ, ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ. ಸಿ. ದೇವೇಗೌಡರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಎಂ. ಕೇಶವಮೂರ್ತಿಯವರು ವರದಿಯನ್ನೊಪ್ಪಿಸಿದಮೇಲೆ ಡಾ॥ ಕೆ. ವಿ. ಪುಟ್ಟಪ್ಪನವರು ಭಾಷಣ ಮಾಡಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷೆಯ ವೈಶಿಷ್ಟ್ಯವನ್ನು ವಿವರಿಸಿದರು.

ಕರಪೇಕಾದ ಉಪಾಧ್ಯಾಯರ ಅವಶ್ಯಕತೆ ಮತ್ತು ಅವರಿಗೆ ಒದಗಿಸಬೇಕಾದ ಸಲಕರಣೆಗಳನ್ನು ಅವರು ಒತ್ತಿಹೇಳಿದರು ಕನ್ನಡವನ್ನು ಪಾರಿಭಾಷಿಕ ಶಿಕ್ಷಣದಲ್ಲೂ ಉಪಯೋಗಿಸಬಹುದೆಂದು ಅವರು ತಿಳಿಸಿದರು. ಶಿಕ್ಷಣ ಕ್ರಮದಲ್ಲಿ ಪಾಶ್ಚಾತ್ಯರ ತತ್ವಗಳನ್ನು ಅಕ್ಷರಶಃ ಅನುಸರಿಸದೆ ಈ ದೇಶದ ಜನರ ಸಂಸ್ಕೃತಿ, ಪರಿಸ್ಥಿತಿಗಳಿಗಾಗಿ ರೂಪಿಸುವುದು ಸೂಕ್ತವೆಂದು ಅವರು ಅಭಿಪ್ರಾಯಪಟ್ಟರು. ಇಂಗ್ಲಿಷಿನಲ್ಲಿರುವ ಪಾರಿಭಾಷಿಕ ಪದಗಳನ್ನು ಹಾಗೆಯೇ ಉಳಿಸಿಕೊಳ್ಳಬಹುದೆಂದೂ ಅಧ್ಯಕ್ಷರು ಹೇಳಿದರು

ಆಟಪಾಠಗಳು ಮತ್ತು ಸಾಹಿತ್ಯ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ವಂದನಾರ್ಪಣೆ ಮತ್ತು ಶಾಮಣ್ಣನ ಸಾಹಸ ಎಂಬ ನಾಟಕಗಳಾದನಂತರ ಸಮಾರಂಭವು ಮುಕ್ತಾಯವಾಯಿತು.

ಚರ್ಚಾ ಸ್ಪರ್ಧೆಗಳ ಸಂಘದ ಭಾಷಣ ಸ್ಪರ್ಧೆ

ನಗರದ ಚರ್ಚಾ ಸ್ಪರ್ಧೆಗಳ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಸಂಘದ ಸ್ಥಾಪನಾ ಮಹೋತ್ಸವವು ಡಿ. ಬನುಮಯ್ಯನವರ ಕಾಮರ್ಸ್ ಕಾಲೇಜಿನಲ್ಲಿ ನೆರವೇರುವುದು. ಶ್ರೀ ಎಂ. ಯಾಮುನಾಚಾರ್ಯರು ಭಾಷಣ ಮಾಡುವರು. ಶ್ರೀ ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸುವರು. ಸಂಜೆ ೫॥ ಗಂಟೆಗೆ ಭಾಷಣ ಸ್ಪರ್ಧೆಯು ಏರ್ಪಾಡಾಗಿದೆ ಸರ್ವರಿಗೂ ಸ್ವಾಗತವಿದೆ.

ವಿವಾಹದ ಔತಣದಲ್ಲಿ ಬೆಂಕಿ ಅನಾಹುತದಿಂದ ೨೦ ಮರಣ

ಕೊಲಂಬೊ ಬಳಿ ಒಂದು ಪಟ್ಟಣ ಕೋಟ್ಟೆ ಕಳೆದ ೨೧ನೇ ತಾರೀಖು ರಾತ್ರಿ ವಿವಾಹದ ಔತಣ ಸಮಾರಂಭವು ನಡೆಯುತ್ತಿದ್ದಾಗ ಬೆಂಕಿ ಅನಾಹುತವು ಆಗಿ ೨೦ ಮಂದಿ ಅತಿಥಿಗಳು ಸತ್ತು, ೧೨ ಜನರು ತೀವ್ರವಾಗಿ ಗಾಯಗೊಂಡಿರುತ್ತಾರೆ. ವಧುವೂ ಸುಟ್ಟಿದಳು. ವರನಿಗೆ ಸ್ವಲ್ಪ ಗಾಯವಾಗಿದೆ

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿ ಸಂಘದ ಸಭೆ

ನಗರದಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಸಂಘದ ಸಾಧಾರಣ ಸಭೆಯು ಬರುವ ಭಾನುವಾರ ಬೆಳಿಗ್ಗೆ ೯॥ ಗಂಟೆಗೆ ದಾಸಪ್ರಕಾಶದಲ್ಲಿ ನಡೆಯುವುದು ಪ್ರೊ॥ ಕೆ. ಸಾಂಬಶಿವರಾಯರು ಅಧ್ಯಕ್ಷತೆ ವಹಿಸುವರು,

ನಗರಕ್ಕೆ ಕೊಲ್ಲಾಪುರದ ಆಯುರ್ವೇದ ವೈದ್ಯರ ಭೇಟಿ

ಕೊಲ್ಲಾಪುರದ ಆಯುರ್ವೇದ ವಿಶಾರದ ವೈದ್ಯ ಜಿ.ಜಿ. ವಾಮನಾಚಾರ್ಯರು ನಗರಕ್ಕೆ ಆಗಮಿಸಿರುವರು. ವೈದ್ಯ ಅಥವಾ ಚಿಕಿತ್ಸೆಯವಾಗಿ ಅವರನ್ನು ಶ್ರೀ ಸದ್ಗುರು ಸೇವಾಶ್ರಮದ ಕಾರ್ಯಾಲಯದಲ್ಲಿ ಬೆಳಿಗ್ಗೆ ಅಥವಾ ಮಧ್ಯಾಹ್ನ ಸಾರ್ವಜನಿಕರು ಭೇಟಿ ಮಾಡಬಹುದು.

ಅಂತರ ಕಾಲೇಜು ಕ್ರೀಡಾ ಮತ್ತು ವ್ಯಾಯಾಮಗಳ ಬಹುಮಾನ ವಿನಿಯೋಗ

ನಗರದ ಅಂತರ ಕಾಲೇಜು ಕ್ರೀಡಾ ಮತ್ತು ವ್ಯಾಯಾಮ ಸಮಿತಿಯ ಆಶ್ರಯದಲ್ಲಿ ಮೊನ್ನೆ ಬಹುಮಾನ ವಿನಿಯೋಗವು ವಿಧಾನ ಸಭಾಧ್ಯಕ್ಷರಾದ ಶ್ರೀ ಎಸ್ ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಜರುಗಿತು ಮಾರ್ಗ ಪಾಸ್ಯ ಜತರ ಸಮಿತಿಯ ಅಧ್ಯಕ್ಷ ಶ್ರೀ ಎ ಸಿ. ದೇವೇಗೌಡರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಲೆಫ್ಟಿನೆಂಟ್ ವೀರರಾಜೆ ಅರಸರು ವರದಿಯನ್ನೊಪ್ಪಿಸಿದನಂತರ ಅಧ್ಯಕ್ಷರು ಕ್ರೀಡೆ ಮತ್ತು ವ್ಯಾಯಾಮ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿ, ಸ್ಪರ್ಧೆಗಳಲ್ಲಿ ಮಹಿಳೆಯರು ಪಾತ್ರವಹಿಸಿರುವುದಕ್ಕಾಗಿ ಸಂತೋಷ ಸೂಚಿಸಿದರು. ಶ್ರೀ ಕೆ. ಆರ್. ನುಹಲಿಂಗನವರು ವಂದನಾರ್ಪಣೆ ಮಾಡಿದರು.

ನೋಟೀಸು

ಡಿ. ಎ ಸತ್ಯನಾರಾಯಣಶೆಟ್ಟರು ಎಂಬುವರ ಹೆಸರಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಬ ಒಟ್ಟು ಷೇರು ನಂ 35249ರ ಲಾಗಾಯ್ತು 35281 ನಂಬರುಗಳ ಪ್ರಕಾರ 33 ಷೇರುಗಳು ಇರುತ್ತವೆ. ಈ ಷೇರುಗಳನ್ನು ಮಾರುವುದಕ್ಕೆ ಅವರಿಗೆ ಹಕ್ಕು ಇರುವುದಿಲ್ಲ ಈ ವಿಚಾರವಾಗಿ ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಾ ಇರುತ್ತೆ. ಯಾರಾದರೂ ಕೊಂಡುಕೊಂಡಲ್ಲಿ ಊರ್ಜಿತವಾಗುವುದಿಲ್ಲ

ಡಿ ಎಚ್. ಶ್ರೀನಿವಾಸಶೆಟ್ಟಿ,
ಎಫ್ 80 II ಮೇನ್ ರಸ್ತೆ,
ಮಲ್ಲೇಶ್ವರಂ,
ಬೆಂಗಳೂರು - 3

ಅಪ್ಪಟವಾದ
ಹಸುವಿನ ಹಾಲು
ಪೌಂಡು 1ಕ್ಕೆ 0 3 6 : ½ ಪೌಂಡಿಗೆ 0 1 9
ಇಂದೇ ಭೇಟಿ ಕೊಟ್ಟು ಪರೀಕ್ಷಿಸಿರಿ
ಕಾಲ : ಬೆಳಿಗ್ಗೆ 5-30ರಿಂದ 9-30
ಮಧ್ಯಾಹ್ನ 3 ರಿಂದ 6-30
ಗೋಕುಲ ಮಿಲ್ಕ್ ಡೈರಿ
ಅಂಟಿಕೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ
ಸೂರಡಿ ರಸ್ತೆ, ಮೈಸೂರು
ಶೀಘ್ರದಲ್ಲೇ ರಮಾವಿಲಾಸ ಅಗ್ರಹಾರದಲ್ಲಿ ಶಾಖೆಯೊಂದನ್ನು ತೆರೆಯಲಾಗುತ್ತೆ

ನಾದಬ್ರಹ್ಮ ಸಂಗೀತ ಸ
ಮೈಸೂರು
3-2-1957 ನೇ ಭಾನುವಾ
ಸಂಜೆ 5-30 ಘಂಟೆಗೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ಸಂ॥ ವಿದ್ವಾನ್ ಟಿ. ಕೆ. ರಂಗಾಚಾರ್
ಹಾಡು
,, ಕಂಠದೇವಿ ಅಳಗಿರಿ
,, ಪಾಲ್‌ಘಾಟ್
ಪ್ರವೇಶ ಧನ :— ಗಂಡಸರಿಗೆ 1-8
ಹೆಂಗಸರಿಗೆ 1-0

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
25-1-57ನೆಯ ಶುಕ್ರವಾರದಿಂದ : ಅಮೋಘವಾದ 5ನೆಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು
ಭಕ್ತಮಾರ್ಕಂಡೇಯ
ಪಾತ್ರ:- ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ರಘುರಾಮಯ್ಯ, ಮಾಸ್ಟರ್ ಆನಂದ್, ಬೇಬಿ-ಉಮಾ, ಪದ್ಮಿನಿ ಪ್ರಿಯದರ್ಶಿನಿ, ಬಾಲಸರಸ್ವತಿ, ನರಸಿಂಹರಾಜು, ಡಿಕ್ಕಿ ಮಾಧವರಾವ್

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರ

ರಾಜಕಮಲ್ ● ಭಾರತದ ಗಣರಾಜ್ಯ ದಿನೋತ್ಸವದ ಕಾಣಿಕೆ : 26.1-57ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3
ಈಗಾಗಲೇ ತಮಿಳು ನಾಡಿನಲ್ಲೆಲ್ಲಾ ಮೆಚ್ಚಿಗೆ ಪಡೆದಿರುವ ಉಮಾ ಪಿಕ್ಚರ್ಸ್‌ರವರ. ನೃತ್ಯ,ಸಂಗೀತ,ಸಾಹಸಮಯ ಮಹೋನ್ನ
ಎಂ ಜಿ. ರಾಮಚಂದ್ರ, ವೀರಪ್ಪ, ಟಿ.ಎಸ್. ನಾಗೇಶ್ವರರಾವ್, ಅಂಜಲಿದೇವಿ, ರಾಗಿಣಿ, ಎಸ್. ವರಲಕ್ಷ್ಮಿ,ತಂಗವೇಲು, ಇ ವಿ ಸರೋಜ, ಎನ್.ಎಸ್ ಕೃಷ್ಣನ್,ಟಿ.ಎ.ಮಧುರಂ ಪಾತ್ರವಹಿಸಿರುವ
★ ಚಕ್ರವರ್ತಿ ತಿರುಮಗಳ್ (ತಮಿಳು)
ದರ. 1—3—0, 1—10—0, 2—6—0 ತರಗತಿಗಳಿಗೆ ಬೆಳಿಗ್ಗೆ 10ರಿಂದ 12ರ ವರೆಗೆ ರಿಸರ್ವೇಷನ್ ಮಾಡಲಾಗುತ್ತೆ.
ಮೊದಲನೆ ನಾಲ್ಕು ವಾರ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.

Edited, Printed and Published by A. R. Nagarajan at Sadhvi Press, D. Subbaiah Road, Mysore

ಟೆಲಿಫೋನ್ ನಂ. 792

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
♦
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. ಆ ರ್ ಟ್
ಶ್ರೀರಾಮನಾಥ ಬೀದಿ,
ಬೆಂಗಳೂರು-2

ಇಂದಿನ ಪತ್ರಿಕೆ 6 ಪುಟ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೧೨] SADHVI : SUNDAY 27—1—1957 ಮೈಸೂರು : ಭಾನುವಾರ ೨೭—೧—೧೯೫೭ : [ಸಂಚಿಕೆ : ೩೩೦

ಭಾರತದಲ್ಲಿ ನೆನ್ನೆಯಿಂದ ಪೂರ್ಣವಾಗಿ ಕಾಶ್ಮೀರದ ಐಕ್ಯ

ರ್ಕಾರಿ ನೌಕರರಿಗೆ ಹೆಚ್ಚಿನ ಸಂಬಳ ಮತ್ತು ತುಟ್ಟಿಭತ್ಯ

ಸರ್ಕಾರದ ಆಜ್ಞೆ

ಬೆಂಗಳೂರು ೨೬

ನೌಕರರ ಸಂಬಳ ಮತ್ತು ಭತ್ಯದ ಬಗ್ಗೆ ಸ ರದವರು ಮೊನ್ನೆ ಸಂಜೆ ಆಜ್ಞೆಯನ್ನು ಹೊ ದರು ಈ ಆಜ್ಞೆಯು ಕಳೆದ ೧ ರಿಂದ ಜಾ ಬರುವುದು.

ಒಟ್ಟು ಆರು ವರ್ಷಗಳ ಸೇವೆ ಸಲ್ಲಿಸಿದವರಿಗೆ ರು ಮುಂಗಡ ಬಡ್ತಿ, ಹೊಸ ಸಂಬಳ ಪ್ರ ಣದ ಪಟ್ಟಿಯಲ್ಲಿ ಅನುಕೂಲವಾಗದಿದ್ದ ಪರಿ ಪರಿಹಾರ ಮತ್ತು ಪೆನ್ಷನ್‌ದಾರರಿಗೆ ಹೆಚ್ಚು ಟ್ಟಿಭತ್ಯವನ್ನು ಕೊಡುವುದೇ ಈ ಆಜ್ಞೆಯ ಮುಖ್ಯ ಅಂಶಗಳಾಗಿವೆ.

ತುಟ್ಟಿ ಭತ್ಯದ ವಿವರಗಳು ಈ ರೀತಿ ಇವೆ :— ರೂ ಗಿಂತ ಕಡಿಮೆ ಬರುವವರಿಗೆ ನಗರ ಮ ಇತರ ಕಡೆ ೩೫ ಮತ್ತು ೩೦ ರೂ; ೧೫೦ ದ ೨೦೦ ರೂ. ಬರುವವರಿಗೆ ೫೦ (ನಗರ)ಮ (ಇತರ) ೪೦ ರೂ; ೨೫೦ ರಿಂದ ೩೦೦ರ ವ ಇರುವವರಿಗೆ ೫೫ ಮತ್ತು ೪೫ ರೂ. ವಿರಾ ವೇತನ ೭೦ ರೂ. ಗಿಂತ ಕಡಿಮೆಯವರಿಗೆ ೪ ತುಟ್ಟಿ ಭತ್ಯ, ೪೦ ರೊಳಗೆ ಬರುವವರಿಗೆ ೫ ತ್ತು ೧೦೦ ರೂ. ವರೆಗೆ ಬರುವವರಿಗೆ ೬ ರೂ ಟ್ಟು ಪಡೆಯುವವರಿಗೆ ಮುಂದೆಯೂ ಅಷ್ಟೇ ತ್ಯ

ಕಾಂಗ್ರೆಸ್ ಉಮೇದುವಾರಿಕೆಗೆ ಬಿ. ವೆಂಕಟೇಶ್‌ರವರ ತಿರಸ್ಕಾರ

ಬೆಂಗಳೂರು ನಗರದ ಮಲ್ಲೇಶ್ವರ ಕ್ಷೇತ್ರದಿಂ ವಿಧಾನ ಸಭೆಗೆ ಕಾಂಗ್ರೆಸ್ ಪರವಾಗಿ ಉಮೇ ವಾರರಾಗಿ ಆರಿಸಲ್ಪಟ್ಟಿರುವ ಕಾರ್ಮಿಕ ಮುಂ ದಾಳುಗಳಾದ ಶ್ರೀ ಬಿ. ವೆಂಕಟೇಶ್‌ರವರು ಪ್ರದೇಶಿಕ ಚುನಾವಣಾ ಸಮಿತಿಗೆ ಪತ್ರ ಬರೆ ತಮ್ಮ ಉಮೇದುವಾರಿಕೆಯನ್ನು ತಿರಸ್ಕರಿಸಿ ವುದಾಗಿ ಗೊತ್ತಾಗಿದೆ. ಐ. ಎನ್. ಟಿ. ಯು. ಯುತರು ಸೂಚಿಸಿದ್ದ ಹೆಸರುಗಳನ್ನು ಕೈ ಬಿಟ್ಟು ತಮ್ಮನ್ನು ಸೂಚಿಸಿರುವ ಬಗ್ಗೆ ಅವರು ಸಮ್ಮತಿಯನ್ನು ವ್ಯಕ್ತಪಡಿಸಿರುವರೆಂದು ಹೇಳ ಗಿದೆ.

ರ್. ಎಸ್. ಎಸ್ ವಾರ್ಷಿಕೋತ್ಸವ

ಮೈಸೂರು ನಗರದ ರಾಷ್ಟ್ರೀಯ ಸ್ವಯಂ ಸೇ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ಗಂಟೆಗೆ ನೂರಡಿ ರಸ್ತೆಯಲ್ಲಿರುವ ಶಾರದಾ ದ್ಯಾರ್ಥಿನಿಲಯದ ಎದುರಿನ ಆವರಣದಲ್ಲಿ ನ ಯುವುದು. ವಕೀಲರಾದ ಶ್ರೀ ಎ ರಾಮರಾಯ ಅಧ್ಯಕ್ಷತೆ ವಹಿಸುವರು. ಶ್ರೀ ಯಾದವರಾವ್ ಷಿಯವರು ಭಾಷಣ ಮಾಡುವರು.

ವೀಣಾವಾದನ

ಚಾಮುಂಡಿಪುರದ ಶ್ರೀ ಸರಸ್ವತಿ ಗಾನಕಲಾ ಮಂಡಲದ ಆಶ್ರಯದಲ್ಲಿ ತ್ಯಾಗರಾಜರ ಆರಾಧನೆ ಮುಖ್ಯ ನಾಳೆ ಸಂಜೆ ೬॥ ಗಂಟೆಗೆ ವಿ ರ್ ಎಸ್. ಕೇಶವಮೂರ್ತಿಯವರ ವೀಣಾ ವಾದನವು ವಿ॥ ರಾಜಗೋಪಾಲ್‌ರವರ ಮೃದಂ ಮೊಡನೆ ನಡೆಯುವುದು.

ನಗರದಲ್ಲಿ ಗಣರಾಜ್ಯ ದಿನೋತ್ಸವ

ಮೈಸೂರು ೨೬

ನಗರದಲ್ಲಿ ನೆನ್ನೆ ಗಣರಾಜ್ಯ ದಿನೋತ್ಸವವನ್ನು ವೈಭವದಿಂದ ಆಚರಿಸಲಾಯಿತು. ಬೆಳಿಗ್ಗೆ ಟೌನ್‌ಹಾಲ್ ಮೈದಾನದಲ್ಲಿ ಪುರಸಭಾಧ್ಯಕ್ಷರು ಧ್ವಜಾರೋಹಣ ಮಾಡಿದನಂತರ, ಪೋಲೀಸ್, ಸ್ಕೌಟ್ ಮತ್ತು ಗರ್ಲ್ ಗೈಡ್ ದಳಗಳಿಂದ ಜಿಲ್ಲಾಧಿಕಾರಿಗಳು ಸೆಲ್ಯೂಟ್ ಸ್ವೀಕರಿಸಿದರು. ಸಂಜೆ ಪುರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಹಳ್ಳಿಯ ಕುಣಿತ, ಜಾನಪದ ಗೀತೆಗಳು, ಸಂಗೀತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳೂ, ಸೇವಾದಳ ಮುಂತಾದವರಿಂದ ವ್ಯಾಯಾಮ ಪ್ರದರ್ಶನಗಳೂ ಜರುಗಿದುವು. ಬಾಣಬಿರುಸುಗಳನ್ನು ಹಾರಿಸಲಾಯಿತು. ಅಧ್ಯಕ್ಷರು ಭಾಷಣ ಮಾಡಿ ಸ್ವಾತಂತ್ರ್ಯ ದಿನೋತ್ಸವದ ಪ್ರಾಮುಖ್ಯತೆಯನ್ನು ವಿವರಿಸಿ ಜನರು ದೇಶಾಭಿವೃದ್ಧಿಯಲ್ಲಿ ಕಾರ್ಯೋನ್ಮುಖರಾಗಬೇಕೆಂದು ಮನವಿ ಮಾಡಿದರು.

ಮಲ್ಲಾರಾಧ್ಯರಿಗೆ ಒಂದು ತಿಂಗಳು ವಿಶೇಷ ರಜ

ಈ ತಿಂಗಳು ೧೭ನೇ ತಾರೀಕಿನಿಂದ ಹುಜೂರು ಸೆಕ್ರೆಟರಿಯಾಗಿ ನಿವೃತ್ತರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರಿಗೆ ಶ್ರೀಮನ್ಮಹಾರಾಜರು ಅಂದಿನಿಂದ ೧ ತಿಂಗಳ ಕಾಲ ವಿಶೇಷ ರಜವನ್ನು ಮಂಜೂರು ಮಾಡಿರುತ್ತಾರೆ.

ಕುರ್ತಕೋಟಿ ಶ್ರೀಪಾದಶಾಸ್ತ್ರಿಗಳಿಂದ ಹರಿಕಥಾ ಕಾಲಕ್ಷೇಪ

ಶ್ರೀ ವಿದ್ಯಾಭಿನವ ವಾಲುಕೇಶ್ವರ ಭಾರತೀ ಸ್ವಾಮಿಗಳವರ ಜಯಂತಿ ಅಂಗವಾಗಿ ಸಂಸ್ಕೃತ ಮಹಾಪಾಠಶಾಲೆಯ ಆವರಣದಲ್ಲಿ ಮೊನ್ನೆಯಿಂದ ಪ್ರತಿ ಸಂಜೆ ೬॥ ಗಂಟೆಗೆ ಕೀರ್ತನ ಕೇಸರಿ ಕುರ್ತಕೋಟಿ ಶ್ರೀಪಾದಶಾಸ್ತ್ರಿಗಳಿಂದ ಹರಿಕಥಾ ಕಾಲಕ್ಷೇಪವು ನಡೆಯುತ್ತಿದೆ. ಈ ದಿನ ಭೀಷ್ಮ ಪಿತಾಮಹ ಮತ್ತು ನಾಳೆ ಆದಿಕವಿ ವಾಲ್ಮೀಕಿ ಎಂಬ ವಿಚಾರವಾಗಿ ಕಥೆಗಳು ನಡೆಯುತ್ತವೆ.

ಚಾಮರಾಜನಗರ ಮತ್ತು ಬಿಳಿಗಿರಿ ಕಾಂಗ್ರೆಸ್ ಉಮೇದುವಾರರು

ಚಾಮರಾಜನಗರದಿಂದ ಶ್ರೀ ವೆಂಕಟರಮಣ ನಾಯಕರೂ, ಬಿಳಿಗಿರಿ ಕ್ಷೇತ್ರದಿಂದ ಶ್ರೀ ಹೆಜ್ಜಿಗೆ ಮಾದಪ್ಪನವರೂ ಮೈಸೂರು ವಿಧಾನ ಸಭೆಗೆ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರರಾಗಿ ಆರಿಸಲ್ಪಟ್ಟಿರುವರು.

ರೇಷ್ಮೆ ಗೂಡುಗಳಿಗೆ ಮಾರಾಟ ತೆರಿಗೆ ವಿನಾಯಿತಿ

ಬೆಂಗಳೂರು ೨೬

ರೇಷ್ಮೆ ಗೂಡುಗಳಿಗೆ ಮಾರಾಟ ತೆರಿಗೆಯ ವಿನಾಯಿತಿ ಮಾಡಲು ಮಂತ್ರಿಮಂಡಲವು ನಿರ್ಧರಿಸಿದೆ.

○ ಸಂಸ್ಥಾನದ ವೈದ್ಯಾಧಿಕಾರಿಗಳು ಆಯುರ್ವೇದ ಮತ್ತು ಯುನಾನಿ ಇಲಾಖೆಯ ಮುಖ್ಯಾಧಿಕಾರಿಯಾಗತಕ್ಕದ್ದೆಂದೂ ಮಂತ್ರಿಮಂಡಲವು ತೀರ್ಮಾನಿಸಿದೆ.

ಕಾಶ್ಮೀರ ರಾಜ್ಯಾಂಗಕ್ಕೆ ಸಭೆಯ ಒಪ್ಪಿಗೆ

ನೆನ್ನೆಯಿಂದ ಭಾರತದಲ್ಲಿ ಸಂಸ್ಥಾನದ ಪೂರ್ಣ ಐಕ್ಯ

ಮೊನ್ನೆ ಮಧ್ಯ ರಾತ್ರಿಯಲ್ಲಿ ಕಾಶ್ಮೀರ ರಾಜ್ಯಾಂಗ ಸಭೆಯು ಅಲ್ಲಿನ ಹೊಸ ರಾಜ್ಯಾಂಗವು ಜಾರಿಗೆ ಬಂದಿರುವುದೆಂದು ಘೋಷಿಸಿ ನಿರ್ಣಯ ಮಾಡಿ, ಅನಂತರ ವಿಸರ್ಜಿತವಾಯಿತು. ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರು ಮಾತನಾಡಿ, ಸಂಸ್ಥಾನದ ಭವಿಷ್ಯವನ್ನು ನಿರ್ಧರಿಸಲು ಅಧಿಕಾರ ಹೊಂದಿರುವ ಪ್ರಜಾ ಪ್ರತಿನಿಧಿಗಳು ತಮ್ಮ ರಾಜ್ಯಾಂಗವನ್ನು ಅಂಗೀಕರಿಸಿರುವುದಾಗಿ ನುಡಿದರು.

ಸಭೆಯ ವಿಸರ್ಜನೆಯು ಕೇವಲ ವಿಧಿ ಪೂರ್ವಕವಾದುದೆಂದೂ, ೧೯೫೨ರಲ್ಲಿ ಆದ ಮತ್ತು ಈಗಾಗಲೇ ಜಾರಿಗೆ ಬಂದಿರುವ ತೀರ್ಮಾನಗಳನ್ನು ಈಗ ಹೊಸ ರಾಜ್ಯಾಂಗದಲ್ಲಿ ಸ್ಪಷ್ಟೀಕರಿಸಲಾಗಿರುವುದೆಂದೂ ಅವರು ನುಡಿದರು. ಹಾಗೆ ಮಾಡುವುದರಿಂದ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲವೆಂದೂ ಅವರು ಸೂಚಿಸಿದರು.

ಮೇಲ್ಕಂಡ ನಿರ್ಧಾರದಂತೆ ಕಾಶ್ಮೀರದ ರಾಜ್ಯಾಂಗವು ನೆನ್ನೆಯಿಂದ ಜಾರಿಗೆ ಬಂದಿತು. ಅದರ ಪ್ರಕಾರ ಆ ಸಂಸ್ಥಾನವು ಭಾರತದಲ್ಲಿ ಐಕ್ಯಗೊಂಡ ಒಂದು ಭಾಗವಾಗಿದೆ.

ರಿಪಬ್ಲಿಕ್ ದಿನೋತ್ಸವದ ಸಮಾರಂಭ

ರಾಜ್ಯಪಾಲರಿಂದ ಸುಬೇದಾರ್ ಭೀಮಯ್ಯನವರಿಗೆ ಪ್ರಶಸ್ತಿ ದಾನ

ಬೆಂಗಳೂರು ೨೬

ರಿಪಬ್ಲಿಕ್ ದಿನೋತ್ಸವದ ಅಂಗವಾಗಿ ನೆನ್ನೆ ಇಲ್ಲಿ ಮಿಲಿಟರಿ ಪೆರೇಡು ಸಮಾರಂಭವು ಜರುಗಿತು. ರಾಜ್ಯ ಪಾಲರು ದಳಗಳ ವೀಕ್ಷಣೆ ಮಾಡಿದರು. ಅವರು ಭಾಷಣ ಮಾಡಿ, ಭಾರತದ ಸೇನೆಯ ನಿಷ್ಠೆ, ಧೈರ್ಯ, ಕರ್ತವ್ಯ ದೃಷ್ಟಿ ಮತ್ತು ಸಾಹಸಗಳನ್ನು ಪ್ರಶಂಸಿಸಿದರು.

ನೂತನ ಮೈಸೂರಿನ ಏಳಿಗೆಯನ್ನು ಪ್ರಸ್ತಾಪಿಸಿ, ನಾವೆಲ್ಲರೂ ಮೊದಲು ಭಾರತೀಯರೆಂದೂ, ಇಡೀ ದೇಶದ ಹಿತದೃಷ್ಟಿಯಿಂದ ಎಲ್ಲರೂ ಕೆಲಸ ಮಾಡಬೇಕೆಂದೂ ಹೇಳಿದರು. ಭಾರತವನ್ನು ಬಲಾಢ್ಯವಾಗಿಯೂ, ಹೆಚ್ಚು ಐಶ್ವರ್ಯವುಳ್ಳ ಮತ್ತು ಪ್ರಗತಿಯುತ ರಾಷ್ಟ್ರವಾಗಿಯೂ ಮಾಡಬೇಕೆಂದೂ ಸೂಚಿಸಿದರು.

ಕಾಶ್ಮೀರದಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಮಿಲಿಟರಿ ಕಾರ್ಯಾಚರಣೆಯಲ್ಲಿ ಸಾಹಸ ಕಾರ್ಯ ನಡೆಸಿದ ಸುಬೇದಾರ್ ಎ. ಎಸ್. ಭೀಮಯ್ಯನವರಿಗೆ ವೀರಚಕ್ರ ಪ್ರಶಸ್ತಿಯನ್ನು ಅವರು ವಿನಿಯೋಗಿಸಿದರು.

ಕಳುವಿನ ಸೈಕಲ್ಲುಗಳು ಪತ್ತೆ

ಮೈಸೂರು ೨೬

ಮಹಾರಾಜಾ ಮತ್ತು ಯುವರಾಜ ಕಾಲೇಜುಗಳ ಬಳಿ ಕಳುವಾದ ೪ ಸೈಕಲ್ಲುಗಳೂ, ಕೆಲವು ಡೈನಮೋಗಳೂ ಕೃಷ್ಣರಾಜಾ ಪೋಲೀಸರ ವಶದಲ್ಲಿವೆ. ಸಂಬಂಧಪಟ್ಟವರು ವಿಚಾರಿಸಬಹುದು.

ಕಾಶ್ಮೀರದಲ್ಲಿ ಈಗಿರುವ ಪರಿಸ್ಥಿತಿಯನ್ನು ಬದಲಾಯಿಸಬಾರದು

ಭದ್ರತಾ ಸಮಿತಿಯ ತೀರ್ಮಾನ

ಕಾಶ್ಮೀರದಲ್ಲಿ ಈಗಿನ ಪರಿಸ್ಥಿತಿಯೇ ಮುಂದುವರಿಯಬೇಕೆಂದು ಸೂಚಿಸುವ ನಿರ್ಣಯವನ್ನು ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಕಳೆದ ಗುರುವಾರ ೧೦-೦ ಓಟುಗಳಿಂದ ಅಂಗೀಕರಿಸಿತು. ರಷ್ಯವು ತಟಸ್ಥವಾಗಿದ್ದಿತು. ಕಾಶ್ಮೀರದ ಭವಿಷ್ಯವನ್ನು ನಿರ್ಧರಿಸಲು ವಿಶ್ವಸಂಸ್ಥೆ ಆಶ್ರಯದಲ್ಲಿ ಜನಮತಗಣನೆಯಾಗಬೇಕೆಂದು ಸಮಿತಿಯು ಹಿಂದೆ ಮಾಡಿದ್ದ ನಿರ್ಣಯಗಳನ್ನು ಸ್ಥಾಪಿಸಲಾಗಿದೆ. ನಿರ್ಣಯವನ್ನು ಐದು ರಾಷ್ಟ್ರಗಳು ಸೂಚಿಸಿದ್ದುವು. ಭಾರತದ ಪ್ರತಿನಿಧಿ ವಿ. ಕೆ. ಕೃಷ್ಣಮೆನನ್ನರು ನಿರ್ಣಯವನ್ನು ಖಂಡಿಸಿ, ನಿರ್ಣಯವು ಅಕ್ರಮ ಮತ್ತು ರಾಜ್ಯಾಂಗ ವಿರೋಧವಾದುದೆಂದು ತಿಳಿಸಿದರು. ಕಾಶ್ಮೀರದ ರಾಜ್ಯಾಂಗವು ಹೇಗಿರಬೇಕೆಂಬುದನ್ನು ಅದು ಸೂಚಿಸುವುದಲ್ಲದೆ ಭಾರತದ ರಾಜ್ಯಾಂಗವು ಹೇಗಿರಬೇಕೆಂಬುದನ್ನೂ ಅದು ಗೊತ್ತುಪಡಿಸಲು ಪ್ರಯತ್ನಿಸುವುದೆಂದು ಅವರು ತಿಳಿಸಿದರು.

ನಿರ್ಣಯದಿಂದ ತಮಗೆ ಬಹಳ ಯಾತನೆಯಾಗಿರುವುದೆಂದೂ, ಭಾರತವು ತನ್ನ ವಾದವನ್ನು ಪೂರ್ಣವಾಗಿ ಮಂಡಿಸುವ ಮುಂಚೆಯೇ ನಿರ್ಣಯವನ್ನು ಸೂಚಿಸುತ್ತಿರುವುದು ಅತ್ಯಂತ ಅಸಾಧಾರಣ ವಿಷಯವೆಂದೂ, ಆದರೆ ಇದರಿಂದ ಕಾಶ್ಮೀರದ ಪರಿಸ್ಥಿತಿಯಲ್ಲಿ ವ್ಯತ್ಯಾಸವೇನೂ ಆಗದೆ ಸಭೆಯು ವಿಸರ್ಜನೆಯಾಗುವುದೆಂದೂ ನೆಹರೂರವರು ತಿಳಿಸಿದ್ದಾರೆ.

ದೆಹಲಿಯಲ್ಲಿ ರಿಪಬ್ಲಿಕ್ ದಿನೋತ್ಸವ

ಭಾರತವು ರಿಪಬ್ಲಿಕ್ ಆದ ೭ನೇ ವರ್ಷದ ದಿನೋತ್ಸವವು ನೆನ್ನೆ ದೆಹಲಿಯ ಕೆಂಪುಕೋಟೆ ಬಳಿ ವೈಭವದಿಂದ ನಡೆಯಿತು. ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು ರಾಷ್ಟ್ರಧ್ವಜವನ್ನು ಹಾರಿಸಿ ಭಾರತದ ಮೂರು ಸೇನಾ ಬಲಗಳಿಂದ ಸೆಲ್ಯೂಟ್ ಸ್ವೀಕರಿಸಿದರು. ಸೈನಿಕರ ಮತ್ತು ಸಾಂಸ್ಕೃತಿಕ ಪ್ರದರ್ಶನ ಮುಂತಾದುವು ನಡೆದುವು. ೧೦ ಲಕ್ಷ ಜನರು ಈ ದೃಶ್ಯವನ್ನು ನೋಡಿದರು. ರಷ್ಯದ ರಕ್ಷಣಾ ಮಂತ್ರಿ ಮಾರ್ಷಲ್ ಜುಕಾಫ್‌ರವರು ನೆಹರೂ ಮತ್ತು ಕೇಂದ್ರ ರಕ್ಷಣಾ ಮಂತ್ರಿ ಕಟ್ಜುರವರೊಡನೆ ಅದನ್ನು ವೀಕ್ಷಿಸಿದರು. ಸಮಾರಂಭಕ್ಕೆ ರಾಷ್ಟ್ರಾಧ್ಯಕ್ಷರು ಮೆರವಣಿಗೆಯಲ್ಲಿ ಆಗಮಿಸಿದ್ದರು. ಪ್ರಪಂಚದ ನಾನಾ ಕಡೆಗಳಲ್ಲೂ ಉತ್ಸವವು ವೈಭವದಿಂದ ಆಚರಿಸಲ್ಪಟ್ಟಿದ್ದಾಗಿ ವರದಿ ಬಂದಿದೆ.

ನಂಜನಗೂಡು ಶ್ರೀಕಂಠೇಶ್ವರಾಧ್ಯಾತ್ಮ ಸಭೆ

ಮೇಲ್ಕಂಡ ಸಭೆಯು ವಾರ್ಷಿಕೋತ್ಸವವನ್ನು ಈ ದಿನ ಮತ್ತು ನಾಳೆ ಸಭಾ ಮಂದಿರದಲ್ಲಿ ನಡೆಸಲು ಏರ್ಪಡಿಸಿರುತ್ತೆ. ಈ ದಿನ ಸಂಜೆ ವೇದಪಠಣ, ವೇ॥ ಬ್ರ॥ ಎಸ್. ವಿಠ್ಠಲಶಾಸ್ತ್ರಿಗಳಿಂದ ಭಾಷಣ ಮತ್ತು ಶ್ರೀ ಎಸ್. ಸತ್ಯನಾರಾಯಣ ಮೂರ್ತಿಯವರಿಂದ ಹರಿಕಥೆಯೂ, ನಾಳೆ ಬೆಳಿಗ್ಗೆ ಸ್ವಾಮಿಯವರ ಮಂಟಪೋತ್ಸವವೂ ನಡೆಯುವುವು.

ವಾರ ಭವಿಷ್ಯ

ತಾ|| ೨೭-೧-೫೭ರಿಂದ ೩-೨-೫೭ರ ವರೆಗೆ

ಮೇಷ :—ಸಟ್ಟಾ ಮತ್ತು ಪಂಥಗಳಲ್ಲಿ ಅನಿರೀಕ್ಷಿತ ಲಾಭ ಶುಭಕಾರ್ಯಗಳಿಗೆ ಉತ್ತಮ ಮತ್ತು ಲಾಭದಾಯಕ. ಹಣಕಾಸಿನ ವ್ಯವಹಾರಕ್ಕಾಗಿ ಪ್ರವಾಸ

ವೃಷಭ —ಕೋರ್ಟು ಕಾರ್ಯ ಜಯ ಸಟ್ಟಾ ವ್ಯವಹಾರದಲ್ಲಿ ತೊಂದರೆ ಕೆಲಸಗಳಲ್ಲಿ ನಿಕಟ ಬಂಧುಗಳ ಸಿಡಿ ಆತುರ ಪಡಬೇಡಿ

ಮಿಥುನ :—ವ್ಯಾಪಾರ ಉದ್ಯೋಗಗಳಲ್ಲಿ ತೃಪ್ತಿ ಸಂಬಂಧಿಕರ ಮೂಲಕ ಲಾಭ ಶುಭಕಾರ್ಯಗಳು ಪ್ರವಾಸ ಸಂಭವ

ಕಟಕ :—ರಾಜಕೀಯ ಮತ್ತು ಇತರ ವ್ಯವಹಾರಗಳಲ್ಲಿ ತೊಂದರೆ ನಿರೀಕ್ಷೆಗಳು ವಿಫಲ ವಿಪರೀತ ವೆಚ್ಚ ಮತ್ತು ಬೆದರಿಕೆಗಳು

ಸಿಂಹ – ವಿಪರೀತ ವೆಚ್ಚ ಆರೋಗ್ಯದ ಕಡೆ ಲಕ್ಷ್ಯವಿಡಿ ರಾಜಕೀಯ ವ್ಯವಹಾರ ಉತ್ತಮವಾಗಿದ್ದರೂ, ಸಾಮಾಜಿಕದಲ್ಲಿ ಕೆಡಕು ಉದ್ಯೋಗ ಪರಿಸ್ಥಿತಿ ಉತ್ತಮ

ಕನ್ಯಾ :—ಆರ್ಥಿಕ ಪರಿಸ್ಥಿತಿ ತೃಪ್ತಿಕರವಾಗಿರುವುದು. ಉದ್ಯೋಗ ಮತ್ತು ವ್ಯಾಪಾರಗಳಲ್ಲಿ ಹೆಚ್ಚಿನ ಆಸಕ್ತಿ ಹೊಸ ಯೋಜನೆಗಳು ಯಶಸ್ವಿಯಾಗುವ ಸಂಭವ ಶುಭ ಕಾರ್ಯಕ್ಕೆ ಸುಸಮಯ

ತುಲಾ —ಪ್ರಭಾವಯುತರಿಂದ ಹೆಚ್ಚಿನ ಪ್ರಯೋಜನ ಕುಟುಂಬದಲ್ಲಿ ಶಾಂತ ಪರಿಸ್ಥಿತಿ ಆದರೆ ಆರೋಗ್ಯದ ಕಡೆ ಗಮನ ಕೊಡುವುದು ಅವಶ್ಯಕ

ವೃಶ್ಚಿಕ —ವ್ಯಾಪಾರ ಉದ್ಯೋಗಗಳಲ್ಲಿ ಉತ್ತಮ ಪರಿಸ್ಥಿತಿ. ಸಟ್ಟಾ ವ್ಯವಹಾರಗಳಲ್ಲಿ ಜಯ ವಿಪರೀತ ವೆಚ್ಚ ನೌಕರಿಯಲ್ಲಿ ಉತ್ತಮ

ಧನು. —ಹಣಕಾಸಿನ ವ್ಯವಹಾರ ಉತ್ತಮ ಶುಭ ಕಾರ್ಯ ಸಿದ್ಧಿ ಕೋರ್ಟು ಕಾರ್ಯದಲ್ಲಿ ಜಯ ಸಿಗದು ರಕ್ತ ಪೀಡೆ ಆರೋಗ್ಯದಲ್ಲಿ ಕಾತರ

ಮಕರ — ವ್ಯಾಪಾರವ್ಯವಹಾರಗಳಲ್ಲಿ ಹೊಸ ಯೋಜನೆಗಳು ವಿಪರೀತ ವೆಚ್ಚ ಉದ್ಯೋಗದಲ್ಲಿ ಕಾತರ ಆರೋಗ್ಯವನ್ನು ಲಕ್ಷ್ಯದಲ್ಲಿಡಿ. ಗೃಹಕೃತ್ಯದಲ್ಲಿ ಸ್ವಲ್ಪ ಮಟ್ಟಿನ ಅಸಮಾಧಾನ

ಕುಂಭ —ಆರ್ಥಿಕ ವ್ಯವಹಾರಗಳಲ್ಲಿ ಪ್ರಗತಿ ಹಿತ ಶತ್ರುಗಳಿಂದ ತೊಂದರೆ ರಾಜಕೀಯ ಮತ್ತು ಸಾಮಾಜಿಕ ರಂಗದಲ್ಲಿ ತೊಂದರೆ.

ಮೀನ —ವ್ಯಾಪಾರಾದಿಗಳಲ್ಲಿ ಲಾಭದಾಯಕ ಸ್ಥಿತಿ ವಿಪರೀತ ವೆಚ್ಚ ಕೋರ್ಟು ಮತ್ತು ರಾಜಕೀಯ ವ್ಯವಹಾರಗಳಲ್ಲಿ ಜಯ ಆರೋಗ್ಯದ ಬಗ್ಗೆ ಎಚ್ಚರಿಕೆ ಇರಲಿ

ಪ್ರಶ್ನೋತ್ತರ ಗೋಷ್ಠಿ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಾಳೆ ಸಂಜೆ ವ್ಯಾಸಂಗ ಗೋಷ್ಠಿ ಕಾರ್ಯಕ್ರಮದ ಅಂಗವಾಗಿ ಪ್ರಶ್ನೋತ್ತರ ಕೂಟವು ನಡೆಯುವುದು

ಆಹಾರ ಸಂಶೋಧನಾಲಯದಲ್ಲಿ ಶಿಶು ಆಹಾರದ ತಯಾರಿಕೆ

ಮೈಸೂರು ೨೭

ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದವರು ಮಕ್ಕಳ ಆಹಾರ ಪದಾರ್ಥವನ್ನು ತಯಾರಿಸುವ ಹೊಸ ವಿಧಾನವನ್ನು ಕಂಡುಹಿಡಿದಿರುತ್ತಾರೆ ಈ ವಿಚಾರವನ್ನು ಆಲಯದ ಡೈರೆಕ್ಟರ್ ಶ್ರೀ ವಿ ಸುಬ್ರಹ್ಮಣ್ಯರವರು ಪತ್ರಿಕಾ ಪ್ರತಿನಿಧಿಗಳಿಗೆ ವಿವರಿಸಿ, ಭಾರತವು ಹಾಲಿನಿಂದ ತಯಾರಾದ, ಮಕ್ಕಳ ಆಹಾರವನ್ನು ೪,೦೦೦ ಟನ್ನಿನಷ್ಟು ಆಮದು ಮಾಡುತ್ತಿರುವುದೆಂದೂ, ಅದಲ್ಲದೆ ಹಾಲಿನ ಪುಡಿಯನ್ನೂ ವಿಶೇಷವಾಗಿ ತರಿಸಲಾಗುತ್ತಿರುವುದೆಂದೂ ಹೇಳುತ್ತಾರೆ

ಆಲಯದವರು ೩ ವರ್ಷಕಾಲ ಪ್ರಯತ್ನಪಟ್ಟು ಅಧಿಕ ಪ್ರಮಾಣದಲ್ಲಿ ಮಕ್ಕಳ ಆಹಾರ ಪದಾರ್ಥವನ್ನು ತಯಾರಿಸುವ ವಿಧಾನವನ್ನು ಕಂಡು ಹಿಡಿದಿರುವುದಾಗಿ ಅವರು ತಿಳಿಸಿರುವರು ಈಗಿನ ವಿಧಾನದಿಂದ ಇದುವರೆಗೆ, ನಿಷೇಧವಾಗಿದ್ದ ಎಮ್ಮೆ ಹಾಲಿನಿಂದಲೂ ಮಕ್ಕಳ ಆಹಾರವನ್ನು ತಯಾರಿಸಲು ಸಾಧ್ಯವೆಂದು ಅವರು ನುಡಿದರು. ಸಂಸ್ಥಾನ ಸರ್ಕಾರಗಳೂ, ಕೈಗಾರಿಕಾಗಾರರೂ ಈ ವಿಧಾನದಂತೆ ಮಕ್ಕಳ ಆಹಾರವು ಸಾಮಾನ್ಯ ಜನರಿಗೆ ದೊರೆಯುವಂತೆ ಮಾಡಬೇಕೆಂದು ಅವರು ಕೋರಿದರು

ಅಮೆರಿಕದ ವ್ಯವಸಾಯ ಇಲಾಖೆಯವರು ಆಹಾರ ಸಂಶೋಧನಾಲಯಕ್ಕೆ ಹಲವು ಪುಸ್ತಕಗಳನ್ನು ಕೊಟ್ಟಿರುತ್ತಾರೆ ಅವುಗಳನ್ನು ಸಮಾರಂಭವೊಂದರಲ್ಲಿ ತೆಗೆದುಕೊಳ್ಳಲಾಯಿತು

ಸಮುದ್ರದ ಕಳ್ಳರಿಂದ ೧,೨೦೦ ಮೂಟೆ ಅಕ್ಕಿ ದರೋಡೆ

ಬರ್ಮಾ ತೀರದಲ್ಲಿ ಮರ್ಟಬನ್ ಖಾರಿಯಲ್ಲಿ ಕಳೆದ ಮಂಗಳವಾರ ಸುಮಾರು ೧,೨೦೦ ಮೂಟೆಗಳಷ್ಟು ಅಕ್ಕಿಯನ್ನು ತುಂಬಿಕೊಂಡು ಹೋಗುತ್ತಿದ್ದ ಒಂದು ದೋಣಿಯನ್ನು ಸಮುದ್ರದ ಕಳ್ಳರು ತಡೆದು ಅಕ್ಕಿಯನ್ನು ಕೊಳ್ಳೆ ಹೊಡೆದರೆಂದು ವರದಿಯಾಗಿದೆ ಕಳ್ಳರು ದೋಣಿಯಲ್ಲಿದ್ದ ಏಳು ಮಂದಿ ನಾವಿಕರ ಕೈಗಳನ್ನು ಕಟ್ಟಿ ಸಮುದ್ರಕ್ಕೆ ತಳ್ಳಿದರೆಂದೂ, ಅವರು ಮೆಲ್ಲಗೆ ದೋಣಿಯಿಂದ ದೂರಕ್ಕೆ ಈಜಿಕೊಂಡು ಹೋಗುತ್ತಿದ್ದಂತೆಯೇ ಕಳ್ಳರು ಅವರ ಮೇಲೆ ಗುಂಡು ಹೊಡೆದು ಗಾಯಗೊಳಿಸಿದ ಪರಿಣಾಮವಾಗಿ ಒಬ್ಬನು ಮಡಿದನೆಂದೂ ಗೊತ್ತಾಗಿದೆ ಉಳಿದವರ ಪೈಕಿ ಒಬ್ಬನು ದಡವನ್ನು ಸೇರಿದನೆಂದೂ, ಐವರು ಪತ್ತೆಯಿಲ್ಲವೆಂದೂ ಹೇಳಲಾಗಿದೆ

ಹಂಗೇರಿಯಿಂದ ೨ ಲಕ್ಷ ಜನರ ದೇಶತ್ಯಾಗ

ಹಂಗೆರಿ ಘಟನೆಗಳ ಪರಿಣಾಮವಾಗಿ ಅಲ್ಲಿನ ೧,೮೨,೦೦೦ ಜನರು ಇತರ ರಾಜ್ಯಗಳಲ್ಲಿ ಆಶ್ರಯ ಪಡೆದಿರುವರೆಂದು ಭಾರತಕ್ಕೆ ಆಗಮಿಸಿರುವ ಲೇಡಿ ಮೌಂಟ್‌ಬ್ಯಾಟನ್ನರು ತಿಳಿಸಿದರು ಬ್ರಿಟನ್ನಿಗೆ ೨೦,೦೦೦ ನಿರಾಶ್ರಿತರು ಬಂದಿರುವರೆಂದು ಹೇಳಲಾಗಿದೆ

ರೆಕ್ಕೆಯುಳ್ಳ ವಿಮಾನ

ರಷ್ಯದ ವೈಮಾನಿಕ ಪ್ರವೀಣರು, ಹಕ್ಕಿಯಂತೆ ರೆಕ್ಕೆಯನ್ನು ಬೀಸುತ್ತಾ ಹಾರಬಲ್ಲ ಹೊಸ ಮಾದರಿಯ ವಿಮಾನವನ್ನು ಕಂಡುಹಿಡಿದಿರುವರೆಂದೂ, ಅದು ಇತರ ಸಾಮಾನ್ಯ ವಿಮಾನಗಳಿಗಿಂತಲೂ, ಕಡಿಮೆ ಪೆಟ್ರೋಲಿನಿಂದ, ಎತ್ತರವಾಗಿಯೂ ಮತ್ತು ವೇಗವಾಗಿಯೂ ಹಾರಬಲ್ಲದೆಂದೂ ಹೇಳಲಾಗಿದೆ

ಗಮಕ ಪರೀಕ್ಷೆ ಫಲಿತಾಂಶ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕಳೆದ ಡಿಸೆಂಬರಿನಲ್ಲಿ ನಡೆದ ಗಮಕ ಪ್ರವೇಶ ಪರೀಕ್ಷೆಯಲ್ಲಿ ಶ್ರೀ ವಾಲ್ಮೀಕಿ ಗಮಕ ಪಾಠಶಾಲೆಯ ೧೭ ವಿದ್ಯಾರ್ಥಿಗಳ ಪೈಕಿ ೧೩ ಮಂದಿ ಉತ್ತೀರ್ಣರಾಗಿರುವರು ಅವರಲ್ಲಿ ೧೪೮ ನಂಬರಿನವರಿಗೆ ಪ್ರಥಮ ತರಗತಿಯು ಬಂದಿದೆ ೧೩೬, ೧೪೦, ೧೪೧, ೧೪೩, ೧೪೭ ಮತ್ತು ೧೪೯ ಎರಡನೇ ತರಗತಿಯಲ್ಲೂ, ೧೩೭, ೧೩೮, ೧೩೯, ೧೪೨, ೧೪೪ ಮತ್ತು ೧೪೫ ತೃತೀಯ ತರಗತಿಯಲ್ಲೂ ಉತ್ತೀರ್ಣರಾಗಿರುವರು

ಎ ಎನ್ ಮೂರ್ತಿರಾಯರ ಅಧಿಕಾರಾವಧಿ

ಸಂಸ್ಥಾನದ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಇಲಾಖಾ ಡೈರೆಕ್ಟರಾಗಿ ಶ್ರೀ ಎ ಎನ್ ಮೂರ್ತಿರಾಯರನ್ನು ಕಳೆದ ನವೆಂಬರ್ ೧ರಿಂದ ಮುಂದಿನ ವರ್ಷ ಡಿಸೆಂಬರ್ ೯ರ ವರೆಗೂ ನೇಮಿಸಲಾಗಿದೆ

ಶಾರದಾ ಸಂಘದ ಮುಕ್ತಾಯ ಸಮಾರಂಭ

ಅಶೋಕಾ ರಸ್ತೆ ಚೌಧುರಿ ಅಪ್ಪಾಜಯ್ಯಶೆಟ್ಟರ ಹಾಸ್ಟಲಿನಲ್ಲಿರುವ ಶ್ರೀ ಶಾರದಾ ಸಂಘದ ಮುಕ್ತಾಯ ಭಾಷಣ ಸಮಾರಂಭವು ಇಂದು ಸಂಜೆ ೫|| ಗಂಟೆಗೆ ನೆರವೇರುವುದು ಪುರಸಭಾಧ್ಯಕ್ಷ ಶ್ರೀ ಎಸ್ ಸಂಜೀವಯ್ಯನವರು ಅಧ್ಯಕ್ಷತೆ ವಹಿಸುವರು ಶ್ರೀ ತ ರಾ ಸುಬ್ಬರಾಯರು ಭಾಷಣ ಮಾಡುವರು.

ಕೆನಡಾ ಮೇಲೆ ರಷ್ಯಾ ವಿಮಾ
ಹಾರಾಟ?

ರಷ್ಯದ ವಿಮಾನಗಳು ಕೆನಡದ ಉತ್ತ ಗ ಮತ್ತು ಅಲಾಸ್ಕಾಗಳ ಮೇಲೆ ಹಾರಾ ಸಿರುವುದಾಗಿ ಕೆನಡಾ ವರ್ತಮಾನ ಸಂಸ್ಥೆ ದು ತಿಳಿಸಿದೆ.

ಅಫೀಮು ಸರಬರಾಜಿಗಾಗಿ
ಮರ ಅರ್ಜಿಗೆ ಪುರಸ್ಕಾರ

ಹೈದರಾಬಾದಿನಲ್ಲಿರುವ ಅರಮನೆ ಗೊತ್ತಾದ ಪ್ರಮಾಣದ ಅಫೀಮನ್ನು ಬೇಕೆಂದು ನಿಜಾಮರು ಆಂಧ್ರ ಸರ್ಕಾರಕ್ಕೆ ಕಳಿಸಿದ್ದ ಅರ್ಜಿಯನ್ನು ತಿರಸ್ಕರಿಸ ಮೊದಲು ಪ್ರತಿ ೩ ತಿಂಗಳಿಗೆ ೭೦ ತೊ ಅಫೀಮನ್ನು ಕೊಡಲಾಗುತ್ತಿತ್ತು. ಪಾ ನ ನಿರೋಧದ ಸಂಬಂಧವಾಗಿ ಮಾದಕ ರ್ಥಗಳ ಸೇವನೆಯನ್ನು ಕಡಿಮೆ ಮಾ ಅರ್ಜಿ ತಿರಸ್ಕಾರಕ್ಕೆ ಕಾರಣ.

ವಿಜಯ ಶಿಶು ವಿಹಾರಕ್ಕೆ ಉದಾ
ಸಹಾಯ

ಕನ್ನೇಗೌಡನಕೊಪ್ಪಲಿನಲ್ಲಿರುವ ಶ್ರೀ ಶಿಶು ವಿಹಾರಕ್ಕೆ ಶ್ರೀ ಜೋಶಯ್ಯ ಬಸವ ರು ಆರು ಬೆಂಚುಗಳನ್ನೂ, ನಾಲ್ಕು ಕಪ್ಪು ಗಳನ್ನೂ ಉಚಿತವಾಗಿ ಕೊಟ್ಟಿರುತ್ತಾರೆ

ಯಶೋಧರಾ ದಾಸಪ್ಪನವರ
ಉಮೇದುವಾರಿಕೆ ವಾಪಸು

ಶ್ರೀಮತಿ ಯಶೋಧರಾ ದಾಸಪ್ಪನ ಗಂಡಸಿ ಕ್ಷೇತ್ರದಿಂದ ವಿಧಾನ ಸಭೆಗೆ ನಿ ಗುವುದೆಂದು ಮೊದಲು ಗೊತ್ತಾಗಿದ್ದಿತು ಅವರು ಬೇರೆ ಕಾರ್ಯ ಗೌರವದಿಂದ ಣೆಗೆ ನಿಲ್ಲಲು ಒಪ್ಪಿರುವುದಿಲ್ಲ

ಹಾಲು ಬರುವ ಬೇವಿನ ಮರ

ನಗರದ ಶಾಲಾ ಬೀದಿಯಲ್ಲಿ ಶ್ರೀ ಕೆ ಯಲ್ಲಪ್ಪನವರ ಯಲ್ಲಮ್ಮ ತಾಯಿ ಗುಡಿ ವ ಬೇವಿನ ಮರದಲ್ಲಿ ಕಳೆದ ೨ನೇ ತಾ ಸೋಮವಾರ ಬೆಳಿಗ್ಗೆ ೬ ಗಂಟೆಯ ಯುತ್ತಿದ್ದ ಹಾಲು ಇತ್ತೀಚೆಗೆ ಕಡಿಮೆ ತ್ತಾ ಬಂದಿದೆ ಅದಕ್ಕೆ ಮುಂಚೆ ಒ ಬ್ಬ ಮುದುಕಿಯು ಭವಿಷ್ಯ ನುಡಿದು ೩ ನಂತರ ಹಾಲು ಬರುವುದು ಕಡಿಮೆಯ ದೆಂದು ತಿಳಿಸಿದ್ದುದಾಗಿ ಹೇಳಲಾಗಿದೆ.

GLOBE TUTORIAL COLLEGE,
Sadvidya Patashala Buildings,
MYSORE
Revision Classes for students promoted to S S. L C Classes
From 3-2-57 8 to 10-30 A M.
K A NAGARAJ, Organiser

ಅಪ್ಪಟವಾದ
ಹಸುವಿನ ಹಾಲು
ಪೌಂಡು 1ಕ್ಕೆ 0 3 6 · ½ ಪೌಂಡಿಗೆ 0 1 9
ಇಂದೇ ಭೇಟಿ ಕೊಟ್ಟು ಪರೀಕ್ಷಿಸಿರಿ
ಕಾಲ ಬೆಳಿಗ್ಗೆ 5 30ರಿಂದ 9-30
ಮಧ್ಯಾಹ್ನ 3 ರಿಂದ 6-30
ಗೋಕುಲ ಮಿಲ್ಕ್ ಡೈರಿ
ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ
ನೂರಡಿ ರಸ್ತೆ ಮೈಸೂರು
ಶೀಘ್ರದಲ್ಲೇ ರಮಾವಿಲಾಸ ಅಗ್ರಹಾರದಲ್ಲಿ ಶಾಖೆಯೊಂದನ್ನು ತೆರೆಯಲಾಗುತ್ತೆ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ ಮೈಸೂರು (Estd. 1911)

ಒಲಂಪಿಯಾ * 25-1-57ರಿಂದ · ಅಮೋಘ ಪ್ರಾರಂಭ
ಸುಪ್ರಸಿದ್ಧ ತ.ರಾ.ಸು.ರವರ ಕಾದಂಬರಿ
ಹಂಸಗೀತೆಯ ವಿಶ್ವದಾಖಲೆಯವರ,
ನಿಮ್ಮಿ, ಭರತ್ ಭೂಷಣ್, ಮನಮೋಹನ ಕೃಷ್ಣ, ಲೀಲಾ ಚಿಟ್ನಿಸ್ ಮತ್ತು ಓಂಪ್ರಕಾಶ್, ಅಭಿನಯಿಸಿರುವ ★ ಬಸಂತ್ ಬಹಾರ್
2 - 57ರಿಂದ ಪ್ರತಿ ದಿನ ಬೆಳಿಗ್ಗೆ 10ರಿಂದ 1 ಗಂಟೆವರೆವಿಗೆ ಮೇಲಿನ ತರಗತಿಗಳಿಗೆ ಟಿಕೇಟುಗಳನ್ನು ಮುಂಗಡವಾಗಿ ಕೊಡಲಾಗುತ್ತೆ.

SUMMER CLASSES
FOR H S. STUDENTS
Admissions are being received for the Special Classes to be held for 4 months during the Summer Holidays for the benefit of the students of the High School I II & III year classes
CITY TUTORIAL COLLEGE,
OLD AGRAHAR, MYSORE

ಶುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟಿಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ



ನರಗಳು ನಾಶವಾದರೆ
ಎಲ್ಲವೂ ನಾಶವೇ!
★ [illegible]
★ ದುರದೃಷ್ಟ
★ ಮಿತಿಮೀರಿ ಕೆಲಸ
★ ಕೊರಗು
★ [illegible]
ಇವೆಲ್ಲ ನರ ದೌರ್ಬಲ್ಯಕ್ಕೆ
—'ಸಾಧಾರಣ ಕಾರಣಗಳು'—
★
★ ಮರೆವು
★ ಭ್ರಾಂತಿ ಕಲ್ಪನೆಗಳು
★ ಭೀತಿ ಮನೋಭಾವ
★ ಆತ್ಮಹತ್ಯೆ ಭಾವನೆ
★ ಮನೋವೈಚಿತ್ರ್ಯಗ
ಇವು ಅದರ ಭೀಕರ ಪರಿಣಾಮಗ
ನರ ದೌರ್ಬಲ್ಯವನ್ನು [illegible]
ನವರತ್ನ-ಕ
ಸೇವಿಸಿರಿ
ಇದು ವಜ್ರ, ಕೆಂಪು, ಮುತ್ತು, ಪಚ್ಚೆ ರಾಗ, ಹವಳ, ನೀಲ, ಗೋಮೇಧಿಕ, ವೈ ಮುಂತಾದ ಒಂಭತ್ತು ಅಮೂಲ್ಯ ಹರಳು ಯೋಗ ವಸ್ತು.
—'ಇದನ್ನು ಕಂಡುಹಿಡಿದವರು'—
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿ
ಇವರ ಪುಕ್ಕಟೆ ವಿವರ ಸಾಹಿತ್ಯಕ್ಕೆ
NAVRATNA KALPA PHARM
JULLUNDUR CITY (Ind

Edited, Printed and Publi
A. R. Nagarajan at Sadhvi
D Subbiah Road, Mysore

ಟೆಲಿಫೋನ್ ನಂ. 792

ಚಂದಾ ದರೆ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಅಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೧೩] SADHVI : MONDAY 28—1—1957 ಮೈಸೂರು : ಸೋಮವಾರ ೨೮—೧—೧೯೫೭ : [ಸಂಚಿಕೆ : ೧೮೩

ೆಹಲಿಗೂ ನುಗ್ಗುವುದಾಗಿ ಪಾಕಿಸ್ತಾನ್ ಲೀಗಿನ ಬೆದರಿಕೆ

ಪಾಕಿಸ್ತಾನದಲ್ಲಿ ಭಾರತದ ವಿರುದ್ಧ ದೊಂಬಿ

ೕರಿಗಳ ಮೇಲೆ ಕಲ್ಲೆಸೆಟು, ಪ್ರತಿಮೆ ದಹನ ಮತ್ತು ಲಾಠಿ ಪ್ರಯೋಗ

ಪಾಕಿಸ್ತಾನದಲ್ಲಿ ಮೊನ್ನೆ ಕಾಶ್ಮೀರ ದಿನಾಚರಣೆಯನ್ನು ನಡೆಸಿದ ಸಂದರ್ಭದಲ್ಲಿ ಹೈದರಾಬಾದ್ ಲಾಹೋರ್, ಕರಾಚಿ, ಢಾಕಾ ಮುಂತಾದ ಗಳಲ್ಲಿ ಕಾಶ್ಮೀರವನ್ನು ಭಾರತದಲ್ಲಿ ಐಕ್ಯಗೊಳಿಸಿದುದರ ವಿರುದ್ಧವಾಗಿ ಪ್ರದರ್ಶನಗಳನ್ನು ನಡೆಸಲಾಯಿತು ಪ್ರಧಾನಿ ನೆಹರೂ ಮತ್ತು ಕಾಶ್ಮೀರ ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮದ್‌ರ ಪ್ರತಿಮೆಗಳ ದಹನ ಮಾಡಲಾಯಿತು. ಲಾಹೋರಿನಲ್ಲಿ ಭಾರತೀಯ ಡೆಪ್ಯುಟಿ ಹೈಕಮಿಷನರ ನಿವಾಸದ ಮೇಲೆ ಇದ್ದ ಭಾರತದ ಧ್ವಜವ ಕೀಳಲು ಪ್ರಯತ್ನ ನಡೆದು ಪೊಲೀಸರು ಲಾಠಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದ ಸಿಂಧ್ ಹೈದರಾಬಾದು ಮತ್ತು ಕರಾಚಿಗಳ ವಿದ್ಯಾರ್ಥಿಗಳಿಗೂ, ಪೊಲೀಸರಿಗೂ ಘರ್ಷಣೆ ನಡೆವು ಹೈದರಾಬಾದಿನಲ್ಲಿ ಸಹಸ್ರಾರು ಜನ ಭಾರತದ ಡೆಪ್ಯುಟಿ ಹೈಕಮಿಷನರರ ಕಛೇರಿಗೆ ನುಗ್ಗಿ ಕಲ್ಲುಗಳನ್ನು ಬೀರಿದರು ಅಲ್ಲಿ ಪೊಲೀಸರು ಅಶ್ರುವಾಯು ಮತ್ತು ಲಾಠಿ ಪ್ರಯೋಗ ಮಾಡಿದರು ಢಾಕಾದಲ್ಲೂ ನೆಹರೂ ಪ್ರತಿಮೆಯನ್ನು ಸುಡಲಾಯಿತು ಕರಾಚಿಯಲ್ಲಿ ಭಾರತ ನಾಯಕರ ಪ್ರತಿಮೆಗಳನ್ನು ಕತ್ತೆ ಮೇಲಿಟ್ಟು ಮೆರವಣಿಗೆ ಮಾಡಿದರು

ೆಗಳಿಗೆ ಸರ್ಕಾರದಿಂದ ಹೆಚ್ಚು ಸಹಾಯ ಅಗತ್ಯ

ಮನವಿಗೆ ಸಚಿವ ಕಡಿದಾಳ್ ಮಂಜಪ್ಪನವರ ಉತ್ತರ

ಮೈಸೂರು ೨೮

ನಗರದ ಆರ್ಟಿಸ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಟೌನ್‌ಹಾಲಿನಲ್ಲಿ ಶ್ರೀ ಪಿ. ಕಾಳಿಂಗರಾವ್ ಮತ್ತು ಪಾರ್ಟಿಯವರು ಸಹಾಯಾರ್ಥ ಕಲಾ ಪ್ರದರ್ಶನವನ್ನು ನಡೆಸಿದರು. ವಿದ್ಯಾ ಮಂತ್ರಿ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀ ಕಾಳಿಂಗರಾವ್, ಶ್ರೀಮತಿ ಮೋಹನ ಕುಮಾರಿ ಮತ್ತು ಪಾರ್ಟಿಯವರಿಂದ ಹಳ್ಳಿ ಗೀತೆ ಆದುವು ಲಘು ಸಂಗೀತ ಮತ್ತು ನಾಟ್ಯ ಅಭಿನಯವಾದ ಮೇಲೆ ಸಂಘದ ಅಧ್ಯಕ್ಷ ಎಂ ಸಿ ಮಹದೇವಸ್ವಾಮಿಯವರು ಸ್ವಾಗತ ಭಾಷಣ ಮಾಡಿ ಸರ್ಕಾರದವರು ಕಲೆಗಳಿಗೆ ಹೆಚ್ಚಿನ ಸಹಾಯವನ್ನು ಮಾಡಬೇಕೆಂದು ಕೋರಿದರು

ಶ್ರೀ ನಿರಂಜನರವರು ಭಾಷಣ ಮಾಡಿ, ಕಲೆಗೆ ಸರ್ಕಾರದವರು ಕೊಡುತ್ತಿರುವ ಪ್ರೋತ್ಸಾಹ ಸಾಲದೆಂದೂ, ಸಚಿವರುಗಳು ಜನರಲ್ಲಿ ಹೆಚ್ಚು ಸಂಪರ್ಕವನ್ನು ಬೆಳೆಸಬೇಕೆಂದೂ ಹೇಳಿದರು ಅಧ್ಯಕ್ಷರು ಮಾತನಾಡಿ ಕಲೆಗಳಿಗೆ ಪ್ರೋತ್ಸಾಹ ನೀಡಬೇಕಾದ ಕರ್ತವ್ಯವನ್ನು ಸರ್ಕಾರದವರು ಅರಿತಿರುವರೆಂದೂ, ಆದರೆ ಹಣದ ಕೊರತೆಯಿಂದ ಅಡಚಣೆಯಾಗಿದೆಯೆಂದೂ, ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿನ ಪ್ರೋತ್ಸಾಹವೀಯಲು ಪರಿಶೀಲಿಸಲಾಗುವುದೆಂದೂ ತಿಳಿಸಿದರು.

ಕಾಶ್ಮೀರದ ಬಗ್ಗೆ ಭದ್ರತಾ ಸಮಿತಿಯ ನಿರ್ಣಯ

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರ ಖಂಡನೆ

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ನೆನ್ನೆ ಗ್ವಾಲಿಯರಿನ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿ, ಕಾಶ್ಮೀರದ ವಿಷಯವಾಗಿ ಭದ್ರತಾ ಸಮಿತಿಯು ಮಾಡಿರುವ ನಿರ್ಣಯವು ಕಾಶ್ಮೀರದಲ್ಲಿ ಪಾಕಿಸ್ತಾನವು ನಡೆಸಿರುವ ಆಕ್ರಮಣವನ್ನು ಪುಷ್ಟೀಕರಿಸಿರುವುದೆಂದು ತಿಳಿಸಿರುತ್ತಾರೆ ಭಾರತವು ತನ್ನ ಒಂದಂಗುಲ ಪ್ರದೇಶದ ಮೇಲೂ ಆಕ್ರಮಣವನ್ನು ಸಹಿಸುವುದಿಲ್ಲವೆಂದೂ ಅವರು ಹೇಳಿರುವರು ಭಾರತವು ಯಾವ ಶಕ್ತಿ ರಾಷ್ಟ್ರ ಕೂಟಕ್ಕಾಗಲೀ, ಮಿಲಿಟರಿ ಒಪ್ಪಂದಕ್ಕಾಗಲೀ ಸೇರುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿರುತ್ತಾರೆ

ಹೊಸ ಕಾಂಗ್ರೆಸ್ ಅಭ್ಯರ್ಥಿಗಳು

ಬೆಂಗಳೂರು ೨೮

ಕಾಂಗ್ರೆಸ್ಸಿನ ಪರವಾಗಿ ಲೋಕಸಭೆಗೆ ಚಿತ್ರದುರ್ಗದಿಂದ ಶ್ರೀ ಎಸ್ ವಾಸುದೇವರಾಯರ ಬದಲು ಶ್ರೀ ಎಸ್ ರಂಗರಾಯರನ್ನು ಆರಿಸಲಾಗಿದೆ ತುಮಕೂರಿನಿಂದ ಶ್ರೀ ಸಿ ಆರ್ ಬಸಪ್ಪನವರು ಸ್ಪರ್ಧಿಸಿರುವರು

ವಿಧಾನ ಸಭೆಗೆ ಪಕ್ಷದ ಪರವಾಗಿ ಗಂಡಸಿ ಕ್ಷೇತ್ರದಿಂದ ಶ್ರೀಮತಿ ದೇವಮ್ಮ ಮಂಜಪ್ಪಗೌಡ ಅಥವಾ ಡಿ ಆರ್ ಕರಿಗೌಡ, ಕಡೂರಿನಿಂದ ಶ್ರೀ ಡಿ ಎಚ್ ರುದ್ರಪ್ಪ, ತರೀಕೆರೆಯಿಂದ ಟಿ ಆರ್ ಪರಮೇಶ್ವರಪ್ಪ, ದಾವಣಗೆರೆಯಿಂದ ಶ್ರೀ ಗಾಂಜಿ ವೀರಪ್ಪ ಮತ್ತು ಪಿರಿಯಾಪಟ್ಟಣದಿಂದ ಶ್ರೀ ಎಸ್. ಸೋಮಣ್ಣನವರನ್ನು ನಿಲ್ಲಿಸಲಾಗಿದೆ

ವಿಶ್ವಸಂಸ್ಥೆಯಲ್ಲಿ ಕೃಷ್ಣ ಮೆನನ್ನರ ಭಾಷಣದ ರಿಕಾರ್ಡು

ಕಾಶ್ಮೀರದ ಪ್ರಶ್ನೆ ಬಗ್ಗೆ ಭದ್ರತಾ ಸಮಿತಿಯಲ್ಲಿ ವಿ. ಕೆ ಕೃಷ್ಣ ಮೆನನ್ನರು ಮೂರು ದಿನಗಳ ವರೆಗೆ ಒಟ್ಟು ೮|| ಗಂಟೆ ಕಾಲ ಭಾಷಣ ಮಾಡಿ ರಿಕಾರ್ಡನ್ನು ಸ್ಥಾಪಿಸಿರುತ್ತಾರೆ ಹಿಂದೆ ೧೯೫೦ರಲ್ಲಿ ಪಾಕಿಸ್ತಾನದ ಆಗಿನ ವಿದೇಶಾಂಗ ಮಂತ್ರಿ ಮಹಮದ್ ಜಫರುಲ್ಲಾರವರು ಇದೇ ವಿಷಯವಾಗಿ ೭|| ಗಂಟೆ ಕಾಲ ಮಾತನಾಡಿದ್ದರು

ಹರಿಕಥೆ

ಸಂಸ್ಕೃತ ಮಹಾ ಪಾಠಶಾಲೆಯ ಆವರಣದಲ್ಲಿ ಶ್ರೀ ವಾಲುಕೇಶ್ವರ ಸ್ವಾಮಿಗಳವರ ಜಯಂತಿ ಅಂಗವಾಗಿ ನಾಳೆ ಸಂಜೆ ೬|| ಗಂಟೆಗೆ ವೇ|| ಬ್ರಹ್ಮಶ್ರೀ ಕುರ್ತುಕೋಟಿ ಶ್ರೀಪಾದ ಶಾಸ್ತ್ರಿಗಳವರು 'ಸಾಧ್ವಿ ಮದಾಲಸಾ' ಮತ್ತು ನಾಳಿದ್ದು ಸಂಜೆ ೬||ಗೆ 'ಭಕ್ತಾಗ್ರಣಿ ವಿದುರ' ಎಂಬ ಹರಿಕಥೆಗಳನ್ನು ನಡೆಸುವರು

ದೆಹಲಿ ಮೇಲೂ ಪಾಕಿಸ್ತಾನದವರ ಕಣ್ಣು?

ಸರ್ದಾರ್ ಅಬ್ದುರ್ ರಬ್ ನಿಷ್ತಾರರ ಒಣ ಬೆದರಿಕೆ

ಪಾಕಿಸ್ತಾನದ ಮುಸ್ಲಿಂ ಲೀಗಿನ ಅಧ್ಯಕ್ಷ ಸರ್ದಾರ್ ಅಬ್ದುರ್‌ರಬ್ ನಿಷ್ತಾರರು ಕರಾಚಿಯ ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡಿ, ಕಾಶ್ಮೀರ ಪ್ರಶ್ನೆಯ ಬಗ್ಗೆ ಭಾರತವು ತನ್ನ ನೀತಿಯನ್ನು ಬದಲಾಯಿಸದಿದ್ದರೆ, ಭಾರತವು ಶ್ರೀನಗರವನ್ನು ಮಾತ್ರವಲ್ಲದೆ, ದೆಹಲಿಯನ್ನೂ ಸಹ ಕಳೆದುಕೊಳ್ಳಬೇಕಾಗುವುದೆಂದು ತಿಳಿಸಿದರು ಕರಾಚಿಯಲ್ಲಿ ಇಂದು ಶೋಕ ದಿನವನ್ನು ಆಚರಿಸಲಾಯಿತು

ವಿಧಾನ ಸಭೆಗೆ ಉಮೇದುವಾರಿಕೆ ಅರ್ಜಿಗಳು

ಮೈಸೂರು ೨೮

ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆನ್ನೆ ಕಾಂಗ್ರೆಸ್ ಪರವಾಗಿ ತಮ್ಮ ಉಮೇದುವಾರಿಕೆ ಅರ್ಜಿಯನ್ನು ಮಂಡ್ಯದಲ್ಲಿ ಸಲ್ಲಿಸಿದರು ಸಮಾಜವಾದಿ ಪಕ್ಷದ ಪರವಾಗಿ ಶ್ರೀ ಎನ್ ಎಲ್ ನಾಗಪ್ಪನವರೂ ತಮ್ಮ ನಾಮಪತ್ರವನ್ನು ಒಪ್ಪಿಸಿದರು

ಲೋಕ ಸಭೆಗೆ ಕಾಂಗ್ರೆಸ್ ಪರವಾಗಿ ಮಂಡ್ಯದಿಂದ ಶ್ರೀ ಎಂ ಕೆ ಶಿವನಂಜಪ್ಪನವರು ಅರ್ಜಿಯನ್ನು ಕೊಟ್ಟಿರುತ್ತಾರೆ

ಮೈಸೂರು ತಾಲ್ಲೂಕಿನಿಂದ ಸ್ವತಂತ್ರರಾಗಿ ಶ್ರೀಗಳಾದ ಎಸ್ ಕೆ ವಿಶ್ವನಾಥ್ ಮತ್ತು ಟಿ. ಪಿ. ಹೊನ್ನಪ್ಪನವರು ನಾಮಪತ್ರಗಳನ್ನು ದಾಖಲ್ಮಾಡಿರುತ್ತಾರೆ

ಸರ್ವೋದಯ ದಿನಾಚರಣೆ

ನಗರದ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ಸರ್ವೋದಯ ದಿನಾಚರಣೆ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರವರು ಸರ್ವೋದಯ ದೃಷ್ಟಿ ಎಂಬ ವಿಚಾರವಾಗಿ ಉಪನ್ಯಾಸ ಮಾಡುವರು. ನಾಳಿದ್ದು ಬೆಳಿಗ್ಗೆ ೭|| ಗಂಟೆಗೆ ಪ್ರಾರ್ಥನೆ ಮತ್ತು ಸೂತ್ರಯಜ್ಞ ಮತ್ತು ಸಂಜೆ ೫||ಗೆ ಸಾಮೂಹಿಕ ಸೂತ್ರಯಜ್ಞ ಮತ್ತು ೬||ಗೆ ಆಶ್ರಮ ಪ್ರಾರ್ಥನೆ ಮತ್ತು ಪ್ರವಚನಗಳು ನಡೆಯುವುವು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೊನೆಟ್ ೭-೧೫ ಮತ್ತು ೮-೧೫ ಡಿ ಕೆ. ಲಕ್ಷ್ಮಮ್ಮ-ದೇವರ ನಾಮ ೭ ೩೦ ಗಾನ ವಿಹಾರ ಮಧ್ಯಾಹ್ನ ೧೨ ಬಿ ಕೆ ರತ್ನ-ಗಾಯನ ೧೨-೩೦ ರಿಕಾರ್ಡು. ೧೨-೪೫ ವನಿತಾ ವಿಹಾರ ೧-೫೦ ಡಿ. ಕೆ. ಲಕ್ಷ್ಮಮ್ಮ-ಸಂಗೀತ ೨-೧೫ ಸಂಗೀತ ಸಂಜೆ ೫-೩೦ ಮತ್ತು ೯-೧೫ ಬಿ ಎಸ್. ರಾಜಯ್ಯಂಗಾರ್-ಗಾಯನ ೬ ೫ ವಿರಾಮ ಸಂಗೀತ ೬ ೨೦ ಆರ್ ಚಂದ್ರ-ಕಾವ್ಯ ವಾಚನ ೭ ೩೦ ಪ್ರಸಂಗ ೮ ನರಲೋಕದಲ್ಲಿ ನಾರದರು-ರೂಪಕ ೮ ೩೦ ರಿಕಾರ್ಡು. ೧೦ ಲಘು ಸಂಗೀತ ೧೦-೧೫ ಉರ್ದು ಗೀತೆ

ನಗರದಲ್ಲಿ ೨,೬೩೦ ರೂ. ವಸ್ತುಗಳ ಅಪಹಾರ

ಮೈಸೂರು ೨೮

ಒಂಟಿಕೊಪ್ಪಲು ಪ್ರದೇಶದಲ್ಲಿ ಹೊಸ ಮಾದರಿ ಮನೆಗಳ ಪೈಕಿ ಶ್ರೀ ಕೃಷ್ಣಪ್ಪ ಎಂಬ ಹಾಲು ಮಾರುವವರೊಬ್ಬರ ಮನೆಯಲ್ಲಿ ೩ ದಿನಗಳ ಹಿಂದೆ ಕಳ್ಳತನ ನಡೆದು ೨,೬೩೦ ರೂ ಬೆಲೆಯ ಚಿನ್ನ ಬೆಳ್ಳಿ ಸಾಮಾನುಗಳನ್ನು ಅಪಹರಿಸಲಾಯಿತೆಂದು ವರದಿಯಾಗಿದೆ ಪೊಲೀಸರು ಪತ್ತೆ ತರದೂದಿನಲ್ಲಿದ್ದಾರೆ

ಸಂಗೀತ ಮತ್ತು ಭಾಷಣ

ಚಾಮುಂಡಿಪುರದಲ್ಲಿರುವ ಶ್ರೀ ಸರಸ್ವತಿ ಗಾನಕಲಾ ಮಂದಿರದ ಆಶ್ರಯದಲ್ಲಿ ಶ್ರೀ ತ್ಯಾಗರಾಜ ಜಯಂತಿ ಅಂಗವಾಗಿ ನಾಳೆ ಸಂಜೆ ೬|| ಗಂಟೆಗೆ ಶ್ರೀ ಚಲುವರಾಯಸ್ವಾಮಿಗಳವರಿಂದ ತ್ಯಾಗರಾಜರ ಬಗ್ಗೆ ಭಾಷಣ ಮತ್ತು ವಿ|| ಆರ್. ಲಕ್ಷ್ಮಮ್ಮ ಮತ್ತು ಪಾರ್ಟಿಯವರಿಂದ ಸಂಗೀತ ಮತ್ತು ನಾಳಿದ್ದು ಸಂಜೆ ೬|| ಗೆ ವಿ|| ಎಸ್ ಎ. ಮರಿಯಪ್ಪನವರ ಗಾಯನ ಕಛೇರಿಗಳು ಜರುಗುವುವು

ಸಮಾಜವಾದಿ ಪಕ್ಷದ ಉಮೇದುವಾರರು

ಸಂಸ್ಥಾನದ ಸಮಾಜವಾದಿ ಪಕ್ಷದ ಪರವಾಗಿ ನಗರದ ದಕ್ಷಿಣ ಕ್ಷೇತ್ರದಿಂದ ಶ್ರೀ ಶ್ರೀಕಂಠಸ್ವಾಮಿ ಮತ್ತು ಉತ್ತರದಿಂದ ಶ್ರೀ ಮಿರ್ ನೂರ್ ಹುಸೇನರನ್ನು ವಿಧಾನ ಸಭೆಗೆ ಉಮೇದುವಾರರಾಗಿ ಆರಿಸಲಾಗಿದೆ

ತೋಟಗಳ ಕಾರ್ಮಿಕರ ಮೇಲೆ ಗುಂಡಿನೇಟಿನಿಂದ ಐವರ ಮರಣ

ಕೊಯಮತ್ತೂರು ಬಳಿ ಅಣ್ಣಾಮಲೆಯ ವಾಲ್ಪಾರೈ ಎಂಬಲ್ಲಿ ಮೊನ್ನೆ ಪೊಲೀಸರು ತೋಟಗಳ ಕಾರ್ಮಿಕರ ಮೇಲೆ ೫ ಬಾರಿ ಗುಂಡು ಹಾರಿಸಿದ ಪರಿಣಾಮವಾಗಿ ಐವರು ಸತ್ತು, ೬ ಮಂದಿಗೆ ಗಾಯವಾಗಿದೆ ತೋಟಗಳ ನ್ಯಾಯ ಮಂಡಲದ ತೀರ್ಪನ್ನು ಕೂಡಲೇ ಜಾರಿಗೆ ತರುವಂತೆ ಒತ್ತಾಯಪಡಿಸಲು ೧೦,೦೦೦ ಕಾರ್ಮಿಕರು ಮೆರವಣಿಗೆ ನಡೆಸಿ, ಸಭೆಗೆ ಹೋಗುತ್ತಿದ್ದಾಗ ಅದರ ವ್ಯವಸ್ಥಾಪಕನನ್ನು ಒಬ್ಬ ಪೊಲೀಸನು ಹೊಡೆದು ಠಾಣೆಗೆ ಒಯ್ಯಲಾಗಿ ಸಿಟ್ಟುಗೊಂಡ ಕಾರ್ಮಿಕರು ಆತನನ್ನು ಬಿಡುವಂತೆ ಒತ್ತಾಯ ಮಾಡಿದರು ಹಲವರು ಠಾಣೆ ಮೇಲೆ ಕಲ್ಲು ಬೀರಿದರು. ಆಗ ಗುಂಡನ್ನು ಹಾರಿಸಲಾಯಿತು

ಕಾಶ್ಮೀರಕ್ಕೆ ನುಗ್ಗುವುದಾಗಿ ಬೆದರಿಕೆ

ಭದ್ರತಾ ಸಮಿತಿಯು ಕಾಶ್ಮೀರದಲ್ಲಿ ಜನಮತಗಣನೆಗೆ ನಿರ್ದಿಷ್ಟ ಕಾಲವನ್ನು ಗೊತ್ತುಪಡಿಸದಿದ್ದರೆ ಆಜಾದ್ ಕಾಶ್ಮೀರ ಸರ್ಕಾರವು ಯುದ್ಧಸ್ತಂಭನ ರೇಖೆಯನ್ನು ಉಲ್ಲಂಘಿಸಿ ಕಾಶ್ಮೀರವನ್ನು ಪ್ರವೇಶಿಸುವುದೆಂದು ಆಜಾದ್ ಕಾಶ್ಮೀರ ಮುಸ್ಲಿಂ ಸಮ್ಮೇಳನದ ನಾಯಕ ಗುಲಾಂ ಅಬ್ಬಾಸ್‌ರವರು ಲಾಹೋರಿನಲ್ಲಿ ತಿಳಿಸಿರುತ್ತಾರೆ ಕಾಶ್ಮೀರದ ಬಗ್ಗೆ ಆಗಿರುವ ಯುದ್ಧಸ್ತಂಭನ ಒಪ್ಪಂದಕ್ಕೆ ತಾವು ಭಾಗಿಗಳಲ್ಲವೆಂದೂ, ಆದುದರಿಂದ ಅಂತಹ ಒಪ್ಪಂದಗಳು ತಮ್ಮನ್ನು ಬದ್ಧಪಡಿಸುವುದಿಲ್ಲವೆಂದೂ ಅವರು ಹೇಳಿರುವರು.

ಪಂಡಿತ ಪಂತರಿಗೆ ಭಾರತರತ್ನ ಪ್ರಶಸ್ತಿ

ಕೇಂದ್ರ ಗೃಹಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರಿಗೆ ರಿಪಬ್ಲಿಕ್ ದಿನೋತ್ಸವದ ಅಂಗವಾಗಿ ರಾಷ್ಟ್ರಾಧ್ಯಕ್ಷರು 'ಭಾರತರತ್ನ' ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ ಬೊಂಬಾಯಿ ಗವರ್ನರ್ ಶ್ರೀಪ್ರಕಾಶ, ಸುಪ್ರೀಂ ಕೋರ್ಟಿನ ಅಟಾರ್ನಿ ಜನರಲ್ ಎಂ ಸಿ ಸೆಟಲ್‌ವಾಡ್ ಮತ್ತು ಜಿ. ಡಿ. ಬಿರ್ಲಾರವರಿಗೆ ಪದ್ಮ ಭೂಷಣ ಪ್ರಶಸ್ತಿಗಳನ್ನೂ, ಭರತನಾಟ್ಯದಲ್ಲಿ ಪ್ರಸಿದ್ಧಿ ಹೊಂದಿರುವ ಶ್ರೀಮತಿ ಟಿ ಬಾಲಸರಸ್ವತಿ, ಕೇಂದ್ರ ಉಪ ಮಂತ್ರಿ ಲಕ್ಷ್ಮಿ ಮೆನನ್ ಮತ್ತು ಮದ್ರಾಸ್ ಸೇವಾ ಸದನದ ಸಂಸ್ಥಾಪಕಿ ಆಂಡಾಳ್ ವೆಂಕಟಸುಬ್ಬರಾಯರಿಗೆ ಪದ್ಮಭೂಷಣ ಪ್ರಶಸ್ತಿಗಳನ್ನೂ ಕೊಡಲಾಗಿದೆ.

ರಾಷ್ಟ್ರೀಯ ಕನಿಷ್ಠಾಂಶ ವೇತನ ೭೫ ರೂ.

ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರಾಷ್ಟ್ರೀಯ ಕನಿಷ್ಠಾಂಶ ವೇತನವು ಮಾಹೆಯಾನ ೭೫ ರೂ ಇರಬೇಕೆಂಬುದಾಗಿ ಸೂಚಿಸಿರುತ್ತಾರೆ ಅದಕ್ಕಿಂತ ಕಡಿಮೆಯಾಗಿ ಭಾರತದಲ್ಲಿ ಯಾರಿಗೂ ವರಮಾನವಿರಬಾರದೆಂದು ಇವರು ಹೇಳಿರುವರು ಮುಖ್ಯವಾಗಿ ಪೊಲೀಸರು, ಉಪಾಧ್ಯಾಯರೇ ಮುಂತಾದವರ ಬಗ್ಗೆ ಇವರು ಈ ರೀತಿ ಪ್ರಸ್ತಾಪಿಸಿರುವರು

ನಾಯಿಗೆ ಹೆದರಿ ಹುಲಿಯ ಓಟ

ಮಧ್ಯ ಮಲಯದ ಬೆಂಟಾಂಗ್ ಎಂಬ ಊರಿನ ಬಳಿ ರಬ್ಬರ್ ತೋಟದಲ್ಲಿ ಹೆಣ್ಣು ನಾಯಿಯೊಂದು ತನ್ನ ಮರಿಗಳ ರಕ್ಷಣೆಗಾಗಿ ಭಾರಿ ಹುಲಿಯೊಡನೆ ಕಾಳಗವಾಡಿ ಅದನ್ನು ಅಟ್ಟಿಸಿಕೊಂಡು ಕಾಡಿಗೂ ಹೋಗಿತ್ತೆಂದು ವರದಿಯಾಗಿದೆ. ಎರಡಕ್ಕೂ ಬಲವಾದ ಹೋರಾಟವಾಗಿ ಕಡೆಗೆ ಹುಲಿಯು ತನ್ನ ರಕ್ಷಣೆಗಾಗಿ ಕಾಡಿಗೆ ಓಡಿತು ಅರಣ್ಯ ಇಲಾಖೆಯವರು ನಾಯಿಯನ್ನು ಕಾಡಿನಿಂದ ವಾಪಸು ಕರೆತಂದರು

ಹಿಂದಿ ಶಿಕ್ಷಣಾಲಯದ ಪ್ರಾರಂಭೋತ್ಸವ

ನಗರದ ಎಣ್ಣೆ ಮಿಷನ್ ರಸ್ತೆಯಲ್ಲಿರುವ ಶ್ರೀ ಶಿವರಾಮಯ್ಯನವರ ಗೃಹದಲ್ಲಿ ಕಳೆದ ೨೫ ರಂದು ಹಿಂದಿ ಶಿಕ್ಷಣಾಲಯದ ಪ್ರಾರಂಭೋತ್ಸವವು, ಶಾರದಾ ಪೂಜೆಯೊಡನೆ ನೆರವೇರಿಸಲ್ಪಟ್ಟಿತು. ಟ್ರೈನಿಂಗ್ ಕಾಲೇಜಿನ ಅಧ್ಯಾಪಕ ಶ್ರೀ ಶ್ರೀನಿವಾಸಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು ಕುಮಾರಿಯರಾದ ಎಂ ಎಸ್ ರಾಜರಾಜೇಶ್ವರಿ ಮತ್ತು ಕೆ ಪಿ ಸರಸ್ವತಿಯವರಿಂದ ಪ್ರಾರ್ಥನೆ, ಶ್ರೀ ಎ. ಎನ್ ಕೆ. ಗೋಪಾಲಭಟ್ಟರಿಂದ ಸ್ವಾಗತಗಳಾದನಂತರ ಯುವರಾಜಾ ಕಾಲೇಜಿನ ಹಿಂದಿ ಅಧ್ಯಾಪಕ ಶ್ರೀ ಜಿ ಸಚ್ಚಿದಾನಂದಂ ಮತ್ತು ಟ್ರೈನಿಂಗ್ ಕಾಲೇಜು ಪ್ರಿನ್ಸಿಪಾಲ್ ಶ್ರೀ ಓ. ಎನ್ ವೆಂಕಟೇಶಯ್ಯಂಗಾರ್ಯರಿಂದ ಭಾಷಣಗಳಾದುವು ಅಧ್ಯಕ್ಷರು ಹಿಂದಿ ಭಾಷೆಯ ಆವಶ್ಯಕತೆಯನ್ನು ವಿವರಿಸಿದರು ಶ್ರೀ ಪ್ರಹ್ಲಾದರವರಿಂದ ಸಂಗೀತವು ನಡೆದನಂತರ ಶ್ರೀ ಸಂಪತ್ಕುಮಾರ್‌ರವರಿಂದ ವಂದನಾರ್ಪಣೆಯಾಗಿ, ಮಂಗಳಾರತಿ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಪಿ. ಜಿ. ದಾಸರ ಉಮೇದುವಾರಿಕೆ

ನಗರದ ಪೌರಸಭಾ ಸದಸ್ಯರಾದ ಡಾ|| ಪಿ. ಜಿ. ದಾಸರು ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ಸಂಘದ ಪರವಾಗಿ ಮೈಸೂರು ದಕ್ಷಿಣ ಕ್ಷೇತ್ರದಿಂದ ವಿಧಾನ ಸಭೆಗೆ ಸ್ಪರ್ಧಿಸುವರು.

ಪ್ರಸಿದ್ಧ ಸಿನಿಮಾ ತಾರೆ ಲಲಿತಳ ವಿವಾಹ

ದಕ್ಷಿಣ ಭಾರತದ ಸುಪ್ರಸಿದ್ಧ ಸಿನಿಮಾ ತಾರೆ ಲಲಿತ ಮತ್ತು ಕೇರಳದ ವಕೀಲ ಶ್ರೀ ಶಿವಶಂಕರ್ ನಾಯರ್‌ರವರ ವಿವಾಹವು ಕಳೆದ ಬುಧವಾರ ಮದ್ರಾಸ್ ನಗರದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ಈ ವಿವಾಹವು ಅನೇಕ ವಿಧಗಳಲ್ಲಿ ಕೋಲಾಹಲಕರವಾಗಿದ್ದಿತು ಚೀಣೀ ಪ್ರಧಾನಿ ಚೌ ಎನ್ ಲೈ, ಯುಗೊಸ್ಲೇವಿಯದ ಅಧ್ಯಕ್ಷ ಮಾರ್ಷಲ್ ಟಿಟೋ, ಮೌಂಟ್ ಬೇಟನ್ ದಂಪತಿಗಳೇ ಮುಂತಾದ ಪ್ರಖ್ಯಾತ ವ್ಯಕ್ತಿಗಳಿಗೂ ಸಹ ಆಹ್ವಾನವೀಯಲಾಗಿತ್ತು

ಮದುವೆಯು ಮಲೆಯಾಳಿ ಸಂಪ್ರದಾಯದಲ್ಲಿ ನಡೆಯಿತು ಸುಂದರವಾಗಿ ಅಲಂಕೃತರಾಗಿ ಕೈಯಲ್ಲಿ ಆರತಿ ತಟ್ಟೆಗಳನ್ನು ಹಿಡಿದ ಯುವತಿಯರಿಂದ ಸುತ್ತುವರಿಯಲ್ಪಟ್ಟು ಲಲಿತಾ ಮಂಟಪದೊಳಗೆ ಬಂದು ಮೊದಲು ತನ್ನ ತಾಯಿ ಮತ್ತಿತರ ಹಿರಿಯರೆಲ್ಲರಿಗೂ ನಮಿಸಿದನಂತರ ವರನೊಡನೆ ವಸ್ತ್ರಾಭರಣಗಳ ಬಳುವಳಿಗಳನ್ನು ಪಡೆದ ತರುವಾಯ ಸಂಬಂಧಿಕರೆಲ್ಲರೂ ಹಾಸ್ಯ ಮಾಡುತ್ತಿದ್ದಾಗ ವರನು ಮಾಂಗಲ್ಯವನ್ನು ಕಟ್ಟಿದನು

ಸಮಾರಂಭಕ್ಕೆ ಜನಪ್ರಿಯ ಹಿಂದಿ ನಟ ರಾಜಕಪೂರರೂ ಆಗಮಿಸಿದ್ದರು ಪ್ರವಾಹದಂತೆ ಬರುತ್ತಿದ್ದ ಅತಿಥಿಗಳನ್ನು ಸ್ವಾಗತಿಸಲು ಗಾಯಕಿ ವಸಂತಕುಮಾರಿ, ಟಿ. ಎ ಮಧುರಂ ಮತ್ತು ಕೇರಳದ ನರ್ತಕ ಗೋಪಿನಾಥ್‌ರವರು ಸಿದ್ಧವಾಗಿ ನಿಂತಿದ್ದರು ಕುತೂಹಲಪೂರಿತರಾದ ಜನರ ಸಂದಣಿಯನ್ನು ಹತೋಟಿಗೆ ತರಲು ಪೊಲೀಸರ ಒಂದು ತಂಡವೇ ಹಾಜರಿದ್ದಿತು

ವಧೂವರರಿಗೆ ಶುಭಾಶಯಗಳನ್ನು ಕೋರಿ, ರಾಷ್ಟ್ರಾಧ್ಯಕ್ಷರು, ಪ್ರಧಾನಿ ನೆಹರೂ, ಮೌಂಟ್ ಬೇಟನ್ ದಂಪತಿಗಳು, ಡಾ|| ರಾಧಾಕೃಷ್ಣನ್ ಮುಂತಾದ ಪ್ರಮುಖರುಗಳನ್ನು ಕಳುಹಿಸಿದ್ದರು

ಅಹೋಬಿಲಸ್ವಾಮಿಗಳವರ ತಿರು ನಕ್ಷತ್ರ

ನಗರದ ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಅಹೋಬಿಲ ಮಠದಲ್ಲಿ ಶ್ರೀ ಶ್ರೀಗಳವರ ತಿರುನಕ್ಷತ್ರವು ಇಂದು, ನಾಳೆ ಮತ್ತು ನಾಳಿದ್ದು ಜರುಗುವುದು ಭಕ್ತರು ಮತ್ತು ಶಿಷ್ಯರು ಸೇವಾದಿಗಳನ್ನು ನಡೆಸಲು ಸಹಾಯ ಮಾಡಬೇಕೆಂದು ಕೋರಲಾಗಿದೆ

ಶ್ರೀ ಸೂಕ್ತ ಸುಧಾ ಸಾಗರ

ನಮ್ಮ ೧೯ನೇ ತಾರೀಕಿನ ಪತ್ರಿಕೆಯಲ್ಲಿ ಮೇಲ್ಕಂಡ ಶಿರೋನಾಮೆಯಲ್ಲಿ ಸಂಪಾದಕರ ಹೆಸರು ದ್ವಿವೇದಿ ಎಸ್ ರಾಮಚಂದ್ರಮೂರ್ತಿ ಎಂಬುದಾಗಿ ತಪ್ಪಾಗಿ ಬಿದ್ದಿದೆ ಅದನ್ನು ದ್ವಿವೇದಿ ಎಸ್ ಸೀತಾರಾಮಶಾಸ್ತ್ರಿ ಎಂಬುದಾಗಿ ಓದಿಕೊಳ್ಳಬೇಕಾಗಿ ವಿನಂತಿ

ಅಪ್ಪಟವಾದ
ಹಸುವಿನ ಹಾಲು
ಪೌಂಡು 1ಕ್ಕೆ 0 3 6 : ½ ಪೌಂಡಿಗೆ 0 1 9
ಅಂದೇ ಭೇಟಿ ಕೊಟ್ಟು ಪರೀಕ್ಷಿಸಿರಿ
ಕಾಲ : ಬೆಳಿಗ್ಗೆ 5 30ರಿಂದ 9 30
ಮಧ್ಯಾಹ್ನ 3 ರಿಂದ 6-30
ಗೋಕುಲ ಮಿಲ್ಕ್ ಡೈರಿ
ತಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ
ಸಾರಡಿ ರಸ್ತೆ, ಮೈಸೂರು
ಶೀಘ್ರದಲ್ಲೇ ರಮಾವಿಲಾಸ ಅಗ್ರಹಾರದಲ್ಲಿ
ಶಾಖೆಯೊಂದನ್ನು ತೆರೆಯಲಾಗುತ್ತೆ

Edited, Printed and Published by
A. R. Nagarajan at Sadhvi Press,
D. Subbiah Road, Mysore

ಗಣರಾಜ್ಯೋತ್ಸವ

ಮೈಸೂರು ೨೮

ಶಿಶು ಸಾಹಿತ್ಯ ಮಂಡಲಿಯ ಆಶ್ರಯದಲ್ಲಿ ಮೊನ್ನೆ ಅಶೋಕಪುರದ ಬಾಲಕರ ತರಬೇತು ಕೇಂದ್ರದಲ್ಲಿ ರಿಪಬ್ಲಿಕ್ ದಿನೋತ್ಸವವು ನಡೆಯಿತು ಪೌರಸಭಾ ಉಪಾಧ್ಯಕ್ಷರಾದ ಶ್ರೀ ಜಿ.ಎಸ್. ರಾಮಕೃಷ್ಣಯ್ಯನವರು ಧ್ವಜಾರೋಹಣ ಮಾಡಿ ಉತ್ಸವದ ಮಹತ್ವವನ್ನು ವಿವರಿಸಿದರು. ಶ್ರೀಮತಿ ಸುಶೀಲಾಬಾಯಿಯವರು ಧನ್ಯವಾದಗಳನ್ನು ಅರ್ಪಿಸಿದರು. ಮಕ್ಕಳಿಗೆ ಪೆಪ್ಪರ್‌ಮೆಂಟ್ ಮತ್ತು ಹಾಲನ್ನು ಹಂಚಲಾಯಿತು

ದಿವಾನರ ಅಗ್ರಹಾರದಲ್ಲಿರುವ ಮಹಿಳಾ ಸದನದ ಆಶ್ರಯದಲ್ಲಿ ಮೊನ್ನೆ ದಿನೋತ್ಸವವು ಶ್ರೀಮತಿ ಹೆಚ್. ಟಿ ಶಾಂತಾರವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಮತಿ ಟಿ ಎಸ್. ಇಂದಿರರವರಿಂದ ಪ್ರಾರ್ಥನೆಯಾದಮೇಲೆ ಸ್ವಾಗತ ಭಾಷಣವಾದನಂತರ ಬಾಲ ವಿಹಾರದ ಮಕ್ಕಳು ಅಭಿನಯ ಗೀತೆಗಳನ್ನು ಹಾಡಿದರು ಶ್ರೀಮತಿ ಎಂ ಬಿ. ಆಂಡಾಳ್‌ರವರಿಂದ ಸುಶ್ರಾವ್ಯವಾದ ವೀಣಾವಾದನವು ನಡೆಯಿತು ಅಧ್ಯಕ್ಷರ ಭಾಷಣವಾದನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಅಶೋಕಪುರದ ಯುವಕರ ಸಂಘದ ಆಶ್ರಯದಲ್ಲಿ ಮೊನ್ನೆ ಶ್ರೀ ಜಿ. ಎಸ್. ರಾಮಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ದಿನಾಚರಣೆಯು ನಡೆಯಿತು ಭಾರತ ರಾಜ್ಯಾಂಗವನ್ನು ರಚಿಸಿದ ಡಾ|| ಬಿ. ಆರ್. ಅಂಬೇಡ್ಕರರ ಭಾವಚಿತ್ರವನ್ನು ಅನಾವರಣ ಮಾಡಲಾಯಿತು ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ಪ್ಯಾಡರ್ ಟೆನ್ನಿಸ್ ಪಂದ್ಯದಲ್ಲಿ ಬಹುಮಾನ ವಿನಿಯೋಗ

ಚಾಮುಂಡಿಪುರದಲ್ಲಿರುವ ಯಂಗ್‌ಸ್ಟರ್ಸ್ ಪ್ಯಾಡರ್ ಟೆನ್ನಿಸ್ ಕ್ಲಬ್ ಆಶ್ರಯದಲ್ಲಿ ನಡೆಯುತ್ತಿದ್ದ ಪ್ಯಾಡರ್ ಟೆನ್ನಿಸ್ ಪಂದ್ಯವು ಮೊನ್ನೆ ಮುಕ್ತಾಯವಾಗಿ ಶ್ರೀ ಎಂ ಎಸ್. ರಾಮನಾಥರವರು ಬಹುಮಾನ ವಿನಿಯೋಗ ಮಾಡಿದರು. ಸಿಂಗಲ್ಸ್ ಪಂದ್ಯದಲ್ಲಿ ಶ್ರೀ ಜಿ ಕೆ ಮಾಧವರಾಯರಿಗೂ ಮತ್ತು ಶ್ರೀ ಟಿ ವಿ ಹರಿಸರ್ವೋತ್ತಮರವರಿಗೂ ಪ್ರಥಮ ಮತ್ತು ದ್ವಿತೀಯ ಬಹುಮಾನಗಳು ದೊರೆತುವು ಡಬಲ್ಸ್ ಪಂದ್ಯದಲ್ಲಿ ಶ್ರೀ ಕೆ ಎನ್ ಶಂಕರ್‌ರ ಪಾರ್ಟಿ ಮತ್ತು ಶ್ರೀ ಜಿ. ಕೆ ಮಾಧವರಾಯರ ಪಾರ್ಟಿಗೆ ಪ್ರಥಮ ಮತ್ತು ದ್ವಿತೀಯ ಬಹುಮಾನಗಳು ದೊರೆತುವು. ಕನ್ಸೋಲೇಷನ್ ಬಹುಮಾನಗಳನ್ನು ಶ್ರೀ ಎಂ. ಆರ್ ಕೃಷ್ಣಮೂರ್ತಿ ಮತ್ತು ಬಿ. ಎ ರಾಜಾರಾವ್‌ರವರಿಗೆ ಕೊಡಲಾಯಿತು.

GLOBE TUTORIAL COLLEGE,
Sadvidya Patashala Buildings,
Revision Classes for students promoted
to S S. L. C Classes
Time 8 to 10-30 A.M.

ನಂಜನಗೂಡಿನಲ್ಲಿ ಗಣರಾಜ್ಯ ದಿನಾಚರಣೆ

ಗಣರಾಜ್ಯ ದಿನೋತ್ಸವವು ನೆನ್ನೆ ನಂಜನಗೂ ಡಿನಲ್ಲಿ ವೈಭವದಿಂದ ಆಚರಿಸಲ್ಪಟ್ಟಿತು ಪುರಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಡಿವಿಜನ್ ಅಧಿಕಾರಿ ಶ್ರೀ ವಿ ಸಿ. ಚನ್ನ ಅರಸಿನವರು ಧ್ವಜಾರೋಹಣ ಮಾಡಿದರು ಎಸ್. ನಾರಾಯಣರಾವ್, ಪ್ರೌಢ ಶಾಲಾ ಉಪಾಧ್ಯಾಯರಾದ ಶ್ರೀ ನರಸಿಂಹಯ್ಯ ರಾದವರಿಂದ ಭಾಷಣಗಳೂ, ಡಿ|| ಕೇಶ ವ್ ಮತ್ತು ವೃಂದದವರಿಂದ ಸಂಗೀತವೂ ಗಿದುವು. ಇದರ ಅಂಗವಾಗಿ ಏರ್ಪಡಿಸಿದ್ದ ಬಾಲ್ ಟೋರ್ನಮೆಂಟಿನಲ್ಲಿ ಜಯಗಳಿ ಗೆ ಸಂಘ ಪುರಸಭಾಧ್ಯಕ್ಷ ಶ್ರೀ ಕೆ. ವೆಂಕಟ ರವರು ಸಾರ್ವಜನಿಕ ಸಮಾರಂಭವೊಂದರಲ್ಲಿ ಹುಮಾನ ವಿನಿಯೋಗ ಮಾಡಿದರು

ಸರ್ಕಾರಿ ನೌಕರರ ತುಟ್ಟಿಭತ್ಯ

ನಗರ ಮತ್ತು ಇತರ ಕಡೆಗಳಲ್ಲಿ ೮೦ ಗಿಂತ ಕಡಿಮೆ ಸಂಬಳ ಬರುವವರಿಗೆ ಕ್ರಮ ೩೫ ಮತ್ತು ೩೦ ರೂ. ತುಟ್ಟಿಭತ್ಯ ಬರು ದು ನೆನ್ನೆ ನಮ್ಮ ಪತ್ರಿಕೆಯಲ್ಲಿ ಬಿದ್ದಿರುವುದು ೩೦ ಮತ್ತು ೨೫ ಎಂದು ಓದಿಕೊಳ್ಳಬೇ ವಿನಂತಿ.

ಜೀವನದ ಹರ್ಷವನ್ನು ಸವಿಯಿ
ಹೆಂಗಸರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಲವಲವಿಕೆಯನ್ನು ಹೊಂದಿ ದೀರ್ಘ ಜೀವನದಲ್ಲಿ ಆನಂದಗಳನ್ನೂ ಅನುಭವಿಸಬೇಕೆಂಬು ಮಾನವರ ಮಹತ್ತರವಾದ ಅಭಿಲಾಷೆ. ಮನುಷ್ಯ ಶರೀ ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿ [illegible], ಜ್ಞಾಪಕ ಶಕ್ತಿಯ ಅಭಾವ, ಮಧುಮೇ ಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌ ರ್ಬಲ್ಯ. ಸಿಫಿಲಿಸ್, ಗೊನೋರಿಯಾ, ಪಾರ್ಶ್ವ ಯು, ಅಂಗವಾಯು ಮತ್ತು ಎಲ್ಲ ವಿಧವಾದ ಳೆಯ ಮೂತ್ರ ರೋಗಗಳಿಗೂ ಕಾರಣವಾದ ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವಾ ಸರಾಗಿರುವ ಡಾ|| ರಾಜಾರಾವರನ್ನು (ಲ್ಯಾಂಗ್ [illegible] ವೀಧಿ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿ. ರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆ ಕಾಯಿಲೆಗಳಿಗೂ ಖ್ಯಾತಿಯ ಚಿಕಿತ್ಸೆಗಳನ್ನು ಡುವರು [illegible] ವುದು.

ಅವರ ಸಲಹೆ ಪಡೆಯುವುದೆಂದರೆ ಹೊಸ ಜೀ ವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯ ಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾ ಡಿ

ರಾಜಾ ಮೆಡಿಕಲ್ ಹಾಲ್
ಡೋರ್ ನಂ. 1745, ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ [illegible]
ಮೂರನೇ ಕಟ್ಟಡ,)
ಮೈಸೂರು.

ಪ್ರಸಿದ್ಧ ಪತ್ರಿಕೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

1956-57 ನೇ ಸಂವತ್ಸರದ ಬೇಬಿ ಸಿದ್ಧೇಶ್ವರ ಮಾದೇಶ್ವರ ರಥೋತ್ಸವಾಂ ದನದ ಜಾತ್ರೆಯು ಅರಮನೆಗೆ ಸೇರಿದ ಬೇಬಿ ಕಾವಲಿನಲ್ಲಿ ತಾ|| 1-3-1957 ರಿಂದ ವಾರ ನಡೆಸಲ್ಪಡುತ್ತದೆ. ಸದರಿ ಕಾವಲು ಪಾಂಡವಪುರ-ಕೃಷ್ಣರಾಜಪೇಟೆ ರಸ್ತೆಯ ಚಿನಕುರುಳಿಗೆ ಮೂರು ಮೈಲಿ ದೂರದಲ್ಲಿದೆ. ಜಾತ್ರೆ ಮಾಳಕ್ಕೆ ಹೋಗಲು ಮೂರು ರಸ್ತೆ ಇದೆ. ನೀರು ನೆರಳಿಗೆ ಸೌಕರ್ಯವಿದೆ. ವೆಟರಿನರಿ ಆಫೀಸರು ಮತ್ತು ಒಬ್ಬ ಜಾತ್ರೆ ಕಾಲದಲ್ಲಿ ಹಾಜರಿದ್ದು ದನಗಳ ಮತ್ತು ಜನರ ಆರೋಗ್ಯವನ್ನು ನೋಡಿಕೊ ವ್ಯವಸ್ಥೆ ಮಾಡಲಾಗಿದೆ

ಪ್ರದರ್ಶನಕ್ಕೆ ಬಂದ ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ

ಜಾತ್ರೆಗೆ ಸಂಬಂಧಪಟ್ಟ ದನಗಳ ಸುಂಕ, ಅಂಗಡಿ ಸುಂಕ. ಗೋಲಕ, ಗೊಬ್ಬ ಬಾಬುಗಳನ್ನು ರೂಢಿಸಿಕೊಳ್ಳುವ ಹಕ್ಕು ಪಾಂಡವಪುರದ ತಾಲ್ಲೂಕು ಚಿನಕುರುಳಿ ಗ್ರಾ ರುವ "ಪ್ರವಾಸ ಮಂದಿರದಲ್ಲಿ" [ಟ್ರಾವಲರ್ಸ್ ಬಂಗ್ಲೆಯಲ್ಲಿ] ಅರಮನೆ ಎಸ್ಟೇ ಗಾರ್ಡನ್ಸ್ ಇಲಾಖಾ ಮೊಹ್ತೇಸರ್-ಇನ್-ಛಾರ್ಜ್‌ರವರಿಂದ ತಾ|| 2-2-1957 ನೇ ಬೆಳಿಗ್ಗೆ 12 ಘಂಟೆಗೆ ಹರಾಜು ಹಾಕಲ್ಪಡುತ್ತೆ.

ಮೈಸೂರು,
ತಾ|| 23-1-1957

ಹೆಚ್. ಎನ್. ಪಾಳ್ಯೇಗಾ
ಸೆಕ್ರೆಟರಿ

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು.

ಟೆಲಿಫೋನ್ ನಂ. 793

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಮುಖ್ಯ ಮತ್ತು ಹೊರಗು ಪ್ರತಿನಿಧಿಗಳಿಗೆ
ಬರೆಯಿರಿ
ತಯಾರಕರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೩] SADHVI : TUESDAY 29—1—1957 ಮೈಸೂರು : ಮಂಗಳವಾರ ೨೯—೧—೧೯೫೭ : [ಸಂಚಿಕೆ : [illegible]

ಪಾಕಿಸ್ತಾನದಲ್ಲಿನ ಪುಂಡತನಕ್ಕಾಗಿ ಭಾರತದ ಪ್ರತಿಭಟನೆ

ನಗರದಲ್ಲಿ ಸೈಕಲ್ ತೆರಿಗೆ ರದ್ದಿನ ಪ್ರಶ್ನೆ

ಪೌರಸಭಾಧಿವೇಶನದಲ್ಲಿ ಪರಿಶೀಲನೆ

ಮೈಸೂರು ೨೮

ಪುರಸಭೆಯ ಸಾಧಾರಣ ಅಧಿವೇಶನವು ನೆನ್ನೆ ಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಕಂದಾಯದ ವಸೂಲಿಯಲ್ಲಿ ಜನರಿಗೆ ಉಂಟಾಗಿರುವ ಕಿರುಕುಳಕ್ಕಾಗಿ ಅಧಿಕಾರಿ ವರ್ಗದವರನ್ನು ಸದಸ್ಯರು ಟೀಕಿಸಿದರು. ಕಂದಾಯದ ಪುನರ್ವಿಮರ್ಶೆ ಅರ್ಜಿಗಳು ಪರಿಶೀಲಿಸಲ್ಪಡದೆ ಹಾಗೆ ಉಳಿದಿವೆಯೆಂದು ಹೇಳಿದಾಗ ಒಟ್ಟು ೬ ಸಾವಿರದಲ್ಲಿ ೩ ಸಾವಿರ ಅರ್ಜಿಗಳು ಫೈಸಲಾಗಿವೆಯೆಂದು ಕಮಿಷನರರು ಉತ್ತರವಿತ್ತರು.

ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಮಾತನಾಡಿ ಕಂದಾಯದ ವಸೂಲಿಯು ಅಸ್ತವ್ಯಸ್ತವಾಗಿದೆಯೆಂದೂ, ೩,೯೬,೦೦೦ ರೂ. ಕಂದಾಯದ ಬಾಕಿಯಲ್ಲಿ ಕೇವಲ ೧,೬೬,೦೦೦ ರೂ ಮಾತ್ರ ವಸೂಲಾಯಿತೆಂದೂ, ಹಾಗೆಯೇ ಈ ವರ್ಷದ ೫,೫೫,೦೦೦ ರೂ ಕಂದಾಯದಲ್ಲಿ ಕೇವಲ ೬೧ ಸಾವಿರ ರೂ ವಸೂಲಾಗಿರುವುದೆಂದೂ ಇದರಿಂದ ಪುರಸಭೆಯ ಆಡಳಿತಕ್ಕೆ ತೊಂದರೆ ಉಂಟಾಗುವುದೆಂದೂ ನುಡಿದರು. ಈ ಕೆಲಸವನ್ನು ತ್ವರಿತಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಭರವಸೆಯಿತ್ತರು.

ನೀರಿನ ಕಂದಾಯದ ವಸೂಲಿ ಪ್ರಶ್ನೆಯು ಬಹಳವು ಸದಸ್ಯರು ಮಾತನಾಡಿ. ಹಣ ಕೊಡಲಾಗ ತಪ್ಪಿಸಿದ ನೀರಿನ ಸೌಲಭ್ಯವನ್ನು ಮತ್ತೆ ಪಡೆಯಬೇಕಾದರೆ ಉಂಟಾಗುತ್ತಿರುವ ತೊಂದರೆಗಳನ್ನು ವಿವರಿಸಿದರು ಶ್ರೀ ಚೌಡಯ್ಯನವರು ಮಾತನಾಡಿ ಕಳೆದ ೨೦ ವರ್ಷಗಳಿಂದಲೂ ನೀರು ಪಡೆಯುತ್ತಿದ್ದವರೊಬ್ಬರ ಹೆಸರು ದಾಖಲೆಯಲ್ಲಿಲ್ಲದಿರುವುದನ್ನು ತಿಳಿಸಿದರು. ಅಂತಹ ಕೆಲವರ ಬಾಕಿಯನ್ನು ಒಟ್ಟಿಗೆ ಕೊಡಲು ಈಗ ತಗಾದೆ ಮಾಡುತ್ತಿರುವ ಅಂಶವನ್ನು ಶ್ರೀ ಸಿ ಎಸ್ ನಾರಾಯಣರಾಯರು ವ್ಯಕ್ತಪಡಿಸಿದರು.

ನಂತರ ಪ್ರಶ್ನೋತ್ತರಗಳಾದುವು. ಡ್ರೈನೇಜ್ ಸೌಕರ್ಯವಿಲ್ಲದಿರುವ ಕಡೆ ಅದರ ತೆರಿಗೆಯ ವಾಪಸ್ ಕೊಡುವ ಪ್ರಶ್ನೆಯನ್ನು ಪರಿಶೀಲಿಸುವುದಾಗಿ ಅಧ್ಯಕ್ಷರು ಶ್ರೀ ಅಜೀಜ್ ಸೇಟರ ಪ್ರ ಉತ್ತರವಿತ್ತರು.

ನಂತರ ನಗರದ ಮಾರ್ಕೆಟ್ಟಿನ ಎಳ್ಳಿದೆರೆ ಹೂ ಮಾರುವವರಿಗೆ ಸೂಕ್ತ ಸ್ಥಳವನ್ನು ಕೊಡಬೇಕೆಂಬ ಶ್ರೀ ಶ್ರೀಕಂಠಶರ್ಮರ ನಿರ್ಣಯವೂ ಮತ್ತು ಸ್ಯಾನಿಟೋರಿಯಮ್ಮಿನಲ್ಲಿ [illegible] ನಿರ್ಮಿಸಬೇಕೆಂದು ಸರಕಾರವನ್ನು ಕೋರುವ ಶ್ರೀ ಚೌಡಯ್ಯನವರ ನಿರ್ಣಯವೂ ಸರ್ವಾನುಮತದಿಂದ ಅಂಗೀಕೃತವಾದುವು.

ಮದ್ರಾಸಿನಲ್ಲಿರುವಂತೆ ನಗರದಲ್ಲೂ ಸೈಕಲ್ ತೆರಿಗೆಯನ್ನು ರದ್ದುಗೊಳಿಸಬೇಕೆಂಬ ಶ್ರೀ ಬಿ ಕೆ. ಪುಟ್ಟಯ್ಯನವರ ನಿರ್ಣಯವನ್ನು ಆರ್ಥಿಕ ಸಮಿತಿ ಪರಿಶೀಲನೆಗೆ ಬಿಡಲಾಯಿತು.

"ಭಾರತ ರತ್ನ" ಪಂಡಿತ ಗೋವಿಂದ ವಲ್ಲಭಪಂತ್



ರಾಷ್ಟ್ರಾಧ್ಯಕ್ಷರಿಂದ 'ಭಾರತ ರತ್ನ' ಪ್ರಶಸ್ತಿ ಪಡೆದಿರುವ ಭಾರತ ಗೃಹ ಮಂತ್ರಿ

ಪಾಕಿಸ್ತಾನದಲ್ಲಿ ನಡೆದ ಪುಂಡುತನಕ್ಕಾಗಿ ಭಾರತದ ಪ್ರತಿಭಟನೆ

ಕರಾಚಿ, ಲಾಹೋರು ಮುಂತಾದ ಕಡೆಗಳಲ್ಲಿ ಪಾಕಿಸ್ತಾನಿಗಳು ನಡೆಸಿದ ಕಪ್ಪು ದಿನಾಚರಣೆ ಅಂಗವಾಗಿ ಜರುಗಿದ ಪುಂಡುತನಕ್ಕಾಗಿ ಪಾಕಿಸ್ತಾನಕ್ಕೆ, ಭಾರತ ಸರ್ಕಾರದವರು ಬಲವಾದ ಪ್ರತಿಭಟನೆಯನ್ನು ಸೂಚಿಸಿರುತ್ತಾರೆ. ಆಜಾದ್ ಕಾಶ್ಮೀರದಿಂದ ಪಾಕಿಸ್ತಾನಿ ಸೈನ್ಯಗಳು ಹೊರಕ್ಕೆ ಹೋಗಿ ಆ ಪ್ರದೇಶವನ್ನು ಕಾಶ್ಮೀರ ಸರ್ಕಾರಕ್ಕೆ ಒಪ್ಪಿಸಬೇಕೆಂದೂ ಭಾರತವು ಒತ್ತಾಯ ಮಾಡಲಿದೆ.

ಪಾಕಿಸ್ತಾನದವರ ವರ್ತನೆಯ ಪರಿಣಾಮವಾಗಿ, ಭಾರತ ಸರ್ಕಾರದವರು ತೆಗೆದುಕೊಳ್ಳಬಹುದಾದ ಜಾಗರೂಕತೆ ಕ್ರಮಗಳನ್ನು ವಿವರಿ, ಇಲ್ಲಿ ನಡೆಯಬಹುದಾದ ಪ್ರತೀಕಾರ ಕ್ರಮಗಳ ಬಗ್ಗೆ ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಎಚ್ಚರಿಕೆ ಇತ್ತಿರುವರೆಂದೂ ತಿಳಿದುಬಂದಿದೆ

ಕಾಂಗ್ರೆಸ್ಸಿನ ಇತರ ಪ್ರಮುಖ ಉಮೇದುವಾರರು

ಬೆಂಗಳೂರು ೨೮

ರಾಜ್ಯ ಸಭೆಯ ಸದಸ್ಯರಾದ ಶ್ರೀ ಹೆಚ್. ಸಿ ದಾಸಪ್ಪನವರು ಕಾಂಗ್ರೆಸ್ಸಿನ ಪರವಾಗಿ ಲೋಕಸಭೆಗೆ ಬೆಂಗಳೂರು ಜಿಲ್ಲಾ ಕ್ಷೇತ್ರದಿಂದ ಸ್ಪರ್ಧಿಸುವರು.

ವಿಧಾನ ಸಭೆಗೆ ಈ ನಗರದ ಬ್ರಾಡ್ವೆ ಕ್ಷೇತ್ರದಿಂದ ಮಾಜಿ ಮಂತ್ರಿ ಮಹಮೂದ್ ಷರೀಫ್ ಮಲ್ಲೇಶ್ವರ ಕ್ಷೇತ್ರದಿಂದ ಪೌರಸಭಾ ಆಲ್ಡರ್ ಮನ್, ಶ್ರೀ ಕೆ. ಎಸ್. ಕುಮಾರನ್ ಸ್ಪರ್ಧಿಸುತ್ತಾರೆ ತೀರ್ಥಹಳ್ಳಿಯಿಂದ ಶ್ರೀಮತಿ ಸಾವಿತ್ರಮ್ಮನವರ ಬದಲು ಶ್ರೀ ಎ ಆರ್ ಬದರೀನಾರಾಯಣ್. ಚಿಕ್ಕಮಗಳೂರಿನಿಂದ ಶ್ರೀಮತಿ ಪಾರ್ವತಮ್ಮನವರ ಬದಲು ಶ್ರೀ ಎಂ ಸುಬ್ಬೇಗೌಡರು ನಿಲ್ಲುವರು

ಚುನಾವಣೆಯಲ್ಲಿ ನಾಮಪತ್ರಗಳ ಅರ್ಪಣೆ

ಮೈಸೂರು ೨೮

ಮಹಾ ಚುನಾವಣೆಗಳ ಅಂಗವಾಗಿ ಕೆಳಗೆ ಕಂಡವರು ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದಾರೆ:—

ಮೈಸೂರು ಉತ್ತರದಿಂದ ಕಾಂಗ್ರೆಸ್ ಪರವಾಗಿ ವಕೀಲರಾದ ಶ್ರೀ ಅಹಮದ್ ಅಕ್ಲಖಾನ್, ಶ್ರೀ ಮಹಮದ್ ಖಲೀಲುಲ್ಲಾ ಮತ್ತು ಶ್ರೀ ಅವಿಸಾರ್ ಉದ್ದೀನ್ ಖುರೇಷಿಯವರು (ಕಾಂಗ್ರೆಸ್ ಪಕ್ಷ ತಪ್ಪಿ). ಇತರರು ಶ್ರೀಗಳಾದ ಎ ಮಹಮದ್ ಸೇಟ್ ಎ ರಾಮಣ್ಣ, ಎಚ್ ಎಸ್ ಮುದ್ದಯ್ಯ ಮತ್ತು ಬಿ ಸುಬ್ಬಣ್ಣ (ಸ್ವತಂತ್ರ) ಮತ್ತು ಬಿ. ಕೆ ಪುಟ್ಟಯ್ಯ ಪಿ ಎಸ್ ಪಿ ಎಂ ಎಸ್ ಉಗ್ರಪ್ಪ ಕಮ್ಯೂನಿಸ್ಟ್ ಶ್ರೀಗಳಾದ ಕೆಂಪೇಗೌಡ, ಎಂ ಮರಿಯಪ್ಪ, ಟಿ ವಿ ಕೆ ಮೂರ್ತಿ, ವಿಸಾರ್ ನೂರ್ ಹುಸೇನ್, ಪಿ ಸುಂದರಂ ಮತ್ತು ಎಂ ಎಸ್ ತಿಮ್ಮಯ್ಯ

ನಗರ-ದಕ್ಷಿಣ ಶ್ರೀ ಕೆ ಎಸ್ ಸೂರ್ಯನಾರಾಯಣ (ಕಾಂಗ್ರೆಸ್), ಶ್ರೀ ವೇದಾಂತ ಹೆಮ್ಮಿಗೆ ಪಿ ಎಸ್ ಪಿ ಶ್ರೀ ಶ್ರೀಕಂಠಶರ್ಮ (ಸಮಾಜವಾದಿ), ಎಲ್ ಶ್ರೀಕಂಠಯ್ಯ, ಬಿ ಕೆ. ವಿಶ್ವನಾಥ್, ಎಂ ಸಿ ಮಹದೇವಸ್ವಾಮಿ, ಎ ರಾಮಣ್ಣ, ಎಸ್ ಭೈರಪ್ಪ (ಸ್ವತಂತ್ರ) ಮತ್ತು ಬಿ.ಜಿ ದಾಸ್ (ಜನಸಂಘ); ಆರ್ ಸೀತಾರಾಮನ್, ಎಚ್ ಕೆ. ಕುಮಾರಸ್ವಾಮಿ

ತಾಲ್ಲೂಕು-ಶ್ರೀ ಕೆ ಪುಟ್ಟಸ್ವಾಮಿ ಮತ್ತು ಟಿ. ವೆಂಕಟರಮಣಯ್ಯ (ಕಾಂ ಮತ್ತು ಹಮ್ಮಿ), ಶ್ರೀ ಬಿ ಶ್ರೀಕಂಠಪ್ಪ (ಪಿ ಎಸ್. ಪಿ.); ಶ್ರೀ ಜೆ. ಬಿ. ಮಲ್ಲಾರಾಧ್ಯ, ಶ್ರೀ ಎಸ್. ಎಂ. ರಾಜಶೇಖರ್, ಎಸ್ ಗೋವಿಂದಪ್ಪ ಮತ್ತು ಟಿ. ಸಿ. ಪೊನ್ನಪ್ಪ (ಸ್ವತಂತ್ರ)

ಲೋಕಸಭೆಗೆ ಜಿಲ್ಲೆಯಿಂದ ಕಾಂಗ್ರೆಸ್ ಪರವಾಗಿ ಶ್ರೀ ಎಂ ಶಂಕರಯ್ಯ ಮತ್ತು ರಿಸರ್ವ್ ಸ್ಥಾನಕ್ಕೆ ಶ್ರೀ ಎಸ್ ಎಂ. ಸಿದ್ದಯ್ಯ, ಪಿ ಎಸ್. ಪಿ ಪರವಾಗಿ ಶ್ರೀ ಎಂ ಎಸ್. ಗುರುಪಾದಸ್ವಾಮಿ ಮತ್ತು ಡಾ॥ ಬೀಗಿರಿರಂಗಯ್ಯ ಮತ್ತು ಸ್ವತಂತ್ರರಾಗಿ ಶ್ರೀ ಎಂ. ಸಿ ಮಹದೇವಸ್ವಾಮಿ. ಹೆಚ್. ಕೆ. ಕುಮಾರಸ್ವಾಮಿ ಮತ್ತು ಕೆ. ಸಿದ್ದಯ್ಯನವರು ಸ್ಪರ್ಧಿಸುವರು

ವಿಧಾನ ಸಭೆಯ ೪೦ ಸ್ಥಾನಗಳಿಗೆ ಜನಸಂಘದ ಸ್ಪರ್ಧೆ

ಭಾರತೀಯ ಜನಸಂಘದವರು ಮೈಸೂರಿನ ವಿಧಾನ ಸಭೆಯ ೪೦ ಮತ್ತು ಲೋಕಸಭೆಯ ೬ ಸ್ಥಾನಗಳಿಗೆ ಸ್ಪರ್ಧಿಸಲು ನಿರ್ಧರಿಸಿರುತ್ತಾರೆ. ಮೈಸೂರು ಜಿಲ್ಲೆಯಿಂದ ೭ ಸ್ಥಾನಗಳಿಗೆ ಸ್ಪರ್ಧಿಸಲಾಗುವುದು ನಗರದ ದಕ್ಷಿಣ ಕ್ಷೇತ್ರದಿಂದ ಡಾ॥ ಬಿ. ಜಿ. ದಾಸ್, ಉತ್ತರದಿಂದ ಶ್ರೀ ಬಿ. ಸುಬ್ಬಣ್ಣ, ತಾಲ್ಲೂಕಿನಿಂದ ಶ್ರೀ ಟಿ ಗೋವಿಂದಪ್ಪ, ಕೊಳ್ಳೇಗಾಲ ಸಾಮಾನ್ಯ ಕ್ಷೇತ್ರದಿಂದ ಶ್ರೀ ಸೋಮಯ್ಯ —ಇವರು ಸ್ಪರ್ಧಿಸುವರು.

ನೂತನ ವಿದ್ಯಾಧಿಕಾರಿಗಳು

ಸರ್ಕಾರಿ ವಿಮಾ ಇಲಾಖಾ ಡೈರೆಕ್ಟರ್ ಶ್ರೀ ಬಿ. ಎಂ. ಕೃಷ್ಣ[illegible]ನ್ನು ಸಂಸ್ಥಾನದ ವಿದ್ಯಾಧಿಕಾರಿಗಳಾಗಿ ನೇಮಿಸಲಾಗಿದೆ

ಮದ್ರಾಸ್ ವಿಶ್ವವಿದ್ಯಾಲಯದ ಶತಮಾನೋತ್ಸವ

ಮೈಸೂರು ರಾಜ್ಯಪಾಲರ ಆರಂಭ ಭಾಷಣ

ಮದ್ರಾಸಿನ ವಿಶ್ವವಿದ್ಯಾಲಯದ ಶತಮಾನೋತ್ಸವ ಸಮಾರಂಭವನ್ನು ನೆನ್ನೆ ಮೈಸೂರಿನ ರಾಜ್ಯಪಾಲರು ಆರಂಭಗೊಳಿಸಿದರು. ೧೫,೦೦೦ ಜನ ವಿದ್ವಾಂಸರೂ, ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ರಾಜ್ಯಪಾಲರು ಭಾಷಣ ಮಾಡಿ ಭಾರತದ ವಿಶ್ವವಿದ್ಯಾಲಯಗಳು ಜಗತ್ತಿನ ಈಗಿನ ಪರಿಸ್ಥಿತಿಯನ್ನು ಅನುಲಕ್ಷಿಸಬೇಕೆಂದು ತಿಳಿಸಿದರು ದೈಹಿಕ ಮತ್ತು ಬೌದ್ಧಿಕ ಶಿಕ್ಷಣವಲ್ಲದೆ, ಉತ್ತಮ ನಾಗರಿಕರಾಗಲು ಸೂಕ್ತ ತರಪೇತನ್ನು ವಿಶ್ವವಿದ್ಯಾಲಯಗಳು ಕೊಡಬೇಕೆಂದೂ, ದೇಶಾಭಿಮಾನವನ್ನು ಬೆಳೆಸಬೇಕೆಂದೂ ಸೂಚಿಸಿದರು ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕ ಸಂಶೋಧನೆ ಮತ್ತು ಯಾಂತ್ರಿಕ ಬೆಳವಣಿಗೆಯಿಂದ ಜೀವನವು ಬಹಳ ಸೂಕ್ಷ್ಮವಾಗಿರುವುದೆಂದು ಅವರು ಹೇಳಿ, ವಿಜ್ಞಾನ ಜಗತ್ತಿನ ಶ್ರೇಯಸ್ಸಾಧನೆಗೆ ಮಾರ್ಗವಾಗಲೆಂದು ಹಾರೈಸಿದರು

ಕಾಶ್ಮೀರದ ವ್ಯವಹಾರದಲ್ಲಿ ಭದ್ರತಾ ಸಮಿತಿಗೆ ಅಧಿಕಾರ ವ್ಯಾಪ್ತಿ ಇಲ್ಲ

ರಾಜಾಜಿಯವರ ಹೇಳಿಕೆ

ಕಾಶ್ಮೀರ ವ್ಯವಹಾರಗಳಲ್ಲಿ ಪ್ರವೇಶಿಸಲು ವಿಶ್ವಸಂಸ್ಥೆಗೆ ವ್ಯಾಪ್ತಿಯೇ ಇಲ್ಲವೆಂದು ರಾಜಾಜಿಯವರು ತಿಳಿಸಿರುತ್ತಾರೆ ಕಾಶ್ಮೀರವು ಯಾರಿಗೂ ಸೇರದ "ಶೂನ್ಯ ಪ್ರದೇಶ"ವೆಂದು ಭಾವಿಸುವುದು ಸರಿಯಲ್ಲ, ಅದು ಅಲ್ಲಿನ ನಿವಾಸಿಗಳಿಗೆ ಸೇರಿದ್ದು; ಆ ಜನರು ಶಾಂತಿಯಿಂದ ತಮ್ಮ ಸರ್ಕಾರವನ್ನು ನಡೆಸಿಕೊಂಡುಬರುತ್ತಿರುವರು. ಅಲ್ಲಿನ ರಾಜ್ಯಾಂಗ ಸಭೆಯು ರಚಿಸಿರುವ ರಾಜ್ಯಾಂಗವನ್ನು ಕಾಗದದ ಚೂರೆಂದು ತಳ್ಳಲಾಗದು—ಎಂದು ಅವರು ಹೇಳಿರುತ್ತಾರೆ.

ಭದ್ರತಾ ಸಮಿತಿಯ ನಿರ್ಣಯದಿಂದ, ಬಹುಕಾಲದಿಂದಲೂ ಭಾರತದ ಪ್ರಧಾನಿಯನ್ನು ಅಲ್ಲಗಳೆಯಬೇಕೆಂಬ ಪಾಶ್ಚಿಮಾತ್ಯರ ಉದ್ದೇಶವು ಸಾಧನೆಯಾಗಿರುವುದೆಂದೂ, ಅಮೆರಿಕಾ ಮತ್ತು ಕಾಮನ್‌ವೆಲ್ತ್ ರಾಜ್ಯಗಳು ಸಮಯ ಸಾಧಿಸಿ, ಭಾರತದ ಮೇಲೆ ಪ್ರಹಾರ ಮಾಡಿರುವುವೆಂದೂ ಅವರು ತಿಳಿಸಿಯತ್ತಾರೆ

ವಸ್ತುಸ್ಥಿತಿಯನ್ನು ಗಮನಿಸಿ ಆ ಮೂಲಕ ಶಾಂತಿ ಸ್ಥಾಪನೆ ಮಾಡಲು ವಿಶ್ವಸಂಸ್ಥೆಯು ಇದೆಯೇ ಹೊರತು ಆಕ್ರಮಣಕ್ಕೆ ಉತ್ತೇಜನ ಕೊಡುವುದಕ್ಕಲ್ಲವೆಂದೂ ಅವರು ನುಡಿದಿರುವರು

ಅಲ್ಲದೆ ಇತ್ತೀಚಿನ ಪಾಶ್ಚಿಮಾತ್ಯರ ನೀತಿಯನ್ನು ನೋಡಿದರೆ ಇದರಲ್ಲೇನೂ ಆಶ್ಚರ್ಯವಿಲ್ಲವೆಂದು ಅವರು ಸೂಚಿಸಿರುವರು ಶಾಂತಿ ಪಾಲನೆಯ ಕರ್ತವ್ಯವನ್ನು ಬಿಟ್ಟು ರಾಜ್ಯಗಳ ಪ್ರಾದೇಶಿಕ ಸಾರ್ವಭೌಮತ್ವವನ್ನು ಗೊತ್ತುಪಡಿಸಲು ಭದ್ರತಾ ಸಮಿತಿಯು ತೊಡಗಿರುವುದನ್ನು ರಾಜಾಜಿಯವರು ಖಂಡಿಸಿರುತ್ತಾರೆ.

ಜಿಲ್ಲೆಗಳಲ್ಲಿ ಚುನಾವಣಾ ದಿನಗಳು

ಬೆಂಗಳೂರು ೨೮

ಸಂಸ್ಥಾನದ ವಿಧಾನ ಸಭೆ ಮತ್ತು ಲೋಕ ಸಭೆಗೆ ಸಂಸ್ಥಾನದಲ್ಲಿ ಬರುವ ತಿಂಗಳು ೨೫ರಿಂದ ಮಾರ್ಚಿ ೧೨ರ ವರೆಗೆ ಚುನಾವಣೆಗಳು ಬೆಳಿಗ್ಗೆ ೮ರಿಂದ ಮಧ್ಯಾಹ್ನ ೧ ಮತ್ತು ೨ ಗಂಟೆಯಿಂದ ಸಂಜೆ ೫ರ ವರೆಗೆ ನಡೆಯುವುವು. ಅದರ ಪ್ರಕಾರ ಕೆಳಗೆ ಕಂಡಂತೆ ದಿನಗಳನ್ನು ಗೊತ್ತುಪಡಿಸಲಾಗಿದೆ —

ಮೈಸೂರು ನಗರ, ಉತ್ತರ, ತಾಲ್ಲೂಕುಗಳಲ್ಲಿ ಮಾರ್ಚಿ ೧೨. ನಂಜನಗೂಡು ಬಲಿಗೆರೆ, ಫೆಬ್ರವರಿ ೨೫ ಚಾಮರಾಜನಗರ ಫೆ ೨೮. ಗುಂಡ್ಲುಪೆಟೆ ಮಾರ್ಚಿ ೬ ಹುಣಸೂರು ಮಾರ್ಚಿ ೮. ಕೃಷ್ಣರಾಜನಗರ ಮಾ ೧೦. ಪಿರಿಯಾಪಟ್ಟಣ ಮಾರ್ಚಿ ೬ ಟಿ ನರಸೀಪುರ ಮಾ ೪ ಕೊಳ್ಳೇಗಾಲ ಮಾ ೨ ಪಾಳ್ಯ ಮಾರ್ಚಿ ೪. ಮಂಡ್ಯ ಜಿಲ್ಲೆ ಮಂಡ್ಯ ಮಾರ್ಚಿ ೨ ಶ್ರೀರಂಗಪಟ್ಟಣ ೪ ಪಾಂಡವಪುರ ೬. ಮಳವಳ್ಳಿ ಫೆಬ್ರವರಿ ೨೫ ಮದ್ದೂರು ೨೮ ಮತ್ತು ನಾಗಮಂಗಲ ಮಾ ೧೦

ರಷ್ಯದಲ್ಲಿ ಅಣು ಶಕ್ತಿಯ ಮೊಟಾರು

ಅಣು ಶಕ್ತಿಯಿಂದ ಚಲಿಸಬಲ್ಲ ಮೊಟಾರುಗಳನ್ನು ತಯಾರಿಸಲು ಸಾಧ್ಯವೆಂದು ರಷ್ಯದ ಇಂಜನಿಯರೊಬ್ಬರು ಹೇಳಿರುತ್ತಾರೆ ಹಲವು ವರ್ಷಗಳಲ್ಲಿ ಅಂತಹ ಕಾರುಗಳನ್ನು ನಿರ್ಮಾಣ ಮಾಡಬಹುದೆಂದೂ ಅವರು ಹೇಳಿರುವರು

ಹಿಂದೀ ಸಾರ್ವಜನಿಕ ಪುಸ್ತಕಾಲಯ

ನಂಜನಗೂಡಿನ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಶಂಕರ ಟ್ಯುಟೋರಿಯಲ್ ಇನ್‌ಸ್ಟಿಟ್ಯೂಟ್ ಕಟ್ಟಡದಲ್ಲಿ ಕಳೆದ ಶನಿವಾರ ಹಿಂದೀ ಸಾರ್ವಜನಿಕ ಉಚಿತ ಪುಸ್ತಕಾಲಯದ ಆರಂಭೋತ್ಸವವನ್ನು ಪುರಸಭಾಧ್ಯಕ್ಷ ಶ್ರೀ ಕೆ. ವೆಂಕಟಸುಬ್ಬೈಯವರು ನೆರವೇರಿಸಿದರು ಪ್ರಾರ್ಥನೆಯಾದನಂತರ ಶ್ರೀ ಎಸ್ ಕೆ ವಿ ಆಚಾರ್ಯರು ಸ್ವಾಗತ ಬಯಸಿದರು ವ್ಯವಸ್ಥಾಪಕ ಶ್ರೀ ಹೆಚ್ ಕೆ ನಾಗರಾಜಾಚಾರ್ಯರು ವರದಿಯನ್ನೊಪ್ಪಿಸಿದನಂತರ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ಮಹಾರಾಜಾ ಕಾಲೇಜಿನ ಆಂಗ್ಲ ಭಾಷೆಯ ಅಧ್ಯಾಪಕರಾದ ಶ್ರೀ ಎಸ್. ಬಾಲಸುಬ್ರಹ್ಮಣ್ಯಂರವರು ಮಾತನಾಡಿ ಪುಸ್ತಕಾಲಯದಿಂದಾಗುವ ಪ್ರಯೋಜನವನ್ನು ವಿವರಿಸಿದರು ಶ್ರೀ ಎಸ್ ರಾಮಸ್ವಾಮಿಯವರಿಂದ ವಂದನಾರ್ಪಣೆಯಾಗಿ, ಮಂಗಳಾರತಿ ಮತ್ತು ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು

ಕಮ್ಯೂನಿಸ್ಟ್ ಉಮೇದುವಾರರು

ಕರ್ನಾಟಕ ಕಮ್ಯೂನಿಸ್ಟ್ ಪಕ್ಷದವರು ಲೋಕಸಭೆಗೆ ಬೆಂಗಳೂರಿನಿಂದ ಶ್ರೀ ಎ ಎಲ್ ಉಪಾಧ್ಯಾಯರನ್ನು ನಿಲ್ಲಿಸಿದ್ದಾರೆ ವಿಧಾನ ಸಭೆಗೆ ಕೋಲಾರದಲ್ಲಿ ೨, ಬೆಂಗಳೂರಿನಲ್ಲಿ ೫ ತುಮಕೂರಿನಲ್ಲಿ ೩ ಸ್ಥಾನಗಳಿಗೆ ಸ್ಪರ್ಧಿಸಲಾಗುವುದು ಇಡೀ ಕರ್ನಾಟಕದಲ್ಲಿ ೨೨ ಅಸೆಂಬ್ಲಿ ಸ್ಥಾನಗಳಿಗೂ, ಮಂಗಳೂರಿನಿಂದ ಲೋಕಸಭೆಗೂ ಸ್ಪರ್ಧಿಸಲಾಗುವುದು. ಕೆ ಎಸ್. ವಾಸನರವರಿಗೆ ಸ್ಥಾನ ಕೊಟ್ಟಿಲ್ಲ ರಾಜ್ಯಸಭೆಗೆ ಚುನಾಯಿತರಾಗಿದ್ದ ಬಿ ವಿ. ಕಕ್ಕಿಲಾಯರನ್ನು ವಿಧಾನ ಸಭೆಗೆ ನಿಲ್ಲಿಸಲಾಗಿದೆ

ಕ್ಯಾಡರ್ ಟೆನಿಸ್ ಕ್ಲಬ್

ನಗರದ ಕೃಷ್ಣಮೂರ್ತಿಪುರಂ ಕ್ಯಾಡರ್ ಟೆನಿಸ್ ಕ್ಲಬ್ಬಿನ ವಾರ್ಷಿಕ ಚುನಾವಣೆ ನಡೆದು ೧೯೫೭-೫೮ನೇ ಸಾಲಿಗೆ ಶ್ರೀ ಎ ಕೆ ಮಾಧವಂರವರು ಕಾರ್ಯದರ್ಶಿಯಾಗಿಯೂ, ಶ್ರೀ ಎ ಆರ್ ರಾಮಮೂರ್ತಿಯವರು ಟ್ರೆಷರರಾಗಿಯೂ ಮತ್ತು ಶ್ರೀ ಎನ್. ಶಂಕರ್‌ರವರು ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಚುನಾಯಿಸಲ್ಪಟ್ಟರು

ಮಾಧವರಾಯರಿಗೆ ದ್ವಿತೀಯ ಪ್ರಶಸ್ತಿ

ಚಾಮುಂಡಿಪುರದ ಯಂಗ್‌ಸ್ಟರ್ಸ್ ಬ್ಯಾಡ್ಮಿಂಟನ್ ಕ್ಲಬ್ಬಿನವರು ನಡೆಸಿದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಕೆ ಎಂ ಓ ಪಿ ಟಿ ಸಿ ಯ ಜಿ ಕೆ ಮಾಧವರಾಯರು ಅತ್ಯುತ್ತಮವಾಗಿ ಆಡಿ ವರ್ಷದ ತಮ್ಮ ದ್ವಿತೀಯ ಸಿಂಗಲ್ಸ್ ಪ್ರಶಸ್ತಿಯನ್ನು ಪಡೆದಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕೋತ್ಸವ

ಮೈಸೂರು ೨೮

ನೂರಡಿ ರಸ್ತೆಯಲ್ಲಿರುವ ಪುರಸಭಾ ವಿದ್ಯಾರ್ಥಿನಿಲಯದ ಎದುರು ಆವರಣದಲ್ಲಿ ಮೊನ್ನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕೋತ್ಸವವು ಆಚರಿಸಲ್ಪಟ್ಟಿತು ಸಂಘದ ಪ್ರಮುಖರಾದ ಶ್ರೀ ಯಾದವರಾವ್ ಜೋಷಿಯವರು ಭಾಷಣ ಮಾಡಿದರು ನಗರದ ವಕೀಲರಾದ ಶ್ರೀ ಎ ರಾಮರಾಯರು ಅಧ್ಯಕ್ಷತೆ ವಹಿಸಿದ್ದರು

ಸಂಸ್ಥೆಯ ಧ್ವಜಾರೋಹಣವಾದ ಮೇಲೆ ಪ್ರಾರ್ಥನೆ ಮತ್ತು ನಗರ ಶಾಖೆಯ ಸಂಚಾಲಕರಾದ ಶ್ರೀ ಟಿ ಎಸ್ ವಿಶ್ವನಾಥ್‌ರವರಿಂದ ಸ್ವಾಗತ ಭಾಷಣವಾದನಂತರ ಸ್ವಯಂಸೇವಕರಿಂದ ವಿವಿಧ ಪ್ರದರ್ಶನಗಳಾದುವು.

ಶ್ರೀ ಜೋಷಿಯವರು ಭಾಷಣ ಮಾಡಿ, ತಮ್ಮ ಸಂಸ್ಥೆಯು ಚುನಾವಣೆಗಳಿಗಾಗಿ ಜನ್ಮತಾಳಿದ್ದಲ್ಲವೆಂದೂ, ಸಮಾಜದಲ್ಲಿ ಸಂಕುಚಿತ ಭಾವನೆ ಮತ್ತು ದುಷ್ಪ್ರವೃತ್ತಿಗಳನ್ನು ತೊಡೆದುಹಾಕಿ ರಾಷ್ಟ್ರ ಕಲ್ಯಾಣಕ್ಕಾಗಿ ಶ್ರಮಿಸುವಂತಹುದೆಂದೂ ನುಡಿದು, ಜನರು ಅದಕ್ಕೆ ಬೆಂಬಲ ನೀಡಬೇಕೆಂದು ಕೋರಿದರು ದೇಶದ ಈ ಸಂದಿಗ್ಧ ಕಾಲದಲ್ಲಿ ವಿದ್ರೋಹ ಚಳುವಳಿಗಳನ್ನು ಪ್ರತಿಭಟಿಸಬೇಕೆಂದೂ ನುಡಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘಕ್ಕೆ ಜನರ ಬೆಂಬಲಕ್ಕಾಗಿ ಮನವಿ ಮಾಡಿಕೊಂಡರು ಶ್ರೀ ಶಿವಸ್ವಾಮಿಯವರಿಂದ ವಂದನಾರ್ಪಣೆಯಾಯಿತು

ಹಿಂದೀ ತರಗತಿಗಳ ಪ್ರಾರಂಭೋತ್ಸವ

ರಾಮಾನುಜಾ ರಸ್ತೆಯಲ್ಲಿರುವ ಶ್ರೀ ಚಾಮುಂಡಾಂಬಿಕಾ ವಿದ್ಯಾ ಸದನದಲ್ಲಿ ಹಿಂದೀ ತರಗತಿಗಳ ಪ್ರಾರಂಭೋತ್ಸವವನ್ನು ಮೈಸೂರು ಹಿಂದೀ ಸಾಹಿತ್ಯ ಸಮಿತಿಯ ಶ್ರೀ ಎ ಟಿ. ಶ್ರೀನಿವಾಸ ರಾಘವಾಚಾರ್ಯರು ಕಳೆದವಾರ ನೆರವೇರಿಸಿದರು ಇದೇ ಏಪ್ರಿಲ್ ಮಾಹೆಯಲ್ಲಿ ನಡೆಯುವ ಹಿಂದೀ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳಿಗೆ ಶಿಕ್ಷಣವನ್ನು ಕೊಡಲಾಗುತ್ತಿದೆ ಈಗ ತರಗತಿಗಳನ್ನು ಪ್ರಾತಃಕಾಲ ೮-೩೦ ರಿಂದ ನಡೆಸಲಾಗುತ್ತಿದೆ ಹೆಚ್ಚಿನ ವಿಚಾರಗಳನ್ನು ವ್ಯವಸ್ಥಾಪಕರಾದ ಶ್ರೀ ಎಂ. ಸಿ ಸುಬ್ಬಪ್ಪನವರಿಂದ ತಿಳಿಯಬಹುದು

ಚಾಮುಂಡಿಪುರದಲ್ಲಿ ಬೀದಿ ನಲ್ಲಿ ನೀರಿಲ್ಲದೆ ತೊಂದರೆ

ಚಾಮುಂಡಿಪುರದ ಶ್ರೀ ಶಂಕರನಾರಾಯಣ ಸ್ವಾಮಿ ದೇವಸ್ಥಾನದ ಸುತ್ತಮುತ್ತಲ ಜನರಿಗಾಗಿ ಆ ಪ್ರದೇಶದಲ್ಲಿ ನಲ್ಲಿಯನ್ನು ಹಾಕಿರುವುದು ಸರಿಯಷ್ಟೆ ಆದರೆ ಹಿಂದೆ ಬರುತ್ತಿದ್ದಂತೆ ಎರಡು ಸಾರಿ ನೀರು ಬರದೆ ಮಧ್ಯಾಹ್ನ ೧೨ರಿಂದ ೨ ಗಂಟೆವರೆಗೆ ಮಾತ್ರ ಬರುತ್ತಿರುವುದರಿಂದ ನೀರನ್ನು ಶೇಖರಿಸಿಟ್ಟುಕೊಳ್ಳಲು ಸಾಧ್ಯವಿಲ್ಲವಾಗಿದೆ ಆದ್ದರಿಂದ ಪ್ರತಿ ದಿನ ಎರಡಾವರ್ತಿಯಾದರೂ ಬರುವಂತೆ ಮಾಡಬೇಕೆಂದು ಮೊಹಲ್ಲಾ ನಿವಾಸಿಯೊಬ್ಬರು ಪತ್ರ ಬರೆದು ಕೋರಿರುತ್ತಾರೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮುತ್ತು						
ಕೊಯಮುತ್ತೂರು ಸಣ್ಣ	೨೮	೪	೦	೩೧	೧೪	೦
ದಪ್ಪ ಬೂದಿ	೨೬	೪	೦	೨೯	೧೪	೪
ಕಡ್ಲೆ	೨೪	೬	೦	೨೪	೧೪	೦
ಕೆಂಬೂತ	೨೪	೧೦	೦	೨೪	೧೨	೦
ರಾಗಿ	೨೬	೧೪	೦	೩೫	೧೨	೦
ಜೋಳ	೩೮	೨	೦			
ಕಡಲೆಕಾಯಿ	೧೬	೨	೦	೨೬	೪	೦
ಹುಚ್ಚೆಳ್ಳು	೪೦	೦	೦	೪೫	೪	೦
ಹೊಂಗೆಬೀಜ	೨೯	೦	೦	೨೮	೮	೦
ಹರಳುಬೀಜ	೪೬	೪	೦	೫೧	೪	೦
ಹುರುಳಿ	೨೫	೦	೦	೨೪	೧೨	೦
[illegible]	೪೬	೧೨	೦	೫೨	೦	೦
ಹಲಸಂದೆ	೩೮	೦	೬	೪೮	೦	೦
[illegible]	೪೦	೮	೦	೫೦	೦	೦
ಉದ್ದು	೫೮	೦	೦	೬೨	೨	೦
ತೊಗರಿ	೨೦	೧	೦			
ಅವರೆ	೪೬	೦	೦	೪೬	೮	೦
[illegible] ಬೀಜ	೨೬	೪	೦	೪೬	೪	೦
ಧನಿಯಾ	೨೪	೨	೦	೨೭	೬	೦
ಹುಣಸೇಹಣ್ಣು	೯	೦	೦	೮	೧೧	೦
ಸೀಗೆಕಾಯಿ	೮	೯	೦	೬	೯	೦
ಮೆಣಸಿನಕಾಯಿ	೧೨	೧೦	೦	೨೧	೧೪	೦

ರೈಲಿನ ಮೇಲ್ಭಾವಣಿ ಪ್ರಯಾಣಿಕರ ವಿಷಾದಾಂತ್ಯ

ಈಶಾನ್ಯ ರೈಲ್ವೆಯ ಬಡೌನಿ ಮತ್ತು ಕಟಿಹಾರ್‌ಗಳ ನಡುವೆ ಕಳೆದ ಮಂಗಳವಾರ ಹೋಗುತ್ತಿದ್ದ ರೈಲಿನ ಮೇಲ್ಭಾವಣಿ ಮೇಲೆ ಪ್ರಯಾಣ ಮಾಡುತ್ತಿದ್ದ ಐದು ಜನರು ಕೋಸಿ ನದಿಯ ಸೇತುವೆ ಉಕ್ಕಿನ ತೊಲೆಗಳು ಬಡಿದ ಪರಿಣಾಮವಾಗಿ ಕೆಳಗೆ ಉರುಳಿ ಮೃತಪಟ್ಟರೆಂದು ವರದಿಯಾಗಿದೆ ಮತ್ತೊಬ್ಬನು ರೈಲಿನ ಮೇಲೆ ಮಲಗಲಾಗಿ ಅವನಿಗೆ ಸ್ವಲ್ಪ ಗಾಯ ಮಾತ್ರ ಆಯಿತೆಂದು ಹೇಳಲಾಗಿದೆ

ಲಾಹೋರಿನಲ್ಲಿ ಬ್ಲಾಕ್ ಔಟ್ ಕ್ರಮ

ಲಾಹೋರಿನ ಮಧ್ಯ ಭಾಗದಲ್ಲಿರುವ ಅನಾರ್ಕಲಿ ಕ್ಷೇತ್ರದಲ್ಲಿ ಕಳೆದ ಶನಿವಾರ ವಿಮಾನ ಧಾಳಿ ಎಚ್ಚರಿಕೆ ಕ್ರಮದ ಅಂಗವಾಗಿ ಪೂರ್ಣವಾದ ಬ್ಲಾಕ್‌ಔಟನ್ನು ನಾಗರಿಕ ರಕ್ಷಣಾ ಇಲಾಖೆಯವರು ನಡೆಸಿದರು ಪಶ್ಚಿಮ ಪಾಕಿಸ್ತಾನದ ಇತರ ಕಡೆಗಳಲ್ಲೂ ಎಚ್ಚರಿಕೆ ಕ್ರಮಗಳು ನಡೆದುವೆಂದು ಹೇಳಲಾಗಿದೆ.

ದಕ್ಷಿಣ ಪ್ರದೇಶ ಮಂಡಲಕ್ಕೆ ಸಿ ನರಸಿಂಹಮೂರ್ತಿ ಕಾರ್ಯದರ್ಶಿ

ಸಂಸ್ಥಾನದ ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಸಿ ನರಸಿಂಹಮೂರ್ತಿಯವರನ್ನು ದಕ್ಷಿಣ ಪ್ರದೇಶ ಮಂಡಲಿಯ ಜಂಟಿ ಕಾರ್ಯದರ್ಶಿಯನ್ನಾಗಿ ಕೇಂದ್ರ ಸರ್ಕಾರದವರು ನೇಮಿಸಿರುತ್ತಾರೆ ಅವರು ೨ ವಾರಗಳಲ್ಲೇ ಹೊಸ ಹುದ್ದೆಯನ್ನು ಸ್ವೀಕರಿಸುವರು

ನಾಳೆ ಬೆಳಿಗ್ಗೆ ೧೧ ಗಂಟೆಗೆ ಮೌನ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ನೆನಪಿಗಾಗಿ ನಾಳೆ ಬೆಳಿಗ್ಗೆ ೧೧ ಗಂಟೆಗೆ ಎಲ್ಲಾ ಕಡೆಗಳಲ್ಲೂ ೨ ನಿಮಿಷ ಮೌನವನ್ನು ಆಚರಿಸಲಾಗುವುದು ವಾಹನ ಸಂಚಾರಗಳೂ ಬಂದಾಗುವುವು

ಪುರಂದರದಾಸರ ದಿನಾಚರಣೆ

ಶ್ರೀ ತ್ಯಾಗರಾಜ ಸಂಗೀತ ವಿದ್ವತ್ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಪುರಂದರದಾಸರ ದಿನಾಚರಣೆಯನ್ನು ಹೊಯ್ಸಳ ಕರ್ನಾಟಕ ವಿದ್ಯಾರ್ಥಿ ನಿಲಯದ ಆವರಣದಲ್ಲಿ ನೆರವೇರಿಸಲಾಗುವುದು

ಕ್ಯಾಲೆಂಡರ್ ಸ್ವೀಕಾರ

ನಗರದ ವಾಣಿವಿಲಾಸ ಮಾರ್ಕೆಟ್ಟಿನ ಜಿ ಆರ್ ವಿ ಕಾಫಿ ವರ್ಕ್ಸಿನವರು ಕಳುಹಿಸಿಕೊಟ್ಟಿರುವ ನವ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಕಾಂಡಿನಿ

ನಗರದಲ್ಲಿರುವ ಗುಂಡ್ಲುಪೇಟೆ ತಾಲ್ಲೂಕು ವಿದ್ಯಾರ್ಥಿ ಸಂಘದ ಪರವಾಗಿ ಸಂಪಾದಕರು ಶ್ರೀ ಎಸ್. ವಿಶ್ವನಾಥ್ ಮತ್ತು ಹೆಚ್, ಎಂ, ಶಿವಣ್ಣನವರು ಪ್ರಕಟಿಸಿರುವ ಮೇಲ್ಕಂಡ ಶಿರೋನಾಮೆಯ ಗ್ರಂಥವೊಂದನ್ನು ಸ್ವೀಕರಿಸಿದ್ದೇವೆ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನೂ, ಹಲವು ಪ್ರಾಸ್ತಾವಿಕ ವಿಚಾರಗಳ ಬಗ್ಗೆ ಲೇಖನಗಳನ್ನೂ ಗುಂಡ್ಲುಪೇಟೆ ತಾಲ್ಲೂಕು ವಿದ್ಯಾರ್ಥಿಗಳ ಪಟ್ಟಿ ಮತ್ತು ಇತರ ವಿವರಗಳನ್ನೂ ಅದರಲ್ಲಿ ಕೊಡಲಾಗಿದೆ. ಅದು ಸಂಘದ ವಾರ್ಷಿಕ ಸಂಚಿಕೆ.

ನೆಹರೂರವರಿಂದ ಬೆಂಗಳೂರಿನ ಹೊಸ ಪೋರ್ಸಿಲೇನ್ ಕಾರ್ಖಾನೆ ಆರಂಭೋತ್ಸವ

ಪ್ರಧಾನಿ ನೆಹರೂರವರು ಬರುವ ತಿಂಗಳು ೨೫ನೇ ತಾರೀಖು ಬೆಂಗಳೂರಿನಲ್ಲಿ ಹೈಟೆನ್ಷನ್ ಇನ್ಸುಲೇಟರ್ ಪೋರ್ಸಿಲೇನ್ ಕಾರ್ಖಾನೆಯ ಆರಂಭೋತ್ಸವವನ್ನು ನೆರವೇರಿಸುವರು

GLOBE TUTORIAL COLLEGE,
Sadvidya Patashala Build...
Revision Classes for students promoted
to S S. L. C. Classes
Time 9 to 10-30 A.M

Edited, Printed and Published by
A. R. Nagarajan at Sadhvi Press,
D. Subbiah Road, Mysore

ಪುರಂದರದಾಸರ ಪುಣ್ಯ ದಿನಾಚರಣೆ

ಮೈಸೂರು

ಸರಸ್ವತಿಪುರದಲ್ಲಿರುವ ಅಖಿಲ ಭಾರತ ಮ ಧ್ವ ಮಂಡಲಿ ವಿದ್ಯಾರ್ಥಿ ನಿಲಯದಲ್ಲಿ ಪುರಂ ರದಾಸರ ಪುಣ್ಯ ದಿನಾಚರಣೆಯ ಸಂಬಂಧ ಗಿ ನಾಳೆ ಸಂಜೆ ೬ ಘಂಟೆಗೆ ಶ್ರೀ ಸೋಸಲೆ ಕಟಸುಬ್ಬಾಚಾರ್ಯರಿಂದ ಪುರಂದರದಾಸರ ಹಿಮೆ ಎಂಬ ಹರಿಕಥೆಯು ನಡೆಯುವುದು ವರಿಗೂ ಸ್ವಾಗತವಿದೆ

ಕೃಷ್ಣಮೂರ್ತಿಪುರದ ೧೮೩ನೇ ನಂ ಮನೆಯಲ್ಲಿ ನಾಳೆ ಆರಾಧನೆಯು ನೆರವೇ ದು ಮಧ್ಯಾಹ್ನ ೩॥ ಗಂಟೆಗೆ ಶ್ರೀ ಆರ್. ಶೇಷಗಿರಿರಾಯರಿಂದ ಭಾಗವತ ಪುರಾಣ ನಾಳಿದ್ದು ಉತ್ತರಾರಾಧನೆಯೂ ನಡೆಯು

ಕಾಳಮ್ಮನಗುಡಿ ಬೀದಿ ಶ್ರೀ ಚೌಡೇಶ್ವರಿ ಮಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಸಂ ಗಂಟೆಗೆ ಭದ್ರಾವತಿಯ ಶ್ರೀ ವೆಂಕಟೇಶದಾ ದ ಪುರಂದರದಾಸರ ಚರಿತ್ರೆ ಹರಿಕಥೆಯು ಗುವುದು.

ಬೆಂಗಳೂರಿನಿಂದ ಲೋಕಸಭೆಗೆ ಹರೀ ನಾಥ ಚಟ್ಟೋಪಾಧ್ಯಾಯ

ಲೋಕಸಭೆಯ ಸದಸ್ಯರಾಗಿರುವ ಶ್ರೀ ಹ ದ್ರನಾಥ ಚಟ್ಟೋಪಾಧ್ಯಾಯರು ಪ್ರಜಾ ಜವಾದಿ ಪಕ್ಷದ ಪರವಾಗಿ ಬೆಂಗಳೂರು ಕ್ಷೇತ್ರದಿಂದ ಉಮೇದುವಾರರಾಗುವರು. ದಿವಂಗತ ಸರೋಜಿನಿ ನಾಯ್ಡುರವರ ಸಹೋ ರರು

ಪಾಕಿಸ್ತಾನದ ಪರವಾಗಿದ್ದ ಕಾಶ್ಮೀರಿಗಳು ಭಾರತದ ಕಡೆ

ಪಾಕಿಸ್ತಾನದ ಪರವಾಗಿದ್ದ ಕಾಶ್ಮೀರದ ಕೀಯ ಸಮ್ಮೇಳನದ ೬ ಮಂದಿ ಪ್ರಮು ತಮ್ಮ ಸಂಸ್ಥೆಗೆ ರಾಜೀನಾಮೆಯಿತ್ತು ಗುಲಾಂ ಮಹಮದ್‌ರವರ ರಾಷ್ಟ್ರೀಯ ಮ್ಮೇಳನಕ್ಕೆ ಸೇರಿರುತ್ತಾರೆ ಇತ್ತೀಚಿನ ಮಾನಗಳಿಂದ ಕಾಶ್ಮೀರಿಗಳ ಹಿತಸಾಧನೆ ಪಾಕಿಸ್ತಾನದವರಿಂದಾಗುವುದಿಲ್ಲವೆಂದು ಮನಗಂಡಿರುವುದಾಗಿ ಅವರು ಹೇಳಿರುತ್ತಾ

ಬೆಂಗಳೂರು ರೇಡಿಯೊ ನಾಳೆ ಕಾರ್ಯ

ಬೆಳಿಗ್ಗೆ ೬ ವೈಷ್ಣವ ಜನತೊ ಗೀತೆ. ೬- ಗಾಂಧಿ ಕಥಾವಳಿ ೭-೩೦ ಚಿಂತನ ಸತ್ಯ ಪಕ ೮-೧೫ ಭಕ್ತಿಮಾರ್ಗ-ಸಂಗೀತ ರೂ ಮಧ್ಯಾಹ್ನ ೧೨ ಎಂ ಆರ್ ಸುಬ್ಬರತ್ನ ಟೀಲು ೧೨-೩೦ ಗಾಂಧಿ ಗೀತಾವಳಿ ರಂದರದಾಸರ ಕೃತಿ ೧-೫೦ ಜ ಚನ್ನಮ್ಮ ಗೀತ ಸಂಜೆ ೫-೩೦ ಮತ್ತು ೮ ಎ. ಶ್ರೀ ಸ್ವರ-ನಾಗಸ್ವರ ೬-೫ ಕಾವ್ಯವಾಚನ ನಾವು ಮತ್ತು ನಮ್ಮವರು ೭-೩೦ ಸಹ ಯ ಪ್ರಸಂಗ ೮-೩೦ ದೆಹಲಿಯಿಂದ, ದಿವ್ಯವಾಣಿ-ರೂಪಕ ೧೦ ರಿಕಾರ್ಡ್ ಸ

ಸರ್ವೋದಯ ದಿನಾಚರಣೆ

ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಹಾಲಿನಲ್ಲಿ ಸರ್ವೋದಯ ದಿನಾಚರಣೆ ಅ ಗಿ ನಾಳೆ ಬೆಳಿಗ್ಗೆ ೮॥ ಗಂಟೆ ಮತ್ತು ಸಂ ಗಂಟೆಗೆ ಗೀತಾ ಪಾಠನ, ಸೂತ್ರ ಯಜ್ಞ ಪ್ರಾರ್ಥನಾ ಸಭೆಗಳು ಜರುಗುವುವು.

POSTERS
Any Language, Colour or size a
Hurry up Your Orders to
KHADRIA BOOK DEPOT
Ashoka Road, Mysore

SUMMER CLASSES
FOR H S. STUDENTS
Admissions are being rec
for the Special Classes to be
for 4 months during the Sum
Holidays for the benefit of
students of the High School
III year classes.
CITY TUTORIAL COLL
OLD AGRAHAR, MYSORE

ಟೆಲಿಫೋನ್ ನಂ. 792

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು : ಫೋನ್ 446

ಒಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೩] SADHVI : WEDNESDAY 30—1—1957 ಮೈಸೂರು : ಬುಧವಾರ ೩೦—೧—೧೯೫೭ : [ಸಂಚಿಕೆ : ೧೯೪

ಪಾಕಿಸ್ತಾನ ಮತ್ತು ದ. ಆಫ್ರಿಕದವರ ಪ್ರವೇಶಕ್ಕೆ ನಿರ್ಬಂಧ

ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕದವರ ಪ್ರವೇಶಕ್ಕೆ ಹತೋಟಿ

ರಾಷ್ಟ್ರಾಧ್ಯಕ್ಷರ ವಿಶೇಷಾಜ್ಞೆ

ಕಾಮನ್‌ವೆಲ್ತ್ ರಾಜ್ಯಗಳಿಂದ ಭಾರತಕ್ಕೆ ಬರುವ ಪ್ರೇಕ್ಷಕರ ಮೇಲೆ ಹತೋಟಿಯನ್ನಿಟ್ಟುಕೊಳ್ಳಲು ಸಾಧಕವಾಗುವಂತೆ ರಾಷ್ಟ್ರಾಧ್ಯಕ್ಷರು ವಿಶೇಷಾಜ್ಞೆಯೊಂದನ್ನು ಹೊರಡಿಸಿರುತ್ತಾರೆ ಬ್ರಿಟನ್, ಕೆನಡ, ಆಸ್ಟ್ರೇಲಿಯ, ಸಿಂಹಳ, ಐರ್ಲೆಂಡ್, ನ್ಯೂಜಿಲೆಂಡ್, ರೊಡೀಷಿಯಾ ಮತ್ತು ನ್ಯಾಸಾ ರಾಜ್ಯಗಳಿಂದ ಬರುವವರಿಗೆ ಈ ಆಜ್ಞೆಯಿಂದ ವಿನಾಯಿತಿ ಕೊಡಲಾಗಿದೆ ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕದಿಂದ ಬರುವವರಿಗೆ ವಿನಾಯಿತಿ ಕೊಟ್ಟಿಲ್ಲ ವಿಶೇಷಾಜ್ಞೆಯು ಈ ಕೂಡಲೆ ಜಾರಿಗೆ ಬರುವುದು

ಪಾಕಿಸ್ತಾನಿಗಳು ಭಾರತಕ್ಕೆ ಬಂದು ಗೊತ್ತಾದ ಅವಧಿಗಿಂತಲೂ ಹೆಚ್ಚು ಕಾಲ ಈ ದೇಶದಲ್ಲಿ ಗುತ್ತಿರುವರೆಂದೂ, ಅಂತಹವರನ್ನು ಸ್ವದೇಶ ವಾಪಸು ಕಳುಹಿಸಲು ಸರ್ಕಾರಕ್ಕೆ ಅಧಿಕಾರವೆಂದು ಕೋರ್ಟುಗಳು ತೀರ್ಮಾನವಿತ್ತಿರುವರಿಂದಲೂ, ಪಾಕಿಸ್ತಾನಿಗಳು ಇಲ್ಲಿ ಅನಪೇಕ್ಷಣೀಯ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವುದರಿಂದಲೂ ಮೇಲ್ಕಂಡ ಜರೂರು ಶಾಸನವನ್ನು ಮಾಡಲಾಗಿದೆಯೆಂದೂ ವರದಿಯಾಗಿದೆ

ಹಮದಾಬಾದಿನ ಮುಸ್ಲಿಮರ ರ್ಷಣೆಯಿಂದ ನಾಲ್ವರ ಮರಣ

ಅಹಮದಾಬಾದಿನಲ್ಲಿ ಮೊನ್ನೆ ರಾತ್ರಿ ಮುಸಲ್ಮಾನರ ಎರಡು ಗುಂಪುಗಳಿಗೆ ಬಲವಾದ ಘರ್ಷಣೆಯಾಗಿ ನಾಲ್ವರು ಮಡಿದು, ಇಬ್ಬರಿಗೆ ಗಾಯವಾಯಿತೆಂದು ವರದಿಯಾಗಿದೆ ಎರಡು ಪಕ್ಷಗಳಿಗೂ ಹಿಂದಿನಿಂದ ದ್ವೇಷವಿದ್ದಿತೆಂದೂ, ನಾಲ್ವರನ್ನು ಬಂಧಿಸಲಾಗಿದೆಯೆಂದೂ ಗೊತ್ತಾಗಿದೆ

ಪುರಂದರದಾಸರ ಪುಣ್ಯ ದಿನಾಚರಣೆ

ನಗರದ ಅಯ್ಯನಾರ್ ಕಲಾಶಾಲೆಯ ಆಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ಬಿಡಾರಂ ಕೃಷ್ಣಪ್ಪನವರ ಶ್ರೀರಾಮ ಮಂದಿರದಲ್ಲಿ ಪುರಂದರದಾಸರ ಪುಣ್ಯ ದಿನಾಚರಣೆಯನ್ನು ನೆರವೇರಿಸಲಾಗುವುದು ಶಾಲೆಯವರಿಂದ ದಾಸರ ಕೀರ್ತನೆಗಳಾಗುವುವು ಸರ್ವರಿಗೂ ಪ್ರವೇಶಾವಕಾಶವಿದೆ

ಎ ಕೆ ಗೋಪಾಲನ್ನರ ಭಾಷಣ

ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಪ್ರಚಾರವನ್ನು ಆರಂಭಗೊಳಿಸಿ ನಾಯಕರಾದ ಶ್ರೀ ಎ. ಗೋಪಾಲನ್ನರು ಬರುವ ೧ನೇ ತಾರೀಕು ಶುಕ್ರವಾರ ಸಂಜೆ ಆರೂವರೆ ಗಂಟೆಗೆ ಟೌನ್‌ಹಾಲಿನಲ್ಲಿ ಭಾಷಣ ಮಾಡುವರು ಶ್ರೀ ಎ. ಎಲ್ ಉಪಾಧ್ಯಾಯರು ಅಧ್ಯಕ್ಷತೆ ವಹಿಸುವರು.

ವೇದವಲ್ಲಿ ಮತ್ತು ರುಕ್ಮಿಣಿಯವರಿಗೆ ಕೇಂದ್ರ ವಿದ್ಯಾರ್ಥಿ ವೇತನ

ಸಾಂಸ್ಕೃತಿಕ ಚಟುವಟಿಕೆಗಳ ಸಂಬಂಧವಾಗಿ ಸರ್ಕಾರದ ಮಾಹೆಯಾನ ೨೫೦ ರೂ ವಿದ್ಯಾರ್ಥಿ ವೇತನವನ್ನು ಬೆಂಗಳೂರಿನ ಶ್ರೀ ಎ ಆರ್ ವೇದವಲ್ಲಿ (ಸಂಗೀತ) ಮತ್ತು ಶ್ರೀಮತಿ ಆರ್ ರುಕ್ಮಿಣಿ (ಪಿಟೀಲು) ಯವರಿಗೆ ಕೊಡಲಾಗಿದೆ

ವಿಧಾನ ಸಭೆಗೆ ಜಿಲ್ಲಾ ಉಮೇದುವಾರಿಕೆಗಳು

ಸ್ವಂ ಸು] ನಂಜನಗೂಡು ೩೦

ಸಂಸ್ಥಾನದ ವಿಧಾನ ಸಭೆಗೆ ಕೆಳಗೆ ಕಂಡವರು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.—

ನಂಜನಗೂಡು ಕ್ಷೇತ್ರ—ಶ್ರೀ ಬಿ ಎನ್ ಎಸ್ ಆರಾಧ್ಯ (ಪಿ ಎಸ್ ಪಿ), ಶ್ರೀ ಪಿ. ಮಹದೇವಯ್ಯ (ಕಾಂಗ್ರೆಸ್)

ಬಿಳಿಗೆರೆ—ಶ್ರೀಗಳಾದ ಜೆ ಸುಬ್ರಹ್ಮಣ್ಯ, ಎನ್ ರಾಜಯ್ಯ (ಕಾಂಗ್ರೆಸ್) ಹೆಜ್ಜಿಗೆ ಮಾದಪ್ಪ, ಡಿ ಎಂ ಸಿದ್ದಯ್ಯ, ಸಿ ದೇವಯ್ಯ, ಜಿ. ದೊರೆಸ್ವಾಮಿ ಜಿ ಚನ್ನಸ್ವಾಮಿ

ಗುಂಡ್ಲುಪೇಟೆ ಶ್ರೀಗಳಾದ ಹೆಚ್ ಕೆ ಶಿವರುದ್ರಪ್ಪ (ಕಾಂ), ಹೆಚ್. ಡಿ ಪುಟ್ಟಸ್ವಾಮಯ್ಯ ಮತ್ತು ಶ್ರೀಮತಿ ನಾಗರತ್ನಮ್ಮ (ಪಿ ಎಸ್ ಪಿ)

ಚಾಮರಾಜನಗರ (೨) ಶ್ರೀಗಳಾದ ವೆಂಕಟರಂಗನಾಯಕ (ಕಾಂ), ಯು ಎಂ ಮಾದಪ್ಪ (ಪಿ ಎಸ್ ಪಿ), ರೇವಣ್ಣ, ರಿಸರ್ವ್ ಬಿ ರಾಚಯ್ಯ (ಕಾಂಗ್ರೆಸ್), ಎಂ ಬಸವಯ್ಯ—ಪಿ ಎಸ್. ಪಿ

ಕೊಳ್ಳೇಗಾಲ (೨) ಟಿ ಪಿ ಬೋರಯ್ಯ (ಕಾಂಗ್ರೆಸ್), ರಿಸರ್ವ್ ಶ್ರೀಮತಿ ಕೆಂಪಮ್ಮ ಕಾಂಗ್ರೆಸ್, ಕೆ ಪಿ ಶಾಂತಮೂರ್ತಿ, ಜವಮ್ಮಯ್ಯ ಮತ್ತು ಸೋಮಯ್ಯ (ಜನಸಂಘ)

ಪಾಳ್ಯ—ವಿರೂಪಾಕ್ಷಯ್ಯ (ಕಾಂ)

ಇತರ ಕಡೆಗಳ ಉಮೇದುವಾರರು

ಪಿರಿಯಾಪಟ್ಟಣ—ಶ್ರೀ ಎನ್ ಆರ್ ಸೋಮಣ್ಣ (ಈಗ ಲೋಕಸಭಾ ಸದಸ್ಯರು ಕಾಂಗ್ರೆಸ್) ಎಂ. ಬಸಪ್ಪ, ಸಿ ಆರ್ ಅಣ್ಣಯ್ಯ, ಬಿ. ಸಿ. ನಾರಾಯಣಸ್ವಾಮಿ.

ಹುಣಸೂರು (೨)—ಶ್ರೀಗಳಾದ ಹೆಚ್ ಬಿ ಬಸಪ್ಪ, ಕೆ ಲಿಂಗಪ್ಪ, ಸಿ ಆರ್ ಅಣ್ಣಯ್ಯ, ಜಿ ಎ ತಿಮ್ಮಪ್ಪಯ್ಯ, ಹೆಚ್ ಬಿ ಚಲುವಯ್ಯ, (ರಿಸರ್ವ್), ಶ್ರೀಗಳಾದ ಎಸ್ ಕಂಠಯ್ಯ, ಆರ್ ಸೀರಣ್ಣ, ಶ್ರೀಮತಿ ಪುಟ್ಟಮ್ಮ, ಡಾ|| ಬಿ ವಿ ರಾಮರಾವ್ ಸಿಂಧೆ ಜನಸಂಘ

ಕೃಷ್ಣರಾಜನಗರ—ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ (ಕಾಂಗ್ರೆಸ್). ಸಿ ಎಲ್ ವೀರತ್ತಯ್ಯ (ಪಿ ಎಸ್. ಪಿ.), ಡಾ|| ಕೆ ಎಸ್ ಗೌಡಯ್ಯ [ಸ್ವ] ಮತ್ತು ಹೆಚ್ ಬಿ ಕೆಂಚೇಗೌಡ.

ಟಿ ನರಸೀಪುರ ಶ್ರೀಗಳಾದ ಕೆ ನಂಜುಂಡಯ್ಯ (ಸ್ವ), ಎಸ್ ಶ್ರೀನಿವಾಸಯ್ಯಂಗಾರ್ (ಪಿ ಎಸ್ ಪಿ) ರಾಜಶೇಖರಮೂರ್ತಿ (ಕಾಂ), ಮತ್ತು ಸೋಮಯ್ಯ, ಜನಸಂಘ

ಲೋಕ ಸಭೆಯ ಅತ್ಯಂತ ಭಾರಿ ಮತ್ತು ಚಿಕ್ಕ ಚುನಾವಣೆ ಕ್ಷೇತ್ರ

ಲೋಕ ಸಭೆಯ ಚುನಾವಣಾ ಕ್ಷೇತ್ರಗಳ ಪೈಕಿ ಮಂಗಳೂರು ಅತ್ಯಂತ ಭಾರಿಯಾದೂ, ಅಲ್ಮೋರಾವು ಅತ್ಯಂತ ಸಣ್ಣದೂ ಆಗಿವೆ. ಮಂಗಳೂರು ಕ್ಷೇತ್ರದಲ್ಲಿ [illegible] ಮತ್ತು ಅಲ್ಮೋರಾದಲ್ಲಿ [illegible]

ಇತರ ಕಡೆಗಳ ಉಮೇದುವಾರಿಕೆಗಳು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ವೆಂಕಟಪ್ಪನವರ ಸ್ಪರ್ಧೆ ಇಲ್ಲ

ಬೆಂಗಳೂರು ೩೦

ಸಂಸ್ಥಾನದ ವಿಧಾನ ಸಭೆಗೆ ಮೈಸೂರೇತರ ಜಿಲ್ಲೆಗಳಿಂದ ಸಲ್ಲಿಸಿರುವ ಉಮೇದುವಾರಿಕೆ ಪತ್ರಗಳು ಈ ರೀತಿ ಇವೆ—ಚನ್ನಪಟ್ಟಣ ಕ್ಷೇತ್ರದಿಂದ ಸ್ಪರ್ಧಿಸಬೇಕಾಗಿದ್ದ ನೂತನ ಮೈಸೂರಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ ವೆಂಕಟಪ್ಪನವರು ಉಮೇದುವಾರಿಕೆಯನ್ನು ಸಲ್ಲಿಸಿಲ್ಲ ಮಂಡ್ಯದಲ್ಲಿ ಪ್ರಾದೇಶಿಕ ಸಮಿತಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯ ಮತ್ತು ಪಿ ಎಸ್ ಪಿ ಉಮೇದುವಾರ ಶ್ರೀ ನಾಗಪ್ಪನವರಲ್ಲದೆ, ಹಾಲಿ ಸದಸ್ಯರಾಗಿರುವ ಶ್ರೀ ಜಿ ಎಸ್ ಬೊಮ್ಮೇಗೌಡರು ಸ್ವತಂತ್ರರಾಗಿ ನಿಂತಿರುವರು.

ಹೊಳೆನರಸೀಪುರದಿಂದ ಶ್ರೀ ಎ ಜಿ ರಾಮಚಂದ್ರರಾವ್, ಹರಿಹರದಿಂದ ಶ್ರೀ ಹೆಚ್ ಸಿದ್ದವೀರಪ್ಪ, ರಾಮನಗರದಿಂದ ಶ್ರೀ ಕೆ. ಹನುಮಂತಯ್ಯ, ದೊಡ್ಡ ಬಳ್ಳಾಪುರದಿಂದ ಶ್ರೀ ಟಿ ಸಿದ್ದಲಿಂಗಯ್ಯ ಶೃಂಗೇರಿಯಿಂದ ಶ್ರೀ ಕಡಿದಾಳ್ ಮಂಜಪ್ಪ, ಚನ್ನನ ಗಿರಿ ಕ್ಷೇತ್ರದಿಂದ ಮಾಜಿ ಸಚಿವ ಶ್ರೀ ಟಿ ಚನ್ನಯ್ಯ ಮುಂತಾದವರು ಸ್ಪರ್ಧಿಸಿದ್ದಾರೆ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಉಮೇದುವಾರಿಕೆ

ಮೊಳಕಾಲ್ಮೂರು ಕ್ಷೇತ್ರದಿಂದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಪರವಾಗಿಯೂ, ಶ್ರೀ ಜಿ ವಿ ಅಂಜನಪ್ಪನವರು ಪಿ ಎಸ್ ಪಿ ಪರವಾಗಿಯೂ ಸ್ಪರ್ಧಿಸಿರುವರು.

ಕಾಶ್ಮೀರದ ಬಗ್ಗೆ ಪಾಕಿಸ್ತಾನದೊಡನೆ ನೇರ ಸಂಭಾಷಣೆ ಇಲ್ಲ

ಭಾರತ ಸರ್ಕಾರದ ನಿಲುವು

ಕಾಶ್ಮೀರ ವಿವಾದದ ವಿಷಯವಾಗಿ ಭಾರತ ಸರ್ಕಾರದವರು ಪಾಕಿಸ್ತಾನದೊಡನೆ ನೇರ ಸಂಧಾನ ನಡೆಸುವುದಿಲ್ಲವೆಂದು ಗೊತ್ತಾಗಿದೆ ವಿಶ್ವಸಂಸ್ಥೆಯ ಮಧ್ಯಸ್ಥಿಕೆಗಾರರಾದ ಡಾ|| ಗ್ರಹಾಂರವರು ನಡೆಸಿದ ಮಾತುಕತೆಗಳು ನಿಂತಾಗಿನಿಂದ ಮುಂದಕ್ಕೆ ಪಾಕಿಸ್ತಾನವು ಸಂಧಾನವನ್ನು ಮುಂದುವರಿಸವುದೆಂದು ಕರಾಚಿಯ ಸುದ್ದಿಯು ತಿಳಿಸಿದ್ದುದರ ಬಗ್ಗೆ ಭಾರತ ಸರ್ಕಾರದ ನಿಲುವೇನೆಂಬುದನ್ನು ವ್ಯಕ್ತಪಡಿಸಲಾಗಿದೆ

ಹಗಲುಗಳ್ಳನಿಗೆ ಒಂದು ವರ್ಷ ಕಠಿಣ ಸಜಾ

ಇದೇ ತಿಂಗಳು ೫ನೇ ತಾರೀಕು ನಗರದ ಚಾಮುಂಡಿಪುರದಲ್ಲಿ ಹಗಲು ಕಳ್ಳತನದಲ್ಲಿ ನಿರತನಾಗಿದ್ದ ರಾಮ ಅಲಿಯಾಸ್ ರಾಮಯ್ಯ ಅಲಿಯಾಸ್ ರಾಮಮೂರ್ತಿ ಎಂಬುವವನನ್ನು ಕೃಷ್ಣರಾಜ ಪೊಲೀಸರು ಬಂಧಿಸಿ ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರ ನ್ಯಾಯಾಧೀಶರು ಅಪರಾಧಿಗೆ ಒಂದು ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ ಅವನಿಗೆ ಹಿಂದೆ ೧೨ ಬಾರಿ ಶಿಕ್ಷೆಯಾಗಿತ್ತೆಂದು ಹೇಳಲಾಗಿದೆ

ಕಾಶ್ಮೀರ ಪ್ರಶ್ನೆ ಬಗ್ಗೆ ಭದ್ರತಾ ಸಮಿತಿಯ ಪಕ್ಷಪಾತ

ಬಕ್ಷಿ ಗುಲಾಂ ಮಹಮದ್ದರ ಟೀಕೆ

ಕಾಶ್ಮೀರದ ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರು ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಬಗ್ಗೆ ಆದ ನಿರ್ಣಯವನ್ನು ಪ್ರಸ್ತಾಪಿಸಿ, ಸಮಿತಿಯ ಸದಸ್ಯರು ಪಕ್ಷಪಾತ ಮಾಡಿರುತ್ತಾರೆಂದೂ, ಕಾಶ್ಮೀರದ ಮೇಲೆ ಪಾಕಿಸ್ತಾನವು ಆಕ್ರಮಣ ನಡೆಸಿ, ಅದರ ಭಾಗವನ್ನು ಹಿಡಿದುಕೊಂಡಿರುವುದೆಂದೂ ಹೇಳಿರುತ್ತಾರೆ. ಕಾಶ್ಮೀರ ರಾಜ್ಯಾಂಗ ಸಭೆಯು ರಚಿಸಿರುವ ರಾಜ್ಯಾಂಗದ ಆಧಾರದ ಮೇಲೆ ಬರುವ ಚುನಾವಣೆಗಳಲ್ಲಿ ನಮ್ಮ ಪಕ್ಷವು ಸ್ಪರ್ಧಿಸಿ, ಕಾಶ್ಮೀರವು ಭಾರತದಲ್ಲಿ ವಿಲೀನವಾಗಿರುವುದಕ್ಕೆ ಜನ ಬೆಂಬಲವಿರುವುದನ್ನು ಜಗತ್ತಿಗೆ ತೋರಿಸುವುದಾಗಿಯೂ ಅವರು ಹೇಳಿರುವರು

ಭಾರತದ ಪರ ಗೂಢಚರ್ಯೆಗಾಗಿ ಪಾಕ್ ಅಧಿಕಾರಿಗೆ ಸಜಾ

ಪಾಕಿಸ್ತಾನದ ಮಿಲಿಟರಿ ರಹಸ್ಯಗಳನ್ನು ಭಾರತಕ್ಕೆ ಒಪ್ಪಿಸಿದರೆಂಬ ಕಾರಣಕ್ಕಾಗಿ ಪಾಕಿಸ್ತಾನ ವಿಮಾನ ಬಲದ ಮಾಜಿ ಅಧಿಕಾರಿ ಮಿರ್ಜಾ ಶಾಮಿಯುಲ್ಲಾ ಬೇಗರಿಗೆ ೧೪ ವರ್ಷ ಕಠಿಣ ಸಜಾ ವಿಧಿಸಲಾಗಿದೆ

ಮದ್ರಾಸಿನಲ್ಲಿ ಟೆಲಿವಿಷನ್ ಪ್ರದರ್ಶನ

ಮದ್ರಾಸಿನ ವಿಶ್ವವಿದ್ಯಾಲಯದ ಶತಮಾನೋತ್ಸವದ ಅಂಗವಾಗಿ ಮೊನ್ನೆ ಅಲ್ಲಿನ ನಿವಾಸಿಗಳಿಗೆ ಟೆಲಿವಿಷನನ್ನು ಪ್ರದರ್ಶಿಸಲಾಯಿತು ಟೆಲಿವಿಷನ್ ಸ್ಟುಡಿಯೊವನ್ನು ಸ್ಥಾಪಿಸಿ, ಜನರು ವಿದ್ಯಾರ್ಥಿಗಳ ಭರತನಾಟ್ಯ ಮತ್ತು ಜಾನಪದ ನೃತ್ಯವನ್ನು ವೀಕ್ಷಿಸಲು ಅನುಕೂಲಪಡಿಸಲಾಗಿದ್ದಿತು.

೫ ಸ್ಥಾನಗಳಿಗೆ ೫೦ ಮಂದಿ ಸ್ಪರ್ಧೆ

ದೆಹಲಿಯಿಂದ ಲೋಕಸಭೆಗೆ ಇರುವ ಐದು ಕ್ಷೇತ್ರಗಳಿಂದ ೫೦ ಮಂದಿ ಸ್ಪರ್ಧಿಸಿರುತ್ತಾರೆ.

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಚುನಾವಣೆ ಸಂಬಂಧವಾಗಿ ನಾಳಿದ್ದು ಸಂಜೆ ೬ ಗಂಟೆಗೆ ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮತ್ತು ಅಭಿಮಾನಿಗಳ ಸಭೆಯೊಂದನ್ನು ಕರೆಯಲಾಗಿದೆ

ಅರಮನೆ ನೌಕರರ ಸಭೆ

ಅರಮನೆ ನೌಕರರ ಸಂಘದ ಸಭೆಯು ಈ ಸಂಜೆ ೫|| ಗಂಟೆಗೆ ಸಹಕಾರ ಭವನದಲ್ಲಿ ಸೇರುವುದು ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಶ್ರೀ ಕೆ. ಆರ್ ಕಾರಂತರು ಭಾಷಣ ಮಾಡುವರು.

೨ ಸಾವಿರ ರೂ. ಬೆಲೆಯ ಹುಲ್ಲು ಮೆದೆಗೆ ಬೆಂಕಿ

ನಂಜನಗೂಡು ತಾಲ್ಲೂಕು ಕಸಬಾ ಹೋಬಳಿ ಮುಳ್ಳೂರು ಗ್ರಾಮದಲ್ಲಿ ಮಾಜಿ ಪಟೇಲರಾದ ಶ್ರೀ ಸಿದ್ದಪ್ಪನವರ ಸುಮಾರು ೨,೦೦೦ ರೂ ಬೆಲೆಯ ೨ ಹುಲ್ಲಿನ ಮೆದೆಗಳಿಗೆ ಮೊನ್ನೆ ಬೆಂಕಿ ಬಿದ್ದು ನಾಶವಾಗಿವೆ. ಅದಕ್ಕೆ ಯಾರು ಕಾರಣರೆಂಬುದು ಗೊತ್ತಿಲ್ಲ.

ನಗರದ ವೆಸ್ಲಿ ಮುದ್ರಣಾಲಯದ ನೌಕರರ ವಿವಾದ

ಕೈಗಾರಿಕಾ ನ್ಯಾಯ ಮಂಡಲದ ತೀರ್ಪು

ಮೈಸೂರು ೨೯

ಸಂಸ್ಥಾನದ ಕೈಗಾರಿಕಾ ನ್ಯಾಯ ಮಂಡಲದವರು ನಗರದ ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸಿನ ಅಧಿಕಾರವರ್ಗ ಮತ್ತು ನೌಕರರ ನಡುವೆ ಇದ್ದ ವಿವಾದದಲ್ಲಿ ತೀರ್ಪನ್ನು ಕೊಟ್ಟು, ಕಾರ್ಮಿಕರ ಐದು ಬೇಡಿಕೆಗಳನ್ನು ವಿಮರ್ಶಿಸಿದ್ದಾರೆ

ನೌಕರರ ಸಂಬಳವನ್ನು ಗ್ರೇಡ ವಾರು ಗೊತ್ತುಪಡಿಸುವುದು, ತುಟ್ಟಿಭತ್ಯವನ್ನು ತಲಾ ೩೫ ರೂ. ನಂತೆ ಕೊಡುವುದು, ಗ್ರಾಚ್ಯುಯಿಟಿಯನ್ನು ಏರ್ಪಡಿಸುವುದು, ೧೯೫೫-೫೬ಕ್ಕೆ ೩ ತಿಂಗಳ ಬೋನಸ್ಸನ್ನು ಕೊಡುವುದು ಮತ್ತು ತರಪೇತು ಕೊಡುವ ಅವಧಿಯನ್ನು ೪ರಿಂದ ೨ ವರ್ಷಕ್ಕೆ ಇಳಿಸಿ ಪೂರಾ ಸಂಬಳವನ್ನು ಕೊಡುವುದು—ಈ ಐದು ಬೇಡಿಕೆಗಳನ್ನು ಮಂಡಿಸಲಾಗಿತ್ತು

ನ್ಯಾಯ ಮಂಡಲದವರು ತಮ್ಮ ತೀರ್ಪಿನಲ್ಲಿ ಗ್ರಾಚ್ಯುಯಿಟಿ ಮತ್ತು ತರಪೇತು ಅವಧಿ ವಿಚಾರದ ಬೇಡಿಕೆಗಳನ್ನು ತಳ್ಳಿಹಾಕಿದ್ದಾರೆ ಸಂಬಳಗಳನ್ನು ಗ್ರೇಡುವಾರಿ ಗೊತ್ತುಪಡಿಸಿರುತ್ತಾರೆ ತುಟ್ಟಿಭತ್ಯವನ್ನು ಸರ್ಕಾರಿ ಮುದ್ರಣಾಲಯದಲ್ಲಿರುವ ದರದಂತೆ ಕೊಡಬೇಕೆಂದು ಸೂಚಿಸಿದ್ದಾರೆ ೧೯೫೫-೫೬ರ ಬೋನಸ್ಸಿನಲ್ಲಿ ಈಗಾಗಲೇ ಪಡೆದಿರುವ ಬೋನಸ್ಸಿನ ಜೊತೆಗೆ ನೌಕರರ ಸಂಬಳದ ಮೂರನೇ ಒಂದು ಭಾಗವನ್ನು ಹೆಚ್ಚಾಗಿ ಕೊಡುವಂತೆ ತೀರ್ಪಿತ್ತಿದ್ದಾರೆ

ಅಂತರ ಕಾಲೇಜು ಕನ್ನಡ ಚರ್ಚೆ

ನಗರದ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಅಂತರ ಕಾಲೇಜು ಕನ್ನಡ ಚರ್ಚೆಯು ನಾಳೆ ಸಂಜೆ ೫॥ ಗಂಟೆಗೆ ಶಾರದಾವಿಲಾಸ ಕಾಲೇಜಿನಲ್ಲಿ ನಡೆಯುವುದು. ಪಶ್ಚಿಮ ಏಷ್ಯದಲ್ಲಿ ಅಮೇರಿಕನರ ಪ್ರವೇಶವು ಅನುಚಿತ ಎಂಬುದು ಚರ್ಚಾ ವಿಷಯ ಕ್ಲಬ್ಬಿನ ಅಧ್ಯಕ್ಷ ಶ್ರೀ ಎಸ್ ಕೆ ಏಕಾಂಬರಂರವರು ಅಗ್ರಾಸನವನ್ನು ವಹಿಸುವರು

ಗೀತೆಗಳ ಗಾಯನ ಸ್ಪರ್ಧೆ

ನಗರದ ಮಹಿಳಾ ಸಂಘದ ಆಶ್ರಯದಲ್ಲಿ ಕಳೆದ ೧೯ನೇ ತಾರೀಖು ನಡೆದ ಗೀತೆಗಳ ಗಾಯನ ಸ್ಪರ್ಧೆಯಲ್ಲಿ ವನಿತಾ ಸದನಕ್ಕೆ ಪರ್ಯಾಯ ಪಾರಿತೋಷಕವು ಬಂದಿದೆ ವನಿತಾ ಸದನದ ಶ್ರೀಮತಿ ಸಿ ಎಸ್ ಕೇಶವಮ್ಮ ಮತ್ತು ಕೆ ಎಸ್. ಕೃಷ್ಣಕುಮಾರಿಯವರಿಗೆ ಪ್ರಥಮ ಮತ್ತು ತೃತೀಯ, ಅಕ್ಕನ ಬಳಗದ ಶ್ರೀಮತಿ ಕಮಲಮ್ಮನವರಿಗೆ ದ್ವಿತೀಯ ಬಹುಮಾನಗಳು ಬಂದಿವೆ ಮಹಿಳಾ ಸದನದ ಶ್ರೀಮತಿ ಜಿ ವಿ. ಕಮಲ ಮತ್ತು ಭಾರತೀ ಸ್ತ್ರೀ ಸಮಾಜದ ಶ್ರೀ ಎ ವಿ ರಾಜೇಶ್ವರಿಯವರಿಗೆ ವಿಶೇಷ ಬಹುಮಾನಗಳು ಬಂದಿವೆ

ಗಮಕ ತರಗತಿಗಳು

ಮಹಾರಾಣಿ ಮಹಿಳಾ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ "ಶ್ರೀ ವಾಲ್ಮೀಕಿ ಗಮಕ ಪಾಠಶಾಲೆ" ಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಲಪೇಕ್ಷಿಸುವ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಪಾಠ ಪ್ರವಚನಗಳು ಫೆಬ್ರವರಿ ೧ನೇ ತಾರೀಖು ಶುಕ್ರವಾರದಿಂದ ನಡೆಸಲ್ಪಡುವುವು ಆಸಕ್ತಿಯುಳ್ಳವರು ಪ್ರತಿದಿನ ಸಾಯಂಕಾಲ ೬ ಗಂಟೆಯಿಂದ ೭ ಗಂಟೆಯ ವರೆಗೆ ಬಂದು ಶಾಲಾ ವ್ಯವಸ್ಥಾಪಕ ಶ್ರೀ ಬಿ ಎಸ್ ಎಸ್ ಕೌಶಿಕ್‌ರವರಿಂದ ಹೆಚ್ಚಿನ ವಿಷಯಗಳನ್ನು ತಿಳಿಯಬಹುದು

SRI GAYATHRI
TALKIES
From 30 1-57 For 2 days
M G M s
GABY
(Cinemascope & Technicolor)
With – Leslie Caron, John Kerr

Edited Printed and Published by A. R. Nagarajan at Sadhvi Press, [illegible] Road, Mysore

ರಿಪಬ್ಲಿಕ್ ದಿನೋತ್ಸವ

ನಗರದ ಅಶೋಕಪುರದ ಮಹಾತ್ಮಾ ಗಾಂಧಿ ಉಚಿತ ವಾಚನಾಲಯದಲ್ಲಿ ರಿಪಬ್ಲಿಕ್ ದಿನೋತ್ಸವವನ್ನು ಕಳೆದ ಶನಿವಾರ ನೆರವೇರಿಸಲಾಯಿತು ಪೌರಸಭಾ ಉಪಾಧ್ಯಕ್ಷ ಶ್ರೀ ಜಿ ಎಸ್ ರಾಮಕೃಷ್ಣಯ್ಯನವರು ಅಧ್ಯಕ್ಷತೆ ವಹಿಸಿದ್ದರು [illegible] ಶ್ರೀ ಆರ್ ಸಿದ್ದಯ್ಯನವರು ಧ್ವಜಾರೋಹಣ ಮಾಡಿದರು ಶ್ರೀ ಎಂ ರುದ್ರಯ್ಯನವರಿಂದ ಸ್ವಾಗತ, ಯುವಜನ ಸಂಘದ ಅಧ್ಯಕ್ಷ ಶ್ರೀ ಎಲ್ ಮರಿಜೋಗಯ್ಯ ಮತ್ತು ಅಧ್ಯಕ್ಷರಿಂದ ಭಾಷಣಗಳಾದುವು ಶ್ರೀ ಎಸ್ ಮರಿಯಪ್ಪನವರು ವಂದನಾರ್ಪಣೆ ಮಾಡಿದರು

ಕೃಷ್ಣರಾಜೇಂದ್ರ ಆಸ್ಪತ್ರೆಯ ಎರಡನೇ ತರಗತಿ ವಿಶೇಷ ವಾರ್ಡಿನಲ್ಲಿರುವ ರೋಗಿಗಳು ಕಳೆದ ೨೬ನೇ ತಾರೀಖು ದಿನೋತ್ಸವವನ್ನು ನೆರವೇರಿಸಿದರು ಡಾ॥ ಗೋಪಾಲರಾಜುರವರು ಧ್ವಜಾರೋಹಣ ಮಾಡಿದರು ಶ್ರೀ ಎಂ ಆರ್ ಶೇಷಗಿರಿರಾಯರಿಂದ ಸ್ವಾಗತ ಮತ್ತು ಸೊರಬದ ಶ್ರೀ ಜಿ ಕೆ ನಾಡಿಗೇರ್‌ರವರಿಂದ ಭಾಷಣಗಳಾದುವು ಹಣ್ಣುಹಂಪಲುಗಳನ್ನು ಹಂಚಲಾಯಿತು

ನಂಜನಗೂಡು ತಾಲ್ಲೂಕು ಕೂಡಲಾಪುರದ ಸಮಾಜ ಯೋಗಕ್ಷೇಮ ಸಮಿತಿಯ ಆಶ್ರಯದಲ್ಲಿ ಉತ್ಸವವು ಪಂಚಾಯಿತಿ ಅಧ್ಯಕ್ಷ ಶ್ರೀ ಕೆ ಚನ್ನಬಸಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು

ಗೃಹಕೃತ್ಯದ ನೋಟೀಸು

ನನ್ನ ಕಕ್ಷಿಗಾರರಾದ ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಸರ್ವಮಾನ್ಯ ಹೊಸಕೋಟೆ ಗ್ರಾಮದಲ್ಲಿರುವ ಕರ್ಣನಾಯಕ ಉರುಫ್ ಚಿಕ್ಕಮಾದನಾಯಕರವರ ಮಕ್ಕಳು ಮಹದೇವು, ಚಿಕ್ಕಮಾದ, ಮೈನರ್ ಸಬೂಬು ಹಿತಚಿಂತಕ ತಾಯಿ ಪುಟ್ಟಸಿದ್ದಮ್ಮ ಉರುಫ್ ಸಣ್ಣಮ್ಮನವರ ಇರಾದೆ ಮೇರೆ ಈ ಮೂಲಕ ಸಮಸ್ತ ಜನರಿಗೂ ತಿಳಿಸುವುದೇನೆಂದರೆ :—

ಷೆಡ್ಯೂಲ್ ಸ್ವತ್ತುಗಳೆಲ್ಲವೂ ನಮ್ಮ ಕಕ್ಷಿಗಾರರಾದ ಮೇಲ್ಕಂಡ ಮೈನರ್ ಮಹದೇವು ಮತ್ತು ಚಿಕ್ಕಮಾದ ಇವರುಗಳ ಪಿತ್ರಾರ್ಜಿತವಾದ ಒಟ್ಟು ಕುಟುಂಬದ ಸ್ವತ್ತುಗಳಾಗಿ ನಮ್ಮ ಕಕ್ಷಿಗಾರರುಗಳಿಗೆ ಸದರಿ ಸ್ವತ್ತಿನಲ್ಲಿ 2 3 ಹಿಸ್ಸೆಯೂ ಇವರ ತಾಯಿ ಮೇಲ್ಕಂಡ ಪುಟ್ಟಸಿದ್ದಮ್ಮ ಉರುಫ್ ಸಣ್ಣಮ್ಮನವರಿಗೆ ಜೀವನಾಂಶದ ಹಕ್ಕೂ ಇರುತ್ತದೆ. ಷೆಡ್ಯೂಲ್ ಸ್ವತ್ತುಗಳನ್ನು ಮೈನರ್ ಮಕ್ಕಳ ಮತ್ತು ಇವರ ತಾಯಿಯ ಹಿತಚಿಂತನೆ, ಪೋಷಣೆಗೆ ಗಮನ ಕೊಡದೆ, ತನ್ನ ಸ್ವಂತ ದುರ್ವ್ಯಾಪಾರ ಮತ್ತು ದುಂದು ಖರ್ಚಿಗಾಗಿ ಕರ್ಣನಾಯಕ ಉರುಫ್ ಚಿಕ್ಕಮಾದನಾಯಕರವರು, ಇತರರ ದುರ್ಬೋಧನೆಗೆ ಒಳಗಾಗಿ ಮೈನರ್ ಮಕ್ಕಳಿಗೂ ಮೋಸ ಮಾಡಲು, ಪರಭಾರೆ ಮಾಡಲು ಉದ್ಯುಕ್ತರಾಗಿರುತ್ತಾರೆಂದು ತಿಳಿದುಬಂದಿರುವುದರಿಂದಲೂ, ಕುಟುಂಬದ ಅವಶ್ಯಕತೆಗೂ, ಬರದಿಗೂ ಅಲ್ಲದ, ಪರಭಾರೆಗ [illegible] ನಮ್ಮ ಕಕ್ಷಿಗಾರರುಗಳನ್ನು ಬದ್ಧಪಡಿಸುವುದಿಲ್ಲವೆಂದೂ, ಯಾರಾದರೂ ಷೆಡ್ಯೂಲ್ ಸ್ವತ್ತುಗಳನ್ನು ಪರಭಾರೆ ಮಾಡಿಸಿಕೊಂಡಿದ್ದರೂ, ಅಥವಾ ಪರಭಾರೆ ಮಾಡಿಸಿಕೊಂಡರೂ ಅದು ತಮ್ಮ ಕಕ್ಷಿಗಾರರನ್ನು ಲೇಶ ಮಾತ್ರವೂ ಬದ್ಧಪಡಿಸುವುದಿಲ್ಲವೆಂದೂ, ಷೆಡ್ಯೂಲ್ ಸ್ವತ್ತುಗಳನ್ನು ಯಾರೂ ಕರ್ಣನಾಯಕ ಉರುಫ್ ಚಿಕ್ಕಮಾದನಾಯಕರವರಿಂದ ಪರಭಾರೆ ಮಾಡಿಸಿಕೊಳ್ಳಕೂಡದೆಂದೂ ಈ ಮೂಲಕ ನೋಟೀಸು ಕೊಟ್ಟಿರುತ್ತೆ

ಷೆಡ್ಯೂಲ್ —ಹೊಸಕೋಟೆ ಗ್ರಾಮದಲ್ಲಿರುವ, ತಮ್ಮ ಕಕ್ಷಿಗಾರರ ಒಟ್ಟು ಸ್ವಾಧೀನಾನುಭವದಲ್ಲಿರುವ ಮನೆ, ಹಿತ್ತಲು, ಸರ್ವೆ ನಂಬರು 55-1, 73-2, 3, ಕುಂಡೇರಳೆ ಕಾವಲಿಗೆ ಸೇರಿದ ಸರ್ವೆ 5, 6, 3ನೇ ನಂಬರು ಜಮೀನುಗಳು

ಈ ಎಡಗೈ ಹೆಬ್ಬೆಟ್ಟಿನ ಗುರುತು ಪುಟ್ಟಸಿದ್ದಮ್ಮ ಉರುಫ್ ಸಣ್ಣಮ್ಮ ಹಾಕಿದ್ದು

ಎಮ್. ವಿ. ವೆಂಕಟರಾಮಸ್ವಾಮಿ,
ಅಡ್ವೊಕೇಟ್, ಮೈಸೂರು

ಕಾಂಗ್ರೆಸ್ ಅಭ್ಯರ್ಥಿಯಾಗಲು ಟಂಡನ್ನರ ನಿರಾಕರಣೆ

ಅಲಹಾಬಾದು ಕ್ಷೇತ್ರದಿಂದ ಲೋಕ ಸಭೆಗೆ ಕಾಂಗ್ರೆಸ್ ಪರವಾಗಿ ಉಮೇದುವಾರರಾಗಿ ನಿಲ್ಲಲು ಮಾಜಿ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ಟಂಡನ್‌ರವರು ನಿರಾಕರಿಸಿರುತ್ತಾರೆ ಅವರ ಆರೋಗ್ಯದ ವಿಚಾರವೂ ಸಹ ಇದಕ್ಕೆ ಒಂದು ಕಾರಣವಾಗಿದೆ ಅವರ ವಿರುದ್ಧವಾಗಿ ತಮ್ಮ ಉಮೇದುವಾರರನ್ನು ನಿಲ್ಲಿಸಬಾರದೆಂದು ಜನಸಂಘ ಮತ್ತು ಸಮಾಜವಾದಿ ಪಕ್ಷದವರು ನಿರ್ಧರಿಸಿದ್ದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವೀಣೆ ೭ ೧೫ ಜಿ ಎಸ್. ವಿಶೇಷ-ಗೀತಾವಳಿ ೭-೩೦ ಬಿ ಎಸ್ ಶ್ಯಾಮಲ-ಕಾವ್ಯವಾಚನ. ೮-೧೫ ಟಿ ಆರ್ ಜಯರಾವ್-ಕಾವ್ಯವಾಚನ ಮಧ್ಯಾಹ್ನ ೧೨ ಶಾರದಾ ರಾಮಚಂದ್ರ-ಸಂಗೀತ ೧೨-೩೦ ಬಿ ಕೇಶವಮೂರ್ತಿ-ಪಿಟೀಲು ೧ ಲಲಿತಾ ರಾಮಾನುಜಂ-ಹಿಂದಿ ಸಂಗೀತ. ೧-೫೦ ವೀಣೆ ೨-೧೫ ಸಂಗೀತ ಸಂಜೆ ೫-೩೦ ಹಿಂದೂಸ್ತಾನಿ ಗಾತ್ರ ಸಂಗೀತ ೬-೫ ವಿರಾಮ. ಸಂಗೀತ ೬-೨೦ ಜಾನಪದ ಗೀತೆ ೭ ೩೦ ತಾಳವಾದ್ಯ ಕಛೇರಿ ೮-೩೦ ನಿಮ್ಮ ಮೆಚ್ಚಿನ ಗೀತೆ ೯-೧೫ ಅಭಿವೃದ್ಧಿ ಯೋಜನೆ ಭಾಷಣ ೯ ೩೦ ನಾಟಕ ೧೦-೧೫ ಗೀತಾವಳಿ

ಅಡಿಗೆಯವರು ಬೇಕಾಗಿದ್ದಾರೆ

ಮೈಸೂರು ತ್ರಿರಾಂಪೇಟೆಯಲ್ಲಿರುವ ಎಂ. ಕೆ ಹಾಸ್ಟಲಿಗೆ ಖಾಯಂ ಆಗಿ ಇರಲು ಅನುಭವಸ್ಥ ಅಡಿಗೆಯವರು ಬೇಕಾಗಿದ್ದಾರೆ ಇಷ್ಟವುಳ್ಳವರು ಸಂಜೆ 7 ಘಂಟೆ ಮೇಲೆ ಸೆಕ್ರೆಟರಿಯವರನ್ನು ಬಂದು ಕಾಣಬಹುದು

ಸಿ ಆರ್ ರಾಮಚಂದ್ರ,
ಸೆಕ್ರೆಟರಿ ಎಂ ಕೆ ಹಾಸ್ಟಲ್

ಪೋಲೀಸನೊಬ್ಬನ ಮುಂ ಪತ್ತೆ

ಹಿಂ[illegible] ೨॥ ಮೈಲಿ ದೂರದ [illegible] ದ ಬಳಿ ಹಿರಿಯೂರು ಪೋಲೀಸ್ [illegible] ಸ್ಟೇಬಲ್ ಗಿರಿಯಪ್ಪ ಎಂಬಾತನ ದು[illegible] ಶವವು ಪತ್ತೆಯಾಗಿದೆ. ಅದನ್ನು [illegible] ಳಲಾಗಿದ್ದು ತನಿಖೆ ನಡೆಯುತ್ತಿದೆ. [illegible] ಕಾರಣವೇನೆಂಬುದು ತಿಳಿದುಬಂದಿಲ್ಲ

ಸಹಾಯಾರ್ಥ ನಾಟಕ

ವಾಣಿವಿಲಾಸ ಮೊಹಲ್ಲಾದ [illegible] ಕ ನಾಟಕ ಮಂಡಳಿಯವರು ನಾ[illegible] ೯॥ ಗಂಟೆಗೆ ಮಂಡ್ಯದ ಶ್ರೀ ಲಕ್ಷ್ಮೀ[illegible] ಸ್ವಾಮಿ ಥಿಯೇಟರಿನಲ್ಲಿ ರಾಜಾ ವಿಕ್ರಮ[illegible] ರಣಿ ಪ್ರಧಾನ ಎಂಬ ನಾಟಕವನ್ನು ಒಂ[illegible] ಲು ಶ್ರೀ ಆಂಜನೇಯಸ್ವಾಮಿಯವರ [illegible] ನದ ನಿಧಿಯ ಸಹಾಯಾರ್ಥವಾಗಿ ಆಡು[illegible] ವರು

[illegible]

ನಗರದ ಸಂಸ್ಕೃತ ಮಹಾ ಪಾಠಶಾಲೆ[illegible] ವರಣದಲ್ಲಿ ಶ್ರೀ ವಾಲ್ಮೀಕೇಶ್ವರ ದೇವ[illegible] ಗಳವರ ಜಯಂತಿ ಅಂಗವಾಗಿ ನಾಳೆ [illegible] ಗಂಟೆಗೆ ಗುರು ಭಕ್ತ [illegible] ಡ್ದು ರಾತ್ರಿ ೭ಕ್ಕೆ ಜಯದೇವ ಚರಿತ್ರೆ [illegible] ರಿಕಥೆಗಳನ್ನು ಶ್ರೀ [illegible] ಶಾಸ್ತ್ರಿಗಳವರು ನಡೆಸುವರು

ಚಂದಾದಾರರಲ್ಲಿ ವಿನಂ

ಪ್ರತಿ ತಿಂಗಳ ಚಂದಾ ಮೊಬಲಗ[illegible] ಯೂ ತಿಂಗಳ ಆರಂಭದಲ್ಲಿಯೇ ಮುಂಗ[illegible] ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಪರಸ್ಥಳಗಳ ಚಂದಾದಾರರಲ್ಲಿ ಈ ಮ[illegible] ವಿನಂತಿ ಮಾಡಲಾಗಿದೆ

— ವ್ಯವಸ್ಥಾಪಕ,

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ಹೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ಏಜಂಟರು [illegible]

ಟೆಲಿಫೋನ್ ನಂ. 792

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ ೧೫] SADHVI : THURSDAY 31-1-1957 ಮೈಸೂರು : ಗುರುವಾರ ೩೧-೧-೧೯೫೭ [ಸಂಚಿಕೆ : ೧೮೫

ಭಾರತದ ಮೇಲೆ ವಿಶ್ವಸಂಸ್ಥೆ ಕ್ರಮಕ್ಕೆ ಪ॥ ಪಾಕಿಸ್ತಾನ್ ಕರೆ

ಭಾರತದ ವಿರುದ್ಧ ಆರ್ಥಿಕ ಮತ್ತು ರಾಜತಾಂತ್ರಿಕ ಕ್ರಮ

ಭದ್ರತಾ ಸಮಿತಿಗೆ ಪಶ್ಚಿಮ ಪಾಕಿಸ್ತಾನದ ಶಾಸನ ಸಭೆಯ ಕರೆ

ಕಾಶ್ಮೀರದಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ಸ್ವತಂತ್ರ ಮತ್ತು ಪಕ್ಷಪಾತವಿಲ್ಲದ ಜನಮತಗಣನೆಯನ್ನು ನಡೆಸಲು ವಿಶ್ವಸಂಸ್ಥೆಯು ತ್ವರಿತ ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಅದು ಸಾಧ್ಯವಾಗದಿದ್ದರೆ ಭಾರತದ ವಿರುದ್ಧವಾಗಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಆರ್ಥಿಕ ಮತ್ತು ರಾಜತಾಂತ್ರಿಕ ಕ್ರಮಗಳನ್ನು ಜರುಗಿಸಬೇಕೆಂದೂ ಪಶ್ಚಿಮ ಪಾಕಿಸ್ತಾನದ ವಿಧಾನ ಸಭೆಯು ಮೊನ್ನೆ ನಿರ್ಣಯ ಮಾಡಿತು. ಭಾರತವು ಇದಕ್ಕೂ ತಗ್ಗದಿದ್ದರೆ ವಿಶ್ವಸಂಸ್ಥೆಯು ಭಾರತದ ವಿರುದ್ಧವಾಗಿ ಭೂ[illegible]ಗಳನ್ನು ಉಪಯೋಗಿಸಬೇಕೆಂದೂ ನಿರ್ಣಯವು ಸೂಚಿಸಿದೆ

೨೬,೦೦೦ ಸ್ಟೇಷನ್ ಮಾಸ್ತರುಗಳಿಂದ ಸಂಬಳದ ನಿರಾಕರಣೆ

ರೈಲ್ವೆಯವರು ತಮ್ಮ ಬೇಡಿಕೆಗಳನ್ನು ಈಡೇರಿಸದಿರುವುದಕ್ಕಾಗಿ ದೇಶಾದ್ಯಂತ ಇರುವ ಸ್ಟೇಷನ್ ಮಾಸ್ತರು ಮತ್ತು ಅಸಿಸ್ಟೆಂಟ್ ಮಾಸ್ತರುಗಳು ಈ ತಿಂಗಳ ಸಂಬಳವನ್ನು ತೆಗೆದುಕೊಳ್ಳುವುದನ್ನು ಮುಂದೆ ಹಾಕಲು ನಿರ್ಧರಿಸಿದ್ದಾರೆ. ಈ ಪೈಕಿ ಶೇಕಡ ೮೫ ಮಂದಿಗೆ [illegible] ಸಂಬಳವು ಬಂದು, ಗಾರ್ಡುಗಳಿಗಿಂತ ಕಡಿಮೆಯಾಗಿರುವುದೆಂದು ಹೇಳಲಾಗಿದೆ

ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆ

ಚುನಾವಣಾ ಪ್ರಚಾರದ ವ್ಯವಸ್ಥೆಗಾಗಿ ಸಮಾಲೋಚಿಸಲು ಬರುವ ೩ನೇ ತಾರೀಕು ಶನಿವಾರ ಬೆಳಿಗ್ಗೆ ೧೧ಕ್ಕೆ ಮೈಸೂರು ಜಿಲ್ಲೆಯ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರು, ಕಾರ್ಯದರ್ಶಿಗಳು, ಕಾರ್ಯಕರ್ತರು ಮತ್ತು ಉಮೇದುವಾರರ ಸಭೆಯನ್ನು ಜಿಲ್ಲಾ ಸಮಿತಿಯ ಕಾರ್ಯಾಲಯದಲ್ಲಿ ಕರೆಯಲಾಗಿದೆ. ಪ್ರಾದೇಶಿಕ ಸಮಿತಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಭಾಗವಹಿಸುವರು

ಸರ್ವೋದಯ ದಿನಾಚರಣೆ

ನಗರದ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನೆನ್ನೆ [illegible] ದಿನದಲ್ಲಿ ಸರ್ವೋದಯ ದಿನಾಚರಣೆಯು ನಡೆಯಿತು. ಗಾಂಧೀಜಿಯವರ ಭಾವಚಿತ್ರವನ್ನು ಅಲಂಕರಿಸಿ ವೇದಿಕೆಯ ಮೇಲಿಡಲಾಗಿತ್ತು. ಬೆಳಿಗ್ಗೆ ಮತ್ತು ಸಂಜೆ, ಪ್ರಾರ್ಥನೆ, ಸೂತ್ರಯಜ್ಞ ಮತ್ತು ಪ್ರವಚನಗಳು ನಡೆದುವು. [illegible] ಹಿರಿಯರು ಭಾಗವಹಿಸಿದ್ದರು. ಗಾಂಧಿ [illegible] ಸಪ್ತಾಹದ ದಿನಾಚರಣೆಯು ನಡೆ

ನಾಗರಕೃಷ್ಣಪ್ಪ ಸುಬ್ಬಣ್ಣನವರ ಉಮೇದುವಾರಿಕೆ

[illegible] ತಾಲ್ಲೂಕು ಕ್ಷೇತ್ರದಿಂದ ಶ್ರೀ ನಾಗರಕೃಷ್ಣಪ್ಪ ಸುಬ್ಬಣ್ಣನವರು ಸ್ವತಂತ್ರ ಅಭ್ಯರ್ಥಿಯಾಗಿ ನಿಂತಿದ್ದಾರೆ. ಅವರು ಪಿ ಎಸ್ ಪಿ ಯಿಂದ ನಿಂತಿಲ್ಲವೆಂದು ಸೂಚಿಸಲಾಗಿದೆ

ಜಿಲ್ಲೆಯಲ್ಲಿ ಇತರ ಉಮೇದುವಾರಿಕೆಗಳು

ನಂಜನಗೂಡು ೩೦

ಕೆಳಗೆ ಕಂಡ ಕ್ಷೇತ್ರಗಳಿಂದ ವಿಧಾನ ಸಭೆಗೆ ನಿಂತಿರುವ ಇತರ ಉಮೇದುವಾರರ ಹೆಸರುಗಳು ಈ ರೀತಿ ಇವೆ

ನಂಜನಗೂಡು ಶ್ರೀ ಒ ವಿ ಬಿ ಸುಬ್ರಹ್ಮಣ್ಯಂ

ಬಿಳಿಗಿರಿ ಶ್ರೀ ಡಿ ಪುಟ್ಟಸ್ವಾಮಯ್ಯ (ಜಿ ದೊರೆಸ್ವಾಮಿಯವರ [illegible])

ಗುಂಡ್ಲುಪೇಟೆ ಶ್ರೀ [illegible] ಕೆ ಪುಟ್ಟಸ್ವಾಮಯ್ಯ

ಚಾಮರಾಜನಗರ ಶ್ರೀಗಳ ವಿ ಶಿವನಂಜಶೆಟ್ಟಿ, ದಾಸಶೆಟ್ಟಿ, ಎಂ ಪುಟ್ಟವೀರಯ್ಯ, ಆರ್ ಪಿ ರೇವಣ್ಣ, ಎಂ ಪುಟ್ಟಮಾದಯ್ಯ ಮತ್ತು ಯು ಎಂ ಗುರುಮಲ್ಲಪ್ಪ

[illegible] ಶ್ರೀಗಳ ಪಿ ಬಿ ವೆಂಕಟೇಗೌಡ, ರಾಜುಗೌಡ ಮತ್ತು ಯಂ ಸಿದ್ದಪ್ಪ

ಕೊಳ್ಳೇಗಾಲ ಶ್ರೀಗಳ ವಿ ಒ ಬಸವಯ್ಯ, ಬಿ ರಾಚಪ್ಪ, ವೀರಭದ್ರಸ್ವಾಮಿ, ಚಿಕ್ಕ ನೀಲೇಗೌಡ, ಎಸ್ ಬೋರೇಗೌಡ, ಎ ಆರ್ ಪುಟ್ಟರಾಜು ಮತ್ತು ಎ ಬಸವರಾಜು (ಶ್ರೀ ಜಿ ತಿಮ್ಮಯ್ಯ ಎಂಬುವರು ನಿಂತಿಲ್ಲ)

ದೇಶಾದ್ಯಂತ ಹುತಾತ್ಮರ ದಿನಾಚರಣೆ

ದೇಶಾದ್ಯಂತ ನೆನ್ನೆ ಬೆಳಿಗ್ಗೆ ೧೧ ಗಂಟೆಗೆ ಹುತಾತ್ಮರ ದಿನಾಚರಣೆ ಅಂಗವಾಗಿ ಎರಡು ನಿಮಿಷ ಮೌನವನ್ನಾಚರಿಸಲಾಯಿತು. ದೆಹಲಿಯಲ್ಲಿ ಮಹಾತ್ಮಾ ಗಾಂಧಿಯವರು ಹುತಾತ್ಮರಾದ ಸ್ಥಳದಲ್ಲಿ ಪ್ರಾರ್ಥನೆ ರಾಮ ಭಜನೆಗಳಾದುವು. ರಾಜಘಾಟಿನಲ್ಲಿ ಸಾಮೂಹಿಕ ಪ್ರಾರ್ಥನೆ ಮತ್ತು ಸೂತ್ರಯಜ್ಞ ನಡೆದು ರಾಷ್ಟ್ರಾಧ್ಯಕ್ಷರು ಮತ್ತು ನೆಹರೂರವರು ಭಾಗವಹಿಸಿದ್ದರು. ತುತ್ತೂರಿಗಳು ಶೋಕ ಸೂಚಕ ನಾದ ಮಾಡಿದಾಗ ತೋಪುಗಳನ್ನೂ ಹಾರಿಸಲಾಯಿತು. ಎಲ್ಲರೂ ಎದ್ದು ನಿಂತು ಮೌನವನ್ನು ಧರಿಸಿದರು. ಶಾಂತಿ ನಿಕೇತನದಲ್ಲಿ ನೆನ್ನೆ ಬೆಳಿಗ್ಗೆ ಚೀನಾದ ಪ್ರಧಾನಿ ಚೌ ಎನ್ ಲೈಯವರು ೨ ನಿಮಿಷ ಮೌನವನ್ನು ತಾಳಿದರು

ಲೋಕಸಭೆ ಮತ್ತು ಮೈಸೂರು ವಿಧಾನ ಸಭೆಗೆ ಅವಿರೋಧ ಆಯ್ಕೆ

ಲೋಕಸಭೆಯ ರಾಜಮಹೇಂದ್ರಿ ಕ್ಷೇತ್ರದಿಂದ ಕಾಂಗ್ರೆಸ್ ಸ್ಪರ್ಧಿ ಶ್ರೀ ಡಿ ಎಸ್ ರಾಜುರವರೂ, ಮೈಸೂರು ವಿಧಾನ ಸಭೆಯ ಮಂಗಳೂರು ಜಿಲ್ಲೆಯ ಬೈಂದೂರು ಕ್ಷೇತ್ರದಿಂದ ಕಾಂಗ್ರೆಸ್ ಸ್ಪರ್ಧಿ ಶ್ರೀ ವೈ ಮಂಜಯ್ಯಶೆಟ್ಟರೂ ಅವಿರೋಧವಾಗಿ ಚುನಾಯಿತರಾಗಿರುತ್ತಾರೆ.

ಲೋಕಸಭೆಗೆ ಗ್ವಾಲಿಯರ್ ಮಹಾರಾಣಿಯವರ ಸ್ಪರ್ಧೆ

ಗ್ವಾಲಿಯರಿನ ಮಹಾರಾಣಿ ಸಿಂಧ್ಯರವರು ಗುಣ-ಭಿಲ್ಸ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸುತ್ತಾರೆಂದು ವರದಿಯಾಗಿದೆ. ಸರ್ದಾರ್ [illegible]ರವರು ಕಾಂಗ್ರೆಸ್ ಪರವಾಗಿ ನಿಂತಿರುವರು

ಅಡಿಕೆ ವ್ಯವಸಾಯಾಭಿವೃದ್ಧಿಗಾಗಿ ೨೬ ಲಕ್ಷ ರೂ. ಧನ ಸಹಾಯ

ಸ್ವ ಸು ಸಂ] ಬೆಂಗಳೂರು ೩೦

ಕೇಂದ್ರ ವ್ಯವಸಾಯ ಮಂತ್ರಿ ಪಂಜಾಬರಾವ್ ದೇಶಮುಖ್‌ರ ಹೇಳಿಕೆ

ಕೇಂದ್ರ ವ್ಯವಸಾಯ ಮಂತ್ರಿ ಪಂಜಾಬರಾವ್ ದೇಶಮುಖ್‌ರವರು ಈ ದಿನ ಇಲ್ಲಿ ಸೇರಿದ ಕೇಂದ್ರ ಅಡಿಕೆ ಸಮಿತಿಯ ೮ನೇ ಅಧಿವೇಶನವನ್ನುದ್ದೇಶಿಸಿ ಮಾತನಾಡಿ ದೇಶವು ಸ್ವಲ್ಪ ಕಾಲದಲ್ಲೇ ಅಡಿಕೆ ವಿಚಾರದಲ್ಲಿ ಸ್ವಾವಲಂಬಿಯಾಗುವುದೆಂದು ತಿಳಿಸಿದರು. ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವುದೆಂದೂ ದ್ವಿತೀಯ ಯೋಜನಾ ಅವಧಿಯಲ್ಲಿ [illegible] ಪ್ರಯೋಗ ಶಾಲೆಯನ್ನು ತೆರೆಯಲಾಗುವುದೆಂದೂ ಅವರು ತಿಳಿಸಿದರು. ಅಡಿಕೆ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಕೇಂದ್ರದವರು ೨೬ ಲಕ್ಷ ರೂಗಳನ್ನು ತೆಗೆದಿಟ್ಟಿರುವರೆಂದೂ ಅಲ್ಲದೆ ಸಂಸ್ಥಾನಗಳಿಗೆ ೧೨ ಲಕ್ಷ ರೂ ಸಹಾಯವನ್ನೀಯಲಾಗುವುದೆಂದೂ ಅವರು ಹೇಳಿದರು

ಸರ್ಕಾರಿ ಕೈಗಾರಿಕಾ ನೌಕರರ ಸಂಬಳದ ಸಮಿತಿ ಕಾರ್ಯಕ್ರಮ

ಸರ್ಕಾರಿ ಕೈಗಾರಿಕಾ ನೌಕರರ ಸಂಬಳದ ಪುನರ್ವಿಮರ್ಶೆಗಾಗಿ ಏರ್ಪಟ್ಟಿರುವ ಸಮಿತಿಯವರು ಈ ದಿನ ಸಭೆ ಸೇರಿ ಸಮಿತಿಯು ನಡವಳಿಕೆ ಕ್ರಮವನ್ನು ಕುರಿತು ಚರ್ಚಿಸಿದರು. ಸಮಿತಿಯವರು, ಮೈಸೂರು, ಟಿ ನರಸೀಪುರ, ಹಾಸನ ಮತ್ತು ಭದ್ರಾವತಿ ಕಾರ್ಖಾನೆಗಳಿಗೂ ಇಲ್ಲಿನ ಕಾರ್ಖಾನೆಗಳಿಗೂ ಭೇಟಿಯೀಯುವರು

ಸಂಸ್ಥೆಯ ವಿರುದ್ಧ ಸ್ಪರ್ಧಿಸಿರುವ ಕಾಂಗ್ರೆಸ್ಸಿನವರಿಗೆ ಎಚ್ಚರಿಕೆ

ಕಾಂಗ್ರೆಸ್ ಸ್ಪರ್ಧಿಗಳ ವಿರುದ್ಧವಾಗಿ ಸ್ಪರ್ಧಿಸಿರುವ ಕಾಂಗ್ರೆಸ್ಸಿನವರು ತಮ್ಮ ಉಮೇದುವಾರಿಕೆಗಳನ್ನು ವಾಪಸು ತೆಗೆದುಕೊಳ್ಳದಿದ್ದರೆ ಅವರನ್ನು ಸಂಸ್ಥೆಯಿಂದ ೬ ವರ್ಷ ಕಾಲ ತೆಗೆದುಹಾಕಲಾಗುವುದೆಂದು ಎ ಐ ಸಿ ಸಿ ಕಛೇರಿಯವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳಿಗೆ ಕಳುಹಿಸಿರುವ ಸೂಚನೆಯಲ್ಲಿ ತಿಳಿಸಿರುತ್ತಾರೆ

ದಶಮಾಂಶ ನಾಣ್ಯಗಳ ಪಟ್ಟಿ

ನಗರದ ಶ್ರೀರಾಮಪೇಟೆ ಈವಿನಿಂಗ್ ಬಜಾರಿನಲ್ಲಿರುವ ಎಲೈಟ್ ಪ್ರಿಂಟರ್ಸ್ ಮಾಲೀಕರಾದ ಶ್ರೀ ಕೆ ನರಸಯ್ಯನವರು ದಶಮಾಂಶ ನಾಣ್ಯಗಳು ಮತ್ತು ಈಗಿನ ರೂ-ಆಣೆ-ಪೈಗಳ ಪರಸ್ಪರ ಹೋಲಿಕೆ ಪಟ್ಟಿಯನ್ನು ಕನ್ನಡ ಮತ್ತು ತಮಿಳಿನಲ್ಲಿ ಮುದ್ರಿಸಿ ಪ್ರಕಟಿಸಿರುತ್ತಾರೆ. ಬರುವ ಏಪ್ರಿಲ್ ೧ ರಿಂದ ದಶಮಾಂಶ ನಾಣ್ಯ ಪದ್ಧತಿಯು ಜಾರಿಗೆ ಬರಲಿವೆ. ಹಳೆಯ ನಾಣ್ಯಗಳಿಗೂ ಹೊಸವುಗಳಿಗೂ ಇರುವ ಹೊಂದಾಣಿಕೆಯ ಪಟ್ಟಿಯನ್ನು ಕೊಡಲಾಗಿದೆ. ೧ ಕಾಸಿನಿಂದ ೧೦೦ [illegible] ಇರುತ್ತದೆ. ಅಲ್ಲದೆ ನಯೆ ಪೈಸೆಗಳ ಆಕಾರವನ್ನು ಸೂಚಿಸುವ ಚಿತ್ರಗಳನ್ನೂ ಕೊಡಲಾಗಿದೆ. ಮಹಾಜನರಿಗೆ ಉಪಯುಕ್ತವಾಗುವಂತೆ ಸಕಾಲದಲ್ಲಿ ಈ ಪಟ್ಟಿಯನ್ನು ಪ್ರಕಟಿಸಲಾಗಿದೆ. ಬೆಲೆ ೧ ಆಣೆ

ಹೊಸ ಸಂಬಳಗಳನ್ನು ಜಾರಿಗೆ ಕೊಡಲು ತೊಡಕುಂಟಾಗಿದೆಯೇ

ಬೆಂಗಳೂರು ೩೦

ಸರ್ಕಾರಿ ನೌಕರರಿಗೆ ಪುನರ್ವಿಮರ್ಶಿತ ಸಂಬಳದ ಮಟ್ಟದ ಪ್ರಕಾರ ವೇತನವನ್ನು ಬಟವಾಡೆ ಮಾಡುವ ಬಗ್ಗೆ ಹಲವು ತೊಡಕುಗಳು ಉದ್ಭವಿಸಿ, ಈ ತಿಂಗಳು ಹಿಂದೆ ಜಾರಿಯಲ್ಲಿದ್ದ, ತಾತ್ಕಾಲಿಕ ಪರಿಹಾರದಿಂದ ಕೂಡಿದ ಸಂಬಳವನ್ನೇ ಕೊಡುವಂತೆ ಸರ್ಕಾರದವರು ಇಲಾಖೆಗಳಿಗೆ ಸೂಚನೆಯಿತ್ತಿರುವರೆಂದೂ ಈ ತಿಂಗಳ ಸಂಬಳವನ್ನು ನಾಳೆ ಬಟವಾಡೆ ಮಾಡಲು ಅದೇ ಮೇರೆ ಬಿಲ್ಲುಗಳನ್ನು ತಯಾರಿಸಲಾಗಿರುವುದೆಂದೂ ಹೇಳಲಾಗಿದೆ. ಕೇಂದ್ರ ಸರ್ಕಾರದವರು ಸಂಸ್ಥಾನದ ಎನ್ ಜಿ ಓ ಗಳ ಸಂಬಳವನ್ನು ಹೆಚ್ಚಿಸುವುದಕ್ಕಾಗಿ ಒಂದೂವರೆ ಕೋಟಿ ರೂ ಧನ ಸಹಾಯ ನೀಡಿರುವುದರ ಸಂಬಂಧದಲ್ಲಿ, ಸಂಸ್ಥಾನದ ಗೆಜೆಟೆಡ್ ಅಧಿಕಾರಿಗಳ ಸಂಬಳವನ್ನೂ ಹೆಚ್ಚಿಸಿರುವ ಬಗ್ಗೆ ಕೇಂದ್ರದವರು ಸಂಸ್ಥಾನ ಸರ್ಕಾರದಿಂದ ಸಮಜಾಯಿಷಿ ಕೇಳಿರುವರೆಂದೂ ಹೇಳಲಾಗಿದೆ

ಕಾಶ್ಮೀರಕ್ಕೆ ವಿಶ್ವಸಂಸ್ಥೆಯ ಸೈನ್ಯ ಕಳುಹಿಸಬೇಕು

ಭದ್ರತಾ ಸಮಿತಿಯಲ್ಲಿ ಪಾಕಿಸ್ತಾನದ ಮಂತ್ರಿ ನೂನರ ಒತ್ತಾಯ

ಕಾಶ್ಮೀರದ ಬಿಕ್ಕಟ್ಟಿನ ಬಗ್ಗೆ ನೆನ್ನೆ ಪಾಕಿಸ್ತಾನದ ಮಂತ್ರಿ ನೂನರು ಭದ್ರತಾ ಸಮಿತಿ ಸಭೆಯಲ್ಲಿ ಮಾತನಾಡಿ ಕಾಶ್ಮೀರ ಪ್ರದೇಶದಲ್ಲಿ ವಿಶ್ವಸಂಸ್ಥೆ ಸೈನ್ಯಗಳನ್ನು ಇಡಬೇಕೆಂದೂ, ಅಲ್ಲಿಂದ ಭಾರತ ಮತ್ತು ಪಾಕಿಸ್ತಾನ ಸೈನ್ಯಗಳೆಲ್ಲವನ್ನೂ ವಾಪಸು ಕರೆಸಬೇಕೆಂದೂ ಸೂಚಿಸಿದರು. ಅದಲ್ಲದೆ ಸ್ಥಳೀಯವಾಗಿ ಏರ್ಪಡಿಸಿರುವ ಸೈನಿಕ ಪಡೆಗಳನ್ನೂ ನಿರಾಯುಧರನ್ನಾಗಿ ಮಾಡಬೇಕೆಂದೂ ಕಾಶ್ಮೀರಿ ಜನರು ವಿಶ್ವಸಂಸ್ಥೆಯ ಜನಮತಗಣನೆ ಮೂಲಕ ತಾವು ಪಾಕಿಸ್ತಾನ ಅಥವಾ ಭಾರತಕ್ಕೆ ಸೇರುವುದನ್ನು ನಿರ್ಧರಿಸುವಂತಾಗಬೇಕೆಂದೂ ಅವರು ಹೇಳಿದರು

ಶಾಂತಿ ನಿಕೇತನಕ್ಕೆ ಚೌ ಎನ್ ಲೈ ರವರಿಂದ ೬೦,೦೦೦ ರೂ. ಕಾಣಿಕೆ

ಚೌ ಎನ್ ಲೈ ಯವರಿಗೆ ವಿಶ್ವ ಭಾರತೀ ವಿಶ್ವವಿದ್ಯಾಲಯದ ಗೌರವ ಪ್ರಶಸ್ತಿ

ಚೀಣದ ಪ್ರಧಾನಿ ಚೌಎನ್‌ಲೈಯವರಿಗೆ ನೆನ್ನೆ ಶಾಂತಿ ನಿಕೇತನದ ವಿಶ್ವ ಭಾರತಿ ವಿಶ್ವವಿದ್ಯಾಲಯದವರು (ಡಾಕ್ಟರ್ ಆಫ್ ಲಿಟರೇಚರ್) "ದೇಶಿಕೋತ್ತಮ" ಗೌರವ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದರು. ಸಂಸ್ಥೆಗೆ ಚೌರವರು ೬೦ ಸಾವಿರ ರೂಗಳ ದ್ರವ್ಯ ಸಹಾಯವಿತ್ತರು

ರಷ್ಯಾ ವಿರುದ್ಧವಾಗಿ ಇರಾನಿನಲ್ಲಿ ವಿದೇಶೀ ನೆಲೆಗಳಿಗೆ ಅವಕಾಶವಿಲ್ಲ

ರಷ್ಯಾ ವಿರುದ್ಧವಾಗಿ ವಿದೇಶೀ ರಾಜ್ಯಗಳು ಏರ್ಪಡಿಸುವ ನೆಲೆಗಳಿಗೆ ಇರಾನು ಅವಕಾಶ ಕೊಡುವುದಿಲ್ಲವೆಂದೂ, [illegible] ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲವೆಂದೂ ಗೊತ್ತಾಗಿದೆ

ಮಲ್ಲಾರಾಧ್ಯರ ರಜಾ ವಿಚಾರ

ಮೈಸೂರು ೩೦

ಶ್ರೀಮನ್ಮಹಾರಾಜರ ಮಾಜಿ ಹುಜೂರು ಕಾರ್ಯದರ್ಶಿ ಶ್ರೀ ಜೆ. ಬಿ. ಮಲ್ಲಾರಾಧ್ಯರು ಹೇಳಿಕೆಯೊಂದನ್ನಿತ್ತು ತಮಗೆ ಮಹಾರಾಜರು ಇದೇ ೧೭ ನೇ ತಾರೀಖಿನಿಂದ ಒಂದು ತಿಂಗಳು ವಿಶೇಷ ರಜವನ್ನು ಕೊಟ್ಟಿರುವರೆಂಬ ಅಂಶವನ್ನು ಅಲ್ಲಗಳೆದಿದ್ದಾರೆ.

೧೯೫೫ನೇ ಡಿಸೆಂಬರ್ ೧೬ರಂದೇ ಸರ್ಕಾರಿ ಸೇವೆಯಿಂದ ನಿವೃತ್ತರಾದ ತಮ್ಮನ್ನು ಶ್ರೀಮನ್ಮಹಾರಾಜರ ವಿಶೇಷ ಕೋರಿಕೆಯಂತೆ ಕೇಂದ್ರ ಸರ್ಕಾರದವರು ವಿಶಾಲ ಮೈಸೂರಿನ ಆರಂಭದವರೆಗೂ ಶ್ರೀಮನ್ಮಹಾರಾಜರ ಹುಜೂರು ಕಾರ್ಯದರ್ಶಿಯಾಗಿರಲು ಅನುಮತಿಯಿತ್ತಿದ್ದರಿಂದಲೂ, ಅದಾನಂತರ ಕಳೆದ ೧೭ನೇ ತಾರೀಖಿನವರೆಗೆ ತಾವು ಶ್ರೀಮನ್ಮಹಾರಾಜರ ಸೇವೆಯಲ್ಲಿ ಅವರ ಇಚ್ಛೆಯಂತೆ ಅನಧಿಕೃತವಾಗಿ ಮುಂದುವರಿದು ನಿವೃತ್ತರಾಗಿರುವುದಾಗಿಯೂ ಅವರು ತಿಳಿಸಿದ್ದಾರೆ.

ಒಂದು ವೇಳೆ ಆ ರೀತಿ ರಜ ಕೊಡುವ ಅಂಶವು ನಿಜವಾದರೆ ಅದು ತಮಗೆ ಒಂದು ತಿಂಗಳ ಸಂಬಳವನ್ನು ಕೊಡಲು ಮಹಾರಾಜರು ಖಾಸಗಿಯಾಗಿ ಮಾಡಿರುವ ಉದಾರ ನಿರ್ಧಾರವು ಮಾತ್ರವೇ ಹೊರತು, ತಾವು ಸರ್ಕಾರಿ ಸೇವೆಯಲ್ಲಿದ್ದಂತಾಗುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ.

ಈ ಕಾರಣಗಳಿಂದ ಸಂಸ್ಥಾನದ ವಿಧಾನಸಭೆಗೆ ತಮ್ಮ ಉಮೇದುವಾರಿಕೆ ವಿಷಯವಾಗಿ ಯಾವ ಸಂಶಯಕ್ಕೂ ಅವಕಾಶವಿಲ್ಲವೆಂದೂ, ವಿಶೇಷ ರಜಾ ಕೊಟ್ಟಿತೆಂಬ ಸುದ್ದಿಯಿಂದ ಓಟರುಗಳಲ್ಲಿ ತಪ್ಪು ಅಭಿಪ್ರಾಯವು ಮೂಡಿತ್ತೆಂದೂ, ತಾವು ಈಗ ಸರ್ಕಾರಿ ನೌಕರರಾಗಿರದೆ ಚುನಾವಣೆಯಲ್ಲಿ ಉಮೇದುವಾರರಾಗಲು ಪೂರ್ಣವಾಗಿ ಅರ್ಹರಾಗಿರುವುದಾಗಿಯೂ ಅವರು ತಿಳಿಸಿರುವರು

ವಿಸ್ತರಣಾ ಯೋಜನೆ ಗೋಷ್ಠಿ

ಚಾಮರಾಜನಗರದ ತಾಲ್ಲೂಕು ಹರದನಹಳ್ಳಿ ಗ್ರಾಮದ ರಾಷ್ಟ್ರೀಯ ವಿಸ್ತರಣಾ ಯೋಜನೆ ಚರ್ಚಾ ಗೋಷ್ಠಿಯ ಮುಕ್ತಾಯ ಸಮಾರಂಭವು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಬಿ. ಚನ್ನರಾಜೇಅರಸರ ಅಧ್ಯಕ್ಷತೆಯಲ್ಲಿ ನಡೆಯಿತು. ವಯಸ್ಕರ ಶಿಕ್ಷಣ ಸಮಿತಿಯ ಮುಖ್ಯಾಧಿಕಾರಿ ಶ್ರೀ ಎಲ್. ತಿಮ್ಮಯ್ಯನವರು ಭಾಷಣ ಮಾಡುತ್ತಾ ಗ್ರಾಮಸ್ಥರು ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಭಾಗವಹಿಸುವಂತೆ ಆಗಬೇಕೆಂದು ತಿಳಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಗ್ರಾಮಗಳು ಮುಂದುವರಿಯಬೇಕಾದರೆ ಇಂಥಾ ಯೋಜನೆಗಳಿಂದಲೇ ಸಾಧ್ಯವೆಂದು ತಿಳಿಸಿದರು. ಗ್ರಾಮಕಲೆಗಳ ಪ್ರದರ್ಶನವೂ ಏರ್ಪಾಡಾಗಿತ್ತು.

GLOBE TUTORIAL COLLEGE,
Sadvidya Patashala Buildings.
Revision Classes for students promoted to S S L C Class
Time 8 to 10-30 A.M.

ಅಡಿಗೆಯವರು ಬೇಕಾಗಿದ್ದಾರೆ

ಮೈಸೂರು ಶ್ರೀರಾಂಪೇಟೆಯಲ್ಲಿರುವ ಎಂ. ಕೆ. ಹಾಸ್ಟಲಿಗೆ ಖಾಯಂ ಆಗಿ ಇರಲು ಅನುಭವಸ್ಥ ಅಡಿಗೆಯವರು ಬೇಕಾಗಿದ್ದಾರೆ. ಇಷ್ಟವುಳ್ಳವರು ಸಂಜೆ 7 ಘಂಟೆ ಮೇಲೆ ಸೆಕ್ರೆಟರಿಯವರನ್ನು ಬಂದು ಕಾಣಬಹುದು

ಸಿ. ಆರ್. ರಾಮಚಂದ್ರ,
ಸೆಕ್ರೆಟರಿ ಎಂ. ಕೆ. ಹಾಸ್ಟಲ್

ಪುಕ್ಕಟೆ ಬಹುಮಾನ

ನಮ್ಮ "ಕ್ಷೀರ ಕೇಂದ್ರ"-ಹಾಲಿನ ಡೈರಿಯ 2ನೇ ವಾರ್ಷಿಕೋತ್ಸವದ ಅಂಗವಾಗಿ ತಾರೀಖು 1-2-57ರಿಂದ 28-2-57ರ ವರೆಗೆ ಕೊಳ್ಳುವ ಪ್ರತಿ ಕೂಪನ್ ಪುಸ್ತಕದೊಂದಿಗೆ ಒಂದೊಂದು ಪುಕ್ಕಟೆ ಬಹುಮಾನವನ್ನು ಕೊಡಲಾಗುವುದು

ನಗರದ ಎಲ್ಲಾ ಭಾಗಗಳಿಗೂ ಹಾಲನ್ನು [illegible] ತಲುಪಿಸುವ ಉಚಿತ ಸೇವೆ ಮುಂದುವರಿಸಲಾಗಿದೆ.

ಬೀದಿ ನಾಯಿಗಳ ಕೊಲೆಯನ್ನು ವಿರೋಧಿಸಿ ರಿಟ್ ಅರ್ಜಿ

ಗುಂಟೂರು ಪೌರಸಭೆಯವರು ಬೀದಿ ನಾಯಿಗಳು ಮತ್ತು ಬೆಕ್ಕುಗಳನ್ನು ಕೊಲ್ಲುವುದನ್ನು ನಿಷೇಧಿಸುವಂತೆ ಕೋರಿ ಕೆ. ಬಸವ ಎಂಬುವರೊಬ್ಬರು ಆಂಧ್ರ ಹೈಕೋರ್ಟಿಗೆ ಸಲ್ಲಿಸಿದ್ದ ರಿಟ್ ಅರ್ಜಿಯೊಂದನ್ನು ವಜಾ ಮಾಡಲಾಗಿದೆ. ಪೌರಸಭೆಯವರು ಪ್ರಾಣಿಗಳಲ್ಲಿ ತಾರತಮ್ಯವನ್ನು ತೋರಿಸಿ ರಾಜ್ಯಾಂಗದ ೧೪ನೇ ವಿಧಿಯನ್ನು ಉಲ್ಲಂಘಿಸಿರುವುದಾಗಿ ಅರ್ಜಿದಾರರು ತಿಳಿಸಿದ್ದರು. ಆಡು, ಕೋಳಿ, ಹಂದಿಗಳನ್ನು ಬಿಟ್ಟು ನಾಯಿಗಳನ್ನು ಸಾಯಿಸುವುದು ಸರಿಯಲ್ಲವೆಂಬುದೇ ಅವರ ವಾದವಾಗಿತ್ತು. ಪೌರಸಭೆಯ ಪರವಾಗಿ ಮಾಡಲಾದ ವಾದದಲ್ಲಿ ಮನುಷ್ಯರ ಆರೋಗ್ಯ ಮತ್ತು ಸುರಕ್ಷತೆಗಾಗಿ ನಾಯಿಗಳನ್ನು ಕೊಲ್ಲಲಾಗುತ್ತಿದೆಯೆಂದು ತಿಳಿಸಲಾಗಿತ್ತು

ವೆಸ್ಲಿ ಕ್ಲಬ್ಬಿನಲ್ಲಿ ರಿಪಬ್ಲಿಕ್ ದಿನೋತ್ಸವ

ಮೈಸೂರು ಕರುಣಾಪುರದಲ್ಲಿರುವ ವೆಸ್ಲಿ ಕ್ಲಬ್ ಕ್ರೈಸ್ತ ಯುವಕರು ರಿಪಬ್ಲಿಕ್ ದಿನಾಚರಣೆಯನ್ನು ಕಳೆದ ೨೬ ರಂದು ರೆವರೆಂಡ್ ಜೆ. ಸೋಮಸುಂದರರವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಭಾರತ ಸರ್ಕಾರ ಮತ್ತು ಪ್ರಜೆಗಳಿಗಾಗಿ ಪ್ರಾರ್ಥನೆ ಮಾಡಲಾಯಿತು. ಅಧ್ಯಕ್ಷರು ಭಾರತೀಯ ಕ್ರೈಸ್ತರ ಜವಾಬ್ದಾರಿ ಏನು ಎಂಬ ವಿಷಯವಾಗಿ ಭಾಷಣ ಮಾಡಿದರು. ರಾಷ್ಟ್ರಗೀತೆಯಿಂದ ಕೂಟವು ಮುಕ್ತಾಯವಾಯಿತು

ಹೊಸ ಅಕ್ಕಿಯ ಅನ್ನ ಮುದ್ದೆಯಾಗದಂತೆ ಮಾಡಲು ವಿಧಾನ

ಹೊಸ ಅಕ್ಕಿಯಲ್ಲಿ ಅನ್ನ ಮಾಡಿದರೆ ಅದು ಮುದ್ದೆಯಾಗುವುದು ಮತ್ತು ಗಟ್ಟಿಯಾದ ಗಂಜಿಯು ಬರುವುದನ್ನು ತಪ್ಪಿಸಲು ಸರಳವಾದ ವಿಧಾನವೊಂದನ್ನು ನಗರದ ಕೇಂದ್ರ ಆಹಾರ ಸಂಶೋಧನಾಲಯದವರು ಕಂಡುಹಿಡಿದಿರುತ್ತಾರೆ. ಅದರಿಂದ ಹಳೆಯ ಅಕ್ಕಿಯ ಅನ್ನದಂತೆ ಹೊಸ ಅಕ್ಕಿಯ ಅನ್ನವೂ ಆಗುವುದೆಂದು ತಿಳಿಸಲಾಗಿದೆ. ಮೊದಲು ಹೊಸ ಅಕ್ಕಿಯನ್ನು ನೀರಿನಲ್ಲಿ ೨-೩ ಗಂಟೆ ಕಾಲ ನೆನೆಸುವುದು, ಬಿಸಿನೀರಾದರೆ ಅರ್ಧ ಗಂಟೆ ಸಾಕು; ನಂತರ ಅದನ್ನು ೧೦ ನಿಮಿಷ ಆವಿಯಲ್ಲಿ ಕಾಯಿಸಿ, ಆಮೇಲೆ ಕುದಿಯುವ ನೀರಿಗೆ ಹಾಕುವುದು-ಇದೇ ಆ ವಿಧಾನ. ಇದು ಒಟ್ಟಿನಲ್ಲಿ ನಿತ್ಯವೂ ಅಡಿಗೆ ಮಾಡುವಷ್ಟೇ ಕಾಲ ತೆಗೆದುಕೊಳ್ಳುವುದು

NATIONAL LEAGUE,
Anothalaya Buildings Mysore
Offers excellent coaching for students of the High School classes
Join Immediately

ಬೇಕಾಗಿದೆ

ಸರ್ಕಾರದ ಕೆಲಸದಿಂದ ಪೆನ್ಷನ್ ಆಗಿ ನಿವೃತ್ತರಾಗಿರುವ ಮತ್ತು ಆರೋಗ ದೃಢಕಾಯರಾಗಿರುವ ಉಪಾಧ್ಯಾಯರು ಹಾಸ್ಟಲಿನ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದೆ. ಬಾಕೀ ವಿಷಯವು ಮುಖತಃ. ಇಷ್ಟವುಳ್ಳವರು ಈ ಕೆಳಗೆ ರುಜು ಮಾಡಿರತಕ್ಕವರನ್ನು ನೋಡತಕ್ಕದ್ದು

ಎಂ. ಎಲ್. ನಾಗಣ್ಣ, ಅಧ್ಯಕ್ಷರು
368. ತ್ಯಾಗರಾಜ ರೋಡ್, ಮೈಸೂರು

ಅಪ್ಪಟವಾದ
ಹಸುವಿನ ಹಾಲು
ಪೌಂಡು 1ಕ್ಕೆ 0 3 6 : ½ ಪೌಂಡಿಗೆ 0 1 9
ಇಂದೇ ಭೇಟಿ ಕೊಟ್ಟು ಪರೀಕ್ಷಿಸಿರಿ
ಕಾಲ: ಬೆಳಗ್ಗೆ 5 30ರಿಂದ 9-30
ಮಧ್ಯಾಹ್ನ 3 ರಿಂದ 6-30
ಗೋಕುಲ ಮಿಲ್ಕ್ ಡೈರಿ
ಅಂಬಲೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ
ಸೂರಡಿ ರಸ್ತೆ ಮೈಸೂರು
ನಾಳೆಯಿಂದ ರಮಾವಿಲಾಸ ಅಗ್ರಹಾರದಲ್ಲಿ
ಶಾಖೆಯೊಂದನ್ನು ತೆರೆಯಲಾಗುತ್ತೆ
ಮನೆಗಳಿಗೂ ಸಪ್ಲೈ ಕೊಡಲಾಗುತ್ತೆ.

Edited, Printed and Published by
A. R. Nagarajan at Sadhvi Press,
D. Subbiah Road Mysore

ಆನೆ ಡಿಕ್ಕಿ ಹೊಡೆದು ರೈಲು ಇಂಜನ್ ಕಂಬಿ ತಪ್ಪಿತು

ಪಾಟ್ನಾ ಬಳಿ ಪಾಸರ್ ಬಜಾರ್ ಎಂಬಲ್ಲಿ ಪ್ರಯಾಣಿಕರ ರೈಲು ಹೋಗುತ್ತಿದ್ದಾಗ ಅದರ ಇಂಜನ್ನಿಗೆ ಭಾರಿ ಸಲಗವೊಂದು ಡಿಕ್ಕಿ ಹೊಡೆಯಲಾಗಿ ಇಂಜನ್ನು ಕಂಬಿ ತಪ್ಪಿ, ಆನೆಯು ಮಡಿಯಿತೆಂದು ಹೇಳಲಾಗಿದೆ. ಮಾವುತನು ಅಪಾಯದಿಂದ ಪಾರಾಗಿರುತ್ತಾನೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು ಕೊಯಮತ್ತೂರು ಸಣ್ಣ	೩೫	೧೦	೦	೪೧	೧೩	೦
ರತ್ನಚೂಡಿ	೩೫	೬	೦	೩೯	೦	೦
ಕಡ್ಡಿ	೩೫	೬	೦	೪೦	೦	೦
ರಾಗಿ	೪೧	೦	೦	೪೬	೧೦	೦
ಜೋಳ	೪೫	೩	೦			
ಕಡಲೆಕಾಯಿ	೧೬	೧೩	೦	೩೯	೫	೦
ಹುಚ್ಚೆಳ್ಳು	೫೦	೫	೦	೫೬	೧೦	೦
ಹರಳುಬೀಜ	೫೮	೦	೦	೫೯	೫	೦
ಹೊಂಗೆಬೀಜ	೩೩	೦	೦			
ಹುರುಳಿ	೩೭	೮	೦	೪೦	೬	೦
ಹೆಸರು	೫೧	೩	೦			
ಹಲಸಂದೆ	೪೮	೦	೦	೫೩	೫	೦
ಅವರೆ	೫೪	೮	೦	೫೫	೧೫	೦
ಧನಿಯ	೩೩	೦	೦	೩೬	೫	೦
ಸೆಣಬಿನ ಬೀಜ	೫೫	೧೩	೦	೫೬	೧೦	೦
ಕಡಲೆ	೫೮	೧೫	೦	೫೯	೫	೦
ಹುಣಿಸೇಹಣ್ಣು	೩	೫	೦	೮	೧೩	೦
ಸೀಗೆಕಾಯಿ	೫	೧೦	೦	೭	೧೦	೦
ಮೆಣಸಿನಕಾಯಿ	೯	೧೩	೦	೩೦	೩	೦

SUCCESS IN ONE MONTH
is ensured by studying.
INTERMEDIATE CHEMISTRY
AT A GLANCE
by R PARTHASARATHY, M Sc.
and banking upon
"GUESS PAPER 1957 WITH ANSWERS"
Copies can be had of :-
(1) R Rajagopal, 307, D. Subbiah Road, Mysore
(2) J. Nanomal and Sons, Book Sellers
Mysore
And copies are available in all the leading book stalls in Mysore

SREE GANESH
TALKIES
Alfred Hitchcock's
THE MAN WHO KNEW
TOO MUCH
[Vista Vision Technicolor-
extended for two days by demand]
Gala Release on 2-2-57
HOT BLOOD
(Cinemascope & Technicolor)
Starring:- Cornel Wilde,
and Jane Russel

ಭಾರತ ಮಾತೆ ಯಾರು?

ಎಂಬುದಕ್ಕೆ ನೆಹರೂರವರ ಉತ್ತರ

ನೆಹರೂರವರು ದೆಹಲಿಯಲ್ಲಿ ರಾಷ್ಟ್ರೀ ಕೇಡೆಟ್ ಪಡೆಗಳನ್ನು ಉದ್ದೇಶಿಸಿ ಮಾತನ ತ್ತಾ, ಭಾರತ ಮಾತೆ ಯಾರೆಂಬ ಪ್ರಶ್ನೆಯ ಹಾಕಿ ತಾವೇ ಉತ್ತರವನ್ನಿತ್ತಿರುತ್ತಾರೆ. ನಾನು ಮತ್ತು ಈ ದೇಶದ ಜನರೆಲ್ಲರೂ ಭಾ ಮಾತೆಯೆಂದು ಅವರು ಹೇಳಿ, ಈ ಪೈಕಿ ಗಾದರೂ ಊನವಾದರೆ ಭಾರತ ಮಾತೆಗೆ ತೆಯೇ ಎಂದು ಅಭಿಪ್ರಾಯಪಟ್ಟಿದ್ದಾರೆ

ರಷ್ಯದಲ್ಲಿ ದೂರಗಾಮಿ ಅಸ್ತ್ರ

ಬಹಳ ದೂರ ಪ್ರದೇಶಕ್ಕೆ ಹೋಗಬಲ್ಲ ಅಸ್ತ್ರಗಳನ್ನು ರಷ್ಯವು ತಯಾರಿಸಿರುವುದೆಂದು ರ ದ ರಕ್ಷಣಾ ಮಂತ್ರಿ ಮಾರ್ಷಲ್ ಜುಕಾಫ ರು ತಿಳಿಸಿರುತ್ತಾರೆ.

ಕನ್ನಿಕಾಪರಮೇಶ್ವರಿ ಸಹಕಾರ ಸಂಘ

ರಜತೋತ್ಸವ

ನಗರದ ಕನ್ನಿಕಾಪರಮೇಶ್ವರಿ ಸಹಕಾರ ಘದ ರಜತ ಮಹೋತ್ಸವವನ್ನು ಶೀಘ್ರದಲ್ಲಿ ರವೇರಿಸಲಾಗುವುದು. ಅದಕ್ಕಾಗಿ ಸಂಘದ ಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರ ಅಧ್ಯ ತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಂದರ್ಭದಲ್ಲಿ ನೂತನವಾಗಿ ಕಟ್ಟಿಸಿರುವ ಸ ದ ಸ್ವಂತ ಕಟ್ಟಡದಲ್ಲಿ ಪ್ರವೇಶೋತ್ಸವವೂ ರವೇರುವುದು.

WANTED
An experienced part-ti
clerk Please contact :-
WARDEN,
Ramdas Uppara Hostel
Saraswathipuram, Mysore

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುವು
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಸ್ಥರು
ಅಶೋಕ ರಸ್ತೆ, ಮೈಸೂರು (Estd 1911

ಚಾಮುಂಡೇಶ್ವರಿ
ಟಾಕೀಸ್
1—2—57ರಿಂದ : ಅಶೋಕ್ ಪ್ರಾರ
ಜ್ಯೂಬಿಲಿ ಫಿಲಂಸ್‌ರವರ ತಮಿಳು ಚಿತ್ರ
ಮರ್ಮವೀರ
ನಟವರ್ಗ-ವೈಜಯಂತಿಮಾಲಾ, ಶಿವಾಜಿ ಗಣೇ
ಆರ್. ಗಣೇಶ್, ತಂಗವೇಲು ಮುಂತಾದ

Office of the Executive Engineer,
City Municipal Council,
Mysore, Dated 25th January 1957

TENDER NOTIFICATION

Sealed Tenders will be received by the undersigned upt 4 P.M. on 4-2-1957 for works of providing Bamboo Th partitions with cloth screens, providing petromax ligh putting up temporary Pendals, providing barricading, hi of furniture etc, in connection with the ensuing General Elections of 1957. Each tenderer should deposit a sum Rs. 50 as earnest money in the Bank of Mysore under "Revenue Deposit" on behalf of Municipal Commissioner and Returning Officer, L.A Constituency, Mysore details of works may be seen in the Municipal Office during working hours.

H. SEETHARAMAIAH,
Municipal Executive Engineer

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI : FRIDAY 1—2—1957 ಮೈಸೂರು : ಶುಕ್ರವಾರ ೧ ೨—೧೯೫೭ : [ಸಂಚಿಕೆ : ೨೮

ಕಾಶ್ಮೀರದಲ್ಲಿ ಜನಮತಗಣನೆ ಬಗ್ಗೆ ನೆಹರೂ ನಿಲುವು

ಾಶ್ಮೀರದಲ್ಲಿ ಜನಮತಗಣನೆ ಸರಿನಲ್ಲಿ ಯುದ್ಧಕ್ಕೆಡೆಬೇಡ

ತರ ರಾಷ್ಟ್ರ ಹರಕತ್ತಿಗೆ ತಪ್ಪಿ ನಡೆದಿದ್ದರೆ ರಾಜೀನಾಮೆ

ಪ್ರಧಾನಿ ನೆಹರೂರವರ ಘೋಷಣೆ

ಪ್ರಧಾನಿ ನೆಹರೂರವರು ಮದ್ರಾಸಿನಲ್ಲಿ ನೆನ್ನೆ ರಂಗ ಸಭೆಯಲ್ಲಿ ಭಾಷಣ ಮಾಡಿ ಕಾಶ್ಮೀರ ವಿಷಯವಾಗಿ ತಾವು ಯಾವುದಾದರೂ ಅಂತ ರಾಷ್ಟ್ರೀಯ ಹರಕತ್ತುಗಳನ್ನು ಒಪ್ಪಿ ಅವನ್ನು ರಿಸಲಿಲ್ಲವೆಂದು ತಮಗೆ ಮನವರಿಕೆ ಮಾಡಿ ಟ್ಟಲ್ಲಿ ತಾವು ಅವನ್ನು ಪಾಲಿಸುವುದಾಗಿಯೂ ಲ್ಲವೇ ತಮ್ಮ ಪ್ರಧಾನಗಿರಿಗೆ ರಾಜೀನಾಮೆ ಡುವುದಾಗಿಯೂ ಘೋಷಿಸಿದರು.

ಒಂಭತ್ತು ವರ್ಷಗಳಿಂದಲೂ ಇರುವ ಈ ತೀ ಸಮಸ್ಯೆಯನ್ನು ಭದ್ರತಾ ಸಮಿತಿಯು ಪೂ ಪರ ಯೋಚನೆಯಿಲ್ಲದೆ ತೀರ್ಮಾನಿಸಿರುವು ರಿಂದ ಭಾರತೀಯರಿಗೆ ಆತಂಕವೂ, ಖೇದವೂ ಉಂಟಾಗಿರುವುದೆಂದೂ ಅವರು ಹೇಳಿದರು. ಭಾರತದ ವಾದವನ್ನೇ ಕೇಳದೆ ಸಂಯುಕ್ತ ರಾಷ್ಟ್ರಗ ನಿರ್ಣಯವನ್ನು ಆತುರವಾಗಿ ಮಂಡಿಸಿ ಅಂ ಕರಿಸಲಾಗಿದೆಯೆಂದೂ, ಈ ವಿಚಾರದಲ್ಲಿ ಕಾ ದ ಜನರ ಯೋಗಕ್ಷೇಮವು ಮಾತ್ರ ಮುಖ್ಯ ದೂ, ಅದೇ ಭಾರತ ಸರ್ಕಾರದ ಮತ್ತು ನಿಲುವೆಂದೂ ಅವರು ನುಡಿದರು.

ಕಾಶ್ಮೀರದಲ್ಲಿ ಜನಮತಗಣನೆಗೆ ಭಾರತವು ಲವು ಷರತ್ತುಗಳ ಮೇಲೆ ಒಪ್ಪಿತ್ತೆಂದೂ, ಆಕ್ರ ಣ ನಡೆಸಿರುವ ಪಾಕಿಸ್ತಾನ ಸೈನ್ಯವನ್ನು ಕಾ ರದಿಂದ ವಾಪಸು ಕರೆಸುವುದು ಮೊದಲನೇ ತ್ತಾಗಿತ್ತೆಂದೂ, ಅದನ್ನು ಈಗಲೂ ಮಾಡಿಲ್ಲ ದೂ, ಇಂತಹ ಷರತ್ತುಗಳ ಒಪ್ಪಿಗೆಯು ಸದಾ ಕ್ಕೂ ಸರಿ ಹೊಂದುವುದಿಲ್ಲವೆಂದೂ ಅವರು ಡಿದರು

ಕಾಶ್ಮೀರದ ಪ್ರಶ್ನೆಯ ಸಂಬಂಧದಲ್ಲಿ ತಪ್ಪು ನಡೆ ಳಿಕೆಯಾದರೆ ಭಾರತದಲ್ಲೆಲ್ಲಾ ಅನೇಕ ವಿಚಾ ಗಳ ಬಗ್ಗೆ ಪರಿಸ್ಥಿತಿ ತಲೆಕೆಳಗಾಗುವುದೆಂದೂ, ಕಿಸ್ತಾನವನ್ನು ಸ್ಥಾಪಿಸಲು ಆಧಾರವಾದ ಡು ರಾಷ್ಟ್ರಗಳ ಭಾವನೆಯನ್ನು ಭಾರತೀ ರು ಎಂದಿಗೂ ಒಪ್ಪುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು

ಜನಮತಗಣನೆಯ ಹೆಸರಿನಿಂದ ಕಾಶ್ಮೀರದ ತಂತ್ರ್ಯ ಕೊಲೆಯ ಯುದ್ಧಕ್ಕೆಡೆಯಾಗಬಾರ ದೂ, ಅದು ಭಾರತಕ್ಕೂ ಹರಡಿ ಇಲ್ಲಿನ ಕ್ಷ್ಯ ಪರಿಸ್ಥಿತಿಯು ವ್ಯತ್ಯಸ್ತವಾಗುವುದೇ ಅಲ್ಲದೆ, ನೈತಿಕವಾಗಿ ಭಾರತದ ನಿಲುವು ಸರಿ ಯಾಗಿರುವುದೆಂದು ಹೇಳಿದರು ಮಿಲಿಟರಿ ಕೂ ಗಳ ಪರಿಣಾಮವೇ ಈಗ ಆಗಿರುವ ನಿರ್ಣಯ ಕಾರಣವೆಂದೂ ಅಭಿಪ್ರಾಯಪಟ್ಟರು.

ಕಾಶ್ಮೀರವು ರಚಿಸಿರುವ ರಾಜ್ಯಾಂಗದ ಬಗ್ಗೆ ನಗ ಗೊಂದಲವನ್ನೆಬ್ಬಿಸಲಾಗಿರುವುದೆಂದೂ, ಕಿಸ್ತಾನವು ಆಕ್ರಮಿಸಿರುವ ಕಾಶ್ಮೀರದ ಭಾ ವನ್ನು ಪಾಕಿಸ್ತಾನದ ರಾಜ್ಯಾಂಗದಲ್ಲಿ ಸೇರಿಸಿ ದ ವಿಚಾರವಾಗಿ ಯಾರೂ ಮಾತನಾಡಿಲ್ಲ ದೂ, ಭದ್ರತಾ ಸಮಿತಿಯು ಈ ಬಗ್ಗೆ ಪ್ರಸ್ತಾಪಿಸಿಲ್ಲವೆಂದೂ, ಅವನ್ನು ಸಮಿತಿಯ ಗಮನಕ್ಕೆ ತಂದರೂ ಯಾವ ಪರಿಣಾಮವೂ ಆಗಲಿಲ್ಲವೆಂದೂ ಅವರು ಹೇಳಿ ಇದು ಅಸಾಧಾರಣ ವಿಷಯವೆಂದು ಅಭಿಪ್ರಾಯಪಟ್ಟರು.

ವ್ಯವಸಾಯ ಕಾಲೇಜಿನ ೪೦೦ ವಿದ್ಯಾರ್ಥಿಗಳ ಮುಷ್ಕರ

ವ್ಯವಸಾಯ ಪದವೀಧರರ ಸಂಬಳ ಹೆಚ್ಚಿಸಲು ಒತ್ತಾಯ

ಬೆಂಗಳೂರು ೧

ಇಂಜನಿಯರಿಂಗ್ ಮತ್ತು ವೈದ್ಯ ಶಾಖಾ ಪದವೀಧರರಿಗೆ ಕೊಡಲಾದ ಪುನರ್ವಿಮರ್ಶಿತ ಸಂಬಳದಂತೆ ವ್ಯವಸಾಯ ಪದವೀಧರರಿಗೆ ವೇತನವನ್ನು ಹೆಚ್ಚಿಸದಿರುವುದಕ್ಕಾಗಿ ಅತೃಪ್ತಿ ಸೂಚಿಸಲು ಹೆಬ್ಬಾಳಿನ ವ್ಯವಸಾಯ ಶಾಲಾ ಮತ್ತು ಕಾಲೇಜಿನ ೪೦೦ ವಿದ್ಯಾರ್ಥಿಗಳು ನೆನ್ನೆ ತರಗತಿಗಳಿಗೆ ಹೋಗದೆ ಏಳು ಮೈಲಿ ದೂರ ನಡೆದು ಇಲ್ಲಿನ ವಿಧಾನಸೌಧದ ಬಳಿ ಸೇರಿದರು. ಅವರುಗಳು ಭಿತ್ತಿ ಪತ್ರಿಕೆಗಳನ್ನು ಹಿಡಿದು ಪ್ರದರ್ಶನ ಮಾಡಿದರು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಸಚಿವರುಗಳಾದ ಶ್ರೀಗಳು ಟಿ. ಮರಿಯಪ್ಪ ಮತ್ತು ಹೆಚ್. ಎಸ್. ರುದ್ರಪ್ಪ ಮತ್ತು ವ್ಯವಸಾಯ ಡೈರೆಕ್ಟರ್ ಮಲ್ಲರಾಜಅರಸಿನವರನ್ನು ಅವರ ಪ್ರತಿನಿಧಿಗಳು ಭೇಟಿ ಮಾಡಿ ಸಂಬಳದ ಮಟ್ಟದಲ್ಲಿ ಬದಲಾವಣೆ ಮಾಡಬೇಕೆಂದು ಕೋರುವ ಮನವಿಗಳನ್ನು ಒಪ್ಪಿಸಿದರು. ಡಿಪ್ಲೊಮಾದವರಿಗೆ ೭೫ ರೂ ನಿಂದ ೨೦೦ ಮತ್ತು ಪದವೀಧರರಿಗೆ ೧೫೦ರಿಂದ ೩೦೦ ರೂ. ಸಂಬಳವನ್ನು ಗೊತ್ತುಮಾಡುವಂತೆ ಅವರು ಒತ್ತಾಯಪಡಿಸಿದರು

ಕಬ್ಬಹಳ್ಳಿ ವಿದ್ಯಾರ್ಥಿ ನಿಲಯ ಸಂಘದ ಮುಕ್ತಾಯ ಸಮಾರಂಭ

ನಗರದ ವೈಸ್‌ರಾಯ್ ರಸ್ತೆಯಲ್ಲಿರುವ ಕಬ್ಬಹಳ್ಳಿ ಚನ್ನಬಸಪ್ಪನವರ ವಿದ್ಯಾರ್ಥಿ ನಿಲಯ ಸಂಘದ ಮುಕ್ತಾಯ ಸಮಾರಂಭವು ನಾಳೆ ಸಂಜೆ ೫|| ಗಂಟೆಗೆ ನೆರವೇರುವುದು. ಕೃಷ್ಣರಾಜೇಂದ್ರ ಆಸ್ಪತ್ರೆಯ ಡಾ|| ಎ. ಕೆ. ಗೋಪಾಲರಾಜರವರು ಅಧ್ಯಕ್ಷತೆ ವಹಿಸುವರು. ಮಾಜಿ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಭಾಷಣ ಮಾಡುವರು. ಶ್ರೀಮತಿ ನಾಗರತ್ನಮ್ಮ ಸುಬ್ಬಣ್ಣನವರು ಬಹುಮಾನ ವಿನಿಯೋಗ ಮಾಡುವರು.

ವೆಂಕಟಕೃಷ್ಣಯ್ಯನವರ ದಿನಾಚರಣೆ

ನಗರದ ಅನಾಥಾಲಯದ ಸಾಹಿತ್ಯ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಎಂ. ವೆಂಕಟಕೃಷ್ಣಯ್ಯನವರ ದಿನಾಚರಣೆಯನ್ನು ನೆರವೇರಿಸಲಾಗುವುದು. ಶಾರದಾ ವಿಲಾಸ ಲಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು. ಶ್ರೀಗಳಾದ ಎಂ. ಯಾಮುನಾಚಾರ್ಯ, ತಗಡೂರು ರಾಮಚಂದ್ರರಾವ್, ಸೋಸಲೆ ರ. ಜಗೋಪಾಲಯ್ಯಂಗಾರ್ ಮತ್ತು ಕೃಷ್ಣಮೂರ್ತಿರಾಯರಿಂದ ಭಾಷಣಗಳು ನಡೆಯುವುವು ವಿ|| ಹೆಚ್. ಟಿ. ರಾಮಸ್ವಾಮಿಯವರ ಸಂಗೀತವು ಏರ್ಪಾಡಾಗಿದೆ. ಸರ್ವರಿಗೂ ಸ್ವಾಗತವಿದೆ.

ಲೋಕಸಭೆ ಮತ್ತು ವಿಧಾನ ಸಭೆಗಳ ನಾಮಪತ್ರ ಪರಿಶೀಲನೆ

ಒಂದು ನಾಮಪತ್ರದ ವಾಪಸಾತಿ

ಮೈಸೂರು ೧

ಲೋಕ ಸಭೆಗೆ ಈ ಜಿಲ್ಲಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿರುವವರೆಲ್ಲರ ಉಮೇದುವಾರಿಕೆಗಳನ್ನೂ ಜಿಲ್ಲಾ ಚುನಾವಣಾಧಿಕಾರಿ ಶ್ರೀ ಡಿ ಆರ್ ಚನ್ನರುದ್ರಯ್ಯನವರು ಈ ದಿನ ಅಂಗೀಕರಿಸಿದರು

ಮೈಸೂರು ನಗರ (ದಕ್ಷಿಣ), ಉತ್ತರ ಮತ್ತು ಮೈಸೂರು (ತಾಲ್ಲೂಕು) ಕ್ಷೇತ್ರಗಳಿಂದ ವಿಧಾನ ಸಭೆಗೆ ನಿಂತಿದ್ದವರೆಲ್ಲರ ನಾಮ ಪತ್ರಗಳನ್ನೂ ಚುನಾವಣಾಧಿಕಾರಿಗಳಾದ ಶ್ರೀ ಎ ವಿಶ್ವನಾಥ್‌ರವರು ಅಂಗೀಕರಿಸಿರುತ್ತಾರೆ ನಗರದ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುತ್ತಾರೆ

ಪಿರಿಯಾಪಟ್ಟಣ, ಹುಣಸೂರು ಮತ್ತು ಕೃಷ್ಣರಾಜನಗರಗಳಿಂದ ವಿಧಾನ ಸಭೆಗೆ ಸ್ಪರ್ಧಿಸಿರುವವರೆಲ್ಲರ ನಾಮ ಪತ್ರಗಳನ್ನೂ ಅಂಗೀಕರಿಸಲಾಗಿದೆ

ವಿಶ್ವವಿದ್ಯಾಲಯದ ತಮಿಳು ಸಂಘ

ನಗರದಲ್ಲಿರುವ ವಿಶ್ವವಿದ್ಯಾಲಯ ತಮಿಳು ಸಂಘದ ಮುಕ್ತಾಯ ಸಮಾರಂಭವು ನಾಳೆ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ನೆರವೇರುವುದು ಫಾದರ್ ಆಡಿಯೋರವರು ಅಧ್ಯಕ್ಷತೆ ವಹಿಸುವರು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಶ್ರೀ ಎಸ್ ರುದ್ರಪತಿ ಮತ್ತು ಮಹಾರಾಣಿ ಕಾಲೇಜಿನ ಶ್ರೀಮತಿ ಟಿ. ಕೆ. ನಾಗಾಂಬಾಳ್‌ರವರಿಂದ ಭಾಷಣಗಳಿವೆ ಬೆಂಗಳೂರು ಕಮಲಾಬಾಯಿ ಹೈಸ್ಕೂಲಿನ ಶ್ರೀಮತಿ ಎ. ಕೆ. ಜಾನಕಮ್ಮಾಳ್‌ರವರ ಸಂಗೀತವು ನಡೆಯುವುದು.

ಮಂಡ್ಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಮಂಡ್ಯದ ಶ್ರೀ ಸದ್ಗುರು ಸಂಗೀತ ಪಾಠಶಾಲೆಯ ಆಶ್ರಯದಲ್ಲಿ ನಾಳೆಯಿಂದ ೪ನೇ ತಾರೀಕು ಪೂರ್ತಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಅದರ ಅಂಗವಾಗಿ ನಾಳೆ ಸಂಜೆ ೫ ಗಂಟೆಗೆ ತ್ಯಾಗರಾಜರು ಮತ್ತು ಪುರಂದರ ದಾಸರ ಪುಣ್ಯ ದಿನಾಚರಣೆಗಳು ಆಗುವುವು. ಸೋಸಲೆ ಮಠಾಧೀಶರಾದ ಶ್ರೀ ಶ್ರೀ ವಿದ್ಯಾ ಕೃಷ್ಣ ತೀರ್ಥ ಶ್ರೀಪಾದಂಗಳವರು ಅಧ್ಯಕ್ಷತೆ ವಹಿಸುವರು. ಡಾ|| ಬಿ. ಆರ್. ಶಾಮಾಚಾರ್ಯರ ಕೊಳಲು, ವಿ|| ಎಂ. ವೆಂಕಟೇಶ್ ಮತ್ತು ಎಂ. ಶೇಷಗಿರಿಯವರ ಸಂಗೀತ ಮತ್ತು ಉಪನ್ಯಾಸಗಳು ನಡೆಯುವುವು.

ಯಳಂದೂರು ವಿದ್ಯಾನಿಧಿ ಸಮಿತಿ ಸಭೆ

ನರಸಿಂಗರಾವ್ ಪೂರ್ಣಯ್ಯನವರ ಸ್ಮಾರಕ ಯಳಂದೂರು ಎಜುಕೇಷನ್ ಫಂಡಿನ ವಾರ್ಷಿಕ ಸಭೆಯು ನಾಳಿದ್ದು ಬೆಳಿಗ್ಗೆ ೧೧ ಗಂಟೆಗೆ ಯಳಂದೂರಿನಲ್ಲಿ ಸೇರುವುದು. ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ ನಿಧಿಗಾಗಿ ಕಳೆದ ೩೭ ವರ್ಷಗಳಲ್ಲಿ ೩೯,೭೩೦-೫-೦ ರೂ. ವಸೂಲಾಗಿ ೩೬,೦೫೧ ರೂ ವೆಚ್ಚವಾಗಿದೆ. ಎಲ್ಲಾ ಕೋಮಿನ ೭೦೦ ವಿದ್ಯಾರ್ಥಿಗಳಿಗೆ ೩೫,೧೦೨-೫-೦ ರೂ. ಗಳನ್ನು ಹಂಚಲಾಗಿದೆ.

ಜಿಲ್ಲೆಯ ಇತರ ಕಡೆಗಳಲ್ಲೂ ಎಲ್ಲ ನಾಮಪತ್ರಗಳ ಅಂಗೀಕಾ

ಕೊಳ್ಳೇಗಾಲ ರಿಸರ್ವ್ ಕ್ಷೇತ್ರದಿಂದ ೧ ಉಮೇದುವಾರಿಕೆ ವಾಪಸು

ಸ್ವಂ ವ. ಪ್ರೋ] ನಂಜನಗೂಡು

ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಟಿ. ನರಸೀಪುರ, ಕೊಳ್ಳೇಗಾಲ ಮತ್ತು ಹಾಳ್ಯ ಈ ಕ್ಷೇತ್ರಗಳಿಂದ ವಿಧಾನ ಸಭೆ ಸಲ್ಲಿಸಿರುವ ಎಲ್ಲಾ ನಾಮಪತ್ರಗಳನ್ನೂ ಇಲ್ಲಿ ಚುನಾವಣಾಧಿಕಾರಿಗಳು ಅಂಗೀಕರಿಸಿರುತ್ತಾರೆ ಕೊಳ್ಳೇಗಾಲ ರಿಸರ್ವ್ ಕ್ಷೇತ್ರದಿಂದ ಶ್ರೀ ಬಸ ಯ್ಯನವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುವರು. ಒಟ್ಟು ೯ ಸ್ಥಾನಗಳಿಗೆ ೪೩ ಮಂದಿ ಸ್ಪರ್ಧಿಸಿರುವರು

ಜೂಜಾಟಕ್ಕಾಗಿ ಸಜಾ ಮತ್ತು ದಂಡ

ಈ ತಾಲ್ಲೂಕು ಮೂಡಹಳ್ಳಿಯಲ್ಲಿ ಜೂಜ ತ್ತಿದ್ದ ಮಾದಪ್ಪ, ಲಿಂಗಣ್ಣ, ಶಿವಣ್ಣ, ನ ಬುಂಡಪ್ಪ, ಪುಟ್ಟಪ್ಪ ಮತ್ತು ಲಿಂಗಪ್ಪ ಎಂಬು ರ ಮೇಲೆ ಹೂಡಲಾಗಿದ್ದ ಮೊಕದ್ದಮೆಯ ಮಾದಪ್ಪನಿಗೆ ೧ ತಿಂಗಳ ಸಜಾ ೨೦೦ ರೂ ದ ಡ, ನಂಜುಂಡಪ್ಪನಿಗೆ ೩ ತಿಂಗಳ ಸಜಾ ೩೦ ರೂ ದಂಡ, ಮತ್ತು ಇತರರಿಗೆ ಕೋರ್ಟು ಯುವವರೆಗೆ ಸಜಾ ಮತ್ತು ೧೦ ರೂ ಜುಲ್ಮಾನೆಯನ್ನು ಇಲ್ಲಿನ ನ್ಯಾಯಾಧೀಶರಾದ ಶ್ರೀ ಕೆ. ಎಂ. ಸಿದ್ದಪ್ಪನವರು ವಿಧಿಸಿರುತ್ತಾರೆ ಜುಲ್ಮಾನೆ ಹಣದಲ್ಲಿ ಅರ್ಧವನ್ನು ಪೋಲೀಸು ಇನ್ಸ್‌ಪೆಕ್ಟರ್ ಕೃಷ್ಣಪ್ಪ ಮತ್ತು ಸಬ್ ಇನ್ಸ್‌ಪೆಕ್ಟರ್ ಶ್ರೀರಂಗನಾಥರವರು ಮತ್ತು ಇತರ ಪೋಲೀಸರಿಗೆ ಕೊಡುವಂತೆ ಸೂಚಿಸಿರುತ್ತಾರೆ

ಸ್ಟೇಷನ್ ಮಾಸ್ಟರರಿಂದ ಸಂಬಳದ ನಿರಾಕರಣೆ

ಮೈಸೂರು ೧

ತಮ್ಮ ಸಂಬಳದ ದರ್ಜೆ ಮತ್ತು ಭತ್ಯ ಮೊದಲಾದುವುಗಳ ಬಗ್ಗೆ ಅತೃಪ್ತಿಯನ್ನು ಸೂಚಿಸಲು ನಗರದ ಮತ್ತು ಮೈಸೂರು ಸೌತ್ ರೈಲ್ವೆ ಸ್ಟೇಷನ್ನುಗಳ ಸ್ಟೇಷನ್ ಮಾಸ್ಟರು ಮತ್ತು ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರುಗಳು ಮೊದಲೇ ನಿರ್ಧರಿಸಿದ್ದಂತೆ ಈ ದಿನ ತಮ್ಮ ಸಂಬಳಗಳನ್ನು ತೆಗೆದುಕೊಳ್ಳಲಿಲ್ಲ.

ನಾಳಿದ್ದು ನಲ್ಲಿ ನೀರು ನಿಲ್ಲುತ್ತದೆ

ನಾಳಿದ್ದು ವಿದ್ಯುಚ್ಛಕ್ತಿಯು ಇರುವುದಿಲ್ಲವಾದ ಪ್ರಯುಕ್ತ ಅಂದು ಬೆಳಿಗ್ಗೆ ೯ ಗಂಟೆಯಿಂದ ಮಧ್ಯಾಹ್ನ ೪ ಗಂಟೆವರೆಗೆ ನಗರದಲ್ಲಿ ನೀರು ಸರಬರಾಜಾಗುವುದಿಲ್ಲವೆಂದು ತಿಳಿಸಲಾಗಿದೆ

ಹರಿಕಥಾ ಕಾರ್ಯಕ್ರಮದ ಬಗ್ಗೆ ಹೇಳಿಕೆ

ನಜರ್‌ಬಾದ್ ಮೊಹಲ್ಲ ಶ್ರೀ ಮೀನಾಕ್ಷಮ್ಮನವರ ಮಠದಲ್ಲಿ ಇಂದಿನಿಂದ ಏರ್ಪಡಿಸಿರುವ ಹರಿಕಥಾ ಕಾರ್ಯಕ್ರಮಗಳಲ್ಲಿ ತಮ್ಮ ಒಪ್ಪಿಗೆಯಿಲ್ಲದೆ ಅಥವಾ ಪೂರ್ವಭಾವಿಯಾಗಿ ವಿಚಾರಿಸದೆ ತಮ್ಮ ಹೆಸರನ್ನು ಹಾಕಿಸಿರುವುದಕ್ಕಾಗಿ ವೇ|| ಬ್ರ|| ಕೋಣನೂರು ಸೀತಾರಾಮ ಶಾಸ್ತ್ರಿಗಳವರು ವಿಷಾದವನ್ನು ವ್ಯಕ್ತಪಡಿಸಿರುತ್ತಾರೆ ಸಾರ್ವಜನಿಕರು ಇಂತಹ ಬೇಜವಾಬ್ದಾರಿ ಪ್ರಕಟಣೆಗೆ ಮರುಳಾಗಿ ಕಲಾವಿದರ ವಿಷಯದಲ್ಲಿ [illegible] ಹೊಂದಕೂಡದೆಂದು ಮನವಿ ಮಾಡಿದ್ದಾರೆ.

ಹೈದರಾಬಾದು ವಿದ್ಯಾರ್ಥಿಗಳ ಘರ್ಷಣೆಯಲ್ಲಿ ೩೩ ಮಂದಿಗೆ ಪೆಟ್ಟು

ಹೈದರಾಬಾದು ನಗರದ ಒಂದು ಹಾಸ್ಟೆಲಿನಲ್ಲಿ ನೆನ್ನೆ ವಿದ್ಯಾರ್ಥಿಗಳ ಎರಡು ಗುಂಪುಗಳಿಗೆ ಘರ್ಷಣೆಯಾಗಿ ಇಬ್ಬರು ಉಪಾಧ್ಯಾಯರೂ ಸೇರಿ ೩೩ ಮಂದಿಗೆ ಗಾಯವಾಗಿ ಶಾಲೆಯನ್ನು ಮೂರು ದಿನಗಳ ಕಾಲ ಮುಚ್ಚಲಾಗಿದೆ. ರಿಪಬ್ಲಿಕ್ ದಿನದಂದು ಒಬ್ಬ ವಿದ್ಯಾರ್ಥಿಯು ರಾಷ್ಟ್ರಧ್ವಜಕ್ಕೆ ಅವಮಾನ ಪಡಿಸಿದನೆಂದೂ, ಅವನಿಂದ ಇತರರ ಕ್ಷಮಾಪಣೆ ಕೇಳಿದರೆಂದೂ, ಅದರಿಂದ ಜಗಳವಾಗಿ ಕೋಲಾಹಲವಾಗಿ ಬಣ್ಣಕ್ಕೆ ತಿರುಗಿ, ಕಲ್ಲು ಮತ್ತು ಚಾಕುಗಳ ಪ್ರಯೋಗವಾಯಿತೆಂದೂ ಹೇಳಲಾಗಿದೆ.

ರಷ್ಯದಿಂದ ಅಮೆರಿಕಾ ಅಧಿಕಾರಿಗಳ ಉಚ್ಚಾಟನೆ

ಮಾಸ್ಕೋನಲ್ಲಿರುವ ಅಮೆರಿಕಾ ರಾಯಭಾರಿ ಕಛೇರಿಯ ಇಬ್ಬರು ಮಿಲಿಟರಿ ಸಹಾಯಾಧಿಕಾರಿಗಳು ರಷ್ಯದಿಂದ ಹೊರಕ್ಕೆ ಹೋಗುವಂತೆ ಸೂಚಿಸಲಾಗಿದೆ.

ಹರಿಕಥೆ

ನಗರದ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಸದ್ಗುರು ಸೇವಾ ಮಂಡಲಿಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ವಾಲುಕೇಶ್ವರ ಭಾರತೀಸ್ವಾಮಿಗಳವರ ಜಯಂತಿ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ಪಂಢರಪುರ ಶಾಸ್ತ್ರಿ ರಂತಿದೇವ ಮತ್ತು ನಾಳಿದ್ದು ಸಂಜೆ ೬॥ ಗೆ ಬಂಧು ಪ್ರೇಮಾ ಭರತ ಎಂಬ ಹರಿಕಥೆಗಳನ್ನು ಶ್ರೀ ಕುರ್ತುಕೋಟಿ ಶ್ರೀನಿವಾಸ ಶಾಸ್ತ್ರಿಗಳವರು ನಡೆಸುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದಿಲ್ರುಬಾ ಮತ್ತು ಸೆಲ್ಲೊ. ೭-೫೫ ಮತ್ತು ೮-೧೫ ಎ. ನಾರಾಯಣರಾವ್-ದೇವರ ನಾಮ. ೭-೩೦ ಚಿತ್ತೂರ ನಾಗಸ್ವರ. ಮಧ್ಯಾಹ್ನ ೧೨ ಎ. ನಾರಾಯಣರಾವ್-ಸಂಗೀತ. ೧೨-೩೦ ಸುಗಮ ಸಂಗೀತ ೧೨-೪೫ ಬಾಲಜಗತ್. ೧-೫೦ ದಿಲ್ರುಬಾ ಮತ್ತು ಸೆಲ್ಲೊ. ಸಂಜೆ ೫-೩೦ ಮತ್ತು ೮ ವಸುಮತಿ ರಾಮಚಂದ್ರ-ಸಂಗೀತ. ೬ ೫ ವಿನೋದ ಸಂಗೀತ. ೬-೨೦ ಭಜನ ಗಾನ ೭-೩೦ ಪ್ರಸಂಗ ೮-೩೦ ರೇಡಿಯೋ ನ್ಯೂಸ್ ರೀಲ್ ೮-೪೦ ಪ್ರಸಾರ ಗೀತೆ ೯-೧೫ ಪ್ರಶ್ನೆಗಳು ೯-೩೦ ರಾಷ್ಟ್ರೀಯ ಸಂಗೀತ. ಕಾರ್ಯಕ್ರಮ ಮುಕ್ತಾಯ ೧೧

GLOBE TUTORIAL COLLEGE,
Sadvidya Patashala Buildings.
Revision Classes for students promoted to S S L C Class
Time 8 to 10 30 A.M.

ಅಡಿಗೆಯವರು ಬೇಕಾಗಿದ್ದಾರೆ

ಮೈಸೂರು ಫ್ರೇಜರ್‌ಪೇಟೆಯಲ್ಲಿರುವ ಎಂ. ಕೆ. ಹಾಸ್ಟಲಿಗೆ ಖಾಯಂ ಆಗಿ ಇರಲು ಅನುಭವಸ್ಥ ಅಡಿಗೆಯವರು ಬೇಕಾಗಿದ್ದಾರೆ ಇಷ್ಟವುಳ್ಳವರು ಸಂಜೆ 7 ಘಂಟೆ ಮೇಲೆ ಸೆಕ್ರೆಟರಿಯವರನ್ನು ಬಂದು ಕಾಣಬಹುದು

ಸಿ. ಆರ್. ರಾಮಚಂದ್ರ,
ಸೆಕ್ರೆಟರಿ, ಎಂ. ಕೆ ಹಾಸ್ಟಲ್

ಇರಾಕ್, ತುರ್ಕಿ ಮತ್ತು ಇರಾನುಗಳಿಗೆ ರಷ್ಯದ ಎಚ್ಚರಿಕೆ

ಅಮೆರಿಕವು ಇರಾನ್, ಇರಾಕ್, ತುರ್ಕಿ ಮತ್ತು ಇತರ ರಾಜ್ಯಗಳಲ್ಲಿ ಅಣು ಶಸ್ತ್ರ ಕಾರ್ಯಾಚರಣೆ ನಡೆಸಲು ಸೈನ್ಯವನ್ನು ಇಡುವ ಪ್ರಯತ್ನದ ವಿಚಾರವನ್ನು ರಷ್ಯದ ಕಮ್ಯೂನಿಸ್ಟ್ ಪಕ್ಷದ ಪತ್ರಿಕೆ ಪ್ರಾವ್ಡಾ ಪ್ರಸ್ತಾಪಿಸಿ, ಆ ರಾಜ್ಯಗಳಿಗೆ ಎಚ್ಚರಿಕೆಯಿತ್ತು. ಆ ಪ್ರದೇಶಗಳಿಂದ ಉಪಯೋಗಿಸುವ ಇಂತಹ ಅಸ್ತ್ರಗಳನ್ನೇ ತಾನೂ ಉಪಯೋಗಿಸಿ ಅವನ್ನು ನಾಶಪಡಿಸಲಾಗುವುದೆಂದು ತಿಳಿಸಿದೆ. ದೂರಗಾಮಿ ಶಸ್ತ್ರ ತಯಾರಿಕೆಯಲ್ಲಿ ಅಮೆರಿಕವು ರಷ್ಯಕ್ಕಿಂತ ಹಿಂದೆ ಬಿದ್ದಿದೆಯೆಂದೂ ಅದು ಹೇಳಿದೆ

ಬಣಜಿಗರ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವ

ನಗರದ ಸಂಸ್ಕೃತಪುರದಲ್ಲಿರುವ ಬಣಜಿಗರ ಸಂಘದ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವವು ನಾಳೆ ಸಂಜೆ ೫॥ ಗಂಟೆಗೆ ಡಾ॥ ಕೆ. ವೆಂಕಟಗಿರಿಗೌಡರ ಅಧ್ಯಕ್ಷತೆಯಲ್ಲಿ ನಡೆಯುವುದು. ಡಾ॥ ಎಲ್. ಸೀಬಯ್ಯನವರು ಭಾಷಣ ಮಾಡುವರು.

ಬೇಕಾಗಿದೆ

ಸರ್ಕಾರದ ಕೆಲಸದಿಂದ ಪೆನ್ಷನ್ ಆಗಿ ನಿವೃತ್ತರಾಗಿರುವ ಮತ್ತು ಆರೋಗ್ಯ ದೃಢಕಾಯರಾಗಿರುವ ಉಪಾಧ್ಯಾಯರು ಹಾಸ್ಟಲಿನ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದೆ. ಬಾಕೀ ವಿಷಯವು ಮುಖತಃ. ಇಷ್ಟವುಳ್ಳವರು ಈ ಕೆಳಗೆ ರುಜು ಮಾಡಿರತಕ್ಕವರನ್ನು ನೋಡತಕ್ಕದ್ದು.

ಎಂ. ಎಲ್. ನಾಗಣ್ಣ, ಅಧ್ಯಕ್ಷರು
368. ತ್ಯಾಗರಾಜ ರೋಡ್, ಮೈಸೂರು

ನಾದಬ್ರಹ್ಮ ಸಂಗೀತ ಸಭಾ

ಮೈಸೂರು
3-2-1957 ನೇ ಭಾನುವಾರ
ಸಂಜೆ 5.30 ಘಂಟೆಗೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ಸಂ॥ ವಿದ್ವಾನ್ ಟಿ. ಕೆ. ರಂಗಾಚಾರ್- ಹಾಡುಗಾರಿಕೆ
,, **ಕಂಡದೇವಿ ಅಳಗಿರಿಸ್ವಾಮಿ-** ಪಿಟೀಲು
,, **ಪಾಲ್‌ಘಾಟ್ ರಘು** ಮೃದಂಗ
ಪ್ರವೇಶ ಧನ:- ಗಂಡಸರಿಗೆ 1-8-0
ಹೆಂಗಸರಿಗೆ 1-0-0
[ಮೆಂಬರಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ ಸ್ತ್ರೀಯರಿಗೆ 1-0-0]

ಅಪ್ಪಟವಾದ

ಹಸುವಿನ ಹಾಲು

ಪೌಂಡು 1ಕ್ಕೆ 0 3 6 : ½ ಪೌಂಡಿಗೆ 0 1 9
ಖಾಜೇ ಭೇಟಿ ಕೊಟ್ಟು ಪರೀಕ್ಷಿಸಿ
ಕಾಲ: ಬೆಳಗ್ಗೆ 5-30 ರಿಂದ 9-30
ಮಧ್ಯಾಹ್ನ 3 ರಿಂದ 6-30

ಗೋಕುಲ ಮಿಲ್ಕ್ ಡೈರಿ

ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ
ಸೂರಿಟಿ ರಸ್ತೆ, ಮೈಸೂರು
ರಘೂವಿಲಾಸ ಅಗ್ರಹಾರದ ಶಾಖೆಯಲ್ಲಿ ಸಹ ಮನೆಗಳಿಗೂ ಸಪ್ಲೈ ಕೊಡಲಾಗುತ್ತೆ.

ನೆಹರೂರವರ ವಿರುದ್ಧವಾಗಿ ಉಮೇದುವಾರರು

ಲೋಕಸಭೆಗೆ ಅಲಹಾಬಾದು ಜಿಲ್ಲೆಯ ಫೂಲ್ಪುರ ದ್ವಿಸದಸ್ಯ ಕ್ಷೇತ್ರದಿಂದ ನೆಹರೂರವರ ವಿರುದ್ಧವಾಗಿ ಜನಸಂಘದ ಶಿವ ಆಧಾರ ಪಾಂಡೆ, ಅಖಿಲ ಭಾರತೀಯ ಗೋ ಸಮ್ಮೇಳನದ ಕಾರ್ಯದರ್ಶಿ ಸೀತಾ ಆರ್. ಖೇಮ್ಕ ಮತ್ತು ಸ್ವತಂತ್ರರಾದ ಇಂದುದೇವ್‌ರವರು ಸ್ಪರ್ಧಿಸಿರುವರು. ಅಖಿಲ ಭಾರತ ಹಿಂದೂ ರಾಜ್ಯದ ಕಾರ್ಯದರ್ಶಿ ಎಲ್. ಜಿ. ಥಟ್ಟೆಯವರು ಸ್ಪರ್ಧಿಸಿಲ್ಲ.

NATIONAL LEAGUE,
Anatholaya Buildings, Mysore
Offers excellent coaching for students of the High School classes
Join Immediatly

SRI GAYATHRI

TALKIES
From 1-2-57 : For 3 days
M.G.M's

THE LAST HUNT

(Cinemascope & Technicolor)
With :- Robert Taylor,
Stewart Granger

Morning Shows on Sat & Sun.
PRIDE & PREJUDICE

-: Coming Shortly :-
THE ANIMAL WORLD

ಒಲಿಂಪಿಯಾ ★

ಅಮೋಘ 2ನೇ ವಾರ
ತ. ರಾ. ಸು ರವರ ಸುಪ್ರಸಿದ್ಧ ಕಾದಂಬರಿ
ಹಂಸಗೀತೆ ಯ ಆಧಾರದ ಮೇಲೆ
ರಚಿತವಾದ ಅಮರ ಕೃತಿ

ಬಸಂತ್ ಬಹಾರ್

ಪಾತ್ರ:- ಭಾರತ್‌ಭೂಷಣ್, ನಿಮ್ಮಿ

ರಣಜಿತ್ ಟಾಕೀಸ್

2-2-57ರಿಂದ : ಅಮೋಘ ಪ್ರಾರಂಭ
ಷೇಕ್ ಮುಖ್ತಾರ್‌ರವರ ಹಿಂದಿ ಚಿತ್ರ

ಮಿಸ್ಟರ್ ಲಂಬು

ಪಾತ್ರ:- ಷೇಕ್ ಮುಖ್ತಾರ್, ವಿಜಯಲಕ್ಷ್ಮಿ, ಸುರಯ್ಯಾ, ಅನ್ವಾರಿ ಮತ್ತು ಇತರರು
ಸಂಗೀತ: ಓ. ಪಿ. ನಯ್ಯಾರ್

ಹೆಸರಘಟ್ಟದಲ್ಲಿ ಫಲಪುಷ್ಪ ಸಂಶೋಧನ ಕೇಂದ್ರ

ಕೇಂದ್ರ ವ್ಯವಸಾಯ ಸಂಶೋಧನಾ ಮಂಡಲಿಯವರು ಹೆಸರಘಟ್ಟದಲ್ಲಿ ಫಲಪುಷ್ಪ ಸಂಶೋಧನಾ ಯಂತ್ರವನ್ನು ಸ್ಥಾಪಿಸುವುದಕ್ಕೆ ಮಂಜೂರಾತಿ ಕೊಟ್ಟಿರುತ್ತಾರೆ. ದ್ವಿತೀಯ ಯೋಜನೆಯ ಅಂಗವಾಗಿ ಉತ್ತರ ಭಾರತದಲ್ಲಿ ಯಂತ್ರವನ್ನು ಸ್ಥಾಪಿಸಲಾಗುವುದು ಅದಕ್ಕೆ ೧೧,[illegible] ರೂ ವೆಚ್ಚವಾಗುವುದು.

CITY TUTORIAL COLLEGE
ಹೈಸ್ಕೂಲು ಮತ್ತು ಮಿಡಲ್ ಸ್ಕೂಲಿನ ಪ್ರತಿ ತರಗತಿಯ ವಿದ್ಯಾರ್ಥಿಗಳಿಗೂ ಬೇಸಿಗೆ ರಜಾ ವಿಶೇಷ ತರಗತಿಗಳು ಪ್ರಾರಂಭವಾಗಿವೆ
C. T. C., OLD AGRAHAR
MYSORE

ಕಡಿಮೆ ಬೆಲೆಗೆ ದೊರೆಯು

ಮೈಸೂರು ಸಿಟಿ ಮಂಡಿ ಮೊಹಲ್ಲಾ [illegible] ರಸ್ತೆ, ಮೋತಿಲಾಲ್ ಟಾಕೀಸ್ ಬಳಿ 963ನೇ ಡೋರ್ ನಂ. ಮನೆಯಲ್ಲಿ ಮನೆ ಕಟ್ಟುವ ಸಾಮಾನುಗಳು-ಅಂದರೆ ಸಾಗುವಾನಿ ಮರದ ಚೌಕಟ್ಟು, [illegible]ಲು, ಮೈಟ್‌ಲಿಡ್ ಕಿಟಕಿ, ಫರ್ನಿಚರುಗಳು ಕಡಿಮೆ ಬೆಲೆಗೆ ದೊರೆಯುತ್ತವೆ. ಸದರಿ ಮನೆಯಲ್ಲಿ [illegible]ವಾಗಿರುವ ಟಿಂಬರ್ ಮರ್ಚೆಂಟ್ [illegible] ಯ್ಯನವರಲ್ಲಿ ವಿಚಾರಿಸಬಹುದು.

ಹರಾಜು

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್

ಇನ್‌ಸಾಲ್‌ವೆನ್ಸಿ ನಂಬರು 3/56

ಅರ್ಜಿದಾರರು:- ಸೈಯದ್ ಅಬ್ದುಲ್ ಗಫೂ
Vs.
ರೆಸ್ಪಾಂಡೆಂಟ್ಸ್:- ಕೆ. ಎಸ್. ರಾಮರಾವ್ ಮತ್ತು ಇತರರು

ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರ ಬಾಬ ಫರ್ನಿಚರ್, ಎಂದರೆ ತೇಗದ ಮರದ ಗಾ ಹಾಕಿದ ದೊಡ್ಡ ಬೀರು, ಕುರ್ಚಿ, ಬೀ ಮಂಚ, ಕನ್ನಡಿ, ಟೇಬಲ್, ಟೀಪಾಯಿ ವಗೈರೆ ಸಾಮಾನುಗಳು ಮೈಸೂರು ಡಿಸ್ಟ್ರಿ ಅಫಿಷಿಯಲ್ ರಿಸೀವರ್‌ರಿಂದ ತಾ॥ 3-2-19 ನೇ ಭಾನುವಾರ ಬೆಳಗ್ಗೆ 9 ಘಂಟೆಯಿಂದ ಮೈ ಸೂರು ಮಂಡಿ ಮೊಹಲ್ಲಾದಲ್ಲಿರುವ ಫೂಲ್ ಸ್ಟ್ರೀಟ್ ಬಳಿ ಇರತಕ್ಕ ಮಳಿಗೆಯಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಯಾ ಬೇಕಾದರೂ ಬಿಡ್ ಮಾಡಿ ಮೊಬಲಗ ಕೊಟ್ಟು ಮಾಲು ಪಡೆಯಬಹುದು.

ಎಸ್. ಎಲ್. ಲಕ್ಷ್ಮೀಗೌಡ,
ಬಿ.ಎ., ಎಲ್‌ಎಲ್.ಬಿ.
ಅಡ್ವೊಕೇಟ್ ಮತ್ತು ಅಫಿಷಿಯಲ್ ರಿಸೀ
- ಮೈಸೂರು,
ತಾ॥ 29-1-57

Edited, Printed and Published by
A. R. Nagarajan at Sadhvi Press
D. Subbiah Road, Mysore

5 ಜೊತೆ ಭಾರಿ ಕುಸ್ತಿಗಳು

3—2—57ನೇ ಭಾನುವಾರ 4 ಘಂಟೆಗೆ
ಮೈಸೂರು ದೊಡ್ಡಕೆರೆ ಫುಟ್‌ಬಾಲ್ ಮೈದಾನದಲ್ಲಿ
ನಡೆಯುತ್ತವೆ

1. ಸದರನ್ ರೈಲ್ವೆ ವರ್ಕ್‌ಷಾಪ್ ಕೊರಾಪಿಟ್ ಪೈ॥ ಕೆಂಚಪ್ಪ Vs ಬೆಂಗಳೂರು ದಂಡು ಪೈ॥ ಕಾಶ್ಮೀರ್ ಮೆಹಬೂಬ್
2. ಬಿಲ್‌ದಾರ್ ಪಟ್ಟಿ ಪೈ॥ ಬಸವರಾಜು Vs ಮಂಡಿ ಮೊಹಲ್ಲಾ ಪೈ॥ ಅಸ್ಗರ್ ಪಾಷಾ
3. ಪೈ॥ [illegible] ರಾಮು ಮಗ ಪೈ॥ ತಿಮ್ಮಯ್ಯ (ವೀರ ಅಭಿಮನ್ಯು) Vs ಪಾಲಹಳ್ಳಿ ಪೈ॥ ಗಂಗಾಧರಪ್ಪ
4. ಅಣ್ಣೇಗೌಡನಕೊಪ್ಪಲು ದಿಲ್‌ದಾರ್ ಪೈ॥ ಅಣ್ಣಯ್ಯ Vs ಮೈಸೂರು ಲಷ್ಕರ್ ಮೊಹಲ್ಲಾ ಅರಸನಕೆರೆ ಪೈ॥ ರಾಮಸ್ವಾಮಿ
5. ಮಹಲಿಂಗೇಶ್ವರ ಗರಡಿ ಪೈ॥ ಅನಂತು Vs. ನೀರಜ ಗರಡಿ ಪೈ॥ ಬದ್ರುದಿನ್ ಮಗ ಪೈ॥ ಜೋಟಾ ಅಕರ್

SREE GANESH TALKIES

GALA RELEASE ON 2-2-1957



ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)
1-2-57 ನೇ ಶುಕ್ರವಾರದಿಂದ : ಅಮೋಘವಾದ 6 ನೇ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು.

ಭಕ್ತ ಮಾರ್ಕಂಡೇಯ

ಪಾತ್ರ:- ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ರಘುರಾಮಯ್ಯ, ಮಾಸ್ಟರ್ ಆನಂದ ಬೇಬಿ-ಉಮಾ, ಪದ್ಮಿನಿ ಪ್ರಿಯದರ್ಶಿನಿ, ಬಾಲಸರಸ್ವತಿ, ನರಸಿಂಹರಾಜು, ರಿಕ್ಕಿ ಮಾಧವ

ಟೆಲಿಫೋನ್ ನಂ. 793

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು ರೋಗಗಳಿಗೆ ಚಿಕಿತ್ಸಕ
*
ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀಕೃಷ್ಣರಾಜೇಂದ್ರ ರಸ್ತೆ,
ಬೆಂಗಳೂರು-2

ಂಪುಟ : ೧೫] SADHVI : SATURDAY 2-2-1957 ಮೈಸೂರು : ಶನಿವಾರ ೨-೨-೧೯೫೭ : [ಸಂಚಿಕೆ : ೧೮೬

ಈಜಿಪ್ಟಿನಿಂದ ಇಸ್ರೇಲಿ ಪಡೆಗಳ ವಾಪಸಾತಿಗಾಗಿ ನಿರ್ಣಯ

ನಗರಕ್ಕೆ ೨೩ನೇ ತಾ॥ ಪ್ರಧಾನಿ ನೆಹರೂರವರ ಭೇಟಿ

ಗ್ಗೆ ಸಾರ್ವಜನಿಕ ಸಭೆಯಲ್ಲಿ ಭಾಷಣ

ಮೈಸೂರು ೨

ಪ್ರಧಾನಿ ನೆಹರೂರವರು ಕಾಂಗ್ರೆಸ್ ಪ್ರಚಾರ ಗಿ ಇದೇ ತಿಂಗಳು ೨೩ನೇ ತಾರೀಖು ಹೈದ ಬಾದಿನಿಂದ ಇಲ್ಲಿಗೆ ವಿಮಾನದಲ್ಲಿ ಆಗಮಿಸು ರು. ಅವರು ಅಂದು ಬೆಳಿಗ್ಗೆ ಸಾರ್ವಜನಿಕರ ದ್ದೇಶಿಸಿ ಭಾಷಣ ಮಾಡುವರು. ನಂತರ ಂಗಳೂರಿಗೆ ತೆರಳುವರು.

ದ. ಕನ್ನಡ ವಿದ್ಯಾರ್ಥಿ ಸಂಘದ ಮುಕ್ತಾಯ ಭಾಷಣ

ನಗರದಲ್ಲಿರುವ ದಕ್ಷಿಣ ಕನ್ನಡ ವಿದ್ಯಾರ್ಥಿ ಂಘದ ಮುಕ್ತಾಯ ಭಾಷಣವನ್ನು ನಾಳೆ ಮ ಧ್ಯಾಹ್ನ ೪ ಗಂಟೆಗೆ ಸಂಸ್ಥಾನದ ಸಾಮಾಜಿಕ ಯೋಗಕ್ಷೇಮ ಸಮಿತಿ ಸದಸ್ಯರಾದ ಶ್ರೀಮತಿ ಲೀ ಲಾವತಿ ಅಂಜನಪ್ಪನವರು ದಾಸಪ್ರಕಾಶ ಹೊ ಟೆಲಿನಲ್ಲಿ ಮಾಡುವರು. ಸಂಘದ ಅಧ್ಯಕ್ಷ ಪ್ರೊ ಸರ್ ಶ್ರೀ ನಾರಾಯಣರಾಯರು ಅಗ್ರಾಸನ ವ ಹಿಸುವರು.

ಮಧ್ವ ವಿಜಯದ ಪುರಾಣ ಮತ್ತು ಉಪನ್ಯಾಸ

ನಗರದ ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಮೊನ್ನೆ ಯಿಂದ ಈ ತಿಂಗಳು ೧೦ರ ಪೂರ್ತಿ ನಿತ್ಯವೂ ಗ್ಗೆ ಮಧ್ವ ವಿಜಯ ಪುರಾಣವೂ, ಸಂಜೆ ಶ್ರೀಮದಾಚಾರ್ಯರ ಮಹಿಮೆ ಮತ್ತು ಅವರ ಗ್ರಂ ಥಗಳ ಬಗ್ಗೆ ಶ್ರೀ ಕೇಶವಗಿರಿರಾಯರಿಂದ ಉಪನ್ಯಾ ಸವೂ ಏರ್ಪಾಡಾಗಿವೆ. ಸರ್ವರಿಗೂ ಆಹ್ವಾನ ವಿದೆ

ಹಿಂದಿ ಸ್ಪರ್ಧೆಯಲ್ಲಿ ಬಹುಮಾನ ವಿನಿಯೋಗ ಸಮಾರಂಭ

ನಗರದ ಶಿಶು ಸಾಹಿತ್ಯ ಸಂಘದ ಆಶ್ರಯದ ಲ್ಲಿ ನಾಳೆ ಸಂಜೆ ೬ ಗಂಟೆಗೆ ಬೆಂಗಳೂರು ಹಿಂ ದೂಸ್ತಾನ್ ವಿಮಾನ ಕಾರ್ಖಾನೆಯ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಕೆ. ಟಿ. ಆರ್. ಅಯ್ಯಂಗಾ ರರ ಅಧ್ಯಕ್ಷತೆಯಲ್ಲಿ ಶ್ರೀಮತಿ ರಂಗನಾಯ ಕಮ್ಮ ಸ್ಮಾರಕ ಹಿಂದಿ ಪ್ರಬಂಧ ಸ್ಪರ್ಧೆಯಲ್ಲಿ ಯಶೀಲರಾದವರಿಗೆ ಬಹುಮಾನಗಳನ್ನು ವಿನಿ ಯೋಗಿಸುವ ಸಮಾರಂಭವು ವನಿತಾ ಸದನದಲ್ಲಿ ನೆರವೇರುವುದು.

ಅನಾಥಾಲಯದ ಸಾಹಿತ್ಯ ಸಂಘದ ವಾರ್ಷಿಕೋತ್ಸವ

ನಗರದ ಅನಾಥಾಲಯದ ಸಾಹಿತ್ಯ ಸಂಘದ ರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ಹಾರಾಜಾ ಕಾಲೇಜಿನ ಎಂ. ರಾಮರಾಯರ ಧ್ಯಕ್ಷತೆಯಲ್ಲಿ ನೆರವೇರುವುದು. ಶ್ರೀ ಎಸ್. ಸೋಮೇಶ್ವರಭಟ್ಟರು ಭಾಷಣ ಮಾಡುವರು

ರೇಷ್ಮೆ ಕಾರ್ಖಾನೆ ಹೊಸ ಜನರಲ್ ಮ್ಯಾನೇಜರ್

ನಗರದಲ್ಲಿರುವ ಸರ್ಕಾರಿ ರೇಷ್ಮೆ ನೆಯ್ಗೆ ಕಾ ರ್ಖಾನೆಯ ಅಸಿಸ್ಟೆಂಟ್ ಜನರಲ್ ಮ್ಯಾ ನೇಜರಾಗಿ ಶ್ರೀ ಡಿ. ಎಸ್. ವೆಂಕಟಸುಬ್ರಹ್ಮಣ್ಯ [illegible]

ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಪ್ರಚಾರದ ಆರಂಭ

ವಿರೋಧ ಪಕ್ಷಗಳ ಬಗ್ಗೆ ಕಾಂಗ್ರೆಸ್ಸಿನ ವರ್ತನೆಗಾಗಿ ಎ. ಕೆ. ಗೋಪಾಲನ್ ಟೀಕೆ

ಮೈಸೂರು ೨

ಶ್ರೀ ಎ. ಕೆ. ಗೋಪಾಲನ್‌ರವರು ನೆನ್ನೆ ಟೌನ್ ಹಾಲಿನ ಆವರಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಪ್ರಚಾರವನ್ನು ಆರಂಭಗೊಳಿಸಿದರು. ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಎಲ್. ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು. ನಗರದ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರಾದ ಶ್ರೀ ಸೋಮಸುಂದರಶರ್ಮರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕುಂಜುಮೋಹನ್‌ರವರು ಕಾಂಗ್ರೆಸ್ ಸರ್ಕಾರವನ್ನು ಟೀಕಿಸುವ ಗೀತೆಗಳನ್ನು ಹೇಳಿದರು

ಶ್ರೀ ಎ. ಕೆ. ಗೋಪಾಲನ್‌ರವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಸರ್ಕಾರದ ಧೋರಣೆಯಿಂದ ನಿಜವಾದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಕಷ್ಟವಾಗಿರುವುದೆಂದೂ, ಹಿಂದೆ ಬ್ರಿಟಿಷರ ಕಾಲದಲ್ಲಿದ್ದಂತೆ ಪೊಲೀಸು ಆಡಳಿತವು ಈಗಲೂ ಇದೆಯೆಂದೂ ಟೀಕಿಸಿದರು.

ಆಡಳಿತ ಪಕ್ಷದವರ ತೆರಿಗೆ ನೀತಿಯನ್ನು ಅವರು ಪ್ರಸ್ತಾಪಿಸಿ, ದೇಶದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ವಿಧಗಳಲ್ಲಿ ಹೆಚ್ಚುಹೆಚ್ಚಾಗಿ ತೆರಿಗೆಗಳನ್ನು ಹಾಕಿ ಬಡವರಿಗೆ ತುಂಬಾ ತೊಂದರೆಯನ್ನುಂಟುಮಾಡಲಾಗಿರುವುದೆಂದು ಹೇಳಿದರು. ಶ್ರೀಮಂತರ ಬಗ್ಗೆ ಕರುಣೆಯನ್ನು ತೋರಲಾಗಿದೆಯೆಂದೂ ನುಡಿದರು. ಕಮ್ಯೂನಿಸ್ಟ್ ಮತ್ತು ಇತರ ವಾಮ ಪಕ್ಷಗಳು ಒಂದಾದರೆ ಪ್ರಬಲವಾದ ವಿರೋಧ ಪಕ್ಷವನ್ನು ರಚಿಸಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಸಂಸ್ಥಾನದ ವಿಧಾನ ಸಭೆಗೆ ೪೦೦ ಕ್ಕೂ ಹೆಚ್ಚು ಮಂದಿ ಸ್ಪರ್ಧಿಗಳು

ಮೈಸೂರು ವಿಧಾನ ಸಭೆಯ ೨೦೮ ಸ್ಥಾನಗಳಿಗೆ ಆರು ರಾಜಕೀಯ ಪಕ್ಷಗಳವರೂ ಮತ್ತು ಸ್ವತಂತ್ರರೂ ಸೇರಿ ೪೦೦ ಕ್ಕೂ ಹೆಚ್ಚು ಮಂದಿ ಸ್ಪರ್ಧಿಸಿರುವರು. ಲೋಕ ಸಭೆಯ ೨೬ ಸ್ಥಾನಗಳಿಗೆ ೫೦ ಮಂದಿ ಉಮೇದುವಾರಿಕೆ ಕೊಟ್ಟಿರುವರು. ಬೇಲೂರು ಕ್ಷೇತ್ರದಿಂದ ಕಾಂಗ್ರೆಸ್ ಪರವಾಗಿ ಶ್ರೀ ಬಿ. ಎಸ್. ದೊರೆಣ್ಣಗೌಡರೂ, ಜನಸಂಘದ ಪರವಾಗಿ ಅವರ ಪುತ್ರ ಶ್ರೀ ಎಂ. ಬಿ. ಲಿಂಗಪ್ಪನವರೂ ಸ್ಪರ್ಧಿಸಿರುವರು.

ಬೆಂಗಳೂರಿಗೆ ೬ನೇ ತಾ॥ ಪಂಡಿತ ಪಂತರ ಭೇಟಿ

ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ಇದೇ ೬ನೇ ತಾರೀಖು ಬೆಂಗಳೂರಿಗೆ ಆಗಮಿಸಿ, ಸಂಸ್ಥಾನದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರವನ್ನು ಆರಂಭಿಸುವರು. ಅಲ್ಲಿನ ಕಾಂಗ್ರೆಸ್ ಭವನದಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡುವರು. ಮಾರನೇ ದಿನ ಬಳ್ಳಾರಿಗೆ ತೆರಳಿ ಅಲ್ಲಿ ಭಾಷಣ ಮಾಡಿ, ಬೆಳ [illegible] ತೆರಳುವರು.

ಕಾಂಗ್ರೆಸ್ ಚುನಾವಣಾ ಪ್ರಚಾರ

ಕಾರ್ಯಕರ್ತರ ಸಭೆಯಲ್ಲಿ ಸಮಿತಿಗಳ ರಚನೆ

ಮೈಸೂರು ೨

ಕಾಂಗ್ರೆಸ್ ಚುನಾವಣಾ ಪ್ರಚಾರದ ಸಂಬಂಧವಾಗಿ ನೆನ್ನೆ ನಗರ ಕಾಂಗ್ರೆಸ್ ಕಛೇರಿಯಲ್ಲಿ ಕಾರ್ಯಕರ್ತರುಗಳ ಸಭೆಯೊಂದು ನಡೆಯಿತು. ನಗರ ಕಾಂಗ್ರೆಸ್ ಉಪಾಧ್ಯಕ್ಷ ಶ್ರೀ ಬಿ. ನಾರಾಯಣಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ಅಧ್ಯಕ್ಷರು, ಶ್ರೀಗಳಾದ ಪಿ. ಗೋಪಾಲಕೃಷ್ಣ ಶೆಟ್ಟಿ ಮತ್ತು ಎಸ್. ಚನ್ನಯ್ಯನವರು ಭಾಷಣ ಮಾಡಿ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಜನ ಬೆಂಬಲವನ್ನು ದೊರಕಿಸುವುದಕ್ಕೆ ಎಲ್ಲ ಕಾರ್ಯಕರ್ತರೂ ಶ್ರಮಿಸಬೇಕೆಂದು ಪ್ರಾರ್ಥಿಸಿದರು. ಕಾಂಗ್ರೆಸ್ ಉಮೇದುವಾರರ ವಿರುದ್ಧವಾಗಿ ನಿಂತಿರುವ ಇತರ ಕಾಂಗ್ರೆಸ್ಸಿನವರು ತಮ್ಮ ನಾಮ ಪತ್ರಗಳನ್ನು ವಾಪಸು ಪಡೆಯುವಂತೆ ಶ್ರೀ ಚನ್ನಯ್ಯನವರು ಪ್ರಾರ್ಥಿಸಿದರು.

ನಂತರ ಪ್ರಚಾರ ಮತ್ತು ಪ್ರಕಟಣ ಸಮಿತಿಗಳನ್ನು ರಚಿಸಲಾಯಿತು. ಪ್ರಚಾರ ಸಮಿತಿಯಲ್ಲಿ ಶ್ರೀಗಳಾದ ಎಸ್. ಲಿಂಗಣ್ಣ, ಪಿ. ಗೋಪಾಲಕೃಷ್ಣಶೆಟ್ಟಿ, ಎ. ಕೃಷ್ಣಮೂರ್ತಿರಾವ್, ಎಸ್. ಸಂಜೀವಯ್ಯ, ಸೈಯದ್ ಅಬ್ದುಲ್ ರಹಮಾನ್, ಎಸ್. ಎಸ್. ಶಾಸ್ತ್ರಿ ಮತ್ತು ಕೆ. ಸಿದ್ದಯ್ಯನವರೂ, ಪ್ರಕಟಣಾ ಸಮಿತಿಯಲ್ಲಿ ಶ್ರೀಗಳಾದ ಅಗರಂ ರಂಗಯ್ಯ, ಹೆಚ್. ಕೆ. ಕುಮಾರಸ್ವಾಮಿ ಮತ್ತು ಹಿ.ಶಾ. ಸುಬ್ಬರಾಯರೂ ಇರುವರು

ಹೊಳೆನರಸೀಪುರದ ಮುನ್ಸೀಫರಾಗಿ ನೇಮಕ

ನಗರದ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟಿನ ಶಿರಸ್ತೇದಾರರಾದ ಶ್ರೀ ಕೆ. ಆರ್. ರಾಮಸ್ವಾಮಿ ಅಯ್ಯಂಗಾರರಿಗೆ ಬಡ್ತಿ ಕೊಟ್ಟು ಹೊಳೆನರಸೀಪುರದ ಮುನ್ಸೀಫರಾಗಿ ನೇಮಕ ಮಾಡಲಾಗಿದೆ.

ಸಹಕಾರ ಸಂಘಗಳ ಸಿಬ್ಬಂದಿ ಸಂಘ

ನಗರದಲ್ಲಿರುವ ಸಹಕಾರ ಸಂಘಗಳ ಸಿಬ್ಬಂದಿಯವರ ವಾರ್ಷಿಕ ಸಮಾರಂಭವು ನಾಳೆ ದಿನ ನೆರವೇರುವುದು. ಅದಕ್ಕಾಗಿ ಕಾಶಿಪತಿ ಅಗ್ರಹಾರದ ವಿದ್ಯಾಗಣಪತಿಯ ಮಂದಿರದ ಕಾರ್ಯದರ್ಶಿ ಶ್ರೀ ವೆಂಕಟಾಚಾರ್ಯರು ಒಂದು ಪಲ್ಲ ಅಕ್ಕಿಯನ್ನು ಉದಾರವಾಗಿ ಕೊಟ್ಟಿರುತ್ತಾರೆ.

ಮಂಡ್ಯದ ಸದ್ಗುರು ಸಂಗೀತ ಶಾಲೆಯ ವಾರ್ಷಿಕೋತ್ಸವ

ಮಂಡ್ಯದ ಶ್ರೀ ಸದ್ಗುರು ಸಂಗೀತ ಪಾಠಶಾಲೆಯ ೫ನೇ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ, ಜಿಲ್ಲಾಧಿಕಾರಿಗಳಾದ ಶ್ರೀ ಮಹಮದ್ ರಹಮತುಲ್ಲಾರವರ ಅಧ್ಯಕ್ಷತೆಯಲ್ಲಿ ನೆರವೇರುವುದು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ವಿ॥ ಆರ್. ಕೆ. ರಾಮನಾಥರವರ ಸಂಗೀತವು ನಡೆಯುವುದು.

ಉಪನಯನ

ಮೈಸೂರಿನ ನಿವೃತ್ತ ರೆವಿನ್ಯೂ ಹೆಡ್ ಕ್ಲಾರ್ಕ್ ಶ್ರೀ ಕೆ. ರಂಗಣ್ಣನವರ ಮಕ್ಕಳು ಶ್ರೀ ಕೆ. ಆರ್. ನಾರಾಯಣರವರು ತಮ್ಮ ಕುಮಾರ ಚಿ॥ ಪ್ರಹ್ಲಾದನಿಗೆ ನಂಜನಗೂಡಿನಲ್ಲಿ ನೆನ್ನೆ ಉಪನಯನವನ್ನು ನೆರವೇರಿಸಿ.

ಇಸ್ರೇಲಿ ಸೈನ್ಯಗಳ ವಾಪಸಾತಿಗಾಗಿ ಕರೆ

ಭದ್ರತಾ ಸಮಿತಿಗೆ ನಿರ್ಣಯ

ಈಜಿಪ್ಟಿನಿಂದ ಇಸ್ರೇಲಿ ಪಡೆಗಳು ಕೂಡಲೇ ವಾಪಸಾಗಬೇಕೆಂದೂ, [illegible] ಕದನ ವಿರಾಮ ರೇಖೆ ಬಳಿ ವಿಶ್ವಸಂಸ್ಥೆಯ ದಳಗಳನ್ನು ನಿಯೋಜಿಸಬೇಕೆಂದೂ ಅಮೆರಿಕಾ, ಭಾರತ ಮತ್ತು ಇತರ ಐದು ರಾಷ್ಟ್ರಗಳು ಭದ್ರತಾ ಸಮಿತಿಗೆ ನಿರ್ಣಯವೊಂದನ್ನು ಕಳುಹಿಸಿವೆ. ರಷ್ಯಾ ಮತ್ತು ಅದರ ಪೂರ್ವ ಯೂರೋಪಿನ ಸ್ನೇಹಪರ ರಾಷ್ಟ್ರಗಳು ಈಗಾಗಲೇ ಇಸ್ರೇಲಿನ ಮೇಲೆ ಮಿತವಾದ ಆರ್ಥಿಕ ಕ್ರಮಗಳನ್ನು ಕೈಗೊಂಡಿರುವುದಾಗಿ ಗೊತ್ತಾಗಿದೆ.

ಡಿಕ್ಕಿಯಾದ ವಿಮಾನಗಳು ಬಿದ್ದು ಶಾಲಾ ಮಕ್ಕಳ ಮರಣ

ಅಮೆರಿಕದ ಕ್ಯಾಲಿಫೋರ್ನಿಯಾ ಪ್ರಾಂತದ ಪಾಕೊಯಿಮ್ ಎಂಬಲ್ಲಿ ಮೊನ್ನೆ ಎರಡು ವಿಮಾನಗಳು ಡಿಕ್ಕಿ ಹೊಡೆದು, ಮೂರು ಶಾಲೆಗಳ ಮೇಲೆ ಉರುಳಿದುವೆಂದೂ, ಅದರಿಂದ ೨೦ ಮಕ್ಕಳಿಗೆ ಸಾವುನೋವುಗಳಾದುವೆಂದೂ ವರದಿಯಾಗಿದೆ. ಅಲ್ಲಿ ೭೫ ಮಕ್ಕಳು ಆಟವಾಡುತ್ತಿದ್ದರು. ಅನೇಕರಿಗೆ ಗಾಯವಾದುದಾಗಿ ಗೊತ್ತಾಗಿದೆ

ವಿವಾಹ ಮಹೋತ್ಸವ

ಮೈಸೂರಿನ ನಿವೃತ್ತ ರೆವಿನ್ಯೂ ಹೆಡ್ ಕ್ಲಾರ್ಕ್ ಶ್ರೀ ಕೆ. ರಂಗಣ್ಣನವರು ತಮ್ಮ ಕುಮಾರಿ, ಗುಂಡ್ಲುಪೇಟೆ ಸಾಮೂಹಿಕ ಯೋಜನೆ ಸಾಮಾಜಿಕ ವಿದ್ಯಾಭ್ಯಾಸದ ಆರ್ಗನೈಸರ್ ಸೌ॥ ರಂಗನಾಯಕಮ್ಮನವರನ್ನು ನಂಜನಗೂಡಿನ ಪತ್ರಿಕೋದ್ಯೋಗಿ ಶ್ರೀ ಕೆ.ಎಸ್. ರಾಮಯ್ಯನವರ ಮಕ್ಕಳು ಶ್ರೀ ಕೆ. ಆರ್. ಶ್ರೀಕಂಠಯ್ಯನವರಿಗೆ ಕೊಟ್ಟು ನೆನ್ನೆ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು.

ಹರಿಕಥೆ

ನಗರದ ವಿದ್ಯಾರಣ್ಯಪುರದ ೪ನೇ ಕ್ರಾಸ್ ರಸ್ತೆಯಲ್ಲಿರುವ ಶ್ರೀ ಹುಚ್ಚೇಗೌಡರ ಮನೆ ಮುಂಭಾಗದ ಚಪ್ಪರದಲ್ಲಿ ಈ ರಾತ್ರಿ ೯ ಗಂಟೆಗೆ ವಿ॥ ಎಸ್. ಚನ್ನಬಸಪ್ಪಶಾಸ್ತ್ರಿಗಳವರು ಶನಿ ಮಹಾತ್ಮೆ ಕಥೆಯನ್ನು ನಡೆಸುವರು.

ಬೆಂಗಳೂರಿನಿಂದ ಮಾರ್ಷಲ್ ಜುಕಾಫರ ಪ್ರಯಾಣ

ಸ್ವಂ. ಸು. ಸಂಕ] ಬೆಂಗಳೂರು ೨

ರಷ್ಯದ ರಕ್ಷಣಾ ಮಂತ್ರಿ ಮಾರ್ಷಲ್ ಜುಕಾಫ್‌ರವರು ನೆನ್ನೆ ಇಲ್ಲಿಗೆ ಭೇಟಿಯಿತ್ತರು. ಅವರನ್ನು ಸಂಸ್ಥಾನದ ಗೃಹ ಮಂತ್ರಿ ಶ್ರೀ ಎಂ. ವಿ. ರಾಮರಾಯರು ಸ್ವಾಗತಿಸಿದರು. ಅವರು ಇಲ್ಲಿನ ನಾನಾ ಸಂಸ್ಥೆಗಳಿಗೆ ಭೇಟಿಯಿತ್ತು ಈ ದಿನ ದೆಹಲಿಗೆ ವಿಮಾನದಲ್ಲಿ ತೆರಳುವರು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅವರಿಗೆ ಅಶೋಕ ಸ್ತಂಭವಿರುವ ದಂತ ಮತ್ತು ಗಂಧದ ಕೋಲನ್ನು ಬಹುಮಾನವಾಗಿ ಕೊಟ್ಟರು.

○ ಮೈಸೂರು ಮತ್ತು ಬೆಂಗಳೂರು ಆಯುರ್ವೇದ ಆಸ್ಪತ್ರೆಗಳನ್ನು ವೈದ್ಯ ಇಲಾಖಾಧಿಕಾರಿಗಳ ಮೇಲ್ವಿಚಾರಣೆಗೆ ಒಪ್ಪಿಸಲಾಗಿದೆ.

ನೆಹರೂರವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ

ಮದ್ರಾಸ್ ವಿಶ್ವವಿದ್ಯಾಲಯವು ಮೊನ್ನೆ ಪ್ರಧಾನಿ ನೆಹರೂರವರಿಗೆ ಡಾಕ್ಟರ್ ಆಫ್ ಲಾಸ್ ಗೌರವ ಪ್ರಶಸ್ತಿಯನ್ನಿತ್ತರು. ನೆಹರೂರವರು ವಿಶ್ವವಿದ್ಯಾಲಯದ ಶತಮಾನೋತ್ಸವ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಅನಂತರ ಭಾಷಣ ಮಾಡಿ ದಕ್ಷಿಣ ಭಾರತವಲ್ಲಿ ಬುದ್ಧಿವಂತಿಕೆ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯು ವಿಶೇಷವಾಗಿ ಬೆಳೆದಿದೆಯೆಂದು ತಿಳಿಸಿದರು.

ಒರಿಸ್ಸಾದಲ್ಲಿ ಆಯುರ್ವೇದ, ಅಲೋಪತಿಗಳಿಗೆ ಸಮಾನ ಸ್ಥಾನ

ಒರಿಸ್ಸಾ ಸಂಸ್ಥಾನದಲ್ಲಿ ಆಯುರ್ವೇದ ಮತ್ತು ಅಲೋಪತಿ ಔಷಧ ಪದ್ಧತಿಗಳ ಪ್ರಶಸ್ತಿ ಪಡೆದವರಿಗೆ ಸಮಾನ ಸ್ಥಾನವನ್ನು ಕೊಡಲಾಗಿರುವುದೆಂದು ಅಲ್ಲಿನ ಮುಖ್ಯ ಮಂತ್ರಿ ಹರಿಕೃಷ್ಣ ಮಹತಾಬ್‌ರವರು ತಿಳಿಸಿರುತ್ತಾರೆ.

ಜಯಲಕ್ಷ್ಮಿ ಶಿಶು ವಿಹಾರದ ವಾರ್ಷಿಕೋತ್ಸವ

ಸೊಪ್ಪಿನಕೂಳದ ಬೀದಿಯಲ್ಲಿರುವ ಜಯಲಕ್ಷ್ಮಿ ಶಿಶು ವಿಹಾರದ ವಾರ್ಷಿಕೋತ್ಸವವು ಮೊನ್ನೆ ಬೆಳಿಗ್ಗೆ ಶ್ರೀಮತಿ ಚಿನ್ನಸ್ವಾಮಿ ಮುದಲಿಯಾರ್ ಅಧ್ಯಕ್ಷತೆಯಲ್ಲಿ ನಡೆಯಿತು. ದೇವರ ನಾಮ, ಶಾರದಾ ಪೂಜೆಗಳ ನಂತರ ಅಧ್ಯಕ್ಷರು ಮಾತನಾಡಿ ಶಿಶು ವಿಹಾರದ ಕಾರ್ಯ ಚಟುವಟಿಕೆಗಳಿಗಾಗಿ ಅಭಿನಂದಿಸಿದರು. ಮಕ್ಕಳಿಗೆ ಸಿಹಿಯನ್ನು ಹಂಚಲಾಯಿತು. ಸಂಜೆ ಮೈಸೂರ ಶಿಕ್ಷಣ ಸಮಿತಿ ಸ್ಥಾಪಕರಾದ ವಿ. ಕೆ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಉತ್ಸವವು ಜರುಗಿತು. ಶಿಶು ವಿಹಾರದ ಸ್ಥಾಪಕರಾದ ಶ್ರೀಮತಿ ಕೆ. ಎಸ್. ಪದ್ಮ ಮತ್ತು ಕೆ. ಎಸ್. ವಾಸುದೇವರವರು ಸ್ವಾಗತ ಬಯಸಿದರು. ಶ್ರೀ ಎಸ್. ಎ. ಮುನಿಯಪ್ಪನವರ ಸಂಗೀತ ಏರ್ಪಾಡಾಗಿತ್ತು.

ದೊಡ್ಡಹುಂಡಿಯಲ್ಲಿ ಗಣರಾಜ್ಯ ದಿನಾಚರಣೆ

ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು ದೊಡ್ಡಹುಂಡಿ ಗ್ರಾಮದಲ್ಲಿ ಕಳೆದ ೨೬ ರಂದು ಗಣರಾಜ ದಿನಾಚರಣೆಯು ನಡೆಯಿತು. ವಿಸ್ತರಣಾ ಬ್ಲಾಕಿನ ಅಭಿವೃದ್ಧಿ ಅಧಿಕಾರಿಗಳಾದ ಹೆಚ್. ಹುಚ್ಚಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಧ್ವಜವಂದನೆ, ಪ್ರಾರ್ಥನೆ ಮತ್ತು ತಾಲ್ಲೂಕು ಸಂಚಾಲಕರಾದ ಶ್ರೀ ಎಸ್. ಎಲ್. ಶಿ. ತಾತಾಚಾರ್ಯರಿಂದ ಸ್ವಾಗತಗಳಾದುವು. ಸಂಗೀತವಾದನಂತರ ಜಿಲ್ಲಾ ವಯಸ್ಕರ ಸಮಿತಿಯ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಟಿ. ಆರ್. ಪಾಪಣ್ಣ, ಶ್ರೀ ಕರಿಬಸವಯ್ಯ ಮತ್ತು ಹಿರಿಕಾಟಿ ಶ್ರೀ ಶಿವಣ್ಣನವರು ಭಾಷಣ ಮಾಡಿದರು. ಅಧ್ಯಕ್ಷರು ಮಾತನಾಡಿ ಸರ್ಕಾರ ಐಕಮತ್ಯದಿಂದ ಕೂಡಿ ಗ್ರಾಮದ ಮತ್ತು ದೇಶದ ಏಳಿಗೆಗೆ ಶ್ರಮಿಸಲು ಕೋರಿದರು.

NATIONAL LEAGUE,
Anathalaya Buildings Mysore
Offers excellent coaching for students of the High School classes
Join Imme[illegible]ly

ನಾದಬ್ರಹ್ಮ ಸಂಗೀತ ಸಭಾ
ಮೈಸೂರು
3-2-1957 ನೇ ಭಾನುವಾರ
ಸಂಜೆ 5 30 ಘಂಟೆಗೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ಸಂ॥ ವಿದ್ವಾನ್ ಟಿ. ಕೆ. ರಂಗಾಚಾರ್–
ವಾಯೊಲಿನ್
„ ಟಿ. ಗೋವಿಂದಸ್ವಾಮಿ–
ಪಿಟೀಲು
„ ಪಾಲ್ಘಾಟ್ ರಘು–
ಮೃದಂಗ
ಪ್ರವೇಶ ದರ – ಗೌರವ 1 3 ½
ಸಾಮಾನ್ಯ 0 ()
[ಮೊದಲನೇ ಟಿಕೆಟ್ ಮಾರಾಟ ಪ್ರವೇಶ]

"ಕಾಶ್ಮೀರದ ವಿಮೋಚನೆಗೆ ೩೦,೦೦೦ ಸ್ವಸ್ಥದ ನೆರವು

ಕಾಶ್ಮೀರದ ವಿಮೋಚನೆ ಒಕ್ಕೂಟ ಪಾಕಿಸ್ತಾನದಲ್ಲಿ ಶಸ್ತ್ರಾಸ್ತ್ರ ಧಾರಣೆ ಮಾಡಿದವರು ಹಿಂದೆ ಬಂದಿಯಾದರೆಂದೂ, ಅಲ್ಲೈ ಎಂಬ ಪ್ರದೇಶದ ಅರಸರಾದ ಮಹಮದ್ ಅಯೂಬ್ ಖಾನರು ಪತ್ರಿಕಾ ಹೇಳಿಕೆಯಿತ್ತು ಭಾರತವು ಕಾಶ್ಮೀರದಲ್ಲಿ ನಡೆಸಿರುವ ಕೃತ್ಯಗಳನ್ನು ಖಂಡಿಸಿ, ಕಾಶ್ಮೀರ 'ಸಂಸ್ಥಾನದ ವಿಮೋಚನೆಗಾಗಿ' ತಮ್ಮ ಸಂಸ್ಥಾನದ ೩೦ ೦೦೦ ಸಶಸ್ತ್ರ ಜನರನ್ನು ಕಳುಹಿಸಲು ಸಿದ್ಧವಾಗಿರುವುದಾಗಿ ತಿಳಿಸಿರುವರೆಂದೂ ಕರಾಚಿಯ ಡಾನ್ ಪತ್ರಿಕೆ ವರದಿ ಮಾಡಿದೆ. ಪಾಕಿಸ್ತಾನದ ಸಿಖ ಹಿ ಫರ್ದರೇನ್ಸ್ ಸಂಸ್ಥೆಯ ಅಧ್ಯಕ್ಷ ಡಾ॥ ಅಲಿ ಮಹಮುದ್‌ರವರು ಇದೇ ಕೆಲಸಕ್ಕಾಗಿ ತಮ್ಮ ಸಂಸ್ಥೆಯ ೧೦,೦೦೦ ಜನರನ್ನು ಕಳುಹಿಸಲು ಸಿದ್ಧವಾಗಿರುವುದಾಗಿ ಹೇಳಿದ್ದಾರೆಂದು ಪತ್ರಿಕೆಯು ಸೂಚಿಸಿದೆ.

ಬಳ್ಳಾರಿ ವಿದ್ಯಾರ್ಥಿ ಸಂಘದ ಮುಕ್ತಾಯ ಸಮಾರಂಭ

ನಗರದ ಬಳ್ಳಾರಿ ವಿದ್ಯಾರ್ಥಿ ಸಂಘದ ಮುಕ್ತಾಯ ಸಮಾರಂಭವು ನಾಳೆ ಬೆಳಿಗ್ಗೆ ೮ ಗಂಟೆಗೆ ಹೊಟೇಲು ದಾಸಪ್ರಕಾಶದಲ್ಲಿ ನಡೆಯುವುದು. ಶ್ರೀ ಶ. ರಾ. ಸುಬ್ಬರಾಯರು ಮುಖ್ಯ ಅತಿಥಿಗಳಾಗುವರು. ಮಹಾರಾಜಾ ಕಾಲೇಜಿನ ಶ್ರೀ ಎಸ್. ನಂ. ರಾಯಜನಟ್ಟಿಯವರು ಅಧ್ಯಕ್ಷತೆ ವಹಿಸುವರು.

ಕ್ಯಾಲೆಂಡರ್ ಸ್ವೀಕಾರ

ನಗರದ ಜೈ ಭಾರತ್ ಇನ್‌ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಕಳುಹಿಸಿರುವ ಈ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

GLOBE TUTORIAL COLLEGE
Sadvidya Patashala Buildings,
Revision Classes for students promoted to S S L C Class
T[illegible]m 8 to 10 30 A M

E[illegible]d Print[illegible] and Published by
[illegible] R Nagar[illegible] at [illegible]dhv[illegible] Press
[illegible] Subbarao Road, Mysore

ರಿಸರ್ವ್ ಬ್ಯಾಂಕಿನಲ್ಲಿ ಹೆಚ್ಚು ಬಡ್ಡಿದರ

ಸರ್ಕಾರಿ ಮತ್ತು ಅಂಗೀಕಾರಾರ್ಹ ಬಾಂಡುಗಳಿಗಾಗಿ ಬ್ಯಾಂಕುಗಳಿಗೆ ಕೊಡಲಾಗಿರುವ ಸಾಲಕ್ಕೆ ರಿಸರ್ವ್ ಬ್ಯಾಂಕಿನವರು ನೆನ್ನೆಯಿಂದ ಶೇಕಡ ೪ರ ಬಡ್ಡಿಯನ್ನು ಹಾಕುತ್ತಾರೆ. ದರವನ್ನು ೩॥ಗಿಂತ ಹೆಚ್ಚಿಸುವುದಿಲ್ಲವೆಂದು ಈ ಮೊದಲು ತಿಳಿಸಲಾಗಿತ್ತು. ಬ್ಯಾಂಕು ದರಕ್ಕೂ ಮತ್ತು ಬಾಂಡುಗಳ ಮೇಲಿನ ಮುಂಗಡದ ಬಡ್ಡಿಗೂ ವ್ಯತ್ಯಾಸ ಮಾಡಿರುವುದು ಇದೇ ಮೊದಲು.

○ ಸಬ್ ರಿಜಿಸ್ಟ್ರಾರ್ ಶ್ರೀ ಎಂ. ಎಸ್. ಶ್ರೀನಿವಾಸಮೂರ್ತಿಯವರಿಗೆ ಬಡ್ತಿ ಕೊಟ್ಟು ಮೈಸೂರು ಜಿಲ್ಲಾ ಅಫಿಷಿಯೇಟಿಂಗ್ ರಿಜಿಸ್ಟ್ರಾರರನ್ನಾಗಿ ಮೊಕರೂರು ಮಾಡಲಾಗಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮುತ್ತು

ಕೊಯಮುತ್ತೂರು ಸಣ್ಣ	೩೭	೮	೦	೪೧	೧೦	೦
ರತ್ನಚೂಡಿ	೩೭	೧೩	೦	೪೦	೦	೦
ಸೇಲಂ ಸಣ್ಣ	೪೦	೦	೦			
ಕೆಂಬೂತಿ	೩೮	೪	೦			
ಕಡ್ಡಿ	೩೭	೧೩	೬	೪೦	೧೪	೦
ರಾಗಿ	೩೯	೮	೦	೪೬	೪	೦
ಜೋಳ	೪೪	೪	೦	೪೯	೧೦	೦
ಕಂಬು	೪೧	೩	೦			
[illegible]	೧೬	೪	೦	೨೫	೪	೦
ಎಳ್ಳು	೮೪	೦	೦	೮೪	೮	೦
ಹುಚ್ಚೆಳ್ಳು	೪೧	೦	೦	೪೫	೮	೦
ಹರಳುಬೀಜ	೪೮	೦	೦			
ಹೊಂಗೆಬೀಜ	೩೩	೩	೦	[illegible]	೧೪	೦
[illegible]	೩೫	೦	೦	೪೦	೦	೦
ಹೆಸರು	೩೧	೧೦	೦			
ಅಲಸಂದೆ	೪೧	೦	೦	೪೨	೬	೦
ಅವರೆ	೪೭	೮	೦	೪೩	೧೦	೦
ಉದ್ದು	೪೬	೦	೦	೫೮	೦	೦
ತೊಗರಿ	೩೫	೦	೦			
ಕಡಲೆ	೪೮	೪	೦	೫೦	೦	೦
[illegible] ಬೀಜ	೪೧	೮	೦	೪೫	೧೪	೦
ಧನಿಯ	೩೫	೩	೦	೩೭	೪	೦
ಹುಣಸೇಹಣ್ಣು	೪	೪	೦	೫	೧೦	೦
ಹುಣಸೆಬೀಜ	೨	೧೦	೦			
ಸೀಗೆಕಾಯಿ	೫	೫	೦	೬	೧೪	೦
ಮೆಣಸಿನಕಾಯಿ	೧೧	೦	೦	೩೪	೦	೦

ವರ್ಕ್ ಚಾರ್ಜ್ ಸಿಬ್ಬಂದಿಯವರ ಬೇಡಿಕೆಗಳು

ಕೃಷ್ಣರಾಜಸಾಗರದಲ್ಲಿ ಕಳೆದ ಭಾನುವಾರ ವಿಶಾಲ ಮೈಸೂರು ವರ್ಕ್ ಚಾರ್ಜ್ ಸಿಬ್ಬಂದಿಯವರ ಸಾಮಾನ್ಯ ಸಭೆಯು ಶ್ರೀ ವಿ. ಎ. ಮಹದೇವರಾಯರ ಅಧ್ಯಕ್ಷತೆಯಲ್ಲಿ ನಡೆದು, ನೌಕರರುಗಳಿಗೆ ಪೆನ್ಷನ್, ತಾತ್ಕಾಲಿಕ ಪರಿಹಾರ, ಎನ್. ಜಿ. ಓ. ಗಳಿಗೆ ಕೊಟ್ಟಿರುವಂತೆ ಪುನರ್ ಮರ್ಶಿತ ಸ್ಕೇಲ್ ವಗೈರೆಗಳನ್ನು ಸರ್ಕಾರದವರು ಕೊಡುವಂತೆ ಕೋರಲಾಯಿತು.

ಬೇಕಾಗಿದೆ

ಸರ್ಕಾರದ ಕೆಲಸದಿಂದ ಪೆನ್ಷನ್ ಆಗಿ ಸ್ವತಂತ್ರರಾಗಿರುವ ಮತ್ತು ಆರೋಗ್ಯ ದೃಢಕಾಯರಾಗಿರುವ ಉಪಾಧ್ಯಾಯರು ಹಾಸ್ಟಲಿನ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದೆ. ಬಾಕೀ ವಿಷಯ ಮುಖತಃ. ಇಷ್ಟವುಳ್ಳವರು ೬ ರೊಳಗೆ ಅರ್ಜಿ ಮಾಡಿರತಕ್ಕವರನ್ನು ನೋಡತಕ್ಕದ್ದು.

ಎಂ. ಎಲ್. ನಾಗಪ್ಪ, ಅಧ್ಯಕ್ಷರು
362. ತ್ಯಾಗರಾಜ ರೋಡ್, ಮೈಸೂರು

ಉತ್ತಮವಾದ ಕಟ್ಟಡದ ಪ್ಲಾನುಗಳುಮತ್ತು ಬ್ಲೂಪ್ರಿಂಟ್

ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್ ಸಪ್ಲೈ ಎಸ್ಟಿಮೇಟ್ ಮಾಡಿಕೊಡುವುದಕ್ಕೂ
ಗಾಯತ್ರಿ ಟಾಕೀಸ್ ಎದುರು
ಹ್ಯಾಟ್ ಅಂಗಡಿಯಲ್ಲಿ
ಬಿ. ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿರಿ
ವಾರದ ರಜಾ . ಸೋಮವಾರ

ರುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ. ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ

ಅಪ್ಪಟವಾದ
ಹಸುವಿನ ಹಾಲು
ಪೌಂಡು 1ಕ್ಕೆ 0 3 6 ½ ಪೌಂಡಿಗೆ 0 1
ಇಂದೇ ಭೇಟಿ ಕೊಟ್ಟು ಪರೀಕ್ಷಿಸಿ
ಕಾಲ ಬೆಳಿಗ್ಗೆ 5 30ರಿಂದ 9 30
ಮಧ್ಯಾಹ್ನ 3 ರಿಂದ 6-30
ಗೋಕುಲ ಮಿಲ್ಕ್ ಡೈ
ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ
ನಾರಾಯಣ ಶಾಸ್ತ್ರಿ ರಸ್ತೆ ಮೈಸೂರು
ರಮಾವಿಲಾಸ ಅಗ್ರಹಾರದ ಶಾಖೆಯಲ್ಲಿ ಬಸ್ತಿ
ಮನೆಗಳಿಗೂ ಸಪ್ಲೈ ಕೊಡಲಾಗುತ್ತೆ

The Model Tutorial Instit
D Banumaiah's High School Buildings, Mysore
Summer Classes for High School II & III Year Classes
Classes commence from 6-2-195
Hours of work 8 A M. to 11 A
Fees – Rs 3 0 0 per mont
Very efficient and useful instruct in General Subjects
[illegible] opportunity st[illegible] keep themse[illegible] engaged during the [illegible] vacation
For particulars apply to the Organiser
S. Subbaiah
Organiser

THE CHAMPION METROPOLITAN COLLEGE OF COMMERCE,
Co-operators Home 100 Road Mysore
ADMISSIONS for fresh classes in Typewriting and Shorthand are now being received
M S PUTTANNA — *Vice-Principal*
P SUBBARAYA SASTRY, — *Principal*

5 ಜೊತೆ ಭಾರಿ ಕುಸ್ತಿಗಳು
3—2—57ನೇ ಭಾನುವಾರ 4 ಘಂಟೆಗೆ
ಮೈಸೂರು ದೊಡ್ಡಕೆರೆ ಫುಟ್‌ಬಾಲ್ ಮೈದಾನದಲ್ಲಿ
ನಡೆಯುತ್ತವೆ

1 ನವರಸ್ ಕೈಲ್ಸೆ ವರ್ಕ್‌ಷಾಪ್ ಕೊಂಪಿಟ್ ಪೈ॥ ಕೆಂಚಪ್ಪ Vs ಬೆಂಗಳೂರು ದಂಡು ಪೈ॥ ಕಾಶ್ಮೀರ್ ಮೆಹಬೂಬ್
2. ದಿಲ್‌ದಾರ್ ಪಟ್ಟಿ ಪೈ॥ ಬಸವರಾಜು Vs ಮಂಡಿ ಮೊಹಲ್ಲಾ ಪೈ॥ ಉಸ್ತಾದ್ ಷಾ
3 ಪೈ॥ ಸ್ವಾಮಿ ರಾಮು ಮಗ ಪೈ॥ ತಿಪ್ಪಯ್ಯ (ವೀರ ಅಭಿಮನ್ಯು) Vs ಪಾಲಹಳ್ಳಿ ಪೈ॥ [illegible] ಧರಪ್ಪ
4. ಕನ್ನೇಗೌಡನಕೊಪ್ಪಲು ದಿಲ್‌ದಾರ್ ಪೈ॥ ಅಣ್ಣಯ್ಯ Vs ಮೈಸೂರು ಲಷ್ಕರ್ ಮೊಹಲ್ಲಾ ಕಾರನಗೆರೆ ಪೈ॥ ರಾಮಸ್ವಾಮಿ
5 ಮಹಲಿಂಗೇಶ್ವರ ಗರಡಿ ಪೈ॥ ಅನಂತು Vs ವೀರನ ಗರಡಿ ಪೈ॥ ಬದ್ರುದಿನ್ ಮಗ ಪೈ॥ ಛೋಟಾ ಅಕರ್

ಶ್ರೀ ಚಿತ್ರ ☆ ೭– [illegible]70ಂದ [illegible] ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನಗಳು
ಅರುಣಾ ಫಿಲಂಸ್‌ ನವರ ತಮಿಳು ಚಿತ್ರ
★ ತ್ರಿಪುರ ತಪ್ಪ ಕ[illegible]
[illegible] — [illegible] ಟಿ ಎಸ್. ಬಾಲಯ್ಯ, [illegible] ಎಂ.ಕೆ. ಸುಬ್ರಹ್ಮಣ್ಯಂ
ಶಿವದಾಸು, ಲಲಿತ, ಪದ್ಮಿನಿ, ರಾಗಿಣಿ ಮುಂತಾದವರು

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 6 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪು : ೦೫] SADHVI : SUNDAY 3-2-1957 ಮೈಸೂರು : ಭಾನುವಾರ ೩-೨-೧೯೫೭ : [ಸಂಚಿಕೆ : ೧೮೮

ಶ್ವಸಂಸ್ಥೆ ಗಸ್ತು ಪಡೆ ಮೇಲೆ ಇಸ್ರೇಲಿ ಸೈನಿಕರ ಗುಂಡು

ಜಿಲ್ಲೆಯಲ್ಲಿ ಕಾಂಗ್ರೆಸ್ ಚುನಾವಣೆ ಪ್ರಚಾರ

ಮೈಸೂರು ೩.

ಂಗ್ರೆಸ್ಸಿನ ಪರವಾಗಿ ಜಿಲ್ಲೆಯಲ್ಲಿ ಚುನಾವ ಚಾರ ನಡೆಸುವ ಸಂಬಂಧವಾಗಿ ನೆನ್ನೆ ಜಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ನ ತು ಶ್ರೀ ಕೆ ಪುಟ್ಟಸ್ವಾಮಿಯವರು ಅ ಕ್ಷತೆ ವಹಿಸಿದ್ದರು ಪ್ರಚಾರ ಮತ್ತು ಪ್ರಕಟಣೆ ಒಂದೊಂದು ಸಮಿತಿಯನ್ನು ಚಿಸಲಾಯಿತು ಪ್ರಚಾರ ಸಮಿತಿಗೆ ಡಿ. ಎಂ. ಸಿದ್ದಯ್ಯನವರು ಅಧ್ಯಕ್ಷ ಯೂ, ಶ್ರೀಗಳಾದ ಟಿ. ವೆಂಕಟರಮಣಯ್ಯ ಸೂರ್ಯನಾರಾಯಣರಾಯರು ಕಾ ರ್ಯದರ್ಶಿಗಳಾಗಿಯೂ, ನಂಜನಗೂಡಿನ ಶ್ರೀ ವಿಶ್ವೇಶ್ವರಗೌಡರು ಖಜಾಂಚಿಯಾಗಿಯೂ ಶ್ರೀ ಎ. ಚಿನ್ನಸ್ವಾಮಿಯವರು ವ್ಯವಸ್ಥಾ ರಾಗಿಯೂ ಆರಿಸಲ್ಪಟ್ಟರು. ಪ್ರತಿ ಜಿಲ್ಲೆಗೂ ಬ್ಬರನ್ನು ಸಮಿತಿ ಸದಸ್ಯರಾಗಿ ತೆಗೆದು ಳ್ಳಲಾಯಿತು ಶ್ರೀಗಳಾದ ಅಗರಂ ರಂಗ ಗೋಪಾಲಕೃಷ್ಣಶೆಟ್ಟಿ ಮತ್ತು ಜೆ ಶಿವಸ್ವಾಮಿಯವರನ್ನು ಪ್ರಕಟಣಾ ಸ ಸದಸ್ಯರಾಗಿ ನೇಮಿಸಲಾಯಿತು

ಯುವರಾಜಾ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘ

ಯುವರಾಜಾ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಸಾಧಾರಣ ಸಭೆಯು ಇದೇ ತಿಂಗ ೬ ನೇ ತಾರೀಖು ಸಂಜೆ ೫½ ಗಂಟೆಗೆ ಕಾ ಲೇಜಿನ ಆವರಣದಲ್ಲಿ ನಡೆಯುವುದು ಸದಸ್ಯರು ವಾರ್ಷಿಕ ಚಂದಾ ೩ ರೂ. ಅನ್ನು ಕೊಟ್ಟು ಸದಸ್ಯತ್ವವನ್ನು ಮುಂದುವರಿಸುವಂತೆ ಕೋರಲಾಗಿದೆ ಸಂಘದ ಕಾರ್ಯದರ್ಶಿ ಶ್ರೀ ಎಸ್ ರಾಮಚಂದ್ರರಾಯರಿಗೆ ಚಂದಾ ಕಳುಹುದು

ಅಕ್ರಮ ಬ್ರಾಂದಿ ಪತ್ತೆ

ಗರದ ಅಶೋಕಾ ರಸ್ತೆಯ ೧ನೇ ಕ್ರಾಸಿನ ನ ಮಾಜಿ ಕಂಟ್ರಾಕ್ಟರ್ ಶ್ರೀ ಎ ರಾಮಕೃಷ್ಣ ಮತ್ತು ಅವರ ಪತ್ನಿ ಶ್ರೀಮತಿ ಸಾವಿತ್ರಮ್ಮನವರು ಅಕ್ರಮವಾಗಿ ಬ್ರಾಂದಿಯನ್ನು ದಾಸ್ತಾನು ಮಾಡಿ ಕಳ್ಳತನದಲ್ಲಿ ಮಾರಾಟ ಮಾಡು ದನ್ನು ಇಲ್ಲಿನ ರೇಂಜ್ ಅಬ್ಕಾರಿ ಇನ್ಸ್ಪೆ ಎಸ್ ರುದ್ರಪ್ಪನವರು ತಮ್ಮ ಸಿಬ್ಬಂದಿ ನೆ ಮೊನ್ನೆ ರಾತ್ರಿ ಪತ್ತೆ ಹಚ್ಚಿ ೬ ಬೊಡ್ಡ ಇನ್ನೂರು ಚಿಕ್ಕ ಬ್ರಾಂದಿ ಸೀಸೆಗಳನ್ನೂ, ದ. ಖಾಲಿ ಸೀಸೆಗಳನ್ನೂ ವಶಪಡಿಸಿಕೊಂ

ಕಾಲದ ವಿಶೇಷ ಹಿಂದಿ ತರಗತಿಗಳು

ಸ್ಥಾನದ ಎಲ್ಲಾ ಮಾಧ್ಯಮಿಕ ಮತ್ತು ಶಾಲಾ ವಿದ್ಯಾರ್ಥಿಗಳಿಗೆ ದೊರೆಕಿರುವ ತಿಂಗಳುಗಳ ದೀರ್ಘ ರಜಾ ಕಾಲವನ್ನು ಸ ಯೋಗಪಡಿಸಿಕೊಳ್ಳುವ ಸಲುವಾಗಿ ನಗರ ಪ್ರಚಾರ ಸಭೆಯಲ್ಲಿ ವಿಶ್ವ ಲೈ ೮ ರಿಂದ ೧೦ ಘಂಟೆವರೆಗೆ ವಿಂ ತರಗತಿಗಳನ್ನು ಏರ್ಪಡಿಸಲಾಗಿದೆ ವಿ ರ್ಥಿಗಳು, ಸಾರ್ವಜನಿಕರೂ ಈ ಅವಕಾಶ ಉಪಯೋಗಿಸಿಕೊಳ್ಳುವಂತೆ ಕೋರಿದ

ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ತಾಯಂದಿರ ಗಮನ ಅಗತ್ಯ

ಮಹಾರಾಣಿ ತ್ರಿಪುರಸುಂದರಮ್ಮಣ್ಣಿಯವರ ಭಾಷಣ

ಬೆಂಗಳೂರು ೩.

ಶ್ರೀಮನ್ಮಹಾರಾಣಿ ಶ್ರೀಮತಿ ತ್ರಿಪುರಸುಂದರಮ್ಮಣ್ಣಿಯವರು ನೆನ್ನೆ ಇಲ್ಲಿನ ರಾಷ್ಟ್ರೀಯ ವಿದ್ಯಾಲಯದ ತಾಯಂದಿರ ಸಂಘದ ಆಶ್ರಯದಲ್ಲಿ ಏರ್ಪಟ್ಟ "ವಿನೋದ ವಿಹಾರದ" ಆರಂಭೋತ್ಸವವನ್ನು ನೆರವೇರಿಸಿ ಭಾಷಣ ಮಾಡಿ ಪಾಲಕಿಯರು ಮಕ್ಕಳ ವಿದ್ಯಾಭ್ಯಾಸದಲ್ಲಿ ತೀವ್ರಾಸಕ್ತಿ ವಹಿಸಿ, ಅವರುಗಳನ್ನು ಉತ್ತಮ ನಾಗರಿಕರನ್ನಾಗಿ ಮಾಡಬೇಕೆಂದು ತಿಳಿಸಿದರು. ಶಾಲೆಗಳಲ್ಲೂ ಮತ್ತು ಮನೆಗಳಲ್ಲೂ ಮಕ್ಕಳು ಪ್ರಗತಿ ಹೊಂದುತ್ತಿರುವ ಬಗೆಯನ್ನು ಅವರು ಲಕ್ಷ್ಯವಿಟ್ಟಿರಬೇಕೆಂದೂ ಸೂಚಿಸಿದರು. ಸಮಾಜದಲ್ಲಿ ಅಂತಸ್ತುಗಳ ವ್ಯತ್ಯಾಸವಿದ್ದರೂ ತಾಯಂದಿರೆಲ್ಲರೂ ಒಂದೇ ವಿಧದ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದೆಂದೂ ಅವರು ನುಡಿದರು

ಮಕ್ಕಳ ವಿದ್ಯಾಭ್ಯಾಸದ ಯೋಜನೆಯಲ್ಲಿ ಕ್ರಾಂತಿಕಾರಕ ಬದಲಾವಣೆಯು ಅಗತ್ಯವೆಂದೂ ತತ್ಕಾಲದಲ್ಲಿ ಅನೇಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಲು ಮಕ್ಕಳಿಗೆ ತಕ್ಕ ವಾತಾವರಣವಿಲ್ಲವೆಂದೂ ಅವರು ಸೂಚಿಸಿದರು ತಾಯಂದಿರ ಜ್ಞಾನ ವಿಕಾಸಕ್ಕಾಗಿ ಗೋಷ್ಠಿಗಳನ್ನು ನಡೆಸಬೇಕೆಂದೂ ಅವರು ಸಲಹೆ ಮಾಡಿದರು.

ಜಮ್ಮುವಿನಲ್ಲಿ ಪಾಕಿಸ್ತಾನದ ಗೂಢಚಾರರ ಪತ್ತೆ

ಪಾಕಿಸ್ತಾನದ ಗೂಢಚಾರರೆಂದು ನಂಬಲಾಗಿರುವ ಇಬ್ಬರನ್ನು ಪೊಲೀಸರು ಪತ್ತೆ ಮಾಡಿರುತ್ತಾರೆ. ಆ ಪೈಕಿ ಒಬ್ಬಳು ತಲೆಯನ್ನು ಬೋಳಿಸಿಕೊಂಡಿರುವ ೩೦ ವರ್ಷದ ಮುಸ್ಲಿಂ ಮಹಿಳೆ ಆಕೆಯು ತನ್ನ ಸ್ಥಳ ಕಾಶ್ಮೀರದ ಪೂಂಚ್ ಎಂದೂ, ಹೆಸರು ಗುಲಾಂ ನೂರ್ ಎಂದೂ ತಿಳಿಸಿರುತ್ತಾಳೆ ಇನ್ನೊಬ್ಬನು ತನ್ನ ಹೆಸರು ಅಮರನಾಥ್ ಎಂದೂ ೨೦ ವರ್ಷಗಳ ಹಿಂದೆ ಜಮ್ಮುವಿನಿಂದ ಪಾಕಿಸ್ತಾನದ ಸಿಯಾಲ್ ಕೋಟೆಗೆ ಹೋದುದಾಗಿಯೂ ತಿಳಿಸಿರುತ್ತಾನೆ. ಆತನು ಫಕೀರನಂತೆ ವೇಷ ಧರಿಸಿದ್ದನು

ಕಳ್ಳತನ

ಹಳೇ ಬಂಡಿಕೇರಿಯ ಕ್ಷೇತ್ರಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಪತಂಗೆಯವರ ಮನೆಯಲ್ಲಿ ನೆನ್ನೆ ಮುಂಜಾನೆ ಕಳ್ಳತನ ನಡೆದು ಎರಡು ಹಿತ್ತಾಳೆ ತಟ್ಟೆಗಳು, ಎರಡು ಚೆಂಬುಗಳು, ಒಂದು ಹಿತ್ತಾಳೆ ಪಾತ್ರೆಗಳನ್ನು ಕಳುವು ಮಾಡಲಾಗಿದೆಯೆಂದು ಪೊಲೀಸರಿಗೆ ದೂರು ಕೊಡಲಾಗಿದೆ

ಹುಬುನೇಕೆರೆಯಲ್ಲಿ ಸ್ಪರ್ಧೆ

ಹುಬುವೇಕೆರೆ ಕ್ಷೇತ್ರದಿಂದ ವಿಧಾನ ಪರಿಷತ್ತಿ ನ ಅಭ್ಯರ್ಥಿಯಾದ ಶ್ರೀ ಟಿ ಸ ಪ್ರಹ್ಲಾದ, ಪ್ರಜಾ ಸಮಾಜವಾದಿ ಪಕ್ಷದ [illegible] (ಗಾಂಧಿ ಸಭ್ಯ) ಶ್ರೀ ಪಿ [illegible] ಮತ್ತು [illegible]ನವರು [illegible] ಗೆ ಸ್ಪರ್ಧಿಸುತ್ತಾರೆ

ವಿಶ್ವ ಸಂಸ್ಥೆ ದಳದವರ ಮೇಲೆ ಇಸ್ರೇಲಿನ ಸೈನ್ಯಗಳ ಗುಂಡು

ವಿಶ್ವ ಸಂಸ್ಥೆಯ ಸೇನಾನಿ ಬರ್ನ್ಸ್‌ರ ಪ್ರತಿಭಟನೆ

ಗಾಜಾ ಪ್ರದೇಶದಲ್ಲಿ ಓಡಿಹೋಗುತ್ತಿದ್ದ ೩ ರಾತ್ರಿಚರರನ್ನು ಬೆನ್ನಟ್ಟಿದ ಇಸ್ರೇಲಿ ಸೈನಿಕರು ಮೊನ್ನೆ ವಿಶ್ವ ಸಂಸ್ಥೆ ಸೇನಾ ದಳದ ಸ್ವೀಡಿಷ್ ಗಸ್ತು ಸಿಪಾಯಿಗಳ ಮೇಲೆ ಗುಂಡು ಹಾರಿಸಿದುದಾಗಿಯೂ, ಈ ಬಗ್ಗೆ ವಿಶ್ವಸಂಸ್ಥೆಯ ಸೇನಾನಿ ಬರ್ನ್ಸ್‌ರವರು ಇಸ್ರೇಲಿ ರಕ್ಷಣಾ ಬಲದ ದಳಪತಿಗೆ ಪ್ರತಿಭಟನೆಯನ್ನು ಸೂಚಿಸಿರುವರೆಂದೂ ವರದಿಯಾಗಿದೆ ಗಸ್ತು ಸಿಪಾಯಿಗಳು ಇವರು ಇಸ್ರೇಲಿ ಸೈನಿಕರನ್ನು ಕರೆದರೆಂದೂ, ಆಗ ಅವರು ಮರೆಯಲ್ಲಿ ನಿಂತು ರೈಫಲ್ಲು ಮತ್ತು ಮಿಷಿನ್ ಗನ್ನುಗಳಿಂದ ಗುಂಡು ಹಾರಿಸಿದರೆಂದೂ ಹೇಳಲಾಗಿದೆ ಸ್ವೀಡಿಷ್ ಸಿಪಾಯಿಗಳು ಪ್ರತಿಯಾಗಿ ಗುಂಡನ್ನು ಹಾರಿಸಿದರು ಆದರೆ ಸಾವುನೋವುಗಳೇನೂ ಆಗಲಿಲ್ಲ.

ದೆಹಲಿ ಪಾಕ್ ಹೈಕಮಿಷನರ್ ಕಛೇರಿ ಬಳಿ ಪ್ರದರ್ಶನ

ವಿದ್ಯಾರ್ಥಿಗಳ ಮೇಲೆ ಅಶ್ರು ವಾಯು ಪ್ರಯೋಗ

ಪಾಕಿಸ್ತಾನದಲ್ಲಿ ಕಪ್ಪು ದಿನಾಚರಣೆ ನಡೆದ ಬಗ್ಗೆ ಪ್ರತಿಭಟನೆ ಸೂಚಿಸಲು ನೆನ್ನೆ ದೆಹಲಿಯಲ್ಲಿ ಪಾಕಿಸ್ತಾನದ ಹೈ ಕಮಿಷನರ್ ಕಛೇರಿ ಮುಂದೆ ೧೦ ಸಾವಿರ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ, ೨೦೦ ಪೊಲೀಸರ ಕಾವಲನ್ನು ಭೇದಿಸಿ ಒಳಗೆ ನುಗ್ಗುವ ಪ್ರಯತ್ನದಲ್ಲಿ ಪೊಲೀಸರ ಮೇಲೆ ಕಲ್ಲುಗಳನ್ನು ಎಸೆದರೆಂದೂ, ಸೂಪರಿಂಟೆಂಡೆಂಟರೂ ಸೇರಿ ೧೧ ಮಂದಿ ಪೊಲೀಸರಿಗೆ ಪೆಟ್ಟು ಬಿದ್ದಿತೆಂದೂ ವರದಿಯಾಗಿದೆ ಪೊಲೀಸರು ಅಶ್ರುವಾಯು ಪ್ರಯೋಗ ಮಾಡಿದರು ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿ ಮತ್ತು ವಿದೇಶಾಂಗ ಮಂತ್ರಿ ನೂನರ ಪ್ರತಿಮೆಗಳನ್ನು ಸುಡಲಾಯಿತು. ಕಲ್ಲು ತೂರಿದುದಕ್ಕಾಗಿ ೩೦ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು ಪ್ರತಿಮೆಗಳನ್ನು ಸುಟ್ಟು ಹಾಕಿದನಂತರ ವಿದ್ಯಾರ್ಥಿಗಳು ಶೋಕ ಸೂಚಕಗಾಗಿ ಎದೆಗಳನ್ನು ಬಡಿದುಕೊಂಡರು 'ಕಾಶ್ಮೀರವು ಭಾರತದ ಭಾಗ, ಪಾಕಿಸ್ತಾನಿಗಳ ಪುಂಡುತನ ಅಡಗಲಿ' ಎಂದು ಕೂಗಲಾಯಿತು ಭದ್ರತಾ ಸಮಿತಿಯ ಈಗಿನ ಕಾಶ್ಮೀರ ನಿರ್ಣಯವನ್ನು ಖಂಡಿಸಲಾಯಿತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೫ ಕೊಳಲು ೭ ೧೫ ದೇವರನಾಮ ಸು ೭-೩೦ ಗಾನವಿಹಾರ ೮-೧೫ ಉದಯ ಸಂಗೀತ ಮಧ್ಯಾಹ್ನ ೧೨ ಬಿ ಎಂ ಮುನಿವೆಂಕಟಪ್ಪ-ಸಂಗೀತ ೧೨ ೩೦ ಮತ್ತು ಸಂಜೆ ೫-೩೦ ಚಿಟ್ ಎಸ್ ಭಾಗ್ಯಲಕ್ಷ್ಮಿ-ವೀಣೆ ೧ ೧೫ ನ [illegible] ೧-೫೦ ಕೊಳಲು ೬-೫ ವಿ ರಾ ಮು ಸಂಗೀತ ೬ ೩೦ ಜಾನಪದ ಗೀತೆ. ೭-೩೦ [illegible] ೮ ರವೀಂದ್ರ ಸಂಗೀತ ೧೫ ರೇಡಿಯೋ ಸಂದರ್ಶನ ೮ ೩೦ ಸಂಗೀತ ೯-೧೫ ತೆಲುಗು-ಇಂಗ್ಲಿಷ್ ಭಾಷಣ ೯-೩೦ ಎ. ಎಸ್ ಮೂರ್ತಿ ಪಕ್ಷಿ ಕಾಲಕ್ಷೇಪ.

ಉಮೇದುವಾರಿಕೆಗಳ ವಾಪಸು

ಸ್ವಂ. ವ. ಪ್ರ:] ನಂಜನಗೂಡು ೩.

ವಿಧಾನ ಸಭೆಗೆ ಚಳಗೆರೆ ಕ್ಷೇತ್ರದಿಂದ ಸ್ಪರ್ಧಿಸಿರುವವರಲ್ಲಿ ಶ್ರೀ ರಾಚಯ್ಯ ಮತ್ತು ಶ್ರೀ ಡಿ. ಎಂ ಸಿದ್ದಯ್ಯನವರು ತಮ್ಮ ಉಮೇದುವಾರಿಕೆಗಳನ್ನು ವಾಪಸು ತೆಗೆದುಕೊಂಡಿದ್ದಾರೆ ಶ್ರೀ ಹೆಜ್ಜಿಗೆ ಹುಚ್ಚಪ್ಪನವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಅಲ್ಲಿ ೫ ಜನರು ಸ್ಪರ್ಧಿಸಿದ್ದಾರೆ

ಗುಂಡ್ಲುಪೇಟೆಯಲ್ಲಿ ಹೆಚ್ ಕೆ ಪುಟ್ಟಸ್ವಾಮಯ್ಯ ಮತ್ತು ಇನ್ನೊಬ್ಬರು ವಾಪಸು ಪಡೆದಿದ್ದಾರೆ ಅಲ್ಲಿ ಶ್ರೀ ಹೆಚ್ ಕೆ ಶಿವರುದ್ರಪ್ಪ ಮತ್ತು ಶ್ರೀಮತಿ ನಾಗರತ್ನಮ್ಮನವರಿಗೆ ನೇರ ಸ್ಪರ್ಧೆಯಿದೆ.

ಚಾಮರಾಜನಗರದಿಂದ ಶ್ರೀ ಜಿ ಎಂ ಗುರುಮಲ್ಲಪ್ಪನವರು ವಾಪಸು ಪಡೆದಿರುವರು ಅಲ್ಲಿ ಒಂಬತ್ತು ಮಂದಿ ಸ್ಪರ್ಧಿಸುವರು ನಂಜನಗೂಡು ಕ್ಷೇತ್ರದಿಂದ ಶ್ರೀ ಬಿ ವಿ. ಬಾಲಸುಬ್ರಹ್ಮಣ್ಯಂರವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆಯಲಿರುವರೆಂದೂ, ಕಾಂಗ್ರೆಸ್ಸಿನ ಶ್ರೀ ಪಿ ಮಹದೇವಯ್ಯನವರಿಗೂ ಪಿ ಎಸ್ ಪಿ ಯ ಶ್ರೀ ಬಿ. ಎ ಎಸ್. ಅರಸ್ಸರಿಗೂ ನೇರ ಸ್ಪರ್ಧೆಯು ಬೀಳುವುದೆಂದೂ ತಿಳಿದುಬಂದಿದೆ ನಾಳೆ ಅಧಿಕೃತ ವಾಪಸಾತಿ ದಿನ.

೫೭ ದಿನಗಳಲ್ಲಿ ಕಾಶ್ಮೀರ ಜನಮತ ಗಣನೆಯಾಗದಿದ್ದರೆ ದಂಡಯಾತ್ರೆ

ಖಾಕ್ಸಾರ್ ಮುಖಂಡ ಅಲ್ಲಾಮಾ ಮಶ್ರಿಕಿಯವರ ಎಚ್ಚರಿಕೆ

ಕಾಶ್ಮೀರದಲ್ಲಿ ಜನಮತಗಣನೆಯನ್ನು ನಡೆಸಲು ನೆಹರೂರವರಿಗೆ ಪಾಕಿಸ್ತಾನದಲ್ಲಿರುವ ಖಾಕ್ಸಾರ್ ಮುಖಂಡ ಅಲ್ಲಾಮಾ ಮಶ್ರಿಕಿಯವರು ೫೭ ದಿನಗಳ ಅವಧಿಯನ್ನು ಕೊಟ್ಟು ಹಾಗೆ ಮಾಡದಿದ್ದರೆ ಆ ಸಂಸ್ಥೆಯ ೧೦ ಲಕ್ಷ ಸ್ವಯಂಸೇವಕರನ್ನು ನುಗ್ಗಿಸುವುದಾಗಿ ತಿಳಿಸಿರುತ್ತಾರೆ ೫೭ ನೇ ಇಸವಿಗೆ ಸರಿಹೊಂದುವಂತೆ ಅವರು ೫೭ ದಿನಗಳ ಅವಧಿಯ ಅಂತ್ಯ ಎಚ್ಚರಿಕೆಯನ್ನಿತ್ತಿರುವರು ಕರಾಚಿಯಲ್ಲಿ ಎಚ್ಚರಿಕೆಯ ಭಾರಿ ಭಿತ್ತಿಪತ್ರಗಳನ್ನು ಪ್ರಕಟಿಸಲಾಗಿದೆ

ಪೂರ್ವ ಸುಮಾತ್ರಾ ದ್ವೀಪದ ಮೇಲೆ ಬಾಂಬು ಧಾಳಿ

ಇಂಡೋನೇಷ್ಯದ ವಿಮಾನಗಳು ಪೂರ್ವ ಸುಮಾತ್ರಾ ದ್ವೀಪದ ದಾರ್ ಉಲ್ ಇಸ್ಲಾಮ್ ಸಂಪರ್ಕದ ದಂಗೆಕೋರರ ಮೇಲೆ ಬಾಂಬು ಧಾಳಿ ಮಾಡಿದರೆಂದೂ, ೧೭ ಜನರು ಸತ್ತು ೯ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ. ದಂಗೆಕೋರರ ದೋಣಿಯೊಂದನ್ನು ಮುಳುಗಿಸಲಾಗಿದೆ ದಂಗೆಕೋರರ ಮೇಲೆ ವಿಮಾನ ಕಾರ್ಯಾಚರಣೆ ನಡೆದಿರುವುದು ಇದೇ ಮೊದಲು

○ ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ ಮೊನ್ನೆ ರಾತ್ರಿ ಬಲವಾದ ಹಿಮ ಬೀಳುತ್ತಿದ್ದರೂ [illegible] ಅನೇಕರು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ "ಸಾಮ್ರಾಜ್ಯಶಾಹಿ ವಿರೋಧ ದಿನ"ವನ್ನು ಆಚರಿಸಿದರು.

ವಾರ ಭವಿಷ್ಯ

ತಾ|| ೩-೨-೫೭ರಿಂದ ೧೦-೨-೫೭ರ ವರೆಗೆ

ಮೇಷ :—ಆರ್ಥಿಕ ಕ್ಷೇತ್ರದಲ್ಲಿ ಏಳಿಗೆ. ಸ್ತ್ರೀಯರ ಅಸಹಕಾರ. ಕೈ ಕೆಳಗಿನವರಿಂದ ಮೋಸ. ವ್ಯಾಪಾರದಲ್ಲಿ ಪ್ರಗತಿ ಇಲ್ಲ.

ವೃಷಭ :—ಕೌಟುಂಬಿಕ ವಾತಾವರಣ ಹಿತಕರವಿಲ್ಲ. ಆರ್ಥಿಕ ಪರಿಸ್ಥಿತಿ ಉತ್ತಮವಿಲ್ಲ. ವ್ಯಾಪಾರಸ್ಥರಿಗೆ ಸಾಮಾನ್ಯ. ಪ್ರವಾಸ ಯೋಗ.

ಮಿಥುನ :—ಮಿಶ್ರಫಲ. ಆರ್ಥಿಕವಾಗಿ ಅಸ್ವಸ್ಥ. ಭ್ರಾತೃಗಳೊಡನೆ ವೈಮನಸ್ಯ. ಸಮಾಜದಲ್ಲಿ ಪ್ರಗತಿಗೆ ಅಡ್ಡಿ. ಶುಭ ಕಾರ್ಯದಲ್ಲಿ ಅಡಚಣೆ.

ಕರ್ಕ :—ಅನಾರೋಗ್ಯ. ಕುಟುಂಬದಲ್ಲಿ ಅಶಾಂತಿ. [illegible] ಸಮಾಧಾನವಿಲ್ಲ. ವ್ಯಾಪಾರ ಸಾಮಾನ್ಯ. ಪ್ರವಾಸ ಯೋಗ.

ಸಿಂಹ :—ಆರೋಗ್ಯ ಉತ್ತಮ. ಧನಲಾಭ. ಆರ್ಥಿಕ ಸ್ಥಿತಿ ತೃಪ್ತಿಕರ. ಸಮಾಜದಲ್ಲಿ ಸ್ಥಾನಮಾನ ಹೆಚ್ಚು. ವ್ಯಾಪಾರದಲ್ಲಿ ಪ್ರಗತಿ. ನೌಕರರಿಗೆ ಪ್ರಶಂಸೆ ಮತ್ತು ಬಡ್ತಿ.

ಕನ್ಯಾ :—ಕಾರ್ಯಕ್ಕೆ ಅಡ್ಡಿ. ಸ್ತ್ರೀಯರ ಅಸಹಕಾರ. ಆಸ್ತಿಪಾಸ್ತಿಗಳ ಬಗ್ಗೆ ವಾದ ವಿವಾದ. ಕುಟುಂಬದಲ್ಲಿ ಅಶಾಂತಿ.

ತುಲಾ :—ಅಶಾಂತಿ. ವೈಮನಸ್ಯ. ಸ್ತ್ರೀಯರ ಅಸಹಕಾರ. ಆಸ್ತಿ ಬಗ್ಗೆ ವಾದ ವಿವಾದ. ವ್ಯಾಪಾರದಲ್ಲಿ ಹೆಚ್ಚಿನ ಪ್ರಗತಿ ಇಲ್ಲ. [illegible] ಪರಿಸ್ಥಿತಿ.

ವೃಶ್ಚಿಕ :—ಅಧಿಕ ಧನಲಾಭ. ಸಮಾಜದಲ್ಲಿ ಸ್ಥಾನಮಾನ. ವ್ಯಾಪಾರದ ಅಭಿವೃದ್ಧಿ. [illegible] ನೌಕರರಿಗೆ ಪ್ರಶಂಸೆ ಮತ್ತು ಬಡ್ತಿ.

ಧನು :—ಆರೋಗ್ಯ ಉತ್ತಮ. ಆರ್ಥಿಕ ಸ್ಥಿತಿ ತೃಪ್ತಿಕರ. ಸಮಾಜದಲ್ಲಿ ಸ್ಥಾನಮಾನ ಹೆಚ್ಚು. ವ್ಯಾಪಾರದಲ್ಲಿ ಅಭಿವೃದ್ಧಿ. ನಿರುದ್ಯೋಗಿಗಳಿಗೆ ಲಾಭ. ನೌಕರರಿಗೆ ಬಡ್ತಿ.

ಮಕರ :—ಮನಸ್ಸಿನಂತೆ ಕೆಲಸ ಆಗುವುದಿಲ್ಲ. ಅಶಾಂತಿ. ಆರ್ಥಿಕ ಲಾಭವಿದ್ದರೂ ಪ್ರಗತಿಯಿಲ್ಲ. ವ್ಯಾಪಾರದಲ್ಲಿ ಸಾಮಾನ್ಯ ಸ್ಥಿತಿ. ಪ್ರವಾಸ ಯೋಗ. ನೌಕರಿಯಲ್ಲಿ ಅಡಚಣೆ.

ಕುಂಭ :—ಆರ್ಥಿಕ ಸ್ಥಿತಿ ಸ್ಥಿರ. ವ್ಯಾಪಾರದಲ್ಲಿ ಪ್ರಗತಿ. ನೂತನ ಪರಿಚಯ. ನೌಕರರ ಪ್ರಗತಿ.

ಮೀನ :—ಆರೋಗ್ಯ ಉತ್ತಮ. ಧನಲಾಭ. ಕೋರ್ಟು ಕಾರ್ಯದಲ್ಲಿ ಜಯ. ನೌಕರರಿಗೆ ಪ್ರಶಂಸೆ. ವ್ಯಾಪಾರದಲ್ಲಿ ಅಭಿವೃದ್ಧಿ.

ಸಿದ್ದನಂಜಪ್ಪನವರ ಅವಿರೋಧ ಆಯ್ಕೆ

ಹಾಸನ ಕ್ಷೇತ್ರದಿಂದ ಲೋಕಸಭೆಗೆ ಶ್ರೀ ಹೆಚ್. ಎಸ್. ಸಿದ್ದನಂಜಪ್ಪನವರು ಅವಿರೋಧವಾಗಿ ಚುನಾಯಿತರಾಗಿರುತ್ತಾರೆ. ಅದಕ್ಕೆ ಮೊದಲು ಶ್ರೀಗಳಾದ ಹಾರನಹಳ್ಳಿ ರಾಮಸ್ವಾಮಿ ಮತ್ತು ಕೊಣನೂರು ಕೇಶವಮೂರ್ತಿ (ಡಮ್ಮಿ) ಯವರು ತಮ್ಮ ಉಮೇದುವಾರಿಕೆಗಳನ್ನು ವಾಪಸು ಪಡೆದರು.



ಚಂದಾದಾರರಲ್ಲಿ ವಿನಂತಿ

ಪ್ರತಿ ತಿಂಗಳ ಚಂದಾ ಮೊಬಲಗನ್ನು ಆಯಾ ತಿಂಗಳ ಆರಂಭದಲ್ಲಿಯೇ ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಸ್ಥಳ ಪರಸ್ಥಳಗಳ ಚಂದಾದಾರರಲ್ಲಿ ಈ ಮೂಲಕ ವಿನಂತಿ ಮಾಡಲಾಗಿದೆ.

- ವ್ಯವಸ್ಥಾಪಕ, ಸಾಧ್ವಿ

Edited, Printed and Published by
A. R. Nagarajan at Sadhvi Press
D. Subbiah Road, Mysore

ಲೋಕಸಭೆಯಲ್ಲಿ "ಏಸುಕ್ರಿಸ್ತ"ನ ಪರ ನಾಮಪತ್ರ

ಲೋಕ ಸಭೆಗೆ ನವದೆಹಲಿ ಕ್ಷೇತ್ರವೊಂದರಿಂದ ಕ್ರೈಸ್ತರ ಗುರು ಯೇಸುಕ್ರಿಸ್ತನನ್ನು ಒಬ್ಬಾತನು ಉಮೇದುವಾರನನ್ನಾಗಿ ಸೂಚಾಯಿಸಿದ್ದಾನೆ. ಆತನ ಹೆಸರೂ ಸಹ ಚಾರ್ಲ್ಸ್ ಜೀಸಸ್. ತಾನು ಅಂಚೆಯ ಮೂಲಕ ಕಳುಹಿಸಿದ್ದ ನಾಮಪತ್ರವು ಸಕಾಲಕ್ಕೆ ತಲುಪಿತ ವಿಚಾರವನ್ನು ಅರಿಯಲು ಆತನು ಕಛೇರಿಗೆ ಹೋಗಿದ್ದನು. ಠೇವಣಿ ಮೊಬಲಗನ್ನು ಕಟ್ಟದೇ ಇದ್ದುದರಿಂದ ಉಮೇದುವಾರಿಕೆಯನ್ನು ತಿರಸ್ಕರಿಸಿರುವುದಾಗಿ ಅಧಿಕಾರಿಗಳು ತಿಳಿಸಿದರು.

ಜಗನ್ನಾಥರಾವ್ ಜೋಷಿಯವರಿಗೆ ಸೀಟು ಅರ್ಪಣೆಗೆ ನಿರ್ಧಾರ

ಭಾರತೀಯ ಜನಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ನಡೆದು, ಗೋವಾ ಜೈಲಿನಲ್ಲಿರುವ "ಕರ್ನಾಟಕ ಕೇಸರಿ" ಶ್ರೀ ಜಗನ್ನಾಥರಾವ್ ಜೋಷಿಯವರಿಗೆ ಜನಸಂಘದ ಪರವಾಗಿ ಒಂದು [illegible]ವನ್ನು ಸಮರ್ಪಿಸಲು ನಿರ್ಧರಿಸಲಾಯಿತು. ಅವರು ಈ ಸಾರಿಯ ಮಹಾ ಚುನಾವಣೆಯಲ್ಲಿ ಲೋಕಸಭೆಗೆ ಧಾರವಾಡದ ಉತ್ತರ ಕ್ಷೇತ್ರದಿಂದ ಕೇಂದ್ರ ಆಹಾರ ಮಂತ್ರಿ ಶ್ರೀ ಕರ್ಮರ್ಕರರ ವಿರುದ್ಧವಾಗಿ ಸ್ಪರ್ಧಿಸಿದ್ದಾರೆ. ಶ್ರೀಯುತರ ಬಿಡುಗಡೆ ಸಂಭವವಿರುವುದರಿಂದ ಅವರನ್ನು ಮೈಸೂರಿಗೆ ಆಹ್ವಾನಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ಸಭಾಧ್ಯಕ್ಷತೆಯನ್ನು ಡಾ|| ಎಸ್. ಆರ್. ವೆಂಕಟಾ[illegible]ರವರು ವಹಿಸಿದ್ದರು.

ಮಂಡ್ಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಮಂಡ್ಯದ [illegible] ಸಂಗೀತ ಪಾಠಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ತಾ|| ೮ ಸಂಜೆ ವಿ|| ಆರ್. ಕೆ. ಶ್ರೀಕಂಠನ್‌ರವರ ಸಂಗೀತವು ಸೂಕ್ತ ಪಕ್ಕ ವಾದ್ಯಗಳೊಡನೆ ನಡೆಯುವುದು. ಸಂಜೆ ೬ ಗಂಟೆಗೆ ಶಾಸನ ಸಭಾ ಸದಸ್ಯ ಶ್ರೀ ಜಿ. ಎಸ್. ಬೊಮ್ಮೇಗೌಡರು "ಗಾನವಾಹಿನಿ" ಪತ್ರಿಕೆಯ ವಾರ್ಷಿಕೋತ್ಸವದ ಅಂಗವಾಗಿ ಬಹುಮಾನ ವಿನಿಯೋಗವನ್ನೂ ಮಾಡುವರು.

ಗೃಹಪ್ರವೇಶ ಮತ್ತು ಉಪನಯನ

ಚಾಮರಾಜನಗರದಲ್ಲಿರುವ ಶ್ರೀ ಎಸ್. ಸುಬ್ಬರಾಯರು ಕಳೆದ ಗುರುವಾರ ಅನಂತ ನಿಲಯವೆಂಬ ತಮ್ಮ ನೂತನ ಗೃಹದ ಪ್ರವೇಶೋತ್ಸವವನ್ನು, ಮೊನ್ನೆ ತಮ್ಮ ಕುಮಾರ ಚಿ|| ಅನಂತಮೂರ್ತಿಯ ಉಪನಯನವನ್ನೂ ನೆರವೇರಿಸಿದರು.

Globe Tutorial College
(Sadvidya Pataśala)
Offers excellent coaching for
High School I, II & III
year classes

CITY TUTORIAL COLLEGE
Old Agrahar, Mysore.
★ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಟ್ಯೂಷನ್ ತರಗತಿಗಳನ್ನು ಬೆಳಗಿನ ವೇಳೆಯಲ್ಲೇ ನಡೆಸಲಾಗುತ್ತಿದೆ. (Fees reduced)
★ ಹೈಸ್ಕೂಲಿನ ಎಲ್ಲಾ ತರಗತಿಗಳ ಟ್ಯೂಷನ್ ಬೆಳಗಿನಲ್ಲಿ ನಡೆಯುತ್ತದೆ (7-30 to 11-30 a. m.)
★ 1958ನೇ ಮಾರ್ಚಿಯ Madras Matric ಪರೀಕ್ಷೆಗೆ ತರಗತಿಗಳು ಪ್ರಾರಂಭವಾಗಿವೆ (6 to 8-30 P. M.) 19 ವಯಸ್ಸಿನವರಿಗೆಲ್ಲಾ ಪ್ರವೇಶವುಂಟು.

ಶುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೋ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ. ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ
ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ

ಸೂರ್ಯರಶ್ಮಿ ಶಾಖದ ಶೇಖರಣೆಗೆ ಅಮೇರಿಕಾದಲ್ಲಿ ಪ್ರಯೋಗ

ಅಣು ಅಸ್ತ್ರಗಳ ಆಸ್ಫೋಟನೆಯಿಂದ ಹೊರಬರುವ ಉಷ್ಣಾಂಶದ ಪ್ರಮಾಣದಷ್ಟು ಶಾಖವನ್ನು ಸೂರ್ಯ ರಶ್ಮಿಯಿಂದ ಶೇಖರಿಸಲು ಅಮೇರಿಕದ ಸೈನ್ಯ ಇಲಾಖೆಯವರು ಒಂದು ಬೃಹದಾಕಾರದ ಫರ್ನೇಸನ್ನೇ ನಿರ್ಮಿಸಲಿರುವರೆಂದು ಹೇಳಲಾಗಿದೆ. ಮಸಾಚುಸೆಟ್ಸ್ ಬಳಿ ಅದನ್ನು ಸ್ಥಾಪಿಸಲಾಗುವುದು. [illegible] ಅಡಿ ಉದ್ದ ಮತ್ತು [illegible] ಅಡಿ ಅಗಲವಿರುವ ಭಾರಿ ಕನ್ನಡಿಯನ್ನು ಇಟ್ಟು [illegible] ಹೊರಬರುವ ಸಂಗ್ರಹಣಾ ಸಾಧನಕ್ಕೆ ರಶ್ಮಿಯನ್ನು ಪ್ರತಿಬಿಂಬಿಸುವಂತೆ ಮಾಡಲಾಗುವುದೆಂದೂ ಹೇಳಲಾಗಿದೆ. ಈ ಸಾಧನವು [illegible] ಕನ್ನಡಿಗಳನ್ನು ಒಳಗೊಂಡಿದೆ. ಅಣು ಶಕ್ತಿಯ ಶಾಖದಿಂದ ಸೈನಿಕರನ್ನು ರಕ್ಷಿಸುವ ಸಲುವಾಗಿ ಸೂರ್ಯರಶ್ಮಿ ಶಾಖವನ್ನು ಪರೀಕ್ಷಾರ್ಥವಾಗಿ ಉಪಯೋಗಿಸಲಾಗುವುದು.

ಬಿ. ಎಸ್. ತಾಂಡವಮೂರ್ತಿಯವರ ಡಿಸ್ಚಾರ್ಜ್

[illegible] ಗ್ರಾಮದಲ್ಲಿ ೧೧ ವರ್ಷಗಳ ಹಿಂದೆ ತಮ್ಮ ತಾಯಿಯನ್ನು [illegible] ಬೆಂಕಿಯಿಟ್ಟು ಕೊಲ್ಲುವಂತೆ ಮಾಡಿದರೆಂದು ನಗರದ ನಲ್ಲಿ ಕಂಟ್ರಾಕ್ಟರ್ ಶ್ರೀ ಬಿ. ಎಸ್. ತಾಂಡವಮೂರ್ತಿ ಮತ್ತು ಇತರ ಮೂವರ ಮೇಲೆ ಗ್ರಾಮದ [illegible] ಹೊರಿಸಿದ್ದ ಮೊಕದ್ದಮೆಯಲ್ಲಿ ಕಳೆದ ೩೦ನೇ ತಾರೀಕು ದ್ವಿತೀಯ ನ್ಯಾಯಾಧೀಶರು ತೀರ್ಪಿತ್ತು ಆಪಾದಿತರು ಕೃತ್ಯ ನಡೆದ ಸ್ಥಳದಲ್ಲಿರಲಿಲ್ಲವೆಂಬ ಕಾರಣ ಅವರನ್ನು ಡಿಸ್ಚಾರ್ಜ್ ಮಾಡಿದರು. ಈ ಬಗ್ಗೆ, ಕೋರ್ಟಿಗೆ ಪೋಲೀಸರು ಮೊದಲು ಒಂದು ರಿಪೋರ್ಟನ್ನು ಕೊಟ್ಟಿದ್ದರು.

ವಿದ್ಯಾ ಸಚಿವರ ಚುನಾವಣಾ ಪ್ರಚಾರದ ಸವಾರಿ

ಶೃಂಗೇರಿಯಲ್ಲಿ ಚುನಾವಣಾ ಪ್ರಚಾರಕ್ಕಾಗಿ ಮೊನ್ನೆ ರಾತ್ರಿ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಬೆಂಗಳೂರಿನಿಂದ ರೈಲಿನಲ್ಲಿ ತೆರಳಿದರು. ಅವರು ಸರ್ಕಾರಿ ಕಾರನ್ನಾಗಲೀ, ಅಥವಾ ನೌಕರರನ್ನಾಗಲೀ ಪ್ರಚಾರಕ್ಕೆ ತೆಗೆದುಕೊಳ್ಳುತ್ತಿಲ್ಲ. ಮಂತ್ರಿಗಳು ಅಧಿಕಾರ ಸ್ಥಾನವನ್ನು ಉಪಯೋಗಿಸಿ ಪ್ರಚಾರ ನಡೆಸುವುದರಿಂದ ವಿರೋಧ ಪಕ್ಷದವರಿಗೆ ಅನ್ಯಾಯವಾಗುವುದೆಂದು ವಿರೋಧ ಪಕ್ಷದವರು ಭಾವಿಸಿದ್ದುದನ್ನು ನಿವಾರಿಸಲು ಅವರು ಈ ರೀತಿ ಮಾಡಿರುತ್ತಾರೆ.

COLLEGE CONVERSATION
Inter Student: I am despaired of passing in Chemistry this time, I have lost all hopes.
Friend:- Don't lose confidence. Even now it is not too late. Please study "INTERMEDIATE CHEMISTRY AT A GLANCE" and bank upon "GUESS PAPER 1957"

The Model Tutorial Institute
D. Banumaiah's High School
Buildings, Mysore
Summer Classes for High School
II & III Year Classes
Classes commence from 6-2-1957
Hours of work 8 A.M to 11 A.M
Fees – Rs 3-0-0 per month.
Very efficient and useful instruction in General Subjects
An excellent opportunity for students to keep themselves study minded and usefully engaged during the long vacation.
For particulars apply to the Organiser
B. Seshagiri Rao,
Organiser

ಕುಸುಬಲು ಅಕ್ಕಿ ಭತ್ತಕ್ಕಾಗಿ ಉತ್ತಮ ವಿಧಾನ

ಮಿಲ್ಲುಗಳಲ್ಲಿ ಕುಸುಬಲು ಅಕ್ಕಿಯನ್ನು ವ್ಯಾಪಾರಿ ದೃಷ್ಟಿಯಿಂದ ತಯಾರಿಸುವ ವಿಧಾನದಲ್ಲಿ, ಭತ್ತದಲ್ಲಿ ಒಂದು ವಿಧವಾದ ಕೆಟ್ಟ ವಾಸನೆಯು ಬರದಂತೆ ಮಾಡಲು ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದವರು ಹೊಸ ವಿಧಾನವನ್ನು ಕಂಡುಹಿಡಿದು ಅದನ್ನು ಇಲ್ಲಿನ ಒಂದು ಅಕ್ಕಿ ಗಿರಣಿಯಲ್ಲಿ ಈಗಾಗಲೇ ಪ್ರದರ್ಶಿಸಿರುತ್ತಾರೆ. ಇದರಿಂದ ಕೆಟ್ಟ ವಾಸನೆಯು ಬರುವುದಿಲ್ಲವೆಂದು ಹೇಳಲಾಗಿದೆ. ಸೋಡಿಯಂ ಹೈಪೋಕ್ಲೋರೈಟ್ ರಸಾಯನ ವಸ್ತುವನ್ನು ಭತ್ತವನ್ನು ನೆನೆಹಾಕುವ ನೀರಿನಲ್ಲಿ ಬೆರೆಸಿದರೆ ಅದರಿಂದ ಕ್ಲೋರಿನ್ [illegible] ಹುಟ್ಟುವ ವಾಸನೆಯನ್ನು ಹೊಡೆಯುವುದು. ಈಗ ಇರುವಂತೆ [illegible] ಡಿಗ್ರಿಗಳಿಗೆ ಹೆಚ್ಚು ಉಷ್ಣಾಂಶದ ನೀರಿನಲ್ಲಿ ಭತ್ತವನ್ನು [illegible] ಗಂಟೆಗಳ ಬದಲು [illegible] ಗಂಟೆಗಳ ಕಾಲ ನೆನೆಸಿದರೆ ಸಾಕೆಂದು ಹೇಳಲಾಗಿದೆ. ಒಂದು ಸಾರಿಗೆ ೫-೧೦ ಟನ್ ಭತ್ತವನ್ನು ಈ ರೀತಿ ಮಾಡಬಹುದು. ಈಗ ಅಲ್ಪಸ್ವಲ್ಪ ಪ್ರಮಾಣದ ತಯಾರಿಕೆಯಿಂದ ಹೆಚ್ಚು ಕಾಲವೂ ಮತ್ತು ವೆಚ್ಚವೂ ಆಗುವುದೆಂದು ಅಭಿಪ್ರಾಯಪಡಲಾಗಿದೆ.

ಅಸಿಸ್ಟೆಂಟ್ ಕಮಿಷನರುಗಳ ಸೀನಿಯಾರಿಟಿ ಪಟ್ಟಿ

ಮೊನ್ನೆ ದಿನದ ಗೆಜೆಟ್ಟಿನಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತು ಡೆಪ್ಯುಟಿ ಕಲೆಕ್ಟರುಗಳ ಗ್ರೇಡಿನಲ್ಲಿರುವ ಅಧಿಕಾರಿಗಳ ಹಂಗಾಮಿ ಸೀನಿಯಾರಿಟಿ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಬಗ್ಗೆ ಆಕ್ಷೇಪಣೆಗಳಿದ್ದರೆ ರಾಜ್ಯ ಪುನರ್ವಿಂಗಡಣಾ ಇಲಾಖೆಯ ವಿಶೇಷ ಕಾರ್ಯದರ್ಶಿಗಳಿಗೆ ಮಾರ್ಚಿ ೩ ರೊಳಗೆ ಕಳುಹಿಸುವಂತೆ ಸೂಚಿಸಲಾಗಿದೆ.

ನಿಜಲಿಂಗಪ್ಪನವರಿಂದ ಬನ್ನೂರಿನಲ್ಲಿ ಸೇತುವೆ ಆರಂಭ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಾಳೆ ಬನ್ನೂರಿನಲ್ಲಿ ಸೇತುವೆಯ ಆರಂಭೋತ್ಸವವನ್ನು ನೆರವೇರಿಸುವರು.

ಉಚಿತ ಬಹುಮಾನ
ನಮ್ಮ ಡೈರಿಯ ವಾರ್ಷಿಕೋತ್ಸವದ ನೆನಪಿಗಾಗಿ ತಾ|| 1-2-57 ರಿಂದ ತಾ|| 28-2-57ರ ವರೆಗೆ, ಸೀಲ್ಡು ಕೊಳ್ಳುವ ಪ್ರತಿ ಲೀಟರ್ ತುಪ್ಪದೊಂದಿಗೆ ಒಂದು ಉಚಿತ ಬಹುಮಾನ ಪತ್ರ[illegible]ವಿ. ವಿವರಗಳಿಗೆ ವಿಚಾರಿಸಿರಿ :—
ಕ್ಷೀರ ಕೇಂದ್ರ
94, ತ್ಯಾಗರಾಜ ರೋಡ್ ಕ್ರಾಸ್, [illegible]
ಬ್ರಾಂಚ್ : ಕೆ. ಆರ್. ಆಸ್ಪತ್ರೆ ರಸ್ತೆ, ಮೈಸೂರು

ಟಾನಿಕ್ಕು ಏತಕ್ಕೆ?
★ ಆರೋಗ್ಯ ಭಾಗ್ಯವನ್ನು ಕಾಪಾಡಿಕೊಳ್ಳಲು
★ ರೋಗಗಳಿಂದ ಪೂರ್ಣ ಗುಣಹೊಂದಲು
★ ಯಂತ್ರದಂತೆ ದಕ್ಷತೆಗಾಗಿ [illegible]
ಮಾನವ ಶರೀರವು ಕೇವಲ ಒಂದು ಯಂತ್ರ. ಶರೀರಕ್ಕೆ ವಾತ, ಪಿತ್ತ, ಕಫಗಳು ಹೇಗೋ ಯಂತ್ರಕ್ಕೆ ಹಬೆ, ಶಾಖ ಮತ್ತು ಚಕ್ರಗಳು ಹಾಗೆ. ಅವುಗಳು ಕ್ರಮವಾಗಿದ್ದರೆ ಆರೋಗ್ಯ-ಶಕ್ತಿ ಅವುಗಳು ಕ್ರಮತಪ್ಪಿದರೆ ಅನಾರೋಗ್ಯ-ಮೃತ್ಯು
ನವರತ್ನ-ಕಲ್ಪವನ್ನು
ಉಪಯೋಗಿಸಿರಿ
ಕವಿರಾಜ ಪಂಡಿತ

ದುರ್ಗಾದತ್ತ ಶರ್ಮಾ
ವೈದ್ಯ ಶಾಸ್ತ್ರ[illegible] ಕಂಡುಹಿಡಿಯಲ್ಪಟ್ಟ ಇದು ವಜ್ರ, ಚಿನ್ನ, [illegible] ಮುಂತಾದ [illegible] ಸಂಯೋಗ.
★ ವಾತ, ಪಿತ್ತ, ಕಫಗಳನ್ನು ಸಮಸ್ಥಿತಿಯಲ್ಲಿಡಲು
★ ಕಳೆದುಹೋದ ಆರೋಗ್ಯವನ್ನು ಪಡೆಯಲು
★ ಯೌವನ ಮತ್ತು ಅದರ ಎಲ್ಲ ಸಂತೋಷಗಳ ಪುನರುಜ್ಜೀವನಕ್ಕೆ
ಇದು ಅದ್ವಿತೀಯವಾದ ಟಾನಿಕ್,
NAVRATNA KALPA PHARMACY,
JULLUNDUR CITY (India)
ಇವರಿಂದ ಪೂರ್ಣ ಸಾಹಿತ್ಯವನ್ನು ಪಡೆಯಿರಿ

ಟೆಲಿಫೋನ್ ನಂ. 792

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಹೊರಗಿನ ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀ[illegible] ಬೀದಿ,
ಬೆಂಗಳೂರು-2

ಬಿಡಿ ಪ್ರತಿಗೆ 3 ಕಾಸು

ಕಣ್ಣುಗಳನ್ನು ಉಚಿತವಾಗಿ
ಪರೀಕ್ಷಿಸಿ
ಕನ್ನಡಕಗಳನ್ನು
ಗೊತ್ತುಮಾಡಲಾಗುವುದು
ಟಿ. ಸಿ. ನಟರಾಜ್
ಅಂಡ್ ಕೋ.
ಆಪ್ಟಿಕಲ್ ಅಪ್ಲಿಯನ್ಸ್
ಮತ್ತು ಕೆಮಿಸ್ಟ್ಸ್
ವಿಧವಿಧವಾದ ಕೂಲಿಂಗ್ ಗ್ಲಾಸು
ಗಳು ದೊರೆಯುತ್ತವೆ.

ಪುಟ : ೦೫] SADHVI : MONDAY 4—2—1957 ಮೈಸೂರು : ಸೋಮವಾರ ೪—೨—೧೯೫೭ : [ಸಂಚಿಕೆ : ೦೫೯

ಕಾಶ್ಮೀರಕ್ಕೆ ವಿದೇಶೀ ಸೈನ್ಯ ಕೂಡದೆಂದು ನೆಹರೂ ನುಡಿ

ರ್. ವೆಂಕಟರಾಮಯ್ಯನವರಿಗೆ ನಿವೃತ್ತಿ ರಜಾ

ನಿಟ್ಟೂರು ಶ್ರೀನಿವಾಸರಾಯರು ಹಂಗಾಮಿ ಶ್ರೇಷ್ಠ ನ್ಯಾಯಾಧೀಶರು

ಂ.ಸು. ತಂತಿ] ಬೆಂಗಳೂರು ೪

ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯನವರು ಬರುವ ಏಪ್ರಿಲ್ಲಿನಲ್ಲಿ ನಿವೃತ್ತರಾಗುವರೆಂದೂ, ಅದಕ್ಕೆ ಪೂರ್ವಭಾವಿಯಾಗಿ ತಿಂಗಳು ೩ನೇ ವಾರದಿಂದ ರಜದ ಮೇಲೆ ಹೋಗಲಿರುವರೆಂದೂ ನಂಬಲರ್ಹವಾಗಿ ತಿಳಿದು ಬಂದಿದೆ. ಅವರ ಸ್ಥಾನದಲ್ಲಿ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಕೆಲಸವನ್ನು ಹಂಗಾಮಿಯಾಗಿ ನಿರ್ವಹಿಸುವರು. ಲಾ ಕಮಿಷನ್ನಿನವರ [illegible] ಪ್ರಕಾರ ಶ್ರೇಷ್ಠ ನ್ಯಾಯಾಧೀಶರ ಸ್ಥಾನಕ್ಕೆ ಸಂಸ್ಥಾನದ ಹೊರಗಿನವರೊಬ್ಬರನ್ನು ನೇಮಿಸಲಾಗುವುದೆಂದು ಗೊತ್ತಾಗಿದೆ.

ಹೈಕೋರ್ಟಿನ ಇತರ ಖಾಲಿ ಸ್ಥಾನಗಳಿಗೆ ಚುನಾವಣೆಗಳಿಂದನಂತರ ನೇಮಕಗಳಾಗುವವೆಂದೂ ಹೇಳಲಾಗಿದೆ.

ಜರ್ಮನ್ ಸಂಸ್ಥೆಯೊಡನೆ

ಂತ್ರ ಸಾಮಗ್ರಿ ಕಾರ್ಖಾನೆ ಒಪ್ಪಂದ

ಇಲ್ಲಿನ ಯಂತ್ರ ಸಾಮಗ್ರಿ ಕಾರ್ಖಾನೆಯವರು ಜರ್ಮನ್ ಸಂಸ್ಥೆಯೊಡನೆ ಮಿಲ್ಲಿಂಗ್ ಯಂತ್ರ ಮತ್ತು ಲೇತುಗಳ ತಯಾರಿಕೆ ಬಗ್ಗೆ ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಯಂತ್ರ ಸಾಮಗ್ರಿ ಕಾರ್ಖಾನೆಯವರು ಮೂರನೇ ಲೇತನ್ನು ತಯಾರಿಸಿದ್ದಾರೆ. ನಾಳೆ ದಿನ ಈ ಬಗ್ಗೆ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಮಾರಂಭವೊಂದು ನಡೆಯುವುದು.

ಗೊಳಕ್ಕೆ ಮೈಸೂರು ಗವರ್ನರರ ಭೇಟಿ

ಮೈಸೂರು ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಇದೇ ೯ನೇ ತಾರೀಖು ಗೊಳಕ್ಕೆ ಭೇಟಿಯಿತ್ತು ಅಲ್ಲಿರುವ ಗೋಮಟೇಶ್ವರ ಮಹಾ ಮಸ್ತಕಾಭಿಷೇಕೋತ್ಸವದಲ್ಲಿ ಭಾಗವಹಿಸುವರು

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಮಾಧವನ್ ನಾಯರ್‌ರವರು ಈ ದಿನ ಇಲ್ಲಿಗೆ ಬಂದಿರುವರು.

ಮೇದುವಾರಿಕೆಗಳ ವಾಪಸಾತಿ

ಪಿ. ಪ್ರೆ.] ನಂಜನಗೂಡು ೪

ಧಾನ ಸಭೆಗೆ ಈ ಕೆಳಗೆ ಕಂಡವರು ಆ ಕ್ಷೇತ್ರಗಳಿಂದ ತಮ್ಮ ಉಮೇದುವಾರಿಕೆ ವಾಪಸು ಪಡೆದಿದ್ದಾರೆ:—

ನರಸೀಪುರ—ಶ್ರೀಗಳು ಕೆ. ನಂಜುಂಡ ಮತ್ತು ಸೋಮಯ್ಯ. ಕಾಂಗ್ರೆಸ್ ಮತ್ತು ಸ್ ಪಿ ಗೆ ನೇರ ಸ್ಪರ್ಧೆ ಇದೆ.

ಮರಾಜನಗರ—ಶ್ರೀ ಆರ್. ಪಿ. ಶಿವಯ್ಯ ಎಂ ಗುರುಮಲ್ಲಪ್ಪ

ಗೆರೆ—ಎಸ್. ರಾಚಪ್ಪ, ಡಿ. ಎಂ. ಸಿದ್ದ ಜಿ. ನೋರೆಸ್ವಾಮಿ. ಇಲ್ಲಿ ಜೆ ಬಿ. ಮಲ್ಲಾ ಪಿ ಎಸ್. ಪಿ. ಉಮೇದುವಾರರು

ಳ್ಳೇ—ಶ್ರೀ ಸಿದ್ದಪ್ಪ ಕೊಳ್ಳೇಗಾಲ-ಶ್ರೀಗಳಾ ರಾಚಪ್ಪ, ಬೋರೇಗೌಡ ಮತ್ತು ಸೋ

ಭಾರತಕ್ಕೆ ವಿದೇಶೀ ಸೈನ್ಯಗಳ ರವಾನೆ ಕೂಡದು

ಕಾಶ್ಮೀರಕ್ಕೆ ವಿಶ್ವ ಸಂಸ್ಥೆ ಸೈನ್ಯ ಕಳುಹುವ ಪ್ರಯತ್ನದ ಬಗ್ಗೆ ನೆಹರೂ ಖಂಡನೆ

ಭಾರತದ ಯಾವ ಭಾಗದಲ್ಲೇ ಆಗಲೀ, ಯಾವ ಸನ್ನಿವೇಶದಲ್ಲೇ ಆಗಲೀ ವಿದೇಶೀ ಸೈನ್ಯಗಳನ್ನು ತಂದಿಳಿಸುವುದನ್ನು ಭಾರತವು ಸಹಿಸುವುದಿಲ್ಲವೆಂದು ಪ್ರಧಾನಿ ನೆಹರೂರವರು ನೆನ್ನೆ ದೆಹಲಿಯ ಪ್ರಚಂಡ ಸಭೆಯಲ್ಲಿ ಘೋಷಣ ಮಾಡುತ್ತಾ ತಿಳಿಸಿದರು. ಈ ಬಗ್ಗೆ ಭದ್ರತಾ ಸಮಿತಿಯಲ್ಲಿ ನಿರ್ಣಯವನ್ನು ತಳ್ಳಿಹಾಕುವುದು ದಿಗ್ಭ್ರಮೆಯ ವಿಷಯವೆಂದು ಅವರು ಹೇಳಿದರು. ಪಾಕಿಸ್ತಾನವು ನಡೆಸುತ್ತಿರುವ ಪ್ರಯತ್ನವನ್ನು ಎಲ್ಲ ದೃಷ್ಟಿಕೋಣಗಳಿಂದಲೂ ಭಾರತೀಯರು ಪರಿಶೀಲಿಸಬೇಕೆಂದು ನುಡಿದರು. ವಿಶ್ವಸಂಸ್ಥೆಯು ಭಾರತ ಮತ್ತು ಪಾಕಿಸ್ತಾನದ [illegible] ಸಹ ಕಾಶ್ಮೀರಕ್ಕೆ ವಿಶ್ವಸಂಸ್ಥೆಯ ಸೈನ್ಯವನ್ನು ಕಳುಹಬೇಕೆಂದು ಸೂಚಿಸಿರಲಿಲ್ಲವೆಂದೂ, ಕಾಶ್ಮೀರದಲ್ಲಿ ಭಾರತದ ಸೈನ್ಯಗಳನ್ನು ಇಡುವ ಬಗ್ಗೆ ವಿಶ್ವಸಂಸ್ಥೆಯು ಮನ್ನಣೆಯಿತ್ತಿರುವುದೆಂದೂ ನೆಹರೂರವರು ಹೇಳಿದರು

೨ ಲಕ್ಷ ರೂ. ಚಿನ್ನದ ಕಳ್ಳ ರವಾನೆಗಾಗಿ ಮೈಸೂರಿನವರೊಬ್ಬರ ಬಂಧನ

ಕಲ್ಲಿಕೋಟೆಯ ಕೇಂದ್ರ ಸುಂಕದ ಅಧಿಕಾರಿಗಳು ನೆನ್ನೆ ಮುಂಜಾನೆ ನೀಲಾಂಬೂರ್ ಮತ್ತು ಗೂಡಲೂರ್ ಘಟ್ಟದ ನಡುವೆ ಮೋಟಾರೊಂದನ್ನು ತಡೆದು, ಅದರಲ್ಲಿ ಬಹಳ ಜಾಗರೂಕತೆಯಿಂದ ಬಚ್ಚಿಟ್ಟು ಕಳ್ಳತನದಿಂದ ರವಾನೆಯಾಗುತ್ತಿದ್ದ ಸುಮಾರು ೨ ಲಕ್ಷ ರೂ. ಬೆಲೆಯ ೨ ಸಾವಿರ ತೊಲ ಚಿನ್ನವನ್ನು ವಶಪಡಿಸಿಕೊಂಡರು. ಅದನ್ನು ಪತ್ತೆ ಹಚ್ಚಲು ಪೋಲೀಸರು ಏಳು ಮೈಲಿ ದೂರ ಮೋಟಾರನ್ನು ಹಿಂಬಾಲಿಸಿದ್ದರು. ಕಾರಿನಲ್ಲಿದ್ದವರ ಪೈಕಿ ಕಲ್ಲಯ್ ಎಂಬಲ್ಲಿನ ಒಬ್ಬ ಮತಮುಖ್ಯನ ಪರ್ತಕ, ಬೆಂಗಳೂರಿನ ಒಬ್ಬ ಶ್ರೀಮಂತರು ಮತ್ತು ಮೈಸೂರಿನ ಮುಸ್ಲಿಂ [illegible]ರವರು ಇದ್ದರು. ಅವರನ್ನೆಲ್ಲಾ ಬಂಧಿಸಿ, ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಎರಡು ನಾಲಿಗೆಯ ಮಗು

ಮದ್ರಾಸಿನಲ್ಲಿ ಸರೋಜಾ ಎಂಬ ಮಹಿಳೆಯು ಮೊನ್ನೆ ವಿಚಿತ್ರ ಮಗುವೊಂದನ್ನು ಪ್ರಸವಿಸಿದಳು. ಅದರ ನಾಲಿಗೆಯು ಜೋಡಾಗಿದ್ದು, ಎರಡಾಗಿ ಸೀಳಿದೆ. ಕೈಕಾಲುಗಳಲ್ಲಿ ಆರು ಬೆರಳುಗಳಿವೆ. ಮಗುವನ್ನು ಅಲ್ಲಿನ ಆಸ್ಪತ್ರೆಯೊಂದರಲ್ಲಿಡಲಾಗಿದೆ. ಆಕೆಗೆ ಇದು ಐದನೇ ಹೆರಿಗೆ.

ಬ್ಯಾಡ್ಮಿಂಟನ್ ಪಂದ್ಯಗಳು

ನಗರದ ಕಲ್ಬುಹಳ್ಳಿ ಹಾಸ್ಟಲಿನ ಬ್ಯಾಡ್ಮಿಂಟನ್ ಟೀಮಿನವರು ವಿವಿಧ ಹಾಸ್ಟಲು, ಕಾಲೇಜು ಮತ್ತು ಇತರ ಊರುಗಳ ಟೀಮುಗಳೊಡನೆ ೧೫ ಬ್ಯಾಡ್ಮಿಂಟನ್ ಪಂದ್ಯಗಳನ್ನು ಆಡಿ, ೧೧ರಲ್ಲಿ ವಿಜಯ ಪಡೆದಿರುವರೆಂದು ತಿಳಿಸಲಾಗಿದೆ.

ಗೋವಾದಿಂದ ೪೪ ಭಾರತೀಯ ಸತ್ಯಾಗ್ರಹಿಗಳ ಖುಲಾಸೆ

ಗೋವಾ ಅಧಿಕಾರಿಗಳು ತ್ರಿದೀಬ ಚೌಧುರಿ, ಎನ್. ಜಿ. ಗೋರೆ, ಮಧು ಲಿಮಯೆ, ಶ್ರೀಮತಿ ಸಿಂಧು ದೇಶಪಾಂಡೆ ಮುಂತಾದ ೪೪ ಮಂದಿ ಭಾರತೀಯ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಿರುತ್ತಾರೆ ಪೋರ್ಚುಗೀಸರ ವಿರುದ್ಧವಾಗಿ ಅಲ್ಲಿ ನಡೆದ ಸತ್ಯಾಗ್ರಹದಲ್ಲಿ ಭಾರತದ ೪೧ ಮಂದಿ ಗೋವಾ ಸೆರೆಮನೆಗಳನ್ನು ಸೇರಿದ್ದರು ಗೋವಾ ಜೈಲುಗಳಲ್ಲಿ ಇನ್ನೂ ೩೦೦ ಜನ ಸ್ವದೇಶೀಯ ಸತ್ಯಾಗ್ರಹಿಗಳು ಇರುವರೆಂದು ಹೇಳಲಾಗಿದೆ

ಕಾಶ್ಮೀರದ ಮೇಲೆ ಪಾಕಿಸ್ತಾನದವರ 'ಅಘೋಷಿತ ಯುದ್ಧ'!

ಪಾಕಿಸ್ತಾನದ ಪ್ರಧಾನಿಯ ಹೇಳಿಕೆ

ಕಾಶ್ಮೀರದ ವಿಷಯವಾಗಿ ವಿಶ್ವಸಂಸ್ಥೆಯ ನಿರ್ಣಯಗಳನ್ನು ಭಾರತವು ಮನ್ನಿಸದಿದ್ದರೆ ಘೋಷಣೆಯಾಗದೆಯೇ ಯುದ್ಧವು ಆಗುವ ಭಯವಿರುವುದೆಂದು ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಲಂಡನ್ ಪತ್ರಿಕೆಯೊಂದರ ಮೂಲಕ ಜಗತ್ತಿಗೆ ಎಚ್ಚರಿಕೆಯಿತ್ತಿರುತ್ತಾರೆ. ವಿಶ್ವಸಂಸ್ಥೆಯು ಪರಿಣಾಮಕಾರಿಯಾದ ಕ್ರಮಗಳನ್ನು ಜರುಗಿಸದಿದ್ದರೆ ಮುಂದೇನಾಗುವುದೆಂಬುದನ್ನು ಯಾರೂ ಹೇಳಲು ಸಾಧ್ಯವಿಲ್ಲವೆಂದೂ, ಕಾಶ್ಮೀರದಲ್ಲಿ ಸಶಸ್ತ್ರ ಧಾಳಿ ನಡೆಸಲು ಸಿದ್ಧರಾಗುತ್ತಿರುವ ಗುಪ್ತಗಾಮಿನ ಮುಖಂಡರನ್ನು ತಡೆದು, ಈ ಪ್ರಶ್ನೆಯನ್ನು ವಿಶ್ವಸಂಸ್ಥೆಯವರ ಕೈಗೆ ಬಿಡಬೇಕೆಂದು ತಾವು ಸಲಹೆ ಮಾಡುತ್ತಿರುವುದಾಗಿಯೂ ಅವರು ಹೇಳಿದ್ದಾರೆ. ಜನಮತಗಣನೆ ನಡೆಯುವವರೆಗೆ ಭಾರತದೊಡನೆ ನೇರ ಸಂಭಾಷಣೆ ನಡೆಸಲು ಸಾಧ್ಯವಿಲ್ಲವೆಂದೂ ಅವರು ಹೇಳಿದ್ದಾರೆ.

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸಗಳು

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ ಮಾಲೆಯ ಅಂಗವಾಗಿ ಈ ದಿನ, ನಾಳೆ ಮತ್ತು ನಾಡಿದ್ದು ನಿತ್ಯವೂ ಸಂಜೆ ೫|| ಗಂಟೆಗೆ ರಸೋಲ್ಲಾಸ ಎಂಬ ವಿಷಯವಾಗಿ ಕೇಂದ್ರ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಡಾ|| ಕೃಷ್ಣಮೂರ್ತಿಯವರು ಉಪನ್ಯಾಸ ಮಾಡುವರು. ಕನ್ನಡ ಪ್ರಾಧ್ಯಾಪಕರಾದ ಶ್ರೀ ತೀ. ನಂ. ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಆಹ್ವಾನವಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನಾಗಸ್ವರ. ೭-೧೫ ಶಾಸ್ತ್ರೀಯ ನಿ ಕೃಷ್ಣಮೂರ್ತಿ-ದೇವರ ನಾಮ. ೭ ಗಾನ ವಿಹಾರ ೮ ೧೫ ವಚನ ಗಾನ. ಮಧ್ಯಾಹ್ನ ೧೨ ಡಿ. ಎಸ್. ಮಂಜುಳ-ಸಂಗೀತ. ೧೨-೩೦ ರೆಕಾರ್ಡು. ೧-೧೫ ವನಿತಾ ವಿಹಾರ. ೧-೩೦ ನಾಗಸ್ವರ ಸಂಜೆ ೫-೩೦ ಮತ್ತು ೯-೧೫ ಎ. ಪಿ. ಕೃಷ್ಣಮಾಚಾರ್-ಪಿಟೀಲು ೬-೫ ವಿನೋದ ಸಂಗೀತ ೭-೩೦ ಮತ್ತು ೭-೫೦ ವಾರ್ತಾ ವಾಚನ. ೮ ರಂಗ ಭೂಮಿ-ಸಂಸ್ಕೃತದಲ್ಲಿ ರೂಪಕ. ೮-೩೦ ಕೆ. ಪಿ. ಅರುಣಾಚಲಂ-ನಾಗಸ್ವರ ೧೦ ಚಿತ್ರ ಸಂಗೀತ. ೧೦-೧೫ ಉರ್ದು ಗೀತೆ.

ನಾಮಪತ್ರಗಳ ವಾಪಸು

ಮೈಸೂರು ೪

ವಿಧಾನ ಸಭೆಗೆ ನಗರದ ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿರುವವರ ಪೈಕಿ ಶ್ರೀಗಳಾದ ಅಮೀರ್ ಉದ್ದೀನ್ ಖುರೇಷಿ, ಖಲೀಲುಲ್ಲಾ, ಜೆಚ್. ಎಸ್. ಮುದ್ದಯ್ಯ, ಪಿ. ಸುಂದರಂ, ಕೆಂಚೇಗೌಡ, ಜಿ. ಸುಬ್ಬಣ್ಣ, ವಿರಾಸ್ ನೂರ್ ಹುಸೇನ್, ಪಿ. ಬಿ. ಕೆ ಮೂರ್ತಿ ಮತ್ತು ಎಂ. ಎಸ್ ತಿಮ್ಮಯ್ಯನವರು ತಮ್ಮ ನಾಮಪತ್ರಗಳನ್ನು ವಾಪಸು ಪಡೆದಿರುತ್ತಾರೆ ಕಾಂಗ್ರೆಸ್ ಪರವಾಗಿ ಶ್ರೀ ಅಹಮದ್ ಅಲ್ಲಿಖಾನರು ಸ್ಪರ್ಧಿಸಿರುವರು. ೭ ಜನರಿಗೆ ಸ್ಪರ್ಧೆಯಿದೆ.

ದಕ್ಷಿಣ ಕ್ಷೇತ್ರದಿಂದ ಮತ್ತು ತಾಲ್ಲೂಕಿನಿಂದ ಕೆಳಗೆ ಕಂಡವರು ವಾಪಸು ಪಡೆದಿರುತ್ತಾರೆ:-

ಶ್ರೀಗಳಾದ ಬಿ ಜಿ ದಾಸ್, ಎ. ರಾಮಣ್ಣ, ಆರ್. ಸೀತಾರಾಮ್ ಮತ್ತು ಭೈರಪ್ಪ(ದಕ್ಷಿಣ). ಇಲ್ಲಿ ೬ ಜನರು ಸ್ಪರ್ಧಿಸಿರುತ್ತಾರೆ.

ಶ್ರೀಗಳಾದ ಎಸ್. ಎಂ. ರಾಜಶೇಖರ್, ಜಿ. ವೆಂಕಟರಮಣಯ್ಯ, ಎಸ್. ಗೋವಿಂದಪ್ಪ, ಜಿ. ಬಿ ಮಲ್ಲಾರಾಧ್ಯ (ತಾಲ್ಲೂಕು) ಈ ಕ್ಷೇತ್ರದಲ್ಲಿ ಶ್ರೀಗಳಾದ ಕೆ. ಪುಟ್ಟಸ್ವಾಮಿ (ಕಾಂ), ಬಿ. ಶ್ರೀಕಂಠಪ್ಪ (ಪಿ ಎಸ್. ಪಿ) ಮತ್ತು ಟಿ. ಸಿ. ಹೊನ್ನಪ್ಪನವರಿಗೆ ತ್ರಿಕೋಣ ಸ್ಪರ್ಧೆಯಿದೆ.

ಲೋಕಸಭೆಗೆ ಜಿಲ್ಲಾ ಸಾಧಾರಣ ಕ್ಷೇತ್ರದಿಂದ ಶ್ರೀಗಳಾದ ಎಂ. ಪಿ. ಮಹದೇವಸ್ವಾಮಿ ಮತ್ತು ಜೆಚ್. ಕೆ. ಕುಮಾರಸ್ವಾಮಿಯವರೂ, ಮೀಸಲು ಕ್ಷೇತ್ರದಿಂದ ಶ್ರೀ ಕೆ. ಸಿದ್ದಯ್ಯನವರೂ ತಮ್ಮ ಉಮೇದುವಾರಿಕೆಗಳನ್ನು ವಾಪಸು ಪಡೆದಿರುವರು. ಇಲ್ಲಿ ಎರಡು ಸ್ಥಾನಗಳಿಗೂ ಕಾಂಗ್ರೆಸ್ ಮತ್ತು ಪಿ. ಎಸ್. ಪಿ. ಯವರಿಗೆ ನೇರ ಸ್ಪರ್ಧೆ ನಡೆಯುವುದು. ಕಾಂಗ್ರೆಸ್ಸಿನ ಪರ ಶ್ರೀಗಳಾದ ಎಂ. ಶಂಕರಯ್ಯ ಮತ್ತು ಎಸ್. ಎಂ. ಸಿದ್ದಯ್ಯನವರೂ, ಪಿ. ಎಸ್. ಪಿ. ಪರ ಶ್ರೀ ಎಂ. ಎಸ್. ಗುರುಪಾದಸ್ವಾಮಿ ಮತ್ತು ಬಿಳಿಗಿರಿರಂಗಯ್ಯನವರೂ ನಿಂತಿರುವರು.

೮೫ನೇ ವಯಸ್ಸಿನಲ್ಲಿ ವಿವಾಹ

ಬ್ರಿಟಿಷರ ಕಾಲದಲ್ಲಿ ಬ್ರಿಟಿಷ್ ಮಂತ್ರಿಮಂಡಲದ ಭಾರತದ ಕಾರ್ಯದರ್ಶಿಯಾಗಿದ್ದ ಲಾರ್ಡ್ ಪೆಥಿಕ್ ಲಾರೆನ್ಸ್‌ರವರು ತಮ್ಮ ೮೫ನೇ ವಯಸ್ಸಿನಲ್ಲಿ ಈಗ ಎರಡನೇ ಬಾರಿ ವಿವಾಹವಾಗಲು ನಿಶ್ಚಯಿಸಿರುತ್ತಾರೆ. ಅವರು ಹೆಲೆನ್ ಮಿಲ್ಲರ್ ಮೆಕ್‌ಕೊಂಬಿ ಎಂಬ ೬೮ ವರ್ಷದ ವಿಧವೆಯನ್ನು ವರಿಸುವರು ಲಾರೆನ್ಸರ ಮೊದಲನೆ ಹೆಂಡತಿ ಮೂರು ವರ್ಷಗಳ ಹಿಂದೆ ಮೃತರಾದರು. ಉಭಯರೂ ೫೦ ವರ್ಷ ಕಾಲ ದಾಂಪತ್ಯ ಜೀವನ ನಡೆಸಿದ್ದರು.

ಫುಟ್‌ಬಾಲ್ ಪಂದ್ಯ

ಕಾಮರ್ಸ್ ಕಾಲೇಜಿನ ಫುಟ್‌ಬಾಲ್ ಮೈದಾನದಲ್ಲಿ ನೆನ್ನೆ ನಡೆದ ಪ್ರದರ್ಶನದ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರು ಫ್ರೆಂಡ್ಸ್ ಯೂನಿಯನ್ ಟೀಮಿನವರಿಗೂ ಮತ್ತು ಸಿಟಿ ಪೋಲೀಸ್ ಟೀಮಿನವರಿಗೂ ೨-೨ ಗೋಲುಗಳಿಂದ ಸಮವಾಯಿತು.

ವೆಂಕಟಕೃಷ್ಣಯ್ಯನವರ ದಿನಾಚರಣೆ

ಮೈಸೂರು ೩

ನಗರದ ಅನಾಥಾಲಯದ ಸಾಹಿತ್ಯ ಸಂಘದ ಆಶ್ರಯದಲ್ಲಿ ಮೊನ್ನೆ ಎಂ. ವೆಂಕಟಕೃಷ್ಣಯ್ಯನವರ ದಿನಾಚರಣೆಯನ್ನು ನೆರವೇರಿಸಲಾಯಿತು. ಲಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಕುಮಾರಿ ಸರಸ್ವತಿಯವರಿಂದ ಪ್ರಾರ್ಥನೆ, ಕಾರ್ಯದರ್ಶಿ ಶ್ರೀ ರಾಮಕೃಷ್ಣರವರಿಂದ ಸ್ವಾಗತವಾದನಂತರ ಶ್ರೀಗಳಾದ ತಗಡೂರು ರಾಮಚಂದ್ರರಾವ್, ಯಂ. ಯಾಮುನಾಚಾರ್, ಸೋಸಲೆ ರಾಜಗೋಪಾಲಯ್ಯಂಗಾರ್, ಎಂ. ಸಿ. ಮಹದೇವಸ್ವಾಮಿ ಮತ್ತು ಆಲಯದ ವಿದ್ಯಾರ್ಥಿ ಶ್ರೀ ಕೃಷ್ಣಮೂರ್ತಿ ಮುಂತಾದವರುಗಳು ಭಾಷಣ ಮಾಡಿ, ತಾತಯ್ಯನವರ ಗುಣಗಾನ ಮಾಡಿದರು

ನಮಕ ಸಹೋದರರಾದ ಶ್ರೀ ಬಿ ಎಸ್. ಎಸ್ ಕೌಶಿಕ್ ಮತ್ತು ಕೆ. ವೆಂಕಟಸುಬ್ಬಯ್ಯನವರಿಂದ ಕಾವ್ಯ ವಾಚನ, ನೃತ್ಯ ಮತ್ತು ಎಚ್. ಹೆಚ್. ಟಿ. ರಾಮಸ್ವಾಮಿ ಮತ್ತು ಪಾರ್ಟಿಯವರಿಂದ ಸಂಗೀತಗಳು ಏರ್ಪಟ್ಟಿದ್ದುವು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು.

ತ್ಯಾಗರಾಜರು ಮತ್ತು ಪುರಂದರ ದಾಸರ ದಿನಾಚರಣೆ

ನಗರದ ವರಲಕ್ಷ್ಮಿ ಅಕೆಡಮೀಸ್ ಆಫ್ ಫೈನ್ ಆರ್ಟ್ಸ್ ಸಂಸ್ಥೆಯ ಆಶ್ರಯದಲ್ಲಿ ಕಳೆದ ೨೦ನೇ ತಾರೀಕು ತ್ಯಾಗರಾಜರ ಜಯಂತಿಯನ್ನು ನೆರವೇರಿಸಲಾಯಿತು ಮೈಸೂರು ಸಹೋದರರೂ, ಸಂಸ್ಥೆಯ ವಿದ್ಯಾರ್ಥಿಗಳು ತ್ಯಾಗರಾಜರ ಕೃತಿಗಳನ್ನು ಹಾಡಿದರು ೩೦ನೇ ತಾರೀಕು ಪುರಂದರ ದಾಸರ ಪುಣ್ಯ ದಿನವನ್ನು ನೆರವೇರಿಸಲಾಯಿತು ದಾಸರ ದೇವರ ನಾಮಗಳ ಕೀರ್ತನೆಯೂ ನಡೆಯಿತು.

ಅರಮನೆ ನೌಕರರ ಸಂಘದ ಕಛೇರಿ

ನಗರದ ಅರಮನೆ ನೌಕರರ ಸಂಘದ ಕಛೇರಿಯನ್ನು ನೆನ್ನೆ ಕೃಷ್ಣರಾಜ ಮೊಹಲ್ಲಾ [illegible] ಮಸೀದಿ ಬಳಿ ತೆರೆಯಲಾಯಿತು. ಈ ಬಗ್ಗೆ ಸಮಾರಂಭವೊಂದು ನಡೆದು ಶ್ರೀ ಎಚ್ ರಂಗನಾಥಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು ಇದಕ್ಕೆ ಮುಂಚೆ ಪೂಜೆ, ಮಂಗಳಾರತಿ ನಡೆದು ರಾಜಮನೆತನದವರಿಗೆ ಶ್ರೇಯಃ ಪ್ರಾರ್ಥನೆ ಮಾಡಲಾಯಿತು. ನೌಕರರು ಒಗ್ಗಟ್ಟಿನಿಂದ ಸುಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದು ತಿಳಿಸಲಾಯಿತು.

ಕಾರಿನಲ್ಲಿದ್ದ ೫,೦೦೦ ರೂ. ನೋಟು ಅಪಹಾರ

ಶಿವಮೊಗ್ಗದಲ್ಲಿ ಕಳೆದ ೨೭ನೇ ತಾರೀಕು ಆಗಮಿಸಿದ್ದ ಉಡುಪಿಯ ಅನಂತ ಕಾಮತ್‌ರವರು ತಮ್ಮ ಮೋಟಾರಿನಲ್ಲಿ ಬಿಟ್ಟುಹೋಗಿದ್ದ ನೂರು ರೂ.ಗಳ ೫೦ ನೋಟುಗಳು ಅಪಹೃತವಾಗಿರುವುದಾಗಿ ವರದಿಯಾಗಿದೆ. ಕಾರನ್ನು ನಿಲ್ಲಿಸಿ ಅವರು ಹೋಟೇಲಿಗೆ ಹೋಗಿ ವಾಪಸು ಬರುವಷ್ಟರಲ್ಲಿ ಈ ಕೃತ್ಯವು ನಡೆದಿರುವುದಾಗಿ ಹೇಳಲಾಗಿದೆ. ಈ ಸಂಬಂಧದಲ್ಲಿ ಪೊಲೀಸರು ಇಬ್ಬರನ್ನು ಬಂಧಿಸಿ, ೨,೦೦೦ ರೂ. ಗಳನ್ನು ವಶಪಡಿಸಿಕೊಂಡಿದ್ದಾರೆ.

ಎಲ್ಲಾ ಭಾಷೆಗಳು, ಬಣ್ಣ ಮತ್ತು ಆಕಾರಗಳಲ್ಲಿ
ಲಿಥೋ ಪೋಸ್ಟರುಗಳನ್ನು
ಸುಲಭ ದರದಲ್ಲಿ ಮಾಡಿಕೊಡುತ್ತೇವೆ,
ಕೂಡಲೇ ವಿಚಾರಿಸಿ
ಹಾಸ್ಟ್ರಿಯಾ ಬುಕ್ ಡಿಪ್ಪೋ,
ಅಶೋಕಾ ರೋಡ್, ಮೈಸೂರು

ಚಂದಾದಾರರಲ್ಲಿ ವಿನಂತಿ

ಪ್ರತಿ ತಿಂಗಳ ಚಂದಾ ಮೊಬಲಗನ್ನು ಆಯಾ ತಿಂಗಳ ಆರಂಭದಲ್ಲಿಯೇ ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಸ್ಥಳೀಯ ಪತ್ರಿಕೆಗಳ ಚಂದಾದಾರರಲ್ಲಿ ಈ ಮೂಲಕ ವಿನಂತಿ ಮಾಡಲಾಗಿದೆ.

— ವ್ಯವಸ್ಥಾಪಕ, ಸಾಧ್ವಿ

ಖಾಲಿ ನಿವೇಶನಗಳಲ್ಲಿ ಮನೆ ಕಟ್ಟಲು ಒತ್ತಾಯ

ನಂಜನಗೂಡು ಪೌರಸಭೆಯ ನಿರ್ಣಯ

ನಂಜನಗೂಡು ೪

ಪೌರಸಭೆಯ ಮಾಹೆಯಾನಾ ಸಭೆಯು ಈ ವಾರ ಶ್ರೀ ಕೆ ವೆಂಕಟಸುಬ್ಬರವರ ಅಧ್ಯಕ್ಷತೆಯಲ್ಲಿ ನಡೆದು, ಪೌರಸಭೆಯು ಸ್ವಾಧೀನಪಡಿಸಿರುವ ನಿವೇಶನಗಳನ್ನು ಪಡೆದಿರುವವರು ಮನೆಗಳನ್ನು ಕಟ್ಟುವ ಬಗ್ಗೆ ಒತ್ತಾಯಪಡಿಸಬೇಕೆಂದೂ, ಅವರು ಹಾಗೆ ಕಟ್ಟದಿದ್ದರೆ ನಿವೇಶನಗಳನ್ನು ಪುರಸಭೆಗೆ ಒಪ್ಪಿಸುವಂತೆ ತಿಳಿಸತಕ್ಕದ್ದೆಂದೂ ನಿರ್ಣಯ ಮಾಡಲಾಯಿತು

ಇಲ್ಲಿನ ಮಹಿಳಾ ಸೇವಾ ಸಮಾಜದ ಹಿಂದೆ ಇರುವ ಪಾದಚಾರಿಯ ಸೇತುವೆಯನ್ನು ವಾಹನಗಳ ಸಂಚಾರಕ್ಕೆ ಅನುಕೂಲಿಸುವಂತೆ ವಿಸ್ತರಿಸಬೇಕೆಂದು ಮರಾಮತ್ತು ಇಲಾಖೆಯನ್ನು ಕೋರಲು ತೀರ್ಮಾನಿಸಲಾಯಿತು. ಸಕ್ಕರೆ ಮೇಲಿನ ಸುಂಕವನ್ನು ಮಣಕ್ಕೆ ೪ ಆಣೆಯಿಂದ ೨ ಆಣೆಗೆ ಇಳಿಸಬೇಕೆಂದೂ ಸರ್ಕಾರವನ್ನು ಕೋರುವ ನಿರ್ಣಯ ಮಾಡಲಾಯಿತು.

ಗೂಢಚರ್ಯೆ ನಡೆಸಿದ್ದಕ್ಕಾಗಿ ಪಾಕಿಸ್ತಾನದ ಮಹಿಳೆಗೆ ಸಜಾ

ಕರಾಚಿಯಲ್ಲಿರುವ ಭಾರತದ ಹೈಕಮಿಷನರ್ ಕಛೇರಿಗೆ ಮಿಲಿಟರಿ ರಹಸ್ಯಗಳ ಕಾಗದ ಪತ್ರಗಳನ್ನು ಕೊಟ್ಟಳೆಂದು ೩ ವರ್ಷಗಳ ಹಿಂದೆ ದಸ್ತಗಿರಿಯಾಗಿದ್ದ ಅನ್ವರ್ ಸುಲ್ತಾನಾ ಎಂಬ ಪಾಕಿಸ್ತಾನದ ವಿಮಾನ ದಳದ ಟೈಪಿಸ್ಟಳಿಗೆ ಕರಾಚಿಯ ವಿಶೇಷ ನ್ಯಾಯಾಧೀಶರು ೫ ವರ್ಷ ಸಜಾ ವಿಧಿಸಿದರು.

ಪಶ್ಚಿಮವಾಹಿನಿಯಲ್ಲಿ ಸರ್ವೋದಯ ಮೇಳ

ಪಶ್ಚಿಮವಾಹಿನಿಯಲ್ಲಿ ಕಳೆದ [illegible] ಪ್ರತಿ ವರ್ಷದಂತೆ [illegible] ಸರ್ವೋದಯ ಮೇಳ [illegible] ನಡೆಯುವುದು. ಮೇಳದ [illegible] ಪ್ರಕಾರ ೧೧ನೇ ತಾರೀಕು ಸಂಜೆ [illegible] ಆರಂಭವಾಗಿ, ೧೨ ಮತ್ತು ೧೩ ರಂದೂ ನಡೆಯುವುದು. ಮೇಳದಲ್ಲಿ ಆಸಕ್ತಿಯುಳ್ಳವರೆಲ್ಲರೂ ಬರಬಹುದು ಸೂತ್ರಾಂಜಲಿಯು ಮೇಳದ ಒಂದು ಮುಖ್ಯ ಕಾರ್ಯಕ್ರಮ

ANNOUNCEMENT

It is hereby notified for general information that one 'Morris Commercial' Station Wagon MYD 70 belonging to the Mysore State Adult Education Council is ready for sale.

The van is 1953 model with accommodation for 5 persons and also suitable for propaganda purposes specially for business concerns. The vehicle is available for inspection at the office, 1253 Krishnamurthipuram, Mysore during office hours.

Offers are invited from the public for the same. Last day for receiving the offers will be the 12th February 1957. The decision of the officer, either in accepting or rejecting the offer without assigning any reason, is final.

Chief Executive Officer

Edited, Printed and Published by A. R. Nagarajan at Sadhvi Press, D. Subbiah Road, Mysore

ತೆಲುಗು ಮತ್ತು ಕನ್ನಡ ಭಾಷೆಗಳ ಬಾಂಧವ್ಯ

ಕಾಲೇಜು ಅಧ್ಯಾಪಕ ಸುಬ್ಬರಾಮಪ್ಪನವರ ಭಾಷಣ

ಬಳ್ಳಾರಿ ೨೯

ಮೈಸೂರು ಮಹಾರಾಜಾ ಕಾಲೇಜಿನ ತೆಲುಗು ಉಪ ಪ್ರಾಧ್ಯಾಪಕರಾದ ಶ್ರೀ ಕೆ ಸುಬ್ಬರಾಮಪ್ಪನವರು ಈ ದಿನ ಇಲ್ಲಿನ ವೀರಶೈವ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸಭೆಯಲ್ಲಿ ಭಾಷಣ ಮಾಡಿ, ತೆಲುಗರು ಮತ್ತು ಕನ್ನಡಿಗರ ನಡುವೆ ಮಧುರ ಬಾಂಧವ್ಯವು ಬೆಳೆಯಬೇಕೆಂದು ಸೂಚಿಸಿದರು. ಬಹು ಕಾಲದಿಂದಲೂ ಉಭಯರೂ ಅನ್ಯೋನ್ಯವಾಗಿದ್ದರೆಂದೂ, ಎರಡು ಭಾಷೆಗಳು ಮತ್ತು ಉಭಯರ ಸಂಸ್ಕೃತಿಯು ಏಕ ರೀತಿಯಲ್ಲಿರುವುವೆಂದೂ ಅವರು ಹೇಳಿದರು. ಉಭಯರೂ ಸೌಹಾರ್ದದಿಂದ ಬಾಳಬೇಕೆಂದೂ ತಿಳಿಸಿ, ಬಳ್ಳಾರಿ ಜನರಲ್ಲಿ ಪರಸ್ಪರ ದ್ವೇಷ ಭಾವನೆಗಳು ಮಾಯವಾಗಿರುವುದಕ್ಕಾಗಿ ಹರ್ಷವನ್ನು ಸೂಚಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಡಿ. ಪುರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ವಿವಾಹಿತ ಯುವತಿಯ ಲಿಂಗ ಪರಿವರ್ತನೆ

ಕೂಚ್ ಬಿಹಾರಿನಲ್ಲಿ ಜ್ಯೋತ್ಸ್ನಾಪಾಲ್ ಎಂಬ ೧೮ ವರ್ಷದ ವಿವಾಹಿತ ಯುವತಿಗೆ ಲಿಂಗ ಪರಿವರ್ತನೆಯಾಗುತ್ತಿರುವುದೆಂದು ವರದಿಯಾಗಿದೆ ಆಕೆಯನ್ನು ಆಸ್ಪತ್ರೆಯಲ್ಲಿ ವೈದ್ಯರು ಪರೀಕ್ಷಿಸುತ್ತಿರುವರು.

○ಚೀಣಕ್ಕೆ ಬರ್ಮದ ೩೩ ಹಳ್ಳಿಗಳನ್ನು ವರ್ಗಾಯಿಸುವ ಬಗ್ಗೆ ಉಭಯ ರಾಷ್ಟ್ರಗಳಿಗೂ ಒಪ್ಪಂದವಾಗಿದೆ. ಒಟ್ಟು ೫೦೦ ಚದರ ಮೈಲಿ ಪ್ರದೇಶ ಚೀಣಕ್ಕೆ ಸೇರಲಿದೆ.

ಆಯುರ್ವೇದ ಪ್ರೇಮಿಗಳೇ
ತೃಪ್ತಿ ಪಡಿರಿ!
ಅಪೂರ್ವ ವೈದ್ಯ ಗ್ರಂಥಗಳು ಕನ್ನಡ ಭಾಷೆಗೆ ಬರುತ್ತಲಿವೆ !!
ಉತ್ತಮ ಕಾಗದ-ಬೆಲೆ ಸುಲಭ-ಅಂದವಾದ ಮುದ್ರಣ
ಅಷ್ಟಾಂಗ ಹೃದಯ
ಸಂಹಿತಾ

	ಸಾದಾ	ಕ್ಯಾಲಿಕೋ
	ಪ್ರತಿ	ಪ್ರತಿ
೧ನೆಯ ಭಾಗ : ಸೂತ್ರಸ್ಥಾನ	೬೫೦	೭೫೦
೨ ಮತ್ತು ೩ನೆಯ ಭಾಗಗಳು : ಶಾರೀರ ಮತ್ತು ನಿದಾನ ಸ್ಥಾನಗಳು	೫೦೦	೬೦೦
೪ ಮತ್ತು ೫ನೆಯ ಭಾಗಗಳು : ಚಿಕಿತ್ಸಾ ಮತ್ತು ಕಲ್ಪ ಸ್ಥಾನಗಳು	೬೦೦	೭೦೦
೨, ೩, ೪ ಮತ್ತು ೫ ಭಾಗಗಳನ್ನು ಒಟ್ಟಾಗಿ ಕೊಳ್ಳುವವರಿಗೆ	೧೦೦೦	೧೧೦೦
ಅಗದ ತಂತ್ರ :	೨೦೦	೩೦೦

ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿಯೂ, ಚಿಕಿತ್ಸಕರಿಗೆ ಹಾವು, ಚೇಳು ಮೊದಲಾದ ವಿಷ ಜಂತುಗಳ ಬಾಧೆಯನ್ನು ಪರಿಹರಿಸಲೂ ಸಹಾಯಕವಾದ ಪ್ರಾಮಾಣ್ಯ ಗ್ರಂಥವು.

ಪ್ರಸೂತಿ ತಂತ್ರ :

ಸ್ತ್ರೀರೋಗ ಮತ್ತು ಕೌಮಾರ ಭೃತ್ಯಗಳನ್ನೊಳಗೊಂಡ ಈ ಪುಸ್ತಕವು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿಯೂ, ವೈದ್ಯರಿಗೆ ಪ್ರಾಮಾಣಿಕ ಗ್ರಂಥವಾಗಿಯೂ; ಸ್ತ್ರೀಯರಿಗೂ, ಗರ್ಭಿಣಿಯರಿಗೂ, ಬಾಲಹಿತೈಷಿಗಳಿಗೂ ಉಪದೇಶವಾದ ಅಪೂರ್ವ ಗ್ರಂಥವು.

ಎಸ್. ಎಲ್. ಭಟ್ಟಾಚಾರ್ಯ,
ಎಂ. ಎ., [illegible]
ನಿವೃತ್ತ ಅಧ್ಯಾಪಕರು ಮತ್ತು ಚಿಕಿತ್ಸಕ,
ಗೌ|| ಆಯುರ್ವೇದ ಮಹಾ ಪಾಠಶಾಲಾ,
ಮೈಸೂರು
ದೊರೆಯುವ ಸ್ಥಳ:-ಭಾರದ್ವಾಜ ವೈದ್ಯಶಾಲೆ,
VI ಮೇನ್, ವಾಣಿವಿಲಾಸ ಮೊಹಲ್ಲಾ,
ಮೈಸೂರು

ಕಳ್ಳತನವಲ್ಲಿ ಸೇಂದಿ ವ್ಯಾಪಾ

ಕೊಳ್ಳೇಗಾಲಕ್ಕೆ ೯ ಮೈಲಿ ದೂರವಿರುವ ಮ ದಿನಿ ಎಂಬ ಗ್ರಾಮ ಮತ್ತು ಸುತ್ತಮುತ್ತ ಪಾ ನಿರೋಧವು ಜಾರಿಯಲ್ಲಿದ್ದರೂ ಕಳ್ಳತನದ ಸೇಂದಿ ಅಂಗಡಿ ಇಟ್ಟು ವ್ಯಾಪಾರ ನಡೆಸಲಾಗುತ್ತಿದೆಯೆಂದೂ, ಕುಡಿಯುವವರಿಂದ ಜನರಿ ತುಂಬಾ ತೊಂದರೆಯಾಗುತ್ತಿದೆಯೆಂದೂ ಸ್ಥ ದವರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

ಸರ್ವೋದಯ ದಿನಾಚರಣೆ

ನಗರದ ಶಿಶು ಸಾಹಿತ್ಯ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಚಂದ್ರ ಬಿಂಬ ಎಂಬ ದ ಕೇಂದ್ರದ ವ್ಯವಸ್ಥಾಪಕರು ಸುಬ್ರಾಯನ ಯಲ್ಲಿ ಕಳೆದ ಶನಿವಾರ "ಸರ್ವೋದಯ" ದಿನಾಚರಣೆಯನ್ನು ನಡೆಸಿದರು. ಬಾಪೂಜಿಯ ಗುಣಗಾನವು ಆಯಿತು. ಅಹಿದ ಕೇಂದ್ರದ ಯಕರಾದ ಶ್ರೀ ಹೆಚ್. ಎಸ್ ನಾಗರಾಜರವರು ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಸೂಚನೆ

ನಮ್ಮಲ್ಲಿ "ಸ್ಟೋರು ಕ್ಲೀನರ್" ಆಗಿ ಕೆ ಮಾಡುತ್ತಿದ್ದ ರಾಜಯ್ಯ ಎಂಬುವನನ್ನು ತಾ|| 1—2—57ರಲ್ಲೂ ಕೆಲಸದಿಂದ ತೆಗೆ ಹಾಕಿರುವುದರಿಂದ ಮುಂದಕ್ಕೆ ನಮ್ಮ ಹೋಟ ಲು ಸಂಬಂಧವಾಗಿ ಅವನು ಯಾವುದಾದ ವ್ಯವಹಾರ ಮಾಡಿದಲ್ಲಿ ಅದಕ್ಕೆ ನಾವು ಜ ಬ್ದಾರರಲ್ಲ

ಷಣ್ಮುಗ ವಿಲಾಸ ರೆಸ್ಟೋರೆಂಟ್
ನಜರ್‌ಬಾದ್, ಮೈಸೂರು.

ಗೃಹಕೃತ್ಯದ ನೋಟೀಸು

ಚಾಮರಾಜನಗರದ ಕಸಬಾದಲ್ಲಿ ಮೇಲಿನ ಮೇಲು ಸಕ್ಕರೆ ಶೆಟ್ಟಿಗಳ ಬೀದಿಯಲ್ಲಿರುವ ಮೇಲು ಸಕ್ಕರೆ ಶೆಟ್ಟಿಗಳ ಮಠದ ಲೇಟ್ ಶಿದ್ದಮ್ಮ ಶೆಟ್ಟಿಯ ಮಗ ನಂಜಶೆಟ್ಟಿಯು ಈ ಮೂಲಕ ಸಮಸ್ತ ಜನಗಳಿಗೂ ತಿಳಿಸುವುದೇನೆಂದರೆ:-

ಷೆಡ್ಯೂಲಿನಲ್ಲಿ ವಿವರಿಸುವ ಮನೆಯು ನ ಪಿತ್ರಾರ್ಜಿತವಾಗಿ ಬಂದು ನನ್ನ ಸ್ವಾಧೀನಾನು ವದಲ್ಲಿರುತ್ತೆ. ನನ್ನ ತಂದೆ ಫೌತಿಯಾಗಿರುವ ಮೂಗಶೆಟ್ಟಿಯು ನನ್ನ ಹಿತಕ್ಕೆ ವಿರೋಧವಾ ನಡೆದುಕೊಳ್ಳುತ್ತಾ ಬಂದಿದ್ದಾಗ್ಯೂ, ಆಗ್ಗೆ ನಾ ಮೈನರ್ ಆಗಿದ್ದುದರಿಂದ ನನ್ನ ಸೋದರ ಶಿದ್ದಮಾದಮ್ಮನ ಗಾರ್ಡಿಯನ್‌ಶಿಪ್ಪಿಗೆ ಬಿಟ್ಟಿದ್ದೆನು. ಹಾಲಿ ನಾನು ಮೇಜರ್ ಆಗಿದ್ದೇನೆ. ನನ್ನ ಬಾಬ್ತು ಷೆಡ್ಯೂಲ್ ಸ್ವತ್ತನ್ನು ನನ್ನ ಗಾರ್ಡಿಯನ್ ಆಗಿದ್ದ ನನ್ನ ಸೋದರ ಅತ್ತೆ ಮಾದಮ್ಮನು ತನ್ನದೆಂದು ಅವರವರೊಡನೆ ಕೊಂಡು ಪರಭಾರೆ ಮಾಡುವ ಏರ್ಪಾಟಿನ ವುದಾಗಿ ನನಗೆ ವರ್ತಮಾನ ತಿಳಿದು ಬಂದಿ ದ್ದರಿಂದ ಷೆಡ್ಯೂಲ್ ಸ್ವತ್ತಿನಲ್ಲಿ ಮೇಲ್ಕಂ ನ್ನ ಸೋದರ ಅತ್ತೆ ಶಿದ್ದಮಾದಮ್ಮನಿಗೆ ಯಾ ವಿಧವಾದ ಹಕ್ಕೂ ಇರುವುದಿಲ್ಲ. ಸದರಿ ಶಿದ್ದ ದಮ್ಮನಿಂದ ಯಾರೂ ಯಾವ ವಿಧವಾಗಿಯೂ ಕರಾರನ್ನು ಮಾಡಿಕೊಳ್ಳಕೂಡದೆಂದು ಮೂಲಕ ಎಚ್ಚರಿಸಿರುತ್ತೇನೆ.

ಷೆಡ್ಯೂಲು:- ಚಾಮರಾಜನಗರದ ಟೌ ಮೇಲಿನ ಮೇಲು ಸಕ್ಕರೆ ಶೆಟ್ಟಿಗಳ ಬೀದಿ ರುವುದು-ನನ್ನ ಪಿತ್ರಾರ್ಜಿತವಾಗಿ ನನ್ನ ಸೇರಿ, ನನ್ನ ಅನುಭವ, ಸ್ವಾಧೀನದಲ್ಲಿರು ಪೂರ್ವಕ್ಕೆ ಮೊಳ್ಳೆ ಮಾದಶೆಟ್ಟರ ನಂಜ ವಗೈರೆಯವರ ಮನೆ, ಪಶ್ಚಿಮಕ್ಕೆ ಸಿ. ವಿ. ಗೇಂದ್ರಯ್ಯನವರು, ಎಸ್. ಎ. ಎಸ್. ವಿ ಚಾರ್ಯರ ಇವರುಗಳ ಮನೆ, ದಕ್ಷಿಣಕ್ಕೆ ಕೂಸುಶೆಟ್ಟಿ ವಗೈರೆಯವರ ಮನೆ, ಉತ್ತ ಮುಚ್ಚುಶೆಟ್ಟರ ಮಗಳು ಪುಟ್ಟಮ್ಮನ ಮನೆ ಇರುವ ಮುನಿಸಿಪಲ್ ಡೋರ್ ನಂ A. 9/582 ಉಳ್ಳ ಹೆಂಚು ಬಾಬ್ತು ಅಂಕಣದ ಮನೆ ಮತ್ತು ಅಂಗಳ ಸಹಾ ಸ್ವತ್ತಾಗಿರುತ್ತೆ.

⌒ ನಂಜಶೆಟ್ಟಿಯು ಎಡಗೈ, ಹೆಬ್ಬೆ ಗುರ್ತಿನ ರುಜು.

[illegible]

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

[illegible]

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಕೂರಾ, ಕಾಗಲ್ಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು : ಫೋನ್ 446

ಪುಟ : ೧೫] SADHVI : TUESDAY 5—2—1957 ಮೈಸೂರು : ಮಂಗಳವಾರ ೫—೨—೧೯೫೭ : [ಸಂಚಿಕೆ : ೫೮

ವಿಧಾನ ಸಭೆಗೆ ಸಚಿವ ಮಂಜಪ್ಪನವರ ಚುನಾವಣೆ -

ಬನ್ನೂರು ಬಳಿ ಕಾವೇರಿ ನದಿ ಸೇತುವೆಯ ಆರಂಭೋತ್ಸವ

ಮುಖ್ಯ ಮಂತ್ರಿ ಮತ್ತು ಮರಾಮತ್ತು ಸಚಿವರ ಭಾಷಣ

ಮೈಸೂರು ೫

ಬನ್ನೂರಿನ ಬಳಿ ಕಾವೇರಿ ನದಿಯ ಮೇಲೆ ನಿರ್ಮಿಸಲಾಗಿರುವ ಹೊಸ ಸೇತುವೆಯ ಆರಂಭೋತ್ಸವವನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ನೆರವೇರಿಸಿದರು. ಮರಾಮತ್ತು ಸಚಿವರಾದ ಶ್ರೀ ಹೆಚ್. ಕೆ. ವೀರಣ್ಣಗೌಡರು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭವು ನದಿಯ [illegible] ರಮ್ಯವಾಗಿ ನಿರ್ಮಿಸಲಾಗಿದ್ದ ಮಂಟಪದಲ್ಲಿ ನಡೆಯಿತು. [illegible] ಗಳ ಸಾವಿರಾರು ಮಂದಿ [illegible] ಳೆಯರೂ, ಮಹಿಳೆಯರೂ ಬಂದಿದ್ದರು.

ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥನೆಯಾದ ನಂತರ, ಸರ್ಕಾರದ ಚೀಫ್ ಇಂಜನಿಯರ್ ಶ್ರೀ ಹೆಚ್. ಅನಂತಾಚಾರ್ಯರು ಸ್ವಾಗತ ಭಾಷಣ ಮಾಡಿ, ಸೇತುವೆಯ ನಿರ್ಮಾಣ ಕಾರ್ಯವು ಶೀಘ್ರವಾಗಿ ನಡೆದಿರುವ ಬಗ್ಗೆ ವಿವರಣೆ ಇತ್ತರು. ಸೇತುವೆಯ ಉದ್ದ ೧,೦೮೦ ಅಡಿ, [illegible] ಅಂತರದ ೨೩ ಆಧಾರ ಸ್ತಂಭಗಳಿವೆ, ಸೇತುವೆ ಮೇಲೆ ರಸ್ತೆ ಅಗಲ ೨೨ ಅಡಿ; ಇದರ ವೆಚ್ಚ ೧೧,೫೭,೦೦೦ ರೂ. ಕಾರ್ಯಾರಂಭ ೯-೪-೧೯೫೫; ಮುಕ್ತಾಯ ೩೧-೧೨-೫೬. ಈ ಸೇತುವೆಯಿಂದ ಮೈಸೂರು ನಗರಕ್ಕೆ ರಸ್ತೆ ಕೇವಲ ೧೪ ಮೈಲಿ ದೂರವಿರುತ್ತದೆ.

ಸಭೆಯ ಪರವಾಗಿ ಅಧ್ಯಕ್ಷರಾದ ಶ್ರೀ ಚನ್ನೇಗೌಡರು ಉಭಯ ಸಚಿವರುಗಳಿಗೂ ಪತ್ರಿಕೆಗಳನ್ನು ಅರ್ಪಿಸಿ, ನಗರದ ಅಭಿವೃದ್ಧಿಗೆ ಅಗತ್ಯವಾದ ಕೆಲವು ಬೇಡಿಕೆಗಳನ್ನು ಮುಂದಿಟ್ಟರು. ಸರ್ಕಾರದ ಧನ ಸಹಾಯ; ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ಏರ್ಪಾಡು, ಪ್ರಸೂತಿ ಮಂದಿರ, ಬಸ್ ಸ್ಟ್ಯಾಂಡು, ಹೈಸ್ಕೂಲು ಕಟ್ಟಡ ಮರಮತ್ತು, ಸೇತುವೆವರೆಗೆ ದೀಪದ ಸೌಕರ್ಯ, ನದಿಯಲ್ಲಿ ಸ್ನಾನಘಾಟ, ಬಸ್ ಸಂಚಾರಕ್ಕಾಗಿ ಪ್ರತ್ಯೇಕ ರಸ್ತೆ, ಇವೇ ಮುಂತಾದವುಗಳ ಬಗ್ಗೆ ಅಂಶಗಳು ಸೂಚಿಸಲ್ಪಟ್ಟಿದ್ದುವು.

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಭಾಷಣ ಮಾಡಿ, [illegible] ಗಳ [illegible] ದೇಶದ ಅಭಿವೃದ್ಧಿಗೆ ಬಹಳ ಸಹಾಯಕವೆಂದು ಹೇಳಿ, ಈ ಸೇತುವೆಯ ನಿರ್ಮಾಣದಿಂದ ಜನ ಮತ್ತು ವಾಹನಗಳ ಸಂಚಾರಕ್ಕೆ ಸಹಾಯವಾಗುವುದಲ್ಲದೆ ವ್ಯಾಪಾರವೂ ಸಹ ಮುಂದುವರಿಯುವುದೆಂದೂ ನುಡಿದರು. ಇದೇ ಬಗೆಯ ಅನೇಕ ಸೇತುವೆಗಳನ್ನು ಇತರ ಕಡೆಗಳಲ್ಲಿ ನಿರ್ಮಿಸುವುದೂ ಅಗತ್ಯವಾಗಿದೆಯೆಂದೂ ಅವರು [illegible]. ನಗರದ ಅಭಿವೃದ್ಧಿಗಾಗಿ ಸರ್ಕಾರದ ಸೂಕ್ತ ಸಹಾಯವನ್ನು ಮಾಡುವುದಾಗಿಯೂ, ಆದರೆ ಅದರಲ್ಲಿ ಮುಖ್ಯವಾದ ಜವಾಬ್ದಾರಿಯನ್ನು ಪೌರಸಭೆಯವರೂ, ಪುರನಿವಾಸಿಗಳೂ ವಹಿಸಬೇಕೆಂದೂ ಸೂಚಿಸಿದರು. ಕಬ್ಬು ವಿಶೇಷವಾಗಿ ಬೆಳೆಯುವ ಈ ಪ್ರಾಂತದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಸರ್ಕಾರದವರು ಆಲೋಚಿಸುತ್ತಿರುವರೆಂದೂ ಅವರು ನುಡಿದರು.

ಶ್ರೀ ವೀರಣ್ಣಗೌಡರು ತಮ್ಮ ಭಾಷಣದಲ್ಲಿ ಪ್ರಯಾಣ ಸೌಲಭ್ಯಗಳನ್ನು ಹೆಚ್ಚಿಸುವ ಬಗ್ಗೆ ಸರ್ಕಾರದವರ ಆಸಕ್ತಿಯನ್ನು ನಿರೂಪಿಸಿದರು. ಪೌರಸಭೆಯ ಬೇಡಿಕೆಗಳನ್ನು ಸಂಬಂಧಪಟ್ಟ ಸಚಿವರುಗಳಲ್ಲಿ ಪ್ರಸ್ತಾಪಿಸಿ ಸೂಕ್ತವಾದ ಏರ್ಪಾಡು ಮಾಡಿಸುವುದಾಗಿ ನುಡಿದರು.

ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಹೆಚ್. ಎಸ್. ನರಸಿಂಹಯ್ಯಂಗಾರ್ಯರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ವ್ಯವಸಾಯ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಬೆಂಗಳೂರು ೫

ವ್ಯವಸಾಯ ಪದವೀಧರರು ಮತ್ತು ಡಿಪ್ಲೊಮಾದವರ ಸಂಬಳದ ಮಟ್ಟವನ್ನು ಸರ್ಕಾರದವರು ಹೆಚ್ಚಿಸದೆ ಇರುವುದನ್ನು ಪ್ರತಿಭಟಿಸಲು ಹೆಬ್ಬಾಳದ ವ್ಯವಸಾಯ ಕಾಲೇಜಿನ ೪೦೦ ವಿದ್ಯಾರ್ಥಿಗಳು ಅನಿರ್ದಿಷ್ಟ ಕಾಲದ ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆ. ಪದವೀಧರರಿಗೆ ಈಗ ಕೊಡುತ್ತಿರುವಂತೆ ೧೦೦ ರೂ ನಿಂದ ೨೫೦ ರ ಮಟ್ಟದ ಬದಲು ೧೫೦ ರಿಂದ ೩೦೦ ರೂ. ವರೆಗೂ, ಡಿಪ್ಲೊಮಾದವರಿಗೆ ೬೦ ರೂ ನಿಂದ ೧೫೦ ರೂ. ವರೆಗಿನ ಬದಲು ೧೦೦ ರೂ ನಿಂದ ೨೦೦ ರೂ ವರೆಗೂ ಸಂಬಳದ ಮಟ್ಟವನ್ನು ಗೊತ್ತುಪಡಿಸಬೇಕೆಂದು ಅವರು ಒತ್ತಾಯ ಮಾಡಿರುವರು. ಬೇಡಿಕೆಗಳು ಈಡೇರದಿದ್ದರೆ ಈ ತಿಂಗಳು ೨೫ ರಿಂದ ನಡೆಯುವ ವಾರ್ಷಿಕ ಪರೀಕ್ಷೆಗಳಲ್ಲೂ ಸಹ ಅವರು ಭಾಗವಹಿಸುವುದಿಲ್ಲವೆಂದೂ ಹೇಳಲಾಗಿದೆ.

ಮೈಸೂರು ಸರ್ಕಾರಿನ ೬೦ ಮಂದಿ ವ್ಯವಸಾಯ ಇನ್‌ಸ್ಪೆಕ್ಟರುಗಳು ನೆನ್ನೆ ಇಲಾಖಾ ಡೈರೆಕ್ಟರನ್ನು ಭೇಟಿ ಮಾಡಿ ತಮ್ಮ ಸಂಬಳದ ಮಟ್ಟವನ್ನು ಹೆಚ್ಚಿಸುವಂತೆ ಕೋರುವ ಮನವಿಯನ್ನು ಒಪ್ಪಿಸಿದರು.

ಕಾಸರಗೋಡಿನಲ್ಲಿ ಕನ್ನಡ ಉಮೇದುವಾರರ ಅವಿರೋಧ ಆಯ್ಕೆ

ಕೇರಳ ಪ್ರಾಂತಕ್ಕೆ ಸೇರಿಸಲ್ಪಟ್ಟಿರುವ ಕಾಸರಗೋಡಿನ ಕ್ಷೇತ್ರದಿಂದ ಕಾಸರಗೋಡು ಕರ್ನಾಟಕ ಏಕೀಕರಣ ಸಮಿತಿ ಪರವಾಗಿ ಸ್ಪರ್ಧಿಸಿರುವ ಎಂ. ಉಮೇಶರಾಯರು ಅಲ್ಲಿನ ಶಾಸನಸಭೆಗೆ ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ. ಇತರ ಉಮೇದುವಾರರು ವಾಪಸು ಪಡೆದಿರುವರು

ಬೆಂಗಳೂರು ಮೋಟಾರು ರೇಸಿನಲ್ಲಿ ಕಾರು ತಲೆಕೆಳಗು

ಯಲಹಂಕದಲ್ಲಿ ನೆನ್ನೆ ಅಖಿಲ ಭಾರತ ಮೋಟಾರು ಕಾರು ಮತ್ತು ಮೋಟಾರ್ ಸೈಕಲ್ ರೇಸುಗಳು ನಡೆದುವು. ೫೦,೦೦೦ ಪ್ರೇಕ್ಷಕರು ಇದ್ದರು. ಸ್ಪರ್ಧೆಯಲ್ಲಿ [illegible] ಯವರ ಕಾರು ತಲೆಕೆಳಗಾಗಿ ಬಿದ್ದು ಅವರಿಗೆ ಸ್ವಲ್ಪ ಗಾಯವಾಯಿತು.

ಜಿಲ್ಲೆಯಲ್ಲಿ ಉಮೇದುವಾರಿಕೆ ಅಖೈರು ಪಟ್ಟಿ

ಮೈಸೂರು ೫

ನೆನ್ನೆ ಉಮೇದುವಾರಿಕೆಗಳ ವಾಪಸಾತಿಗಳಾದ ಮೇಲೆ ಸ್ಪರ್ಧಿಸಿರುವವರ ಅಖೈರು ಪಟ್ಟಿಯು ಈ ರೀತಿ ಇರುತ್ತದೆ :—

ಪಿರಿಯಾಪಟ್ಟಣ : ಶ್ರೀ ಸೋಮಣ್ಣ (ಕಾಂ) ಮತ್ತು ಶ್ರೀ ವೆಂಕಟರಾಜು (ಸ್ವ). ಕೃಷ್ಣರಾಜನಗರ : ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ (ಕಾಂ), ಟಿ. ಎನ್. ವೀರಭದ್ರಯ್ಯ (ಪಿ.ಎಸ್.ಪಿ.) ಮತ್ತು ಹೆಚ್. ಬಿ. ಕೆಂಚೇಗೌಡ (ಸ್ವ). ಹುಣಸೂರು : ಶ್ರೀಗಳಾದ ಡಿ. ದೇವರಾಜ ಅರಸ್ (ಕಾಂ), ಬಿ. ವಿ. ರಾಮರಾವ್ ಸಿಂಧ್ಯ (ಜನಸಂಘ), ಆರ್. ಸಿ. ಅಣ್ಣಯ್ಯ (ಸ್ವ), ಕೆ. ಲಿಂಗಪ್ಪ (ಸ್ವ); ರಿಸರ್ವ್ ಸ್ಥಾನಕ್ಕೆ ಶ್ರೀ ಎನ್. ರಾಚಯ್ಯ (ಕಾಂ), ಶ್ರೀ ಕುಂಟಯ್ಯ ಮತ್ತು ಶ್ರೀ ಆರ್. ಸಿದ್ದಣ್ಣ (ಸ್ವತಂತ್ರರು). ಗುಂಡ್ಲುಪೇಟೆ : ಶ್ರೀ ಹೆಚ್. ಕೆ. ಶಿವರುದ್ರಪ್ಪ (ಕಾಂ) ಮತ್ತು ಶ್ರೀಮತಿ ನಾಗರತ್ನಮ್ಮ (ಸ್ವ). ನಂಜನಗೂಡು : ಶ್ರೀ ಪಿ. ಮಹದೇವಯ್ಯ (ಕಾಂ) ಮತ್ತು ಶ್ರೀ ಬಿ. ಎನ್. ಎಸ್. ಆರಾಧ್ಯ (ಪಿ. ಎಸ್. ಪಿ.). ಚಾಮರಾಜನಗರ : ಸಾಮಾನ್ಯ ಸ್ಥಾನ-ಶ್ರೀಗಳಾದ ವೆಂಕಟರಂಗಯ್ಯಂಗಾರ್ (ಕಾಂ), ಯು. ಎಂ. ಮಾದಪ್ಪ (ಪಿ. ಎಸ್. ಪಿ.), ಯಜಮಾನ ದಾಸಶೆಟ್ಟಿ ಮತ್ತು ಶಿವನಂಜಶೆಟ್ಟಿ (ಸ್ವತಂತ್ರರು); ಮೀಸಲು-ಬಿ. ರಾಚಯ್ಯ (ಕಾಂ), ಬಿ. ಬಸವಯ್ಯ [ಪಿ. ಎಸ್. ಪಿ] ಮತ್ತು ಎಂ. ಪುಟ್ಟದೇವಯ್ಯ [ಸ್ವ].

ಕೊಳ್ಳೇಗಾಲ-ಸಾಮಾನ್ಯ ಸ್ಥಾನ : ಶ್ರೀಗಳಾದ ಟಿ. ಪಿ. ಬೋರಯ್ಯ [ಕಾಂ], ಕೆ. ಪಿ. ಶಾಂತಮೂರ್ತಿ (ಪಿ. ಎಸ್. ಪಿ.) ಮತ್ತು ಎಂ. ವೀರಭದ್ರಸ್ವಾಮಿ [ಸ್ವ]. ಮೀಸಲು : ಶ್ರೀಮತಿ ಕೆಂಪಮ್ಮ [ಕಾಂ], ಬಿ. ಆರ್. ಪುಟ್ಟರಾಜು (ಪಿ. ಎಸ್. ಪಿ.) ಮತ್ತು ಎಲ್. ಬಸವರಾಜು (ಸ್ವ). [illegible] : ಶ್ರೀ ಎಸ್. ಸಿ. ವಿರೂಪಾಕ್ಷಯ್ಯ (ಕಾಂ), ಟಿ. ವೆಂಕಟೇಗೌಡ ಮತ್ತು ಸಿ. ರಾಜಗೌಡ (ಸ್ವತಂತ್ರರು).

ಮಂಡ್ಯ ಜಿಲ್ಲೆ ಉಮೇದುವಾರಿಕೆ

ಮಂಡ್ಯ : ಶ್ರೀಗಳಾದ ಎಸ್. ಚನ್ನಯ್ಯ (ಕಾಂ), ಜಿ. ಎಸ್. ಬೊಮ್ಮೇಗೌಡ (ಸ್ವ) ಮತ್ತು ಎ. ಎಲ್. ನಾಗಪ್ಪ (ಸೋಷಲಿಸ್ಟ್). ಶ್ರೀರಂಗಪಟ್ಟಣ : ಶ್ರೀಗಳಾದ ಎ. ಜಿ. ಬಂಡಿಗೌಡ (ಕಾಂ) ಮತ್ತು [illegible] ಚುಂಚೇಗೌಡ. ನಾಗಮಂಗಲ : ಶ್ರೀಗಳಾದ ಟಿ. ಮರಿಯಪ್ಪ (ಕಾಂ), ಕೆ. ಮರಿಯಪ್ಪ (ಪಿ. ಎಸ್. ಪಿ). ಪಾಂಡವಪುರ : ಶ್ರೀಮತಿ ದಮಯಂತಿ ಬೋರೇಗೌಡ : (ಕಾಂ), ಬಿ. ಚಾಮಯ್ಯ (ಪಿ. ಎಸ್. ಪಿ.) ಮತ್ತು ದೊಡ್ಡತಿಮ್ಮೇಗೌಡ (ಸ್ವ) ಮದ್ದೂರು : ಶ್ರೀ ಹೆಚ್. ಕೆ. ವೀರಣ್ಣಗೌಡ (ಕಾಂ) ಮತ್ತು ಎಸ್. ಕೆ. ಚಿಕ್ಕಣ್ಣ (ಪಿ. ಎಸ್. ಪಿ.). ಮಳವಳ್ಳಿ : ಹೆಚ್. ಎ. ಸಿದ್ದೇಗೌಡ [ಕಾಂ], ಶ್ರೀಮತಿ ಶಾರದಮ್ಮ ವೀರಣ್ಣಗೌಡ (ಸ್ವ) ಮತ್ತು ಶ್ರೀ ಬಿ. ಪಿ. ನಾಗರಾಜಮೂರ್ತಿ (ಪಿ.ಎಸ್.ಪಿ.)

ಕಡಿದಾಳ್ ಮಂಜಪ್ಪ ಮತ್ತು ಮೂವರ ಅವಿರೋಧ ಆಯ್ಕೆ

ಲೋಕ ಸಭೆಗೆ ಹಾಸನ ಜಿಲ್ಲಾ ಕ್ಷೇತ್ರದಿಂದ ಕಾಂಗ್ರೆಸ್ಸಿನ ಪರವಾಗಿ ನಿಂತಿರುವ ಶ್ರೀ ಹೆಚ್. ಸಿದ್ದನಂಜಪ್ಪನವರು (ಹಾಲಿ ಸದಸ್ಯರು) ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ಸಂಸ್ಥಾನದ ವಿಧಾನ ಸಭೆಗೆ [illegible] ಕ್ಷೇತ್ರದಿಂದ ಕಾಂಗ್ರೆಸ್ಸಿನ ಉಮೇದುವಾರರಾದ ಶ್ರೀ ಕೈ. ಮಂಜಯ್ಯಶೆಟ್ಟರೂ, ಗುಲ್ಬರ್ಗ ಜಿಲ್ಲೆಯ [illegible] ರಿಸರ್ವ್ ಕ್ಷೇತ್ರದಿಂದ ಶ್ರೀ ಸರ್ವೇಶ್ ಎಂಬ ಸ್ವತಂತ್ರರೂ ಅವಿರೋಧವಾಗಿ ಚುನಾಯಿತರಾಗಿರುವರೆಂದು ಘೋಷಿಸಲಾಗಿದೆ. ಶ್ರೀ ಸರ್ವೇಶ್‌ರವರ ವಿರುದ್ಧವಾಗಿ ನಿಂತಿದ್ದ ಇಬ್ಬರು ಕಾಂಗ್ರೆಸ್ ಸ್ಪರ್ಧಿಗಳ ಉಮೇದುವಾರಿಕೆಯನ್ನು ಚುನಾವಣಾಧಿಕಾರಿಗಳು ತಳ್ಳಿಹಾಕಿರುವರು. ಚನ್ನಗಿರಿ ಕ್ಷೇತ್ರದಿಂದ ಕಾಂಗ್ರೆಸ್ ಉಮೇದುವಾರರಾದ ಶ್ರೀ ಕುಂದೂರು ರುದ್ರಪ್ಪನವರೂ, ಶೃಂಗೇರಿ ಕ್ಷೇತ್ರದಿಂದ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರೂ ಅವಿರೋಧವಾಗಿ ಚುನಾಯಿತರಾಗಿರುವರು.

ಪಾಕಿಸ್ತಾನದ ಗಡಿನಾಡಿನಲ್ಲಿ ವೇಶ್ಯೆಯರ ಟ್ರೇಡ್ ಯೂನಿಯನ್

ಪಾಕಿಸ್ತಾನದ ವಾಯುವ್ಯ ಗಡಿನಾಡಿನ ಪ್ರಾಂತದ ಮರ್ದಾನ್ ಜಿಲ್ಲೆಯ ವೇಶ್ಯೆಯರು ತಮ್ಮದೇ ಆದ ಟ್ರೇಡ್ ಯೂನಿಯನ್ ಅನ್ನು ಸ್ಥಾಪಿಸಿಕೊಂಡಿರುತ್ತಾರೆ. ಅದಕ್ಕೆ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಖಜಾಂಚಿಯವರು ಇರುವರು. ವೇಶ್ಯೆಯರ ಹಕ್ಕನ್ನು ರಕ್ಷಿಸಿಕೊಳ್ಳಲೂ, ನ್ಯಾಯಾಲಯಗಳಲ್ಲಿ ಅವರ ಪರ ವ್ಯವಹಾರ ನಡೆಸಲೂ ಉದ್ದೇಶಿಸಿ ಈ ಬಗ್ಗೆ ನಿಧಿಯನ್ನು ಸಂಗ್ರಹಿಸಲು ತೀರ್ಮಾನವಾಗಿದೆ. ಮರ್ದಾನ್ ನಗರ ಮತ್ತು ಜಿಲ್ಲೆಯಿಂದ ವೇಶ್ಯೆಯರನ್ನು ಹೊರಕ್ಕೆ ಅಟ್ಟುವ ಕ್ರಮವನ್ನು ತಡೆಯಲು ಈ ಸಂಘವನ್ನು ಸ್ಥಾಪಿಸಲಾಗಿದೆ.

ಗೋವಾ ಜೈಲಿನ ಖೈದಿಗಳೆಲ್ಲರ ಬಿಡುಗಡೆ

ಗೋವಾ ಜೈಲುಗಳಲ್ಲಿ ಬಂಧಿಸಲ್ಪಟ್ಟಿರುವ ಅಹಿಂಸಾತ್ಮಕ ಹೋರಾಟಗಾರರೆಲ್ಲರನ್ನೂ ಬಿಡುಗಡೆ ಮಾಡಲು ಅಲ್ಲಿನ ಸರ್ಕಾರದವರು ಆಲೋಚಿಸುತ್ತಿರುವುದಾಗಿ ಬಿಡುಗಡೆ ಹೊಂದಿರುವ ಪಿ. ಎಸ್. ಪಿ. ಮುಖಂಡರಾದ ಮಧು [illegible] ತಿಳಿಸಿರುತ್ತಾರೆ.

ಖಾನ್ ಸಾಹೇಬರ ನಿವೃತ್ತಿಯೋ

ಪ. ಪಾಕಿಸ್ತಾನದ ಮುಖ್ಯಮಂತ್ರಿ ಖಾನ್ ಸಾಹೇಬರು ಅಲ್ಲಿನ ಶಾಸನ ಸಭೆಯ ಆಯವ್ಯಯದ ಅಧಿವೇಶನಾನಂತರ ರಾಜಕೀಯದಿಂದ ನಿವೃತ್ತರಾಗುವರೆಂದೂ, ಅವರ ಸ್ಥಾನಕ್ಕೆ ಅಲ್ಲಿನ ಹಣಕಾಸಿನ ಮಂತ್ರಿ ಅಬ್ದುರ್ ರಷೀದ್‌ರವರು ಬರುವರೆಂದೂ ವರದಿಯಾಗಿದೆ.

○ ನಗರದ ನಜರ್‌ಬಾದಿನಲ್ಲಿ [illegible] ಚಂಚಯ್ಯ ಎಂಬುವನ ಮೇಲೆ ಅಲ್ಲಿನ ಪೋಲೀಸರು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಅಪರಾಧಿಯಾಗಿ [illegible] ೧೫ ರೂ. ದಂಡ ವಿಧಿಸಲಾಗಿದೆ.

ಮೈಸೂರು ಮಹಾರಾಜರು ಮದ್ರಾಸ್ ಗವರ್ನರರಾಗಲು ಸ್ವಾಗತ

ಮದ್ರಾಸ್ ಮಂತ್ರಿ ಸುಬ್ರಹ್ಮಣ್ಯಂರವರ ಹೇಳಿಕೆ

ಮದ್ರಾಸಿನಲ್ಲಿ ಕಳೆದ ೨೦ನೇ ತಾರೀಕು ಅಲ್ಲಿನ ವಿಶ್ವವಿದ್ಯಾಲಯದ ಶತಮಾನೋತ್ಸವವು ನಡೆದಾಗ ಅಲ್ಲಿನ ಗವರ್ನರರೂ ಛಾನ್ಸಲರೂ ಆದ ಎ. ಜೆ. ಜಾನ್‌ರವರು ಉತ್ಸವದ ಆರಂಭೋತ್ಸವವನ್ನು ನೆರವೇರಿಸಲು ಆಗಮಿಸಿದ್ದ ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರನ್ನು ಸ್ವಾಗತಿಸುತ್ತಾ, ಬಾಯಿತಪ್ಪಿ ಅವರು ಮದ್ರಾಸಿನ ಗವರ್ನರರೆಂದು ಹೇಳಿದರು. ಇದರ ಬಗ್ಗೆ ವಿಶ್ವವಿದ್ಯಾಲಯದ ಪ್ರೋ-ಛಾನ್ಸಲರ್ ಮತ್ತು ವಿದ್ಯಾಮಂತ್ರಿಗಳಾದ ಸಿ. ಸುಬ್ರಹ್ಮಣ್ಯಂರವರು ವ್ಯಾಖ್ಯಾನ ಮಾಡಿ ತಮ್ಮ ಛಾನ್ಸಲರು ಹೇಳಿದುದು ಬಾಯಿ ತಪ್ಪಿನ ಮಾತೆಂದು ತಾವು ಭಾವಿಸುವುದಿಲ್ಲವೆಂದೂ, ಅದು ಮುಂದೆ ಆಗಬಹುದಾದ ಘಟನೆಯ ಮುನ್ಸೂಚನೆಯೆಂದೂ ತಿಳಿಸಿದರು. ಮೈಸೂರಿನ ರಾಜ್ಯಪಾಲರು ಮದ್ರಾಸಿನ ಗವರ್ನರರಾದರೆ, ಆ ಸಂಸ್ಥಾನವು ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವುದೆಂದೂ, ಅದರಿಂದ ಮದ್ರಾಸಿನವರೆಲ್ಲರಿಗೂ ಅನುಕೂಲವಾಗುವುದೆಂದೂ ಅವರು ನುಡಿದಿದ್ದಾರೆ.

ಪಾಕಿಸ್ತಾನದ ವಿರುದ್ಧವಾಗಿ ಪ್ರದರ್ಶನಕ್ಕೆ ನೆಹರೂ ಅಸಮ್ಮತಿ

ದೆಹಲಿ ಮತ್ತು ಇತರ ಕಡೆಗಳಲ್ಲಿ ಇತ್ತೀಚೆಗೆ ಆದ ಪಾಕಿಸ್ತಾನದ ವಿರುದ್ಧ ಪ್ರದರ್ಶನಗಳನ್ನು ನೆಹರೂರವರು ಖಂಡಿಸಿರುತ್ತಾರೆ. ಇಂತಹ ಪ್ರದರ್ಶನಗಳಿಂದ ಕಾಶ್ಮೀರದ ಪ್ರಶ್ನೆಯು ಬಲಗೊಳ್ಳುವುದರ ಬದಲು ಬಲಗುಂದುವುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಅನಾಥಾಲಯ ಸಾಹಿತ್ಯ ಸಂಘದ ಮುಕ್ತಾಯ ಭಾಷಣ

ನಗರದ ಅನಾಥಾಲಯದ ಸಾಹಿತ್ಯ ಸಂಘದ ಮುಕ್ತಾಯ ಭಾಷಣವನ್ನು ಕಾಲೇಜು ಅಧ್ಯಾಪಕ ಶ್ರೀ ಎಸ್. ವಿ. ಪರಮೇಶ್ವರಭಟ್ಟರು ಮೊನ್ನೆ ಮಾಡಿದರು. ಶ್ರೀ ಎಂ. ರಾಮರಾಯರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿಗಳ ವರದಿ, ಬಹುಮಾನ ವಿನಿಯೋಗ ಮತ್ತು ಅಧ್ಯಕ್ಷ ಭಾಷಣವಾದನಂತರ ಆಲಯದ ಕಲಾವಿದರು ಶ್ರೀ ಎಂ. ರಾಮರಾಯರಿಂದ ವಿರಚಿತವಾದ 'ಚಿತ್ರಪ್ರಮಾದ' ಮತ್ತು ಶ್ರೀ ಎಸ್. ಅನಂತನಾರಾಯಣ್‌ರವರ 'ತಿರುಗಿ ಬಿದ್ದ ತುರುಫ್' ಎಂಬ ಎರಡು ಸಾಮಾಜಿಕ ನಾಟಕಗಳನ್ನು ಅಭಿನಯಿಸಿದರು. ಶ್ರೀ ಶರ್ಮರವರಿಂದ ಚಿತ್ರಗೀತೆಗಳಾದ ಮೇಲೆ ಕಾರ್ಯದರ್ಶಿಗಳಿಂದ ವಂದನಾರ್ಪಣೆಯಾಗಿ, ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಕಲಾವಿದರ ಸಂಘದ ಸ್ಥಾಪನೆ

ವಿವಿಧ ಕಲೆಗಳ ಅಭಿವೃದ್ಧಿಗಾಗಿ ಸರ್ಕಾರದವರು ಕೊಡಲಿರುವ ಧನ ಸಹಾಯವನ್ನು ನಗರದ ಕಲಾ ಸಂಸ್ಥೆಗಳು ಸದ್ವಿನಿಯೋಗ ಮಾಡಿಕೊಳ್ಳುವಂತಾಗಲು ನಾನಾ ಸಂಸ್ಥೆಗಳವರು ಮೊನ್ನೆ ಸಭೆ ನಡೆಸಿ ಕಲಾವಿದರ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಿದರು. ಸಂಗೀತ-ನಾಟಕ ಅಕಾಡೆಮಿ ಸಂಸ್ಥೆಯಿಂದ ಮಾನ್ಯವಾಗದಿರುವ ಕಲಾ ಸಂಸ್ಥೆಗಳು ತಮ್ಮ ಸಂಘಗಳನ್ನು ಈ ತಿಂಗಳು ೧೦ರೊಳಗೆ ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಕೋರಲಾಯಿತು. ಇದೇ ತಿಂಗಳು ೧೬ನೇ ತಾರೀಕು ಸಂಜೆ ೬ ಗಂಟೆಗೆ ಕ್ಯಾತನಹಳ್ಳಿ ಸಿದ್ದಲಿಂಗಯ್ಯನವರ ಪಾಠಶಾಲೆಯಲ್ಲಿ ಕಲಾವಿದರು ಸೇರಿ ಸಂಘವನ್ನು ಸ್ಥಾಪಿಸುವರು. ಈ ಬಗ್ಗೆ ಆವಶ್ಯಕ ಕಾರ್ಯಕ್ರಮ ಕೈಗೊಳ್ಳಲು ಶ್ರೀಗಳಾದ ಎಂ. ಸಿ. ಮಹದೇವಸ್ವಾಮಿ, ಕೆ. ರಾಮಣ್ಣ ಮುಂತಾದವರು ಇರುವ ಸಮಿತಿಯೊಂದನ್ನು ರಚಿಸಲಾಯಿತು.

ಹರಿಕಥಾ ಸಪ್ತಾಹ

ಶಿವರಾಂಪೇಟೆ ಶ್ರೀ ರಾಮೋತ್ಸವ ಸಭೆಯ ಶ್ರೀ ರಾಮ ಮಂದಿರದಲ್ಲಿ ಶ್ರೀ ಪಿ. ಆರ್. ಸುಬ್ಬರಾಮಯ್ಯನವರಿಂದ ನೆನ್ನೆ ಆರಂಭವಾಯಿತು ೧ ವಾರ ಹರಿಕಥಾ ಸಪ್ತಾಹವನ್ನು ಏರ್ಪಡಿಸಲಾಗಿದೆ. ಸರ್ವರಿಗೂ ಸ್ವಾಗತವುಂಟು.

ವಿವಾಹ ಮಹೋತ್ಸವಗಳು

ಮೈಸೂರು ಅಂಚೆ ಸೂಪರಿಂಟೆಂಡೆಂಟರವರ ಕಛೇರಿ ಹೆಡ್ ಗುಮಾಸ್ತರಾದ ಶ್ರೀ ಬಿ. ಎಸ್. ರಾಮಚಂದ್ರರಾಯರು ತಮ್ಮ ಕುಮಾರಿ ಸೌ|| ಬಿ. ಆರ್. ರಮಾಮಣಿಯನ್ನು ಶ್ರೀ ಶೆಟ್ಟಿ ಕೃಷ್ಣರಾಯರ ಪುತ್ರ ಶ್ರೀ ಶೆಟ್ಟಿ ಶ್ರೀನಿವಾಸರಾಯರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ಅರಮನೆ ಗುರುಕಾರ್ ಶ್ರೀ ಮಲ್ಹಾರಿರಾಯರ ಮಕ್ಕಳು ಶ್ರೀ ಎಂ. ರಾಜಾರಾಯರು ತಮ್ಮ ಪುತ್ರ ಶ್ರೀ ಕೃಷ್ಣಮೂರ್ತಿಯವರಿಗೆ ರಾಮನಾಥಪುರದ ಶ್ರೀ ಆರ್. ಎ. ಕೃಷ್ಣರಾಯರ ಪುತ್ರಿ ಸೌ|| ಪ್ರೇಮಾಬಾಯಿಯನ್ನು ತಂದುಕೊಂಡು ನೆನ್ನೆ ರಾಮನಾಥಪುರದಲ್ಲಿ ವಿವಾಹವನ್ನು ಜರುಗಿಸಿದರು.

ಬೆಂಗಳೂರು ತಾಲ್ಲೂಕು [illegible] ಶಾನುಭೋಗ್ [illegible] ತಮ್ಮ ಶ್ರೀ ಜೆ. ಹನುಮಂತರಾಯರು ತಮ್ಮ ಕುಮಾರಿ ಸೌ|| ಸರೋಜಾಬಾಯಿಯನ್ನು ಚಳ್ಳಕೆರೆ ಭಟ್ಟರಹಳ್ಳಿ ಶ್ರೀ ಹನುಮಂತರಾಯರ ಕುಮಾರ ಶ್ರೀ ಪಿ. ಹೆಚ್. ಸತ್ಯನಾರಾಯಣರಾಯರಿಗೆ ಕೊಟ್ಟು ಕಳೆದ ಶುಕ್ರವಾರ ನಗರದಲ್ಲಿ ವಿವಾಹವನ್ನು ಜರುಗಿಸಿದರು. ಶ್ರೀ ಜೆ. ಹನುಮಂತರಾಯರು ತಮ್ಮ ಕುಮಾರ ಶ್ರೀ ಜೆ. ಹೆಚ್. ಲಿಂಗರಾಯರಿಗೆ ಮೈಸೂರಿನ ಶ್ರೀ [illegible] ವಿ. ಕೆ. ಮೂರ್ತಿಯವರ ಕುಮಾರಿ ಸೌ|| ಜಯಶ್ರೀಯನ್ನು ತಂದುಕೊಂಡು ಅಂದೇ ನಗರದಲ್ಲಿ ವಿವಾಹವನ್ನು ನಡೆಸಿದರು.

ಸಿನಾಯ್ ಖಾಲಿ ಮಾಡುವಂತೆ ಇಸ್ರೇಲಿಗೆ ವಿಶ್ವಸಂಸ್ಥೆ ಕರೆ

ಸಿನಾಯ್ ಪ್ರದೇಶವನ್ನು ಪೂರ್ಣವಾಗಿ ಖಾಲಿ ಮಾಡುವಂತೆ ಇಸ್ರೇಲಿಗೆ ವಿಶ್ವಸಂಸ್ಥೆಯ ಸಾಧಾರಣ ಸಭೆಯು ಈಗ ಆರನೇ ಬಾರಿಗೆ ಕರೆಯಿತ್ತಿದೆ. ಈ ಬಗ್ಗೆ ೭೪-೨ ಓಟುಗಳಿಂದ ನಿರ್ಣಯವನ್ನು ಅಂಗೀಕರಿಸಲಾಗಿದೆ. ಈಜಿಪ್ಟ್ ಮತ್ತು ಇಸ್ರೇಲ್ ಗಡಿ ನಡುವೆ ವಿಶ್ವಸಂಸ್ಥೆಯ ಪಹರೆ ಪಡೆಯನ್ನು ನಿಲ್ಲಿಸುವ ಬಗ್ಗೆ ೫೬-೦ ಓಟುಗಳಿಂದ ಮತ್ತೊಂದು ನಿರ್ಣಯವನ್ನು ಅಂಗೀಕರಿಸಲಾಗಿದೆ. ೨೨ ರಾಷ್ಟ್ರಗಳು ತಟಸ್ಥವಾಗಿದ್ದುವು.

ಉಮೇದುವಾರರೊಬ್ಬರ ಮರಣ

ಚನ್ನಗಿರಿ ಪೌರಸಭಾಧ್ಯಕ್ಷರೂ, ವಿಧಾನ ಸಭೆಗೆ ಪಿ. ಎಸ್. ಪಿ. ಉಮೇದುವಾರರೂ ಆದ ಶ್ರೀ ಎಂ. ಎಸ್. ವಾಸಣ್ಣನವರು ಕಳೆದ ೧ನೇ ತಾರೀಕು ನಿಧನ ಹೊಂದಿದರು. ಅಂದು ಅದಕ್ಕಾಗಿ ಊರಿನಲ್ಲೆಲ್ಲಾ ಹರತಾಳವನ್ನು ಆಚರಿಸಲಾಯಿತು.

ಜಿಲ್ಲಾ ಭಾಷೆಗಳು, ಬಣ್ಣ ಮತ್ತು ಆಕಾರಗಳಲ್ಲಿ
ಲಿಥೋ ಪೋಸ್ಟರುಗಳನ್ನು
ಸುಲಭ ದರದಲ್ಲಿ ಮಾಡಿಕೊಡುತ್ತೇವೆ,
ಕೂಡಲೇ ವಿಚಾರಿಸಿ
[illegible] ಬುಕ್ ಡಿಪೋ,
ಅಶೋಕಾ ರೋಡ್, ಮೈಸೂರು

CITY TUTORIAL COLLEGE
Old Agrahar, Mysore.
★ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೈಸ್ಕೂಲು ತರಗತಿಗಳನ್ನು ಬೆಳಗಿನ ವೇಳೆಯಲ್ಲೇ ನಡೆಸಲಾಗುತ್ತಿದೆ. (Fees reduced)
★ ಮಿಡಲ್ ಸ್ಕೂಲಿನ ಎಲ್ಲಾ ತರಗತಿಗಳೂ ಸುಪ್ರಭಾತ ವೇಳೆಯಲ್ಲಿ ನಡೆಯುತ್ತಿವೆ. (7-30 to 11-30 a. m.)
★ 1958ನೇ ಮಾರ್ಚಿಯ Madras Matric ಪರೀಕ್ಷೆಗೆ ತರಗತಿಗಳು ಪ್ರಾರಂಭವಾಗಿವೆ. (6 to 8-30 P. M.) 19 ವಯಸ್ಸಿನವರಿಗೆಲ್ಲಾ ಪ್ರವೇಶವುಂಟು.

ಚಂದಾದಾರರಲ್ಲಿ ವಿನಂತಿ

ಪ್ರತಿ ತಿಂಗಳ ಚಂದಾ ಮೊಬಲಗನ್ನು ಆಯಾ ತಿಂಗಳ ಆರಂಭದಲ್ಲಿಯೇ ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಸ್ಥಳ ಪರಸ್ಥಳಗಳ ಚಂದಾದಾರರಲ್ಲಿ ಈ ಮೂಲಕ ವಿನಂತಿ ಮಾಡಲಾಗಿದೆ.

— ವ್ಯವಸ್ಥಾಪಕ, ಸಾಧ್ವಿ

ಗೋವಾ ವಿಮೋಚನೆ ಚಳುವಳಿ ಮುಂದುವರಿಸಲು ಕರೆ

ಗೋವಾ ವಿಮೋಚನೆ ಚಳುವಳಿಯು ಮುಂದುವರಿಯಬೇಕೆಂದು, ಬಿಡುಗಡೆಯಾಗಿರುವ ಪಿ. ಎಸ್. ಪಿ. ಮುಖಂಡರಾದ ಎನ್. ಜಿ. ಗೋರೆಯವರು ತಿಳಿಸಿರುತ್ತಾರೆ. ಬಿಡುಗಡೆಯಾದ ೩೩ ಮಂದಿ ಭಾರತೀಯರಿಗೆ ಕಾರವಾರದಲ್ಲಿ ಮೊನ್ನೆ ಸತ್ಕಾರ ಕೂಟವನ್ನು ನಡೆಸಿದಾಗ ಅವರು ಭಾಷಣ ಮಾಡಿ ಬಂಧನದಲ್ಲಿ ೩೦೦ ಮಂದಿ ಗೋವಾ ಜನರು ಇರುವರೆಂದೂ, ಗೋವಾ ಜನರು ಭಾರತೀಯರಲ್ಲವೆಂಬ ಭಾವನೆ ಮೂಡಿಸಲು ಅವರನ್ನು ಬಿಡುಗಡೆ ಮಾಡಿಲ್ಲವೆಂದೂ ಅವರು ಹೇಳಿರುವರು. ಗೋವಾದಲ್ಲಿ ಜನಜಾಗೃತಿಯು ಬಹಳವಾಗಿರುವುದೆಂದೂ ಅವರು ಹೇಳಿರುತ್ತಾರೆ.

೧೯ ತಿಂಗಳ ಕಾಲ ಜೈಲಿನಲ್ಲಿದ್ದು ಬಿಡುಗಡೆ ಹೊಂದಿರುವ ಭಾರತೀಯರು ಕೃಶವಾಗಿರುತ್ತಾರೆಂದೂ, ಅನೇಕರು ೧೫-೨೫ ಪೌಂಡು ತೂಕ ಕಡಿಮೆಯಾಗಿರುವರೆಂದೂ ಹೇಳಲಾಗಿದೆ. ೯ ಅಡಿ ಅಗಲ ೧೨ ಅಡಿ ಉದ್ದದ ಒಂದು ಕೋಣೆಯಲ್ಲಿ ೪೦ ಮಂದಿ ರಾಜಕೀಯ ಖೈದಿಗಳನ್ನು ತುಂಬಲಾಗಿತ್ತೆಂದೂ ಹೇಳಲಾಗಿದೆ.

ದಕ್ಷಿಣ ಸಾಗರದ ದ್ವೀಪದಲ್ಲಿ ಉಪ್ಪಿನ ಮರುಭೂಮಿ

ದಕ್ಷಿಣ ಸಾಗರದ ಬಳಿ ಇರುವ ರಾಸ್ ದ್ವೀಪಸ್ತೋಮದಲ್ಲಿ ಉಪ್ಪಿನ ಮರುಭೂಮಿಯು ಇರುವುದನ್ನು ರಷ್ಯದ ಹಡಗೊಂದು ಪತ್ತೆ ಹಚ್ಚಿದೆ. ದಕ್ಷಿಣ ಧ್ರುವದ ದ್ವೀಪವನ್ನು ಹುಡುಕಲು ಹೊರಟಿರುವ ಹಲವರು ಕುಡಿಯುವ ನೀರಿಗಾಗಿ ಶೋಧಿಸಿದರೆಂದೂ, ಎಲ್ಲೂ ಸಸ್ಯಗಳಾಗಲೀ ಅಥವಾ ಯಾವ ಜೀವವಾಗಲಿ ಕಾಣದೆ ಕೇವಲ ಉಪ್ಪಿನ ರಾಶಿಗಳು ಬಿದ್ದಿದ್ದುದು ಕಂಡುಬಂದಿತೆಂದೂ ಹೇಳಲಾಗಿದೆ.

ಅಲಿಘಡದ ವಿದ್ಯಾರ್ಥಿಗಳ ಪ್ರದರ್ಶನ

ಪಾಕಿಸ್ತಾನದ ವಿದ್ಯಾರ್ಥಿಗಳು ಭಾರತದ ವಿರುದ್ಧವಾಗಿ ನಡೆಸಿದ ಪ್ರದರ್ಶನಗಳನ್ನು ಪ್ರತಿಭಟಿಸಲು ಮೊನ್ನೆ ಅಲಿಘಡದ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹರತಾಳವನ್ನು ನಡೆಸಿದರು. ಅವರು ಮೆರವಣಿಗೆ ನಡೆಸಲು ಹೊರಟಿದ್ದು ಪೊಲೀಸರ ಸಲಹೆ ಮೇರೆ ಆ ಪ್ರಯತ್ನವನ್ನು ಬಿಟ್ಟುಬಿಟ್ಟರು.

ವಿಮಾನ ಸರ್ವೀಸಿನಲ್ಲಿ ೩ನೇ ತರಗತಿ ಪ್ರಯಾಣ

ವಿಮಾನಗಳಲ್ಲಿ ೩ನೇ ತರಗತಿಯ ಪ್ರಯಾಣವನ್ನು ಏರ್ಪಾಡು ಮಾಡುವ ವಿಷಯದ ಪರಿಶೀಲನೆಗೆ ಲಂಡನ್ನಿನಲ್ಲಿ ಅಂತರರಾಷ್ಟ್ರೀಯ ವಿಮಾನ ಸಂಚಾರ ಸಂಘದ ಸಭೆಯು ಸೇರಲಿದೆ. ಅದರಲ್ಲಿ ಭಾಗವಹಿಸಲು ಏರ್ ಇಂಡಿಯಾ ಇಂಟರ್‌ನ್ಯಾಶನಲ್ ಸಂಸ್ಥೆಯ ಪ್ರತಿನಿಧಿ ಕೂಚರವರು ಲಂಡನ್ನಿಗೆ ಪ್ರಯಾಣ ಮಾಡುವರು.

ಜಿ. ಸ್ವಾಮಿದಾಸರಿಗೆ ಸಹೋದರರ ವಿಯೋಗ

ನಗರದ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಜಿ. ಸ್ವಾಮಿದಾಸರ ಏಕಮಾತ್ರ ಸಹೋದರರಾದ ಶ್ರೀ ಜಿ. ಜೋಸುವಾರವರು ಕಳೆದ ಶುಕ್ರವಾರ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಬಂಧುಗಳಿಗೆ ಅನುತಾಪವನ್ನು ಸೂಚಿಸುತ್ತೇವೆ.

NATIONAL LEAGUE,
Anathalaya Buildings, Mysore
Offers excellent coaching for students
of the High School classes
Join immediately

Globe Tutorial College
(Sadvidya Patasala)
Offers excellent coaching for
High School I, II & III
year classes

ಸಂಗು ಗಣೇಶರವರ ಉಪವಾಸ ಮುಕ್ತಾಯ

ಮದ್ರಾಸಿನಲ್ಲಿ ಅನೇಕ [illegible] ೧೮ ದಿನಗಳಿಂದ ಉಪವಾಸ ನಡೆಸುತ್ತಿದ್ದ ಅಲ್ಲಿಯ ಪ್ರಮುಖ ಕಾಂಗ್ರೆಸ್ಸಿನವರಾದ ಸಂಗು ಗಣೇಶರವರು ಮೊನ್ನೆ ತಮ್ಮ ವ್ರತವನ್ನು ಮುಕ್ತಾಯಗೊಳಿಸಿದರು. ಮದ್ರಾಸನ್ನು ತಮಿಳುನಾಡೆಂದು ಕರೆಯಬೇಕೆಂದೂ ಅವರು ತಿಳಿಸಿದ್ದರು. ಈ ಬೇಡಿಕೆಯನ್ನು ಎಲ್ಲ ಪಕ್ಷಗಳವರೂ ಒತ್ತಾಯಪಡಿಸಲು ಒಪ್ಪಿರುತ್ತಾರೆ. ತೆಯ್ಯಾರು ಹರಿಜನ ಸಹಕಾರ ಸಂಘವೊಂದನ್ನು ಸ್ಥಾಪಿಸಿ ಆ ಮೂಲಕ ಉಪ್ಪನ್ನು ತಯಾರಿಸುವುದಾದರೆ ಅವರಿಗೆ ರಹದಾರಿ ಕೊಡುವುದಾಗಿ ಭಾರತದ ಉಪ್ಪಿನ ಕಮಿಷನರು ಗಣೇಶರವರಿಗೆ ಪತ್ರ ಬರೆದು ತಿಳಿಸಿದ್ದಾರೆ. ಅವರ ಇತರ ಹಲವಾರು ಬೇಡಿಕೆಗಳು ಸಿದ್ಧಿಯಾಗಲಿವೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವಾರ್ತೆ. ೭-೧೫ ಮತ್ತು ೮-೩ ಜಯಂ ಮತ್ತು ಭಾಗ್ಯಂ-ದೇವರನಾಮ ೮-೪೫ ಹಿಂದಿ ಪಾಠ. ಮಧ್ಯಾಹ್ನ ೧೨ ಎಂ. ಎಸ್. [illegible] ಯಮ್ಮ-ವೀಣೆ. ೧೨-೩೦ ಜಯಂ ಮತ್ತು ಭಾಗ್ಯಂ-ಸಂಗೀತ. ೧-೫೦ ವೀಣೆ. ಸಂಜೆ ೫-೩ ಮತ್ತು ೮ ಹೆಚ್.ಎಸ್. ತಮ್ಮಯ್ಯ-ನಾಗಸ್ವರ. ೬-೫ ವಿರಾಮ ಸಂಗೀತ. ೬-೩೦ ರೀಜನಲ್. ೭-೩೦ ನಾವು ಮತ್ತು ನಮ್ಮವರು ೮-೩೦ ರಾಷ್ಟ್ರೀಯ ಕಾರ್ಯಕ್ರಮ ೮-೫ ರಿಲಾಮ್. ೯-೧೫ ನಾಗಮ್ಮ-ಸಂಗೀತ.

○ ಶ್ರೀ ಕೆ.ಸಿ. ರೆಡ್ಡಿಯವರು ನಿನ್ನೆ ಬೆಳಗ್ಗೆ ದೆಹಲಿಗೆ ತೆರಳಿದರು. ನಾಳೆ ವಾಪಸು ಬರುವರು.

ಗೃಹಕೃತ್ಯದ ನೋಟೀಸು

ಮೈಸೂರು ಸಿಟಿ ಕೃಷ್ಣರಾಜ ಮೊಹಲ್ಲಾ ಹುಲ್ಲಿನ ಬೀದಿ ಡೋರ್ ನಂಬರು 1778-32 ರಲ್ಲಿ ವಾಸ ಮಾಡುವ ಎಮ್ಮೆ ಸಿದ್ದಯ್ಯನವರ ಮಕ್ಕಳು ಕಂಟ್ರಾಕ್ಟರ್ ಬಸವಯ್ಯನವರು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

28-12-1956ನೇ ಸೋಮವಾರದ ದಿವಸ ನನ್ನ ಎರಡನೇ ಮಗನಾದ ಭೈರಪ್ಪನು, ತಲೆ ಆಗದಿರುವ ಜನರ ಚಿತಾವಣೆಯಿಂದ, ಜಗಳ ತೆಗೆದು, ತನ್ನ ಹೆಂಡತಿಯನ್ನು ಕರೆದುಕೊಂಡು ಮನೆ ಬಿಟ್ಟುಹೋಗಿರುತ್ತಾನೆ. ಈ ಕೆಳಗೆ ಷೆಡ್ಯೂಲಿನಲ್ಲಿ ನಮೂದಿಸುವ ಸ್ವತ್ತುಗಳು ಸ್ವಯಾರ್ಜಿತವಾದುವು. ಈ ಸ್ವತ್ತುಗಳಲ್ಲಿ ಯಾರಿಗೂ ಯಾವ ವಿಧವಾದ ಹಕ್ಕು ಇರುವುದಿಲ್ಲ. ಸದರಿ ಭೈರಪ್ಪನವರು ಈ ಷೆಡ್ಯೂಲು ಸ್ವತ್ತುಗಳನ್ನು ಪರಭಾರೆ ಮಾಡುವ ತರದೂದಿನಲ್ಲಿರುತ್ತಾರೆಂದು ತಿಳಿದುಬಂದಿದೆ. ಈ ಸ್ವತ್ತುಗಳನ್ನು ಯಾರಾದರೂ ಕ್ರಯ, ಆಧಾರ ಮತ್ತು ಭೋಗ್ಯ ವಗೈರೆ ಮಾಡಿಕೊಂಡಲ್ಲಿ ಖಂಡಿತ ಊರ್ಜಿತವಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಷೆಡ್ಯೂಲು :— 1) ಮೈಸೂರು ತಾಲ್ಲೂಕ್ ಜಯಪುರ ಹೋಬಳಿ ಜಯಪುರದಲ್ಲಿರುವ ಸರ್ವೆ ನಂಬರು 154, ಖುಷ್ಕಿ ಜಮೀನು-ವಿಸ್ತೀರ್ಣ 5 ಎಕರೆ. 2) ಮೈಸೂರು ಸಿಟಿ ಸೂಯೆಜ್ ಫಾರಂ ಬಳಿ ಇರುವ ತೆಂಗಿನ ತೋಟ, ಸರ್ವೆ ನಂಬರು 127/2 ಮುಕ್ಕಾಲು ಎಕರೆ ವಿಸ್ತೀರ್ಣ 3) ಮೈಸೂರು ತಾಲ್ಲೂಕು ಜಯಪುರ ಹೋಬಳಿ ಜಯಪುರದಲ್ಲಿರುವ ಸರ್ವೆ 3615ನೇ ನಂಬರ್ ಜಮೀನು, ವಿಸ್ತೀರ್ಣ 7 ಎಕರೆ. 4) ಮೈಸೂರು ಸಿಟಿ ಕೃಷ್ಣರಾಜ ಮೊಹಲ್ಲಾ ಹುಲ್ಲಿನ ಬೀದಿಯಲ್ಲಿ ಡೋರ್ ನಂಬರುಗಳು 1) 1715, 2) 1778-32, 3) ಮಾನಂದವಾಡಿ ರಸ್ತೆಯಲ್ಲಿ ಡೋರ್ ನಂಬರು 1152 ಮತ್ತು 4) ಸಿಮೆಂಟ್ ಹೌಸ್ 12ನೇ ಬ್ಲಾಕ್ ಡೋರ್ ನಂಬರ್ 1063-48.

Edited, Printed and Published by
A. R. Nagarajan at Sadhvi Press
D. Subbiah Road, Mysore

[illegible] ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸ [illegible]
ಬೆಂಗಳೂರು-2

ಪುಟ : ೦೫] SADHVI : WEDNESDAY 6-2-1957 ಮೈಸೂರು : ಬುಧವಾರ ೬-೨-೧೯೫೭ : [ಸಂಚಿಕೆ : [illegible]

ಂಗಳೂರಿನಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತ್

ನಗರದ ಎರಡು ಕ್ಷೇತ್ರಗಳ ಸರು ಉಮೇದುವಾರರ ಪಟ್ಟಿ

ಮೈಸೂರು ೬

ನಗರದ ಎರಡು ಕ್ಷೇತ್ರಗಳಿಂದ ವಿಧಾನ ಸಭೆಗೆ ನಿಂತಿರುವ ಉಮೇದುವಾರರ ಹೆಸರು ಪಟ್ಟಿ ಈ ರೀತಿ ಇದೆ :—

ದಕ್ಷಿಣ—ಶ್ರೀಗಳಾದ ಕೆ. ಎಸ್. ಸೂರ್ಯನಾರಾಯಣರಾವ್ (ಕಾಂ), ವೇದಾಂತಂ ಹೆಮ್ಮಿಗೆ (ಪಿ. ಎಸ್. ಪಿ), ಶ್ರೀಕಂಠಶರ್ಮ (ಸೋ. ಹಿಂ), ಬಿ ಕೆ ವಿಶ್ವನಾಥ್, ಎಲ್. ಶ್ರೀಕಂಠ [illegible] ಮತ್ತು ಎಂ. ಸಿ. ಮಹದೇವಸ್ವಾಮಿ (ಸ್ವತಂತ್ರ)

ಉತ್ತರ—ಶ್ರೀಗಳಾದ ಅಹಮದಲ್ಲಿಖಾನ್ (ಕಾಂ), ಜಿ ಕೆ ಪುಟ್ಟಯ್ಯ (ಪಿ ಎಸ್. ಪಿ), [illegible] ಅಣ್ಣ, ಎ. ಮಹಮದ್ ಸೇಟ್, ಮ[illegible] (ಸ್ವತಂತ್ರರು) ಮತ್ತು ಎಂ ಎಸ್ ಉಗ್ರಪ್ಪ (ಕಮ್ಯೂನಿಸ್ಟ್)

ಮೈಸೂರು ವಿಧಾನ ಸಭೆಗೆ ಅಣ್ಣಾರಾವ್ ಗಣಮುಖಿಯವರ ಆಯ್ಕೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ, ಮಾಜಿ ಮಂತ್ರಿಗಳೂ ಆದ ಅಣ್ಣಾರಾವ್ ಗಣಮುಖಿಯವರು ಮೈಸೂರು ವಿಧಾನ ಸಭೆಗೆ ಗುಲ್ಬರ್ಗಾ ಜಿಲ್ಲೆಯ [illegible] ಕ್ಷೇತ್ರದಿಂದ ಅವಿರೋಧವಾಗಿ ಆರಿಸಿ ಬಂದಿರುತ್ತಾರೆ. ಬೆಳಗಾಮಿನ ಸಂಕಗಾಂವ್ ಕ್ಷೇತ್ರದಿಂದ ಕಾಂಗ್ರೆಸ್ಸಿನ ಸ್ಪರ್ಧಿ ನಾಗನೂರು [illegible] ನಬಿಸಾಬ್‌ರವರೂ, ಗುಲ್ಬ[illegible] ಶಹಾಪುರ ಕ್ಷೇತ್ರದಿಂದ ವಕೀಲ ಶ್ರೀ ವಿರೂಪಾಕ್ಷಪ್ಪನವರೂ ಅವಿರೋಧವಾಗಿ ಚುನಾಯಿತರಾದರು.

ಹೈಕೋರ್ಟಿಗೆ ರಜಾ ದಿನಗಳು

ಈ ವರ್ಷದಲ್ಲಿ ಏಪ್ರಿಲ್ ೧೫ ರಿಂದ ಜೂನ್ ೬ ರವರೆಗೆ ಬೇಸಿಗೆಗಾಗಿಯೂ, ಸೆಪ್ಟೆಂಬರ್ ೩೦ ರಿಂದ ಅಕ್ಟೋಬರ್ ೮ ರವರೆಗೆ ದಸರಾಕ್ಕಾಗಿ, ಡಿಸೆಂಬರ್ ೨೩ ರಿಂದ ೩೧ ರವರೆಗೆ ಚಳಿಗಾಲಕ್ಕಾಗಿಯೂ ಹೈಕೋರ್ಟಿಗೆ ರಜವಿರುವುದು

ಮತ್ತೊಬ್ಬರ ಹೆಸರಿನಲ್ಲಿ ಓಟು ಹಾಕುವುದನ್ನು ತಪ್ಪಿಸಲು ಕ್ರಮ

ಮತ್ತೊಬ್ಬರ ಹೆಸರಿನಲ್ಲಿ ಓಟು ಕೊಡುವುದ[illegible] ಕೇಂದ್ರ ಚುನಾವಣಾ ಕಮಿಷನರು ಹೊಸ ನಿಬಂಧನೆಯನ್ನು ಮಾಡಿ [illegible] ಮತ್ತು ಮೇಲ್ಪಟ್ಟು ಜನರು ಇರುವ ನಗರಗ[illegible] ಪ್ರತಿಯೊಬ್ಬ ಓಟರನೂ ಗುರುತಿನ ಚೀಟಿ [illegible] ಅಥವಾ [illegible] ಗುರ್ತು [illegible] ಬೇಕೆಂದು ವಿಧಾಯಕಮಾಡಿರುತ್ತಾರೆ

[illegible] ಎರಡು ಲಕ್ಷ [illegible]

[illegible] ಭಾರತ [illegible] ಸಮಿತಿಯು [illegible] ೧೫೦ ಕೋಟಿ ರೂ. ವೆಚ್ಚದಿಂದ ೧೦,೦೦೦ [illegible] ನಿರ್ಧರಿಸಿದೆ

ಕಾಶ್ಮೀರದಲ್ಲಿ ಜನಮತಗಣನೆ ಪ್ರಶ್ನೆಯೇ ಇಲ್ಲ

ವಿಶ್ವಸಂಸ್ಥೆ ಸೈನ್ಯ ಕಳುಹುವ ಯೋಜನೆಗೆ ತಿರಸ್ಕಾರ

ಭದ್ರತಾ ಸಮಿತಿಯು ಕಾಶ್ಮೀರದಲ್ಲಿ ಜನಮತಗಣನೆಯನ್ನು ನಡೆಸಬೇಕೆಂದು ನಿರ್ಣಯವನ್ನು ಮಾಡಿದರೆ ಅದನ್ನು ಭಾರತವು ಒಪ್ಪುವುದಿಲ್ಲವೆಂದೂ, ಈ ಬಗ್ಗೆ ಭಾರತ ಸರ್ಕಾರದವರು ಈಗಾಗಲೇ ನಿರ್ಧಾರಕ್ಕೆ ಬಂದಿರುವರೆಂದೂ, ಕಾಶ್ಮೀರದಲ್ಲಿ ವಿಶ್ವಸಂಸ್ಥೆಯ ಸೇನೆಯನ್ನು ಇಳಿಸುವ ಸೂಚನೆಯನ್ನೂ ಭಾರತ ಸರ್ಕಾರದವರು ತಿರಸ್ಕರಿಸುವರೆಂದೂ ಗೊತ್ತಾಗಿದೆ. ಈ ಬಗ್ಗೆ ವಿಶ್ವಸಂಸ್ಥೆಯಲ್ಲಿರುವ ಭಾರತದ ಪ್ರತಿನಿಧಿಗಳ ನಾಯಕ ವಿ ಕೆ ಕೃಷ್ಣಮೆನನ್‌ರಿಗೆ ಸೂಚನೆಯನ್ನು ಕಳುಹಲಾಗಿರುವುದೆಂದು [illegible]

ಕಾಶ್ಮೀರ [illegible] ಮಹಮ್ಮದ್ [illegible] ಪಾಕಿಸ್ತಾನ [illegible] ಸೇನೆಯನ್ನು [illegible] ಕಾಶ್ಮೀರದಲ್ಲಿ [illegible] ನಡೆಸಬೇಕೆಂದೂ [illegible] ಮಣವನ್ನು ಭದ್ರತಾ ಸಮಿತಿಯು [illegible] ಬೇಕೆಂದೂ, ಆಜಾದ್ ಕಾಶ್ಮೀರವನ್ನು ಕಾಶ್ಮೀರ ಸರ್ಕಾರದ ವಶಕ್ಕೆ ಒಪ್ಪಿಸಬೇಕೆಂದೂ ಅವರು ಸೂಚಿಸಿದ್ದಾರೆ

ಭಾರತಕ್ಕೆ ಕೋಟಿಗಟ್ಟಲೆ ಜವಾಹಿರಲಾಲರು ಬೇಕು

ನೆಹರೂರವರ ಹೇಳಿಕೆ

ಔರಂಗಾಬಾದಿನಲ್ಲಿ ಕಳೆದ ವಾರ ನೆಹರೂರವರು ಬಹಿರಂಗ ಸಭೆಯನ್ನುದ್ದೇಶಿಸಿ ತಮ್ಮ ನಂತರ ಯಾರು ಎಂಬ ವಿಷಯವನ್ನು ಪುನಃ ಪ್ರಸ್ತಾಪಿಸಿ, ಈ ಪ್ರಶ್ನೆಗೆ ಈಗ ಅವಶ್ಯಕತೆಯಿಲ್ಲವೆಂದೂ, ತಾವು ಇನ್ನೂ ದೃಢಕಾಯರಾಗಿ ಸೇವೆ ಮಾಡುತ್ತಿರುವುದಾಗಿಯೂ ತಿಳಿಸಿರುತ್ತಾರೆ. ದೇಶಾಭ್ಯುದಯ ಸಾಧನೆಯ ಕೆಲಸವು ಅತ್ಯಗಾಧವೆಂದೂ, ಅದಕ್ಕೆ ಒಂದಲ್ಲ. ಎರಡಲ್ಲ, ನೂರಲ್ಲ, ಕೋಟಿ ಕೋಟಿ ಜವಾಹರಲಾಲರು ಅವಶ್ಯಕನೆಂದೂ ಅವರು ಹೇಳಿರುತ್ತಾರೆ. ತಮ್ಮ ಕೆಲಸವನ್ನು ನಿರ್ವಹಿಸುವಂತೆ ಹಲವರಿಗೆ ಮಾತ್ರ ಹೇಳುವ ಬದಲು ಕೋಟಿಗಟ್ಟಲೆ ಜನರಿಗೆ ತಾವು ಉಪದೇಶ ಮಾಡಲು ಬಯಸುವುದಾಗಿಯೂ ಅವರು ತಿಳಿಸಿರುವರು.

ಸಮಾಜವಾದಿ ಚುನಾವಣಾ ಪ್ರಚಾರಕನ ಕೊಲೆ

[illegible] ಬಳಿ ಹಳ್ಳಿಯೊಂದರಲ್ಲಿ ಚುನಾವಣೆ ಪ್ರಚಾರ [illegible] ಸಮಾಜವಾದಿ ಪಕ್ಷದ [illegible] ಅವನ [illegible] ರಾತ್ರಿ ಪ್ರಚಾರವನ್ನು ಮು[illegible] ಅವನು ಮನೆಗೆ ಹಿಂದಿರುಗುತ್ತಿದ್ದನೆಂದು ಹೇಳಲಾಗಿದೆ. ಅವನ [illegible] ಪತ್ತೆಯಾಗಿಲ್ಲ

ಭಾರತವು ವಿಶ್ವಸಂಸ್ಥೆಯ ನಿಯಮವನ್ನು ಉಲ್ಲಂಘಿಸಿಲ್ಲ

ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸರ ಹೇಳಿಕೆ

ಭಾರತ ಮತ್ತು ಪಾಕಿಸ್ತಾನಗಳು ಕಾಶ್ಮೀರದ ಪ್ರಶ್ನೆಯ ಇತ್ಯರ್ಥಕ್ಕೆ ಬೇರೊಂದು ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದರೆ ಕಾಶ್ಮೀರದಲ್ಲಿ ಜನಮತಗಣನೆಯ ಮೂಲಕವೇ ಸಮಸ್ಯೆಯು ಬಗೆಹರಿಯಬೇಕಾಗಿರುವುದೆಂದು ತಾವು ಇನ್ನೂ ನಂಬಿರುವುದಾಗಿ ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ತಿಳಿಸಿರುತ್ತಾರೆ. ಕಾಶ್ಮೀರ ರಾಜ್ಯಾಂಗ ಸಭೆಯನ್ನು ವಿಸರ್ಜನೆ ಮಾಡಿ, ಆ ಸಂಸ್ಥಾನವನ್ನು ಭಾರತದಲ್ಲಿ ವಿಧಿಪೂರ್ವಕವಾಗಿ ಐಕ್ಯಗೊಳಿಸಿದ್ದರೂ, ಭಾರತವು ವಿಶ್ವಸಂಸ್ಥೆಯ ನಿಯಮೋಲ್ಲಂಘನೆ ಮಾಡಿದಂತೆ [illegible] ಅವರು ಅಭಿಪ್ರಾಯಪಟ್ಟಿರು[illegible] ಕಾಶ್ಮೀರ ಸಮಸ್ಯೆ ಬಗ್ಗೆ ಭಾರತವು ವಿಶ್ವಸಂಸ್ಥೆಯ ನಿರ್ಣಯವನ್ನು ಮುಂದೆಯೂ ಉಲ್ಲಂಘಿಸಲಾರದೆಂದು ತಾವು ನಂಬಿರುವುದಾಗಿ ಅವರು ನುಡಿದಿದ್ದಾರೆ

ಅಮೆರಿಕಾ ಹಡಗಿಗೆ ಡಿಕ್ಕಿ ಹೊಡೆದ ತುರ್ಕಿ ಹಡಗು ನೀರುಪಾಲು

ಕಳೆದ ಭಾನುವಾರ ಇಸ್ತಾಂಬುಲ್ ತೀರದ ಬಳಿ ತುರ್ಕಿಯ ಇಜ್‌ಮೀರ್ ಎಂಬ ಹಡಗು ಅಮೆರಿಕದ ಹೊವೆಲಿ ಲೈಕ್ಸ್ ಎಂಬ ಹಡಗಿಗೆ ಡಿಕ್ಕಿ ಹೊಡೆದು ಮುಳುಗಿತೆಂದು ವರದಿಯಾಗಿದೆ. ತುರ್ಕಿಯ ಹಡಗಿನಲ್ಲಿ ೨೪೩ ಮಂದಿ ಪ್ರಯಾಣಿಕರಿದ್ದರು. ಅನೇಕ ಪ್ರಯಾಣಿಕರನ್ನು ರಕ್ಷಿಸಲಾಯಿತು. ಒಬ್ಬಾತನು ಮೃತಪಟ್ಟಿರುತ್ತಾನೆ. ಇಬ್ಬರು ನಾವಿಕರು ಪತ್ತೆಯಿಲ್ಲ. [illegible] ಪ್ರಯಾಣಿಕರಿಗೆ ಗಾಯವಾಗಿದೆ.

ಲೋಕ ಸಭೆಗೆ ೬ ಮತ್ತು ವಿಧಾನ ಸಭೆಗೆ ೨೪ ಕಾಂಗ್ರೆಸ್ ಸದಸ್ಯರು

ಇದುವರೆಗೆ ಲೋಕ ಸಭೆಯ ಒಟ್ಟು ೬ ಮತ್ತು ವಿಧಾನ ಸಭೆಗಳ ೨೪ ಸ್ಥಾನಗಳಿಗೆ ಕಾಂಗ್ರೆಸ್ ಉಮೇದುವಾರರು ಅವಿರೋಧವಾಗಿ ಆರಿಸಿ ಬಂದಿರುತ್ತಾರೆ.

ಭಾಷಣ ಸ್ಪರ್ಧೆಗಳ ಫಲಿತಾಂಶ

ಯುವರಾಜಾ ಕಾಲೇಜು ಭೌತ ವಿಜ್ಞಾನ ಸಂಘದ ಆಶ್ರಯದಲ್ಲಿ ಡಿಸೆಂಬರ್—ಜನವರಿ ಮಾಹೆಗಳಲ್ಲಿ ನಡೆದ ಭಾಷಣ ಸ್ಪರ್ಧೆಗಳಲ್ಲಿ ಶ್ರೀಗಳಾದ ಎಸ್. ಕೆ ಕುಮಾರ್‌ರಿಗೆ [illegible] ಪ್ರಥಮ ಬಹುಮಾನವೂ, ಎಂ. ಸಿ. ಶ್ರೀನಿವಾಸನ್‌ರವರಿಗೆ ದ್ವಿತೀಯ, ಟಿ ಎಸ್. ಪ್ರಹ್ಲಾದ್, ಹೆಚ್. ಆರ್. ಸತ್ಯನಾರಾಯಣ [illegible] ಮತ್ತು ಆರ್ [illegible] ಗೆ ತೃತೀಯ ಬಹುಮಾನಗಳು ಬಂದಿವೆ.

[illegible]

ನಗರದ [illegible] ಶ್ರೀ ವಿ ಪಿ ಎಸ್ ವೆಂಕಟೇಶದಾಸರಿಂದ ಭೃಂಗಿ ಶಾಪ ಎಂಬ ಕೀರ್ತನೆಯು ನಡೆಯುವುದು.

ಬೆಂಗಳೂರಿನಲ್ಲಿ ಕೇಂದ್ರ ಗೃಹ ಮಂತ್ರಿ ಪಂತರು

ಮುಖ್ಯ ಮಂತ್ರಿ ಮತ್ತು ನಾಯಕರಿಂದ ಸ್ವಾಗತ

ಸ್ವಾ ಸು. ಸಂ.] ಬೆಂಗಳೂರು ೬

ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರು ಈ ದಿನ ಇಲ್ಲಿಗೆ ವಿಮಾನದಲ್ಲಿ ಆಗಮಿಸಿದರು. ಅವರನ್ನು ಮುಖ್ಯ ಮಂತ್ರಿ ಎಸ್. ನಿಜಲಿಂಗಪ್ಪ ಮತ್ತು ಕಾಂಗ್ರೆಸ್ ಮುಖಂಡರಾದ ಶ್ರೀಗಳು ಎ. ವೆಂಕಟಪ್ಪ, ಎಸ್. ಚನ್ನಯ್ಯ ಮತ್ತು ಪೌರಸಭಾಧ್ಯಕ್ಷ ಶ್ರೀ ದೇವಿದಾಸ್‌ರವರು ಸ್ವಾಗತಿಸಿದರು. ಪಂತ್‌ರವರನ್ನು ತೆರೆದ ಮೋಟಾರಿನಲ್ಲಿ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮೂಲಕ ಕರೆತರಲಾಯಿತು. ಅವರು ಇಲ್ಲಿನ ವಕೀಲರ ಸಂಘದಲ್ಲಿ ಭಾಷಣ ಮಾಡಿ, ನಂತರ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಸಂಜೆ ಕಾಂಗ್ರೆಸ್ ಚುನಾವಣೆ ಪ್ರಚಾರದ ಆರಂಭೋತ್ಸವವನ್ನು ನೆರವೇರಿಸುವರು

○ಕೇಂದ್ರ ತೆಂಗಿನಕಾಯಿ ಸಮಿತಿ ಸಭೆಯು ಈ ದಿನ ಮುಕ್ತಾಯವಾಯಿತು. ೬ ಲಕ್ಷ ರೂ ವೆಚ್ಚದಿಂದ ತೆಂಗಿನ ತೋಟಗಳ ಸರ್ವೆ ನಡೆಸಲು ನಿರ್ಧರಿಸಲಾಯಿತು.

ಅಲ್ಜೀರಿಯದ ಬಗ್ಗೆ ವಿಶ್ವಸಂಸ್ಥೆ ನಿರ್ಣಯಕ್ಕೆ ಫ್ರಾನ್ಸಿನ ತಿರಸ್ಕಾರ

ಅಲ್ಜೀರಿಯದ ಸಮಸ್ಯೆ ಬಗ್ಗೆ ವಿಶ್ವಸಂಸ್ಥೆಯು ಮಾಡುವ ನಿರ್ಣಯವನ್ನು ಫ್ರಾನ್ಸ್ ತಿರಸ್ಕರಿಸುವುದೆಂದು ಆ ದೇಶದ ವಿದೇಶಾಂಗ ಮಂತ್ರಿ ಪೀನೂರವರು ತಿಳಿಸುತ್ತಾರೆ. ಅಲ್ಜೀರಿಯವು ಫ್ರಾನ್ಸಿನ ತಾಯಿನಾಡಿಗೆ ಸೇರಿದ ಭೂಮಿಯೆಂದು ಫ್ರಾನ್ಸು ಭಾವಿಸಿದೆ. ಈ ಬಗ್ಗೆ ಬರುವ ಪ್ರಶ್ನೆಯು ವಿಶ್ವಸಂಸ್ಥೆಯ ವ್ಯಾಪ್ತಿಗೆ ಸೇರಿರುವುದಿಲ್ಲವೆಂಬುದೇ ಫ್ರಾನ್ಸಿನ ವಾದ

ಕಾಶ್ಮೀರದ ಬಗ್ಗೆ ಶಾಂತರೀತಿ ಇತ್ಯರ್ಥಕ್ಕೆ ಕರೆ

ಸಿಂಹಳದ ಪ್ರಧಾನಿ ಬಂಡಾರನಾಯಕೆ ಮತ್ತು ಚೀನದ ಪ್ರಧಾನಿ ಚೌ ಎನ್ ಲೈಯವರು ನೆನ್ನೆ ಜಂಟಿ ಹೇಳಿಕೆಯೊಂದನ್ನಿತ್ತು ಏಷ್ಯಾ-ಆಫ್ರಿಕಾ ಒಕ್ಕೂಟದ ಭದ್ರತೆಗಾಗಿ ಕಾಶ್ಮೀರ ಸಮಸ್ಯೆಯನ್ನು ಪಾಕಿಸ್ತಾನ ಮತ್ತು ಭಾರತಗಳು ಶಾಂತ ರೀತಿಯಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸಿದ್ದಾರೆ. ಬಾಂಡುಂಗ್ ಸಮ್ಮೇಳನದ ಪಂಚಶೀಲ ತತ್ವವನ್ನು ಉಭಯರೂ ಒತ್ತಿ ಹೇಳಿದ್ದಾರೆ

ಆಂಧ್ರ ವಿಧಾನ ಸಭೆಯಲ್ಲಿ ಕಾಂಗ್ರೆಸ್ಸಿಗೆ ಬಹುಮತ

ಆಂಧ್ರ ಪ್ರದೇಶ ಶಾಸನ ಸಭೆಗೆ ೪ ಜನ ಕಾಂಗ್ರೆಸ್ ಉಮೇದುವಾರರು ಅವಿರೋಧವಾಗಿ ಆರಿಸಿ ಬಂದಿರುತ್ತಾರೆ. ಆಂಧ್ರ ಶಾಸನ ಸಭೆಯಲ್ಲಿ ಈಗ ಕಾಂಗ್ರೆಸ್ ಸದಸ್ಯರ ಸಂಖ್ಯೆ [illegible] ಇದೆ. ಅಲ್ಲಿ ಒಟ್ಟು ೩೦೦ ಸ್ಥಾನಗಳಿವೆ. ಆಂಧ್ರ ಪ್ರದೇಶದಲ್ಲಿ ೨ ವರ್ಷಗಳ ಹಿಂದೆ ಸಾರ್ವತ್ರಿಕ ಚುನಾವಣೆ ನಡೆದಿದ್ದು, ಈಗ ತೆಲಂಗಾಣದಲ್ಲಿ ಚುನಾವಣೆ ಮಾತ್ರ ನಡೆಯಬೇಕಾಗಿದೆ.

ದಕ್ಷಿಣ ಕನ್ನಡ ವಿದ್ಯಾರ್ಥಿಗಳ ಸಂಘದ ಮುಕ್ತಾಯ ಸಮಾರಂಭ

ಮೈಸೂರು ೨

ದಕ್ಷಿಣ ಕನ್ನಡ ವಿದ್ಯಾರ್ಥಿ ಸಂಘದ ಮುಕ್ತಾಯ ಸಮಾರಂಭವು ಮೊನ್ನೆ ದಾಸಪ್ರಕಾಶ ಹೋಟೇಲಿನಲ್ಲಿ ನಡೆಯಿತು ಶ್ರೀಮತಿ ಲೀಲಾವತಿ ಅಂಜನಪ್ಪನವರು ಮುಕ್ತಾಯ ಭಾಷಣವನ್ನು ಮಾಡಿದರು ಸಂಘದ ಅಧ್ಯಕ್ಷ ಪ್ರೊ|| ಶಾರದಾಚಾರ್ಯರು ಅಗ್ರಾಸನವನ್ನು ವಹಿಸಿದ್ದರು

ಕಾರ್ಯದರ್ಶಿ ಶ್ರೀ ರಾಜಶೇಖರರವರಿಂದ ಸ್ವಾಗತ ಭಾಷಣವಾದನಂತರ, ಜಂಟಿ ಕಾರ್ಯದರ್ಶಿ ಶ್ರೀ ಕೆ ಜಿ ಶೆಟ್ಟಿಯವರು ವರದಿಯನ್ನು ಒಪ್ಪಿಸಿದರು ಕುಮಾರಿ ಫಿಲೋಮಿನಾ ಕುಟಿನೋರವರೂ, ಮಹಾರಾಜಾ ಕಾಲೇಜಿನ ಶ್ರೀಮತಿ ಸೀತಾಲಕ್ಷ್ಮಿಯವರೂ ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಹಿತವಚನಗಳನ್ನಿತ್ತರು ಸಂಗೀತ ಸ್ಪರ್ಧೆಯೂ ಏರ್ಪಾಡಾಗಿತ್ತು

ಶ್ರೀಮತಿ ಲೀಲಾವತಿ ಅಂಜನಪ್ಪನವರು ತಮ್ಮ ಭಾಷಣದಲ್ಲಿ ಯುವಕರಲ್ಲಿ ಪ್ರತ್ಯೇಕತಾ ಭಾವನೆಗಳಿರಬಾರದೆಂದೂ, ನೂತನ ಮೈಸೂರಿನ ಅಭ್ಯುದಯಕ್ಕಾಗಿ ಸರ್ವರೂ ಶ್ರಮಿಸಬೇಕೆಂದೂ ತಿಳಿಸಿದರು ದಕ್ಷಿಣ ಕನ್ನಡದ ನೈಸರ್ಗಿಕ ಸೌಂದರ್ಯವನ್ನು ಪ್ರಶಂಸಿಸಿ, ಅಲ್ಲಿಗೆ ಪ್ರವಾಸಿಗರು ಯಥೇಚ್ಛವಾಗಿ ಬರುವಂತಾಗಬೇಕೆಂದು ಹಾರೈಸಿದರು

ಕುಮಾರಿ ಲಲಿತ ಶೆಟ್ಟಿಯವರಿಂದ ನೃತ್ಯವೂ, ಸಂಘದ ಸದಸ್ಯರಿಂದ ಹಾಸ್ಯಭರಿತ ತುಳು ಮತ್ತು ಕೊಂಕಣಿ ಗೀತೆಗಳೂ, ಇತರರಿಂದ ಇಂಗ್ಲಿಷ್ ಹಾಡುಗಳೂ ಹೇಳಲ್ಪಟ್ಟುವು

ರಾಮಾಯಣ ತರಗತಿಗಳ ಆರಂಭೋತ್ಸವ

ನಗರದ ರಮಾವಿಲಾಸ ಅಗ್ರಹಾರದಲ್ಲಿರುವ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೮ ಗಂಟೆಗೆ ರಾಮಾಯಣ ತರಗತಿಗಳ ಆರಂಭೋತ್ಸವವನ್ನು ಶ್ರೀ ಅಗರಂ ರಂಗಯ್ಯನವರು ನೆರವೇರಿಸುವರು ಶ್ರೀ ಶಾಶಾಚಾರ್ಯರು ವಾಲ್ಮೀಕಿ ರಾಮಾಯಣದ ಪ್ರವಚನ ನಡೆಸುವರು ಸರ್ವರಿಗೂ ಆಹ್ವಾನವಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೊನೆಟ್ ೭-೧೫ ಬಿ ಎಸ್ ಶ್ರೀನಿವಾಸಯ್ಯಂಗಾರ್-ದೇವರನಾಮ. ೭-೩೦ ಮತ್ತು ೮-೧೫ ಕಾವ್ಯವಾಚನ ಮಧ್ಯಾಹ್ನ ೧೨ ಬಿ. ಎಸ್. ಶ್ರೀನಿವಾಸಯ್ಯಂಗಾರ್-ಸಂಗೀತ ೧೨-೩೦ ಮತ್ತು ಸಂಜೆ ೮ ಎಂ. ಶೇಷಪ್ಪ-ಪಿಟೀಲು ೧ ಹಿಂದೂಸ್ಥಾನಿ ಸಂಗೀತ ೧-೫೦ ವಚನವಾಣಿ ಸಂಜೆ ೪ ೩೦ ಜಯಗ್ರೀವಾಚಾರ್-ಹಿಂದೂಸ್ಥಾನಿ ಸಂಗೀತ ೬-೫ ವಿ ರಾಮ ಸಂಗೀತ ೬ ೩೦ ಜಾನಪದಗೀತೆ ೭ ೩೦ 'ವಾದ್ಯ ಕಛೇರಿ. ೮-೩೦ ನಮ್ಮ ಮೆಚ್ಚಿನ ಗೀತೆ ೯-೧೫ ವಿಜ್ಞಾನ ವಿಮರ್ಶೆ ೯-೩೦ ರಾಷ್ಟ್ರೀಯ ಕಾರ್ಯಕ್ರಮ

The Model Tutorial Institute,
D Banumiah's High School Buildings Mysore
Summer Classes for High School
II & III Year Classes
Classes commence from 6 2.1957
Hours of work 8 A M to 11 A.M
Fees Rs 3 0-0 per month
Very efficient and useful instruction in General Subjects
An excellent opportunity for students to keep themselves study minded and usefully engaged during the long vacation
particulars apply to the Organiser
B Seshagiri Rao,
Organiser

Edited Printed and Published by A R Nagarajan at Sadhvi Press D Subbiah Road Mysore

ವಿವಾಹ ಮಹೋತ್ಸವಗಳು

ನಿವೃತ್ತ ಸರ್ವೆ ಸೂಪರ್‌ವೈಸರ್ ಆದ ಶ್ರೀ ಕೆ ಮಾಧವರಾಯರು ತಮ್ಮ ಕುಮಾರಿ ಸೌ|| ನಿರ್ಮಲರವರನ್ನು ಶಿವಮೊಗ್ಗದ ಶ್ರೀ ಎಂ ವಾಸುದೇವಾಚಾರ್ಯರ ಮಗ ಶ್ರೀ ಎಂ ವಿ ಕೃಷ್ಣಮೂರ್ತಿಯವರಿಗೆ ಕೊಟ್ಟು, ಮತ್ತು ತಮ್ಮ ಕುಮಾರರೂ ಅಸಿಸ್ಟೆಂಟ್ ಪರ್ಮನೆಂಟ್ ವೇ ಇನ್ಸ್‌ಪೆಕ್ಟರರೂ ಆದ ಶ್ರೀ ಕೆ ಎಂ ಶ್ರೀನಿವಾಸರಾವರಿಗೆ ಮೈಸೂರಿನ ಅರಮನೆ ಕಛೇರಿಯ ಶ್ರೀ ಆರ್ ಕೃಷ್ಣಮೂರ್ತಿಯವರ ಮಗಳು ಸೌ|| ಪದ್ಮಾಸಿಯನ್ನು ತಂದುಕೊಂಡು ಮೊನ್ನೆ ಮಂಡ್ಯದಲ್ಲಿ ವಿವಾಹವನ್ನು ಜರುಗಿಸಿದರು

ನಿವೃತ್ತ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ ಆರ್ ಚಂದ್ರಶೇಖರಯ್ಯನವರು ತಮ್ಮ ಕುಮಾರ ಚಿ|| ಸಿ|| ಪಾಂಡುರಂಗನಿಗೆ ಬ್ರಹ್ಮೋಪದೇಶವನ್ನೂ, ತಮ್ಮ ಕುಮಾರ ಶ್ರೀ ರಾಮಕೃಷ್ಣಯ್ಯನವರಿಗೆ ವಿದ್ಯಾರಣ್ಯಪುರದಲ್ಲಿರುವ ಶ್ರೀ ಎಸ್ ವಿ ಕೇಶವಮೂರ್ತಿಯವರ ಮಗಳು ಸೌ|| ರಂಗಲಕ್ಷ್ಮಿಯನ್ನು ತಂದುಕೊಂಡು ವಿವಾಹವನ್ನೂ ಮೊನ್ನೆ ನಗರದಲ್ಲಿ ನೆರವೇರಿಸಿದರು

ದಕ್ಷಿಣ ಆಫ್ರಿಕದಲ್ಲಿ ಬ್ರಿಟಿಷ್ ಧ್ವಜಕ್ಕೆ ಮನ್ನಣೆ ರದ್ದು

ದಕ್ಷಿಣ ಆಫ್ರಿಕದಲ್ಲಿ ಬ್ರಿಟಿಷರ ಯೂನಿಯನ್ ಜಾಕಿಗೆ ಮನ್ನಣೆ ತಪ್ಪಿಸಿ, ಅದರ ಬದಲು ತಮ್ಮದೇ ಆದ ಪ್ರತ್ಯೇಕ ರಾಷ್ಟ್ರ ಧ್ವಜವನ್ನು ಏರ್ಪಡಿಸಬೇಕೆಂದು ಕೋರುವ ಮಸೂದೆಯನ್ನು ಅಲ್ಲಿನ ಪಾರ್ಲಿಮೆಂಟಿಗೆ ಖಾಸಗಿ ಸದಸ್ಯರೊಬ್ಬರು ತಂದಿರುತ್ತಾರೆ ಅದನ್ನು ಪ್ರಧಾನಿ ಸ್ಟ್ರೈಡಂರವರು ಒಪ್ಪಿರುತ್ತಾರೆ ಮಸೂದೆಯ ಎರಡನೇ ಪಠಣವೂ ಸಹಾ ನಡೆಯಿತು

ಬೇಸಿಗೆ ಕಾಲದ ವಿಶೇಷ ಹಿಂದಿ ತರಗತಿಗಳು

ಕೃಷ್ಣವಿಲಾಸ ಅಗ್ರಹಾರದ ಮಾದರಿ ಶಾಲೆಯಲ್ಲಿರುವ ಸೇವಾ ಸಂಘದ ಆಶ್ರಯದಲ್ಲಿ ಕಳೆದ ಶುಕ್ರವಾರದಿಂದ ನಿತ್ಯವೂ ಬೆಳಿಗ್ಗೆ ೮ ರಿಂದ ೧೦ ಮತ್ತು ಸಂಜೆ ೪|| ಯಿಂದ ೮ ಗಂಟೆವರೆಗೆ ಬೇಸಿಗೆ ಕಾಲದ ವಿಶೇಷ ಹಿಂದಿ ತರಗತಿಗಳನ್ನು ನಡೆಸಲಾಗುತ್ತಿದೆ ಉದ್ಯೋಗಸ್ಥರಿಗೆ ಸಂಜೆ ೬ ಗಂಟೆಗೆ ಪ್ರತ್ಯೇಕ ತರಗತಿಗಳನ್ನೂ ನಡೆಸಲಾಗುವುದು ವಿದ್ಯಾರ್ಥಿಗಳು ಇದೇ ಏಪ್ರಿಲಿನಲ್ಲಿ ಆಗುವ ಬೆಂಗಳೂರು ಹಿಂದಿ ಸಾಹಿತ್ಯ ಪರಿಷತ್ತಿನ ಪರೀಕ್ಷೆಗೆ ಕುಳಿತುಕೊಳ್ಳಬಹುದು ವಿದ್ಯಾರ್ಥಿಗಳು ಈ ಸದವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಕೋರಲಾಗಿದೆ

ಪುರಾಣ ಪ್ರವಚನ

ನಗರದ ಅಟ್ಟಿಗೆಗೂಡು ಶ್ರೀ ಮೀನಾಕ್ಷಿ ಅಮ್ಮನವರ ಮಠದಲ್ಲಿ ಸುಬ್ರಹ್ಮಣ್ಯೇಶ್ವರಸ್ವಾಮಿ ಮಹೋತ್ಸವದ ಅಂಗವಾಗಿ ಈ ರಾತ್ರಿ ೮ ಗಂಟೆಗೆ ತಲಕಾಡು ಮಾಯಿಗಾರವರಿಂದ "ಭಕ್ತ ಮಯೂರಧ್ವಜ" ಎಂಬ ಪುರಾಣ ಪ್ರವಚನವು ೮ ಶುಕವಿರತ್ನಂ ಭಾರತೀಯವರ ವ್ಯಾಖ್ಯಾನದೊಡನೆ ನಡೆಯುತ್ತದೆ

ಪ್ರಭಾ ಶಿಶುವಿಹಾರ
ಮೈಸೂರು ವಾಣೀವಿಲಾಸಪುರಂ
ಯಾದವಗಿರಿಯಲ್ಲಿರುವ
ಕಸ್ತೂರಿ ಬಾ ಕನ್ಯಾ ವಿದ್ಯಾಲಯದ
ಆಶ್ರಯದಲ್ಲಿ, ಶ್ರೀ ಜಗದಂಬಾ ಶಿಶುವಿಹಾರದ
ಡೈರೆಕ್ಟರ್
ಶ್ರೀ ಡಿ. ಕೃಷ್ಣಮೂರ್ತಿಯವರ
ಮೇಲ್ವಿಚಾರಣೆಯಲ್ಲಿ
ಪ್ರಭಾ ಶಿಶುವಿಹಾರವನ್ನು
ತೆರೆಯಲಾಗಿದೆ
ಶಿಶು ವಿದ್ಯಾಭಿಮಾನಿಗಳಾದ ಮಾತಾಪಿತೃಗಳು ತಮ್ಮ ಮಕ್ಕಳನ್ನು ಮೇಲ್ಕಂಡ ಶಿಶುವಿಹಾರಕ್ಕೆ ಸೇರಿಸಿ ಪ್ರಯೋಜನ ಪಡೆಯಬೇಕಾಗಿ ವಿನಂತಿ
ಪ್ರವೇಶ ಧನ 1 0 0
ಶಾಲಾ ಶುಲ್ಕ 2–0–0
ಜುಮ್ಲಾ 3–0–0
ಯಶೋಧರಾ ದಾಸಪ್ಪ,
ಸಂಚಾಲಕಿ

ನೀಲಗಿರಿಯಲ್ಲಿ ಸೂಜಿ ಕಾರ್ಖಾನೆ

ಕೈಯಲ್ಲಿ ಬಟ್ಟೆ ಹೊಲಿಯುವಂತಹ ಸೂಜಿಗಳ ತಯಾರಿಕೆ ಕಾರ್ಖಾನೆಯನ್ನು ನೀಲಗಿರಿಯಲ್ಲಿ ಸ್ಥಾಪಿಸಲಾಗುತ್ತಿದೆ ಇಂತಹ ಯಂತ್ರವು ಸ್ಥಾಪಿಸಲ್ಪಡುತ್ತಿರುವುದು ಭಾರತದಲ್ಲಿ ಇದೇ ಮೊದಲು ಯೂರೋಪಿನಲ್ಲಿ ನಡೆಯುತ್ತಿರುವ ಇಂತಹ ಕಾರ್ಖಾನೆಗಳಲ್ಲಿನ ಹವಾಗುಣಕ್ಕೆ ಇಲ್ಲೂ ಹೊಂದುವಂತೆ ಮಾಡಲು ಕಾರ್ಖಾನೆಯನ್ನು ಸಮುದ್ರ ಮಟ್ಟಕ್ಕೆ ೭,೦೦೦ ಅಡಿ ಎತ್ತರದಲ್ಲಿ ನಿರ್ಮಿಸಲಾಗುತ್ತಿದೆ ಎತ್ತರ ಪ್ರದೇಶದಲ್ಲಿ ತಯಾರಾಗುವ ಸೂಜಿಗಳು ತುಕ್ಕು ಹಿಡಿಯುವುದಿಲ್ಲವೆಂದು ಹೇಳಲಾಗಿದೆ

ಕ್ರೈಸ್ಟ್ ಕಾಮರ್ಸ್ ಕಾಲೇಜಿನ ವಾರ್ಷಿಕೋತ್ಸವ

ನಗರದಲ್ಲಿರುವ ಕ್ರೈಸ್ಟ್ ಕಾಮರ್ಸ್ ಕಾಲೇಜಿನ ಒಂದನೇ ವಾರ್ಷಿಕೋತ್ಸವವು ನಾಳೆ ಸಂಜೆ ೫|| ಗಂಟೆಗೆ ಟೌನ್‌ಹಾಲಿನಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಸಿ ಆರ್ ಚನ್ನರುದ್ರಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರುವುದು

ಫಿಲೋಮಿನಾ ಕಾಲೇಜು ಕರ್ನಾಟಕ ಸಂಘ

ನಗರದ ಸೇಂಟ್ ಫಿಲೋಮಿನಾ ಕಾಲೇಜಿನ ಕರ್ನಾಟಕ ಸಂಘದ ಮುಕ್ತಾಯ ಭಾಷಣವನ್ನು ಮಹಾರಾಣಿ ಕಾಲೇಜಿನ ಇಂಗ್ಲಿಷ್ ಭಾಷಾ ಉಪನ್ಯಾಸಕರಾದ ಶ್ರೀ ವಿ ಪುಟ್ಟಮಾದಪ್ಪನವರು ನಾಳೆ ಸಂಜೆ ಸಾಯಂಕಾಲ ಮುಕ್ಕಾಲು ಗಂಟೆಗೆ ಮಾಡುವರು ಕಾಲೇಜಿನ ಪ್ರಿನ್ಸಿಪಾಲ್ ಫಾದರ್ ಆಡಿಯೊರವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು

ಕೊಯಮತ್ತೂರು	೨೭	೧೪	೦	೪೨	೨	೦
ರತ್ನಚೂಡಿ	೩೮	೮	೦	೩೯	೧೪	೦
ಅಕ್ಕಿ	೨೬	೧೨	೮	೪೧	೦	೦
ಕಾರು	೨೫	೪	೦			
ರಾಗಿ	೩೮	೧೪	೦	೪೫	೧೦	೦
ಜೋಳ	೪೫	೧೨	೦	೪೮	೬	೦
ಕಂಬು	೪೧	೦	೦			
ಕಡಲೆಕಾಯಿ	೧೬	೮	೦	೨೬	೦	೦
ಹುಚ್ಚೆಳ್ಳು	೪೨	೦	೦	೪೬	೮	೦
ಹರಳುಬೀಜ	೪೬	೦	೦	೪೮	೦	೦
ಹೊಂಗೆಬೀಜ	೨೦	೦	೦	೨೩	೧೪	೦
ಹುರುಳಿ	೨೬	೧೦	೦	೪೦	೬	೮
ಹೆಸರು	೪೬	೧೨	೦	೫೨	೮	೦
ಅಲಸಂದೆ	೯೬	೪	೦	೫೨	೦	೦
ಅವರೆ	೪೫	೦	೦	೪೩	೦	೦
ತೊಗರಿ	೪೫	೧೪	೮	೪೬	೧೪	೦
ಉದ್ದು	೫೮	೬	೮	೩೪	೬	೦
ಕಡಲೆ	೪೪	೪	೦	೪೮	೪	೦
[illegible]	೪೫	೦	೦	೭೪	೧೪	೮
ಧನಿಯ	೨೬	೦	೦	೨೬	೨	೦
[illegible]	೧	೧೨	೦	೪	೧೪	೦
ಸೀಗೆ ಪು	೪	೧೦	೦	೫	೧೪	೦
ಮೆಣಸಿನಕಾಯಿ	೪	೮	೮	೨೧	೧೪	೦

ವಕೀಲರಾದ ಶ್ರೀ ಎ. ಎಸ್. ರಾಮಯ್ಯನವರ ನಿಧನ

ಶ್ರೀ ತಗಡೂರು ರಾಮಚಂದ್ರರಾಯರು ತಿಳಿಸುತ್ತಾರೆ.- ಮೈಸೂರು ಮತ್ತು ಕೊ ಡ್ರಾಂತ್ಯದಲ್ಲಿ ಸುಪ್ರಸಿದ್ಧರೂ, ತಮ್ಮ ರಾಜ್ಯ ರಕ್ಷಣಾ ಸಮಿತಿಯ ಲೀಗಲ್ ಅಡ್ವೈಸರೂ ಶ್ರೀ ಎ ಎಸ್ ರಾಮಯ್ಯನವರು ವೈ ಚಾಮುಂಡಿಪುರದ ತಮ್ಮ ಸ್ವಗೃಹದಲ್ಲಿ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ ಶ್ರೀಯುತರು ರಾಜ್ಯಾಂಗದ ಶಾಂತಿಸ್ಥೈರ್ಯವನ್ನು ಪಡೆದಿದ್ದರು ರಾಜ್ಯ ಸಂಬಂಧಪಟ್ಟ ಹಾಗೆ ಅನೇಕ ಹೋರಾಟ ನ್ನು ಪ್ರಯೋಗಾರ್ಥವಾಗಿ ಹೂಡಿದ್ದರು ರ್ಥ ಬುದ್ಧಿಯಿಂದ ಸೇವೆ ಸಲ್ಲಿಸಿದರು. ಜೀವಿಗಳಿಗೆ ಜೀವನ ಯಾತ್ರೆಯನ್ನು ಸಾ ರು. ಕೊನೆಯ ಗಳಿಗೆಯವರೆಗೂ ಅತ್ಯಂ ಕರ್ತವ್ಯನಿರತರಾಗಿ ದುಡಿದರು ಅವರ ಮರಣ ದೇಶಕ್ಕೆ ಮತ್ತು ತಮ್ಮ ಸಂಸ್ಥೆಗೆ ಅಪಾರ ನ ವಾಗಿದೆ. ಶ್ರೀಯುತರಿಗೆ ೫೪ ವರ್ಷ ವಯ ತ್ತು ಮೂರು ಮಕ್ಕಳು ಹಾಗೂ ಪತ್ನಿಯವರು ಅವರುಗಳಿಗೂ, ಅವರ ಬಂಧುಗಳಿಗೂ ದು ನ್ನು ಸಹಿಸುವ ಶಕ್ತಿಯನ್ನೂ, ಶ್ರೀಯುತ ತ್ಮಕ್ಕೆ ಶಾಂತಿಯನ್ನೂ ಕೊಡಲೆಂದು ಜಗದೀ ವನ್ನು ಪ್ರಾರ್ಥಿಸುತ್ತೇನೆ

ಅಂಬೂರಿನಲ್ಲಿ ಸೈಕಲ್ ತೆರಿ ವ ಜಾ

ಅಂಬೂರಿನ ಪೌರಸಭೆಯವರು ಕಳೆದ ವಾರ ಸಭೆಯು ಸೈಕಲ್ ತೆರಿಗೆಯನ್ನು ರದ್ದುಗೊ ಳಿಸಲು ನಿರ್ಧರಿಸಿದರು.

ನೀರು ಸರಬರಾಜಿನ ತೊಂದ

ನಗರದ ಪೌರಸಭೆಯವರಿಗೆ ಮನೆಗಂದಾ ಯವನ್ನು ಹೆಚ್ಚುಮಾಡುವುದರಲ್ಲಿರುವಷ್ಟು ಆ ಯು ಅನುಕೂಲ ಕಲ್ಪಿಸುವುದರಲ್ಲಿ ಇಲ್ಲವೆಂ ಹೇಳಬೇಕಾಗಿದೆ. ಕೃಷ್ಣರಾಜವನದಲ್ಲಿ ನೀ ಸರಬರಾಜಿನ ವ್ಯವಸ್ಥೆಯೇ ಇದಕ್ಕೆ ನಿದ ಮನೆ ಕಂದಾಯವನ್ನು ಹೆಚ್ಚಿಸಲಾಗಿದೆ ಆ ನೀರಿನ ಪ್ರಮಾಣವನ್ನು ಮಾತ್ರ ಮೊಟಕುಗೊ ಳಿಸಲಾಗಿದೆ ಸಂಜೆ ೬|| ಯಿಂದ ೮ರ ವರೆಗೆ ಇ ದ್ದ ನೀರು ಈಗ ೭|| ರಿಂದ ೮ರ ವರೆಗೆ ಬದ ಲು ಮಾಡಿದ್ದಾರೆ ಬರುವ ನೀರಿನ ಪ್ರಮಾಣ ಕಡಿಮೆ ಪುರಸಭೆಯವರನ್ನು ವಿಚಾರಿಸಿ ದರೆ ಉತ್ತರ ಬರುತ್ತಿಲ್ಲ ಸಂಬಂಧಪಟ್ಟವರು ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು ಸೌಕರ್ಯವನ್ನು ಕಲ್ಪಿಸುವಂತೆ ಕೋರಲಾಗಿದೆ

— ಕೆ ರಾಮಮೂ

NATIONAL LEAGUE,
Anthalaya Buildings Mysore
Offers excellent coaching for stude
of the High School classes
Join immediately

THE CHAMPION METROPOLITAN COLLEGE OF COMMERCE,
Co-operators Home 100 Road, Mysore
ADMISSIONS for fresh classes in Typewriting and Shorthand are now being received
M.S. PUTTANNA, *Vice-Principal*
P SUBBARAYA SASTR *Principal*

THE NATIONAL INSTITUTE OF COMMERCE
1677, Old Mysore Bank Road, Mysore
FRESH ADMISSIONS for TYPEWRITING & SHORTHAN are now being received Individual attention and expert trai ing by experienced staff. Equipped with first class Typewrite & furniture etc , JOIN NOW

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೫] SADHVI : THURSDAY 7—2—1957 ಮೈಸೂರು : ಗುರುವಾರ ೭—೨—೧೯೫೭ : [ಸಂಚಿಕೆ : ೦೯೨

ಲ್ಜೀರಿಯದಲ್ಲಿ ಕಳೆದ ವಾರ ೭೫೦ ಮಂದಿಯ ಕೊಲೆ

ದ ವಾರ ೭೦೦ ಆಲ್ಜೀರಿಯ ಮತ್ತು ೪೫ ಫ್ರೆಂಚರ ಕೊಲೆ

ರ್ಷಗಳಲ್ಲಿ ೨೦ ಸಹಸ್ರ ಜನರ ಹತ್ಯೆ

ನ್ಸ್ ಮತ್ತು ಅಲ್ಜೀರಿಯಗಳಾದ್ಯಂತ ನ ಮುಷ್ಕರದ ಸಂಬಂಧವಾಗಿ ಕಳೆದ ವಾರ ರಿಯದಲ್ಲಿ ೭೦೦ ಮಂದಿ ರಾಷ್ಟ್ರೀಯರೂ, ಮಂದಿ ಫ್ರೆಂಚ್ ಸೈನಿಕರೂ ಕೊಲ್ಲಲ್ಪಟ್ಟ ವು ವರದಿಯಾಗಿದೆ ವಿಶ್ವ ಸಂಸ್ಥೆಯಲ್ಲಿ ರಿಯಾ ಸಮಸ್ಯೆಯನ್ನು ಚರ್ಚಿಸುವ ದಿನ ವಾಗಿ ಮುಷ್ಕರ ನಡೆಸಲು ಕರೆಯಿತ್ತು ಷ್ಟು ೧೯೫೪ನೇ ನವೆಂಬರ್ ೧ ರಿಂದ ದ ದಂಗೆಯು ನಡೆಯುತ್ತಿದ್ದು ಈವ ಸಾವಿರ ಫ್ರೆಂಚ್ ಸೈನಿಕರೂ, ೧೭೦೦೦ ರಾ ಷ್ಟ್ರೀಯರೂ ಮಡಿದಿರುವುದಾಗಿ ವರದಿಯಾಗಿದೆ.

ಒಂದೇ ದಿನದಲ್ಲಿ ೧೯ ಮಂದಿ ದಂಗೆಕೋ ತರಾಗಿದ್ದಾರೆ ಒಂದು ಮೋಟಾರನ್ನು ದಾ ಯು ಕಡೆದು ಇಬ್ಬರು ಐರೋಪ್ಯರನ್ನು ಮಾಡಿರುವರು

ಪ್ರ ಸರ್ಕಾರದ ರಚನೆಗಾಗಿ ಂಗ್ರೆಸ್ಸಿಗೆ ಬೆಂಬಲ ಅಗತ್ಯ

ಪ್ರಧಾನಿ ನೆಹರೂರವರ ಕರೆ

ತ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸ್ಥಿತಿಯಲ್ಲಿ ಸುಭದ್ರವಾದ ಸರ್ಕಾರದ ಮು ಅತ್ಯಗತ್ಯವೆಂದು ಪ್ರಧಾನಿ ನೆಹರೂ ನೆನ್ನೆ ಅಲಹಾಬಾದಿನ ಚುನಾವಣಾ ಪ್ರಚಾರ ಭಾಷಣದಲ್ಲಿ ನುಡಿದು ಇದಕ್ಕಾಗಿ ಎಲ್ಲರೂ ಗ್ರೆಸ್ಸಿಗೆ ಬೆಂಬಲ ನೀಡಬೇಕೆಂದು ಕೋರಿದರು ಭದ್ರವಾದ ಸರ್ಕಾರವನ್ನು ರಚಿಸಲು ಕಾಂಗ್ರೆಸ್ ಪಕ್ಷವೊಂದೇ ಸಮರ್ಥವಾಗಿದೆಯೆಂದೂ ನುಡಿದರು

ರಿಕದಲ್ಲಿ ಅಣು ಧಾಳಿ ರಕ್ಷಣೆ ಗಿ ಸುರಂಗದ ಕೇಂದ್ರಗಳು

ದಾಳಿಯ ಸಮಯದಲ್ಲಿ ಜನರಿಗೆ ರಕ್ಷ ಣೆ ನೀಡಲು ಭೂಮಿಯೊಳಗೆ ಸುರಂಗವನ್ನು ರಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲು ದ ಅಣು ವಿಜ್ಞಾನಿಗಳು ೨ ಸಾವಿರ ಡಾಲರುಗಳ ಯೋಜನೆಯನ್ನು ಸಿದ್ಧ ದ್ದಾರೆ ನೇರವಾಗಿ ಬೀಳುವ ಅಣು ಬಾಂಬಿನಿಂದಲೂ ಸಹ ರಕ್ಷಣೆಯು ಈ ಕೇಂದ್ರ ಗಳ ಮೂಲಕ ದೊರೆಯುವುದೆಂದು ಹೇಳಲಾ

ಜನಗೂಡಿನಲ್ಲಿ ಪುರಂದರದಾಸರ ಪುಣ್ಯ ದಿನಾಚರಣೆ

ಜನಗೂಡು ಶ್ರೀ ಎ ಎಸ್ ಮೂರ್ತಿ ಮಂಡಲಿಯವರು ನಾಳೆ ಸಂಜೆ ೪|| ಕರ್ನಾಟಕ ವಿದ್ಯಾರ್ಥಿ ನಿಲಯದಲ್ಲಿ ದಾಸರ ಪುಣ್ಯ ದಿನಾಚರಣೆ ಮತ್ತು ರ ಆರಾಧನೆಗಳನ್ನು ನೆರವೇರಿಸುವ ಎಸ್ ನಾರಾಯಣಂಯರು ಅಧ್ಯಕ್ಷ ರು ವಿ|| ವಿ ರಾಮರತ್ನಂರವರ ಡಿ ಓ ಗುರುರಾಜಪ್ಪನವರ ಪಿಟೀ ೨|| ಟಿ ಎಂ ಪುಟ್ಟಸ್ವಾಮ ರ ಮೃದಂಗದೊಡನೆ ನಡೆಯುವುದು

ಕಾಶ್ಮೀರ ಪ್ರಶ್ನೆಯಲ್ಲಿ ಯಾರೂ ಅಕ್ರಮ ಪ್ರವೇಶ ಮಾಡಲಾಗದು

ಚುನಾವಣಾ ಪ್ರಚಾರ ಭಾಷಣದಲ್ಲಿ ಗೃಹ ಮಂತ್ರಿ ಪಂತರ ಭಾಷಣ

ಬೆಂಗಳೂರು ೬

ಭಾರತದ ಗೃಹ ಮಂತ್ರಿ ಪಂಡಿತ ಪಂತರು ನಿನ್ನೆ ಸುಭಾಷ್ ನಗರದಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರವನ್ನು ಆರಂಭಿಸುತ್ತ ಭಾಷಣ ಮಾಡಿ ಕಾಶ್ಮೀರದ ಸಮಸ್ಯೆಯಲ್ಲಿ ಅತಿಕ್ರಮ ಪ್ರವೇಶ ಮಾಡಲು ಯಾರಿಗೂ ಅವಕಾಶ ಕೊಡುವುದಿಲ್ಲವೆಂದು ನುಡಿದರು ಕಾಶ್ಮೀರವು ತನ್ನ ಭವಿಷ್ಯವನ್ನು ತಾನೇ ನಿರ್ಧರಿಸಿಕೊಳ್ಳಲು ತೀರ್ಮಾನಿಸಿ ಆ ರೀತಿಯೇ ಮಾಡಿರುತ್ತದೆ ಬಲವಂತದ ಜನಮತಗಣನೆಯಿಂದ ಅಲ್ಲಿ ಗೊಂದಲವೂ ವಿನಾಶವೂ ಉಂಟಾಗುತ್ತದೆ ಎಂದು ಅವರು ಹೇಳಿದರು

ಕಾಶ್ಮೀರದ ಜನರು ಭಾರತದೊಡನೆ ಇರಲು ಯಾವ ನಿರ್ಬಂಧವೂ ಇರದೆ ತೀರ್ಮಾನಿಸಿರುವರು ಇದನ್ನು ಬದಲಾಯಿಸಲು ಹಲವು ದೇಶಗಳು ಮಾಡುತ್ತಿರುವ ಪ್ರಯತ್ನಗಳು [illegible] ಆದರೂ ನಮ್ಮ ಜಾಗರೂಕರಾಗಿರುವುದು ಅಗತ್ಯ-ಎಂದು ಅವರು ನುಡಿದರು

ಚುನಾವಣೆಗಳ ವಿಚಾರವನ್ನು ಪ್ರಸ್ತಾಪಿಸಿ ನೂತನ ರಾಜ್ಯಗಳ ಪುನರ್ವಿಂಗಡಣೆ ಮುಗಿದಿರುವ ಈ ಸಮಯದಲ್ಲಿ ನಮ್ಮ ಸರ್ವ ಶಕ್ತಿಯನ್ನೂ ಕೇಂದ್ರೀಕರಿಸಿ ರಾಷ್ಟ್ರದ ಸಂಘಟನೆಯನ್ನು ಸಾಧಿಸಬೇಕೆಂದು ಹೇಳಿದರು ನಮ್ಮಲ್ಲಿ ಯಾರೂ ಕರಿಕುರಿಗಳಂತೆ ಆಗದಿರಲೆಂದೂ ಹಾರೈಸಿದರು ಈಗ ನಡೆಸಬೇಕಾಗಿರುವ ಅಗಾಧವಾದ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸಲು ಕಾಂಗ್ರೆಸ್ಸಿಗಲ್ಲದೆ ಬೇರೆ ಯಾರಿಗೂ ಸಾಧ್ಯವಿಲ್ಲವೆಂದು ಅವರು ಹೇಳಿ ಕಾಂಗ್ರೆಸ್ ಉಮೇದುವಾರರಿಗೇ ಬೆಂಬಲ ನೀಡಬೇಕೆಂದು ಕೋರಿದರು

ಕಾಶ್ಮೀರದ ಬಗ್ಗೆ ಭಾರತಕ್ಕೆ ಆಜ್ಞೆ ಮಾಡಲು ವಿಶ್ವಸಂಸ್ಥೆಗೆ ಹಕ್ಕಿಲ್ಲ

ಫ್ರೆಂಚ್ ವಿದೇಶಾಂಗ ಸಚಿವರ ಹೇಳಿಕೆ

ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಕಾಶ್ಮೀರ ವಿವಾದದ ಬಗ್ಗೆ ತನ್ನ ನಿರ್ಧಾರಗಳನ್ನು ಭಾರತದ ಮೇಲೆ ಹೇರಲು ಹಕ್ಕಿಲ್ಲವೆಂದೂ, ಕೇವಲ ಸಲಹೆಯನ್ನು ಮಾತ್ರ ಕೊಡಬಹುದೆಂದೂ ಫ್ರೆಂಚ್ ವಿದೇಶಾಂಗ ಮಂತ್ರಿ ಪಿನೋರವರು ಹೇಳಿದ್ದಾರೆ

ಕಳೆದುಹೋದ ೧,೦೦೧ ರೂ. ಪತ್ತೆ

ಮಂಡಿ ಮೊಹಲ್ಲದ ಕೆ ಎಂ ಹುಸೇನ್ ಸಾಹೇಬ್ ಎಂಬ ಮಿಲ್ ಮಾಲಿಕರ ಮಗನು ನೆನ್ನೆ ಗಿರಣಿಯಿಂದ [illegible] ಅವರ ಅಂಗಡಿಗೆ ಕೊಡಲು ೧,೦೦೧ ರೂ ಗಳನ್ನು ಪಾಕೆಟ್ಟಿನಲ್ಲಿ ಇಟ್ಟುಕೊಂಡು ಹೋಗುತ್ತಿದ್ದಾಗ ಅದು ದಾರಿಯಲ್ಲಿ ಬಿದ್ದುಹೋಯಿತು ಮಂಡಿ ಪೊಲೀಸಿನವರು ತನಿಖೆ ನಡೆಸಿ ಆ ಪಾಕೆಟ್ಟು [illegible] ಕೊಡದಿಟ್ಟಿದ್ದುದನ್ನು ಪತ್ತೆ ಹಚ್ಚಿರುತ್ತಾರೆ [illegible] ಗಿಸಲಾಗಿದೆ

ಗ್ರಾಮಸ್ಥರಲ್ಲಿ ಜಗಳವಾಗಿ ೧೧ ಜನರಿಗೆ ಗಾಯ

ಮೈಸೂರು ೬

ಮೈಸೂರು ತಾಲ್ಲೂಕಿನ ರಮ್ಮನಹಳ್ಳಿ ಮತ್ತು ಗೋಪಾಲಪುರ ಗ್ರಾಮಗಳಲ್ಲಿ ಎರಡು ಗುಂಪುಗಳಿಗೆ ಮೊನ್ನೆ ನಡೆದ ಘರ್ಷಣೆಯಲ್ಲಿ ರಮ್ಮನಹಳ್ಳಿಯ ಚಿಕ್ಕಯ್ಯ ಎಂಬಾತನಿಗೂ, ಮತ್ತಿತರ ಮೂವರಿಗೂ ತೀವ್ರವಾಗಿಯೂ, ಸುಮಾರು ೫ ಮಂದಿಗೂ, ಗೋಪಾಲಪುರದ ದೇವೇಗೌಡ ಮತ್ತು ಹನುಮೇಗೌಡ ಎಂಬುವರಿಗೆ ಸಾಮಾನ್ಯವಾಗಿಯೂ ಗಾಯಗಳಾದುವು ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ನೆನ್ನೆ ಸೇರಿಸಲಾಯಿತೆಂದು ಗೊತ್ತಾಗಿದೆ

ಕಾಲೇಜು ಭೌತ ವಿಜ್ಞಾನ ಸಂಘದ ಮುಕ್ತಾಯ ಸಮಾರಂಭ

ನಗರದ ಯುವರಾಜಾ ಕಾಲೇಜಿನ ಭೌತ ವಿಜ್ಞಾನ ಸಂಘದ ಮುಕ್ತಾಯ ಸಮಾರಂಭವು ನಾಳೆ ಮಧ್ಯಾಹ್ನ ೪ ಗಂಟೆಗೆ ನೆರವೇರುವುದು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಪ್ರೊಫೆಸರ್ ಶ್ರೀ ಸಿ ಕೆ ಸುಂದರಂಚಾರ್‌ರವರು ಭಾಷಣ ಮಾಡುವರು ಯುವರಾಜಾ ಕಾಲೇಜಿನ ಪ್ರೊಫೆಸರ್ ಡಾ|| ಎಂ ಷಡಕ್ಷರಸ್ವಾಮಿಯವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ

ಉಪನ್ಯಾಸ

ನಗರದ ವಿದ್ಯಾರಣ್ಯಪುರದ ೩ನೇ ಕ್ರಾಸಿನಲ್ಲಿರುವ ಶ್ರೀ ಯಲ್ಲಮ್ಮನವರ ದೇವಸ್ಥಾನದಲ್ಲಿ ನಾಳೆ ರಾತ್ರಿ ೮ ಗಂಟೆಗೆ ಬೆಂಗಳೂರಿನ ಶ್ರೀ ಮಹಾರಾಜ ಆಶ್ರಮದ ಶ್ರೀ ಸಿದ್ಧಾನಂದ ಸ್ವಾಮಿ ಜಿಯವರು ಮಾನವ ಜನ್ಮದ ಉದ್ಧಾರ ಎಂಬ ವಿಷಯವಾಗಿ ಉಪನ್ಯಾಸವನ್ನು ಮಾಡುವರು

ಭಟ್ಟಿಯವರ ದಸ್ತಗಿರಿ

ನೆಹರೂರವರ ವಿರುದ್ಧವಾಗಿ ಚುನಾವಣೆಗೆ ನಿಲ್ಲಬೇಕೆಂದಿದ್ದ ಅಖಿಲ ಭಾರತ ಹಿಂದೂ ರಾಜ್ಯ ಪಕ್ಷದ ಕಾರ್ಯದರ್ಶಿ ಶ್ರೀ ಎಲ್ ಜಿ ಭಟ್ಟಿಯವರನ್ನು ನೆನ್ನೆ ಅಲಹಾಬಾದಿನಲ್ಲಿ ದಸ್ತಗಿರಿ ಮಾಡಲಾಯಿತು ಗೋಹತ್ಯವನ್ನು ನಿರೋಧಿಸುವ ಶಾಸನವನ್ನು ಮಾಡಲು ನೆಹರೂರವರು ಒಪ್ಪದೇ ಇರುವುದರಿಂದ ಅವರು ನೆನ್ನೆ ಅಲ್ಲಿ ಮಾಡಲಿದ್ದ ಭಾಷಣದ ಪ್ರದೇಶದಲ್ಲಿ ಕಪ್ಪು ಬಾವುಟದ ಪ್ರದರ್ಶನವನ್ನು ಮಾಡುವುದಲ್ಲದೆ ಹಲವು ಗೋವುಗಳನ್ನು ಸಹ ಕರೆದೊಯ್ಯುವುದಾಗಿ ಭಟ್ಟಿಯವರು ಪ್ರಕಟಿಸಿದ್ದರು ಯಾವ ಘಟನೆಗಳೂ ಆಗದಂತೆ ಮಾಡಲು ಪೊಲೀಸಿನವರು ಅವರನ್ನು ಮುಂಚಿತವಾಗಿ ಬಂಧಿಸಿದರು

ಬೊಂಬಾಯಿ ಬಳಿ ಸಿಡಿ ಮದ್ದಿನ ಕಾರ್ಖಾನೆಯ ಆಸ್ಫೋಟನೆ

ಬೊಂಬಾಯಿಗೆ ಹನ್ನೆರಡು ಮೈಲಿ ದೂರದಲ್ಲಿರುವ ಕುರ್ಲಾ ಎಂಬಲ್ಲಿ ಮೊನ್ನೆ ರಾತ್ರಿ ಸಿಡಿ ಮದ್ದಿನ ಕಾರ್ಖಾನೆಯೊಂದರಲ್ಲಿ ಭಯಂಕರ ಆಸ್ಫೋಟನೆಯುಂಟಾಗಿ ಅದರ ಜ್ವಾಲೆಯು ಸುಮಾರು ೫ ಮೈಲಿ ದೂರದವರಿಗೂ ಕಾಣಿಸಿತೆಂದು ವರದಿಯಾಗಿದೆ

ತುಮಕೂರಿಗೆ ಕೇಂದ್ರ ಮಂತ್ರಿ ಪಂತರ ಭೇಟಿ

ಸ್ವಂತ ವರದಿ] ಬೆಂಗಳೂರು ೬

ಸಚಿವ ಶ್ರೀ ಎಂ ವಿ ರಾಮರಾವ್, ವಿಶಾಲ ಮೈಸೂರಿನ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ ವೆಂಕಟಪ್ಪ ಮತ್ತು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರೊಡನೆ ಪಂಡಿತ ಪಂತರು ಈ ಬೆಳಿಗ್ಗೆ ತುಮಕೂರಿಗೆ ತೆರಳಿ ಚುನಾವಣಾ ಪ್ರಚಾರ ಭಾಷಣವನ್ನು ಮಾಡಿದನಂತರ ಅಲ್ಲಿನ ವಕೀಲರ ಸಂಘಕ್ಕೆ ಭೇಟಿಯಿತ್ತಿದ್ದರು ಅಲ್ಲಿಂದ ಅವರು ಹಿಂದಿರುಗಿ ಮಧ್ಯಾಹ್ನ ವಿಶೇಷ ವಿಮಾನದಲ್ಲಿ ಬೆಳಗಾಂ ಮೂಲಕ ನಾಗಪುರಕ್ಕೆ ಪ್ರಯಾಣ ಬೆಳೆಸಿದರು.

ಗವರ್ನರು ನೆನ್ನೆ ರಾತ್ರಿ ಪಂತರ ಗೌರವಾರ್ಥವಾಗಿ ಭೋಜನ ಕೂಟವನ್ನೇರ್ಪಡಿಸಿದ್ದರು

ಸಿಂಗಪುರಕ್ಕೆ ಹಿಂದೂಸ್ತಾನ್ ಕಾರ್ಖಾನೆಯ ವಿಮಾನ

ಇಲ್ಲಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ತಯಾರಾದ ಎಚ್ ಟಿ ೨ ಟ್ರೈನರ್ ವಿಮಾನವೊಂದನ್ನು ಸದ್ಯದಲ್ಲೇ ಸಿಂಗಪುರಕ್ಕೆ ಕಳುಹಿಸಲಾಗುವುದೆಂದೂ, ಅದರ ಬೆಲೆ ೬೦ ಸಹಸ್ರ ರೂ ಗಳಾಗುವುದೆಂದೂ ಗೊತ್ತಾಗಿದೆ.

ಹುಬ್ಬಳ್ಳಿ ಗಿರಣಿಗೆ ಬೆಂಕಿ ಬಿದ್ದು ೨೦ ಲಕ್ಷ ರೂ. ನಷ್ಟ

ಹುಬ್ಬಳ್ಳಿ ನಗರದ ಹತ್ತಿ ಗಿರಣಿಯೊಂದರಲ್ಲಿ ನೆನ್ನೆ ಬೆಳಿಗ್ಗೆ ಬೆಂಕಿಯ ಅಪಘಾತ ಸಂಭವಿಸಿ ಸುಮಾರು ೨೦ ಲಕ್ಷ ರೂ ಬೆಲೆ ಬಾಳುವ ಯಂತ್ರೋಪಕರಣಗಳು ನಾಶವಾಗಿವೆಯೆಂದು ವರದಿಯಾಗಿದೆ ಇದು ಉತ್ತರ ಕರ್ನಾಟಕದಲ್ಲಿ ಅತ್ಯಂತ ದೊಡ್ಡ ಗಿರಣಿಗಳಲ್ಲೊಂದಾಗಿತ್ತೆಂದು ಹೇಳಲಾಗಿದೆ

ಮೈಸೂರು ವಿಧಾನ ಸಭೆಗೆ ಮತ್ತೊಬ್ಬರ ಅವಿರೋಧ ಆಯ್ಕೆ

ಮಂಗಳೂರು ಜಿಲ್ಲೆಯ ಕಾರ್ಕಳ ಚುನಾವಣಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್. ಜಿ [illegible] ಎಂಬ ಸ್ವತಂತ್ರ ಉಮೇದುವಾರರು ತಮ್ಮ ನಾಮಪತ್ರವನ್ನು ವಾಪಸು ಪಡೆದಿರುವುದರಿಂದ ಕಾಂಗ್ರೆಸ್ಸಿನ ಉಮೇದುವಾರರು ಮಂಜಪ್ಪನವರು ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ. ಮೈಸೂರು ಸಭೆಗೆ ಇದುವರೆಗೆ ೬ ಮಂದಿಯು ಆಯ್ಕೆಯಾಗಿದೆ

ಮೃಗಾಲಯಕ್ಕೆ ಎರಡು ಕಾಡು ನಾಯಿ ಮರಿಗಳು

ನಗರದಲ್ಲಿರುವ ಮೃಗಾಲಯದಲ್ಲಿ ಅತ್ಯಂತ ಅಪೂರ್ವವಾದ ಎರಡು ಕಾಡು ನಾಯಿ ಮರಿಗಳನ್ನು ತಂದಿರಿಸಲಾಗಿದೆ ಅವನ್ನು ಹೆಗ್ಗಡದೇವನ ಕೋಟೆ ತಾಲ್ಲೂಕು ಮಂಚೇಗೌಡನಹಳ್ಳಿಯ ಸರ್ಕಾರಿ ಬೇಟೆಯ ಅಧಿಕಾರಿಗಳು ಕಳುಹಿಸಿಕೊಟ್ಟಿರುತ್ತಾರೆ

○ ಸಟ್ಟಾ ಜೂಜಾಟ ನಡೆಸಿದನೆಂದ ನಜರ್ ಬಾದ್ ಪೊಲೀಸರು ಕಾಳಲಿಂಗಯ್ಯ ಎಂಬಾತನ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಈ ದಿನ ಅಪಾದಿತನಿಗೆ ೧೫ ರೂ ದಂಡವನ್ನು ವಿಧಿಸಲಾಯಿತು

ಜೋಗಿನಲ್ಲಿ ವಿದ್ಯುಚ್ಛಕ್ತಿ ನೌಕರರ ಸಭೆ

ಸಂಬಳದ ನೂತನ ಪಟ್ಟಿ ಬಗ್ಗೆ ಅತೃಪ್ತಿ

ಜೋಗಿನಲ್ಲಿ ಕಳೆದ ಸೋಮವಾರ ವಿದ್ಯುಚ್ಛಕ್ತಿ ನೌಕರರ ಸಭೆಯು ಸಂಘದ ಉಪಾಧ್ಯಕ್ಷರಾದ ಶ್ರೀ ಎಂ. ಸಿ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಸರ್ಕಾರದವರು ಹೊಸದಾಗಿ ಜಾರಿಗೆ ಕೊಟ್ಟಿರುವ ಸಂಬಳದ ಪಟ್ಟಿಯು ತುಂಬಾ ಅತೃಪ್ತಿಕರವಾಗಿರುವುದೆಂದು ಸೂಚಿಸಿ, ಈ ಬಗ್ಗೆ ಆಜ್ಞೆಯನ್ನು ಪುನರ್ವಿಮರ್ಶಿಸುವಂತೆ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಈಗ ಕೊಡಲಾಗಿರುವ ಸಂಬಳದಲ್ಲಿ ೩,೫೦೦ ಮಂದಿ ನೌಕರರ ಬಡ್ತಿಗೆ ಅವಕಾಶ ಕಲ್ಪಿಸಿಲ್ಲವೆಂದು ತಿಳಿಸಲಾಯಿತು.

ಬ್ರಿಟನ್ನಿನ ಅಣುಬಾಂಬು ಪರೀಕ್ಷೆ ವಿರುದ್ಧ ವಿಶ್ವಸಂಸ್ಥೆಗೆ ದೂರು

ಪೆಸಿಫಿಕ್ ಸಾಗರದ ಕ್ರಿಸ್ಮಸ್ ದ್ವೀಪಗಳಲ್ಲಿ ಅಣು ಬಾಂಬು ಪ್ರಯೋಗ ಪರೀಕ್ಷೆಗಳನ್ನು ಬ್ರಿಟನ್ನು ನಡೆಸದಿರುವಂತೆ ಆ ಸರ್ಕಾರಕ್ಕೆ ಜಪಾನಿನ ಸರ್ಕಾರವು ಮಾಡಿರುವ ಪ್ರಾರ್ಥನೆಯನ್ನು ತಿರಸ್ಕರಿಸಿದರೆ ಜಪಾನು ಈ ವಿಚಾರವನ್ನು ವಿಶ್ವಸಂಸ್ಥೆಗೆ ಕೊಂಡೊಯ್ಯುವುದೆಂದು ಜಪಾನಿನ ಹಂಗಾಮಿ ಪ್ರಧಾನಿಯವರು ತಿಳಿಸಿರುತ್ತಾರೆ

ಅಸ್ಸಾಂ ಶಾಲೆಗಳಲ್ಲಿ ಯೋಗಾಭ್ಯಾಸ ಪಾಠ

ಅಸ್ಸಾಮಿನ ಶಾಲಾ ಮತ್ತು ಕಾಲೇಜುಗಳಲ್ಲಿ ಯೋಗಾಭ್ಯಾಸ ಪಾಠವನ್ನು ಜಾರಿಗೆ ತರಲು ಅಲ್ಲಿನ ಸರ್ಕಾರದವರು ಕ್ರಮ ಕೈಗೊಳ್ಳಲಿದ್ದಾರೆ. ಸರ್ಕಾರದ ಯೋಗ ವ್ಯಾಯಾಮ ಶಿಕ್ಷಕ ಖರ್ಗಾರಿಯಾರವರು ಬೊಂಬಾಯಿಯ ಯೋಗ ಶಿಕ್ಷಣ ಶಾಲೆಯಲ್ಲಿ ೮ ತಿಂಗಳ ತರಪೇತು ಪಡೆದು ವಾಪಸು ಹೋಗಿ ಅಸ್ಸಾಂ ಸರ್ಕಾರಕ್ಕೆ ತಮ್ಮ ಯೋಜನೆಯೊಂದನ್ನು ಒಪ್ಪಿಸಿರುತ್ತಾರೆ

ಫುಟ್‌ಬಾಲ್ ಸಂಸ್ಥೆಯ ವ್ಯವಹಾರದಲ್ಲಿ ಜಿಲ್ಲಾ ಜಡ್ಜರ ಆಜ್ಞೆ

ನಗರದ ಸಬ್ ಜಡ್ಜರು ಕಳೆದ ೧ನೇ ತಾರೀಖು ತಾತ್ಕಾಲಿಕ ತಡೆ ಆಜ್ಞೆಯೊಂದನ್ನು ಹೊರಡಿಸಿ, ಮೈಸೂರು ಸಂಸ್ಥಾನದ ಫುಟ್ ಬಾಲ್ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಡಿ. ಗುಣಭೂಷಣಂ ಮತ್ತು ಸಂಘದ ಬೆಂಗಳೂರು ಡಿವಿಜನ್ನಿನ ಉಪಾಧ್ಯಕ್ಷ ಶ್ರೀ ಎ ಎ. ಜೋಸೆಫ್‌ರವರು ಕಳೆದ ತಿಂಗಳು ೨೭ ರಂದು ಬೆಂಗಳೂರಿನ ಮೇಯೊ ಹಾಲಿನಲ್ಲಿ ನಡೆದ ಸಭಾ ನಡವಳಿಕೆಯನ್ನು ಜಾರಿಗೆ ತರದಂತೆ ತಿಳಿಸಿರುತ್ತಾರೆ. ಅಂದು ಬೆಂಗಳೂರಿನಲ್ಲಿ ಸಂಸ್ಥಾನ ಸಂಘದ ಸಾಧಾರಣ ಸಭೆಯನ್ನು ನಡೆಸಲಾಯಿತೆಂದೂ, ಅದರಲ್ಲಿ ನಗರದ ಬ್ಲೂಸ್ ಮತ್ತು ಛಾಲೆಂಜ್ ಯೂನಿಯನ್ ಕ್ಲಬ್ಬು ಮುಂತಾದ ಹಲವಾರು ಸಂಸ್ಥೆಗಳವರು ಭಾಗವಹಿಸಿ, ಬೆಂಗಳೂರನ್ನು ಸಂಸ್ಥೆಯ ಕೇಂದ್ರಸ್ಥಾನವಾಗಿ ಮಾಡಲಾಯಿತೆಂದೂ ಹೇಳಲಾಗಿದೆ ಮೈಸೂರು ಡಿವಿಜನ್ನಿನ ಕಾರ್ಯದರ್ಶಿ ಶ್ರೀ ಬಿ. ಶ್ರೀನಿವಾಸಯ್ಯಂಗಾರ್ಯರು ಈ ನಿರ್ಧಾರವನ್ನು ಪ್ರತಿಭಟಿಸಿ ಕೋರ್ಟಿನಲ್ಲಿ ವ್ಯವಹಾರ ಹೂಡಿರುತ್ತಾರೆ. ಸಂಘದ ಜನರಲ್ ಕೌನ್ಸಿಲ್ಲಿಗೆ ಮೈಸೂರು ಮತ್ತು ಬೆಂಗಳೂರುಗಳಿಂದ ತಲಾ ೬ ಪ್ರತಿನಿಧಿಗಳನ್ನು ತೆಗೆದುಕೊಳ್ಳಬೇಕೆಂದು ೨೭-೧-೫೭ರಲ್ಲಿ ಮಾಡಿರುವ ನಿಯಮದ ಬದಲಾವಣೆ ಕ್ರಮಬದ್ಧತೆಯನ್ನು ಅವರು ಪ್ರಶ್ನಿಸಿದ್ದಾರೆ ಸಂಸ್ಥೆಯ ಕೆಲಸವು ೧೯೫೦ರ ಕೈಪಿಡಿಯ ಆಧಾರದ ಮೇಲೆ ನಡೆಯಬೇಕೆಂದು ಅವರು ತಮ್ಮ ಅರ್ಜಿಯಲ್ಲಿ ತಿಳಿಸಿದ್ದಾರೆ

ASTRO-PALMISTRY

Consult

H. S. VENKATA RAO,

B. A., B.L., B. Ed

1329 K. M. Puram, Mysore.

ಘಜ್ನಿ ಮಹಮದ್, ಚೆಂಗೆಸ್ ಖಾನರಂತೆ ಭಾರತದಮೇಲೆ ಧಾಳಿ

ಖಾಕ್ಸಾರ್ ನಾಯಕ ಅಲ್ಲಾಮಾ ಮಷ್ರೀಕಿಯವರ ಬೆದರಿಕೆ

ಕರಾಚಿಯಲ್ಲಿ ಕಳೆದ ಶುಕ್ರವಾರ ಖಾಕ್ಸಾರರ ನಾಯಕ ಅಲ್ಲಾಮಾ ಮಷ್ರೀಕಿಯವರು ತಮ್ಮ ಹಿಂಬಾಲಕರ ಸಭೆಯೊಂದರಲ್ಲಿ ಭಾಷಣ ಮಾಡಿ, ಕಾಶ್ಮೀರವನ್ನು ವಿಮೋಚನೆ ಮಾಡುವುದಕ್ಕಾಗಿಯಲ್ಲದೆ, ಭಾರತವನ್ನೂ ಸಹಾ ವಿಮೋಚನಗೊಳಿಸಲು ಭಾರತದ ಮೇಲೆ ದಂಡಯಾತ್ರೆ ಮಾಡಬೇಕೆಂದು ತಿಳಿಸಿದರು ಘಜ್ನಿಮಹಮದ್, ಚೆಂಗೆಸ್‌ಖಾನ್ ಮತ್ತು ಸಿಕಂದರ್‌ರವರು ಬಹಳ ಕಾಲದ ಹಿಂದೆ ನಡೆಸಿದ ದಂಡಯಾತ್ರೆಯ ರೀತಿಯಲ್ಲಿ ಭಾರತದ ವಿಮೋಚನೆಯಾಗಬೇಕಾಗಿರುವುದೆಂದು ಅವರು ತಿಳಿಸಿದರು. ಕಾಶ್ಮೀರವನ್ನು ಭಾರತದ ಭಾಗವೆಂದು ಘೋಷಿಸಿದ ಬಗ್ಗೆ ಪ್ರತಿಭಟಿಸಲು ಸಭೆಯನ್ನು ಕರೆಯಲಾಗಿತ್ತು.

ವಿಶ್ವಸಂಸ್ಥೆಗೆ ಷೇಕ್ ಅಬ್ದುಲ್ಲಾ ಪತ್ರ

ಬಕ್ಷಿ ಗುಲಾಂ ಮಹಮದ್‌ರವರ ವಿವರಣೆ

ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಷೇಕ್ ಅಬ್ದುಲ್ಲಾರವರು ಬರೆದಿರುವ ಪತ್ರದ ವಿಚಾರವನ್ನು ಕಾಶ್ಮೀರದ ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರು ಪ್ರಸ್ತಾಪಿಸಿ, ಅದು ಸುಳ್ಳಿನ ಪತ್ರವಲ್ಲವೆಂದು ಹೇಳಿರುತ್ತಾರೆ. ಪಾಕಿಸ್ತಾನದ ಪತ್ರಿಕೆಗಳಲ್ಲಿ ಈ ಪತ್ರದ ಫೋಟೊ ಫಲಕವನ್ನು ಮುದ್ರಿಸಿರುವುದನ್ನು ತಾವು ನೋಡಿರುವುದಾಗಿಯೂ, ಅದು ಅವರ ಪತ್ರವೇ ಎಂದೂ ತಿಳಿಸಿರುತ್ತಾರೆ ಈ ಕಾಗದವನ್ನು ಪಾಕಿಸ್ತಾನಕ್ಕೆ ಕಳ್ಳಸಾಗಣೆ ಮಾಡಿ, ಪಾಕಿಸ್ತಾನದ ಪ್ರತಿನಿಧಿಗಳು ಈ ಪತ್ರವನ್ನು ವಿಶ್ವಸಂಸ್ಥೆಗೆ ಒಪ್ಪಿಸಲು ಸಾಧ್ಯವಾಗದಿದ್ದುದರಿಂದ ಬೇರೊಬ್ಬರ ಮೂಲಕ ಅದನ್ನು ತಲಪಿಸಲಾಯಿತೆಂದು ಅವರು ಹೇಳಿರುತ್ತಾರೆ.

ಭಾರತಕ್ಕೆ ಅಮೆರಿಕದಿಂದ ೩೦ ಸಾವಿರ ಕೋಳಿಮರಿ

ದೆಹಲಿಗೆ ಈ ತಿಂಗಳು ೧೩ ಅಥವಾ ೧೪ನೇ ತಾರೀಖು ಅಮೆರಿಕದಿಂದ ೩೦ ಸಾವಿರ ಕೋಳಿ ಮರಿ ಮತ್ತು ೨೪ ಪೆಟ್ಟಿಗೆಗಳಲ್ಲಿರುವ (ಮರಿ ಮಾಡುವ) ಮೊಟ್ಟೆಗಳು ವಿಮಾನವೊಂದರಲ್ಲಿ ತರಲ್ಪಡಲಿವೆ. ಆ ಪೈಕಿ ೫ ಸಾವಿರ ಮರಿಗಳನ್ನು ದೆಹಲಿಯ ಮಾದರಿ ಕೋಳಿ ಸಾಕುವ ಕೇಂದ್ರಗಳಲ್ಲಿ ಪಾಲನೆ ಮಾಡಲಾಗುತ್ತದೆ ೪,೦೦೦ ಮರಿಗಳನ್ನು ಇಜ್ಜತ್‌ನಗರದ ಕೇಂದ್ರಕ್ಕೆ ಕಳುಹಲಾಗುವುದು ಉಳಿದುವನ್ನು ನಾನಾ ಸಂಸ್ಥಾನಗಳಿಗೆ ಕಳುಹಲಾಗುವುದು.

ವೀರಶೈವ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ತ್ಯಾಗರಾಜಾ ರಸ್ತೆಯಲ್ಲಿರುವ ತುಂಬೇರಳೆ ಸಾಹುಕಾರ್ ಸಿದ್ಧಪ್ಪನವರ ವೀರಶೈವ ವಿದ್ಯಾರ್ಥಿ ನಿಲಯ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೫॥ ಗಂಟೆಗೆ ನಿಲಯದ ಕಟ್ಟಡದಲ್ಲಿ ನೆರವೇರುವುದು ಲೋಕ ಸಭಾ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಬೀಳ್ಕೊಡುಗೆ ಭಾಷಣ ಮಾಡುವರು. ಮಹಾರಾಜಾ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕರಾದ ಶ್ರೀ ಎಸ್. ಎ. ಶಾಂತವೀರಪ್ಪನವರು ಅಧ್ಯಕ್ಷತೆ ವಹಿಸುವರು.

NATIONAL LEAGUE,

Anathalaya Buildings, Mysore

Offers excellent coaching for students of the High School classes

Join immediately

Edited, Printed and Published by
A. R. Nagarajan at Sadhvi Press
D. Subbiah Road, Mysore

ವಿವಾಹ ಮಹೋತ್ಸವಗಳು

ವಿದ್ಯಾರಣ್ಯಪುರದಲ್ಲಿರುವ ಶ್ರೀ ಎಸ್. ಎ. ಕೇಶವಮೂರ್ತಿಯವರು ತಮ್ಮ ಕುಮಾರಿ ಸೌ॥ ರಂಗಲಕ್ಷ್ಮಿಯನ್ನು ನಗರದ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ. ಆರ್. ಚಂದ್ರಶೇಖರಯ್ಯನವರ ಮಗ ಶ್ರೀ ಟಿ. ಸಿ. ರಾಮಕೃಷ್ಣಯ್ಯನವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಅಗರದಲ್ಲಿರುವ ಜಮೀನ್ದಾರ್ ಶ್ರೀ ಎಂ ಎಸ್ ರಾಮರಾಯರು ತಮ್ಮ ನಾಲ್ಕನೇ ಪುತ್ರಿ, ಸೌ॥ ವೆಂಕಮ್ಮನನ್ನು ಕತಗಡ ಶ್ರೀ ಬಿಂದೂರಾಯರ ಕುಮಾರ ಶ್ರೀ ಕೆ. ಬಿ. ರಾಮಚಂದ್ರರಾಯರಿಗೆ ಕೊಟ್ಟು ಕಳೆದ ಸೋಮವಾರವೂ, ತಮ್ಮ ಐದನೇ ಕುಮಾರಿ ಸೌ॥ ಸಾವಿತ್ರಿಬಾಯಿಯನ್ನು ನಿವೃತ್ತ ವ್ಯವಸಾಯ ಇನ್ಸ್‌ಪೆಕ್ಟರ್ ಶ್ರೀ ಸಿ. ಎ. ಕೃಷ್ಣರಾಯರ ಕುಮಾರ ಚಿ॥ ಸಿ. ಕೆ. ವಿಜಯನಿಗೆ ಕೊಟ್ಟು ನೆನ್ನೆಯೂ ವಿವಾಹವನ್ನು ಮೂಗೂರಿನಲ್ಲಿ ಜರುಗಿಸಿದರು.

ರಾಷ್ಟ್ರಾಧ್ಯಕ್ಷರಿಗೆ ನೇತ್ರ ಚಿಕಿತ್ಸೆ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರ ಬಲಗಣ್ಣಿನಲ್ಲಿದ್ದ ಪೊರೆಯನ್ನು ಮೊನ್ನೆ ಶಸ್ತ್ರ ಚಿಕಿತ್ಸೆ ನಡೆಸಿ ತೆಗೆಯಲಾಯಿತು. ಅವರು ಆರೋಗ್ಯವಾಗಿರುತ್ತಾರೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮುತ್ತು

ಕೊಯಮತ್ತೂರು	೩೦	೦	೦	೪೩	೪	೦
ದಪ್ಪಭತ್ತ	೩೪	೪	೦	೩೯	೬	೦
ಕೆಂಬತ್ತ	೩೯	೦	೦			
ಕಡ್ಡಿ	೩೬	೧೨	೦	೪೦	೦	೦
ಕಾರು	೩೩	೧೨	೦			
ರಾಗಿ	೪೧	೮	೦	೪೫	೬	೦
ಜೋಳ	೩೬	೪	೦	೪೪	೦	೦
ಕಡಲೆಕಾಯಿ	೧೬	೪	೦	೨೪	೦	೦
ಹುಚ್ಚೆಳ್ಳು	೪೦	೦	೦	೪೫	೪	೦
ಹರಳುಬೀಜ	೪೫	೦	೦	೪೬	೧೪	೦
ಹೊಂಗೆಬೀಜ	೧೬	೦	೦	೨೪	೧೪	೦
ಹುರುಳಿ	೩೬	೦	೦	೨೯	೦	೦
ಹೆಸರು	೪೬	೮	೦	೫೧	೦	೦
ಅಲಸಂದಿ	೪೬	೦	೦	೫೧	೧೪	೦
ಅವರೆ	೪೨	೦	೦	೪೪	೦	೦
ಧನಿಯ	೨೫	೨	೦	೨೬	೪	೦
ಉದ್ದು	೬೬	೧೪	೦			
ಕಡಲೆ	೪೫	೧೪	೦	೪೯	೦	೦
ಸೆಣಬಿನ ಬೀಜ	೪೩	೦	೦	೪೫	೦	೦
ಹುಣಸೇಹಣ್ಣು	೨	೧೨	೦	೬	೨	೦
ಸೀಗೆಕಾಯಿ	೪	೨	೦	೬	೦	೦
ಮೆಣಸಿನಕಾಯಿ	೧೩	೧೪	೦	೨೧	೧೨	೦

ಜೈ ಹಿಂದ್ !



ದಯವಿಟ್ಟು ನಿಮ್ಮ ಓಟನ್ನು ಕಾಂಗ್ರೆಸ್ ಉಮೇದುವಾರರಿಗೇ ಕೊಡಿರಿ !

ಅಣು ಬಾಂಬು ನಿಷೇಧಕ್ಕೆ ಜುಕೋವರ ಕರೆ

ರಷ್ಯದ ರಕ್ಷಣಾ ಮಂತ್ರಿ ಮಾರ್ಷಲ್ ಜುಕೋವರು, ಮೂರನೇ ಮಹಾ ಯುದ್ಧವು ಸಂಭವಿಸಿದರೆ ಅಣು ಶಸ್ತ್ರಗಳನ್ನು ಉಪಯೋಗಿಸುವುದರಲ್ಲಿ ಸಂದೇಹವೇನೂ ಇಲ್ಲವೆಂದು ತಿಳಿಸಿರುತ್ತಾರೆ. ಹಲವು ಸಾಮ್ರಾಜ್ಯಶಾಹಿ ರಾಷ್ಟ್ರಗಳ ವರ್ತನೆಯ ಪರಿಣಾಮವಾಗಿ ಯುದ್ಧದ ಭೀತಿಯುಂಟಾಗಿರುವುದೆಂದು ಅವರು ಹೇಳಿ, ಅಣು ಶಸ್ತ್ರಗಳ ನಿಷೇಧವಾಗಬೇಕೆಂದು ಸೂಚಿಸಿರುತ್ತಾರೆ.

ನೆಹರೂರವರ ಕಾಶ್ಮೀರ-ನೀತಿಗೆ ಸಾಧುಗಳ ಬೆಂಬಲ

ಬೊಂಬಾಯಿಯಲ್ಲಿ ೫೦೦ಕ್ಕೂ ಹೆಚ್ಚು ಮಂದಿ ಸಾಧುಗಳು ಮತ್ತು ಮಹಂತರು ಸಭೆ ಸೇರಿ ಪ್ರಧಾನಿ ನೆಹರೂರವರ ಕಾಶ್ಮೀರ ನೀತಿಗೆ ಬೆಂಬಲವನ್ನು ಸೂಚಿಸಿದರು. ಕಾಶ್ಮೀರವು ಚಾರಿತ್ರಿಕ, ಸಾಂಸ್ಕೃತಿಕ, ಭೌಗೋಲಿಕ ಮತ್ತು ಆರ್ಥಿಕವಾಗಿ ಭಾರತದ ಭಾಗವೆಂದು ಅವರು ಸೂಚಿಸಿದ್ದಾರೆ

ಪುಣ್ಯ-ದಿನಾಚರಣೆ

ನಗರದ ಜಯನಗರದ ವನಿತಾ ಸದನದಲ್ಲಿ ಕಳೆದ ಶುಕ್ರವಾರ ತ್ಯಾಗರಾಜರು, ಪುರಂದರದಾಸರು ಮತ್ತು ಮಹಾತ್ಮಾ ಗಾಂಧೀಜಿಯವರ ಪುಣ್ಯ ದಿನಾಚರಣೆಯನ್ನು ನೆರವೇರಿಸಲಾಯಿತು. ಶ್ರೀ ಎಂ. ಯಾಮುನಾಚಾರ್ಯರು ಅಧ್ಯಕ್ಷತೆ ವಹಿಸಿ ಭಾಷಣ ಮಾಡಿ ಮೂವರು ಮಹಾತ್ಮರುಗಳ ಗುಣಾತಿಶಯಗಳನ್ನು ವಿವರಿಸಿದರು. ಸದನದ ವಿದ್ಯಾರ್ಥಿನಿಯರಿಂದ ಸಂಗೀತ ಮತ್ತು ಭಜನೆಗಳು ಆದುವು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರನಾಮಗಳು. ೭-೩೦ ಹಿಂದಿ ಶಿಕ್ಷಣ. ೮-೧೫ [illegible]. ಮಧ್ಯಾಹ್ನ ೧೨ ಮತ್ತು ಸಂಜೆ ೫-೩೦ ಮೈಸೂರು ಸಹೋದರರು-ಸಂಗೀತ. ೧೨-೩೦ ವಾದ್ಯವೃಂದ. ೧೨-೪೫ ವನಿತಾ-ವಿಹಾರ. ೧-೫೦ ಕ್ಲಾರಿಯೊನೆಟ್. ಸಂಜೆ ೬-೨೦ ಗೀತಾವಳಿ ೬-೩೦ ಗ್ರಾಮಸ್ಥರಿಗಾಗಿ ಕಾರ್ಯಕ್ರಮ ೭-೩೦ ಯೋಜನೆಯ ಸಾಧನೆ : ಪ್ರಸಂಗ ... ರಾಧ ಮತ್ತು ಜಯಲಕ್ಷ್ಮಿ, ಗಾಯನ : ಮುದ್ದ... ನ್ ರಿಲೆ. ೯-೧೫ ರಸಮಂಜರಿ. ೧೦ ಚಿತ್ರಗೀತ. ೧೦-೧೫ ಉರ್ದು ಪದ್ಯ ಪಠಣ.

The Model Tutorial Institute

D. Banumiah's High School Buildings, Mysore

Summer Classes for High School II & III Year Classes

Classes commence from 6-2.1957

Hours of work : 8 A.M. to 11 A.M.

Fees . . Rs. 3-0-0 per month

Very efficient and useful instruction in General Subjects

An excellent opportunity for students to keep themselves study-minded and usefully engaged during the long vacation.

For particulars apply to the Organiser

B. Seshagiri Rao
Organiser

ಲಕ್ಷ್ಮಿ ಚಿತ್ರ ★ 8—2—57 ನೇ : ಶುಕ್ರವಾರದಿಂದ : ಆಡಂಬರದ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
ಆಡಂಬರದ ತಮಿಳು ಚಿತ್ರ ★ ಮರುಮಲರ್ಚಿ
ಪಾತ್ರ :- ಎಂ.ಎನ್. ನಂಬಿಯಾರ್, ಶ್ರೀರಾಂ, ಸಿ. ಎಸ್ ಆರ್, ಜಿ. ವರಲಕ್ಷ್ಮಿ, ಇ. ವಿ. ಸರೋಜ ಮುಂತಾದವರು
ಕೊನೆಯ ದಿನ — " [illegible] " (ತಮಿಳು)

SRI GAYATHRI ★ Grand Gala Release from To-morrow : Warner's Technicolor master-piece Jungle Picture with wild animals | To-day Last day SCARAMOUCHE
Morning Shows on Sat & Sun ★ NIGHT & DAY ★ THE ANIMAL WORLD ★

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಹೊರಗಿನ ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸ ಬಜಾರ್ ಬೀದಿ,
ಬೆಂಗಳೂರು-2

ಂಪುಟ : ೧೫] SADHVI : FRIDAY 8-2-1957 ಮೈಸೂರು : ಶುಕ್ರವಾರ ೮-೨-೧೯೫೭ : [ಸಂಚಿಕೆ : [illegible]

ಭಾರತಕ್ಕೆ ಅಂತರ್ರಾಷ್ಟ್ರ ನಿಧಿಯ ೧೨ ಕೋಟಿ ಡಾಲರ್

ಗರದಲ್ಲಿ ರಷ್ಯಾ ಪ್ರೌಢ ವಿದ್ಯಾ ್ಯಾಸ ಚಿತ್ರಪಟಗಳ ಪ್ರದರ್ಶನ

ಮೈಸೂರು ೮

ನಗರದ ಇಂಡೋ ಸೋವಿಯಟ್ ಸಾಂಸ್ಕೃತಿಕ ಘದ ಆಶ್ರಯದಲ್ಲಿ ನಾಳೆಯಿಂದ ೧ ವಾರ ಷ್ಯದ ಪ್ರೌಢ ವಿದ್ಯಾಭ್ಯಾಸದ ಚಿತ್ರಪಟಗಳ ದರ್ಶನವನ್ನು ಗಾಂಧಿ ಚೌಕದಲ್ಲಿರುವ ಸಿ. ಪಿ. ಕಟ್ಟಡದಲ್ಲಿ ಏರ್ಪಡಿಸಲಾಗಿದೆ. ರಷ್ಯದ ವಿದ್ಯಾಲಯಗಳು, ತಾಂತ್ರಿಕ ಸಂಸ್ಥೆ ಮತ್ತು ಶಾಲೆಗಳು ವಿದ್ಯಾಭ್ಯಾಸದ ಪರಿಚಯವನ್ನು ದರ್ಶನದಿಂದ ಮಾಡಿಕೊಳ್ಳಲು ಸಹಕಾರಿಯಾ ಗಿದೆ. ರಷ್ಯದ ವಿದ್ಯಾರ್ಥಿಗಳ ಜೀವನ, ಅವ ಸಾಂಸ್ಕೃತಿಕ ಚಟುವಟಿಕೆ ಮತ್ತು ವಿರಾಮ ವನ್ನು ಅವರು ಉಪಯೋಗಿಸುವ ವಿಧಾನ, ನೇ ಮುಂತಾದ ವಿಷಯಗಳನ್ನು ಅದರಿಂದ ಯಬಹುದಾಗಿದೆ.

ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ರು ಶ್ರೀನಿವಾಸರಾಯರು ಇದರ ಆರಂಭೋ ವನ್ನು ನಾಳಿದ್ದು ಸಂಜೆ ೬ ಗಂಟೆಗೆ ನೆರವೇರಿ ಈ ಪ್ರದರ್ಶನವು ಬೆಳಗ್ಗೆ ೯ರಿಂದ ೧೨ ಸಂಜೆ ೪ರಿಂದ ೮ರವರೆಗೆ ನಡೆಯುವುದು.

ಬಿ. ಜಿ. ದಾಸರ ಉಮೇದುವಾರಿಕೆ ವಾಪಸಾತಿ ಪ್ರಶ್ನೆ

ನಗರದ ದಕ್ಷಿಣ ಕ್ಷೇತ್ರದಿಂದ ವಿಧಾನ ಸಭೆಗೆ ಸಂಘದ ಪರ ಉಮೇದುವಾರರಾಗಿದ್ದ ಡಾ|| ಜಿ. ದಾಸ್‌ರವರು ಸಂಸ್ಥೆಗೆ ಕಾರಣವನ್ನು ನೀಡದೆ ಹಠಾತ್ತನೆ ತಮ್ಮ ಉಮೇದುವಾರಿಕೆ ಯನ್ನು ವಾಪಸ್ಸು ಪಡೆದ ವಿಚಾರವನ್ನು ತೀವ್ರ ಪರಿಶೀಲಿಸಲಾಗುತ್ತಿದೆಯೆಂದೂ, ಪ್ರಾಂ ಯ ಜನ ಸಂಘದ ಅಧಿಕಾರಿಗಳ ಗಮನಕ್ಕೆ ವಿಚಾರವನ್ನು ತರಲಾಗಿದ್ದು ಮುಂದಿನ ಕ್ರಮ ಬಗ್ಗೆ ಅವರ ನಿರ್ದೇಶನವನ್ನು ನಿರೀಕ್ಷಿಸಲಾಗಿ ದೆಂದೂ ನಗರದ ಜನ ಸಂಘ ಪಕ್ಷದ ಕಾರ್ಯ ಶ್ರೀ ಎಂ. ಕೃಷ್ಣಪ್ಪನವರು ತಿಳಿಸಿರುತ್ತಾರೆ.

ಮಧ್ವ ನವಮಿ ಮಹೋತ್ಸವ

ಸರಸ್ವತಿಪುರದಲ್ಲಿರುವ ಅಖಿಲ ಭಾರತ ಮಾ ಮಹಾ ಮಂಡಲದ ವಿದ್ಯಾರ್ಥಿ ನಿಲಯದಲ್ಲಿ ಮಧ್ವ ನವಮಿ ಉತ್ಸವದ ಅಂಗವಾಗಿ ಪ್ರಾ ಕಾಲ ೭ ಗಂಟೆಗೆ ಮಧ್ವವಿಜಯ, ವಾಯು ವೇ ಮೊದಲಾದವುಗಳ ಪಾರಾಯಣ, ಹಾಗೂ ಸಂಜೆ ೪-೩೦ಕ್ಕೆ ವಿ|| ಭೋಳೆ ಕೃ ಚಾರ್ಯರ ಭಾಷಣವು ಏರ್ಪಾಡಾ ಗಿದೆ. ಸರ್ವರಿಗೂ ಸ್ವಾಗತವಿದೆ.

ಗರಕ್ಕೆ ಅಮೆರಿಕದ ರಾಗಮಾಲಿಕೆ ಹಾಡುಗಾರರ ಭೇಟಿ

ಮೆರಿಕದ ರಾಷ್ಟ್ರೀಯ ರಂಗದ ಸಂಸ್ಥೆಯ ಕಾರ್ಯಕ್ರಮದ ಅಂಗವಾಗಿ ಭಾರತಕ್ಕೆ ಆ ಸಿರುವ ಅಲ್ಲಿನ ಸುಪ್ರಸಿದ್ಧ ಹಾರ್ವೆಸ್ಟರ್ ನಗಾರರಾದ ವಿ|| ಡರ್ ಸ್ಟಾಪ್ಸಿರವರ ವೇ ತಿಂಗಳು ೧೯ನೇ ತಾರೀಕು ನಗರ ಬಿಸಿ, ಅಂದು ಸಂಜೆ ಇಲ್ಲಿನ [illegible] ನಿನಾಲಯದಲ್ಲಿ ತಮ್ಮ ವಾದನ ನ ಮಾಡುವರು ಸ್ಥಳೀಯ ರೋಟರಿ ಯವರು ಈ ಕಾರ್ಯಕ್ರಮವು ಏರ್ಪಾ

ಅಕ್ಕಿ ವರ್ತಕರಿಗೆ ಸಾಲದ ಸೌಲಭ್ಯಕ್ಕೆ ನಿರ್ಬಂಧ

ರಿಸರ್ವ್ ಬ್ಯಾಂಕಿಗೆ ಭಾರತ ಸರ್ಕಾರದ ಸೂಚನೆ

ಬೆಂಗಳೂರು ೮

ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ನೆನ್ನೆ ಇಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಭಾಷಣ ಮಾಡಿ ಅಕ್ಕಿಯನ್ನು ಬಚ್ಚಿಡುವುದನ್ನು ತಪ್ಪಿಸುವ ಸಲುವಾಗಿ ಅಕ್ಕಿ ವರ್ತಕರಿಗೆ ಸಾಲದ ಸೌಲಭ್ಯಗಳನ್ನು ನಿರ್ಬಂಧಿಸಬೇಕೆಂದು ಭಾರತ ಸರ್ಕಾರದವರು ರಿಸರ್ವ್ ಬ್ಯಾಂಕಿಗೆ ಸೂಚನೆಯಿತ್ತಿರುವುದಾಗಿ ತಿಳಿಸಿದರು. ಇದರಿಂದ ಅಕ್ಕಿ ಬೆಲೆಯು ನ್ಯಾಯವಾದ ಮಟ್ಟಕ್ಕೆ ಇಳಿಯಲು ಸಹಾಯವಾಗುವುದೆಂದೂ ಅವರು ಅಭಿಪ್ರಾಯಪಟ್ಟರು.

ಅಭಾವವಿರುವ ಪ್ರದೇಶಗಳಲ್ಲಿ ಒದಗಿಸಲು ನಾಡಿನಾದ್ಯಂತ [illegible] ಸಾವಿರ ಫೇರ್ ಪ್ರೈಸ್ ಷಾಪುಗಳನ್ನು ಮುಂದೆಯೂ ನಡೆಸಲು [illegible] ಅವರು [illegible] ವಧಿಯಲ್ಲಿ [illegible] ಮತ್ತು [illegible] ಯನ್ನು ಅಮೆರಿಕ [illegible] ಮು ಮಾಡಿ [illegible] ಗಳನ್ನು ತಡೆಯುವ ಗುರಿಯನ್ನು ಹೊಂದಲಾಗಿದೆಯೆಂದೂ ಅವರು ಹೇಳಿದರು.

ಭಾರತ ಮತ್ತು ಪಾಕಿಸ್ತಾನಗಳಿಗೆ ಬಾಂಡಂಗ್ ರಾಷ್ಟ್ರಗಳ ಕರೆಯೇ?

ಕಾಶ್ಮೀರದ ಸಮಸ್ಯೆಯನ್ನು ಭಾರತ ಮತ್ತು ಪಾಕಿಸ್ತಾನಗಳು ಶಾಂತಿಯುತವಾಗಿ ಇತ್ಯರ್ಥಪಡಿಸಿಕೊಳ್ಳುವಂತೆ ತಾವು ಎರಡು ರಾಷ್ಟ್ರಗಳಿಗೂ ಪತ್ರ ಮುಖೇನ ತಿಳಿಸುವುದಲ್ಲದೆ, ಇತರ ಬಾಂಡಂಗ್ ಸಮ್ಮೇಳನದ ರಾಷ್ಟ್ರಗಳೂ ತಮ್ಮ ಸ್ನೇಹ ಸೌಹಾರ್ದಗಳನ್ನುಪಯೋಗಿಸಿ ಈ ಪ್ರಶ್ನೆಯನ್ನು ಶಾಂತಿಯುತವಾಗಿ ಇತ್ಯರ್ಥಪಡಿಸುವಂತೆ ಮಾಡಲು ತಾವು ಪ್ರಯತ್ನಿಸುವುದಾಗಿ ಸಿಂಹಳದ ಪ್ರಧಾನಿ ಬಂಡಾರನಾಯಕೆಯವರು ತಿಳಿಸಿರುತ್ತಾರೆ.

ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಮುಷ್ಕರ ಹೂಡಿದರು

ಸೇಂಟ್ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ತರಗತಿಗಳ ಸಂತೋಷ ಸಮಾರಂಭವನ್ನು ನಡೆಸಲು ಪ್ರಿನ್ಸಿಪಾಲರನ್ನು ಕೇಳಲಾಗಿ ಅವರು ಅದಕ್ಕೆ ಕಾಲೇಜಿನಲ್ಲಿ ಅವಕಾಶ ಕೊಡಲು ಸಾಧ್ಯವಿಲ್ಲವೆಂದು ಹೇಳಿದರೆಂದೂ, ಆದುದರಿಂದ ಹೋಟೇಲುಗಳಲ್ಲಿ ಅವನ್ನು ನಡೆಸಲು ವಿದ್ಯಾರ್ಥಿಗಳು ಪ್ರಯತ್ನಿಸುತ್ತಿರುವರೆಂದೂ ತಿಳಿದುಬಂದಿದೆ. ಕಾಲೇಜಿನ ವಿದ್ಯಾರ್ಥಿನಿಯರು ತಮ್ಮ ಸಂಘದ ವಾರ್ಷಿಕೋತ್ಸವವನ್ನು ನಡೆಸುವಾಗ ಉಪಾಧ್ಯಾಯರುಗಳನ್ನು ಕರೆಯಕೂಡದೆಂದೂ [illegible] ಅದನ್ನು ನಡೆಸಿ [illegible] ತ್ತಾರೆ. [illegible] ಕಾಲೇಜಿನಲ್ಲಿ ಅವಕಾಶ ಕೊಡದಿರುವ ಬಗ್ಗೆ ವಿದ್ಯಾರ್ಥಿಗಳಲ್ಲಿ ವಿಶೇಷ ಅಸಮಾಧಾನವುಂಟಾಗಿರುವುದಾಗಿ ತಿಳಿದುಬಂದಿದೆ.

ಅಂತರ ರಾಷ್ಟ್ರೀಯ ನಿಧಿಯಿಂದ ಭಾರತಕ್ಕೆ ೧೨॥ ಕೋಟಿ ಡಾಲರ್

ಭಾರತ ಸರ್ಕಾರದವರು ಅಂತರ ರಾಷ್ಟ್ರೀಯ ಹಣಕಾಸಿನ ನಿಧಿಯಿಂದ ೧೨॥ ಕೋಟಿ ಡಾಲರನ್ನು ಪಡೆಯಲು ಸಂಧಾನ ನಡೆಸಿ, ಈಗ ಒಡನೆ ೭ ಕೋಟಿ ಡಾಲರ್ ಹಣವನ್ನೂ, ಒಂದು ತಿಂಗಳನಂತರ ಉಳಿದ ಹಣವನ್ನು ಸಾಲವಾಗಿ ಪಡೆಯಲಿರುವರು. ಇದಲ್ಲದೆ ಭಾರತವು ನಿಧಿಯಿಂದ ಇನ್ನೂ ೭॥ ಕೋಟಿ ಡಾಲರ್ ಹಣವನ್ನು ಹನ್ನೆರಡು ತಿಂಗಳಲ್ಲಿ ತೆಗೆದುಕೊಳ್ಳಬಹುದು.

ಸರ್ವೋದಯ ಮೇಳ

ಪಶ್ಚಿಮವಾಹಿನಿಯಲ್ಲಿ ನಾಳಿದ್ದು, ೧೧ ಮತ್ತು ೧೨ನೇ ತಾರೀಕುಗಳಲ್ಲಿ ನಡೆಯುವ ಸರ್ವೋದಯ ಮೇಳದ ಕಾರ್ಯಕ್ರಮವು ಈ ರೀತಿ ಇದೆ:- ಸೋಮವಾರ ಸಂಜೆ ೬|| ಗಂಟೆಗೆ ಶಿಬಿರದ ಆರಂಭ; ೧೧ರಂದು ಬೆಳಗ್ಗೆ ೫||ಗೆ ಪ್ರಾರ್ಥನೆ, ೭||ರಿಂದ ೧೦||ರವರೆಗೆ ಸಾಮೂಹಿಕ ಶ್ರಮದಾನ, ಮಧ್ಯಾಹ್ನ ೧||ರಿಂದ ೩ ಸೂತ್ರಯಜ್ಞ, ೩ರಿಂದ ೫ ಸರ್ವೋದಯ ಕಾರ್ಯಕರ್ತರ ಸಮ್ಮೇಳನ, ಸಂಜೆ ೬-೩೦ಕ್ಕೆ ಶ್ರೀರಂಗಪಟ್ಟಣದಲ್ಲಿ ಪ್ರಾರ್ಥನಾ ಸಭೆ, ೧೨ರಂದು ಬೆಳಗ್ಗೆ ೫|| ಪ್ರಾರ್ಥನೆ, ೭ರಿಂದ ಸಂಜೆ ೫||ವರೆಗೆ ಅಖಂಡ ಸೂತ್ರಯಜ್ಞ, ಸೂತ್ರಾಂಜಲಿಯ ಸಮರ್ಪಣೆ, ಭಜನೆ, ರಾಷ್ಟ್ರವಾಚನ ಕೀರ್ತನೆ, ಬೆಳಗ್ಗೆ ೧೧ರಿಂದ ೧೨ಕ್ಕೆ ಪ್ರಾರ್ಥನಾ ಸಭೆ ಮತ್ತು ಸಂಜೆ ೫||ಯಿಂದ ೬||ವರೆಗೆ ಪ್ರಾರ್ಥನಾ ಸಭೆ ಮತ್ತು ಮೇಳದ ಮುಕ್ತಾಯ.

ಸಪ್ತಮಂಗಲಂ ಸುಬ್ರಹ್ಮಣ್ಯ ವಾಧ್ಯಾರ್‌ರ ನಿಧನ

ನಗರದ ಹಳೇ ಅಗ್ರಹಾರದಲ್ಲಿದ್ದ ವೇ|| ಬ್ರ|| ಶ್ರೀ ಸಪ್ತಮಂಗಲಂ ಸುಬ್ರಹ್ಮಣ್ಯ ವಾಧ್ಯಾರ್‌ರವರು ಈ ದಿನ ಬೆಳಗ್ಗೆ ೧೧-೩೦ ಗಂಟೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ದಿವಂಗತರು ಸದ್ಗುಣಸಂಪನ್ನರೂ ಮತ್ತು ಶ್ರೇಷ್ಠ ವರ್ಗದ ವೈದಿಕ ಧರ್ಮ ಪ್ರವರ್ತಕರೂ ಆಗಿ, ಬಹು ಮಂದಿಯ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರಿಗೆ ೭೭ ವರ್ಷ ವಯಸ್ಸಾಗಿತ್ತು. ಹಲವು ದಿನಗಳಿಂದಲೂ ಕಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿದ್ದರು. ಅವರಿಗೆ ಇಬ್ಬರು ಪುತ್ರರೂ ಮತ್ತು ಇಬ್ಬರು ಪುತ್ರಿಯರೂ ಇರುವರು. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಕೋರಿ, ಬಂಧು ಮಿತ್ರರಿಗೆ ನಮ್ಮ ಅನುತಾಪವನ್ನು ಸೂಚಿಸುತ್ತೇವೆ.

ಕಳ್ಳತನ

ನಗರದ ಸೀತಾವಿಲಾಸ ಅಗ್ರಹಾರದ [illegible] ಬೀದಿಯಲ್ಲಿರುವ ಶ್ರೀ ಸಿ. ವಿ. ಗೋವಿಂದರಾಯರ ಮನೆಗೆ ನೆನ್ನೆ ಸಂಜೆ ಕಳ್ಳರು ನುಗ್ಗಿ ಸುಮಾರು ೪೦೦ ರೂ. ಬೆಲೆಯ ಸಾಮಾನುಗಳನ್ನು ಅಪಹರಿಸಿರುವುದಾಗಿ ವರದಿಯಾಗಿದೆ.

ನಗರ ಕಾಂಗ್ರೆಸ್ ಕಛೇರಿಗೆ ಟೆಲಿಫೋನ್

ಚುನಾವಣೆಗಳ ಸಂಬಂಧವಾಗಿ ನಗರದ ಕಾಂಗ್ರೆಸ್ ಕಛೇರಿಗೆ ಟೆಲಿಫೋನ್ ಸೌಕರ್ಯವನ್ನು ಕಲ್ಪಿಸಲಾಗಿದೆ. ಅದರ ಸಂಖ್ಯೆ [illegible].

ಕಾಶ್ಮೀರದ ಬಗ್ಗೆ ಭಾರತವು ತನ್ನ ಜವಾಬ್ದಾರಿಯನ್ನು ಮರೆಯದು

ವಿಶ್ವ ಸಂಸ್ಥೆಗೆ ನೆಹರೂರವರ ಸೂಚನೆ

ಕಾಶ್ಮೀರದ ವಿಷಯವಾಗಿ ವಿಶ್ವಸಂಸ್ಥೆಯು ತಪ್ಪು ಹೆಜ್ಜೆಯನ್ನಿಟ್ಟರೆ ಕಾಶ್ಮೀರದಲ್ಲಲ್ಲದೆ ಭಾರತ ಮತ್ತು ಪಾಕಿಸ್ತಾನಗಳೆರಡರಲ್ಲೂ ಕೆಟ್ಟ ಪರಿಣಾಮಗಳಾಗುವುವೆಂದು ನೆಹರೂರವರು ನೆನ್ನೆ ಲಕ್ನೋದಲ್ಲಿ ತಿಳಿಸಿದರು. ಶಾಂತಿಯ ಹೆಸರಿನಲ್ಲಿ ಈ ಸಮಸ್ಯೆಯನ್ನು ಬಿಡಿಸಲು ಹೋಗಿ ಹೊಸ ಸಮಸ್ಯೆಗಳನ್ನು ತಂದೊಡ್ಡಬಾರದೆಂದು ಅವರು ಹೇಳಿದರು. ಭಾರತವು ವಿಶ್ವಸಂಸ್ಥೆಯ ನಿರ್ಣಯಗಳನ್ನು ಗೌರವಿಸಲು ಇಚ್ಛಿಸುತ್ತದೆಂದೂ ಆದರೆ ತನ್ನ ಹಕ್ಕು ಮತ್ತು ಜವಾಬ್ದಾರಿಗಳನ್ನು ಅದು ಮರೆಯುವಂತಿಲ್ಲವೆಂದೂ ಅವರು ಹೇಳಿದರು.

ಮಹಾರಾಣಿ ಕಾಲೇಜು ಸಂಘದ ಮುಕ್ತಾಯ ಸಮಾರಂಭ

ನಗರದ ಮಹಾರಾಣಿ ಕಾಲೇಜಿನ ಸಂಘದ ಮುಕ್ತಾಯ ಸಮಾರಂಭವು ನಾಳೆ ಸಂಜೆ ೫|| ಗಂಟೆಗೆ ನೆರವೇರುವುದು. ವೈಸ್ ಛಾನ್ಸಲರ್ ಡಾ|| ಕೆ. ವಿ. ಪುಟ್ಟಪ್ಪನವರು ಭಾಷಣ ಮಾಡುವರು. ಪ್ರಿನ್ಸಿಪಾಲ್ ಶ್ರೀಮತಿ ಎಂ. ಜಯಲಕ್ಷ್ಮಮ್ಮಣ್ಣಿಯವರು ಅಧ್ಯಕ್ಷತೆ ವಹಿಸುವರು.

ಕಾಲೇಜು ಲಲಿತಕಲಾ ಸಂಘದ ಮುಕ್ತಾಯ ಭಾಷಣ

ಯುವರಾಜಾ ಕಾಲೇಜಿನ ಲಲಿತಾ ಕಲಾ ಸಂಘದ ಮುಕ್ತಾಯ ಭಾಷಣವನ್ನು ಪ್ರೊ|| ಎ. ಎ. ಸಿಕಂದರವರು ನಾಳೆ ಸಂಜೆ ೫|| ಗಂಟೆಗೆ ಮಾಡುವರು. ಡಾ|| ಎಲ್. ಶೀಬಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀಮತಿ ಎಸ್. ಚೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತವು ಏರ್ಪಾಡಾಗಿದೆ.

ಕಲ್ಕತ್ತಾ ಹೈಕೋರ್ಟಿನ ಅಧ್ಯಕ್ಷರಾದ ಅಮಲ ಕುಮಾರ ಸರ್ಕಾರರವರನ್ನು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ ನೇಮಿಸಲಾಗಿದೆ.

ಬೆಂಗಳೂರಿಗೆ ನಾಳೆ ಢೇಬರರ ಭೇಟಿ

ಕಾಂಗ್ರೆಸ್ ಅಧ್ಯಕ್ಷ ಯು. ಎನ್. ಢೇಬರ್‌ರವರು ನಾಳೆ ಬೆಂಗಳೂರಿಗೆ ಭೇಟಿ ಕೊಡುವರು. ಅವರು ರಾಮನಗರ, ಚನ್ನಪಟ್ಟಣ ಮತ್ತು ಕೋಲಾರಗಳಿಗೂ ಭೇಟಿಯಿತ್ತು ಚುನಾವಣೆ ಪ್ರಚಾರ ಭಾಷಣಗಳನ್ನು ಮಾಡುವರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದಿಲ್ರುಬಾ ೭-೧೫ ಮತ್ತು ೮-೧೫ ಚಿಂತನದಲ್ಲಿ ಕೃಷ್ಣಮೂರ್ತಿ-ದೇವರ ನಾಮ ೭-೩೦ ಟಿ. ಆರ್. ಮಹಲಿಂಗಂ-ಕೊಳಲು. ಮಧ್ಯಾಹ್ನ ೧೨ ಚಿಂತನದಲ್ಲಿ ಕೃಷ್ಣಮೂರ್ತಿ-ಸಂಗೀತ. ೧೨-೩೦ ರಿಕಾರ್ಡ್. ೧-೪೫ ಬಾಲಜಗತ್. ೧-೫೦ ದಿಲ್ರುಬಾ. ಸಂಜೆ ೫-೩೦ ಮಿತ್ರ ೬. ಹೆಚ್. ಬಿ. ರಾಮಸ್ವಾಮಿ-ಸಂಗೀತ. ೭-೧೫ ವಚನ ಗಾನ. ೭-೩೦ ಕವಿ ಕೆ ಬುಲ್ಲಿ ನವ್ಯ ಪ್ರಯೋಗ-ಕನ್ನಡ ಭಾಷಣ. ೮-೩೦ ರೇಡಿಯೊ ನ್ಯೂಸ್ ರೀಲ್. ೮-೪೦ ಪ್ರಸಾರಗೀತೆ. ೯-೧೫ ವಾದ್ಯಗೋಷ್ಠಿ, ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ.

ಕಾಂಗ್ರೆಸ್ಸಿನಲ್ಲಿ ಒಳಜಗಳದಿಂದ ಸಂಸ್ಥೆಗೆ ಹಾನಿ

ಕಾರ್ಯಕರ್ತರಿಗೆ [illegible] ಪಂಡಿತ ಪಂತರ ಹಿತೋ[illegible]

ಬೆಂಗಳೂರು

ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು ನೆನ್ನೆ ಇಲ್ಲಿ ಕಾಂಗ್ರೆಸ್ ಕಾರ್ಯಕರ್ತರ [illegible] ಮಾಡಿ [illegible] ಗ್ರೆಸ್ಸಿನವರ ಒಳಜಗಳದಿಂದ ಸಂಸ್ಥೆಯು [illegible]ಗುಂದುವುದೆಂದು ತಿಳಿಸಿ [illegible] ಪ್ರಜಾಸತ್ತಾತ್ಮಕ ಹಿತದ [illegible] [illegible] ಕಾಂಗ್ರೆಸ್ಸಿನ ಅಸ್ತಿತ್ವ [illegible] ವಿರೋಧ ಪಕ್ಷ [illegible] ಅವರು ಹೇಳಿದರು. [illegible] ಕಾಂಗ್ರೆಸ್ಸಿನವರ ಶಿಸ್ತಿನ ಬಗ್ಗೆ ವಿಶೇಷ [illegible] ವೆಂದೂ ತಿಳಿಸಿದರು. [illegible] ಒಟ್ಟಿಗೆ ದೇಶದ ಹಿತಕ್ಕೆ ಬೇರೊಂದು ಸಂಸ್ಥೆಯಿಲ್ಲವೆಂದೂ ಅವರು ಹೇಳಿದರು.

ಪಂಜಾಬಿನಲ್ಲಿ ಅಸ್ಪೃಶ್ಯ ಕಮ್ಯೂನಿಸ್ಟ್ ಉಮೇದುವಾರರ ಸ್ಪರ್ಧೆ

ಪಂಜಾಬಿನ ವಿಧಾನಸಭೆಗೆ ತೇಜಸಿಂಗ್ ಸ್ವತಂತ್ರ ಎಂಬ [illegible] ಕ್ಷೇತ್ರದಿಂದ ಸ್ಪರ್ಧಿಸುತ್ತಿ[illegible]ರೆ [illegible] ಅಸ್ಪೃಶ್ಯರಾಗಿದ್ದರು. ಅವರ ಬಗ್ಗೆ [illegible] ಕಮ್ಯೂನಿಸ್ಟ್ [illegible] ಪ್ರಕಟಿಸಿದೆ.

ಮದರಾಸಿನ ೩೦ ಜನ ಕಾಂಗ್ರೆಸ್ಸಿಗರ [illegible]

[illegible] ಕಾಂಗ್ರೆಸ್ ಸದಸ್ಯರಾದ [illegible] ಸದಸ್ಯತ್ವ [illegible]

ಸಂಗೀತ ಸ್ಪರ್ಧೆಗಳು

[illegible] ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ [illegible] ಕೃತಿಗಳ ಜೂನಿಯರ್ ಮತ್ತು ಸೀನಿಯರ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಜೂನಿಯರ್ ಸ್ಪರ್ಧೆಗೆ [illegible] ಸೀನಿಯರ್ ಸ್ಪರ್ಧೆಗೆ [illegible] ಪ್ರವೇಶ ಧನ [illegible] ವರ್ಷಗಳವರೆಗಿನವರು ಜೂನಿಯರ್ ಮತ್ತು [illegible] ವರ್ಷದವರೆಗಿನವರು ಸೀನಿಯರ್ ಸ್ಪರ್ಧೆಗೆ ಸೇರಬಹುದು. ಆಸಕ್ತರು ವಿದ್ವತ್ ಪರೀಕ್ಷೆಗೆ ಕೂಡದವರಿಗೆ ಅವಕಾಶವಿಲ್ಲ. ಎರಡಕ್ಕೂ [illegible] ಸ್ಥಾನಗಳನ್ನು [illegible] ಸೇರಲಿಚ್ಛಿಸುವವರು [illegible] ತಾರೀಕಿನೊಳಗೆ ಪ್ರವೇಶ ಧನದೊಡನೆ ಪತ್ರವನ್ನು ತಲುಪಿಸಬೇಕು.

ಶಿಶು ವಿಹಾರದ ಪೋಷಕರ ಸಭೆ

ಕನ್ನೇಗೌಡನಕೊಪ್ಪಲಿನಲ್ಲಿರುವ ವಿಜಯ ಶಿಶು ವಿಹಾರದಲ್ಲಿ ಕಳೆದ [illegible] ಶಿಶು ವಿಹಾರದ ಮಕ್ಕಳ [illegible] ಪೋಷಕ ವರ್ಗದವರ ಸಭೆಯು ನಡೆಯಿತು. ಮಕ್ಕಳಿಂದ ಗೀತೆ ನೃತ್ಯ ಕೋಲಾಟಗಳು ನಡೆದುವು. ಪುರಸಭಾ [illegible] ಶ್ರೀ ಎಸ್. ಸಂಜೀವಯ್ಯನವರು ಅಧ್ಯಕ್ಷತೆ ವಹಿಸಿ [illegible] [illegible] [illegible]

ಯುವರಾಜಾ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘ

ನಗರದ ಯುವರಾಜಾ ಕಾಲೇಜಿನ ಹಳೇ ವಿದ್ಯಾರ್ಥಿಗಳ [illegible] ಸಭೆಯು [illegible] ಡಾ! ಎಂ [illegible] ಅಧ್ಯಕ್ಷರಾಗಿಯೂ [illegible] ಕಾರ್ಯದರ್ಶಿಗಳಾಗಿಯೂ [illegible] ಕಾರ್ಯ[illegible] ಆಯ್ಕೆಯಾದರು.

ನೂತನ ಸಿಂಹಾಸನ ಮತ್ತು ಬೆಳ್ಳಿ ಪಾಲಕಿ ಸಂಪ್ರೋಕ್ಷಣೆ

ಹಲವರಿಗೆ ಬಿರುದುಗಳ ವಿನಿಯೋಗ

ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಮೊನ್ನೆ ವೀರ ಸಿಂಹಾಸನ ಮಠದ ನೂತನ ಸಿಂಹಾಸನ ಮತ್ತು ಬೆಳ್ಳಿ ಪಾಲಕಿ ಸಂಪ್ರೋಕ್ಷಣ ಮಹೋತ್ಸವವು ನಡೆಯಿತು. ಕರ್ನಾಟಕದ ನಾನಾ ಭಾಗಗಳಿಂದ ಪ್ರಮುಖರೂ ವಿದ್ವಾಂಸರೂ, ಅಧಿಕಾರಿಗಳೂ ಆಗಮಿಸಿದ್ದರು. [illegible] ಗುರು ಶಿವರಾತ್ರೀಶ್ವರರ ಭಾವಚಿತ್ರ [illegible] ಉತ್ಸವವು ಊರಿನ ಬೀದಿಗಳಲ್ಲಿ ಸಕಲ ಮರ್ಯಾದೆಯೊಡನೆ ವೈಭವದಿಂದ ಜರುಗಿತು.

ಉತ್ಸವದ ಅಂಗವಾಗಿ ಧಾರ್ಮಿಕ ಸಭೆಯು ಏರ್ಪಟ್ಟಿತ್ತು. ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಯವರು ನೂತನ ಸಿಂಹಾಸನವನ್ನು ಅಲಂಕರಿಸಿದ್ದರು. ಪ್ರಾರ್ಥನೆ ಮತ್ತು ಶ್ರೀ ಶಿವಲಿಂಗಸ್ವಾಮಿ ಹಿರೇಮಠರವರಿಂದ ಸ್ವಾಗತ ಗೀತೆಯಾದ ನಂತರ ಮೈಸೂರಿನ ಡಾ॥ ಎಂ. ಜಿ. ನಂಜುಂಡಾರಾಧ್ಯ [illegible] ಮುಧೋಳಿನ ಶ್ರೀ ಮೃತ್ಯುಂಜಯಸ್ವಾಮಿಗಳೂ ಮತ್ತು ಗದಗಿನ ಶ್ರೀ ನಾಗಭೂಷಣಶಾಸ್ತ್ರಿಗಳೂ ಭಾಷಣ ಮಾಡಿದರು.

ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಸ್ವಾಮಿಗಳಿಗೆ ಭಕ್ತ ಮಂಡಲಿಯ ಪರವಾಗಿ ಒಪ್ಪವತ್ತಳೆಯನ್ನು ಸಮರ್ಪಿಸಿದರು. ಸ್ವಾಮಿಗಳವರ ಪೀಠದ ಮಹನೀಯರಿಗೆ ಬಿರುದು ಮತ್ತು ಪ್ರಶಸ್ತಿಗಳನ್ನು ಇತ್ತು ಗೌರವಿಸಿದರು.

ಡಾ॥ ಎಂ. ಜಿ. ನಂಜುಂಡಾರಾಧ್ಯರಿಗೆ—[illegible] ಸಾಹಿತ್ಯರತ್ನ [illegible] ಗದಗಿನ [illegible] ಪ್ರವೀಣ ಬೆಂಗಳೂರಿನ ಶ್ರೀ ಬಿ. ಎಸ್. [illegible] ಪ್ರಭಾತ [illegible] ಮತ್ತು ಮೈಸೂರಿನ [illegible] ಎಂ. ಸಿ. ಮಹದೇವಸ್ವಾಮಿ—[illegible] ಪ್ರವೀಣ [illegible]

[illegible] ಬಳಿಕ [illegible] ಮೇಲೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ರಷ್ಯದಲ್ಲಿ [illegible] ಕೋಟಿ ಪೌಂಡು ಮಿಲಿಟರಿ ವೆಚ್ಚ

ರಷ್ಯವು ಮುಂದಿನ [illegible] ಕೋಟಿ ಪೌಂಡಿನಷ್ಟು ಹಣವನ್ನು [illegible] ವೆಚ್ಚ ಮಾಡಲಿದೆ. ಇದು [illegible] ಇದು [illegible] ಕಳೆದ ವರ್ಷ ಮಿಲಿಟರಿಗಾಗಿ [illegible] ವೆಚ್ಚ ಮಾಡಲು ನಿಗದಿಯಾಗಿದ್ದಿತು.

ಕ್ಯಾಲೆಂಡರ್ ಸ್ವೀಕಾರ

ನಗರದ ಸುಪ್ರಸಿದ್ಧ ಗಡಿಯಾರದ ವರ್ತಕರಾದ ಶ್ರೀ ರಾಮುಕಟಂಗ ಕಂಪೆನಿಯವರು ಕಳುಹಿಸಿಕೊಟ್ಟಿರುವ [illegible] ಚಿತ್ರದಿಂದ ಕೂಡಿದ ಹೊಸ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿರುತ್ತೇವೆ.

ಪ್ರಭಾ ಶಿಶುವಿಹಾರ

ಮೈಸೂರು [illegible] ವಾಣೀವಿಲಾಸಪುರಂ
ಯಾದವಗಿರಿಯಲ್ಲಿರುವ
ಕಸ್ತೂರಿ ಬಾ ಕನ್ಯಾ ವಿದ್ಯಾಲಯದ
ಆಶ್ರಯದಲ್ಲಿ, ಶ್ರೀ ಜಗದಂಬಾ ಶಿಶುವಿಹಾರದ
ಡೈರೆಕ್ಟರ್
ಶ್ರೀ ಡಿ. ಕೃಷ್ಣಮೂರ್ತಿಯವರ
ನೇತೃತ್ವದಲ್ಲಿ
ಪ್ರಭಾ ಶಿಶುವಿಹಾರವನ್ನು
ತೆರೆಯಲಾಗಿದೆ

ಶಿಶು ವಿದ್ಯಾಭಿಮಾನಿಗಳಾದ ಮಾತಾಪಿತೃಗಳು ತಮ್ಮ ಮಕ್ಕಳನ್ನು ಮೇಲ್ಕಂಡ ಶಿಶುವಿಹಾರಕ್ಕೆ ಸೇರಿಸಿ ಪ್ರಯೋಜನ ಪಡೆಯಬೇಕಾಗಿ ವಿನಂತಿ.

ಪ್ರವೇಶ ಧನ	1—0—0
ಶಾಲಾ ಶುಲ್ಕ	2—0—0
ಜುಂ	3—0—0

ಯಮುನಾ [illegible] ವಾಸಪ್ಪ,
ಸಂಚಾಲಕಿ

Edited Printed and Published by
A. R. Nagarajan at Sadhvi Press
D. Subbiah Road, Mysore

ಸಿನಾಯ್‌ನಿಂದ ವಾಪಸಾತಿಗೆ ಇಸ್ರೇಲಿನ ಷರತ್ತು

ಸಿನಾಯ್ ಪ್ರದೇಶದಿಂದ ಪೂರ್ಣವಾಗಿ ವಾಪಸಾಗಬೇಕೆಂದು ವಿಶ್ವಸಂಸ್ಥೆಯ ಸಾಧಾರಣ ಸಭೆಯು ಮಾಡಿರುವ ಸೂಚನೆಯನ್ನು ಪಾಲಿಸಲು ಇಸ್ರೇಲಿಗೆ ಸಾಧ್ಯವಾಗುವಂತೆ ಅಕಾಬಾ ಖಾರಿಯಲ್ಲಿ ಉಭಯ ಪಕ್ಷಗಳವರೂ ಯುದ್ಧದ ರೀತಿಯ ನಡವಳಿಕೆಗಳನ್ನು ಕೈಗೊಳ್ಳದಿರುವ ಬಗ್ಗೆ ಈಜಿಪ್ಟಿನಿಂದ ಭರವಸೆಯನ್ನು ಪಡೆಯಬೇಕೆಂದು ಇಸ್ರೇಲು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರಿಗೆ ತಿಳಿಸಿದೆ.

ಆಂಧ್ರದಲ್ಲಿ ಎರಡು ಕಡೆ ಭಾರಿ ಕಬ್ಬಿಣದ ಗಣಿಗಳ ಪತ್ತೆ

೩೮ ಕೋಟಿ ಟನ್ನಿನ ಅದಿರು ಸಿಗುವ ಎರಡು ಭಾರಿ ಕಬ್ಬಿಣದ ಗಣಿಗಳನ್ನು ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ ಭಾರತ ಸರ್ಕಾರದ ಭೂಗರ್ಭ ಇಲಾಖೆಯವರು ಕಂಡುಹಿಡಿದಿರುತ್ತಾರೆ. ಹಲವಾರು ಶತಮಾನಗಳವರೆಗೆ ಅಲ್ಲಿ ಕಬ್ಬಿಣವನ್ನು ತೆಗೆಯಬಹುದೆಂದು ಹೇಳಲಾಗಿದೆ. ಒಂದು ಕಡೆ ಶೇಕಡ ೩೫ರಿಂದ ೩೭ ಮತ್ತು ಇನ್ನೊಂದು ಕಡೆ ೫೦ರಷ್ಟು ಕಬ್ಬಿಣವು ಅದಿರಿನಲ್ಲಿ ಸಿಗುವುದು.

ಭಾರತದಲ್ಲಿ ಅಧಿಕ ವ್ಯಾಗನ್ನುಗಳ ತಯಾರಿಕೆ

ಭಾರತದಲ್ಲಿ ಈಗ ವರ್ಷಕ್ಕೆ [illegible],೦೦೦ ವ್ಯಾಗನ್ನುಗಳನ್ನು ತಯಾರಿಸುತ್ತಿರುವುದನ್ನು ೩೬ ಸಾವಿರಕ್ಕೆ ಹೆಚ್ಚಿಸಲು ರೈಲ್ವೆ ಬೋರ್ಡಿನವರು ನಿರ್ಧರಿಸಿದ್ದಾರೆ. ಇದೇ ಏಷ್ಯದಲ್ಲೇ ಭಾರತವು ಬಹಳ ಹೆಚ್ಚಾಗಿ ವ್ಯಾಗನ್ನುಗಳನ್ನು ತಯಾರಿಸುತ್ತಿದೆ.

ಪಂಚಾಂಗ ಸ್ವೀಕಾರ

ಕೊಳ್ಳೇಗಾಲದ ಜ್ಯೋತಿಸ್ಸಿದ್ಧಾಂತ ಕೇಸರಿ ವೇ॥ ಬ್ರ॥ ವೆಂಕಟಸುಬ್ಬಾಶಾಸ್ತ್ರಿಗಳವರು ಪ್ರಕಟಿಸಿರುವ ಹೇವಿಳಂಬಿ ನಾಮ ಸಂವತ್ಸರದ ಪಂಚಾಂಗವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಇವರಲ್ಲಿ ಸೂರ್ಯ ಸಿದ್ಧಾಂತ, ವಾಕ್ಯ, ಆರ್ಯಭಟ, ದೃಗ್ಗಣಿತ ಈ ನಾಲ್ಕು ರೀತಿಯ ವಿವರಗಳು ಕೊಡಲ್ಪಟ್ಟಿವೆ. ಕೇಂದ್ರ ಸರ್ಕಾರದವರು ಭಾರತಖಂಡಕ್ಕೆಲ್ಲಾ ಒಂದೇ ಪಂಚಾಂಗವನ್ನು ಏರ್ಪಡಿಸಬೇಕೆಂದು ಪ್ರಯತ್ನಪಡುತ್ತಿರುವ ವಿಚಾರವಾಗಿ ಲೇಖಕರು ಕೂಲಂಕಷವಾಗಿ ವಿಮರ್ಶೆ ಮಾಡಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುತ್ತಾರೆ. ಆಸ್ತಿಕ ಮಹನೀಯರು ಪ್ರಾಚೀನ ಮಾರ್ಗವಾದ ಸಿದ್ಧಾಂತ ಪ್ರಕಾರವಾಗಿ ಕರ್ಮಾನುಷ್ಠಾನ ಮಾಡಬೇಕೆಂದು ಅವರು ಸೂಚಿಸಿರುತ್ತಾರೆ. ವರ್ಷ ಫಲ, ದ್ವಾದಶ ರಾಶಿಯ ಫಲ, ಗುರು ಶುಕ್ರಾಸ್ತೋದಯ, ಗ್ರಹಣ ಮುಂತಾದ ವಿವರಗಳನ್ನೂ ಸಹ ಕೊಡಲಾಗಿದೆ.

ವಂದನೆಗಳು

ಮಿತ್ರರು ಮತ್ತು ವಹಿವಾಟುದಾರರಿಗೆ 25 ವರ್ಷದ ಸಹಕಾರ ಸವಿ ನೆನಪಿಗಾಗಿ

ಸಿ. ನಾರಾಯಣರಾವ್,
ಮೂರ್ತಿ ಸ್ಟೋರ್ಸ್, ಸೊರಡಿ ರಸ್ತೆ, ಮೈಸೂರು

NATIONAL LEAGUE,
Anathalaya Buildings Mysore
Offers excellent coaching for students of the High School classes
Join immediately

ಫ್ರಾನ್ಸಿನ ಕಾಮನ್‌ವೆಲ್ತ್

ಫ್ರೆಂಚ್ ರಾಷ್ಟ್ರಗಳಿಗೆ ಸಂಬಂಧಿಸಿದ ಕಾಮನ್‌ವೆಲ್ತನ್ನು ರಚಿಸಲು ಫ್ರಾನ್ಸು ದೀರ್ಘಾವಧಿಯ ಯೋಜನೆಯೊಂದನ್ನು ಸಿದ್ಧಗೊಳಿಸುತ್ತಿರುವುದಾಗಿ ಫ್ರೆಂಚ್ ವಿದೇಶಾಂಗ ಮಂತ್ರಿ [illegible] ವರು ತಿಳಿಸಿರುತ್ತಾರೆ.

ಬಣಜಿಗ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ

ಸರಸ್ವತಿಪುರದಲ್ಲಿರುವ ಬಣಜಿಗರ ಸಂಘ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವು ಕಳೆದ ಶನಿವಾರ ಆಚರಿಸಲಾಯಿತು.

ಶ್ರೀಮತಿ ಜೆಚ್. ಆರ್. ಲೀಲಾವತಿಯವರಿಂದ ಪ್ರಾರ್ಥನೆ ಮತ್ತು ನಿಲಯದ ವಾರ್ಡನ್ ರಾದ ಶ್ರೀ ಎಸ್. ನಾಗರಾಜುರವರಿಂದ ಸ್ವಾಗತ ವಾದನಂತರ ಕ್ಷೇಂಥದ ಕಾರ್ಯದರ್ಶಿಗಳಾದ ಎ. ನಾರಾಯಣಸ್ವಾಮಿಯವರು ನಿಲಯದ ವಾರ್ಷಿಕ ವರದಿಯನ್ನು ಓದಿದರು. ವಿವಿಧ [illegible] ಮತ್ತು ಲಘು ಸಂಗೀತಗಳಾದನಂತರ [illegible] ಎಲ್. ಸೀಬಯ್ಯನವರು ನಿಲಯದ ವಾರ್ಷಿಕ ಸಂಚಿಕೆಯಾದ "ಜ್ಯೋತಿ" ಯನ್ನು ಉದ್ಘಾಟನೆ ಮಾಡಿದರು. ಶ್ರೀ ಸಿ. ಕೆ. ರಾಜಪ್ಪನವರು ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಭಾಷಣ ಮಾಡಿದರು. ಶ್ರೀ ಎಂ. ವಿ. ಶ್ರೀನಿವಾಸರು ಉತ್ತರವಿತ್ತು, ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಡಾ॥ ಸೀ[illegible]ಯ್ಯನವರು ಮಾತನಾಡಿ, ವಿದ್ಯಾರ್ಥಿಗಳು ಹೆಚ್ಚುಹೆಚ್ಚು ಶ್ರಮಪಡಬೇಕೆಂದೂ, ಆಲಸ್ಯವನ್ನು ಬಿಡಬೇಕೆಂದೂ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಡಾ॥ ಕೆ. ವೆಂಕಟಗಿರಿಗೌಡರ ಭಾಷಣ ಮತ್ತು ಶ್ರೀ ಚನ್ನಕೇಶವಯ್ಯನವರ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಚಾಮುಂಡೇಶ್ವರಿ
ಟಾಕೀಸ್
8—2—57ರಿಂದ ಪ್ರಾರಂಭ
ತಾಯಿಕ್ಕು ಪಿನ್ ತಾರ
(ತಮಿಳು)
ಪಾತ್ರ ಎಂ. ಜಿ. ರಾಮಚಂದ್ರ, ಭಾನುಮತಿ
ಟಿ. ಎಸ್. ಬಾಲಯ್ಯ, ಕಣ್ಣಾಂಬ

ಜೈ ಹಿಂದ್!
ಸುಭದ್ರ ಸರ್ಕಾರದ ರಚನೆಯ ಅಗತ್ಯ

ಪ್ರಕೃತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಸುಭದ್ರವಾದ ಸರ್ಕಾರವನ್ನು ರಚಿಸುವುದು ಅತ್ಯಗತ್ಯ. ಇದಕ್ಕಾಗಿ ರೂ ಕಾಂಗ್ರೆಸ್ಸಿಗೆ ಬೆಂಬಲ ನೀಡಬೇಕು.
—ಪ್ರಧಾನಿ



ಕಾಂಗ್ರೆಸ್ ಉಮೇದುವಾರರಿಗೆ
ದಯವಿಟ್ಟು ನಿಮ್ಮ ಓಟನ್ನು ಕೊಡಿ

ಪ್ರಭುದೇವಾ ಥಿಯೇಟರ

(ಹೆದ್ದಾರಿ ಟಾಕೀಸ್)

8-2-57ನೆ ಶುಕ್ರವಾರದಿಂದ : ಅಮೋಘವಾದ 7ನೆಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು

ಭಕ್ತ ಮಾರ್ಕಂಡೇಯ

ಪಾತ್ರ – ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ರಘುರಾಮಯ್ಯ, ಮಾಸ್ಟರ್ ಆನಂದ್, ಬೇಬಿ ಉಮಾ, ಪದ್ಮಿನಿ ಪ್ರಿಯದರ್ಶಿನಿ, ಬಾಲಸರಸ್ವತಿ ನರಸಿಂಹರಾಜು, ರಿಕ್ಕಿ ನಾಥನ್

ರಿಜಿಸ್ಟರ್ಡ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಹೊಸ ಆವೃತ್ತಿಗಳು
ಬಂದಿವೆ
ಮೈಸೂರು ಸಿಲ್ಕ್, ಧರ್ಮಾವರಂ,
[illegible], ನಾಗಪುರ, [illegible]
ಸೀರೆಗಳು [illegible]
ಎಂ.ವಿ. ಭೋಜಯ್ಯ
[illegible]
[illegible]
ಮೈಸೂರು : ಫೋನ್ 440

ಸಂಪುಟ : ೧೫] SADHVI : SATURDAY 9-3-1957 ಮೈಸೂರು : ಶನಿವಾರ ೯-೩-೧೯೫೭ : [ಸಂಚಿಕೆ : [illegible]

ಸ್ಥಳೀಯ ಸಂಸ್ಥೆ ಶಾಲಾ ಅಧ್ಯಾಪಕರಿಂದ ಮುಷ್ಕರವೇ ?

ಸ್ಥಳೀಯ ಸಂಸ್ಥೆಗಳ ಅಧ್ಯಾಪಕರಿಂದ ನೇರ ಕಾರ್ಯಾಚರಣೆಯೋ ?

[illegible] ಕಾಲದ ಬೇಡಿಕೆಗಳ ಬಗ್ಗೆ ತೀರ್ಮಾನ

ಬೆಂಗಳೂರು ೯

ಹೊಸ ಮೈಸೂರು ಸಂಸ್ಥಾನಕ್ಕೆ ಸೇರಿದ [illegible] ಜಿಲ್ಲಾ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳ ಉಪಾಧ್ಯಾಯರ ಪ್ರತಿನಿಧಿಗಳ ಸಮ್ಮೇಳನವು ನೆನ್ನೆ ಇಲ್ಲಿ ನಡೆಯಿತು. ಸಂಸ್ಥಾನ ವಿದ್ಯಾಭ್ಯಾಸ ಫೆಡರೇಷನ್ನಿನ ಅಧ್ಯಕ್ಷ ಶ್ರೀ ಜೆ. [illegible] ರಾಧ್ಯರು ಅಧ್ಯಕ್ಷತೆ ವಹಿಸಿದ್ದರು.

ಸಂಬಳ, ಭತ್ಯ, [illegible] ವೇತನ ಮುಂತಾದುಗಳ ಬಗ್ಗೆ ಸರ್ಕಾರಿ ಅಧ್ಯಾಪಕರುಗಳಿಗೂ, ಸ್ಥಳೀಯ ಸಂಸ್ಥೆಗಳಲ್ಲಿರುವವರಿಗೂ ತಾರತಮ್ಯವೆಣಿಸುತ್ತಿರುವುದರ ಬಗ್ಗೆ ಸಮ್ಮೇಳನವು ತೀವ್ರ ಅಸಮಾಧಾನವನ್ನು ಸೂಚಿಸಿತು.

ಉಪಾಧ್ಯಾಯರ ಕುಂದುಕೊರತೆಗಳನ್ನು ನಿವಾರಿಸುವ ಬಗ್ಗೆ ನೇರ ಕಾರ್ಯಾಚರಣೆಯೂ [illegible], ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮ್ಮೇಳನವು ನಿರ್ಧರಿಸಿತು.

ಅದಕ್ಕಾಗಿ ಕ್ರಿಯಾ ಸಮಿತಿಯೊಂದನ್ನು ರಚಿಸಲಾಯಿತು. ಅದರಲ್ಲಿ ಶ್ರೀಗಳಾದ ಜೆ. ಬಿ. ಮಲ್ಲಾರಾಧ್ಯ, ಎಂ. ಮಹಾಬಲರಾವ್, ಎಂ. ಪಿ. ಎಲ್. ಶಾಸ್ತ್ರಿ, ಕೆ. ಗುರುರಾಜಾರಾವ್ ಮತ್ತು ಬಿ. ನರಸಿಂಹಮೂರ್ತಿಯವರು ಸದಸ್ಯರಾಗಿರುವರು.

ಗೋವಾದಲ್ಲಿ ರಾಷ್ಟ್ರೀಯರಿಂದ ಸಶಸ್ತ್ರ ಹೋರಾಟವೇ ?

ಗೋವಾದ ವಿಮೋಚನಾ ಚಳುವಳಿಯಲ್ಲಿ [illegible] ಭಂಗಗೊಂಡ ಸ್ವಾತಂತ್ರ್ಯ ಪ್ರೇಮಿಗಳು ಸಶಸ್ತ್ರ ಕ್ರಾಂತಿಕಾರಿ ಹೋರಾಟ ನಡೆಸಲು ಸಿದ್ಧರಾಗುವ ಸ್ಥಿತಿಯುಂಟಾಗುತ್ತಿದೆಯೆಂದು [illegible] ಸಭಾ ಸದಸ್ಯ [illegible] ಚೌಧುರಿಯವರು ತಿಳಿಸಿರುತ್ತಾರೆ. ಪೋರ್ಚುಗೀಸ್ ಅಧಿಕಾರಿಗಳ ಭಯೋತ್ಪಾದನೆ [illegible] ಬೇರೊಂದು ಮಾರ್ಗವಿಲ್ಲವೆಂದು ಅಲ್ಲಿನ ರಾಷ್ಟ್ರೀಯರು ಭಾವಿಸಿ[illegible] ಚೌಧುರಿಯವರು ಅಭಿಪ್ರಾಯಪಟ್ಟಿರುವರು. ಗೋವಾ ಜನರಿಗೆ ಸ್ವಾತಂತ್ರ್ಯ [illegible] ಸ್ವಾತಂತ್ರ್ಯ ಹೋರಾಟದಲ್ಲಿ [illegible] ಆಸಕ್ತಿ ವಹಿಸುತ್ತಿಲ್ಲವೆಂದೂ [illegible] ಪೋರ್ಚುಗೀಸರು ಪ್ರಯತ್ನಿಸುತ್ತಿರು[illegible] ಯೂ ಅವರು ಹೇಳುವರು.

ಅರೇಬಿಯಕ್ಕೆ ಅಮೆರಿಕದ ಶಸ್ತ್ರಾಸ್ತ್ರ ಸರಬರಾಜು

ಐಸನ್‌ಹೋವರ್ ಮತ್ತು [illegible] ಪ್ರಕಟನೆಯೊಂದನ್ನು ಹೊರಡಿಸಿ, ಸೌದಿ ಅರೇಬಿಯಕ್ಕೆ ಅಮೆರಿಕದ ಶಸ್ತ್ರಾಸ್ತ್ರ ಸರಬರಾಜು ಎರಡು ರಾಷ್ಟ್ರಗಳಿಗೂ ಒಪ್ಪಂದವಾಗಿರುವ[illegible] ತಿಳಿಸಿರುತ್ತಾರೆ. [illegible] ವಿಮಾನ ನೆಲೆಯನ್ನು [illegible] ಐದು ವರ್ಷಕಾಲ ಅಮೆರಿಕವು ಉಪಯೋಗಿ[illegible] ಒಪ್ಪಂದವಾಗಿರುವುದಾಗಿ [illegible] [illegible] ಸಹಾಯವನ್ನೂ ಒದಗಿಸಲಾಗುವುದು.

ಇಸ್ರೇಲಿನೊಡನೆ ಹ್ಯಾಮರ್ ಷೀಲ್ಡರ ಸಂಧಾನದಲ್ಲಿ ಬಿಕ್ಕಟ್ಟು

ಇಸ್ರೇಲಿ ಸೈನಿಕರು [illegible] ಪ್ರದೇಶದಿಂದ ಪೂರ್ಣವಾಗಿ ವಾಪಸಾಗಬೇಕೆಂದು ವಿಶ್ವಸಂಸ್ಥೆಯು ಮಾಡಿರುವ ನಿರ್ಣಯದ ಸಂಬಂಧವಾಗಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್ ಷೀಲ್ಡರು ಇಸ್ರೇಲಿನ ವಿದೇಶಾಂಗ ಡೈರೆಕ್ಟರ್ ಜನರಲ್ಲರಾದ ವಾಲ್ಟರ್ ಐಟಾನ್‌ರವರೊಡನೆ ನಡೆಸುತ್ತಿದ್ದ ಮಾತುಕತೆಗಳಲ್ಲಿ ಬಿಕ್ಕಟ್ಟುಂಟಾಗಿರುವುದೆಂದು ವರದಿಯಾಗಿದೆ. ಅಕಾಬಾ ಖಾರಿಯಲ್ಲಿ ತನ್ನ ಹಡಗುಗಳ ಸಂಚಾರಕ್ಕೆ ಸ್ವಾತಂತ್ರ್ಯ ಬೇಕೆಂದು ಇಸ್ರೇಲು ಭರವಸೆಗಾಗಿ ಒತ್ತಾಯಪಡಿಸುತ್ತಿದೆ. ವಿಶ್ವಸಂಸ್ಥೆಯ ನಿರ್ಣಯವನ್ನು ಪಾಲಿಸುವಂತೆ ಅಮೆರಿಕದ ಅಧ್ಯಕ್ಷರು ಬರೆದಿರುವ ಪತ್ರಕ್ಕೆ ಇಸ್ರೇಲಿನ ಪ್ರಧಾನಿ ಬೆನ್ ಗುರಿಯಾನರವರು ಉತ್ತರವಿತ್ತು ಬೇಷರತ್ತಿನ ವಾಪಸಾತಿಗೆ ಇಸ್ರೇಲು ನಿರಾಕರಿಸಿರುವುದಾಗಿ ತಿಳಿಸಿರುತ್ತಾರೆ.

ಹಿಂದೂಸ್ಥಾನ ಕಾರ್ಖಾನೆಯಲ್ಲಿ ಪ್ರಯಾಣಿಕರ ವಿಮಾನ ತಯಾರಿ

ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಪ್ರಯಾಣಿಕರ ವಿಮಾನಗಳನ್ನು ತಯಾರಿಸುವ ಬಗ್ಗೆ ಯೋಜನೆಯನ್ನು ಸಿದ್ಧಗೊಳಿಸಲಾಗಿದೆ ಮತ್ತು ಅಲ್ಲಿ ದಿನಕ್ಕೊಂದು ರೈಲು ಗಾಡಿಯನ್ನು ತಯಾರಿಸಲೂ ಆಲೋಚಿಸಲಾಗಿದೆ.

ವಿದ್ಯಾರ್ಥಿನಿಲಯದ ರಜತೋತ್ಸವ ಮತ್ತು ವಾರ್ಷಿಕೋತ್ಸವ

ನಗರದ ಗಾಂಧಿ ಚೌಕದಲ್ಲಿರುವ ಶ್ರೀ ಕಾವೇರಿ ಪಟ್ಟಣಂ ಸುಬ್ಬರಾಯ ಶ್ರೇಷ್ಠಿ ಮತ್ತು ಅಣ್ಣಮ್ಮ ಶ್ರೇಷ್ಠಿಯವರ ಉಚಿತ ವಿದ್ಯಾರ್ಥಿನಿಲಯದ ರಜತ ಮಹೋತ್ಸವ ಮತ್ತು ವಾರ್ಷಿಕೋತ್ಸವಗಳು ನಾಳೆ ಸಂಜೆ ೫॥ ಗಂಟೆಗೆ ಕಾವೇರಿ ಪಟ್ಟಣಂ [illegible] ನೆರವೇರುವುವು. [illegible] ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ॥ ಎಸ್. ನಾರಾಯಣ ಶ್ರೇಷ್ಠಿಯವರು ಅಧ್ಯಕ್ಷತೆ ವಹಿಸುವರು. ಸುಪ್ರಸಿದ್ಧ ಕಾದಂಬರಿಕಾರರಾದ ಶ್ರೀ ನಿರಂಜನರವರು ಸಂಘದ ಮುಖ್ಯ ಭಾಷಣ ಮಾಡುವರು. ಶ್ರೀಮತಿ ಅನುಪಮಾರವರ ಭಾಷಣ ಇರುವುದು. ಇದಲ್ಲದೆ ವೀಣಾವಾದನ, ನೃತ್ಯ, ನಾಟಕ ಮುಂತಾದುವು ನಡೆಯುವುವು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನಿಮಿ. ೭-[illegible] ಮತ್ತು [illegible] ಎಂ. ಶ್ರೀನಿವಾಸಮೂರ್ತಿ[illegible] ದೇವರನಾಮ ೭-೩೦ ಉದಯ ಸಂಗೀತ [illegible]-೩೦ ಎ. ವಿ. [illegible] [illegible]-ನಾಗೇಶ್ವರ [illegible]-೩೦ ಬಾಲಕರಿಗೆ [illegible] [illegible] ಮತ್ತು [illegible] ವಿಠಲಂ [illegible] ಸಂಗೀತ [illegible]-೩೦ ವಾದ್ಯವೃಂದ. [illegible] ಗೀತೆಗಳು. [illegible] ಮತ್ತು ರಾತ್ರಿ [illegible]-೩೦ [illegible] ಮತ್ತು [illegible]-ಸಂಗೀತ ಸಂಜೆ [illegible] ಪಾಶ್ಚಾತ್ಯ ಸಂಗೀತ [illegible] ಮತ್ತು ರಾತ್ರಿ [illegible] [illegible] ದೇವರನಾಮ [illegible]-೩೦ ವಾರದ [illegible] ಕ್ರಮದ ವಿವರಗಳು. [illegible] ೬-೩೦ [illegible] ವಿಷಯಗಳ ಬಗ್ಗೆ ಭಾಷಣ [illegible] ಭಕ್ತ ಸಂಗೀತ

ರಾಷ್ಟ್ರೀಯ ವ್ಯಾಯಾಮ ಸ್ಪರ್ಧೆಗಳ ಆರಂಭೋತ್ಸವ

ಬೆಂಗಳೂರು ೯

ಇಲ್ಲಿನ ಸಂಪಂಗಿರಾಮ ಕ್ರೀಡಾಂಗಣದಲ್ಲಿ ನೆನ್ನೆ ಮಧ್ಯಾಹ್ನ ರಾಷ್ಟ್ರೀಯ ವ್ಯಾಯಾಮ ಸ್ಪರ್ಧೆಗಳ ಆರಂಭೋತ್ಸವವನ್ನು ಮಾಜಿ [illegible] ಜನರಲ್ ಕಾರಿಯಪ್ಪನವರು ನೆರವೇರಿಸಿದರು. [illegible] ಭಾಗವಹಿಸಿದ್ದರು. ಶ್ರೀ ಕಾರಿಯಪ್ಪನವರು ವ್ಯಾಯಾಮ ಧ್ವಜವನ್ನು ಆರೋಹಣ ಮಾಡಿದರು. ವಿದ್ಯಾ [illegible] ಕಾರಿಗಳೂ, [illegible] ಅಧ್ಯಕ್ಷರೂ ಆದ ಶ್ರೀ ಸಿ. ನರಸಿಂಹಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ಭಾರತದ ಒಲಿಂಪಿಕ್ ವ್ಯಾಯಾಮ ಸಂಘದ ಅಧ್ಯಕ್ಷರಾದ [illegible] ಮಹಾರಾಜರು ಭಾಗವಹಿಸಿದ್ದರು.

ವಿವಾಹದ ಬಗ್ಗೆ ಮಾತು ಕೊಟ್ಟು ತಪ್ಪಿದ್ದಕ್ಕೆ ದಂಡ

ಬೆಂಗಳೂರಿನ ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಗುಮಾಸ್ತರಾಗಿರುವ ಶ್ರೀ ಶ್ಯಾಮಸುಂದರರವರಿಗೆ [illegible] ಶ್ರೀಮತಿ ಚಂದ್ರಮ್ಮ ಎಂಬ [illegible] ಕನ್ಯೆಯು [illegible] ವಿವಾಹ [illegible], ಅದಕ್ಕೆ ತಪ್ಪಿದುದಕ್ಕಾಗಿ [illegible] [illegible] ಶ್ರೀ [illegible] [illegible] ನಷ್ಟ [illegible] ೫೦೦ ರೂ. [illegible], [illegible] ೫೦೦ ರೂ. [illegible] [illegible]

ಯುವರಾಜಾ ಕಾಲೇಜಿನಲ್ಲಿ ಸಂಸ್ಕೃತೋತ್ಸವ

ನಾಳೆ ಮತ್ತು ನಾಡಿದ್ದು ಸಂಜೆ [illegible] ಯುವರಾಜಾ ಕಾಲೇಜಿನಲ್ಲಿ ಸಂಸ್ಕೃತೋತ್ಸವ ನಡೆಯುವುದು. ನಾಳೆ ಡಾ॥ [illegible] ಅಧ್ಯಕ್ಷತೆ ವಹಿಸುವರು. ಶ್ರೀ [illegible] ಶಾಸ್ತ್ರಿಗಳು "[illegible]" ವಿಷಯವಾಗಿ ಭಾಷಣ ಮಾಡುವರು. ನಾಡಿದ್ದು ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು ಅಧ್ಯಕ್ಷರು. ಶ್ರೀ [illegible] "[illegible]" ವಿಷಯವಾಗಿ ಮಾತನಾಡುವರು. ನೃತ್ಯ ಮತ್ತು ಸಂಗೀತಗಳೂ ಏರ್ಪಾಡಾಗಿದೆ.

ಚುನಾವಣೆ ಅಧಿಕಾರಿಗಳಿಗೆ ೨೦೦ ರೂ॥ ಸಂಬಳ

ಚುನಾವಣೆ ಕಾಲದಲ್ಲಿ ನೇಮಿಸಲ್ಪಟ್ಟಿರುವ ಅಧಿಕಾರಿಗಳು [illegible] ತಿಂಗಳ ಸಂಬಳವನ್ನು [illegible] [illegible] ಸರ್ಕಾರವು [illegible] ಮಾಡಿರುತ್ತಾರೆ.

ಗ್ರಾಮಾಧಿಕಾರಿಗಳ ಬೇಡಿಕೆ ಬಗ್ಗೆ ಮಾತುಕತೆ ವಿಫಲ

ಬೆಂಗಳೂರು ೯

ಕಳೆದ ತಿಂಗಳು [illegible] ಗ್ರಾಮಾಧಿಕಾರಿಗಳ ಸಮ್ಮೇಳನದ ನಿರ್ಣಯಗಳನ್ನು ಸರ್ಕಾರ [illegible] ಬೇಕೆಂದು [illegible] ಗ್ರಾಮಾಧಿಕಾರಿಗಳ ಸಂಘದ [illegible] ಶ್ರೀ ಎಸ್. ಎಲ್. ನರಸಿಂಹಯ್ಯನವರು ಮುಖ್ಯ ಮಂತ್ರಿ [illegible] ಮಾತುಕತೆಯು ವಿಫಲಗೊಂಡಿರುವುದೆಂದೂ, ಬೇಡಿಕೆಗಳ ಬಗ್ಗೆ [illegible] ನೇರ ಕಾರ್ಯಾಚರಣೆ [illegible] ಸಂಸ್ಥೆಯವರು [illegible] ಕ್ರಿಯಾ ಸಮಿತಿಯು [illegible] ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವರು. [illegible] ತಿಂಗಳು [illegible] ಬರುವ [illegible] ಸಮ್ಮೇಳನ [illegible] ಕರೆಯಲು ಆಲೋಚಿಸಲಾಗಿದೆ.

ಪಾಕಿಸ್ತಾನದ ಪ್ರಧಾನಿಗೆ ಸ್ವಪಕ್ಷದಿಂದ ಮುಖಭಂಗ

ಅವಾಮಿ ಲೀಗಿನಿಂದ [illegible]

[illegible] ಸದಸ್ಯರುಗಳ [illegible]

ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರ ಪಕ್ಷದ [illegible] [illegible] [illegible] ಸ್ವಾತಂತ್ರ್ಯ [illegible] ಬೇಕೆಂದು [illegible] ನೀತಿಯನ್ನು [illegible] ಸಂಸ್ಥೆಯು [illegible] ನೀತಿಯನ್ನು [illegible] [illegible] ಸುಹ್ರಾವರ್ದಿಯವರು [illegible], ಈ ಬಗ್ಗೆ ಲೀಗಿನ [illegible] ಪ್ರಧಾನಿಯವರ ನೀತಿಯನ್ನು [illegible] [illegible] [illegible] ಭಾಷಾನಿಯವರು [illegible] ಯನ್ನು [illegible] [illegible] [illegible] [illegible] [illegible] [illegible] ಅಧ್ಯಕ್ಷರಿಗೆ [illegible]

[illegible] ಎನ್. ಸಿ. [illegible]

ಎನ್. ಸಿ. ಸಿ. ದಳದ [illegible] [illegible] [illegible] ಆರಂಭವಾಯಿತು. ೬೦೦ಕ್ಕೂ ಹೆಚ್ಚು ಮಂದಿ ಅಧಿಕಾರಿಗಳು ಮತ್ತು [illegible] ಎನ್. ಸಿ. ಸಿ. [illegible] ಹೊಸ ಮೈಸೂರು ಸಂಸ್ಥಾನದ [illegible] [illegible] ಅಧಿಕಾರಿಗಳಾದ ಶ್ರೀ ಸಿ. [illegible] ಭಾಷಣ ಮಾಡಿ, [illegible] ಉದ್ಘಾಟನೆಯನ್ನು ನೆರವೇರಿಸಿದರು.

ಮಂತ್ರಿಗಳ ಪ್ರವಾಸ ಕಾಲದಲ್ಲಿ ಸಂಚಾರ ನಿರ್ಬಂಧ ಅಗತ್ಯವೇ ?

ಶ್ರೀ ಅಗರಂ ರಂಗಯ್ಯನವರು ಈ ರೀತಿ ಬರೆದಿರುತ್ತಾರೆ —

ಕಳೆದ ಸೋಮವಾರ ಬನ್ನೂರಿನಲ್ಲಿ ಸೇತುವೆ ಆರಂಭೋತ್ಸವ ನಡೆದಾಗ ಊರಿಗೆ ಒಂದು ಮೈಲಿ ದೂರದಲ್ಲಿರುವ ಅತ್ತ ರಸ್ತೆಯಲ್ಲಿಯೇ ಮೋಟಾರು ಬಸ್ಸುಗಳನ್ನು ತಡೆದು ನಿಲ್ಲಿಸಲಾಯಿತು ಊರಿನೊಳಗೆ ಬಂದಿದ್ದ ಬಸ್ಸುಗಳನ್ನು ಸಹ ಹೊರಕ್ಕೆ ಬಿಡಲಿಲ್ಲ ವಿಚಾರಿಸಲಾಗಿ ಮಂತ್ರಿಗಳ ಆಗಮನಕ್ಕಾಗಿ ಈ ರೀತಿ ಮಾಡಲಾಗಿದೆಯೆಂದು ಹೇಳಲಾಯಿತು ಆದುದರಿಂದ ಪ್ರಯಾಣಿಕರು ಉರಿಯುವ ಬಿಸಿಲಿನಲ್ಲಿ ಒಂದು ಮೈಲಿ ನಡೆದು ಬನ್ನೂರನ್ನು ತಲುಪಬೇಕಾಯಿತು ಅವರ ಪೈಕಿ ನಾನೂ, ನನ್ನ ಸಹೋದರರೂ ಇದ್ದೆವು ಬನ್ನೂರಿಗೆ ಬಂದಮೇಲೆ 'ಪೌರಕಾರ್ಯಕ್ಷರು' ತಮ್ಮನ್ನು ಕಾರಿನಲ್ಲಿ ಸೇತುವೆ ಬಳಿಗೆ ಕಳುಹಿಸಿದರು ಸಮಾರಂಭಕ್ಕೆ ಬಂದಿದ್ದ ಇತರ ಪ್ರಯಾಣಿಕರು ಅಲ್ಲಿಂದ ಸೇತುವೆ ವರೆಗೆ ಎರಡು ಮೈಲಿ, ಎಂದರೆ ಒಟ್ಟು ಮೂರು ಮೈಲಿ ನಡೆಯಬೇಕಾಯಿತು

ಯಾವ ಜನಸಂದಣಿಯೂ ಇಲ್ಲದ ಗ್ರಾಮಾಂತರ ಪ್ರದೇಶದ ಒಳ ರಸ್ತೆಯಲ್ಲಿ ಈ ಬಗೆಯ ಪ್ರತಿಬಂಧಕದ ಅವಶ್ಯಕತೆಯೇನಿದ್ದಿತೋ ಎನೆಂಬುದು ಅರ್ಥವಾಗುವುದಿಲ್ಲ ಮಂತ್ರಿಗಳ ಅರಿವು ಅನುಮತಿ,ಅಪೇಕ್ಷೆಗಳಿಲ್ಲದೆ ಈ ಅತ್ಯುತ್ಸಾಹದ ಪ್ರದರ್ಶನಗಳು ನಡೆಯುತ್ತವೆಂದು ಭಾವಿಸಬೇಕಾಗಿದೆ ಕಾರ್ಯಗೌರವದಿಂದ ಮಂತ್ರಿಗಳು ಒಂದು ಗಂಟೆ ವಿಳಂಬವಾಗಿ ಬಂದುದರಿಂದ ಪ್ರಯಾಣಿಕರಿಗೆ ಉಂಟಾದ ತೊಂದರೆಯನ್ನು ಊಹಿಸಿಕೊಳ್ಳಬಹುದು ಕೆಲವು ದಿನಗಳ ಕೆಳಗೆ ಕೃಷ್ಣರಾಜನಗರದಲ್ಲಿ ರಷ್ಯದ ಸಾಂಸ್ಕೃತಿಕ ನಿಯೋಗದವರಿಗೆ ಉಂಟಾದ ಅನಾನುಕೂಲವು ಇಂತಹ ನಿದರ್ಶನಗಳಲ್ಲೊಂದು ಇದು ಕೇವಲ ಒಂದು ಗ್ರಾಮದಲ್ಲಿ ಮಾತ್ರವಲ್ಲದೆ ಇತರ ಇಂತಹ ಪ್ರಸಂಗಗಳಲ್ಲಿಯೂ ನಡೆಯುತ್ತಿರುವ ಪದ್ಧತಿಯಾಗಿ ಕಂಡು ಬರುವುದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಕೂಡಲೇ ಗಮನ ಕೊಟ್ಟು ಇದನ್ನು ತಪ್ಪಿಸುವಂತೆ ಸಂಬಂಧಪಟ್ಟವರಿಗೆ ತಿಳುವಳಿಕೆ ಕೊಡುವುದು ಸೂಕ್ತವಾಗಿದೆ

ಪ್ರಜಾಪ್ರಭುತ್ವ ಕಾಲದಲ್ಲಿ ಈ ಬಗೆಯ ನಡವಳಿಕೆಗಳು ಅನುಚಿತವೆಂಬುದನ್ನು ಹೇಳಬೇಕಾಗಿಲ್ಲ

ಪುರಾಣ ಪ್ರವಚನ

ನಗರದ ಶ್ರೀಮನ್ಮಹಾರಾಜರ ಸಂಸ್ಕೃತ ಪಾಠಶಾಲೆಯ ಆವರಣದಲ್ಲಿರುವ ಶ್ರೀ ಸದ್ಗುರು ಸೇವಾ ಮಂಡಲದ ಆಶ್ರಯದಲ್ಲಿ ಮೊನ್ನೆಯಿಂದ ಪ್ರತಿ ದಿನ ಸಂಜೆ ೬-೩೦ ಗಂಟೆಗೆ ಬ್ರ|| ಶ್ರೀ|| ಕಾಶೀಕರ್ ಚಂದ್ರಶೇಖರ ಭಟ್ಟರಿಂದ ಶ್ರೀಮದ್ರಾಮಾಯಣದ ಉತ್ತರ ಕಾಂಡದ ಪುರಾಣ ಪ್ರವಚನವು ಏರ್ಪಾಡಾಗಿದೆ ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ

ಚೌಡೇಶ್ವರಿ ಅಮ್ಮನವರ ರಥೋತ್ಸವ

ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ನಾಳೆ ಅಮ್ಮನವರ ರಥೋತ್ಸವ, ನಾಳಿದ್ದು ವಸಂತೋತ್ಸವ ಮಂಗಳವಾರ ನವಿಲು ವಾಹನೋತ್ಸವ ಮತ್ತು ೧೩ನೇ ತಾರೀಖು ಶಯನೋತ್ಸವಗಳು ನಡೆಯುವುವು ಸರ್ವರೂ ದಯಮಾಡಿಸಬೇಕಾಗಿ ಕೋರಿದೆ

ರಾಮಾಭ್ಯುದಯ ಸಭೆಗೆ ಕಾಣಿಕೆ

ನಗರದ ಶ್ರೀರಾಮಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭೆಗೆ ಕೆಳಗೆ ಕಂಡವರು ದ್ರವ್ಯ ಸಹಾಯ ಮಾಡಿರುತ್ತಾರೆ-ಕಲ್ಕತ್ತದಲ್ಲಿರುವ ಶ್ರೀ ಬಿ ಎಸ್ ಎ ಭೂಷಣ್‌ರವರು ಹಿಂದೆ ಕೊಟ್ಟ ೧೧೦ ರೂ ಅಲ್ಲದೆ ಇನ್ನೂ ೨೦೦ ರೂ ಕೊಟ್ಟಿರುತ್ತಾರೆ ಶ್ರೀಗಳಾದ ಎ. ಆರ್ ವೆಂಕಟಸುಬ್ಬಾಶಾಸ್ತ್ರಿಗಳು ೧೧೬ ರೂ., ವೇ|| ಬ್ರ|| ಪಿ ವೆಂಕಟಾಚಲಾವಧಾನಿಗಳು ೧೧೧ ರೂ ಬಿ ರಾಮಚಂದ್ರಶಾಸ್ತ್ರಿಗಳು ೫೦ ಸುಬ್ಬರಾಯರು ಮತ್ತು ಶ್ರೀಮತಿ ಎ ಗೌರಮ್ಮನವರು ತಲಾ ೧೦೦ ರೂ., ಮತ್ತು ವೆಂಕಣ್ಣಭಟ್ಟರು ಗುತ್ತು ನರಸಿಂಹಸೋಮಯಾಜಿಗಳು ತಲಾ ೫೦ ರೂ

ಪ್ರಪಂಚವು ಸಿಡಿ ಮದ್ದಿನ ಮೇಲೆ ಕುಳಿತಿರುವಂತಿದೆ

ನೆಹರೂರವರ ಹೇಳಿಕೆ

ವಿಶ್ವವು ಬಲವಾದ ಬಿಕ್ಕಟ್ಟಿನ ಸ್ಥಿತಿಯಲ್ಲಿರುವುದೆಂದೂ ಎಲ್ಲಾದರೂ ಸಣ್ಣ ಕಿಡಿಯೊಂದು ಸಿಡಿದರೂ ಜಗತ್ತಿಗೆಲ್ಲಾ ಅದು ವ್ಯಾಪಿಸುವುದೆಂದೂ ನೆಹರೂರವರು ತಿಳಿಸಿರುತ್ತಾರೆ ಜಗತ್ತು ಸಿಡಿಮದ್ದಿನ ರಾಶಿಯ ಮೇಲೆ ಕುಳಿತಿರುವುದಾಗಿ ಅವರು ಅಭಿಪ್ರಾಯಪಟ್ಟಿರುತ್ತಾರೆ ಯುದ್ಧದಿಂದ ದೂರವಿದ್ದರೂ ಅದರ ಪರಿಣಾಮವು ಭಾರತದ ಮೇಲೆ ಆಗುವುದೆಂದೂ ಅವರು ಹೇಳಿರುವರು

ಯುದ್ಧ ಸ್ಥಂಭನಕ್ಕಾಗಿ ಬ್ರಿಟನ್ನಿಗೆ ಯೆಮೆನ್ನಿನ ಕರೆ

ಏಡನ್ ಆಶ್ರಿತ ಸಂಸ್ಥಾನದ ಗಡಿಯಲ್ಲಿ ಕದನ ಸ್ಥಂಭನಕ್ಕಾಗಿ ಬ್ರಿಟಿಷ್ ಸರ್ಕಾರದವರು ಸಹಕಾರ ನೀಡಬೇಕೆಂದು ಯೆಮೆನ್ ರಾಜ್ಯವು ಕೋರಿರುವುದಾಗಿ ವರದಿಯಾಗಿದೆ ಈ ಬಗ್ಗೆ ತಮ್ಮ ಪ್ರತಿನಿಧಿಯೊಬ್ಬರನ್ನು ಯೆಮೆನ್ ಅಧಿಕಾರಿಯೊಡನೆ ಮಾತುಕತೆಗಾಗಿ ಕಳುಹಿಸುವಂತೆ ಕೋರಲಾಗಿದೆ ಒತ್ತಾಯ ಮತ್ತು ಹಿಂಸೆಗಳಿಲ್ಲದಿರುವ ವಾತಾವರಣದಲ್ಲಿ ಸಂಧಾನ ನಡೆಯಬೇಕೆಂದು ಸೂಚಿಸಲಾಗಿದೆ

ಪಾಕಿಸ್ತಾನದ ಶಾಸನ ಸಭೆಯಲ್ಲಿ ನೆಹರೂ ಪ್ರಶಂಸೆಗೆ ಅಡ್ಡಿ

ಪಶ್ಚಿಮ ಪಾಕಿಸ್ತಾನದ ಶಾಸನ ಸಭೆಯಲ್ಲಿ ಭಾರತದ ಪ್ರಧಾನಿ ನೆಹರೂರವರನ್ನು ಒಬ್ಬ ಸದಸ್ಯರು ಪ್ರಶಂಸಿಸಿದಾಗ ಮತ್ತೊಬ್ಬ ಸದಸ್ಯರು "ನೆಹರೂರವರಿಗೆ ಇಲ್ಲಿ ಯಾರೂ ಸ್ನೇಹಿತರಿಲ್ಲ ಅವರು ನಮ್ಮ ಶತ್ರು" ಎಂದು ಕೂಗಿಕೊಂಡುದಾಗಿ ವರದಿಯಾಗಿದೆ ಸಭೆಯಲ್ಲಿ ಮಂತ್ರಿಗಳ ಸಂಬಳದ ಮಸೂದೆಯು ಚರ್ಚೆಯಾಗುತ್ತಿದ್ದಾಗ ಮಿಯಾ ಮಹಮದ್ ಶಾಫಿ ಎಂಬುವರು ತಮ್ಮ ಮಂತ್ರಿಗಳು ಭಾರತೀಯ ಮುಖಂಡರಂತೆ ನಾಡಿನ ಸೇವೆಗಾಗಿ ಎಲ್ಲಾ ಸುಖಗಳನ್ನೂ ತ್ಯಜಿಸುವಂತೆ ಮಾಡಬೇಕೆಂದು ತಿಳಿಸಿ ನೆಹರೂರವರನ್ನು ಪ್ರಶಂಸಿಸಲಾಗಿ ಪೀರ್ ಜಾದಾ ಷಹಾನವಾಜ್‌ರವರು ನೆಹರೂರವರ ಪ್ರಶಂಸೆಯನ್ನು ನಾವು ಕೇಳುವುದಿಲ್ಲವೆಂದು ಕೂಗಿದರು

ಥಟ್ಟೆಯವರ ಬಿಡುಗಡೆ

ಅಲಹಾಬಾದಿನಲ್ಲಿ ಬುಧವಾರ ದಸ್ತಗಿರಿಯಾದ ಅಖಿಲ ಭಾರತ ಹಿಂದೂ ರಾಜ್ಯ ಪಕ್ಷದ ಕಾರ್ಯದರ್ಶಿ ಎಲ್ ಜಿ ಥಟ್ಟೆಯವರನ್ನು ಮೊನ್ನೆ ಬಿಡುಗಡೆ ಮಾಡಲಾಯಿತು

ಮುಖ್ಯ ಮಂತ್ರಿಗಳಲ್ಲಿ ಮುಸ್ಲಿಂ ನಿಯೋಗದವರ ಮನವಿ

ಸಂಸ್ಥಾನದ ಮುಸ್ಲಿಂ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀಗಳು ಹೆಚ್ ಎಂ ಇಸ್ಮೇಲ್ ತಬಿಷ್ ಮತ್ತು ಶೇರ್ ಮುಸ್ಲಿಹುದ್ದೀನರವರು ಕಳೆದ ಬುಧವಾರ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿ ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರಿಗೆ ಸಂಸ್ಥಾನದ ಹೈಕೋರ್ಟು ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಕಲ್ಪಿಸಬೇಕೆಂದು ಮನವಿ ಮಾಡಿಕೊಂಡರು ಈ ವಿಚಾರವನ್ನು ಸಕಾಲದಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು ಶ್ರೀ ನಿಜಲಿಂಗಪ್ಪನವರು ಭರವಸೆಯಿತ್ತರೆಂದು ಗೊತ್ತಾಗಿದೆ

NATIONAL LEAGUE,
Anotholaya Buildings Mysore
Offers excellent coaching for students
of the High School classes
Join immediately

Edited, Printed and Published by
A. R Nagarajan at Sadhvi Press
Subbiat Road, Mysore

THE NATIONAL INSTITUTE OF COMMERCE
1677 Old Mysore Bank Road Mysore
FRESH ADMISSIONS for TYPEWRITING & SHORTHAND are now being received Individual attention and expert training by experienced staff Equipped with first class Typewriters & furniture etc., JOIN NOW

ಸೈಬೀರಿಯಾ-ಭಾರತಗಳ ನಡುವೆ ವ್ಯಾಪಾರ ಹಡಗು ಸಂಚಾರ

ದೂರ ಪೂರ್ವದಲ್ಲಿರುವ ರಷ್ಯಾ ತೀರ ನಗರಗಳು ಮತ್ತು ಭಾರತಗಳ ನಡುವೆ ನೇರ ವ್ಯಾಪಾರ ಹಡಗು ಸಂಚಾರ ವ್ಯವಸ್ಥೆಯನ್ನು ಆರಂಭಿಸಲಾಗಿದೆ ಈ ಸಂಬಂಧವಾಗಿ ನಖೋಡ್ಕ ಎಂಬ ಸೈಬೀರಿಯಾ ರೇವಿನಿಂದ ರಷ್ಯದ ಒಂದು ಹಡಗು ಕಳೆದ ವಾರ ಕಲ್ಕತ್ತಾವನ್ನು ತಲುಪಿತು

ರಜಾ ದಿನಗಳಲ್ಲೂ ರೈಲ್ವೆ ವ್ಯಾಗನ್ನುಗಳಿಗೆ ಭರ್ತಿ

ರೈಲ್ವೆ ವ್ಯಾಗನ್ನುಗಳಿಗೆ ಸಾಮಾನುಗಳನ್ನು ಎಲ್ಲ ದಿನಗಳಲ್ಲೂ ಭರ್ತಿ ಮಾಡಬೇಕೆಂದೂ, ಆ ಕೆಲಸಕ್ಕೆ ಯಾವ ದಿನವೂ ರಜಾ ಇರಕೂಡದೆಂದೂ ರೈಲ್ವೆ ಬೋರ್ಡಿನವರು ನಿರ್ಧರಿಸಿರುತ್ತಾರೆ ಭಾನುವಾರ, ರಿಪಬ್ಲಿಕ್ ಮತ್ತು ಸ್ವಾತಂತ್ರ್ಯ ದಿನೋತ್ಸವದ ದಿವಸಗಳಲ್ಲೂ ಈ ಕೆಲಸವು ನಡೆಯಬೇಕೆಂದು ಸೂಚನೆಯಾಯಲಾಗಿದೆ

ಸಂಗೀತ ಕಲಾಭಿವರ್ಧಿನೀ ಸಭೆಯವರ ವಿನಂತಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯು ಸ್ಥಾಪಿಸಲ್ಪಟ್ಟು ಮೂರು ವರ್ಷಗಳಾದುವು ಈ ಸಂಸ್ಥೆಯು ಸಂಗೀತಕ್ಕೆ ಸಂಬಂಧಿಸಿದ ಸಾಹಿತ್ಯ ಹರಿಕಥೆ ಭರತನಾಟ್ಯ, ಚಿತ್ರ ಶಿಲ್ಪ, ಸ್ಪರ್ಧೆ, ಉಪನ್ಯಾಸ ವಾಗ್ಗೇಯಕಾರರ ಜಯಂತಿ ಇತ್ಯಾದಿಗಳನ್ನು ನಡೆಸುತ್ತಿದೆ ಅನೇಕ ಸಂಗೀತ ಕಛೇರಿಗಳನ್ನು ಅದರ ಆಶ್ರಯದಲ್ಲಿ ನಡೆಸಲಾಗುತ್ತಿದೆ ಮುಖ್ಯವಾಗಿ ಮೈಸೂರಿನ ವಿದ್ವಾಂಸರಿಗೆ ಇದು ಪ್ರೋತ್ಸಾಹವೀಯುತ್ತಿರುವ ಸಂಸ್ಥೆ ಸಂಸ್ಥೆಯವರು ಸದಾಶಿವರಾಯರ ಕೀರ್ತನೆಗಳನ್ನು ಪ್ರಕಟಿಸಿದ್ದಾರೆ ವೈಣಿಕ ಪ್ರವೀಣ ಶೇಷಣ್ಣನವರ ಕೃತಿಗಳನ್ನು ಪ್ರಕಟಿಸುವುದರಲ್ಲಿದ್ದಾರೆ ಸಂಗೀತ ಕಲಾವಿದರು ಮತ್ತು ಅಭಿಮಾನಿಗಳು ತಿಂಗಳಿಗೆ ೧ ಆಣೆ ಚಂದಾ ಅಥವಾ ೧ ರೂ ಪ್ರೋತ್ಸಾಹಕ ಚಂದಾವನ್ನು ಕೊಟ್ಟು ಸಂಸ್ಥೆಯ ಸದಸ್ಯರಾಗಿ ಅದಕ್ಕೆ ಬೆಂಬಲ ನೀಡಬೇಕೆಂದು ಕಲಾಭಿಮಾನಿಗಳಾದ ಶ್ರೀ ಎಸ್ ಕೃಷ್ಣಯ್ಯಂಗಾರ್ಯರು ಮನವಿ ಮಾಡಿಕೊಂಡಿರುತ್ತಾರೆ

ಫುಟ್‌ಬಾಲ್ ಪಂದ್ಯ

ನಗರದ ಫ್ರೆಂಡ್ಸ್ ಯೂನಿಯನ್ ಫುಟ್‌ಬಾಲ್ ಕ್ಲಬ್ಬಿನವರು ಶ್ರೀರಂಗಪಟ್ಟಣದಲ್ಲಿ ಮೊನ್ನೆ ನಡೆದ ಸೈನ್ ಫುಟ್‌ಬಾಲ್ ಟೋರ್ನಮೆಂಟಿನಲ್ಲಿ ಮಂಡ್ಯದ ಯಂಗ್‌ಸ್ಟರ್ಸ್ ಟೀಮಿನವರನ್ನು ೬-೧ ಮತ್ತು ನೆನ್ನೆ ಮೈಸೂರಿನ ಗೋಪಾಲಕೃಷ್ಣ ಟೀಮಿನವರನ್ನು ೨-೦ ಗೋಲುಗಳಿಂದ ಸೋಲಿಸಿದರು

ಪ್ರೋಸೆಸ್ ನೌಕರರಿಗೆ ಹೆಚ್ಚು ಸಂಬಳಕ್ಕಾಗಿ ಮನವಿ

ನ್ಯಾಯಾಂಗ ಶಾಖೆಯಲ್ಲಿರುವ ವಿದ್ಯಾವಂತ ಪ್ರೋಸೆಸ್ ನೌಕರರಿಗೆ ಮುಂದಿನ ಗ್ರೇಡುಗಳನ್ನು ಕೊಡದೆ ಇರುವುದರಿಂದ ಅವಿದ್ಯಾವಂತರಂತೆಯೇ ಅವರೂ ಹೆಚ್ಚು ಕಾಲ ಪರಿತಪಿಸಬೇಕಾಗಿರುತ್ತದೆ ವಿದ್ಯಾವಂತ ಪ್ರೋಸೆಸ್ ನೌಕರರುಗಳ ವಿದ್ಯೆ ಮತ್ತು ಸರ್ವಿಸ್‌ಗಳನ್ನು ಗಣನೆಗೆ ತೆಗೆದುಕೊಂಡು ಮುಂದಿನ ಗ್ರೇಡುಗಳನ್ನು ಕೊಟ್ಟರೆ ಸದರಿ ನೌಕರರಿಗೆ ತುಂಬಾ ಉಪಕಾರವಾಗುತ್ತದೆ-ಎಂಬುದಾಗಿ ನೊಂದ ವಿದ್ಯಾವಂತ ಪ್ರೋಸೆಸ್ ನೌಕರರೊಬ್ಬರು ತಿಳಿಸಿರುತ್ತಾರೆ

[illegible] !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು
ಮಾಡಲಾಗುತ್ತೆ
ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ

ಮಹಾರಾಜಾ ಕಾಲೇಜು ವಿದ್ಯಾ ನಿಲಯ ಸಂಘದ ವಾರ್ಷಿಕೋ ತ್ಸವ

ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಯ ಸಂಘದ ವಾರ್ಷಿಕೋತ್ಸವವು ನೆನ್ನೆ ವೈಭವದಿಂದ ನಡೆಯಿತು ಶ್ರೀ ಸಿ ಡಿ ನರ ಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಗಾರ್ಚಾರ್ಯರಿಂದ ಪ್ರಾರ್ಥನೆ ಮತ್ತು ವಿದ್ಯಾ ರ್ಥಿಗಳಿಂದ ವೇದ ಮಂತ್ರಗಳ ಉಚ್ಚಾ ಯಾದನಂತರ ಕಾರ್ಯದರ್ಶಿ ಶ್ರೀ ಎ. ಸಿ ಸ್ವಾಮಿ ಮ್ಮನವರು ಸ್ವಾಗತ ಭಾಷಣ ಮಾಡಿ ವರ ಸ್ಸೊಪ್ಪಿಸಿದರು ವಿವಿಧ ವೇಷ ಸ್ಪರ್ಧೆಯು ನಡೆಯಿತು, ಶ್ರೀ ಪ್ರೇಮಾನಂದ್‌ರವರಿಂದ ರ್ ವಾದನವೂ, ವಿದ್ಯಾರ್ಥಿಗಳಿಂದ ಕೋ ವೂ ಆದನಂತರ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು ಹಿರಿ ಮತ್ತು ಕಿರಿಯ ವಿದ್ಯಾರ್ಥಿಗಳು ಭಾಷಣ ಪರಸ್ಪರ ಶುಭಾಶಯಗಳನ್ನು ಕೋರಿದರು

'ದೇವಗಂಗೆ' ಎಂಬ ನಾಟಕ ಕರ್ತೃ ಶ್ರೀ ಪಿ. ಶಂ ಶ್ರೀಕಂಠಯ್ಯನವರು ಪ್ರ ಪಡಿಸಿ ಭಾಷಣ ಮಾಡಿದರು ವಿದ್ಯಾರ್ಥಿ ಹೇಗಾದರೂ ಮಾಡಿ, "ಪರೀಕ್ಷೆಯಲ್ಲಿ ತೇರ್ಗ ಯಾಗಬೇಕೆಂಬ ಗುರಿಯನ್ನಿಟ್ಟುಕೊಳ್ಳದೆ ಕವಾಗಿ ತಮ್ಮ ಪಾಠಗಳನ್ನು ಅಭ್ಯಾಸ ಮಾ ರಾಜ ಮಾರ್ಗದಲ್ಲಿ ಉತ್ತೀರ್ಣರಾಗಲು ಪ್ರ ತ್ನಿಸಬೇಕೆಂದು ನುಡಿದರು ಅಧ್ಯಾಪಕರುಗಳ ಸಹ ತಮ್ಮ ಜೀವನದಲ್ಲಿ ವಿದ್ಯಾರ್ಥಿಗಳಿಗೆ ಲ್ಪಂಕ್ತಿಯನ್ನು ಹಾಕಬೇಕೆಂದು ಅವರು ಹೇ ದರು

ಅಧ್ಯಕ್ಷರ ಭಾಷಣಾನಂತರ ನಾಟಕ ರ್ಶನವಾಗಿ ವಂದನಾರ್ಪಣೆ ಮತ್ತು ರಾಷ್ಟ್ರ ಯೊಡನೆ ಸಮಾರಂಭವು ಮುಗಿಯಿತು

ವಿದ್ಯಾರ್ಥಿನಿಲಯದ [illegible]

ನಗರದ ಶ್ರೀರಾಮಪೇಟೆಯಲ್ಲಿರುವ ಮ ರ್ ಕೃಷ್ಣಶೆಟ್ಟರ ವಿದ್ಯಾರ್ಥಿನಿಲಯದ [illegible] ರಣೆಯು ೩-೪ ಸಂಜೆ ೫ ಗಂಟೆಗೆ ನೆರವೇರು ದು ಶಾರದಾವಿಲಾಸ ಲಾ ಕಾಲೇಜಿನ ಪ್ರಿನ್ಸಿ ಲರಾದ ಶ್ರೀ ಟಿ ಎಸ್ ರಾಮಗೋಪಾಲಯ್ಯಂ ಗಾರ್ಯರು ಅಧ್ಯಕ್ಷತೆ ವಹಿಸುವರು ಕೃಷ್ಣರಾ ಜೇಂದ್ರ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಎಂ ಬಸವಂ[illegible]ರವರು ಭಾಷಣ ಮಾ ವರು

ಉತ್ತಮವಾದ ಕಟ್ಟಡದ
ಪ್ಲಾನುಗಳುಮತ್ತು ಬ್ಲೂಪ್ರಿಂಟ್
ಮಾಡಿಕೊಡುವುದಕ್ಕೂ ಮತ್ತು [illegible]
ಸಲಾಕೆ - ಎಸ್ಟಿಮೇಟ್ ಮಾಡಿಕೊಡುವುದಕ್ಕೂ
ಗಾಯತ್ರಿ ಟಾಕೀಸ್ ಎದುರು
ಹ್ಯಾಟ್ ಅಂಗಡಿಯಲ್ಲಿ
ಬಿ. ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿರಿ
ವಾರದ ರಜಾ ಸೋಮವಾರ

"ಜೈ ಹಿಂದ್" !
ಕಾಂಗ್ರೆಸ್ಸನ್ನು ಬಿಟ್ಟರೆ ದೇಶದ ಹಿತಕ್ಕೆ ಬೇರೆ ಒಂದು ಸಂಸ್ಥೆಯಿಲ್ಲ. ಆರ್ಥಿಕ ವೃದ್ಧಿಗಾಗಿ ಕೈಗೊಳ್ಳಲಾಗಿರುವ ಪಂಚ ಯೋಜನೆಯು ಯಶಸ್ವಿಯಾಗಲು ಕಾಂಗ್ರೆ ಬೆಂಬಲವು ಬೇಕು
—ಪಂಡಿತ ಗೋವಿಂದ ವಲ್ಲಭ



ಕಾಂಗ್ರೆಸ್ ಉಮೇದುವಾರ
ಜಯವಿಟ ನಿಮ್ಮ ಓಟನ್ನು

ರಿಜಿಸ್ಟರ್ ನಂ. 793

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ರೋಗಗಳಿಗೆ ಶೀಘ್ರ ಫಲ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಸಂಚಾಲಕರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1 [illegible]
[illegible] ರಸ್ತೆ,
ಬೆಂಗಳೂರು-2

ಇಂದಿನ ಪತ್ರಿಕೆ ೬ ಕಾಸು



ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ನಿಮ್ಮ ಓಟನ್ನು ಕೊಡಿರಿ

ಪುಟ : ೧೫] SADHVI : SUNDAY 10—2—1957 ಮೈಸೂರು : ಭಾನುವಾರ ೧೦—೨—೧೯೫೭ [ಸಂಚಿಕೆ : [illegible]

ವಿಶ್ವಸಂಸ್ಥೆ ನಿರ್ಣಯದ ವಿರುದ್ಧ ಇಸ್ರೇಲಿ ಜನರ ಪ್ರದರ್ಶನ

ಭಾರತವು ಅಂತರರಾಷ್ಟ್ರೀಯ ಜವಾಬ್ದಾರಿ ಮೀರುವುದಿಲ್ಲ

ದ್ರತಾ ಸಮಿತಿಯಲ್ಲಿ ಕೃಷ್ಣಮೆನನ್ನರ ಹೇಳಿಕೆ

ಅಂತರ ರಾಷ್ಟ್ರೀಯ ಜವಾಬ್ದಾರಿಗಳನ್ನು ಉ ಸಲು ಭಾರತವು ಯಾವಾಗಲೂ ಆಲೋಚಿ ವೆಂದೂ ಮತ್ತು ಆ ರೀತಿ ಮಾಡುವುದಿಲ್ಲವೆಂ, ಆದರೆ ಭದ್ರತಾ ಸಮಿತಿಯೂ ಸಹ ಹಲವು ತರ ರಾಷ್ಟ್ರೀಯ ಜವಾಬ್ದಾರಿಗಳಿರುವುದ ಮನಗಾಣಬೇಕೆಂದೂ ನೆನ್ನೆ ಭದ್ರತಾ ಸಮಿತಿಯಲ್ಲಿ ಭಾರತದ ಪ್ರತಿನಿಧಿ ವಿ. ಕೆ. ಕೃಷ್ಣಮೆನನ್ನರು ಕಾಶ್ಮೀರ ಚರ್ಚೆ ಬಗ್ಗೆ ಭಾಷಣ ದಿ ತಿಳಿಸಿದರು ಯಾವುದಾದರೂ ಸಲಹೆ ಯನ್ನು ಕೊಟ್ಟು, ಅದು ತಿರಸ್ಕೃತವಾದರೆ, ಅ ದು ಒಪ್ಪಿಗೆಯೆಂದು ಅರ್ಥ ಮಾಡುವಂತಿಲ್ಲವೆಂ ಅವರು ವ್ಯಾಖ್ಯಾನ ಮಾಡಿದರು ಜನಮತ ಗಣನೆಯನ್ನು ನಡೆಸುವಂತೆ ಹಿಂದೆ ಲಾರ್ಡ್ ಮೌಂಟ್‌ಬ್ಯಾಟನ್ನರು ಮಹಾರಾಜರವರಿಗೆ ತಿಳಿಸಿದಾಗ ಅವರು ಅದಕ್ಕೊಪ್ಪಲಿಲ್ಲವೆಂದೂ, ಲಿಯಾಕತ್ ಅಲಿಖಾನರಿಗೆ ನೆಹರೂರವರು ಅದೇ ವೇಳೆ ಬರೆದಾಗ ಅವರೂ ಸಹ ವಾಕ್ಯಶಃ ಅಲ್ಲದೆ ಕ್ರಿಯಾತ್ಮಕವಾಗಿಯೂ ಒಪ್ಪಲಿಲ್ಲವೆಂದೂ, ೧೯೪೭ ಡಿಸೆಂಬರ್ ೨೨ ರಲ್ಲೇ ಈ ಮಾತು [illegible]ಯಿತೆಂದೂ ಮೆನನ್ನರು ಹೊರಗೆಡಹಿದರು ನಂತರ ಅವರು ಭದ್ರತಾ ಸಮಿತಿಗೆ ಭಾರತದ ರ ವಿಷಯವನ್ನು ಪ್ರಸ್ತಾಪಿಸಿ, ಕಾಶ್ಮೀರದ ಪಾಕಿಸ್ತಾನದ ಆಕ್ರಮಣ ನಡೆಸಿಲ್ಲವಾಗಿ ತಿಳಿಸಿರುವುದೆಂದೂ, ಪಾಕಿಸ್ತಾನದ ಹೇಳಿಕೆ ನಿಜವಲ್ಲವೆಂದು ವ್ಯಕ್ತಪಟ್ಟಿರುವುದಾಗಿ ನುಡಿದರು ಭಾರತದ [illegible] ಉವುದೆಂದು ವಾದಿಸಿದರು.

೨೦ನೇ ಆಗಸ್ಟ್ ೧೯೪೮ ಮತ್ತು ೧೩ನೇ ಜ ನರ ನಿರ್ಣಯಗಳಿಗೆ ಭಾರತವು ಬದ್ಧವಾಗಿರುವುದೆಂದೂ, ಅವುಗಳ ಪ್ರಕಾರ ಪಾಕಿಸ್ತಾನದ ಪಡೆಗಳು ಇಲ್ಲದೆ ಕಾಶ್ಮೀರದಿಂದ ಸೈನ್ಯವನ್ನೆಲ್ಲಾ ಹಿಂದಕ್ಕೆ ಕರೆಸಬೇಕೆಂದೂ, ಸ ಆಕ್ರಮಣವನ್ನು ಕೊನೆಗಾಣಿಸು ದೇಶಾವ ವಿಷಯವನ್ನೂ ಪರಿಶೀಲಿಸಲು ವಿಲ್ಲವೆಂದೂ ಮೆನನ್ನರು ನುಡಿದರು

ಶ್ಮೀರ ರಾಜ್ಯಾಂಗ ಸಭೆಯು ಮಾಡಿರುವ ಯನ ಭೂಮಿಕೆಯನ್ನೇ ಬೇಕು ಅದ ಹೊಸದೇನೂ ಸೃಷ್ಟಿಯಾಗಿಲ್ಲವೆಂದೂ ಅ ನುಡಿದರು

ಲೀಸನ ಕೊಲೆ ಬಗ್ಗೆ ಇಬ್ಬರ ದಸ್ತಗಿರಿ

ಮಗರ ತಾಲ್ಲೂಕಿನ ಹಿರಿಯೂರಿನಲ್ಲಿ ಕೆ ನಗಳ ಹಿಂದೆ ಪೋಲೀಸನೊಬ್ಬನು ಕೊಲೆ ಯಾದ ಪ್ರಕರಣದಲ್ಲಿ [illegible] ಸನ್ನಿವೇಶದಲ್ಲಿ ಇಬ್ಬರನ್ನು ಬಂಧಿಸಿ ಹಿರಾ ಸತ್ತಿನಲ್ಲಿಡಲಾಗಿದೆ ಅಪರಿಚಿತ ಸಮೂಹ [illegible] ಗಿ ಹೋಗಲಾಗಿರುವುದನ್ನು ಪತ್ತೆ ಹಚ್ಚಿ ಸಿ ಅಲ್ಲದೆ ಹಲವು ಆಯುಧಗಳನ್ನೂ ಳ್ಳಲಾಗಿದೆ

ನಗರದಲ್ಲಿ ನೆಹರೂರವರ ಕಾರ್ಯಕ್ರಮ

ಮೈಸೂರು ೧೦

ಪ್ರಧಾನಿ ನೆಹರೂರವರು ಚುನಾವಣೆ ಪ್ರಚಾರದ ಸಂಬಂಧವಾಗಿ ಇದೇ ತಿಂಗಳು ೨೩ನೇ ತಾರೀಕು ೮½ ಗಂಟೆಗೆ ಹೈದರಾಬಾದಿನಿಂದ ಹೊರಟು ವಿಮಾನದಲ್ಲಿ ಇಲ್ಲಿಗೆ ೯½ ಗಂಟೆಗಾಗಮಿಸಿ ೧೦-೩೦ಕ್ಕೆ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ೧೨ ಗಂಟೆಗೆ ಬೆಂಗಳೂರಿಗೆ ವಿಮಾನದಲ್ಲಿ ಪ್ರಯಾಣ ಮಾಡುವರು ಅಲ್ಲಿ ಮಧ್ಯಾಹ್ನ ೩ ಗಂಟೆಗೆ ಹೈಟೆನ್ಷನ್ ಇನ್ಸುಲೇಟರ್ ಕಾರ್ಖಾನೆಯ ಆರಂಭೋತ್ಸವವನ್ನು ನೆರವೇರಿಸುವರು

ಕಾಂಗ್ರೆಸ್ಸಿಗೆ ಬೆಂಬಲ ನೀಡುವಂತೆ ಮನವಿ

ನಗರದ ಸಮಾಜ ಸೇವಾ ಕಾರ್ಯಕರ್ತರಾದ ಶ್ರೀ ಎಂ. ನರಸಿಂಹಯ್ಯನವರ ಪತ್ರವೊಂದನ್ನು ಬರೆದು ನಗರದ ಮಹಾಜನರು ಬರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಬೆಂಬಲ ನೀಡಬೇಕೆಂದು ಕೇಳಿರುತ್ತಾರೆ ಕಾಂಗ್ರೆಸ್ಸು ಅನೇಕ ಕೆಲಸಗಳನ್ನು ಸಾಧಿಸಿರುವುದೆಂದೂ ಅಲ್ಪ ಸ್ವಲ್ಪ ದೋಷಗಳಿಗಾಗಿ ಓಟು ಕೊಡದೆ ಸಂಸ್ಥೆಯ ಶಕ್ತಿಯನ್ನು ಕುಂದಿಸಬಾರದೆಂದೂ ಅವರು ಸೂಚಿಸಿರುತ್ತಾರೆ

ಮನಶ್ಶಾಸ್ತ್ರ ಸಂಘದ ಮುಕ್ತಾಯ ಭಾಷಣ

ಕಾಲೇಜು ಮನಶ್ಶಾಸ್ತ್ರ ಸಂಘದ ಮುಕ್ತಾಯ ಭಾಷಣವನ್ನು ನಾಳೆ ಸಂಜೆ ೫-೩೦ಕ್ಕೆ ಶ್ರೀ ಎಸ್. ಶಂಕರನಾರಾಯಣರಾಯರು ಮಾಡುವರು ಡಾ|| ಕುಪ್ಪುಸ್ವಾಮಿಯವರು ಅಧ್ಯಕ್ಷತೆ ವಹಿಸುವರು

ಹರಿಕಥೆ

ಮೈಸೂರು ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಈ ರಾತ್ರಿ ೮ ಗಂಟೆಗೆ ಏಕಾದಶೀ ಪ್ರಯುಕ್ತ "ಸತೀ ಅನಸೂಯಾ" ಎಂಬ ಹರಿಕಥೆಯು ವಿದ್ವಾನ್ ಬಿ ವಿ ಗುರುರಾಜಾಚಾರ್ಯರವರಿಂದ ನಡೆಯುತ್ತದೆ

ಸಂಸ್ಥಾನದ ವಿಧಾನ ಸಭೆಗೆ ೫೮೦ ಮಂದಿ ಉಮೇದುವಾರರು

ಸಂಸ್ಥಾನದ ವಿಧಾನಸಭೆಯ ೨೦೮ ಸ್ಥಾನಗಳಿಗೆ ೫೮೦ ಮಂದಿ ಅಭ್ಯರ್ಥಿಗಳು ಸ್ಪರ್ಧಿಸಿರುತ್ತಾರೆ ಒಟ್ಟು ೯೭೭ ಜನರು ಉಮೇದುವಾರಿಕೆಗಳನ್ನು ಸಲ್ಲಿಸಿದ್ದರು ೩೯೭ ಮಂದಿಯ ನಾಮಪತ್ರಗಳು ವಾಪಸಾಗಿವೆ, ಅಥವಾ ತಿರಸ್ಕರಿಸಲ್ಪಟ್ಟಿವೆ ಲೋಕಸಭೆಯ ೨೬ ಸ್ಥಾನಗಳಿಗೆ ನಾಲ್ವರು ಕೇಂದ್ರ ಸಚಿವರುಗಳೂ ಸೇರಿ ೭೩ ಮಂದಿ ಸ್ಪರ್ಧಿಸಿರುವರು

ತಲಚೇರಿ-ಮೈಸೂರು ರೈಲು ಸರ್ವೇಗೆ ಮಂಜೂರಾತಿ

ತಲಚೇರಿ-ಕೊಡಗು-ಮೈಸೂರುಗಳ ನಡುವೆ ೧೫೦ ಮೈಲಿಯ ಮೀಟರ್‌ಗೇಜ್ ರೈಲನ್ನು ನಿರ್ಮಿಸುವ ಸಂಬಂಧವಾಗಿ ಇಂಜಿನಿಯರಿಂಗ್ ಮತ್ತು ಟ್ರಾಫಿಕ್ ಸರ್ವೆ ನಡೆಸಲು ರೈಲ್ವೆ ಬೋರ್ಡಿನವರು ಮಂಜೂರಾತಿ ಕೊಟ್ಟಿರುತ್ತಾರೆ ಕನ್ನಡ ಮತ್ತು ಮಲಯಾಳ ಭಾಷಾ ಜನರಿಗೆ ಹೆಚ್ಚಿನ ಸಂಪರ್ಕ ಬೆಳೆಸಬೇಕೆಂಬುದೇ ಇದರ ಉದ್ದೇಶ

ಬೆಂಗಳೂರಿಗೆ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರ ಭೇಟಿ

ಭದ್ರತಾ ಸಮಿತಿ ನಿರ್ಣಯದ ಬಗ್ಗೆ ಟೀಕೆ

ಬೆಂಗಳೂರು ೧೦

ಕಾಂಗ್ರೆಸ್ ಅಧ್ಯಕ್ಷ ಯು ಎನ್ ಧೇಬರ್‌ರವರು ನೆನ್ನೆ ಬೆಳಿಗ್ಗೆ ಇಲ್ಲಿಗೆ ವಿಮಾನದಲ್ಲಿ ಆಗಮಿಸಿದರು ಅವರನ್ನು ಕಾಂಗ್ರೆಸ್ ನಾಯಕರುಗಳಾದ ಶ್ರೀಗಳು ವಿ ವೆಂಕಟಪ್ಪ, ಎಸ್ ಚನ್ನಯ್ಯ ಮುಂತಾದವರೂ ಸಚಿವರುಗಳೂ ಸ್ವಾಗತಿಸಿದರು ಧೇಬರ್‌ರವರನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು ಅವರು ಬೆಳಿಗ್ಗೆಯೇ ಕೋಲಾರಕ್ಕೆ ತೆರಳಿ ಅಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಹಿಂತಿರುಗಿದರು

ನೆನ್ನೆ ಸಂಜೆ ಇಲ್ಲಿನ ಬಹಿರಂಗ ಸಭೆಯಲ್ಲಿ ಅವರು ಭಾಷಣ ಮಾಡಿ ೧೦,೦೦೦ ಮೈಲಿಯಾಚೆ ಕುಳಿತು ಮಾಡಲ್ಪಟ್ಟ ನಿರ್ಣಯವೊಂದು ಕಾಶ್ಮೀರದ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ಹೇಳಿದರು ಕಾಶ್ಮೀರದ ಜನರ ಇಚ್ಛೆಯೇ ನಿರ್ಣಯಾತ್ಮಕವಾದುದು, ಅಲ್ಲಿನ ಜನರು ತಮ್ಮ ರಾಜ್ಯಾಂಗ ಸಭೆಯ ಮೂಲಕ ತಮ್ಮ ಇಚ್ಛೆಯೇನೆಂಬುದನ್ನು ವ್ಯಕ್ತಪಡಿಸಿರುವರು ಕಾಶ್ಮೀರದ ಜನರ ಮೇಲೆ ನ್ಯೂಯಾರ್ಕಿನಿಂದ ಇಂದು ಒಂದು ತೀರ್ಪನ್ನು ಹೇರಿದರೆ ನಾಳೆ ಮಾಸ್ಕೋವಿನಿಂದ ಬೇರೊಂದನ್ನು ಹೊರಿಸಬಹುದು-ಎಂದು ಅವರು ಹೇಳಿದರು

ಬೆಂಗಳೂರಿನಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಸಭೆ

ಬೆಂಗಳೂರಿನಲ್ಲಿ ಬರುವ ತಿಂಗಳು ೩ನೇ ವಾರದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಸಮ್ಮೇಳನವು ಸೇರಲಿದೆ

ಜೈನ ದೀಕ್ಷಾ ಸ್ವೀಕಾರ ಸಮಾರಂಭ

ಜೈನ ಸನ್ಯಾಸಿನಿ ಶ್ರೀ ಸಾಯರ್ ಕವರ್‌ಜಿಯವರ ಉಪದೇಶ ಪಡೆದ ಶ್ರೀಮತಿ ಸರೋಜಾಬಾಯಿ ಎಂಬಾಕೆಯು ನಾಳೆ ೯ ಗಂಟೆಗೆ ಕಾವೇರಿಪಟ್ಟಣ ಸುಬ್ಬರಾಯನಛತ್ರದಲ್ಲಿ ಸಾಯರ್ ಕವರ್‌ಜಿಯವರಿಂದ ಜೈನ ಧರ್ಮವನ್ನು ಸ್ವೀಕರಿಸುವರು. ನಾಳೆ ಸಂಜೆ ಅವರನ್ನು ನಗರದ ನಾನಾ ಬೀದಿಗಳಲ್ಲಿ ಇಲ್ಲಿನ ಜೈನ ಸಂಘದವರು ಮೆರವಣಿಗೆ 'ಪಾಲಕ' ಕರೆದೊಯ್ಯುವರು ಆಕೆಯು ಜೈನಧರ್ಮ ಪ್ರಚಾರಕ್ಕಾಗಿ ನಾನಾ ಊರುಗಳಿಗೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುವರು ಅವರ ದೀಕ್ಷಾ ಸ್ವೀಕಾರ ಮತ್ತು ಮೆರವಣಿಗೆಗಳಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಕೋರಲಾಗಿದೆ

ಕೃಷ್ಣರಾಜೇಂದ್ರ ಆಸ್ಪತ್ರೆಗೆ ಹೊಸ ವೈದ್ಯರು

ಮೇಲ್ಕೋಟೆ ಆಸ್ಪತ್ರೆಯ ಎಂ ಎ ಹನುಮಂತರಾವ್ ಮತ್ತು ಭದ್ರಾವತಿ ಕಾಗದದ ಕಾರ್ಖಾನೆ ಆಸ್ಪತ್ರೆಯಿಂದ ಶ್ರೀ ಕೆ ಶೇಷಾದ್ರಿಯವರನ್ನು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ವರ್ಗಾಯಿಸಲಾಗಿದೆ ಈ ಆಸ್ಪತ್ರೆಯಲ್ಲಿರುವ ಶ್ರೀ ಓ ಎಂ ಚಂದ್ರಶೇಖರ್‌ರವರನ್ನು ಬೆಂಗಳೂರು ಸಿವಿಲ್ ಪ್ರದೇಶದ ಸ್ಯಾನಟೋರಿಯಮ್ಮಿಗೆ ಕಳುಹಲಾಗಿದೆ

ಕಾಂಗ್ರೆಸ್ ಚುನಾವಣಾ ಪ್ರಚಾರದ ಆರಂಭೋತ್ಸವ

ಮೈಸೂರು ೧೦

ಇದೇ ತಿಂಗಳು ೧೩ನೇ ತಾರೀಕು ಬುಧವಾರ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಗರದ ಕಾಂಗ್ರೆಸ್ ಚುನಾವಣಾ ಪ್ರಚಾರದ ಆರಂಭೋತ್ಸವವನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ ವೆಂಕಟಪ್ಪನವರು ನೆರವೇರಿಸುವರು

ಭೌತ ವಿಜ್ಞಾನ ಸಂಘದ ಮುಕ್ತಾಯ ಸಮಾರಂಭ

ಯುವರಾಜಾ ಕಾಲೇಜಿನ ಭೌತ ವಿಜ್ಞಾನ ಸಂಘದ ಮುಕ್ತಾಯ ಸಮಾರಂಭವು ಮೊನ್ನೆ ನಡೆಯಿತು. ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಭೌತ ಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಸಿ ಕೆ ಸುಂದರಾಚಾರ್ಯರು ಭಾಷಣ ಮಾಡಿದರು ಶ್ರೀ ಎಂ ಎಲ್ ಸುಂದರರಾಜನ್‌ರವರಿಂದ ಪ್ರಾರ್ಥನೆ, ಸಂಘದ ಅಧ್ಯಕ್ಷ ಶ್ರೀ ಎಂ ಟಿ ರಾಮಸ್ವಾಮಿ ಅಯ್ಯಂಗಾರರಿಂದ ಸ್ವಾಗತ ಭಾಷಣ ಮತ್ತು ಕಾರ್ಯದರ್ಶಿ ಎ ಎನ್ ರಾಮಚಂದ್ರರವರಿಂದ ಸಂಘದ ವಾರ್ಷಿಕ ವರದಿಗಳಾದನಂತರ ಶ್ರೀ ಸುಂದರಾಚಾರ್ಯರು ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳ ಬಗ್ಗೆ ಮಾತನಾಡುತ್ತಾ, ತಾವು ಅಮೆರಿಕದಲ್ಲಿ ಪ್ರೊ|| ಐನ್‌ಸ್ಟೀನ್ ರೊಡನೆ ನಡೆಸಿದ ಸಂಭಾಷಣೆಯನ್ನು ಸ್ವಾರಸ್ಯವಾಗಿ ವರ್ಣಿಸಿದರು ವಿಜ್ಞಾನಿಗಳಿಗೆ ಇರಬೇಕಾದ ಗುಣಗಳನ್ನು ವಿವರಿಸಿ, ವಿಜ್ಞಾನವನ್ನು ಅಭ್ಯಾಸ ಮಾಡುವುದು ಅಗತ್ಯವೆಂದು ಉದಾಹರಣೆಗಳ ಮೂಲಕ ವ್ಯಕ್ತಪಡಿಸಿದರು ಅಧ್ಯಕ್ಷತೆ ವಹಿಸಿದ್ದ ಡಾ|| ಎಂ [illegible]ಸ್ವಾಮಿಯವರ ಭಾಷಣವಾದನಂತರ ಶ್ರೀ ಸಿ ಎನ್ ಚಂದ್ರಶೇಖರಮೂರ್ತಿಯವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಮುತ್ತೋಜಿರಾವ್ ಸಿಂಧ್ಯರಿಗೆ ನಿವೃತ್ತಿ ಪೂರ್ವದ ರಜಾ

ಸಂಸ್ಥಾನದ ಪೋಲೀಸು ಇಲಾಖಾ ಡಿ.ಐ.ಜಿ ಯವರಾದ ಶ್ರೀ ಆರ್. ಮುತ್ತೋಜಿರಾವ್ ಸಿಂಧ್ಯರವರಿಗೆ ಕಳೆದ ಡಿಸೆಂಬರ್ ೨೮ ರಿಂದ [illegible] ದಿನಗಳ ನಿವೃತ್ತಿ ಪೂರ್ವದ ರಜಾವನ್ನು ಕೊಡಲಾಗಿದೆ

ವಿಶ್ವಸಂಸ್ಥೆಯ ನಿರ್ಧಾರದ ವಿರುದ್ಧವಾಗಿ ಯಹೂದ್ಯರ ಪ್ರದರ್ಶನ

ಗಾಜಾ ಪ್ರದೇಶದಿಂದ ಇಸ್ರೇಲಿ ಸೈನಿಕರನ್ನು ವಾಪಸು ಕರೆಸಬೇಕೆಂದು ವಿಶ್ವಸಂಸ್ಥೆಯು ಮಾಡಿರುವ ಸೂಚನೆಯನ್ನು ಪ್ರತಿಭಟಿಸಿ ಇಸ್ರೇಲಿನ ಟೆಲ್ ಅವೀವ್, ಹೈಫಾ ಮತ್ತು ಜೆರೂಸಲೆಂಗಳಲ್ಲಿ ಯಹೂದ್ಯರು ನೆನ್ನೆ ವಿರೋಧ ಪ್ರದರ್ಶನ ನಡೆಸಿದರು ೨೦ ಸಾವಿರ ಜನರು ಟೆಲ್ ಅವೀವಿನಲ್ಲಿ ಪ್ರದರ್ಶನ ಮಾಡಿದರು ಗಾಜಾವನ್ನು ಈಜಿಪ್ಟಿಗೆ ಒಪ್ಪಿಸಕೂಡದೆಂದು ನಿರ್ಣಯ ಮಾಡಲಾಯಿತು

○ಯುದ್ಧದಲ್ಲಿ ಕೈಕಾಲು ಕಳೆದುಕೊಂಡವರಿಗಾಗಿ ಕೃತಕ ಸಾಧನಗಳನ್ನು ಒದಗಿಸಲು ಬೊಂಬಾಯಿಯಲ್ಲಿ ಒಂದು ಕಾರ್ಖಾನೆ ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ.

ವಾರ ಭವಿಷ್ಯ

ತಾ|| ೧೦-೨-೫೭ ರಿಂದ ೧೬-೨-೫೭ರ ವರೆಗೆ

ಮೇಷ :—ಆರೋಗ್ಯ ಸಾಧಾರಣ ಮಾನಸಿಕ ಚಿಂತೆ. ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಅಶುಭ ಫಲಗಳು. ಮಿತ್ರರಿಂದ ಮೋಸ ಸಂಭವ. ಧನಲಾಭ.

ವೃಷಭ :— ಆರೋಗ್ಯ ಉತ್ತಮ, ಧನಲಾಭ. ಅಧಿಕ ವ್ಯಯ, ವ್ಯಾಪಾರ ಉದ್ಯೋಗಗಳಲ್ಲಿ ಸಾಧಾರಣ ಫಲ. ಮಿತ್ರರಿಂದ ಸಹಾಯ. ಗೃಹ ಸೌಖ್ಯ.

ಮಿಥುನ :—ಅನಾರೋಗ್ಯ, ಅನಿರೀಕ್ಷಿತ ಧನಲಾಭ, ಸಮಾಜದಲ್ಲಿ ಉನ್ನತಿ, ವ್ಯಾಪಾರವ್ಯವಹಾರಗಳಲ್ಲಿ ಅಪಜಯ ಉದ್ಯೋಗದಲ್ಲಿ ನೌಕರರಿಗೆ ಶುಭ ಫಲಗಳು.

ಕರ್ಕ :—ಆರೋಗ್ಯ ಸಾಧಾರಣ, ಧನಲಾಭ, ಮಿತ್ರರಿಂದ ಸಹಾಯ, ಸಮಾಜದಲ್ಲಿ ಪ್ರಗತಿ. ವ್ಯಾಪಾರ,ಉದ್ಯೋಗ,ನೌಕರಿಗಳಲ್ಲಿ ಸಾಧಾರಣ ಫಲಗಳು.

ಸಿಂಹ :—ಆರೋಗ್ಯ ಉತ್ತಮ, ಧನಲಾಭ, ವಿದ್ಯಾರ್ಥಿಗಳಿಗೆ ಶುಭ ಫಲ ವಿವಾಹ ಯೋಗ, ವ್ಯಾಪಾರವ್ಯವಹಾರದಲ್ಲಿ ಜಯ ಮಿತ್ರ ಸಹಾಯ

ಕನ್ಯಾ :—ಆರೋಗ್ಯ ಸಾಧಾರಣ,ಧನ ಲಾಭ, ಅಧಿಕ ವ್ಯಯ, ಚಿಂತೆ, ಮಿತ್ರರಿಂದ ಮೋಸ. ವ್ಯಾಪಾರ,ಉದ್ಯೋಗಗಳಲ್ಲಿ ಅಶುಭ ಫಲಗಳು.

ತುಲಾ :— ಮಿತ್ರರೊಡನೆ ವೈಮನಸ್ಯ, ಕುಟುಂಬದಲ್ಲಿ ಅಶಾಂತಿ, ಕೆಲಸಕಾರ್ಯಗಳಲ್ಲಿ ಸಾಧಾರಣ ಫಲಗಳು, ಮಿತ್ರರಿಂದ ಸಹಾಯ. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಅಶುಭ ಫಲಗಳು

ವೃಶ್ಚಿಕ :—ಆರೋಗ್ಯ ಉತ್ತಮ, ಧನಲಾಭ, ಇಷ್ಟ ಕಾರ್ಯ ಸಿದ್ಧಿ, ಸ್ನೇಹಿತರಿಂದ ಸಹಕಾರ. ವ್ಯಾಪಾರ,ಉದ್ಯೋಗ,ನೌಕರಿಗಳಲ್ಲಿ ಜಯ

ಧನು :— ಧನಲಾಭ, ಸಮಾಜದಲ್ಲಿ ಪ್ರಗತಿ. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಉತ್ತಮ ಫಲಗಳು, ವಿದ್ಯಾರ್ಥಿಗಳಿಗೆ ಶುಭ ಫಲಗಳು, ವಿವಾಹ ಯೋಗ, ಆರೋಗ್ಯ ಸಾಧಾರಣ, ಚಿಂತೆ

ಮಕರ :—ಆರೋಗ್ಯ ಉತ್ತಮ, ಧನಲಾಭ ದುಂದು ವೆಚ್ಚ, ಚಿಂತೆ, ಸಮಾಜದಲ್ಲಿ ಪ್ರಗತಿ. ವ್ಯಾಪಾರ ಉದ್ಯೋಗಗಳಲ್ಲಿ ಸಾಧಾರಣ ಫಲ.

ಕುಂಭ :— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಉತ್ತಮ ವ್ಯಾಪಾರ, ಉದ್ಯೋಗಗಳಲ್ಲಿ ಜಯ, ಚಿಂತೆ. ಕುಟುಂಬದಲ್ಲಿ ಅಶಾಂತಿ.

ಮೀನ :—ಆರೋಗ್ಯ ಉತ್ತಮ. ಸಾಧಾರಣ ಆರ್ಥಿಕ ಪರಿಸ್ಥಿತಿ. ಮಿತ್ರ ಸಹಾಯ. ವ್ಯಾಪಾರ,ಉದ್ಯೋಗ, ನೌಕರಿಗಳಲ್ಲಿ ಸಾಧಾರಣ ಫಲಗಳು.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd. 1911.

ಉಚಿತ ಬಹುಮಾನ
ನಮ್ಮ ಡೈರಿಯ ವಾರ್ಷಿಕೋತ್ಸವದ ನೆನಪಿಗಾಗಿ ತಾ|| 1-2-57 ರಿಂದ ತಾ|| 28-2-57ರ ವರೆಗೆ, ನೀವು ಕೊಳ್ಳುವ ಪ್ರತಿ ಕೂಪನ್ ಪುಸ್ತಕದೊಂದಿಗೆ ಒಂದು ಉಚಿತ ಬಹುಮಾನ ಪಡೆಯಿರಿ. ವಿವರಗಳಿಗೆ ವಿಚಾರಿಸಿ :—
ಕ್ಷೀರ ಕೇಂದ್ರ
94, ತ್ಯಾಗರಾಜ ರೋಡ್ ಆಫೀಸ್ ಮತ್ತು
ಬ್ರಾಂಚ್ : ಕೆ.ಆರ್. ಆಸ್ಪತ್ರೆ ರಸ್ತೆ,ಮೈಸೂರು

೩ ಗಾಡಿಗಳನ್ನು ಬಿಟ್ಟು ಗೂಡ್ಸ್ ರೈಲು ಓಡಿದ ಪ್ರಸಂಗ

ದಕ್ಷಿಣ ರೈಲ್ವೆಯ ಗುಂತಕಲ್ ಮತ್ತು ವಿಜಯವಾಡಾ ವಿಭಾಗದ ವಾಣ್ಯಂ-ಬುಗ್ಗನಪಲ್ಲಿ ನಿಲ್ದಾಣಗಳ ನಡುವೆ ಓಡುತ್ತಿದ್ದ ಗೂಡ್ಸ್ ರೈಲಿನ ಮೂರು ಗಾಡಿಗಳು ಮತ್ತು ಬ್ರೇಕ್ ವ್ಯಾನು ಕಳಚಿಕೊಂಡುವೆಂದೂ, ಇದು ತಿಳಿಯದೆ ಡ್ರೈವರನು ಮುಂದಿನ ನಿಲ್ದಾಣವನ್ನು ತಲಪಿದನೆಂದೂ, ನಂತರ ಅಲ್ಲಿನ ಸ್ಟೇಷನ್ ಮಾಸ್ಟರರು ಹಿಂದಿನ ನಿಲ್ದಾಣದ ಅಧಿಕಾರಿಗೆ ತಂತಿ ಕಳುಹಿಸಿ ಆಗ ಹೊರಡಬೇಕಾಗಿದ್ದ ಪ್ರಯಾಣಿಕರ ರೈಲನ್ನು ಬಿಡದಂತೆ ತಿಳಿಸಿ, ಬೇರೊಂದು ಇಂಜನ್ನನ್ನು ಕಳುಹಿಸಿ ರಸ್ತೆ ಮಧ್ಯೆ ನಿಂತಿದ್ದ ವ್ಯಾಗನ್ನನ್ನು ತಮ್ಮ ನಿಲ್ದಾಣಕ್ಕೆ ಕರೆತರಿಸಿದರೆಂದೂ ವರದಿಯಾಗಿದೆ.

ಕಾವ್ಯ ವಾಚನ

ಜಯನಗರದಲ್ಲಿರುವ ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ಈ ಸಂಜೆ ೭|| ಗಂಟೆಗೆ ಏಕಾದಶಿ ಪ್ರಯುಕ್ತ ಶ್ರೀಮತಿ ವಸುಂಧರಾ,ಬಿ. ಉಮಾ ಮತ್ತು ವಸುಧಾ ಇವರುಗಳಿಂದ ಶ್ರೀ ಸತ್ಯನಾರಾಯಣ ವ್ರಥ ಕಥಾ ಭಾಗದ ವಾಚನವನ್ನೂ,ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವನ್ನೂ ಏರ್ಪಡಿಸಲಾಗಿದೆ.

ಬಹಿರಂಗ ಸಭೆ

ನಗರದ ಪ್ರಜಾ ಮಂಡಲಿಯ ಆಶ್ರಯದಲ್ಲಿ ಈ ಸಂಜೆ ೬|| ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಆಹಾರ ಧಾನ್ಯದ ಬೆಲೆ,ಚುನಾವಣೆ ಇತ್ಯಾದಿ ವಿಷಯಗಳ ಬಗ್ಗೆ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ ಮಹಾ ಜನರು ಭಾಗವಹಿಸುವಂತೆ ಸಂಚಾಲಕ ಶ್ರೀ ಎ. ಎಸ್. ವೆಂಕಟಸುಬ್ಬಯ್ಯ ಶರ್ಮರವರು ಪ್ರಾರ್ಥಿಸುತ್ತಾರೆ

ಶುಚಿ ರುಚಿಯುಳ್ಳ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ. ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು
ಮಾಡಲಾಗುತ್ತೆ
ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ

ಓಟಿಗಾಗಿ ಕಾಂಗ್ರೆಸ್ ಸ್ಪರ್ಧಿಯ ಉಪವಾಸ

ಬಿಹಾರಿನ ಶಾಸನ ಸಭೆಗೆ ಪರಗಾರ್ಹ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ಸಿನವರಾದ ರಾಜೇಶ್ವರ ಪ್ರಸಾದಸಿಂಗರು ತಮಗೆ ಮತದಾರರು ಪೂರ್ಣ ಬೆಂಬಲದ ಭರವಸೆ ಕೊಡುವರೆಗೂ ನಿರಶನ ವ್ರತ ನಡೆಸಲು ನಿರ್ಧರಿಸಿ ಉಪವಾಸವನ್ನಾರಂಭಿಸಿದ್ದಾರೆ. ಅವರ ವಿರುದ್ಧವಾಗಿ ಕಿಸಾನರ ನಾಯಕರೊಬ್ಬರೂ, ಒಬ್ಬ ಸ್ವತಂತ್ರರೂ ನಿಂತಿರುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕ್ಲಾರಿಯೊನೆಟ್. ೭-೧೫ ಎಸ್. ಚಂದ್ರಪ್ಪ-ದೇವರ ನಾಮ. ೭-೩೦ ಗಾನ ವಿಹಾರ. ೮-೧೫ ರಿಕಾರ್ಡು. ಮಧ್ಯಾಹ್ನ ೧೨ ಎಸ್. ಚಂದ್ರಪ್ಪ. ಸಂಗೀತ. ೧೨-೩೦ ವೀಣಾ ವಾದನ. ೧ ರಿಕಾರ್ಡು. ೧-೫೦ ಕ್ಲಾರಿಯೊನೆಟ್. ೨-೧೫ ಸಂಗೀತ. ಸಂಜೆ ೫-೩೦ ಎಂ. ಹೆಚ್. ಜಯಮ್ಮ-ವೀಣೆ. ೬-೨೦ ಜಾನಪದ ಗೀತೆ. ೭-೩೦ ಮತ್ತು ೮ ಅಬ್ದುಲ್ ಗಫೂರ್-ಸಂಗೀತ. ೮-೩೦ ಗಾಯನ. ೯-೨೫ ಹೊಸ ನಾಣ್ಯಗಳ ಪದ್ಧತಿ-ಭಾಷಣ. ೯-೩೦ ಟಿ. ಕೆ ವೇಣುಗೋಪಾಲದಾಸ್-ಕಥಾ ಕಾಲಕ್ಷೇಪ.

ಸಿನಿಮಾ ಮಂದಿರದ ಬಳಿ ಪೋಲೀಸು ನೌಕರರ ಅಕ್ರಮ ವರ್ತನೆ

ಡಿ. ಎಸ್. ಪಿ ಯವರ ಕಛೇರಿ ನೌಕರರೆಂದು ಹೇಳಲಾದ ಚನ್ನಮಲ್ಲಪ್ಪ ಎಂಬುವವರು ಕಳೆದ ಗುರುವಾರ ರಾತ್ರಿ ನಗರದ ಒಂದು ಸಿನಿಮಾ ಮಂದಿರಕ್ಕೆ ಹೋಗಿ ತಮ್ಮನ್ನು ಒಳಕ್ಕೆ ಬಿಡುವಂತೆ ಗೇಟ್‌ಕೀಪರನನ್ನು ಕೇಳಲಾಗಿ ಆತನು ಪಾಸ್ ಇಲ್ಲದೆ ಬಿಡಲು ಸಾಧ್ಯವಿಲ್ಲವೆಂದು ತಿಳಿಸಿದನೆಂದೂ, ಆಗ ಪೋಲೀಸ್ ನೌಕರರು ಅನುಚಿತವಾಗಿ ವರ್ತಿಸಿ ಅಗೌರವವಾದ ಮಾತುಗಳನ್ನಾಡಿದರೆಂದೂ ಹೇಳಲಾಗಿದೆ. ತರುವಾಯ ಮಂದಿರದವರು ಆತನನ್ನು ಒಳಕ್ಕೆ ಬಿಡದೆ ಕಳುಹಿಸಿಬಿಟ್ಟರು. ಸರ್ಕಾರೀ ನೌಕರರು ಈ ರೀತಿ ಅಕ್ರಮವಾಗಿ ವರ್ತಿಸುವುದರಿಂದ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಇಲಾಖೆಗೂ ಅಗೌರವ ತಂದಂತಾಗುವುದು. ಇನ್ನು ಮುಂದೆ ಇಂತಹ ಅಕ್ರಮಗಳು ನಡೆಯದಂತಾಗುವುದು ಅಗತ್ಯ.

— ಓರ್ವ ಪ್ರೇಕ್ಷಕ

ಅವನನ್ನು ನೋಡಿರಿ
★ ಅವನ ಮೂಗು ಬಾಧೆಪಡುತ್ತಿದೆ ಅಥವಾ ಅವನ ಗಂಟಲಿನಲ್ಲಿ ಶೀತವಾಗಿದೆ.
★ ಅವನು ಹಾಸಿಗೆಯಿಂದ ಎದ್ದು ಕೂಡುವನು ಅಥವಾ ಕಿಟಕಿಯ ಬಳಿಗೆ ಓಡುವನು
★ ಅವನು ದಿಗ್ಭ್ರಾಂತನಾಗುವನು ಮತ್ತು ಉಸಿರಾಡಲು ಒದ್ದಾಡುವನು
★ ಅವನ ಉಚ್ಛ್ವಾಸವು ತುಂಬಾ ಕಠಿಣವಾದುದು ಮತ್ತು ಅತಿ ಶೀಘ್ರವಾದುದು
★ ಅವನ ನಿಶ್ವಾಸವು ತುಂಬಾ ಕಠಿಣ ಹಾಗೂ ಶಬ್ದವಾದುದು
★ ಅವನು ಕೆಮ್ಮುವ ಹಾಗೆ ತಳ್ಳಣಿಸುವನು
★ ಅವನ ತುಟಿಗಳು ಬಿಳಿಚಿಕೊಂಡಿವೆ
★ ಅವನ ಮುಖವೇ ಒಂದು ಕಥೆಯನ್ನು ಹೇಳುವುದು.
ಅದೇ ಆಸ್ತಮ
ದಾರುಣ ಮತ್ತು ಕಾತರತೆಯ ಒಂದು ಚಿತ್ರ.
ಕಣ್ಣೀರಿನ ಆಳವಾದ ಈ ಚಿತ್ರವನ್ನು
ಆಸೆ ಮತ್ತು ಹರ್ಷಕ್ಕೆ ಬದಲಿಸುವುದು
ಕವಿರಾಜ ಪಂಡಿತ
ಮುಗಾರದತ್ತ ಶರ್ಮ
ವೈದ್ಯ ವಾಚಸ್ಪತಿ
ಜಗದ್ವಿಖ್ಯಾತ
ನವರತ್ನ-ಕಲ್ಪ
ಕಂಡುಹಿಡಿದವರು
ವಜ್ರ, ವೈಢೂರ್ಯ ಮತ್ತು
ಹವಳ ಇತ್ಯಾದಿ ಅಮೂಲ್ಯ
ನವರತ್ನಗಳಿಂದ ತಯಾರಿಸಿದೆ
ಉಚಿತ ಸಾಹಿತ್ಯಕ್ಕೆ ಬರೆಯಿರಿ :—
NAVRATNA KALPA PHARMACY,
JULLUNDUR CITY (India)

ಶಿಶುವಿಹಾರಗಳ ಉಪಾಧ್ಯಾಯಿನಿಯ ಶಿಕ್ಷಣ ಕೇಂದ್ರ

ವಿದ್ಯಾ ಇಲಾಖಾಧಿಕಾರಿಗಳ ಸೂಚನೆ ಮೇ ನಗರದ ಶ್ರೀ ಜಗದಂಬಾ ಶಿಶುವಿಹಾರದ ಆ ಯದಲ್ಲಿ ಶಿಶುವಿಹಾರಗಳ ಉಪಾಧ್ಯಾಯಿನಿ ರ ಶಿಕ್ಷಣ ಕೇಂದ್ರವನ್ನು ಶಾಲೆಯಿಂದ ೧೦ ತಿಂ ಳ ಕಾಲ ನಡೆಸಲಾಗುವುದು. ಹೈಸ್ಕೂಲಿನ ೧ ಮತ್ತು ೭ನೇ ತರಗತಿ ಮತ್ತು ಹೆಚ್ಚಿನ ವಿದ್ಯಾ ಅರ್ಹತೆ ಪಡೆದಿರುವ ಮಹಿಳೆಯರು ತಮ್ಮ ಅ ಗಳನ್ನು ಜಗದಂಬಾ ಶಿಶುವಿಹಾರದ ಡೈರೆಕ್ಟ ಕ್ಲಪ್ತ ಕಾಲದಲ್ಲಿ ಕಳುಹಿಸಬೇಕೆಂದೂ, ಹೆಚ್ಚಿ ವಿಷಯಗಳನ್ನು ಖುದ್ದಾಗಿ ತಿಳಿಯಬಹುದೆಂದು ಸೂಚಿಸಲಾಗಿದೆ.

○ ಅಸ್ಸಾಮಿನ ಕೊಹಿಮಾ ನಗರದ ಬ ಸೈನಿಕ ವಿಮಾನವೊಂದು ಕೆಳಗೆ ಬಿದ್ದು ೮ ಜ ರು ಮೃತರಾಗಿರುವರೆಂದು ವರದಿಯಾಗಿದೆ.

ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ ಆಹಾ
ಸರಬರಾಜು ಇಲಾಖೆ, ಮೈಸೂರು 4-2-195

ಟೆಂಡರ್ ನೋಟಿಫಿಕೇಷನ್

ಮೈಸೂರು ಹೊಸ ಸಂತೆಪೇಟೆಯಲ್ಲಿರುವ ಸರ್ಕಾರಿ ಸೆಂಟ್ರಲ್ ಡಿಪೋ ಗೋಡೌನುಗಳಲ್ಲಿ ದಾಸ್ತಾನು ಮಾಡಲಾಗಿರುವ ಅಕ್ಕಿ ಪೈಕಿ ಸುಮಾ 5,500 ಪಲ್ಲ (ಐದು ಸಾವಿರದ ಐದು ನೂ ಪಲ್ಲಾ) ಮೊದಲನೇ ದರ್ಜೆಯ, ಹೊಟ್ಟು ಬಿಡಿಸಿದ (ಪಾಲಿಷ್ ಇಲ್ಲದ) ಹಳೇ ಅಕ್ಕಿಯನ್ನು ಚೀಲಗಳು ವಿನಹ, ಗೋಡೌನ್ ಪ್ರದೇಶದಲ್ಲಿ ಕೊಳ್ಳುವ ಬಗ್ಗೆ, ಅಪೇಕ್ಷಿಸುವವರಿಂದ ಮುಚ್ಚಿ ಪ್ರತಿಗಳಲ್ಲಿ ಮೊಹರಾದ ಟೆಂಡರುಗಳನ್ನು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ (ಆಹಾ ಶಾಖೆ)ಯಲ್ಲಿ ತಾ|| 15-2-1957ನೇ ಶುಕ್ರವಾ ಮಧ್ಯಾಹ್ನ 3 ಘಂಟೆಯವರೆಗೆ ಸ್ವೀಕರಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

1. ಪ್ರತಿ ಟೆಂಡರಿನ ಜೊತೆಯಲ್ಲೂ, ಮೈಸೂರು ಖಜಾನೆ ಅಥವಾ ಮೈಸೂರು ಬ್ಯಾಂಕಿನಲ್ಲಿ "ರೆವಿನ್ಯೂ ಡಿಪಾಜಿಟ್ಸ್‌ಗಾಗಿ" ರೂ 1,000 (ಒಂದು ಸಹಸ್ರ) ಅನ್ನು ಠೇವಣಿ ಮೊಬಲಗಾ ಕಟ್ಟಿದ ಬಗ್ಗೆ, ಡೂಪ್ಲಿಕೇಟ್ ಚಲನ್ನನ್ನು ಲಗ ತಿರಬೇಕು; ಇದಕ್ಕೆ ತಪ್ಪಿ ಬರುವಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

2. ಯಾವುದೇ ಟೆಂಡರನ್ನಾದರೂ, ಕಾರಣ ಕನ್ನೇ ಕೊಡದೆ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸರ್ಕಾರದವರು ಹೊಂದಿರುವರು. ಮತ್ತು ಈ ಬಗ್ಗೆ ಸರ್ಕಾರದ ತೀರ್ಮಾನವೇ ಅಂತ್ಯವಾದುದು ಮತ್ತು ಬದ್ಧವಾದುದು.

3 ಟೆಂಡರುಗಳನ್ನು ಜಿಲ್ಲಾಧಿಕಾರಿಗಳ ಹಾರ ಇಲಾಖಾ ಕಛೇರಿಯಲ್ಲಿ 16-2-19 ನೇ ತಾರೀಖು ಶನಿವಾರ ಬೆಳಗ್ಗೆ 10 ಘಂಟೆಗೆ ಯಲಾಗುವುದು. ಅಪೇಕ್ಷೆ ಪಡುವ ಟೆಂಡರುದಾರರು ಎದುರಿಗೆ ಇರಬಹುದು

4. ಜಯಶೀಲರಾದ ಟೆಂಡರುದಾರರು ತನ ಟೆಂಡರು ಅಂಗೀಕಾರವಾದ ಬಗ್ಗೆ ಕೊಟ್ಟ ಮೂರು ದಿನಗಳೊಳಗೆ ಟೆಂಡರು ಮೊಲಗಿನ ಬಾಕಿ ಹಣವನ್ನು ಪಾವತಿ ಮಾಡಿ ಯನ್ನು ಸುಪರ್ದಿಗೆ ತೆಗೆದುಕೊಂಡ ಬಗ್ಗೆ ಮತ್ತು ಅದನ್ನು 15 ದಿನಗಳೊಳಗೆ ಅಲ್ಲಿಂದ ಗಿಸುವ ಬಗ್ಗೆಯೂ ಮುಚ್ಚಳಿಕೆ ಬರೆದುಕೊ ಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಆತನ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ತನ ಕಾಂಟ್ರಾಕ್ಟು ರದ್ದಾದಂತೆ ಭಾವಿಸಲಾವುದು. ಮತ್ತು ಟೆಂಡರು ಷರತ್ತುಗಳಿಗೆ ತಪ್ಪಿ ಬಗ್ಗೆ, ಪುನಃ ಟೆಂಡರನ್ನು ಕರೆಯಬೇಕಾದ ದರ್ಭದಲ್ಲಿ ಸರ್ಕಾರಕ್ಕೆ ಉಂಟಾಗಬಹುದಾದ ಷ್ಟಗಳಿಗೂ ಆತನನ್ನೇ ಗುರಿಪಡಿಸಲಾಗುವು

5 ಮೈಸೂರಿನ ಅರಕೆಯಲ್ಲಿ ಪಲ್ಲ 1ಕ್ಕೆ ಸೇರಿನಂತೆ ಅಕ್ಕಿಯನ್ನು ಕೊಳ್ಳುವ ಬಗ್ಗೆ ಆಣೆ ನಾಣ್ಯಗಳಲ್ಲಿ ಬೆಲೆಯನ್ನು ಅಕ್ಷರ ಅಂಕಿಗಳಲ್ಲಿ ನಮೂದಿಸತಕ್ಕದ್ದು.

6. ಮೇಲೆ ನಮೂದಿಸಿರುವ ಕಛೇರಿಯ ಮತ್ತು ಮೈಸೂರಿನಲ್ಲಿರುವ ಸರ್ಕಾರಿ ಸೆಂಟ್ ಡಿಪೋವಿನಲ್ಲೂ ಕೆಲಸದ ದಿನ ಮತ್ತು ವೇಳೆ ಅಕ್ಕಿಯ ಮಾದರಿಯನ್ನು ನೋಡಬಹುದು.

(ರುಜು) ಡಿ. ಆರ್. ಜಿನ್ನರುದ್ರಯ್ಯ
ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ.

THE CHAMPION METROPOLITAN COLLEGE OF COMMERCE
Co-operators' Home, 100' Road, Mysore
ADMISSIONS for fresh classes in Typewriting and Shorthand are now being received
M.S. PUTTANNA, *Vice-Principal*
P. SUBBARAYA SASTRY, *Principal*

CLASSES FOR MADRAS MATRIC EXAMINATION March 58
Persons above 19 years admitted. No minimum qualification
JOIN AT ONCE.
SUMMER CLASSES (*Middle & High school*) *IN FULL SWING.*
Girls also admitted.
CITY TUTORIAL COLLEGE, OLD AGRAHAR, MYSORE

Edited, Printed and Published by
A. R. Nagarajan at Sadhvi Press,
D. Subbiah Road, Mysore

ರಿಜಿಷ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು



ಇಂದಿನ ಪತ್ರಿಕೆ ೩ ಕಾಸು



ಕಾಂಗ್ರೆಸ್ ಉಮೇದುವಾರರಿಗೇ
ಜಯವಿಟ್ಟು ನಿಮ್ಮ ಓಟನ್ನು ಕೊಡಿರಿ

ಪುಟ : ೧೫] SADHVI : MONDAY 11—2—1957 ಮೈಸೂರು : ಸೋಮವಾರ ೧೧—೨—೧೯೫೭ : [ಸಂಚಿಕೆ : ೧೯೩

ಪೋರ್ಚುಗೀಸರಿಂದ ಭಾರತದ ವಾಯುಗಡಿ ಉಲ್ಲಂಘನೆ

ಸೋವಿಯಟ್ ರಷ್ಯದಲ್ಲಿ ಪ್ರೌಢ ವಿದ್ಯಾಭ್ಯಾಸದ ಪ್ರಗತಿ

ನಗರದಲ್ಲಿ ವಸ್ತು ಪ್ರದರ್ಶನದ ಪ್ರಾರಂಭೋತ್ಸವ

ಮೈಸೂರು ೧೧

ರಷ್ಯಾ ದೇಶದಲ್ಲಿ ಪ್ರೌಢ ವಿದ್ಯಾಭ್ಯಾಸವು ಹೊಂದಿರುವ ಪ್ರಗತಿಯನ್ನು ಸೂಚಿಸುವ ಪ್ರದರ್ಶ ಪ್ರಾರಂಭೋತ್ಸವವನ್ನು ಹಂಗಾಮಿ ಮುಖ್ಯ ನ್ಯಾಯಾಧೀಶರಾದ ಶ್ರೀ ಸಿಟ್ಟೂರು ಶ್ರೀನಿವಾಸ ರವರು ನೆನ್ನೆ ಇಕ್ಕನ ಗಾಂಧಿ ಚೌಕದಲ್ಲಿರುವ ಸಿ ಸಿ ನಿಲಯದಲ್ಲಿ ನೆರವೇರಿಸಿದರು. ಭಾರ ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಈ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಸಂಘದ ಅಧ್ಯಕ್ಷರಾದ ಶ್ರೀ ಡಿ. ವಿ. ಕೆ. ಮೂರ್ತಿಯವರು ಅತಿಥಿಗಳನ್ನು ಸ್ವಾಗತಿಸಿ, ಪ್ರದರ್ಶನದ ಉದ್ದೇಶವನ್ನು ವಿವರಿಸಿದರು.

ಶ್ರೀ ಸಿಟ್ಟೂರು ಶ್ರೀನಿವಾಸರಾಯರು ತಮ್ಮ ಭಾಷಣದಲ್ಲಿ, ರಷ್ಯದ ಕ್ರಾಂತಿಯನಂತರ ಆ ದೇಶವು ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಪಾಂಚವಾರ್ಷಿಕ ಯೋಜನೆಗಳ ಮೂಲಕ ಸಾಧಿಸಿರುವ ಪ್ರಗತಿಯನ್ನು ವಿವರಿಸಿದರು. ರಾಜಕೀಯ ಧ್ಯೇಯಗಳು ಒಂದೊಂದು ರಾಷ್ಟ್ರಕ್ಕೂ ಬೇರೆಬೇರೆಯಾಗಿ ಇರಬಹುದಾದರೂ, ರಚನಾತ್ಮಕ ಮಾರ್ಗಗಳಲ್ಲಿ ಅವುಗಳು ಸಾಧಿಸಿರುವ ಕಾರ್ಯಗಳಿಂದ ಇತರರು ಪ್ರಯೋಜನ ಹೊಂದಬೇಕೆಂದು ಅವರು ನುಡಿದರು. ಈ ವಸ್ತು ಪ್ರದರ್ಶನವು ಈ ಕಾರ್ಯದಲ್ಲಿ ವಿಶೇಷ ಸಹಕಾರಿಯಾಗುವುದೆಂದು ಅವರು ಹೇಳಿದರು.

ಶ್ರೀ ಕೆ. ಸಂಪದ್ಗಿರಿರಾಯರು ಭಾಷಣ ಮಾಡಿ, ಮತ್ತು ವರ್ಷಕ್ಕೆ ಮುಂಚೆ ರಷ್ಯವು ಸ್ವಾತಂತ್ರ್ಯಪೂರ್ವದ ಭಾರತದ ಸ್ಥಿತಿಯಲ್ಲಿಯೇ ಇದ್ದಿದ್ದು, ಕ್ರಾಂತಿಯನಂತರ ರಾಷ್ಟ್ರದ ಪುನರ್ರಚನೆಗೆ ಅತ್ಯಗತ್ಯವಾದ ವಿದ್ಯಾಭ್ಯಾಸದ ಸುಧಾರಣೆಯನ್ನು ಕೈಗೊಂಡು ಯೋಜನಾಬದ್ಧ ರೀತಿಯಲ್ಲಿ ಹತ್ತು ವರ್ಷಗಳೊಳಗೆ ನಿರಕ್ಷರತೆಯನ್ನು ನಿರ್ಮೂಲ ಮಾಡಿತೆಂದೂ ಹೇಳಿದರು. ಪ್ರತಿಯೊಬ್ಬ ತರುಣ ತರುಣಿಗೂ ಅವರವರ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾದ ವಿದ್ಯೆಯನ್ನು ಉಚಿತವಾಗಿ ಕೊಟ್ಟು ಅವರುಗಳು ರಾಷ್ಟ್ರದ ಅಭಿವೃದ್ಧಿಯಲ್ಲಿ ಭಾಗಿಗಳಾಗುವಂತೆ ಮಾಡಲಾಗಿದೆ. ವಿದ್ಯಾವಂತರ ನಿರುದ್ಯೋಗದ ಪ್ರಶ್ನೆ ಅಲ್ಲಿ ಇರುವುದಿಲ್ಲ. ನಮ್ಮ ದೇಶವು ಸ್ವಾತಂತ್ರ್ಯ ಪಡೆದ ಹತ್ತು ವರ್ಷಗಳನಂತರ ಇನ್ನೂ ಇಲ್ಲಿ ಶೇಕಡ ೭೫ ಮಂದಿ ಅನಕ್ಷರಸ್ಥರಿರುವರು. ಈ ವಿಷಯದಲ್ಲಿ ನಾವು ರಷ್ಯದಿಂದ ಕಲಿಯಬೇಕಾದ್ದು ಅಗತ್ಯ. ರಾಜಕೀಯ ಮಾರ್ಗಕ್ಕೆ ಪ್ರಾಧಾನ್ಯತೆ ಕೊಡದೆ ಫಲಿತಾಂಶಕ್ಕೆ ಹೆಚ್ಚು ಗಮನ ಕೊಡುವುದು ಅಗತ್ಯ—ಎಂದು ಅವರು ಹೇಳಿದರು.

ಸರ್ಕಾರವು ಮಾಡುವ ಎಲ್ಲ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಕಲರಿಗೂ ಸಂಪೂರ್ಣ ತಿಳುವಳಿಕೆಯನ್ನುಂಟುಮಾಡುವ ಪ್ರಚಾರ ಕೌಶಲ್ಯವು ಅಲ್ಲಿ ವಿಶೇಷವಾಗಿರುತ್ತದೆ. ಇವನ್ನು ನಮ್ಮ ಜನರು ಪ್ರಯೋಜನ ಹೊಂದಬೇಕೆಂದು ಅವರು ನುಡಿದರು.

ಪಶ್ಚಿಮವಾಹಿನಿಯಲ್ಲಿ ಸರ್ವೋದಯ ಮೇಳ

ಮೈಸೂರು ೧೧

ಪಶ್ಚಿಮವಾಹಿನಿಯಲ್ಲಿ ನೆನ್ನೆ ಸಂಜೆ ಸರ್ವೋದಯ ಮೇಳವು ಆರಂಭವಾಯಿತು. ಅದರಲ್ಲಿ ಶ್ರೀಗಳಾದ ಡಾ|| ವೈ. ಪಾರ್ಥನಾರಾಯಣ ಪಂಡಿತ್, ಬೆಳಗುಂಬ ನಾರಣಪ್ಪ, ಹೆಚ್. ಆರ್. ವೆಂಕಟರಮಣ ಅಯ್ಯರ್ ಮುಂತಾದವರು ಭಾಗವಹಿಸಿರುವರು. ಈ ಸಂಜೆ ಶ್ರೀರಂಗಪಟ್ಟಣದಲ್ಲಿ ಪ್ರಾರ್ಥನಾ ಸಭೆಯೂ; ನಾಳೆ ಬೆಳಿಗ್ಗೆ ೫-೩೦ಕ್ಕೆ ಪಶ್ಚಿಮವಾಹಿನಿಯಲ್ಲಿ ಪ್ರಾರ್ಥನೆ, ೫-೩೦ರಿಂದ ಸಂಜೆ ೫-೩೦ರವರೆಗೆ ಅಖಂಡ ಸೂತ್ರಯಜ್ಞ, ಸೂತ್ರಾಂಜಲಿ ಸಮರ್ಪಣೆ, ೧೧ರಿಂದ ೧೨ ಸಾಮೂಹಿಕ ಪ್ರಾರ್ಥನೆ, ಮತ್ತು ಪ್ರವಚನ, ೨ರಿಂದ ೫ ಗಾಂಧಿ ಸಾಹಿತ್ಯ ವಾಚನ, ಗೀತಾ ಪಠಣ ಯೋಜನೆ, ಕೀರ್ತನೆ ಸಂಜೆ ೫||ಗೆ ಅಖಿಲ ಭಾರತ ಸರ್ವ ಸೇವಾ ಸಂಘದ ಕಾರ್ಯದರ್ಶಿ ಶ್ರೀ ವಲ್ಲಭಸ್ವಾಮಿಯವರ ಪ್ರವಚನವೂ ಏರ್ಪಾಡಾಗಿದೆ.

ವಿಶ್ವವಿದ್ಯಾಲಯ ಸಂಸ್ಕೃತ ಸಂಘದ ಸಮಾಪನ ಭಾಷಣ

ಮಹಾರಾಜಾ ಕಾಲೇಜಿನಲ್ಲಿ ನಾಳೆ ಸಂಜೆ ೫|| ಗಂಟೆಗೆ ವಿಶ್ವವಿದ್ಯಾಲಯ ಸಂಸ್ಕೃತ ಸಂಘದ ಸಮಾಪನ ಭಾಷಣವನ್ನು ಕನ್ನಡ ಪ್ರಾಧ್ಯಾಪಕರಾದ ಶ್ರೀ ತೀ. ನಂ. ಶ್ರೀಕಂಠಯ್ಯನವರು ಮಾಡುವರು. ಸಂಸ್ಕೃತ ಪ್ರಾಧ್ಯಾಪಕ ಶ್ರೀ ನ. ಶಿವರಾಮಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಹರಿಕಥೆ

ವಿದ್ಯಾರಣ್ಯಪುರದ ಮೂರನೇ ಕ್ರಾಸಿನಲ್ಲಿರುವ ಯಲ್ಲಮ್ಮಾಂಬಾ ದೇವಸ್ಥಾನದಲ್ಲಿ ದೇವೀ ಸಪ್ತಾಹದ ಅಂಗವಾಗಿ ಈ ಸಂಜೆ ೬|| ಗಂಟೆಗೆ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯನ್ನು ವಿ|| ಗುರುರಾಜಾಚಾರ್ಯರು ನಡೆಸುವರು. ನಾಳೆ ಸಂಜೆ ಅದೇ ಹೊತ್ತಿಗೆ ವಿ|| ನದೀಪುರಂ ಶ್ರೀನಿವಾಸಯ್ಯಂಗಾರ್ಯರು ಭೂಕೈಲಾಸ ಎಂಬ ಕಥೆಯನ್ನು ಮಾಡುವರು.

ಗವರ್ನರರೊಡನೆ ಶ್ರೀ ಜೆ. ಎಸ್. ರಾಮಕೃಷ್ಣಯ್ಯನವರ ಭೇಟಿ

ಪೌರಸಭಾ ಉಪಾಧ್ಯಕ್ಷರಾದ ಶ್ರೀ ಜೆ. ಎಸ್. ರಾಮಕೃಷ್ಣಯ್ಯನವರು ಈ ದಿನ ಬೆಳಿಗ್ಗೆ ಅರಮನೆಯಲ್ಲಿ ಗವರ್ನರರನ್ನು ಭೇಟಿ ಮಾಡಿ ಗೌರವವನ್ನು ಸಲ್ಲಿಸಿದರು.

ಕಾರ್ಯದರ್ಶಿಗಳಾದ ಶ್ರೀ ಎ. ಸೀತಾರಾಮ್‌ರವರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಗಿಯಿತು.

ಪ್ರದರ್ಶನವು ಹತ್ತು ದಿನಗಳ ಕಾಲ ನಡೆಯುತ್ತದೆ. ಪ್ರವೇಶ ಉಚಿತ. ರಷ್ಯಾ ದೇಶದಲ್ಲಿ ವಿದ್ಯಾಭ್ಯಾಸದ ಪ್ರಗತಿಯನ್ನು ಸೂಚಿಸುವ ಚಿತ್ರಗಳನ್ನು ಅದರಲ್ಲಿ ಇಡಲಾಗಿದೆ. ಮತ್ತು ಛಾಯಾ ಚಿತ್ರಗಳೂ ಸಹ ತೋರಿಸಲ್ಪಡುತ್ತವೆ. ಸಾರ್ವಜನಿಕರು ಇದಕ್ಕೆ ಭೇಟಿ ಕೊಟ್ಟು ಪ್ರಯೋಜನ ಪಡೆಯಬೇಕೆಂದು ಕೋರಲಾಗಿದೆ.

ಪೋರ್ಚುಗೀಸ್ ವಿಮಾನಗಳಿಂದ ಭಾರತದ ನಿಯಮದ ಉಲ್ಲಂಘನೆ

ಪೋರ್ಚುಗಲ್ ಸರ್ಕಾರದ ನಿರ್ಧಾರ

ಪೋರ್ಚುಗೀಸ್ ಸರ್ಕಾರದ ವಿದೇಶಾಂಗ ಮತ್ತು ಸಮುದ್ರಾಂತರ ಇಲಾಖೆಗಳು ಜಂಟಿ ಪ್ರಕಟಣೆಯೊಂದನ್ನು ಹೊರಡಿಸಿ, ಡಾಮನ್, ಡಯೂ ಮತ್ತು ಗೋವಾಗಳ ಮೇಲೆ ವಿಮಾನ ಸಂಚಾರದ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸಲು ತಮ್ಮ ಸರ್ಕಾರದವರು ನಿರ್ಧರಿಸಿರುವುದಾಗಿ ತಿಳಿಸಿವೆ. ಭಾರತದಲ್ಲಿರುವ ಪೋರ್ಚುಗೀಸ್ ಪ್ರದೇಶಗಳ ೧೦ ಮೈಲಿ ಸುತ್ತ ಎಲ್ಲೂ ಆ ದೇಶದ ವಿಮಾನಗಳು ಹಾರಾಡಬಾರದೆಂದು ಭಾರತ ಸರ್ಕಾರದವರು ನಿರ್ಬಂಧ ಹಾಕಿದ್ದರು. ಆದರ ವೇಳೆ ಭಾರತದ ಪ್ರದೇಶದ ಮೇಲೆ ತಮ್ಮ ವಿಮಾನಗಳು ಹಾರಕೂಡದೆಂದು ಪೋರ್ಚುಗೀಸರು ಸೂಚಿಸಿದ್ದು, ಈಗ ಪುನಃ "ವಿಮಾನ ಸಂಚಾರದ ಸ್ವಾತಂತ್ರ್ಯ"ದ ಸ್ಥಾಪನೆಗೆ ನಿರ್ಧರಿಸಿರುತ್ತಾರೆ.

ರೈಲ್ವೆ ನೌಕರರಿಗೆ ಹೆಚ್ಚು ಸಂಬಳ

೧,೩೦,೦೦೦ ಮಂದಿಗೆ ಸೌಲಭ್ಯ

ಭಾರತದ ರೈಲ್ವೆಗಳಲ್ಲಿರುವ ಎಲ್ಲಾ ನಾನ್ ಗೆಜೆಟೆಡ್ ವರ್ಗಗಳ ನೌಕರರ ಹುದ್ದೆಗಳ ಸಂಬಳವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಯೋಜನೆಯನ್ನು ನೆನ್ನೆ ರೈಲ್ವೆ ಮಂತ್ರಿ ಜಗಜೀವನರಾಂರವರು ಘೋಷಿಸಿದರು. ಇದರಿಂದ ೧,೩೦,೦೦೦ ನೌಕರರಿಗೆ ಅನುಕೂಲವಾಗುವುದೆಂದು ಗೊತ್ತಾಗಿದೆ. ಹೊಸ ಏರ್ಪಾಡಿನ ಪ್ರಕಾರ ನೌಕರರುಗಳಿಗೆ ಹೆಚ್ಚಿನ ಸಂಬಳ ಅಥವಾ ಹೆಚ್ಚು ಸಂಬಳದ ಸೌಲಭ್ಯ ಬರುವ ಬಡ್ತಿ ಅವಕಾಶಗಳು ದೊರೆಯುವುವು. ಕಳೆದ ಏಪ್ರಿಲ್ ೧ ರಿಂದ ಈ ವ್ಯವಸ್ಥೆಯು ಜಾರಿಗೆ ಬರುವುದು.

ಇದರಿಂದ ೩೩,೦೦೦ ಸ್ಟೇಷನ್ ಮತ್ತು ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರುಗಳು, ೪೪,೦೦೦ ಕಛೇರಿ ಗುಮಾಸ್ತರು, ೧೫,೦೦೦ ಅಕೌಂಟ್ಸ್ ಗುಮಾಸ್ತರು, ೨೪,೦೦೦ ಕಮ್ಮರ್ಷಲ್ ಕ್ಲಾರ್ಕುಗಳು, ೫,೦೦೦ ಟ್ರೇನ್ ಕ್ಲಾರ್ಕುಗಳು, ೩,೦೦೦ ಟ್ರೇನ್ ಎಕ್ಸಾಮಿನರುಗಳು ಮತ್ತು ೧೩,೦೦೦ ಟಿಕೆಟ್ ಕಲೆಕ್ಟರುಗಳು, ೩,೦೦೦ ಸಿಗ್ನಲರುಗಳು, ಮತ್ತು ೧೦,೦೦೦ ಡ್ರೈವರುಗಳು, ಫೈರ್ಮನ್ನರು ಮತ್ತು ಗಾರ್ಡುಗಳಿಗೆ ಸೌಲಭ್ಯವು ದೊರೆತಂತಾಗುವುದು.

ಶಾರದಾ ಪೂಜೆ

ನಂಜನಗೂಡಿನ ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟಿನ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಶಾರದಾ ಪೂಜೆಯನ್ನು ಶ್ರೀ ಬಿ. ವಿ. ಪಂಡಿತರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಉಪನಯನ

ಚಾಮುಂಡಿಪೆಟ್ಟದಲ್ಲಿರುವ ನಿವೃತ್ತ ರೆವಿನ್ಯೂ ಸುಪರಿಂಟೆಂಡೆಂಟ್ ಶ್ರೀ ಚೆನ್ನೂರು ವೆಂಕಟರಮಣಯ್ಯನವರ ಮೊಮ್ಮಕ್ಕಳು ಶ್ರೀ ಕೆ. ವಿ. ವೆಂಕಟಾಚಲಯ್ಯನವರ ಕುಮಾರ ಚಿ|| ರಾಮಕೃಷ್ಣನಿಗೆ ನೆನ್ನೆ ನಂಜನಗೂಡಿನಲ್ಲಿ ಉಪನಯನವನ್ನು ನೆರವೇರಿಸಿದರು.

ಕಾಶ್ಮೀರದ ವಿಲೀನ ಮತ್ತು ಪಾಕಿಸ್ತಾನದ ದುರಾಕ್ರಮಣದ ಬಗ್ಗೆ ಒಪ್ಪಿಗೆ ಅಗತ್ಯ

ವಿಶ್ವಸಂಸ್ಥೆ ಮತ್ತು ಪಾಕಿಸ್ತಾನದೊಡನೆ ಮಾತುಕತೆಗೆ ನೆಹರೂ ಷರತ್ತು

ಭಾರತದಲ್ಲಿ ಕಾಶ್ಮೀರದ ಐಕ್ಯ ಮತ್ತು ಪಾಕಿಸ್ತಾನವು ಕಾಶ್ಮೀರದಲ್ಲಿ ನಡೆಸಿರುವ ದುರಾಕ್ರಮಣ—ಈ ಮೂಲಭೂತ ತತ್ವಗಳನ್ನು ಒಪ್ಪಿಕೊಂಡಲ್ಲಿ ಮಾತ್ರ ಕಾಶ್ಮೀರದ ವಿಚಾರವಾಗಿ ತಾವು ವಿಶ್ವಸಂಸ್ಥೆ, ಪಾಕಿಸ್ತಾನ ಅಥವಾ ಯಾವುದೇ ರಾಷ್ಟ್ರದೊಡನೆ ಸಂಭಾಷಣೆ ನಡೆಸಲು ಸಿದ್ಧವಿರುವುದಾಗಿ ಪ್ರಧಾನಿ ನೆಹರೂರವರು ನೆನ್ನೆ ಜಲಂಧರದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಭಾರತವು ದುರ್ಬಲ ರಾಷ್ಟ್ರವಲ್ಲ. ಭಾರತದ ಸೈನ್ಯವು ಅತ್ಯಂತ ಉತ್ತಮವಾದುದು. ಕಾಶ್ಮೀರದ ಬಗ್ಗೆ ಏನು ಪರಿಸ್ಥಿತಿಯು ಉದ್ಭವಿಸಿದರೂ ಅದನ್ನು ತಾಳ್ಮೆಯಿಂದ ಎದುರಿಸಲಾಗುತ್ತದೆ. ಭಾರತದವರು ಆಗದಿದ್ದರೂ, ಕೆಲವು ಘರ್ಷಣೆಗಳುಂಟಾಗಬಹುದು. ಅಂತಹ ಸನ್ನಿವೇಶವನ್ನಾದರೂ ಶಾಂತಿ ಸ್ಥೈರ್ಯಗಳಿಂದ ಮುಖಾ ಜನರು ಎದುರಿಸಬೇಕು. ಪ್ರಭುತ್ವದವರ ನೀತಿಗೆ ಮುಖಾ ಚುನಾವಣೆಯಲ್ಲಿ ಬೆಂಬಲ ನೀಡಿ ನಮ್ಮ ಮುಂದಿರುವ ಸವಾಲಿಗೆ ಉತ್ತರ ಕೊಡಬೇಕು—ಎಂದು ಅವರು ನುಡಿದರು.

ಬ್ರೈಟ್ ಕಾಮರ್ಸ್ ಕಾಲೇಜಿನ ವಾರ್ಷಿಕೋತ್ಸವ

ನಗರದ ಬ್ರೈಟ್ ಕಾಮರ್ಸ್ ಕಾಲೇಜಿನ ಐದನೇ ವಾರ್ಷಿಕೋತ್ಸವವು ಕಳೆದ ಗುರುವಾರ ಟೌನ್‌ಹಾಲಿನಲ್ಲಿ ನೆರವೇರಿತು. ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಆರ್. ಚನ್ನರುದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದನಂತರ ಪ್ರಿನ್ಸಿಪಾಲ್ ಶ್ರೀ ಕೆ. ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಹಳೆಯ ವಿದ್ಯಾರ್ಥಿ ಶ್ರೀ ಬಿ. ಗುಂಡೂರಾಯರು ಭಾಷಣ ಮಾಡಿ ಹಿಂದಿನ ನೆನಪುಗಳನ್ನು ತಂದುಕೊಟ್ಟರು. ಶ್ರೀ ಪ್ರಭಾಕರ್‌ರವರು ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಭಾಷಣ ಮಾಡಿ ಸಂಸ್ಥೆಯ ಕೆಲಸಕಾರ್ಯಗಳನ್ನು ಮೆಚ್ಚಿ, ಅದು ಇನ್ನೂ ಹೆಚ್ಚು ಉಪಯುಕ್ತವಾಗಲೆಂದು ಹಾರೈಸಿದರು. ಶ್ರೀ ವಿಗಡಂ ಗಣೇಶರವರ ಹಾಸ್ಯ, ರಾಜಗೋಪಾಲ್‌ರವರ ನೃತ್ಯ ಕಲಾ ಮಂದಿರದ ವಿದ್ಯಾರ್ಥಿನಿಯರಿಂದ ನೃತ್ಯ ಮತ್ತು ಸಂಸ್ಥೆಯ ವಿದ್ಯಾರ್ಥಿವಿದ್ಯಾರ್ಥಿನಿಯರಿಂದ ನಾಟಕಾಭಿನಯಗಳೂ ಆದುವು.

○ ಭಾರತದಲ್ಲಿ ಸಂಚರಿಸುತ್ತಿರುವ ಜರ್ಮನ್ ಪತ್ರಿಕೋದ್ಯಮಿ ನಿಯೋಗದ ಸದಸ್ಯರು ನೆನ್ನೆ ರಾತ್ರಿ ನಗರಕ್ಕೆ ಆಗಮಿಸಿ, ಬೆಳಿಗ್ಗೆ ಗವರ್ನರರನ್ನು ಭೇಟಿ ಮಾಡಿ ಬೆಂಗಳೂರಿಗೆ ತೆರಳಿದರು. ರಾತ್ರಿ ಅವರು ಬೃಂದಾವನಕ್ಕೆ ಭೇಟಿಯಿತ್ತಿದ್ದರು.

ನೆಹರೂರವರ ಕಾರ್ಯದರ್ಶಿಯವರ ಆಗಮನ

ಪ್ರೆ. ಸು. ಪತ್ರಿ] ಬೆಂಗಳೂರು ೧೧

ಪ್ರಧಾನ ನೆಹರೂರವರ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ [illegible] ಚುನಾವಣೆ ಪ್ರಚಾರಕ್ಕಾಗಿ ಇಂದು ಇಲ್ಲಿಗೆ ಆಗಮಿಸುವವರು

ವಾರ ಭವಿಷ್ಯ

ತಾ॥ ೧೦-೨ ೫೭ ರಿಂದ ೧೬ ೨ ೫೭ರ ವರೆಗೆ

ಮೇಷ —ಆರೋಗ್ಯ ಸಾಧಾರಣ ಮಾನಸಿಕ ಚಿಂತೆ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಅಶುಭ ಫಲಗಳು ಮಿತ್ರರಿಂದ ಮೋಸ ಸಂಭವ ಧನಲಾಭ

ವೃಷಭ :— ಆರೋಗ್ಯ ಉತ್ತಮ, ಧನಲಾಭ ಅಧಿಕ ವ್ಯಯ, ವ್ಯಾಪಾರ ಉದ್ಯೋಗಗಳಲ್ಲಿ ಸಾಧಾರಣ ಫಲ ಮಿತ್ರರಿಂದ ಸಹಾಯ ಗೃಹ ಸೌಖ್ಯ

ಮಿಥುನ —ಅನಾರೋಗ್ಯ, ಅನಿರೀಕ್ಷಿತ ಧನಲಾಭ, ಸಮಾಜದಲ್ಲಿ ಉನ್ನತಿ, ವ್ಯಾಪಾರವ್ಯವಹಾರಗಳಲ್ಲಿ ಅಪಜಯ ಉದ್ಯೋಗದಲ್ಲಿ ನೌಕರರಿಗೆ ಶುಭ ಫಲಗಳು

ಕರ್ಕ —ಆರೋಗ್ಯ ಸಾಧಾರಣ ಧನಲಾಭ, ಮಿತ್ರರಿಂದ ಸಹಾಯ, ಸಮಾಜದಲ್ಲಿ ಪ್ರಗತಿ ವ್ಯಾಪಾರ,ಉದ್ಯೋಗ,ನೌಕರಿಗಳಲ್ಲಿ ಸಾಧಾರಣ ಫಲಗಳು.

ಸಿಂಹ :—ಆರೋಗ್ಯ ಉತ್ತಮ, ಧನಲಾಭ, ವಿದ್ಯಾರ್ಥಿಗಳಿಗೆ ಶುಭ ಫಲ ವಿವಾಹ ಯೋಗ ವ್ಯಾಪಾರವ್ಯವಹಾರದಲ್ಲಿ ಜಯ ಮಿತ್ರ ಸಹಾಯ

ಕನ್ಯಾ :—ಆರೋಗ್ಯ ಸಾಧಾರಣ,ಧನ ಲಾಭ ಅಧಿಕ ವ್ಯಯ, ಚಿಂತೆ, ಮಿತ್ರರಿಂದ ಮೋಸ ವ್ಯಾಪಾರ ಉದ್ಯೋಗಗಳಲ್ಲಿ ಅಶುಭ ಫಲಗಳು

ತುಲ — ಮಿತ್ರರೊಡನೆ ವೈಮನಸ್ಯ ಕುಟುಂಬದಲ್ಲಿ ಅಶಾಂತಿ, ಕೆಲಸಕಾರ್ಯಗಳಲ್ಲಿ ಸಾಧಾರಣ ಫಲಗಳು, ಮಿತ್ರರಿಂದ ಸಹಾಯ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಅಶುಭ ಫಲಗಳು

ವೃಶ್ಚಿಕ —ಆರೋಗ್ಯ ಉತ್ತಮ, ಧನಲಾಭ ಇಷ್ಟ ಕಾರ್ಯ ಸಿದ್ಧಿ ಸ್ನೇಹಿತರಿಂದ ಸಹಕಾರ ವ್ಯಾಪಾರ,ಉದ್ಯೋಗ ನೌಕರಿಗಳಲ್ಲಿ ಜಯ

ಧನು :— ಧನಲಾಭ, ಸಮಾಜದಲ್ಲಿ ಪ್ರಗತಿ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಉತ್ತಮ ಫಲಗಳು, ವಿದ್ಯಾರ್ಥಿಗಳಿಗೆ ಶುಭ ಫಲಗಳು, ವಿವಾಹ ಯೋಗ, ಆರೋಗ್ಯ ಸಾಧಾರಣ, ಚಿಂತೆ

ಮಕರ — ಆರೋಗ್ಯ ಉತ್ತಮ ಧನಲಾಭ ದುಂದು ವೆಚ್ಚ, ಚಿಂತೆ, ಸಮಾಜದಲ್ಲಿ ಪ್ರಗತಿ ವ್ಯಾಪಾರ ಉದ್ಯೋಗಗಳಲ್ಲಿ ಸಾಧಾರಣ ಫಲ.

ಕುಂಭ ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಉತ್ತಮ ವ್ಯಾಪಾರ, ಉದ್ಯೋಗಗಳಲ್ಲಿ ಜಯ ಚಿಂತೆ ಕುಟುಂಬದಲ್ಲಿ ಅಶಾಂತಿ.

ಮೀನ —ಆರೋಗ್ಯ ಉತ್ತಮ ಸಾಧಾರಣ ಆರ್ಥಿಕ ಪರಿಸ್ಥಿತಿ ಮಿತ್ರ ಸಹಾಯ ವ್ಯಾಪಾರ,ಉದ್ಯೋಗ, ನೌಕರಿಗಳಲ್ಲಿ ಸಾಧಾರಣ ಫಲಗಳು

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911

ಉಚಿತ ಬಹುಮಾನ
ನಮ್ಮ ಡೈರಿಯ ವಾರ್ಷಿಕೋತ್ಸವದ ನೆನಪಿಗಾಗಿ ತಾ॥ 1 2 57 ರಿಂದ ತಾ॥ 28.2 57ರ ವರೆಗೆ, ನೀವು ಕೊಳ್ಳುವ ಪ್ರತಿ ಕೋರ್ಸ್ ಪುಸ್ತಕದೊಂದಿಗೆ ಒಂದು ಉಚಿತ ಬಹುಮಾನ ಪಡೆಯಿರಿ ವಿವರಗಳಿಗೆ ವಿಚಾರಿಸಿ :-
ಕ್ಷೀರ ಕೇಂದ್ರ
94 ತ್ಯಾಗರಾಜ ರೋಡ್ ಪ್ರೆಸ್ ಮತ್ತು ಬ್ರಾಂಚ್ ಕೆ.ಆರ್ ಆಸ್ಪತ್ರೆ ರಸ್ತೆ,ಮೈಸೂರು.

೪ ಗಾಡಿಗಳನ್ನು ಬಿಟ್ಟು ಗೂಡ್ಸ್ ರೈಲು ಓಡಿದ ಪ್ರಸಂಗ

ದಕ್ಷಿಣ ರೈಲ್ವೆಯ ಗುಂತಕಲ್ ಮತ್ತು ವಿಜಯವಾಡಾ ವಿಭಾಗದ ಪಾಣ್ಯಂ-ಬುಗ್ಗನಪಲ್ಲಿ ನಿಲ್ದಾಣಗಳ ನಡುವೆ ಓಡುತ್ತಿದ್ದ ಗೂಡ್ಸ್ ರೈಲಿನ ಮೂರು ಗಾಡಿಗಳು ಮತ್ತು ಬ್ರೇಕ್ ವ್ಯಾನು ಕಳಚಿಕೊಂಡುವೆಂದೂ, ಇದು ತಿಳಿಯದೆ ಡ್ರೈವರನು ಮುಂದಿನ ನಿಲ್ದಾಣವನ್ನು ತಲಪಿದನೆಂದೂ, ನಂತರ ಅಲ್ಲಿನ ಸ್ಟೇಷನ್ ಮಾಸ್ಟರರು ಹಿಂದಿನ ನಿಲ್ದಾಣದ ಅಧಿಕಾರಿಗೆ ತಂತಿ ಕಳುಹಿಸಿ ಆಗ ಹೊರಡಬೇಕಾಗಿದ್ದ ಪ್ರಯಾಣಿಕರ ರೈಲನ್ನು ಬಿಡದಂತೆ ತಿಳಿಸಿ, ಬೇರೊಂದು ಇಂಜನ್ನನ್ನು ಕಳುಹಿಸಿ ರಸ್ತೆ ಮಧ್ಯೆ ನಿಂತಿದ್ದ ವ್ಯಾಗನ್ನನ್ನು ತಮ್ಮ ನಿಲ್ದಾಣಕ್ಕೆ ಕರೆತರಿಸಿದರೆಂದೂ ವರದಿಯಾಗಿದೆ

ಕಾವ್ಯ ವಾಚನ

ಜಯನಗರದಲ್ಲಿರುವ ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ಈ ಸಂಜೆ ೭॥ ಗಂಟೆಗೆ ಏಕಾದಶಿ ಪ್ರಯುಕ್ತ ಶ್ರೀಮತಿ ವಸುಂಧರಾ,ಬಿ. ಉಮಾ ಮತ್ತು ವಸುಧಾ ಇವರುಗಳಿಂದ ಶ್ರೀ ಸತ್ಯನಾರಾಯಣ ವ್ರತ ಕಥಾ ಭಾಗದ ವಾಚನವನ್ನೂ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವನ್ನೂ ಏರ್ಪಡಿಸಲಾಗಿದೆ

ಬಹಿರಂಗ ಸಭೆ

ನಗರದ ಪ್ರಜಾ ಮಂಡಲಿಯ ಆಶ್ರಯದಲ್ಲಿ ಈ ಸಂಜೆ ೬॥ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಆಹಾರ ಧಾನ್ಯದ ಬೆಲೆ,ಚುನಾವಣೆ ಇತ್ಯಾದಿ ವಿಷಯಗಳ ಬಗ್ಗೆ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ ಮಹಾ ಜನರು ಭಾಗವಹಿಸುವಂತೆ ಸಂಚಾಲಕ ಶ್ರೀ ಎ ಎಸ್ ವೆಂಕಟಸುಬ್ಬಯ್ಯ ಶರ್ಮರವರು ಪ್ರಾರ್ಥಿಸಿರುತ್ತಾರೆ

ಶುಚಿ ರುಚಿಯುಳ್ಳ !
ಬ್ರೆಡ್, ಬನ್ಸು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ
ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ

ಓಟಿಗಾಗಿ ಕಾಂಗ್ರೆಸ್ ಸ್ಪರ್ಧಿಯ ಉಪವಾಸ

ಬಿಹಾರಿನ ಶಾಸನ ಸಭೆಗೆ ಸರಗಾರ್ಹ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ಸಿನವರಾದ ರಾಜೇಶ್ವರ ಪ್ರಸಾದಸಿಂಗರು ತಮಗೆ ಮತದಾರರು ಪೂರ್ಣ ಬೆಂಬಲದ ಭರವಸೆ ಕೊಡುವವರೆಗೂ ನಿರಶನ ವ್ರತ ನಡೆಸಲು ನಿರ್ಧರಿಸಿ ಉಪವಾಸವನ್ನಾರಂಭಿಸಿದ್ದಾರೆ ಅವರ ವಿರುದ್ಧವಾಗಿ ಕಿಸಾನರ ನಾಯಕರೊಬ್ಬರೂ, ಒಬ್ಬ ಸ್ವತಂತ್ರರೂ ನಿಂತಿರುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಕ್ಲಾರಿಯೊನೆಟ್ ೭-೧೫ ಎಸ್ ಚಂದ್ರಪ್ಪ-ದೇವರ ನಾಮ ೭-೩೦ ಗಾನ ವಿಹಾರ ೮-೧೫ ರಿಕಾರ್ಡು ಮಧ್ಯಾಹ್ನ ೧೨ ಎಸ್. ಚಂದ್ರಪ್ಪ ಸಂಗೀತ ೧೨-೩೦ ವೀಣಾ ವಾದನ ೧ ರಿಕಾರ್ಡು ೧-೫೦ ಕ್ಲಾರಿಯೊನೆಟ್. ೨ ೧೫ ಸಂಗೀತ ಸಂಜೆ ೫-೩೦ ಎಂ ಹೆಚ್. ಜಯಮ್ಮ-ವೀಣೆ. ೬-೨೦ ಜಾನಪದ ಗೀತೆ ೭-೩೦ ಮತ್ತು ೮ ಅಬ್ದುಲ್ ಗಫೂರ್-ಸಂಗೀತ ೮-೩೦ ಗಾಯನ. ೯-೨೫ ಹೊಸ ನಾಟ್ಯಗಳ ಪದ್ಧತಿ-ಭಾಷಣ ೯ ೩೦ ಟಿ. ಕೆ ವೇಣುಗೋಪಾಲದಾಸ್-ಕಥಾ ಕಾಲಕ್ಷೇಪ

ಸಿನಿಮಾ ಮಂದಿರದ ಬಳಿ ಪೊಲೀಸು ನೌಕರರ ಅಕ್ರಮ ವರ್ತನೆ

ಡಿ ಎಸ್ ಪಿ ಯವರ ಕಛೇರಿ ನೌಕರರೆಂದು ಹೇಳಲಾದ ಚನ್ನಮಲ್ಲಪ್ಪ ಎಂಬುವರು ಕಳೆದ ಗುರುವಾರ ರಾತ್ರಿ ನಗರದ ಒಂದು ಸಿನಿಮಾ ಮಂದಿರಕ್ಕೆ ಹೋಗಿ ತಮ್ಮನ್ನು ಒಳಕ್ಕೆ ಬಿಡುವಂತೆ ಗೇಟ್‌ಕೀಪರನನ್ನು ಕೇಳಲಾಗಿ ಅತನು ಪಾಸ್ ಇಲ್ಲದೆ ಬಿಡಲು ಸಾಧ್ಯವಿಲ್ಲವೆಂದು ತಿಳಿಸಿದನೆಂದೂ, ಆಗ ಪೊಲೀಸ್ ನೌಕರರು ಅನುಚಿತವಾಗಿ ವರ್ತಿಸಿ ಅಗೌರವವಾದ ಮಾತುಗಳನ್ನಾಡಿದರೆಂದೂ ಹೇಳಲಾಗಿದೆ ತರುವಾಯ ಮಂದಿರದವರು ಅತನನ್ನು ಒಳಕ್ಕೆ ಬಿಡದೆ ಕಳುಹಿಸಿಬಿಟ್ಟರು. ಸರ್ಕಾರೀ ನೌಕರರು ಈ ರೀತಿ ಅಕ್ರಮವಾಗಿ ವರ್ತಿಸುವುದರಿಂದ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಇಲಾಖೆಗೂ ಅಗೌರವ ತಂದಂತಾಗುವುದು ಇನ್ನು ಮುಂದೆ ಇಂತಹ ಅಕ್ರಮಗಳು ನಡೆಯದಂತಾಗುವುದು ಅಗತ್ಯ

— ಓರ್ವ ಪ್ರೇಕ್ಷಕ

ಅವನನ್ನು ನೋಡಿರಿ
★ ಅವನ ಮೂಗು ಬಾಧೆಪಡುತ್ತಿದೆ ಅಥವಾ ಅವನ ಗಂಟಲಿನಲ್ಲಿ ಶೀತವಾಗಿದೆ
★ ಅವನು ಹಾಸಿಗೆಯಿಂದ ಎದ್ದು ಕೂಡುವನು ಅಥವಾ ಕಿಟಕಿಯ ಬಳಿಗೆ ಓಡುವನು
★ ಅವನು ದಿಗ್ಭ್ರಾಂತನಾಗುವನು ಮತ್ತು ಉಸಿರಾಡಲು ಒದ್ದಾಡುವನು
★ ಅವನ ಉಚ್ಛ್ವಾಸವು ತುಂಬಾ ಕಠಿಣವಾದುದು ಮತ್ತು ಅತಿ ಶೀಘ್ರವಾದುದು
★ ಅವನ ನಿಶ್ವಾಸವು ತುಂಬಾ ಕಠಿಣ ಹಾಗೂ ಶಬ್ದವಾದುದು
★ ಅವನು ಕೆಮ್ಮುವ ಹಾಗೆ ತಳ್ಳಿಸುವನು
★ ಅವನ ತುಟಿಗಳು ಬಿಳಿಚಿಕೊಂಡಿವೆ
★ ಅವನ ಮುಖವೇ ಒಂದು ಕಥೆಯನ್ನು ಹೇಳುವುದು
ಅದೇ ಆಸ್ತಮ
ದಾರುಣ ಮತ್ತು ಯಾತನೆಯ ಒಂದು ಚಿತ್ರ,
ಕಣ್ಣೀರಿನ ಆಳವಾದ ಈ ಚಿತ್ರವನ್ನು
ಆಸೆ ಮತ್ತು ಹರ್ಷಕ್ಕೆ ಬದಲಿಸುವುದು
ಕವಿರಾಜ ಪಂಡಿತ
ಮುಗಾರದತ್ತ ರಮ
ವೈದ್ಯ ವಾಚಸ್ಪತಿ
ಜಗದ್ವಿಖ್ಯಾತ
ನವರತ್ನ-ಕಲ್ಪ
ಕಂಡು ಹಿಡಿದವರು
ಪದ್ಮ, ವೈಡೂರ್ಯ ಮತ್ತು ನವರತ್ನಾದಿ ಅಮೂಲ್ಯ ಪದಾರ್ಥಗಳಿಂದ ತಯಾರಿಸಿದೆ
ಉಚಿತ ಸಾಹಿತ್ಯಕ್ಕೆ ಬರೆಯಿರಿ .-
NAVRATNA KALPA PHARMACY,
JULLUNDUR CITY (India)

ಶಿಶುವಿಹಾರಗಳ ಉಪಾಧ್ಯಾಯಿನಿಯರ ಶಿಕ್ಷಣ ಕೇಂದ್ರ

ವಿದ್ಯಾ ಇಲಾಖಾಧಿಕಾರಿಗಳ ಸೂಚನೆ ಮೇ ನಗರದ ಶ್ರೀ ಜಗದಂಬಾ ಶಿಶುವಿಹಾರದ ಆ ಯದಲ್ಲಿ ಶಿಶುವಿಹಾರಗಳ ಉಪಾಧ್ಯಾಯಿನಿ ರ ಶಿಕ್ಷಣ ಕೇಂದ್ರವನ್ನು ನಾಳೆಯಿಂದ ೧೦ ತಿಂ ಳ ಕಾಲ ನಡೆಸಲಾಗುವುದು ಹೈಸ್ಕೂಲಿನ ೧ ಮತ್ತು ೨ನೇ ತರಗತಿ ಮತ್ತು ಹೆಚ್ಚಿನ ವಿದ್ಯಾ ಅರ್ಹತೆ ಪಡೆದಿರುವ ಮಹಿಳೆಯರು ತಮ್ಮ ಅ ಗಳನ್ನು ಜಗದಂಬಾ ಶಿಶುವಿಹಾರದ ಡೈರೆಕ್ಟ ಕ್ಲುಪ್ತ ಕಾಲದಲ್ಲಿ ಕಳುಹಿಸಬೇಕೆಂದೂ, ಹೆಚ್ಚಿ ವಿಷಯಗಳನ್ನು ಖುದ್ದಾಗಿ ತಿಳಿಯಬಹುದೆಂ ಸೂಚಿಸಲಾಗಿದೆ

O ಅಸ್ಸಾಮಿನ ಕೊಹಿಮಾ ನಗರದ ಸೈನಿಕ ವಿಮಾನವೊಂದು ಕೆಳಗೆ ಬಿದ್ದು ೮ ರು ಮೃತರಾಗಿರುವರೆಂದು ವರದಿಯಾಗಿದೆ.

ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ ಆಹಾ ಸರಬರಾಜು ಇಲಾಖೆ, ಮೈಸೂರು 4-2 195

ಟೆಂಡರ್ ನೋಟಿಫಿಕೇಷನ್

ಮೈಸೂರು ಹೊಸ ಸಂತೆಪೇಟೆಯಲ್ಲಿರುವ ಸರ್ಕಾರಿ ಸೆಂಟ್ರಲ್ ಡಿಪೊ ಗೋಡೌನುಗಳಲ್ಲಿ ದಾಸ್ತಾನು ಮಾಡಲಾಗಿರುವ ಅಕ್ಕಿ ಪೈಕಿ ಸುಮಾರು 5,500 ಪಲ್ಲ (ಐದು ಸಾವಿರದ ಐದು ನೂರು ಪಲ್ಲಾ) ಮೊದಲನೇ ದರ್ಜೆಯ, ಹೊಟ್ಟು ಬಿಡಿಸಿದ (ಪಾಲಿಷ್ ಇಲ್ಲದ) ಹಳೇ ಅಕ್ಕಿಯನ್ನು, ಚೀಲಗಳು ವಿನಹ, ಗೋಡೌನ್ ಪ್ರದೇಶದಲ್ಲಿ ಕೊಳ್ಳುವ ಬಗ್ಗೆ, ಅಪೇಕ್ಷಿಸುವವರಿಂದ ಮುದ್ರಿತ ಪ್ರತಿಗಳಲ್ಲಿ ಮೊಹರಾದ ಟೆಂಡರುಗಳನ್ನು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ (ಆಹಾರ ಶಾಖೆ)ಯಲ್ಲಿ ತಾ॥ 15.2.1957ನೇ ಶುಕ್ರವಾ ಮಧ್ಯಾಹ್ನ 3 ಘಂಟೆಯವರೆಗೆ ಸ್ವೀಕರಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ

1. ಪ್ರತಿ ಟೆಂಡರಿನ ಜೊತೆಯಲ್ಲೂ, ಮೈಸೂರು ಖಜಾನೆ ಅಥವಾ ಮೈಸೂರು ಬ್ಯಾಂಕಿನಲ್ಲಿ "ರೆವಿನ್ಯೂ ಡಿಪಾಜಿಟ್ಸ್‌ಗಾಗಿ" ರೂ 1,000 (ಒಂದು ಸಹಸ್ರ) ಅನ್ನು ಠೇವಣಿ ಮೊಬಲಗು ಕಟ್ಟಿದ ಬಗ್ಗೆ, ಡೂಪ್ಲಿಕೇಟ್ ಚಲನ್ನನ್ನು ಲಗತ್ತಿಸಿರಬೇಕು, ಇದಕ್ಕೆ ತಪ್ಪಿ ಬರುವಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು

2 ಯಾವುದೇ ಟೆಂಡರನ್ನಾದರೂ, ಕಾರಣ ವನ್ನೇ ಕೊಡದೆ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸರ್ಕಾರದವರು ಹೊಂದಿರುವರು ಮತ್ತು ಈ ಬಗ್ಗೆ ಸರ್ಕಾರದ ತೀರ್ಮಾನವೇ ಅಂತ್ಯವಾದುದು ಮತ್ತು ಬದ್ಧವಾದುದು

3 ಟೆಂಡರುಗಳನ್ನು ಜಿಲ್ಲಾಧಿಕಾರಿಗಳ ಹಾರ ಇಲಾಖಾ ಕಛೇರಿಯಲ್ಲಿ 16-2-19 ನೇ ತಾರೀಖು ಶನಿವಾರ ಬೆಳಗ್ಗೆ 10 ಘಂಟೆಗೆ ಯಲಾಗುವುದು ಅಪೇಕ್ಷೆ ಪಡುವ ಟೆಂಡರುದಾರರು ಎದುರಿಗೆ ಇರಬಹುದು

4 ಜಯಶೀಲರಾದ ಟೆಂಡರುದಾರನು ತನ ಟೆಂಡರು ಅಂಗೀಕಾರವಾದ ಬಗ್ಗೆ ಕೊಟ್ಟ ಮೂರು ದಿನಗಳೊಳಗೆ ಟೆಂಡರು ಮೊ ಲಗಿನ ಬಾಕಿ ಹಣವನ್ನು ಪಾವತಿ ಮಾಡಿ ಯನ್ನು ಸುಪರ್ದಿಗೆ ತೆಗೆದುಕೊಂಡ ಬಗ್ಗೆ ಮತ್ತು ಅದನ್ನು 15 ದಿನಗಳೊಳಗೆ ಅಲ್ಲಿಂದ ಗಿಸುವ ಬಗ್ಗೆಯೂ ಮುಚ್ಚಳಿಕೆ ಬರೆದುಕೊ ಕ್ಕದ್ದು ಅದಕ್ಕೆ ತಪ್ಪಿದಲ್ಲಿ ಅತನ ಠೇವಣಿ ಲಗಳನ್ನು ಮುಟ್ಟುಗೋಲು ಹಾಕಿಕೊಂ ತನ ಕಾಂಟ್ರಾಕ್ಟು ರದ್ದಾದಂತೆ ಭಾವಿಸಲಾ ವುದು. ಮತ್ತು ಟೆಂಡರು ಷರತ್ತುಗಳಿಗೆ ತಪ್ಪಿ ಬಗ್ಗೆ, ಪುನಃ ಟೆಂಡರನ್ನು ಕರೆಯಬೇಕಾ ದರ್ಭದಲ್ಲಿ ಸರ್ಕಾರಕ್ಕೆ ಉಂಟಾಗಬಹುದಾ ಷ್ಟಗಳಿಗೂ ಅತನನ್ನೇ ಗುರಿಪಡಿಸಲಾಗುವು

5 ಮೈಸೂರಿನ ಅಳತೆಯಲ್ಲಿ ಪಲ್ಲ 1ಕ್ಕೆ ಸೇರಿನಂತೆ ಅಕ್ಕಿಯನ್ನು ಕೊಳ್ಳುವ ಬಗ್ಗೆ ಅಣೆ ನಾಣ್ಯಗಳಲ್ಲಿ ಬೆಲೆಯನ್ನು ಅಕ್ಷರ ಅಂಕಿಗಳಲ್ಲಿ ನಮೂದಿಸತಕ್ಕದ್ದು

6. ಮೇಲೆ ನಮೂದಿಸಿರುವ ಕಛೇರಿಯ ಮತ್ತು ಮೈಸೂರಿನಲ್ಲಿರುವ ಸರ್ಕಾರೀ ಸೆಂಟ್ರಲ್ ಡಿಪೋವಿನಲ್ಲೂ ಕೆಲಸದ ದಿನ ಮತ್ತು ವೇ ಲ್ಲಿ ಅಕ್ಕಿಯ ಮಾದರಿಯನ್ನು ನೋಡಬಹುದು

(ರುಜು) ಡಿ. ಆರ್ ಚನ್ನರುದ್ರಯ್ಯ
ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ

THE CHAMPION METROPOLITAN COLLEGE OF COMMERCE
Co-operators Home 100 Road, Mysore
ADMISSIONS for fresh classes in Typewriting and Shorthand are now being received
PUTTANNA
Vice-Principal
P SUBBARAVA SASTRY,
Principal

CLASSES FOR MADRAS MATRIC EXAMINATION March 58
Persons above 19 years admitted No minimum qualification
[illegible]
SUMMER CLASSES (*Middle & High school*) *IN FULL SWING*
Girls also admitted.
CITY TUTORIAL COLLEGE, OLD AGRAHAR MYSORE

Edited, Printed and Published by
A. R Nagarajan at Sadhvi Press,
D Subbiah Road, Mysore

ಟೆಲಿಫೋನ್ ನಂ 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು



ಪುಟ : ೧೫] SADHVI : MONDAY 11—2—1957 ಮೈಸೂರು : ಸೋಮವಾರ ೧೧—೨—೧೯೫೭ : [ಸಂಚಿಕೆ : ೧೯೩

ಪೋರ್ಚುಗೀಸರಿಂದ ಭಾರತದ ವಾಯುಗಡಿ ಉಲ್ಲಂಘನೆ

ಸೋವಿಯಟ್ ರಷ್ಯದಲ್ಲಿ ಪ್ರೌಢ ವಿದ್ಯಾಭ್ಯಾಸದ ಪ್ರಗತಿ

ನಗರದಲ್ಲಿ ವಸ್ತು ಪ್ರದರ್ಶನದ ಪ್ರಾರಂಭೋತ್ಸವ

ಮೈಸೂರು ೧೧

ರಷ್ಯಾ ದೇಶದಲ್ಲಿ ಪ್ರೌಢ ವಿದ್ಯಾಭ್ಯಾಸವು ಹೊಂದಿರುವ ಪ್ರಗತಿಯನ್ನು ಸೂಚಿಸುವ ಪ್ರದರ್ಶನದ ಪ್ರಾರಂಭೋತ್ಸವವನ್ನು ಹಂಗ ಮಿತ್ರೇಶ, ಸ್ಥಾನಾಧೀಶರಾದ ಶ್ರೀ ಸಿಟ್ಟೂರು ಶ್ರೀನಿವಾಸ ರವರು ನೆನ್ನೆ ೫ಕ್ಕೆ ನ ಗಾಂಧಿ ಚೌಕದಲ್ಲಿರುವ ಸಿ ಸಿ ನಿಲಯದಲ್ಲಿ ನೆರವೇರಿಸಿದರು. ಭಾರತ ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಈ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಸಂಘದ ಅಧ್ಯಕ್ಷರಾದ ಶ್ರೀ ಡಿ. ವಿ. ಕೆ ಮೂರ್ತಿಯವರು ಗಣ್ಯರನ್ನು ಸ್ವಾಗತಿಸಿ, ಪ್ರದರ್ಶನದ ಉದ್ದೇಶವನ್ನು ವಿವರಿಸಿದರು.

ಶ್ರೀ ಸಿಟ್ಟೂರು ಶ್ರೀನಿವಾಸರಾಯರು ತಮ್ಮ ಭಾಷಣದಲ್ಲಿ, ರಷ್ಯದ ಕ್ರಾಂತಿಯನಂತರ ಆ ದೇಶವು ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಪಂಚ ವಾರ್ಷಿಕ ಯೋಜನೆಗಳ ಮೂಲಕ ಸಾಧಿಸಿರುವ ಪ್ರಗತಿಯನ್ನು ನಿರೂಪಿಸಿ ರಾಜಕೀಯ ಧ್ಯೇಯಗಳು ಒಂದೊಂದು ರಾಷ್ಟ್ರಕ್ಕೂ ಬೇರೆಬೇರೆಯಾಗಿ ಇರಬಹುದಾದರೂ ರಚನಾತ್ಮಕ ಮಾರ್ಗಗಳಲ್ಲಿ ಅವುಗಳು ಸಾಧಿಸಿರುವ ಕಾರ್ಯಗಳಿಂದ ಇತರರು ಪ್ರಯೋಜನ ಹೊಂದಬೇಕೆಂದು ಅವರು ನುಡಿದರು. ಈ ಪ್ರದರ್ಶನವು ಈ ಕಾರ್ಯದಲ್ಲಿ ವಿಶೇಷ ಸಹಕಾರಿಯಾಗುವುದೆಂದು ಅವರು ಹೇಳಿದರು.

ಶ್ರೀ ಕೆ ಸಂಪದ್ಗಿರಿರಾಯರು ಭಾಷಣ ಮಾಡಿ, ನಲ್ವತ್ತು ವರ್ಷಕ್ಕೆ ಮುಂಚೆ ರಷ್ಯವು ಸ್ವಾತಂತ್ರ್ಯಪೂರ್ವದ ಭಾರತದ ಸ್ಥಿತಿಯಲ್ಲಿಯೇ ಇದ್ದಿತು. ಕ್ರಾಂತಿಯನಂತರ ರಾಷ್ಟ್ರದ ಪುನರ್ನಿರ್ಮಾಣಕ್ಕೆ ಅತ್ಯಗತ್ಯವಾದ ವಿದ್ಯಾಭ್ಯಾಸದ ಸುಧಾರಣೆಯನ್ನು ಕೈಗೊಂಡು ಯೋಜನಾಬದ್ಧ ರೀತಿಯಲ್ಲಿ ಹತ್ತು ವರ್ಷಗಳೊಳಗೆ ನಿರಕ್ಷರತೆಯನ್ನು ನಿರ್ಮೂಲ ಮಾಡಿತೆಂದೂ ಹೇಳಿದರು. ಪ್ರತಿಯೊಬ್ಬ ತರುಣ ತರುಣಿಗೂ ಅವರವರ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾದ ವಿದ್ಯೆಯನ್ನು ಉಚಿತವಾಗಿ ಕೊಟ್ಟು ಅವರುಗಳು ರಾಷ್ಟ್ರದ ಅಭಿವೃದ್ಧಿಯಲ್ಲಿ ಭಾಗಿಗಳಾಗುವಂತೆ ಮಾಡಲಾಗಿದೆ. ವಿದ್ಯಾವಂತರ ನಿರುದ್ಯೋಗದ ಪ್ರಶ್ನೆ ಅಲ್ಲಿ ಇರುವುದಿಲ್ಲ. ನಮ್ಮ ದೇಶವು ಸ್ವಾತಂತ್ರ್ಯ ಪಡೆದ ಹತ್ತು ವರ್ಷಗಳನಂತರ ಇನ್ನೂ ಶೇಕಡ ೭೫ ಮಂದಿ ಅನಕ್ಷರಸ್ಥರಿರುವರು. ಈ ವಿಷಯದಲ್ಲಿ ನಾವು ರಷ್ಯದಿಂದ ಕಲಿಯುವುದು ಅಗತ್ಯ. ರಾಜಕೀಯ ಮತ [illegible] ಕಡೆಗಣಿಸಿ ಫಲಿತಾಂಶಕ್ಕೆ ಗಮನ ಕೊಡುವುದು ಅಗತ್ಯ ಎಂದು ಅವರು ಹೇಳಿದರು.

ನೆ ಸಾಧಿಸುವ ಎಲ್ಲ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಕಲರಿಗೂ ಸಂಪೂರ್ಣ ಮಾಹಿತಿಯನ್ನು ಒದಗಿಸುವ ಪ್ರಚಾರ ಕೌಶಲ್ಯ ಅಲ್ಲಿ ವಿಶೇಷವಾಗಿದೆ. ಇವನ್ನು ನಮ್ಮ ಜನರು ಸಹ ಪ್ರಯೋಜನ ಹೊಂದಬೇಕೆಂದು ಅವರು ನುಡಿದರು.

ಪಶ್ಚಿಮವಾಹಿನಿಯಲ್ಲಿ ಸರ್ವೋದಯ ಮೇಳ

ಮೈಸೂರು ೧೧

ಪಶ್ಚಿಮವಾಹಿನಿಯಲ್ಲಿ ನೆನ್ನೆ ಸಂಜೆ ಸರ್ವೋದಯ ಮೇಳವು ಆರಂಭವಾಯಿತು. ಅದರಲ್ಲಿ ಶ್ರೀಗಳಾದ ಡಾ|| ವೈ. ನಾರಾಯಣ ಪಂಡಿತ್, ಬೆಳಗುಂಬ ನಾರಣಪ್ಪ, ಹೆಚ್. ಆರ್. ವೆಂಕಟರಮಣ ಅಯ್ಯಂಗಾರ್ ಮುಂತಾದವರು ಭಾಗವಹಿಸಿರುವರು. ಈ ಸಂಜೆ ಶ್ರೀರಂಗಪಟ್ಟಣದಲ್ಲಿ ಪ್ರಾರ್ಥನಾ ಸಭೆಯೂ ನಾಳೆ ಬೆಳಗ್ಗೆ ೫-೩೦ಕ್ಕೆ ಪಶ್ಚಿಮವಾಹಿನಿಯಲ್ಲಿ ಪ್ರಾರ್ಥನೆ, ೫-೩೦ರಿಂದ ಸಂಜೆ ೫-೩೦ರವರೆಗೆ ಅಖಂಡ ಸೂತ್ರಯಜ್ಞ, ಸೂತ್ರಾಂಜಲಿ ಸಮರ್ಪಣೆ, ೧೧-೩೦-೧೨ಕ್ಕೆ ಸಾಮೂಹಿಕ ಪ್ರಾರ್ಥನೆ, ಮತ್ತು ಪ್ರವಚನ, ೨ರಿಂದ ೫ ಗಾಂಧಿ ಸಾಹಿತ್ಯ ವಾಚನ, ಗೀತಾ ಪಾರಾಯಣ, ಯೋಜನೆ, ಕೀರ್ತನೆ, ಸಂಜೆ ೫||ಗೆ ಅಖಿಲ ಭಾರತ ಸರ್ವ ಸೇವಾ ಸಂಘದ ಕಾರ್ಯದರ್ಶಿ ಶ್ರೀ ವಲ್ಲಭಸ್ವಾಮಿಯವರ ಪ್ರವಚನವೂ ಏರ್ಪಾಡಾಗಿದೆ.

ವಿಶ್ವವಿದ್ಯಾಲಯ ಸಂಸ್ಕೃತ ಸಂಘದ ಸಮಾಪನ ಭಾಷಣ

ಮಹಾರಾಜಾ ಕಾಲೇಜಿನಲ್ಲಿ ನಾಳೆ ಸಂಜೆ ೫|| ಗಂಟೆಗೆ ವಿಶ್ವವಿದ್ಯಾಲಯ ಸಂಸ್ಕೃತ ಸಂಘದ ಸಮಾಪನ ಭಾಷಣವನ್ನು ಕನ್ನಡ ಪ್ರಾಧ್ಯಾಪಕರಾದ ಶ್ರೀ ತೀ. ನಂ. ಶ್ರೀಕಂಠಯ್ಯನವರು ಮಾಡುವರು. ಸಂಸ್ಕೃತ ಪ್ರಾಧ್ಯಾಪಕ ಶ್ರೀ ನ. ಶಿವರಾಮಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಹರಿಕಥೆ

ವಿದ್ಯಾರಣ್ಯಪುರದ ಮೂರನೇ ಕ್ರಾಸಿನಲ್ಲಿರುವ ಯಲ್ಲಮ್ಮಾಂಬಾ ದೇವಸ್ಥಾನದಲ್ಲಿ ದೇವಿ ಸಪ್ತಾಹದ ಅಂಗವಾಗಿ ಈ ಸಂಜೆ ೬|| ಗಂಟೆಗೆ ಶ್ರೀ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯನ್ನು ವಿ|| ಗುರುರಾಜಾಚಾರ್ಯರು ನಡೆಸುವರು. ನಾಳೆ ಸಂಜೆ ಅದೇ ಹೊತ್ತಿಗೆ ವಿ|| ನದೀಪುರಂ ಶ್ರೀನಿವಾಸಯ್ಯಂಗಾರ್ಯರು ಭೂ ಕೈಲಾಸ ಎಂಬ ಕಥೆಯನ್ನು ಮಾಡುವರು.

ಗವರ್ನರರೊಡನೆ ಶ್ರೀ ಜಿ ಎಸ್. ರಾಮಕೃಷ್ಣಯ್ಯನವರ ಭೇಟಿ

ಪೌರಸಭಾ ಉಪಾಧ್ಯಕ್ಷರಾದ ಶ್ರೀ ಜಿ ಎಸ್ ರಾಮಕೃಷ್ಣಯ್ಯನವರು ಈ ದಿನ ಬೆಳಗ್ಗೆ ಅರಮನೆಯಲ್ಲಿ ಗವರ್ನರರನ್ನು ಭೇಟಿ ಮಾಡಿ ಗೌರವವನ್ನು ಸಲ್ಲಿಸಿದರು.

ಕಾರ್ಯದರ್ಶಿಗಳಾದ ಶ್ರೀ ಎ. ಸೀತಾರಾಮ್‌ರವರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಗಿಯಿತು

ಪ್ರದರ್ಶನವು ಹತ್ತು ದಿನಗಳ ಕಾಲ ನಡೆಯುತ್ತದೆ. ಪ್ರವೇಶ ಉಚಿತ. ರಷ್ಯಾ ದೇಶದಲ್ಲಿ ವಿದ್ಯಾಭ್ಯಾಸದ ಪ್ರಗತಿಯನ್ನು ಸೂಚಿಸುವ ಚಿತ್ರಗಳನ್ನು ಇದರಲ್ಲಿ ಇಡಲಾಗಿದೆ ಮತ್ತು ಟಯಾ ಚಿತ್ರಗಳೂ ಸಹ ತೋರಿಸಲ್ಪಡುತ್ತವೆ. ಸಾರ್ವಜನಿಕರು ಇದಕ್ಕೆ ಭೇಟಿ ಕೊಟ್ಟು ಪ್ರಯೋಜನ ಪಡೆಯಬೇಕೆಂದು ಕೋರಲಾಗಿದೆ.

ಪೋರ್ಚುಗೀಸ್ ವಿಮಾನಗಳಿಂದ ಭಾರತದ ನಿಯಮದ ಉಲ್ಲಂಘನೆ

ಪೋರ್ಚುಗಲ್ ಸರ್ಕಾರದ ನಿರ್ಧಾರ

ಪೋರ್ಚುಗೀಸ್ ಸರ್ಕಾರದ ವಿದೇಶಾಂಗ ಮತ್ತು ಸಮುದ್ರಾಂತರ ಇಲಾಖೆಗಳು ಜಂಟಿ ಪ್ರಕಟಣೆಯೊಂದನ್ನು ಹೊರಡಿಸಿ, ಡಾಮನ್, ಡಯೂ ಮತ್ತು ಗೋವಾಗಳ ಮೇಲೆ ವಿಮಾನ ಸಂಚಾರದ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸಲು ತಮ್ಮ ಸರ್ಕಾರದವರು ನಿರ್ಧರಿಸಿರುವುದಾಗಿ ತಿಳಿಸಿವೆ. ಭಾರತದಲ್ಲಿರುವ ಪೋರ್ಚುಗೀಸ್ ಪ್ರದೇಶಗಳ ೧೦ ಮೈಲಿ ಸುತ್ತ ಎಲ್ಲೂ ಆ ದೇಶದ ವಿಮಾನಗಳು ಹಾರಾಡಬಾರದೆಂದು ಭಾರತ ಸರ್ಕಾರದವರು ನಿರ್ಬಂಧ ಹಾಕಿದ್ದರು. ಆದರವೇಳೆ ಭಾರತದ ಪ್ರದೇಶದ ಮೇಲೆ ತಮ್ಮ ವಿಮಾನಗಳು ಹಾರಕೂಡದೆಂದು ಪೋರ್ಚುಗೀಸರು ಸೂಚಿಸಿದ್ದರು. ಈಗ ಪುನಃ "ವಿಮಾನ ಸಂಚಾರದ ಸ್ವಾತಂತ್ರ್ಯ"ದ ಸ್ಥಾಪನೆಗೆ ನಿರ್ಧರಿಸಿರುತ್ತಾರೆ.

ರೈಲ್ವೆ ನೌಕರರಿಗೆ ಹೆಚ್ಚು ಸಂಬಳ

೧,೩೦,೦೦೦ ಮಂದಿಗೆ ಸೌಲಭ್ಯ

ಭಾರತದ ರೈಲ್ವೆಗಳಲ್ಲಿರುವ ಎಲ್ಲಾ ನಾನ್ ಗೆಜೆಟೆಡ್ ವರ್ಗಗಳ ನೌಕರರ ಹುದ್ದೆಗಳ ಸಂಬಳವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಯೋಜನೆಯನ್ನು ನೆನ್ನೆ ರೈಲ್ವೆ ಮಂತ್ರಿ ಜಗಜೀವನರಾಂರವರು ಘೋಷಿಸಿದರು. ಇದರಿಂದ ೧,೩೦,೦೦೦ ನೌಕರರಿಗೆ ಅನುಕೂಲವಾಗುವುದೆಂದು ಗೊತ್ತಾಗಿದೆ. ಹೊಸ ಏರ್ಪಾಡಿನ ಪ್ರಕಾರ ನೌಕರರುಗಳಿಗೆ ಹೆಚ್ಚಿನ ಸಂಬಳ ಅಥವಾ ಹೆಚ್ಚು ಸಂಬಳದ ಸೌಲಭ್ಯ ಬರುವ ಬಡ್ತಿ ಅವಕಾಶಗಳು ದೊರೆಯುವುವು. ಕಳೆದ ಏಪ್ರಿಲ್ ೧ ರಿಂದ ಈ ವ್ಯವಸ್ಥೆಯು ಜಾರಿಗೆ ಬರುವುದು.

ಇದರಿಂದ ೩೩,೦೦೦ ಸ್ಟೇಷನ್ ಮತ್ತು ಅಸಿಸ್ಟೆಂಟ್ ಸ್ಟೇಷನ್ ಮಾಸ್ತರುಗಳು, ೪೮,೦೦೦ ಕಛೇರಿ ಗುಮಾಸ್ತರು, ೧೫,೦೦೦ ಅಕೌಂಟ್ಸ್ ಗುಮಾಸ್ತರು, ೨೪,೦೦೦ ಕಮರ್ಷಿಯಲ್ ಕ್ಲಾರ್ಕುಗಳು, ೫,೦೦೦ ಟ್ರೇನ್ ಕ್ಲಾರ್ಕುಗಳು, ೩,೦೦೦ ಟ್ರೇನ್ ಎಕ್ಸಾಮಿನರುಗಳು ಮತ್ತು ೧೩,೦೦೦ ಟಿಕೆಟ್ ಕಲೆಕ್ಟರುಗಳು, ೩,೦೦೦ ಸಿಗ್ನಲರುಗಳು, ಮತ್ತು ೧೦,೦೦೦ ಡ್ರೈವರುಗಳು, ಫೈರ್‌ಮನ್‌ಗಳು ಮತ್ತು ಗಾರ್ಡುಗಳಿಗೆ ಸೌಲಭ್ಯವು ದೊರೆತಂತಾಗುವುದು

ಶಾರದಾ ಪೂಜೆ

ನಂಜನಗೂಡಿನ ಶಂಕರ ಟ್ಯುಟೋರಿಯಲ್ ಇನ್‌ಸ್ಟಿಟ್ಯೂಟಿನ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಶಾರದಾ ಪೂಜೆಯನ್ನು ಶ್ರೀ ಬಿ ವಿ ಪಂಡಿತರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ

ಉಪನಯನ

ಚಾಮುಂಡಿವಿಹಾರದಲ್ಲಿರುವ ನಿವೃತ್ತ ರೆವಿನ್ಯೂ ಸೂಪರಿಂಟೆಂಡೆಂಟ್ ಶ್ರೀ [illegible] ಶ್ರೀ ಕೆ. ಎ. ವೆಂಕಟೇಶಯ್ಯಂಗಾರ ಕುಮಾರ ಚಿ|| ರಾಮಕೃಷ್ಣನಿಗೆ ನೆನ್ನೆ ನಂಜನಗೂಡಿನಲ್ಲಿ ಉಪನಯನವನ್ನು ನಡೆಸಿದರು

ಕಾಶ್ಮೀರದ ವಿಲೀನ ಮತ್ತು ಪಾಕಿಸ್ತಾನದ ದುರಾಕ್ರಮಣದ ಬಗ್ಗೆ ಒಪ್ಪಿಗೆ ಅಗತ್ಯ

ವಿಶ್ವಸಂಸ್ಥೆ ಮತ್ತು ಪಾಕಿಸ್ತಾನದೊಡನೆ ಮಾತುಕತೆಗೆ ನೆಹರೂ ಷರತ್ತು

ಭಾರತದಲ್ಲಿ ಕಾಶ್ಮೀರದ ಐಕ್ಯ ಮತ್ತು ಪಾಕಿಸ್ತಾನವು ಕಾಶ್ಮೀರದಲ್ಲಿ ನಡೆಸಿರುವ ದುರಾಕ್ರಮಣ—ಈ ಮೂಲಭೂತ ತತ್ವಗಳನ್ನು ಒಪ್ಪಿಕೊಂಡಲ್ಲಿ ಮಾತ್ರ ಕಾಶ್ಮೀರದ ವಿಚಾರವಾಗಿ ನಾವು ವಿಶ್ವಸಂಸ್ಥೆ, ಪಾಕಿಸ್ತಾನ ಅಥವಾ ಯಾವುದೇ ರಾಷ್ಟ್ರದೊಡನೆ ಸಂಭಾಷಣೆ ನಡೆಸಲು ಸಿದ್ಧವಿರುವುದಾಗಿ ಪ್ರಧಾನಿ ನೆಹರೂರವರು ನೆನ್ನೆ ಜಲಂಧರಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಭಾರತವು ದುರ್ಬಲ ರಾಷ್ಟ್ರವಲ್ಲ. ಭಾರತದ ಸೈನ್ಯವು ಅತ್ಯಂತ ಉತ್ತಮವಾದುದು. ಕಾಶ್ಮೀರದ ಬಗ್ಗೆ ಏನು ಪರಿಸ್ಥಿತಿಯು ಉದ್ಭವಿಸಿದರೂ ಅದನ್ನು ಶಾಂತಿಯಿಂದ ಎದುರಿಸಲಾಗುವುದು. ಭಾರಿ ಕದನವು ಆಗದಿದ್ದರೂ, ಕೆಲವು ಘರ್ಷಣೆಗಳುಂಟಾಗಬಹುದು. ಅಂತಹ ಸನ್ನಿವೇಶವನ್ನಾದರೂ ಶಾಂತಿ ಸ್ಥೈರ್ಯಗಳಿಂದ ಮಹಾಜನರು ಎದುರಿಸಬೇಕು. ಪ್ರಭುತ್ವದವರ ನೀತಿಗೆ ಮುಂಬರುವ ಚುನಾವಣೆಯಲ್ಲಿ ಬೆಂಬಲ ನೀಡಿ ನಮ್ಮ ಮುಂದಿರುವ ಸವಾಲಿಗೆ ಉತ್ತರ ಕೊಡಬೇಕು—ಎಂದು ಅವರು ನುಡಿದರು.

ಬ್ರೈಟ್ ಕಾಮರ್ಸ್ ಕಾಲೇಜಿನ ವಾರ್ಷಿಕೋತ್ಸವ

ನಗರದ ಬ್ರೈಟ್ ಕಾಮರ್ಸ್ ಕಾಲೇಜಿನ ಏಳನೇ ವಾರ್ಷಿಕೋತ್ಸವವು ಕಳೆದ ಗುರುವಾರ ಟೌನ್‌ಹಾಲಿನಲ್ಲಿ ನೆರವೇರಿತು. ಜಿಲ್ಲಾಧಿಕಾರಿಗಳಾದ ಶ್ರೀ ಡಿ ಆರ್. ಚನ್ನರುದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದನಂತರ ಪ್ರಿನ್ಸಿಪಾಲ್ ಶ್ರೀ ಕೆ. ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಹಳೆಯ ವಿದ್ಯಾರ್ಥಿ ಶ್ರೀ ಬಿ ಗುಂಡೂರಾಯರು ಭಾಷಣ ಮಾಡಿ ಹಿಂದಿನ ನೆನಪುಗಳನ್ನು ತಂದುಕೊಟ್ಟರು. ಶ್ರೀ ಪ್ರಭಾಕರ್‌ರವರು ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಭಾಷಣ ಮಾಡಿ ಸಂಸ್ಥೆಯ ಕೆಲಸಕಾರ್ಯಗಳನ್ನು ಮೆಚ್ಚಿ, ಅದು ಇನ್ನೂ ಹೆಚ್ಚು ಉಪಯುಕ್ತವಾಗಲೆಂದು ಹಾರೈಸಿದರು. ಶ್ರೀ ವಿಗಡಂ ಗಣೇಶರವರ ಹಾಸ್ಯ, ರಾಜಗೋಪಾಲ್‌ರವರ ನೃತ್ಯ ಕಲಾ ಮಂದಿರದ ವಿದ್ಯಾರ್ಥಿನಿಯರಿಂದ ನೃತ್ಯ ಮತ್ತು ಸಂಸ್ಥೆಯ ವಿದ್ಯಾರ್ಥಿವಿದ್ಯಾರ್ಥಿನಿಯರಿಂದ ನಾಟಕಾಭಿನಯಗಳೂ ಆದುವು

○ ಭಾರತದಲ್ಲಿ ಸಂಚರಿಸುತ್ತಿರುವ ಜರ್ಮನ್ ಪ್ರತಿನಿಧಿ ನಿಯೋಗದ ತಂಡವು ನೆನ್ನೆ ರಾತ್ರಿ ನಗರಕ್ಕೆ ಆಗಮಿಸಿ, ಬೆಳಗ್ಗೆ ಗವರ್ನರರನ್ನು ಭೇಟಿ ಮಾಡಿ ಬೆಂಗಳೂರಿಗೆ ತೆರಳಿದರು. ರಾತ್ರಿ ಅವರು ಬೃಂದಾವನಕ್ಕೆ ಭೇಟಿಯಿತ್ತಿದ್ದರು

ನೆಹರೂರವರ ಕಾರ್ಯದರ್ಶಿಯವರ ಆಗಮನ

ಸ್ವಂತ ವರದಿ] ಬೆಂಗಳೂರು ೧೧

ಪ್ರಧಾನಿ ನೆಹರೂರವರ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ ಲಕ್ಷ್ಮೀ [illegible] ಪ್ರಚಾರಕ್ಕಾಗಿ ಇಂದು ಇಲ್ಲಿಗಾಗಮಿಸುವರು

ಪುರುಷರೊಡನೆ ಸ್ತ್ರೀಯರು ಸ್ಪರ್ಧಿಸುವುದು ಅನುಚಿತ

ಮಹಾರಾಣಿ ಕಾಲೇಜಿನಲ್ಲಿ ಕುವೆಂಪುರವರ ಭಾಷಣ

ಮೈಸೂರು ೧೧

ಮಹಾರಾಣಿ ಕಾಲೇಜು ಸಂಘದ ವಾರ್ಷಿ [illegible] ಉಪನ್ಯಾಸಕ ಡಾ॥ ಕೆ ವಿ ಪುಟ್ಟಪ್ಪನವರು ನೆನ್ನೆ ಮಾಡಿ ಸ್ತ್ರೀಯರು ಸಕಲ ಭಾಗಗಳಲ್ಲಿಯೂ ಪುರುಷರೊಡನೆ ಸ್ಪರ್ಧೆ ನಡೆಸಲು ಯತ್ನಿಸುತ್ತಿರುವುದು ಅನುಚಿತವೆಂದು ನುಡಿದರು ಹೆಂಗಸರಿಗೂ, ಗಂಡಸರಿಗೂ ಸಮಾನತೆಯಿರಬೇಕೆಂದು ವಾದಿಸುತ್ತಿರುವ ಈ ಕಾಲದಲ್ಲಿ ನಮ್ಮ ದೇಶದ ಮಹಿಳೆಯರಿಗೆ ಅನಾದಿ ಕಾಲದಿಂದಲೂ ಬಂದಿರುವ ಪೂಜ್ಯತೆ ಮತ್ತು ಮಾನ್ಯತೆಗಳನ್ನು ಮರೆಯಬಾರದೆಂದು ಅವರು ಸೂಚಿಸಿದರು ಸಮತ್ವಕ್ಕೂ ಸಮಾನತೆಗೂ ಅವರು ಅಂತರವನ್ನು ಸೂಚಿಸಿ, ಸ್ತ್ರೀಯರು ತಮ್ಮ ಉದಾತ್ತವಾದ ಮಾತೃಭಾವ ಮತ್ತು ಕರುಣಾಶೀಲತೆಯನ್ನು ಮರೆಯಲಾಗದೆಂದು ಹೇಳಿದರು ಸ್ತ್ರೀಯರನ್ನು ಆದಿಶಕ್ತಿ ಸ್ವರೂಪಿಣಿಯರೆಂದೂ, ಆದರ್ಶ ಗೃಹಿಣಿಯರೆಂದೂ ಭಾವಿಸಬೇಕೆಂಬುದಾಗಿ ಅವರು ತಿಳಿಸಿದರು [illegible] ಪೂರಕರಾಗಿರುವಂತೆ ಸ್ತ್ರೀಯರಾಗಿ [illegible] ವ್ಯಕ್ತಿ [illegible] ಕಾಂಕ್ಷೆಯು ಉಂಟಾಗಬಾರದೆಂದೂ ಹಾಗೆ ಆದರೆ ದೇಶದ ಅವನತಿಯು ಸಿದ್ಧವೆಂದೂ ಹೇಳಿ [illegible] ಊರ್ಮಿಳೆಯ ನಿಸ್ಪೃಹತೆಯ [illegible] ನಿದರ್ಶನವನ್ನು ಉದಹರಿಸಿದರು

ಮಹಿಳೆಯರು ಉಪಾಧ್ಯಾಯಿನಿಯರಾಗಿ [illegible] ವೈದ್ಯರಾಗಿ [illegible] ದೇಶಸೇವೆಯನ್ನು ಸಲ್ಲಿಸಬಹುದೆಂದು ಅವರು ಸೂಚಿಸಿದರು

[illegible]

ವಿದ್ಯಾರ್ಥಿನಿಯರಿಂದ ರಚಿತವಾಗಿರುವ ಭಾವತರಂಗಿಣಿ ಎಂಬ ಕನ್ನಡ ಕೈಬರಹ ಪತ್ರಿಕೆಯ ಪ್ರಕಾಶನವನ್ನೂ ಸಹ ಕುವೆಂಪುರವರು ನೆರವೇರಿಸಿದರು

ಮೊದಲು ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದ ವೇಳೆ ಶ್ರೀ ಪುಟ್ಟಮಾದಪ್ಪನವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿನಿ ಶ್ರೀಮತಿ ಎಂ ಕೋಮಲರವರಿಂದ ವರದಿಯೂ ಶ್ರೀಮತಿ ಎಸ್ ಶಾಂತಾರವರಿಂದ ಕ್ರೀಡಾ ಸ್ಪರ್ಧೆಗಳ ವರದಿಯೂ ಆದನಂತರ ಶ್ರೀ ಪುಟ್ಟಪ್ಪನವರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು

ಅಧ್ಯಕ್ಷತೆ ವಹಿಸಿದ್ದ ಪ್ರಿನ್ಸಿಪಾಲರಾದ ಶ್ರೀಮತಿ ಎಂ ಜಯಲಕ್ಷಮ್ಮಣ್ಣಿಯವರು ಶಾಲೆಯ ಅಭಿವೃದ್ಧಿಯನ್ನು ಕುರಿತು ಮಾತನಾಡಿ ದಿನೇ ದಿನೇ ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಪೂರೈಸಲು ವಿಶ್ವವಿದ್ಯಾಲಯದವರ ನೆರವು ಅಗತ್ಯವೆಂದು ಒತ್ತಿ ಹೇಳಿದರು

ಶ್ರೀಮತಿ ಉಮಾದೇವಿಯವರಿಂದ ಕನ್ನಡ ಗೀತೆಗಳು [illegible] ವಿವಿಧ ವೇಷ ಸ್ಪರ್ಧೆ ಮುಂತಾದ [illegible] ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಏಪ್ರಿಲ್ ೧ರಿಂದ ನಯೆ ಪೈಸೆಗಳ ಚಲಾವಣೆ

ಇದೇ ಏಪ್ರಿಲ್ ೧ರಿಂದ ಚಲಾವಣೆಗೆ ಬರಲಿರುವ ನಯೆ ಪೈಸೆಗಳು ಸರ್ಕಾರದ ಎಲ್ಲಾ ಖಜಾನೆಗಳಲ್ಲೂ ರಿಸರ್ವ್ ಬ್ಯಾಂಕ್ [illegible] ಬ್ಯಾಂಕುಗಳಲ್ಲೂ ವಿನಿಮಯಕ್ಕೆ ದೊರೆಯುವುವೆಂದು ಕೇಂದ್ರ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ ೧೦ [illegible] ನಯೆ ಪೈಸೆ ಮತ್ತು ೧ ನಯಾ ಪೈಸಾ ನಾಣ್ಯಗಳು ಸಾರ್ವಜನಿಕರಿಗೆ ಧಾರಾಳವಾಗಿ ದೊರೆಯಲು ವ್ಯವಸ್ಥೆ ಮಾಡಲಾಗುವುದು

ಮನೆ ಮತ್ತು ಮಳಿಗೆ

[illegible] ಮೈಸೂರು ಸಿಟಿ [illegible]

ವಿವರಗಳಿಗೆ —

ಜಯ ಅಂಡ್ ಕಂಪೆನಿ,

ಮನೆ [illegible]ಗಳ ಏಜಂಟರು

ಹಳೇ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು ಫೋನ್ 520

Edited Printed and Published by
A R Nagaraj at Sadhvi Press,
D Subbaiah Road Mysore

ವಿವಾಹ ಮಹೋತ್ಸವಗಳು

ನಗರದ ಪ್ರಸಿದ್ಧ ವರ್ತಕರಾದ ಶ್ರೀ ಎಸ್ ಗುಂಡೂರಾಯರು ತಮ್ಮ ಕುಮಾರಿ ಸೌ॥ ಅನ್ನಪೂರ್ಣನನ್ನು [illegible] ತಾಲ್ಲೂಕು ಕಚೇರಿಯ [illegible] ಶ್ರೀ ಕೆ ರಾಮಸ್ವಾಮಿ ಅಯ್ಯಂಗಾರ್ ಪುತ್ರ ಶ್ರೀ ಶ್ರೀನಿವಾಸರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ನಗರದ ಸ್ಟೇಟ್ ಮಾರ್ಕೆಟ್‌ನ ಶ್ರೀ ನಾರಾಯಣರಾಯರು ತಮ್ಮ ಕುಮಾರಿ ಸೌ॥ ಸುಶೀಲಳನ್ನು ಶ್ರೀ ಟಿ ಸುಬ್ಬರಾಯರ ಮಗ ಹಾಗೂ, ಬೆಂಗಳೂರಿನ ಕಿರ್ಲೋಸ್ಕರ್ ಸಂಸ್ಥೆ ಇಂಜನಿಯರೂ ಆದ ಶ್ರೀ ಎಂ ಎಸ್ ಶ್ರೀನಿವಾಸಮೂರ್ತಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ಜರುಗಿಸಿದರು

ನಗರದ ಜವಳಿ ವರ್ತಕರಾದ ಶ್ರೀ ಪಿ ಎಸ್ ಕೊಂಡಯ್ಯರಾಯರ ಪುತ್ರರಾದ ಶ್ರೀ ಪಿ ಜಯರಾಯರ ಮಗ ಶ್ರೀ ಪಿ ಜೆ ವಿಶ್ವನಾಥರಾಯರಿಗೆ ನಗರದ ಬಟ್ಟೆ ವರ್ತಕರಾದ ಶ್ರೀ ಎಂ ಎಲ್ ವೆಂಕಟರಾಯರ ಕುಮಾರಿ ಸೌ॥ ಸಾವಿತ್ರಿಬಾಯಿಯನ್ನು ಕೊಟ್ಟು ಮೊನ್ನೆ ವಿವಾಹವು ಜರುಗಿತು

ಕಾಂಗ್ರೆಸ್ಸಿನ ವಿರುದ್ಧ ಕೊಟ್ಟ ಓಟು ಕಾಶ್ಮೀರದ ನೀತಿಗೆ ಪೆಟ್ಟು

ಕೇಂದ್ರ ಗೃಹ ಮಂತ್ರಿ ಪಂತರು ಕಳೆದ [illegible] ಪ್ರಚಾರ ಭಾಷಣ ಮಾಡುತ್ತ, ಕಾಂಗ್ರೆಸ್ಸಿಗೆ ವಿರುದ್ಧವಾಗಿ ಕೊಡುವ ಓಟು ಕಾಶ್ಮೀರದ ನೀತಿಗೆ ಕೊಟ್ಟ ಪೆಟ್ಟಾಗುವುದೆಂದು ತಿಳಿಸಿದರು ಪ್ರಥಮ [illegible] ಹೋರಾಟವನ್ನು ಮುಂದುವರಿಸಬೇಕಾದರೆ [illegible] ಎಲ್ಲರ ಬೆಂಬಲವೂ ಇರಬೇಕೆಂದೂ [illegible]

ಉಮೇದುವಾರರೊಬ್ಬರ ಅಪಹರಣ?

ಪಶ್ಚಿಮ ಬಂಗಾಳದ ಬರ್ದ್ವಾನ್ ಜಿಲ್ಲೆಯ ಸಾದರ್ ಸಬ್ ಡಿವಿಜನ್ ಆಫೀಸರು ಅಲ್ಲಿನ [illegible] ಕ್ಷೇತ್ರದ ಪಿ ಎಸ್ ಪಿ ಉಮೇದುವಾರ ಗೋವರ್ಧನ ಛತ್ರಿಯವರನ್ನು ಎಲ್ಲಿದ್ದರೂ ತಮ್ಮ ಮುಂದೆ ಹಾಜರ್ ಮಾಡುವಂತೆ ವಾರಂಟನ್ನು ಹೊರಡಿಸಿರುತ್ತಾರೆ ಅದೇ ಸಾರ್ವತ್ರಿಕ ಕ್ಷೇತ್ರದ ಪಕ್ಷದ ಉಮೇದುವಾರರಾದ ದಾಶರಥಿಯವರು ಅರ್ಜಿ ಕೊಟ್ಟು ತಮ್ಮ ಸ್ನೇಹಿತರನ್ನು ಅಪಹರಣ ಮಾಡಲಾಗಿದೆಯೆಂದು ತಿಳಿಸಿದ್ದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಮುಖವೀಣೆ ೭-೧೫ ಹೆಚ್ ವಿ ಮೈಥಿಲಿ ದೇವರ ನಾಮ, ೭-೩೦ ಗಾಯನ ಹಾರ ೮-೧೫ ರಿಕಾರ್ಡು. ಮಧ್ಯಾಹ್ನ ೧೨ ಮತ್ತು [illegible] ಕೃಷ್ಣಮೂರ್ತಿ—ವೀಣೆ ೧೨ ೩೦ ರಿಕಾರ್ಡು ೧೨-೪೫ ವನಿತಾ ವಿಹಾರ ೧-೫ ಮುಖವೀಣೆ ೩ ೧೫ ಸಂಗೀತ ಸಂಜೆ ೫ ೩೦ ಮತ್ತು ೯-೧೫ ಎ. ಚನ್ನಕೇಶವಯ್ಯ—ಸಂಗೀತ ೭-೨೦ ಎ ಆರ್ ಅಂಬುಜ—ಗೀತೆ ೭-೩೦ ಭಾರತ ಸರ್ಕಾರದ ಹಣದ ವ್ಯವಸ್ಥೆ—ಭಾಷಣ ೮ ಕವಿ ಕಾವ್ಯವಾಚನ ೧೦ ಚಿತ್ರ ಸಂಗೀತ ೧೦-೧೫ ಉರ್ದು ಗೀತೆ

ಲಕ್ಷ್ಮಿ
ಟಾಕೀಸ್

ಬೆನಿಫಿಟ್ ಪ್ರದರ್ಶನ
17-2-57ರ ಬೆಳಗ್ಗೆ
10 30 ಕ್ಕೆ

ಆರ್ ಮಾರ್

ಶ್ರೇಷ್ಠ ಮಟ್ಟದ ಸಾಮಾಜಿಕ ಚಿತ್ರ
ಪಾತ್ರ -ದೇವ್ ಆನಂದ್ ಗೀತಾಬಾಲಿ

CLASSES FOR MADRAS MATRIC EXAMINATION March 58
Persons by 19 years admitted No minimum qualification
ATTENTION
SUMMER CLASSES (Middle & High school) IN FULL SWING
Girls also admitted.
CITY TUTORIAL COLLEGE, OLD AGRAHAR MYSORE

ಕಾಂಗ್ರೆಸ್ಸಿಗೇ ದಯವಿಟ್ಟು ಓಟು ಕೊಡಿ
ದೇಶದ ಏಳಿಗೆಗಾಗಿ ಕಾಂಗ್ರೆಸ್ಸಿನ ಉಮೇದುವಾರರಿಗೇ
ಮುಂಬರುವ ಚುನಾವಣೆಯಲ್ಲಿ ನಿಮ್ಮ ಘನವಾದ
ವೋಟನ್ನು ಕೊಡಬೇಕೆಂದು ಈ ಮೂಲಕ
ಮನವಿ ಮಾಡಿಕೊಳ್ಳುತ್ತೇನೆ
ಎಸ್ ಕೆ ಲಕ್ಷ್ಮೀನರಸಿಂಹಯ್ಯ, ಅಡ್ವೊಕೇಟ್, ಮೈಸೂರು

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ
★
ಒಮ್ಮೆ ಉಪಯೋಗಿಸಿ ನೋಡಿ
☆
[illegible] ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತವೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
[illegible]

Central Food Technological Research Institute

TENDER NOTIFICATION

Sealed Tenders are invited from Established Building Contractors with experience of over ten years for constructing a Foundry and Smithy Shed in the Premises of the Institute at an approximate cost of Rs 30,000 Tender papers consisting of 3 sets of bill of quantities and one set of drawings can be had from the Chief Architect and Town Planning Officer of the Government of Mysore, New Public Offices Bangalore-- on payment of Rs 5 per set

Completed Tenders in duplicate together with an earne deposit of Rs 750 strictly in Cash or by Bank Draft shoul be delivered to the undersigned at Central Food Technological Research Institute, V V Mohalla P O, Mysore, so as to reach him before 4 P M on Friday the 22nd February 19 Tenders received will be opened the same day at 4-30 P M in the presence of the Contractors or their representatives who may be present at that time

The Director of the Institute reserves the right to accept or reject the lowest or any tender without assigning any reason therefor The work will have to be completed in all respects within 4 months from the date of award failing which the Director reserves the right to levy a penalty of Rs per day for any extra time taken

A W De SOUZA
Administrative Offic

ಟೆಲಿಫೋನ್ ನಂ 792



ಕಾಂಗ್ರೆಸ್ ಉಮೇದುವಾರರಿಗೇ
ಜಯವಿಟ್ಟು ನಿಮ್ಮ ಓಟನ್ನು ಕೊಡಿರಿ

ಇಂದಿನ ಪತ್ರಿಕೆ 3 ಕಾಸು

ಬ್ರ್ಯಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ [illegible]
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
[illegible]
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀ[illegible] ಬೀದಿ,
ಬೆಂಗಳೂರು-2

ಸಂಪುಟ : [illegible]] SADHVI : TUESDAY 12—2—1957 ಮೈಸೂರು ಮಂಗಳವಾರ ೧೨-೨-೧೯೫೭ [ಸಂಚಿಕೆ : [illegible]

ಕಾಶ್ಮೀರಕ್ಕೆ ಪ್ರವೇಶಿಸಿದ ಪಾಕ್ ಅಧಿಕಾರಿಗಳ ಬಂಧನ

ಇಸ್ರೇಲ್ ವಿರುದ್ಧ ಕ್ರಮಕ್ಕೆ ಹ್ಯಾಮರ್‌ಷೀಲ್ಡರ ವಿರೋಧ

ಏಷ್ಯಾ ಆಫ್ರಿಕಾ ನಿರ್ಣಯದ ಬಗ್ಗೆ ವಿಶ್ವಸಂಸ್ಥೆ ಕಾರ್ಯದರ್ಶಿಯ ಪ್ರತಿಕ್ರಿಯೆ

ಈಜಿಪ್ಟಿನಿಂದ ತನ್ನ ಸೈನ್ಯಗಳನ್ನು ಇಸ್ರೇಲು ಹಿಂತೆಗೆಯಲು ನಿರಾಕರಿಸಿರುವ ಬಗ್ಗೆ ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ಏಷ್ಯಾ ಆಫ್ರಿಕಾದ [illegible] ರಾಷ್ಟ್ರಗಳು ಇಸ್ರೇಲಿನ ಮೇಲಿನ [illegible] ಕ್ರಮಗಳನ್ನು ಜರುಗಿಸಲು ನಿರ್ಣಯವನ್ನು ಸಿದ್ಧಗೊಳಿಸುತ್ತಿರುವುವೆಂದು ವರದಿಯಾಗಿದೆ. ಸಂಸ್ಥೆಯ ಸಾಧಾರಣ ಸಭೆಯು [illegible] ನಾಳೆ ಇಸ್ರೇಲಿನ ಉತ್ತರವನ್ನು [illegible]ಲಿದೆ.

ಸಭೆಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರು ವರದಿಯನ್ನೊಪ್ಪಿಸಿ, ಇಸ್ರೇಲಿನ ವಿರುದ್ಧವಾಗಿ ಸಾಮೂಹಿಕ ಕ್ರಮಗಳನ್ನು [illegible] ಸಂಘರ್ಷಣೆಗೆ ಹೊಸ ಅವಕಾಶ [illegible]ವೆಂದು ಅಭಿಪ್ರಾಯಪಟ್ಟಿರುತ್ತಾರೆ. ಸಾಧಾರಣ ಸಭೆಯ ನಿರ್ಣಯಗಳನ್ನು ಕಾರ್ಯಗತ [illegible] ಬಗ್ಗೆ ಸರಿಯಾದ ಮಾರ್ಗವನ್ನು ಸಭೆಯು [illegible] ಹಿಡಿಯಬೇಕೆಂದು ಅವರು ಸೂಚಿಸಿದ್ದಾರೆ.

ಆಜಾದ್ ಕಾಶ್ಮೀರಿಗಳಿಂದ ಪಾಕಿಸ್ತಾನದ ಖಂಡನೆ

ಪಾಕಿಸ್ತಾನವು ಆಕ್ರಮಿಸಿರುವ ಕಾಶ್ಮೀರ ಪ್ರದೇಶದಲ್ಲಿ ಕಳೆದ ವಾರ ಕಾಶ್ಮೀರ ದಿನಾಚರಣೆ ನಡೆಸುವ ಪ್ರಯತ್ನವು ಸಂಪೂರ್ಣವಾಗಿ ವಿಫಲವಾಯಿತೆಂದು ರಾವಲ್ಪಿಂಡಿಯ ಒಂದು ಪತ್ರಿಕೆ ತಿಳಿಸಿದೆ. ಕಾಶ್ಮೀರಿಗಳಿಗೆ ಪಾಕಿಸ್ತಾನವು ಯಾವ ಅನುಕೂಲವನ್ನೂ ಮಾಡಿಕೊಡಲಿಲ್ಲವೆಂದು ಆಜಾದ್ ಕಾಶ್ಮೀರಿಗಳು ದಿನಾಚರಣೆಯಲ್ಲಿ ಭಾಗವಹಿಸಲಿಲ್ಲವೆಂದು ಹೇಳಲಾಗಿದೆ. ಪಾಕಿಸ್ತಾನ ಪರವಾಗಿ ಘೋಷಣೆಗಳನ್ನು ಕೂಗಬೇಕೆಂದು [illegible] ತಿಳಿಸಿದಾಗ ಪಾಕಿಸ್ತಾನ ಸರ್ಕಾರವನ್ನು ಖಂಡಿಸುವ ಘೋಷಣೆಗಳನ್ನು ಮಾಡಿದರೆಂದು ಹೇಳಲಾಗಿದೆ.

[illegible] ಶ್ರೀ ತ್ರಿನಯನೇಶ್ವರಸ್ವಾಮಿ ರಥ

[illegible]ಮನ ಕೋಟೆಯಲ್ಲಿರುವ ಶ್ರೀ ತ್ರಿನಯನೇಶ್ವರಸ್ವಾಮಿಯವರ ರಥೋತ್ಸವವು ನಾಳೆ ಬೆಳಗಿನ [illegible] ಗಂಟೆಗೆ [illegible]ಯುತ್ತದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಗಂಟೆ ಮತ್ತು [illegible] ಶ್ರೀಮತಿ [illegible] ಪ್ರಸಾದ್ ದೇವರನಾಮ [illegible] ಮಧ್ಯಾಹ್ನ [illegible] ಜಿ ಆರ್ [illegible] ಸಂಗೀತ [illegible] ಸಂಗೀತ [illegible] ಸಂಗೀತ ಸಂಜೆ [illegible] ಮತ್ತು [illegible] ನಾಗಸ್ವರ [illegible] ನಾವು ಮತ್ತು ನಮ್ಮವರು [illegible] ಕ್ರಮ [illegible] [illegible]

ಬ್ರಿಟಿಷ್ ವಿಮಾನಗಳಿಂದ ಏರ್ಡ ಗ್ರಾಮದ ನಾಶ

ಬ್ರಿಟಿಷ್ ಆಶ್ರಿತ ಪ್ರದೇಶವಾದ ಏಡನ್ನಿನ [illegible] ಎಂಬ ಊರಿನ ಮೇಲೆ ಬ್ರಿಟಿಷ್ ವಿಮಾನಗಳು [illegible] ಮಾಡಿ ಊರನ್ನು ನಾಶಪಡಿಸಿವೆ. ಆದರೆ ಮುಂಚೆ ಅಲ್ಲಿನ [illegible] ಜನರಿಗೆ [illegible] ಎಚ್ಚರಿಕೆಯನ್ನು ಕೊಡಲಾಗಿತ್ತು. [illegible] ಬ್ರಿಟಿಷ್ ಸೈನಿಕರ ಕೊಲೆಗೆ [illegible] ಆ ಊರಿನಲ್ಲಿ [illegible] ಎಂದು ಹೇಳಲಾಗಿದೆ

ರೈಲು ಡಿಕ್ಕಿಯಿಂದ ೩೩ ಮಂದಿಗೆ ಗಾಯ

ಸೂರತ್ ಮತ್ತು [illegible] ನಿಲ್ದಾಣಗಳ ನಡುವೆ [illegible] ರೈಲಿಗೂ, ಗೂಡ್ಸ್ [illegible] ಡಿಕ್ಕಿಯಾಗಿ ಇಬ್ಬರಿಗೆ ತೀವ್ರವಾಗಿಯೂ [illegible] ಮಂದಿಗೆ ಸ್ವಲ್ಪವೂ ಗಾಯವಾಗಿದೆ

ಚುನಾವಣೆ ಪ್ರಚಾರಕ್ಕೆ ಆನೆ

ಮದುರೆಯ [illegible] ಸ್ಪರ್ಧಿಸಿರುವ ಸ್ವತಂತ್ರ ಅಭ್ಯರ್ಥಿಯೊಬ್ಬರಿಗೆ ಸಂಕೇತವಾಗಿ [illegible] ಆನೆ ಚಿಹ್ನೆಯನ್ನು ಓಟರುಗಳಿಗೆ ಮನದಟ್ಟು ಮಾಡಿಕೊಡಲು ಸ್ಪರ್ಧಿಯು ಆನೆಯೊಂದನ್ನು ಬಾಡಿಗೆಗೆ ಪಡೆದು ಹಳ್ಳಿಗಳಲ್ಲಿ [illegible] ಮೆರವಣಿಗೆ ಮಾಡಿಸುತ್ತಿರುವ[illegible] ಗೊತ್ತಾಗಿದೆ

ಹಿರಿಯಣ್ಣ ಸ್ಮಾರಕ ಸಭೆ

ವಿಶ್ವವಿದ್ಯಾಲಯದ ಸಂಸ್ಕೃತ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಹಿರಿಯಣ್ಣ ಸ್ಮಾರಕ ಸಭೆಯು ನಡೆಯುವುದು. ಶ್ರೀಮತಿ ಹೆಚ್ [illegible], ಶ್ರೀಗಳಾದ ಎಸ್ ರಾಮಚಂದ್ರರಾವ್, ಎಂ ಯಾಮುನಾಚಾರ್ಯ ಮತ್ತು ಪ್ರೊ॥ ಎನ್ ಶಿವರಾಮಶಾಸ್ತ್ರಿಯವರು ತತ್ವಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಉಪನ್ಯಾಸ ಮಾಡುವರು

ಸಂಸ್ಥಾನದ ಪಕ್ಷಗಳ ಉಮೇದುವಾರಿಕೆ

ಸಂಸ್ಥಾನದ ವಿಧಾನ ಸಭೆಗೆ ಸ್ಪರ್ಧಿಸುವವರ ಸಂಖ್ಯೆ ಈ ರೀತಿ ಇದೆ —ಕಾಂಗ್ರೆಸ್ ೨೦೦ ಪಿ ಎಸ್ ಪಿ ೬೦ ಜನಸಂಘ ೨೩ ಕಮ್ಯುನಿಸ್ಟ್ [illegible], ಲೋಕಸೇವಾ ಸಂಘಗಳ [illegible] ವರ್ಗ [illegible] ದ್ರಾವಿಡ ಮುನ್ನೇತ್ರ ಸಂಘ [illegible] [illegible] ಮತ್ತು [illegible] ಪಕ್ಷ [illegible], ಸಮಾಜವಾದಿ [illegible], ಕೋಲಾರದ ಸಂಯುಕ್ತರಂಗ [illegible], [illegible] ಏಕೀಕರಣ ಸಮಿತಿ [illegible] ಮತ್ತು ಸ್ವತಂತ್ರರು [illegible]

ಸ್ಟ್ಯಾಟಿಸ್ಟಿಕ್ಸ್ ಸಂಘದ ಮುಖ್ಯ ಭಾಷಣ

ಮಹಾರಾಜಾ ಕಾಲೇಜಿನ ಸ್ಟ್ಯಾಟಿಸ್ಟಿಕ್ಸ್ ಸಂಘದ ಮುಖ್ಯ ಭಾಷಣವನ್ನು [illegible] ವಿಶ್ವವಿದ್ಯಾಲಯದ [illegible] [illegible] [illegible]ರಂಗರವರು ಅಧ್ಯಕ್ಷತೆ ವಹಿಸುವರು

ಕಾಶ್ಮೀರಕ್ಕೆ ಪ್ರವೇಶಿಸಿದ ಪಾಕ್ ಅಧಿಕಾರಿಗಳ ಬಂಧನ

ಕದನ ವಿರಾಮ ರೇಖೆಯನ್ನು ದಾಟಿ ಕಾಶ್ಮೀರ ಕಣಿವೆಗೆ ಇತ್ತೀಚೆಗೆ ಪ್ರವೇಶಿಸಿದ ಪೋಲೀಸು ಅಧಿಕಾರಿಗಳೂ ಸೇರಿ ಹಲವು ಪಾಕಿಸ್ತಾನಿಗಳನ್ನು ದಸ್ತಗಿರಿ ಮಾಡಲಾಗಿದೆ. ಅಧಿಕಾರಿಗಳು ಕಣಿವೆಗೆ ಶಸ್ತ್ರಾಸ್ತ್ರಗಳನ್ನು ಕಳ್ಳತನದಲ್ಲಿ ರವಾನೆ ಮಾಡುತ್ತಿದ್ದರೆಂದೂ ಜನರನ್ನು ಕಾಶ್ಮೀರಕ್ಕೆ ಕಳುಹಿಸುತ್ತಿದ್ದರೆಂದೂ ಹೇಳಲಾಗಿದೆ. ಕೋಮುವಾರು [illegible]ಟ್ಟನ್ನು ತಂದೊಡ್ಡುವುದೇ ಅವರುಗಳ ಉದ್ದೇಶವಾಗಿ[illegible] ಗೊತ್ತಾಗಿದೆ

ತಮಿಳುನಾಡು ಗ್ರಾಮಾಧಿಕಾರಿಗಳಿಂದ ೧ ದಿನದ ಮುಷ್ಕರ

ತಮಿಳುನಾಡಿನ ಗ್ರಾಮಾಧಿಕಾರಿಗಳ [illegible] ಅಧಿವೇಶನದಲ್ಲಿ ಪೆನ್ಷನ್ [illegible] ತಾರೀಕು ಗ್ರಾಮಾಧಿಕಾರಿಗಳು ಒಂದು ದಿನ ಮುಷ್ಕರ ನಡೆಸುವಂತೆ ನಿರ್ಧರಿಸಲಾಯಿತು. ಅಂದು [illegible] ಕೆಲಸಕ್ಕೆ ಹೋಗ[illegible]ದವೆಂದೂ [illegible] ಕೊಟ್ಟಿರುವಂತೆ ತಮಗೂ ಸುತ್ತು ಭತ್ಯವನ್ನು ಕೊಡಬೇಕೆಂದು ಒತ್ತಾಯಪಡಿಸಲು ಅಂದು ಸಭೆಗಳನ್ನು ನಡೆಸಬೇಕೆಂದ[illegible] [illegible]ಸಲಾಗಿದೆ.

ಆಗಾಖಾನರ ಪ್ಲಾಟಿನಂ ಜೂಬಿಲಿ

ಈ ತಿಂಗಳು [illegible]ನೇ ತಾರೀಕು ಬೊಂಬಾಯಿಯಲ್ಲಿ ಆಗಖಾನರ ಪ್ಲಾಟಿನಂ ಜೂಬಿಲಿಯನ್ನು ಅವರ ಹಿಂಬಾಲಕರು ನಡೆಸುವರು. ಆ ದಿನ ಭಾರತಕ್ಕೆ ಸ್ವಂತ ಇರುವ ಇಸ್ಮೇಲಿಯಾ ಮತೀಯರ ಸಹಕಾರ ಮತ್ತು ವ್ಯವಸಾಯ ಸಂಘಗಳಿಗೆ ೩೦ ಲಕ್ಷ ರೂ ಗಳನ್ನು [illegible]ಗುವುದು. ಆಗಖಾನರ ಬಗ್ಗೆ ನಡೆದ ಉತ್ಸವಗಳಲ್ಲಿ ಇದೇ ಮೊದಲಾಗಿ ಇಡೀ ಕೋಮಿನ ಉಪಯೋಗಕ್ಕೆ ಬಂದಾ ಹಣವನ್ನು ವಿನಿಯೋಗಿಸಲಾಗುವುದು. ಪ್ಲಾಟಿನಂ ಲೋಹದಲ್ಲಿ ಆಗಾಖಾನರ ತುಲಾಭಾರ ತೂಗಲಾಗುವುದು. ಅವರ ಮಗ [illegible]ಖಾನರು ಉತ್ಸವದಲ್ಲಿ ಭಾಗವಹಿಸುವರು. [illegible] ನಡೆಯಲಿವೆ

ಈ ಸಾರಿ ರಿಕಾರ್ಡು ಕಾಫಿ ಬೆಳೆ

ಈ ವರ್ಷ ೩೮ [illegible] ಟನ್ನಿನಷ್ಟು ಕಾಫಿಯು ಬೆಳೆದಿದೆ. ಇಷ್ಟೊಂದು ಹಿಂದೆಂದೂ ಆಗಿರಲಿಲ್ಲ. [illegible] ೧೦೦ ಟನ್ ಕಾಫಿಯನ್ನು ಹೊರದೇಶಗಳಿಗೆ ರಫ್ತು ಮಾಡಲಾಗುವುದು

[illegible] ಸಂಘಕ್ಕೆ [illegible]?

ನಗರದ [illegible] ಕಾಲೇಜಿನ ವಿದ್ಯಾರ್ಥಿ ಸಂಘಗಳು [illegible] ಕೂಟವನ್ನು [illegible] ಅಧಿಕಾರಿಗಳು ಅವಕಾಶ ಕೊಡದೆ [illegible] ಕೂಟಕ್ಕೆ ಮಾತ್ರ [illegible], ಪಕ್ಷಪಾತ ತೋರಿಸಿ[illegible] ವಿದ್ಯಾರ್ಥಿಗಳಲ್ಲಿ ಅಸಮಾಧಾನವೆಂ[illegible] [illegible] ತಿಳಿ[illegible]ತ್ತಾರೆ

ಸೀರೆ ಕಳುವಿಗಾಗಿ ಮೂವರು ಸ್ತ್ರೀಯರ ಬಂಧನ

ನಂಜನಗೂಡು ೧೧

ಇಲ್ಲಿನ ಶ್ರೀರಾಮಶೆಟ್ಟರ ಅಂಗಡಿಯಲ್ಲಿ ಸೀರೆಗಳನ್ನು ಕಳುವು ಮಾಡಿದರೆಂದು ಲಲಿತಮ್ಮ, ವೆಂಕಟಮ್ಮ ಮತ್ತು ಸುಬ್ಬಮ್ಮ ಎಂಬ ಮೂವರು ಸ್ತ್ರೀಯರನ್ನು ಪೋಲೀಸರು ಬಂಧಿಸಿರುತ್ತಾರೆ. ಕೊಳ್ಳುವುದಾಗಿ ಹೇಳಿ ೪ ಸೀರೆಗಳನ್ನು ಹೊತ್ತುಕೊಂಡುಹೋದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ

ಐಸೆನ್‌ಹೋವರ್ ಮತ್ತು ಬ್ರಿಟಿಷ್ ಪ್ರಧಾನಿ ಸಮಾಗಮ

ಬರ್ಮುಡಾ ದ್ವೀಪದಲ್ಲಿ ಮಾರ್ಚಿ ೨೧ರಿಂದ ೨೪ನೇ ತಾರೀಕಿನವರೆಗೆ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರ್ ಮತ್ತು ಬ್ರಿಟನ್ನಿನ ಪ್ರಧಾನಿ ಹೆರಾಲ್ಡ್ ಮ್ಯಾಕ್‌ಮಿಲನ್‌ರವರು ಮಾತುಕತೆ ನಡೆಸುವರೆಂದು ವರದಿಯಾಗಿದೆ. ಈ ತಿಂಗಳು ೨೫ ಮತ್ತು ೨೬ನೇ ತಾರೀಕು ಫ್ರಾನ್ಸಿನ ಪ್ರಧಾನಿ ಮೊಲೆಯವರೊಡನೆ ಐಸೆನ್‌ಹೋವರರು ಮಾತುಕತೆ ನಡೆಸುವರು. ಬ್ರಿಟಿಷ್ ಪ್ರಧಾನಿ ಮತ್ತು ಐಕ್ ಸಂಧಿ [illegible]ಯಲ್ಲಿ ಕೆನಡಾ ಪ್ರಧಾನಿ ಸೇಂಟ್ ಲಾರೆಂಟರವರು ಭಾಗವಹಿಸುವರು

ವಿಶ್ವ ನ್ಯಾಯಾಲಯಕ್ಕೆ ಅಣುಶಸ್ತ್ರ ಪರೀಕ್ಷೆ ಬಗ್ಗೆ ದೂರು

ಜಪಾನಿಗೆ ರಾಜಾಜಿ ಕರೆ

ಪೆಸಿಫಿಕ್ ಸಾಗರದ ಕ್ರಿಸ್ಮಸ್ ದ್ವೀಪದಲ್ಲಿ ಬ್ರಿಟನ್ನು ನಡೆಸಲಿರುವ ಜಲಜನಕ ಅಸ್ತ್ರಪ್ರಯೋಗ ಪರೀಕ್ಷೆಯ ವಿರುದ್ಧವಾಗಿ ಜಪಾನಿನಲ್ಲೆಲ್ಲಾ ಪ್ರತಿಭಟನಾ ಚಳುವಳಿಯ ವ್ಯವಸ್ಥಾಪಕರಿಗೆ ರಾಜಾಜಿಯವರು ಸಂದೇಶವೊಂದನ್ನು ಕಳುಹಿಸಿ, ಅಂತರರಾಷ್ಟ್ರೀಯ ಕಾನೂನಿಗೆ ವ್ಯತಿರೇಕವಾಗಿದ್ದು ಅನೈತಿಕವಾದ ಈ ಪರೀಕ್ಷೆಗಳ ಬಗ್ಗೆ ಹಲವಾರು ಸರ್ಕಾರಗಳು ವಿಶ್ವಸಂಸ್ಥೆಯ ನ್ಯಾಯಾಲಯಕ್ಕೆ ದೂರು ಕೊಡಬೇಕೆಂದು ಸಲಹೆ ಮಾಡಿರುತ್ತಾರೆ. ಈ ಬಗ್ಗೆ ತೀರ್ಮಾನವಾಗಬೇಕೆಂದೂ ಅವರು ಹೇಳಿರುತ್ತಾರೆ. ಅಣುಶಸ್ತ್ರಗಳನ್ನು ಹೊಂದಿರುವ ರಾಷ್ಟ್ರಗಳು ತಾವೇ ಸೂರ್ಯಚಂದ್ರರೆಂದೂ, ಸರ್ವಶಕ್ತನಾದ ಭಗವಂತನೆಂದೂ ಭಾವಿಸಿರುವುದಾಗಿಯೂ ರಾಜಾಜಿಯವರು ತಿಳಿಸಿರುತ್ತಾರೆ.

ಆಜಾದ್ ಕಾಶ್ಮೀರದಿಂದ ೪॥ ಲಕ್ಷ ಮುಸ್ಲಿಮರ ಪರಾರಿ

ಕಾಶ್ಮೀರದಲ್ಲಿ ಸೀಸ್‌ಫೈರ್ ಆದಾಗಿನಿಂದ ಈ ವರೆಗೆ ಪಾಕಿಸ್ತಾನದವರು ಆಕ್ರಮಿಸಿರುವ ಪ್ರದೇಶದ ೪॥ ಲಕ್ಷ ಜನರು ಸೀಸ್‌ಫೈರ್ ರೇಖೆಯನ್ನು ದಾಟಿ ಕಾಶ್ಮೀರದೊಳಕ್ಕೆ ಬಂದಿರುವರೆಂದು, [illegible] ಪುನರ್ವಸತಿ [illegible]ದೆಂದು ಕಾಶ್ಮೀರದ ಮುಖ್ಯಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರು ತಿಳಿಸಿರುತ್ತಾರೆ.

○ ಶ್ರೀ ಸುತ್ತೂರು ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದ ಸಂಘದ ವಾರ್ಷಿಕೋತ್ಸವದ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ಸಚಿವ ಶ್ರೀ ಸಿ ಎಂ. ಪೂಣಚ್ಚನವರು ಮುಖ್ಯ ಭಾಷಣ ಮಾಡುವರು

ಯುವರಾಜಾ ಕಾಲೇಜಿನಲ್ಲಿ ಸಂಸ್ಕೃತೋತ್ಸವ

ಮೈಸೂರು ೧೧

ಇಲ್ಲಿನ ಯುವರಾಜ ಕಾಲೇಜಿನ ಸಂಸ್ಕೃತ ಸಂಘದ ಆಶ್ರಯದಲ್ಲಿ ಮೊನ್ನೆ ಸಂಸ್ಕೃತೋತ್ಸವವು ನಡೆಯಿತು ಪ್ರಿನ್ಸಿಪಾಲರಾದ ಡಾ|| ಎಲ್ ಸೀಬಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ವಸಂತಕುಮಾರಿಯವರಿಂದ ಪ್ರಾರ್ಥನೆಯಾದನಂತರ, ಕಾಲೇಜಿನ ಸಂಸ್ಕೃತ ಶಾಖೆಯ ಅಧ್ಯಕ್ಷರಾದ ಶ್ರೀ ಟಿ ಎಸ್ ಗೋಪಾಲಾಚಾರ್ ಸ್ವಾಗತ ಭಾಷಣ ಮಾಡಿದರು

ಮಹಾರಾಜಾ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎನ್ ಶಿವರಾಮಶಾಸ್ತ್ರಿಗಳು ಭಾಸಕವಿ ರಚಿಸಿದ ನಾಟಕಗಳ ಬಗ್ಗೆ ಭಾಷಣ ಮಾಡಿ ಭಾಸನು ಕಾಳಿದಾಸನಿಗಿಂತಲೂ ಹಿಂದಿನವನೆಂದೂ, ಆತನ ಕೃತಿಗಳು ಇನ್ನೂ ಸಂಪೂರ್ಣವಾಗಿ ಸಿಕ್ಕಿಲ್ಲವೆಂದೂ ಪಂಡಿತರು [illegible] ರೀತಿಯ ವಾದಗಳು ಹುಟ್ಟಿಕೊಂಡಿವೆ ಎಂದೂ ಹೇಳಿ, ಭಾಸಕವಿಯ ಕೃತಿಗಳಲ್ಲಿರುವ ಸ್ವಾರಸ್ಯವಾದ ಸನ್ನಿವೇಶಗಳನ್ನೂ ಪಾತ್ರಗಳ ಪೋಷಣೆಯನ್ನೂ ಉದಾಹರಣೆಗಳೊಡನೆ ವಿವರಿಸಿದರು

ಕುಮಾರಿ ಸುಶೀಲಾ ಮತ್ತು ಸೋಮಶೇಖರ್ ಅವರ [illegible] ಭರತನಾಟ್ಯವೂ ಸಂಗೀತವೂ ನಡೆಯಿತು ಕಾರ್ಯದರ್ಶಿಗಳಾದ ಶ್ರೀ ಎಂ ಎನ್ ಸೋಮಶೇಖರ್‌ರವರು ವಂದನಾರ್ಪಣೆ ಮಾಡಿದರು

ಕನ್ನಡ ಪ್ರಾಧ್ಯಾಪಕರಾದ ಶ್ರೀ ಡಿ ಎಲ್ ನರಸಿಂಹಾಚಾರ್ಯರು [illegible] ಸ್ಪರ್ಧೆ [illegible] ಕಾವ್ಯವನ್ನು ಅವರ [illegible] ವಾಗಿ ವಿವರಿಸಿದರು

ಅಧ್ಯಕ್ಷತೆ ವಹಿಸಿದ್ದ ಡಾ|| ಎಸ್ ಶ್ರೀಕಂಠಶಾಸ್ತ್ರಿಗಳವರು [illegible] ಬಾಣಭಟ್ಟನ ಕೃತಿಯನ್ನು ಹೋಲಿಸಿ ಅದರ ವೈಶಿಷ್ಟ್ಯವನ್ನು ವಿಮರ್ಶಕ ದೃಷ್ಟಿಯಲ್ಲಿ ವಿವರಿಸಿದರು

ಮೊದಲು ಪ್ರಾರ್ಥನೆಯಾದನಂತರ ಸಂಘದ ಅಧ್ಯಕ್ಷರಾದ ಶ್ರೀ ಟಿ ಎಸ್ ಗೋಪಾಲಾಚಾರ್ ಸ್ವಾಗತ ಭಾಷಣ ಮಾಡಿದರು [illegible] ಗಳ [illegible] ಮತ್ತು ಅನಸೂಯಾರವರಿಂದ ಗಾಯನವು ನಡೆಯಿತು ಕಾರ್ಯದರ್ಶಿಯವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

ಪ್ರಜಾ ಮಂಡಲದ ಸಭೆ

ನಗರದ ಪ್ರಜಾ ಮಂಡಲಿಯ ಆಶ್ರಯದಲ್ಲಿ ಮೊನ್ನೆ ಬಹಿರಂಗ ಸಭೆಯೊಂದು ಟೌನ್‌ಹಾಲಿನಲ್ಲಿ ನಡೆದು ಅಕ್ಕಿ ಮತ್ತು ರಾಗಿ ಬೆಲೆಗಳನ್ನು ಇಳಿಸಿ ರೂ ಗೆ [illegible] ಸೇರು ಅಕ್ಕಿ, [illegible] ಸೇರು ರಾಗಿ ಮಾರುವಂತೆ ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು

ಸ್ಕೌಟು ಮಾಸ್ಟರುಗಳ ಶಿಕ್ಷಣ ಶಿಬಿರ

ನಗರ ಮತ್ತು ಜಿಲ್ಲೆಯ ನಾನಾ ಪ್ರೌಢ ಮತ್ತು ಮಾಧ್ಯಮಿಕ ಶಾಲಾ ಸ್ಕೌಟು ಮಾಸ್ಟರುಗಳ ಶಿಕ್ಷಣ ಶಿಬಿರವು ಕಳೆದ ಶನಿವಾರ ನಂಜನಗೂಡ ರೆಸಿಡೆನ್ಸಿ ಬಂಗಲೆಯಲ್ಲಿ ಆರಂಭವಾಯಿತು ಜಿಲ್ಲಾ ಕಮಿಷನರ್ ಶ್ರೀ ಬಿ ಟಿ ಶ್ರೀನಿವಾಸಯ್ಯಂಗಾರರು ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು [illegible] ಮಂದಿ ಶಿಕ್ಷಣ ಪಡೆಯುತ್ತಿದ್ದಾರೆ ೧೦ ದಿನಗಳ ಕಾಲ ಶಿಬಿರ ನಡೆಯುವುದು

[illegible] ಚಂದ್ರಗುತ್ತ್ಯಾಂಬಾ ದೇವಾಲಯದ ವಾರ್ಷಿಕೋತ್ಸವ

[illegible] ಮೊದ[illegible] ಶ್ರೀ [illegible] ಚಂದ್ರಗುತ್ತ್ಯಾಂಬಾ ದೇವಿಯ [illegible] ದಲ್ಲಿ [illegible] ಮಹೋತ್ಸವವು ನಡೆಯಿತು [illegible] ಪೂಜಾ [illegible] ಇವೆ [illegible] ಯವರ [illegible]

ವಿದ್ಯಾ ಪೀಠದಲ್ಲಿ ಪ್ರಶಸ್ತಿ ಪತ್ರ ವಿನಿಯೋಗ

ನಂಜನಗೂಡು ೧೧

ಇಲ್ಲಿನ ಮತ್ತು ಹಾಸನದ ವಿದ್ಯಾಪೀಠಗಳ ಪ್ರಶಸ್ತಿ ಪತ್ರಗಳ ವಿನಿಯೋಗವನ್ನು ಪರೀಕ್ಷಾಧ್ಯಕ್ಷರಾದ ಶ್ರೀ ಕೆ ವೆಂಕಟಸುಬ್ಬಣ್ಣನವರು ನೆನ್ನೆ ನೆರವೇರಿಸಿದರು ನ್ಯಾಯಾಧೀಶರಾದ ಶ್ರೀ ಎಂ ಸಿದ್ಧಪ್ಪನವರು ಅಧ್ಯಕ್ಷತೆ ವಹಿಸಿದ್ದರು [illegible] ಶಿಕ್ಷಣ [illegible] ವಿದ್ಯಾರ್ಥಿ [illegible] ಮ್ಮಣ್ಣನವರು ಭಾಷಣ ಮಾಡಿದ [illegible] ಶ್ರೀ [illegible] ಮತ್ತು ಶ್ರೀ [illegible] ಪ್ರಾರ್ಥನೆಯು ನಡೆಯಿತು ವಿದ್ಯಾಪೀಠದ ಕಾರ್ಯದರ್ಶಿ ಶ್ರೀ ಗೋವಿಂದರಾಜರವರು ವಂದನಾರ್ಪಣೆ ಮಾಡಿದರು

೧,೯೦೦ ತೊಲ ಕಳ್ಳಸಾಗಾಣೆ ಚಿನ್ನದ ಪತ್ತೆ

ಸಿಂಗಪೂರಿನಿಂದ ಬಂದ ಹಡಗಿನಲ್ಲಿ ಮದ್ರಾಸಿನ ನಾಗಪಟ್ಟಣಕ್ಕೆ ಆಗಮಿಸಿದ ಮೂವರು ಪ್ರಯಾಣಿಕರನ್ನು ಕೇಂದ್ರದ ಸುಂಕದ ಅಧಿಕಾರಿಗಳು ಶೋಧಿಸಲಾಗಿ ಅವರ ಬಳಿ ೨೦,೦೦೦ ರೂ ಬೆಲೆಯ ೧,೯೦೦ ತೊಲ ಅಕ್ರಮ ಸಾಗಾಣೆಯ ಚಿನ್ನವು ದೊರೆತದಾಗಿ ವರದಿಯಾಗಿದೆ ಪೆಟ್ಟಿಗೆಗಳಲ್ಲಿ ವಿಶೇಷ ರೀತಿಯ ರಂಧ್ರಗಳನ್ನು ಮಾಡಿ ಅದರಲ್ಲಿ ಚಿನ್ನವನ್ನಿಡಲಾಗಿತ್ತು ಆ ಪ್ರದೇಶದಲ್ಲಿ ಇಷ್ಟು ಭಾರಿ ಮೊತ್ತದ ಕಳ್ಳಸಾಗಾಣೆ ಚಿನ್ನದ ಪತ್ತೆ ಆಗಿರುವುದು ಇದೇ ಮೊದಲು

ವಿವಾಹ ಮಹೋತ್ಸವಗಳು

ಶ್ರೀ ಬಿ ಆರ್ ಟಿ ಸುಬ್ಬರಾಯರ ಪುತ್ರಿ [illegible] ಕುಮಾರಿಯವರಿಗೆ [illegible] ಶ್ರೀ [illegible] ಸ್ವಾಮಿ [illegible] ಶ್ರೀ ಎಂ ಎಸ್ ಅನಂತ [illegible] ರ ಮಗ [illegible] ರಾಮಲೋಚನ [illegible] ಮೊನ್ನೆ ವಿವಾಹವು ನೆರವೇರಿತು

[illegible] ಶ್ರೀ ಎಂ ಜಿ ಮಾಧವ [illegible] ಕುಮಾರಿಯವರು ತಮ್ಮ ಕುಮಾರಿಯನ್ನು [illegible] ಜಿ ಟಿ ರಾಮ [illegible] ಮೊನ್ನೆ ವಿವಾಹವನ್ನು ನಡೆಸಿದರು

ನೂತನ ಗೃಹಪ್ರವೇಶ

ಶ್ರೀ ಸಿಂಧುವಳ್ಳಿ ಸುಬ್ಬಕೃಷ್ಣಯ್ಯಂರವರು ಕಾಶೀಪತಿ ಅಗ್ರಹಾರದಲ್ಲಿ ತಾವು ನೂತನವಾಗಿ ಕಟ್ಟಿಸಿರುವ ಗೃಹದ ಪ್ರವೇಶೋತ್ಸವದ ಅಂಗವಾಗಿ ಮೊನ್ನೆ ರಾತ್ರಿ ಭೋಜನ ಕೂಟವೊಂದನ್ನು ಏರ್ಪಡಿಸಿ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಸರಸ್ವತಿ ಪೂಜೆ

ನಗರದ ಮಹಾವಿಲಾಸ ಮೊಹಲ್ಲಾ ಹಿಂದಿ ಪ್ರಚಾರ ಸಭಾ ಕೇಂದ್ರದಲ್ಲಿ ಕಳೆದ ಶುಕ್ರವಾರ ಸರಸ್ವತಿ ಪೂಜೆಯನ್ನು ಏರ್ಪಡಿಸಲಾಗಿತ್ತು ವಕೀಲರಾದ ಶ್ರೀ ಕೆ ವಿ ಶ್ರೀನಿವಾಸಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಚಿಕ್ಕಲಿಂಗಯ್ಯ, ಮಸಂದ್, ಸುವರ್ಣಾಚಾರ್ ಮತ್ತು ಪಿಲ್ಲೇರವರುಗಳು ಭಾಷಣ ಮಾಡಿದರು ಶ್ರೀ ಎಂ ವಿ ಶ್ರೀನಿವಾಸ ಮೂರ್ತಿಯವರು ವಂದನಾರ್ಪಣೆ ಮಾಡಿದರು.

ಔಷಧಿಗಳ ಅಂಗಡಿಯ ಆರಂಭ

ನಗರದ ಪ್ರ[illegible] ವೈದ್ಯ ಶ್ರೀ ಎಚ್. ಆರ್ ವೆಂಕಟರಾಮ[illegible] ಮೊನ್ನೆ [illegible] ಕಟ್ಟಡದಲ್ಲಿ [illegible] ಔಷಧಿ ಅಂಗಡಿಯನ್ನು ತೆರೆದು ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

SRI GAYATHRI
(AL[illegible])
To[illegible]
THE [illegible] WOLF

ಸಿರಿಯಾದಲ್ಲಿ ಬಲ ಪಕ್ಷಗಳವರ ಪ್ರದರ್ಶನ

ಸಿರಿಯದ ಅಲೆಪ್ಪೊ ಮತ್ತು ಇತರ ನಗರಗಳಲ್ಲಿ ಬಲ ಪಕ್ಷಗಳವರು ಹಿಂಸಾತ್ಮಕ ಪ್ರದರ್ಶನಗಳನ್ನು ನಡೆಸುತ್ತಿರುವರೆಂದೂ, ಅದರ ಸಲುವಾಗಿ ಅಲ್ಲಿನ ಸೈನಿಕರು ಆ ನಗರಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವುದಾಗಿಯೂ ವರದಿಯಾಗಿದೆ ಐದು ದಿನಗಳ ಹಿಂದೆ ಅಲೆಪ್ಪೊವಿನ ಗವರ್ನರರು ರಾಜಧಾನಿ ಡಮಾಸ್ಕಸ್ಸಿನಲ್ಲಿ ಆಶ್ರಯ [illegible] ಪ್ರದರ್ಶನಕಾರರು ಮಾಡಿದ್ದರಿಂದ, ಗವರ್ನರ [illegible] ಬಳಿ ಬಾಂಬುಗಳು ಸಿಡಿಸಲಾಗಿದೆ [illegible] ದಿನಗಳೊಳಗೆ ರಾಜೀನಾಮೆ ಕೊಡುವಂತೆ ಸಿರಿಯಾ ಸರ್ಕಾರವನ್ನು ಅವರು ಒತ್ತಾಯಪಡಿಸಿದ್ದಾರೆ [illegible] ಕಛೇರಿ ಬಳಿ ಬಾಂಬನ್ನು ಸಿಡಿಸಲಾಗಿದೆ ಅಲೆಪ್ಪೊ ಮತ್ತು ಡಮಾಸ್ಕಸ್‌ಗಳ ನಡುವೆ ಎಲ್ಲ [illegible] ಅನುಕೂಲಗಳನ್ನೂ ಸೈನ್ಯದವರು ನಿಷೇಧಿಸಿದ್ದಾರೆ

ಸೂಯೆಜ್ ಕಾಲುವೆಯಲ್ಲಿ ಹಡಗುಗಳ ಸಂಚಾರ ಆರಂಭ

ಈಜಿಪ್ಟಿನಲ್ಲಿ ಆಂಗ್ಲೋ ಫ್ರೆಂಚರು ಧಾಳಿ ನಡೆಸಿದಂದಿನಿಂದ ಸಂಚಾರಕ್ಕೆ ಅವಕಾಶವಿಲ್ಲದಿದ್ದ ಸೂಯೆಜ್ ಕಾಲುವೆಯಲ್ಲಿ ಮೊನ್ನೆ ಇದೇ ಮೊದಲಾಗಿ ಇಟಲಿಯ ಎಣ್ಣೆ ಹಡಗು ಸಂಚರಿಸಿದುದಾಗಿ ವರದಿಯಾಗಿದೆ ಕಾಲುವೆಯಲ್ಲಿರುವ ಅಡ್ಡಿಗಳನ್ನು [illegible] ಸಣ್ಣ ಹಡಗುಗಳು ಹೋಗಲು ಈಗ ಅವಕಾಶವಿದೆ

ಬೆಂಗಳೂರಿನಲ್ಲಿ ಪೈರು ಕೀಟನಾಶಕ ಶಾಲೆ

ಪೈರುಗಳನ್ನು ನಾಶಪಡಿಸುವ ಕ್ರಿಮಿ ಕೀಟಗಳನ್ನು [illegible] ಪ್ರಾಣಿಗಳ [illegible] ಶಾಲೆಯೊಂದನ್ನು ಬೆಂಗಳೂರಿನಲ್ಲಿ ಈ ತಿಂಗಳು [illegible] ತೆರೆಯಲಾಗುವುದೆಂದು ವರದಿಯಾಗಿದೆ [illegible] ಇಂತಹ [illegible] ಇದೇ ಮೊದಲು. ಈ ಶಾಲೆಯಲ್ಲಿ ಇದು [illegible] ಕ್ರಿಮಿನಾಶಕ [illegible] ಗಳನ್ನು [illegible] ಅವನ್ನು ಹಂಚುವುದೇ ಇಲ್ಲಿ ನಡೆಯುವ ಕೆಲಸ.

ಕೈಗಾರಿಕಾ ಕಾರ್ಮಿಕರ ಸಂಬಳದ ಸಮಿತಿ ಕಾರ್ಯಾರಂಭ

ಸರ್ಕಾರದವರು ರಚಿಸಿದ ಕೈಗಾರಿಕಾ ಕಾರ್ಮಿಕರ ಸಂಬಳದ ಪುನರ್ವಿಮರ್ಶೆ ಸಮಿತಿಯು ನೆನ್ನೆಯಿಂದ ಸಾಕ್ಷ್ಯಗಳನ್ನು ತೆಗೆದುಕೊಳ್ಳಲು ಆರಂಭಿಸಿತು ಅಡಿಷನಲ್ ಕೈಗಾರಿಕಾ ಡೈರೆಕ್ಟರರ ಸಾಕ್ಷ್ಯ ಪಡೆಯಲಾಯಿತು ಈ ತಿಂಗಳು [illegible]ರಿಂದ ಸಮಿತಿಯವರು ಶಿವಮೊಗ್ಗ, ಕೊಡಗು, ಮೈಸೂರು, ಕೊಳ್ಳೇಗಾಲ ಮತ್ತು ಟಿ ನರಸೀಪುರಗಳಲ್ಲಿ ಪ್ರವಾಸ ಮಾಡುವರು

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸದ ಅಂಗವಾಗಿ ನಾಳೆ ಸಂಜೆ ೫|| ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಬೆಂಗಳೂರಿನ ಟಾಟಾ ವಿಜ್ಞಾನ ಶಾಲೆಯ ಪ್ರೊ|| ಎಸ್ ಕೆ. ಬೋಸರು "ಕೈಗಾರಿಕೆ ಉತ್ಪಾದನೆಯ ಮಾನಸಿಕ ಸ್ಥಿತಿ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಪ್ರೊ|| ಬಿ ಕುಪ್ಪುಸ್ವಾಮಿಯವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ.

ಸರಸ್ವತಿಪುರದಲ್ಲಿ ನೀರಿನ ತೊಂದರೆ

ಸರಸ್ವತಿಪುರದಲ್ಲಿ ನೀರು ಸರಬರಾಜಿನ ಬಗ್ಗೆ ಜನರಿಗೆ ತುಂಬಾ ತೊಂದರೆಯಾಗಿದೆ ಕಳೆದ ಭಾನುವಾರ ಬೆಳಿಗ್ಗೆ ೯ ರಿಂದ ಸಂಜೆ ೪ ರವರೆಗೆ ನೀರನ್ನು ನಿಲ್ಲಿಸುವುದಾಗಿ ತಿಳಿಸಿ, ಅಂದೂ ಮತ್ತು [illegible] ಗಂಟೆಯಿಂದ [illegible] ಮತ್ತು [illegible] ಗಂಟೆಯಿಂದ [illegible] ರವರೆಗೆ ನೀರು ಬರುತ್ತಿತ್ತು ಈಗ [illegible] ದಿನಕ್ಕೆಲ್ಲಾ ಕೇವಲ ಮೂರು ಗಂಟೆ ಕಾಲ [illegible] ಸಂಬಂಧಪಟ್ಟವರು ಈ ಕಡೆ [illegible] ಅವಶ್ಯ [illegible]

ಕೇದಾರ-ಬದರಿ ಯಾತ್ರಾ ದರ್ಪಣ

ಸುಪ್ರಸಿದ್ಧ ಕೀರ್ತನಕಾರರೂ, ಗಮಕಿಗಳೂ ಆದ ವೇ|| ಬ್ರ|| ಹೆಚ್ ರಾಮಕೃಷ್ಣಶಾಸ್ತ್ರಿಗಳು ವಿರಚಿತವಾದ ಮೇಲ್ಕಂಡ ಶಿರೋನಾಮೆಯ ಪುಸ್ತಕವನ್ನು ನಾವು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ ನಗರದ ಪ್ರಮುಖ ವರ್ತಕರಾದ ಶ್ರೀ ಕೆ ಪುಟ್ಟಸ್ವಾಮಿರಾಯರು ಕುಟುಂಬ ಪರಿವಾರ ಸಮೇತರಾಗಿ ಕಳೆದ ವರ್ಷ ನಡೆಸಿದ ಬದರಿ ಕೇದಾರ ಯಾತ್ರೆಯಲ್ಲಿ ಅವರೊಡನೆ ಹೋಗಿದ್ದ ಶ್ರೀ ಗಮಕಿಯವರು ತಮ್ಮ ಅನುಭವವನ್ನು ಹೃದಯಂಗಮವಾಗಿ ವಿವರಿಸಿರುತ್ತಾರೆ ಸನಾತನ ಧರ್ಮಾವಲಂಬಿಗಳು ಕೈಗೊಳ್ಳುವ ಯಾತ್ರೆಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಕಠಿಣತರವೂ ಆಗಿರುವ ಈ ಯಾತ್ರೆಯನ್ನು ಮೇಲ್ಕಂಡ ಮಹನೀಯರುಗಳು ಶ್ರದ್ಧಾಭಕ್ತಿಯಿಂದ ಯಶಸ್ವಿಯಾಗಿ ನೆರವೇರಿಸಿರುವುದಲ್ಲದೆ ತಮ್ಮ ಸಂಪೂರ್ಣ ಅನುಭವಗಳನ್ನು ಆಸ್ತಿಕ ಮಹಾ ಜನರ ಮುಂದಿಟ್ಟಿರುವುದು ಪ್ರಶಂಸನೀಯವಾಗಿದೆ. ಯಾತ್ರೆಯ ಉದ್ದಕ್ಕೂ ದೊರೆಕುವ ವಿವಿಧ ಸ್ಥಳಗಳ ಪರಿಚಯವನ್ನಲ್ಲದೆ ಪ್ರವಾಸದ ಕಷ್ಟಸುಖಗಳನ್ನೂ ಸಹ ವರ್ಣಿಸಿರುತ್ತಾರೆ ಕೆಲವು ವರ್ಷಗಳ ಹಿಂದ ಅತ್ಯಂತ ಕಷ್ಟಸಾಧ್ಯವೆಂದು ಭಾವಿಸಲಾಗಿದ್ದ ಈ ಯಾತ್ರೆಗಳು ಆಧುನಿಕ ಸಂಚಾರ ಸೌಕರ್ಯಗಳಿಂದ ಸುಲಭ ಸಾಧ್ಯವಾಗಿರುವಲ್ಲಿ ಸಹಸ್ರಾರು ಜನರು ಯಾತ್ರೆಯನ್ನು ಕೈಗೊಳ್ಳುತ್ತಿರುವುದರಿಂದ ಇಂತಹ ಕೈಪಿಡಿಯು ಪ್ರಕಟಣೆಯು ಒಂದು ಮಹೋಪಕಾರವೇ ಸರಿ ಮೇಲ್ಕಂಡ ಕ್ಷೇತ್ರಗಳಿಗೆ ಹೋಗಿಬರುವವರು ಈ ಪುಸ್ತಕದ ಪ್ರತಿಯನ್ನು ಪಡೆದರೆ ಅದರ ಪೂರ್ಣ ಬೆಲೆಯು ದೊರೆತಂತೆ ಎಂಬುದಾಗಿ ಪ್ರಕಾಶಕರೂ, ಶ್ರೀ ಪುಟ್ಟಸ್ವಾಮಿರಾಯರ ಪುತ್ರರೂ ಆದ ಶ್ರೀ ಕೆ ಚಂದ್ರಶೇಖರಯ್ಯನವರು ಹೇಳಿರುವ ಮಾತುಗಳನ್ನೇ ನಾವು ಸಹ ಪ್ರತಿಧ್ವನಿಸುತ್ತೇವೆ

ಕಾಶಿ ಕರ್ನಾಟಕ ಸಂಘದ ವಾರ್ಷಿಕೋತ್ಸವ

ಸ್ವಂ ಸು] ಕಾಶಿ

ಇಲ್ಲಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಕಳೆದ ೩ನೇ ತಾರೀಕು ಶ್ರೀ ಬಿ ದಾಸಪ್ಪಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು ಮೈಸೂರಿನ ಶ್ರೀ ಟಿ ಸಿ ಶಾಂತರಾಜ್‌ರವರು ಬೀಳ್ಕೊಡುಗೆ ಭಾಷಣ ಮಾಡಿದರು ಶ್ರೀಮತಿಗಳಾದ [illegible] ದೇವಿ, ರತ್ನಮ್ಮ ಮತ್ತು ಲಕ್ಷ್ಮೀದೇವಿಯವರಿಂದ ಮೊದಲು ಪ್ರಾರ್ಥನೆಯಾದನಂತರ ಶ್ರೀ ವಿ ವಿ ಚೆಲ್ಲಂರವರು ಸ್ವಾಗತ ಭಾಷಣ ಮಾಡಿದರು ಅಧ್ಯಕ್ಷರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿನಿಯೋಗಿಸಿ ಭಾಷಣ ಮಾಡಿದರು ಹಿರಿಯ ವಿದ್ಯಾರ್ಥಿಗಳ ಪರವಾಗಿ ಹೆಚ್ ಎ ಐತಾಳ್‌ರವರ ಭಾಷಣವಾಯಿತು ಸಂಗೀತ, ಭಾವಗೀತೆ, "ಯಮನ ಸೋಲು" ಎಂಬ ಛಾಯಾ ರೂಪದ ನಾಟಕ ಮತ್ತು [illegible]ರೀಶ್ವರರು ಎಂಬ ನಾಟಕವು ಆದುವು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

ಮನೆ ಬಾಡಿಗೆಗಿದೆ

ಯಾದವಗಿರಿ ನೀರಿನ ಟ್ಯಾಂಕ್ ಸಮೀಪ ತಾರಸಿ ಮನೆ ಬಾಡಿಗೆಗಿದೆ ತಿಂಗಳಿಗೆ ರೂ [illegible] ದೀಪ, ನಲ್ಲಿ, ಫ್ಲಷ್ ಇದ್ದು, ಪುಟ್ಟ ಸಂಸಾರಕ್ಕೆ ಅನುಕೂಲವಾದುದು

ಮನೆ ಕ್ರಯಕ್ಕಿದೆ

ಕೆ ಆರ್ ವನಂ, 8 ಮತ್ತು 9ನೇ ನಂ [illegible] ರಸಿ ಮನೆ ಗೀಸ, ನಲ್ಲಿ ಇದೆ,

ಸೈಟುಗಳು ಬೇಕು

ನಿರಂಜನ ಗಾರ್ಡನ್ಸ್, ವಿದ್ಯಾರಣ್ಯಪುರ 6, 7, 8ನೇ ಕ್ರಾಸುಗಳಲ್ಲಿ

ಬಿ. ಎನ್. ಸುಬ್ಬರಾವ್

ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

Printed [illegible] Published [illegible] Sadhvi [illegible]
[illegible] Road, Mysore

ಟೆಲಿಫೋನ್ ನಂ 192



ಕಾಂಗ್ರೆಸ್ ಉಮೇದುವಾರರಿಗೇ
ದಯಮಾಡಿ ನಿಮ್ಮ ಓಟನ್ನು ಕೊಡಿರಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿಯೂ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : WEDNESDAY 13—2—1957 ಮೈಸೂರು . ಬುಧವಾರ ೧೩—೨—೧೯೫೭ : [ಸಂಚಿಕೆ : ೧೪೦

ಸಂಸ್ಥಾನದಲ್ಲಿ ಜವಾನರ ಗೃಹ ವಸತಿಗೆ ೩ ಕೋಟಿ ರೂ.

೩ ಕೋಟಿ ರೂ. ವೆಚ್ಚದಲ್ಲಿ ಜವಾನರುಗಳಿಗೆ ಗೃಹ ವಸತಿ

ಸಂಸ್ಥಾನ ಸರ್ಕಾರದ ತೀರ್ಮಾನ

ಸು ತಂತಿ] ಬೆಂಗಳೂರು ೧೨.

[illegible] ಕೋಟಿ ರೂ. ವೆಚ್ಚದ ಅಂದಾಜಿನ ನಾಲ್ಕನೇ ವರ್ಗದ ನೌಕರರಾದ ಜವಾನರುಗಳಿಗೆ ಗೃಹಗಳನ್ನು ನಿರ್ಮಾಣ ಮಾಡಲು ಸಂಸ್ಥಾನ ಸರ್ಕಾರದವರು ನಿರ್ಧರಿಸಿರುತ್ತಾರೆ. ಇದರಲ್ಲಿ ಅರ್ಧ ಭಾಗದ ವೆಚ್ಚವನ್ನು ತಾವು ವಹಿಸುವುದಾಗಿ ಕೇಂದ್ರ ಸರ್ಕಾರದವರು ಸೂಚಿಸಿರುತ್ತಾರೆ.

ವಿಶ್ವವಿದ್ಯಾಲಯ ಅಧ್ಯಾಪಕರ ಸಂಬಳದ ಬಗ್ಗೆ ಪರಿಶೀಲನೆ

ಇದೇ ತಿಂಗಳು ೧೬ನೇ ತಾರೀಖು ಮೈಸೂರಿನಲ್ಲಿ ಸೇರುವ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಉಪಾಧ್ಯಾಯರ ಸಂಬಳದ ಪುನರ್ವಿಮರ್ಶೆ ವಿಚಾರವನ್ನು ಪರಿಶೀಲಿಸಲಾಗುವುದು.

ಶ್ರೀನಿವಾಸಯ್ಯ ಇಂಜನಿಯರಿಂಗ್ ಕಾಲೇಜಿನ ಅಭಿವೃದ್ಧಿ

ಇಲ್ಲಿನ ಬಿ ಎಂ ಎಸ್ ಇಂಜನಿಯರಿಂಗ್ ಕಾಲೇಜಿನ ಅಭಿವೃದ್ಧಿ ಸಂಬಂಧವಾಗಿ ಭಾರತ ಮತ್ತು ಮೈಸೂರು ಸರ್ಕಾರಗಳಿಗೆ ನಡೆಯುತ್ತಿದ್ದ ಸಂಧಾನವು ಅಂತ್ಯಗೊಂಡಿದೆ. ಈ ಯೋಜನೆ ಪ್ರಕಾರ ವಿದ್ಯಾ ಸಂಸ್ಥೆಗೆ ೧೯ ಲಕ್ಷ ರೂ. ಸ [illegible] ಸ್ಟೆನ್ನೂ, ಆಡಳಿತ ಸಮಿತಿಯೊಂದನ್ನೂ ಏರ್ಪಡಿಸಲಾಗುವುದು. ಸಮಿತಿಯಲ್ಲಿ ದಕ್ಷಿಣ ಭಾರತ ಪ್ರಾದೇಶಿಕ ಶಿಕ್ಷಣ ಮಂಡಲಿ, ಭಾರತ ಮತ್ತು ಮೈಸೂರು ಸರ್ಕಾರಗಳ ಪ್ರತಿನಿಧಿಗಳು ಇರುವರು.

ಹಲಿ ಕರ್ನಾಟಕ ಸಂಘದ ಕಟ್ಟಡಕ್ಕೆ ಸೂರು ಸರ್ಕಾರದಿಂದ ೩೦,೦೦೦ ರೂ

ಹಲಿ ಕರ್ನಾಟಕ ಸಂಘದ ಕಟ್ಟಡಕ್ಕಾಗಿ ಸೂರು ಸರ್ಕಾರದವರು ೩೦,೦೦೦ ರೂ. ಸಹಾಯ ಮಾಡಿರುವರು. ೨ ಲಕ್ಷ ರೂ. ಅಂದಾಜಿನಲ್ಲಿ ಒಂದು ರಂಗ ಮಂದಿರ ಮತ್ತು ಕನ್ನಡಿಗರ ಮಕ್ಕಳಿಗಾಗಿ ಶಾಲಾ ಕಟ್ಟಡವ ನಿರ್ಮಿಸಬೇಕೆಂದು ಸಂಘದವರು ಆಲೋಚಿಸಿರುವರು.

ಭಾರತದ ಪ್ರಥಮ ವಿಮಾನ ವಾಹಕ ನೌಕೆ

ಭಾರತ ಸರ್ಕಾರದವರು ಬ್ರಿಟನ್ನಿನ ಹರ್ಕ್ಯುಲಿಸ್ ಎಂಬ ೧೩,೬೦೦ ಟನ್ನಿನ ವಿಮಾನ ವಾಹಕ ನೌಕೆಯನ್ನು ಕೊಳ್ಳಲಿದ್ದಾರೆ. ಇದು ಭಾರತದ ಪ್ರಥಮ ವಿಮಾನ ವಾಹಕ ನೌಕೆ. ಅದನ್ನು [illegible]

ಹರಿಕಥೆ

ಪ್ರಸಿದ್ಧ [illegible] ನಾಳೆ ಸಂಜೆ ೬-೩೦ ಗಂಟೆಗೆ [illegible] ನಾಳೆ ಸಂಜೆ [illegible] ನಿವಾಗಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಮೈಸೂರು ೧೨.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ ವೆಂಕಟಪ್ಪನವರು ಚುನಾವಣೆ ಪ್ರಚಾರ ಸಂಬಂಧವಾಗಿ ಈ ಮಧ್ಯಾಹ್ನ ಇಲ್ಲಿಗೆ ಆಗಮಿಸಿದರು. ಸಂಜೆ ೬-೩೦ ಗಂಟೆಗೆ ಅವರು ಟೌನ್ ಹಾಲ್ ಮೈದಾನದಲ್ಲಿ ಚುನಾವಣೆ ಪ್ರಚಾರದ ಆರಂಭೋತ್ಸವವನ್ನು ನೆರವೇರಿಸುವರು. ೮-೩೦ ಗಂಟೆಗೆ ಚಾಮುಂಡಿಪುರದ [illegible] ಬ್ಲಾಕಿನ ರಾಮ ಮಂದಿರದಲ್ಲಿ ಭಾಷಣ ಮಾಡಿ ರಾತ್ರಿ ನಂಜನಗೂಡಿಗೆ ತೆರಳುವರು. ನಾಳೆ ಬೆಳಿಗ್ಗೆ ಕೊಳ್ಳೇಗಾಲ, ಪಾಳ್ಯ, ಮಧ್ಯಾಹ್ನ ೪ ಗಂಟೆಗೆ ಚಾಮರಾಜನಗರ [illegible] ರಾತ್ರಿ [illegible] ಕೃಷ್ಣರಾಜನಗರಗಳಿಗೆ ಭೇಟಿ ಕೊಟ್ಟು ಭಾಷಣ ಮಾಡುವರು.

ಗದಾಯುದ್ಧವನ್ನು ಕುರಿತು ಭಾಷಣ

ಯುವರಾಜಾ ಕಾಲೇಜಿನ ಸೀನಿಯರ್ ಇಂಟರ್ [illegible] ತರಗತಿಯ ಸಂತೋಷ ಸಮಾರಂಭದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ಡಿ ಎಲ್ ನರಸಿಂಹಾಚಾರ್ಯರು "ಕವಿ ರನ್ನನ ಗದಾಯುದ್ಧ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಸ್ವಾಗತವಿದೆ.

ಮಹದೇಶ್ವರ ಬೆಟ್ಟದ ಜಾತ್ರೆಗೆ ಹೋಗುವವರಿಗೆ ಇನಾಕ್ಯುಲೇಷನ್

ಕೊಳ್ಳೇಗಾಲದ ತಾಲ್ಲೂಕು ಮಹದೇಶ್ವರ ಬೆಟ್ಟದಲ್ಲಿ, ಮಹಾ ಶಿವರಾತ್ರಿ ಸಂದರ್ಭದಲ್ಲಿ ಇದೇ ೨೮ ರಿಂದ ಆರು ದಿನಗಳು ನಡೆಯುವ ಜಾತ್ರೆ ಕಾಲದಲ್ಲಿ ಕಾಲರಾ ವ್ಯಾಧಿಯು ಹರಡುವ ಸಂಭವವಿರುವುದರಿಂದ ಅಲ್ಲಿಗೆ ಹೋಗುವವರು ಮಾರ್ಗಗಳಲ್ಲಿ ಏರ್ಪಡಿಸಲಾಗಿರುವ ಕೇಂದ್ರಗಳಲ್ಲಿ ಕಾಲರಾ ವಿರೋಧ ಇನಾಕ್ಯುಲೇಷನ್ ಮಾಡಿಸಿಕೊಂಡು, ಆ ಬಗ್ಗೆ ಸರ್ಟಿಫಿಕೇಟು ಪಡೆದಿರಬೇಕೆಂದೂ, ಆ ರೀತಿ ಸರ್ಟಿಫಿಕೇಟು ಪಡೆಯದವರನ್ನು ಟಗರಪುರದಿಂದ ಮುಂದಕ್ಕೆ ಜಾತ್ರೆ ನಡೆಯುವ ಪ್ರದೇಶಕ್ಕೆ ಬಿಡಲಾಗುವುದಿಲ್ಲವೆಂದೂ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳ ಪ್ರಕಟಣೆ ಹೊರಡಿಸಿರುತ್ತಾರೆ. ಇನಾಕ್ಯುಲೇಷನ್ನನ್ನು ಉಚಿತವಾಗಿ ಮಾಡುವ ಬಗ್ಗೆ ಏರ್ಪಾಡಾಗುತ್ತದೆಂದೂ ತಿಳಿಸಲಾಗಿದೆ.

ಡಾ|| ಸುಬ್ರಹ್ಮಣ್ಯನ್ನರ ರಾಗಮಾಲಿಕೆ ಗಾಯನ

ಅಮೇರಿಕದ ಸುಪ್ರಸಿದ್ಧ ರಾಗಮಾಲಿಕೆ ಗಾಯಕರಾದ ಡಾ|| ಡಾ|| ಸುಬ್ರಹ್ಮಣ್ಯನ್‌ರವರು ನೆನ್ನೆ ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸಿದರು. ಇಲ್ಲಿನ ರೋಟರಿ ಕ್ಲಬ್ಬಿನವರು [illegible] ಮಕ್ಕಳ ಪುಸ್ತಕ ಭಂಡಾರದ ಸಹಾಯಾರ್ಥವಾಗಿ ಇವರಿಂದ [illegible] ಶ್ರೀ ವಿ ಸುಬ್ರಹ್ಮಣ್ಯಂ ಅವರು ಅಧ್ಯಕ್ಷತೆ ವಹಿಸಿ ಡಾ|| ಸುಬ್ರಹ್ಮಣ್ಯಂ ಅವರನ್ನು [illegible] ಸಲ್ಲಿಸಿದರು.

ಮಧ್ಯ ಪೂರ್ವದಲ್ಲಿ ಇತರ ರಾಷ್ಟ್ರಗಳ ಕೈವಾಡ ಕೂಡದು

ಅಗ್ರ ರಾಷ್ಟ್ರಗಳಿಗೆ ರಷ್ಯದ ಕರೆ

ಮಧ್ಯಪೂರ್ವದಲ್ಲಿ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳು ತಮ್ಮ ಕೈವಾಡವನ್ನು ನಡೆಸಕೂಡದೆಂಬ ಜಂಟಿ ನೀತಿಯನ್ನು ಅವಲಂಬಿಸಬೇಕೆಂದು ರಷ್ಯದ ವಿದೇಶಾಂಗ ಮಂತ್ರಿ ಷೆಪಿಲಾವ್‌ರವರು ನೆನ್ನೆ ಪಶ್ಚಿಮ ರಾಷ್ಟ್ರಗಳ ರಾಯಭಾರಿಗಳಿಗೆ ಇತ್ತ ಪತ್ರಗಳಲ್ಲಿ ಸಲಹೆ ಮಾಡಿದ್ದಾರೆ. ಮಧ್ಯಪೂರ್ವದ ರಾಷ್ಟ್ರಗಳನ್ನು ಮಿಲಿಟರಿ ಕೂಟಗಳಿಗೆ ಸೇರಿಸುವ ಪ್ರಯತ್ನವನ್ನು ತಪ್ಪಿಸಬೇಕೆಂದೂ, ಎಲ್ಲಾ ಸಮಸ್ಯೆಗಳನ್ನೂ ಸಂಧಾನದ ಮೂಲಕವೇ ಇತ್ಯರ್ಥಪಡಿಸಬೇಕೆಂದೂ ಅವರು ಸೂಚಿಸಿದ್ದಾರೆ. ಮಧ್ಯಪೂರ್ವದಲ್ಲಿರುವ ವಿದೇಶೀ ನೆಲೆಗಳನ್ನು ವಿಸರ್ಜನೆ ಮಾಡಿ ಅಲ್ಲಿಂದ ಎಲ್ಲಾ ವಿದೇಶೀ ಸೈನ್ಯಗಳನ್ನು ವಾಪಸು ಕರೆಸಬೇಕೆಂದೂ, ಅಲ್ಲಿಗೆ ಶಸ್ತ್ರಾಸ್ತ್ರ ರವಾನೆ ನಿಲ್ಲಿಸಬೇಕೆಂದೂ ಷೆಪಿಲಾವ್ ತಿಳಿಸಿದ್ದಾರೆ. ಅಲ್ಲಿನ ರಾಷ್ಟ್ರಗಳಲ್ಲಿ ರಾಜಕೀಯ, ಮಿಲಿಟರಿ, ಅಥವಾ ಬೇರಾವ [illegible] ಇಲ್ಲದ [illegible] ಅಭಿವೃದ್ಧಿಯನ್ನು [illegible] ಸಬೇಕೆಂದೂ ತಿಳಿಸಲಾಗಿದೆ.

ಈಜಿಪ್ಟಿನ ಪ್ರದೇಶವನ್ನು ಇನ್ನೂ ಮುಂದೆಯೂ ಆಕ್ರಮಣ ಮಾಡಿಕೊಂಡಿರುವುದರ ಪರಿಣಾಮದ ಜವಾಬ್ದಾರಿಯು ಇಸ್ರೇಲಿನ ಮೇಲೆ ಬೀಳುವುದೆಂದು ಷೆಪಿಲಾವ್ ಎಚ್ಚರಿಸಿದ್ದಾರೆ.

ಕಾಶ್ಮೀರ ಶಾಸನ ಸಭೆಗೆ ೭೫ ಮಂದಿ ಸದಸ್ಯರು

ಕಾಶ್ಮೀರ ಶಾಸನ ಸಭೆಯಲ್ಲಿ ಒಟ್ಟು ೭೫ ಮಂದಿ ಸದಸ್ಯರಿರುವರೆಂದೂ, ಅಲ್ಲಿ ೭೧ ಏಕ ಸದಸ್ಯ ಮತ್ತು ನಾಲ್ಕು ದ್ವಿ ಸದಸ್ಯ ಕ್ಷೇತ್ರಗಳನ್ನು ಕಲ್ಪಿಸಲಾಗಿದೆಯೆಂದೂ ವರದಿಯಾಗಿದೆ. ಅಲ್ಲಿ ಮಹಾ ಚುನಾವಣೆಗಳನ್ನು ನಡೆಸುವ ಸಂಬಂಧದಲ್ಲಿ ಕ್ಷೇತ್ರಗಳ ವಿಂಗಡಣೆಯಾಗಿದೆ. ಜಮ್ಮುವಿನಲ್ಲಿ ೨೬ ಏಕ ಸದಸ್ಯ ಮತ್ತು ೪ ದ್ವಿ ಸದಸ್ಯ ಕ್ಷೇತ್ರಗಳೂ ಕಾಶ್ಮೀರ ಪ್ರಾಂತದಲ್ಲಿ ೪೩ ಮತ್ತು ಲಡಾಕ್ಕಿನಲ್ಲಿ ೨ ಏಕ ಸದಸ್ಯ ಕ್ಷೇತ್ರಗಳೂ ಇರುತ್ತವೆ.

ಪಾಕಿಸ್ತಾನದ ವಿದೇಶಾಂಗ ನೀತಿಗೆ ಸಂಪೂರ್ಣ ವಿರೋಧ

ಅವಾಮಿ ಲೀಗ್ ಅಧ್ಯಕ್ಷರ ವೀರ ಪ್ರತಿಜ್ಞೆ

ಪೂರ್ವ ಪಾಕಿಸ್ತಾನದ ಅವಾಮಿ ಲೀಗಿನ ಅಧ್ಯಕ್ಷ ಮೌಲಾನಾ ಭಾಷಾನಿಯವರು ನೆನ್ನೆ ಕಾಗ್ಮಾರಿ ಎಂಬಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡಿ, ಪಾಕಿಸ್ತಾನದ ಕೇಂದ್ರಾಂತರ ಪ್ರಜೆಗಳ [illegible] ಪಾಕಿಸ್ತಾನದ [illegible] ಮತ್ತು ಪೂರ್ವ ಪಾಕಿಸ್ತಾನದ [illegible] ಪಾಕಿಸ್ತಾನದ [illegible] ಪರಿಣಾಮವಾಗಿಯೆಂದೂ, [illegible] ಬಗ್ಗೆ ತಮ್ಮ [illegible] ಜನರು ಹೇಳಿದ್ದಾರೆ.

ಇಂಜನಿಯರಿಂಗ್ ವಿದ್ಯಾರ್ಥಿಗಳ ಸತ್ಯಾಗ್ರಹ

ಮೈಸೂರು ೧೨.

ನಗರದ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಮತ್ತು ಸಿ ಪಿ ಸಿ ವೃತ್ತಿ ಶಿಕ್ಷಣಾಲಯದ ಡಿಪ್ಲೊಮಾ ವಿದ್ಯಾರ್ಥಿಗಳು ನಾಳೆ ಬೆಳಿಗ್ಗೆ ಪೌರ ಸತ್ಯಾಗ್ರಹವನ್ನು ನಡೆಸುವರು. ಎಲ್ ಸಿ ಇ ಆದವರಿಗೆ ಇತರ ಸರ್ಕಾರಗಳು ಕೊಡುತ್ತಿರುವ ವೇತನವನ್ನೇ ಮೈಸೂರು ಸರ್ಕಾರದವರೂ ಇಲ್ಲಿನವರಿಗೆ ಕೊಡಬೇಕೆಂದೂ, ವಿದ್ಯಾರ್ಥಿಗಳಿಗಾಗಿ ಸಪ್ಲಿಮೆಂಟರಿ ಪರೀಕ್ಷೆಗಳನ್ನು ಜಾರಿಗೆ ತರಬೇಕೆಂದೂ, ಅವರು ಸರ್ಕಾರವನ್ನು ಒತ್ತಾಯ ಮಾಡುವ ಸಲುವಾಗಿ ನಾಳೆ ಬೆಳಿಗ್ಗೆ ನಗರದ ರಸ್ತೆಗಳಲ್ಲಿ ಮೆರವಣಿಗೆ ನಡೆಸುವರು.

ಇಸ್ರೇಲಿನ ಷರತ್ತಿಗೆ ಅಮೇರಿಕದ ಮನ್ನಣೆ

ಗಾಜಾ ಪ್ರದೇಶದಿಂದ ಇಸ್ರೇಲು ತನ್ನ ಸೈನಿಕರನ್ನು ಹಿಂದಕ್ಕೆ ಕರೆಸುವ ಸಂಬಂಧವಾಗಿ ವಿಶ್ವಸಂಸ್ಥೆಗೆ ಹಾಕಿರುವ ಷರತ್ತುಗಳ ಬಗ್ಗೆ ಅಮೇರಿಕದ ವಿದೇಶಾಂಗ ಮಂತ್ರಿ ಡಲೆಸ್‌ರವರು ಎರಡು ಅಂಶಗಳ ಹೊಸ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಅಕಾಬಾ ಖಾರಿಯಲ್ಲಿ ಸ್ವತಂತ್ರ ನೌಕಾ ಸಂಚಾರಕ್ಕೆ ಅಮೇರಿಕದ ಬೆಂಬಲದ ಬಹಿರಂಗ ಪ್ರಕಟಣೆ ಮತ್ತು ಗಾಜಾ ಪ್ರದೇಶದ ಮೂಲಕ ಈಜಿಪ್ಟ್ ಇಸ್ರೇಲಿನ ಮೇಲೆ ಧಾಳಿ ನಡೆಸದಿರಲು ಮಧ್ಯದಲ್ಲಿ ವಿಶ್ವಸಂಸ್ಥೆ ಸೈನ್ಯವನ್ನಿಡುವಂತೆ ಅಮೇರಿಕದ ಒತ್ತಾಯ - ಈ ವಿಚಾರಗಳು ಅದರಲ್ಲಿ ಅಡಕವಾಗಿವೆ.

ಸಂಸ್ಥಾನದಲ್ಲಿ ೪ ಸಕ್ಕರೆ ಮತ್ತು ನಾಲ್ಕು ಸಿಮೆಂಟ್ ಕಾರ್ಖಾನೆಗಳು

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಬಿಜಾಪುರ ಜಿಲ್ಲೆಯ ಗುಳೇದಗುಡ್ಡದ ಪೌರಸಭಾ ಸಮಾರಂಭದಲ್ಲಿ ನೆನ್ನೆ ಭಾಷಣ ಮಾಡುತ್ತಾ, ಸಂಸ್ಥಾನದಲ್ಲಿ ಇನ್ನೂ ಮೂರು, ನಾಲ್ಕು ಸಿಮೆಂಟ್ ಕಾರ್ಖಾನೆಗಳನ್ನೂ, ಅಷ್ಟೇ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳನ್ನೂ ಬೇಗನೆ ಸ್ಥಾಪಿಸಲಾಗುವುದೆಂದು ತಿಳಿಸಿದ್ದಾರೆ.

ಚುನಾವಣೆಯಿಂದ ವಾಪಸಾತಿ

ರಾಮನಗರದಿಂದ ವಿಧಾನ ಸಭೆಗೆ ಸ್ಪರ್ಧಿಸಿರುವವರ ಪೈಕಿ ಶ್ರೀ ಎಸ್ ಸಿ ದೇವಣಾಸಿದ್ದಪ್ಪನವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುತ್ತಾರೆ. ಹೊಳಲ್ಕೆರೆ ಕ್ಷೇತ್ರದಿಂದ ಸ್ವತಂತ್ರವಾದಿ ಉಮೇದುವಾರ ಡಾ. ಶ್ರೀ ವಿ. ಕೆ. [illegible]ಪ್ಪನವರೂ ಚುನಾವಣೆಯಿಂದ [illegible] ರಾಮನಗರ ಕ್ಷೇತ್ರದಲ್ಲಿ [illegible] ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರಿಗೂ ಮತ್ತು ಶ್ರೀ [illegible] ನೇರ ಸ್ಪರ್ಧೆ ಬಿದ್ದಿದೆ.

ದಕ್ಷಿಣ ಭಾರತ ಮುಸ್ಲಿಮರ ಸಮ್ಮೇಳನದ [illegible] ಸಮಿತಿಯು ನೆನ್ನೆ ಹೈದರಾಬಾದಿನಲ್ಲಿ ಸೇರಿ ಮಹಾ ಚುನಾವಣೆಗಳಲ್ಲಿ ಭಾರತದ ಮುಸ್ಲಿಮರು ಕಾಂಗ್ರೆಸ್ಸಿಗೆ ಬೆಂಬಲ ನೀಡುವಂತೆ ಸೂಚಿಸಿದೆ.

ಜನಸಾಮಾನ್ಯರು ಸಂಸ್ಕೃತವನ್ನು ಕಲಿಯುವಂತಾಗಬೇಕು

ತಿ. ನಂ. ಶ್ರೀಕಂಠಯ್ಯನವರ ಭಾಷಣ

ಮೈಸೂರು [illegible]

ವಿಶ್ವವಿದ್ಯಾನಿಲಯ [illegible] ಮಹಾರಾಜಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾದ ಶ್ರೀ ನಂ. ಶಿವರಾಮಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ [illegible] ಎಸ್. [illegible] ಪ್ರಾರ್ಥನೆಯಾದನಂತರ [illegible] ಎಸ್. ಎಂ. ಚಂದ್ರಶೇಖರ್ ಅವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಗಳಾದ ಶ್ರೀ [illegible] ಎಸ್. ಶಿವಶಂಕರಮೂರ್ತಿಯವರು ವಾರ್ಷಿಕ ವರದಿಯನ್ನು ಒಪ್ಪಿಸಿದರು.

ಅನಂತರ ಕನ್ನಡ ಪ್ರಾಧ್ಯಾಪಕ ಶ್ರೀ ತಿ. ನಂ. ಶ್ರೀಕಂಠಯ್ಯನವರು ಸಂಘದವರಿಂದ ಒರೆಯಲ್ಪಟ್ಟ ಕೈಬರಹದ "ಅಮೃತ [illegible]" ಎಂಬ ಗ್ರಂಥವನ್ನು ಉದ್ಘಾಟನ ಮಾಡಿದರು. ತರುವಾಯ ಶ್ರೀಯುತರು ಸಮಯೋಚಿತ ಭಾಷಣ ಮಾಡುತ್ತಾ ಸಂಸ್ಕೃತ ಭಾಷೆಯ ಮಹತ್ವವನ್ನು ಕೊಂಡಾಡಿ ಅದರ ಮೂಲಕ ಆಗುವ ಜ್ಞಾನಾರ್ಜನೆ, ಮನಃಪರಿಪಾಕ, ಆತ್ಮೋದ್ಧಾರ ಇವುಗಳನ್ನು ವಿವರಿಸಿದರು. ಸಂಸ್ಕೃತದ ಆಶ್ರಯವಿಲ್ಲದೆ ಕನ್ನಡ, ತೆಲುಗು ಮುಂತಾದ ಭಾಷೆಗಳು ಬೆಳೆಯುವುದಕ್ಕೆ ಆಗುವುದಿಲ್ಲವೆಂದರು. ಸಂಸ್ಕೃತಕ್ಕೆ ಬಂದಿರುವ "ಮೃತಭಾಷೆ" ಎಂಬ ಕಳಂಕ [illegible] ಹೋಗಬೇಕಾದರೆ ಸಾಮಾನ್ಯ ಜನರಿಗೆ ಬೇಕಾಗುವ ಭಾಷೆ ಎಷ್ಟು ಎಂಬುದನ್ನು ಗೊತ್ತುಮಾಡಿ ಅದನ್ನು ಕಲಿಯುವಂತೆ [illegible] ಹೇಳಿದರು.

ಶ್ರೀ ಶಿವರಾಮಶಾಸ್ತ್ರಿಗಳು ಮಾತನಾಡಿ, ಸಂಸ್ಕೃತ ವ್ಯಾಸಂಗ ಮಾಡುವವರು ಆ ಭಾಷೆಯ ವ್ಯಾಕರಣವನ್ನು ನೋಡಿ ಭಯಪಡಬೇಕಾಗಿಲ್ಲವೆಂದು ಹೇಳಿ ಯಾರ್ಯಾರ ಪಟ್ಟಿಕ್ಕೆ ಎಷ್ಟೆಷ್ಟು ಬೇಕೋ ಅಷ್ಟು ಮಾತ್ರ ಸಾಕೆಂದೂ ಹೇಳಿದರು.

ಶ್ರೀ ಶ್ರೀಕಂಠಮೂರ್ತಿ ವೃಂದದಿಂದ ಸಂಗೀತ [illegible] ಕುಮಾರಿಗಳಾದ ಕಮಲ ಮತ್ತು ಎಸ್. ಪಿ. ನಾಗರತ್ನರವರಿಂದ ಒಳ್ಳೆಯ ನೃತ್ಯವೂ ಇದ್ದಿತು. ಕಾರ್ಯದರ್ಶಿಗಳಾದ ಶ್ರೀ ನಾ. ರಾಮಮೂರ್ತಿಯವರು ವಂದನಾರ್ಪಣೆ ಮಾಡಿದರು.

೮ ರೂ. ಬಟ್ಟೆ ಕಳುವಿಗಾಗಿ ಕೈದಿಗೆ ೩ ವರ್ಷ ಸಜಾ

ಕಡೂರಿನಲ್ಲಿ ಎಂಟು ರೂಪಾಯಿ ಬೆಲೆಯ ಹಳೆಯ ರಗ್ಗು ಮತ್ತು ಒಂದು ಬೆಡ್‌ಶೀಟನ್ನು ಕಳುವು ಮಾಡಿದನೆಂದು ಕೆ. ಡಿ. ನರಸಿಂಹ ಎಂಬುವನಿಗೆ ಶಿವಮೊಗ್ಗದ ಸೆಷನ್ಸ್ ನ್ಯಾಯಾಧೀಶರು ೩ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ.

ನಾಯಕ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವ

ಮೈಸೂರು ೧೨

[illegible] ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ ಸಮಾರಂಭವು ನೆನ್ನೆ "ವಿದ್ಯಾಭವನ"ದಲ್ಲಿ ನಡೆಯಿತು. ಪೌರಸಭಾಧ್ಯಕ್ಷ ಶ್ರೀ ಎಸ್. [illegible] ಅವರು ಅಧ್ಯಕ್ಷತೆ ವಹಿಸಿದ್ದರು. [illegible] ಶಿಕ್ಷಣ [illegible] ವಿದ್ಯಾರ್ಥಿಗಳು [illegible] ಬೆಳೆಸಬೇಕೆಂದೂ, ಮಹಾತ್ಮಾ ಗಾಂಧಿ ಅವರ ಆದರ್ಶದಂತೆ ಅವರು ನಡೆದುಕೊಳ್ಳಬೇಕೆಂದೂ ಹೇಳಿದರು. ನಿಲಯದ ವಿದ್ಯಾರ್ಥಿಗಳಾದ ಶ್ರೀಗಳು ಬಾಲಕೃಷ್ಣ ಮತ್ತು ಭೀಮಯ್ಯನವರು ಕೃತಜ್ಞತೆ ಸೂಚಿಸಿದರು. ಮೊದಲು, ನಿಲಯದ ವಾರ್ಡನ್ ಆದ ಶ್ರೀ ಕೆ. ಹೆಚ್. ಚಲುವರಾಜುರವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಗಳಿಂದ ವಂದನಾರ್ಪಣೆಯಾಯಿತು.

ವಿಶ್ವವಿದ್ಯಾಲಯ ಪತ್ರಿಕೋದ್ಯಮ

ಸಂಘದ ಮುಕ್ತಾಯ ಭಾಷಣ

ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದ ಮುಕ್ತಾಯ ಭಾಷಣವನ್ನು ನಾಳೆ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ, ಮಂಡ್ಯದ ಜನಮನ ಪತ್ರಿಕಾ ಸಂಪಾದಕರಾದ ಶ್ರೀ ಕೆ. ವಿ. ಶಂಕರೇಗೌಡರು ಮಾಡುವರು. ಸಂಘದ ಅಧ್ಯಕ್ಷ [illegible] ಅಧ್ಯಕ್ಷತೆ ವಹಿಸುವರು [illegible]

ಫ್ರಾನ್ಸಿನಲ್ಲೂ ಅಣು ಬಾಂಬು ತಯಾರಿ

[illegible]

ಮೈಸೂರು [illegible]

[illegible]

[illegible]

ಟೆಂಡರ್ ನೋಟೀಸ್

ಮೈಸೂರು [illegible] 1957ನೇ ಫೆಬ್ರವರಿ 16ನೇ ತಾರೀಖು ಶನಿವಾರ ಬೆಳಿಗ್ಗೆ 11 ಗಂಟೆಯವರೆಗೆ ಸ್ವೀಕರಿಸಲಾಗುವುದೆಂದು ಈ ಮೂಲಕ ಪ್ರಕಟಿಸಲಾಗಿದೆ. ಈ ಬಗ್ಗೆ ಕಂಟ್ರಾಕ್ಟು 1957ನೇ ಏಪ್ರಿಲ್ 1ರಿಂದ 1958ನೇ ಮಾರ್ಚಿ 31ರವರೆಗೆ ಒಂದು ವರ್ಷ ಕಾಲ ಜಾರಿಯಲ್ಲಿರತಕ್ಕದ್ದು.

ಕಂಟ್ರಾಕ್ಟಿನ ಬಗ್ಗೆ ವಿವರಗಳು ಮತ್ತು ಇತರ ಷರತ್ತುಗಳನ್ನು [illegible] ಮೈಸೂರಿನಲ್ಲಿರುವ ಸರ್ಕಾರಿ ಉದ್ಯಾನಗಳು ಮತ್ತು ತೋಟಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮತ್ತು ಮೈಸೂರು ಪ್ರಾಣಿ ಸಂಗ್ರಹಾಲಯದ ಕ್ಯುರೇಟರ್ [illegible] ಕೆಲಸದ ದಿನಗಳಲ್ಲಿ ಬೆಳಿಗ್ಗೆ 11 ರಿಂದ ಸಂಜೆ 5 ಗಂಟೆಯೊಳಗೆ ಪಡೆಯಬಹುದು.

ಎಂ. ಹೆಚ್. ಮರಿಗೌಡ,
ಸೂಪರಿಂಟೆಂಡೆಂಟ್

Edited, Printed and Published by
R. Nagarajan at Sadhvi Press,
Subbiah Road, Mysore

ರಷ್ಯದಲ್ಲಿ ಎರಡು ಹೊಸ ಪ್ರಾಂತಗಳ ಉದಯ

ರಷ್ಯನ್ ಸುಪ್ರೀಂ ಸೋವಿಯಟ್ ಸಭೆಯು [illegible] ಮತ್ತು [illegible] ಪ್ರದೇಶಗಳಲ್ಲಿ ಎರಡು ಹೊಸ ಪ್ರಾಂತಗಳನ್ನು ನಿರ್ಮಿಸಲು ನಿರ್ಧರಿಸಿತು. ಯುದ್ಧ ಕಾಲದಲ್ಲಿ ಆ ಪ್ರದೇಶದಿಂದ ಹೊರಕ್ಕೆ ಕಳುಹಲಾಗಿದ್ದ ಜನರನ್ನು ಅಲ್ಲಿಗೆ ಪುನಃ ಕರೆತರಲಾಗುವುದು. ರಷ್ಯಾ ದೇಶದ ಪ್ರಾಂತಗಳಿಗೆ ಹೆಚ್ಚಿನ [illegible], ನ್ಯಾಯಾಂಗ ಅಧಿಕಾರವನ್ನು ನೀಡುವ ಸೂಚನೆಯನ್ನು ಸಭೆಯು ಅಂಗೀಕರಿಸಿತು. ಅಲ್ಲಿ ವಿಶೇಷ ನ್ಯಾಯಾಲಯಗಳು ಮುಂದೆ ರದ್ದಾಗುವುವು.

ಅಲೆಕ್ಸಾಂಡ್ರಿಯದಲ್ಲಿ ಗೂಢಚಾರರ ಪತ್ತೆ

ಅಲೆಕ್ಸಾಂಡ್ರಿಯದ ಫ್ರೀಮೇಸನ್ನುಗಳ ಸಂಘದಲ್ಲಿ ಗುಪ್ತಚಾರರ ಗುಂಪೊಂದು [illegible]ದೆಂದು ಈಜಿಪ್ಟಿನ ಅಧಿಕಾರಿಗಳು ಹೇಳಿರುತ್ತಾರೆ. ಬ್ರಿಟಿಷ್ ಮತ್ತು ಇಸ್ರೇಲಿನವರೊಡನೆ ಅವರುಗಳು ಗೂಢಚರ್ಯೆಗೆ ಸಂಬಂಧಪಟ್ಟ ವ್ಯವಹಾರಗಳನ್ನಿಟ್ಟುಕೊಂಡಿದ್ದರೆಂಬುದು ಅಲ್ಲಿ ದೊರೆತ ಕಾಗದಪತ್ರಗಳಿಂದ ಗೊತ್ತಾಗಿರುವುದಾಗಿಯೂ ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮುತ್ತು						
ಕೊಯಮುತ್ತೂರು	೩೮	೬	೦	೪೨	೬	೦
ರಸಬಾಳೆ	೩೮	೩	೦	೪೨	೧೦	೦
ಕಡ್ಲೆ	೩೭	೧೪	೦	೪೨	೪	೦
[illegible] ಸಣ್ಣ	೩೮	೬	೦			
ರಾಗಿ	೨೯	೪	೦	೪೬	೦	೦
ಕಂಬು	೪೦	೦	೦			
ಕಡಲೆಕಾಯಿ	೧೭	೩	೦	೩೪	೩	೦
ಹುಚ್ಚೆಳ್ಳು	೪೯	೪	೦	೪೪	೮	೦
ಹರಳುಬೀಜ	೪೩	೦	೦	೪೪	೦	೦
ಹೊನ್ನೆಬೀಜ	೧೮	೮	೦	೩೪	೧೨	೦
ತೊಗರಿ	೨೭	೮	೦	೨೯	೧೨	೦
ಹೆಸರು	೫೭	೧೦	೦			
ಕಲಸಂದೆ	೪೮	೧೪	೦	೫೩	೦	೦
ಅವರೆ	೪೦	೬	೦	೪೨	೩	೦
ಧನಿಯ	೨೫	೧೨	೦	೨೭	೧೨	೦
ಕಡಲೆ	೪೭	೩	೦	೪೮	೪	೦
[illegible] ಬೀಜ	೪೭	೦	೦	೪೪	೧೦	೦
ಹುಣಸೆಬೀಜ	೬	೧೨	೦	೬	೧೪	೦
ಹುಣಸೇಹಣ್ಣು	೩	೮	೦	೫	೩	೦
ಸೀಗೆಕಾಯಿ	೬	೦	೦	೭	೧	೦
ಮೆಣಸಿನಕಾಯಿ	೧೭	೧೨	೦	೨೭	೬	೦

PRE-UNIVERSITY COURSE

For the benefit of students who wish to join the Jr. Inter classes in July 57, A SPECIAL COURSE of 4½ months has been started.

Subj:— ENGLISH & P. C. M.

Excellent Tuition-Expert Teachers

CITY TUTORIAL COLLEGE

Old Agrahar, Mysore

Summer Classes in Full Swing

ರೇಷ್ಮೆ ಕೈಗಾರಿಕೆ ಅಭಿವೃದ್ಧಿಗಾ ಸಂಸ್ಥಾನಕ್ಕೆ ೯,೦೦೦ ರೂ.

ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ೯,೦೦೦ ರೂ ಗಳನ್ನು ಮಂಜೂರು ಮಾಡಿರುತ್ತಾರೆ. ಮಗ್ಗಗಳನ್ನು ಶೇಖರಿಸಿ, ಬಾಡಿಗೆಗೆ ಕೊಡುವುದಕ್ಕಾಗಿ ೬,೦೦೦ ರೂ. ಗಳನ್ನೂ, ಸರ್ಕಾರದ ರೇಷ್ಮೆ ಇಲಾಖೆಯವರು ಅಂಕಿಅಂಶಗಳ ಭಾಗವನ್ನು ಮುಂದುವರಿಸುವುದಕ್ಕಾಗಿ ೩,೧೫೦ ರೂ ಗಳನ್ನೂ ಕೊಡಲಾಗಿದೆ.

ಸ್ವದೇಶೀ ಸಾಬೂನುಗಳ ಮೇಲ ಗುರುತು

ವಿದೇಶೀ ಸಾಬೂನು ಸಂಸ್ಥೆಗಳ ಸ್ಪರ್ಧೆಯನ್ನು ಎದುರಿಸಲು ಭಾರತೀಯ ಸಾಬೂನು ತಯಾರಿಕಾ ಕಂಪೆನಿಗಳು ತಮ್ಮ ಪದಾರ್ಥಗಳ ಮೇಲೆ ಸ್ವದೇಶೀ ಎಂದು ಗುರುತು ಇರುವ [illegible]ಕರನ್ನು ಹಾಕಬೇಕೆಂದು ಇಲ್ಲಿನ ತಯಾರಿ[illegible]ಗಾರರ ಸಂಘವು ನಿರ್ಧರಿಸಿದೆ.

ಆಹಾರ ಸಂಶೋಧನಾಲಯ ಸಂಘದ ವಾರ್ಷಿಕ ದಿನಾಚರಣೆ

ನಗರದಲ್ಲಿರುವ ಆಹಾರ ಸಂಶೋಧನಾಲಯ ಸಂಘದ ವಾರ್ಷಿಕ ದಿನೋತ್ಸವವನ್ನು ನಾಳೆ ಸಂಜೆ ೫॥ ಗಂಟೆಗೆ ನೆರವೇರಿಸಲಾಗುವುದು. ವೈಸ್ ಛಾನ್ಸೆಲರ್ ಡಾ॥ ಕೆ. ವಿ. ಪುಟ್ಟಪ್ಪನವರು ಅಧ್ಯಕ್ಷತೆ ವಹಿಸುವರು. ಕುಮಾರಿ ಪ್ರಿಯಂವ ಮತ್ತು ಪಾರ್ಟಿಯವರ ನೃತ್ಯವನ್ನೂ ಏರ್ಪಡಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫೫ ಕೊಳಲು. ೭-೧೫ ಬಿ. ವಿ. ರಾಮಚಂದ್ರಶಾಸ್ತ್ರಿ-ದೇವರ ನಾಮಗಳು ೭-೩೦ ಮತ್ತು ೮-೧೫ ಎಚ್. ಎ. ಬಳಿಗಿರಿರಂಗಾಚಾರ್-ಕಾವ್ಯ ವಾಚನ. ಮಧ್ಯಾಹ್ನ ೧೨ ಬಿ. ವಿ. ರಾಮಚಂದ್ರಶಾಸ್ತ್ರಿ ಗಾಯನ ೧೨-೩೦ ಮತ್ತು ರಾತ್ರಿ ೯ ಎಚ್. ಟಿ. ವೆಂಕಟರಾಮಯ್ಯ-ಪಿಟೀಲು. ೧ ಮತ್ತು ಸಂಜೆ ೫-೩೦ [illegible]-ಹಾರ್ಮೋನಿಕ. ೧-೫೦ ಕೊಳಲು. ೨ ಸಂಗೀತ ೬-೫೫ ಸಂಗೀತ ೬-೫೦ ಜನಪದ ಗೀತೆಗಳು. ೭-೩೦ ಗ್ರಾಮಸ್ಥರಿಗಾಗಿ ೭-೪೫ ತಾಳವಾದ್ಯ ಕಚೇರಿ. ೮-೩೦ ನಿಮ್ಮ ಮೆಚ್ಚಿನ ಗೀತೆಗಳು ೯-೧೫ ನವ ಮೈಸೂರು-ಹೈದರಾಬಾದು ಕರ್ನಾಟಕ. ೯-೩೦ ಒರಿಯ ನಾಟಕ ಕನ್ನಡ ರೂಪಕ "ಇದೇ ನನ್ನ ಶಕ್ತಿ" ೧೦-೧೫ [illegible]-ರಿಕಾರ್ಡುಗಳು.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಸಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd. 1911)

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ

ಲಿಮಿಟೆಡ್, ಮೈಸೂರು

ಈ ಸೊಸೈಟಿಯು ಸ್ಥಾಪಿತವಾಗಿ ಇವತ್ತಿಗೆ 25 ವರ್ಷಗಳಾದುವು. ಈ ಸೊಸೈಟಿಯ ಸ್ಥಾಪನೆ ಮತ್ತು ಬೆಳವಣಿಗೆಗಾಗಿ ಇದುವರೆವಿಗೂ ನಾನಾ ವಿಧಗಳಲ್ಲಿ ಸಹಕರಿಸಿದ ಸೊಸೈಟಿಯ ಎಲ್ಲಾ ಮೆಂಬರುಗಳಿಗೂ, ಡಿಪಾಜಿಟ್‌ದಾರರಿಗೂ, ನೌಕರ ವರ್ಗದವರಿಗೂ, ಹಿತೈಷಿಗಳಿಗೂ, ಸರ್ಕಾರದವರಿಗೂ ಮತ್ತು ಸಹಕಾರ ಇಲಾಖೆಯವರಿಗೂ ಸೊಸೈಟಿಯ ಪರವಾಗಿ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿ ಮುಂದೆಯೂ ಇವರುಗಳು ಮತ್ತು ಇತರರು ಸೊಸೈಟಿಯ ಪ್ರಗತಿಗೆ ಅತ್ಯೋತ್ಸಾಹದಿಂದ ಸಹಕಾರ ನೀಡಬೇಕೆಂದು [illegible]

ಮೈಸೂರು,
[illegible]

ಮ್ಯಾನೇಜಿಂಗ್ ಕಮಿಟಿ ಪರವಾಗಿ,
ಬಿ. ಗೋಪಾಲಕೃಷ್ಣಶೆಟ್ಟಿ,
ಅಧ್ಯಕ್ಷರು.



SRI GAYATHRI TALKIES ✶ From 14-2-57 : For 3 days
Walt Disney's, a fabulous thrilling story
ANIMAL WORLD | DAVY CROCKETT
Morning Shows on Sat. & Sun.
Beasts from 20,000 Fathoms

ಟೆಲಿಫೋನ್ ನಂ. 792



ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ನಿಮ್ಮ ಓಟನ್ನು ಕೊಡಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರುಗಳು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀ[illegible] ಬೀದಿ,
ಬೆಂಗಳೂರು-2

[ಸಂಪುಟ : ೧೫] SADHVI : THURSDAY 14—2—1957 ಮೈಸೂರು : ಗುರುವಾರ ೧೪—೨—೧೯೫೭ : [ಸಂಚಿಕೆ : ೧೪೪

ಕಾಶ್ಮೀರದ ಪ್ರಶ್ನೆ ಬಗ್ಗೆ ಸ್ವೀಡನ್ನಿನ ಪ್ರತಿನಿಧಿ ಮಧ್ಯಸ್ತಿಕೆ?

ಕಾಂಗ್ರೆಸ್ ಚುನಾವಣಾ ಪ್ರಚಾರದ ಆರಂಭೋತ್ಸವ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ವೆಂಕಟಪ್ಪನವರ ಭಾಷಣ

ಮೈಸೂರು ೧೪

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎ ವೆಂಕಟಪ್ಪನವರು ನೆನ್ನೆ ಟೌನ್ ಹಾಲ್ ಮೈದಾನದಲ್ಲಿ ಸೇರಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡಿ ಮುಂದೆ ಬರಲಿರುವ ಚುನಾವಣೆಗಳ ಪ್ರಚಾರದ ಆರಂಭೋತ್ಸವವನ್ನು ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ, ದೇಶದ ಸ್ವಾತಂತ್ರ್ಯ ಸಾಧನೆಗಾಗಿ ಕಾಂಗ್ರೆಸ್ ಸಂಸ್ಥೆಯು ಮಾಡಿದ ತ್ಯಾಗ ಮತ್ತು ಬಲಿದಾನಗಳನ್ನೂ, ಸ್ವಾತಂತ್ರ್ಯಾನಂತರ ರಾಷ್ಟ್ರದ ಪುನರ್ರಚನೆ ಮತ್ತು ನಿರಾಶ್ರಿತರ ಪುನರ್ವಸತಿ, ಪಂಚವಾರ್ಷಿಕ ಯೋಜನೆ ಮುಂತಾದ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿರುವ ವಿಚಾರಗಳನ್ನೂ ವಿಶದವಾಗಿ ವಿವರಿಸಿದರು. ಮಹಾತ್ಮಾ ಗಾಂಧಿಯವರ ಉನ್ನತ ಆದರ್ಶದಂತೆ ಪ್ರಧಾನಿ ನೆಹರೂರವರ ನಾಯಕತ್ವದಲ್ಲಿ ರಾಷ್ಟ್ರಸೇವೆ ಮಾಡುತ್ತಿರುವ ಕಾಂಗ್ರೆಸ್ ಸಂಸ್ಥೆಗೆ ಚುನಾವಣೆಯಲ್ಲಿ ಸಕಲರೂ ಬೆಂಬಲ ನೀಡಿ ಕೈಗೊಳ್ಳಲಾಗಿರುವ ಮಹತ್ಕಾರ್ಯಗಳು ಸಾಂಗವಾಗಿ ನೆರವೇರಲು ಸಹಕರಿಸಬೇಕೆಂದು ಕೋರಿದರು. ಪ್ರಸ್ತುತ ಅಂತರ ರಾಷ್ಟ್ರೀಯ ರಂಗದಲ್ಲಿ ಎಲ್ಲರ ಮನಸ್ಸನ್ನೂ ಆಕರ್ಷಿಸಿರುವ ಕಾಶ್ಮೀರದ ಸಮಸ್ಯೆಯಲ್ಲಿ ಪ್ರಧಾನಿ ನೆಹರೂರವರು ಅನುಸರಿಸುತ್ತಿರುವ ನೀತಿಗೆ ಸಂಪೂರ್ಣ ಬೆಂಬಲ ತೋರಲು ಈ ಚುನಾವಣೆಗಳು ಸುಸಮಯವಾಗಿರುವುದೆಂದು ಅವರು ನುಡಿದು, ಕಾಂಗ್ರೆಸ್ ಉಮೇದುವಾರರೆಲ್ಲರೂ ಜಯಶಾಲಿಗಳಾಗುವಂತೆ ಮಾಡಬೇಕೆಂದು ಮನವಿ ಮಾಡಿದರು

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ಚನ್ನಯ್ಯನವರು ತಮ್ಮ ಭಾಷಣದಲ್ಲಿ, ಎಷ್ಟೇ ಬಿನ್ನಾಭಿಪ್ರಾಯಗಳಿದ್ದರೂ ಮಹಾ ಜನರು ತಪ್ಪುಗಳೆಲ್ಲವನ್ನೂ ಬದಿಗೊತ್ತಿ ಮೈಸೂರು ನಗರವು ಯಾವಾಗಲೂ ಕಾಂಗ್ರೆಸ್ಸಿಗೆ ಬೆಂಬಲವಾಗಿದೆಯೆಂಬ ಖ್ಯಾತಿಯನ್ನು ಕಾಪಾಡಬೇಕೆಂದು ಕೋರಿದರು.

ಮೊದಲು ವಿ|| ಪಿ.ಪಿ. ಶಂಕರರಾಯರು ರಾಷ್ಟ್ರೀಯ ಯೋಜನೆಗಳ ಮೇಲಿನ ಲಾವಣಿಯನ್ನು ಮಾಧುರ್ಯವಾಗಿ ಹಾಡಿದರು. ಶ್ರೀ ಬಿ ನಾರಾಯಣಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು

ನಂಜನಗೂಡಿನ ಟೆನ್ನಿಸ್ ಕ್ಲಬ್ ಮೈದಾನದಲ್ಲಿ ಅಧ್ಯಕ್ಷ ಶ್ರೀ ವೆಂಕಟಪ್ಪನವರು ನಿನ್ನೆ ರಾತ್ರಿ ಕಾಂಗ್ರೆಸ್ ಚುನಾವಣಾ ಪ್ರಚಾರ ಭಾಷಣ ಮಾಡಿ, ದೇಶದ ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗೆ ಮತ ನೀಡಬೇಕಾದ ಅವಶ್ಯಕತೆಯನ್ನು ತಿಳಿಸಿ ಹೇಳಿದರು. ಶ್ರೀಗಳಾದ ಡಿ. ಎಂ. ಸಿದ್ಧ[illegible] ಅಧ್ಯಕ್ಷರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ಜ|| ಮಹಮದ್ ಷರೀಫ್[illegible] ವಂದನಾರ್ಪಣೆ ಮಾಡಿದರು.

ಇಂದು ಬೆಳಿಗ್ಗೆ ೭|| ಗಂಟೆಗೆ ಶ್ರೀ ವೆಂಕಟಪ್ಪನವರು ಕೊಳ್ಳೇಗಾಲಕ್ಕೆ ತೆರಳಿದರು.

ಈ ಬೆಳಿಗ್ಗೆ ಪುತ್ತಿಗೆ ಶ್ರೀಗಳವರು ಪರಂಧಾಮವನ್ನೈದಿದರು

ಕೃಷ್ಣ ದೇವಾಲಯದ ಹಿಂದೆ ಬೃಂದಾವನದ ನಿರ್ಮಾಣ

ಸ್ವಂ. ಸು. ತಂತಿ] ಉಡುಪಿ ೧೪

ಇಲ್ಲಿನ ಪುತ್ತಿಗೆ ಮಠದ ಹಿರಿಯ ಸ್ವಾಮಿಗಳಾದ ಶ್ರೀ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರು ಈ ಮುಂಜಾನೆ ತಮ್ಮ ಇಹಲೋಕ ವ್ಯಾಪಾರವನ್ನು ತ್ಯಜಿಸಿ ಪರಂಧಾಮವನ್ನೈದಿದರು. ಅವರಿಗೆ ೧೦೧ ವರ್ಷ ವಯಸ್ಸಾಗಿತ್ತು. ಅವರ ದೇಹವನ್ನು ಮಧ್ವ ಸರೋವರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಸ್ನಾನ ಮಾಡಿಸಿ, ದೇವಸ್ಥಾನದ ಸುತ್ತಲೂ ಮೆರವಣಿಗೆ ಮಾಡಲಾಯಿತು. ಇತರ ಮಠಗಳ ಸ್ವಾಮಿಗಳೂ, ಶಿಷ್ಯರೂ ಭಾಗವಹಿಸಿದ್ದರು. ಶ್ರೀ ಕೃಷ್ಣದೇವಾಲಯದ ಹಿಂಭಾಗದಲ್ಲಿ ಕಳೇಬರದ ಮೇಲೆ ಬೃಂದಾವನವನ್ನು ನಿರ್ಮಿಸಲಾಯಿತು. ದೀರ್ಘ ಜೀವಿಗಳ ಪೈಕಿ ಶ್ರೀ ವಾದಿರಾಜಸ್ವಾಮಿಗಳನಂತರ ಇವರೂ ಒಬ್ಬರು. ಅವರು ಆಧುನಿಕ ಕಾಲದ ಮಹರ್ಷಿಗಳಂತೆ ವಿರಾಜಿಸುತ್ತಿದ್ದರು

ನಾಳೆಯಿಂದ ಚಿಕ್ಕಮಗಳೂರು ಗ್ರಾಮಾಧಿಕಾರಿಗಳ ಮುಷ್ಕರ

ಸಂಸ್ಥಾನದ ಗ್ರಾಮಾಧಿಕಾರಿಗಳ ಬೇಡಿಕೆ ಬಗ್ಗೆ ಮುಖ್ಯ ಮಂತ್ರಿಯವರೊಡನೆ ನಡೆಸಿದ ಮಾತುಕತೆಗಳು ವಿಫಲಗೊಂಡ ಪರಿಣಾಮವಾಗಿ ಗ್ರಾಮಾಧಿಕಾರಿಗಳ ಸಂಘದ ಕ್ರಿಯಾ ಸಮಿತಿಯವರು ನಾಳೆಯಿಂದ ಮುಷ್ಕರ ನಡೆಸಬೇಕೆಂದು ಇತ್ತಿರುವ ಸೂಚನೆಯನ್ನನುಸರಿಸಿ ಚಿಕ್ಕಮಗಳೂರು ಜಿಲ್ಲಾ ಶಾಖಾ ಸದಸ್ಯರು ಮುಷ್ಕರ ನಡೆಸುವರು. ಅವರೆಲ್ಲರೂ ಕೆಲಸವನ್ನು ಮಾಡದೆ ನಿಲ್ಲಿಸುವರೆಂದು ಹೇಳಲಾಗಿದೆ.

ನಡು ರಸ್ತೆಯಲ್ಲಿ ದರೋಡೆಗಾಗಿ ಮೂವರಿಗೆ ಸಜಾ

ಬೆಂಗಳೂರು ನಗರ ನ್ಯಾಯಾಧೀಶ ಶ್ರೀ ಎ. ಪಂಚಾಕ್ಷರಯ್ಯನವರು ಎ. ಜೆ. ಕುಮಾರ್, ನಜೀರ್ ಅಹಮದ್ ಮತ್ತು ಒಬ್ಬ ಹೆಂಗಸಿನ ಮೇಲಿನ ಮೊಕದ್ದಮೆಯಲ್ಲಿ ತೀರ್ಪಿತ್ತು ಮೊದಲಿನ ಇಬ್ಬರಿಗೂ ೩ ವರ್ಷ ಮತ್ತು ಮಹಿಳೆಗೆ ೬ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ. ಮಹಿಳೆಯು ಕಳೆದ ಡಿಸೆಂಬರ್ ೮ ರಂದು ರಾತ್ರಿ ರಸ್ತೆಯಲ್ಲಿ ಹೋಗುತ್ತಿದ್ದ ಗುಮಾಸ್ತ ಶ್ರೀ ರೇವಣಸಿದ್ದಯ್ಯ ಎಂಬುವರನ್ನು ತಡೆದು ಅವರಿಂದ ದುಡ್ಡು ವಸೂಲಿಗೆ ಪ್ರಯತ್ನಿಸಿದಳೆಂದೂ, ನಂತರ ಒಬ್ಬನು ಅಲ್ಲಿಗೆ ಬಂದು ಗುಮಾಸ್ತನನ್ನು ಹಿಡಿದು ಸಿಳ್ಳುಹಾಕಲು ಇನ್ನೂ ಇಬ್ಬರು ಬಂದು ಗುಮಾಸ್ತನ ಬಳಿ ಇದ್ದ ಪೆನ್ನು, ಹಣದ ಚೀಲ ಮತ್ತು ಕೈ ಗಡಿಯಾರವನ್ನು ಅಪಹರಿಸಿಕೊಂಡು ಹೋದರೆಂದೂ ಆಪಾದಿಸಲಾಗಿತ್ತು. ಪುಂಡರನ್ನು ಉಗ್ರವಾಗಿ ಶಿಕ್ಷಿಸಬೇಕೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿರುತ್ತಾರೆ.

ನಿಧನ

ಕಳೆದ ೨೦ ವರ್ಷಗಳಿಂದಲೂ ತಾಂಡವಪುರದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಶ್ರೀ ಮಲ್ಲಪ್ಪನವರು ನೆನ್ನೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕಾಶ್ಮೀರದ ಬಗ್ಗೆ ಭಾರತ-ಪಾಕಿಸ್ತಾನಗಳ ನಡುವೆ ಸ್ವೀಡನ್ನಿನ ಸಂಧಾನ?

ಭದ್ರತಾ ಸಮಿತಿಗೆ ಬ್ರಿಟನ್ನಿನ ನಿರ್ಣಯ

ಕಾಶ್ಮೀರದ ವಿಷಯವಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಮಧ್ಯಸ್ತಿಕೆ ನಡೆಸಲು ಭದ್ರತಾ ಸಮಿತಿಯ ಈಗಿನ ಅಧ್ಯಕ್ಷರಾಗಿರುವ ಸ್ವೀಡನ್ನಿನ ಪ್ರತಿನಿಧಿ ಗುನಾರ್ ಜಾರಿಂಗ್‌ರವರು ಭಾರತ ಮತ್ತು ಪಾಕಿಸ್ತಾನಗಳಿಗೆ ಭೇಟಿ ಕೊಡುವ ವಿಷಯವು ಬ್ರಿಟಿಷ್ ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ವರದಿಯಾಗಿದೆ. ಈ ಬಗ್ಗೆ ನಿರ್ಧಾರವನ್ನೇನೂ ಮಾಡಿಲ್ಲ. ಈ ದಿನ ಸೇರಲಿರುವ ಭದ್ರತಾ ಸಮಿತಿಯ ಸಭೆಯಲ್ಲಿ, ಈ ಪ್ರಶ್ನೆ ಬಗ್ಗೆ ಮುಖ್ಯ ಪಾತ್ರ ವಹಿಸುತ್ತಿರುವ ಬ್ರಿಟನ್ನಿನ ಪ್ರತಿನಿಧಿಗಳು ನಿರ್ಣಯವೊಂದನ್ನು ತರುವರು. ಎರಡು ರಾಷ್ಟ್ರಗಳೊಡನೆ ಸಂಧಾನವನ್ನು ಸಮಿತಿ ಅಧ್ಯಕ್ಷರು ನಡೆಸಬೇಕೆಂದೂ, ಉಭಯರೂ ಅದರಲ್ಲಿ ಸಹಕರಿಸಬೇಕೆಂದೂ ಕೋರಲಾಗುವುದು.

ಮೈಸೂರಿಗೆ ಕರ್ನಾಟಕ ಎಂಬ ಹೆಸರೇ ಸರಿ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಆಶಯ

ಬಿಜಾಪುರದ ವರ್ತಕರು ಕಳೆದ ಸೋಮವಾರ ಕೊಟ್ಟ ಬಿನ್ನವತ್ತಳೆಗೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಉತ್ತರವಿತ್ತು; ಮೈಸೂರು ಸಂಸ್ಥಾನಕ್ಕೆ ಕರ್ನಾಟಕವೆಂಬ ಹೆಸರನ್ನಿಡುವ ಕೋರಿಕೆಗೆ ಬೆಂಬಲವನ್ನಿತ್ತರು. ಆದರೆ ಮೈಸೂರಿನಲ್ಲಿ ಆ ಹೆಸರು ಬೇಡವೆನ್ನುವವರೂ ಇರುವರೆಂದೂ, ಆದ್ದರಿಂದ ಈ ಪ್ರಶ್ನೆಯನ್ನು ಬುದ್ಧಿವಂತಿಕೆಯಿಂದ ಪರಿಹರಿಸಬೇಕಾಗಿದೆಯೆಂದೂ, ಅದಕ್ಕೆ ಕಾಲ ಅಗತ್ಯವೆಂದೂ ಅವರು ಅಭಿಪ್ರಾಯಪಟ್ಟರು.

ಮೋಟಾರು ವ್ಯಾನು ತಲೆಕೆಳಗಾಗಿ ೬ ಜನರಿಗೆ ಗಾಯ

ನಗರದ ಪುರಸಭೆಯ ಮೋಟಾರು ವ್ಯಾನೊಂದು ನೆನ್ನೆ ರಾತ್ರಿ ಜಯಪುರದಿಂದ ನಗರದ ಕಡೆಗೆ ಬರುತ್ತಿದ್ದಾಗ ಸಣ್ಣ ಸೇತುವೆಯೊಂದರ ಬಳಿ ಆಕಸ್ಮಿಕಕ್ಕೀಡಾಗಿ ತಲೆಕೆಳಗಾಗಿ ಮಗುಚಿಕೊಂಡು ಅದರಲ್ಲಿದ್ದ ಪುರಸಭೆ ಮತ್ತು ತಾಲ್ಲೂಕು ಕಛೇರಿ ನೌಕರ ವರ್ಗದ ಆರು ಮಂದಿಗೆ ಸಾಧಾರಣವಾದ ಗಾಯಗಳಾದುವೆಂದು ತಿಳಿದು ಬಂದಿದೆ. ಸುದ್ದಿ ತಿಳಿದ ತಕ್ಷಣವೇ ಪುರಸಭಾಧಿಕಾರಿಗಳು ಸ್ಥಳಕ್ಕೆ ತೆರಳಿ ಗಾಯಗೊಂಡವರಿಗೆ ಚಿಕಿತ್ಸೆ ನಡೆಸಿ, ಆಸ್ಪತ್ರೆಗೆ ಸೇರಿಸಿ ಉರುಳಿದ್ದ ವಾಹನವನ್ನು ಎತ್ತಿಸಿದರು.

ಅರಮನೆ ನೌಕರರ ಸಂಘದ ಸಭೆ

ಅರಮನೆ ನೌಕರರ ಸಂಘದ ಸಭೆಯು ನಾಳೆ ಸಾಯಂಕಾಲ ೬ ಗಂಟೆಗೆ ಅರಮನೆ ಕೋಟೆ ಮಾರಮ್ಮನವರ ದೇವಸ್ಥಾನದ ಆವರಣದಲ್ಲಿ ಶ್ರೀ ಕೆ. ಎಲ್. ಸೀತಾರಾಮರವರ ಅಧ್ಯಕ್ಷತೆಯಲ್ಲಿ ನಡೆಯುವುದು. ನೌಕರರೆಲ್ಲರೂ ಭಾಗವಹಿಸುವಂತೆ ಕೋರಲಾಗಿದೆ.

ಇಂಜನಿಯರಿಂಗ್ ಡಿಪ್ಲೊಮಾ ವಿದ್ಯಾರ್ಥಿಗಳ ಪ್ರತಿಭಟನಾ ಸಭೆ

ಮೈಸೂರು ೧೪

ನಿನ್ನೆಯೇ ನಿರ್ಧರಿಸಿದ್ದಂತೆ ಇಂದು ನಗರದ ಸಿ. ಪಿ. ಸಿ. ಪಾಲಿಟೆಕ್ನಿಕ್ ಶಾಲೆ ಮತ್ತು ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನ ಡಿಪ್ಲೊಮಾ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗದೆ ಮುಷ್ಕರ ಹೂಡಿ ಬೆಳಿಗ್ಗೆ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ಟೌನ್ ಹಾಲ್ ಬಳಿ ಸಭೆ ಸೇರಿದರು. ಶ್ರೀಗಳಾದ ಯಶವಂತರಾವ್, ವಿಠಲಾನಂದ್, ರಾಮರಾವ್ ಮತ್ತು ಬಿ. ಎಸ್. ಕೇಶವರಾವ್ ಮುಂತಾದವರು ಭಾಷಣ ಮಾಡಿದರು. ಡಿಪ್ಲೊಮಾ ಹೊಂದಿದವರಿಗೆ ಬೇರೆ ಕಡೆಗಳಲ್ಲಿರುವಂತೆಯೇ ಸಂಬಳದ ದರವನ್ನು ಗೊತ್ತುಮಾಡಲು ಮತ್ತು ಸಪ್ಲಿಮೆಂಟರಿ ಪರೀಕ್ಷೆಗಳನ್ನು ಏರ್ಪಡಿಸಲು ಸರ್ಕಾರವನ್ನು ಕೋರುವ ನಿರ್ಣಯಗಳನ್ನು ಮಾಡಲಾಯಿತು.

ಕಾಲೇಜು ಕನ್ನಡ ಸಂಘದಲ್ಲಿ ಪು. ತಿ. ನರಸಿಂಹಾಚಾರ್ಯರ ಭಾಷಣ

ಮಹಾರಾಜಾ ಕಾಲೇಜು ಕನ್ನಡ ಸಂಘದ ಸಮಾಪನ ಭಾಷಣವನ್ನು ಶ್ರೀ ಪು. ತಿ. ನರಸಿಂಹಾಚಾರ್ಯರು ನಾಳೆ ಸಂಜೆ ೫ ಗಂಟೆಗೆ ನೆರವೇರಿಸುವರು. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಜಿಲ್ಲಾ ರೇಷ್ಮೆ ಕಾರ್ಮಿಕರ ಸಂಘ

ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಮೊನ್ನೆ ಕೊಳ್ಳೇಗಾಲದಲ್ಲಿ ರೇಷ್ಮೆ ಕೆಲಸಗಾರರ ಬಹಿರಂಗ ಸಭೆಯು ಶ್ರೀ ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಸೋಮಸುಂದರಶರ್ಮರವರು ಭಾಷಣ ಮಾಡಿದರು. ಜಿಲ್ಲೆಗೆ ಸಂಬಂಧಪಟ್ಟ ರೇಷ್ಮೆ ಕಾರ್ಮಿಕರ ಸಂಘವನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಅದಕ್ಕೆ ಶ್ರೀ ಎಸ್. ಸೋಮಸುಂದರಶರ್ಮ ಅಧ್ಯಕ್ಷರು, ಶ್ರೀಗಳಾದ ಬಿ. ಎ. ಬೆಳ್ಳಿಯಪ್ಪ, ಎಂ. ಎಲ್. ಉಗ್ರಪ್ಪ, ಕುಂಜಪ್ಪ, ಕರಗಯ್ಯ ಮತ್ತು ವೆಂಕಟರಮಣರವರು ಉಪಾಧ್ಯಕ್ಷರುಗಳು ಮತ್ತು ಶ್ರೀ ಕೆ. ಎಲ್. ಅಶ್ವತ್ಥ ಕಾರ್ಯದರ್ಶಿ. ಶ್ರೀ ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ ಕೊಳ್ಳೇಗಾಲ ಶಾಖಾ ಸಮಿತಿಯನ್ನೂ ರಚಿಸಲಾಯಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ದಿಲ್ರುಬಾ ಮತ್ತು ಸಿತಾರ್. ೭-೧೫ ಎ. ಲಲಿತ-ದೇವರನಾಮ ೭-೩೦ ಹಿಂದಿ ಪಾಠ. ೮-೧೫ ರಿಕಾರ್ಡು. ಮಧ್ಯಾಹ್ನ ೧೨ ಸಂಗೀತ. ೧೨-೩೦ ವಾದ್ಯವೃಂದ ೧೨-೪೫ ವನಿತಾ ವಿಭಾಗ. ೧-೫೦ ದಿಲ್ರುಬಾ ಮತ್ತು ಸೆಲ್ಲೋ. ೩-೧೫ ಸಂಗೀತ. ಸಂಜೆ ೫-೩೦ ಸಿ. ಸರೋಜಮ್ಮ-ಸಂಗೀತ. ೬-೫ ವಿರಾಮ ಸಂಗೀತ. ೬-೩೦ ರಿಕಾರ್ಡು. ೬-೪೦ ನಮ್ಮ ಸಂಪ್ರದಾಯದಲ್ಲಿ ಬಿಲ ಮತ್ತು ಜೀವನದ ಭಾಗಗಳು-ಭಾಷಣ. ೮ ಮದ್ರಾಸಿನಿಂದ-ಟಿ. ಕೆ. ರಂಗಾಚಾರಿ ಸಂಗೀತ ೯-೧೫ ರಿಕಾರ್ಡು. ೯-೩೦ ತೆಲುಗು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ. ೧೦-೧೫ ಉರ್ದುಗೀತೆ.

ನಾಗರಿಕ ಜೀವನ ಮತ್ತು ಪ್ರಾಮಾಣಿಕತೆಯ ಅಗತ್ಯ

ವಿದ್ಯಾರ್ಥಿಗಳಿಗೆ ಶ್ರೀ ಸಿ. ಎಂ. ಪೂಣಚ್ಚರವರ ಹಿತೋಪದೇಶ

ಮೈಸೂರು ೧೪

ಶ್ರೀ ಸುತ್ತೂರು ಶಿವರಾತ್ರೀಶ್ವರ ವಿದ್ಯಾರ್ಥಿ ನಿಲಯ ವಿದ್ಯಾರ್ಥಿ ಸಂಘದ ಹದಿನಾರನೆಯ ವಾರ್ಷಿಕೋತ್ಸವದ ಮುಖ್ಯ ಭಾಷಣವನ್ನು ಮಾಡುತ್ತಾ ಮೈಸೂರು ಕೈಗಾರಿಕಾ ಸಚಿವರಾದ ಶ್ರೀ ಸಿ ಎಂ ಪೂಣಚ್ಚರವರು-ನಮ್ಮ ದೇಶದಲ್ಲಿ ಬಡತನಕ್ಕಿಂತಲೂ ಹೆಚ್ಚಿನ ಶೋಚನೀಯ ಸ್ಥಿತಿಯಲ್ಲಿರುವುದು ನಾಗರಿಕತೆ ಮತ್ತು ಪ್ರಾಮಾಣಿಕತೆಗಳ ನ್ಯೂನತೆಯೆಂದು ಹೇಳಿದರು. ಸಮಾಜವು ಉದ್ಧಾರವಾಗಬೇಕಾದರೆ ವಿದ್ಯಾರ್ಥಿಗಳು ಇವುಗಳ ಕಡೆ ಹೆಚ್ಚಿನ ಗಮನ ಕೊಡಬೇಕೆಂದು ಬಹು ಸ್ವಾರಸ್ಯವಾಗಿ ಅನೇಕ ನಿತ್ಯ ಜೀವನದ ಸಾದೃಶ್ಯಗಳಿಂದ ತಿಳಿಸಿದರು.

ಸುತ್ತೂರು ವಿದ್ಯಾರ್ಥಿನಿಲಯದಲ್ಲಿ ಮೆಟ್ಟಿಲು ಹತ್ತುವ ದಾರಿಯಲ್ಲಿ ಒಂದು ವಿದ್ಯುಚ್ಛಕ್ತಿ ಬಲ್ಬಿಗೆ ಬೀಗ ಹಾಕಿಟ್ಟಿರುವುದನ್ನು ಉದಾಹರಣೆಗೆ ತೆಗೆದುಕೊಂಡು ಪಾಶ್ಚಾತ್ಯ ದೇಶಗಳ ಜನರಲ್ಲಿರುವ ನಾಗರೀಕ ಜೀವನದ, ಪ್ರಾಮಾಣಿಕತೆಗಳೊಂದಿಗೆ ಹೋಲಿಸಿ ನಮ್ಮ ದೇಶವು ಬಹಳ ಹಿಂದೆ ಇದೆಯೆಂದು ಹೇಳಿ ವಿಷಾದಿಸಿದರು ರೇಷನ್ ಕಾಲದಲ್ಲಿಯೂ, ಯುದ್ಧ ಕಾಲದಲ್ಲಿಯೂ ಆ ದೇಶದ ಜನರು ಎಷ್ಟು ನಂಬಿಕೆಯಿಂದ ಜೀವನ ಮಾಡಿದರೆಂಬುದನ್ನು ಚಿತ್ರಿಸಿ ವಿದ್ಯಾರ್ಥಿಗಳು ಈ ಗುಣಗಳನ್ನು ಪರಕೀಯರಿಂದಲೂ ಕಲಿತು ಸಮಾಜವನ್ನು ಮೇಲ್ಮಟ್ಟಕ್ಕೆ ತಂದು ದೇಶದ ಗೌರವವನ್ನು ಕಾಪಾಡಬೇಕೆಂದು ಕೋರಿದರು

ಮಹಾರಾಜಾ ಕಾಲೇಜಿನ ಆಂಗ್ಲ ಭಾಷಾ ಪ್ರಾಧ್ಯಾಪಕರಾದ ಶ್ರೀ ಎಸ್ ವಿ ಶಾಂತವೀರಪ್ಪನವರು ಅಧ್ಯಕ್ಷತೆ ವಹಿಸಿದ್ದ ಸಚಿವ ಪೂಣಚ್ಚರವರನ್ನು ಸ್ವಾಗತಿಸುತ್ತಾ ದೇಶಕ್ಕೆ ಅವರು ಮಾಡುತ್ತಿರುವ ಸೇವೆಯನ್ನು ಕೊಂಡಾಡಿದರು

ಆದಿಯಲ್ಲಿ ಶ್ರೀ ಬಿ ಜಯದೇವಪ್ಪನವರಿಂದ ಪ್ರಾರ್ಥನೆಯಾದನಂತರ, ಕಾರ್ಯದರ್ಶಿಗಳಾದ ಶ್ರೀ ಹೆಚ್ ಟಿ ಶಾಂತವೀರಯ್ಯನವರು ಸಂಘದ ವರದಿಯನ್ನು ಒಪ್ಪಿಸಿದರು ನಂತರ ಮಂತ್ರಿಗಳಿಂದ ಬಹುಮಾನಗಳು ಹಂಚಲ್ಪಟ್ಟುವು ವಿವಿಧ ವಿನೋದಾವಳಿ ನಾಟಕ, ಸಂಗೀತಗಳು ಏರ್ಪಾಡಾಗಿದ್ದುವು. ಕಾರ್ಯದರ್ಶಿ ಎಂ ಮರಿಸ್ವಾಮಿಯವರು ವಂದನಾರ್ಪಣೆ ಮಾಡಿದರು

ಅಕ್ಕಿಹೆಬ್ಬಾಳಿನಲ್ಲಿ ರಥೋತ್ಸವ

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳಿನಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ರಥೋತ್ಸವವು ನಾಳೆ ಬೆಳಿಗ್ಗೆ ನಡೆಯುವುದು ಅದರ ಅಂಗವಾಗಿ ೧೯ನೇ ತಾರೀಕು ವರೆಗೆ ವಿವಿಧ ಉತ್ಸವಗಳು ಜರುಗುವುವು

ದೆಹಲಿ ಕರ್ನಾಟಕ ಸಂಘದಲ್ಲಿ ಕೈಲಾಸಂ ನಾಟಕಾಭಿನಯ

ಸ್ವಂ ವ] ನವದೆಹಲಿ ೧೧

ದೆಹಲಿ ಕರ್ನಾಟಕ ಸಂಘದಲ್ಲಿ ಕಳೆದ ೧೦ನೇ ತಾರೀಕು ಮನರಂಜನಾ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು. ಕಾರ್ಯದರ್ಶಿ ಶ್ರೀ ತಿರುಮಲೇಶರವರು ಸ್ವಾಗತ ಭಾಷಣ ಮಾಡಿದನಂತರ, ಶ್ರೀ ಎಂ. ಆರ್. ರಂಗರಾಜರವರು, ಕುವೆಂಪುರವರ "ಪ್ರೇಮ ಕಾಶ್ಮೀರ" ಕವನ ಸಂಗ್ರಹದ ಕೆಲವು ಗೀತೆಗಳನ್ನು ಹಾಡಿದರು ಶ್ರೀ ಗುಂಡೂರಾಯರಿಂದ ಏಕ ಪಾತ್ರಾಭಿನಯವೂ ಮತ್ತು ಆ॥ ವಿ॥ ವಿ ದೊರೆಸ್ವಾಮಿ ಅಯ್ಯಂಗಾರ್ಯರಿಂದ ವೀಣಾ ವಾದನವೂ ಆದನಂತರ ಸಂಘದ ಕಲಾವಿದರು ಕೈಲಾಸಂರವರ "ಬಂಡ್ವಾಳ್ವಿಲ್ಲದ ಬಡಾಯಿ" ಎಂಬ ನಾಟಕವನ್ನು ಅಭಿನಯಿಸಿದರು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಕಾಂಗ್ರೆಸ್ಸಿನ ೩೩ ಮಂದಿ ಸ್ಪರ್ಧಿಗಳ ಅವಿರೋಧ ಆಯ್ಕೆ

ಸಂಸ್ಥಾನಗಳ ವಿಧಾನ ಸಭೆಗಳಿಗೆ ಇದುವರೆಗೆ ೩೯ ಮಂದಿ ಅವಿರೋಧವಾಗಿ ಚುನಾಯಿತರಾಗಿರುವರು ಆ ಪೈಕಿ ೩೩ ಮಂದಿ ಕಾಂಗ್ರೆಸ್ಸಿನವರು ಇಬ್ಬರು ಸ್ವತಂತ್ರರು. ಮೈಸೂರಿನಲ್ಲಿ ೮ ಮಂದಿಯ ಅವಿರೋಧ ಆಯ್ಕೆಯಾಗಿದೆ.

ಗಾಂಧಿ ವಿಚಾರ ವ್ಯಾಸಂಗ ಗೋಷ್ಠಿ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಕಾರ್ಯಾಲಯದಲ್ಲಿ ನಾಳೆ ಸಂಜೆ ೬ ಗಂಟೆಗೆ ವ್ಯಾಸಂಗ ಗೋಷ್ಠಿಯು ನಡೆಯುವುದು. ಶ್ರೀ ಎ. ಸೋಮಶೇಖರ್‌ರವರ 'ಗಾಂಧೀಸ್ ಚಾಲೆಂಜ್ ಟು ವೆಸ್ಟರ್ನ್ ಎಕನಾಮಿಕ್ಸ್' ಎಂಬ ಪ್ರಬಂಧವನ್ನು ವಿಮರ್ಶಿಸಲಾಗುವುದು. ಸರ್ವರಿಗೂ ಆಹ್ವಾನವುಂಟು.

ಭೂಗೋಳಶಾಸ್ತ್ರ ಸಂಘದ ಮುಕ್ತಾಯ ಭಾಷಣ

ಮಹಾರಾಜಾ ಕಾಲೇಜಿನ ಭೂಗೋಳಶಾಸ್ತ್ರ ಸಂಘದ ಮುಕ್ತಾಯ ಭಾಷಣವನ್ನು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಶ್ರೀ ಎಫ್. ಜೆ ನರೊನ್ಹಾರವರು ನಾಳೆ ಸಂಜೆ ೫॥ ಗಂಟೆಗೆ ಮಾಡುವರು ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಸಿ ಡಿ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಆಹ್ವಾನವಿದೆ.

ಟಿ. ಎಲ್ ಗಂಗೋಜಿರಾಯರ ನಿಧನ

ಹಿಂದಿನ ಪ್ರಜಾ ಪ್ರತಿನಿಧಿ ಸಭಾ ಸದಸ್ಯರೂ, ಬೆಂಗಳೂರಿನ ಪ್ರಮುಖ ರೇಷ್ಮೆ ವ್ಯಾಪಾರಿಯೂ ಆದ ಶ್ರೀ ಟಿ ಎಲ್ ಗಂಗೋಜಿರಾಯರು ಮೊನ್ನೆ ಬೆಂಗಳೂರಿನಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೫೫ ವರ್ಷವಾಗಿತ್ತು

ಜೈ ಹಿಂದ್

ಸ್ವತಂತ್ರ ಭಾರತದ ಏಳಿಗೆಗಾಗಿ ಕಾಂಗ್ರೆಸ್ ಉಮೇದುವಾರರುಗಳಿಗೇ
ತಮ್ಮ ಘನವಾದ ಓಟುಗಳನ್ನು ಕೊಟ್ಟು ಜಯಶೀಲರನ್ನಾಗಿ
ಮಾಡಬೇಕೆಂದು ಪ್ರಾರ್ಥಿಸುತ್ತೇವೆ

ಶ್ರೀ ಚೌಡೇಶ್ವರೀ ಹಾಲ್,

ಕ್ಲಾತ್ ಮರ್ಚೆಂಟ್ಸ್, 27 ಸಯ್ಯಾಜಿರಾವ್ ರಸ್ತೆ, ಮೈಸೂರು

ಚಾಮುಂಡೇಶ್ವರಿ ಟಾಕೀಸ್

16—2 '57 ರಿಂದ ಅಮೋಘ ಪ್ರದರ್ಶನಾರಂಭ

ಕೆಂಪರಾಜ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ

★ ನಳದಮಯಂತಿ ★

ಭೂಮಿಕೆ:— ಕೆಂಪರಾಜ್, ಭಾನುಮತಿ, ಗಣಪತಿಭಟ್, ಮುಕ್ಕಾಮಲ ನರಸಿಂಹರಾಜು ಮುಂತಾದವರು

ವಿಶೇಷ ಸೂಚನೆ — ಇದೇ 16ನೇ ತಾ! ನಿಂದ ಗಂಡಸರ ಮತ್ತು ಹೆಂಗಸರ ಕೊನೆ ತರಗತಿ ದರವನ್ನು 6 ಆಣೆ (37 ನಯೆ ಪೈಸ)ಯಾಗಿ ನಿಗದಿ ಮಾಡಲಾಗಿದೆ.

ಮೊದಲು 5 ವಾರಗಳ ಕಾಲ ಕಾಂಪ್ಲಿಮೆಂಟರಿ, ಫ್ರೀ ಪಾಸು ಮತ್ತು ಇತರ ರಿಯಾಯಿತಿಗಳನ್ನು ಮಾನ್ಯ ಮಾಡಲಾಗಿದೆ.

ಹುಜೂರ್ ಖಜಾನೆಯ ೧ ಲಕ್ಷ ರೂ. ದುರುಪಯೋಗದ ಮೊಕದ್ದಮೆ

ಮಾಜಿ ಟ್ರೆಜರರ್ ಕೃಷ್ಣಮೂರ್ತಿಯವರ ಸೆಷನ್ಸ್ ವಿಚಾರಣೆ

ಬೆಂಗಳೂರು ೧೩

ಸರ್ಕಾರದ ಖಜಾನೆಯಲ್ಲಿ ೧,೧೦,೧೬೦ ರೂಗಳನ್ನು ದುರುಪಯೋಗಪಡಿಸಿಕೊಂಡರೆಂದು ಮಾಜಿ ಟ್ರೆಜರರ್ ಸಿ. ಎನ್ ಕೃಷ್ಣಮೂರ್ತಿಯವರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಅವರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಗಿದೆ. ನಂಬಿಕೆ ದ್ರೋಹ ಮತ್ತು ಸುಳ್ಳು ಲೆಕ್ಕಗಳನ್ನು ಬರೆಯಲಾಗಿತ್ತೆಂದು ಅಪಾದನೆ ಹೊರಿಸಲಾಗಿದೆ ಕಳೆದ ೫೩ನೇ ಡಿಸೆಂಬರ್ ೧೧ರಲ್ಲಿ ಮೊದಲು ಮೊಕದ್ದಮೆ ಹೂಡಲ್ಪಟ್ಟು ೫೪ರ ಏಪ್ರಿಲ್ ಎರಡು ಅಡಿಷನಲ್ ಕೋರ್ಟಿಗೆ ವರ್ಗವಾಗಿತ್ತು

ಚುನಾವಣೆ ದಿನ ರಜಾ

ಮಹಾ ಚುನಾವಣೆಗಳು ನಡೆಯುವ ಸ್ಥಳಗಳಲ್ಲಿ ಆಯಾ ದಿನ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆ ನೌಕರರಿಗೆಲ್ಲಾ ರಜಾ ಕೊಡಲಾಗುವುದು. ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಿಗಳು ಸಹ ರಜಾ ಕೊಡುವಂತೆ ಸರ್ಕಾರದವರು ಸೂಚಿಸಿರುತ್ತಾರೆ

ವಿದ್ಯುಚ್ಛಕ್ತಿ ಮಗ್ಗದವರಿಗೆ ಸೂಚನೆ

ವಿದ್ಯುಚ್ಛಕ್ತಿ ಮಗ್ಗಗಳವರು ಮಾಹೆಯಾನಾ ಕಳುಹಿಸಬೇಕಾದ ಪರಿಪತ್ರಗಳನ್ನು ಬಟ್ಟೆ ಕಮಿಷನರರಿಗೆ ಕಳುಹಿಸುವಂತೆಯೂ, ಇದು ಈಗ ಸರಿಯಾಗಿ ನಡೆಯುತ್ತಿಲ್ಲವೆಂದೂ ಸರ್ಕಾರದವರು ಸೂಚಿಸಿರುತ್ತಾರೆ

INTER EXAM. 1957

The students who are keen on passing in Chemistry, should ensure their "GUESS PAPER 1957' by buying "INTERMEDIATE CHEMISTRY AT A GLANCE " before the 20th February.

ಪ್ರಕಟಣೆ

ಕೆಳಗೆ ಕಾಣಿಸಿರುವ ಖಾಯಿಲೆಗಳಿಗೆ ಚಿಕಿತ್ಸೆ
ಮಾಡುವುದರಲ್ಲಿ ಹೆಸರುವಾಸಿಯಾಗಿರುವ

ಕವಿರಾಜ್
ಓಂಪ್ರಕಾಶ್ ಬಿ. ಎ
ಭಿಷಗಾಚಾರ್ಯ
ಧನ್ವಂತರಿಯವರು
ತಮ್ಮ ಪ್ರವಾಸ ಕಾರ್ಯಕ್ರಮದಲ್ಲಿ ಕೆಳಗೆ ಕಂಡಂತೆ ಸಲಹೆ ನೀಡಲು ದೊರೆಯುವರು.

ಇದೇ ಫೆಬ್ರವರಿ 18 ರಂದು ಬೆಳಿಗ್ಗೆ
8 ರಿಂದ 11 ರ ವರೆಗೆ
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ

ಮುಂದೆ ಕಂಡ ಖಾಯಿಲೆಗಳಿಂದ ನರಳುತ್ತಿರುವವರು ಅವರನ್ನು ಭೇಟಿ ಮಾಡಿ, ಪರೀಕ್ಷೆ ಸಲಹೆ ಮತ್ತು ಪರಿಣಾಮಕಾರಿ ಚಿಕಿತ್ಸೆಯನ್ನು ಪಡೆಯಬಹುದು.

1 ಪೋಲಿಯೊ, 2 ದೇಹದ ಯಾವುದೇ ಅಂಗದ ಪಾರ್ಶ್ವವಾಯು (ಮುಖ, ಕತ್ತು, ತೋಳು, ಕಾಲುಗಳು, ಅರ್ಧ ಅಥವಾ ಪೂರ್ಣ ಶರೀರ). 3 ತೀವ್ರ ರಕ್ತದ ಒತ್ತಡ, 4. ಕಿವುಡುತನ. 5 ಮೂರ್ಛೆತನ ಅಥವಾ ಉನ್ಮಾದ, 6 ಕುರುಡು ಅಥವಾ ಮಾಲಗಣ್ಣು, 7 ಮಾನಸಿಕ ಅಸ್ವಸ್ಥತೆ.

ARYAVARTA POLIO ASHRAM,
114. E. Kamla Nagar, Delhi 6.
Phone : 27858

ಮೇಲ್ಕಂಡ ರೋಗಗಳ ಚಿಕಿತ್ಸೆ ಬಗ್ಗೆ "ಪೋಲಿಯೋ ಮೈಲಿಟಿಸ್ ಮತ್ತು ಆಯುರ್ವೇದ" ಎಂಬ ಸಚಿತ್ರ
ಇಂಗ್ಲಿಷ್ ಪುಸ್ತಕದ ಬೆಲೆ ರೂ. 7-8-0
ಅಂಚೆ ವೆಚ್ಚ ರೂ. 0-14-0
ಪಿ. ಸೂ: ಸಲಹೆ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮಾತ್ರ

ತೆರಿಗೆದಾರರ ಸಭೆ

ಸರಸ್ವತಿಪುರದ ತೆರಿಗೆದಾರರ ಸಂಘದ ಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಬಡಾವ ತೆಂಗಿನ ತೋಟದಲ್ಲಿ ಬಹಿರಂಗ ಸಭೆಯು ಗುವುದು. ವಿಧಾನ ಸಭೆಗೆ ಸ್ಪರ್ಧಿಸಿರುವ ಗ್ರೆಸ್ ಉಮೇದುವಾರರಾದ ಶ್ರೀ ಕೆ ಸೂರ್ಯನಾರಾಯಣರಾವ್ ಮತ್ತು ಇತರ ಷಣ ಮಾಡುವರು. ಭಾರತ ಸರ್ಕಾರದ ಕ್ಯುಮೆಂಟರಿ ಚಿತ್ರದ ಪ್ರದರ್ಶನವನ್ನೂ ಸಲಾಗಿದೆ ಸರ್ವರಿಗೂ ಆಹ್ವಾನವಿದೆ

CHANGE OF NAME

Sri H Chenna, Skill Artizan T. No. T. 711, S Mills Shop in the mechani work-shops Mysore South p mitted to change name fr H. CHENNA to H. CHEN IAH as desired by him.

ಮನೆ ಮತ್ತು ಮಳಿಗೆ

ಕ್ರಯಕ್ಕೆ, ಭೋಗ್ಯಕ್ಕೆ ಅಥವಾ ಅಧಾ ಮೈಸೂರು ಸಿಟಿ ನಾರಾಯಣಶಾಸ್ತ್ರಿ ಸೀತಾವಿಲಾಸ ಛತ್ರದ ಸಮೀಪ.

ವಿವರಗಳಿಗೆ :—

ಜಯ ಅಂಡ್ ಕಂಪೆನಿ,
ಮನೆ ಮತ್ತು ಜಮೀನುಗಳ ಏಜಂಟ
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು . ಫೋನ್

ಮೈಸೂರಿನಲ್ಲಿ ಪ್ರತಿ ತಿಂಗಳ 17 ನೇ ತಾರೀಕು

ವಿಶ್ವವಿಖ್ಯಾತರಾಗಿ

ನವರತ್ನ ಕ
ದಿವ್ಯೌಷಧವನ್ನು ಕಂ
ಹಿಡಿದಿರುವ
ಕವಿರಾಜ ಪಂಡಿ
ದುರ್ಗಾದತ್ತ ಶ
ವೈದ್ಯ ವಾಚಸ್ಪತಿ

ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲೇ
ವಿಮಾನದಲ್ಲಿ ಸಂಚರಿಸುವರು

ನವರತ್ನ — ಕಲ್ಪ
ಉಪಯೋಗಿಸಿ

ಇದು [illegible], [illegible], ಮುತ್ತು, ಹವಳ, ಗೋಮೇಧಿಕ, ಶಿಲಾ, ಪದ್ಮರಾಗ ಮತ್ತು ಸ್ತ್ರೀಲ-ಈ 9 ಅಮೂಲ್ಯ ಹರಳುಗಳ ಯೋಗ, ಇದರಿಂದ ನರಗಳ ದೌರ್ಬಲ್ಯ, ಧರ್ ಸಂಬಂಧದ ವ್ಯಾಧಿಗಳು, [illegible] ದೋಷ, ಮೂಲವ್ಯಾಧಿ, ನಾಳವ್ರಣ, [illegible] ತ್ರ, ಅಸ್ತಮಾ ಮತ್ತು ಇನ್ನು ಇತರ ಸಾಮಾನ್ಯ ರೋಗಗಳು ತೀವ್ರವಾದ ಖಾಯಿಲೆ ಸಂಪೂರ್ಣವಾಗಿ ಗುಣ ಹೊಂದುವುವು. [illegible] ದು ಆರೋಗ್ಯದಾಯಕ ಔಷಧಿ ಇದೊಂದೇ

ವಿಶಾಖಪಟ್ಟಣ, ರಾಜಮಹೇಂದ್ರಿ, ಗುಂ ಬೆಜವಾಡ, ಮದ್ರಾಸು, ಬೆಂಗಳೂರು ತ್ತೂರು, ಮಧುರೆ, ತಿರುಚನಾಪಳ್ಳಿ, ರ್ನಾಕುಲಂ, ಕೊಟ್ಟಾಯಂ, ತ್ರಿವೇಂಡ್ರಂ ಲ್ಲೀಕೆ, [illegible], ಕುಂಭಕೋಣ, [illegible] ರಾಮಾದುಗಳ ವಿಳಾಸ ಮತ್ತು ಇತರ ಹಿತ್ಯಗಳಿಗೆ ಬರೆಯಿರಿ:—

NAVRATNA KALPA PHARMA
JULLUNDUR CITY (Indi

Edited, Printed and Published
A. R. Nagarajan at Sadhvi Pr
D Subbiah Road, Mysore

ರಿಜಿಸ್ಟರ್ಡ್ ನಂ. 792



ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : FRIDAY 15—2—1957 ಮೈಸೂರು : ಶುಕ್ರವಾರ ೧೫-೨-೧೯೫೭ : [ಸಂಚಿಕೆ : ೨೦೦

ಆಜಾದ್ ಕಾಶ್ಮೀರಿಗಳ ಮೇಲೆ ಪಾಕ್ ಸೈನಿಕರ ಗುಂಡು

ಆಜಾದ್ ಕಾಶ್ಮೀರದಲ್ಲಿ ಪಾಕ್ ಸೈನಿಕರ ಗುಂಡಿನೇಟು

೧೭ ಮಂದಿಯ ಮರಣ

ಾಕಿಸ್ತಾನ ಆಕ್ರಮಿತ ಕಾಶ್ಮೀರದ ಪೂಂ ಕ್ಷೇತ್ರದಲ್ಲಿ ಪಾಕಿಸ್ತಾನ ಸೈನ್ಯವು ಗುಂಡು ಸಿದ ಪರಿಣಾಮವಾಗಿ ೧೭ ಮಂದಿ ಮೃತರಾ ಗಿದ್ದಾರೆ ಅಲ್ಲಿ ಆಹಾರ ಸಮಸ್ಯೆಯನ್ನು ಹರಿಸಲು ಸರ್ಕಾರದವರು ಅಶಕ್ತರಾಗಿರುವು ಕ್ಕಾಗಿ ಜನರು ಪ್ರದರ್ಶನ ನಡೆಸಿದಾಗ ಸೈನ್ಯ ವರು ಗುಂಡು ಹಾರಿಸಿದರೆಂದೂ ಹೇಳಲಾಗಿದೆ. ಾರು ಮಕ್ಕಳು ತುಳಿಯಲ್ಪಟ್ಟು ಮೃತಪ ವೆ

ಕಾಶ್ಮೀರದ ಮೇಲೆ ಗುಡ್ಡಗಾಡಿನವರ ಧಾಳಿ ಬೆದರಿಕೆ

ಬರುವ ಹಲವು ವಾರಗಳಲ್ಲೇ ಕಾಶ್ಮೀರದ ಮೇಲೆ ಆಜಾದ್ ಕಾಶ್ಮೀರದ ಗುಡ್ಡಗಾಡಿನವರು ಳಿ ನಡೆಸುವರೆಂದು ಅಲ್ಲಿನ ಅಧ್ಯಕ್ಷರೆಂದು ಕ ಯಲ್ಪಡುವ ಅಬ್ದುಲ್ ಖಯೂಮ್ ಖಾನ ತಿಳಿಸಿರುವುದಾಗಿ ಲಂಡನ್ನಿನ ಡೈಲಿ ಟೆಲಿಗ್ರಾ ಮತ್ತು ರಾವಲ್ಪಿಂಡಿಯಲ್ಲಿರುವ ಸ್ಟೇಟ್ಸ್ ಪತ್ರಿಕೆಗಳು ಪ್ರಕಟಿಸಿವೆ ಜನರು ಅವೇಶ ದಲಿ ಕಾಶ್ಮೀರ ಸಮಸ್ಯೆಯು ಹೋರಾಟ ಲ್ಲಿಯೆ, ಪರ್ಯವಸಾನವಾಗುವುದೆಂದೂ, ಇದಕ್ಕೆ ರೆ ಮಾರ್ಗವಿಲ್ಲವೆಂದೂ ಖಯೂಮ್ ಖಾನ ಅಭಿಪ್ರಾಯಪಟ್ಟಿರುವುದಾಗಿ ತಿಳಿಸಲಾಗಿದೆ ಳೆದ ಡಿಸೆಂಬರ್ ಅಥವಾ ಜನವರಿಯಲ್ಲೇ ಹೋ ಟವು ಆರಂಭವಾಗುವುದೆಂದು ತಾವು ನಂಬಿ ದ್ದುದಾಗಿಯೂ, ಏನೇ ಆದರೂ ಇನ್ನು ಕೆಲವು ವಾರಗಳಲ್ಲೇ ಯುದ್ಧವಾಗುವುದೆಂದೂ, ಅವರು ಹೇಳುವರು.

ಮಧ್ಯ ಪೂರ್ವಕ್ಕೆ ಅಮೆರಿಕದ ಸಹಾಯದ ಪ್ರಶ್ನೆ ಚರ್ಚೆಯಿಲ್ಲ

ಮಧ್ಯ ಪೂರ್ವಕ್ಕೆ ಅಮೆರಿಕವು ಮಿಲಿಟರಿ ಮ ಆರ್ಥಿಕ ಸಹಾಯ ನೀಡುವ ಬಗ್ಗೆ ಐಸೆನ್‌ಹೋವ ಯೋಜನೆಯನ್ನು ಚರ್ಚೆಗೆ ತೆಗೆದುಕೊಳ್ಳಬಾರದೆಂದು ಪಕ್ಷ ಸಂಸ್ಥೆಯ ಸ್ಟಿಯರಿಂಗ್ ಸಮಿತಿಯು ನಿರ್ಧರಿಸಿರುತ್ತದೆ. ಈ ಬಗ್ಗೆ ಕೈಗೊಂಡಿದ್ದ ನಿರ್ಣಯವನ್ನು ತಿರಸ್ಕರಿಸಲಾಯಿತು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ ೭-೧೫ ಮತ್ತು ೮-೧೫ ಲಕ್ಷ್ಮಣಶಾಸ್ತ್ರಿ-ದೇವರನಾಮ ೭-೩೦ ಬಾಂಧವ್ ಮತ್ತು ಪಾರ್ಟಿ-ಹನಾ ಮಧ್ಯಾಹ್ನ ೧೨ ಎಸ್ ಲಕ್ಷ್ಮಣಶಾಸ್ತ್ರಿ- ಗೀತ ೧೨-೩೦ ರೆಕಾರ್ಡ್ ೧೨-೪೫ ಬಾ ಗೀತ್ ೧-೫೦ ವೀಣೆ ಸಂಜೆ ೫-೩೦ ಮ ರಾಜಮ್ಮ ಸಿ ಆರ್. ಗೌಡ-ಸಂಗೀತ ವಚನಗಾನ ೭-೩೦ ವಿ ವೃ ವಾ ತೇ ೪೦ ರೇಡಿಯೊ ನ್ಯೂಸ್ ರೀಲ್ ೮-೪೦ ಗೀತೆ ೯-೧೫ ನಿಷ್ಣ ಎನುಭವಗಳು-ಸಂಗೀ ಸಭೆಯಲ್ಲಿ ೯-೩೦ ಯ ಸಂಗೀತ: ಎಸ್ ವೆಂಕಟರಾಮಯ್ಯ-ಪಿಟೀಲು

ಬಂಗಾಳದಲ್ಲಿ ೨॥ ಲಕ್ಷ ಅಂಚೆ ನೌಕರರಿಂದ ೧೫ ನಿಮಿಷ ಮುಷ್ಕರ

ಪಶ್ಚಿಮ ಬಂಗಾಳದ ಅಂಚೆ ಮತ್ತು ತಂತಿ ಇಲಾಖೆಯ ೨॥ ಲಕ್ಷ ನೌಕರರು ಅಸ್ಸಾಂ ನೌಕರರ ಬೇಡಿಕೆಗಳ ಬಗ್ಗೆ ಸಹಾನುಭೂತಿ ತೋರಲು ನೆನ್ನೆ ಕಾಲು ಗಂಟೆ ಮುಷ್ಕರ ನಡೆಸಿದರು ಅಸ್ಸಾಂ ನೌಕರರು ಮುಷ್ಕರ ನಡೆಸಬಾರದೆಂದು ಮೊನ್ನೆ ಆದ ಒಪ್ಪಂದವನ್ನುಲ್ಲಂಘಿಸಿ ನೌಕರರು ಮುಷ್ಕರವನ್ನು ಮುಂದುವರಿಸುತ್ತಾರೆ. ಕೇಂದ್ರ ಸಮಿತಿಯವರಿಗೂ ಸರ್ಕಾರಕ್ಕೂ ಒಪ್ಪಂದವಾಗಿತ್ತು

ಹುಚ್ಚು ಹತ್ತಿದ ಪೋಲೀಸನಿಂದ ೩೨ ಜನರ ಕೊಲೆ

ಟಾಂಗನೀಕ ಬಳಿ ಕಳೆದ ಮಂಗಳವಾರ ಆಫ್ರಿಕನ್ ಒಬ್ಬ ಪೋಲೀಸು ಕಾನ್‌ಸ್ಟೇಬಲ್ಲಿಗೆ ಹುಚ್ಚು ಹತ್ತಿ ಮಂದಿಯನ್ನು ಕೊಲೆ ಮಾಡಿ ಪರಾರಿಯಾಗಿದ್ದಾನೆ ಜನ ಮಹಿಳೆಯರೂ ಗುಡಿಸಲಿಗೆ ಬೆಂಕಿ ಹಚ್ಚಿ ಇಬ್ಬರು ಮಹಿಳೆಯರನ್ನೂ, ಕೊಡಲಿಯಿಂದ ಕಡಿದು ಒಬ್ಬಳನ್ನೂ, ಕಡ್ಡಿ ರಿವಾಲ್ವರಿನಿಂದ ೩ ಮಕ್ಕಳನ್ನೂ ಅವನು ಕೊಂದಿದ್ದಾನೆ ಮತ್ತೊಬ್ಬ ಹುಡುಗಿಯನ್ನು ಕತ್ತು ಹಿಸುಕಿ ಸಾಯಿಸಿದ್ದಾನೆ ಅವನನ್ನು ಹಿಡಿಯಲು ನಾಯಿಗಳು, ಮೋಟಾರು ದಳ ಮತ್ತು ವಿಮಾನವನ್ನು ಉಪಯೋಗಿಸಲಾಗುತ್ತಿದೆ ಮಳೆಯಿಂದ ಪತ್ತೆ ತರಮೂದಿಗೆ ಅಡ್ಡಿಯಾಗಿದೆ. ಅವನನ್ನು ಬಂಧಿಸಲು ಸಹಾಯಕವಾಗುವ ಮಾಹಿತಿ ಕೊಡುವವರಿಗೆ ೧೦೦ ಪೌಂಡು ಬಹುಮಾನವೀಯಲಾಗುವುದು ಅವನು ಉಗಾಂಡಾ ಗುಡ್ಡಗಾಡಿನವನು

ದೊಡ್ಡ ತಿಮ್ಮಯ್ಯನವರ ಅವಿರೋಧ ಆಯ್ಕೆ

ಲೋಕ ಸಭೆಗೆ ಕೋಲಾರ ಜಿಲ್ಲಾ ರಿಸರ್ವ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶಾಂತಿ ಪ್ರಕಾಶರವರು ಚುನಾವಣೆಯಿಂದ ನಿವೃತ್ತರಾಗಿರುತ್ತಾರೆ. ಕಾಂಗ್ರೆಸ್ ಪರವಾಗಿ ಸ್ಪರ್ಧಿಸಿರುವ ಮತ್ತು ಈಗ ಸದಸ್ಯರಾಗಿರುವ ಶ್ರೀ ದೊಡ್ಡ ತಿಮ್ಮಯ್ಯನವರು ಅವಿರೋಧವಾಗಿ ಆರಿಸಿಬಂದಿರುತ್ತಾರೆ. ಮತ್ತೊಬ್ಬ ಸ್ಪರ್ಧಿ ಶ್ರೀ ಡಿ ವೆಂಕಟರಾಯಪ್ಪನವರು ಕೆಲವು ದಿನಗಳ ಹಿಂದೆಯೇ ನಾಮ ಪತ್ರವನ್ನು ವಾಪಸು ಪಡೆದಿದ್ದರು ಲೋಕ ಸಭೆಗೆ ಮೈಸೂರಿನಿಂದ ಇಬ್ಬರು ಅವಿರೋಧವಾಗಿ ಆರಿಸಿಬಂದಂತಾಗಿದೆ

ಸದಾಶಿವರಾಯರ ಕೃತಿಗಳ ಸ್ಪರ್ಧೆ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ಸದಾಶಿವರಾಯರ ಕೃತಿಗಳ ಸ್ಪರ್ಧೆಯನ್ನು ಇದೇ ೨೪ನೇ ತಾರೀಕು ಭಾನುವಾರ ಮಧ್ಯಾಹ್ನ ೪-೩೦ ಘಂಟೆಗೆ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ ಏರ್ಪಡಿಸಲಾಗಿದೆ ಸೇರಲು ಅಪೇಕ್ಷಿಸುವವರು ಇದೇ ೨೨ ರೊಳಗೆ ತಿಳಿಸಬೇಕಾಗಿ ಸಭೆಯ ಗೌರವ ಖಜಾಂಚಿಯವರು ಸೂಚಿಸಿರುತ್ತಾರೆ.

ಢಾಕಾದಲ್ಲಿ ವಿದ್ಯಾರ್ಥಿಗಳ ಎರಡು ಗುಂಪಿಗೆ ಘರ್ಷಣೆ

ಪೂರ್ವ ಪಾಕಿಸ್ತಾನದ ರಾಜಧಾನಿ ಢಾಕಾದಲ್ಲಿ ಮೊನ್ನೆ ಅಲ್ಲಿನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಎರಡು ಗುಂಪುಗಳಿಗೆ ಘರ್ಷಣೆ ನಡೆದು ಹಲವರಿಗೆ ಗಾಯಗಳಾದುವು ಪೂರ್ವ ಪಾಕಿಸ್ತಾನಕ್ಕೆ ಪ್ರಾದೇಶಿಕ ಸ್ವಾತಂತ್ರ್ಯವನ್ನು ಕೇಳುತ್ತಿರುವ ಅಲ್ಲಿನ ಅವಾಮಿ ಲೀಗಿನ ಅಧ್ಯಕ್ಷ ಮೌಲಾನಾ ಭಾಷಾನಿಯವರನ್ನು ದೇಶದ್ರೋಹಕ್ಕಾಗಿ ವಿಚಾರಣೆಗೆ ಗುರಿಪಡಿಸಬೇಕೆಂದು ಒತ್ತಾಯಪಡಿಸಲು ಪ್ರಧಾನಿ ಸುಹ್ರವರ್ದಿಯ ಬೆಂಬಲಿಗ ವಿದ್ಯಾರ್ಥಿಗಳು ಸಭೆ ನಡೆಸಿ ಭಾಷಾನಿಯವರ ಬಗ್ಗೆ ಅವಮಾನಕರವಾದ ಮಾತುಗಳನ್ನಾಡಿದರೆಂದೂ, ಭಾಷಾನಿಯವರ ಕಡೆಯ ವಿದ್ಯಾರ್ಥಿಗಳು ಇವನ್ನು ಪ್ರತಿಭಟಿಸಲು ಘರ್ಷಣೆಯಾಗಿ ಭಾಷಾನಿ ಕಡೆಯ ಹಲವರಿಗೆ ಗಾಯಗಳೂ ಆದುವೆಂದೂ ವರದಿಯಾಗಿವೆ ನೆನ್ನೆಯೂ ಸಹ ಘರ್ಷಣೆ ನಡೆದ ಕಲ್ಲುಗಳನ್ನು ಬೀರಲಾಯಿತು ಎರಡು ಗುಂಪುಗಳು ಪ್ರತ್ಯೇಕ ಸಭೆ ನಡೆಸಿದರು. ಒಂದು ಗುಂಪಿನವರು ಭಾಷಾನಿಯವರಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿದರು ಮತ್ತೊಂದು ಗುಂಪಿನವರು ಅವರನ್ನು ಗಲ್ಲಿಗೇರಿಸಬೇಕೆಂದು ಒತ್ತಾಯಪಡಿಸಿದರು

ಮುದುಕಿಯೊಬ್ಬಳ ಸಹಗಮನ

ಅತ್ರಿ ಬಳಿ ಉಜರಿ ಎಂಬ ಹಳ್ಳಿಯಲ್ಲಿ ಕಳೆದ ಸೋಮವಾರ ೬೦ ವರ್ಷದ ರಾಮಪ್ಯಾರಿ ಎಂಬ ಹೆಂಗಸೊಬ್ಬಳು ತನ್ನ ಗಂಡನ ಚಿತೆಯನ್ನೇರಿ ಪ್ರಾಣತ್ಯಾಗ ಮಾಡಿದಳು. ಈ ವಿಚಾರವನ್ನು ತಿಳಿದ ಕೂಡಲೇ ಪೋಲೀಸರು ಸ್ಥಳಕ್ಕೆ ತೆರಳಿ ಅರ್ಧ ಬೆಂದ ಹೆಂಗಸಿನ ಶರೀರವನ್ನು ವಶಪಡಿಸಿಕೊಂಡರು ಈ ಸಂಬಂಧದಲ್ಲಿ ಹತ್ತು ಜನ ಗಂಡಸರು ಮತ್ತು ೩ ಮಂದಿ ಹೆಂಗಸರನ್ನು ಬಂಧಿಸಲಾಗಿದೆ.

ರೈಲ್ವೆಯ ೪ನೇ ವರ್ಗದ ನೌಕರರಿಗೆ ಸಂಬಳ ಹೆಚ್ಚಿಸಲು ಮನವಿ

ರೈಲ್ವೆಯ ನಾಲ್ಕನೇ ವರ್ಗದ ನೌಕರರ ಪೈಕಿ ಹಲವರು ಮನವಿಯೊಂದನ್ನು ಮಾಡಿ, ಮೂರನೇ ವರ್ಗದ ನೌಕರರಿಗೆ ಎರಡು ಬಾರಿ ಸಂಬಳವನ್ನು ಏರಿಸಲಾಗಿದೆಯೆಂದೂ, ನಾಲ್ಕನೇ ವರ್ಗದವರನ್ನು ಕಡೆಗಣಿಸಲಾಗಿರುವುದೆಂದೂ, ಧಾರಣೆವಾಸಿಯು ವಿಪರೀತವಾಗಿರುವಾಗ ಈಗಲಾದರೂ ೪ನೇ ವರ್ಗದವರಿಗೆ ೧೦ ರೂ. ನಷ್ಟಾದರೂ ಹೆಚ್ಚು ಸಂಬಳವನ್ನು ಕೊಡಬೇಕೆಂದೂ ಕೋರಿರುತ್ತಾರೆ.

ಮಹಾರಾಜಾ ಕಾಲೇಜು ಟ್ಯುಟೋರಿಯಲ್ ದಿನಾಚರಣೆ

ಇಲ್ಲಿನ ಮಹಾರಾಜಾ ಕಾಲೇಜಿನ ಟ್ಯುಟೋರಿಯಲ್ ದಿನಾಚರಣೆಯು ನಾಳೆ ಸಂಜೆ ೫॥ ಗಂಟೆಗೆ ನೆರವೇರುವುದು ಚಾನ್ಸಲರಾದ ಶ್ರೀ ಜಯಚಾಮರಾಜ ಒಡೆಯರವರು ಅಧ್ಯಕ್ಷತೆ ವಹಿಸುವರು ವೈಸ್ ಚಾನ್ಸೆಲರ್ ಶ್ರೀ ಕೆ. ವಿ ಪುಟ್ಟಪ್ಪನವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವರು

ಈ ವರ್ಷದಲ್ಲಿ ೧॥ ಕೋಟಿ ರೂ. ಸಣ್ಣ ಕೈಗಾರಿಕೆ ಯೋಜನೆ

ಸಂಸ್ಥಾನ ಸರ್ಕಾರದ ಮುಖ್ಯಾಧಿಕಾರಿ - ಸ್ಪೆಂ.ಸು. ತಂತಿ] ಬೆಂಗಳೂರು ೧೫

ಸಂಸ್ಥಾನ ಸರ್ಕಾರದವರು ಪ್ರಸಕ್ತ ವರ್ಷಕ್ಕಾಗಿ ೧॥ ಕೋಟಿ ರೂ ಗಳ ಸಣ್ಣ ಕೈಗಾರಿಕೆಗಳ ಯೋಜನೆಯನ್ನು ಮಂಜೂರು ಮಾಡಿದ್ದಾರೆ.

○ ರಾಜ್ಯಾಧ್ಯಕ್ಷರು ಮೈಸೂರು ಖಾದಿ ಮತ್ತು ಗ್ರಾಮ ಕೈಗಾರಿಕೆ ಬೋರ್ಡ್ ರಚನೆಗೆ ಸಮ್ಮತಿ ಸೂಚಿಸಿರುತ್ತಾರೆ

ಧಾರವಾಡದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಇದೇ ಮೇ ತಿಂಗಳು ೬, ೭ ಮತ್ತು ೮ನೇ ತಾರೀಕು ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಧಾರವಾಡದಲ್ಲಿ ನಡೆಸಲು ಅಧಿಕೃತವಾಗಿ ನಿರ್ಧರಿಸಲಾಗಿದೆ

○ ಭಾರತದ ಶ್ರೇಷ್ಠ ಸೇನಾನಿ ಜ॥ ಶ್ರೀನಾಗೇಶ್‌ರವರು ಇಲ್ಲಿಗೆ ಆಗಮಿಸಿರುತ್ತಾರೆ ಅವರು ೨ ದಿನಗಳ ವರೆಗೆ ಇರುವರು

○ ಬಳ್ಳಾರಿ ಮತ್ತು ಹೊಸಪೇಟೆ ಪೌರಸಭೆಗಳು ಆಕ್ಟ್ರಾಯ್ ಸುಂಕ ವಿಧಿಸಲು ಸರ್ಕಾರದವರು ಸಮ್ಮತಿಸಿರುತ್ತಾರೆ

ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಕಾಗದ ಪತ್ರಗಳ ಕಳುವು

ಬೆಂಗಳೂರು ಉತ್ತರ ತಾಲ್ಲೂಕು ಕಛೇರಿಯಿಂದ ಎರಡು ಕಟ್ಟು ಕಾಗದಗಳು ಕಳುವಾಗಿರುವ ಸಂಬಂಧದಲ್ಲಿ ಕಛೇರಿಯ ಜವಾನ ಅಂತೋಣಿ ಮತ್ತು ಅಪರಿಚಿತ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಕಳೆದ ೫ನೇ ತಾರೀಕು ಕಾಗದಗಳು ಪತ್ತೆಯಿಲ್ಲದೆ, ಅಮಲ್ದಾರರು ಪೋಲೀಸರಿಗೆ ದೂರು ಕೊಟ್ಟಿದ್ದರು. ಹಲವು ಕಾಗದಗಳನ್ನು ಬೆಂಗಳೂರಿನ ಸುಗಂಧ ದ್ರವ್ಯದ ಅಂಗಡಿಯೊಂದರಲ್ಲಿ ಪೊಟ್ಟಣ ಕಟ್ಟಲು ಉಪಯೋಗಿಸಲಾಗುತ್ತಿತ್ತೆಂದು ಹೇಳಲಾಗಿದೆ.

ಶಾಸನ ಸಭಾಧಿವೇಶನ

ಬರುವ ಏಪ್ರಿಲ್‌ನಿಂದ ೪ ತಿಂಗಳ ಆಯವ್ಯಯ ಅಂದಾಜನ್ನು ಅಂಗೀಕರಿಸಲು ಸಂಸ್ಥಾನದ ಶಾಸನ ಸಭೆಗಳು ಮಾರ್ಚ್ ತಿಂಗಳಲ್ಲಿ ಸೇರುವ ಸಂಭವವಿದೆ.

ದನಗಳ ಪ್ರದರ್ಶನದಲ್ಲಿ ಬಹುಮಾನ ವಿನಿಯೋಗ

ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವದ ಅಂಗವಾಗಿ ಏರ್ಪಡಿಸಿರುವ ದನಗಳ ಪ್ರದರ್ಶನದಲ್ಲಿ ನಾಳೆ ಸಂಜೆ ೪ ಗಂಟೆಗೆ ಕೈಗಾರಿಕಾ ಮಂತ್ರಿ ಶ್ರೀ ಪೂಜಪ್ಪನವರು ಬಹುಮಾನ ವಿನಿಯೋಗ ಮಾಡುವರು. ಮಾಜಿ ಮಂತ್ರಿ ಶ್ರೀ ಹೆಚ್. ಎಂ ಚೆನ್ನಬಸಪ್ಪನವರು ಅಧ್ಯಕ್ಷತೆ ವಹಿಸುವರು

ಶಿವ ಕಥೆ

ಲಷ್ಕರ್ ಮೊಹಲ್ಲಾ ವೀರನಗೆರೆ ಬಸಪ್ಪನವರ ಗರಡಿ ಮುಂಭಾಗದಲ್ಲಿ ಹಾಕಿರುವ ಚಪ್ಪರದಲ್ಲಿ ಈ ರಾತ್ರಿ ೯ ಗಂಟೆಗೆ ವಿ॥ ಎಸ್. ಚನ್ನಯ್ಯ ಶಾಸ್ತ್ರಿಗಳಿಂದ ಜಗದೇಕ ವೀರ ಎಂಬ ಶಿವಕಥೆಯು ನಡೆಯುವುದು ಸರ್ವರಿಗೂ ಆಹ್ವಾನವಿದೆ.

ವಿಶ್ವವಿದ್ಯಾಲಯ ಪತ್ರಿಕೋದ್ಯಮ ಸಂಘದ ಮುಕ್ತಾಯ ಭಾಷಣ

ಮೈಸೂರು ೧

ವಿಶ್ವವಿದ್ಯಾಲಯ ಪತ್ರಿಕೋದ್ಯಮ ಸಂಘದ ವರ್ಷಾಂತ್ಯದ ಸಮಾರಂಭವನ್ನು ಮಂಡ್ಯದ 'ಜನವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ಕೆ ವೆಂಕಟರಾಮೇಗೌಡರು ನೆನ್ನೆ ಸಂಜೆ ಮಹಾರಾಜ ಕಾಲೇಜಿನಲ್ಲಿ ನೆರವೇರಿಸಿದರು. ಶ್ರೀ ನ ಭಿ ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಆರ್ ನಾಗವೇಣಿಯವರಿಂದ ಪ್ರಾರ್ಥನೆ ಮತ್ತು ಸಂಘದ ಉಪಾಧ್ಯಕ್ಷ ಶ್ರೀ ಎಸ್ ಎಸ್ ಚನ್ನಕೇಶವಯ್ಯನವರಿಂದ ಸ್ವಾಗತವಾದ ನಂತರ ಕಾರ್ಯದರ್ಶಿ ಶ್ರೀ ಡಿ ಎಂ ಗುರುಸಿದ್ದಯ್ಯನವರು ವಾರ್ಷಿಕ ವರದಿಯನ್ನು ಒಪ್ಪಿಸಿದರು. ಶ್ರೀಮತಿ ನ ಗಮಣಿಯವರಿಂದ ಲಘು ಸಂಗೀತವಾದನಂತರ ಸೀನಿಯರ್ ತರಗತಿ ವಿದ್ಯಾರ್ಥಿ ಶ್ರೀ ಗ.ರ ಮಲ್ಲಪ್ಪ ಮತ್ತು ಜೂನಿಯರ್ ತರಗತಿಯ ಶ್ರೀ ಸುಶೀಲೇಂದ್ರರವರು ಭಾಷಣ ಮಾಡಿ ತಮ್ಮ ಅನುಭವಗಳನ್ನು ವಿವರಿಸಿದರು.

ಸಂಘದವರು ಏರ್ಪಡಿಸಿದ್ದ ಸಣ್ಣ ಕತೆಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಶ್ರೀ ವೆಂಕಟರಾಮೇಗೌಡರು ಬಹುಮಾನ ವಿನಿಯೋಗ ಮಾಡಿದನಂತರ ಮಾತನಾಡಿ ವಿದ್ಯಾರ್ಥಿಗಳು ಗುರುಗಳಲ್ಲಿ ಹೆಚ್ಚು ಗೌರವವಿಡಬೇಕೆಂದು ಹೇಳಿದರು. ಇಂದಿನ ಕಾಲದಲ್ಲಿ ಶಾಸನ ಸಭೆಗಳಾಗಲೀ ಅಥವಾ ಜನತೆಯ ಪ್ರತಿನಿಧಿಗಳಾಗಲೀ ಜನರಿಗೆ ಯಾವುದನ್ನು ಮಾಡಿಕೊಡಲು ಸಾಧ್ಯವಾಗುವುದಿಲ್ಲವೋ ಅದನ್ನು ಪತ್ರಿಕೆಗಳು ಮಾಡಬೇಕೆಂದು ನುಡಿದು ಪತ್ರಿಕೋದ್ಯಮದ ಹಲವು ಸಮಸ್ಯೆಗಳನ್ನು ಚರ್ಚಿಸಿದರು. ಅಧ್ಯಕ್ಷರ ಉಪಸಂಹಾರ ಭಾಷಣವಾದನಂತರ ಕಾರ್ಯದರ್ಶಿ ಶ್ರೀ ಕೃಷ್ಣ ಸಂಗಮ ಅವರು ವಂದನಾರ್ಪಣೆ ಮಾಡಿದರು.

ಕೊಲೆ ಅಪಾದನೆಯಲ್ಲಿ ೪ ವರ್ಷ ಕಠಿಣ ಸಜಾ

ಚಾಮರಾಜನಗರದ ೩ ಬ್ಲಾಕು ಚೌಗಟ್ಟು ಗ್ರಾಮದ ಗೌಡ ರಂಗಯ್ಯ ಎಂಬಾತನು ಕದನವೆಂಬ ಕಾರಣದ ಮೇಲೆ ಮಾ ಬಸವನನ್ನು ದೊಣ್ಣೆಯಿಂದ ಹೊಡೆದು ಅವನು ಸ್ವರ್ಗಸ್ಥನಾಗಲು ಕಾರಣವಾದನೆಂದು ಚಾಮರಾಜನಗರದ ಪೋಲೀಸರು ಹೂಡಿದ್ದ ಮೊಕದ್ದಮೆ ಸೆಷನ್ಸ್ ವಿಚಾರಣೆಗೆ ಗುರಿಯಾಗಿ ಆಪಾದಿತನು ತಪ್ಪಿತಸ್ಥನೆಂದು ತೀರ್ಮಾನಿಸಲ್ಪಟ್ಟು ಆತನಿಗೆ ೪ ವರ್ಷ ಕಠಿಣ ಸಜಾ ಮತ್ತು ೨೦೦ ರೂ ದಂಡ, ತಪ್ಪಿದರೆ ಮೂರು ತಿಂಗಳ ಸಜಾ ವಿಧಿಸಲಾಗಿದೆ.

ಹೆಂಡ ಇಳಿಸುವವರ ಸತ್ಯಾಗ್ರಹದಲ್ಲಿ ಮಹಿಳೆಯರು !

ಆಂಧ್ರದ ವಾರಂಗಲ್ಲಿನಲ್ಲಿ ನಡೆಯುತ್ತಿರುವ ಹೆಂಡ ಇಳಿಸುವವರ ಸತ್ಯಾಗ್ರಹದಲ್ಲಿ ೬ ಮಹಿಳೆಯರೂ ಸೇರಿರುತ್ತಾರೆ. ಆ ಸ್ತ್ರೀ ಇಬ್ಬರಿಗೆ ೬೦ ವರ್ಷಕ್ಕೂ ಹೆಚ್ಚು ವಯಸ್ಸಾಗಿದೆ. ಹಿಂದೆ ಸತ್ಯಾಗ್ರಹವು ನಡೆಯುತ್ತಿದ್ದು ಮಧ್ಯೆ ನಿಂತು ಹೋಗಿ ಪುನಃ ಮೊನ್ನೆಯಿಂದ ಆರಂಭವಾಗಿದೆ. ಹೆಂಡ ಇಳಿಸಲು ಸ್ಥಳದವರನ್ನು ಕಂಟ್ರಾಕ್ಟರು ಕರೆಸುತ್ತಿಲ್ಲವೆಂಬುದೇ ಸತ್ಯಾಗ್ರಹದ ಕಾರಣ

ಅಖಿಲ ಭಾರತ ನೇತ್ರ ವೈದ್ಯರ ಸಮ್ಮೇಳನ

ಬೆಂಗಳೂರಿನಲ್ಲಿ ಇದೇ ತಿಂಗಳು ೨೭ನೇ ತಾರೀಖು ಬೆಳಿಗ್ಗೆ ಅಖಿಲ ಭಾರತ ನೇತ್ರ ವೈದ್ಯರ ಸಮ್ಮೇಳನವು ಸೇರುವುದು. ಗವರ್ನರ್ ಶ್ರೀ ಜಯಚಾಮರಾಜ ಒಡೆಯರವರು ಅದರ ಆರಂಭೋತ್ಸವವನ್ನು ನೆರವೇರಿಸುವರು.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು ಕೊಯಮುತ್ತೂರು	೩೯	೬	೦	೪೨	೮	೦
ರತ್ನಚೂಡಿ	೩೮	೮	೦	೪೦	೦	೦
ಕಡ್ಡಿ	೧೬	೧೨	೦	೪೧	೧೨	೦
ಕೆಂಬೂತಿ	೩೯	೮	೦			
ಚೀರಿಗೆ ಸಣ್ಣ	೩೮	೮	೦			
ರಾಗಿ	೨೬	೪	೦	೨೫	೪	೦
ಜೋಳ	೪೬	೦	೦	೪೯	೧೨	೦
ಕಂಬು	೪೨	೪	೦			
ಕಡಲೆಕಾಯಿ	೧೬	೦	೦	೨೫	೬	೦
ಹುಚ್ಚೆಳ್ಳು	೪೬	೧೪	೦	೪೪	೧೨	೦
ಹರಳುಬೀಜ	೨೫	೦	೦	೨೯	೬	೦
ಹೊಂಗೆಬೀಜ	೨೦	೦	೦	೨೪	೧೦	೦
ಕುಸುಬೆ	೪೯	೦	೦	೪೪	೬	೦
ಹೆಸರು	೪೮	೮	೦	೪೯	೦	೦
ಅಲಸಂದೆ	೪೦	೦	೦	೪೪	೮	೦
ಧನಿಯ	೨೬	೦	೦	೨೭	೪	೦
ಅವರೆ	೪೧	೬	೦	೪೪	೮	೦
ಕಡಲೆ	೨೫	೦	೦	೪೯	೨	೦
ಹತ್ತಿ ಬೀಜ	೪೦	೦	೦	೪೪	೬	೦
ಹುಣಸೆಬೀಜ	೬	೦	೦	೭	೮	೦
ಹುಣಸೇಹಣ್ಣು	೩	೧೨	೦	೪	೧೪	೦
ಸೀಗೆಕಾಯಿ	೫	೨	೦	೬	೨	೦
ತೆಂಗಿನಕಾಯಿ	೧೨	೮	೦	೨೭	೨	೦

ಸಂಗೀತ ಕಲಾಭಿವರ್ಧಿನೀ ಸಭಾ,

ಮೈಸೂರು

ಮೇಲ್ಕಂಡ ಸಭೆಯ ಸರ್ವ ಸದಸ್ಯರ ಅಧಿವೇಶನವು

ಜನರಲ್ ಬಾಡಿ ಮೀಟಿಂಗ್

ತಾ॥ 3 3-1957ನೇ ಭಾನುವಾರ ಪ್ರಾತಃಕಾಲ 8 30ಕ್ಕೆ ಶ್ರೀ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ ಏರ್ಪಾಡಾಗಿದೆ. ಸದಸ್ಯರೆಲ್ಲರೂ ತಪ್ಪದೆ ಬರಬೇಕಾಗಿ ಪ್ರಾರ್ಥನೆ

14-2-57 ಗೌರವ ಕಾರ್ಯದರ್ಶಿಗಳು

ವಿಮಾನದಲ್ಲಿ ಶಿಶು ಜನನ

ಲಂಡನ್ನಿನಿಂದ ವಿಯನ್ನಾ ನಗರಕ್ಕೆ ಕಳೆದ ೧೦ನೇ ತಾರೀಖು ರಾತ್ರಿ ಹೊರಟ ವಿಮಾನವೊಂದು ಜರ್ಮನ್ ಪ್ರದೇಶದ ಮೇಲೆ ಹೋಗುತ್ತಿದ್ದಾಗ ಫ್ರಿಟ್ಜ್ ಫ್ಯಾಂಗಲ್ ಎಂಬ ೩೪ ವರ್ಷದ ಫ್ರೆಂಚ್ ತರುಣಿಗೆ ಮಗುವೊಂದು ಜನಿಸಿತು. ೧೫ ಸಾವಿರ ಅಡಿ ಎತ್ತರದಲ್ಲಿ ವಿಮಾನ ಹಾರುತ್ತಿದ್ದಾಗ ಜನನವಾಯಿತು

ಪ್ಯಾಡರ್ ಟೆನ್ನಿಸ್ ಆಟ

ಜಯನಗರದ ಪ್ಯಾಡರ್ ಟೆನ್ನಿಸ್ ಕ್ಲಬ್ಬಿನವರಿಗೂ ಮತ್ತು ಕೃಷ್ಣಮೂರ್ತಿಪುರದ ಕ್ಲಬ್ಬಿನವರಿಗೂ ನೆನ್ನೆ ನಡೆದ ಪಂದ್ಯದಲ್ಲಿ ಜಯನಗರದ ಟೀಮು ೪-೧ ಪಾಯಿಂಟಿನಿಂದ ಜಯಗಳಿಸಿತು

Revision Classes for
H S I, II & III YEAR
H S VENKATA RAO
B A, B L, B Ed
1329 K M Puram, Mysore

ಜೀವನದ ಹರ್ಷವನ್ನು ಸವಿಯಿರಿ
ಮುದುಕರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ ಐಶ್ವರ್ಯ ದೀರ್ಘಾಯುಷ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಶೆ ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿಗಳು ಷಂಡತ್ವ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ ಸಿಫಿಲಿಸ್, ಗೊನೋರಿಯಾ, ಪಾರ್ಶ್ವವಾಯು, ಅಂಡವಾಯು ಮತ್ತು ಎಲ್ಲ ವಿಧವಾದ ಹಳೆಯ ಮೂತ್ರ ರೋಗಗಳಿಗೂ ಕಾರಣವಾಗಿವೆ. ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ॥ ರಂಜಾರವರನ್ನು (ಭಾನುವಾರ ಪ್ರತಿ ೭) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ ೪ ರಿಂದ 8ರ ವರೆಗೆ ಭೇಟಿ ಮಾಡಿರಿ. ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆಯ ವ್ಯಾಧಿಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು. ನೂರಕ್ಕೆ ನೂರು ಖಾತರಿ ಕೊಡಲಾಗುವುದು.

ಅವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ

ರಾಣಾ ಮೆಡಿಕಲ್ ಹಾಲ್,
ಲೇನ್ ನಂ 1745 ಅಶೋಕಾ ರಸ್ತೆ,
ಮೈಸೂರು ಬ್ಯಾಂಕ್ ಬಳಿ ಎಡ ಭಾಗದಿಂದ
ಮೂರನೇ ಕಟ್ಟಡ)
ಮೈಸೂರು.

ವಿನೋಬಾ ಭಾವೆಯವರಿಗೆ ಹೊಟ್ಟೆನೋವು

ಆಚಾರ್ಯ ವಿನೋಬಾ ಭಾವೆಯವರಿಗೆ ಇದ್ದಕ್ಕಿದ್ದಂತೆಯೇ ಹೊಟ್ಟೆನೋವು ಕಾಣಿಸಿಕೊಂಡಿದೆ. ಅವರು ತಮಿಳುನಾಡಿನ ತಾಂಗಿ ಗ್ರಾಮದಲ್ಲಿ ಬಿಡಾರ ಮಾಡಿರುತ್ತಾರೆ

SREE GANESH
TALKIES
From 16-2-57 For 3 days only
THE PROUD & PROFANE
(In Vistavision)
Starring -William Holden and
Deborah Kerr
Along with this programme a Technicolor documentary "Prime Minister Nehru's visit to America" will also be screened as an additional attraction
MATINEE AT 3 P. M.

PRE-UNIVERSITY COURSE
For the benefit of students who want to join the Jr Inter classes in July A SPECIAL COURSE of 4½ months has been started.
Subj:- ENGLISH & P C M
Excellent Tuition-Expert Teachers
CITY TUTORIAL COLLEGE
Old Agrahar, Mysore
Summer Classes in Full Swing

ಮೈಸೂರಿನಲ್ಲಿ ಪ್ರತಿ ತಿಂಗಳು
17 ನೇ ತಾರೀಕು
ವಿಶ್ವವಿಖ್ಯಾತರಾಗಿರುವ

ನವರತ್ನ ಕಲ್ಪ
ವಿಶ್ವೌಷಧವನ್ನು ಕಂಡುಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 59
— ಭೇಟಿಯ ಕಾಲ —
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲ್ಕಂಡ ವಿಷಯವನ್ನು ಗಮನಿಸಿ
ಅವರ ಪರೀಕ್ಷೆ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಅವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಿಸಿ
ಇದು ವಜ್ರ, ಚಿನ್ನ, ಮುತ್ತು, ಹವಳ, ಗೋಮೇಧಿಕ, ನೀಲ, ಪಚ್ಚೆ ರಾಗಿ ಮುತ್ತು ಸೇರಿ ಈ 9 ಅಮೂಲ್ಯ ಹರಳುಗಳ ಸಂಯೋಜನೆ ನಿಮ್ಮ ಎಲ್ಲಾ ಸಾಮಾನ್ಯ ಹಾಗೂ ತೀವ್ರವಾದ ಖಾಯಿಲೆಗಳಿಗೂ ಅತ್ಯುತ್ತಮ ಆರೋಗ್ಯದಾಯಕ ಔಷಧಿ ಇದಾಗಿದೆ.
NAVRATNA KALPA PHARMACY,
JULLUNDUR CITY (India)

Sarada Vilas High School,
MYSORE

Classes for the benefit of the students of the school who have been recently promoted from I & II year classes will be held for months in the mornings from 8 to 10-30 Regular work will commence from 1-3-1957 Students may have their names registered from 18 2-57 in the office between 10 & 11 30 A M on all working days.

K. V. NARAYAN,
O ganiser
Sarada Tutorial Institute

ಚಾಮುಂಡೇಶ್ವರಿ ಟಾಕೀಸ್
16—2— 57 ರಿಂದ ಅಮೋಘ ಪ್ರದರ್ಶನಾರಂಭ
ಕೆಂಪರಾಜ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ
★ **ನಳದಮಯಂತಿ** ★
ಭೂಮಿಕೆ — ಕೆಂಪರಾಜ್, ಭಾನುಮತಿ, ಗಣಪತಿಭಟ್, ಮುಕ್ಕಾಮಲ
ನರಸಿಂಹರಾಜು ಮುಂತಾದವರು
ವಿಶೇಷ ಸೂಚನೆ — ಇದೇ 16ನೇ ತಾ॥ ನಿಂದ ಗಂಡಸರ ಮತ್ತು ಹೆಂಗಸರ ಕೊನೆ ತರಗತಿ ದರವನ್ನು 6 ಆಣೆ (37 ನಯೆ ಪೈಸೆ)ಯಾಗಿ ನಿಗದಿ ಮಾಡಲಾಗಿದೆ
ಮೊದಲು ೨ ವಾರಗಳ ಕಾಲ ಕಾಂಪ್ಲಿಮೆಂಟರಿ, ಫ್ರೀ ಪಾಸು ಮತ್ತು ಇತರ ರಿಯಾಯಿತಿಗಳನ್ನು ಮನ್ನಾ ಮಾಡಲಾಗಿದೆ

ಪ್ರಭು ದೇವಾ ಥಿಯೇಟರ್ (ಪದ್ಮಾ ಟಾಕೀಸ್) ★ 15 2-57ನೆಯ ಶುಕ್ರವಾರ : ಜನಭರಿತವಾದ **50** ನೆಯ ದಿನ
ವಿಕ್ರಮ್ ಪ್ರೊಡಕ್ಷನ್ಸ್‌ರವರ ಅತ್ಯುತ್ತಮವಾದ ಕನ್ನಡ ಚಿತ್ರ — ಪ್ರತಿದಿನ ೩ ಆಟಗಳು
★ **ಭಕ್ತ ಮಾರ್ಕಂಡೇಯ** ★
ಪಾತ್ರ ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ಗಂಗಾಮಯ್ಯ, ಮಾಸ್ಟರ್ ಆನಂದ್, ಬೇಬಿ ಉಮಾ, ಕುಮಾರಿ ಪ್ರಿಯದರ್ಶಿನಿ, ಬಾಲಸರಸ್ವತಿ, ನರಸಿಂಹರಾಜು, ಡಿಕ್ಕಿಮಾಧವರಾವ್

Edited, Printed and Published by A R. Nagarajan at Sadhvi Press D Subbiah Road, Mysore

[illegible] ನಂ. 792

ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ತಮ್ಮ ಓಟನ್ನು ಕೊಡಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಚಿಕಿತ್ಸಕ
ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ
ಏಜೆಂಟರುಗಳು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀ[illegible] ಬೀದಿ,
ಬೆಂಗಳೂರು-2

[illegible]] SADHVI : SATURDAY 16—2—1957 ಮೈಸೂರು : ಶನಿವಾರ ೧೬—೨—೧೯೫೭ : [ಸಂಚಿಕೆ : [illegible]

ಾಶ್ಮೀರದಲ್ಲಿ ನಿಶ್ಶಸ್ತ್ರೀಕರಣಕ್ಕಾಗಿ ನಾಲ್ಕುರಾಷ್ಟ್ರಗಳ ಕರೆ

ಶ್ಮೀರದಲ್ಲಿ ನಿಶ್ಶಸ್ತ್ರೀಕರಣಕ್ಕಾಗಿ ಸಂಧಾನ

ವೀಡನ್ನಿನ ಪ್ರತಿನಿಧಿ ಕಳುಹಲು ಭದ್ರತಾ ಸಮಿತಿಗೆ ನಿರ್ಣಯ

ಟನ್ ಅಮೆರಿಕ, ಕ್ಯೂಬ ಮತ್ತು ಆಸ್ಟ್ರೇಲಿಯಗಳು ನೆನ್ನೆ ಭದ್ರತಾ ಸಮಿತಿಯಲ್ಲಿ ನಿರ್ಣಯವನ್ನು ಮಂಡಿಸಿ, ಸಮಿತಿ ಅಧ್ಯಕ್ಷರೂ, ಸ್ವೀಡನ್ ಪ್ರತಿನಿಧಿಯೂ ಆದ ಗುನ್ನಾರ್ ಜಾರಿಂಗ್‌ರವರು ಭಾರತ ಮತ್ತು ಪಾಕಿಸ್ತಾನಗಳಿಗೆ ತೆರಳಿ ಕಾಶ್ಮೀರದಲ್ಲಿ ನಿಶ್ಶಸ್ತ್ರೀಕರಣದ ವಿಚಾರವನ್ನು ಚರ್ಚಿಸಬೇಕೆಂದು ಸೂಚಿಸಿರುವರು ಕೊಲಂಬಿಯಾ ರಾಷ್ಟ್ರವು ಇದನ್ನು ವಿರೋಧಿಸಿತು ವಿಶ್ವ[illegible]ಯ ಭಾರತ-ಪಾಕಿಸ್ತಾನ ಸಮಿತಿಯು [illegible]ರದ ಮೇಲೆ [illegible] ಭಾರತದ ಸಾರ್ವಭೌಮತ್ವವಿರುವುದೆಂಬುದನ್ನು ಅಂಗೀಕರಿಸಿರುವುದೂ, ಕಾಶ್ಮೀರದಲ್ಲಿ ಪಾಕಿಸ್ತಾನ ಸೈನ್ಯವಿರುವುದು ನ್ಯಾಯವೇ ಇಲ್ಲವೆಂದು ಅದು ಹೇಳಿರುವುದೂ ಕೊಲಂಬಿಯಾ ಪ್ರತಿನಿಧಿಯು ತಿಳಿಸಿ

ರತವು ಈ ನಿರ್ಣಯವನ್ನು ತಿರಸ್ಕರಿಸುತ್ತದೆ ರಷ್ಯವು ನಿರ್ಣಯದ ಎರಡು ಭಾಗಗಳನ್ನು ವೀಟೋ ಮಾಡಲಿರುವುದಾಗಿಯೂ ಗೊತ್ತಾಗಿದೆ

ರಷ್ಯದ ವಿದೇಶಾಂಗ ಮಂತ್ರಿತ್ವದಲ್ಲಿ ಬದಲಾವಣೆ

ಷ್ಯದ ವಿದೇಶಾಂಗ ಮಂತ್ರಿ ಡಿಮಿಟ್ರಿ ಷೆಪಿಲೋವರ ಸ್ಥಾನದಲ್ಲಿ ಉಪ ವಿದೇಶಾಂಗ ಮಂತ್ರಿ ಆಂಡ್ರಿ ಗ್ರಾಮಿಕೊರವರನ್ನು ನೇಮಿಸಲಾಗಿದೆ ಷೆಪಿಲಾವ್‌ರವರನ್ನು ರಷ್ಯದ ಕೇಂದ್ರ ಕಮ್ಯೂನಿಸ್ಟರ ಪಕ್ಷದ ಒಬ್ಬ ಕಾರ್ಯದರ್ಶಿಯಾಗಿ [illegible]ಕೊಳ್ಳಲಾಗಿದೆ

ಅರಮನೆ ನೌಕರರ ಸಭೆ

ಅರಮನೆ ಕೋಟೆ ಮಾರಮ್ಮನ ದೇವಸ್ಥಾನದ ಆವರಣದಲ್ಲಿ ನೆನ್ನೆ ಸಂಜೆ ಅರಮನೆ ಕಛೇರಿ[illegible]ರ ಸಭೆಯು ಶ್ರೀ ಕೆ ಎಂ ಸೀತಾರಾಂರವರ ಅಧ್ಯಕ್ಷತೆಯಲ್ಲಿ ನಡೆಯಿತು ಸರ್ಕಾರಿ ನೌಕರರಿಗೆ ಕೊಡಲಾಗಿರುವಂತೆ ತಾತ್ಕಾಲಿಕ ಪರಿಹಾರವನ್ನು ಅರಮನೆ ನೌಕರರಿಗೆ ಕಳೆದ ಆಗಸ್ಟಿನಿಂದ ಕೊಡುವಂತೆ ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ಶ್ರೀಗಳಾದ ವೇಂಕಟಪ್ಪಗೆ, ಕೆಂಪರಾಜ ಅರಸ್, ಬಿ ಎಂ [illegible]ಯ್ಯ, ಬಿ. ಕೆ ಪುಟ್ಟಯ್ಯ ಮತ್ತು ವೆಂಕಟರಾಮಪಿಳ್ಳೆಯವರು ಭಾಷಣ ಮಾಡಿ

ರ್ತನಾ ಸಭೆ ಮತ್ತು ರಾಮಾಯಣ ಪ್ರವಚನ

ರದ ರಮಾವಿಲಾಸ ರಸ್ತೆಯಲ್ಲಿರುವ ಗೋ[illegible]ರ ಪರಿಷತ್ತಿನ ಕಾರ್ಯಾಲಯದಲ್ಲಿ ಬೆಳಗ್ಗೆ ೭॥ ಗಂಟೆಗೆ ಆಶ್ರಮ ಪ್ರಾರ್ಥನೆ, [illegible]ಪ್ರವಚನ [illegible] ತರಗತಿಗಳೂ, ೭॥ [illegible] ಸಂಘದ ಆಶ್ರಯದಲ್ಲಿ ಶ್ರೀ ಎಸ್ [illegible] ರಾಮಾಯಣ [illegible] ನಡೆಯುತ್ತವೆ.

ಕೇಂದ್ರ ಹಣಕಾಸಿನ ಸಮಿತಿ ಅಧ್ಯಕ್ಷರ ಆಗಮನ

ಸ್ವಂ ಸು. ಕಂತಿ] ಬೆಂಗಳೂರು ೧೬

ಕೇಂದ್ರ ಹಣಕಾಸಿನ ಸಮಿತಿ ಅಧ್ಯಕ್ಷರಾದ ಶ್ರೀ ಕೆ ಸಂತಾನಂರವರು ಈ ದಿನ ಇಲ್ಲಿಗೆ ಆಗಮಿಸಿದರು

○ ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಅಜಯ ಘೋಷರು ಚುನಾವಣೆ ಪ್ರಚಾರಕ್ಕಾಗಿ ಈ ದಿನ ಇಲ್ಲಿಗೆ ಬಂದರು

ಸಚಿವ ಜಗಜೀವನರಾಂರವರ ಅವಿರೋಧ ಆಯ್ಕೆ

ರೈಲ್ವೆ ಮಂತ್ರಿ ಜಗಜೀವನ್ ರಾಂರವರು ಲೋಕಸಭೆಗೆ ಬಿಹಾರಿನ ಸಸರಾಂ ರಿಸರ್ವ್ ಕ್ಷೇತ್ರದಿಂದ ಅವಿರೋಧವಾಗಿ ಚುನಾಯಿತರಾಗಿರುತ್ತಾರೆ. [illegible]ರ ಪ್ರತಿಸ್ಪರ್ಧಿ ಪಿ ಎಸ್ ಪಿ ಪಕ್ಷದ ಚತು ದೂಸದ್‌ರವರು ಚುನಾವಣೆಯಿಂದ ನಿವೃತ್ತರಾಗಿರುವರು

ಪುರಂದರದಾಸರು ಮತ್ತು ತ್ಯಾಗರಾಜರ ಆರಾಧನೆ

ಸರಸ್ವತಿಪುರದ ತ್ಯಾಗಬ್ರಹ್ಮ ಗಾನ ಕಲಾ ಮಂದಿರದ ಆಶ್ರಯದಲ್ಲಿ ಮಹಾತ್ಮಾ ಫಿಕ್ಟರ್ ಕಛೇರಿ ಎದುರಿನ ಮೈದಾನದಲ್ಲಿ ನಾಳೆ ಪುರಂದರದಾಸರು ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವವನ್ನು ಏರ್ಪಡಿಸಲಾಗಿದೆ. ವಿ॥ ಶೀಲಮ್ಮ ಕಡಾಂಬಿಯವರು ಅಧ್ಯಕ್ಷತೆ ವಹಿಸುವರು ಬೆಳಿಗ್ಗೆ ಪೂಜೆ ಮತ್ತು ಸಂಜೆ ೫ ಗಂಟೆಗೆ ಸಭೆಗಳು ಜರುಗುವುವು ಕುಮಾರಿ ನಾಗರತ್ನ ಮತ್ತು ರಾಜಲಕ್ಷ್ಮಿ, ಕುಮಾರಿ ಅನ್ನಪೂರ್ಣ ಮತ್ತು ಸಹೋದರಿ, ವಿ॥ ಎಸ್ ಬಿ. ಶ್ರೀರಂಗಮ್ಮ, ವಿ॥ ಆರ್ ಸರೋಜಮ್ಮ ಮತ್ತು ಶ್ರೀ ಎಂ ಎಸ್ ಸೋಮು, ವಿ॥ ಎಂ ಟಿ ಕೌಸಲ್ಯರವರ ಸಂಗೀತಗಳು ಆಗುವುವು. ವಿ॥ ಎಂ ಎಸ್ ನಾರಾಯಣಯ್ಯಂಗಾರ್ಯರ ವೇಣುವಾದನ ಮತ್ತು ವಿ॥ ಬಿ ಎಸ್ ನಾರಾಯಣಯ್ಯಂಗಾರ್ಯರ ಸಂಗೀತ ಕಛೇರಿಗಳು ಜರುಗುವುವು. ಸರ್ವರಿಗೂ ಆಹ್ವಾನವಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಮತ್ತು ೮-೧೫ ಸರೋಜಾ ನಾರಾಯಣರಾವ್-ದೇವರನಾಮ ೭-೩೦ ರೆಕಾರ್ಡು ೮-೩೦ [illegible] ನಾಗರಾಜರಾವ್ [illegible] ೧-೩೦ ಬಾಲಜಗತ್ [illegible] ೧೨ ಮತ್ತು ೨ [illegible] ಪಿ ಸೀತಾರಾಂ ಸಂಗೀತ ೧೨-೩೦ [illegible] ಗೀತೆಗಳು ೧-೫೦ ವಲ್ಲಭಂ ಕಲ್ಯಾಣ [illegible] ಸಂಗೀತ ಸಂಜೆ ೫ ಪಾಶ್ಚಾತ್ಯ ಸಂಗೀತ ೫-೩೦ ಮತ್ತು ೧೧ ಎಂ ಎ ಲಕ್ಷ್ಮೀನರಸಿಂಹಯ್ಯ-ಸ್ಯಾಕ್ಸೋಫೋನ್ ೬ ೩೦ [illegible] ೭ ೩೦ ಸಂಗೀತ [illegible] ಕನ್ನಡ ನಾಟಕ ೮-೩೦ [illegible] ೯ ೩೦ ವಲ್ಲಭಂ ಕಲ್ಯಾಣ ಸುಂದರಂ ಸಂಗೀತ

ಯೋಜನೆ ನೆರವಿಗಾಗಿ ಹಣದ ಉಳಿತಾಯ ಅಗತ್ಯ

ಮಹಿಳೆಯರಿಗೆ ಮಹಾರಾಣಿಯವರ ಹಿತೋಕ್ತಿ

ಮೈಸೂರು ೧೬

ಶ್ರೀಮನ್ಮಹಾರಾಣಿ ಶ್ರೀಮತಿ ತ್ರಿಪುರ ಸುಂದರಮ್ಮಣ್ಣಿಯವರು ನೆನ್ನೆ ಇಲ್ಲಿ ಸೇರಿದ್ದ ಮಹಿಳಾ ಉಳಿತಾಯ ಚಳವಳಿಯ ಸಂಸ್ಥಾನದ ಸಲಹಾ ಸಮಿತಿ ಪ್ರಥಮ ಸಭೆಯ ಅಧ್ಯಕ್ಷತೆ ವಹಿಸಿದ್ದರು ಅವರು ಭಾಷಣ ಮಾಡಿ ರಾಷ್ಟ್ರ ಹಿತದೃಷ್ಟಿಯಿಂದ ಮಹಿಳೆಯರು ಸ್ವಲ್ಪಸ್ವಲ್ಪವೆ ವರಾ ಹಣವನ್ನು ಉಳಿತಾಯ ಮಾಡಬೇಕೆಂದು ತಿಳಿಸಿದರು ಜನಸಾಮಾನ್ಯರು ಕಷ್ಟಪಟ್ಟು ಉಳಿತಾಯ ಮಾಡದಿದ್ದರೆ [illegible] ನಾಡಿನ ಅಭಿವೃದ್ಧಿಗಾಗಿ ಸಿದ್ಧಗೊಳಿಸಿರುವ ಯೋಜನೆಗಳು ಜಯಪ್ರದವಾಗುವುದಿಲ್ಲವೆಂದು ಹೇಳಿ ಉಳಿತಾಯ ಯೋಜನೆಯಲ್ಲಿ ಸಂಸ್ಥಾನದ ಮಹಿಳೆಯರು ಹಿಂದೆ ಬೀಳಬಾರದೆಂದು ನುಡಿದರು

ಗವರ್ನರ್‌ರವರು ಸಂಜೆ [illegible] ಕಳುಹಿಸಿದ್ದ ಹೇಳಿಕೆಯ[illegible] ಅಲ್ಪ ಉಳಿತಾಯ ಯೋಜನೆಗೆ ವಿಶೇಷ ಪ್ರೋತ್ಸಾಹವು ಅಗತ್ಯವೆಂದು ಸೂಚಿಸಿದ್ದರು ಸಂದೇಶವನ್ನು ಸಮಿತಿಯ ಉಪಾಧ್ಯಕ್ಷಿಣಿ ಶ್ರೀಮತಿ ಲೀಲಾವತಿ ಚಂಡನಪ್ಪನವರು ಓದಿದರು.

ಚಾಮರಾಜ ಮೊಹಲ್ಲಾ ಯುವಕ ಸಂಘದ ಸಭೆ

ಚಾಮರಾಜ ಮೊಹಲ್ಲಾ ಯುವಕ ಸಂಘದ ಸರ್ವ ಸದಸ್ಯರುಗಳ ಸಭೆಯು ನಾಳೆ ಮಧ್ಯಾಹ್ನ ೨ ಗಂಟೆಗೆ [illegible]ಯಲ್ಲಿರುವ ಶ್ರೀಮನ್ಮಹಾರಾಜರವರ ಛತ್ರದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಂ ಎಸ್ ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ ಧಾರವಾಡ ಕರ್ನಾಟಕ ಸಂಘದ ಸದಸ್ಯರೂ, ಸಾಹಿತಿಗಳೂ ಆದ ಶ್ರೀ ಮಹದೇವ ಬಣಕಾರಿಯವರು ಭಾಷಣ ಮಾಡುವರು ಸದಸ್ಯರುಗಳೆಲ್ಲರೂ ತಪ್ಪದೆ ದಯಮಾಡಿಸಬೇಕಾಗಿ ಕೋರಲಾಗಿದೆ

ಕ್ರೀಡಾ ಕೇಂದ್ರದಲ್ಲಿ ಬಹುಮಾನ ವಿನಿಯೋಗ

ನಗರದ ಶಿಶು ಸಾಹಿತ್ಯ ಸಂಘದ ಆಶ್ರಯದಲ್ಲಿ ಕೃಷ್ಣಮೂರ್ತಿಪುರದಲ್ಲಿ ನಡೆಯುತ್ತಿರುವ ಕ್ರೀಡಾ ಕೇಂದ್ರದಲ್ಲಿ ಏರ್ಪಡಿಸಿದ್ದ ವಿವಿಧ ಆಟಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿನಿಯೋಗ ಸಮಾರಂಭವನ್ನು ಕಳೆದ ಬುಧವಾರ ಪೊಲೀಸ್ ಟ್ರೈನಿಂಗ್ ಸ್ಕೂಲಿನ ಪ್ರಿನ್ಸಿಪಲ್ ಶ್ರೀ ಹೆಚ್ ಕೆ ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು ಶ್ರೀ ಆರ್. ಸತ್ಯನಾರಾಯಣರವರು ಸ್ವಾಗತಿಸಿದರು. ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿ, ಶಿಶು ಸಾಹಿತ್ಯ ಸಂಘದ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಕ್ರೀಡಾ ಕೇಂದ್ರಗಳು ಪ್ರತಿ ಊರು ಮತ್ತು ಪ[illegible] ಹಳ್ಳಿಗಳಲ್ಲಿ [illegible] ಸಿದರು [illegible] ನಾಗೇಶರಾಯರು ವಂದನೆಗಳನ್ನರ್ಪಿಸಿದರು ಸಭೆಯು ವಿವಿಧ ವಿನೋದಾವಳಿ [illegible] ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾಯಿತು

ಗ್ರಾಮಾಧಿಕಾರಿಗಳ ವೇತನದ ಬಗ್ಗೆ ಸರ್ಕಾರದ ಪರಿಶೀಲನೆ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೧೬

ಹಳೇ ಮೈಸೂರಿನ ಶ್ಯಾನುಭೋಗ ಪಟೇಲರುಗಳ ಬೇಡಿಕೆ ವಿಚಾರವಾಗಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ೩೦ ಸಾವಿರ ಗ್ರಾಮ ನೌಕರರಲ್ಲಿ ಸಂಬಳದ ವಿಚಾರವಾಗಿ ಅಸಮಾಧಾನವು ಇರುವುದೆಂದೂ, ಅವರ ವೇತನವನ್ನು ಪುನರ್ವಿಮರ್ಶೆ ಮಾಡುವ ವಿಚಾರವನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ ತಿಳಿಸಿದರು ಅವರುಗಳ ಬೇಡಿಕೆ ಬಗ್ಗೆ ಮುಖ್ಯ ಮಂತ್ರಿಯವರು ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿ ಗ್ರಾಮಾಧಿಕಾರಿಗಳು ತಮ್ಮ ಗುರಿಗೆ ಧಕ್ಕೆ ಬರುವ ಕೆಲಸವನ್ನು ಮಾಡಬಾರದೆಂದೂ ಸೂಚಿಸಿದರು

ನಗರದಲ್ಲಿ ಕಮ್ಯೂನಿಸ್ಟ್ ನಾಯಕ ಅಜಯ ಘೋಷರ ಭಾಷಣ

ಮೈಸೂರು ೧೬

ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ನಾಳೆ ಬೆಳಗ್ಗೆ ೧೦ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯುವುದು ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಅಜಯ ಘೋಷ್‌ರವರು ಭಾಷಣ ಮಾಡುವರು ಪ್ರಾಂತೀಯ ಸಮಿತಿಯ ಕಾರ್ಯದರ್ಶಿ ಶ್ರೀ ಎಸ್. ಎಲ್ ಉಪಾಧ್ಯಾಯರು ಅಧ್ಯಕ್ಷತೆ ವಹಿಸುವರು. ಸಾರ್ವಜನಿಕರು ದಯಮಾಡಿಸಬೇಕೆಂದು ಪ್ರಾರ್ಥಿಸಲಾಗಿದೆ ಶ್ರೀ ಅಜಯ ಘೋಷರನ್ನು ಸ್ವಾಗತಿಸಲು ಪಕ್ಷದ ಸದಸ್ಯರು, ಕಾರ್ಯಕರ್ತರು ಮತ್ತು ಬೆಂಬಲಿಗರ ಸಭೆಯು ಪಕ್ಷದ ಕಛೇರಿಯಲ್ಲಿ ನಾಳೆ ಬೆಳಗ್ಗೆ ೮-೩೦ಕ್ಕೆ ನಡೆಯುವುದು ಪಕ್ಷದ ಸದಸ್ಯರೂ, ಬೆಂಬಲಿಗರೂ ಸಭೆಗೆ ದಯಮಾಡಿಸಬೇಕೆಂದು ಕೋರಲಾಗಿದೆ

ದಕ್ಷಿಣ ರೈಲ್ವೆ ನೌಕರರ ಸಂಘದ ಪ್ರತಿನಿಧಿಗಳ ಸಭೆ

ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯದರ್ಶಿ ಶ್ರೀ ಎಸ್ ಗುರುಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಾಳೆ ಮತ್ತು ಮಂಗಳವಾರ [illegible]ಮಾಂಬಾ ಭವನದ ಆವರಣದಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ದಕ್ಷಿಣ ರೈಲ್ವೆ ನೌಕರರ ಸಂಘದ [illegible] ಶಾಖೆಗಳ ಅಧಿಕಾರ ವರ್ಗದವರ ಸಭೆಯು ನಡೆಯುವುದು. ಕೇಂದ್ರ ಸಂಸ್ಥೆಯ ಇತರ ಮುಖಂಡರೂ ಭಾಗವಹಿಸುವರು ನಗರದ ಎಲ್ಲಾ ರೈಲು ನೌಕರರೂ ಬರುವಂತೆ ಕೋರಲಾಗಿದೆ.

○ ಶ್ರೀ ಬಾಳಗಂಚಿ ಸುಬ್ಬರಾಯರ ಮಗ ಶ್ರೀ ಬಿ ಕೃಷ್ಣಮೂರ್ತಿಯವರಿಗೆ [illegible] ಪೌರಸಭಾ ಸದಸ್ಯ ಶ್ರೀ ಕೆ ಅನಂತರಾಮಯ್ಯನವರ ಮಗಳು [illegible] ಸುಲೋಚನರವರನ್ನು ಕೊಟ್ಟು [illegible] ನಡೆಸಿದ ವಿವಾಹದ ಸಂಬಂಧವಾಗಿ ವಧುವಿನ ತಂದೆಯವರು ಮೈಸೂರು ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ೧೦೧ ರೂ ಕಾಣಿಕೆ ಕೊಟ್ಟಿರುತ್ತಾರೆ

ಬೆಂಗಳೂರಿನಿಂದ ಎಕ್ಸ್‌ಪ್ರೆಸ್ ಗೂಡ್ಸ್ ರೈಲು ಸಂಚಾರ

ಭಾರತದ ರೈಲ್ವೆಯವರು ಏರ್ಪಡಿಸಿರುವ ಎಕ್ಸ್‌ಪ್ರೆಸ್ ಗೂಡ್ಸ್ ರೈಲು ಓಡಾಟದ ಅಂಗವಾಗಿ ಹಲವು ಹೊಸ ರಸ್ತೆಗಳಲ್ಲಿ ಇದೇ ವ್ಯವಸ್ಥೆಯನ್ನು ಜಾರಿಗೆ ತರಲಿರುವರು. ಅದರ ಪ್ರಕಾರ ಬೆಂಗಳೂರು-ಮದ್ರಾಸು ಮತ್ತು ಬೆಂಗಳೂರು-ಪೂನಾಗಳ ನಡುವೆ ವಾರದಲ್ಲಿ ನಾಲ್ಕು ದಿನ ಪರಸ್ಪರ ಈ ವಿಧದ ಗೂಡ್ಸ್ ರೈಲು ಸಂಚಾರವಿರುವುದು. ಈ ದೇಶದಲ್ಲಿ ಈಗ ೭೭ ಎಕ್ಸ್‌ಪ್ರೆಸ್ ಗೂಡ್ಸ್ ರೈಲುಗಳನ್ನು ಬಿಡಲಾಗುತ್ತಿದೆ.

ಸ್ಟ್ಯಾಟಿಸ್ಟಿಕ್ಸ್ ಸಂಘದ ಮುಕ್ತಾಯ ಸಮಾರಂಭ

ಮಹಾರಾಜಾ ಕಾಲೇಜು ಸ್ಟ್ಯಾಟಿಸ್ಟಿಕ್ ಸಂಘದ ಮುಕ್ತಾಯ ಭಾಷಣವು ಕಳೆದ ಬುಧವಾರ ನಡೆಯಿತು. ಶ್ರೀ ಎಸ್. ಕೆ. ಪಿಶಾಂಬರ-ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಎ. ಆರ್. ಲೋಕಮಾತಾರವರಿಂದ ಪ್ರಾರ್ಥನೆಯಾದನಂತರ, ಶ್ರೀ ಕೆ. ಸಿ ಶಿವಪ್ಪನವರು ಸ್ವಾಗತ ಭಾಷಣ ಮಾಡಿದರು. ವರದಿಯನ್ನೊಪ್ಪಿಸಿದನಂತರ, ಶ್ರೀ ಶಂಕರನ್‌ರವರು ಬಹುಮಾನ ವಿನಿಯೋಗವನ್ನು ಮಾಡಿದರು. ಆಹಾರ ಸಂಶೋಧನಾಲಯದ ಶ್ರೀ ಹೆಚ್. ಎ ಬಿ ಪಾರ್ಥಿಯಾರವರು ಭಾಷಣ ಮಾಡಿ, ಸಂಖ್ಯಾ ಶಾಸ್ತ್ರವು ವಿಜ್ಞಾನಯುಗದಲ್ಲಿ ಪ್ರಾಮುಖ್ಯವಾದುದೆಂದು ಹೇಳಿ, ಅದರ ಸಂಬಂಧವನ್ನು ಇತರ ಶಾಸ್ತ್ರಗಳೊಂದಿಗೆ ತುಲನಾತ್ಮಕವಾಗಿ ವಿವರಿಸಿದರು. ಡಾ|| ಶಾನಾಚಾರ್‌ರವರ ವೇಣುವಾದನ ಮತ್ತು 'ವಿಪರೀತಕ್ಕಂತೀ ವಿವಾಹ' ಮತ್ತು 'ವ್ಯಾಧಿಗೆ ತಕ್ಕ ವೈದ್ಯ' ಎಂಬ ಎರಡು ನಾಟಕಗಳು ಅಭಿನಯಿಸಲ್ಪಟ್ಟವು. ಕಾರ್ಯದರ್ಶಿ ಶ್ರೀ ಕೆ. ಸಿ. ಶಿವಪ್ಪನವರಿಂದ ವಂದನಾರ್ಪಣೆಯಾದನಂತರ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಬೇಕಾಗಿದ್ದಾರೆ

ಸಿಲ್ಕ್ ಅಥವಾ ಆರ್ಟ್ ಸಿಲ್ಕ್ ವೀವರುಗಳು ಬೇಕಾಗಿದ್ದಾರೆ

ಶಾಂತಿ ಟೆಕ್ಸ್‌ಟೈಲ್ಸ್,
ಇಂಜನಿಯರಿಂಗ್ ಕಾಲೇಜು ಎದುರು,
ಮಾನಂದವಾಡಿ ರಸ್ತೆ, ಮೈಸೂರು

INTER EXAM. 1957

The students who are keen on passing in Chemistry, should ensure their "GUESS PAPER 1957" by buying "INTERMEDIATE CHEMISTRY AT A GLANCE" before the 20th February.

ಪಾಕಿಸ್ತಾನಕ್ಕೆ ಜೆಟ್ ವಿಮಾನಗಳ ಆಮದು

ಅಮೇರಿಕದವರು ಪರಸ್ಪರ ರಕ್ಷಣಾ ಒಪ್ಪಂದದಿಂದ ಒದಗಿಸುವ ಸಹಾಯದ ಕಾರ್ಯಕ್ರಮದ ಅಂಗವಾಗಿ ಪಾಕಿಸ್ತಾನವು ಅಮೇರಿಕದಿಂದ ನೇರವಾಗಿ ಜೆಟ್ ವಿಮಾನಗಳನ್ನು ಯೂರೋಪಿನ ಮೂಲಕ ತರಿಸಿಕೊಳ್ಳುತ್ತಿದೆ. ಕಳೆದ ಮಂಗಳವಾರವೇ ಅದರ ಪ್ರಥಮ ತಂಡವು ಆಗಮಿಸಿತು.

ಹೊನ್ನಾವರಕ್ಕೆ ರಾಜ್ಯಪಾಲರ ಭೇಟಿ

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಇದೇ ತಿಂಗಳು ೧೮ನೇ ತಾರೀಕು ಕಾರವಾರ ಜಿಲ್ಲೆಗೆ ಭೇಟಿ ಕೊಡುವರು. ಅವರು ಅಂದು ಹೊನ್ನಾವರದ ಸೇಂಟ್ ಥಾಮಸ್ ಪ್ರೌಢಶಾಲೆಯ ಸುವರ್ಣ ಮಹೋತ್ಸವವನ್ನು ಆರಂಭಗೊಳಿಸುವರು. ಅದಕ್ಕಾಗಿ ೧೭ನೇ ತಾರೀಕು ಸಂಜೆ ರೈಲಿನಲ್ಲಿ ಹೊರಟು ಅವರು ಅರಸೀಕೆರೆ, ಬೀರೂರು, ತಾಳಗುಪ್ಪೆ, ಸಿರಸಿ ಮಾರ್ಗವಾಗಿ ತೆರಳುವರು.

ಲಕ್ಷ್ಮಿ
ಬೆನಿಫಿಟ್ ಪ್ರದರ್ಶನ
17-2-57ರ ಬೆಳಿಗ್ಗೆ
10 30 ಕ್ಕೆ

ಆರ್ ಮಾರ್

ಶ್ರೇಷ್ಠ ಮಟ್ಟದ ಸಾಮಾಜಿಕ ಚಿತ್ರ
ಪಾತ್ರ :-ದೇವ್ ಆನಂದ್, ಗೀತಾಬಾಲಿ

ನೌಕರರು ಬೇಕಾಗಿದ್ದಾರೆ

ಮೈಸೂರು ಖದ್ದರ್ ಪರಸ್ಪರ ಸಹಾಯ ಸಂಘಕ್ಕೆ ಒಬ್ಬ ಗುಮಾಸ್ತರು (Clerk) ಮತ್ತು ಒಬ್ಬ ವಿದ್ಯಾವಂತ ಸಹಾಯಕರು (Literate Attender) ಬೇಕಾಗಿದ್ದಾರೆ. ಗುಮಾಸ್ತರ ಕೆಲಸಕ್ಕೆ ಸೇರಲಿಚ್ಛಿಸುವವರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಅಕೌಂಟ್ಸ್ ವಿಷಯಗಳಲ್ಲಿ ಸಾಕಷ್ಟು ಅನುಭವ ಹೊಂದಿರಬೇಕು.

ಗುಮಾಸ್ತರ ಹುದ್ದೆಗೆ ಮಾಹೆಯಾನಾ ರೂ. 40 ಮತ್ತು ವಿದ್ಯಾವಂತ ಸಹಾಯಕರ ಹುದ್ದೆಗೆ ಮಾಹೆಯಾನಾ ರೂ. 20 ತಲಬನ್ನೂ, ಸಂಘದ ನಿಯಮಗಳಿಗನುಸಾರವಾಗಿ ತುಟ್ಟಿ ಭತ್ಯವನ್ನೂ ಕೊಡಲಾಗುವುದು.

ಉದ್ಯೋಗ ಅಪೇಕ್ಷಿಸುವವರು ಇದೇ ಮಾಹೆ 28ನೇ ತಾರೀಖು ಗುರುವಾರ ಸಂಜೆ 6 ಘಂಟೆಯೊಳಗಾಗಿ ಸಂಘದ ಕಛೇರಿಗೆ ಯೋಗ್ಯತಾ ಪತ್ರದೊಡನೆ ಅರ್ಜಿಗಳನ್ನು ಸಲ್ಲಿಸಬಹುದು.

ವಿವರಗಳನ್ನು ಸಂಘದ ಕಛೇರಿಯಿಂದ ಕೆಲಸದ ಕಾಲದಲ್ಲಿ ಪಡೆಯಬಹುದು.

ಎಸ್. ಶ್ರೀನಿವಾಸಮೂರ್ತಿ,
ಗೌರವ ಕಾರ್ಯದರ್ಶಿ

THE CHAMPION METROPOLITAN COLLEGE OF COMMERCE

Co-operators' Home, 100' Road, Mysore

ADMISSIONS for fresh classes in Typewriting and Short-hand are now being received

M.S. PUTTANNA, *Vice-Principal*
P. SUBBARAVA SASTRY, *Principal*

ನಂಜನಗೂಡು ಟೌನ್ ಮುನಿಸಿಪಾಲಿಟಿ

ಪ್ರಕಟಣೆ

ನಂಜನಗೂಡು ಟೌನ್ ಮುನಿಸಿಪಲ್ ಸರಹದ್ದಿನೊಳಗೆ ಬರುವ ಎಲ್ಲಾ ವಾಹನಗಳ ಮೇಲೆ 1957-58ನೇ ಸಾಲಿಗೆ, ಅಂದರೆ 1957ನೇ ಏಪ್ರಿಲ್ ಒಂದನೇ ತಾರೀಕಿನ ಆರಭ್ಯ 1958ನೇ ಮಾರ್ಚಿ 31ನೇ ತಾರೀಕು ಪೂರಾ ವಹೀಲ್ ರಿಸೀಟುಗಳಂತೆ ವಸೂಲ್ಮಾಡುವ ಟೋಲ್ ಬಾಬನ್ನು ಹರಾಜು ಮೂಲಕ ಒಂದು [illegible]ವಾಗಿ 1957ನೇ ಮಾರ್ಚಿ 1ನೇ ತಾರೀಖು ಶುಕ್ರವಾರ ಬೆಳಿಗ್ಗೆ 11 ಘಂಟೆಗೆ ಮುನಿಸಿಪಲ್ ಆಫೀಸಿನ ಬಳಿ ಮಾಡಲಾಗುತ್ತೆ.

ಹರಾಜು ಇಸ್ತಿಹಾರ್ ತಪಶೀಲನ್ನು ಮುನಿಸಿಪಲ್ ಆಫೀಸಿನಲ್ಲಿ ಪಡೆಯಬಹುದು.

ನಂ [illegible]
[illegible] 5-2-1957

ಕೆ. [illegible] ಸುಬ್ಬಯ್ಯನ್,
ಪ್ರೆಸಿಡೆಂಟ್,
ಟೌನ್ ಮುನಿಸಿಪಲ್ ಕೌನ್ಸಿಲ್,
ನಂಜನಗೂಡು

ಇಡೀ ಗ್ರಾಮದಲ್ಲೆಲ್ಲಾ ಮಹಿಳೆಯರೇ ನೌಕರರು

ಪೂರ್ವ ಫ್ರಾನ್ಸಿನ ಕೌರ್ಸ್ ಅವ್ ಫ್ರೋಜರ್ಸ್ ಎಂಬ ಹಳ್ಳಿಯಲ್ಲಿ ಗ್ರಾಮದ ಮೇಯರ್ ಮತ್ತು ಪೋಲೀಸರು ಬಿಟ್ಟು ಮಿಕ್ಕ ಎಲ್ಲಾ ಹುದ್ದೆಗಳಿಗೂ ಮಹಿಳೆಯರೇ ನೇಮಕವಾಗಿರುತ್ತಾರೆ. ಮಹಿಳೆಯರು ಗೂಡ್ಸ್ ರೈಲು, ಅಂಚೆ ಕಛೇರಿ ಮತ್ತು ಸೇವಿಂಗ್ಸ್ ಬ್ಯಾಂಕನ್ನು ನಡೆಸುವರು. ತೆರಿಗೆ ಅರ್ಜಿ, ಹೊಗೆಸೊಪ್ಪು ವ್ಯಾಪಾರ, ಅಂಚೆ ಬಟವಾಡೆ ಮುಂತಾದುವನ್ನು ಅವರೇ ಮಾಡುವರು. ಮೇಯರರ ಕಾರ್ಯದರ್ಶಿ ಮತ್ತು ಹಳ್ಳಿಯ ವೈದ್ಯರೂ ಮಹಿಳೆಯರೇ ಆಗಿರುವರು. ಸ್ತ್ರೀಯರೇ ಈ ಕೆಲಸವನ್ನು ಏತಕ್ಕೆ ನಿರ್ವಹಿಸುತ್ತಿರುವರೆಂಬುದನ್ನು ಗಂಡಸರಾರೂ ಪ್ರಶ್ನಿಸುವ ಗೋಜಿಗೆ ಹೋಗಿಲ್ಲ.

೭|| ಅಡಿ ಎತ್ತರದ ಮನುಷ್ಯ

ನಾಸಿಕದ ಬಳಿ ಪರ್ಣೆ ಆರ್ವ ಎಂಬಲ್ಲಿರುವ ೨೫ ವರ್ಷದ ರೈತ ಮನಸಾ ಕಾಳು ಎಂಬುವನು ಏಳು ಅಡಿ ೬ ಅಂಗುಲ ಎತ್ತರವಿದ್ದಾನೆ. ಅವನು ಹತ್ತು ಅಡಿವರೆಗೂ ಬೆಳೆಯಬಹುದೆಂದು ವೈದ್ಯರು ಅಭಿಪ್ರಾಯಪಟ್ಟಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮುತ್ತು

ಕೊಯಮುತ್ತೂರು	೨೯	೦	೦	೪೨	೪	೦
ರತ್ನಚೂಡಿ	೨೮	೨	೦	೪೦	೦	೦
ಕೆಂಬೂತಿ	೨೮	೧೨	೦			
ಕಡ್ಡಿ	೨೮	೨	೦	೪೦	೦	೦
ರಾಗಿ	೨೬	೧೨	೦	೪೫	೦	೦
ಜೋಳ	೪೭	೦	೦	೪೮	೦	೦
ಕಡಲೆಕಾಯಿ	೧೬	೮	೦	೨೬	೧೨	೦
ಹುಚ್ಚೆಳ್ಳು	೪೯	೧೨	೦	೫೫	೧೪	೦
ಹರಳುಬೀಜ	೫೦	೦	೦	೫೨	೦	೦
[illegible]ಬೀಜ	೧೫	೧೪	೦	೨೫	೬	೦
ಹುರುಳಿ	೨೮	೦	೦	೨೫	೧೪	೦
ಅಲಸಂದೆ	೪೭	೨	೦	೫೪	೮	೦
ಅವರೆ	೫೦	೧೨	೦	೫೨	೮	೦
ಧನಿಯ	೨೫	೧೪	೦	೨೫	೨	೦
ಉದ್ದು	೫೪	೦	೦	೬೦	೧೨	೦
ಕಡಲೆ	೫೫	೦	೦	೫೮	೧೪	೦
ಸೆಣಬಿನ ಬೀಜ	೪೯	೦	೦	೫೪	೦	೦
ಹುಣಸೆಬೀಜ	೬	೮	೦	೭	೧೪	೦
ಹುಣಸೇಹಣ್ಣು	೪	೧	೦	೮	೦	೦
ಸೀಗೆಕಾಯಿ	೫	೦	೦	೬	೧೪	೦
ಮೆಣಸಿನಕಾಯಿ	೧೨	೧೨	೦	೨೨	೦	೦

SRI GAYATHRI

TALKIES
LAST DAY

DAVY CROCKETT

From 17-2-57 : For 2 days

GREAT DAY IN THE MORNING

Starring :-Robert Stack, Ruth Roman and Virginia Mayo.

Morning Shows
To-morrow only

Beast From 20,000 Fathoms

THE BRIGHT COLLEGE OF COMMERCE

Fresh ADMISSIONS are received to classes in **COST ACCOUNTS**. Special coaching for **JULY Examinations** conducted by the Institute of Cost and Works Accounts, Calcutta. Tuition given by expert and experienced staff **PRACTICAL** training also given.

Classes in **HINDI** also started. Intending candidates may apply to the Principal on or before the 25th of February 57

ಹಾಂಕಾಂಗ್ ಬೆಂಕಿ ಅನಾಹುತದಿಂದ ೫೭ ಮಂದಿ ಮರಣ

ಹಾಂಕಾಂಗಿನಲ್ಲಿ ಮೊನ್ನೆ ಮುಂಜಾನೆ ಬೆಂಕಿ ಪ್ರಮಾದವುಂಟಾಗಿ ೫೭ ಜನರು ಮಡಿದಿರುವರು. ಅಗ್ನಿ ಶಾಮಕ ದಳದವರು ಹಲವರನ್ನು ರಕ್ಷಿಸಿದರು. ೪೦೦ ಜನರು ನಿರಾಶ್ರಿತರಾಗಿರುವರು.

ನೇತಾಜಿ ಬೋಸರ ಹೆಸರಿನಲ್ಲಿ ವಿಶ್ವವಿದ್ಯಾಲಯ

ಪಶ್ಚಿಮ ಬಂಗಾಳದಲ್ಲಿ ದ್ವಿತೀಯ ಯೋಜನೆಯ ಅಂಗವಾಗಿ ಸ್ಥಾಪಿಸಲಾಗುವ ೩ ಹೊಸ ವಿಶ್ವವಿದ್ಯಾಲಯಗಳ ಪೈಕಿ ಒಂದಕ್ಕೆ ನೇತಾಜಿ ಸುಭಾಷ್‌ಚಂದ್ರಬೋಸರ ಹೆಸರನ್ನಿಡಲಾಗುವುದು.

ಉತ್ತಮವಾದ ಕಟ್ಟಡದ ಪ್ಲಾನುಗಳುಮತ್ತು ಬ್ಲೂಪ್ರಿಂಟ

ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ
ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದಕ್ಕೂ
ಗಾಯತ್ರಿ ಟಾಕೀಸ್ ಎದುರು
ಹ್ಯಾಟ್ ಅಂಗಡಿಯಲ್ಲಿ
ಬಿ. ಮುನಿಸಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿರಿ
ವಾರದ ರಜಾ ಸೋಮವಾರ

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್

ಪ್ರತಿ ಭಾನುವಾರದ

ಸ್ಪೆಷಲ್ ಪೊಟೆಟೊ ಬ್ರೆಡ್

ಶ್ರೀ ಕೃಷ್ಣಾ ಬೇಕರಿ

ಡಿ. ಸುಬ್ಬಯ್ಯಾ ರೋಡ್, ಮೈಸೂರು.
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು
ಮಾಡಲಾಗುತ್ತೆ
ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆರೆದಿಲ್ಲ

ಮೈಸೂರಿನಲ್ಲಿ ಪ್ರತಿ ತಿಂಗಳು 17 ನೇ ತಾರೀಕು

ವಿಶ್ವವಿಖ್ಯಾತವಾಗಿರುವ



ನವರತ್ನ-ಕಲ್ಪ

ದಿವ್ಯೌಷಧವನ್ನು ಕಂಡು
ಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ. 590
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲ್ಕಂಡ ವಿಷಯವನ್ನು ಗಮನಿಸಿ
ಇವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು

ನವರತ್ನ — ಕಲ್ಪ
ಉಪಯೋಗಿಸಿರಿ

ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪದ್ಮರಾಗಿ ಮತ್ತು ಸ್ಫಟಿಕ— ಈ 9 ಅಮೂಲ್ಯ ಹರಳುಗಳ ಯೋಗ. ಇದರಿಂದ ನರಗಳ ದೌರ್ಬಲ್ಯ, ಸಂಬಂಧದ ವ್ಯಾಧಿಗಳು, ಬಿಳಿ ಸೊನ್ನು, ಮೇಹ, ಮೂಲವ್ಯಾಧಿ, ಕಾಮಿಲೆ, ಬಹುಮೂತ್ರ, ಅಸ್ತಮಾ ಮತ್ತು ನಿಮ್ಮ ಇನ್ನಿತರ ಎಲ್ಲ ಸಾಮಾನ್ಯ ಹಾಗೂ ತೀವ್ರವಾದ ಖಾಯಿಲೆಗಳು ಸಂಪೂರ್ಣವಾಗಿ ಗುಣ ಹೊಂದುವುವು. ಅತ್ಯು ನ್ನ ಆರೋಗ್ಯದಾಯಕ ಔಷಧಿ ಇದೊಂದೇ. ವ ಸಾಹಿತ್ಯಗಳಿಗೆ ಬರೆಯಿರಿ:—

NAVRATNA KALPA PHARMACY,
JULLUNDUR CITY (India)

Edited, Printed and Published by
R. Nagarajan at Sadhvi Press,
D. Subbiah Road, Mysore

ಟೆಲಿಫೋನ್ ನಂ. 792



ಕಾಂಗ್ರೆಸ್ ಉಮೇದುವಾರರಿಗೇ
ಜಯವಿತ್ತು ನಿಮ್ಮ ಓಟನ್ನು ಕೊಡಿರಿ

ಇಂದಿನ ಪತ್ರಿಕೆ ೬ ಪುಟ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕ್, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ : 446

ಪುಟ : ೧೩] SADHVI : SUNDAY 17—2—1957 ಮೈಸೂರು : ಭಾನುವಾರ ೧೭—೨—೧೯೫೭ : [ಸಂಚಿಕೆ : ೨೦೩

ಮೈಸೂರು ತಾಲ್ಲೂಕಿನ ೨೦೦ ಗ್ರಾಮ ನೌಕರರ ಮುಷ್ಕರ

ಶ್ಮೀರದಲ್ಲಿ ವಿಶ್ವಸಂಸ್ಥೆ ಪಡೆಗಳ ನ್ನಿಡಲು ಭಾರತ ಒಪ್ಪುವುದಿಲ್ಲ

ಭದ್ರತಾ ಸಮಿತಿಯ ಸಭೆಯಲ್ಲಿ ಕೃಷ್ಣಮೆನನ್ನರ ಹೇಳಿಕೆ

ಶ್ಮೀರದಲ್ಲಿ ಜನಮತಗಣನೆ ನಡೆಸುವ ಸಲು ಗಿ ವಿಶ್ವಸಂಸ್ಥೆ ಪಡೆಗಳನ್ನು ಅಲ್ಲಿಗೆ ಕಳುಹು ದು ಭಾರತದ ಸರ್ವಾಧಿಕಾರ ಮತ್ತು ಅಂತರ ಷ್ಟ್ರೀಯ ನ್ಯಾಯದ ಉಲ್ಲಂಘನೆಯಾಗುವು ದು, ಆದ್ದರಿಂದ ಇದನ್ನು ನಾವು ವಿರೋಧಿಸು ಗಿಯೂ ಶ್ರೀ ವಿ.ಕೆ. ಕೃಷ್ಣಮೆನನ್ನರು ನೆನ್ನೆ ತಾ ಸಮಿತಿಯ ಸಭೆಯಲ್ಲಿ ಸ್ಪಷ್ಟಪಡಿಸಿ ರು.

ಈ ರೀತಿ ಸೈನ್ಯಗಳನ್ನು ಕಳುಹಿಸಬೇಕೆಂದು ಟನ್, ಅಮೆರಿಕಗಳು ಸೂಚಿಸುವುದು ಭಾರತ ದನೆ ಅವುಗಳಿಗಿರುವ ಸ್ನೇಹಕ್ಕೆ ಧಕ್ಕೆಯುಂ ಗುವಂತಹ ವಿಷಯವೆಂದು ಅವರು ಹೇಳಿ ಕ [illegible] ವರ್ಷಗಳಿಂದಲೂ [illegible] ಪೋಷಿಸಲು ಹೋರಾಡಿದ ನಾವು ಇದ ನ್ನು ಈಗಲೂ ವಿರೋಧಿಸುವುದಾಗಿ ತಿಳಿಸಿದರು.

ಈ ಮೊದಲೇ ಪಾಕಿಸ್ತಾನವು ಮಾಡಿರುವ ತ ಪ್ಪಿ ಗಣನೆಗೆ ತಾರದೆ ಭಾರತವನ್ನು ದೂರ ಗುತ್ತಿದೆ. ಕ್ರಮವಾಗಿ ಚುನಾವಣೆಗಳನ್ನು ಸಿ ಆ ಮೂಲಕ ಭಾರತದೊಡನೆ ಕಾಶ್ಮೀರವು ವಿಲೀನವಾದುದನ್ನು ಟೀಕಿಸುವವರು ಯಾವ ಚು ನಾವಣೆಯೂ ಇಲ್ಲದೆ ಸುಮ್ಮನೆ ತನ್ನ ರಾಜ್ಯಾಂ ಗ ಕಾಶ್ಮೀರವನ್ನು ಪಾಕಿಸ್ತಾನವು ಸೇರಿಸಿ ಕೊಳ್ಳುವುದಕ್ಕೆ ಸುಮ್ಮನಿದ್ದಾರೆ. ಅಲ್ಲದೆ ಪಾಕಿಸ್ತಾ ನ ದುರಾಡಳಿತದಿಂದ ಜನತೆಯು ನರಳುತ್ತಿರು ವುದನ್ನೂ ಕಡೆಗಣಿಸಿದ್ದಾರೆ.

ಪಾಕಿಸ್ತಾನವು ನಡೆಸಿದ ದುರಾಕ್ರಮ ಣದ ಬಗ್ಗೆ ಭಾರತವು ಇತ್ತ ದೂರನ್ನು ಕಡೆಗಣಿ ಸಿ ವಿಶ್ವಸಂಸ್ಥೆಯ ಸೈನ್ಯಗಳನ್ನು ಕಾಶ್ಮೀರಕ್ಕೆ ಕ ಳುಹಿಸಬೇಕೆಂಬ ಪಾಕಿಸ್ತಾನದ ಸೂಚನೆಗೆ ಪ್ರಾ ಶಸ್ತ್ಯ ನೀಡಿ, ತನ್ಮೂಲಕ ಭಾರತಕ್ಕೆ ಅನ್ಯಾ ಯ ಮಾಡಲಾಗಿದೆ. ಆದರೆ ಇದಕ್ಕಾಗಿ ಭಾರತ ವು ತನ್ನ ದೂರನ್ನು ವಾಪಸು ಪಡೆಯುವಂತೆ ಮಾಡಲಾಗುವುದಿಲ್ಲ—ಎಂದು ಅವರು ಹೇಳಿದರು. ಸಾರ್ವಭೌಮಾಧಿಕಾರಕ್ಕೆ ಚ್ಯುತಿ ಬರದಂ ತೆ ಭಾರತವು ಸಂಧಾನ ನಡೆಸುವುದಾಗಿಯೂ ಅ ವರು ಭರವಸೆಯಿತ್ತರು.

ಆಜಾದ್ ಕಾಶ್ಮೀರದಿಂದ ವಿರಾರು ಮುಸ್ಲಿಮರ ವಲಸೆ

ಶ್ಮೀರವು ನೂತನ ರಾಜ್ಯಾಂಗವನ್ನು ಇತ್ತೀ ಚೆ ರಚಿಸಿದನಂತರ ಇದುವರೆಗೆ ಸುಮಾರು ೫ ೦೦ ಮಂದಿ ಮುಸ್ಲಿಂ ನಿರಾಶ್ರಿತರು ಪಾಕಿಸ್ತಾ ನ ಆಕ್ರಮಿತವಾದ ಆಜಾದ್ ಕಾಶ್ಮೀರದ ಪ್ರದೇಶದಲ್ಲಿ ನಿರುದ್ಯೋಗ ಮತ್ತು ಆಹಾರಾಭಾ ವವನ್ನು ತಡೆಯಲಾರದೆ ಗಡಿ ದಾಟಿ ಓಡಿ ಬಂ ದಿರುವರೆಂದು ವರದಿಯಾಗಿದೆ. ತಮ್ಮ ಸ್ಥಿತಿಗತಿ ಗಳು ಕ್ರಮವಾಗಬೇಕೆಂದು ಒತ್ತಾಯಪಡಿಸಿದ ವರನ್ನು ಪಾಕಿಸ್ತಾನ ಸರ್ಕಾರವು ಬಂಧಿಸ ಬಹುದಾಗಿ ಅವರುಗಳು ತಿಳಿಸಿದಾರೆ.

ತಾಲ್ಲೂಕು ಗ್ರಾಮಾಧಿಕಾರಿಗಳ ಮುಷ್ಕರದ ಆರಂಭ

ಮೈಸೂರು ೧೬

ಇಡೀ ತಾಲ್ಲೂಕು ಗ್ರಾಮಾಧಿಕಾರಿಗಳ ವಿಶೇಷ ಸಭೆಯು ನೆನ್ನೆ ನಡೆಯಿತು. ತಮ್ಮ ಕೇಂದ್ರ ಕ್ರಿಯಾ ಸಮಿತಿಯು ಮಾಡಿರುವ ನಿರ್ಧಾರದಂತೆ ತಾವೂ ನೆನ್ನೆಯಿಂದ ಮುಷ್ಕರವನ್ನು ಆರಂಭಿಸತಕ್ಕದ್ದೆಂಬ ನಿರ್ಣಯ ಮಾಡಲ್ಪಟ್ಟಿತು. ಅದರಂತೆ ತಾಲ್ಲೂಕಿನ ಸುಮಾರು ೨೦೦ ಮಂದಿ ಪಟೇಲರು, ಶ್ಯಾನುಭೋಗರು, ತಳವಾರರು ತೋಟಿಗಳು ಸರ್ಕಾರದ ಯಾವ ಕೆಲಸಕಾರ್ಯಗಳನ್ನೂ ಮಾಡದೆ ಮುಷ್ಕರವನ್ನು ಆರಂಭಿಸಿದರು.

ಯುವರಾಜಾ ಕಾಲೇಜು ಕರ್ನಾಟಕ ಸಂಘದ ವಾರ್ಷಿಕೋತ್ಸವ

ನಗರದ ಯುವರಾಜಾ ಕಾಲೇಜು ಕರ್ನಾಟಕ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೫|| ಗಂಟೆಗೆ ಕಾಲೇಜು ಆವರಣದಲ್ಲಿ ನಡೆಯುವುದು. ಮಹಾರಾಜಾ ಕಾಲೇಜು ಕನ್ನಡ ಪ್ರಾಧ್ಯಾಪಕರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸುವರು. ಕನ್ನಡ ಉಪಪ್ರಾಧ್ಯಾಪಕ ಶ್ರೀ ಕೆ. ವಿ. ರಾಘವಾಚಾರ್ಯರು ಭಾಷಣ ಮಾಡುವರು.

ಚಾಮರಾಜನಗರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ

ಕಾಂಗ್ರೆಸ್ ಚುನಾವಣಾ ಪ್ರಚಾರದ ಸಲುವಾಗಿ ಮಾಜಿ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ನಾಳೆ ಹರವೆ, ಅರಕಲವಾಡಿ, ಕಾಗಲವಾಡಿ, ಆಲೂರು, ಸಂತೆಮರಳ್ಳಿ, ಉಮ್ಮತ್ತೂರು ಮತ್ತು ಚಾಮರಾಜನಗರಗಳಲ್ಲಿ ಸಂಚರಿಸಿ, ಬಹಿರಂಗ ಸಭೆಗಳಲ್ಲಿ ಭಾಷಣ ಮಾಡುವರು. ಮಹಾಜನರು ಭಾಗವಹಿಸುವಂತೆ ಕೋರಲಾಗಿದೆ.

ಅಂಗಡಿ ಸಿಬ್ಬಂದಿ ಕಾನೂನು ಉಲ್ಲಂಘನೆಗಾಗಿ ದಂಡ

ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆಗಾಗಿ ನಗರದ ದ್ವಿತೀಯ ನ್ಯಾಯಾಧೀಶರು ಮಂಡಿ ಮೊಹಲ್ಲಾ ಅಕ್ಬರ್ ರಸ್ತೆಯ ದಿನಸಿ ಅಂಗಡಿ ಮಾಲೀಕರಾದ ಶ್ರೀ ಅಬುಬಾಕರ್ ಮತ್ತು ಗ್ಲಾಸ್ ವ್ಯಾಪಾರಿಗಳಾದ ವಾಹಬ್ ಸಾಹೇಬರಿಗೆ ತಲಾ ೧೦ ರೂ. ದಂಡವನ್ನು ವಿಧಿಸಿರುತ್ತಾರೆ. ಅದೇ ತಪ್ಪಿತಕ್ಕಾಗಿ ಅಕ್ಬರ್ ರಸ್ತೆಯ ಗ್ಲಾಸ್ ವ್ಯಾಪಾರಿಗಳಾದ ಅಬ್ದುಲ್ಲಾ ಖಾನರಿಗೆ ೫ ರೂ. ಮತ್ತು ತ್ಯಾಗರಾಜ ರಸ್ತೆಯ ಲೇವಾದೇವಿಗಾರರಾದ ಶ್ರೀ ಕನ್ಹಯ್ಯಾಲಾಲರಿಗೆ ೨೦ ರೂ. ದಂಡ ವಿಧಿಸಲಾಗಿದೆ.

ಕುಸ್ತಿಯ ಮೂಲಕ ಉಮೇದುವಾರರ ಆಯ್ಕೆ

ಓಟು ಪಡೆಯುವ ಕಷ್ಟಕರ ಕೆಲಸದ ಬದಲು, ಪಶ್ಚಿಮ ಪಾಕಿಸ್ತಾನದ ಒಂದು ಪೌರಸಭೆಗೆ ಕುಸ್ತಿಯ ಮೂಲಕ ಚುನಾವಣೆಯನ್ನು ಮಾಡಲಾಯಿತು. ಅಲ್ಲಿ ಮಹಮುದ್ ರಂಜಾ ಮತ್ತು ನವೀನ್ ಮಹಮುದ್‌ರವರು ಕುಸ್ತಿಯಾಡಿದರು. ಮಂಜೂರರವರು ಗೆದ್ದು ಸಭೆಗೆ ಚುನಾಯಿತರಾದರು.

ಭದ್ರತಾ ಸಮಿತಿಯ ಕಾಶ್ಮೀರ ನಿರ್ಣಯದಲ್ಲಿ ದುರುದ್ದೇಶ

ಪ್ರಧಾನಿ ನೆಹರೂರವರ ಘೋಷಣೆ

ಭದ್ರತಾ ಸಮಿತಿಯ ಇತ್ತೀಚಿನ ನಿರ್ಣಯವು ಕಾಶ್ಮೀರ ಸಮಸ್ಯೆಯ ಮೂಲಭೂತ ಅಂಶಗಳನ್ನು ಬದಿಗೊತ್ತಿ, ಆಕ್ರಮಣಕಾರಿಯಾದ ಪಾಕಿಸ್ತಾನಕ್ಕೆ ಭಾರತದೊಡನೆ ಸಮಾನ ಹಕ್ಕನ್ನಿತ್ತು-ಭಾರತವು ವಿರೋಧಿಸಿದರೂ ಸಹ, ವಿಶ್ವಸಂಸ್ಥೆ ಪಡೆಗಳನ್ನು ಕಾಶ್ಮೀರಕ್ಕೆ ಕಳುಹಿಸಲು ಸೂಚಿಸಿರುವುದರಿಂದ ಸಮಸ್ಯೆಯ ಪರಿಹಾರಕ್ಕೆ ಅಡ್ಡದಾರಿ ಹಿಡಿಯುವುದಲ್ಲದೆ ದುರುದ್ದೇಶಪೂರಿತವಾಗಿಯೂ ಇರುವುದೆಂದು ಪ್ರಧಾನಿ ನೆಹರೂರವರು ನೆನ್ನೆ ತಿಳಿಸಿದರು.

ಶಾಂತಿ ಸ್ಥಾಪನೆಯ ಉದ್ದೇಶದಿಂದ ಸಮಸ್ಯೆಯ ಪರಿಹಾರಕ್ಕಾಗಿ ಭಾರತವು ಸೂಚಿಸಿದ ಸಲಹೆಗಳೆಲ್ಲವೂ ಭರವಸೆಗಳೆಂದೂ, ಹಿಂದಿನ ಘಟನೆಗಳನ್ನು ಮರೆತು ಈಗ ನಾವು ಕೊಟ್ಟ ವಚನವನ್ನು ಪಾಲಿಸಬೇಕೆಂದೂ ಭಾರತವನ್ನು ಕೇಳಲಾಗುತ್ತಿದೆ. ವಸ್ತುತಃ ನಮ್ಮ ವಾದವನ್ನು ತಿರಸ್ಕರಿಸುವ ಮಾರ್ಗದಲ್ಲಿಯೇ ಮುಂದುವರಿಯಲಾಗುತ್ತಿದೆ—ಎಂದು ಅವರು ನುಡಿದರು.

ಈ ಸಂಬಂಧದಲ್ಲಿ ಬ್ರಿಟನ್ನು ಭಾರತಕ್ಕೆ ಅಪಚಾರವೆಸಗಿದೆಯೆಂದೂ ಅವರು ಬಹಿರಂಗ ಸಭೆಯೊಂದರಲ್ಲಿ ತಿಳಿಸಿದರು.

ಭದ್ರತಾ ಸಮಿತಿಯ ಕಾಶ್ಮೀರ ನಿರ್ಣಯಕ್ಕೆ ರಷ್ಯದ ತಿದ್ದುಪಡಿಗಳು

ಕಾಶ್ಮೀರ ಸಮಸ್ಯೆಯ ಇತ್ಯರ್ಥಕ್ಕಾಗಿ ಭದ್ರತಾ ಸಮಿತಿಯ ಮುಂದೆ ಬ್ರಿಟನ್, ಅಮೆರಿಕಾ ಮುಂತಾದ ರಾಷ್ಟ್ರಗಳು ಮಂಡಿಸಿರುವ ನಿರ್ಣಯಕ್ಕೆ ನೆನ್ನೆ ರಷ್ಯವು ಮೂರು ತಿದ್ದುಪಡಿಗಳನ್ನು ಸೂಚಿಸಿತು. ಅವರ ಪ್ರಕಾರ ಸಮಿತಿಯ ಅಧ್ಯಕ್ಷ ಜಾರಿಂಗರು ಅನಿರ್ದಿಷ್ಟ ಕಾಲ ಸಂಧಾನ ನಡೆಸಬಹುದು. ಮತ್ತು ಕಾಶ್ಮೀರಕ್ಕೆ ವಿಶ್ವಸಂಸ್ಥೆ ಪಡೆಗಳನ್ನು ಕಳುಹಿಸುವ ಸೂಚನೆಯನ್ನೂ ನಿರ್ಣಯದಿಂದ ತೆಗೆದುಹಾಕಬಹುದು.

ಶಾರದಾ ಕಾಮರ್ಸ್ ಇನ್ಸ್ಟಿಟ್ಯೂಟ್

ನಂಜನಗೂಡಿನ ಶ್ರೀ ಶಾರದಾ ಕಾಮರ್ಸ್ ಇನ್ಸ್ಟಿಟ್ಯೂಟಿನ ವಿದ್ಯಾರ್ಥಿಗಳ ಸಂಘದ ಈ ವರ್ಷದ ಕಾರ್ಯನಿರ್ವಾಹಕ ಸಮಿತಿಗೆ ಕೆಳಕಂಡವರನ್ನು ಚುನಾಯಿಸಲಾಗಿದೆ:-ಶ್ರೀ ರಾಮದಾಸ್‌ರವರು ಅಧ್ಯಕ್ಷರು, ಶ್ರೀ ಎ. ಆರ್. ವೆಂಕಟೇಶ್ ಮತ್ತು ಶ್ರೀ ಕಾಶಿ ವಿಶ್ವನಾಥ್ ಕಾರ್ಯದರ್ಶಿಗಳು. ಶ್ರೀಗಳಾದ ಬಿ. ಆರ್. ಚಂದ್ರಶೇಖರ್, ಎಸ್ ನಾಗೇಶ್, ಆರ್. ಹರಿಹರ್, ಕೆ. ಪಿ. ಸಂಪತ್ಕುಮಾರ್ ಮತ್ತು ಎಸ್. ಸಿ. ಸೀತಾರಾಮಶಾಸ್ತ್ರಿ ಸದಸ್ಯರು. ಶಾಲೆಯ ೧೧ನೇ ವಾರ್ಷಿಕೋತ್ಸವಕ್ಕೆ ಹಳೆಯ ವಿದ್ಯಾರ್ಥಿಗಳು ತಮ್ಮ ಚಂದಾ ಹಣವನ್ನು ಈ ಮಾಹೆಯ ಕೊನೆಯೊಳಗೆ ಕಾರ್ಯದರ್ಶಿಗಳ ವಿಳಾಸಕ್ಕೆ ಕಳುಹಿಸಬೇಕೆಂದು ಕೋರಲಾಯಿತು.

ಮಧ್ಯ ಪೂರ್ವಕ್ಕೆ ಅಮೆರಿಕ ಮಿಲಿಟರಿ ನೆರವು ನೀಡುವ ಬಗ್ಗೆ ರಚಿಸಲಾಗಿರುವ ಅಮೆರಿಕದ ಸಲಹಾ ಸಮಿತಿಯ ಸಭೆಯು ಬರುವ ವಾರ ಕರಾಚಿಯಲ್ಲಿ ಸಮಾವೇಶಗೊಳ್ಳುವುದೆಂದು ಗೊತ್ತಾಗಿದೆ.

ಪರೀಕ್ಷೆಯಿಲ್ಲದೆ ತೇರ್ಗಡೆಯಾಗಬಹುದಾದ ಶಾಲೆಗಳು

ಬರುವ ವರ್ಷ ನಾನಾ ಸಂಸ್ಥಾನಗಳಲ್ಲಿ ಸುಮಾರು ೩೦ ಶಾಲೆಗಳನ್ನು ಆರಿಸಿಕೊಂಡು, ಅವುಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಕ್ರಮವನ್ನು ರದ್ದು ಮಾಡಿ, ಅವರು ವರ್ಷದಲ್ಲಿ ತರಗತಿಗಳಲ್ಲಿ ತೋರ್ಪಡಿಸಿರುವ ಪ್ರಗತಿಯನ್ನು ಗಮನಿಸಿ ಮೇಲಿನ ತರಗತಿಗೆ ತೇರ್ಗಡೆ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದೆಂದು ಹೇಳಲಾಗಿದೆ. ಇದಕ್ಕಾಗಿ ದೊಡ್ಡ ಸಂಸ್ಥಾನಗಳಿಂದ ತಲಾ ಎರಡರಂತೆಯೂ ಮತ್ತು ಸಣ್ಣವುಗಳಿಂದ ಒಂದರಂತೆಯೂ ಶಾಲೆಗಳನ್ನು ಆರಿಸಲು ಆಲೋಚಿಸಲಾಗಿದೆ. ಮೇಲ್ಕಂಡ ಶಾಲೆಗಳಲ್ಲಿ ಹೊಸ ಶಿಕ್ಷಣದ ಅವಧಿಯು ಮುಗಿಯುವವರೆಗೆ ಪ್ರತಿಯೊಂದು ಶಾಲೆಗೂ ಮೊದಲನೇ ವರ್ಷದಲ್ಲಿ ೭೫ ಸಹಸ್ರ ರೂ ಮತ್ತು ಅನಂತರ ವರ್ಷಕ್ಕೆ ೫೦ ಸಹಸ್ರ ರೂ ಗಳಂತೆ ಸಹಾಯ ಧನವನ್ನು ಒದಗಿಸತಕ್ಕದ್ದೆಂದೂ ಆಲೋಚಿಸಲಾಗಿದೆ

ನಗರದ ಅಂಚೆ ಮತ್ತು ತಂತಿ ಇಲಾಖಾ ನೌಕರರಿಂದ ಬ್ಯಾಡ್ಜ್ ಚಳುವಳಿ

ನಗರದ ಅಂಚೆ ಮತ್ತು ತಂತಿ ಇಲಾಖಾ ನೌಕರರು ನೆನ್ನೆ ತಮ್ಮ ಬೇಡಿಕೆಗಳ ಬಗ್ಗೆ ಬ್ಯಾಡ್ಜ್ ಚಳುವಳಿಯ ಅಂಗವಾಗಿ ಸಂಜೆ ಬಹಿರಂಗ ಸಭೆಯೊಂದನ್ನು ಏರ್ಪಡಿಸಿದ್ದರು. ಶ್ರೀ ವಾಸುದೇವರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸೀತಾರಾಮಯ್ಯನವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಹೆಚ್. ವಿ. ರಾಘವರಾವ್, ದಾಮೋದರನ್ ನಾಯರ್ ಮತ್ತು ವಿ ರಾಮರಾಯರು ಭಾಷಣ ಮಾಡಿದರು. ಭತ್ಯದ ಏರಿಕೆ, ಮತ್ತೊಂದು ಸಂಬಳದ ಸಮಿತಿ ರಚನೆ ಮುಂತಾದ ಹಲವು ಬೇಡಿಕೆಗಳ ಬಗ್ಗೆ ಸರ್ಕಾರ ಮತ್ತು ಪಾರ್ಲಿಮೆಂಟ್ ಸದಸ್ಯರಿಗೆ ಒಪ್ಪಿಸಲು ತಯಾರಾಗಿದ್ದ ಮನವಿಯೊಂದನ್ನು ಸಭೆಯು ಸ್ವೀಕರಿಸಿತು. ಶ್ರೀ ಬನಾರ್ಜಿರವರು ವಂದನಾರ್ಪಣೆ ಮಾಡಿದರು.

ಪುಸ್ತಕಗಳ ಗಂಟು ಸಿಕ್ಕಿರುತ್ತೆ

ನಗರದ ಸಯ್ಯಾಜಿರಾವ್ ರಸ್ತೆಯ ಹೊಸ ಸ್ಟಾಚ್ಯು ಬಳಿ, ಹಲವು ಪುಸ್ತಕಗಳಿಂದ ಕೂಡಿದ ಒಂದು ಗಂಟು ಸಿಕ್ಕಿರುತ್ತೆ. ಮಾಲೀಕರು ರುಜುವಾತು ಕೊಟ್ಟು ಟೌನ್‌ಹಾಲ್ ಬಳಿ ಇರುವ ಸಿಟಿ ಬಸ್ ಸ್ಟ್ಯಾಂಡ್ ಕಛೇರಿಯಲ್ಲಿ ಅದನ್ನು ಪಡೆಯಬಹುದೆಂದು ತಿಳಿಸಲಾಗಿದೆ.

ದೇವನೂರು ಮಠದ ಸ್ವಾಮಿಗಳ ನಿರ್ಯಾಣ

ನಂಜನಗೂಡು ೧೬

ನಂಜನಗೂಡು ತಾಲ್ಲೂಕು ದೇವನೂರು ಮಠಾಧೀಶರಾದ ಶ್ರೀ [illegible]ಟದಾರ್ಯಸ್ವಾಮಿಗಳು ಇಂದು ಮಧ್ಯಾಹ್ನ ೩|| ಗಂಟೆಯಲ್ಲಿ [illegible] ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೦ ವರ್ಷ ವಯಸ್ಸಾಗಿತ್ತು. ಕಳೆದ ೩ ತಿಂಗಳಿಂದಲೂ ಉಲ್ಬಣಿಸಿದ ಗೂರಲು ಖಾಯಿಲೆಯಿಂದ ಅವರು ಅಸ್ವಸ್ಥರಾಗಿದ್ದರು.

ವಾರ ಭವಿಷ್ಯ

ತಾ|| ೧೦-೩-೫೭ ರಿಂದ ೧೬-೩-೫೭ರ ವರೆಗೆ

ಮೇಷ:— ಕುಟುಂಬದಲ್ಲಿ ಅಶಾಂತಿ ಆರ್ಥಿಕ ಮುಗ್ಗಟ್ಟು. ಅನಿರೀಕ್ಷಿತ ಘಟನೆಗಳು ನೌಕರರಿಗೆ ಕಿರುಕುಳ ಅನಿರೀಕ್ಷಿತ ಪ್ರವಾಸ ಇತರರೊಡನೆ ವೈಮನಸ್ಯ

ವೃಷಭ:—ಗೃಹಕೃತ್ಯದಲ್ಲಿ ತೊಡಕು ಅಧಿಕ ವ್ಯಯ ವ್ಯಾಪಾರದಲ್ಲಿ ಪ್ರಗತಿ ಕಡಿಮೆ ಉದ್ಯೋಗದಲ್ಲಿ ನಿರಾಶೆ ಸಂತೋಷದಾಯಕ ಸನ್ನಿವೇಶ ಮನಶ್ಶಾಂತಿ

ಮಿಥುನ:—ಅಧಿಕ ಧನಲಾಭ ಕೋರ್ಟು ವ್ಯವಹಾರಗಳಲ್ಲಿ ಜಯ. ವ್ಯಾಪಾರದಲ್ಲಿ ಪ್ರಗತಿ ನೌಕರರಿಗೆ ಪ್ರಶಂಸೆ ಮತ್ತು ಬಡ್ತಿ ಕುಟುಂಬದಲ್ಲಿ ಸಂಯಮ ಅಗತ್ಯ

ಕರ್ಕ:— ಈ ವಾರ ಸಾಮಾನ್ಯ ಫಲಗಳು ಅಧಿಕ ವ್ಯಯ. ಇತರರೊಡನೆ ವೈಮನಸ್ಯ ನೌಕರರಿಗೆ ಪ್ರಗತಿ ಕಡಿಮೆ ವ್ಯಾಪಾರವ್ಯವಹಾರಗಳಲ್ಲಿ ನಿರುತ್ಸಾಹ

ಸಿಂಹ:— ಅಧಿಕ ಲಾಭ. ಪ್ರವಾಸ ಯೋಗ ವ್ಯಾಪಾರೋದ್ಯಮಗಳಲ್ಲಿ ಪ್ರಗತಿ ವಧೂವರರಿಗೆ ವಿವಾಹ ಯೋಗ ದೇಹಾಲಸ್ಯ

ಕನ್ಯಾ:— ಆರೋಗ್ಯ ಉತ್ತಮ ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಕಡಿಮೆ ಉದ್ಯೋಗದಲ್ಲಿ ಪ್ರಗತಿಗೆ ಅಡಚಣೆ ಹೊಸ ಉದ್ಯಮಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು

ತುಲಾ —ಕುಟುಂಬದಲ್ಲಿ ಅಶಾಂತಿ. ಪ್ರಗತಿಗೆ ಅಡ್ಡಿ ಧನಲಾಭ ನೌಕರರಿಗೆ ಪ್ರಗತಿ ಸಂತೋಷ ಸಮಾರಂಭಗಳು

ವೃಶ್ಚಿಕ:—ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ. ನೌಕರರಿಗೆ ಹೆಚ್ಚಿನ ಪ್ರಗತಿಯಿಲ್ಲ ಕುಟುಂಬದಲ್ಲಿ ಅಶಾಂತಿ

ಧನುಸ್ಸು:—ಆರೋಗ್ಯ ಉತ್ತಮ ಅಧಿಕ ಧನಲಾಭ ಕುಟುಂಬದಲ್ಲಿ ಸಂತೋಷ ಪ್ರಯಾಣ ಸಂಭವ ವ್ಯಾಪಾರದಲ್ಲಿ ಪ್ರಗತಿ. ನೌಕರರಿಗೆ ಬಡ್ತಿ.

ಮಕರ:—ಆರೋಗ್ಯ ಸಮರ್ಪಕ ಕುಟುಂಬದಲ್ಲಿ ನೆಮ್ಮದಿ ಆರ್ಥಿಕ ಸ್ಥಿತಿ ಸಮರ್ಪಕ ವ್ಯಾಪಾರದಲ್ಲಿ ಅಭಿವೃದ್ಧಿ. ವಿವಾಹ ಯೋಗ ಹೊಸ ಉದ್ಯಮಗಳಿಗೆ ಒಳ್ಳೆಯ ಕಾಲ

ಕುಂಭ.—ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ ಆರ್ಥಿಕ ಪರಿಸ್ಥಿತಿ ಸಾಮಾನ್ಯ. ನೌಕರರಿಗೆ ಪ್ರಗತಿ ವ್ಯಾಪಾರಸ್ಥರಿಗೆ ಶುಭ ಫಲಗಳು

ಮೀನ —ಆರೋಗ್ಯ ಸಮರ್ಪಕ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಕುಟುಂಬದಲ್ಲಿ ಸಂತೋಷ. ವ್ಯಾಪಾರದಲ್ಲಿ ಅಭಿವೃದ್ಧಿ ಪ್ರವಾಸ ಸಂಭವ ನೌಕರರಿಗೆ ಬಡ್ತಿ

ಬಳ್ಳಾರಿ ಆಸ್ಪತ್ರೆಗೆ ಸರ್ಕಾರದಿಂದ ೫೦,೦೦೦ ರೂ.

ಬಳ್ಳಾರಿಯಲ್ಲಿ ಮಹಿಳೆಯರ ಆಸ್ಪತ್ರೆಯನ್ನು ನಿರ್ಮಿಸಲು ಅಲ್ಲಿನ ಶ್ರೀ ಎ ಆರ್ ಕುಪ್ಪುಸ್ವಾಮಿ ಮುದಲಿಯಾರರು ಕೊಟ್ಟಿರುವ ೫೦,೦೦೦ ರೂ ದಾನವನ್ನು ಸರ್ಕಾರದವರು ಅಂಗೀಕರಿಸಿ ತಾವೂ ೫೦,೦೦೦ ರೂ ಗಳನ್ನು ಮಂಜೂರು ಮಾಡಿರುತ್ತಾರೆ

ಕ್ಯಾಲೆಂಡರ್ ಸ್ವೀಕಾರ

ನಗರದ ಮಾಡರ್ನ್ ಆಟೋಮೊಬೈಲ್ಸ್ ಸಂಸ್ಥೆಯವರು ಕಳುಹಿಸಿಕೊಟ್ಟಿರುವ, ಪ್ರಧಾನಿ ನೆಹರೂರವರ ಸುಂದರ ವರ್ಣ ಚಿತ್ರದಿಂದ ಕೂಡಿರುವ ನವ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಉಚಿತ ಬಹುಮಾನ

ನಮ್ಮ ಡೈರಿಯ ವಾರ್ಷಿಕೋತ್ಸವದ ನೆನಪಿಗಾಗಿ ತಾ|| 1 2 57 ರಿಂದ ತಾ|| 28 2.57ರ ವರೆಗೆ, ನೀವು ಕೊಳ್ಳುವ ಪ್ರತಿ ಕೂಪನ್ ಪುಸ್ತಕದೊಂದಿಗೆ ಒಂದು ಉಚಿತ ಬಹುಮಾನ ಪಡೆಯಿರಿ ವಿವರಗಳಿಗೆ ವಿಚಾರಿಸಿರಿ —

[illegible] ಕೇಂದ್ರ

11 ತ್ಯಾಗರಾಜ ರೋಡ್ ಕ್ರಾಸ್ ಮತ್ತು
ಬ್ರಾಂಚ್ ಕೆ ಆರ್ ಆಸ್ಪತ್ರೆ ರಸ್ತೆ, ಮೈಸೂರು

ಮಧ್ಯ ಪ್ರದೇಶದ ಇಬ್ಬರು ಮಂತ್ರಿಗಳ ಆಯ್ಕೆ

ಮಧ್ಯ ಪ್ರದೇಶದ ಆರೋಗ್ಯ ಮಂತ್ರಿ ರಾಣಿ ಪದ್ಮಾವತಿ ಮತ್ತು ಸಮಾಜ ಕಲ್ಯಾಣ ಸಚಿವ ಗಣೇಶ ರಾಮ ಅನಂತ್‌ರವರು ಅಲ್ಲಿನ ಶಾಸನ ಸಭೆಗೆ ಆರಿಸಿಬಂದಿರುತ್ತಾರೆ ಗಣೇಶ ಅನಂತ್‌ರವರು ಹಿಮ್ಮವರ್ಗದವರು ಅವರಿಬ್ಬರ ವಿರುದ್ಧ ಸ್ಪರ್ಧಿಸಿದ್ದ ಇತರ ಉಮೇದುವಾರರು ಚುನಾವಣೆಯಿಂದ ನಿವೃತ್ತರಾಗಿರುವರು

ಆಹಾರ ಸಂಶೋಧನಾಲಯದ ಸಂಘದ ಸಂತೋಷ ಸಮಾರಂಭ

ನಗರದಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯ ಸಂಘದ ವಾರ್ಷಿಕ ಸಂತೋಷ ಸಮಾರಂಭವು ಮೊನ್ನೆ ವೈಸ್‌ಛಾನ್ಸಲರ್ ಡಾ|| ಕೆ ವಿ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು ಡೈರೆಕ್ಟರ್ ಡಾ|| ವಿ ಸುಬ್ರಹ್ಮಣ್ಯಂರವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿಗಳ ವರದಿ ಮತ್ತು ಬಹುಮಾನ ವಿನಿಯೋಗಗಳಾದುವು ಕುವೆಂಪುರವರು ಭಾಷಣ ಮಾಡಿ ಆಹಾರವು ಪೋಲಾಗದಂತೆ ಮಾಡುವುದು ಮತ್ತು ಹೊಸ ಪದಾರ್ಥಗಳ ತಯಾರಿಕೆ ಇವುಗಳ ಬಗ್ಗೆ ಆಲಯದಲ್ಲಿ ನಡೆಯುತ್ತಿರುವ ಕೆಲಸಗಳನ್ನು ಶ್ಲಾಘಿಸಿದರು

ಪುತ್ತಿಗೆ ಸ್ವಾಮಿಗಳವರ ನಿಧನದ ಬಗ್ಗೆ ಸಂತಾಪ ಸೂಚನೆ

ಉಡುಪಿಯ ಪುತ್ತಿಗೆ ಮಠದ ಶ್ರೀ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರು ಬೃಂದಾವನಸ್ಥರಾದ ಬಗ್ಗೆ ಸರಸ್ವತಿಪುರದಲ್ಲಿರುವ ಅಖಿಲ ಭಾರತ ಮಾಧ್ವ ಮಹಾ ಮಂಡಲದ ವಿದ್ಯಾರ್ಥಿನಿಲಯದಲ್ಲಿ ಮೊನ್ನೆ ಸಂತಾಪ ಸೂಚಕ ಸಭೆಯು ನಡೆಯಿತು ನಿಲಯದ ಸಂಚಾಲಕರಾದ ಶ್ರೀ ಕೆ ವಿದ್ಯೋಪಾಧ್ಯಾಯರು ಶ್ರೀ ಶ್ರೀಗಳವರ ಗುಣಗಾನ ಮಾಡಿದರು ವಿಶೇಷ ಪ್ರಾರ್ಥನೆಯೊಂದಿಗೆ ಸಭೆಯು ಮುಕ್ತಾಯವಾಯಿತು

ಬೇಕಾಗಿದ್ದಾರೆ

ಸಿಲ್ಕ್ ಅಥವಾ ಆರ್ಟ್ ಸಿಲ್ಕ್ ವೀವರುಗಳು ಬೇಕಾಗಿದ್ದಾರೆ

ಶಾಂತಿ ಟೆಕ್ಸ್‌ಟೈಲ್ಸ್,
ಇಂಜನಿಯರಿಂಗ್ ಕಾಲೇಜು ಎದುರು,
ಮಾನಂದವಾಡಿ ರಸ್ತೆ, ಮೈಸೂರು

ಶಿಶು ವಿಹಾರಗಳ ಅಧ್ಯಾಪಕಿಯರ ಶಿಕ್ಷಣ ಕೇಂದ್ರ

ವಿದ್ಯಾಭ್ಯಾಸ ಇಲಾಖೆಯ ಮನ್ನಣೆ ಪಡೆದು,
ಶ್ರೀ ಜಗದಂಬಾ ಶಿಶು ವಿಹಾರದಲ್ಲಿ
ತಾ|| 11-3-57 ರಿಂದ ಮೇಲ್ಕಂಡ ಶಿಕ್ಷಣ ಕೇಂದ್ರವನ್ನು ಆರಂಭಿಸಲಾಗುವುದು
ಸೇರಲಪೇಕ್ಷಿಸುವವರು ಶಿಶು ವಿಹಾರದ ಡೈರೆಕ್ಟರರಿಗೆ ಇದೇ 28ನೇ ತಾರೀಕಿನೊಳಗೆ ಅರ್ಜಿಗಳನ್ನು ಸಲ್ಲಿಸಬಹುದು
ಪ್ರವೇಶ ಶುಲ್ಕ 1 ರೂ , ಉಪಕರಣಗಳಿಗಾಗಿ ಶುಲ್ಕ 2 ರೂ ಮತ್ತು ಮಾಹೆಯಾನ ಶುಲ್ಕ 5 ರೂ

PRE-UNIVERSITY COURSE

For the benefit of students who wish to join the Jr Inter classes in July 57 A SPECIAL COURSE of 4½ months has been started

Subj – ENGLISH & P C M

Excellent Tuition-Expert Teachers
CITY TUTORIAL COLLEGE
Old Agrahar Mysore

Summer Classes in Full Swing

ಚುನಾವಣೆಗಳಿಗಾಗಿ ಚಪ್ಪಲಿಗಳ ಶೇಖರಣೆ

ಅಹಮದಾಬಾದಿನಲ್ಲಿ ಮೊನ್ನೆ ನಡೆದ ಕಾಂಗ್ರೆಸ್ ಚುನಾವಣಾ ಸಭೆಗೆ ತೆಗೆದುಕೊಂಡು ಹೋಗುವ ಉದ್ದೇಶದಿಂದ ಹಳೆಯ ಪಾದರಕ್ಷೆಗಳನ್ನು ಸಂಗ್ರಹಿಸುತ್ತಿದ್ದ ೧೪ ವರ್ಷದ ಒಬ್ಬ ಹುಡುಗನೂ ಸೇರಿ ೩ ಜನರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಅವರುಗಳು ೧೦೦ ಪಾದರಕ್ಷೆಗಳನ್ನು ಶೇಖರಿಸಿ, ಗಂಟುಕಟ್ಟಿಕೊಂಡಿದ್ದರು ಅದನ್ನು ನೋಡಿ ಪೋಲೀಸರಿಗೆ ಕೌತುಕ ಹುಟ್ಟಿ ಅವರನ್ನು ಬಂಧಿಸಿರುವರು

ಭೂಗೋಳ ಶಾಸ್ತ್ರ ಸಂಘದ ಮುಕ್ತಾಯ ಸಮಾರಂಭ

ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರ ಸಂಘದ ಮುಕ್ತಾಯ ಸಮಾರಂಭವನ್ನು ಮೊನ್ನೆ ರಿಜಿಸ್ಟ್ರಾರ್ ಶ್ರೀ ಎಫ್ ಜೆ ನರ್ರೋನಾರವರು ನೆರವೇರಿಸಿದರು ಮಹಾರಾಜಾ ಕಾಲೇಜು ಪ್ರಿನ್ಸಿಪಾಲ್ ಶ್ರೀ ಸಿ ಡಿ ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ಮಂಜುಳಾರವರಿಂದ ಪ್ರಾರ್ಥನೆ, ಸಂಘದ ಅಧ್ಯಕ್ಷ ಡಾ|| ಜಿ.ಕೆ ಗೋರಿಯವರಿಂದ ಸ್ವಾಗತ ಭಾಷಣ ಮತ್ತು ಕಾರ್ಯದರ್ಶಿ ಶ್ರೀ ಎಂ ಸಿ ಸಿದ್ದಪ್ಪನವರ ವರದಿಗಳಾದಮೇಲೆ, ಹಲವು ವಿದ್ಯಾರ್ಥಿಗಳು ಭಾಷಣ ಮಾಡಿ ಭೂಗೋಳ ಶಾಸ್ತ್ರದ ಶಾಖೆಯಲ್ಲಿ ಆನರ್ಸ್, ಎಂ ಎ ಮತ್ತು ಎಂ ಎಸ್‌ಸಿ ತರಗತಿಗಳನ್ನು ತೆರೆಯಬೇಕೆಂದು ಕೋರಿದರು ಪ್ರಬಂಧ ಸ್ಪರ್ಧೆಯಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು ಶ್ರೀ ನರ್ರೋನಾರವರು ಮಾತನಾಡಿ ವಿದ್ಯಾರ್ಥಿಗಳು ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಸೂಚಿಸಿದರು ಸಂಘದ ಉಪಾಧ್ಯಕ್ಷ ಶ್ರೀ ಎಂ. ಎನ್ ಕರೀಗೌಡರಿಂದ ವಂದನಾರ್ಪಣೆಯಾಯಿತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಪಿಟೀಲು ೭-೧೫ ಆರ್ ಕಾರದ ಮತ್ತು ಆರ್ ಸರಸ್ವತಿ ದೇವರ ನಾಮ. ೭-೩೦ ಗಾನ ವಿಹಾರ ೮ ೧೫ ಉದಯ ಸಂಗೀತ ಮಧ್ಯಾಹ್ನ ೧೨ ಎಂ. ಎಲ್ ಚೌಡಮ್ಮ-ಗಾಯನ ೧೨-೩೦ ಮತ್ತು ಸಂಜೆ ೫-೩೦ ಎಚ್ ಎಸ್. ಕೃಷ್ಣಮೂರ್ತಿ ವೀಣೆ ೧ ಗಾನ ಮಂಜರಿ ೧ ೫೦ ಪಿಟೀಲು ೬ ೧೫ ಸಂಗೀತ ಕಛೇರಿ ಸಂಜೆ ೬-೫ ವಿಂಪು ಸಂಗೀತ ೬ ೩೦ ಜಾನಪದ ಗೀತೆಗಳು ೬.೩೦ ಗ್ರಾಮಸ್ಥರಿಗಾಗಿ ೭-೩೦ ಮತ್ತು ೮ ೩೦ ಸುನಂದಾ ಘೋಷ್ ರವೀಂದ್ರ ಸಂಗೀತ. ೮ ಹೊಸ ಕನ್ನಡ ಸಿತಾರಮು ಹರು ರೂಪಕ ೮-೪೫ ನಿಲಯ ವಿದ್ವಾಂಸರಿಂದ ಗಾಯನ ೯ ೧೫ ಪ್ರಜಾ ಪ್ರಭುತ್ವದ ಬಗ್ಗೆ ಭಾಷಣ ೯-೩೦ ಕಥಾ ಕಾಲಕ್ಷೇಪ ಟಿ ಸಿ ಗೋಪಿನಾಥದಾಸರಿಂದ

Sarada Vilas High School,
MYSORE

Classes for the benefit of the students of the school who have been recently promoted from I & II year classes will be held for 4 months in the mornings from 8 to 10-30 Regular work will commence from 1-3-1957 Students may have their names registered from 18-2-57 in the office between 10 & 11-30 A.M on all working days

K V NARAYAN,
Organiser
Sarada Tutorial Institute

THE CHAMPION METROPOLITAN COLLEGE OF COMMERCE
Co-operators' Home 100 Road, Mysore

Cost Accountancy Classes

CLASSES for the fresh Fourth Batch have commenced
A few seats are available

M S PUTTANNA
Vice-Principal

P SUBBARAYA SASTRY,
Principal

ಸಣ್ಣ ಕೈಗಾರಿಕೆಗಳಿಗಾಗಿ ಕೇಂದ್ರದಿ ೨೦ ಲಕ್ಷ ರೂ.

ಸಣ್ಣ ಕೈಗಾರಿಕೆಗಳಿಗೆ ಸುಲಭ ರೀತಿಯ ತ್ತಿನ ಆಧಾರದ ಮೇಲೆ ೧೦,೦೦೦ ರೂ. ಸಾಲವನ್ನು ಕೊಡಲು ಮೈಸೂರು ಸರ್ಕಾ ಕೇಂದ್ರದವರು ೨೦ ಲಕ್ಷ ರೂ ಗ್ರಾಂಟು ರುತ್ತಾರೆ

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ
ಡಿ ಸುಬ್ಬಯ್ಯಾ ರೋಡ್, ಮೈಸೂರು
ಒಟ್ಟಾಗಿಯೂ ಸಹ ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತೆ
ನಮ್ಮ ಅಂಗಡಿ ಶಾಖೆಯನ್ನು ಎಲ್ಲೂ ತೆ

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಸರಕುಗಳ
ಗಡಿಯಾರಗಳು ಮತ್ತು ಕನ್ನಡಕಗಳ
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಕಂ
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರ
ಅಶೋಕ ರಸ್ತೆ, ಮೈಸೂರು (Estd 191

ಮೈಸೂರಿನಲ್ಲಿ ಪ್ರತಿ ತಿಂಗಳು
17 ನೇ ತಾರೀಖು
ವಿಶ್ವವಿಖ್ಯಾತರಾಗಿರು

ನವರತ್ನ-ಕ
ದಿವ್ಯೌಷಧವನ್ನು ಕಂಡು ಹಿಡಿದಿರುವ
ಕವಿರಾಜ ಪಂಡಿ
ದುರ್ಗಾದತ್ತ ಶ
ವೈದ್ಯ ವಾಚಸ್ಪತಿಯವ
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ
— ಭೇಟಿಯ ಕಾಲ —
ಬೆಳಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲ್ಕಂಡ ವಿಷಯವನ್ನು ಗಮನಿಸಿ
ಅವರ ಪರೀಕ್ಷಕ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು [illegible] ಸರಿಯಾಗಿ ಪ್ರಕೃತಿಶಾಸ್ತ್ರ
ವಿಧಾನದಲ್ಲಿ ಸಂಶೋಧಿಸುವರು
ನವರತ್ನ — ಕಲ್ಪ
ಉಪಯೋಗಿಸಿರಿ
ಇದು ಪತ್ರ, ಕೆಂಪು, ಮುತ್ತು, [illegible] ಗೋಮೇಧಿಕ, ಹೀರ, ಪಚ್ಚೆ ರಾಗಿಣಿ ಮುತ್ತು ಶಿಲೆ ಈ 9 ಅಮೂಲ್ಯ ಹರಳುಗಳ ಸಂ ಇದು ಎಲ್ಲಾ ಸಾಮಾನ್ಯ ಹಾಗೂ [illegible] ಯಂತೆಗಳೂ ಅತ್ಯುತ್ತಮ ಆರೋಗ್ಯದಾಯ ಔಷಧಿ ಇದೊಂದೇ ಉಚಿತ ಸಾಹಿತ್ಯ ಕಾರಿ —

NAVRATNA KALPA PHARMACY,
JULLUNDUR CITY (India)

Edited, Printed and Published A. R. Nagarajan at Sadhvi Pre D Subbiah Road. Mysore

ಟೆಲಿಫೋನ್ ನಂ. 796

ಇಂದಿನ ಪತ್ರಿಕೆ 3 ಕಾಸು



ಂಗ್ರೆಸ್ ಉಮೇದುವಾರರಿಗೇ
ಯುವಿಟ್ಟು ನಿಮ್ಮ ಓಟನ್ನು ಕೊಡಿರಿ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1 [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಟ : ೧೫] SADHVI : MONDAY 18-2-1957 ಮೈಸೂರು : ಸೋಮವಾರ ೧೮-೨-೧೯೫೭ : [ಸಂಚಿಕೆ : ೨೦೪

ಕಾಶ್ಮೀರದ ಬಗ್ಗೆ ಭಾರತಕ್ಕೆ ಕೊಲಂಬಿಯದ ಬೆಂಬಲ

ಗುರುಕುಲ ವಿದ್ಯಾಭ್ಯಾಸ ಪದ್ಧತಿಯೇ ಶ್ರೇಯಸ್ಕರ

ಕಾಲೇಜು ಟ್ಯುಟೋರಿಯಲ್ ಆಚರಣೆಯಲ್ಲಿ ರಾಜ್ಯಪಾಲರ ಭಾಷಣ

ಮೈಸೂರು ೧೭

ಮಹಾರಾಜಾ ಕಾಲೇಜಿನ ಟ್ಯುಟೋರಿಯಲ್ ದಿನಾಚರಣೆಯು ಮೊನ್ನೆ ಛಾನ್ಸೆಲರ್ ಶ್ರೀ ಜಯಚಾಮರಾಜ ಒಡೆಯರ ಅಧ್ಯಕ್ಷತೆಯಲ್ಲಿ ನೆರೆದು ವೈಸ್ ಛಾನ್ಸೆಲರ್ ಶ್ರೀ ಕೆ. ವಿ. ಪುಟ್ಟಪ್ಪನವರು ಭಾಷಣ ಮಾಡಿದರು

ಛಾನ್ಸೆಲರು ತಮ್ಮ ಭಾಷಣದಲ್ಲಿ, ಮುಂದೆ ಸಮಾಜವನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ವಿದ್ಯಾರ್ಥಿಗಳಿಗೆ ಸಾಧಕವಾಗುವಂತೆ ಉತ್ತಮ ನಡತೆಯನ್ನು ಕಲಿಸುವ ಉದಾತ್ತ ಗುಣವುಳ್ಳ ಗುರುವೇ ಮುಖ್ಯವೆಂದೂ, ಅಂತಹ ಗುರುವು ಪುಸ್ತಕ ಹೇಳಿಕೊಡುವುದಕ್ಕಿಂತಲೂ ಆತನ ಜೀವನವೇ ಹೆಚ್ಚು ವಿಷಯಗಳನ್ನು ಕಲಿಸುವುದೆಂದೂ, ಪ್ರಾಚೀನ ಭಾರತದಲ್ಲಿ ವಿಶ್ವವಿದ್ಯಾಲಯಗಳು ಕಲ್ಲು, ಇಟ್ಟಿಗೆ, ಪುಸ್ತಕ ಭಂಡಾರ ಮತ್ತು ಪ್ರಯೋಗ ಶಾಲೆಗಳಿಂದಲ್ಲ, ಎಲ್ಲಿ ಒಬ್ಬ ಮಹಾ ಗುರುವಿದ್ದನೋ ಅಲ್ಲೇ ಒಂದು ಗುರುಕುಲ ಅಥವಾ ವಿಶ್ವವಿದ್ಯಾಲಯವು ಉದ್ಭವಿಸುತ್ತಿತ್ತೆಂದೂ ಹೇಳಿದರು. ಭಾರತ ವಿದ್ಯಾಭ್ಯಾಸ ಪದ್ಧತಿಯಲ್ಲಿ ಪುನಃ ಅಂತಹ ಮಹಾ ಭಾಗ್ಯವು ಬರುವುದೇ ಎಂದೂ ಅವರು ಪ್ರಶ್ನಿಸಿದರು

ಕಾರಣವು ಮನಸ್ಸಿಗೆ ಹತ್ತಬೇಕಾದರೆ ಭಕ್ತಿ ಗೌರವ ವಾತಾವರಣವು ಇರಬೇಕೆಂದೂ, ಉಪಾಧ್ಯಾಯನು ಶಿಷ್ಯನಲ್ಲಿ ಗೌರವ ಸಂಪಾದಿಸುವ ಶಕ್ತಿಯುಳ್ಳವನಾಗಿರಬೇಕೆಂದೂ ನುಡಿದರು. ಆಧುನಿಕ ಜೀವನದ ಹಲವು ಅಹಿತ ಮಾರ್ಗಗಳ ಕಾರಣವಾಗಿ ನಮ್ಮ ಜೀವನದಲ್ಲಿ ಅಸಭ್ಯತೆಯುಂಟಾಗುತ್ತಿರುವುದರ ಬಗ್ಗೆ ಎಚ್ಚರಿಕೆ ವಹಿಸಬೇಕೆಂದೂ, ಎಂದು ಹೇಳಿ ಮಹಾರಾಜಾ ಕಾಲೇಜಿನ ಉತ್ತಮವಾದ ಹೆಸರಿಗೆ ಕಳಂಕ ಬರುವಂತೆ ವಿದ್ಯಾರ್ಥಿಗಳು ಕಾಲೇಜನ್ನು ಬಿಟ್ಟಮೇಲೂ ವರ್ತಿಸಬಾರದೆಂದೂ ತಿಳಿಸಿದರು

ಶ್ರೀ [illegible]ನವರು ಭಾಷಣ ಮಾಡಿ ಗುರು ಶಿಷ್ಯರ ಸಂಬಂಧವು ಉತ್ತಮಗೊಳ್ಳಲು ಗುರುಕುಲ ಪದ್ಧತಿಯು ಸರಿಯಾದ ಮಾರ್ಗವೆಂದೂ, ವ್ಯಕ್ತಿಗೆ ವಿದ್ಯೆಯು ಜ್ಯೋತಿಯ ರೂಪದಲ್ಲಿ ಗ್ರಹಿಸಲ್ಪಟ್ಟಾಗಲೇ ಅದರ ಸಿದ್ಧಿಯಾಗುವುದೆಂದೂ ಹೇಳಿ ವಿದ್ಯೆಯನ್ನು ಲೌಕಿಕ ಜೀವನಕ್ಕಾಗಿ ಮಾತ್ರ ಕಲಿಯುತ್ತಿರುವುದು ತಪ್ಪಬೇಕೆಂದೂ ಹೇಳಿದರು

ಪ್ರಾರಂಭದಲ್ಲಿ ಶ್ರೀ ಟಿ. ಎಸ್. ಗೋಪಾಲರ ಸ್ವಾಗತ ಗೀತೆಯೂ ಪ್ರೊ|| ಸಿ. ಡಿ. ನರಸಿಂಹಯ್ಯನವರಿಂದ ಸ್ವಾಗತ ಭಾಷಣವೂ ಆದನಂತರ ಶ್ರೀಮತಿ ಮಂಜುಳಾರವರು ಕನ್ನಡ ಗೀತೆಯನ್ನು ಹಾಡಿದರು. ಕಾಲೇಜಿನ ಜೂನಿಯರ್ ತರಗತಿ ವಿದ್ಯಾರ್ಥಿಗಳ ಪರವಾಗಿ ಶ್ರೀ [illegible]ರವರೂ, ಸೀನಿಯರ್ ತರಗತಿಯವರ ಪರವಾಗಿ ಶ್ರೀಮತಿ ಅನಂತಲಕ್ಷ್ಮಿಯವರೂ [illegible]ಣ ಮಾಡಿದರು

ಅಸಿಸ್ಟೆಂಟ್ ಪ್ರೊಫೆಸರರುಗಳ ಹುದ್ದೆ ಅನವಶ್ಯಕ

ವೈಸ್ ಛಾನ್ಸೆಲರರಲ್ಲಿ ಅಧ್ಯಾಪಕರ ಮನವಿ

ಮೈಸೂರು ೧೬

ಇಲ್ಲಿನ ಮಹಾರಾಜಾ ಕಾಲೇಜಿನ ಅಧ್ಯಾಪಕರುಗಳ ಪ್ರತಿನಿಧಿಗಳು ಮೊನ್ನೆ ವೈಸ್ ಛಾನ್ಸೆಲರ್ ಮತ್ತು ವಿಶ್ವವಿದ್ಯಾಲಯದ ಸಿಂಡಿಕೇಟಿನವರ ಬಳಿ ನಿಯೋಗ ಹೋಗಿ ತಮ್ಮ ಸಂಬಳವನ್ನು ೨೦೧ ರೂ. ನಿಂದ ಆರಂಭಿಸಿ ೨೦೦-೨೦-೫೦೦ ರೂ. ಮಾಡಬೇಕೆಂದೂ, ಅಸಿಸ್ಟೆಂಟ್ ಪ್ರೊಫೆಸರುಗಳ ಹುದ್ದೆಗಳನ್ನು ರದ್ದು ಮಾಡಬೇಕೆಂದೂ ತಿಳಿಸಿದರು. ಅವರುಗಳ ಬದಲು ಪ್ರೊಫೆಸರುಗಳು, ರೀಡರುಗಳು ಮತ್ತು ಲೆಕ್ಚರರುಗಳು ಇರಬೇಕೆಂದೂ, ಅಧ್ಯಾಪಕರ ಸಂಬಳ ಮತ್ತು ಪ್ರೊಫೆಸರರ ಪರಮಾವಧಿ ಸಂಬಳವು ೧ : ೪ ಪ್ರಮಾಣದಲ್ಲಿರಬೇಕೆಂದೂ ಕೋರಲಾಯಿತು. ರೀಡರುಗಳಿಗೆ ೫೦೦-೨೫-೭೦೦ ಮತ್ತು ಪ್ರೊಫೆಸರುಗಳಿಗೆ ೭೦೦-೫೦-೧೫೦೦ ರೂ. ಇರಬೇಕೆಂದು ಅರಿಕೆ ಮಾಡಲಾಯಿತು. ವಿಶ್ವವಿದ್ಯಾಲಯದ ಗ್ರಾಂಟ್ ಕಮಿಷನ್ನಿನ ಸಹಾಯ ದ್ರವ್ಯವನ್ನು ಪಡೆದುಕೊಳ್ಳಲು ಯತ್ನಿಸಬೇಕೆಂದೂ ತಿಳಿಸಲಾಯಿತು

ಸಹಕಾರ ಡಿಪ್ಲೊಮಾ ವಿನಿಯೋಗ

ನಗರದಲ್ಲಿರುವ ಸರ್ಕಾರಿ ಸಹಕಾರ ಶಿಕ್ಷಣ ಶಾಲೆಯಲ್ಲಿ ತರಬೇತು ಪಡೆದ ವಿದ್ಯಾರ್ಥಿಗಳಿಗೆ ನಾಳೆ ಸಂಜೆ ೫ ಗಂಟೆಗೆ ಡಿಪ್ಲೊಮಾ ವಿನಿಯೋಗ ಮಾಡಲಾಗುವುದು. ಈ ಬಗ್ಗೆ ನಡೆಯುವ ಸಮಾರಂಭವು ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಬಿ. ಎ. ಪಾಟೀಲರ ಅಧ್ಯಕ್ಷತೆಯಲ್ಲಿ ನಡೆಯುವುದು. ಚೀಫ್ ಮಾರ್ಕೆಟಿಂಗ್ ಅಧಿಕಾರಿಗಳಾದ ಶ್ರೀ ಕೆ. ಆರ್. ಮರುದೇವೇಗೌಡರು ಡಿಪ್ಲೊಮಾವನ್ನು ಹಂಚುವರು.

ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಮಹಾರಾಜರ ಭೇಟಿ

ಶ್ರೀಮನ್ಮಹಾರಾಜರು ಇದೇ ೨೧ನೇ ತಾರೀಖು ಕೊಳ್ಳೇಗಾಲದ ತಾಲ್ಲೂಕಿನ ಮಹದೇಶ್ವರ ಸ್ವಾಮಿ ಬೆಟ್ಟಕ್ಕೆ ಭೇಟಿಯಿತ್ತು ಮಾರನೇ ದಿನ ಹಿಂದಿರುಗುವರು. ಅವರು ೨೩ನೇ ತಾರೀಖು ಬೆಳಿಗ್ಗೆ ೧೦-೩೦ ಗಂಟೆಗೆ ಬೆಂಗಳೂರಿನಲ್ಲಿ ನೇತ್ರ ವೈದ್ಯರ ೧೮ನೇ ಅಖಿಲ ಭಾರತ ಸಮ್ಮೇಳನದ ಉದ್ಘಾಟನೆ ಮಾಡುವರು. ೨೪ನೇ ತಾರೀಖು ಬೆಳಿಗ್ಗೆ ೧೧ಕ್ಕೆ ಯಶವಂತಪುರದಲ್ಲಿ ಹೊಸದಾಗಿ ಕಟ್ಟಲಾಗಿರುವ ಗಂಗಾಧರೇಶ್ವರಸ್ವಾಮಿ ದೇವಸ್ಥಾನದಲ್ಲಿ ಈಶ್ವರನ ಪ್ರತಿಷ್ಠಾ ಮಹೋತ್ಸವದ ಅಧ್ಯಕ್ಷತೆ ವಹಿಸುವರು

ಉಪನಯನ

ಬೆಂಗಳೂರು ಮಲ್ಲೇಶ್ವರದಲ್ಲಿರುವ ಶ್ರೀ ಬಿ. ಸಿ. ಚಂದ್ರಶೇಖರರವರು ತಮ್ಮ ಕುಮಾರ ಚಿ|| ವಿಶ್ವನಾಥನಿಗೆ ನೆನ್ನೆ ನಂಜನಗೂಡಿನಲ್ಲಿ ಬ್ರಹ್ಮೋಪದೇಶವನ್ನು ನೆರವೇರಿಸಿದರು

ಸಂಗೀತ ವಿದ್ವಾನ್ ಶ್ರೀ ಬೆಳಕವಾಡಿ ವರದರಾಜಯ್ಯಂಗಾರ್ಯರು ತಮ್ಮ ಕುಮಾರ ಚಿ|| ರಾಮಾನುಜನಿಗೂ, ಶ್ರೀ ಬಿ. ರಂಗಸ್ವಾಮಯ್ಯಂಗಾರ್ಯರು ತಮ್ಮ ಪುತ್ರ ಚಿ|| ಎ. ಆರ್. ಗೋವರ್ಧನನಿಗೂ ನೆನ್ನೆ ಉಪನಯನವನ್ನು ನೆರವೇರಿಸಿದರು.

ನಗರದಲ್ಲಿ ನೆಹರೂರವರ ಕಾರ್ಯಕ್ರಮ

ಮೈಸೂರು ೧೭

ಪ್ರಧಾನಿ ನೆಹರೂರವರು ಚುನಾವಣೆ ಪ್ರಚಾರ ಕಾರ್ಯಕ್ಕಾಗಿ ಇದೇ ೨೩ನೇ ತಾರೀಖು ಬೆಳಿಗ್ಗೆ ೧೦|| ಗಂಟೆಗೆ ಮಂಡಕಳ್ಳಿ ನಿಲ್ದಾಣಕ್ಕೆ ವಿಮಾನದಲ್ಲಿ ಆಗಮಿಸುವರು. ಅವರು ದೊಡ್ಡಕೆರೆ, ಹಾರ್ಡಿಂಜ್ ಸರ್ಕಲ್ ಮೂಲಕ ಸರ್ಕಾರಿ ಭವನಕ್ಕೆ ತೆರಳುವರು. ೧೧ ಗಂಟೆಗೆ ಭವನದ ಉತ್ತರ ದ್ವಾರದಿಂದ ಹೊರಟು ದಾವೂದ್ ಖಾನ್ ರಸ್ತೆ, ಅಶೋಕಾ ರಸ್ತೆ, ನೆಹರೂ ಸರ್ಕಲ್, ಇರ್ವಿನ್ ರಸ್ತೆ ಮತ್ತು ಸಯ್ಯಾಜಿರಾವ್ ರಸ್ತೆ ಮೂಲಕ ಟೌನ್‌ಹಾಲಿಗೆ ಬರುವರು. ಅಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದನಂತರ ಅಶೋಕ ರಸ್ತೆ, ನೆಹರೂ ಸರ್ಕಲ್ ಕಮಾನಿ ದರ್ವಾಜಾ (ಆರ್ಚ್‌ಗೇಟ್) ಮೂಲಕ ಸರ್ಕಾರಿ ಭವನಕ್ಕೆ ವಾಪಸಾಗುವರು

ವಿವಾಹ ಮಹೋತ್ಸವಗಳು

ಪ|| ವಿ|| ಬೆಳಕವಾಡಿ ಶ್ರೀನಿವಾಸಯ್ಯಂಗಾರ್ಯರ ಪುತ್ರಿ ಸೌ|| ಇಂದಿರಾರವರನ್ನು ಶ್ರೀ ಜಿ. ರಂಗಸ್ವಾಮಿ ಅಯ್ಯಂಗಾರ್ಯರ ಮಗ ಶ್ರೀ ಬಿ. ಆರ್. ವಾಸುದೇವನವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವು ಜರುಗಿತು

ವಿಶ್ವವಿದ್ಯಾಲಯದ ನೌಕರರಾದ ಶ್ರೀ ಸಿ. ಡಿ. ಶ್ರೀನಿವಾಸಮೂರ್ತಿಯವರು ತಮ್ಮ ಕುಮಾರಿ ಸೌ|| ಲೀಲಾರವರನ್ನು ಶ್ರೀ ಡಿ. ರಂಗಾಚಾರ್ಯರ ಕುಮಾರರಾದ ಶ್ರೀ ಡಿ. ಆರ್. ನರಹರಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ಜರುಗಿಸಿದರು

ನಿವೃತ್ತ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಾದ ಶ್ರೀ ಎಸ್. ಸಿ. ಮಲ್ಲಪ್ಪನವರು ತಮ್ಮ ಕುಮಾರಿ ಸೌ|| ವಿಜಯಾಂಬರವರನ್ನು ಅಸಿಸ್ಟೆಂಟ್ ಕಮಿಷನರ್ ಶ್ರೀ ಎಂ. ಬಸಪ್ಪನವರ ಪುತ್ರ ಶ್ರೀ ಎಂ. ಬಿ. ವಿಶ್ವನಾಥರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ಬೆಳೆಸಿದರು

ರೈಲ್ವೆ ಡಿವಿಜನಲ್ ಅಕೌಂಟ್ಸ್ ಕಛೇರಿಯ ಶ್ರೀ ಬಿ. ಕೆ. ಗೋಪಾಲರಾಯರು ತಮ್ಮ ಕುಮಾರಿ ಸೌ|| ಸರೋಜಾರವರನ್ನು ಹೊಸ ನಗರದ ಸಾಬಾಜಿ ಶ್ರೀನಿವಾಸಾಚಾರ್ಯರ ಪುತ್ರ ಶ್ರೀ ಎಸ್. ಕೃಷ್ಣಮೂರ್ತಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನಡೆಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಮುರಳಿ ವೀಣೆ. ೭-೧೫ ಚಂಪಾ ನರಸಿಂಹಮೂರ್ತಿ-ದೇವರ ನಾಮಗಳು ೭-೩೦ ಗಾನ ವಿಹಾರ ೮-೧೫ ಜಿ. ಎಸ್. ಬಾಲಸುಬ್ರಹ್ಮಣ್ಯಂ-ರಿಕಾರ್ಡ್. ಮಧ್ಯಾಹ್ನ ೧೨ ಬಿ. ಕೃಷ್ಣಮೂರ್ತಿ-ಪಿಟೀಲು ೧೨-೩೦ ಎಂ. ಸಿ. ವಸಂತಕೋಕಿಲಂ-ರಿಕಾರ್ಡ್. ೧-[illegible] ವನಿತಾ ವಿಹಾರ ೧-೫೦ ಮುರಳಿ ವೀಣೆ ೨-೧೫ ಗಾಯನ ಸಂಜೆ ೫-೩೦ ವಿ. ವೆಂಕಟಸುಬ್ಬರಾವ್-ವೀಣೆ ೬-೫ ವಿರಾಮ ಸಂಗೀತ ೬-೩೦ ಹೆಚ್. ಸೀತಾರಾಂರಾವ್-ಕಾವ್ಯ ವಾಚನ [illegible]-೩೦ [illegible] ೮-೩೦ "ನಯಾ ಪೈಸಾ" ಪ್ರಸಂಗ [illegible] ಸಂಗೀತ ಸಾಮ್ರಾಜ್ಯ [illegible]-೧೫ ವಿ. ವೆಂಕಟಸುಬ್ಬರಾವ್ [illegible] ೧೦ ಚಿತ್ರ ಸಂಗೀತ ೧೦-೧೫ ಉರ್ದು ಹಾಡುಗಳು

ಕಾಶ್ಮೀರದ ಬಗ್ಗೆ ಭಾರತದ ವರ್ತನೆಗೆ ಕೊಲಂಬಿಯಾ ಬೆಂಬಲ

ಪಾಕಿಸ್ತಾನದ ಬೆಂಬಲಿಗ ರಾಷ್ಟ್ರಗಳಿಗೆ ತಳಮಳ

ಕಾಶ್ಮೀರದ ಪ್ರಶ್ನೆ ಬಗ್ಗೆ ಭದ್ರತಾ ಸಮಿತಿಯಲ್ಲಿ ಕೊಲಂಬಿಯಾ ಪ್ರತಿನಿಧಿ ಫ್ರಾನ್ಸಿಸ್ಕೊ ಉರುಟಿಯಾರವರು ಮಾತನಾಡಿ ಅಡ್ಮಿರಲ್ ನಿಮಿಟ್ಸ್‌ರನ್ನು ಜನಮತಗಣನೆ ಅಧಿಕಾರಿಯಾಗಿ ಮಾಡಬೇಕೆಂಬ ವಿಚಾರವು ಕೇವಲ ಪ್ರಚಾರ ದೃಷ್ಟಿಯುಳ್ಳದಾಗಿತ್ತೆಂದೂ, ಅದೇ ಜನಮತಗಣನೆಯನ್ನು ತೆಗೆದುಕೊಳ್ಳಲು ಅಡ್ಡಿಯಾಯಿತೆಂದೂ ತಿಳಿಸಲಾಗಿ ಅದರಿಂದ ಪಾಕಿಸ್ತಾನದ ಬೆಂಬಲಿಗ ಪಶ್ಚಿಮ ರಾಷ್ಟ್ರಗಳಲ್ಲಿ ದಂಗು ಬಡಿದಂತಾಗಿರುವುದೆಂದು ಗೊತ್ತಾಗಿದೆ. ಭಾರತದ ವರ್ತನೆಯು ಜನಮತಗಣನೆಗೆ ಅಡ್ಡಿಯಾಗಿಲ್ಲವೆಂದೂ ಅವರು ಹೇಳಿರುತ್ತಾರೆ. ಭಾರತವು ಸೂಚಿಸಿದ್ದಂತೆ ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರನ್ನು ಹಿಂದೆ ಜನಮತಗಣನೆ ಅಧಿಕಾರಿಯಾಗಿ ನೇಮಿಸಿದ್ದರೆ ಈಗಾಗಲೇ ಕಾಶ್ಮೀರದಲ್ಲಿ ಜನಮತಗಣನೆಯಾಗಿರುತ್ತಿತ್ತೆಂದೂ ಅವರು ಹೇಳಿದರು

ಕಾಶ್ಮೀರದ ವಿಚಾರವಾಗಿ ವಿಶ್ವಸಂಸ್ಥೆಯು ಭಾರತ ಪಾಕಿಸ್ತಾನ ಸಮಿತಿಯನ್ನು ನೇಮಿಸಲಾಗಿತ್ತಷ್ಟೆ? ಕೊಲಂಬಿಯದ ಪ್ರತಿನಿಧಿಯನ್ನು ಸಮಿತಿಯ ಅಧ್ಯಕ್ಷರಾಗಿ ಚುನಾಯಿಸಲಾಗಿತ್ತು.

ಮದ್ರಾಸು ಅಂಚೆ ನೌಕರರಿಂದ ಅರ್ಧ ಗಂಟೆ ಮುಷ್ಕರ

ಮದ್ರಾಸಿನ ಅಂಚೆ ಇಲಾಖೆಯ ಮೂರು ಮತ್ತು ನಾಲ್ಕನೇ ವರ್ಗಗಳ ನೌಕರರಾದ ಗುಮಾಸ್ತರು ಮತ್ತು ಜವಾನರು ಮೊನ್ನೆ ಮಧ್ಯಾಹ್ನ ಅರ್ಧ ಗಂಟೆ ಕಾಲ ಮುಷ್ಕರ ನಡೆಸಿ, ಶಿಸ್ತಿನಿಂದ ಮೆರವಣಿಗೆಯಲ್ಲಿ ಪೋಸ್ಟ್ ಮಾಸ್ಟರ್ ಜನರಲ್ಲರ ಬಳಿಗೆ ಹೋಗಿ, ಕಛೇರಿಯಲ್ಲಿ ಸಾಕಷ್ಟು ನೌಕರರು ಇಲ್ಲದಿರುವುದರಿಂದ ತಮಗೆ ಹೆಚ್ಚಿನ ಹೊರೆಯು ಬಿದ್ದಿರುವುದೆಂದೂ, ಈ ಕಾರಣದಿಂದ ತಮ್ಮ ಸ್ಥಿತಿಗಳಲ್ಲಿ ಉಂಟಾಗುವ ನ್ಯೂನತೆಗಳಿಂದಾಗಿ ಇಡೀ ಅಂಚೆ ಮತ್ತು ತಂತಿ ಇಲಾಖೆಯ ಕೆಲಸವು ನಡೆಯಲು ಧಕ್ಕೆಯೊದಗುವುದೆಂದೂ ಹೇಳಿ, ಕೂಡಲೇ ೫೦ ಮಂದಿ ಗುಮಾಸ್ತರನ್ನು ನೇಮಿಸಬೇಕೆಂದು ಒತ್ತಾಯಪಡಿಸಿದರು. ಅಂಚೆ ಕಛೇರಿಗಳಲ್ಲಿ ಅಧಿಕಾರಿಗಳು ಸಾಕಷ್ಟು ಸಿಬ್ಬಂದಿಯನ್ನು ನೇಮಿಸದೆ ತಾತ್ಸಾರ ಭಾವನೆ ತಾಳಿರುವುದನ್ನು ಪ್ರದರ್ಶನಕಾರರು ತೀವ್ರವಾಗಿ ಪ್ರತಿಭಟಿಸಿದರು. ಸೂಪರಿಂಟೆಂಡೆಂಟರು ಅವರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಅವರ ಬೇಡಿಕೆಗಳಿಗೆ ಅಗತ್ಯವಾದ ಮಂಜೂರಾತಿ ಪಡೆಯಲು ಮೇಲ್ಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದೆಂದು ತಿಳಿಸಿದರು

○ ಕಾಶ್ಮೀರದ [illegible]ಧಾನಿ ಶ್ರೀನಗರ ಮತ್ತು ಇತರ ನಗರಗಳಲ್ಲಿ ಅನೇಕ ರೈತರು ಮತ್ತು ಕಾರ್ಮಿಕರು ಸಾಮ್ರಾಜ್ಯಶಾಹಿ ವಿರೋಧದ ದಿನಾಚರಣೆಯನ್ನು ನಡೆಸಿ, ಕಾಶ್ಮೀರದಲ್ಲಿ ವಿದೇಶೀ ಸೈನ್ಯಗಳನ್ನು ಇಡುವ ಬಗ್ಗೆ ಮಾಡಲಾಗಿರುವ ಸೂಚನೆಗೆ ಪ್ರತಿಭಟನೆಯನ್ನು ಸೂಚಿಸಿದರು.

ಜೊಹಾನ್ಸ್‌ಬರ್ಗಿನಲ್ಲಿ ೨ ಸಾವಿರ ಆಫ್ರಿಕನ್ನರ ಬಂಧನ

ಜೊಹಾನ್ಸ್‌ಬರ್ಗಿನಲ್ಲಿ ಬಸ್ ಪ್ರಯಾಣದ ದರವನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ ಆಫ್ರಿಕನ್ನರು ಕಳೆದ ಆರು ವಾರಗಳಿಂದಲೂ ಬಸ್ಸು ಪ್ರಯಾಣವನ್ನು ಬಹಿಷ್ಕರಿಸಿದ್ದಾರೆ. ಅಲ್ಲಿನ ಶಸ್ತ್ರಸಜ್ಜಿತ ಪೊಲೀಸರು ನೆನ್ನೆ ದಿನ ಆಫ್ರಿಕನ್ನರ ಹಾಸ್ಟಲೊಂದರ ಮೇಲೆ ಧಾಳಿ ನಡೆಸಿ, ರಹದಾರಿ, ರಿಜಿಸ್ಟ್ರೇಷನ್ನು ಮತ್ತು ತೆರಿಗೆ ಶಾಸನಗಳನ್ನು ಉಲ್ಲಂಘಿಸಿ ಅಲ್ಲಿ ಬಿಡಾರವಾಡಿದ್ದ ೨ ಸಹಸ್ರ ಮಂದಿ ಆಫ್ರಿಕನ್ನರನ್ನು ದಸ್ತಗಿರಿ ಮಾಡಿದರೆಂದೂ ಅವರೆಲ್ಲರೂ ಹೆಚ್ಚಿನ ಬಸ್ ದರವನ್ನು ಕೊಡದೆಯೂ; ತಮ್ಮ ಮನೆಗಳಿಂದ ಹಾಸ್ಟಲಿಗೆ ಸುಮಾರು ಒಂಭತ್ತು ಮೈಲಿ ನಡೆಯುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿಯೂ ಅಲ್ಲಿಯೇ ಬಿಡಾರ ಮಾಡಿದ್ದರೆಂದು ಹೇಳಲಾಗಿದೆ. ಬಸ್ ಪ್ರಯಾಣದ ಬಹಿಷ್ಕಾರವು ಈಗ ಪ್ರಿಟೋರಿಯಾ ಮತ್ತು ಪೋರ್ಟ್ ಎಲಿಜಬೆತ್‌ಗಳಿಗೂ ಹರಡಿರುವುದೆಂದು ವರದಿಯಾಗಿದೆ.

ಚುನಾವಣಾ ಘರ್ಷಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮರಣ

ವಾರಂಗಲ್ಲಿನ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಾದ ಜಿ. ವೆಂಕಟಯ್ಯ ಎಂಬುವರು ಕಳೆದ ಗುರುವಾರ ಚುನಾವಣಾ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾಗ ಕಮ್ಯೂನಿಸ್ಟರೂ ಮತ್ತು ಸಮಾಜವಾದಿ ಪಕ್ಷದವರೂ ಅವರನ್ನು ಹೊಡೆದ ಕಠಿಣವಾಗಿ ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟು ಮಾರನೇ ದಿನ ಮೃತಪಟ್ಟರೆಂದು ವರದಿಯಾಗಿದೆ. ಕಮ್ಯೂನಿಸ್ಟರು ಕಾಂಗ್ರೆಸ್ ಕಛೇರಿ ಮೇಲೆ ಧಾಳಿ ನಡೆಸಿದರೆಂದೂ, ಅಲ್ಲಿ ಪರಿಸ್ಥಿತಿಯು ತೀವ್ರವಾಗಿಯೇ ಇರುವುದೆಂದೂ ಹೇಳಲಾಗಿದೆ.

ಅಂತರ ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನಿತರು

ನಗರದ ಸುತ್ತೂರು ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದ ಸಂಘದ ಆಶ್ರಯದಲ್ಲಿ ನಡೆದ ಕರ್ನಾಟಕ ಅಂತರ ಕಾಲೇಜು ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಮಹಾರಾಜಾ ಕಾಲೇಜಿನ ಶ್ರೀ ವೈ. ಕೆ. ಲಕ್ಷ್ಮೀನಾರಾಯಣಭಟ್ಟ ಮತ್ತು ಎಂ. ಚನ್ನಪ್ಪನವರಿಗೆ ಪ್ರಥಮ ಮತ್ತು ಎರಡನೇ ಬಹುಮಾನಗಳೂ, ಮಹಾರಾಣಿ ಕಾಲೇಜಿನ ಶ್ರೀಮತಿ ಎ. ವಸಂತರವರಿಗೆ ತೃತೀಯ ಬಹುಮಾನವು ಬಂದಿವೆ.

ಶಾರದಾ ಪೂಜೆ

ಚಾಮರಾಜನಗರದ ಆನಂದ ಹಿಂದೀ ಮಂದಿರದ ವಿದ್ಯಾರ್ಥಿಗಳು ಕಳೆದ ಗುರುವಾರ ಶಾರದಾ ಪೂಜೆಯನ್ನು ಆಚರಿಸಿದರು. ಶ್ರೀ ಸಿ. ಎಸ್. ಸುಂದರರಾಯರು ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಜಿ. ಎಲ್. ಶಾಮಯ್ಯಂಗಾರ್‌ರವರು ಹಿಂದಿ ಮಹತ್ವದ ಮೇಲೆ ಭಾಷಣ ಮಾಡಿದರು. ಶ್ರೀ ಎ. ಎಸ್. ನಾಗಪ್ಪನವರು ಪರೀಕ್ಷೆಯ ವಿದ್ಯಾರ್ಥಿಗಳಿಗೆ ಶುಭವಚನವನ್ನಿತ್ತರು. ಮಂಗಳಾರತಿ, ಪ್ರಸಾದ ವಿತರಣೆ ಆದನಂತರ ಶ್ರೀ ಎಂ. ಎಸ್. ನಾಗರಾಜಾಚಾರ್ಯರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಶಿಶು ವಿಹಾರಗಳ ಅಧ್ಯಾಪಕಿಯರ ಶಿಕ್ಷಣ ಕೇಂದ್ರ

ವಿದ್ಯಾಭ್ಯಾಸ ಇಲಾಖೆಯ ಮನ್ನಣೆ ಪಡೆದು,
ಜಗದಂಬಾ ಶಿಶು ವಿಹಾರದಲ್ಲಿ
ತಾ|| 1-3-57 ರಿಂದ ಮೇಲ್ಕಂಡ ಶಿಕ್ಷಣ
ಕೇಂದ್ರವನ್ನು ಆರಂಭಿಸಲಾಗುವುದು.
ಸೇರಲಪೇಕ್ಷಿಸುವವರು ಶಿಶು ವಿಹಾರದ ವ್ಯವಸ್ಥಾ
ಪಕರಿಗೆ ಇದೇ 28ನೇ ತಾರೀಖಿನೊಳಗೆ
ಅರ್ಜಿಗಳನ್ನು ಸಲ್ಲಿಸಬಹುದು
[illegible], ಹೆಚ್ಚಿನ ವಿವರಗಳಿಗೆ
[illegible]

Edited, Printed and Published by
A. R. Nagarajan at Sadhvi Press,
D. Subbiah Road, Mysore

ಪಾಕಿಸ್ತಾನಕ್ಕೆ ಅನಾಯಾಸವಾದಾಗ ಪಲಾಯನಕ್ಕಾಗಿ ಅಧಿಕಾರಿಗಳ ಸಿದ್ಧತೆ

ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯ ಆಯವ್ಯಯ ಅಧಿವೇಶನವು ಕಳೆದ ಶುಕ್ರವಾರ ಸೇರಿದ್ದಾಗ ವಿರೋಧ ಪಕ್ಷದ ಸದಸ್ಯರಾದ ಸಯೀದ್ ಅಹಸನ್ ಎಂಬುವರು ಮಾತನಾಡುತ್ತಾ, ದೇಶದಲ್ಲಿ ಏನಾದರೂ ಪರಿಸ್ಥಿತಿಯೊದಗಿದಲ್ಲಿ ಅಲ್ಲಿಂದ ಹೊರಕ್ಕೆ ಓಡಿಹೋಗಲು ಹಲವು ಅಧಿಕಾರಿಗಳು ವಿದೇಶೀ ಪಾಸ್‌ಪೋರ್ಟುಗಳನ್ನು ಹೊಂದಿರುವರೆಂದೂ, ಅಧಿಕಾರಿಗಳಲ್ಲಿ ಲಂಚಗುಳಿತನ ಮತ್ತು ಸ್ವಜನಗಳು ಹೆಚ್ಚಾಗಿರುವುದರಿಂದ ಅಂತಹವರನ್ನು ಹೊರಕ್ಕೆ ಅಟ್ಟಬೇಕೆಂದೂ ತಿಳಿಸಿದರು. ಮತ್ತೊಬ್ಬ ಸದಸ್ಯರು ಮಾತನಾಡಿ, ಸುಹ್ರಾವರ್ದಿಯವರು ಸರ್ವಾಧಿಕಾರೀ ಆಡಳಿತ ನಡೆಸುತ್ತಿರುವರೆಂದೂ, ತಮ್ಮ ಪಕ್ಷದ ಚುನಾವಣಾ ಪ್ರಚಾರಕ್ಕಾಗಿ ಸರ್ಕಾರದ ಹಣವನ್ನು ಬಳಸುತ್ತಿರುವರೆಂದೂ ಆಪಾದಿಸಿದರು. ಪ್ರಧಾನಿಯವರು ಅಂಗರಕ್ಷಕರನ್ನು ನೇಮಿಸಿಕೊಂಡಿರುವರೆಂದು ಅವರು ಆಕ್ಷೇಪಿಸಿದಾಗ ಸಭೆಯಲ್ಲಿ ಗೊಂದಲವಾಗಿ ಸದಸ್ಯರು ಮೇಜುಗಳನ್ನು ಬಡಿದರೆಂದೂ ಹೇಳಲಾಗಿದೆ.

ಮಾರ್ಚಿ ೨ ರಿಂದ ಚಿಂಗಲ್ಪಟ್ಟಿನ ಸರ್ಕಾರಿ ನೌಕರರ ಮುಷ್ಕರ ?

ಕೇಂದ್ರ ಹಣಕಾಸಿನ ಸಚಿವರು ಕೊಟ್ಟ ಭರವಸೆಯ ಪ್ರಕಾರ ತಮಗೆ ಫೆಬ್ರವರಿ ೨೫ ರೊಳಗೆ ೧೦ ರೂ. ತಾತ್ಕಾಲಿಕ ಪರಿಹಾರವನ್ನು ನೀಡದಿದ್ದರೆ ಮಾರ್ಚಿ ೨ನೇ ತಾರೀಕಿನಿಂದ ಕೆಲಸಕ್ಕೆ ಹೋಗುವುದಿಲ್ಲವೆಂದು ಚಿಂಗಲ್ಪಟ್ ಜಿಲ್ಲೆಯ ಸರ್ಕಾರಿ ಕೆಳ ದರ್ಜೆ ನೌಕರರು ತೀರ್ಮಾನಿಸಿದ್ದಾರೆ.

ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರ ಸಭೆ

ನಗರದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರ ಸಭೆಯು ನಾಳೆ ಸಂಜೆ ೪-೩೦ ಘಂಟೆಗೆ, ನಗರದ ನೂರಡಿ ರಸ್ತೆಯಲ್ಲಿರುವ ದಕ್ಷಿಣ ಕ್ಷೇತ್ರದ ಚುನಾವಣಾ ಕಛೇರಿಯಲ್ಲಿ ಸೇರುವುದು. ಎಲ್ಲಾ ಕಾರ್ಯಕರ್ತರೂ ಬರಬೇಕಾಗಿ ಕೋರಲಾಗಿದೆ.

ಕ್ಯಾಲೆಂಡರ್ ಸ್ವೀಕಾರ

ನಗರದ ಅಶೋಕ ರಸ್ತೆಯ ಜನಪ್ರಿಯ ವ್ಯಾಪಾರಿ ಶ್ರೀ ಜಿ. ಎ. ವ[illegible]ಶೆಟ್ಟರು, ಆಸ್ಪತ್ರೆ ರಸ್ತೆಯ ವಾಸವಿ ಡೈಯಿಂಗ್ [illegible]ನವರು ಮತ್ತು ಧೂತಪಾಪೇಶ್ವರ ಔಷಧಾಲಯದ ಡಾ|| ಎಸ್. ಆರ್. ವೆಂಕಟಾಚಾರ್ಯರು ಕಳುಹಿಸಿಕೊಟ್ಟಿರುವ ನವವರ್ಷದ ಕ್ಯಾಲೆಂಡರುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಸೇತುಪತಿಯವರಿಗೆ ಕಾಂಗ್ರೆಸ್ಸಿಗರ ಬೆಂಬಲ

ರಾಮನಾಥಪುರ ತಾಲ್ಲೂಕಿನ ಕಾಂಗ್ರೆಸ್ಸಿಗರ ಸಭೆಯು ಕಳೆದ ಬುಧವಾರ ಸೇರಿ, ಆ ಕ್ಷೇತ್ರದಿಂದ ಮದ್ರಾಸು ಶಾಸನ ಸಭೆಗೆ ಸ್ವತಂತ್ರವಾಗಿ ಸ್ಪರ್ಧಿಸಿರುವ ಮದ್ರಾಸಿನ ಮರಾಮತ್ತು ಶಾಖಾ ಸಚಿವ ಶ್ರೀ ಸೇತುಪತಿಯವರಿಗೆ ಬೆಂಬಲ ನೀಡುವ ಬಗ್ಗೆ ಕಾಂಗ್ರೆಸ್ ಸದಸ್ಯರು ವೈಯಕ್ತಿಕವಾಗಿ ಪ್ರಚಾರ ನಡೆಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತೆಂದು ವರದಿಯಾಗಿದೆ. ಸೇತುಪತಿಯವರಿಗೆ ಕಾಂಗ್ರೆಸ್ ಪರವಾಗಿ ಉಮೇದುವಾರಿಕೆ ಸಲ್ಲಿಸಲು ಅವಕಾಶ ಕೊಟ್ಟಿಲ್ಲ

THE
BRIGHT COLLEGE
OF COMMERCE

Fresh ADMISSIONS are received to classes in COST ACCOUNTS. Special coaching for JULY Examinations conducted by the Institute of Cost and Works Accounts, Calcutta. Tuition given by expert and experienced staff. PRACTICAL training also given.

Classes in HINDI also started.

Intending candidates may apply to the Principal on or before the 25th of February 57

ಜಿಲ್ಲಾ ದಾನಕ್ಕಾಗಿ ವಿನೋಬಾ ಭಾವೆಯವರ ಕರೆ

ಗ್ರಾಮದಾನ ಮತ್ತು ತಾಲ್ಲೂಕು ದಾನ ಚಳುವಳಿಗಳನ್ನಾರಂಭಿಸಿದ ಆಚಾರ್ಯ ವಿನೋಬಾ ಭಾವೆಯವರು ಈಗ ಜಿಲ್ಲಾ ದಾನ ಚಳುವಳಿಗಾಗಿ ಕರೆಯಿತ್ತಿದ್ದಾರೆ. ಕಳೆದ ಬುಧವಾರ ಅವರು ರಾಮನಾಥಪುರ ಜಿಲ್ಲೆಗೆ ಆಗಮಿಸಿದಾಗ ಕುನ್ನಕುಡಿ ಸ್ವಾಮಿಗಳೊಡನೆ ಭೇಟಿ ಮಾಡಿದರು. ಆಗ ಸ್ವಾಮಿಗಳೊಡನೆ ಸಂಭಾಷಣೆಯಲ್ಲಿ ಮಠಾಧೀಶರು ಜಿಲ್ಲಾದಾನ ಚಳುವಳಿಗೆ ಬೆಂಬಲವಿತ್ತು ಸಹಕರಿಸಬೇಕೆಂದು ಮನವಿಮಾಡಿದರು.

ಎಸ್. ಕೆ. ಪಾಟೀಲರ ಕಾರಿಗೆ ಕಲ್ಲಿನೇಟು

ಬೊಂಬಾಯಿನ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎಸ್. ಕೆ. ಪಾಟೀಲರು ನೆನ್ನೆ ಅಹಮದಾಬಾದ್ ಬಳಿ ದೇವಗಾಂ ಎಂಬ ಊರಿನಲ್ಲಿ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಭಾಷಣ ಮುಗಿಸಿ ವಾಪಸಾಗುತ್ತಿದ್ದಾಗ ದಾರಿಯ ಪಕ್ಕಗಳಲ್ಲಿ ಜನರ ಗುಂಪು ಸೇರಿ ಅವರುಗಳ ಕಾರಿನ ಮೇಲೆ ಕಲ್ಲೇಟಿನ ಮಳೆಗರೆದಾಗ ಗುಲಾಂ ಸ್ಯದರ್ ಮೋರ್ಬಿ ಎಂಬುವನಿಗೂ ಮತ್ತಿತರ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರಿಗೂ ಗಾಯಗಳಾದುವೆಂದು ವರದಿಯಾಗಿದೆ.

ಮಂತ್ರಿಗಳ ಮೇಲೆಯೇ ಪಾಕಿಸ್ತಾನ್ ಪೊಲೀಸರ ಕಣ್ಣು

ಪಾಕಿಸ್ತಾನದ ಪೊಲೀಸ್ ಪಡೆಯವರು ತಮ್ಮ ಮೇಲೆಯೇ ಕಣ್ಣಿಟ್ಟು, ತಮ್ಮ ಚಲನವಲನಗಳ ಬಗ್ಗೆ ಗೂಢಚರ್ಯೆಯಲ್ಲಿ ತೊಡಗಬಹುದೆಂದು ಅಲ್ಲಿನ ಗೃಹ ಮಂತ್ರಿ ಗುಲಾಂ ಅಲಿ ತಾಲ್ಪೂರ್‌ರವರು ಸಂದೇಹಿಸಿದ್ದಾರೆ. ಕೇಂದ್ರ ಮಂತ್ರಿಗಳೆಲ್ಲರೂ ತಮ್ಮ ರಕ್ಷಣೆಗೆ ಖಾಸಗಿ ಪೊಲೀಸರನ್ನು ನೇಮಿಸಿಕೊಳ್ಳಬೇಕೆಂಬ ಸಲಹೆಗೆ ಉತ್ತರಿಸುತ್ತಾ ಅವರು ಈ ರೀತಿ ತಿಳಿಸಿದ್ದಾರೆ.

ಯೆಮೆನ್ನಿಗೆ ಕಮ್ಯೂನಿಸ್ಟ್ ದೇಶಗಳಿಂದ ಶಸ್ತ್ರಾಸ್ತ್ರ ಸಹಾಯ ?

ಯೆಮೆನ್ ರಾಜ್ಯಕ್ಕೆ ರಷ್ಯ ಮತ್ತಿತರ ಕಮ್ಯೂನಿಸ್ಟ್ ರಾಜ್ಯಗಳು ಮತ್ತು ಈಜಿಪ್ಟ್ ಶಸ್ತ್ರಾಸ್ತ್ರಗಳನ್ನೂ ಮತ್ತಿತರ ರೀತಿಯ ಸಹಾಯವನ್ನೂ ನೀಡುತ್ತಿರುವುದಾಗಿ ಬ್ರಿಟನ್ನು ವಿಶ್ವಸಂಸ್ಥೆಯಲ್ಲಿ ನೆನ್ನೆ ಆಪಾದಿಸಿತು.

ದೇವನೂರು ಮಠದ ಸ್ವಾಮಿ ನಿರ್ಯಾಣ

ನಂಜನಗೂಡು ತಾಲ್ಲೂಕು ದೇವನೂರು ಮಠಾಧೀಶರಾದ ಶ್ರೀ ಕೋಂಟದಾರ್ಯಸ್ವಾಮಿಗಳು ನೆನ್ನೆ ಮಧ್ಯಾಹ್ನ ೨|| ಗಂಟೆಯಲ್ಲಿ [illegible] ನಿಧನರಾದರೆಂದು ತಿಳಿಸಲು ವಿಷಾದಿ ವೆ. ಅವರಿಗೆ ೬೦ ವರ್ಷ ವಯಸ್ಸಾಗಿತ್ತು. ೨ ತಿಂಗಳಿಂದಲೂ ಉಲ್ಬಣಿಸಿದ ಗೂರಲು ಕಾಯಿಲೆಯಿಂದ ಅವರು ಅಸ್ವಸ್ಥರಾಗಿದ್ದರು.

ವಿಷಮಿಶ್ರಿತ ಆಹಾರ ಸೇವಿ ಮೂವರ ಮರಣ

ಸತ್ತು ಬಿದ್ದ ಜೇಡರ ಹುಳುವಿನಿಂದ [illegible] ಪಲ್ಯವನ್ನು ಸೇವಿಸಿ ಗೂಡೂರಿನ ಹರಿಜನ ಕು ದವೊಂದರ ಮೂವರು ಮೃತಪಟ್ಟ ದು ವರದಿಯಾಗಿದೆ. ಇನ್ನಿಬ್ಬರು ಆಸ್ಪತ್ರೆ ಉತ್ತಮಗೊಳ್ಳುತ್ತಿರುವರೆಂದು ಹೇಳಲಾಗಿ

ಸಂಸ್ಥಾನದ ನಾನಾ ಕಡೆ ಗ್ರಾಮ ನೌಕರರ ಮುಷ್ಕರ

ತಮ್ಮ ಸಂಬಳಸಾರಿಗೆಗಳನ್ನು ಹೆಚ್ಚಿ ಬಗ್ಗೆ ಗ್ರಾಮಾಧಿಕಾರಿಗಳು ಸಲ್ಲಿಸಿದ್ದ ದೀ ಳು ಈಡೇರದಿದ್ದ ಬಗ್ಗೆ ಸಂಸ್ಥಾನದಲ್ಲಿ ಶುಕ್ರವಾರದಿಂದ ನಾನಾ ಕಡೆ ಅವರ ಮುಷ್ಕ ಳು ಆರಂಭವಾದುವು. ಶಿವಮೊಗ್ಗ ಮತ್ತು ಮಗಳೂರು ಜಿಲ್ಲೆಗಳಲ್ಲೂ, ಗುಂಡ್ಲುಪೇಟೆ, ರ್ಥಹಳ್ಳಿ, ಆನಂದಪುರ, ತರೀಕೆರೆ, ಬೇಲೂ ತಾಲ್ಲೂಕುಗಳಲ್ಲೂ ಗ್ರಾಮ ನೌಕರರು ಸಭೆ ತ್ತು ಮೆರವಣಿಗೆಗಳನ್ನು ನಡೆಸಿದರು.

ಬಿರುಗಾಳಿಯಿಂದ ಹಡಗು ಮುಳುಗಿ ೩೦ ಮಂದಿಯ ಮ

ಇಂಡೋನೇಷ್ಯದ ಬಳಿ ಸಮುದ್ರದಲ್ಲಿ ಗಾಳಿಯ ಬೀಸಿಯಿಂದ ಹಡಗೊಂದು ಮುಳು ಅದರಲ್ಲಿದ್ದ ೩೦ ಜನರು ಮೃತಪಟ್ಟಿರುತ್ತಾರೆ.

ಯುವಜನ ಬಳಗದ ಸಭೆ

ನಗರದಲ್ಲಿರುವ ಯುವಜನ ಬಳಗದ ಕಾ ರಿ ಸಮಿತಿ ಮತ್ತು ಹಿತೈಷಿಗಳ ಸಭೆ ನಾಳೆ ಸಂಜೆ ೬ ಗಂಟೆಗೆ ಅಶೋಕಾ ರಸ್ತೆಯಲ್ಲಿರುವ ನೆಪ್ಚೂನ್ ಸ್ಟೂಡಿಯೊ ಆವರಣದಲ್ಲಿ ಯುವುದು. ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ವೇದಿಕೆಯೊಂದನ್ನು ಏರ್ಪಡಿ ವಿಷಯವನ್ನು ಅಲ್ಲಿ ಪರಿಶೀಲಿಸಲಾಗುವುದು.

ಮೈಸೂರು ಸಿಟಿ ಮರದ ಗಾಣದ ಎಣ್ಣೆ-ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸ್ ವಾಣೀವಿಲಾಸ ರಸ್ತೆ :: ಬ್ರಾಂಚ್ ಶಿವರಾಂಪೇಟೆ ಮೈಸೂರು

ಗಾಣದ ಎಣ್ಣೆ ಅಡಿಗೆಗೆ ಉತ್ಕೃಷ್ಟವಾದುದು, ಆರೋಗ್ಯಕರ ಮತ್ತು ರುಚಿಕರ ಹಾಗೂ ಮಿಲ್ಲಿನ ಎಣ್ಣೆಗಿಂತ ಕಡಿಮೆ ದರ

	ದರಗಳು	ರಿಬೇಟ್	ನಿವ್ವಳ ಬೆಲೆ
ಹಚ್ಚೆಳ್ಳೆಣ್ಣೆ	2 1 6	0 1 6	2 0 0
ಕಡಲೆಕಾಯೆಣ್ಣೆ	2 2 6	0 1 6	2 1 0
ಅಚ್ಚೆಳ್ಳೆಣ್ಣೆ	3 13 6	0 1 6	3 12 0
ಹರಳೆಣ್ಣೆ	4 12 0	ಇಲ್ಲ	3 12 0

ರಾಜಕಮಲ್ ಟಾಕೀಸ್

ಅತಿ ಶೀಘ್ರದಲ್ಲಿಯೇ ಬರಲಿದೆ!

ನೀವು ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ, ನಿಮ್ಮ ನೆಚ್ಚಿನ ತಾರಾಗಣದಿಂದ ಕೂಡಿದ
ದಶಲಕ್ಷಕ್ಕೂ ಮೇಲ್ಪಟ್ಟು ವೆಚ್ಚ ಮಾಡಿರುವ,
ಪದ್ಮಿನಿ ಪಿಕ್ಚರ್ಸ್ (ಮೊದಲತೇದಿ ಖ್ಯಾತಿ) ರವರ

★ ರತ್ನಗಿರಿ ರಹಸ್ಯ ★
(ಕನ್ನಡ)

ಪಾತ್ರ.— ಬಿ. ಆರ್. ಪಂತುಲು, ಉದಯಕುಮಾರ್, ಟಿ. ಆರ್. ರಾಮಚಂದ್ರನ್
ಡಿಕ್ಕಿ ಮಾಧವರಾವ್, ಎಂ. ವಿ. ರಾಜಮ್ಮ, ಜಮುನಾ, ಸಾಹುಕಾರ್ ಜಾನಕಿ,
ಬಿ. ಸರೋಜಾದೇವಿ ಮತ್ತು ರೇವತಿ ಮುಂತಾದವರು

ನಿರ್ಮಾಣ ನಿರ್ದೇಶನ ಬಿ. ಆರ್. ಪಂತುಲು

[SRI RAGHAVENDRA RELEASE

ರಿಜಿಸ್ಟರ್ ನಂ. 794



ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : TUESDAY 19-2-1957 ಮೈಸೂರು : ಮಂಗಳವಾರ ೧೯-೨-೧೯೫೭ : [ಸಂಚಿಕೆ : ೨೦೪

ಕಾಶ್ಮೀರಕ್ಕೆ ವಿಶ್ವಸಂಸ್ಥೆ ಸೇನೆ ರವಾನೆಗೆ ರಷ್ಯಾ ವಿರೋಧ

ಕಾಶ್ಮೀರದಲ್ಲಿ ಜನಮತಗಣನೆ ಪ್ರಶ್ನೆಯೇ ಇಲ್ಲ

ಅಲ್ಲಿನ ಪ್ರಜೆಗಳೇ ಸಮಸ್ಯೆಯನ್ನು ಬಗೆಹರಿಸಿರುವುದಾಗಿ ರಷ್ಯಾ ಹೇಳಿಕೆ

ಭದ್ರತಾ ಸಮಿತಿಯಲ್ಲಿ ನೆನ್ನೆ ರಷ್ಯದ ಪ್ರತಿನಿಧಿ ಸೊಬೊಲೆವ್‌ರವರು ಮಾತನಾಡಿ ಕಾಶ್ಮೀರ ...ದ್ರಿ ಜನಮತಗಣನೆ ಪ್ರಶ್ನೆಯೇ ಇಲ್ಲವೆಂದೂ, ...ನ ಪ್ರಜೆಗಳೇ ತಾವು ಭಾರತದಲ್ಲಿ ಐಕ್ಯಗೊಂ...ಡು ಭಾಗವೆಂದು ಸೂಚಿಸಿ ಈ ಮೂಲಕ ...ಶ್ಮೀರ ಸಮಸ್ಯೆಯನ್ನು ಬಗೆಹರಿಸಿರುವರೆಂದು ...ಸ್ತಾ ಸರ್ಕಾರದವರು ಭಾವಿಸಿರುವುದಾಗಿಯೂ ...ೀದರು ಕಾಶ್ಮೀರಕ್ಕೆ ವಿಶ್ವಸಂಸ್ಥೆ ಸೈನ್ಯವ ...ಕಳುಹುವ ಭಾವನೆಯೇ ವಿಶ್ವಸಂಸ್ಥೆಯ ...ಣಾಳಿಕೆಯ ಉಲ್ಲಂಘನೆ ಮತ್ತು ಕಾಶ್ಮೀರ ಪ್ರ...ಶ್ನೆ ಬಗ್ಗೆ ಮಾಡುವ ಅಪರಾಧವಾಗುವುದೆಂ ...ಅವರು ನುಡಿದರು. ವಿಶ್ವಸಂಸ್ಥೆ ಸೈನ್ಯವ ...ನ್ನು ತಪ್ಪಿಸಿ, ಅಂತರ ರಾಷ್ಟ್ರೀಯ ...ಸನ್ನೆಗಾಗಿ ಮಾತ್ರ ಇರುವುದಾಗಿಯೂ ...ರು ತಿಳಿಸಿದರು. ಕಾಶ್ಮೀರದಲ್ಲಿ ಬಲವಂತ...ದ ಜನಮತಗಣನೆ ನಡೆಸಲು ವಿಶ್ವಸಂಸ್ಥೆ ...ನ್ಯವನ್ನು ಕಳುಹುವುದಕ್ಕೆ ಸಂಸ್ಥೆಯ ಪ್ರಣಾಳಿ...ಯಲ್ಲಿ ಅವಕಾಶ ಕಲ್ಪಿಸಿಲ್ಲವೆಂದೂ ಸೊಬೊ...ಲೆವ್ ಅಭಿಪ್ರಾಯಪಟ್ಟರು

ಕಾಶ್ಮೀರದ ಸಮಸ್ಯೆ ಅಂತರ ರಾಷ್ಟ್ರ ನ್ಯಾಯಾಲಯಕ್ಕೆ?

ಉಭಯ ಪಕ್ಷಗಳವರೂ ಒಪ್ಪಿದರೆ ಕಾಶ್ಮೀರ ವಿಶ್ವ ಸಂಸ್ಥೆ ಸೈನ್ಯವನ್ನು ಹಂಗಾಮಿಯಾಗಿ ...ಳುಹಿಸಬೇಕೆಂದೂ, ಈ ವಿಚಾರವನ್ನು ಅಂತರ...ಷ್ಟ್ರೀಯ ನ್ಯಾಯಾಲಯಕ್ಕೆ ಕಳುಹಿಸುವುದನ್ನು ...ಪರಿಶೀಲಿಸಬೇಕೆಂದೂ ಭದ್ರತಾ ಸಮಿತಿಯಲ್ಲಿ ...ಟನ್ ಮುಂತಾದ ೪ ರಾಷ್ಟ್ರಗಳು ಸೂಚಿಸಿರುವ ...ರ್ಣಯಕ್ಕೆ ಕೊಲಂಬಿಯವು ಕಳುಹಿಸಿರುವ ತಿ...ದ್ದುಪಡಿಯಲ್ಲಿ ಸೂಚಿಸಲಾಗಿದೆ

ಆಜಾದ್ ಕಾಶ್ಮೀರದಿಂದ ಆಕ್ರಮಣ ಯುದ್ಧದ ಬೆದರಿಕೆ

ಭದ್ರತಾ ಸಮಿತಿಯಲ್ಲಿ ೪ ರಾಷ್ಟ್ರಗಳು ಮಂ...ಡಿಸುವ ನಿರ್ಣಯವನ್ನು ರಷ್ಯವು ವೀಟೊ ಮಾ...ಡಿದರೆ ಆಜಾದ್ ಕಾಶ್ಮೀರದವರು ವಿಮೋಚನಾ ...ಯುದ್ಧವನ್ನು ಆರಂಭಿಸಲು ಅವಕಾಶವಾಗುವ...ದು ಆಜಾದ್ ಕಾಶ್ಮೀರ ಸರ್ಕಾರದ ಅಧ್ಯಕ್ಷ ...ಯಾಂ ಖಾನರು ಹೇಳಿರುತ್ತಾರೆ.

...ಸ್ಥಾನದಲ್ಲಿ ೯೪ ಆರೋಗ್ಯ ಕೇಂದ್ರಗಳು

...ತೀಯ ಪಂಚವಾರ್ಷಿಕ ಯೋಜನೆ ಅವಧಿ...ಯಲ್ಲಿ ಮೈಸೂರು ಸರ್ಕಾರದವರು ೯೪ ಆರೋ...ಗ್ಯ ಕೇಂದ್ರಗಳನ್ನು ತೆರೆಯಲಿರುವರು. ಬೊಂ...ಬಾಯಿ ಮತ್ತು ಹೈದರಾಬಾದು ಕನ್ನಡ ಪ್ರದೇ...ಶಗಳನ್ನು ತಲಾ ೨೬ ಕೇಂದ್ರಗಳಿರುವುವು. ಉಳಿ...ದ ಕೇಂದ್ರಗಳನ್ನು ಮಂಗಳೂರು, ಕೊಡಗು ...ಷ್ಟು ಹಳೇ ಮೈಸೂರುಗಳಲ್ಲಿ ಸ್ಥಾಪಿಸಲಾಗು...ವುದು. ಮೈದಾನ ಪ್ರದೇಶದಲ್ಲಿ ೧೫,೦೦೦ದಿಂದ ...೦,೦೦೦ದವರೆಗೆ ಜನಸಂಖ್ಯೆ ಇರುವ ಪ್ರದೇಶದ ...ಒಂದೊಂದು ಕೇಂದ್ರವನ್ನಿಡಲಾಗುವುದು ...ಡಿನಲ್ಲಿ ೩,೦೦೦ದಿಂದ ೬,೦೦೦ ಪ್ರಜೆಗಳ...ಗೆ ಒಂದು ಇರುವುದು

ಮೈಸೂರು ಜಿಲ್ಲೆಯಲ್ಲಿ ಚುನಾವಣೆ ಮತ್ತು ಎಣಿಕೆ ದಿನ

ಮೈಸೂರು ೧೯

ಈ ಜಿಲ್ಲೆಯಲ್ಲಿ ಮಹಾ ಚುನಾವಣೆಯು [illegible] ೨೫ನೇ ತಾರೀಕಿನಿಂದ ಮಾರ್ಚಿ ೧೩ನೇ ತಾರೀಕಿನವರೆಗೆ ನಡೆಯಲಿದೆ

ಕ್ಷೇತ್ರ	ಚುನಾವಣೆ	ಎಣಿಕೆ
ನಂಜನಗೂಡು	ಫೆ ೨೫	ಮಾರ್ಚಿ ೧೩
ಬಿಳಿಗೆರೆ	೨೭	೯
ಚಾಮರಾಜನಗರ	೨೮	೧೩
ಕೊಳ್ಳೆಗಾಲ	ಮಾರ್ಚಿ ೩	೧೨
ಹಾಳ್ಯ	೪	೧೩
ಟಿ ನರಸೀಪುರ	೮	೮
ಗುಂಡ್ಲುಪೇಟೆ	೬	೧೧
ಪಿರಿಯಾಪಟ್ಟಣ	೬	೧೪
ಹುಣಸೂರು	೮	೧೪
ಕೃಷ್ಣರಾಜನಗರ	೧೦	೧೩
ಮೈಸೂರು	೧೩	೧೮

ಮಹಿಳಾ ಸಮಾಜದ ಸ್ಥಾಪಕರ ದಿನಾಚರಣೆ

ನಗರದ ಮಹಿಳಾ ಸಮಾಜದ ಆಶ್ರಯದಲ್ಲಿ ಸಂಸ್ಥೆಯ ಸ್ಥಾಪಕರಾದ ದಿವಂಗತ ಶ್ರೀಮತಿ ಕೆ. ಡಿ. ರುಕ್ಮಿಣಿಯಮ್ಮನವರ ಪ್ರಥಮ ವಾರ್ಷಿಕ ಸ್ಮಾರಕ ದಿನಾಚರಣೆಯು ನೆನ್ನೆ ಶ್ರೀಮತಿ ಲಲಿತಮ್ಮ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಳಗ್ಗೆ ಸಮಾಜದ ಶಿಶುವಿಹಾರದ ಮಕ್ಕಳಿಗೆ ಕಿತ್ತಳೆ ಹಣ್ಣುಗಳನ್ನು ಹಂಚಲಾಯಿತು. ಸಂಜೆ ಸಭೆಯು ಶ್ರೀಮತಿ ವಸಂತಕುಮಾರಿಯವರ ಪ್ರಾರ್ಥನೆಯಿಂದ ಆರಂಭವಾಯಿತು. ಶ್ರೀಮತಿ ವಿಶಾಲಾಕ್ಷಮ್ಮನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಟಿ. ಆರ್. ಶ್ರೀನಾಥ್‌ರವರಿಂದ ಸುಶ್ರಾವ್ಯವಾದ ವೀಣಾವಾದನವು ನಡೆಯಿತು.

ಶ್ರೀಮತಿ ಹೆಚ್. ವೈ. ಸರಸ್ವತಮ್ಮನವರು ಭಾಷಣ ಮಾಡಿ, ದಿವಂಗತ ರುಕ್ಮಿಣಿಯಮ್ಮನವರು ಸಂಸ್ಥಾನದಲ್ಲಿ ಮಹಿಳೆಯರ ಉನ್ನತಿಗಾಗಿ ನಡೆಸಿದ ಕಾರ್ಯಗಳನ್ನು ವಿವರಿಸಿ, ಅವರ ಗುಣಗಾನ ಮಾಡಿದರು. ಶ್ರೀಮತಿ ತಿಮ್ಮಮ್ಮನವರು ವಂದನಾರ್ಪಣೆ ಮಾಡಿ ದಿ|| ರುಕ್ಮಿಣಿಯಮ್ಮನವರು ಬಡ ವಿದ್ಯಾರ್ಥಿನಿಯರಿಗಾಗಿ ಏರ್ಪಡಿಸಿದ್ದ ನಿಧಿಯನ್ನು ಬೆಳೆಸಲು ಎಲ್ಲರೂ ಶ್ರಮಪಡಬೇಕೆಂದು ಸೂಚಿಸಿದರು. ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಮಸ್ಕತ್ ದೊರೆಯಿಂದ ಒಮಾನ್ ರಾಜ್ಯದ ಆಕ್ರಮಣ

ಪರ್ಷಿಯಾ ಖಾರಿಯಲ್ಲಿರುವ, ೬,೦೦೦ ಚದುರ ಮೈಲಿ ವಿಸ್ತೀರ್ಣವುಳ್ಳ ಒಮಾನ್ ರಾಜ್ಯವನ್ನು ಮಸ್ಕತ್ ದೇಶದ ಸುಲ್ತಾನರು ಬ್ರಿಟಿಷ್ ಶಸ್ತ್ರ ಸಹಾಯ ಪಡೆದು ಆಕ್ರಮಿಸಿಕೊಂಡಿರುವುದಾಗಿ ವರದಿಯಾಗಿದೆ. ಅಲ್ಲಿ ಎಣ್ಣೆಯು ಹೇರಳವಾಗಿ ದೊರೆಯುವುದು. ಒಮಾನಿನ ರಾಜರನ್ನು ಬಂಧನದಲ್ಲಿಡಲಾಗಿದೆ. ಈ ವಿಚಾರವು ಅರಬ್ ಲೀಗಿ, ಗಮನಕ್ಕೆ ಬಂದಿದೆ. ಲೀಗು ಮಾರ್ಚಿಯಲ್ಲಿ ಸೇರಿ ಈ ಬಗ್ಗೆ ಚರ್ಚಿಸುವುದು.

ಧರ್ಮ ಯುದ್ಧದ ಕೂಗಿನಿಂದ ಭಾರತ-ಪಾಕಿಸ್ತಾನ ಹೋರಾಟ ಸಂಭವ

ಪಾಕಿಸ್ತಾನದವರ ವರ್ತನೆ ಬಗ್ಗೆ ಕೃಷ್ಣ ಮೆನನ್ನರ ಎಚ್ಚರಿಕೆ

ಭಾರತದ ಮಂತ್ರಿ ವಿ. ಕೆ. ಕೃಷ್ಣ ಮೆನನ್ನರು ನೆನ್ನೆ ಅಮೆರಿಕದ ಟೆಲಿವಿಷನ್, ಮೂಲಕ ಪತ್ರಿಕಾ ಸಮ್ಮೇಳನದಲ್ಲಿ ಭಾಷಣ ಮಾಡಿ, ಪಾಕಿಸ್ತಾನದಿಂದ ಬರುತ್ತಿರುವ ಇಸ್ಲಾಂ ಧರ್ಮ ಯುದ್ಧದ ಬೆದರಿಕೆಗಳಿಂದ ತಮ್ಮ ರಾಷ್ಟ್ರ ಮತ್ತು ಪಾಕಿಸ್ತಾನಗಳ ನಡುವೆ ಹೋರಾಟವಾಗುವ ಅಪಾಯವಿರುವುದೆಂದು ತಿಳಿಸಿದರು. ಪಾಕಿಸ್ತಾನವು ಗುಡ್ಡಗಾಡಿನ ಜನರನ್ನು ಕೆಣಕುತ್ತಿರುವುದೆಂದೂ, ಕಾಶ್ಮೀರದ ವಿಚಾರದಲ್ಲಿ ಜನರನ್ನು ಹಿಂಸೆಗಾಗಿ ಪ್ರಚೋದನೆ ಮಾಡುತ್ತಿರುವುದಾಗಿಯೂ ಅವರು ಹೇಳಿ, ಆಕ್ರಮಣವು ನಡೆದರೆ ಭಾರತವು ತನ್ನ [illegible] ರಕ್ಷಿಸಿಕೊಳ್ಳುವುದೆಂದು ಸೂಚಿಸಿದರು. ಕಾಶ್ಮೀರವು ಭಾರತಕ್ಕೆ ಸೇರಿದುದೇ ಹೊರತು ಭಾರತವು ಅದನ್ನು ಅಧೀನಪಡಿಸಿಕೊಳ್ಳಲಿಲ್ಲವೆಂದೂ ಅವರು ಹೇಳಿದರು

ವಿ. ಕೆ. ಕೃಷ್ಣ ಮೆನನ್ನರು ಆಯಾಸದಿಂದ ಕುಸಿದುಬಿದ್ದರು

ವಾಷಿಂಗ್ಟನ್ನಿಗೆ ಟೆಲಿವಿಷನ್ ಪ್ರಸಾರ ಮಾಡಲು ನೆನ್ನೆ ಹೋಗಿದ್ದ ಭಾರತದ ಮಂತ್ರಿ ವಿ. ಕೆ. ಕೃಷ್ಣಮೆನನ್ನರು ವಿಪರೀತ ಆಯಾಸದಿಂದ ಕುಸಿದುಬಿದ್ದು ನ್ಯೂಯಾರ್ಕಿಗೆ ಕರೆತರಲ್ಪಟ್ಟರು. ವೈದ್ಯರು ಅವರಿಗೆ ಪೂರ್ಣ ವಿಶ್ರಾಂತಿಯು ಬೇಕೆಂದು ತಿಳಿಸಿದ್ದಾರೆ. ಭದ್ರತಾ ಸಮಿತಿ ಸಭೆಗೂ ಹೋಗಬಾರದೆಂದು ಅವರಿಗೆ ಸೂಚಿಸಲಾಗಿದೆ. ಕಳೆದ ಶುಕ್ರವಾರ ಅವರು ಭದ್ರತಾ ಸಮಿತಿಯಲ್ಲಿ ಭಾಷಣ ಮಾಡುತ್ತಿದ್ದಾಗಲೇ ಸುಸ್ತಾಗಿದ್ದರು. ೭ [illegible]ದಾದ ಕೂಡಲೇ ವಾಷಿಂಗ್ಟನ್ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರ್ಧರಿಸಿ ಅಲ್ಲಿ ಪೂರ್ಣವಾಗಿ ಆಯಾಸಗೊಂಡರು. ಅವರ ರಕ್ತದ ಒತ್ತಡವು ಎಂದಿಗಿಂತ ಕಡಿಮೆ ಇದೆ. ಅಲ್ಲದೆ ವಿಪರೀತ ಜ್ವರವು ಬಂದಿದೆ

ಗಾಜಾ ಪ್ರದೇಶ ಬಿಡಲು ಇಸ್ರೇಲಿನ ನಿರಾಕರಣೆ

ಗಾಜಾ ಮತ್ತು ಅಕಾಬಾ ಪ್ರದೇಶಗಳಿಂದ ತನ್ನ ಸೈನ್ಯಗಳನ್ನು ಹಿಂದಕ್ಕೆ ಕರೆಸಲು ಇಸ್ರೇಲು ನಿರಾಕರಿಸಿದೆ. ಇಸ್ರೇಲಿನ ರಕ್ಷಣೆಗಾಗಿ ಅಮೆರಿಕವು ಮಾಡಿದ್ದ ಹಲವು ಸಲಹೆಗಳನ್ನೂ ಅದು ತಿರಸ್ಕರಿಸಿದೆ

ಬೆಂಗಳೂರಿನಲ್ಲಿ ೧,೦೦೦ [illegible] ವಿದ್ಯಾರ್ಥಿಗಳ ಮುಷ್ಕರ

ಸರ್ಕಾರಿ ಸೇವೆಯಲ್ಲಿರುವ ಡಿಪ್ಲೊಮಾದವರ ಸಂಬಳದ ಪುನರ್ವಿಮರ್ಶೆಯು ಸರಿಯಾಗಿಲ್ಲವೆಂಬ ಕಾರಣದಿಂದ ನೆನ್ನೆ ಬೆಂಗಳೂರಿನ ಎಂಜನಿಯರಿಂಗ್ ಡಿಪ್ಲೊಮಾ ಮತ್ತು ವೃತ್ತಿ [illegible]ಶಾಲೆಯ ೧,೦೦೦ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗದೆ ಮುಷ್ಕರ ನಡೆಸಿ, ಪ್ರತಿಭಟನೆಯನ್ನು ಸೂಚಿಸಿದರು

ಅಮೆರಿಕದಲ್ಲಿ ವೃದ್ಧರ ಗೃಹಕ್ಕೆ ಬೆಂಕಿ ಬಿದ್ದು ೭೦ ಮಂದಿ ಮರಣ

ಅಮೆರಿಕದ ಮಿಸೌರಿ ಪ್ರಾಂತದ ವಾರೆಂಟನ್ ಎಂಬಲ್ಲಿ ನೆನ್ನೆ ವೃದ್ಧರ ಗೃಹವೊಂದಕ್ಕೆ ಬೆಂಕಿ ಬಿದ್ದು ೭೦ಕ್ಕೂ ಹೆಚ್ಚು ಮಂದಿ ಮೃತಪಟ್ಟಿರುತ್ತಾರೆ. ೭೧ ಮಂದಿ ಪತ್ತೆಯಿಲ್ಲ. ಅವರಲ್ಲಿ [illegible] ಮಹಿಳೆಯರು. ಗೃಹದಲ್ಲಿ ೧೫೦ ನಿವಾಸಿಗಳೂ, ೫೦ ಜನ ಪ್ರೇಕ್ಷಕರೂ ಇದ್ದರೆಂದೂ ಹೇಳಲಾಗಿದೆ

ಶಾಸನಸಭಾ ಉಮೇದುವಾರನ ಬಂಧನ

ಮಧುರಾಂತಕದ ಕ್ಷೇತ್ರದಿಂದ ಮದ್ರಾಸು ವಿಧಾನ ಸಭೆಗೆ ಸಮಾಜವಾದಿ ಪಕ್ಷದಿಂದ ಉಮೇದುವಾರರಾಗಿರುವ ೬. ಎ. ದೊರೈಬಾಬುರವರನ್ನು ಅಲ್ಲಿನ ಪೋಲೀಸರು ನೆನ್ನೆ ಬಂಧಿಸಿದರು. ಅವರು ೫೦೦ ಜನರೊಡನೆ ಅಲ್ಲಿನ ತಾಲ್ಲೂಕು ಕಛೇರಿ ಮುಂದೆ ಸತ್ಯಾಗ್ರಹವನ್ನು ಆಚರಿಸಲು ಹೋಗುತ್ತಿದ್ದರೆಂದು ಹೇಳಲಾಗಿದೆ. ಕಾಂಗ್ರೆಸ್ ಉಮೇದುವಾರರಿಗೆ ಸರ್ಕಾರಿ ನೌಕರರು ಬೆಂಬಲ ನೀಡುತ್ತಿರುವುದನ್ನು ಪ್ರತಿಭಟಿಸಲು ಅವರು ಹೊರಟಿದ್ದರು

ಸಂಸ್ಥಾನದಲ್ಲಿ ೩ ಕಡೆ ಪ್ರಾದೇಶಿಕ ಆರೋಗ್ಯ ಕಛೇರಿ

ಆರೋಗ್ಯ ಇಲಾಖೆಯ ಡೆಪ್ಯುಟಿ ಡೈರೆಕ್ಟರರ ಮೇಲ್ವಿಚಾರಣೆಯಲ್ಲಿ ಮೂರು ಕಡೆ ಪ್ರಾದೇಶಿಕ ಆರೋಗ್ಯ ಕಛೇರಿಗಳನ್ನು ತೆರೆಯಲು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಬೆಂಗಳೂರು, ಮಂಡ್ಯ, ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ೧ ಬೆಂಗಳೂರಿನಲ್ಲಿ, ಮೈಸೂರು, ಹಾಸನ, ಚಿಕ್ಕಮಗಳೂರು ಕೊಡಗು ಮತ್ತು ಶಿವಮೊಗ್ಗಗಳಿಗಾಗಿ ಮೈಸೂರಿನಲ್ಲೂ ಮತ್ತು ಬೆಳಗಾಂ, ಬಿಜಾಪುರ, ಧಾರವಾಡ, ಕಾರವಾರ, ಗುಲ್ಬರ್ಗ, ರಾಯಚೂರು ಮತ್ತು ಬೀದರುಗಳಿಗಾಗಿ ಬೆಳಗಾಮಿನಲ್ಲೂ ಕಛೇರಿಗಳನ್ನು ಏರ್ಪಡಿಸಲಾಗುವುದು.

ಸಂಸ್ಥಾನದಲ್ಲಿ ೪೦ ಕುಟುಂಬ ಯೋಜನಾ ಕೇಂದ್ರಗಳು

ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಸಂಸ್ಥಾನ ಸರ್ಕಾರದವರು ಪಟ್ಟಣಗಳಲ್ಲಿ ೧೦ ಮತ್ತು ಹಳ್ಳಿಗಳಲ್ಲಿ ೩೦ ಕುಟುಂಬ ಯೋಜನಾ ಕೇಂದ್ರಗಳನ್ನು ತೆರೆಯಲು ಆಲೋಚಿಸಿದ್ದಾರೆ.

ಹರೀಂದ್ರನಾಥ ಚಟ್ಟೋಪಾಧ್ಯಾಯರಿಗೆ ಚಲನಚಿತ್ರ ನಟರ ಬೆಂಬಲ

ಲೋಕಸಭೆಗೆ ಸ್ಪರ್ಧಿಸಿರುವ ಹರೀಂದ್ರನಾಥ ಚಟ್ಟೋಪಾಧ್ಯಾಯರಿಗೆ ಬೆಂಬಲ ಕೊಡಲು ಭಾರತದ ಹಲವು ಚಲನಚಿತ್ರ ನಟರು ಮುಂದೆ ಬಂದಿರುತ್ತಾರೆ. ತಿಂಗಳ ೨೨ನೇ ತಾರೀಕು ಬೊಂಬಾಯಿಯ ರಾಜಕಪೂರ್‌ರವರೂ ಅಂದು ಮದ್ರಾಸಿನ ಶಿವಾಜಿ ಗಣೇಶನ್ ಮತ್ತು ಎನ್. ಎಸ್. ಕೃಷ್ಣನ್‌ರವರೂ ಬೆಂಗಳೂರಿಗೆ ಬಂದು ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವರು.

ಇನಾಂ ರದ್ದಿಯಾತಿ ಶಾಸನದ ವಿರುದ್ಧ ರಿಟ್ ಅರ್ಜಿ

ಬೆಂಗಳೂರು ೧೪

ಸಂಸ್ಥಾನ ಸರ್ಕಾರದವರು ಜಾರಿಗೆ ತಂದಿರುವ ವೈಯುಕ್ತಿಕ ಇನಾಂ ರದ್ದಿಯಾತಿ ಶಾಸನದ ವಿರುದ್ಧವಾಗಿ ಸೊರಬ ತಾಲ್ಲೂಕಿನ ಕುಪ್ಪಗಡ್ಡೆ ಹಳ್ಳಿಯ ಇನಾಮುದಾರ್ ಟಿ. ದತ್ತಂಭಟ್ಟರು ಹೈಕೋರ್ಟಿಗೆ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಾಧೀಶರಾದ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಮತ್ತು ಶ್ರೀ ಕೆ ಎಸ್. ಪದ್ಮನಾಭಯ್ಯನವರು ಪರಿಶೀಲನೆಗೆ ತೆಗೆದುಕೊಂಡು ಸರ್ಕಾರಕ್ಕೆ ನೋಟೀಸು ಕಳುಹುವಂತೆ ಆಜ್ಞೆ ಮಾಡಿರುತ್ತಾರೆ.

ಕಳೆದ ಸೆಪ್ಟೆಂಬರ್ ೧೫ ರಂದು ಸರ್ಕಾರದವರು ಹೊರಡಿಸಿರುವ ಪ್ರಕಟಣೆ ಪ್ರಕಾರ ಸಂಸ್ಥಾನದಲ್ಲಿ ೪೦೦ ಇನಾಮು ಗ್ರಾಮಗಳು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲ್ಪಟ್ಟವೆಂದೂ, ಅದಕ್ಕೆ ಇನಾಮುದಾರರಿಗೆ ಪರಿಹಾರವನ್ನು ಕೊಡಲಾಗುವುದೆಂದೂ ಸರ್ಕಾರದವರು ತಿಳಿಸಿರುವುದಾಗಿಯೂ ಅರ್ಜಿದಾರರು ನಮೂದಿಸಿ, ಅದರ ಪರಿಣಾಮವಾಗಿ ತಮ್ಮ ಇನಾಮಿನ ರೈತರುಗಳು ಇದುವರೆಗೂ ಈ ವರ್ಷದ ಗುತ್ತಿಗೆ ಫಸಲನ್ನು ಕೊಟ್ಟಿಲ್ಲವೆಂದು ತಿಳಿಸಿರುತ್ತಾರೆ. ೧,೨೦೦ ರ ಪೈಕಿ ೪೦೦ ಇನಾಮು ಗ್ರಾಮಗಳಿಗೆ ಕಾನೂನನ್ನು ಜಾರಿ ಮಾಡಿ ಸಣ್ಣ ಇನಾಮುದಾರರು ಮತ್ತು ಇನಾಮು ಗ್ರಾಮಗಳ ಜೋಡಿದಾರರಿಗೂ ತಾರತಮ್ಯವನ್ನೆಣಿಸಲಾಗಿರುವುದೆಂದೂ ತಿಳಿಸಲಾಗಿದೆ.

ಕಾಂಗ್ರೆಸ್ಸಿಗೆ ಚಿಕ್ಕಮಗಳೂರು ಜಿಲ್ಲೆಯ ಹಲವರ ರಾಜೀನಾಮೆ

ಚಿಕ್ಕಮಗಳೂರಿನ ವಿಧಾನಸಭಾ ಸದಸ್ಯ ಶ್ರೀಮತಿ ಬಿ. ಎಲ್. ಸುಬ್ಬಮ್ಮ ಮತ್ತು ಆ ಜಿಲ್ಲೆಯ ೩೩ ಜನ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರು ಪ್ರಾದೇಶಿಕ ಚುನಾವಣಾ ಸಮಿತಿಯವರ ಆಯ್ಕೆ ವಿಧಾನದಲ್ಲಿ ಜಿಗುಪ್ಸೆಗೊಂಡು ಕಾಂಗ್ರೆಸ್ಸಿಗೆ ರಾಜೀನಾಮೆ ಸಲ್ಲಿಸಿರುತ್ತಾರೆ.

"ಜ್ಯೋತಿ"

ನಗರದ ಬಣಜಿಗರ ಸಂಘ ವಿದ್ಯಾರ್ಥಿ ನಿಲಯದವರು ಮೇಲ್ಕಂಡ ಶಿರೋನಾಮೆಯ ವಾರ್ಷಿಕ ಸಂಚಿಕೆಯೊಂದನ್ನು ಪ್ರಕಟಿಸುತ್ತಾರೆ. ಶ್ರೀ ಎಂ. ವಿ. ಶ್ರೀನಿವಾಸ್ ಮತ್ತು ಶ್ರೀ ಎಸ್. ನಂಜುಂಡಯ್ಯನವರು ಅದರ ಸಂಪಾದಕರು. ಸಂಘದ ಸದಸ್ಯರಿಗೂ ಮತ್ತು ಸಾರ್ವಜನಿಕರಿಗೂ ನಿಲಯದ ವಿದ್ಯಾರ್ಥಿಗಳು ಸಾಧಿಸಿರುವ ಪ್ರಗತಿಯನ್ನು ಪರಿಚಯ ಮಾಡಿಕೊಡುವುದೇ ಇದರ ಉದ್ದೇಶ. ತರುಣ ಬರಹಗಾರರಲ್ಲಿ ಸಾಹಿತ್ಯ ಶಕ್ತಿಯನ್ನು ಬೆಳೆಸುವುದೂ ನಿಲಯದವರ ಉದ್ದೇಶವಾಗಿದೆ. ಭಗವದ್ಗೀತೆಯ ಸ್ಥಿತಪ್ರಜ್ಞನ ವಿಚಾರವಾದ ಶ್ಲೋಕದ ಅರ್ಥವನ್ನೂ, ಹಲವು ಕವನಗಳನ್ನೂ, ಲೇಖನಗಳನ್ನೂ ಪ್ರಕಟಿಸಲಾಗಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಭತ್ತ

ಕೊಯಮತ್ತೂರು	[illegible]	[illegible]	೦	[illegible]	[illegible]	೦
ರತ್ನಚೂಡಿ	[illegible]	[illegible]	೦	[illegible]	[illegible]	೦
ಕಡ್ಡಿ	[illegible]	[illegible]	೦	[illegible]	[illegible]	೦
ಕಂಬಾರ	[illegible]	[illegible]	೦	[illegible]	[illegible]	೦
ಸೇಲಂ ಸಣ್ಣ	[illegible]	[illegible]	೦			
ರಾಗಿ	[illegible]	[illegible]	೦	[illegible]	[illegible]	[illegible]
ಜೋಳ	[illegible]	[illegible]	೦	[illegible]	[illegible]	೦
ಕಂಬು	[illegible]	[illegible]	೦	[illegible]	[illegible]	೦
ನವಣೆ	[illegible]	[illegible]	[illegible]			
ಕಡಲೆಕಾಯಿ	[illegible]	[illegible]	೦	[illegible]	[illegible]	೦
ಹರಳುಬೀಜ	[illegible]	[illegible]	೦			
ಹುಚ್ಚೆಳ್ಳು	[illegible]	[illegible]	೦	[illegible]	[illegible]	೦
ಹೊಂಗೆಬೀಜ	[illegible]	[illegible]	೦	[illegible]	[illegible]	[illegible]
ಹುರುಳಿ	[illegible]	೦	೦	[illegible]	[illegible]	೦
ಉದ್ದು	[illegible]	೦	೦	[illegible]	[illegible]	[illegible]
ಅವರೆ	[illegible]	[illegible]	೦	[illegible]	[illegible]	೦
ಧನಿಯ	[illegible]	[illegible]	೦	[illegible]	[illegible]	೦
ಕಡಲೆ	[illegible]	[illegible]	[illegible]	[illegible]	[illegible]	೦
ತೊಗರಿ	[illegible]	[illegible]	೦	[illegible]	[illegible]	[illegible]
ಕೆಂಪುಮೆಣಸು	[illegible]	೦	೦	[illegible]	[illegible]	೦
ಹುಣಸೆ	[illegible]	[illegible]	೦	[illegible]	[illegible]	೦
ಮೆಣಸಿನಕಾಯಿ	[illegible]	[illegible]	೦	[illegible]	[illegible]	[illegible]
ಬೆಳ್ಳುಳ್ಳಿ	[illegible]	[illegible]	[illegible]	[illegible]	[illegible]	೦
ತೆಂಗಿನಕಾಯಿ	[illegible]	೦	೦	[illegible]	[illegible]	[illegible]

ಜನತೆಯ ನ್ಯಾಯವಾದ ಹಕ್ಕಿಗೆ ಕಮ್ಯೂನಿಸ್ಟ್ ಪಕ್ಷದ ಹೋರಾಟ

ಚುನಾವಣಾ ಪ್ರಚಾರ ಸಭೆಯಲ್ಲಿ ಅಜಯ ಘೋಷರ ಭಾಷಣ

ಮೈಸೂರು ೧೪

ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯ ಘೋಷರು ಇಲ್ಲಿನ ಟೌನ್ ಹಾಲ್ ಮೈದಾನದಲ್ಲಿ ನೆನ್ನೆ ತಮ್ಮ ಪಕ್ಷದ ಪರ ಚುನಾವಣಾ ಪ್ರಚಾರ ಭಾಷಣ ಮಾಡಿದರು. ಕಾಮ್ರೇಡ್ ಎನ್. ಎಲ್. ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಘೋಷರು ತಮ್ಮ ಭಾಷಣದಲ್ಲಿ ಜನಸಾಮಾನ್ಯರ ನ್ಯಾಯವಾದ ಹಕ್ಕುಗಳಿಗಾಗಿ ತಮ್ಮ ಪಕ್ಷವು ಹೋರಾಟ ನಡೆಸುವುದೆಂದೂ, ಕೇವಲ ವಾಗ್ದಾನಗಳನ್ನು ಮಾಡುವುದಿಲ್ಲವೆಂದೂ ತಿಳಿಸಿದರು. ಕಾಂಗ್ರೆಸ್ ಸರ್ಕಾರದ ನೀತಿಗಳನ್ನು ಟೀಕಿಸಿ ಕಾಶ್ಮೀರದ ಪ್ರಶ್ನೆಯನ್ನು ಕಾಂಗ್ರೆಸ್ಸು ತನ್ನ ಚುನಾವಣಾ ಪ್ರಚಾರಕ್ಕೆ ಉಪಯೋಗಿಸಿಕೊಳ್ಳುತ್ತಿರುವುದು ಸರಿಯಲ್ಲವೆಂದು ನುಡಿದರು. ಬಡ ಜನರಿಗೆ ತೊಂದರೆಯಾಗುತ್ತಿರುವ ಮಾರಾಟ ತೆರಿಗೆಯಿಂದ ವಸೂಲಾಗುತ್ತಿರುವ ವರಮಾನವು ೩೩ ಕೋಟಿಯಿಂದ ೭೦ ಕೋಟಿಗೆ ಏರಿರುವುದೆಂದೂ, ಆದರೆ ವರಮಾನ ತೆರಿಗೆಯು ಮಾತ್ರ ಹಾಗೆಯೇ ಇರುವುದೆಂದೂ ತಿಳಿಸಿ, ಇದರಿಂದ ಕಾಂಗ್ರೆಸ್ಸು ಭಾರಿಭಾರಿ ವರ್ತಕರ ಬೆಂಬಲಿಗ ಪಕ್ಷವಾಗಿರುವುದೆಂಬುದು ವ್ಯಕ್ತವಾಗುವುದೆಂದೂ ತಿಳಿಸಿದರು. ನಿರುದ್ಯೋಗ, ಗೋವಾ ಸಮಸ್ಯೆ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿ, ದೇಶದಲ್ಲಿರುವ ವಿದೇಶೀ ಕಂಪೆನಿಗಳೆಲ್ಲವನ್ನೂ ರಾಷ್ಟ್ರೀಕರಣ ಮಾಡಬೇಕಾದುದು ಅಗತ್ಯವೆಂದು ನುಡಿದರು.

ವಿವಾಹ ಮಹೋತ್ಸವಗಳು

ಮೈಸೂರು ಮೆಡಿಕಲ್ ಸರ್ವಿಸ್ಸಿನ ಡಾ|| ಹೆಚ್ ದೇವಪ್ಪನವರು ತಮ್ಮ ಕುಮಾರಿ ಸೌ|| ಶಾಂತನನ್ನು ಕೊಳ್ಳೇಗಾಲ ತಾಲ್ಲೂಕು ಚಿಲಕವಾಡಿಯ ಶ್ರೀ ಸಿದ್ದಮಲ್ಲದೇವರವರ ಪುತ್ರ ಶ್ರೀ ಎಸ್ ಮಹಲಿಂಗಸ್ವಾಮಿಯವರಿಗೆ ಕೊಟ್ಟು ಮೊನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ಅರಸೀಕೆರೆ ತಾಲ್ಲೂಕು ಬಾಣಾವರದಲ್ಲಿರುವ ಸರಾಫ್ ಶೆಟ್ಟಿ ಶ್ರೀ ಬಿ ರಾಮಯ್ಯನವರು ತಮ್ಮ ಕುಮಾರ ಶ್ರೀ ಬಿ ಆರ್. ಸುಬ್ಬಕೃಷ್ಣರವರಿಗೆ ಕೃಷ್ಣರಾಜಪೇಟೆ ತಾಲ್ಲೂಕು ಹೊಸಹೊಳಲಿನ ಶ್ರೀ ಎಸ್. ಪುಟ್ಟಯ್ಯನವರ ಕುಮಾರಿ ಸೌ|| ಶಾಂತನನ್ನು ತಂದುಕೊಂಡು ಹೊಸಹೊಳಲಿನಲ್ಲಿ ಮೊನ್ನೆ ವಿವಾಹವನ್ನು ಜರುಗಿಸಿದರು.

ಹೆಸರುಘಟ್ಟದ ಶ್ರೀ ಹೆಚ್ ವೆಂಕಟರಮಣಯ್ಯನವರು ಆರ್. ಐ ಎಸ್. ಇಂಡಸ್ಟ್ರಿಯಲ್ ಸೂಪರ್‌ವೈಸರಾದ ಶ್ರೀ ಹೆಚ್. ನಾರಾಯಣರವರಿಗೆ ಶ್ರೀ ಲಿಂಗಯ್ಯನವರ ಮಗಳು ಸೌ|| ಎಲ್. ಶಾರದಾರವರನ್ನು ತಂದುಕೊಂಡು ಮೊನ್ನೆ ನಗರದಲ್ಲಿ ವಿವಾಹವನ್ನು ಬೆಳೆಸಿದರು.

ಕೋರ್ಟಿನಲ್ಲೇ ಕೊಲೆ

ಅಲಹಾಬಾದು ಜಿಲ್ಲಾ ಕೋರ್ಟಿನಲ್ಲಿ ಕಳೆದ ಶನಿವಾರ ಶಂಕರ್ ಎಂಬ ೩೦ ವರ್ಷದವನ ಮೇಲೆ ಯಾವನೋ ಗುಂಡು ಹಾರಿಸಿದನೆಂದೂ, ಅವನು ಸ್ಥಳದಲ್ಲೇ ಮೃತಪಟ್ಟನೆಂದೂ ವರದಿಯಾಗಿದೆ. ಹಂತಕನು ಪರಾರಿಯಾಗಿರುತ್ತಾನೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೧೫ ಮತ್ತು ೮-೧೫ ಆರ್. ಚಂದ್ರಸಿಂಗ್–ದೇವರನಾಮ. ೭-೩೦ ಹಿಂದಿ ಶಿಕ್ಷಣ. ಮಧ್ಯಾಹ್ನ ೧೨ ರಾಜಲಕ್ಷ್ಮಿ ಶ್ರೀನಿವಾಸನ್–ಗಾಯನ ೧೨-೩೦ ಗಾನಮಂಜರಿ. ೧ ಆರ್. ಚಂದ್ರಸಿಂಗ್-ನಾಟಕಗಾರಿಕೆ. ೧-೫೦ ನಿಲಯ ವಿದ್ವಾಂಸರ ಸಂಗೀತ. ೩-೧೫ ಸಂಗೀತ ಕಛೇರಿ ಸಂಜೆ ೫-೩೦ ಮತ್ತು ರಾತ್ರಿ ೮ ವಿ. ಕೃಷ್ಣಸ್ವಾಮಿ ನಾಗೇಶ್. ೬-೫ ವಿವಿಧ ಸಂಗೀತ. ೬-೩೦ ಗೀತಾವಳಿ. ೭-೩೦ ಗ್ರಾಮಸ್ಥರಿಗಾಗಿ. ೭-೩೦ ಶ್ರೋತೃಗಳ ಕೋರಿಕೆಗೆ ನಮ್ಮ ಉತ್ತರ ೮-೩೦ ರಾಷ್ಟ್ರೀಯ ಕಾರ್ಯಕ್ರಮ: ದೆಹಲಿ ರಿಲೇ. ೯-೫೦ ಕೆ. ಎಲ್. ಸೈಗಲ್–ರಿಕಾರ್ಡು. ೧೦-೧೫ ಎಂ. ಎಸ್. ಕಲ್ಯಾಣಿ ಅಯ್ಯಂಗಾರ್. ಗಾಯನ.

ಕೊಟ್ಟಣದ ಅಕ್ಕಿ ಕೈಗಾರಿಕೆ ಕೇಂದ್ರದ ಆರಂಭ

ಬೆಂಗಳೂರು ೧೪

ಬೆಂಗಳೂರು ಮಹಿಳಾ ಸೇವಾ ಸಂಘದವರು ಕೊಟ್ಟಣದ ಅಕ್ಕಿ ಕೈಗಾರಿಕೆ ಕೇಂದ್ರವನ್ನು ಪ್ರಾರಂಭಿಸಿದ್ದಾರೆ. ಅದರ ಆರಂಭೋತ್ಸವವನ್ನು ಕಳೆದ ಬುಧವಾರ, ಗ್ರಾಮ ಕೈಗಾರಿಕಾ ಡೈರೆಕ್ಟರಾದ ಶ್ರೀ ಬೀರಪ್ಪನವರು ನೆರವೇರಿಸಿದರು.

ಚಿತ್ರಾ ಆರ್ಟ್ಸ್‌ನ ಸಂಘದ ಪದ್ಮಾ ಎಂಬ ಮಗುವಿನಿಂದ ದೇವತಾ ಪ್ರಾರ್ಥನೆಯಾದನಂತರ ಸಂಘದ ಕಾರ್ಯದರ್ಶಿ ಶ್ರೀಮತಿ ಕೆ ಪದ್ಮಾರವರು ಸ್ವಾಗತ ಭಾಷಣ ಮಾಡಿದರು. ಕಲಾಮಂದಿರದ ಶ್ರೀ ಅ ನಾ ಸುಬ್ಬರಾಯರು ಸಂಘದ ಸೇವಾಕಾಂಕ್ಷೆಯ ಗುರಿಯನ್ನು ವಿವರಿಸಿದರು.

ಮೈಸೂರು ದೇಶದ ಕೊಟ್ಟಣದ ಅಕ್ಕಿ ಕೈಗಾರಿಕೆ ಅಧಿಕಾರಿಗಳಾದ ಶ್ರೀ ಎ. ಎಸ್. ಸೂರ್ಯನಾರಾಯಣರಾಯರೂ, ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗದ ಜೋನಲ್ ಡೈರೆಕ್ಟರಾದ ಶ್ರೀ ಕೆ. ವೆಂಕಟರಾಮಯ್ಯನವರೂ ಮತ್ತು ಲೋಕಸಭಾ ಸದಸ್ಯರಾದ ಶ್ರೀ ಎಸ್. ಕೇಶವಯ್ಯಂಗಾರ್ಯರೂ ಭಾಷಣ ಮಾಡಿದರು. ಸರ್ಕಾರದವರು ಜನಹಿತ ಕಾರ್ಯಕ್ಕಾಗಿ ಕೋಟ್ಯಂತರ ಹಣವನ್ನು ಖರ್ಚು ಮಾಡಿ ಸಾಧಿಸುತ್ತಿರುವ ಮಹತ್ಕಾರ್ಯಗಳನ್ನು ವಿವರಿಸಿ ಗ್ರಾಮೋದ್ಯೋಗಗಳಿಗೆ ಈಗಿರುವ ಅವಶ್ಯಕತೆಯನ್ನು ಸ್ಪಷ್ಟಗೊಳಿಸಿದರು.

ಅಧ್ಯಕ್ಷರು ಮಾತನಾಡಿ, ಇಂತಹ ಕೈಗಾರಿಕೆಗಳನ್ನು ಸ್ಥಾಪಿಸುವುದೇ ಸರ್ಕಾರದ ಉದ್ದೇಶವೆಂದೂ, ಇದಕ್ಕಾಗಿ ಬೇಕಾದಷ್ಟು ಹಣ ಕೊಡಲು ಸಿದ್ಧರಾಗಿದ್ದಾರೆಂದೂ ತಿಳಿಸಿದರು. ಈ ಸಹಾಯ ಪಡೆಯಲು ರಿಜಿಸ್ಟರ್ಡ್ ಸಂಘಗಳೂ, ಸಹಕಾರ ಸಂಸ್ಥೆಗಳೂ ಮುಂದೆ ಬರುತ್ತಿರುವುದು ಸಂತೋಷವಾದರೂ, ಈ ಸಂಖ್ಯೆಯು ಹೆಚ್ಚಬೇಕೆಂದರು.

ಇಂತಹ ಕೈಗಾರಿಕಾ ಕೇಂದ್ರಗಳು ಹೆಚ್ಚಬೇಕೆಂದು ಒತ್ತಿ ಹೇಳಿ, ಕೊಟ್ಟಣದ ಅಕ್ಕಿ ಕೇಂದ್ರವನ್ನು ಆರಂಭಗೊಳಿಸಿದರು.

ಫಲ, ಪುಷ್ಪ, ವೀಳೆಯ ವಿನಿಯೋಗ ಮತ್ತು ಜಯಕಾರದೊಡನೆ ಸಮಾರಂಭವು ಮುಕ್ತಾಯವಾಯಿತು.

ಚಿಕ್ಕಮಗಳೂರು ವೃತ್ತಿ ಶಿಕ್ಷಣಾಲಯಕ್ಕೆ ೧ ಲಕ್ಷ ರೂ. ದಾನ

ಚಿಕ್ಕಮಗಳೂರಿನಲ್ಲಿ ವೃತ್ತಿ ಶಿಕ್ಷಣಾಲಯವೊಂದನ್ನು ನಿರ್ಮಿಸುವ ಸಲುವಾಗಿ ತಿಪ್ಪನಹಳ್ಳಿ ಎಸ್ಟೇಟಿನ ಶ್ರೀ ಎ ಚಂದ್ರೇಗೌಡರ ಮಕ್ಕಳು ಮತ್ತು ಮೊಮ್ಮಕ್ಕಳು ೧ ಲಕ್ಷ ರೂ ಗಳನ್ನು ದಾನವಾಗಿ ಕೊಟ್ಟಿರುತ್ತಾರೆ.

ಕಲಾವಿದರ ಸಭೆ

ನಗರದ ಕಲಾವಿದರ ಸಭೆಯು ಈ ಸಂಜೆ ೬ ಗಂಟೆಗೆ ಕ್ಯಾತನಹಳ್ಳಿ ಸಿದ್ದಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯುವುದು. ಎಲ್ಲಾ ಕಲಾವಿದರೂ ಬರುವಂತೆ ಕೋರಲಾಗಿದೆ.

ಕೂಡಲೇ ಮಾರಾಟಕ್ಕಿದೆ

ರೆಮಿಂಗ್ಟನ್ ಟೈಪ್‌ರೈಟರ್, ಫಿಲಿಪ್ಸ್ ರೇಡಿಯೋ, ಹರ್ಕ್ಯುಲಿಸ್ ಲೇಡೀಸ್ ಸೈಕಲ್, ಆರ್. ಸಿ. ಎ. ರೇಡಿಯೋ ಗ್ರಾಂ ಮತ್ತು ಗ್ರಾಮಾಫೋನ್, ಜಿ. ಇ. ಸಿ. ವಿದ್ಯುಚ್ಛಕ್ತಿ ಫ್ಯಾನ್, ಸಿಂಗರ್ ಹೊಲಿಯುವ ಯಂತ್ರ ಮತ್ತು ಅನೇಕ ಉತ್ತಮ ಫರ್ನಿಚರುಗಳು. ಹೆಚ್ಚಿನ ವಿವರಗಳಿಗೆ ವಿಚಾರಿಸಿ:–

ಆ ಬೀಡ್ಸ್,
[illegible] : ಮೈಸೂರು

ಮೃಗಾಲಯದ ಹುಲಿಮರಿಯ ಬಾಲಕಿಗೆ ಗಾಯ

ಮೈಸೂರು

ಮಿಸ್ ಸದಾನಂದ್ ಎಂಬ ಉಪಾಧ್ಯಾ ಯವರ ನೇತೃತ್ವದಲ್ಲಿ ಮೊನ್ನೆ ನಗರಕ್ಕೆ ಆ ಸಿದ ಕೊಯಮತ್ತೂರಿನ ಶಾಲಾ ವಿದ್ಯಾರ್ಥಿ ಯರ ತಂಡವೊಂದರ ಪೈಕಿ ಹಲವರು ಇ ಮೃಗಾಲಯಕ್ಕೆ ಹೋಗಿದ್ದಾಗ, ಅಲ್ಲಿನ ಆವ ದಲ್ಲಿ ಕಟ್ಟಿಹಾಕಿರುವ ಹುಲಿಮರಿಯು ಸುಮಾ ೧೨ ವರ್ಷದ ಮಾರ್ಥಾಲ್ ಎಂಬ ಬಾಲಿ ಕತ್ತು, ಮುಖಗಳ ಮೇಲೆ ಪಂಜದಿಂದ ಹೊಡೆ ಗಾಯಗೊಳಿಸಿತೆಂದೂ, ಅಲ್ಲಿಯೇ ಇದ್ದ ಕೂರಿನ ಯುವಕರ ತಂಡದವರು ಅವಳನ್ನು ಆಸ್ಪತ್ರೆಗೆ ಸೇರಿಸಿದರೆಂದೂ ವರದಿಯಾಗಿದೆ.

ಸ್ಥಳದಲ್ಲಿ ನಿಂತಿದ್ದ ಪೋಲೀಸು ಕಾನ್ಸ್ಟೇಬ ಲೇ, ಮೃಗಾಲಯದವರಾಗಲೀ ಈ ಬಗ್ಗೆ ನ ಕೊಡಲಿಲ್ಲವೆಂದು ಹೇಳಲಾಗಿದೆ. ಯುವಕ ಈ ವಿಚಾರವನ್ನು ನಜರ್‌ಬಾದು ಪೋಲೀಸು ಠಾಣೆಗೆ ತಿಳಿಸಿದರು. ಅವರು ಕೊಡಬೇಕಾ ದೂರನ್ನೇನೂ ಸ್ವೀಕರಿಸಲಿಲ್ಲ. ಗಾಯಗೊ ಹುಡುಗಿಯನ್ನು ಬಿಡಿಸಲು ಬಂದ ಮತ್ತೊ ಬಾಲಕಿಯ ಕೈ ಮೇಲೆ ಗಾಯವಾಗಿದೆ. ಆಸ್ಪ ಗೆ ಸೇರಿರುವವಳ ಸ್ಥಿತಿ ಉತ್ತಮವಾಗುತ್ತಿದೆ.

ಕೇಂದ್ರ ಆಹಾರ ಸಂಸ್ಥೆಯಲ್ಲಿ ಶಾವಿಗೆ ತಯಾರಿಕೆ ಯಂತ್ರದ ಸ್ಥಾಪನೆ

ನಗರದ ಕೇಂದ್ರ ಆಹಾರ ಸಂಶೋಧನಾ ಯದವರು ಶಾವಿಗೆಯನ್ನು ತಯಾರಿಸುವ ಯಂತ್ರವೊಂದನ್ನು ಸ್ಥಾಪಿಸಿರುತ್ತಾರೆ. ಅದು ಮಾಡುವ ವಿಧಾನವನ್ನು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ಡೈರೆಕ್ಟರ್ ಡಾ|| ವಿ ಸುಬ್ರಹ್ಮಣ್ಯ ರು ವಿವರಿಸಿದರು. ಗೋಧಿ ಹಿಟ್ಟಿನಿಂದ ಸ್ತುವನ್ನು ತಯಾರಿಸಲಾಗುವುದು. ಸಂಶೋ ನಾಲಯದವರು ತಯಾರಿಸುವ ವಿಧಾನದ ಪದಾರ್ಥದಲ್ಲಿ ಶೇಕಡ ೧೪ರಷ್ಟು ಪೌಷ್ಟಿಕಾಂ ವು ಉಳಿಯುವುದು. ಅಕ್ಕಿಯಲ್ಲಿರುವುದಕ್ಕಿ ಮೂರರಷ್ಟು ಮತ್ತು ಗೋಧಿಯಲ್ಲಿರುವ ಪೌಷ್ಟಿ ಕಾಂಶವು ಇವರಲ್ಲಿರುವುದು. ಅಕ್ಕಿಯನ್ನು ಉ ಯೋಗಿಸುವ ವಿಧಾನಗಳಲ್ಲೇ ಈ ಪದಾರ್ಥ ನ್ನೂ ಬಳಸಬಹುದು. ಅದರಲ್ಲಿ ಶೇಕಡ ೧೦ ಷ್ಟು ಆಹಾರಾಂಶವು ಇರುತ್ತದೆ ಮತ್ತು ದನ್ನು ನೀರಿನಲ್ಲಿ ತೊಳೆಯಬೇಕಾದ ಕೆಲಸ ವುದಿಲ್ಲ. ಅಲ್ಲದೆ ಪೌಂಡಿಗೆ ೪|| ಆಣೆಯ ಮೊರೆಯುವುದು ವಿದೇಶೀ ಪದಾರ್ಥವು ಡಿಗೆ ೧ ರೂ ಆಗುವುದು.

ಬಸ್ಸು ಅಪಘಾತದಲ್ಲಿ ೭ ಜನ ಮರಣ

ರುಡಾಪ್ಲಿ ಬಳಿ ಪ್ರಯಾಣಿಕರ ಬಸ್ಸೊಂದು ಲುವೆ ಕಟ್ಟೆಗೆ ಡಿಕ್ಕಿ ಹೊಡೆದು ಮಗುಚಿಕೊಂಡಿತೆಂದೂ, ಅದರ ಪರಿಣಾಮ ೭ ಜನರು ಮೃತಪಟ್ಟು ೩೫ ಮಂದಿಗೆ ಗಾಯ ಗಿರುವುದಾಗಿಯೂ ವರದಿಯಾಗಿದೆ. ಅವರೆಲ್ಲ ವಿವಾಹದ ಗುಂಪಿನವರು. ವರ, ಮೋಟಾರು ವರ್ ಮತ್ತು ಕ್ಲೀನರರಿಗೆ ಮಾತ್ರ ಪೆಟ್ಟಾಗಿ

SRI GAYATHRI
TALKIES
From 19-2-57 : For 2
BOLD AND BRAVE
(Superscope & Technicolo
With:-Mickey Rooney

Edited, Printed and Published
A. R. Nagarajan at Sadhvi Pr
D. Subbiah Road, Mysore

JOTHI ELECTRIC LAUNDRY
NAZARBAD, MYSORE
Central Office:— NEW STATUE SQUARE
GRAND REDUCTION IN DRY CLEANING RATES
Woollen Coats Rs. 1-8-0 per piece
Woollen Pants Rs. 1-0-0 per piece
Silk Sarees Rs. 1-8-0 per saree
Real Dry cleaning with American Triplex Dry cleaning Machine
Public Patronage is solicited

ರಿಜಿಸ್ಟರ್ಡ್ ನಂ. 792



ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ನಿಮ್ಮ ಓಟನ್ನು ಕೊಡಿರಿ



ಇಂದಿನ ಪತ್ರಿಕೆ ೩ ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. [illegible]
ಶ್ರೀ [illegible] ರಸ್ತೆ.
ಬೆಂಗಳೂರು-2

ಸಂಪುಟ : ೦೫] SADHVI । WEDNESDAY 20—2—1957 ಮೈಸೂರು । ಬುಧವಾರ ೨೦-೨-೧೯೫೭ : [ಸಂಚಿಕೆ : ೩೦೫

ಸೂಯೆಜ್ ಕಾಲುವೆ ಬಳಕೆ ಬಗ್ಗೆ ತ್ರಿರಾಷ್ಟ್ರ ಸಂಧಾನವೇ

ಗ್ರಾಮಾಧಿಕಾರಿಗಳ ಸಂಭಾವನೆ ಹೆಚ್ಚಿಸಲು ತೀವ್ರಾಲೋಚನೆ

ವಿಧ ಗ್ರಾಮಾಧಿಕಾರಿಗಳ ಪದ್ಧತಿಯ ಐಕ್ಯ

ಮ ತಂತಿ] ಬೆಂಗಳೂರು ೨೦

ಸಂಸ್ಥಾನದ ವಿವಿಧ ಭಾಗಗಳಲ್ಲಿರುವ ಪರಸ್ಪರ ಭಿನ್ನವಾದ ಗ್ರಾಮಾಧಿಕಾರಿ ಪದ್ಧತಿಯನ್ನು ಮಗೂಡಿಸುವ ಮತ್ತು ಅವರುಗಳ ಸಂಭಾವನ್ನು ಹೆಚ್ಚಿಸುವ ವಿಷಯಗಳು ಸರ್ಕಾರದ ವ್ರಾಲೋಚನೆಯಲ್ಲಿದೆ. ಈ ಪ್ರಶ್ನೆಗಳನ್ನು ಲ್ಲಿ ಸೇರುವ ಮಂತ್ರಿಮಂಡಲದ ಸಭೆಯಲ್ಲಿ ಶೀಲಿಸಲಾಗುವುದು.

ಬ್ಲಿಕ್ ಸರ್ವಿಸ್ ಕಮಿಷನ್ನಿನ ಸದಸ್ಯರ ನಿವೃತ್ತಿ

ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಧ್ಯಕ್ಷರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡ ತ್ತ ಸದಸ್ಯರಾದ ಶ್ರೀ ಜಾರ್ಜ್ ಮ್ಯಾಥ್ಯೂರವ ಮೇ ೧೮ನೇ ತಾರೀಕು ನಿವೃತ್ತರಾಗಲಿದಾ

ಹೊನ್ನಾವರಕ್ಕೆ ತೆರಳಿದ್ದ ರಾಜ್ಯಪಾಲರು ಈ ಇಲ್ಲಿಗೆ ಆಗಮಿಸಿದರು ನಾಳೆ ಅವರು ಅಖಿಲ ಭಾರತ ನೇತ್ರ ವೈದ್ಯರ ಸಮ್ಮೇಳನವನ್ನು ಆರಂಭಗೊಳಿಸುವರು.

ಮಾರ್ಚ್ ಕಡೇ ವಾರದಲ್ಲಿ ಶಾಸನ ಸಭೆಗಳ ವೇಶನವು ಒಂದು ವಾರ ಕಾಲ ನಡೆಯುವ [illegible]ದಾಗುತ್ತಿದೆ.

ಮಂಗಳೂರಿನಲ್ಲಿ ಚುನಾವಣೆ ಪ್ರಚಾರಕ್ಕಾಗಿ ಶ್ರೀ ಎ ಬಿ ಶೆಟ್ಟಿಯವರು ಈ ಸಂಜೆ ತೆ ವರು

ಈಜಿಪ್ಟಿನೊಡನೆ ಪಶ್ಚಿಮರಾಷ್ಟ್ರಗಳ ತಾತ್ಕಾಲಿಕ ಒಪ್ಪಂದ ಯತ್ನ

ಸೂಯೆಜ್ ಕಾಲುವೆ ವಿಷಯವಾಗಿ ಈಜಿಪ್ಟಿನೊಡನೆ ಮಧ್ಯವರ್ತಿ ಒಪ್ಪಂದವನ್ನು ಮಾಡಿಕೊಳ್ಳಲು ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಗಳು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮ ಮೂಲಕ ಪ್ರಯತ್ನ ನಡೆಸಲಿವೆಯೆಂ ವರದಿಯಾಗಿದೆ. ಕಾಲುವೆಯನ್ನು ಬಳಸು ವ ರಾಷ್ಟ್ರಗಳ ನಡುವೆ ಈ ಬಗ್ಗೆ ಸ ಲೋಚನೆಯಾಗಿದೆಯೆಂದೂ, ಇತರ ರಾ ಗಳೊಡನೆಯೂ ಸಂಧಾನವಾಗುತ್ತಿರುವ ಗಿ ಹೇಳಲಾಗಿದೆ.

ಳೂರು ರೇಡಿಯೊ ನಾಳೆ ಕಾರ್ಯಕ್ರಮ

ಗ್ಗೆ ೬-೫ ಕೊಳಲು. ೭-೧೫ ಗೀತಾವಳಿ. ೦ ಮತ್ತು ೮-೧೫ರಿಂ. ಸುಬ್ರಹ್ಮಣ್ಯಶಾಸ್ತ್ರಿ ವಾಚನ. ಮಧ್ಯಾಹ್ನ ೧೨ ಮತ್ತು ೧-೫೦ ಚಿತ್ರ-ಸಂಗೀತ. ೧೨-೩೦ ಎ. ವೀರಭ ಪಿಟೀಲು ೧ ಹಿಂದೂಸ್ಥಾನಿ ಸಂಗೀತ. ಸಂಗೀತ. ಸಂಜೆ ೫-೩೦ ವಿಶ್ವಂಭರತೀ ೦-ಹಿಂದೂಸ್ಥಾನಿ ಸಂಗೀತ. ೬-೨೦ ಚಾ ಗೀತೆ. ೭-೩೦ ಶಾಸ್ತ್ರೀಯ ಸಂಗೀತ. ವೀರಭದ್ರಯ್ಯ-ಪಿಟೀಲು. ೮-೩೦ ನಿತ್ಯ ನ ಗೀತೆಗಳು. ೯-೧೫ ನೂತನ ವೈಜ್ಞಾನಿಕ ವೃತ್ತಾಂತ-ಭಾಷಣ. ೯-೩೦ ಅಖಿಲ ಭಾರತ ಕ ಕಾರ್ಯಕ್ರಮ.

ಸಹಕಾರ ಸಂಘಗಳ ಇನ್ಸ್ಪೆಕ್ಟರುಗಳ ಸಂಬಳ ಹೆಚ್ಚಿಸಲು ಮನವಿ

ರಿಜಿಸ್ಟ್ರಾರ್ ಬಿ ಎ. ಪಾಟೀಲರ ಉತ್ತರ

ಮೈಸೂರು ೧೯

ನೆನ್ನೆ ಇಲ್ಲಿನ ಸಹಕಾರ ಭವನದಲ್ಲಿ ಆದ ಸಮಾರಂಭವೊಂದರ ಸಮಯದಲ್ಲಿ ಸಹಕಾರ ಸಂಸ್ಥೆಗಳ ಇನ್ಸ್ಪೆಕ್ಟರುಗಳು ಮತ್ತು ಆಡಿಟರುಗಳು ಸಂಸ್ಥಾನದ ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಬಿ ಎ ಪಾಟೀಲರಿಗೆ ಮನವಿಯನ್ನು ಸಲ್ಲಿಸಿ ತಮಗೆ ತಕ್ಕಷ್ಟು ಸಂಬಳವನ್ನು ಕೊಡಬೇಕೆಂದು ಮನವಿ ಮಾಡಿಕೊಂಡರು.

ರಿಜಿಸ್ಟ್ರಾರರು ಉತ್ತರಿಸುತ್ತಾ, ತಾವು ಈ ವಿಚಾರವಾಗಿ ಸರ್ಕಾರಕ್ಕೆ ಸಲಹೆಗಳನ್ನು ಮಾಡಿರುವುದಾಗಿಯೂ, ೩ ಗ್ರೇಡಿನ ಇನ್ಸ್ಪೆಕ್ಟರುಗಳನ್ನು ಏರ್ಪಡಿಸುವಂತೆ ಸೂಚಿಸಿರುವುದಾಗಿಯೂ, ಅದರ ಪ್ರಕಾರ ಯಾರಿಗೂ ಒಂದೇ ಸ್ಥಾನದಲ್ಲಿ ಕೊಳೆಯುವಂತೆ ಆಗುವುದಿಲ್ಲವೆಂದೂ ತಿಳಿಸಿದರು ಹಾಗೆಯೇ ಆಡಿಟರುಗಳ ಒನ್ನೂ ವಿವಿಧ ಗ್ರೇಡುಗಳನ್ನು ಏರ್ಪಡಿಸುವಂತೆ ಸಲಹೆ ಮಾಡಿರುವುದಾಗಿಯೂ ಅವರು ಸೂಚಿಸಿ ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಹೇಳಿದರು

ನಗರದ ಸಹಕಾರ ಸಂಘಗಳು ಮತ್ತು ಬ್ಯಾಂಕಿನ ನೌಕರರು ಮತ್ತು ಸೂಪರ್‌ವೈಸರುಗಳು ರಿಜಿಸ್ಟ್ರಾರರಿಗೆ ಮನವಿಯನ್ನು ಸಲ್ಲಿಸಿದರು. ಅದರ ಬಗ್ಗೆ ಶ್ರೀ ಪಾಟೀಲರು ಮಾತನಾಡಿ ಸೂಪರ್‌ವೈಸರುಗಳನ್ನು ಸರ್ಕಾರದ ಸೇವೆಗೆ ತಳುಹಿಸಲು ಸಂಘಗಳವರು ಒಪ್ಪಿದರೆ ಮತ್ತು ಅಂತಹವರಿಗೆ ವಯಸ್ಸು ಮೀರಿಂದಿದ್ದರೆ ಅವರನ್ನು ಸರ್ಕಾರಿ ಸೇವೆಗೆ ತೆಗೆದುಕೊಳ್ಳಲಾಗುವುದೆಂದು ಭರವಸೆಯಿತ್ತರು

ಮಹಾರಾಣಿ ಕಾಲೇಜು ಅಧ್ಯಾಪಕಿಯೊಬ್ಬರ ಆತ್ಮಹತ್ಯ

ನಗರದ ಮಹಾರಾಣಿ ಕಾಲೇಜಿನ ಅಧ್ಯಾಪಕಿ ಶ್ರೀಮತಿ ಅನಸೂಯ ಎಂಬ ೨೭ ವರ್ಷ ವಯಸ್ಸಿನ ಮಹಿಳೆಯು ಮೊನ್ನೆ ಸಂಜೆ ನೀರಿನ ತೊಟ್ಟಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡ ಪ್ರಸಂಗವು ವರದಿಯಾಗಿದೆ. ಆಕೆಯು ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಚನ್ನರುದ್ರಯ್ಯನವರ ಪುತ್ರಿ. ಆಕೆಯು ಮೊನ್ನೆ ಸಂಜೆ, ಅವರ ನಿವಾಸವಾದ ಜಲಸನ್ನಿಧಿ ಭವನದ ಸ್ನಾನದ ಮನೆಗೆ ಹೋಗಿ ಬಾಗಿಲು ಹಾಕಿಕೊಂಡು ಬಹಳ ಹೊತ್ತಾದರೂ ಹೊರಕ್ಕೆ ಬಾರದಿದ್ದುದರಿಂದ, ಬಾಗಿಲನ್ನು ಬಲಪ್ರಯೋಗದಿಂದ ತೆಗೆದು ನೋಡಲಾಗಿ ತೊಟ್ಟಿಯಲ್ಲಿ ಮೃತಪಟ್ಟಿದ್ದುದು ಗೋಚರವಾಯಿತು. ಮೃತಳಿಗೆ ವಿವಾಹವಾಗಿರಲಿಲ್ಲವೆಂದೂ, ಕೆಲವು ದಿನಗಳಿಂದ ಮಾನಸಿಕ ಅಸ್ವಸ್ಥತೆಯುಂಟಾಗಿತ್ತೆಂದೂ ಹೇಳಲಾಗಿದೆ.

ಕೋರ್ಟಿನಲ್ಲಿದ್ದಾಗಲೇ ನ್ಯಾಯಾಧೀಶರ ಮರಣ

ಅಲಹಾಬಾದು ಹೈಕೋರ್ಟಿನ ಲಕ್ನೋ ಪೀಠದ ನ್ಯಾಯಾಧೀಶರಾದ ಎಂ ಎಚ್. ಕಿದ್ವಾಯಿರವರು ನೆನ್ನೆ ಬೆಳಿಗ್ಗೆ ಕೋರ್ಟಿನಲ್ಲಿ ಕುಳಿತಿದ್ದಾಗ ಹಠಾತ್ತನೆಯೇ ಮೃತಪಟ್ಟರು.

ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರಲ್ಲಿ ಅವಿಶ್ವಾಸ

ಪಶ್ಚಿಮ ಪಾಕಿಸ್ತಾನದ ಅವಾಮಿ ನಾಯಕರ ಸಭೆಯಲ್ಲಿ ನಿರ್ಣಯ

ಪಶ್ಚಿಮ ಪಾಕಿಸ್ತಾನದ ಅವಾಮಿ ಲೀಗಿನ ನಾಯಕರ ಸಮ್ಮೇಳನವು ನೆನ್ನೆ ಲಾಹೋರಿನಲ್ಲಿ ನಡೆದು, ಪ್ರಧಾನಿ ಸುಹ್ರಾವರ್ದಿಯವರು ಪಕ್ಷದ ನಾಯಕರಾಗಿರುವ ಬಗ್ಗೆ ಅವಿಶ್ವಾಸವನ್ನು ವ್ಯಕ್ತಪಡಿಸಿದರು. ಮತ್ತು ಪೂರ್ವ ಪಾಕಿಸ್ತಾನದ ಅವಾಮಿ ಲೀಗ್ ಅಧ್ಯಕ್ಷ ಮೌಲಾನಾ ಭಾಷಾನಿಯವರಲ್ಲಿ ಅಚಲ ನಂಬಿಕೆಯನ್ನೂ ಸೂಚಿಸಿದರು. ಸುಹ್ರಾವರ್ದಿ ಮತ್ತು ಅವರ ಹಲವು ಅನುಯಾಯಿಗಳು ಪಶ್ಚಿಮ ಪಾಕಿಸ್ತಾನದ ಅವಾಮಿ ಲೀಗನ್ನು ವಿಸರ್ಜಿಸಲು ಅಧಿಕಾರವಿಲ್ಲವೆಂದು ಸೂಚಿಸಲಾಯಿತು ಈ ಸಭೆಗೆ ಗಡಿನಾಡು, ಸಿಂಧ್, ಪಂಜಾಬ್ ಮತ್ತು ಕರಾಚಿಯಿಂದ ಪ್ರತಿನಿಧಿಗಳು ಆಗಮಿಸಿದ್ದರು.

ಚುನಾವಣೆ ಸಭೆಯಲ್ಲಿ ಉಮೇದುವಾರನ ಮರಣ

ಅಹಮದ್‌ನಗರದ ಬಳಿ ಸಂಗಮ್ನೇರ್ ಮೀಸಲು ಕ್ಷೇತ್ರದಿಂದ ಬೊಂಬಾಯಿ ಶಾಸನಸಭೆಗೆ ಸ್ಪರ್ಧಿಸಿದ್ದ ಕಾಂಗ್ರೆಸ್ ಹರಿಜನ ಉಮೇದುವಾರ ಗೋಪಾಲ ಶ್ರಾವಣ ಭಂಗ್ರೆಯವರು ಮೊನ್ನೆ ಒಂದು ಕಡೆ ಚುನಾವಣೆ ಸಭೆಯಲ್ಲಿ ಮಾತನಾಡುತ್ತಾ ಕುಸಿದುಬಿದ್ದು ಮೃತಪಟ್ಟರು. ಅವರಿಗೆ ೪೫ ವರ್ಷ ವಯಸ್ಸಾಗಿತ್ತು. ಅವರು ಶಾಸನ ಸಭಾ ಸದಸ್ಯರಾಗಿದ್ದರು.

ನೀಲಗಿರಿ ಬಳಿ ಕೃತಕ ರೇಷ್ಮೆ ಕಾರ್ಖಾನೆ

ದಕ್ಷಿಣ ಭಾರತದ ಬಟ್ಟೆ ಕೈಗಾರಿಕೆಯವರು ಇಟಲಿ ಸರ್ಕಾರ ಮತ್ತು ಮಿಲಾನ್ ನಗರದ ಕಂಪೆನಿಯ ಸಹಾಯದಿಂದ, ನೀಲಗಿರಿಯ ತಪ್ಪಲಿನಲ್ಲಿರುವ ಮೇಟ್ಟುಪಾಳ್ಯದಲ್ಲಿ ಕೃತಕ ರೇಷ್ಮೆ ಕಾರ್ಖಾನೆಯನ್ನು ಸ್ಥಾಪಿಸಲಿರುವರು ಅದಕ್ಕೆ ಏಳು ಕೋಟಿ ರೂ. ಬಂಡವಾಳ ಹಾಕಲಾಗುವುದು.

ಪಕ್ಷಗಳ ಚುನಾವಣಾ ವೇದಿಕೆಯ ರಚನೆ

ಮಹಾ ಚುನಾವಣೆಗಳಲ್ಲಿ ಭಾಗವಹಿಸಿರುವ ರಾಜಕೀಯ ಪಕ್ಷಗಳು ತಮ್ಮತಮ್ಮ ಧ್ಯೇಯ ಧೋರಣೆಗಳನ್ನು ಮಹಾಜನರಿಗೆ ಮನದಟ್ಟು ಮಾಡಿಕೊಡುವಂತೆ ಅವಕಾಶ ಕಲ್ಪಿಸುವ ಸಲುವಾಗಿ ನಗರದಲ್ಲಿ ಪ್ರಚಾರವೇದಿಕೆಯೊಂದನ್ನು ರಚಿಸಲು ನೆನ್ನೆ ನಗರದ ಯುವಜನ ಬಳಗದ ಕಾರ್ಯ ಸಮಿತಿ ಮತ್ತು ಹಿತೈಷಿಗಳ ಸಭೆಯಲ್ಲಿ ನಿರ್ಧರಿಸಲಾಯಿತು. ಪೌರಸಭಾ ಸದಸ್ಯ ಶ್ರೀ ಹೆಚ್. ಎಸ್. ಮುದ್ದಯ್ಯನವರು ಅಧ್ಯಕ್ಷತೆ ವಹಿಸಿದ್ದರು ಬಟ್ಟೆ ವರ್ತಕರಾದ ಶ್ರೀ ಎಸ್. ಉತ್ತಂರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಅದಕ್ಕಾಗಿ ಏರ್ಪಡಿಸಿದೆ ಶ್ರೀಗಳಾದ ಎಸ್. ಎಂ. ತಿರುಮಲಯ್ಯಂಗಾರ್, ಎಂ ಎ. ಷೌಕತ್ ಅಲಿ, ಶ್ರೀಮತಿ ಎಸ್. ಕಮಲಾದೇವಿಯವರು ಅದರ ಸದಸ್ಯರಾಗಿರುವರು. ಶ್ರೀ ಎ ಎಸ್ ನಾರಾಯಣಸ್ವಾಮಿಯವರು ಸಂಚಾಲಕರು

ಕನ್ನಡ ಪ್ರದೇಶದ ನಾಲ್ಕು ರೇವುಗಳ ಅಭಿವೃದ್ಧಿ ಕಾರ್ಯ

ರಾಜ್ಯಪಾಲರ ಭರವಸೆ

ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರಿಗೆ ಶನಿವಾರ ಜಿಲ್ಲಾ ಬೋರ್ಡು ಮತ್ತು ಹೊನ್ನಾವರ ಪೌರಸಭೆಗಳವರು ನೆನ್ನೆ ಇತ್ತ ಬಿನ್ನವತ್ತಳೆಗೆ ಉತ್ತರವಾಗಿ ಅವರು ಕಾರವಾರ, ಭಟ್ಕಳ್, ಕುಮಟಾ ಮತ್ತು ಹೊನ್ನಾವರ ಬಂದರುಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರದವರು ಆಲೋಚಿಸುತ್ತಿರುವರೆಂದೂ, ಆ ಪ್ರದೇಶಕ್ಕೆ ರೈಲ್ವೆ ಸೌಕರ್ಯವನ್ನು ಕಲ್ಪಿಸುವುದನ್ನೂ ಪರಿಶೀಲಿಸಲಾಗುತ್ತಿರುವುದೆಂದೂ ತಿಳಿಸಿದರು. ಕಾರವಾರ ಜಿಲ್ಲೆಯ ಅಗಾಧ ಪ್ರಕೃತಿ ಸಂಪತ್ತಿನ ಸರ್ವೆ ನಡೆಸಿ ಅಲ್ಲಿ ಕೈಗಾರಿಕೆಗಳನ್ನು ಏರ್ಪಡಿಸಬೇಕಾಗಿದೆಯೆಂದೂ, ವಿಮಾನ ಕೈಗಾರಿಕೆಯನ್ನು ಅಲ್ಲಿ ಅಭಿವೃದ್ಧಿಗೊಳಿಸುವುದು ಶಕ್ಯಕರವಲ್ಲವೆಂದೂ, ಇಡೀ ಸಂಸ್ಥಾನಕ್ಕೆಲ್ಲಾ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಬೇಕೆಂಬುದೇ ಸರ್ಕಾರದ ಧ್ಯೇಯವೆಂದೂ ಅವರು ಹೇಳಿದರು.

ಗವರ್ನರರು ಹೊನ್ನಾವರದ ಸೇಂಟ್ ಥಾಮಸ್ ಪ್ರೌಢಶಾಲೆಯ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಿದ್ದರು.

ರಾಧಾಕೃಷ್ಣನ್ನರಿಗೆ ರಾಷ್ಟ್ರಾಧ್ಯಕ್ಷತೆ

ಮಹಾ ಚುನಾವಣೆಗಳನಂತರ ರಾಷ್ಟ್ರಾಧ್ಯಕ್ಷರ ಸ್ಥಾನಕ್ಕೆ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಬರುವ ಸಂಭವವಿದೆ. ಕೇಂದ್ರ ಮಂತ್ರಿ ಜಗಜೀವನರಾಂರವರು ಉಪಾಧ್ಯಕ್ಷರಾಗಬಹುದೆಂದೂ ಹೇಳಲಾಗುತ್ತಿದೆ.

೧ ಲಕ್ಷ ಸಮಾಜ ಕಲ್ಯಾಣ ಕೇಂದ್ರಗಳ ಸ್ಥಾಪನೆ

ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯೊಳಗೆ ದೇಶಾದ್ಯಂತ ೧ ಲಕ್ಷ ಸಮಾಜ ಕಲ್ಯಾಣ ಕೇಂದ್ರಗಳನ್ನು ಏರ್ಪಡಿಸಲಾಗುವುದೆಂದೂ, ಅವು ೫ ಲಕ್ಷ ಹಳ್ಳಿಗಳಲ್ಲಿ ಕಾರ್ಯ ನಡೆಸುವುವೆಂದೂ ಕೇಂದ್ರ ಸಮಾಜಕಲ್ಯಾಣ ಬೋರ್ಡಿನ ಅಧ್ಯಕ್ಷಿಣಿ ದುರ್ಗಾಬಾಯಿ ದೇಶಮುಖ್‌ರವರು ತಿಳಿಸಿರುತ್ತಾರೆ. ಮೊದಲಿನ ಏರ್ಪಾಡಿನ ಪ್ರಕಾರ ೧೦,೦೦೦ ಕೇಂದ್ರಗಳನ್ನು ತೆರೆಯಬೇಕೆಂದು ಉದ್ದೇಶಿಸಲಾಗಿತ್ತು.

ನೆಹರೂರವರ ಮೋಟಾರು ಮಾರ್ಗದಲ್ಲಿ ಬದಲಾವಣೆ

ಇದೇ ೨೩ನೇ ತಾರೀಕು ನಗರಕ್ಕೆ ಆಗಮಿಸುವ ಪ್ರಧಾನಿ ನೆಹರೂರವರ ಮೋಟಾರು ಸರ್ಕಾರಿ ಭವನಕ್ಕೆ ಟೌನ್‌ಹಾಲಿನಿಂದ ವಾಪಸು ತೆರಳುವಾಗ ಆಲ್ಬರ್ಟ್ ವಿಕ್ಟರ್ ರಸ್ತೆ, ಹಾರ್ಡಿಂಜ್ ಸರ್ಕಲ್, ಬೆಂಗಳೂರು-ನೀಲಗಿರಿ ರಸ್ತೆ ಮುಖಾಂತರ ಆರ್ಚ್ ಗೇಟಿನೊಳಗಿನಿಂದ ಹೋಗುವುದೆಂದು ತಿಳಿಸಲಾಗಿದೆ.

ಅಣಕು ಚುನಾವಣೆ

ಮಂಡಿ ಮೊಹಲ್ಲಾ ನಾಡೆ ರಸ್ತೆಯಲ್ಲಿರುವ ಮಿಸ್ ಕೈಲಾಸ್ಪೈಟ್ ಶಾಲೆಯ ಕೇಂದ್ರದಲ್ಲಿ ಅಣಕು ಚುನಾವಣೆಯನ್ನು [illegible]

ಪಶ್ಚಿಮವಾಹಿನಿಯಲ್ಲಿ ಸರ್ವೋದಯ ಮೇಳ

ಸರ್ವೋದಯ ಕಾರ್ಯ ಕೇಂದ್ರ ಸ್ಥಾಪನೆಗೆ ನಿರ್ಧಾರ

ಮೈಸೂರು ೩೦

ಪಶ್ಚಿಮವಾಹಿನಿಯಲ್ಲಿ ಕಳೆದ ೧೯ನೇ ತಾರೀಕು ಸರ್ವೋದಯ ಮೇಳದ ಅಂಗವಾಗಿ ಜೇಗುಂಬದ ನಾರಣಪ್ಪನವರ ಅಧ್ಯಕ್ಷತೆಯಲ್ಲಿ ಸರ್ವೋದಯ ಕಾರ್ಯಕರ್ತರ ಸಭೆಯು ಏರ್ಪಟ್ಟಿತ್ತು. ಅಖಿಲ ಭಾರತ ಸರ್ವಸೇವಾ ಸಂಘದ ಕಾರ್ಯದರ್ಶಿ ಶ್ರೀ ವಲ್ಲಭಸ್ವಾಮಿಯವರು ಭಾರತಾದ್ಯಂತ ವ್ಯಾಪಕವಾಗಿ ನಡೆಯುತ್ತಿರುವ ಭೂದಾನ ಚಳುವಳಿಯನ್ನೂ ಮತ್ತು ಪೂಜ್ಯ ವಿನೋಬಾಜಿಯವರು ಮುಂದಿನ ಜೂನ್‌ನಲ್ಲಿ ಮೈಸೂರಿಗೆ ಕೊಡಲಿರುವ ಭೇಟಿಯು ಯಶಸ್ವಿಯಾಗುವ ವಿಚಾರದಲ್ಲಿ ಮೈಸೂರು ಜನತೆಯ ಜವಾಬ್ದಾರಿಯನ್ನೂ ಕುರಿತು ಮಾತನಾಡಿದರು ಈ ವರ್ಷದಲ್ಲಿ ಭೂದಾನ ಚಳುವಳಿಯು ಜಯಪ್ರದವಾಗಲು ಕಾರ್ಯಕರ್ತರು ಕೈಗೊಳ್ಳಬೇಕಾದ ಕರ್ತವ್ಯವನ್ನು ಕುರಿತು ವಿಚಾರ ವಿನಿಮಯವು ನಡೆಯಿತು

ಗಾಂಧೀಜಿಯ ಚಿತಾಭಸ್ಮವು ವಿಸರ್ಜನೆ ಮಾಡಲ್ಪಟ್ಟ ಪಶ್ಚಿಮವಾಹಿನಿ ಕ್ಷೇತ್ರದಲ್ಲಿ ಶಾಶ್ವತವಾದ ಸ್ಮಾರಕವಾಗಿ ಒಂದು ಸರ್ವೋದಯ ಕಾರ್ಯ ಕೇಂದ್ರವನ್ನು ಸ್ಥಾಪಿಸಬೇಕೆಂದೂ, ಈ ಉದ್ದೇಶಕ್ಕಾಗಿ ಮೈಸೂರು ಅರಮನೆಗೆ ಸೇರಿರುವ ಪಶ್ಚಿಮವಾಹಿನಿಯ ಛತ್ರವನ್ನು ದಾನ ನೀಡಬೇಕೆಂದು ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರನ್ನು ಪ್ರಾರ್ಥಿಸಬೇಕೆಂದೂ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು ಈ ಬಗ್ಗೆ ಸೂಕ್ತ ಕಾರ್ಯವನ್ನು ಕೈಗೊಳ್ಳಲು ಡಾ|| ಸಿ ಬಂದೀಗೌಡರು, ಶ್ರೀ ಎಸ್. ವಿ. ಮಂಜುನಾಥನ್ ಮತ್ತು ಶ್ರೀ ಕೆ. ಎಸ್. ನಾರಾಯಣಸ್ವಾಮಿಯವರಿಗೆ ಅಧಿಕಾರ ಕೊಡಲಾಯಿತು

ಮೇಳದ ಅಂಗವಾಗಿ ಅಖಂಡ ಸೂತ್ರಯಜ್ಞ, ಭಜನೆ, ಗ್ರಂಥ ವಾಚನ, ಶ್ರಮದಾನ ಕಾರ್ಯ, ಸೂತ್ರಾಂಜಲಿಯ ಸಮರ್ಪಣೆ, ಪ್ರಾರ್ಥನಾ ಸಭೆಗಳು ಏರ್ಪಟ್ಟಿದ್ದುವು ಸಂಸ್ಥಾನದ ನಾನಾ ಕಡೆಗಳಿಂದ ಅನೇಕ ಮಂದಿ ಕಾರ್ಯಕರ್ತರೂ, ಇತರ ಅಭಿಮಾನಿಗಳೂ ಭಾಗವಹಿಸಿದ್ದರು

ಪಾರಿಜಾತವನೇಶ್ವರಸ್ವಾಮಿ ಜಯಂತ್ಯುತ್ಸವ

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಶಾಂತಾಶ್ರಮದಲ್ಲಿ ನಾಳೆಯಿಂದ ೨೮ ರವರೆಗೆ ಶ್ರೀ ಪಾರಿಜಾತವನೇಶ್ವರ ಸ್ವಾಮಿಯವರ ಪಂಚವಾರ್ಷಿಕ ಜಯಂತಿಯನ್ನು ನಡೆಸಲಾಗುವುದು ಅದರ ಅಂಗವಾಗಿ ಬೆಳಗ್ಗೆ ಅಭಿಷೇಕ, ಅರ್ಚನೆ ಮತ್ತು ಭಗವದ್ಗೀತಾ ಪಾರಾಯಣ ಮತ್ತು ಪ್ರವಚನಗಳೂ; ಸಂಜೆ ಶ್ರೀ ಸಾಂಖ್ಯಾನಂದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಉಪನ್ಯಾಸ, ಸಂಗೀತ ಮುಂತಾದುವೂ ನಡೆಯುವುವು. ನಾಳೆ ಸಂಜೆ ಶ್ರೀ ಎಂ ಯಾಮುನಾಚಾರ್ಯರಿಂದ ಸಂತರ ಸಂದೇಶದ ವಿಷಯವಾಗಿ ಉಪನ್ಯಾಸವಿದೆ.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಸರಕುಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಒಂದಾವರ್ತಿ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ನಗರದಲ್ಲಿ ಅಂತರ ರಾಷ್ಟ್ರ ಕೂಟದ ಸ್ಥಾಪನೆ

ಪಂಚಶೀಲ ತತ್ವದ ಪ್ರಚಾರದ ಸಲುವಾಗಿ ಅಂತರ ರಾಷ್ಟ್ರಗಳ ಬಗ್ಗೆ ಪರಸ್ಪರ ತಿಳುವಳಿಕೆಯು ಬೆಳೆಯಲು ಅವಕಾಶ ಕಲ್ಪಿಸುವ ಸಲುವಾಗಿ ನಗರದಲ್ಲಿ ಅಂತರ ರಾಷ್ಟ್ರ ಕೂಟವೊಂದನ್ನು ಏರ್ಪಡಿಸಲಾಗುವುದು ಅದರ ಕಾರ್ಯಕ್ಷೇತ್ರವನ್ನು ತಗಡೂರಿನಲ್ಲಿ ಏರ್ಪಡಿಸಿ, ಅಲ್ಲಿ ಒಂದು ಅಂತರ ರಾಷ್ಟ್ರ ಭವನವನ್ನು ಆರಂಭಿಸಲಾಗುವುದು, ನಗರದಲ್ಲಿರುವ ಭಾರತ-ರಷ್ಯಾ ಸಾಂಸ್ಕೃತಿಕ ಸಂಘ, ಚೀನಾ-ಭಾರತ ಸ್ನೇಹ ಸಂಘ, ಶಾಂತಿ ಸಮಿತಿಗಳ ಸದಸ್ಯರು, ಅಂತರ ರಾಷ್ಟ್ರ ಸಂಬಂಧದ ಅಭಿಮಾನಿಗಳು, ರಷ್ಯಾ ಹೈಯರ್ ಎಜುಕೇಷನ್ ಪ್ರದರ್ಶನದ ಪ್ರಮುಖ ಸಂಸ್ಥೆಯ ಕಾರ್ಯಕರ್ತರು ಕಳೆದ ಭಾನುವಾರ ತಗಡೂರಿಗೆ ತೆರಳಿ ಅಲ್ಲಿರುವ ಅಂಬರ್ ಚರಖಾ ಕಾರ್ಯಕ್ಷೇತ್ರದಲ್ಲಿ ಏರ್ಪಡಿಸಲಾಗಿರುವ ಅಂತರ ರಾಷ್ಟ್ರ ಭವನವನ್ನು ಪರಿಶೀಲಿಸಿದರು ಅಲ್ಲಿಗೆ ಶೀಘ್ರದಲ್ಲೇ ರಷ್ಯಾ ರಾಯಭಾರ ಕಛೇರಿಯ ಪ್ರಥಮ ಕಾರ್ಯದರ್ಶಿಯವರೂ ಭೇಟಿ ಕೊಡಲಿರುವರು

ಸಂಸ್ಥಾನದಲ್ಲಿ ಪಾರಿಭಾಷಿಕ ಶಿಕ್ಷಣ ಶಾಲೆಗಳ ಸ್ಥಾಪನೆ

ವಿವಿಧ ಕೈಗಾರಿಕೆ ಮತ್ತು ಉದ್ಯಮಗಳಲ್ಲಿ ನುರಿತ ಕೆಲಸಗಾರರ ಕೊರತೆಯನ್ನು ನೀಗಿಸಲು ಸರ್ಕಾರದವರು ೬೦ ಲಕ್ಷ ರೂ. ವೆಚ್ಚದಿಂದ ದ್ವಿತೀಯ ಯೋಜನೆ ಅವಧಿಯಲ್ಲಿ ಅನೇಕ [illegible] ತರಪೇತು ಶಾಲೆಗಳನ್ನು ತೆರೆಯಲಿರುವರು. ಮೈಸೂರು, ಭದ್ರಾವತಿ ಮತ್ತು ಹುಬ್ಬಳ್ಳಿಗಳಲ್ಲಿ ಅಂತಹ ಶಾಲೆಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಅಲ್ಲಿ ೧೦೦ ಕೆಲಸಗಾರರಿಗೆ ತರಪೇತು ಕೊಡಲಾಗುವುದು ದ್ವಿತೀಯ ಯೋಜನೆ ಮುಕ್ತಾಯದ ವೇಳೆಗೆ ೧,೦೦೦ ಜನರಿಗೆ ಶಿಕ್ಷಣವೀಯಲಾಗುವುದು ಈ ವೆಚ್ಚದಲ್ಲಿ ಕೇಂದ್ರ ಸರ್ಕಾರದವರು ಶೇಕಡ ೬೦ಭಾಗವನ್ನು ವಹಿಸುವರು

ಜೀವನದ ದರ್ಶನವನ್ನು ಸವಿಯಿರಿ
ಮುದುಕರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!
ಆರೋಗ್ಯ, ಐಶ್ವರ್ಯ ದೇಹದಾರ್ಢ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಸೆ ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿಗಳು ಷಂಡತ್ವ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ, ಸಿಫಿಲಿಸ್, ಗೊನೋರಿಯಾ, ಪಾರ್ಶ್ವವಾಯು, ಅಂಡವಾಯು ಮತ್ತು ಎಲ್ಲ ವಿಧವಾದ ಹಳೆಯ ಮೊಂಡು ರೋಗಗಳಿಗೂ ಕಾರಣವಾಗಿವೆ. ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ|| ರಾಜಾರವರನ್ನು (ಲೈಂಗಿಕ ಪ್ರವೀಣ) ಪ್ರತಿದಿನ ಬೆಳಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ. ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆಯ ಕಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು ನೂರಕ್ಕೆ ನೂರು ಖಾತರಿ ಕೊಡಲಾಗುವುದು.
ಅವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿ ಇಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ.
ರಾಜಾ ಮೆಡಿಕಲ್ ಹಾಲ್,
ಡೋರ್ ನಂ. 1745. ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ ಬಾಲಿಕಾಗಾರದಿಂದ
ಮೂರನೇ ಕಟ್ಟಡ),
ಮೈಸೂರು.

ಚುನಾವಣೆ ಪ್ರಚಾರದಲ್ಲಿ ಅಕ್ರಮಗಳನ್ನು ನಡೆಸದಂತೆ ಎಚ್ಚರಿಕೆ

ಕೇಂದ್ರ ಚುನಾವಣಾ ಕಮಿಷನ್ನಿನವರು ಪ್ರಕಟಣೆಯೊಂದನ್ನು ಹೊರಡಿಸಿ, ಪ್ರಚಾರ ಕಾರ್ಯದಲ್ಲಿ ಪ್ರತಿಸ್ಪರ್ಧಿಗಳು ನಡೆಸುವ ಸಭೆಯಲ್ಲಿ ಗಲಭೆ, ಮತದಾರರಲ್ಲಿ ಮೋಸ, ಲಂಚಗುಳಿತನ, ಮತದಾರರ ಮೇಲೆ ಬಲಾತ್ಕಾರ, ಓಟು ಕೊಡುವ ಕ್ಷೇತ್ರದಿಂದ ೧೦೦ ಗಜದೊಳಗೆ ಪ್ರಚಾರ ಮತ್ತು ಮತದಾರರಿಗಾಗಿ ವಾಹನ ಸೌಕರ್ಯದ ಏರ್ಪಾಡು ಇವುಗಳು ಸಲ್ಲವೆಂದೂ, ಅದನ್ನು ನಡೆಸಿದವರಿಗೆ ಶಿಕ್ಷೆ ವಿಧಿಸಲಾಗುವುದೆಂದೂ ತಿಳಿಸಿರುವರು ಮೋಟಾರು ವಾಹನಗಳ ಮಾಲೀಕರು ತಮ್ಮ ಸಂಸಾರದವರನ್ನಲ್ಲದೆ ಅನ್ಯರನ್ನು ಓಟು ಸ್ಥಳಕ್ಕೆ ಕರೆತಂದು ವಾಪಸು ಕರೆದುಕೊಂಡುಹೋದರೆ ೨೫೦ ರೂ ದಂಡವನ್ನು ಕೊಡಬೇಕಾಗುವುದೆಂದೂ, ಅವರನ್ನು ಪೋಲೀಸರು ವಾರಂಟ್ ಇಲ್ಲದೆ ಬಂಧಿಸಬಹುದೆಂದೂ ಸೂಚಿಸಲಾಗಿದೆ ಸಭೆಗಳಲ್ಲಿ ಗಲಭೆ ಮಾಡಿದರೂ ಇದೇ ಶಿಕ್ಷೆಯಾಗುವುದು.

ರಷ್ಯದಲ್ಲಿ ೧೪೯ ವರ್ಷದವನ ಚುನಾವಣೆ ಸ್ಪರ್ಧೆ

ರಷ್ಯಕ್ಕೆ ಸೇರಿರುವ ಅಜರ್‌ಬೈಜಾನ್ ಪ್ರಾಂತದ ಚುನಾವಣೆಯೊಂದರಲ್ಲಿ ೧೪೯ ವರ್ಷದ ಮಹಮುದ್ ಇಬಟೋವ್ ಎಂಬಾತನು ಉಮೇದುವಾರನಾಗಿ ನಿಂತಿರುತ್ತಾನೆ. ಆತನು ೧೦೦ ಜನರಿರುವ ಕುಟುಂಬದ ಮುಖ್ಯಸ್ಥನು. ಕಳೆದ ವರ್ಷ ಅವನಿಗೆ ರಷ್ಯಾ ಸರ್ಕಾರದವರು ಪ್ರಶಸ್ತಿ ಪದಕವನ್ನು ಕೊಟ್ಟಿದ್ದರು.

ಸಂತಾಪ ಸೂಚನೆ

ನಗರದ ಕಣಿಯರ ಸೇವಾ ಸಮಾಜದ ಸಭೆಯು ಮೊನ್ನೆ ನಡೆದು ಸಂಸ್ಥೆಯ ಸದಸ್ಯರಾದ ಶ್ರೀ ಆರ್. ಚೆನ್ನಪ್ಪ ಕೃಷ್ಣ ಮತ್ತು ಶ್ರೀಮತಿ ಜಯಮ್ಮನವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿತು.

ಜನಮತಗಣನೆಗೆ ಸಿದ್ಧವೆಂ ಮಾತ್ರಕ್ಕೆ ಒಪ್ಪಂದವಾಗುವು

ಕಾಶ್ಮೀರದ ಪ್ರಶ್ನೆ ಬಗ್ಗೆ ರಾಜಾಜಿಯ ಹೇಳಿಕೆ

ರಾಜಾಜಿಯವರು ಪತ್ರಿಕಾ ಭೇಟಿಯ ಲ್ಲಿ ಮಾತನಾಡಿ ಕಾಶ್ಮೀರದಲ್ಲಿ ಜನಮತ ಗೆ ಭಾರತವು ಸಮ್ಮತಿ ಸೂಚಿಸಿದುದು ಒಪ್ಪ ವಾದವೆಂದಾಗುವುದಿಲ್ಲವೆಂದು ತಿಳಿಸಿದ್ದಾರೆ, ಲ್ಲಿ ಜನಮತಗಣನೆ ನಡೆಸಿದರೆ ಕಾಶ್ಮೀರ ದ್ಯಾಂಗ ಸಭೆಯನ್ನು ನಿರ್ಲಕ್ಷಿಸಿ ಅದನ್ನು ರವಿಸಿದಂತಾಗುವುದೆಂದೂ, ಭಾರತ ಮತ್ತು ಕಿಸ್ತಾನಗಳಲ್ಲಿ ಯುದ್ಧದ ವಾತಾವರಣ ದುವುದೆಂದೂ ಅವರು ಅಭಿಪ್ರಾಯಪಟ್ಟಿರು ವಿಶ್ವಸಂಸ್ಥೆಯ ಕೇಂದ್ರಕ್ಕೂ, ಶೀತ ಯುದ್ಧ ಹರಡುತ್ತಿರುವುದೆಂದೂ ಅವರು ನುಡಿದಿರು ಇಂತಹ ಒಂದು ಸೂಚನೆಯನ್ನು ನೆರ ಒಂದು ರಾಷ್ಟ್ರವನ್ನೇ ಬಲಿಕೊಡಲು ಭಾರ ಸಿದ್ಧವಿಲ್ಲವೆಂದು ಅವರು ಹೇಳಿರುವರು

ಕೋಲಾರ ಜಿಲ್ಲಾ ಬೋರ್ಡ್ ನೌಕ ಹಂಗಾಮಿ ಪರಿಹಾರ

ಕೋಲಾರ ಜಿಲ್ಲಾ ಬೋರ್ಡಿನ ಎಲ್ಲಾ ಕರರಿಗೂ ಶೇಕಡ ೧೦ ರೂ ರಂತೆ ಹಂಗಾ ಪರಿಹಾರ ಒದಗಿಸಲು ನಿರ್ಧರಿಸಲಾಗಿದೆ ಅ ಬೋರ್ಡ್ ಸ್ಕೂಲುಗಳ ಉಪಾಧ್ಯಾಯರು ಈ ಸೌಲಭ್ಯವು ದೊರೆಯುವುದು.

ಸಟ್ಟಾ ಜೂಜಾಟಕ್ಕಾಗಿ ದಂಡ

ಶ್ರೀರಂಗಪಟ್ಟಣದ ಪೋಲೀಸರು ಸಟ್ಟಾ ಜೂಜಾಟ ಕೇಂದ್ರವೊಂದರ ಮೇಲೆ ಧಾಳಿ ಮಾ ತಮ್ಮಯ್ಯ ಮತ್ತು ಸೈಯದ್ ಪೀರ್ ಎಂಬು ನ್ನು ಬಂಧಿಸಿ ಅವರ ಬಳಿ ಇದ್ದ ರೂ. ೪೭-೧೪ ಅನ್ನು ವಶಪಡಿಸಿಕೊಂಡರು ಅವರಿಬ್ಬರಿಗೂ ತಲಾ ೨೫ ರೂ ದಂಡವನ್ನು ವಿಧಿಸಲಾಗಿದೆ

Edited, Printed and Published
A. R. Nagarajan at Sadhvi Pre
D. Subbiah Road. Mysore


ಆಯುರ್ವೇದ ವಿಧಾನ
ಅತ್ಯುತ್ತಮ ಧಾತುವರ್ಧಕ ಸಿದ್ಧೌಷಧ.
ದಿ ಸದ್ವೈದ್ಯಶಾಲಾ ಪ್ರೈವೇಟ್ ಲಿ. ನಂಜನಗೂಡು
ಯಾವಾಗಲೂ ನಂಜನಗೂಡು ಟೂತ್‌ಪೌಡರನ್ನೆ ಉಪಯೋಗಿಸಿ

ಪಾರ್ವತಿಯ ತಾಮಸ ಕಲೆ-ಮಾಯೆಯ ಸೋಲು : ಸಾತ್ವಿಕ ಕಲೆ-ಅಕ್ಕಮಹಾದೇವಿ ಗೆಲುವೆ
ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ ಶರವೇಗದಲ್ಲಿ ಬರಲಿದೆ!
ಅಲ್ಲಮ ಪ್ರಭುದೇವ—ಬಸವೇಶ್ವರ-ಅಕ್ಕಮಹಾದೇವಿ ಈ ಮಹಾತ್ಮರ ಅಮರ ವಚನಗಳ
ಮತ್ತು ವರ್ಣರಂಜಿತ ರಮ್ಯ ನೃತ್ಯಗಳನ್ನೊಳಗೊಂಡ ಮಧುರೇಶ್ವರ
ಪಿಕ್ಚರ್ಸ್ ರವರ ಅಮರ ಕಲಾಕೃತಿ
ಪ್ರಭುಲಿಂಗಲೀಲೆ
(ಕನ್ನಡ)
ಭೂಮಿಕೆ:-ಹರಿಣಿ, ಪ್ರತಿಮಾದೇವಿ, ವೀರಪ್ಪ, ನರಸಿಂಹರಾಜು, ಬಸವರಾಜು,
ನಿರ್ದೇಶಕ : ಮಂಜುನಾಥ — ಸ್ಟುಡಿಯೊ : ಪ್ರೀಮಿಯರ್
Negative rights for Mysore city and Mysore District
including Kollegal Taluk controlled by
G. B. NAGAVARMA Asoka Road, Mysore.

ನ್ಯೂ ಅಪೇರಾ ಟಾಕೀಸ್, ಮೈಸೂರು ★ ಅತಿ ಶೀಘ್ರದಲ್ಲಿಯೇ ಬರಲಿದೆ
ಅನ್ನಪೂರ್ಣರವರ ತಮಿಳು ಚಿತ್ರ
★ ಎಂಗಳ್ ವೀಟ್ಟು ಮಹಾಲಕ್ಷ್ಮಿ ★
ತಮಿಳು ನಾಡಿನಲ್ಲಿ ಯಶಸ್ಸುಗಳಿಸಿರುವ ಹಾಗು ಬಹು ದಿನಗಳಿಂದಲೂ ನೀವು ನಿರೀಕ್ಷಿಸುತ್ತಿದ್ದ, ನಾಗೇಶ್ವರರಾವ್, ನಂಬಿಯಾರ್, ತಂಗವೇಲು, ಸಾವಿತ್ರಿ, ನಟಿಸಿರುವ ಶ್ರೇಷ್ಠ ಕಲಾಕೃತಿ
[TALLAM RELEASE

ರಿಜಿಸ್ಟ್ರೀ ನಂ. 794

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ು. ೦೩] SADHVI · THURSDAY 21-2-1957 ಮೈಸೂರು : ಗುರುವಾರ ೨೧-೨-೧೯೫೭ : [ಸಂಚಿಕೆ : ೨೦೬

ಸರಾ ಉತ್ಸವ ಕಾರ್ಯಕ್ರಮ ರಚನೆಗಾಗಿ ಸಮಿತಿ

ಸರಾ ಉತ್ಸವ ಕಾರ್ಯಕ್ರಮದ ಬಗ್ಗೆ ಸಮಿತಿಯ ರಚನೆ

ಮಂತ್ರಿ ಎ. ವಿ. ರಾಮರಾವ್‌ರವರು ಅಧ್ಯಕ್ಷರು

ಸಂತಿ] ಬೆಂಗಳೂರು ೨೧

ಸೂರಿನಲ್ಲಿ ದಸರಾ ಉತ್ಸವದ ಕಾರ್ಯಕ್ರಮವನ್ನು ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ರಚಿಸುವ ಬಗ್ಗೆ ಸೂಕ್ತ ಸಲಹೆ ಮಾಡಲು ಸರಕಾರದವರು ಮಾಜಿ ಮಂತ್ರಿ ಶ್ರೀ ಎ. ವಿ. ರಾಮರಾವ್‌ರವರ ಅಧ್ಯಕ್ಷತೆಯಲ್ಲಿ ೧೨ ಜನ ಸದಸ್ಯರ ಸಮಿತಿಯೊಂದನ್ನು ರಚಿಸಿರುತ್ತಾರೆ. ವ್ಯವಸಾಯ ಮತ್ತು ಕೈಗಾರಿಕಾ ಇಲಾಖೆ ಡೈರೆಕ್ಟರುಗಳಲ್ಲದೆ ಮದ್ರಾಸಿನ ಕಲಾ ಕ್ಷೇತ್ರದ ಶ್ರೀಮತಿ ರುಕ್ಮಿಣಿ ಅರುಂಡೇಲ್‌ರವರೂ ಸದಸ್ಯರಾಗಿರುವರು.

೧೦ ಲಕ್ಷ ರೂ. ವೆಚ್ಚದಲ್ಲಿ ಕಾರದ ಗಡಂಗಿನ ನಿರ್ಮಾಣ

ಂಗಳೂರಿನಲ್ಲಿ ಕೇಂದ್ರ ಸರ್ಕಾರದವರು ೩೦ ರೂ. ವೆಚ್ಚದಿಂದ ೨೦ ಲಕ್ಷ ಟನ್ ಹಿಡಿಸುವ ದವ ಗೋಡೌನನ್ನು ನಿರ್ಮಿಸಲಿರುವರು ಬೆಳಗಾಂ ಮತ್ತು ಬಿಜಾಪುರಗಳಲ್ಲೂ ಒಂದು ಗಡಂಗುಗಳನ್ನು ಕಟ್ಟಲಾಗುವುದೆಂದು ಗಿದೆ. ಬೆಂಗಳೂರಿನಲ್ಲಿ ಕಟ್ಟಬೇಕಾದ ನಿನ ನಿವೇಶನವನ್ನು ಕೇಂದ್ರದ ಆಹಾರ ಶ್ರೀ ಸಿ. ಎಸ್. ರಾಮಕೃಷ್ಣರವರು ಪರಿಶೀಲಿಸಿದರು

ಚಿನ್ನದ ಗಣಿಯ ೫೦೦ ಂಗ್ರೆಸ್ಸಿಗರ ರಾಜೀನಾಮೆ

ನ ಗಣಿ ಪ್ರದೇಶದ ಶ್ರೀ ಎಂ. ಸಿ. ಪರಮ ರವರೂ ಮತ್ತು ಅವರ ೫೦೦ ಜನ ಸಂ ಕಾಂಗ್ರೆಸ್ ಸಂಸ್ಥೆಗೆ ರಾಜೀನಾಮೆ ಕೊಡುತ್ತಿರುತ್ತಾರೆಂದು ತಿಳಿದುಬಂದಿದೆ. [illegible] ವರು ಕಾಂಗ್ರೆಸ್ ಅಧ್ಯಕ್ಷ ಶ್ರೀ [illegible] ರವರಿಗೆ ಪತ್ರ ಬರೆದು ಕಾಂಗ್ರೆಸ್ ಸಂ ಗುಂಪುಗಳ ಜಾತಿ ಮತ್ತು ಕೋಮು [illegible] ಯೆಂದು ತಿಳಿಸಿ

ವಿದ್ ಕಾಶ್ಮೀರ ತ್ಯಜಿಸಲು ಕಿಸ್ತಾನಕ್ಕೆ ಅಂತ್ಯ ಎಚ್ಚರಿಕೆ

ಕಿಸ್ತಾನವು ಆಕ್ರಮಿಸಿರುವ ಕಾಶ್ಮೀರ ಪ್ರದೇಶವನ್ನು ಬಿಟ್ಟುಹೋಗಲು ಪಾಕಿಸ್ತಾನಕ್ಕೆ ಗಡುವು ಕೊಡಲು ಆಲೋಚಿಸುತ್ತಿರುವುದಾಗಿ ಕಾಶ್ಮೀರದ ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರು ತಿಳಿಸಿರುತ್ತಾರೆ.

ಉಪನ್ಯಾಸ

ಮುಂದಿನ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಶ್ರೀಮದಲ್ಲಿ ಶ್ರೀ ಪಾರಿಜಾತವನೇಶ್ವರಸ್ವಾಮಿ [illegible] ಶಂಕರ ವಾರ್ಷಿಕ ಜಯಂತಿ ಅಂಗ [illegible] ೩೦ ಗಂಟೆಗೆ [illegible] ಪ್ರಾಧ್ಯಾಪಕ ಶ್ರೀ [illegible] ರಿಂದ ಪಂಚ [illegible] ದ ಬಗ್ಗೆ ಉಪನ್ಯಾಸ [illegible] ಗಿದೆ

೬ ಜನ ಕಾಂಗ್ರೆಸ್ಸಿಗರಿಂದ ಪಕ್ಷದ ವಿರುದ್ಧವಾಗಿ ಸ್ಪರ್ಧೆ

ಬೆಂಗಳೂರು ೨೧

ಕಾಂಗ್ರೆಸ್ ಸಂಸ್ಥೆಯ ಅಧಿಕೃತ ಉಮೇದುವಾರರ ವಿರುದ್ಧವಾಗಿ ಕೆಳಗೆ ಕಂಡ ಆರು ಮಂದಿ ಪಕ್ಷದ ಸದಸ್ಯರು ಸಂಸ್ಥಾನದ ಶಾಸನ ಸಭೆಗೆ ಸ್ಪರ್ಧಿಸಿದ್ದಾರೆ:- ಶ್ರೀ ಪುಟ್ಟಸ್ವಾಮಿಯವರು ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಿಂದ ಅಧಿಕೃತ ಉಮೇದುವಾರ ಶ್ರೀ ತಿಮ್ಮಾಬೋವಿಯವರ ವಿರುದ್ಧ; ಶ್ರೀ ಬಿ. ಟಿ. ಕೆಂಪರಾಜ್‌ರವರು ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಶ್ರೀ ಬಿ. ಬಸವಲಿಂಗಪ್ಪನವರ ವಿರುದ್ಧ; ಶ್ರೀ ಸಿ. ಟಿ. ಹನುಮಂತಪ್ಪನವರು ಶಿರಾ ವಿಧಾನಸಭಾ ಕ್ಷೇತ್ರದಿಂದ ಶ್ರೀ ಪಿ. ಅಂಜನಪ್ಪನವರ ವಿರುದ್ಧ; ಶ್ರೀ ಜಿ. ಎಸ್. ಬೊಮ್ಮೇಗೌಡರು ಮಂಡ್ಯ ಕ್ಷೇತ್ರದಿಂದ ಶ್ರೀ ಎಸ್. ಚನ್ನಯ್ಯನವರ ವಿರುದ್ಧ, ಶ್ರೀ ಬಿ. ನಂಜಪ್ಪನವರು ಬೆಂಗಳೂರು ಕಬ್ಬನ್‌ಪೇಟೆ ಕ್ಷೇತ್ರದಿಂದ ಶ್ರೀ ದೀನದಯಾಳು ನಾಯ್ಡುರವರ ವಿರುದ್ಧ ಮತ್ತು ಶ್ರೀ ರಂಗಸ್ವಾಮಿರೆಡ್ಡಿಯವರು ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಶ್ರೀ ಎ. ವಿ. ನರಸಿಂಹರೆಡ್ಡಿಯವರ ವಿರುದ್ಧ.

ಕಾಶ್ಮೀರದ ಮೇಲೆ ಧಾಳಿಯಾದರೆ ಭಾರತದ ಮೇಲೂ ಆದಂತೆ

ಭದ್ರತಾ ಸಮಿತಿಯಲ್ಲಿ ಕೃಷ್ಣಮೆನನ್ನರ ಹೇಳಿಕೆ

ಭದ್ರತಾ ಸಮಿತಿ ಸಭೆಯು ನೆನ್ನೆ ಪುನಃ ಸೇರಿದ್ದಾಗ ಭಾರತದ ಪ್ರತಿನಿಧಿ ವಿ. ಕೆ. ಕೃಷ್ಣಮೆನನ್ನರು ಮಾತನಾಡಿ ಕಾಶ್ಮೀರದ ಮೇಲೆ ಧಾಳಿ ನಡೆಸಿದರೆ ಭಾರತದ ಮೇಲೆ ಆಕ್ರಮಣ ನಡೆದಂತೆಯೇ ಎಂದು ತಿಳಿಸಿದರು. ಅದಕ್ಕೆ ತಕ್ಕ ಕಾರ್ಯಾಚರಣೆ ನಡೆಸಲಾಗುವುದೆಂದೂ ಅವರು ನುಡಿದರು. ಕಾಶ್ಮೀರವು ಭಾರತದಲ್ಲಿ ಐಕ್ಯಗೊಂಡಿರುವ ಭಾಗವೆಂದು ಅವರು ಹೇಳಿ, ವಿಶ್ವಸಂಸ್ಥೆಯ ಪ್ರನಾಳಿಕೆಯ ಪ್ರಕಾರ, ತನ್ನ ರಾಜ್ಯದ ಮೇಲೆ ದಂಡಯಾತ್ರೆಯಾದರೆ ಅದನ್ನ ತಡೆಯಲಾಗುವುದೆಂದೂ ಅವರು ನುಡಿದರು.

ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ನಡೆಸಲು ಯೋಚಿಸುತ್ತಿರುವುದೆಂಬುದನ್ನು ಅವರು ನಿರಾಕರಿಸಿದರು. ಕಾಶ್ಮೀರಕ್ಕೆ ವಿಶ್ವ ಸೈನ್ಯವನ್ನು ಕಳುಹಿಸುವ ಸಲಹೆಯನ್ನು ಅವರು ಖಂಡಿಸಿದರು. ಅವುಗಳನ್ನು ಕಳುಹುವುದರಿಂದ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ಬರುವುದೆಂದೂ, ಅದರಿಂದ ಅಂತಃಕಲಹಕ್ಕೆ ಎಡೆಯಾಗುವುದೆಂದೂ ಅವರು ಸೂಚಿಸಿದರು.

ವಿಶ್ವಸಂಸ್ಥೆಯಲ್ಲಿ ಮತ್ತೆ ಕೃಷ್ಣಮೆನನ್ನರ ಕುಸಿತ

ಕಾಶ್ಮೀರ ಪ್ರಶ್ನೆಯ ಬಗ್ಗೆ ಭದ್ರತಾ ಸಮಿತಿಯ ಮುಂದೆ ಭಾರತದ ಪರವಾದ ವಾದವನ್ನು ಮಂಡಿಸುತ್ತ ನೆನ್ನೆ ಎರಡು ಗಂಟೆಗಳ ಕಾಲ ಮಾತನಾಡುತ್ತಿದ್ದ [illegible] ಶ್ರೀ ವಿ. ಕೆ. ಕೃಷ್ಣಮೆನನ್ನರು [illegible] ಮತ್ತೆ ಕುಸಿದುಬಿದ್ದರೆಂದೂ, ಅವರಿಗೆ ತಕ್ಷಣ ವೈದ್ಯಕೀಯ ಉಪಚಾರವನ್ನು ನೀಡಲಾಯಿತೆಂದೂ ವರದಿಯಾಗಿದೆ

ಅಧ್ಯಾಪಕರ ಸಂಬಳವನ್ನು ಏರಿಸಲು ವಿಶ್ವವಿದ್ಯಾಲಯದ ಸೂಚನೆ

ಬೆಂಗಳೂರು ೨೧

ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟಿನ ಸಭೆಯು ನೆನ್ನೆ ಇಲ್ಲಿ ಸೇರಿ ಅಧ್ಯಾಪಕರ ಸಂಬಳ ಶ್ರೇಣಿಗಳ ವಿಷಯವನ್ನು ಚರ್ಚಿಸಿ, ಕೆಳಗೆ ಕಂಡಂತೆ ಸಂಬಳಗಳ ಮಟ್ಟವನ್ನು ಏರಿಸಲು ಸರ್ಕಾರಕ್ಕೆ ಸಲಹೆ ಮಾಡಲಾಯಿತು

ಅಧ್ಯಾಪಕರು : ಈಗಿನ ೧೨೦-೧೦-೧೫೦-೧೦-೨೦೦-೧೦-೨೫೦ರ ಮಟ್ಟದಿಂದ ೨೦೦-೧೫-೩೫೦-೨೦-೪೫೦. ಉಪ ಪ್ರಾಧ್ಯಾಪಕರು : ಈಗಿನ ೨೫೦-೨೫-೩೫೦-೪೦೦ರ ಮಟ್ಟದಿಂದ ೩೦೦-೨೫-೫೦೦-೨೫ ೬೦೦. ಪ್ರಾಧ್ಯಾಪಕರು : ಈಗಿನ ೪೦೦-೨೫ ೬೦೦ ೩೦-೭೫೦ರ ಮಟ್ಟದಿಂದ ೫೦೦-೩೦-೮೦೦-೪೦-೧,೦೦೦.

ಏಪ್ರಿಲ್ ೧ರಿಂದ ಕರ್ನಾಟಕದ ವಿದ್ಯುಚ್ಛಕ್ತಿ ವ್ಯವಸ್ಥೆಗಳು ಸರ್ಕಾರದ ವಶಕ್ಕೆ

ಹಳೇ ಬೊಂಬಾಯಿಯ ನಾಲ್ಕು ಕನ್ನಡ ಜಿಲ್ಲೆಗಳಲ್ಲಿರುವ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಮೈಸೂರು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಸಂಧಾನಗಳು ನಡೆದಿವೆ ಬರುವ ಏಪ್ರಿಲ್ ೧ರಿಂದ ಅದನ್ನು ಸರ್ಕಾರದವರು ತಮ್ಮ ವಶಕ್ಕೆ ಪಡೆಯುವರು.

ಸಂಸ್ಕೃತ ಸಮಿತಿಯವರ ಆಗಮನ

ಕೇಂದ್ರ ಸಂಸ್ಕೃತ ಸಮಿತಿಯವರು ಇಂದು ಇಲ್ಲಿಗೆ ಆಗಮಿಸಿದರು. ಅವರು ೪ ದಿನಗಳವರೆಗೆ ಇರುವರು ಮೈಸೂರಿಗೂ ಭೇಟಿಯೀಯುವರು. ಇಲ್ಲಿನ ಸಂಸ್ಕೃತ ಸಂಸ್ಥೆಗಳು ಮತ್ತು ಮಠಾಧಿಪತಿಗಳನ್ನೂ ಸಮಿತಿಯವರು ಭೇಟಿ ಮಾಡುವರು. ಸಂಸ್ಕೃತ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸುವ ವಿಷಯವಾಗಿ ಚರ್ಚಿಸಲಾಗುವುದು.

ಪಾಕಿಸ್ತಾನದಲ್ಲಿ ಅಸಾಧಾರಣ ಪರಿಸ್ಥಿತಿ

ಪಾಕಿಸ್ತಾನದಲ್ಲಿ ಅಸಾಧಾರಣ ಪರಿಸ್ಥಿತಿಯು ಉಂಟಾಗಿರುವುದೆಂದೂ, ಅಲ್ಲಿ ಜನರನ್ನು ವಿಚಾರಣೆಗೆ ಗುರಿಪಡಿಸದೆ ಬಂಧಿಸಲು ಶಾಸನವನ್ನು ಮಾಡಬೇಕಾಗಿರುವುದೆಂದೂ ಪಾಕಿಸ್ತಾನದ ರಾಷ್ಟ್ರೀಯ ಸಭೆಯಲ್ಲಿ ಪ್ರಧಾನಿ ಸುಹ್ರಾವರ್ದಿಯವರು ತಿಳಿಸಿರುತ್ತಾರೆ.

ಗ್ವಾಟಿಮಾಲಾ ಬಳಿ ಅಗ್ನಿ ಪರ್ವತದ ಆರ್ಭಟ

ಮಧ್ಯ ಅಮೇರಿಕದಲ್ಲಿರುವ ಗ್ವಾಟಿಮಾಲಾ ನಗರಕ್ಕೆ ೩೦ ಮೈಲಿ ದೂರದಲ್ಲಿರುವ ಫ್ಯೂಗೊ ಎಂಬ ಅಗ್ನಿಪರ್ವತವು ಮೊನ್ನೆಯಿಂದ ಹೊಗೆ ಬೆಂಕಿಯನ್ನು ಕಾರಲು ಆರಂಭಿಸಿರುವುದೆಂದೂ, ಅದರ ಜ್ವಾಲೆಯು ನೂರಾರು ಅಡಿ ಎತ್ತರದವರೆಗೂ ಹೋಗುತ್ತಿರುವುದೆಂದೂ ವರದಿಯಾಗಿದೆ. [illegible] ಅದನ್ನು ದೂರದಿಂದ ನೋಡಲು ಅನುಮತಿ [illegible] ಸರ್ಕಾರದವರು ಪ್ರಕಟನೆ ಹೊರಡಿಸಿದ್ದಾರೆ

ರಾಷ್ಟ್ರಾಭಿವೃದ್ಧಿಗಾಗಿ ನೇತ್ರ ವೈದ್ಯರ ನಿಸ್ವಾರ್ಥ ಸೇವೆ ಅಗತ್ಯ

ಅ. ಭಾ. ನೇತ್ರ ವೈದ್ಯ ಸಮ್ಮೇಳನದಲ್ಲಿ ರಾಜ್ಯಪಾಲರ ಭಾಷಣ

ಸ್ವಂ. ಪ್ರ. ಸಂತಿ] ಬೆಂಗಳೂರು ೨೧

2. Two posts of Senior Mechanics in the scale of Rs. 00-5-120-8-200-10/2-220 plus the usual allowances admissible to Central Government Servants in Mysore.

(a) Senior Plant Assistant : A science degree or Diploma in Engineering Technology or allied fields, with five years' experience in any chemical industry, in the operation and maintenance of chemical plants

(b) Senior Mechanical Assistant : At least 10 years of experience as a skilled mechanic in the machine shop of a modern production workshop. Must be capable of working on as many of the following machines as possible :

Precision tool room lathes, universal milling machines, surface grinders, Do-all and planning machines, etc. Should be capable of working independently from drawings and blue-prints and as a group leader, guide other mechanics. Education desirable upto S. S. L. C. Standard.

3. Five posts of mechanics in the scale of [illegible] 60-5/2 [illegible] 3-105 plus the usual allowances admissible to Central Government Servants in Mysore.

(a) Plant mechanic Must have 5-7 years experience in the operation and maintenance of various types of chemical plant and equipment in a food or fine chemical industry. Bench fitting and General Workshop experience considered desirable.

(b) Sheet Metal Worker Must have 5-7 years experience in sheet metal work in copper, brass, stainless steel, aluminium, etc., Knowledge of Bench fitting and operation of sheet metal working machinery like presses, shears, Rolling and Bending machines, Do-all machines Experience in sheet metal jointing like soldering, brazing, setting and welding, etc., will be considered as additional qualifications.

(c) General Fitter and Blacksmith. Must have 5-7 years experience in precision Bench fitting work, involving operations like marking, cutting, filing, grinding, buffing, polishing, etc. Knowledge in operation of power hammers, presses, etc. desirable.

(d) Foundry Mechanic Must have 5 years experience in General-Foundry Practice including moulding core making and operation of cupolas, crucible furnaces etc., Knowledge of forging annealing, heat treating etc., of steels and alloy steels desirable. A general idea of pattern making will be an additional qualification

( ) Pattern Maker Must have about 5 years experience in Pattern Making in a good foundry making cupola and crucible castings and experience in general carpentry work and cabinet making Must be capable of reading blue-print Knowledge of operation of wood working machinery desirable.

For all the above five posts education upto S. S. L. C. Standard and capacity to read and understand drawings

4. Six posts of workshop Assistants in the scale of Rs 40-2-60-1/2-75, plus the usual allowances admissible to Central Government Servants in Mysore.

(a) **Machinist : Must have 3-5 years experience as a skilled turner and machinist in a good workshop and be capable of handling independently all types of lathes and do precision turning work including screw cutting. Knowledge of handling other machines like radial drills, shaping and planing machines, milling machines, etc., and general bench fitting practice desirable**

(b) Welder Must have a good knowledge and experience for 3-5 years in both arc and gas welding work on cast iron, mild steel, stainless steel, copper, brass, aluminium, etc. Experience in general workshop practice including handling of some machine tools and general bench fitting work like marking, filing, cutting, etc. desirable

(c) Fitter. Must have 3-5 years experience in bench fitting work including marking, grinding, buffing, polishing, filing, etc. Experience in either Smithy, machine shop or plumbing practice desirable.

Education for the above three posts, upto S. S. L. C. Standard and/or Certificate from any recognised technical Institute in the trades specified.

(d) General Workshop Assistant.

Qualifications : Diploma in Engineering &/or Intermediate in Science. Must have about 3 years experience in the maintenance of records, in a production workshop like accounts for raw materials, finished products, tools, equipment and job cards. Knowledge of estimating and costing desirable.

(e) Two posts of Pilot Plant Assistants

***Qualifications*. S.S.L.C**

Experience desirable : about 5 years as an operator in a factory having a variety of chemical equipment and/or some analytical experience in a laboratory.

II. DIVISION OF FOOD PROCESSING

One post of Mechanic in the scale of Rs. 60-5/2-75-3-105 plus the usual allowances admissible to Central Government Servants in Mysore.

Qualifications: Diploma in Mechanical Engineering or equivalent qualifications. Practical experience in Food Processing plant or flour mill preferable

III. DIVISION OF STORAGE AND PRESERVATION

One post of Refrigeration Mechanic in the scale of Rs. 60-5/2-75-3-105 plus the usual allowances admissible to Central Government Servants in Mysore

Qualification Candidates should have experience of maintenance of refrigeration machinery.

IV. DIVISION OF INFORMATION AND STATISTICS.

(a) **Two posts of Demonstrators in the scale of Rs. 100-5-120-8-200-10/2-220, plus the usual allowances admissible to Central Government Servants in Mysore.**

Qualification : **A degree or diploma in Home Economics or allied** sciences with experience in village level work, processing and preservation of foods, and working knowledge of Hindi and/or Kannada.

Desirable : (i) Experience in organization of Exhibitions, (ii) Teaching, and (iii) Popular writing.

(b) Two posts of Projection Operators in the scale of Rs. 100-5-120-8-200-10/2-220 plus the usual allowances admissible to Central Government Servants in Mysore.

Qualifications : Matriculation, preferably with a Diploma in Cinematography and experience in Cine Sound Projection work

(c) One post of Second Div Clerk in the scale of Rs. 80-5- 8-200-E.B-10/2-220. plus the u allowance admissible to Cen Government Servants in Mysore.

Qualifications : **Matriculation, T pewriting 40 words and shorthand words per minute Experience in counts, stock maintenance & purch**

(d) Two posts of Driver-cum chanic in the scale of Rs.60-4-120 5 150 plus the usual allowances a ssible to Central Government vants in Mysore.

Qualifications : **Diploma in Au mobile Engineering** or practical ex rience **in automobile repair work** period of 5 years

***Experience*.** Driving experie of motor vehicles including heavy nsport over a period of at least th years.

V. DIVISION OF FRUIT TECHNOLOGY :

Two posts of Senior Laborat Assistants in the scale of Rs 100 120-8-200-10/2-220 plus the u allowances admissible to Cen Government Servants in Mysore

Qualifications. B.Sc (Hons), B.Sc. in Chemistry or Agricult Chemistry, Biochemistry or food Tec nology; analytical experience de rable.

Applications on prescribed form o tainable from the undersigned sho reach the Director, Central Food Tec rological Research Institute, V. Mohalla P. O., Mysore, on or befo 18th March 1957 with the prescrib application fee of Rs. 7-8-0 (Rs. 1-8 in the case of Scheduled caste a tribes) by crossed Postal Order p able to the Director of the Institu in respect of applicants for the po of I (1) (a) Electrical Supervisor. 1 (a) Senior Plant Assistant, I (a) Senior Mechanical Assistant, IV. Demonstrators, IV. (b) Project Operators, and (V) Senior Labo tory Assistants. Candidates c for interview for these posts only be paid single Second Class Rail fare each way.

Applications in respect of the posts may be made without any fe plain paper

Government and Semi-Governm servants should submit their Ap cations through proper channel.

A. W. De Souza.
Administrative
Officer

Edited, Printed and Publish
by A. R. Nagarajan at Sadh
Press, D. Subbiah Road, Mysor

[illegible]

ಬಿಡಿ ಪತ್ರಿಕೆ 3 ಕಾಸು

ಕಾಂಗ್ರೆಸ್ ಉಮೇದುವಾರರಿಗೆ
ದಯವಿಟ್ಟು ತಮ್ಮ ಓಟನ್ನು ಕೊಡಿರಿ

ಬ್ರಾಂಕಾಲ್
[illegible]
ಮೈಸೂರು ಸಂಸ್ಥಾನ ಮತ್ತು
[illegible]
ಸತ್ಯ ಅಂಡ್ ಕೋ.,
[illegible]
71/1. [illegible]
ಶ್ರೀ [illegible] ರಸ್ತೆ,
ಬೆಂಗಳೂರು-2

ಪುಟ : ೦೮] SADHVI : TUESDAY 26—2—1957 ಮೈಸೂರು : ಮಂಗಳವಾರ ೨೬—೨—೧೯೫೭ : [ಸಂಚಿಕೆ : ೨೦೦

ಮಾನದಲ್ಲಿ ಉಂಟಾದ ಬೆಂಕಿಯಿಂದ ನೆಹರೂ ಪಾರು

೨೮ ಜಿಲ್ಲೆಗಳಲ್ಲಿ ಚುನಾವಣೆ ಆರಂಭ

ಬೆಂಗಳೂರು ೨೫

...ಯ ಮಹಾ ಚುನಾವಣೆ ಅಂಗವಾಗಿ ಸಂಸ್ಥಾನದ ೧೮ ಜಿಲ್ಲೆಗಳ ೨೫ ಕ್ಷೇತ್ರಗಳ ...ಧಾನ ಸಭೆಯ ೩೪ ಸ್ಥಾನಗಳಿಗಾಗಿ ಮತ...ನ ನಡೆಯಿತು. ಅನೇಕ ಕಡೆಗಳಲ್ಲಿ ಬಹ...ರವಾದ ಓಟಿಂಗು ಆಯಿತೆಂದು ವರದಿ...ದೆ. ಒಟ್ಟು ೮೭ ಉಮೇದುವಾರರ ಭವಿ... ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ, ರೆವಿನ್ಯೂ ಮಂ... ಎಂ. ಪಿ. ಪಾಟೀಲ್. ಸ್ಪೀಕರ್ ಶ್ರೀ ... ಆರ್ ಶೆಟ್ಟಿ ಮತ್ತು ಮಾಜಿ ಮಂ...ಗಳಾದ ಶ್ರೀಗಳು ಟಿ. ಸಿದ್ಧಲಿಂಗಯ್ಯ ಮತ್ತು ...ಕ್ಷಯ್ಯನವರು ಇರುವರು. ಅನೇಕಲ್ಲಿನಲ್ಲಿ ...ಎಣಿಕೆ ನಡೆಯುವುದು

ಸಂಸ್ಥಾನಗಳಲ್ಲಿ ಮತದಾನ ಆರಂಭ

...ದಿನ ೯ ಸಂಸ್ಥಾನಗಳಲ್ಲಿ ಮಹಾ ಚು...ಗಳು ನಡೆದುವು. ಆಂಧ್ರ, ಅಸ್ಸಾಂ, ...ರ್, ಮಧ್ಯಪ್ರದೇಶ, ಬೊಂಬಾಯಿ, ಮೈ..., ಒರಿಸ್ಸಾ, ರಾಜಸ್ಥಾನ ಮತ್ತು ಉತ್ತ...ದೇಶಗಳಲ್ಲಿ ಒಟ್ಟು ೬೦೨ ವಿಧಾನಸಭಾ ...ಗಳೂ, ೨೪೧ ಲೋಕಸಭಾ ಸ್ಥಾನಗಳೂ ...ಮ ಕೊಡಲಾಯಿತು.

ಪಾರಿಜಾತವನೇಶ್ವರ ಜಯಂತಿ ಕಾರ್ಯಕ್ರಮ

ಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ...ಕ್ರಮದಲ್ಲಿ ಪಾರಿಜಾತವನೇಶ್ವರಸ್ವಾಮಿ...ಯ ಅಂಗವಾಗಿ ನಾಳೆ ಮಧ್ಯಾಹ್ನ ೪ ಗಂ... ... ನಾಗಪ್ಪಶಾಸ್ತ್ರಿಯವರಿಂದ ವೀಣಾ ಮತ್ತು ಸಂಗೀತ, ರಾತ್ರಿ ೧೦ ಗಂಟೆಗೆ ...ರಕ್ಷಂ ಭಾರತೀಯವರಿಂದ ಕಥಾ ಕಾ... ಮತ್ತು ನಾಳಿದ್ದು ಮಧ್ಯಾಹ್ನ ಸ್ವಾಮಿ... ಮಂಗಳಾರತಿ, ಶ್ರೀ ಶ್ರೀಗಳವರ ಪಾದ...ಪ್ತ ಸಂತರ್ಪಣೆಗಳು ನಡೆಯುವುವು. ... ಗಂಟೆಗೆ ರಾಮಕೃಷ್ಣ ... ಶ್ರೀ ...ಸಂದರ್ಶೀಯವರಿಂದ ಉಪಾಖ್ಯಾ... ...ತ್ರಿನ ಬಗ್ಗೆ ಉಪನ್ಯಾಸವು ನಡೆಯು...

...ದು ಅಧಿಕಾರಿಗಳು ಕೇಂದ್ರಕ್ಕೆ

...ದಿನ ಸೂಪರಿಂಟೆಂಡಿಂಗ್ ಇಂಜನಿಯ... ... ಎಸ್. ಕೃಷ್ಣಸ್ವಾಮಿಯವರನ್ನು ...ಕಾರದ ಸಾರ್ವಜನಿಕ ಆರೋಗ್ಯ ...ಗ್ ಶಾಖೆಯ ಡೆಪ್ಯುಟಿ ಡೈರೆಕ್ಟರ್ ...ಗಿ ನೇಮಿಸಲು ಅವರ ಸೇವೆಯನ್ನು ...ಲಾಗಿದೆ.

...ಶ ಪುಸ್ತಕ ... ಶಾರದ ಸಂಭ್ರಮೋತ್ಸವ

[illegible]

ಸಹಾಯ ಪಡೆವ ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಗ್ರಾಂಟು

ಬೆಂಗಳೂರು ೨೫

ಮುಂದಿನ ವರ್ಷದಿಂದ ಸಂಸ್ಥಾನದಲ್ಲಿ ಸಹಾಯ ಪಡೆವ ಪ್ರಾಥಮಿಕ ಶಾಲೆಗಳಿಗೆ ಕೊಡಲಾಗುತ್ತಿರುವ ಮಾಸಿಕ ೧೮ ರೂ ಗ್ರಾಂಟನ್ನು ೩೦ ರೂ ಗೆ ಹೆಚ್ಚಿಸಲಾಗಿದೆ. ಆ ಶಾಲೆಗಳ ಉಪಾಧ್ಯಾಯರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಈ ಗ್ರಾಂಟನ್ನು ಕಳೆದ ಜನವರಿ ೧ರಿಂದಲೇ ಕೊಡಲಾಗುವುದು. ಮಾಜಿ ಸಂಸ್ಥಾನದಲ್ಲಿ ಇಂತಹ ೧,೩೬೬ ಶಾಲೆಗಳಿರುವುವು. ಇದರಿಂದ ಸರ್ಕಾರಕ್ಕೆ ೩ ಲಕ್ಷ ರೂ ಹೆಚ್ಚು ವೆಚ್ಚವಾಗುವುದು

ಭದ್ರಾವತಿಯಲ್ಲಿ ಪ್ರತಿಬಂಧಕಾಜ್ಞೆ

ಭದ್ರಾವತಿಯಲ್ಲಿ ಮೊನ್ನೆ ಸಂತೆ ನಡೆಯುತ್ತಿದ್ದಾಗ ಕಾಂಗ್ರೆಸ್ ಮತ್ತು ಪಿ ಎಸ್ ಪಿ ಪಕ್ಷಗಳ ಪ್ರಚಾರಕರಿಗೆ ಘರ್ಷಣೆ ನಡೆದು ಹಲವರಿಗೆ ಕಲ್ಲೇಟುಗಳು ಬಿದ್ದು ಗಾಯವಾಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಜನ್ನಾಪುರ ಬಡಾವಣೆಯಲ್ಲೂ ರಾತ್ರಿ ಘರ್ಷಣೆಯಾಯಿತು. ಅಲ್ಲಿನ ಅಮಲ್ದಾರ್-ಮ್ಯಾಜಿಸ್ಟ್ರೇಟರು ನೆನ್ನೆ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿ ಮೆರವಣಿಗೆ, ಸಭೆ ಮತ್ತು ಐವತ್ತಕ್ಕಿಂತಲೂ ಹೆಚ್ಚು ಜನರ ಕೂಟಗಳನ್ನು ನಿಷೇಧಿಸಿರುತ್ತಾರೆ

ಮಹಾದೇಶ್ವರ ದೇವಾಲಯದ ಬೆಳ್ಳಿ ಬಾಗಿಲಿನ ಪ್ರಾರಂಭೋತ್ಸವ

ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ನೆನ್ನೆ ಕೊಳ್ಳೇಗಾಲದ ಮಲೆ ಮಾದೇಶ್ವರಬೆಟ್ಟಕ್ಕೆ ತೆರಳಿದ್ದರು. ದೇವಾಲಯದ ಧರ್ಮದರ್ಶಿ ಸಮಿತಿ ಅಧ್ಯಕ್ಷ ಶ್ರೀ ಜಿ ಪಿ ಮಲ್ಲಪ್ಪನವರ ಪುತ್ರರೂ, ಚಿಕ್ಕಮಗಳೂರಿನಲ್ಲಿರುವ ಮೈಸೂರು ಬ್ಯಾಂಕು ಶಾಖಾ ಮ್ಯಾನೇಜರರೂ ಆದ ಶ್ರೀ ಜಿ. ಎಂ ನಟರಾಜರವರು ೫,೦೦೦ ರೂ ವೆಚ್ಚದಲ್ಲಿ ಮಾಡಿಸಿರುವ ಬೆಳ್ಳಿ ಬಾಗಿಲಿನ ಆರಂಭೋತ್ಸವವನ್ನು ರಾಜ್ಯಪಾಲರ ಪುತ್ರರಾದ ರಾಜಕುಮಾರ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರವರು ನೆರವೇರಿಸಿದರು. ಮಹಾದ್ವಾರದ ಬಲ ಭಾಗದಲ್ಲಿರುವ ಶ್ರೀ ವಿಘ್ನೇಶ್ವರನಿಗೆ ದೇವಸ್ಥಾನದ ನಿಧಿಯಿಂದ ಮಾಡಿಸಿರುವ ಬೆಳ್ಳಿ ಕವಚದ ಅನಾವರಣೋತ್ಸವವೂ ಜರುಗಿತು. ಮಹಾರಾಜರು ಪರಿವಾರ ಸಮೇತ ಈ ಮಧ್ಯಾಹ್ನ ನಗರಕ್ಕೆ ಹಿಂದಿರುಗಿದರು

ಶಿವಕಥೆ

ವಿದ್ಯಾರಣ್ಯಪುರದ ೩ನೇ ಕ್ರಾಸಿನ ಶ್ರೀ ಮ...ಲಿಂಗ ದೇವಸ್ಥಾನದಲ್ಲಿ ನಾಳೆ ರಾತ್ರಿ ೯ ಗಂಟೆಗೆ ವಿ॥ ಗಂಗಾಧರ ಕರ್ಮಾರರವರಿಂದ ... ಬಾಲ ಲೀಲೆ ಎಂಬ ಶಿವಕಥೆಯು ಇದೆ

○ ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜದೇಶಿಯರ್ ಸ್ವಾಮಿಗಳ ತಿರುನಕ್ಷತ್ರದ ... ನಡೆಸಬೇಕೆಂದಿದ್ದ ಸ್ಪರ್ಧೆ... [illegible] ... ದಿನವನ್ನು ... [illegible]

ನಂಜನಗೂಡು-ಬಿಳಿಗೆರೆಯಲ್ಲಿ ಚುನಾವಣೆ

ಶೇಕಡ ೩೦ರಷ್ಟು ಮಂದಿಯ ಮತದಾನ

ಸ್ವಂ. ವ. ಫೋ.] ನಂಜನಗೂಡು ೨೫

ಸಂಸ್ಥಾನದ ವಿಧಾನ ಸಭೆಗೆ ನೆನ್ನೆ ನಂಜನಗೂಡು ಮತ್ತು ಬಿಳಿಗೆರೆ ಕ್ಷೇತ್ರಗಳಿಂದ ಚುನಾವಣೆಯು ಶಾಂತ ರೀತಿಯಿಂದಲೂ, ಸುಸೂತ್ರವಾಗಿಯೂ ಜರುಗಿತು. ನಂಜನಗೂಡು ಕ್ಷೇತ್ರಕ್ಕೆ ಟೌನಿನಿಂದ ಅಲ್ಲಿನ ಶೇಕಡ ೬೦ರಷ್ಟಾಗುವ ಸುಮಾರು ೬,೦೦೦ ಜನರೂ ಮತ್ತು ಗ್ರಾಮಗಳಿಂದ ಶೇಕಡ ೩೦ರಷ್ಟು ಮಂದಿಯೂ ಓಟು ಕೊಟ್ಟಿರುವರು.

ಬಿಳಿಗೆರೆ ಕ್ಷೇತ್ರದಲ್ಲಿ ಶೇಕಡ ೬೦ರಷ್ಟಾಗುವ ಸುಮಾರು ೧೮,೦೦೦ ಜನರು ಓಟು ಮಾಡಿರುವರು. ಎರಡು ಕಡೆಗಳಲ್ಲೂ ಮತದಾರರ ಪಟ್ಟಿಗಳು ಸರಿಯಾಗಿಲ್ಲವೆಂದು ಜನರು ಆಡಿಕೊಳ್ಳುತ್ತಿದ್ದರು. ಓಟು ಕೊಡುವುದರಲ್ಲಿ ವೃದ್ಧರೂ, ಸ್ತ್ರೀಯರೂ ಊನವಾದವರೂ ವಿಶೇಷ ಆಸಕ್ತಿ ತೋರಿದ್ದರು

ನಂಜನಗೂಡಿನಲ್ಲಿ ಉಭಯ ಉಮೇದುವಾರರ ನಡುವೆಯೂ ಸ್ಪರ್ಧೆ ಜೋರಾಗಿದೆ. ಬಿಳಿಗೆರೆಯಲ್ಲಿ ೪ ಜನ ಸ್ಪರ್ಧಿಗಳ ಪರವಾಗಿಯೂ ಒಂದೇ ಸಮನಾಗಿರುವುದೆಂದು ಹೇಳಲಾಗಿದೆ.

ಕಾಂಗ್ರೆಸ್ಸಿಗೆ ಬೆಂಬಲ ನೀಡಲು ಎಸ್. ನಾರಾಯಣರಾಯರ ಮನವಿ

ನಂಜನಗೂಡಿನ ಸುಪ್ರಸಿದ್ಧ ವಕೀಲರಾದ ಶ್ರೀ ಎಸ್ ನಾರಾಯಣರಾಯರು ಹೇಳಿಕೆಯೊಂದನ್ನಿತ್ತು ಈಗ ನಡೆಯುತ್ತಿರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಸಂಸ್ಥೆಗೆ ಜನರು ಬೆಂಬಲ ನೀಡಬೇಕೆಂದು ಮನವಿ ಮಾಡಿರುತ್ತಾರೆ. ಈ ಚುನಾವಣೆಯು ಅಂತರ ರಾಷ್ಟ್ರೀಯ ಮಹತ್ವವನ್ನು ಪಡೆದಿರುವುದೆಂದೂ, ದೇಶದಲ್ಲಿರುವವರೆಲ್ಲರೂ ಪ್ರಧಾನಿ ನೆಹರೂರವರಿಗೆ ನೆರವಾಗಿರುವರೆಂಬುದನ್ನು ತೋರಿಸಿಕೊಡಲು ಇದು ಸಕಾಲವೆಂದೂ ಅವರು ಹೇಳಿರುತ್ತಾರೆ. ಪ್ರಾಂತಗಳಲ್ಲೂ ಸಹಾ ಕಾಂಗ್ರೆಸ್ಸು ಬಲಯುತವಾಗಿರಬೇಕೆಂದು ಅವರು ಸೂಚಿಸಿರುತ್ತಾರೆ

ಸ್ವತಂತ್ರ ಉಮೇದುವಾರರಿಗೆ ಬೆಲೆಯಿಲ್ಲ

ಪಂಡಿತ ನೆಹರೂರವರ ಹೇಳಿಕೆ

ಚುನಾವಣೆಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವ ಉಮೇದುವಾರರಿಗೆ ಯಾವ ಬೆಲೆಯೂ ಇಲ್ಲವೆಂದು ಪ್ರಧಾನಿ ನೆಹರೂರವರು ಹೇಳಿರುತ್ತಾರೆ. ಅಂತಹವರಿಂದ ಕೂಡಿದ ಶಾಸನ ಸಭೆಗಳು ಕೇವಲ ಚರ್ಚಾಕೂಟಗಳಂತಿರುವುವು. ಅಲ್ಲಿ ಯಾವ ನಿರ್ಧಾರವನ್ನೂ ಕೈಗೊಳ್ಳಲು ಸಾಧ್ಯವಿಲ್ಲ. ಸ್ವತಂತ್ರರು ಬುದ್ಧಿಶಾಲಿಗಳಾಗಿರಬಹುದು, ... [illegible] ... ಸ್ವತಂತ್ರರೆಂಬುವರಿಗೆ [illegible]

ಮೇಘದೂತ್ ವಿಮಾನದ ಇಂಜನ್ನಿನಲ್ಲಿ ಬೆಂಕಿ

ನೆಹರೂರವರು ಸುರಕ್ಷಿತರಾಗಿ ಇಳಿದರು

ಸ್ವಂ. ವ. ತಂತಿ] ಬೆಂಗಳೂರು ೨೫

ಕಾಂಗ್ರೆಸ್ ಚುನಾವಣೆ ಪ್ರಚಾರದ ಸಂಬಂಧವಾಗಿ ಕೇರಳಕ್ಕೆ ಹೋಗಿದ್ದ ಪ್ರಧಾನಿ ನೆಹರೂರವರು ಆ ಪ್ರಾಂತದಿಂದ ವಾಯುಪುರಕ್ಕೆ ಈ ಬೆಳಿಗ್ಗೆ ಮೇಘದೂತ್ ವಿಮಾನದಲ್ಲಿ ಹೊರಟಾಗ ಅದರ ಇಂಜನ್ನೊಂದರಲ್ಲಿ ಬೆಂಕಿಯುಂಟಾಗಲು ವಿಮಾನವನ್ನು ರಾಯಚೂರು ಬಳಿ [illegible] ವಿಮಾನ ನೆಲೆಯಲ್ಲಿ ಬಲವಂತವಾಗಿ ಇಳಿಸಬೇಕಾಗಿ ಬಂದಿತೆಂದು ಅಧಿಕೃತ ವಾರ್ತೆಯ ಪ್ರಕಾರ ಗೊತ್ತಾಗಿದೆ.

ಚಾಲಕನು ಚಾತುರ್ಯತೆಯಿಂದ ಮತ್ತೊಂದು ಇಂಜನ್ನಿನ ಸಹಾಯದಿಂದ ಅದನ್ನು ಕೆಳಗೆ ತಂದಿಳಿಸಿದನು. ನೆಹರೂರವರು ಹಸನ್ಮುಖಿಯಾಗಿ ಇಳಿದು ವಿಮಾನದ ಚಾಲಕನನ್ನು ಅಭಿನಂದಿಸಿದರು. ಯಾರಿಗೂ ಗಾಯವಾಗಲಿಲ್ಲ.

ಪಂಜಾಬಿನಲ್ಲಿ ೮ ಸ್ಥಾನಗಳಿಗೂ ಕಾಂಗ್ರೆಸ್ ಸ್ಪರ್ಧಿಗಳ ಆಯ್ಕೆ

೧೦ ಮಂದಿ ಪ್ರತಿಸ್ಪರ್ಧಿಗಳ ಠೇವಣಿ ಮುಟ್ಟುಗೋಲು

ಪಂಜಾಬಿನಲ್ಲಿ ಮೊನ್ನೆ ನಡೆದ ಚುನಾವಣೆಗಳಲ್ಲಿ ಅಲ್ಲಿನ ಮುಖ್ಯ ಮಂತ್ರಿ ಪ್ರತಾಪಸಿಂಗ್ ಕೈರೋನರು ತಮ್ಮ ಎದುರಾಳಿ ಕಮ್ಯೂನಿಸ್ಟ್, ಉಮೇದುವಾರ ಸರ್ದಾರ್ ಗುರುಮೇಜ್‌ಸಿಂಗ್‌ರವರಿಗಿಂತ ೨೦,೫೦೦ರಷ್ಟು ಹೆಚ್ಚು ಓಟುಗಳಿಂದ ಜಯಶಾಲಿಗಳಾಗಿರುತ್ತಾರೆ. ಚುನಾವಣೆಯಲ್ಲಿ ಇನ್ನೂ ಏಳು ಕಾಂಗ್ರೆಸ್ಸಿನವರು ಜಯಗಳಿಸಿರುವರು. ಜನಸಂಘದವ ೪, ಒಬ್ಬ ಕಮ್ಯೂನಿಸ್ಟ್ ಮತ್ತು ಐದು ಮಂದಿ ಸ್ವತಂತ್ರರು ಠೇವಣಿಗಳನ್ನು ಕಳೆದುಕೊಂಡಿರುವರು

ನಿಧನ

ಸಂತೆಪೇಟೆ [illegible] ವರ್ತಕರಾದ ಶ್ರೀ ಎಂ. ಕೃಷ್ಣರಾಜರಾಯರ ಪತ್ನಿ ಶ್ರೀಮತಿ ಸಾವಿತ್ರಿಬಾಯಿಯವರು ಈ ಮುಂಜಾನೆ ಸುಮಾರು ೫ ಗಂಟೆಗೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಬಹು ದಿನಗಳಿಂದಲೂ ಕಾಯಿಲೆಯಾಗಿತ್ತು. ೫೫ ವರ್ಷ ವಯಸ್ಸು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧುಗಳಿಗೆ ಹೃತ್ಪೂರ್ವಕ ಅನುತಾಪವನ್ನು ಸೂಚಿಸುತ್ತೇವೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗೋಷ್ಠಿವಾದ್ಯ. ೭-೧೫ ಮತ್ತು ... [illegible] ... ೭-೩೦ ಹಿಂದಿ ಪಾಠ. ಮಧ್ಯಾಹ್ನ ೧೨ ಬಿ. ... ಅನಂತರಾಮಯ್ಯ-ಪಿಟೀಲು. ೧೨-೩೦ ... ಆರ್. ಜಾನ್ಹವಿ-ಸಂಗೀತ. ೧-೫೦ ಟಿ. ಎಸ್. ರಾಮಚಂದ್ರ ಸಂಗೀತ [illegible]

ಆಹಾರದ ಬೆಲೆ ಹೆಚ್ಚುತ್ತಿರುವುದನ್ನು ತಡೆಗಟ್ಟಬೇಕು

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೨೭

ಪೌರಸಭೆಯ ಸಾಧಾರಣ ಅಧಿವೇಶನವು ನೆನ್ನೆ [illegible]ಕೃಷ್ಣ ಶ್ರೀ ಎಸ್. ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಕಳೆದ ವಾರ ಪ್ರಧಾನಿ ನೆಹರೂರವರು ಕಾಂಗ್ರೆಸ್ ಚುನಾವಣಾ ಪ್ರಚಾರಕ್ಕಾಗಿ ಒಂದು [illegible]ದ ಸರವಾಗಿ ಬಂದಿದ್ದಾಗ ಪೌರಸಭಾ ನೌಕರ ಸೇವೆ, ಸಾಮಗ್ರಿ ಮತ್ತಿತರ ಸಾಧನಗಳನ್ನು [illegible] ಪಕ್ಷವು ದುರುಪಯೋಗಪಡಿಸಿಕೊಂಡಿತೆಂದು ಶ್ರೀಗಳಾದ ಸಿ. ಎಚ್. ನಾರಾಯಣ[illegible]ಯರು ಮತ್ತು ಅಜೀಜ್ ಸೇಟರು ಆಕ್ಷೇಪಿಸಿದಾಗ ಶ್ರೀ ಎಸ್. ಲಿಂಗಣ್ಣ, ಟಿ. ನರಸಿಂಹಯ್ಯಂಗಾರ್, ಡಿ. ಲಿಂಗಯ್ಯ ಮುಂತಾದವರು ಆ ರೀತಿಯ ಆಪಾದನೆಗಳನ್ನು ಪ್ರತಿಭಟಿಸಿದರು. ಅಧ್ಯಕ್ಷರು ಮತ್ತು ಕಮಿಷನರರು ಉತ್ತರವಿತ್ತು, ಪ್ರಧಾನಿ ನೆಹರೂರವರಂತಹ [illegible] ವ್ಯಕ್ತಿಗಳು ನಗರಕ್ಕೆ ಆಗಮಿಸಿದಾಗ ಪೌರಸಭೆಯ ಮತ್ತು ಜನರ ಘನತೆಯ ದೃಷ್ಟಿಯಿಂದ ಆ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ [illegible] ಸಭೆಯ ಬಗ್ಗೆ ಇತ್ತ ನೆರವಿಗಾಗಿ ಸಭೆಯ ವ್ಯವಸ್ಥಾಪಕರು ಹಣ [illegible] ಮಾಡಲು [illegible]ಕೆಂದು ಹೇಳಿ, ಆಪಾದನೆಗಳನ್ನು ನಿರಾಕರಿಸಿದರು.

ನಗರದಲ್ಲಿ ಹೊಸ ಕಂದಾಯದಿಂದ ವರ್ಷ[illegible] ೩ ಲಕ್ಷ ರೂ. ಆದಾಯವಿದೆಯೆಂದೂ, ಇದು[illegible]ರಿಗೆ ೩,೫೦೦ ಮನೆಗಳಿಗೆ ಮಾತ್ರ ಮೀಟರುಗಳನ್ನು ಹಂಚಲಾಗಿದೆಯೆಂದೂ ಮತ್ತು [illegible]ಗಳಿಗೆ ಕಂದಾಯದ ವಿನಾಯಿತಿಯನ್ನೀಯಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು.

ಬೇರೆ ಪ್ರಶ್ನೆಗಳಿಗೆ ಉತ್ತರವೀಯುತ್ತಾ ನಗರದ ಎಲ್ಲಾ ಮನೆಗಳಿಗೂ ಹಾಕಬೇಕೆಂದರೆ ಸು[illegible] ೧೦ ಸಾವಿರ ಮೀಟರುಗಳು ಬೇಕೆಂದೂ [illegible] ಮೀಟರುಗಳನ್ನು ಪ್ರತಿ ವರ್ಷವೂ ಸ್ವಲ್ಪಸ್ವಲ್ಪವಾಗಿ ಕೊಂಡುಕೊಳ್ಳುತ್ತಿದೆಯೆಂದೂ, [illegible] ಪ್ರಕಾರ ೬೦೦ ರೂ. [illegible] ಗೆ ಅಂದಾಜಿನ ಮನೆಗಳಲ್ಲಿ ಇನ್ನೂ ಹಲವು ಮೀಟರು ಹಾಕಬೇಕಾಗಿದೆಯೆಂದೂ ತಿಳಿಸಿದರು.

ಆಹಾರದ ಬೆಲೆಯು ದಿನೇದಿನೇ ಏರುತ್ತಿರುವುದನ್ನು ತಡೆಗಟ್ಟಲು ಜರೂರು ಕ್ರಮಗಳನ್ನು ಕೈಗೊಳ್ಳಬೇಕೆಂದೂ ಮತ್ತು ಆಹಾರ ಪದಾರ್ಥಗಳನ್ನು ದಾಸ್ತಾನು ಮಾಡಲು ಬ್ಯಾಂಕುಗಳಿಂದ ದೊರೆಯುವ ಸೌಲಭ್ಯಗಳನ್ನು ತಡೆಗಟ್ಟಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸುವ ಶ್ರೀ ಹೆಚ್. ಎಲ್. ಮುದ್ದಯ್ಯನವರ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ನಗರದ ನೀರು ಸರಬರಾಜು ಅಭಿವೃದ್ಧಿ ಯೋಜನೆಯ ಅಂಗವಾಗಿ ಸರ್ಕಾರದವರು ಈ ವರ್ಷಕ್ಕೆ ೧೩ ಲಕ್ಷ ರೂ. ಗಳನ್ನು ಸಾಲವಾಗಿ ಮಂಜೂರು ಮಾಡಿರುವುದನ್ನು ರಿಕಾರ್ಡು ಮಾಡಲಾಯಿತು. ಸಂತೆಯ ಕಟ್ಟೇರಿಯಲ್ಲಿ ಕೂಲಿಗಳು ರಿಜಿಸ್ಟರ್ ಮಾಡಿಕೊಂಡು ಲೈಸೆನ್ಸ್ ಪಡೆಯುವಂತೆ ವಿಧಾಯಕ ಮಾಡಲು ಸಭೆಯು ಒಪ್ಪಿತು.

ಹೊಸ ಸ್ಟ್ಯಾಚ್ಯು ಸರ್ಕಲ್ಲಿನಿಂದ ಸಂಸ್ಕೃತ ಪಾಠಶಾಲೆಯ ವರೆಗಿನ ರಸ್ತೆಗೆ ೬೬ ಸಾವಿರ ರೂ. ವೆಚ್ಚದಲ್ಲಿ ಸಿಮೆಂಟ್ ಕಾಂಕ್ರೀಟ್ ಹಾಕಲು ಸರ್ಕಾರದಿಂದ ಧನ ಸಹಾಯಕ್ಕಾಗಿ ಪ್ರಾರ್ಥಿಸಲಾಯಿತು. ಸುಲಭ ದರದಲ್ಲಿ ಅಕ್ಕಿ ಮಾರಾಟ ಮಾಡುವ ಡಿಪೋಗಳನ್ನು ಮುಂದುವರಿಸಬೇಕೆಂದು [illegible]ಯಕಡಿಸಬೇಕೆಂದೂ [illegible] ಕಾರ್ಯವನ್ನು ಕೋರುವಂತೆ ನಿರ್ಧರಿಸಲಾಯಿತು.

ಪ್ರಜಾ ಸಮಾಜವಾದಿ ಪಕ್ಷದ ಚುನಾವಣಾ ಪ್ರಚಾರ

ಕೆ. ಆರ್. ಕಾರಂತರ ಭಾಷಣ

ಮೈಸೂರು ೨೭

ನಗರದ ಪ್ರಜಾ ಸಮಾಜವಾದಿ ಪಕ್ಷದ ಆಶ್ರಯದಲ್ಲಿ ಮೊನ್ನೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯು ನಡೆಯಿತು. ವಿಶಾಲ ಮೈಸೂರಿನ ಪಕ್ಷದ ನಾಯಕರಾದ ಶ್ರೀ ಕೆ. ರಾಮಕೃಷ್ಣ ಕಾರಂತರು ಭಾಷಣ ಮಾಡಿ ತಮ್ಮ ಪಕ್ಷದ ಉಮೇದುವಾರರಿಗೆ ಓಟುಗಳ ಬೆಂಬಲ ನೀಡಬೇಕೆಂದು ಪ್ರಾರ್ಥಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮವರಲ್ಲೂ ಅನೇಕರು ಕಷ್ಟಕಾರ್ಪಣ್ಯಗಳನ್ನು ಅನುಭವಿಸಿರುವುದಾಗಿ ಅವರು ಹೇಳಿ, ತ್ಯಾಗವು ಕಾಂಗ್ರೆಸ್ಸಿಗೆ ಮಾತ್ರ ಮೀಸಲಲ್ಲವೆಂದು ತಿಳಿಸಿದರು. ಕಾಂಗ್ರೆಸ್ ಸರ್ಕಾರಗಳು ಬಂದ ಮೇಲೆ ಪ್ರಜೆಗಳಿಗೆ ವಿಪರೀತ ಕಷ್ಟಗಳು ಪ್ರಾಪ್ತವಾದುವೆಂದು ಅವರು ಹೇಳಿದರು. ಬೊಂಬಾಯಿ ಮತ್ತು ಮದ್ರಾಸು ಸಂಸ್ಥಾನಗಳಲ್ಲಿರುವುದಕ್ಕಿಂತಲೂ ಮೈಸೂರಿನಲ್ಲಿ ಲಂಚಗುಳಿತನವು ವಿಶೇಷವಾಗಿರುವುದೆಂದೂ, ಇದು ತಮ್ಮ ಅನುಭವಸಿದ್ಧವಾದ ಮಾತೆಂದೂ ಅವರು ಹೇಳಿದರು

ಸಹಾಯ ಪಡೆವ ಪ್ರೌಢ ಶಾಲಾ ಅಧ್ಯಾಪಕರ ಸಭೆ

ನಗರದಲ್ಲಿರುವ ಸಹಾಯ ಪಡೆವ ಖಾಸಗೀ ಪ್ರೌಢಶಾಲೆಗಳ ಉಪಾಧ್ಯಾಯರ ಸಭೆಯು ಕಳೆದ ಶನಿವಾರ ಹಾರ್ಡ್ವಿಕ್ ಶಾಲೆಯಲ್ಲಿ ಶ್ರೀ ಎಂ. ರಾಮಶೇಷಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರು ಭಾಷಣ ಮಾಡಿ ಉಪಾಧ್ಯಾಯರ ಕುಂದುಕೊರತೆ ನಿವಾರಣೆಗೆ ಸೂಕ್ತ ಸಲಹೆಗಳನ್ನಿತ್ತರು. ಎಲ್ಲಾ ಉಪಾಧ್ಯಾಯರಿಗೂ ತಾತ್ಕಾಲಿಕ ಪರಿಹಾರ ಮತ್ತು ಹೊಸ ಸಂಬಳದ ಸ್ಕೇಲನ್ನು ಕೊಡುವಂತೆ ಖಾಸಗೀ ಶಾಲೆಗಳ ಆಡಳಿತ ಸಮಿತಿಗಳಿಗೆ ಸರ್ಕಾರವು ಸೂಚನೆಯೀಯಬೇಕೆಂದು ಕೋರಲಾಯಿತು. ಸರ್ಕಾರದವರು ಕೊಡುತ್ತಿರುವ ತುಟ್ಟಿ ಭತ್ಯದ ಮಟ್ಟದಲ್ಲಿ ಖಾಸಗೀ ಶಾಲಾಧ್ಯಾಪಕರಿಗೆ ಭತ್ಯವು ದೊರೆಯಬೇಕೆಂದೂ, ಅದರಲ್ಲಿ ಶೇಕಡ [illegible] ಭಾಗವನ್ನು ಸರ್ಕಾರವು ವಹಿಸಬೇಕೆಂದೂ ಪ್ರಾರ್ಥಿಸಲಾಯಿತು. ಉಪಾಧ್ಯಾಯರುಗಳಿಗೆ ವಾರ್ಷಿಕ ಬಡ್ತಿ ದೊರೆಯಬೇಕೆಂದೂ ಸೂಚಿಸಲಾಯಿತು. ಈ ನಿರ್ಣಯಗಳನ್ನು ಕಾರ್ಯಗತ ಮಾಡುವ ಸಲುವಾಗಿ ಶ್ರೀಗಳಾದ ಎಂ. ಪಿ. ಎಲ್. ಶಾಸ್ತ್ರಿ, ಎಂ. ಸಿ. ಮಹದೇವಸ್ವಾಮಿ, ಎಂ. ರಾಮಶೇಷಯ್ಯಂಗಾರ್, ಟಿ. ರಾಮಣ್ಣ, ವಿ. ಸೀತಾರಾಮಶಾಸ್ತ್ರಿ ಮತ್ತು ಕೆ. [illegible]ಪಾಲ್‌ರವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಯಿತು.

ವಿವಾಹ ಮಹೋತ್ಸವಗಳು

ಧರ್ಮರತ್ನಾಕರ ಕೆ. [illegible]ಬಸಪ್ಪನವರ ಪ್ರಥಮ ಕುಮಾರ ಶ್ರೀ ಬಿ. ನಾಗಪ್ಪನವರು ತಮ್ಮ ಸಾಕು ಮಗಳು ಸೌ|| ಶೈಲಜೆಯನ್ನು ಕೊರಟಗೆರೆ ತಾಲ್ಲೂಕು ಅಕ್ಕಿರಾಮಪುರದ ಶ್ರೀ ಗಂಗಪ್ಪನವರ ಮಕ್ಕಳು ಶ್ರೀ ಎಸ್. ಜಿ. ಚಿಕ್ಕಣ್ಣಯ್ಯನವರಿಗೆ ಕೊಟ್ಟು ಮೊನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು. ಸಂಜೆ ಸ್ವಾಗತ ಸಮಾರಂಭವು ಏರ್ಪಾಡಾಗಿತ್ತು.

ಬೆಂಗಳೂರು ಮಹಾರಾಣಿ ಕಾಲೇಜಿನ ಅಧ್ಯಾಪಕಿ ಶ್ರೀಮತಿ ಚನ್ನಮ್ಮ ವೀರಪ್ಪನವರು ತಮ್ಮ ಕುಮಾರಿ ಸೌ|| ಸುಶೀಲಾರವರನ್ನು ಕೆಲವಾಡಿಯ ಶ್ರೀ ವೀರಪ್ಪ ಕುಲಕರ್ಣಿಯವರ ಮಕ್ಕಳು ಶ್ರೀ ಶಿವಣ್ಣ ವಿ. ಕುಲಕರ್ಣಿಯವರಿಗೆ ಕೊಟ್ಟು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಶಿವರಾತ್ರಿ ಕಾಲಕ್ಷೇಪ

ನಗರದ ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ಶಿವರಾತ್ರಿ ಪ್ರಯುಕ್ತ ನಾಳೆ ರಾತ್ರಿ ೧೦ ಗಂಟೆಗೆ ಮಾಸ್ಟರ್ ಗುರುರಾಯರಿಂದ ಭಕ್ತ ಪ್ರಹ್ಲಾದ ಎಂಬ ಹರಿಕಥೆಯು ಜರುಗುವುದು.

ಲಷ್ಕರ್ ಮೊಹಲ್ಲಾ ಪಾಂಡುರಂಗಸ್ವಾಮಿ ದೇವಾಲಯದಲ್ಲಿ ನಾಳೆ ರಾತ್ರಿ ೧೦ಕ್ಕೆ ಭಾವಸಾರ ಕ್ಷತ್ರಿಯ ಮಂಡಲಿ ಆಶ್ರಯದಲ್ಲಿ ವಿll ಆರ್. ಎಸ್. ಶೇಷಗಿರಿದಾಸರಿಂದ "ಅಕ್ಕ ಮಹಾದೇವಿ ಚರಿತ್ರೆ"ಯು ನಡೆಯುವುದು.

[illegible] ೨ನೇ ಡಿವಿಜನ್ನಿನ ಸಮರ್ಥ ಕಬೀರರ ಶ್ರೀ ರಾಮ ಮಂದಿರದಲ್ಲಿ ನಾಳೆ ರಾತ್ರಿ ೧೦ಕ್ಕೆ ವಿll ಸುಬ್ಬರಾಮಯ್ಯನವರು ಭಕ್ತ ತುಳಸೀದಾಸ ಎಂಬ ಹರಿಕಥೆಯನ್ನು ಮಾಡುವರು.

ನಂಜನಗೂಡಿನ ಬಟ್ಟೆ ವರ್ತಕರ ಸಂಘದ ಅಧ್ಯಕ್ಷ ಶ್ರೀ ಆರ್. ಶೇಷಗಿರಿರಾಯರ ಅಂಗಡಿ ಬಳಿ ನಾಳೆ ರಾತ್ರಿ ೧೦ ಗಂಟೆಗೆ ವಿll ಪಿ. ಎಸ್. ನರಸಿಂಹಮೂರ್ತಿ ದಾಸರಿಂದ [illegible] ಶಂಕರ ವಿಲಾಸ ಎಂಬ ಶಿವಕಥೆಯೂ, ಪಂಡರಾಪುರದ ಶ್ರೀ ನಾರಾಯಣರಾವ್ ಕಾಳೆಯವರಿಂದ ಭಕ್ತ ದಾಮಾಜಿ ಎಂಬ ಹರಿಕಥೆಯೂ ನಡೆಯುವುವು.

ನಿಜಾಮರ ಹಿರಿಯ ಮಗ ಮೇಲೆ ದಾವಾ ಡಿಕ್ರಿ

ಹೈದರಾಬಾದಿನ ನಿಜಾಮರ ಹಿರಿಯ [illegible] ಬಿರಾರಿನ ರಾಜಕುಮಾರರು [illegible] ೧೩,೨೦,೭೫೦ ರೂ. ಬೆಲೆಯ ಆಭರ[illegible] ಕೊಂಡ ಬಗ್ಗೆ ಕೊಡಬೇಕಾಗಿದ್ದ ಬಾಕಿ [illegible] ೯,೫೯,೯೮೦ ರೂ. ಗಳಿಗಾಗಿ ದೆಹಲಿಯ [illegible]ವ್ಯಾಪಾರಿಗಳಾದ ಲಾಲಾ ಕಪೂರ್‌ಚಂದ್[illegible]ಧಾ ಮತ್ತು ಇತರರು ಹೂಡಿದ್ದ ದಾವೆಯಲ್ಲಿ [illegible]ದರಾಬಾದು ಹೈಕೋರ್ಟು ನ್ಯಾಯಾಧೀಶ[illegible] ಜಸ್ಟಿಸ್ ಕೊಯಾಜಿಯವರು ತೀರ್ಪಿತ್ತು [illegible]ಯನ್ನು ಕೊಡುವಂತೆ ತಿಳಿಸಿರುತ್ತಾರೆ. [illegible] ೧೦ ರ ಬಡ್ಡಿಯ ಮೇಲೆ ತಾವು ಹಣವನ್ನು [illegible]ಕುವುದಾಗಿ ರಾಜಕುಮಾರರು ವಾಗ್ದಾನ[illegible]ವನ್ನು ಬರೆದುಕೊಟ್ಟಿದ್ದರು ೧೯೪೮ರಲ್ಲಿ [illegible]ಕು ೨೮ ಲಕ್ಷ ರೂ. ಬಿಲ್ಲನ್ನು ಪ್ರತಿವಾದಿ [illegible]ಟ್ಟಿದ್ದರು. ತಾವು ನಿಜಾಮರ ಸ್ವತ್ತಿಗೆ [illegible] ಅವರ ಆಸ್ತಿಯನ್ನು ಪಡೆಯುವವರೆಗೆ ಬಾಕಿ[illegible]ನ್ನು ಕೊಡಬೇಕಾಗಿಲ್ಲವೆಂದು ರಾಜಕುಮಾರ[illegible] ಹೂಡಿದ್ದ ವಾದವನ್ನು ಕೋರ್ಟು ಅಂಗೀಕ[illegible]ರಿಲ್ಲ

O ಮೈಸೂರು ಜಿಲ್ಲಾ ಸಹಕಾರ ಸಂಘಗಳ [illegible] ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಜೆ. ಶಿವಣ್ಣ[illegible]ರನ್ನು ಮಂಗಳೂರು ದಕ್ಷಿಣಕ್ಕೆ ವರ್ಗಾಯಿ[illegible]

ಸಿಟಿ ಟ್ಯುಟೋರಿಯಲ್ ಕಾಲೇ

ಕಳೆದ 9 ವರ್ಷಗಳಿಂದ ವಿದ್ಯಾರ್ಥಿಗಳಿಗೆ [illegible]ಮ ಸೇವೆ ಸಲ್ಲಿಸಿರುವ ಈ ಸಂಸ್ಥೆಯಲ್ಲಿ [illegible] ಕೆಳಕಂಡ ತರಗತಿಗಳು.

ಬೇಸಗೆ ರಜದ ವಿಶೇಷ ತರಗತಿಗಳು
ಮಿಡಲ್ ಸ್ಕೂಲಿನ ಎಲ್ಲಾ ತರಗತಿಗಳು
ಹೈಸ್ಕೂಲಿನ ಎಲ್ಲಾ ತರಗತಿಗಳು
Pre-University Classes
4 Months Tuition in ENGLI
& P. C. M. for S. S. L. C. Pass
students
MADRAS MATRICULATION
Classes for 1958 March Exam

C. T. C., old Agrahar, Myso
[*The oldest & the best Institu*

VENSON TRANSPORTS,
HIGH ROAD, CHITTUR

Have opened a Branch in Gayathri Bhavan Buildings Mysore and have arranged to undertake the transport of any Parcels to either Mangalore via Mercara, or Madras via Bangalore and Chittur by their Daily Express Lorry Service. For particulars please contact local branch

ನಾದಬ್ರಹ್ಮ ಸಂಗೀತ ಸಭಾ,
ಮೈಸೂರು
ಮನೋಹರ ಸಂಗೀತ ಕಛೇರಿ
1957 ನೇ ಮಾರ್ಚಿ 3 ನೇ ತಾರೀಕು
ಭಾನುವಾರ ಸಂಜೆ 6-30 ಗಂಟೆಗೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ಮೈಸೂರು ಆಸ್ಥಾನ ವಿದ್ವಾನ್ ಲೇಟ್
ಶ್ರೀ ನಾರಾಯಣ ಭಾಗವತರ್‌ರವರ ಮಗಳು
ಶ್ರೀಮತಿ ಲಲಿತಾ ಭಾನುರವರ
ಗಾಯನ
ಶ್ರೀಮತಿ [illegible] ಲಕ್ಷ್ಮಿ
ಅವರ ಪಿಟೀಲು
ವಿll ತಂಜಾವೂರು ಜನಾರ್ಧನ್‌ರವರ
ಮೃದಂಗ
ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ
ಪ್ರವೇಶ : ರೂ. 1-0-0

Edited, Printed and Published by
. R. Nagarajan at Sadhvi Press
D. Subbiah Road, Mysore

ಲಕ್ಷ್ಮಿ ★ ಚಿತ್ರದ ಜನಸಂದಣಿಗೆ ಪ್ರದರ್ಶನ ಕಲ್ಪಿಸುತ್ತಿರುವ,
ಬಿ. ಎನ್. ರೆಡ್ಡಿಯವರ ಅತ್ಯುತ್ತಮ ಕಲಾಕೃತಿ
ಎನ್. ಟಿ. ರಾಮರಾವ್, ರೇಲಂಗಿ, ಜಮುನಾ,
ಇ. ವಿ. ಸರೋಜಾ, ಸಾಹುಕಾರ್ ಜಾನಕಿ
ಮುಂತಾದವರು ಪಾತ್ರವಹಿಸಿರುವ (ತೆಲುಗು) ★ ಭಾಗ್ಯರೇ

ವಿ ಸೂ:— ಮಹಾ ಶಿವರಾತ್ರಿ ಪ್ರಯುಕ್ತ ತಾ|| 27—2—57ರಂದು ರಾತ್ರಿ 1 ಘಂ
ಅಧಿಕ ಪ್ರದರ್ಶನ ಏರ್ಪಡಿಸಿದೆ

ಮಹಾ ಶಿವರಾತ್ರಿ ಪ್ರಯುಕ್ತ 27-2-57ನೇ ಬುಧವಾರ ನಾಲ್ಕು ಪ್ರದರ್ಶನಗಳು
ಪ್ರಭುದೇವಾ ಥಿಯೇಟ
(ಪದ್ಮಾ ಟಾಕೀಸ್)
22-2-57 ನೆಯ ಶುಕ್ರವಾರದಿಂದ : ಜನಭರಿತವಾದ 9 ನೆಯ ವಾರ : ಪ್ರತಿ ದಿನ 3 ಆಟಗಳು
ಭಕ್ತ ಮಾರ್ಕಂಡೇಯ
(ಕನ್ನಡ)

COMING SHORTLY — M. G. M's Cinemascope & Technicolor hit
Ava Gardner and Stewart Granger In ★ BHOWANI JUNCTION ★
AT SRI GAYATHRI TALKIES, MYSORE

ರಿಜಿಸ್ಟ್ರೇ ನಂ 192



ಕಾಂಗ್ರೆಸ್ ಉಮೇದುವಾರರಿಗೇ
ಮತವನ್ನು ನಿಮ್ಮ ಓಟನ್ನು ಕೊಡಿರಿ

ಇಂದಿನ ಪತ್ರಿಕೆ 3 ಕಾಸು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯಾ ಬ್ಯಾಂಕ್ ಎದುರು
ಮೈಸೂರು ಫೋನ್ : 446

ಪುಟ : [illegible]] SADHVI : WEDNESDAY 27-2-1957 ಮೈಸೂರು : ಬುಧವಾರ ೨೭-೨-೧೯೫೭ : [ಸಂಚಿಕೆ : [illegible]

ಪ್ರಧಾನಿ ನೆಹರೂರವರಿಗೆ ಮಹಾರಾಜರ ಅಭಿನಂದನೆ

ಆನೇಕಲ್ಲಿನ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಯ ಜಯ

ಚುನಾವಣೆಯಲ್ಲಿ ಪ್ರಥಮ ಗೆಲುವು

ಬೆಂಗಳೂರು ೨೭

[illegible] ಚುನಾವಣೆಯಲ್ಲಿ ಸಂಸ್ಥಾನದ [illegible] ಗೆ ಇದೇ ಪ್ರಥಮವಾಗಿ ಆನೇಕಲ್ ಕ್ಷೇತ್ರ ಕಾಂಗ್ರೆಸ್ಸಿನ ಶ್ರೀ ಜೆ. ಸಿ. ರಾಮಸ್ವಾಮಿಯವರು ಇಬ್ಬರು ಸ್ವತಂತ್ರ ಸ್ಪರ್ಧಿಗಳಾದ [illegible] ಅಪ್ಪಾರೆಡ್ಡಿ ಮತ್ತು ಎಸ್. ಶರಭಣ್ಣನವರನ್ನು ಸೋಲಿಸಿ ಜಯಗಳಿಸಿರುತ್ತಾರೆ. ಅವ[illegible] ಮತ್ತು ಶ್ರೀ ಶರಭಣ್ಣನವರಿಗೆ [illegible] ಮತ್ತು ಶ್ರೀ [illegible] ಅಪ್ಪಾರೆಡ್ಡಿಯವರಿಗೆ [illegible] ಓಟುಗಳು ಬಂದಿವೆ. [illegible] ಓಟುಗಳು [illegible] ವಾದುವು.

ಚುನಾವಣೆಯಲ್ಲಿ ಬಿಹಾರ್ ಮಂತ್ರಿಯೊಬ್ಬರ ಅಪಜಯ

[illegible] ಮತ್ತು [illegible] ಶ್ರೀ ಮಹೇಶ ಪ್ರಸಾದ ಸಿನ್ಹರವರು ಮೊನ್ನೆ [illegible] ಚುನಾವಣೆಯಲ್ಲಿ ಪಿ ಎಸ್ ಪಿ ಪಕ್ಷದ ಉಮೇದುವಾರರೂ, ಈಗ ಶಾಸನಸಭಾ ಸದಸ್ಯರೂ ಆದ ಮಹಾ ಮಾಯಾಪ್ರಸಾದ ಸಿನ್ಹರವರಿಂದ ಸೋಲಿಸಲ್ಪಟ್ಟಿರುತ್ತಾರೆ. [illegible] ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಜಿ [illegible]ಕ್ಷರು [illegible] ಕ್ರಮವಾಗಿ [illegible] ಮತ್ತು [illegible] ಓಟುಗಳು ಬಂದಿ[illegible] ಇನ್ನೂ ಇಬ್ಬರು ಉಮೇದುವಾರರಿ[illegible]

ಮೈಸೂರು ರೇಡಿಯೊ ನಾಳೆ ಕಾರ್ಯಕ್ರಮ

[illegible] ೭-೫ ಕೊಳಲು ೭-೧೫ ಬಿ ವಿ [illegible] ಮತ್ತು ಬಿ. ಕೆ. ಶ್ರೀನಿವಾಸ[illegible] ನಾಮ ೭.೩೦ ಮತ್ತು ೮-೧೫ [illegible] ಮಧ್ಯಾಹ್ನ ೧೨ ಮತ್ತು ೩ ಬಿ ವಿಷ್ಣು [illegible] ೧೨.೩೦ ಬಿ ವಿ. ಶ್ರೀನಿವಾಸ ಮತ್ತು ಬಿ ಕೆ. ಶ್ರೀನಿವಾಸ-ಸಂಗೀತ [illegible] ವಾದ್ಯ. ೧.೩೦ ಕನ್ನಡ [illegible] ಎಂ ವಿ. ಲೀಲಾ-ಗಾಯನ ೩-೧೫ ಸಂಜೆ ೫.೩೦ ಎಂ ಪಿ [illegible] ಜಾನಪದ ಗೀತೆ. ೭.೩೦ ತಾಳ ವಾದ್ಯ [illegible] ಎಂ ವಿ ಲೀಲಾ-ಗಾಯನ. ೮.೩೦ ಮೆಚ್ಚಿನ ಗೀತೆಗಳು. ೯-೧೫ ಮೈಸೂರು [illegible] ಅಭಿವೃದ್ಧಿ ಯೋಜನೆ-[illegible] ರಕ್ಷಕ-ನಾಟಕ. ೧೦-೧೫ ರಿಕಾರ್ಡು

೧-೩-೫೭

[illegible] ೭.೫ ಗಾಂಧಿ ಕಥಾವಳಿ. ೭-೧೫ [illegible] ಬಾಲಕೃಷ್ಣ-ದೇವರ ನಾಮ [illegible] ೮-೧೫ ರಿಕಾರ್ಡು. [illegible] ಸಂಗೀತ ೧೨-೩೦ ವಾದ್ಯ ವೃಂದ [illegible] ೧-೫೦ ವೀಣೆ. ೩ ಮಹಿಳಾ ವಿಹಾರ [illegible] ಸಂಗೀತ. ೭-೩೦ ನೃತ್ಯಗೀತೆ [illegible] ದಲ್ಲಿ ಸಸ್ಯ ಪ್ರಯೋಗ: ಕೆ. ಎಸ್ [illegible] ಭಾಷಣ ೮ ಮುದ್ದಾಸಿನಂತೆ [illegible] ಶ್ರೀನಿವಾಸಯ್ಯಂಗಾರ್-[illegible] ರಿಕಾರ್ಡು ೯-೩೦ ತೆರಂಗರಂಗ. ೧೦

ಎಲ್ಲರ ಶುಭಾಶಯಗಳು!

ವಿಮಾನ ಅಪಘಾತದಲ್ಲಿ ಸಂರಕ್ಷಿತರಾಗಿ ಪಾರಾಗಿರುವ ಪ್ರಧಾನಿ ನೆಹರೂರವರಿಗೆ ವಿಶ್ವದ ಎಲ್ಲಾ ಕಡೆಗಳಿಂದಲೂ ಅಭಿನಂದನಾ ಸಂದೇಶಗಳು ಬರುತ್ತಿವೆ

ನ್ಯಾಯಾಧೀಶರ ಮೇಲೆ ಬಟ್ಟೆ ಗಂಟು ಎಸೆದುದಕ್ಕೆ ೧ ವರ್ಷ ಸಜಾ

ಬೆಂಗಳೂರು ೨೬

ಇಲ್ಲಿನ ದ್ವಿತೀಯ ನಗರ ನ್ಯಾಯಾಧೀಶರು ನೆನ್ನೆ ಮುನಿಸ್ವಾಮಿ ಎಂಬುವನಿಗೆ ಕೋರ್ಟಿನ ಅವಹೇಳನಕ್ಕಾಗಿ ಎರಡು ಅಪರಾಧಗಳಿಗಾಗಿ ೧ ವರ್ಷ ಮತ್ತು ೬ ತಿಂಗಳು ಕಠಿಣ ಸಜಾ ವಿಧಿಸಿದರು. ಕಳೆದ ಡಿಸೆಂಬರ್ [illegible] ತಾರೀಕು ನಗರ ನ್ಯಾಯಾಧೀಶರು ಕೋರ್ಟಿನಲ್ಲಿ ತಮ್ಮ ವಿಚಾರಣೆ ನಡೆಸುತ್ತಿದ್ದಾಗ ನ್ಯಾಯಾಧೀಶರ ಕಡೆಗೆ ಅಪರಾಧಿಯು ಬಟ್ಟೆ ಗಂಟನ್ನು ಎಸೆದನೆಂದು ಆಪಾದಿಸಲಾಗಿತ್ತು. ಎರಡು ಸಜಾಗಳನ್ನೂ ಏಕಕಾಲದಲ್ಲಿ ಅನುಭವಿಸುವಂತೆ ಸೂಚಿಸಲಾಗಿದೆ.

ರಾಜಸ್ಥಾನದ ಮುಖ್ಯ ಮಂತ್ರಿ ವಿಜಯ

ವಿರೋಧಿಗಳ ಠೇವಣಿ ಮುಟ್ಟುಗೋಲು

ರಾಜಸ್ಥಾನದ ಮುಖ್ಯ ಮಂತ್ರಿ [illegible] ಲಾಲ್ [illegible] ರವರು [illegible] ಚುನಾಯಿತರಾಗಿರುತ್ತಾರೆ. ಅವರ ವಿರುದ್ಧವಾಗಿ [illegible] ಜನಸಂಘ ಮತ್ತು ಪಿ. ಎಸ್. ಪಿ ಉಮೇದುವಾರರುಗಳು ತಮ್ಮ ಠೇವಣಿಗಳನ್ನು ಕಳೆದುಕೊಂ

ನೆಹರೂರವರ ವಿಮಾನದಲ್ಲಿ ಬೆಂಕಿ

ಘಟನೆ ಬಗ್ಗೆ ವಿವರಗಳು

ಪ್ರಧಾನಿ ನೆಹರೂರವರು ನೆನ್ನೆ ಜಬ್ಬಲ್ಪುರವನ್ನು [illegible] ಮಂಗಳೂರಿನಿಂದ ಹತ್ತಿ ಬಂದಿದ್ದ ಮೇಘದೂತ ವಿಮಾನದಲ್ಲಿ ಆದ ಅಲ್ಪ ಘಟನೆಯನ್ನು ಪ್ರಜೆಗಳು ತಿಳಿಯಬೇಕೆಂದು [illegible] ನೆನ್ನೆ ಬೆಳಿಗ್ಗೆ ೮ ಗಂಟೆಗೆ [illegible] ಹೊರಟವರು [illegible] ಗಂಟೆಗಳ [illegible] ವಿಮಾನ [illegible] ಕೂಡಲೇ [illegible] ನೆಹರೂರವರು [illegible]

[illegible] ಬೆಂಕಿ [illegible] ಎಲ್ಲರೂ [illegible] ಎಂದೂ ತಿಳಿಸಿದ[illegible] ವಿಮಾನವನ್ನು ಸುರಕ್ಷಿತವಾಗಿ ಇಳಿಸಲಾ[illegible] ಲೀಡರ್ [illegible] ನಂತರ ವಿಮಾನದಿಂದ ಇಳಿದು, ನೆಹರೂರವರಿಗೆ [illegible] ಘಟನೆ ಬಗ್ಗೆ ವಿಷಾದ ಸೂಚಿಸಲಾಗಿ [illegible] ನೆಹರೂರವರು ಅವರ ಕೈ ಕುಲುಕಿ ಅವರನ್ನು ಅಭಿನಂದಿಸಿದರು. ನಂತರ ಬೇಗಂಪೇಟೆಯಿಂದ ವಿಮಾನ ಬಲದ ಎರಡು ವಿಮಾನಗಳು ಬಂದುವು. ನೆಹರೂ ಮತ್ತು ಪರಿವಾರದವರು ಅವುಗಳಲ್ಲಿ ಪ್ರಯಾಣ ಮಾಡಿದರು.

ಮಕ್ಕಳ ಲೈಬ್ರರಿ ವಾರ್ಷಿಕೋತ್ಸವ

ನಗರದ [illegible] ರಸ್ತೆಯಲ್ಲಿರುವ ರೋಟರಿ ಕ್ಲಬ್ಬಿನವರ ಮಕ್ಕಳ ಪುಸ್ತಕ ಭಂಡಾರದ ವಾರ್ಷಿಕೋತ್ಸವ [illegible] ಗೆ ರಾಜಕುಮಾರಿ [illegible] ದೇವಿಯವರ ಅಧ್ಯಕ್ಷತೆಯಲ್ಲಿ ನಡೆಯುವ ವಾರ್ಷಿಕೋತ್ಸವ ಸಮಾರಂಭಕ್ಕೆ ಭಂಡಾರದ ಸದಸ್ಯರಾಗಿರುವ ಮಕ್ಕಳೆಲ್ಲರೂ ಬರಬೇಕೆಂದು ವ್ಯವಸ್ಥಾಪಕರು ಕೋರಿದ್ದಾರೆ.

ಶಿವರಾತ್ರಿ ಕಾಲಕ್ಷೇಪ

ನಗರದ [illegible] ಅಗ್ರಹಾರದಲ್ಲಿರುವ ಶ್ರೀ [illegible] ವಿಶ್ವೇಶ್ವರ ದೇವಸ್ಥಾನದ [illegible] ಗಂಟೆಗೆ [illegible] ಶ್ರೀ [illegible] ಕಾಲಕ್ಷೇಪವನ್ನು ನಡೆಸುವರು.

[illegible] ರಸ್ತೆಯಲ್ಲಿರುವ [illegible] ಮಂದಿರದಲ್ಲಿ [illegible] ಗಂಟೆಗೆ [illegible] ಎಸ್ [illegible] ಎಂಬ

ನೆಹರೂರವರಿಗೆ ಮಹಾರಾಜರ ಅಭಿನಂದನೆ

ವಿಮಾನ ಅಪಘಾತದಿಂದ ಪಾರಾದ ಬಗ್ಗೆ ಸಂತೋಷ ಸೂಚನೆ

ಮೈಸೂರು ೨೬

ನೆನ್ನೆ ದಿನ ರಾಯಚೂರು ಬಳಿ ನಡೆದ ವಿಮಾನ ಅಗ್ನಿಸ್ಪರ್ಶದಿಂದ ಪಾರಾದುದಕ್ಕಾಗಿ ಸಂತೋಷವನ್ನು ಸೂಚಿಸಿ ಶ್ರೀಮನ್ಮಹಾರಾಜರವರು ಈ ದಿನ ಪ್ರಧಾನಿ ನೆಹರೂರವರಿಗೆ ತಂತಿ ಕಳುಹಿಸಿರುತ್ತಾರೆ. ಜಗತ್ತಿನಲ್ಲಿ ಶಾಂತಿ ಸೌಹಾರ್ದಗಳನ್ನು ಬೆಳೆಸಲು ಪ್ರಮುಖ ಪಾತ್ರ ವಹಿಸಿರುವ ಶ್ರೀ ನೆಹರೂರವರು ದೀರ್ಘಾಯುಷ್ಮಂತರಾಗಿ ಬಾಳಬೇಕೆಂದೂ ಸಹ ಅವರು ಹಾರೈಸಿರುತ್ತಾರೆ.

ನೆಹರೂ ಪಾರಾದುದಕ್ಕೆ ರಾಷ್ಟ್ರಾದ್ಯಂತ ಸಂತೋಷ

"ದೇವರ ಮಗು" ಬಗ್ಗೆ ಪಂಜಾಬು ಗೌರ್ನರರ ಹೇಳಿಕೆ

ಪ್ರಧಾನಿ ನೆಹರೂರವರು ನೆನ್ನೆ ವಿಮಾನ ದುರಂತದಿಂದ ಪಾರಾದ ಬಗ್ಗೆ ರಾಷ್ಟ್ರಾದ್ಯಂತ ನಾಯಕರು ಮತ್ತು ಪ್ರಜೆಗಳು ಸಂತೋಷವನ್ನು ಸೂಚಿಸಿದ್ದಾರೆ. ಕೇಂದ್ರ ಮಂತ್ರಿಗಳಾದ ಮೌಲಾನಾ ಆಜಾದ್, ಜಿ. ಬಿ ಪಂತ್, ಕಾಂಗ್ರೆಸ್ ಅಧ್ಯಕ್ಷ ಢೇಬರ್, ಗೌರ್ನರರುಗಳಾದ ಬಿ. ರಾಮಕೃಷ್ಣರಾವ್, ಸಿ. ಪಿ. ಎನ್. ಸಿಂಗ್ ಮತ್ತು [illegible] ಜೆ [illegible], ಡಾ|| ಬಿ. ಸಿ. ರಾಯ್, ಎಸ್. ಕೆ. ಪಾಟೀಲ್, ಹಾಗೆ ಮುಂತಾದವರು ಹೇಳಿಕೆಯಿತ್ತು ತಮ್ಮ ಹರ್ಷವನ್ನು ವ್ಯಕ್ತಪಡಿಸಿದ್ದಾರೆ. ಭಗವಂತನಿಗೆ ಎಲ್ಲರೂ ಕೃತಜ್ಞರಾಗಬೇಕೆಂದು ಅವರುಗಳು ಹೇಳಿದ್ದಾರೆ. ಪಂಜಾಬು ಗೌರ್ನರ್ ಸಿ. ಪಿ. ಎನ್. ಸಿಂಗರು ಎಲ್ಲರೂ ಒಂದು ಘೋರ ಸಂಕಟದಿಂದ ಪಾರಾಗಿರುವರೆಂದೂ, ನೆಹರೂರವರು ದೇವರ ಶಿಶುವೆಂದೂ, ಕಲಹಹೋಗಿ [illegible] ಮತ್ತು [illegible] ಜಗತ್ತಿನಲ್ಲಿ ಶಾಂತಿ ಮತ್ತು ಪ್ರಗತಿಯ [illegible] ರೂಪದಲ್ಲಿರುವ ನೆಹರೂರವರು ಇನ್ನೂ ಅನೇಕ ವರ್ಷಕಾಲ ಬದುಕಿರಬೇಕೆಂದು ಹಾರೈಸಿದ್ದಾರೆ.

ನೆಹರೂರವರು ನೆನ್ನೆ ಮಧ್ಯಾಹ್ನ ೨|| ಗಂಟೆಗೆ [illegible] ಆಗಮಿಸಿ ನಂತರ ಜಬ್ಬಲ್ಪುರವನ್ನು ತಲುಪಿದರು.

ಓಟು ಕೊಡಲು ಮೊಮ್ಮಗನ ಹೆಗಲ ಮೇಲೆ ವೃದ್ಧನ ಆಗಮನ

ಇಡೀ ಉತ್ತರ ಪ್ರದೇಶದಲ್ಲೆಲ್ಲಾ ಅತ್ಯಂತ ವೃದ್ಧನೆಂದು ಹೇಳಲಾದ ೧೦೮ ವರ್ಷವನ್ನು ದಾಟಿರುವ [illegible] ಜಿಲ್ಲೆಯ [illegible] ಕ್ಷೇತ್ರದಲ್ಲಿ ಮತದಾರನೊಬ್ಬನು ತನ್ನ ಮೊಮ್ಮಗನ ಹೆಗಲ ಮೇಲೆ ಕುಳಿತು ಓಟು ಕೇಂದ್ರಕ್ಕೆ ಹೋಗಿ ಓಟು ಕೊಟ್ಟಿರುತ್ತಾನೆ.

ಸೂಚನೆ

ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ನಾಳೆ ಸಾಧ್ವಿ [illegible] ರಜಾ ಕೊಡಲಾಗಿದೆ.

ಆಯುರ್ವೇದ ವೈದ್ಯರ ಸಂಬಳ ಹೆಚ್ಚಬೇಕು

ಸಂಸ್ಥಾನದ ವೈದ್ಯರ ಸಭೆಯಲ್ಲಿ ನಿರ್ಣಯ

ಮೈಸೂರು ೨೭

ಸಂಸ್ಥಾನದ ನಾನಾ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರ ವೈದ್ಯರು ತಮ್ಮ ಸಂಘದ ಆಶ್ರಯದಲ್ಲಿ ಕಳೆದ ಭಾನುವಾರ ನಗರದಲ್ಲಿ ಸಭೆ ಸೇರಿದ್ದರು. ಡಾ|| ಎಸ್. ಗಂಡಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿಯವರಾದ ಡಾ|| ಬಿ. ಶಾಮಾಚಾರ್ಯರು ಸ್ವಾಗತ ಭಾಷಣ ಮಾಡಿದನಂತರ ಡಾ|| ಟಿ. ವಿ. ಕಸ್ತೂರಿಯವರು ಸಭೆಯ ಉದ್ದೇಶವನ್ನು ವಿವರಿಸಿದರು. ಸರ್ಕಾರದವರು ಜಾರಿಗೆ ತಂದಿರುವ ಹೊಸ ಸಂಬಳದ ಪಟ್ಟಿಯಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯರುಗಳಿಗೆ ಸ್ವಲ್ಪ ಪ್ರೋತ್ಸಾಹವೂ ದೊರೆತಿಲ್ಲದಿರುವುದೂ, ಕೆಲವು [illegible] ಅಲ್ಪ ಉತ್ತೇಜನದಿಂದ ಸ್ಥಳೀಯ ಸಂಸ್ಥೆ ಮತ್ತು ಜಿಲ್ಲಾ ಬೋರ್ಡ್ ವೈದ್ಯರುಗಳಿಗೆ ಅವಕಾಶ ಸಿಕ್ಕದಿರುವುದೂ ಸಭೆಯಲ್ಲಿ ಚರ್ಚಿಸಲ್ಪಟ್ಟವು. ವೈದ್ಯರುಗಳಿಗೆ ೧೦೦-[illegible] ರೂ. ಗ್ರೇಡನ್ನು ಜಾರಿಗೆ ತರುವಂತೆ ಸರ್ಕಾರವನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಸಂಸ್ಥಾನದಲ್ಲಿರುವ ೫೦೦ ದೇಶೀಯ ವೈದ್ಯ ಆಸ್ಪತ್ರೆಗಳನ್ನು ಸುವ್ಯವಸ್ಥಿತಗೊಳಿಸಲು ಪ್ರತ್ಯೇಕ ಇಲಾಖೆಯನ್ನು ಏರ್ಪಡಿಸಿ, ಆಯುರ್ವೇದದಲ್ಲಿ ಸರಿಯಾದ ಅರ್ಹತೆ ಮತ್ತು ಪ್ರಶಸ್ತಿ ಪಡೆದವರನ್ನೇ ಇಲಾಖಾ ಮುಖ್ಯಾಧಿಕಾರಿಯನ್ನಾಗಿ ಮಾಡಿ ಅವರ ಕೈಕೆಳಗೆ ಸೂಪರಿಂಟೆಂಡೆಂಟುಗಳನ್ನು ನೇಮಿಸಬೇಕೆಂದೂ, ಅದರಲ್ಲಿ ಜಿಲ್ಲಾ ಬೋರ್ಡ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಅನೇಕ ವರ್ಷದಿಂದ ಸೇವೆ ಸಲ್ಲಿಸುವವರಿಗೆ ಪ್ರಾಧಾನ್ಯತೆಯನ್ನು ಕೊಡಬೇಕೆಂದೂ ಸೂಚಿಸುವ ನಿರ್ಣಯವು ಮಾಡಲ್ಪಟ್ಟಿತು.

ಜಿಲ್ಲಾ ಬೋರ್ಡ್ ಮತ್ತು ಸ್ಥಳೀಯ ಸಂಸ್ಥೆಗಳ ಎಲ್ಲಾ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳನ್ನೂ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು, ಹೆಚ್ಚು ಸೌಕರ್ಯಗಳನ್ನು ಒದಗಿಸುವಂತೆ ಕೋರಲಾಯಿತು.

ಆರೋಗ್ಯರಕ್ಷಣೆ ಬಗ್ಗೆ ಸುಲಭವೂ ಮತ್ತು ಅತ್ಯಾವಶ್ಯಕವೂ ಆದ ಆಯುರ್ವೇದ ಸೂತ್ರಗಳನ್ನು ಜನರಿಗೆ ತಿಳಿಸಲು ಎರಡನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಯಿತು. ಕೇಂದ್ರ ಆಯುರ್ವೇದ ಭಾರತೀಯ [illegible] ಒತ್ತಾಯ ಮಾಡಲಾಯಿತು.

ಟಿ. ಕೆ. ಬಾಲಕೃಷ್ಣನವರಿಗೆ ಸತ್ಕಾರ

ನಗರದಲ್ಲಿರುವ ಬೆಂಗಳೂರು ಪ್ರೆಸ್ ವ್ಯವಸ್ಥಾಪಕರಾದ ಶ್ರೀ ಟಿ. ಕೆ. ಬಾಲಕೃಷ್ಣನವರ ಗೌರವಾರ್ಥವಾಗಿ ಶ್ರೀ ಶಾರದಾ ಪ್ರೆಸ್ಸಿನ ಮಾಲೀಕರು ಶ್ರೀ ಎಲ್. ಕೃಷ್ಣಶೆಟ್ಟಿ ಮತ್ತು ಶ್ರೀ ವಿನಾಯಕ ಪ್ರಿಂಟಿಂಗ್ ವರ್ಕ್ಸ್‌ನ ಮಾಲೀಕರು ಶ್ರೀ ಕೆ. ವೆಂಕಟಸುಬ್ಬಯ್ಯನವರು ಮೊನ್ನೆ ಸ್ವಾ ಚಾಮುಂಡೇಶ್ವರಿ ಶಾಖೆಯಲ್ಲಿ ಭೋಜನಕೂಟವೊಂದನ್ನು ಏರ್ಪಡಿಸಿದ್ದರು. ಶ್ರೀ ಗಣೇಶ [illegible], ಸರ್ಕಾರದ ಬ್ರಾಂಚ್ ಮುದ್ರಣಾಲಯದ ಶ್ರೀ ಶ್ರೀರಾಮ್, ವೆಸ್ಲಿ ಮುದ್ರಣಾಲಯದ ಶ್ರೀ [illegible] ಮತ್ತು ಶ್ರೀ ಚಲುವಯ್ಯಂಗಾರ್‌ರವರು ಭಾಷಣ ಮಾಡಿ, ಶ್ರೀ ಬಾಲಕೃಷ್ಣನವರನ್ನು ಕೇಂದ್ರ ಕಛೇರಿಯ ಅಸಿಸ್ಟೆಂಟ್ ಕಾರ್ಯದರ್ಶಿಯಾಗಿ ನೇಮಿಸಲಾಗಿರುವ ಬಗ್ಗೆ ಅಭಿನಂದಿಸಿ ಅವರಿಗೆ ಶುಭಾಶಯವನ್ನು ಕೋರಿದರು. ಶ್ರೀ ಬಾಲಕೃಷ್ಣನವರು ಕೃತಜ್ಞತೆಯನ್ನು ಸೂಚಿಸಿ ಭಾಷಣ ಮಾಡಿದನಂತರ, ಶ್ರೀ ವೆಂಕಟಸುಬ್ಬಯ್ಯನವರು ವಂದನಾರ್ಪಣೆ ಮಾಡಿದರು.

ಅಡಿಗೆಯ ಸ್ಪರ್ಧೆ

[illegible] ಕಾಲೇಜಿನ ವಿದ್ಯಾರ್ಥಿನಿ [illegible] ಎ. ಎಸ್. [illegible] ಬಹುಮಾನ [illegible] ಪ್ರಶಸ್ತಿಯನ್ನು ಪಡೆದಿರುತ್ತಾರೆ. ಈ ಮೊದಲನೆಯ ಬಾರಿ [illegible] ಅಡಿಗೆಯ ಕ್ರಮ [illegible]

ಕಾಂಗ್ರೆಸ್ಸನ್ನು ಟೀಕಿಸುವುದೇ ಒಂದು ಕೈಗಾರಿಕೆಯಾಗಿದೆ

ನೆಹರೂರವರ ವ್ಯಂಗ್ಯ ಟೀಕೆ

ನೆಹರೂರವರು ಇತ್ತೀಚೆಗೆ ಮಾಡಿದ ಭಾಷಣವೊಂದರಲ್ಲಿ, ಹಲವು ವಿರೋಧ ಪಕ್ಷದವರಿಗೆ ಕಾಂಗ್ರೆಸ್ಸನ್ನು ಟೀಕಿಸುವುದೇ ಒಂದು ಕೈಗಾರಿಕೆಯಾಗಿರುವುದೆಂದು ಹೇಳಿ ಅದು ಬಹಳ ಅಭಿವೃದ್ಧಿ ಹೊಂದುತ್ತಿರುವುದೆಂದೂ ತಿಳಿಸಿರುತ್ತಾರೆ. ಅದೊಂದು ಸ್ವತಂತ್ರ ಭಾರಿ ಕೈಗಾರಿಕೆಯಾಗಿರುವುದೆಂದೂ ಅವರು ಹೇಳಿರುವರು. ಪ್ರಜಾಪ್ರಭುತ್ವದಲ್ಲಿ ಭಾಷಣ ಸ್ವಾತಂತ್ರ್ಯವಿರುವುದರಿಂದ ಟೀಕೆಗೆ ಅವಕಾಶವಿರುವುದೆಂದು ಅವರು ಹೇಳಿರುವರು

ಅಲಕನಂದಾ ನದಿಗೆ ೧೭ ಲಕ್ಷ ರೂ. ವೆಚ್ಚದಿಂದ ಸೇತುವೆ

ಬದರೀನಾಥಕ್ಕೆ ಯಾತ್ರೆ ಹೋಗುವವರಿಗೆ ಅನುಕೂಲಪಡಿಸಲು ಅಲಕನಂದಾ ನದಿಗೆ ೧೭ ಲಕ್ಷ ರೂ ವೆಚ್ಚದಿಂದ ಒಂದು ಸೇತುವೆಯನ್ನು ಕಟ್ಟಲಾಗಿದೆ. ಶ್ರೀನಗರದ ಮೂಲಕ ಹೋಗುವುದು ತಪ್ಪುವುದು. ಋಷಿಕೇಶದಿಂದ ಪೀಪಲ್ ಕೋಟೆಗೆ ನೇರವಾದ ಮೋಟಾರು ಮಾರ್ಗವು ಇದರಿಂದ ಏರ್ಪಡಾಗುವುದು. ಸೇತುವೆಯು ೨೪೦ ಅಡಿ ಉದ್ದವಿದ್ದು ಉಕ್ಕಿನಿಂದ ನಿರ್ಮಿಸಲ್ಪಟ್ಟಿದೆ.

ಚಾಮರಾಜನಗರದ ಇಂಟರ್ ಕಾಲೇಜು ಸಂಘದ ವಾರ್ಷಿಕೋತ್ಸವ

ಚಾಮರಾಜನಗರದ ಇಂಟರ್ ಕಾಲೇಜು ಸಂಘದ ವಾರ್ಷಿಕೋತ್ಸವವು ಕಳೆದ ೧೯ನೇ ತಾರೀಕು ಪ್ರಿನ್ಸಿಪಾಲ್ ಶ್ರೀ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರಿನ ಶ್ರೀ ಯಂ. ಯಾಮುನಾಚಾರ್ಯರು ಭಾಷಣ ಮಾಡಿ, ವಿದ್ಯಾರ್ಥಿಗಳಲ್ಲಿ ಸದ್ಗುಣಗಳು ಬೆಳೆಯಬೇಕೆಂದೂ, ಪಂಡಿತ ಚಿಂತನೆಯು ಇರಬೇಕೆಂದೂ ಸೂಚಿಸಿದರು. [illegible] ಕಾರ್ಯದರ್ಶಿ ಶ್ರೀ ಪುಟ್ಟಸ್ವಾಮಯ್ಯನವರಿಂದ ವರದಿಯಾದನಂತರ, ಶ್ರೀ ಎ. ನಾಗರಾಜರಾಯರು ಕ್ರೀಡಾ ವರದಿಯನ್ನೊಪ್ಪಿಸಿದರು. ಕ್ರೀಡೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ಸಂಘದ ಅಧ್ಯಕ್ಷ ಶ್ರೀ ಯು. ಎಂ. ಮಾದಪ್ಪನವರು, ಕಾಲೇಜಿಗೆ ಸುಮಾರು ೫೦೦ ರೂ ಬೆಲೆಯ ಗ್ರಂಥಗಳನ್ನು ಉದಾರವಾಗಿ ಕೊಟ್ಟಿರುವ ಪ್ರೊ|| ಶ್ರೀ ರಂಗಣ್ಣನವರಿಗೆ ಕಾಲೇಜಿನ ಪರವಾಗಿ ಕೃತಜ್ಞತೆಯನ್ನು ಸೂಚಿಸಿದರು. ಲಕ್ಷ್ಮಿ ಲಕ್ಷ್ಮಣ ಎಂಬ ನಾಟಕವು ಕಡೆಯಲ್ಲಿ ನಡೆಯಿತು.

ಚಾಮರಾಜನಗರ ತಾಲ್ಲೂಕು ಗ್ರಾಮಾಧಿಕಾರಿಗಳ ಮುಷ್ಕರ

ಸಂಸ್ಥಾನದ ಗ್ರಾಮಾಧಿಕಾರಿಗಳ ಕೇಂದ್ರ ಸಂಘದವರ ಸಿಫಾರಸಿನಂತೆ ಎಲ್ಲಾ ಗ್ರಾಮಾಧಿಕಾರಿಗಳೂ ಬರುವ ತಿಂಗಳು ೭ ರಿಂದ ಅಸಹಕಾರವನ್ನು ನಡೆಸುವಂತೆ ಮೊನ್ನೆ ಚಾಮರಾಜನಗರದಲ್ಲಿ ಸೇರಿದ್ದ ತಾಲ್ಲೂಕು ಗ್ರಾಮಾಧಿಕಾರಿಗಳ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು.

ನಾದಬ್ರಹ್ಮ ಸಂಗೀತ ಸಭಾ,
ಮೈಸೂರು
ಮನೋಹರ ಸಂಗೀತ ಕಛೇರಿ
1957 ನೇ ಮಾರ್ಚಿ 3 ನೇ ತಾರೀಕು
ಭಾನುವಾರ ಸಂಜೆ 6-30 ಗಂಟೆಗೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ಮೈಸೂರು ಆಸ್ಥಾನ ವಿದ್ವಾನ್ ಲೇಟ್
ಶ್ರೀ ನಾರಾಯಣ ಭಾಗವತರ್‌ರವರ ಮಗಳು
ಶ್ರೀಮತಿ ಲಲಿತಾ ಭಾನುರವರ
ಗಾಯನ
ಶ್ರೀಮತಿ ಪಾಪನಾಶಂ [illegible]ಸರಸ್ವತಿ
ಯವರ ಪಿಟೀಲು
ವಿ|| ತಂಜಾವೂರು ಜನಾರ್ಧನ್‌ರವರ
ಮೃದಂಗ
ಸದಸ್ಯರಲ್ಲದವರಿಗೆ [illegible]
ಪ್ರವೇಶ ರೂ 1-0-0

Edited, Printed and Published by
A. R. Nagarajan at Sadhvi Press
[illegible]

ಪಾಕಿಸ್ತಾನಕ್ಕೆ ಭಾರತದಿಂದ ಅಂಬರ್ ಚರಖಾ ಬಹುಮಾನ

ಲಾಹೋರಿನಲ್ಲಿರುವ ಭಾರತದ ಡೆಪ್ಯುಟಿ ಹೈಕಮಿಷನರ್ ಎಸ್. ವಿ. ರಾಯರು ಪಶ್ಚಿಮ ಪಾಕಿಸ್ತಾನ ಸರ್ಕಾರಕ್ಕೆ ಭಾರತದ ಪರವಾಗಿ ಎರಡು ಅಂಬರ್ ಚರಖಾಗಳನ್ನು ಬಹುಮಾನ ಮಾಡಿರುವರು. ಪಶ್ಚಿಮ ಪಾಕಿಸ್ತಾನದ ಸಮಾಜ ಕಲ್ಯಾಣ ಮಂತ್ರಿ ಹಸನ್ ಮಹಮುದ್‌ರವರು ಅವನ್ನು ಸ್ವೀಕರಿಸಿ ಕಡಿಮೆ ವರಮಾನದ ಉದ್ಯೋಗಸ್ಥರಿಗೆ ಅದರಿಂದ ಸೌಲಭ್ಯವಾಗುವುದೆಂದು ತಿಳಿಸಿರುವರು. ಅಲ್ಲಿ ಖಾಸಗಿಯವರು ಚರಕಗಳನ್ನು ತಯಾರಿಸುವಂತೆ ಏರ್ಪಡಿಸಲಾಗುವುದೆಂದೂ, ಮುಂದಿನ ವರ್ಷ ೩೦,೦೦೦ ಚರಖಗಳನ್ನು ನಿರ್ಮಿಸಲಾಗುವುದೆಂದೂ ಸಚಿವರು ಹೇಳಿರುವರು

ಬೆಳ್ಳಿ ಕರಂಡಗಳ ಅರ್ಪಣೆ ಬಗ್ಗೆ ನೆಹರೂರವರ ಖಂಡನೆ

ವಿಜಯವಾಡದಲ್ಲಿ ನೆಹರೂರವರು ಭಾಷಣ ಮಾಡಿ ತಮಗೆ ಬೆಳ್ಳಿ ಮತ್ತು ಚಿನ್ನದ ಕರಂಡಗಳಲ್ಲಿ ಬಿನ್ನವತ್ತಳೆಗಳನ್ನು ಅರ್ಪಿಸುವ ಬಗ್ಗೆ ತೀವ್ರ ಅಸಮಾಧಾನವನ್ನು ಸೂಚಿಸಿರುತ್ತಾರೆ. ಅವು ಹಿಂದಿನ ಆಡಳಿತದ ಅವಶೇಷಗಳೆಂದೂ, ಅವು ಹೋಗಬೇಕೆಂದೂ ಅವರು ತಿಳಿಸಿರುವರು. ಅವರಿಗೆ ಅಲ್ಲಿನ ಕಾಂಗ್ರೆಸ್ಸಿನವರು ಬೆಳ್ಳಿ ಕರಂಡದಲ್ಲಿ ಬಿನ್ನವತ್ತಳೆಯನ್ನು ಸಮರ್ಪಿಸಿದ್ದರು

ಹಿಂದಿ ತರಗತಿಗಳು

ವಿದ್ಯಾರಣ್ಯಪುರದಲ್ಲಿರುವ ಶಾರದಾಂಬ ಹಿಂದಿ ನಿಕೇತನದ ಆಶ್ರಯದಲ್ಲಿ ಬರುವ ವರ್ಷದ ಮದರಾಸ್ ಮೆಟ್ರಿಕ್ಯುಲೇಷನ್, ಮೈಸೂರು ಸ್ಕೂಲ್ ಫೈನಲ್ಲಿನ ೧೯೫೭ರ ಸಪ್ಲಿಮೆಂಟರಿ ಮತ್ತು ೧೯೫೮ರ ಪಬ್ಲಿಕ್ ಪರೀಕ್ಷೆಗಳಿಗೂ ಮತ್ತು ಮೈಸೂರು ಹಾಗೂ ೧೯೫೭ರ ಮದರಾಸಿನ ಎಲ್ಲಾ ಹಿಂದೀ ಪರೀಕ್ಷೆಗಳಿಗೂ ಶಿಕ್ಷಣದ ಏರ್ಪಾಡಾಗಿದೆ. ಮದರಾಸ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹಾಜರಾಗಬಯಸುವವರು ಪೂರ್ವಭಾವಿಯಾಗಿ ಯಾವ ಹೈಸ್ಕೂಲ್ ಪರೀಕ್ಷೆಯನ್ನೂ ತೆಗೆದುಕೊಂಡಿರಬೇಕಾಗಿಲ್ಲ. ೧೯೫೭ನೇ ಮಾರ್ಚಿ ಮಾಹೆಯೊಳಗಾಗಿ ೨೦ ವರ್ಷ ಪೂರೈಸಿದ್ದರೆ ಮಾತ್ರ ಸಾಕು. ಉತ್ತಮ ಮಟ್ಟದ ಶಿಕ್ಷಣ ಮತ್ತು ಖಾತರಿಯಾದ ಫಲಿತಾಂಶದ ಭರವಸೆ ಕೊಡಲ್ಪಡುತ್ತದೆ. ಹೆಚ್ಚಿನ ವಿವರಗಳನ್ನು ವ್ಯವಸ್ಥಾಪಕರಾದ ಶ್ರೀ ಎಸ್. ಎ. ಜಗನ್ನಾಥರಾವ್‌ರವರಿಂದ ತಿಳಿಯಬಹುದು. ಶಿಕ್ಷಣ ಉಚಿತ

ಇಟ್ಟಿಗೆಗೂಡಿನಲ್ಲಿ ಕಳ್ಳತನ

ಇಟ್ಟಿಗೆಗೂಡು ಅರುಣಾಚಲಂ ಬೀದಿಯಲ್ಲಿರುವ ಶ್ರೀ ಎಂ. ಎಸ್. ಕಾಶೀಪತಿರಾಯರ ಶಿವಾಜಿ ಟೈಲರಿಂಗ್ ಹಾಲ್ ಅಂಗಡಿಯಲ್ಲಿ ಕಳೆದ ಗುರುವಾರ ರಾತ್ರಿ ಸುಮಾರು ಮುನ್ನೂರು ರೂಪಾಯಿಗಳ ಬಟ್ಟೆಗಳು ಕಳುವಾಗಿವೆ. ಹೊಲಿದ ಬಟ್ಟೆಗಳು ಮತ್ತು ಹೊಲಿಯಲು ಕತ್ತರಿಸಿದ್ದ ಬಟ್ಟೆಗಳೂ ಸಹಾ ಹೋಗಿವೆ. ನಜರ್‌ಬಾದ್ ಪೋಲೀಸರು ತನಿಖೆ ಕ್ರಮ ನಡೆಸುತ್ತಿರುವರು.

ಚಾಮುಂಡೇಶ್ವರೀ
ಟಾಕೀಸ್
ಶಂಕರ್‌ರಾಜ್ ಪ್ರೊಡಕ್ಷನ್‌ರವರ ಕನ್ನಡ ಚಿತ್ರ
ನಳದಮಯಂತಿ
ಮಹಾ ಶಿವರಾತ್ರಿ ಪ್ರಯುಕ್ತ ಆ ದಿನ
ನಾಲ್ಕು ಪ್ರದರ್ಶನಗಳು
ಮಧ್ಯಾಹ್ನ 3 ಸಂಜೆ 6 30, ರಾತ್ರಿ 10 ಮತ್ತು
1-15 ಗಂಟೆಗೆ

ಭೂದಾನ ಕಾರ್ಯಕರ್ತರಿಗೆ ಪರೀಕ್ಷೆ ಬಗ್ಗೆ ರಿಯಾಯಿತಿ

ಭೂದಾನ ಕಾರ್ಯದಲ್ಲಿ ತೊಡಗಿರುವ ಕಾಲೇಜು ವಿದ್ಯಾರ್ಥಿಗಳು ಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳಲು ನಾಗಪುರ ವಿಶ್ವವಿದ್ಯಾಲಯದವರು ಎಲ್ಲಾ ಸೌಲಭ್ಯಗಳನ್ನೂ ಅವರುಗಳಿಗೆ ಕಲ್ಪಿಸಿಕೊಡುವರೆಂದು ಜಯಪ್ರಕಾಶ ನಾರಾಯಣರವರು ತಿಳಿಸಿರುತ್ತಾರೆ.

೫೫ ಲಕ್ಷ ರೂ. ವೆಚ್ಚದಿಂದ ಮೀನು ಕೈಗಾರಿಕೆ ಅಭಿವೃದ್ಧಿ

ಕಾರವಾರದಿಂದ ಮಂಗಳೂರುವರೆಗೆ ಇರುವ ಸಮುದ್ರದ ತೀರದಲ್ಲಿ ಮೀನು ಕೈಗಾರಿಕೆಯನ್ನು ೫೫.೬ ಲಕ್ಷ ರೂ. ವೆಚ್ಚದಿಂದ ಅಭಿವೃದ್ಧಿಗೊಳಿಸಲು ನಿರ್ಧರಿಸಲಾಗಿದೆ. ಇದರ ಅಂಗವಾಗಿ ೫೭-೫೮ರಲ್ಲಿ ೧೧.೫ ಲಕ್ಷ ರೂ ವೆಚ್ಚ ಮಾಡಲಾಗುವುದು.

ಚುನಾವಣೆ ಸಿಬ್ಬಂದಿಯವರ ಸೌಕರ್ಯದಲ್ಲಿ ಅವ್ಯವಸ್ಥೆ

ನಂಜನಗೂಡು ಮತ್ತು ಬಿಳಿಗಿರಿ ಕ್ಷೇತ್ರಗಳ ಚುನಾವಣೆ ಕಾರ್ಯದಲ್ಲಿ ನಿಯೋಜಿಸಲ್ಪಟ್ಟ ಅಧಿಕಾರಿಗಳು ಮತ್ತು ನೌಕರರಿಗೆ ಊಟೋಪಚಾರದ ಬಗ್ಗೆ ವ್ಯವಸ್ಥೆಯು ತೀರಾ ಅಸಮರ್ಪಕವಾಗಿದ್ದು ಅವರುಗಳಿಗೆ ತುಂಬಾ ತೊಂದರೆಯಾಯಿತೆಂದು ವಾಚಕರೊಬ್ಬರು ತಿಳಿಸಿರುತ್ತಾರೆ.

ಕ್ಯಾಲೆಂಡರ್ ಸ್ವೀಕಾರ

ನಗರದ ಲಕ್ಷ್ಮಿ ಚಲನ ಚಿತ್ರ ಮಂದಿರದವರು ಕಳುಹಿಸಿರುವ ಆಕರ್ಷಣೀಯವಾದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಗಳು
ಅಶೋಕ ರಸ್ತೆ, ಮೈಸೂರು (Estd. 1911)

ಮೋತಿಲಾಲ್ ಟಾಕೀಸ್
27-2-57 ರಿಂದ : ಪ್ರಾರಂ
ಚಕ್ರವರ್ತಿ
ತಿರುಮಗಳ್
(ತಮಿಳು)
ಪಾತ್ರ:- ಎಂ. ಜಿ. ರಾಮಚಂದ್ರನ್, [illegible]
ಆರ್. ನಾಗೇಶ್ವರರಾವ್, ಅಂಜಲಿದೇವಿ, [illegible]
ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ
ಮಹಾ ಶಿವರಾತ್ರಿ ಪ್ರಯುಕ್ತ ಆ ದಿನ ರಾ
1-30 ಗಂಟೆಗೆ ವಿಶೇಷ ಪ್ರದರ್ಶನ ಏರ್ಪಡಿ

SREE GANESH
TALKIES
To-day :
TARANTULA
From 28-2-57 : For 2 d
A DAY OF FURY
(In Technicolor)
From 2-3-57 : For 3 d
THE GAMMA PEOPLE
Starring:-Paul Douglas

ರಿಜಿಸ್ಟರ್ ನಂ. 792



ಗ್ರೆಸ್ ಉಮೇದುವಾರರಿಗೆ
ಮ್ಮ ನಿಮ್ಮ ಓಟನ್ನು ಕೊಡಿರಿ

ಅಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲ ಕಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[: ೦೫] SADHVI : FRIDAY 1—3—1957 ಮೈಸೂರು : ಶುಕ್ರವಾರ ೧—೩—೧೯೫೭ : [ಸಂಚಿಕೆ : ೫೦೩

ಾಜಾದಿಂದ ಇಸ್ರೇಲ್ ಸೈನ್ಯಗಳ ವಾಪಸಿಗಾಗಿ ಒಪ್ಪಂದ

ಕ್ಕಳಿಗೆ ಆಟಗಳಷ್ಟೇ ಸ್ತಕಾಲಯಗಳೂ ಮುಖ್ಯ

ಕ ಭಂಡಾರದಲ್ಲಿ ರಾಜಕುಮಾರಿ ಯತ್ರೀ ದೇವಿಯವರ ಭಾಷಣ

ಮೈಸೂರು ೧

ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಏ ಡುವ ಮಕ್ಕಳ ಪುಸ್ತಕ ಭಂಡಾರದ ವಾರ್ಷಿಕೋತ್ಸವವು ವೈಸ್‌ರಾಯ್ ಲಿನ ಭಂಡಾರದ ನೂತನ ಕಟ್ಟಡದಲ್ಲಿ ನೆರವೇರಿತು ರಾಜಕುಮಾರಿ ಗಾಯತ್ರಿ ವರು ಅಧ್ಯಕ್ಷತೆ ವಹಿಸಿದ್ದರು ಲು ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂ ಟಿ ಸಮಾರಂಭವು ಕುಮಾರಿ ಶಾರದಾ ರ್ಥನೆಯಿಂದ ಉಪಕ್ರಮವಾಯಿತು

ಕ್ಲಬ್ಬಿನ ಅಧ್ಯಕ್ಷ ಶ್ರೀ ಎಸ್ ಕೆ ಪಿ ಸ್ವಾಗತ ಭಾಷಣ ಮಾಡಿದ ಕ ಭಂಡಾರದ ಸಮಿತಿ ಅಧ್ಯಕ್ಷ ಶ್ರಿ [illegible] ವರದಿಯನ್ನೊಪ್ಪಿಸಿದರು [illegible] ಕುಮಾರಿ ಅವರಿಗೆ ಬಹು [illegible] ಪಿಸಲಾಯಿತು.

ರಿಯವರು ತಮ್ಮ ಭಾಷಣ ತಿ ನುಡಿದರು:—

ಗರ ಚಿಕ್ಕ ಮಕ್ಕಳ ಪುಸ್ತಕಾಲಯದ ಪ್ಪು ಈ ಹಬ್ಬಕ್ಕೆ ನನ್ನನ್ನು ಬಿನ್ನ ಡಿರುತ್ತೀರಿ ಇದರಿಂದ ನನಗೆ ಬಹ ವಾಗಿದೆ

ವರದಿಯು ಬಹಳ ಚನ್ನಾಗಿದೆ ನಿಮ್ಮ ಕೆಗಳು ಬಹಳ ಉತ್ತಮವಾಗಿವೆ ಪುಸ್ತಕಾಲಯಗಳು, ಆಟದ ಬಯಲು ಮುಖ್ಯವಾದುವು. ಇಂತಹ ಬಲಯು ದಷ್ಟು ದೇಶಕ್ಕೆ ಒಳ್ಳೆಯದು ಇತ್ತ ಸಂಖ್ಯೆಯೇ ದೇಶದ ಏಳಿಗೆಯ ಗು ಚಿಕ್ಕವಯಸ್ಸಿನಲ್ಲಿ ಪಡೆದ ಜ್ಞಾನವೇ ತಳಹದಿಯಾಗುವುದು. ಆದುದರಿಂದ ಲಯಗಳ ಉಪಯೋಗವನ್ನು ಒತ್ತಿ ಇಗಿಲ್ಲ

ಈ ಪಟ್ಟದಲ್ಲಿ ನಾವು ಸೇರಿರುವ ಬಹಳ ಸಂತೋಷ. ಇಂತಹ ಹಬ್ಬ ಗಳ ನಡೆಯುತ್ತಿದ್ದರೆ ಮಕ್ಕಳ ಸಂ ಮತ್ತು ಏಳಿಗೆಯೂ ಬೆಳೆಯುತ್ತವೆ. ದೊಡ್ಡವರು ಬೆಳೆಯಲೆಂದೂ, ಇದ ಗಿಸುವ ಮಕ್ಕಳು ಮುಂದುವರಿಯು ತಿ ಹಾರೈಸುತ್ತೇನೆ. ಅಲ್ಲದೆ ಇಂತ ನು ಹೆಚ್ಚಿ ದೇಶಕ್ಕೆ ಒಳ್ಳೆಯದಾಗ ಎಂದೇಳಿ ತಮ್ಮನ್ನೆಲ್ಲ [illegible] ವನ್ನು ನೆರವೇರಿಸುತ್ತೇನೆ ನ್ನು ಸಂಗೀತಗಳಾದನಂತರ ಪುಸ್ತ [illegible] ಕಾರ್ಯದರ್ಶಿ ಶ್ರೀ ಎಂ. [illegible] ವಂದನಾರ್ಪಣೆ ಮಾ

ಕ್ಕೆ ರಾಜಕುಮಾರಿ ಗಾಯತ್ರಿ ದೇ ಕೋದರಿಯರಾದ ಮಿಸ್ [illegible] ರಾಜಕುಮಾರಿ ಶ್ರೀಕಂಠ [illegible]

ರಾಜಕುಮಾರಿ ಗಾಯತ್ರೀ ದೇವಿಯವರು

ನಿನ್ನೆ ಮಕ್ಕಳ ಪುಸ್ತಕ ಭಂಡಾರದ ಸಮಾರಂಭ ದಲ್ಲಿ ಭಾಷಣ ಮಾಡುತ್ತಿರುವ ಚಿತ್ರ

ಬೆಂಗಳೂರಿನಲ್ಲಿ ಸೈಕಲ್ ಡಬ್ಬಲ್ ರೈಡಿಂಗ್‌ಗೆ ಅವಕಾಶ

ಬಾಲಕರನ್ನು ಮಾತ್ರ ಕೂರಿಸಲು ಅನುಮತಿ

ಬೆಂಗಳೂರು ೧

ಬೆಂಗಳೂರು ನಗರದಲ್ಲಿ ಸಧ್ಯದಲ್ಲೇ ಸೈಕಲ್ ಡಬ್ಬಲ್ ರೈಡಿಂಗ್‌ಗೆ ಅವಕಾಶ ಕಲ್ಪಿಸಲಾಗುವುದು ಈ ಬಗ್ಗೆ ಅಲ್ಲಿನ ಪೌರಸಭೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಲಾಗಿದೆ ಆದರೆ ಸೈಕಲ್ ಸವಾರನು ೧೬ ಅಥವಾ ಕಡಿಮೆ ವಯಸ್ಸಿನವರನ್ನು ಕೂಡಿಸಿಕೊಂಡುಹೋಗಲು ಮಾತ್ರ ಅನುಮತಿಯಾಗಲು ಸಭೆಯು ಒಪ್ಪಿದೆ.

ಓಟು ಕೊಡಲು ಒಪ್ಪದಿದ್ದುದಕ್ಕೆ ಚೂರಿ ಇರಿತದಿಂದ ಮರಣ

ಅಮೃತಸರದ ಬಳಿ ಪಟ್ಟಿ ಎಂಬಲ್ಲಿ ಕಳೆದ ೨೬ನೇ ತಾರೀಕು ಒಬ್ಬ ಉಮೇದುವಾರನಿಗೆ ಓಟು ಕೊಡಲು ನಿರಾಕರಿಸಿದುದಕ್ಕಾಗಿ ಸೂರತ ಸಿಂಗ್ ಎಂಬಾತನ ಮೇಲೆ ಮೂವರು ಧಾಳಿ ಮಾಡಿದರೆಂದೂ, ಆತನು ಇರಿತದ ಪರಿಣಾಮವಾಗಿ ಮೃತಪಟ್ಟನೆಂದೂ ವರದಿಯಾಗಿದೆ.

ಚಿಂತಾಮಣಿ ಘರ್ಷಣೆ ಬಗ್ಗೆ ಇಬ್ಬರ ಬಂಧನ

ಚಿಂತಾಮಣಿಯಲ್ಲಿ ಇತ್ತೀಚೆಗೆ ನಡೆದ ಚುನಾವಣೆ ಪ್ರಚಾರ ಸಂಬಂಧ [illegible] 'ಧೆಯಲ್ಲಿ ನಾರಾಯಣಸ್ವಾಮಿ ಎಂಬಾತನು ಮೃತಪಟ್ಟಿರುವನಷ್ಟೆ? ಆತನ ಬಳಿ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಮುದ್ರಿತವಾಗಿದ್ದ ಕಾಂಗ್ರೆಸ್ ಹಸ್ತ ಪತ್ರಿಕೆಗಳಿದ್ದುವು ಗಲಭೆ ಸಂಬಂಧದಲ್ಲಿ ಕೃಷ್ಣಾರೆಡ್ಡಿ ಮತ್ತು ಜಬ್ಬಾರ್ ಎಂಬುವರನ್ನು ಬಂಧಿಸ

ಮಾಜಿ ಮಂತ್ರಿ ಸಿದ್ದಲಿಂಗಯ್ಯನವರ ವಿಜಯ

ಬೆಂಗಳೂರು ೧

ದೊಡ್ಡಬಳ್ಳಾಪುರ ಕ್ಷೇತ್ರದಿಂದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಮಾಜಿ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ಭಾರಿ ಜಯಗಳಿಸಿರುತ್ತಾರೆ ಅವರಿಗೆ ೧೭,೫೩೭ ಮತ್ತು ಜನಸಂಘದ ಮತ್ತು ಸ್ವತಂತ್ರ ಸ್ಪರ್ಧಿಗಳಾದ ಶ್ರೀಗಳು ಟಿ. ಸಿ ಗಂಗಾಧರಪ್ಪ ಮತ್ತು ಎ. ರಾಮಕೃಷ್ಣಯ್ಯನವರಿಗೆ ಕ್ರಮವಾಗಿ ೭,೦೮೦ ಮತ್ತು ೩,೫೫೧ ಓಟುಗಳು ಬಂದಿವೆ

ಕರ್ನಾಟಕದಲ್ಲಿ ದೊಡ್ಡಮೇಟಿಯವರ ಆಯ್ಕೆ

ಧಾರವಾಡ ಜಿಲ್ಲೆಯ ರೋಣ್ ಕ್ಷೇತ್ರದಿಂದ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ತಮ್ಮ ಪಿ. ಎಸ್. ಪಿ. ಪ್ರತಿಸ್ಪರ್ಧಿಗಿಂತ ೩,೦೦೦ ಕ್ಕೂ ಹೆಚ್ಚು ಓಟು ಗಳಿಸಿ ಆರಿಸಲ್ಪಟ್ಟಿರುವರು ಈ ಎರಡೂ ಕಾಂಗ್ರೆಸ್ಸಿನ ವಿಜಯಗಳು

ನೆಹರೂ ಪಕ್ಷಕ್ಕೆ ಓಟು ಕೊಟ್ಟು ಕೂಡಲೆ ಮುದುಕಿಯ ಮರಣ

ಪಂಜಾಬಿನ ವಿಧಾನ ಸಭೆಗೆ ಫಗ್ವಾರ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಮುದುಕಿಯೊಬ್ಬಳು ತಾನು ಓಟು ಕೊಡಬೇಕೆಂದು ತೀವ್ರ ಉದ್ವೇಗವನ್ನು [illegible] ಮಂಚದ ಮೇಲೆ ಎತ್ತಿತರಲಾಯಿತೆಂದೂ, ತನ್ನ ಓಟನ್ನು ನೆಹರೂರವರಿಗೆ ಕಳುಹಿಸಬೇಕೆಂದು ಆಕೆಯು ಕೋರಲು ಅದಕ್ಕೆ ಅಧಿಕಾರಿಗಳು ನಿರಾಕರಿಸಲಾಗಿ ನೆಹರೂ ಪಕ್ಷದವರ ಓಟು ಪೆಟ್ಟಿಗೆ ಬಳಿ ಕರೆದುಕೊಂಡುಹೋಗಬೇಕೆಂದು ಕೇಳಿದಳೆಂದೂ, ಹಾಗೆ ಮಾಡಿದಮೇಲೆ ಆಕೆಯು ಓಟು ಪತ್ರವನ್ನು ಹಾಕಿದ ಮರುಕ್ಷಣದಲ್ಲೇ ಕುಸಿದು ಪ್ರಾಣಬಿಟ್ಟಳೆಂದೂ ವರದಿಯಾಗಿದೆ.

ಸೀರೆಗೆ ಬೆಂಕಿ ತಗುಲಿ ಯುವತಿಯ ಮರಣ

ನಗರದ ದಾನಪ್ರಕಾಶ ಭವನದಲ್ಲಿರುವ, ಗಡಿಯಾರದ ಅಂಗಡಿ ಮಾಲೀಕರಾದ ಶ್ರೀ ಚಂದ್ರಶೇಖರಗೌಡರ ಪುತ್ರಿ ಕುಮಾರಿ ದಾಕ್ಷಾಯಿಣಿ ಎಂಬ ಕುಮಾರಳು ೧೬ ವರ್ಷದ ತರುಣಿಯು ಮೊನ್ನೆ ಸಂಜೆ ಮನೆಯಲ್ಲಿ ಕಾಫಿ ಮಾಡುತ್ತಿದ್ದಾಗ ಸೀರೆಗೆ ಬೆಂಕಿ ತಗುಲಿ ಸುಟ್ಟ ಗಾಯದಿಂದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ರಾತ್ರಿ ಮೃತಪಟ್ಟಳು. ಹುಡುಗಿಗೆ ಸಧ್ಯದಲ್ಲೇ ವಿವಾಹವು ನಡೆಯಲಿದ್ದುದಾಗಿ ಹೇಳಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದಿಲ್ರುಬಾ ೭-೧೫ ಮಂತ್ರ ೮-೧೦. ಎ. ದೊರೆಸ್ವಾಮಿ—ದೇವರನಾಮ. ೭-೩೦ ರಿಕಾರ್ಡು. ಮಧ್ಯಾಹ್ನ ೧-೨. ದೊರೆಸ್ವಾಮಿ—ಸಂಗೀತ. ೧೨-೩೦ ರಿಕಾರ್ಡು ೯. ೧ ನಾದದ ೧-೪೦ ದಿಲ್ರುಬಾ. ೭ ಬಾಲಜನರ್. ಸಂಜೆ ೫-೩೦ ಮತ್ತು ೮ ಸಿ ಕೆ ಶಾರದ-ಸಂಗೀತ [illegible] ೭-೩೦ ಪ್ರಶ್ನೆ ನೃತ್ಯ [illegible] ಯೂ ನ್ಯೂಸ್ ರೀಲ್. ೮-೪೦ ಪ್ರಸಾರಗೀತೆ [illegible]

ನಾಳೆ ರಾತ್ರಿ ಡಾ॥ ಅಮೊಸಿಂಗರ ಭಾಷಣ

ಮೈಸೂರು ೧

ನಗರದ ಅಕ್ಬರ್ ಮೊಹಲ್ಲಾ ಕಾಂತರಾಜಾಪಾರ್ಕಿನಲ್ಲಿ ನಾಳೆ ರಾತ್ರಿ ೮ ಗಂಟೆಗೆ ರಾಜ್ಯ ಸಭಾ ಸದಸ್ಯ ಡಾ॥ ಅಮೊಸಿಂಗ್‌ರವರು ಕಾಂಗ್ರೆಸ್ ಚುನಾವಣಾ ಪ್ರಚಾರ ಭಾಷಣ ಮಾಡುವರು

ಶಿವಕಥೆ

ಕಾಳಮ್ಮನಗುಡಿ ಬೀದಿ ಶ್ರೀ ಕಾಶೀಶ್ವರ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ಈ ಸಂಜೆ ೭ ಗಂಟೆಗೆ ಧರ್ಮ ವಿಶಾರದ ಶ್ರೀ ವೆಂಕಟೇಶದಾಸರಿಂದ "ಮಡಿವಾಳ ಮಾಚಯ್ಯ" ಎಂಬ ಶಿವಕಥೆ ನಡೆಯುವುದು

ಶಾರದಾ ಯೂನಿಯನ್ನಿನ ವಾರ್ಷಿಕೋತ್ಸವ

ವೈಸ್‌ರಾಯ್ ರಸ್ತೆಯ ಶ್ರೀ ಶಾರದಾ ನಿಕೇತನದಲ್ಲಿರುವ ಶಾರದಾ ಯೂನಿಯನ್ನಿನ ಗಾನೇ ವಾರ್ಷಿಕೋತ್ಸವದ ಅಂಗವಾಗಿ ಕಳೆದ ತಿಂಗಳ [illegible] ತಾರೀಕು ಶಾರದಾ ಪೂಜೆಯನ್ನು ನೆರವೇರಿಸಲಾಯಿತು. ಶ್ರೀ ಯಂ. [illegible] ರು ಅಧ್ಯಕ್ಷತೆ ವಹಿಸಿದ್ದರು ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಸೋಮನಾಥಾನಂದಜಿಯವರು ಭಾಷಣ ಮಾಡಿದರು. ಮೈಸೂರು ಗಮಕ ಕೋವಿದರಿಂದ ಕಾವ್ಯ ವಾಚನ ಮತ್ತು ಆಧುನಿಕ ಕನ್ನಡ ಸಾಹಿತ್ಯದ ಬಗ್ಗೆ ಶ್ರೀ ನಿರಂಜನರವರ ಭಾಷಣವಾಯಿತು. ಮೊದಲು ಸಂಘದ ಅಧ್ಯಕ್ಷ ಶ್ರೀ ಎ ಎಲ್. ಕೃಷ್ಣಮೂರ್ತಿಯವರಿಂದ ಸ್ವಾಗತವೂ ಮತ್ತು ಕಾರ್ಯದರ್ಶಿ ಶ್ರೀ ಎಸ್. ಪಟ್ಟಾಭಿರಾಮನ್ನರಿಂದ ವಾರ್ಷಿಕ ವರದಿ ಪಠನವೂ ಆದುವು ವಿವಿಧ ಮನರಂಜನೆಯ ಕಾರ್ಯಕ್ರಮಗಳೂ ನಡೆದುವು.

ಗಾಜಾ ಮತ್ತು ಅಕಾಬಾಗಳಿಂದ ಇಸ್ರೇಲ್ ಸೈನ್ಯ ವಾಪಸು

ಈ ದಿನ ಒಪ್ಪಂದದ ನಿರೀಕ್ಷೆ

ಗಾಜಾ ಮತ್ತು ಅಕಾಬಾ ಖಾರಿಯಿಂದ ಇಸ್ರೇಲು ತನ್ನ ಸೈನಿಕರನ್ನು ವಾಪಸು ಕರೆಸುವ ವಿಚಾರದಲ್ಲಿ ಒಪ್ಪಂದವಾಗುವ ಬಗ್ಗೆ ವಿಶ್ವಸಂಸ್ಥೆಯಲ್ಲಿ ಈ ದಿನ ಘೋಷಣೆಯಾಗಲಿರುವುದೆಂದು ವಾಷಿಂಗ್ಟನ್ನಿನಲ್ಲಿರುವ ಇಸ್ರೇಲಿ ರಾಯಭಾರ ಕಛೇರಿಯು ನಿರೀಕ್ಷಿಸಿದೆ. ಈ ವಿಚಾರವಾಗಿ ವಾಷಿಂಗ್ಟನ್ನಿನಲ್ಲಿ ಮಾತುಕತೆಗಳು ಮುಕ್ತಾಯದ ಘಟ್ಟಕ್ಕೆ ಬಂದಿರುವುದಾಗಿಯೂ ಹೇಳಲಾಗಿದೆ.

ಕಲ್ಲಿದ್ದಲು ಉತ್ಪಾದನೆಗೆ ೧೪ ಕೋಟಿ ರೂ. ಯಂತ್ರ

ಭಾರತದಲ್ಲಿ ಕಲ್ಲಿದ್ದಲನ್ನು ತೆಗೆಯುವ ಸಲುವಾಗಿ ರಷ್ಯದ ಪ್ರವೀಣರ ಸಂಘವೊಂದು ೧೪ ಕೋಟಿ ರೂ. ಯಂತ್ರವನ್ನು ತರಿಸಲು ಶಿಫಾರಸು ಮಾಡಿದೆ. ಆದರಿಂದ ವರ್ಷಕ್ಕೆ ೩೦,೦೦೦ ಟನ್ ಕಲ್ಲಿದ್ದಲನ್ನು ತಯಾರಿಸಬಹುದೆಂದು [illegible] ಕೋಟಿ ಟನ್ ಕಲ್ಲಿದ್ದಲು [illegible]

“ಭ[illegible]” ದ ರಾಜ್ಯ ಶಾಸ್ತ್ರ

(ಸರ್ವೋದಯ ವಿಚಾರ ವೇದಿಕೆ)

ನಮ್ಮದು ಪಕ್ಷ ರಾಜಕೀಯವಲ್ಲ. ಎಲ್ಲರನ್ನೂ ಒಳಗೊಂಡು, ಸಮಾಜದ ಎಲ್ಲ ವ್ಯಕ್ತಿಗಳೂ ಭಾಗವಹಿಸಬಹುದಾದ [illegible] ನಮ್ಮ ನಂಬಿಕೆ. ಇದನ್ನು ನಾನು “ಲೋಕನೀತಿ” ಎಂದು ಕರೆಯುತ್ತೇನೆ. ಇಂದಿನ ‘ರಾಜನೀತಿ’ಗೆ ವಿರೋಧ [illegible] ಇದು.

ಗೋಖಲೆ, ಗಾಂಧೀಜಿ ಇವರುಗಳು ರಾಜಕೀಯವನ್ನು ಧಾರ್ಮಿಕ [illegible] ಪರಿವರ್ತಿಸಲು ಪ್ರಯತ್ನಿಸಿದರು. ಹಿಂದೆ ಮಹಮ್ಮದ್, ಅಕ್ಬರ್ ಮುಂತಾದ ಮಹನೀಯರು ಇದೇ ಪ್ರಯೋಗವನ್ನು ಮಾಡಿದರು. ಆದರೂ ರಾಜಕೀಯ ಕ್ಷೇತ್ರವು ಧರ್ಮದಿಂದ ಪುನೀತವಾಗದೆ ಬದಲು ಧರ್ಮವು ರಾಜಕೀಯದಿಂದ ಕಲುಷಿತವಾಯಿತು. [illegible] ಇತಿಹಾಸದ ಸ್ಪಷ್ಟ ಪಾಠ.

೧೮-೧೯ನೇ ಶತಮಾನದ ಕುಟಿಲ ರಾಜಕೀಯವೇ ಇಂದಿಗೂ ನಡೆಯುತ್ತಿದೆ. ತಂತ್ರ ಬದಲಾಯಿಸಿದೆ ಅಷ್ಟೆ. ಅಂದಿನಂತೆ ಇಂದಿಗೂ ಯಾವ [illegible] ಕೊಳ್ಳಬಹುದು [illegible] ಗಾಂಧೀ ವಾದಿಗಳೆನ್ನುವವರು [illegible] ಪಟ್ಟದ ರಾಜಕೀಯ ವಿಚಾರವನ್ನು [illegible].

[illegible] ರಾಜಕೀಯದಲ್ಲಿ [illegible] ಸಾಧ್ಯವೆ?

[illegible] ಸರ್ವೋದಯ [illegible] ಚಿಂತನೆಯಲ್ಲಿ [illegible].

[illegible] ಇಂದಿನ [illegible] ‘ಲೋಕನೀತಿ’ಯನ್ನಾಗಿ [illegible] ಈ ಸುಧಾರಣೆ [illegible] ನಮ್ಮ [illegible].

[illegible] ಒಂದು ವಿರೋಧ ಪಕ್ಷ ಅಗತ್ಯ. ಆದರೆ ಅಧಿಕಾರಾರೂಢ [illegible] ವಿರೋಧ-ಪಕ್ಷವು ಸುಧಾರಣಾ [illegible]. ಆಡಳಿತ ಪಕ್ಷದ [illegible].

ಚೆಹಲಿ ಚುನಾವಣೆ ಘರ್ಷಣೆಯಲ್ಲಿ ಒಬ್ಬಾತನ ಮರಣ

ಚೆಹಲಿಯಿಂದ ಲೋಕಸಭಾ ಚುನಾವಣೆ ಸಂಬಂಧದಲ್ಲಿ ಇಬ್ಬರು ಉಮೇದುವಾರರ ಹಿಂಬಾಲಕರಿಗೆ ಘರ್ಷಣೆಯಾಗಿ ಒಬ್ಬನು ಮೃತಪಟ್ಟನು.

[illegible] ಶಾಸನಾಧಿಕಾರದ ಅವಲಂಬನೆ ಇಲ್ಲದೆ ಇಡೀ ಜನತೆಯ [illegible] ಚಿಂತನೆ ಮಾಡುವ ನಿಸ್ವಾರ್ಥ ಸೇವಕರ ಗುಂಪೇ ನಿರಂಕುಶ ಪ್ರಭುತ್ವಕ್ಕೆ ನಿಜವಾದ ವಿರೋಧ ಶಕ್ತಿಯಾಗಬಲ್ಲದು. ಸರ್ವೋದಯ ಸಮಾಜವು ಈ ಶಕ್ತಿಯನ್ನು ಬೆಳೆಸಲು ಪ್ರಯತ್ನಿಸುತ್ತದೆ.

ಸಂಕುಚಿತ ಸ್ವಾರ್ಥವನ್ನು ಬಿಟ್ಟು ವಿಶಾಲ ಮನಸ್ಸಿನಿಂದ ನಮ್ಮ ಮುಂದಿರುವ ಕಾರ್ಯದಲ್ಲಿ ಉತ್ಸಾಹದಿಂದ ತೊಡಗೋಣ.

— ಆಚಾರ್ಯ ವಿನೋಬ

ನಾದಬ್ರಹ್ಮ ಸಂಗೀತ ಸಭಾ,
ಮೈಸೂರು
ಮನೋಹರ ಸಂಗೀತ ಕಛೇರಿ
1957 ನೇ ಮಾರ್ಚಿ 3 ನೇ ತಾರೀಕು
ಭಾನುವಾರ ಸಂಜೆ 6-30 ಗಂಟೆಗೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ಮೈಸೂರು ಆಸ್ಥಾನ ವಿದ್ವಾನ್ ಲೇಟ್
ಶ್ರೀ ನಾರಾಯಣ ಭಾಗವತರವರ ಮಗಳು
ಶ್ರೀಮತಿ ಲಲಿತಾ ಭಾನುರವರ
ಗಾಯನ
ಶ್ರೀಮತಿ ಜಾನಕಿರಾಂ ಬಾಲಸರಸ್ವತಿ
ಯವರ ಪಿಟೀಲು
ವಿ|| ತಂಜಾವೂರು ಜನಾರ್ಧನ್‌ರವರ
ಮೃದಂಗ
ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ
ಪ್ರವೇಶ ರೂ 1-0-0

[illegible] Printed and Published by A. R. Nagarajan at Sadhvi Press, D Subbiah Road, Mysore

ಸಿಟಿ ಟ್ಯುಟೋರಿಯಲ್ ಕಾಲೇಜು
ಕಳೆದ ೧೦ ವರ್ಷಗಳಿಂದ ವಿದ್ಯಾರ್ಥಿಗಳಿಗೆ ಉತ್ತಮ ಸೇವೆ ಸಲ್ಲಿಸುವ ಈ ಸಂಸ್ಥೆಯವರು ಈಗ ನಡೆಸುತ್ತಿರುವ ತರಗತಿಗಳು.
ಬೇಸಗೆ ರಜದ ವಿಶೇಷ ತರಗತಿಗಳು
ಮಿಡಲ್ ಸ್ಕೂಲಿನ ಎಲ್ಲಾ ತರಗತಿಗಳು
ಹೈಸ್ಕೂಲಿನ ಎಲ್ಲಾ ತರಗತಿಗಳು
Pre University Classes
4 Months Tuition in ENGLISH & P. C. M for S. S. L. C Passed students
MADRAS MATRICULATON
Classes for 1958 March Examn.
C. T. C. old Agrahar, Mysore
[*The oldest & the best Institution*]

Sri Kanyakaparameswari Co-operative Society, Limited,
Hanumantha Rao Road. (Near Prabha Picture House)
MYSORE

TENDER NOTICE

Sealed tenders are invited from Licensed Electrical Contractors for installing Electric Lights to this Society's New Buildings at New Statue Circle, Mysore. For copies of the specifications, conditions and plan please contact the Secretary. The last date for receipt of tenders is 7-3-57 at 6 p. m

P. Gopalakrishna Setty,
President

ಕಾಫಿ ಬೀಜಗಳು
ಕಂಟ್ರೋಲ್ ಬೆಲೆಗಳಿಗೆ ಸಿಗುತ್ತವೆ
ಶ್ರೀ ಕನ್ಯಕಾಪರಮೇಶ್ವರಿ
ಕೋ-ಆಪರೇಟಿವ್ ಸೊಸೈಟಿ
ಲಿಮಿಟೆಡ್, ಮೈಸೂರು.

ಮನೆಗಳು ಕ್ರಯಕ್ಕಿವೆ
1 ವಿದ್ಯಾರಣ್ಯಪುರ [illegible] ಕಟ್ಟಿದ ರೂ 8,500
2 ವಿದ್ಯಾರಣ್ಯಪುರ 3ನೇ ಕ್ರಾಸಿನಲ್ಲಿ ಮಂಗಳೂರು ಹೆಂಚಿನ ಮನೆ ರೂ.
3 ವಿದ್ಯಾರಣ್ಯಪುರ 2ನೇ ಕ್ರಾಸಿನಲ್ಲಿ ಮಂಗಳೂರು ಹೆಂಚಿನ ಮನೆ (ರೂ. 7,500
4 ಕೃಷ್ಣರಾಜ ಮೊಹಲ್ಲಾ [illegible] ಬಳಿ ಒಂದು ನಾಡು ಹೆಂಚಿನ ಮನೆ [illegible] ರೂ. 5,500
5 ಚಾಮುಂಡಿಪುರಂ 2ನೇ ಕ್ರಾಸಿನಲ್ಲಿ ಮಹಡಿ ಮನೆ ರೂ. 9,500
6 ದೇವಟಿಗೆ ಬೀದಿ ಕ್ರಾಸಿನಲ್ಲಿರುವ 2 ಹೆಂಚಿನ ಮನೆ (ತೊಟ್ಟಿಮನೆ, ರೂ
7 ಲಕ್ಷ್ಮೀಪುರಂನಲ್ಲಿ ಒಂದು S-90/2 ರೂ 8,000
8 [illegible] ಗಾರ್ಡನ್ನಲ್ಲಿ ಒಂದು ಮಂಗಳೂರು ಹೆಂಚಿನ ರೂ. 8,000
9 ಚಾಮುಂಡಿಪುರಂ [illegible] ದು ತಾರಸಿ ಮತ್ತು ಮಂಗಳೂರು [illegible] ರೂ 8,500
10 ದೇವಟಿಗೆ ಬೀದಿ [illegible] ಗಳೂರು ಹೆಂಚಿನ ಮನೆ ರೂ 7,000
11 ರಾಮಾನುಜಾ ರೋಡು ಕ್ರಾಸಿನಲ್ಲಿ ತಾರಸಿ ಕಟ್ಟಿದ ರೂ 5,000
ಹೆಚ್ಚು ವಿವರಗಳಿಗೆ ಇವರಲ್ಲಿ ವಿಚಾರಿಸಿ
ಎಂ ಮಲ್ಲರಾಜೇ ಅರಸ್.
ಎಫ್ 377 ಫೋರ್ಟ್ ಮೊಹಲ್ಲಾ, ಮೈ

ಒಲಂಪಿಯಾ ಟಾಕೀಸ್
1-3-57 ರಿಂದ : ಅಮೋಘ ಪ್ರಾರಂಭ . ಪ್ರತಿ ದಿನ 3 ಆಟಗಳು
ಎಂ. ಸಿ. ಫಿಲಂಸ್ ರವರ ★ ಚೆಂಗೀಸ್ ಖಾನ್
ಪಾತ್ರ :- [illegible], ಪ್ರೇಮನಾಥ್, ಬೀನಾರಾಯ್, ಶೇರ್ ಮತ್ತು ಜಾನಿವಾಕರ್

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
1 3 57 ನೆಯ ಭಾನುವಾರದಿಂದ : ಜನಭರಿತ 10 ನೆಯ ವಾರ : ಪ್ರತಿ ದಿನ 3 ಆಟಗಳು.
ಭಕ್ತ ಮಾರ್ಕಂಡೇಯ
(ಕನ್ನಡ)

SADHVI

Statement about ownership and other particulars

1 Place of Publication	323. D Subbiah Road, Mysore
2 Periodicity of its publication	Daily
3 Printer's Name,	A. R Nagarajan
Nationality	Indian
Address	323. D Subbiah Road, Mysore
4 Publisher's Name	Do
Nationality	,,
Address	,,
5 Editor's Name	,,
Nationality	,,
Address	,,
6 Names and addresses of individuals who own the newspaper and partners or shareholders holding more than one per cent of the total capital	Agaram Rangiah B. A.

I, A. R. Nagarajan, hereby declare that the particulars given above are true to the best of my knowledge and belief.

Dated 1-3-57

(Sd) A. R. Nagarajan,

ಚಾಮುಂಡೇಶ್ವರಿ ಟಾಕೀಸ್
2 3 57ರಿಂದ : ಜನಸಂದಣಿಯ . 3ನೇ ವಾ
ಕೆಂಪರಾಜ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ
★ ನಳದಮಯಂತಿ ★
ಭೂಮಿಕೆ:— ಕೆಂಪರಾಜ್, ಭಾನುಮತಿ, ಗಣಪತಿಭಟ್, ಮುಕ್ಕಾಮಲ
ನರಸಿಂಹರಾಜು ಮುಂತಾದವರು

ಸುಸಮಯ! — — ಕಳೆದುಕೊಳ್ಳಬೇಡಿ
ಅಮೋಘ ಹರಾಜು ಮಾರಾಟ
3 3 57 ನೇ ಭಾನುವಾರ ಬೆಳಗ್ಗೆ 10 ಘಂಟೆಗೆ : ಸೇಲ್ ರೂಂ
[illegible] ಎಲೆಕ್ಟ್ರೋಪ್ಲೇಟೆಡ್ ಸ್ಟ್ಯಾಂಡಿನಲ್ಲಿ ಜೋಡಿಸಿರುವ 3 ಸ್ಕೇಲುಗಳಲ್ಲಿ
ಲೇಟ್ ಆಗುವ ಜಿ. ಇ. ಸಿ. ಎಲೆಕ್ಟ್ರಿಕ್ ಫ್ಯಾನು, ಎಲೆಕ್ಟ್ರಿಕ್ ಸ್ಟೌ, ಅರ್
ಎ ರೇಡಿಯೋಗ್ರಾಂ ಮತ್ತು ಗ್ರಾಮಾಫೋನ್, ಸಿಂಗರ್ ಹೊಲಿಯುವ ಯಂತ್ರ
ಪೆರಾಂಬುಲೇಟರ್, ವ್ಯವಹಾರ ಜ್ಞಾನ ಮತ್ತು ಸಾಹಿತ್ಯಯುಕ್ತ ಪುಸ್ತಕಗಳು
ಮತ್ತು ಬೀಟಿ ಮರಗಳ ಸೋಫಾ ಸೂಟ್, ಟೀಪಾಯಿಗಳು ಮೊದಲಾದ ಫರ್ನಿಚರ್
ಗಳು ಹೊಸಾಹೊಸ ಚಿತ್ರದ ಕುರ್ಚಿಗಳು, ಅಲ್ಮೈರಾ, ಷೋ ಕೇಸು, ಸಿಂಗಲ್ ಮತ್ತು
ಡಬ್ಬಲ್ ಮಂಚಗಳು, ಊಟದ ಮತ್ತು ಪಿಂಗ್ ಪಾಂಗ್ ಟೇಬಲ್ಲುಗಳು, [illegible]
ಕುರ್ಚಿಗಳು, ಡಿನ್ನರ್ ವ್ಯಾಗನ್ ಮತ್ತು ಇತರ ಅನೇಕ ಉಪಯುಕ್ತ ವಸ್ತುಗಳು
ಶನಿವಾರ ಸಂಜೆ 3ರಿಂದ 6 ಗಂಟೆಯೊಳಗೆ ಪದಾರ್ಥಗಳನ್ನು ಪರಿಶೀಲಿಸಬಹುದು
ಅಬೀಡ್ಸ್,
ಫೋನ್. 473 — ಸ್ಟ್ಯಾಚ್ಯು ಚೌಕ —, ಮೈಸೂ

ಕೈಗಾರಿಕಾ ವಸ್ತು ಪ್ರದರ್ಶನ
(ಮಿಲಿಟರಿ ಹೆಡ್‌ಕ್ವಾರ್ಟರ್ಸ್ ಸಬ್ ಏರಿಯಾ ಇವರ ನೇತೃತ್ವದಲ್ಲಿ
ಮಿಲಿಟರಿ ಪೆರೇಡ್ ಮೈದಾನದಲ್ಲಿ
ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು ೧
ಅನೇಕ ಕೈಗಾರಿಕೆಗಳವರು, ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಮತ್ತು ಶ್ರಮ
ವ್ಯಾಪಾರಿಗಳು ಇವರಲ್ಲಿ ಭಾಗವಹಿಸುವರು
ದಿನವಹಿ ಚಲಚ್ಚಿತ್ರ ನಟನಟಿಯರಿಂದ ಅನೇಕಾನೇಕ ಕಾರ್ಯಕ್ರಮಗಳು
ಸ್ಟಾಲುಗಳಿಗೆ ದಯವಿಟ್ಟು ಕೂಡಲೇ
ಜನರಲ್ ಸೆಕ್ರೆಟರಿ-ಇವರಿಗೆ ಬರೆಯಿರಿ
ಟೆಲಿಗ್ರಾಂ: [illegible] — — ಫೋನ್ : 611

ಟೆಲಿಫೋನ್ ನಂ 792



ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು ಹೊರಗಿನ ಪ್ರದೇಶಗಳಿಗೆ
ಏಜೆಂಟರುಗಳು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
[illegible] ರೋಡ್,
ಬೆಂಗಳೂರು-2

ಪು : ೧೫] SADHVI : SATURDAY 2-3-1957 ಮೈಸೂರು : ಶನಿವಾರ ೨-೩-೧೯೫೭ : [ಸಂಚಿಕೆ : ೨೦೪

ಷ್ಯಾ-ಅಮೆರಿಕಗಳ ಸಮ್ಮೇಳನಕ್ಕಾಗಿ ನೆಹರೂ ಕರೆ

ಚುನಾವಣೆಯಲ್ಲಿ ಜಲಿಂಗಪ್ಪನವರ ವಿಜಯ

ಬೆಂಗಳೂರು ೨

ಹೊಳಲ್ಕೆರೆ ಕ್ಷೇತ್ರದಿಂದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಜಯಗಳಿಸಿದ್ದಾರೆ. ಅವರ ಎದುರಾಳಿ ಪಿ. ಎಸ್. ಪಿ. ಯ ಶ್ರೀ [illegible] ಜನಪ್ಪನವರು ಪಡೆದ [illegible] ಓಟುಗಳಿಗಿಂತ [illegible] ಓಟುಗಳನ್ನು ಹೆಚ್ಚಾಗಿ ಪಡೆದಿದ್ದಾರೆ. ಬಳ್ಳಾರಿ ಜಿಲ್ಲೆಯ ಹಿರಿಯೂರಿನಿಂದ ಕಾಂಗ್ರೆಸ್ಸಿನ ಶ್ರೀ ಬಿ ವಿ ರಾಮಯ್ಯನವರು ಪಿ ಎಸ್ ಪಿ ಉಮೇದುವಾರ ಶ್ರೀ ಸಿ ಎಂ. ರೇವಣ್ಣಯ್ಯನವರಿಗಿಂತಲೂ ೮.೦೦೦ ಓಟುಗಳ ಹೆಚ್ಚು ಗಳಿಸಿ ಆರಿಸಲ್ಪಟ್ಟಿದ್ದಾರೆ. ಶ್ರೀ ಮು[illegible]ಪ್ಪಗೌಡ ಎಂಬ ಸ್ವತಂತ್ರ ಉಮೇದುವಾರ [illegible] ಓಟನ್ನು ಗಳಿಸಿ ಠೇವಣಿ ಕಳೆದುಕೊಂಡರು

[illegible] ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಶ್ರೀ ಬೊಮ್ಮ ಹೆಗ್ಗಡೆಯವರು ಹೆಚ್ಚಿನ ಓಟು ಪಡೆದು [illegible]ಯನ್ನು ಸೋಲಿಸಿದ್ದಾರೆ. ಆ ಪೈಕಿ ಒಬ್ಬ ಉಮೇದುವಾರರ ಠೇವಣಿಯು ಮುಟ್ಟುಗೋಲಾಗಿದೆ.

ಉತ್ತರ ಪ್ರದೇಶದ ಮಂತ್ರಿ ಬಿ. ಗುಪ್ತರವರ ಪರಾಜಯ

ಉತ್ತರ ಪ್ರದೇಶ ಕಾಂಗ್ರೆಸ್ಸಿನ ಅತ್ಯಂತ ಪ್ರಮುಖ ಮುಖಂಡರೂ, ಅಲ್ಲಿನ ಸರಕಾರದ [illegible] ಮಂತ್ರಿಯೂ ಆದ ಚಂದ್ರಭಾನು ಗುಪ್ತರವರಿಗೆ ಚುನಾವಣೆಯಲ್ಲಿ ಪರಾಜಯವಾಗಿದೆ. ಅವರ ವಿರುದ್ಧವಾಗಿ ಪ್ರಜಾ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ತ್ರಿಲೋಕಿ ಸಿಂಗರು ಲಕ್ನೋ ಪೂರ್ವ ಕ್ಷೇತ್ರದಿಂದ ಸ್ಪರ್ಧಿಸಿ ವಿಜಯಗಳಿಸಿದ್ದಾರೆ. ಶ್ರೀ ತ್ರಿಲೋಕಿ ಸಿಂಗರು ಬಿ ಗುಪ್ತರಿಗಿಂತಲೂ ೧೧.೨೦೦ಕ್ಕೂ ಹೆಚ್ಚು ಓಟುಗಳು ಬಂದಿರುವುದಾಗಿ ಘೋಷಿಸಲಾಗಿದೆ. [illegible] ಚುನಾವಣೆಯು ಉಭಯ ಪಕ್ಷಗಳಿಗೆ [illegible] ಚುನಾವಣೆಯಾಗಿದ್ದ[illegible] ಸ್ಪರ್ಧಿಗೆ [illegible] ಮತ್ತು ತ್ರಿಲೋಕಿ [illegible] ಓಟುಗಳು ಬಂದಿವೆ. [illegible]ವನ್ನು ನೆನ್ನೆ ರಾತ್ರಿ [illegible] ಪ್ರಕಟಿಸಲಾಯಿತು.

ಕ್ಷೇತ್ರಕ್ಕೆ ಮುದುಕಿಯರ ಸೈಕಲ್ ಸವಾರಿ

[illegible] ಜಿಲ್ಲೆಯಲ್ಲಿ ೮೦ ವರ್ಷ ಹೆಚ್ಚು ವಯಸ್ಸಿನ [illegible] ಮಂದಿ ಮಹಿಳೆಯರು ಓಟು [illegible] ಸೈಕಲ್ಲುಗಳ ಮೇಲೆ ಕೂರಿಸಿ [illegible] ಕ್ಷೇತ್ರಕ್ಕೆ ಕರೆತರಲಾಯಿತೆಂದು [illegible] ಮುದುಕರು ಜಿಲ್ಲೆಯ [illegible] ಚುನಾವಣಾ ಕೇಂದ್ರಕ್ಕೆ [illegible] ವಯಸ್ಸಿನವರನ್ನು [illegible] ಮೇಲೆ [illegible] ಕರೆತಂದು [illegible] ಪೆಟ್ಟಿಗೆಗೆ ತಮ್ಮ ಓಟನ್ನು ಹಾಕುವಂತೆ [illegible] ಮಾಡಲಾಯಿತು

ಸಂಸ್ಥಾನದ ಮುದ್ರೆಯಲ್ಲಿ ಬದಲಾವಣೆ ಯಿಲ್ಲ

ಬೆಂಗಳೂರು ೨

ಹಿಂದೆ ಇದ್ದ [illegible] ಎಂಬುವರ ಬದಲು [illegible] ಸಂಸ್ಥಾನದ ಚಿಹ್ನೆಯನ್ನು [illegible] ಬೇಕೆಂದು ಸರ್ಕಾರವು ನಿರ್ಧರಿಸಿದ್ದಾರೆ

ಲಾಲ್ ಬಾಗ್ [illegible]

[illegible] ದಿನ [illegible] ಬೆಂಗಳೂರು [illegible]

ಮತದಾನವು ದೇವರ ಪೂಜೆ ಎಂದು ಮುದುಕಿಯ ಭಾವನೆ

[illegible] ಒಬ್ಬ ವೃದ್ಧೆಯು [illegible] ಮತದಾನ [illegible] ಸೈಕಲ್ ಮೇಲೆ ಕೂರಿಸಿಕೊಂಡು ಬಂದು ಓಟು ಕೊಡಿಸಿದರು. ಮತದಾನವು ದೇವರ ಪೂಜೆಯಷ್ಟೇ ಪವಿತ್ರವಾದುದರಿಂದ ಓಟಿನ ಚೀಟಿಯನ್ನು ಪೆಟ್ಟಿಗೆಯಲ್ಲಿ ಹಾಕಿದನಂತರ ಅದಕ್ಕೆ ವಂದಿಸುವುದಾಗಿಯೂ ಅವಳ ಅನಂತರ ತಿಳಿಸಿದಳು

ಮಧ್ಯ ಪ್ರದೇಶದ ಮುಖ್ಯ ಮಂತ್ರಿ ಕಟ್ಜೂರವರ ಜಯ

ಮಧ್ಯ ಪ್ರದೇಶದ ಮುಖ್ಯ ಮಂತ್ರಿ ಕೈಲಾಸನಾಥ ಕಟ್ಜೂರವರು ತಮ್ಮ ಪ್ರತಿಸ್ಪರ್ಧಿಗಳು ಜನಸಂಘದ ಲಕ್ಷ್ಮೀನಾರಾಯಣ ಮತ್ತು ರಾಮರಾಜ್ಯ ಪರಿಷತ್ತಿನ ಚಬ್ಬುಲಾಲ್ ರವರ ಮೇಲೆ ಜಯಗಳಿಸಿದ್ದಾರೆ. ಕಟ್ಜೂರವರಿಗೆ ೧೧,೪೫೦, ಉಳಿದ ಇಬ್ಬರಿಗೆ ಕ್ರಮವಾಗಿ ೪,೬೫೫ ಮತ್ತು ೧,೭೪೯ ಓಟುಗಳು ಬಂದಿವೆ.

ಕಾಶ್ಮೀರದ ಬಗ್ಗೆ ಬ್ರಿಟನ್ನಿನ ನಡತೆ

ಬ್ರಿಟಿಷ್ ಪ್ರಧಾನಿಗೆ ಹೈಕಮಿಷನರ್ ಮ್ಯಾಕ್ಡೊನಾಲ್ಡರ ಎಚ್ಚರಿಕೆ?

ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್ಮಿಲನ್ ರವರೊಡನೆ ಭಾರತದಲ್ಲಿರುವ ಬ್ರಿಟಿಷ್ ಹೈಕಮಿಷನರ್ ಮಾಲ್ಕಂ ಮ್ಯಾಕ್ಡೊನಾಲ್ಡರು ನೆನ್ನೆ ಲಂಡನ್ನಿನಲ್ಲಿ ಭೇಟಿ ಮಾಡಿ ಕಾಶ್ಮೀರದ ಬಗ್ಗೆ ಬ್ರಿಟನ್ನಿನ ವರ್ತನೆಯ ಪರಿಣಾಮವನ್ನು ಕುರಿತು ಚರ್ಚೆ ನಡೆಸಿದರೆಂದು ವರದಿಯಾಗಿದೆ. ಇದೇ ವಿಷಯವಾಗಿ ಅವರಿಬ್ಬರಿಗೂ ಇನ್ನೂ ಹಲವಾರು ಭೇಟಿಗಳು ನಡೆಯಲಿವೆ. ಹೈಕಮಿಷನರು ಈಗಾಗಲೇ ಬ್ರಿಟನ್ನಿನ ಕಾಮನ್‌ವೆಲ್ತ್ ಮಂತ್ರಿ ಲಾರ್ಡ್ ಹೋಂರವರೊಡನೆ ಸಂಭಾಷಣೆ ನಡೆಸಿರುವರು. ಕಾಶ್ಮೀರದ ಬಗ್ಗೆ ಬ್ರಿಟನ್ನಿನ ವರ್ತನೆ ಪರಿಣಾಮವಾಗಿ ಭಾರತವು ಕಾಮನ್‌ವೆಲ್ತನ್ನು ತ್ಯಜಿಸುವ ಪರಿಸ್ಥಿತಿಯೂ ಇರುವುದೆಂದು ಅವರು ಬ್ರಿಟಿಷ್ ಮಂತ್ರಿಗಳಿಗೆ [illegible]

ರಷ್ಯಾ-ಅಮೆರಿಕಾ ನಾಯಕರ ದುಂಡು ಮೇಜಿನ ಪರಿಷತ್ತಿಗೆ ಒತ್ತಾಯ

ಪ್ರಧಾನಿ ನೆಹರೂರವರ ಕರೆ

ವಿಶಾಖಪಟ್ಟಣದಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಭಾಷಣ ಮಾಡಿ ಅಮೆರಿಕ ಮತ್ತು ರಷ್ಯಾ ದೇಶಗಳ ನಾಯಕರು ಬೇಗನೆ ಸಂಧಿಸಿ ತಮ್ಮ ಭಿನ್ನತೆಗಳನ್ನು ಸಂಧಾನಿಸಿಕೊಳ್ಳಬೇಕೆಂದೂ, ಜಗತ್ತಿನ ಪರಿಸ್ಥಿತಿಯ ಬಿಕ್ಕಟ್ಟನ್ನು ಕಡಿಮೆ ಮಾಡಿ ಸಂಪೂರ್ಣ ಶಾಂತಿಯನ್ನು ಸ್ಥಾಪಿಸುವ ಬಗ್ಗೆ ಚರ್ಚಿಸಬೇಕೆಂದೂ ಸಲಹೆ ಮಾಡಿದರು. ಮಧ್ಯ ಪ್ರಾಚ್ಯದ ಬಗ್ಗೆ ಅಮೆರಿಕಾ ಮತ್ತು ರಷ್ಯಾ ಯೋಜನೆಗಳಲ್ಲಿ ಒಳ್ಳೆಯ ವಿಷಯಗಳು ಅಡಕವಾಗಿರುವುವೆಂದೂ ಅವನ್ನು ಉಭಯ ನಾಯಕರೂ ದುಂಡು ಮೇಜಿನ ಪರಿಷತ್ತಿನಲ್ಲಿ ಪರಿಶೀಲಿಸಬೇಕೆಂದೂ ನೆಹರೂರವರು ತಿಳಿಸಿದರು

ಗಾಜಾ ಖಾಲಿ ಮಾಡುವುದಾಗಿ ಇಸ್ರೇಲ್ ಮಂತ್ರಿ ಹೇಳಿಕೆ

ಪೆಷಾವರಿನಲ್ಲಿ ಇತ್ತೀಚೆಗೆ ಎಲ್ಲಾ ಗುಡ್ಡಗಾಡಿನವರ ಕ್ರಿಯಾ ಸಮಿತಿಯ ಸಭೆಯು ನಡೆದುದಾಗಿಯೂ, ಈ ತಿಂಗಳು ೧೫ನೇ ತಾರೀಕಿಗೆ ಮುಂಚೆ ಕಾಶ್ಮೀರದಲ್ಲಿ ಧರ್ಮ ಯುದ್ಧದ ಚಳುವಳಿಯನ್ನು ಹೂಡಬೇಕೆಂದು ನಿರ್ಧರಿಸಲಾಯಿತೆಂದೂ ಕರಾಚಿಯ ಡಾನ್ ಪತ್ರಿಕೆಯು ವರದಿ ಮಾಡಿದೆ. ಸ್ವಾಟ್, ದೀರ್ ಮತ್ತು ವಜೀರ್ [illegible] ಈ ಗುಡ್ಡಗಾಡು ಸಂಸ್ಥಾನದ ಅರಸರು ಧರ್ಮ ಯುದ್ಧಕ್ಕೆ ಎಲ್ಲ ಸೌಲಭ್ಯಗಳನ್ನೂ ಒದಗಿಸಬೇಕೆಂದು ಕೋರುವ ನಿರ್ಣಯವನ್ನು ಮಾಡಲಾಯಿತೆಂದೂ, ಕಾಶ್ಮೀರಕ್ಕೆ ನುಗ್ಗಲು ಪೆಷಾವರಿನಲ್ಲಿ ಗುಡ್ಡಗಾಡಿನವರು ಸೇರಬೇಕೆಂದೂ ನಿರ್ಣಯಗಳನ್ನು ಮಾಡಿದುದಾಗಿ ಗೊತ್ತಾಗಿದೆ. ಹಾಗೆ ಸೇರಲು ಪೆಷಾವರಿನ ಕಮಿಷನರರು ಅವಕಾಶ ಕೊಡಬೇಕೆಂದು ಕೋರಲು ಅವರನ್ನು ಸಮಿತಿಯವರು ಭೇಟಿ ಮಾಡಲಿರುವರು

ರೂಸ್‌ವೆಲ್ಟರ ಪತ್ನಿಯಿಂದ ನೇತ್ರದಾನ

ಅಮೆರಿಕದ ಅಧ್ಯಕ್ಷರಾಗಿದ್ದ ದಿವಂಗತ ರೂಸ್‌ವೆಲ್ಟರ ಪತ್ನಿ ಎಲೀನಾರ್‌ರವರು ತಮ್ಮ ಮರಣಾನಂತರ ತಮ್ಮ ನೇತ್ರಗಳನ್ನು ಇತರರಿಗೆ ಉಪಯೋಗಿಸಲು ಅವಕಾಶವಾಗುವಂತೆ ದಾನ ಮಾಡುವ ಪ್ರತಿಜ್ಞೆಗೆ ರುಜು ಹಾಕಿರುತ್ತಾರೆ. ಅವರಲ್ಲದೆ ಇನ್ನೂ ೧೫,೦೦೦ ಜನರು ನೇತ್ರ ಬ್ಯಾಂಕಿಗೆ ತಮ್ಮ ಕಣ್ಣುಗಳನ್ನು ಕೊಡಲೊಪ್ಪಿರುವರು

ರಷ್ಯದಲ್ಲಿ ಸ್ವೀಡನ್ನಿನ ಗೂಢಚಾರರ ಬಂಧನ

ರಷ್ಯ[illegible] ಸ್ವೀಡನ್ನು [illegible] ಗೂಢಚರ್ಯ ನಡೆಸುತ್ತಿರುವುದಾಗಿ ರಷ್ಯ ಸರಕಾರದವರು ಆಪಾದಿಸುತ್ತಾರೆ. ಈ ಸಂಬಂಧದಲ್ಲಿ ೧೪ ಮಂದಿ ಸ್ವೀಡನ್ನಿನ ಏಜೆಂಟರನ್ನು ಬಂಧಿಸಲಾಗಿದೆ. ಮಾಸ್ಕೋವಿನಲ್ಲಿರುವ ಸ್ವೀಡನ್ನಿನ ರಾಯಭಾರಿಗೆ ಈ ಬಗ್ಗೆ ಪತ್ರವನ್ನು ಕಳುಹಲಾಗಿದೆ

ರಾಜಾಸ್ತಾನದಲ್ಲಿ ಮಂತ್ರಿಗಳ ಪರಾಜಯ

ರಾಜಾಸ್ಥಾನದ ವಿಧಾನ ಸಭೆಯ ಚುನಾವಣೆಯಲ್ಲಿ ಅಲ್ಲಿನ ಉಪ ಮಂತ್ರಿ ಆಲಿಮುದ್ದೀನ್ ಮತ್ತು ಅಜ್ಮೀರಿನ ಮಾಜಿ ಮುಂತ್ರಿ ಬಾಲಕೃಷ್ಣ ಕೌಲ್‌ರವರು ಪರಾಜಿತರಾಗಿರುವರು.

ಶಿಶು ವಿಹಾರಗಳ ಅಧ್ಯಾಪಕಿಯರ ಶಿಕ್ಷಣ ಕೇಂದ್ರ

ವಿದ್ಯಾಭ್ಯಾಸ ಇಲಾಖೆಯ ಮನ್ನಣೆ ಪಡೆದು,
ಶ್ರೀ ಜಗದಂಬಾ ಶಿಶು ವಿಹಾರದಲ್ಲಿ
ತಾ|| 11-3-57 ರಿಂದ ಮೇಲ್ಕಂಡ ಶಿಕ್ಷಣ
ಕೇಂದ್ರವನ್ನು ಆರಂಭಿಸಲಾಗುವುದು
ಸೇರಲಪೇಕ್ಷಿಸುವವರು ಶಿಶು ವಿಹಾರದ ಡೈರೆಕ್ಟರರಿಗೆ ಕೂಡಲೇ ಅರ್ಜಿಗಳನ್ನು ಸಲ್ಲಿಸಬಹುದು

ನಂಜನಗೂಡು ಕ್ಷೇತ್ರದ ಮತದಾರರಿಗೆ ವಂದನೆ

ಪಿ. ಮಹದೇವಯ್ಯನವರ ಕೃತಜ್ಞತೆ

ನಂಜನಗೂಡು ಕ್ಷೇತ್ರದಿಂದ ವಿಧಾನ ಸಭೆಗೆ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರನಾಗಿದ್ದ ನನಗೆ ಮಹಾಜನರು ಸಂಪೂರ್ಣ ಸಹಕಾರ ನೀಡಿ ಜಯಗಳಿಸುವಂತೆ ಮಾಡಿರುವುದಲ್ಲದೆ, ಕಾಂಗ್ರೆಸ್ ಮಹಾ ಸಂಸ್ಥೆಯಲ್ಲಿ ತಮಗಿರುವ ಪ್ರೀತಿ ವಿಶ್ವಾಸಗಳನ್ನು ತೋರ್ಪಡಿಸಿರುವುದಕ್ಕಾಗಿ ಎಲ್ಲರಿಗೂ ಈ ಮೂಲಕ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ಪಿ. ಮಹದೇವಯ್ಯ,
ನಂಜನಗೂಡು

ಗುಜರಾತಿನಲ್ಲಿ ಮಹಿಳಾ ಮಂತ್ರಿಯ ಪರಾಜಯ

ಗುಜರಾತಿನಲ್ಲಿ ಬೊಂಬಾಯಿಯ ಸಮಾ ಕಲ್ಯಾಣ ಮಂತ್ರಿ ಇಂದುಮತಿ ಚಿಮನ್‌ಲಾಲ್ ವರು ಮಹಾ ಗುಜರಾತು ಪರಿಷತ್ತಿನ ಬೆಂ ಪಡೆದ ಸ್ವತಂತ್ರ ಸ್ಪರ್ಧಿ ಗಜಾ[illegible] ಪಟೇ ರಿಂದ ಪರಾಜಯಗೊಂಡಿರುವರು. ಅಲ್ಲಿ ಕಾ ಗ್ರೆಸ್ಸಿಗೆ ಇದು ಎಂಟನೇ ಭಾರಿ ಸೋಲೆಂದು ಗಣಿಸಲಾಗಿದೆ.

ವಸಂತ ಇನ್‌ಸ್ಟಿಟ್ಯೂಟ್ ಆಫ್ ಕಾಮ ಸಂಸ್ಥೆಯ ವಾರ್ಷಿಕೋತ್ಸವ

ಮೇಲ್ಕಂಡ ಸಮಾರಂಭವು ನಗರದ ಬಸ ಯ್ಯನವರ ಪ್ರೌಢಶಾಲಾ ಕಟ್ಟಡದಲ್ಲಿ ನೆನ್ನೆ ಜರುಗಿತು. ಮಹಾರಾಜಾ ಕಾಲೇಜಿನ ಇಂಗ್ಲಿ ಉಪ ಪ್ರಾಧ್ಯಾಪಕ ಶ್ರೀ ಎಸ್. ರಾಮಚಂದ್ರ ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಕಾ ಮತ್ತು ಜಯರವರಿಂದ ಪ್ರಾರ್ಥನೆ, ಮತ್ತು ಶ್ರೀ ಬಿ. ವಿ. ಶ್ರೀಕಂಠಯ್ಯನವರಿಂದ ಸ್ವಾಗತ ಭಾ ಣವಾದನಂತರ, ಸಂಸ್ಥೆಯ ಪ್ರಿನ್ಸಿಪಾಲರಾದ ಶ್ರೀ ಕೆ. ಎಂ. ಲಕ್ಷ್ಮೀನಾರಾಯಣರಾಯರು ವರ ಯನ್ನು ಒಪ್ಪಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಗೆ ವರಿಗೆ ಬಹುಮಾನಗಳನ್ನು ಹಂಚಿ ಅಧ್ಯಕ್ಷರು ಭಾ ಷಣ ಮಾಡಿ ವೇದ ಕಾಲಗಳಿಂದಲೂ ವಾಣಿ ವು ಬೆಳೆದುಬಂದ ಅಂಶವನ್ನೂ, ಅದರ ಇಂದಿ ಪ್ರಾಮುಖ್ಯತೆಯನ್ನೂ ವಿವರಿಸಿದರು. ಶ್ರೀ ಕೇಶ ರಾವ್ ಮತ್ತು ಪಾರ್ಟಿಯವರಿಂದ 'ಅಳಿಯ ದೇ ವರು' ಎಂಬ ನಾಟಕವೂ ಮತ್ತು ಶ್ರೀ ಡಿ. ಎಸ್. ಕಲಾನಿಕೇತನ ಸಂಸ್ಥೆಯವರಿಂದ ನರ್ತನಗಳು ನಡೆದುವು. ಶ್ರೀ ತ್ಯಾಗರಾಜನ್‌ರವರು ವಂದನಾ ರ್ಪಣೆ ಮಾಡಿದರು

ಕಳಲೆಯಲ್ಲಿ ಮಹಾ ಜಾತ್ರೆ

ಕಳಲೆ ಶ್ರೀ ಕೈವಲಾದೇವಿ ಮಹಾ ಜಾತ್ರೆ ನಾಳಿದ್ದು ನಡೆಯುತ್ತದೆ. ಭಕ್ತ ಮಹಾ ಜನ ಜಾತ್ರೆಗೆ ದಯಮಾಡಿಸಿ ದೇವಿ ಕೃಪೆಗೆ ಪಾತ್ರ ರಾಗಬೇಕೆಂದು ಶ್ರೀ ಎಂ. ಎಲ್. ಸುಬ್ರಹ್ಮ ರಾಜ ಅರಸ್‌ರವರು ಪ್ರಾರ್ಥಿಸಿರುತ್ತಾರೆ. ಶ್ರೀ ಗಿರಿ ರಸ್ತೆಯು ಕಳಲೆಯೂರಿಗೆ ಪೂರ್ವಕ್ಕಿದೆ ಮ ತ್ತು ನಂಜನಗೂಡು ತಾಲ್ಲೂಕು ದ್ಯಾವರಹಳ್ಳಿಯಿಂದಲೂ ಹೋಗಬಹುದು

ವಿಧಾನಸಭಾ ಚುನಾವಣೆ
ಮೈಸೂರು ನಗರ ಉತ್ತರ ಕ್ಷೇತ್ರ
ತಾ|| 12-3-57 ನೇ ಮಂಗಳವಾರ
ಈ ಗುರ್ತಿನ ಪೆಟ್ಟಿಗೆಗೆ ದಯವಿಟ್ಟು ಓಟು ಹಾ

ಎ. ರಾಮಣ್ಣ, ಸಂಪಾದಕ, 'ವಿಜಯ'
Advt]

Edited, Printed and Published
A. R. Nagarajan at Sadhvi Pre
D. Subbiah Road, Mysore

SRI GAYATHRI TALKIES ★ Grand Gala Release From 15—3—57 : Daily 4 Show
Tony Curtis, Burt Lancaster, Gina Lollobrigida in
THE WONDER SHOW OF THE WORLD
★ TRAPEZE ★
To-day : "THE VIEWS OF POMPEY'S HEAD"

ರಿಜಿಸ್ಟ್ರೇ ನಂ. 192

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ 3 ಕಾಸು

ಬ್ರಾಂಕಾಲ್
[illegible]
ಮೈಸೂರು ಸಂಸ್ಥಾನ [illegible]
[illegible] ಪ್ರದೇಶಗಳಿಗೆ
[illegible]
ಸತ್ಯ ಅಂಡ್ ಕೋ.,
[illegible]
71/1. [illegible]
[illegible]
ಬೆಂಗಳೂರು-2

ಪುಟ : ೦೫] SADHVI : WEDNESDAY 13—3—1957 ಮೈಸೂರು : ಬುಧವಾರ ೧೩—೩—೧೯೫೭ : [ಸಂಪುಟ ೩, [illegible]

ಗೃಹ ಮಂತ್ರಿ ಎಂ. ವಿ. ರಾಮರಾಯರ ರಾಜೀನಾಮೆ

ಗೃಹ ಮಂತ್ರಿ ಎಂ. ವಿ. ರಾಮರಾಯರ ರಾಜೀನಾಮೆ

ಚುನಾವಣೆಯಲ್ಲಿ ಪರಾಜಿತರಾದ ಪರಿಣಾಮ

ಬೆಂಗಳೂರು ೧೩

ತುಮಕೂರು ಕ್ಷೇತ್ರದಿಂದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಪರಾಜಯ ಹೊಂದಿದ ಗೃಹ ಮಂತ್ರಿ ಶ್ರೀ ಎಂ. ವಿ ರಾಮರಾಯರು ತಮ್ಮ ಸಚಿವ ಪದವಿಗೆ ನೆನ್ನೆ ರಾಜೀನಾಮೆಯನ್ನು ಸಲ್ಲಿಸಿದರು. ಮುಖ್ಯ ಮಂತ್ರಿಗಳು ಸದರೀ ರಾಜೀನಾಮೆಯನ್ನು ಸಧ್ಯದಲ್ಲೇ, ರಾಜ್ಯಪಾಲರಾದ ಜಯಚಾಮರಾಜರ ಅವಗಾಹನೆಗೆ ತರಲಿರುವರು. ಇನ್ನು ಕೆಲವು ದಿನಗಳಲ್ಲಿಯೇ ಹೊಸ ಮಂತ್ರಿಮಂಡಲದ ಸ್ಥಾಪನೆಯಾಗಲಿರುವುದರಿಂದ ಅಲ್ಲಿಯವರೆಗೆ ಶ್ರೀ ರಾಮರಾಯರು ತಮ್ಮ ಅಧಿಕಾರದಲ್ಲಿ ಮುಂದುವರಿಯುವಂತೆ ಪದ್ಧತಿಯ ಪ್ರಕಾರ ರಾಜ್ಯಪಾಲರು ಸೂಚನೆ ನೀಡುವರೆಂದು ತಿಳಿದುಬಂದಿದೆ

ಚೂರಿ ಇರಿತದಿಂದ ಸಬ್ ಇನ್‌ಸ್ಪೆಕ್ಟರ್ ಮರಣ

ಚನ್ನಪಟ್ಟಣ ಗಣಿ ಪ್ರದೇಶದ ಕಾಮಸಮುದ್ರ ಸ್ಟೇಷನ್ನಿನಲ್ಲಿ ಕಳೆದ ಗುರುವಾರ ರಾತ್ರಿ ಸಬ್ ಇನ್ಸ್‌ಪೆಕ್ಟರ್ ಶ್ರೀ ಟಿ ವಾಮಾಚಾರ್ ಎಂಬುವರನ್ನು ವಹಿ ಹಾಜರಿ ಕೊಡಬೇಕಾದ ರಾಮುಲು [illegible] ಒಬ್ಬರ ಚಾಕು ಇರಿತದಿಂದ ತೀವ್ರ ಪರಿಣಾಮವಾಗಿ ಅಧಿಕಾರಿಯು ಗಣಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಅವರ ಶವವನ್ನು ಅವರ [illegible] ವಾಸಮನೆಯಿರುವ ಮೈಸೂರು ನಗರಕ್ಕೆ ನೆನ್ನೆ ತರಲಾಗಿತ್ತು ಅಂದು ಸಂಜೆ ಎಂದಿನಂತೆ [illegible] ಕಾಲ್ ಸಮಯದಲ್ಲಿ ರಾಮುಲುವು [illegible] ಗಲಾಟೆ ಮಾಡಿದನೆಂದೂ, ಅವನನ್ನು ಗ[illegible] ಚೂರಿಯಿಂದ ಇರಿದು ಪರಾರಿಯಾದನೆಂದೂ ಮಾರನೇ ದಿನ ಅವನನ್ನು ಬಂಧಿಸಲಾಯಿತೆಂದೂ ಹೇಳಲಾಗಿದೆ.

[illegible] ಶಿಕ್ಷಣಾಲಯ ವಿದ್ಯಾರ್ಥಿ ಸಂಘದ ಮುಕ್ತಾಯ ಭಾಷಣ

ನಗರದ ವೃತ್ತಿ ಶಿಕ್ಷಣಾಲಯದ ವಿದ್ಯಾರ್ಥಿ [illegible] ಮುಕ್ತಾಯ ಭಾಷಣವನ್ನು ನಾಳೆ ಸಂಜೆ [illegible] ಗಂಟೆಗೆ ಪಶುಪಾಲನ ಮಂತ್ರಿ ಶ್ರೀ ಟಿ. [illegible] ಪ್ಪನವರು ಮಾಡುವರು ಶಾಲೆಯ ಸೂಪರಿಂಟೆಂಡೆಂಟರಾದ ಶ್ರೀ ಪಿ ಮುನಿಯಪ್ಪನವರು [illegible] ವಹಿಸುವರು ಶ್ರೀ ಪಿ [illegible] [illegible] ಬಹುಮಾನಗಳನ್ನು ವಿನಿಯೋಗ ಮಾಡುವರು

ರೇಣುಕಾಚಾರ್ಯರ ಜಯಂತಿ

[illegible] ಕೆಳಗಿನ ಬೀದಿಯಲ್ಲಿರುವ ಶ್ರೀ [illegible] ಶ್ವರ ದೇವಸ್ಥಾನದಲ್ಲಿ ಜಗದ್ಗುರು [illegible] ಚಾರ್ಯರ ಜಯಂತಿ ಅಂಗವಾಗಿ ನಾಳೆ [illegible] ವರೆಗೆ ಸಮಾರಂಭಗಳನ್ನು ಏರ್ಪಡಿಸಲಾಗಿದೆ ನಾಳೆ ಬೆಳಗ್ಗೆ ಏಕಾದಶವಾರ [illegible] ಷೇಕ, ಸಹಸ್ರ ಬಿಲ್ವಾರ್ಚನೆ ಮುಂತಾದವು, ಪ್ರತಿ ದಿನ ಸಂಜೆ ೬ ಗಂಟೆಗೆ ವಿ|| ಶ್ರೀ [illegible] ಶಾಸ್ತ್ರಿ [illegible] ಯವರಿಂದ ಕಥೆ [illegible] ನಡೆಯುತ್ತವೆ

ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗೆ ಪೂರ್ಣ ಬಹುಮತ

ಸಚಿವ ಚನ್ನಿಗರಾಮಯ್ಯನವರ ಆಯ್ಕೆ

ಸ್ವಂ ಸು ಸಂತಿ] ಬೆಂಗಳೂರು ೧೩

ಸ್ಥಳೀಯ ಸಂಸ್ಥೆ ಸಚಿವ ಶ್ರೀ ಆರ್. ಚನ್ನಿಗರಾಮಯ್ಯನವರೂ ಕಾಂಗ್ರೆಸ್ ಮುಂದಾಳುಗಳಾದ ಶ್ರೀ ವಾಟಿ ಪರಿಯಪ್ಪನವರೂ ಮಧುಗಿರಿ ಕ್ಷೇತ್ರದಿಂದ ಚುನಾಯಿತರಾಗಿರುತ್ತಾರೆ ಅವರಿಗೆ ಕ್ರಮವಾಗಿ [illegible] ಮತ್ತು [illegible] ಓಟುಗಳು ಬಿದ್ದಿವೆ ವಿಧಾನ ಸಭೆಯಲ್ಲಿ ಕಾಂಗ್ರೆಸ್ಸಿಗೆ [illegible] ಪಿ ಎಸ್ ಪಿ [illegible] ಕೃಷಿಕ [illegible] ಪಕ್ಷಕ್ಕೆ [illegible] ಪರಿಶಿಷ್ಟ ವರ್ಗದ ಫೆಡರೇಷನ್ನಿಗೆ [illegible] ಮತ್ತು ಸ್ವತಂತ್ರರಿಗೆ [illegible] ಸ್ಥಾನಗಳು ಬಂದು ಕಾಂಗ್ರೆಸ್ಸಿಗೆ ಪೂರ್ಣ ಬಹುಮತ ದೊರೆತಿದೆ

○ ಲೋಕ ಸಭೆ ಚುನಾವಣೆಯಲ್ಲಿ ಬೆಂಗಳೂರು ಜಿಲ್ಲೆಯಿಂದ ಶ್ರೀ ಹೆಚ್ ಸಿ ದಾಸಪ್ಪನವರು [illegible] ಓಟು ಗಳಿಸಿ ಆಯ್ಕೆಯಾದರು

ನಗರ ಮತ್ತು ತಾಲ್ಲೂಕಿನಲ್ಲಿ ಚುನಾವಣೆ

ಶೇಕಡ ೪೯ ಮಂದಿಯಿಂದ ಮತದಾನ

ಮೈಸೂರು ೧೩

ಮಹಾಚುನಾವಣೆಯ ಕಡೆಯ ದಿನವಾದ ನೆನ್ನೆ ಮೈಸೂರು ನಗರ, ಮೈಸೂರು ಉತ್ತರ ಮತ್ತು ಮೈಸೂರು (ತಾಲ್ಲೂಕು) ಗಳಲ್ಲಿ ಚುನಾವಣೆಗಳು ನಡೆದುವು ಒಟ್ಟು ೧,೫೬,೩೪೦ ಓಟರುಗಳ ಪೈಕಿ [illegible] ಮಂದಿ ಮತದಾನ ಮಾಡಿದರು ಶೇಕಡ ೪೯ ರಷ್ಟು ಓಟು ಕೊಡಲ್ಪಟ್ಟಿವೆ ನಗರದಲ್ಲಿ [illegible] ಓಟರು ಪೈಕಿ [illegible] ಉತ್ತರದಲ್ಲಿ [illegible] ರ ಪೈಕಿ [illegible] ಮತ್ತು ತಾಲ್ಲೂಕಿನಲ್ಲಿ [illegible] ಓಟರ ಪೈಕಿ [illegible],೭೦೦ ಮಂದಿ ಓಟು ಕೊಟ್ಟಿರುತ್ತಾರೆ.

ಹೆಚ್. ಟಿ ಕೃಷ್ಣಯ್ಯನವರ ನಿಧನ

ಹಾಸನ ಜಿಲ್ಲಾ ಟ್ರೆಜರಿ ಅಧಿಕಾರಿಗಳಾದ ಶ್ರೀ ಹೆಚ್ ಟಿ ಕೃಷ್ಣಯ್ಯನವರು ಕಳೆದ ೧೦ನೇ ತಾರೀಖು ಹೃದಯ ವೇದನೆಯಿಂದ ಹಾಸನದಲ್ಲಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಅವರು

ಲೋಕ ಸಭೆಗೆ ಎಂ. ವಿ. ಕೃಷ್ಣಪ್ಪ, ಇಮಾಂ ಮತ್ತು ವಡೆಯರ್ ಆಯ್ಕೆ

ಲೋಕ ಸಭೆಗೆ ಚಿತ್ರದುರ್ಗದಿಂದ ಪಿ ಎಸ್ ಪಿ ಯ ಶ್ರೀ ಜೆ ಎಂ ಇಮಾಂ, ತುಮಕೂರಿನಿಂದ ಕಾಂಗ್ರೆಸ್ಸಿನ ಶ್ರೀ ಎಂ. ವಿ ಕೃಷ್ಣಪ್ಪ, ಮಂಡ್ಯದಿಂದ ಶ್ರೀ ಎಂ. ಕೆ ಶಿವನಂಜಪ್ಪ ಮತ್ತು ಶಿವಮೊಗ್ಗದಿಂದ ಶ್ರೀ ಕೆ ಜಿ ವಡೆಯರ್‌ರವರು ಚುನಾಯಿಸಲ್ಪಟ್ಟಿರುತ್ತಾರೆ. ಬಿಜಾಪುರದಲ್ಲಿ ಸ್ವತಂತ್ರರಾದ ಶ್ರೀ ಎಂ. ಎಸ್ ಸುಗಂಧಿಯವರು ಜಯ ಪಡೆದಿರುವರು ಅಲ್ಲಿ ಒಬ್ಬರೇ ದೇವಣ [illegible] ಬೆಳಗಾಮಿನಲ್ಲಿ ಚಿಕೋಡಿ ಕ್ಷೇತ್ರದಿಂದ ನಿಮ್ನ ವರ್ಗದ ಫೆಡರೇಷನ್ನಿನ ಶ್ರೀ ಕಟ್ಟಿ ದತ್ತ ಅಪ್ಪನವರು ಚುನಾಯಿಸಲ್ಪಟ್ಟಿರುವರು

ಸಹಕಾರ ಮಂತ್ರಿ ಭೀಮಪ್ಪನಾಯಕರ ವಿಜಯ

ಎಂ.ಸಿ. ನಾಗೆಯ್ಯರೆಡ್ಡಿಯವರ ಪರಾಭವ

ಬೆಂಗಳೂರು ೧೩

ಚಳ್ಳಕೆರೆ ಕ್ಷೇತ್ರದಿಂದ ಸಹಕಾರ ಮಂತ್ರಿ ಶ್ರೀ ಎ ಭೀಮಪ್ಪನಾಯಕರು ಲೋಕಸಭೆಯ ಸದಸ್ಯರೂ, ವಿಧಾನ ಸಭಾ ಸದಸ್ಯರೂ ಆದ ಶ್ರೀ ಮೂಲ್ಕಾ ಗೋವಿಂದರೆಡ್ಡಿಯವರಿಗಿಂತ ೪,೦೦೦ ಓಟುಗಳನ್ನು ಹೆಚ್ಚಾಗಿ ಗಳಿಸಿ ಜಯ ಪಡೆದಿರುತ್ತಾರೆ

ಗೌರಿಬಿದನೂರು ತಾಲ್ಲೂಕಿನಲ್ಲಿ ವಿಧಾನಸಭಾ ಸದಸ್ಯರೂ, ಕೋಲಾರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಪ್ರಾದೇಶಿಕ ಚುನಾವಣಾ ಸಮಿತಿ ಸದಸ್ಯರೂ ಆದ ಶ್ರೀ ಎಂ. ಸಿ ನಾಗಯ್ಯರೆಡ್ಡಿಯವರಿಗೆ ಭಾರಿ ಸೋಲಾಗಿದೆ ಅವರಿಗೆ ೧೧,೪೭೯ ಓಟುಗಳೂ, ಪ್ರತಿಸ್ಪರ್ಧಿ ಯುನೈಟೆಡ್ ಫ್ರಂಟಿನ ಶ್ರೀ ಕೆ ಹೆಚ್ ವೆಂಕಟರೆಡ್ಡಿಯವರಿಗೆ [illegible] ಓಟುಗಳೂ ಬಂದಿವೆ ಮತ್ತೊಬ್ಬ ಸ್ವತಂತ್ರ ಸ್ಪರ್ಧಿ ಶ್ರೀ ಹನುಮಂತರಾಯಪ್ಪನವರಿಗೆ ೧,೧೧೦ ಓಟು ಬಂದು ಠೇವಣಿಯು ನಷ್ಟವಾಗಿದೆ

ಚಳ್ಳಕೆರೆ ದ್ವಿಸದಸ್ಯ ಕ್ಷೇತ್ರದಿಂದ ಕಾಂಗ್ರೆಸ್ಸಿನ ಶ್ರೀ ಟಿ ಹನುಮಯ್ಯನವರು ಆರಿಸಿಬಂದಿರುವರು

ಶ್ರವಣಬೆಳಗೊಳ ಕ್ಷೇತ್ರದಲ್ಲಿ ಪಿ ಎಸ್. ಪಿ ಯ ಶ್ರೀ ಎನ್ ಜಿ ನರಸಿಂಹೇಗೌಡರು ಕಾಂಗ್ರೆಸ್ಸಿನ ಸ್ಪರ್ಧಿ ಶ್ರೀ ಕೆ ಲಕ್ಕಪ್ಪನವರಿಗಿಂತ ೯,೯೦೦ ಓಟುಗಳನ್ನು ಹೆಚ್ಚಾಗಿ ಗಳಿಸಿ ಜಯ ಪಡೆದಿರುವರು.

ಗ್ರಾಮಾಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಎಲ್ ನರಸಿಂಹಯ್ಯನವರಿಗೆ [illegible] ಓಟು ಬಂದು ಠೇವಣಿ ಕಳೆದುಕೊಂಡಿರುವರು

ನಾಳೆ ಓಟುಗಳ ಎಣಿಕೆ

ಮೈಸೂರು ೧೩

ತಾಲ್ಲೂಕು ಕ್ಷೇತ್ರಕ್ಕೆ ಸಂಬಂಧಪಟ್ಟ ಎಣಿಕೆಯು ನಾಳೆ ಬೆಳಗ್ಗೆ ೧೧ ಗಂಟೆಗೆ ಟೌನ್‌ಹಾಲಿನಲ್ಲಿ ಆರಂಭವಾಗುವುದು ಸ್ಪರ್ಧಿಗಳು ಮತ್ತು ಅವರ ಏಜೆಂಟರಿಗೆ ಮಾತ್ರ ಭವನದೊಳಗೆ ಅವಕಾಶವಿದೆ. ಧ್ವನಿ ವರ್ಧಕದ ಮೂಲಕ ಆಗ್ಗಿಂದಾಗ್ಗೆ ಎಣಿಕೆಯ ವಿವರಗಳನ್ನು ಕೊಡಲಾಗುವುದು ನಾಳಿದ್ದು ಉತ್ತರ ಕ್ಷೇತ್ರ ಮತ್ತು ೧೬ನೇ ತಾರೀಕು ನಗರದ ಎಣಿಕೆಗಳು ನಡೆಯುವುವು

ಲೋಕ ಸಭಾ ಕ್ಷೇತ್ರದ ಎಣಿಕೆಯು ವಸ್ತುಪ್ರದರ್ಶನ ಕಟ್ಟಡದಲ್ಲಿ ನಾಳೆ ೧೧ ಗಂಟೆಗೆ ಆರಂಭವಾಗುವುದು

ಚಾಮರಾಜನಗರದಲ್ಲಿ ಎಣಿಕೆ

ಚಾಮರಾಜನಗರದಿಂದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ನೆನ್ನೆ ದಿನ ಎಣಿಕೆಯು ಆರಂಭವಾಯಿತು ಶ್ರೀಗಳಾದ ಯು ಎಂ ಮಾದಪ್ಪನವರಿಗೆ [illegible], ಶ್ರೀ ವೆಂಕಟರಂಗನಾಯಕರಿಗೆ ೧,೮೦೪, ಶ್ರೀ ಬಿ ರಾಚಯ್ಯನವರಿಗೆ [illegible] ಮತ್ತು ಬಸವಯ್ಯನವರಿಗೆ [illegible] ಓಟುಗಳು ಬಿದ್ದುವು ಈ ದಿನವೂ ಎಣಿಕೆಯು ಮುಂದುವರಿಯಿತು.

ಸಂಸ್ಥಾನದಲ್ಲಿ ಒಂದೇ ವಿಧದ ಗೇಣಿ ಶಾಸನ

ಸರ್ಕಾರದ ವಿಶೇಷಾಧಿಕಾರಿ [illegible]

ಬೆಂಗಳೂರು ೧೩

ಸಂಸ್ಥಾನದಲ್ಲೆಲ್ಲಾ ಅನ್ವಯಿಸುವ ಒಂದೇ ವಿಧದ ಗೇಣಿ ಶಾಸನವನ್ನು ತಯಾರಿಸಲು ಸರ್ಕಾರದವರು ೪ ವಿಶೇಷಾಧಿಕಾರಿಗಳನ್ನು ನೆನ್ನೆ ನೇಮಿಸಿದರು ಬೊಂಬಾಯಿ ಗೇಣಿ [illegible], ಹೈದರಾಬಾದು ಮತ್ತು ಮದ್ರಾಸು ಪ್ರದೇಶದ, ಕೊಡಗು ಮತ್ತು ಮೈಸೂರು ಗೇಣಿ ಶಾಸನದ ವಿಶೇಷಾಧಿಕಾರಿಗಳು [illegible] ಇದೇ ರೀತಿ ಗೇಣಿ ಶಾಸನ [illegible] ಸರ್ಕಾರದವರು ಸಧ್ಯದಲ್ಲೇ ಶಾಸನವನ್ನು [illegible] ರುವರು ವಿಶಿಷ್ಟ ಕಲಮುಗಳನ್ನು [illegible] ಆಯಾ ಪ್ರದೇಶಗಳಲ್ಲಿ [illegible] ಜಾರಿಯಲ್ಲಿರತಕ್ಕದ್ದೆಂದು [illegible] ಗೇಣಿದಾರರನ್ನು [illegible] ರಕ್ಷಣೆಗಳನ್ನು ಒದಗಿಸಲಾಗಿದೆ [illegible] ಶಾಸನವನ್ನು ತರಲಾಗುತ್ತದೆ, ಅದರಲ್ಲಿ ಗೇಣಿದಾರರ ಭದ್ರತೆ ಮತ್ತು ನ್ಯಾಯವಾದ ಗುತ್ತಿಗೆಗಳನ್ನು ಗೊತ್ತು ಪಡಿಸಲಾಗುವುದು.

ಮೈಸೂರಿನಲ್ಲಿ ಇನ್ನು ಒಂದು ವರ್ಷ ಕಾಲ ಗೇಣಿ ಕಾನೂನನ್ನು ಮುಂದುವರಿಸಲಾಗುವುದು. ಬೊಂಬಾಯಿ ಪ್ರದೇಶದಲ್ಲಿ ಗೇಣಿದಾರರನ್ನು ಜಮೀನುದಾರರು ತಪ್ಪಿಸುವ ಅಧಿಕಾರವನ್ನು ಈ ವರ್ಷದ ಅಕ್ಟೋಬರು ವರೆಗೆ ಮುಂದೆ ಹಾಕಲಾಗುವುದು

ಹೆಚ್. ಎಂ. ಚನ್ನಬಸಪ್ಪನವರ ವಿಜಯ

ಮೈಸೂರು ೧೩

ವಿಧಾನ ಸಭೆಗೆ ಕೃಷ್ಣರಾಜನಗರದಿಂದ ಪ್ರಾಜ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಆರಿಸಿಬಂದಿರುತ್ತಾರೆ ಅವರಿಗೆ [illegible], ಶ್ರೀ ಕೆ. ಎಸ್. ಗೌಡಯ್ಯನವರಿಗೆ [illegible], ಶ್ರೀ ಹೆಚ್. ಬಿ ಕೆಂಚೇಗೌಡರಿಗೆ ೧,[illegible] ಮತ್ತು ಪಿ.ಎಸ್.ಪಿ ಯ ಶ್ರೀ ಸಿ. ಎಲ್. [illegible] ಯ್ಯನವರಿಗೆ ೧,೧೭೧ ಓಟು ಬಂದು ಕಡೆಯವರಿಬ್ಬರ ಠೇವಣಿ ಮುಟ್ಟುಗೋಲಾಗಿದೆ.

ಮೋಟಾರು ಹರಿದು ಬಾಲಕಿ ಸಾವು

ನೆನ್ನೆ ಸಂಜೆ ಟೌನ್‌ಹಾಲಿನ ಬಳಿ ಶ್ರೀ [illegible] ಗೋಪಾಲಯ್ಯ ಎಂಬುವರಿಗೆ [illegible] ಮೇಲೆ ಮೋಟಾರು ಹರಿದು ಗಾಯವಾಗಿ ಕೃಷ್ಣರಾಜ ಆಸ್ಪತ್ರೆಗೆ ಸೇರಿಸಲ್ಪಟ್ಟನು. ಮೋಟಾರನ್ನು [illegible] ಶ್ರೀ ಎ ವಿ [illegible] ವರು ನಡೆಸುತ್ತಿದ್ದರು

ಶ್ರೀರಂಗಪಟ್ಟಣದಲ್ಲಿ ಬೊಮ್ಮೇಗೌಡರ ವಿಜಯ

೬ ಸಾವಿರ ಹೆಚ್ಚು ಮತಗಳು

ಸ್ವಂ. ಸು. ಫೋ] ಬೆಂಗಳೂರು ೧೩

ಶ್ರೀರಂಗಪಟ್ಟಣದ ಚುನಾವಣೆಯಲ್ಲಿ ಪಿ. ಎಸ್ ಪಿ ಯ ಶ್ರೀ ಅರಕೆರೆ ಬೊಮ್ಮೇಗೌಡರಿಗೆ ೧೮,[illegible] ಮತ್ತು ಕಾಂಗ್ರೆಸ್ಸಿನ ಶ್ರೀ ಎ. ಜಿ. ಬಂಡೀಗೌಡರಿಗೆ ೧೧,[illegible] ಓಟುಗಳು ಬಂದು, ಶ್ರೀ ಬೊಮ್ಮೇಗೌಡರು ಜಯಶೀಲರಾಗಿದ್ದಾರೆ.

ಗೃಹ ಮಂತ್ರಿ ಎಂ. ವಿ. ರಾಮರಾಯರ ಪರಾಜಯ

ವಿಧಾನ ಸಭೆಗೆ ಟಿ. ಮರಿಯಪ್ಪನವರ ಆಯ್ಕೆ

ಬೆಂಗಳೂರು ೧೩

ತುಮಕೂರು ಕ್ಷೇತ್ರದಿಂದ ಗೃಹ ಮಂತ್ರಿ ಶ್ರೀ ಂ. ವಿ. ರಾಮರಾಯರು ವಿಧಾನ ಸಭೆ ಚುನಾ ಣೆಯಲ್ಲಿ ಪರಾಜಿತರಾಗಿರುತ್ತಾರೆ. ಅವರಿಗೆ ೩,೪೮೭ ಮತ್ತು ಪ್ರತಿಸ್ಪರ್ಧಿ ಶ್ರೀ ಜಿ. ಎಸ್. ಕೃಷ್ಣನವರಿಗೆ ೧೪,೦೫೫ ಓಟುಗಳು ಬಂದಿವೆ. ಮತ್ತೊಬ್ಬ ಸ್ಪರ್ಧಿ ಟಿ. ಎಲ್. ತಿಮ್ಮಪ್ಪನವರು ,೭೦೩ ಓಟುಗಳಿಸಿ ಪರಾಜಿತರಾಗಿರುತ್ತಾರೆ.

ನಾಗಮಂಗಲ ಕ್ಷೇತ್ರದಿಂದ ಹಣಕಾಸಿನ ಮಂ ತ್ರಿ ಟಿ. ಮರಿಯಪ್ಪನವರು ಮತ್ತೊಬ್ಬ ಸ್ಪರ್ಧಿ ಶ್ರೀ ಕೆ. ಮರಿಯಪ್ಪನವರಿಗಿಂತ ಸುಮಾರು ,೦೦೦ ಓಟುಗಳನ್ನು ಹೆಚ್ಚಾಗಿ ಗಳಿಸಿ ಜಯ ಪಡೆದಿರುವರು. ಆದರೆ ಅವರ ಚುನಾವಣೆಯನ್ನು ಕೆಲವು ಕಾರಣಗಳಿಗಾಗಿ ಪ್ರಕಟಿಸಿಲ್ಲ. ಅವರುಗ ಕ್ರಮವಾಗಿ ೧೫,೯೮೫ ಮತ್ತು ೧೪,೭೦೭ ಓಟುಗಳು ಬಂದಿವೆ.

ಅರಕಲಗೂಡು ಕ್ಷೇತ್ರ ಮತ್ತು ಮಾಗಡಿಯಿಂ ಕಾಂಗ್ರೆಸ್ಸಿನವರಾದ ಶ್ರೀ ಟಿ ಡಿ. ಮಾರಣ್ಣನ ರು ಪರಾಜಿತರಾಗಿರುವರು. ಅವರ ವಿರುದ್ಧ ನಾ ನಿಂತಿದ್ದ ಸ್ವತಂತ್ರರಾದ ಶ್ರೀ ಪುಟ್ಟೇಗೌಡರು ಮತ್ತು ಪಿ ಎಸ್ ಪಿ.ಯ ಶ್ರೀ ಬಿ. ಸಿಂಗ್ರಿಗೌಡ ರು ಜಯಗಳಿಸಿರುವರು.

ಗುಂಡ್ಲುಪೇಟೆಯಲ್ಲಿ ಸ್ವತಂತ್ರರಾದ ಶ್ರೀಮತಿ . ಎಸ್. ನಾಗರತ್ನಮ್ಮನವರು [illegible] ಓಟುಗಳಿಂದ ಕಾಂಗ್ರೆಸ್ಸಿನ ಶ್ರೀ ಕೆ . ಶಿವರುದ್ರಪ್ಪನವರ ಮೇಲೆ ಜಯ ಪಡೆದಿರುತ್ತಾರೆ. ಶ್ರೀಮತಿಯವರು ವಿಧಾನ ಸಭೆಯ ಸ್ಪೀಕರು, ಸ್ವತಂತ್ರ ಸದಸ್ಯರು. ಶ್ರೀ ಶಿವರುದ್ರಪ್ಪನವರು ಹಾಲಿ ಸದಸ್ಯರಾಗಿರುವರು.

ಈ ಸುದ್ದಿಗಳನ್ನು ಮೊನ್ನಿನ ಪತ್ರಿಕೆಯ ಕಡೇ ಪ್ರತಿಗಳಲ್ಲಿ ಪ್ರಕಟಿಸಲಾಗಿದ್ದಿತು.

ದೆಹಲಿ ರೇಡಿಯೊವಿನಲ್ಲಿ ಮೈಸೂರು ಯಕ್ಷಗಾನ

ದೆಹಲಿಯ ಆಲ್ ಇಂಡಿಯಾ ರೇಡಿಯೋವಿನಲ್ಲಿ ಇದೇ ತಿಂಗಳು ೧೭ ನೇ ತಾರೀಖು ರಾತ್ರಿ ಗಂಟೆಗೆ ತಲಕಾಡಿನ ಮಾಯಿಗೌಡರು ಮತ್ತು ಇತರ ಯಕ್ಷಗಾನ ತಂಡದವರು ಯಕ್ಷಗಾನವನ್ನು ಮಾಡುವರು. ಅದನ್ನು ಎಲ್ಲಾ ಕೇಂದ್ರಗಳಿಂದಲೂ ಪುನಃಪ್ರಸಾರ ಮಾಡಲಾಗುವುದು.

ಅಲ್ಯೂಷಿಯನ್ ದ್ವೀಪದಲ್ಲಿ ಭಾರಿ ಭೂಕಂಪ

ಪೆಸಿಫಿಕ್ ಸಾಗರದ ಉತ್ತರ ಭಾಗದಲ್ಲಿರುವ ಅಲ್ಯೂಷಿಯನ್ ದ್ವೀಪಸ್ತೋಮದಲ್ಲಿ ಮೊನ್ನೆ ಭಾರಿ ಭೂಕಂಪವಾಯಿತು. ಅದರ ಬಿರುಸು ಹವಾಯಿ ದ್ವೀಪಗಳ ವರೆಗೂ ವ್ಯಾಪಿಸಿತ್ತು. ಅಲಾಸ್ಕಾ ದೇಶದ ಒಳನಾಡಿನಲ್ಲಿರುವ ಫೇರ್‌ಬ್ಯಾಂಕ್ಸ್ ನಗರದಲ್ಲೂ ಸಹಾ ಭೂಕಂಪವಾಯಿತು. ಹವಾಯ್ ದ್ವೀಪದ ವರೆಗೆ ಭೂಕಂಪದ ರಭಸದಿಂದ ಸಮುದ್ರದ ಅಲೆಗಳು ಬಹಳ ಎತ್ತರಕ್ಕೆ ಎದ್ದಿದ್ದುವು. ದ್ವೀಪಸ್ತೋಮದಲ್ಲಿ ಜನರು ಹೆಚ್ಚಾಗಿ ವಾಸವಿಲ್ಲ. ಅಲ್ಲಿ ಜನರು ವಾಸವಾಗಿದ್ದಿದ್ದರೆ ಯಾರೂ ಉಳಿಯುತ್ತಿರಲಿಲ್ಲವೆಂದು ಅಮೆರಿಕದ ಭೂಕಂಪ ತಜ್ಞರೊಬ್ಬರು ತಿಳಿಸಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಿತಾರ್. ೭-೧೫ ಕೆ. ಎಸ್. ವೆಂಕಟರಾಮಯ್ಯ-ದೇವರ ನಾಮ. ೭-೩೦ ಮತ್ತು ೮ ೧೫ ಬಿ. ಎಸ್. ಎಸ್. ಕೌಶಿಕ್-ಕಾವ್ಯ ವಾಚನ. ಮಧ್ಯಾಹ್ನ ೧೨ ಕೆ. ಎಸ್. ವೆಂಕಟರಾವ್-ಸಂಗೀತ. ೧೨.೪೦ ರಾಟ್ಟಪುತ್ತೂರ್ ಕೃಷ್ಣಮೂರ್ತಿ ಪಿಟೀಲು. ೧ ಮತ್ತು ೩ ಸಿ. ಎಸ್. ದೇಶಪಾಂಡೆ-ಸಂಗೀತ. ೧-೪೦ ಕನ್ನಡ ಗೀತೆಗಳ. ೨-೧೫ ಗಾಯನ. ಸಂಜೆ ೫-೩೦ ವಿ ಎಸ್ ಸಿಂಹ-ಸಿತಾರ್. ೬-೩೦ ವೈ ಕೆ ವೇಣುಗೋಪಾಲ್ ಜಾನಪದ ಗೀತೆ ೭-೨೦ ಕಿರುಗತೆ. ೮ ವಿನೋದ ನಾಟಕ ಚಕ್ರ ೮ ೧೫ ರಾಟ್ಟಪುತ್ತೂರ್ ಕೃಷ್ಣಮೂರ್ತಿ-ಪಿಟೀಲು ೮-೩೦ ಸಾಪ್ತಾಹಿಕ ಅಭಿವೃದ್ಧಿ ಯೋಜನೆ-ಭಾಷಣ ೮ [illegible] ೧೫ ಪ್ರಜಾಸತ್ತೆ : ಭಾಷಣ ೯-೩೦ ಗೀತಾವಳಿ.

SRI GAYATHRI
TALKIES
To-day & Tomorrow
Two Great stars were born to dance together-Fred Astaire, Leslie Caron in
DADDY LONG LEGS
(Cinemascope & Technicolour)
Grand Gala opening
From 13-3-57
TRAPEZE

ಬಹುಮಾನ ಪಡೆದ ಕನ್ನಡ ರೇಡಿಯೊ ನಾಟಕಗಳು

ಕಳೆದ ವರ್ಷ ಆಲ್ ಇಂಡಿಯಾ ರೇಡಿಯೊದವರು ನಾನಾ ಭಾಷೆಗಳಲ್ಲಿ ಏರ್ಪಡಿಸಿದ್ದ ನಾಟಕಗಳ ಸ್ಪರ್ಧೆಯಲ್ಲಿ ಎ. ಪಿ. ಕುಲಕರ್ಣಿಯವರ ನೆಚ್ಚಿದೆಮ್ಮೆ ಕೋಣ ಈಯಿತು ಎಂಬ ನಾಟಕ, ಜಿ. ಕೆ. ಗೋವಿಂದರಾಯರ ಕನಸು ಒಡೆದಿತ್ತು ಎಂಬ ನಾಟಕ, ಹೆಚ್. ವಿ. ಸುಬ್ಬರಾಯರ ಕಾಮಣ್ಣ ಎಂಬ ನಾಟಕಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳು ಬಂದಿವೆ. ಅವುಗಳಿಗೆ ಕ್ರಮವಾಗಿ ೨೫೦, ೧೫೦ ಮತ್ತು ೫೦ ರೂ.ಗಳನ್ನು ಕೊಡಲಾಗುವುದು.

ಮೈಸೂರು ಹೌಸಿಂಗ್ ಬೋರ್ಡ್, ಬೆಂಗಳೂರು

ಪ್ರಕಟಣೆ

ಬೆಂಗಳೂರಿನಲ್ಲಿರುವ ಮೈಸೂರು ಹೌಸಿಂಗ್ ಬೋರ್ಡಿನವರು ಕಡಿಮೆ ವರಮಾನ ಬರುವವರ ಗೃಹ ವಸತಿ ಯೋಜನೆ ಅಂಗವಾಗಿ ಮೈಸೂರು ನಗರದಲ್ಲಿ ಕೆಳಗೆ ಕಾಣಿಸಿರುವ ಪ್ರದೇಶಗಳಲ್ಲಿ ನಿವೇಶನಗಳನ್ನು ಪಡೆದಿರುವವರ ಮನೆಗಳನ್ನು ನಿರ್ಮಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲಿರುವುದರಿಂದ ಅರ್ಜಿದಾರರಿಗಾಗಿ ಪ್ರಕಟಿಸಲಾಗಿದೆ:—

1. ಜಯನಗರ, 2 ಚಾಮುಂಡಿಪುರಂ, 3 ಕೃಷ್ಣಮೂರ್ತಿಪುರಂ, 4. ಸರಸ್ವತಿಪುರಂ ಮತ್ತು 5. ವಾಣಿವಿಲಾಸ ಮೊಹಲ್ಲಾ.

ನಿಗದಿಯಾಗಿರುವ ನಮೂನೆಗಳಲ್ಲಿ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಅವನ್ನು ಮೈಸೂರು ಜಿಲ್ಲಾ ಕಛೇರಿ ಕಟ್ಟಡದಲ್ಲಿರುವ ಮೈಸೂರು ಸಬ್ ಡಿವಿಷನ್ನಿನ ಮೈಸೂರು ಹೌಸಿಂಗ್ ಬೋರ್ಡಿನ ಅಸಿಸ್ಟೆಂಟ್ ಇಂಜನಿಯರರ ಕಛೇರಿಯಲ್ಲಿ ಕಛೇರಿ ಕೆಲಸದ [illegible] ಅರ್ಜಿಗಳನ್ನು ಕೊಟ್ಟು ಪಡೆಯಬಹುದು. ಅರ್ಜಿಗಳನ್ನು ತೆಗೆದುಕೊಳ್ಳಲು 1957ನೇ ಮಾರ್ಚ್ 20ನೇ ತಾರೀಖು ಕಡೆಯ ದಿನ.

ಆರ್. ಸತ್ಯನಾರಾಯಣ,
ಮೈಸೂರು ಹೌಸಿಂಗ್ ಬೋರ್ಡಿನ ಚೇರ್ಮನ್ನರಿಗಾಗಿ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಯ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ.
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಸ್ಥ
ಅಶೋಕ ರಸ್ತೆ, ಮೈಸೂರು (Estd. 1911)

ನಗರಾಭಿವೃದ್ಧಿ ಸಮಿತಿ ಮೈಸೂರು

ಪ್ರಕಟಣೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:— 1957-58ನೇ ಸಾಲಿಗೆ, ಅಂದರೆ 1-4-57ರಿಂದ 31-3-58ರವರೆಗೆ ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಿಂದ ಕಲ್ಲು, ಸಿಮೆಂಟ್, ಸ್ಟೋನ್‌ವೇರ್ ಪೈಪುಗಳು ಇತ್ಯಾದಿ ಸಾಮಾನುಗಳನ್ನು ಮೈಸೂರು ಸಿಟಿ [illegible] ಇರುವ ನಗರಾಭಿವೃದ್ಧಿ ಸಮಿತಿ ಸ್ಟೋರಿಗೂ ಮತ್ತು ಆಫೀಸಿಗೂ ಸಾಗಿಸಲು ಬೇಕಾದ ಟೆಂಡರುಗಳು ತಾರೀಖು 20-3-57ರ ವರೆಗೆ ಪ್ರತಿ ಬೋರ್ಡ್ ಇಂಜನಿಯರ್ ಸಾಹೇಬರವರಿಂದ ಸ್ವೀಕರಿಸಲ್ಪಡುತ್ತವೆ. ಇಷ್ಟಪಟ್ಟವರು ರೂ 25.00 ಠೇವಣಿ ಹಣದೊಡನೆ ಬೇಕಾದ ಕಾಗದಗಳಲ್ಲಿ ಮೇಲೆ ಹೇಳಿದ ಅವಧಿಯಲ್ಲಿ ಟೆಂಡರುಗಳನ್ನು ಕೊಡಬಹುದು. ಹೆಚ್ಚಿನ ವಿವರಗಳನ್ನು ಆಫೀಸು ದಿನಗಳಲ್ಲಿ ನೋಟೀಸ್ ಬೋರ್ಡ್ ನೋಡಿ ತಿಳಿದುಕೊಳ್ಳಬಹುದು.

ಎಸ್. ಲಿಂಗಪ್ಪ,
ಛೇರ್ಮನ್

Edited, Printed and Published by
A. R. Nagarajan at Sadhvi Press,
D. Subbiah Road, Mysore

ಆಯುರ್ವೇದ ವಿದ್ವಾನ ಬಿ. ವಿ. ಪಂಡಿತರ
ಬೆಜೋಲ್
ಅತ್ಯುತ್ತಮ ಧಾತುವರ್ಧಕ ಔಷಧ
ದಿ ಸದ್ವೈದ್ಯ ಶಾಲಾ ವರ್ಕ್ಸ್ ನಂಜನಗೂಡು
ಶಾಖೆಗಳು:- ಬೆಂಗಳೂರು, ಮೈಸೂರು, ಮಂಗಳೂರು [illegible]
ಯಾವಾಗಲೂ ನಂಜನಗೂಡು ಟೂತ್‌ಪೌಡರನ್ನೇ ಉಪಯೋಗಿಸಿ.

ರಾಜಕಮಲ್
15-3-57 ರಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗಲಿರುವ ಅಮೋಘ 3ನೇ ವಾರ
ಪದ್ಮಿನಿ ಪಿಕ್ಚರ್ಸ್ [ಮೊದಲ ತೇದಿ ಖ್ಯಾತಿ]ರವರ ಕನ್ನಡ ಚಿತ್ರ
ರತ್ನಗಿರಿರಹಸ್ಯ
ಪಾತ್ರ:- ಬಿ ಆರ್. ಪಂತಲು, ಉದಯ ಕುಮಾರ್, ಟಿ. ಆರ್. ರಾಮಚಂದ್ರನ್
[ಶ್ರೀ ರಾಘವೇಂದ್ರ ರಿಲೀಸ್]

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಮೆಂಬರು : ಐ. ಎಸ್. ಟಿ. ಎಂ. ಎ.

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
15-3-57ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ
ಸರ್ವೋದಯ ಪಿಕ್ಚರ್ಸ್‌ರವರ ಸಂಗೀತಮಯ ತಮಿಳು ಚಿತ್ರ
ತ್ಯಾಗರಾಜ ಭಾಗವತರ್, ಲಲಿತ, ಮಾಧುರಿದೇವಿ, ತಂಗವೇಲು, ಟಿ. ಎಸ್. ಬಾಲಯ್ಯ, ಎನ್. ಎಸ್. ಕೃಷ್ಣನ್, ಟಿ ಎ ಮಧುರಂ ಪಾತ್ರವಹಿಸಿರುವ
★ ಪುದುವಾಳ್ವು ★

ರಿಜಿಸ್ಟ್ರೀ ನಂ. 79೪

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

[illegible] ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೮] SADHVI । THURSDAY 14--3—1957 ಮೈಸೂರು । ಗುರುವಾರ ೧೪ ೩—೧೯೫೭ : [ಸಂಚಿಕೆ : ೨೨೫

ಅಮೆರಿಕವು ಬಾಗ್ದಾದ್ ಒಪ್ಪಂದ ಕೂಟಕ್ಕೆ ಸೇರುವುದೇ ?

ೋಕಸಭೆಗೆ ಎಂ. ವಿ. ಕೃಷ್ಣಪ್ಪ ತ್ತು ಹೆಚ್.ಸಿ. ದಾಸಪ್ಪನವರು

ಬೆಂಗಳೂರು ೧೪

ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ೇಕ ಸಭೆಗೆ ಕಾಂಗ್ರೆಸ್ ಸ್ಪರ್ಧಿ ಶ್ರೀ ಹೆಚ್. ದಾಸಪ್ಪನವರು ೮೫,೩೮೯ ಹೆಚ್ಚು ಮತಗ ದ ಚುನಾಯಿತರಾಗಿರುವರು. ಅವರಿಗೆ ೬,೭೦೪ ಮತ್ತು ಅವರ ನಿಕಟ ಸ್ಪರ್ಧಿ ಶ್ರೀ ಶಿವಲಿಂಗಯ್ಯನವರಿಗೆ ೫೫,೩೮೫ ಮತಗ ಬಂದುವು.

ಮಕೂರು ಕ್ಷೇತ್ರದಿಂದ ಲೋಕ ಸಭೆಗೆ ಎಂ ವಿ ಕೃಷ್ಣಪ್ಪನವರು ೬೪,೩೮೮ ಹೆ ಮತಗಳಿಂದ ಜಯಗಳಿಸಿದರು. ಅವರಿಗೆ ೬,೮೬೩ ಮತ್ತು ಅವರ ನಿಕಟ ಸ್ಪರ್ಧಿ ಪ್ರ ಸೋಷಲಿಸ್ಟ್ ಪಕ್ಷದ ಶ್ರೀ ಗಂಗಾಧರ್‌ರವರ ೩,೪೭೫ ಮತಗಳು ಬಂದುವು.

ಾಯಚೂರಿನ ಲೋಕ ಸಭಾ ಕ್ಷೇತ್ರದಿಂದ ಂಗ್ರೆಸ್ಸಿನ ಶ್ರೀ ಜೆ. ಎಸ್. ಮೆಲ್ಕೋಟೆಯ ೧೪ ಸಾವಿರ ಬಹುಮತದಿಂದ ಚುನಾಯಿತ ುವರು ಅವರಿಗೆ ೮೪,೦೫೯ ಮತ್ತು ಲೋ ಪಾಸಂಘದ ಅವರ ಪ್ರತಿಸ್ಪರ್ಧಿ ಶ್ರೀ ವಿಶ್ವನಾ ಯವರಿಗೆ ೬೬,೦೫೯ ಮತಗಳು ಬಂದಿವೆ.

ೋರ್ನಿಯೊವಿನಲ್ಲೂ ಮಿಲಿಟರಿ ಪ್ರಭುತ್ವ

ಂಡೊನೇಷ್ಯದ ಬೋರ್ನಿಯೊ ದ್ವೀಪದಲ್ಲೂ ಯಿಂದ ಮಿಲಿಟರಿ ಪ್ರಭುತ್ವ ಆರಂಭ ಸಿತು. ಕೇಂದ್ರ ಸರ್ಕಾರದ ಆಡಳಿತವು ಮಾತ್ರಕ್ಕೆ ಉಳಿದಿರುತ್ತದೆ. ಇಂಡೊನೇ ಸರ್ಕಾರದ ಅಧಿಕಾರ ವ್ಯಾಪ್ತಿಯು ಈಗ ದ್ವೀಪದಲ್ಲಿ ಮಾತ್ರ ಇದೆ. ಸೆಲಿಬಿಸ್, ಮ , ಸುಂಡಾ ದ್ವೀಪಗಳು ಮತ್ತು ಸುಮಾತ್ರ ದ ಬಹು ಭಾಗವು ಈಗಾಗಲೇ ಸೈನ್ಯದ ಟರಿ ಆಡಳಿತದಲ್ಲಿದೆ.

ಂದೂ ಮಹಾ ಸಭೆಯ ಉಪಾ ಕ್ಷರ ಠೇವಣಿ ಮುಟ್ಟುಗೋಲು

ಖಿಲ ಭಾರತ ಹಿಂದೂ ಮಹಾ ಸಭೆಯ ಧ್ಯಕ್ಷರಾದ ಡಾ|| ಎಲ್. ಬಿ. ಖರೆಯವರೂ , ನಾಲ್ಕು ಮಂದಿಯೂ ನಾಗಪುರ ಕ್ಷೇತ್ರ ಲೋಕ ಸಭೆಗೆ ಕಾಂಗ್ರೆಸ್ ಸ್ಪರ್ಧಿ ಶ್ರೀ . ಅಗರ್‌ವಾಲರ ವಿರುದ್ಧ ಸ್ಪರ್ಧಿಸಿ ಠೇವ ನ್ನು ಕಳೆದುಕೊಂಡಿರುವರೆಂದು ವರದಿ ಗಿದೆ.

ಿಲ ಮೈಸೂರು ಸಂಸ್ಥಾನದ ಸಂಗೀತ ಸ್ಪರ್ಧೆ

ಶಿತನ ಮೈಸೂರು ಸಂಸ್ಥಾನದ ರಚನೆಯ ೀಸ್ಮಾರ್ಥವಾಗಿ ಬೆಂಗಳೂರು ಚಾಮರಾಜ ಯ ಶ್ರೀ ರಾಮ ಸೇವಾ ಮಂಡಲಿಯವರು ಶ್ರೀರಾಮನವಮಿ ಉತ್ಸವದ ಅಂಗವಾಗಿ ತ ಸ್ಪರ್ಧೆಯೊಂದನ್ನು ನಡೆಸಲು ನಿರ್ಧರಿ ದ್ದಾರೆ. ವೀಣೆ, ಪಿಟೀಲು, ಕೊಳಲು, ಮೃ ಮತ್ತು ಬಾಯಿ ಹಾಡುಗಾರಿಕೆಗಳಲ್ಲಿ ಪಾ ರಿಸುವ ಅಭ್ಯಾಸಿಗಳು ೫ ರೂ. ಶುಲ್ಕದೊ ತಿಂಗಳು ೨ನೇ ತಾರೀಖಿನೊಳಗೆ ಅರ್ಜಿ ಳ್ಳಬಹುದು.

ಶಾಸನ ಸಭೆಗೆ ಮತ್ತೆ ಇಬ್ಬರು ಸಚಿವರ ಆಯ್ಕೆ

ಬೆಂಗಳೂರು ೧೪

ಸಂಸ್ಥಾನದ ವಿಧಾನ ಸಭೆಗೆ ಸಚಿವ ಶ್ರೀ ಹೆಚ್. ಎಸ್. ರುದ್ರಪ್ಪನವರು ಹೊನ್ನಾಳಿ–ಶಿಕಾರಿಪುರ ಕ್ಷೇತ್ರದಿಂದಲೂ ಮತ್ತು ಸಚಿವ ಶ್ರೀ ಚನ್ನಿಗರಾಮಯ್ಯನವರು ಮಧುಗಿರಿ ವಿಭಾಗ ಕ್ಷೇತ್ರದಿಂದಲೂ ಆರಿಸಿಬಂದಿರುವರು. ಮಧುಗಿರಿಯ ಸಾಮಾನ್ಯ ಕ್ಷೇತ್ರದಿಂದ ಮಾಲಿ ಮರಿಯಪ್ಪನವರು ಕಾಂಗ್ರೆಸ್ಸಿನ ಪರವಾಗಿ ಸ್ಪರ್ಧಿಸಿ ಗೆದ್ದಿರುವರು.

ಹಾವೇರಿಯ ಹಿರೇಕೆರೂರಿನಲ್ಲಿ ಶ್ರೀ ಎಸ್. ಬಿ ಗುಬ್ಬಿ, ಕಡೂರಿನಲ್ಲಿ ಶ್ರೀ ಡಿ ಹೆಚ್. ರುದ್ರಪ್ಪ, ಸುರತ್ಕಲ್ಲಿನಲ್ಲಿ ಶ್ರೀ ಪಿ. ಆರ್. ಕರ್ಕೆರಾ, ಗುಳೇದಗುಡ್ಡದಲ್ಲಿ ಪಿ ಎಂ ರುದ್ರಪ್ಪ, ಬೈಲಹೊಂಗಲದಲ್ಲಿ ಶ್ರೀ ಹೆಚ್.ಪಿ. ಕೌಜಲಗಿ, ಶಿರಹಟ್ಟಿಯಲ್ಲಿ ಶ್ರೀಮತಿ ಲೀಲಾವತಿ ಮಾಗಡಿ, ಶಿರಾದಲ್ಲಿ ಶ್ರೀ ಟಿ. ತಾರೇಗೌಡ ಮತ್ತು ಶ್ರೀ ಪಿ ಅಂಜನಪ್ಪ, ಹಮ್ನಾಬಾದಿನಲ್ಲಿ ಶ್ರೀ ಮುರಳೀಧರರಾಯರು ವಿಧಾನ ಸಭೆಗೆ ಕಾಂಗ್ರೆಸ್ಸಿನ ಪರ ಜಯಗಳಿಸಿರುವರು. ಶಿಡ್ಲಘಟ್ಟದಲ್ಲಿ ಶ್ರೀ ಜೆ ವೆಂಕಟಪ್ಪನವರು ಕಾಂಗ್ರೆಸ್ಸಿನ ಶ್ರೀ ಅಶ್ವಲರೆಡ್ಡಿಯವರನ್ನು ಸೋಲಿಸಿರುವರು. ಅಥಣಿಯಲ್ಲಿ ಸ್ವತಂತ್ರರಾದ ಶ್ರೀ ಜನುವಂತರಾವ್ ಭೋಜರಾಜ್ ಪವಾರರಿಗೆ ಜಯವಾಗಿದೆ.

ಮೊರಾರ್ಜಿ ದೇಸಾಯ್ ಮತ್ತು ಲಾಲ್ ಬಹದ್ದೂರರ ಜಯ

ಬೊಂಬಾಯಿ ಸಂಸ್ಥಾನದ ಸೂರತ್ ಕ್ಷೇತ್ರದಿಂದ ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವ ಶ್ರೀ ಮೊರಾರ್ಜಿ ದೇಸಾಯಿಯವರೂ ಮತ್ತು ಅಲಹಾಬಾದ್ ಕ್ಷೇತ್ರದಿಂದ ಮಾಜಿ ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿಯವರೂ ಲೋಕ ಸಭೆಗೆ ಆರಿಸಿ ಬಂದಿರುತ್ತಾರೆ

ಉತ್ತರ ಪ್ರದೇಶದ ವಿಧಾನ ಸಭೆಯ ಡೆಪ್ಯುಟಿ ಸ್ಪೀಕರರಾದ ಶ್ರೀ ಹರಗೋವಿಂದ್‌ರವರು ಲೋಕ ಸಭೆಗೆ ಚುನಾಯಿತರಾಗಿರುವರು

ಕೇಂದ್ರದ ಉಪ ಮಂತ್ರಿಗಳಿಬ್ಬರ ಸೋಲು

ಕೇಂದ್ರ ಸರ್ಕಾರದ ಉಪ ಸಚಿವರುಗಳಾದ ಶ್ರೀ ಓ. ವಿ. ಅಲಗೇಶ ಮತ್ತು ಶ್ರೀಮತಿ ಮರಗತಂ ಚಂದ್ರಶೇಖರ್‌ರವರು ಮದರಾಸಿನ ಚಂಗಲ್ಪಟ್ ದ್ವಿಸದಸ್ಯ ಕ್ಷೇತ್ರದಿಂದ ಸಂಸ್ಥಾನ ವಿಧಾನ ಸಭೆಗೆ ಸ್ಪರ್ಧಿಸಿ ಪರಾಜಿತರಾಗಿರುವರು. ಆ ಕ್ಷೇತ್ರಗಳಲ್ಲಿ ಸ್ವತಂತ್ರ ಉಮೇದುವಾರರಾದ ಶ್ರೀಗಳು ಎ. ಕೃಷ್ಣಸ್ವಾಮಿ ಮತ್ತು ಎಸ್. ಶಿವರಾಜ್‌ರವರು ಗೆದ್ದಿರುವರು.

ಶ್ರೀರಂಗಪಟ್ಟಣದಲ್ಲಿ ಎ. ಜಿ. ಬಂದಿಗೌಡರ ಪರಾಜಯ

ಶ್ರೀರಂಗಪಟ್ಟಣದಿಂದ ಸಂಸ್ಥಾನದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರೂ ಮತ್ತು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ವ್ಯವಸ್ಥಾ ಕಾರ್ಯದರ್ಶಿಯೂ ಆದ ಶ್ರೀ ಎ. ಜಿ. ಬಂದಿಗೌಡರಿಗೆ ಭಾರಿ ಸೋಲಾಗಿದೆ. ಸ್ವತಂತ್ರ ಉಮೇದುವಾರರಾದ ಶ್ರೀ ಎ ಜಿ. ಚುಂಚೇಗೌಡರು ಜಯಗಳಿಸಿರುವರು. ಅವರಿಗೆ ೧೮,೨೪೦ ಓಟುಗಳೂ, ಶ್ರೀ ಬಂದಿಗೌಡರಿಗೆ ೧೧,೨೪೭ ಓಟುಗಳೂ ಬಂದುವು.

ಸಧ್ಯದಲ್ಲೇ ಬಾಗ್ದಾದ್ ಒಪ್ಪಂದ ಕೂಟಕ್ಕೆ ಅಮೆರಿಕ ಸೇರುವುದು

ಸ್ವಲ್ಪ ಕಾಲಾನಂತರ ಬಾಗ್ದಾದ್ ಒಪ್ಪಂದದ ಕೂಟಕ್ಕೆ ಅಮೆರಿಕವು ಸೇರಲಿರುವುದೆಂದು ಪಾಕಿಸ್ತಾನದಲ್ಲಿನ ಅಮೆರಿಕದ ರಾಯಭಾರಿ ಹೊರೇಸ್ ಹಿಲ್ಡ್ರೆತ್‌ರವರು ಸೂಚನೆಯಿತ್ತಿದ್ದಾರೆ. ಈ ಬಗ್ಗೆ ಅವರನ್ನು ಪ್ರಶ್ನಿಸಲಾಗಿ "ಇನ್ನೂ ಹೆಚ್ಚು ಅರಬ್ ಮತ್ತು ಮಧ್ಯಪ್ರಾಚ್ಯದ ರಾಷ್ಟ್ರಗಳನ್ನು ಸೇರಿಸಿದನಂತರ" ಅಮೆರಿಕವು ಬಾಗ್ದಾದ್ ಒಪ್ಪಂದಕ್ಕೆ ಸೇರುವುದೆಂದು ಅವರು ತಿಳಿಸಿದರು.

ವಿಮಾನ ಸಿಡಿದು ಗುಡಿಸಲ ಮೇಲೆ ಬಿದ್ದು ಐವರ ಮರಣ

ಇಂಡಿಯನ್ ಏರ್‌ಲೈನ್ಸಿನ ಡಕೋಟಾ ವಿಮಾನವೊಂದು ನೆನ್ನೆ ಬೆಳಿಗ್ಗೆ ದೆಹಲಿ ಸಮೀಪದಲ್ಲಿ ಕಾರ್ಮಿಕರ ಗುಡಿಸಲುಗಳಿದ್ದ ಪ್ರದೇಶದಲ್ಲಿ ಬಿದ್ದುದರಿಂದ ವಿಮಾನದಲ್ಲಿದ್ದ ಇಬ್ಬರೂ ಮತ್ತು ಗುಡಿಸಲಿನಲ್ಲಿದ್ದ ಮೂವರೂ ಮೃತಪಟ್ಟರೆಂದು ವರದಿಯಾಗಿದೆ. ಗುಡಿಸಲುಗಳಲ್ಲಿದ್ದ ಸುಮಾರು ೫೦೦ ಜನರು ಕೆಲಸಗಳಿಗಾಗಿ ಹೊರಗೆ ಹೋಗಿದ್ದುದರಿಂದ ಹೆಚ್ಚಿನ ದುರಂತ ನಡೆಯಲಿಲ್ಲ. ನೂರು ಗುಡಿಸಲುಗಳು ಸುಟ್ಟು ಭಸ್ಮವಾದುವು.

ಲೋಕಸಭೆಗೆ ತಂದೆ ಮತ್ತು ಮಗಳ ಆಯ್ಕೆ

ಇದುವರೆಗೂ ರಾಜ್ಯ ಸಭೆಯ ಸದಸ್ಯರಾಗಿದ್ದ ಮದ್ರಾಸಿನ ಡಾ|| ಪಿ ಸುಬ್ಬರಾಯನ್‌ರವರು ತಿರುಚೆಂಗೋಡು ಕ್ಷೇತ್ರದಿಂದಲೂ ಅವರ ಮಗಳು ಶ್ರೀಮತಿ ಪಾರ್ವತಿ ಕೃಷ್ಣನ್ ಕಮ್ಯೂನಿಸ್ಟ್ ಸ್ಪರ್ಧಿಯಾಗಿ ಕೊಯಮತ್ತೂರು ಕ್ಷೇತ್ರದಿಂದಲೂ ಲೋಕಸಭೆಗೆ ಚುನಾಯಿತರಾಗಿರುವರು. ಕಳೆದ ಚುನಾವಣೆಗಳಲ್ಲಿ ಇಬ್ಬರೂ ಸೋತಿದ್ದರು.

ಸತ್ಯನಾರಾಯಣ ಪೂಜೆ ಮತ್ತು ಸಂಗೀತ

ವಿದ್ಯಾರಣ್ಯಪುರದಲ್ಲಿರುವ ಶ್ರೀ ಸತ್ಯನಾರಾಯಣ ಮಂದಿರದಲ್ಲಿ ನಾಳೆ ಪೂರ್ಣಿಮೆ ಪ್ರಯುಕ್ತ ಬೆಳಿಗ್ಗೆ ಸತ್ಯನಾರಾಯಣ ಪೂಜೆಯೂ ಮತ್ತು ಸಂಜೆ ೬–೩೦ಕ್ಕೆ ವಿದುಷಿ ಚೊಕ್ಕಮ್ಮನವರ ಗಾಯನವೂ, ವಿ|| ಎಚ್. ವಿ ಕೃಷ್ಣರಾಯರ ಪಿಟೀಲು ಮತ್ತು ಅ|| ವಿ|| ಡಿ ಶೇಷಪ್ಪನವರ ಮೃದಂಗದೊಡನೆ ಏರ್ಪಾಡಾಗಿವೆ.

ದೇವನೂರು ಮಠದ ಉತ್ತರಾಧಿಕಾರಿಗಳ ಆಯ್ಕೆ

ನಂಜನಗೂಡು ತಾಲ್ಲೂಕು ದೇವನೂರು ಶ್ರೀ ಗುರುಮಲ್ಲೇಶ್ವರ ಮಠದ ಶ್ರೀ ಕೋಂಟದಾರ್ಯ ಸ್ವಾಮಿಯವರು ಕಳೆದ ೧೭ನೇ ತಾರೀಖು ಲಿಂಗೈಕ್ಯರಾದ ಪ್ರಯುಕ್ತ ಅವರ ಸ್ಥಾನಕ್ಕೆ ಉತ್ತರಾಧಿಕಾರಿಗಳನ್ನು ಗೊತ್ತುಮಾಡಲು ಇದೇ ೨೦ನೇ ತಾರೀಖು ಬುಧವಾರ ಸಾಯಂಕಾಲ ೬ ಗಂಟೆಗೆ ದೇವನೂರು ಶ್ರೀ ಮಠದಲ್ಲಿ ಸಭೆ ಸೇರುವುದರಿಂದ ಎಲ್ಲ ಭಕ್ತಮಾಹೇಶ್ವರರೂ ಸಕಾಲಕ್ಕೆ ಬರಬೇಕೆಂದು ಮಠದ ಭಕ್ತರುಗಳು ಕೋರಿರುತ್ತಾರೆ.

ಶ್ರೀ ಪುಟ್ಟಸ್ವಾಮಿಯವರಿಗೆ ಭಾರಿ ವಿಜಯ

ಮೈಸೂರು ೧೪

ಇಂದು ಬೆಳಿಗ್ಗೆ ೧೧ ಗಂಟೆಗೆ ಮೈಸೂರು ತಾಲ್ಲೂಕಿನ ಮತದಾನದ ಎಣಿಕೆ ಆರಂಭವಾಗಿ ೪–೩೦ಕ್ಕೆ ಮುಗಿಯಿತು. ಕಾಂಗ್ರೆಸ್ಸಿನ ಶ್ರೀ ಕೆ. ಪುಟ್ಟಸ್ವಾಮಿಯವರಿಗೆ ೧೧,೬೨೩, ಪಿ ಎಸ್. ಪಿ ಯ ಶ್ರೀಕಂಠಪ್ಪನವರಿಗೆ ೫,೭೫೫ ಮತ್ತು ಸ್ವತಂತ್ರರಾದ ಟಿ.ಸಿ. ಗೊನ್ನಪ್ಪನವರಿಗೆ ೪,೧೩೦ ಓಟುಗಳು ಬಂದು ಶ್ರೀ ಪುಟ್ಟಸ್ವಾಮಿಯವರು ಜಯ ಗಳಿಸಿದರು.

ಶ್ರೀ ಪ್ರಸನ್ನ ಸಾಯಿಮಂದಿರದ ಪ್ರಾರಂಭೋತ್ಸವ

ನಗರದ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದ ಆರಂಭೋತ್ಸವವನ್ನು ನಾಳೆ ಸಂಜೆ ೫–೩೦ ಗಂಟೆಗೆ ಶ್ರೀಮನ್ಮಹಾರಾಜರವರು ನೆರವೇರಿಸುವರು.

ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿಯ ವಂದನೆಗಳು

ಮೊನ್ನೆ ನಗರದಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಸಹಕರಿಸಿ ಸಹಾಯ ಮಾಡಿದ ಎಲ್ಲಾ ಮಹಾ ಜನರಿಗೂ ಮತ್ತು ಸಾರ್ವಜನಿಕ ಸಂಸ್ಥೆಗಳ ಕಾರ್ಯಕರ್ತರುಗಳಿಗೂ ನಗರ ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿಯವರು ಈ ಮೂಲಕ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿರುತ್ತಾರೆ.

ಮದ್ರಾಸಿನಲ್ಲಿ ಸಚಿವ ಸೇತುಪತಿಯವರ ಜಯ

ರಾಮನಾಥಪುರ ಕ್ಷೇತ್ರದಿಂದ ಮದ್ರಾಸಿನ ವಿಧಾನ ಸಭೆಗೆ, ಹಾಲಿ ಸಚಿವರಾಗಿರುವ ಶ್ರೀ ಎಸ್. ಆರ್. ಸೇತುಪತಿಯವರು ಸ್ವತಂತ್ರವಾಗಿ ಸ್ಪರ್ಧಿಸಿ ಜಯಗಳಿಸಿರುವರು. ಕಾಂಗ್ರೆಸ್ ಟಿಕೆಟ್ ದೊರೆಯದಿದ್ದುದರಿಂದ ಅವರು ಸ್ವತಂತ್ರರಾಗಿ ಸ್ಪರ್ಧಿಸಿದ್ದರು. ಅವರ ವಿರೋಧವಾಗಿ ಕಮ್ಯೂನಿಸ್ಟರೊಬ್ಬರು ನಿಂತು ಪರಾಜಿತರಾದರು. ಆ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನವರು ಬೇರೆ ಯಾವ ಉಮೇದುವಾರರನ್ನೂ ನಿಲ್ಲಿಸಲಿಲ್ಲ

ಮುಂದಿನ ಮುಖ್ಯ ಮಂತ್ರಿ ಯಾರು ?

ಹನುಮಂತಯ್ಯನವರ ಗೃಹದಲ್ಲಿ ಸಮಾಲೋಚನೆ

ಸ್ವಂ. ವ. ತಂತಿ] ಬೆಂಗಳೂರು ೧೪

ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತವು ಬಂದಿರುವುದರಿಂದ ನಾಯಕತ್ವದ ಸ್ಪರ್ಧೆಯ ಸೂಚನೆಗಳು ಈಗಾಗಲೇ ಕಂಡು ಬರುತ್ತಿವೆ. ಹುಬ್ಬಳ್ಳಿಯಿಂದ ಶ್ರೀ ಟಿ ಆರ್. ನೇಸ್ವಿಯವರು ಇಲ್ಲಿಗೆ ಬಂದಿದ್ದಾರೆ ಈ ದಿನ ಬೆಳಿಗ್ಗೆ ಶ್ರೀ ಹನುಮಂತಯ್ಯನವರ ಮನೆಯಲ್ಲಿ ಜಯಶೀಲರಾದ ೬೦ ಜನ ಕಾಂಗ್ರೆಸ್ ಸ್ಪರ್ಧಿಗಳು ಎರಡು ಗಂಟೆ ಕಾಲ ಸಮಾಲೋಚನೆ ನಡೆಸಿದರು

ಕಾಶ್ಮೀರದ ಸಮಸ್ಯೆ ಆಗ್ನೇಯ ಏಷ್ಯಾ ರಾಷ್ಟ್ರ ಕೂಟದಲ್ಲಿ ಚರ್ಚಿಸತಕ್ಕದ್ದಲ್ಲ

ಪಾಕಿಸ್ತಾನದ ಸಮಸ್ಯೆಯು ಬಗ್ಗೆ ಆಗ್ನೇಯ ಏಷ್ಯಾ ರಾಷ್ಟ್ರಗಳ ಕೂಟದ ಸಭೆಯಲ್ಲಿ ಪರಿಶೀಲಿಸಬೇಕೆಂದು ಪಾಕಿಸ್ತಾನವು ಮಾಡಿದ್ದ ಸಲಹೆಯನ್ನು ಡಲ್ಲೆಸ್‌ರವರು ಪ್ರಸ್ತಾಪಿಸಿ ಅದನ್ನು ಅಲ್ಲಿ ಪರಿಶೀಲಿಸಬೇಕಾದ ಅಗತ್ಯವಿಲ್ಲವೆಂದೂ, ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳ ಮೇಲೆ ಕಮ್ಯೂನಿಸ್ಟರ ಆಕ್ರಮಣ ನಡೆದರೆ ಮಾತ್ರ ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳೆಲ್ಲ ಸಂಯುಕ್ತವಾಗಿ ಕ್ರಮ ಕೈಗೊಳ್ಳುವ ಬಗ್ಗೆ ಒಪ್ಪಂದದ ಅನುಬಂಧಗಳಲ್ಲಿ ನಮೂದಿಸಲಾಗಿರುವುದೆಂದೂ ತಿಳಿಸಿರುವರು.

ನೆಲಮಂಗಲದಲ್ಲಿ ಕಾಂಗ್ರೆಸ್ ಉಮೇದುವಾರರ ಆಯ್ಕೆ

ನೆಲಮಂಗಲದ ದ್ವಿ ಸದಸ್ಯ ಕ್ಷೇತ್ರದಲ್ಲಿ ವಿಧಾನ ಸಭೆಯ ಸಾಮಾನ್ಯ ಸ್ಥಾನಕ್ಕೆ ಶ್ರೀ ಆಲೂರು ಹನುಮಂತಪ್ಪನವರೂ ಮತ್ತು ಮೀಸಲು ಸ್ಥಾನಕ್ಕೆ ಲೋಕ ಸೇವಾ ನಿರತ ಶ್ರೀ ಎಂ ಹನುಮಂತಯ್ಯನವರೂ—ಕಾಂಗ್ರೆಸ್ಸಿನ ಪರವಾಗಿ ಸ್ಪರ್ಧಿಸಿ ಜಯ ಗಳಿಸಿರುವರು

ಬಿಹಾರಿನ ರೆವಿನ್ಯೂ ಸಚಿವರ ಪರಾಜಯ

ಬಿಹಾರಿನ ರೆವಿನ್ಯೂ ಸಚಿವರಾದ ಶ್ರೀ ಕೃಷ್ಣ ವಲ್ಲಭ ಸಹಾಯ್‌ರವರು ಚುನಾವಣೆಯಲ್ಲಿ ಪರಾಜಿತರಾಗಿರುವರು ಅವರ ಪ್ರತಿಸ್ಪರ್ಧಿಯಾಗಿದ್ದ ಜನತಾ ಪಕ್ಷದ ಉಮೇದುವಾರರು ಜಯಗಳಿಸಿರುವರು

ರಾಜಾಸ್ತಾನದಲ್ಲಿ ಪಠ್ಯ ಪುಸ್ತಕಗಳ ರಾಷ್ಟ್ರೀಕರಣ

ರಾಜಾಸ್ತಾನ ಸಂಸ್ಥಾನದಲ್ಲಿ ಈ ವರ್ಷ ಜುಲೈನಿಂದ ಮಧ್ಯಮ ವರ್ಗದ ತರಗತಿಗಳ ಎಲ್ಲಾ ವಿಷಯಗಳ ಪಠ್ಯ ಪುಸ್ತಕಗಳನ್ನೂ ರಾಷ್ಟ್ರೀಕರಣ ಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ

ರಾಮಾಭ್ಯುದಯ ಸಭೆಗೆ ಕಾಣಿಕೆ

ಶ್ರೀರಾಮಪೇಟೆ ಶ್ರೀ ರಾಮಾಭ್ಯುದಯ ಸಭೆಗೆ ಮೈಸೂರಿನ ಶ್ರೀ ಆರ್ ರಾಮರಾಯರು, ಬೊಂಬಾಯಿಯ ಶ್ರೀ ರಾಮಣ್ಣನವರು, ಬೆಂಗಳೂರಿನ ಶ್ರೀಮತಿ ನಾಗಮ್ಮ ಟಿ ರಾಮಯ್ಯನವರು ತಲಾ ೧೦೧ ರೂ., ಮೈಸೂರಿನ ಶ್ರೀ ಎಸ್ ಎಲ್ ನಾರಾಯಣರಾಯರು ಮತ್ತು ಬೆಂಗಳೂರಿನ ಶ್ರೀ ಟಿ ರಾಮಕೃಷ್ಣಯ್ಯನವರು ತಲಾ ೧೦೦ ರೂ.; ಕಲ್ಪತ್ರದ ಶ್ರೀ ಸಿ.ಎ ಕೃಷ್ಣಸ್ವಾಮಿ ಮತ್ತು ಬೆಂಗಳೂರಿನ ಶ್ರೀ ಜಿ ಎಸ್. ಕೃಷ್ಣಮೂರ್ತಿಯವರು ತಲಾ ೨೫ ರೂ ಗಳನ್ನು ಕಾಣಿಕೆಯಾಗಿ ಕೊಟ್ಟಿರುತ್ತಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗಾಂಧಿ ಕಥಾವಳಿ ೭-೧೫ ಎಂ. ಎಸ್. ಲಲಿತಮ್ಮ-ಗೀತಾವಳಿ ೭-೩೦ ಹಿಂದಿ ಶಿಕ್ಷಣ. ೮-೧೫ ಗೀತಾವಳಿ ಮಧ್ಯಾಹ್ನ ೧೨ ಮತ್ತು ೨-೧೫ ಎಂ ಎ ನಿರ್ಮಲಾದೇವಿ ಗಾಯನ ೧೨-೩೦ ವಾದ್ಯ ವೃಂದ ೧೨ ೪೫ ವನಿತಾ ವಿಹಾರ ೧ ೫೦ ಗೀತಾವಳಿ ಸಂಜೆ ೫ ಹಿಂದೂಸ್ಥಾನಿ ಸಂಗೀತ ೬ ೫ ವಿರಾಮ ಸಂಗೀತ ೬-೨೦ ಗೀತಾವಳಿ ೬-೩೦ ಗ್ರಾಮಸ್ಥರಿಗಾಗಿ ೭ ೨೦ ಕನ್ನಡದಲ್ಲಿ ವಾರ್ತೆ : ಪ್ರಸಂಗ ೮ ವಿನೋದ ನಾಟಕ ಚಕ್ರ ೮-೧೫ ವಿದೂಷಕ ಹಾಸ್ಯ ರಸಿಕ [illegible] ತರಂಗ ರಂಗ ವಿನೋದ ಕಾರ್ಯಕ್ರಮ

ಮಧ್ಯ ಪೂರ್ವದ ಬಗ್ಗೆ ರಷ್ಯಾ ಸಲಹೆಗೆ ತ್ರಿರಾಷ್ಟ್ರಗಳ ತಿರಸ್ಕಾರ

ಮಧ್ಯ ಪೂರ್ವ ರಾಷ್ಟ್ರಗಳಲ್ಲಿ ಅನ್ಯ ದೇಶೀಯ ಮಿಲಿಟರಿ ನೆಲೆಗಳನ್ನು ರದ್ದುಗೊಳಿಸಿ, ಅವುಗಳನ್ನು ಮಿಲಿಟರಿ ಕೂಟಗಳೊಳಗೆ ಸೇರಿಸದೆ ಅವುಗಳಿಗೆ ಶಸ್ತ್ರಾಸ್ತ್ರ ಸರಬರಾಜನ್ನು ತಪ್ಪಿಸಬೇಕೆಂದು ರಷ್ಯವು ಮಾಡಿದ್ದ ೧೧ ಅಂಶಗಳ ಸಲಹೆಯನ್ನು ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸುಗಳು ತಿರಸ್ಕರಿಸಿವೆ ರಷ್ಯವು ವಿಪರೀತವಾಗಿ ಶಸ್ತ್ರಾಸ್ತ್ರಗಳನ್ನು ಕಳುಹಿಸುತ್ತಿರುವುದರಿಂದಲೇ ಆ ಪ್ರದೇಶದಲ್ಲಿ ಬಿಕ್ಕಟ್ಟು ಹೆಚ್ಚಾಗುತ್ತಿರುವುದೆಂದೂ ತಿಳಿಸಲಾಗಿದೆ

ಕತ್ತೆ ಅರಚಿದುದು ಓಟು ಮಾಡುವುದಕ್ಕೆ ಅಪಶಕುನ

ಬೊಂಬಾಯಿ ನಗರದಲ್ಲಿ ಆಸ್ತಿಕರಾದ ವೃದ್ಧ ದಂಪತಿಗಳಿಬ್ಬರು ಕಳೆದ ಸೋಮವಾರ ಓಟು ಕೊಡಲು ಮನೆಯಿಂದ ಹೊರಕ್ಕೆ ಬಂದಾಗ ಎಲ್ಲೋ ಕತ್ತೆಯೊಂದು ಅರಚಿತು ಅದು ಅಪಶಕುನವಾಯಿತೆಂದೂ, ಈಗ ತಾವು ಓಟು ಕೊಟ್ಟರೆ ತಮ್ಮ ಅಭ್ಯರ್ಥಿಗೆ ಸೋಲಾಗಬಹುದೆಂದೂ ಅವರು ಭಾವಿಸಿ ಮತವನ್ನು ಚಲಾಯಿಸದೆ ಮನೆಯಲ್ಲೇ ಉಳಿದರು

ನಯೆ ಪೈಸೆಯಲ್ಲಿ ಅಂಚೆ ದರ

ಬರುವ ತಿಂಗಳು ೧ರಿಂದ ಜಾರಿಗೆ ಬರುವ ದಶಮಾಂಶ ನಾಣ್ಯ ಪದ್ಧತಿಗೆ ತಕ್ಕಂತೆ ಅಂಚೆ ದರಗಳನ್ನೂ ಅಳವಡಿಸಲಾಗಿದೆ ಅದರ ಪ್ರಕಾರ ಮೊದಲಿನ ೧೦೦ ತೊಲ ಇನ್‌ಷೂರ್ ಪದಾರ್ಥಕ್ಕೆ ೭೭ ನಯೆ ಪೈಸೆ ಮತ್ತು ಮುಂದಿನ ೧೦೦ ಅಥವಾ ಕಡಿಮೆ ತೊಲಗಳಿಗೆ ೨೦ ನಯೆ ಪೈಸೆಗಳಾಗುವುವು ರಿಜಿಸ್ಟರ್ ಪದಾರ್ಥಕ್ಕೆ ೫೦ ನಯೆ ಪೈಸೆಯನ್ನು ಗೊತ್ತುಪಡಿಸಲಾಗಿದೆ ಸರ್ಟಿಫಿಕೇಟ್ ಆಫ್ ಪೋಸ್ಟಿಂಗಿಗೆ ೩ ನಯೆ ಪೈಸೆ ಆಗುವುದು ಅಂಚೆ ಕಛೇರಿಗಳಲ್ಲಿ ಕೊಡುವ ಪದಾರ್ಥಗಳಿಗೆ ಲೇಟ್ ಫೀಗಾಗಿ ೩ ನಯೆ ಪೈಸೆ ಕೊಡಬೇಕು ಆರ್ ಎಂ ಎಸ್. ನಲ್ಲಿ ಕೊಟ್ಟರೆ ಆರು ನಯೆ ಪೈಸೆ ಆಗುವುದು. ಮೇಲ್ ವ್ಯಾನಿಗೆ ಹಾಕಿದರೆ ಒಳನಾಡಿನ ಪದಾರ್ಥಕ್ಕೆ ೬ ನಯೆ ಪೈಸೆ ವಿದೇಶೀ ಪದಾರ್ಥಕ್ಕೆ ೧೨ ನಯೆ ಪೈಸೆ

ರಾಮಕೃಷ್ಣ ಪರಮಹಂಸರ ದಿನಾಚರಣೆ

ದೇವರಾಜ ಮೊಹಲ್ಲಾ ಮಹಿಳಾ ಸದನದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ರಾಮಕೃಷ್ಣ ಪರಮಹಂಸರ ದಿನಾಚರಣೆಯನ್ನು ನೆರವೇರಿಸಲಾಗುವುದು ಶ್ರೀಮತಿ ಎಸ್. ಡಿ ಭಾಗೀರಥಿಯವರು ಅಧ್ಯಕ್ಷತೆ ವಹಿಸುವರು ಸಾಮೂಹಿಕ ಪ್ರಾರ್ಥನೆಯೂ ನಡೆಯುವುದು ಮಹಿಳೆಯರೆಲ್ಲರಿಗೂ ಸ್ವಾಗತವಿದೆ. ಶ್ರೀ ಎಂ. ಪ್ರಹ್ಲಾದ್‌ರವರ ಸಂಗೀತವೂ ಏರ್ಪಾಡಾಗಿದೆ

ವಿದ್ಯಾಭ್ಯಾಸದ ಇಲಾಖೆಯ ರೆಕಗ್ನಿಷನ್ ಪಡೆದ
ನರ್ಸರಿ ಸ್ಕೂಲ್ ಉಪಾಧ್ಯಾಯಿನಿಯರ ಶಿಕ್ಷಣ ಕೇಂದ್ರ
ನಗರದ ದಿವಾನ್ಸ್ ರೋಡಿನಲ್ಲಿರುವ
ಶ್ರೀ ಜಗದಂಬಾ ಶಿಶುವಿಹಾರದಲ್ಲಿ
11-3-57ರಿಂದ ಪ್ರಾರಂಭವಾಗಿದೆ
ಸೇರಲಪೇಕ್ಷಿಸುವ ಮಹಿಳೆಯರು ಕೂಡಲೇ
ಡೈರೆಕ್ಟರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು
ಕೋರಲಾಗಿದೆ
ಡಿ ಕೃಷ್ಣಮೂರ್ತಿ,
ಡೈರೆಕ್ಟರ್

ಶ್ರೀವಿಲ್ಲಿಪುತ್ತೂರು ಕ್ಷೇತ್ರದಲ್ಲಿ ೭೧ ಸಾವಿರ ಕುಲಗೆಟ್ಟ ಓಟುಗಳು

ಲೋಕ ಸಭೆಗೆ ಶ್ರೀವಿಲ್ಲಿಪುತ್ತೂರು ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಒಟ್ಟು ಮತದಾನದ ಶೇಕಡ ೮ ರಷ್ಟಾದ ೭೧,೪೫೬ ಮತಗಳು ಕುಲಗೆಟ್ಟುವೆಂದು ವರದಿಯಾಗಿದೆ. ಅಲ್ಲದೆ ಅಭ್ಯರ್ಥಿಗಳ ಪೈಕಿ ನಾಲ್ಕರಿಗೆ ಇದಕ್ಕೂ ಕಮ್ಮಿಯಾಗಿ ಓಟುಗಳು ಬಂದುವೆಂದು ಗೊತ್ತಾಗಿದೆ.

ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ಸಿಗೆ ಜಯ

ಪಿರಿಯಾಪಟ್ಟಣದಿಂದ ಮೈಸೂರು ವಿಧಾನ ಸಭೆಗೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ಎಸ್. ಆರ್. ಸೋಮಣ್ಣನವರು ೧೯,೭೧೪ ಓಟುಗಳನ್ನು ಪಡೆದು ಜಯಶೀಲರಾಗಿರುವರು ಪರಾಜಿತರಾದ ಸ್ವತಂತ್ರ ಉಮೇದುವಾರ ಶ್ರೀ ಟಿ ವೆಂಕಟರಾಯರಿಗೆ ೯,೨೪೪ ಓಟುಗಳು ಬಂದಿವೆ

ಏಪ್ರಿಲ್ ಮಧ್ಯ ಭಾಗದಲ್ಲಿ ಮಂತ್ರಿಮಂಡಲಗಳ ರಚನೆ

ಮುಂದಿನ ಸೋಮವಾರ ದೆಹಲಿಯಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ ಸಭೆಯು ಸೇರಿ ನಾನಾ ಸಂಸ್ಥಾನಗಳಲ್ಲಿ ಮಂತ್ರಿಮಂಡಲಗಳನ್ನು ರಚಿಸುವ ಬಗ್ಗೆ ಚರ್ಚಿಸಿ ಪಕ್ಷಗಳ ನಾಯಕರ ಚುನಾವಣೆಯ ಕಾರ್ಯಕ್ರಮವನ್ನೂ ಮತ್ತು ಮಂತ್ರಿಮಂಡಲಗಳ ಸಂಖ್ಯೆ ಮತ್ತು ಅವುಗಳಲ್ಲಿ ಸ್ತ್ರೀಯರು. ಅಲ್ಪಸಂಖ್ಯಾತರೇ ಮುಂತಾದ ಪಂಗಡಗಳ ಪ್ರಾತಿನಿಧ್ಯದ ಬಗ್ಗೆ ನಿರ್ಧಾರ ಕೈಗೊಳ್ಳುವುದೆಂದೂ ವರದಿಯಾಗಿದೆ ನಾಯಕರುಗಳು ಚುನಾಯಿತರಾದನಂತರ ಅವರನ್ನು ದೆಹಲಿಗೆ ಸಮಾಲೋಚನೆಗಾಗಿ ಕರೆಸಿ ಮಂತ್ರಿಮಂಡಲಗಳ [illegible] ಈಗಿನ ಸೂಚನೆ ಪ್ರಕಾರ ಏಪ್ರಿಲ್ ಮಧ್ಯ ಭಾಗದಲ್ಲಿ ಹೊಸ ಮಂತ್ರಿಮಂಡಲಗಳು ರಚನೆಯಾಗಬಹುದೆಂದು ತಿಳಿದುಬಂದಿದೆ.

ಚೀಲ ಕಳೆದುಹೋಗಿದೆ

ಕೆಲವು ಪುಸ್ತಕಗಳು, ಬಟ್ಟೆ ಮತ್ತು ಕಾಗದ ಪತ್ರಗಳು ಇರುವ ಒಂದು ಚೀಲವು ಕಳೆದ ಸೋಮವಾರ ನಗರ ರೈಲ್ವೆ ಸ್ಟೇಷನ್ ಬಳಿ ಕಳೆದುಹೋಗಿರುತ್ತೆ. ಯಾರಿಗಾದರೂ ಸಿಕ್ಕಿದಲ್ಲಿ ಅದನ್ನು ತಂದುಕೊಟ್ಟರೆ ಸೂಕ್ತ ಬಹುಮಾನ ಕೊಡಲಾಗುವುದು

ಹೆಚ್. ಬಿ. ರುದ್ರಪ್ಪ, ಬಿ ಇ
ಕೆಮಿಕಲ್ ಇಂಜನಿಯರ್,
(ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಕಂಪನಿ,
ಬೆಳಗೊಳ)
ವಾಣಿವಿಲಾಸ ರಸ್ತೆ, ಮೈಸೂರು.

○ ಮೈಸೂರು ತಾಲ್ಲೂಕು ಕ್ಷೇತ್ರದಿಂದ ಮ ವಿಧಾನ ಸಭೆ ಮತ್ತು ಲೋಕ ಸಭೆಗಳ ನಾವಣೆಯು ಅಮಲ್ದಾರ್ ಶ್ರೀ ರಾಮಕೃಷ್ಣ ಮೇಲ್ವಿಚಾರಣೆಯಲ್ಲಿ ಯಶಸ್ವಿಯಾಗಿ ಗಿತು.

ಮೈಸೂರಿನಲ್ಲಿ ಪ್ರತಿ ತಿಂಗಳ
17 ನೇ ತಾರೀಕು
ವಿಶ್ವವಿಖ್ಯಾತರಾಗಿ
ನವರತ್ನ ಕಲ್ಪ

ದಿವ್ಯೌಷಧವನ್ನು ಕಂ
ಡುಹಿಡಿದಿರುವ
ಕವಿರಾಜ ಪಂಡಿ
ದುರ್ಗಾದತ್ತ ಶರ್ಮ
ವೈದ್ಯ ವಾಚಸ್ಪತಿ
ಪ್ರತಿ ತಿಂಗಳು 17ನೇ ತಾರೀಕು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ನೋಡಬಹುದು : ರೂಮ್ ನಂ. 5
—: ಭೇಟಿಯ ಕಾಲ :—
ಬೆಳಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಇವರು [illegible]
[illegible] ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಗಳು
ಇದು ವಜ್ರ, ಚಿನ್ನ, ಮುತ್ತು, ಹವಳ, ಗೋರೋಚನ, ಪಚ್ಚೆ, ಪದ್ಮರಾಗ ಮತ್ತು ಕಸ್ತೂರಿ—ಈ 9 ಅಮೂಲ್ಯ ಪದಾರ್ಥಗಳ ಸಂ ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಧದ ವ್ಯಾಧಿಗಳು, ಕೆಮ್ಮು, ದಮ್ಮು, ರಕ್ತ ಮೂಲವ್ಯಾಧಿ, ಸಾಂಕ್ರಾಮಿಕ, ಬಹುಮೂತ್ರ, ಮತ್ತು ನಿಮ್ಮ ಇನ್ನಿತರ ಎಲ್ಲಾ ಸಾಮಾನ್ಯ ಹಾಗೂ ತೀವ್ರವಾದ ಕಾಯಿಲೆಗಳೂ ಸಂಪೂರ್ಣವಾಗಿ ಗುಣಹೊಂದುವುವು. ಅತ್ಯುತ್ತಮ ಇದೊಂದೇ
ವಿಶಾಖಪಟ್ಟಣ, ರಾಜಮಹೇಂದ್ರಿ, ಗುಂ ಬೆಜವಾಡ, ಮದ್ರಾಸು, ಬೆಂಗಳೂರು, ತ್ತೂರು, ಮಧುರೆ, ತಿರುಚಿನಾಪಳ್ಳಿ, ಸೇಲಂ, ರ್ನಾಕುಲಂ ಕೊಟ್ಟಾಯಂ ತ್ರಿವೇಂದ್ರಂ ಲ್ಲೇರಿ, ಪಾಂಡಿಚೆರಿ, ಕುಂಭಕೋಣಂ, ರಾಜಾದಿಗಳ ವಿಳಾಸ ಮತ್ತು ಇತರ ಹಿತ್ಯಗಳಿಗೆ ಬರೆಯಿರಿ.—
NAVRATNA KALPA PHARMACY,
JULLUNDUR CITY· (India

Edited, Printed and Publishe
A. R. Nagarajan at Sadhvi Pr
D Subbiah Road, Mysore

SRI GAYATHRI TALKIES
Grand Gala Release : From 15--3--57 . Daily 4 Shows
At 10-30, 3-30 6-30 and 9-45
★ **TRAPEZE** ★
THE WONDER SHOW OF THE WORLD
Starring Tony Curtis, Burt Lancaster and
Gina Lollobrigida
Complimentary and Free Passes suspended

ಪ್ರಭುದೇವಾ ಥಿಯೇಟರ
(ಪದ್ಮಾ ಟಾಕೀಸ್)
15—3—57ನೇ : ಶುಕ್ರವಾರದಿಂದ : ಅಶೋಕ
ಸರ್ವೋದಯ ಪಿಕ್ಚರ್ಸ್‌ರವರ ಸಂಗೀತಮಯ ತಮಿಳು ಚಿತ್ರ

★ **ಪುದುವಾಳ್ವು**
ಪಾತ್ರ : ತ್ಯಾಗರಾಜ ಭಾಗವತರ್, ಲಲಿತ, ಮಾಧುರಿದೇವಿ, ತಂಗವೇಲು,
ಟಿ ಎಸ್ ಬಾಲಯ್ಯ, ಎಸ್. ಎಸ್ ಕೃಷ್ಣನ್, ಟಿ ಎ. ಮಧುರಂ

ರಿಜಿಸ್ಟರ್ಡ್ ನಂ. 192

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಒಂದು ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀರಾಮಪುರ [illegible]
ಬೆಂಗಳೂರು-2

ಸಂಪುಟ : ೦೫] SADHVI : FRIDAY 15—3—1957 ಮೈಸೂರು : ಶುಕ್ರವಾರ ೧೫-೩-೧೯೫೭ : [ಸಂಚಿಕೆ : [illegible]

ಮೈಸೂರು ಉತ್ತರದಲ್ಲಿ ಮಹಮದ್‌ಸೇಟರ ವಿಜಯ

ಲೋಕಸಭೆಯಲ್ಲಿ ಕಾಂಗ್ರೆಸ್ಸಿಗೆ ಮತ್ತೆ ಮೂರು ಸ್ಥಾನಗಳು

ಪಿ. ಎಸ್. ಪಿ. ಪಕ್ಷದ ನಾಯಕ ಹುಚ್ಚೇಗೌಡರ ಸೋಲು

ಬೆಂಗಳೂರು ೧೫

ಮೈಸೂರು ಸಂಸ್ಥಾನದ ತಿಪಟೂರು ಕ್ಷೇತ್ರದಿಂದ ಲೋಕಸಭೆಗೆ ಕಾಂಗ್ರೆಸ್ಸಿನ ಶ್ರೀ ಸಿ. ಆರ್. ಬಸಪ್ಪನವರೂ, ಉತ್ತರ ಕನ್ನಡದಿಂದ ಶ್ರೀ ಜೋಕಿಂ ಆಳ್ವರವರೂ, ಬಿಜಾಪುರದ ಉತ್ತರದಿಂದ ಶ್ರೀ ಆರ್. ಬಿ. ಬಿದರಿಯವರೂ ಚುನಾಯಿತರಾಗಿರುವರು. ತಿಪಟೂರಿನಲ್ಲಿ ಪ್ರಜಾ ಸಮಾಜವಾದಿ ಪಕ್ಷದ ನಾಯಕ ಶ್ರೀ ಬಿ. ಹುಚ್ಚೇಗೌಡರು ಕಾಂಗ್ರೆಸ್ ಸ್ಪರ್ಧಿಯಿಂದ ಪರಾಜಿತರಾದರು. ಈ ವರೆಗೆ ಸಂಸ್ಥಾನದಿಂದ ಲೋಕಸಭೆಯ [illegible] ಸ್ಥಾನಗಳು ಕಾಂಗ್ರೆಸ್ಸಿಗೂ, ಪ್ರಜಾ ಸಮಾಜವಾದಿ, ನಿಮ್ನ ವರ್ಗದ ಫೆಡರೇಷನ್ ಮತ್ತು ಲೋಕಸೇವಾ ಸಂಘಗಳಿಗೆ ತಲಾ ಒಂದೊಂದು ಸ್ಥಾನವೂ ದೊರೆತಿವೆ.

ಕಾಂಗ್ರೆಸ್ಸಿನ ಶ್ರೀ ಧುದ್ಯ ನಾಯಕರು ಹೊ[illegible]ಳಿ ಮೀಸಲು ಕ್ಷೇತ್ರದಿಂದಲೂ, ಶ್ರೀ ಹೆಚ್. ಲಿಂಗಾರೆಡ್ಡಿಯವರು ಮಾಲೂರಿನಿಂದಲೂ, ಶ್ರೀ ಪಿ. ಜಿ. ಸಿದ್ಧಾಂತಿಯವರು ಬಿಜಾಪುರದ ಮುದ್ದೆಬಿಹಾಳಿನಿಂದಲೂ, ಶ್ರೀ ಎಸ್. ಹೆಚ್. [illegible]ರವರು ಬಾಗೇವಾಡಿಯಿಂದಲೂ ಸಂಸ್ಥಾನ ವಿಧಾನ ಸಭೆಗೆ ಮೊನ್ನೆ ಆರಿಸಿಬಂದಿರುವರು

ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗೆ ಮತ್ತೆ ಹಲವು ಸ್ಥಾನಗಳು

ಬೆಂಗಳೂರು ೧೫

ಸಂಸ್ಥಾನದ ವಿಧಾನ ಸಭೆಗೆ ಮೈಸೂರು ತಾಲ್ಲೂಕಿನಿಂದ ಶ್ರೀ ಕೆ. ಪುಟ್ಟಸ್ವಾಮಿಯವರೂ, ದೊಡ್ಡಬಳ್ಳಾಪುರದ ಸಾಮಾನ್ಯ ಕ್ಷೇತ್ರದಿಂದ ಶ್ರೀ ಮುನಿಯಪ್ಪನವರೂ, ಬೆಂಗಳೂರು ಉತ್ತರ ಸಾಮಾನ್ಯ ಸ್ಥಾನದಿಂದ ಕೆ. ಪಿ. ಬೈರೇಗೌಡರೂ, ಮೀಸಲು ಸ್ಥಾನದಿಂದ ವೈ. ರಾಮಕೃಷ್ಣಪ್ಪನವರೂ, ಕೃಷ್ಣರಾಜಪೇಟೆಯಿಂದ ಶ್ರೀ ಎಂ. ಕೆ. [illegible]ಮ್ಮೇಗೌಡರೂ ಚುನಾಯಿತರಾದರು

ಬಂಗಾರುಪೇಟೆಯಿಂದ ಸಂಯುಕ್ತ ರಂಗದ ಸ್ವತಂತ್ರ ಸ್ಪರ್ಧಿ ಶ್ರೀ ಡಿ. ನಾರಾಯಣರಾಯರು ವಿಧಾನ ಪರಿಷತ್ತಿನ ಹಾಲಿ ಕಾಂಗ್ರೆಸ್ ಸದಸ್ಯ ಶ್ರೀ ಡಿ. ವೆಂಕಟರಾಮಯ್ಯನವರನ್ನು ಸೋಲಿಸಿದರು

ಮೈಸೂರು ತಾಲ್ಲೂಕಿನಲ್ಲಿ ಕಾಂಗ್ರೆಸ್ ಸ್ಪರ್ಧಿ ಕೆ. ಪುಟ್ಟಸ್ವಾಮಿಯವರಿಗೆ [illegible], ಶ್ರೀ ಶ್ರೀಕಂಠಪ್ಪನವರಿಗೆ [illegible] ಮತ್ತು ಶ್ರೀ ಸಿ. ಹೊನ್ನಪ್ಪನವರಿಗೆ [illegible] ಮತಗಳು ಬಿದ್ದವು

ಶ್ರೀರಂಗಪಟ್ಟಣದ ಚುನಾವಣೆ

ಶ್ರೀರಂಗಪಟ್ಟಣದಿಂದ ವಿಧಾನ ಸಭೆಗೆ ನಿಂತಿದ್ದ ಶ್ರೀ ಎ. ಜಿ. ಬಂಡಿಗೌಡರು ಪಿ. ಎಸ್. ಪಿ. ಯವರೆಂದು ನಮ್ಮ ಪತ್ರಿಕೆಯಲ್ಲಿ ತಪ್ಪಾಗಿ ಬಿದ್ದಿತ್ತು. ಅವರು ಸ್ವತಂತ್ರವಾಗಿ ಸ್ಪರ್ಧಿಸಿ [illegible] ಬಹುಮತದಿಂದ ಕಾಂಗ್ರೆಸ್ಸಿನ ಶ್ರೀ [illegible] ಬಂಡಿಗೌಡರನ್ನು ಸೋಲಿಸಿದರು

ಚಾಮರಾಜನಗರದಲ್ಲಿ ಪರಿಗಣಿತ ಕೋಮಿನ ಸ್ಥಾನ ಕಾಂಗ್ರೆಸ್ಸಿಗೆ

ಸಾಮಾನ್ಯ ಸ್ಥಾನಕ್ಕೆ ಯು. ಎಂ. ಮಾದಪ್ಪನವರ ವಿಜಯ

ಸ್ವಂ. ಸು. ತಂತಿ] ಚಾಮರಾಜನಗರ ೧೫

ಚಾಮರಾಜನಗರದಿಂದ ದ್ವಿಸದಸ್ಯ ವಿಧಾನ ಸಭಾ ಚುನಾವಣೆಯಲ್ಲಿ ಪಿ. ಎಸ್. ಪಿ. ಉಮೇದುವಾರರಾದ ಶ್ರೀ ಯು. ಎಂ. ಮಾದಪ್ಪನವರು ಸಾಮಾನ್ಯ ಸ್ಥಾನದಿಂದ [illegible] ಓಟುಗಳನ್ನು ಪಡೆದು, ಜಯಶೀಲರಾಗಿರುವರು. [illegible] ಪ್ರತಿಸ್ಪರ್ಧಿಯಾದ, ಕಾಂಗ್ರೆಸ್ಸಿನ ಶ್ರೀ ವೆ. [illegible] ನಾಯಕರವರಿಗೆ [illegible] ಓಟುಗಳು ಬಂದವು

ಮೀಸಲು ಸ್ಥಾನದಲ್ಲಿ ಕಾಂಗ್ರೆಸ್ ಉಮೇದುವಾರ ಶ್ರೀ ಬಿ. [illegible] ಓಟುಗಳು [illegible] ಅವರ ಪ್ರತಿಸ್ಪರ್ಧಿ ಪಿ. ಎಸ್. ಪಿ. ಉಮೇದುವಾರ ಶ್ರೀ ಬಸವಯ್ಯನವರಿಗೆ [illegible] ಓಟುಗಳು ಬಂದುವು. ಸ್ವತಂತ್ರವಾಗಿ ಸ್ಪರ್ಧಿಸಿದ್ದ ಶ್ರೀಗಳು ದೇವಯ್ಯ ಮತ್ತು ಪುಟ್ಟಮಾದಪ್ಪನವರು ಕ್ರಮವಾಗಿ [illegible] ಮತ್ತು [illegible] ಓಟುಗಳನ್ನು ಪಡೆದು ಪರಾಜಿತರಾಗಿ ಠೇವಣಿಗಳನ್ನು ಕಳೆದುಕೊಂಡಿರುವರು

೧,೯೩,೧೯೯ ಬಹುಮತದಿಂದ ಪ್ರಧಾನಿ ನೆಹರೂರವರ ವಿಜಯ

ಪ್ರತಿಸ್ಪರ್ಧಿಗಳೆಲ್ಲರ ಠೇವಣಿ ಮುಟ್ಟುಗೋಲು

ಉತ್ತರ ಪ್ರದೇಶದ ಫೂಲ್‌ಪುರ ಕ್ಷೇತ್ರದಿಂದ ಪ್ರಧಾನಿ ನೆಹರೂರವರು ೧,೯೩,೧೯೯ ಓಟುಗಳ ಬಹುಮತ ಪಡೆದು ಲೋಕಸಭೆಗೆ ಚುನಾಯಿತರಾಗಿದ್ದಾರೆ. ಅವರ ಮೂವರು ಪ್ರತಿಸ್ಪರ್ಧಿಗಳೂ ಠೇವಣಿಯನ್ನು ಕಳೆದುಕೊಂಡಿರುವರು. ಪ್ರಧಾನಿಯವರಿಗೆ [illegible], ಸ್ವತಂತ್ರರಾದ ಶ್ರೀ ಸೀತಾರಾಂ ಪೋಂಕಾರವರಿಗೆ [illegible], ಜನಸಂಘದ ಸ್ಪರ್ಧಿ ಶ್ರೀ ಶಿವಧರಪಾಂಡೆಯವರಿಗೆ [illegible] ಮತ್ತೊಬ್ಬ ಸ್ವತಂತ್ರ ಶ್ರೀ ರಾಮದೇವ್‌ರವರಿಗೆ [illegible] ಮತಗಳು ಬಂದಿವೆ. ನೆಹರೂರವರೊಡನೆ ಮೀಸಲು ಸ್ಥಾನದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ಸಿನ ಶ್ರೀ ಮಸೂರಿಯ ದೀನರವರು [illegible] ಹೆಚ್ಚಿನ ಮತಗಳಿಂದ ಪ್ರಜಾ ಸೋಷಲಿಸ್ಟ್ ಪಕ್ಷದ ತಮ್ಮ ಸ್ಪರ್ಧಿ ಜೇತಾರಾಂರವರನ್ನು ಸೋಲಿಸಿರುವರು

ಕೆ. ಸಿ. ರೆಡ್ಡಿಯವರಿಗೆ ಹೆಚ್ಚು ಮತಗಳು

ಕೋಲಾರದ ದ್ವಿಸದಸ್ಯ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿರುವ ಕೇಂದ್ರ ಉತ್ಪಾದನಾ ಶಾಖೆಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅವರ ಕಮ್ಯೂನಿಸ್ಟ್ ಪ್ರತಿಸ್ಪರ್ಧಿ ಶ್ರೀ ವಿ. ಎಂ. ಗೋವಿಂದರಾಜರವರಿಗಿಂತ ೮ ಸಾವಿರ ಹೆಚ್ಚು ಮತಗಳನ್ನು ನಿನ್ನೆ ಪಡೆದಿದ್ದರು. ಈ ದಿನದ ಎಣಿಕೆಯಲ್ಲಿ ಶ್ರೀ ರೆಡ್ಡಿಯವರಿಗೆ ಒಟ್ಟಿನಲ್ಲಿ ಸ್ವಲ್ಪ ಹೆಚ್ಚು ಮತಗಳು ಬಂದಿರುವುವೆಂದು ಗೊತ್ತಾಗಿದೆ.

ಗೃಹ ಮಂತ್ರಿ ರಾಮರಾಯರ ರಾಜೀನಾಮೆ ಅಂಗೀಕಾರ

ಬೆಂಗಳೂರು ೧೫

ಇತ್ತೀಚೆಗೆ ಚುನಾವಣೆಯಲ್ಲಿ ಪರಾಜಿತರಾದ ಸಂಸ್ಥಾನದ ಗೃಹ ಮಂತ್ರಿ ಶ್ರೀ ಎಂ. ಪಿ. ರಾಮರಾಯರ ರಾಜೀನಾಮೆಯನ್ನು ರಾಜ್ಯಪಾಲರು ಅಂಗೀಕರಿಸಿ ನೂತನ ಸರ್ಕಾರದ ರಚನೆಯಾಗುವವರೆಗೂ ಅವರು ಮುಂದುವರಿಯಬೇಕೆಂದು ಕೋರಿದ್ದಾರೆಂದು ಗೊತ್ತಾಗಿದೆ.

ಸಂಸ್ಥಾನದಲ್ಲಿ ವಿದ್ಯಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ

ವಿದ್ಯಾ ಇಲಾಖೆಯಲ್ಲಿನ ಕೆಲಸಕಾರ್ಯಗಳನ್ನು ತ್ವರಿತಗೊಳಿಸುವ ಉದ್ದೇಶದಿಂದ ಸರ್ಕಾರದವರು [illegible] ಆಡಳಿತಕ್ಕೆ ಸಂಬಂಧಿಸಿದ ರಜಾ ಮಂಜೂರಾತಿ [illegible] ಮುಂತಾದ ಹಲವು ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ವಿದ್ಯಾ ಇಲಾಖಾಧಿಕಾರಿ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳಿಗೆ [illegible] ನೀಡಿದ್ದಾರೆಂದು ಗೊತ್ತಾಗಿದೆ. ಈ ವರೆಗೆ ಇವುಗಳ ಬಗ್ಗೆ ಸರ್ಕಾರವೇ ಆಜ್ಞೆ ಮಾಡುತ್ತಿತ್ತು

ಇಂಡೋನೇಷ್ಯಾ ಸರ್ಕಾರದ ರಾಜೀನಾಮೆ

ಜರೂರು ಪರಿಸ್ಥಿತಿಯ ಘೋಷಣೆ

ಕೇಂದ್ರ ಸರ್ಕಾರದ ವಿರುದ್ಧ ಈಗಾಗಲೇ ಮೂರು ಪ್ರಾಂತಗಳ ದಂಡನಾಯಕರು ದಂಗೆಯೆದ್ದು ಅರಾಜಕತೆಗೊಳಗಾಗಿದ್ದ ಇಂಡೋನೇಷ್ಯದಲ್ಲಿ ನೆನ್ನೆ ಡಾ|| ಅಲಿ ಶಾಸ್ತ್ರಮಿಡ್ಜೋಜೋರವರ ಮಂತ್ರಿಮಂಡಲವು ರಾಜೀನಾಮೆಯಿತ್ತ ನಂತರ ಅಧ್ಯಕ್ಷ ಸುಕರ್ನೋರವರು ದೇಶಾದ್ಯಂತ ಆಕ್ರಮಣ ಮತ್ತು ಯುದ್ಧ ಸ್ಥಿತಿಯನ್ನು ಘೋಷಿಸಿ, ರಾಷ್ಟ್ರದ ಸರ್ವಾಧಿಕಾರವನ್ನು ತಾವೇ ವಹಿಸಿಕೊಂಡಿರುವರು. ಅವರು ರಾಷ್ಟ್ರಕ್ಕೆ ಮನವಿ ಮಾಡಿ ಜನತೆಯು ದೇಶದಲ್ಲಿ ಅರಾಜಕತೆಯನ್ನು ತಡೆಯಲು ಆಡಳಿತ ವರ್ಗಕ್ಕೆ ಸಹಕಾರ ನೀಡಬೇಕೆಂದು ಕೋರಿದ್ದಾರೆ. ಇದಕ್ಕೆ ಮುಂಚೆ ಸುಮಾತ್ರಾ ದ್ವೀಪ ಮತ್ತು ಪೂರ್ವ ಇಂಡೋನೇಷ್ಯಗಳಲ್ಲದೆ ಪಶ್ಚಿಮ ಜಾವಾದಲ್ಲೂ ಸಹ ದಂಗೆಯೇಳುವ ಸನ್ನಾಹ ನಡೆಯಿತು. ಪ್ರಮುಖ ರಾಜಕೀಯ ಪಕ್ಷವಾದ ಮಾಸ್ಯುಮಿಯು ಸರ್ಕಾರಕ್ಕೆ ಕೊಟ್ಟಿದ್ದ ತನ್ನ ಬೆಂಬಲವನ್ನು ಹಿಂತೆಗೆದುಕೊಂಡನಂತರ ಸರ್ಕಾರವು ರಾಜೀನಾಮೆಯಿತ್ತಿತು. ರಾಷ್ಟ್ರದ ಬಹು ಭಾಗಗಳಿಂದ ಮಾಜಿ ಉಪಾಧ್ಯಕ್ಷ ಡಾ|| ಹಟ್ಟಾರವರನ್ನು ಪ್ರಧಾನಿಯನ್ನಾಗಿ ಮಾಡಬೇಕೆಂದು ಒತ್ತಾಯ ಬರುತ್ತಿದೆ

ಕಪಿಲಾ ನದಿಯಲ್ಲಿ ಮುಳುಗಿ ಮರಣ

ಹುಣ್ಣಿಮೆ ಸೇವೆಗಾಗಿ ಈ ದಿನ ಬೆಳಗ್ಗೆ ನಂಜನಗೂಡಿಗೆ ಹೋಗಿ ಕಪಿಲಾ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಮೈಸೂರು ಚಾಮರಾಜಪುರಂನಲ್ಲಿರುವ ಶ್ರೀ ಎ. ಜಿ. ವೆಂಕಟೇಶ್ವರವರ ಕುಮಾರ ೧೬ ವರ್ಷದ ಸುಬ್ರಹ್ಮಣ್ಯಂ ಎಂಬ ಬಾಲಕನು ಮುಳುಗಿ ಮೃತಪಟ್ಟುದಾಗಿ ತಿಳಿದುಬಂದಿದೆ.

ಮೈಸೂರು ಉತ್ತರದಲ್ಲಿ ಮಹಮದ್ ಸೇಟರ ವಿಜಯ

ಮೈಸೂರು ೧೫

ಸಂಸ್ಥಾನದ ವಿಧಾನ ಸಭೆಗೆ ನಗರದ ಉತ್ತರ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಸ್ವತಂತ್ರ ಉಮೇದುವಾರರಾದ ಶ್ರೀ ಮಹಮದ್‌ಸೇಟ್‌ರವರು ಜಯ ಪಡೆದಿರುವರು. ಓಟುಗಳ ವಿವರಗಳು ಈ ರೀತಿ ಇವೆ:–

ಶ್ರೀ ಮಹಮದ್‌ಸೇಟ್	[illegible]
" ಅಹಮದ್ ಅಲ್ಲಿಖಾನ್ (ಕಾಂ)	[illegible]
,, ಬಿ. ಕೆ. ಪುಟ್ಟಯ್ಯ (ಪಿ. ಎಸ್. ಪಿ.)	[illegible]
,, ಎ. ರಾಮಣ್ಣ (ಸ್ವ)	[illegible]
,, ಎಂ. ಎಲ್. ಉಗ್ರಪ್ಪ (ಕಮ್ಯೂನಿಸ್ಟ್)	[illegible]

[illegible] ಮತಗಳು ಕುಲಗೆಟ್ಟುವು.

ಶ್ರೀಗಳಾದ ಎ. ರಾಮಣ್ಣ ಮತ್ತು ಎಂ. ಎಲ್. ಉಗ್ರಪ್ಪನವರಿಗೆ ಠೇವಣಿ ಹೋಗಿರುತ್ತದೆ.

ಕ್ಯೂಬಾ ಅಧ್ಯಕ್ಷ ಅರಮನೆ ಮೇಲೆ ದಂಗೆಕಾರರ ಧಾಳಿ

ಹೋರಾಟದಲ್ಲಿ ೪೦ ಜನರ ಮರಣ

ಕ್ಯೂಬಾ ರಾಜ್ಯದ ಹವಾನಾ ನಗರದಲ್ಲಿ ಮೊನ್ನೆ ಮಧ್ಯಾಹ್ನ ಅಲ್ಲಿನ ಅಧ್ಯಕ್ಷರ ಅರಮನೆಗೆ ವೇಷಧಾರಿಗಳಾದ ವಿದ್ಯಾರ್ಥಿಗಳ ಗುಂಪೊಂದು ಮಷಿನ್ ಗನ್ ಸಮೇತ ನುಗ್ಗಿ ಧಾಳಿ ಮಾಡಿದರೆಂದೂ, ಅಂದು ರಾತ್ರಿಯೆಲ್ಲಾ ನಗರದ ಹಲವಾರು ಭಾಗಗಳಲ್ಲಿ ನಡೆದ ಬೀದಿ ಕಾಳಗಗಳಲ್ಲಿ ಸುಮಾರು ೪೦ ಮಂದಿ ಮೃತಪಟ್ಟರೆಂದೂ ವರದಿಯಾಗಿದೆ. ಇದು ಅಲ್ಲಿನ ಅಧ್ಯಕ್ಷ ಫುಲ್ಜೆನ್ಸಿಯೋ ಬಾಟಿಸ್ಟಾರವರ ವಿರುದ್ಧವಾಗಿ ಕಮ್ಯೂನಿಸ್ಟ್ ನಾಯಕ ಕಾರ್ಲೋಸ್ ಪ್ರಿಯೋರವರ ಗುಂಪಿನವರು ನಡೆಸಿದ ಪಿತೂರಿಯೆಂದು ಆಕ್ರಮಣವನ್ನು ಹಿಮ್ಮೆಟ್ಟಿಸಿದ ಸೈನ್ಯಾಧಿಕಾರಿಯು ತಿಳಿಸಿದ್ದಾರೆ. ಅಧ್ಯಕ್ಷರ ಭವನದಲ್ಲಿ ಧಾಳಿಕಾರರಿಗೂ ಮತ್ತು ಸೈನ್ಯ ಪಡೆಗಳಿಗೂ ಸುಮಾರು ಒಂದು ಗಂಟೆಯ ಕಾಲ ಕದನ ನಡೆಯಿತೆಂದೂ ಹವಾನಾ ವಿಶ್ವವಿದ್ಯಾಲಯದ ಬಳಿ ಗುಂಡಿನ ಕಾಳಗವನ್ನು ಬಿಟ್ಟರೆ ದೇಶದ ಉಳಿದ ಭಾಗವೆಲ್ಲಾ ಶಾಂತವಾಗಿತ್ತೆಂದೂ ತಿಳಿದುಬಂದಿದೆ

ಹುರೋಡಿನ ಕೇಡಿಗೆ ಕಠಿಣ ಸಜಾ

ಕಳೆದ ಜನವರಿ ೨೯ನೇ ತಾರೀಕು ರಾತ್ರಿ ನಗರದ ಲಲಿತಮಹಲಿನ ಬಳಿ ಸಂದೇಹಾಸ್ಪದವಾಗಿ ತಿರುಗುತ್ತಿದ್ದ ಹುರೋಡಿನ ಕಳ್ಳಾ ಕೇಡಿ ಮಾಣಿಕ್ಯಂ ಎಂಬುವವನನ್ನು ನಜರ್‌ಬಾದ್ ಪೊಲೀಸರು ಹಿಡಿದು ನಗರದ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ಆತನಿಗೆ ಮೂರು ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು

ಲೋಕ ಸಭೆಗೆ ಅನಂತಶಯನಂ ಮತ್ತು ನಂದಾರವರ ಆಯ್ಕೆ

ಲೋಕ ಸಭೆಯ ಸ್ಪೀಕರರಾದ ಶ್ರೀ ಕೆ. ಅನಂತಶಯನಂ ಅಯ್ಯಂಗಾರ್ಯರು ಚಿತ್ತೂರು ಕ್ಷೇತ್ರದಿಂದಲೂ ಮತ್ತು ಕೇಂದ್ರ ಯೋಜನಾ ಮಂತ್ರಿ ಗುಲ್ಜಾರಿಲಾಲ್ ನಂದಾರವರು ಅಹಮದಾಬಾದಿನ ಸಬರಕಾಂತ ಎಂಬ ಕ್ಷೇತ್ರದಿಂದಲೂ ಲೋಕ ಸಭೆಗೆ ಆರಿಸಿಬಂದಿರುವರು.

ಸಿ ಪಿ ಸಿ ವೃತ್ತಿ ಶಿಕ್ಷಣಾಲಯ ಸಂಘದ ಮುಕ್ತಾಯ ಸಮಾರಂಭ

ಮೈಸೂರು ೧೫

ನಗರದಲ್ಲಿರುವ ಸಿ ಪಿ ಸಿ ವೃತ್ತಿ ಶಿಕ್ಷಣಾಲಯದ ವಿದ್ಯಾರ್ಥಿ ಸಂಘದ ಮುಕ್ತಾಯ ಭಾಷಣವನ್ನು ಆರ್ಥಿಕ ಸಚಿವರಾದ ಶ್ರೀ ಟಿ ಮರಿಯಪ್ಪನವರು ನೆನ್ನೆ ಮಾಡಿ ಸ್ವಾತಂತ್ರ್ಯಾನಂತರ ದೇಶದಲ್ಲಿ ನಡೆಯುತ್ತಿರುವ ಆರ್ಥಿಕ ಪುನರ್ನಿರ್ಮಾಣ ಕಾರ್ಯದಲ್ಲಿ ಪರಿಭಾಷಿಕ ಶಿಲ್ಪಿಗಳು ವಿದ್ಯಾರ್ಥಿಗಳು ಮಹತ್ತರವಾದ ಪಾತ್ರವನ್ನು ವಹಿಸಲು ಅವಕಾಶವಿದೆಯೆಂದು ನುಡಿದರು ಅತ್ಯಂತ ಬಡತನದಿಂದ ಕೂಡಿದ ನಮ್ಮ ರಾಷ್ಟ್ರದಲ್ಲಿ ಸಕಲ ವಿಧದ ಪ್ರಗತಿ ಸಾಧನೆಗೂ ಪ್ರಜೆಗಳು ಟೊಂಕ ಕಟ್ಟಿ ನಿಲ್ಲಬೇಕಾಗಿದೆಯೆಂದೂ ಇದಕ್ಕಾಗಿ ಗೊತ್ತುಮಾಡಲಿರುವ ಪಂಚ ವಾರ್ಷಿಕ ಯೋಜನೆಗಳಲ್ಲಿ ಎಲ್ಲರೂ ಸಹಕರಿಸಬೇಕೆಂದೂ ಅವರು ಸೂಚಿಸಿದರು

ಶ್ರೀ ಪಿ ಜಾನಕಿರಾಮಶೆಟ್ಟರು ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಿದರು ಮೊದಲು ಪ್ರಾರ್ಥನೆಯಾದನಂತರ ಶಾಲಾ ಸೂಪರಿಂಟೆಂಡೆಂಟಾದ ಶ್ರೀ ಪಿ ಮುನಿಯಪ್ಪನವರು ಸ್ವಾಗತ ಭಾಷಣ ಮಾಡಿ ಶಾಲೆಯಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳನ್ನು ವಿವರಿಸಿದರು ಕಾರ್ಯದರ್ಶಿ ಶ್ರೀ ವಿ ವಿಠಲಾನಂದರವರು ವರದಿಯನ್ನೊಪ್ಪಿಸಿದರು

ಶಾಲೆಯಿಂದ ನಿವೃತ್ತರಾಗಲಿರುವ ವಿದ್ಯಾರ್ಥಿ ಶ್ರೀ ರಂಗರಾಯರು ಬೀಳ್ಕೊಡುಗೆ ಭಾಷಣ ಮಾಡಿ ತಮಗೆ ದೊರೆತ ಉತ್ತಮ ಶಿಕ್ಷಣಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು ವಿದ್ಯಾರ್ಥಿಗಳಿಂದ ವಿವಿಧ ವೇಷ ಸ್ಪರ್ಧೆ ಲಘು ಸಂಗೀತ ಮತ್ತು ನಾಟಕ ಪ್ರದರ್ಶನಗಳಾದುವು ಉಪಾಧ್ಯಕ್ಷರಾದ ಶ್ರೀ ಕೆ ಗುಜ್ಜಯ್ಯನವರಿಂದ ವಂದನಾರ್ಪಣೆಯಾದನಂತರ ಸಭೆ ಮುಗಿಯಿತು

ಪ್ರಾಥಮಿಕ ವಿದ್ಯಾಭ್ಯಾಸದ ಪಾಠ ಕ್ರಮ ಗೊತ್ತುಪಡಿಸಲು ಸಮಿತಿ

ಸಂಸ್ಥಾನದ ಎಲ್ಲಾ ಭಾಗಗಳಿಗೂ ಹೊಂದುವಂತಹ ಪ್ರಾಥಮಿಕ ತರಗತಿ ಪಠ್ಯಕ್ರಮವನ್ನು ರಚಿಸಲು ವಿದ್ಯಾ ಇಲಾಖೆ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದವರು ಸಮಿತಿಯೊಂದನ್ನು ರಚಿಸಿದ್ದಾರೆಂದು ಗೊತ್ತಾಗಿದೆ ಹಾಗೆಯೇ ಪ್ರೌಢಶಾಲಾ ಪಠ್ಯಕ್ರಮದ ರಚನೆಗೂ ಸಮಿತಿಯೊಂದನ್ನು ರಚಿಸಲಾಗುವುದೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಎಟ್ಟೀಲು ೧೫ ವಸ್ತ್ರ ೮ ೧೫ ಡಿ ನಾಗರತ್ನ ದೇವರ ನಾಮಗಳು ೭ ೩೦ ಜಾನಪದ ಗೀತೆಗಳು ಮಧ್ಯಾಹ್ನ ೧೨ ಡಿ ನಾಗರತ್ನ ಗಾಯನ ೧೨-೩೦ ಸುಗಮ ಸಂಗೀತ್ ರಿಕಾರ್ಡು ೧೨-೪೫ ಬಾಲ ಜಗತ್ ೧ ೫೦ ಹಿಂದಿ ಗೀತೆಗಳು ಸಂಜೆ ೫ ೩೦ ಎ ಟಿ ಕೌಸಲ್ಯ ಗಾಯನ ೬ ೦ ವಿರಾಮ ಸಂಗೀತ ೬ ೧೦ ಹಿಂದಿ ಗೀತೆಗಳು ೬ ೩೦ ಗ್ರಾಮಸ್ಥರಿಗಾಗಿ ೭ ೩೦ ಪ್ರಸಂಗ ವಾರ್ತೆ ಎಸ್ ವಿ ಕರ್ಣಮರಾಯರಿಂದ ೮ ವಿನೋದ ನಾಟಕ ಚಕ್ರ ೮ ೧೫ ಎಂ ಟಿ ಕೌಶಲ್ಯ ಗಾಯನ ೮ ೩೦ ರೇಡಿಯೋ ಸಮಾಚಾರಗಳ ರೀಲ್ ೮ ೪೦ ಪ್ರಸಾರ ಗೀತೆ ದೆಹಲಿ ರಿಲೆ ೯ ೧೫ ರಂಗಭೂಮಿಯ ವಿನೋದ ೯ ೩೦ ಅಖಿಲ ಭಾರತ ಸಂಗೀತ ಕಾರ್ಯಕ್ರಮ ದೆಹಲಿಯಿಂದ ರಿಲೆ

ಲೋಕ ಸಭೆಗೆ ನೆಸ್ವಿಯವರ ಆಯ್ಕೆ

ವಿಧಾನ ಸಭೆಗೆ ಮತ್ತೆ ಹಲವು ಕಾಂಗ್ರೆಸ್ಸಿನವರ ಜಯ

ಸ್ವಂ ಸು ಕಂತಿ] ಬೆಂಗಳೂರು ೧೫

ಧಾರವಾಡದಿಂದ ಶ್ರೀ ಟಿ ಆರ್ ನೆಸ್ವಿ ಮತ್ತು ದಕ್ಷಿಣ ಕೊಪ್ಪಳದಿಂದ ಶ್ರೀ ಸಂಗಪ್ಪನವರು ಲೋಕ ಸಭೆಗೆ ಆರಿಸಿಬಂದಿರುವರು

ವಿಧಾನ ಸಭೆಗೆ ಗುಲ್ಬರ್ಗದ ಶಂಕರೇಗೌಡ ತಲವಂಗಿ ಕೊಪ್ಪಳದ ಮಲ್ಲಿಕಾರ್ಜುನಗೌಡ, ರಾಣೆಬೆನ್ನೂರಿಂದ ಶ್ರೀ ಕೆ ಎಫ್ ಪಾಟೀಲ ಮತ್ತು ಶ್ರೀಮತಿ ಎಲ್ಲವ್ವಸಂಮ್ಯಾಣಿ ಹಾನಗಲ್ಲಿನಿಂದ ಪಿ ಎಸ್ ಪಿ ಯ ಬಸವನಗೌಡ, ಕುಂದಾಪುರದಿಂದ ಪಿ ಎಸ್ ಪಿ ಯ ಶ್ರೀನಿವಾಸಶೆಟ್ಟಿಯವರು ಚುನಾಯಿತರಾಗಿದ್ದಾರೆ

ಗಾಜಾ ಪ್ರದೇಶದ ಜನರಿಂದ ಈಜಿಪ್ಟ್ ಆಡಳಿತಕ್ಕಾಗಿ ಒತ್ತಾಯ

ಈಜಿಪ್ಟ್ ಇಸ್ರೇಲ್ ಗಡಿಯಲ್ಲಿರುವ ಗಾಜಾ ಪ್ರದೇಶದ ಆಡಳಿತವನ್ನು ಈಜಿಪ್ಟ್ ಸರ್ಕಾರವು ವಹಿಸಿಕೊಳ್ಳಬೇಕೆಂದು ಒತ್ತಾಯಪಡಿಸಿ ಅಲ್ಲಿನ ಜನರು ಮೊನ್ನೆ ಸಾಮೂಹಿಕ ಪ್ರದರ್ಶನಗಳನ್ನು ನಡಸಿದರೆಂದೂ ಆದರೂ ವಿಶ್ವಸಂಸ್ಥೆಯ ಪಡೆಗಳವರು ಸುಮ್ಮನಿದ್ದರೆಂದೂ ವರದಿಯಾಗಿದೆ

ಮಧ್ಯ ಭಾರತದಲ್ಲಿ ೧೦ ಜನ ಕಾಂಗ್ರೆಸ್ಸಿಗರ ಸಸ್ಪೆಂಡ್

ಅಧಿಕೃತವಾಗಿ ನಿಲ್ಲಿಸಲಾಗಿದ್ದ ಕಾಂಗ್ರೆಸ್ ಸ್ಪರ್ಧಿಗಳ ವಿರುದ್ಧ ಪ್ರಚಾರದಲ್ಲಿ ತೊಡಗಿದುದೇ ಮುಂತಾದ ಹಲವು ಕಾರಣಗಳಿಗಾಗಿ ಮಧ್ಯಭಾರತದ ೧೦ ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ಸಂಸ್ಥೆಯಿಂದ ಹೊರದೂಡಲಾಗಿದೆಯೆಂದು ವರದಿಯಾಗಿದೆ

ಓಟಿನ ಚೀಟಿಗಳ ನಾಶದಿಂದ ಮರು ಚುನಾವಣೆ

ಮದ್ರಾಸ್ ಸಂಸ್ಥಾನದ ನಾಗಪಟ್ಟಣ ಕ್ಷೇತ್ರದಲ್ಲಿ ಚುನಾವಣೆಯ ದಿನ ಎರಡು ಕೇಂದ್ರಗಳಲ್ಲಿ ಓಟಿನ ಚೀಟಿಗಳು ನಾಶವಾದ ಕಾರಣ ಅಲ್ಲಿ ಮರು ಚುನಾವಣೆಯು ನಡೆಯಬೇಕೆಂದು ಕೇಂದ್ರ ಚುನಾವಣಾ ಮಂಡಲಿಯವರು ಆಜ್ಞೆ ಮಾಡಿದ್ದಾರೆ

ತಂಜಾವೂರು ಜಿಲ್ಲೆಯ ತಿರುಕ್ಕವಲ್ಲಿ ಎಂಬ ಕ್ಷೇತ್ರದ ಎರಡು ಮತದಾನ ಕೇಂದ್ರಗಳಲ್ಲಿ ಬೆಂಕಿ ಅನಾಹುತ ಸಂಭವಿಸಿದುದರಿಂದ ಚುನಾವಣಾಧಿಕಾರಿಗಳು ಅಲ್ಲಿ ನಡೆದ ಮತದಾನವನ್ನು ರದ್ದುಗೊಳಿಸಿ ನಾಳೆ ಮತ್ತೆ ಚುನಾವಣೆ ನಡೆಸಲು ಆಜ್ಞೆ ಮಾಡಿರುವರು

ಇಂದಿನಿಂದ ಅಮೋಘ

ಲಕ್ಷ್ಮಿ ★ 2ನೇ ವಾರ

ಮಕ್ಕಳೈ ಪೆತ್ರ
ಮಹಾರಾಸಿ

ಪಾತ್ರ ಶಿವಾಜಿ ಗಣೇಶನ್ ನಂಬಿಯಾರ್,
ಸಾರಂಗಪಾಣಿ ಕಣ್ಣಾಂಬ ಭಾನುಮತಿ
ಎಂ ಎನ್ ರಾಜಂ

ಆಜಾದ್ ಕಾಶ್ಮೀರದಲ್ಲಿ ಮನೆಗಳನ್ನು ಉರುಳಿಸಿ ವಿಮಾನ ನಿಲ್ದಾಣಗಳ ರಚನೆ

ಪಾಕಿಸ್ತಾನದ ಹತೋಟಿಯಲ್ಲಿರುವ ಕಾಶ್ಮೀರದ ಗಿಲ್ಗಿಟ್ ಮತ್ತು ಚಿತ್ರಾಲ್ ನಗರಗಳಲ್ಲಿ ಜನರು ವಾಸಿಸುತ್ತಿರುವ ಮನೆಗಳನ್ನು ಕೆಡವಿ, ಅಲ್ಲಿ ಪಾಕಿಸ್ತಾನದ ವಿಮಾನ ಪಡೆಗಳಿಗಾಗಿ ದೊಡ್ಡ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿರುವುದೆಂದು ಕಾಶ್ಮೀರದ ಪ್ರಧಾನಿ ಭಕ್ಷಿ ಗುಲಾಂ ಮಹಮದ್ ರವರು ತಿಳಿಸಿರುವರು

ರೈಲ್ವೆ ನೌಕರಿಯಿಂದ ತೆಗೆದುದಕ್ಕಾಗಿ ರಿಟ್ ಅರ್ಜಿ

ಹಿಂದಿನ ಮೈಸೂರು ರೈಲ್ವೆಯಲ್ಲಿ ಸ್ಟೆನೊಗ್ರಾಫರ್ ಆಗಿದ್ದ ಶ್ರೀ ಎಂ ಹೆಚ್ ಬಾಲಾಜಿಸಿಂಗ್ ರವರು ಮದ್ರಾಸಿನ ಶ್ರೇಷ್ಠ ನ್ಯಾಯಾಸ್ಥಾನದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿ ತಮಗೆ ೧೯೫೦ನೇ ಏಪ್ರಿಲ್ ತಿಂಗಳಿನಿಂದ ೨೦೦-೩೦೦ ರೂ ಮಟ್ಟದ ಸಂಬಳವನ್ನು ಕೊಡಲು ನಿರಾಕರಿಸಿ ಸದರ್ನ್ ರೈಲ್ವೆ ಜನರಲ್ ಮ್ಯಾನೇಜರವರು ಮಾಡಿರುವ ಆಜ್ಞೆಯನ್ನೂ ಮತ್ತು ಕೆಳದರ್ಜೆಯ ಕೆಲಸಕ್ಕೆ ಬರದಿದ್ದುದಕ್ಕಾಗಿ ತಮ್ಮನ್ನು ಕೆಲಸದಿಂದ ವಜಾ ಮಾಡಿ ಚೀಫ್ ಆಪರೇಟಿಂಗ್ ಸೂಪರಿಂಟೆಂಡೆಂಟರು ಮಾಡಿರುವ ಆಜ್ಞೆಯನ್ನೂ ರದ್ದುಗೊಳಿಸಬೇಕೆಂದು ಕೋರಿದ್ದಾರೆ

SREE GANESH
TALKIES
WAR & PEACE
Now running to Crowded Houses in
its complete
2nd Week From 16 3 57

ಗುಂಡ್ಲುಪೇಟೆ ಕ್ಷೇತ್ರದ ಮತದಾರರಿಗೆ ವಂದನೆ

ಶ್ರೀಮತಿ ನಾಗರತ್ನಮ್ಮನವರ ಕೃತಜ್ಞತೆ

ಗುಂಡ್ಲುಪೇಟೆ ಕ್ಷೇತ್ರದಿಂದ ಸಂಸ್ಥಾನ ವಿಧಾನ ಸಭೆ ಚುನಾವಣೆಯಲ್ಲಿ ಸ್ವತಂತ್ರ ಉಮೇದುವಾರಳಾಗಿ ನಿಂತಿದ್ದ ನನಗೆ ಬೆಂಬಲ ನೀಡಿ ಜಯಗಳಿಸಲು ಸಹಾಯಕರಾದ ಮತದಾರರಿಗೂ ಮತ್ತು ಇತರ ವಿಧದಲ್ಲಿ ನೆರವು ನೀಡಿದ ಎಲ್ಲರಿಗೂ ನಾನು ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ಮುಂದೆಯೂ ಮಹಾ ಜನರ ಮತ್ತು ದೇಶದ ಸೇವೆ ಸಲ್ಲಿಸುವ ಕಾರ್ಯದಲ್ಲಿ ಎಲ್ಲರ ಸಹಾಯಸಹಕಾರಗಳನ್ನೂ ಕೋರುತ್ತೇನೆ

ನಾಗರತ್ನಮ್ಮ ಕೆ ಸಿ ಸುಬ್ಬಣ್ಣ

ಕಳ್ಳತನದ ಪ್ರಯತ್ನ

ಜಯನಗರ ಬಡಾವಣೆಯಲ್ಲಿರುವ ಶ್ರೀ ಶ್ರೀ ಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಯ ಹೆಂಚನ್ನು ತೆಗೆದು ಮೊನ್ನೆ ರಾತ್ರಿ ರೋ ಕಳ್ಳತನಕ್ಕೆ ಪ್ರಯತ್ನಿಸಿ ವಿಫಲರಾದ ವರದಿಯಾಗಿದೆ

ನಾಳೆದ್ದು ನೀರು ನಿಲ್ಲುವುದು

ನಾಳೆದ್ದು ಭಾನುವಾರ ವಿದ್ಯುಚ್ಛಕ್ತಿಯ ರುವ ಪ್ರಯುಕ್ತ ನಗರದಲ್ಲಿ ಬೆಳಗ್ಗೆ ೮॥ ಮಧ್ಯಾಹ್ನ ೩॥ ಗಂಟೆಯವರೆಗೆ ನೀರು ನಿ ವುದು

ಮೈಸೂರಿನಲ್ಲಿ ಪ್ರತಿ ತಿಂಗ
17 ನೇ ತಾರೀಖು
ವಿಶ್ವವಿಖ್ಯಾತವಾಗಿ
ನವರತ್ನ ಕ

ದಿವ್ಯೌಷಧವನ್ನು
ಹಿಡಿದಿರುವ
ಕವಿರಾಜ ಪಂಡಿ
ದುರ್ಗಾದತ್ತ ಶ
ವೈದ್ಯ ವಾಚಸ್ಪತಿಯ
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ
ಭೇಟಿಯ ಕಾಲ —
ಬೆಳಗ್ಗೆ 7-30 ರಿಂದ 12 30 ಮತ್ತು
ಮಧ್ಯಾಹ್ನ 4ರಿಂದ 7 30
ಮೇಲ್ಕಂಡ ವಿಷಯವನ್ನು ಗಮನಿಸಿ
ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಹವಳ, ಗೋಮೇಧಿಕ ನೀಲ ಪದ್ಮರಾಗ ಮುತ್ತು ಇಲೆ ಈ 9 ಹರಳುಗಳ ಸಂಯೋಗ ಲ್ಲಾ ಸಾಮಾನ್ಯ ಹಾಗೂ ತೀವ್ರವಾದ ವಾ ಗೆಗೂ ಅತ್ಯುತ್ತಮ ಆರೋಗ್ಯದಾಯಕವಾದ ಧಿ ಇದೊಂದೇ
NAVRATNA KALPA PHARMACY,
JULLUNDUR CITY (India)

Edited Printed and Published
A R Nagarajan at Sadhvi Pre
Subbiah Road, Mysore

Office of the Municipal Commissioner
City Municipal Council,
Mysore dated the 9th March 1957

SALE NOTIFICATION

The compost heaps near Jodi thenginamara (ಜೋಡಿ ತೆಂಗಿನ ಮರ) area in Mandi Mohalla Mysore, will be sold at the spot by Public Auction by the Municipal Executive Engineer or any officer duly authorised by him on Wednesday the 20th March 1957 at 10 30 A M Each heap will be auctioned separately Any information required may be had from the Municipal Executive Engineer or Manager, Municipal Farm

(Sd) A VISVANATH
Municipal Commissioner

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
15—3—57ನೇ . ಶುಕ್ರವಾರದಿಂದ . ಅಮೋಘ ಪ್ರಾ
ಸರ್ವೋದಯ ಪಿಕ್ಚರ್ಸ್‌ರವರ ಸಂಗೀತಮಯ ತಮಿಳು ಚಿತ್ರ

★ ಪುದು ವಾಳ್ವು ★
ಪಾತ್ರ ತ್ಯಾಗರಾಜ ಭಾಗವತರ್, ಲಲಿತ, ಮಾಧುರಿದೇವಿ, ತಂಗವೇಲು,
ಟಿ ಎಸ್ ಬಾಲಯ್ಯ, ಎನ್ ಎಸ್ ಕೃಷ್ಣನ್, ಟಿ ಎ ಮಧುರಂ

ರಿಜಿಸ್ಟರ್ಡ್ ನಂ. 192

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI : SATURDAY 16—3—1957 ಮೈಸೂರು : ಶನಿವಾರ ೧೬-೩-೧೯೫೭ : [ಸಂಚಿಕೆ : ೨೨೭

ದಕ್ಷಿಣ ಕ್ಷೇತ್ರದಲ್ಲಿ ಸೂರ್ಯನಾರಾಯಣರಾಯರ ಜಯ

ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗೆ ಇನ್ನಷ್ಟು ಸ್ಥಾನಗಳು

ಬೆಂಗಳೂರು ೧೬

ನೆನ್ನೆ ಕಾಂಗ್ರೆಸ್ ಪಕ್ಷಕ್ಕೆ ಸಂಸ್ಥಾನದ ವಿಧಾನ ಸಭೆಯಲ್ಲಿ ೧೧, ಪಿ ಎಸ್ ಪಿ ಮತ್ತು ಸ್ವತಂತ್ರರಿಗೆ ತಲಾ ೩ ಸ್ಥಾನಗಳು ದೊರೆತುವು

ಹಾಲಿ ವಿಧಾನ ಸಭಾ ಸದಸ್ಯ ದೇವರಾಜ ಅರಸ್ ಮತ್ತು ಹಾಲಿ ಲೋಕ ಸಭಾಸದಸ್ಯ ಶ್ರೀ ಎನ್ ರಾಚಯ್ಯನವರು ಹುಣಸೂರಿನ ಸಾಮಾನ್ಯ ಮತ್ತು ಮೀಸಲು ಸ್ಥಾನಗಳಿಂದ ಕ್ರಮವಾಗಿ ೩,೦೫ ಮತ್ತು ೭,೩೫೦ ಬಹುಮತವನ್ನು ಪಡೆದರು ಅರಸಿನವರಿಗೆ ೨೧,೨೪೯ ಮತ್ತು ಶ್ರೀ ರಾಚಯ್ಯನವರಿಗೆ ೨೦,೫೬೩ ಮತಗಳು ಬಂದಿವೆ ೮,೮೧೦ ಮತಗಳು ಕುಲಗೆಟ್ಟುವು ಜನಸಂಘ ಮತ್ತು ಪಿ ಎಸ್ ಪಿ ಸ್ಪರ್ಧಿಗಳ ಠೇವಣಿ ಹೋಯಿತು

ಕಾಂಗ್ರೆಸ್ಸಿನ ಶ್ರೀ ಬಿ ಎಚ್ ದೊರೆಣ್ಣಗೌಡ ಮತ್ತು ಹೆಚ್ ಕೆ ಸಿದ್ದಯ್ಯನವರುಗಳು ಬೇಲೂರಿನ ಸಾಮಾನ್ಯ ಮತ್ತು ಮೀಸಲು ಕ್ಷೇತ್ರದಿಂದಲೂ ಶ್ರೀ ಡಿ ಮೂಕಪ್ಪನವರು ಸಾಗರದಿಂದಲೂ ಚುನಾಯಿತರಾದರು

ಪಿ ಎಸ್ ಪಿ ಪಕ್ಷವು ಪಾಂಡವಪುರ ಮತ್ತು ಉಡುಪಿ ಕ್ಷೇತ್ರಗಳಲ್ಲಿ ಜಯಗಳಿಸಿತು ಪಾಂಡವಪುರದಲ್ಲಿ ಶ್ರೀ ಬಿ ಚಾವಯ್ಯನವರು ೩,೬೪೦ ಬಹುಮತದಿಂದ ಕಾಂಗ್ರೆಸ್ಸಿನ ಸ್ಪರ್ಧಿ ಶ್ರೀಮತಿ ದಮಯಂತಿ ಬೋರೇಗೌಡರನ್ನು ಸೋಲಿಸಿದರು ಅವರಿಗೆ ೧೩,೬೭೭ ಶ್ರೀಮತಿ ದಮಯಂತಿಯವರಿಗೆ ೮,೮೩೭ ಮತ್ತು ಸ್ವತಂತ್ರರಾದ ಶ್ರೀ ದೊಡ್ಡತಿಮ್ಮೇಗೌಡರಿಗೆ ೭,೩೪೯ ಮತಗಳು ಬಂದುವು ೭ ಮತಗಳು ಕುಲಗೆಟ್ಟುವು ಉಡುಪಿಯಲ್ಲಿ ಪಿ ಎಸ್ ಪಿ ಯ ಉಪೇಂದ್ರ ಶ್ರೀನಿವಾಸ ನಾಯಕರು ಆರಿಸಿಬಂದರು ಹಾನಗಲ್ಲಿನಿಂದ ಸ್ವತಂತ್ರರಾದ ಶ್ರೀ ಬಸನಗೌಡ ರುದ್ರಗೌಡ ಪಾಟೀಲರು ಗೆದ್ದರು

ಪಿ ಎಸ್. ಕುಮಾರಸ್ವಾಮಿ ರಾಜಾರವರ ನಿಧನ

ಮದರಾಸಿನ ಮಾಜಿ ಮುಖ್ಯ ಮಂತ್ರಿಯೂ, ಒರಿಸ್ಸಾ ಸಂಸ್ಥಾನದ ಮಾಜಿ ಗವರ್ನರರೂ ಆದ ಶ್ರೀ ಪಿ ಎಸ್ ಕುಮಾರಸ್ವಾಮಿ ರಾಜಾರವರು ನೆನ್ನೆ ಮಧ್ಯರಾತ್ರಿಯಲ್ಲಿ ಮದರಾಸಿನ ಆಸ್ಪತ್ರೆಯಲ್ಲಿ ಮೃತರಾದರೆಂದು ವರದಿಯಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ನಾಗಸ್ವರ ೭-೧೫, ಮತ್ತು ೨೫ ಎನ್ ಸರಸ್ವತಿ—ದೇವರ ನಾಮ ೭-೩೦ ಹೇಮಂತ ಕುಮಾರ್—ರಿಕಾರ್ಡು ೮ ೩೦ ಬಾಲ [illegible] ೯ ಜಾನಪದ ಗೀತೆ : ದೆಹಲಿ ರಿಲೇ ಮಧ್ಯಾಹ್ನ ೧ ಮತ್ತು ೧-೫೦ ಎಂ. ಜಿ. ಸುಶೀಲಾ—ಗಾಯನ ೧೨.೩೦ ಮತ್ತು ಸಂಜೆ ೬ ೩೦ ಆರ್ ಸುಬ್ಬಾಶಾಸ್ತ್ರಿ—ಪಿಟೀಲು ೩-೧೫ ೬ ವರದರಾಜಯ್ಯಂಗಾರ್ ಗಾಯನ ಸಂಜೆ ೫ ಪಾಶ್ಚಾತ್ಯ ಸಂಗೀತ ೬-೫ ವಿರಾಮ ಸಂಗೀತ ೭ ದೇವರ ನಾಮಗಳು. ೭ ೩೦ ಗ್ರಾಮಸ್ಥರಿಗೆ ೭ ೩೦ ಗಿರಿಜಾವಳಿ ೮ "ಎರಡು ನಾಟಕಗಳು" ೮-೩೦ ವೀಣೆ ೯-೧೫ ಚಿತ್ರ ಸಂಗೀತ ೯ ೩೦ ಎಂ ಡಿ [illegible]

ಶ್ರೀ ವಿ ಕೆ. ಕೃಷ್ಣಮೇನನ್ನರ ವಿಜಯ

ಬೊಂಬಾಯಿಯಲ್ಲಿ ಲೋಕ ಸಭೆಗೆ ಕಾಂಗ್ರೆಸ್ ಸ್ಪರ್ಧಿಗಳ ಜಯ

ಭಾರತ ಸರ್ಕಾರದ ಸಚಿವರಾದ ಶ್ರೀ ವಿ ಕೆ ಕೃಷ್ಣಮೇನನ್‌ರವರು ಉತ್ತರ ಬೊಂಬಾಯಿ ಕ್ಷೇತ್ರದಿಂದ ಲೋಕ ಸಭೆಗೆ ಸ್ಪರ್ಧಿಸಿ, ೧ ೭೧ ೭೦೦ ಓಟುಗಳನ್ನು ಪಡೆದು ಜಯಶೀಲರಾಗಿರುವರು ಅವರ ಪ್ರತಿಸ್ಪರ್ಧಿ ಪೀಟರ್ ಅಲ್ವಾರಿಸ್‌ರವರಿಗೆ ೧ ೩೮ ೭೭ ಓಟುಗಳು ಬಂದುವು ಶ್ರೀ ಮೇನನ್ನರ ಜಯದಿಂದ ಪ್ರಭಾವ ಎದ್ದು ಕಾಂಗ್ರೆಸ್ಸಿಗೆ ಜನತೆಯ ಬೆಂಬಲವು ದೊರೆತಂತಾಗಿದೆ ಬೊಂಬಾಯಿ ದಕ್ಷಿಣ ಕ್ಷೇತ್ರದಿಂದಲೂ ಲೋಕ ಸಭೆಗೆ ಕಾಂಗ್ರೆಸ್ ಉಮೇದುವಾರ ಶ್ರೀ ಎಸ್ ಕೆ ಪಾಟೀಲರು ಜಯಗಳಿಸಿರುವರು

ಬಿಹಾರ್ ಮತ್ತು ಒರಿಸ್ಸಾ ಮುಖ್ಯ ಮಂತ್ರಿಗಳ ವಿಜಯ

ಬಿಹಾರಿನ ಶಾಸನ ಸಭೆಗೆ ಅಲ್ಲಿನ ಮುಖ್ಯ ಮಂತ್ರಿ ಡಾ। ಕೃಷ್ಣಸಿಹ್ನರವರೂ ಮತ್ತು ಅಲ್ಲಿನ ಮೀಸಲು ಸ್ಥಾನದಿಂದ ಕಾಂಗ್ರೆಸ್ಸಿನ ಶ್ರೀಮತಿ ಲೀಲಾವತಿಯವರೂ ಆರಿಸಿಬಂದಿರುವರು ಒರಿಸ್ಸಾದ ಮುಖ್ಯ ಮಂತ್ರಿ ಹರೇಕೃಷ್ಣ ಮೆಹತಾಬರು ಗಣತಂತ್ರ ಪರಿಷತ್ತಿನ ಸ್ಪರ್ಧಿ ಶ್ರೀ ವಾಸುದೇವನಾಯರ್‌ರವರಿಗಿಂತ ೧೭ ಸಾವಿರ ಹೆಚ್ಚು ಮತ ಗಳಿಸಿ ಗೆದ್ದಿರುವರು

ಇಂಡೋನೇಷ್ಯದಲ್ಲಿ ಭಾರತ ರಾಯಭಾರ ಕಛೇರಿ ಮೇಲೆ ಧಾಳಿ

ಇಂಡೋನೇಷ್ಯ ರಾಜಧಾನಿ ಜಕಾರ್ತಾದಲ್ಲಿರುವ ಭಾರತ ರಾಯಭಾರ ಕಛೇರಿಯ ನೌಕರರ ವಸತಿ ಗೃಹದ ಮೇಲೆ ೨೦೦ ಜನರ ಗುಂಪೊಂದು ನೆನ್ನೆ ಧಾಳಿ ಮಾಡಿ ನೌಕರನೊಬ್ಬನನ್ನು ಬಲವಂತವಾಗಿ ತಮ್ಮ ಬಂಧನದಲ್ಲಿರಿಸಿಕೊಂಡು ಕಟ್ಟಡದಲ್ಲಿನ ವಸ್ತುಗಳಲ್ಲಿ ಒಂದನ್ನೂ ಬಿಡದೆ ಕೊನೆಗೆ ಛಾವಣಿಯನ್ನೂ ಸಹ ಎತ್ತಿಕೊಂಡು ಹೋದರೆಂದು ಗೊತ್ತಾಗಿದೆ ಈ ಕೃತ್ಯಕ್ಕೆ ಕಾರಣ ತಿಳಿದಿಲ್ಲವಾದರೂ ಹಲವು ದಿನಗಳಿಂದಲೂ ಕಟ್ಟಡದ ವಾರೀಸನು ಭವನವನ್ನು ಖಾಲಿ ಮಾಡಲು ಒತ್ತಾಯ ಮಾಡುತ್ತಿದ್ದನೆಂದೂ ರಾಯಭಾರಿಯವರು ಅದಕ್ಕೆ ಒಪ್ಪಿರಲಿಲ್ಲವೆಂದೂ ತಿಳಿದು ಬಂದಿದೆ

ಚಾಮರಾಜನಗರದಲ್ಲಿ ವಾಲಿಬಾಲ್, ಬ್ಯಾಡ್‌ಮಿಂಟನ್ ಟೋರ್ನಮೆಂಟುಗಳು

ಚಾಮರಾಜನಗರದ ಜೈಹಿಂದ್ ವಾಲಿಬಾಲ್ ಕ್ಲಬ್ಬು ಮತ್ತು ಫ್ರೆಂಡ್ಸ್ ಯೂನಿಯನ್ ಬ್ಯಾಡ್‌ಮಿಂಟನ್ ಕ್ಲಬ್ಬುಗಳ ಆಶ್ರಯದಲ್ಲಿ ಬರುವ ತಿಂಗಳು ವಾಲಿಬಾಲ್ ಮತ್ತು ಬ್ಯಾಡ್‌ಮಿಂಟನ್ ಟೋರ್ನಮೆಂಟುಗಳನ್ನು ನಡೆಸಲಾಗುವುದು ಆ ಪಂದ್ಯಗಳಲ್ಲಿ ಸಕಲ ವಿದ್ಯಾ ಸಂಸ್ಥೆಗಳೂ ಮತ್ತು ಸಾರ್ವಜನಿಕ ಕ್ಲಬ್ಬುಗಳೂ ಭಾಗವಹಿಸಲು ಅವಕಾಶವಿರುತ್ತದೆ ಪ್ರವೇಶ ಧನವನ್ನು ಕಳುಹಿಸಲು ಇದೇ ೨೮ನೇ ತಾರೀಖು ಕೊನೆಯ ದಿನ ಹೆಚ್ಚಿಗೆ ವಿವರಗಳಿಗಾಗಿ ಜನರಲ್ ಸೆಕ್ರೆಟರಿಗಳೊಡನೆ ವ್ಯವಹರಿಸಬಹುದು

ಲೋಕ ಸಭೆಗೆ ಮೈಸೂರು ಜಿಲ್ಲೆಯಿಂದ ಚುನಾವಣೆ

ಕಾಂಗ್ರೆಸ್ ಉಮೇದುವಾರರ ಮುನ್ನಡೆ

ಮೈಸೂರು ೧೬

ಮೈಸೂರು ಜಿಲ್ಲೆಯ ಲೋಕಸಭಾ ಕ್ಷೇತ್ರದ ಓಟಿನ ಎಣಿಕೆಯಲ್ಲಿ ಇಂದು ಮಧ್ಯಾಹ್ನ ೨ ಗಂಟೆಯ ವೇಳೆಗೆ ಸಾಮಾನ್ಯ ಸ್ಥಾನದ ಕಾಂಗ್ರೆಸ್ ಉಮೇದುವಾರರಾದ ಶ್ರೀ ಎಂ ಶಂಕರಯ್ಯನವರಿಗೆ ಅವರ ಪ್ರತಿ ಸ್ಪರ್ಧಿಗಿಂತ ೨೭ ಸಾವಿರ ಹೆಚ್ಚು ಮತಗಳು ಬಂದಿದ್ದುವು

ಮೀಸಲು ಸ್ಥಾನದಿಂದ ಕಾಂಗ್ರೆಸ್ ಸ್ಪರ್ಧಿ ಶ್ರೀ ಎಸ್ ಎಂ ಸಿದ್ದಯ್ಯನವರು ಪಿ ಎಸ್ ಪಿ ಸ್ಪರ್ಧಿಗಿಂತ ಮೂರು ಸಾವಿರ ಹೆಚ್ಚು ಮತಗಳನ್ನು ಗಳಿಸಿರುವರು

ಬೇಲೂರು ಕ್ಷೇತ್ರದಲ್ಲಿ ೧೭,೧೯೯ ಕುಲಗೆಟ್ಟ ಓಟುಗಳು

ಹಾಸನ ಜಿಲ್ಲೆಯ ಬೇಲೂರು ದ್ವಿಸದಸ್ಯ ಕ್ಷೇತ್ರದಿಂದ ಲೋಕ ಸಭೆ ಚುನಾವಣೆಯಲ್ಲಿ ೧,೩೧,೦೭೧ ಜನರು ಕೊಟ್ಟ ಓಟುಗಳಲ್ಲಿ ೧೭,೧೯೯ ತಿರಸ್ಕೃತವಾಗಿರುವುವೆ ಮತ್ತು ಪರಾಜಿತರಾದ ಸ್ವತಂತ್ರ ಸ್ಪರ್ಧಿ ಶ್ರೀ ಬಿ ಜಿ ಗುರಪ್ಪನವರ ಪೆಟ್ಟಿಗೆಗಳಲ್ಲಿಯೇ ೧೭,೦೦೦ ಓಟುಗಳು ಕುಲಗೆಟ್ಟಿದ್ದುವೆಂದೂ ಹೇಳಲಾಗಿದೆ

ಕೇಂದ್ರ ಸರ್ಕಾರದ ಇಬ್ಬರು ಸಚಿವರ ಸೋಲು

ಪೂರ್ವ ಖಾನ್‌ದೇಶದಿಂದ ಲೋಕ ಸಭೆಗೆ ನಡೆದ ಚುನಾವಣೆಯಲ್ಲಿ ಕೇಂದ್ರ ಸರ್ಕಾರದ ನ್ಯಾಯಾಂಗ ಸಚಿವ ಎಸ್ ವಿ ಪಾಟಸ್ಕರ್‌ರವರು ಪರಾಜಿತರಾಗಿರುವರು ಅವರ ಪ್ರತಿಸ್ಪರ್ಧಿ, ಪಿ ಎಸ್ ಪಿ ಯ ಶ್ರೀ ನೌಷದ್ ಬರೂಚಾರವರು ವಿಜಯಿಗಳಾಗಿರುವರು ಕೇಂದ್ರ ಕಾರ್ಮಿಕ ಮಂತ್ರಿ ಶ್ರೀ ಖಂಡುಭಾಯಿ ದೇಸಾಯಿಯವರೂ, ಅಹಮದಾಬಾದಿನಲ್ಲಿ ಮಹಾ ಗುಜರಾತ್ ಜನತಾ ಪರಿಷತ್ತಿನ ಶ್ರೀ ಇಂದುಲಾಲ್ ಯಾಜ್ಞಿಕ್‌ರವರಿಂದ ಪರಾಜಿತರಾಗಿರುವರು.

ಲಕ್ನೋ ರೈಲ್ವೆ ನಿಲ್ದಾಣದಲ್ಲಿ ಎಂಜನ್ನಿಗೆ ಸಿಕ್ಕಿ ೩ ಜನರ ಮರಣ

ರೈಲು ಗಾಡಿಯನ್ನು ನೂಕುನುಗ್ಗಲಿನಿಂದ ತಪ್ಪಿಸಿಕೊಂಡು ಹತ್ತುವ ಸಲುವಾಗಿ ಲಕ್ನೋ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಬಿಟ್ಟು ಗಾಡಿ ಪಕ್ಕದ ಮತ್ತು ಶಂಟಿಂಗ್ ಎಂಜಿನ್ ಓಡಾಡುವ ಲೈನುಗಳ ಮೇಲೆ ನಿಂತಿದ್ದ ಹಲವು ಪ್ರಯಾಣಿಕರ ಮೇಲೆ ಹಿಂದು ಮುಂದಾಗಿ ಪೆಟ್ಟಿಗೆ ತೆರಳುತ್ತಿದ್ದ ಎಂಜಿನ್ ಹರಿದು ೩ ಜನರು ಸ್ಥಳದಲ್ಲೇ ಮೃತಪಟ್ಟು, ೧೨ ಮಂದಿ ಗಾಯಗೊಂಡರೆಂದು ವರದಿಯಾಗಿದೆ ಗಾಯಗೊಂಡವರಿಬ್ಬರ ಸ್ಥಿತಿಯು ಚಿಂತಾಜನಕವಾಗಿದೆ

ಮಂಗಳೂರಿನಿಂದ ಲೋಕ ಸಭೆಗೆ ಕಾಂಗ್ರೆಸ್ ಸ್ಪರ್ಧಿಯ ಆಯ್ಕೆ

ಭಾರತದಲ್ಲಿ ಅತಿ ದೊಡ್ಡ ಲೋಕಸಭಾ ಕ್ಷೇತ್ರವಾದ ಮಂಗಳೂರಿನಿಂದ ಕಾಂಗ್ರೆಸ್ ಸ್ಪರ್ಧಿ ಶ್ರೀ ಕೆ ಆರ್ ಆಚಾರ್ಯರು ಆರಿಸಿಬಂದಿದ್ದಾರೆ

ನಗರದ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಸ್ಪರ್ಧಿಯ ಆಯ್ಕೆ

ಕೆ ಎಸ್ ಸೂರ್ಯನಾರಾಯಣರಾಯರ ವಿಜಯ

ನಾಲ್ಕು ಜನ ಪ್ರತಿ ಸ್ಪರ್ಧಿಗಳ ಠೇವಣಿ ಮುಟ್ಟುಗೋಲು

ಮೈಸೂರು ೧೬

ನಗರದ ದಕ್ಷಿಣ ಕ್ಷೇತ್ರದಿಂದ ಸಂಸ್ಥಾನದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಈ ದಿನ ಎಣಿಕೆ ನಡೆದು ಕಾಂಗ್ರೆಸ್ ಉಮೇದುವಾರರಾದ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರು ಜಯಗಳಿಸಿರುವರು ಓಟಿನ ವಿವರಗಳು ಈ ರೀತಿ ಇವೆ – ಶ್ರೀಗಳಾದ

ಕೆ ಎಸ್ ಸೂರ್ಯನಾರಾಯಣರಾವ್ (ಕಾಂ)	೬,೪೬೬
ಎಲ್ ಶ್ರೀಕಂಠಯ್ಯ (ಸ್ವ)	೫,೩೨೨
ಎಂ ಸಿ ಮಹದೇವಸ್ವಾಮಿ (ಸ್ವ)	೨,೫೪೨
ಶ್ರೀ ವೇದಾಂತ ಹೆಮ್ಮಿಗೆ (ಪಿ ಎಸ್ ಪಿ)	೧,೮೯೯
ಶ್ರೀಕಂಠಶರ್ಮ (ಕೋಮುನಿಸ್ಟ್)	೧,೬೯೯
ವಿಶ್ವನಾಥ್ (ಸ್ವ)	೧ ೨೦೪

ಶ್ರೀಗಳಾದ ವೇದಾಂತ ಹೆಮ್ಮಿಗೆ, ವಿಶ್ವನಾಥ್, ಶ್ರೀಕಂಠಶರ್ಮ ಮತ್ತು ಎಂ ಸಿ ಮಹದೇವಸ್ವಾಮಿಯವರು ತಮ್ಮ ಠೇವಣಿಯನ್ನು ಕಳೆದುಕೊಂಡಿರುವರು

ಕೆ. ಸಿ. ರೆಡ್ಡಿಯವರಿಗೆ ಹೆಚ್ಚಿನ ಓಟುಗಳು

ಲೋಕ ಸಭೆಗೆ ಕೋಲಾರ ಕ್ಷೇತ್ರದ ಓಟುಗಳ ಎಣಿಕೆಯು ನಾಳೆಗೆ ಮುಕ್ತಾಯವಾಗುವುದೆಂದು ನಿರೀಕ್ಷಿಸಲಾಗಿದೆ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರಿಗೆ ನೆನ್ನೆ ೫೫,೬೯೭ ಓಟುಗಳೂ, ಅವರ ಕಮ್ಯೂನಿಸ್ಟ್ ಪ್ರತಿಸ್ಪರ್ಧಿ ವಿ ಎಂ ಗೋವಿಂದನ್‌ರವರಿಗೆ ೪೮,೫೬೩ ಓಟುಗಳೂ ಬಂದಿದ್ದುವು ಇದುವರೆಗೆ ೨೧೬ ಕೇಂದ್ರಗಳ ಓಟುಗಳ ಎಣಿಕೆಯಾಗಿದೆ ಇನ್ನೂ ೫೭೭ ಕೇಂದ್ರಗಳ ಎಣಿಕೆಯಾಗಬೇಕಾಗಿದೆ

ಚುನಾವಣೆ ಪಣದಲ್ಲಿ ಸೋತು ತಲೆಯ ಮುಂಡನ

ಪ್ರಜಾ ಸಮಾಜವಾದಿ ಪಕ್ಷದ ಸ್ಪರ್ಧಿ ಶ್ರೀಮತಿ ವಿಜಯಲಕ್ಷ್ಮಿಯವರು ಗೆಲ್ಲುವರೆಂದು ತಾವು ನುಡಿದಿದ್ದ ಭವಿಷ್ಯವು ಸುಳ್ಳಾದರೆ ತಮ್ಮ ತಲೆಯನ್ನು ಬೋಳಿಸಿಕೊಳ್ಳುವುದಾಗಿ ಪಣ ಕಟ್ಟಿದ್ದ ಮದ್ರಾಸಿನ ಮೈಲಾಪುರದ ಇಬ್ಬರು ಯುವಕರು ತಮ್ಮ ಉಮೇದುವಾರಳ ಬದಲು ದ್ರಾವಿಡ ಮುನ್ನೇತ್ರ ಕಳಗಂನ ಸ್ಪರ್ಧಿ ಅಣ್ಣಾದೊರೈಯವರಿಗೆ ಜಯವಾದ ಕಾರಣ ತಮ್ಮ ಪಣದಂತೆ ತಲೆಯನ್ನು ಬೋಳಿಸಿಕೊಂಡರೆಂದು ವರದಿಯಾಗಿದೆ.

ಪಾಳ್ಯ ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗೆ ಸೋಲು

ಸ್ವತಂತ್ರ ಸ್ಪರ್ಧಿ ವೆಂಕಟೇಗೌಡರ ಆಯ್ಕೆ

ಸ್ವಂ ಸು ಫೋ] ನಂಜನಗೂಡು ೧೬

ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಕ್ಷೇತ್ರದಿಂದ ಕಾಂಗ್ರೆಸ್ ಉಮೇದುವಾರರಾಗಿದ್ದ ಶ್ರೀ ಎಂ ಶಂಕ್ರಪ್ಪನವರನ್ನು ಸ್ವತಂತ್ರ ಉಮೇದುವಾರರಾದ ಶ್ರೀ ವೆಂಕಟೇಗೌಡರು ೭,೦೩೩ ಓಟುಗಳಿಂದ ಸೋಲಿಸಿರುವುದಾಗಿ ತಿಳಿದುಬಂದಿದೆ

ಇಹಪರ ಸುಖಸಾಧನೆಗೆ ಶ್ರೀ ಸಾಯಿಬಾಬಾರವರ ನೆರವು

ಮಂದಿರದ ಆರಂಭೋತ್ಸವದಲ್ಲಿ ರಾಜ್ಯಪಾಲರ ಭಾಷಣ

ಮೈಸೂರು ೧೩

ಶ್ರೀ ಪ್ರಸನ್ನ ಸಾಯಿ ಮಂದಿರದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರು ನಿನ್ನೆ ನೆರವೇರಿಸಿ, ಇಹಪರ ಸುಖ ಸಾಧನೆಗೆ ಶ್ರೀ ಸಾಯಿಬಾಬಾರವರು ನೀಡುತ್ತಿದ್ದ ನೆರವನ್ನು ವಿವರಿಸಿದರು. ಶ್ರೀಮತಿ ಗೌರಮ್ಮ ನಾಗರಾಜರವರು ಶ್ರೀ ಬಿ. ಎಸ್. ಕಪನೀಪತಯ್ಯನವರಿಂದ ವಿರಚಿತವಾದ ಮಂಗಳ ಪದ್ಯಗಳನ್ನು ಸುಶ್ರಾವ್ಯವಾಗಿ ಪಠಿಸಿದರು. ಶ್ರೀಮತಿ ಚೊಕ್ಕಮ್ಮ ಮತ್ತು ವೃಂದದವರಿಂದ ಮನೋಹರವಾದ ಗಾಯನವಾಯಿತು. ಸಾಮೂಹಿಕ ಭಜನೆಯಾದನಂತರ ಮಂದಿರದ ಅಧ್ಯಕ್ಷ ಡಾ|| ನಾಣಿಸ್ವಾಮಿಯವರು ಬಿನ್ನವತ್ತಳೆಯನ್ನು ಓದಿ ಗಂಧದ ಕರಂಡದಲ್ಲಿ ರಾಜ್ಯಪಾಲರಿಗೆ ಒಪ್ಪಿಸಿದರು

ಮಂದಿರದ ಕಟ್ಟಡವನ್ನು ನಿರ್ಮಿಸಲು ಬಹಳ ಸಹಾಯ ಮಾಡಿರುವ ಶ್ರೀ ಬೋರಮ್ಮನವರ ಬಸವಯ್ಯನವರಿಗೆ ಸುವರ್ಣ ಹಾರವನ್ನೂ, ಸಾಯಿಬಾಬಾರವರ ವಿಗ್ರಹವನ್ನು ಮಾಡಿಕೊಟ್ಟ ಸದಾನಂದಾಚಾರ್ಯ ಮತ್ತು ಪರಮೇಶ್ವರಾಚಾರ್ಯರಿಗೆ ಉಡುಗರೆಯನ್ನೂ, ವಿದ್ಯುದ್ದೀಪಗಳನ್ನು ಉಚಿತವಾಗಿ ಹಾಕಿಕೊಟ್ಟ ಕಂಟ್ರಾಕ್ಟರುಗಳ ಸಂಘದವರಿಗೆ ಪಾರಿತೋಷಕವನ್ನೂ ಮಂದಿರದವರು ಶ್ರೀಮನ್ಮಹಾರಾಜರ ಮೂಲಕ ವಿನಿಯೋಗ ಮಾಡಿಸಿದರು

ಶ್ರೀಮನ್ಮಹಾರಾಜರು ಸಾಯಿಬಾಬಾರವರಿಗೆ ಅರ್ಚನೆಯನ್ನು ಸ್ವತಃ ನಡೆಸಿದರು ಅವರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು

ಪ್ರಪಂಚದಲ್ಲಿ ಇತ್ತೀಚೆಗೆ ಐಹಿಕ ಸುಖವನ್ನಪೇಕ್ಷಿಸಿ ಅಂತಹ ಸುಖ ಪ್ರಾಪ್ತಿಗೆ ಅನುಕೂಲವಾದ ಮಾರ್ಗಗಳನ್ನು ಆಶ್ರಯಿಸುತ್ತಿರುವುದು ಸ್ವಾಭಾವಿಕವಾಗಿಹೋಗಿದೆ. ಇದರಿಂದ ಐಹಿಕ ಸುಖಾಭಿಲಾಷೆಗಾಗಿ ಪರಮಾರ್ಥವನ್ನೇ ಮರೆಯುತ್ತಿರುವ ಸೂಚನೆಗಳು ನಮಗೆಲ್ಲರಿಗೂ ಗೋಚರವಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಐಹಿಕ ಸುಖಾಭಿಲಾಷೆಯನ್ನು ಬಿಡದೆ, ಪರಮಾರ್ಥದ ಹಾದಿಯನ್ನು ಮರೆಯದೆ ಎರಡನ್ನೂ ಸಮಾನವಾಗಿ ಹೊಂದಿಸಿಕೊಂಡುಹೋಗಬೇಕಾದ್ದು ಅತ್ಯವಶ್ಯಕ. ಶ್ರೀ ಸಾಯಿಬಾಬಾರವರು ಆಧ್ಯಾತ್ಮಿಕ ಪ್ರಪಂಚದ ಶಿಖರವನ್ನೇರಿದ ಮಹಾ ಸಾಧುಗಳು, ಮಹಾ ಮಹಿಮರು ಮತ್ತು ಮಹಾ ಸತ್ಪುರುಷರು. ನಮ್ಮ ಭಾರತ ಭೂಮಿಯು, ಹಾಗೂ ಪ್ರಪಂಚದ ಇಂದಿನ ಪರಿಸ್ಥಿತಿಯಲ್ಲಿ ಇಂತಹ ಮಹಾ ವಿಭೂತಿಗಳು ಅತ್ಯವಶ್ಯಕವಾಗಿ ಬೇಕಾಗಿದ್ದಾರೆ ನಮ್ಮಲ್ಲಿ ಈಗಿರತಕ್ಕ ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಪರಿಸ್ಥಿತಿಯನ್ನು ನಿಧಾನವಾಗಿ ಪರಿಶೀಲಿಸಿದರೆ, ಶ್ರೀ ರಾಮಕೃಷ್ಣ ಪರಮಹಂಸರಂತೆ ಸರ್ವಮತ ತತ್ವಗಳನ್ನೂ ಅನುಭವಕ್ಕೆ ತಂದುಕೊಂಡು ವಿರುದ್ಧ ಜಾತಿ ಮತಗಳ ಹೋರಾಟವನ್ನು ತಪ್ಪಿಸಿ, ಸರ್ವ ಧರ್ಮ ಸಮನ್ವಯವನ್ನು ಮಾಡತಕ್ಕಂಥ ಶ್ರೀ ಸಾಯಿನಾಥ ಮಹಾಪುರುಷರ ಉಪದೇಶವೂ, ಅನುಗ್ರಹವೂ ಈಗ ಅತ್ಯವಶ್ಯಕವಾಗಿವೆ. ಹೀಗೆ ಶ್ರೇಯಸ್ಸು, ಪ್ರೇಯಸ್ಸು ಎರಡನ್ನೂ ಸಮರಸವಾಗಿ ಹೊಂದಿಸಿಕೊಂಡುಹೋಗುವ ಸುಲಲಿತವಾದ ಮಾರ್ಗವನ್ನು ಬೋಧಿಸುವ ಸಾಧುಸಂತರುಗಳಲ್ಲಿ ಪ್ರಸಿದ್ಧರಾಗಿರುವವರು ಶ್ರೀ ಸಾಯಿನಾಥರು

ಐಹಿಕ ಸುಖಾಪೇಕ್ಷೆಯಿಲ್ಲದೆ ದೇವಾಲಯ, ಭಜನ ಮಂದಿರ, ಪ್ರಾರ್ಥನಾ ಸ್ಥಳ, ಯಾತ್ರಾಸ್ಥಳಗಳು--ಇವುಗಳಿಗೆ ಈಗಿನ ಕಾಲದಲ್ಲಿ ಹೋಗತಕ್ಕವರು ಬಹಳ ವಿರಳ ಆದರೆ ಸದ್ಗುರು ಸಾಯಿಬಾಬಾ ಅವರ ಸಮೀಪಕ್ಕೆ ಹೋಗುವವರಿಗೆ ಶ್ರೀ ಗುರುಗಳವರು ಮೊಟ್ಟಮೊದಲು ಭಕ್ತರ ಐಹಿಕ ಇಷ್ಟಾರ್ಥಗಳನ್ನು ಪೂರೈಸಿ, ಅವರನ್ನು ಶ್ರೇಯೋಮಾರ್ಗಕ್ಕೆ ತಿರುಗಿಸುತ್ತಿದ್ದರೆಂಬುದು ತಿಳಿಯಬರುತ್ತದೆ ಇದಲ್ಲದೆ ಶ್ರೀ ಸಾಯಿಬಾಬಾರವರು ಅನೇಕ ಸಂದರ್ಭಗಳಲ್ಲಿ -" ನೀವೆಲ್ಲಿದ್ದರೂ ಸರಿ ಏನು ಮಾಡುತ್ತಿದ್ದರೂ ಸರಿ ನೀವು ಮಾಡುತ್ತಿ [illegible] ವೂ ನನಗೆ ತಿಳಿಯುತ್ತದೆ ದೇವರನ್ನು ದೃಢವಾಗಿ ನಂಬಿದವನಿಗೆ ಎಂದಿಗೂ ಅಳಿವಿಲ್ಲ ಯಾವುದಕ್ಕೂ ಕೊರತೆಯಿಲ್ಲ ಭಕ್ತನು ಭಕ್ತಿಯಿಂದ ನನ್ನನ್ನು ಯಾವಾಗ ಬಾ ಎಂದು ಕರೆದರೆ ಆಗಲೇ ನಾನು ಕಾಣಿಸಿಕೊಳ್ಳುವೆನು. ನನಗೆ ಪ್ರಯಾಣ ಅನುಕೂಲಗಳೇನೂ ಬೇಕಾಗಿಲ್ಲ"- ಎಂಬುದಾಗಿ ಅಪ್ಪಣೆ ಕೊಡಿಸಿ ಭಕ್ತರ ಐಹಿಕ ದುಃಖ ನಿವಾರಣೆ, ಸುಖಪ್ರಾಪ್ತಿ ಇವುಗಳನ್ನು ಅನುಗ್ರಹಿಸಿ ಎಲ್ಲರೂ [illegible] ತಮ್ಮನ್ನೇ ಸ್ಮರಿಸಿಕೊಂಡು ಸನ್ಮಾರ್ಗ ಪ್ರವರ್ತಕರಾಗುವಂತೆ ಮಾಡುತ್ತಿದ್ದರು ಇವರಿಗೆ ಪಂಡಿತರು-ಪಾಮರರು, ಧನಿಕರು ಬಡವರು, ಉತ್ತಮ ಜಾತಿಯವರು-ನೀಚ ಜಾತಿಯವರು ಎಂಬ ಭೇದಭಾವವಿಲ್ಲದೆ ಎಲ್ಲರಿಗೂ ಅವರವರ ಮನೋಧರ್ಮ, ಆಧ್ಯಾತ್ಮಿಕ ಪ್ರವೃತ್ತಿ, ಮುಂತಾದುವುಗಳಿಗೆ ಅನುಸಾರವಾಗಿ ಉಪದೇಶವಾಣಿಯನ್ನು ಅನುಗ್ರಹಿಸುತ್ತಿದ್ದರು.

ಕೆಲವರಿಗೆ ಒಬ್ಬರೇ ಕುಳಿತು ಗುರುವನ್ನು ಅಥವಾ ದೇವರನ್ನು ಭಜಿಸುವುದಕ್ಕೆ ಅನುಕೂಲವಿರಬಹುದು ಎಲ್ಲರಿಗೂ ಆ ಬಗೆಯ ಅನುಕೂಲವಿಲ್ಲದಿರುವಾಗ ಇಂತಹ ಪ್ರಾರ್ಥನಾ ಮಂದಿರಗಳಲ್ಲಿ ಒಟ್ಟುಗೂಡಿ ಭಕ್ತಿಯಿಂದ ಭಜನೆ ಮಾಡುವುದು ಬಹಳ ಸುಗಮವಾದ ಶ್ರೇಯಸ್ಸಾಧನೆಗೆ ತಕ್ಕ ಮಾರ್ಗ. ಪರಸ್ಪರ ಭೇದಭಾವಗಳಿಲ್ಲದೆ ಅನನ್ಯ ಮನಸ್ಕರಾಗಿ, ಸಾಮೂಹಿಕ ಭಜನೆಗಳಲ್ಲಿ ಭಾಗಿಗಳಾಗಿ, ಮನಸ್ಸನ್ನು ಕ್ರಮವಾಗಿ ಪರಿಪಕ್ವಗೊಳಿಸುವ ಸನ್ನಿವೇಶವನ್ನು ಇಲ್ಲಿ ಪಡೆಯಬಹುದು.

ಸಾಮೂಹಿಕ ಭಜನೆಯನ್ನು ಮಾಡುತ್ತಿರುವಾಗ ಮನಸ್ಸು ಚಂಚಲವಾಗುವುದು ಸ್ವಾಭಾವಿಕ ಇಂತಹ ಪ್ರಾರ್ಥನಾ ಮಂದಿರದಲ್ಲಿ ಮನಸ್ಸನ್ನು ಬಿಗಿ ಹಿಡಿದು ನಿಲ್ಲಿಸುವುದಕ್ಕೆ ಒಂದು ದೇವತಾ ವಿಗ್ರಹವೋ, ಅಥವಾ ಗುರುವಿನ ಪಟವೋ ಇದ್ದಲ್ಲಿ ಮನಸ್ಸು ಅಲ್ಲಿ ಸ್ಥಿರವಾಗಿ ನಿಂತು ಕ್ರಮಾನುಕ್ರಮವಾಗಿ ಮನೋಧರ್ಮವು ಉತ್ತಮಗೊಂಡು ಶ್ರೇಯೋಮಾರ್ಗದಲ್ಲಿ ಮುಂದುವರಿಯುವುದು ಸುಲಭ ಮತ್ತು ಸಾಧ್ಯ.

ಈ ಧರ್ಮಕಾರ್ಯಕ್ಕೆ ನೆರವಾಗಿ ಭಕ್ತಿಯಿಂದ ಅತ್ಯಲ್ಪ ಸೇವೆ ಸಲ್ಲಿಸಿರುವ ಎಲ್ಲಾ ಭಕ್ತರಿಗೂ ಶ್ರೀ ಸಾಯಿನಾಥನು ಸಮಸ್ತ ಶ್ರೇಯಸ್ಸನ್ನು ಅನುಗ್ರಹಿಸಿ ಇತೋಪ್ಯತಿಶಯವಾದ ಧರ್ಮಕಾರ್ಯಗಳನ್ನು ಇನ್ನೂ ಮುಂದೆ ಮಾಡುವಂತೆ ಅನುಗ್ರಹಿಸಲೆಂದೂ ನಾವು ಪ್ರಾರ್ಥಿಸುತ್ತೇವೆ

ಶ್ರೀ ಎಂ ಪುಟ್ಟಯ್ಯನವರಿಂದ ವಂದನಾರ್ಪಣೆಯಾದನಂತರ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಸಮಾರಂಭವು ಮುಗಿಯಿತು

ವಕೀಲರಿಂದ ಮತ್ತೊಬ್ಬ ವಕೀಲರಿಗೆ ಚೂರಿ ಪ್ರಯೋಗದ ಪ್ರಯತ್ನ

ಹೈದರಾಬಾದಿನ ಜಿಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಕಳೆದ ಮಂಗಳವಾರ ಒಂದು ಮೊಕದ್ದಮೆಯಲ್ಲಿ ಇಬ್ಬರು ವಕೀಲರ ನಡುವೆ ನಡೆಯುತ್ತಿದ್ದ ವಾದವಿವಾದಗಳಲ್ಲಿ ಅಹಮದ್ ಆಲಿ ಎಂಬ ವಕೀಲರು ಆಜಂ ಅಲಿಖಾನ್ ಎಂಬ ಮತ್ತೊಬ್ಬ ವಕೀಲರ ಬಗ್ಗೆ ಮಾಡಿದ ಟೀಕೆಗಾಗಿ ಕೋಪಗೊಂಡು ಒಂದು ಚೂರಿಯನ್ನು ಸೆಳೆದು ಅಹಮದ್ ಆಲಿಯವರನ್ನು ಅಟ್ಟಿಸಿಕೊಂಡುಹೋದರೆಂದೂ, ಅವರು ಗಾಬರಿಯಿಂದ ಓಡಿ ರಕ್ಷಣೆಗಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರ ಕೊಠಡಿಯನ್ನು ಹೊಕ್ಕರೆಂದೂ ವರದಿಯಾಗಿದೆ. ತರುವಾಯ ಕೋರ್ಟಿನ ವಕೀಲರ ಸಂಘದವರು ಸಭೆ ಸೇರಿ ಆಜಂ ಆಲಿಖಾನರು ಸಂಘಕ್ಕೆ ಲಿಖಿತ ಕ್ಷಮಾಪಣೆ ಸಲ್ಲಿಸಬೇಕೆಂದು ಠರಾವು ಮಾಡಿದರು. ಅಹಮದ್ ಆಲಿಖಾನರು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅರ್ಜಿಯೊಂದನ್ನು ಸಲ್ಲಿಸಿ, ಈ ಘಟನೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಪೋಲೀಸರಿಗೆ ವರದಿ ಮಾಡುವಂತೆ ಕೋರಿದರು. ಅದೇ ಮೇರೆಗೆ ಮಾಡಲಾಯಿತು

○ಪೂರ್ವ ಜರ್ಮನಿಯಲ್ಲಿ ರಷ್ಯದ ಸೈನ್ಯಗಳನ್ನು ತಾತ್ಕಾಲಿಕವಾಗಿ ಇಡುವ ಬಗ್ಗೆ ಕಳೆದ ಮಂಗಳವಾರ ಎರಡು ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳು ಒಪ್ಪಂದಕ್ಕೆ ರುಜು ಹಾಕಿರುವರು.

ಮದ್ರಾಸಿನ ಕಾಂಗ್ರೆಸ್ ಸುಧಾರಣಾ ಪಕ್ಷದ ನಾಯಕನ ಪರಾಜಯ

ಮದ್ರಾಸ್ ಸಂಸ್ಥಾನದಲ್ಲಿ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆರಿಸಲಾದ ರೀತಿಯ ಬಗ್ಗೆ ಪ್ರತಿಭಟಿಸಿ ಸ್ಥಾಪಿಸಲಾದ ಕಾಂಗ್ರೆಸ್ ಸುಧಾರಣಾ ಪಕ್ಷದ ಪ್ರಮುಖ ನಾಯಕ ಶ್ರೀ ಕೆ. ಎಸ್. ವೆಂಕಟಕೃಷ್ಣ ರೆಡ್ಡಿಯಾರರನ್ನು ಅವರ ಸ್ವಕ್ಷೇತ್ರವಾದ ನಲ್ಲೂರಿನಲ್ಲಿ ಶ್ರೀ ವೇದಮಾಣಿಕ್ಯಂ ಎಂಬ ಸ್ವತಂತ್ರ ಸ್ಪರ್ಧಿಯು ೩ ಸಾವಿರ ಮತಗಳಿಂದ ಸೋಲಿಸಿರುವರು.

ಓಟು ಮಾಡುವ ಮಹಿಳೆಯರ ಮಕ್ಕಳಿಗಾಗಿ ತೊಟ್ಟಿಲುಗಳು

ಬೊಂಬಾಯಿ ಕೈಗಾರಿಕಾ ಕೇಂದ್ರ ಪ್ರದೇಶದಿಂದ, ಮಕ್ಕಳೊಡನೆ ಬಂದು ಓಟು ಮಾಡುವ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ, ಸ್ವಯಂಸೇವಕರುಗಳು ಮತದಾನ ಕೇಂದ್ರಗಳ ಬಳಿ ರಸ್ತೆ ಮಗ್ಗುಲಲ್ಲಿ ಹಲವು ತೊಟ್ಟಿಲುಗಳನ್ನು ಇಟ್ಟಿದ್ದ ಪ್ರಸಂಗವು ವರದಿಯಾಗಿದೆ ಸ್ವಯಂಸೇವಕರು ಮಕ್ಕಳನ್ನು ಕರೆದುಕೊಂಡು ತೊಟ್ಟಿಲುಗಳಲ್ಲಿ ಮಲಗಿಸಿ, ತಾಯಿಯರು ಓಟು ಕೊಟ್ಟು ಬರುವವರೆಗೆ, ಜೋಗುಳ ಹಾಡುತ್ತಾ ತೂಗುತ್ತಿದ್ದರೆಂದೂ ಹೇಳಲಾಗಿದೆ.

ಕಾಸರಗೋಡಿನಲ್ಲಿ ಕನ್ನಡವೇ ಕೋರ್ಟ್ ಭಾಷೆ

ಕನ್ನಡ ಪ್ರಾಂತ್ಯವಾದ ಮಂಗಳೂರಿನ ಕಾಸರಗೋಡು ತಾಲ್ಲೂಕು ಕೇರಳ ಸಂಸ್ಥಾನಕ್ಕೆ ಸೇರಿಸಲ್ಪಟ್ಟಿದ್ದರೂ, ಆ ತಾಲ್ಲೂಕಿನಲ್ಲಿ ಕೋರ್ಟು ಭಾಷೆಯು ಕನ್ನಡವೇ ಇರತಕ್ಕದ್ದೆಂದು ಕೇರಳ ಸರ್ಕಾರದ ವಿಜ್ಞಾಪನೆಯೊಂದರಿಂದ ಗೊತ್ತಾಗಿದೆ

ಕೋಟೆರಿ ಕ್ಲಬ್ಬಿನ ಅಧಿಕಾರ ವರ್ಗ

೧೯೫೭-೫೮ರ ಸಾಲಿಗೆ ನಗರದ ಕೋಟೆರಿ ಕ್ಲಬ್ಬಿನ ಅಧ್ಯಕ್ಷರಾಗಿ ಡಾ|| ಎಂ ಶಂಕರಸ್ವಾಮಿಯವರೂ, ಉಪಾಧ್ಯಕ್ಷರಾಗಿ ಶ್ರೀ ಎಫ್ ಕೆ ಇರಾನಿಯವರೂ, ಕಾರ್ಯದರ್ಶಿಗಳಾಗಿ ಶ್ರೀ ಎಸ್ ಎಸ್ ಶಾಸ್ತ್ರಿಯವರೂ, ಖಜಾಂಚಿಯಾಗಿ ಶ್ರೀ ಶಂಕರ ಜವಳಿಯವರೂ, ಡೈರೆಕ್ಟರುಗಳಾಗಿ ಡಾ|| ಎ ಕೆ ಗೋಪಾಲಂಗಾರ್, ಡಾ|| ಎಸ್. ಸಿ ಪುಟ್ಟಣ್ಣ, ಡಾ|| ಪಾರ್ಸಿಯಾ ಮತ್ತು ಡಾ|| ಎಸ್ ಸಂಜೀವರಾಯರೂ ಚುನಾಯಿತರಾಗಿದ್ದಾರೆ.

ಸಹಾಯಾರ್ಥ ಸಿನಿಮಾ ಪ್ರದರ್ಶನ

ನಗರದ ಚಾಮುಂಡಿಪುರದಲ್ಲಿರುವ ಸೀತಾಸದನದ ಸಹಾಯಾರ್ಥವಾಗಿ ಇದೇ ೧೮ ನೇ ತಾರೀಕು ಸೋಮವಾರ ಬೆಳಗ್ಗೆ ೧೦-೩೦ ಗಂಟೆಗೆ ನಗರದ ಲಕ್ಷ್ಮಿ ಥಿಯೇಟರಿನಲ್ಲಿ [illegible] ಎಂಬ ಚಿತ್ರದ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ. ಮೇಲ್ಕಂಡ ಪ್ರದರ್ಶನವು ಈ ದಿನ ಏರ್ಪಾಡಾಗಿದ್ದು, ವಿದ್ಯುಚ್ಛಕ್ತಿ ತೊಂದರೆಯಿಂದ ಮುಂದುವರಿದಿದೆ.

ತ್ಯಾಗರಾಜರ ಮತ್ತು ಪುರಂದರದಾಸರ ದಿನಾಚರಣೆ

ನಂಜನಗೂಡಿನಲ್ಲಿರುವ ಶ್ರೀ ಸರಸ್ವತೀ ಗಾನ ಶಿಕ್ಷಣ ಶಾಲೆಯ ಆಶ್ರಯದಲ್ಲಿ ಮೇಲ್ಕಂಡ ದಿನಾಚರಣೆಯು ಅಲ್ಲಿನ ಕನಕದಾಸ ವಿದ್ಯಾರ್ಥಿನಿಲಯದಲ್ಲಿ ನಾಳೆ ಸಂಜೆ ೫ ಗಂಟೆಗೆ ನೆರವೇರುವುದು. ಆಯುರ್ವೇದ ವಿದ್ವಾನ್ ಭಿಷಗ್ರತ್ನ ಬಿ.ವಿ. ಪಂಡಿತರು ಅಧ್ಯಕ್ಷತೆ ವಹಿಸುವರು. ವಿ|| ಚಲುವರಾಯಸ್ವಾಮಿಯವರು ಭಾಷಣ ಮಾಡುವರು.

ನಂಜನಗೂಡು ಶಾರದಾ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಘದ ವಾರ್ಷಿಕೋತ್ಸವ

ನಂಜನಗೂಡಿನಲ್ಲಿರುವ ಶಾರದಾ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸಿನ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೪-೩೦ ಗಂಟೆಗೆ ಅಲ್ಲಿನ ಪ್ರೌಢಶಾಲಾ ಆವರಣದಲ್ಲಿ ಜರುಗುವುದು. ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಪಿ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸುವರು. ಮೈಸೂರು ಶಾರದಾ ವಿಲಾಸ ಕಾಲೇಜಿನ ಗಣಿತ ಶಾಸ್ತ್ರದ ಅಧ್ಯಾಪಕರಾದ ಶ್ರೀ ವಿ. ಕೆ. ದೊರೆಸ್ವಾಮಿಯವರು ಮುಕ್ತಾಯ ಭಾಷಣ ಮಾಡುವರು

ಬಂಗಾಳದಲ್ಲಿ ಎನ್. ಸಿ. ಚಟ ಯವರ ಪರಾಜಯ

ಕಮ್ಯೂನಿಸ್ಟ್ ಸ್ಪರ್ಧಿಯ ವಿಜಯ

ಪಶ್ಚಿಮ ಬಂಗಾಳದಲ್ಲಿ ಲೋಕಸಭಾ ಚು ವಣೆಗೆ ಸ್ಪರ್ಧಿಸಿದ್ದ ಹಿಂದೂ ಮಹಾ ಸಭಾಧ್ಯ ಶ್ರೀ ಎನ್. ಸಿ. ಚಟರ್ಜಿಯವರೂ ಮತ್ತು ಗ್ರೆಸ್ಸಿನ ಶ್ರೀ ಸತೀಂದ್ರನಾಥ ಚೌಧುರಿಯವ ಪರಾಜಿತರಾಗಿರುವರು. ಕಮ್ಯೂನಿಸ್ಟ್ ದುವಾರರಾದ ಶ್ರೀ ಪ್ರಭಾತ್‌ಕರ್‌ರವರು ವಿ ಗಳಿಸಿರುವರು

ಬಿಹಾರ್ ವಿಶ್ವವಿದ್ಯಾಲಯದ ಉಪಸ್ಥಾನಪತಿಗಳ ನಿಧನ

ಬಿಹಾರ್ ವಿಶ್ವವಿದ್ಯಾಲಯದ ಉಪ ಪತಿ ಶ್ರೀ ಶ್ಯಾಮನಂದ್ ಸಹಾಯರು ೬೫ ನೇ ವಯಸ್ಸಿನಲ್ಲಿ ಮುಜಫರ್‌ಪುರದಲ್ಲಿ ನಿಧನರಾದರು ಅವರು ಅಲ್ಲಿಂದ ಲೋಕ ಕಾಂಗ್ರೆಸ್ ಪರ ಸ್ಪರ್ಧಿಸಿದ್ದರು.

ಕಾರಂಜಿ ಕೆರೆಯಲ್ಲಿ ಶವ

ನಿನ್ನೆ ದಿನ ಬೆಳಗ್ಗೆ ಕಾರಂಜಿಕೆರೆಯಲ್ಲಿ ಚಿತ ಗಂಡಸಿನ ಶವವೊಂದು ತೇಲುತ್ತಿತ್ತೆಂದು ನಜರ್‌ಬಾದ್ ಪೋಲೀಸರು ತನಿಖೆ ನಡೆಸುತ್ತಿ ವರೆಂದೂ ಗೊತ್ತಾಗಿದೆ.

ನರ್ಸರಿ ಸ್ಕೂಲ್ ಉಪಾಧ್ಯಾಯಿಯರ ಶಿಕ್ಷಣ ಕೇಂದ್ರ

ನಗರದ ದಿವಾನ್ಸ್ ರೋಡಿನಲ್ಲಿರುವ

ಶ್ರೀ ಜಗದಂಬಾ ಶಿಶುವಿಹಾರದ

11-3-57ರಿಂದ ಪ್ರಾರಂಭವಾಗಿದೆ
ಸೇರಲಪೇಕ್ಷಿಸುವ ಮಹಿಳೆಯರು ಕೂಡಲೇ
ಡೈರೆಕ್ಟರರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು
ಕೋರಲಾಗಿದೆ

ಪಿ. ಕೃಷ್ಣಮೂರ್ತಿ,
ಡೈರೆಕ್ಟರ್

ಮೈಸೂರಿನಲ್ಲಿ ಪ್ರತಿ ತಿಂಗಳು
17 ನೇ ತಾರೀಕು
ವಿಶ್ವವಿಖ್ಯಾತವಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡು
ಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಕು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ. 590
—: ಭೇಟಿಯ ಕಾಲ :—
ಬೆಳಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4ರಿಂದ 7-30
ಮೇಲ್ಕಂಡ ವಿಷಯವನ್ನು ಗಮನಿಸಿ
ಅವರ ಪರೀಕ್ಷಿತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸಂಯೋಗ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಹವಳ, ಗೋಮೇಧಿಕ, ನೀಲ, ಪದ್ಮರಾಗಿಣಿ ಮತ್ತು ಸ್ತಿಕ-ಈ 9 ಅಮೂಲ್ಯ ಹರಳುಗಳ ಸಂಯೋಗ ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಧದ ವ್ಯಾಧಿಗಳು, ಬಿಳಿ ತೊನ್ನು, ರಕ್ತ ದೋ ಮೂಲವ್ಯಾಧಿ, ಕಾಮಶ್ವಾಸ, ಬಹುಮೂತ್ರ, [illegible] ಮತ್ತು [illegible] ಇನ್ನಿತರ ಎಲ್ಲಾ ಹಾಗೂ ತೀವ್ರವಾದ ವ್ಯಾಧಿಗಳೂ ಸಂಪೂರ್ಣವಾಗಿ ಗುಣಹೊಂದುವುವು. ಅತ್ಯುತ್ತಮ ಇದೊಂದೇ
NAVRATNA KALPA PHARMACY,
JULLUNDUR CITY (India)

Edited, Printed and Published
A. R. Nagarajan at Sadhvi Pres
D. Subbiah Road, Mysore

ರಿಜಿಸ್ಟ್ರೇ ನಂ. 192

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 6 ಕಾಸು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಪುಟ : ೦೫] SADHVI : SUNDAY 17-3-1957 ಮೈಸೂರು : ಭಾನುವಾರ ೧೭-೩-೧೯೫೭ : [ಸಂಚಿಕೆ : ೨೨೬

ವಿಧಾನ ಸೌಧದ ವೆಚ್ಚಗಳ ಬಗ್ಗೆ ವಿಚಾರಣಾ ಸಮಿತಿ ಟೀಕೆ

ವಿಧಾನ ಸೌಧದ ನಿರ್ಮಾಣದಲ್ಲಿ ದುಂದುವೆಚ್ಚ ಮತ್ತು ಅಕ್ರಮ

ವಿಚಾರಣಾ ಸಮಿತಿಯ ವರದಿಯ ವಿವರಗಳು

ಬೆಂಗಳೂರು ೧೬

ವಿಧಾನ ಸೌಧ ಕಟ್ಟಡದ ನಿರ್ಮಾಣದಲ್ಲಿ ದುಂದು ವೆಚ್ಚವಾಗಿರುವುದೆಂಬ ಬಗ್ಗೆ ಪರಿಶೀಲನೆ ನಡೆಸಲು ನೇಮಕವಾಗಿದ್ದ ಸಮಿತಿಯ ವರದಿಯು ನೆನ್ನೆ ಹೊರಬಿದ್ದು, ಅದರ ಯೋಜಕರಾದ ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಕಟ್ಟಡದ ನಿರ್ಮಾಣದ ವೆಚ್ಚದ ಬಗ್ಗೆ ಅಂದಾಜನ್ನೇ ಅರಿತಿರಲಿಲ್ಲವೆಂದೂ, ಸರ್ಕಾರೀ ನಿಯಮ ನಿಬಂಧನೆಗಳನ್ನೂ ಲಕ್ಷಿಸದೆ, ಸ್ವೇಚ್ಛೆಯಾಗಿ ತಮಗೆ ತೋರಿದ ರೀತಿಯಲ್ಲಿ ಬದಲಾವಣೆಗಳನ್ನು ಮಾಡಿ ಇಲಾಖೆಯವರಿಂದಲೇ ಅಂದಾಜುಗಳನ್ನು ತಯಾರಿಸಿ, ಕೆಲಸಕಾರ್ಯಗಳನ್ನು ನಡೆಸುತ್ತಿದ್ದರೆಂದೂ ಆಪಾದಿಸಲಾಗಿದೆ

ಕಟ್ಟಡದ ಶೃಂಗಾರಕ್ಕಾಗಿಯೇ ೪೫ ಲಕ್ಷ ರೂ. ಗಳ ವ್ಯಯವಾಗಿದೆಯೆಂದೂ ವರದಿಯಲ್ಲಿ ಸೂಚಿಸಿ, ಇದು ಒಂದು ಕಳಂಕವೆಂದೂ ಅಭಿಪ್ರಾಯಪಟ್ಟಿರುವರು ವರದಿಯ ಇತರ ವಿವರಗಳು ಈ ರೀತಿ ಇವೆ: —

೧೯೫೧ನೇ ಇಸವಿಯಲ್ಲಿ ವಿಧಾನ ಸೌಧದ ನಿರ್ಮಾಣಕ್ಕಾಗಿ ೬೬ ಲಕ್ಷ ರೂ ಗಳ ಅಂದಾಜನ್ನು ಕೂಡ ಮಂಜೂರು ಮಾಡಲು ಸರ್ಕಾರದವರು ಸಿದ್ಧರಾಗಿರಲಿಲ್ಲ ಆದರೆ ಅದನ್ನು ಈಗ ೧೮೦ ಲಕ್ಷ ರೂ. ವೆಚ್ಚದಿಂದ ನಿರ್ಮಿಸಲಾಗಿದೆ ಕಟ್ಟಡಕ್ಕೆ ಈಗ ತಗಲಿರುವ ವೆಚ್ಚದಲ್ಲೇ ೬೦ ಲಕ್ಷ ರೂ.ಗಳ ಉಳಿತಾಯದಿಂದ, ಒಂದಕ್ಕೆ ಬದಲು ಎರಡು ಕಟ್ಟಡಗಳನ್ನು ಸಿದ್ಧಪಡಿಸಬಹುದಾಗಿತ್ತು ಈ ಬಗ್ಗೆ ಲೆಕ್ಕಗಳನ್ನು ಕ್ರಮವಾಗಿ ಇಡಲು ಸರಿಯಾದ ವ್ಯವಸ್ಥೆಯಾಗಿರಲಿಲ್ಲ. ಈ ಕಾರ್ಯಗಳಲ್ಲಿ ನಿಯೋಜಿತರಾಗಿದ್ದ ವಿಶೇಷ ಇಂಜನಿಯರ್ ಶ್ರೀ ಮುನಿಯಪ್ಪನವರು ದೊಡ್ಡದೊಡ್ಡ ಕಾರ್ಯಗಳನ್ನು ನಿಭಾಯಿಸುವುದರಲ್ಲಾಗಲೀ, ಮರಾಮತ್ತು ಲೆಕ್ಕಗಳಲ್ಲಾಗಲೀ ಪರಿಶ್ರಮ ಹೊಂದಿರಲಿಲ್ಲ.

ಕಟ್ಟಡದ ಕೆಲಸಗಳನ್ನು ನೋಡುತ್ತಿದ್ದ ಚೀಫ್ ಇಂಜನಿಯರರೂ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರರೂ ಸರ್ಕಾರಿ ಸೇವಕರಾಗಿ ಪ್ರಾಮಾಣಿಕತೆಯಿಂದ ಕೆಲಸ ಮಾಡದೆ ಕಡಿಮೆ ಅಂದಾಜುಗಳನ್ನು ಸಲ್ಲಿಸುತ್ತಿದ್ದರು. ಮರಾಮತ್ತು ಕೆಲಸಗಳ ಅಂದಾಜುಗಳ ಬಗ್ಗೆ ಪೂರ್ವಭಾವಿಯಾಗಿ ಸರ್ಕಾರದ ಮಂಜೂರಾತಿ ಪಡೆಯಬೇಕೆಂಬುದನ್ನು ನಿರ್ಲಕ್ಷಿಸಲಾಗಿದೆ. ೮೦ ಲಕ್ಷ ರೂ ವೆಚ್ಚ ತಗಲುವ ಸಂದರ್ಭದಲ್ಲಿ ಆಡಳಿತವರ್ಗದವರು ೫೦ ಲಕ್ಷ ರೂ. ಅಂದಾಜನ್ನು ತಯಾರಿಸಿದ್ದರು ಆಗಿನ ಮರಾಮತ್ತು ಸಚಿವರು ಯಾವ ಸಂದರ್ಭದಲ್ಲೂ ಖರ್ಚು ೫೦ ಲಕ್ಷಕ್ಕೆ ಮೀರಬಾರದೆಂದು ಹಟ ಹಿಡಿದು ಹೇಳುತ್ತಿದ್ದರು ೫೦ ಲಕ್ಷ ರೂ. ಅಂದಾಜಿನಂತೆ ನಡೆಯುತ್ತಿದ್ದ ಈ ಕೆಲಸದಲ್ಲಿ ಮುಖ್ಯ ಮಂತ್ರಿಗಳ ಆಜ್ಞೆಯ ಮೇರೆಗೆ ನಾನಾ ದುಂದು ವೆಚ್ಚದ ಬದಲಾವಣೆಗಳನ್ನು ಮಾಡಲಾಯಿತು. ಮುಖ್ಯ ಮಂತ್ರಿಗಳ ಈ ಆದೇಶದ ಕ್ರಮಬದ್ಧತೆ ಮತ್ತು ಹಣಕಾಸಿನ ಪರಿಸ್ಥಿತಿಗಳನ್ನು ಗಣಿಸದೆ ಅಧಿಕಾರಿವರ್ಗದವರು ತಮ್ಮ ನಾನಾ ತಪ್ಪುಗಳಿಗೆ ಈ ಆಜ್ಞೆಗಳನ್ನು ಉಪಯೋಗಿಸಿಕೊಂಡು, ತಮ್ಮ ಕಾರ್ಯಗಳಿಗೆ ಸಂಬಂಧಪಟ್ಟ ಅಂಗೀಕಾರವನ್ನು ಪಡೆಯದೆ ಹೋಗಿರುವರು ಅವರೇ ಒಪ್ಪಿಕೊಂಡಂತೆ ಅಂದಾಜನ್ನು ೮ ಲಕ್ಷ ರೂ [illegible] ಗಿ ತಯಾರಿಸಿ [illegible] ಬಿಟ್ಟಿರುವ ಅನೇಕ [illegible] ಗಳನ್ನೂ ಸೂಚಿಸಿವೆ ಅಂದಾಜು ೧೦ ಲಕ್ಷ ರೂ [illegible]

[illegible] ಕಾಲದಲ್ಲಿ ಈ ವೆಚ್ಚದ ವೇಳೆ [illegible] ಇಲಾಖೆಯ [illegible] ಮುಖ್ಯ ಮಂತ್ರಿಗಳೇ [illegible] ಇಲಾಖೆಯನ್ನೂ ವಹಿಸಿಕೊಂಡಿದ್ದುದು [illegible] ಇವಕ್ಕೆ ಕಾರಣವಾಗಿದೆ [illegible] ಅಕ್ರಮಗಳ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಸಮಿತಿಯವರ ಟೀಕೆಗಳನ್ನೂ ಅಲಕ್ಷಿಸಲಾಗಿದೆ

"ಇಂದು ಅರಮನೆಯಿಂದ ಶಾಸನಸಭೆಗೆ ಪರಮಾಧಿಕಾರವು ಒದಗಿರುವುದನ್ನು ಈ ಕಟ್ಟಡವು ಪ್ರತಿಬಿಂಬಿಸಬೇಕು, ಇದಕ್ಕಾಗಿ ವೆಚ್ಚವು ಎಷ್ಟೇ ಆಗಲಿ ಪರವಾಯಿಲ್ಲ. ಇದು ಮೈಸೂರು ಸಂಸ್ಥಾನದಲ್ಲೇ ಬಹಳ ಸುಂದರವಾದ ಮತ್ತು ಭವ್ಯವಾದ ಭವನವಾಗಿರಬೇಕು" ಎಂದು ಶ್ರೀ ಹನುಮಂತಯ್ಯನವರು ವಿಧಾನ ಸೌಧ ನಿರ್ಮಾಣದ ಸಮಿತಿಗೆ ಇತ್ತ ಆದೇಶವನ್ನು ಸಮಿತಿಯವರು ಉಲ್ಲೇಖಿಸಿ ಶ್ರೀ ಹನುಮಂತಯ್ಯನವರು ಹೇಗೆ ದುಂದು ವೆಚ್ಚಕ್ಕೆ ಹಿಂಜರಿಯಲಿಲ್ಲವೆಂಬುದನ್ನು ಸೂಚಿಸಿದ್ದಾರೆ

ಮೇಲ್ಕಂಡ ದುಂದು ವೆಚ್ಚಗಳ ಫಲವಾಗಿ ತೆರಿಗೆದಾರರ ಮೇಲೆ ಹಲವು ವರ್ಷಗಳ ಕಾಲ ಪ್ರತಿವರ್ಷ ೨೫ ಲಕ್ಷ ರೂ. ಹೊರೆ ಬೀಳುವುದೆಂದು ಸಮಿತಿಯು ತಿಳಿಸಿ, ವಿಧಾನ ಸೌಧದ ನಿರ್ಮಾಣಕ್ಕೆ ಸಾಲದಿಂದ ಒದಗಿಸಲಾದ ೧೮೦ ಲಕ್ಷ ರೂ ಗಳಿಗೆ ತಲಾ ೧೮ ಲಕ್ಷದಂತೆ ೧೦ ವರ್ಷಗಳೂ ಮತ್ತು ಬಡ್ಡಿಗಾಗಿ ತಲಾ ೭.೩ ಲಕ್ಷ ರೂ. ನಂತೆ ಮೊದಲ ಹಲವು ವರ್ಷಗಳೂ ತೆರಬೇಕಾಗುವುದೆಂದು ವಿವರಿಸಿದೆ.

ತಮಗೆ ಸರಿಯಾದ ರೀತಿಯ ಸಹಕಾರವು ಸರ್ಕಾರ ಮತ್ತು ಅಧಿಕಾರಿಗಳಿಂದ ದೊರೆಯಲಿಲ್ಲವೆಂದೂ ಸಮಿತಿಯವರು ಹೇಳಿದ್ದಾರೆ ಯೋಜನೆಯ ನಿರ್ದಿಷ್ಟ ವೆಚ್ಚದ ಅಂದಾಜು ಮುಂತಾದ ವಿವರಗಳನ್ನು ವಿಧಾನಸಭಾ ಡಿವಿಜನ್ನಿನವರು ಮುಂಚೆಯೇ ಒದಗಿಸಲಿಲ್ಲ ಈ ಬಗ್ಗೆ ಪೂರ್ಣವಾದ ಫೈಲನ್ನು ಒಪ್ಪಿಸಲು ಸರ್ಕಾರವು ಒಪ್ಪಲಿಲ್ಲ. ಅಧಿಕಾರಿಗಳು ಬಿಚ್ಚು ಮನಸ್ಸಿನಿಂದ ಹೇಳಿಕೆಯೀಯಲೂ ಮತ್ತು ಎಲ್ಲ ಕಾಗದ ಪತ್ರಗಳನ್ನೂ ಪರಿಶೀಲನೆಗೆ ನೀಡಲೂ ಒಪ್ಪಲಿಲ್ಲ—ಎಂಬವೇ ಮುಂತಾದ ಹಲವು ಅಂಶಗಳನ್ನು ಸಮಿತಿಯವರು ಉಲ್ಲೇಖಿಸಿರುವರು.

ಈ ಸಮಿತಿಯನ್ನು ಶ್ರೀ ಹನುಮಂತಯ್ಯನವರು ಅಧಿಕಾರದಲ್ಲಿದ್ದಾಗಲೇ ನೇಮಿಸಲಾಗಿತ್ತು. ಅದರಲ್ಲಿ ನಾಗಪುರದ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಶ್ರೀ ಪಿ ಬಿ ದೇವ್‌ರವರೂ, ಸಂಸ್ಥಾನದ ಹಣಕಾಸಿನ ಇಲಾಖೆಯ ನಿವೃತ್ತ ಕಾರ್ಯದರ್ಶಿ ಶ್ರೀ ಬಿ ಎಸ್. ರಾಘವೇಂದ್ರರಾವ್ ಮತ್ತು ನಿವೃತ್ತ ಚೀಫ್ ಇಂಜನಿಯರ್ ಶ್ರೀ ಎಂ. ನರಸಿಂಹಯ್ಯನವರೂ ಸದಸ್ಯರಾಗಿದ್ದರು.

ವಿಧಾನ ಸೌಧದ ವಿಚಾರಣಾ ಸಮಿತಿ ವರದಿ ಪಕ್ಷಪಾತದಿಂದ ಕೂಡಿದ್ದು

ಶ್ರೀ ಹನುಮಂತಯ್ಯನವರಿಂದ ಸಮಿತಿ ಮತ್ತು ಸರ್ಕಾರದ ಮೇಲೆ ಆರೋಪಣೆ

ಬೆಂಗಳೂರು ೧೬

ಮಾಜಿ ಮುಖ್ಯ ಮಂತ್ರಿ ಹನುಮಂತಯ್ಯನವರು ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಿ ವಿಧಾನ ಸೌಧ ಸಮಿತಿಯ ವರದಿಯು ನಿಷ್ಪಕ್ಷಪಾತವಾದ ಹೇಳಿಕೆಯ ಬದಲು ಮಿಸ್ ಮೇಯೋ ಭಾರತದ ಮೇಲೆ ಬರೆದ ಪುಸ್ತಕದಂತೆ ದುರುದ್ದೇಶಪೂರಿತವಾಗಿರುವುದೆಂದು ಟೀಕಿಸಿದ್ದಾರೆ ಕಟ್ಟಡದ ನಿರ್ಮಾಣದ ಬಗ್ಗೆ ಅನುಸರಿಸಲಾದ ಕ್ರಮ ಮುಂತಾದ ಅಲ್ಪ ವಿಷಯಗಳನ್ನೇ ಸಮಿತಿಯವರು ದೊಡ್ಡದು ಮಾಡಿ ಅಲ್ಲಿ ಸಾಧಿಸಲಾಗಿರುವ ಉತ್ತಮ ಕೆಲಸ ಮತ್ತು ಭವನದ ಬಗ್ಗೆ ಅನೇಕ ಜನರು ಮಾಡಿರುವ ಪ್ರಶಂಸೆಗಳನ್ನು ಗಣನೆಗೇ ತೆಗೆದುಕೊಂಡಿಲ್ಲವೆಂದು ಆಕ್ಷೇಪಿಸಿದ್ದಾರೆ.

ಸಮಿತಿಯವರು ತಮಗೆ ವಿಧಿಸಲಾಗಿದ್ದ ಎಲ್ಲೆಯನ್ನು ಅತಿಕ್ರಮಿಸಿರುವರು, ಏಕಪಕ್ಷೀಯವಾದ ಟೀಕೆಗಳನ್ನು ಮಾಡಿರುವರು ವಾಸ್ತವಾಂಶಗಳನ್ನು ಮರೆಸಿರುವರು ಮತ್ತು ಅವಹೇಳನದಲ್ಲಿ ತೊಡಗಿರುವರು—ಎಂದು ಅವರು ಅಭಿಪ್ರಾಯಪಟ್ಟಿರುವರು

ಕಳೆದ ಡಿಸೆಂಬರ್ ೩ನೇ ತಾರೀಖಿನಲ್ಲೇ ಸಲ್ಲಿಸಲಾದ ವರದಿಯನ್ನು ಈಗ ಪ್ರಕಟಿಸುತ್ತಿರುವುದರಲ್ಲಿ ರಾಜಕೀಯ ಉದ್ದೇಶವು ಅಡಗಿದೆಯೆಂದು ಹೇಳಿ ಅದರಲ್ಲಿರುವ ಆಪಾದನೆಗಳಿಗೆ ಮತ್ತೆ ವಿವರವಾಗಿ ಉತ್ತರ ಕೊಡುವುದಾಗಿಯೂ ಅವರು ತಿಳಿಸಿದ್ದಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಮುಖವೀಣೆ ೭ ೧೫ ಟಿ. ಆರ್. ರಂಗಸ್ವಾಮಿ-ದೇವರ ನಾಮ ೭-೩೦ ಗಾನ ವಿಹಾರ ೮-೧೫ ಉದಯ ಸಂಗೀತ ಮಧ್ಯಾಹ್ನ ೧೨ ಟಿ. ಆರ್. ರಂಗಸ್ವಾಮಿ-ಗಾಯನ ೧೨-೩೦ ಮತ್ತು ಸಂಜೆ ೫-೩೦ ಎಲ್ ಶೇಷಗಿರಿರಾವ್-ವೀಣೆ ೧-೫೦ ಎಂ ಎ ವಿ ಕೆ. ೨-೧೫ ಗಾಯನ ಸಂಜೆ ೬.೫ ವಿರಾಮ ಸಂಗೀತ ೬-೨೦ ಜಿ. ಸುನಂದ ಮತ್ತು ಜಿ ವಸುಂಧರ-ದಾಸರ ಗೀತೆಗಳು ೬-೪೦ ಗ್ರಾಮಸ್ಥರಿಗಾಗಿ ೭-೩೦ ಹಿಂದಿ ಭಜನೆ ೮ ಹೊಸ ಕನ್ನಡ ಪಿತಾಮಹರು : ರೂಪಕ. ೮-೩೦ ಸಂಗಮೇಶ್ವರ ಹಿರೇಮಠ್-ವಚನ ಗಾನ. ೮-೪೫ ಲಘು ಗೀತೆಗಳು ೮-೫೫ ಪಾರ್ಲಿಮೆಂಟಿನಲ್ಲಿ ಈ ದಿನ ೯-೧೫ ಬ್ರಾಡ್‌ಕಾಸ್ಟ್ ಮೂಲಕ ಶಿಕ್ಷಣ : ಭಾಷಣ ೯-೩೦ ಕೆ. ಎಸ್. ಸೀತಾರಾಮಶಾಸ್ತ್ರಿ-ಕಥಾ ಕಾಲಕ್ಷೇಪ.

ವಿಧಾನ ಸೌಧ ಸಮಿತಿ ಶಿಫಾರಸಿನಂತೆ ಸರ್ಕಾರಿ ಕ್ರಮಗಳು

ಬೆಂಗಳೂರು ೧೬

ವಿಧಾನ ಸೌಧದ ನಿರ್ಮಾಣದಲ್ಲಿ ಆದಂತಹ ಲೋಪದೋಷಗಳನ್ನು ತಡೆಗಟ್ಟಲು ಸಮಿತಿಯವರು ಸೂಚಿಸಿರುವ ಶಿಫಾರಸುಗಳನ್ನು ಒಪ್ಪಿ ಸರ್ಕಾರದವರು ಕೆಳಗೆ ಕಂಡ ಕ್ರಮಗಳನ್ನು ಕೈಗೊಂಡಿದ್ದಾರೆ:—

ತಪ್ಪಿತಸ್ಥರೆಂದು ಕಂಡುಬಂದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಆಪಾದನೆಗಳನ್ನು ಹೊರಿಸಲಾಗಿದೆ. ಹಲವು ಅಕ್ರಮಗಳ ಬಗ್ಗೆ ತನಿಖೆ ಮುಂದುವರಿಯುತ್ತಿದೆ ಲೆಕ್ಕ ಪತ್ರಗಳ ಅಕ್ರಮಗಳನ್ನು ಸರಿಪಡಿಸಲು ತಕ್ಕ ಸಿಬ್ಬಂದಿಯೊಡನೆ ಉನ್ನತ ದರ್ಜೆಯ ಅಧಿಕಾರಿಯನ್ನೂ, ಕೆಲಸ ಕಾರ್ಯಗಳ ಮೇಲೆ ತನಿಖೆಗಾಗಿ ಒಬ್ಬ ಸೂಪರಿಂಟೆಂಡಿಂಗ್ ಎಂಜನಿಯರ್ ಮತ್ತು ಒಬ್ಬ ಎಕ್ಸಿಕ್ಯುಟಿವ್ ಎಂಜನಿಯರರನ್ನೂ ನೇಮಿಸಲಾಗಿದೆ ಹಣಕಾಸಿನ ವೆಚ್ಚಗಳಬಗ್ಗೆ ತಕ್ಕ ಉಸ್ತುವಾರಿಗಾಗಿ ಕಾನೂನಿನಲ್ಲಿ ಹಲವು ಬದಲಾವಣೆಗಳನ್ನು ಸೂಚಿಸಲು ಹಿರಿಯ ಇಂಜನಿಯರುಗಳ ಸಮಿತಿಯನ್ನು ಕೋರಲಾಗಿದೆ. ಗೊತ್ತಾದ ಒಂದು ಮಿತಿಗಿಂತ ಹೆಚ್ಚಿನ ವೆಚ್ಚದ ಯೋಜನೆಯ ಸರ್ಕಾರದ ಅಂಗೀಕಾರವನ್ನು ಪಡೆಯಬೇಕೆಂಬ ಸಲಹೆಯನ್ನು ಪರಿಶೀಲಿಸುತ್ತಿದೆ

ಸಚಿವ ಜಗನ್ನಾಥರಾವ್ ಚಂದರ್ಕಿಯವರ ಪರಾಜಯ

ಬೆಂಗಳೂರು ೧೬

ಸಂಸ್ಥಾನದ ಅಬ್ಕಾರಿ ಮತ್ತು ಕಾರ್ಮಿಕ ಸಚಿವ ಶ್ರೀ ಜಗನ್ನಾಥರಾವ್ ಚಂದರ್ಕಿಯವರು ಶಾಸನ ಸಭೆಗೆ ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿರುವರು. ಸ್ವತಂತ್ರ ಉಮೇದುವಾರರಾದ ಶ್ರೀ ಬಸವಂತರಾಯರು ಒಂದು ಸಾವಿರ ಓಟುಗಳನ್ನು ಹೆಚ್ಚಾಗಿ ಪಡೆದು ವಿಜಯಿಗಳಾಗಿರುವರು ಇದರಿಂದ ಸಂಸ್ಥಾನದ ಇಬ್ಬರು ಸಚಿವರಿಗೆ ಪರಾಜಯವಾದಂತಾಗಿದೆ.

● ರಾಮ ಸಪ್ತಾಹ ಮಹೋತ್ಸವ

ನಗರದ ಮಂಡಿ ಮೊಹಲ್ಲಾ ಕೃಷ್ಣರಾಜೇಂದ್ರ ಆಸ್ಪತ್ರೆ ರಸ್ತೆಯ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಪಕ್ಕದ ಖಾಲಿ ಜಾಗದಲ್ಲಿ ಹಾಕಿರುವ ಚಪ್ಪರದಲ್ಲಿ ಇಪ್ಪತ್ತೇಳನೆ ವರ್ಷದ ಶ್ರೀರಾಮ ಸಪ್ತಾಹ ಮಹೋತ್ಸವದ ಅಂಗವಾಗಿ ಇಂದಿನಿಂದ ೨೪ ರ ವರೆಗೆ ಪ್ರತಿದಿನ ಪ್ರಾತಃಕಾಲ ೭ ಗಂಟೆಯಿಂದ ೮ ಗಂಟೆಯವರೆವಿಗೆ ಶ್ರೀಮದ್ಭಗವದ್ಗೀತಾ ಪಾರಾಯಣವೂ, ಸಂಜೆ ೭ ಗಂಟೆಯಿಂದ ೯ ರವರೆಗೆ ವೇ|| ಬ್ರ|| ಶ್ರೀ|| ಹರಿಹರಾನಂದ ಭಾರತಿ ಸ್ವಾಮಿಜಿಯವರಿಂದ ಹರಿಕಥೆಗಳೂ ನಡೆಸಲ್ಪಡುತ್ತವೆ.

○ ಕೇರಳ ಸಂಸ್ಥಾನದ ಚುನಾವಣೆಯಲ್ಲಿ ಬಹುಮತ ಪಡೆದಿರುವ ಕಮ್ಯೂನಿಸ್ಟ್ ಪಕ್ಷದವರನ್ನು ಅಲ್ಲಿನ ಸರ್ಕಾರ ರಚಿಸುವಂತೆ ಆಹ್ವಾನಿಸಲಾಗುವುದೆಂದು ವರದಿಯಾಗಿದೆ ಅಲ್ಲಿ ಈಗ ರಾಷ್ಟ್ರಾಧ್ಯಕ್ಷರ ಆಳ್ವಿಕೆಯು ಜಾರಿಯಲ್ಲಿದೆ.

ವಾರ ಭವಿಷ್ಯ

ತಾ|| ೧೭ ೩-೫೭ ರಿಂದ ೨೪ ೩ ೫೭ ರ ವರೆಗೆ

ಮೇಷ —ಕೆಲಸ ಕಾರ್ಯಗಳಲ್ಲಿ ಸಾಮಾನ್ಯ ಫಲಗಳು ಧನಲಾಭ ಆದರೆ ವಿಪರೀತ ವೆಚ್ಚ ನೌಕರರಿಗೆ ಶುಭ ಫಲ ಆರೋಗ್ಯ ಉತ್ತಮ

ವೃಷಭ —ಆರ್ಥಿಕ ಪರಿಸ್ಥಿತಿ ಮತ್ತು ಆರೋಗ್ಯ ಉತ್ತಮ ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ ಕುಟುಂಬದಲ್ಲಿ ಕಲಹ ಚಿಂತೆ ಪ್ರವಾಸ ಸಂಭವ

ಮಿಥುನ —ಆರೋಗ್ಯ ಸಾಧಾರಣ ಸಮಾಜದಲ್ಲಿ ಪ್ರಗತಿ, ಧನಲಾಭ ಚಿಂತೆ ಅಪಘಾತ ಭಯ ವ್ಯಾಪಾರ ಉದ್ಯೋಗಗಳಲ್ಲಿ ಅಶುಭ ಫಲಗಳು

ಕರ್ಕ —ಆರೋಗ್ಯ ಸಾಧಾರಣ ಹರ್ಷದಾಯಕ ಫಲಗಳು ವ್ಯಾಪಾರವ್ಯವಹಾರಗಳಲ್ಲಿ ಜಯ ನೌಕರಿಯಲ್ಲಿ ಪ್ರಗತಿ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮಾಜದಲ್ಲಿ ಪ್ರಗತಿ

ಸಿಂಹ —ಆರೋಗ್ಯ ಉತ್ತಮ ಸಮಾಜದಲ್ಲಿ ಪ್ರಗತಿ ಹೊಸ ನೌಕರಿ ಯೋಗ ವ್ಯಾಪಾರವ್ಯವಹಾರಗಳಲ್ಲಿ ಅಶುಭ ಫಲಗಳು ಕುಟುಂಬದಲ್ಲಿ ಕಲಹ, ಮಿತ್ರ ಸಹಾಯ

ಕನ್ಯಾ —ಅನಾರೋಗ್ಯ ಕುಟುಂಬದಲ್ಲಿ ಕಲಹ ಸಮಾಜದಲ್ಲಿ ಪ್ರಗತಿ ಸಾಧಾರಣ ಆರ್ಥಿಕ ಪರಿಸ್ಥಿತಿ ಅಪಘಾತ ಭಯ, ವ್ಯಾಪಾರವ್ಯವಹಾರಗಳಲ್ಲಿ ಅಪಜಯ

ತುಲಾ —ಸಮಾಜದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಜಯ, ನೌಕರಿಯಲ್ಲಿ ಪ್ರಗತಿ ಮಿತ್ರರಿಂದ ತೊಂದರೆ ಧನಲಾಭ ವಿಪರೀತ ವೆಚ್ಚ

ವೃಶ್ಚಿಕ —ಆರೋಗ್ಯ ಸಾಧಾರಣ ಮಿತ್ರರೊಡನೆ ವೈಮನಸ್ಯ ವ್ಯಾಪಾರ ಉದ್ಯೋಗಗಳಲ್ಲಿ ಅಪಜಯ ನೌಕರಿಯಲ್ಲಿ ಕಿರುಕುಳ ಧನಲಾಭ ಕುಟುಂಬದಲ್ಲಿ ಕಲಹ

ಧನು —ಆರೋಗ್ಯ ಉತ್ತಮ ಗೃಹ ಸೌಖ್ಯ ಸಮಾಜದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು ನೌಕರಿಯಲ್ಲಿ ಸಾಧಾರಣ ಫಲಗಳು

ಮಕರ —ಆರೋಗ್ಯ ಸಾಧಾರಣ ಕುಟುಂಬದಲ್ಲಿ ಕಲಹ ವ್ಯಾಪಾರವ್ಯವಹಾರಗಳಲ್ಲಿ ಅಶುಭ ಫಲಗಳು ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಯೋಗ

ಕುಂಭ —ಆರೋಗ್ಯ ಉತ್ತಮ ಕುಟುಂಬದಲ್ಲಿ ಸೌಖ್ಯ, ಸಮಾಜದಲ್ಲಿ ಪ್ರಗತಿ ಮಿತ್ರ ಸಹಾಯ ವ್ಯಾಪಾರವ್ಯವಹಾರಗಳಲ್ಲಿ ಸಾಮಾನ್ಯ ಫಲ ನೌಕರಿಯಲ್ಲಿ ಸಾಧಾರಣ ಫಲ

ಮೀನ :—ಅನಾರೋಗ್ಯ, ಚಿಂತೆ ಸಮಾಜದಲ್ಲಿ ಮಿತ್ರರಿಂದ ಕಿರುಕುಳ ನೌಕರಿಗೆ ಸಾಧಾರಣ ಫಲಗಳು ಧನಲಾಭ ಅಧಿಕ ವೆಚ್ಚ ವ್ಯಾಪಾರವ್ಯವಹಾರಗಳಲ್ಲಿ ಅಶುಭ ಫಲಗಳು

ದಕ್ಷಿಣ ಕೊರಿಯದಲ್ಲಿ ಉತ್ಕಟ ಕ್ಷಾಮ

ಕಳೆದ ವರ್ಷ ಭತ್ತದ ಫಸಲು ಹಾಳಾದ ಕಾರಣ ದಕ್ಷಿಣ ಕೊರಿಯಾದಲ್ಲಿ ತೀವ್ರ ಆಹಾರಾಭಾವ ಉಂಟಾಗಿ ಸುಮಾರು ೩೦ ಲಕ್ಷ ಜನರಿಗೆ ಪರಿಹಾರ ನೀಡಬೇಕಾಗಿದೆಯೆಂದೂ ಮತ್ತು ೧೦ ಲಕ್ಷ ಜನರು ಇಲಿಗಳು ಮರದ ಬೇರು ಮುಂತಾದುವುಗಳನ್ನು ತಿಂದು ಹಸಿವನ್ನು ನೀಗುತ್ತಿದ್ದಾರೆಂದೂ ವರದಿಯಾಗಿದೆ

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಯ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
[illegible]
ಒಂದೇ ಭೇಟಿ ಕೊಡಿ
ಕೆ ಎಸ್ ಲಕ್ಷ್ಮಣ ಐಯ್ಯರ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ ಮೈಸೂರು (Estd 1911)

ವಿದೇಶಿ ಸಾಂಸ್ಕೃತಿಕ ಸಂಘಗಳಲ್ಲಿ ಸರ್ಕಾರಿ ನೌಕರರ ಪಾತ್ರಕ್ಕೆ ನಿಷೇಧ

ಯಾರಾದರೂ ವಿದೇಶೀ ಪ್ರಮುಖರು ದೇಶಕ್ಕೆ ಭೇಟಿಯಿತ್ತಾಗ ಅವರಿಗೆ ಅರ್ಪಿಸುವ ಸನ್ಮಾನ ಪತ್ರಗಳಲ್ಲಿ ಸರ್ಕಾರವನ್ನು ಸಂದಿಗ್ಧಕ್ಕೀಡುಮಾಡುವ ರೀತಿಯಲ್ಲಿ ರಾಜಕೀಯ ವಿಷಯಗಳನ್ನು ಪ್ರಸ್ತಾಪಿಸುವುದರಿಂದ ಅಂತಹ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಯಾವ ರೀತಿಯ ಪಾತ್ರವನ್ನೂ ವಹಿಸಕೂಡದೆಂದು ಕೇಂದ್ರ ಸರ್ಕಾರದವರು ಆಜ್ಞೆ ಮಾಡಿದ್ದಾರೆಂದು ತಿಳಿದು ಬಂದಿದೆ

ಇಸ್ರೇಲಿಗೆ ಪುನಃ ಅಮೆರಿಕದ ಆರ್ಥಿಕ ನೆರವು

ಈಜಿಪ್ಟಿನ ಮೇಲೆ ಆಕ್ರಮಣ ನಡೆಸಿದಾಗಿನಿಂದ ತಾತ್ಕಾಲಿಕವಾಗಿ ಇಸ್ರೇಲಿಗೆ ನಿಲ್ಲಿಸಲಾಗಿದ್ದ ೫ ಕೋಟಿ ಡಾಲರ್ ಆರ್ಥಿಕ ನೆರವನ್ನು ಪುನಃ ಮುಂದುವರಿಸಲು ಇಸ್ರೇಲಿನೊಡನೆ ಅಮೆರಿಕವು ಮಾತುಕತೆಗಳನ್ನು ನಡೆಸುತ್ತಿದೆಯೆಂದು ವರದಿಯಾಗಿದೆ

ಬಾಗ್ದಾದ್ ಕೌಲಿಗೆ ಅಮೆರಿಕಾ ಸೇರುವ ಸಂಭವವಿಲ್ಲ

ಅಮೆರಿಕವು ಬಾಗ್ದಾದ್ ಕೌಲಿಗೆ ನಿರಂತರ ಬೆಂಬಲ ಕೊಡುತ್ತಿರುವುದಾದರೂ ಆ ಕೂಟವನ್ನು ಸೇರಲು ಯಾವ ನಿರ್ಧಾರವನ್ನೂ ಮಾಡಿಲ್ಲವೆಂದು ಅಮೆರಿಕದ ವಿದೇಶಾಂಗ ಶಾಖೆಯ ವಕ್ತಾರರು ಮೊನ್ನೆ ತಿಳಿಸಿ ಪಾಕಿಸ್ತಾನದಲ್ಲಿನ ಅಮೆರಿಕ ರಾಯಭಾರಿ ಹಿಲ್ಡ್ರೆತ್‌ರವರ ಹೇಳಿಕೆಯನ್ನು ನಿರಾಕರಿಸಿದ್ದಾರೆ

ನ್ಯಾಟೋ ವಿಮಾನ ಬಲಕ್ಕೆ ಅಣು ಬಾಂಬುಗಳ ಸಜ್ಜು

ಉತ್ತರ ಅಟ್ಲಾಂಟಿಕ್ ಸೇನಾ ಕೂಟದ ಅಮೆರಿಕ ವಿಮಾನಗಳಿಗೆ ಅಣು ಬಾಂಬು ಗಳನ್ನು ಕೊಟ್ಟು ಅವುಗಳನ್ನು ಒಯ್ಯಲನುಕೂಲವಾಗುವಂತೆ ವಿಮಾನ ಬಲವನ್ನು ಸಜ್ಜುಗೊಳಿಸಲಾಗುತ್ತಿರುವುದೆಂದು ನ್ಯಾಟೋ ವಿಮಾನ ಬಲದ ನಾಯಕ ಅರ್ಲ್ ಆಫ್ ಬ್ಯಾಂಡನ್ನರು ತಿಳಿಸಿದ್ದಾರೆ

ವಿದ್ಯಾರಣ್ಯಪುರದಲ್ಲಿ ಸೊಳ್ಳೆ ಕಾಟ ತಪ್ಪಿಸಲು ಪೌರಸಭೆಗೆ ಮನವಿ

ನಗರದ ವಿದ್ಯಾರಣ್ಯಪುರದ ನಿವಾಸಿಗಳ ಪರವಾಗಿ ಶ್ರೀ ಬಿ ಎಸ್ ಸುಬ್ಬರಾಯರು ಪೌರಸಭಾಧ್ಯಕ್ಷರು, ಕಮೀಷನರರು ಮತ್ತು ಆರೋಗ್ಯಾಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಿ ನೋಲ್ಕಂಡ ಪ್ರದೇಶದಲ್ಲಿ ಇತ್ತೀಚೆಗೆ ನಾನಾ ಜಾತಿಯ ಸೊಳ್ಳೆಗಳು ಉದ್ಭವಿಸಿ ಅವುಗಳ ಉಪಟಳದಿಂದ ಅಲ್ಲಿ ವಾಸಿಸುವುದೇ ಕಷ್ಟವಾಗಿರುವುದೆಂದೂ ರಾತ್ರಿ ವೇಳೆ ನಿದ್ರೆಯೇ ಇಲ್ಲದೆ ಇದರಿಂದ ಅನೇಕ ರೋಗರುಜಿನಗಳುಂಟಾಗಲು ಅವಕಾಶವಾಗುವುದೆಂದೂ ತಿಳಿಸಿ ಈ ಕೊರತೆಯನ್ನು ನಿವಾರಿಸಬೇಕೆಂದು ಕೋರಿರುವರು ಸೊಳ್ಳೆ ಪರದೆಗಳನ್ನು ಉಪಯೋಗಿಸುವುದರಿಂದಲೂ ಅವುಗಳ ಕಾಟವನ್ನು ನಿವಾರಿಸಲು ಸಾಧ್ಯವಿಲ್ಲವೆಂದೂ ಬೇಸಿಗೆ ಕಳೆಯ ಈ ಕಾಲದಲ್ಲಿ ಅವುಗಳು ಬಹಳ ಹಿಂಸೆ ಕೊಡುತ್ತಿರುವುವೆಂದೂ ಅವರು ತಿಳಿಸಿ, ಮಂಡ್ಯದಲ್ಲಿ ಪೌರಸಭೆಯವರು ಸೊಳ್ಳೆ ಕಾಟವನ್ನು ನಿರ್ಮೂಲ ಮಾಡಿರುವಂತೆ ಇಲ್ಲೂ ನಡೆಸಲು ಕ್ರಮ ಕೈಗೊಂಡು ಜನರನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿರುವರು

ಮಾರ್ಚಿ ೨೨ ರಿಂದ ದೇಶೀಯ ಪದ್ಧತಿಯ ಕ್ಯಾಲೆಂಡರ್

ಜನವರಿ ತಿಂಗಳಿಂದ ಆರಂಭವಾಗುವ ಗ್ರಿಗೆರಿಯನ್ ವರ್ಷ ಮಾಪನದ ಬದಲು ಇನ್ನು ಮುಂದೆ ಚೈತ್ರ ವೈಶಾಖ ಮಾಸಗಳಿಂದ ಆರಂಭವಾಗುವ ದೇಶೀಯ ಪದ್ಧತಿಯ ವರ್ಷ ಮಾಪನವನ್ನು ಭಾರತ ಸರ್ಕಾರದವರು ಈ ತಿಂಗಳು ೨೨ನೇ ತಾರೀಖಿನಿಂದ ಅನುಸರಿಸಲು ನಿರ್ಧರಿಸಿದ್ದಾರೆ ಹೊಸ ವರ್ಷ ಮಾಪನದಲ್ಲೂ ಸಹ ಈಗಿನಂತೆಯೇ ಸಾಮಾನ್ಯ ವರ್ಷಗಳಲ್ಲಿ ೩೬೫ ಮತ್ತು ಲೀಪ್ ವರ್ಷಗಳಲ್ಲಿ ೩೬೬ ದಿನಗಳಿರುತ್ತವೆ ಆದರೆ ವರ್ಷವು ಜನವರಿ ೧ ರ ಬದಲು ಉಗಾದಿಯಿಂದ ಆರಂಭವಾಗುವುದು

ವಿವಾಹ ಮಹೋತ್ಸವಗಳು

ಹಾಸನ ಜಿಲ್ಲೆಯ ಅರಸೀಕೆರೆ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಶ್ರೀನಿವಾಸಮೂರ್ತಿಯವರ ಪುತ್ರಿ ಸೌ|| ಗೋಪಿಬಾಯಿಯನ್ನು ಸಕಲೇಶಪುರದ ಇನಾಂದಾರ್ ಶ್ರೀ ಕೆ ಭೀಮರಾವ್‌ರವರ ಪುತ್ರ ಶ್ರೀ ಬಿ ಪಾಂಡುರಂಗರಾಯರಿಗೆ ಕೊಟ್ಟು ಈ ದಿನ ಆಲೂರಿನಲ್ಲಿ ವಿವಾಹವು ಜರುಗಿತು

ಮೈಸೂರು ಅರಮನೆ ಜಂಗಿ ಇಲಾಖಾ ಮೇಸ್ತ್ರೀಯರಾದ ಶ್ರೀ ಎಸ್ ನಾಗಪ್ಪನವರು ತಮ್ಮ ಪುತ್ರಿ ಸೌ|| ಸೌಭಾಗ್ಯ ರುಕ್ಮಿಣಿಯನ್ನು ಗುಂಡ್ಲುಪೇಟೆಯ ಶ್ರೀ ಕೆ ಅಪ್ಪಣ್ಣನವರ ಪುತ್ರ ಶ್ರೀ ರಘುಪತಿಯವರಿಗೆ ಕೊಟ್ಟು ಈ ದಿನ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ನಗರದ ಸಣ್ಣಪುಟ್ಟ ಕೈಗಾರಿಕಾದಾರರ ಸಭೆ

ನಗರದ ಎಲ್ಲಾ ಸಣ್ಣಪುಟ್ಟ ಕೈಗಾರಿಕಾದಾರರ ಸಭೆಯನ್ನು ಇದೇ [illegible] ಸಂಜೆ ೫ ಗಂಟೆಗೆ ಲಕ್ಷ್ಮೀಪುರಂನಲ್ಲಿರುವ ಗ್ರಾಮಾಂತರ ಕೈಗಾರಿಕಾ ಸೂಪರಿಂಟೆಂಡೆಂಟರ ಕಛೇರಿಯಲ್ಲಿ ಏರ್ಪಡಿಸಿರುತ್ತೆ ಗ್ರಾಮಾಂತರ ಕೈಗಾರಿಕಾ ಸೂಪರಿಂಟೆಂಡೆಂಟರು ಅಧ್ಯಕ್ಷತೆ ವಹಿಸುವರು ನಗರದಲ್ಲಿರುವ ಎಲ್ಲಾ ತರಹ ಸಣ್ಣಪುಟ್ಟ ಕೈಗಾರಿಕಾದಾರರುಗಳೂ ಮತ್ತು ನಗರದಲ್ಲಿ ಈಗಾಗಲೇ ರಿಜಿಸ್ಟರಾಗಿರುವ ಕೈಗಾರಿಕಾ ಸಂಘದ ಷೇರುದಾರರುಗಳೂ ಸಭೆಗೆ ಬರುವಂತೆ ಕೋರಲಾಗಿದೆ

ಜೂಜಿನಲ್ಲಿ ಮಗ ಮನೆಯನ್ನು ಸೋತ ದುಃಖಕ್ಕಾಗಿ ತಂದೆಯ ಮರಣ

ಕೊಳ್ಳೇರೆಯಲ್ಲಿ ಹುಲ್ಲಪ್ಪ ಎಂಬ ೬೦ ವರ್ಷ ವಯಸ್ಸಿನ ವೃದ್ಧನು ತನ್ನ ಮನೆಯನ್ನು ಮಗನು ಜೂಜಿನಲ್ಲಿ ಪಣವಾಗಿಟ್ಟು ಸೋತು ಪರಭಾರೆ ಮಾಡಿದ ವಿಷಯವನ್ನು ತಿಳಿದು ದುಃಖವನ್ನು ತಡೆಯಲಾರದೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ

SRI KANYAKAPARAMESWARI
CO-OPERATIVE SOCIETY, Ltd.,
MYSORE

Applications are invited for the post of a temporary part-time Stenographer cum-clerk for a period of 3 months only The last date for receipt of application is 20-3 1957

P Gopalakrishna Setty
President

ಅಪೇರಾ ಟಾಕೀಸ್ ★
17 3-57ರಿಂದ ಆರಂಭವಾದ
4 ನೇ ವಾರ
ಅಣ್ಣಪೂರ್ಣರವರ ಉನ್ನತ ಮಟ್ಟದ ತಮಿಳು ಚಿತ್ರ
ಎಂಗಳ್ ವೀಟ್ಟು ಮಹಾಲಕ್ಷ್ಮಿ
ಪಾತ್ರ — ನಾಗೇಶ್ವರರಾವ್, ಸಾವಿತ್ರಿ ನಂಬಿಯಾರ್, ತಂಗವೇಲು ಮುಂತಾದವರು
[A TALLAM RELEASE
ಶೀಘ್ರದಲ್ಲಿಯೇ ಬರಲಿದೆ — ★ ಪ್ರೇಮದ ಪುತ್ರಿ ★

ರಹದಾರಿಯಿಲ್ಲದೆ ರೇಡಿಯೋ ಇಟ್ಟುಕೊಂಡಿದ್ದುದಕ್ಕೆ ಜುಲ್ಮಾನೆ

ನಗರದ [illegible] ರಹದಾರಿಯಿಲ್ಲದೆ ರೇಡಿಯೋಗಳನ್ನು ಇಟ್ಟುಕೊಂಡಿದ್ದವರ [illegible] ಇನ್ಸ್‌ಪೆಕ್ಟರ್‌ಗಳಾದ ಶ್ರೀ ಎಸ್ [illegible] ಮತ್ತು ಕೆ ಎಲ್ ಎಸ್ ಮೂರ್ತಿಯವರು [illegible] ಹೂಡಿದ್ದ ಮೊಕದ್ದಮೆಯಲ್ಲಿ ಪ್ರಥಮ ನ್ಯಾಯಾಧೀಶರು ನೆನ್ನೆ [illegible] ಕ್ರಮವಾಗಿ [illegible], ೭೫ ಮತ್ತು ೩೦ ರೂ ಜುಲ್ಮಾನೆಯನ್ನು ವಿಧಿಸಿದರು

ಹುಣಸೆಹಣ್ಣು ಕಳ್ಳರ ಬಂಧನ

ನೆನ್ನೆ ರಾತ್ರಿ ನಗರದ [illegible] ಗಳಿಗೆ ಹೊರಟಿದ್ದ ಒಬ್ಬ ಪ್ರಯಾಣಿಕರಿಂದ ೧ ಮೂಟೆ ಹುಣಸೆಹಣ್ಣನ್ನು ಕದ್ದುದಕ್ಕೆ ಪೊಲೀಸರು [illegible] ಬಂಧಿಸಿರುವರು



ನರ್ಸರಿ ಸ್ಕೂಲ್ ಉಪಾಧ್ಯಾಯಿನಿಯರ ಶಿಕ್ಷಣ ಕೇಂದ್ರ
ನಗರದ ದಿವಾನ್ಸ್ ರೋಡಿನಲ್ಲಿರುವ
ಶ್ರೀ ಜಗದಂಬಾ ಶಿಶುವಿಹಾರ
11-3-57ರಿಂದ ಪ್ರಾರಂಭವಾಗಿದೆ
ಸೇರಲಪೇಕ್ಷಿಸುವ ಮಹಿಳೆಯರು ಕೂಡಲೆ
ವ್ಯವಸ್ಥಾಪಕರಿಗೆ ಅರ್ಜಿ ಹಾಕಿಕೊಳ್ಳಬೇಕು
[illegible]
[illegible]
ವ್ಯವಸ್ಥಾಪಕ

ಮೈಸೂರಿನಲ್ಲಿ ಪ್ರತಿ ತಿಂಗಳ
17 ನೇ ತಾರೀಖು
ವಿಶ್ವವಿಖ್ಯಾತವಾದ
ನವರತ್ನ-ಕಲ್ಪ
[illegible]
ಕವಿರಾಜ [illegible]
ದುರ್ಗಾದತ್ತ [illegible]
ವೈದ್ಯ ವಾಚಸ್ಪತಿಯು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ
—೧ ಭೇಟಿಯ ಕಾಲ —
ಬೆಳಿಗ್ಗೆ 7-30 ರಿಂದ 12-30 ವರೆಗೂ
ಮಧ್ಯಾಹ್ನ 4ರಿಂದ 7-30
[illegible]
ನವರತ್ನ—ಕಲ್ಪ
[illegible]
NAVRATNA KALPA PHARMACY
JULLUNDUR CITY (Ind

Edited, Printed and Published
A R Nagarajan at Sadhvi Pr
D Subbiah Road, Mysore

ರಿಜಿಸ್ಟರ್ಡ್ ನಂ. 192

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ 3 ಕಾಸು

ಬ್ರಾಂಕಾಲ್
ಅಜೀರ್ಣ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಹೊರಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀಕೃಷ್ಣರಾಜೇಂದ್ರ ರಸ್ತೆ,
ಬೆಂಗಳೂರು-2

ಸಂಪುಟ ೧೮] SADHVI : MONDAY 18 3—1957 ಮೈಸೂರು : ಸೋಮವಾರ ೧೮ ೩—೧೯೫೭ : [ಸಂಚಿಕೆ : ೩೨೯

ಲೋಕ ಸಭೆಗೆ ಎಂ. ಶಂಕರಯ್ಯನವರ ಭಾರಿ ವಿಜಯ

ಕೊಳ್ಳೇಗಾಲ ಕ್ಷೇತ್ರದಲ್ಲಿ ಕಾಂಗ್ರೆಸ್ ಉಮೇದುವಾರರ ಮುನ್ನಡೆ

ಮೈಸೂರು ೧೮

ವಿಧಾನ ಸಭೆಗೆ ಕೊಳ್ಳೇಗಾಲದಿಂದ ನಡೆದ ಚುನಾವಣೆಗೆ ಸಂಬಂಧಪಟ್ಟಂತೆ ಯಳಂದೂರು ಕ್ಷೇತ್ರದ ಓಟುಗಳ ಎಣಿಕೆಯು ಮುಗಿದಿದೆ ಕಾಂಗ್ರೆಸ್ ಉಮೇದುವಾರ ಶ್ರೀ ಟಿ ಪಿ ಬೋರಯ್ಯನವರು ಅವರ ಪ್ರತಿಸ್ಪರ್ಧಿ ಪಿ ಎಸ್ ಪಿ ಯ ಶ್ರೀ ಕೆ ಪಿ ಶಾಂತಮೂರ್ತಿಯವರಿಗಿಂತ ೪,೨೨೨ ಓಟನ್ನು ಹೆಚ್ಚಾಗಿ ಗಳಿಸಿರುವರು ಮೀಸಲು ಸ್ಥಾನದಲ್ಲಿ ಕಾಂಗ್ರೆಸ್ಸಿನ ಶ್ರೀಮತಿ ಕೆಂಪಮ್ಮನವರಿಗೆ ಪ್ರತಿಸ್ಪರ್ಧಿ ಶ್ರೀ ಪುಟ್ಟರಾಜು ರವರಿಗಿಂತ ೪೧೮ ಓಟುಗಳು ಹೆಚ್ಚಾಗಿ ಬಂದಿವೆ ಎಣಿಕೆಯು ಮುಂದುವರಿಯುತ್ತಿದೆ ಓಟುಗಳು ಈ ರೀತಿ ಬಂದಿವೆ —

ಟಿ ಪಿ ಬೋರಯ್ಯ	೧೭,೩೬೭
ಕೆ ಪಿ ಶಾಂತಮೂರ್ತಿ	೧೩,೮೪೫
— ಮೀಸಲು ಸ್ಥಾನ —	
ಶ್ರೀಮತಿ ಕೆಂಪಮ್ಮ	೧೬,೮೦೪
ಶ್ರೀ ಪುಟ್ಟರಾಜು	೧೬,೩೮೬

ಟಿ ಚೌಡಯ್ಯನವರಿಗೆ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ

ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ಕರ್ನಾಟಕ ವಾದ್ಯ ಸಂಗೀತಕ್ಕಾಗಿ ಈ ವರ್ಷದ ಪ್ರಶಸ್ತಿಯನ್ನು ಮೈಸೂರಿನ ಸಂಗೀತ ರತ್ನ ಶ್ರೀ ಟಿ ಚೌಡಯ್ಯನವರಿಗೆ ಕೊಟ್ಟಿದ್ದಾರೆ ಕರ್ನಾಟಕ ಸಂಗೀತದ ಬಾಯಿ ಹಾಡುಗಾರಿಕೆಗಾಗಿ ಮುಸಿರಿ ಸುಬ್ರಹ್ಮಣ್ಯ ಅಯ್ಯರ್‌ರವರಿಗೂ ಹಿಂದೂಸ್ತಾನಿ ಬಾಯಿ ಹಾಡುಗಾರಿಕೆಗಾಗಿ ರಸೂಲನ್ ಬಾಯಿಯವರಿಗೂ ಕಥಕ್ ನೃತ್ಯಕ್ಕಾಗಿ ಲಚ್ಚು ಮಹಾರಾಜ್ ಮತ್ತು ಭರತನಾಟ್ಯಕ್ಕಾಗಿ ರುಕ್ಮಿಣಿದೇವಿ ಅರುಂಡೇಲ್‌ರವರಿಗೂ ಪ್ರಶಸ್ತಿಗಳನ್ನು ಕೊಡಲಾಗಿದೆ

ಹೆಚ್ ವಿ ಕಾಮತ್ತರ ಸೋಲು

ಲೋಕಸಭೆಯ ಹಾಲಿ ಸದಸ್ಯರಾದ ಶ್ರೀ ಹೆಚ್ ವಿ ಕಾಮತ್‌ರವರು ಮಧ್ಯಪ್ರದೇಶದ ಹೋಷಂಗಾಬಾದ್ ಕ್ಷೇತ್ರದಿಂದ ಲೋಕಸಭೆ ಚುನಾವಣೆಯಲ್ಲಿ ಪರಾಜಿತರಾಗಿರುವರು ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ಸಿನ ಶ್ರೀ ಮಗನ್‌ಲಾಲ್ ಬಾಗ್ಡಿ ಎಂಬುವರು ಜಯ ಗಳಿಸಿರುವರು

ಕಡೇ ಸುದ್ದಿ

ಲೋಕಸಭೆಗೆ ಶಂಕರಯ್ಯ ಮತ್ತು ಎಸ್. ಎಂ. ಸಿದ್ದಯ್ಯನವರ ಆಯ್ಕೆ

ಈ ಸಂಜೆ ೬ ಗಂಟೆಗೆ ಮೈಸೂರು ಜಿಲ್ಲಾ ಲೋಕಸಭಾ ಚುನಾವಣಾ ಎಣಿಕೆಯು ಅಧಿಕೃತವಾಗಿ ಮುಗಿದು, ಕಾಂಗ್ರೆಸ್ಸಿನ ಶ್ರೀ ಎಂ ಶಂಕರಯ್ಯನವರು ಸುಮಾರು ೭೩ ಸಾವಿರ ಓಟುಗಳಿಂದಲೂ ಶ್ರೀ ಎಸ್ ಎಂ ಸಿದ್ದಯ್ಯನವರು ಸುಮಾರು ೧೮೦೦೦ ಬಹುಮತದಿಂದಲೂ ವಿಜಯಿಗಳಾಗಿದ್ದಾರೆ

ಬ್ರಿಟನ್ನಿನಲ್ಲಿ ಎರಡು ಲಕ್ಷ ಬಂದರು ಕೆಲಸಗಾರರ ಮುಷ್ಕರ

ಬ್ರಿಟನ್ನಿನ ಎರಡು ಲಕ್ಷಕ್ಕೂ ಹೆಚ್ಚಿನ ಬಂದರು ಕೆಲಸಗಾರರು ತಮ್ಮ ಸಂಬಳವನ್ನು ಶೇಕಡ ೧೦ ರಷ್ಟು ಹೆಚ್ಚಿಸಬೇಕೆಂಬ ಬೇಡಿಕೆ ಎನ್ನಿಟ್ಟು ನೆನ್ನೆ ಮಧ್ಯರಾತ್ರಿಯಿಂದ ಮುಷ್ಕರವನ್ನು ಆರಂಭಿಸಿರುವರು ಇದರಿಂದ ೧೦ ಕ್ಕೂ ಮೀರಿದ ಹಡಗುಗಳಿಗೆ ತೊಂದರೆಯಾಗಿದೆ ಒಂದು ವಾರದೊಳಗಾಗಿ ಮುಷ್ಕರವನ್ನು ಬಹಳವಾಗಿ ಪ್ರಬಲಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ ಆದರಲ್ಲಿ ಸುಮಾರು ೫ ಲಕ್ಷ ಜನ ಭಾಗವಹಿಸುವ ಸಂಭವವಿರುವುದೆಂದೂ ಹೇಳಲಾಗುತ್ತಿದೆ ಕಳೆದ ೩೦ ವರ್ಷಗಳಿಂದ ಇದುವರೆಗೆ ಇಂತಹ ಭಾರಿ ಮುಷ್ಕರವು ನಡೆದಿರಲಿಲ್ಲವೆಂದೂ ವರದಿಯಾಗಿದೆ

ಕಾಮನ ಕೊಂಡದ ಬಳಿ ಜನರ ಗುಂಪಿನ ಮೇಲೆ ಗುಂಡು

ಬಿಕನೀರ್ ಜಿಲ್ಲೆಯಲ್ಲಿ ಆರು ಜನರ ಮರಣ

ಬಿಕನೀರ್ ಜಿಲ್ಲೆಯ ಒಂದು ಗ್ರಾಮದ ನಿವಾಸಿಯೊಬ್ಬನು ತನ್ನ ದನಗಳನ್ನು ಒಂದು ಜಮೀನಿನಲ್ಲಿ ಮೇಯಿಸಲು ಅವಕಾಶ ಕೊಡದಿದ್ದುದಕ್ಕಾಗಿ ಸೇಡು ತೀರಿಸಿಕೊಳ್ಳಲು ನೆನ್ನೆ ಗ್ರಾಮದಲ್ಲಿ ಹೋಳಿ ಹಬ್ಬದ ಸಂಬಂಧದಲ್ಲಿ ಕಾಮನ ಕೊಂಡದ ಬಳಿ ಸೇರಿದ್ದ ೪೦೦ ಜನರ ಮೇಲೆ ಗುಂಡು ಹಾರಿಸಲಾಗಿ ಆರು ಜನರು ಮಡಿದು ೧೫ ಮಂದಿ ಗಾಯಗೊಂಡರೆಂದು ವರದಿಯಾಗಿದೆ ಅವನು ಒಂದು ಮನೆಯ ಮೇಲ್ಛಾವಣಿಯಿಂದ ಗುಂಡು ಹಾರಿಸಿ ಅನಂತರ ಒಂಟೆಯ ಮೇಲೆ ಕುಳಿತು ಪರಾರಿಯಾಗಿ ತರುವಾಯ ತಾನೇ ಬಂದು ಪೋಲೀಸರ ವಶವಾದನೆಂದೂ ಗೊತ್ತಾಗಿದೆ

ಚುನಾವಣೆಯಲ್ಲಿ ಸೋತ ಕೇಂದ್ರಮಂತ್ರಿಗಳ ರಾಜೀನಾಮೆ

ಹೊಸ ಮಂತ್ರಿಮಂಡಲಗಳ ರಚನೆಯು ಅಲ್ಪಕಾಲದಲ್ಲೇ ಆಗುವುದರಿಂದ ಈಗ ಚುನಾವಣೆಯಲ್ಲಿ ಸೋತ ಕೇಂದ್ರ ಕಾರ್ಮಿಕ ಮಂತ್ರಿ ಶ್ರೀ ಖಂಡೂಭಾಯಿ ದೇಸಾಯಿ ನ್ಯಾಯಾಂಗ ಮಂತ್ರಿ ಶ್ರೀ ಹೆಚ್ ವಿ ಪಟಾಸ್ಕರರು ಇತ್ತಿರುವ ರಾಜೀನಾಮೆಯನ್ನು ಪ್ರಧಾನಿ ನೆಹರೂರವರು ಇನ್ನೂ ಅಂಗೀಕರಿಸಿಲ್ಲವೆಂದು ವರದಿಯಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕೇಳಲು ೭ ೧೫ ಎಲ್ ಜ ಸುಮಿತ್ರ ಗೀತಾಂಜಲಿ ೭-೩೦ ಗಾನವಿಹಾರ ೮ ೧೫ ಉದಯ ಸಂಗೀತ ಮಧ್ಯಾಹ್ನ ೧೨ ಎಂ ವಿ ಲೀಲಾ ಗಾಯನ ೧-೩೦ ಗಾನಮಂಜರಿ ೧ ೫೦ ಕೇಳಲು ೨ ೧೫ ಸಂಗೀತ ಕಚೇರಿ ಸಂಜೆ ೫ ೦ ಮತ್ತು ೬-೧೫ ಆರ್ ಆರ್ ಕೇಶವಮೂರ್ತಿ ಪಿಟೀಲು ೬ ೫ ವಿನೋದ ಸಂಗೀತ ೭-೩೦ ಎ ಸುನಂದ [illegible] ೮ ೩೦ ಪ್ರಮುಖ [illegible] ಸನ್ನಿವೇಶಗಳು ಪ್ರಸಂಗ [illegible] ರಾತ್ರಿ ೯ ೩೦ [illegible] ಚಿತ್ರಗೀತೆ ೧೦ ೧೫ ಮ ಹಂಚುಗಳು

ನೌಕರರ ಹೆಚ್ಚಿನ ಸಂಬಳಕ್ಕಾಗಿ ಕೇಂದ್ರದಿಂದ ೨ ಕೋಟಿ ರೂ ನಿರೀಕ್ಷೆ

ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ

ಸ್ವಂ ಸು ತಂತಿ] ಬೆಂಗಳೂರು ೧೮

ಈ ದಿನ ರಾಜ್ಯಪಾಲರು ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಕುರಿತು ಬೀಳ್ಕೊಡಿಗೆ ಭಾಷಣ ಮಾಡಿ ಸದಸ್ಯರ ಕರ್ತವ್ಯ ಪಾಲನೆಗಾಗಿ ಅಭಿನಂದಿಸಿ ಮುಂದೆಯೂ ಅವರು ಹಾಗೆಯೇ ಸೇವೆ ಮಾಡಲೆಂದು ಹಾರೈಸಿದರು ಚುನಾವಣೆಗಳು ಶಾಂತವಾಗಿ ನಡೆದುದಕ್ಕಾಗಿ ಸಂತೋಷವನ್ನು ಸೂಚಿಸಿ ಅಧಿಕಾರಿಗಳನ್ನು ವಂದಿಸಿದರು ಆರ್ಥಿಕದ ವಿಚಾರಣೆಯನ್ನು ಶೀಘ್ರವಾಗಿ ಮಾಡಿ ಸರ್ಕಾರಿ ನೌಕರರಿಗೆ ಹೆಚ್ಚಿನ ವೇತನಗಳನ್ನು ಕೊಡಲು ಕೇಂದ್ರ ಸರ್ಕಾರದಿಂದ ಎರಡು ಕೋಟಿ ರೂ ನೆರವನ್ನು ನಿರೀಕ್ಷಿಸಿರುವುದಾಗಿ ನುಡಿದರು

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬಿ ಸಿ ರಾಯರ ವಿಜಯ

ಬಂಗಾಳದ ಮುಖ್ಯಮಂತ್ರಿ ಬಿ ಸಿ ರಾಯ್‌ರವರು ಕಲ್ಕತ್ತಾ ನಗರದ ಬೋ ಬಜಾರ್ ಕ್ಷೇತ್ರದಿಂದ ಪ್ರಾಂತ್ಯದ ಶಾಸನ ಸಭೆಗೆ ಸ್ಪರ್ಧಿಸಿ ತಮ್ಮ ಕಮ್ಯೂನಿಸ್ಟ್ ಪ್ರತಿಸ್ಪರ್ಧಿ ಇಸ್ಮೇಲ್‌ರವರಿಗಿಂತ ಕೇವಲ ೬೦೦ ಓಟುಗಳನ್ನು ಹೆಚ್ಚಾಗಿ ಪಡೆದು ಜಯಗಳಿಸಿರುವರು ಹಿಂದೂ ಮಹಾ ಸಭೆಯ ಶ್ರೀ ಮಹೇಂದ್ರ ಘೋಷ್‌ರವರು ಈ ಚುನಾವಣೆಯಲ್ಲಿ ಸ್ಪರ್ಧಿಸಿ ಠೇವಣಿ ಕಳೆದುಕೊಂಡಿರುವರು ಕಲ್ಕತ್ತಾ ನಗರದಿಂದ ನೆನ್ನೆ ಹೊರಬಿದ್ದ ಇತರ ಐದು ಫಲಿತಾಂಶಗಳಲ್ಲೂ ಕಾಂಗ್ರೆಸ್ ಜಯಗಳಿಸಿದೆ ಪ್ರಾಂತ್ಯದ ನೀರಾವರಿಮಂತ್ರಿ ಶ್ರೀ ಅಜಯ ಕುಮಾರ ಮುಖರ್ಜಿಯವರು ಕಾಂಗ್ರೆಸ್ಸಿನ ಪರವಾಗಿಯೂ, ಅವರ ವಿರುದ್ಧ ಅವರ ತಮ್ಮ ವಿಶ್ವನಾಥ ಮುಖರ್ಜಿಯವರೂ ಸ್ಪರ್ಧಿಸಿ ಅಜಯ ಕುಮಾರರು ಜಯಗಳಿಸಿರುವರು

ವಿಮಾನಾಪಘಾತದಲ್ಲಿ ಫಿಲಿಪೈನ್ಸ್ ಅಧ್ಯಕ್ಷರ ನಿಧನ

ಫಿಲಿಪೈನ್ಸ್ ದ್ವೀಪಗಳ ಅಧ್ಯಕ್ಷರಾದ ರಮೋನ್ ಮ್ಯಾಗ್ಸೆಸೇರವರು ನೆನ್ನೆ ಸೆಬು ಎಂಬ ನಗರದ ಬಳಿ ವಿಮಾನಾಪಘಾತದಿಂದ ಮಡಿದರೆಂದು ವರದಿಯಾಗಿದೆ ಅವರೊಡನೆ ವಿಮಾನದಲ್ಲಿದ್ದ ಇತರ ೨೬ ಜನರೂ ಮೃತಪಟ್ಟಿರುವರು ಒಬ್ಬರು ಮಾತ್ರ ಉಳಿದಿರುವರು ಮಧ್ಯ ಮಾರ್ಗದಲ್ಲಿ ವಿಮಾನವು ಹತೋಟಿ ತಪ್ಪಿ ಮುರಿದುಬಿತ್ತೆಂದು ವರದಿಯಾಗಿದೆ

ಹೋಳಿ ಹಬ್ಬದ ಗಲಾಟೆಯಲ್ಲಿ ಪೋಲೀಸರಿಂದ ಗುಂಡು

ಧಾರವಾಡ ಜಿಲ್ಲಾ ರೋಣ ತಾಲ್ಲೂಕಿನ [illegible] ಹೋಳಿ ಸಂಬಂಧ ಸಂಭ್ರಮದಲ್ಲಿ ಎರಡು ಗುಂಪುಗಳಿಗೆ ವೈಮನಸ್ಯವುಂಟಾಗಿ ಘರ್ಷಣೆಯಾದಾಗ ಪೋಲೀಸರು ಗುಂಡು ಹಾರಿಸಿ ಗಲಾಟೆಯನ್ನು ಹತೋಟಿಗೆ ತಂದರು ಹನ್ನೆರಡು ಮಂದಿಗೆ ಗಾಯಗಳಾದುವು.

ಅಬ್ಕಾರಿ ಸಚಿವರ ರಾಜೀನಾಮೆ ಅಂಗೀಕಾರ

ಸ್ವಂ ಸು ತಂತಿ] ಬೆಂಗಳೂರು ೧೮

ಚುನಾವಣೆಯಲ್ಲಿ ಪರಾಜಿತರಾದ ಅಬ್ಕಾರಿ ಮಂತ್ರಿ ಶ್ರೀ ಜಗನ್ನಾಥರಾವ್ ಚಂಡ್ರಿಕೆಯವರ ರಾಜೀನಾಮೆಯನ್ನು ರಾಜ್ಯಪಾಲರು ಅಂಗೀಕರಿಸಿ ಸಂಸ್ಥಾನದಲ್ಲಿ ಹೊಸ ಮಂತ್ರಿಮಂಡಲದ ರಚನೆಯಾಗುವವರೆಗೆ ಮುಂದುವರಿಯಬೇಕೆಂದು ಅವರನ್ನು ಕೋರಿದ್ದಾರೆ

○ ದೀರ್ಘಾಲಸ್ಯದಿಂದಿದ್ದ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಸಿ ಕೆ ಅಂಬಲಿಯವರು ಪೂರ್ಣವಾಗಿ ಗುಣ ಹೊಂದಿ ಈ ದಿನ ವಿಧಾನ ಸಭೆಯ ಅಧ್ಯಕ್ಷರ ಕೊಠಡಿಯಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರು

○ ಉಭಯ ಶಾಸನ ಸಭೆಗಳ ಅಧಿವೇಶನಗಳು ಈ ದಿನ ಮಧ್ಯಾಹ್ನ ೩ ಗಂಟೆಗೆ ಆರಂಭವಾಗುತ್ತವೆ ಅವುಗಳನ್ನುದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವರು

ಲೋಕ ಸಭೆಗೆ ಶಂಕರಯ್ಯನವರ ವಿಜಯ ಸಿದ್ಧ

ಮೈಸೂರು ೧೮

ಮೈಸೂರು ಜಿಲ್ಲೆಯಿಂದ ಲೋಕಸಭೆಗೆ ಸ್ಪರ್ಧಿಸಿರುವ ಕಾಂಗ್ರೆಸ್ಸಿನ ಶ್ರೀ ಎಂ ಶಂಕರಯ್ಯನವರಿಗೆ ಈ ಮಧ್ಯಾಹ್ನ ೨ ಗಂಟೆ ಹೊತ್ತಿಗೆ ಅವರ ಪ್ರತಿಸ್ಪರ್ಧಿ, ಪಿ ಎಸ್ ಪಿ ಯ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರಿಗಿಂತಲೂ ಸುಮಾರು ೬೦ ೦೦೦ ಓಟುಗಳು ಹೆಚ್ಚಾಗಿ ಬಂದಿದ್ದುವು ಆದ್ದರಿಂದ ಅವರು ಆರಿಸಿಬರುವುದು ಖಚಿತವೆಂದು ಗೊತ್ತಾಗಿದೆ ಕೃಷ್ಣರಾಜನಗರ ಮತ್ತು ಪಿರಿಯಾಪಟ್ಟಣಗಳ ಓಟುಗಳ ಎಣಿಕೆ ಮಾತ್ರ ಉಳಿದಿತ್ತು ಮೀಸಲು ಕ್ಷೇತ್ರದಿಂದ ಪಿ ಎಸ್ ಪಿ. ಯ ಶ್ರೀ ಎ ಸಿ ಬಿಳಿಗಿರಿ ರಂಗಯ್ಯನವರು ಕಾಂಗ್ರೆಸ್ಸಿನ ಶ್ರೀ ಎಸ್ ಎಂ ಸಿದ್ದಯ್ಯನವರಿಗಿಂತ ಸುಮಾರು ೫,೦೦೦ ಹೆಚ್ಚು ಮತಗಳನ್ನು ಪಡೆದಿದ್ದರು ಅಖೈರು ಫಲಿತಾಂಶವು ಈ ಸಂಜೆ ಪ್ರಕಟವಾಗುವ ನಿರೀಕ್ಷೆಯಿದೆ

ರಹದಾರಿಯಿಲ್ಲದೆ ರೇಡಿಯೋ ಹೊಂದಿದ್ದಕ್ಕೆ ದಂಡ

ನಗರದ ದೇವರಾಜ ಮೊಹಲ್ಲದ ಶ್ರೀ ಎಸ್ ಗೋವಿಂದಪ್ಪ ಎಂಬುವರು ರಹದಾರಿ ಪಡೆಯದೆ ರೇಡಿಯೋವನ್ನು ಉಪಯೋಗಿಸುತ್ತಿದ್ದರೆಂದು ಆಪಾದಿಸಿ ಮೈಸೂರು ಡಿವಿಜನ್ನಿನ ವೈರ್‌ಲೆಸ್ ಇನ್ಸ್‌ಪೆಕ್ಟರ್ ಶ್ರೀ ಸಾಕ್ಷಾಚಾರವರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಆಪಾದಿತರಿಗೆ ಈ ದಿನ ೨೦ ರೂ ದಂಡ ವಿಧಿಸಿದರು

ಕೆ ಸಿ ರೆಡ್ಡಿಯವರಿಗೆ ಹೆಚ್ಚಿನ ಬಹುಮತ

ಕೋಲಾರ ಲೋಕಸಭಾ ಕ್ಷೇತ್ರದ ಚುನಾವಣೆಯ ಎಣಿಕೆಯಲ್ಲಿ ನೆನ್ನೆ ರಾತ್ರಿ ವರೆಗೆ ಶ್ರೀ ಕೆ ಸಿ ರೆಡ್ಡಿಯವರು ಅವರ ಪ್ರತಿಸ್ಪರ್ಧಿಗಿಂತ ೩೨,೮೮೦ ಹೆಚ್ಚಿನ ಮತಗಳನ್ನು ಪಡೆದಿದ್ದರು ಅವರಿಗೆ ೧,೬೬,೪೩೩ ಮತ್ತು ಶ್ರೀ ಗೋವಿಂದರವರಿಗೆ ೧,೩೩,೫೫೩ ಮತಗಳು ಬಂದಿದ್ದುವು

ಕೆ. ಎಸ್. ಸೂರ್ಯನಾರಾಯಣ ರಾಯರಿಗೆ ಸತ್ಕಾರ

ಮೈಸೂರು ೧೮

ಮೈಸೂರು ದಕ್ಷಿಣ ಕ್ಷೇತ್ರದಿಂದ ವಿಧಾನ ಸಭೆಗೆ ಚುನಾಯಿತರಾಗಿರುವ ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರನ್ನು ಸತ್ಕರಿಸಲು ನೆನ್ನೆ ನಗರದಲ್ಲಿ ಹಲವಾರು ಸಮಾರಂಭಗಳು ಜರುಗಿದುವು. ಜಿಲ್ಲೆ ಮೊಹಲ್ಲೆಯ ವೈದ್ಯ [illegible] ಪಂಡಿತರ ಮನೆಯಲ್ಲಿ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಮತಿ ಲಕ್ಷ್ಮಿಬಾಯಿ ಅವರಿಂದ ಪ್ರಾರ್ಥನಾನಂತರ ಶ್ರೀ ಆರ್. ಶ್ರೀನಿವಾಸಾಚಾರ್ ರು ಸ್ವಾಗತ ಭಾಷಣ ಮಾಡಿ ಜಿಲ್ಲೆ ಮೊಹಲ್ಲೆಯು ಯಾವಾಗಲೂ ಕಾಂಗ್ರೆಸ್ಸಿಗೆ ಬೆಂಬಲವಾಗಿರುವುದೆಂದು ತಿಳಿಸಿದರು.

ಶ್ರೀ ಎಂ. ವಿ. ಸೂರ್ಯನಾರಾಯಣರವರ ಕೊಳಲು ಕಛೇರಿಯು ಶ್ರೀ ಪುಟ್ಟಣ್ಣನವರ ಪಿಟೀಲು ಮತ್ತು ಶ್ರೀ ರಾಜಣ್ಣನವರ ಮೃದಂಗದೊಡನೆ ಸಂಪನ್ನವಾಗಿ ನಡೆಯಿತು.

ಸತ್ಕಾರಕ್ಕಾಗಿ ಶ್ರೀ ಸೂರ್ಯನಾರಾಯಣರಾಯರು ಧನ್ಯವಾದಗಳನ್ನು ಸಲ್ಲಿಸಿ ಇನ್ನು ಮುಂದೆಯೂ ತಾವು ಸಾಧ್ಯವಾದ ಮಟ್ಟಿಗೆ ಪ್ರಜಾ ಸೇವೆ ಮಾಡುವುದಾಗಿ ಹೇಳಿ ಕಾಂಗ್ರೆಸ್ಸಿಗೆ ಎಂದಿನಂತೆ ಸಕಲರೂ ಬೆಂಬಲ ನೀಡಬೇಕೆಂದು ಕೋರಿದರು. ಭೇದಭಾವಗಳೇನಿದ್ದರೂ ಅವುಗಳನ್ನು ಮರೆತು ಎಲ್ಲರೂ ದೇಶ ಸೇವೆಯಲ್ಲಿ ತೊಡಗಬೇಕೆಂದು ಅಧ್ಯಕ್ಷರು ನುಡಿದರು. ಶ್ರೀ ಆರ್. ನಾಗರಾಜಾಚಾರ್ಯರಿಂದ ವಂದನಾರ್ಪಣೆಯಾದ ನಂತರ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಡಿ. ಸುಬ್ಬಯ್ಯ ರಸ್ತೆಯಲ್ಲಿ [illegible] ಸಂಘದವರು ಒಂದು ಸಮಾರಂಭವನ್ನು ಏರ್ಪಡಿಸಿದ್ದರು. [illegible] ಭಾಷಣ ಮಾಡಿ ಶ್ರೀ ಸೂರ್ಯನಾರಾಯಣರಾಯರನ್ನು [illegible] ಅವರ [illegible]

ಚಾಮುಂಡಿಪುರದಲ್ಲಿರುವ [illegible] ಶ್ರೀ [illegible] ಶ್ರೀ ಕೆ. [illegible] ರಾಯರನ್ನು [illegible] ಕೊಡನೆ ಸನ್ಮಾನ ಮಾಡಿದರು.

ಕ್ಯಾಲೆಂಡರ್ ಸ್ವೀಕಾರ

ನಗರದ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಸಂಸ್ಥೆಯವರು ಕಳುಹಿಸಿರುವ ನವವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಆಧುನಿಕ ಮಹಿಳೆಯರ ವೈಯಾರಗಳ ಖಂಡನೆ

ಇತ್ತೀಚಿನ ದಿನಗಳಲ್ಲಿ ಹೆಂಗಸರು ಮಾಡುವುದೆಲ್ಲ ಅಶ್ಲೀಲ ಭಾವನೆಯನ್ನು ಕೆರಳಿಸುವಂತಿದೆ, ಎಂದು ಈಜಿಪ್ಟಿನ ಶ್ರೇಷ್ಠ ಮತೀಯ ನಾಯಕ ಷೇಕ್ ಹರ್ಸ ಮೂಮ್ರ ಎಂಬುವರು ಹೇಳಿದ್ದಾರೆ. ಹೆಂಗಸರ ಮುಚ್ಚದ ತೋಳು, ಮೈ ಆಕಾರ ಕಾಣುವಂತೆ ಬಿಗಿಯಾದ ಉಡುಪು, ತೆರೆದಿರುವ ಎದೆಯ ಬಹುಭಾಗ ಮತ್ತು ಕಾಲುಗಳಲ್ಲಿ ಹೆಂಗಸರ ಫ್ಯಾಷನ್ನುಗಳನ್ನು ಇವರು ಟೀಕಿಸುತ್ತಾ, ಈ ರೀತಿಯ ಹೆಂಗಸರನ್ನು ಪುರುಷರು ಯಾವುದೋ ಒಂದು ವಿಕಾರದ ಭಾವನೆಯಿಂದ ನೋಡುವ ಕಾರಣ ಅನರ್ಥವು ಸಂಭವವೆಂದು ಅವರು ತಿಳಿಸುವರು.

ಚುನಾವಣೆಯಲ್ಲಿ ಗೆದ್ದ ಮೇಲೆ ಸ್ಪರ್ಧಿಯ ಮರಣ

ಸೇಲಮ್ಮಿನ ಯರಕಾಡು ಕ್ಷೇತ್ರದ ವಿಧಾನ ಸ್ಥಾನದಿಂದ ಮದ್ರಾಸ್ ವಿಧಾನಸಭೆಗೆ ಮೂವರು ಸ್ವತಂತ್ರರನ್ನು ಸೋಲಿಸಿ ಆರಿಸಿಬಂದ ಕಾಂಗ್ರೆಸ್ಸಿನ [illegible] ಗೌಂಡರ್ ಎಂಬುವರು ಮೊನ್ನೆ [illegible] ಕೆಲವು ದಿನಗಳಿಂದ ತೀವ್ರ ಕಾಯಿಲೆಯಾಗಿ ಪ್ರಜ್ಞೆ ತಪ್ಪಿದ್ದ ಕಾರಣ ಅವರಿಗೆ ವಿಜಯದ ಸುದ್ದಿಯನ್ನು ಸಹ ತಿಳಿಸಲಿಲ್ಲ.

ಕಾಂಗ್ರೆಸ್ ಸ್ಪರ್ಧಿ ಶಂಕರಯ್ಯನವರ ಭಾರಿ ಮುನ್ನಡೆ

ಮೀಸಲು ಸ್ಥಾನದಲ್ಲಿ ಪಿ. ಎಸ್. ಪಿ. ಪಕ್ಷದ ಬಿಳಿಗಿರಿರಂಗಯ್ಯನವರಿಗೆ ಹೆಚ್ಚು ಓಟು

ಮೈಸೂರು ೧೮

ಲೋಕಸಭಾ ಮೈಸೂರು ಜಿಲ್ಲಾ ಕ್ಷೇತ್ರದ ಓಟಿನ ಎಣಿಕೆಯಲ್ಲಿ ನೆನ್ನೆ ರಾತ್ರಿವರೆಗೆ ಕಾಂಗ್ರೆಸ್ ಸ್ಪರ್ಧಿ ಶ್ರೀ ಎಂ. ಶಂಕರಯ್ಯನವರಿಗೆ [illegible] ಮತ್ತು ಪಿ. ಎಸ್. ಪಿ. ಯ ಗುರುಸಿದ್ದಸ್ವಾಮಿಯವರಿಗೆ [illegible] ಮತಗಳು ಬಂದು ಶಂಕರಯ್ಯನವರು [illegible] ಹೆಚ್ಚಿನ ಮತಗಳನ್ನು ಗಳಿಸಿದ್ದರು. ಮೀಸಲು ಸ್ಥಾನದಲ್ಲಿ ಪಿ. ಎಸ್. ಪಿ. ಸ್ಪರ್ಧಿ ಶ್ರೀ ಬಿಳಿಗಿರಿ ರಂಗಯ್ಯನವರಿಗೆ [illegible] ಮತ್ತು ಕಾಂಗ್ರೆಸ್ಸಿನ ಶ್ರೀ ಎಸ್. ಎಂ. ಸಿದ್ಧಯ್ಯನವರಿಗೆ [illegible] ಮತಗಳು ಬಂದು ಶ್ರೀ ಬಿಳಿಗಿರಿ ರಂಗಯ್ಯನವರು [illegible] ಮತಗಳಿಂದ ಮುಂದಿದ್ದರು.

ಕಲ್ಕತ್ತಾದಲ್ಲಿ ಓಟಿನ ಎಣಿಕೆಯಲ್ಲಿ ಜನರ ಘರ್ಷಣೆ

ಪೊಲೀಸರಿಂದ ಲಾಠಿ ಮತ್ತು ಅಶ್ರುವಾಯು ಪ್ರಯೋಗ

ಡಾ|| ಬಿ. ಸಿ. ರಾಯ್‌ರವರ ಓಟುಗಳ ಎಣಿಕೆಯು ನೆನ್ನೆ ಕಲ್ಕತ್ತಾದಲ್ಲಿ ನಡೆಯುತ್ತಿದ್ದಾಗ ಎರಡು ಪಂಗಡಗಳವರಲ್ಲಿ ಗಲಭೆಯಾಗಿ, ಗುಂಪನ್ನು ಚದುರಿಸಲು ಪೊಲೀಸರು ಮೊದಲು ಲಾಠಿ ಪ್ರಹಾರ ಮಾಡಿ, ಅನಂತರ ಅಶ್ರುವಾಯುವನ್ನು ಪ್ರಯೋಗಿಸಿದರೆಂದು ವರದಿಯಾಗಿದೆ. ಫಲಿತಾಂಶವು ಪ್ರಕಟವಾಗುವುದಕ್ಕೆ ಮುಂಚೆಯೇ ಎರಡು ಪಕ್ಷದವರೂ ತಮ್ಮ ತಮ್ಮ ಕಡೆಯವರೇ ಗೆದ್ದರೆಂದು ಕೂಗಿಕೊಳ್ಳುತ್ತಿದ್ದರೆಂದೂ, ಇದರಿಂದ ಘರ್ಷಣೆಯುಂಟಾಗಿ ೨೧ ಜನರು ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟರೆಂದೂ ಗೊತ್ತಾಗಿದೆ.

ಹುಲಿ ಮರಿಗಳೊಡನೆ ನೆಹರೂರವರ ಹೋಳಿಹಬ್ಬದ ಸಂಭ್ರಮ

ಪ್ರಧಾನಿ ನೆಹರೂರವರು ಮೊನ್ನೆ ಹೋಳಿ ಹಬ್ಬದ ಸಲುವಾಗಿ ಸಹಸ್ರಾರು ಮಂದಿಯೊಡನೆ ತಮ್ಮ ಮನೆಯಲ್ಲಿ ಸೇರಿ ಗುಲಾಲ್ ಎರಚಿ ಮತ್ತು ಮೈಕೈ ಬಣ್ಣವನ್ನು ಹಚ್ಚಿಕೊಂಡು ಆನಂದಿಸಿದರು. [illegible] ನಂತರ ತಾವೂ ತಮ್ಮ ಪಿಚಕಾರಿಯೊಂದರಿಂದ ಸುತ್ತಲೂ ನೆರೆದಿದ್ದ ಜನರೆಲ್ಲರಿಗೂ ಬಣ್ಣದ ನೀರಿನ ಅಭಿಷೇಕ ಮಾಡಿದರು. ತಮಗೆ ಬಹುಮಾನವಾಗಿ ಕೊಡಲಾಗಿದ್ದ ಎರಡು ಹುಲಿ ಮರಿಗಳೊಡನೆ ಅನಂತರ ಸ್ವಲ್ಪ ಹೊತ್ತು ಆಟವಾಡಿದರು.

ಅಶುಭ ಸಂಖ್ಯೆಯ ಓಟನ್ನು ತಪ್ಪಿಸಲು ವಿಫಲ ಪ್ರಯತ್ನ

ಕೊಯಮುತ್ತೂರು ಜಿಲ್ಲೆಯ ಅನ್ನೂರು ಪಾಳ್ಯಂ ಎಂಬ ಕ್ಷೇತ್ರದಿಂದ ಮದರಾಸು ಶಾಸನ ಸಭೆಗೆ ನಡೆದ ಚುನಾವಣೆಯಲ್ಲಿ ೩೭೭ ಜನ ಮತದಾರರಿದ್ದು, ಕೇವಲ ೧೩ ಮಂದಿ ಮಾತ್ರ ಓಟು ಮಾಡಿರುವರು. ೧೩ ರ ಸಂಖ್ಯೆಯು ಅಶುಭವಾದುದೆಂದು ಭಾವಿಸಿ ಒಂದು ಓಟನ್ನಾದರೂ ಹೆಚ್ಚಾಗಿ ಸಂಪಾದಿಸಲು ೭ ಗಂಟೆಕಾಲ ನಡೆಸಿದ ಪ್ರಯತ್ನವು ವಿಫಲವಾಯಿತು.

ತಂದೆ ಮಗಳು ಒಟ್ಟಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ

ಗೋವಾದ ನಿವಾಸಿ ೪೪ ವಯಸ್ಸಿನ ಸದಾನಂದ ಜಂಬಾವಲಿಕರ್ ಎಂಬಾತನೂ, ೧೪ ವರ್ಷದ ಸುಶಾಂತಿ ಎಂಬ ಆತನ ಮಗಳೂ ಒಟ್ಟಿಗೆ ಈ ಸಲದ ಎಸ್. ಎಸ್. ಸಿ. ಪರೀಕ್ಷೆಗೆ ಕಾರವಾರ ಕೇಂದ್ರದಿಂದ ಕುಳಿತಿದ್ದಾರೆ. ಸದಾನಂದನು ಒಂದು ಶಿಕ್ಷಣ ಶಾಲೆಯನ್ನು ನಡೆಸುತ್ತಿದ್ದಾನೆ. ೧೪ ವರ್ಷಗಳ ಹಿಂದೆ ಇದೇ ಪರೀಕ್ಷೆಗೆ ಕುಳಿತು ಆತನು ಫೇಲಾಗಿದ್ದನು.

ಹುಬ್ಬಳ್ಳಿಗೆ ಮೆಡಿಕಲ್ ಕಾಲೇಜು

ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜನ್ನೂ, ಬೆಂಗಳೂರು ಅಥವಾ ಧಾರವಾಡದಲ್ಲಿ ಒಂದು ಪಶುವೈದ್ಯದ ಕಾಲೇಜನ್ನೂ ತೆರೆಯಲು ಸರ್ಕಾರದವರು ತೀರ್ಮಾನಿಸಿರುವರು.

ಸರ್ಕಾರಿ ನೌಕರರಿಗೆ ಹಬ್ಬಗಳಿಗಾಗಿ ಮುಂಗಡ ಸಂಬಳ

ಬೆಂಗಳೂರು ೧೭

ವರ್ಷದ ಹಲವು ಪ್ರಮುಖ ಹಬ್ಬಗಳ ಆಚರಣೆ ಸಂಬಂಧದಲ್ಲಿ ನೌಕರರಿಗೆ ಸಂಬಳವನ್ನು ಮುಂಗಡವಾಗಿ ಕೊಡುವ ಬಗ್ಗೆ ಸರ್ಕಾರದವರು ಆಜ್ಞೆ ಹೊರಡಿಸಿರುವರು. ಈ ಮೊಬಲಗನ್ನು ೪ ಸುಲಭ ಕಂತುಗಳಲ್ಲಿ ವಾಪಸು ಪಡೆಯಲಾಗುವುದು. ೩೦೦ ರೂ. ಗಳಿಗೆ ಒಳಪಟ್ಟು ವೇತನ ಪಡೆಯುವ ನಾನ್ ಗೆಜೆಟೆಡ್ ನೌಕರರಿಗೆ ಈ ಸೌಲಭ್ಯವು ದೊರೆಯುವುದು. ಒಬ್ಬರಿಗೆ ೭೫ ರೂ ಅಥವಾ ಒಂದು ತಿಂಗಳ ಸಂಬಳ-ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಮುಂಗಡವಾಗಿ ಕೊಡಲಾಗುವುದು. ವರ್ಷದಲ್ಲಿ ಒಂದು ಬಾರಿ ಮಾತ್ರ ಈ ರೀತಿ ಕೊಡಲಾಗುವುದು. ಈ ಕ್ರಮವು ಕೇಂದ್ರ ಸರ್ಕಾರದಲ್ಲೂ, ಮದ್ರಾಸು, ಬೊಂಬಾಯಿ ಮತ್ತು ಮಾಜಿ ಹೈದರಾಬಾದು ಸಂಸ್ಥಾನಗಳಲ್ಲೂ ಜಾರಿಯಲ್ಲಿದ್ದಿತು.

ದ್ರಾವಕ ಕುಡಿದು ದಂಪತಿಗಳ ಆತ್ಮಹತ್ಯೆ

ಬೆಂಗಳೂರಿನ ಲಿಂಗಶೆಟ್ಟಿಪೇಟೆಯ ನಿವಾಸಿಗಳಾದ ಸೀತಾರಾಮಯ್ಯ ಮತ್ತು ಲಕ್ಷ್ಮಮ್ಮ ಎಂಬ ದೇವಾಂಗ ಮತದ ದಂಪತಿಗಳು ಅಸ್ವಸ್ಥಾವಸ್ಥೆಯಲ್ಲಿ ನೆನ್ನೆ ಆಸ್ಪತ್ರೆಗೆ ಸೇರಿಸಲ್ಪಟ್ಟು ಮೃತರಾದರು. ಜೀವನದಲ್ಲಿ ಅಪಮಾನವನ್ನು ಭರಿಸಲಾರದೆ ತಾವು ದ್ರಾವಕ ಕುಡಿದುದಾಗಿ ಸೀತಾರಾಮಯ್ಯನು ತಿಳಿಸಿದ್ದನು. ಅವರಿಗೆ ಐದು ಮಕ್ಕಳು ಇವೆ.

ರೈಲು ಛಾರ್ಜಿಗೆ ಹಳೇ ನಾಣ್ಯವೇ ಮುಂದುವರಿಯುವುದು

[illegible] ನಾಣ್ಯ ಪದ್ಧತಿಯು ಜಾರಿಗೆ ಬಂದರೂ ರೈಲ್ವೆ ಚಾರ್ಜು, ಪಾರ್ಸಲ್, ಸಾಗಾಣಿಕೆ ಮುಂತಾದ ದರಗಳನ್ನು ಮಾತ್ರ ಹಳೆಯ ನಾಣ್ಯ ಪದ್ಧತಿಯಲ್ಲಿಯೇ ನಿಗದಿ ಮಾಡಲಾಗುವುದು. ಆದರೆ ಆ ಬೆಲೆಯ ಮೊತ್ತವನ್ನು ಇಲಾಖೆಗೆ ಕೊಡುವಾಗ ಹಳೆಯ ಅಥವಾ ಹೊಸ ನಾಣ್ಯಗಳಲ್ಲಿಯಾಗಲೀ ಅಥವಾ ಎರಡನ್ನೂ ಸೇರಿಸಿಯಾಗಲೀ ಕೊಡಬಹುದು. ಇಲಾಖೆಯವರೂ ಸಹ ಇವೆರಡರಲ್ಲಿ ಯಾವ ಮೂಲಕವಾದರೂ ಜನರಿಗೆ ಹಣವನ್ನು ವಾಪಸ್ ಮಾಡಬಹುದು.

ಮದರಾಸಿನಲ್ಲಿ ಚಲನಚಿತ್ರ ಕಥಾಲೇಖಕರ ವಿಜಯ

ಚಲನಚಿತ್ರ ಕಥೆಗಳ ಲೇಖಕರಾದ ಶ್ರೀ ಎಂ. ಕರುಣಾನಿಧಿಯವರು ಮದರಾಸಿನ ಶಾಸನ ಸಭೆಗೆ ದ್ರಾವಿಡ ಸಂಘದ ಪರವಾಗಿ ಸ್ಪರ್ಧಿಸಿ ಕಾಂಗ್ರೆಸ್ ಉಮೇದುವಾರರಿಗಿಂತ ೮,೦೦೦ ಓಟುಗಳನ್ನು ಹೆಚ್ಚಾಗಿ ಪಡೆದು ವಿಜಯಗಳಿಸಿರುವರು. ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಇತರ ಐದು ಮಂದಿ ಸ್ವತಂತ್ರರು ಠೇವಣಿಗಳನ್ನು ಕಳೆದುಕೊಂಡರು.

ರೈನ್ ಲ್ಯಾಂಡ್ ಕಣಿವೆಯಲ್ಲಿ ಒಂದು ದಿನ ಸ್ತ್ರೀಯರ ದರ್ಬಾರು

ಜರ್ಮನಿಯ ರೈನ್‌ಲ್ಯಾಂಡ್ ಕಣಿವೆಯಲ್ಲಿ ಕಳೆದ ತಿಂಗಳ ಕೊನೆಯಲ್ಲಿ ಒಂದು ದಿನ ಸ್ತ್ರೀಯರದೇ ಪೂರ್ಣ ದರ್ಬಾರು ನಡೆಯಿತು. ಅಂದು ಅವರು ಹೇಳಿದಂತೆ ಪುರುಷರು ಕೇಳಬೇಕೆಂಬ ಸಂಪ್ರದಾಯವಿದೆ. ಆ ದಿನ ಹೆಂಗಸರು ಆಕರ್ಷಕವಾಗಿ ಶೃಂಗರಿಸಿಕೊಂಡು ಬೀದಿಯಲ್ಲಿ ಹೊರಟು ತಮಗೆ ಇಷ್ಟಬಂದ ಯಾವ ಗಂಡಸನ್ನಾದರೂ ಅಟ್ಟಿಸಿಕೊಂಡುಹೋಗಿ ಚುಂಬಿಸುತ್ತಿದ್ದರು. ಈ ಧಾಳಿಗೆ ಪೊಲೀಸ್ ಕಾನ್‌ಸ್ಟೇಬಲ್ಲುಗಳೂ ಸಿಕ್ಕಿದ್ದರು. ತಮ್ಮ ಮಹಿಳಾ ನೌಕರರು ಇದರಲ್ಲಿ ಭಾಗವಹಿಸಲು ಸಹಾಯಕವಾಗುವಂತೆ ಅನೇಕ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳವರು ರಜಾ ಕೊಟ್ಟಿದ್ದರು.

ಬೆಂಗಳೂರು-ಮಂಗಳೂರುಗಳ ನೇರ ಬಸ್ ಸಂಚಾರ ವ್ಯವಸ್ಥೆ

ಬೆಂಗಳೂರು

ಸಂಸ್ಥಾನದ ರಾಜಧಾನಿಯಾದ ಬೆಂಗಳೂರಿಗೂ ಮತ್ತು ರೇವು ಪಟ್ಟಣವಾದ ಮಂಗಳೂರಿಗೂ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ [illegible]ಗಳ ನಡುವೆ ನೇರವಾದ ಬಸ್ ಸಂಚಾರ ವ್ಯವಸ್ಥೆಯನ್ನು ಆರಂಭಿಸಲು ಸರ್ಕಾರದವರು [illegible]ವಾಗಿ ಪರ್ಯಾಲೋಚಿಸುತ್ತಿದ್ದಾರೆಂದೂ, [illegible] ಇಲ್ಲಿ ನಡೆಯಲಿರುವ ಪ್ರಾದೇಶಿಕ ಸಂಚಾರ ಪ್ರಾಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದೆಂದೂ ವರದಿಯಾಗಿದೆ.

ಬೊಂಬಾಯಿಯಲ್ಲಿ ಕಾಂಗ್ರೆಸ್ಸಿಗೆ ಸ್ಪಷ್ಟ ಬಹುಮತ

ಬೊಂಬಾಯಿ ಪ್ರಾಂತದ ಶಾಸನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಇದುವರೆಗೆ [illegible] ಸ್ಥಾನಗಳು ದೊರೆತು ಅದಕ್ಕೆ ಸ್ಪಷ್ಟ ಬಹುಮತ ಬರಬೇಕಾದುದಕ್ಕಿಂತಲೂ ಆರು ಸ್ಥಾನಗಳು ಹೆಚ್ಚಾಗಿ ಬಂದಿವೆ.

ರಾಜಸ್ಥಾನದ ವಿಧಾನ ಸಭೆಯಲ್ಲೂ ಕಾಂಗ್ರೆಸ್ ಪಕ್ಷವು ನಿಶ್ಚಿತ ಬಹುಮತ ಪಡೆದಿದೆ.

ಮೃತರಾದ ಸ್ಪರ್ಧಿಗೆ ಚುನಾವಣೆಯಲ್ಲಿ ಜಯ

ಬಿಹಾರಿನ ಮುಜಫರ್‌ಪುರ್ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿದ್ದ ಮತ್ತು ಪಾಟ್ನಾ ವಿಶ್ವವಿದ್ಯಾಲಯದ ಉಪಸ್ಥಾನಪತಿಗಳಾಗಿದ್ದು ಮೊನ್ನೆ ದಿವಂಗತರಾದ ಶ್ರೀ ಶ್ಯಾಮನಂದ್ ಸಹಾಯರವರಿಗೆ ಚುನಾವಣೆಯಲ್ಲಿ ೪೦ ಸಾವಿರ ಬಹುಮತದಿಂದ ಜಯ ಲಭಿಸಿದೆ. ಈ ಫಲಿತಾಂಶವನ್ನು ಕೇಂದ್ರ ಚುನಾವಣಾ ಮಂಡಲಿಯ ಅಪ್ಪಣೆಗಾಗಿ ಪ್ರಕಟಿಸದೆ ತಡೆದಿಡಲಾಗಿದೆ.

ಕೇರಳದಲ್ಲಿ ಮಾಜಿ ಸಚಿವರ ಸೋಲು

ಕೇರಳದ ಮಾಜಿ ಮುಖ್ಯ ಮಂತ್ರಿ ಶ್ರೀ ಪಾನಂಪಿಳ್ಳ ಗೋವಿಂದ ಮೆನನ್‌ರವರು ಪರಾಜಿತರಾಗಿರುವರು. ಅಲ್ಲಿ ಪಿ. ಎಸ್. ಪಿ. ಉಮೇದುವಾರರಾದ ಶ್ರೀ ಜನಾರ್ಧನನ್ ಎಂಬುವರು ಜಯಗಳಿಸಿರುವರು.

ಆಸ್ಟ್ರಿಯದಿಂದ ಜೆಕ್ ಅಧಿಕಾರಿಯ ಗಡೀಪಾರು

ಆಸ್ಟ್ರಿಯದಲ್ಲಿ ಗೂಢಚರ್ಯೆಯ ಸಂಬಂಧವಾಗಿ ಅಲ್ಲಿನ ಜೆಕೊಸ್ಲೊವೇಕಿಯಾ ರಾಯಭಾರ ಕಛೇರಿಯ ಅಧಿಕಾರಿಯೊಬ್ಬನನ್ನು ಗಡೀಪಾರು ಮಾಡಲಾಗಿರುವುದೆಂದು ಗೊತ್ತಾಗಿದೆ.

ಕಡಕೋಳದಲ್ಲಿ ಇಬ್ಬರು ಕೇಡಿಗಳ ಬಂಧನ

ಮೊನ್ನೆ ಸಂಜೆ ಆರು ಗಂಟೆಯಲ್ಲಿ ಕಡಕೋಳ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರ ಜೇಬಿನಿಂದ ೩೧೦ ರೂ ಗಳನ್ನು ಅಪಹರಿಸುವ ಪ್ರಯತ್ನದಲ್ಲಿದ್ದ, ಹಿಂದೆ ಹಲವು ಬಾರಿ ಸಜಾ ಆಗಿರುವ ಮೈಸೂರಿನ ಬಸವ ಮತ್ತು [illegible] ಎಂಬ ಇಬ್ಬರು ಕೇಡಿಗಳನ್ನು ರೈಲ್ವೆ ಪೊಲೀಸರು ಬಂಧಿಸಿ ತನಿಖೆ ಕ್ರಮ ಜರುಗಿಸುತ್ತಿರುವರು.

ನರ್ಸರಿ ಸ್ಕೂಲ್ ಉಪಾಧ್ಯಾಯಿನಿಯರ ಶಿಕ್ಷಣ ಕೇಂದ್ರ

ನಗರದ ದಿವಾನ್ಸ್ ರೋಡಿನಲ್ಲಿರುವ

ಶ್ರೀ ಜಗದಂಬಾ ಶಿಶುವಿಹಾರದಲ್ಲಿ

11-3-57 ರಿಂದ ಪ್ರಾರಂಭವಾಗಿದೆ

ಸೇರಲಪೇಕ್ಷಿಸುವ ಮಹಿಳೆಯರು ಕೂಡಲೇ ಡೈರೆಕ್ಟರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು ತಿಳಿಸಲಾಗಿದೆ

ಡಿ. ಕೃಷ್ಣಮೂರ್ತಿ,
ಡೈರೆಕ್ಟರ್

Edited, Printed and Published by
A. R. Nagarajan at Sadhvi Press
J. Subbiah Road, Mysore

SRI GAYATHRI TALKIES ★ Running to Crowded Houses in the FOURTH DAY
★ T R A P E Z E ★
Daily 4 Shows — 10-30, 3-30, 6-30 and 9-45

[illegible] ನಂ. 192

ಚಂದಾ ದರ

ಏಜಂಟರುಗಳ ಮೂಲಕ
೩ಂಗಳಿಗೆ ಎಂಟಾಣೆ

ಅಂಚೆ ಮೂಲಕ
೩ಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

[illegible] ಪತ್ರಿಕೆ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೪] SADHVI : TUESDAY 19—3—1957 ಮೈಸೂರು : ಮಂಗಳವಾರ ೧೯—೩—೧೯೫೭ : [ಸಂಚಿಕೆ : ೨೩೦

ಬರ್ಮಾ ನಗರದಲ್ಲಿ ಬೆಂಕಿಯಿಂದ ೧ ಕೋಟಿ ರೂ. ನಷ್ಟ

ಕಳೆದ ಐದು ವರ್ಷಗಳಿಂದ ಂಸ್ಥಾನದಲ್ಲಿ ಸಾಧಿಸಿದ ಪ್ರಗತಿ

ಸನ ಸಭೆಗಳ ಜಂಟಿ ಅಧಿವೇಶನಗಳಲ್ಲಿ ರಾಜ್ಯಪಾಲರ ಭಾಷಣ

ಬೆಂಗಳೂರು ೧೯

ನೆನ್ನೆ ಸಂಸ್ಥಾನದ ಉಭಯ ಶಾಸನ ಸಭೆಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುತ್ತಾ ಸಂಸ್ಥಾನದಲ್ಲಿ ಎಲ್ಲೋ ಮ ದುರ್ಘಟನೆಯನ್ನು ಬಿಟ್ಟರೆ ಉಳಿದ ಕಡೆ ಶಾಂತವಾಗಿ ಚುನಾವಣೆಗಳು ನಡೆದುದ ಗಿ ಸಂತೋಷವನ್ನು ವ್ಯಕ್ತಪಡಿಸಿದರು. ಕಳೆ ವರ್ಷಗಳಲ್ಲಿ ಸಾಧಿತವಾದ ಕಾರ್ಯಗಳನ್ನು ಶೀಲಿಸಿ ಆ ಅವಧಿಯಲ್ಲಿ ಆಹಾರಾಭಾವದ ರಣೆ, ಸರ್ಕಾರಿ ನೌಕರರ ಸಂಬಳಗಳ ಪುನ ಮರ್ಶೆ, ಸಂಸ್ಥಾನದ ಪುನರ್ರಚನೆ ಮುಂತಾ ಪ್ರಾಮುಖ್ಯವಾದ ಅಂಶಗಳನ್ನು ಉಲ್ಲೇಖಿಸಿ ದ

ಪ್ರಥಮ ಪಂಚವಾರ್ಷಿಕ ಯೋಜನೆಯ ೯೦ ಟಿ ರೂ. ಗಳ ಕಾರ್ಯದಲ್ಲಿ ೮೩ ಕೋಟಿಗಳನ್ನು ನಿರ್ವಹಿಸಲಾಯಿತೆಂದು ತಿಳಿಸಿ ನೀರಾವರಿ ಕಾರ್ಯಗಳಲ್ಲಿ ಆದ ಪ್ರಗತಿಯ ಪ್ರಸ್ತಾಪಿಸಿ ಭದ್ರಾ, ನುಗು ಮುಂತಾ ಣೆಕಟ್ಟುಗಳು ಮುಗಿದು ಸಾಗುವಳಿ ಕಾರ್ಯ ಆರಂಭವಾಗಿವೆ. ತುಂಗಭದ್ರಾ ಅಣೆಕಟ್ಟಿ ದ ೬೦ ಸಾವಿರ ಎಕರೆ ಜಮೀನಿಗೆ ನೀರೊದ ಸಲಾಗಿದೆ. ಆಹಾರದ ಉತ್ಪನ್ನದಲ್ಲಿ ಶೇಕಡ ೧೧ ಷ್ಟು ಹೆಚ್ಚಿದೆ. ಫಲವತ್ತಾದ ಎಂಟು ಲಕ್ಷ ಎಕರೆ ಭೂಮಿಯು ನಾಶವಾಗುವುದನ್ನು ತಡೆಗಟ್ಟಿದೆ. ಹತ್ತಿ ಬೆಳೆ ಭೂಮಿಯ ವಿಸ್ತೀರ್ಣ ಶೇ ೫೦ರಷ್ಟು ಹೆಚ್ಚಿದೆ. ಸಂಸ್ಥಾನದ ಪಶುಪ ಯ ಅಭಿವೃದ್ಧಿಗೂ ಸೂಕ್ತ ಕ್ರಮಗಳನ್ನು ಳ್ಳಲಾಗಿದೆ. ಈಗ ಸಂಸ್ಥಾನದಲ್ಲಿ ಪ್ರತಿ ಸಾವಿರ ಜನಗಳಿಗೊಂದರಂತೆ ಪಶುವೈದ್ಯ ಯಿದೆ. ಅಲ್ಲದೆ ಈ ಬಗ್ಗೆ ಶಿಕ್ಷಣವೀಯ ಒಂದು ಕಾಲೇಜನ್ನು ತೆರೆಯಲು ಯೋಚಿಸಿ ಎಂದು ತಿಳಿಸಿದರು.

ವಿದ್ಯುಚ್ಛಕ್ತಿ ಅಭಿವೃದ್ಧಿ ಬಗ್ಗೆ ಪ್ರಸ್ತಾಪಿಸಿ ದ ಐದು ವರ್ಷಗಳಲ್ಲಿ ಸಂಸ್ಥಾನದ ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಬಳಕೆಗಳು ಪಟ್ಟೀಡರಷ್ಟು ಏರಿದೆ. ತುಂಗಭದ್ರಾ ಅಣೆಯಲ್ಲಿ ೯,೦೦೦ ಕಿಲೊವಾಟನಷ್ಟು ವಿದ್ಯುಚ್ಛಕ್ತಿಯು ಸದ್ಯದಲ್ಲೇ ಉತ್ಪತ್ತಿಯಾಗುವುದು. ೧೯ ವಿದ್ಯುತ್ ಕೇಂದ್ರದಿಂದ ಉತ್ತರ ಕ ಟಕ ಭಾಗಗಳಿಗೂ ಈಗ ಹೆಚ್ಚು ವಿದ್ಯುತ್ ಒದಗಿಸಲಾಗಿದೆ—ಎಂದು ನುಡಿದರು.

ಂಚಾರ ವ್ಯವಸ್ಥೆಯ ಪ್ರಗತಿಯನ್ನು ಪ್ರಸ್ತಾ ಸಂಸ್ಥಾನದಲ್ಲಿ ಒಟ್ಟು ೬,೦೦೦ ಮೈಲಿನ ಸ್ತೆಗಳು ಹೆಚ್ಚಾದುವೆಂದು ತಿಳಿಸಿದರು ವರ್ಷ ೧ ೫೦೦ ಮಂದಿ ಹೆಚ್ಚಾಗಿ ಉದ್ಯಾ ಯುಗಂದು ನೆಮಿಸಿಕೊಳ ಟಾರಿ ವಿದ್ಯಾಭ್ಯಾಸ ಅವ್ಯತಿಯನ್ನು ಸಮನ್ವಯ ಸಲು ಪ್ರಯತ್ನಗಳಾಗುತ್ತಿವೆಯೆಂದೂ ದರು

ಕೊಳ್ಳೇಗಾಲ ಕ್ಷೇತ್ರದಲ್ಲಿ ೨ ಸ್ಥಾನಗಳೂ ಕಾಂಗ್ರೆಸ್ಸಿಗೆ

ಮೈಸೂರು ೧೯

ಸಂಸ್ಥಾನದ ವಿಧಾನಸಭೆಗೆ ಕೊಳ್ಳೇಗಾಲ ದ್ವಿಸದಸ್ಯ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಸಾಮಾನ್ಯ ಸ್ಥಾನದಿಂದ ಕಾಂಗ್ರೆಸ್ ಸ್ಪರ್ಧಿ ಶ್ರೀ ಟಿ. ಪಿ ಬೋರಯ್ಯನವರೂ ಮತ್ತು ಮೀಸಲು ಸ್ಥಾನದಿಂದ ಕಾಂಗ್ರೆಸ್ಸಿನ ಶ್ರೀಮತಿ ಕೆಂಪಮ್ಮನವರೂ ಕ್ರಮವಾಗಿ ೧೧ ೫೭೦ ಮತ್ತು ೫,೮೬೩ ಹೆಚ್ಚಿನ ಬಹುಮತದಿಂದ ಜಯಗಳಿಸಿದ್ದಾರೆ. ಓಟಿನ ವಿವರಗಳು ಈ ರೀತಿ ಇವೆ.—

ಸಾಮಾನ್ಯ ಸ್ಥಾನ:—

ಶ್ರೀ ಟಿ ಪಿ ಬೋರಯ್ಯ (ಕಾಂ) ೨೭,೧೪೭
ಶ್ರೀ ಕೆ ಪಿ ಶಾಂತಮೂರ್ತಿ (ಪಿ.ಎಸ್ ಪಿ) ೧೫ ೫೭೭

ಮೀಸಲು ಸ್ಥಾನ:—

ಶ್ರೀಮತಿ ಕೆಂಪಮ್ಮ (ಕಾಂ) ೨೨,೨೮೭
ಶ್ರೀ ಪಿ ಆರ್ ಪುಟ್ಟರಾಜು (ಪಿ ಎಸ್ ಪಿ) ೧೬,೪೨೩
ಶ್ರೀ ಎನ್ ಬಸವರಾಜು (ಸ್ವತಂತ್ರ) ೮,೧೩೭

ಕೆ. ಸಿ. ರೆಡ್ಡಿಯವರಿಗೆ ೨೫,೫೩೯ ಹೆಚ್ಚಿನ ಮತಗಳಿಂದ ಜಯ

ಮತ್ತೆ ಮೂವರು ಕೇಂದ್ರ ಮಂತ್ರಿಗಳ ಆಯ್ಕೆ

ಲೋಕ ಸಭೆಗೆ ಕೋಲಾರ ಜಿಲ್ಲಾ ಕ್ಷೇತ್ರದಿಂದ ಉತ್ಪಾದನಾ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ೨೫,೫೩೯ ಹೆಚ್ಚಿನ ಮತಗಳಿಂದ ನೆನ್ನೆ ಚುನಾಯಿತರಾದರು. ಅವರಿಗೆ ೨,೦೯,೫೪೭ ಮತ್ತು ಅವರ ಪ್ರತಿಸ್ಪರ್ಧಿ ಶ್ರೀ ಎ. ಎಂ ಗೋವಿಂದರವರಿಗೆ ೧,೮೪,೦೦೯ ಮತಗಳು ಬಂದುವು.

ಕೇಂದ್ರ ಗೃಹ ನಿರ್ಮಾಣ ಶಾಖಾ ಸಚಿವ ಸರ್ದಾರ್ ಸ್ವರ್ಣಸಿಂಗರು ಜಲಂಧರ್ ಕ್ಷೇತ್ರದಿಂದಲೂ ವಾರ್ತಾ ಶಾಖಾ ಸಚಿವ ಡ ಬಿ ವಿ ಕೇಸ್ಕರ್‌ರವರು ಉತ್ತರ ಪ್ರದೇಶದ ಮುಸಾಫರ್ ಖಾನಾ ಕ್ಷೇತ್ರದಿಂದಲೂ ಮತ್ತು ಪಾರ್ಲಿಮೆಂಟರಿ ವ್ಯವಹಾರಗಳ ಮಂತ್ರಿ ಶ್ರೀ ಸತ್ಯನಾರಾಯಣ ಸಿನ್ಹಾರವರು ಬಿಹಾರಿನ ಸಮಸ್ತೀಪುರದಿಂದಲೂ ಚುನಾಯಿತರಾಗಿರುವರು

ಕಳೆದ ಐದು ವರ್ಷಗಳಲ್ಲಿ ೫೬ ಲಕ್ಷ ಜನಸಂಖ್ಯೆಯ ೧೧ ಸಾವಿರ ಹಳ್ಳಿಗಳಲ್ಲಿ ಸಾಮೂಹಿಕ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತ ಮಾಡಲಾಯಿತೆಂದೂ ಈಗ ಮತ್ತೆ ೫೦ ಹೊಸ ಬ್ಲಾಕುಗಳನ್ನು ಸಂಸ್ಥಾನಕ್ಕೆ ನಿಗದಿ ಮಾಡಲಾಗಿದೆಯೆಂದೂ ತಿಳಿಸಿದರು

ಸ್ಥಳೀಯ ಸಂಸ್ಥೆಗಳಲ್ಲಿನ ನೌಕರರು ಮತ್ತು ಗ್ರಾಮಾಧಿಕಾರಿಗಳ ವೇತನಗಳನ್ನು ಸ್ತ್ರ ವಿಸುವ ಹೊಂದಿಸುವ ಪ್ರಶ್ನೆ ಸರ್ಕಾರಿ ನೌಕರರ ಸಂಬಳ ಪಡ್ಡಿ [illegible] ನಗೆ [illegible] ವೆ ಬಗ್ಗೆ ಸಲಹೆ ಮಾಡಲು ಒಂದು ಸಮಿತಿಯನ್ನು ನೇಮಿಸಲಾಗಿರುವ ಅಂಶವನ್ನು ಸೂಚಿಸಿದರು

ಕಾಶ್ಮೀರವು ಎಂದಿಗೂ ಭಾರತದ ಭಾಗವಾಗಿಯೇ ಇರುತ್ತದೆ

ಪಾರ್ಲಿಮೆಂಟಿನ ಜಂಟಿ ಅಧಿವೇಶನದಲ್ಲಿ ರಾಷ್ಟ್ರಾಧ್ಯಕ್ಷರ ಹೇಳಿಕೆ

ರಾಷ್ಟ್ರಾಧ್ಯಕ್ಷರು ನೆನ್ನೆ ಕೇಂದ್ರ ಪಾರ್ಲಿಮೆಂಟಿನ ಜಂಟಿ ಸಭೆಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ, ಕಾಶ್ಮೀರದ ವಿಷಯವನ್ನು ಪ್ರಸ್ತಾಪಿಸಿ ಆ ಸಂಸ್ಥಾನವು ೧೯೪೭ರ ಅಕ್ಟೋಬರನಲ್ಲೇ ಭಾರತದಲ್ಲಿ ವಿಲೀನವಾಗಿ ಇಂದಿಗೂ ಭಾರತದ ಅಂಗವಾಗಿರುವುದೆಂದು ತಿಳಿಸಿ, ಪಾಕಿಸ್ತಾನವು ಅಂತರ ರಾಷ್ಟ್ರೀಯ ನಿಯಮಗಳನ್ನು ನಿರ್ಲಕ್ಷಿಸಿ ಭಾರತದ ಒಕ್ಕೂಟದ ಗಡಿಯನ್ನುಲ್ಲಂಘಿಸಿ ಆಕ್ರಮಣ ಮಾಡಿದುದೇ ಕಾಶ್ಮೀರದ ಈಗಿನ ಬಿಕ್ಕಟ್ಟಿಗೆ ಕಾರಣವಾಯಿತೆಂದು ನುಡಿದರು. ಈ ಸಮಸ್ಯೆಯನ್ನು ಬಗೆಹರಿಸುವ ಗಿ ಪರಿಹರಿಸುವ ಕಳಕಳಿಯಿಂದ ಭಾರತವು ಆರಂಭದಲ್ಲಿ ಪೂರ್ಣ ವಿಶ್ವಾಸವಿಟ್ಟು ಅವರೊಡನೆ ಸಹಕರಿಸಲು ಸಿದ್ಧವಾಗಿರುವರೆಂದೂ, ಆದರೆ ಪಾಕಿಸ್ತಾನದಲ್ಲಿ ಭಾರತದ ವಿರುದ್ಧ ಧರ್ಮ ಯುದ್ಧದ ಪ್ರಚೋದನೆಯು ಮಾತ್ರ ಇನ್ನೂ ಕಡಿಮೆ ಯಾಗಿಲ್ಲವೆಂದೂ ಅವರು ತಿಳಿಸಿ ಈ ತೆರನಾದ ಅಪಪ್ರಚಾರಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಭಾರತದ ಗಡಿ ಮತ್ತು ಹಿತಗಳನ್ನು ಸೌಹಾರ್ದಯುತವಾಗಿ ರಕ್ಷಿಸಿಕೊಳ್ಳುವುದೇ ಭಾರತದ ನೀತಿಯಾಗಿರುವುದೆಂದು ನುಡಿದರು. ಕಳೆದ ವರ್ಷವಲ್ಲೂ ಪೂರ್ವ ಬಂಗಾಳದಿಂದ ಭಾರತಕ್ಕೆ ಹಿಂದುಗಳ ನಿರ್ಗಮನವು ಸಾಗುತ್ತಲೇ ಇತ್ತೆಂದೂ, ಇದರಿಂದ ಪಶ್ಚಿಮ ಬಂಗಾಳಕ್ಕೆ ಆ ಜನರು ಒಂದು ಹೊರೆಯಾಗಿ ಅದರಿಂದ ಕಳವಳವುಂಟಾಗಿರುವುದೆಂದೂ ರಾಷ್ಟ್ರಾಧ್ಯಕ್ಷರು ತಿಳಿಸಿದರು

ಗೋವಾದ ವಿಷಯವಾಗಿ ರಾಷ್ಟ್ರಾಧ್ಯಕ್ಷರು ಮಾತನಾಡುತ್ತಾ, ಅದು ಪೋರ್ಚುಗಲ್ಲಿನ ಹಿಡಿತದಿಂದ ತಪ್ಪಿ, ಭಾರತದ ಇತರ ಭಾಗಗಳಂತೆ ಸ್ವಾತಂತ್ರ್ಯ ಪಡೆಯಬೇಕೆಂಬುವೇ ಭಾರತದ ಸ್ಪಷ್ಟ ಧೋರಣೆಯಾಗಿರುವುದೆಂದೂ ತಿಳಿಸಿದರು

ಆಫ್ರಿಕದ ಘಾನಾ ರಾಜ್ಯಕ್ಕೆ ಸ್ವಾತಂತ್ರ್ಯವು ದೊರಕಿರುವುದನ್ನು ಸ್ವಾಗತಿಸಿ ಮಲಯಕ್ಕೆ ಬೇಗನೆ ಸ್ವಾತಂತ್ರ್ಯದೊರಕಲೆಂದು ಅವರು ಹಾರೈಸಿದರು

ದೇಶದಲ್ಲಿ ಹೆಚ್ಚುತ್ತಿರುವ ಪದಾರ್ಥಗಳ ಬೆಲೆಯನ್ನು ತಗ್ಗಿಸಲು ಸರ್ವ ವಿಧವಾದ ಪ್ರಯತ್ನಗಳನ್ನೂ ಮಾಡುವುದಾಗಿ ಭರವಸೆಯಿತ್ತರು.

ಮಾಜಿ ಮಂತ್ರಿ ಟಿ. ಚೆನ್ನಯ್ಯ

ನವರ ಪರಾಜಯ

ಮೈಸೂರು ಸಂಸ್ಥಾನದ ಮಾಜಿ ಮಂತ್ರಿ ಶ್ರೀ ಟಿ. ಚೆನ್ನಯ್ಯನವರು ಕೋಲಾರದ ವಿಧಾನ ಸಭೆಯ ಮೀಸಲು ಕ್ಷೇತ್ರದಲ್ಲಿ ನಿಮ್ಮ ವರ್ಗದ ಫೆಡರೇಷನ್ ಸ್ಪರ್ಧಿ ಶ್ರೀ ಎಂ ಆರ್ ರವರಿಂದ [illegible] ಮತಗಳಿಂದ ಸೋಲಿಸಲ್ಪಟ್ಟರು [illegible] ಸಾಮಾನ್ಯ ಸ್ಥಾನದಲ್ಲಿ ಕಾಂಗ್ರೆಸ್ ಸ್ಪರ್ಧಿಯನ್ನು ಕಮ್ಯೂನಿಸ್ಟ್ ಪಕ್ಷದ ಶ್ರೀ ಎಂ. ಸಿ ನರಸಿಂಹನ್‌ರವರು ಸೋಲಿಸಿದರು

ಬರ್ಮಾದ ಗ್ರಾಮದಲ್ಲಿ ಬೆಂಕಿಯಿಂದ ೧ ಕೋಟಿ ರೂ. ನಷ್ಟ

ಬರ್ಮಾದ ರಂಗೂನ್ ನಗರಕ್ಕೆ ಉತ್ತರದಲ್ಲಿ ೨೫೦ ಮೈಲಿ ದೂರದಲ್ಲಿರುವ ತೈಲ ಕೇಂದ್ರವಾದ ಯೆನಾಂಗ್‌ಯಾಂಗ್ ಎಂಬ ನಗರದಲ್ಲಿ ಕಳೆದ ವಾರಾಂತ್ಯದಲ್ಲಿ ಭಾರಿ ಬೆಂಕಿ ಅಪಘಾತ ಸಂಭವಿಸಿ, ಅರ್ಧ ಪಟ್ಟಣವು ನಾಶವಾಗಿ, ಎಂಟು ಮಂದಿ ಮಡಿದರೆಂದು ವರದಿಯಾಗಿದೆ. ಒಂದು ಕೋಟಿ ರೂ. ಗಳಿಗೂ ಮೀರಿ ಆಸ್ತಿಪಾಸ್ತಿಗಳಿಗೆ ನಷ್ಟ ಸಂಭವಿಸಿರುವುದೆಂದು ಗೊತ್ತಾಗಿದೆ

ಪಂಜಾಬ್ ಚುನಾವಣೆಗಳಲ್ಲಿ ಅಧಿಕಾರಿಗಳ ಪ್ರವೇಶ

ಶಾಸನ ಸಭೆಯಲ್ಲಿ ವಿರೋಧ ಪಕ್ಷದವರ ಸಭಾತ್ಯಾಗ

ಪಂಜಾಬಿನ ಶಾಸನ ಸಭೆಯು ನೆನ್ನೆ ಆರಂಭವಾದಾಗ, ರಾಜ್ಯಪಾಲರು ಭಾಷಣ ಮಾಡಲು ವೇದಿಕೆಯನ್ನು ಹತ್ತುತ್ತಿದ್ದ ಸಮಯದಲ್ಲಿ ಕಮ್ಯೂನಿಸ್ಟ್ ಸದಸ್ಯ ಸರ್ದಾರ್ ಹರಕಿಸಿಂಗ್ ಸುರಿತ್ ಎಂಬುವರು, ಚುನಾವಣೆಯಲ್ಲಿ ಅಧಿಕಾರಿಗಳು ತಲೆ ಹಾಕಿ ಆಡಳಿತ ಯಂತ್ರದ ದುರುಪಯೋಗವಾಗಿರುವುದರ ಬಗ್ಗೆ ಒಂದು ಹೇಳಿಕೆಯನ್ನು ಓದಲು ಯತ್ನಿಸಿದರು. ಅದಕ್ಕೆ ಅವಕಾಶವೀಯದುದರಿಂದ ಸಭೆಯ ವಿರೋಧ ಪಕ್ಷದ ಒಂಭತ್ತು ಮಂದಿ ಕಮ್ಯೂನಿಸ್ಟ್ ಮತ್ತು ಒಬ್ಬ ಸೋಷಲಿಸ್ಟ್ ಸದಸ್ಯರು ಸಭಾತ್ಯಾಗ ಮಾಡಿದರು.

ಫಿಲಿಪ್ಪೈನ್ಸ್ ಅಧ್ಯಕ್ಷರ ಶವ ಪತ್ತೆ

ಮೊನ್ನೆ ಸೇಬು ದ್ವೀಪದಲ್ಲಿ ವಿಮಾನಾಪಘಾತಕ್ಕೊಳಗಾಗಿ ಮೃತರಾದ ಫಿಲಿಪ್ಪೈನ್ಸ್ ಅಧ್ಯಕ್ಷ ರಿಮೋನ್ ಮ್ಯಾಗ್ಸೇಸೆಯವರ ಶವವನ್ನು ನೆನ್ನೆ ಪತ್ತೆ ಹಚ್ಚಲಾಯಿತೆಂದು ವರದಿಯಾಗಿದೆ.

ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರಿಂದ ಲಂಚ ರುಷುವತ್ತುಗಳು

ಶಾಸನ ಸಭೆಯಲ್ಲಿ ಎಸ್ ಶ್ರೀನಿವಾಸ ಅಯ್ಯಂಗಾರ್ಯರ ಆರೋಪಣೆ

ಸ್ವಂ ಸು ಕಂತಿ] ಬೆಂಗಳೂರು, ೧೯

ಉಭಯ ಶಾಸನ ಸಭೆಗಳಲ್ಲೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಿತು ಮಹಾ ಚುನಾವಣೆಯು ನ್ಯಾಯವಾದ ರೀತಿಯಲ್ಲಿ ನಡೆಯಲಿಲ್ಲವೆಂದು ಶ್ರೀಗಳಾದ ಎಸ್ ಶ್ರೀನಿವಾಸಯ್ಯಂಗಾರ್ ಮತ್ತು ಗೋಪಾಲಗೌಡರು ಟೀಕಿಸಿದರು ಕಾಂಗ್ರೆಸ್ಸಿನವರು ಲಂಚ ರುಷುವತ್ತುಗಳನ್ನು ಕೊಟ್ಟರೆಂಬುದಾಗಿ ಶ್ರೀ ಶ್ರೀನಿವಾಸಯ್ಯಂಗಾರ್ಯರು ಆಪಾದಿಸಿದರು ಆದರೂ ರು ಗೀಡ ಶಾಸನವನ್ನು ಸಹ ಅವರು ಖಂಡಿಸಿದರು

ರಾಜ್ಯಪಾಲರ ಭಾಷಣಕ್ಕಾಗಿ ವಂದನೆಯನ್ನು ಸೂಚಿಸುವ ನಿರ್ಣಯವನ್ನು ಶ್ರೀ ಹುಚ್ಚಮಾಸ್ತಿಗೌಡರು ಸೂಚಿಸಿದರು.

ಮೂಲ ಶಿಕ್ಷಣದ ಬಗ್ಗೆ ಹಳೆಯ ಮೈಸೂರಿನ ಸುಧಾರಣಾ ಸಮಿತಿಯ ಶಿಫಾರಸುಗಳನ್ನು ಸರ್ಕಾರ ಸದ್ಯ ಪರಿಶೀಲಿಸುತ್ತಿದೆ ವರೆಂದು ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ ಕೆ. ಹನುಮಂತಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

೯೪,೨೪೯ ಬಹುಮತದಿಂದ ಶಂಕರಯ್ಯನವರ ಆಯ್ಕೆ

ಮೀಸಲು ಸ್ಥಾನದಲ್ಲಿ ೧,೮೨,೨೫೫ ಮತಗಳಿಂದ ಎಸ್. ಎಂ. ಸಿದ್ದಯ್ಯನವರ ವಿಜಯ

ಮೈಸೂರು ೧೯

ಲೋಕ ಸಭೆಗೆ ಮೈಸೂರು ಜಿಲ್ಲೆಯಿಂದ ೩ ಸ್ಥಾನಗಳೂ ನೆನ್ನೆ ಕಾಂಗ್ರೆಸ್ಸಿಗೆ ದೊರಕಿರುವ ಸಾಮಾನ್ಯ ಸ್ಥಾನದಿಂದ ಚುನಾಯಿತರಾದ ಕಾಂಗ್ರೆಸ್ ಸ್ಪರ್ಧಿ ಶ್ರೀ ಎಂ. ಶಂಕರಯ್ಯನವರು ೯೪,೨೪೯ ಹೆಚ್ಚಿನ ಬಹುಮತದಿಂದ ಗೆದ್ದರು ಇವರಿಗೆ [illegible] ಮತಗಳು ಬಂದವು ಪಿ. ಎಸ್. ಪಿ. ಪಕ್ಷದ ಸ್ಪರ್ಧಿ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರಿಗೆ ೬೭,೩೦೭ ಮತಗಳು ಬಂದವು

ಮೀಸಲು ಸ್ಥಾನದಿಂದ ಕಾಂಗ್ರೆಸ್ ಸ್ಪರ್ಧಿ ಶ್ರೀ ಎಸ್. ಎಂ. ಸಿದ್ದಯ್ಯನವರು ೧,೮೨,೨೫೫ ಬಹುಮತದಿಂದ ಜಯಗಳಿಸಿದರು. ಅವರಿಗೆ ೧,೮೪,೯೯೫ ಮತ್ತು ಪಿ. ಎಸ್. ಪಿ. ಪಕ್ಷದ ಸ್ಪರ್ಧಿ ಶ್ರೀ ಎಲ್. ಸಿ. ಭಲರಿ ರಂಗಯ್ಯನವರಿಗೆ ೧,೮೪,೩೫೦ ಮತಗಳು ಬಂದವು ಒಟ್ಟು ೩೬,೬೬೭ ಮತಗಳು ತಿರಸ್ಕೃತವಾದುವು

ಕೇಂದ್ರ ಆಹಾರ ಸಂಶೋಧನಾಲಯದ ಪ್ರಗತಿ

ನಗರದ ಕೇಂದ್ರ ಆಹಾರ ಸಂಶೋಧನಾಲಯದ ಕಾರ್ಯಕಾರಿ ಸಮಿತಿಯ ಸಭೆಯು ಮೊನ್ನೆ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಮಂತ್ರಿಗಳು ನಿಲಯದ ಸಂಘಾದವರನ್ನುದ್ದೇಶಿಸಿ ಭಾಷಣ ಮಾಡಿ, ಆಲಯದ ಕೆಲಸವನ್ನು ಶ್ಲಾಘಿಸಿದರು. ತಾವು ಮುಂದೆ ಮುಖ್ಯ ಮಂತ್ರಿಯಾಗಲೀ, ಅಥವಾ ಬಿಡಲಿ ಎಂದಿಗೂ ಈ ಸಂಶೋಧನಾಲಯದ ಅಭಿವೃದ್ಧಿಗೆ ಬೆಂಬಲ ದೊರಕಿಸಲು ಶ್ರಮಿಸುವುದಾಗಿ ಭರವಸೆಯಿತ್ತರು

ಪಶ್ಚಿಮ ಪಾಕಿಸ್ತಾನದಲ್ಲಿ ಸಮ್ಮಿಶ್ರ ಮಂತ್ರಿಮಂಡಲದ ರಚನೆಯೇ

ಪಶ್ಚಿಮ ಪಾಕಿಸ್ತಾನದ ಮುಖ್ಯಮಂತ್ರಿ ಡಾ॥ ಖಾನ್ ಸಾಹೇಬರು ರಾಜೀನಾಮೆಯೀಯುವರೆಂಬ ಪ್ರಬಲ ವದಂತಿ ವೇಳೆ ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ಬಲವು ಸಚಿವರೊಡನೆ ನೆನ್ನೆ ಲಾಹೋರಿಗೆ ತೆರಳಿದರೆಂದು ಗೊತ್ತಾಗಿದೆ. ಪ್ರಸ್ತುತ [illegible] ಮತ್ತು ಪಾಕಿಸ್ತಾನ ಕೇಂದ್ರ ಸರ್ಕಾರಗಳಲ್ಲಿ ಸಮ್ಮಿಶ್ರ ಮಂತ್ರಿಮಂಡಲಗಳ ಸ್ಥಾಪನೆಯಾಗುವ ಸಂಭವವಿರುವುದೆಂದೂ ಹೇಳಲಾಗುತ್ತಿದೆ. ಸಚಿವ ಸಯ್ಯದ್ ಹುಸೇನ್ ಎಂಬುವರು ಮೇಲ್ಕಂಡ ಸುದ್ದಿಗಳನ್ನು ನಿರಾಕರಿಸಿರುವರು

ಬೆಂಗಳೂರು ಬಳಿ ಅಂಬರ್ ಚರಕದ ಶಿಕ್ಷಣ ಶಾಲೆ

ಬೆಂಗಳೂರಿನ ಬಳಿ ಕೃಷ್ಣರಾಜಪುರ ವಿದ್ಯಾಲಯದಲ್ಲಿ ಅಂಬರ್ ಚರಕದಲ್ಲಿ ಶಿಕ್ಷಣ ಕೊಡುವ ಮಿಸ್ತ್ರಿ ತರಗತಿಗಳನ್ನು ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಬೋರ್ಡಿನ ಬೆಂಗಳೂರು ಸರಂಜಾಮು ಕಾರ್ಯಾಲಯದವರು ತೆರೆಯುವರು. ಶಿಕ್ಷಣ ಪಡೆಯಲಿಚ್ಛಿಸುವವರು ಇದೇ ೨೫ನೇ ತಾರೀಕಿನೊಳಗಾಗಿ ಅರ್ಜಿಗಳನ್ನು ಕಾರ್ಯಾಲಯದ ಗೌರವ ವ್ಯಾವಹಾರಿಕ ಸಲಹೆಗಾರರಾದ ಶ್ರೀ ಎಂ. ಹೆಚ್. [illegible]ರವರಿಗೆ ಕಳುಹಿಸಿಕೊಡಬೇಕು. ಒಕ್ಕೈಯ ಬಡಗಿಗಳಿಗೆ ಮಾಹೆಯಾನಾ ೩೦ ರೂ. ವೇತನವನ್ನೂ ಕೊಡಲಾಗುವುದು. ಚರಿತ್ರನಾಲಯ, ಸಹಕಾರ ಸಂಘಗಳು, ಸರಂಜಾಮು ಕಾರ್ಯಾಲಯಗಳಿಂದ ಬಂದವರಿಗೆ ಪ್ರಾಶಸ್ತ್ಯ ಕೊಡಲಾಗುವುದು.

ಅಮೆರಿಕದ ವಾಯುನೌಕೆಯಿಂದ ೨೧ ದಿನಗಳ ಸತತ ಹಾರಾಟ

ಅಮೆರಿಕದ ನೌಕಾ ದಳಕ್ಕೆ ಸೇರಿದ ಒಂದು ವಾಯು ನೌಕೆಯು ೨೧ ದಿನ ೧೩ ನಿಮಿಷಗಳ ಕಾಲ ಕೆಳಗಿಳಿಯದೇ ಒಂದೇ ಸಮನೆ ಒಟ್ಟು ೮ ಸಾವಿರ ಮೈಲಿಗಳಷ್ಟು ಹಾರಾಡಿ ಮೊನ್ನೆ ಇಳಿಯಿತೆಂದೂ, ಇದುವರಗೂ ಇಷ್ಟು ಹೆಚ್ಚಿನ ಕಾಲ ಯಾವ ವಿಮಾನವೂ ಸಹ ಒಂದೇ ಸಮನೆ ಹಾರಲಿಲ್ಲವೆಂದೂ ತಿಳಿದುಬಂದಿದೆ

ವಿಜಯಿಗಳಾದ ಲೋಕ ಸಭಾ ಸದಸ್ಯರ ಮೆರವಣಿಗೆ

ಮೈಸೂರು ೧೯

ಜಿಲ್ಲೆಯಿಂದ ಲೋಕ ಸಭೆಗೆ ಚುನಾಯಿತರಾದ ಶ್ರೀ ಎಂ. ಶಂಕರಯ್ಯ ಮತ್ತು ಎಸ್. ಎಂ. ಸಿದ್ದಯ್ಯನವರನ್ನು ನೆನ್ನೆ ಸಂಜೆ ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ಸನ್ಮಾನಿಸಲಾಯಿತು. ಪುರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯ, ಶ್ರೀ ಸಿ. ಕೆ. ದೇವನಾಥ್ ಮತ್ತು ಶ್ರೀ ಪ್ರಭಾಕರ ಶರ್ಮರವರುಗಳು ಭಾಷಣ ಮಾಡಿ ಜಯಶಾಲಿಗಳನ್ನು ಅಭಿನಂದಿಸಿ ಅವರಿಂದ ದೇಶ ಸೇವೆಗೆ ಹೆಚ್ಚಿನ ರವು ದೊರೆಯಲೆಂದು ಹಾರೈಸಿದರು. ಶ್ರೀ ಶಂಕರಯ್ಯ ಮತ್ತು ಸಿದ್ದಯ್ಯನವರುಗಳು ಕೃತಜ್ಞತೆಯನ್ನು ವ್ಯಕ್ತಪಡಿಸಿ ತಮ್ಮ ಮುಂದಿನ ಸೇವಾ ಕಾರ್ಯಗಳಲ್ಲಿ ಎಲ್ಲರ ಬೆಂಬಲಕ್ಕಾಗಿ ಮನವಿ ಮಾಡಿದರು

ಅನಂತರ ಅವರನ್ನೂ, ಹುಣಸೂರಿನಿಂದ ಸಂಸ್ಥಾನ ಶಾಸನ ಸಭೆಗೆ ಚುನಾಯಿತರಾಗಿರುವ ಶ್ರೀ ಎಂ. ರಾಚಯ್ಯನವರನ್ನೂ ತೆರೆದ ಮೋಟಾರಿನಲ್ಲಿ ಕುಳ್ಳಿರಿಸಿ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಅವರಿಗೆ ಅನೇಕರು ಹಾರತುರಾಯಿಗಳನ್ನರ್ಪಿಸಿ ಅಭಿನಂದಿಸಿದರು

ಭಾರತೀಯ ಕಲೆಗಳ ಬಗ್ಗೆ ಭಾಷಣ

ಇಂಗ್ಲೆಂಡ್ ಮತ್ತು ಲಾಹೋರ್‌ಗಳಲ್ಲಿ ವಸ್ತು ಪ್ರದರ್ಶನ ಶಾಲೆಯ ವ್ಯವಸ್ಥಾಧಿಕಾರಿಗಳಾಗಿದ್ದ ಡಾ॥ ಚಾರ್ಲೆಸ್ ಫ್ಯಾಬ್ರಿಯವರು ಇಂಟ್ರೊಡಕ್ಷನ್ ಟು ಇಂಡಿಯನ್ ಆರ್ಟ್ ಎಂಬ ವಿಚಾರವಾಗಿ ಈ ದಿನ ಸಂಜೆ ೬॥ ಘಂಟೆಗೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ. ಎ. ಮಂದಿರದಲ್ಲಿ ಚಿತ್ರ ಪ್ರದರ್ಶನದೊಡನೆ ಭಾಷಣವನ್ನು ಮಾಡುತ್ತಾರೆ ಸರ್ವರಿಗೂ ಸ್ವಾಗತವಿದೆ

ರಹದಾರಿಯಿಲ್ಲದೆ ಲಾರಿ ನಡೆಸಿದುದಕ್ಕೆ ಜುಲ್ಮಾನೆ

ಸೈಯದ್ ಅಹಮದ್ ಮತ್ತು ಅಹಮದ್ ಸಾಬ್ ಎಂಬುವರು ರಹದಾರಿಯಿಲ್ಲದೆ ಲಾರಿ ಓಡಿಸಿದುದಕ್ಕಾಗಿ ತಲಾ ೫ ರೂ. ಜುಲ್ಮಾನೆ ವಿಧಿಸಲಾಗಿದೆ.

ಸಿನಿಮಾದಲ್ಲಿ ಧೂಮಪಾನಕ್ಕಾಗಿ ಶಿಕ್ಷೆ

ರಣಜಿತ್ ಟಾಕೀಸಿನಲ್ಲಿ ಧೂಮಪಾನ ಮಾಡಿದ್ದಕ್ಕಾಗಿ ಬಾಲರಾಜ್, ಪೆರುಮಾಳ್, ಕನಗಾ, ಲೆನಾರ್ಡ್, ಕೆ. ಎಸ್. ಪಾಲ್ ರವರುಗಳಿಗೆ ತಲಾ ೧೦ ರೂ. ಎಸ್. ಬಿ. ಚಿಟ್ಟೆಗೌಡ, ಸೈಯದ್ ಅಹಮದ್ ಮತ್ತು ದಸ್ತಗೀರ್ ಇವರಿಗೆ ತಲಾ ೫ ರೂ. ಜುಲ್ಮಾನೆ ವಿಧಿಸಲಾಗಿದೆ

ಮಣಿಪುರದಲ್ಲಿ ಕಾಂಗ್ರೆಸ್ಸಿಗೆ ಬಹುಮತವಿಲ್ಲ

ಮಣಿಪುರ ಸಂಸ್ಥಾನದ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿಗೆ ೧೩, ಸಮಾಜವಾದಿ ಮತ್ತು ಸ್ವತಂತ್ರರಿಗೆ ತಲಾ ೭ ಮತ್ತು ಕಮ್ಯೂನಿಸ್ಟರಿಗೆ ೪ ಸ್ಥಾನಗಳು ಬಂದು ಅಲ್ಲಿ ಕಾಂಗ್ರೆಸ್ಸಿಗೆ ಬಹುಮತ ವಿಫಲವಾಗಿದೆ

ಕೈರೋವಿಗೆ ಕೃಷ್ಣಮೆನನ್ನರ ಪ್ರಯಾಣ

ಕೇಂದ್ರ ಸರ್ಕಾರದ ಸಚಿವ ಶ್ರೀ ವಿ. ಕೆ. ಕೃಷ್ಣಮೆನನ್ನರು ಈಜಿಪ್ಟಿನ ಅಧ್ಯಕ್ಷ ನಾಸೆರರ ಆಹ್ವಾನದ ಮೇಲೆ ನೆನ್ನೆ ಕೈರೋವಿಗೆ ತೆರಳಿದರು. ಬರುವ ಗುರುವಾರ ಅವರು ಹಿಂದಿರುಗುವರು

ಸಭೆಗೆ ಹಾಜರಾಗದೆ ಭತ್ಯ ಪಡೆದ ಶಾಸನ ಸಭಾ ಸದಸ್ಯರ ಬಂಧನ

ಬೊಂಬಾಯಿ ಶಾಸನಸಭಾ ಸದಸ್ಯರಾದ, ಕಾಂಗ್ರೆಸ್ಸಿನ ಶ್ರೀ ಈಶ್ವರಭಾಯಿ ಕೆ. ಚಾವ್ಡಾ ಎಂಬುವರು ಕಳೆದ ವರ್ಷ ಮಾರ್ಚಿ ತಿಂಗಳಲ್ಲಿ ನಡೆದ ಅಧಿವೇಶನದಲ್ಲಿ ಕೆಲವು ದಿನಗಳು ಹಾಜರಾಗದೆ ಆ ದಿನಗಳಿಗಾಗಿ ಭತ್ಯವನ್ನೂ ಮತ್ತು ಪ್ರಯಾಣ ಭತ್ಯವನ್ನೂ ಪಡೆದುದಕ್ಕಾಗಿ ಲಂಚ ನಿರೋಧ ಶಾಖೆಯವರು ಅವರನ್ನು ದಸ್ತಗಿರಿ ಮಾಡಿದರು. ಇಬ್ಬರ ಜಾಮೀನು ಮತ್ತು ೫೦೦ ರೂ. ನಗದು ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ

ಪರಾಜಿತರಾದ ಮಂತ್ರಿಗಳಿಗೆ ಮತ್ತೆ ಸ್ಥಾನ ಕಲ್ಪಿಸಕೂಡದು

ಚುನಾವಣೆಗಳಲ್ಲಿ ಪರಾಜಿತರಾದ ಮಂತ್ರಿಗಳಿಗಾಗಿ, ಪಾರ್ಲಿಮೆಂಟು ಅಥವಾ ಶಾಸನ ಸಭಾ ಕ್ಷೇತ್ರಗಳಲ್ಲಿ ಸ್ಥಾನಗಳನ್ನು ಖಾಲಿ ಮಾಡಿಸಿ, ಮತ್ತೆ ಅವರು ಸ್ಪರ್ಧಿಸಲು ಅವಕಾಶ ಕೊಡಬಾರದೆಂದೂ ಮತ್ತು ಮೇಲ್ಮನೆಗೆ ಅವರುಗಳನ್ನು ನಾಮಕರಣ ಮಾಡಬಾರದೆಂದೂ ನೆನ್ನೆ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಪಕ್ಷವು ದೆಹಲಿಯಲ್ಲಿ ಸಭೆ ಸೇರಿ ನಿರ್ಧರಿಸಿತು

ಆಜಾದ್ ಕಾಶ್ಮೀರದ ನಾಯಕರ ಭೇಟಿಗೆ ಜಾರಿಂಗರ ನಿರಾಕರಣೆ

ಭಾರತ-ಪಾಕಿಸ್ತಾನಗಳ ನಡುವೆ ಕಾಶ್ಮೀರ ಸಮಸ್ಯೆಯ ಬಗ್ಗೆ ಸಂಧಾನ ನಡೆಸಲು ಕರಾಚಿಗೆ ವಿಶ್ವ ಸಂಸ್ಥೆಯ ಪರವಾಗಿ ಬಂದಿರುವ ಸ್ವೀಡನ್ನಿನ ಪ್ರತಿನಿಧಿ ಜಾರಿಂಗರು ಆಜಾದ್ ಕಾಶ್ಮೀರಕ್ಕೆ ಭೇಟಿಯಿತ್ತು ಅಲ್ಲಿನ ನಾಯಕರನ್ನು ಸಂದರ್ಶಿಸಬೇಕೆಂಬ ಪಾಕಿಸ್ತಾನದ ಮನವಿಯನ್ನು ಅವರು ನಿರಾಕರಿಸಿದರೆಂದು ವರದಿಯಾಗಿದೆ

ಹೈದರಾಬಾದಿನ ಮಾಜಿ ಉಪ ಸಚಿವರಿಗೆ ಸೋಲು

ಬಿದರ್ ಜಿಲ್ಲೆಯ ಬಾಲ್ಕಿ ಸಂತಪುರ್ ದ್ವಿಸದಸ್ಯ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಸ್ಪರ್ಧಿಸಿದ್ದ ಹೈದರಾಬಾದು ಸಂಸ್ಥಾನದ ಗೃಹಶಾಖೆಯ ಮಾಜಿ ಉಪ ಮಂತ್ರಿ ಶ್ರೀ ಶ್ರೀನಿವಾಸರಾವ್ ಏಕೆಲಿಕರ್‌ರವರು ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಸ್ಪರ್ಧಿಯೊಬ್ಬರಿಂದ [illegible]ದರು ಆ ಕ್ಷೇತ್ರದ ಮೀಸಲು ಸ್ಥಾನವೂ ಸಹ ಸಮಿತಿಯ ಉಮೇದುವಾರರಿಗೇ ಲಭಿಸಿತು

ತೆಂಕಾಶಿಯಲ್ಲಿ ಶೃಂಗೇರಿ ಜಗದ್ಗುರುಗಳು

ದಕ್ಷಿಣ ದೇಶದ ತೆಂಕಾಶಿ ಕ್ಷೇತ್ರದಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳವರು ಈಗ ಬಿಡಾರ ಮಾಡಿದ್ದಾರೆ ಅವರು ಅಲ್ಲಿಗೆ ಭೇಟಿಯಿತ್ತ ದಿನ ಆಕಸ್ಮಿಕವಾಗಿ ಮೂರೂವರೆ ಅಂಗುಲದಷ್ಟು ಭಾರಿ ಮಳೆ ಬಂದುದರಿಂದ ಅವರ ಸ್ವಾಗತಕ್ಕಾಗಿ ಏರ್ಪಡಿಸಿದ್ದ ಮೆರವಣಿಗೆ ಮುಂತಾದ ಸಮಾರಂಭಗಳನ್ನು ಆ ದಿನ ನಡೆಸಲಾಗದೆ ಮಾರನೆಯ ದಿನ ನಡೆಸಲಾಯಿತು

ಮೈಸೂರು ಪೇಟೆಧಾರಣೆ

ಬಂಗಾರಕಡ್ಡಿ ಮತ್ತು ಕೊಯಮತ್ತೂರು	೨೮	೦	೦	೩೨	೨	೦
ರತ್ನಚೂಡಿ	೨೯	೧೩	೦	೪೦	[illegible]	೦
ಕಡ್ಡಿ	೨೯	೬	೦	೪೦	೦	೦
ರಾಗಿ	೪೦	೧೨	೦	೪೯	೧೨	೦
ಜೋಳ	೪೭	[illegible]	೦	೪೯	[illegible]	೦
ಕಡಲೆಕಾಯಿ	[illegible]	[illegible]	೦	[illegible]	೦	೦
ಹುಚ್ಚೆಳ್ಳು	[illegible]	೦	೦	[illegible]	[illegible]	೦
ಹರಳುಬೀಜ	[illegible]	೦	೦	೪೭	೦	೦
ಹೊಂಗೆಬೀಜ	೧೯	೧೦	೦	೨೭	[illegible]	೦
ಹುರುಳಿ	[illegible]	[illegible]	೦	೪೦	೨	೦
ಹೆಸರು	[illegible]	೬	೦	[illegible]	೧[illegible]	೦
ಹಲಸಂದೆ	[illegible]	೧೦	೦	[illegible]	[illegible]	೦
ಧನಿಯ	[illegible]	[illegible]	೦	[illegible]	೬	೦
ಅವರೆ	[illegible]	[illegible]	೦	೪೦	೬	೦
ಕಡಲೆ	[illegible]	೨	೦	[illegible]	೦	೦
ಹತ್ತಿಬೀಜ	೨೧	೦	೦	[illegible]	೨	೦
ಹುಣಸೆಬೀಜ	೬	೬	೦			
ಹುಣಸೆಹಣ್ಣು	೨	೦	೦	[illegible]	೧೧	೦
ಒಣಗೆಣಸು	[illegible]	[illegible]	೦	೬	೧೪	೦
ಮೆಣಸಿನಕಾಯಿ	೧೧	೦	೦	೧[illegible]	[illegible]	೦
ತೆಂಗಿನಕಾಯಿ ೧,೦೦೦				೨೧[illegible]	೦	೦

The Southern Railway Co-operative Society Ltd.,
MYSORE
NOTIFICATION

3-year Fixed Deposits of Rs. [illegible],000 and above are accepted at 3 per cent until further Notice

By Order of the Board,
Mysore, 16 3 57
B. MADHAVA RAO,
Secretary

ಮಾರ್ಚಿ ೨೯ ರಂದು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ನಾಯಕರ ಆಯ್ಕೆ

ರಾಜ್ಯ ಸಭೆಯ ಹಾಲಿ ಕಾಂಗ್ರೆಸ್ ಸದಸ್ಯರೂ ಮತ್ತು ಲೋಕಸಭೆಗೆ ಹೊಸದಾಗಿ ಆಯ್ಕೆಯಾದ ಕಾಂಗ್ರೆಸ್ ಸದಸ್ಯರೂ ಮಾರ್ಚಿ ೨೯ರಂದು ಸಭೆ ಸೇರಿ ತಮ್ಮ ನಾಯಕರನ್ನು ಚುನಾಯಿಸಬೇಕೆಂದು ನೆನ್ನೆ ನಡೆದ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸಭೆಯಲ್ಲಿ ತೀರ್ಮಾನಿಸಲಾಯಿತು

ಕಾಶ್ಮೀರವು ಭಾರತದ ಭಾಗವೆಂದು ಹೈದರಾಬಾದಿನ ಮುಸ್ಲಿಮರ ಹೇಳಿಕೆ

ಹೈದರಾಬಾದಿನಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಹೈದರಾಬಾದ್ ರಾಷ್ಟ್ರೀಯ ಕಾಶ್ಮೀರ ರಂಗ ಎಂಬ ಮುಸ್ಲಿಮರ ಸಂಸ್ಥೆಯು, ಈಗ ಕರಾಚಿಗೆ ಆಗಮಿಸಿರುವ ವಿಶ್ವಸಂಸ್ಥೆಯ ಮಧ್ಯಸ್ಥಗಾರ ಜಾರಿಂಗರಿಗೆ ಪತ್ರ ಬರೆದು, ಭಾರತದ ಮುಸ್ಲಿಮರು ಕಾಶ್ಮೀರವನ್ನು ಭಾರತದ ಅಂಗವೆಂದು ಪರಿಗಣಿಸಿ, ಪಾಕಿಸ್ತಾನವು ಆಕ್ರಮಣಕಾರಿ ರಾಷ್ಟ್ರವೆಂಬುದಾಗಿ ಭಾವಿಸುವರೆಂದು ತಿಳಿಸಿ ಜಾರಿಂಗರು ದೆಹಲಿಗೆ ಬಂದಾಗ ಆ ಸಂಸ್ಥೆಯ ನಿಯೋಗದವರು ಅವರನ್ನು ಭೇಟಿ ಮಾಡುವರೆಂದೂ ಹೇಳಲಾಗಿದೆ

ಕೇರಳದಲ್ಲಿ ಕಮ್ಯೂನಿಸ್ಟರಿಗೆ ಮತ್ತೊಂದು ಸ್ಥಾನ

ಕೇರಳ ಶಾಸನ ಸಭೆಗೆ ನೆನ್ನೆ ಪಟ್ಟಾಂಬಿ ಕ್ಷೇತ್ರದಿಂದ ಮತ್ತೊಬ್ಬ ಕಮ್ಯೂನಿಸ್ಟ್ ಉಮೇದುವಾರ ಶ್ರೀ ಕೆ. ಪಿ. ಗೋಪಾಲನವರು ಆರಿಸಿ ಬಂದಿದ್ದಾರೆ ಇದರಿಂದ ಕಮ್ಯೂನಿಸ್ಟರಿಗೆ ೫೮ ಸ್ಥಾನಗಳು ದೊರಕಿದಂತಾಗಿದೆ. ನೆನ್ನೆ ಪ್ರಕಟವಾದ ಫಲಿತಾಂಶದ ಪ್ರಕಾರ ಮತ್ತೊಂದು ಸ್ಥಾನವು ಕಾಂಗ್ರೆಸ್ಸಿಗೆ ಲಭಿಸಿ ಆ ಪಕ್ಷದ ಬಲವು ೪೨ಕ್ಕೆ ಏರಿತು. ಇಬ್ಬರು ಸ್ವತಂತ್ರ ಉಮೇದುವಾರರು ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ ತಾವು ಕಮ್ಯೂನಿಸ್ಟ್ ಪಕ್ಷಕ್ಕೆ ಯಾವ ಷರತ್ತೂ ಇಲ್ಲದೆ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ. ಕಮ್ಯೂನಿಸ್ಟರಿಗೆ ೫ ಜನ ಸ್ವತಂತ್ರರ ಬೆಂಬಲವು ದೊರಕುವುದಾದರೂ, ಸರ್ಕಾರ ರಚಿಸಲು ಇನ್ನೂ ೩ ಸ್ಥಾನಗಳು ಬೇಕಾಗುವುವು. ಆ ಸಂಸ್ಥಾನದಲ್ಲಿ ಇನ್ನೂ ೭ ಸ್ಥಾನಗಳ ಫಲಿತಾಂಶವು ಪ್ರಕಟವಾಗಬೇಕಾಗಿದೆ

ಡಿಕ್ಲರೇಷನ್ ಮಾಡದೆ ಪತ್ರಿಕೆ ಹೊರಡಿಸಿದುದಕ್ಕಾಗಿ ದಂಡ

ದಾವಣಗೆರೆಯ ಶ್ರೀ ಬಿ. ಎಂ. ರೇವಣ್ಣಸಿದ್ದಯ್ಯ ಎಂಬುವರು ಡಿಕ್ಲರೇಷನ್ನನ್ನು ಸಲ್ಲಿಸದೆ ಪ್ರಜಾಶಕ್ತಿ ಎಂಬ ದಿನ ಪತ್ರಿಕೆಯನ್ನು ಪ್ರಕಟಿಸಿದರೆಂಬ ಕಾರಣಕ್ಕಾಗಿ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಸಂಪಾದಕರಿಗೆ ೨೫ ರೂ. ದಂಡ ಅಥವಾ ಎರಡು ವಾರ ಸಾದಾ ಸಜಾ ವಿಧಿಸಲಾಗಿದೆ

SREE GANESH
TALKIES
WAR AND PEACE
LAST FOUR DAYS
Daily Shows at 2-30 and 6-45 P.M.

ನರ್ಸರಿ ಸ್ಕೂಲ್ ಉಪಾಧ್ಯಾಯಿನಿಯರ ಶಿಕ್ಷಣ ಕೇಂದ್ರ

ನಗರದ ದಿವಾನ್ಸ್ ರೋಡಿನಲ್ಲಿರುವ
ಶ್ರೀ ಜಗದಂಬಾ ಶಿಶುವಿಹಾರದಲ್ಲಿ
11-3-57ರಿಂದ ಪ್ರಾರಂಭವಾಗಿದೆ
ಸೇರಲಪೇಕ್ಷಿಸುವ ಮಹಿಳೆಯರು ಕೂಡಲೆ
ವ್ಯವಸ್ಥಾಪಕರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು
ಕೋರಲಾಗಿದೆ
ಶ್ರೀ ಕೃಷ್ಣಮೂರ್ತಿ
ವ್ಯವಸ್ಥಾಪಕ

Edited, Printed and Published by A. R. Nagarajan at Sadhvi Press D Subbiah Road, Mysore

[illegible] ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೮] SADHVI : WEDNESDAY 20-3-1957 ಮೈಸೂರು : ಬುಧವಾರ ೨೦—೩—೧೯೫೭ : [ಸಂಚಿಕೆ : ೨೩೦

ಸಂಸ್ಥಾನದ ಆಯವ್ಯಯದಲ್ಲಿ ೧೨ ಕೋಟಿ ರೂ. ಖೋತಾ

ಂದ್ರ ಆಯವ್ಯಯದಲ್ಲಿ ದಿನಕ್ಕೆ ೧ ಕೋಟಿ. ರೂ ಖೋತಾ

ಹೊಸ ತೆರಿಗೆಗಳು ಯಾವುವೂ ಇಲ್ಲ

ಕೇಂದ್ರ ಅರ್ಥಿಕ ಮಂತ್ರಿ ಶ್ರೀ ಟಿ ಟಿ ಕೃಷ್ಣಾಚಾರಿಯವರು ನೆನ್ನೆ ಲೋಕಸಭೆಯಲ್ಲಿ ಈ ಲಿನ ಆಯವ್ಯಯವನ್ನು ಮಂಡಿಸಿದರು ಅದ ಪ್ರಕಾರ ಈ ವರ್ಷದಲ್ಲಿ ಒಟ್ಟು ೩೩೫ ಕೋಟಿ ಖೋತಾ ಬರುವುದು ರೆವಿನ್ಯೂ ಬಾಬು ದಲ್ಲೇ ೫೬||| ಕೋಟಿ ರೂ ಖೋತಾ ಬರು ವು ಈ ಸಲ ಹಲವು ವಿಶೇಷ ಕಾರಣಗಳಿ ಗಿ ರಕ್ಷಣಾ ಇಲಾಖಾ ಬಾಬಿಗೆ ೪೯||| ಕೋಟಿ ರೂ ಹೆಚ್ಚು ಧನವನ್ನು ನೀಡಲಾಗಿದೆ ರಾಷ್ಟ್ರ ಣ ಮತ್ತು ಸಮಾಜ ಸೇವಾ ಕಾರ್ಯಗಿ ಕ್ಕದ ಸಿವಿಲ್ ಆಡಳಿತ ಇಲಾಖೆಗೆ ೪೭||| ಟಿ ರೂ ಹೆಚ್ಚಾಗಿ ನಿಗದಿ ಮಾಡಲಾಗಿದೆ ಂತ ಸರ್ಕಾರಗಳಿಗೆ ಸಾಲಗಳು ಮತ್ತು ಧ ಕಾರ್ಯಗಳ ವೆಚ್ಚವು ಈ ವರ್ಷ ೭೭೨ ಟಿ ರೂ ಆಗುವುದು

ಕೃಷ್ಣಮಾಚಾರಿಯವರು ಭಾಷಣ ಮಾಡಿ ದಲ್ಲಿ ಯಾವ ಹೊಸ ತೆರಿಗೆಗಳನ್ನೂ ಹಾಕಿ ದಿ ದೂ ಎದರೆ ಮೇ ತಿಂಗಳಲ್ಲಿ ಹೊಸ ಸರ್ಕಾ ದ ವಿಷಯದಲ್ಲಿ ಕ್ರಮ ಕೈಗೊಳ್ಳಬಹುದೇ ತೀರಿ ಜನರು ಹೆಚ್ಚಿನ ರಪ್ಪು, ಕಡಿಮೆ ಆ ಮತ್ತು ಇತರ ತ್ಯಾಗಗಳಿಗೆ ಸಿದ್ಧರಾಗಿರಬೇಕೆಂ ಮನವಿ ಮಾಡಿಕೊಂಡಿರುವರು

ವಿಧಾನಸೌಧ ಸಮಿತಿ ವರದಿ ಕಟಣೆಯಿಂದ ಕ್ರಿಯಾಲೋಪ

ಧಾನ ಪರಿಷತ್ತಿನಲ್ಲಿ ಎಂ. ಪಿ. ಎಲ್ ಶಾಸ್ತ್ರಿಗಳ ಆಕ್ಷೇಪಣೆ

ಬೆಂಗಳೂರು ೨೦

ನ್ನೆ ವಿಧಾನ ಪರಿಷತ್ತಿನ ಸಭೆ ಆರಂಭವಾ ಗ, ಶ್ರೀ ಎಂ ಪಿ ಎಲ್ ಶಾಸ್ತ್ರಿಗಳು ಮಾ ಡಿ ಸರ್ಕಾರದವರು ವಿಧಾನಸೌಧದ ವಿಚಾ ಸಮಿತಿಯವರ ವರದಿಯನ್ನು ಪ್ರಕಟಿಸಿ ಸ ಸವಲತ್ತಿನ ಹಕ್ಕಿಗೆ ಲೋಪ ತಂದಿದ್ದಾರೆಂ ಆಕ್ಷೇಪಿಸಿದರು

ಸನ ಸಭೆಗಳಿಂದ ರಚಿತವಾದ ಅಂದಾಜು ತಿಯವರ ಶಿಫಾರಸಿನಂತೆ ನೇಮಿಸಲಾದ ಸ ಯ ವರದಿಯನ್ನು ಮೊದಲು ಶಾಸನ ಸಭೆ ಮುಂದೆ ಮಂಡಿಸಬೇಕಾಗಿತ್ತೆಂದೂ ರಾಜ ಉದ್ದೇಶಕ್ಕಾಗಿ ವರದಿಯನ್ನು ಉಪಯೋಗಿ ಲಾಗಿದೆಂದೂ ಅವರು ಹೇಳಿ, ವರದಿಯ ಚರ್ಚೆ ದರೂ ಅವಕಾಶ ಮಾಡಿಕೊಡಬೇಕೆಂ ಅಧ್ಯಕ್ಷರನ್ನು ಪ್ರಾರ್ಥಿಸಿದರು. ಸಚಿವ ಕಡಿ ಳ್ ಮಂಜಪ್ಪನವರು ಆ ವಿಷಯವನ್ನು ಪರಿ ಸುವುದಾಗಿ ಭರವಸೆಯಿತ್ತರು.

ವಿ ಗಿರಿಯವರ ಪರಾಜಯ

ಂದ್ರ ಸರ್ಕಾರದ ಮಾಜಿ ಸಚಿವ ಶ್ರೀ ವಿ ರಿಯವರು ಆಂಧ್ರದ ಪಾರ್ವತಿಪುರ ಕ್ಷೇತ್ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ೫೬೫ ಓಟುಗಳಿಂದ ಪರಾಜಿತರಾಗಿ.

ಈ ಸಾಲಿನ ರೈಲ್ವೆ ಆಯವ್ಯಯದಲ್ಲಿ ೨೧|| ಕೋಟಿ. ರೂ ಉಳಿತಾಯ

ಪ್ರಯಾಣ ದರದಲ್ಲಿ ಬದಲಾವಣೆ ಇಲ್ಲ, ನೆ ೬ ತಿಂಗಳಲ್ಲಿ ಸಾಗಾಣಿಕೆ ದರಗಳ ಪುನರ್ವಿಮರ್ಶೆ

ನೆನ್ನೆ ಲೋಕಸಭೆಯಲ್ಲಿ ಈ ಸಾಲಿನ ರೈಲ್ವೆ ಆಯವ್ಯಯವನ್ನು ರೈಲ್ವೆ ಮಂತ್ರಿ ಶ್ರೀ ಜಗಜೀವನರಾಂರವರು ಮಂಡಿಸಿದರು. ಅದರ ಪ್ರಕಾರ ಈ ಸಾಲಿಗೆ ಒಟ್ಟು ೩೬೮|| ಕೋಟಿ ರೂ ಆದಾಯ, ೩೪೭.೭೭ ಕೋಟಿ ರೂ ವೆಚ್ಚವಾಗಿ ೨೧.೪೩ ಕೋಟಿ ರೂ ನಿವ್ವಳ ಉಳಿತಾಯವನ್ನು ನಿರೀಕ್ಷಿಸಲಾಗಿದೆ ಎರಡನೆಯ ಪಂಚ ವಾರ್ಷಿಕ ಯೋಜನೆಯ ಕಾರ್ಯಗಳಿಗಾಗಿ ಈ ಸಾಲಿನಲ್ಲಿ ೧೭೬ ಕೋಟಿ ರೂ, ದಿನಚರಿ ಆರ್ಡರುಗಳಿಗಾಗಿ ೨೮೪.೬೩ ಕೋಟಿ ರೂ ಮತ್ತು ವಿವಿಧ ದರ್ಜೆಯ ನೌಕರರ ಉದ್ದೇಶಗಳ ಪುನರ್ವ್ಯವಸ್ಥೆಗಾಗಿ ೩.೨ ಕೋಟಿ ರೂ ಗಳನ್ನು ನಿಗದಿ ಮಾಡಲಾಗಿದೆ.

ಈ ಸಾಲಿನಲ್ಲಿ ಪ್ರಯಾಣಿಕರಿಂದ ಬರುವ ವರಮಾನವು ೧೧೯ ಕೋಟಿ ರೂ, ಸಾಮಾನು ಸರಂಜಾಮುಗಳ ಸಾಗಾಣಿಕೆಯಿಂದ ೨೨೦ ಕೋಟಿ ರೂ ಮತ್ತು ಸಾಗಾಣಿಕೆಯ ದ ೨೪ ಕೋಟಿ ರೂ ಗಳು ಬರುವುವೆಂದು ನಿರೀಕ್ಷಿಸಲಾಗಿದೆ ಕಳೆದ ಸಾಲಿಗಿಂತ ಈ ಸಾಲಿನಲ್ಲಿ ೧೮|| ಕೋಟಿ ರೂ ಹೆಚ್ಚು ಆದಾಯವು ಬಂದರೂ, ಉಳಿತಾಯದಲ್ಲಿ ೫|| ಕೋಟಿ ರೂ ಕಡಿಮೆಯಾಗಿದೆ

ಶ್ರೀ ಜಗಜೀವನರಾಂರವರು ಆಯವ್ಯಯದ ಬಗ್ಗೆ ಮಾತನಾಡಿ ಕಳೆದ ಸಾಲಿನಲ್ಲಿ ಜನರಿಗೆ ಒದಗಿಸಲಾದ ಸೌಕರ್ಯಗಳನ್ನೂ, ಇಲಾಖೆಯ ನಾನಾ ಮುಖ ಪ್ರಗತಿಯನ್ನೂ ವಿವರಿಸಿದರು ಪ್ರಯಾಣಿಕರ ದರಗಳನ್ನು ಈಗ ಬದಲಾಯಿಸುವುದಿಲ್ಲವೆಂದೂ, ಸಾಗಣೆ ದರಗಳನ್ನು ಮೆ ತಿಂಗಳ ನಂತರ ಪುನರ್ವಿಮರ್ಶಿಸಲಾಗುವುದೆಂದೂ ಹೇಳಿ ಶ್ರೀ ಎ ರಾಮಸ್ವಾಮಿ ಮೊದಲಿಯಾರರ ಅಧ್ಯಕ್ಷತೆಯಲ್ಲಿ ದರಗಳ ಪುನರ್ವಿಮರ್ಶೆಗೆ ಸಲಹೆ ಮಾಡಲು ನೇಮಿಸಿದ್ದ ಸಮಿತಿಯ ವರದಿಯನ್ನು ನಿರೀಕ್ಷಿಸುತ್ತಿರುವುದಾಗಿ ಹೇಳಿದರು

ಕಳೆದ ವರ್ಷ ರೈಲ್ವೆಗಳಲ್ಲಿ ಸಾಗಿಸಲಾದ ಸಾಮಾನುಗಳ ತೂಕವು ಹಿಂದಿನ ವರ್ಷಕ್ಕಿಂತ ಶೇ|| ೧೧ರಷ್ಟು ಹೆಚ್ಚಿದ್ದಿತು ಅದನ್ನು ಈ ಸಾಲಿನಲ್ಲಿ ಶೇ|| ೧೧ರಿಂದ ೨೦ಕ್ಕೆ ಏರಿಸುವ ಯೋಜನೆಯಿದೆ ಪ್ರಯಾಣಿಕರಿಗೆ ಸರ್ವ ರೀತಿಯ ನೆರವು ದೊರಕಿಸಿಕೊಡಲು ಪ್ರತಿ ರೈಲ್ವೆ ವಿಭಾಗದ ಮುಖ್ಯ ನಿಲ್ದಾಣಗಳಲ್ಲೂ ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಲಾಗುವುದು ಕಳ್ಳತನಗಳು ಕಳೆದ ವರ್ಷಕ್ಕಿಂತ ಈಗ ದಮ್ಮ ಕಮ್ಮಿಯಾಗಿದೆ ರೈಲ್ವೆ ಎಂಜಿನ್ನುಗಳು ಮತ್ತು ಗಾಡಿಗಳ ಬಗ್ಗೆ ಸ್ವಪರಿಪೂರ್ಣತೆಯನ್ನು ಪಡೆಯಲು ಯತ್ನಿಸಲಾಗುತ್ತಿದೆ-ಎಂದು ಅವರು ತಿಳಿಸಿದರು

ನಿಧನ

ನಗರದಲ್ಲಿರುವ ಮಂ.ಮತ್ತು ಇಲಾಖಾ ನಂಜನಗೂಡು ಸಬ್ ಡಿವಿಜನ್ ಕಛೇರಿಯ ಅಸಿಸ್ಟೆಂಟ್ ಶ್ರೀ ಟಿ ರಾಮಾಚಾರ್ಯರ ತಂದೆ ಶ್ರೀ ಕೃಷ್ಣಾಚಾರ್ಯರು ಕಳೆದ ಗುರುವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ನಂಬೂದ್ರಿಪಾದ್ ಕೇರಳದ ಮುಖ್ಯಮಂತ್ರಿಯಾಗುವರೇ?

ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿಮಂಡಲವು ರಚಿತವಾದರೆ ಆಗ ಅಲ್ಲಿನ ಕಮ್ಯೂನಿಸ್ಟ್ ನಾಯಕ ಶ್ರೀ ಇ ಎಂ ಎಸ್ ನಂಬೂದ್ರಿಪಾದ್‌ರವರು ಮುಖ್ಯ ಮಂತ್ರಿಗಳಾಗುವರೆಂದು ಹೇಳಲಾಗಿದೆ. ಅವರು ಅಖಿಲ ಭಾರತ ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರು ಅವರು ಹಿಂದೆ ಪಕ್ಷದ ಕಾರ್ಯದರ್ಶಿಯಾಗಿಯೂ ಇದ್ದರು ಅವರು ನೀಲೇಶ್ವರದಿಂದ ಕೇರಳ ಶಾಸನಸಭೆಗೆ ಆರಿಸಿಬಂದಿದ್ದಾರೆ

ಮದುವೆ ಸಂಭ್ರಮದಲ್ಲಿ ಇರಿತದಿಂದ ಹೆಂಗಸಿನ ಕೊಲೆ

ಬೆಂಗಳೂರಿನ ಸಿವಿಲ್ ಪ್ರದೇಶದ ಸುಬ್ಬ್ರಾಜೀ ಕುಂಟೆಯ ನಿವಾಸಿ ಮುನಿಯಮ್ಮ ಎಂಬಾಕೆಯು ಮೊನ್ನೆ ರಾತ್ರಿ ತನ್ನ ಮಗಳ ಮದುವೆಯ ಸಂಭ್ರಮದಲ್ಲಿದ್ದಾಗ ಅವಳ ಮೈದುನ ರಂಗಪ್ಪ ಎಂಬಾತನು ಆಕೆಯನ್ನು ಚೂರಿಯಿಂದ ಇರಿದನೆಂದೂ, ತಕ್ಷಣವೇ ಆಕೆಯನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸಿದರೂ ಫಲವಾಗದೆ ಮೃತಪಟ್ಟಳೆಂದೂ ವರದಿಯಾಗಿದೆ ಮುನಿಯಮ್ಮನ ಪತಿಯು ಜೀವಂತನಾಗಿದ್ದಾಗ ತನಗೆ ಆಗಾಗ್ಗೆ ಕೊಡುತ್ತಿದ್ದ ದುಡ್ಡು ಕಾಸನ್ನು ಅತನ ಮರಣಾನಂತರ ಮುನಿಯಮ್ಮನು ನಿಲ್ಲಿಸಿದುದರಿಂದ ರಂಗಪ್ಪನು ಕೋಪಗೊಂಡು ಈ ರೀತಿ ಮಾಡಿದನೆಂದೂ ಹೇಳಲಾಗಿದೆ

ಯುವರಾಜಾ ಕಾಲೇಜು ಹಿರಿಯ ವಿದ್ಯಾರ್ಥಿಗಳಿಗೆ ಸತ್ಕಾರ

ಯುವರಾಜಾ ಕಾಲೇಜಿನ ಸೀನಿಯರ್ ತರಗತಿ ವಿದ್ಯಾರ್ಥಿಗಳ ಗೌರವಾರ್ಥವಾಗಿ ನಾಳಿದ್ದು ಸಂಜೆ ೬ ಗಂಟೆಗೆ ಕಾಲೇಜಿನಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿದೆ ವಿದ್ಯಾರ್ಥಿಗಳು ಇಂದು ಮತ್ತು ನಾಳೆ ಕೆಲಸದ ವೇಳೆಯಲ್ಲಿ ಕಾಲೇಜಿಗೆ ಬಂದು ಆಹ್ವಾನ ಪತ್ರಿಕೆಗಳನ್ನು ಪಡೆಯಬೇಕೆಂದು ಸಮಾರಂಭದ ವ್ಯವಸ್ಥಾಪಕ ಮಂಡಲಿಯ ಕಾರ್ಯದರ್ಶಿಯವರು ಕೋರಿದ್ದಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೧೫ ಆರ್ ವಾಸುದೇವಮೂರ್ತಿ-ದೇವರ ನಾಮಗಳು ೭-೩೦ ಮತ್ತು ೮-೧೫ ಬಿ. ಪಿ ವಿಶ್ವೇಶ್ವರಯ್ಯ-ಕಾವ್ಯ ವಾಚನ ಮಧ್ಯಾಹ್ನ ೧೨ ಆರ್ ವಾಸುದೇವಮೂರ್ತಿ-ಗಾಯನ ೧೨.೩೦ ಕೆ ಜೆ. ವೆಂಕಟಾಚಾರ್-ಪಿಟೀಲು ೧ ಮತ್ತು ಸಂಜೆ ೫-೩೦ ಲಲಿತಾ ಶಿವರಾಂ ಉಭಯಕರ್-ಹಿಂದೂಸ್ತಾನಿ ಗಾತ್ರ ಸಂಗೀತ ೧-೫೦ ನಿಲಯ ವಿದ್ಯಾಂಸರಿಂದ ಗಾಯನ ೬-೧೫ ಸಂಗೀತ ಪಾಠ ಸಂಜೆ ೬-೫ ವಿರಾಮ ಸಂಗೀತ ೬-೨೦ ಲಿಂಗಪ್ಪ ಮತ್ತು ಬೇಲೂರಮ್ಮ-ಜಾನಪದ ಗೀತೆಗಳು ೬.೩೦ ಗ್ರಾಮಸ್ಥರಿಗಾಗಿ. ೭.೩೦ ಶತವರ್ಷ ಪ್ರಸಂಗ ಆ ಕೆ. ಜೆ ವೆಂಕಟಾಚಾರ್-ಪಿಟೀಲು. ೮-೩೦ ನಿಮ್ಮ ಮೆಚ್ಚಿನ ಗೀತೆಗಳು ೯-೧೫ ಪ್ರಜಾಪ್ರಭುತ್ವ ಮತ್ತು ಸ್ವತಂತ್ರ ಪತ್ರಿಕೋದ್ಯಮ: ಪೋತನ್ ಜೋಸೆಫ್‌ರವರಿಂದ ಭಾಷಣ ೯.೩೦ ರಾಷ್ಟ್ರೀಯ ಕಾರ್ಯಕ್ರಮ

ಸಂಸ್ಥಾನದ ಆಯವ್ಯಯದಲ್ಲಿ ೧೧ ಕೋಟಿ ೯೬ ಲಕ್ಷ ಖೋತಾ

ಶಾಸನ ಸಭೆಗಳಲ್ಲಿ ಮಂಡನೆ

ಸ್ವಂ ಮು ಫೋ:] ಬೆಂಗಳೂರು ೨೦

ಈ ದಿನ ಮಧ್ಯಾಹ್ನ ಉಭಯ ಶಾಸನ ಸಭೆಗಳಲ್ಲಿ ಅರ್ಥಿಕ ಸಚಿವ ಶ್ರೀ ಟಿ ಮರಿಯಪ್ಪನವರು ಸಂಸ್ಥಾನದ ಹೊಸ ವರ್ಷದ ಸಂಗಾಮಿ ಆಯವ್ಯಯ ಅಂದಾಜಿನ ಪಟ್ಟಿಯನ್ನು ಮಂಡಿಸಿದರು ಅದರ ಪ್ರಕಾರ ಒಟ್ಟು ೪೯ ಕೋಟಿ, ೫ ಲಕ್ಷ, ೧೪ ಸಾವಿರ ರೂ. ಆದಾಯವು ಬಂದು, ಒಟ್ಟು ೬೧ ಕೋಟಿ, ೨ ಲಕ್ಷದ, ೧೦ ಸಾವಿರ ರೂ. ವೆಚ್ಚವಾಗಿ, ೧೧ ಕೋಟಿ ೯೬ ಲಕ್ಷ, ೯೬ ಸಾವಿರ ರೂ ಖೋತಾ ಬರುವ ನಿರೀಕ್ಷೆಯಿದೆ.

ಈ ಸಂಬಂಧವಾಗಿ ಒಂದು ಶ್ವೇತ ಪತ್ರವನ್ನು ಹೊರಡಿಸಲಾಗಿದೆ ನೂತನ ಶಾಸನಸಭೆಯು ರಚನೆಯಾದಮೇಲೆ ಈ ಅಂದಾಜುಗಳಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಬಹುದೆಂದು ಅದರಲ್ಲಿ ಸಮೂದಿಸಲಾಗಿದೆ. ಕೇಂದ್ರ ಸರ್ಕಾರದಲ್ಲಿಯೂ ಮತ್ತು ಸಾರ್ವಜನಿಕರಿಂದಲೂ ಮಾಡಿರುವ ಸಾಲಗಳ ತೀರ್ಮೆ ಮತ್ತು ಇತರ ನಿಧಿಗಳಿಗೆ ಸುಮಾರು ೬ ಕೋಟಿ ರೂ. ಹಣದ ಮೊಬಲಗನ್ನು ತೆಗೆದಿಡಲಾಗಿದೆ.

○ ಗ್ರಾಂಟ್ ಸ್ಕೂಲುಗಳ ಉಪಾಧ್ಯಾಯರ ವೇತನಗಳನ್ನು ಹೆಚ್ಚಿಸಲು ನಿಯಮಾವಳಿಗಳಲ್ಲಿ ಸೂಕ್ತ ಬದಲಾವಣೆ ಮಾಡಲಾಗುವುದೆಂದು ವಿದ್ಯಾ ಮಂತ್ರಿ ಕಡಿದಾಳ್ ಮಂಜಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

○ ಇನ್ನು ಎರಡು ವರ್ಷಗಳಲ್ಲಿ ಸಂಸ್ಥಾನದ ಬಸ್ಸುಗಳ ರಾಷ್ಟ್ರೀಕರಣವನ್ನು ಪೂರ್ಣಗೊಳಿಸಲಾಗುವುದೆಂದು ಗೃಹ ಮಂತ್ರಿ ಎಂ. ವಿ. ರಾಮರಾಯರು ತಿಳಿಸಿದರು.

○ ಸಂಸ್ಥಾನದಲ್ಲೆಲ್ಲಾ ಜ್ವರ ನಿರೋಧಕವನ್ನು ಜಾರಿಗೆ ತರಲು ೩ ಕೋಟಿ ರೂ ಖೋತಾ ಬರುವುದರಿಂದ ಈ ಬಗ್ಗೆ ಕೇಂದ್ರಸರ್ಕಾರದ ಸಹಾಯ ಪಡೆಯಲಾಗುತ್ತಿರುವುದೆಂದು ಆರೋಗ್ಯ ಮಂತ್ರಿ ಚಂದರೀಯವರು ತಿಳಿಸಿದರು.

ಮುಂದಿನ ತಿಂಗಳು ೧೦ನೇ ತಾರೀಖಿನ ಒಳಗೆ ಹೊಸದಾಗಿ ಚುನಾಯಿತರಾಗಿರುವ ಕಾಂಗ್ರೆಸ್ ಶಾಸನಸಭಾ ಸದಸ್ಯರ ಸಭೆಯು ಸೇರಿ ತಮ್ಮ ನಾಯಕರನ್ನು ಆರಿಸುವರೆಂದು ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಹೇಳಿದ್ದಾರೆ

ಹಿಂದೂ ಮಹಾ ಸಭಾಧ್ಯಕ್ಷ ಚಟರ್ಜಿಯವರ ರಾಜೀನಾಮೆ

ಅಖಿಲ ಭಾರತ ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಎನ್ ಸಿ ಚಟರ್ಜಿಯವರು ಅನಾರೋಗ್ಯದ ನಿಮಿತ್ತ ರಾಜೀನಾಮೆ ಕೊಡುವರೆಂದು ಹೇಳಲಾಗಿದೆ.

ಸಟ್ಟಾ ಜೂಜಾಟಕ್ಕಾಗಿ ದಂಡ

ನಗರದ ನಜರ್‌ಬಾದ್ ಮೊಹಲ್ಲಾ ಕಾಟೂಟಗೇರಿಯಲ್ಲಿ ಸಟ್ಟಾ ಜೂಜಾಡುತ್ತಿದ್ದ ರಾಜು ಎಂಬುವನ ಮೇಲೆ ನಜರ್‌ಬಾದ್ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ದ್ವಿತೀಯ ನಗರ ನ್ಯಾಯಾಧೀಶರು ನೆನ್ನೆ ಆತನಿಗೆ ೧೫ ರೂ. ದಂಡ ವಿಧಿಸಿದರು.

ಶಾಸನ ಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕಾಗಿ ವಂದನೆ

ವಿರೋಧ ಪಕ್ಷದವರಿಂದ ಸರ್ಕಾರದ ಆಡಳಿತದ ಲೋಪದೋಷಗಳ ಖಂಡನೆ

ಬೆಂಗಳೂರು ೨೦

ನೆನ್ನೆ ದಿನ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ರಾಜ್ಯಪಾಲರ ಭಾಷಣದ ಬಗ್ಗೆ [illegible]ಫಲವಾದ ಚರ್ಚೆಗಳಾದುವು. ಕೊನೆಯಲ್ಲಿ ಅವರಿಗೆ ವಂದನೆ ಸಲ್ಲಿಸುವ ನಿರ್ಣಯವು ವಿಧಾನ ಸಭೆಯಲ್ಲಿ ಬಹುಮತದಿಂದ ಅಂಗೀಕೃತವಾಯಿತು. ಪರಿಷತ್ತಿನಲ್ಲಿ ಚರ್ಚೆ ನಡೆಯುತ್ತಿದೆ. ಶ್ರೀ ಹುಚ್ಚಮಾಸ್ತಿಗೌಡರು ರಾಜ್ಯಪಾಲರಿಗೆ ವಂದನೆ ಸಲ್ಲಿಸುವ ನಿರ್ಣಯವನ್ನು ಮಂಡಿಸಿದ ವೇಳೆ ವಿರೋಧ ಪಕ್ಷದ ಶ್ರೀಗಳಾದ ಎಸ್. ಶ್ರೀನಿವಾಸಯ್ಯಂಗಾರ್, ಬಿ. ಪಿ. ಕದಂ ಮತ್ತು ಎಸ್. ಗೋಪಾಲಗೌಡರು ಹಲವು ತಿದ್ದುಪಡಿಗಳನ್ನು ಸೂಚಿಸಿ ಸರ್ಕಾರದ ಲೋಪದೋಷಗಳನ್ನು ಟೀಕಿಸಿದರು.

ರಾಜ್ಯಪಾಲರ ಭಾಷಣವು ಕೇವಲ ಆಡಳಿತ ವರದಿಯಂತೆ ಇದೆಯೆಂದೂ, ಚುನಾವಣೆಯಲ್ಲಿ ಕೋಮುವಾದವು ತಾಂಡವವಾಡುತ್ತಿತ್ತೆಂದೂ, ಕಾಂಗ್ರೆಸ್ಸಿನವರು ಲಂಚ ರುಷುವತ್ತುಗಳಲ್ಲಿ ತೊಡಗಿದ್ದರೆಂದೂ ಮತ್ತು ಆಹಾರದ ಬೆಲೆಯು ಏರುತ್ತಿರುವುದನ್ನು ತಡೆಗಟ್ಟಲು ಸರ್ಕಾರವು ವಿಫಲವಾಗಿದೆಯೆಂದೂ, ತಾವು ಕೊಟ್ಟ ಸಲಹೆಗಳೆಲ್ಲವೂ ಕಿವುಡಂಗಿತ್ತಂತಾಗಿದೆಯೆಂದೂ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್‌ರು ಟೀಕಿಸಿದರು.

ಶ್ರೀ ಬಿ. ಪಿ. ಕದಂರವರು ಮಾತನಾಡಿ ಇತ್ತೀಚಿನ ಗೇಣಿ ಶಾಸನದಿಂದ ಸರ್ಕಾರವು ರೈತರಿಗೆ ಬರಬೇಕಾದ ಸೌಲಭ್ಯವನ್ನು ನಿರಾಕರಿಸಿ ಪ್ರತಿಗಾಮಿಗಳ ಹಿತವನ್ನು ಸಾಧಿಸಿದೆಯೆಂದೂ ಸರ್ಕಾರಿ ಯೋಜನೆಗಳೆಲ್ಲವೂ ವಿಫಲವಾಗಿರುವುವೆಂದೂ ನುಡಿದರು.

ಶ್ರೀ ಎಸ್. ಗೋಪಾಲಗೌಡರು ಮಾತನಾಡಿ ದೇಶದಲ್ಲಿ ತಾಂಡವವಾಡುತ್ತಿರುವ ನಿರುದ್ಯೋಗವು ಪರಿಹಾರವಾಗಿಲ್ಲವೆಂದೂ, ಆಹಾರದ ಉತ್ಪತ್ತಿ ಹೆಚ್ಚಿದೆಯೆಂಬುದು ಎಷ್ಟರಮಟ್ಟಿಗೆ ನಿಜವೆಂಬುದಕ್ಕೆ ಪೇಟೆಯಲ್ಲಿ ವಿಪರೀತವಾಗಿ ಏರುವ ಧಾನ್ಯಗಳ ಬೆಲೆಯೇ ಸಾಕ್ಷಿಯೆಂದೂ ಕಾಂಗ್ರೆಸ್ಸಿಗರು ತಾವೇ ಸರ್ಕಾರವೆಂಬಂತೆ ನಡೆದುಕೊಂಡು ಸರ್ಕಾರವನ್ನು ತಮ್ಮ ಕೈ ಕೂಸನ್ನಾಗಿ ಮಾಡಿಕೊಂಡಿದ್ದಾರೆಂದೂ ನುಡಿದರು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು ಮಾತನಾಡಿ ಲಕ್ಕವಳ್ಳಿ ಜಲಾಶಯದ ನಿರ್ಮಾಣದಲ್ಲಿ ಆಗುತ್ತಿರುವ ಅಕ್ರಮಗಳನ್ನು ತಪ್ಪಿಸಿದರೆ ಅಂತಹ ಎರಡು ಕಟ್ಟೆಗಳನ್ನು ಕಟ್ಟಬಹುದೆಂದು ಹೇಳಿದರು.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು ಮಾತನಾಡಿ, ಕೋಮುವಾರು ಭಾವನೆಯನ್ನು ನಾಶ ಮಾಡಲು ಯತ್ನಿಸದೆ ಜಾತ್ಯತೀತ [illegible] ರಾಷ್ಟ್ರದಲ್ಲೂ ಸರ್ಕಾರವು ಜಾತಿಯ ಆಧಾರದ ಮೇಲೆ ಓಟು ಪಡೆದಿದೆಯೆಂದು ಆಪಾದಿಸಿದರು.

ಸ್ವಾತಂತ್ರ್ಯ ಬಂದಾಗಿನಿಂದಲೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯೇ ನಡೆದಿಲ್ಲವೆಂದು ಶ್ರೀ ಬಿ. ಹುಚ್ಚೇಗೌಡರು ಟೀಕಿಸಿದರು.

ವಿಧಾನ ಪರಿಷತ್ತಿನಲ್ಲಿ ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು ಮಾತನಾಡಿ ಉಪಾಧ್ಯಾಯರುಗಳಿಗೆ ಸಾಕಷ್ಟು ಸೌಲಭ್ಯವನ್ನು ಒದಗಿಸಿಲ್ಲವೆಂದು ಹೇಳಿ ರಾಜ್ಯಪಾಲರ ಭಾಷಣವನ್ನು ಟೀಕಿಸಿದರು.

ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಮಾತನಾಡಿ ರೈತರಿಗೆ ಸರ್ಕಾರದಿಂದ ನ್ಯಾಯ ದೊರಕುವ ಭರವಸೆಯೇ ಇಲ್ಲವೆಂದೂ, ಶಾಸನವಿರೋಧದ ಬಗ್ಗೆ ಒಂದೊಂದು ಊರಿನಲ್ಲಿ ಒಂದೊಂದು ನೀತಿಯನ್ನನುಸರಿಸಿ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎಂಬಂತೆ ಸರ್ಕಾರದವರು ಮಾಡಿದ್ದಾರೆಂದೂ ಟೀಕಿಸಿದರು.

ಬಂಗಾಳದ ವಿಧಾನ ಸಭಾಧ್ಯಕ್ಷರ ಪರಾಜಯ

ಪಶ್ಚಿಮ ಬಂಗಾಳದ ವಿಧಾನ ಸಭಾಧ್ಯಕ್ಷ ಶ್ರೀ ಶೈಲಕುಮಾರ ಮುಖರ್ಜಿಯವರು ಮಹಾಚುನಾವಣೆಯಲ್ಲಿ ಕಮ್ಯೂನಿಸ್ಟ್ ಪ್ರತಿಸ್ಪರ್ಧಿ ಸಮರ ಮುಖರ್ಜಿ ಎಂಬುವರಿಂದ ಕೇವಲ ೧೪೦ ಓಟುಗಳಿಂದ ಸೋಲಿಸಲ್ಪಟ್ಟಿರುವರು.

ಕಳಲೆ ಲಕ್ಷ್ಮೀಕಾಂತಸ್ವಾಮಿ ರಥೋತ್ಸವ

ಕಳಲೆ ಶ್ರೀ ಲಕ್ಷ್ಮೀಕಾಂತಸ್ವಾಮಿ ರಥೋತ್ಸವವು ನಿನ್ನೆ ಬೆಳಗು ರಾತ್ರಿ ಪುಷ್ಪಗಳಿಂದಲೂ ಮತ್ತು ವಿದ್ಯುದ್ದೀಪಗಳಿಂದಲೂ ಅಲಂಕರಿಸಿ ಶ್ರೀಯವರ ತೇರಿನ ಉತ್ಸವವು ನಡೆಯಿತು. ಅರಮನೆ ಮತ್ತು ಚಾಮುಂಡಿ ವಿಹಾರದಿಂದ ಕಳುಹಿಸಲ್ಪಟ್ಟಿದ್ದ ೫೦೦ ಜರತಾರಿ ಉಪ್ಪಟಗಳನ್ನೂ ಮತ್ತು ಶಾಲುಗಳನ್ನೂ ಮೂಲಮೂರ್ತಿಗೂ ಮತ್ತು ಉತ್ಸವಮೂರ್ತಿಗೂ ಧರಿಸಲಾಗಿತ್ತು.

ತೆಪ್ಪೋತ್ಸವ

ನಾಳೆ ರಾತ್ರಿ ೮ ಘಂಟೆಗೆ, ಶ್ರೀ ಚೆಲುವಾಜಮ್ಮಣ್ಣಿಯವರು ಕಟ್ಟಿಸಿರುವ "ಶ್ರೀ ಚೆಲುವಾಂಬಾ ಪಟ್ಟಣ" ಎಂಬ ಕೆರೆಯಲ್ಲಿ ತೆಪ್ಪೋತ್ಸವವು ನಡೆಯುತ್ತದೆ. ಭಕ್ತ ಮಹಾಜನರು ಉತ್ಸವಕ್ಕೆ ದಯಮಾಡಿಸಿ ಶ್ರೀಯವರ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಎಂ. ಎಲ್. ಸುಬ್ರಹ್ಮಣ್ಯರಾಜೇ ಅರಸರು ಪ್ರಾರ್ಥಿಸುತ್ತಾರೆ.

ಶ್ರೀ ಲಕ್ಷ್ಮೀಕಾಂತ ಮೂಲವಿಗ್ರಹವನ್ನು ಜನಮೇಜಯರಾಯನು ಪ್ರತಿಷ್ಠೆ ಮಾಡಿಸಿ ಗ್ರಾಮಕ್ಕೆ "ವೇಣುಪುರಿ" ಅಥವಾ "ಕಳಲೆ" ಎಂದು ಹೆಸರು ಕೊಟ್ಟನೆಂದು ಶ್ರೀ ಕಪಿಲಾಕ್ಷೇತ್ರ ವೈಭವದಲ್ಲಿ ಬರೆದಿರುತ್ತಾರೆ. ಶಾ॥ ೧೪೩೩ನೇ ಸಿದ್ಧಾರ್ಥಿ ನಾಮ ಸಂವತ್ಸರದಲ್ಲಿ ಕಳಲೆ ಮೂಲಪುರುಷರಾದ ಶ್ರೀಕಾಂತವಡೆಯರು ಮತ್ತು ಇವರ ಸಹೋದರರಾದ ಶ್ರೀ ಕೃಷ್ಣ ವಡೆಯರವರು ಶ್ರೀ ಲಕ್ಷ್ಮೀಕಾಂತ ಉತ್ಸವ ವಿಗ್ರಹವನ್ನು ದ್ವಾರಕಾ ನಗರದಿಂದ ಕಳಲೆಗೆ ತಂದರೆಂದು ಗ್ರಂಥದಿಂದ ತಿಳಿದು ಬರುತ್ತದೆ.

ಫಲಿತಾಂಶವನ್ನು ತಪ್ಪಾಗಿ ಪ್ರಕಟಿಸಿದುದಕ್ಕಾಗಿ ಬಂಧನ

ಬಂಗಾಳದ ಮುಖ್ಯ ಮಂತ್ರಿ ಡಾ॥ ಬಿ. ಸಿ. ರಾಯ್‌ರವರನ್ನು ಮಹಮದ್ ಇಸ್ಮಾಯಿಲ್ ಎಂಬ ಮುಸ್ಲಿಂ ಸ್ಪರ್ಧಿಯು ಸೋಲಿಸಿದನೆಂಬ ಸುಳ್ಳು ಸುದ್ದಿಯನ್ನೂ ಮತ್ತು ವಿರೋಧ ಭಾಷಣ ಬೀರುವ ವರದಿಯನ್ನೂ ಪ್ರಕಟಿಸಿ ಕಲ್ಕತ್ತೆಯಲ್ಲಿ ಜನರ ಉದ್ರೇಕ ಮತ್ತು ಘರ್ಷಣೆಗಳಿಗೆ ಕಾರಣರಾದರೆಂಬ ಆಪಾದನೆಯ ಮೇಲೆ ಅಲ್ಲಿನ ಸ್ಥಳೀಯ ಉರ್ದು ಪತ್ರಿಕೆಯೊಂದರ ಸಂಪಾದಕ, ಮುದ್ರಕ ಮತ್ತು ಪ್ರಕಟನಕಾರರೂ ಸೇರಿ ಐದು ಜನರನ್ನು ಬಂಧಿಸಲಾಗಿದೆ.

ಜೀವನದ ಹರ್ಷವನ್ನು ಸವಿಯಿರಿ

ಹೆಂಗಸರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಸೆ. ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿಗಳು ಷಂಡತ್ವ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ, ಸಿಫಿಲಿಸ್, ಗೊನೋರಿಯಾ, ಪಾರ್ಶ್ವ ವಾಯು, ಅಂಧ ವಾಯು ಮತ್ತು ಎಲ್ಲ ವಿಧವಾದ ಪ[illegible]ಯ ಮೂತ್ರ ರೋಗಗಳಿಗೂ ಕಾರಣವಾಗಿವೆ. ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ॥ ರಾಮಾರಾವ್‌ರವರನ್ನು (ಲೈಂಗಿಕ ಪ್ರವೀಣ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ. ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆಯ ಕಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು. ನೂರಕ್ಕೆ ನೂರು ಖಾತರಿ ಕೊಡಲಾಗುವುದು.

ಇವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಗಳಿಸಿದಂತೆಯೇ. ಔಷಧಿಗಳನ್ನು ಗೌಪ್ಯವಾಗಿ ಕಳುಹಿಸಲಾಗುವುದು. ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ.

ರಾಮಾ ಮೆಡಿಕಲ್ ಹಾಲ್,
ಲೇನ್ ನಂ 1745 ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ [illegible]
ಮೂರನೇ ಅಟ್ಟದ),
ಮೈಸೂರು.

Edited, Printed and Published by
A. R. Nagarajan at Sadhvi Press,
Subbiah Road, Mysore

ವಿಧಾನ ಸೌಧ ವಿಚಾರಣಾ ಸಮಿತಿಯು ತನ್ನ ಮೇರೆ ಮೀರಿದೆ

ಹನುಮಂತಯ್ಯನವರಿಂದ ಮತ್ತೆ ಟೀಕೆ

ಬೆಂಗಳೂರು ೨೦

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ಪುನಃ ಒಂದು ದೀರ್ಘವಾದ ಹೇಳಿಕೆಯನ್ನಿತ್ತು, ವಿಧಾನಸೌಧದ ವಿಚಾರಣಾ ಸಮಿತಿಯು ತನಗೆ ಸರ್ಕಾರದವರು ನಿಯೋಜಿಸಿದ್ದ ವಿಧಾನದ ಎಲ್ಲೆಯನ್ನು ಮೀರಿ ಅನುಚಿತವಾದ ಮತ್ತು ಬೇಜವಾಬ್ದಾರಿಯುತವಾದ ಟೀಕೆಗಳನ್ನು ಮಾಡಿದೆಯೆಂದು ತಿಳಿಸಿದ್ದಾರೆ.

ತನ್ನ ವ್ಯಾಪ್ತಿಗೆ ಒಳಪಡದಿದ್ದರೂ ಸಮಿತಿಯು ಭವನದ ನಿವೇಶನ, ಗಾತ್ರ ಮತ್ತು ಶಿಲ್ಪಗಳ ಬಗ್ಗೆ ಬಹಳ ಕ್ಷುಲ್ಲಕವಾದ ಭಾಷೆಯನ್ನು ಪ್ರಯೋಗಿಸಿ ಟೀಕಿಸಿದೆ. ಇದನ್ನು ಅಲ್ಪ ಸಾಕ್ಷ್ಯ ಪಡೆದು ಮಾಡಲಾಗಿದೆ. ಈ ರೀತಿ ಎಲ್ಲೆ ಮೀರಿ ಸಮಿತಿಯು ಅಪ ಮಾರ್ಗವನ್ನು ಹಿಡಿದಿದೆಯೆಂದೂ ಅವರು ಹೇಳಿರುವರು. ಲೆಕ್ಕಪತ್ರಗಳು, ಮಜೂರಿ ದರಗಳು, ಕಾರ್ಯ ನಿರ್ವಹಣೆ [illegible] ವ್ಯಯದ ಅವಕಾಶ ಇವೇ ಮುಂತಾದ ಅಂಶಗಳಲ್ಲಿ ಮಾತ್ರ ವಿಚಾರಣೆ ನಡೆಸಲು ಸಮಿತಿಗೆ ಅಧಿಕಾರವಿತ್ತೆಂದು ಅವರು ತಿಳಿಸಿರುತ್ತಾರೆ.

ಸೂಯೆಜ್ ಕಾಲುವೆ ಶುಲ್ಕದ ಬಗ್ಗೆ ನೆಹರೂರವರೊಡನೆ ಸಮಾಲೋಚನೆ

ಸೂಯೆಜ್ ಕಾಲುವೆಯನ್ನು ಸಂಚಾರಕ್ಕೆ ತೆರೆದನಂತರ ಹಡಗುಗಳಿಂದ ಶುಲ್ಕವನ್ನು ವಸೂಲು ಮಾಡಬೇಕಾದ ವಿಧಾನವನ್ನು ರೂಪಿಸುವ ಬಗ್ಗೆ ಈಜಿಪ್ಟಿನ ಅಧ್ಯಕ್ಷ ನಾಸೆರರು ಪ್ರಧಾನಿ ನೆಹರೂರವರ ಸಲಹೆಯನ್ನು ಕೇಳಿದ್ದಾರೆಂದು ಅಲ್ಲಿನ ಭಾರತದ ರಾಯಭಾರಿಯವರು ತಿಳಿಸಿದ್ದಾರೆ. ಇದೇ ವಿಷಯವಾಗಿ ಅಮೆರಿಕ, ರಷ್ಯ, ಯುಗೋಸ್ಲಾವಿಯಾಗಳೊಡನೆ ಈಜಿಪ್ಟು ನಡೆಸುತ್ತಿರುವ ಮಾತುಕತೆಗಳಿಂದ ಕೊನೆಗೆ ಕಾಲುವೆ ಶುಲ್ಕದ ಒಂದು ನಿಧಿಯೇರ್ಪಟ್ಟು ಅದರಲ್ಲಿ ಒಂದು ಗೊತ್ತಾದ ಭಾಗವು ಮಾತ್ರ ಈಜಿಪ್ಟಿಗೆ ಸಲ್ಲುವ ರೀತಿಯಲ್ಲಿ ವ್ಯವಸ್ಥೆಯಾಗಬಹುದೆಂದು ಹೇಳಲಾಗಿದೆ.

JUST RELEASED FROM THE PRESS

AN AID TO BOTANY
(HISTOLOGY)
(For Intermediate Students)
★
HIGHER TRIGONOMETRY
AND SOLID GEOMETRY
(*Answers to Mysore University Question Papers B Sc. 1951-1956*)
—: Please Contact :—
Publishers :—
R. KRISHNASWAMI,
Paper & Stationery Merchants.
MYSORE

ಸಂಸ್ಥಾನ ಶಾಸನ ಸಭೆಯ

ಕಾಂಗ್ರೆಸ್ಸಿಗೆ ೧೪೬ ಸ್ಥಾನಗ

ಬೆಂಗಳೂರು

ಸಂಸ್ಥಾನದ ವಿಧಾನ ಸಭೆಯ ೨೦೮ ಸ್ಥಾ ಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ವರೆಗೆ ೧೪೬ ಸ್ಥಾನಗಳು ದೊರೆತಿವೆ. ಇನ್ನು ಸ್ಥಾನಗಳ ಫಲಿತಾಂಶವು 'ಮಾತ್ರ' ತಿಳಿಯ ಗಿದೆ.

ಸಂಸ್ಥಾನದಿಂದ ಲೋಕ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಇದುವರೆಗೆ ೨೧ ನಗಳು ದೊರೆತಿವೆ. ಇನ್ನು ಐದು ಸ್ಥಾನಗಳ ಫಲಿತಾಂಶವು ಪ್ರಕಟವಾಗಬೇಕಾಗಿದೆ.

ಭಾರತವು ಕಾಮನ್‌ವೆಲ್ತನ್ನು ತ್ಯಜಿಸುವುದೇ?

ಲೋಕಸಭೆಯಲ್ಲಿ ವಿದೇಶೀಯರ ಬಗ್ಗೆ [illegible] ವಿಷಯವಾಗಿ ಚರ್ಚೆ ನಡೆಯುತ್ತಿ ಭಾರತವು ಕಾಮನ್‌ವೆಲ್ತನ್ನು ತ್ಯಜಿಸಬೇಕೆಂದು ಕಮ್ಯೂನಿಸ್ಟರು ತೀವ್ರವಾಗಿ ಒತ್ತಾಯಪಡಿಸಿದಾಗ ಗೃಹ ಸಚಿವ ಗೋವಿಂದವಲ್ಲಭ ಪಂತರು, [illegible], ಈ ವಿಷಯವನ್ನು ಭಾರತವು [illegible] ಸದೇಕಾದ ಕಾಲವು ಅಸಂಭವವಲ್ಲವೆಂದು [illegible] ದರು.

SREE GAYATH
TALKIES
To-day & To-morrow only
TRAPEZE

From 22-3-57
M.G.M's
HIGH SOCIET
Starring:- Grace Kelly, Bin
Crosby and Frank Sinatr

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಸಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿ
ಅಶೋಕ ರಸ್ತೆ, ಮೈಸೂರು (Estd. 19

ರಣಜಿತ್ ಟಾಕೀಸ್
21-3-57 ನೇ ಗುರುವಾರದಿಂದ
ಅಮೋಘ ಪ್ರಾರಂಭ
ರಘುವೀರ್ ಚಿತ್ರ [illegible]
ಪೌರಾಣಿಕ ಹಿಂದಿ ಚಿತ್ರ
ಹರಿಹರ ಭಕ್ತಿ
ಪಾತ್ರ :- ತ್ರಿಲೋಕ್ ಕಪೂರ್, ಸಾಹು ಮೋದಕ್, [illegible], ದುರ್ಗಾ ಖೋಟೆ, ಉಲ್ಹಾಸ್, [illegible], ಮಾರುತಿ ಮುಂತಾದವರು

ಮನೆ ಮಾರಾಟಕ್ಕಿದೆ
ಮೈಸೂರು ಮಂಡಿ ಮೊಹಲ್ಲಾ ಮಧ್ಯ ಭಾಗದಲ್ಲಿ—ದೀಪ, ನಲ್ಲಿ ಇರುವ
ಅಚ್ಚುಕಟ್ಟಾದ ಮನೆ ಮಾರಾಟಕ್ಕಿದೆ
ಮೋಟಾರು ಷೆಡ್ಡು ಬಾಡಿಗೆಗೆ ಇದೆ
ಮೈಸೂರು ನಗರದ ಮಧ್ಯ ಭಾಗದಲ್ಲಿ, ದೊಡ್ಡಪೇಟೆಯಲ್ಲಿರುವುದು ಹೆಚ್ಚಿನ ವಿವರಗಳಿಗೆ
ಎ. ಶಂಕರಶೆಟ್ಟಿ ಅಂಡ್ ಸನ್ಸ್,
ಜ್ಯುಯೆಲರ್ಸ್ · ನ್ಯೂ [illegible] ಸರ್ಕಲ್ · ಮೈಸೂರು



ರಿಜಿಸ್ಟರ್ ನಂ. 790

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಪುಟ : ೧೫] SADHVI : THURSDAY 21—3—1957 ಮೈಸೂರು : ಗುರುವಾರ ೨೧—೩—೧೯೫೭ : [ಸಂಚಿಕೆ : ೨೩

ಈಜಿಪ್ಟಿಗೆ ಇಸ್ರೇಲಿನಿಂದ ಮತ್ತೆ ಯುದ್ಧದ ಬೆದರಿಕೆ -

ಮೈಸೂರು ಸಂಸ್ಥಾನದ ಆಯವ್ಯಯ

ಸಭೆಯಲ್ಲಿ ಅರ್ಥಿಕ ಸಚಿವರಿಂದ ವಿವರಣೆ

ಬೆಂಗಳೂರು ೨೧

ರ್ಥಿಕ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಉಭಯ ಶಾಸನ ಸಭೆಗಳಲ್ಲೂ ಪ್ರಸಕ್ತ ದಿನ ಆಯವ್ಯಯವನ್ನು ಮಂಡಿಸಿ ಅದರಲ್ಲಿ ಪ್ಪ ವರ್ಷದ ಮೊದಲ ನಾಲ್ಕು ತಿಂಗಳ ಅವಧಿ ಗೆ ಕೇವಲ ೧೨,೨೫,೬೯,೦೦೦ ರೂ. ಗಳನ್ನು ತ್ರ ಸಭೆಯು ಮಂಜೂರು ಮಾಡಬಹುದೆಂ ತಿಳಿಸಿದರು. ನೌಕರರ ಸಂಬಳದ ಮಟ್ಟದ ಪರಿಷ್ಕರಣೆಯ ಸಲುವಾಗಿ ಕೇಂದ್ರದಿಂದ ನಿಷ್ಕರ್ಷಿಸಲಾಗಿರುವ ೧೧ ಕೋಟಿ ರೂ. ಗಳನ್ನು ಆ ವ್ಯಯದ ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂದು ಸು ಹೇಳಿದರು.

ಈ ಸಾಲಿನಲ್ಲಿ ಸಾರ್ವಜನಿಕ ಸಾಲಗಳ ತೀ ಗಾಗಿ ೫ ಕೋಟಿ, ಕೇಂದ್ರದ ಸಾಲಕ್ಕಾಗಿ ೨ ಟಿ ೬೦ ಲಕ್ಷ ಮತ್ತು ಇತರ ಸಂಸ್ಥಾನಗಳೊ ಡನ ಸಾಲಕ್ಕಾಗಿ ೨೦ ಲಕ್ಷ ರೂ ಗಳನ್ನು ತೆಗೆ ದಿರಿಸಿದೆ. ವಿದ್ಯಾಭ್ಯಾಸಕ್ಕೆ ೧೦ ಕೋಟಿ ೮೦ ರೂ, ಆರೋಗ್ಯ ಇಲಾಖಾ ವೆಚ್ಚಕ್ಕೆ ೨ ಟಿ ೭೪ ಲಕ್ಷ, ಜನಾರೋಗ್ಯಕ್ಕಾಗಿ ೧ ಕೋ ೪ ಲಕ್ಷ, ವ್ಯವಸಾಯಕ್ಕಾಗಿ ೧ ಕೋಟಿ ೭೪ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ೧ ಕೋ ಲಕ್ಷ, ಸರ್ಕಾರಿ ಕೈಗಾರಿಕೆಗಳಿಗಾಗಿ ೧ ಟಿ ೮೪ ಲಕ್ಷ, ಪಶುಪಾಲನೆಗಾಗಿ ೭೭ ಲಕ್ಷ, ಪರಿ ಕಾರ್ಯಗಳಿಗೆ ೮೧ ಲಕ್ಷ, ಸಹಕಾರ ಕೆಗೆ ೬೫ ಲಕ್ಷ ಮತ್ತು ಸಾರ್ವಜನಿಕ ಕಾರ್ಯ ಕ್ಕೆ ೪ ಕೋಟಿ ೨೪ ಲಕ್ಷ ರೂ. ಗಳನ್ನು ವೆಚ್ಚ ಸಲು ಆಲೋಚಿಸಲಾಗಿದೆ.

ವರೆ ಇವುಗಳ ಪೈಕಿ ಯಾವುದನ್ನು ಬೇಕಾ ಮುಂದಿನ ಸರ್ಕಾರವು ತನ್ನ ನೀತಿಗನುಗು ಗಿ ಬದಲಾಯಿಸಬಹುದು. ಸ್ಥಳೀಯ ಸಂ ಗೆ ೨೧ ಲಕ್ಷ ರೂ, ಪುರಸಭೆಗಳಿಗೆ ೬೫ ಜಮೀನು ಅಡಮಾನ ಬ್ಯಾಂಕುಗಳಿಗೆ ಕ್ಷ, ಸಾಮೂಹಿಕ ಅಭಿವೃದ್ಧಿ ಕಾರ್ಯಗಳ ಲಕ್ಷ. ಸಹಕಾರ ಸಂಘಗಳಿಗೆ ೨೪ ಲಕ್ಷ ವರಮಾನದ ನೌಕರರ ಗೃಹ ನಿರ್ಮಾಣ ಲಕ್ಷ, ಗೃಹ ನಿರ್ಮಾಣ ಸಹಕಾರ ಸಂ ಗೆ ೧೫ ಲಕ್ಷ, ಕೈ ಮಗ್ಗದ ಅಭಿವೃದ್ಧಿಗಾಗಿ ಕ್ಷ ಮತ್ತು ಸರ್ಕಾರಿ ನೌಕರರಿಗೆ ಸಾಲಗಳ ೨೫ ಲಕ್ಷ ರೂ. ಗಳನ್ನು ತೆಗೆದಿಡಲಾಗಿದೆ. ದಾಗಿ ಸಚಿವರು ತಿಳಿಸಿದರು.

ಲೋಕಸಭೆಯಲ್ಲಿ ಕಾಂಗ್ರೆಸ್ಸಿಗೆ ಪೂರ್ಣ ಬಹುಮತ

ಇದುವರೆಗೆ ಪ್ರಕಟವಾಗಿರುವ ಲೋಕ ಸ ಚುನಾವಣಾ ಫಲಿತಾಂಶದ ಪ್ರಕಾರ ಕಾಂಗ್ರೆ ಸ್ ಮತ್ತು ಉಳಿದ ಎಲ್ಲಾ ವಿರೋಧ ಪ ಕ್ಷಗಳಿಗೂ ಒಟ್ಟು ೪೦ ಸ್ಥಾನಗಳು ಬಂದಿವೆ. ವಿಂದ ೫೦೦ ಮಂದಿ ಸದಸ್ಯರ ಸಭೆಯಲ್ಲಿ ಕಾಂ ಗ್ರೆಸ್ಸಿಗೆ ಸ್ಪಷ್ಟ ಬಹುಮತಕ್ಕಿಂತ ೧೧ ಸ್ಥಾ ನ ಹೆಚ್ಚಾಗಿ ದೊರೆತಿವೆ.

ವಿಧಾನ ಸೌಧದ ವರದಿ ಚರ್ಚೆಗೆ ಇದು ಸಕಾಲವಲ್ಲ

ವಿಧಾನ ಪರಿಷತ್ತಿನಲ್ಲಿ ಸಚಿವ ಕಡಿದಾಳರ ಹೇಳಿಕೆ

ಬೆಂಗಳೂರು ೨೧

ವಿಧಾನ ಸೌಧ ವಿಚಾರಣಾ ಸಮಿತಿಯ ವರದಿಯನ್ನು ಸಭೆಯ ಮುಂದೆ ಚರ್ಚೆಗೆ ಇಡಬೇಕೆಂದು ನೆನ್ನೆ ವಿಧಾನ ಪರಿಷತ್ತಿನಲ್ಲಿ ಬಂದ ಕೇಳಿಕೆಗೆ ನೆನ್ನೆ ಸಚಿವ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು ವರದಿಯ ಮೇಲಿನ ಚರ್ಚೆಗೆ ಇದು ಸಕಾಲವಲ್ಲವೆಂದೂ ಮತ್ತು ಅಹಿತಕರವೆಂದೂ ತಿಳಿಸಿದರು. ವರದಿಯಲ್ಲಿ ಸೂಚಿಸಿದಂತೆ ಹಲವು ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ತನಿಖೆ ನಡೆಸುತ್ತಿರುವಾಗ ಈ ಚರ್ಚೆಯು ಅದರ ಮೇಲೆ ಪ್ರಭಾವ ಬೀರಬಹುದೆಂದೂ ಮತ್ತೆ ಇನ್ನೂ ಹಲವು ವಿಷಯಗಳ ಬಗ್ಗೆ ಸರ್ಕಾರವು ನಿರ್ಧಾರವನ್ನು ಕೈಗೊಂಡಿಲ್ಲವಾದ ಪ್ರಯುಕ್ತ ಈಗ ಚರ್ಚೆಯು ನಡೆಯಕೂಡದೆಂದೂ ಅವರು ತಿಳಿಸಿದರು

ಏಷ್ಯದಿಂದ ಅಮೆರಿಕನರನ್ನು ಹೊರದೂಡಲು ಮಾವೋತ್ಸೆ ತುಂಗರ ಸಲಹೆ

ಏಷ್ಯದಲ್ಲಿ ಭದ್ರವಾಗಿ ಕಾಲೂರಿರುವ ಅಮೆರಿಕನರನ್ನು ಹೊರದೂಡಲು ಚೀಣಾ ಮತ್ತು ಜಪಾನುಗಳು ಒಂದಾಗಬೇಕೆಂದು ಇತ್ತೀಚೆಗೆ ಪೀಕಿಂಗಿಗೆ ಭೇಟಿಯಿತ್ತ ಜಪಾನಿ ಪಾರ್ಲಿಮೆಂಟ್ ನಿಯೋಗವೊಂದಕ್ಕೆ ಚೀಣದ ಅಧ್ಯಕ್ಷ ಮಾವೋತ್ಸೆ ತುಂಗರು ಸೂಚಿಸಿದುದಾಗಿ ಅದರ ನಾಯಕ ಜನರಲ್ ಅಕಿಯೋ ತಿಯೋರವರು ಹೇಳಿದ್ದಾರೆ. ಲ್ಯಾಟಿನ್ ಅಮೆರಿಕಾ ಮತ್ತು ಆಫ್ರಿಕಾ ದೇಶಗಳವರು ತಮ್ಮ ಪ್ರದೇಶಗಳಿಂದ ಹೇಗೆ ಅಮೆರಿಕನರನ್ನು ಓಡಿಸಲು ಹೋರಾಡುತ್ತಿದ್ದಾರೋ ಅದೇ ರೀತಿ ಚೀಣಾ ಜಪಾನುಗಳೂ ಮಾಡಬೇಕೆಂದು ಮಾವೋರವರು ತಿಳಿಸಿರುವುದಾಗಿ ಅವರು ಹೇಳಿರುವರು

ಮೊಹರಾದ ಪೆಟ್ಟಿಗೆಯಿಂದ ೧೧ ಲಕ್ಷ ರೂ. ಚಿನ್ನದ ಮಾಯ

ಅಸ್ಸಾಂ ಪ್ರಾಂತದ ದಿಂಬ್ರೂಗ್ ಎಂಬಲ್ಲಿನ ಪೊಲೀಸರು ಟೀ ಕೋರ್ಜ್ ಎಂಬ ಚೀಣೀಯನಿಂದ ವಶಪಡಿಸಿಕೊಂಡ ಆಸ್ತಿಯ ಪೈಕಿ ೧೧ ಲಕ್ಷ ರೂ ಬೆಲೆಯ ೯೪೨ ತೊಲ ಚಿನ್ನವನ್ನು ದಿಬ್ರೂಗಡ ಜಿಲ್ಲಾಧಿಕಾರಿಗಳು ಮೊನ್ನೆ ಹರಾಜು ಹಾಕಲು ಸಿದ್ಧಪಡಿಸಿಕೊಂಡು ಹರಾಜಿನ ಕಾಲದಲ್ಲಿ ಚಿನ್ನವನ್ನು ಹೊರತೆಗೆಯಲು ಮೊಹರಾದ ಪೆಟ್ಟಿಗೆಯನ್ನು ಒಡೆದಾಗ ಅದು ಖಾಲಿಯಿದ್ದುದು ಗೋಚರವಾಯಿತು. ಈ ಬಗ್ಗೆ ತನಿಖೆ ಸಾಗುತ್ತಿದೆ.

ಈ ಸಾಲಿನಲ್ಲಿ ಸತ್ಯಮಂಗಲಂ ರೈಲ್ವೆ ನಿರ್ಮಾಣದ ಸರ್ವೆ

ಮೊನ್ನೆ ಪ್ರಕಟವಾದ ರೈಲ್ವೆ ಆಯವ್ಯಯದಲ್ಲಿ ಈ ವರ್ಷ ನಾನಾ ರೈಲ್ವೆ ಭಾಗಗಳಲ್ಲಿ ಹೊಸ ಮಾರ್ಗಗಳ ನಿರ್ಮಾಣದ ಬಗ್ಗೆ ನಡೆಸಲಾಗುವ ಸರ್ವೆಗಳಲ್ಲಿ ಚಾಮರಾಜನಗರ-ಸತ್ಯಮಂಗಲ ರೈಲ್ವೆ ಮಾರ್ಗದ ಕಾರ್ಯವು ಸೇರಿದೆ.

ವಿಧಾನ ಪರಿಷತ್ತಿನ ಅಧ್ಯಕ್ಷ ಸುಬ್ರಹ್ಮಣ್ಯರವರ ನಿವೃತ್ತಿ

ಬೆಂಗಳೂರು ೨೧

ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ವಿಧಾನ ಸಭೆಗೆ ಚುನಾಯಿತರಾದ ಕಾರಣ ಶ್ರೀ ಟಿ ಸುಬ್ರಹ್ಮಣ್ಯರವರು ವಿಧಾನ ಪರಿಷತ್ತಿನ ಸದಸ್ಯತ್ವ ಮತ್ತು ಅಧ್ಯಕ್ಷತೆಯಿಂದ ನಿವೃತ್ತರಾಗಿರುವರು. ಹಾಗೆಯೇ ಶ್ರೀಗಳಾದ ಎಂ. ಎಂ. ಪಾಟೀಲ್, ಕೆ ಟಿ ಜಂಬಣ್ಣ, ಮೋರ್ಸ್, ಬಿ ಕೆ. ಪುಟ್ಟರಾಮಯ್ಯ ಮತ್ತು ಹೆಚ್. ಎಲ್. ತಿಮ್ಮಾಬೋವಿಯವರು ಕೆಳಮನೆಗೆ ಚುನಾಯಿತರಾದ ಕಾರಣ ಮೇಲ್ಮನೆಯಲ್ಲಿನ ಅವರ ಸದಸ್ಯತ್ವವು ನೆನ್ನೆಯಿಂದ ರದ್ದಾಗಿರುತ್ತದೆ.

ಕೇಂದ್ರ ಸಚಿವರ ಆಯ್ಕೆ

ಕೇಂದ್ರದ ವಿದೇಶಾಂಗ ವ್ಯವಹಾರಗಳ ಶಾಖೆಯಲ್ಲಿನ ಸಚಿವ ಡಾ|| ಸೈಯದ್ ಮಹಮೂದ್ ರವರು ಬಿಹಾರಿನ ಗೋಪಾಲಗಂಜ್ ಕ್ಷೇತ್ರದಿಂದಲೂ, ನಿತ್ಯೋಪಯುಕ್ತ ವಸ್ತುಗಳ ಇಲಾಖಾ ಮಂತ್ರಿ ಶ್ರೀ ನಿತ್ಯಾನಂದ ಕಾನುಂಗೋರವರು ಒರಿಸ್ಸಾದ ಕಟಕ್ ಕ್ಷೇತ್ರದಿಂದಲೂ ಲೋಕ ಸಭೆಗೆ ಚುನಾಯಿತರಾಗಿರುವರು. ಶ್ರೀ ಕಾನುಂಗೋರವರ ವಿರುದ್ಧ ಸ್ಪರ್ಧಿಸಿದ್ದ ಪಿ ಎಸ್ ಪಿ. ಪಕ್ಷದ ಶ್ರೀ ಸ ರಂಗಧರ ದಾಸರು ಪರಾಜಿತರಾಗಿರುವರು.

ಕೇಂದ್ರ ಸರ್ಕಾರದ ವ್ಯವಸಾಯ ಸಚಿವರಾದ ಶ್ರೀ ಪಂಜಾಬರಾವ್ ದೇಶಮುಖರು ಬೊಂಬಾಯಿ ಸಂಸ್ಥಾನದ ಅಮರಾವತಿ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾಗಿರುವರು.

ಸೇತುವೆಗಳ ಬಗ್ಗೆ ಸಲಹೆ ನೀಡಲು ಉನ್ನತ ಮಟ್ಟದ ಸಮಿತಿ

ದೇಶದಲ್ಲಿ ಸೇತುವೆಗಳ ಉಸ್ತುವಾರಿ ಮತ್ತು ರಕ್ಷಣೆ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಲು ಕೇಂದ್ರ ಜಲ ಮತ್ತು ವಿದ್ಯುತ್ ಸಮಿತಿಯ ಅಧ್ಯಕ್ಷ ಡಾ|| ಎ ಎನ್. ಖೋಸ್ಲೆರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗಿದೆ

ಖಾಸಗಿ ಸಂಸ್ಥೆಗಳ ಶಿಕ್ಷಕರ ನಿವೃತ್ತಿ ವಯಸ್ಸಿಗೆ ಮಿತಿ ಇಲ್ಲ

ಸರ್ಕಾರದಿಂದ ಸಹಾಯ ಪಡೆಯುತ್ತಿರುವ ಖಾಸಗಿ ಶಾಲೆಗಳ ಶಿಕ್ಷಕರ ನಿವೃತ್ತಿ ವಯಸ್ಸನ್ನು ಸರ್ಕಾರವು ನಿಗದಿ ಮಾಡಿಲ್ಲವೆಂದೂ, ಅದನ್ನು ೬೦ ವರ್ಷಕ್ಕೆ ಮಿತಿಗೊಳಿಸಬೇಕೆಂದು ವಿದ್ಯಾಧಿಕಾರಿಗಳು ಮಾಡಿದ್ದ ಸಲಹೆಯನ್ನು ಸರ್ಕಾರವು ಒಪ್ಪಿಲ್ಲವೆಂದೂ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ವಿಧಾನ ಸಭೆಯಲ್ಲಿ ಶ್ರೀ ಬಿ. ನಾರಾಯಣಸ್ವಾಮಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ವಯೋಮಿತಿಯು ಸರ್ಕಾರಿ ಶಾಲೆಗಳ ಉಪಾಧ್ಯಾಯರಿಗೆ ಮಾತ್ರ ಅನ್ವಯಿಸುವುದೆಂದು ಅವರು ನುಡಿದರು.

ಪಾಕಿಸ್ತಾನದ ಆಡಳಿತ ಪಕ್ಷವಾದ ಅವಾಮಿ ಲೀಗಿನ ಅಧ್ಯಕ್ಷತೆಗೆ ಮೌಲಾನಾ ಭಷಾನಿಯವರು ರಾಜೀನಾಮೆ ಸಲ್ಲಿಸಿದ್ದಾರೆಂದು ವರದಿಯಾಗಿದೆ.

ಈಜಿಪ್ಟಿನ ಮೇಲೆ ಯುದ್ಧ ಹೂ ವುದಾಗಿ ಇಸ್ರೇಲಿನ ಬೆದರಿಕೆ

ಅಕಾಬಾ ಕೊಲ್ಲಿಯಲ್ಲಿ ಇಸ್ರೇಲಿ ಹಡಗು ಸಂಚಾರಕ್ಕೆ ಅಡ್ಡಿ ಪಡಿಸಿದರೆ ತಾವು ಈಜಿಪ್ಟಿ ಮೇಲೆ ಮತ್ತೆ ಯುದ್ಧ ಮಾಡುವುದಾಗಿ ಇಸ್ರೇಲಿನ ಪ್ರಧಾನಿ ಡೇವಿಡ್ ಬೆನ್ ಗುರಿಯೋರವರು ತಿಳಿಸಿದ್ದಾರೆ.

ಕಾಶ್ಮೀರದ ಪ್ರಶ್ನೆ ಬಗ್ಗೆ ಭಾರತದ ನೀತಿ ಬದಲಾಗುವುದಿಲ್ಲ

ರಾಜ್ಯ ಸಭೆಯಲ್ಲಿ ಪ್ರಧಾನಿ ನೆಹರೂರವರ ಸ್ಪಷ್ಟೋಕ್ತಿ

ವಿಶ್ವ ಸಂಸ್ಥೆಯ ಮಧ್ಯಸ್ಥಗಾರ ಗುನ್ನಾರ್ ಜಾರಿಂಗರೊಡನೆ ಮಾತುಕತೆ ನಡೆಸಿದ ಮಾತ್ರಕ್ಕೆ ಕಾಶ್ಮೀರದ ಬಗ್ಗೆ ಭಾರತದ ನೀತಿಯು ಬದಲಾಗುವುದಿಲ್ಲವೆಂದೂ, ಅದನ್ನು ಈಗಾಗಲೇ ಸ್ಪಷ್ಟವಾಗಿ ಭದ್ರತಾ ಸಮಿತಿಯ ಮುಂದೆ ಪ್ರತಿಪಾದಿಸಲಾಗಿರುವುದೆಂದೂ, ಜಾರಿಂಗರು ಏನಾದರೂ ತಮಗೆ ಸಂಶಯಗಳಿದ್ದಲ್ಲಿ ಅವುಗಳನ್ನು ಪರಿಹರಿಸಿಕೊಳ್ಳಬಹುದೆಂದೂ ಪ್ರಧಾನಿ ನೆಹರೂರವರು ನೆನ್ನೆ ರಾಜ್ಯ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಕಾಮನ್‌ವೆಲ್ತ್ ಸಂಬಂಧವನ್ನು ಕಡಿದುಕೊಳ್ಳಬೇಕೆಂಬ, ಸದಸ್ಯರ ಕೋರಿಕೆಯನ್ನು ಪ್ರಧಾನಿಯವರು ಪ್ರಸ್ತಾಪಿಸಿ ಹಲವು ವೇಳೆ ನಮ್ಮ ಮನಸ್ಸಿಗೆ ಅಹಿತವಾಗುವ ಪ್ರಸಂಗಗಳುಂಟಾದರೂ ಮೂಲಭೂತವಾದ ನೀತಿಯನ್ನು ತ್ಯಜಿಸುವುದು ಸಾಧುವಲ್ಲವೆಂದು ಹೇಳಿ ಸದಸ್ಯರ ಕೇಳಿಕೆಯನ್ನು ನಿರಾಕರಿಸಿದರು

ಸರ್ಕಾರಿ ಸಂಸ್ಥೆಗಳ ಕಾರ್ಮಿಕರ ವೇತನ ಸಮಿತಿ ವರದಿ ನಿರೀಕ್ಷೆ

ಬೆಂಗಳೂರು ೨೧

ಸಂಸ್ಥಾನದ ಸರ್ಕಾರಿ ಸಂಸ್ಥೆಗಳಲ್ಲಿನ ಕಾರ್ಮಿಕರ ವೇತನವನ್ನು ಹೆಚ್ಚಿಸುವ ಬಗ್ಗೆ ಸರ್ಕಾರವು ಆದಷ್ಟು ಬೇಗನೆ ನಿರ್ಧಾರ ಕೈಗೊಳ್ಳಲು ಇಚ್ಛಿಸಿದ್ದಾರೆಂದೂ, ಈ ಬಗ್ಗೆ ಸಲಹೆ ನೀಡಲು ರಚಿತವಾಗಿದ್ದ ಸಮಿತಿಯ ವರದಿಯು ಸಧ್ಯದಲ್ಲಿಯೇ ಬರಬಹುದೆಂದೂ, ಅನಂತರ ತೀರ್ಮಾನ ಕೈಗೊಳ್ಳಲಾಗುವುದೆಂದೂ ಅರ್ಥಿಕ ಸಚಿವ ಶ್ರೀ ಟಿ. ಮರಿಯಪ್ಪನವರು ನೆನ್ನೆ ವಿಧಾನ ಸಭೆಯಲ್ಲಿ ತಿಳಿಸಿದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗಾಂಧಿ ಕಥಾವಳಿ. ೭-೧೫ ಬಿ. ಪಿ ರಾಜಲಕ್ಷ್ಮಿ ಕನ್ನಡ ಗೀತೆ ೭-೩೦ ಹಿಂದಿ ಶಿಕ್ಷಣ. ೮-೧೫ ರಿಕಾರ್ಡುಗಳು ಮಧ್ಯಾಹ್ನ ೧೨ ಮತ್ತು ಸಂಜೆ ೫-೩೦ ಕೆ. ಎಸ್. ಚಂದ್ರಶೇಖರಯ್ಯ-ಗಾಯನ. ೧೨-೩೦ ವಾದ್ಯವೃಂದ. ೧೨-೪೫ ವನಿತಾವಿಹಾರ. ೧-೫೦ ಪಿಟೀಲು. ೬-೧೫ ಮತ್ತು ೭-೫ ಸಂಗೀತ. ೭-೨೦ ನೃತ್ಯ [illegible]. ೭-೩೦ ಗ್ರಾಮಸ್ಥರಿಗಾಗಿ. ೭-೩೦ ಸಂಸ್ಥಾನದ ಅಭಿವೃದ್ಧಿ ಯೋಜನೆಗಳು-ಭಾಷಣ. ೮ ಮಹಾರಾಜಪುರಂ ವಿಶ್ವನಾಥ ಅಯ್ಯರ್ ಮತ್ತು ಗೋಷ್ಠಿ-ಮದ್ರಾಸ್ ರಿಲೇ. ೯-೧೫ ತಮಿಳು ಕಾರ್ಯಕ್ರಮ. ೧೦ ಚಿತ್ರ ಗೀತ ೧೦-೧೫ ಉರ್ದು ಪದ್ಯಗಳು.

ನಿಶ್ಶಸ್ತ್ರೀಕರಣಕ್ಕೆ ರಷ್ಯದ ಸಲಹೆ

ಮೊನ್ನೆ ಲಂಡನ್ನಿನಲ್ಲಿ ಆರಂಭವಾದ ನಿಶ್ಶಸ್ತ್ರೀಕರಣ ಉಪಸಮಿತಿ ಸಭೆಯಲ್ಲಿ ರಷ್ಯದ ಪ್ರತಿನಿಧಿಯು ಸಲಹೆಯೊಂದನ್ನು ಮಂಡಿಸಿದರು. ಅದರ ಪ್ರಕಾರ ಎರಡು ಘಟ್ಟಗಳಲ್ಲಿ ನಿಶ್ಶಸ್ತ್ರೀಕರಣವನ್ನು ಸಾಧಿಸಬಹುದಾಗಿದೆ. ಮೊದಲನೇ ಘಟ್ಟದಲ್ಲಿ ೧೯೫೮ರ ವೇಳೆಗೆ ಅಮೆರಿಕ, ರಷ್ಯಾ ಮತ್ತು ಚೀಣಗಳು ತಲಾ ೨೫ ಲಕ್ಷ, ಬ್ರಿಟನ್ ಫ್ರಾನ್ಸ್‌ಗಳು ತಲಾ ೭½ ಲಕ್ಷಕ್ಕೆ ಸೈನ್ಯವನ್ನು ಮಿತಿಗೊಳಿಸಬೇಕು. ಇತರ ರಾಷ್ಟ್ರಗಳ ಸೇನಾ ಮಿತಿಯನ್ನು ಅಂತರರಾಷ್ಟ್ರೀಯ ನಿಶ್ಶಸ್ತ್ರೀಕರಣ ಸಮ್ಮೇಳನವೊಂದು ನಿರ್ಧರಿಸಬೇಕು. ಅಣು ಶಸ್ತ್ರಗಳನ್ನು ಪಡೆದ ರಾಷ್ಟ್ರಗಳು ಅವುಗಳ ಬಳಿಸ್ಫೋಟವನ್ನು ... ಅವನ್ನು ಉಪಯೋಗಿಸುವುದಿಲ್ಲವೆಂದು ಘೋಷಿಸಿ ಇತರ ವಿಧದ ಸೇನಾ ಬಲಗಳನ್ನು ಕಡಿಮೆ ಮಾಡಿಕೊಳ್ಳಬೇಕು.

ಎರಡನೆಯ ಘಟ್ಟದಲ್ಲಿ ೧೯೫೯ರ ವೇಳೆಗೆ ಅಣು ಶಸ್ತ್ರಗಳ ತಯಾರಿಕೆಯು ಸಂಪೂರ್ಣವಾಗಿ ನಿಲ್ಲಬೇಕು ಮತ್ತು ಆ ಶಸ್ತ್ರಗಳ ತಯಾರಿಕೆ ಮೇಲೆ ಹತೋಟಿಯನ್ನು ಇಡಬೇಕು. ಜರ್ಮನಿ ಮತ್ತು ವಿದೇಶಗಳಲ್ಲಿನ ಸೇನಾ ಬಲಗಳನ್ನು ಮೊದಲ ಮತ್ತು ರಷ್ಯಗಳು ಕಡಿಮೆ ಮಾಡಿಕೊಳ್ಳಬೇಕು.

ಸೂಯೆಜ್ ಕಾಲುವೆ ಶುಲ್ಕವನ್ನು ಮುಂಗಡವಾಗಿ ಕೊಡಲು

ಈಜಿಪ್ಟಿನ ಕೋರಿಕೆ

ಸಭೆ ವಿಶ್ವಸಂಸ್ಥೆಯ ಸಂಚಾರಕ್ಕೆ ತೆರೆಯಲ್ಪಡುವ ಸೂಯೆಜ್ ಕಾಲುವೆಯಲ್ಲಿ ಸಂಚರಿಸುವ ಹಡಗುಗಳು ಶುಲ್ಕಗಳನ್ನು ಮುಂಗಡವಾಗಿ ಕಾಲುವೆ ಕಂಪೆನಿಗೆ ಸಲ್ಲಿಸಬೇಕೆಂದು ಈಜಿಪ್ಟ್ ಸರ್ಕಾರವು ಎಲ್ಲಾ ರಾಷ್ಟ್ರಗಳಿಗೂ ಮನವಿ ಮಾಡಿಕೊಂಡಿದೆ. ೧೮೮೮ರ ಕಾನ್‌ಸ್ಟಾಂಟಿನೋಪಲ್ ಒಪ್ಪಂದವನ್ನು ಪಾಲಿಸಿ, ಇದುವರೆಗಿನ ದರಗಳನ್ನೇ ಮುಂದುವರಿಸಿಕೊಂಡು ಬರುವುದಾಗಿಯೂ ಮತ್ತು ಕಾಲುವೆಯ ಅಭಿವೃದ್ಧಿಗಾಗಿ ಪತ್ಯೇಕ ನಿಧಿಯೊಂದನ್ನು ಏರ್ಪಡಿಸಿ ವರಮಾನದ ಶೇಕಡ ೨೫ರಷ್ಟನ್ನು ಅದಕ್ಕೆ ಕೊಡುವ ಪ್ರಮಾಣವನ್ನು ನಿಗದಿ ಮಾಡಲಾಗುವುದೆಂದೂ ಈಜಿಪ್ಟ್ ತಿಳಿಸಿದೆ.

ಸಿಂಹಳದಲ್ಲೊಂದು ಒಪ್ರವಿಡ ಕಳಗಂ

ಸಿಂಹಳವು ಸಿಂಹಳೀಯರಿಗೇ ಇರಬೇಕೆಂದು ಪ್ರತಿಪಾದಿಸುವವರ ವಿರುದ್ಧವಾಗಿ ಚಳುವಳಿ ನಡೆಸಲು ... ಮಾಜಿ ಮಂತ್ರಿ ... ಅಧ್ಯಕ್ಷತೆಯಲ್ಲಿ "ನವಲಂ ಕಳಗಂ" ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದಾರೆ. ಇವರು ತಮಿಳು ವಿಶ್ವವಿದ್ಯಾಲಯದ ಸ್ಥಾಪನೆಗೆ ಒಂದು ಕೋಟಿ ರೂ ನಿಧಿಯನ್ನು ಸಂಗ್ರಹಿಸಲಿದ್ದಾರೆ.

"ನಗೆ ಬಾಂಬ್"

ಬೆಂಗಳೂರು ನಗರದ ಜರ್ನಲಿಸ್ಟ್ಸ್ ಕಾಲೊನಿಯಲ್ಲಿರುವ ಚಾತಕ ಪ್ರಕಾಶನದವರು ಪ್ರಕಟಿಸಿರುವ ಮೇಲ್ಕಂಡ ಶಿರೋನಾಮೆಯ ಕಿರು ಪುಸ್ತಕವೊಂದನ್ನು ಆದರದಿಂದ ಸ್ವೀಕರಿಸಿದ್ದೇವೆ. ಹಲವಾರು ವಿಷಯಗಳ ಮೇಲೆ ಹಾಸ್ಯಪೂರಿತವಾದ ಟೀಕೆಗಳನ್ನು ಒಳಗೊಂಡ ಲೇಖನಗಳ ಸಂಕಲನವಿದು. ಬರಹಗಾರರಾದ ಶ್ರೀ ಹೆಚ್ ಆರ್ ನಾಗೇಶರಾಯರ ಶೈಲಿಯು ಸರಳವಾಗಿಯೂ ಮತ್ತು ಆಕರ್ಷಣೀಯವಾಗಿಯೂ ಇದೆ. ಬೆಲೆ ಆಣೆ.

ಮಗಳ ಮದುವೆ ಮಾಡದಂತೆ ನಿಜಾಮರಿಗೆ ನೋಟೀಸ್

ಮದುವೆಯಾಗಿದ್ದರೂ ಮತ್ತೊಂದು ವಿವಾಹದ ಯತ್ನದ ಆಪಾದನೆ

ಹೈದರಾಬಾದಿನ ಪ್ರಸಿದ್ಧ ಅಡ್ವೋಕೇಟರಾದ ಶ್ರೀ ಬಿ ಜಿ ಕೇಸ್ಕರ್‌ರವರು ನಿಜಾಮರಿಗೆ ಒಂದು ನೋಟೀಸನ್ನು ತಂತಿ ಮೂಲಕ ಕಳುಹಿಸಿ ಅವರು ತಮ್ಮ ಮಗಳು ಸಜೀರುನ್ನಿಸಾ ಬೇಗಂ ಎಂಬಾಕೆಯನ್ನು ನವಾಬ್ ಜಹೂರ್ ಯಾರ್ ಜಂಗ್ ಬಹದ್ದೂರ್ ಎಂಬಾತನಿಗೆ ಕೊಟ್ಟು ಮದುವೆ ಮಾಡಬೇಕೆಂದಿರುವುದನ್ನು ನಿಲ್ಲಿಸಬೇಕೆಂದು ತಿಳಿಸಿದ್ದಾರೆ. ತಮ್ಮ ಕಕ್ಷಿಗಾರರಾದ ನವಾಬ್ ಖುಸ್ರು ಯಾರ್ ಜಂಗರಿಗೆ ನಿಜಾಮರು ತಮ್ಮ ಮಗಳನ್ನು ೨೭ ವರ್ಷಗಳ ಹಿಂದೆಯೇ ಮದುವೆ ಮಾಡಿಕೊಟ್ಟು ಆಕೆಯನ್ನು ಗಂಡನ ಬಳಿಗೆ ಕಳುಹಿಸದೆ ತಮ್ಮ ಕಕ್ಷಿಯ ಸಂಬಂಧದಿಂದ ಇಟ್ಟುಕೊಂಡು ವಿವಾಹ ವಿಚ್ಛೇದನವನ್ನೂ ಪಡೆಯುದೆ ಆತನು ಜೀವಂತವಾಗಿರುವಾಗಲೇ ಆತನ ಪತ್ನಿಯನ್ನು ಈ ರೀತಿ ಮತ್ತೊಬ್ಬರಿಗೆ ಮದುವೆ ಮಾಡುವ ಈ ಸಾಹಸವನ್ನು ನಿಲ್ಲಿಸಿ ಅವಳನ್ನು ೨೪ ಗಂಟೆಗಳೊಳಗೆ ಗಂಡನ ಬಳಿಗೆ ಕಳುಹಿಸದಿದ್ದರೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ಅವರು ತಿಳಿಸಿದ್ದಾರೆ.

ಬ್ರಿಟನ್ನಿಗೆ ಅಮೆರಿಕದ ಅಣುಅಸ್ತ್ರಗಳ ಸಜ್ಜು

ವಿಶ್ವದಲ್ಲಿ ಬ್ರಿಟನ್ನನ್ನು ಪ್ರಥಮ ದರ್ಜೆಯ ಅಣು ಬಲವುಳ್ಳ ರಾಷ್ಟ್ರವನ್ನಾಗಿ ಮಾಡಲು ಅಮೆರಿಕವು ಯೋಚಿಸಿ ಅದಕ್ಕಾಗಿ ಒಂದು ನಿರ್ದಿಷ್ಟವಾದ ವಿಧಿಯಲ್ಲಿ ಸಹಾಯ ನೀಡಲು ಸಿದ್ಧವಾಗಿದೆಯೆಂದೂ, ಈ ಬಗ್ಗೆ ಮುಂದಿನ ವಾರದಲ್ಲಿ ಬ್ರಿಟಿಷ್ ಪ್ರಧಾನಿಗೆ ಐಸೆನ್‌ಹೋವರರು ಭರವಸೆ ನೀಡಲಿರುವರೆಂದೂ ವರದಿಯಾಗಿದೆ.

ಹರಿಕಥೆ

ಈ ದಿನ ರಾತ್ರಿ ೭ ಘಂಟೆಗೆ ದೇವರಾಜ ಮೊಹಲ್ಲಾ ಅನೆಸಾರೋಟು ಬೀದಿಯಲ್ಲಿರುವ ದುರ್ಗಾದೇವಿಯವರ ದೇವಸ್ಥಾನದ ಚಪ್ಪರದಲ್ಲಿ ಶ್ರೀ ಬಿ ಎಂ ಬಸವಣ್ಣನವರಿಂದ "ಹರಿಶ್ಚಂದ್ರ ಚರಿತ್ರೆ" ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ.

ಸೇವಾ ದಳದ ಶಿಬಿರ

ಟಿ ನರಸೀಪುರದ ವಿದ್ಯೋದಯ ಪ್ರೌಢಶಾಲೆಯಲ್ಲಿ ಕಳೆದ ಸೋಮವಾರ ಭಾರತ ಸೇವಾದಳದ ಸೇವಾ ಶಿಬಿರವು ಆ ತಾಲ್ಲೂಕಿನ ಸ್ಥಳೀಯ ... ಇನ್ಸ್‌ಪೆಕ್ಟರವರಾದ ಶ್ರೀ ಬಿ. ಶಿವಣ್ಣನವರಿಂದ ಪ್ರಾರಂಭಿಸಲ್ಪಟ್ಟಿತು.

JUST RELEASED FROM THE PRESS

AN AID TO BOTANY

(HISTOLOGY)

(For Intermediate Students)

★

HIGHER TRIGONOMETRY AND SOLID GEOMETRY

(*Answers to Mysore University Question Papers B Sc 1951-1956*)

— Please Contact —

Publishers :—

R KRISHNASWAMI

Paper & Stationery Merchants

MYSORE

ಕೇರಳದಲ್ಲಿ ಕಮ್ಯೂನಿಸ್ಟರಿಗೆ ೫೮ ಸ್ಥಾನಗಳು

ನೆನ್ನೆ ಕೇರಳದಲ್ಲಿ ಪ್ರಕಟವಾದ ಚುನಾವಣಾ ಫಲಿತಾಂಶಗಳ ಪ್ರಕಾರ ವಿಧಾನಸಭೆಗೆ ... ಮತ್ತು ಚಿತ್ತೂರು ಸಾರ್ವತ್ರಿಕ ಸ್ಥಾನಗಳು ಕಮ್ಯೂನಿಸ್ಟ್ ಪಕ್ಷದ ಶ್ರೀ ನಾರಾಯಣಕುಟ್ಟಿ ಮತ್ತು ಬಾಲಕೃಷ್ಣಮೆನನ್‌ರವರಿಗೆ ದೊರೆತುವು. ಚಿತ್ತೂರಿನ ವಿಧಾನಸಭಾ ಸ್ಥಾನವು ಕಾಂಗ್ರೆಸ್ಸಿಗೆ ದೊರಕಿತು. ಇನ್ನು ಮೂರು ಸ್ಥಾನಗಳ ಫಲಿತಾಂಶವು ಪ್ರಕಟವಾಗಬೇಕಾಗಿದೆ. ಈಗ ಕಮ್ಯೂನಿಸ್ಟ್ ಪಕ್ಷದ ಬಲ ೫೮ಕ್ಕೆ ಏರಿದೆ. ಶಾಸನ ಸಭೆಯಲ್ಲಿ ಸ್ಪಷ್ಟ ಬಹುಮತಕ್ಕೆ ಇನ್ನು ಒಂದು ಸ್ಥಾನ ಮಾತ್ರ ಬೇಕಾಗಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಕಲ್ಲು ಮುಕ್ತ

ಕೊಯಮುತ್ತೂರು	[illegible]	[illegible]
ಕಲ್ಲುಸಕ್ಕರೆ	[illegible]	
ಅಕ್ಕಿ	[illegible]	
ಕಾಡು	[illegible]	
ರಾಗಿ	[illegible]	[illegible]
ಜೋಳ	[illegible]	[illegible]
ನವಣೆ	[illegible]	
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	[illegible]
ತೊಗರಿಬೇಳೆ	[illegible]	[illegible]
ಕಡಲೆಬೇಳೆ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಕಳಸಂಡಿ	[illegible]	[illegible]
ಧನಿಯ	[illegible]	[illegible]
ಅವರೆ	[illegible]	[illegible]
ಉಪ್ಪು	[illegible]	
ಕಡಲೆ	[illegible]	[illegible]
ಹೆಸರುಬೇಳೆ	[illegible]	[illegible]
ಹುರುಳಿಬೇಳೆ	[illegible]	
ಹುಣಸೆಹಣ್ಣು	[illegible]	[illegible]
ಬೆಲ್ಲ	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧,೦೦೦	[illegible]	[illegible]

The Mysore State Football Association

(The Mysore Committee)

The Prince's Birthday Foot ball Tournament will Start from about the 29th of this month. Any person willing to run the tournament under Contract system may contact the Secretary on or before the 23rd inst.

B Srinivasa Iyengar
Hon. Secretary

The Southern Railway Co-operative Society Ltd,

MYSORE

NOTIFICATION

3-year Fixed Deposits of Rs. 5,000 and above are accepted at 5 per cent until further Notice

Mysore,
16 3 57

By Order of the Board,
B MADHAVA RAO,
Secretary

SREE GANESH TALKIES

WAR AND PEACE

To morrow Last day

Daily at 2-30 and 6-45 P M.

If you have not already seen it, see to-day

From 23-3-57

KISS OF FIRE

(In Technicolor)

Starring —Jack Palance and Barbara Rush

ಕೊಳ್ಳೆಗಾಲದಲ್ಲಿ ಜಯಶೀಲರಾದ ಉಮೇದುವಾರರ ಮೆರವಣಿಗೆ

ಲೋಕ ಸಭೆಗೆ ಚುನಾಯಿತರಾಗಿರುವ ... ಆದ ಎಂ. ಶಂಕರಯ್ಯ ಮತ್ತು ಎಸ್ ... ಸಿದ್ದಯ್ಯನವರನ್ನು, ವಿಧಾನ ಸಭೆಗೆ ಆಯ್ಕೆಯಾಗಿರುವ ಶ್ರೀ ಬಿ ಪಿ ಬೋರಯ್ಯ ಮತ್ತು ಶ್ರೀ ... ಕೆಂಚಮ್ಮನವರನ್ನೂ ಗೌರವಿಸಲು ಮೊನ್ನೆ ಕೊಳ್ಳೆಗಾಲದಲ್ಲಿ ಬಹಳ ವೈಭವಯುತವಾದ ಮೆರವಣಿಗೆ ಮಾಡಲಾಯಿತು. ಸುಮಾರು ... ಜನ ಸೇರಿದ್ದರು.

ಮತದಾರರಿಗೆ ಕೆ. ಎಸ್ ಸೂರ್ಯನಾರಾಯಣರಾಯರ ವಂದನೆ

ಮೈಸೂರು ನಗರದ ದಕ್ಷಿಣ ಕ್ಷೇತ್ರದಿಂದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಜಯಶೀಲರಾದ ಶ್ರೀ ಕೆ ಎಸ್. ಸೂರ್ಯನಾರಾಯಣರಾಯರು ತಮಗೆ ನೆರವಾದ ಎಲ್ಲಾ ಬಂಧುಮಿತ್ರರಿಗೂ ಮತದಾರರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸಿ ಸಾರ್ವಜನಿಕ ಸೇವೆ ಸಲ್ಲಿಸಲು ಶಕ್ತಿ ಮೀರಿ ಶ್ರಮಿಸುವುದಾಗಿ ತಿಳಿಸಿದ್ದಾರೆ.

ನಂಜನಗೂಡಿನಲ್ಲಿ ಜೇಬುಗಳ್ಳನ ಬಂಧನ

ಮೈಸೂರಿನ ಕೇಡಿ ಶಿವಣ್ಣ ಎಂಬುವನು ಮೊನ್ನೆ ನಂಜನಗೂಡು ಬಸ್ ಸ್ಟ್ಯಾಂಡ್ ಬಳಿ ಬಸ್ಸು ಹತ್ತುತ್ತಿದ್ದ ಪ್ರಯಾಣಿಕರೊಬ್ಬರ ಜೇಬಿನಲ್ಲಿ ೪೫ ರೂ ಇದ್ದ ಪರ್ಸನ್ನು ಹಾರಿಸಲು ಯತ್ನಿಸಿದಾಗ ಪೋಲೀಸರ ಕೈಗೆ ಸಿಕ್ಕಿಬಿದ್ದನೆಂದು ವರದಿಯಾಗಿದೆ. ಇವನಿಗೆ ಹಿಂದೆ ಮೂರು ಬಾರಿ ಶಿಕ್ಷೆಯಾಗಿದ್ದಿತು.

ಒಲಂಪಿಯಾ ಟಾಕೀಸ್

22-3-57ರಿಂದ : ದಿನವಹಿ 3 ಪ್ರದರ್ಶನಗಳು

ಹೇಮಲತಾ ಪಿಕ್ಚರ್ಸ್‌ರವರ

ಬಸಂತ್ ಪಂಚಮಿ

ಪಾತ್ರ -ನಿರೂಪರಾಯ್, ಜೀವನ್, ...

ನಿರ್ದೇಶನ ಜಯಂತ್ ದೇಸಾಯ್

ಮೈಸೂರು ಒಂದನೇ ಮುನ್‌ಸೀಫ್‌ರವರ ಕೋರ್ಟು

Ex No 524/56

ಡಿಕ್ರಿ ಹೋಲ್ಡರ್ : ಮೈಸೂರು ಸಿಟಿ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶಾಹಿ ಚಲುವಾಚಾರ್‌ರವರ ಮಗ ಶಾಹಿ ವೆಂಕಟಾಚಾರ್.

Vs

ಜಡ್ಜ್‌ಮೆಂಟ್ ಡೆಟರು : ಮೈಸೂರು ಸಿಟಿ ಇರ್ವಿನ್ ರೋಡ್ ಕ್ರಾಸಿನಲ್ಲಿರುವ ಲೇಟ್ ... ಶ್ಯಾಮಾಚಾರ್‌ರ ಹೆಂಡತಿ ... ವಗೈರೆ

ಜಡ್ಜ್‌ಮೆಂಟ್ ಡೆಟರು ಡಿಕ್ರಿ ಹೋಲ್ಡರಿಗೆ ಪಾವತಿ ಮಾಡಬೇಕಾದ ಮೊಬಲಗಿನ ಬಗ್ಗೆ ಕೆಳಗೆ ಷೆಡ್ಯೂಲಿನಲ್ಲಿ ಕಂಡ ಜಡ್ಜ್‌ಮೆಂಟ್ ಡೆಟರಿನ ಸ್ವತ್ತು ಕೋರ್ಟು ಅವರಣದಲ್ಲಿ ತಾರೀಖು 26—3—57ನೇ ಮಂಗಳವಾರ ದಿವಸ 11 ಘಂಟೆಗೆ ಹರಾಜಾಗಿರುತ್ತೆ. ಇಷ್ಟವುಳ್ಳವರು ಬಿಡ್ ಮಾಡಬಹುದು.

—: ಷೆಡ್ಯೂಲ್ :—

ಮೈಸೂರು ಸಿಟಿ ಇರ್ವಿನ್ ರೋಡ್ ಕ್ರಾಸಿನಲ್ಲಿರುವ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ ... ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ಯಾಲಕ್ಕಿ ... ಯವರ ಮನೆ, ಉತ್ತರಕ್ಕೆ ಕೆಂಪೇಗೌಡನವರ ... ಈ ಮಧ್ಯೆ ಇರುವ ಒಂದು ಸಾವಿರದ ... ಇಪ್ಪತ್ತೆರಡನೇ ನಂಬರು ಅರು ಅಂಕಣದ ... ಮನೆ. ಇದಕ್ಕೆ ಸೇರಿದ ಪೂರ್ವ ಪಶ್ಚಿಮ ...6½ ಅಡಿ, ದಕ್ಷಿಣೋತ್ತರ 2½ ಅಡಿ ... ಖಾಲಿ ಜಾಗ ಸೇರಿ ಪೂರಾ ಸ್ವತ್ತು.

ಕೋರ್ಟಿನ ಅಪ್ಪಣೆ ಮೇರೆ

ಎಸ್ ಕೆ. ಲಕ್ಷ್ಮೀನರಸಿಂಹ...

ಬಿ. ಎ., ಬಿ. ಎಲ್.

ಡಿಕ್ರಿ ಹೋಲ್ಡರ್ ಪರ ಅಡ್ವೊಕೇಟ್

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

22—3—57ನೇ ಶುಕ್ರವಾರದಿಂದ ಅಮೋಘ 2ನೇ ವಾರ

ಸರ್ವೋದಯ ಪಿಕ್ಚರ್ಸ್‌ರವರ ಸಂಗೀತಮಯ ತಮಿಳು ಚಿತ್ರ

★ ಪ್ರದುಮ್ನ ವಿಜಯಂ ★

ಪಾತ್ರ ತ್ಯಾಗರಾಜ ಭಾಗವತರ್, ಲಲಿತ, ಮಾಧುರಿ ದೇವಿ, ತಂಗವೇಲು,

ಟಿ ಎಸ್ ಬಾಲಯ್ಯ, ಎನ್ ಎಸ್. ಕೃಷ್ಣನ್, ಟಿ. ಎಂ ಮಧುರಂ

Edited, Printed and Published by A. R. Nagaraja at Sadhvi Press, D. Subbiah Road, Mysore

[illegible] ನಂ. 200

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

[illegible]

ಬ್ಯಾಂಕಾಲ್
ಅಜೀರ್ಣ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71|1. [illegible]
[illegible],
ಬೆಂಗಳೂರು-2

ಪುಟ : ೦೪] SADHVI : FRIDAY 22—3—1957 ಮೈಸೂರು : ಶುಕ್ರವಾರ ೨೨—೩—೧೯೫೭ : [ಸಂಚಿಕೆ : [illegible]

ಇಂದಿನಿಂದ ಹೊಸ ರಾಷ್ಟ್ರೀಯ ಕ್ಯಾಲೆಂಡರ್ ಆರಂಭ

ವಿಧಾನ ಸೌಧದ ಮುಂದು ವೆಚ್ಚಕ್ಕೆ ಹನುಮಂತಯ್ಯನವರೊಬ್ಬರೇ ಕಾರಣರಲ್ಲ

ವಿಧಾನ ಸಭೆಯಲ್ಲಿ ಮಹಮೂದ್ ಇಮಾಮರ ಹೇಳಿಕೆ

ಸು ಪ್ರೆಸ್] ಬೆಂಗಳೂರು ೨೨

ಇಂದು ವಿಧಾನ ಸಭೆಯಲ್ಲಿ ಸಂಸ್ಥಾನದ ಆಯವ್ಯಯದ ಮೇಲೆ ಚರ್ಚೆಯು ಆರಂಭವಾಯಿತು. ವಿರೋಧ ಪಕ್ಷದ ನಾಯಕರಾದ ಶ್ರೀ ಜಿ ಎಂ [illegible] ರವರು ತಮ್ಮ ಭಾಷಣದಲ್ಲಿ ವಿಧಾನಸೌಧದ ಪ್ರಸ್ತಾಪಿಸಿ ಅದಕ್ಕೆ ವೆಚ್ಚವಾಗಿರುವ [illegible] ಗಳ ಹಣ ಲೆಕ್ಕದ ದಾಖಲೆಗೆ ಇನ್ನೂ [illegible] ಹೋಗಿಲ್ಲ. ಈ ಮುಂದುವೆಚ್ಚಕ್ಕೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೊಬ್ಬರನ್ನೇ ದೂರುವುದು ಸರಿಯಲ್ಲ. ಅದಕ್ಕೆ ಆ ಮಂತ್ರಿಮಂಡಲದ ಸದಸ್ಯರೆಲ್ಲರೂ ಜವಾಬ್ದಾರರೆಂಬುದಾಗಿ ಹೇಳಿದರು

ವರ್ಷ ಇಂಟರ್ ತರಗತಿಯಲ್ಲಿ ಕನ್ನಡ ಮಾಧ್ಯಮ ಆರಂಭ

ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಇಂದು ವಿದ್ಯಾ ಸಚಿವ ಕಡಿದಾಳ್ ಮಂಜಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ಈ ವರ್ಷದಲ್ಲೇ ಇಂಟರ್‌ಮೀಡಿಯೆಟ್ ಮತ್ತು ಅದರ ಕೆಳಗಿನ ತರಗತಿಗಳಿಂದ ಕನ್ನಡ ಮಾಧ್ಯಮವು ಜಾರಿಗೆ ತರಲಾಗುವುದೆಂದು ತಿಳಿಸಿದರು

ಪಶ್ಚಿಮ ಪಾಕಿಸ್ತಾನದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ

ನೂನ್ ಬಲ ಕುಂದಿರುವುದರ ಪರಿಣಾಮ

ಪಶ್ಚಿಮ ಪಾಕಿಸ್ತಾನದಲ್ಲಿ ಆಡಳಿತ ನಡೆಸುತ್ತಿದ್ದ ರಿಪಬ್ಲಿಕನ್ ಪಕ್ಷದ ೩೦ ಮಂದಿ ಸದಸ್ಯರು ಮೊನ್ನೆ ಹಠಾತ್ತಾಗಿ ವಿರೋಧ ಪಕ್ಷ ಕೂಡಿದರೂ, ಅಲ್ಲಿನ ಶಾಸಕ ಸಭೆಯಲ್ಲಿ ಒಂದು ಸೂಚನೆ ಮೇಲೆ ಚರ್ಚೆ ನಡೆದು, ಅದರ ಬಗ್ಗೆ ಮತದಾನ ನಡೆಯಲಿದ್ದುದರಿಂದ ಮಂತ್ರಿಮಂಡಲವು ಉಳಿದುಕೊಂಡಿತೆಂದು ವರದಿಯಾಗಿದೆ. ೩೦೪ ಸದಸ್ಯರಿರುವ ಶಾಸನ ಸಭೆಯಲ್ಲಿ ಬಹುಮತ ಪಡೆದಿದ್ದ ಆಡಳಿತ ಪಕ್ಷದ ಬಲವು ಕುಂದಲು ಮುಖ್ಯಮಂತ್ರಿ ಡಾ|| ಖಾನ್ ಸಾಹೇಬರು ಅಲ್ಲಿನ ಶಾಸಕ ಸಭೆಯನ್ನು [illegible] ಸುವಂತೆ ಅಧ್ಯಕ್ಷರಿಗೆ ಸಲಹೆ ಮಾಡಲಾಗಿ [illegible] ಮೇರೆ ಅಧ್ಯಕ್ಷರು ಮೊನ್ನೆ ಮಧ್ಯರಾತ್ರಿ ಪ್ರಕಟಣೆಯೊಂದನ್ನು ಹೊರಡಿಸಿ ಪಾಕಿಸ್ತಾನ ರಾಜ್ಯಾಂಗದ ಪ್ರಕಾರ ಸರ್ಕಾರದ ಆಡಳಿತ ಸೂತ್ರವನ್ನು ತಾವೇ ವಹಿಸಿಕೊಂಡರು

, ಕಾಂಗ್ರೆಸ್ ಸಮಿತಿಯ ವಂದನೆಗಳು

ಸೂರು ಜಿಲ್ಲೆಯಲ್ಲಿ ಲೋಕಸಭೆ, ಹಾಗೂ ಜ್ಯ ವಿಧಾನ ಸಭೆಗೆ ಕಾಂಗ್ರೆಸ್ ಉಮೇದುವಾರರು ಆರಿಸಿಬರಲು ಮತವಿತ್ತ ಓಟುದಾರರಿಗೆ ಮತ್ತು ನೆರವು ನೀಡಿ ಸಹಕರಿಸಿದ ಎಲ್ಲ ಮಹನೀಯರಿಗೂ, ಕಾಂಗ್ರೆಸ್ ಕಾರ್ಯಕರ್ತರುಗಳಿಗೂ, ಈ ಮೂಲಕ ಮೈಸೂರು ಜಿಲ್ಲಾ ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿ ಕೃತಜ್ಞತೆಯನ್ನರ್ಪಿಸುತ್ತದೆ

ತಾಮ್ರದ ತಂತಿ ಪ್ರಕರಣದಲ್ಲಿ ನಷ್ಟದ ವಸೂಲಿಗಾಗಿ ಕ್ರಮ

ಶಾಸನ ಸಭೆಯಲ್ಲಿ ಸಚಿವ ವೀರಣ್ಣಗೌಡರ ವಿವರಣೆ

ಬೆಂಗಳೂರು ೨೨

೧೯೫೨-೫೩ನೇ ಸಾಲಿನ ತಾಮ್ರದ ತಂತಿ ಪ್ರಕರಣದಲ್ಲಿ ಆದ ನಷ್ಟವನ್ನು ವಸೂಲಿ ಮಾಡುವ ಸಲುವಾಗಿ ಸಂಬಂಧಪಟ್ಟ ಸಂಸ್ಥೆಗೆ ನೋಟೀಸು ಕೊಡಲಾಗಿದೆಯೆಂದು ತಮಗೆ ಅನಧಿಕೃತವಾಗಿ ತಿಳಿದಿದೆಯೆಂದು ನೆನ್ನೆ ಶಾಸನ ಸಭೆಯಲ್ಲಿ ಸಚಿವ ವೀರಣ್ಣಗೌಡರು ಶ್ರೀ ಎ ವಿ ನರಸಿಂಹರೆಡ್ಡಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಈ ನಷ್ಟವನ್ನು ತಪ್ಪಿತಸ್ಥರಿಂದ ವಸೂಲು ಮಾಡಬೇಕೆಂದೂ, ಇಲ್ಲದಿದ್ದರೆ ಹಾಗೆಯೇ ಬಿಟ್ಟುಬಿಡಬೇಕೆಂದೂ ಆಡಿಟರ್ ಜನರಲ್‌ರವರು ತಮ್ಮ ವರದಿಯಲ್ಲಿ ಸೂಚಿಸಿದ್ದರೆಂದೂ ಈ ಬಗ್ಗೆ ವಿಷಯವನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಪರಿಶೀಲಿಸುತ್ತಿದೆಯೆಂದೂ ಸಚಿವರು ಹೇಳಿದರು.

ಪಾಕಿಸ್ತಾನದಲ್ಲಿ ಪ್ರಜಾ ಸತ್ತಾತ್ಮಕ ಪ್ರಭುತ್ವಕ್ಕೆ ಭಾರಿ ಧಕ್ಕೆ

ಪ್ರಧಾನಿ ನೆಹರೂ ನುಡಿ

ಪಶ್ಚಿಮ ಪಾಕಿಸ್ತಾನದಲ್ಲಿ ಶಾಸನ ಸಭೆಯನ್ನು ವಿಸರ್ಜಿಸಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಜಾರಿಗೆ ತಂದಿರುವ ವಿಷಯವನ್ನು ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ಪ್ರಸ್ತಾಪಿಸಿ ಕಳೆದ ಹತ್ತು ವರ್ಷಗಳಿಂದ ಭಾರತದಲ್ಲಿ ಪ್ರಜಾಸತ್ತಾತ್ಮಕ ಆಡಳಿತವು ಯಶಸ್ವಿಯಾಗಿ ನಡೆಯುತ್ತಿರುವಾಗ ಪಾಕಿಸ್ತಾನದಲ್ಲಿ ಪ್ರಜಾಸತ್ತೆಗೆ ತೀವ್ರ ಧಕ್ಕೆಯೊದಗಿರುವುದೆಂದು ನುಡಿದರು. ಸ್ವತಂತ್ರ ಪ್ರದೇಶದ ರಾಷ್ಟ್ರಗಳೆಂದು ಕರೆದುಕೊಳ್ಳುವ ಎಷ್ಟು ದೇಶಗಳಲ್ಲಿ ಭಾರತದಲ್ಲಿರುವಷ್ಟು ಸ್ವಾತಂತ್ರ್ಯವಿದೆ ಎಂಬುದಾಗಿ ನೆಹರೂರವರು ಪ್ರಶ್ನಿಸಿ, ಮಿಲಿಟರಿ ನೆರವನ್ನು ಪಡೆಯುವ ರಾಷ್ಟ್ರಗಳ ಮತ್ತು ಪಾಕಿಸ್ತಾನದ ಸ್ಥಿತಿಗಳನ್ನು ಭಾರತದೊಡನೆ ಹೋಲಿಸಿದರು " ಇತರ ರಾಷ್ಟ್ರಗಳು ನಮ್ಮೊಡನೆ ವರ್ತಿಸುವಾಗ ನಾವು ಭಾರತದ ಕ್ರಾಂತಿಯ ವೀರಪುತ್ರರೆಂಬುದನ್ನು ನೆನಪಿಟ್ಟು, ಬೇರೆಯವರ ಹೋರಾಟದ ಫಲದಿಂದ ಆಕಸ್ಮಿಕವಾಗಿ ಸ್ವಾತಂತ್ರ್ಯ ಪಡೆದವರೊಡನೆ ವರ್ತಿಸುವಂತೆ ತಾತ್ಸಾರವಾಗಿ ನಮ್ಮೊಡನೆ ನಡೆಯದಿರಲಿ " ಎಂಬುದಾಗಿ ಸಹ ಅವರು ಎಚ್ಚರಿಸಿದರು

ಧಾರವಾಡ ತಾಲ್ಲೂಕಿನಲ್ಲಿ ೧೦ ತಿಂಗಳಿಗೆ ೬೩ ಕೊಲೆ

ಕಳೆದ ವರ್ಷದ ಜನವರಿ ತಿಂಗಳಿಂದ ಹತ್ತು ತಿಂಗಳ ಅವಧಿಯಲ್ಲಿ ಧಾರವಾಡ ತಾಲ್ಲೂಕಿನಲ್ಲಿ ೬೩ ಕೊಲೆ ಪ್ರಕರಣಗಳು ನಡೆದು ರಿಪೋರ್ಟ್ ಮಾಡಲ್ಪಟ್ಟಿರುವುವೆಂದು ಹೇಳಲಾಗಿದೆ ಈ ವಿಷಯವಾಗಿ ವಿಧಾನ ಸಭೆಯಲ್ಲಿ ಎ ಎಸ್ ಪಾಟೀಲರು ಕೇಳಿದ ಪ್ರಶ್ನೆಗೆ ಗೃಹ ಸಚಿವ ಶ್ರೀ ಎಂ. ವಿ ರಾಮರಾಯರು ಲಿಖಿತ ಉತ್ತರವಿತ್ತು, ಅಗತ್ಯ ಬಿದ್ದಾಗ ಅಲ್ಲಿಗೆ ಹೆಚ್ಚು ಪೋಲೀಸು ಪಡೆಯನ್ನು ಕಳುಹಲಾಗುವುದೆಂದು ತಿಳಿಸಿರುವರು.

ಸಂತೆಪೇಟೆ ಮತ್ತು ಆನೆಸಾರೋಟು ರಸ್ತೆಗಳಲ್ಲಿ ಏಕ ಮುಖ ಸಂಚಾರ

ಮೈಸೂರು ೨೨

ನಗರದ ಆನೆಸಾರೋಟು ರಸ್ತೆ ಮತ್ತು ಹಳೇ ಸಂತೆಪೇಟೆಗಳಲ್ಲಿ ವಾಹನಗಳ ಓಡಾಟವು ಹೆಚ್ಚಿರುವುದರಿಂದ ಏಕಮುಖ ಸಂಚಾರದ ವ್ಯವಸ್ಥೆಯನ್ನು ಜಾರಿಗೆ ತಂದು ಆ ಬಗ್ಗೆ ಆಜ್ಞೆ ಹೊರಡಿಸಲಾಗಿದೆ ಇದರಿಂದ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಕಡೆಗಳಿಂದ ಬರತಕ್ಕ ವಾಹನಗಳು ಆನೆ ಸಾರೋಟು ರಸ್ತೆ ಮೂಲಕ ಬಂದು ಹಳೇ ಸಂತೆಪೇಟೆ ಮಾರ್ಗವಾಗಿ ಬನುಮಯ್ಯನವರ ಛೌಕವನ್ನು ಹಾಯ್ದು ಮುಂದಕ್ಕೆ ಹೋಗಬೇಕೆಂದು ತಿಳಿಸಲಾಗಿದೆ. ಬೆಂಗಳೂರು ಕಡೆಯಿಂದ ಬರತಕ್ಕ ವಾಹನಗಳು ಧನ್ವಂತರಿ ರಸ್ತೆ, ಆನೆ ಸಾರೋಟು ರಸ್ತೆ ಮಾರ್ಗವಾಗಿ ಬನುಮಯ್ಯನವರ ಛೌಕದಿಂದ ಹಾಯ್ದು ಹೋಗತಕ್ಕದ್ದು ನಂಜನಗೂಡು ಕಡೆಯಿಂದ ಬರುವ ವಾಹನಗಳು ಲ್ಯಾನ್ಸ್‌ಡೌನ್ ರಸ್ತೆ ಮಾರ್ಗವಾಗಿ ಹೊಸ ಸ್ಟ್ಯಾಚ್ಯು ಛೌಕದಿಂದ ಹಳೇ ಸಂತೆಪೇಟೆ ಮೂಲಕ ಬನುಮಯ್ಯ ಛೌಕವನ್ನು ಹಾಯ್ದು ಹೋಗಬೇಕು ಸಂತೆಪೇಟೆಯಲ್ಲಿ ದಕ್ಷಿಣದಿಂದ ಉತ್ತರಕ್ಕೆ ಸಂಚಾರವನ್ನು ತಡೆಯಲಾಗಿದೆ

ಧಾನ್ಯಗಳ ಮೇಲೆ ಸಾಲ ನೀಡದಂತೆ ಬ್ಯಾಂಕುಗಳಿಗೆ ಸರ್ಕಾರದ ಸೂಚನೆ ಇಲ್ಲ

ಆಹಾರ ಧಾನ್ಯಗಳ ಮೇಲೆ ವರ್ತಕರಿಗೆ ಬ್ಯಾಂಕುಗಳು ಸಾಲ ಕೊಟ್ಟು, ಅವರು ದಾಸ್ತಾನು ಮಾಡಿ ಆಹಾರದ ಬೆಲೆಗಳನ್ನು ಹೆಚ್ಚಿಸಲು ಕಾರಣವಾಗುವುದನ್ನು ತಪ್ಪಿಸಲು ಆ ರೀತಿ ಸಾಲ ಕೊಡದಂತೆ ಬ್ಯಾಂಕುಗಳಿಗೆ ಸೂಚನೆಯೀಯುವುದು ಅನಾವಶ್ಯಕವೆಂದು ಸರ್ಕಾರದವರು, ಪುರಸಭೆಯವರು ಈ ಬಗ್ಗೆ ಮಾಡಿಕೊಂಡಿದ್ದ ಮನವಿಗೆ ಉತ್ತರವಿತ್ತು ತಿಳಿಸಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗಿಟಾರ್, ೭-೧೫ ಮತ್ತು ೮-೧೫ ಎ ಹೆಚ್ ಶ್ರೀನಿವಾಸಮೂರ್ತಿ-ದೇವರ ನಾಮ ೭-೩೦ ಸುಬ್ರಹ್ಮಣ್ಯಪಿಳ್ಳೆ-ನಾಗಸ್ವರ ಮಧ್ಯಾಹ್ನ ೧೨ ಎ. ಎಚ್ ಶ್ರೀನಿವಾಸಮೂರ್ತಿ-ಗಾಯನ. ೧೨-೩೦ ರಿಕಾರ್ಡುಗಳು ೧೨-೪೫ ಸಂಗೀತ ಕಾರ್ಯಕ್ರಮ ೧-೫೦ ಗಾಯನ ೩ ಬಾಲ ಜಗತ್ ಸಂಜೆ ೫ ೩೦ ಪಿ. ಆರ್ ಸುಂದರರಾಜ ಗಾಯನ ೬ ೫ ಸಂಗೀತ ೬-೨೦ ಹಳೆಯಗಾನ ೬-೩೦ ಗ್ರಾಮಸ್ಥರಿಗಾಗಿ ೭-೩೦ ತಿಂಗಳ ಸಮಾಲೋಚನೆ-ಎಂ ವಿ ಚೌಡಪ್ಪ ೮ ಪಿ ಆರ್ ಸುಂದರರಾಜ-ಸಂಗೀತ. ೮-೩೦ ರೇಡಿಯೊ ನ್ಯೂಸ್ ರೀಲ್ ೮-೪೦ ಪ್ರಸಾರ ಗೀತೆ ೯-೧೫ ಕಿರುಗತೆ ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ-ಗಿರಿಜಾದೇವಿ. ಗಾಯನ, ಮಹಮದ್ ಅಹಮದ್ ಖಾನ್ ಸಾರಂಗಿ, ಗುಲಾಂ ಮಹಮದ್-ತಬಲ

○ ಈಗ ಸಂಬಳ ಮತ್ತು ತುಟ್ಟಿ ಭತ್ಯಗಳೆರಡೂ ಸೇರಿ ೧೧೦ ರೂಗಳವರೆಗೆ ಪಡೆಯುತ್ತಿರುವ ಕೇಂದ್ರದ ಕೆಳದರ್ಜೆ ನೌಕರರಿಗೆ ತುಟ್ಟಿ ಭತ್ಯದಲ್ಲಿ ೬ ರೂ ಹೆಚ್ಚು ಅಲ್ಲಿನ ಸರ್ಕಾರದವರು ಕೊಟ್ಟಿರುತ್ತಾರೆ

ಇಂದಿನಿಂದ ಹೊಸ ರಾಷ್ಟ್ರೀಯ ಕ್ಯಾಲೆಂಡರ್ ಜಾರಿ

ಶಾಲಿವಾಹನ ಶಕೆಯ ಪದ್ಧತಿ ಅನುಸರಣೆ

ಈಗ ಜಾರಿಯಲ್ಲಿರುವ "ಗ್ರೆಗೋರಿಯನ್" ಕ್ಯಾಲೆಂಡರಿನ ಜೊತೆಯಲ್ಲಿಯೇ ಅಧಿಕಾರಿ ವ್ಯವಹಾರಗಳಿಗೆ ಉಪಯೋಗಿಸಲ್ಪಡುವ ಹೊಸ ಶಕೆ ಕ್ಯಾಲೆಂಡರು ನೆನ್ನೆ ಮಧ್ಯ ರಾತ್ರಿಯಿಂದ ಜಾರಿಗೆ ಬಂದಿರುವುದಾಗಿ ಭಾರತ ಸರ್ಕಾರದವರು ಪ್ರಕಟಿಸಿರುತ್ತಾರೆ

ಇಂದು ೧ ೧ ೧೮೭೯ನೇ ದಿನವೆಂದು ಪರಿಗಣಿಸಲಾಗುವುದು ಇದು ಶಾಲಿವಾಹನ ಶಕೆಯನ್ನು ಸೂಚಿಸುತ್ತದೆ ಈ ದಿನವನ್ನೇ ಚೈತ್ರ ಪ್ರಥಮದಿನವೆಂದು ಪರಿಗಣಿಸಲಾಗುವುದು ಮುಂದೆ ಯುಗಾದಿಯ ಹಬ್ಬದನಂತರ ಬರುವ ಪ್ರಥಮೆಯನ್ನಲ್ಲ. ಕಳೆದ ಸುಮಾರು ೧,೮೦೦ ವರ್ಷಗಳಿಂದಲೂ ಪ್ರತಿ ವರ್ಷಕ್ಕೆ ೨೪ ನಿಮಿಷದಂತೆ ಆಗುತ್ತಿದ್ದ ವ್ಯತ್ಯಾಸವನ್ನು ಕ್ರಮಪಡಿಸಲು ನಿಪುಣರ ಸಮಿತಿಯು ಮಾಡಿದ ಸಲಹೆ ಮೇರೆ ಈ ರೀತಿ ಮಾರ್ಪಾಡು ಮಾಡಿರುವುದಾಗಿ ತಿಳಿಯಬಂದಿದೆ ಚೈತ್ರದಿಂದ ಫಾಲ್ಗುಣದವರೆಗೆ ಪ್ರತಿ ತಿಂಗಳ ದಿನ ಸಂಖ್ಯೆಯನ್ನು ಗೊತ್ತುಮಾಡಲಾಗಿದೆ. ಆಧುನಿಕ ಕ್ಯಾಲೆಂಡರಿನಂತೆ ನಾಲ್ಕು ವರ್ಷಕ್ಕೊಮ್ಮೆ ಒಂದು ದಿನವನ್ನು ಚೈತ್ರಮಾಸದಲ್ಲಿ ಹೆಚ್ಚಾಗಿ ಸೇರಿಸಲಾಗುವುದು

ಐಸೆನ್‌ಹೋವರ್ ಮತ್ತು ಮ್ಯಾಕ್‌ಮಿಲನ್ನರ ಭೇಟಿ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರೂ ಮತ್ತು ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್‌ಮಿಲನ್ನರೂ ಬರ್ಮ್ಯೂಡಾ ದ್ವೀಪದಲ್ಲಿ ಮೂರು ದಿನಗಳ ಸಮ್ಮೇಳನವನ್ನು ನೆನ್ನೆ ಆರಂಭಿಸಿದರು ಮಧ್ಯ ಪೂರ್ವದ ಬಗ್ಗೆ ತಮ್ಮೆರಡು ರಾಷ್ಟ್ರಗಳ ನೀತಿಗಳನ್ನು ಸಮನ್ವಯಗೊಳಿಸಲೂ ಮತ್ತು ಪರಸ್ಪರ ಸಂಬಂಧಗಳನ್ನು ಬಲಪಡಿಸಲೂ ಅವರು ಮಾತುಕತೆ ನಡೆಸುವರು

ಸಹೋದರಿಯ ಮರಣದ ದುಃಖದಿಂದ ಆತ್ಮಹತ್ಯೆ

ಬೆಂಗಳೂರು ನಗರದ ಕಂಟೋನ್ಮೆಂಟಿನ [illegible] ಬೀದಿಯಲ್ಲಿ ಕಳೆದ ಭಾನುವಾರ ಮನೆಯ ವಿವಾಹದ ಸಂಭ್ರಮದಲ್ಲಿದ್ದ ಮುನಿಯಮ್ಮ ಎಂಬಾಕೆಯು ಅವಳ ಮೈದುನನಿಂದ ಇರಿಯಲ್ಪಟ್ಟು ಮೃತಳಾದಳಷ್ಟೆ. ಪಶ್ಚಾತ್ತಾಪದಿಂದ ಮೈದುನ ರಂಗಪ್ಪನು ತಾನೂ ಇರಿದುಕೊಂಡು ಈಗ ಅಸ್ವಾಸ್ಥ್ಯದಲ್ಲಿ ಆಸ್ಪತ್ರೆಯಲ್ಲಿದ್ದಾನೆ. ಮುನಿಯಮ್ಮನ ಶವವನ್ನು ಮೊನ್ನೆ ಸಂಸ್ಕಾರ ಮಾಡಿದಾಗ ಅವಳ ತಂಗಿಯು ತಾನೂ ಅವಳನ್ನು ಹಿಂಬಾಲಿಸುವುದಾಗಿ ಕೂಗಿಕೊಂಡಳೆಂದೂ, ನೆನ್ನೆ ನೆಹರೂಪುರದ ತನ್ನ ಮನೆಯಲ್ಲಿ ಆಕೆಯು ನೇಣುಹಾಕಿಕೊಂಡು ಒದ್ದಾಡುತ್ತಿದ್ದುದನ್ನು ನೆರೆಹೊರೆಯವರು ಕಂಡು ಅವಳನ್ನು ಬಿಡಿಸಿದಾಗ ಅವಳು ಒಂದು ಗುಟುಕು ನೀರು ಕುಡಿದನಂತರ ಮೃತಪಟ್ಟಳೆಂದೂ ವರದಿಯಾಗಿದೆ

ಆಕರ್ಷಣೆಯಿಲ್ಲದ, ನಿರ್ಜೀವ ಆಯವ್ಯಯ

ವಿಧಾನ ಪರಿಷತ್ತಿನಲ್ಲಿ ಸದಸ್ಯರ ಟೀಕೆ

ಬೆಂಗಳೂರು ೨೨

ನೆನ್ನೆ ವಿಧಾನ ಪರಿಷತ್ತಿನಲ್ಲಿ ಸಂಸ್ಥಾನದ ಆಯವ್ಯಯದ ಮೇಲೆ ಚರ್ಚೆಯು ಆರಂಭವಾಗಿ ಅನೇಕ ಸದಸ್ಯರು ಅದನ್ನು ಟೀಕಿಸಿದರು.

ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಚರ್ಚೆಯನ್ನು ಆರಂಭಿಸಿ ಎಸ್. ಎಸ್. ಎಲ್. ಸಿ.ಗೆ ಸಮಾನವಾದ ಇತರ ವಿದ್ಯೆಯ ಅರ್ಹತೆಯನ್ನು ಪಡೆದ ಉಪಾಧ್ಯಾಯರಿಗೆ ಎಸ್. ಎಸ್. ಎಲ್. ಸಿ. ಉಪಾಧ್ಯಾಯರಿಗೆ ಸಂಬಳ ಕೊಡಬೇಕೆಂದೂ ವಯಸ್ಕರ ಶಿಕ್ಷಣ ಸಮಿತಿ, ಸಮಾಜ ಯೋಗಕ್ಷೇಮ ಸಮಿತಿ ಮುಂತಾದ ಸಂಸ್ಥೆಗಳನ್ನು ಒಂದುಗೂಡಿಸಬೇಕೆಂದೂ ಮತ್ತು ಮನರಂಜನೆ ತೆರಿಗೆಯ ೩೦ ಲಕ್ಷ ರೂ. ಆದಾಯದಲ್ಲಿ ಹಲವು ಲಕ್ಷ ರೂ.ಗಳನ್ನು ಕಲಾಭಿವೃದ್ಧಿಗಾಗಿ ತೆಗೆದಿಡಬೇಕೆಂದೂ ಸೂಚಿಸಿದರು.

ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು, ಆಯವ್ಯಯವು ನೀರಸ ಮತ್ತು ಆಕರ್ಷಣೆಯಿಲ್ಲದೆ, ನಿರ್ಜೀವವಾಗಿದೆಯೆಂದೂ ಮತ್ತು ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯ ನೈಜ ಚಿತ್ರವನ್ನು ಪ್ರತಿಬಿಂಬಿಸುವುದಿಲ್ಲವೆಂದೂ, [illegible] ಆಯವ್ಯಯದ ಸಾಂಪ್ರದಾಯಿಕ ಹಾದಿಯಿಂದ ಹೊರ ಹೋಗಿಲ್ಲವೆಂದೂ ಟೀಕಿಸಿದರು. [illegible] ರಾಜ್ಯದ ಖನಿಜ ಸಂಪತ್ತನ್ನು ಸದುಪಯೋಗಪಡಿಸಿಕೊಂಡು ಆದಾಯವನ್ನು ಹೆಚ್ಚಿಸಿಕೊಂಡಿಲ್ಲವೆಂದು ನುಡಿದರು. ಸರ್ಕಾರವು [illegible]ವನ್ನು ಕಡಿಮೆ ಮಾಡಬಲ್ಲ ಬಹಳ ಎಚ್ಚರಿಕೆಯಿಂದ ಹಣದ ವೆಚ್ಚ ಮಾಡಬೇಕೆಂದು ಶ್ರೀ ಎಂ. ಎಲ್. ಶ್ರೀಕಂಠಯ್ಯನವರು ಹೇಳಿದರು.

ಇದಕ್ಕೆ ಮುಂಚೆ ಪ್ರಶ್ನೋತ್ತರ ಕಾಲದಲ್ಲಿ ವಿದ್ಯಾ ಸಚಿವ [illegible] ಮಂಜಪ್ಪನವರು ಶ್ರೀ [illegible]ಯವರಿಗೆ ಉತ್ತರವಿತ್ತು ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಸಂಸ್ಥಾನದಲ್ಲಿ ಹೊಸ ಇಂಜನಿಯರಿಂಗ್ ಶಾಲೆಗಳನ್ನು ತೆರೆಯುವ ಬದಲು ೧೨೦೦ ಜನ ವಿದ್ಯಾರ್ಥಿಗಳನ್ನುಳ್ಳ ಒಂದು ಪಾಲಿಟೆಕ್ನಿಕ್ ಶಾಲೆಯನ್ನು ತೆರೆಯಲು ಮತ್ತು ಈಗ ಬೆಂಗಳೂರು ದಾವಣಗೆರೆ ಮತ್ತು ಮಂಗಳೂರುಗಳ ಶಿಕ್ಷಣ ಸಂಸ್ಥೆಗಳನ್ನು ವಿಸ್ತರಿಸಲು ಚಿಕ್ಕಮಗಳೂರು ಮತ್ತು ಗುಲ್ಬರ್ಗಗಳಲ್ಲಿ ಹೊಸ ಟೆಕ್ನಿಕಲ್ ಶಿಕ್ಷಣ ಶಾಲೆಗಳನ್ನು ತೆರೆಯಲು ಸರ್ಕಾರವು ಯೋಚಿಸಿದೆಯೆಂದು ತಿಳಿಸಿದರು. ಧನಾಭಾವದ ಕಾರಣ ಸರ್ಕಾರವು ಎಲ್ಲಾ ಖಾಸಗಿ ಶಾಲೆಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಅಸಾಧ್ಯವೆಂದೂ, ಸಂಸ್ಥಾನದಲ್ಲಿ ರಾಮನಗರದ ಪುರಸಭೆಯ ಪ್ರೌಢ ಶಾಲೆಯನ್ನು ಮಾತ್ರ ಸರ್ಕಾರವು ತೆಗೆದುಕೊಂಡಿತೆಂದೂ ಸಚಿವರು ಶ್ರೀ ರಂಗಪ್ಪನವರಿಗೆ ತಿಳಿಸಿದರು.

ಕೇವಲ ಒಂದು ಓಟಿನಿಂದ ಚುನಾವಣೆಯಲ್ಲಿ ಜಯ

ಪಶ್ಚಿಮ ಬಂಗಾಳ ವಿಧಾನ ಸಭೆಗೆ [illegible] ಕ್ಷೇತ್ರದಿಂದ ನಿಮ್ನವರ್ಗದ ಫೆಡರೇಷನ್ ಉಮೇದುವಾರರಾದ ಶ್ರೀ ಪ್ರಮಥನಾಥ ಘೋಷ್‌ರವರು ಅವರ ಕಾಂಗ್ರೆಸ್ ಸ್ಪರ್ಧಿ ಶ್ರೀ ಮಹಿತೋಷ್ ಸಹಾರವರಿಗಿಂತ ಒಂದು ಓಟು ಹೆಚ್ಚಾಗಿ ಪಡೆದು ಚುನಾಯಿತರಾದರು. ಅವರಿಗೆ ೨೦,೪೪೫ ಮತ್ತು ಶ್ರೀ ಸಹಾರವರಿಗೆ ೨೦,೪೪೪ ಮತಗಳು ಬಂದಿದ್ದುವು.

ಕುಕ್ಕರಹಳ್ಳಿ ಕೆರೆಯಲ್ಲಿ ವಿದ್ಯಾರ್ಥಿಯ ಶವ

ನಗರದ ಕೃಷ್ಣಮೂರ್ತಿಪುರದಲ್ಲಿರುವ ನಿವೃತ್ತ ಅಧ್ಯಾಪಕರಾದ ಶ್ರೀ ಸುಬ್ಬರಾವ್ ಎಂಬುವರ ಪುತ್ರನಾದ, ೨೨ ವರ್ಷದ ಶ್ರೀನಿವಾಸರಾವ್ ಎಂಬ ವಿದ್ಯಾರ್ಥಿಯ ಶವವು ನೆನ್ನೆ ಕುಕ್ಕರಹಳ್ಳಿ ಕೆರೆಯಲ್ಲಿ ಸಿಕ್ಕಿ ಲಕ್ಷ್ಮೀಪುರಂ ಪೊಲೀಸರು ಅದರ ಮಹಜರು ನಡೆಸಿದರು. ಮೃತನು ಹಿಂದೆ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ಎರಡು ಬಾರಿ ಫೇಲಾಗಿದ್ದು ಈ ಬಾರಿ ಮತ್ತೆ ಕಟ್ಟಿದ್ದನೆಂದು ಹೇಳಲಾಗಿದೆ. ಆತನ [illegible] ಪತ್ತೆಯಿಲ್ಲದೆ, ಪೊಲೀಸರಿಗೆ ದೂರು ಕೊಡಲಾಗಿತ್ತೆಂದು ಹೇಳಲಾಗಿದೆ.

ಪಾಕಿಸ್ತಾನದ ಬಗ್ಗೆ ಎಚ್ಚರಿಕೆಯಿಂದಿರಲು ಪಂತರ ಮನವಿ

ಮೊನ್ನೆ ರಾಜ್ಯ ಸಭೆಯಲ್ಲಿ ಗೃಹ ಮಂತ್ರಿ ಪಂತರು ಭಾಷಣ ಮಾಡಿ ಪಾಕಿಸ್ತಾನದಲ್ಲಿ ಕಾಶ್ಮೀರದ ಸಂಬಂಧವಾಗಿ ಭಾರತದ ವಿರುದ್ಧ ನಡೆಸುತ್ತಿರುವ ತೀವ್ರ ಅಪಪ್ರಚಾರವನ್ನು ವಿವರಿಸಿ ಈ ಬಗ್ಗೆ ನಾವೆಲ್ಲರೂ ಎಚ್ಚರದಿಂದಿರಬೇಕೆಂದು ಸೂಚಿಸಿದರು. ಪಾಕಿಸ್ತಾನದವರನ್ನು ನಾವು ದ್ವೇಷಿಸುವುದಿಲ್ಲವಾದರೂ ಅವರು ಇಂದು ಮಾಡುತ್ತಿರುವ ಕಾರ್ಯದ ಫಲವು ಅವರ ಮೇಲೆಯೇ ತಿರುಗಿ ಬೀಳುವುದೆಂದೂ ನುಡಿದು, ನಾವು ಎಲ್ಲರಿಗೂ ಶುಭವನ್ನು ಕೋರುತ್ತೇವೆ, ವೀರಮಾತೆಯ ವೀರಪುತ್ರರಂತೆ ಯಾವ ಸಂದರ್ಭಕ್ಕೂ ತಯಾರಾಗಿ ಇದ್ದೇವೆ ಎಂಬದಾಗಿ ನುಡಿದರು.

ಐರ್ಲೆಂಡ್ ಪ್ರಧಾನಿಯಾಗಿ ಡಿವೇಲರಾರವರ ಆಯ್ಕೆ

ಐರ್ಲೆಂಡ್ ದೇಶದ ಶಾಸನ ಸಭೆಯ ಅಧಿವೇಶನವು ಮೊನ್ನೆ ಜರುಗಿ ಅಲ್ಲಿನ ಹಿರಿಯ ನಾಯಕ ಈಮನ್ ಡಿವೇಲರಾರವರನ್ನು ಪ್ರಧಾನಿಯನ್ನಾಗಿ ಬಹುಮತದಿಂದ ಚುನಾಯಿಸಲಾಯಿತು.

ಕಾಲೇಜ್ ಕ್ಯಾಂಟೀನಿನಲ್ಲಿ ಲಾಕ್‌ಔಟು

ಮೈಸೂರು ಯೂನಿವರ್ಸಿಟಿಯ ಕಾಲೇಜು ಕ್ಯಾಂಟೀನ್ ಮ್ಯಾನೇಜ್‌ಮೆಂಟಿನವರು ಅಲ್ಲಿಯ ಹನ್ನೊಂದು ಜನ ಕೆಲಸಗಾರರನ್ನು ನಾಲ್ಕು ತಿಂಗಳ ಸಂಬಳ ಕೊಡದೆ ಕಾನೂನು ಬಾಹಿರವಾಗಿ ಲಾಕ್ ಔಟ್ ಮಾಡಿರುತ್ತಾರೆ. ಸಂಧಾನಕ್ಕೆ ಎಷ್ಟು ಪ್ರಯತ್ನಪಟ್ಟರೂ ಅದಕ್ಕೆ ಒಪ್ಪುತ್ತಿಲ್ಲ. ಇದರಿಂದ ಅಲ್ಲಿಯ ಕೆಲಸಗಾರರಿಗೂ ಮತ್ತು ಪರೀಕ್ಷೆಗಳಿಗೆ ಓದುತ್ತಿರುವ ವಿದ್ಯಾರ್ಥಿಗಳಿಗೂ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ಯಾಂಟೀನ್ ನಡೆಯುವಂತೆ ತಕ್ಕ ವಿಚಾರಣೆಗಳನ್ನು ಮಾಡಬೇಕೆಂದೂ ಮತ್ತು ಅಲ್ಲಿಯ ಕೆಲಸಗಾರರಿಗೆ ಕೊಡಬೇಕಾಗಿರುವ ಸಂಬಳವನ್ನು ಕೊಟ್ಟು ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಮ್ಯಾನೇಜ್‌ಮೆಂಟಿನವರಿಗೆ ಎಲ್ಲಾ ಪುರಜನರು ಒತ್ತಾಯ ತರುವಂತೆ ಮಾಡಬೇಕೆಂದೂ ಹೋಟೆಲು ಕೆಲಸಗಾರರ ಸಂಘದ ಕಾರ್ಯದರ್ಶಿಗಳು ಮನವಿ ಮಾಡಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಬಂಗಾರದಕಡ್ಡಿ ಮತ್ತು ಕೆಂಪು [illegible]	[illegible]	[illegible]
ದಪ್ಪ ಭತ್ತ	[illegible]	[illegible]
ಅಕ್ಕಿ	[illegible]	[illegible]
[illegible]	[illegible]	
ರಾಗಿ	[illegible]	[illegible]
ಜೋಳ	[illegible]	[illegible]
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	[illegible]
ಹರಳುಬೀಜ	[illegible]	
ತೊಗರಿಬೇಳೆ	[illegible]	[illegible]
ಹುರುಳಿ	[illegible]	[illegible]
ಅಲಸಂದೆ	[illegible]	[illegible]
ಅವರೆ	[illegible]	[illegible]
ಧನಿಯ	[illegible]	[illegible]
ಉದ್ದು	[illegible]	
ಕಡಲೆ	[illegible]	[illegible]
ಕಡಲೆಬೇಳೆ	[illegible]	[illegible]
ಹುಣಸೆಬೀಜ	[illegible]	[illegible]
ಹುಣಸೆಹಣ್ಣು	[illegible]	[illegible]
[illegible]	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧,೧೦೦	[illegible]	

ಮನೆ ಕ್ರಯಕ್ಕಿದೆ

ನರಸಿಂಹರಾಜ ಮೊಹಲ್ಲಾ, ಮಹಾರಾಣಾ ಪ್ರತಾಪ್ ಸರ್ಕಲ್ ಬಳಿ ಹೊಸ ತಾರಸಿ ಕಟ್ಟಡ 1831 ನೇ ನಂ. 2 ಅಡ್ಡ ರಸ್ತೆ ಇದ್ದು ನಲ್ಲಿ ದೀಪ, ಕಾಂಪೌಂಡ್ ಇವೆ. ಹಾಲಿ 50 ರೂ. ಬಾಡಿಗೆ ಬರುತ್ತಿದೆ. 2 ಸಂಸಾರಕ್ಕೆ ಅನುಕೂಲವಾಗಿದೆ. ರೂ. 7,500

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲಾ ಬಳಿ, ಮೈಸೂರು

ಬ್ರಿಟನ್ನಿನಲ್ಲಿ ಇಂಜನಿಯರಿಂಗ್ ನೌಕರರಿಂದಲೂ ಮುಷ್ಕರ

ಬ್ರಿಟನ್ನಿನಲ್ಲಿ ಎರಡು ಲಕ್ಷ ರೇವು ಕೆಲಸಗಾರರು ಮುಷ್ಕರ ಕೈಗೊಂಡಿರುವುದರ ಜೊತೆಗೆ ನಾಳೆಯಿಂದ ೩೦ ಲಕ್ಷ ಇಂಜನಿಯರಿಂಗ್ ನೌಕರರೂ ಮುಷ್ಕರವನ್ನಾರಂಭಿಸುವ ಸಂಭವವಿರುವುದೆಂದೂ, ಇದರಿಂದ ಉಂಟಾಗುವ ಉತ್ಕಟ ಪರಿಸ್ಥಿತಿಯನ್ನು ನಿವಾರಿಸಲು ಅಲ್ಲಿನ ಕಾರ್ಮಿಕ ಸಚಿವರು ತೀವ್ರವಾಗಿ ಪ್ರಯತ್ನಿಸುತ್ತಿರುವರೆಂದೂ ವರದಿಯಾಗಿದೆ.

ಕೇರಳದಲ್ಲಿ ಕಮ್ಯೂನಿಸ್ಟರಿಗೆ ಬಹುಮತ

ಕೇರಳದಲ್ಲಿ ಮೊನ್ನೆ ಕಮ್ಯೂನಿಸ್ಟ್ ಪಕ್ಷಕ್ಕೆ ವಿಧಾನ ಸಭೆಯ ಮತ್ತೊಂದು ಸ್ಥಾನವು [illegible] ಕ್ಷೇತ್ರದಿಂದ ದೊರೆತು ಅದರ ಬಲವು ೬೦ಕ್ಕೆ ಏರಿತು. ಇನ್ನು ೨ ಸ್ಥಾನಗಳ ಫಲಿತಾಂಶವು ಪ್ರಕಟವಾಗಿಲ್ಲ. ಕಮ್ಯೂನಿಸ್ಟ್ ಬೆಂಬಲದಿಂದ ಚುನಾವಣೆಯಲ್ಲಿ ಗೆದ್ದ ೫ ಜನ ಸ್ವತಂತ್ರರ ಬಲವೂ ಸೇರಿದರೆ ಕಮ್ಯೂನಿಸ್ಟರಿಗೆ ಸರ್ಕಾರ ರಚಿಸಲು ಸಾಕಾಗುವ ೬೫ ಸ್ಥಾನಗಳ ಬಹುಮತವು ದೊರೆಯುವುದು.

ದುರ್ಗಾದೇವಿ ಜಾತ್ರೆ

ಮೈಸೂರು [illegible] ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಮಾಮೂಲಿನಂತೆ ಜಾತ್ರೆ ನಡೆಯುವುದು. ಇದೇ ೨೫ನೇ ಸೋಮವಾರ ತೊಟ್ಟಿಲ್ಲಾದಲ್ಲಿ ಉತ್ಸವ ನಡೆಯುವುದು. ೨೬ನೇ ತಾರೀಕು ಮಧ್ಯಾಹ್ನ ೧ ಘಂಟೆಗೆ ಉತ್ಸವವು ಮೆರೆದು ೪-೩೦ ಗಂಟೆಗೆ ದೇವಸ್ಥಾನಕ್ಕೆ ಬಿಜಯ ಮಾಡುವುದು. ಭಕ್ತಾದಿಗಳಿಂದ ಮಹಾ ಮಂಗಳಾರತಿ ನಡೆಯುವುದು. ರಾತ್ರಿ ೭-೩೦ ಗಂಟೆಗೆ ಉತ್ಸವವು ರಾಜಧಾನಿಯಲ್ಲಿ ನಡೆಯುವುದು. ತಾರೀಕು ೨೯-೩-೫೭ನೇ ಶುಕ್ರವಾರ ಸಾಯಂಕಾಲ ೮ ಗಂಟೆಗೆ ಮರು ಪೂಜೆ ನಡೆಯುವುದು. ಭಕ್ತಾದಿಗಳು ಸಕಾಲಕ್ಕೆ ಬಂದು ದುರ್ಗಾದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸಲಾಗಿದೆ.

ಸಂಸ್ಥಾನದ ಗೇಣಿ ಶಾಸನಗಳ ಸಮನ್ವಯಕ್ಕಾಗಿ ಪರಿಣತರ ಸಮಿತಿ

ಸಂಸ್ಥಾನದ ವಿವಿಧ ಭಾಗಗಳಲ್ಲಿ ಬೇರೆಬೇರೆ ರೀತಿಯ ಗೇಣಿ ಶಾಸನಗಳೆಲ್ಲವನ್ನೂ ಸಮನ್ವಯಗೊಳಿಸಿ ಇಡೀ ಸಂಸ್ಥಾನಕ್ಕೆ ಅನ್ವಯಿಸುವ ರೀತಿಯಲ್ಲಿ ಶಾಸನ ಮಾಡಲು ಸೂಕ್ತ ಸಲಹೆಯನ್ನೀಯುವುದಕ್ಕಾಗಿ ಪರಿಣತರ ಸಮಿತಿಯೊಂದನ್ನು ಸರ್ಕಾರದವರು ರಚಿಸಲಿದ್ದಾರೆಂದು ರೆವಿನ್ಯೂ ಮಂತ್ರಿ ಮಲ್ಲನಗೌಡ ಪಾಟೀಲರು ಮೊನ್ನೆ ಶಾಸನ ಸಭೆಯಲ್ಲಿ ಗೇಣಿ ಕುರಿತ ಶಾಸನಗಳನ್ನು ಮಂಡಿಸುತ್ತಾ ತಿಳಿಸಿದರು.

ಹಬ್ಬಕ್ಕೆ ಲಾಂಗ್ ಕ್ಲಾತ್‌ಗಳು

30" [illegible] ಗಜಕ್ಕೆ 0 12 0
33" [illegible] ,, ,, 0 15 0
44" [illegible] ,, ,, 1 8 0

[illegible]
ಬಾಹುಸಾರ್ ಕಂಪೆನಿ,
[illegible] ರಸ್ತೆ, ಮೈಸೂರು

SREE GAYATHRI
TALKIES
From 22-3-57 For 3 days
M.G.M's
HIGH SOCIETY
Starring :- Bing Crosby, Grace Kelly and Frank Sinatra

ಗೀತಾ ಮಿಲ್ಕ್ ಡೈರಿ
390- 6ನೇ ಮೇನ್ ರೋಡ್
([illegible] ಹತ್ತಿರ)
ವಾಣಿವಿಲಾಸ ಮೊಹಲ್ಲಾ, ಮೈಸೂರು

ಅಪ್ಪಟ ಹಾಲಿನ ಸರಬರಾಜು
ಇಲ್ಲಿ ಎದುರಿಗೇ ಕರೆದ, ಶುದ್ಧವಾದ ಹಸುವಿನ ಹಾಲನ್ನು ಸಪ್ಲೈ ಮಾಡಲಾಗುತ್ತದೆ. ಮನೆ ಡಿಲಿವರಿಯೂ ಸಹಾ ಉಂಟು. ವಿವರಗಳಿಗೆ ವಿಚಾರಿಸಿ.

ಕೇಂದ್ರ ಸಚಿವ ಮಹಾವೀರ ತ್ಯಾಗಿಯವರ ಜಯ

ಲೋಕ ಸಭೆಗೆ ಆಚಾರ್ಯ ಕೃಪಲಾನಿ ಮತ್ತು ದಾಂಗೆಯವರ ಆಯ್ಕೆ

ಕೇಂದ್ರ ಸರ್ಕಾರದ ರಕ್ಷಣಾ ಶಾಖೆಯ ಸಚಿವರಾಗಿರುವ ಮಹಾವೀರ ತ್ಯಾಗಿಯವರು ಉತ್ತರ ಪ್ರದೇಶದ ಡೆಹರಾಡೂನ್ ಕ್ಷೇತ್ರದಿಂದ ಲೋಕಸಭೆಗೆ ಆರಿಸಲ್ಪಟ್ಟಿರುವರು.

ಮಧ್ಯ ಬೊಂಬಾಯಿಯ ದ್ವಿಸದಸ್ಯ ಕ್ಷೇತ್ರದಿಂದ ಸಾಮಾನ್ಯ ಸ್ಥಾನಕ್ಕೆ ಕಮ್ಯೂನಿಸ್ಟ್ ಉಮೇದುವಾರ ಎಸ್. ಎ. ದಾಂಗೆಯವರು ಮತ್ತು ಮೀಸಲು ಸ್ಥಾನಕ್ಕೆ ನಿಮ್ನ ವರ್ಗಗಳ ಫೆಡರೇಷನ್ನಿನ ಜಿ. ಕೆ. ಮಾನೆಯವರೂ ಲೋಕಸಭೆಗೆ ಆರಿಸಲ್ಪಡುವರು.

ಪ್ರಜಾ ಸಮಾಜವಾದಿ ಪಕ್ಷದ ನಾಯಕ ಆಚಾರ್ಯ ಜೆ. ಬಿ. ಕೃಪಲಾನಿಯವರು ಬಿಹಾರದ ಸೀತಾಮಹಿ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾಗಿರುವರು.

ಗುಲ್ಬರ್ಗಾ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ

ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಉಂಟಾಗಿರುವ ಅಭಾವ ಪರಿಸ್ಥಿತಿಯ ಬಗ್ಗೆ ವರದಿ ಮಾಡಲು ಅಲ್ಲಿನ ಜಿಲ್ಲಾಧಿಕಾರಿಗಳು ತಹಸೀಲ್ದಾರರನ್ನು ನೇಮಿಸಿದ್ದಾರೆ. ಅದನ್ನು "ಕ್ಷಾಮ ಪ್ರದೇಶ"ವೆಂದು ಕರೆಯಲು ಅಲ್ಲಿನವರು ಒತ್ತಾಯ ಮಾಡಿದ್ದಾರೆ.

ಸಮಾಜವಾದಿ ಪಕ್ಷದ ನಾಯಕ ಡಾ|| ರಾಮಮನೋಹರ ಲೋಹಿಯಾರವರು ಉತ್ತರ ಪ್ರದೇಶದ ಚಾಂದೋಲಿ ಎಂಬ ಕ್ಷೇತ್ರದಿಂದ ಲೋಕಸಭೆಗೆ ಚುನಾವಣೆಯಲ್ಲಿ ಸ್ಪರ್ಧಿಸಿ, ಕಾಂಗ್ರೆಸ್ ಪ್ರತಿಸ್ಪರ್ಧಿಯಿಂದ ಸೋಲಿಸಲ್ಪಟ್ಟಿರುವರು.

ಒಲಂಪಿಯಾ ಟಾಕೀಸ್
22-3-57ರಿಂದ: ದಿನವಹಿ 3 ಪ್ರದರ್ಶನಗಳು
[illegible] ಪಿಕ್ಚರ್ಸ್‌ರವರ
ಬಸಂತ್ ಪಂಚಮಿ
ಪಾತ್ರ: ನಿರೂಪಾರಾಯ್, ಜೀವನ್, [illegible]
ನಿರ್ದೇಶಕ: ಜಯಂತ್ ದೇಸಾಯ್

ಲಕ್ಷ್ಮಿ ಟಾಕೀಸ್
22-3-57ರಿಂದ
ಪ್ರತಿದಿನ 3 ಆಟಗಳು
ದಿನವಹಿ 3 ಆಟಗಳು
[illegible]
ಮಕ್ಕಳೈ ಪೆತ್ರ
— ಮಹಾರಾ
ಪಾತ್ರ:- [illegible] ಗಣೇಶನ್, [illegible]

ಸಿಟಿ ಕೋ-ಆಪರೇಟಿವ್ ಬ್ಯಾಂಕ್
ಲಿಮಿಟೆಡ್, ಮೈಸೂರು
ಪ್ರಕಟಣೆ

ಬ್ಯಾಂಕಿನ 45ನೆಯ ವಾರ್ಷಿಕ ಮಹಾಸಭೆಯು ಇದೇ ಮಾಹೆ 24ನೆಯ ತಾರೀಖು ಭಾನುವಾರ ಮಧ್ಯಾಹ್ನ 2-30 ಘಂಟೆಯ ವೇಳೆಯಲ್ಲಿ ಮೈಸೂರು ಡಿ. ಬನುಮಯ್ಯನವರ ಹೈಸ್ಕೂಲ್ ಸಭಾಂಗಣದಲ್ಲಿ ನಡೆಯಲು ಏರ್ಪಾಡಾಗಿದೆ. ಈ ಬಗ್ಗೆ ಬ್ಯಾಂಕು ಮೆಂಬರುಗಳಿಗೆ ರಿಪೋರ್ಟ್ ಪ್ರತಿಗಳನ್ನು ಕಳುಹಿಸಿರುವುದು ಸರಿಯಷ್ಟೆ. ಕೆಲವು ರಿಪೋರ್ಟ್ ಪ್ರತಿಗಳು ಅಂಚೆ ಇಲಾಖೆಯಿಂದ ವಿಳಾಸಗಳು ಸರಿಯಿಲ್ಲವೆಂಬ ಸಬೂಬಿನಿಂದ ವಾಪಸ್ಸಾಗಿರುತ್ತವೆ. ಸದರಿ ಮೆಂಬರುಗಳು ಆಫೀಸು ವೇಳೆಯಲ್ಲಿ ಬ್ಯಾಂಕಿನಲ್ಲಿ ವಿಚಾರಿಸಿ ರಿಪೋರ್ಟ್ ಪ್ರತಿಗಳನ್ನು ಪಡೆಯಬಹುದೆಂದೂ ಈ ಪ್ರಕಟಣೆಯನ್ನು ಆಹ್ವಾನವಾಗಿ ಅಂಗೀಕರಿಸಿ ಮೀಟಿಂಗಿಗೆ ದಯಮಾಡಿಸಬೇಕಾಗಿ ವಿನಂತಿ.

ಆರ್. ಕೃಷ್ಣಸ್ವಾಮಿ,
ಗೌ|| ಕಾರ್ಯದರ್ಶಿಗಳು

Edited, Printed and Published
A. R. Nagarajan at Sadhvi
D. Subbiah Road, Mysore

[illegible] 790

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

[illegible]

ಸಂಸ್ಥಾನದ ವಿದ್ಯಮಾನಗಳನ್ನು
ಪ್ರಕಾಶಪಡಿಸುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೩] SADHVI : SATURDAY 23—3—1957 ಮೈಸೂರು : ಶನಿವಾರ ೨೩—೩—೧೯೫೭ : [ಸಂಚಿಕೆ : ೨೩೪

ಬಾಗ್ದಾದ್ ಕೌಲಿನ ಸೇನಾ ಸಮಿತಿಗೆ ಅಮೆರಿಕದ ಸೇರ್ಪಡೆ

ಶ್ವವಿದ್ಯಾಲಯಕ್ಕೆ ೧ ಕೋಟಿಗೆ ಾರಿದ ಆದಾಯದ ನಿರೀಕ್ಷಣೆ

ಆಯವ್ಯಯದ ಅಂದಾಜಿನಲ್ಲಿ ೧೬ ಲಕ್ಷ ರೂ. ಕೊರತೆ

ಬೆಂಗಳೂರು ೨೩

ವಿಶ್ವವಿದ್ಯಾಲಯದ ಸೆನೆಟ್ ಸಭೆಯು ನೆನ್ನೆ ಲ್ಲಿ ಉಪಕುಲಪತಿ ಡಾ|| ಕೆ ವಿ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು ಸಿಂಡಿಕೇಟಿನ ಸದಸ್ಯರಾದ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರು ಸಭೆಯಲ್ಲಿ ೧೯೫೭-೫೮ನೇ ಸಾಲಿನ ಆಯವ್ಯಯದ ಅಂದಾಜನ್ನು ಮಂಡಿಸಿ, ಆ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ೩೦,೩೫,೩೪೦ ರೂ. ಗಳ ವೆಚ್ಚವೂ ಮತ್ತು [illegible] ರೂ ಆದಾಯವೂ ಬಂದು [illegible] ರೂ ಕೊರತೆ ಬೀಳುವುದೆಂದು ತಿಳಿಸಿದರು ಈ ಬಗ್ಗೆ ಅವರು ವಿವರಗಳನ್ನಿತ್ತು ಸಂಸ್ಥಾನ ಸರ್ಕಾರದಿಂದ ೮೪,೪೭,೯೮೪ ರೂ ಗಳನ್ನು ಗ್ರಾಂಟ್ ರೂಪದಲ್ಲೂ ಮತ್ತು ಕೇಂದ್ರ ವಿಶ್ವವಿದ್ಯಾಲಯದ ಗ್ರಾಂಟ್ ಕಮೀಷನ್ನಿನಿಂದ [illegible] ರೂ ಗಳನ್ನು ಗ್ರಾಂಟ್ ರೂಪದಲ್ಲೂ ಪಡೆಯಲಾಗುವುದೆಂದೂ, ಶಿಕ್ಷಣ ಶುಲ್ಕದಿಂದ ೧೯೦ ೦೦೦ ರೂ.ಗಳ ಆದಾಯವನ್ನು ನಿರೀಕ್ಷಿಸಲಾಗಿದೆಯೆಂದೂ ನುಡಿದರು

ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಒಂದು ಕೋಟಿಯಷ್ಟು ಮೊಬಲಗಿನ ಬಜೆಟ್ಟನ್ನು ತಯಾರಿಸಿರುವುದು ಇದೇ ಮೊದಲೆಂದೂ ಮತ್ತು ಇದೇ ಪ್ರಥಮ ಕೊರತೆ ಬಜೆಟ್ ಆಗಿರುವುದೆಂದೂ ಅವರು ಹೇಳಿದರು ಕೊರತೆಯನ್ನು ಭರ್ತಿ ಮಾಡಲೂ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸಲೂ ಮತ್ತು ಇತರ ಹಲವು ಸುಧಾರಣೆಗಳನ್ನು ಜಾರಿಗೆ ತರಲೂ ಶಿಕ್ಷಣ ಶುಲ್ಕವನ್ನೂ, ಪ್ರಯೋಗ ಶಾಲೆಗಳ ಮತ್ತು ಇತರ ಶುಲ್ಕಗಳನ್ನೂ ಹೆಚ್ಚಿಸಬೇಕಾಗುವುದೆಂದೂ ಅವರು ತಿಳಿಸಿದರು

ಶ್ರೀ ಎನ್ ಶ್ರೀನಿವಾಸಮೂರ್ತಿಯವರು ಮಾತನಾಡಿ ಕನ್ನಡ ಪ್ರಾಧ್ಯಾಪಕರನ್ನು ಹೆಚ್ಚಾಗಿ ನೇಮಿಸಬೇಕೆಂದೂ, ವಿಶ್ವವಿದ್ಯಾಲಯ ಪುಸ್ತಕ ಭಂಡಾರವನ್ನು ವಿಸ್ತರಿಸಿ ಅದಕ್ಕಾಗಿ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದೂ ಮತ್ತು ಮೈಸೂರು ಮಹಾರಾಣಿ ಕಾಲೇಜನ್ನು ಉತ್ತಮ ಪಡಿಸಲು ಹಣವನ್ನೊದಗಿಸಬೇಕೆಂದೂ ತಿಳಿಸಿ ಶುಲ್ಕವನ್ನು ಹೆಚ್ಚಿಸುವುದು ಬಡ ವಿದ್ಯಾರ್ಥಿಗಳಿಗೆ ತೊಂದರೆಯುಂಟುಮಾಡುವುದರಿಂದ ಆ ಯೋಚನೆಯನ್ನು ಬಿಡಬೇಕೆಂದೂ ಅವರು ಹೇಳಿದರು.

ಶ್ರೀ ಎ ಸಿ ದೇವೇಗೌಡರು ಮಾತನಾಡಿ ವಿಶ್ವವಿದ್ಯಾಲಯವು ತನ್ನದೇ ಆದ ಒಂದು ಮುದ್ರಣಾಲಯವನ್ನು ಹೊಂದಿದ್ದರೆ ಕಾಲೇಜಿಗೆ ಬೇಕಾಗುವ [illegible] ಅಚ್ಚಿಸಬಹುದೆಂ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ದಾನವನ್ನು ಸ್ವೀಕರಿಸಿ, ಅವರಿಗೆ ಸಿಂಡಿಕೇಟಿನಲ್ಲಿ ಸ್ಥಾನ ಕೊಡುವ ಬಗ್ಗೆ ಕಾನೂನಿನಲ್ಲಿ ಅವಕಾಶವಿರಬೇಕೆಂದೂ ತಿಳಿಸಿದರು.

ಏಪ್ರಿಲ್ ಕಡೆಯಲ್ಲಿ ಸಂಸ್ಥಾನದ ಹೊಸ ಮಂತ್ರಿಮಂಡಲ

ಬೆಂಗಳೂರು ೨೩

ಬರುವ ತಿಂಗಳು ೧೫ನೇ ತಾರೀಕಿನೊಳಗೆ ಸಂಸ್ಥಾನದ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯು ನಡೆದು ಅನಂತರ ಎರಡು ವಾರಗಳೊಳಗೆ ಹೊಸ ಮಂತ್ರಿಮಂಡಲವು ರಚಿಸಲ್ಪಟ್ಟು ಅಧಿಕಾರ ವಹಿಸಿಕೊಳ್ಳುವುದೆಂದು ವರದಿಯಾಗಿದೆ

ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ರಚನೆ ಬಗ್ಗೆ ಸಮಾಲೋಚನೆ

ಕೇರಳದ ಚುನಾವಣೆಯಲ್ಲಿ ಬಹುಮತ ಪಡೆದಿರುವ ಕಮ್ಯೂನಿಸ್ಟ್ ಪಕ್ಷವು ಸಂಸ್ಥಾನದಲ್ಲಿ ಸರ್ಕಾರವನ್ನು ರಚಿಸುವ ಬಗ್ಗೆ ಭಾರತದ ಕೇಂದ್ರ ಮತ್ತು ಸಂಸ್ಥಾನದ ಪಕ್ಷಗಳು ನೆನ್ನೆ ಎರ್ನಾಕುಲಮ್ಮಿನಲ್ಲಿ ಸಭೆ ನಡೆಸಿ, ಅಧಿಕಾರ ವಹಿಸಿಕೊಂಡ ನಂತರ ಪಕ್ಷದ ಚುನಾವಣಾ ಪ್ರಣಾಳಿಕೆಯಂತೆ ರಾಷ್ಟ್ರದ ರಾಜ್ಯಾಂಗದ ಎಲ್ಲೆಕಟ್ಟಿನೊಳಗೆ ಆಡಳಿತ ನಡೆಸುವ ವಿಷಯವನ್ನು ಪರಿಶೀಲಿಸಿದುವೆಂದು ವರದಿಯಾಗಿದೆ

ಅಲ್ಲಿನ ಕಮ್ಯೂನಿಸ್ಟ್ ಸರ್ಕಾರಕ್ಕೆ ಪಿ ಎಸ್ ಪಿ ಪಕ್ಷದ ಬೆಂಬಲ ದೊರಕಿಸುವ ಬಗ್ಗೆ ಪ್ರಯತ್ನಗಳಾಗುತ್ತಿರುವುವೆಂದೂ, ಆದರೆ ಅದು ಆಶಾದಾಯಕವಾಗಿಲ್ಲವೆಂದೂ ಹೇಳಲಾಗುತ್ತಿದೆ ಕೇರಳದ ಗವರ್ನರ್ ಶ್ರೀ ರಾಮಕೃಷ್ಣರಾಯರು ದೆಹಲಿಗೆ ತೆರಳಿರುವರು. ಸಂಸ್ಥಾನದಲ್ಲಿ ಸರ್ಕಾರದ ರಚನೆ ಬಗ್ಗೆ ಅವರು ಪ್ರಧಾನಿ ನೆಹರೂ ಮತ್ತು ಗೃಹ ಸಚಿವ ಪಂತರೊಡನೆ ಮಾತುಕತೆ ನಡೆಸುವರೆಂದು ಗೊತ್ತಾಗಿದೆ

ಸೇವಕನಿಗೆ ನ್ಯಾಯಾಧೀಶರಿಂದ ಸತ್ಕಾರ ಕೂಟ

ಬಳ್ಳಾರಿಯ ಜಿಲ್ಲಾ ನ್ಯಾಯಾಲಯದ ಸೇವಕನಾದ ಕೆ ನಾಗಪ್ಪ ಎಂಬುವನು ನಿವೃತ್ತನಾದ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಭೀಮಯ್ಯನವರು ಅವನನ್ನು ಬೀಳ್ಕೊಡಲು ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು ಜಡ್ಜರು ಸ್ವತಃ ಅವನಿಗೆ ಹಾರವನ್ನು ಹಾಕಿ, ೩೦ ವರ್ಷ ಕಾಲ ಅವನು ಶ್ರದ್ಧಾ ಭಕ್ತಿಯಿಂದ ಸೇವೆ ಸಲ್ಲಿಸಿದುದನ್ನು ಪ್ರಶಂಸಿಸಿದರು ಜಿಲ್ಲಾ ನ್ಯಾಯಾಧೀಶರು ಒಬ್ಬ ಸೇವಕನ ಬಗ್ಗೆ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದುದು ಇದೇ ಪ್ರಥಮವೆಂದು ಹೇಳಲಾಗಿದೆ

ಎನ್ ಜಿ ಓ ಗಳಿಗೆ ಹಬ್ಬಕ್ಕಾಗಿ ಸಂಬಳದ ಮುಂಗಡ

ಸಂಸ್ಥಾನದ ಎನ್ ಜಿ ಓ ಗಳಿಗೆ ಸೌರಮಾನ ಮತ್ತು ಚಾಂದ್ರಮಾನ ಯುಗಾದಿ, ಸಂಕ್ರಾಂತಿ, ದೀಪಾವಳಿ, ರಂಜಾನ್, ಬಕ್ರೀದ್ ಮತ್ತು ಕ್ರಿಸ್‌ಮಸ್ ಹಬ್ಬಗಳ ಸಂದರ್ಭಗಳಲ್ಲಿ ಒಂದು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಡುವಂತೆ ಸರ್ಕಾರೀ ಆಜ್ಞೆಯಾಗಿದೆ

ಶ್ರೀ ಟಿ ಎಸ್ ರಾಜಗೋಪಾಲ ಅಯ್ಯಂಗಾರ್ಯರು [illegible] ಖರ್ಚನ್ನು ಕಡಿಮೆ ಮಾಡಲು ಮಾರ್ಗಗಳನ್ನು ಕಂಡುಹಿಡಿಯಬೇಕೆಂದು ನುಡಿದರು

ಬಾಗ್ದಾದ್ ಒಪ್ಪಂದದ ಸೇನಾ ಸಮಿತಿಗೆ ಸೇರಲು ಅಮೆರಿಕದ ಒಪ್ಪಿಗೆ

ಬಾಗ್ದಾದ್ ಒಪ್ಪಂದ ಕೂಟದ ಆರ್ಥಿಕ ಮಂಡಲಿಯ ಸದಸ್ಯತ್ವವನ್ನು ಈಗಾಗಲೇ ಹೊಂದಿರುವ ಅಮೆರಿಕವು ಒಪ್ಪಂದದ ಸೇನಾ ಸಮಿತಿಗೂ ಸೇರಲು ಒಪ್ಪಿರುವುದಾಗಿ ನೆನ್ನೆ ಬರ್ಮುಡಾ ಸಮ್ಮೇಳನದಲ್ಲಿ ಬ್ರಿಟನ್ನಿಗೆ ತಿಳಿಸಲಾಯಿತೆಂದು ವರದಿಯಾಗಿದೆ ಇದರಿಂದ ಕಮ್ಯೂನಿಸ್ಟರ ವಿರುದ್ಧ ಸಂಯುಕ್ತ ಸೇನಾ ಕಾರ್ಯಾಚರಣೆಯನ್ನು ಯೋಜಿಸಲು ಸಾಧ್ಯವಾಗುವುದೆಂದೂ, ಒಪ್ಪಂದದ ಪೂರ್ಣ ಸದಸ್ಯತ್ವವನ್ನು ಪಡೆಯುವ ಕಾರಣ ಇತರ ಸದಸ್ಯ ರಾಷ್ಟ್ರಗಳೊಡನೆ ಹೋರಾಡುವಾಗ ಅಮೆರಿಕವು ಅವುಗಳ ಸಹಾಯಕ್ಕೇನೂ ಬರಬೇಕಾದುದಿಲ್ಲವೆಂದೂ ಅಲ್ಲಿನ ವಿದೇಶಾಂಗ ಶಾಖೆಯ ವಕ್ತಾರರು ತಿಳಿಸಿರುವರು ಅಮೆರಿಕದ ಈ ನಿರ್ಧಾರವನ್ನು ಕೂಟದ ಸದಸ್ಯ ರಾಷ್ಟ್ರಗಳಿಗೂ ತಿಳಿಸಲಾಗಿದೆಯೆಂದು ಅವರು ತಿಳಿಸಿದರು

ಬೇವಿನ ಮರದ ಹಕ್ಕಿನ ಜಗಳದಲ್ಲಿ ೮ ಜನರ ಮರಣ

ಕಾಶಿಯ ಬಳಿ ಮಚ್ಲಿ ಎಂಬ ಹಳ್ಳಿಯಲ್ಲಿ ವಿವಾದಾಸ್ಪದವಾಗಿದ್ದ ಒಂದು ಬೇವಿನ ಮರವನ್ನು ತಾವು ಕೊಂಡುಕೊಂಡುದಾಗಿ ಹೇಳಿ ಹಲವರು ಕಡಿಯಲು ಮೊನ್ನೆ ಹೋದಾಗ ಮತ್ತೊಂದು ಗುಂಪಿನವರು ಅದು ಗ್ರಾಮ ಸಮಾಜಕ್ಕೆ ಸೇರಿದುದೆಂದು ಹೇಳಿ ಅವರನ್ನು ತಡೆದರೆಂದೂ, ಮಾತು ಬೆಳೆದು ಕೊನೆಯಲ್ಲಿ ತೀವ್ರ ಹೊಡೆದಾಟವಾಗಿ ಸ್ಥಳದಲ್ಲೇ ೬ ಮಂದಿಯೂ, ಪೋಲೀಸ್ ಠಾಣೆಗೆ ಒಯ್ಯುತ್ತಿದ್ದಾಗ ಒಬ್ಬನೂ, ಆಸ್ಪತ್ರೆಯಲ್ಲಿ ಮತ್ತೊಬ್ಬನೂ ಮೃತಪಟ್ಟರೆಂದೂ ಗೊತ್ತಾಗಿದೆ ಇಬ್ಬರಿಗೆ ತೀವ್ರ ಗಾಯಗಳಾದುವು

ಎಂ ಎಸ್ ಸ್ವಾಮಿನಾಥನ್‌ರವರು ರೆವಿನ್ಯೂ ಕಾರ್ಯದರ್ಶಿ

ಶಿವಮೊಗ್ಗದ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್. ಸ್ವಾಮಿನಾಥನ್‌ರವರನ್ನು ಸರ್ಕಾರದ ರೆವಿನ್ಯೂ ಕಾರ್ಯದರ್ಶಿಯಾಗಿ ವರ್ಗಾಯಿಸಿ, ಉಪ ಕಾರ್ಯದರ್ಶಿ ಶ್ರೀ ಆರ್ ಭರಮಯ್ಯನವರಿಗೆ ಬಡ್ತಿಯಿತ್ತು ಶಿವಮೊಗ್ಗ ಜಿಲ್ಲೆಗೆ ವರ್ಗಾಯಿಸಲಾಗಿದೆ

ಕಾಲೇಜು ಕ್ಯಾಂಟೀನಿನ ಮುಷ್ಕರ

ನಗರದ ಕಾಲೇಜು ಕ್ಯಾಂಟೀನಿನ ೧೧ ಮಂದಿ ಕೆಲಸಗಾರರಿಗೆ ಸಂಬಳ ಕೊಟ್ಟಿಲ್ಲವೆಂಬುದು ನಿಜವಲ್ಲವೆಂದೂ, ಅವರಿಗೆ ಸಂಬಳಗಳು ಪೂರ್ಣವಾಗಿ ಸಂದಾಯವಾಗಿ ಈಗ ಫೆಬ್ರವರಿ ತಿಂಗಳ ಸಂಬಳವನ್ನು ಕೊಡಲು ಸಿದ್ಧವಿರುವುದಾಗಿ ಮಾಲೀಕರು ಲೇಬರ್ ಆಫೀಸಿಗೂ ಸಹ ತಿಳಿಸಿದ್ದಾರೆಂದೂ ಅಲ್ಲದೆ ಆರು ಜನ ಕೆಲಸಗಾರರು ಕೆಲಸದ ವೇಳೆ ಹಾಜರಿದ್ದರೆಂದೂ, ಸಂಬಳ ಕೊಟ್ಟಿಲ್ಲವೆಂಬುದು ಸುಳ್ಳೆಂದು ಮುಷ್ಕರದವರಲ್ಲಿ ಒಬ್ಬನು ಒಪ್ಪಿಕೊಂಡು ಲೇಬರ್ ಆಫೀಸಿಗೂ ತಿಳಿಸಿದ್ದನೆಂದು, ಹೀಗಿರುವಾಗ ಮುಷ್ಕರದವರು ಹಲವರ ಪ್ರೇರೇಪಣೆಯಿಂದ ಈ ಕ್ರಮ ಕೈಗೊಂಡಿದ್ದಾರೆಂದೂ ಮತ್ತು ಈಗಲೂ ಅವರು ಕೆಲಸಕ್ಕೆ ಸೇರಬಹುದೆಂದೂ ಕ್ಯಾಂಟೀನಿನ ಮ್ಯಾನೇಜರು ತಿಳಿಸಿ ಪತ್ರ ಬರೆದಿದ್ದಾರೆ.

ವಿಧಾನ ಸೌಧದ ಬಗ್ಗೆ ಪ್ರಶಂಸೆ ಮತ್ತು ಟೀಕೆಗಳು

ಶಾಸನ ಸಭೆಯಲ್ಲಿ ಆಯವ್ಯಯದ ಚರ್ಚೆ

ಸ್ವಂ ಸು ಪ್ರೋ] ಬೆಂಗಳೂರು ೨೩

ವಿಧಾನ ಸಭೆಯಲ್ಲಿ ಬಜೆಟ್ಟಿನ ಮೇಲೆ ಚರ್ಚೆ ನಡೆದು ಶ್ರೀ [illegible]ರವರು ವಿಧಾನ ಸೌಧದ ಕಟ್ಟಡದ ರಚನೆಗಾಗಿ ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಕಾರ್ಯವನ್ನು ಪ್ರಶಂಸಿಸಿ ಅದನ್ನು ನೋಡಲು ಪ್ರತಿ ದಿನವೂ ಸಾವಿರಾರು ಜನರು ಬರುತ್ತಿರುವರೆಂದು ಹೇಳಿದರು. ಶ್ರೀ ಗೋಪಾಲಗೌಡರು 'ಅದನ್ನು' [illegible] ಟೀಕಿಸಿ, ಬೇಲೂರಿನ [illegible] ಗಳಲ್ಲಿ ಸಾವಿರಾರು ಜನರು ಅದನ್ನು ನೋಡಲು ಹೋಗಿದ್ದುದೂ, [illegible] ಪ್ರಶಂಸೆಯಾಗಬಹುದೆಂದೂ ನುಡಿದರು. ಇನ್ನೂ ಹಲವು ಸದಸ್ಯರು ಪರವಾಗಿಯೂ, ವಿರೋಧವಾಗಿಯೂ ಮಾತನಾಡಿದರು

ಮಂತ್ರಿಮಂಡಲದಲ್ಲಿ ನಿಮ್ನ ವರ್ಗದವರಿಗೆ ಪ್ರಾತಿನಿಧ್ಯದ ಬಗ್ಗೆ ಬಂದ [illegible] ನಿರ್ಣಯವನ್ನು ಕುರಿತು ಶ್ರೀ ನಿಜಲಿಂಗಪ್ಪನವರು ಮಾತನಾಡಿ ಆ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ತಿಳಿಸಿದರು

ಪಠ್ಯ ಪುಸ್ತಕಗಳ ರಾಷ್ಟ್ರೀಕರಣ ಮಾಡುವ ಬಗ್ಗೆ ಬಂದ ಖಾಸಗೀ ನಿರ್ಣಯವನ್ನು ಕುರಿತು ಸಚಿವ ಕಡಿದಾಳ್ ಮಂಜಪ್ಪನವರು ಮಾತನಾಡಿ ಆ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ನುಡಿದರು. [illegible] ಪಾಸಾದುವು

ದ್ವಿತೀಯ ಯೋಜನೆಗೆ ಕೇಂದ್ರ ಸರ್ಕಾರದ ಸಹಾಯ

ವಿಧಾನ ಪರಿಷತ್ತು ಈ ದಿನ ಮುಕ್ತಾಯಗೊಂಡಿತು. ದ್ವಿತೀಯ ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವ ಪ್ರಶ್ನೆ ಬಂದಾಗ ಅದಕ್ಕಾಗಿ ಕೇಂದ್ರದಿಂದ [illegible] ಲಕ್ಷ ರೂ. ಗಳನ್ನು ಸಾಲವಾಗಿಯೂ ಮತ್ತು [illegible] ಲಕ್ಷ ರೂ. ಗಳನ್ನು ಗ್ರಾಂಟಾಗಿಯೂ ಪಡೆಯಲಾಗುವುದೆಂದು ಹಣಕಾಸಿನ ಸಚಿವ ಶ್ರೀ ಟಿ. ಮರಿಯಪ್ಪನವರು ತಿಳಿಸಿದರು

ಬ್ರಿಟನ್ನಿನ ರೇವು ಕಾರ್ಮಿಕರ ಮುಷ್ಕರ ಮುಕ್ತಾಯ.

ಬ್ರಿಟನ್ನಿನ ಎರಡು ಲಕ್ಷ ರೇವು ಕೆಲಸಗಾರರು ತಮ್ಮ ಮಜೂರಿಯನ್ನು ಶೇ [illegible] ರಷ್ಟು ಹೆಚ್ಚಿಸಬೇಕೆಂದು ಕೋರಿ ಕಳೆದ ಆರು ದಿನಗಳಿಂದ [illegible] ಗೊಂಡಿದ್ದ ಮುಷ್ಕರವನ್ನು ಮುಕ್ತಾಯಗೊಳಿಸುವ ಬಗ್ಗೆ ನೆನ್ನೆ ರಾತ್ರಿ ಒಪ್ಪಂದವಾಯಿತೆಂದು ಗೊತ್ತಾಗಿದೆ.

ಭಾರತದಲ್ಲಿ ಪ್ರಪಂಚದಲ್ಲೇ ದೊಡ್ಡದಾದ ಯುರೇನಿಯಂ ಗಣಿ

ಈಶಾನ್ಯ ಭಾರತದ ಒಂದುಕಡೆ ಪ್ರಪಂಚದಲ್ಲೇ ಅತ್ಯಂತ ಭಾರಿಯಾದ ಯುರೇನಿಯಂ ಮತ್ತು ಇತರ ರೇಡಿಯೋ ಆಕ್ಟಿವ್ ಖನಿಜಗಳ ಅದಿರಿನ ಗಣಿಯೊಂದು ಪತ್ತೆಯಾಗಿದೆಯೆಂದು ಭಾರತದ ಅಣುಶಕ್ತಿ ಸಮಿತಿಯವರು ತಿಳಿಸಿದ್ದಾರೆ

ನೈಜಾಮರ ಮಗಳ ಮದುವೆಗೆ ಅಡ್ಡಿಪಡಿಸುವ ಪ್ರಯತ್ನ

ಹಿಂದೆ ಮದುವೆಯಾಗಿದ್ದನೆಂಬುವನ ಅರ್ಜಿಗೆ ತಿರಸ್ಕಾರ

ಹೈದರಾಬಾದಿನ ನಿಜಾಮರು ತಮ್ಮ ಪುತ್ರಿ ಷಹಜಾನ್ನಿಸಾ ಬೇಗಂರವರ ವಿವಾಹ ಬೆಳೆಸುವುದನ್ನು ತಪ್ಪಿಸುವ ಬಗ್ಗೆ ಖುಸ್ರು ಯಾರ್ ಜಂಗ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಹೈದರಾಬಾದು ಜಿಲ್ಲಾ ನ್ಯಾಯಾಧೀಶರು ತಿರಸ್ಕರಿಸಿ ಈ ರೀತಿ ಅಭಿಪ್ರಾಯಪಟ್ಟಿರುವರು :—

ಅರ್ಜಿದಾರರು ನಿಜಾಮರ ಪುತ್ರಿಯೊಡನೆ ತನ್ನ ವಿವಾಹವಾದ ಬಗ್ಗೆ ರುಜುವಾತು ಕೊಡಲು ಕೋರ್ಟಿನಲ್ಲಿ ನಿಯಾಹಾ ಎಂಬ ವಿವಾಹದ ಸರ್ಟಿಫಿಕೇಟನ್ನು ಹಾಜರು ಮಾಡಿಲ್ಲ ತನ್ನ ವಿವಾಹವನ್ನು ನೆರವೇರಿಸಿದ ಖಾಜಿಯ ಹೆಸರನ್ನು ತಿಳಿಸಿಲ್ಲ ಕಳೆದ ೨೭ ವರ್ಷಗಳ ಹಿಂದೆ ನಡೆಯಿತೆಂದು ಹೇಳಲಾದ ವಿವಾಹದಲ್ಲಿ ಅರ್ಜಿದಾರರ, ಇದುವರೆಗೆ ತನ್ನ ಪತ್ನಿಯನ್ನು ಪಡೆಯುವ ಬಗ್ಗೆ ಪ್ರಯತ್ನಿಸದೆ ಮೌನವಾಗಿದ್ದುದನ್ನು ನೋಡಿದರೆ ಈ ವಿವಾಹವು ಹಿಂದೆ ನಡೆದಿದ್ದಿತೆಂಬುದು ನಿರಾಧಾರವಾಗಿ ಕಾಣಬರುತ್ತದೆ ಅದಲ್ಲದೆ ಅವರು ವಿವಾಹದ ಬಗ್ಗೆ ಸಾಕಾದಷ್ಟು ಸಾಕ್ಷ್ಯಸಾಹಿತ್ಯಗಳನ್ನು ಹಾಜರು ಮಾಡದಿರುವುದರಿಂದ ನಿಜಾಮರಿಗೆ ನೋಟೀಸು ಕೊಡಲು ಸಾಧ್ಯವಿಲ್ಲ

ಅರ್ಜಿದಾರರಾದ ಖುಸ್ರು ಯಾರ್ ಜಂಗರವರು ತಮ್ಮ ಅರ್ಜಿಯಲ್ಲಿ, ಹೈದರಾಬಾದಿನ ಮೇಲೆ ಪೊಲೀಸು ಕಾರ್ಯಾಚರಣೆ ನಡೆಯುವುದಕ್ಕೆ ಮುಂಚೆ ನಿಜಾಮರು ಸರ್ವತಂತ್ರ ಸ್ವತಂತ್ರರಾಗಿದ್ದುದರಿಂದ ಅವರ ಮೇಲೆ ಕೋರ್ಟು ವ್ಯಾಜ್ಯ ಹೂಡುವುದು ಶಕ್ಯದಾಗಿದ್ದುದರಿಂದ ಆ ಬಗ್ಗೆ ಯೋಚನೆಯನ್ನೇ ಮಾಡಲಿಲ್ಲವೆಂದೂ, ಅವರಿಗೆ ರಾಜಪ್ರಮುಖತ್ವವು ತಪ್ಪಿದನಂತರ ತಾವು, ಷಹಜಾನ್ನಿಸಾ ಬೇಗಂರವರ ಪುನರ್ವಿವಾಹದ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿ ವ್ಯವಹಾರ ಹೂಡಲು ಸಿದ್ಧಪಡಿಸಿಕೊಳ್ಳುತ್ತಿದ್ದುದಾಗಿಯೂ ತಿಳಿಸಿದ್ದರು

ಅಮೆರಿಕದಲ್ಲಿಯೇ ಜಲಜನಕ ಬಾಂಬ್ ಸ್ಫೋಟನೆಗೆ ಸಿದ್ಧತೆ

ಇದುವರೆಗೆ ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ಅಣು ಮತ್ತು ಜಲಜನಕ ಬಾಂಬುಗಳ ಪ್ರಯೋಗಿಕ ಸ್ಫೋಟನೆಗಳನ್ನು ನಡೆಸುತ್ತಿದ್ದ ಅಮೆರಿಕವು ತನ್ನ ಎಲ್ಲೆಯೊಳಗಿನ ನೇವಾಡಾ ಮರುಭೂಮಿಯಲ್ಲಿ ಒಂದು ಸಣ್ಣ ಜಲಜನಕ ಬಾಂಬನ್ನು ಅಸ್ಫೋಟಿಸಲು ಸಿದ್ಧತೆ ಮಾಡಿಕೊಳ್ಳುತ್ತಿದೆ ಇತ್ತೀಚೆಗೆ ಕಂಡ ಹಿಡಿಯಲಾಗಿರುವ ಸುಲಭ ಸ್ಫೋಟನ ವಿಧಾನ ಮತ್ತು ಅಣು ಕಣಗಳ ಪ್ರಸರವನ್ನು ತಡೆಯುವ ಕ್ರಮಗಳನ್ನು ಜನರಿಗೆ ತೋರಿಸುವ ಉದ್ದೇಶದಿಂದ ಈ ಕಾರ್ಯವನ್ನು ಕೈಗೊಳ್ಳಲಾಗಿದೆ

ಮೈಸೂರು ಪೇಟೆ ಧಾರಣೆ

ಬಂಗಾರದಸಣ್ಣ ಮತ್ತು ಕೊಯಮತ್ತೂರು	[illegible]	[illegible]	೦	[illegible]	[illegible]	[illegible]
ರತ್ನಚೂಡಿ	[illegible]	[illegible]	[illegible]	[illegible]	[illegible]	೦
ಕಡ್ಡಿ	[illegible]	[illegible]	[illegible]	[illegible]	[illegible]	[illegible]
ರಾಗಿ	[illegible]	[illegible]	[illegible]	[illegible]	೦	೦
ಜೋಳ	[illegible]	[illegible]	[illegible]			
ಕಡಲೆಕಾಯಿ	[illegible]	[illegible]	[illegible]	[illegible]	೦	೦
ಹುಚ್ಚೆಳ್ಳು	[illegible]	[illegible]	[illegible]	[illegible]	[illegible]	೦
ಹರಳುಬೀಜ	[illegible]	[illegible]	[illegible]			
ಹೊಂಗೇಬೀಜ	[illegible]	[illegible]	[illegible]	[illegible]	[illegible]	೦
ಹುರುಳಿ	[illegible]	[illegible]	[illegible]	[illegible]	[illegible]	[illegible]
ಹೆಸರು	[illegible]	[illegible]	[illegible]			
[illegible]	[illegible]	[illegible]	೦	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	೦
ಅವರೆ	[illegible]	[illegible]	[illegible]	[illegible]	[illegible]	೦
ಸಾಸ್ವೆ	[illegible]	[illegible]	[illegible]			
ಕಡಲೆ	[illegible]	[illegible]	[illegible]	[illegible]	[illegible]	೦
[illegible]	[illegible]	[illegible]	[illegible]	[illegible]	[illegible]	[illegible]
ಹುಣಸೆಬೀಜ	[illegible]	[illegible]	[illegible]			
[illegible]	[illegible]	[illegible]	[illegible]	[illegible]	[illegible]	೦
[illegible]	[illegible]	[illegible]	೦	[illegible]	[illegible]	[illegible]
[illegible]	[illegible]	[illegible]	೦	[illegible]	೦	[illegible]
ಬೆಲ್ಲ	[illegible]	[illegible]	೦			
ತೆಂಗಿನಕಾಯಿ ೧,೦೦೦	[illegible]	೦	೦	[illegible]	೦	೦

ಬರುವ ವರ್ಷದ ಮಾರ್ಚಿಯೊಳಗೆ ಜಿಲ್ಲಾ ಬೋರ್ಡುಗಳ ಚುನಾವಣೆ

ಬೆಂಗಳೂರು ೨೩

ಸಂಸ್ಥಾನದ ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳನ್ನು ಬರುವ ವರ್ಷದ ಮಾರ್ಚ್ ತಿಂಗಳೊಳಗೆ ನಡೆಸಲಾಗುವುದೆಂದೂ, ಸಧ್ಯದಲ್ಲಿ ಬೋರ್ಡುಗಳ ಬದಲು ಸಲಹಾ ಸಮಿತಿಗಳನ್ನು ರಚಿಸಲಾಗುವುದೆಂದೂ, ಸಂಸ್ಥಾನದ ಎಲ್ಲಾ ಜಿಲ್ಲಾ ಬೋರ್ಡುಗಳಿಗೂ ಅನ್ವಯಿಸುವಂತಹ ಒಂದೇ ಶಾಸನವನ್ನು ತಯಾರಿಸುವ ಅಂಶವೂ ಸರ್ಕಾರದ ಪರಿಶೀಲನೆಯಲ್ಲಿರುವುದೆಂದೂ ನೆನ್ನೆ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಚನ್ನಿಗರಾಮಯ್ಯನವರು ತಿಳಿಸಿದರು ಕೊಡಗಿಗೆ ಒಂದು ಜಿಲ್ಲಾ ಬೋರ್ಡನ್ನು ರಚಿಸುವ ಅಂಶವೂ ಸರ್ಕಾರದ ಪರಿಶೀಲನೆಯಲ್ಲಿರುವುದೆಂದೂ ಅವರು ಉಪ ಪ್ರಶ್ನೆಗೆ ಉತ್ತರವಾಗಿ ನುಡಿದರು

ವಿವಾಹದ ಭೋಜನ ಮಾಡಿದ ೨೬ ಜನರಿಗೆ ವಾಂತಿ

ತಿರುಚಿರಾಪಳ್ಳಿಯ ಗೀತಾಪುರದ ಚಿನ್ನಸ್ವಾಮಿ ಎಂಬಾತನ ಮನೆಯಲ್ಲಿ ನಡೆದ ವಿವಾಹದ ಸಂದರ್ಭದಲ್ಲಿ ಊಟ ಮಾಡಿದ ಅವನ ಬಂಧುಗಳಲ್ಲಿ ೨೬ ಜನಕ್ಕೆ ವಿಪರೀತ ವಾಂತಿ ಆರಂಭವಾಗಿ, ಅವರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನಡೆಸಲಾಯಿತೆಂದು ವರದಿಯಾಗಿದೆ. ಕಲಾಯಿ ಇಲ್ಲದೆ ಕಿಲುಬು ಹಿಡಿದಿದ್ದ ಪಾತ್ರೆಯಲ್ಲಿದ್ದ ಆಹಾರವನ್ನು ಸೇವಿಸಿದ್ದರಿಂದ ಆ ರೀತಿ ಆಯಿತೆಂದು ಹೇಳಲಾಗಿದೆ

ಯುದ್ಧವಾದರೆ ಅಣು ಬಾಂಬಿನ ಪ್ರಯೋಗ

ರಷ್ಯದ ರಕ್ಷಣಾ ಮಂತ್ರಿಯ ಎಚ್ಚರಿಕೆ

ಮತ್ತೊಂದು ವಿಶ್ವ ಸಮರವೇನಾದರೂ ಆದಲ್ಲಿ ಅಣು ಬಾಂಬುಗಳನ್ನು ಖಂಡಿತವಾಗಿಯೂ ಉಪಯೋಗಿಸಲಾಗುವುದೆಂದೂ ಅದಕ್ಕೆ ತಮ್ಮ ಸೇನೆಯು ತಕ್ಕ ಶಕ್ತಿಯನ್ನು ಪಡೆದಿದೆಯೆಂದೂ ರಷ್ಯದ ರಕ್ಷಣಾ ಮಂತ್ರಿ ಜುಕೊವ್ ತಿಳಿಸಿದ್ದಾರೆ ಅಣು ಅಸ್ತ್ರಗಳನ್ನು ಬಹಿಷ್ಕರಿಸದಿದ್ದರೆ ಅವು ಸಾಂಪ್ರದಾಯಿಕ ಅಸ್ತ್ರಗಳನ್ನು ಕ್ರಮೇಣ ಮೂಲೆಗೊತ್ತುವುವೆಂದೂ, ಆಗ ಶತ್ರುಗಳು ಎಲ್ಲಿದ್ದರೂ ಅವರಿಗೆ ಕ್ಷೇಮ ತಪ್ಪದೆಂದೂ ಅವರು ಎಚ್ಚರಿಸಿರುವರು

ಗ್ಯಾಂಗ್‌ಮೇನ್‌ಗಳನ್ನು ಕೆಲಸದಿಂದ ತೆಗೆಯದಂತೆ ಮನವಿ

ನಗರದ ಪುರಸಭೆಯ ಹಣಕಾಸಿನ ಸಮಿತಿಯವರು ಖರ್ಚನ್ನು ಕಡಿಮೆ ಮಾಡಬೇಕೆಂದು ತೀರ್ಮಾನ ಮಾಡಿರುವುದರಿಂದ ಇಂಜಿನಿಯರ್‌ರವರು ೩೧ ಮಂದಿ ಗ್ಯಾಂಗ್‌ಮೇನ್‌ಗಳನ್ನು ಇದೇ ಏಪ್ರಿಲ್ ತಿಂಗಳಿಂದ ಕೆಲಸದಿಂದ ತೆಗೆದು ನೋಟೀಸು ಕೊಟ್ಟಿರುತ್ತಾರೆ ಈ ನೋಟೀಸು ಅನ್ಯಾಯವೂ ಮತ್ತು ಸಕಾರಣವಲ್ಲದ್ದೂ ಆಗಿರುವುದರಿಂದ ಅದನ್ನು ವಾಪಸು ಪಡೆಯಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಮುನಿಸಿಪಲ್ ಕೆಲಸಗಾರರ ಸಂಘವು ಕೋರಿದೆ

ಜಗಜೀವನರಾಂ ಸಂಘ

ಮೇಲ್ಕಂಡ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ೧೩ನೇ ತಾರೀಖು ಬುಧವಾರ ಟಿ. ನರಸೀಪುರ ತಾಲ್ಲೂಕು ವ್ಯಾಕರಣಜಪುರದಲ್ಲಿ ಸೇರಿ ಕೆಳಗೆ ಕಂಡವರನ್ನು ಪ್ರತಿನಿಧಿಗಳನ್ನಾಗಿ ಆರಿಸಲಾಯಿತು:- ಶ್ರೀ ಬಿ ಎಂ ಬಸವಲಿಂಗಯ್ಯನವರು ಅಧ್ಯಕ್ಷರು, ಶ್ರೀ ಎಂ ಸಿದ್ದಯ್ಯನವರು ಉಪಾಧ್ಯಕ್ಷರು, ಶ್ರೀ ಎಂ ಮಹಾದೇವಯ್ಯನವರು ಕಾರ್ಯದರ್ಶಿ ಸಹ ಕಾರ್ಯದರ್ಶಿಯಾಗಿ ಶ್ರೀ ಆರ್ ಬಸವಣ್ಣನವರು [illegible] ಖಜಾಂಚಿ ಉಪ ಖಜಾಂಚಿಗಳಾಗಿ ಶ್ರೀ ಡಿ ಮುತ್ತಯ್ಯ ಮತ್ತು ಬಸವರಾಜುರವರು ಆರಿಸಲ್ಪಟ್ಟರು ನಂತರ ನೂತನ ಅಧ್ಯಕ್ಷರು ಸಂಘವನ್ನು ಉದ್ದೇಶಿಸಿ ಭಾಷಣ ಮಾಡಿದರು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

Edited, Printed and Published by
A. R. Nagarajan at Sadhvi Press,
D. Subbiah Road, Mysore

ವಿಜ್ಞಾನ ಮತ್ತು ಸಾಮಾಜಿಕ ವಿಷಯಗಳ ಶಿಕ್ಷಣ ಗೋಷ್ಠಿ

ಮೈಸೂರು ೨೨

ಅಖಿಲ ಭಾರತ ಶಿಕ್ಷಣ ವಿದ್ಯಾಭ್ಯಾಸ ಸಮಿತಿ ಕಾರ್ಯದರ್ಶಿ ಶ್ರೀ ಎಸ್ ನಟರಾಜನ್‌ರವರು ಕಳೆದ ಸೋಮವಾರ ನಗರದ ಉಪಾಧ್ಯಾಯರ ಕಾಲೇಜಿನಲ್ಲಿ ಸಮಾಜಶಾಸ್ತ್ರ ಮತ್ತು ಸಾಮಾನ್ಯ ವಿಜ್ಞಾನ ಶಿಕ್ಷಣದ ಬಗ್ಗೆ ಏಳು ದಿವಸಗಳ ಚರ್ಚಾ ಗೋಷ್ಠಿಯೊಂದನ್ನು ಆರಂಭಗೊಳಿಸಿದರು ಮೇಲ್ಕಂಡ ವಿಷಯಗಳಲ್ಲಿ ಶಿಕ್ಷಣವೀಯುವುದು ಇಂದಿನ ಪ್ರಜಾತಂತ್ರ ಯುಗದಲ್ಲಿ ಎಷ್ಟು ಆಗತ್ಯವೆಂಬುದನ್ನು ಅವರು ವಿವರಿಸಿ ವಿದ್ಯಾರ್ಥಿಯು ತನ್ನ ಜವಾಬ್ದಾರಿಯನ್ನು ಅರಿತು ಅದರಂತೆ ನಡೆಯಲು ಅರ್ಹನನ್ನಾಗಿ ಮಾಡುವ ಉದ್ದೇಶವನ್ನು ಈ ರೀತಿ ಶಿಕ್ಷಣವು ಹೊಂದಿದೆಯೆಂದೂ ಅದನ್ನು ಸರಿಯಾಗಿ ತರಬೇತು ಮಾಡುವ ಉಪಾಧ್ಯಾಯರ ಪಾತ್ರವು ಮಹತ್ತರವಾದುದೆಂದೂ ಅವರು ಭಾಷಣದಲ್ಲಿ ತಿಳಿಸಿದರು

ಶ್ರೀ ಶೇಷಯ್ಯಂಗಾರ್ಯರು ಮಾತನಾಡಿ ಚರ್ಚಾಗೋಷ್ಠಿಯ ಕಾರ್ಯಕ್ರಮ ಮತ್ತು ಉದ್ದೇಶಗಳನ್ನು ವಿವರಿಸಿದರು ಇದರಲ್ಲಿ ಅಮೆರಿಕದ ವಿದ್ಯಾ ಪರಿಣತರಾದ ರೋಸ್‌ಮೇರಿ ವಿಲ್‌ಕಾಕ್ಸ್ ಮತ್ತು ರಿಚರ್ಡ್ ಫ್ರೆಡರಿಕ್ ಕ್ಲಿಸ್‌ರವರು ಸಹಾಯಕರಾಗಿದ್ದಾರೆ

ಬಾಲಕರ ಶ್ರೀ ರಾಮ ಮಂದಿರ

ಶ್ರೀ ರಾಮೋತ್ಸವದ ಅಂಗವಾಗಿ ಇದೇ ಚೈತ್ರ ಶುದ್ಧ ನವಮಿ ಸೋಮವಾರ ತಾ|| ೮-೪-೫೭ ರಿಂದ ಮೊದಲುಗೊಂಡು, ವಿದ್ಯಾರಣ್ಯಪುರಂ ಬಸ್ ಸ್ಟ್ಯಾಂಡಿನ ಹತ್ತಿರ ಮಾಮೂಲಿನಂತೆ ರಾಮೋತ್ಸವವನ್ನು ನೆರವೇರಿಸಬೇಕೆಂದು ನಿಶ್ಚಯಿಸಿರುತ್ತಾರೆ ಭಗವದ್ಭಕ್ತರು ತನು, ಮನ, ಧನ, ಧಾನ್ಯಗಳ ರೂಪದಲ್ಲಿ ಸಹಾಯ ಮಾಡಬೇಕೆಂದು ಬಕ್ತ ಮಂಡಳಿಯವರು ಕೋರಿರುತ್ತಾರೆ

ಬಳ್ಳಾರಿಯಲ್ಲಿ ಜಟಕಾ ಗಾಡಿಯವರ ಮುಷ್ಕರ

ಬಳ್ಳಾರಿ ನಗರದ ಪ್ರಮುಖ ವಾಣಿಜ್ಯ ಕೇಂದ್ರವಾದ ಬೆಂಗಳೂರು ರಸ್ತೆಯಲ್ಲಿ ಏಕ ಮುಖ ಸಂಚಾರವನ್ನು ಜಾರಿಗೆ ತಂದುದರ ವಿರುದ್ಧ ಪ್ರತಿಭಟಿಸಲು ಅಲ್ಲಿನ ಜಟಕಾ ಮತ್ತು ಎತ್ತಿನ ಗಾಡಿಗಳವರು ಮುಷ್ಕರ ಹೂಡಿ ಕಳೆದ ಮಂಗಳವಾರದಿಂದ ಗಾಡಿಗಳನ್ನು ನಿಲ್ಲಿಸಿದ್ದಾರೆಂದು ವರದಿಯಾಗಿದೆ.

ಕೇರಳದಲ್ಲಿ ಮುಂದಿನ ಕಾಂಗ್ರೆಸ್ ಮಹಾಧಿವೇಶನ

ಅಖಿಲ ಭಾರತ ಕಾಂಗ್ರೆಸ್ಸಿನ ಮುಂದಿನ ಮಹಾಧಿವೇಶನವು ಕೇರಳದಲ್ಲಿ ಸಮಾವೇಶಗೊಳ್ಳುವುದೆಂದೂ, ಅದು ನಡೆಯುವ ಸ್ಥಳ ಮತ್ತು ದಿನವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಇಂದು ಸಮಾವೇಶಗೊಂಡು ನಿರ್ಧರಿಸುವುದೆಂದು ಹೇಳಲಾಗಿದೆ ಈ ಅಧಿವೇಶನಕ್ಕಾಗಿ ಕೇರಳ, ವಿದರ್ಭ ಕಾಶ್ಮೀರಗಳಿಂದ ಆಹ್ವಾನವು ಬಂದಿತ್ತೆಂದು ವರದಿಯಾಗಿದೆ

ಹಬ್ಬಕ್ಕೆ ಮಿಲ್ ಪಂಚೆಗಳು
ಮಿನರ್ವಾ 8 ಮೊಳ ಜೊತೆ 8 12 0
ರಾಜಾ ಮಿಲ್ ಜೊತೆ 8 8 0 ಇಂದ 10 8 0
ಸ್ಪೆಷಲ್ ಮಲ್ಮಲ್ ಜೊತೆ ರೂ 12 14 0
ಇದಲ್ಲದೆ ಬೇರೆ ಮಿಲ್ಲಿನವು ಬಹಳ ಇವೆ
ಬಾಹುಸಾರ್ ಕಂಪೆನಿ,
[illegible] ರಸ್ತೆ ಮೈಸೂರು

ಮನೆ ಖರೀದಿಗಿದೆ
ನಾನು [illegible] ವಿದ್ಯಾರಣ್ಯಪುರಂ ೧ನೇ ಕ್ರಾಸ್ ನಂ [illegible] 2 [illegible] ಕಟ್ಟಿಸಿ [illegible] ಬಾಡಿಗೆ [illegible] ಪತ್ರ ರಿಜಿಸ್ಟರ್ [illegible] ಕೊಡಲಾಗುತ್ತೆ. ಸಲ್ಲಿ [illegible] ಫ್ಲಾಷ್ [illegible] ಇರುತ್ತೆ [illegible] ಇದೆ [illegible] ರೂಪಾಯಿ [illegible] ಮನೆ [illegible]
ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲಾ ಬಳಿ, ಮೈಸೂರು

ಉಮೇದುವಾರಳು ಸೋ ಬಿಟ್ಟ ದೀಕ್ಷೆ ಈ ಸಾರಿ ಗಡ್ಡ ವಿಸರ್ಜನೆ

೧೯೫೨ರಲ್ಲಿ ನಡೆದ ಮಹಾ ಚುನಾ ಮದ್ರಾಸಿನ ಶಾಸನ ಸಭೆಗೆ ಶ್ರೀಮತಿ ಕುಂಚಿತಪಾದಂ ಎಂಬುವಳು ಸ್ಪರ್ಧಿ ತಳಾದಳು. ಒಬ್ಬ ಕಾಂಗ್ರೆಸ್ ಕಾಯ ಪ್ರತಿಜ್ಞೆಯನ್ನು ಕೈಗೊಂಡು ಆಕೆಯು ಯಶಳಾಗಿ ಬರುವವರೆಗೂ ತಲೆಯ ತೆಗೆಯುವುದಿಲ್ಲವೆಂದು ತೀರ್ಮಾನಿಸಿದ್ದ ನಡೆದ ಚುನಾವಣೆಯಲ್ಲಿ ಆಕೆಯು ಧಿಸಿ ಜಯಗಳಿಸಲಾಗಿ ಅವನು ಗಡ್ಡ ಟ್ಟನ್ನು ತೆಗೆದು ತಲೆಯನ್ನು ಕ್ಷೌರ ಕೊಂಡನೆಂದು ಗೊತ್ತಾಗಿದೆ

ಜೈಲಿನಿಂದ ಲಾಲ್ ತಪ್ಪಿಸಿಕೊ ಬಗ್ಗೆ ಅಧಿಕಾರಿಗಳ ಬಂಧ

ಭಾರತದ ನಾನಾ ಸಂಸ್ಥಾನಗಳಲ್ಲಿ ಗೆ ಸುಮಾರು ೫೦ ಬಾರಿ ಅನೇಕ ಲಕ್ಷ ಷ್ಟು ಮೋಸ ಮಾಡಿದ ನಟವರ್‌ಲಾಲನು ಡಿಗೆ ಲಕ್ನೋ ಜಿಲ್ಲಾ ಜೈಲಿನಿಂದ ಪುನಃ ಕೊಂಡು ಹೋದ ಬಗ್ಗೆ ಜೈಲಿನ ಮುಖ್ಯ ರಿ ಅಸಿಸ್ಟೆಂಟ್ ಜೈಲರು ಮತ್ತಿತರ ೧೧ ಜೈಲ್ ವಾರ್ಡರುಗಳನ್ನೊಳಗೊಂಡು ಪೈಕಿ ಅಲ್ಲಿನ ಸಿ ಐ ಡಿ ಇಲಾಖೆಯ ಅಧಿಕಾ ಬಂಧಿಸಿದ್ದಾರೆ ಜೈಲಿನಿಂದ ಹೊರಬಿದ್ದ ಕಳೆದ ವಾರ ಲಕ್ನೋವಿಗೆ ಬಂದು ಅಲ್ಲಿ ಮೋಟಾರು ಕಾರು ವ್ಯಾಪಾರಿ ಮತ್ತು ವರ್ತಕರಿಗೆ ಅನೇಕ ಸಾವಿರ ರೂ ಗಳಷ್ಟು ಸ ಮಾಡಿದನೆಂದು ವರದಿಯಾಗಿದೆ

ಒಳ ಚರಂಡಿ ವ್ಯವಸ್ಥೆಯ ಅಭಿವೃದ್ಧಿಗ ೨ ಲಕ್ಷ ರೂ. ಸಾಲ

ನಗರದ ಒಳ ಚರಂಡಿ ವ್ಯವಸ್ಥೆಯನ್ನು ಮಪಡಿಸುವ ಸಲುವಾಗಿ ಪುರಸಭೆಗೆ ಕೊಟ್ಟಿರುವ ೨ ಲಕ್ಷ ರೂ ಗಳ ಜೊತೆಗೆ ೨ ಲಕ್ಷ ರೂ ಸಾಲವನ್ನು ಸರ್ಕಾರದ ಮಂಜೂರು ಮಾಡಿದ್ದಾರೆ

The Southern Railway Co-operativ
Society Ltd,
MYSORE
NOTIFICATION
3-year Fixed Deposits of R
5 000 and above are accep
at 5 per cent until furt
notice.
By Order of the Bo
Mysore B MADHAVA RA
16-3 57 Secretary

ನರ್ಸರಿ ಸ್ಕೂಲ್ ಉಪಾಧ್ಯಾಯಿಯರ ಶಿಕ್ಷಣ ಕೇಂದ್ರ
ನಗರದ ದಿವಾನ್ಸ್ ರೋಡಿನಲ್ಲಿರುವ
ಶ್ರೀ ಜಗದಂಬಾ ಶಿಶುವಿಹಾರ
11-3-57 ರಿಂದ ಪ್ರಾರಂಭವಾಗಿದೆ
ಸೇರಲಪೇಕ್ಷಿಸುವ ಮಹಿಳೆಯರು ಕೂಡ
ಪ್ರಿನ್ಸಿಪಾಲರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು
ತಿಳಿಸಲಾಗಿದೆ
ಶ್ರೀ ಕೃಷ್ಣಮೂ
ಪ್ರಿನ್ಸಿಪಾಲ್

ಸಿಟಿ ಕೋ-ಆಪರೇಟಿವ್ ಬ್ಯಾ
ಡೈರೆಕ್ಟರುಗಳ ಚುನಾವಣೆ
ಇದೇ 24-3-57ನೇ ಭಾನುವಾ
2-30 ಘಂಟೆಗೆ
ಶ್ರೀ ಬಸವರಾಜ್ಯನವರ ಹೈಸ್ಕೂಲ್ [illegible] ನಡೆಯುವ ಮೇಲ್ಕಂಡ [illegible] ರೆಕ್ಟರುಗಳ ಚುನಾವಣೆಗೆ ಉಮೇದುವಾ [illegible] ರುವ ಧರ್ಮ ಪ್ರವರ್ತ [illegible] ಸುಕ್ಕಳೂ, ಹಾಲಿ ಡೈರೆಕ್ಟರೂ ಆಗಿ
ಶ್ರೀ ಬಿ. ಬಿ. ರಾಮಪ್ಪನವರ
[illegible] ತಮ್ಮ ಅಮೂಲ್ಯವಾದ ಓಟನ್ನು
ಅವರ ನಂಬರು 21

ಟೆಲಿಫೋನ್ ನಂ 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ ೬ ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಒಳ್ಳೆ ಔಷಧ
ಮೈಸೂರು ಸಂಸ್ಥಾನ ಮತ್ತು
ಹೊರಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀ [illegible] ರಸ್ತೆ,
ಬೆಂಗಳೂರು-2

ಪುಟ : ೦೪] SADHVI । SUNDAY 24-3-1957 ಮೈಸೂರು । ಭಾನುವಾರ ೨೪-೩-೧೯೫೭ । [ಸಂಚಿಕೆ : ೨೪೩

ಕೇರಳದಲ್ಲಿ ಕಾಂಗ್ರೆಸ್ಸು ವಿರೋಧ ಪಕ್ಷವಾಗಿ ವರ್ತಿಸುವುದು

ಾನ ಸೌಧದ ವಿಚಾರಣಾ ಸಮಿತಿಯ ವರದಿ

ಕೆಗಳಿಗೆ ಶ್ರೀ ಹನುಮಂತಯ್ಯನವರ ಉತ್ತರ

ಬೆಂಗಳೂರು ೨೪

ಧಾನ ಸಭೆಯ ಆಯವ್ಯಯದ ಚರ್ಚೆಯ ರೋಧ ಪಕ್ಷದ ನಾಯಕ ಇಮಾಂರವರು [illegible] ಧದ ಬಗ್ಗೆ ಪ್ರಸ್ತಾಪಿಸಿದುದಕ್ಕೆ ಶ್ರೀ ಹನುಮಂತಯ್ಯನವರು ಮಾತನಾಡಿ, ತ [illegible] ಗೆ ಉತ್ತರವಿತ್ತು [illegible] ಧದ ವಿಚಾರಣಾ ಸಮಿತಿಯವರು [illegible] ವಾಗಿ ಮತ್ತು ಅಪ್ರಾಸಂಗಿಕವಾಗಿ [illegible] ಸೌಧ ನಿರ್ಮಾಣ ಕಾರ್ಯದಲ್ಲಿ ಯಾವ [illegible] ಗಳು, ಅಜಾಗರೂಕತೆ ಗಳೇ ಆ [illegible] ಮುಂದೆ ಗೊತ್ತಾಗುವುದೆಂದು ನು [illegible] ಕಟ್ಟಡಕ್ಕೆ ಮೂಲಕಾರಣವಾದ ವಿಧಾನ ಸಭೆಯ ಅಂದಾಜುಗಳ ಸಮಿತಿಯ ಮುಂದೆ [illegible] ವಸ್ತುಗಳಲ್ಲಿ [illegible] ಮುಂದಿ [illegible] ಒಪ್ಪಿಗೆಯ [illegible] ಮಾಡಿಸದೆ [illegible] ಬಾಯಿ ಬಿಟ್ಟಿದ್ದರೆಂದೂ ಅವರು [illegible]

[illegible] ಪ್ರಾರಂಭದ ಅಂದಾಜಿಗಿಂತ ವಿಧಾನ ಸೌಧದ ಬಗ್ಗೆ ಶ್ರೀ ಹನುಮಂತಯ್ಯನವರ [illegible] ಮುಂದೆ ಮತ್ತು [illegible] ಹಟ್ಟಿ [illegible] ಕಾರ್ಯ ನಡೆಯುತ್ತಿದೆಯೆಂದು [illegible] ಜಲ ಕಡಿದ ಅಂದಾಜಿನ [illegible] ೭೦ ಮತ್ತು ೮೭ ಲಕ್ಷಗಳ [illegible] ಮತ್ತು [illegible] ೩ ಕೋಟಿ ರೂ ಗಳಾದ ಅಂಕಿಗ [illegible] ಈ ರೀತಿಯ ವ್ಯತ್ಯಾಸ [illegible] ಕಡೆಯುಳ್ಳ ಇರುವ [illegible] ದೊರೆಯುತ್ತಿದೆಯೆಂ [illegible] ಬಿಟ್ಟು ಅಂದಾಜಿನ [illegible] ಬಲಗನ್ನು ಶಿಲ್ಪಿಗಳಿಗೆ ಕಲ್ಪನ [illegible] ವುದಾಗಿಯೂ ಅದರಲ್ಲಿ ಒಂದು ಭ [illegible] ನಿರ್ಮಾಣ ಮಾಡಬಹುದಿತ್ತೆಂದೂ [illegible]

[illegible] ಡಿಗೆ ೨೪ ರೂ. [illegible] ವಿಧಾನ [illegible] ಣಕ್ಕೆ ದುಬಾರಿ ವೆಚ್ಚವಾಗಿರು [illegible] ಸಮಿತಿಯವರು ಬೆಂಗಳೂ [illegible] ಕೇಂದ್ರ ಸರ್ಕಾರದ ಕಟ್ಟಡಗಳ [illegible] ೩೦ ೫೫ ರೂ [illegible] ನಗೆ ತಂದುಕೊಳ್ಳದೆ ಟೀಕೆ ಮಾ [illegible] ಸನ ಸಭೆಯ ಕಾರ್ಯದರ್ಶಿ [illegible] ಪಕ್ಷಪಾತವಾಗಿಯೂ [illegible] ಅಧ್ಯಕ್ಷರುಗಳಿಗಿದ್ದ [illegible] ಮತ್ತು ಭಾವ್ಯಂ [illegible] ವಾಗಿಯೂ ತಮ್ಮನ್ನು ಕೇಳದೆ [illegible] ಎಂದಿಗೂ ಹೇ [illegible] ಸಮಿತಿಯವರು [illegible] ಸಿಕೊಂಡು [illegible]

ಸಂಸ್ಥಾನ ಶಾಸನ ಸಭೆಯಲ್ಲಿ ಕಾಂಗ್ರೆಸ್ ಬಲದ ಇಳಿತಾಯ

ಬೆಂಗಳೂರು ೨೪

ನೆನ್ನೆಗೆ ಸಂಸ್ಥಾನದಲ್ಲಿ ಚುನಾವಣೆಗಳು ಪೂರ್ಣಗೊಂಡ ಈ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಒಟ್ಟು [illegible] ಸ್ಥಾನಗಳನ್ನು ಗಳಿಸಿತು ವಿರೋಧ ಪಕ್ಷಗಳ ಬಲದ ಮೊತ್ತದಿಂದ [illegible] ಸ್ಥಾನಗಳು ಈಗಿನ ಶಾಸನ ಸಭೆಯಲ್ಲಿ ವಿವಿಧ ಪಕ್ಷಗಳ ಬಲಾಬಲಗಳು ಈ ರೀತಿ ಇವೆ ಕಾಂಗ್ರೆಸ್ [illegible] ಪಿ. ಎಸ್. ಪಿ [illegible] ಕಮ್ಯೂನಿಸ್ಟ್ ಮತ್ತು ಲೋಕ ಸೇವಕ ಸಂಘಗಳು ತಲಾ [illegible] ಇತರ ಪಕ್ಷಗಳು ಮತ್ತು ಸ್ವತಂತ್ರರು [illegible]

ವಿಧಾನ ಸೌಧದ ಟೆಲಿಫೋನ್ [illegible] ಎಂಬ [illegible] ಉತ್ತರವಾಗಿ ಇಂತಹ [illegible] ಯಲ್ಲಿ ಈ ರೀತಿ [illegible] ಎಂದು ತೋರಿದೆ ಕೇವಲ [illegible] ದ್ದರೆಂದೂ [illegible] ಇರುವುದರಿಂದ [illegible] ರೀತಿಯ [illegible] ಉತ್ತರ [illegible] ಗೊತ್ತಾಗುವುದೆಂದೂ ಅವರು ಹೇಳಿದರು.

ಈಗಿನ ಸವೆಂಬರವಲ್ಲಿ ಮಣ್ಣು ತೆಗೆಸಲು [illegible] ಲಕ್ಷ ರೂ. ವೆಚ್ಚವಾಯಿತೆಂದು ಮಾತ್ರ ಹೇಳಿದ ಸಮಿತಿಯವರು ಅದೇ ಮಣ್ಣನ್ನು [illegible] ಲಕ್ಷ ರೂ ಗೆ ಮಾರಿದ ಅಂಶವನ್ನೇಕೆ ಬಿಡಿಗಣಿಸಿರುವರೆಂದು ಕೇಳಿದರು

[illegible] ನಾನಾ ಪ್ರಾಂತ್ಯಗಳಿಂದ ಮುಖ್ಯರಾದ [illegible] ವನ್ನು ಕಡೆಯುವಂತೆ ಕಾವು [illegible] ರಗಳ [illegible] ಭವ್ಯ ಕಟ್ಟಡಗಳ ಶಿಲ್ಪ ಚಾತುರ್ಯಗಳನ್ನು ವೀಕ್ಷಿಸಿ ಉತ್ತಮವಾದ ಅಭಿಪ್ರಾಯಗಳನ್ನು ವಿಧಾನ ಸೌಧದಲ್ಲಿ ಒಂದುಗೂಡಿಸಿರುವುದಾಗಿಯೂ ಸಾಂಪ್ರದಾಯಿಕವಾಗಿ [illegible] ಗಳನ್ನು [illegible] ನಿರ್ಮಾಣವನ್ನು ಸಾಗಿಸಿದ್ದರೆ ಇನ್ನೂ ಎಂಟು ಹತ್ತು ವರ್ಷಗಳಾದರೂ ಹಿಡಿಯುತ್ತಿತ್ತೆಂದೂ ಹೇಳಿ ತಾವು ಮುಖ್ಯಮಂತ್ರಿ ಸ್ಥಾನದಿಂದ ಹೊರಬಂದ ಮೇಲೆ ಇಲ್ಲಿಯವರೆಗೆ ಏನು ಕೆಲಸ ನಡೆದಿದೆಯೆಂದು ಪ್ರಶ್ನಿಸಿದರು

ಸಮಿತಿಯವರು ವರದಿಯನ್ನು ದುರಭಿಪ್ರಾಯದಿಂದ ವಿಷಮಯವಾದ ಮನೋಸ್ಥಿತಿ [illegible] ಣವಲ್ಲಿ ಬರೆದರೆಂದೂ ಮತ್ತು ಅಧ್ಯಕ್ಷರು ತಮ್ಮ ಸಾಕ್ಷ್ಯ ತೆಗೆದುಕೊಳ್ಳುವಾಗ ತಮ್ಮನ್ನ ಸೌಜನ್ಯದಿಂದ [illegible] ಸಮಿತಿ ಸದಸ್ಯರಾದ ಶ್ರೀ ನರಸಿಂಹಯ್ಯನವರ ತಮ್ಮ ಮುಂದೆ [illegible] ನ್ನು ತೋರಿಸಲಿಲ್ಲವೆಂದು [illegible] ಹೇಳಿದರು [illegible] ರಲ್ಲಿ ಹೋಗುತ್ತಿದ್ದ [illegible] ಗುಣದನ್ನು [illegible] ತ್ರವಾಗಿ [illegible] ಸಮಾಧಾನ [illegible]

ಕೇರಳ ಪ್ರದೇಶದಲ್ಲಿ ಕಾಂಗ್ರೆಸ್ಸು ವಿರೋಧ ಪಕ್ಷ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರ

ಕೇರಳ ದೇಶದಲ್ಲಿ ಕಾಂಗ್ರೆಸ್ಸಿಗೆ ಸ್ಪಷ್ಟ ಬಹುಮತವು ಒಂದಿಲ್ಲವಾದುದರಿಂದ ಅಲ್ಲಿ ಮಂತ್ರಿಮಂಡಲದ ರಚನೆಯನ್ನು ಬಹು ಸಂಖ್ಯಾತರಾಗಿರುವ ಕಮ್ಯೂನಿಸ್ಟರಿಗೇ ಬಿಟ್ಟು ಕಾಂಗ್ರೆಸ್ ಪಕ್ಷದವರು ವಿರೋಧ ಪಕ್ಷವಾಗಿ ವರ್ತಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ

ಒರಿಸ್ಸಾದಲ್ಲಿ ಯಾವ ಪಕ್ಷಕ್ಕೂ ನಿಚ್ಚಳ ಬಹುಮತ ದೊರೆತಿಲ್ಲ ಅಲ್ಲಿನ ಗಣತಂತ್ರ ಪರಿಷತ್ತಿನೊಡನೆ ಕಾಂಗ್ರೆಸ್ಸು ಸಮ್ಮಿಶ್ರ ಸರ್ಕಾರವನ್ನು ರಚಿಸಲಾಗದೆಂದೂ ಸಹ ಕಾರ್ಯಕಾರಿ ಸಮಿತಿ ತೀರ್ಮಾನಿಸಿರುತ್ತದೆ ಅಲ್ಲಿ ಯಾವ ಒಂದು ಪಕ್ಷವೂ ಮಂತ್ರಿಮಂಡಲ ರಚಿಸುವ ಜವಾಬ್ದಾರಿಯನ್ನು ವಹಿಸದಿದ್ದರೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯೇ ಜಾರಿಗೆ ಬರುವುದೆಂದೂ ಹೇಳಲಾಗಿದೆ

ಸಂಸ್ಥಾನದಲ್ಲಿ ಸರ್ಕಾರದಿಂದಲೇ ಪಠ್ಯ ಪುಸ್ತಕಗಳ ರಚನೆ

ವಿಧಾನ ಪರಿಷತ್ತಿನಲ್ಲಿ ಪಠ್ಯ ಪುಸ್ತಕಗಳ ರಾಷ್ಟ್ರೀಕರಣದ ನಿರ್ಣಯ ವಾಪಸು

ಬೆಂಗಳೂರು ೨೪

ಸಂಸ್ಥಾನದ ವಿದ್ಯಾಭ್ಯಾಸ ಇಲಾಖೆಯು ನಾನಾ ಶಾಲಾ ತರಗತಿಗಳಿಗೆ ಗೊತ್ತುಮಾಡುವ ಪಠ್ಯಪುಸ್ತಕಗಳ ರಚನೆ ಮತ್ತು ಪ್ರಕಟಣೆ ಕಾರ್ಯಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಶ್ರೀ ಎಂ ಪಿ ಎಲ್ ಶಾಸ್ತ್ರಿಗಳು ವಿಧಾನ ಪರಿಷತ್ತಿನಲ್ಲಿ ನೆನ್ನೆ ಒಂದು ನಿರ್ಣಯವನ್ನು ಮಂಡಿಸಿದರು. ಅವರು ಭಾಷಣ ಮಾಡಿ ಈಗಿನ ಸ್ಥಿತಿಯಲ್ಲಿ ದುಬಾರಿ ಬೆಲೆಗಳಿಗೂ ಮತ್ತು ಲೇಖಕರಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವಂತೆಯೂ ಮಾಡಿರುವ ಪಬ್ಲಿಷರುಗಳ ಹಾವಳಿಯನ್ನು ತಪ್ಪಿಸಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ವೆಚ್ಚವನ್ನು ಕಡಿಮೆ ಮಾಡುವುದೇ ನಿರ್ಣಯದ ಉದ್ದೇಶವೆಂದು ನುಡಿದರು

ವಿದ್ಯಾ ಖಾತೆ ಕಡಿದಾಳ್ ಮಂಜಪ್ಪನವರು ಮಾತನಾಡಿ ಸರ್ಕಾರದವರು ಪಠ್ಯಪುಸ್ತಕಗಳನ್ನು ಬರೆಯುವಲ್ಲಿ ನಿಪುಣರ ಸಮಿತಿಯೊಂದನ್ನು ರಚಿಸಲಿದ್ದಾರೆಂದೂ ಈ ವಿಷಯವನ್ನು ವಿದ್ಯಾಭ್ಯಾಸ ಪದ್ಧತಿಗಳ ಸಮನ್ವಯ ಸಮಿತಿಯು ಪರಿಶೀಲಿಸಲಿದೆಯೆಂದೂ ಸದ್ಯಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ತರಗತಿಗಳ ಪಠ್ಯಪುಸ್ತಕಗಳನ್ನು ಸರ್ಕಾರವೇ [illegible] ವುದೆಂದೂ ತಿಳಿಸಿದನಂತರ ಸೂಚಕರು ನಿರ್ಣಯವನ್ನು ವಾಪಸು ಪಡೆದರು.

ಸಂಸ್ಥಾನದ [illegible] ಮಾಡಿದಾರಿಗಳಿಗೂ ತಾತ್ಕಾಲಿಕ ಪರಿಹಾರ

ಸಂಸ್ಥಾನದ [illegible] ಧಿಕಾರಿಗಳಿಗೆ ತಾತ್ಕಾಲಿಕ [illegible] ಸರ್ಕಾರವು ಶೀಘ್ರವಾಗಿ ಯೋಚಿಸುತ್ತಿರುವುದಾಗಿಯೂ, ಹೊಸ ಮಂತ್ರಿಮಂಡಲದ ಅವಧಿಯ [illegible] ಕಡಿಮೆಯಾಗಿ [illegible] ಕೆಗಳನ್ನು ಪರಿಶೀಲಿಸಲು [illegible] ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಶಾಸನ [illegible] ಅರಕಲಗೂಡು [illegible] ನ್ಯಾಯಾಧಿಕಾರಿಗಳ ನಿಯೋಗವೊಂದಕ್ಕೆ ನೆನ್ನೆ ತಿಳಿಸಿದರೆಂದು [illegible] ಗೊತ್ತಾಗಿದೆ

ವಿಧಾನ ಸೌಧದ ವರದಿ ಬಗ್ಗೆ ಮತ್ತೆ ಶಾಸನ ಸಭಾಸದಸ್ಯರ ಟೀಕೆ

ಬೆಂಗಳೂರು ೨೪

ವಿಧಾನ ಸಭೆಯಲ್ಲಿ ಆಯವ್ಯಯದ ಮೇಲಿನ ಚರ್ಚೆಯು ಸಾಗುತ್ತಿದ್ದಾಗ ಮತ್ತೆ ವಿಧಾನಸೌಧದ ವಿಷಯವು ಪ್ರಸ್ತಾಪಕ್ಕೆ ಬಂದು ಶ್ರೀ ಎಸ್ ಗೋಪಾಲಗೌಡರು ಅದನ್ನು ಹನುಮಂತಯ್ಯನವರ ಸರಸ್ವತಿ ಭಕ್ತಿಯ ಪ್ರತೀಕವೆಂದು ಟೀಕಿಸಿದರು

ಮುಂಚೆ ಶ್ರೀ ಪಳನಿಯಪ್ಪರವರು ಮಾತನಾಡಿ ವಿಚಾರಣಾ ಸಮಿತಿಯ ವರದಿಯನ್ನು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಹೇಳಿ ಬರೆಸಿದ್ದರೆಂದು ಅಪಾದಿಸಿದರು

ಶ್ರೀ ಗೋಪಾಲಗೌಡರು ತಮ್ಮ ಭಾಷಣದಲ್ಲಿ ಪ್ರಜಾ ಆಯವ್ಯಯಗಳು ಮತ್ತು ಮಿತಿಯಿಲ್ಲದ ವೆಚ್ಚಗಳ ಬಗ್ಗೆ ಆತಂಕವನ್ನು ಸೂಚಿಸಿದರು. ವಿಧಾನಸೌಧದ ವರದಿಯ ಬಗ್ಗೆ ಶ್ರೀ ಹನುಮಂತಯ್ಯನವರು ನೆನ್ನೆ ಕೊಟ್ಟ ಉತ್ತರವನ್ನು ಪ್ರಸ್ತಾಪಿಸಿ ಧರ್ಮದ ಎಲ್ಲಾ ಕಡೆಯುಳ್ಳ ಅನ್ಯಾಯಗಳಿಗೆ ಕಾರಣ ತಮ್ಮದು ಹೆಚ್ಚಿಲ್ಲವೆಂದು ಅವರು ಹೇಳಿದುದು ಸರಿಯಲ್ಲವೆಂದರು

ರಾಜರ ಕಾಲಗಳಿಂದ ಅಧಿಕಾರವು ಜನತೆಗೆ ಬಂದ ಮೇಲೆ ಕಟ್ಟಡವು ಪ್ರತಿಬಿಂಬಿಸುವ ಅಂಶದ ಬಗ್ಗೆ ಶ್ರೀ ಗೋಪಾಲಗೌಡರು ಪ್ರಸ್ತಾಪಿಸಿ ಮಹಾರಾಜರ ವಿರುದ್ಧ ಅಧಿಕಾರಕ್ಕಾಗಿ ಹೋರಾಡಿದುದು ಅವರ ಅಧಿಕಾರವನ್ನು ನಾವು ಪಡೆಯುವುದಕ್ಕಲ್ಲ, ಮಹಾರಾಜರಂತೆ ನಾವೂ ಡಂಬಾಚಾರ ಮಾಡಲಾಗುತ್ತದೆಯೇ? ಎಂದು ಪ್ರಶ್ನಿಸಿ ವಿಧಾನ ಸೌಧವನ್ನು ಕಟ್ಟುವ ಬಗ್ಗೆ ಶ್ರೀ ಹನುಮಂತಯ್ಯನವರು ಕ್ರಮವಹಿಸಿದವರಾದರೂ ಅವರ ಮಾರ್ಗವನ್ನು ನಾವು ಒಪ್ಪುವುದಿಲ್ಲವೆಂದು ನುಡಿದರು

ಮುಳಬಾಗಿಲು ಚುನಾವಣೆಯಲ್ಲಿ ಕಾಂಗ್ರೆಸ್ ಕಾರ್ಯದರ್ಶಿಗೆ ಸೋಲು

ಸಂಸ್ಥಾನದ ವಿಧಾನ ಸಭೆಗೆ ಮುಳಬಾಗಿಲಿನ ಸಾಮಾನ್ಯ ಸ್ಥಾನದಿಂದ ಸ್ವತಂತ್ರ ಸಂಯುಕ್ತ ರಂಗದ ಸ್ಪರ್ಧಿ ಶ್ರೀ ಬಿ. ಎಲ್. ನಾರಾಯಣಸ್ವಾಮಿಯವರು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಜಂಟಿ ಕಾರ್ಯದರ್ಶಿ ಶ್ರೀ ಜಿ ನಾರಾಯಣಗೌಡರನ್ನು [illegible] ಮತಗಳಿಂದ ಸೋಲಿಸಿರುವರು. ಅವರಿಗೆ [illegible] ಮತ್ತು ಶ್ರೀ ಗೌಡರಿಗೆ [illegible] ಮತಗಳು ಬಂದುವು. ಅವರ ಮೀಸಲು ಸ್ಥಾನವು ಕಾಂಗ್ರೆಸ್ಸಿನ ಶ್ರೀ ಜಿ ನಾರಾಯಣಪ್ಪನವರಿಗೆ ದೊರೆತಿದೆ. ಅವರಿಗೆ [illegible] ಮತ್ತು ಸಂಯುಕ್ತ ರಂಗದ ಅವರ ಸ್ಪರ್ಧಿ ಶ್ರೀ ಜಿ ನಾರಾಯಣಸ್ವಾಮಿಯವರಿಗೆ [illegible] ಮತಗಳು ಬಂದುವು. ಶ್ರೀ ಜಿ ನಾರಾಯಣಗೌಡರು ಮತ್ತು ಜಿ ನಾರಾಯಣಪ್ಪನವರು ಹಿಂದಿನ ಶಾಸನಸಭಾ ಸದಸ್ಯರು.

ವಾರ ಭವಿಷ್ಯ

ತಾ|| ೨೪-೩ ೫೭ರಿಂದ ೩೦-೩ ೫೭ ರವರೆಗೆ

ಮೇಷ — ಆರೋಗ್ಯ ಉತ್ತಮ, ಆರ್ಥಿಕ ಪರಿಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಉತ್ಸಾಹ, ಶುಭ ಕಾರ್ಯಗಳು ಜರುಗುವುವು

ವೃಷಭ — ಆರೋಗ್ಯ [illegible] ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು ಅನ್ಯರ ಸಹಕಾರ, ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ ಉದ್ಯೋಗದಲ್ಲಿ ಕಿರುಕುಳ, ಅಪಘಾತ ಭಯ

ಮಿಥುನ.— ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಸ್ಥಳಾಂತರ, ಕಾರ್ಯವಿಘ್ನ ಆಘಾತ ಭಯ

ಕರ್ಕ — ಆರೋಗ್ಯ ಉತ್ತಮ, ಆರ್ಥಿಕ ಪರಿಸ್ಥಿತಿ ಅಸಮರ್ಪಕ, ಅನ್ಯರಿಂದ ವಂಚನೆ, ವ್ಯಾಪಾರವ್ಯವಹಾರಗಳಲ್ಲಿ ಜಯ, ನೌಕರಿಯಲ್ಲಿ ನಿರುತ್ಸಾಹ

ಸಿಂಹ.— ಆರೋಗ್ಯ ಸಾಧಾರಣ, ಆರ್ಥಿಕ ಪರಿಸ್ಥಿತಿ ಉತ್ತಮ, ದುಂದು ವೆಚ್ಚ, ಸಾಮಾಜಿಕ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ [illegible]

ಕನ್ಯಾ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಅಸಮರ್ಪಕ [illegible] ವ್ಯಾಪಾರವ್ಯವಹಾರಗಳಲ್ಲಿ ನಷ್ಟ, ಉದ್ಯೋಗದಲ್ಲಿ [illegible] ಫಲಗಳು ಅಪಘಾತ ಭಯ

ತುಲಾ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಉತ್ತಮ. ಮಿತ್ರರಿಂದ ವಂಚನೆ ಕಾರ್ಯಗಳಲ್ಲಿ ಶುಭ ಫಲ ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು ವಿದ್ಯಾರ್ಥಿಗಳಿಗೆ [illegible]

ವೃಶ್ಚಿಕ — ಅನಾರೋಗ್ಯ ಸಂಭವ ಆರ್ಥಿಕ ಪರಿಸ್ಥಿತಿ ಸಾಧಾರಣ ಉದ್ಯೋಗದಲ್ಲಿ ಕಿರುಕುಳ ಮಿತ್ರರೊಡನೆ ವೈಮನಸ್ಯ ಸ್ತ್ರೀಯರಿಂದ ಸಹಾಯ ಅಪಘಾತ ಭಯ

ಧನು — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ, ಉದ್ಯೋಗದಲ್ಲಿ ಯಶಸ್ಸು ಶುಭ ಕಾರ್ಯಗಳು ಜರುಗುವುವು, ಪ್ರವಾಸ ಯೋಗ

ಮಕರ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಉತ್ತಮ ಉದ್ಯೋಗದಲ್ಲಿ ಬದಲಾವಣೆ, ನೌಕರಿಯಲ್ಲಿ ಸ್ಥಳಾಂತರ, ಕಾರ್ಯ ವಿಘ್ನ ಅಪಘಾತ ಸಂಭವ

ಕುಂಭ — ಆರೋಗ್ಯ ಸಾಧಾರಣ, ಆರ್ಥಿಕ ಪರಿಸ್ಥಿತಿ ಸಮರ್ಪಕ, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ, ಉದ್ಯೋಗದಲ್ಲಿ ಅಲ್ಪ ಪ್ರಗತಿ, ನೌಕರಿಯಲ್ಲಿ ಸ್ಥಳಾಂತರ, ಕಾರ್ಯ ವಿಘ್ನ

ಮೀನ — ಆರೋಗ್ಯ ಉತ್ತಮ, ಆರ್ಥಿಕ ಪರಿಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ನೂತನ ಪರಿಚಯಗಳು

ನಯಾ ಪೈಸೆ ಜಾರಿಗೆ ತರಲು ಇದೇ ೩೦ ರಂದು ರಜಾ

ಏಪ್ರಿಲ್ ೧ನೇ ತಾರೀಖಿನಿಂದ ನಯಾಪೈಸೆ ನಾಣ್ಯ ಪದ್ಧತಿಯನ್ನು ಜಾರಿಗೆ ತರುವ ಸಲುವಾಗಿ ಇದೇ ೩೦ ಮತ್ತು ಏಪ್ರಿಲ್ ೧ರಂದು ರಜಾ ದಿನಗಳೆಂದು ಭಾರತ ಸರ್ಕಾರದವರು ಸೂಚಿಸಿದ್ದಾರೆ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ,
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಕಡಿಮೆ ಬೆಲೆಗೆ ದೊರೆಯುತ್ತವೆ
[illegible]
ಕೆ. ಎಸ್. ಲಕ್ಷ್ಮಣ ಅಯ್ಯರ್
ಅಂಡ್ ಸನ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು.
ಅಶೋಕ ರಸ್ತೆ, ಮೈಸೂರು (Estd 1911)

ರಾಜಿನಾಮೆ ಕೊಡಲು ಪೂರ್ವ ಪಾಕಿಸ್ತಾನದ ಮುಖ್ಯಮಂತ್ರಿಯ ಅಪೇಕ್ಷೆ?

ಪೂರ್ವ ಪಾಕಿಸ್ತಾನದಲ್ಲಿ ಹಲವು ಸಮಾಜ ಘಾತಕ ಶಕ್ತಿಗಳು ಸರ್ಕಾರದ ಕೆಲಸಗಳಿಗೆ ಅಡಚಣೆಯನ್ನು ಒಡ್ಡುವ ಉದ್ದೇಶದಿಂದ ರಾಜ್ಯದಲ್ಲಿ [illegible]ಗಳನ್ನು ನಡೆಸಲು ಪ್ರಚೋದಿಸುತ್ತಿರುವುದರಿಂದ ತಮಗೆ ತುಂಬಾ ಜಿಗುಪ್ಸೆಯುಂಟಾಗಿ [illegible] ರಾಜೀನಾಮೆ ಕೊಡಲು ಅಪೇಕ್ಷಿಸಿರುವುದಾಗಿಯೂ ಪೂರ್ವ ಪಾಕಿಸ್ತಾನದ ಮುಖ್ಯ ಮಂತ್ರಿ ಅತಾವುರ್ ರಹಮಾನರು ತಮ್ಮ ಮಿತ್ರರಿಗೆ ತಿಳಿಸಿದುದಾಗಿ ವರದಿಯಾಗಿದೆ.

ದಕ್ಷಿಣ ಆಫ್ರಿಕದಲ್ಲಿ ೨೫ ಮಂದಿ ನಿಗ್ರೋಯರಿಗೆ ಸಾಮೂಹಿಕ ಫಾಸಿ

ಕಳೆದ ವರ್ಷ ನೇಟಾಲ್ ಪ್ರಾಂತದಲ್ಲಿ ಮನೆಗಳಿಗೆ ನುಗ್ಗಿ ಶೋಧನೆ ಮಾಡುತ್ತಿದ್ದ ಇಬ್ಬರು ಬಿಳಿಯ ಮತ್ತು ಮೂವರು ವರ್ಣ ಜನಾಂಗದ ಪೋಲೀಸರನ್ನು ಕೊಲೆ ಮಾಡಿದ ಆಪಾದನೆ ಮೇಲೆ ೨೨ ಮಂದಿ ಆಫ್ರಿಕನರು ಮತ್ತು ಮೂವರು ವರ್ಣ ಜನಾಂಗದವರೂ ಸೇರಿ ಒಟ್ಟು ೨೫ ಮಂದಿಯನ್ನು ಪ್ರಿಟೋರಿಯಾ ಜೈಲಿನಲ್ಲಿ ಮೊನ್ನೆ ಒಟ್ಟಿಗೆ ಗಲ್ಲಿಗೆ ಹಾಕಲಾಯಿತು

ಕನ್ನಡ ಸಾಹಿತ್ಯ ಸಮ್ಮೇಳನದ ಶುಲ್ಕಗಳು

ಧಾರವಾಡದಲ್ಲಿ ನಡೆಯುವ [illegible]ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವವರು [illegible] ರೂ ಕೊಟ್ಟು ಸ್ವಾಗತ ಸಮಿತಿ ಸದಸ್ಯರಾಗಬಹುದು ಅಥವಾ ೩ ರೂ ಕೊಟ್ಟು ಪ್ರತಿನಿಧಿಯಾಗಿ ಭಾಗವಹಿಸಬಹುದು ೧೦ ರೂ[illegible]ಗೆ ಹೆಚ್ಚಾಗಿ ಕೊಟ್ಟವರನ್ನು ಆಶ್ರಯದಾತರೆಂದು ಪರಿಗಣಿಸಲಾಗುವುದು. ಅಂತಹವರಿಗೆ ಸಮ್ಮೇಳನದ ಮೂರು ದಿನದ ಎಲ್ಲಾ ಕಾರ್ಯಕ್ರಮಗಳಿಗೂ ಉಚಿತ ಪ್ರವೇಶ ಉಂಟು ಮುಂಚೆ [illegible] ತಿಳಿಸಿದಲ್ಲಿ ಸಮ್ಮೇಳನದ [illegible] ಸೌಕರ್ಯವನ್ನು ಏರ್ಪಾಡು ಮಾಡಲಾಗುವುದು. [illegible] ಸಮ್ಮೇಳನದ ಪೂರಾ ಅವಧಿಯಲ್ಲಿ ಊಟ ತಿಂಡಿಗಳಿಗಾಗಿ ೧೫ ರೂ ಕೊಡಬೇಕು

ರಹದಾರಿಯಿಲ್ಲದೆ ರೇಡಿಯೊ ಇಟ್ಟ ಆಪಾದನೆ

ಕಳೆದ [illegible] ವಾರದ ನಮ್ಮ ಸಂಚಿಕೆಯಲ್ಲಿ ಪರವಾನಿಯಿಲ್ಲದೆ ರೇಡಿಯೊ ಇಟ್ಟಿದ್ದುದಕ್ಕಾಗಿ ಶ್ರೀ ಎಸ್ ನಾಗಭೂಷಣಂ ಎಂಬವರಿಗೆ ೩೦|| ರೂ ಜುಲ್ಮಾನೆಯಾಯಿತೆಂದು ಪ್ರಕಟವಾಗಿದ್ದುದು ತಪ್ಪು. ಇವರಿಗೆ ಸಲ್ಲಬೇಕಾದ ೩೦|| ರೂ ಗಳನ್ನು ಮಾತ್ರ ಪಾವತಿ ಮಾಡುವಂತೆ ಕೋರ್ಟಿನವರು ಆಜ್ಞೆ ಮಾಡಿ ಆಪಾದಿತರನ್ನು ನಿರಪರಾಧಿಗಳೆಂದು ಖುಲಾಸೆ ಮಾಡಿದರೇ ವಿನಃ ಯಾವ ಜುಲ್ಮಾನೆಯನ್ನು ವಿಧಿಸಲಿಲ್ಲವೆಂದು ತಿಳಿದುಬಂದಿದೆ

ರಾಜಕಮಲ್ ಟಾಕೀಸ್
20—3—57ರಿಂದ ಅಮೋಘ 4ನೇ ವಾರ
ಪದ್ಮಿನಿ ಪಿಕ್ಚರ್ಸ್‌ರವರ ಕನ್ನಡ ಚಿತ್ರ
ರತ್ನಗಿರಿ ರಹಸ್ಯ
ಪಾತ್ರ ಬಿ ಆರ್ ಪಂತುಲು, ಎಂ ವಿ ರಾಜಮ್ಮ, ಉದಯಕುಮಾರ್, ಜಮುನ, ಜಾನಕಿ
ಲಕ್ಷ್ಮೀದೇವಿ ಟಿ ಆರ್ ರಾಮಚಂದ್ರನ್

HOUSE FOR SALE

HOUSE No 1063 53 Vidyaranya-puram, measuring 50 x 45 with built up area of 850 Sq ft is for sale

[illegible] willing to purchase [illegible] please contact

Dr B S Suryanarayana Rao,
Kempananjamba Agrahara
Krishnaraja Mohalla,
MYSORE

ಮಾಧವನ್ ನಾಯರರ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರ ಆಯ್ಕೆ

ಬೆಂಗಳೂರು ೨೪

ಬರುವ ತಿಂಗಳು ಎರಡನೇ ವಾರದಲ್ಲಿ ನಡೆಯುವ ಸಂಸ್ಥಾನದ ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಮಾಧವನ್ ನಾಯರ್‌ರವರು ಮೇಲ್ವಿಚಾರಣೆ ನಡೆಸುವರೆಂದು ಗೊತ್ತಾಗಿದೆ ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳ ಪೈಕಿ ಒಬ್ಬೊಬ್ಬರು ಈ ಚುನಾವಣೆಗಳಲ್ಲಿ ಹಾಜರಿರುವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಾಯಕರ ಚುನಾವಣಾ ದಿನವನ್ನು ಗೊತ್ತುಪಡಿಸುತ್ತದೆ.

ದೇವನೂರು ಮಠದ ನೂತನ ಸ್ವಾಮಿಗಳು

(ಓ ಸು) ದೇವನೂರು ೨೩

ನಂಜನಗೂಡು ತಾಲ್ಲೂಕು ದೇವನೂರು ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳು ಲಿಂಗೈಕ್ಯರಾದ ನಂತರ ಅವರ ಉತ್ತರಾಧಿಕಾರಿಗಳನ್ನು ಆರಿಸಲು ಕಳೆದ ಬುಧವಾರ [illegible]ರವ ವೇ|| ಬ್ರ|| ಶಿವರುದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿ ಮಠದ ಭಕ್ತರ ಸಭೆಯೊಂದು ನಡೆದು [illegible] ವಾಙ್ಮಯ ಪ್ರಕಾಶನ ಕಾರ್ಯಾಲಯದ ಸ್ಥಾಪಕರೂ ಮತ್ತು ಸಂಪಾದಕರೂ ಆದ ಶ್ರೀ ಶಿವಬಸವ ಸ್ವಾಮಿಗಳನ್ನು ಚುನಾಯಿಸಲಾಯಿತು

ಮಠದಾರರಿಗೆ ಎಂ. ಶಂಕರಯ್ಯ ಮತ್ತು ಎಸ್ ಎಂ ಸಿದ್ದಯ್ಯನವರ ವಂದನೆಗಳು

ಮೈಸೂರು ಪಾರ್ಲಿಮೆಂಟರಿ ಕ್ಷೇತ್ರದಿಂದ ಲೋಕ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಸಂಸ್ಥೆಗೂ [illegible] ತಮ್ಮಗಳಿಗೂ ಅಭಿಮಾನವನ್ನೂ, ಬೆಂಬಲವನ್ನೂ ತೋರಿಸಿ ಅಖಂಡ ಜಯವನ್ನು ಗಳಿಸಿಕೊಟ್ಟುದಕ್ಕಾಗಿ ಮಹಾಜನರೆಲ್ಲರಿಗೂ, ಶುಭಾಶಯಗಳನ್ನು ಕೋರಿ ಪತ್ರಗಳನ್ನು ಬರೆದು ಪ್ರೇಮವನ್ನು ವ್ಯಕ್ತಪಡಿಸಿದ ಅನೇಕ ಸ್ನೇಹಿತರಿಗೂ ಶ್ರೀಗಳಾದ ಎಂ ಶಂಕರಯ್ಯ ಮತ್ತು ಎಸ್ ಎಂ ಸಿದ್ದಯ್ಯನವರು ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿದ್ದಾರೆ

ಚರಂಡಿ ಕಟ್ಟದೆ ಪುರನಿವಾಸಿಗಳಿಗೆ ತೊಂದರೆ

ನಗರದ ನಾರಾಯಣಶಾಸ್ತ್ರಿ ರಸ್ತೆಯ ೨೨೯ನೇ ನಂಬರು ಮನೆಯ ಬಳಿ ರಸ್ತೆಯಲ್ಲಿ ಚರಂಡಿ ಕಟ್ಟಲು ಪೌರಸಭೆಯಿಂದ ಅಧಿಕಾರ ಪಡೆದ ಕಂಟ್ರಾಕ್ಟರು ಹಳ್ಳವನ್ನು ತೋಡಿ ಎರಡು ತಿಂಗಳಾದರೂ ಇನ್ನೂ ಕೆಲಸವನ್ನು ಪೂರೈಸದೆ ಇರುವುದರಿಂದ ಅಲ್ಲಿ ತಿರುಗಾಡುವ ಜನರಿಗೆ ಬಹಳ ತೊಂದರೆಯಾಗಿರುವುದಾಗಿ ಪೌರಸಭಾಧಿಕಾರಿಗಳಿಗೆ ತಿಳಿಸಿದ್ದಾಗ್ಯೂ ಇದುವರೆಗೆ ಅದನ್ನು ಕ್ರಮಪಡಿಸಿಲ್ಲವೆಂದೂ, ಈಗಲಾದರೂ ಈ ಕಾರ್ಯವನ್ನು ಬೇಗನೆ ಮುಗಿಸಿ ನಿವಾಸಿಗಳ ತೊಂದರೆಯನ್ನು ಪರಿಹರಿಸಬೇಕೆಂದೂ ಕೋರಿ ವಾಚಕರೊಬ್ಬರು ಪತ್ರ ಬರೆದಿರುತ್ತಾರೆ

WANTED

One experienced Accounts Clerk particularly trained in Jewellery accounts Should be able to maintain accounts without assistance One with knowledge of Typewriting preferred Salary according to experience

MYSORE JEWELLERY MART
New Statue Square
Sayyaji Rao Road Mysore

Edited Printed and Published by A. R Nagarajan at Sadhvi Press, D. Subbiah Road, Mysore

ಟೋಕಿಯೋ ಬಳಿ ೬೭ ಜನರಿ ವಿಮಾನ ಮಾಯ

ಅಮೆರಿಕದ ಸಾನ್‌ಫ್ರಾನ್ಸಿಸ್ಕೋ ನಗರದಿಂದ ಜಪಾನಿನ ಟೋಕಿಯೋವಿಗೆ ಹೊರಟಿದ್ದ ೬೭ ಪ್ರಯಾಣಿಕರನ್ನು ಹೊಂದಿದ್ದ ಅಮೆರಿಕನ್ ವಿಮಾನವೊಂದು ಟೋಕಿಯೋ ನಗರಕ್ಕೆ ೨೨೦ ಮೈಲಿ ದೂರದಲ್ಲಿದ್ದಾಗ ರೇಡಿಯೋ ಸಂಪರ್ಕವನ್ನು ಕಡಿದುಕೊಂಡು ಮಾಯವಾಯಿತೆಂದೂ, ಅದಕ್ಕಾಗಿ ಈಗ ೬೦ ವಿಮಾನಗಳು ಹುಡುಕುತ್ತಿರುವುದೂ ವರದಿಯಾಗಿದೆ

ಕೇರಳದಲ್ಲಿ ಕಮ್ಯೂನಿಸ್ಟರಿಗೆ ಮತ್ತೊಂದು ಸ್ಥಾನ

ಕೇರಳದ ವಿಧಾನ ಸಭೆಗೆ ಪೊನ್ನಾನಿ ಕ್ಷೇತ್ರದ ಸಾಮಾನ್ಯ ಸ್ಥಾನದಿಂದ ಕಮ್ಯೂನಿಸ್ಟ್ ಅಭ್ಯರ್ಥಿ [illegible] ಎಲಿಯಾಸ್‌ರವರು [illegible] ಸ್ಥಾನದಿಂದ ಕಾಂಗ್ರೆಸ್ಸಿನ ಶ್ರೀ [illegible]ರವರೂ ಜಯಗಳಿಸಿದರು ಇಲ್ಲಿಗೆ ಪ್ರಾಂತದಲ್ಲಿ ಚುನಾವಣೆಗಳು ಮುಗಿದು, ಕಾಂಗ್ರೆಸ್ಸಿಗೆ ೪೩, ಕಮ್ಯೂನಿಸ್ಟರಿಗೆ ೬೦, ಪಿ ಎಸ್ ಪಿ ಗೆ ೯, ಮುಸ್ಲಿಂ ಲೀಗಿಗೆ ೮ ಮತ್ತು ಸ್ವತಂತ್ರರಿಗೆ ೬ ಸ್ಥಾನಗಳು ದೊರೆತಿವೆ ಕಮ್ಯೂನಿಸ್ಟರು ೫ ಜನ ಸ್ವತಂತ್ರರ ಸಹಾಯದಿಂದ ಸರ್ಕಾರವನ್ನು ರಚಿಸಲಿರುವರು

ಋಣ ಬಾಧೆ ಸಹಿಸಲಾರದೆ ಇಡೀ ಸಂಸಾರದ ಐವರ ಮರ

ಮದ್ರಾಸಿನ ತಿರುನಲ್ವೇಲಿ ಜಿಲ್ಲೆಯ [illegible]ಳಂ ಎಂಬ ಹಳ್ಳಿಯಲ್ಲಿ ಪೋಸ್ಟ್‌ಮಾಸ್ಟರಾಗಿದ್ದ [illegible] ಸಾಲದ ಬಾಧೆಯನ್ನು ತಾಳಲಾರದೆ ಮೂವರು ಮಕ್ಕಳನ್ನು ಕತ್ತು ಕೊಲೆ ಮಾಡಿ, ಪತ್ನಿಯೊಡನೆ ತಾವೂ ನೇಣು ಹಾಕಿಕೊಂಡು ಮೃತಪಟ್ಟರೆಂದು ವರದಿಯಾಗಿದೆ

ಚಾಮರಾಜನಗರದ ತಾಲ್ಲೂಕು ಗ್ರಾಮಾಧಿಕಾರಿಗಳ ಸಭೆ

ಈ ತಾಲ್ಲೂಕಿನ ಗ್ರಾಮಾಧಿಕಾರಿಗಳು ೬ನೇ ತಾರೀಖಿನಂದು ಮುಚ್ಚಳಿಕೆ [illegible] ತಾಲ್ಲೂಕು ಕಛೇರಿಯಿಂದ [illegible] ಗ್ರಾಮಾಧಿಕಾರಿಗಳಿಗೆ ಮುಚ್ಚಳಿಕೆ ಬರೆದು ಕೊಡಲು ನೋಟೀಸು ಕೊಟ್ಟಿರುವ ವಿಷಯವಾಗಿ ಸಮಾಲೋಚನೆ ನಡೆಸಲು ನಾಳೆ [illegible] ಘಂಟೆಗೆ ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಬೀದಿಯಲ್ಲಿ ಗ್ರಾಮಾಧಿಕಾರಿಗಳ ಸಂಘದ ಸಭೆಯನ್ನು ಕರೆಯಲಾಗಿದೆ ತಾಲ್ಲೂಕಿನ ಎಲ್ಲಾ ಗ್ರಾಮಾಧಿಕಾರಿಗಳೂ ತಮ್ಮ ಉತ್ತಮ ಸಲಹೆ ಮತ್ತು ನಿರ್ಧಾರ ತಿಳಿಸಲು ಸಭೆಗೆ ತಪ್ಪದೆ ದಯಮಾಡಿಸಲು ಕೋರಿದೆ

ಹಬ್ಬಕ್ಕೆ ಸೀರೆಗಳು

ವಾಯಿಲ್ ಸೀರೆ-ಬೆಲೆ	ರೂ. 4 14 0
ಶಿಫಾನ್ ಸೀರೆಗಳು-	ರೂ 8 8 0
ದೊರಿಯ ಪೆಟಿಕೋಟ್	ರೂ 5 4 0

ಸ್ಟಾಕ್ ಬಹಳ [illegible]
ಬಾಹುಸಾರ್ ಕಂಪೆನಿ
[illegible] ರಸ್ತೆ ಮೈಸೂರು



ಒಲಿಂಪಿಯಾ ✦ 25 3—57ನೇ ಸೋಮವಾರದಿಂದ
[illegible]
ಮಾಡರ್ನ್ ಮೂವೀಸ್
ರವರ ಹಿಂದಿ ಚಿತ್ರ ★ ಸೀಮಾ ★
ತಾರೆ :— ನೂತನ್, ಬಾಲರಾಜ್ ಸಹಾನಿ, ಸುಂದರ್ ಮತ್ತು ಶೋಭಾ ಖೋಟೆ
ನಿರ್ದೇಶನ :— ಅಮಿಯಾ ಚಕ್ರವರ್ತಿ — ಸಂಗೀತ - ಶಂಕರ್ ಮತ್ತು ಜೈ
ಪ್ರತೀ ದಿನ "[illegible]" ೧೦ [illegible]

ಟೆಲಿಫೋನ್ ನಂ 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ [illegible]

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ,
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಪುಟ : ೦೮] SADHVI : MONDAY 25—3—1957 ಮೈಸೂರು : ಸೋಮವಾರ ೨೫—೩—೧೯೫೭ : [ಸಂಚಿಕೆ : ೨೩೩

ಬ್ರಿಟನ್ನಿಗೆ ಅಮೆರಿಕದ ರಾಕೆಟ್ ವಿಮಾನಗಳ ಸರಬರಾಜು

ಟನ್ನಿಗೆ ಅಮೆರಿಕದ ಮಿಸ್ಸೈಲ್ ರಾಕೆಟ್ಟುಗಳ ಸರಬರಾಜು

ಅಣು ಅಸ್ತ್ರ ಪ್ರಯೋಗಗಳ ಬಗ್ಗೆ ರಿಕಾ ಮತ್ತು ಬ್ರಿಟನ್ನುಗಳ ಒಪ್ಪಂದ

ಮೇರಿಕದ ಅಧ್ಯಕ್ಷ ಐಸೆನ್‌ಹೋವರ್ ಮತ್ತು ನ್ನಿನ ಪ್ರಧಾನಿ ಮ್ಯಾಕ್‌ಮಿಲನ್‌ರವರು ರ್ಮ್ಯುಡಾದ ಹ್ಯಾಮಿಲ್ಟನ್ ಎಂಬಲ್ಲಿ ಮೂರು ದಿನಗಳಿಂದ ಮಾತುಕತೆ ನಡೆಸಿ ವಿಶ್ವದ ನಾನಾ ಸ್ಯೆಗಳನ್ನು ಪರಿಶೀಲಿಸಿ ನೆನ್ನೆ ಜಂಟಿ ಘೋಷಣೆಯನ್ನು ಹೊರಡಿಸಿರುವರು. ಅಣು ಅಸ್ತ್ರ ಪ್ರಯೋಗದ ಬಗ್ಗೆ ಪೂರ್ವಭಾವಿಯಾಗಿ ಸಂಸ್ಥೆಗೆ ತಿಳಿಸಲು ಮತ್ತು ಅಂತಹ ಪ್ರಯೋಗಗಳನ್ನು ನೋಡಲು ಅಂತರರಾಷ್ಟ್ರೀಯ ವೀಕ್ಷಕರನ್ನು ಬಿಡಲು ರಷ್ಯವು ಒಪ್ಪುವುದಾದರೆ ತಾವೂ ಅದೇ ರೀತಿ ಮಾಡಲು ಸಿದ್ಧವೆಂದು ಘೋಷಣೆಯಲ್ಲಿ ತಿಳಿಸಲಾಗಿದೆ. ಯೋಗಿಕ ಆಸ್ಫೋಟನೆಗಳು ಅಪಾಯದ ಮಟ್ಟಕ್ಕಲ್ಪ ಪ್ರಮಾಣವನ್ನು ಮೀರುವುದಿಲ್ಲ ವೆಂದು ಸ್ಪಷ್ಟಪಡಿಸಲಾಗಿದೆ.

ಶಕ್ತಿಯ ಹಲವು ಗೈಡೆಡ್ ಮಿಸ್ಸೈಲ್‌ಗಳನ್ನು ಅಮೆರಿಕವು ಬ್ರಿಟನ್ನಿಗೆ ಸರಬರಾಜು ಮಾಡುವ ವಿಷಯದ ಬಗ್ಗೆಯೂ ಒಪ್ಪಂದವಾಗಿದೆ. ಆ ಅಸ್ತ್ರಗಳ ಹತೋಟಿಯು ಅಮೆರಿಕನ್ನರ ಕೈಯಲ್ಲಿರುವುದು. ಉತ್ತರ ಅಟ್ಲಾಂಟಿಕ್ ಒಕ್ಕೂಟದ ಪ್ರಾಮುಖ್ಯತೆ, ಬಾಗ್ದಾದ್ ಒಪ್ಪಂದದ ಮಿಲಿಟರಿ ಸಮಿತಿಯಲ್ಲಿ ಅಮೆರಿಕದ ಪಾತ್ರ, ಪಶ್ಚಿಮ ಜರ್ಮನಿಯ ಐಕ್ಯಕ್ಕೆ ಬೆಂಬಲ ಇವೇ ಮುಂತಾದ ಪ್ರಮುಖ ವಿಷಯಗಳ ಬಗ್ಗೆಯೂ ಒಪ್ಪಂದವಾಗಿದೆ. ಈ ವಿಷಯವನ್ನು ಮಾಸ್ಕೊ ರೇಡಿಯೊ ಪ್ರಕಟಿಸಿ ಬರ್ಮ್ಯುಡ ಮಾತುಕತೆಯಿಂದ ಶಾಂತಿ ಸಾಧನೆಗೆ ಯಾವ ಪ್ರಯೋಜನವಾಗುವುದಿಲ್ಲವೆಂದು ತಿಳಿಸಿದೆ.

ಬುಧವಾರವೂ ವಿಧಾನ ಸಭೆ ಅಧಿವೇಶನ

ನಾಳೆ ಮುಕ್ತಾಯವಾಗಬೇಕಾದ ವಿಧಾನಸಭೆಯ ಅಧಿವೇಶನವನ್ನು ನಾಳಿದ್ದು ಬುಧವಾರದವರೆಗೂ ಮುಂದುವರಿಸಲಾಗಿದೆಯೆಂದು ತಿಳಿದುಬಂದಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಪಿಟೀಲು ೭-೧೫ ಟಿ ವಿ ರಂಗ[illegible]-ದೇವರ ನಾಮ ೭-೩೦ ಗಾನ ಪಾಠ-ಸಂಗೀತ ಪಾಠ ೮-೧೫ ಉದಯ ಶಂಕರ ರೆಕಾರ್ಡ್. ಮಧ್ಯಾಹ್ನ ೧೨ ಲಲಿತಾ ದ[illegible]-ಗಾಯನ ೧೨-೩೦ ಚಿತ್ತೂರು ಸುಬ್ರಹ್ಮಣ್ಯ[illegible] ರೆಕಾರ್ಡ್ ೧೨-೪೫ ವನಿತಾ ವಿಹಾರ [illegible] ಪಿಟೀಲು ೨-೧೫ ಅಖಿಲ ಭಾರತ [illegible] ಕಾರ್ಯಕ್ರಮಗಳಿಂದ ಸಂಜೆ [illegible] ಎಂ ಶಂಕರನಾರಾಯಣಶಾಸ್ತ್ರಿ-ವೀಣೆ [illegible] ಸಂಗೀತ ೬-೨೦ ಬಿ ಭವಾನಿ [illegible] ೭-೩೦ ಗ್ರಾಮ [illegible] ನಾರದ-ರೂಪಕ ೮-೩೦ ಟಿ ಚೌಡಯ್ಯ-ಪಿಟೀಲು ೯-೧೫ ಎಂ ಶಂಕರನಾರಾಯಣಶಾಸ್ತ್ರಿ-ವೀಣೆ ೧೦ ಚಿತ್ರ ಗೀತ

ಇಂದು ಕೇರಳ ಕಮ್ಯೂನಿಸ್ಟ್ ಪಕ್ಷದ ನಾಯಕರ ಚುನಾವಣೆ

ಮಂತ್ರಿಮಂಡಲಕ್ಕೆ ಸೇರಲು ಪಿ ಎಸ್ ಪಿ ಪಕ್ಷದ ನಿರಾಕರಣೆ

ಕೇರಳದ ಕಮ್ಯೂನಿಸ್ಟ್ ಪಕ್ಷದ ಶಾಸನ ಸಭಾ ಸದಸ್ಯರ ಸಭೆಯು ಇಂದು ನಾಯಕನನ್ನು ಚುನಾಯಿಸಲಿದೆ.

ಕಳೆದ ಮೂರು ದಿನಗಳಿಂದಲೂ ಎರ್ನಾಕುಲಂನಲ್ಲಿ ಸಭೆ ಸೇರಿದ್ದ ಭಾರತ ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಮಂಡಲಿಯ ಸಭೆಯಲ್ಲಿ ಸರ್ಕಾರವನ್ನು ರಚಿಸಲು “ಪ್ರೋತ್ಸಾಹ ನೀಡಬೇಕೆಂದು ಪಿ ಎಸ್ ಪಿ ಪಕ್ಷಕ್ಕೆ ಕರೆಯಿತ್ತಿದೆ. ಆ ಪ್ರಾಂತದಲ್ಲಿ ತಮ್ಮ ಸರ್ಕಾರವು ಪಕ್ಷದ ನೀತಿಯನ್ನು ತ್ಯಜಿಸಿ ಎಲ್ಲಾ ಪಕ್ಷಗಳ ಸಹಕಾರದೊಡನೆ ಅಂಚಿನ [illegible] ವಸ್ತುಗಳನ್ನು ನಿರ್ಮೂಲ ಮಾಡಿ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಆಡಳಿತ ನಡೆಸುವುದೆಂದು [illegible] ಮಂಡಲಿಯು ತಿಳಿಸಿದೆ.

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಪಕ್ಷಗಳೊಡನೆ ಮೈತ್ರಿಗೆ ಯತ್ನಿಸುವುದಿಲ್ಲವೆಂದು ಶ್ರೀ ನಂಬೂದಿರಿಪಾಡ್‌ರವರು ಸ್ಪಷ್ಟಪಡಿಸಿರುವರು. ಕಮ್ಯೂನಿಸ್ಟ್ ಮಂತ್ರಿಮಂಡಲದಲ್ಲಿ ತಮ್ಮ ಪಕ್ಷವು ಸೇರುವುದಕ್ಕೆ ಕೇರಳ ಪಿ ಎಸ್ ಪಿ ಪಕ್ಷದ ನಾಯಕ ಪಟ್ಟಂ ತಾಣು ಪಿಳ್ಳೆಯವರು ನಿರಾಕರಿಸಿರುವರು.

ಕಳ್ಳ ಸೇಂದಿ ರವಾನೆಯಲ್ಲಿ ಪೋಲೀಸರೊಡನೆ ಜನರ ಘರ್ಷಣೆ

ಕಡೂರು ಕೆರೆ ಸಂತೆಗ್ರಾಮದ ದೊಡ್ಡಹಟ್ಟಿ ಎಂಬ ಗ್ರಾಮದ ಬಳಿ ಕಳೆದ ಸೋಮವಾರ ಕಳ್ಳ ಸೇಂದಿ ರವಾನೆ ಬಗ್ಗೆ ಗುಮಾನಿ ಪಟ್ಟು ಪೋಲೀಸರು ಒಂದು ಲಾರಿಯನ್ನು ತಡೆದರೆಂದೂ, ಆಗ ಅವರಲ್ಲಿ ಕುಡಿದು ಅಮಲಿನಲ್ಲಿದ್ದ ಇಬ್ಬರು ಕೆಳಕ್ಕೆ ಧುಮುಕಿ ತಪ್ಪಿಸಿಕೊಂಡು ಹೋಗುವ ಯತ್ನದಲ್ಲಿ ಒಬ್ಬನು ಪಕ್ಕದ ಜಲ್ಲಿ ಕಲ್ಲು ರಾಶಿಯ ಮೇಲೆ ಬಿದ್ದು ತೀವ್ರ ಗಾಯಗೊಂಡು ಮೃತಪಟ್ಟನೆಂದೂ ವರದಿಯಾಗಿದೆ. ಇದರಿಂದ ಪಕ್ಕದ ಹಳ್ಳಿಯ ಜನರು ಉದ್ರೇಕಗೊಂಡು ಪೋಲೀಸರೇ ಅವನನ್ನು ಕೊಂದರೆಂದು ಹೇಳಿ ಅವರ ಮೇಲೆ ಬಿದ್ದು ಗಲಭೆ ನಡೆಸಿದರೆಂದೂ, ರಿಸರ್ವ್ ಪೋಲೀಸರು ಅವರನ್ನು ಹತೋಟಿಗೆ ತಂದರೆಂದೂ ಗೊತ್ತಾಗಿದೆ.

ಏಪ್ರಿಲ್ ೧ ರಿಂದ ಜಾರಿಗೆ ಕೊಡಲು ೬೧ ಕೋಟಿ ನೂತನ ನಾಣ್ಯ

ಬರುವ ತಿಂಗಳ ೧ನೇ ತಾರೀಖಿನಿಂದ ಜಾರಿಗೆ ಕೊಡಲು ೧, ೨, ೫ ಮತ್ತು ೧೦ ನಯಾ ಪೈಸೆಗಳ ಒಟ್ಟು ೬೧ ಕೋಟಿ ನಾಣ್ಯಗಳನ್ನು ಭಾರತ ಸರ್ಕಾರದವರು ತಯಾರಿಸುತ್ತಿದ್ದಾರೆಂದು ವರದಿಯಾಗಿದೆ. ಜೂನ್ ತಿಂಗಳ ಅಂತ್ಯಕ್ಕೆ [illegible] ಕೋಟಿ ಹೊಸ ನಾಣ್ಯಗಳನ್ನು ತಯಾರಿಸಲಾಗುವುದೆಂದೂ, ಈ ವರ್ಷಾಂತ್ಯದೊಳಗೆ ೨೫ ಮತ್ತು ೫೦ ನಯಾ ಪೈಸೆಗಳ ನಾಣ್ಯಗಳನ್ನು ಜಾರಿಗೆ ಕೊಡಲಾಗುವುದೆಂದೂ ತಿಳಿದು

ಬ್ರಿಟನ್ನಿನಲ್ಲಿ ೧೦ ಲಕ್ಷ ಇಂಜನಿಯರಿಂಗ್ ಕಾರ್ಮಿಕರ ಮುಷ್ಕರ

ಬ್ರಿಟನ್ನಿನ ಇಂಜನಿಯರಿಂಗ್ ಕೈಗಾರಿಕೆಗಳ ಒಟ್ಟು ೧೦ ಲಕ್ಷ ಮಂದಿ ಕಾರ್ಮಿಕರು ವೇತನಗಳನ್ನು ಹೆಚ್ಚಿಸಬೇಕೆಂಬ ಕೋರಿಕೆಯನ್ನು ಈಡೇರಿಸಿಕೊಳ್ಳಲು ಮೊನ್ನೆಯಿಂದ ಮುಷ್ಕರವನ್ನು ಆರಂಭಿಸಿದರು. ಅದರ ಫಲವಾಗಿ ಬ್ರಿಟನ್ನಿನ ರಫ್ತು ವ್ಯಾಪಾರಕ್ಕೆ ಅಡಚಣೆಯಾಗಿ ತೀವ್ರ ಆರ್ಥಿಕ ಮುಗ್ಗಟ್ಟು ಉಂಟಾಗಿರುವುದೆಂದು ಹೇಳಲಾಗಿದೆ.

ಸೂಯೆಜ್ ಬಗ್ಗೆ ನಾಸೆರ್ ಮತ್ತು ಹ್ಯಾಮರ್‌ಶೀಲ್ಡ್ ಒಪ್ಪಂದ

ಸೂಯೆಜ್ ಕಾಲುವೆ ವಿವಾದದಲ್ಲಿ ಒಂದು ಇತ್ಯರ್ಥಕ್ಕೆ ಬರಲು ಈಜಿಪ್ಟ್ ಸರ್ಕಾರವು ಪ್ರಪಂಚ ಸಂಸ್ಥೆಯ ಕಾರ್ಯದರ್ಶಿ ಹ್ಯಾಮರ್‌ಶೀಲ್ಡರೊಡನೆ ಒಪ್ಪಂದ ಮಾಡಿಕೊಂಡಿರುವುದೆಂದು ತಿಳಿಸಲಾಗಿದೆ. ಈ ಸಂಬಂಧವಾಗಿ ಮೊನ್ನೆ ಉಭಯರೂ ದೀರ್ಘ ಚರ್ಚೆ ನಡೆಸಿ ಇಸ್ರೇಲ್ ಮತ್ತು ಸೂಯೆಜ್ ಪರಿಸ್ಥಿತಿಗಳನ್ನು ಪರಿಶೀಲಿಸಿದರೆಂದೂ ಹೇಳಲಾಗಿದೆ.

ಬ್ರಿಟನ್ನು ಅಣು ಅಸ್ತ್ರ ಪ್ರಯೋಗ ನಿಲ್ಲಿಸುವುದಿಲ್ಲ

ಅಣು ಅಸ್ತ್ರಗಳ ಪ್ರಯೋಗವನ್ನು ನಿಲ್ಲಿಸಬೇಕೆಂದು ಜಪಾನು ಬ್ರಿಟನ್ನಿಗೆ ಸಲ್ಲಿಸಿದ್ದ ಕೋರಿಕೆಯನ್ನು ಬ್ರಿಟನ್ನು ಮೊನ್ನೆ ನಿರಾಕರಿಸಿದುದಾಗಿ ಗೊತ್ತಾಗಿದೆ.

ಅಸ್ಸಾಮಿನಲ್ಲಿ ಮುಂದಿನ ವರ್ಷ ಕಾಂಗ್ರೆಸ್ ಮಹಾಧಿವೇಶನ

ಬರುವ ವರ್ಷ ಜನವರಿ ತಿಂಗಳಿನ ೧೮, ೧೯ ಮತ್ತು ೨೦ನೇ ತಾರೀಖು ಅಸ್ಸಾಮಿನಲ್ಲಿ ಕಾಂಗ್ರೆಸ್ ಮಹಾಧಿವೇಶನವು ಸೇರುವುದೆಂದು ವರದಿಯಾಗಿದೆ.

ಸಂಗೀತ ಕಛೇರಿ

ನಗರದ ಬಂಡಿಕೇರಿ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಈ ದಿನ ರಾತ್ರಿ ೭|| ಗಂಟೆಗೆ ವಿ|| ಹೆಚ್ ಟಿ ರಾಮಸ್ವಾಮಿಯವರ ಗಾಯನವನ್ನು ವಿ|| ಬಿ ಎಲ್. ಆಚಾರ್ಯರ ಪಿಟೀಲು ಮತ್ತು ವಿ|| ಹೆಚ್ ಟಿ ನಾಗಣ್ಣನವರ ಮೃದಂಗದೊಡನೆ ಏರ್ಪಡಿಸಲಾಗಿದೆ.

ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಹೊಸ ಡೈರೆಕ್ಟರುಗಳು

ನಗರದ ಮೇಲ್ಕಂಡ ಬ್ಯಾಂಕಿನ ಡೈರೆಕ್ಟರುಗಳ ಚುನಾವಣೆಯು ನೆನ್ನೆ ನಡೆದು ಪ್ರಕಟಿಸ[illegible]. ಈ ಕೆಳಗೆ ಕಂಡವರು ಆರಿಸಲ್ಪಟ್ಟಿರುವರು — ಶ್ರೀಗಳಾದ ಶರಣಪ್ಪ ಉಪಾಧ್ ಚೌಡಯ್ಯ, ಡಾ|| ಬಿ ಜಿ ಎಸ್, ಕೆ. ಪುಟ್ಟಪ್ಪರಾವ್, ಡಿ ಬಿ ರಾಮಪ್ಪ, ಜಿ ಆರ್ ರಂಗಸ್ವಾಮಯ್ಯ, ಎಚ್ ರಾಮಣ್ಣ, ಎಚ್ ಕೃಷ್ಣಮೂರ್ತಿರಾವ್, ಎ ಎ ಶ್ರೀಕಂಠಯ್ಯ, ಎ ನರಸಿಂಗರಾವ್, ಬಿ ಶ್ರೀನಿವಾಸಯ್ಯಂಗಾರ್, ಸಿ ಎಲ್ ನಂಜುಂಡಯ್ಯ, ಎ ಆರ್ ಸತ್ಯನಾರಾಯಣರಾವ್, ಎ ಎ ಶ್ರೀನಿವಾಸ ಸಮುದ್ರಿ, ಜಿ ಅಬ್ದುಲ್ ವಹಾಬ್ ಖಾನ್ ಮತ್ತು ಎಂ ಎಚ್ ನಾರಾಯಣರಾವ್.

ಪಬ್ಲಿಕ್ ಸರ್ವಿಸ್ ಕಮೀಷನ್ನಿನಲ್ಲಿ ಕೋಮುವಾರು ಪ್ರಾತಿನಿಧ್ಯವಿಲ್ಲ

ಮುಖ್ಯ ಮಂತ್ರಿಯವರ ಹೇಳಿಕೆ

ಬೆಂಗಳೂರು ೨೩

ಶ್ರೀ ಕೆಚ್ ಎಂ ಗಂಗಾಧರಯ್ಯನವರು ವಿಧಾನ ಪರಿಷತ್ತಿನಲ್ಲಿ ನಿರ್ಣಯವೊಂದನ್ನು ತಂದು ಪಬ್ಲಿಕ್ ಸರ್ವಿಸ್ ಕಮೀಷನ್ನಿನಲ್ಲಿ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯವಿರಬೇಕೆಂದು ಕೋರಿದ್ದರು. ಆ ರೀತಿ ಸ್ಥಾನವನ್ನು ಮೀಸಲಾಗಿಡುವುದು ಸಾಧ್ಯವಿಲ್ಲವೆಂದೂ, ಅರ್ಹರಾದವರು [illegible] ನೇಮಿಸಿಕೊಳ್ಳಲಾಗುವುದೆಂದೂ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಲಾಗಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಮಾರ್ಚಿ ೩೦ ಮತ್ತು ಏಪ್ರಿಲ್ ೨ನೇ ತಾ|| ಬ್ಯಾಂಕುಗಳಿಗೆ ರಜಾ

ಲೆಕ್ಕಗಳನ್ನು ರೂ. ಆ. ಪೈ. ಗಳಿಂದ ಹೊಸ ದಶಮಾಂಶ ಪದ್ಧತಿಗೆ ಬದಲಾಯಿಸಲು ಅನುಕೂಲವಾಗುವಂತೆ ಇದೇ ೩೦ನೇ ತಾರೀಖು ಮತ್ತು ಏಪ್ರಿಲ್ ೨ನೇ ತಾರೀಖು ಬ್ಯಾಂಕುಗಳಿಗೆ ರಜಾ ದಿನಗಳೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಖಜಾನೆಗಳಲ್ಲಿಯೂ ಆ ದಿನ ಕೆಲಸ ನಡೆಯುವುದಿಲ್ಲ. ಆದರೆ ಸರ್ಕಾರಿ ಕಛೇರಿಗಳು ಎಂದಿನಂತೆ ಕೆಲಸ ಮಾಡುವುವು.

ಹಂಗೆರಿಯಲ್ಲಿ ಮತ್ತೊಂದು ಕ್ರಾಂತಿಯ ದಮನ

ಹಂಗೆರಿಯಲ್ಲಿ ಇದೇ ಮಾರ್ಚಿ ೧೫ ರಂದು ಸರ್ಕಾರದ ವಿರುದ್ಧ ಮತ್ತೊಂದು ಕ್ರಾಂತಿಯನ್ನು ನಡೆಸಲು ಏರ್ಪಾಡಾಗಿತ್ತೆಂದೂ, ಅದನ್ನು ತಕ್ಷಣವೇ ಮಟ್ಟ ಹಾಕಲಾಯಿತೆಂದೂ ಅಲ್ಲಿನ ಪ್ರಧಾನಿ ಯೂನೋಸ್ ಕಾಡಾರರು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಇಸ್ಲಾಮಿಕ್ ಗಣರಾಜ್ಯೋತ್ಸವ

ಪಾಕಿಸ್ತಾನವು ಇಸ್ಲಾಮಿಕ್ ಗಣರಾಜ್ಯವೆಂದು ಘೋಷಿಸಲ್ಪಟ್ಟ ಪ್ರಥಮ ವಾರ್ಷಿಕ ದಿನಾಚರಣೆಯನ್ನು ನೆನ್ನೆ ಕರಾಚಿಯಲ್ಲಿ ಆಚರಿಸಲಾಯಿತು. ಅದರಲ್ಲಿ ೫೦ ಸೇಬರ್ ಜೆಟ್ ಮತ್ತು ಇತರ ಎಂಟು ವಿಮಾನಗಳೂ, [illegible] ಟ್ಯಾಂಕುಗಳೂ, ಪ್ರಬಲವಾದ ಬಂದೂಕಗಳೂ ಪ್ರದರ್ಶಿಸಲ್ಪಟ್ಟವು.

ಮನೆಗೆ ನುಗ್ಗಿ ಹೆಂಗಸರ ಆಭರಣಗಳ ದರೋಡೆ

ಹೊಳೆನರಸೀಪುರದ ಪ್ರೈಮರಿ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರಾದ ಶ್ರೀ ಸುಬ್ಬರಾಯರು ಮನೆಯಲ್ಲಿಲ್ಲದಿದ್ದಾಗ ಕಳೆದ ಗುರುವಾರ ರಾತ್ರಿ ೮ ಗಂಟೆಯಲ್ಲಿ ಒಬ್ಬ ದೃಢಕಾಯನಾದ ವ್ಯಕ್ತಿಯು ಅವರ ಮನೆಗೆ ನುಗ್ಗಿ ಮಕ್ಕಳಿಗೆ ಬೆದರಿಸುತ್ತಾ ಇದ್ದ ರಾಯರ ತಾಯಿಯ ಕತ್ತಿನಿಂದ ಮಾಂಗಲ್ಯ ಮತ್ತು ಚಿನ್ನದ ಸರವನ್ನು ಕಿತ್ತನೆಂದೂ, ಅವರು ಕೂಗಿಕೊಂಡಾಗ ನೋಡಲು ಬಂದ ಸುಬ್ಬರಾಯರ ಪತ್ನಿ ಮತ್ತು ತಂಗಿಯರಿಬ್ಬರಿಂದಲೂ ಮಾಂಗಲ್ಯ ಮತ್ತು ಚಿನ್ನದ ಸರಗಳನ್ನು ಕಿತ್ತುಕೊಂಡು ಪರಾರಿಯಾದನೆಂದೂ, ಹೆಂಗಸರ ಪೈಕಿ ಒಬ್ಬರಿಗೆ ಕತ್ತಿನ ಮೇಲೂ, ಕೈಮೇಲೂ ಗಾಯಗಳಾದುವೆಂದೂ ವರದಿಯಾಗಿದೆ.

ಅಂಗಡಿ ಸಿಬ್ಬಂದಿ ಕಾನೂನು ಉಲ್ಲಂಘನೆಗಾಗಿ ದಂಡ

ಮೈಸೂರು ೨೫

ಅಂಗಡಿ ಸಿಬ್ಬಂದಿ ಕಾನೂನು ಉಲ್ಲಂಘನೆಗಾಗಿ ನಗರದ ಎರಡನೇ ನ್ಯಾಯಾಧೀಶರು ಮೊನ್ನೆ ಕೆಳಗೆ ಕಂಡ ಬೀಡಿ ಅಂಗಡಿಗಳ ಮಾಲೀಕರಿಗೆ ಮುಂದೆ ಸೂಚಿಸಿರುವ ಮೇರೆ ದಂಡಗಳನ್ನು ವಿಧಿಸಿರುವರು:—

ಜಗನ್ಮೋಹನ ಬಂಗ್ಲಾ ರಸ್ತೆಯ ಶ್ರೀ ಎ. ಹಿ [illegible] ಮತ್ತು [illegible] ರಸ್ತೆಯ ಶ್ರೀ ವೀರಾಂಜಟ್ಟಿ, ತಲಾ ೧೦ ರೂ. ಅಶೋಕಾ ರಸ್ತೆಯ ಶ್ರೀ ಕೆ. ಪಿ. ಹುಸನ್, ಅಸ್ಗರ್ ರಸ್ತೆಯ ಶ್ರೀ ಅಬು, ಅಶೋಕಾ ರಸ್ತೆಯ ಶ್ರೀ ಮಹಮದ್ ಹನೀಫ್ ಮತ್ತು ಶ್ರೀ ಕೆ. ಕೆ. ವರ್ದ, ಇರ್ವಿನ್ ರಸ್ತೆಯ ಶ್ರೀ ಕೊಗಡ್ ಅನಂತಯ್ಯ, ನರಬಾದ ರಸ್ತೆಯ ಶ್ರೀ ಇಬ್ರಾಹಿಂ, ಹಳೇ ಅಗ್ರಹಾರದ ಅಯ್ಯಂಗಾರ್ ಲಂಚ್ ಹೋಂ ಎದುರಿಗಿರುವ ಶ್ರೀ ನಂಜುಂಡಯ್ಯ ಮತ್ತು ವಾಣೀವಿಲಾಸ ಮಾರ್ಕೆಟ್ ಗಲ್ಲಿಯ ಶ್ರೀ ಬಿ. ಸೂರ್ಯನಾರಾಯಣರವರಿಗೆ ತಲಾ ೫ ರೂ.

ಇರ್ವಿನ್ ರಸ್ತೆಯ ವೇಣುಗೋಪಾಲ್ ಕಾಫಿ ಮತ್ತು ಜನರಲ್ ಸ್ಟೋರ್ಸಿನ ಮಾಲೀಕ ಶ್ರೀ ಗೋವಿಂದಶೆಟ್ಟಿ, ಅದೇ ರಸ್ತೆಯಲ್ಲಿರುವ ಚ[illegible]ದ ವ್ಯಾಪಾರಿಗಳಾದ ಶ್ರೀ ಮಹಮದ್ ಯೂಸುಫ್ ಮತ್ತು ಎಚ್. ಎಸ್. [illegible]ರಿಗೂ ತಲಾ ೫ ರೂ.

ಇರ್ವಿನ್ ರಸ್ತೆಯ ಬಟ್ಟೆ ವ್ಯಾಪಾರಿಗಳಾದ ಶ್ರೀ ಶಂಕರ್‌ದಾಸ್ ಮತ್ತು ದೇವರಾಜ ಮಾರ್ಕೆಟ್ಟಿನಲ್ಲಿರುವ ದಿನಸಿ ಅಂಗಡಿ ಮಾಲೀಕರಾದ ಶ್ರೀ [illegible]ರವರಿಗೂ ತಲಾ ೪ ರೂ.

ರೈಲ್ವೆ ಯೂನಿಯನ್ ಬೇಡಿಕೆಗಳ ದಿನಾಚರಣೆ

ಮೊನ್ನೆ ದಿನ ರೈಲ್ವೆ ವರ್ಕ್‌ಷಾಪ್ ಮೈದಾನದಲ್ಲಿ ರೈಲ್ವೆ ಕೆಲಸಗಾರರ ಭಾರಿ ಬಹಿರಂಗ ಸಭೆಯು ನಡೆಯಿತು. ಶ್ರೀಗಳಾದ ಜಿ. ಡಿ. ರಾಮದಾಸ್, ಕೆ. ಎಲ್. ಎಸ್. ಮೂರ್ತಿ ಮತ್ತು ಕೆ. ಎಸ್. ರಾಮಸ್ವಾಮಿಯವರು, ಭಾಷಣ ಮಾಡಿ ಕೆಲಸಗಾರರ ಜೀವನ ಅಂಕಿ-ಅಂಶಕ್ಕೆ ಅನುಗುಣವಾಗಿ ರೈಲ್ವೆ ಕೆಲಸಗಾರರಿಗೆ ತುಟ್ಟಿ ಭತ್ಯವನ್ನು ಕೊಡುತ್ತಿಲ್ಲವೆಂದೂ, ಮತ್ತು ರೈಲ್ವೆ ಆದಾಯ ಹೆಚ್ಚುತ್ತಿದ್ದರೂ ಕೆಲಸಗಾರರ ಸಂಬಳವನ್ನು ಕಳೆದ ಏಳು ವರ್ಷಗಳ-ದೀರ್ಘ ಹೆಚ್ಚಿಸಿಲ್ಲವೆಂದೂ, ಸರ್ಕಾರದವರು ಒಡನೆ ನೌಕರರ ಮೇಲೆ ಕರುಣವಿಟ್ಟು ಆದಾಯಕ್ಕೆ ತಕ್ಕಂತೆ ಸಂಬಳ, ತುಟ್ಟಿ ಭತ್ಯವನ್ನು ಹೆಚ್ಚಿಸಬೇಕೆಂದೂ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಪಾರ್ಥಸಾರಥಿಯವರು ಸಮಯೋಚಿತವಾಗಿ ಮಾತನಾಡಿದನಂತರ, ಸಹ ಕಾರ್ಯದರ್ಶಿ ಶ್ರೀ ಜಿ. ಎಸ್. ಭೈರೋಜಿರಾಯರ ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು.

ಓಟುಗಳನ್ನು ನಿಧಾನವಾಗಿ ಎಣಿಸುವುದರ ರಿಕಾರ್ಡು

ಆಂಧ್ರದ ಮದ್ನಾಪಲ್ ಜಿಲ್ಲೆಯ [illegible] ಎಂಬ ಕ್ಷೇತ್ರದಿಂದ ಶಾಸನ ಸಭೆಗೆ ನಡೆದ ಚುನಾವಣೆಯಲ್ಲಿ ಚಲಾಯಿಸಲಾದ ೧,೩೮,೬೩೫ ಓಟುಗಳನ್ನು ಎಣಿಸಲು ೫೦ ದಿನ ಹಿಡಿಯಿತೆಂದೂ, ಓಟುಗಳನ್ನು ಕಡಿಮೆಯಾಗಿ ಎಣಿಸುವುದರಲ್ಲಿ ಇದೇ ರಿಕಾರ್ಡೆಂದೂ ಹೇಳಲಾಗಿದೆ.

ಮನೆ ತೆರಿಗೆ ಬಗ್ಗೆ ಮಾಲೀಕರಿಗೂ ಬಾಡಿಗೆದಾರರಿಗೂ ಜಗಳ

ಕುಂಭಕೋಣದ ಒಂದು ಮನೆಯಲ್ಲಿ ವಾಸವಾಗಿದ್ದ ಬಾಡಿಗೆದಾರನಿಗೂ ಮತ್ತು ಮಾಲೀಕನಿಗೂ, ಮನೆಯ ಕಂದಾಯವನ್ನು ಪಾವತಿ ಕೊಡುವ ಬಗ್ಗೆ ಜಗಳವಾಗಿ ಇಬ್ಬರೂ ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟರೆಂದು ವರದಿಯಾಗಿದೆ.

ವಜ್ರದ ಒಡವೆಗಳನ್ನು ಇಲಿಗಳು ಅಪಹರಿಸಿದುದರಿಂದ ಗೊಂದಲ

ಮದರಾಸ್ ಪಾರ್ಕ್‌ಟೌನಿನ ಪರಾಂಕುಶಪುರದಲ್ಲಿ ಕಳೆದ ವಾರ ಒಂದು ವಿನೋದಕರವಾದ ಕೃತ್ಯವು ಜರುಗಿತು. ಅಲ್ಲಿನ ನಿವಾಸಿ ವೆಂಕಟೇಶದಾಸ ಎಂಬುವರ ಪತ್ನಿಯು ೧೫,೦೦೦ ರೂ. ಬೆಲೆಬಾಳುವ ವಜ್ರದ ಒಂದು ಮೂಗತಿ ಮತ್ತು ಎರಡು ಓಲೆಗಳನ್ನು ಒಂದು ಸಣ್ಣ ಪೆಟ್ಟಿಗೆಯಲ್ಲಿಟ್ಟು ಸ್ನಾನಕ್ಕಾಗಿ ತೆರಳಿ, ವಾಪಸು ಬಂದು ನೋಡಿ [illegible] ಪೆಟ್ಟಿಗೆ [illegible] ಕಂಡು ತಕ್ಷಣ ದೂರು ಕೊಡಲಾಗಿ ಪೊಲೀಸರು ಮನೆಯ ಎಲ್ಲ ಸಂಸಾರಗಳವರನ್ನೂ ಮನೆಗಳಲ್ಲೇ ಬಂಧಿಸಿದುದಾಗಿ ೫ ಗಂಟೆಗಳ ಕಾಲ ಒಂದೇ ಸಮನೆ ಶೋಧಿಸಲಾಗಿ ಒಂದು ನಿಮಿಷದಲ್ಲೇ ಅಂಗಳದ ಬಚ್ಚಲಲ್ಲಿ ಮೂಗುತಿಯ ತಿರುಪನ್ನು ಕಂಡರು. ಒಂದು ಗಂಟೆಯನಂತರ ಮೂಗುತಿ ಮತ್ತು ಒಂದು ಓಲೆಯು ಮನೆಯಲ್ಲಿ ಇಜ್ಜಲು ಮೂಟೆಯ ಪಕ್ಕ ದೊರಕಿತು. ೫ ಗಂಟೆಗಳನಂತರ ಇನ್ನೊಂದು ಓಲೆಯೂ ಅಲ್ಲೇ ಸಿಕ್ಕಿತು. ಇವಿಷ್ಟಕ್ಕೂ ಕಾರಣವಾದ ಕಳ್ಳರು ಇಲಿಗಳು! ಅವುಗಳು ಈ ಶೋಧನೆಯ ಸಂಭ್ರಮದಿಂದ ಬೆದರಿ ದಿಕ್ಕಾಪಾಲಾಗಿ ಓಡಿ ಒಡವೆಗಳನ್ನು ಚೆಲ್ಲಾಡಿದುವೆಂಬುದು ಗೊತ್ತಾಯಿತು.

ಪಶ್ಚಿಮ ಬಂಗಾಳದ ಆರೋಗ್ಯ ಸಚಿವರ ಪರಾಜಯ

ಪಶ್ಚಿಮ ಬಂಗಾಳದ ಆರೋಗ್ಯ ಸಚಿವ ಡಾ| ಎ. ಡಿ. ಮುಖರ್ಜಿಯವರು ಬಸೀರ್‌ಹಾಟ್ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಫಾರ್ವರ್ಡ್ ಬ್ಲಾಕಿನ [illegible] ವಾರ ಚಿತ್ರಾ [illegible] ಎಂಬುವರಿಂದ ಸೋಲಿಸಲ್ಪಟ್ಟಿರುವರು.

ಶ್ರೀರಂಗಪಟ್ಟಣದ ಬಳಿ ಬೆಂಕಿ ೩೦ ಸಾವಿರ ರೂ. ನಷ್ಟ

ಶ್ರೀರಂಗಪಟ್ಟಣದ ಲಕ್ಷ್ಮೀ ಶ್ರೀನಿವಾಸ ಅಗ್ರಹಾರದಲ್ಲಿ ಕಳೆದ ಶುಕ್ರವಾರ ಬೆಂಕಿ ಆಕಸ್ಮಿಕವು ಸಂಭವಿಸಿ ಏಳು ಹುಲ್ಲಿನ ಗುಡಿಸಲುಗಳು ಸುಟ್ಟು ಹೋದುವು. [illegible] ಸುಮಾರು ೩೦ ಸಾವಿರ ರೂ. ನಷ್ಟವಾಗಿದೆಯೆಂದು ತಿಳಿದುಬಂದಿದೆ.

ಕೃಷ್ಣರಾಜನಗರದ ಮತದಾರರಿಗೆ ಹೆಚ್. ಎಂ. ಚನ್ನಬಸಪ್ಪನವರ ವಂದನೆ

ಕೃಷ್ಣರಾಜನಗರದಿಂದ ಸಂಸ್ಥಾನದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಿ ತಮಗೆ ಬೆಂಬಲ ನೀಡಿ ಜಯಶೀಲರನ್ನಾಗಿ ಮಾಡಿದ ಮತದಾರರಿಗೂ ಮತ್ತು ಇತರ ವಿಧಗಳಲ್ಲಿ ನೆರವು ನೀಡಿದ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಸಲ್ಲಿಸಿರುತ್ತಾರೆ.

ಬೆಲೆ ಇಳಿದಿದೆ
ರೆಡಿಮೇಡ್ ಸೊಳ್ಳೆ ಪರದೆ
ನಾಯಲ್ ಶಿಫಾನ್ ಸೀರೆಗಳು
ಬನ್ನಿ ಷರ್ಟಿಂಗ್ ಕೋಟಿಂಗ್ ಲಾಂಗ್ ಕ್ಲಾತ್
ಇಷ್ಟು ಸಾಮಾನುಗಳು ಬೇಕಾದರೂ ನೋಡಬಹುದು
ಬಾಹುಸಾರ್ ಕಂಪೆನಿ
[illegible] ರಸ್ತೆ, ಮೈಸೂರು.

WANTED

One experienced Accounts Clerk particularly trained in Jewellery accounts Should be able to maintain accounts without assistance One with knowledge of Typewriting preferred Salary according to experience

MYSORE JEWELLERY MART
New Statue Square
Sayyaji Rao Road, Mysore

ಅಣು ಅಸ್ತ್ರಗಳ ಆಸ್ಫೋಟನೆಗೆ ಮತ್ತೆ ರಾಜಾಜಿಯವರ ವಿರೋಧ

ಪ್ರಬಲ ರಾಷ್ಟ್ರಗಳ ಹಲವು ಮಂದಿ ಮೂರ್ಖರು ಅಣು ಅಸ್ತ್ರ ಪ್ರಯೋಗಗಳಿಂದ ವಾತಾವರಣವನ್ನು ಕೆಡಿಸಿ ಮಾನವ ಜನಾಂಗಕ್ಕೆ ಅಪಚಾರವೆಸಗುತ್ತಾ ಪ್ರಗತಿ ಹೊಂದಲು ಪ್ರಬಲ ಆಕಾಂಕ್ಷೆಯುಳ್ಳ ತಮ್ಮ ದೇಶದ ಜನರನ್ನು ತಪ್ಪುದಾರಿಗೆಳೆಯುವುದನ್ನು ಇದುವರೆಗೂ ಮೂರ್ಖತನದಿಂದ ಅನುಭವಿಸುತ್ತಿದ್ದ ಪ್ರಪಂಚದಲ್ಲಿ ಆ ಜಡ ಮನೋಭಾವವು ತಾನಾಗಿ ಅವುಗಳನ್ನು ತಡೆಗಟ್ಟಲು ನಾನಾ ರಾಷ್ಟ್ರಗಳಿಂದ ಸಾಮೂಹಿಕ ಕ್ರಮಗಳು ಜರುಗಲು ಆರಂಭವಾಗಿರುವುದಕ್ಕಾಗಿ ರಾಜಾಜಿಯವರು ಸಂತೋಷವನ್ನು ವ್ಯಕ್ತಪಡಿಸಿ ಜಪಾನಿನ ಶಾಂತಿ ಸಮಿತಿಗೆ ಪತ್ರ ಬರೆದಿದ್ದಾರೆ. ಅಣು [illegible]ಗಳಲ್ಲಿ ಸಿಡಿತ ಮತ್ತು ಮಿಸ್ಸೈಲ್ ರಾಕೆಟ್ಟುಗಳು ಹತೋಟಿ ತಪ್ಪಿ ಸಿಡಿದುದೇ ಮುಂತಾದ ಅನಾಹುತಗಳು ವಾತಾವರಣವನ್ನು ನಿರೀಕ್ಷೆಗಿಂತ ಹೆಚ್ಚು ಕೆಡಿಸುತ್ತಿರುವುದರಿಂದ ಅದನ್ನು ತಡೆಗಟ್ಟುವುದು ಅತ್ಯವಶ್ಯಕವೆಂದು ಅವರು ಪ್ರತಿಪಾದಿಸಿದ್ದಾರೆ.

ಏಪ್ರಿಲ್ ೪ ಅಥವಾ ೬ ರಂದು ಶಾಸನಸಭಾ ನಾಯಕರ ಆಯ್ಕೆ

ಬರುವ ತಿಂಗಳು ೪ ಅಥವಾ ೬ನೇ ತಾರೀಖು ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ [illegible] ನಾಯಕರ ಆಯ್ಕೆ ನಡೆಸುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿರುವರು.

ಚುನಾವಣೆಯಲ್ಲಿ ಜಯಶೀಲರಾದವರಿಗೆ ಸತ್ಕಾರ

ನಗರದ ಕೃಷ್ಣರಾಜ ಮೊಹಲ್ಲೆಯ [illegible] ಯುವಕ ಸಂಘದವರು, ಇತ್ತೀಚಿನ ಚುನಾವಣೆಗಳಲ್ಲಿ ಜಯಶೀಲರಾದ ಶ್ರೀಗಳು ಎಂ. [illegible]ರಯ್ಯ, ಎಸ್. ಎಂ. [illegible]ದ್ದಯ್ಯ, ಕೆ. ಎಸ್. ಸೂರ್ಯನಾರಾಯಣರಾವ್ ಮತ್ತು ಕೆ. ಪುಟ್ಟಸ್ವಾಮಿಯವರುಗಳು ಗೌರವಾರ್ಥವಾಗಿ ನೆನ್ನೆ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು. ಶ್ರೀ ಎಸ್. ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಲ್ಲಿ ಶ್ರೀ ಸೂರ್ಯನಾರಾಯಣರಾಯರು ಮಾತ್ರ ಆಗಮಿಸಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಕೆ. ಆರ್. ಲಕ್ಷ್ಮೀಬಾಯಿಯವರಿಂದ ಪ್ರಾರ್ಥನೆ ಮತ್ತು ಶ್ರೀ ರಾಮಾಂಜಪುರವರಿಂದ ಸ್ವಾಗತ ಭಾಷಣಗಳಾದನಂತರ ದೇವತಾ ಪೂಜೆಯೂ ಮತ್ತು ಉಪಾಹಾರವೂ ಆದವು. ಅಧ್ಯಕ್ಷರು ಭಾಷಣ ಮಾಡಿ ಕಾಂಗ್ರೆಸ್ ಸಂಸ್ಥೆಗೆ ಜನರು ಬೆಂಬಲವಿತ್ತುದಕ್ಕಾಗಿ ಧನ್ಯವಾದಗಳನ್ನರ್ಪಿಸಿದರು ಮತ್ತು ಚುನಾಯಿತ ಪ್ರತಿನಿಧಿಗಳು ಉತ್ತಮ ರೀತಿಯಲ್ಲಿ ಜನರ ಸೇವೆಯನ್ನು ಮಾಡುವರೆಂದು ಭರವಸೆಯಿತ್ತರು. ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರು ಮಾತನಾಡಿ ತಮಗೆ ಬೆಂಬಲವಿತ್ತುದಕ್ಕಾಗಿ ಜನರನ್ನು ವಂದಿಸಿ ತಮ್ಮ ಕೈಲಾದ ಮಟ್ಟಿಗೂ ಸೇವೆ ಮಾಡುವುದಾಗಿ ತಿಳಿಸಿದರು.

ಯುಗಾದಿ ಹಬ್ಬಕ್ಕಾಗಿ
ಸವಿ ಭಕ್ಷ್ಯಗಳು

ಯುಗಾದಿ ಹಬ್ಬಕ್ಕಾಗಿ, ೩ ದಿನ ಮುಂಚೆ ತಿಳಿಸಿದಲ್ಲಿ, ರವೆಯಿಂದ ಮಾಡಿದ, ಕೆಳಗೆ ಸೂಚಿಸಿರುವ ಯಾವ ಭಕ್ಷ್ಯವನ್ನಾದರೂ 25ಕ್ಕೆ ಕಡಿಮೆಯಿಲ್ಲದಂತೆ ಸಿದ್ಧಪಡಿಸಿ ಬೇಗನೆ ಕೊಡಲಾಗುತ್ತೆ. ಅಲ್ಲದೆ ಬೇರೆ ದಿನಗಳಿಗಾಗಿ ಬೇಕಾದರೂ ಮಾಡಿಕೊಡಲಾಗುವುದು.

ಭಕ್ಷ್ಯಗಳ ವಿವರ:— ರವೆ ಶ್ಯಾವಿಗೆ, ಪೇಣಿ ಮಂಡಿಗೆ, ಚಿರೋಟಿ, ಸಕ್ಕರೆ ಹೋಳಿಗೆ ಬಾದುಷಾ ಮತ್ತು ಇತರ ಭಕ್ಷ್ಯಗಳು.

ಸಿದ್ಧನಾಬಾಚಾರ್
ಭೀಮಪಾಕ ಮಂದಿರ
[illegible] ಅಡಿಗೆಯವರ [illegible]
1134 ನಾರಾಯಣಶಾಸ್ತ್ರಿ ರಸ್ತೆ
[illegible]

ಮಲಯದಲ್ಲಿ ಶಾಂತಿಗಾಗಿ ಕಮ್ಯೂನಿಸ್ಟರ ಸಂಧಾನ

ಮಲಯಾದಲ್ಲಿ ಕಳೆದ ಒಂಭತ್ತು ವರ್ಷಗಳಿಂದ ಕಮ್ಯೂನಿಸ್ಟರಿಗೂ, ಸರ್ಕಾರಕ್ಕೂ ನಡೆಯುತ್ತಿರುವ ಗೆರಿಲ್ಲಾ ಯುದ್ಧವನ್ನು ಮುಕ್ತಾಯಗೊಳಿಸಲು ಸಂಧಾನ ನಡೆಸುವ ಬಗ್ಗೆ ಕಮ್ಯೂನಿಸ್ಟ್ ಪಕ್ಷದವರು ಸರ್ಕಾರವನ್ನು ಆಹ್ವಾನಿಸಿ ಪತ್ರ ಬರೆದಿರುವರೆಂದು ಹೇಳಲಾಗಿದೆ. ಈ ಸಂಬಂಧವಾಗಿ ಕಮ್ಯೂನಿಸ್ಟರು ಮೂರು ಷರತ್ತುಗಳನ್ನು ಹಾಕಿ ಮಲಯದ ಕಮ್ಯೂನಿಸ್ಟರೂ ಮತ್ತು ಇ[illegible]ಸ್ತ್ರೀಯರೂ ಪ್ರಜಾ ಪ್ರಭುತ್ವ ರಾಷ್ಟ್ರಗಳಲ್ಲಿರುವಂತೆ ಎಲ್ಲ ಹಕ್ಕುಬಾಧ್ಯತೆಗಳನ್ನೂ ಹೊಂದಬೇಕು, ಅಲ್ಲಿನ ಮಹಾಚುನಾವಣೆಗಳಲ್ಲಿ ಭಾಗವಹಿಸುವುದೇ ಮುಂತಾದ ಎಲ್ಲ ರಾಜಕೀಯ ಸ್ವಾತಂತ್ರ್ಯಗಳನ್ನೂ ಕಮ್ಯೂನಿಸ್ಟ್ ಪಕ್ಷವು ಹೊಂದಿರಬೇಕು ಮತ್ತು ಮಲಯದ ಕಮ್ಯೂನಿಸ್ಟ್ ಪಕ್ಷದವರಾಗಲೀ, ಮಲಯಾ ಜನಾಂಗ ವಿಮೋಚನಾ ಪಡೆಯವರಾಗಲೀ ಹೋರಾಟ ನಡೆಸಿದ ಬಗ್ಗೆ ಅವರನ್ನು ಶಿಕ್ಷೆಗೆ ಗುರಿಪಡಿಸಬಾರದು-ಎಂದು ತಿಳಿಸಿರುವುದಾಗಿಯೂ ಗೊತ್ತಾಗಿದೆ. ಆದರೆ ಅಧಿಕಾರಿ ವಲಯಗಳಲ್ಲಿ ಈ ಬಗ್ಗೆ ಸಮರ್ಥನೆ ದೊರೆತಿಲ್ಲ.

ಗೂಡ್ಸ್ ರೈಲು ಮತ್ತು ಟ್ರಕ್ಕುಗಳ ಘರ್ಷಣೆಯಲ್ಲಿ ೪ ಮರಣ

ದೆಹಲಿಯ ಸಫ್ದರ್‌ಜಂಗ್ ವಿಮಾನ ನಿಲ್ದಾಣದ ಬಳಿ ಮೊನ್ನೆ ಬೆಳಿಗ್ಗೆ ಒಂದು ಮೋಟಾರು ಟ್ರಕ್ಕು ರೈಲು ಮಾರ್ಗವೊಂದನ್ನು ಲೆವೆಲ್ ಕ್ರಾಸಿಂಗಿನಲ್ಲಿ ದಾಟುತ್ತಿದ್ದಾಗ ಚಲಿಸುತ್ತಿದ್ದ ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದು ಸ್ಥಳದಲ್ಲೇ ೪ ಮಂದಿ ಮೃತಪಟ್ಟರು. ಟ್ರಕ್ಕಿನ ಡ್ರೈವರನೂ ಸೇರಿ ಇಬ್ಬರಿಗೆ ತೀವ್ರ ಗಾಯಗಳಾದುವು.

ಬಾಟಾರವರಿಗೆ ನೊಬೆಲ್ ಶಾಂತಿ ಪಾರಿತೋಷಕ?

ವಿಶ್ವವಿಖ್ಯಾತ ಪಾದರಕ್ಷೆಗಳ ತಯಾರಿಕಾ ಕಂಪನಿ ಮಾಲೀಕರಾದ ಜಾನ್ ಎ. ಬಾಟಾರವರು ಪೂರ್ವರಾಷ್ಟ್ರಗಳ ಸುಮಾರು ಲಕ್ಷ ಮಂದಿ ನಿರ್ಗತಿಕರಿಗೆ ಪಾದರಕ್ಷೆಗಳನ್ನು ಒದಗಿಸಿರುವರೆಂದೂ, ಆದಕಾರಣ ಬರುವ ಡಿಸೆಂಬರಿನಲ್ಲಿ ನೀಡಲಾಗುವ ನೊಬೆಲ್ ಶಾಂತಿ ಪಾರಿತೋಷಕವನ್ನು ಅವರಿಗೆ ಕೊಡುವ ಬಗ್ಗೆ ಅವರ ಹೆಸರನ್ನು ಸೂಚಿಸಲಾಗಿರುವುದೆಂದೂ ವರದಿಯಾಗಿದೆ.

ಆಹಾರ ಪರಿಸ್ಥಿತಿ ಉತ್ತಮಪಡಿಸಲು ಭಷಾನಿಯವರ ಉಪವಾಸ

ಪೂರ್ವ ಪಾಕಿಸ್ತಾನದಲ್ಲಿ ಹತೋಟಿ ತಪ್ಪಿದ ಆಹಾರ ಪರಿಸ್ಥಿತಿಯ ಸುಧಾರಣೆಗಾಗಿ ಅಲ್ಲಿನ ಅವಾಮಿ ಲೀಗ್ ಪಕ್ಷದ ನಾಯಕ ಮೌಲಾನಾ ಭಷಾನಿಯವರು ಮೇ ೩ ನೇ ತಾರೀಖಿನಿಂದ ಉಪವಾಸವನ್ನು ಆರಂಭಿಸುವರೆಂದು ವರದಿಯಾಗಿದೆ. ಕಳೆದ ವರ್ಷವೂ ಅವರು ಅದೇ ದಿನ ಆರಂಭಿಸಿದ ಉಪವಾಸವನ್ನು ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸುಹ್ರಾವರ್ದಿಯವರ ಭರವಸೆಯ ಮೇಲೆ ನಿಲ್ಲಿಸಿದ್ದರು.

SREE GAYATHRI
TALKIES
From 25-3-57 For 2 days
M.G.M's
FASTEST GUN ALIVE
With – Glenn Ford & Jeane Craine

On 27-3-57 1 Day Only
M.G.M's
CAMILLE
Starring :- Greta Garbo
and Robert Taylor

Edited Printed and Published [illegible]
A. R. Nagarajan at Sadhvi Press
[illegible]

ಉಗಾದಿ ಹಬ್ಬದ ಪ್ರಯುಕ್ತ ಸುಲಭ ಬೆಲೆಗೆ
ಎಲ್ಲಾ ವಿಧವಾದ ಬನ್ನಿ ಷರ್ಟಿಂಗ್, ಕೋಟಿಂಗ್, ಪಾಪ್ಲಿನ್ ಬಟ್ಟೆಗಳು; ಫಿನ್ಲೆ, ರಾಜಾ ಮಿಲ್, ಕ್ಯಾಲಿಕೊ ಮಿಲ್ಸ್ ಪಂಚೆಗಳು, ಚೀಟಿಗಳು, ವಾಯಿಲ್‌ಗಳು,
ಮತ್ತು ನಿಮಗೆ ಬೇಕಾದ ಇನ್ನೂ ಅನೇಕ ರಕಮಿನ ಬಟ್ಟೆಗಳು ಬಂದಿವೆ
ಜಯಕೃಷ್ಣ ಕ್ಲಾತ್ ಎಂಪೋರಿಯಂ,
ಮೈಸೂರು ಬ್ಯಾಂಕ್ ರೋಡ್,
(ವ್ಯಾಪಾರಭವನದ ಎದುರಿಗೆ) ಮೈಸೂರು

[illegible] ನಂ. 134

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ [illegible]

ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

[ಸಂಪುಟ : ೦೫] SADHVI : TUESDAY 26—3—1957 ಮೈಸೂರು : ಮಂಗಳವಾರ ೨೬—೩—೧೯೫೭ : [ಸಂಚಿಕೆ : ೨೩೩

ಗೋವಾ ವಿಮೋಚನೆಗೆ ತ್ವರಿತ ಪರಿಣಾಮಕಾರಿ ಕ್ರಮ

೧೬ ಲಕ್ಷ ರೂ. ವೆಚ್ಚದಲ್ಲಿ ಬೂನು ಕಾರ್ಖಾನೆ ಬಡಾವಣೆ

ಜ್ಯಪಾಲರಿಂದ ನೂತನ ಕಾರ್ಖಾನೆಯ ಆರಂಭೋತ್ಸವ

ಬೆಂಗಳೂರು ೨೫

ಇಲ್ಲಿನ ರಾಜಾಜಿ ನಗರದ ಬಡಾವಣೆಯ ೨೦ ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ೧೬ ಲಕ್ಷ ರೂ ವೆಚ್ಚದಿಂದ ಏರ್ಪಾಡಿಸಿ ಕಟ್ಟಲಾಗಿರುವ ಸಂಸ್ಥಾನ ಸಾಬೂನು ಕಾರ್ಖಾನೆಯ ಆರಂಭೋತ್ಸವ [illegible] ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ನೆನ್ನೆ ನೆರವೇರಿಸಿ ಕಾರ್ಖಾನೆ [illegible] ಹೆಚ್ಚು ಸಾಬೂನು ಉತ್ಪತ್ತಿಯಾ[illegible] ಅಭಿವೃದ್ಧಿ ಪಡೆಯಲೆಂದು ಹಾರೈಸಿದರು [illegible]ರ್ಯವನ್ನು ಆರಂಭಿಸಿದ ಭಾರತ ರತ್ನ ವಿಶ್ವೇಶ್ವರಯ್ಯನವರನ್ನು ಅವರು ಪ್ರಶಂಸಿಸಿದರು [illegible] ಜೀವನದಲ್ಲಿ ಮುಖ್ಯ ಸ್ಥಾನ ಪಡೆದಿರುವ ಸಾಬೂನಿನ ಬಳಕೆಯು ಮುಂದೆ ಇನ್ನೂ ಹೆಚ್ಚುವುದೆಂದು ನುಡಿದರು

[illegible] ಭದಲ್ಲಿ ಕೈಗಾರಿಕಾ ಸಚಿವ ಶ್ರೀ ಸಿ. [illegible] ರವರು ಸ್ವಾಗತ ಭಾಷಣ ಮಾಡಿ [illegible]ನೆಯ ಇತಿಹಾಸವನ್ನು ವಿವರಿಸಿ, ಹೊಸ [illegible]ನೆಯಲ್ಲಿ ಸಾಬೂನಿನ ಉತ್ಪತ್ತಿಯನ್ನು [illegible] ೧೫೦೦ ಟನ್ನಿಗೆ ಹೆಚ್ಚಿಸಲು ಯೋಜನೆಯೊಂದೂ ಇದರಿಂದ ಜನ ಸಾಮಾನ್ಯ ಅವಶ್ಯಕತೆಯು ಪೂರೈಕೆಯಾಗುವುದೆಂದೂ [illegible] ಅಲ್ಲಿ ಹೊಸದಾಗಿ ಗ್ಲಿಸರಿನ್ ತಯಾರಾಗುವುದೆಂದೂ ನುಡಿದರು. ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಡಿಷನಲ್ ಡೈರೆಕ್ಟರ್ ಶ್ರೀ [illegible] ಪಾರ್ಥಸಾರಥಿಯವರು ತಮ್ಮ ವರದಿಯಲ್ಲಿ ಕಾರ್ಖಾನೆಯ ಪ್ರಗತಿಯನ್ನು ವಿವರಿಸಿದರು.

ಅಣು ಅಸ್ತ್ರ ಪ್ರಯೋಗಗಳ ಳುವಳಿಕೆಗಿಂತ ನಿಷೇಧ ಅಗತ್ಯ

ರಾಜಾಜಿಯವರ ಹೇಳಿಕೆ

ಮುಂಚಿತವಾಗಿ ವಿಶ್ವಸಂಸ್ಥೆಗೆ ತಿಳಿಸಿದನಂತರ ಅಣು ಅಸ್ತ್ರಗಳ ಪ್ರಯೋಗಗಳನ್ನು ನಡೆಸುವುದಾಗಿ ನೆನ್ನೆ ಬರ್ಮುಡಾದಲ್ಲಿ ಅಮೆರಿಕ ಮತ್ತು ಬ್ರಿಟನ್ನಿನ ನಾಯಕರು ಹೊರಡಿಸಿದ ಹೇಳಿಕೆಗೆ ಉತ್ತರವಾಗಿ ವಿಶ್ವದ ವಾತಾವರಣ, ನೀರು ಮತ್ತು ಆಹಾರಗಳನ್ನು ಕೆಡಿಸುವ ಈ ಪರೀಕ್ಷೆಗಳನ್ನು ಮುನ್ಸೂಚನೆಯಿತ್ತು ನಡೆಸುವುದು [illegible]ವಾಗಿಲ್ಲ ಅವುಗಳ ಪೂರ್ಣ ನಿಷೇಧ [illegible]ವೆಂಬುದಾಗಿ ರಾಜಾಜಿಯವರು ತಿಳಿ[illegible]

ಮಹದೇವಯ್ಯನವರ ಗೌರವಾರ್ಥ ಸತ್ಕಾರ

[illegible]ನಿಂದ ಸಂಸ್ಥಾನ ಶಾಸನ ಸಭೆಗೆ [illegible]ನ ಪರವಾಗಿ ಚುನಾಯಿತರಾಗಿರುವ ಶ್ರೀ ಬಿ. ಮಹದೇವಯ್ಯನವರ ಗೌರವಾರ್ಥ [illegible] ಕಳಲೆ ಒಳ ಮನೆ ಎಂಬ ಗ್ರಾಮದ [illegible] ಶ್ರೀ ತಮ್ಮಯ್ಯನವರು ನೆನ್ನೆ ಒಂದು [illegible]ಕೂಟವನ್ನು ಏರ್ಪಡಿಸಿದರು

೭ನೇ ತಾರೀಕು ಸಂಜೆ ರೆಸಿಡೆನ್ಸಿಯಲ್ಲಿ ನಾಯಕರ ಚುನಾವಣೆ

ನಿಜಲಿಂಗಪ್ಪನವರ ಪುನರಾಯ್ಕೆ ಸಂಭವ

ಬೆಂಗಳೂರು ೨೫

ಸಂಸ್ಥಾನದ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯವರು ನೆನ್ನೆ ಒಂದು ಪತ್ರಿಕೆಯನ್ನು ಹೊರಡಿಸಿ ಏಪ್ರಿಲ್ ೭ನೇ ತಾರೀಕು ಸಂಜೆ ೬ ಗಂಟೆಗೆ ಪಕ್ಷದ ಸಭೆಯು ಇಲ್ಲಿನ ರೆಸಿಡೆನ್ಸಿ ಭವನದಲ್ಲಿ ನಡೆಯುವುದೆಂದು ತಿಳಿಸಿರುವರು. ನಾಯಕತ್ವ ಚುನಾವಣೆಗೆ ಹಲವರ ಹೆಸರುಗಳು ಕೇಳಿಬರುತ್ತಿರುವುದಾದರೂ ಅಷ್ಟರಲ್ಲಿ ಪ್ರಕೃತ ಈಗಿನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಪುನರಾಯ್ಕೆ ಸ್ಥಿರವಾಗಿರುವುದೆಂದು ಹೇಳಲಾಗುತ್ತಿದೆ. ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿ ಮಾಧವನ್ ನಾಯರ್‌ರವರು ಚುನಾವಣೆ ನಡೆಸುವರು

ಸೂಯೆಜ್ ಕಾಲುವೆಯಲ್ಲಿ ಮಾಮೂಲಿನಂತೆ ನೌಕಾ ಸಂಚಾರ

ಸೂಯೆಜ್ ಕಾಲುವೆಯು ಈಗ ನೌಕಾ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದು ಎಲ್ಲ ಹಡಗುಗಳನ್ನೂ ತೆರೆದಿರುವುದರಿಂದ ಅಲ್ಲಿ ನೆನ್ನೆಯಿಂದ ಮಾರ್ಗವು ಹಡಗುಗಳ ಸಂಚಾರಕ್ಕೆ ಸುಗಮವಾಗಿರುವುದೆಂದು ವರದಿಯಾಗಿದೆ. ಅಬ್ಬುಕಿರ್ ಎಂಬ ಚಿಕ್ಕ ಹಡಗೊಂದನ್ನು ಮಾತ್ರ ಈಗ ತೆಗೆಯಬೇಕಾಗಿದೆ. ಕಾಲುವೆ ಮಾರ್ಗವಾಗಿ ಸಂಚರಿಸುವ ಎಲ್ಲ ಹಡಗುಗಳೂ ಈಜಿಪ್ಟಿನ ಅಧಿಕಾರಿಗಳಿಗೆ ಸುಂಕವನ್ನು ಸಲ್ಲಿಸುತ್ತಿರುವುವು

ಖಾನ್ ಸಾಹೇಬರ ಚುನಾವಣೆ ಅಕ್ರಮ

ಪಾಕಿಸ್ಥಾನದ ಕೇಂದ್ರ ಶಾಸನಸಭೆಗೆ ಕ್ವೆಟ್ಟಾ ಪುರಸಭಾ ಕ್ಷೇತ್ರದಿಂದ ಪಶ್ಚಿಮ ಪಾಕಿಸ್ಥಾನದ ಮಾಜಿ ಮುಖ್ಯಮಂತ್ರಿ ಡಾ|| ಖಾನ್ ಸಾಹೇಬರು ಚುನಾಯಿತರಾಗಿರುವುದು ಕ್ರಮಬದ್ಧವಲ್ಲವೆಂದು ನೆನ್ನೆ ಅಲ್ಲಿನ ಹೈಕೋರ್ಟಿನ ಪೀಠವೊಂದು ತೀರ್ಪಿತ್ತಿತು. ಚುನಾವಣಾ ಕ್ಷೇತ್ರವಾದ ಕ್ವೆಟ್ಟಾ ಪುರಸಭೆಯು ಸರಿಯಾಗಿ ರಚಿತವಾಗಿಲ್ಲದ ಕಾರಣ ಆಯ್ಕೆಯು ಅಕ್ರಮವೆಂದು ವಾದಿಸಿ ಮಹಮದ್ ಅಕ್ಬರ್ ಎಂಬುವರು ಕೋರ್ಟಿಗೆ ಅರ್ಜಿ ಸಲ್ಲಿಸಿದ್ದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೫ ಕ್ಲಾರಿಯೊನೆಟ್ ೭-೧೫ ಮತ್ತು ೮-೧೫ ಆರ್. ಜಲಜಾಕ್ಷಮ್ಮ ದೇವರನಾಮ. ೭-೩೦ ಹಿಂದಿ ಶಿಕ್ಷಣ ಮಧ್ಯಾಹ್ನ ೧೨ ಮತ್ತು ೩ ಎಂ ವೆಂಕಟಗಿರಿಯಪ್ಪ—ಪಿಟೀಲು ೧೨-೩೦ ಗಾನಮಂಜರಿ. ೧ ಆರ್ ಜಲಜಾಕ್ಷಮ್ಮ—ಗಾಯನ ೧-೫೦ ನಿಲಯ ವಿದ್ವಾಂಸರಿಂದ ಜಾವಡಿಗಾರಿಕೆ ೩ [illegible] ಭಾರತ ಸಂಗೀತ ಕಾರ್ಯಕ್ರಮದಿಂದ ಸಂಜೆ ೫ ೩೦ ಮ. [illegible]ಸ್ತ್ರೀ ಬಿ ಪಾಠಯ್ಯ—ನಾದಸ್ವರ ೬-೨ ವಿನಾಮ ಸಂಗೀತ. ೭-೩೦ ಭಕ್ತಿಗೀತೆ ೭-೩೦ ಗ್ರಾಮಸ್ಥರಿಗಾಗಿ. ೭-೩೦ ನಿಮ್ಮ ಪ್ರಶ್ನೆಗಳಿಗೆ ಉ[illegible] ಕಾರ್ಯಕ್ರಮ [illegible] ೯ ೩೦ ಫಯಾಜ್ ಖಾನ್ ರಿಕಾರ್ಡ್ [illegible]

ಗೋವಾ ವಿಮೋಚನೆಗೆ ಶೀಘ್ರದಲ್ಲಿಯೇ ಪರಿಣಾಮಕಾರಿ ಕ್ರಮ

ಲೋಕ ಸಭೆಯಲ್ಲಿ ಪ್ರಧಾನಿ ನೆಹರೂರವರ ಆಶ್ವಾಸನೆ

ಗೋವಾ ವಿಮೋಚನೆಗಾಗಿ ಇಂದಿನ ಸನ್ನಿವೇಶಗಳಿಗೆ ತಕ್ಕಂತೆಯೂ, ಭಾರತದ ನೀತಿಗೆ ಅನುಗುಣವಾಗಿಯೂ, ಹಲವು ಪರಿಣಾಮಕಾರಿ ಕ್ರಮಗಳನ್ನು ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದೆಂದೂ, ಆ ವಿಷಯವಾಗಿ ವಿರೋಧ ಪಕ್ಷಗಳ ನಾಯಕರೊಡನೆಯೂ ಸಮಾಲೋಚನೆ ಆಗುವುದೆಂದೂ ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ತಿಳಿಸಿದರು. ಕೇವಲ ಗೋವಾ ಸೆರೆಮನೆಗಳಲ್ಲಿದ್ದ ಬಂದಿಗಳ ಬಿಡುಗಡೆಯಿಂದ ಸಮಸ್ಯೆಯು ಪರಿಹಾರವಾದಂತಾಗಲಿಲ್ಲವೆಂದೂ ಅವರು ಹೇಳಿದರು

ಒರಿಸ್ಸಾ ಗಣತಂತ್ರ ಪಕ್ಷದ ಸದಸ್ಯರೊಬ್ಬರು ಕಾಂಗ್ರೆಸ್ಸಿಗೆ

ಮಹಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರೆಯದ ಒರಿಸ್ಸಾ ಸಂಸ್ಥಾನದಲ್ಲಿ ಗಣತಂತ್ರ ಪರಿಷತ್ತಿನವರು, ಪಿ ಎಸ್. ಪಿ ಮತ್ತು ಕಮ್ಯೂನಿಸ್ಟರ ಸಹಕಾರದಿಂದ ಸರ್ಕಾರವನ್ನು ರಚಿಸಲು ಸಂಧಾನ ನಡೆಸುತ್ತಿರುವರೆಂದು ಗೊತ್ತಾಗಿದೆ. ಇದೇ ಸಂದರ್ಭದಲ್ಲಿ, ಪರಿಷತ್ತಿನ ಸದಸ್ಯರೊಬ್ಬರಾದ ಶ್ರೀ ಲಾಲ್ ಮಿತ್ರೋದಯಸಿಂಗ್ ಬರ್ಮಾ ಎಂಬುವರು ಪಕ್ಷವನ್ನು ತ್ಯಜಿಸಿ ಕಾಂಗ್ರೆಸ್ಸನ್ನು ಸೇರಿರುವರೆಂದು ಗೊತ್ತಾಗಿದೆ. ಅವರು ಒಂದು ಹೇಳಿಕೆಯಿತ್ತು ಸಂಸ್ಥಾನದಲ್ಲಿ ಸುಭದ್ರವಾದ ಸರ್ಕಾರದ ಸ್ಥಾಪನೆಗಾಗಿ ಪ್ರಯತ್ನಿಸಲು ತಾವು ಗಣತಂತ್ರ ಪರಿಷತ್ತನ್ನು ತ್ಯಜಿಸಿ ಕಾಂಗ್ರೆಸ್ಸನ್ನು ಸೇರಿರುವುದಾಗಿ ತಿಳಿಸಿರುವರು

ಗಾಜಾ ಗಡಿಯಲ್ಲಿ ಇಸ್ರೇಲಿ ಸೈನ್ಯಗಳ ಜಮಾವಣೆ

ಗಾಜಾ ಪ್ರದೇಶದ ಉತ್ತರ ಗಡಿಯಲ್ಲಿ ಇಸ್ರೇಲಿ ಸೈನ್ಯಗಳ ಜಮಾವಣೆಯು ನಡೆಯುತ್ತಿದೆಯೆಂಬುದಾಗಿ ವಿಶ್ವಸಂಸ್ಥೆ ಪಡೆಯ ಅಧಿಕಾರಿಗಳು ತಿಳಿಸಿದ್ದಾರೆ. ಈಜಿಪ್ಟು ಗಾಜಾ ಪ್ರದೇಶವನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡರೆ ತಾನು ಆ ಪ್ರದೇಶವನ್ನು ಆಕ್ರಮಿಸುವುದಾಗಿ ಇಸ್ರೇಲು ಹಿಂದೆ ಎಚ್ಚರಿಕೆ ಕೊಟ್ಟಿತ್ತು

ಸಂಸ್ಥಾನದಲ್ಲೆಲ್ಲಾ ಒಂದೇ ರೀತಿಯ ವಿದ್ಯುಚ್ಛಕ್ತಿ ದರ

ಸಂಸ್ಥಾನದಲ್ಲಿ ವಿವಿಧ ಕಾರ್ಯಗಳಿಗಾಗಿ ಸರಬರಾಜು ಮಾಡುವ ವಿದ್ಯುಚ್ಛಕ್ತಿಗೆ ಒಂದೇ ರೀತಿಯಲ್ಲಿ ದರವನ್ನು ವಿಧಾಯಕ ಮಾಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ನೆನ್ನೆ ಮರಾಮತ್ತು ಸಚಿವ ಶ್ರೀ ಹೆಚ್. ಕೆ. ವೀರಣ್ಣಗೌಡರು ವಿಧಾನ ಸಭೆಯ ಪ್ರಶ್ನೋತ್ತರದ ಕಾಲದಲ್ಲಿ ತಿಳಿಸಿದರು. ನೆನ್ನೆ ಸಭೆಯು [illegible]ಗೆ ಪ್ರತಿಯಾಗಿ [illegible] ಗಂಟೆಗೆ [illegible] ಆರಂಭವಾಯಿತು. ಆ ಸಮಯದಲ್ಲಿ ಅನೇಕ ಸದಸ್ಯರೂ, ಹಲವರು ಮಂತ್ರಿಗಳೂ ಬಂದಿರಲಿಲ್ಲ ಮತ್ತು ವಿರೋಧ ಪಕ್ಷದ ಕಡೆ ಕುರ್ಚಿಗಳು ಬಹುತೇಕ ಖಾಲಿಯಾಗಿದ್ದುವು. ಪ್ರಶ್ನೋತ್ತರಗಳಿಗಾಗಿ ಒಂದು ಗಂಟೆ ಕಾಲ ನಿಗದಿ ಮಾಡಿದ್ದುದು ಸದಸ್ಯರ ಗೈರುಹಾಜರಿಯ ಕಾರಣ ಕೇವಲ ಏಳು ನಿಮಿಷಗಳಲ್ಲೇ ಮುಕ್ತಾಯಗೊಂಡಿತು

ಶಂಕರನ್ ನಂಬೂದ್ರಿಪಾದ್‌ರವರು ಕೇರಳದ ಮುಖ್ಯ ಮಂತ್ರಿ

ಸಚಿವರಿಗೆ ೩೫೦ ರೂ.ಗೆ ನಿಯಮಿತ ಸಂಬಳ

ಕೇರಳದ ಮಹಾ ಚುನಾವಣೆಯಲ್ಲಿ ಬಹುಮತ ಪಡೆದಿರುವ ಕಮ್ಯೂನಿಸ್ಟ್ ಪಕ್ಷದ ಸಭೆಯು ನೆನ್ನೆ ಮಧ್ಯಾಹ್ನ ಸೇರಿ ಶ್ರೀ ಇ ಎಂ ನಂಬೂದಿರಿಪಾದ್‌ರವರನ್ನು ನಾಯಕರಾಗಿ ಆರಿಸಿತು. ಶ್ರೀ ಅಚ್ಯುತ ಮೆನನ್‌ರವರು ಉಪ ನಾಯಕರಾಗಿ ಆರಿಸಲ್ಪಟ್ಟರು. ಕಮ್ಯೂನಿಸ್ಟ್ ಬೆಂಬಲ ಪಡೆದು ಚುನಾವಣೆಯಲ್ಲಿ ಜಯಶೀಲರಾದ ಐದು ಜನ ಸ್ವತಂತ್ರರೂ ಪಕ್ಷಕ್ಕೆ ಸೇರುವುದಾಗಿ ಗೊತ್ತಾಗಿದೆ

ನೂತನ ಸಚಿವ ಸಂಪುಟದಲ್ಲಿ ೯ ಅಥವಾ ೧೦ ಮಂದಿ ಮಂತ್ರಿಗಳಿದ್ದು ಅವರ ಸಂಬಳವು ತಿಂಗಳಿಗೆ ೩೦೦ ಅಥವಾ ೩೫೦ ರೂ ಇರುವುದೆಂದೂ, ಒಬ್ಬೊಬ್ಬರಿಗೂ ಒಂದೊಂದು ಇಲಾಖೆಯನ್ನು ಮಾತ್ರ ವಹಿಸಲಾಗುವುದೆಂದೂ ವರದಿಯಾಗಿದೆ

ವಿಶ್ವ ಸಮಸ್ಯೆಗಳ ಪರಿಹಾರಕ್ಕಾಗಿ ಅಗ್ರ ನಾಯಕರ ಭೇಟಿ ಅಗತ್ಯ

ಲೋಕಸಭೆಯಲ್ಲಿ ನೆಹರೂರವರ ನುಡಿ

ಭಾರತದ ವಿದೇಶಾಂಗ ನೀತಿಯ ಬಗ್ಗೆ ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ದೀರ್ಘವಾದ ಭಾಷಣ ಮಾಡಿ ಕಾಶ್ಮೀರ ಸಮಸ್ಯೆಯ ಬಗ್ಗೆ ಎಷ್ಟೇ ಮನ ನೋಯುವ ಘಟನೆಗಳು ಜರುಗಿದ್ದಾಗ್ಯೂ ಭಾರತವು ಕಾಮನ್‌ವೆಲ್ತ್ ಕೂಟವನ್ನು ಈಗ ತ್ಯಜಿಸುವುದು ಸರಿಯಲ್ಲವೆಂದು ಹೇಳಿ ವಿಶ್ವದ ನಾನಾ ಸಮಸ್ಯೆಗಳ ಬಗ್ಗೆ ಪರಿಹಾರವನ್ನು ಯೋಚಿಸಲು ಅಗ್ರರಾಷ್ಟ್ರಗಳ ಅದರಲ್ಲೂ ವಿಶೇಷವಾಗಿ ಅಮೆರಿಕ ಮತ್ತು ರಷ್ಯಗಳ ನಾಯಕರ ಸಮ್ಮೇಳನವು ನಡೆಯಬೇಕೆಂದು ಕರೆಯಿತ್ತರು

ಕಾಶ್ಮೀರದ ಬಗ್ಗೆ ಪ್ರಸ್ತಾಪಿಸಿ ಆದಾಗ್ಯೂ ಕಾಶ್ಮೀರವು ಭಾರತಕ್ಕೆ ನ್ಯಾಯವಾಗಿ ಸೇರಬೇಕೆಂದೂ, ಆದರೆ ಅದನ್ನು ಪಡೆಯಲು ತಾವು ಬಲಪ್ರಯೋಗ ಮಾಡುವುದಿಲ್ಲವೆಂದೂ ನುಡಿದರು. ಆದರೆ ಕಾಶ್ಮೀರದ ಮೇಲೆ ಆಕ್ರಮಣವಾದರೆ ಅದನ್ನು ಭಾರತವು ತನ್ನ ಮೇಲಿನ ಆಕ್ರಮಣವೆಂದು ಭಾವಿಸಿ ಕ್ರಮ ಕೈಗೊಳ್ಳುವುದೆಂದು ಹೇಳಿದರು.

ವಿಶ್ವದ ಬಳಕೆಗಾರರ ಹಿತ ಮತ್ತು ಈಜಿಪ್ಟಿನ ಸಾರ್ವಭೌಮತ್ವಗಳಿಗೆ ಚ್ಯುತಿ ಬಾರದಂತೆ ಸೂಯೆಜ್ ಕಾಲುವೆ ಒಪ್ಪಂದವು ಸಾಧ್ಯವೆಂದೂ, ಆದರೆ ವಿದೇಶೀಯರ ಪ್ರಭಾವಗಳ ಘರ್ಷಣೆಯಿಂದ ಮಧ್ಯಪೂರ್ವದ ಪರಿಸ್ಥಿತಿಯು ಕೆಟ್ಟಿದೆಯೆಂದೂ ಹೇಳಿ, ಹಿಂದೆ ಇಂಡೋ-ಚೀನದಲ್ಲಿ ಮಾಡಿದಂತೆ ಅಗ್ರರಾಷ್ಟ್ರಗಳು ಮಧ್ಯಪೂರ್ವದ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕಬಾರದೆಂದು ಕೋರಿದರು. ಲಂಡನ್ನಿನಲ್ಲಿ ನಡೆಯುತ್ತಿರುವ ನಿಶ್ಶಸ್ತ್ರೀಕರಣ ಸಮ್ಮೇಳನದಿಂದ ಹಿಂದೆ ಯಾವ ಉಪಯೋಗವೂ ಆಗದಿದ್ದರೂ ಈಗಲಾದರೂ ಆದೀತೆಂದು ಆಶಿಸಿದರು

ಖೋತಾ ಆಯವ್ಯಯ ಸುಭದ್ರ ಆರ್ಥಿಕ ನೀತಿಯ ಚಿಹ್ನೆಯಲ್ಲ

ಶಾಸನ ಸಭೆಯಲ್ಲಿ

ಶ್ರೀನಿವಾಸಯ್ಯಂಗಾರ್ಯರ ಹೇಳಿಕೆ

ಬೆಂಗಳೂರು ೩

ಸಂಸ್ಥಾನದ ಆಯವ್ಯಯದ ಮೇಲೆ ನಿನ್ನೆ ಶಾಸನ ಸಭೆಯಲ್ಲಿ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಮಾತನಾಡಿ ಪ್ರತಿ ವರ್ಷ ಖೋತಾ ಆಯವ್ಯಯಗಳು ಇರುವುದು ಸುಭದ್ರವಾದ ಆರ್ಥಿಕ ನೀತಿಯ ಕುರುಹಲ್ಲವೆಂದೂ, ಇದಕ್ಕಾಗಿ ಸರ್ಕಾರದವರು ರಾಜ್ಯದ ಆದಾಯ ಹೆಚ್ಚಿಸಬೇಕೆಂದೂ ನುಡಿದು ಆ ಬಗ್ಗೆ ಹಲವು ಸಲಹೆಗಳನ್ನಿತ್ತರು.

ಖೋತಾ ಸರಿದೂಗಿಸಲು ಸಂಸ್ಥಾನದಿಂದ ತೆರಿಗೆ ರೂಪದಲ್ಲಿ ಕೇಂದ್ರಕ್ಕೆ ಸಲ್ಲುತ್ತಿರುವ ಹಣದಲ್ಲಿ ಹೆಚ್ಚಿನ ಪಾಲನ್ನು ಕೇಳುವುದು, ನಾನಾ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಕೇಂದ್ರವು ಕೊಡುವ ಸಾಲಕ್ಕೆ ಆ ಕಾರ್ಯಗಳಿಂದ ಆದಾಯವು ಬರುವವರೆಗೂ ಬಡ್ಡಿಯ ವಿನಾಯಿತಿಯನ್ನು ಕೇಳುವುದು, ಪಾನ ನಿರೋಧವನ್ನು ಆಂಧ್ರದಲ್ಲಿರುವಂತೆ ಪೂರ್ತಿ ಆಚರಣೆಗೆ ತರುವುದು ಇಲ್ಲವೆ ರದ್ದುಗೊಳಿಸುವುದು, ನಾನಾ [illegible] ಇನ್ನು ಸರ್ಕಾರವೇ ರಫ್ತು ಮಾಡಿ ಆದಾಯವನ್ನು ಪಡೆಯುವುದೇ ಮುಂತಾದ ಹಲವು ಸಲಹೆಗಳನ್ನಿತ್ತರು

ಸಂಸ್ಥಾನದ ಹಣಕಾಸಿನ ಸ್ಥಿತಿಯನ್ನು ವಿಮರ್ಶಿಸಿ ಕೇಂದ್ರ ಸರ್ಕಾರದಿಂದಲೇ ಅಲ್ಲದೇ [illegible] ಸಬೇಕೆಂದು ಹೇಳಿದರು.

[illegible] ರದಿಯನ್ನು ಪ್ರಶಂಸಿಸಿ [illegible] ಮೇಲೆ ತನ್ನ ಅಭಿಪ್ರಾಯವನ್ನು [illegible] ದು ಅದರ ಕಾರ್ಯ ವ್ಯಾಪ್ತಿಯಲ್ಲಿತ್ತು [illegible] ದು ವಿಧಾನ ಸೌಧವನ್ನು ನಿರ್ಮಿಸಿದ ಹನುಮಂತಯ್ಯನವರ ದೂರದೃಷ್ಟಿಯನ್ನು ಶ್ಲಾಘಿಸಿ [illegible] ೮೦ ಲಕ್ಷ ರೂ ವೆಚ್ಚ ಮಾಡಿದಂತಹ [illegible] ಗಳನ್ನು ನಾವು [illegible] ಹೇಳಿದರು.

ಶ್ರೀ ವಿ. ಆರ್ ನಾಯ್ಡುರವರು ಮಾತನಾಡಿ ಸರ್ಕಾರವು ಪೊಲೀಸರ, [illegible] ಮುಂತಾದ ಕೆಳ ನೌಕರರ ಸ್ಥಿತಿಗತಿಗಳಿಗೆ ಹೆಚ್ಚಿನ ಗಮನವೀಯಬೇಕೆಂದು ಕೋರಿದರು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗಮಕ ಸಂಗೀತೋತ್ಸವ

ಕನ್ನಡ ಸಾಹಿತ್ಯ ಪರಿಷತ್ತಿನವರು ನಾಳೆಯಿಂದ ಬರುವ ಭಾನುವಾರದವರೆಗೆ ಬೆಂಗಳೂರು ಚಾಮರಾಜಪೇಟೆ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಕನ್ನಡ ಗಮಕ ಸಂಗೀತ ಕಲಾ ಮಹೋತ್ಸವವನ್ನು ಆಚರಿಸಲಿರುವರು ಆರಂಭೋತ್ಸವವು ನಾಳೆ ಸಂಜೆ ಶ್ರೀ ಸಿ. ವಿ. ರಾಘವೇಂದ್ರರಾಯರಿಂದ ನೆರವೇರುವುದು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರ ಇಲಾಖೆಯ ಡೈರೆಕ್ಟರ್ ಶ್ರೀ ಮೂರ್ತಿರಾಯರು ಅಧ್ಯಕ್ಷತೆ ವಹಿಸುವರು ಈ ಸಂದರ್ಭದಲ್ಲಿ ಶನಿವಾರ ಗಮಕ ವಿಚಾರ ಗೋಷ್ಠಿಯೂ, ಭಾನುವಾರ ಉಪನ್ಯಾಸ ಗೋಷ್ಠಿಯೂ ದಿನವಹಿ ಕಾವ್ಯವಾಚನ ಕಾರ್ಯಕ್ರಮಗಳೂ ನಡೆಯಲು ಏರ್ಪಾಡಾಗಿವೆ

ನೃಸಿಂಹಭಾರತೀ ಸ್ವಾಮಿಗಳವರ ಜಯಂತ್ಯುತ್ಸವ

ನಗರದ ಅಭಿನವ ಶಂಕರಾಲಯದಲ್ಲಿ [illegible] ಮೇಲ್ಕಂಡ ಸಮಾರಂಭವನ್ನು ಏರ್ಪಡಿಸಲಾಗಿದೆ ಅದರ ಅಂಗವಾಗಿ ಬೆಳಿಗ್ಗೆ [illegible] ರುದ್ರಾಭಿಷೇಕ, ಸಹಸ್ರನಾಮಾರ್ಚನೆ, ಮಹಾಮಂಗಳಾರತಿಯೂ [illegible] ೬-೩೦ ರಿಂದ ರುದ್ರಕ್ರಮಾರ್ಚನ, ಸ್ವಸ್ತಿವಾಚನ ಮತ್ತು ಮಂಗಳಾರತಿಯೂ ನಡೆಯುವುವು [illegible] ಸಂಜೆ ಉಪನ್ಯಾಸ ಮತ್ತು ಸಂಗೀತ ಕಛೇರಿಗಳೂ ಜರುಗುವುವು [illegible]

ವಿಶೇಷ ಗೇಣಿ ಶಾಸನಗಳಿಗೆ ಶಾಸನ ಸಭೆಗಳ ಒಪ್ಪಿಗೆ

ಬೆಂಗಳೂರು ೨೬

ಸರ್ಕಾರದವರು ಇತ್ತೀಚೆಗೆ ಹೊರಡಿಸಿದ್ದ ತುರ್ತು ಗೇಣಿ ಶಾಸನಗಳಿಗೆ ವಿಧಾನ ಸಭೆಯು ಕಳೆದ ಶನಿವಾರವೂ ವಿಧಾನ ಪರಿಷತ್ತು ನೆನ್ನೆಯೂ ಅಂಗೀಕಾರವಿತ್ತುವು

ವಿಧಾನ ಸಭೆಯಲ್ಲಿ ಶ್ರೀ ಹುಚ್ಚೇಗೌಡರು ಶಾಸನಗಳನ್ನು ಟೀಕಿಸಿ ಸರ್ಕಾರವು ಹಿಂದೆ ರಚಿಸಿದ್ದ ಸಮಿತಿಗಳ ವರದಿಗಳನ್ನು ಕಸದ ಬುಟ್ಟಿಗೆ ತಳ್ಳುತ್ತಿದೆಯೆಂದೂ, ಜಿಲ್ಲಾ ಬೋರ್ಡುಗಳಿಗೆ ಸಂದಾಯದ ಆದಾಯದಲ್ಲಿ ಪಾಲನ್ನು ಶೇಕಡ [illegible] ಯಿಂದ [illegible] ಗೆ ಇಳಿಸಿದೆಯೆಂದೂ ನುಡಿದರು

ಪ್ರಶ್ನೋತ್ತರ ಕಾಲದಲ್ಲಿ ರೆವಿನ್ಯೂ ಸಚಿವ ಎಂ. ವಿ. ಪಾಟೀಲರು ಉತ್ತರವಿತ್ತು, ಸಂಸ್ಥಾನದ ಅನಾವೃಷ್ಟಿ ಪ್ರದೇಶಗಳಲ್ಲಿ ದನಕರುಗಳಿಗೆ ಕುಡಿಯುವ ನೀರಿಗಾಗಿ ಗೋ ಕಟ್ಟೆಗಳ ನಿರ್ಮಾಣದ ಬಗ್ಗೆ ಒಂದು ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ತಿಳಿಸಿದರು ಅಭಾವದಿಂದ ನೊಂದಿರುವ ರಾಯಚೂರು ಬೀದರ್, ಗುಲ್ಬರ್ಗ ಜಿಲ್ಲೆಗಳಿಗೆ ಪರಿಹಾರ ಕಾರ್ಯಕ್ರಮಕ್ಕಾಗಿ ೭೫ ಸಾವಿರ ರೂ ಮತ್ತು ತಕಾವಿ ಸಾಲಕ್ಕಾಗಿ ೫೦ ಸಾವಿರ ರೂ ಗಳನ್ನು ಮಂಜೂರು ಮಾಡಲಾಗಿದೆಯೆಂದು ಹೇಳಿದರು

[illegible] ಪರಿಷತ್ತಿನಲ್ಲಿ ಸಚಿವ ಮರಿಯಪ್ಪನವರು [illegible] ಸರ್ಕಾರದವರ ಪರಿಶೀಲ [illegible] ರು

ಸುಣ್ಣಕಲ್ಲಿನ ಸುರಂಗದಲ್ಲಿ ಸಿಕ್ಕಿ ಐವರ ಮರಣ

ಬಾಗೇಪಲ್ಲಿ ತಾಲ್ಲೂಕಿನ ಮದ್ದಿಪಲ್ಲಿ ಎಂಬಲ್ಲಿ [illegible] ಸುರಂಗದಲ್ಲಿ [illegible] ತೊಡಗಿದ್ದ ಐದು ಜನರ ಪೈಕಿ ನಾಲ್ವರು [illegible] ಮೃತಪಟ್ಟರೆಂದು ವರದಿಯಾಗಿದೆ ಮತ್ತೊಬ್ಬ ಹೇಗೋ ಸೊಂಟದ ವರೆಗೆ ಹೂಳಲ್ಪಟ್ಟು [illegible] ಸುರಂಗದ ಹೊರಗಡೆ ಆಟವಾಡುತ್ತಿದ್ದ [illegible] ಒಂದು ಮಗುವು ಮಣ್ಣು ಕುಸಿಯುವುದಕ್ಕೆ ಒಂದು ಕ್ಷಣ ಮುಂಚೆ ಒಳಕ್ಕೆ ಪ್ರವೇಶಿಸಿ [illegible] ಮಡಿಲಲ್ಲಿ ಅದೂ ಮೃತಪಟ್ಟಿದ್ದುದು ಕರುಣ ಜನಕವಾಗಿತ್ತು

"ಸಮಾಜ ದುರಂತ" ನಾಟಕಾಭಿನಯ

ನಗರದ ಶಿವಾನಂದ ಕಲಾವಿದರು ತಮ್ಮ ಸಂಸ್ಥೆಯ ವಾರ್ಷಿಕೋತ್ಸವದ ಪ್ರಯುಕ್ತ ಕಳೆದ ಶನಿವಾರ ಸಂಜೆ ಟೌನ್ ಹಾಲಿನಲ್ಲಿ 'ಸಮಾಜ ದುರಂತ' ಎಂಬ ನಾಟಕವನ್ನು ಅಭಿನಯಿಸಿದರು ಅಧ್ಯಕ್ಷತೆ ವಹಿಸಿದ್ದ ಪುರಸಭಾ ಸದಸ್ಯರಾದ ಶ್ರೀ ಎಂ. ಸಿ. ಮಹಾದೇವಸ್ವಾಮಿಯವರು ಭಾಷಣ ಮಾಡಿ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕಾದ ಅವಶ್ಯಕತೆಯನ್ನು ಒತ್ತಿಹೇಳಿದರು

ಕಾವ್ಯ ವಾಚನ

[illegible] ಯುಕ್ತ ನಾಳೆ ಸಾಯಂಕಾಲ ೬ ಗಂಟೆಗೆ ಮೈಸೂರು ಒಂಟಿಕೊಪ್ಪಲಿನಲ್ಲಿರುವ ಪೌರಾಣಿಕ [illegible] ಶ್ರೀಕಂಠಶಾಸ್ತ್ರಿಗಳ [illegible] ವಸತಿ ಸದನದ ವಿದ್ಯಾರ್ಥಿನಿಯರಿಂದ ಭರತ ಭಕ್ತಿ ಎಂಬ ಕಾವ್ಯದ ವಾಚನವನ್ನು ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನದೊಡನೆ ನಡೆಯಿಸಿರುತ್ತೆ

ಬಿಂದಿಗೆ ಕದಿಯುತ್ತಿದ್ದ ಕೇಡಿಯ ಬಂಧನ

ನಗರದ ಸಿವಿಲ್ ಪೊಲೀಸ್ ಲೈನಿನ ಬೀದಿಯಲ್ಲಿ ಕೆಳಗಿಟ್ಟಿದ್ದ ಬಿಂದಿಗೆಯನ್ನು ಮೊನ್ನೆ ಅಪಹರಿಸುತ್ತಿದ್ದ ಕೇಡಿ ಮಾದ ಎಂಬುವವನನ್ನು ನಜರ್ ಬಾದ್ ಪೊಲೀಸರು ಬಂಧಿಸಿರುತ್ತಾರೆ

ಸಿನಿಮಾದಲ್ಲಿ ಧೂಮ ಪಾನಕ್ಕಾಗಿ ದಂಡ

ನಗರದ ರಣಜಿತ್ ಟಾಕೀಸಿನಲ್ಲಿ ಮೊನ್ನೆ ಧೂಮಪಾನ ಮಾಡುತ್ತಿದ್ದ ಅಬ್ದುಲ್ [illegible] ಮತ್ತು ಗೋಪಾಲ್ ಎಂಬುವರಿಗೆ ತಲಾ ೩ ರೂ ಮತ್ತು ಭಾಸ್ಕರ್ ಮತ್ತು ಪಾರ್ಥಸಾರಥಿ ಎಂಬುವರಿಗೆ ತಲಾ ೨ ರೂ ದಂಡವನ್ನು ನಿನ್ನೆ ದಿನ ನಗರ ನ್ಯಾಯಾಧೀಶರು ವಿಧಿಸಿದರು

"ವೈದ್ಯ ಜೀವನ

ಗುಜರಾತ್ ಪ್ರಾಂತದ ಲೋಲಿಂಬರಾಜ ಎಂಬ ಕವಿಯಿಂದ ರಚಿತವಾಗಿ ಮೈಸೂರು ಆಸ್ಥಾನ ಮಹಾ ವಿದ್ವಾಂಸರಾಗಿದ್ದ ಆಗರಂ ಪುಟ್ಟಸ್ವಾಮಿ ಪಂಡಿತರ ದೀಪಿಕಾ ಸಹಿತವಾದ 'ವೈದ್ಯಜೀವನ' ಎಂಬ ಗ್ರಂಥವನ್ನು ಪಂಡಿತರ ಮಕ್ಕಳಾದ ಆಯುರ್ವೇದ ವಿದ್ವಾನ್ ಆಗರಂ ವೆಂಕಟರಾಮಾ ಪಂಡಿತರು ಪ್ರಕಾಶಪಡಿಸಿರುತ್ತಾರೆ. ಇದಕ್ಕೆ ಮೊದಲು ಶ್ರೀ ಪುಟ್ಟಸ್ವಾಮಿ ಪಂಡಿತರೇ ಎಂಭತ್ತು ವರ್ಷಗಳ ಹಿಂದೆ ಪ್ರಕಾಶಪಡಿಸಿದ್ದರು ಅನಂತರ ಶ್ರೀ ವೆಂಕಟರಾಮಾ ಪಂಡಿತರು ಈಗ್ಗೆ [illegible] ವರ್ಷಗಳ ಹಿಂದೆ ಪುನಃ ಮುದ್ರಿಸಿದರು ಈಗ ಅದರ ಮೂರನೆಯ ಮುದ್ರಣವು ಹೊರಬಿದ್ದಿದೆ

ನಗರದಲ್ಲಿ ಪ್ರಕಾಶವಾಗುತ್ತಿರುವ 'ವೈದ್ಯ ಬಂಧು' ಪತ್ರಿಕೆಯ ಗ್ರಂಥಮಾಲೆಯ ಪ್ರಥಮ ಪುಷ್ಪವಾಗಿ ಈಗ ಇದು ಹೊರಬಿದ್ದಿದೆ ಮೊದಲನೆಯ ಎರಡು ಮುದ್ರಣಗಳಿಗಿಂತಲೂ ಹೆಚ್ಚಿನ ವಿವರಗಳನ್ನು ಇದರಲ್ಲಿ ಕೊಡಲಾಗಿದೆ ಶ್ರೀ ವೆಂಕಟರಾಮಾ ಪಂಡಿತರು ಆಯುರ್ವೇದ ವಿದ್ಯೆಯಲ್ಲಿ ತಮಗಿರುವ ವಿಶೇಷವಾದ ಆಸಕ್ತಿಯನ್ನು ಸೂಚಿಸಲು ಈ ಗ್ರಂಥದ ಎಲ್ಲ ವೆಚ್ಚಗಳನ್ನೂ ತಾವೇ ವಹಿಸಿ ಅದನ್ನು ವೈದ್ಯ ಬಂಧು ಗ್ರಂಥ ಮಾಲೆಗೆ ಅರ್ಪಿಸಿರುತ್ತಾರೆ.

ಈ ಗ್ರಂಥದಲ್ಲಿ ರೋಗಗಳ ಸ್ವರೂಪ, ಅವುಗಳ ನಿದಾನ ಮತ್ತು ಚಿಕಿತ್ಸೆಗಳಿಗೆ ಆಧಾರವಾದ ಶ್ಲೋಕಗಳನ್ನೂ, ಅವುಗಳ ಕನ್ನಡ ಅರ್ಥವ [illegible] ತಿಳಿಸಲಾಗಿದೆ ಆಯುರ್ವೇದ ವೈದ್ಯರುಗಳೂ ಮತ್ತು ಸಾಮಾನ್ಯ ಜನರೂ ಇದರಿಂದ ವಿಶೇಷವಾಗಿ ಪ್ರಯೋಜನ ಪಡೆಯಬಹುದು

ಈ ಗ್ರಂಥದೊಡನೆ ಆಯುರ್ವೇದ ಶಾಸ್ತ್ರದ ಅಧಿದೇವತೆಗಳಾದ ಅಶ್ವಿನೀ ದೇವತೆಗಳ ವಿಚಾರಗಳನ್ನೂ ಸಹ ಮೂಲ ಶ್ಲೋಕ ಮತ್ತು ತಾತ್ಪರ್ಯಗಳೊಡನೆ ವಿವರಿಸಲಾಗಿದೆ

ಕನ್ನಡಿಗರೆಲ್ಲರೂ ಇದನ್ನು ಓದಿ ತಮ್ಮ ಆರೋಗ್ಯ ಭಾಗ್ಯವನ್ನು ಸಂರಕ್ಷಿಸಿಕೊಳ್ಳಲೆಂದು ಬಯಸುತ್ತೇವೆ ಇದರ ಬೆಲೆ ೩ ರೂಪಾಯಿ

ಬಡವರ ವಸತಿಗಾಗಿ ಕೇಂದ್ರ ಸರ್ಕಾರದ ಸಹಾಯ

ಅಲ್ಪ ವರಮಾನದ ತರಗತಿಯ ಜನರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಲು ನಾವು ನಾನಾ ಸಂಸ್ಥಾನಗಳಿಗೆ ಸಹಾಯ ನೀಡುವಾಗ ಕೇಂದ್ರದ ಷರತ್ತಿನಂತೆ ಆಯಾ ಪ್ರಾಂತ ಸರ್ಕಾರಗಳಿಗೆ ತಮ್ಮ ಪಾಲಿನ ಹಣವನ್ನು ಒದಗಿಸುವುದು ಬಹಳ ಕಷ್ಟಕರವಾಗಿರುವುದರಿಂದ ಆ ಷರತ್ತನ್ನು ತೆಗೆದುಹಾಕುವುದಾಗಿ ಕೇಂದ್ರ ಸರ್ಕಾರದ ಆರ್ಥಿಕ ಸಚಿವ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿರುವರು

ಹರಿಕಥೆ

ನಗರದ ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ನಾಳೆ ರಾತ್ರಿ ೮ ಗಂಟೆಗೆ ವಿದ್ವಾನ್ ಶ್ರೀ ಅನಂತಪದ್ಮನಾಭ ಭಾಗವತರಿಂದ 'ಪಾಂಡವ ರಕ್ಷಣ' ಎಂಬ ಕಥೆಯು ನಡೆಯುತ್ತದೆ ಸರ್ವರಿಗೂ ಸ್ವಾಗತವಿದೆ

ಹಬ್ಬಕ್ಕೆ
30 ನಂಬರಿನ ಲಾಂಗ್ ಕ್ಲಾತ್ [illegible] 1 2 0
ರಾಜಾಮಿಲ್ ಪಂಚೆಗಳು 8 8 0ಯಿಂದ 10 8 0
ವಾಯಿಲ್ ಸೀರೆಗಳು ಬೆಲೆ 4 14 0 ಇಂದ
ಚೀಟಿ, ಲಾನ್ ಪ್ರಿಂಟ್ಸ್ ಬಹಳ ಬಂದಿವೆ
ಬಾಹುಸಾರ್ ಕಂಪೆನಿ,
ನೂರಡಿ ರಸ್ತೆ ಮೈಸೂರು.

ಯುಗಾದಿ ಹಬ್ಬಕ್ಕಾಗಿ
ಹೊಸ ರವೆಯು
ಬಂದಿದೆ
ಕೃಷ್ಣಾ ಸೋಜಿ ಡಿಪೋ,
ಸಂತೇಪೇಟೆ
ಮೈಸೂರು

ಆಜಾದ್ ಕಾಶ್ಮೀರದಲ್ಲಿ ಪಾಕಿಸ್ತಾನದ ದುರಾಡಳಿತ

ಪಾಕಿಸ್ತಾನದ ವಶದಲ್ಲಿರುವ ಆಜಾದ್ ಕಾಶ್ಮೀರದ ಆಡಳಿತವು ಅಲ್ಲಿನ ಸೇನೆಯ [illegible] ಗಳಿಂದ ಒಂದು ಪೊಲೀಸ್ ರಾಜ್ಯವೆಂಬುದಾಗಿ ಇತ್ತೀಚೆಗೆ ಅಲ್ಲಿಂದ ಗಡೀಪಾರು ಮಾಡಲ್ಪಟ್ಟ ಖ್ವಾಜಾ ಸನಾವುಲ್ಲಾ ಎಂಬ ಪತ್ರಿಕಾ ಸಂಪಾದಕರೊಬ್ಬರು ತಿಳಿಸಿದ್ದಾರೆ ಆಜಾದ್ ಕಾಶ್ಮೀರದ ರಕ್ಷಣಾ ಶಾಸನದ [illegible] ದಿನವಹಿ ದಸ್ತಗಿರಿಗಳಾಗಿ ಸಹಸ್ರಾರು [illegible] ನಿರಪರಾಧಿಗಳಿಂದ ಅಲ್ಲಿನ ಬಂದೀಖಾನೆಗಳು ತುಂಬಿವೆಯೆಂದೂ, ಅನೇಕ [illegible] ಗಳನ್ನು [illegible] ಟು ಹಾಕಿ ನೆಲಸಮ ಮಾಡಲಾಯಿತೆಂದೂ [illegible] ಕಾಶ್ಮೀರದ [illegible] ನಾಯಕರಾಗಿದ್ದ [illegible] ಮಹಮದ್ ಎಂಬಾತನನ್ನು ಕೊಲೆ ಮಾಡಿ [illegible] ನು ಭಾರತಕ್ಕೆ ಪರಾರಿಯಾದನೆಂಬ ಸುಳ್ಳು ವದಂತಿಯನ್ನು ಹರಡಲಾಯಿತೆಂದೂ, ಇತ್ತೀಚೆಗೆ ಅಲ್ಲಿಗೆ ಭೇಟಿಯಿತ್ತ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರಿಬ್ಬರಿಗೆ ಜನರ ಕಷ್ಟಗಳನ್ನು ವಿವರಿ [illegible] ವ ಮನವಿ ಪತ್ರಗಳನ್ನು ಸಮರ್ಪಿಸಿದ ಮಹಾ [illegible] ರಾಧಕ್ಕಾಗಿ ತಮ್ಮನ್ನು ಗಡೀಪಾರು ಮಾಡಲಾಯಿತೆಂದೂ ಅವರು ಹೇಳಿ, ಪಾಕಿಸ್ತಾನದ [illegible] ವು ಅಲ್ಲಿಂದ ಹೊರಟುಹೋದರೆ ಜನರು ತಮ್ಮ ಬಂಧುಗಳೊಡನೆ ಸೇರುವುದು ಖಚಿತವೆಂದೂ [illegible] ತಿಳಿಸಿದ್ದಾರೆ

ಭಾರತಕ್ಕೆ ಪೋಲೆಂಡ್ ಪ್ರಧಾನಿಯ ಆಗಮನ

ಭಾರತಕ್ಕೆ ಹತ್ತು ದಿನಗಳ ಸೌಹಾರ್ದ ಭೇಟಿಗಾಗಿ ಪೋಲೆಂಡ್ ಪ್ರಧಾನಿ ಜೋಸೆಫ್ ಸಿರಾಂಕಿವಿಕ್ಸ್‌ರವರು ಮೊನ್ನೆ ನವದೆಹಲಿಗೆ ಆಗಮಿಸಿದರು ಅವರನ್ನು ಪ್ರಧಾನಿ ನೆಹರೂ ಮತ್ತು [illegible] ಗಣ್ಯರು ಸ್ವಾಗತಿಸಿದರು.

'ಶಾರದಾವಿಲಾಸ ಕಾಲೇಜು ಪತ್ರಿಕೆ'

ಮೇಲ್ಕಂಡ ಸಂಸ್ಥೆಯ ಇಂಗ್ಲಿಷ್ ಭಾಷಾ ಭಾಗದ ಅಧ್ಯಾಪಕ ಶ್ರೀ ವಿ ವೆಂಕಟರಾಮಯ್ಯನವರ ಸಂಪಾದಕತ್ವದಲ್ಲಿ ಹೊರಟಿರುವ ಈ ವರ್ಷದ ಸಂಚಿಕೆಯನ್ನು ಅವರಿಂದ ಸ್ವೀಕರಿಸಿದ್ದೇವೆ ವಿದ್ಯಾರ್ಥಿಗಳೂ ಮತ್ತು ಅಧ್ಯಾಪಕರೂ ನಾನಾ ರೀತಿಯ ಉಪಯುಕ್ತ ಲೇಖನಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇತ್ತು ಪತ್ರಿಕೆಗೆ ಕಳೆ ಕೊಟ್ಟಿದ್ದಾರೆ.

ಜೀವನದ ಹರ್ಷವನ್ನು ಸವಿಯಿ
ಹೆಂಡರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಶೆ ಮನುಷ್ಯ ದೇಹದ ಅನೇಕ ಭಾಗಗಳಲ್ಲಿರುವ ಕೆಟ್ಟು ಹೋದ ಗ್ರಂಥಿಗಳ ಸಂಪರ್ಕ, ಜ್ಞಾಪಕ ಶಕ್ತಿಯ ಅಭಾವ, [illegible], ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ ಸಿಫಿಲಿಸ್, ಗೊನೋರಿಯಾ, [illegible], ಅಂದರೆ ವಾಯು ಮತ್ತು ಎಲ್ಲ ವಿಧವಾದ [illegible] ಯ ಮೂತ್ರ ರೋಗಗಳಿಗೂ ಕಾರಣವಾದ ಇವುಗಳನ್ನು ಕೂಡಲೇ ಗುಣಪಡಿಸಲು [illegible] ರವರನ್ನು (ಸ್ಪೆಷಲಿಸ್ಟ್) ಪ್ರತಿದಿನ ಬೆಳಿಗ್ಗೆ ೭ ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿ [illegible] ರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ದೀರ್ಘ ಖಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಕೊಡುವರು ನೂರಕ್ಕೆ ನೂರು ಖಾತರಿ ಕೊಡಲ್ಪಡುವುದು

ಅವರ ಸಲಹೆ ಪಡೆಯುವುದರಿಂದ ಪೂರ್ತಿ [illegible] ನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು [illegible] ದಲಾಗುವುದು. ಕೆಳಗಿನ ವಿಳಾಸದಲ್ಲಿ ಭೇಟಿ [illegible]

ರಾಜಾ ಮೆಡಿಕಲ್ ಹಾಲ್
ಲೇನ್ ನಂ 1745 ಅಶೋಕಾ ರಸ್ತೆ
(ಮೈಸೂರು ಬ್ಯಾಂಕ್ ಬಳಿ ಖಾಲಿ ಜಾಗದ
ಮೂರನೇ ಕಟ್ಟಡ)
ಮೈಸೂರು

Edited, Printed and Published
A. R. Nagarajan at Sadhvi Pre
D Subbiah Road, Mysore

ಟೆಲಿಫೋನ್ ನಂ 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೫] SADHVI : WEDNESDAY 27—3—1957 ಮೈಸೂರು : ಬುಧವಾರ ೨೭—೩—೧೯೫೭ : [ಸಂಚಿಕೆ : ೩೩೮

ಅಣು ಅಸ್ತ್ರ ಪರೀಕ್ಷಾ ಪ್ರಯೋಗಗಳ ನಿಷೇಧಕ್ಕೆ ರಷ್ಯಾ ಸಿದ್ಧ

ವಿಧಾನ ಸೌಧ ಸಮಿತಿ ವರದಿಯ ಟೀಕೆಗೆ ಮುಖ್ಯ ಮಂತ್ರಿಯವರ ಉತ್ತರ

ವಿಧಾನ ಸಭೆಯಲ್ಲಿ ಇಬ್ಬರು ಸಚಿವರಿಂದ ಹನುಮಂತಯ್ಯನವರ ಖಂಡನೆ

ಬೆಂಗಳೂರು ೨೭

ವಿಧಾನ ಸಭೆಯಲ್ಲಿ ಆಯವ್ಯಯದ ಚರ್ಚೆ [illegible] ಮುಕ್ತಾಯಗೊಳಿಸಿದಾಗ ಮುಖ್ಯ [illegible] ಶ್ರೀ ಎಸ್ ನಿಜಲಿಂಗಪ್ಪನವರೂ, ಸಚಿವ [illegible] ಮರಿಯಪ್ಪ ಮತ್ತು ವೀರಣ್ಣಗೌಡ [illegible] ಸೌಧದ ವರದಿಯ ಟೀಕೆಗಳಿಗೆ ಉತ್ತರ [illegible] ಶ್ರೀ ಹನುಮಂತಯ್ಯನವರನ್ನು ತೀ[illegible]ಡಿಸಿದರು

[illegible] ಮಂತ್ರಿಗಳು ಮಾತನಾಡಿ ಸಮಿತಿ ವರದಿಯನ್ನು ಪಲ್ಲಿಸಿದಾಗ ಶ್ರೀ ಹನುಮಂತಯ್ಯನವರು ಈ ಬಗ್ಗೆ ನ್ಯಾಯಾಂಗ ವಿಚಾರಣೆ [illegible]ಡಿಸುವಿರಾ? ಎಂಬುದಾಗಿಯೂ, [illegible] ಅವರ ಅಧ್ಯಕ್ಷರ [illegible]? ಎಂಬ ದಾಗಿಯೂ [illegible] ಕೇಳಿದ್ದರಿಂದಲೂ, ಸಮಿತಿಯವರ ವರದಿ [illegible] ವಿವರಣೆಗಳನ್ನೂ ಪಡೆ[illegible] ಬೇಕೆಂದು ಇತ್ತೀಚೆಗೆ ಮತ್ತೊಂದು [illegible] ದಿಂದಲೂ ನುಡಿದರು ಸಮಿತಿಯವ[illegible] ವರದಿ ಬರೆಸಿದ ದಾಗಿ ಸದಸ್ಯ[illegible] ಮಾಡಿಸಂತಹ ಹೀನ ಆಪಾದನೆಗೆ [illegible] ಸುವುದಿಲ್ಲವಾಗಿಯೂ ನುಡಿದರು [illegible] ನೋಡಿದರೆ ಈ ಭವನವನ್ನು ವಿಧಾನ [illegible] ಬದಲು ವಿಷಾದ ಸೌಧ [illegible] ಬೇಕೆನ್ನಿಸುತ್ತದೆಂದು ಶ್ರೀ ನಿಜಲಿಂಗಪ್ಪನವರು ಹೇಳಿದರು

[illegible] ಮರಿಯಪ್ಪನವರು ಮಾತನಾಡಿ ಸಮಿ[illegible] ಮುಖ್ಯ ಮಂತ್ರಿಗಳು ವರದಿಯನ್ನು ಟೀಕಿ[illegible] ಆಪಾದನೆಗೆ ಉತ್ತರವಿತ್ತು ಸಮಿ[illegible] ರಚಿಸಿದವರು ಹನುಮಂತಯ್ಯನವರೇ [illegible] ಸದಸ್ಯರ ಮೇಲೆ ಆಪಾದನೆ ಮಾ[illegible] ಜವಾಬ್ದಾರಿಯುತ ಮನುಷ್ಯನ ಕಾರ್ಯ[illegible], ಸಮಿತಿಯವರಿಗೆ ಇತ್ತ ಹಣವು [illegible] ಬ್ಲಿಟ್ಜ್ ಪತ್ರಿಕೆಗೆ ನುರಿ[illegible] ಹೇಳಿದ್ದು ಸಮನಲ್ಲವೆಂದೂ ಹೇಳಿ[illegible]

[illegible] ಮತ್ತು ಶಾಖಾ ಸಚಿವ ಶ್ರೀ ಎಚ್ ಕೆ [illegible] ಗೌಡರು ಮಾತನಾಡಿ ಹನುಮಂತಯ್ಯ[illegible] ಹೇಳಿದಂತೆ ಶಿಲ್ಪಿಗಳ ಬಾಡಿಗೆಯಲ್ಲಿ [illegible] ಆತುರವೇನೂ ಇಲ್ಲವೆಂದೂ, [illegible] ವಿಧಾನ ಸೌಧಕ್ಕೆ ವೆಚ್ಚವಾದ [illegible] ಬಡ್ಡಿಯೇ ೫೦ ಲಕ್ಷ ರೂ ಗಳಾ[illegible] ಹೇಳಿದರು ಹನುಮಂತಯ್ಯನವ[illegible] ತಳಿತವಲ್ಲಿ ಮಹಜರ್ ಬೀ ನೊ[illegible] ವಿಕಾರಿಸಿದ್ದಾರೆಂದೂ [illegible] ರಾವಣ, ಗಾಂಧಿಜಿ ಹಿಂದೆ ಗೋಡ್ಸೆ[illegible] ರುಗಳಂತೆ ವಿಧಾನ ಸೌಧದ ಜೊತೆಯಲ್ಲಿ [illegible]ಮಂತಯ್ಯನವರ ಹೆಸರೂ ಕಳಂಕಪೂರಿತ[illegible] ಯಿತೆಂದರು

ಎಣ್ಣೆ ಡಬ್ಬಗಳಿದ್ದ ವ್ಯಾಗನ್ ಹತ್ತಿಕೊಂಡು ನಾಲ್ವರ ಮರಣ

ಬೆಂಗಳೂರು ೨೭

ದಂಡಿನ [illegible] ಸ್ಟೇಷನ್ನಿನಲ್ಲಿ ಡೀಸಲ್ ಎಣ್ಣೆ ಡಬ್ಬಗಳ [illegible] ವ್ಯಾಗನ್ನಿನಿಂದ ಡಬ್ಬಗಳನ್ನು ಇಳಿಸುತ್ತಿದ್ದಾಗ ನೆನ್ನೆ [illegible] ಆಕಸ್ಮಾತ್ ಬೆಂಕಿ ಹತ್ತಿಕೊಂಡು [illegible] ಕೂಲಿ [illegible] ಬೆಂಕಿ [illegible] ವಾಗಿ [illegible] ಮಡಿದವರೆಂದು [illegible] ತಕ್ಷಣ [illegible] ವರದಿಯಾಗಿದೆ ಎಣ್ಣೆ [illegible] ಇಳಿಸ [illegible] ಕೆಲವರು ಪ್ರಾಣ [illegible] ಘಟನೆಯ [illegible] ಸಂಭವಿಸಿದೆ [illegible]

ಬಸ್ ಹತ್ತಿಕೊಂಡು ಮೂವರಿಗೆ ಗಾಯ

ಬೆಂಗಳೂರ [illegible] ಡಿಪೋ [illegible] ನೆನ್ನೆ ಬಸ್ಸೊಂದನ್ನು [illegible] ಸುತ್ತಿದ್ದಾಗ ಅದರ [illegible] ಪೆಟ್ರೋಲ್ ಟ್ಯಾಂಕು [illegible] ಬೆಂಕಿ [illegible] ಮಾಡುತ್ತಿದ್ದ [illegible] ಮೂವರು ಕೆಲಸಗಾರರಿಗೆ [illegible] ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದು ಗೊತ್ತಾಗಿದೆ

ಏಪ್ರಿಲ್ ೩ನೇ ತಾರೀಖು ಪೆನ್ಷನ್ ಬಟವಾಡೆ

ಹೊಸ ನಾಣ್ಯ ಪದ್ಧತಿಯು ಜಾರಿಗಾಗಿ ಏಪ್ರಿಲ್ ೧ನೇ ತಾರೀಖು ಬ್ಯಾಂಕು ಮತ್ತು ಖಜಾನೆಗಳಿಗೆ ರಜವಿರುವುದರಿಂದ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳ ಪೆನ್ಷನ್‌ದಾರರಿಗೆ ೩ನೇ ತಾರೀಖು ಹಣವನ್ನು ಕೊಡಲಾಗುವುದೆಂದು ಖಜಾನೆ ಅಧಿಕಾರಿಗಳು ತಿಳಿಸಿದ್ದಾರೆ.

ಒರಿಸ್ಸಾದಲ್ಲಿ ಗಣತಂತ್ರ ಪರಿಷತ್ತಿನಿಂದ ಸರ್ಕಾರ ರಚನೆ ಯತ್ನ

ಒರಿಸ್ಸಾ ಗಣ ತಂತ್ರ ಪರಿಷತ್ತಿನ [illegible] ನೆನ್ನೆ ಕಟಕ್ಕಿನಲ್ಲಿ ಸೇರಿ ಪಾಟ್ನಾ ಮಹಾರಾಜರಾದ ಆರ್ ಎನ್ ಸಿಂಗ್‌ದೇವ್‌ರವರನ್ನು ನಾಯಕರಾಗಿ ಆರಿಸಿತು. ಮಹಾ ಚುನಾವಣೆಯಲ್ಲಿ ಪಕ್ಷಕ್ಕೆ [illegible] ಸ್ಥಾನಗಳು ಲಭಿಸಿ ಕಾಂಗ್ರೆಸ್ಸಿಗಿಂತ ಹೆಚ್ಚಿನ ಮತವು ದೊರಕಿರುವುದೆಂದೂ, ಜಯಶೀಲರಾಗಿರುವ ಪಿ ಎಸ್ ಪಿಯ ೧೧ ಸದಸ್ಯರೂ ಮತ್ತು ಕಮ್ಯೂನಿಸ್ಟರೂ ಹಲವು ಸ್ವತಂತ್ರರೂ ಪರಿಷತ್ತಿಗೆ ಬೆಂಬಲ ನೀಡುವರೆಂದೂ ಹೇಳಲಾಗಿದೆ

ನಾಯಕರಾದ ಪಾಟ್ನಾ ಮಹಾರಾಜರು [illegible] ರಾಜ್ಯಪಾಲರಿಗೆ ಪತ್ರ ಬರೆದು [illegible] ತೆರೆದಿರುವ ತಮ್ಮ ಪಕ್ಷವು ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗಿಂತಲೂ ಹೆಚ್ಚು [illegible] ಸರ್ಕಾರವನ್ನು ರಚಿಸಲು ಸಮರ್ಥವಾಗಿ [illegible] ತಿಳಿಸಿರುವರು ಒರಿಸ್ಸಾದಲ್ಲಿ ರಾಷ್ಟ್ರಪತಿಯವರ ಆಡಳಿತ [illegible] ಸ್ಥಾಪಿಸಲೂ ಮತ್ತು ಕಾಂಗ್ರೆಸ್ಸು ಪುನಃ ಅಧಿಕಾರಕ್ಕೆ ಬರುವುದನ್ನು ತಡೆಗಟ್ಟಲೂ ವಿರೋಧ ಪಕ್ಷದವರೆಲ್ಲರೂ ನಿರ್ಧರಿಸಿರುವುದಾಗಿ ಹೇಳಲಾಗಿದೆ

ಅಣು ಬಾಂಬ್ ಪರೀಕ್ಷಾ ಪ್ರಯೋಗ ನಿಷೇಧಕ್ಕೆ ರಷ್ಯಾ ಸಿದ್ಧ

ಅಣು ಮತ್ತು ಜಲಜನಕ ಬಾಂಬುಗಳ ಪರೀಕ್ಷಾ ಪ್ರಯೋಗಗಳನ್ನು ಕೂಡಲೇ ತಾತ್ಕಾಲಿಕವಾಗಿ ನಿಲ್ಲಿಸುವ ಬಗ್ಗೆ ಪಶ್ಚಿಮ ರಾಷ್ಟ್ರಗಳೊಡನೆ ಒಪ್ಪಂದಕ್ಕೆ ಬರಲು ತಾನು ಸಿದ್ಧವಾಗಿರುವುದಾಗಿಯೂ, ಈ ವಿಷಯದಲ್ಲಿ ಹಿಂದೆಯೇ ಪಶ್ಚಿಮ ರಾಷ್ಟ್ರಗಳಿಗೆ ಇತ್ತಿದ್ದ ಸಲಹೆಗೆ ಇದುವರೆಗೂ ಉತ್ತರ ಬಂದಿಲ್ಲವೆಂದೂ ರಷ್ಯವು ಪ್ರಕಟಿಸಿರುವುದರಿಂದ ಅಣುಶಸ್ತ್ರಗಳ ಪರೀಕ್ಷಾ ಪ್ರಯೋಗವನ್ನು ಪರಿಶೀಲಿಸಲು ವಿಶ್ವದ ಅವಕಾಶವನ್ನೇರ್ಪಡಿಸುವ ಬಗ್ಗೆ ಅಮೆರಿಕಾ ಮತ್ತು ಬ್ರಿಟನ್ನುಗಳು ನೀಡಿರುವ ನಿಲುವೆಯನ್ನು ಕುರಿತು, ಈ ಪರೀಕ್ಷೆಗಳು ಬಹಳ ಅಪಾಯಕರವೆಂದೂ, ಅವುಗಳ ಪರಿಶೀಲನೆಯಿಂದ ಅಪಾಯವು ಕಡಿಮೆಯಾಗುವುದಿಲ್ಲವೆಂದೂ, ಆದ ಕಾರಣ ಆ ಪರೀಕ್ಷಾ ಪ್ರಯೋಗಗಳನ್ನು ಪೂರ್ಣವಾಗಿ ನಿಷೇಧಿಸುವುದೇ ಮೇಲೆಂದೂ ರಷ್ಯದ ವಿದೇಶಾಂಗ ಇಲಾಖಾ ವಕ್ತಾರರು ತಿಳಿಸಿದರು

ಕೇರಳ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಹೆಚ್ಚಿನ ಸಂಬಳ

ವಿಶ್ವವಿದ್ಯಾಲಯಗಳ ಗ್ರಾಂಟ್ಸ್ ಕಮಿಷನ್ನಿನವರ ಸಲಹೆಯಂತೆ ಕೇರಳ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ದರ್ಜೆ ಪ್ರಾಧ್ಯಾಪಕರಿಗೆ ೫೦೦-೮೦೦ ರೂ ನಿಂದ ೮೦೦-೧೨೫೦ ರೂ ಗಳಿಗೂ, ದ್ವಿತೀಯ ದರ್ಜೆ ಪ್ರಾಧ್ಯಾಪಕರಿಗೆ ೪೫೦-೬೦೦ ರೂ ನಿಂದ ೫೦೦-೮೦೦ ರೂ ಗಳಿಗೂ ಮತ್ತು ಅಧ್ಯಾಪಕರಿಗೆ ೧೫೦-೪೦೦ ರೂ. ನಿಂದ ೨೫೦-೫೦೦ ರೂ ಗಳಿಗೂ ಸಂಬಳದ ಮಟ್ಟಗಳನ್ನು ಏರಿಸಿ ಕೇರಳ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಜಮೀನ್ದಾರನ ಶಿರಚ್ಛೇದನ ಮತ್ತು ದರೋಡೆ

ಬಿಹಾರಿನ ಮಾಂಘೀರ್ ಜಿಲ್ಲೆಯ [illegible] ಎಂಬ ಗ್ರಾಮದ ಧನಿಕ ವ್ಯವಸಾಯಗಾರನೊಬ್ಬನ ಮನೆಗೆ ಹಲವು ದರೋಡೆಯವರು ಆಕೆ[illegible] ನುಗ್ಗಿ ಯಜಮಾನನ ರುಂಡವನ್ನು ಕತ್ತರಿಸಿ ಹಣ ಮತ್ತು ನಗಗಳನ್ನು ಅಪಹರಿಸಿಕೊಂಡು ಪರಾರಿಯಾದರು. ದರೋಡೆಯವರ ಕ್ರಮ ಯಾಚಿಸಿ ಬಂದ ಯಜಮಾನನ ಪತ್ನಿಯ ಕೈಗಳನ್ನು ಅವರು ಕತ್ತರಿಸಿದರೆಂದೂ ಮತ್ತು ಮನೆಯ ಸೇವಕನ ಕಣ್ಣುಗಳನ್ನು ಕಿತ್ತರೆಂದೂ ಹೇಳಲಾಗಿದೆ

ಗ್ರಾಮಾಧಿಕಾರಿಗಳ ಮುಷ್ಕರ ಮುಕ್ತಾಯ

ಮುಖ್ಯ ಮಂತ್ರಿಗಳಿಂದ ಭರವಸೆ

ಬೆಂಗಳೂರು ೨೭

ಸಂಸ್ಥಾನದ ಗ್ರಾಮಾಧಿಕಾರಿಗಳ ಸಂಘದವರ ನಿಯೋಗವೊಂದು ನೆನ್ನೆ ಮುಖ್ಯ ಮಂತ್ರಿ ಮತ್ತು ಗೃಹ ಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ನಿವೇದಿಸಿದರೆಂದೂ, ಮುಖ್ಯ ಮಂತ್ರಿ[illegible] ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆಯಿತ್ತ ಫಲವಾಗಿ ಮುಷ್ಕರವನ್ನು ನಿಲ್ಲಿಸಬೇಕೆಂದು ಸಂಘದವರು ತೀರ್ಮಾನ ಮಾಡಿರುವುದಾಗಿಯೂ ಗೊತ್ತಾಗಿದೆ

ಶಾಸನ ಸಭೆಗಳ ಅಧಿವೇಶನ ಮುಕ್ತಾಯ

ಸ್ವಂ ಸು ಪ್ರೋ॥] ಬೆಂಗಳೂರು ೨೭

ಇಂದು ಬೆಳಗ್ಗೆ ಉಭಯ ಶಾಸನ ಸಭೆಗಳ ಅಧಿವೇಶನಗಳು ನಡೆದು ವಿಧಾನ ಸಭೆಯಲ್ಲಿ ಸಂಸ್ಥಾನದ ೪ ತಿಂಗಳ ಅವಧಿಯ ತಾತ್ಕಾಲಿಕ ಆಯವ್ಯಯದ ೧,೫೯,೦೬,೦೦೦ ರೂ ಗಳ ಬೇಡಿಕೆಯನ್ನೂ ಮತ್ತು ಹೊಸ ಸಂಸ್ಥಾನವು ಉದಯಿಸಿದ ಕಾಲದಿಂದ ಇಲ್ಲಿಯವರೆಗಿನ ಅವಧಿಯ ಒಟ್ಟು ೪೦ ಲಕ್ಷ,೮೫,೦೦೦ ರೂ ಗಳ ಆಯವ್ಯಯವನ್ನೂ ಮಂಜೂರು ಮಾಡಿತು ಪರಿಷತ್ತು ಅಂಗೀಕರಿಸಬೇಕಾಗಿದೆ

ಕೊಡಗಿನ ಮೂಲಕ ಮೈಸೂರು ಮತ್ತು ತಲಚೇರಿಗಳ ನಡುವೆ ರೈಲು ಮಾರ್ಗವನ್ನು ಏರ್ಪಡಿಸುವ ವಿಷಯವು ಕೇಂದ್ರ ಅಧಿಕಾರಿಗಳ ತೀವ್ರ ಪರಿಶೀಲನೆಯಲ್ಲಿರುವುದಾಗಿ ಸಚಿವ ಪೂಜಾರ್ಯರವರು ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು ಸಂಸ್ಥಾನದಲ್ಲೆಲ್ಲಾ ಏಕ ರೀತಿಯ ತಾತ್ಕಾಲಿಕ ಪರಿಹಾರವನ್ನು ಗ್ರಾಮಾಧಿಕಾರಿಗಳಿಗೆ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆಯೆಂದೂ ಮುಖ್ಯ ಮಂತ್ರಿಗಳು ತಿಳಿಸಿದರು

ಮಧ್ಯಾಹ್ನದ ಅಧಿವೇಶನದಲ್ಲಿ ಖಾಸಗಿ ವಿಧೇಯಕಗಳು ಪರಿಶೀಲನೆಗೆ ತೆಗೆದುಕೊಳ್ಳಲ್ಪಟ್ಟವು. ಕೊನೆಯಲ್ಲಿ ಮುಖ್ಯ ಮಂತ್ರಿಗಳೂ ಮತ್ತು ವಿರೋಧ ಪಕ್ಷದ ನಾಯಕರೂ ಮಾತನಾಡಿ ಪರಸ್ಪರ ಸಹಾಯಕ್ಕಾಗಿ ತಮ್ಮ ಕೃತಜ್ಞತೆಯನ್ನು ಸೂಚಿಸಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೧೫ ಕೆ ಎಸ್. ರಾಮಚಂದ್ರ-ದೇವರನಾಮ ೭-೩೦ ಮತ್ತು ೮-೧೫ ಕೆ ಲಕ್ಷ್ಮೀಕಾಂತ-ಕಾವ್ಯವಾಚನ ಮಧ್ಯಾಹ್ನ ೧೨ ಕೆ ಎಸ್ ರಾಮಚಂದ್ರ-ಗಾಯನ ೧೨-೩೦ ಮತ್ತು ೮ ಹೆಚ್. ವಿ ರಾಮರಾವ್-ಪಿಟೀಲು ೧ ಮತ್ತು ಸಂಜೆ ೫-೩೦ ಕೆ. ಎಸ್. ಮೋಹನ-ಹಿಂದೂಸ್ತಾನೀ ಸಂಗೀತ ೧-೫೦ ವಿಲಯ ವಿದ್ವಾಂಸರು ೬-೧೫ ಅಖಿಲ ಭಾರತ ಸಂಗೀತ ಕಾರ್ಯಕ್ರಮ ೭ ೫ ವಿವಾದ ಸಂಗೀತ ೭-೩೦ ಹಾವನೂರಮ್ಮ-ಬೃಂದಗಾನ ೭-೩೦ ಗ್ರಾಮಸ್ಥರಿಗಾಗಿ ಕಾರ್ಯಕ್ರಮ ೭-೩೦ ಶಾಸ್ತ್ರೀಯ ಕಛೇರಿ. ೮-೩೦ ನಿಮ್ಮ ಮೆಚ್ಚಿನ ಹಾಡುಗಳು. ೯-೧೫ ಮೈಸೂರು ಸರ್ಕಾರದ ಅಭಿವೃದ್ಧಿ ಯೋಜನೆಗಳು : ಚರ್ಚೆ ೯-೩೦ ವೇಣು ನಾದ : ನಾಟಕ ೧೦-೧೫ ದೇವರನಾಮ

ಪರೀಕ್ಷಾ ವಿದ್ಯಾರ್ಥಿಗಳಿಗಾಗಿ ಬಸ್ ಸೌಕರ್ಯ

ನಗರದ ನಾನಾ ಕಾಲೇಜುಗಳಲ್ಲಿ ನಡೆಯುತ್ತಿರುವ ಪರೀಕ್ಷೆಗಳಿಗೆ ಹೋಗುವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಬೆಳಗ್ಗೆ ಮತ್ತು ಮಧ್ಯಾಹ್ನಗಳಲ್ಲಿ ನಗರದ ಬಸ್ಸುಗಳನ್ನು ಓಡಿಸಲು ಏರ್ಪಾಡು ಮಾಡಲಾಗಿದೆ ಇದಕ್ಕೆ ಎರಡಾಣೆ ದರ ನಿಗದಿ ಮಾಡಲಾಗಿದೆ ವಾಣಿವಿಲಾಸಪುರಂ, ಚಾಮುಂಡಿಪುರಂ ಮತ್ತು ಕೆಸರೆ ಮಾರ್ಗಗಳ ಬಸ್ಸುಗಳು ಕಾಲೇಜುಗಳಿಗೆ ಹೋಗುವುವು.

ನಗರದಲ್ಲಿ ಕಳ್ಳತನಗಳು

ಮೈಸೂರು ೨೬

ನಗರದಲ್ಲಿ ಇತ್ತೀಚೆಗೆ ಹಲವು ಕಳ್ಳತನದ ಪ್ರಸಂಗಗಳು ವರದಿಯಾಗಿವೆ. ೬ ಟೆಂಪಲ್ ರಸ್ತೆ ೫ನೇ ಮೇನ್ ರಸ್ತೆಯಲ್ಲಿ ವಾಸವಾಗಿರುವ ಕೇಂದ್ರ ಆಹಾರ ಸಂಶೋಧನಾಲಯದ [illegible] ರಿ ಶ್ರೀ ಎಸ್ ಎಲ್ [illegible] ಊರಿನಲ್ಲಿ ಇದ್ದಾಗ ಮೊನ್ನೆ ಸಂಜೆ [illegible] ಮನೆಗೆ ಕಳ್ಳರು [illegible] ಸುಮಾರು [illegible] ರೂ ಬೆಲೆಯ ಆಭರಣಗಳನ್ನು ದೋಚಿಕೊಂಡು ಹೋಗಿದ್ದಾರೆ

ಮೊನ್ನೆ ರಾತ್ರಿ ನಗರದ ರಮಾವಿಲಾಸ ಅಗ್ರಹಾರದ ಟಾಯ್ ಪ್ಯಾಲೇಸ್ ಮಾಲೀಕರಾದ ಶ್ರೀ ಎಸ್ ಆರ್ ಕೃಷ್ಣಮೂರ್ತಿಯವರ ಮನೆಗೆ [illegible] ಕಳ್ಳರು ನುಗ್ಗಿದ್ದಾರೆ. ಸುಮಾರು ೧[illegible] ರೂ ಬೆಲೆಯ ವಸ್ತುಗಳು ಕಳುವಾಗಿವೆ.

ಸರಸ್ವತಿಪುರಂ ಬಡಾವಣೆಯಲ್ಲಿ ಶ್ರೀ ರೆಡ್ಡಿ ಎಂಬುವರ ಮನೆಗೆ ಮೊನ್ನೆ ಹಗಲಲ್ಲೇ ಕಳ್ಳನೊಬ್ಬನು ನುಗ್ಗಿ ಬೀಗಿಲು ಹಾಕಿಕೊಂಡು ಸಾಮಾನುಗಳನ್ನು ಸಂಗ್ರಹಿಸುತ್ತಿದ್ದಾಗ ಸುತ್ತಮುತ್ತಲಿನವರು [illegible] ಒಂದು ಮನೆಯನ್ನು ಸುತ್ತುಗಟ್ಟಿ ಪೊಲೀಸರನ್ನು ಕರೆಸಲಾಗಿ ಕಳ್ಳನು ಹೊರಬೀಳಲು ಪ್ರಯತ್ನಿಸಿದನು [illegible] ಪೊಲೀಸ್ ಪೇದೆ ಬಾಗಿಲನ್ನು ಒಡೆದು ನುಗ್ಗಿ ಅವನನ್ನು ಹಿಡಿದು [illegible] ಹಾಗಿದೆ

ಯೂನಿವರ್ಸಿಟಿ ರೆಸ್ಟೋರೆಂಟ್ ವಿವಾದ ಮುಕ್ತಾಯ

ನಗರದ ಯೂನಿವರ್ಸಿಟಿ ರೆಸ್ಟೋರೆಂಟಿನ ಕಾರ್ಮಿಕರಿಗೆ ಸಂಬಳ [illegible] ಬಗ್ಗೆ [illegible] ಅಸಿಸ್ಟೆಂಟ್ ಲೇಬರ್ ಕಮೀಷನರ್ [illegible] ಸಮ್ಮುಖದಲ್ಲಿ [illegible] ರೂ, ಹತ್ತು ಮಂದಿ ಕೆಲಸಗಾರರಿಗೆ ಬೋನಸ್ ಕೊಟ್ಟಿರುವರೆಂದೂ ತಿಳಿದುಬಂದಿದೆ.

ರಾಮನವಮಿ ಉತ್ಸವ

ನಗರದ ಗೀತಾ ರಸ್ತೆಯಲ್ಲಿರುವ ಪ್ರಸನ್ನ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ [illegible] ನವಮಿ ಪ್ರಯುಕ್ತ ಬರುವ ಸೋಮವಾರದಿಂದ ದಿನವೂ ರಾಮಾಯಣ ಪಾರಾಯಣ, ಸಹಸ್ರನಾಮಾರ್ಚನೆ ಮುಂತಾದ ಪೂಜಾ ವಿಧಿಗಳನ್ನೂ ಮತ್ತು ಶ್ರೀ ರಾಮ ಪಟ್ಟಾಭಿಷೇಕ, ಹನುಮಂತೋತ್ಸವಗಳನ್ನೂ ಪ್ರಸನ್ನ ಬಾಲಕ ಸೀತಾರಾಮ ಮಂದಿರದವರು ಆಚರಿಸುವರು. ಇದಕ್ಕಾಗಿ ಮಹಾಜನರ ಸಹಾಯವನ್ನು ಕೋರಲಾಗಿದೆ.

ಸರಸ್ವತಿಪುರಂ ಬಡಾವಣೆಯಲ್ಲಿರುವ [illegible] ನೇ ನಂ ಮನೆಯಲ್ಲಿ ಶ್ರೀ ರಾಮ ಸೇವಾ ಭಕ್ತ ಮಂಡಲಿಯವರು ಶ್ರೀ ರಾಮ ನವಮಿ ಮಹೋತ್ಸವವನ್ನು ಏಪ್ರಿಲ್ ೧ ರಿಂದ ೯ನೇ ತಾರೀಖಿನವರೆಗೆ ನಡೆಸಲು ಸಂಕಲ್ಪಿಸಿದ್ದಾರೆ. ಆಸ್ತಿಕ ಶಿರೋಮಣಿಗಳು ತನುಮನಧನಗಳಿಂದ ನೆರವು ನೀಡಿ ಶ್ರೀರಾಮರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರಲಾಗಿದೆ

ಹಣದ ಬಗ್ಗೆ ಸ್ವಲ್ಪ ತಿರಸ್ಕಾರವೇ ಒಳ್ಳೆಯದೆಂದು ನೆಹರೂ ಹೇಳಿಕೆ

ಹಣವು ಪ್ರಪಂಚದ ವಸ್ತುಗಳಲ್ಲೆಲ್ಲಾ ಅಲ್ಲದಿದ್ದರೂ ಒಳಳ ತೊಂದರೆಯನ್ನುಂಟುಮಾಡುವುದರಿಂದ ಅದರ ಬಗ್ಗೆ ಸ್ವಲ್ಪ ಅಸಡ್ಡೆಯನ್ನು ಹೊಂದಿರುವುದು ಮನಸ್ಸಿಗೆ ಹಿತಕರವೆಂದು ಪ್ರಧಾನಿ ನೆಹರೂರವರು ಇತ್ತೀಚೆಗೆ ಅಖಿಲ ಭಾರತ ವಾಣಿಜ್ಯೋದ್ಯಮಿಗಳ ಸಂಘವನ್ನುದ್ದೇಶಿಸಿ ಭಾಷಣ ಮಾಡಿದಾಗ ತಿಳಿಸಿದರು. ಆದರೆ ಇದರಿಂದ ಹಣವಂತರನ್ನು ತಿರಸ್ಕರಿಸಿದಂತಲ್ಲವೆಂದೂ, ಕೆಲವು ವೇಳೆ ದುಷ್ಕಾರ್ಯಗಳಿಗಾಗಿ ಹಣವು ವಿನಿಯೋಗವಾಗುವುದನ್ನು ಕಂಡರೆ ಮನಸ್ಸಿಗೆ ಬಹಳ ಬೇಸರವಾಗುವುದೆಂದೂ ಹಣಕ್ಕಿಂತ ಜೀವವು [illegible] ಅವರು ಹೇಳಿದರು

ಜಾತ್ರೆಯಲ್ಲಿ ತೇರಿನ ಮೇಲ್ಭಾಗ ಕಳಚಿ ಬಿದ್ದು ಬಾಲಕರಿಗೆ ಗಾಯ

ಮದ್ರಾಸ್ ನಗರದ ಮೈಲಾಪುರದಲ್ಲಿ ಮೊನ್ನೆ ಶ್ರೀ ಆದಿಕೇಶವಸ್ವಾಮಿಯವರ ಜಾತ್ರೆಯು ನಡೆದಾಗ ರಥದ ಕಳಶವು ಟೆಲಿಗ್ರಾಫ್ ತಂತಿಗಳಿಗೆ ತಗಲಿದ ಕಾರಣ ಮೇಲ್ಭಾಗವು ಕಳಚಿ [illegible] ನೋಡುತ್ತಿದ್ದ ಬಾಲಕರ ಮೇಲೆ ಬೀಳಲಾಗಿ ನಾಲ್ವರಿಗೆ ಗಾಯಗಳಾದುವು. ತೇರಿನ ಹಿಂಭಾಗದಲ್ಲಿ ಕುಳಿತು ನಗಾರಿ ಬಾರಿಸುತ್ತಿದ್ದವನಿಗೆ ಪೆಟ್ಟು ಬಿದ್ದು ನಗಾರಿಯು ನಾಶವಾಯಿತು

ಸಂಸ್ಥಾನದಲ್ಲಿ ಹಿಂದಿ ಶಿಕ್ಷಕರ ನೇಮಕಕ್ಕೆ ಕೇಂದ್ರದಿಂದ ೬ ಸಾವಿರ ರೂ

ದಕ್ಷಿಣ ಭಾರತದಲ್ಲಿ ಹಿಂದಿ ಪ್ರಚಾರವನ್ನು ಹೆಚ್ಚಿಸಲು ಹಿಂದಿ ಬಾರದ ಸಂಸ್ಥಾನಗ[illegible] ಹಿಂದಿ ಅಧ್ಯಾಪಕರನ್ನು ನೇಮಿಸು[illegible] ಕೇಂದ್ರ ಸರ್ಕಾರದವರು [illegible] ಗಳನ್ನು [illegible] ಆಂಧ್ರ [illegible] ಮೈಸೂರುಗಳಿಗೆ ನೀಡಿರು[illegible] ಮೈಸೂರಿಗೆ ೬ ಸಾವಿರ ರೂ.ಗ[illegible]

ಹಬ್ಬಕ್ಕೆ ಲಾಂಗ್ ಕ್ಲಾತ್‌ಗಳು

3೦ [illegible] ಡಬಲ್ ಪ್ರಿಂಟ್ಸ್—ಗಜಕ್ಕೆ	0 12 0
13 [illegible] ನವಾಬ್ ಪ್ಲೀಟ್ಸ್	0 15 0
41 [illegible] ಮಾಹಿನೂರ್	1 8 0

ಇವಲ್ಲದೆ ಇನ್ನೂ ಅನೇಕ ಇವೆ

ಬಾಹುಕಾರ್ ಕಂಪೆನಿ,
ನೂರಡಿ ರಸ್ತೆ, ಮೈಸೂರು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ.
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

Edited, Printed and Published by
A R Nagarajan at Sadhvi Press,
[illegible] Road, Mysore

ಲಕ್ಕವಳ್ಳಿ-ಚಂಬಾಲ್ ಯೋಜನೆಗಳ ಪರಿಶೀಲನಾ ಸಮಿತಿ

ಸಂಸ್ಥಾನದ ಲಕ್ಕವಳ್ಳಿ ಮತ್ತು ಮಧ್ಯ ಪ್ರದೇಶದ ಚಂಬಾಲ್ ಅಣೆಕಟ್ಟುಗಳ ಯೋಜನೆಗಳನ್ನು ಪರಿಶೀಲಿಸಲು ಕೇಂದ್ರ ಆಯೋಜನಾ ಮಂಡಲಿಯವರು ಶ್ರೀ ಎ. ವಿ ಗಾಡ್ಗಿಲ್ಲರ ನೇತೃತ್ವದಲ್ಲಿ ಐದು ಜನ ಸದಸ್ಯರ ಒಂದು ಸಮಿತಿಯನ್ನು ರಚಿಸಿದ್ದಾರೆ. ಅದರಲ್ಲಿ ಮೈಸೂರಿನ ನಿವೃತ್ತ ಚೀಫ್ ಇಂಜನಿಯರ್ ಶ್ರೀ ಎಂ ನರಸಿಂಹಯ್ಯನವರೂ ಇದ್ದಾರೆ. ಅವರು ವಿಧಾನ ಸೌಧ ವಿಚಾರಣಾ ಸಮಿತಿಯ ಸದಸ್ಯರಲ್ಲೊಬ್ಬರು

ಯುವಕರು ವಿಮಾನಯಾನವನ್ನು ಕಲಿಯಲು ನೆಹರೂ ಸಲಹೆ

ಪ್ರಧಾನಿ ನೆಹರೂರವರು ಮೊನ್ನೆ ದೆಹಲಿಯ ವಿಮಾನ ನಿಲ್ದಾಣದಲ್ಲಿ ಗ್ಲೈಡರ್ ಹಾರಾಟಗಾರರ ಸಭೆಯೊಂದನ್ನುದ್ದೇಶಿಸಿ ಭಾಷಣ ಮಾಡಿ 'ವಾಯು ಯುಗ' ವಾದ ಇಂದು ಯುವಕರು ಹೆಚ್ಚುಹೆಚ್ಚಾಗಿ ವಿಮಾನ ಯಾನವನ್ನು ಕಲಿಯಬೇಕೆಂದು ಸೂಚಿಸಿದರು.

ನಟಿಸುತ್ತಿದ್ದಾಗಲೇ ನಟ "ಗೋಪ್" ನಿಧನ

ಇದುವರೆಗೆ ಸುಮಾರು ೧೦೦ಕ್ಕೂ ಮೀರಿದ ಚಿತ್ರಗಳಲ್ಲಿ ವಿದೂಷಕನ ಪಾತ್ರವನ್ನು ವಹಿಸಿದ್ದ 'ಗೋಪ್' ಮೊನ್ನೆ 'ತೀಸರಿಗಲ್ಲಿ' ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾಗ ಹೃದಯಸ್ತಂಭನದಿಂದ ಬೊಂಬಾಯಿಯ ಅಂಧೇರಿ ಸ್ಟುಡಿಯೋವಿನಲ್ಲಿ ಮೃತಪಟ್ಟನು

ಹರಿಕಥೆ

ನಗರದ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದಲ್ಲಿ ಏಕಾದಶಿ ಪ್ರಯುಕ್ತ ಈ ಸಂಜೆ ೭ ಘಂಟೆಗೆ ಶ್ರೀ ಬಿ. ಎಂ ಬಸವಣ್ಣನವರಿಂದ ಚನ್ನಯ್ಯನ ಭಕ್ತಿ ಎಂಬ ಕಥೆಯನ್ನು ಏರ್ಪಡಿಸಲಾಗಿದೆ.

ನಮ್ಮಲ್ಲಿ ಕಾಫಿ ಬೀಜಗಳು

ಕಂಟ್ರೋಲ್ ಬೆಲೆಗಳಿಗೆ ದೊರೆಯುತ್ತವೆ
ಶ್ರೀ ಕನ್ನಿಕಾ ಪರಮೇಶ್ವರಿ
ಕೋ-ಆಪರೇಟಿವ್ ಸೊಸೈಟಿ ಲಿ.
ಮೈಸೂರು

ಮೋತಿಲಾಲ್ ಟಾಕೀಸ್

27-3-57 ರಿಂದ : ಅಮೋಘ ಪ್ರಾರಂಭ
ಮಿನರ್ವಾ ಮೂವಿಟೋನ್‌ರವರ ಅತ್ಯುತ್ತಮ
ಕಲಾಕಾರರಾದ ಪೃಥ್ವಿರಾಜ್, ವನಮಾಲ
ಸೊಹ್ರಾಬ್ ಮೋದಿ ಅಭಿನಯಿಸಿರುವ
ಸಿಕಂದರ್
(ಹೊಸ ಕಾಪಿ)

ಬ್ರಿಟನ್ನಿನ ರೇವು ಕಾರ್ಮಿಕ ಮುಷ್ಕರ ಮುಕ್ತಾಯ ಅಸಂಭ

ಬ್ರಿಟನ್ನಿನ ಸುಮಾರು ಎರಡು ಲಕ್ಷ ರೇ[illegible] ಲಸಗಾರರು ಕಳೆದ ವಾರ ಆರಂಭಿಸಿದ ಮುಷ್ಕರವು ಮುಕ್ತಾಯವಾಗುವ ಸೂಚನೆಗಳು ಕಂಡುಬರುವುದಿಲ್ಲವೆಂದೂ, ಮಾಲೀಕರು ಕಾರ್ಮಿಕರ ಸಂಬಳವನ್ನು ಶೇಕಡ ಐದರಷ್ಟು ಹೆಚ್ಚಿಸುವುದಾಗಿ ತಿಳಿಸಿದ ಬಗ್ಗೆ ಅವರುಗಳು ತೃಪ್ತಿಗೊಂಡಿಲ್ಲವೆಂದೂ ಹೇಳಲಾಗಿದೆ.

ಮಹಿಳೆಯರಿಗಾಗಿ ಆಯುರ್ವೇದ ತರಗತಿಗಳು

ಒಂಟಿಕೊಪ್ಪಲಿನ ಮಾತೃ ಮಂಡಲಿಯವರು ಆಯುರ್ವೇದ ವಿದ್ವಾನ್ ಶ್ರೀ ಎಸ್ ಎಲ್. ಭ[illegible]ಚಾರ್ಯರಿಂದ ದಿನವೂ ಆಯುರ್ವೇದದ ಪ್ರ[illegible] ತರಗತಿಗಳನ್ನೂ, ಕೇಂದ್ರ ಆಹಾರ ಸಂಶೋಧನಾಲಯದವರಿಂದ ಆಹಾರ ಸಂಗ್ರಹಣೆ ಮುಂತಾದ ಉಪಯುಕ್ತ ವಿಷಯಗಳ ಬಗ್ಗೆ ಪ್ರದರ್ಶನ[illegible] ಜನೆ ಶಿಕ್ಷಣವನ್ನೂ ನಡೆಸಲು ಏರ್ಪಾಡು ಮಾಡಿದ್ದಾರೆ

ನಿಧನ

ನಗರದ ನರಸಿಂಹರಾಜ ಮೊಹಲ್ಲಾದಲ್ಲಿ ನಿವೃತ್ತ ಡಾ॥ ಶಾಮಣ್ಣನವರ ಮಾತೃಶ್ರೀಯವರಾದ ಶ್ರೀಮತಿ ಶೃಂಗಾರಮ್ಮನವರು ಕಳೆದ [illegible] ಸೋಮವಾರ ತಮ್ಮ ೮೦ನೇ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ನಗರದ ಚೇತನಾ ಪುಸ್ತಕಾಲಯದ ಶ್ರೀ ಎಸ್ ನಾರಾಯಣಸ್ವಾಮಿಯವರೂ ವಾಷಿಂಗ್ಟನ್ನಿನಲ್ಲಿ ಅಂತರ ರಾಷ್ಟ್ರೀಯ ಬ್ಯಾಂಕ್ ಸಂಸ್ಥೆಯ ಉನ್ನತಾಧಿಕಾರಿಗಳಾದ [illegible] ಕೆ ಎಸ್ ಕೃಷ್ಣಸ್ವಾಮಿಯವರೂ ಶ್ರೀಮತಿಯವರ ಮೊಮ್ಮಕ್ಕಳು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ

ಮನೆಗಳು ಕ್ರಯಕ್ಕಿವೆ

1 ಡೋರ್ ನಂ 2788/9. ಚಾಮುಂಡಿ[illegible] ವಣೆ ಶಂಕರನಾರಾಯಣ ಸ್ವಾಮಿ ದೇವಸ್ಥಾನದ ಹತ್ತಿರ, 3 ಕಡೆ ರಸ್ತೆ, ಕಾರಿಸಿ ಮಂಗಳೂರು ಹೆಂಚಿನ ಸುಮಾರು 2,0[illegible] ಚದರಡಿ ಉಳ್ಳ ವಿಶಾಲವಾದ, 3 ಸಂಸಾರ ಅನುಕೂಲವಾದ ಕಟ್ಟಡ ನಲ್ಲಿ, ದೀಪ
2. ನಾರಾಯಣಶಾಸ್ತ್ರಿ ರಸ್ತೆ. ಸೀತಾವಿಲಾಸ ಛತ್ರದ ಹತ್ತಿರ ಅಂಗಡಿ ಮತ್ತು ಮನೆ ಕಟ್ಟಡ
3 ಇನ್ನೂ ಕೆಲವು ಉತ್ತಮವಾದ ಸ್ವತ್ತು ಕ್ರಯಕ್ಕೂ, ಭೋಗ್ಯಕ್ಕೂ ಇವೆ

ಸಿಟಿಯಲ್ಲಿರುವ ಒಳ್ಳೆಯ ಸ್ಥಿರ ಸ್ವತ್ತುಗಳ ಜಾಲವನ್ನು ಸದಾ ತೋರಿಸುತ್ತೇವೆ
ವಿವರಗಳಿಗೆ :-
ಜಯ ಅಂಡ್ ಕಂಪೆನಿ,
ಸ್ಥಿರ ಸ್ವತ್ತಿನ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು : ಫೋನ್

ರಣಜಿತ್ ★ 28-3 57 ರಿಂದ : ಅಮೋಘ ಪ್ರಾ
ದಿನವಹಿ ಮೂರು ಪ್ರದರ್ಶನಗಳು
ದೇಸಾಯಿ ಪ್ರೊಡಕ್ಷನ್ಸ್‌ರವರ ಗೇವಾ ಕಲರ್ ನೃತ್ಯಗಳಿಂದ ಕೂಡಿದ ಹಿಂದಿ ಚಿತ್ರ
ಚಿತ್ರಾ, ದಲ್‌ಜಿತ್, ರಾಂಸಿಂಗ್, ತಿವಾರಿ,
ಮಾರುತಿ ಮುಂತಾದವರು ನಟಿಸಿರುವ ★ಬರ್ಸರಿಬಾ
ದಿಗ್ದರ್ಶನ . ನಾನುಭಾಯ್ ವಕೀಲ್ — ಸಂಗೀತ : ಕಮಲ್ ಮಿತ್ರ

ನಿರೀಕ್ಷಿಸಿರಿ !
ನಿಮ್ಮ ನೆಚ್ಚಿನ ಲಕ್ಷ್ಮಿ ಚಿತ್ರಮಂದಿರದ
ಶ್ರೀಶಕ್ತಿ ಪಿಕ್ಚರ್ಸ್‌ರವರ, ಮಂತ್ರ, ಸಾಹಸ ಮತ್ತು ಗೇವಾ ಕಲರಿನ ಕಾಶ್ಮೀರದ
ದೃಶ್ಯಗಳನ್ನೊಳಗೊಂಡ ತಮಿಳು ಚಿತ್ರ
ಅಲ್ಲಾವುದ್ದೀನ್ ಮತ್ತು ಅದ್ಭುತ ದೀ
ಭೂಮಿಕೆ : ನಾಗೇಶ್ವರರಾವ್, ಅಂಜಲಿದೇವಿ, ಎಸ್. ವಿ ರಂಗರಾವ್ ಟಿ ಎಸ್ ಬಾಲಯ್ಯ
ರಾಜಸುಲೋಚನಾ, ತಂಗವೇಲು ಮುಂತಾದವರು
ಕೊನೇ 2 ದಿನಗಳು ಮಾತ್ರ .—'ಮುಕ್ಕಲ್ಕಚಟ್ರಿ ಮಹಾರಾಸಿ'



ಉಗಾದಿ ಹಬ್ಬದ ಪ್ರಯುಕ್ತ ಸುಲಭ ಬೆಲೆಗೆ
ಮತ್ತು ನಿಮಗೆ ಬೇಕಾದ ಇನ್ನೂ ಅನೇಕ ರಕಂ ಬಟ್ಟೆಗಳು ಬಂದಿವೆ
ಎಲ್ಲಾ ವಿಧವಾದ ಚಿನ್ನಿ ಷರ್ಟಿಂಗ್, ಕೋಟಿಂಗ್, ಪಾಪ್ಲಿನ್ ಬಟ್ಟೆಗಳೂ; ಫಿನ್ಲೆ,
ರಾಜಾ ಮಿಲ್, ಕ್ಯಾಲಿಕೊ ಮಿಲ್ಸ್ ಪಂಚೆಗಳು, ಚೀಟಿಗಳು, ವಾಯಿಲ್‌ಗಳು,
ಜಯಕೃಷ್ಣಾ ಕ್ಲಾತ್ ಎಂಪೋರಿಯಂ, ಮೈಸೂರು ಬ್ಯಾಂಕ್ ರೋಡ್, (ವ್ಯಾಸಭವನದ ಎದುರಿಗೆ) ಮೈಸೂರು

ಟೆಲಿಫೋನ್ ನಂ 792

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಡಿಯಾ ಬ್ಯಾಂಕ್ ಎದುರು,
ಸೂರು ಫೋನ್ : 446

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸ [illegible] ಬೀದಿ,
ಬೆಂಗಳೂರು-2

ಪುಟ : ೦೩] SADHVI : THURSDAY 28—3—1957 ಮೈಸೂರು : ಗುರುವಾರ ೨೮—೩—೧೯೫೭ [ಸಂಚಿಕೆ : ೨೩೯

ಅವಿಶ್ವಾಸದಿಂದ ಕಾಂಬೋಡಿಯಾ ಸರ್ಕಾರದ ಪತನ

ಶೀಯ ಮತ್ತು ವಿದೇಶೀ ವೈದ್ಯ ಪದ್ಧತಿಗಳ ಸಮನ್ವಯ

ಯುರ್ವೇದ ಕಾಲೇಜು ಸಮಾರಂಭದಲ್ಲಿ ಡಾ|| ಕಾರಿಯಪ್ಪನವರ ಭಾಷಣ

ಮೈಸೂರು ೨೮

ನಗರದ ಆಯುರ್ವೇದ ಮತ್ತು ಯುನಾನಿ [illegible]ಂಭದ ವಾರ್ಷಿಕೋತ್ಸವವು ವಸ್ತು ಪ್ರದರ್ಶನ ಭವನದಲ್ಲಿ ನೆನ್ನೆ ಜರುಗಿತು. ಸಂಸ್ಥಾನದ ಆರೋಗ್ಯ ಇಲಾಖೆಯ ಡೈರೆಕ್ಟರ್ ಶ್ರೀ ವೆಂಕಟಸುಬ್ಬರಾಯರು ಅಧ್ಯಕ್ಷತೆ ವಹಿಸಿ ನಿವೃತ್ತ ದಂಡ ನಾಯಕ ಡಾ|| ಕೆ ಎಂ ಕಾರಿಯಪ್ಪನವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು.

ಶ್ರೀಮತಿ ಸರಸ್ವತಿಯವರಿಂದ ಪ್ರಾರ್ಥನೆಯಾದ ಮೇಲೆ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಂ. ಚೆನ್ನಬಸಪ್ಪನವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಹಲಸಗಿಯವರು ವಾರ್ಷಿಕ ವರದಿಯನ್ನು ಒಪ್ಪಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿನಿಯೋಗ ಮಾಡಿದನಂತರ ಡಾ|| ಕಾರಿಯಪ್ಪನವರು ಭಾಷಣ ಮಾಡಿ ಕಾಲೇಜಿನವರ ನ್ಯಾಯವಾದ ಬೇಡಿಕೆಗಳನ್ನು ಸರ್ಕಾರವು ಶೀಘ್ರವಾಗಿ ಈಡೇರಿಸಲಿ ಎಂದು ಹಾರೈಸಿದರು. ರಾಷ್ಟ್ರೀಯತೆಯ [illegible] ದೇಶೀಯ ಮತ್ತು ವಿದೇಶೀಯ ವೈದ್ಯಕೀಯ ನಡುವೆ ವಿವಾದಗಳ ಬದಲು ಶಿಕ್ಷಣ ಪದ್ಧತಿಗಳೆರಡಕ್ಕೂ "ವಿವಾಹ"ವನ್ನು ಜರುಗಿಸಿ ಎರಡು ಪದ್ಧತಿಯ ಉಪಯುಕ್ತತೆಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿ ಅವರನ್ನು ಸುವೈದ್ಯರನ್ನಾಗಿ ಮಾಡಬೇಕೆಂದರು. ವರ್ತಮಾನಕ ದಿನಗಳು ನಾನಾ ಕಾರಣಗಳ[illegible]ರುವ ನಮ್ಮ ದೇಶದಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿ ನಷ್ಟಕ್ಕೊಳಗಾಗಬಾರದೆಂದೂ ಕಷ್ಟಪಟ್ಟು ಅಭ್ಯಾಸ ಮಾಡಿ ಶೀಲ ಸದ್ಗುಣವನ್ನು ಬೆಳೆಸಿಕೊಂಡು ರಾಷ್ಟ್ರದ ಪ್ರತಿಷ್ಠೆಯನ್ನು ಹೆಚ್ಚಿಸಬೇಕೆಂದೂ ಅವರು ಬೋಧಿಸಿದರು

ವಿವಿಧ ವೇಷ ಸ್ಪರ್ಧೆಗಳಾದನಂತರ ಅಧ್ಯಕ್ಷ ಭಾಷಣ ಮಾಡಿ ಕಾಲೇಜಿನ ವರ್ಗಾವಣೆ ಪ್ರಶ್ನೆ ಸಂಪೂರ್ಣವಾಗಿ ಮುಕ್ತಾಯವಾಗಿರುವುದಾಗಿ ಹೇಳಿದರು. ಕಾಲೇಜು ವ್ಯಾಸಂಗವೆ ಮುಗಿಸಿದ ವಿದ್ಯಾರ್ಥಿಗಳಿಗೆ ಸಂಸ್ಥಾನದ ಎಲ್ಲಾ ಕೇಂದ್ರಗಳಲ್ಲಿ ಆಸ್ಪತ್ರೆಗಳಲ್ಲಿ ವೇತನಗಳ ಶಿಕ್ಷಣ ನೀಡಲಾಗುವುದೆಂದೂ ಮತ್ತು ನಾನಾ ರೀತಿಯ ರೋಗಗಳ ಪರಿಶೀಲನೆ [illegible]ರಿಯ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕಲ್ಪಿಸಲಾಗಿದೆಯೆಂದೂ [illegible]ದು

ಸಮಾರಂಭದ ಅಂಗವಾಗಿ ನಾಟಕ ಮುಂತಾದ ಮನೋರಂಜನಾ ಕಾರ್ಯಕ್ರಮಗಳಿದ್ದುವು. ಶ್ರೀ [illegible]ಪ್ಪನವರು ತಮಗಿತ್ತ ಪುಷ್ಪ ಹಾರವನ್ನು [illegible]ಗಳಿಗೆ ಹರಾಜು ಹಾಕಿ ಆ ಹಣವನ್ನು ವಿದ್ಯಾರ್ಥಿಗಳ ಸಹಾಯಕ್ಕಾಗಿ ದಾನವಿ

ಕೆ. ಅನಂತಸುಬ್ಬರಾಯರ ಕನ್ನಡ ಟೈಪರೈಟರಿಗೆ ಮನ್ನಣೆ

ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯಮಂತ್ರಿಯವರ ಹೇಳಿಕೆ

ಸ್ವಂ ಸು ಫೋನ್] ಬೆಂಗಳೂರು ೨೮

ಸುಪ್ರಸಿದ್ಧ ಕನ್ನಡ ಪತ್ರಿಕೋದ್ಯಮಿಗಳಾದ ಶ್ರೀ ಕೆ ಅನಂತಸುಬ್ಬರಾಯರು ವಿಶೇಷ ಶ್ರಮ ವಹಿಸಿ ಸಿದ್ಧಪಡಿಸಿರುವ ಕನ್ನಡ ಟೈಪ್ ರೈಟರ್ ಯಂತ್ರಕ್ಕೆ ಸರ್ಕಾರದವರು ಮನ್ನಣೆಯಿತ್ತಿರುವರೆಂದು ಈ ದಿನ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು

ಚುನಾವಣೆಗಳಲ್ಲಿ ಪ್ರಮುಖ ಕಾಂಗ್ರೆಸ್ಸಿನವರ ಪರಾಜಯ

ಹಲವು ಪ್ರಮುಖ ಕಾಂಗ್ರೆಸ್ಸಿನವರು ಚುನಾವಣೆಯಲ್ಲಿ ಪರಾಜಯ ಹೊಂದಿದ ವಿಷಯವಾಗಿ ಶ್ರೀ ನಿಜಲಿಂಗಪ್ಪನವರು ವಿಷಾದವನ್ನು ವ್ಯಕ್ತಪಡಿಸಿದರು ಸಂಸ್ಥೆಯಲ್ಲಿರಬಹುದಾದ ದೋಷಗಳನ್ನು ಗಮನಿಸಲು ಇದು ಸಕಾಲವೆಂದು ಅವರು ನುಡಿದರು ಪ್ರಾಂತ ವಿಂಗಡಣೆಗೂ ಈ ಪರಾಜಯಗಳಿಗೂ ಸಂಬಂಧವಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು ಸೋತವರ ಸೇವೆಯು ದೇಶಕ್ಕೆ ಯಾವುದಾದರೂ ರೂಪದಲ್ಲಿ ಲಭಿಸಲೆಂದು ಅವರು ಹಾರೈಸಿದರು

ಖೋತಾ ಆಯವ್ಯಯವು ಸ್ವಲ್ಪ ದಿನಗಳಲ್ಲಿಯೇ ಸರಿದೂಗಿಸಲ್ಪಡುವುದೆಂದು ಅವರು ತಿಳಿಸಿ [illegible]ದಲು ತಮ್ಮೊಡನೆ ಸಹಕರಿಸಿದ ವಿರೋಧ ಪಕ್ಷದವರಿಗೂ, ಅಧಿಕಾರ ವರ್ಗ ಮತ್ತು ಪತ್ರಿಕಾ ಕರ್ತರಿಗೂ ಅವರು ವಂದನೆಗಳನ್ನು ಸಲ್ಲಿಸಿದರು.

ಕೇರಳ ಸರ್ಕಾರಕ್ಕೆ ಕೇಂದ್ರದಿಂದ ಸಹಕಾರ

ರಾಜ್ಯಪಾಲರೊಡನೆ ಇಂದು ನಂಬೂದ್ರಿಪಾದರ ಭೇಟಿ

ದೆಹಲಿಯಲ್ಲಿ ಪ್ರಧಾನಿ ನೆಹರೂ ಮತ್ತು ಗೃಹ ಮಂತ್ರಿ ಪಂತರೊಡನೆ ಸಮಾಲೋಚಿಸಿ ವಾಪಸು ಬಂದ ಕೇರಳದ ರಾಜ್ಯಪಾಲರು ನೆನ್ನೆ ಪತ್ರಿಕಾಗೋಷ್ಠಿಯೊಂದರಲ್ಲಿ ಮಾತನಾಡಿ ಕಮ್ಯೂನಿಸ್ಟರು ರಾಜ್ಯಾಂಗದ ಎಲ್ಲೆಯೊಳಗೆ ಇರುವವರೆಗೂ ಕೇಂದ್ರ ಸರ್ಕಾರವು ಅವರಿಗೆ ಸಂಪೂರ್ಣ ಸಹಕಾರ ನೀಡುವುದೆಂದೂ ತಿಳಿಸಿದರು. ಗುಂಡಿನ ಬದಲು ಓಟಿನಿಂದ ಅಧಿಕಾರಕ್ಕೆ ಕಮ್ಯೂನಿಸ್ಟರು ಬಂದಿರುವ ಅವಕಾಶವು ಅಪೂರ್ವವೆಂದೂ, ಇದರಿಂದ ಕೇಂದ್ರ ಮತ್ತು ಪ್ರಾಂತ ಸರ್ಕಾರಗಳ ಬಾಂಧವ್ಯವು ಕೆಡುವುದಿಲ್ಲವೆಂದೂ ಮತ್ತು ವಿದೇಶೀ ಕಮ್ಯೂನಿಸ್ಟರ ಪ್ರಭಾವವು ಸಂಸ್ಥಾನದಲ್ಲಿ ಹೆಚ್ಚುವ ಅವಕಾಶವಿಲ್ಲವೆಂದೂ ಅವರು ಹೇಳಿದರು. ಅಭದ್ರವಾದ ಸರ್ಕಾರಗಳಿಂದ ಬೇಸತ್ತ ಜನರು ಕೊನೆಗೆ ಕಮ್ಯೂನಿಸ್ಟರಿಗೆ ಮತನಿತ್ತರೆಂದು ಸಹ ತಿಳಿಸಿದರು

ಕಮ್ಯೂನಿಸ್ಟ್ ಪಕ್ಷದ ನಾಯಕ ಶ್ರೀ ನಂಬೂದ್ರಿಪಾದ್‌ರವರು ಗವರ್ನರರನ್ನು ಇಂದು ಭೇಟಿ ಮಾಡಿ ಸರ್ಕಾರದ ರಚನೆ ಬಗ್ಗೆ ಸಮಾಲೋಚಿಸುವರು. ನೂತನ ಸರ್ಕಾರವು ಬರುವ ತಿಂಗಳು ೭ರಿಂದ ೧೧ನೇ ತಾರೀಖಿನೊಳಗಾಗಿ ಅಧಿಕಾರವ

ಅಣು ಪರೀಕ್ಷೆ ನಿಷೇಧಿಸಲು ಭಾರತ ಮತ್ತು ಪೋಲೆಂಡಿನ ಕರೆ

ಉಭಯ ರಾಷ್ಟ್ರದ ಪ್ರಧಾನಿಗಳ ಜಂಟಿ ಘೋಷಣೆ

ದೆಹಲಿಗೆ ಆಗಮಿಸಿರುವ ಪೋಲೆಂಡಿನ ಪ್ರಧಾನಿ ಸಿರಾಂಕಿವಿಕ್ಸ್‌ರವರು ಪಂಡಿತ ನೆಹರೂರವರೊಡನೆ ಮಾತುಕತೆ ನಡೆಸಿ ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ವಿಚಾರ ವಿನಿಮಯ ಮಾಡಿದರು. ಉಭಯ ಪ್ರಧಾನಿಗಳೂ ನೆನ್ನೆ ಸಂಯುಕ್ತ ಘೋಷಣೆಯೊಂದನ್ನು ಹೊರಡಿಸಿ ವಿಶ್ವದಲ್ಲಿ ಶಸ್ತ್ರ ಸನ್ಯಾಸವಾಗಬೇಕೆಂದೂ, ಅದಕ್ಕೆ ಪೂರ್ವಭಾವಿಯಾಗಿ ಅಣು ಮತ್ತು ಜಲಜನಕ ಬಾಂಬುಗಳ ಪರೀಕ್ಷಾ ಪ್ರಯೋಗಗಳು ನಿಲ್ಲಬೇಕೆಂದೂ ತಿಳಿಸಿ, ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೋರಿರುವರು. ಅಣು ಅಸ್ತ್ರಗಳ ಪ್ರಯೋಗ ಪರೀಕ್ಷೆಯಿಂದ ಎಲ್ಲ ಜೀವರಾಶಿಗಳಿಗೂ ತೊಂದರೆಯಾಗುವುದಲ್ಲದೆ, ಮಾನವನ ಭವಿಷ್ಯ ಮತ್ತು ನಾಗರಿಕತೆಗೆ ತೀವ್ರ ಅಪಾಯ ಸಂಭವಿಸುವುದೆಂದೂ ಅವರು ತಿಳಿಸಿರುವರು

ಶಸ್ತ್ರ ಸನ್ಯಾಸದ ಬಗ್ಗೆ ಕಳೆದ ೧೦ ವರ್ಷಗಳಿಂದಲೂ ಚರ್ಚೆ ನಡೆಯುತ್ತಲೇ ಇರುವುದಾದರೂ ಫಲಕಾರಿಯಾಗಿಲ್ಲ. ಮೊದಲು ಹಿರಿಯ ರಾಷ್ಟ್ರಗಳು ಕೆಲವು ರೀತಿಯ ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡಬೇಕು ಮತ್ತು ಅವುಗಳ ಮೇಲಿನ ಹತೋಟಿ ಪರಿಶೀಲನೆ ಬಗ್ಗೆ ವ್ಯವಸ್ಥೆಯಾಗಬೇಕು-ಎಂದೂ ಉಭಯ ಪ್ರಧಾನಿಗಳು ತಿಳಿಸಿರುವರು.

ಹಿರಿಯ ರಾಷ್ಟ್ರಗಳು ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಉತ್ತಮಗೊಳಿಸಲು ದೃಢವಾದ ಪ್ರಯತ್ನ ಮಾಡಬೇಕು ಪಂಚಶೀಲ ತತ್ವದ ಅನುಸರಣೆಯಿಂದ ವಿಶ್ವದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯ ಮಿಲಿಟರಿ ಕೂಟಗಳಿಂದ ಸುರಕ್ಷತೆ ನೆಲೆಸಲಾರದು. ಪ್ರಜಾ ಚೀಣಕ್ಕೆ ಪ್ರಪಂಚ ಸಂಸ್ಥೆಯಲ್ಲಿ ಸ್ಥಾನ ದೊರಕಿಸುವ ಬಗ್ಗೆ ಎರಡು ರಾಷ್ಟ್ರಗಳೂ ಶ್ರಮಿಸುವುವು-ಎಂದೂ ಘೋಷಣೆಯಲ್ಲಿ ನಮೂದಿಸಲಾಗಿದೆ.

ಸೆಂಟ್ರಲ್ ಜೈಲ್ ಚರಂಡಿ ತೂರಿ ಖೈದಿಗಳ ಪರಾರಿ

ಬೆಂಗಳೂರು ೨೮

ಸೆಂಟ್ರಲ್ ಜೈಲಿನ ಪಶ್ಚಿಮ ಭಾಗದ ಕಡೆಯ ಬಚ್ಚಲಿಗೆ ಹಾಕಿದ್ದ ತಂತಿ ಬೇಲಿಯನ್ನು ತೂರಿ ೫ ಜನ ಖೈದಿಗಳು ನೆನ್ನೆ ನಡು ಹಗಲಲ್ಲೇ ತಪ್ಪಿಸಿಕೊಂಡು ಪರಾರಿಯಾದರೆಂದು ವರದಿಯಾಗಿದೆ ಅವರ ಪರಾರಿಯ ವಿಷಯವು ಬಹಳ ಹೊತ್ತಾದ ಮೇಲೆ ಒಬ್ಬ ವಾರ್ಡರನಿಂದ ಪತ್ತೆಯಾಯಿತೆಂದೂ, ಇದಕ್ಕಾಗಿ ಅವರು ಬಹಳ ದಿನಗಳಿಂದಲೂ ತಂತಿಗಳನ್ನು ಯಾರಿಗೂ ಕಾಣದ ಹಾಗೆ ಕತ್ತರಿಸಿ ಸಮಯ ಸಾಧಿಸಿ ನೆನ್ನೆ ತಪ್ಪಿಸಿಕೊಂಡರೆಂದೂ ಅವರಲ್ಲಿ ಇಬ್ಬರು ಭಾರಿ ಕೇಡಿಗಳೂ, ಒಬ್ಬ ವಿಚಾರಣಾ ಖೈದಿಯೂ, ಉಳಿದಿಬ್ಬರು ಸಣ್ಣ [illegible] ತಿಳಿದುಬಂದಿದೆ. ಅವರನ್ನು ಸಂಸ್ಥಾನಾದ್ಯಂತ ಪೊಲೀಸರು ಹುಡುಕುತ್ತಿ

ಕಾಂಬೋಡಿಯಾ ಸರ್ಕಾರದ ಪತನ

ಆರ್ಥಿಕ ನೀತಿಯಲ್ಲಿ ಪಾರ್ಲಿಮೆಂಟಿನ ಅವಿಶ್ವಾಸ

ಕಾಂಬೋಡಿಯಾ ಸರ್ಕಾರದವರು ಅನುಸರಿಸುತ್ತಿರುವ ಆರ್ಥಿಕ ನೀತಿಯನ್ನು ವಿರೋಧಿಸಿ ಅಲ್ಲಿನ ಪಾರ್ಲಿಮೆಂಟ್ ಸಭೆಯು ನೆನ್ನೆ ಆಡಳಿತದಲ್ಲಿ ೬೩-೦ ಓಟುಗಳಿಂದ ಅವಿಶ್ವಾಸವನ್ನು ಸೂಚಿಸಿದುದರಿಂದ ಸಾನ್ ಯುನ್‌ರವರ ನಾಯಕತ್ವದಲ್ಲಿ ರಚಿತವಾಗಿದ್ದ ಸರ್ಕಾರವು ಪತನ ಹೊಂದಿತು. ಚರ್ಚೆ ಕಾಲದಲ್ಲಿ ಮುಖ್ಯ ಮಂತ್ರಿಗಳೂ ಮತ್ತು ಇತರ ಸಚಿವರೂ ಹಾಜರಿರಲಿಲ್ಲ. ದೇಶದ ಆರ್ಥಿಕ ದುಸ್ಥಿತಿ ಮತ್ತು ಹೆಚ್ಚುತ್ತಿರುವ ಬೆಲೆಗಳ ವಿಷಯವಾಗಿ ಸರ್ಕಾರವನ್ನು ಖಂಡಿಸುವ ಭಾಷಣಗಳಾದುವು.

ಕೇರಳದ ಮಂತ್ರಿಗಳಿಗೆ ಸೈಕಲ್ಲೇ ವಾಹನ

ಕೇವಲ ೨೫೦ ರೂ ಸಂಬಳ, ಸಣ್ಣ ಕುಟೀರಗಳಲ್ಲಿ ವಾಸ

ಕೇರಳದ ಕಮ್ಯೂನಿಸ್ಟ್ ಮಂತ್ರಿಗಳು [illegible] ಜನ ಸಾಮಾನ್ಯರಂತೆ ಇರಲು ನಿರ್ಧರಿಸಿ ವಾಸಕ್ಕಾಗಿ ಭಾರಿ ಬಂಗ್ಲೆ ಮುಂತಾದ ಭವನಗಳನ್ನು ಬಿಟ್ಟು ಸಾಮಾನ್ಯ ದರ್ಜೆ ಮನೆಗಳಲ್ಲಿ, ಒಂದೇ ಮನೆಯಲ್ಲಿ ಇಬ್ಬರು ಮೂವರು ಮಂತ್ರಿಗಳು ಇರಲು ಯೋಚಿಸಿದ್ದಾರೆ. ಅಲ್ಲದೆ ತಮ್ಮ ಸಂಬಳಗಳನ್ನು ಸಹ ತಿಂಗಳಿಗೆ ಕೇವಲ ೨೫೦ಕ್ಕೆ ಇಳಿಸಿಕೊಂಡು ಮೋಟಾರು ಕಾರುಗಳ ಬದಲು ಸೈಕಲ್ಲುಗಳನ್ನೇ ವಾಹನವಾಗಿ ಉಪಯೋಗಿಸಲು ನಿರ್ಧರಿಸಿದ್ದಾರೆ.

ಪಾಕಿಸ್ತಾನದ ನಿಂದೆ ಮತ್ತು ಬೆದರಿಕೆಗೆ ಭಾರತ ಜಗ್ಗುವುದಿಲ್ಲ

ರಾಜ್ಯ ಸಭೆಯಲ್ಲಿ ಪ್ರಧಾನಿ ನೆಹರೂರವರ ಘೋಷಣೆ

ರಾಜ್ಯ ಸಭೆಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಾತನಾಡಿ ಕಾಶ್ಮೀರದ ಬಗ್ಗೆ ಪಾಕಿಸ್ತಾನವು ಮಾಡುತ್ತಿರುವ ದ್ವೇಷಪೂರ್ಣ ಅಪಪ್ರಚಾರ ಮತ್ತು ಬೆದರಿಕೆಗಳಿಗೆ ಭಾರತವು ಜಗ್ಗುವುದಿಲ್ಲವೆಂದೂ, ಸಮಸ್ಯೆಯ ಇತ್ಯರ್ಥವು ಅವರಿಗೆ ಬೇಕಾಗಿದ್ದರೆ ಈ ರೀತಿಯ ಮಾತನ್ನು ಬಿಟ್ಟು ಸಂಧಾನಕ್ಕೆ ಬರಲೆಂದೂ ಹೇಳಿದರು ಪಾಕಿಸ್ತಾನವು ಅಭಿವೃದ್ಧಿ ಹೊಂದದಿದ್ದರೆ ಭಾರತಕ್ಕೇ ತೊಂದರೆಯಾದ ಕಾರಣ ಅದು ಪ್ರಗತಿ ಹೊಂದಬೇಕೆಂದೂ, ಹಾಗೆಂದ ಮಾತ್ರಕ್ಕೆ ಅದು ಭಾರತವನ್ನು ಹೆದರಿಸುವಂತಹ ಬಲವನ್ನು ಹೊಂದಬೇಕೆಂಬುದಲ್ಲವೆಂದೂ ಅವರು ಹೇಳಿ ಇಷ್ಟಾದರೂ ಭಾರತವು ಪಾಕಿಸ್ತಾನದೊಡನೆ ಸೌಹಾರ್ದವನ್ನು ತೋರುವುದು ಅಶಕ್ತತೆಯ ಚಿಹ್ನೆಯಲ್ಲವೆಂದೂ, ತನಗೆ ಸರಿಯೆಂದು ಕಂಡುಬಂದುದನ್ನು ಮತ್ತು ತನ್ನ ಹಿತರಕ್ಷಣೆಯನ್ನು ಭಾರತವು [illegible] ಕಾಲದಲ್ಲೂ ಬಿಟ್ಟುಕೊಡುವುದಿಲ್ಲವೆಂದು ನುಡಿದರು

ಾಕ್ ಸೈನ್ಯಗಳು ಹಿಂದಿರುಗಿದ ೀತೆಯೇ ಕಾಶ್ಮೀರ ಪ್ರಶ್ನೆಯ ಪರಿಶೀಲನೆ

ಲೋಕ ಸಭೆಯಲ್ಲಿ ಕೃಷ್ಣಮೇನನ್ನರ ವಿವರಣೆ

ದುರಾಕ್ರಮಣ ನಡೆಸಿರುವ ಪಾಕಿಸ್ತಾನಿ ಸೈ ೆಳನ್ನು ಹಿಂಪಡೆಕ್ಕೆ ಕರೆಸಿಕೊಂಡು ನಮ್ಮ ದೇಶ ಪರಮಾಧಿಕಾರವನ್ನು ಅಂಗೀಕರಿಸಿದಮೇಲೆ ಕಾಶ್ಮೀರದ ಪ್ರಶ್ನೆಯ ವಿಚಾರವಾಗಿ ಭಾರ ಮಾತುಕತೆ ನಡೆಸಲು ಸಿದ್ಧವಾಗುವುದೆಂದು ವಿ ಕೆ ಕೃಷ್ಣಮೇನನ್ನರು ಮೊನ್ನೆ ಲೋಕ ಯಲ್ಲಿ ಸ್ಪಷ್ಟಪಡಿಸಿದರು

ೋಕಸಭಾ ಚುನಾವಣೆಯಲ್ಲಿ ಶೋಕ ಮೆಹ್ತಾರವರ ಸೋಲು

ಪ್ರಜಾ ಸಮಾಜವಾದಿ ಪಕ್ಷದ ನಾಯಕರಾದ ಅಶೋಕ ಮೆಹ್ತಾರವರು ಮಧ್ಯಪ್ರದೇಶದ ಂದ್ರ ಎಂಬ ಕ್ಷೇತ್ರದಿಂದ ಲೋಕಸಭಾ ಚುನಾವಣೆಯಲ್ಲಿ ಪರಾಜಿತರಾಗಿರುವರು ಅವರ ತಿಸ್ಪರ್ಧಿ ಕಾಂಗ್ರೆಸ್ ಪಕ್ಷದ ಆರ್ ಎಂ ರಾಂ ನಾಯಿಕ್ ಎಂಬುವರು ಮೆಹತಾರವರ ತ ೯೩೦೦೦ ಓಟುಗಳನ್ನು ಹೆಚ್ಚಾಗಿ ಪಡೆದು ಮುಂದಲರಾಗಿರುವರು

ದರಾಸಿನಲ್ಲಿ ಪಿ. ರಾಮಮೂರ್ತಿಯವರ ಪರಾಜಯ

ಮದರಾಸಿನ ನಾಗಪಟ್ಟಣ ದ್ವಿಸದಸ್ಯ ಕ್ಷೇತ್ರದ ಲೋಕ ಸಭೆಗೆ, ಕಮ್ಯೂನಿಸ್ಟ್ ಪಕ್ಷದ ಲಿಟ್‌ಬ್ಯೂರೋ ಸದಸ್ಯರೂ ಮತ್ತು ಶಾಸನ ಯ ವಿರೋಧ ಪಕ್ಷದ ನಾಯಕರೂ ಆದ ಪಿ ರಾಮಮೂರ್ತಿಯವರು ಸ್ಪರ್ಧಿಸಿ ಪರಾ ಗಿರುವರು ಕಾಂಗ್ರೆಸ್ಸಿನ ಶ್ರೀ ಕೆ ಆರ್ ಂಫರವರು ಅಲ್ಲಿ ಚುನಾಯಿತರಾಗಿರು .

“ಧರ್ಮ ಸಂದೇಶ” ಮಾಸ ಪತ್ರಿಕೆ

ಬೆಂಗಳೂರಿನಲ್ಲಿರುವ ವೇ॥ ಬ್ರ॥ ಆಗಮಿಕ ದೀಕ್ಷಿತರು ಪ್ರಕಟಿಸುತ್ತಿರುವ “ಧರ್ಮ ಸಂ ಮಾಸ ಪತ್ರಿಕೆಯು ನಮ್ಮ ಹಸ್ತಗತವಾಗಿ ಹಿಂದೆ ಇದು ಎರಡು ವರ್ಷಕಾಲ ನಡೆದು ತುಹೋಗಿತ್ತು ಈಗ ಶ್ರೀ ದೀಕ್ಷಿತರು ಆದ ಮಿತ್ರರ ಸಹಾಯದಿಂದ ಪುನಃ ಆರಂಭಿಸಿದ್ದಾರೆ ಧರ್ಮ ಸಂದೇಶ ಪೋಷಿಣಿ ಸಭೆಯ ಶ್ರಯದಲ್ಲಿ ಈ ಪತ್ರಿಕೆಯು ನಡೆಯುತ್ತಿದೆ ನಾತನ ಧರ್ಮ ತತ್ವಗಳನ್ನು ಪ್ರಸಾರ ಮಾಡುದೇ ಇದರ ಉದ್ದೇಶ ಶೃಂಗೇರಿ, ದ್ವಾರಕಾ ರನಿ ಮುಂತಾದ ಮಠಾಧೀಶರುಗಳೂ; ಶ್ರೀ ಧರಸ್ವಾಮಿಗಳೂ ಇದಕ್ಕೆ ಆಶೀರ್ವದಿಸಿ ಅನುಗ್ರಹಿಸಿರುತ್ತಾರೆ ಶ್ರೀ ಕರಪಾತ್ರಿ ಸ್ವಾಮಿಗಳು ಧರ್ಮ ಪ್ರಚಾರದ ಆಗತ್ಯದ ವಿಷಯವಾಗಿ ಲೇಖನವನ್ನು ಈ ಸಂಚಿಕೆಗೆ ಕಳುಹಿಸಿರುತ್ತಾರೆ ಇದಲ್ಲದೆ ಇನ್ನೂ ಹಲವು ಉತ್ತಮ ಲೇಖನಗಳ ನೂತನ ವ್ಯವಸ್ಥೆಯಲ್ಲಿ ಈ ಮಾಸ ಪತ್ರಿಕೆಯು ಚಿರಕಾಲ ನಡೆದು ತನ್ನ ಅಮೋಘವಾದ ಯವನ್ನು ಸಾಧಿಸಿ ಆಸ್ತಿಕ ಮಹನೀಯರಿಗೆ ಜ್ಞಾನ ದೀವಿಗೆಯಾಗಲೆಂದು ಹಾರೈಸುತ್ತೇವೆ.

ಜಪಾನಿನ ರೈಲ್ವೆ ಮುಷ್ಕರದಿಂದ ಕೋಪಗೊಂಡ ಜನರ ಗಲಭೆ

ಮೊದಲೇ ಕೊಡಲು ಒಪ್ಪಿದ್ದ ಬೋನಸ್ಸನ್ನು ಸರ್ಕಾರವು ನಿರಾಕರಿಸಿದುದನ್ನು ಪ್ರತಿಭಟಿಸಲು ಕಳೆದ ಭಾನುವಾರ ಜಪಾನಿನ ರೈಲ್ವೆ ಕಾರ್ಮಿಕರು ಹಠಾತ್ತನೆ ಮುಷ್ಕರವನ್ನು ಹೂಡಿದಾಗ ರಜಾ ಕಾಲದ ಪ್ರವಾಸಕ್ಕೆ ತೆರಳುತ್ತಿದ್ದ ಜನರಿಗೆ ಅಡಚಣೆಯಾಗಿ ಅವರು ಕೋಪಗೊಂಡು ಅನೇಕ ನಿಲ್ದಾಣಗಳಲ್ಲಿ ಕಿಟಕಿ ಗಾಜುಗಳನ್ನು ಒಡೆದು ರೈಲ್ವೆ ನೌಕರರು ಮತ್ತು ಕಾವಲುಗಾರರನ್ನು ಅಟ್ಟಿಸಿಕೊಂಡುಹೋದರು ಪೋಲೀಸರು ಪರಿಸ್ಥಿತಿಯನ್ನು ತಹಬಂದಿಗೆ ತಂದರು

ಪುಸ್ತಕ ನೋಡಿ ಪರೀಕ್ಷೆಯಲ್ಲಿ ಉತ್ತರ ಬರೆಯುವ ಅವಕಾಶ

ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪುಸ್ತಕಗಳನ್ನು ತೆಗೆದುಕೊಂಡುಹೋಗಿ ಅವುಗಳನ್ನು ನೋಡಿಕೊಂಡು ಉತ್ತರ ಬರೆಯಲು ಅವಕಾಶ ಕೊಡುವ ವಿಷಯವನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಬೇಕೆಂಬುದಾಗಿ ಗುಜರಾತ್ ವಿಶ್ವವಿದ್ಯಾಲಯದ ಸೆನೆಟ್ ಸಭೆಯು ಸಿಂಡಿಕೇಟ್ ಮಂಡಲಿಗೆ ಆದೇಶವಿತ್ತಿದೆ

ಕೆಂಪನಂಜಾಂಬ ಅಗ್ರಹಾರದ ಶ್ರೀ ರಾಮೋತ್ಸವ ಸಭಾ

ರಾಜಧಾನಿಯ ಕೆಂಪನಂಜಾಂಬಾ ಅಗ್ರಹಾರದಲ್ಲಿ ಇದೇ ಹೇವಿಳಂಬಿ ಸಂವತ್ಸರದ ಚೈತ್ರ ಶುದ್ಧ ಪ್ರತಿಪತ್ (೧ ೪ ೫೭) ಸೋಮವಾರದಿಂದ ರಾಮೋತ್ಸವವು ಪ್ರಾರಂಭವಾಗಿ ಚೈತ್ರ ಶುದ್ಧ ದಶಮಿ (೯-೪-೧೯೫೭) ಮಂಗಳವಾರ ಶ್ರೀ ರಾಮ ಪಟ್ಟಾಭಿಷೇಕವೂ, ೧೨-೪-೧೯೫೭ ನೇ ಶುಕ್ರವಾರ ಹನುಮಂತೋತ್ಸವವೂ ನಡೆಯಬೇಕೆಂದು ಭಗವತ್ಪ್ರೇರಣೆಯಾಗಿರುವುದರಿಂದ ಈ ಮಹಾಕಾರ್ಯಕ್ಕೆ ಮಹಾ ಜನರು ಎಂದಿನಂತೆ ಸ್ವಹಸ್ತ ಪರಹಸ್ತಗಳಿಂದ ಧನಧಾನ್ಯ ರೂಪಗಳಲ್ಲಿ ಸಹಾಯ ಮಾಡಿ ಶ್ರೀ ರಾಮನ ಕೃಪೆಗೆ ಭಾಗಿಗಳಾಗಬೇಕೆಂದು ಕೋರಲಾಗಿದೆ

ಕಮ್ಯೂನಿಸ್ಟ್ ಚೀಣಕ್ಕೆ ಜೋರ್ಡಾನಿನ ಮನ್ನಣೆ

ಕಮ್ಯೂನಿಸ್ಟ್ ಚೀಣಕ್ಕೆ ಮಾನ್ಯತೆ ಕೊಡಲು ತಮ್ಮ ಸರ್ಕಾರವು ಉದ್ದೇಶಿಸಿದೆಯೆಂದು ಜೋರ್ಡಾನ್ ರಾಜ್ಯದ ಪ್ರಧಾನಿ ಸುಲೇಮಾನ್ ನಾಬುಲ್ಸಿಯವರು ಚೀಣೀ ಸೌಹಾರ್ದ ನಿಯೋಗವೊಂದಕ್ಕೆ ಮೊನ್ನೆ ತಿಳಿಸಿದರೆಂದು ವರದಿಯಾಗಿದೆ.

‘ಪತ್ರಿಕೋದ್ಯಮಿ’

ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಸಂಘದವರ ಪ್ರಯೋಗಾರ್ಥ ಪ್ರಕಟಣೆಯಾದ ಈ ವರ್ಷದ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿದ್ದೇವೆ ಅದರಲ್ಲಿ ವಿದ್ಯಾರ್ಥಿಗಳಿಂದ ಕವನಗಳು, ಹರಟೆಗಳು, ಸಣ್ಣ ಕತೆಗಳು ಮತ್ತು ಪತ್ರಿಕೋದ್ಯಮದ ಹಲವಾರು ಉಪಯುಕ್ತ ಅಂಶಗಳ ಮೇಲೆ ಲೇಖನಗಳೂ ಇವೆ

ಪಂಚಾಂಗ ಸ್ವೀಕಾರ

ನಗರದ ಆನಂದ ಮುದ್ರಣಾಲಯದ ಮಾಲೀಕರಾದ ಸಿದ್ಧಾಂತಿ ಶ್ರೀ ಎಂ ಎಸ್ ಚಂದ್ರಶೇಖರ ಜೋಯಿಸರಿಂದ ರಚಿತವಾದ ಹೇವಿಳಂಬಿ ಸಂವತ್ಸರದ ಪಂಚಾಂಗವೊಂದನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ತೆಲುಗು ದೇವಾಂಗ ಸಂಘ

ಮೇಲ್ಕಂಡ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ ನಡೆದು ಈ ಸಾಲಿಗೆ ಶ್ರೀ ಎಸ್. ರಾಮಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ವರದಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಎ. ಪಾಪಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀ ಗೋಪಾಲಯ್ಯನವರು ಖಜಾಂಚಿಯಾಗಿಯೂ ಮತ್ತು ಶ್ರೀಗಳಾದ ಗುರುವಯ್ಯ, ಕೃಷ್ಣಪ್ಪ, ಮಾದೇಶಯ್ಯ ಮತ್ತು ಪಿಳ್ಳಯ್ಯನವರು ಸದಸ್ಯರಾಗಿಯೂ ಚುನಾಯಿತರಾದರು ಈ ವರ್ಷವೂ ದಸರಾ ಮಹೋತ್ಸವವನ್ನು ನಡೆಯಬೇಕೆಂಬುದಾಗಿಯೂ ಮತ್ತು ಆಹಾರ ಧಾನ್ಯಗಳ ಬೆಲೆ ತಗ್ಗಿಸಲು ಕ್ರಮ ಕೈಗೊಳ್ಳಬೇಕೆಂದೂ ಸರ್ಕಾರವನ್ನು ಕೋರಿ ನಿರ್ಣಯ ಮಾಡಲಾಯಿತು.

ಹಬ್ಬಕ್ಕೆ ಮಿಲ್ ಪಂಚೆಗಳು

ಮಿನರ್ವಾ-8 ನಂಬ-ಜೊತೆ — 8 12 0
ರಾಜಾಮಿಲ್-ಜೊತೆ 8 8 0 ಇಂದ 10 8 0
ಸ್ಪೆಷಲ್ ಮರ್ಸರೈಸ್ಡ್ ಜೊತೆ — 12 14 0
ಇವಲ್ಲದೆ ಬೇರೆ ಮಿಲ್ಲಿನವು ಬಹಳ ಇವೆ

ಬಾಹುಸಾರ್ ಕಂಪೆನಿ,
ಸೂರದಿ ರಸ್ತೆ, ಮೈಸೂರು

ಮನೆಗಳು ಕ್ರಯಕ್ಕಿವೆ

1 ಡೋರ್ ನಂ 2788,9 ಚಾಮುಂಡಿ ಬಡಾವಣೆ ಶಂಕರನಾರಾಯಣ ಸ್ವಾಮಿ ದೇವಸ್ಥಾನದ ಹತ್ತಿರ. 3 ಕಡೆ ರಸ್ತೆ, ತಾರಸಿ ಮತ್ತು ಮಂಗಳೂರು ಹೆಂಚಿನ ಸುಮಾರು 2,000 ಚದರಡಿ ಉಳ್ಳ ವಿಶಾಲವಾದ, 3 ಸಂಸಾರಕ್ಕೆ ನುಕೂಲವಾದ ಕಟ್ಟಡ ನಲ್ಲಿ, ದೀಪ ಇದೆ
2 ನಾರಾಯಣಶಾಸ್ತ್ರಿ ರಸ್ತೆ ಸೀತಾವಿಲಾಸ ಛತ್ರದ ಹತ್ತಿರ ಅಂಗಡಿ ಮತ್ತು ಮನೆ ಇರುವ ಕಟ್ಟಡ
3 ಇನ್ನೂ ಕೆಲವು ಉತ್ತಮವಾದ ಸ್ವತ್ತುಗಳು ಕ್ರಯಕ್ಕೂ, ಭೋಗ್ಯಕ್ಕೂ ಇವೆ

ಸಿಟಿಯಲ್ಲಿರುವ ಒಳ್ಳೆಯ ಸ್ಥಿರ ಸ್ವತ್ತುಗಳ ಮೇಲೆ ಸಾಲವನ್ನೂ ಸಹಾ ಕೊಡಿಸುತ್ತೇವೆ
ವಿವರಗಳಿಗೆ :-

ಜಯ ಅಂಡ್ ಕಂಪೆನಿ,
ಸ್ಥಿರ ಸ್ವತ್ತಿನ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು : ಫೋ 520

ಒಲಂಪಿಯಾ ★

29-3-57 ರಿಂದ ಅಮೋಘ ಪ್ರಾರಂಭ
ಪುಕಾರ್, ಸಿಕಂದರ್, ಪೃಥ್ವಿವಲ್ಲಭ್.
ಇಂತಹ ಅತ್ಯುತ್ತಮ ಚಿತ್ರಗಳನ್ನು ನೀಡಿದ, ಮಿನರ್ವಾ ಮೂವಿಟೋನರವರ ಹಿಂದಿ ಚಿತ್ರ
ಸೊಹ್ರಾಬ್ ಮೋದಿ, ಮಧುಬಾಲ, ಉಲ್ಹಾಸ್, ಪ್ರದೀಪ್ ಕುಮಾರ್, ಪಾತ್ರವಹಿಸಿರುವ ★ ರಾಜಹಟ್
ನಿರ್ದೇಶನ : ಸೊಹ್ರಾಬ್ ಮೋದಿ — ಸಂಗೀತ : ಶಂಕರ್ ಮತ್ತು ಜೈಕಿಷ
ಕಡೇ ದಿನ :— “ಸೀಮಾ”

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

28-3-57 ರಿಂದ : ಅಮೋಘ ಪ್ರಾರಂಭ
ನೀಲಾ ರವರ ತಮಿಳು ಚಿತ್ರ ★ ಮಂತ್ರವಾದಿ
ಪಾತ್ರ:— ಪ್ರೇಂ ನಜೀರ್, ಕುಮಾರಿ ಮುಂತಾದವರು

ವರ್ತಕರಿಗೂ, ವಾಣಿಜ್ಯೋದ್ಯಮಿಗಳಿಗೂ ಅಪೂರ್ವ ಸುಸಮಯ !
ಇದೇ ಏಪ್ರಿಲ್ ಒಂದರಿಂದ ಜಾರಿಗೆ ಬರಲಿರುವ ನಯಾ ಪೈಸಾ ದಶಮಾಂಶ ನಾಣ್ಯಗಳು ಮತ್ತು ರೂ. ಆ. ಪೈಗಳನ್ನು ಸಮನ್ವಯಗೊಳಿಸಿ
೧ ಕಾಸಿನಿಂದ ಹಿಡಿದು ಒಂದು ರೂ ವರೆಗೂ ಮತ್ತು ಯಾವ ತರಹದ ವ್ಯಾಪಾರ ಪಟ್ಟಿಯಲ್ಲಾದರೂ 1/8 ರಿಂದ ಹಿಡಿದು 10,000 ಸಂಖ್ಯೆಯವರೆಗೂ ಅನ್ವಯಿಸುವಂತಹ ಯಲ್ಲಿ ಬೆಲೆ ಕೂಲಿ ಡಿಸ್ಕೌಂಟು ಮತ್ತು ಶೇಕಡವಾರು ಲೆಕ್ಕವನ್ನು ವಿವರವಾಗಿ ತಿಳಿಸಬಲ್ಲ

ಎಲೈಟ್ಸ್ ರೆಡಿ ರೆಕನರ್

ಬಿಕರಿಗೆ ಸಿದ್ಧವಾಗಿದೆ
ವಾಣಿಜ್ಯ ಸಂಸ್ಥೆಗಳು ದಿನಸಿ ಮತ್ತು ಬಟ್ಟೆ ವರ್ತಕರು ಮತ್ತು ಇತರ ವ್ಯವಹಾರಗಳನ್ನು ಹೊಂದಿರುವವರಿಗೆ ಅತ್ಯುಪಯುಕ್ತವಾದ ಈ ಪುಸ್ತಕವು 320 ಪುಟಗಳಿಂದ ಕೂಡಿದೆ
ಬೆಲೆ 3—0—0. ಅಂಚೆ ವೆಚ್ಚ ಬೇರೆ
ಮಾರಾಟಗಾರರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತೆ
ವಿವರಗಳಿಗೆ ಕೆಳಗೆ ಕಂಡವರೊಡನೆ ವ್ಯವಹರಿಸಿ

ಎಲೈಟ್ ಪ್ರಿಂಟರ್ಸ್,
1041. ಶಿವರಾಂಪೇಟೆ, ಮೈಸೂರು.

REE GAYATHRI
TALKIES
rom 28-3-57 : For 3 days
Daily 3 Shows
rner Bro's
AND OF THE PHARAOHS
Cinemascope & Warner Color,
—:Next Change:—
The Lone Ranger
(Technicolor)

ited, Printed and Published by
R. Nagarajan at Sadhvi Press,
Subbiah Road, Mysore

29—3—57 ರಿಂದ ಅಮೋಘ ಪ್ರದರ್ಶನಾರಂಭ
ನಿಮ್ಮ ನೆಚ್ಚಿನ ಲಕ್ಷ್ಮಿ ಚಿತ್ರಮಂದಿರದಲ್ಲಿ
(ಪ್ರತಿ ದಿನ 3 ಪ್ರದರ್ಶನಗಳು)
ಜನಪ್ರಿಯ ಕಥಾ ವಸ್ತು—ರೋಮಾಂಚಕ ಸನ್ನಿವೇಶಗಳು—ಮಾಯ ಮಂತ್ರಗಳಿಂದ ಕೂಡಿದ ಮಹೋನ್ನತ ಕಲಾಕೃತಿ
ಜೈಶಕ್ತಿ ಪಿಕ್ಚರ್ಸ್‌ರವರ ತಮಿಳು ಚಿತ್ರ ಅಲ್ಲಾವುದ್ದೀನ್ ಮತ್ತು ಅದ್ಭುತದೀಪ
ಭೂಮಿಕೆ ನಾಗೇಶ್ವರರಾವ್, ಅಂಜಲಿದೇವಿ, ಎಸ್. ವಿ ರಂಗರಾವ್ ಬಿ. ಎಸ್ ಬಾಲಯ್ಯ, ರಾಜಾ ಸುಲೋಚನಾ ತಂಗವೇಲು ಮುಂತಾದವರು
ದಿಗ್ದರ್ಶನ : ಟಿ ಆರ್ ರಘುನಾಥ್ — ಸಂಗೀತ : ಎಸ್. ರಾಜೇಶ್ವರರಾವ್ — ಕಾಸ್ಟ್ಯೂಮ್ ದೃಶ್ಯಗಳು “ಗೇವಾ ಕಲರ್”ನಲ್ಲಿ
[ಹಂಚಿಕೆ : ಜೆಮಿನಿ ಮೂವೀಸ್, ಬೆಂಗಳೂರು-9]
ಕಡೇ ದಿನ :— ‘ಮಕ್ಕಳೈ ಪೆಟ್ರ ಮಹಾರಾಸಿ’

ರಣಜಿತ್ ಟಾಕೀಸ್ ★
ಚಿತ್ರಾ, ದಲ್‌ಜಿತ್, ರಾಂಸಿಂಗ್, ತಿವಾರಿ, ಸಾಮತಿ ಮುಂತಾದವರು ನಟಿಸಿರುವ
★ ಬಂಸರಿಬಾಲ ★
28—3—57 ರಿಂದ : ಅಮೋಘ ಪ್ರಾರಂಭ : ದಿನವಹಿ 3 ಆಟಗಳು
ದೇವಾಯನ್ ಪ್ರೊಡಕ್ಷನ್ಸ್‌ರವರ, ಗೇವಾ ಕಲರ್ ನೃತ್ಯಗಳಿಂದ ಕೂಡಿದ ಹಿಂದಿ ಚಿತ್ರ
ದಿಗ್ದರ್ಶನ ನಾನುಭಾಯ್ ವಕೀಲ್
ಸಂಗೀತ ಕಮಲ್ ಮಿತ್ರ

ರಿಜಿಸ್ಟ್ರೀ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೫] SADHVI : FRIDAY 29—3—1957 ಮೈಸೂರು : ಶುಕ್ರವಾರ ೨೯—೩—೧೯೫೭ : [ಸಂಚಿಕೆ : ೨೪೦

ಬ್ರಿಟನ್ನಿಗೆ ರಾಕೆಟ್ಟುಗಳ ಸರಬರಾಜು ಬಗ್ಗೆ ಕೆನಡಾ ಅತೃಪ್ತಿ

ಮುಷ್ಕರ ನಿಲ್ಲಿಸಲು ಗ್ರಾಮಾಧಿಕಾರಿಗಳ ಸಂಘದ ಕರೆ

ಬೆಂಗಳೂರು ೨೮

ಮುಖ್ಯ ಮಂತ್ರಿಯವರು ತಮ್ಮ ಬೇಡಿಕೆಗಳ ಶೀಘ್ರವಾಗಿ ಈಡೇರಿಸಲು ಭರವಸೆಯಿತ್ತಿರುವುದರಿಂದ ಗ್ರಾಮಾಧಿಕಾರಿಗಳು ತಾತ್ಕಾಲಿಕವಾಗಿ ಮುಷ್ಕರವನ್ನು ನಿಲ್ಲಿಸಿ ಎಂದಿನಂತೆ ಸರ್ಕಾರಿ ಕಾರ್ಯಗಳಲ್ಲಿ ನಿರತರಾಗಬೇಕೆಂದು ಸಂಘದ ಕ್ರಿಯಾ ಸಮಿತಿಯು ಕರೆಯಿತ್ತಿದೆ.

ಅಣು ಪ್ರಯೋಗೆ ಪ್ರಮಾಣದ ಹತೋಟಿಗೆ ಬ್ರಿಟನ್ನಿನ ಇಚ್ಛೆ

ರಷ್ಯಾದೊಡನೆ ಒಪ್ಪಂದದಿಂದ ಅಣು ಅಸ್ತ್ರಗಳ ಪ್ರಯೋಗಗಳ ಪ್ರಮಾಣವನ್ನು ಮಿತಗೊಳಿಸಲು ಬ್ರಿಟನ್ನು ಒಂದು ವಿಧಾನವನ್ನು ಯೋಚಿಸಿದೆಯೆಂದೂ, ಅದು ಅಸಾಧ್ಯವಾದರೆ ಯಾರಿಗೂ ಅಪಾಯವಾಗದ ರೀತಿಯಲ್ಲಿ ಪ್ರಯೋಗಗಳ ಸಂಖ್ಯೆಯನ್ನೇ ಮಿತಗೊಳಿಸಲು ಸಹ ನಿರ್ಧರಿಸಲಾಗಿದೆಯೆಂದೂ ಅಲ್ಲಿನ ಪ್ರಧಾನಿ ಮ್ಯಾಕ್ ಮಿಲನ್ ಹೇಳಿದ್ದಾರೆ

ಪೋಲೆಂಡಿನ ಸೇನೆಯಲ್ಲಿ ಖೋತಾ

ಈಗಾಗಲೇ ಒಂದು ಬಾರಿ ಸೇನೆಯಲ್ಲಿ ಖೋತಾ ಮಾಡಿರುವ ಪೋಲೆಂಡು ಪುನಃ ೩೪,೫೦೦ ಮಂದಿಯಷ್ಟು ಸೇನಾ ಬಲವನ್ನು ಇಳಿಸುವುದಾಗಿ ಪ್ರಕಟಿಸಿದೆ

ಇನ್ಸ್‌ಪೆಕ್ಟರರ ಕಛೇರಿ ಮುಂದೆ ಬೀಡಿ ಕಾರ್ಮಿಕರ ಕಪ್ಪು ಬಾವುಟ ಪ್ರದರ್ಶನ

ಮೈಸೂರು ಡಿವಿಜನ್ನಿನ ಕಾರ್ಖಾನೆಗಳ ಇನ್ಸ್‌ಪೆಕ್ಟರು ನಗರದ ಹಲವು ಬೀಡಿ ಕಾರ್ಖಾನೆಗಳ ಮೇಲೆ ಹೂಡಿದ್ದ ಮೊಕದ್ದಮೆಗಳನ್ನು ವಾಪಸು ಪಡೆದುದರಿಂದ ತಮ್ಮ ಹಿತಕ್ಕೆ ಧಕ್ಕೆಯುಂಟಾಗಿರುವುದೆಂದು ಸುಮಾರು ೨,೦೦೦ ಮಂದಿ ಬೀಡಿ ಕಾರ್ಮಿಕರು ಅಶೋಕಾ ರಸ್ತೆಯಲ್ಲಿರುವ ಫ್ಯಾಕ್ಟರಿ ಇನ್ಸ್‌ಪೆಕ್ಟರರ ಕಛೇರಿ ಮುಂದೆ ಮೊನ್ನೆ ಒಂದು ಗಂಟೆ ಕಾಲ ಕಪ್ಪು ಬಾವುಟದ ಪ್ರದರ್ಶನ ನಡೆಸಿದರೆಂದು ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಕಾರ್ಮಿಕ ಸಂಘದ ಉಪಾಧ್ಯಕ್ಷರಾದ ಶ್ರೀ ಅಜೀಜ್ ಸೇಠರವರು ಅವರನ್ನುದ್ದೇಶಿಸಿ ಮಾತನಾಡಿ ಶಾಂತಿಯುತವಾಗಿರಬೇಕೆಂದೂ, ಅವರ ಕುಂದುಕೊರತೆಗಳನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿ ಪರಿಹಾರ ಪಡೆಯಲು ತಾವು ಪ್ರಯತ್ನಪಡುವುದಾಗಿಯೂ ತಿಳಿಸಿದರು.

ನಗರದಲ್ಲಿ ಸಂಸ್ಥಾನದ ವಕೀಲರ ಸಮ್ಮೇಳನ

ಮುಂದಿನ ಮೇ ತಿಂಗಳು ನಗರದಲ್ಲಿ ಸಂಸ್ಥಾನದ ವಕೀಲರ ಸಮ್ಮೇಳನವು ನಡೆಯುವುದೆಂದು ಗೊತ್ತಾಗಿದೆ. ಬರುವ ತಿಂಗಳು ೩ನೇ ತಾರೀಕು ಸಮ್ಮೇಳನದ ಅಧ್ಯಕ್ಷರ ಆಯ್ಕೆ ಬಗ್ಗೆ ಸ್ವಾಗತ ಸಮಿತಿ ಸದಸ್ಯರ ಸಭೆಯು ನಡೆಯಲಿದೆ. ಸಮ್ಮೇಳನದಲ್ಲಿ ಚರ್ಚಿಸುವ ವಿಷಯಗಳನ್ನು ಏಪ್ರಿಲ್ ೨೦ನೇ ತಾರೀಕಿನೊಳಗೆ ಸಮ್ಮೇಳನದ ಕಾರ್ಯದರ್ಶಿಗಳಿಗೆ ಕಳುಹಿಸಬೇಕೆಂದು ಕೋರಲಾಗಿದೆ

ಬ್ರಿಟನ್ನಿಗೆ ಮಿಸ್ಸೈಲ್ ರಾಕೆಟ್ಟುಗಳ ನೀಡಿಕೆಗಾಗಿ ಕೆನಡದ ಆತಂಕ

ಅಮೇರಿಕವು ಬ್ರಿಟನ್ನಿಗೆ ಮಿಸ್ಸೈಲ್ ರಾಕೆಟ್ಟುಗಳನ್ನು ನೀಡುವ ಬಗ್ಗೆ ಕೆನಡದ ವಿದೇಶಾಂಗ ಮಂತ್ರಿ ಲೆಸ್ಟರ್ ಪಿಯರ್ಸನ್ನರು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಈ ನೀಡಿಕೆಯಿಂದ ಅಮೇರಿಕವು ನ್ಯಾಟೋ ಮಿಲಿಟರಿ ಕೂಟದ ತನ್ನ ಮಿತ್ರರಲ್ಲಿ ಪಕ್ಷಪಾತ ಮಾಡಿದಂತಾಗಿ ಇತರ ಸದಸ್ಯ ರಾಷ್ಟ್ರಗಳ ಅಸಮಾಧಾನಕ್ಕೆ ಗುರಿಯಾಗುವುದೆಂದು ಅವರು ಹೇಳಿದರು

ವಿಶ್ವದ ಕೋರ್ಟಿಗೆ ಕಾಶ್ಮೀರ ಪ್ರಶ್ನೆ ಕೊಂಡೊಯ್ಯಲು ವಿರೋಧ

ಕಾಶ್ಮೀರ ಪ್ರಶ್ನೆ ವಿ. ಸಂ. ಭದ್ರತಾ ಸಮಿತಿಯ [illegible] ತನ್ನ ವಚನವನ್ನು ಭಾರತವು [illegible] ಅಥವಾ ಮುರಿದಿರುವುದೇ ಎಂಬುದು ಮುಖ್ಯವೆಂದೂ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರು ಹೇಗ್ ವಿಶ್ವ ನ್ಯಾಯಾಲಯಕ್ಕೆ ಈ ಪ್ರಶ್ನೆಯನ್ನು ಕೊಂಡೊಯ್ಯುವುದನ್ನು ವಿರೋಧಿಸಿದ್ದಾರೆ

ಸಬ್ ಇನ್ಸ್‌ಪೆಕ್ಟರರನ್ನು ಇರಿದು ಕೊಂದವನ ಮೇಲೆ ಮೊಕದ್ದಮೆ

ಈಗ್ಗೆ ಕೆಲವು ದಿನಗಳ ಹಿಂದೆ ರಾಮುಡು ಎಂಬ ಕೇಡಿಯು ಹಳೆಯ ಜಿದ್ದಿನ ಮೇಲೆ ಕಾಮಸಮುದ್ರದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಮಾಯಾಚಾರ್ ಎಂಬುವರನ್ನು ಚೂರಿಯಿಂದ ಇರಿದು ಕೊಂದನಷ್ಟೆ. ಅವನ ಮೇಲೆ ಬಂಗಾರಪೇಟೆಯ ಪೊಲೀಸು ಇನ್ಸ್‌ಪೆಕ್ಟರು ಈಗ ಚಿನ್ನದ ಗಣಿ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ

ಮೋಟಾರು ವಾಹನಗಳ ರಿಜಿಸ್ಟ್ರೇಷನ್ನಿನ ಪುನರ್ವ್ಯವಸ್ಥೆ

ವಿಶಾಲ ಮೈಸೂರಿನ ನಾನಾ ಭಾಗಗಳಲ್ಲಿ ಈಗ ಮೋಟಾರು ವಾಹನಗಳ ರಿಜಿಸ್ಟ್ರೇಷನ್ ಬಗ್ಗೆ ಇರುವ ವಿವಿಧ ಪದ್ಧತಿಗಳನ್ನು ಕ್ರೋಢೀಕರಿಸುವವರೆಗೆ ಸದ್ಯದ ಕ್ರಮಗಳಲ್ಲಿ ತಾತ್ಕಾಲಿಕವಾಗಿ ಸರ್ಕಾರದವರು ಹಲವು ಬದಲಾವಣೆಗಳನ್ನು ಮಾಡಿದ್ದಾರೆ. ಅದರ ಪ್ರಕಾರ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಮತ್ತು ಮಂಡ್ಯ ಜಿಲ್ಲೆಗಳವರು ಇನ್ನು ಮುಂದೆ ತಮ್ಮ ಜಿಲ್ಲಾ ಕೇಂದ್ರಗಳ ಬದಲು ಮೈಸೂರಿನಲ್ಲಿ ವಾಹನಗಳನ್ನು ರಿಜಿಸ್ಟರ್ ಮಾಡಿಸಬೇಕಾಗುವುದು

ವಿ|| ಎಸ್ ರಾಮರತ್ನಂರವರಿಗೆ ಗಾನ ಸುಧಾಮಣಿ ಎಂಬ ಪ್ರಶಸ್ತಿ

ಆಸ್ಥಾನ ವಿದ್ವಾನ್ ಗೋಟುವಾದ್ಯಂ ನಾರಾಯಣಯ್ಯಂಗಾರ್ಯರ ಪುತ್ರರಾದ ವಿ. ಎಸ್. ರಾಮರತ್ನಂರವರಿಗೆ ಸಂಸ್ಥಾನದ ಮಾಜಿ ದಿವಾನರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಕಳೆದ ಶನಿವಾರ ಬೆಂಗಳೂರಿನ ಒಂದು ಸಮಾರಂಭದಲ್ಲಿ ಗಾನ ಸುಧಾಮಣಿ ಎಂಬ ಪ್ರಶಸ್ತಿಯನ್ನಿತ್ತರು. ಸನ್ಮಾನಿತರಾದ ವಿ|| ರಾಮರತ್ನಂರವರು ಪ್ರಧಾನಿ ನೆಹರೂ, ರಾಷ್ಟ್ರಪತಿ ಡಾ|| ರಾಜೇಂದ್ರಪ್ರಸಾದ್ ಮತ್ತು ಪ್ರೊ|| ಮಹಾರಾಜರುಗಳಿಂದ ಬಹು ಪ್ರಶಸ್ತಿಗಳನ್ನು ಪಡೆದಿರುವರು

ಸೀರೆಗೆ ಬೆಂಕಿ ತಗುಲಿ ಮಹಿಳೆಯ ಮರಣ

ಮೈಸೂರು ೨೮

ನಗರದ ಪಾರ್ವತಿ ಪ್ರಿಂಟಿಂಗ್ ಪ್ರೆಸ್ಸಿನ ಮಾಲೀಕರ ಪತ್ನಿ ಶ್ರೀಮತಿ ಪಾರ್ವತಮ್ಮ ಎಂಬ ೩೫ ವರ್ಷ ವಯಸ್ಸಿನ ಮಹಿಳೆಯು ಕೃಷ್ಣಮೂರ್ತಿಪುರದ ಅವರ ಮನೆಯಲ್ಲಿ ನೆನ್ನೆ ಸಂಜೆ ಕಾಫಿ ಕಾಯಿಸುತ್ತಿದ್ದಾಗ ಆಕಸ್ಮಾತ್ ಸೀರೆಗೆ ಬೆಂಕಿ ತಗುಲಿ ಗಾಯಗಳಿಂದ ಮೃತಪಟ್ಟರು. ಲಕ್ಷ್ಮೀಪುರಂ ಪೊಲೀಸರು ಮಹಜರು ಕ್ರಮ ನಡೆಸಿದರು

ಹೈ ಕೋರ್ಟಿಗೆ ಬೇಸಿಗೆ ರಜ

ಹೈಕೋರ್ಟಿಗೆ ಏಪ್ರಿಲ್ ೧೫ ರಿಂದ ಜೂನ್ ೭ ರವರೆಗೆ ಬೇಸಿಗೆ ರಜವಿರುವುದು. ಏಪ್ರಿಲ್ ೧೫ ರಿಂದ ಮೇ ೧೦ ರವರೆಗೆ ಶ್ರೀ ಹೆಚ್. ಹೊಂಬೇಗೌಡರೂ ಮತ್ತು ಮೇ ೧೧ ರಿಂದ ಜೂನ್ ೭ ರವರೆಗೆ ಶ್ರೀ [illegible] ಶ್ರೀನಿವಾಸರಾಯರೂ ರಜಾ ಕಾಲದ ನ್ಯಾಯಾಧೀಶರಾಗಿರುವರು

ಉಪನ್ಯಾಸ

ನಗರದ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಶ್ರೀಮನ್ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ವೇ|| ಪಾ|| ವಿದ್ಯಾಲಂಕಾರ ಶ್ರೀ ಆರ್. ರಾಮಶಾಸ್ತ್ರಿಗಳವರಿಂದ "ಆತ್ಮನ ಸ್ವತಂತ್ರತೆ" ಎಂಬ ವಿಷಯವಾಗಿ ಉಪನ್ಯಾಸವು ಏರ್ಪಾಡಾಗಿದೆ

ಕಳ್ಳತನಕ್ಕಾಗಿ ಕಠಿಣ ಶಿಕ್ಷೆ

ನಗರದ ನವಜ್ಯೋತಿ ಸ್ಟುಡಿಯೋವಿಗೆ ಕಿಟಕಿಯೊಂದರಿಂದ ಕಳೆದ ೧೭ನೇ ತಾರೀಕು ನುಗ್ಗಿ ೧೫ ರೀಲುಗಳನ್ನು ಕದಿಯುತ್ತಿದ್ದಾಗ ಸಿಕ್ಕಿಬಿದ್ದ ಅಂತೋಣಿ ಎಂಬ ಕಳ್ಳನ ಮೇಲೆ ಲಕ್ಷ್ಮೀಪುರಂ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರದ ಪ್ರಥಮ ನ್ಯಾಯಾಧೀಶರು ಅಪರಾಧಿಗೆ ೩ ತಿಂಗಳ ಕಠಿಣ ಸಜವನ್ನು ವಿಧಿಸಿದರು

ಸೈಪ್ರಸ್ ನಾಯಕ ಮಕಾರಿಯೋಸ್‌ರವರ ಖುಲಾಸೆ

ಅವರು ಸೈಪ್ರಸ್ಸನ್ನು ಪ್ರವೇಶಿಸಲು ನಿಷೇಧ

ಸೈಪ್ರಸ್ಸಿನಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಚಳುವಳಿ ಸಂದರ್ಭದಲ್ಲಿ ಪಿತೂರಿ ನಡೆಸಿದರೆಂಬ ಕಾರಣಕ್ಕಾಗಿ ಗಡೀಪಾರು ಮಾಡಿ ಬಂಧಿಸಲ್ಪಟ್ಟಿದ್ದ ಆರ್ಚ್ ಬಿಷಪ್ ಮಕಾರಿಯೋಸ್ ಮತ್ತು ಅವರ ಮೂವರು ಅನುಯಾಯಿಗಳನ್ನು ನೆನ್ನೆ ಬಂಧ ವಿಮೋಚನೆ ಮಾಡಿ ಬ್ರಿಟಿಷ್ ಸರ್ಕಾರವು ಆಜ್ಞೆ ಮಾಡಿದೆ ಆದರೆ ಅವರುಗಳು ಸೈಪ್ರಸ್ಸನ್ನು ಈಗಿನ ಸನ್ನಿವೇಶದಲ್ಲಿ ಪ್ರವೇಶಿಸಲು ಅವಕಾಶವಿಲ್ಲ. ಸೈಪ್ರಸ್ಸಿನ ಮೇಲೆ ವಿಧಿಸಲಾಗಿರುವ ಪಹರಾ ಪರಿಸ್ಥಿತಿಯನ್ನು ಸಧ್ಯದಲ್ಲೇ ರದ್ದುಗೊಳಿಸುವುದಿಲ್ಲವೆಂದು ಹೇಳಲಾಗಿದೆ.

ಲೋವರ್ ಸೆಕೆಂಡರಿ ಪರೀಕ್ಷೆ ಇಲ್ಲ

ಬೆಂಗಳೂರು ೨೮

ವಿದ್ಯಾ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಮೊನ್ನೆ ವಿಧಾನ ಪರಿಷತ್ತಿನಲ್ಲಿ ಮಾತನಾಡುತ್ತಾ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ನಡೆಸುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿಲ್ಲವೆಂದು ತಿಳಿಸಿದರು

ನಾಯಕತ್ವದ ವಿಚಾರದಲ್ಲಿ ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೨೮

ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ಸ್ಪರ್ಧಿಸುವ ವಿಷಯವನ್ನು ಪತ್ರಿಕಾ ಪ್ರತಿನಿಧಿಗಳು ನೆನ್ನೆ ಪ್ರಸ್ತಾಪಿಸಿದಾಗ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ರೀತಿ ನುಡಿದರು- ಇದು ಪಕ್ಷದ ಸದಸ್ಯರಿಗೆ ಸೇರಿದ ವಿಷಯ; ನಾನೇ ಮುಂದುವರಿಯುವಂತೆ ಅವರು ಹೇಳಿದರೆ ಮುಂದುವರಿಯುತ್ತೇನೆ; ಬೇರೆ ಸ್ಥಾನದಿಂದ ಸೇವೆ ಸಲ್ಲಿಸುವಂತೆ ಹೇಳಿದರೆ ಹಾಗೇ ಮಾಡುತ್ತೇನೆ; ಸುಮ್ಮನೆ ನಿಂತು ನೋಡುವಂತೆ ಹೇಳಿದರೆ ಅದಕ್ಕೂ ಒಪ್ಪುತ್ತೇನೆ

ಪ್ರಶ್ನೆ ಪತ್ರಿಕೆಗಳು ಮಾಯವಾಗಿ ಬಂಗಾಳದಲ್ಲಿ ಪರೀಕ್ಷೆ ಮುಂದಕ್ಕೆ

ಪಶ್ಚಿಮ ಬಂಗಾಳದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಎಲ್ಲಾ ವಿಭಾಗದ ಪ್ರಶ್ನೆ ಪತ್ರಿಕೆಗಳಿದ್ದ ಒಂದು ಪಾರ್ಸಲ್ ಕಳುವಾದ ಪ್ರಯುಕ್ತ ಇದೇ ಏಪ್ರಿಲ್ ೪ನೇ ತಾರೀಕಿನಿಂದ ಆರಂಭವಾಗಲಿದ್ದ ಪರೀಕ್ಷೆಗಳನ್ನು ಮುಂದಕ್ಕೆ ಹಾಕಲಾಯಿತೆಂದು ವರದಿಯಾಗಿದೆ. ಪಾರ್ಸಲ್ ಹೇಗೆ ಮಾಯವಾಯಿತೆಂಬುದು ಇನ್ನೂ ಗೊತ್ತಾಗಿಲ್ಲ

ಸರ್ಕಾರಿ ಕೈಗಾರಿಕೋದ್ಯಮಗಳ ಕಾರ್ಮಿಕರ ವೇತನದ ಸಮಿತಿ ವರದಿ

ಸಂಸ್ಥಾನದ ನಾನಾ ಕೈಗಾರಿಕಾ ಸಂಸ್ಥೆಗಳ ಉದ್ಯೋಗಿಗಳ ಸಂಬಳ ಸಾರಿಗೆಗಳನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆ ನಡೆಸಿ ಸಲಹೆಯನ್ನೀಯಲು ನೇಮಿಸಲಾಗಿದ್ದ ಸಮಿತಿಯವರು ಒಂದು ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಂದೂ ಅದನ್ನು ಪರಿಶೀಲಿಸಲಾಗುತ್ತಿದೆಯೆಂದೂ ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ವಿಧಾನ ಸಭೆಯಲ್ಲಿ ತಿಳಿಸಿದರು.

○ತೆಂಕಾಸಿಯ ಬಳಿ ವಡಗಕ್ಕೆ ಎಂಬ ಹಳ್ಳಿಯ ಬಾವಿಯೊಂದರ ನೀರನ್ನು ಕುಡಿದ ಕಾರಣ ೫೦ ಮಂದಿಗೆ ವಾಂತಿಯುಂಟಾಗಿ ಅಸ್ವಸ್ಥತೆಯಾಯಿತೆಂದೂ, ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿದನಂತರ ಅವರುಗಳು ಸ್ವಲ್ಪ ಗುಣಮುಖರಾಗುತ್ತಿರುವರೆಂದೂ ವರದಿಯಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದಿಲ್ರುಬಾ ಮತ್ತು ಸೆಲ್ಲೊ. ೭-೧೫ ಮತ್ತು ೮-೧೫ ಸಂಧ್ಯಾ ಚಕ್ರವರ್ತಿ-ದೇವರ ನಾಮ ೭-೩೦ ಬಿಸ್ಮಿಲ್ಲಾ ಮತ್ತು ಪಾರ್ಟಿ-ಶಹನಾಯ್ ಮಧ್ಯಾಹ್ನ ೧೨ ಸಂಧ್ಯಾ ಚಕ್ರವರ್ತಿ-ಗಾಯನ ೧೨-೩೦ ಸುಗಮ-ಸಂಗೀತ. ೧೨-೪೫ ಬಾಲ ಜಗತ್. ೧-೫೦ ದಿಲ್ರುಬಾ ಮತ್ತು ಸೆಲ್ಲೊ, ಸಂಜೆ ೫-೩೦ ಎಸ್. ರಾಮಚಂದ್ರರಾವ್ ಗಾಯನ. ೬-೧೫ ವಿರಾಮ ಸಂಗೀತ. ೬-೩೦ ವಚನ ಗಾನ. ೬-೪೦ ಗ್ರಾಮಸ್ಥರಿಗಾಗಿ. ೭-೩೦ ಪ್ರಪಂಚ ವಾರ್ತಾಸಮೀಕ್ಷೆ, ೮ ಎಸ್. ರಾಮಚಂದ್ರರಾವ್- ಪುರಂದರ ದಾಸರ ಕೀರ್ತನೆಗಳು ೮-೩೦ ರೇಡಿಯೋ ನ್ಯೂಸ್ ರೀಲ್. ೯-೫೦ ಪ್ರಸಾರ ಗೀತೆಗಳು ದೆಹಲಿ ರಿಲೇ ೯-೧೫ ಕಥನಿಕ. ೯-೩೦ ಅಖಿಲ ಭಾರತ ಸಂಗೀತ ಕಾರ್ಯಕ್ರಮ- ದೆಹಲಿ ರಿಲೇ

ಸಂಸ್ಕೃತ ಪ್ರಸಾರಕ್ಕೆ ೧೨ ಲಕ್ಷ ರೂ; ಕನ್ನಡ ನಿಘಂಟಿಗೆ ೫೦ ಸಾವಿರ

ವಿಧಾನ ಪರಿಷತ್ತಿನಲ್ಲಿ ಕಡಿದಾಳ್ ಮಂಜಪ್ಪನವರ ವಿವರಣೆ

ಬೆಂಗಳೂರು ೨೮

ನೆನ್ನೆ ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಾಲದಲ್ಲಿ ವಿದ್ಯಾ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ ರುಮಾಲೆ ಚನ್ನಬಸವಯ್ಯನವರಿಗೆ ಉತ್ತರವಿತ್ತು, ಕಳೆದ ನಾಲ್ಕು ವರ್ಷಗಳಲ್ಲಿ ಸಂಸ್ಕೃತ ಪ್ರಸಾರಕ್ಕಾಗಿ ೧೨ ಲಕ್ಷ ರೂ. ಗಳಿಗೂ ಮೀರಿಯೂ, ಕಳೆದ ವರ್ಷವೊಂದರಲ್ಲೇ ಸಂಗೀತ ಮತ್ತು ಭಾಷಣಗಳಿಗೆ ೩,೪೧,೩೪೪ ರೂ. ಗಳೂ ವೆಚ್ಚವಾಗಿದೆಯೆಂದು ತಿಳಿಸಿದರು. ಕನ್ನಡ ನಿಘಂಟಿನ ರಚನೆಗೆ ೫೦ ಸಾವಿರ ರೂ, ವಿಶ್ವಕೋಶಕ್ಕಾಗಿ ೮,೯೭೫ ರೂ. ಗಳೂ ಖರ್ಚಾಗಿವೆಯೆಂದು ಹೇಳಿದರು. ಸರ್ಕಾರದವರು ಇನ್ನೂ ೨೫ ಗ್ರಂಥಗಳನ್ನು ೧ ಲಕ್ಷ ರೂ. ಖರ್ಚಿನಲ್ಲಿ ಪ್ರಕಟಿಸಲು ಯೋಚಿಸಿದ್ದಾರೆಂದು ನುಡಿದರು

ವಿಧಾನ ಸೌಧದ ವಿಚಾರಣಾ ಸಮಿತಿಗಾಗಿ ೬೦ ಸಹಸ್ರ ರೂ. ವೆಚ್ಚ

ವಿಧಾನ ಸೌಧದ ವಿಚಾರಣಾ ಸಮಿತಿ ಮತ್ತು ಅದರ ಖರ್ಚಿಗಾಗಿ ಸರ್ಕಾರದವರಿಗೆ ಒಟ್ಟು ೬೦ ಸಾವಿರ ರೂ. ಗಳು ಖರ್ಚಾಗಿರುವುದಾಗಿ ಗೊತ್ತಾಗಿದೆ. ಇದರ ಸಮಿತಿಯ ಅಧ್ಯಕ್ಷರಿಗೆ ತಿಂಗಳಿಗೆ ೨,೫೦೦ ರೂ. ನಂತೆ ೫ ತಿಂಗಳಿಗೆ ೧೨,೫೦೦ ರೂ. ಗಳೂ, ಸಮಿತಿ ಸದಸ್ಯರಿಬ್ಬರಿಗೂ ಒಟ್ಟು ಅವಧಿಗೆ ತಲಾ ೫ ಸಾವಿರದಂತೆ ೧೦ ಸಾವಿರ ರೂ. ಗಳೂ ಮತ್ತು ವರದಿಯನ್ನು ಮುದ್ರಿಸಲು ೯,೬೦೦ ರೂ. ಗಳೂ ವೆಚ್ಚವಾಗಿರುವುವು

ಸಂಸ್ಥಾನದ ಅಕೌಂಟ್ಸ್ ಗುಮಾಸ್ತರ ಶಿಕ್ಷಣ ಶಾಲೆ

ಸಂಸ್ಥಾನ ಸರ್ಕಾರದ ವಿವಿಧ ಇಲಾಖೆಗಳ ಅಕೌಂಟ್ಸ್ ಗುಮಾಸ್ತರಿಗೆ ತರಬೇತು ನೀಡಲು ಶಾಲೆಯೊಂದನ್ನು ಸ್ಥಾಪಿಸಲು ಸರ್ಕಾರದವರು ಯೋಚಿಸುತ್ತಿದ್ದಾರೆಂದು ಸಚಿವ ಮರಿಯಪ್ಪನವರು ವಿಧಾನ ಸಭೆಯಲ್ಲಿ ತಿಳಿಸಿರುವರು

ಹಬ್ಬಕ್ಕೆ ರವೆ, ಸಕ್ಕರೆ
ಇತ್ಯಾದಿ ಬಂದಿವೆ
ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್
ಮೈಸೂರು

ಹಬ್ಬಕ್ಕೆ ಸೀರೆಗಳು

ವಾಯಿಲ್ ಸೀರೆ ಬೆಲೆ	ರೂ. 4-14-0	ಯಿಂದ
ಶಿಫಾನ್ ಸೀರೆಗಳು "	8-8-0	,,
[illegible]	5-4-0	,,

ಹೊಸ ಬಗೆಯ ಬಂದಿವೆ. ಬೆಲೆಗಳೂ ಕಮ್ಮಿ
ಬಾಪೂಸಾರ್ ಕಂಪೆನಿ,
ಸೂರಿಡಿ ರಸ್ತೆ ಮೈಸೂರು

ಅಣು ಅಸ್ತ್ರದ ಪ್ರಯೋಗವನ್ನು ಪ್ರತಿಭಟಿಸಲು ಉಪವಾಸ

ಜಪಾನಿನ ಬಳಿ ಕ್ರಿಸ್ಮಸ್ ದ್ವೀಪಗಳಲ್ಲಿ ಬ್ರಿಟನ್ನು ನಡೆಸಲಿರುವ ಅಣು ಅಸ್ತ್ರದ ಪ್ರಯೋಗವನ್ನು ನಿಲ್ಲಿಸಬೇಕೆಂದು ಒತ್ತಾಯ ಪಡಿಸುವ ಸಲುವಾಗಿ ನಾಲ್ವರು ಜಪಾನೀಯರು ಟೋಕಿಯೋದಲ್ಲಿ ಉಪವಾಸ ಮುಷ್ಕರ ಹೂಡಿರುವರೆಂದು ವರದಿಯಾಗಿದೆ. ಕಳೆದ ಮಹಾ ಯುದ್ಧದಲ್ಲಿ ಹಿರೋಷಿಮಾ ನಗರದ ಮೇಲೆ ಪ್ರಯೋಗಿಸಲಾದ ಅಣು ಬಾಂಬಿನಿಂದ ಇವರು ನಾಲ್ವರೂ ತೊಂದರೆಗೀಡಾಗಿದ್ದರು. ಜಪಾನಿನ ಪ್ರಧಾನಿಯು ಖುದ್ದಾಗಿ ಬ್ರಿಟನ್ನಿಗೆ ನಿಯೋಗ ಹೋಗಿ ಅಣು ಅಸ್ತ್ರ ಪ್ರಯೋಗವನ್ನು ತಡೆಗಟ್ಟಲು ಪ್ರಯತ್ನಿಸಬೇಕೆಂದೂ ಅವರು ಒತ್ತಾಯ ಮಾಡಿರುವರು.

ರಾಮನವಮಿ ಕಾಲದಲ್ಲಿ ರಾಮಾಯಣ ಪಾರಾಯಣದ ಬಗ್ಗೆ ಕಾಮಕೋಟಿ ಪೀಠಾಧೀಶರ ಸೂಚನೆ

ರಾಮನವಮಿಯ ಕಾಲದಲ್ಲಿ ಬರುವ ತಿಂಗಳು ೮ರಿಂದ ಮೇ ೫ನೇ ತಾರೀಖಿನ ವರೆಗೆ ಒಂದು ತಿಂಗಳ ಕಾಲ ರಾಮಾಯಣವನ್ನು ವಿಭೀಷಣನ ಶರಣಾಗತಿಯಿಂದ ರಾಮ ಪಟ್ಟಾಭಿಷೇಕದವರೆಗೆ ಆಸ್ತಿಕರೆಲ್ಲರೂ ದಿನವೂ ಶ್ರವಣ ಮಾಡಬೇಕೆಂದೂ, ಅಲ್ಲದೆ ಇತರರಿಗೂ ಸಹ ಹೇಳಬೇಕೆಂದೂ, ಈ ರೀತಿ ಮಾಡುವವರು ಶ್ರೀ ಮಠಕ್ಕೆ ಬರೆದು ತಿಳಿಸಿದರೆ ಪಠಣದ ಕೊನೆಯ ದಿನ ಅವರಿಗೆ ಫಲಮಂತ್ರಾಕ್ಷತೆಗಳನ್ನು ಕಳುಹಿಸಲಾಗುವುದೆಂದೂ ಕಂಚಿಯ ಕಾಮಕೋಟಿ ಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯ ಸ್ವಾಮಿಗಳವರು ತಿಳಿಸಿದ್ದಾರೆ

ನಾಳಿದ್ದು ನಗರದ ನೀರು ಸರಬರಾಜಿನಲ್ಲಿ ಖೋತಾ

ಇದೇ ಮಾರ್ಚ್ ೩೧ನೇ ತಾರೀಖು ಭಾನುವಾರ ನಗರಕ್ಕೆ ವಿದ್ಯುಚ್ಛಕ್ತಿ ಸರಬರಾಜು ಇಲ್ಲವಾದ ಪ್ರಯುಕ್ತ ಆ ದಿನ ಬೆಳಗ್ಗೆ ೮ ಗಂಟೆಯಿಂದ [illegible] ಗಂಟೆಯವರೆಗೆ ನಗರದಲ್ಲಿ ನೀರು ಸರಬರಾಜು ಇರುವುದಿಲ್ಲವೆಂಬ ಅಂಶವನ್ನು ಸಾರ್ವಜನಿಕರಿಗೂ ಈ ಮೂಲಕ ತಿಳಿಯಪಡಿಸಿರುತ್ತೆ.

ಶ್ರೀ ಕನ್ನಿಕಾಪರಮೇಶ್ವರೀ
ಕೋ ಆಪರೇಟಿವ್ ಸೊಸೈಟಿ
ಲಿ ಮೈಸೂರು
ಪ್ರಕಟಣೆ

ತಾ|| 1-4-1957ರ ಲಾಗಾಯ್ತು ನಯೆಪೈಸೆ ಆಧಾರದ ಮೇಲೆ ಲೆಕ್ಕಗಳನ್ನಿಡಲು ಮತ್ತು ಲೇವಾದೇವಿಯನ್ನು ನಡೆಸಲು ನಿರ್ಧರಿಸಲಾಗಿದೆ. ಮೆಂಬರುಗಳು, ಡಿಪಾಜಿಟ್ ದಾರರು ಮತ್ತು ಸಾರ್ವಜನಿಕರು ಸಹಕರಿಸಬೇಕಾಗಿ ಕೋರಿದೆ.

ಪಿ. ಗೋಪಾಲಕೃಷ್ಣ ಶೆಟ್ಟಿ
ಅಧ್ಯಕ್ಷರು

Edited, Printed and Published by
A. R. Nagarajan at Sadhvi Press,
D. Subbiah Road, Mysore

ಗೋವಾ ಮತ್ತು ಕಾಶ್ಮೀರದ ಬಗ್ಗೆ ಭಾರತಕ್ಕೆ ಪೋಲೆಂಡಿನ ಬೆಂಬಲ

ಕಾಶ್ಮೀರದಮೇಲೆ ಭಾರತಕ್ಕೆ ಸಂಪೂರ್ಣವಾದ ಹಕ್ಕಿದೆಯೆಂದೂ ಮತ್ತು ಗೋವಾ ಸ್ವಾಸ್ಥ್ಯವು ಭಾರತಕ್ಕೆ ಸೇರಬೇಕೆಂದೂ ತಾವು ಭಾವಿಸುವುದಾಗಿ ಪೋಲೆಂಡ್ ಪ್ರಧಾನಿ ಜೋಸೆಫ್ ಸಿರಾಂಕಿವಿಕ್ಸ್‌ರವರು ನೆನ್ನೆ ತಿಳಿಸಿದರು.

ಗಾಂಧಿ ವಿಚಾರ ಪರಿಷತ್ತಿನವರ ಶಿಕ್ಷಣ ತರಗತಿಗಳು

ಬರುವ ತಿಂಗಳು ೧೫ ರಿಂದ ೩ ತಿಂಗಳ ಕಾಲ ಸಾಹಿತ್ಯ, ಅಂತರ ರಾಷ್ಟ್ರೀಯ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ವಿಜ್ಞಾನ, ಇತಿಹಾಸ ಮತ್ತು ಗಾಂಧಿ ದರ್ಶನ ಮುಂತಾದ ವಿಷಯಗಳ ಬಗ್ಗೆ ಶ್ರೀಗಳಾದ ಎಂ. ಯಾಮುನಾಚಾರ್ಯ, ಎಸ್. ವಿ. ರಂಗಣ್ಣ, ಮುದ್ದಲಿಂಗಣ್ಣ, ಡಾ|| ಎಂ. ವಿ. ಕೃಷ್ಣರಾವ್ ಮತ್ತು ಶಾಸ್ತ್ರಿ ಶಾಮಣ್ಣನವರಿಂದ ವಿಶೇಷ ತರಗತಿಗಳನ್ನು ನಗರದ ಗಾಂಧಿ ವಿಚಾರ ಪರಿಷತ್ತಿನವರು ಏರ್ಪಡಿಸಲಿರುವರು. ಅವಕ್ಕೆ ೩೦ ಮಂದಿಗೆ ಪ್ರವೇಶವಿದೆ. ವಿವರಗಳನ್ನು ಸಂಚಾಲಕರಾದ ಶ್ರೀ ಕೆ. ಎಸ್. ನಾರಾಯಣಸ್ವಾಮಿಯವರಿಂದ ೬-೪-೫೭ ರೊಳಗೆ ಪಡೆಯಬಹುದು

○ನಗರದ ಅಠಾರಾ ಕಛೇರಿ ಬಳಿ ವ್ಯವಸಾಯದ ಡಿಪೋಮುಂದೆ ನೆನ್ನೆ ಮಧ್ಯರಾತ್ರಿಯಲ್ಲಿ ಅನುಮಾನಾಸ್ಪದವಾಗಿ, ಬೀಗಮುರಿಯುವ ಉಪಕರಣಗಳೊಂದಿಗೆ ತಿರುಗಾಡುತ್ತಿದ್ದ ರಾಮ ಎಂಬುವನನ್ನು ಲಕ್ಷ್ಮೀಪುರಂ ಪೋಲೀಸರು ದಸ್ತಗಿರಿ ಮಾಡಿರುವರು.

SREE GANESH
TALKIES
Festival Special Attractoin
Gala Release on 30-3 57
ROCK AROUND THE CLOCK

ಪ್ರಣಯದ ಪರಿಣಾಮವಾಗಿ ತರುಣತರುಣಿಯರ ದುರಂ

ಬೊಂಬಾಯಿಯ ಮಲಬಾರ್ ಹಿಲ್ ಪ್ರ ದಲ್ಲಿ ನೆನ್ನೆ ಸಂಜೆ ಒಬ್ಬ ತರುಣಿಯು ತಾಯಿ ಮತ್ತು ಮಗನೊಡನೆ ಮಾತ ಕುಳಿತಿದ್ದಾಗ ಒಬ್ಬ ಯುವಕನು ಅಲ್ಲಿಗೆ ಅವಳೊಡನೆ ವಿವಾದ ನಡೆಸಿದನೆಂದೂ, ಅನ ವಿರಸವುಂಟಾಗಿ ಉದ್ರೇಕಗೊಂಡು ಅವನು ಯನ್ನು ಗುಂಡಿನಿಂದ ಹೊಡೆದು ಸ್ವಲ್ಪದೂ ತಾನೂ ಹೊಡೆದುಕೊಂಡು ಮೃತನಾದನೆಂ ರದಿಯಾಗಿದೆ. ಆಸ್ಪತ್ರೆಗೆ ಕೊಂಡೊಯ್ಯುವ ಯಲ್ಲಿ ಆ ತರುಣಿಯೂ ಮೃತಳು. ಆಕೆಯು ವಾಹ ವಿಚ್ಛೇದನ ಹೊಂದಿದ್ದು, ಮೃತ ರುಣನಿಗೂ, ಅವಳಿಗೂ ಅನುರಾಗ ಬೆಳೆದಿ ಹೇಳಲಾಗಿದೆ.

ಸಿಟಿ ಮುನಿಸಿಪಲ್ ಆಫೀಸು, ಮೈಸೂ
ತಾ|| 27-3-1957
R. 8 S. 87/56-57

ನೋಟಿಫಿಕೇಷ

ಮೈಸೂರು ಸಿಟಿ ದೇವರಾಜ ಮಾರ್ ಪಶ್ಚಿಮ ಭಾಗದಲ್ಲಿ ಆನೆಕಾರೋಟ್ ಮುಂಭಾಗದಲ್ಲಿ ಹೊಸದಾಗಿ ಕಟ್ಟಿ 177/1 ನೇ ನಂಬರ್ ಅಂಗಡಿ ಮಳಿಗೆ 57-58 ನೇ ಸಾಲಿಗೆ ಮಾಹೆಯಾನ ಬಾಡಿ ಪಡೆಯುವ ಹಕ್ಕನ್ನು ತಾ|| 3-4-195 ಬುಧವಾರ ದಿವ 10 ಘಂಟೆ ಯಿತು ಸ್ಥಳದ ಬಳಿ ಬಹಿರಂಗವಾಗಿ ಹರಾ ಮೂಲಕ ವಿಲೆ ಪಡಿಸಲಾಗುತ್ತೆ. ವಿವರಗ ಮುನಿಸಿಪಲ್ ಆಫೀಸಿನಲ್ಲಿ ಆಫೀಸು ವೇಳೆ ತಿಳಿಯಬಹುದು.

ಕೆ. ಹೆಚ್. ಖಂಡೇರಾವ್,
ರೆವಿನ್ಯೂ ಆಫೀಸರ್,
ಸಿಟಿ ಮುನಿಸಿಪಾಲಿಟಿ, ಮೈಸೂ

JOTHI ELECTRIC LAUNDRY
NAZARBAD, MYSORE
Central Office :— NEW STATUE SQUARE
GRAND REDUCTION IN DRY CLEANING RATES
Woollen Coats Rs. 1-8-0 per piece
Woollen Pants Re. 1-0-0 per piece
Silk Sarees Rs. 1-8-0 per saree
Real Dry cleaning with American Triplex Dry Cleaning Machine
Public Patronage is solicited

ನ್ಯೂ ಆಪೇರಾ ಟಾಕೀಸ್
31-3-57ರಿಂದ ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು.
ಆರ್. ಎನ್. ಆರ್. ಪಿಕ್ಚರ್ಸ್ ರವರ ಕನ್ನಡ ಚಿತ್ರ ಪ್ರೇಮದ ಪುತ್ರಿ
ಪಾತ್ರ:— ಜೂನಿಯರ್ ಶ್ರೀರಂಜನಿ, ಸಂಧ್ಯಾ, ಸೂರ್ಯಕಲಾ, ಆರ್. ನಾಗೇಂದ್ರರಾವ್, ಉದಯಕುಮಾರ್, ಕಲ್ಯಾಣಕುಮಾರ್, ರಾಜನಾಲ ಮುಂತಾದವರು

5 ಜೊತೆ ಭಾರಿ ಕುಸ್ತಿಗಳು
31-3-57 ನೇ ಭಾನುವಾರ, ಸಂಜೆ 4 ಘಂಟೆಗೆ ಮೈಸೂರು ಎಗ್ಸಿಬಿಷನ್ ಆವರಣದಲ್ಲಿ



ಮೈಸೂರು ಭೂತಪ್ಪನವರ ಗರಡಿ ಸುದರ್ಶನ್ ಪಟ್ಟ
ಚೋರಾಫಿಟ್ ಪೈ|| ಕೂರಿಸ್ವಾಮಿ Vs. ಬೆಂಗಳೂರು ಸಿಟಿ
ನಾಟಿಸ್ ಪೋರ್ಟ್ ಜಹಾರ್ ಖುರ್ಷಿ ಗರಡಿ ಪೈ||
ಫೋಟಿಸಾಬ್ ಖುರ್ಷಿ
ಪೈ|| ಶ್ರೀಕಂಠಪ್ಪ Vs ಪೈ|| ಜೈಪ್ರಕಾಶ್ ನಾಗಣ್ಣ
ಪೈ|| ಅಪ್ಪಯ್ಯ Vs ಪೈ|| ನಂಜಾ
ಪೈ|| ಸರ್ದಾರ್ Vs ಪೈ|| ಚಿಕ್ಕರ್
ಪೈ|| ಮರಿಯಪ್ಪ Vs ಪೈ|| ನಂಜುಂಡರಾಮು ಉಗ್ರ ಪಟು
ಟಿಕೆಟು ದರಗಳು : 1 8 0, 1 0 0, 0 8 0



ಒಲಿಂಪಿಯಾ ★ 29-3-57 ರಿಂದ ಅಮೋಘ ಪ್ರಾರಂಭ
ಪುಕಾರ್, ಸಿಕಂದರ್, ಪೃಥ್ವಿವಲ್ಲಭ್-
ಇಂತಹ ಅತ್ಯುತ್ತಮ ಚಿತ್ರಗಳನ್ನು ನೀಡಿದ, ಮಿನರ್ವಾ ಮೂವಿಟೋನ್ ರವರ ಹಿಂದಿ ಚಿತ್ರ
ಸೊಹ್ರಾಬ್ ಮೋದಿ, ಮಧುಬಾಲ, ಉಲ್ಲಾಸ್,
ಪ್ರದೀಪ್ ಕುಮಾರ್, ಪಾತ್ರವಹಿಸಿರುವ ★ ರಾಜಹಟ್
ನಿರ್ದೇಶನ : ಸೊಹ್ರಾಬ್ ಮೋದಿ — ಸಂಗೀತ : ಶಂಕರ್ ಮತ್ತು ಜೈಕಿಷನ್

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
28-3-57 ರಿಂದ ಅಮೋಘ ಪ್ರಾರಂಭ
[illegible] ರವರ
[illegible] ಚಿತ್ರ ★ ಮಂತ್ರವಾದಿ
ಪಾತ್ರ — ಪ್ರೇಂ ನಜೀರ್, ಕುಮಾರಿ ಮುಂತಾದವರು

ಲಕ್ಷ್ಮಿ ★ 29-3-57 ರಿಂದ ಅಮೋಘ ಪ್ರದರ್ಶನಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು
ಶ್ರೀಶಕ್ತಿ ಫಿಲ್ಮ್ಸ್‌ರವರ, " ಗೇವಾ ಕಲರ್ " ದೃಶ್ಯಗಳಿಂದ ಕೂಡಿದ, ತಮಿಳು ಚಿತ್ರ
[illegible] ನಾಗೇಶ್ವರರಾವ್, ಅಂಜಲಿ
[illegible] ಎಸ್. ವಿ. ರಂಗರಾವ್ ಟಿ ಎಸ್ ಬಾಲಯ್ಯ [illegible]
[illegible], ತಂಗವೇಲು ಮುಂತಾದವರು ★ ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ ★

ಟೆಲಿಫೋನ್ ನಂ. 192

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ಲಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
•
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ,
ಸಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀ [illegible] ರೋಡ್,
ಬೆಂಗಳೂರು-2

ಪುಟ : ೧೫] SADHVI : SATURDAY 30—3—1957 ಮೈಸೂರು : ಶನಿವಾರ ೩೦—೩—೧೯೫೭ : [ಸಂಚಿಕೆ : ೨೪೮

ಒರಿಸ್ಸದಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ರಚನೆ ಸಂಭವ

ಬೈಸಿಕಲ್ ಮೇಲಿನ ತೆರಿಗೆ ರದ್ದಾಗುವುದಿಲ್ಲ

ಪೌರಸಭಾಧಿವೇಶನದಲ್ಲಿ ನಿರ್ಣಯ

ಮೈಸೂರು ೩೦

ನೆನ್ನೆ ಪುರಸಭೆಯ ಸಾಮಾನ್ಯ ಅಧಿವೇಶನವು ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ಶ್ರೀ ಗೋವಿಂದಯ್ಯನವರು ಮಾತನಾಡಿ ಕೇಂದ್ರ ಸರ್ಕಾರದವರು ಆಹಾರ ಧಾನ್ಯಗಳನ್ನು ಸುಲಭ ಬೆಲೆಯಲ್ಲಿ ಮಾರಾಟ ಮಾಡಲು ನಿರ್ಧರಿಸಿದ್ದರೂ, ಇಲ್ಲಿನ ಸ್ಥಳೀಯ ಸಂಗ್ರಹಾಧಿಕಾರಿಗಳ ವರ್ತನೆಯಿಂದ ಜನರಿಗೆ ತೊಂದರೆಯಾಗಿರುವುದರಿಂದ ಅದನ್ನು ನಿವಾರಿಸಲು ಕೇಂದ್ರವನ್ನು ಪ್ರಾರ್ಥಿಸುವಂತೆ ಅಧ್ಯಕ್ಷರನ್ನು ಕೋರಿದರು.

ನಗರದಲ್ಲಿ ಹೆಚ್ಚಿರುವ ಸೊಳ್ಳೆ ಮತ್ತು ಹಗಲು ಕೃತ ಕಾಟವನ್ನು ತಪ್ಪಿಸಬೇಕೆಂದು ಡಾ|| ಬಿ ದಾಸರು ಸೂಚಿಸಿದರು. ಶ್ರೀ ಚೌಡಯ್ಯನವರು ನಗರದಲ್ಲಿ ಹೆಚ್ಚುತ್ತಿರುವ ವೇಶ್ಯೆಯರ ಕಾಟವನ್ನು ಮತ್ತು ಶ್ರೀ ಸಿ ಎಲ್ ನಾರಾಯಣರಾಯರು ಜೂಜಾಟವನ್ನೂ ತಪ್ಪಿಸಬೇಕೆಂದು ಕೋರಿದರು

ಸಭೆಯಲ್ಲಿ ಅಹವಾಲುಗಳ ತೀರ್ಮಾನದಲ್ಲಿ ಅಧಿಕಾರಿಗಳ ವರ್ತನೆಯನ್ನು ಹಲವು ಸದಸ್ಯರು ಟೀಕಿಸಿದರು. ಕಂದಾಯದ ವಸೂಲಿಯಲ್ಲಿ ಲೋಪಗಳನ್ನು ಸೂಚಿಸಲಾಯಿತು.

ಲಷ್ಕರ್ ಮತ್ತು ಮಂಡಿ ಮೊಹಲ್ಲಾಗಳಲ್ಲಿ ಜನರ ಅನುಕೂಲಕ್ಕಾಗಿ ಒಂದು ಮಾಧ್ಯಮಿಕ ಶಾಲೆಯನ್ನು ತೆರೆಯಬೇಕೆಂದು ಕೋರುವ ಹೆಚ್ ಎಲ್. ಮುದ್ದಯ್ಯನವರ ನಿರ್ಣಯವು ಅನುಮೋದಕರಿಲ್ಲದೆ ಪರಿಶೀಲನೆಗೆ ತೆಗೆದುಕೊಳ್ಳಲಾಗಲಿಲ್ಲ. ಇದನ್ನು ಪ್ರತಿಭಟಿಸಿ ಅವರು ಸಭಾತ್ಯಾಗ ಮಾಡಿ ಸ್ವಲ್ಪ ಹೊತ್ತಿನನಂತರ ಮರಳಿದರು.

ಸುಮಾರು ೪೯,೩೦೦ ರೂ. ಗಳ ಖರ್ಚಿನಲ್ಲಿ ನಗರ ಸ್ವಾಸ್ಥ್ಯ ಚೌಕದಿಂದ ಪುರಸಭಾ ಕಛೇರಿವರೆಗೆ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಹಾಕಿಸಲೊಪ್ಪಿ ಇದಕ್ಕೆ ಸರ್ಕಾರ ಮತ್ತು ನಗರಾಭಿವೃದ್ಧಿ ಸಮಿತಿಗಳು ಸ್ವಲ್ಪ ಖರ್ಚನ್ನು ವಹಿಸಿಕೊಳ್ಳಬೇಕೆಂದು ಕೋರಲು ನಿರ್ಧರಿಸಲಾಯಿತು.

ಸಭಾ ನೌಕರರಿಗೆ ತಲಾ ೫ ರೂ ಗೆ ವಿಚಾರಕ್ಕೆ, ೨೫.ಗೆ ೩| ಸೇರಿನಂತೆ ಸೂಯೆಜ್ ಘಾರದಲ್ಲಿ ಬೆಳೆದ ರಾಗಿಯನ್ನು ಸರಬರಾಜು ಮಾಡಲು ಒಪ್ಪಲಾಯಿತು.

ಪೌರಸಭೆಯ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಸೈಕಲ್ ಮೇಲಿನ ತೆರಿಗೆಯನ್ನು ಇಳಿಸಲು ಸಾಧ್ಯವಿಲ್ಲವೆಂದು ಆಡಳಿತ ಸಮಿತಿಯು ಮಾಡಿದ ಸಲಹೆಯನ್ನು ಪರಿಶೀಲಿಸಿ ಸ್ವಲ್ಪ ಚರ್ಚೆಯ ನಂತರ ಒಪ್ಪಲಾಯಿತು.

ವೆಂಪುರವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಮೈಸೂರು ೩೦

ಬರುವ ಮೇ ತಿಂಗಳಲ್ಲಿ ಧಾರವಾಡದಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಡಾ|| ಕೆ. ವಿ. ಪುಟ್ಟಪ್ಪನವರು ವಹಿಸಲೊಪ್ಪಿರುವರು

ಸಂಸ್ಥಾನದ ನಾಯಕತ್ವದ ಬಗ್ಗೆ ಪರಸ್ಪರ ಸಮಾಲೋಚನೆ ಅಗತ್ಯ

ಮಾಜಿ ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಬೆಂಗಳೂರು, ೩೦

ಸಂಸ್ಥಾನದ ನೂತನ ನಾಯಕತ್ವದ ವಿಚಾರವನ್ನು ಕುರಿತು ನೆನ್ನೆ ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಪತ್ರಿಕಾ ಹೇಳಿಕೆಯಲ್ಲಿ ನಾಯಕತ್ವದ ಬಗ್ಗೆ ಪರಸ್ಪರ ಸಮಾಲೋಚನೆಯಿಂದ ನಿರ್ಧರಿಸುವ ಅಗತ್ಯವೆಂದು ತಿಳಿಸಿದ್ದಾರೆ. [illegible] ಇವರಿಗೆ [illegible] ಮತ್ತು ಸಾಮರ್ಥ್ಯಗಳನ್ನು ಸಾಧಿಸಬೇಕೆಂದು [illegible] ಅಭಿಪ್ರಾಯಪಟ್ಟರು. ನಾಯಕತ್ವಕ್ಕೆ ಆರಿಸಿದ ಒಟ್ಟು ಗಳಿಸುವ [illegible] ವರಿಂದ ಕಾಂಗ್ರೆಸ್ ಪಕ್ಷಕ್ಕಾಗಲಿ, ದೇಶಕ್ಕಾಗಲಿ ಒಳ್ಳೆಯದಾಗುವುದಿಲ್ಲವೆಂದು ಅವರು ಸೂಚಿಸಿದರು. ನಾಯಕತ್ವದ ವಿಚಾರವನ್ನು ಸದಸ್ಯರ ಸಹಜ ಸಮಾಲೋಚನೆಗೆ ಬಿಟ್ಟರೆ [illegible] ಮುಂದಾಗಿಯೂ ಅವರು ನುಡಿದರು. ತಾನೇ ದೇಶದ ನಾಯಕರಾಗಬೇಕೆಂದು ತನಗೆ ನೂರಾರು ಮಂದಿ ಪತ್ರ ಬರೆದಿರುವರೆಂದೂ, ಹಲವು ಸದಸ್ಯರೂ ಸಹ ಅದೇ ಅಭಿಪ್ರಾಯವನ್ನು ತಮ್ಮಲ್ಲಿ ಹೇಳಿರುವುದಾಗಿಯೂ ಅವರು ನುಡಿದರು. ಈ ವಿಚಾರವನ್ನು ಕುರಿತು ತಮ್ಮಲ್ಲಿ ಒಡನೆ ಮುಖಂಡರೊಡನೆ ಸಮಾಲೋಚಿಸುತ್ತಿರುವುದಾಗಿ ಅವರು ಹೇಳಿದರು

ಕಾಂಗ್ರೆಸ್ ಪಕ್ಷದ ನಾಯಕರಾಗಿ ಪುನಃ ನೆಹರೂರವರ ಆಯ್ಕೆ

ಹೊಸ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ ಪ್ರಧಾನಿ ನೆಹರೂರವರು ನೆನ್ನೆ ಸರ್ವಾನುಮತದಿಂದ ಆರಿಸಲ್ಪಟ್ಟರು. ಅವರೇ ಮುಂದಿನ ಐದು ವರ್ಷಗಳವರೆಗೂ ಪ್ರಧಾನಿಯಾಗಿರುವರು

ನೆಹರೂರವರು ಮಾತನಾಡಿ, ತಮ್ಮನ್ನು ಪುನಃ ನಾಯಕರನ್ನಾಗಿ ಆರಿಸಿದ ಬಗ್ಗೆ ವಂದನೆಯನ್ನು ಸಲ್ಲಿಸಿದರು. ಅವರೆ ಉನ್ನತ ಜವಾಬ್ದಾರಿ ಸ್ಥಾನಗಳಿಗೆ ಒಂದೇ ಸಮನೆ ಒಬ್ಬನೇ ಮನುಷ್ಯನನ್ನು ಚುನಾಯಿಸುವ ಕೆಟ್ಟ ಪದ್ಧತಿಯ ಬಗ್ಗೆ ಸದಸ್ಯರು ಎಚ್ಚರಿಕೆ ವಹಿಸಬೇಕೆಂದು ಸೂಚಿಸಿದರು. ವಿಶೇಷ ಸಂದರ್ಭಗಳನ್ನು ಬಿಟ್ಟರೆ ಬೇರೆ ಕಾಲಗಳಲ್ಲಿ ಹಾಗೆಮಾಡಬಾರದೆಂದು ಹೇಳಿದರು

ಕಳೆದ ೧೦ ವರ್ಷಗಳಿಂದಲೂ ತಾವು ಪ್ರಧಾನಿಯಾಗಿರುವುದಾಗಿಯೂ, ತಮಗೆ ಹಿಂದಿನಂತೆ ಇಷ್ಟು ದೀರ್ಘ ಕಾಲ ಪ್ರಧಾನಿಯಾಗಿರುವವರು ತಾವೊಬ್ಬರೇ ಎಂದೂ ನೆಹರೂರವರು ಹೇಳಿ, ತಾವು ಭೇಟಿ ಕೊಟ್ಟ ರಾಜ್ಯಗಳ ಅಧ್ಯಕ್ಷರಾಗಲಿ, ಪ್ರಧಾನಿಯವರಾಗಲಿ ಬದಲಾಗುತ್ತಿರುವ ಅಂಶವನ್ನು ತಿಳಿಸಿದರು. ಹೊಸ ಅಧಿಕಾರಕ್ಕೆ ಹೊಸಬರು ಬರುವುದರಿಂದ ಕೆಲಸಕ್ಕೆ ಸ್ಫೂರ್ತಿ ಹೆಚ್ಚುವುದೆಂದೂ, ಪ್ರಜಾ ಪ್ರಭುತ್ವವು ದೃಢಮೂಲವಾಗಬೇಕಾದರೆ ವ್ಯಕ್ತಿ ಪ್ರಾಧಾನ್ಯತೆ ತಪ್ಪಬೇಕೆಂದೂ ನೆಹರೂರವರು ಹೇಳಿದರು

ಒರಿಸ್ಸಾದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ

ಮುಖ್ಯ ಮಂತ್ರಿ ಮಹತಾಬರ ಘೋಷಣೆ

ಒರಿಸ್ಸಾ ಸಂಸ್ಥಾನದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲವನ್ನು ಸ್ಥಾಪಿಸುವ ಬಗ್ಗೆ ಹಳೆಯ ಶಾಸನ ಸಭೆಯ ಬಹುಮಂದಿ ಸದಸ್ಯರ ಬೆಂಬಲವು ತಮ್ಮ ಪಕ್ಷಕ್ಕೆ ಇರುವುದೆಂದು ಒರಿಸ್ಸಾ ಮುಖ್ಯ ಮಂತ್ರಿ ಹರೇಕೃಷ್ಣ ಮಹತಾಬರವರು ನೆನ್ನೆ ತಿಳಿಸಿದರು. ಅವರನ್ನು ಅಲ್ಲಿನ ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಪುನಃ ನೆನ್ನೆ ಆರಿಸಲಾಯಿತು. ೧೪೦ ಮಂದಿ ಸದಸ್ಯರಿರುವ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ೫೬ ಜನರು ಇರುವರು. ತಮ್ಮ ಪಕ್ಷದ ಬಲವು ಈಗ ೭೪ಕ್ಕೆ ಏರಿರುವುದೆಂದೂ, ಇತರ ೧೧ ಮಂದಿ ತಮ್ಮ ಮಂತ್ರಿಮಂಡಲಕ್ಕೆ ಬೆಂಬಲ ನೀಡಲಿರುವುದಾಗಿಯೂ ಮಹತಾಬರು ಹೇಳಿದರು

ಪೌರಸಭಾ ಕಛೇರಿ ಮುಂದೆ ಗ್ಯಾಂಗ್‌ಮೆನ್ನುಗಳ ಪ್ರದರ್ಶನ

ನಗರದ ಪೌರಸಭೆಯು ಗ್ಯಾಂಗ್‌ಮೆನ್ನುಗಳ ಪೈಕಿ ೩೦ ಜನರನ್ನು ಕೆಲಸದಿಂದ ತೆಗೆದುಹಾಕುವುದಾಗಿ ಪ್ರಕಟನೆಯನ್ನು ಸೂಚಿಸಿ ನೆನ್ನೆ ಪುರಸಭೆಯ ಕಾಂಪೌಂಡಿನಲ್ಲಿ ಸುಮಾರು ೧೦೦ ಮಂದಿ ಗ್ಯಾಂಗ್ ಮೆನ್ನುಗಳು ಭಿತ್ತಿ ಪತ್ರಿಕೆಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನ ನಡೆಸಿದರು. ಪುರಸಭಾ ಸದಸ್ಯರಾದ ಶ್ರೀಗಳು ಎಸ್. ಗೋವಿಂದಯ್ಯ ಮತ್ತು ಜಿ ಎಸ್. ರಾಮಕೃಷ್ಣಯ್ಯನವರು ಅವರುಗಳಿಗೆ ಸಮಾಧಾನ ಹೇಳಿ ವಾಪಸು ಕಳುಹಿಸಿದರು.

ಭರತ ಭಕ್ತಿ ಕಾವ್ಯ ವಾಚನ

ಯುಗಾದಿ ಹಬ್ಬದ ಪ್ರಯುಕ್ತ ನಾಳೆ ಸೋಮವಾರ ಸಂಜೆ ಆರೂವರೆ ಗಂಟೆಗೆ ೩ ಸುಬ್ಬಯ್ಯಾ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ಶ್ರೀಮತಿಗಳಾದ ಬಿ ವಸುಂಧರ ಮತ್ತು ಜಿ ವಸುಧಾರವರುಗಳು "ಭರತ ಭಕ್ತಿ" ಕಾವ್ಯ ವಾಚನವನ್ನು ಮಾಡುವರು. ಸರ್ವರಿಗೂ ಸ್ವಾಗತವಿದೆ.

ಬಿರುದುಬಾವಲಿಗಳ ರದ್ದು

ಕಲೆ ಮತ್ತು ಕುಶಲ ವಿದ್ಯೆಗಳಿಗೆ ವಿಶೇಷ ಬಹುಮಾನ

ಸ್ವಂ ಸು ಫೋ] ಬೆಂಗಳೂರು ೩೦

ಸಾರ್ವಜನಿಕ ಸೇವೆಗಾಗಿ ಕೊಡಲಾಗುತ್ತಿದ್ದ ಬಿರುದುಬಾವಲಿ ಮುಂತಾದ ಪ್ರಶಸ್ತಿಗಳ ಬದಲು ಕಲೆ, ಸಂಸ್ಕೃತಿ ಮತ್ತು ಕುಶಲ ವಿದ್ಯೆಗಳಲ್ಲಿ ಪ್ರಶಸ್ತಿ ಪಡೆದವರಿಗೆ ಪಾರಿತೋಷಕಗಳನ್ನು ಕೊಡಲು ಸರ್ಕಾರದವರು ನಿರ್ಧರಿಸಿರುತ್ತಾರೆ

○ ಪೋಲೆಂಡಿನ ಪ್ರಧಾನಿ ಜೋಸೆಫ್ ಸಿರಾಂಕಿವಿಕ್ಸ್‌ರವರು ಈ ದಿನ [illegible] ಬೊಂಬಾಯಿಗೆ ತೆರಳಿದರು

○ ವ್ಯವಸಾಯಕ್ಕಾಗಿ ಹೆಚ್ಚು ನೆರವನ್ನು ನೀಡಬಲ್ಲ [illegible] ಜಿಲ್ಲಾ ಮತ್ತು ಗ್ರಾಮಾಂತರ ಸಹಕಾರ ಸಂಘಗಳಿಗೆ ೩೦ ಲಕ್ಷ ರೂ ಹೆಚ್ಚಿನ ಬಂಡವಾಳವನ್ನು ಕೊಡಲು ಸರ್ಕಾರದವರು ನಿರ್ಧರಿಸಿರುತ್ತಾರೆ.

ಪೌರಸಭೆಯ ಆಯವ್ಯಯದ ಅಂದಾಜಿನ ಪರಿಶೀಲನೆ

ಆದಾಯ ರೂ. ೭೫,೭೧,೭೧೮

ವೆಚ್ಚ ರೂ. ೭೪,೬೫,೪೦೦

ಮೈಸೂರು ೩೦

ಇಂದು ಬೆಳಗ್ಗೆ ನಡೆದ ಪುರಸಭೆಯ ವಿಶೇಷ ಅಧಿವೇಶನದಲ್ಲಿ ನೂತನ ವರ್ಷದ ಆಯವ್ಯಯವನ್ನು ಮಂಡಿಸಲಾಯಿತು. ಅದರ ಪ್ರಕಾರ ಕಳೆದ ಸಾಲಿನ ಶಿಲ್ಕು ೧,೭೫,೦೧೮ ರೂ ಗಳೂ ಸೇರಿ ಒಟ್ಟು ೭೫,೭೧,೭೧೮ ರೂ ಗಳ ಆದಾಯವೂ, ೭೪,೬೫,೪೦೦ ರೂ ವೆಚ್ಚವೂ ಆಗಿ ೧,೦೬,೩೧೮ ರೂ.ಗಳ ಉಳಿತಾಯವನ್ನು ನಿರೀಕ್ಷಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಮನೆಗಂದಾಯದಿಂದ ೪,೩೨,೭೫೦ ರೂ., ಸ್ಯಾನಿಟರಿ ಸೆಸ್ಸಿನಿಂದ ೯೧,೭೫೨ ರೂ., ಡ್ರೈನೇಜ್ ಸೆಸ್ಸಿನಿಂದ ೨೮,೫೦೮ ರೂ., ಆರೋಗ್ಯ ಸೆಸ್ ವಸೂಲಾತಿಯಿಂದ ೭೫,೦೦೦ ರೂ ಮತ್ತು ವಿದ್ಯಾ ಸೆಸ್ಸಿನಿಂದ ೩೦,೦೦೦ ರೂ. ಹುಟ್ಟುವಳಿ ಬರುವ ನಿರೀಕ್ಷೆಯಿದೆ.

ಒಳಚರಂಡಿ ವ್ಯವಸ್ಥೆ, ರಸ್ತೆ ಟಾರಿಂಗ್, ಬ್ಯಾಂಕ್ ಓವರ್‌ಡ್ರಾಫ್ಟ್, ನೀರು ಸರಬರಾಜು ಅಭಿವೃದ್ಧಿ ಮುಂತಾದುವುಗಳಿಗಾಗಿ ಸರ್ಕಾರದಿಂದ ೭೫,೩೦,೦೦೦ ರೂ ಸಾಲ ಬರಲಿದೆ.

ವೆಚ್ಚದ ಬಾಬಿನಲ್ಲಿ ಬೀದಿ ದೀಪಗಳಿಗೆ ೧,೨೦,೦೦೦ ರೂ , ಮಂಡಿ ಮತ್ತು ಲಷ್ಕರ್‌ನಲ್ಲಿ ಒಳ ಚರಂಡಿಗಾಗಿ ೧,೭೫,೦೦೦ ರೂ , ರಸ್ತೆಗಳಿಗೆ ಸಿಮೆಂಟ್ ಮತ್ತು ಟಾರ್ ಹಾಕಲು ೧,೪೦,೦೦೦ ರೂ , ರಸ್ತೆ ದುರಸ್ತಿಗಾಗಿ ೧,೫೦,೦೦೦ ರೂ ಗಳನ್ನು ತೆಗೆದಿಡಲಾಗುವುದು. ಕ್ರೀಡಾಂಗಣಕ್ಕೆ ೫೩,೦೦೦ ರೂ ಒದಗಿಸಲಾಗುವುದು. ನೀರು ಸರಬರಾಜಿಗೆ ೫ ಲಕ್ಷ ರೂ ವಿನಿಯೋಗವಾಗುವುದು

ಪೌರಸಭಾ ಕಮಿಷನರ್ ಶ್ರೀ ವಿಶ್ವನಾಥ್‌ರವರು ತಮ್ಮ ಟೀಕಾ ಪತ್ರಿಕೆಯಲ್ಲಿ ತೆರಿಗೆ ಬಾಬಿನಲ್ಲಿ ಹಲವಾರು ಬದಲಾವಣೆಗಳನ್ನು ಸೂಚಿಸಿದ್ದರು. ಕಟ್ಟಡಗಳು ಮತ್ತು ನಿವೇಶನ ಕಂದಾಯವನ್ನು ಹೆಚ್ಚಿಸಿ ೭೫,೦೦೦ ರೂ ಅನ್ನು ಹೆಚ್ಚಾಗಿ ಪಡೆಯುವಂತೆ ತಿಳಿಸಿದ್ದರು. ವಿದ್ಯುಚ್ಛಕ್ತಿ ತೆರಿಗೆಯನ್ನು ದ್ವಿಗುಣಗೊಳಿಸುವುದು, ವೃತ್ತಿ ತೆರಿಗೆ ವಿಧಿಸುವುದು, ಆಕ್ಟ್ರಾಯ್ ವಜಾ ಮಾಡಲ್ಪಟ್ಟ ಹಲವು ವಸ್ತುಗಳ ಮೇಲೆ ಪುನಃ ಆ ಸುಂಕವನ್ನು ವಿಧಿಸುವುದು, ಪೆಟ್ರೋಲ್ ತೆರಿಗೆ ಮೇಲೆ ಆಕ್ಟ್ರಾಯ್ ವಿಧಿಸುವುದು ಮುಂತಾದ ಸಲಹೆಗಳನ್ನು ನೀಡಿದ್ದರು

ತೆರಿಗೆ ಬಗ್ಗೆ ಅವರ ಸಲಹೆಯನ್ನು ಆಡಳಿತ ಸಮಿತಿಯು ಅನುಮೋದಿಸಿಲ್ಲ. ವಾಹನ ತೆರಿಗೆಯನ್ನು ತೆಗೆದುಹಾಕಿರುವ ಬಗ್ಗೆ ಪೌರಸಭೆಗೆ ಉಂಟಾಗಿರುವ ನಷ್ಟಕ್ಕೆ ಸರ್ಕಾರವು ಹೆಚ್ಚು ಸಹಾಯ ಕೊಡಬೇಕೆಂದು ಸಮಿತಿಯು ಸೂಚಿಸಿದೆ. ವಿದ್ಯುಚ್ಛಕ್ತಿ ದರವನ್ನು ಪುನಃ ಪರಿಶೀಲನೆ ಮಾಡುವಂತೆ ಸರ್ಕಾರವನ್ನು ಕೋರಲು ಸಮಿತಿಯು ಸಲಹೆ ಮಾಡಿದೆ

ಸಂಸ್ಕೃತಿ ಪ್ರಸಾರಕ್ಕೆ ೧೨ ಲಕ್ಷ ರೂ; ಕನ್ನಡ ನಿಘಂಟಿಗೆ ೫೦ ಸಾವಿರ

ವಿಧಾನ ಪರಿಷತ್ತಿನಲ್ಲಿ ಕಡಿದಾಳ್ ಮಂಜಪ್ಪನವರ ವಿವರಣೆ

ಬೆಂಗಳೂರು ೨೮

ನೆನ್ನೆ ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಾಲದಲ್ಲಿ ವಿದ್ಯಾ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ ರುದ್ರಾಳಿ ಚನ್ನಬಸವಯ್ಯನವರಿಗೆ ಉತ್ತರವಿತ್ತು, ಕಳೆದ ನಾಲ್ಕು ವರ್ಷಗಳಲ್ಲಿ ಸಂಸ್ಕೃತಿ ಪ್ರಸಾರಕ್ಕಾಗಿ ೧೨ ಲಕ್ಷ ರೂ. ಗಳಿಗೂ [illegible], ಕಳೆದ ವರ್ಷವೊಂದರಲ್ಲೇ ಸಂಗೀತ ಮತ್ತು ಭಾಷಣಗಳಿಗೆ ೩,೪೧,೩೪೯ ರೂ. ಗಳೂ ವೆಚ್ಚವಾಗಿದೆಯೆಂದು ತಿಳಿಸಿದರು. ಕನ್ನಡ ನಿಘಂಟಿನ ರಚನೆಗೆ ೫೦ ಸಾವಿರ ರೂ., ವಿಶ್ವಕೋಶಕ್ಕಾಗಿ ೮,[illegible] ರೂ. ಗಳೂ ಖರ್ಚಾಗಿವೆಯೆಂದು ಹೇಳಿದರು. ಸರ್ಕಾರದವರು ಇನ್ನೂ ೩೫ ಗ್ರಂಥಗಳನ್ನು ೧ ಲಕ್ಷ ರೂ. ಖರ್ಚಿನಲ್ಲಿ ಪ್ರಕಟಿಸಲು ಯೋಚಿಸಿದ್ದಾರೆಂದು ನುಡಿದರು.

ವಿಧಾನ ಸೌಧದ ವಿಚಾರಣಾ ಸಮಿತಿಗಾಗಿ ೬೦ ಸಹಸ್ರ ರೂ. ವೆಚ್ಚ

ವಿಧಾನ ಸೌಧದ ವಿಚಾರಣಾ ಸಮಿತಿ ಮತ್ತು ಅದರ ವರದಿಗಾಗಿ ಸರ್ಕಾರದವರಿಗೆ ಒಟ್ಟು ೬೦ ಸಾವಿರ ರೂ. ಗಳು ಖರ್ಚಾಗಿರುವುದಾಗಿ ಗೊತ್ತಾಗಿದೆ. ಈ ವಿಚಾರಣಾ ಸಮಿತಿಯ ಅಧ್ಯಕ್ಷರಿಗೆ ತಿಂಗಳಿಗೆ [illegible] ರೂ. ನಂತೆ ೫ ತಿಂಗಳಿಗೆ [illegible] ರೂ. ಗಳೂ, ಸಮಿತಿ ಸದಸ್ಯರಿಬ್ಬರಿಗೂ ಒಟ್ಟು ಅವಧಿಗೆ ತಲಾ ೫ ಸಾವಿರದಂತೆ ೧೦ ಸಾವಿರ ರೂ. ಗಳೂ ಮತ್ತು ವರದಿಯನ್ನು ಮುದ್ರಿಸಲು [illegible] ರೂ. ಗಳೂ ವೆಚ್ಚವಾಗಿರುವವು

ಸಂಸ್ಥಾನದ ಅಕೌಂಟ್ಸ್ ಗುಮಾಸ್ತರ ಶಿಕ್ಷಣ ಶಾಲೆ

ಸಂಸ್ಥಾನ ಸರ್ಕಾರದ ವಿವಿಧ ಇಲಾಖೆಗಳ ಅಕೌಂಟ್ಸ್ ಗುಮಾಸ್ತರಿಗೆ ತರಬೇತು ನೀಡಲು ಶಿಕ್ಷಣಶಾಲೆಯನ್ನು ಸ್ಥಾಪಿಸಲು ಸರ್ಕಾರದವರ ಯೋಚನೆಯಿದೆಯೆಂದು ಸಚಿವ ಮರಿಯಪ್ಪನವರು ವಿಧಾನ ಸಭೆಯಲ್ಲಿ ತಿಳಿಸಿರುವರು

ಹಬ್ಬಕ್ಕೆ ರವೆ, ಸಕ್ಕರೆ
ಇತ್ಯಾದಿ ಬಂದಿವೆ
ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್
ಮೈಸೂರು

ಹಬ್ಬಕ್ಕೆ ಸೀರೆಗಳು
ವಾಯಿಲ್ ಸೀರೆ ಬೆಲೆ ರೂ. 4-14-0 ಯಿಂದ
ಶಿಫಾನ್ ಸೀರೆಗಳು „ 8-8-0 „
[illegible] 5-4-0 „
ಸ್ಟಾಕ್ ಬಹಳ ಬಂದಿವೆ. ಬೆಲೆಗಳೂ ಕಮ್ಮಿ
ಬಾಪೂಸಾರ್ ಕಂಪೆನಿ,
ನೂರಡಿ ರಸ್ತೆ, ಮೈಸೂರು

ಅಣು ಅಸ್ತ್ರದ ಪ್ರಯೋಗವನ್ನು ಪ್ರತಿಭಟಿಸಲು ಉಪವಾಸ

ಜಪಾನಿನ ಬಳಿ ಕ್ರಿಸ್ಮಸ್ ದ್ವೀಪಗಳಲ್ಲಿ ಬ್ರಿಟನ್ನು ನಡೆಸಲಿರುವ ಅಣು ಅಸ್ತ್ರದ ಪ್ರಯೋಗವನ್ನು ನಿಲ್ಲಿಸಬೇಕೆಂದು ಒತ್ತಾಯ ಪಡಿಸುವ ಸಲುವಾಗಿ ನಾಲ್ವರು ಜಪಾನೀಯರು ಟೋಕಿಯೊದಲ್ಲಿ ಉಪವಾಸ ಮುಷ್ಕರ ಹೂಡಿರುವರೆಂದು ವರದಿಯಾಗಿದೆ. ಕಳೆದ ಮಹಾ ಯುದ್ಧದಲ್ಲಿ ಹಿರೋಷಿಮಾ ನಗರದ ಮೇಲೆ ಪ್ರಯೋಗಿಸಲಾದ ಅಣು ಬಾಂಬಿನಿಂದ ಅವರು ನಾಲ್ವರೂ ತೊಂದರೆಗೀಡಾಗಿದ್ದರು. ಜಪಾನಿನ ಪ್ರಧಾನಿಯು ಖುದ್ದಾಗಿ ಬ್ರಿಟನ್ನಿಗೆ ನಿಯೋಗ ಹೋಗಿ ಅಣು ಅಸ್ತ್ರ ಪ್ರಯೋಗವನ್ನು ತಡೆಗಟ್ಟಲು ಪ್ರಯತ್ನಿಸಬೇಕೆಂದೂ ಅವರು ಒತ್ತಾಯ ಮಾಡಿರುವರು.

ರಾಮನವಮಿ ಕಾಲದಲ್ಲಿ ರಾಮಾಯಣ ಪಾರಾಯಣದ ಬಗ್ಗೆ ಕಾಮಕೋಟಿ ಪೀಠಾಧೀಶರ ಸೂಚನೆ

ರಾಮನವಮಿಯ ಕಾಲದಲ್ಲಿ ಬರುವ ತಿಂಗಳು ೮ರಿಂದ ಮೇ ೫ನೇ ತಾರೀಕಿನ ವರೆಗೆ ಒಂದು ತಿಂಗಳ ಕಾಲ ರಾಮಾಯಣವನ್ನು ವಿಭೀಷಣನ ಶರಣಾಗತಿಯಿಂದ ರಾಮ ಪಟ್ಟಾಭಿಷೇಕದವರೆಗೆ ಆಸ್ತಿಕರೆಲ್ಲರೂ ದಿನವೂ ಪಠಣ ಮಾಡಬೇಕೆಂದೂ, ಅಲ್ಲದೆ ಇತರರಿಗೂ ಹಾಗೆ ಹೇಳಬೇಕೆಂದೂ, ಈ ರೀತಿ ಮಾಡುವವರು ಶ್ರೀ ಮಠಕ್ಕೆ ಬರೆದು ತಿಳಿಸಿದರೆ ಪಠಣದ ಕೊನೆಯ ದಿನ ಅವರಿಗೆ ಫಲಮಂತ್ರಾಕ್ಷತೆಗಳನ್ನು ಕಳುಹಿಸಲಾಗುವುದೆಂದೂ ಕಂಚಿಯ ಕಾಮಕೋಟಿ ಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯ ಸ್ವಾಮಿಗಳವರು ತಿಳಿಸಿದ್ದಾರೆ

ನಾಳಿದ್ದು ನಗರದ ನೀರು ಸರಬರಾಜಿನಲ್ಲಿ ಖೋತಾ

ಇದೇ ಮಾರ್ಚಿ ೩೧ನೇ ತಾರೀಕು ಭಾನುವಾರ ನಗರಕ್ಕೆ ವಿದ್ಯುಚ್ಛಕ್ತಿ ಸರಬರಾಜು ಇಲ್ಲವಾದ ಪ್ರಯುಕ್ತ, ಆ ದಿನ ಬೆಳಿಗ್ಗೆ ೮ ಗಂಟೆಯಿಂದ ೧೧ ಗಂಟೆಯವರೆಗೆ ನಗರದಲ್ಲಿ ನೀರು ಸರಬರಾಜು ಇರುವುದಿಲ್ಲವೆಂಬ ಅಂಶವನ್ನು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಿರುತ್ತೆ.

ಶ್ರೀ ಕನ್ಯಕಾಪರಮೇಶ್ವರೀ ಕೋ ಆಪರೇಟಿವ್ ಸೊಸೈಟಿ ೦ ಮೈಸೂರು

ಪ್ರಕಟಣೆ

ತಾ|| 1-4-1957ರ ಲಾಗಾಯ್ತು [illegible] ಆಧಾರದ ಮೇಲೆ ಲೆಕ್ಕಗಳನ್ನಿಡಲು ಮತ್ತು ಲೇವಾದೇವಿಯನ್ನು ನಡೆಸಲು ನಿರ್ಧರಿಸಲಾಗಿದೆ. ಮೆಂಬರುಗಳು, ಡಿಪಾಜಿಟ್‌ದಾರರು ಮತ್ತು ಸಾರ್ವಜನಿಕರು ಸಹಕರಿಸಬೇಕಾಗಿ ಕೋರಿದೆ.

ಪಿ. ಗೋಪಾಲಕೃಷ್ಣ ಶೆಟ್ಟಿ,
ಅಧ್ಯಕ್ಷರು

Edited, Printed and Published by
A. R. Nagarajan at Sadhvi Press,
D. Subbiah Road, Mysore

ಗೋವಾ ಮತ್ತು ಕಾಶ್ಮೀರದ ಬಗ್ಗೆ ಭಾರತಕ್ಕೆ ಪೋಲೆಂಡಿನ ಬೆಂಬಲ

ಕಾಶ್ಮೀರದಮೇಲೆ ಭಾರತಕ್ಕೆ ಸಂಪೂರ್ಣವಾದ ಹಕ್ಕಿದೆಯೆಂದೂ ಮತ್ತು ಗೋವಾ ಸ್ವಾಸ್ತ್ಯವು ಭಾರತಕ್ಕೆ ಸೇರಬೇಕೆಂದೂ ತಾವು ಭಾವಿಸುವುದಾಗಿ ಪೋಲೆಂಡ್ ಪ್ರಧಾನಿ ಜೋಸೆಫ್ ಸಿರಾಂಕಿವಿಕ್ಸ್‌ರವರು ನೆನ್ನೆ ತಿಳಿಸಿದರು.

ಗಾಂಧಿ ವಿಚಾರ ಪರಿಷತ್ತಿನವರ ಶಿಕ್ಷಣ ತರಗತಿಗಳು

ಬರುವ ತಿಂಗಳು ೧೫ ರಿಂದ ೨ ತಿಂಗಳ ಕಾಲ ಸಾಹಿತ್ಯ, ಅಂತರ ರಾಷ್ಟ್ರೀಯ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ವಿಜ್ಞಾನ, ಇತಿಹಾಸ ಮತ್ತು ಗಾಂಧಿ ದರ್ಶನ ಮುಂತಾದ ವಿಷಯಗಳ ಬಗ್ಗೆ ಶ್ರೀಗಳಾದ ಎಂ. ಯಾಮುನಾಚಾರ್ಯ, ಎಸ್. ವಿ. ರಂಗಣ್ಣ, ಮುದ್ದಲಿಂಗಣ್ಣ, ಡಾ|| ಎಂ. ವಿ. ಕೃಷ್ಣರಾವ್ ಮತ್ತು ಶಾಸ್ತ್ರಿ ಶಾಮಣ್ಣನವರಿಂದ ವಿಶೇಷ ತರಗತಿಗಳನ್ನು ನಗರದ ಗಾಂಧಿ ವಿಚಾರ ಪರಿಷತ್ತಿನವರು ಏರ್ಪಡಿಸಲಿರುವರು. ಅದಕ್ಕೆ ೫೦ ಮಂದಿಗೆ ಪ್ರವೇಶವಿದೆ. ವಿವರಗಳನ್ನು ಸಂಚಾಲಕರಾದ ಶ್ರೀ ಕೆ. ಎಸ್. ನಾರಾಯಣಸ್ವಾಮಿಯವರಿಂದ ೬-೪-೫೭ ರೊಳಗೆ ಪಡೆಯಬಹುದು

○ ನಗರದ ಅಠಾರಾ ಕಛೇರಿ ಬಳಿ ವ್ಯವಸಾಯದ ಡಿಪೋ ಮುಂದೆ ಮೊನ್ನೆ ಮಧ್ಯರಾತ್ರಿಯಲ್ಲಿ ಅನುಮಾನಾಸ್ಪದವಾಗಿ, ಬೀಗಮುರಿಯುವ ಉಪಕರಣಗಳೊಂದಿಗೆ ತಿರುಗಾಡುತ್ತಿದ್ದ ರಾಮ ಎಂಬುವನನ್ನು ಲಕ್ಷ್ಮೀಪುರಂ ಪೋಲೀಸರು ದಸ್ತಗಿರಿ ಮಾಡಿರುವರು.

SREE GANESH
TALKILS
Festival Special Attractoin
Gala Release on 30-3 57
ROCK AROUND THE CLOCK

ಪ್ರಣಯದ ಪರಿಣಾಮವಾಗಿ ತರುಣತರುಣಿಯರ ದುರಂ

ಬೊಂಬಾಯಿಯ ಮಲಬಾರ್ ಹಿಲ್ ಪ್ರದೇ ಶದಲ್ಲಿ ನೆನ್ನೆ ಸಂಜೆ ಒಬ್ಬ ತರುಣಿಯು ತ ತಾಯಿ ಮತ್ತು ಮಗನೊಡನೆ ಮೋಟಾರಿ ಕುಳಿತಿದ್ದಾಗ ಒಬ್ಬ ಯುವಕನು ಅಲ್ಲಿಗೆ ಬ ಅವಳೊಡನೆ ವಿವಾದ ನಡೆಸಿದನೆಂದೂ, ಆನಂ ವಿರಸವುಂಟಾಗಿ ಉದ್ರೇಕಗೊಂಡು ಅವನು ಯನ್ನು ಗುಂಡಿನಿಂದ ಹೊಡೆದು ಸ್ವಲ್ಪ ದೂರದ ತಾನೂ ಹೊಡೆದುಕೊಂಡು ಮೃತನಾದನೆಂದೂ ರದಿಯಾಗಿದೆ. ಆಸ್ಪತ್ರೆಗೆ ಕೊಂಡೊಯ್ಯುವ ದಾ ಯಲ್ಲಿ ಆ ತರುಣಿಯೂ ಮೃತಳಾದಳು. ಆಕೆಯು ವಾಹ ವಿಚ್ಛೇದನ ಹೊಂದಿದ್ದು, ಮೃತಪಟ್ಟ ಯುವಕನಿಗೂ, ಅವಳಿಗೂ ಅನುರಾಗ ಬೆಳೆದಿತ್ತೆಂ ಹೇಳಲಾಗಿದೆ.

ಸಿಟಿ ಮುನಿಸಿಪಲ್ ಆಫೀಸು, ಮೈಸೂರು
ತಾ|| 27-3-1957
R. 8 S. 87/56-57

ನೋಟಿಫಿಕೇಷನ್

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿನ ಪಶ್ಚಿಮ ಭಾಗದಲ್ಲಿ ಆನೆಕಾರೋಟ್ ರ ಮುಂಭಾಗದಲ್ಲಿ ಹೊಸದಾಗಿ ಕಟ್ಟಿಸಿದ 177/1 ನೇ ನಂಬರ್ ಅಂಗಡಿ ಮಳಿಗೆಯನ್ನು 57-58 ನೇ ಸಾಲಿಗೆ ಮಾಹೆಯಾನ ಬಾಡಿಗೆ ಪಡೆಯುವ ಹಕ್ಕನ್ನು ತಾ|| 3—4—1957ರ ಬುಧವಾರ ದಿವ 10 ಘಂಟೆ ಬಾಗಾ ಯಿತು ಸ್ಥಳದ ಬಳಿ ಬಹಿರಂಗವಾಗಿ ಹರಾಜು ಮೂಲಕ ವಿಲೆ ಪಡಿಸಲಾಗುತ್ತೆ. ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ವೇಳೆಯಲ್ಲಿ ತಿಳಿಯಬಹುದು.

ಕೆ. ಹೆಚ್. ಖಂಡೇರಾವ್,
ರೆವಿನ್ಯೂ ಆಫೀಸರ್,
ಸಿಟಿ ಮುನಿಸಿಪಾಲಿಟಿ, ಮೈಸೂ

JOTHI ELECTRIC LAUNDRY
NAZARBAD, MYSORE
Central Office :— NEW STATUE SQUARE
GRAND REDUCTION IN DRY CLEANING RATES
Woollen Coats Rs. 1-8-0 per piece
Woollen Pants Re. 1-0-0 per piece
Silk Sarees Rs. 1-8-0 per saree
Real Dry cleaning with American Triplex Dry Cleaning Machine
Public Patronage is solicited

ನ್ಯೂ ಅಪೇರಾ ಟಾಕೀಸ್
31-3-57ರಿಂದ ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು
ಆರ್. ಎನ್. ಆರ್. ಪಿಕ್ಚರ್ಸ್ ರವರ ಕನ್ನಡ ಚಿತ್ರ **ಪ್ರೇಮದ ಪುತ್ರಿ**
ಪಾತ್ರ:— ಜೂನಿಯರ್ ಶ್ರೀರಂಜಿನಿ, ಸಂಧ್ಯಾ, ಸೂರ್ಯಕಲಾ, ಆರ್. ನಾಗೇಂದ್ರ ರಾವ್, ಉದಯಕುಮಾರ್, ಕಲ್ಯಾಣಕುಮಾರ್, ರಾಜಗೋಪಾಲ ಮುಂತಾದವರು

5 ಜೊತೆ ಭಾರಿ ಕುಸ್ತಿಗಳು
31-3-57 ನೇ ಭಾನುವಾರ, ಸಂಜೆ 4 ಘಂಟೆಗೆ ಮೈಸೂರು ಎಗ್ಜಿಬಿಷನ್ ಆವರಣದಲ್ಲಿ



ಮೈಸೂರು ಧೂಳಪ್ಪನವರ ಗರಡಿ ಸುದರ್ಶನ್ ಶಿಷ್ಯ ಕೋಲಾರದ ಪೈ|| [illegible] Vs. ಬೆಂಗಳೂರು ಸಿಟಿ ಮಟನ್ ಮಾರ್ಕೆಟ್ ಜಹಗೀರ್ ಖುರೇಷಿ ಗರಡಿ ಪೈ|| ಘೋರಿಬಾಬ್ ಖುರೇಷಿ
ಪೈ|| ವೈಜನಾಥ Vs ಪೈ|| ಜೈಪ್ರಕಾಶ್ ನಾಗಪ್ಪ
ಪೈ|| ಅಣ್ಣಯ್ಯ Vs ಪೈ|| ನಂಜಾ
ಪೈ|| ಸರ್ದಾರ್ V. ಪೈ|| ಇಸ್ಮರ್
ಪೈ|| ಮರಿಯಪ್ಪ Vs ಪೈ|| ವೆಂಕಟರಾಮು ಇತ್ಯಾದಿ
ಟಿಕೆಟು ದರಗಳು : 1 8 0, 1 0 0, 0 8 0



ಒಲಿಂಪಿಯಾ ★ 29-3-57 ರಿಂದ ಅಮೋಘ ಪ್ರಾರಂಭ
ಪುಕಾರ್, ಸಿಕಂದರ್, ಪೃಥ್ವಿವಲ್ಲಭ್-ಇಂತಹ ಅತ್ಯುತ್ತಮ ಚಿತ್ರಗಳನ್ನು ನೀಡಿದ, ಮಿನರ್ವಾ ಮೂವಿಟೋನ್‌ರವರ ಹಿಂದಿ ಚಿತ್ರ
ಸೊಹ್ರಾಬ್ ಮೋದಿ, ಮಧುಬಾಲ, ಉಲ್ಹಾಸ್, ಪ್ರದೀಪ್ ಕುಮಾರ್, ಪಾತ್ರವಹಿಸಿರುವ ★ **ರಾಜಹಟ್**
ನಿರ್ದೇಶನ : ಸೊಹ್ರಾಬ್ ಮೋದಿ -- ಸಂಗೀತ : ಶಂಕರ್ ಮತ್ತು ಜೈಕಿಷನ್

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
28-3-57 ರಿಂದ : : ಅಮೋಘ ಪ್ರಾರಂಭ
[illegible] ★ **ಮಂತ್ರವಾದಿ**
ಪಾತ್ರ.— ಪ್ರೇಂ ನಜೀರ್, ಕುಮಾರಿ ಮುಂತಾದವರು

ಲಕ್ಷ್ಮಿ ★ 29- 3—57 ರಿಂದ ಅಮೋಘ ಪ್ರದರ್ಶನಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು
ಜೈಶಕ್ತಿ ಪಿಕ್ಚರ್ಸ್‌ರವರ, "ಗೇವಾ ಕಲರ್" ದೃಶ್ಯಗಳಿಂದ ಕೂಡಿದ, ತಮಿಳು ಚಿತ್ರ
ಭೂಮಿಕೆ :— ನಾಗೇಶ್ವರರಾವ್, ಅಂಜಲಿ ದೇವಿ, ಎಸ್. ವಿ. ರಂಗರಾವ್ ಟಿ. ಎಸ್. ಬಾಲಯ್ಯ ರಾಜಾ ಸುಲೋಚನಾ, ತಂಗವೇಲು ಮುಂತಾದವರು
★ **ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ** ★

[illegible] ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ:
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು-2

ಸಂಪುಟ : ೧೫] SADHVI , SATURDAY 30—3—1957 ಮೈಸೂರು : ಶನಿವಾರ ೩೦—೩—೧೯೫೭ : [ಸಂಚಿಕೆ : [illegible]

ಒರಿಸ್ಸದಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ರಚನೆ ಸಂಭವ

ಬೈಸಿಕಲ್ ಮೇಲಿನ ತೆರಿಗೆ ರದ್ದಾಗುವುದಿಲ್ಲ

ಪೌರಸಭಾಧಿವೇಶನದಲ್ಲಿ ನಿರ್ಣಯ

ಮೈಸೂರು ೩೦

ನೆನ್ನೆ ಪುರಸಭೆಯ ಸಾಮಾನ್ಯ ಅಧಿವೇಶನವು ಶ್ರೀ ಎಸ್. ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಶ್ರೀ ಗೋವಿಂದಯ್ಯನವರು ಮಾತನಾಡಿ ಕೇಂದ್ರ ಸರ್ಕಾರದವರು ಆಹಾರ ಧಾನ್ಯಗಳನ್ನು ಸುಲಭ ಬೆಲೆಯಲ್ಲಿ ಮಾರಾಟವಾಗಲು ಏರ್ಪಡಿಸಿದ್ದರೂ, ಇಲ್ಲಿನ ಸ್ಥಳೀಯ ಸಂಗ್ರಹಣಾಧಿಕಾರಿಗಳ ವರ್ತನೆಯಿಂದ ಜನಗಳಿಗೆ ತೊಂದರೆಯಾಗಿರುವುದರಿಂದ ಅದನ್ನು ನಿವಾರಿಸಲು ಕೇಂದ್ರವನ್ನು ಪ್ರಾರ್ಥಿಸುವಂತೆ ಅಧ್ಯಕ್ಷರನ್ನು ಕೋರಿದರು.

ನಗರದಲ್ಲಿ ಹೆಚ್ಚಿರುವ ಸೊಳ್ಳೆ ಮತ್ತು ಹಗಲು ಕಳ್ಳರ ಕಾಟವನ್ನು ತಪ್ಪಿಸಬೇಕೆಂದು ಡಾ|| ಬಿ [illegible] ದಾಸರು ಸೂಚಿಸಿದರು. ಶ್ರೀ ಚೌಡಯ್ಯನವರು ನಗರದಲ್ಲಿ ಹೆಚ್ಚುತ್ತಿರುವ ವೇಶ್ಯೆಯರ ಕಾಟವನ್ನೂ ಮತ್ತು ಶ್ರೀ ಸಿ. ಎಲ್. ನಾರಾಯಣರಾಯರು [illegible] ಜೂಜಾಟವನ್ನೂ ತಪ್ಪಿಸಬೇಕೆಂದು ಕೋರಿದರು.

ಪುರಸಭೆಯಲ್ಲಿ ಅಹವಾಲುಗಳ ತೀರ್ಮಾನದ ಬಗ್ಗೆ ಅಧಿಕಾರಿಗಳ ವರ್ತನೆಯನ್ನು ಹಲವು ಸದಸ್ಯರು ಟೀಕಿಸಿದರು. ಕಂದಾಯದ ವಸೂಲಿಯಲ್ಲಿ [illegible]ಗಳನ್ನು ಸೂಚಿಸಲಾಯಿತು.

ಲಷ್ಕರ್ ಮತ್ತು ಮಂಡಿ ಮೊಹಲ್ಲಾಗಳಲ್ಲಿ ಬಾಲಕಿಯರ ಅನುಕೂಲಕ್ಕಾಗಿ ಒಂದು ಮಾಧ್ಯಮಿಕ ಶಾಲೆಯನ್ನು ತೆರೆಯಬೇಕೆಂದು ಕೋರುವ ಶ್ರೀ ಹೆಚ್. ಎಲ್. ಮುದ್ದಯ್ಯನವರ ನಿರ್ಣಯವು ಅನುಮೋದಕರಿಲ್ಲದೆ ಪರಿಶೀಲನೆಗೆ ತೆಗೆದುಕೊಳ್ಳಲಾಗಲಿಲ್ಲ. ಇದನ್ನು ಪ್ರತಿಭಟಿಸಿ ಅವರು ಸಭಾತ್ಯಾಗ ಮಾಡಿ ಸ್ವಲ್ಪ ಹೊತ್ತಿನನಂತರ ಮತ್ತೆ ಬಂದರು.

ಸುಮಾರು [illegible] ರೂ. ಗಳ ಖರ್ಚಿನಲ್ಲಿ ಹೊಸ ಸ್ವಾಸ್ಥ್ಯ ಚೌಕದಿಂದ ಪುರಸಭಾ ಕಛೇರಿಯವರೆಗೆ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಹಾಕಲು ಒಪ್ಪಿ ಇದಕ್ಕೆ ಸರ್ಕಾರ ಮತ್ತು ನಗರಾಭಿವೃದ್ಧಿ ಸಮಿತಿಗಳು ಸ್ವಲ್ಪ ಖರ್ಚನ್ನು ವಹಿಸಿಕೊಳ್ಳಬೇಕೆಂದು ಕೋರಲು ನಿರ್ಧರಿಸಲಾಯಿತು. ಪುರಸಭಾ ನೌಕರರಿಗೆ ತಲಾ [illegible] ರೂ. ಗೆ [illegible] ರೂ. ಗೆ [illegible] ಸೇರಿನಂತೆ ಸೊಸೈಟಿ ಫಾರಂನಲ್ಲಿ ಬೆಳೆದ ರಾಗಿಯನ್ನು ಸರಬರಾಜು ಮಾಡಲು ಒಪ್ಪಲಾಯಿತು.

ಪೌರಸಭೆಯ ಇಂದಿನ ಆರ್ಥಿಕ ಪರಿಸ್ಥಿತಿಯು ಸೈಕಲ್ ಮೇಲಿನ ತೆರಿಗೆಯನ್ನು ಇಳಿಸಲು ಅವಕಾಶವಿಲ್ಲವೆಂದು ಆರ್ಥಿಕ ಸಮಿತಿಯು ಮಾಡಿದ ಸಲಹೆಯನ್ನು ಪರಿಶೀಲಿಸಿ ಸ್ವಲ್ಪ ಚರ್ಚೆಯ ನಂತರ ಒಪ್ಪಲಾಯಿತು.

ಕುವೆಂಪುರವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಮೈಸೂರು ೩೦

ಬರುವ ಮೇ ತಿಂಗಳಲ್ಲಿ ಧಾರವಾಡದಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸೆಲರ್ ಡಾ|| ಕೆ. ವಿ. ಪುಟ್ಟಪ್ಪನವರು ವಹಿಸಲು ಒಪ್ಪಿರುವರು.

ಸಂಸ್ಥಾನದ ನಾಯಕತ್ವದ ಬಗ್ಗೆ ಪರಸ್ಪರ ಸಮಾಲೋಚನೆ ಅಗತ್ಯ

ಮಾಜಿ ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೩೦

ಸಂಸ್ಥಾನದ ನೂತನ ನಾಯಕತ್ವದ ವಿಚಾರವನ್ನು ಕುರಿತು ನೆನ್ನೆ ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಪತ್ರಿಕಾ ಭೇಟಿಯಲ್ಲಿ [illegible] ಪರಸ್ಪರ ಸಮಾಲೋಚನೆಯಿಂದ [illegible] ಅಗತ್ಯವೆಂದು ಹೇಳಿದರು. [illegible] ಸ್ಪರ್ಧೆ ಇರುವುದರಿಂದ [illegible] ಒಗ್ಗಟ್ಟು ಮತ್ತು ಸಾಮರಸ್ಯವನ್ನು ಸಾಧಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ನಾಯಕತ್ವಕ್ಕೆ [illegible] ಕಾಂಗ್ರೆಸ್ ಪಕ್ಷದಲ್ಲಿ ಬೇರೆ ಬೇರೆ ಗುಂಪುಗಳು [illegible] ಎಂದು ಅವರು ಸೂಚಿಸಿ [illegible] ಸದಸ್ಯರ ಸಹೃದಯ ಸಮಾಲೋಚನೆಗೆ [illegible] ಪಟ್ಟರು. [illegible] ಅವರು ನುಡಿದರು. [illegible] ನಾಯಕರ ಗಾದಿಗೆ [illegible] ನೂರಾರು ಮಂದಿ [illegible], ಹಲವು ಸದಸ್ಯರೂ [illegible] ತಮ್ಮಲ್ಲಿ ಹೇಳಿದುದ್ದವಾಗಿಯೂ ಅವರು ನುಡಿದರು. ಈ ವಿಚಾರವನ್ನು ಕುರಿತು ತಮ್ಮಲ್ಲಿ ಬರುವ ಮುಖಂಡರೊಡನೆ ಸಮಾಲೋಚಿಸುತ್ತಿರುವುದಾಗಿ ಅವರು ಹೇಳಿದರು

ಕಾಂಗ್ರೆಸ್ ಪಕ್ಷದ ನಾಯಕರಾಗಿ ಪುನಃ ನೆಹರೂರವರ ಆಯ್ಕೆ

ಹೊಸ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ ಪ್ರಧಾನಿ ನೆಹರೂರವರು ನೆನ್ನೆ ಸರ್ವಾನುಮತದಿಂದ ಆರಿಸಲ್ಪಟ್ಟರು. ಅವರೇ ಮುಂದಿನ ಐದು ವರ್ಷಗಳವರೆಗೂ ಪ್ರಧಾನಿಯಾಗಿರುವರು

ನೆಹರೂರವರು ಮಾತನಾಡಿ, ತಮ್ಮನ್ನು ಪುನಃ ನಾಯಕರಾಗಿ ಆರಿಸಿದ ಬಗ್ಗೆ ವಂದನೆಯನ್ನು ಸಲ್ಲಿಸಿದರು. ಅವರೆ ಉನ್ನತ ಜವಾಬ್ದಾರಿ ಸ್ಥಾನಗಳಿಗೆ ಒಂದೇ ಸಮನೆ ಒಬ್ಬನೇ ಮನುಷ್ಯನನ್ನು ಚುನಾಯಿಸುವ ಪದ್ಧತಿಯ ಬಗ್ಗೆ ಸದಸ್ಯರು ಎಚ್ಚರಿಕೆ ವಹಿಸಬೇಕೆಂದು ಸೂಚಿಸಿದರು. ವಿಶೇಷ ಸಂದರ್ಭಗಳನ್ನು ಬಿಟ್ಟರೆ ಉಳಿದ ಕಾಲಗಳಲ್ಲಿ ಹಾಗೆಮಾಡಬಾರದೆಂದು ಹೇಳಿದರು

ಕಳೆದ ೧೦ ವರ್ಷಗಳಿಂದಲೂ ತಾವು ಪ್ರಧಾನಿಯಾಗಿರುವುದಾಗಿಯೂ, ತಮಗೆ ತಿಳಿದಿರುವಂತೆ ಇಷ್ಟು ದೀರ್ಘ ಕಾಲ ಪ್ರಧಾನಿಯಾಗಿರುವವರು ಪ್ರಪಂಚದಲ್ಲೇ ಎಂದೂ ನೆಹರೂರವರು ಹೇಳಿ, ತಾವು ಭೇಟಿ ಕೊಟ್ಟ ರಾಷ್ಟ್ರಗಳ ಅಧ್ಯಕ್ಷರಾಗಲಿ, ಪ್ರಧಾನಿಯವರಾಗಲಿ ಬದಲಾಗುತ್ತಿರುವ ಅಂಶವನ್ನು ತಿಳಿಸಿದರು. ಉನ್ನತಾಧಿಕಾರಕ್ಕೆ ಹೊಸಬರು ಬರುವುದರಿಂದ ಕೆಲಸಕ್ಕೆ ಸ್ಫೂರ್ತಿ ಹೆಚ್ಚುವುದೆಂದೂ, ಪ್ರಜಾಪ್ರಭುತ್ವವು ಬಲವಾಗಬೇಕಾದರೆ ವ್ಯಕ್ತಿಪ್ರಾಧಾನ್ಯತೆ ತಪ್ಪಬೇಕೆಂದೂ ನೆಹರೂರವರು ಹೇಳಿದರು

ಒರಿಸ್ಸಾದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ

ಮುಖ್ಯ ಮಂತ್ರಿ ಮೆಹತಾಬರ ಪುನರಾಯ್ಕೆ

ಒರಿಸ್ಸಾ ಸಂಸ್ಥಾನದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲವನ್ನು ಸ್ಥಾಪಿಸುವ ಬಗ್ಗೆ ಅಲ್ಲಿನ ಶಾಸನ ಸಭೆಯ ಬಹುಮಂದಿ ಸದಸ್ಯರ ಬೆಂಬಲವು ತಮ್ಮ ಪಕ್ಷಕ್ಕೆ ಇರುವುದೆಂದು ಒರಿಸ್ಸಾ ಮುಖ್ಯ ಮಂತ್ರಿ ಹರೇಕೃಷ್ಣ ಮೆಹತಾಬ್‌ರವರು ನೆನ್ನೆ ತಿಳಿಸಿದರು. ಅವರನ್ನು ಅಲ್ಲಿನ ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಪುನಃ ನೆನ್ನೆ ಆರಿಸಲಾಯಿತು. ೧೪೦ ಮಂದಿ ಸದಸ್ಯರಿರುವ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ೫೬ ಜನರು ಇರುವರು. ತಮ್ಮ ಪಕ್ಷದ ಬಲವು ಈಗ ೭೪ಕ್ಕೆ ಹೆಚ್ಚಿರುವುದೆಂದೂ, ಇತರ ೧೮ ಮಂದಿ ತಮ್ಮ ಮಂತ್ರಿಮಂಡಲಕ್ಕೆ ಬೆಂಬಲ ನೀಡಲಿರುವುದಾಗಿ ಮಿ ಮೆಹತಾಬರು ಹೇಳಿದರು

ಪೌರಸಭಾ ಕಛೇರಿ ಮುಂದೆ ಗ್ಯಾಂಗ್‌ಮೆನ್ನುಗಳ ಪ್ರದರ್ಶನ

ನಗರದ ಪೌರಸಭೆಯ ಗ್ಯಾಂಗ್‌ಮೆನ್ನುಗಳ ಪೈಕಿ ೩೦ ಜನರನ್ನು ಕೆಲಸದಿಂದ ತೆಗೆದುದಕ್ಕಾಗಿ ಪ್ರತಿಭಟನೆಯನ್ನು ಸೂಚಿಸಿ ನೆನ್ನೆ ಪುರಸಭೆಯ ಕಾಂಪೌಂಡಿನಲ್ಲಿ ಸುಮಾರು ೧೦೦ ಮಂದಿ ಗ್ಯಾಂಗ್ ಮೆನ್ನುಗಳು ಭಿತ್ತಿ ಪತ್ರಿಕೆಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನ ನಡೆಸಿದರು. ಪುರಸಭಾ ಸದಸ್ಯರಾದ ಶ್ರೀಗಳು ಎಸ್. ಗೋವಿಂದಯ್ಯ ಮತ್ತು ಜಿ. ಎಸ್. ರಾಮಕೃಷ್ಣಯ್ಯನವರು ಅವರುಗಳಿಗೆ ಸಮಾಧಾನ ಹೇಳಿ ವಾಪಸು ಕಳುಹಿಸಿದರು.

ಭರತ ಭಕ್ತಿ ಕಾವ್ಯ ವಾಚನ

ಯುಗಾದಿ ಹಬ್ಬದ ಪ್ರಯುಕ್ತ ನಾಳಿದ್ದು ಸೋಮವಾರ ಸಂಜೆ ಆರೂವರೆ ಗಂಟೆಗೆ ೩ ಸುಬ್ಬಯ್ಯಾ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ಶ್ರೀಮತಿಗಳಾದ ಬಿ. ವಸುಂಧರೆ ಮತ್ತು ಜಿ. ವಸುಧಾರವರುಗಳು "ಭರತ ಭಕ್ತಿ" ಕಾವ್ಯ ವಾಚನವನ್ನು ಮಾಡುವರು. ಸರ್ವರಿಗೂ ಸ್ವಾಗತವಿದೆ.

ಬಿರುದುಬಾವಲಿಗಳ ರದ್ದು

ಕಲೆ ಮತ್ತು ಕುಶಲ ವಿದ್ಯೆಗಳಿಗೆ ವಿಶೇಷ ಬಹುಮಾನ

ಸ್ವಂ ಸು ಫೋ] ಬೆಂಗಳೂರು ೩೦

ಸಾರ್ವಜನಿಕ ಸೇವೆಗಾಗಿ ಕೊಡಲಾಗುತ್ತಿದ್ದ ಬಿರುದುಬಾವಲಿ ಮುಂತಾದ ಪ್ರಶಸ್ತಿಗಳ ಬದಲು ಕಲೆ, ಸಂಸ್ಕೃತಿ ಮತ್ತು ಕುಶಲ ವಿದ್ಯೆಗಳಲ್ಲಿ ಪ್ರಶಸ್ತಿ ಪಡೆದವರಿಗೆ ಪಾರಿತೋಷಕಗಳನ್ನು ಕೊಡಲು ಸರ್ಕಾರದವರು ನಿರ್ಧರಿಸಿರುತ್ತಾರೆ

○ ಪೋಲೆಂಡಿನ ಪ್ರಧಾನಿ ಜೋಸೆಫ್ ಸಿರಾಂಕಿವಿಕ್ಸ್‌ರವರು ಈ ದಿನ ಪರಿವಾರ ಸಮೇತ ಬೊಂಬಾಯಿಗೆ ತೆರಳಿದರು

○ ವ್ಯವಸಾಯಕ್ಕಾಗಿ ಹೆಚ್ಚು ನೆರವನ್ನು ನೀಡಲು ಅನುಕೂಲಿಸುವಂತೆ ಜಿಲ್ಲಾ ಮತ್ತು ಗ್ರಾಮಾಂತರ ಸಹಕಾರ ಸಂಘಗಳಿಗೆ ೩೦ ಲಕ್ಷ ರೂ. ಹೆಚ್ಚಿನ ಬಂಡವಾಳವನ್ನು ಕೊಡಲು ಸರ್ಕಾರದವರು ನಿರ್ಧರಿಸಿರುತ್ತಾರೆ.

ಪೌರಸಭೆಯ ಆಯವ್ಯಯದ ಅಂದಾಜಿನ ಪರಿಶೀಲನೆ

ಆದಾಯ ರೂ. [illegible]

ವೆಚ್ಚ ರೂ. [illegible]

ಮೈಸೂರು ೩೦

ಇಂದು ಬೆಳಗ್ಗೆ ನಡೆದ ಪುರಸಭೆಯ ವಿಶೇಷ ಅಧಿವೇಶನದಲ್ಲಿ ನೂತನ ವರ್ಷದ ಆಯವ್ಯಯವನ್ನು ಮಂಡಿಸಲಾಯಿತು. ಅದರ ಪ್ರಕಾರ ಕಳೆದ ಸಾಲಿನ ಶಿಲ್ಕು [illegible] ರೂ ಗಳೂ ಸೇರಿ ಒಟ್ಟು [illegible] ರೂ ಗಳ ಆದಾಯವೂ, [illegible] ರೂ ವೆಚ್ಚವೂ ಆಗಿ [illegible] ರೂ.ಗಳ ಉಳಿತಾಯವನ್ನು ನಿರೀಕ್ಷಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಮನೆಗಂದಾಯದಿಂದ [illegible] ರೂ., [illegible] ಸೆಸ್ಸಿನಿಂದ [illegible] ರೂ., ಡ್ರೈನೇಜ್ ಸೆಸ್ಸಿನಿಂದ [illegible] ರೂ., ಆರೋಗ್ಯ ಸೆಸ್ ವಸೂಲಾತಿಯಿಂದ [illegible] ರೂ ಮತ್ತು ವಿದ್ಯಾ ಸೆಸ್ಸಿನಿಂದ ೨೦,೦೦೦ ರೂ. ಹುಟ್ಟುವಳಿ ಬರುವ ನಿರೀಕ್ಷೆಯಿದೆ.

ಒಳಚರಂಡಿ ವ್ಯವಸ್ಥೆ, ರಸ್ತೆ ಟಾರಿಂಗ್, ಬ್ಯಾಂಕ್ ಓವರ್‌ಡ್ರಾಫ್ಟ್, ನೀರು ಸರಬರಾಜು ಅಭಿವೃದ್ಧಿ ಮುಂತಾದುವುಗಳಿಗಾಗಿ ಸರ್ಕಾರದಿಂದ [illegible] ರೂ ಸಾಲ ಬರಲಿದೆ.

ವೆಚ್ಚದ ಬಾಬಿನಲ್ಲಿ ಬೀದಿ ದೀಪಗಳಿಗೆ [illegible] ರೂ, ಮಂಡಿ ಮತ್ತು ಲಷ್ಕರ್‌ನಲ್ಲಿ ಒಳ ಚರಂಡಿಗಾಗಿ [illegible] ರೂ, ರಸ್ತೆಗಳಿಗೆ ಸಿಮೆಂಟ್ ಮತ್ತು ಟಾರ್ ಹಾಕಲು [illegible] ರೂ, ರಸ್ತೆ ದುರಸ್ತಿಗಾಗಿ [illegible] ರೂ ಗಳನ್ನು ತೆಗೆದಿಡಲಾಗುವುದು. ಕ್ರೀಡಾಂಗಣಕ್ಕೆ [illegible] ರೂ. ಒದಗಿಸಲಾಗುವುದು. ನೀರು ಸರಬರಾಜಿಗೆ ೫ ಲಕ್ಷ ರೂ ವಿನಿಯೋಗವಾಗುವುದು.

ಪೌರಸಭಾ ಕಮಿಷನರ್ ಶ್ರೀ ವಿಶ್ವನಾಥ್‌ರವರು ತಮ್ಮ ಪೀಠಿಕಾ ಪತ್ರಿಕೆಯಲ್ಲಿ ತೆರಿಗೆ ಬಾಬಿನಲ್ಲಿ ಹಲವಾರು ಬದಲಾವಣೆಗಳನ್ನು ಸೂಚಿಸಿದ್ದರು. ಕಟ್ಟಡಗಳು ಮತ್ತು ಜಮೀನು ಕಂದಾಯವನ್ನು ಹೆಚ್ಚಿಸಿ [illegible] ರೂ ಅಷ್ಟು ಹೆಚ್ಚಾಗಿ ಪಡೆಯುವಂತೆ ತಿಳಿಸಿದ್ದರು. ವಿದ್ಯುಚ್ಛಕ್ತಿ ತೆರಿಗೆಯನ್ನು ದ್ವಿಗುಣಗೊಳಿಸುವುದು, ವೃತ್ತಿ ತೆರಿಗೆ ವಿಧಿಸುವುದು, ಅಕ್ಟ್ರಾಯ್ ವಜಾ ಮಾಡಲ್ಪಟ್ಟ ಹಲವು ವಸ್ತುಗಳ ಮೇಲೆ ಪುನಃ ೫ ಸುಂಕವನ್ನು ವಿಧಿಸುವುದು, ಪೆಟ್ರೋಲ್ ತೆರಿಗೆ ಮೇಲೆ ಅಕ್ಟ್ರಾಯ್ ವಿಧಿಸುವುದು ಮುಂತಾದ ಸಲಹೆಗಳನ್ನು ನೀಡಿದ್ದರು

ತೆರಿಗೆ ಬಗ್ಗೆ ಅವರ ಸಲಹೆಯನ್ನು ಆರ್ಥಿಕ ಸಮಿತಿಯು ಅನುಮೋದಿಸಿಲ್ಲ. ವಾಹನ ತೆರಿಗೆಯನ್ನು ತೆಗೆದುಹಾಕಿರುವ ಬಗ್ಗೆ ಪೌರಸಭೆಗೆ ಉಂಟಾಗಿರುವ ನಷ್ಟಕ್ಕೆ ಸರ್ಕಾರವು ಹೆಚ್ಚು ಪರಿಹಾರ ಕೊಡಬೇಕೆಂದು ಸಮಿತಿಯು ಸೂಚಿಸಿದೆ. ವಿದ್ಯುಚ್ಛಕ್ತಿ ದರವನ್ನು ಪುನಃ ಪರಿಶೀಲನೆ ಮಾಡುವಂತೆ ಸರ್ಕಾರವನ್ನು ಕೋರಲು ಸಮಿತಿಯು ಸಲಹೆ ಮಾಡಿದೆ

ಕಾಂಗ್ರೆಸ್ ವಿರುದ್ಧವಾಗಿ ವರ್ತಿಸಿದವರ ವಿಚಾರಣೆಗೆ ಸಮಿತಿ

ಕಾಂಗ್ರೆಸ್ ಪಕ್ಷದ ಸದಸ್ಯರು ಚುನಾವಣಾ ಕಾಲದಲ್ಲಿ ಪಕ್ಷದ ಶಿಸ್ತಿಗೆ ವಿರೋಧವಾಗಿ ನಡೆದುಕೊಂಡ ಬಗ್ಗೆ ವಿಚಾರಣೆ ನಡೆಸಲು ಮೂವರು ಸದಸ್ಯರುಳ್ಳ ಒಂದು ಸಮಿತಿಯನ್ನು ತಮಿಳುನಾಡು ಕಾಂಗ್ರೆಸ್ಸು ರಚಿಸಿದೆ

ಪಂಚಾಂಗ ಶ್ರವಣ

ಶ್ರೀ ಹೇವಿಳಂಬಿ ಸಂವತ್ಸರದ ಚೈತ್ರ ಶುಕ್ಲ ಪ್ರತಿಪತ್ ಸೋಮವಾರ ತಾ|| ೧-೪-೫೭ನೇ ಶುಭ ದಿವಸ ಸಂಜೆ ೬-೩೦ ಗಂಟೆಗೆ ಮೈಸೂರು ಅಶೋಕಾ ರೋಡ್ ಕ್ರಾಸ್ (ಹಳ್ಳದಕೇರಿ) ಜ್ಯೋತಿರ್ಮಂದಿರಂ ಆನಂದಾ ಪವರ್ ಪ್ರೆಸ್ ಆವರಣದಲ್ಲಿ ಪಂಚಾಂಗ ಶ್ರವಣ ನೆರವೇರುವಂತೆ ಏರ್ಪಡಿಸಲಾಗಿದೆ

ದೇವರಹಳ್ಳಿ ಗ್ರಾಮದಲ್ಲಿ ಹರಿಜನರಿಗೆ ತೊಂದರೆ

ಮದ್ದೂರು ತಾಲ್ಲೂಕಿನ ಚಿಕ್ಕರಸನಕೆರೆ ಹೋಬಳಿ ದೇವರಹಳ್ಳಿ ಗ್ರಾಮದ ಹಲವರು ಸವರ್ಣೀಯರು ಹರಿಜನರನ್ನು ಕೂಲಿಗೆ ಕರೆದಾಗ ಬರದಿದ್ದುದಕ್ಕಾಗಿ ತುಂಬಾ ಹಿಂಸಿಸುತ್ತಿದ್ದಾರೆಂದೂ, ಹರಿಜನರ ಪೈಕಿ ಒಬ್ಬ ಮುದುಕನನ್ನು ಕೊಲೆ ಮಾಡಿದ್ದಾಗಿಯೂ, ಅಲ್ಲಿನ ಉಳಿದ ಹರಿಜನರ ಮನೆಗಳನ್ನು ಧ್ವಂಸ ಮಾಡುವುದಾಗಿಯೂ ಬೆದರಿಸಿದ್ದುದರಿಂದ ಸುಮಾರು ೩೦ ಸಂಸಾರಗಳು ಊರನ್ನು ಬಿಟ್ಟು ಚಿಕ್ಕರಸನಕೆರೆಗೆ ಓಡಿಹೋಗಿದ್ದಾರೆಂದೂ, ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಗಮನಿಸಿ ಸೂಕ್ತ ಬಂದೋಬಸ್ತನ್ನು ಮಾಡಬೇಕೆಂದೂ ನೊಂದ ಹರಿಜನರು ಕೋರಿ ಪತ್ರ ಬರೆದಿದ್ದಾರೆ.

ವರ್ತಕರಿಗೂ [illegible] ಅಪೂರ್ವ ಸುಸಮಯ !
ಇದೇ ಏಪ್ರಿಲ್ ಒಂದರಿಂದ ಜಾರಿಗೆ ಬರಲಿರುವ ನಯಾ ಪೈಸಾ ದಶಮಾಂಶ ನಾಣ್ಯಗಳು
ಮತ್ತು ರೂ ಆ ಪೈ ಗಳನ್ನು ಸಮನ್ವಯಗೊಳಿಸಿ
೧ ಕಾಸಿನಿಂದ ಹಿಡಿದು ಒಂದು ರೂ ವರೆಗೂ ಮತ್ತು ಯಾವ ತರಹದ ವ್ಯಾಪಾರ ವಹಿವಾಟಿನಲ್ಲಾದರೂ 1/8ರಿಂದ ಹಿಡಿದು 11 000 ಸಂಖ್ಯೆಯವರೆಗೂ ಅನ್ವಯಿಸುವಂತಹ ರೀತಿಯಲ್ಲಿ ಬೆಲೆ, ಕೂಲಿ ಡಿಸ್ಕೌಂಟು ಮತ್ತು ಶೇಕಡಾರು ಲೆಕ್ಕವನ್ನು ಏಕ್‌ದಮ್ ತಿಳಿಸಬಲ್ಲ

ಎಲೈಟ್ಸ್ ರೆಡಿ ರೆಕನರ್

ಬೇಗನೆ ಸಿದ್ಧವಾಗಿದೆ
ವಾಣಿಜ್ಯ ಸಂಸ್ಥೆಗಳು ದಿವಸಿ ಮತ್ತು ಎಸ್ಟೇ[illegible]ಕರು ಮತ್ತು ಇತರ ವ್ಯವಹಾರಗಳನ್ನು
[illegible] ಅತ್ಯವಶ್ಯಕ [illegible] ಪುಸ್ತಕವು [illegible] ಪುಟಗಳಿಂದ ಕೂಡಿದೆ
ಬೆಲೆ 3 0 0 [illegible] ಅಂಚೆ ವೆಚ್ಚ ಬೇರೆ
ಮಾರಾಟಗಾರರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತೆ
ವಿವರಗಳಿಗೆ ಕೆಳಗೆ ಕಂಡ ವಿಳಾಸಕ್ಕೆ ವ್ಯವಹರಿಸಿರಿ

ಎಲೈಟ್ ಪ್ರಿಂಟರ್ಸ್,
1041 ಶಿವರಾಂಪೇಟೆ ಮೈಸೂರು

ಯುಗಾದಿ ಆಕರ್ಷಣೆ

ಹೊಸ ವರ್ಷದ ಆನಂದೋತ್ಸವದಲ್ಲಿ ನೂತನ ನಮೂನೆಯ ಬಳೆಗಳನ್ನೂ, ಮನ ಸೆಳೆಯುವ ರಿಬ್ಬನ್ನುಗಳನ್ನೂ, ನಿಮ್ಮ ಮುದ್ದು ಮಕ್ಕಳಿಗೂ, ಮಡದಿ–ಭಗಿನಿಯರಿಗೂ ತೊಡಿಸಿ ನಲಿಯುವಂತೆ ಮಾಡಿರಿ

ಸೌಭಾಗ್ಯ ಸ್ಟೋರ್ಸ್
467 ದೇವರಾಜಾ ಮಾರ್ಕೆಟ್ :: ಟೆಲಿಫೋನ್ ನಂ. 249
ವಿ. ಸೂ: 31—3—57ನೇ ಭಾನುವಾರವೂ ವ್ಯಾಪಾರವಿದೆ

ನ್ಯೂ ಆಪೇರಾ ಟಾಕೀಸ್
31 3.57ರಿಂದ ಅನೋಖ ಪ್ರಾರಂಭ ಪ್ರತಿ ದಿನ ಮೂರು ಪ್ರದರ್ಶನಗಳು
ಆರ್ ಎನ್ ಆರ್ ಪಿಕ್ಚರ್ಸ್ ರವರ ಕನ್ನಡ ಚಿತ್ರ
ಪ್ರೇಮದ ಪುತ್ರಿ
ಪಾತ್ರ ಜೂನಿಯರ್ ಶ್ರೀರಂಜನಿ, ಸಂಧ್ಯಾ, ಸೂರ್ಯಕಲಾ, ಆರ್. ನಾಗೇಂದ್ರರಾವ್, ಉದಯಕುಮಾರ್, ಕಲ್ಯಾಣಕುಮಾರ್, ರಾಜನಾಲ ಮುಂತಾದವರು

5 ಜೊತೆ ಭಾರಿ ಕುಸ್ತಿಗಳು
31-3-57 ನೇ ಭಾನುವಾರ, ಸಂಜೆ 4 ಘಂಟೆಗೆ ಮೈಸೂರು ಎಗ್ಜಿಬಿಷನ್ ಆವರಣದಲ್ಲಿ

ಮೈಸೂರು ಭೂತಪ್ಪನವರ ಗರಡಿ ಸುದರ್ಶನ್ ಪಟ್ಟಿ ಕೋಂ. ಫಟ್ ಪೈ॥ ದೊರೆಸ್ವಾಮಿ Vs ಬೆಂಗಳೂರು ಸಿಟಿ ಮಟನ್ ಮಾರ್ಕೆಟ್ ಉಮಾರ್ ಖುರೈಶಿ ಗರಡಿ ಪೈ॥ ಘೋಟೆಸಾಬ್ ಖುರೈಶಿ
ಪೈ॥ ಪೈಜನ ಫ್ Vs ಪೈ॥ ಜೈಪ್ರಕಾಶ್ ನಾಗಣ್ಣ
ಪೈ॥ ಅಣ್ಣಯ್ಯ Vs ಪೈ॥ ನಂಜು
ಪೈ॥ ಸರ್ದಾರ್ Vs ಪೈ॥ ಶಂಕರ್
ಪೈ॥ ನಂಜಯ್ಯಪ್ಪ Vs ಪೈ॥ ವೆಂಕಟರಾಮು ಉ॥ ಶಿ
ಟಿಕೇಟು ದರಗಳು 1 8 0 1 0 0, 0 8 0

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ ಮೈಸೂರು (E. 11911)

ಬೆಲೆ ಇಳಿದಿದೆ
[illegible]
ವಾಯಿಲ್ ಶಿಫಾನ್ ಸೀರೆಗಳು
ಲಿನ್ನ ಷರ್ಟಿಂಗ್ ಕೋಟಿಂಗ್, ಲಾಂಗ್‌ಕ್ಲಾತ್
ಎಷ್ಟು ನಮೂನೆಗಳು ಬೇಕಾ ನೋಡಬಹುದು
ಬಾಹುಸಾರ್ ಕಂಪೆನಿ,
ನೂರಡಿ ರಸ್ತೆ ಮೈಸೂರು

ಜಯಾ ಕೆಫೆ ಹೊಟೇಲಿನ ಬೀಡಿ ಅಂಗಡಿ ಬಿಕರಿಗಿದೆ

ನಗರದ ನೂರಡಿ ರಸ್ತೆಯಲ್ಲಿ ಜಯಾ ಕೆಫೆ ಹೊಟೇಲಿನಲ್ಲಿರುವ ಬೀಡಿ ಮತ್ತು ಸ್ಟೇಷನರಿ ಅಂಗಡಿಯು ಮಾಲುಗಳ ಸಮೇತ ಬಿಕರಿಗೆ ದೊರೆಯುತ್ತೆ. ವಿವರಗಳಿಗಾಗಿ ವಿಚಾರಿಸಿ

ಜಯ ಕೆಫೆ,
ನೂರಡಿ ರಸ್ತೆ, ಮೈಸೂರು

SREE GANESH
TALKIES
Festival Special Attraction
Gala Release on 30-3-57
ROCK AROUND
THE CLOCK

Edited, Printed and Published by
A. [illegible] Nagarajan at Sadhvi Press,
D. Subbiah Road, Mysore

ದಶಮಾಂಶ ನಾಣ್ಯ ಪದ್ಧತಿ

1-4-1957ರಿಂದ ಜಾರಿಗೆ ಬರಲಿರುವ ದಶಮಾಂಶ ನಾಣ್ಯ ಪದ್ಧತಿಯ ನಯಾ ಪೈಸಾ ಮತ್ತು ಹಾಲಿ ಜಾರಿಯಲ್ಲಿರುವ ರೂ. ಆ ಪೈ ಗಳನ್ನು ಸಮನ್ವಯಗೊಳಿಸುವ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ — [ಪಡಿಯಚ್ಚು: ಎಲೈಟ್ ಪ್ರಿಂಟರ್ಸ್‌ರವರ ಕೃಪೆಯಿ

ಹಳೇ ನಾಣ್ಯ ರೂ ಆ ಪೈ	ಹೊಸದು ನಯಾ ಪೈಸಾ	ಹಳೇ ನಾಣ್ಯ ರೂ ಆ ಪೈ	ಹೊಸದು ನಯಾ ಪೈಸಾ	ಹಳೇ ನಾಣ್ಯ ರೂ ಆ ಪೈ	ಹೊಸದು ನಯಾ ಪೈಸಾ	ಹಳೇ ನಾಣ್ಯ ರೂ ಆ ಪೈ	ಹೊಸದು ನಯಾ ಪೈಸಾ
0-0-1	1	0-4-1	26	0-8-1	51	0-12-1	76
0-0-2	1	0-4-2	26	0-8-2	51	0-12-2	76
0-0-3	2	0-4-3	27	0-8-3	52	0-12-3	77
0-0-4	2	0-4-4	27	0-8-4	52	0-12-4	77
0-0-5	3	0-4-5	28	0-8-5	53	0-12-5	78
0-0-6	3	0-4-6	28	0-8-6	53	0-12-6	78
0-0-7	4	0-4-7	29	0-8-7	54	0-12-7	79
0-0-8	4	0-4-8	29	0-8-8	54	0-12-8	79
0-0-9	5	0-4-9	30	0-8-9	55	0-12-9	80
0-0-10	5	0-4-10	30	0-8-10	55	0-12-10	80
0-0-11	6	0-4-11	31	0-8-11	56	0-12-11	81
0-1-0	6	0-5-0	31	0-9-0	56	0-13-0	81
0-1-1	7	0-5-1	32	0-9-1	57	0-13-1	82
0-1-2	7	0-5-2	32	0-9-2	57	0-13-2	82
0-1-3	8	0-5-3	33	0-9-3	58	0-13-3	83
0-1-4	8	0-5-4	33	0-9-4	58	0-13-4	83
0-1-5	9	0-5-5	34	0-9-5	59	0-13-5	84
0-1-6	9	0-5-6	34	0-9-6	59	0-13-6	84
0-1-7	10	0-5-7	35	0-9-7	60	0-13-7	85
0-1-8	10	0-5-8	35	0-9-8	60	0-13-8	85
0-1-9	11	0-5-9	36	0-9-9	61	0-13-9	86
0-1-10	11	0-5-10	36	0-9-10	61	0-13-10	86
0-1-11	12	0-5-11	37	0-9-11	62	0-13-11	87
0-2-0	12	0-6-0	37	0-10-0	62	0-14-0	87
0-2-1	13	0-6-1	38	0-10-1	63	0-14-1	88
0-2-2	14	0-6-2	39	0-10-2	64	0-14-2	89
0-2-3	14	0-6-3	39	0-10-3	64	0-14-3	89
0-2-4	15	0-6-4	40	0-10-4	65	0-14-4	90
0-2-5	15	0-6-5	40	0-10-5	65	0-14-5	90
0-2-6	16	0-6-6	41	0-10-6	66	0-14-6	91
0-2-7	16	0-6-7	41	0-10-7	66	0-14-7	91
0-2-8	17	0-6-8	42	0-10-8	67	0-14-8	92
0-2-9	17	0-6-9	42	0-10-9	67	0-14-9	92
0-2-10	18	0-6-10	43	0-10-10	68	0-14-10	93
0-2-11	18	0-6-11	43	0-10-11	68	0-14-11	93
0-3-0	19	0-7-0	44	0-11-0	69	0-15-0	94
0-3-1	19	0-7-1	44	0-11-1	69	0-15-1	94
0-3-2	20	0-7-2	45	0-11-2	70	0-15-2	95
0-3-3	20	0-7-3	45	0-11-3	70	0-15-3	95
0-3-4	21	0-7-4	46	0-11-4	71	0-15-4	96
0-3-5	21	0-7-5	46	0-11-5	71	0-15-5	96
0-3-6	22	0-7-6	47	0-11-6	72	0-15-6	97
0-3-7	22	0-7-7	47	0-11-7	72	0-15-7	97
0-3-8	23	0-7-8	48	0-11-8	73	0-15-8	98
0-3-9	23	0-7-9	48	0-11-9	73	0-15-9	98
0-3-10	24	0-7-10	49	0-11-10	74	0-15-10	99
0-3-11	24	0-7-11	49	0-11-11	74	0-15-11	99
0-4-0	25	0-8-0	50	0-12-0	75	[illegible]	[illegible]

ಹೊಸ ನಾಣ್ಯದ ಸ್ವರೂಪ

Reverse Obverse



100 Naye Paise (One R [illegible]

50 Naye Paise (Half R [illegible]

25 Naye Paise (Qua [illegible]

10 Naye Paise



5 Naye Paise



2 Naye Paise



1 Naye Paise

ಟೆಲಿಫೋನ್ ನಂ 798

ಯುಗಾದಿ ಶುಭಾಶಯ
ಶ್ರೀ ಜಗನ್ಮಾತೆ ಚಾಮುಂಡಾಂ
ಬಿಕಾ ಕೃಪೆಯಿಂದ ಹೇವಿಳಂಬಿ
ನಾಮ ಸಂವತ್ಸರದ ಯುಗಾದಿ ಸಂದ
ರ್ಭದಲ್ಲಿ ವಿಶಾಲ ಮೈಸೂರು ಸಂಸ್ಥಾ
ನದ ಪ್ರಜಾಬಾಂಧವರಿಗೂ, ಭಾವಿ ಮಂ
ತ್ರಿ ಮಂಡಲಕ್ಕೂ, ನಮ್ಮ ಹಿತೈಷಿಗಳಿ
ಗೂ ಮಿತ್ರರಿಗೂ ಆಯುರಾ
ರೋಗ್ಯ ಭಾಗ್ಯಗಳನ್ನು ಕರುಣಿಸಲಿ
ಶ್ರೀ ಸತ್ಯನಾರಾಯಣ
ಪರಿಮಳ ಫ್ಯಾಕ್ಟರಿ,
ಮೈಸೂರು

ಇಂದಿನ ಪತ್ರಿಕೆ ೨ ಕಾಸು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ . 446

ಪುಟ ೧೪] SADHVI : SUNDAY 31—3—1957 ಮೈಸೂರು : ಭಾನುವಾರ ೩೧—೩—೧೯೫೭ : [ಸಂಚಿಕೆ : [illegible]

ಗಣತಂತ್ರ ಪರಿಷತ್ತಿನ ನಾಯಕರಿಗೆ ಒರಿಸ್ಸಾ ಗೌರ್ನರ್ ಕರೆ

ಹೇವಿಳಂಬಿ ಸಂವತ್ಸರದ ಫಲಗಳು

ಜ್ಯೋತಿಷ ಮತ್ತು ಧರ್ಮ ಶಾಸ್ತ್ರ ವಿದ್ವಾನ್ ಶ್ರೀ ನಾ ಕೃಷ್ಣ ಜೋಯಿಸರು ಈ ರೀತಿ ಬರೆಯುತ್ತಾರೆ –

ಸಂವತ್ಸರಗಳಲ್ಲಿ ೩೧ನೆಯದಾದ ಹೇವಿಳಂಬಿ ಹೆಸರಿನ ಚಾಂದ್ರ ವರ್ಷವು ಸನ್ ೧೯೫೭ ಏಪ್ರಿಲ್ ೧ನೇ ತಾರೀಖು ಸೋಮವಾರ [illegible] ಗುತ್ತದೆ ಸೌರಮಾನ ಹೇವಿಳಂಬಿ ವತ್ಸರವು ಏಪ್ರಿಲ್ ೧೩ನೇ ತಾರೀಖು ಆ[illegible] ತ್ತದೆ ಈ ವರ್ಷಾರಂಭದ ದಿನವೇ [illegible] ದಿಗೆ [illegible] ಶಾಲಿವಾಹನ ಶಕ [illegible] ನೇ ವರ್ಷ ಪ್ರಾರಂಭ [illegible] ಇಂದು ಕಲಿ ಯುಗದ [illegible] ನೇ ದಿವಸ

ಹೇವಿಳಂಬಿ ಸಂವತ್ಸರ ಪುರುಷನ ಬಣ್ಣ [illegible] ಕರ್ಪೂರ, ಅಭಿನಯನ ದೇವತೆ ಆ[illegible] ರಾಜ್ಯಪಾಲರಲ್ಲಿ ಪರಸ್ಪರ [illegible] ವಾಗುತ್ತದೆ ಪ್ರಜೆಗಳಿಗೆ ಪೀಡೆ [illegible] ಪದಾರ್ಥಗಳ ಬೆಲೆ ಹೆಚ್ಚುತ್ತದೆ ಇ[illegible] ಜನರ ಸೌಖ್ಯಕ್ಕೆ ಕುಂದಿಲ್ಲ ಈ ವ[illegible] ಟ್ಟಿದವನು ವಸ್ತು ಸಂಗ್ರಹಣ ಕಾ[illegible] ಚಿನ್ನ, ಬಟ್ಟೆ, ಧಾನ್ಯ, ರತ್ನ [illegible] ಕೂಡಿ ಹಂಡತಿಮಕ್ಕಳೊಡನೆ ಸುಖಿಸುತ್ತಾನೆ

ನವ ನಾಯಕರು

[illegible] ರಾಜ ಚಂದ್ರ ಮತ್ತು ಆತನೇ ಸೇ[illegible] ಮಂತ್ರಿ ಶನಿ ಸೇನಾಧಿಪತಿ ಶುಕ್ರ [illegible] ಧಿಪತಿ ಮತ್ತು ಮೇಘಾಧಿಪತಿ [illegible] ಧಿಪತಿ ಮಂಗಳ, ಧಾನ್ಯಾಧಿಪತಿ ಸೂರ್ಯ, [illegible] ಧಿಪತಿ ಗುರು, ಪಶುನಾಯಕ ಗೋ[illegible]

ನವ ನಾಯಕರಲ್ಲಿ ರಾಜ, ಸೇನಾಧಿಪತಿ, ಅ[illegible] ಧಿಪ, ಮೇಘಾಧಿಪತಿ, ರಸಾಧಿಪತಿ ಮ[illegible] ಪತಿ ಈ ಆರು ಮಂದಿ ನಾಯಕರು [illegible] ಗ್ರಹಗಳಾಗಿರುತ್ತಾರೆ ಪಶು ನಾಯ[illegible] ದನೇ ಈ ನಾಯಕರಿಂದ ಈ ವ[illegible] ಕೂಲವಾದ ಮಳೆಯಾಗುತ್ತದೆ [illegible] ಮಿರುತ್ತದೆ ಬಿಳೀ ಧಾನ್ಯವು ಫಲಿ[illegible] ಗಳು ಸೌಖ್ಯದಿಂದಿರುತ್ತಾರೆ. ದೇ[illegible] ತೀರ್ಥೋತ್ಸವಾದಿಗಳು ನಡೆಯುತ್ತವೆ [illegible] ಸಾಮಾನ್ಯಗೂ ಸುರತ ಕೇಳಿಯಲ್ಲಿ [illegible] ಹುಲ್ಲು ಸಮೃದ್ಧಿಯಿದ್ದು ಪ[illegible] ದಿಂದಿರುತ್ತವೆ ಶ್ರೀಗಂಧ ಕರ್ಪೂ[illegible], ಮುತ್ತು, ಚಿನ್ನ, ಕೇಸರಿ ಇ[illegible] ದ ಪದಾರ್ಥಗಳು ಹೆಚ್ಚಾಗಿ ದೊ[illegible] ಮಂತ್ರಿ, ಸಸ್ಯಾದಿಪತಿ, ಧಾನ್ಯಾ[illegible] ಮಂದಿ ನಾಯಕರು ಪಾಪ[illegible] ಗಿರುತ್ತಾರೆ ಇವರಿಂದ ಕೆಲವು ಕಡೆ [illegible] ಬೆಳೆಗೆ ಆತಂಕವಾಗುತ್ತದೆ ರಾ[illegible] ಭಯ ಇರುತ್ತದೆ ಬಿಸಿಲ [illegible] ಬಂಗಾರು ಬೆಳೆ ಅನುಕೂಲ [illegible]

ಉತ್ತರ [illegible] ಪೂರ್ವ ರಾಜ್ಯವನ್ನು ಹ[illegible]

[illegible] ನಕ್ಷತ್ರವನ್ನು ರಾತ್ರಿ [illegible] ಗುರುವು ಸಿಂಹ, ಕನ್ಯಾ, ತುಲಾ ರಾಶಿಗಳಲ್ಲಿ ಸಂಚರಿಸುತ್ತಾನೆ ಶನಿಯು [illegible] ಫೆಬ್ರವರಿ [illegible] ನೇ ತಾ॥ ವರೆಗೆ ವೃಶ್ಚಿಕದಲ್ಲಿ ಅನಂತರ ಧನುಸ್ಸಿನಲ್ಲೂ ಸಂಚರಿಸುತ್ತಾನೆ ತಾ॥ [illegible] ರಿಂದ [illegible] ರವರೆಗೆ ಗುರುವು ಅಸ್ತನಾಗಿರುತ್ತಾನೆ ವರ್ಷಾರಂಭದಿಂದ ತಾ॥ [illegible] ರವರೆಗೂ ಪುನಃ [illegible] ರಿಂದ [illegible] ವರೆಗೂ ಶುಕ್ರನು ಅಸ್ತನಾಗಿರುತ್ತಾನೆ

ಗ್ರಹಣಗಳು

ತಾ॥ [illegible] ನೇ ಸೋಮವಾರ ರಾತ್ರಿ [illegible] ಘಟಿಗೆ [illegible] ನಕ್ಷತ್ರದಲ್ಲಿ [illegible] ತಾ॥ [illegible] ನೇ ಗುರುವಾರ ಸಾಯಂಕಾಲ [illegible] ಘಂಟೆ ಭರಣಿ ನಕ್ಷತ್ರದಲ್ಲಿ ಚಂದ್ರಗ್ರಹಣವಾಗುತ್ತದೆ

ಮಕರ ಸಂಕ್ರಾಂತಿ ಫಲ

ತಾ॥ [illegible] ನೇ ಪುಷ್ಯ [illegible] ಸೋಮವಾರ ದಿನ [illegible] (ತೆಲುಗಿನಲ್ಲಿ ಮಂಗಳವಾರ) [illegible] ಲಗ್ನದಲ್ಲಿ ಸೂರ್ಯನು ನಿರಯನ ಮಕರ [illegible] ವನ್ನು ಪ್ರವೇಶಿಸುತ್ತಾನೆ ಸಂಕ್ರಾಂತಿ ದೇವತೆಯ ಹೆಸರು ಧ್ವಾಂಕ್ಷಿ ವಾಹನ ಆನೆ ಆಯುಧ ಧನಸ್ಸು ಜನನ ರಕ್ಷ್ಯ ದೇಶದಲ್ಲಿ ಸ್ನಾನ ಯಮುನಾ ನದಿಯಲ್ಲಿ ಉಡುಗೆ ನೀಲ ವಸ್ತ್ರ ಆಹಾರ ಹಾಲು ಇವರಿಂದ ರಕ್ಷ್ಯ ಜನರಿಗೆ ತೊಂದರೆ ಯಮುನಾ ನದಿಯಲ್ಲಿ ಪ್ರವಾಹ ಕಡಿಮೆ ನೀಲಿ ಮತ್ತು ಕೆಂಪು ಪದಾರ್ಥಗಳು, ಛತ್ರ ಸೀಸ, ಹಸು ಇವುಗಳಿಗೆ ಬೆಲೆ ಹೆಚ್ಚು ಆನೆಗಳಿಗೆ ತೊಂದರೆ

ಮಳೆ ವಿಚಾರ

ಈ ವರ್ಷದ ಮೇಘದ ಹೆಸರು ಆವರ್ತ ಇದು ಮೇರು ಶಿಖರದಲ್ಲಿ ಹುಟ್ಟಿ, ಮೂರು ಕೊಳಗ ಮಳೆ ಸುರಿಸುತ್ತದೆ ಆರ್ದ್ರಾ, ಪುಷ್ಯ, ಹಸ್ತ ಮಳೆಗಳು ಅನುಕೂಲವಾಗಿ ಆಗುತ್ತವೆ ಭರಣಿ, ಆಶ್ಲೇಷ, ಮಖ, ಪುಬ್ಬ ಉತ್ತರ ಚಿತ್ತ ಮಳೆಗಳು ಸಾಮಾನ್ಯವಾಗಿಯೂ ಕೃತ್ತಿಕ, ರೋಹಿಣಿ, ಪುನರ್ವಸು, ಸ್ವಾತಿ, ವಿಶಾಖ ಮಳೆಗಳು ಖಂಡವೃಷ್ಟಿಯಾಗಿಯೂ ಬೀಳುತ್ತವೆ ಒಟ್ಟಿನಲ್ಲಿ ಬೆಳೆಗಳಾಗುವಷ್ಟು ಮಳೆ ಬೀಳುತ್ತದೆ

ನಮ್ಮ ಶುಭಾಶಯಗಳು

ನೂತನ ವರ್ಷದಲ್ಲಿ ಭಗವಂತನು ನಮ್ಮ ವಾಚಕರಿಗೂ, ಜಾಹೀರಾತುದಾರರಿಗೂ, ಹಿತೈಷಿಗಳಿಗೂ ಮತ್ತು ಸಕಲರಿಗೂ ಮಂಗಳಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

— ಸಂಪಾದಕ

ಬ್ರಿಟನ್ನಿನ ಪ್ರಮುಖ ಮಂತ್ರಿಯೊಬ್ಬರ ರಾಜೀನಾಮೆ

ಸೈಪ್ರಸ್ ದ್ವೀಪದ ಆರ್ಚ್‌ಬಿಷಪ್ ಮಕಾರಿಯೊಸ್‌ರವರನ್ನು ಬಿಡುಗಡೆ ಮಾಡಿದ ಬಗ್ಗೆ ಪ್ರತಿಭಟಿಸಿ ಲಾರ್ಡ್ ಪ್ರಿವಿ ಸೀಲರಾದ ಲಾರ್ಡ್ ಸ್ಯಾಲಿಸ್‌ಬರಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿರುವರು ಅಲ್ಲಿ ಆಡಳಿತ ನಡೆಸುತ್ತಿರುವ ಕನ್ಸರ್ವೇಟಿವ್ ಪಕ್ಷದಲ್ಲಿ ಅತ್ಯಂತ ಪ್ರಭಾ[illegible] ನಾಯಕರಲ್ಲಿ ಇವರೂ ಒಬ್ಬರು

ಒರಿಸ್ಸಾ ಮಂತ್ರಿಮಂಡಲದ ರಚನೆ

ಗಣ ತಂತ್ರ ಪರಿಷತ್ತಿನ ನಾಯಕರಿಗೆ ಗವರ್ನರರ ಆಹ್ವಾನ

ಒರಿಸ್ಸಾ ಗವರ್ನರ್ ಡಾ. ಭೀಮಸೇನ ಸಾಚಾರ್‌ರವರು ಅಲ್ಲಿನ ಶಾಸನ ಸಭೆಯ ಗಣ ತಂತ್ರ ಪರಿಷತ್ತಿನ ನಾಯಕರಾದ ಪಾಟ್ನಾ ಮಹಾರಾಜರಿಗೆ ಆಹ್ವಾನವನ್ನು ಕಳುಹಿಸಿ ಈ ದಿನ ತಮ್ಮನ್ನು ಭೇಟಿ ಮಾಡುವಂತೆ ಕೋರಿರುತ್ತಾರೆ ಶಾಸನ ಸಭೆಯ ೧೪೦ ಸದಸ್ಯರ ಪೈಕಿ ತಮಗೆ ೭೩ ಮಂದಿಯ ಬೆಂಬಲವಿರುವುದೆಂದು ಪಾಟ್ನಾ ಮಹಾರಾಜರು ಕಳೆದ [illegible] ನೇ ತಾರೀಖು ಗವರ್ನರರಿಗೆ ಪತ್ರ ಬರೆದು ಸಂಸ್ಥಾನದ ನೂತನ ಮಂತ್ರಿ ಮಂಡಲವನ್ನು ರಚಿಸಲು ತಮ್ಮನ್ನು ಆಹ್ವಾನಿಸುವುದು ಅಗತ್ಯವೆಂದು ಸೂಚಿಸಿದ್ದರು. ತಮಗೆ [illegible] ಮಂದಿ ಕಮ್ಯೂನಿಸ್ಟ್ ಸದಸ್ಯರ ಬೆಂಬಲವಿರುವುದೆಂದೂ ಅವರು ಹೇಳಿರುವರು ಆದರೆ ಈ ವಿಚಾರವನ್ನು ಕಮ್ಯೂನಿಸ್ಟ್ ಸದಸ್ಯರು ನಿರಾಕರಿಸಿರುವರು

ಏಳು ಮಂದಿ ಸ್ವತಂತ್ರರು ತಮ್ಮದೇ ಪ್ರತ್ಯೇಕ ಗುಂಪನ್ನು ರಚಿಸಿಕೊಂಡಿರುತ್ತಾರೆ ತಾವು ಇತರ ಪಕ್ಷಗಳೊಡನೆ ಸೇರುವುದಿಲ್ಲವೆಂದೂ, ಪ್ರತ್ಯೇಕವಾಗಿ ಉಳಿಯುವುದಾಗಿಯೂ ಇವರುಗಳು ತಿಳಿಸಿ ಚುನಾವಣೆಯಲ್ಲಿ ಪ್ರಜೆಗಳು ಆಡಳಿತ ನಡೆಸುತ್ತಿರುವ ಕಾಂಗ್ರೆಸ್ಸಿನ ವಿರುದ್ಧವಾಗಿ ಅಭಿಪ್ರಾಯ ಸೂಚಿಸಿರುವರೆಂದೂ, ಆದ್ದರಿಂದ ಕಾಂಗ್ರೆಸ್ಸೇತರ ಮಂತ್ರಿಮಂಡಲದ ಸ್ಥಾಪನೆಯು ಅಪೇಕ್ಷಣೀಯವೆಂದೂ ತಿಳಿಸಿರುತ್ತಾರೆ

ಸೂಚನೆ

ಚಾಂದ್ರಮಾನ ಯುಗಾದಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ಭರತ ಭಕ್ತಿ ಕಾವ್ಯ ವಾಚನ

ಮೈಸೂರು ೩೧

ಯುಗಾದಿ ಹಬ್ಬದ ಪ್ರಯುಕ್ತ ನಾಳೆ ಸೋಮವಾರ ಸಂಜೆ ಆರೂವರೆ ಗಂಟೆಗೆ ೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ಶ್ರೀಮತಿಗಳಾದ ಬಿ ವಸುಂಧರ ಮತ್ತು ಜಿ ವಸುಧಾರವರುಗಳು "ಭರತ ಭಕ್ತಿ" ಕಾವ್ಯ ವಾಚನವನ್ನು ಮಾಡುವರು ಸರ್ವರಿಗೂ ಸ್ವಾಗತವಿದೆ

ಯುಗಾದಿ ಪ್ರಯುಕ್ತ ವಿಶೇಷ ಪೂಜೆ

ನಗರದ ವಿದ್ಯಾರಣ್ಯಪುರದ ೧೦೩೬/೫ನೇ ನಂಬರು ಕಟ್ಟಡದಲ್ಲಿರುವ ದೈವಿಕಾಶ್ರಮದಲ್ಲಿ ಶ್ರೀ ಸ್ವಾಮಿ ಶ್ರೀ ಕೃಷ್ಣಚೈತನ್ಯರವರು ದೇಶದ ಸುಭಿಕ್ಷಕ್ಕಾಗಿಯೂ ಮತ್ತು ಭಕ್ತಾದಿಗಳ ಕ್ಷೇಮಕ್ಕಾಗಿಯೂ ನಾಳೆ ಯುಗಾದಿ ಪ್ರಯುಕ್ತ ವಿಶೇಷ ಪೂಜೆಯನ್ನು ನೆರವೇರಿಸುವರು ಅಂದು ಬೆಳಿಗ್ಗೆ ೧೦ ಗಂಟೆಗೆ ದೇವರ ದರ್ಶನ ಮತ್ತು ಪೂಜೆಯೂ, ಬಳಿಕ್ಕೆ ತೀರ್ಥ ಪ್ರಸಾದ ವಿನಿಯೋಗವೂ ಜರುಗುವುವು ಹೇವಿಳಂಬಿ ಸಂವತ್ಸರದಲ್ಲಿ ದೇಶದ ಸುಭಿಕ್ಷೆಗಾಗಿ ಶ್ರೀ ಸ್ವಾಮಿ ಕೃಷ್ಣಚೈತನ್ಯರವರು ಯುಗಾದಿ ಕಳೆದನಂತರ ಉಪನ್ಯಾಸ ಮಾಡಲು ಸಂಚರಿಸುವರು

“ಸಾಧ್ವಿ” ಪತ್ರಿಕೆಯ ಮಾರಾಟದ ಬೆಲೆ ಎರಡು ನಯೇ ಪೈಸೆ

ಚಂದಾ ದರದಲ್ಲಿ ಬದಲಾವಣೆಯಿಲ್ಲ

ಹೊಸ ನಾಣ್ಯ ಪದ್ಧತಿಗನುಸಾರವಾಗಿ ಇನ್ನು ಮುಂದೆ “ಸಾಧ್ವಿ” ಪತ್ರಿಕೆಯ ಮಾರಾಟದ ಬೆಲೆ ಎರಡು ನಯೇ ಪೈಸೆ ಎಂದು ಗೊತ್ತುಮಾಡಲಾಗಿದೆ ಭಾನುವಾರದ ಸಂಚಿಕೆಗೂ ಸಹ ಬೆಲೆ ಎರಡು ನಯೇ ಪೈಸ, ಅಂಚೆ ಮೂಲಕ ತಿಂಗಳಿಗೆ ಒಂದು ರೂಪಾಯಿ ಅಥವಾ ನೂರು ನಯೇ ಪೈಸೆ ಇರುತ್ತದೆ.

ಸ್ಥಳ ಪರಸ್ಥಳಗಳ ತಿಂಗಳ ಚಂದಾ ದರದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಏಜೆಂಟರ ಮೂಲಕ ಎಂದಿನಂತೆ ತಿಂಗಳಿಗೆ ಎಂಟಾಣೆ ಅಥವಾ ಐವತ್ತು ನಯೇ ಪೈಸ ಇರುತ್ತದೆ

ಮಹಾ ಜನರು ಉದಾರವಾಗಿ ಸಹಕರಿಸಬೇಕಾಗಿ ವಿನಂತಿ

— ವ್ಯವಸ್ಥಾಪಕ

ಲಂಡನ್ನಿನಲ್ಲಿ ೫ ಲಕ್ಷ ಇಂಜನಿಯರಿಂಗ್ ಕಾರ್ಮಿಕರ ಮುಷ್ಕರ

ಲಂಡನ್ನಿನಲ್ಲಿ ನೆನ್ನೆ ೫ ಲಕ್ಷ ಇಂಜನಿಯರಿಂಗ್ ಕೆಲಸಗಾರರು ಮುಷ್ಕರವನ್ನಾರಂಭಿಸಿದರು ಬರುವ ಶನಿವಾರದೊಳಗೆ ಇಡೀ ರಾಷ್ಟ್ರದ ಇಂಜನಿಯರಿಂಗ್ ಕೆಲಸಗಾರರೆಲ್ಲರೂ ಮುಷ್ಕರ ಹೂಡುವರೆಂದು ಹೇಳಲಾಗಿದೆ. ಶೇಕಡ ೧೦ರಂತೆ ಸಂಬಳವನ್ನು ಹೆಚ್ಚಿಸಬೇಕೆಂದು ಒತ್ತಾಯಪಡಿಸಿ ಅಲ್ಲಿನ ೧೦ ಕೈಗಾರಿಕಾ ಪ್ರದೇಶಗಳಲ್ಲಿ ಕಳೆದ ಶನಿವಾರದಿಂದಲೂ ೧೦ ಲಕ್ಷ ಮಂದಿ ಈಗಾಗಲೇ ಮುಷ್ಕರ ನಡೆಸುತ್ತಿರುವರು

ಪಂಚಾಂಗ ಶ್ರವಣ

ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯ ಆವರಣದಲ್ಲಿರುವ ಶ್ರೀ ವಾಲುಕೇಶ್ವರ ಭಾರತಿ ಸ್ವಾಮಿಗಳವರ ದೇವಸ್ಥಾನದಲ್ಲಿ ನಾಳೆ ಶ್ರೀ ಸ್ವಾಮಿಗಳವರಿಗೆ ಮಹಾ ಪೂಜೆ, ಸಂಜೆ ೭॥ ಗಂಟೆಗೆ ಬ್ರಹ್ಮಶ್ರೀ ಪಾಟಣಕರ ಚಂದ್ರಶೇಖರ ಭಟ್ಟರಿಂದ ಪಂಚಾಂಗ ಶ್ರವಣ ಮತ್ತು ಮಹಾ ಮಂಗಳಾರತಿಗಳು ನಡೆಯುತ್ತವೆ ಸರ್ವರೂ ದಯಮಾಡಿಸುವಂತೆ ಕೋರಲಾಗಿದೆ

ಶುಭಾಶಯಗಳ ಸ್ವೀಕಾರ

ಬೆಂಗಳೂರಿನ ಸಾಧು-ಚಾರ್ಯ ಮತ್ತು ಕಂಪೆನಿಯವರೂ ಮತ್ತು ನಗರದ ವಿದ್ಯಾರಣ್ಯಪುರದಲ್ಲಿರುವ ದೈವಿಕಾಶ್ರಮದವರೂ ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಕಾವ್ಯವಾಚನ ಮತ್ತು ಪಂಚಾಂಗ ಶ್ರವಣ

ನಾಳೆ ಯುಗಾದಿ ಹಬ್ಬದ ಪ್ರಯುಕ್ತ ಸಂಜೆ ೭ ಗಂಟೆಗೆ ಜಯನಗರದ ಬಡಾವಣೆಯಲ್ಲಿರುವ ಪೌರಾಣಿಕ ಸಾಲಿಗ್ರಾಮದ ಶ್ರೀಕಂಠ ಶಾಸ್ತ್ರಿಗಳ ಮನೆಯಲ್ಲಿ ಹರಧನುರ್ಭಂಗ ಎಂಬ ವಿಷಯವಾಗಿ ಶ್ರೀ ಪಿ ಎ ಗಿರಿಧರಮೂರ್ತಿಯವರಿಂದ ವಾಚನವನ್ನೂ, ತರುವಾಯ ಪಂಚಾಂಗ ಶ್ರವಣವನ್ನು ಏರ್ಪಡಿಸಿರುತ್ತಾರೆ

ರಾಮೋತ್ಸವದ ಕಾರ್ಯಕ್ರಮಗಳು

ಮೈಸೂರು ೩೦

ಶ್ರೀ ರಾಮೋತ್ಸವದ ಅಂಗವಾಗಿ ನಗರದಲ್ಲಿ ಕೆಳಗೆ ಕಂಡ ಕಾರ್ಯಕ್ರಮಗಳು ಏರ್ಪಾಡಾಗಿವೆ

ಸೀತಾವಿಲಾಸ [illegible] ಶ್ರೀ ಸೀತಾರಾಮ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ವಿ ಹೆಚ್ ಟಿ ರಾಮಸ್ವಾಮಿಯವರ ಗಾಯನ [illegible] ಪಿಟೀಲು [illegible] ನಾಗಣ್ಣನವರ ಮೃದಂಗ

ಒಂಟಿಕೊಪ್ಪಲಿನಲ್ಲಿರುವ [illegible] ಶ್ರೀ [illegible] ಸಮಾಜದ ಆವರಣದಲ್ಲಿ ನಾಳೆ ಸಂಜೆ ೬ ಗಂಟೆಗೆ ವಿ ಬಿ ಆರ್ ಶಂಕರಾಚಾರ್ಯರ ವೇಣುವಾದನ ವಿ ಟಿ [illegible] ರಾಜಪ್ಪನವರ ಪಿಟೀಲು [illegible] ವಿ ಟಿ ಆರ್ ಶ್ರೀನಿವಾಸರವರಿಂದ ಗಾಯನ

[illegible] ಅಗ್ರಹಾರದ ಶ್ರೀ ರಾಮೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬.೩ ಗಂಟೆಗೆ [illegible] ಶ್ರವಣ ೭.೩೦ಕ್ಕೆ ಕುಮಾರಿ ನಂದಿನಿಯವರಿಂದ ನೃತ್ಯ ಮತ್ತು ೮-೩೦ಕ್ಕೆ ಶ್ರೀ ರಾಜರಾಜೇಶ್ವರಿ ಕಲಾ ಮಂಡಳಿಯವರಿಂದ ವಾದ್ಯಗೋಷ್ಠಿ ನಾಳಿದ್ದು ಸಂಜೆ

UNIVERSITY SENATE ELECTION

Dear Sir

Please reserve your Vote o First Preference in my favour & oblige

Thanking you Yours

Sl No 42 K M R V Sastry,

Editor Mysore Prabha Daily

MYSORE

ಉಪನ್ಯಾಸ

ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಪ್ರೊಫೆಸರ್ ಎಸ್ ಒಬರ್‌ರವರು ಬರುವ ೩ನೇ ತಾರೀಖು ಮಂಗಳವಾರ ಸಂಜೆ ೬ ಗಂಟೆಗೆ ನಗರದ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ದಿ ರೈಸ್ ಆಫ್ ಅಮೆರಿಕನ್ ಅಂಡರ್‌ಸ್ಟಾಂಡಿಂಗ್ [illegible] ಏಷ್ಯಾ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಪ್ರಧಾನಿ ನೆಹರೂ ಮತ್ತು ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರ ಭೇಟಿ ಮತ್ತು "ಯು ಎಸ್ ಎ" ಗಳಿಗೆ ಸಂಬಂಧಪಟ್ಟ ಚಿತ್ರಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ

೬.೩೦ಕ್ಕೆ ವಿದುಷಿ ಗೌರಮ್ಮ ನಾಗರಾಜ್‌ರವರ [illegible] ೭-೩೦ ರಿಂದ ವಿದುಷಿ ಗೌರಿ ಕುಪ್ಪುಸ್ವಾಮಿಯವರ ಗಾಯನ ವಿ| ಮಹದೇವಪ್ಪನವರ ಪಿಟೀಲು ಮತ್ತು ವಿ|| ಹರಿಶ್ಚಂದ್ರರವರ ಮೃದಂಗ ೧೦ ರಿಂದ ವಿ| ನದೀಪುರಂ [illegible] ರಂಗಾಚಾರ್ಯರಿಂದ ಹರಿಕೀರ್ತನೆ

ಯುಗಾದಿ ಶುಭಾಶಯಗಳು

ನಮ್ಮ ಉದ್ಯಮದಲ್ಲಿ ನೆರವು ನೀಡಿ ಪ್ರೋತ್ಸಾಹಿಸಿದ ತಹ ನಮ್ಮ ಮಾನ್ಯ ಗಿರಾಕಿಗಳಿಗೂ ಮತ್ತು ಹಿತೈಷಿಗಳಿಗೂ ನೂತನ ವರ್ಷವಾದ ಹೇವಿಳಂಬಿ ಸಂವತ್ಸರದಲ್ಲಿ ಸಕಲ ಸನ್ಮಂಗಳಗಳುಂಟಾಗಲೆಂದು ಹಾರೈಸುತ್ತೇವೆ

ಬಿ ಮುನಿಸ್ವಾಮಪ್ಪ,

ಡಿಸ್ಟಿಲರ್ ಮತ್ತು ಲೈಸನ್ಸ್ ಹೋಲ್ಡರ್

ಗಾಯತ್ರಿ ಟಾಕೀಸ್ ಎದುರು [illegible] ಅಂಗಡಿ

ನೂರಡಿ ರಸ್ತೆ ಮೈಸೂರು

ಸೂಯೆಜ್ ಕಾಲುವೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಇನ್ನುಮುಂದೆ ಕಾಲುವೆ ಸಂಚಾರ ಶುಲ್ಕದಿಂದ ಬರುವ ಆದಾಯದ ಶೇಕಡ ೩೦ರಷ್ಟನ್ನು ವಿಶ್ವಸ [illegible]ಗೆ ಸಲ್ಲಿಸಲು ಈಜಿಪ್ಟಿನ ಅಧ್ಯಕ್ಷ ನಾಸೆರರು ಒಪ್ಪಿರುವರೆಂದು ವರದಿಯಾಗಿದೆ

Edited, Printed and Published by
A R Nagarajan at Sadhvi Press,
D Subbiah Road Mysore

ಹಬ್ಬಕ್ಕೆ

30" ಜಾರ್ಜೆಟ್ ಲಾಂಗ್ ಕ್ಲಾತ್ 0 12
ರಾಜಾ ಮಿಲ್ ಪಂಚೆ 8 8 0 ರಿಂದ 10 8
ವಾಯಿಲ್ ಸೀರೆಗಳು ಬೆಲೆ 4 14 0 ರಿಂದ
[illegible] ಬ್ಲೌಸ್ ಬಹಳ ಬಂದಿದೆ

ಬಾಹುಸಾರ್ ಕಂಪೆನಿ,

ನೂರಡಿ ರಸ್ತೆ ಮೈಸೂರು

ಜಯ ಕೆಫೆ ಹೋಟೇಲಿನ ಬೀಡಿ ಅಂಗಡಿ ಬಿಕರಿಗಿದೆ

ನಗರದ ನೂರಡಿ ರಸ್ತೆಯಲ್ಲಿ ಜಯಾ ಕೆಫೆ ಹೋಟೇಲಿನಲ್ಲಿರುವ ಬೀಡಿ ಮತ್ತು ಸ್ಟೇಷನರಿ ಅಂಗಡಿಯು ಮಾಲುಗಳ ಸಮೇತ ಬಿಕರಿಗೆ ದೊರೆಯುತ್ತೆ ವಿವರಗಳಿಗಾಗಿ ವಿಚಾರಿಸಿ

ಜಯ ಕೆಫೆ,

ನೂರಡಿ ರಸ್ತೆ ಮೈಸೂರು.

ಯುಗಾದಿ ಹಬ್ಬದ ಶುಭಾಶಯಗಳು

— 0 —

ನಮ್ಮ ಗಿರಾಕಿಗಳು ಮತ್ತು ಶ್ರೇಯೋಭಿಲಾಷಿಗಳಿಗೆ ಯುಗಾದಿ ಶುಭಾಶಯಗಳನ್ನು ಕೋರುತ್ತಾ ನವವರ್ಷದಲ್ಲಿ ಎಲ್ಲರಿಗೂ ಭಗವಂತನು ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ

ನಾಳೆ ಮಧ್ಯಾಹ್ನ ಮಾಮೂಲು ದರದಲ್ಲಿ ಸ್ಪೆಷಲ್ ಊಟ ಉಂಟು

ಇಂದ್ರ ಭವನ

ಬೋರ್ಡಿಂಗ್ ಅಂಡ್ ಲಾಡ್ಜಿಂಗ್, ಧನ್ವಂತರಿ ರಸ್ತೆ, ಮೈಸೂರು

ಬಾಂಬೆ ಇಂದ್ರಭವನ್ — ಇಂದ್ರ ಕೆಫೆ

ಸಯ್ಯಾಜಿ ರಾವ್ ರಸ್ತೆ ಮೈಸೂರು

ವಂದೇ ಮಾತರಂ

ನೂತನ ಹೇವಿಳಂಬಿ ಸಂವತ್ಸರವು ನಮ್ಮ ಮಾನ್ಯ ಗಿರಾಕಿ ವರ್ಗಕ್ಕೂ, ಪ್ರೋತ್ಸಾಹಕರಿಗೂ ಮತ್ತು ಬಂಧು ಮಿತ್ರರಿಗೂ ಸೌಖ್ಯ ಸಂಪದಭಿವೃದ್ಧಿಯನ್ನು ನೀಡಲೆಂದೂ ಭಾರತದ ಮನೆಮನೆಯೂ ಸಂತಸದ ಬೀಡಾಗಲೆಂದೂ, ವಿಶ್ವ ವ್ಯಾಪಿ ಶಾಂತಿಯು ಏರ್ಪಡಲೆಂದೂ ಶ್ರೀ ಜಗನ್ನಿಯಾಮಕನಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸುವೆವು

ಸೌಭಾಗ್ಯ ಸ್ಟೋರ್ಸ್

ಫೋನ್ 249 ದೇವರಾಜಾ ಮಾರ್ಕೆಟ್ ಮೈಸೂರು

The Mysore District Co operative Central Bank Ltd,

MYSORE

Dated 30th March 1957

NOTIFICATION

Dated 25th March 1957

The [illegible] and the Co-operative Societies in Mysore District are hereby informed that the Mysore District Co-operative Central Bank Ltd Mysore hitherto situated in Manohara Buildings Narayan Sastry Road will be shifted to the 1st & 2nd floor of the Buildings of M/s H Venkataramiah and Sons ([illegible] Buildings) New Statue Square Mysore from 1-4-1957

B S Narasimha Iyengar
Secretary

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

28-3-57 ರಿಂದ ಅಮೋಘ ಪ್ರಾರಂಭ

[illegible]ರವರ ತಮಿಳು ಚಿತ್ರ ★ ಮಂತ್ರವಾದಿ

ಶೀಘ್ರದಲ್ಲೇ ಬರುತ್ತದೆ ವಿಜಯಾರವರ ತಮಿಳು ಚಿತ್ರ ಮಾಯಾ ಬಜಾರ್

ವರ್ತಕರಿಗೂ ವಿದ್ಯಾರ್ಥಿಗಳಿಗೂ ಅಪೂರ್ವ ಸುಸಮಯ!

ಇದೇ ಏಪ್ರಿಲ್ ಒಂದರಿಂದ ಜಾರಿಗೆ ಬರಲಿರುವ ನಯಾ ಪೈಸಾ ದಶಮಾಂಶ ನಾಣ್ಯಗಳು ಮತ್ತು ರೂ ಆ ಪೈ ಗಳನ್ನು ನಯಾ ಪೈಸೆಗಳಿಗೆ [illegible] ಕಾಸಿನಿಂದ ಹಿಡಿದು ಒಂದು ರೂ ವರೆಗೆ ಮತ್ತು ಯಾವ [illegible] ವರೆಗೂ 1/8 ರಿಂದ ಹಿಡಿದು 10 000 ಸಂಖ್ಯೆಯವರೆಗೂ [illegible] ಬೆಲೆ ಕೂಲಿ, ಡಿಸ್ಕೌಂಟು ಶೇಕಡ ವಾರು ಲೆಕ್ಕವನ್ನು ಮತ್ತು ಬಸ್ ಪ್ರಯಾಣದ ಮೈಲೇಜನ್ನೂ ವಿವರವಾಗಿ ತಿಳಿಸಲಾಗಿದೆ

ಎಲೈಟ್ಸ್ ರೆಡಿ ರೆಕನರ್

ಬಿಕರಿಗೆ ಸಿದ್ಧವಾಗಿದೆ

ವಿದ್ಯಾಸಂಸ್ಥೆಗಳು ದಿನಸಿ ಮತ್ತು ಬಟ್ಟೆ ವರ್ತಕರು ಮತ್ತು ಇತರೆ ವ್ಯವಹಾರಗಳನ್ನು ಹೊಂದಿರುವವರಿಗೆ ಅತ್ಯಾವಶ್ಯಕವಾದ ಈ ಪುಸ್ತಕವು 220 ಪುಟಗಳಿಂದ ಕೂಡಿದೆ

ಬೆಲೆ 3 0 0 ರೂ ಅಂಚೆ ವೆಚ್ಚ ಬೇರೆ

ಮಾರಾಟಗಾರರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತೆ

ವಿವರಗಳಿಗೆ ಕೆಳಗೆ ಕಂಡವರೊಡನೆ ವ್ಯವಹರಿಸಿ

ಎಲೈಟ್ ಪ್ರಿಂಟರ್ಸ್,

1041 ಶಿವರಾಂಪೇಟೆ, ಮೈಸೂರು

ಫೋನ್ ನಂ 341 - ಟೆಲಿಗ್ರಾಂ . ಆರಾಮ್

ಯುಗಾದಿಯ ಶುಭಾಶಯಗಳು

ಆರಾಮ ವಸತಿ ಮತ್ತು ಉತ್ತಮ ಭೋಜನ ಫಲಾಹಾರಗಳುಳ್ಳ ಈ ಭವನಕ್ಕೆ ಒಮ್ಮೆ ದಯಮಾಡಿಸಿ ಬೆಲೆಗಿಂತ ಅಧಿಕವಾದ ಫಲ ಇಲ್ಲಿ ದೊರೆಯುವುದು

ನ್ಯೂ ಚಾಮುಂಡೇಶ್ವರಿ ಕೆಫೆ

ಫಲಾಹಾರ, ಭೋಜನ ಮತ್ತು ವಸತಿ ಗೃಹ

ಶಿವರಾಂಪೇಟೆ ಇಲವಾಲದ ರಸ್ತೆ ಮೈಸೂರು-[illegible] ಚಂದ್ರಯ್ಯ

ನ್ಯೂ ಅಪೇರಾ ಟಾಕೀಸ್ ★ 31—3—57ರಿಂದ : ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಆರ್ ಎಂ ಆರ್ ಪಿಕ್ಚರ್ಸ್‌ರವರ ಕನ್ನಡ ಚಿತ್ರ

ಜೂನಿಯರ್ ಶ್ರೀರಂಜನಿ, ಸಂಧ್ಯಾ, ಸೂರ್ಯಕಲಾ, ಆರ್ ನಾಗೇಂದ್ರ ರಾವ್,

ಉದಯಕುಮಾರ್, ಕಲ್ಯಾಣಕುಮಾರ್ [illegible] ಮುಂತಾದವರು ಪಾತ್ರವಹಿಸಿರುವ

ದರ 3 3 0, 1 10 0 1 4 0 0 1 4 0 0 8 0 0 6 0 [illegible] 8 [illegible] ಮತ್ತು 6 [illegible]

★ ಪ್ರೇಮದ ಪುತ್ರಿ ★

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ



ಇಂದಿನ ಪತ್ರಿಕೆ 2 ನಯೆ ಪೈಸೆ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
•
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
[illegible] ರಸ್ತೆ,
ಬೆಂಗಳೂರು-2

ಪುಟ ೧೫] SADHVI : TUESDAY 2-4 1957 ಮೈಸೂರು : ಮಂಗಳವಾರ ೨—೪—೧೯೫೭ [ಸಂಚಿಕೆ : ೨೪೩

ಮೈಸೂರು ಸಂಸ್ಥಾನದ ಮಂತ್ರಿಮಂಡಲದ ರಾಜೀನಾಮೆ

[illegible] ೧೦ ವರ್ಷ ಕಾಲ ಮೈಸೂರಿನವರಿಗೇ ಮುಖ್ಯ ಮಂತ್ರಿ ಪದವಿ

[illegible]ಸಭಾ ಸತ್ಕಾರಕೂಟದಲ್ಲಿ ಕಂಠಿಯವರ ಹೇಳಿಕೆ

ಮೈ.] ನಂಜನಗೂಡು ೩

[illegible]ಸಂಸ್ಥಾನದ ವಿಧಾನ ಸಭೆಯ ಅಧ್ಯಕ್ಷರಾದ ಎಸ್. ಆರ್. ಕಂಠಿಯವರು ಕಳೆದ ಶುಕ್ರವಾರ [illegible]ಗೂಡಿಗೆ ಭೇಟಿ ಇತ್ತಿದ್ದರು. ಅವರ [illegible]ವಾಗಿ ಪುರಸಭೆಯವರು ಒಂದು ಸ[illegible]ಕೂಟವನ್ನು ಏರ್ಪಡಿಸಿದ್ದರು. ಅದರಲ್ಲಿ [illegible]ರುವವರು ಮಾತನಾಡಿ ಇನ್ನು ೧೦ ವ[illegible] ಮೈಸೂರು ಸಂಸ್ಥಾನದ ಮುಖ್ಯಮಂತ್ರಿ ಪದವಿಯು ಮೈಸೂರಿನವರಿಗೆ [illegible] ಕರ್ನಾಟಕದವರು ವಿಶ್ವಾಸ[illegible]ವೆಂದೂ ತಿಳಿಸಿದರು. ಪ್ರಾರಂಭದ[illegible] [illegible] ಕಟ್ಟುಸ್ವಾಮಿ[illegible] [illegible] ಮಾಡಿದರು.

[illegible]ಶ ನಾಣ್ಯ ಪದ್ಧತಿಯು ಶಾಂತಿಯುತ ಕ್ರಾಂತಿ

ಪ್ರಧಾನಿ ನೆಹರೂರವರ ಅಭಿಪ್ರಾಯ

ನೆನ್ನೆ[illegible]ವ ಜಾರಿಗೆ ಬಂದ ದಶಮಾಂಶ [illegible] ಪದ್ಧತಿಯು ಶಾಂತವಾದ ಮತ್ತು ದಿ[illegible] [illegible] ಕಾರಿಯಾದ ಕ್ರಾಂತಿಯೆಂದು ಪ್ರಧಾನಿ ನೆಹರೂರವರು ಸಂದೇಶವೊಂದರಲ್ಲಿ ತಿಳಿಸುತ್ತಾರೆ. ಮುಂದೆ ಅಳತೆ ತೂಕದಲ್ಲೂ [illegible] ವ್ಯವಸ್ಥೆಯಾಗುವುದೆಂದೂ ಅವ[illegible] [illegible]ವರು ನೆಹರೂರವರು ಹೊಸ ಬದ[illegible] ಅಗತ್ಯವಾಗಿರುವುದಲ್ಲದೆ ಅದು ಅನಿ[illegible]ವಾಗಿತ್ತೆಂದೂ ತಿಳಿಸಿರುತ್ತಾರೆ. ಹಲವು [illegible] ಉತ್ತಮವಾಗಿದ್ದರೂ ಈಗಿನ ಸನ್ನಿವೇಶದಲ್ಲಿ ಸರಿಯಾಗಿ ಹೊಂದಿಕೊಳ್ಳಲಾರದೆಂ[illegible] ಆದ್ದರಿಂದ ಬದಲಾಯಿಸುತ್ತಿರುವ ಕ್ರಮ[illegible]ಕ್ಕಂತೆ ಭಾರತವೂ ತನ್ನ ಪದ್ಧತಿಗಳನ್ನು [illegible] ಮಾಡಿಕೊಳ್ಳಬೇಕಾಗಿರುವುದೆಂದೂ ಅ[illegible] ತಿಳಿಸಿರುವರು. ಮತ್ತು ಜನರು ಹೊಸ [illegible]ಯನ್ನು ಸ್ವಾಗತಿಸಿ, ಸಹಕಾರ ನೀಡಬೇಕೆಂದು ಅವರು ಕೋರಿರುವರು.

[illegible]ಗೀತ ರತ್ನ ಟಿ. ಚೌಡಯ್ಯ[illegible]ರಿಗೆ ರಾಷ್ಟ್ರಾಧ್ಯಕ್ಷರಿಂದ ಪ್ರಶಸ್ತಿ

[illegible] ಸಂಗೀತ ನಾಟಕ ಅಕಾಡೆಮಿಯವ[illegible] ಕೊಟ್ಟಿರುವ ಸಂಗೀತ ವಿದ್ವಾಂಸ[illegible] ನಟರು, ನಾಟಕ ಕರ್ತೃಗ[illegible] [illegible] ಪ್ರಶಸ್ತಿಗಳಿಗೆ ಇತ್ತಿರುವ ಬ[illegible] ನೆನ್ನೆ ರಾಷ್ಟ್ರಾಧ್ಯಕ್ಷ ಡಾ|| [illegible] ಪ್ರಸಾದರು ವಿತರಿಸಿದರು. [illegible] ಕ್ಷೀರ ಶಾಲು, ಜರತಾರಿ [illegible] [illegible] ಮತ್ತು ಸರಗಳನ್ನು ಕೊಡ[illegible] ಮುಸಿರಿ ಸುಬ್ರಹ್ಮಣ್ಯ ಅಯ್ಯರ್, [illegible] ಟಿ. ಚೌಡಯ್ಯ, ಶ್ರೀಮತಿ ಎಕ್ಕಿ[illegible] [illegible] ಮುಂತಾದವರಿಗೆ ಬ[illegible] ಒಂದೊಂದು ಪ್ರಶಸ್ತಿ ಪತ್ರ[illegible] [illegible]

ಡೆನ್ಮಾರ್ಕ್, ಇಸ್ರೇಲ್ ಮತ್ತು ಫ್ರಾನ್ಸುಗಳಿಗೆ ರಷ್ಯದ ಎಚ್ಚರಿಕೆ

ರಷ್ಯದ ಪ್ರಧಾನಿ ಬಲ್ಗಾನಿನ್‌ರು ಡೆನ್ಮಾರ್ಕ್ ಪ್ರಧಾನಿಗೆ ಎಚ್ಚರಿಕೆಯಿತ್ತು ಅಮೆರಿಕವು ಅಣು ಶಸ್ತ್ರಾಸ್ತ್ರಗಳನ್ನು ಹೊಂದಿರುವ ಸೈನ್ಯಗಳನ್ನು ಡೆನ್ಮಾರ್ಕಿನಲ್ಲಿ ಇಡಲು ಅವಕಾಶವೀಯಬಾರದೆಂದು ತಿಳಿಸಿರುತ್ತಾರೆ. [illegible] ಮತ್ತು ಇತರ [illegible] ಕೂಟಗಳ ಒಪ್ಪಂದದ ಪ್ರಕಾರ ನಡೆಸಲಾಗು[illegible] [illegible] ಕ್ರಮದಿಂದ ಅಂತರ [illegible] ಪರಿಸ್ಥಿತಿಯು ಮತ್ತಷ್ಟು ಬಿಕ್ಕಟ್ಟಿಗೆ [illegible] [illegible] ಡೆನ್ಮಾರ್ಕ್ [illegible] ಆಕ್ರಮಣಕ್ಕೆ [illegible] [illegible] ದೊಡ್ಡ [illegible] [illegible] ತಿಳಿಸಿರುವರು.

ಇಸ್ರೇಲ್ ಮತ್ತು ಫ್ರಾನ್ಸ್‌ಗಳಿಗೂ ಸಹ ರಷ್ಯವು ಎಚ್ಚರಿಕೆಯಿತ್ತು ಸಮೀಪ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳ ಬಲಪ್ರಯೋಗ ನಡೆಸುವಂತೆ ಸೂಚಿಸಿರುತ್ತವೆ. ಈಜಿಪ್ಟಿನ ವಿರುದ್ಧವಾಗಿ ಹೊಸ ಧಾಳಿಯನ್ನು ನಡೆಸಿದ್ದೇ ಆದರೆ ಅಪಾಯಕರ ಸನ್ನಿವೇಶವುಂಟಾಗುವುದಲ್ಲದೆ ವಿಶೇಷ ವ್ಯಾಪಕವಾದ ಮಿಲಿಟರಿ ಘರ್ಷಣೆಯುಂಟಾಗಿ ಶಾಂತಿಪಾಲನಾ ಕಾರ್ಯಕ್ಕೆ ಭಾರಿ ಧಕ್ಕೆಯುಂಟಾಗುವುದೆಂದೂ ರಷ್ಯವು ತಿಳಿಸಿರುತ್ತದೆ.

ಜೇಬುಗಳ್ಳನಿಗೆ ೧|| ವರ್ಷ ಕಠಿಣ ಶಿಕ್ಷೆ

ಸ್ವ. ವ.] ನಂಜನಗೂಡು ೩

ಕೆಲವು ದಿನಗಳ ಹಿಂದೆ ಇಲ್ಲಿನ ಬಸ್ ಸ್ಟಾಂಡಿನಲ್ಲಿ ಬಸ್ ಹತ್ತುತ್ತಿದ್ದ ಪ್ರಯಾಣಿಕರೊಬ್ಬರ ಜೇಬಿನಿಂದ ಪರ್ಸನ್ನು ಕದಿಯುತ್ತಿದ್ದಾಗ ಸಿಕ್ಕಿಬಿದ್ದ ಶಿವಣ್ಣ ಎಂಬ ಕೈದಿಗೆ ನ್ಯಾಯಾಧೀಶರಾದ ಶ್ರೀ ಟಿ. ಎಂ. ಸಿದ್ದಪ್ಪನವರು ೧|| ವರ್ಷ [illegible] ಸಜವನ್ನು ಕಳೆದ ಶನಿವಾರ ವಿಧಿಸಿದರು. ಬಿಡುಗಡೆಯಾದ ನಂತರವೂ ಆಪಾದಿತನು ೧ ವರ್ಷ ಕಾಲ ತನ್ನ ಚಲನ ವಲನಗಳ ಬಗ್ಗೆ [illegible] [illegible]ಯನ್ನೀಯುವಂತೆ ಸೂಚಿಸಿದರು. ಅವನಿಗೆ ಈಗಾಗಲೇ ಏಳು ಬಾರಿ ಶಿಕ್ಷೆಯಾಗಿದೆ.

ಜೂಜಾಟಕ್ಕೆ ಮನೆ ಕೊಟ್ಟುದಕ್ಕಾಗಿ ೨೦೦ ರೂ. ದಂಡ

ಇದೇ ತಾಲ್ಲೂಕಿನ ದೇವನೂರಿನ ಸುಬ್ಬಪ್ಪ ಎಂಬುವನು ತನ್ನ ಮನೆಯಲ್ಲಿ ಜೂಜಾಡಲು ಅವಕಾಶವಿತ್ತುದಕ್ಕಾಗಿ ಅವನಿಗೆ [illegible] ಸಾದಾ ಸಜ ಮತ್ತು ೨೦೦ ರೂ. ಜುಲ್ಮಾನೆಯನ್ನು [illegible] ಇತರ [illegible] ಮುಂದಿಗೆ ತಲಾ [illegible] ದಂಡವನ್ನು ವಿಧಿಸಲಾಯಿತು. ಪೊಲೀಸರ ಸಾಹಸಕ್ಕಾಗಿ ದಂಡದಲ್ಲಿ [illegible] ಹಣವನ್ನು ಅವರಿಗೆ ಬಹುಮಾನವಾಗಿ ಕೊಡುವಂತೆಯೂ ಸ[illegible] [illegible]

ನಯೆ ಪೈಸೆ

ಮೊದಲೆರಡಾಣೆಗೆ ಎರಡಾರು ಪೈಸೆ
ಮೂರರಿಂದಾರಾಣೆ ಆರಾರು ಪೈಸೆ
ಸೇರಬೇಕದಕೆ ಇನ್ನೊಂದು ಪೈಸೆ
ಏಳರಿಂದ ಹತ್ತಾಣೆ ಆರಾರು ಪೈಸೆ
ಸೇರಬೇಕದಕೆ ಇನ್ನೆರಡು ಪೈಸೆ
ಹನ್ನೊಂದು-ಹದಿನಾಲ್ಕು ಆರಾರು ಪೈಸೆ
ಸೇರಬೇಕದಕೆ ಇನ್ಮೂರು ಪೈಸೆ
ಹದಿನೈದು-ಹದಿನಾರು ಆರಾರು ಪೈಸೆ
ಸೇರಬೇಕದಕೆ ಇನ್ನಾಲ್ಕು ಪೈಸೆ

— ಎಸ್ ಪರಮೇಶ್ವರ[illegible]

ರಾಮೋತ್ಸವದ ಕಾರ್ಯಕ್ರಮ

ಮೈಸೂರು ೩

ನಗರದ ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಈ ಸಂಜೆ ೭ ಗಂಟೆಗೆ ವಿ|| ಟಿ. ಪುಟ್ಟಸ್ವಾಮಯ್ಯನವರ ಗಾಯನವು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಾಡಾಗಿದೆ.

ನಗರದ ಕೃಷ್ಣಮೂರ್ತಿಪುರದಲ್ಲಿರುವ ಚಾಮರಾಜ ಮೊಹಲ್ಲಾ ಮಹಾಜನ ಸಭೆಯ ರಾಮಮಂದಿರದಲ್ಲಿ ಶ್ರೀರಾಮೋತ್ಸವವು ನೆನ್ನೆಯಿಂದ ಆರಂಭವಾಗಿ ೯ನೇ ತಾರೀಕಿನವರೆಗೆ ನಡೆಯುವುದು. ಇಂದು ಸಂಜೆ ೭ ಗಂಟೆಗೆ ವೇ|| ಬ್ರ|| ಶ್ರೀ ಕುರ್ತಕೋಟಿ ಶ್ರೀಪಾದಶಾಸ್ತ್ರಿಗಳವರಿಂದ ಉತ್ತರ ಗೋಗ್ರಹಣವೆಂಬ ಹರಿಕಥೆಯು ಜರುಗುವುದು.

ವಾಣಿವಿಲಾಸ ಮೊಹಲ್ಲಾ ಭಾರತೀ ಸ್ತ್ರೀ ಸಮಾಜದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಂಗೀತ ಭೂಷಣ ಎಂ. ಎ. ನರಸಿಂಹಾಚಾರ್ಯರಿಂದ ಗಾಯನವು ಏರ್ಪಾಡಾಗಿದೆ.

ಸರಸ್ವತಿಪುರದ [illegible]ನೇ ನಂಬರು ಮನೆಯಲ್ಲಿ ಈ ದಿನ ಸಂಜೆ ಶ್ರೀ ಆನೇಕಲ್ [illegible]ಚಾರ್ಯರಿಂದ ಪುರಾಣವೂ ನಂತರ ಶ್ರೀಮತಿ ಶಾಂತಮ್ಮನವರಿಂದ ಸೂಕ್ತ ಪಕ್ಕವಾದ್ಯಗಳೊಡನೆ ಸಂಗೀತವೂ ಏರ್ಪಾಡಾಗಿದೆ.

ಗೀತಾ ರೋಡಿನಲ್ಲಿರುವ ಶ್ರೀ ಪ್ರಸನ್ನ ಬಾಲಕ ಸೀತಾರಾಮ ಮಂದಿರದಲ್ಲಿ ಈ ರಾತ್ರಿ ೮|| ಗಂಟೆಗೆ ವಿದ್ವಾನ್ ಎಂ. ಎಸ್. ನಾರಾಯಣಯ್ಯಂಗಾರ್‌ರವರಿಂದ ಕೊಳಲು ವಿದ್ವಾನ್ ಹೆಚ್. ವಿ. ಕೃಷ್ಣರಾಯರಿಂದ ಪಿಟೀಲು ವಿದ್ವಾನ್ ಆನಂದರಾಯರ ಮೃದಂಗದೊಡನೆ ನಡೆಯುತ್ತೆ.

ನಾಳೆ ರಾತ್ರಿ ೮|| ಘಂಟೆಗೆ ವಿದ್ವಾನ್ ಎ. ನಂಜುಂಡಸ್ವಾಮಿಯವರ ಗಾಯನ, ವಿದ್ವಾನ್ ಪುತ್ತೂರ್ ಕೃಷ್ಣಮೂರ್ತಿಯವರ ಪಿಟೀಲು ವಿದ್ವಾನ್ ಎಚ್. ಟಿ. ನಾಗಣ್ಣನವರ ಮೃದಂಗ ಮತ್ತು ವಿದ್ವಾನ್ [illegible]ರವರ ಘಟದೊಡನೆ ನಡೆಯುತ್ತೆ.

ಪಂಚಾಂಗ ಸ್ವೀಕಾರ

ಮೈಸೂರು ದೇವೀರಮ್ಮಣಿ ಅಗ್ರಹಾರದಲ್ಲಿರುವ [illegible] [illegible] ಮಹಾ[illegible] [illegible] [illegible] ಕಳುಹಿಸಿಕೊಟ್ಟಿರುವ ಹೇವಿಳಂಬಿ ಸಂವತ್ಸರದ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಮಂತ್ರಿಮಂಡಲದ ರಾಜೀನಾಮೆ

ಶಾಸನ ಸಭೆಗಳ ವಿಸರ್ಜನೆ

ಸ್ವಂ. ಪು. ಶಂ.] ಬೆಂಗಳೂರು ೨

ರಾಜ್ಯಾಂಗದ ಪ್ರಕಾರ ಐದು ವರ್ಷದ ಅವಧಿಯು ಮುಗಿದುದರಿಂದ ರಾಜ್ಯಪಾಲರ ಆಜ್ಞೆಯ ಮೇರೆ ನೆನ್ನೆ ದಿನ ಸಂಸ್ಥಾನದ ವಿಧಾನ ಸಭೆಯು ವಿಸರ್ಜನೆ ಮಾಡಲ್ಪಟ್ಟಿತು. ಅದರ ಪರಿಣಾಮವಾಗಿ ಈ ದಿನ ಸಂಸ್ಥಾನದ ಮುಖ್ಯ ಮಂತ್ರಿಯವರು ಮಂತ್ರಿಮಂಡಲದ ರಾಜೀನಾಮೆಯನ್ನು ರಾಜ್ಯಪಾಲರಿಗೆ ಸಲ್ಲಿಸಿದರು. ಅದನ್ನು ಅವರು ಅಂಗೀಕರಿಸಿ ನೂತನ ಮಂತ್ರಿ ಮಂಡಲದ ರಚನೆಯಾಗುವವರೆಗೆ ಈಗಿನ ಮಂತ್ರಿಗಳೇ ಮುಂದುವರಿಯುವಂತೆ ಕೋರಿರುವರು. ಈ ದಿನ ಈ ಬಗ್ಗೆ ಅಧಿಕೃತ ಪ್ರಕಟಣೆಯು ಹೊರಬೀಳುವ ನಿರೀಕ್ಷಣೆಯಿದೆ.

ಆಂಗ್ಲೊ ಇಂಡಿಯನ್ನರ ಪ್ರತಿನಿಧಿ

ಇದುವರೆಗೆ ವಿಧಾನ ಸಭೆಯಲ್ಲಿ ಆಂಗ್ಲೊ ಇಂಡಿಯನ್ನರ ಪರವಾಗಿ ನೇಮಕರಾಗಿದ್ದ ಶ್ರೀ [illegible] ರಾಮನ್‌ರವರ ಸ್ಥಾನದಲ್ಲಿ ಹೊಸ ಸಭೆಗೆ ಶ್ರೀ ಹರ್ಬರ್ಟ್‌ರವರನ್ನು ರಾಜ್ಯಪಾಲರು ನಾಮಕರಣ ಮಾಡಿರುತ್ತಾರೆ.

ಹುತ್ತಿ ಚಿನ್ನದ ಗಣಿ ಮೈಸೂರಿಗೆ

ಆಂಧ್ರ ಸರ್ಕಾರದವರ ಅಧೀನಕ್ಕೊಳಪಟ್ಟಿದ್ದ ರಾಯಚೂರು ಜಿಲ್ಲೆಯ ಹುತ್ತಿ ಎಂಬಲ್ಲಿನ ಚಿನ್ನದ ಗಣಿಗಳನ್ನು ಮೈಸೂರು ಸಂಸ್ಥಾನಕ್ಕೆ ವಹಿಸಿಕೊಡಲು ಆಂಧ್ರ ಸರ್ಕಾರವು ಒಪ್ಪಿರುವುದಾಗಿ ಗೊತ್ತಾಗಿದೆ.

ಪುನಃ ರಾಜೇಂದ್ರ ಪ್ರಸಾದರೇ ರಾಷ್ಟ್ರಾಧ್ಯಕ್ಷರು

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಪುನಃ ಡಾ|| ರಾಜೇಂದ್ರ ಪ್ರಸಾದರ ಹೆಸರನ್ನು ಸೂಚಿಸಲು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯವರು ನಿರ್ಧರಿಸಿರುವರು. ಇದಕ್ಕೆ ಬಾಬು ರಾಜೇಂದ್ರ ಪ್ರಸಾದರು ಸಮ್ಮತಿಸಿರುವರೆಂದು ಗೊತ್ತಾಗಿದೆ.

ಎಸ್. ಚಂದ್ರಶೇಖರಯ್ಯರ್‌ರವರ ನಿಧನ

ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶರೂ, ಗಡಿ ವಿಂಗಡಣೆ ಸಮಿತಿಯ ಅಧ್ಯಕ್ಷರೂ ಆದ ಎಸ್. ಚಂದ್ರಶೇಖರ ಅಯ್ಯರ್‌ರವರು ಮೊನ್ನೆ ಮದ್ರಾಸಿನಲ್ಲಿ ನಿಧನ ಹೊಂದಿದರು. ಹಲವಾರು ದಿನಗಳಿಂದ ಅವರು ರೋಗ ಪೀಡಿತರಾಗಿದ್ದರು. ಅವರಿಗೆ ೬೮ ವರ್ಷ ವಯಸ್ಸಾಗಿತ್ತು. ಅವರು ಭಾರತ-ಪಾಕಿಸ್ತಾನ ಗಡಿ ಸಮಿತಿಯಲ್ಲಿ ಭಾರತದ ಪ್ರತಿನಿಧಿಗಳಾಗಿ ಕೆಲಸ ಮಾಡಿದ್ದರು. ಗಡಿ ವಿಂಗಡಣೆ ಸಮಿತಿ ಅಧ್ಯಕ್ಷರಾಗಿದ್ದು ಪಾರ್ಲಿಮೆಂಟು ಮತ್ತು ಸಂಸ್ಥಾನ ಶಾಸನ ಸಭೆಗಳ ಕ್ಷೇತ್ರಗಳ ಎಲ್ಲೆಗಳನ್ನು ಅವರು ಗೊತ್ತುಪಡಿಸಿದ್ದರು.

○ ಕೇರಳ ಶಾಸನ ಸಭೆಯ ಬಹು ಸಂಖ್ಯಾತ ಅಂಗವಾದ ಕಮ್ಯೂನಿಸ್ಟ್ ಪಕ್ಷದ ನಾಯಕ ಶ್ರೀ ಇ. ಎಂ. ಎಸ್. ನಂಬೂದಿರಿಪಾದ್‌ರವರಿಗೆ [illegible] ಗವರ್ನರರು ಮೊನ್ನೆ ಆಹ್ವಾನವನ್ನು ಕಳುಹಿಸಿ ಅವರು ತಮ್ಮ ಮಂತ್ರಿಗಳ ಪಟ್ಟಿಯನ್ನು ನಾಳೆ ದಿನ ಸಲ್ಲಿಸುವಂತೆ ಕೋರಿರುತ್ತಾರೆಂದು ವರದಿಯಾಗಿದೆ.

ಪೌರಸಭಾ ನೌಕರದ್ದುಮೊಗಳಿಗೆ ಪೌರಸಭಾ ಕೋರ್ಟಿನ ಸ್ಥಾಪನೆ

ಆಯವ್ಯಯ ಪರಿಶೀಲನೆ ಸಭೆಯಲ್ಲಿ ಸಲಹೆ

ಮೈಸೂರು ೨

ಪೌರಸಭೆಯ ಬರುವ ಸಾಲಿನ ಆಯವ್ಯಯದ ಬಗ್ಗೆ ಕಳೆದ ಶನಿವಾರ ನಡೆದ ಚರ್ಚೆಯಲ್ಲಿ ಶ್ರೀ ಎ ಕೃಷ್ಣಮೂರ್ತಿ ಯವರು ಪೌರಸಭಾ ನೌಕರ[illegible] ಪೌರಸಭಾ ಕೋರ್ಟನ್ನು ಏರ್ಪಡಿಸಬೇಕೆಂದು ಸಲಹೆ ಮಾಡಿದರು

[illegible] ಅಧಿಕಾರಿಗಳವರು [illegible] ಸುಂಕವನ್ನು ತೆಗೆದುಹಾಕಬೇಕೆಂದು ಅನೇಕ ಬಾರಿ ಸಲಹೆ ಮಾಡಿದ್ದರೂ ಅದನ್ನು ಗಮನಿಸಿಲ್ಲವೆಂದೂ ಬಹಳ ಹಳೇ ಕಾಲದ ಈ ಪದ್ಧತಿಯನ್ನು ರದ್ದುಗೊಳಿಸುವುದು ಅಗತ್ಯವೆಂದೂ ಸೂಚಿಸಿದರು

ಪೌರಸಭಾ [illegible] ದಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಅದನ್ನು ರದ್ದು ಮಾಡಬೇಕೆಂದೂ ಶ್ರೀ ಎಂ ಎಸ್ ಶಿವ[illegible]ಯ್ಯನವರು ತಿಳಿಸಿದರು

ಚರ್ಚೆಯಲ್ಲಿ ಶ್ರೀ [illegible] ಎಚ್ ಎಸ್ [illegible] ಕೆ ವೆಂಕಟಪತಿ [illegible] ಎಸ್ [illegible] ಕೆ [illegible] ರಂಗಸ್ವಾಮಿ [illegible] ವೀರಭದ್ರಯ್ಯ [illegible] ಸಲಹೆಗಳನ್ನಿತ್ತು [illegible] ವರ್ಗದ [illegible] ಗಳನ್ನು ಟೀಕಿಸಿದರು

[illegible] ಕಂದಾಯ [illegible] ಜನರ ಮೇಲೆ [illegible] ಹೊರಿಸುವುದಕ್ಕಿಂತ [illegible] ಗೆ [illegible] ಹೆಚ್ಚಿಸಿಕೊಳ್ಳ[illegible] ಸಲಹೆ [illegible] ಕಾಯಿತು ವಾಹನ ತೆರಿಗೆಯಿಂದ ಬರತಕ್ಕ ಹೆಚ್ಚಿನ [illegible] ಮೋಟಾರು ತೆರಿಗೆ ಆದಾಯದಲ್ಲಿ ಒಂದು ಪಾಲನ್ನು ಪೌರಸಭೆಯ ಸರ್ಕಾರದಿಂದ ಪಡೆಯಬೇಕೆಂದು ಶ್ರೀ ಸಿ ಎಲ್ ನಾರಾಯಣರಾಯರು ಸೂಚಿಸಿದರು ಆರೋಗ್ಯ ಕಾರ್ಯಗಳಿಗಾಗಿ [illegible] ಲಾಗಿರುವ [illegible] ಹೆಚ್ಚು ಭಾಗವನ್ನು [illegible] ಬೇಗ ಮುಗಿಸಿ ಕೊಳಕು ಪ್ರದೇಶವನ್ನು ತೆಗೆದುಹಾಕಿ ನಗರದ ಆರೋಗ್ಯವನ್ನು ಕಾಪಾಡಬೇಕೆಂದು ಶ್ರೀ ದೊಡ್ಡತಿಮ್ಮಯ್ಯನವರು ಕೋರಿದರು

ಶ್ರೀ ಎಸ್ ಲಿಂಗಣ್ಣನವರು ಮಾತನಾಡಿ ಸದಸ್ಯರ ಆಕ್ಷೇಪಣೆಗಳಿಗೆ ಸೂಕ್ತ ಸಮಾಧಾನವಿತ್ತನಂತರ ಸಭೆಯನ್ನು ನಾಳೆಗೆ ಮುಂದುವರಿಸಲಾಯಿತು

ಕ್ಯಾಲೆಂಡರ್ ಸ್ವೀಕಾರ

ಮಂಗಳೂರು ಗಣೇಶ ಬೀಡಿ ಸಂಸ್ಥೆಯವರು ಕಳುಹಿಸಿಕೊಟ್ಟಿರುವ ಸುಂದರವಾದ ಗಣಪತಿ ವಿಗ್ರಹದಿಂದ ಕೂಡಿದ ನೂತನ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ನಯೇ ಪೈಸೆ ಅಭಾವದಿಂದ ಅಂಚೆ ದರದಲ್ಲಿ ವ್ಯತ್ಯಾಸ

ದಶಮಾಂಶ ನಾಣ್ಯ ಪದ್ಧತಿಯು ಜಾರಿಗೆ ಬರುವಾಗ ಅಂಚೆ ಪದಾರ್ಥಗಳ ಪೈಕಿ ಕೆಲವಕ್ಕೆ ಬೆಲೆ ಹೆಚ್ಚು ಇನ್ನು ಕೆಲವಕ್ಕೆ ಕಡಿಮೆಯಾಗಲಿರುವುದಾಗಿ [illegible] ಗೊತ್ತಾಗಿದೆ ೨ ಆಣೆಯ ಒಳನಾಡಿನ ಕಾಗದಕ್ಕೆ ಅರ್ಧ ನಯಾ ಪೈಸವನ್ನು ಹೆಚ್ಚಾಗಿ ಕೊಡಬೇಕಾಗುವುದು ಅದರ ಬೆಲೆಯು ೧೩ ನಯೆ ಪೈಸೆ ಆಗುವುದು ಪೋಸ್ಟಲ್ ಆರ್ಡರ್ ಕಮಿಷನನ್ನು ೧ ಆಣೆ [illegible] ನಯೆ ಪೈಸೆಗಳಾಗುವುವು ೩ ಕಾಸಿನ ಅಂಚೆಸ್ಟಾಂಪಿಗೆ ೨ ನಯೆ ಪೈಸೆಯನ್ನೂ [illegible] ಕಾಸಿನ ಸ್ಟಾಂಪಿಗೆ ೩ [illegible] ಕಾಸಿನದಕ್ಕೆ ೫ ಮತ್ತು ೧ ಆಣೆಯದಕ್ಕೆ ೬ ನಯೆ ಪೈಸೆಗಳನ್ನೂ ಕೊಡಬೇಕಾಗುವುದು

ಮನಿಯಾರ್ಡರುಗಳ ಕಮಿಷನನ್ನು ಹೊಸ ನಾಣ್ಯ ಪದ್ಧತಿಯಂತೆ ತೆಗೆದುಕೊಳ್ಳಲಾಗುವುದು ಆದರೆ ಸಧ್ಯಕ್ಕೆ ಟೆಲಿಫೋನ್ ದರಗಳನ್ನು ಹಳೇ ನಾಣ್ಯದ ಪದ್ಧತಿಯಂತೆಯೇ ಪಡೆಯಲಾಗುವುದು

ಉರಿಗದಲ್ಲಿ ಗಣಿ ಕೆಲಸದ ಶಾಲೆಯ ಸ್ಥಾಪನೆ

ಕೋಲಾರ ಚಿನ್ನದ ಗಣಿ ಪ್ರದೇಶದ ಉರಿ[illegible] ವರ್ಷದಿಂದ ಗಣಿ ಕೆಲಸ ಶಿಕ್ಷಣ ಶಾಲೆಯೊಂದನ್ನು ತೆರೆಯುವ ಯೋಜನೆಯನ್ನು ಭಾರತ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಪ್ರತಿ ವರ್ಷವೂ ಅದಕ್ಕೆ ೪೦ [illegible] ವಿದ್ಯಾರ್ಥಿಗಳನ್ನು ಸೇರಿಸಲಾಗುವುದು [illegible] ಶಿಕ್ಷಣ ಪಡೆದವರಿಗೆ [illegible] ಪತ್ರವನ್ನು ಕೊಡಲಾಗುವುದು [illegible] ಸಂಸ್ಥಾನದ ಪಾರಿಭಾಷಿಕ ಶಿಕ್ಷಣ [illegible] ಕ್ರಮದಲ್ಲಿ ಅವನ್ನು ನಡೆಸಲಾಗುವುದು

ಶುಭಾಶಯ ಸ್ವೀಕಾರ

ಈ ಕೆಳಗಿನವರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

೧ ಸಂಗೀತ ಶಾಸ್ತ್ರ ವಿಶಾರದ ಕೆ ವಾಸುದೇವಾಚಾರ್ಯರು ಕಲಾಕ್ಷೇತ್ರ ಅಡಯಾರ್ ಮದರಾಸು

೨ ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ ಜಗನ್ಮೋಹನ ಭವನ ರಸ್ತೆ, ಮೈಸೂರು

೩ ಎಸ್ ಕೆ ಎಂ ಶಾಸ್ತ್ರಿ ಅಂಡ್ ಸನ್ಸ್, ಚಾಮುಂಡಿಪುರಂ, ಮೈಸೂರು

೪ ಟಿ ವರದರಾಜನ್ ಮತ್ತು ವೈ ಆರ್ ಗೋಪಾಲಕೃಷ್ಣ, ಕೃಷ್ಣವಿಲಾಸ ಅಗ್ರಹಾರ ಮೈಸೂರು

೫ ಇ ಆರ್ ಕೃಷ್ಣಮೂರ್ತಿ ಪತ್ರಿಕೋದ್ಯೋಗಿ ನಂಜನಗೂಡು

೬ ವನಿತಾ ಸದನ ಮೈಸೂರು

೭ ನವ್ಯ ಸಾಹಿತ್ಯ ಪ್ರಕಾಶನ ಮೈಸೂರು

ಪಂಚಾಂಗ ಸ್ವೀಕಾರ

ಶ್ರೀ ಶೃಂಗೇರಿ ಜಗದ್ಗುರುಗಳ ಮಠದವರು ಕಳುಹಿಸಿಕೊಟ್ಟಿರುವ ಹೇವಿಳಂಬಿ ಸಂವತ್ಸರದ ಪಂಚಾಂಗವನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ನೂತನ ವರ್ಷದ ಶುಭಾಶಯಗಳು

(ಭಾಮಿನಿ ಷಟ್ಪದಿ)

ಶ್ರೀವರನ ಕೃಪೆಯಿಂದ ಸಂದಿಹ
ಹೇವಿಳಂಬಿಯ ನವ್ಯ ವರುಷದಿ
ಬೇವುಬೆಲ್ಲದ ಕಿರದ ಸೊಗವಳಲುಗಳು
ಸವುನೆಂದು ।
ಭಾವಿಸುವ, ವರಭಾರತಾಂಬೆಯ
ಸೇವೆಗೈಯುವ, ದಿವ್ಯ ಶಕುತಿಯ
ನೀವುದೈ ಶ್ರೀವೀರನಾರಾಯಣನೆ
ಮಣಿಯುವೆವು ॥
ಹೇವಿಳಂಬಿಯ ಭವ್ಯ ವರುಷದಿ
ಜೀವನದಿ ಸಮರಸವು, ಸಸ್ಯತೆ
ಯಾವುದೊಂದರ ಕೊರತೆಯಿಲ್ಲದ ಭಾವ,
ನೆಲೆಗೊಳುತ ।
ಕಾವ್ಯವಾಚನಕಲೆಯು ಮೇಳೈಸು
ಶ್ರಾವ್ಯಗಾನದ ಲಹರಿಯಿಂ ಸಂ
ಭಾವ್ಯರಾಗಲಿ ಜನತೆ ಜಗದೀಶ್ವರನ
ಕೃಪೆಯಿಂದ ॥

ಗಮಕ ವಿದ್ವಾನ್ ನಂ ಅಶ್ವತ್ಥನಾರಾಯಣ
ಕನ್ನಡ ಪಂಡಿತ,
ಸರ್ಕಾರಿ ಬಾಲಕರ ಪ್ರೌಢಶಾಲಾ, ಹಾಸನ

ಹತ್ತಿ ಮಾರಾಟದ ಮೇಲೆ ಹತೋಟಿ

ಹತ್ತಿ ಮಾರಾಟ ಮಾಡುವವರು ಬೊಂಬಾಯಿಯಲ್ಲಿರುವ ಬಟ್ಟೆ ಕಮಿಷನರ ಅನುಜ್ಞೆ ಪಡೆದು ಹತ್ತಿಯನ್ನು ಮಾರಬೇಕೆಂದು ಭಾರತ ಸರ್ಕಾರದವರು ವಿಧಾಯಕ ಮಾಡಿ ಆಜ್ಞೆ ಹೊರಡಿಸಿರುತ್ತಾರೆ ಹತ್ತಿಯ ಬೆಲೆಯು ಮನಸ್ವೀ ಏರುತ್ತಿರುವುದನ್ನು ತಡೆಗಟ್ಟಿ, ಅದು ಗಿರಣಿಗಳಿಗೆ ನ್ಯಾಯವಾದ ಬೆಲೆಗೆ ದೊರೆಯುವಂತೆ ಮಾಡುವುದೇ ಸರ್ಕಾರದ ಉದ್ದೇಶ ಹತ್ತಿ ಬೆಲೆಯನ್ನು ನಿಗದಿ ಮಾಡುವಂತೆಯೂ ಬಟ್ಟೆ ಕಮಿಷನರರಿಗೆ ಅಧಿಕಾರವೀಯಲಾಗಿದೆ

ಡೈನಾಮೈಟ್ ರಾಶಿ ಸಿಡಿದು ೨೬ ಜನರ ಮರಣ

ಮೆಕ್ಸಿಕೋ ರಾಜ್ಯದ ರಾಜಧಾನಿಯ [illegible] ಒಂದು ಬಾಣಬಿರುಸಿನ ಕಾರ್ಖಾನೆಯಲ್ಲಿ [illegible] ನೇಕ ಟನ್ನುಗಳಷ್ಟು ಡೈನಾಮೈಟ್ ರಾಶಿಯು ಕಳೆದ ೨೭ನೇ ತಾರೀಕು ಸಿಡಿದ ಪರಿಣಾಮವಾ ೨೬ ಜನರು ಮಡಿದು, ೧೨೨ ಮಂದಿಗೆ ಗಾಯವಾಗಿದೆ. ೨೦ ಕಾರ್ಮಿಕರು ಪತ್ತೆಯಿಲ್ಲ ಅರ್ಧ ಗಂಟೆ ಅವಧಿಯಲ್ಲಿ ಎರಡು ಬಾರಿ ಸಿಡಿತಗಳಾ ಆ ಸ್ಥಳದಲ್ಲಿ ೧೦ ಅಡಿ ಆಳದ ಸುತ್ತು ೯೦ [illegible] ವ್ಯಾಸದ ಗುಂಡಿಯಾಯಿತು ಅದರ ರಭಸ ೧ ಮೈಲಿ ಆಚೆ ಇರುವ ಪೌರಸಭಾ ವಿಮಾನ [illegible] ಲ್ದಾಣದ ಭವನದ ಕಿಟಕಿಗಳು ಪುಡಿಯಾದ [illegible] ಶಾಮಕ ದಳದ ನಾಲ್ವರು ಎರಡನೇ [illegible] ನೆಯಲ್ಲಿ ಮಡಿದಿರುತ್ತಾರೆ ಈ ಪ್ರದೇಶದಲ್ಲಿ ಈ ಅನಾಹುತವು ಅತ್ಯಂತ ಭೀಕರವಾದುದೆಂ ಹೇಳಲಾಗಿದೆ

ಜರ್ಮನ್ ನಿಯೋಗದ ಮುಂದೆ ಭರತ ನಾಟ್ಯ ಪ್ರದರ್ಶನ

ನಗರಕ್ಕೆ ಆಗಮಿಸಿರುವ ಜರ್ಮನ್ ನಿಯೋಗದವರ ಗೌರವಾರ್ಥವಾಗಿ ಈ ಸಂಜೆ ೬ ಗು[illegible]ಗೆ ಇಲ್ಲಿನ ಭಾರತ ಕಲಾನಿಕೇತನ ಸಂಸ್ಥೆಯ ವಿ ಕೆ ವೆಂಕಟಲಕ್ಷ್ಮಮ್ಮನವರ ಶಿಷ್ಯೆಯರಾದ ಕುಮಾರಿಯರು ಎಂ ಶಕುಂತಲಾ ಜಿ ಮಂಜುಳಾ ಮತ್ತು ಕೃಷ್ಣವೇಣಿಯವರುಗಳಿಂದ ಭರತ ನಾಟ್ಯವನ್ನು ಲಕ್ಷ್ಮೀಪುರದ ಮಹಿಳಾ ಸಮಾಜದಲ್ಲಿ ಏರ್ಪಡಿಸಲಾಗಿದೆ

TO THE REGISTERED GRADUATES

Dear Sirs

I have stood as a candidate for election to one of the seats in the Mysore University Senate from the Registered Graduates Constituency

I request you kindly to exercise your first preference vote in my favour by marking "1" against my name in the Ballot Paper The Ballot Paper is returnable before the 15th of April 1957

Yours Sincerely
Palhalli Sitaramaiah

ನೂತನ ವರ್ಷದ ಶುಭಾಶಯಗಳು

ನಮ್ಮ ಮಾನ್ಯ ಗಿರಾಕಿಗಳಿಗೂ ಮಿತ್ರ ಹಿತೈಷಿಗಳಿಗೂ ನೂತನ ವರ್ಷವಾದ ಹೇವಿಳಂಬಿ ಸಂವತ್ಸರದಲ್ಲಿ ಸಕಲ ಸನ್ಮಂಗಳಗಳೂ ಆಗಲೆಂದು ಹಾರೈಸುತ್ತೇವೆ

ಜಿ. ವಿ. ಶ್ರೀನಿವಾಸಯ್ಯಂಗಾರ್,
ಯುನೈಟೆಡ್ ಪ್ರಾವಿಷನ್ ಸ್ಟೋರ್ಸ್,
ಕೃಷ್ಣಮೂರ್ತಿಪುರಂ, ಮೈಸೂರು

University Senate Electio

Dear Sir,

Please reserve your Vote of Fir Preference in my favour & oblige

Thanking you. Yours

Sl No 42, K M R V Sastry,
Editor Mysore Prabha Daily
MYSORE

Edited, Printed and Published by
A. R Nagarajan at Sadhvi Press
D. Subbiah Road, Mysore

THE CHAMPION METROPOLITAN COLLEGE OF COMMERCE
Co operators Home 100 Road Mysore
FOR
FURTHER EDUCATION in Commerce, Business, Cost Accounts Shorthand and Typewriting

M S PUTTANNA,
Vice Principal

P SUBBARAYA SASTRY,
Principal

ಯುಗಾದಿ ಹಬ್ಬದ ಶುಭಾಶಯ

ನಮ್ಮ ಗಿರಾಕಿಗಳು ಮತ್ತು ಶ್ರೇಯೋಭಿಲಾಷಿಗಳಿಗೆ ಯುಗಾದಿ ಶುಭಾಶಯಗಳನ್ನು ಕೋರುತ್ತಾ, ನವವರ್ಷದಲ್ಲಿ ಎಲ್ಲರಿಗೂ ಭಗವಂತನು ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ

ಇಂದ್ರ ಕೆಫೆ

ಸಯ್ಯಾಜಿರಾವ್ ರಸ್ತೆ ಮೈಸೂರು

HAND BOOK OF TYPEWRITING MECHANISM (For Senior & Junior Grades) Second Edition Contains over 145 questions with answers An invaluable guide for the Examination going students Price 37 Naye paise Copies can be had of THE NATIONAL INSTITUTE OF COMMERCE, Bank Road Mysore

ಶ್ರೀ ಕನ್ಯಕಾಪರಮೇಶ್ವರಿ ಕೋ-ಅಪರೇಟಿವ್ ಸೊಸೈಟಿ,
ಲಿಮಿಟೆಡ್, ಮೈಸೂರು

ಮೂರು ವರ್ಷಗಳ ಕಾಲ ಕಬ್ಬಿಣ, ಸಿಮೆಂಟ್, ಅಕ್ಕಿ, ಕಾಫಿ ಬೀಜ, [illegible] ವಗೈರೆ ರೈಲ್ವೆ ಗುಡ್ಸ್‌ಷೆಡ್ ನಿಂದ ಇತರ ಕಡೆಗಳಿಂದ ಸೊಸೈಟಿಯ ಗೋಡೌನ್‌ಗಳಿಗೆ ಸಾಗಿಸಲು ಟೆಂಡರುಗಳನ್ನು 8 4 57ರ ವರೆಗೆ ಸ್ವೀಕರಿಸಲಾಗುವುದು ಸೆಕ್ರೆಟರಿಯವರಿಂದ ವಿವರಗಳನ್ನು ತಿಳಿಯಬಹುದು

ಪಿ ಗೋಪಾಲಕೃಷ್ಣ ಶೆಟ್ಟಿ,
ಅಧ್ಯಕ್ಷರು

ರಾಜಕಮಲ್ ಟಾಕೀಸ್

3—4—57 ರಿಂದ ಜನಭರಿತವಾದ 6ನೇ ವಾರ

ಪದ್ಮಿನಿ ಪಿಕ್ಚರ್ಸ್‌ರವರ ಕನ್ನಡ ಚಿತ್ರ

★ ರತ್ನಗಿರಿ ರಹಸ್ಯ ★

ಪಾತ್ರ - ಬಿ ಆರ್ ಪಂತುಲು, ಎಂ ವಿ ರಾಜಮ್ಮ, ಉದಯಕುಮಾರ್, ಜಮುನ, ಟಿ ಆರ್ ರಾಮಚಂದ್ರನ್, ಬಿ ಸರೋಜಾದೇವಿ, ಬಾಲಕೃಷ್ಣ, ಲಕ್ಷ್ಮೀದೇವಿ

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

[illegible]

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೩] SADHVI · WEDNESDAY 3—4—1957 ಮೈಸೂರು · ಬುಧವಾರ ೩—೪—೧೯೫೭ · [ಸಂಚಿಕೆ : [illegible]

ಬ್ರಿಟನ್ನಿನಲ್ಲಿ ೧೭ ಲಕ್ಷ ಕಾರ್ಮಿಕರ ಮುಷ್ಕರ ಮುಕ್ತಾಯ

ಮಂತ್ರಿಮಂಡಲದ ರಾಜೀನಾಮೆ ಅಂಗೀಕಾರ

(ಸ್ವಂ ಸು ತಂತಿ] ಬೆಂಗಳೂರು ೩

ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲದ ರಾಜೀನಾಮೆಯನ್ನು ರಾಜ್ಯಪಾಲರು ಅಂಗೀಕರಿಸಿ ಹೊಸ ಮಂತ್ರಿಮಂಡಲದ ರಚನೆಯಾಗುವವರೆಗೆ ಅವರೇ ನಡುಗಾಲದ ಸರ್ಕಾರವಾಗಿ ಮುಂದುವರಿಯುವಂತೆ ಕೋರಿರುತ್ತಾರೆ

ಬ್ರಿಟನ್ನಿನ ಇಂಜನಿಯರಿಂಗ್ ಕಾರ್ಮಿಕರ ಮುಷ್ಕರ ಮುಕ್ತಾಯ

ಮೂರು ವಾರಗಳಿಂದ ಬ್ರಿಟನ್ನಿನಲ್ಲಿ ಒಟ್ಟು ೭ ಲಕ್ಷ ಮಂದಿ ಇಂಜನಿಯರಿಂಗ್ ಮತ್ತು ಹಡಗು ಕೆಲಸಗಾರರು ನಡೆಸುತ್ತಿದ್ದ ಮುಷ್ಕರವನ್ನು ನಿನ್ನೆ ದಿನ ಮುಕ್ತಾಯ ಮಾಡಲಾಯಿತು ನಾಳೆಯಿಂದ ಅವರುಗಳು ಕೆಲಸಕ್ಕೆ ಹಿಂದಿರುಗುವರು ಶೇಕಡ ೧೦ ರಷ್ಟು ಸಂಬಳವನ್ನು ಹೆಚ್ಚಿಸಬೇಕೆಂದು ಕಾರ್ಮಿಕರು ಮುಷ್ಕರ ಹೂಡಿದ್ದರು ಕಾರ್ಮಿಕ ಪ್ರತಿನಿಧಿಗಳೊಡನೆ ಈ ಬಗ್ಗೆ ನೇರ ಸಂಭಾಷಣೆ ನಡೆಸಲು ಮಾಲೀಕರು ಒಪ್ಪಿದುದರಿಂದಲೂ ಮತ್ತು ಸರ್ಕಾರದವರು ವಿಚಾರಣಾ ಕೋರ್ಟನ್ನು ನೇಮಿಸುವುದಾಗಿ ತಿಳಿಸಿದುದರಿಂದಲೂ ಮುಷ್ಕರವನ್ನು ನಿಲ್ಲಿಸಲಾಯಿತೆಂದು ಹೇಳಲಾಗಿದೆ

ಒರಿಸ್ಸಾದಲ್ಲಿ ಮಂತ್ರಿಮಂಡಲ ರಚಿಸಲು ಮೆಹತಾಬರಿಗೆ ಆಹ್ವಾನ

ಒರಿಸ್ಸಾ ಪ್ರಾಂತದಲ್ಲಿ ಮಂತ್ರಿಮಂಡಲವನ್ನು ರಚಿಸಲು ಅಲ್ಲಿನ ವಿಧಾನ ಸಭಾ ಕಾಂಗ್ರೆಸ್ ಪಕ್ಷ ನಾಯಕರಾದ ಹರೆಕೃಷ್ಣ ಮೆಹತಾಬರನ್ನು ಗವರ್ನರ್ ಲಾಲಾ ಭೀಮಸೇನ ಸಚರ್‌ರವರು ಆಹ್ವಾನಿಸಿರುತ್ತಾರೆ. ಮೆಹತಾಬರು ಅದಕ್ಕೆ ಒಪ್ಪಿದ್ದಾರೆ ಸ್ವಲ್ಪ ಕಾಲ ಮುಂಚೆ ಮೆಹತಾಬರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಸಲ್ಲಿಸಿದ್ದರು ಹೊಸ ಮಂತ್ರಿ ಮಂಡಲವಾಗುವವರೆಗೆ ಅದೇ ಸರ್ಕಾರವು ಮುಂದುವರಿಯುವುದು ಒರಿಸ್ಸಾದಲ್ಲಿ ಚಿರಕಾಲ ಬಾಳಬಲ್ಲ ಮಂತ್ರಿಮಂಡಲವನ್ನು ಮೆಹತಾಬರು ರಚಿಸಬಲ್ಲರೆಂಬ ಕಾರಣದಿಂದ ಗವರ್ನರರು ಅವರನ್ನು ಆಹ್ವಾನಿಸಿರುವರೆಂದು ಅಧಿಕೃತ ಪ್ರಕಟಣೆಯೊಂದು ತಿಳಿಸಿದೆ

ಆಡಳಿತ ಪಕ್ಷದ ಪ್ರಭಾವಕ್ಕೆ ಅಧಿಕಾರಿಗಳು ಒಳಗಾಗಬಾರದು

ಶ್ರೀ ನಿಜಲಿಂಗಪ್ಪನವರ ಹಿತನುಡಿ

(ಸ್ವಂ ಸು ತಂತಿ] ಬೆಂಗಳೂರು ೩

ಭಾರತ ವಿದ್ಯಾನ ಮಂದಿರದ ಆಡಳಿತ ಶಾಖೆ ಆರಂಭೋತ್ಸವವನ್ನು ಈ ದಿನ ವಿಧಾನ ಸೌ[illegible] ಶ್ರೀ ನಿಜಲಿಂಗಪ್ಪನವರು ನೆರವೇರಿಸಿ ಅಧಿಕಾರಿಗಳು ಆಡಳಿತ ಪಕ್ಷದವರ ಪ್ರಭಾವಕ್ಕೆ ಒಳಗಾಗಬಾರದೆಂದು ಸೂಚಿಸಿದರು ಆಡಳಿತ [illegible] ಇಂದಿನ ಮಂತ್ರಿ ಮಂಡಲದವರು [illegible] ಅವರು ಭರವಸೆಯಿತ್ತು ಮಂತ್ರಿಮಂಡಲದ ನಿರ್ಧಾರಗಳನ್ನು ಅಧಿಕಾರಿಗಳು ಜಾರಿಗೆ ತರಬೇಕೆಂದು ಸಹ ತಿಳಿಸಿದರು

ದ್ವಿತೀಯ ಯೋಜನೆಯಲ್ಲಿ ಸಹಕಾರ ಪದ್ಧತಿಯ ಅಭಿವೃದ್ಧಿಕ್ರಮ

ರಿಜಿಸ್ಟ್ರಾರ್ ಬಿ ಎ ಪಾಟೀಲರ ವಿವರಣೆ

ಮೈಸೂರು ೩

ದ್ವಿತೀಯ ಯೋಜನೆ ಅವಧಿಯಲ್ಲಿ ಸಂಸ್ಥಾನದ ಸಹಕಾರ ಚಳುವಳಿಯ ಅಭಿವೃದ್ಧಿಗಾಗಿ [illegible] ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ೩ ಕೋಟಿ ರೂ [illegible] ಕಾರ್ಪೊರೇಷನ್ನಿನವರು [illegible] ಕೋಟಿ ರೂ ಮತ್ತು ರಿಸರ್ವ್ ಬ್ಯಾಂಕಿನವರು ೫ ಕೋಟಿ ರೂ ಗಳನ್ನು [illegible] ಮಂಜೂರು ಮಾಡುವರೆಂದೂ ಸಂಸ್ಥಾನ ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಬಿ ಎ ಪಾಟೀಲ ಅವರು ತಿಳಿಸಿರುತ್ತಾರೆ ಗ್ರಾಮಾಂತರದಲ್ಲಿ ಮುಖ್ಯವಾಗಿ ವ್ಯವಸಾಯ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದಂತೆ ಹೆಚ್ಚು ಸಾಲ ಕೊಡಲಾಗುವುದೆಂದೂ [illegible] ರಷ್ಟು ರೈತರ ಉಪಯೋಗವಾಗುವುದೆಂದೂ ಅವರು ತಿಳಿಸಿರುವರು

ಪ್ರತಿ ಜಿಲ್ಲೆಗೂ ಒಂದರಂತೆ ಜಿಲ್ಲಾ ಸಹಕಾರ ಬ್ಯಾಂಕನ್ನು [illegible] ರೂ ಮೂಲ ಬಂಡವಾಳ ಮತ್ತು [illegible] ಲಕ್ಷ ರೂ ಷೇರು ಬಂಡವಾಳದಿಂದ ಏರ್ಪಡಿಸಲಾಗುವುದೆಂದು ಅವರು ಹೇಳಿರುವರು ೧೦ ಮಾರ್ಕೆಟಿಂಗ್ ಸಂಘಗಳನ್ನು ಸ್ಥಾಪಿಸಲಾಗುವುದೆಂದೂ ಅವರು ತಿಳಿಸಿರುವರು

ಹಲವಾರು ಸಂಘಗಳಿಂದ ಸಾಲದ ಹಣವನ್ನು ವಾಪಸು ಪಡೆಯುವ ಸಂಬಂಧದಲ್ಲಿ ಅವರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದರು

ಸರ್ಕಾರಿ ಆಸ್ಪತ್ರೆಗಳಲ್ಲಿ ಹೌಸ್ ಸರ್ಜನ್ನುಗಳ ನೇಮಕ

ಸಂಸ್ಥಾನದ ಹಲವು ಪ್ರಮುಖ ಆಸ್ಪತ್ರೆಗಳಲ್ಲಿ ಗೌರವ ಹೌಸ್ ಸರ್ಜನ್ನುಗಳನ್ನು ನೇಮಿಸಲು ಸರ್ಕಾರದವರು ತತ್ವಶಃ ಅಂಗೀಕರಿಸಿರುತ್ತಾರೆ ಈ ಬಗ್ಗೆ ಯೋಜನೆಯೊಂದನ್ನು ಸಿದ್ಧಗೊಳಿಸಲಾಗುತ್ತಿದೆ ಹಲವಾರು ವರ್ಷಗಳ ಹಿಂದೆ ಹಳೆಯ ಮೈಸೂರಿನಲ್ಲಿ ಈ ಪದ್ಧತಿಯು ಇದ್ದು ಅದನ್ನು ಈಚೆಗೆ ತಪ್ಪಿಸಲಾಗಿತ್ತು

ಪ್ರಶ್ನೆ ಪತ್ರಿಕೆ ಕಠಿಣವೆಂದು ವಿದ್ಯಾರ್ಥಿಯ ಆತ್ಮಹತ್ಯೆ

ಭೌತ ಶಾಸ್ತ್ರ ಪ್ರಶ್ನೆ ಪತ್ರಿಕೆಯು ಬಹಳ ಕಠಿಣವಾಗಿತ್ತೆಂಬ ಕಾರಣಕ್ಕಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಬಿ ಎಸ್‌ಸಿ ವಿದ್ಯಾರ್ಥಿ ಸುಬ್ಬರಾವ್ ಎಂಬ ೨೦ ವರ್ಷದ ತರುಣನು ಮೊನ್ನೆ ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದನೆಂದೂ ಈ ಪ್ರಯತ್ನದಲ್ಲಿ ಅವನ ಬಲಗೈ ಕತ್ತರಿಸಿ ಹೋಗಿ ಆಸ್ಪತ್ರೆಯಲ್ಲಿ ಮೃತನಾದನೆಂದು ವರದಿಯಾಗಿದೆ ಆತನು ಅರಕಲಗೂಡು ತಾಲ್ಲೂಕು ಹೆಬ್ಬಳ್ಳದ ಶ್ಯಾನುಭೋಗರಾದ ಶ್ರೀ ರಾಮಸ್ವಾಮಿಯವರ ಮಗನೆಂದು ಹೇಳಲಾಗಿದೆ ಪ್ರಶ್ನೆ ಪತ್ರಿಕೆಯು ಕಠಿಣವಾಗಿದ್ದು ತಾನು ಫೇಲಾಗುವೆನೆಂಬ ಶಂಕೆಯುಂಟಾದ ಕಾರಣ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸೂಚಿಸಿ ಬರೆದಿದ್ದ ಕಾಗದವೊಂದು ಅವನ ಜೇಬಿನಲ್ಲಿ ದೊರಕಿತು

ಉಪಾಧ್ಯಕ್ಷ ಸ್ಥಾನ ಬಿಡಲು ರಾಧಾಕೃಷ್ಣನ್ನರ ನಿರ್ಧಾರ

ಡಾ॥ ಎಸ್ ರಾಧಾಕೃಷ್ಣನವರು ರಾಷ್ಟ್ರದ ಉಪಾಧ್ಯಕ್ಷ ಸ್ಥಾನದಲ್ಲಿ ಎರಡನೇ ಅವಧಿಗೆ ಮುಂದುವರಿಯಲು ಇಚ್ಛೆ ಇಲ್ಲವೆಂದು ತಿಳಿಸಿರುವರೆಂದು ವರದಿಯಾಗಿದೆ ಪ್ರಧಾನಿ ನೆಹರೂ ಮತ್ತು ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಈ ವಿಷಯವಾಗಿ ಉಪಾಧ್ಯಕ್ಷರೊಡನೆ ನೆನ್ನೆ ಪ್ರತ್ಯೇಕವಾಗಿ ಸಂಭಾಷಣೆ ನಡೆಸಿದರೆಂದೂ, ಆದರೆ ಅದು ಫಲಕಾರಿಯಾಗಲಿಲ್ಲವೆಂದೂ ಹೇಳಲಾಗಿದೆ ತಮ್ಮ ನಿಲುವನ್ನು ಬದಲಾಯಿಸಲು ರಾಧಾಕೃಷ್ಣನ್ನರು ಇಚ್ಛಿಸುತ್ತಿಲ್ಲವೆಂದು ಗೊತ್ತಾಗಿದೆ

ಚುನಾವಣೆ ತಕರಾರು ಮೊಕದ್ದಮೆ

ಸಂಸ್ಥಾನದಲ್ಲಿ ಇತ್ತೀಚೆಗೆ ನಡೆದ ಚುನಾವಣೆ ಸಂಬಂಧವಾಗಿ ಇದೇ ಮೊದಲಾಗಿ ಶಿವಮೊಗ್ಗ ಜಿಲ್ಲೆಯ ಕ್ಷೇತ್ರವೊಂದರ ಆಯ್ಕೆ ಬಗ್ಗೆ ಮೊಕದ್ದಮೆಯನ್ನು ಚುನಾವಣಾ ನ್ಯಾಯಮಂಡಲದ ಮುಂದೆ ಹೂಡಲಾಗಿದೆ ಶ್ರೀ ತಿಪ್ಪರುದ್ರೇಗೌಡರು ಅವಿರೋಧವಾಗಿ ಚುನಾಯಿಸಲ್ಪಟ್ಟಿರುವ ಶ್ರೀ ಕುಂದೂರು ರುದ್ರಪ್ಪನವರ ವಿರುದ್ಧವಾಗಿ ತಕರಾರು ಅರ್ಜಿಯನ್ನು ಕೊಟ್ಟಿರುವರೆಂದು ವರದಿಯಾಗಿದೆ

ಮಂಗಳೂರು–ಬೆಂಗಳೂರು ಸರ್ಕಾರಿ ಬಸ್ ಸರ್ವಿಸ್

ಮಂಗಳೂರು–ಬೆಂಗಳೂರು ಸರ್ಕಾರಿ ಬಸ್ ಸರ್ವಿಸನ್ನು ಮೊನ್ನೆಯಿಂದ ಏರ್ಪಡಿಸಲಾಗಿದೆ ಈ ಸಂಬಂಧವಾಗಿ ಮಂಗಳೂರಿನಲ್ಲಿ ಮೊನ್ನೆ ಸಮಾರಂಭವೊಂದು ನಡೆಯಿತು ಮಡಿಕೇರಿ ಮತ್ತು ಮೈಸೂರುಗಳ ನಡುವೆ ಈ ಬಸ್ಸು ಸಂಚಾರವಿರುವುದು ಮಂಗಳೂರಿಗೆ ಹೋಗುವ ಬಸ್ಸು ನಗರಕ್ಕೆ ೧೧ ಗಂಟೆಗೆ ಬಂದು ೧೧-೪೫ಕ್ಕೆ ಹೊರಡುವುದು ಬೆಂಗಳೂರಿಗೆ ಹೋಗುವ ಬಸ್ಸು [illegible] ೪೫ಕ್ಕೆ ನಗರಕ್ಕಾಗಮಿಸಿ ೩-೩೦ಕ್ಕೆ ತೆರಳುವುದು

ಸಣ್ಣ ಕೈಗಾರಿಕೆ ವಿದ್ಯುಚ್ಛಕ್ತಿ ಬಳಕೆಗಾರರಿಗೆ ರಿಯಾಯಿತಿ

ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವವರಿಗೆ ಸರ್ಕಾರದವರು ರಿಯಾಯಿತಿಯನ್ನು ತೋರಲು ನಿರ್ಧರಿಸಿರುತ್ತಾರೆ ಕಡಿಮೆ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಕಡಿಮೆ ಅಶ್ವಶಕ್ತಿಯ ಮೋಟಾರುಗಳನ್ನಿಡಲು ಇದೇ ಜುಲೈವರೆಗೆ ಅವಧಿಯನ್ನು ಹೆಚ್ಚಿಸಲಾಗಿದೆ.

ವಸಂತ ನವರಾತ್ರಿ ಉತ್ಸವ

ನಗರದ ಶ್ರೀ ಕಾಳಿಕಾಂಬ ಕಮಟೇಶ್ವರ ಸ್ವಾಮಿಯವರ ದೇವಾಲಯದಲ್ಲಿ ವಸಂತ ನವರಾತ್ರಿ ಉತ್ಸವವು ಮೊನ್ನೆಯಿಂದ ಆರಂಭವಾಯಿತು ಮೊನ್ನೆ ದಿನ ಅದರ ಅಂಗವಾಗಿ ವಿಶ್ವಕರ್ಮ ಜಯಂತಿಯು ಜರುಗಿತು ನಾಳೆ ಬೆಳಿಗ್ಗೆ ೯ ಗಂಟೆಗೆ ಶ್ರೀ ವಿಶ್ವಕರ್ಮ ಬ್ರಹ್ಮೋತ್ಸವವು ಜರುಗುವುದು

ಚಿನ್ನದ ಗಣಿ ಮೇಸ್ತ್ರಿಗಳ ಮುಷ್ಕರ

ಕೋಲಾರದ ಚಿನ್ನದ ಗಣಿಗಳ ಪೈಕಿ ಒಂದಾದ ಚಾಂಪಿಯನ್ ರೀಫ್ ಗಣಿಯಲ್ಲಿ ೨೦೦ ಮಂದಿ ಮೇಸ್ತ್ರಿಗಳು ಹೆಚ್ಚು ಸಂಬಳಕ್ಕಾಗಿ ನಿನ್ನೆಯಿಂದ ಮುಷ್ಕರ ಹೂಡಿರುತ್ತಾರೆ ಅವರು ಮುಷ್ಕರ ಹೂಡಿದುದರಿಂದ [illegible] ದಿಲ್ಲವೆಂದು [illegible] ಕಾರ್ಮಿಕರು [illegible] ಅವರುಗಳನ್ನು [illegible] ದಿಂದ ಮೇಲಕ್ಕೆ ಕರೆತಂದು [illegible] ಪರಿಸ್ಥಿತಿಯು ಶಾಂತವಾಗಿದೆ

ನಯೆ ಪೈಸೆಯಿಂದ ಭಿಕ್ಷುಕರ ತೊಂದರೆ

ವಿಜಯವಾಡಾದಲ್ಲಿ ನಯೆ ಪೈಸೆ ಜಾರಿಯಿಂದ ಅಲ್ಲಿನ ಭಿಕ್ಷುಕರಿಗೆ ತೊಂದರೆಯಾಗಿರುವುದೆಂದು ಹೇಳಲಾಗಿದೆ ೧ ರೂಪಾಯಿಯನ್ನು ಸಂಪಾದಿಸಲು ತಾನು ೬೪ ಜನರ ಹತ್ತಿರ ಹೋಗುವುದರ ಬದಲು ಈಗ ೧೦೦ ಮಂದಿಯ ಹತ್ತಿರ ಯಾಚನೆ ಮಾಡಬೇಕಾಗಿರುವುದೆಂದು ಒಬ್ಬ ಭಿಕ್ಷುಕನು ತಿಳಿಸಿದ್ದಾನೆ. ಅಲ್ಲಿನ ಉಪಾಹಾರ ಗೃಹ ಮತ್ತು ಹೋಟೇಲುಗಳಲ್ಲಿ ಪದಾರ್ಥಗಳ ಬೆಲೆಗಳು ಏರಿ ಅವರುಗಳಿಗೆ ಮತ್ತಷ್ಟು ತೊಂದರೆಯಾಗಿದೆ

ರತ್ನಗಿರಿ ರಹಸ್ಯ

ಶ್ರೀಮನ್ಮಹಾರಾಜರು ಮೊನ್ನೆ ದಿನ "ರತ್ನಗಿರಿ ರಹಸ್ಯ" ಚಿತ್ರವನ್ನು ಜಗನ್ಮೋಹನ ಭವನ ಥಿಯೇಟರಿಗೆ ದಯಮಾಡಿಸಿ ವೀಕ್ಷಿಸಿದರು ಆಗ ಚಿತ್ರದ ಹಂಚಿಕೆದಾರರ ಸಂಸ್ಥೆಯ ಮ್ಯಾನೇಜರ್ ಶ್ರೀ [illegible] ಮತ್ತು ಸುಪ್ರಸಿದ್ಧ ನಟ ಶ್ರೀ ಬಿ. ಆರ್ ಪಂತುಲುರವರಿಗೆ ಭೇಟಿಯನ್ನು [illegible] ಅವರು ಮುಂದೆಯೂ ಇದೇ ರೀತಿಯ ಉತ್ತಮ ಕೃತಿಗಳನ್ನು ತಯಾರಿಸಬೇಕೆಂದು ಹಾರೈಸಿದರು

ಸಂಸ್ಥಾನದ ರಸ್ತೆ ಸಂಚಾರ ಸಮಿತಿಯ ರಚನೆ

ಶ್ರೀ [illegible] ಅಧ್ಯಕ್ಷತೆಯಲ್ಲಿ ಸಂಸ್ಥಾನದ ರಸ್ತೆ ಸಂಚಾರ ಸಮಿತಿಯನ್ನು ಸರ್ಕಾರದವರು ನೇಮಿಸಿರುತ್ತಾರೆ ಅದರಲ್ಲಿ [illegible] ಚೀಫ್ ಇಂಜನಿಯರ್, ರಸ್ತೆ ಸಂಚಾರ ಕಮಿಷನರ್ [illegible] ಹುಬ್ಬಳ್ಳಿಯ ಶ್ರೀ ಬಿ [illegible] ಶ್ರೀ ಪ್ರಕಾಶ ಚಂದ್ರ [illegible] ಬೆಂಗಳೂರಿನ ಶ್ರೀ ಎಸ್. ಗಣೇಶರಾಯರು ಸದಸ್ಯರಾಗಿರುವರು

ನಯೆ ಪೈಸೆ ಪದ್ಧತಿ ಜಾರಿಗೆ

ಭಾರತದ ಎಲ್ಲಾ ನಗರ ಮತ್ತು ಪಟ್ಟಣಗಳಲ್ಲಿ ಮೊನ್ನೆಯಿಂದ ನಯೆ ಪೈಸೆ ಪದ್ಧತಿಯು ಜಾರಿಗೆ ಬಂದಿತು. ಅಂಚೆ ಕಛೇರಿಗಳು, ರೈಲ್ವೆ ಸ್ಟೇಷನ್ ಮತ್ತು ಇತರ ಕಡೆಗಳಲ್ಲಿ ಹೊಸ ನಾಣ್ಯಗಳನ್ನು ಚಲಾವಣೆಗೆ ತರಲಾಯಿತು

ಸಂಗೀತ ಕಛೇರಿ

ನಗರದ ಕೆಂಪನಂಜಾಂಬಾ ಅಗ್ರಹಾರದಲ್ಲಿ ರಾಮನವಮಿ ಮಹೋತ್ಸವದ ಅಂಗವಾಗಿ ಈ ದಿನ ರಾತ್ರಿ ೭॥ ಗಂಟೆಗೆ ಎ॥ ಅಲಬಾಕ್ಷಮ್ಮನವರ ಗಾಯನವು ಏರ್ಪಾಡಾಗಿದೆ.

ಎತ್ತಿನ ವ್ಯಾಜ್ಯದಲ್ಲಿ ಚೂರಿ ಇರಿತದಿಂದ ಮರಣ

ನ ಮರಿ ಒಳ ಕಪ್ಪಲೂರು ಎಂಬಲ್ಲಿರುವ ಚಿಲ್ಲರೆ ಅಂಗಡಿಯೊಂದರಲ್ಲಿ ಎತ್ತಿನ ವಿಚಾರವಾಗಿ ತಿಮ್ಮಯ್ಯಗೌಡ ಎಂಬುವನಿಗೆ ಅಂಗಡಿಯ ಮಾಲೀಕರಲ್ಲೊಬ್ಬನು ಚೂರಿಯಿಂದ ಇರಿಯಲಾಗಿ ಅವನು ಮೃತಪಟ್ಟನೆಂದು ವರದಿಯಾಗಿದೆ. ಆಪಾದಿತನನ್ನು ಬಂಧಿಸಲಾಗಿದೆ. ಹೇಳಿಕೆಯ ಪ್ರಕಾರ ಉಪಾಹಾರ ಸ್ವೀಕರಿಸಲು ಅಂಗಡಿಗೆ ಬಂದಾಗ ಅವರಲ್ಲೊಬ್ಬನಿಗೆ ಹರಿದು ಹೋದ ಎಲೆಯನ್ನು ಕೊಟ್ಟುದರಿಂದ ವ್ಯಾಜ್ಯಕ್ಕೆ ಕಾರಣವಾಯಿತು. ಅಂಗಡಿಯವನು ಆತನನ್ನು ಹೊರಗೆ ಕಳುಹಿಸಿದನೆಂದೂ, ಅದನ್ನು ನೋಡಿ ಸಿಟ್ಟುಗೊಂಡ ತಿಮ್ಮಯ್ಯನೇ ಅಂಗಡಿಯಲ್ಲಿದ್ದ ಸೋಡಾ ಸೀಸೆಗಳನ್ನು ಹೊರಕ್ಕೆ ಎತ್ತಿ ಒಗೆದನೆಂದೂ ಹೇಳಲಾಗಿದೆ. ಆದರ ಮೇಲೆ ಅವನನ್ನು ಚೂರಿಯಿಂದ ಇರಿಯಲಾಯಿತು. ಪೋಲೀಸರು ಕೊಲೆ ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿಕೊಂಡಿರುತ್ತಾರೆ.

ಬೆಂಕಿ ಪೊಟ್ಟಣದ ಹೊಸ ದರ

ನಿನ್ನೆಯಿಂದ ಜಾರಿಗೆ ಬಂದಿರುವ ಹೊಸ ನಾಣ್ಯ ಪದ್ಧತಿಯಂತೆ ಭಾರತ ಸರ್ಕಾರದವರು ಬೆಂಕಿ ಪೊಟ್ಟಣದ ಚಿಲ್ಲರೆ ಮಾರಾಟದ ದರವನ್ನು ನಿಗದಿ ಮಾಡಿದ್ದಾರೆ. ೪೦ ಕಡ್ಡಿಗಳಿರುವ ಪೊಟ್ಟಣಕ್ಕೆ ೩ ನಯೆ ಪೈಸೆ ಮತ್ತು ೬೦ ಇರುವವುಗಳಿಗೆ ೫ ನಯೆ ಪೈಸೆಗಳನ್ನು ಗೊತ್ತುಪಡಿಸಲಾಗಿದೆ. ಹೊಸ ದರದಿಂದ ೪೦ ಕಡ್ಡಿಗಳಿರುವ ಪೆಟ್ಟಿಗೆಯ ಕ್ರಯವು ಈಗಿನ ಬೆಲೆಗಿಂತಲೂ ಕಡಿಮೆಯಾಗುತ್ತದೆಂದೂ ೬೦ ಕಡ್ಡಿಯುರುವ ಪೆಟ್ಟಿಗೆಯ ಕ್ರಯವು ಸ್ವಲ್ಪ ಹೆಚ್ಚಾಗುವುದೆಂದೂ ಹೇಳಲಾಗಿದೆ.

ದೆಹಲಿ ಬಳಿ ೫೦೦ ಕೋತಿಗಳ ವಿಚಿತ್ರ ಮರಣ

ದೆಹಲಿಯ ಬಳಿಯ ಕೋಟೆ ಪ್ರದೇಶದಲ್ಲಿನ ಸುಮಾರು ೫೦೦ ಕೋತಿಗಳು ವಿಚಿತ್ರವಾದ ರೀತಿಯಲ್ಲಿ ಹಿಂಡುಹಿಂಡಾಗಿ ಮರಣ ಹೊಂದಿವೆ. ಮರದ ಮೇಲೆ ಕುಳಿತಂತೆಯೇ ಹಲವು ಮೃತಪಟ್ಟಿವೆ. ಜೀವಿಸಿರುವ ಕೆಲವು ಕಪಿಗಳು ಒಂದು ರೀತಿ ಮತ್ತು ಹಿಡಿದಂತೆ ಇವೆ. ಇವನ್ನು ಪತ್ರಿಕೆಗಳು ಕಂಡು ವರದಿ ಮಾಡಿವೆ. ಅಲ್ಲಿನ ಪ್ರಾಣಿಭಿಷಕರು ತನಿಖೆ ನಡೆಸುತ್ತಿರುವರು. ಅವು ಅತಿಸಾರ ಜಾಡ್ಯದಿಂದ ಮೃತಪಟ್ಟಿರುವುವೆಂದು ಊಹಿಸಲಾಗಿದೆ.

ಬ್ರಿಟನ್ನಿನಿಂದ ಅಮೆರಿಕದ ಸೈನ್ಯಗಳ ವಾಪಸು

ಈ ವರ್ಷ ಬ್ರಿಟನ್ನಿನಿಂದ ೪,೪೦೦ ಮಂದಿ ಅಮೆರಿಕಾ ಸೈನಿಕರನ್ನು ವಾಪಸು ಕರೆಸಲಾಗುವುದೆಂದು ಗೊತ್ತಾಗಿದೆ. ಕಳೆದ ಆರು ವರ್ಷಗಳಿಂದ ಇಂಗ್ಲೆಂಡಿನಲ್ಲಿ ಅಮೆರಿಕಾ ಸೈನ್ಯಗಳನ್ನು ಇಡಲಾಗಿದೆ. ಅಲ್ಲಿ ಒಟ್ಟು ೮೨,೦೦೦ ಸೈನಿಕರು ಇರುವರು. ವಾಪಸಾಗುವ ಸೈನಿಕರ ಕೆಲಸಗಳು ಪೂರೈಸಿವೆಂದು ಹೇಳಲಾಗಿದೆ.

ಶ್ರೀರಂಗಪಟ್ಟಣದಲ್ಲಿ ನೀರಿಗೆ ತೊಂದರೆ

ಶ್ರೀರಂಗಪಟ್ಟಣದ ಟೌನ್ನಿನ ಮನೆ ನಲ್ಲಿಗಳಲ್ಲಿ ನೀರು ಸರಿಯಾಗಿಯೂ, ಸಕಾಲದಲ್ಲೂ ಬಾರದೆ, ಜನರಿಗೆ ತೊಂದರೆಯಾಗಿದೆ. ಮೇನ್ ಲೈನುಗಳ ಸ್ಲೈಸ್‌ಗೇಟುಗಳನ್ನು ತೆಗೆಯದೆ ಇರುವುದೇ ಇದಕ್ಕೆ ಕಾರಣವೆಂದು ಕಾಣಬರುತ್ತದೆ. ಪೌರಸಭೆಯವರು ಕೂಡಲೇ ಈ ವಿಚಾರವನ್ನು ಗಮನಿಸಿ ಜನರ ತೊಂದರೆಯನ್ನು ನಿವಾರಿಸಬೇಕೆಂದು ಅಲ್ಲಿನ ವಾಚಕರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

೪ ರೂ. ಸಾಲದ ಸಂಬಂಧದಲ್ಲಿ ಮಗನೊಡನೆ ತಾಯಿಯ ಆತ್ಮಹತ್ಯೆ

ಮದುರೆಯ ಬಳಿ ಉರಪ್ಪನೂರು ಎಂಬ ಗ್ರಾಮದಲ್ಲಿ ಒಂದು ಕಡೆ ಗಂಡನನ್ನು ಬಿಟ್ಟಿರಲಾರದೆ ಮಹಿಳೆಯೊಬ್ಬಳು ತನ್ನ ಮೂರು ವರ್ಷದ ಮಗನೊಡನೆ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗವೊಂದು ವರದಿಯಾಗಿದೆ. ಮೃತಳ ತಂದೆ ಮಾಯಾಂಡಿ ತೇವರ್ ಎಂಬಾತನು ತನ್ನ ಅಳಿಯನಿಗೆ ೪ ರೂ. ಸಾಲವನ್ನು ತೀರಿಸಬೇಕಾಗಿತ್ತೆಂದೂ, ಅದನ್ನು ವಸೂಲು ಮಾಡಿಕೊಂಡು ಬರದಿದ್ದರೆ ಪುನಃ ಮನೆ ಸೇರಿಸುವುದಿಲ್ಲವೆಂದು ಗಂಡನು ಬೆದರಿಸಿ ಮೃತಳನ್ನು ತಂದೆಯ ಮನೆಗೆ ಕಳುಹಿಸಿದನೆಂದೂ, ಆದರೆ ತಂದೆಯ ದುಸ್ಥಿತಿಯನ್ನು ಕಂಡ ಆ ಸ್ತ್ರೀಯು ಕೊನೆಗೆ ತನ್ನ ಮಗನೊಡನೆ ಭಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಳೆಂದೂ ವರದಿಯಾಗಿದೆ

ಜಲಜನಕ ಬಾಂಬಿನ ಪರೀಕ್ಷೆಗಾಗಿ ದ್ವೀಪ ಖಾಲಿ

ಬ್ರಿಟನ್ನು ಪೆಸಿಫಿಕ್ ಸಾಗರದ ಕ್ರಿಸ್ಮಸ್ ದ್ವೀಪದಲ್ಲಿ ಸದ್ಯದಲ್ಲೇ ನಡೆಸಲಿರುವ ಜಲಜನಕ ಬಾಂಬಿನ ಪ್ರಯೋಗ ಪರೀಕ್ಷೆಗೆ ಮುಂಚಿತವಾಗಿ, ಅನಾವಶ್ಯಕವೆಂದು ಪರಿಗಣಿಸಲಾಗಿರುವ ಅಲ್ಲಿನ ಜನರನ್ನು ಗಿಲ್ಬರ್ಟ್ ದ್ವೀಪಕ್ಕೆ ಸಾಗಿಸಲಾಗಿದೆ

ಶ್ರೀ ವಿದ್ಯಾ ಪುಸ್ತಕ ಭಂಡಾರದ ಪ್ರಕಟಣೆ

ನಗರದ ಶ್ರೀ ಶ್ರೀ ವಿದ್ಯಾ ಪುಸ್ತಕ ಭಂಡಾರದವರು ಜಾತಕ ಕುಂಡಲಿ, ಸಂವತ್ಸರಗಳ ಪಟ್ಟಿ, ದಶಮಾಂಶ ನಾಣ್ಯಗಳು ಇವೇ ಮುಂತಾದ ವಿವರಗಳನ್ನೊಳಗೊಂಡ ಹಸ್ತ ಪತ್ರವನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ. ಅದನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಕಳೆದ ಹೇವಿಳಂಬಿ ಸಂವತ್ಸರದಿಂದ ದುರ್ಮುಖಿ ವರ್ಷದವರೆಗೂ ೬೦ ವರ್ಷಗಳಿಗೆ ಇಂಗ್ಲೀಷು, ಶಾಲಿವಾಹನ ಶಕ ಮತ್ತು ತಮಿಳು ವರ್ಷಗಳ ಪಟ್ಟಿಯನ್ನು ಇದರಲ್ಲಿ ಕೊಡಲಾಗಿದೆ. ಜ್ಯೋತಿಷ್ಯರಿಗೂ ಇತರರಿಗೂ ಇದು ಪ್ರಯೋಜನಕಾರಿಯಾಗಿರುತ್ತದೆ. ಬೆಲೆ ಅರ್ಧಾಣೆ

ಸಂತೆಪೇಟೆಯಲ್ಲಿ ರಾಗಿ ತೂರುವುದರಿಂದ ತೊಂದರೆ

ನಗರದ ಸಂತೆಪೇಟೆಯ ನಡುಬೀದಿಯಲ್ಲಿ ರಾಗಿ ಮುಂತಾದ ಧಾನ್ಯಗಳನ್ನು ರಾಶಿ ಹಾಕಲಾಗುತ್ತಿದೆ. ಅಲ್ಲದೆ ಧಾನ್ಯವನ್ನು ತೂರುತ್ತಿರುವುದರಿಂದ ಓಡಾಡುವ ಜನರ ಮೇಲೆ ಧೂಳು ಬೀಳುವ ಕಾರಣವಾಗಿ ಅನಾರೋಗ್ಯ ಮತ್ತು ಕೊಳಕಿಗೆ ಅವಕಾಶವಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೂ ಅಡ್ಡಿಯಾಗಿದೆ. ಪೌರಸಭೆಯವರೂ, ಟ್ರಾಫಿಕ್ ಪೋಲೀಸರೂ ಈ ವಿಚಾರವನ್ನು ಪರಿಶೀಲಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮಾಡುವುದು ಅಗತ್ಯ- ಎಂಬುದಾಗಿ ನಗರದ ಪ್ರಜಾ ಮಂಡಲದ ಸಂಚಾಲಕರಾದ ಶ್ರೀ ವೆಂಕಟಸುಬ್ಬಯ್ಯಶರ್ಮರವರು ತಿಳಿಸಿರುತ್ತಾರೆ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ರಾಮೋತ್ಸವದ ಕಾರ್ಯಕ್ರಮ

ಮೈಸೂರು ೩

ನಗರದ ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಈ ಸಂಜೆ ೭ ಗಂಟೆಗೆ ವಿ|| ಆರ್. ಎಸ್. ದೊರೆಸ್ವಾಮಿಯವರ ವೀಣಾವಾದನವು ನಡೆಯುವುದು

ವಾಣಿವಿಲಾಸ ಮೊಹಲ್ಲಾ ಭಾರತೀ ಸ್ತ್ರೀ ಸಮಾಜದಲ್ಲಿ ಈ ಸಂಜೆ ೬ ಗಂಟೆಗೆ ಅ|| ವಿ|| ಸ್ವರಮೂರ್ತಿ ವಿ ಎಸ್ ರಾಯರ ವೀಣಾವಾದನವು ಏರ್ಪಾಡಾಗಿದೆ.

ಸರಸ್ವತಿಪುರದ ಶ್ರೀ ಲಕ್ಷ್ಮೀನರಸಿಂಹ ಪ್ರಸನ್ನ ಶ್ರೀ ರಾಮ ಭಕ್ತ ಮಂಡಲಿಯ ಆಶ್ರಯದಲ್ಲಿ ರಾಮೋತ್ಸವದ ಅಂಗವಾಗಿ ಈ ಸಂಜೆ ೫|| ಗಂಟೆಗೆ ವಿ|| ಹೆಚ್. ಟಿ. ರಾಮಸ್ವಾಮಿಯವರ ಗಾಯನ ಮತ್ತು ನಾಳೆ ಸಂಜೆ ೬|| ಗಂಟೆಗೆ ವಿ|| ಎ. ಆರ್ ಕೃಷ್ಣಮೂರ್ತಿಯವರ ಸಂಗೀತವು ಪಕ್ಕ ವಾದ್ಯಗಳೊಡನೆ ನಡೆಯುವುವು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ.

ಬೆಳಗ್ಗೆ ೭-೫ ಕ್ಲಾರಿಯೋನೆಟ್ ೭-೧೫ ಎಂ. ಎ. ಸೀತಾ ಮತ್ತು ಶಕುಂತಲಾ-ಶೀವರ ನಾಮ ೭-೩೦ ಮತ್ತು ೮-೧೫ ಕೆ ಎಲ್. ನಾರಾಯಣಸ್ವಾಮಿ-ಕಾವ್ಯ ವಾಚನ. ಮಧ್ಯಾಹ್ನ ೧೨ ವಿ. ರಾಮಯ್ಯ-ಪಿಟೀಲು ೧೨-೩೦ ಎಂ ಎ ಸೀತಾ ಮತ್ತು ಎಂ. ಎ. ಶಕುಂತಲಾ ಸಂಗೀತ. ೧ ಕ್ಲಾರಿಯೋನೆಟ್ ೧-೫೦ ಅಬ್ದುಲ್ ರಹೀಂ ಸಾಹೇಬ್ ೩ ೧೫ ಸಂಗೀತ ಸಂಜೆ ೫ ೬೦ ಸಿತಾರ್ ವಾದನ ೬-೪೦ ಜಾನಪದ ಗೀತೆ ೭-೩೦ ತಾಳ ವಾದ್ಯ ಕಛೇರಿ ೮ ವಿ ರಾಮಸ್ವಾಮಿ-ಪಿಟೀಲ ೮-೩೦ ಹೊಸ ನಾಟ್ಯಗಳು-ಭಾಷಣ ೯-೩೦ ಅಖಿಲ ಭಾರತ ನಾಟಕ ಕಾರ್ಯಕ್ರಮ-ಚಾರುದತ್ತ (ಭಾಸಕವಿ) ನಾಟಕ

ELECTIONS TO THE SENATE
MYSORE UNIVERSITY
Please give your Vote of
First Preference to
V. LINGAPPAIYA,
Advocate and Former
Senate Member

ಜೀವನದ ಹರ್ಷವನ್ನು ಸವಿಯಿರಿ
ಹೆಂಡರಿಗೆ ತಾರುಣ್ಯ !
ವೃದ್ಧರಿಗೆ ಯೌವನ !
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಮತ್ತು ಬಲಶಾಲಿಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಸೆ. ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟು ಹೋದ ಗ್ರಂಥಿಗಳು ಹಾಗೂ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ, ಸಿಫಿಲಿಸ್, ಗೊನೋರಿಯಾ, ವಾತ್ಸ್ಯ ವಾಯು, ಅಂಗ ವಾಯು ಮತ್ತು ಎಲ್ಲ ವಿಧವಾದ ಜಠರ ಮೂತ್ರ ರೋಗಗಳಿಗೂ ಕಾರಣವಾಗಿವೆ. ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ|| ರಾಜಾರವರನ್ನು (ಲೈಂಗಿಕ ಪ್ರವೀಣ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8 ರ ವರೆಗೆ ಭೇಟಿ ಮಾಡಿರಿ. ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆಯ ಕಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು ನೂರಕ್ಕೆ ನೂರು ಖಾತರಿ ಕೊಡಲಾಗುವುದು.

ಅವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ

ರಾಜಾ ಮೆಡಿಕಲ್ ಹಾಲ್,
ಲೇನ್ ನಂ 1745 ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ ಎಡ ಭಾಗದಿಂದ ಮೂರನೇ ಕಟ್ಟಡ).
ಮೈಸೂರು

Edited, Printed and Published by
A. R. Nagarajar at Sadhvi Press,
D Subbiah Road, Mysore

ಅಂಗಡಿ ಸಿಬ್ಬಂದಿ ಕಾನೂನು ಉಲ್ಲಂಘನೆಗಾಗಿ ದಂಡ

ಅಂಗಡಿ ಸಿಬ್ಬಂದಿ ಕಾನೂನನ್ನು ಉಲ್ಲಂಘಿಸಿದುದಕ್ಕಾಗಿ ಕೆಳಗೆ ಕಂಡ ಅಂಗಡಿಗಳ ಮಾಲೀಕರಿಗೆ ಕಳೆದ ಶನಿವಾರ ದ್ವಿತೀಯ ನಗರ ನ್ಯಾಯಾಧೀಶರು ಮುಂದೆ ಕಂಡಂತೆ ಜುಲ್ಮಾನೆಯನ್ನು ವಿಧಿಸಿರುವರು:- ಆನೆ ಸಾರೋಟು ರಸ್ತೆ ದಿನಸಿ ಅಂಗಡಿಗಳ ಶ್ರೀಗಳಾದ ಪಿ. ಕೆ. ಮೂಸಾ ಮತ್ತು ಟಿ ಕೆ. ಮಹಮೂದ್ ತಲಾ ೩ ರೂ. ಮತ್ತು ಅಕ್ಬರ್ ರಸ್ತೆಯ ದಿನಸಿ ಅಂಗಡಿ ಮಾಲೀಕ ಶ್ರೀ ಅಶ್ವತ್ಥನಾರಾಯಣಶೆಟ್ಟಿ ಮತ್ತು ಜಗನ್ಮೋಹನ ಬಂಗ್ಲೆ ರಸ್ತೆಯ ಬೀಡಿ ಅಂಗಡಿ ಮಾಲೀಕ ಶ್ರೀ ಟಿ. ಎಸ್. ರಾಜನ್-ತಲಾ ೫ ರೂ.

ಫುಟ್ ಬಾಲ್ ಪಂದ್ಯ

ಕಾಮರ್ಸ್ ಫುಟ್ ಬಾಲ್ ಮೈದಾನದಲ್ಲಿ ನಿನ್ನೆ ನಡೆದ ಯುಗಾದಿ ಹಬ್ಬದ ಫುಟ್ ಬಾಲ್ ಪಂದ್ಯದಲ್ಲಿ ಮೈಸೂರು ಫ್ರೆಂಡ್ಸ್ ಯೂನಿಯನ್ ಟೀಮಿನವರು ಇಟ್ಟಿಗೆಗೂಡು ಸೆಲೆಕ್ಟ್ಸ್ ಟೀಮಿನವರನ್ನು ೩-೨ ಗೋಲುಗಳಿಂದ ಸೋಲಿಸಿದ್ದಾರೆ

SHREE GAYATHRI
TALKIES
To-day : Last day
LONE RANGER
From 4-4-57 : For 2 days only
RETURN TO TREASURE ISLAND
(Technicolor)
Starring :-Tab Hunter and Dawn Addams

ಚಂದಾದಾರರಲ್ಲಿ ವಿನಂತಿ

ಸ್ಥಳ ಪರಸ್ಥಳಗಳ ಚಂದಾದಾರರುಗಳು ತಮ್ಮ ತಿಂಗಳ ಚಂದಾ ಹಣವನ್ನು ದಯವಿಟ್ಟು ಮುಂಗಡವಾಗಿ ಪಾವತಿ ಮಾಡಿ ರಸೀತಿ ಪಡೆಯಬೇಕೆಂದು ಕೋರಲಾಗಿದೆ.

— ವ್ಯವಸ್ಥಾಪಕ
" ಸಾಧ್ವಿ "

ಶ್ರೀರಂಗಪಟ್ಟಣದ ಟೌನ್ ಮುನಿಸಿಪಲ್
ಕೌನ್ಸಿಲ್ ಅಧ್ಯಕ್ಷರವರ ಆಫೀಸು
ತಾ|| 29-3-57
H C 202 56

ಪ್ರಕಟಣೆ

ಶ್ರೀರಂಗಪಟ್ಟಣದ ಟೌನ್ ಮುನಿಸಿಪಾಲಿಟಿಯವರು ಗಂಜಾಂನಲ್ಲಿ ಹೊಸದಾಗಿ ಕಟ್ಟಿಸಿರುವ ಕಟ್ಟಡದಲ್ಲಿ 1957-58ನೇ ಸಾಲಿನಿಂದ ಒಂದು ಶಿಶು ವಿಹಾರವನ್ನು ನಡೆಸಲು ಒಬ್ಬ ಉಪಾಧ್ಯಾಯಿನಿ ಬೇಕಾಗಿರುತ್ತೆ. ಸಂಬಳ ತಿಂಗಳೊಂದಕ್ಕೆ ರೂ 30, ತುಟ್ಟಿ ಭತ್ಯ ರೂ. 20 ಮಾತ್ರ.

ಇಷ್ಟಪಡುವವರು ತಾರೀಖು 22-4-57ನೇ ಸೋಮವಾರ ಸಾಯಂಕಾಲ 4 ಘಂಟೆಯೊಳಗೆ ತಲುಪುವಂತೆ ಈ ಕೆಳಗೆ ರುಜು ಮಾಡಿರುವವರ ಅಡ್ರಸ್ಸಿಗೆ ಅರ್ಜಿಗಳನ್ನು ಕಳುಹಿಸಬಹುದು. ಅರ್ಜಿಯ ಜೊತೆಯಲ್ಲಿ ಯೋಗ್ಯತಾ ಪತ್ರಗಳ ನಕಲುಗಳನ್ನು ಕಳುಹಿಸಿಕೊಡತಕ್ಕದ್ದು ಮತ್ತು ಈ ಕೆಳಗೆ ಕಾಣಿಸಿರುವ ವಿವರಗಳನ್ನು ಕೊಡತಕ್ಕದ್ದು.

1. ಹೆಸರು
2. ತಂದೆಯವರ ಹೆಸರು
3 ವಯಸ್ಸು
4, ವಿದ್ಯಾರ್ಹತೆ
5. ಯೋಗ್ಯತಾ ಪತ್ರದ ನಕಲುಗಳು
6. ಇತರೆ ವಿವರಗಳು

ನರ್ಸರೀ ಸ್ಕೂಲುಗಳಲ್ಲಿ ತರಬೇತು ಪಡೆದಿರುವವರಿಗೆ ಉತ್ತೇಜನ ಕೊಡಲಾಗುತ್ತೆ. ಮತ್ತು ಆವಶ್ಯಕತೆ ಇದ್ದಲ್ಲಿ ಅವರವರ ಸ್ವಂತ ಖರ್ಚಿನಿಂದ ಬಂದು ಭೇಟಿ ಮಾಡತಕ್ಕದ್ದು. ತಿಳಿಯುವುದು.

(ರುಜು) ಬಿ ನೋರೇಗೌಡ
ಅಧ್ಯಕ್ಷರು,
ಟೌನ್ ಮುನಿಸಿಪಲ್ ಕೌನ್ಸಿಲ್
ಶ್ರೀರಂಗಪಟ್ಟಣ

[illegible] ನಂ. [illegible]

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : [illegible]] SADHVI : THURSDAY 4—4—1957 ಮೈಸೂರು : ಗುರುವಾರ ೪—೪—೧೯೫೭ : [ಸಂಚಿಕೆ : [illegible]

ಚಿಲಿಯಲ್ಲಿ ಗಲಭೆಯಿಂದ ಮುತ್ತಿಗೆ ಪರಿಸ್ಥಿತಿ ಘೋಷಣೆ

ಚಿಲಿಯಲ್ಲಿ ಜರೂರು ಪರಿಸ್ಥಿತಿ

ಗಲಭೆಯಲ್ಲಿ ೪೧ ಮಂದಿ ಮರಣ

ದಕ್ಷಿಣ ಅಮೆರಿಕದ ಚಿಲಿ ರಾಜ್ಯದಲ್ಲಿ ಸಂಚಾರ ದರಗಳನ್ನು ಹೆಚ್ಚಿಸಿರುವುದರ ವಿರುದ್ಧವಾಗಿ ನಡೆದ ಗಲಭೆಯಲ್ಲಿ ೪೧ ಮಂದಿ ಮಡಿದಿರುವರೆಂದೂ, ಅಲ್ಲಿ ಮುತ್ತಿಗೆ ಪರಿಸ್ಥಿತಿಯನ್ನು ಘೋಷಿಸಲಾಗಿರುವುದೆಂದೂ ವರದಿಯಾಗಿದೆ. ಅಶಾಂತಿ ಮತ್ತು ಅವ್ಯವಸ್ಥೆಯನ್ನು ದಮನ ಮಾಡಲು ಸೈನ್ಯಕ್ಕೆ ಆಜ್ಞೆ ಕೊಡಲಾಗಿದೆ. ರಾಜಧಾನಿ ಸ್ಯಾಂಟಿಯಾಗೊವಿನಲ್ಲಿ ಸರ್ಕಾರಿ ಭವನದ ಮೇಲೆ ಧಾಳಿ ಮಾಡಲು ಎರಡು ಬಾರಿ ಪ್ರಯತ್ನಗಳನ್ನು ನಡೆಸಲಾಗಿದ್ದಿತು. ಗಲಭೆಕಾರರು ನಗರದ ಬೀದಿದೀಪಗಳನ್ನು ಒಡೆದು ಲೂಟಿ ಮಾಡಿದರು. ಹಲವು ಪ್ರದರ್ಶನಕಾರರನ್ನು ಬಂಧಿಸಲಾಗಿದೆ. ಸೆಂಟ್ರಲ್ ಕೋರ್ಟ್‌ಹೌಸ್ ಮೇಲೆ ಧಾಳಿಯಿಟ್ಟು ಧಾಳಿ ಮಾಡಿ ಕಲ್ಲಿನ ಮಳೆಗರೆಯಲಾಗಿ ಟ್ಯಾಂಕುಗಳೂ, ಸಶಸ್ತ್ರ ಸೈನಿಕರೂ ಧಾವಿಸಿ ಬಂದು ಅವರನ್ನು ಚದುರಿಸಿದರು. ನಗರದಲ್ಲಿ ರಾತ್ರಿಯೆಲ್ಲಾ ಗುಂಡಿನ ಸದ್ದು ಕೇಳಿಬರುತ್ತಿತ್ತು. ಗಲಭೆಯು ಇತರ ಕಡೆಗಳಿಗೆ ಹರಡದಂತೆ ತಡೆಯಲು ಕರ್ಫ್ಯೂ ಆಜ್ಞೆಯನ್ನು ವಿಧಿಸಲಾಗಿದೆ.

ಪರೀಕ್ಷೆಯಲ್ಲಿ ಸೂಪರ್‌ವೈಸರ್ ಮೇಲೆ ವಿದ್ಯಾರ್ಥಿಗಳ ಧಾಳಿ

ಮಚಲಿಪಟ್ಟಣದ ಒಂದು ಪ್ರೌಢ ಶಾಲೆಯಲ್ಲಿ ಕಳೆದ ತಿಂಗಳು ಎಸ್. ಎಸ್. ಎಲ್. ಸಿ. ಪರೀಕ್ಷೆ ನಡೆಯುತ್ತಿದ್ದಾಗ ಶಾಲೆಯ ಸಹಾಯಕ ಸೂಪರ್‌ವೈಸರ್ ಬಿ. ವೆಂಕಟೇಶ್ವರರಾಯರ ಮೇಲೆ ಇಬ್ಬರು ವಿದ್ಯಾರ್ಥಿಗಳು ಧಾಳಿ ಮಾಡಿ ಹೊಡೆದರೆಂದು ವರದಿಯಾಗಿದೆ. ಇಬ್ಬರು ವಿದ್ಯಾರ್ಥಿಗಳು ಕಾಪಿ ಮಾಡುತ್ತಿದ್ದುದು ಅಂದು ಪತ್ತೆಯಾಗಿ ಪರೀಕ್ಷಾ ಸಮಯದಲ್ಲಿ ಅಕ್ರಮಗಳಿಗೆ ತಾವು ಅವಕಾಶ ಕೊಡುವುದಿಲ್ಲವೆಂದು ಶ್ರೀ ವೆಂಕಟೇಶ್ವರರಾಯರು ವಿದ್ಯಾರ್ಥಿಗಳಿಗೆ ಎಚ್ಚರಿಕೆಯಿತ್ತಿದ್ದರು. ವೆಂಕಟೇಶ್ವರರಾಯರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ನಂತರ ಪೋಲೀಸು ಉಸ್ತುವಾರಿಯಲ್ಲಿ ಪರೀಕ್ಷೆಯನ್ನು ಮುಂದುವರಿಸಲಾಯಿತು.

ಪರೀಕ್ಷೆಯಲ್ಲಿ ಕಾಪಿ ಮಾಡಿದ ವಿದ್ಯಾರ್ಥಿಗಳ ಉಚ್ಚಾಟನೆ

ಮದನಪಲ್ಲಿಯ ಬೆಸೆಂಟ್ ಥಿಯಸಾಫಿಕಲ್ ಕಾಲೇಜಿನ ಇಬ್ಬರು ಸೀನಿಯರ್ ಇಂಟರ್ ವಿದ್ಯಾರ್ಥಿಗಳು ಕಳೆದ ವಾರ ಪರೀಕ್ಷೆಯಲ್ಲಿ ಕಾಪಿ ಮಾಡಿದರೆಂದು ಅವರನ್ನು ಶಾಲೆಯಿಂದ ಹೊರಕ್ಕೆ ಹಾಕಿ ಮುಂದೆ ಅದರಲ್ಲಿ ಭಾಗವಹಿಸದಂತೆ ತಿಳಿಸಲಾಯಿತೆಂದು ವರದಿಯಾಗಿದೆ.

ಕೋ-ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿ

ನಗರದ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಸಭೆಯು ನಡೆದು ಹೊಸ ವರ್ಷಕ್ಕೆ ಕೆ. ಪುಟ್ಟಸ್ವಾಮಿರಾಯರು ಅಧ್ಯಕ್ಷರಾಗಿಯೂ, ಸಿ. ನರಸಿಂಗರಾಯರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಹೆಚ್. ರಾಮಣ್ಣನವರು ಕಾರ್ಯದರ್ಶಿಗಳಾಗಿಯೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟಿರುವರು.

ರಾಜೇಂದ್ರ ಪ್ರಸಾದ್ ಮತ್ತು ರಾಧಾಕೃಷ್ಣನ್‌ರವರ ಒಪ್ಪಿಗೆ

ರಾಷ್ಟ್ರಾಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ

ರಾಷ್ಟ್ರಾಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಡಾ|| ರಾಜೇಂದ್ರ ಪ್ರಸಾದ್ ಮತ್ತು ಸರ್ವಪಲ್ಲಿ ರಾಧಾಕೃಷ್ಣನ್‌ರವರ ಹೆಸರುಗಳನ್ನು ಕಾಂಗ್ರೆಸ್ಸಿನ ಕೇಂದ್ರ ಪಾರ್ಲಿಮೆಂಟರಿ ಸಮಿತಿಯು ಸೂಚಿಸಲು ನಿರ್ಧರಿಸಿದೆ. ಅದಕ್ಕೆ ಅವರಿಬ್ಬರೂ ಒಪ್ಪಿರುವುದಾಗಿ ಗೊತ್ತಾಗಿದೆ.

ರಾಧಾಕೃಷ್ಣನ್‌ರವರನ್ನು ಒಪ್ಪಿಸಲು ನೆಹರೂ ಫೆಬ್ರವರಿಯಲ್ಲಿಯೇ ಕೇಂದ್ರ ಮಂತ್ರಿ ಕೆ. ಸಿ. ರೆಡ್ಡಿಯವರೂ ಜತೆ [illegible]

ಜಲಜನಕ ಬಾಂಬು ಸಿಡಿತದ ಪ್ರದೇಶಕ್ಕೆ ತೆರಳಲು ದಂಪತಿಗಳ ನಿರ್ಧಾರ

ಅಣು ಕಿರಣಗಳ ದುಷ್ಪರಿಣಾಮದ ಪ್ರಚಾರವೇ ಉದ್ದೇಶ

ಬ್ರಿಟನ್ನು ಪೆಸಿಫಿಕ್ ಸಾಗರದ ಕ್ರಿಸ್ಮಸ್ ದ್ವೀಪದಲ್ಲಿ ಸಧ್ಯದಲ್ಲೇ ನಡೆಸುವ ಜಲಜನಕ ಬಾಂಬು ಪರೀಕ್ಷಾ ಸಿಡಿತದ ಸಮಯದಲ್ಲಿ ಆ ಪ್ರದೇಶಕ್ಕೆ ಬ್ರಿಟಿಷ್ ದಂಪತಿಗಳಿಬ್ಬರು ಹೋಗಲು ಸಿದ್ಧವಾಗಿರುತ್ತಾರೆಂದು ವರದಿಯಾಗಿದೆ. ಗಂಡನು ೬೩ ವರ್ಷದ ಮಾಜಿ ಸಿವಿಲ್ ಸರ್ವಿಸ್ ಅಧಿಕಾರಿ, ಹೆಸರು ಹೆರಾಲ್ಡ್ ಸ್ಟೀಲ್. ಅತನ ಪತ್ನಿ ಶೀಲಾ ಎಂಬಾಕೆಯು ೩೯ ವರ್ಷದವಳು. ಅಣು ಕಿರಣಗಳ ಪ್ರಸರಣಕ್ಕೆ ತಾವು ತುತ್ತಾಗಿ ಅಣು ಸಿಡಿತಗಳಿಂದ ಆಗುವ ಭಯಂಕರ ಪರಿಣಾಮವನ್ನು ತೋರಿಸಲು ಅವರು ಉದ್ದೇಶ ಹೊಂದಿರುವರು. ತಮ್ಮ ೩ ಮಕ್ಕಳನ್ನು ಮಿತ್ರರ ಆಶ್ರಯದಲ್ಲಿ ಬಿಟ್ಟು, ತಾವು ಉಳಿತಾಯ ಮಾಡಿರುವ ೪೦೦ ಪೌಂಡು ಹಣದಿಂದ ಅವರು ಜಪಾನಿಗೆ ವಿಮಾನದಲ್ಲಿ ಹೋಗಲಿರುವರು. ಸಾಯುವುದು ತಮ್ಮ ಅಪೇಕ್ಷೆಯಲ್ಲವೆಂದೂ, ಆದರೆ ಅಣು ಶಕ್ತಿಯ ಭಯಂಕರ ಪರಿಣಾಮವನ್ನು ವಿಶ್ವಕ್ಕೆ ತೋರಿಸುವುದೇ ತಮ್ಮ ಉದ್ದೇಶವೆಂದೂ ಅವರು ಹೇಳಿರುವರು.

ಜಾರ್ಡಾನ್ ದೊರೆಯ ಪಲಾಯನಕ್ಕೆ ಏರ್ಪಾಡು ?

ಜಾರ್ಡಾನ್ ದೇಶದಲ್ಲಿ ಉತ್ಕಟ ಪರಿಸ್ಥಿತಿಯುಂಟಾಗಿರುವುದೆಂದೂ, ಅಲ್ಲಿನ ಯುವಕ ದೊರೆ ಹುಸೇನರವರು ರಾಜಧಾನಿ ಅಮ್ಮಾನಿನಿಂದ ಪರಾರಿಯಾಗಲು ತಮ್ಮ ಸ್ವಂತ ವಿಮಾನವನ್ನು ಸಜ್ಜುಗೊಳಿಸುತ್ತಿರುವರೆಂದೂ ಲಂಡನ್ ವಾರ್ತೆಯೊಂದು ತಿಳಿಸಿದೆ. ದೊರೆಯನ್ನು ಅಲ್ಲಿನ ಜನರು ಪಾಶ್ಚಿಮಾತ್ಯ ರಾಷ್ಟ್ರಗಳ ಹಿಂಬಾಲಕರೆಂದು ಕರೆಯುತ್ತಿದ್ದಾರೆ. ದೊರೆಯು ತಮ್ಮ ೯ ವರ್ಷದ ರಾಜಕುಮಾರನಿಗೆ ಪಟ್ಟ ಕಟ್ಟಬೇಕೆಂದು ಅಲ್ಲಿನ ಬಲಪಕ್ಷದವರೂ, ದೇಶವನ್ನು ರಿಪಬ್ಲಿಕ್ ಮಾಡಬೇಕೆಂದು ವಾಮ ಪಕ್ಷದವರೂ ಒತ್ತಾಯ ಪಡಿಸುತ್ತಿರುವುದಾಗಿ ಗೊತ್ತಾಗಿದೆ

ಕೇರಳದಲ್ಲಿ ೧೧ ಮಂದಿಯ ಮಂತ್ರಿಮಂಡಲ

ಇಬ್ಬರು ಸ್ವತಂತ್ರರು ಮತ್ತು ಒಬ್ಬ ಮಹಿಳೆಗೆ ಸಚಿವ ಪದವಿ

ಕೇರಳ ಶಾಸನ ಸಭೆಯ ಕಮ್ಯೂನಿಸ್ಟ್ ಪಕ್ಷದ ನಾಯಕ ಇ. ಎಂ. ಎಸ್. ನಂಬೂದರಿಪಾದ್‌ರವರು ನಿನ್ನೆ ಅಲ್ಲಿನ ಗವರ್ನರರನ್ನು ಭೇಟಿ ಮಾಡಿ ಅವರಿಗೆ ತಮ್ಮ ಮಂತ್ರಿಮಂಡಲದ ಪಟ್ಟಿಯನ್ನು ಒಪ್ಪಿಸಿದರು. ೧೧ ಮಂದಿ ಸಚಿವರಿರುವ ಈ ಮಂತ್ರಿಮಂಡಲದಲ್ಲಿ ಇಬ್ಬರು ಸ್ವತಂತ್ರರು ಮತ್ತು ಒಬ್ಬರು ಮಹಿಳೆಯು ಇರುವರು. ಡಾ|| ಎ. ಆರ್. ಮೆನನ್ ಮತ್ತು ವಿ. ಆರ್. ಕೃಷ್ಣಯ್ಯರ್‌ರವರು ಸ್ವತಂತ್ರರು. ಮಹಿಳಾ ಸಚಿವರ ಹೆಸರು ಕುಮಾರಿ ಕೆ. ಆರ್. ಗೌರಿ. ಮಂತ್ರಿಮಂಡಲದಲ್ಲಿ ಮೇಲ್ಕಂಡವರು ಮತ್ತು ಮುಖ್ಯ ಮಂತ್ರಿಯಾಗಲಿರುವ ಇ. ಎಂ. ಎಸ್. ನಂಬೂದರಿಪಾದ್‌ರವರಲ್ಲದೆ, ಸಿ. ಅಚ್ಯುತ, ಕೆ. ಸಿ. ಜಾರ್ಜ್, ಕೆ. ಪಿ. ಗೋಪಾಲನ್, ಟಿ. ವಿ. ಥಾಮಸ್, ಪಿ. ಕೆ. ಚಾತನ್, ಟಿ. ಎ. ಮಜೀದ್ ಮತ್ತು ಜೋಸೆಫ್ ಮುಂಡಶ್ಶೇರಿಯವರೂ ಇರುವರು. ಅವರವರಿಗೆ ಒಪ್ಪಿಸಲಾಗುವ ಇಲಾಖೆಗಳ ಕೆಲಸವನ್ನು ಸರಿಯಾಗಿ ನಿರ್ವಹಿಸುವ ವ್ಯಕ್ತಿಯಿಂದಲೇ ಸಚಿವರನ್ನು ಆಯ್ಕೆ ಮಾಡಿರುವುದಾಗಿ ನಾಯಕರು ತಿಳಿಸಿದ್ದಾರೆ. ನಾಳೆ ದಿನ ಬೆಳಗ್ಗೆ ೧೧|| ಗಂಟೆಗೆ ಪ್ರಮಾಣ ವಚನ ಸ್ವೀಕಾರವಿದೆ.

ರಾಮೋತ್ಸವ ಕಾರ್ಯಕ್ರಮ

ಮೈಸೂರು ೪

ಶ್ರೀ ರಾಮೋತ್ಸವದ ಅಂಗವಾಗಿ ಕೆಂಪನಂಜಾಂಬಾ ಅಗ್ರಹಾರದ ಶ್ರೀ ರಾಮೋತ್ಸವ ಸಭೆಯ ಆಶ್ರಯದಲ್ಲಿ ಈ ಸಂಜೆ ೬|| ಗಂಟೆಗೆ ವಿ|| ಚೊಕ್ಕಮ್ಮನವರ ವೀಣಾ ವಾದನ ಮತ್ತು ಗಾಯನವು ನಡೆಯುವುದು. ನಾಳೆ ಸಂಜೆ ೬|| ಗಂಟೆಗೆ ವಿ|| ಲಕ್ಷ್ಮೀನರಸಿಂಹಯ್ಯನವರ ಸ್ಯಾಕ್ಸೋಫೋನ್ ಮತ್ತು ರಾತ್ರಿ ೮|| ಗೆ ವಿ|| ರಾಜಮ್ಮ ಕೇಶಾದ್ರಿಯವರ ಸಂಗೀತವು ಏರ್ಪಾಡಾಗಿವೆ.

ಶ್ರೀರಾಮಪೇಟೆ ಶ್ರೀ[illegible]ಶ್ವರ ದೇವಸ್ಥಾನದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀಮತಿ ಲಕ್ಷ್ಮೀಬಾಯಿ ದೇಶಪಾಂಡೆಯವರಿಂದ ಸತಿ ಅನಸೂಯ ಎಂಬ ಹರಿಕಥೆಯು ನಡೆಯುವುದು.

ವಾಣೀವಿಲಾಸ ಮೊಹಲ್ಲೆಯ ಭಾರತೀ ಸ್ತ್ರೀ ಸಮಾಜದಲ್ಲಿ ಈ ಸಂಜೆ ೬ ಗಂಟೆಗೆ ಆ|| ವಿ|| ಸ್ವರಮೂರ್ತಿ ವಿ. ಎನ್. ರಾಯರಿಂದ ವೀಣಾ ವಾದನ ಮತ್ತು ನಾಳೆ ಸಂಜೆ ೬ಕ್ಕೆ ವಿ|| ಗೌರಿ ಕುಪ್ಪುಸ್ವಾಮಿಯವರ ಗಾಯನವು ಇವೆ.

ಕೇರಳ ದಿನಾಚರಣೆ

ಕೇರಳದಲ್ಲಿ ಪ್ರಥಮ ಕಮ್ಯೂನಿಸ್ಟ್ ಸರ್ಕಾರದ ರಚನೆಯ ದಿನವಾದ ತಾ|| ೫-೪-೫೭ರಂದು ಭಾರತ ಕಮ್ಯೂನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಸಮಿತಿಯು ಸಂಜೆ ೬ ಗಂಟೆಗೆ ಪಕ್ಷದ ಕಛೇರಿಯಲ್ಲಿ "ಕೇರಳ ದಿನ"ವನ್ನು ಆಚರಿಸುವುದು. ಪಾರ್ಟಿಯ ಸದಸ್ಯರೂ, ಅಭಿಮಾನಿಗಳೂ ಬೆಂಬಲಿಗರೂ ಮತ್ತು ಸಾರ್ವಜನಿಕರೂ ದಯಮಾಡಿಸಿ ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ.

ಪೂರ್ಣ ಸ್ವಪ್ರಭುತ್ವಕ್ಕಾಗಿ ಪೂರ್ವ ಪಾಕಿಸ್ತಾನದ ಒತ್ತಾಯ

ಪೂರ್ವ ಪಾಕಿಸ್ತಾನಕ್ಕೆ ಪೂರ್ಣವಾದ ಪ್ರಾದೇಶಿಕ ಸ್ವಪ್ರಭುತ್ವವು ಬೇಕೆಂದು ಒತ್ತಾಯಪಡಿಸಲು ಅಲ್ಲಿನ ವಿಧಾನ ಸಭೆಯು ನಿನ್ನೆ ಸರ್ವಾನುಮತದಿಂದ ನಿರ್ಣಯ ಮಾಡಿತು. ಪಾಕಿಸ್ತಾನದ ಕೇಂದ್ರ ಸರ್ಕಾರದವರು ನಾಣ್ಯ, ವಿದೇಶಾಂಗ ಮತ್ತು ರಕ್ಷಣೆ ಬಾಬುಗಳನ್ನು ಮಾತ್ರ ಇಟ್ಟುಕೊಂಡು ಉಳಿದ ಎಲ್ಲಾ ವಿಚಾರಗಳಲ್ಲೂ ಪ್ರಾಂತಕ್ಕೆ ಸ್ವಾತಂತ್ರ್ಯವೀಯಬೇಕೆಂದು ಕೋರಲಾಯಿತು.

ಸೆಣಬಿನ ಕಾರ್ಖಾನೆ ಕಾರ್ಮಿಕರ ಮೇಲೆ ಪೋಲೀಸಿನವರ ಗುಂಡು

ಇಬ್ಬರ ಮರಣ; ಇಪ್ಪತ್ತು ಜನರಿಗೆ ಗಾಯ

ಟಿಟಾಗರ್‌ನ ಇಸ್ಪಹಾನಿ ಸೆಣಬಿನ ಕಾರ್ಖಾನೆಯ ಕಾರ್ಮಿಕರ ಮೇಲೆ ನಿನ್ನೆ ಪೋಲೀಸರು ಗುಂಡು ಹಾರಿಸಲಾಗಿ ಇಬ್ಬರು ಮೃತಪಟ್ಟು, ೨೦ ಮಂದಿಗೆ ಗಾಯವಾದುದಾಗಿ ವರದಿಯಾಗಿದೆ. ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂದು ಒತ್ತಾಯಪಡಿಸಿ ಕಾರ್ಖಾನೆಯ ೬ ಸಾವಿರ ಕಾರ್ಮಿಕರು ಮೊನ್ನೆಯಿಂದ ಸ್ಟ್ರೈಕ್ ಮುಷ್ಕರ ನಡೆಸುತ್ತಿರುವರೆಂದು ಹೇಳಲಾಗಿದೆ.

ಸಿಂಗಪುರದ ಬ್ಯಾಂಕಿನಲ್ಲಿ ೧| ಲಕ್ಷ ರೂ. ನಗನಾಣ್ಯಗಳ ಮಾಯ

ಸಿಂಗಪುರದಲ್ಲಿರುವ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ೧,೨೪,೪೪೦ ರೂ. ಬೆಲೆಯ ಹಣ ಮತ್ತು ನಗಗಳು ಮಾಯವಾಗಿರುವುದೆಂದು ವರದಿಯಾಗಿದೆ. ಹಣವನ್ನು ಇಡಲಾಗಿದ್ದ ಅಗಾಧವಾದ ಉಕ್ಕಿನ ಸ್ಟ್ರಾಂಗ್ ರೂಮನ್ನು ತೆರೆಯಲು ಎಂಟು ಬೀಗದ ಕೈಗಳು ಬೇಕಾಗುವುವು. ಕಳ್ಳತನದ ಬಗ್ಗೆ ಮ್ಯಾನೇಜರಿಗೆ ತುಂಬಾ ಗಾಬರಿಯುಂಟಾಗಿದೆ. ಪೋಲೀಸರು ತನಿಖೆ ನಡೆಸಿ, ಬೀಗಗಳನ್ನು ಮುರಿದ ಬಗ್ಗೆ ಕುರುಹುಗಳೇನೂ ಇಲ್ಲವೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

ತಂದೆಯಿಂದ ಮಗನ ಇರಿತ

ಪುತ್ತೂರು ಬಳಿ ಕೊಂಬೆಟ್ಟಿನ ಡೇವಿಡ್ ಲೋಬೊ ಎಂಬಾತನು ತನ್ನ ಮೊದಲನೇ ಹೆಂಡತಿ ಮಗ ಫ್ರಾನ್ಸಿಸ್ ಲೋಬೊನನ್ನು ಚೂರಿಯಿಂದ ಇರಿದುದಾಗಿಯೂ, ಅದಕ್ಕೆ ಪ್ರತಿಯಾಗಿ ಮಗನು ತಂದೆಯನ್ನು ಇರಿದನೆಂದೂ, ತಂದೆಯನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಆತನು ಮೃತಪಟ್ಟನೆಂದೂ ವರದಿಯಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕೊಳಲು ೭-೧೫ ಗಾಂಧಿ ಸ್ಮೃತಿ ೭-೩೦ ಹಿಂದಿ ವಾರ್ತೆ ೮-೧೫ ಆರ್. ಇಂದಿರಮ್ಮ-ದೇವರನಾಮ ಮಧ್ಯಾಹ್ನ ೧೨ ಎಸ್. ಎಂ. ಮರಿಯಪ್ಪ-ಸಂಗೀತ. ೧ [illegible] ಮತ್ತು ಸೆಲ್ಲೊ ೧-೩೦ ರಿಕಾರ್ಡು. ೧-೫೦ ಕೊಳಲು ೩ ವನಿತಾ ವಿಹಾರ ಸಂಜೆ ೬-೩೦ ಸಾಹಿತ್ಯ ಸಮಾರೋಹ ೬-೪೦ ಸ್ವಪ್ನ ಸಾಮ್ರಾಜ್ಯದ ಬಗ್ಗೆ ಕನ್ನಡ ಭಾಷಣ. ೮ ಮದ್ರಾಸಿನಿಂದ-ನೆಡುನೂರಿ ಕೃಷ್ಣಮೂರ್ತಿ-ಸಂಗೀತ. ೯-೧೫ ಚಿತ್ರ ಸಂಗೀತ ೯-೩೦ ಸಾಹಿತ್ಯ ಸಮಾರೋಹ

ದಾಸ್ತಾನಿರುವ ಅಕ್ಕಿಗೆ ಗಿರಾಕಿಗಳೇ ಇಲ್ಲ

ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲಾಧಿಕಾರಿಗಳ ಹೇಳಿಕೆ

ಮೈಸೂರು ೪

ಡಿವಿಜನಲ್ ಕಮಿಷನರ್ ಶ್ರೀ ಕೆ ಶೇಷಗಿರಿರಾಯರು ನೆನ್ನೆ ಮಧ್ಯಾಹ್ನ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ ಇದುವರೆಗೆ ತಮ್ಮ ಕ್ಷೇತ್ರದಲ್ಲಿ ಆಗಿರುವ ಕೆಲಸಕಾರ್ಯಗಳನ್ನು ವಿವರಿಸಿದರು

ಕಳೆದ ೫ ತಿಂಗಳಲ್ಲಿ ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೋಡಲು ಸರ್ಕಾರದವರು ೩,೪೦,೦೦೦ ರೂ ಗಳನ್ನು ಮಂಜೂರು ಮಾಡಿದ್ದಾರೆ ಹಳ್ಳಿಗಳಿಗೆ ರಸ್ತೆ ಮೂಲಕ ಸಂಪರ್ಕವನ್ನು ಏರ್ಪಡಿಸಲು ೩,೫೫ ೦೦೦ ರೂ, ಗುಡ್ಡಗಾಡಿನವರ ಅಭಿವೃದ್ಧಿಗಾಗಿ ೧,೪೪,೦೦೦ ರೂ, ನಾನಾ ಊರುಗಳಲ್ಲಿ ಕಶ್ಮಲ ನಿವಾರಣೆ, ರಸ್ತೆ ರಿಪೇರಿ ಮುಂತಾದ ಕಾರ್ಯಗಳಿಗೆ ೪೦ ಸಾವಿರ ರೂ ಗಳನ್ನು ಕೊಡಲಾಗಿದೆ-ಎಂದು ಅವರು ತಿಳಿಸಿದರು

ಅಣೆಕಟ್ಟುಗಳ ೮ ಯೋಜನೆಗಳಲ್ಲಿ ತುಂಗಾ ಮತ್ತು ನುಗು ಕಾರ್ಯಗಳು ಮುಗಿಯುತ್ತಾ ಬಂದಿವೆ ಅಣೆಕಟ್ಟುಗಳ ನಿರ್ಮಾಣದೊಂದಿಗೆ ಭೂ ಸಾಗುವಳಿ ಕಾರ್ಯವನ್ನೂ ತ್ವರಿತಗೊಳಿಸಲಾಗುತ್ತಿದೆ ಅದರಂತೆ ಈ ಸಾರಿ ನುಗು ಪ್ರದೇಶದಲ್ಲಿ ೫ ಸಾವಿರ ಎಕರೆ ಸಾಗುವಳಿಯಾಗುವುದು-ಎಂದು ಹೇಳಿದರು

ನಗರದಲ್ಲಿರುವ ಕೇಂದ್ರ ಆಹಾರ ಧಾನ್ಯ ಸಂಗ್ರಹಾಲಯದಲ್ಲಿ ಅಳತೆ ಮತ್ತು ತೂಕಗಳು ಸರಿಯಾಗಿಲ್ಲವೆಂಬ ದೂರನ್ನು ತಾವು ಪರಿಶೀಲಿಸಿದುದಾಗಿಯೂ ಅಲ್ಲಿರುವ ತೂಕದ ಯಂತ್ರವು ಸರಿಯಾಗಿಲ್ಲದ ಕಾರಣ ಈ ರೀತಿ ಆಗುತ್ತಿರುವುದೆಂದೂ, ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆಯೆಂದೂ ಜಿಲ್ಲಾಧಿಕಾರಿಗಳು ತಿಳಿಸಿದರು

ನಗರದಲ್ಲಿ ೧೯ ಸಹಕಾರ ಸಂಘಗಳು ತಿಂಗಳಿಗೆ ಸುಮಾರು ೧ ಸಾವಿರ ಪಲ್ಲ ಅಕ್ಕಿಯನ್ನು ಮಾರಾಟ ಮಾಡುತ್ತಿವೆಯೆಂದೂ ಇರುವ ಅಕ್ಕಿಗೆ ಸಾಕಾದಷ್ಟು ಬೇಡಿಕೆಯೇ ಇಲ್ಲವೆಂದೂ ಅವರು ಹೇಳಿದರು

ಹೊಸ ನಾಣ್ಯಗಳ ಬಗ್ಗೆ ಜನರಲ್ಲಿ ತಪ್ಪು ತಿಳುವಳಿಕೆಗಳುಂಟಾಗಿ ಮೋಸ ಹೋಗುವ ಪ್ರಸಂಗಗಳನ್ನು ಪ್ರಸ್ತಾಪಿಸಿ ಹೊಸ ನಾಣ್ಯ ಪದ್ಧತಿಯ ಬಗ್ಗೆ ಧ್ವನಿವರ್ಧಕಗಳ ಮೂಲಕ ಪ್ರಚಾರ ಮಾಡಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು ಪ್ರತಿ ತಾಲ್ಲೂಕು ಖಜಾನೆಗೂ ೧೬ ಸಾವಿರ ರೂ ಬೆಲೆಯ ನಾಣ್ಯಗಳನ್ನು ಒದಗಿಸಲಾಯಿತೆಂದೂ ಇನ್ನು ಮುಂದೆಯೂ ಒದಗಿಸಲಾಗುವುದೆಂದೂ ಹೇಳಿದರು.

ಬಂಗಾಳ, ಪಂಜಾಬು ಮತ್ತು ಮದ್ರಾಸ್ ನಾಯಕರ ಆಯ್ಕೆ

ಬಂಗಾಳ, ಪಂಜಾಬು ಮದ್ರಾಸು ಪ್ರಾಂತಗಳ ವಿಧಾನ ಸಭಾ ಕಾಂಗ್ರೆಸ್ ಪಕ್ಷಗಳ ನಾಯಕರಾಗಿ ಡಾ॥ ಬಿ. ಸಿ ರಾಯ್, ಪ್ರತಾಪಸಿಂಗ್ ಖೈರಾನ್ ಮತ್ತು ಕಾಮರಾಜ ನಾಡಾರ್‌ರವರು ಸರ್ವಾನುಮತದಿಂದ ಆರಿಸಲ್ಪಟ್ಟಿರುತ್ತಾರೆ. ಅವರುಗಳು ಪುನಃ ಆಯಾ ಸಂಸ್ಥಾನಗಳ ಮುಖ್ಯಮಂತ್ರಿಗಳಾಗುವರು ಮದ್ರಾಸಿನ ಮಂತ್ರಿ ಮಂಡಲವನ್ನು ರಚಿಸಲು ಕಾಮರಾಜರಿಗೆ ಗವರ್ನರ್ ಎ. ಜೆ. ಜಾನ್‌ರವರು ಆಹ್ವಾನವಿತ್ತಿದ್ದಾರೆ

ನಟನಟಿಯರು ಬೇಕಾಗಿದ್ದಾರೆ

ಹೊಸ ಬಗೆಯ ಕನ್ನಡ ನಾಟಕಗಳನ್ನು ಪ್ರದರ್ಶಿಸಲು ಸ್ಥಾಪಿತವಾಗಿರುವ ಈ ಸಂಸ್ಥೆಗೆ ಅರಿತ ನುರಿತ ನಟನಟಿಯರು (ನಾಟ್ಯೋಪಜೀವಿಗಳು, ನಾಟ್ಯ ವಿಲಾಸಿಗಳು) ಬೇಕಾಗಿದ್ದಾರೆ. ಅಭ್ಯರ್ಥಿಗಳು ಕೆಳಗಿನ ವಿಳಾಸಕ್ಕೆ ಭಾವಚಿತ್ರದೊಂದಿಗೆ ಬರೆಯಬೇಕು

ಮ್ಯಾನೇಜಿಂಗ್ ಡೈರೆಕ್ಟರ್,
ಕನ್ನಡ ಥಿಯೇಟರ್ಸ್ (ಪ್ರೈವೇಟ್) ಲಿಮಿಟೆಡ್
ತ್ಯಾಗರಾಜ ರಸ್ತೆ, ಮೈಸೂರು

Edited, Printed and Published by
R. Nagarajan at Sadhvi Press,
Subbiah Road, Mysore

ಇಂಟರ್ ಆದವರಿಗೆ ಮಾತ್ರ ಆಯುರ್ವೇದ ಕಾಲೇಜಿಗೆ ಪ್ರವೇಶ

ಆರೋಗ್ಯ ಮಂತ್ರಿ ಎ. ಬಿ. ಶೆಟ್ಟರ ಸೂಚನೆ

ಮೈಸೂರು ೩

ಇಲ್ಲಿನ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ಆರೋಗ್ಯ ಸಚಿವ ಶ್ರೀ ಎ ಬಿ ಶೆಟ್ಟರ ಗೌರವಾರ್ಥವಾಗಿ ಮೊನ್ನೆ ಇತ್ತ ಸತ್ಕಾರಕೂಟದಲ್ಲಿ ಸಚಿವರು ಮಾತನಾಡಿ, ಇನ್ನುಮುಂದೆ ಇಂಟರ್ ಅಥವಾ ಹೆಚ್ಚಿನ ಪರೀಕ್ಷೆ ಆದವರಿಗೆ ಮಾತ್ರ ಕಾಲೇಜಿನಲ್ಲಿ ಪ್ರವೇಶ ಸಿಗುವಂತೆ ಮಾಡಲು ಯೋಚಿಸಲಾಗಿರುವುದೆಂದು ತಿಳಿಸಿದರು ವೈದ್ಯ ಶಾಸ್ತ್ರವನ್ನು ಅಭ್ಯಸಿಸುವವರಿಗೆ ಆದಷ್ಟು ಹೆಚ್ಚು ವಿಜ್ಞಾನದ ಅರಿವು ಆಗಬೇಕೆಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುವುದೆಂದೂ, ಇದರಿಂದ ವೈದ್ಯಕೀಯ ಶಾಸ್ತ್ರದ ಮಟ್ಟವು ಹೆಚ್ಚುವುದೆಂದೂ ಅವರು ಹೇಳಿದರು

ಪ್ರಾಚೀನ ವೈದ್ಯ ಪದ್ಧತಿಯನ್ನಾಗಲೀ, ಅಥವಾ ಆಧುನಿಕ ಪದ್ಧತಿಯನ್ನಾಗಲೀ ಕಡೆಗಣಿಸುವಂತಿಲ್ಲವೆಂದೂ, ಎರಡು ಕ್ರಮಗಳ ಉತ್ತಮಾಂಶಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕೆಂದೂ ಅವರು ಹೇಳಿದರು. ಅದೇ ದೃಷ್ಟಿಯಿಂದ ಆಯುರ್ವೇದ ಕಾಲೇಜಿನಲ್ಲಿ ಸಂಯೋಜಿತ ಪದ್ಧತಿಯ ಶಿಕ್ಷಣವನ್ನು ತರಲು ಆಲೋಚಿಸಲಾಗಿರುವುದೆಂದೂ ಅವರು ನುಡಿದರು

ಲೋಕಸಭೆಯ ವಿಸರ್ಜನೆ ವಿರುದ್ಧ ಅರ್ಜಿಯ ತಿರಸ್ಕಾರ

ಈ ದಿನ ಅಥವಾ ನಾಳೆ ವಿಸರ್ಜನೆಯಾಗಲಿರುವ ಲೋಕಸಭೆಯನ್ನು ರದ್ದುಮಾಡಲು ಅವಕಾಶವಾಗದಂತೆ ಆಜ್ಞೆ ಹೊರಡಿಸಬೇಕೆಂದು ಸಭೆಯ ಮೈಸೂರು ಸದಸ್ಯರಾದ ಎಂ ಎಸ್ ಗುರುಪಾದಸ್ವಾಮಿಯವರು ಪಂಜಾಬು ಹೈಕೋರ್ಟಿನಲ್ಲಿ ಹೂಡಿದ್ದ ರಿಟ್ ಅರ್ಜಿಯನ್ನು ಶ್ರೇಷ್ಠ ನ್ಯಾಯಾಧೀಶರೂ ಮತ್ತು ನ್ಯಾಯಾಧೀಶ ಚೋಪ್ರಾರವರೂ ತಿರಸ್ಕರಿಸಿರುತ್ತಾರೆ ಹಿಮಾಚಲ ಪ್ರದೇಶ ಮತ್ತು ಕಾಂಗ್ರಾ ಕಣಿವೆಯಿಂದ ಲೋಕಸಭೆಗೆ ಚುನಾವಣೆಯು ಜೂನಿನಲ್ಲಿ ನಡೆಯಲಿದೆ ಆದರೆ ರಾಷ್ಟ್ರಾಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯು ಬರುವ ತಿಂಗಳು ಆಗುವ ಕಾರಣ ಈಗಿನ ಸಭೆಯ ಸದಸ್ಯರೇ ರಾಷ್ಟ್ರಾಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಭಾಗವಹಿಸುವುದು ವಿಹಿತವೆಂದು ಶ್ರೀ ಗುರುಪಾದಸ್ವಾಮಿಯವರು ಸೂಚಿಸಿದ್ದರು ಆದ್ದರಿಂದ ಲೋಕಸಭೆಯ ವಿಸರ್ಜನೆಯನ್ನು ತಡೆಗಟ್ಟದಿದ್ದರೆ ಅರ್ಜಿದಾರರ ಹಕ್ಕುಗಳಿಗೆ ಚ್ಯುತಿ ಬಂದಂತಾಗುವುದೆಂದು ತಿಳಿಸಿ ರಿಟ್ ಆಜ್ಞೆಯಾಗಬೇಕೆಂದು ಅವರು ಕೋರಿದ್ದರು. ಇದೇ ವಿಚಾರವಾಗಿ ಲೋಕಸಭೆಯಲ್ಲಿ ಶ್ರೀ ಹೆಚ್ ವಿ. ಕಾಮತ್‌ರವರೂ ವಾದ ಮಾಡಿದ್ದರು

TO THE REGISTERED GRADUATES

Dear Sirs

I have stood as a candidate for election to one of the seats in the Mysore University Senate from the Registered Graduates Constituency

I request you kindly to exercise your first preference vote in my favour by marking "1" against my name in the Ballot Paper

G S JOSYER,
Member Bihar Research Society
PATNA

ಚಂದಾದಾರರಲ್ಲಿ ವಿನಂತಿ

ಸ್ಥಳ ಪರಸ್ಥಳಗಳ ಚಂದಾದಾರರುಗಳು ಪ್ರತಿ ತಿಂಗಳ ಚಂದಾ ಹಣವನ್ನು ದಯವಿಟ್ಟು ಮುಂಗಡವಾಗಿ ಪಾವತಿ ಮಾಡಿ ರಸೀತಿ ಪಡೆಯಬೇಕೆಂದು ಕೋರಲಾಗಿದೆ

— ವ್ಯವಸ್ಥಾಪಕ
"ಸಾಧ್ವಿ"

ಮೈಸೂರು ಡಿವಿಜನ್ ಸಂಚಾರ ವ್ಯವಸ್ಥಾ ಸಲಹಾ ಸಮಿತಿ

ಮೈಸೂರು ೪

ಮೈಸೂರು ಡಿವಿಜನ್ನಿನ ಸಂಚಾರ ವ್ಯವಸ್ಥಾ ಸಲಹಾ ಸಮಿತಿಯನ್ನು ಕೆಳಗೆ ಕಂಡಂತೆ ಸರ್ಕಾರದವರು ಪುನರ್ರಚಿಸಿದ್ದಾರೆ

ಸಮಿತಿಗೆ ಡಿವಿಜನಲ್ ಕಮಿಷನರು ಅಧ್ಯಕ್ಷರು, ಮೈಸೂರು ಡಿ ಐ ಜಿ, ಕಾವೇರಿ ಸರ್ಕಲ್ ಇಂಜನಿಯರ್, ರೀಜನಲ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು, ಮೈಸೂರಿನ ಟಿ ವೆಂಕಟರಮಣಯ್ಯ, ಅರಸೀಕೆರೆಯ ಶ್ರೀ ಬಿ ಚನ್ನಪ್ಪ, ಚಿಕ್ಕಮಗಳೂರಿನ ಶ್ರೀ ಸಿ. ವಿ ಧ್ರುವ ಮತ್ತು ಹಿರಾರಿಪುರದ ಶ್ರೀ ಸಿ. ಕಾಡಪ್ಪನವರು ಸದಸ್ಯರು

ಜನರ ಸೌಕರ್ಯಕ್ಕಾಗಿ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ಡಿವಿಜನ್ನಿನ ನಾನಾ ಜಿಲ್ಲೆಗಳಲ್ಲಿ ಸಂಚರಿಸಿ ರಜಿಸ್ಟ್ರೇಷನ್ ಮತ್ತು ರಹದಾರಿಗಳನ್ನು ಕೊಡುವರು

ಕೋರ್ಟಿನಲ್ಲಿ ಹಾಜರಿ ಬಗ್ಗೆ ಮಂತ್ರಿಗಳಿಗೆ ವಿನಾಯಿತಿ ಇಲ್ಲ

ಸಿವಿಲ್ ದಾವೆಯೊಂದರಲ್ಲಿ ಪ್ರತಿವಾದಿಗಳ ಪೈಕಿ ಒಬ್ಬರಾಗಿದ್ದ ಮದ್ರಾಸಿನ ಮಂತ್ರಿ ಎಂ ಭಕ್ತವತ್ಸಲಂರವರು ಕೋರ್ಟಿಗೆ ಹಾಜರಾಗದಂತೆ ವಿನಾಯಿತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮದ್ರಾಸು ಹೈಕೋರ್ಟು ತಿರಸ್ಕರಿಸಿದೆ. ತಮ್ಮನ್ನು ಕಮಿಷನನ್ನಿನ ಮೇಲೆ ವಿಚಾರಣೆ ಮಾಡುವಂತೆ ಅವರು ಕೋರಿದ್ದರು ಮಂತ್ರಿಗಳಿಗೆ ಹೆಚ್ಚು ಕೆಲಸವಿರುವುದೆಂಬ ವಾದದಮೇಲೆ ಅವರು ಕೋರ್ಟಿಗೆ ಬರದಿರುವುದನ್ನು ನ್ಯಾಯಾಧೀಶರು ಒಪ್ಪಲಿಲ್ಲ. ಕೋರ್ಟಿಗೆ ಬರುವುದರಿಂದ ಮಂತ್ರಿ ಪದವಿಗೆ ಅವಮಾನವಾದಂತೆ ಪರಿಗಣಿಸಬೇಕಾಗಿಲ್ಲವೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವರು

ಘಾನಾದಲ್ಲಿ ಬ್ರಿಟಿಷ್ ರಾಷ್ಟ್ರಗೀತೆ ವಜಾ

"ಗಾಡ್ ಸೇವ್ ದಿ ಕ್ವೀನ್" ಎಂಬ ಬ್ರಿಟಿಷ್ ರಾಷ್ಟ್ರಗೀತೆಯನ್ನು ಇನ್ನು ಮುಂದೆ ಘಾನಾ ರಾಜ್ಯದಲ್ಲಿ ನುಡಿಸಬಾರದೆಂದು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ ಆದರೆ ಬ್ರಿಟಿಷ್ ರಾಜವಂಶಸ್ಥರಾಗಲಿ ಅಥವಾ ರಾಣಿಯವರ ಪ್ರತಿನಿಧಿಯಾಗಲೀ ಆ ದೇಶಕ್ಕೆ ಬಂದಾಗ ಅದನ್ನು ನುಡಿಸಲಾಗುವುದು

ಶ್ರಮದಾನ ಶಿಬಿರದ ಮುಕ್ತಾಯ

೬ ನರಸೀಪುರದ ವಿದ್ಯೋದಯ ಪ್ರೌಢಶಾಲೆಯಲ್ಲಿ ನಡೆಯುತ್ತಿದ್ದ ಭಾರತ ಸೇವಾ ದಳ ಶ್ರಮದಾನ ಶಿಬಿರವು ಕಳೆದ ೩ರಂದೇ ಕಾ ಮುಕ್ತಾಯವಾಯಿತು ಈ ಸಮಾರಂಭಕ್ಕೆ ತಿ ತಾಲ್ಲೂಕಿನ ಅಸಿಸ್ಟೆಂಟ್ ಇಂಜನಿಯರ್ ಶ್ರೀ ವೆಂಕಟರಾಘವಾಚಾರ್‌ರವರು ಅಧ್ಯಕ್ಷತೆ ವ ಸಿದ್ದರು ಶ್ರೀ ಗಟ್ಟಿ ಸದಾಶಿವ ಮತ್ತು ಸ್ವಯಂಸೇ ವಕರಿಂದ ಪ್ರಾರ್ಥನೆಯಾದನಂತರ ಶಿಬಿರಾಧಿ ಶ್ರೀ ಶಿವಬಸಪ್ಪನವರು ಸ್ವಾಗತ ಭಾಷ ಮಾಡಿದರು. ಕಾರ್ಯಾಲಯದ ಮಂತ್ರಿ ಶ್ರೀ ಎಸ್ ಕೃಷ್ಣರಾಯರು ಶಿಬಿರದ ಕೆಲಸಕಾರ್ಯಗಳ ಬಗ್ಗೆ ವರದಿ ಓದಿದರು ಸ್ವಯಂಸೇವಕರುಳಿಗೆ ಪ್ರಶಸ್ತಿ ಪತ್ರ ವಿನಿಯೋಗಿಸಿದನಂತರ, ತಾಲ್ಲೂಕಿನ ಅಮಲ್ದಾರ್ ಶ್ರೀ ಎಸ್ ತಿಮ್ಮಪ್ಪಯವರು ಮುಕ್ತಾಯ ಭಾಷಣ ಮಾಡಿ ಸ್ವಯಂಸೇವಕರು ಆಗಿಂದಾಗ್ಗೆ ಹಳ್ಳಿಗಳಿಗೆ ಹೋಗಿ ಗ್ರಾಮ ರ ಜೀವನವನ್ನು ಉತ್ತಮಗೊಳಿಸಲು ಪ್ರಯತ್ನಿ ಬೇಕೆಂದು ನುಡಿದರು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಹಿಮ ಪ್ರವಾಹದಿಂದ ೭೦ ಮಂದಿ ಸಜೀವ ಸಮಾಧಿ

ಉತ್ತರ ಅಫಘಾನಿಸ್ತದಲ್ಲಿ ಒಂದು ಕಡೆ ರಸ್ತೆ ಮಾರ್ಗದಲ್ಲಿ ಹೋಗುತ್ತಿದ್ದವರ ಪೈಕಿ ೭೦ ಮಂ ಕಾರ್ಮಿಕರು ಹಿಮ ಪ್ರವಾಹದಿಂದ ಸಜೀವ ಸಮಾಧಿ ಹೊಂದಿದುದಾಗಿ ವರದಿ ಬಂದಿದೆ ಮಂದಿ ತಪ್ಪಿಸಿಕೊಂಡು ಹೊರಕ್ಕೆ ಬಂದರು ಬಂಡೆಗಳನ್ನು ಸಿಡಿಸಲೆತ್ನಿಸಿದಾಗ ಬೆಟ್ಟದ ಮೇಲೆ ಮಂಜು ಗೆಡ್ಡೆಗಳು ಜಾರಿ ಈ ಅಪಾಯವು ಸಂಭವಿಸಿತೆಂದು ಹೇಳಲಾಗಿದೆ.

THE PUBLIC LIBRARY, MYSORE

Notification—dated 3rd April 1957

APPLICATIONS are invited on or before the 10th April 1957 in the form prescribed by the P S C. for the post of an Attender, the minimum qualification being a pass in S. S. L. C Pay Rs 25 and D. A. Rs 20 p m.

P Gopalakrishnan Setty,
3rd April 1957 *President*

ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ !

ಅನೋಖ್ ಹರಾಜು ಮಾರಾಟಕ್ಕೆ ಬನ್ನಿರಿ

7-4-57ನೇ : ಭಾನುವಾರ ಬೆಳಿಗ್ಗೆ 10 ಘಂಟೆಗೆ : [illegible]

3 ಪೀಸುಗಳಲ್ಲಿ ಬೀಟಿ ಮರದ ಸೋಫಾ ಸೆಟ್ಟುಗಳು, ತೇಗ ಮತ್ತು ಬೀಟಿ ಮರದ ಸಿಂಗಲ್ ಮತ್ತು ಡಬ್ಬಲ್ ಮಂಚಗಳು, ಡ್ರೆಸ್ಸಿಂಗ್ ಟೇಬಲ್ಲುಗಳು ಅಲ್ಮೈರಾಗಳು, [illegible] ಮೊದಲಾದ ಉತ್ತಮ ಫರ್ನೀಚರುಗಳು ಇಂಗ್ಲಿಷ್ ಪೆರಾಂಬುಲೇಟರ್, ಕುರ್ಚಿಗಳು, ಟೇಬಲ್ಲುಗಳು ಬೇಬೀಸ್ ಕಾರ್ ಕೊಟ್ಟಿಲುಗಳು, ಟೀಪಾಯಿಗಳು, [illegible] ಮತ್ತು ಇತರ ಉಪಯುಕ್ತ ಪದಾರ್ಥಗಳು,

೬ನೇ ತಾ॥ ಶನಿವಾರ ಸಂಜೆ 4ರಿಂದ 6 ಗಂಟೆವರೆಗೆ ಪದಾರ್ಥಗಳನ್ನು [illegible]

ಅಬೀದ್ಸ್,

ಡೋರ್ ನಂ. 473 [illegible] ಮೈಸೂರು

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

4-4-57 ರಿಂದ : ಅನೋಖ್ 2ನೇ ವಾರ

[illegible] ★ ಮಂತ್ರವಾದಿ

ಶೀಘ್ರದಲ್ಲೇ ಬರುತ್ತದೆ ಮಾಯಾ ಬಜಾರ್ (ಶಶಿರೇಖಾ ಪರಿಣಯ) ವಿಜಯಾದವರ ತಮಿಳು ಚಿತ್ರ

ಚಾಮುಂಡೇಶ್ವರಿ ಟಾಕೀಸ್,

5—4—57 ರಿಂದ : ಅಮೋಘ ಪ್ರಾರಂಭ

ಮಧುಕೇಶ್ವರವರ ಕನ್ನಡ ಚಿತ್ರ ★ ಪ್ರಭುಲಿಂಗಲೀಲೆ

ತಾರಾಗಣ :- ಪ್ರತಿಮಾದೇವಿ, ಹರಿಣಿ, ನರಸಿಂಹರಾಜು, ವೀರಪ್ಪ ಮುಂತಾದವರು

Sri G B. Nagavarma Release

ಟೆಲಿಫೋನ್ ನಂ 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ



ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೫] SADHVI : FRIDAY 5—4—1957 ಮೈಸೂರು : ಶುಕ್ರವಾರ ೫—೪—೧೯೫೭ : [ಸಂಚಿಕೆ : ೨೯೬

ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿಮಂಡಲದ ಆರಂಭ

ಇಂದಿನಿಂದ ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿಮಂಡಲ

ಈ ದಿನ ಮಧ್ಯಾಹ್ನ ೧೨॥ ಗಂಟೆಗೆ ಕೇರಳದ ರಾಜ್ಯಪಾಲರ ಸಮ್ಮುಖದಲ್ಲಿ ನೂತನ ಸಂಸ್ಥಾನದ ಪ್ರಥಮ ಮಂತ್ರಿಮಂಡಲವು ಪ್ರಮಾಣ ವಚನವನ್ನು ಕೈಗೊಂಡು, ಅದರ ಪರಿಣಾಮವಾಗಿ ಕಮ್ಯೂನಿಸ್ಟರ ಆಳ್ವಿಕೆಯು ಇಂದಿನಿಂದ ಮು [illegible] ಯವಾಗಿದೆ

ಪ್ರಮಾಣ ವಚನ ಸ್ವೀಕಾರಕ್ಕೆ ಮುಂಚೆ ಮಾಜಿ ತಿರುವಾಂಕೂರು-ಕೊಚ್ಚಿ ಸಂಸ್ಥಾನದ ಪ್ರಸಿದ್ಧ ಕಮ್ಯೂನಿಸ್ಟ್ ಸದಸ್ಯ ಪಿ ಕೃಷ್ಣಪಿಳ್ಳೆಯವರ ಸಮಾಧಿಗೆ ನಂಬೂದರಿಪಾಡ್‌ರವರು ಹೂಮಾಲೆಯನ್ನರ್ಪಿಸಿದರು ಅದಕ್ಕಾಗಿ ಪ್ರಮಾಣ ವಚನ ಸಮಾರಂಭವು ೧ ಗಂಟೆ ಕಾಲ ತಡವಾಯಿತು

ಕೇರಳದ ಗವರ್ನರರ ಸಲಹೆಗಾರರಾದ ಶ್ರೀ ರಾಮುನ್ನಿ ಮೆನನ್ನರು ತಮ್ಮ ಅಧಿಕಾರವನ್ನು ನಿನ್ನೆ ಬಿಟ್ಟುಕೊಟ್ಟರು ಆ ಸ್ಥಾನವನ್ನು ಇಂದಿನಿಂದ ರದು ಮಾಡಲಾಗಿದೆ

ಇಂಡೋನೇಷ್ಯಾದಲ್ಲಿ ಜರೂರು ಮಂತ್ರಿಮಂಡಲದ ಸ್ಥಾಪನೆ

ಇಂಡೋನೇಷ್ಯದ ಅಧ್ಯಕ್ಷ ಸುಕರ್ನೋರವರು ಪ್ರವೀಣರುಳ್ಳ ಜರೂರು ಮಂತ್ರಿಮಂಡಲವೊಂದನ್ನು ರಚಿಸಲಿದ್ದಾರೆ. ಮಂತ್ರಿಮಂಡಲದಲ್ಲಿರುವವರು ಪಾರ್ಲಿಮೆಂಟಿನ ಸದಸ್ಯರಾಗಿರುವುದಿಲ್ಲ ವಿಚಾರವನ್ನು ಸುಕರ್ನೋರವರು ನಿನ್ನೆ ನಡೆದ ರಾಜಕೀಯ ಮತ್ತು ಮತ್ತು ಸೈನ್ಯ ನಾಯಕರುಗಳ ಮಹಾ ಸಭೆಯಲ್ಲಿ ತಿಳಿಸಿದರು ಕಳೆದ ವರ್ಷವೇ ಅಧ್ಯಕ್ಷ ಸುಕರ್ನೋರವರು ತಮ್ಮ ದೇಶದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸಮಾ ಹಾಗೂ ಕಮ್ಯೂನಿಸ್ಟರೂ ಸೇರಿ ಎಲ್ಲ ಪ್ರಜೆಗಳ ಪ್ರಾತಿನಿಧ್ಯವುಳ್ಳ ಸರ್ಕಾರವನ್ನು ರಚಿಸುವುದು ಅಗತ್ಯವೆಂದು ತಿಳಿಸಿದ್ದರು ಇಂಡೋನೇಷ್ಯಕ್ಕೆ ಪಾಶ್ಚಿಮಾತ್ಯ ದೇಶದಲ್ಲಿರುವಂತಹ ಪ್ರಜಾಪ್ರಭುತ್ವ ತಕ್ಕದಲ್ಲವೆಂದೂ ಅವರು ಹೇಳಿದರು

ಲೋಕ ಸಭೆಯ ವಿಸರ್ಜನೆ

ಈಗಿನ ಲೋಕಸಭೆಯನ್ನು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ನಿನ್ನೆ ದಿನ ವಿಸರ್ಜನೆ ಮಾಡಿದರು ಮಹಾ ಚುನಾವಣೆಗಳ ಪರಿಣಾಮವಾಗಿ ಸ್ಥಾಪಿಸಲ್ಪಡುವ ಹೊಸ ಸಭೆ ಮೇ ೧೧ರಿಂದ ಆರಂಭವಾಗುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕೊಳಲು. ೭-೧೫ ಮತ್ತು ೯ ಶ್ರೀ ಮತಿ ಪ್ರಸಾದ್-ದೇವರನಾಮ. ೨ ರೆಕಾರ್ಡ್. ಮಧ್ಯಾಹ್ನ ೧೨ ಶ್ರೀ ಮತಿ ಪ್ರಸಾದ್ ಸಂಗೀತ ೧೨-೩೦ ಮತ್ತು ೧-೨೦ ರೆಕಾರ್ಡ್ ೧ ಮತ್ತು ೧-೫೦ ಕೊಳಲು. ೩ ಬಾಲಕರ ಮಕ್ಕಳ ಕಾರ್ಯಕ್ರಮ ೩-೩೦ ಸಾಹಿತ್ಯ ಸಮಾರೋಪ. ಸಂಜೆ ೫-೩೦ ಮತ್ತು ೮ ಪ್ರಭಾಕರ-ಸಂಗೀತ ೬-೨೦ ವಚನ ೬-೩೦ ಯೋಜನೆಯ ಸಾಧನೆ-ಭಾಷಣ ೧೦ ಪ್ರಸಾರಗೀತೆ. ೮-೧೫ ನನ್ನ ಅನುಭವ ಪ್ರವರ್ತನಾಲಯದಲ್ಲಿ. ೯-೩೦ ರಾಷ್ಟ್ರೀಯ ಕಾರ್ಯಕ್ರಮ.

ಕಾಂಗ್ರೆಸ್ ಪಕ್ಷದ ನಾಯಕರ ಆಯ್ಕೆ ಬಗ್ಗೆ ಮಾತುಕತೆ

ಹಠಾತ್ತಾಗಿ ಕೆ ಸಿ ರೆಡ್ಡಿಯವರ ಹೆಸರಿನ ಸೂಚನೆ

ಬೆಂಗಳೂರು, ೫

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಕೆ ಪಿ ಮಾಧವನ್ ನಾಯರ್‌ರವರು ನಿನ್ನೆ ಸಂಜೆ ಇಲ್ಲಿಗೆ ಹಠಾತ್ತನೆ ಆಗಮಿಸಿದರು ೬ನೆ ದಿನ ಅವರು ಮೈಸೂರು ವಿಧಾನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯನ್ನು ನಡೆಸುವರು ಅವರೊಡನೆ ಈಗಾಗಲೇ ಪಕ್ಷದ ವಿವಿಧ ಪಂಗಡಗಳ ಮುಖಂಡರು ನಾಯಕರ ಆಯ್ಕೆ ವಿಚಾರವಾಗಿ ಮಾತುಕತೆ ಪ್ರಾರಂಭಿಸಿರುತ್ತಾರೆ

ಕೇಂದ್ರ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಹೆಸರನ್ನು ಈ ಸಂದರ್ಭದಲ್ಲಿ ಹಠಾತ್ತನೆ ಸೂಚಿಸಲಾಗುತ್ತಿದೆ ಶ್ರೀ ರೆಡ್ಡಿಯವರು ಈ ದಿನ ಇಲ್ಲಿಗೆ ಆಗಮಿಸುವ ನಿರೀಕ್ಷೆಯಿದೆ ಈಗಿನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ವಿರುದ್ಧವಾಗಿ ಶ್ರೀ ರೆಡ್ಡಿಯವರ ಹೆಸರನ್ನು ಸೂಚಿಸಲಾಗುತ್ತಿದೆಯೆಂದು ಹೇಳಲಾಗಿದೆ ಅವರ ಹೆಸರು ಮುಂದೆ ಬಂದಿರುವುದರಿಂದ ಶ್ರೀ ಕಡಿದಾಳ್ ಮಂಜಪ್ಪನವರು ನಾಯಕ ಸ್ಪರ್ಧೆಯಲ್ಲಿ ಭಾಗವಹಿಸದೆ ಇರಬಹುದೆಂದೂ ಹೇಳಲಾಗುತ್ತಿದೆ

ನಾಯಕತ್ವಕ್ಕೆ ಬಹಿರಂಗವಾದ ಸ್ಪರ್ಧೆಯು ನಡೆಯಬಾರದೆಂಬ ಹೈಕಮಾಂಡಿನ ಅಭಿಪ್ರಾಯದ ವಿಚಾರವನ್ನು ಶ್ರೀ ನಾಯರ್‌ರವರು ಸ್ಪಷ್ಟಪಡಿಸುವರೆಂದೂ ಗೊತ್ತಾಗಿದೆ ಚುನಾವಣೆಯ ಬಗ್ಗೆ ಹೈಕಮಾಂಡಿನವರು ಯಾವ ಆದೇಶವನ್ನೂ ಕೊಡುವುದಿಲ್ಲವಾದರೂ, ನಾಯಕರ ಆಯ್ಕೆಯು ಸರ್ವಾನುಮತದಿಂದ ನಡೆಯಬೇಕೆಂಬುದೇ ಅವರ ಅಭಿಲಾಷೆಯೆಂದೂ ಶ್ರೀ ನಾಯರ್‌ರವರು ಹೇಳಿರುವರು

ಏಳನೇ ಅಂತಸ್ತಿನಿಂದ ಹಾರಿ ಕೆನಡಾ ರಾಯಭಾರಿ ಮರಣ

ಈಜಿಪ್ಟಿನಲ್ಲಿ ಕೆನಡಾ ದೇಶದ ರಾಯಭಾರಿಯಾದ ಹರ್ಬರ್ಟ್ ನಾರ್ಮನ್‌ರವರು ನಿನ್ನೆ ಕೈರೋವಿನಲ್ಲಿ ಸ್ವೀಡಿಷ್ ರಾಯಭಾರಿ ಕಛೇರಿ ಕಟ್ಟಡದ ಏಳನೇ ಅಂತಸ್ತಿನಿಂದ ಹಾರಿ ಮೃತಪಟ್ಟರೆಂದು ವರದಿಯಾಗಿದೆ ಅವರು ಕಮ್ಯೂನಿಸ್ಟ್ ಪಕ್ಷದವರೆಂಬ ಬಗ್ಗೆ ಮಾಡಲಾದ ಆರೋಪಣೆಗಳಿಗಾಗಿ ಜಿಗುಪ್ಸೆಗೊಂಡು ಆತ್ಮಹತ್ಯ ಮಾಡಿಕೊಂಡುದಾಗಿ ವರದಿಯಾಗಿದೆ.

ರಾಮೋತ್ಸವ ಕಾರ್ಯಕ್ರಮ

ಮೈಸೂರು ೫

ಶ್ರೀ ರಾಮೋತ್ಸವ ಕಾರ್ಯಕ್ರಮದ ಅಂಗವಾಗಿ ಕೆಂಪನಂಜಾಂಬಾ ಅಗ್ರಹಾರದ ಶ್ರೀ ರಾಮೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ವಿ॥ ರಾಘವನ್‌ರವರ ಮತ್ತು ರಾತ್ರಿ ೯ ಗಂಟೆಗೆ ವಿ॥ ರಾಜಮ್ಮ ಸಿ ಆರ್. ಗೌಡರವರ ಸಂಗೀತ ಕಛೇರಿಗಳು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುವು.

ವಾಣೀವಿಲಾಸ ಮೊಹಲ್ಲಾ ಭಾರತೀ ಶ್ರೀ ಸಮಾಜದ ಆಶ್ರಯದಲ್ಲಿ ನಾಳೆ ಸಂಜೆ ೬ಕ್ಕೆ ವಿ॥ ರಾಜಂ ಶಾಸ್ತ್ರಿಯವರ ಗಾಯನವು ಏರ್ಪಾಡಾಗಿದೆ

ಭದ್ರತಾ ಸಮಿತಿಯಲ್ಲಿ ಹೈದರಾಬಾದು ಪ್ರಶ್ನೆ ಪರಿಶೀಲನೆ

ಜಾರಿಂಗರಿಗೆ ಮಾಜಿ ಮಂತ್ರಿಯೊಬ್ಬರ ಮನವಿ

ಕರಾಚಿಯಲ್ಲಿರುವ ಭದ್ರತಾ ಸಮಿತಿಯ ಪ್ರತಿನಿಧಿ ಜಾರಿಂಗರಿಗೆ ನಿನ್ನೆ ಮಾಜಿ ಹೈದರಾಬಾದಿನ ಮಂತ್ರಿ ಎಂ ಎ ರಹೀಂರವರು ಮನವಿಯೊಂದನ್ನು ಸಲ್ಲಿಸಿ, ೯ ವರ್ಷಗಳಿಂದಲೂ ಇತ್ಯರ್ಥವಾಗದೆ ಉಳಿದಿರುವ ಹೈದರಾಬಾದು ಸಂಸ್ಥಾನದ ಪ್ರಶ್ನೆಯನ್ನು ಪರಿಶೀಲಿಸಬೇಕೆಂದು ಕೋರಿರುತ್ತಾರೆ. ಭಾರತದಲ್ಲಿ ಹೈದರಾಬಾದು ಐಕ್ಯಗೊಂಡ ಬಗ್ಗೆ ನಿಜಾಮರ ಕಾರ್ಯವನ್ನು ಪ್ರಶ್ನಿಸಿ ಪಾಕಿಸ್ತಾನವು ಭದ್ರತಾ ಸಮಿತಿಗೆ ೯ ವರ್ಷಗಳ ಹಿಂದೆ ದೂರು ಕೊಟ್ಟಿದ್ದಿತು ಅದು ಇನ್ನೂ ಇತ್ಯರ್ಥವಾಗಿಲ್ಲ. ಹೈದರಾಬಾದಿನ ಮೇಲೆ ಭಾರತವು ನಡೆಸಿರುವ ಆಕ್ರಮಣವನ್ನು ಭದ್ರತಾ ಸಮಿತಿಯು ಪರಿಶೀಲಿಸಬೇಕು-ಎಂದು ರಹೀಮರು ಒತ್ತಾಯ ಮಾಡಿರುವುದಾಗಿ ಹೇಳಲಾಗಿದೆ

ಕಲ್ಕತ್ತದಲ್ಲಿ ನಯೆ ಪೈಸೆ ಬದಲಾವಣೆ ಬಗ್ಗೆ ಗಲಭೆ

ಕಲ್ಕತ್ತದಲ್ಲಿ ನಯೆ ಪೈಸೆ ಪದ್ಧತಿಯು ಜಾರಿಗೆ [illegible] ಅಂಚೆ ವಸ್ತುಗಳ ದರವು ಹೆಚ್ಚಿದ ಕಾರಣ ಅಲ್ಲಿನ ಅನೇಕ ಅಂಚೆ ಕಛೇರಿಗಳ ಬಳಿ ನಿನ್ನೆ ಗಲಭೆ ಪ್ರದರ್ಶನಗಳು ನಡೆದುವೆಂದು ವರದಿಯಾಗಿದೆ ನಯಾ ಪೈಸೆಯನ್ನು ಕೊಟ್ಟು ಕಾರ್ಡುಕವರನ್ನು ಕೊಳ್ಳಲು ಅಧಿಕಾರಿಗಳು ಒತ್ತಾಯ ಮಾಡಿದರೆಂದೂ, ಅವರಿ ಹಳೇ ನಾಣ್ಯವನ್ನೇ ಕೊಡುವುದಾಗಿ ಜನರು ತಿಳಿಸಿದರೆಂದೂ, ಇದರಿಂದ ಸಿ ಕಛೇರಿಗಳಲ್ಲಿ ಹೊಡೆದಾಟಗಳಾದುವೆಂದೂ, ಪೊಲೀಸರು ಮಧ್ಯೆ ಪ್ರವೇಶಿಸಿ ಶಾಂತಿಯನ್ನು ಸ್ಥಾಪಿಸಿದರೆಂದೂ ಹೇಳಲಾಗಿದೆ. ಇತರ ಕಛೇರಿಗಳ ಬಳಿಯೂ ಪೊಲೀಸು ಕಾವಲನ್ನು ಹಾಕಲಾಗಿತ್ತು ಕೆಲವು ಕಡೆ ನಯೆ ಪೈಸೆಗಳು ಮುಗಿದ ಮೇಲೆ ಹಳೇ ನಾಣ್ಯಗಳನ್ನು ಪಡೆಯಲಾಯಿತು

ಚಿಲ್ಲರೆ ನಾಣ್ಯ ಬಿದ್ದುದಾಗಿ ಹೇಳಿ ೧೦,೦೦೦ ರೂ. ನೊಡನೆ ಪರಾರಿ

ದೆಹಲಿಯ ರಿಸರ್ವ್ ಬ್ಯಾಂಕ್ ಕಟ್ಟಡದಲ್ಲಿ ಕಳೆದ ಮಂಗಳವಾರ ಕೇಂದ್ರ ಗೃಹ ಮಂತ್ರಿ ಇಲಾಖೆಯ ನೌಕರನೊಬ್ಬನು ೧೦ ಸಾವಿರ ರೂ ಅನ್ನು ಕಳೆದುಕೊಂಡುದಾಗಿ ವರದಿಯಾಗಿದೆ ಆತನು ಹಣವನ್ನು ಎಣಿಸುತ್ತಾ ನಿಂತಿದ್ದಾಗ ಪಕ್ಕದಲ್ಲಿ ಇದ್ದ ಒಬ್ಬನು ಚಿಲ್ಲರೆ ನಾಣ್ಯಗಳು ಕೆಳಗೆ ಬಿದ್ದುವೆಂದು ನೌಕರನಿಗೆ ಹೇಳಲಾಗಿ ಆತನು ಅದನ್ನು ಹುಡುಕುತ್ತಿದ್ದಾಗ ೧೦ ಸಾವಿರ ರೂ ಹಣವೂ, ಅಪರಿಚಿತ ವ್ಯಕ್ತಿಯೂ ಅದೃಶ್ಯವಾದುದು ಗೊತ್ತಾಯಿತು ಪೊಲೀಸರು ತನಿಖೆ ನಡೆಸುತ್ತಿರುವರು

ನಾಳಿದ್ದು ಹಲವು ಕಡೆ ನೀರು ಸರಬರಾಜಿಲ್ಲ

ನಗರದ ಹಲವು ಭಾಗಗಳಲ್ಲಿ ಪೈಪು ಲೈನು ರಿಪೇರಿ ಕೆಲಸ ನಡೆಯುವುದರ ಪ್ರಯುಕ್ತ ನಾಳಿದ್ದು ಬೆಳಿಗ್ಗೆ ೮ರಿಂದ ಸಂಜೆ ೫ರ ವರೆಗೆ ನಗರದ ದಕ್ಷಿಣ ಭಾಗದ ಪ್ರದೇಶದಲ್ಲಿ ನೀರು ಸರಬರಾಜು ಇರುವುದಿಲ್ಲವೆಂದು ತಿಳಿಸಲಾಗಿದೆ

ಪೊಲೀಸಿನವರ ಗುಂಡಿನಿಂದ ಪಾಕಿಸ್ತಾನದ ಕಳ್ಳ ರವಾನೆಗಾರರ ಮರಣ

ಬಿಕನೀರ್ ಬಳಿ ಹೈವಾಲಾ ಗಡಿ ಹತ್ತಿರ ಕಳೆದ ಸೋಮವಾರ ರಾತ್ರಿ ಪೊಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ಇಬ್ಬರು ಪಾಕಿಸ್ತಾನಿ ಕಳ್ಳ ರವಾನೆಗಾರರು ಮೃತಪಟ್ಟಿರುತ್ತಾರೆ. ಗಡಿಯನ್ನು ದಾಟಲು ಐದು ಮಂದಿ ಪಾಕಿಸ್ತಾನದವರು ಎರಡು ಕುದುರೆಗಳನ್ನೇರಿ ಬಂದಿದ್ದರೆಂದೂ, ಅವರನ್ನು ಪ್ರಶ್ನಿಸಲಾಗಿ ಅವರು ಪೊಲೀಸರ ಮೇಲೆ ಗುಂಡು ಹಾರಿಸಿದರೆಂದೂ ವರದಿಯಾಗಿದೆ ಪೊಲೀಸರು ಆತ್ಮ ರಕ್ಷಣೆಗಾಗಿ ಗುಂಡು ಹಾರಿಸಿದರು. ಮೂವರು ಪಾಕಿಸ್ತಾನಿಗಳು ಪರಾರಿಯಾಗಿರುವರು. ಸತ್ತವರಿಬ್ಬರ ಬಳಿ ೧೦,೦೦೦ ರೂ ನೋಟುಗಳು ದೊರೆತಿವೆ

ಅಳಗಪ್ಪ ಚೆಟ್ಟಿಯಾರರ ನಿಧನ

ಮದ್ರಾಸಿನ ಭಾರಿ ಕೈಗಾರಿಕೋದ್ಯಮಿಗಳೂ, ದಾನಶೀಲರೂ ಆದ ಡಾ॥ ಅಳಗಪ್ಪ ಚೆಟ್ಟಿಯಾರರು ಈ ದಿನ ಬೆಳಿಗ್ಗೆ ಮದ್ರಾಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿದುಬಂದಿದೆ ಅವರು ಕಾರೈಕುಡಿಯಲ್ಲಿ ಒಂದು ವೈಜ್ಞಾನಿಕ ಕಾಲೇಜನ್ನು ಸ್ಥಾಪಿಸಲು ೧೫ ಲಕ್ಷ ರೂ ಮತ್ತು ಮುನ್ನೂರು ಎಕರೆ ಜಮೀನನ್ನು ಕೊಟ್ಟಿದ್ದರು ಮದರಾಸು ಮತ್ತು ಅಣ್ಣಾಮಲೈ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಪ್ರಯೋಗ ಶಾಲೆಗಳಿಗಾಗಿ ಹತ್ತು ಲಕ್ಷ ರೂ ಕೊಟ್ಟಿದ್ದರು ಅನೇಕ ಗಿರಣಿಗಳನ್ನು ಅವರು ನಡೆಸುತ್ತಿದ್ದರು. ದಾನಧರ್ಮ, ಪರೋಪಕಾರಗಳಿಗೆ ಅವರು ಬಹಳ ಪ್ರಖ್ಯಾತಿ ಪಡೆದಿದ್ದರು

ಜುಲ್ಮಾನೆ ಹಣಕ್ಕಾಗಿ ಗಫಾರ್ ಖಾನರ ಆಸ್ತಿ ಜಪ್ತಿಗೆ ಆಜ್ಞೆ

ಗಡಿನಾಡಿನ ಕೆಂಪು ಅಂಗಿಯವರ ನಾಯಕ ಖಾನ್ ಅಬ್ದುಲ್ ಗಫಾರ್ ಖಾನರಿಗೆ ಮೂರು ಮೊಕದ್ದಮೆಗಳಲ್ಲಿ ವಿಧಿಸಿರುವ ದಂಡದ ಹಣವನ್ನು ವಸೂಲು ಮಾಡಲು ಅವರ ಚರ ಸ್ಥಿರ ಆಸ್ತಿಗಳನ್ನು ಜಪ್ತಿ ಮಾಡಿ ಹರಾಜು ಹಾಕುವಂತೆ ಪಶ್ಚಿಮ ಪಾಕಿಸ್ತಾನದ ಹೈಕೋರ್ಟ್ ಆಜ್ಞೆ ಮಾಡಿದೆ ಅವರು ಒಟ್ಟು ೧೪,೦೦೦ ರೂ ದಂಡವನ್ನು ತೆರಬೇಕಾಗಿದೆ

ನೂತನ ವಿದ್ಯಾಧಿಕಾರಿಗಳು

ದಕ್ಷಿಣ ಜೋನಲ್ ಕೌನ್ಸಿಲ್ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟಿರುವ ಶ್ರೀ ಸಿ ನರಸಿಂಹಮೂರ್ತಿಯವರಿಂದ ಶ್ರೀ ಬಿ ಎಂ ಕೃಷ್ಣನವರ ವಿದ್ಯಾ ಇಲಾಖಾಧಿಕಾರಿಯ ಹುದ್ದೆಯನ್ನು ನಿನ್ನೆ ವಹಿಸಿಕೊಂಡರು.

ಶಿವಮೊಗ್ಗದ ವೈದ್ಯರೊಬ್ಬರ ಆತ್ಮಹತ್ಯ

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ನರಾದ ಡಾ॥ ಎಸ್ ಎ ರೇವಣ್ಣನವರು ಜೀವನದಲ್ಲಿ ಜಿಗುಪ್ಸೆಗೊಂಡು ವಿಷವನ್ನು ಸೇವಿಸಿ ಆತ್ಮಹತ್ಯ ಮಾಡಿಕೊಂಡಿರುವುದಾಗಿ ವರದಿಯಾಗಿದೆ ಅವರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನಡೆಸಿದರೂ ಪ್ರಯೋಜನವಾಗಲಿಲ್ಲ ಅವರಿಗೆ ೩ ವರ್ಷದ ಮಗು, ಗರ್ಭಿಣಿ ಪತ್ನಿ ಮತ್ತು ವೃದ್ಧ ಮಾತಾಪಿತೃಗಳಿರುವರು.

ಕೇರಳದ ಮುಖ್ಯ ಮಂತ್ರಿ ನಂಬೂದ್ರಿಪಾದ್‌ರವರು

ಸಂಕ್ಷಿಪ್ತ ಜೀವನ ಪರಿಚಯ

ಕೇರಳದ ನೂತನ ಶಾಸನಸಭೆಯ ನಾಯಕರಾ [illegible] ಶ್ರೀ [illegible] ಶಂಕರನ್ ನಂಬೂದ್ರಿ [illegible] ಸಹೋದ್ಯೋಗಿಗ [illegible] ರಾಜ್ಯದ ಆಡಳಿತ ಸೂತ್ರವನ್ನು ಸ್ವೀಕರಿಸಿದ

[illegible] ನಂಬೂದ್ರಿ ಬ್ರಾಹ್ಮಣರ ಸಂ [illegible] ಜನಿಸಿದರು ಭಾರತದ [illegible] ನಡೆದ ದ್ವಿತೀಯ ದುಂಡು ಮೇಜಿನ [illegible] ದಲ್ಲಿ ಆದ ಕಾನೂನು ಭಂಗ ಚಳವಳಿಯಲ್ಲಿ ಇವರು ಭಾಗವಹಿಸಿ

[illegible] ತಿಂಗಳು [illegible] ಗಳೇ [illegible] ಕಾಲೇಜನ್ನು ಬಿಟ್ಟು ಚಳುವಳಿಗೆ ಸೇರಿ [illegible] ರಲ್ಲಿ ಹಲವು ಸಂಗಡಿಗ [illegible] ಸಮಾಜವಾದಿ ಪಕ್ಷವನ್ನು ರಚಿಸಿದ [illegible] ಅಖಿಲ ಭಾರತ ಕಾಂಗ್ರೆಸ್ ಸಮಾಜವಾದಿ ಪಕ್ಷದ ಜಂಟಿ ಕಾರ್ಯದರ್ಶಿಯಾಗಿ [illegible]

[illegible] ವರ್ಷ ಕಾಲ ಕೇರಳ ಪ್ರಾಂತ ಕಾಂಗ್ರೆಸ್ ಸಮಿತಿ ಸದಸ್ಯರಾಗಿದ್ದರು [illegible] ರಲ್ಲಿ ರಾಜಾಜಿಯವರು ಮದ್ರಾಸಿನಲ್ಲಿ ಪ್ರಥಮ ಕಾಂಗ್ರೆಸ್ ಮಂತ್ರಿಮಂಡಲವನ್ನು ರಚಿಸಿದಾಗ ಅವರು ಅಲ್ಲಿನ ಶಾಸನಸಭಾ ಸದಸ್ಯರಾಗಿದ್ದರು.

[illegible] ಕಾಂಗ್ರೆಸ್ಸು ರಾಷ್ಟ್ರೀಯ ಸಮಸ್ಯೆ [illegible] ನೀತಿಗಾಗಿಯೂ, ಅದರ ವಕೀ [illegible] ಅತೃಪ್ತಿ ಪಟ್ಟುಕೊಂಡು ಅವರು ಕಾಂ [illegible] ಬಿಟ್ಟು ಕಮ್ಯೂನಿಸ್ಟ್ ಪಕ್ಷವನ್ನು [illegible] ಎರಡು [illegible] ಪಕ್ಷದ [illegible] ಭಾಗವಹಿಸಿದ್ದರು. [illegible] ಸಭೆ [illegible]

[illegible] ಲಕ್ಷ [illegible] ಪಡೆದ [illegible] ಮಾರಿ [illegible] ಕಮ್ಯೂನಿಸ್ಟ್ [illegible] ದಿಂದ ಪಕ್ಷ [illegible] ಸದಸ್ಯರಾಗಿ [illegible] ವರ್ಷ ಪಕ್ಷದ ಪ್ರಧಾನ [illegible] ಇದ್ದರು

ಅವರಿಗೆ ಮಾರ್ಕ್ಸ್‌ನ ತತ್ವದಲ್ಲಿ ಗಾಢವಾದ ನಂಬಿಕೆಯು ಇದೆ ಕೇರಳ ಕಮ್ಯೂನಿಸ್ಟ್ ಪಕ್ಷದಲ್ಲಿ ಅವರ ಪಾತ್ರವು ವಿಶೇಷವಾಗಿರುವುದು

ಗೋವಾಕ್ಕೆ ಪೋರ್ಚುಗೀಸ್ ಸೈನ್ಯದ ರವಾನೆ

ಭಾರತದಲ್ಲಿರುವ ಪೋರ್ಚುಗೀಸ್ ವಸಾಹತುಗಳಿಗೆ ೧೮೦೦ ಪೋರ್ಚುಗೀಸ್ ಸೈನ್ಯವನ್ನು ಲಿಸ್ಬನ್‌ನಿಂದ ರವಾನಿಸಲಾಯಿತು ಗೋವಾ ಮುಂತಾದ ಕಡೆ ಈಗ ಇರುವ ಪೋರ್ಚುಗೀಸ್ ಸೈನಿಕರ ಕೆಲಸವನ್ನು ಹೊಸ ಸೈನ್ಯಗಳು ವಹಿಸಿಕೊಳ್ಳುವುವು ಪೋರ್ಚುಗೀಸ್ ಭಾರತವು ಮುಂದೆಯೂ ತಮ್ಮದೇ ಆಗಿರುವುದೆಂದು ಪೋರ್ಚುಗೀಸ್ ರಕ್ಷಣಾ ಮಂತ್ರಿ ಫರ್ನಾಂಡೊ ಸಾಂಟೊಸ್ ಕಾಸ್ಟ್ರೊರವರ ತಿಳಿಸಿ, ಅಲ್ಲಿ ಪರಿಸ್ಥಿತಿಯು ಉತ್ತಮವಾಗಿರುವುದೆಂದು ನುಡಿದಿರುವರು

ಕರ್ನಾಟಕದ ವಿದ್ಯುಚ್ಛಕ್ತಿ ಉದ್ಯಮ ಸರ್ಕಾರದ ವಶಕ್ಕೆ

ಮಾಜಿ ಮುಂಬಯಿ ಸಂಸ್ಥಾನದ ಧಾರವಾಡ ಬೆಳಗಾಂ ಮತ್ತು ಬಿಜಾಪುರಗಳಲ್ಲಿರುವ ವಿದ್ಯುಚ್ಛಕ್ತಿ ಉದ್ಯಮಗಳನ್ನು ಮೈಸೂರು ಸರ್ಕಾರವು ಮೊನ್ನೆಯಿಂದ ತನ್ನ ವಶಕ್ಕೆ ತೆಗೆದುಕೊಂಡಿದ್ದಾರೆ ಇದುವರೆಗೆ ಅದು ಖಾಸಗೀ ಉದ್ಯಮಗಳ ಕೈಲಿತ್ತು.

ಬೆಂಗಳೂರಿನಲ್ಲಿ ರಾಮನವಮಿ ಉತ್ಸವ

ರಾಜಾಜಿಯವರಿಂದ ಆರಂಭ

ಬೆಂಗಳೂರು ೪

ಇಲ್ಲಿನ ಚಾಮರಾಜಪೇಟೆಯ ಶ್ರೀ ರಾಮಸೇವಾ ಮಂಡಲಿಯ ಆಶ್ರಯದಲ್ಲಿ ಇದೇ ೮ನೇ ತಾರೀಖು ಸಂಜೆ ೬ ಗಂಟೆಗೆ ೧೯ನೇ ಶ್ರೀ ರಾಮನವಮಿ ಉತ್ಸವದ ಆರಂಭೋತ್ಸವವು ನೆರವೇರುವುದು ಭಾರತ ರತ್ನ ಶ್ರೀ ಸಿ. ರಾಜಗೋಪಾಲಾಚಾರಿಯವರು ಇದನ್ನು ಪ್ರಾರಂಭ ಮಾಡುವರು ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರರು ಅಧ್ಯಕ್ಷತೆ ವಹಿಸುವರು ವಿ ಶಮ್ಮಂಗುಡಿ ಶ್ರೀನಿವಾಸಯ್ಯರ್‌ರವರ ಗಾಯನವು ನಡೆಯುವುದು

ಮಲೇರಿಯಾ ರೋಗವನ್ನು ತಡೆಗಟ್ಟಲು ಉಪ್ಪು

ಮಲೇರಿಯಾ ನಿರೋಧಕ ಕ್ರಿಮಿ ನಾಶಕಗಳ ಉಪಚಾರವನ್ನು ಎದುರಿಸಲು ಸೊಳ್ಳೆಗಳಿಗೆ ದಿನೇ ದಿನೇ ಹೆಚ್ಚುತ್ತಿರುವ ಶಕ್ತಿಯಿಂದ ಕ್ರಿಮಿನಾಶಕಗಳ ಉಪಯೋಗವು ಕಡಿಮೆಯಾಗುತ್ತಿದ್ದರೂ ಈಗ ಆ ಖಾಯಿಲೆಯ ನಿರೋಧಕ್ಕಾಗಿ ಒಂದು ಹೊಸ ಲವಣವನ್ನು ಕಂಡುಹಿಡಿಯಲಾಗಿದೆ ಇದನ್ನು ಜನರು ದಿನವಹಿ ಸಾಧಾರಣ ಉಪ್ಪಿನಂತೆ ಉಪಯೋಗಿಸಬಹುದು ಆದರೆ ಇದರಲ್ಲಿ ಮಲೇರಿಯಾ ನಿರೋಧಕ ಲವಣಗಳನ್ನು ಬೆರೆಸಲಾಗಿರುವುದರಿಂದ ಸೊಳ್ಳೆಗಳು ಕಡಿದರೂ ರೋಗವು ಹರಡುವುದಿಲ್ಲವೆಂದು ಹೇಳಲಾಗಿದೆ

ಸ್ಥಳೀಯ ಸಂಸ್ಥೆಗಳಿಗಾಗಿಯೇ ಪ್ರತ್ಯೇಕ ಮರಾಮತ್ತು ಇಲಾಖೆ

ಸ್ಥಳೀಯ ಸಂಸ್ಥೆಗಳಿಗಾಗಿಯೇ ಪ್ರತ್ಯೇಕ ಮರಾಮತ್ತು ಇಲಾಖೆಯನ್ನು ಏರ್ಪಡಿಸಲು ಸರ್ಕಾರದವರು ಆಲೋಚಿಸುತ್ತಿರುವರೆಂದು ಮೈಸೂರು ಡಿವಿಜನಲ್ ಕಮಿಷನರರಾದ ಶ್ರೀ ಕೆ ಶೇಷಗಿರಿರಾಯರು ಶಿವಮೊಗ್ಗದ ಪೌರಸಭಾ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿರುತ್ತಾರೆ ಈ ರೀತಿ ಪ್ರತ್ಯೇಕ ಇಲಾಖೆಯನ್ನು ಏರ್ಪಡಿಸುವುದರಿಂದ ಪೌರಸಭೆ ಮತ್ತು ಜಿಲ್ಲಾ ಬೋರ್ಡು ಕೆಲಸಗಳು ಬೇಗನೆ ನಡೆಯಲು ಸಹಕಾರಿಯಾಗುವುದೆಂದು ಅಭಿಪ್ರಾಯ ಪಡಲಾಗಿರುವುದೆಂದೂ ಅವರು ತಿಳಿಸಿರುವರು

ಪ್ರಾಂತೀಯ ಗೃಹ ನಿರ್ಮಾಣ ಸಹಕಾರ ಸಂಘದ ಸಭೆ

ಬರುವ ೧೪ ನೇ ತಾರೀಖು ಬೆಂಗಳೂರಿನಲ್ಲಿ ನಡೆಯಲಿರುವ ಮೈಸೂರು ಪ್ರಾಂತ ಗೃಹ ನಿರ್ಮಾಣ ಸಹಕಾರ ಸಂಘದ ಸಭೆಯಲ್ಲಿ ನಗರದ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಪ್ರತಿನಿಧಿಯಾಗಿ ಭಾಗವಹಿಸಲು ಶ್ರೀ ಡಿ ಬಿ ರಾಮಯ್ಯನವರು ಆರಿಸಲ್ಪಟ್ಟಿದ್ದಾರೆ

ಶ್ರೀಕಂಠೇಶ್ವರ ಸ್ವಾಮಿಯವರ ಪಂಚ ರಥೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಪಂಚ ರಥೋತ್ಸವವು ಇದೇ ೧೦ನೇ ತಾರೀಖು ಬುಧವಾರ ಬೆಳಿಗ್ಗೆ ೫-೪೦ರಿಂದ ೬ ೩ ಗಂಟೆಯೊಳಗೆ ನಡೆಯುವುದು ಅದರ ಅಂಗವಾಗಿ ಮೊನ್ನೆಯಿಂದ ವಿವಿಧ ಉತ್ಸವಗಳು ಜರುಗುತ್ತಿವೆ ೭ನೇ ತಾರೀಖು ತ್ರಿಕಂಠಮುಡಿ ಉತ್ಸವವು ಇದೆ ೧೬ನೇ ತಾರೀಖಿನವರೆಗೂ ಸಮಾರಂಭಗಳು ನೆರವೇರುವುವು

ಉಪಾಧ್ಯಾಯಿನಿಯರು ಬೇಕಾಗಿದ್ದಾರೆ

ಗ್ರಾಮಾಂತರಗಳಲ್ಲಿ ಶಿಶು ವಿಹಾರವನ್ನು ನಡೆಸಲು, ನರ್ಸರಿ ಶಿಕ್ಷಣ ಪಡೆದಿರತಕ್ಕ ಅಥವಾ ಅನುಭವವುಳ್ಳ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ ವಿವರಗಳಿಗೆ ಬರೆಯಿರಿ

ಎಸ್ ಇಂದಿರಮ್ಮ,
ನಂ 973 ವಿದ್ಯಾರಣ್ಯಪುರಂ ಮೈಸೂರು

Edited, Printed and Published by A R Naparnjau at Sadhvi Press, D Subbiah Road, Mysore

ಸಂಡೂರು-ಹೊಸಪೇಟೆ ಬಳಿ ಅತ್ಯುತ್ಕೃಷ್ಟ ಕಬ್ಬಿಣದ ಅದಿರು

ಬಳ್ಳಾರಿ ಜಿಲ್ಲೆಯ ಸಂಡೂರು ಹೊಸಪೇಟೆ ಪ್ರದೇಶದಲ್ಲಿ ದೊರೆಯುವ ಕಬ್ಬಿಣದ ಅದಿರು ಅತ್ಯುತ್ಕೃಷ್ಟವಾದುದೆಂದೂ, ಅದರಲ್ಲಿ ಶೇಕಡ ೭೦ ರಷ್ಟು ಕಬ್ಬಿಣವು ಇರುವುದೆಂದೂ ರಷ್ಯದ ಪಾರಿಭಾಷಿಕ ಪ್ರವೀಣರೊಬ್ಬರು ತಿಳಿಸಿರುತ್ತಾರೆ ಇತರ ಕಡೆ ದೊರೆಯುವ ಅತ್ಯುತ್ಕೃಷ್ಟವೆಂದು ಹೇಳಲಾದ ಅದಿರಿನಲ್ಲಿ ಶೇಕಡ ೬೦ ರಷ್ಟು ಕಬ್ಬಿಣದ ಅಂಶವಿರುವುದೆಂದು ಅವರು ತಿಳಿಸಿರುತ್ತಾರೆ ಅಲ್ಲಿ ಸುಮಾರು ೧೦ ಲಕ್ಷ ರೂ ಬಂಡವಾಳದಲ್ಲಿ ಸಣ್ಣ ಪ್ರಮಾಣದ ಕಾರ್ಖಾನೆಯನ್ನು ಏರ್ಪಡಿಸಬಹುದೆಂದು ಅವರು ಸಲಹೆ ಮಾಡಿರುತ್ತಾರೆ

ನಾಲೆಗೆ ಟಾಂಗಾ ಗಾಡಿ ಬಿದ್ದರೂ ಜನರ ಪಾರು

ಕ್ಯಾತನಹಳ್ಳಿಯಿಂದ ಪಾಂಡವಪುರಕ್ಕೆ ಕಳೆದ ೨ನೇ ತಾರೀಖು ಹೋಗುತ್ತಿದ್ದ ಟಾಂಗಾ ಗಾಡಿಯೊಂದು ಕುದುರೆ ಸಮೇತ ವಿಶ್ವೇಶ್ವರಯ್ಯ ನಾಲೆಗೆ ಮಗುಚಿಕೊಂಡಿತೆಂದೂ, ಆದರೆ ಗಾಡಿ ಹೊಡೆಯುವವನೂ, ಹಲವು ಪ್ರಯಾಣಿಕರೂ ಮುಂಚೆಯೇ ಕೆಳಕ್ಕೆ ಹಾರಿ ಪಾರಾದರೆಂದೂ ವರದಿಯಾಗಿದೆ ಕುದುರೆಯೂ ಮತ್ತು ಗಾಡಿಯೂ ಪತ್ತೆಯಾಗಿಲ್ಲ ಮಾರನೇ ದಿನ ಅದೇ ಕಾಲುವೆಯಲ್ಲಿ ಬಟ್ಟೆ ಒಗೆಯಲು ಹೋಗಿದ್ದ ಗಣೇಶ್ ಎಂಬ ಸ್ಥಳೀಯ ಮಾರವಾಡಿ ಬಟ್ಟೆ ವರ್ತಕನು ಮುಳುಗಿ ಮೃತಪಟ್ಟುದಾಗಿ ತಿಳಿದುಬಂದಿದೆ

ಮೌಲಾನಾ ಆಜಾದರಿಗೆ ಉಪ ಪ್ರಧಾನಿ ಹುದ್ದೆ

ಭಾರತದ ನೂತನ ಮಂತ್ರಿಮಂಡಲದಲ್ಲಿ ಉಪ ಪ್ರಧಾನಿ ಸ್ಥಾನವನ್ನು ಮತ್ತೆ ಏರ್ಪಡಿಸಲಾಗುವುದೆಂದೂ, ಅದಕ್ಕೆ ಮೌಲಾನಾ ಆಜಾದರನ್ನು ನೇಮಿಸಲಾಗುವುದೆಂದೂ ತಿಳಿದುಬಂದಿದೆ ಅವರಿಗೆ ಬೇರೆ ಯಾವ ಇಲಾಖೆಯನ್ನೂ ವಹಿಸುವುದಿಲ್ಲವೆಂದು ಗೊತ್ತಾಗಿದೆ ಸರ್ದಾರ್ ಪಟೇಲರು ಜೀವಿಸಿದ್ದಾಗ ಅವರು ಮಾತ್ರ ಭಾರತದ ಉಪ ಪ್ರಧಾನಿಯಾಗಿದ್ದರು ವಿ ಕೆ ಕೃಷ್ಣಮೆನನ್ನರು ಮುಂದೆ ನ್ಯಾಯಾಂಗ ಮಂತ್ರಿಗಳಾಗುವರೆಂದೂ, ಈಗ ನ್ಯಾಯಾಂಗ ಸಚಿವರಾಗಿರುವ ಶ್ರೀ ಸಿ. [illegible] ಬಿಸ್ವಾಸ್‌ರವರು ಅನಾರೋಗ್ಯ ಕಾರಣಗಳಿಗಾಗಿ ನಿವೃತ್ತರಾಗಲಿರುವರೆಂದೂ ಹೇಳಲಾಗಿದೆ

ಮೇ ೭ರೊಳಗೆ ರಾಜ್ಯ ಸಭೆಗೆ ಚುನಾವಣೆ

ರಾಜ್ಯಸಭೆಯ ೩೭ ಖಾಲಿ ಸ್ಥಾನಗಳಿಗೆ ಬರುವ ತಿಂಗಳು ೭ನೇ ತಾರೀಕಿನೊಳಗೆ ಚುನಾವಣೆಯು ನಡೆಯಲಿದೆ ಆ ಪೈಕಿ ಬೊಂಬಾಯಿಯಿಂದ ೮, ಪಶ್ಚಿಮ ಬಂಗಾಳದಿಂದ ೩ ಮೈಸೂರು, ಕೇರಳ, ಮದ್ರಾಸು, ಪಂಜಾಬು ಮತ್ತು ಉತ್ತರ ಪ್ರದೇಶಗಳಿಂದ ತಲಾ ೨ ಮತ್ತು ಆಂಧ್ರ ಪ್ರದೇಶ, ಅಸ್ಸಾಂ, ಬಿಹಾರ್, ಒರಿಸ್ಸಾ ಮತ್ತು ರಾಜಾಸ್ಥಾನಗಳಿಂದ ತಲಾ ೧ ಸ್ಥಾನವನ್ನು ಭರ್ತಿ ಮಾಡಬೇಕಾಗಿದೆ

ಗೋಕುಲ ಮಿಲ್ಕ್ ಡೈರಿ

ಅಂಬಳೆ ಅಣ್ಣಯ್ಯಪಂಡಿತರ ಛತ್ರದ ಹಿಂಭಾಗ
ಮತ್ತು
ರಮಾವಿಲಾಸ ಅಗ್ರಹಾರ, ಮೈಸೂರು

ನಮ್ಮಲ್ಲಿ ಅಪ್ಪಟ ಹಸುವಿನ ಹಾಲು
ದೊರೆಯುತ್ತದೆ

ಪೌಂಡು ಒಂದಕ್ಕೆ	0 3 3
ಅರ್ಧ ಪೌಂಡ್	0 1 9

ಖಾಕ್ಸಾರರ ನಾಯಕ ಅಲ್ಲಾಮ ಮಷ್ರೀಕಿಯವರ ಉಚ್ಚಾಟ

ಬುದ್ಧಿ ಸ್ಥಿಮಿತವಿಲ್ಲವೆಂಬ ಆಕ್ಷೇ

ಪಾಕಿಸ್ತಾನದ ಖಾಕ್ಸಾರ್ ಪಕ್ಷದ ಮುಖ್ಯ ಅಲ್ಲಾಮಾ ಮಷ್ರೀಕಿಯವರನ್ನು ಅಲ್ಲಿನ ಇಸ್ಲಾಂ ಲೀಗಿನ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಗಿದೆ. ಅವರಿಗೆ ಬುದ್ಧಿಯು ಸ್ಥಿಮಿತವಾಗಿಲ್ಲದಿರುವುದೇ ಅದಕ್ಕೆ ಕಾರಣ ಲೀಗನ್ನು ಅವರೇ ಸ್ಥಾಪಿಸಿ ಅದರ ಅಧ್ಯಕ್ಷರಾಗಿದ್ದರು ಹಿಂದೆ ಅದಕ್ಕೆ ಖಾಕ್ ಮುಸ್ಲಿಂ ಲೀಗ್ ಎಂದು ಹೆಸರಿಡಲಾಗಿತ್ತು ಭಾರತದ ಮೇಲೆ ೧೦ ಲಕ್ಷ ಜನರನ್ನು ನುಗ್ಗಿಸಿ ಕಾಶ್ಮೀರವನ್ನು ಗೆದ್ದುಕೊಳ್ಳುವುದಾಗಿ ಮಷ್ರೀಕಿಯವರು ಹೇಳಿ ಅದಕ್ಕೆ ದಿನವನ್ನೂ ಗೊತ್ತುಮಾಡಿದ್ದರು ಆ ದಿನವೂ ಮುಗಿದು, ಬೇರೆ ಬೇರೆ ದಿನಗಳನ್ನು ಗೊತ್ತು ಪಡಿಸಲಾಗಿ, ಅದರಿಂದ ಇಸ್ಲಾಂ ಲೀಗಿನ ಸದಸ್ಯರು ಅವರ ವಿಚಾರದಲ್ಲಿ ಬೇಸರಪಟ್ಟಿರುವರು ಮೇ [illegible]ಕ್ಕೆ ಭಾರತದ ಮೇಲೆ ನುಗ್ಗುವುದಾಗಿ ಮಷ್ರೀಕಿಯವರು ಈಗ ತಿಳಿಸಿರುವರು

ದಕ್ಷಿಣ ರೈಲ್ವೆಯ ನಗರ ಶಾಖಾ ಸಂಘಕ್ಕೆ ಅಧಿಕಾರ ವರ್ಗ

ದಕ್ಷಿಣ ರೈಲ್ವೆ ಕೆಲಸಗಾರರ ಸಂಘದ ನಗರ ಶಾಖೆಯ ಸದಸ್ಯರ ಸಭೆಯು ಕಳೆದ ೩೧ನೇ ತಾರೀಖು ಶ್ರೀ ಹೆಚ್ ಡಿ ರಾಘವರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆದು ಟಿಕೆಟ್ ಪರೀಕ್ಷಕರಾದ ಶ್ರೀ ಎಸ್ ಆರ್ ನಾಗರಾಜರಾವರವರನ್ನು ಶ್ರೀ ಎಸ್ ಶ್ರೀಕಂಠಯ್ಯನವರ ಸ್ಥಾನದಲ್ಲಿ ಸಂಘದ ಅಧ್ಯಕ್ಷರಾಗಿ ಆರಿಸಲಾಯಿತು ಶ್ರೀ ಬಿ ಎಸ್ ಶ್ರೀಕಂಠಯ್ಯನವರು ಸಂಘಕ್ಕೆ ಸಲ್ಲಿಸಿದ್ದ ಸೇವೆಯನ್ನು ಪ್ರಶಂಸಿಸಲಾಯಿತು

ಸತ್ಕಾರ ಕೂಟ

ಶ್ರೀ ನಾಡಿಗ ಸುಬ್ಬರಾಯರ ೬೦ನೇ ವರ್ಷದ ಹುಟ್ಟಿದ ಹಬ್ಬದ ಸಂಬಂಧವಾಗಿ ಅವರ ಪುತ್ರರಾದ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರು ನೆನ್ನೆ ತಮ್ಮ ನಿವಾಸದಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಿ ಹಲವಾರು ಇಷ್ಟ ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಯುಗಾದಿ ಶುಭಾಶಯ

ಗಲ್ಲತ್ತಿಯ ಶ್ರೀ ಕೆ ಸಿ ಅಯ್ಯ ಮತ್ತು ಶ್ರೀಮತಿ ಅಯ್ಯರವರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಲಕ್ಷ್ಮಿ ★ 5- 4—57ರಿಂದ ಅಮೋಘ 2ನೇವಾರ ದಿನವಹಿ ೪ ಪ್ರದರ್ಶನಗಳು

ಜೈಶಕ್ತಿ ಪಿಕ್ಚರ್ಸ್‌ರವರ ತಮಿಳು ಚಿತ್ರ

ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ

ಭೂಮಿಕೆ ನಾಗೇಶ್ವರರಾವ್, ಅಂಜಲಿದೇವಿ ಎಸ್ ವಿ ರಂಗರಾವ್, ಟಿ ಎಸ್ ಬಾಲಯ್ಯ ರಾಜಸುಲೋಚನಾ, ತಂಗವೇಲು

THE INSTITUTE OF SOCIAL SCIEN

MYSORE

(Registered)

The students of the Institu may send their applications w the fee of Rs 5 for the Diplom Examination on or before 15 April '57 to the Treasurer of t Institute at the Mysore Univers Co-operative Society Ltd Maharaja's College Union Bu ings, Mysore

Secretar

ಚಾಮುಂಡೇಶ್ವರಿ ಟಾಕೀಸ್

5—4 57 ರಿಂದ : ಅಮೋಘ ಪ್ರಾ

ಮಧುಕೇಶ್ವರರವರ
ಕನ್ನಡ ಚಿತ್ರ ★ ಪ್ರಭುಲಿಂಗ ಲೀಲೆ

ತಾರಾಗಣ – ಪ್ರತಿಮಾದೇವಿ, ಹರಿಣಿ, ನರಸಿಂಹರಾಜು, ವೀರಪ್ಪ ಮುಂತಾದವರು

[Sri G B Nagavarma Rele

ಟೆಲಿಫೋನ್ ನಂ 792

ಚಂದಾ ದರ

[illegible]

ಅಂಚೆ ಮೂಲಕ

ತಿಂಗಳಿಗೆ [illegible] ರೂ.

[illegible] ಪತ್ರಿಕೆ 2 ನಯೆ ಪೈಸೆ

[illegible] ಪತ್ರಿಕೆ 2 ನಯೆ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ : 446

ಪುಟ : ೦೫] SADHVI SATURDAY 6—4 1957 ಮೈಸೂರು ಶನಿವಾರ ೬—೪—೧೯೫೭ [[illegible]

ಜಲಿಂಗಪ್ಪ ಮತ್ತು ಕಡಿದಾಳ್‌ರವರಲ್ಲಿ ತೀವ್ರ ಸ್ಪರ್ಧೆ

ಗಳ ಕಮ್ಯೂನಿಸ್ಟ್ ಮಂತ್ರಿ ಡಲದ ಅಧಿಕಾರ ಸ್ವೀಕಾರ

ಸ್ವತಂತ್ರರಿಂದ ದೇವರ ಹೆಸರಿನಲ್ಲಿ ಪ್ರಮಾಣ ವಚನ

ರಳದ ಪ್ರಥಮ ಕಮ್ಯೂನಿಸ್ಟ್ ಮಂತ್ರಿ ಳವು ನಂಬೂದರಿಪಾದ್‌ರವರ ನಾಯಕ ನ್ನೆ ಮಧ್ಯಾಹ್ನ ೧೨॥ ಗಂಟೆಗೆ, ರಾಜ್ಯ ದ ಬಿ ರಾಮಕೃಷ್ಣರಾಯರ ಸಮ್ಮುಖ ಪ್ರಮಾಣ ವಚನವನ್ನು ತೆಗೆದುಕೊಂಡ ರವನ್ನು ಸ್ವೀಕರಿಸಿತು ಸಮಾರಂ ರಾಜಭವನದ ಉದ್ಯಾನವನದಲ್ಲಿ ಏರ್ಪ ತ್ತು ಭಾರತದ ರಾಜ್ಯಾಂಗದಲ್ಲಿ ತಾವ ಪೂರ್ಣ ಭಕ್ತಿ ಮತ್ತು ನಿಷ್ಠೆಯನ್ನು ತೋ ವಾಗಿ ಕಮ್ಯೂನಿಸ್ಟ್ ಮಂತ್ರಿಗಳು ಪ್ರ ಣ ಮಾಡಿದರು. ಆದರೆ ಇಬ್ಬರು ಸ್ವತಂತ್ರ ದ ಡಾ॥ ಎ. ಆರ್ ಮೆನನ್ ಮತ್ತು ವಿ ಕೃಷ್ಣಯ್ಯರ್‌ರವರು ದೇವರ ಹೆಸರಿನಲ್ಲಿ ಪ್ರ ಣ ಮಾಡಿದರು

ಮಂತ್ರಿಗಳು ಸಮಾರಂಭಕ್ಕೆ ಬರುವಾಗ ಅವ ಮೋಟಾರುಗಳ ಮೇಲೆ ಪಕ್ಷದ ಧ್ವಜಗಳು ಇ ವು ವಾಪಸು ಹೋದಾಗ ರಾಷ್ಟ್ರಧ್ವಜಗಳನ್ನು ಲಾಗಿದ್ದಿತು ಮುಖ್ಯ ಮಂತ್ರಿ ಕಡೆಯಲ್ಲಿ ಆಗಮಿಸಿದರು ಅದಕ್ಕೆ ಮುಂ ತ್ನಪುರ ಎಂಬಲ್ಲಿಗೆ ಹೋಗಿ ಅಲ್ಲಿ ಕಮ್ಯೂ ಪಕ್ಷದ ಸಂಸ್ಥಾಪಕ ಕೃಷ್ಣಪಿಳ್ಳೆಯವರ ಧಿಗೆ ಅವರು ಪುಷ್ಪ ಮಾಲಿಕೆಯನ್ನು ಅ ಸಿದರು ಭಾರತದಲ್ಲಿ ಚುನಾವಣೆಗಳ ಮೂಲ ಧಿಕಾರಕ್ಕೆ ಬಂದ ಕಮ್ಯೂನಿಸ್ಟ್ ಮಂತ್ರಿ ಳವು ಇದೊಂದೇ ಆಗಿದೆ

ಉಚಿತ ಚಿಕಿತ್ಸೆ

ಸೂರು ತ್ಯಾಗರಾಜ ರೋಡು [illegible] ನಲ್ಲಿರುವ "ಆತ್ಮ ವಿಕಾಸ ಮಂದಿರ"ದ [illegible] (ದಿವ್ಯ) ಮತ್ತು [illegible] ರೋಗಿಗಳಿಗೆ ಸಿದ್ಧ ಔಷಧಗಳು ಬಡವರಿಗೆ ಉ [illegible] ಗಿ ದೊರೆಯುತ್ತವೆಂದು ತಿಳಿಸಲಾಗಿದೆ.

ಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನಾಗಸ್ವರ, ೭ ೧೫ ಬಿ ಎಸ್ [illegible] ರ್-ಕನ್ನಡಗೀತೆ, ೭-೩೦ ಮುತ್ತು [illegible] ಚ್. ಎಸ್. ಅನಸೂಯ-ಸಂಗೀತ. ಎ. ಎಸ್ ಚಂದ್ರಶೇಖರಯ್ಯ-ವೀಣೆ. [illegible] ಮಹಿಳಾ ಕಾರ್ಯಕ್ರಮ [illegible] ಮಧ್ಯಾಹ್ನ [illegible] ಎಚ್ ಎಸ್ ಅನಸೂಯ ಸಂಗೀತ, ಎಸ್ ರಾಮಾಚಾರ್-ಕನ್ನಡ ಗೀತೆ, [illegible] ಸಂಗೀತ, ೧ ೩೦ ಮತ್ತು ೯-೧೫ [illegible] ನಾರಾಯಣ ಅಯ್ಯಂಗಾರ್-ಕೊಳಲು, ಮತ್ತು ಸಂಜೆ ೫-೩೦ ಎಚ್ ಆರ್ ರಾ [illegible] ಷ್ಟ ಸಂಗೀತ, ೫ ಪಾಶ್ಚಾತ್ಯ ಸಂಗೀತ, ಪ್ರದೇಶ ಸಮಾಚಾರ ೭ ೩೦ [illegible] ಸಂಸ್ಕೃತಿ-ಕನ್ನಡ ಭಾಷಣ, ೮ ಎರಡು [illegible] ಗಳು, ೮-೩೦ [illegible] ೯-೧೫ [illegible] ೯ ೩೦ [illegible]

ಕಾವ್ಯ ವಾಚನ

ಮೈಸೂರು ೫

ಶ್ರೀ ರಾಮನವಮಿ ಪ್ರಯುಕ್ತ ಇದೇ ಶನಿ ಸೋಮವಾರ ಸಂಜೆ ೬-೩೦ ಗಂಟೆಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ [illegible] ಶ್ರೀ ವಾಲ್ಮೀಕಿ ಗಾನ ಮಂದಿರದಲ್ಲಿ [illegible] ವಿದ್ಯಾರ್ಥಿನಿಯಾದ ಶ್ರೀಮತಿ ಎಂ ಶಾಂತಲಕ್ಷ್ಮಿ ಬಿ ಎ ಮತ್ತು ಎಸ್ ಬಿ [illegible] ರತ ಭಕ್ತಿ ಕಾವ್ಯದ "ವಿಭೀಷಣ ಶರಣಾಗತಿ" ಎಂಬ ಭಾಗವನ್ನು ವಾಚನ [illegible] ಸ್ವಾಗತವಿದೆ

ರೈಲು ದುರಂತದಲ್ಲಿ ಸಾವಿತ್ರಿ ಗಣೇಶನ್‌ರ ಕುಟುಂಬಕ್ಕೆ ೧೦ ಸಾವಿರ ರೂ. ಪರಿಹಾರ

ಕಳೆದ ನವೆಂಬರ್ [illegible] ಬಳಿ ನಡೆದ ರೈಲು ಅಪಘಾತದಲ್ಲಿ [illegible] ಸಂಗೀತ [illegible] ಶ್ರೀ ಕೆ ಎಸ್ ಗಣೇಶ್ ಮತ್ತು ಅವರ ಪರಿವಾರದವ [illegible] ವರಿಗೆ ಒಟ್ಟಾಗಿ ೧೦ ೦೦೦ ರೂ ಪರಿಹಾರವನ್ನು ಕೊಡಲಾಗಿದೆ ಈ ಮೊತ್ತವು [illegible] ವಧಿಯವ ಈ ಹಣವನ್ನು [illegible] ರೂ ಸಮವಾಗಿ ಹಂಚಿಕೊಳ್ಳಬೇಕು [illegible] ಸಿನಿಮಾ ನಟಿಯ ಪ್ರಯಾಣ [illegible] ಕೊಂಡ ಒಡವೆಗಳ ಬಾಬತ್ತು ೧,೭೫೦ ರೂ ಗಳನ್ನು ಅವರಿಗೆ ಕೊಡಲಾಗುವುದು

ಸಾವಿತ್ರಿ ಗಣೇಶನವರ ತಾಯಿ ಶ್ರೀಮತಿ ಚಲ್ಲಮ್ಮಾಳ್‌ರವರೂ ಅಲ್ಲದೇ ಮೃತರಾದ [illegible] ಅವರ ಪತಿ ಪಿ ಎನ್ ಶ್ರೀನಿವಾಸ ಅಯ್ಯರ್‌ರವರು ತಮ್ಮ ಮತ್ತು ತಮ್ಮ ಪುತ್ರಿ ವಿಶಾಲಾಕ್ಷಿಯವರ ಪರವಾಗಿ ಪರಿಹಾರಕ್ಕೆ ಅರ್ಜಿ ಹಾಕಿಕೊಂಡಿದ್ದರು ಅವರಿಗೂ ೫,೫೦೦ ರೂ. ಪರಿಹಾರವನ್ನು ನೀಡಲಾಗಿದೆ

ಸಾವಿತ್ರಿ ಗಣೇಶನ್ನರ ಮತ್ತೊಬ್ಬ ಮಗ [illegible] ಜನು ಅಪಘಾತದಲ್ಲಿ ಮೃತಪಟ್ಟಿದ್ದರಿಂದ ೯೦೦ ರೂ ಪರಿಹಾರವನ್ನು ಆತನ ಸಹೋದರ ರವಿಗೆ ಕೊಡಲಾಗಿದೆ

— ಕಡೇ ಸುದ್ದಿ —

ನಿಜಲಿಂಗಪ್ಪನವರೇ ಮತ್ತೆ ಮುಖ್ಯ ಮಂತ್ರಿ

ಸರ್ವಾನುಮತದ ಆಯ್ಕೆ

ಸ್ವಂ ಸು ಪ್ರೋ] ಬೆಂಗಳೂರು ೬

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಮಾಧವನ್ ನಾಯರು ಈ ಸಂಜೆ ೫ ಗಂಟೆಗೆ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು ಅವರನ್ನು ವಿಮಾನ ನಿಲ್ದಾಣದಲ್ಲಿ ಶ್ರೀಗಳಾದ ಕಡಿದಾಳ್ ಮಂಜಪ್ಪ ಮತ್ತು ಎಂ ವಿ ರಾಮರಾವ್ [illegible] ಮುಂತಾದವರು ಸಭಾಭವನಕ್ಕೆ ಕರೆತಂದರು

೫॥ ಗಂಟೆಗೆ ಸಂಸ್ಥಾನ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ನಡೆದು, ಶ್ರೀ ನಿಜಲಿಂಗಪ್ಪನವರು ಸರ್ವಾನುಮತದಿಂದ ನಾಯಕರಾಗಿ [illegible] ಆರಿಸಲ್ಪಟ್ಟರು ಅವರ ಹೆಸರನ್ನು ಶ್ರೀ [illegible] ರಾವ್ [illegible] ಸೂಚಿಸಿದರು ಶ್ರೀಮತಿ ಲಕ್ಷ್ಮಮ್ಮ ಮಾಧವರಾಯರು ಅನುಮೋದಿಸಿದರು

ರಾಮೋತ್ಸವ ಕಾರ್ಯಕ್ರಮ

ಮೈಸೂರು ೬

ರಾಮೋತ್ಸವದ ಅಂಗವಾಗಿ ಕೆಂಪನಂಜಾಂಬಾ ಅಗ್ರಹಾರದ ಶ್ರೀ ರಾಮೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ವಿ॥ ಎ ಎಸ್. [illegible] ರವರ ವೀಣಾವಾದನವೂ, ರಾತ್ರಿ ೯ ಗಂಟೆಗೆ ವಿ॥ ಟಿ ಆರ್ ಶ್ರೀನಿವಾಸನ್‌ರವರ ಸಂಗೀತವೂ ನಡೆಯುವುವು

[illegible] ಮೊಹಲ್ಲಾ ಭಾರತೀ ಶ್ರೀ ಸಮಾಜದ ಆಶ್ರಯದಲ್ಲಿ ನಾಳೆ ೫ ಘಂಟೆಕ್ಕೆ ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು ಕಛೇರಿಯು ನಡೆಯುವುದು

ನಗರದ ಸೀತಾವಿಲಾಸ ಅಗ್ರಹಾರದ ಶ್ರೀ ರಾಮ ದೇವಸ್ಥಾನದಲ್ಲಿ ಈ ಸಂಜೆ ೭ ಘಂಟೆಗೆ ವಿ॥ [illegible] ಎಸ್ [illegible] ರವರ ವೀಣಾ ವಾದನವು ಏರ್ಪಾಡಾಗಿದೆ

ನಾಳೆ ಶ್ರೀ [illegible] ಭಕ್ತ ಮಂಡಳಿ ಶ್ರೀ ರಾಮ ಮಂದಿರದಲ್ಲಿ ಪ್ರತಿ ವರ್ಷ [illegible] ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ

ಸೀನಪ್ಪ ಶೆಟ್ಟಿ ಬೀದಿಯಲ್ಲಿರುವ ಸೀತಾರಾಮ ಸದನದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಶ್ರೀ ಬಿ ಎಸ್ ಎನ್ [illegible] ರವರ ಕಾವ್ಯ ವಾಚನವೂ ಶ್ರೀ ಕೆ. ವೆಂಕಟಸುಬ್ಬಯ್ಯನವರ ವ್ಯಾಖ್ಯಾನವೂ ನಡೆಯುವುದು

ನಂಜನಗೂಡಿನ ಶ್ರೀ ಲಕ್ಷ್ಮೀ ಭಜನ ಮಂದಿರದ ಆಶ್ರಯದಲ್ಲಿ [illegible] ಶ್ರೀ ರಾಮೋತ್ಸವ ಕಾರ್ಯಕ್ರಮಗಳು ನಿತ್ಯವೂ ಸಂಜೆ ೭ ರಿಂದ ೯॥ ಗಂಟೆವರೆಗೆ ಜರುಗುವುವು ಪ್ರತಿದಿನ ಸಂಜೆ ಶ್ರೀ [illegible] ಭಾಗವತರು ಮತ್ತು [illegible] ಯವರ ಭಜನೆ ನಡೆ [illegible] ಸಂಜೆ ಶ್ರೀಮತಿ ಕೆ. ಆರ್. ಲೀಲಾವತಿಯವರ ಸಂಗೀತವು ಏರ್ಪಾಡಾಗಿದೆ

ಅಮೃತಸರಕ್ಕೆ ನುಗ್ಗಲು ಅಲ್ಲಾಮಾ ಮಶ್ರಿಕಿ ಹಂಚಿಕೆ

ಕಾಶ್ಮೀರವನ್ನು ಹಿಡಿದುಕೊಳ್ಳುವ ಹಲುವಾಗಿ [illegible] ದಿನ ಅಮೃತಸರಕ್ಕೆ ನುಗ್ಗಲು ಪಾಕಿಸ್ತಾನ-ಭಾರತ ಗಡಿ ಬಳಿ ವಗಾಹ್ ಎಂಬಲ್ಲಿ ಖಾಕ್ಸಾರ್ ನಾಯಕ ಅಲ್ಲಾಮಾ ಮಶ್ರಿಕಿಯವರು ತಮ್ಮ ಗುಂಪಿನ ಮುಂಚೂಣಿ ಶಿಬಿರವನ್ನು ಸ್ಥಾಪಿಸಿರುವರೆಂದು ವರದಿಯಾಗಿದೆ ಮೇ-೧೫ರವರೆಗೆ ಅವರು ಅಮೃತಸರ ಮತ್ತು ಅಲ್ಲಿಂದ ಮುಂದೆ [illegible] ಪ್ರವೇಶಿಸಲು [illegible] ಹೇಳಲಾಗಿದೆ [illegible] ಕಾಶ್ಮೀರದ [illegible] ಹೇಳುತ್ತಾರೆ [illegible] ಸ್ಥಾಪಿಸಿದ ಇಸ್ಲಾಂ ಲೀಗಿನಿಂದ ಕಳೆದ ವಾರ ಅವರನ್ನು ಉಚ್ಚಾಟನೆ ಮಾಡಲಾಯಿತು

○ಬೊಂಬಾಯಿ ಸಂಸ್ಥಾನದ ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಪುನಃ ವೈ ಬಿ ಚವಾಣರವರನ್ನು ಆರಿಸಲಾಗಿದೆ

ನಾಯಕತ್ವಕ್ಕೆ ಕಡಿದಾಳ್ ಮತ್ತು ನಿಜಲಿಂಗಪ್ಪನವರಲ್ಲಿ ಸ್ಪರ್ಧೆ

ಒಮ್ಮತದ ಆಯ್ಕೆಗಾಗಿ ಕೆ. ಸಿ ರೆಡ್ಡಿ ಮತ್ತು ಇತರರ ಪ್ರಯತ್ನ

ಸ್ವಂ. ಸು ಕಾಂ] ಬೆಂಗಳೂರು ೬.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯಲ್ಲಿ ಶ್ರೀಗಳಾದ ನಿಜಲಿಂಗಪ್ಪ ಮತ್ತು ಕಡಿದಾಳ್ ಮಂಜಪ್ಪನವರಿಗೆ ಸ್ಪರ್ಧೆಯುಂಟಾಗಿದೆಯೆಂದೂ, ಉಭಯರಿಗೂ ಸಮಾನವಾದ ಬೆಂಬಲವಿರುವುದೆಂದೂ ಹೇಳಲಾಗುತ್ತಿದೆ.

ಕೇಂದ್ರ ಉತ್ಪನ್ನ ಶಾಖಾ ಸಚಿವ ಶ್ರೀ ಕೆ ಸಿ. ರೆಡ್ಡಿಯವರು ಈ ದಿನ ಬೆಳಿಗ್ಗೆ ಇಲ್ಲಿಗೆ ಆಗಮಿಸಿದರು ನಾಯಕರ ಒಮ್ಮತದ ಆಯ್ಕೆಗಾಗಿ [illegible] ಕಾಂಗ್ರೆಸ್ ಮುಖಂಡರಾದ ಶ್ರೀಗಳು [illegible] ವಾಸಪ್ಪ, ಕೆ ಹನುಮಂತಯ್ಯ, [illegible] ಎಸ್ ಚನ್ನಯ್ಯ, ಟಿ ಸುಬ್ರಹ್ಮಣ್ಯರವರೂ ಮುಂತಾದವರೆಲ್ಲರೂ ನಾಯಕರ [illegible] ಬೇಕೆಂದು ಅಭಿಪ್ರಾಯಪಟ್ಟು [illegible] ಸರ್ವಾನುಮತದಿಂದ [illegible] ಸಲಹೆ ಮಾಡಿದವರು. ಈ ಬಗ್ಗೆ [illegible] ನಡೆಯುತ್ತಿರುವುದರಿಂದ ಮುಖ್ಯ [illegible] ಒಂದು ಗಂಟೆ ತಡವಾಗಿ ಸೇರಬಹುದೆಂದು ಹೇಳಲಾಗಿದೆ

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಮಾಧವನ್ ನಾಯರ್‌ರವರು ಈ ಮಧ್ಯಾಹ್ನ ಇಲ್ಲಿಗೆ ಆಗಮಿಸಿದರು

ಕೇರಳದಲ್ಲಿ ಮಲಯಾಳಿಯೇ ಆಡಳಿತ ಮತ್ತು ಶಿಕ್ಷಣ ಮಾಧ್ಯಮ

ಹೆಚ್ಚಿನ ಭೂಮಿಯಿರುವವರಿಂದ, [illegible] ಕಡಿಮೆಯಿರುವವರಿಗೆ ಹಂಚಿಕೆ

ಸರ್ಕಾರದ ಧ್ಯೇಯೋದ್ದೇಶಗಳನ್ನು ಕುರಿತು ಮುಖ್ಯ ಮಂತ್ರಿ ನಂಬೂದ್ರಿಪಾದ್‌ರವರು ಹೇಳಿಕೆಯಿತ್ತು ಸಂಸ್ಥಾನದಲ್ಲಿ ಶೀಘ್ರದಲ್ಲೇ ಭೂಸುಧಾರಣೆಯನ್ನು ಜಾರಿಗೆ ತಂದು ಜಮೀನು ಹಿಡುವಳಿ ಪರಮಾವಧಿಯು [illegible] ಗೊತ್ತುಮಾಡಲಾಗುವುದೆಂದೂ, ಕೃಷಿಕನಿಗೇ ಭೂಮಿಯ ಅನುಭವದ ಹಕ್ಕು ದೊರಕಿಸಿಕೊಡಲಾಗುವುದೆಂದೂ ಮತ್ತು ಹೆಚ್ಚಿನ ಭೂಮಿಯನ್ನು ವ್ಯವಸಾಯಕ್ಕೆ ಕಡಿಮೆಯಿರುವವರಿಗೆ ಹಂಚಲಾಗುವುದೆಂದೂ ತಿಳಿಸಿರುವರು

ಸಂಸ್ಥಾನದಲ್ಲಿರುವ ಹಲವು ಖಾಸಗಿ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಲಾಗುವುದೆಂದೂ ಮತ್ತು ಮಲಯಾಳಿಯನ್ನು ಆಡಳಿತದ ಮತ್ತು ವಿಶ್ವವಿದ್ಯಾನಿಲಯಗಳ ಶಿಕ್ಷಣದ ಮಾಧ್ಯಮವನ್ನಾಗಿಯೂ ಮಾಡಲಾಗುವುದೆಂದು ಅವರು ತಿಳಿಸಿದರು

ತಮ್ಮ ಪೈಕಿ ಅನೇಕರಿಗೆ ಆಡಳಿತಾನುಭವವಿಲ್ಲವೆಂದೂ ಅವರು ಹೇಳಿದರು ತಮ್ಮ ಇಚ್ಛೆಗನುಸಾರವಾಗಿಲ್ಲದ ಕಾನೂನು ಕಟ್ಟಳೆಗಳ ಮಧ್ಯೆ ತಾವು ಕೆಲಸ ಮಾಡಬೇಕಾಗಿರುವುದೆಂದು ಅವರು ನುಡಿದರು ಲಂಚ ಮತ್ತು ಆಡಳಿತದ ಅನ್ಯಾಯಗಳನ್ನು ಹೋಗಲಾಡಿಸಲು ಪ್ರಯತ್ನಪೂರ್ವಕವಾಗಿ ಅವರು ಭರವಸೆಯಿತ್ತರು

ನಗರದಲ್ಲಿ ಸಂಸ್ಥಾನದ ವಕೀಲರ ಸಮ್ಮೇಳನ

ಮೈಸೂರು ೫

ನಗರದಲ್ಲಿ ಬರುವ ತಿಂಗಳು ೧೦ ಮತ್ತು ೧೧ನೇ ತಾರೀಖು ಸಂಸ್ಥಾನದ ವಕೀಲರ ಸಮ್ಮೇಳನವು ನಡೆಯುವುದು. ಅದರ ಅಧ್ಯಕ್ಷರನ್ನು ಚುನಾಯಿಸಲು ಇದೇ ತಿಂಗಳು ೧೦ನೇ ತಾರೀಖು ಸ್ವಾಗತ ಸಮಿತಿಯ ಸಭೆಯು ಸೇರುತ್ತದೆ. ಸದಸ್ಯರೆಲ್ಲರೂ ತಪ್ಪದೆ ಬರಬೇಕೆಂದು ಕೋರಲಾಗಿದೆ

ಸಹಕಾರ ಸಂಘದ ಚುನಾವಣೆ ತಕರಾರು ಅರ್ಜಿಗೆ ಪುರಸ್ಕಾರ

ನಾಳೆ ನಡೆಯಬೇಕಾಗಿದ್ದ ಮೇಲ್ಕಂಡ ಚುನಾವಣೆಯಲ್ಲಿ ಉಮೇದುವಾರರುಗಳ ಪಟ್ಟಿಯಲ್ಲಿ ಶ್ರೀ ಎಚ್. ಕೆ. ಕುಮಾರಸ್ವಾಮಿಯವರ ಹೆಸರನ್ನು ಸೇರಿಸಿರಲಿಲ್ಲವಾದ್ದರಿಂದ ಶ್ರೀಯುತರು ಅಸಿಸ್ಟೆಂಟ್ ರಿಜಿಸ್ಟ್ರಾರರ ನ್ಯಾಯಾಲಯದಲ್ಲಿ ಸದರಿ ಸೊಸೈಟಿಯ ಮೇಲೆ ಮೊಕದ್ದಮೆ ಹೂಡಿದ್ದರು. ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಶಿವಣ್ಣನವರು ನೆನ್ನೆ ಉಭಯಪಕ್ಷದವರನ್ನೂ ಕರೆಸಿ ವಿಚಾರಣೆ ನಡೆಸಿ, ಸೊಸೈಟಿಯವರ ನಿರ್ಧಾರ ಸಾಧುವಾದುದಲ್ಲವೆಂದೂ, ಶ್ರೀ ಕುಮಾರಸ್ವಾಮಿಯವರ ಹೆಸರನ್ನು ಸೇರಿಸಬೇಕೆಂದೂ ತೀರ್ಪಿತ್ತರು. ಅದರಂತೆ ಉಮೇದುವಾರರ ಪಟ್ಟಿಯಲ್ಲಿ ಶ್ರೀಯುತರ ಹೆಸರನ್ನು ಈಗ ಸೇರಿಸಿಕೊಳ್ಳಲಾಗಿದೆ

ಸಹಾಯಾರ್ಥ ನಾಟಕ

ನಗರದ ಕಮಲಾ ಆರ್ಟಿಸ್ಟ್ಸ್ ಸಂಸ್ಥೆಯು ತನ್ನ ವಾರ್ಷಿಕೋತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀ ಸಿ. ಅಂ[illegible]ಣ್ಣನವರ ‘ಸತ್ಯಾಗ್ರ[illegible]’ ಮತ್ತು ಶ್ರೀ ಎಸ್. ಆರ್. [illegible]ಣ್ಣನವರ ‘ನೌಕರ’ ಎಂಬ ಎರಡು ಸಾಮಾಜಿಕ ನಾಟಕಗಳನ್ನು ಅಭಿನಯಿಸಲಾಗುವುದು. ಇದರಿಂದ ಬರುವ ಉತ್ಪತ್ತಿಯನ್ನು ನಾನಾ ಶಾಲಾ ಬಡ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮುಂತಾದವುಗಳಿಗಾಗಿ ವಿನಿಯೋಗಿಸಲಾಗುವುದು. ಸಾರ್ವಜನಿಕರು ಪ್ರೋತ್ಸಾಹಿಸುವಂತೆ ಸಂಸ್ಥೆಯವರು ಪ್ರಾರ್ಥಿಸಿರುತ್ತಾರೆ

ರಾಜಸ್ಥಾನದ ಮುಖ್ಯ ಮಂತ್ರಿ ಸ್ಥಾನಕ್ಕೆ ಸುಖಾಡಿಯಾ

ರಾಜಸ್ಥಾನದ ಶಾಸನ ಸಭೆಯ ಬಹುಸಂಖ್ಯಾತ ಪಕ್ಷವಾದ ಕಾಂಗ್ರೆಸ್ಸಿನ ನಾಯಕರಾಗಿ ಈಗಿನ ಮುಖ್ಯ ಮಂತ್ರಿ ಮೋಹನಲಾಲ್ ಸುಖಾಡಿಯಾರವರು ಆರಿಸಲ್ಪಟ್ಟಿರುತ್ತಾರೆ.

ಇರಾನಿನ ಪ್ರಧಾನಿಯ ರಾಜೀನಾಮೆ

ಇರಾನಿನ ಪ್ರಧಾನಿ ಹುಸೇನ್ ಆಲಾರವರು ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. ಅವರ ಸ್ಥಾನದಲ್ಲಿ ರಾಜರು ಅರಮನೆ ಮಂತ್ರಿ ಮನ್[illegible]ಚರ್ ಇಗ್ಬಾಲರನ್ನು ಪ್ರಧಾನಿಯಾಗಿ ನೇಮಿಸಿರುವರು

ಮೈಸೂರು ಪೇಟೆ ಧಾರಣೆ

[illegible]

[illegible]	[illegible]	[illegible]	೦	[illegible]	೦	೦
[illegible]	[illegible]	[illegible]	೦	[illegible]	[illegible]	೦
ಅಕ್ಕಿ	[illegible]	೦	೦	[illegible]	[illegible]	೦
ಕೊಬ್ಬರಿ	[illegible]	[illegible]	೦			
ರಾಗಿ	[illegible]	[illegible]	೦	[illegible]	೦	೦
ಕಡಲೆಕಾಯಿ	[illegible]	೦	೦	[illegible]	[illegible]	೦
[illegible]	[illegible]	[illegible]	೦	[illegible]	[illegible]	೦
[illegible]	[illegible]	೦	೦			
[illegible]	[illegible]	೦	೦	[illegible]	[illegible]	೦
ಹುರುಳಿ	[illegible]	[illegible]	೦	[illegible]	[illegible]	೦
ಹೆಸರು	[illegible]	೦	೦	[illegible]	[illegible]	೦
[illegible]	[illegible]	೦	೦	[illegible]	[illegible]	೦
ಧನಿಯ	[illegible]	[illegible]	೦	[illegible]	[illegible]	೦
ಅವರೆ	[illegible]	[illegible]	೦	[illegible]	೦	೦
[illegible]	[illegible]	೦	೦			
[illegible]	[illegible]	[illegible]	೦			
[illegible]	[illegible]	[illegible]	೦	[illegible]	[illegible]	೦
[illegible]	[illegible]	[illegible]	[illegible]	[illegible]	[illegible]	೦
[illegible]	[illegible]	[illegible]	೦	[illegible]	[illegible]	[illegible]
[illegible]	[illegible]	೦	೦	[illegible]	[illegible]	೦
ತೆಂಗಿನಕಾಯಿ	[illegible]	೦	೦	[illegible]	[illegible]	೦

ಲೋಟಸ್ ಚಕ್ರಬಂಧ ಸ್ಪರ್ಧೆ ನಡೆಸುವವರಿಗೆ ಸಜಾ

ಮದರಾಸಿನಲ್ಲಿ ಲೋಟಸ್ ಕ್ರಾಸ್‌ವರ್ಡ್ಸ್ ಎಂಬ ಚಕ್ರಬಂಧ ಸ್ಪರ್ಧೆಯನ್ನು ನಡೆಸುತ್ತಿದ್ದ ಪಿ. ರಾಮಸ್ವಾಮಿ ನಾಡಾರ್ ಎಂಬುವರು [illegible]ನೇ ನಂಬರು ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವಾಗಿ [illegible] ರೂ. ಗಳನ್ನು ಸಂಚಿತವಾಗಿ ಪ್ರಕಟಿಸಿ, ಅವರಲ್ಲಿ ಪ್ರಥಮ ಬಹುಮಾನ ಪಡೆದವರೆಂದು ಘೋಷಿಸಲಾದ ಜನಗಳಿಗೆ ಬಹುಮಾನದ ಮೊಬಲಗನ್ನು [illegible] ವನ್ನು ದುರುಪಯೋಗಪಡಿಸಿಕೊಂಡರೆಂದು ಸಿ. ಐ. ಡಿ. ಪೊಲೀಸರು ಅಲ್ಲಿನ ನಾಲ್ಕನೇ ಪ್ರೆಸಿಡೆನ್ಸಿ ನ್ಯಾಯಾಧಿಪರ ಮುಂದೆ ಹೂಡಿದ್ದ ಮೊಕದ್ದಮೆಯಲ್ಲಿ ಅವನು ಅಪರಾಧಿಯೆನ್ನಲು ಸಾಕಷ್ಟು [illegible] ಇಲ್ಲವೆಂದು ತಿಳಿಸಿ ವಜಾ ಮಾಡಿದ್ದರು. ಈ ತೀರ್ಪಿನ ಮೇಲೆ ಪೊಲೀಸರು ಹೈಕೋರ್ಟಿನಲ್ಲಿ ಅಪೀಲು ಹೂಡಿದಾಗ ಅಲ್ಲಿನ ನ್ಯಾಯಾಧೀಶ ಶ್ರೀ ಎನ್. ಸೋಮಸುಂದರಂರವರು ಅಪರಾಧಿಗೆ [illegible]ರವಾವಧಿ ಶಿಕ್ಷೆಯಾದ ಎರಡು ತಿಂಗಳು ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು.

ಮೇಲ್ಕಂಡ ಸ್ಪರ್ಧೆಯಲ್ಲಿ [illegible] ಸಾವಿರ ರೂಗಳು ಪ್ರವೇಶ ಶುಲ್ಕವಾಗಿ ವಸೂಲಿ ಸಿಕ್ಕಿದ್ದರೂ ಅವಶ್ಯಕತೆಗಿಂತಲೂ ಬಹುಮಾನದ ಮೊಬಲಗನ್ನು ಹೆಚ್ಚಿಸಿರುವುದರಿಂದ, ಹಣದ ದು[illegible]ಯೋಗ [illegible] ವೆಂದೂ ಹೈಕೋರ್ಟಿನ ನ್ಯಾಯಾಧಿಪರು [illegible] ಅಭಿಪ್ರಾಯಪಟ್ಟು, ಕೆಳಗಿನ ಕೋರ್ಟಿನ ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ಖುಲಾಸೆ ಮಾಡಿರುವುದರಲ್ಲಿ ಏನೋ ಕುಟಿಲವಿರಬಹುದೆಂದೂ ತಿಳಿಸಿರುವರು

ಹುಣಸೂರಿನಲ್ಲಿ ಹೊಡೆದಾಟ

ಹುಣಸೂರಿನಲ್ಲಿ ಕಳೆದ ಮಂಗಳವಾರ [illegible]ತ್ತು ಮಾರಮ್ಮನ ಮೆರವಣಿಗೆಯು ಹೋಗುತ್ತಿದ್ದಾಗ, ಊರಿನ ದೊಡ್ಡ ಮಸೀದಿ ಬಳಿ ಎರಡು ಗುಂಪುಗಳಿಗೆ ಹೊಡೆದಾಟವಾಯಿತೆಂದೂ, ಮೂವರಿಗೆ ಪೆಟ್ಟುಬಿದ್ದುದಾಗಿಯೂ ವರದಿಯಾಗಿದೆ. ರಿಸರ್ವ್ ಪೊಲೀಸರು ಸ್ಥಳಕ್ಕೆ ಆಗಮಿಸಿದಮೇಲೆ ಪರಿಸ್ಥಿತಿಯು ಹತೋಟಿಗೆ ಬಂದಿತು

ಹೈಟಿ ದ್ವೀಪದ ಅಧ್ಯಕ್ಷರ ರಾಜೀನಾಮೆ ಮತ್ತು ಬಂಧನ

ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಒಂದಾದ ಹೈಟಿಯ ಅಧ್ಯಕ್ಷ ಫ್ರಾಂಕ್ ಸಿಲ್ವಾನರವರು ತಮ್ಮ ರಾಜೀನಾಮೆಯನ್ನು ಅಲ್ಲಿನ ಸೈನ್ಯಾಧಿಕಾರಿಗಳಿಗೆ ಒಪ್ಪಿಸಿದರೆಂದೂ ಅವರನ್ನು ಅನಂತರ ಬಂಧಿಸಲಾಯಿತೆಂದೂ ವರದಿಯಾಗಿದೆ. ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರರಾಗಲಿರುವ ಲೂಯಿ ಡಿಜೋಲಿಯವರು ಮಾಜಿ ಅಧ್ಯಕ್ಷರ ವಿರುದ್ಧ ನಡೆಯುತ್ತಿರುವ ಸಾರ್ವತ್ರಿಕ ಮುಷ್ಕರವನ್ನು ನಿಲ್ಲಿಸುವಂತೆ ಕರೆಯಿತ್ತಿರುವರು.

ಅಮೇರಿಕಾ ಮಾದರಿಯಲ್ಲಿ ಪಾಕಿಸ್ತಾನ ರಾಜ್ಯಾಂಗ ಪರಿವರ್ತನೆ

ಬ್ರಿಟನ್ನಿನಲ್ಲಿರುವಂತೆ ರಚಿಸಲಾಗಿರುವ ಪಾಕಿಸ್ತಾನದ ರಾಜ್ಯಾಂಗವನ್ನು ಅಮೇರಿಕದ ರಾಜ್ಯಾಂಗದ ಮಾದರಿಗೆ ಪರಿವರ್ತಿಸುವ ವಿಷಯವನ್ನು ಅಲ್ಲಿನ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಸಧ್ಯದಲ್ಲೇ ಸಭೆ ಸೇರಿ ಪರಿಶೀಲಿಸುವರೆಂದು ಗೊತ್ತಾಗಿದೆ. ಹೊಸ ಮಾರ್ಪಾಡಿನ ಪ್ರಕಾರ ಅಲ್ಲಿನ ಅಧ್ಯಕ್ಷರು ಪ್ರಧಾನ ಆಡಳಿತಾಧಿಕಾರಿಯಾಗುವರು. ಪಾಕಿಸ್ತಾನದ ರಿಪಬ್ಲಿಕ್ ದಿನಾಚರಣೆ ದಿನ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ಪ್ರಧಾನ ಭಾಷಣ ಮಾಡಿ ಹೊಸ ಮಾರ್ಪಾಡಿನ ವಿಷಯವನ್ನು ಸೂಚಿಸಿದ್ದರು. ಈ ಮಾರ್ಪಾಡು ಸಿಂಧುವಾಗಬೇಕಾದರೆ, ಪಾಕಿಸ್ತಾನದ ರಾಷ್ಟ್ರೀಯ ಸಭೆಯ ಮೂರನೇ ಎರಡು ಭಾಗದಷ್ಟು ಸದಸ್ಯರ ಬೆಂಬಲ ದೊರೆಯಬೇಕಾಗಿದೆ. ಕಳೆದ ವರ್ಷ ತಾನೆ ಪಾಕಿಸ್ತಾನವು ಬ್ರಿಟಿಷ್ ಮಾದರಿ ರಾಜ್ಯಾಂಗವನ್ನು ರಚಿಸಿಕೊಂಡಿದ್ದಿತು

Edited, Printed and Published by A. R. Nagarajan at Sadhvi Press, D. Subbiah Road, Mysore

ನರ್ಸರಿ ಶಾಲಾ ಅಧ್ಯಾಪಕಿಯರ ಪರೀಕ್ಷಾ ಫಲಿತಾಂಶ

ನರ್ಸರಿ ಶಾಲಾ ಅಧ್ಯಾಪಕಿಯರ ಶಿಕ್ಷಣ ಪರೀಕ್ಷೆಯಲ್ಲಿ [illegible] ಈ ಕೆಳಕಂಡ ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ -

೧ನೆ ತರಗತಿ ಶ್ರೀಮತಿ [illegible] ಕೆ ಆರ್ [illegible] ಎಸ್ [illegible] ಮತ್ತು ಸುಶೀ[illegible]

ಎರಡನೇ ತರಗತಿ ಶ್ರೀಮತಿಯರಾದ [illegible] ಎಂ. ಗಂಗ[illegible] ಡಿ. ಲಲಿತ, [illegible] ಎಸ್. [illegible] ಜಿ. ಲಲಿ, ಹೆಚ್. ವಿ [illegible] ಗೌರಮ್ಮ, [illegible] ಸರೋಜಮ್ಮ, ಸತ್ಯ ಅಂಬುಜಮ್ಮ

ಮೂರನೇ ತರಗತಿ ಶ್ರೀಮತಿಯರಾದ ಡಿ. ಸಂಪತ್, ಕೆ. ಎಲ್. ಲಲಿತ, ಎಂ. ಎಲ್. [illegible] ಮತ್ತು ಎ. ಜಿ. ಗಿರಿಜಾಂಬ

ಶ್ರೀಮತಿಯರಾದ ವಿ. ಎಸ್. ಎಸ್. ನಂಜಮ್ಮ ಮತ್ತು ತುಳಸಮ್ಮನವರಿಗೆ ಸರ್ಟಿಫಿಕೇಟ್ [illegible].

ಶೃಂಗೇರಿ ಮಠಕ್ಕೆ ಸೇರಿದ ಕರ್ನಾಟಕ ಬ್ರಾಹ್ಮಣರ ಕಾಣಿಕೆ

ನಗರದಲ್ಲಿ [illegible] ಕರ್ನಾಟಕ ಸ್ಮಾರ್ತ ಬ್ರಾಹ್ಮಣ [illegible] ಹಲವು ಮನೆಗಳ [illegible] ಕಾಣಿಕೆಯನ್ನು ಕೊಟ್ಟಿ[illegible] ರು ಇದನ್ನು ಸಂಪತಿ ಮಾಡಿ ಕಳಿಸಿಕೊಡಬೇಕೆಂದೂ, ಈ ಬಗ್ಗೆ ಶೃಂಗೇರಿ [illegible] ವೆ ಬಂದಿರುವ [illegible] ಮಠದ ಮುದ್ರೆ ಹೊಂದಿರುವ ನಗರದ ಜ್ಯೋತಿಷ್ಯ ವಿದ್ವಾನ್ ದೈವಜ್ಞ ಭೂಷಣ ಶ್ರೀ ಕೆ ವೆಂಕಪ್ಪ ಶಾಸ್ತ್ರಿಗಳವರು ಮನವಿ ಮಾಡಿಕೊಂಡಿರುತ್ತಾರೆ

ಮಂಡ್ಯದಲ್ಲಿನ ರಾಮೋತ್ಸವ ಕಾರ್ಯಕ್ರಮ ಮುಂದಕ್ಕೆ

ಮಂಡ್ಯದ ಸಮರ್ಥ ಸಂಗೀತ ಪಾಠಶಾಲೆಯ ಆಶ್ರಯದಲ್ಲಿ ನಾಳಿದ್ದಿನಿಂದ ಆರಂಭವಾಗಬೇಕಾಗಿದ್ದ ಶ್ರೀ ರಾಮೋತ್ಸವ ಕಾರ್ಯಕ್ರಮವು ಅನಿವಾರ್ಯ ಕಾರಣಗಳಿಂದ ಇದೇ ತಿಂಗಳು [illegible]ರಿಂದ [illegible] ನಡೆಯುವುದು. ಆ ದಿನದಿಂದ [illegible] ಉತ್ಸವ, ಶ್ರೀರಾಮ ತಾರಕ ಹೋಮ ಇತರ ವಿಧಿ ಕಾರ್ಯಕ್ರಮಗಳು ಜರುಗುವುವು. ಉತ್ಸವದ [illegible] ಮೈಸೂರಿನ ತರುಣ ಗಾಯಕರು, ಹರಿಕಥಾ ವಿದ್ವಾಂಸರು, ವೇದ ವ್ಯಾಖ್ಯಾನ ಸಂಪನ್ನರೇ ಮುಂತಾದವರು ಭಾಗವಹಿಸುವರು

ಸೆನೆಟ್ ಚುನಾವಣೆಗೆ ಎಸ್. ಎಲ್. ಈಶ್ವರಪ್ಪನವರ ಸ್ಪರ್ಧೆ

ಶಿವಮೊಗ್ಗದ ಅಡ್ವೊಕೇಟರೂ, ಪ್ರಸಿದ್ಧ ಸಹಕಾರಿಗಳೂ ಮತ್ತು ದೀನಬಂಧು ಪತ್ರಿಕೆಯ ಸಂಪಾದಕರೂ ಆದ ಶ್ರೀ ಎಸ್. ಎಲ್. ಈಶ್ವರಪ್ಪನವರು ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಚುನಾವಣೆಯಲ್ಲಿ ಸ್ಪರ್ಧಿಸಿರುತ್ತಾರೆ. ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಜೈಲು ವಾಸವನ್ನು ಅನುಭವಿಸಿರುವರು. ಅವರು ಸಮಾಜ ಸೇವೆಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿರುತ್ತಾರೆ.

ಮೈಸೂರು ಕೋ ಆಪರೇಟಿವ್ ಸೊಸೈಟಿ,
ಲಿಮಿಟೆಡ್,
ಡೈರೆಕ್ಟರುಗಳ ಚುನಾವಣೆ
7—4—57ನೇ ಭಾನುವಾರ
ಮಧ್ಯಾಹ್ನ 3—30ಕ್ಕೆ
ದಸರಾ ವಸ್ತು ಪ್ರದರ್ಶನಾಲಯದಲ್ಲಿ
ಮೇಲ್ಕಂಡ ಚುನಾವಣೆಯಲ್ಲಿ ದಯವಿಟ್ಟು
21ನೇ ನಂಬರಿನ
ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್
ಸೊಸೈಟಿಯ ಮಾಜಿ ಉಪಾಧ್ಯಕ್ಷರಾದ
ಶ್ರೀ ಎಂ. ಎಸ್. ರಾಮಲಿಂಗು
ಬಿ. ಎ
ರವರಿಗೆ ತಮ್ಮ ಘನವಾದ ಓಟನ್ನು
ಕೊಡಬೇಕಾಗಿ ವಿನಂತಿ.

ಶ॥ ಜ॥ ಕೆ. ಎಸ್. ತಿಮ್ಮಯ್ಯನವ

ಭಾರತದ ಪ್ರಧಾನ ಸೇನಾನಿಯ ಅಧಿಕಾರವನ್ನು ಅವರು ಜ॥ ಶ್ರೀನಾಗೇಶ್‌ರವರಿಂದ ವಹಿಸಿಕೊಂಡಿರುವರು. ಶ್ರೀ ತಿಮ್ಮಯ್ಯನವರು ತನ ಮೈಸೂರಿ (ಕೊಡಗ್)ನವರು. ಸ್ವ[illegible] ಭಾರತದ ದ[illegible] ಅಧಿಕಾರವನ್ನು ವ[illegible] ಮೈಸೂರಿನವರಲ್ಲಿ ಇವರು ಎರಡನೆ[illegible]

ಕಾಲೇಜು ಹುಡುಗಿಯಿಂದ ೫೦,೦೦೦ ರೂ. ವಜ್ರದ ಕಳ್ಳ ರವಾನೆ ಪ್ರಯತ್ನ

ತಿರುಚಿನಾಪಳ್ಳಿಯ ವಿಮಾನ ನಿಲ್ದಾಣದಲ್ಲಿ ಕಳೆದ ಭಾನುವಾರ ರಾಜಾಂಬಾಳ್ ಎಂಬ ಕಾಲೇಜು ವಿದ್ಯಾರ್ಥಿನಿಯನ್ನು ಸುಂಕದ ಅಧಿಕಾರಿಗಳು ಶೋಧಿಸಲಾಗಿ ಆಕೆಯ ಬಳಿ [illegible] ರೂ ಬೆಲೆಯ ಕೃತಕ ವಜ್ರಗಳು ದೊರೆತ ವಿಷಯ ವರದಿಯಾಗಿದೆ. ಆಕೆಯು ಸಿಂಹಳದ ಜಫ್ನಾಗೆ ಹೊರಟಿದ್ದಳು. [illegible] ಚೀಲದಲ್ಲಿ ಅವನ್ನು ಬಚ್ಚಿಡಲಾಗಿತ್ತೆಂದು ತಿಳಿದು ಬಂದಿದೆ. ಆಕೆಯ ಮೇಲೆ ಭಾರತದ ಸುಂಕದ ಮತ್ತು ವಿದೇಶ ವಿನಿಮಯ ಶಾಸನಗಳ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ

ನಿವೃತ್ತ ಸರ್ಕಾರಿ ನೌಕರರ ಸಭೆ

ನಿವೃತ್ತರಾಗಿರುವ ಸರ್ಕಾರಿ ನೌಕರರು ತಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ಸುಲಭವಾಗಿ ಒಂದು ಸಂಘವನ್ನು ಸ್ಥಾಪಿಸಲು ಯೋಚಿಸಿರುತ್ತಾರೆ. ಈ ಸಂಬಂಧವಾಗಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ. ಪೌರಸಭಾ ಸದಸ್ಯ ಶ್ರೀ ಬಿ. ಜಿ. ದಾಸ[illegible] ಅಧ್ಯಕ್ಷತೆ ವಹಿಸುವರು. ನಿವೃತ್ತ ನೌಕರರೆಲ್ಲರೂ ಸಭೆಗೆ ಬರುವಂತೆ ಕೋರಲಾಗಿದೆ

ಸಹಾಯಾರ್ಥ ವಿವಿಧ ವಿನೋದಾವಳಿ

ಶ್ರೀ ರಾಮೋತ್ಸವದ ನಿಧಿಗಾಗಿ ಶ್ರೀ ಗಾ[illegible] ಶ್ರೀ ಲಲಿತ ಕಲಾ ಸಂಘದವರು ನಾಳೆ ಸಂಜೆ [illegible] ಗಂಟೆಗೆ ನಗರದ ಸಹಕಾರ ಭವನದಲ್ಲಿ ನೃತ್ಯ, ನಾಟಕ ಮತ್ತು ಸಂಗೀತಗಳುಳ್ಳ ವಿವಿಧ ವಿನೋದಾವಳಿಯನ್ನು ಏರ್ಪಡಿಸಿರುವರು. [illegible] ಶ್ರೀ ಎಸ್. ಸಂಜೀವಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀಮತಿಯರಾದ ಕೃಷ್ಣ[illegible] ಮತ್ತು ರಾಧಾರಾಣಿಯವರ ನೃತ್ಯವನ್ನು ಇಡಲಾಗಿದೆ.

ಮರೆಯಬೇಡಿರಿ!
ಹರಾಜು ಮಾರಾಟ
ನಾಳೆ ಬೆಳಗ್ಗೆ 10 ಘಂಟೆಗೆ
ಅಬೀಡ್ಸ್,
ಸ್ಪೋರ್ಟ್ಸ್ ಸ್ಟೋರ್, ಮೈಸೂರು

ಗೋಕುಲ ಮಿಲ್ಕ್ ಡೈ
ಅಂಬಳೆ ಅಣ್ಣಯ್ಯಪಂಡಿತರ ಛತ್ರದ ಹಿಂ
ಮತ್ತು
ರಮಾವಿಲಾಸ ಅಗ್ರಹಾರ, ಮೈಸೂರು
ನಮ್ಮಲ್ಲಿ ಅಪ್ಪಟ ಹಸುವಿನ ಹಾಲು
ದೊರೆಯುತ್ತದೆ.

ಪೌಂಡು ಒಂದಕ್ಕೆ	0 3 3
ಅರ್ಧ ಪೌಂಡ್	0 1 9

ಟೆಲಿಫೋನ್ ನಂ 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾ ಪೈಸೆ

ಸಾಧ್ವಿ

ಬಿಡಿಯ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI : SUNDAY 7—4—1957 ಮೈಸೂರು : ಭಾನುವಾರ ೭—೪—೧೯೫೭ : : [ಸಂಚಿಕೆ ೨೯೪

೧೫ನೇ ತಾ॥ನೊಳಗೆ ಸಂಸ್ಥಾನದ ಹೊಸ ಮಂತ್ರಿಮಂಡಲ

ಮುಖ್ಯ ಮಂತ್ರಿ ನಿಜಲಿಂಗಪ್ಪನವರೇ ಪುನಃ ನಾಯಕರು

ಅವಿರೋಧದಿಂದ ಆಯ್ಕೆ

ಬೆಂಗಳೂರು ೭

ಕಳೆದ ಐದು ತಿಂಗಳಿಂದ ನೂತನ ಮೈಸೂರಿನ ಮುಖ್ಯ ಮಂತ್ರಿಗಳಾಗಿರುವ ಶ್ರೀ ನಿಜಲಿಂಗಪ್ಪನವರು ನೆನ್ನೆ ಪುನಃ ಹೊಸ ಶಾಸಕಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಮುಂದಿನ ಐದು ವರ್ಷದವರೆಗೆ ಅವರು ಮುಖ್ಯ ಮಂತ್ರಿಯಾಗಿರುವರು.

ಕಾಂಗ್ರೆಸ್ ಹೈ ಕಮ್ಯಾಂಡಿನ ಪ್ರತಿನಿಧಿ ಶ್ರೀ. ಮಾಧವ ಠಾಕುರ್‌ರವರ ಅಧ್ಯಕ್ಷತೆಯಲ್ಲಿ ಪಕ್ಷದ ಸಭೆಯು ನಡೆದು ಶ್ರೀ ನಿಜಲಿಂಗಪ್ಪನವರ ಏಕಮಾತ್ರ ಹೆಸರನ್ನು ಸೂಚಿಸಲಾಯಿತು ದರಾಬಾದು ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಅಣ್ಣಾರಾವ್ ಗಣಮುಖಿಯವರು ಅವರ ಸರನ್ನು ಸೂಚಿಸಿ, ಶಿವಮೊಗ್ಗದ ಶ್ರೀಮತಿ ತ್ನಮ್ಮ ಮಾಧವರಾಯರು ಅನುಮೋದಿಸಿದರು ರೆಯವರಾರ ಹೆಸರನ್ನೂ ಸೂಚಿಸಲಿಲ್ಲವಾಗಿ ನಿಜಲಿಂಗಪ್ಪನವರು ಆರಿಸಲ್ಪಟ್ಟಿರುವರೆಂದು ಶ್ರೀ ನಾಯರ್‌ರವರು ಘೋಷಿಸಿದರು.

ಶ್ರೀಗಳಾದ ಅಣ್ಣಾರಾವ್ ಗಣಮುಖಿ, ಕಡಿದಾಳ್ ಮಂಜಪ್ಪ, ವಿ ವೆಂಕಟಪ್ಪ, ಎಸ್. ಚನ್ನಯ್ಯ, ಶ್ರೀಮತಿ ನಾಗರತ್ನಮ್ಮನವರು ಭಾಷಣ ಮಾಡಿ ಶ್ರೀ ನಿಜಲಿಂಗಪ್ಪನವರನ್ನು ಅಭಿನಂದಿಸಿದರು

ಶ್ರೀ ನಿಜಲಿಂಗಪ್ಪನವರು ತಮ್ಮನ್ನು ನಾಯ ರಾಗಿ ಪುನಃ ಆರಿಸಿದ ಬಗ್ಗೆ ಕೃತಜ್ಞತೆಯನ್ನು ಸೂಚಿಸಿದರು ನಾಯಕತ್ವವು ಮುಳ್ಳಿನ ಹಾಸಿಗೆಯಂತಿರುವುದೆಂದೂ, ಸದಸ್ಯರೆಲ್ಲರ ಸರ್ವಾನುಮತದ ಸಹಕಾರವು ತಮಗೆ ಅಗತ್ಯವೆಂದೂ ಅವರು ಹೇಳಿದರು.

ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಮತ್ತು ಟಿ. ಚೌಡಯ್ಯನವರಿಗೆ ಸನ್ಮಾನ

ರಾಷ್ಟ್ರಾಧ್ಯಕ್ಷರ ಪ್ರಶಸ್ತಿಯನ್ನು ಪಡೆದಿರುವ ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಮತ್ತು ಗೀತ ರತ್ನ ಟಿ. ಚೌಡಯ್ಯನವರಿಗೆ ನಾಳೆ ಸಂಜೆ ೫॥ ಗಂಟೆಗೆ ಬಿ.ಡಿ.ರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದವರು ಅಭಿನಂದನೆಗಳನ್ನು ಸಲ್ಲಿಸಲು ಒಂದು ಸಮಾರಂಭವ ರ್ಪಡಿಸಿರುವರು.

ಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸ್ವರಾಜ ವೀಣೆ ೭-೧೫ ವಸಂತ ಉಪಾಸನೆ-ದೇವರನಾಮ. ೭-೩೦ ಗಾಯನ ೮-೧೫ ರೆಕಾರ್ಡು. ಮಧ್ಯಾಹ್ನ ೧೨ ವಸಂತ ಗೀತ. ೧೨ ೩೦ ಆರ್ ಕೆ ವೀಣೆ. ೧ ರೆಕಾರ್ಡು ೧-೩೦ ಸುಗಮ ಸಂಗೀತ. ೧-೪೫ ಮುಖ ವೀಣೆ. ೨-೧೫ ಗೀತ ಸಂಜೆ ೫ ೦೦ ಆರ್ ಕೆ. ಮಂಜುಳಾ ೬-೫ ಜಾನಪದ ಗೀತೆ ೬.೩೦ ಮತ್ತು ೮ ವಿ ಶ್ರೀರಾಮುಲು ನಾಯ್ಡು-ಹಿಂದಿ ಗೀತೆ ಮತ್ತು ಗಜಲ್. ೮-೧೫ ಕನ್ನಡ ಕರಿಸಗೆ. ೮-೩೦ ಸಾಹಿತ್ಯ ಸಮಾರೋಪ. ೯-೧೫ ಕ್ರೀಡಾ [illegible] ೯-೩೦ ರಾಮನವಮಿ [illegible]

೫೦೦ ಜನ ಅರಮನೆ ನೌಕರರಿಗೆ ಬಲಾತ್ಕಾರದ ನಿವೃತ್ತಿಯೇ ?

ಪತ್ರಿಕಾ ಗೋಷ್ಠಿಯಲ್ಲಿ ನೌಕರರ ಸಂಘದವರ ವಿವರಣೆ

ಮೈಸೂರು ೭

ಐದು ವರ್ಷಕ್ಕಿಂತ ಹೆಚ್ಚು ಸರ್ವಿಸ್ ಆಗದೆ ಇರುವ ಸುಮಾರು ೫೦೦ ಜನ ನೌಕರರನ್ನು ಅರಮನೆ ಇಲಾಖೆಯಿಂದ ಬಲಾತ್ಕಾರವಾಗಿ ನಿವೃತ್ತಿ ಮಾಡಲು ನಡೆಯುತ್ತಿರುವ ಪ್ರಯತ್ನದ ಬಗ್ಗೆ ನೌಕರರ ಮತ್ತು ಅವರ ಬಂಧುವರ್ಗದವರ ಮತ್ತು ಸಾರ್ವಜನಿಕರ ಕಳವಳವನ್ನು ವ್ಯಕ್ತಪಡಿಸಲು ಈ ದಿನ ಬೆಳಿಗ್ಗೆ ಪದವಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಬಿ ಶ್ರೀಕಂಠಪ್ಪ ಮತ್ತು ಕಾರ್ಯದರ್ಶಿ ಶ್ರೀ ವೇದಾಂತ ಹೆಮ್ಮಿಗೆಯವರು ಪತ್ರಿಕಾ ಗೋಷ್ಠಿಯೊಂದನ್ನು ಕರೆದಿದ್ದರು

ಬರುವ ತಿಂಗಳಿಂದ ಸದರಿ ನೌಕರರುಗಳನ್ನು ಕೆಲಸದಿಂದ ತೆಗೆಯುವುದಾಗಿ ನಿರ್ಧರಿಸಿ ಇಲಾಖೆಯ ಮುಖ್ಯಾಧಿಕಾರಿಗಳ ಮೂಲಕ ಈಗಾಗಲೇ ಹಲವರಿಗೆ ತಿಳುವಳಿಕೆ ಕೊಡಲಾಗಿದೆ ಉಳಿದವರಿಗೆ ಇನ್ನು ಒಂದೆರಡು ದಿನಗಳಲ್ಲಿ ನೋಟೀಸನ್ನು ಜಾರಿ ಮಾಡಲಾಗುತ್ತದೆ

ಶ್ರೀಮನ್ಮಹಾರಾಜರಿಗೆ ಕೇಂದ್ರ ಸರ್ಕಾರದಿಂದ ಕೊಡಲಾಗುತ್ತಿರುವ ರಾಜಧನದಲ್ಲಿ ಅರಮನೆ ಸಿಬ್ಬಂದಿಯನ್ನು ಮುಂದುವರಿಸಿಕೊಂಡು ಹೋಗುವ ವೆಚ್ಚವೂ ಸಹ ಸೇರಿರುತ್ತದೆ. ಹೀಗಿರುವಲ್ಲಿ ಅವರನ್ನು ಕೆಲಸದಿಂದ ತೆಗೆಯುವುದು ಕೇಂದ್ರ ಸರ್ಕಾರದೊಡನೆ ಮಾಡಿಕೊಂಡಿರುವ ಒಪ್ಪಂದಕ್ಕೆ ಮಾತ್ರವೇ ಅಲ್ಲದೆ ಟ್ರೇಡ್ ಯೂನಿಯನ್ ನಿಯಮಗಳಿಗೂ ಸರ್ವಿಸ್ ನಿಯಮಗಳಿಗೂ ಸಹ ವ್ಯತಿರೇಕವಾಗುತ್ತದೆ ಈ ಎಲ್ಲಾ ದೃಷ್ಟಿಗಳಿಂದಲೂ ಮತ್ತು ಸಾವಿರಾರು ಜನ ಬಡ ಕುಟುಂಬಗಳ ಹಿತದೃಷ್ಟಿಯಿಂದಲೂ ಈ ನೌಕರರನ್ನು ನಿವೃತ್ತಿ ಮಾಡುವುದನ್ನು ಮನ್ನಾ ಮಾಡಬೇಕು ಅವರ ಸೇವೆಯು ಅವಶ್ಯವಿಲ್ಲದಿದ್ದರೆ, ಸೈನ್ಯ ಮುಂತಾದ ದಳಗಳಂತೆ ಅವರನ್ನು ಕೇಂದ್ರ ಅಥವಾ ಬೇರೆ ಸರ್ಕಾರಗಳ ಅಥವಾ ಇಲಾಖೆಗಳ ಕೆಲಸಗಳಿಗಾಗಿ ತೆಗೆದುಕೊಳ್ಳಲು ಏರ್ಪಾಟು ಮಾಡಬೇಕು-ಎಂದು ಅವರು ಸೂಚಿಸಿದರು.

ಈ ಸಂಬಂಧವಾಗಿ ಅರಮನೆ ಮತ್ತು ಕಾರ್ಮಿಕ ಇಲಾಖಾ ಅಧಿಕಾರಿಗಳಿಗೆ ಮಾಡಿದ ಮನವಿಗಳಿಗೆ ಉತ್ತರ ಬಾರದಿರುವುದಕ್ಕಾಗಿ ಅವರು ವಿಷಾದವನ್ನು ವ್ಯಕ್ತಪಡಿಸಿದರು ಈ ವಿಷಯಕ್ಕೆ ಶ್ರೀಮನ್ಮಹಾರಾಜರವರೂ, ಸರ್ಕಾರದವರೂ ಕೂಡಲೇ ಗಮನ ಕೊಟ್ಟು ಬಡ ನೌಕರರ ತೊಂದರೆಯನ್ನು ತಪ್ಪಿಸಬೇಕೆಂದೂ ಸಹ ಅವರು ಮನವಿ ಮಾಡಿದರು

ಕಮಟೇಶ್ವರಸ್ವಾಮಿಯವರ ರತ್ನಮಂಟಪ ಉತ್ಸವ

ನಗರದ ಶ್ರೀ ಕಾಳಿಕಾಂಬಾ ಕಮಟೇಶ್ವರಸ್ವಾಮಿಯವರ ರತ್ನಮಂಟಪ ಉತ್ಸವವು ನಾನಾ ಬೀದಿಗಳಲ್ಲಿ ನಾಳಿದ್ದು ಸಂಜೆ ೬ ಗಂಟೆಗೆ ಹೊರಡುವುದು [illegible] ಭಾಗವಹಿಸು

ಕಾವ್ಯ ವಾಚನ

ಮೈಸೂರು ೭

ಶ್ರೀ ರಾಮನವಮಿ ಪ್ರಯುಕ್ತ ಇದೇ ೮ನೇ ತಾರೀಕು ಸೋಮವಾರ ಸಂಜೆ ೬-೩೦ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಪತ್ರಿಕಾಲಯದಲ್ಲಿ ಶ್ರೀ ವಾಲ್ಮೀಕಿ ಗಮಕ ಪಾಠಶಾಲೆಯ ವಿದ್ಯಾರ್ಥಿನಿಯರಾದ ಶ್ರೀಮತಿ ಎಂ. ಶಾಂತಲಕ್ಷ್ಮಿ, ಬಿ ಎ. ಮತ್ತು ಎಸ್. ಬಿ ಹರಿಮಳರವರು ಭರತ ಭಕ್ತಿ ಕಾವ್ಯದ "ವಿಭೀಷಣ ಪಟ್ಟಾಭಿಷೇಕ" ಎಂಬ ಭಾಗವನ್ನು ಗಮಕ ಮಾಡುವರು. ಸರ್ವರಿಗೂ ಸ್ವಾಗತವಿದೆ.

ರಾಮೋತ್ಸವ ಕಾರ್ಯಕ್ರಮ

ನಂಜನಗೂಡಿನ ಶ್ರೀ ಲಕ್ಷ್ಮಿ ಭಜನ ಮಂದಿರದಲ್ಲಿ ನಾಳಿದ್ದು ಸಂಜೆ ೬॥ಗೆ ಏ॥ ಎಂ. ಜೆ ಶ್ರೀನಿವಾಸಯ್ಯಂಗಾರ್ಯರ ವೀಣಾ ವಾದನವು ನಡೆಯುವುದು.

ಟಿ ನರಸೀಪುರದ ವಳವಾಯಿ ಅಗ್ರಹಾರದ ಶ್ರೀ ರಾಮ ಮಂದಿರದಲ್ಲಿ ನಾಳೆಯಿಂದ ೧೭ನೇ ತಾರೀಕಿನವರೆಗೆ ನಿತ್ಯವೂ ಬೆಳಿಗ್ಗೆ ಪಂಚಾಮೃತಾಭಿಷೇಕ, ಸೂರ್ಯ ನಮಸ್ಕಾರ, ನವಗ್ರಹ ಜಪ, ಪಾರಾಯಣ, ಸಹಸ್ರನಾಮಾರ್ಚನೆ, ಭಜನೆ, ಸಂಗೀತಗಳು ಜರುಗುವುವು ೧೭ನೇ ತಾರೀಕು ಪಟ್ಟಾಭಿಷೇಕವೂ, ೧೮ ರಂದು ಬೆಳಿಗ್ಗೆ ವಸಂತೋತ್ಸವ ಮತ್ತು ಸಂಜೆ ಹನುಮಂತೋತ್ಸವವೂ ನಡೆಯುವುವು

ಮೈಸೂರು ದೇವರಾಜ ಮೊಹಲ್ಲಾ ಆನೆ ಸಾರೋಟು ಬೀದಿಯಲ್ಲಿರುವ ಶ್ರೀಮಾನ್ ಟಿ. ದಾಸಪ್ಪನವರ ಶ್ರೀರಾಮ ಮಂದಿರದಲ್ಲಿ ನಾಳೆ ಮಧ್ಯಾಹ್ನ ೧ ಗಂಟೆಗೆ ರಾಮನವಮಿ ಪೂಜೆಯು ನಡೆಯುತ್ತದೆ ಅದೇ ದಿನ ರಾತ್ರಿ ೯ ಗಂಟೆಗೆ ಎಚ್. ಎಂ ಶಿವಲಿಂಗಸ್ವಾಮಿ ಹಿರೇಮಠ್‌ರವರಿಂದ "ಹೇಮರೆಡ್ಡಿ ಮಲ್ಲಮ್ಮ" ಎಂಬ ಶಿವಕಥೆ ನಡೆಯುತ್ತದೆ. ಸರ್ವರಿಗೂ ಆಹ್ವಾನವಿದೆ

ಸುಧಾ ಕ್ರೀಡಾ ಕೂಟದ ವಾರ್ಷಿಕೋತ್ಸವ

ಸುಧಾ ಕ್ರೀಡಾ ಕೂಟದ ೮ನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಕೃಷ್ಣವಿಲಾಸ ರಸ್ತೆಯ 'ಶ್ರೀರಾಮು' ನಿವಾಸದಲ್ಲಿ ನಡೆಯಿತು. ಶ್ರೀ ಅಗರಂ ರಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು ಕುಮಾರಿ ವಿ ಸುವರ್ಣಮಾಲಾರವರಿಂದ ಪ್ರಾರ್ಥನೆಯಾದ ಬಳಿಕ ಕುಮಾರಿ ವೈ ಆರ್ ಸುಧಾರವರು ಸರ್ವರಿಗೂ ಸ್ವಾಗತವನ್ನು ನೀಡಿದರು ಕುಮಾರಿ ವೈ ಆರ್. ಸುಭದ್ರಾರವರು ವಾರ್ಷಿಕ ವರದಿಯನ್ನು ಓದಿದರು. ಅನಂತರ ಅಧ್ಯಕ್ಷರು ಭಾಷಣ ಮಾಡಿ ಕೇವಲ ಹೆಣ್ಣು ಮಕ್ಕಳೇ ಕೂಡಿ, ಶಿಸ್ತಿನಿಂದ ಈ ಕೂಟವನ್ನು ನಡೆಯಿಸಿಕೊಂಡು ಬರುತ್ತಿರುವುದು ತುಂಬಾ ಪ್ರಶಂಸನೀಯವೆಂದೂ, ಆಟಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸ್ವದೇಶೀ ಕ್ರೀಡೆಗಳ ಉತ್ತೇಜನ ಕೊಡಬೇಕೆಂದೂ ಹೇಳಿದರು. ಕೂಟದ ಮಕ್ಕಳಿಂದ ಸಂಗೀತ, ನೃತ್ಯ ಮತ್ತು ಡ್ರಿಲ್ಲುಗಳಾದ ಮೇಲೆ ಶ್ರೀಮಾನ್ ಎಂ ಕೆ ತಿ. ರಾಯರವರು ವಂದನಾರ್ಪಣೆ ಮಾಡಿದರು ಅನಂತರ 'ಭಕ್ತ ಪ್ರಹ್ಲಾದ' ಎಂಬ ಪೌರಾಣಿಕ ನಾಟಕವು ಅಭಿನಯಿಸಲ್ಪಟ್ಟು ಮಂಗಳ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

೧೫ ನೇ ತಾರೀಕಿನೊಳಗೆ ಹೊಸ ಮಂತ್ರಿಮಂಡಲ

೯ ಅಥವಾ ೧೦ ಸಚಿವರಿರುವುದಾಗಿ ನಿಜಲಿಂಗಪ್ಪನವರ ಹೇಳಿಕೆ

ಸ್ವಂ ಸು. ಫೋನ್] ಬೆಂಗಳೂರು ೭

ನೂತನ ನಾಯಕರಾದ ಶ್ರೀ ನಿಜಲಿಂಗಪ್ಪನವರು ಈ ದಿನ ಬೆಳಿಗ್ಗೆ ಸಾಧ್ವಿ ಪತ್ರಿಕಾ ಪ್ರತಿನಿಧಿಗೆ ಕೊಟ್ಟ ಭೇಟಿಯಲ್ಲಿ ಈ ತಿಂಗಳು ೧೫ನೇ ತಾರೀಕಿನೊಳಗೆ ಹೊಸ ಮಂತ್ರಿಮಂಡಲವನ್ನು ತಾವು ರಚಿಸಲಿರುವುದಾಗಿ ತಿಳಿಸಿದರು ನಾಯಕರೊಡನೆ ಸಮಾಲೋಚನೆ ನಡೆಸಲು ಅವರು ೧೧ನೇ ತಾರೀಕು ದೆಹಲಿಗೆ ಪ್ರಯಾಣ ಮಾಡುವರು.

ತಾವು ನಾಯಕರಾಗಿ ಆರಿಸಲ್ಪಟ್ಟಿರುವ ಅಂಶವನ್ನು ಅವರು ನಿನ್ನೆಯೇ ಸಂಸ್ಥಾನದ ರಾಜ್ಯಪಾಲರಿಗೂ, ದೆಹಲಿಯ ಕಾಂಗ್ರೆಸ್ ನಾಯಕರಿಗೂ ತಿಳಿಯಪಡಿಸಿದರು

ಹೊಸ ಮಂತ್ರಿಮಂಡಲದಲ್ಲಿ ೯ ಅಥವಾ ೧೦ ಮಂದಿ ಸಚಿವರಿರುವರು ಮಹಿಳೆಯರಿಗೂ ಸ್ಥಾನ ಕೊಡುವ ಉದ್ದೇಶವಿದೆ. ಉಪ ಮಂತ್ರಿಗಳ ನೇಮಕದ ವಿಚಾರವನ್ನು ನಾಯಕರೊಡನೆ ಸಮಾಲೋಚನೆ ಮಾಡಿ ನಿರ್ಧರಿಸಬೇಕಾಗಿದೆ-ಎಂದು ಅವರು ಸೂಚಿಸಿದರು.

ಭೂಸುಧಾರಣೆ, ಹಡಗುಗಳ ನಿರ್ಮಾಣ, ವಿದ್ಯುಚ್ಛಕ್ತಿ ಉತ್ಪಾದನೆಯ ವಿಸ್ತರಣೆ, ಬಂದರು ನಿರ್ಮಾಣ, ರೈಲು ಮಾರ್ಗಗಳು ಇವೇ ಮುಂತಾದ ಅಂಶಗಳಿಗೆ ತಾವು ಹೆಚ್ಚು ಗಮನ ಕೊಡುವುದಾಗಿಯೂ ಅವರು ತಿಳಿಸಿದರು.

ಕೇರಳದಲ್ಲಿ ಹತ್ತು ಮಂದಿಗೆ ಮರಣ ದಂಡನೆ ರದ್ದು

ಕಮ್ಯೂನಿಸ್ಟ್ ಸರ್ಕಾರದಿಂದ ಖೈದಿಗಳಿಗೆ ಕ್ಷಮೆ

ಕೇರಳದಲ್ಲಿ ಕಮ್ಯೂನಿಸ್ಟ್ ಪ್ರಭುತ್ವವು ಆರಂಭವಾದ ಸಂತೋಷ ಸನ್ನಿವೇಶದಲ್ಲಿ ಮೊನ್ನೆ ದಿನ ಗಲ್ಲಿಗೇರಬೇಕಾಗಿದ್ದ ೧೦ ಮಂದಿಗೆ ಕ್ಷಮೆ ನೀಡಿ ಪ್ರಾಣಹತ್ಯವನ್ನು ತಪ್ಪಿಸಲು ನಿರ್ಧರಿಸಲಾಗಿದೆಯೆಂದು ಅಲ್ಲಿನ ಮುಖ್ಯ ಮಂತ್ರಿ ನಂಬೂದಿರಿಪಾಡ್‌ರವರು ತಿಳಿಸಿರುತ್ತಾರೆ. ರಾಜಕೀಯ ಜಗಳದಲ್ಲಿ ಕಾಂಗ್ರೆಸ್ ಕಾರ್ಯಕರ್ತನೊಬ್ಬನ ಕೊಲೆ ಮಾಡಿದ ವಾಸು ಪಿಳ್ಳೆಯೂ ಆ ಪೈಕಿ ಒಬ್ಬನಾಗಿರುತ್ತಾನೆ ಅವನಿಗೆ ಕಳೆದ ಡಿಸೆಂಬರಿನಲ್ಲೇ ಗಲ್ಲಾಗಬೇಕಾಗಿದ್ದು ನಾಲ್ಕು ಬಾರಿ ಫಾಸಿ ಕ್ರಮವನ್ನು ಮುಂದೆ ಹಾಕಲಾಗಿತ್ತು.

ಇದೇ ಸಮಯದಲ್ಲಿ ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಲು ಕೇರಳ ಸರ್ಕಾರದವರು ನಿರ್ಧರಿಸಿರುತ್ತಾರೆ. ರಾಜಕೀಯ ವಿದ್ಯಮಾನಗಳಲ್ಲಿ ಹೊರಿಸಲಾದ ಖಟ್ಲೆಗಳನ್ನೂ ರದ್ದು ಮಾಡಲಾಗುವುದು. ಇತರ ಖೈದಿಗಳಿಗೆ ಶಿಕ್ಷೆಯನ್ನು ಕಡಿಮೆ ಮಾಡಲಾಗುವುದು.

ಸೂಚನೆ

ಶ್ರೀ ರಾಮ ನವಮಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕರು

ವಾರ ಭವಿಷ್ಯ

ತಾ|| ೭-೪-೫೭ ರಿಂದ ೧೪-೪-೫೭ ರ ವರೆಗೆ

ಮೇಷ:— ಕಳೆದ ವಾರಕ್ಕಿಂತ ಉತ್ತಮ ಪರಿಸ್ಥಿತಿ, ಆದಾಯ ಅಧಿಕ, ಖರ್ಚು ಕಡಿಮೆ, ಆರೋಗ್ಯ ನೆಟ್ಟಗೆ, ಪ್ರಯಾಣದಿಂದ ಲಾಭ.

ವೃಷಭ: ಶುಭ ಫಲ ಹೆಚ್ಚು, ಆರೋಗ್ಯ ತೃಪ್ತಿಕರ, ಮಂಗಳ ಕಾರ್ಯ, ಹಲವರಿಗೆ ಅಪಘಾತ ಸಂಭವ ಪ್ರವಾಸದಲ್ಲಿ ಅಡ್ಡಿ

ಮಿಥುನ:—ಅನುಕೂಲ ಪರಿಸ್ಥಿತಿ, ಸಾಧಾರಣ ಆರೋಗ್ಯ. ಆಲಸ್ಯದಿಂದ ಕಾರ್ಯಸಿದ್ಧಿ ಲಾಭ ಕಡಿಮೆ ಮಿತ್ರ ಸಹಾಯ, ಪ್ರವಾಸದಲ್ಲಿ ಜಯ.

ಕಟಕ:—ಅನುಕೂಲ ಸನ್ನಿವೇಶ ಆರ್ಥಿಕ ಮುಗ್ಗಟ್ಟಿನ ಸುಧಾರಣೆ ಕಾರ್ಯ ಸಿದ್ಧಿ ಲಾಭದಾಯಕ ಪ್ರಸಂಗ ಮಂಗಳ ಕಾರ್ಯ.

ಸಿಂಹ: ಆಕಸ್ಮಿಕ ಧನಲಾಭ, ಕಷ್ಟ ಪರಿಹಾರ, ಮಾನಸಿಕ ಚಿಂತೆ ದೂರ, ಉದ್ಯೋಗಿಗಳಿಗೆ ಸ್ಥಿತಿ ಲಾಭದಾಯಕ, ಆರೋಗ್ಯ ಉತ್ತಮ, ವಾಹನ ಸಂಚಾರ ಮತ್ತು ಹೊಸಬರ ಪರಿಚಯ

ಕನ್ಯಾ:—ಮಾನಸಿಕ ಚಿಂತೆ, ಮಿತ್ರರಿಂದ ದ್ರೋಹ. ಆತ್ಮಗೌರವಕ್ಕೆ ಚ್ಯುತಿ, ಪ್ರಯಾಣದಿಂದ ಲಾಭ ಬಾಕಿ ವಸೂಲಿ ಸಂತೋಷ ಕೂಟಗಳಲ್ಲಿ ವಾರ್ತೆ

ತುಲಾ:—ಕಷ್ಟಕ್ಕೆ ತಕ್ಕ ಪ್ರತಿಫಲ ಪ್ರಾಪ್ತಿ ಅಧಿಕ ಲಾಭ, ಋಣ ಪರಿಹಾರ, ರಾಜಕೀಯವಾಗಿ ಸಹಾಯ, ಎಚ್ಚರಿಕೆಯಿಂದ ವರ್ತಿಸಬೇಕು ಆರೋಗ್ಯ ಸಾಧಾರಣ.

ವೃಶ್ಚಿಕ:— ಮಾನಸಿಕ ಚಿಂತೆ. ದೈಹಿಕ ಶ್ರಮ. ಅನಾನುಕೂಲ ಪ್ರಸಂಗ ಅಧಿಕ ಧನ ವ್ಯಯ. ಅಲ್ಪ ಆದಾಯ.

ಧನು.- ಕಾರ್ಯ ಸಿದ್ಧಿ ಮತ್ತು ಧನಲಾಭ ಆರೋಗ್ಯ ತೃಪ್ತಿಕರ, ಮಂಗಳ ಕಾರ್ಯ, ವ್ಯಾಪಾರಿಗಳಿಗೆ ಉತ್ಸಾಹ, ವೃಥಾ ಅಲೆದಾಟ ಮತ್ತು ಚಿಂತೆ

ಮಕರ ಚಿಂತೆ ಪರಿಹಾರ ಸಾಂಪತ್ತಿಕ ಸ್ಥಿತಿಯಲ್ಲಿ ಸುಧಾರಣೆ, ಶತ್ರುಪರಿಹಾರಗಳಿಂದ ಲಾಭ. ಹೊಸಬರ ಭೇಟಿಯಿಂದ ಸಹಾಯ, ಅಧಿಕ ಧನಲಾಭ

ಕುಂಭ.—ಅರ್ಧಕ್ಕೆ ನಿಂತ ಕಾರ್ಯದ ಪೂರೈಕೆ, ಆರೋಗ್ಯ ತೃಪ್ತಿಕರ, ಸ್ತ್ರೀಯರಿಗೆ ಪ್ರಶಂಸೆ. ಋಣ ಬಾಧೆ, ಮನೆಯಲ್ಲಿ ಕಳುವು, ಅನಾರೋಗ್ಯ.

ಮೀನ:- ಶತ್ರುಗಳು ಮಿತ್ರರಾಗುವ ಕಾಲ, ಕಾರ್ಯ ಜಯ, ಹಲವರಿಗೆ ಮಿಶ್ರ ಫಲ, ವ್ಯವಹಾರದಲ್ಲಿ ಅವರು ಜಾಗರೂಕತೆಯಿಂದ ಇರಬೇಕು, ಸಾಂಪತ್ತಿಕ ಸ್ಥಿತಿಯಲ್ಲಿ ಸುಧಾರಣೆ, ಸಣ್ಣ ಸಣ್ಣ ಪ್ರವಾಸ ಸಂಭವ

ಮಹಿಳಾ ಪ್ರತಿನಿಧಿಗಳಿಗೆ ಅಭಿನಂದನೆ

ಲೋಕಸಭೆ ಮತ್ತು ಸಂಸ್ಥಾನ ವಿಧಾನ ಸಭೆಗೆ ಆರಿಸಿಬಂದಿರುವ ಎಲ್ಲಾ ಮಹಿಳಾ ಪ್ರತಿನಿಧಿಗಳನ್ನು ಅಭಿನಂದಿಸಿ ನಗರದ ರಾಷ್ಟ್ರ ಮಂಡಲಿಯ ಆಡಳಿತ ಸಮಿತಿಯು ಕಳೆದ ತಿಂಗಳು ಸಭೆಯಲ್ಲಿ ನಿರ್ಣಯವನ್ನು ಮಾಡಿ, ಪ್ರತಿನಿಧಿಗಳು ತಮಗೆ ದೊರೆತಿರುವ ಸದವಕಾಶವನ್ನು ಉಪಯೋಗಿಸಿಕೊಂಡು ರಾಷ್ಟ್ರ ಕಲ್ಯಾಣಕ್ಕಾಗಿ ದುಡಿಯಬೇಕೆಂದೂ, ಮುಖ್ಯವಾಗಿ ಮಹಿಳೆಯರ ಮತ್ತು ಮಕ್ಕಳ ಕ್ಷೇಮ ಚಿಂತನೆ ಮಾಡಬೇಕೆಂದೂ ಸೂಚಿಸಿದೆ

SREE GAYATHRI
TALKIES
To day & Tomorrow
HILDA CRANE
With Jean Simmons,
Guy Madison
(Cinemascope & Technicolor)
From 9-4-57
Adventures of Robinson
Crusoe

ಕೇರಳ ದಿನಾಚರಣೆ

ಮೈಸೂರು ೭,

ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಮೊನ್ನೆ ಪಕ್ಷದ ಕಛೇರಿಯಲ್ಲಿ ಕೇರಳ ದಿನಾಚರಣೆಯನ್ನು ನೆರವೇರಿಸಲಾಯಿತು. ಶ್ರೀ ಎಂ ಎ ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಭಾರತ ಶಿಶುವಿಹಾರದ ಮಕ್ಕಳಿಂದ ಸ್ವಾಗತ ಗೀತೆ ಮತ್ತು ನೃತ್ಯವಾದ ಮೇಲೆ ಶ್ರೀಗಳಾದ ಸಿ ಕೆ. ಮೋರ್ಜ್, ತಗಡೂರು ರಾಮಚಂದ್ರರಾವ್, ಸೀತಾರಾಂ ಮತ್ತು ಸೋಮಸುಂದರ ಶರ್ಮರವರು ಭಾಷಣ ಮಾಡಿ ಕೇರಳದಲ್ಲಿ ಸ್ಥಾಪಿತವಾಗಿರುವ ಕಮ್ಯೂನಿಸ್ಟ್ ಸರ್ಕಾರವನ್ನು ಸ್ವಾಗತಿಸಿದರು ಜನತೆಯ ಆಶೋತ್ತರಗಳನ್ನು ಈಡೇರಿಸಲು ಕಮ್ಯೂನಿಸ್ಟ್ ಸರ್ಕಾರಕ್ಕೆ ಸಾಧ್ಯವಾಗಲೆಂದು ಹಾರೈಸಲಾಯಿತು ಕೇರಳದ ಹುತಾತ್ಮರಿಗಾಗಿ ೧ ನಿಮಿಷ ಮೌನಧಾರಣೆ ಮಾಡಲಾಯಿತು ಕಮ್ಯೂನಿಸ್ಟ್ ಸರ್ಕಾರಕ್ಕೆ ಶುಭಾಶಯವನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು

ಸತ್ಯನಾರಾಯಣಸ್ವಾಮಿಯವರ ಕಲ್ಯಾಣೋತ್ಸವ

ಸಂತೆಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಾಲಯದಲ್ಲಿರುವ ಶ್ರೀ ಸತ್ಯನಾರಾಯಣಸ್ವಾಮಿಯವರ ಕಲ್ಯಾಣ ಮಹೋತ್ಸವವು ನ ೪ನೇ ರಾತ್ರಿ ೮-೩೦ ರಿಂದ ೯-೧೫ರೊಳಗೆ ನಡೆಯುವುದು ಇದರ ಅಂಗವಾಗಿ ನಾಳೆಯಿಂದ ೧೫ನೇ ತಾರೀಕಿನವರೆಗೆ ವಿವಿಧ ಉತ್ಸವಗಳು ಜರುಗುವುವು.

ಜೈಲಿನಲ್ಲಿ ಯುಗಾದಿ ಕಾರ್ಯಕ್ರಮ

ನಗರದ ಜೈಲಿನಲ್ಲಿ ಕಳೆದ ೧ನೇ ತಾರೀಕು ಯುಗಾದಿ ದಿನ ಬೈದಿಗಳಿಗೆ ಶ್ರೀ ಎ ಬಿ. ಹಿರಿಯಣ್ಣಯ್ಯನವರು ಹಬ್ಬದ ಊಟವನ್ನು ಏರ್ಪಡಿಸಿದ್ದರು ಭಜನೆ, ಪಂಚಾಂಗ ಮತ್ತು ಪುರಾಣ ಶ್ರವಣಗಳು ಜರುಗಿದ ಮೇಲೆ ಜೈಲು ಸೂಪರಿಂಟೆಂಡೆಂಟರು, ಬೈದಿಗಳಿಗೆ ಸನ್ಮಾರ್ಗದಲ್ಲಿರುವಂತೆ ಬುದ್ಧಿವಾದಗಳನ್ನು ಹೇಳಿದರು ನಂತರ ಶ್ರೀ [illegible] ಪ್ರಾರ್ಥನೆ ಮಾಡಲಾಯಿತು

ಅಣು ಬಾಂಬು ಪರೀಕ್ಷಾ ಪ್ರದೇಶಕ್ಕೆ ಹೋಗಲು ಭಾರತೀಯನ ಕಾತರ

ಕ್ರಿಸ್ಮಸ್ ದ್ವೀಪದಲ್ಲಿ ಬ್ರಿಟನ್ನು ಅಣು ಬಾಂಬು ಪರೀಕ್ಷೆ ನಡೆಸುವ ಸಮಯದಲ್ಲಿ ಅಲ್ಲಿಗೆ ಜಪಾನೀಯರು ಕಳುಹಿಸಬೇಕೆಂದಿರುವ ಪರೀಕ್ಷಾ ಹಡಗಿಗೆ ತಾವೂ ಸೇರಲು ಇಚ್ಛಿಸಿರುವುದಾಗಿ ದೆಹಲಿಯ ಕ್ರಾಂತಿವಾದಿ ರಾಜಾರಾಂ ಎಂಬಾತನೆ ಮುಂದೆ ಬಂದಿರುತ್ತಾನೆಂದು ವರದಿಯಾಗಿದೆ ಆತನಿಗೆ ೧೯೧೯ ರ ರೌಲಟ್ ಶಾಸನದ ಚಳುವಳಿ ಕಾಲದಲ್ಲಿ ಮರಣ ದಂಡನೆ ವಿಧಿಸಲಾಗಿತ್ತು ಅದನ್ನು ಜೀವಾವಧಿ ಸಜಕ್ಕೆ ಇಳಿಸಲಾಯಿತು ಆವನು ೧೪ ವರ್ಷ ಕಾಲ ಅಂಡಮಾನ್ ದ್ವೀಪದಲ್ಲಿದ್ದನು. ತನ್ನನ್ನೂ ಒಬ್ಬ ಸ್ವಯಂಸೇವಕನನ್ನಾಗಿ ತೆಗೆದುಕೊಳ್ಳುವಂತೆ ಆತನು ಜಪಾನಿನ ಅಣು ಶಕ್ತಿ ಪರೀಕ್ಷಾ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದಿರುತ್ತಾನೆ

ಬಿಡಾರಂ ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂದಿರ

ಮೈಸೂರು

ಘನವಾದ ಸಂಗೀತ ಕಛೇರಿಗಳು

8-4-57ನೇ ಸೋಮವಾರ ಸಂಜೆ 6 ಘಂಟೆಗೆ
ವಿದ್ವಾಂಸರುಗಳಾದ

ಶ್ರೀ ವಿ ಎಸ್ ಸುಬ್ರಹ್ಮಣ್ಯಯ್ಯರ್	ಗಾಯನ
ಸಂಗೀತ ರತ್ನ ಟಿ. ಚೌಡಯ್ಯ	ಪಿಟೀಲು
ಶ್ರೀ ಟಿ. ಕೆ. ಮೂರ್ತಿ	ಮೃದಂಗ

9-4-57ನೇ ಮಂಗಳವಾರ ಸಂಜೆ 6 ಘಂಟೆಗೆ
ವಿದ್ವಾಂಸರುಗಳಾದ

ಶ್ರೀ ಚೆಮ್ಮಂಗುಡಿ ಶ್ರೀನಿವಾಸಯ್ಯರ್	ಗಾಯನ
ಸಂಗೀತ ರತ್ನ ಟಿ ಚೌಡಯ್ಯ	ಪಿಟೀಲು
ಶ್ರೀ ಪಳನಿ ಸುಬ್ರಹ್ಮಣ್ಯಂ	ಮೃದಂಗ

ಟಿಕೀಟು ದರ : ರೂ 2-0-0
5 ವರ್ಷಕ್ಕೆ ಕಡಿಮೆ ಇರುವ ಮಕ್ಕಳಿಗೆ ಪ್ರವೇಶವಿಲ್ಲ ವಿದ್ಯಾರ್ಥಿಗಳಿಗೆ ಅರ್ಧ ಛಾರ್ಜು ಇಲ್ಲ

ರಾಮೋತ್ಸವದ ಕಾರ್ಯಕ್ರಮ

ಮೈಸೂರು ೭

ರಾಮೋತ್ಸವದ ಅಂಗವಾಗಿ ಕೆಂಪನಂಜಾಂಬಾ ಅಗ್ರಹಾರದ ಶ್ರೀ ರಾಮೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ರಾತ್ರಿ ೮|| ಗಂಟೆಗೆ ವಿ|| ಎಸ್. ಕೆ ಅನಂತಪದ್ಮನಾಭ ಭಾಗವತರಿಂದ ಹರಿಕೀರ್ತನೆಯು ಏರ್ಪಾಡಾಗಿದೆ. ನಾಳಿದ್ದು ರಾತ್ರಿ ಪಟ್ಟಾಭಿಷೇಕದ ಅಂಗವಾಗಿ ವಿ|| ಶ್ರೀನಿವಾಸಯ್ಯಂಗಾರ್ಯರ ಗೋಟುವಾದ್ಯವಿದೆ.

ವಾಣಿವಿಲಾಸ ಮೊಹಲ್ಲಾ ಭಾರತೀ ಸ್ತ್ರೀ ಸಮಾಜದ ಆಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ವಿ|| ಟಿ ಪುಟ್ಟಸ್ವಾಮಿಯವರ ಸಂಗೀತವು ಜರುಗುವುದು ನಾಳಿದ್ದು ಸಂಜೆ ೬ಕ್ಕೆ ವಿ|| ಪಿ ರಾಮರತ್ನಂರವರ ಸಂಗೀತವು ಇದೆ.

ನಗರದ ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಈ ಸಂಜೆ ೬ ಗಂಟೆಗೆ ವಿ|| ಪ್ರಹ್ಲಾದರಾಯರ ಗಾಯನವು ಪಕ್ಕವಾದ್ಯಗಳೊಡನೆ ಏರ್ಪಾಡಾಗಿದೆ

ಕೃಷ್ಣಮೂರ್ತಿಪುರದಲ್ಲಿರುವ ಚಾಮರಾಜ ಮೊಹಲ್ಲಾ ಮಹಾಜನ ಸಭಾ ರಾಮಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ವಿ|| ಕುರ್ತುಕೋಟಿ ಶ್ರೀಪಾದಶಾಸ್ತ್ರಿಗಳವರಿಂದ ಭಕ್ತ ಸುಧಾಮ ಎಂಬ ಹರಿಕಥೆಯು ನಡೆಯುವುದು ನಾಳೆ ರಾಮನವಮಿ ಮತ್ತು ನಾಳಿದ್ದು ಪಟ್ಟಾಭಿಷೇಕೋತ್ಸವಗಳು ಜರುಗುವುವು

ಕಿಲ್ಲೆ ಮೊಹಲ್ಲಾ ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ರಾಮಸೇವಾ ಸಮಿತಿಯ ಆಶ್ರಯದಲ್ಲಿ ನಾಳೆ ಲಾಗಾಯಿತು ಪ್ರತಿನಿತ್ಯ ಬೆಳಿಗ್ಗೆ ಪಾರಾಯಣ ಮತ್ತು ರಾತ್ರಿ ಭಜನೆ, ಹರಿಕಥೆ ಮತ್ತು ಸಂಗೀತಗಳು ಏರ್ಪಾಡಾಗಿವೆ

ಮೈಸೂರು ಸಿವಿಲ್ ಪೋಲೀಸ್ ಹೆಡ್‌ಕ್ವಾರ್ಟರ್ಸ್ ಲೈನಿನಲ್ಲಿ ನಾಳೆಯಿಂದ ೨೦ರ ವರೆಗೆ ನಿತ್ಯವೂ ರಾತ್ರಿ ೮ ಗಂಟೆಗೆ ಕಥಾ ಕಾಲಕ್ಷೇಪ, ಸಂಗೀತ ಮುಂತಾದುವು ಏರ್ಪಾಡಾಗಿವೆ ನಾಳೆ ರಾತ್ರಿ ವೇ|| ಸುಬ್ಬರಾಮಯ್ಯನವರಿಂದ ಶ್ರೀ ರಾಮಾವತಾರ ಎಂಬ ಕಥೆಯು ನಡೆಯುವುದು

ಇಲವಾಲ ರಸ್ತೆಯಲ್ಲಿರುವ ಮನ್ನಾರ್ ಕೃಷ್ಣಶೆಟ್ಟರ ವಿದ್ಯಾರ್ಥಿನಿಲಯ ಕಟ್ಟಡದಲ್ಲಿ ನಾಳೆಯಿಂದ ಉತ್ಸವದ ಅಂಗವಾಗಿ ನಿತ್ಯವೂ ಬೆಳಿಗ್ಗೆ ಅಭಿಷೇಕ, ಪಾರಾಯಣ ಮುಂತಾದುವೂ, ರಾತ್ರಿ ಭಜನೆ ಮತ್ತು ಮಂಗಳಾರತಿಗಳೂ ಜರುಗುವುವು.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)



Edited, Printed and Published by
A. R. Nagarajan at Sadhvi Press,
D. Subbiah Road, Mysore

ಬಡ ಉಪಾಧ್ಯಾಯರಿಗೆ ಖಜಾ ಸರಾಫರಿಂದ ತೊಂದರೆ

ಮಾಬಳ್ಳಿ ಪ್ರಾಥಮಿಕ ಬಾಲಕರ ಶಾಲಾ ಉಪಾಧ್ಯಾಯರಾದ ಶ್ರೀ ಎಂ ಬಸವಯ್ಯನವರು ಈ ರೀತಿ ಬರೆದಿರುತ್ತಾರೆ:—

ಯುಗಾದಿ ಹಬ್ಬದ ಸಲುವಾಗಿ ಸರ್ಕಾರದವರು ತಮ್ಮ ನೌಕರರಿಗೆ ಒಂದು ತಿಂಗಳ ಸಂಬಳದ ಮುಂಗಡವನ್ನು ಕೊಡುವಂತೆ ಆಜ್ಞೆ ಮಾಡಿದ್ದರಷ್ಟೆ ಅದಕ್ಕಾಗಿ ನಾನೂ ಅರ್ಜಿ ಹಾಕಿಕೊಂಡು ಅವರ ಮೇಲೆ ಹಣ ಕೊಡುವಂತೆ ಸ್ಯಾಂಕ್ಷನ್ ಆಗಿತ್ತು. ಅದನ್ನು ಪಡೆಯಲು ೨೯ನೇ ತಾರೀಕು ಮಧ್ಯಾಹ್ನ ೨ ಗಂಟೆಗೆ ಚಾಮರಾಜನಗರ ತಾಲ್ಲೂಕು ಖಜಾನೆಗೆ ಹೋಗಿ ಬಿಲ್ಲಿಗೆ ಸಹಿ ಮಾಡಿದೆನು ೪ ಗಂಟೆವರೆಗೆ ಕಾದರೂ ಹಣ ಸಿಗಲಿಲ್ಲ. ನನ್ನ ಎದುರಿನಲ್ಲಿ ಇತರೆಯವರಿಗೆಲ್ಲಾ ಹಣ ಕೊಡಲಾಯಿತು ನನ್ನ ಊರು ೨೦ ಮೈಲಿ ದೂರವಿರುವುದಾಗಿಯೂ, ಹಣವನ್ನು ಕೊಡುವಂತೆಯೂ ನಾನು ಸರಾಫರನ್ನು ಕೇಳಿಕೊಂಡೆ. ಅವರು ಗಮನಿಸದೆ ಇರಲಾಗಿ ಗಲಾಟೆ, ಅಲ್ಲ ಎಂದು ಹೇಳಲಾಗಿ ಅವರು ಇತರರಿಗೆ ಹಣ ಬಟವಡೆ ಮಾಡಿದ ವಿಚಾರವನ್ನು ತಿಳಿಸಿದೆ. ಅವರು ಕೊಡುವವರೆಗೂ ಇದ್ದರೆ ಇರು ಇಲ್ಲದಿದ್ದರೆ ಹೋಗು-ಎಂದು ಹೇಳಿದರು ಈ ವಿಚಾರವನ್ನು ಟ್ರೆಷರಿ ಅಧಿಕಾರಿಗಳ ಗಮನಕ್ಕೆ ನಾನು ತಂದಮೇಲೆ ಅವರೂ ಸಹ ಸರಾಫರಿಗೆ ಸೂಚನೆಯಿತ್ತರೂ, ಅವರ ಮಾತಿಗೂ ಗೌರವ ಸಿಗಲಿಲ್ಲ. ಸಂಜೆ ೬ ಗಂಟೆಯಾದರೂ ದುಡ್ಡು ಸಿಗದೆ ಕಡೆಗೆ ನಾನು ನಿರಾಶನಾಗಿ ವಾಪಸು ಬಂದುಬಿಟ್ಟೆ. ಸಂಬಂಧಪಟ್ಟ ಇಲಾಖೆಯವರು ನನಗೆ ಸದರಿ ಸರಾಫರಿಂದ ಆದ ಅನ್ಯಾಯವನ್ನು ಗಮನಿಸಿ, ಬಡ ಉಪಾಧ್ಯಾಯರುಗಳಿಗೆ ಇನ್ನು ಮುಂದಾದರೂ ಇಂತಹ ತೊಂದರೆಗಳಾಗದಂತೆ ಮಾಡುವರೆಂದು ನಂಬಿರುತ್ತೇನೆ.

ತಿರುಮಕೂಡ್ಲು ಅಗಸ್ತ್ಯೇಶ್ವರ ಸ್ವಾಮಿಯವರ ರಥೋತ್ಸವ

ತಿರುಮಕೂಡಲಿನ ಶ್ರೀ ಅಗಸ್ತ್ಯೇಶ್ವರ ಸ್ವಾಮಿಯವರ ರಥೋತ್ಸವವು ಇದೇ ತಿಂಗಳು ೧೧ನೇ ತಾರೀಕು ನೆರವೇರುವುದು. ಅದರ ಅಂಗವಾಗಿ ಕಳೆದ ಬುಧವಾರದಿಂದ ವಿವಿಧ ಕಾರ್ಯಕ್ರಮಗಳು ಆರಂಭವಾಗಿ ೧೩ ರವರೆಗೆ ನಡೆಯುವುವು.

ಎಚ್ಚರಿಕೆ ! : ಎಚ್ಚರಿಕೆ

ಬಿಡಾರಂ ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂದಿರ,

ಮೈಸೂರು

ಮಹಾ ಜನಗಳಲ್ಲಿ ತಿಳಿಯಪಡಿಸುವುದೇನಂದರೆ — ಮೇಲ್ಕಂಡ ರಾಮಮಂದಿರದ ಪರವಾಗಿ ಚಂದಾ ಮುಂತಾದುವುಗಳನ್ನು ವಸೂಲು ಮಾಡುವುದಕ್ಕೆ ಶ್ರೀ ನರಸಿಂಹಮೂರ್ತಿ ಮತ್ತು ಶ್ರೀ ಎಂ. ನಾಗ ಎಂಬುವರು ನಿಯಮಿತರಾಗಿರುತ್ತಾರೆ.

ಇತರರ್ಯಾರಾದರೂ ರಾಮಮಂದಿರದ ಹೆಸರನ್ನು ಹೇಳಿಕೊಂಡು ಬಂದರೆ, ಅಂತಹವರಿಗೆ ಕೊಡುವ ಹಣಕ್ಕೆ ಮಂದಿರದವರು ಜವಾಬ್ದಾರರಾಗುವುದಿಲ್ಲ.

ಬಿ. ಕೆ. ಪದ್ಮನಾಭರಾವ್,
ಗೌರವ ಕಾರ್ಯದರ್ಶಿ

ಗೋಕುಲ ಮಿಲ್ಕ್ ಡೈ
ಕಂಬಳಿ ಅಣ್ಣಯ್ಯಪಂಡಿತರ ಛತ್ರದ ಹಿಂಭಾಗ
ಮತ್ತು
ರಮಾವಿಲಾಸ ಅಗ್ರಹಾರ, ಮೈಸೂರು.
ನಮ್ಮಲ್ಲಿ ಅಪ್ಪಟ ಹಸುವಿನ ಹಾಲು
ದೊರೆಯುತ್ತದೆ.
ಪೌಂಡು ಒಂದಕ್ಕೆ 0 3 3
ಅರ್ಧ ಪೌಂಡ್ 0 1 9

ನ್ಯೂ ಆಪೇರಾ ★
ಶ್ರೀ
7-4-57ರಿಂದ ಅಮೋಘ 2ನೇ ವಾರ
ಪ್ರತಿ ದಿನ ೩ ಪ್ರದರ್ಶನಗಳು
ಆರ್. ಎನ್ ಆರ್. ರವರ ಕನ್ನಡ ಚಿತ್ರ
ಪ್ರೇಮದ ಪುತ್ರಿ
ಶ್ರೀರಂಜಿನಿ (ಜೂ), ಸಂಧ್ಯಾ, ಸೂರ್ಯಕಲಾ,
ಆರ್. ನಾಗೇಂದ್ರರಾವ್, ಉದಯಕುಮಾರ್,
ಕಲ್ಯಾಣಕುಮಾರ್ ಬೇಬಿ ಉಮಾ, ಗಣಪತಿ
ಭಟ್ಟ ಮುಂತಾದವರು ನಟಿಸಿರುವ,
ನಿರ್ಮಾಪಕ ಮತ್ತು ನಿರ್ದೇಶಕ . ಆರ್ ನಾಗೇಂದ್ರರಾವ್ [ಕಲ್ಲಂ ರಿಲೀಸ್

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ುಟ : ೦೫] SADHVI : TUESDAY 9—4—1957 ಮೈಸೂರು : ಮಂಗಳವಾರ ೯—೪—೧೯೫೭ : [ಸಂಚಿಕೆ : [illegible]

ಈಜಿಪ್ಟಿನ ಮೇಲೆ ಮತ್ತೊಮ್ಮೆ ಇಸ್ರೇಲಿನ ಧಾಳಿಗೆ ಸಿದ್ಧತೆ?

ರ್ಮ ಮತ್ತು ನ್ಯಾಯದಿಂದಲೇ ಪ್ರಗತಿಯು ಸಾಧ್ಯ

ನೋತ್ಸವ ಸಮಾರಂಭದಲ್ಲಿ ರಾಜಾಜಿಯವರ ಭಾಷಣ

ಬೆಂಗಳೂರು ೯

ಇಲ್ಲಿನ ಚಾಮರಾಜಪೇಟೆಯ ಶ್ರೀ ರಾಮ[illegible]ವಾ ಮಂಡಳಿಯಲ್ಲಿ ಏರ್ಪಾಡಾಗಿರುವ ರಾ[illegible]ತ್ಸವ ಕಾರ್ಯಕ್ರಮದ ಆರಂಭೋತ್ಸವವನ್ನು ಸಿ. ರಾಜಗೋಪಾಲಾಚಾರಿಯವರು ನೆನ್ನೆ ನೆರವೇರಿಸಿ ಭಾಷಣ ಮಾಡಿ, ಭಾರತದ ಪ್ರಗತಿಯನ್ನು ಇಡೀ ವಿಶ್ವವೇ ಕಾದು ನೋಡುತ್ತಿರುವುದೆಂದೂ, ನಾಡಿನ ಪ್ರತಿಯೊಬ್ಬ ನಾಗರಿಕನೂ ಸತ್ಯ, ಧರ್ಮ ಮತ್ತು ನ್ಯಾಯಗಳಿಗೆ ತಲೆಬಾಗಿ ನಡೆಯದಿದ್ದರೆ ಎಷ್ಟೇ ಔದ್ಯೋಗಿಕ ಯೋಜನೆಗಳನ್ನು ಸಾಧಿಸಿದರೂ ನಿಜವಾದ ಪ್ರಗತಿಯು ಆಗುವುದಿಲ್ಲವೆಂದೂ ತಿಳಿಸಿದರು. ರಾಮಾಯಣವು ಜನಪ್ರಿಯವಾಗಿರುವುದಕ್ಕೆ ಜನರ ನಡೆನುಡಿಗಳ ಆದರ್ಶವು ಆ ಕಾವ್ಯದಲ್ಲಿ ರೂಪಿತವಾಗಿರುವುದೇ ಕಾರಣವೆಂದು ಅವರು ಹೇಳಿದರು. ರಾಮಾಯಣದಂತೆ ಪದೇಪದೇ ಪುನರ್ಪಠಣವಾಗುವ ಬೇರೊಂದು ಮಹಾಕಾವ್ಯವಿಲ್ಲವೆಂದೂ, ಆಧುನಿಕ ಸಾಹಿತ್ಯಗಳೂ ಸಹಾ ರಾಮಾಯಣವನ್ನು ಹಿಂದೂಡಲು ಸಾಧ್ಯವಾಗಿಲ್ಲವೆಂದೂ ಅವರು ಹೇಳಿ, ಮಾನವನು ಹೇಗೆ ವರ್ತಿಸಬೇಕೆಂಬುದನ್ನು ಶ್ರೀರಾಮನು ತನ್ನ ಜೀವನದಲ್ಲಿ ತೋರಿಸಿಕೊಟ್ಟಿರುವುದಾಗಿ ತಿಳಿಸಿದರು

ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರು ತಮ್ಮ ಭಾಷಣದಲ್ಲಿ ಸಂಗೀತದ ಮುಖ್ಯ ಗುರಿಯು ಆಧ್ಯಾತ್ಮ ಸಾಧನೆಯೆಂದೂ, ಭಾರತೀಯ ಸಂಗೀತದಲ್ಲಿ ಧರ್ಮಾತೀತವಾದ ಭಾವನೆಗೆ ಆಸ್ಪದವಿಲ್ಲವೆಂದೂ ಹೇಳಿದರು. ಸಂಗೀತವು ದೇವರ ಸಾಕ್ಷಾತ್ಕಾರಕ್ಕೆ ಮಾರ್ಗವೆಂದೂ ಅವರು ನುಡಿದರು

ಮಫ್ರೀಕಿಯವರ ದಂಡಯಾತ್ರೆ ತಂಡ ಹಿಂದಕ್ಕೆ ಸರಿಯಿತು

ಅಪ್ಘಾನಿಸ್ತಾನದ ಮೇಲೆ ನುಗ್ಗುವ ಸಲುವಾಗಿ ಪಾಕಿಸ್ತಾನದ ಗಡಿ ಬಳಿ ಪಗ್ರಾಹ್ ಎಂಬಲ್ಲಿ ಕೇಂದ್ರೀಕರಿಸಲ್ಪಟ್ಟಿರುವ ಫಾಕ್ಸಿರ್ ತಂಡದ [illegible] ಶಿಬಿರವನ್ನು ಒಂದು ಮೈಲಿ ಹಿಂದಕ್ಕೆ ತೆಗೆದುಕೊಂಡುಹೋಗಲಾಗಿರುವುದೆಂದು [illegible]ಪೋರಿನ ವಾರ್ತೆಯು ತಿಳಿಸಿದೆ. ಘರ್ಷಣೆಗಳನ್ನು ತಪ್ಪಿಸಲು ಸ್ಥಳೀಯ ಅಧಿಕಾರಿಗಳ ಪ್ರಾರ್ಥನೆಯ ಮೇರೆ ಹಾಗೆ ಮಾಡಲಾಗಿರುವುದೆಂದು ಪಾಕಿಸ್ತಾನದ [illegible] ಅಲ್ಲಾಮಾ [illegible] ತಿಳಿಸಿರುವರು

ಕಾವ್ಯ ವಾಚನ

ರಾಜಧಾನಿಯ ಜಯನಗರದಲ್ಲಿರುವ ಪೌರಾಣಿಕ ಶಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳ ಮನೆಯ[illegible] ಏಕಾದಶಿ ಪ್ರಯುಕ್ತ ನಾಳೆ ಸಂಜೆ ೭-೩೦ ಗಂಟೆಗೆ ಶ್ರೀಮತಿ ಶ್ರೀ ಹ.ಕೃ. ಲಕ್ಷ್ಮೀದೇವಿಯವರಿಂದ [illegible] ಎಂಬ ಕಾವ್ಯ ವಾಚನವೂ, ಶ್ರೀ ಭಾರತದ ಕೃಷ್ಣರಾಯ[illegible] ವ್ಯಾಖ್ಯಾನವನ್ನೂ ಏರ್ಪಡಿಸಿರುತ್ತೆ

ಚುನಾಯಿತರಾದ ಕಾಂಗ್ರೆಸ್ ಸದಸ್ಯರಿಗೆ ಸತ್ಕಾರ

ಮೈಸೂರು ೯

ಮಹಾ ಚುನಾವಣೆಗಳಲ್ಲಿ ಮೈಸೂರು ನಗರದಿಂದ ವಿಧಾನಸಭೆಗೆ ಚುನಾಯಿತರಾದ ಕಾಂಗ್ರೆಸ್ ಸದಸ್ಯರು ಶ್ರೀ ಕೆ. ಎಸ್. ಸೂರ್ಯನಾರಾಯಣ ರಾಯರು, ಶ್ರೀ ಕೆ. ಪುಟ್ಟಸ್ವಾಮಿ ಮತ್ತು ಲೋಕಸಭೆಗೆ ಆರಿಸಲ್ಪಟ್ಟ ಕಾಂಗ್ರೆಸ್ಸಿನ ಶ್ರೀಗಳಾದ ಎಂ. ಶಂಕರಯ್ಯ ಮತ್ತು ಎಸ್. ಎಂ. ಸಿದ್ದಯ್ಯನವರ ಗೌರವಾರ್ಥ ವಾಣಿವಿಲಾಸ ಅಗ್ರಹಾರದಲ್ಲಿ ಕಾಂಗ್ರೆಸ್ ಹಿತೈಷಿಗಳು ಸತ್ಕಾರಕೂಟವೊಂದನ್ನು ನೆನ್ನೆ ಏರ್ಪಡಿಸಿದ್ದರು. ಶ್ರೀ ಎಸ್. ಚನ್ನಯ್ಯನವರು ಅಗ್ರಾಸನ ವಹಿಸಿದ್ದರು. ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಸ್ವಾಗತ ಭಾಷಣ ಮಾಡಿದನಂತರ ಶ್ರೀ [illegible] ಕುಮಾರಸ್ವಾಮಿಯವರು ನೂತನವಾಗಿ ಜನರು ಕಾಂಗ್ರೆಸ್ಸಿಗೆ [illegible] ಬೆಂಬಲ ನೀಡಬೇಕೆಂದು ಕೋರಿದರು. ಶ್ರೀಗಳಾದ ಕೆ. ಎಸ್. ಸೂರ್ಯನಾರಾಯಣರಾವ್, ಕೆ. ಪುಟ್ಟಸ್ವಾಮಿ ಮತ್ತು ಎಂ. ಶಂಕರಯ್ಯನವರು ತಮಗಿತ್ತ ಸತ್ಕಾರಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ ತಮ್ಮ ಕಾರ್ಯಕ್ರಮಗಳಿಗೆ ಜನರ ಬೆಂಬಲಕ್ಕಾಗಿ ಮನವಿ ಮಾಡಿಕೊಂಡರು. ಅಧ್ಯಕ್ಷರು ಮಾತನಾಡಿ ಮೈಸೂರು ನಗರದವರು ಕಾಂಗ್ರೆಸ್ಸಿಗೆ ಬೆಂಬಲವಿತ್ತುದಕ್ಕಾಗಿ ವಂದಿಸಿದರು. ಶ್ರೀ ಎ. ಕೃಷ್ಣಮೂರ್ತಿರಾಯರು ವಂದನಾರ್ಪಣೆ ಮಾಡಿದರು.

ಆಯುರ್ವೇದ ಕಾಲೇಜಿಗೆ ಇನ್ನೆರಡು ಆಸ್ಪತ್ರೆಗಳು

ಮೈಸೂರಿನಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜಿಗೆ ಸೇರಿದಂತೆ ಇನ್ನೆರಡು ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿಸಲಾಗುವುದೆಂದೂ, ಅದಕ್ಕಾಗಿ ೩ ಲಕ್ಷ ರೂ. ವೆಚ್ಚ ಮಾಡಲಾಗುವುದೆಂದೂ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ತಿಳಿಸಿರುತ್ತಾರೆ. ಈಗ ಇರುವ ಆಯುರ್ವೇದ ವಿದ್ಯಾರ್ಥಿಗಳಿಗೆ [illegible]ಯಲ್ಲಿ ಚಿಕಿತ್ಸಾ ವಿಧಾನದ ಶಿಕ್ಷಣವನ್ನು ಕೊಡಲಾಗುವುದೆಂದೂ ಅವರು ಹೇಳಿರುವರು

ಕುಂದೂರು ರುದ್ರಪ್ಪನವರ ಶಾಸನ ಸಭಾ ಸದಸ್ಯತ್ವದ ರದ್ದು

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಕ್ಷೇತ್ರದಿಂದ ಮೈಸೂರಿನ ವಿಧಾನ ಸಭೆಗೆ ಅವಿರೋಧವಾಗಿ ಚುನಾಯಿತರಾಗಿರುವ ಶ್ರೀ ಕುಂದೂರು ರುದ್ರಪ್ಪನವರು ವೆಚ್ಚದ ಪಟ್ಟಿಯನ್ನು ಸಕಾಲದಲ್ಲಿ ಚುನಾವಣಾ ಕಮೀಷನ್ನಿಗೆ ಒಪ್ಪಿಸದಿದ್ದುದಕ್ಕಾಗಿ ಅವರ ಸದಸ್ಯತ್ವವನ್ನು ರದ್ದುಗೊಳಿಸಲಾಗಿದೆ.

ಕೇರಳದ ಗೆಜೆಟೆಡ್ ಅಧಿಕಾರಿಗಳ ಹೆಚ್ಚು ಸಂಬಳಕ್ಕೆ ತಡೆ

ಇತ್ತೀಚೆಗೆ ಕೇರಳದಲ್ಲಿ ಗೆಜೆಟೆಡ್ ಅಧಿಕಾರಿಗಳ ಸಂಬಳದ ಪರಮಾವಧಿಯನ್ನು ೧,೦೦೦ ರೂ.ಗಳಿಂದ [illegible] ೧,೮೦೦ಕ್ಕೆ ಹೆಚ್ಚಿಸಿದ ಬಗ್ಗೆ ಅಲ್ಲಿನ [illegible] ಸರ್ಕಾರದವರು ತಡೆ ಆಜ್ಞೆಯನ್ನು ಹೊರಡಿಸಿದ್ದಾರೆ. ಅಲ್ಲಿನ ನಾನ್ ಗೆಜೆಟೆಡ್ [illegible] ತಡೆ ಆಜ್ಞೆಯು ಅನ್ವಯಿಸು[illegible]

ಮುಸಿರಿ ಸುಬ್ರಹ್ಮಣ್ಯಯ್ಯರ್ ಮತ್ತು ಚೌಡಯ್ಯನವರಿಗೆ ಸನ್ಮಾನ

ಮೈಸೂರು ೯

ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪತ್ರ ಮತ್ತು ಖಿಲ್ಲತ್ತುಗಳನ್ನು ಪಡೆದಿರುವ ಶ್ರೀ ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಮತ್ತು ಸಂಗೀತ ರತ್ನ ಟಿ. ಚೌಡಯ್ಯನವರ ಗೌರವಾರ್ಥವಾಗಿ ನೆನ್ನೆ ಇಲ್ಲಿನ ಪ್ರಸನ್ನ ಸೀತಾರಾಮ ಮಂದಿರದವರು ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಮಂದಿರದ ಅಧ್ಯಕ್ಷರಾದ ಶ್ರೀ ಕೆ. ಪುಟ್ಟೂರಾಯರು ಭಾಷಣ ಮಾಡಿ ಉಭಯ ವಿದ್ವಾಂಸರನ್ನೂ ಅವರ ಕಲಾ ಪ್ರೌಢಿಮೆಗಾಗಿ ಪ್ರಶಂಸಿಸಿ ಅವರಿಗೆ ರಾಷ್ಟ್ರಾಧ್ಯಕ್ಷರು ಮಾಡಿರುವ ಸನ್ಮಾನಕ್ಕಾಗಿ ಮೆಚ್ಚಿಗೆಯನ್ನು ಸೂಚಿಸಿದರು. ಮಂದಿರದ ಪರವಾಗಿ ಅವರಿಬ್ಬರಿಗೂ ಶಾಲುಗಳನ್ನು ಬಹುಮಾನವಾಗಿ ಕೊಡಲಾಯಿತು. ಸಂಗೀತ ವಿದ್ವಾಂಸರಿಬ್ಬರಿಗೂ ಕೊಡಲಾಗಿರುವ ಪ್ರಶಸ್ತಿ ಪತ್ರ ಮತ್ತು ಫಲಕಗಳನ್ನು ಸಭಿಕರು ನೋಡಿ ಹರ್ಷವನ್ನು ಸೂಚಿಸಿದರು

ಸೊಸೈಟಿ ಡೈರೆಕ್ಟರುಗಳ ಚುನಾವಣೆಗೆ ತಡೆ ಆಜ್ಞೆ

ಮೊನ್ನೆ ನಡೆಯಬೇಕಾಗಿದ್ದ ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆಯು ನಡೆಯಲಿಲ್ಲ. ಡೈರೆಕ್ಟರುಗಳ ಸ್ಥಾನಕ್ಕೆ ಸ್ಪರ್ಧಿಸಿದ್ದವರ ಪೈಕಿ ಹಲವರ ಹೆಸರುಗಳನ್ನು ತೆಗೆಯಬೇಕಿದ್ದ ಸಂದರ್ಭದಲ್ಲಿ ಉಮೇದುವಾರರಾಗಿದ್ದ ಶ್ರೀ ಯೋಗಾನಂದಂ ಮತ್ತು ಇನ್ನೂ ಮೂವರು ಅಸಿಸ್ಟೆಂಟ್ ರಿಜಿಸ್ಟ್ರಾರರ ಕೋರ್ಟಿನಲ್ಲಿ ದೂರು ಕೊಟ್ಟುದರ ಮೇಲೆ ಚುನಾವಣೆ ಬಗ್ಗೆ ತಡೆ ಆಜ್ಞೆ ಹೊರಡಿಸಲಾಯಿತು. ಸಾಲಗಳನ್ನು ತೆಗೆದುಕೊಂಡಿದ್ದರೆಂಬುದೇ ಸ್ಪರ್ಧಿಗಳ ಹೆಸರುಗಳನ್ನು ತೊಡೆಯಲು ಕಾರಣವೆಂದು ಹೇಳಲಾಗಿದೆ.

ಇಂಡೊನೇಷ್ಯದಲ್ಲಿ ಪ್ರವೀಣರ ಮಂತ್ರಿ ಮಂಡಲ

ಇಂಡೊನೇಷ್ಯಾ ಅಧ್ಯಕ್ಷ ಸುಕರ್ನೊರವರು ಪ್ರವೀಣರಿಂದ ಕೂಡಿರುವ ಪಾರ್ಲಿಮೆಂಟ್ ಪದ್ಧತಿಯಲ್ಲದ ಮಂತ್ರಿಮಂಡಲವನ್ನು ರಚಿಸಿರುತ್ತಾರೆ. ಹಿಂದಿನ ಮಂತ್ರಿಮಂಡಲದಲ್ಲಿ ಯೋಜನಾ ಸಚಿವರಾಗಿದ್ದ ಡಾ|| ಜುವಾಂಡಾರವರು ಈಗ ಪ್ರಧಾನಿಯಾಗಿರುವರು. ಸ್ಟಾಲಿನ್ ಬಹುಮಾನವನ್ನು ಪಡೆದಿರುವ ಡಾ|| ಪ್ರಿಜನೋರವರು ವಿದ್ಯಾ ಸಚಿವರಾಗಿರುವರು. ವಿದೇಶಾಂಗ ಇಲಾಖೆ ಕಾರ್ಯದರ್ಶಿಯನ್ನು [illegible] ಮಂತ್ರಿಯಾಗಿ [illegible]

ರೈಲು ಮತ್ತು ವಿಮಾನಗಳ ಅಪಘಾತದಿಂದ ಮರಣಗಳು

ದಕ್ಷಿಣ ಆಫ್ರಿಕದ ಕೇಪ್ ಟೌನ್ ಬಳಿ ಎರಡು ವಿದ್ಯುಚ್ಛಕ್ತಿ ರೈಲುಗಾಡಿಗಳ ಡಿಕ್ಕಿಯಾಗಿ [illegible] ಜನರು ಸತ್ತಿರುವರು. ನೈಜೀರಿಯದಲ್ಲಿ ವಿಮಾನವೊಂದು ಮುರಿದು [illegible] ಪ್ರಯಾಣಿಕರು ಮಡಿದರು. [illegible] ನೆನ್ನೆ ಫ್ರೆಂಚ್ ವಿಮಾನ[illegible] ಮೃತಪಟ್ಟಿರುತ್ತಾರೆ

ಈಜಿಪ್ಟಿನ ಮೇಲೆ ಮತ್ತೊಮ್ಮೆ ಆಕ್ರಮಣಕ್ಕೆ ಇಸ್ರೇಲ್ ಸಿದ್ಧತೆ?

ಇಸ್ರೇಲಿನಲ್ಲಿ ಸೈನ್ಯಗಳ ಜಮಾವಣೆಗೆ ಅನುಕೂಲವಾಗಿ, ಜಾರ್ಡನ್-ಇಸ್ರೇಲ್ ಗಡಿ ಬಳಿ ಸೈನ್ಯಗಳನ್ನು ಕೇಂದ್ರೀಕರಿಸಲಾಗುತ್ತಿರುವುದೆಂದು ಕೈರೋವಿಗೆ ಬಂದಿರುವ ವರದಿಗಳು ತಿಳಿಸಿವೆ. ಈಜಿಪ್ಟಿನ ಮೇಲೆ ಎರಡನೇ ಆವರ್ತಿ ಆಕ್ರಮಣ ನಡೆಸಲು ಇಸ್ರೇಲು ಸಿದ್ಧವಾಗುತ್ತಿರುವುದೆಂಬ ಶಂಕೆಯು ಕೈರೋವಿನಲ್ಲಿ ಮೂಡಿರುವುದಾಗಿಯೂ ಹೇಳಲಾಗಿದೆ

ಗಾಜಾ ಪ್ರದೇಶದಲ್ಲಿ ೧೯ ಬಾರಿ ಗಡಿಯನ್ನು ಉಲ್ಲಂಘಿಸಿ ಈಜಿಪ್ಟಿನವರು ಕೊಳ್ಳೆ ಹೊಡೆದಿರುವರೆಂದು ಇಸ್ರೇಲ್ ಆರೋಪಿಸಿ ಭದ್ರತಾ ಸಮಿತಿ ಅಧ್ಯಕ್ಷರಿಗೆ ಪತ್ರ ಬರೆದಿದೆ. ಈ ಘಟನೆಗಳನ್ನು ಅತ್ಯಂತ ತೀವ್ರ ತರವಾಗಿ ಪರಿಗಣಿಸಬೇಕೆಂದೂ, ಇವರಿಂದ ಆ ಪ್ರದೇಶದಲ್ಲಿ ಭೀತಿಗೂ ಕಾರಣವಾಗಿರುವುದೆಂದೂ ತಿಳಿಸಲಾಗಿದೆ

ಭಾರತಕ್ಕೆ ಬರ್ಮಾದಿಂದ ೫ ಲಕ್ಷ ಟನ್ ಅಕ್ಕಿ

ಭಾರತವು ಬರ್ಮಾದಿಂದ ೫ ಲಕ್ಷ ಟನ್ ಅಕ್ಕಿಯನ್ನು [illegible] ಕೋಟಿ ರೂ.ಗಳಿಗೆ ಕೊಳ್ಳಲು ಒಪ್ಪಂದ ಮಾಡಿಕೊಂಡಿರುವುದಾಗಿ ವರದಿಯಾಗಿದೆ

ಹೊಸ ರೂಪಾಯಿ ನೋಟುಗಳು

ದಶಮಾಂಶ ಪದ್ಧತಿಯ ನಾಣ್ಯಗಳಿಗೆ ಅನುಗುಣವಾಗಿ ಹೊಸ ಒಂದು ರೂ. ನೋಟನ್ನು ಸಧ್ಯದಲ್ಲೇ ಜಾರಿಗೆ ತರಲಾಗುವುದು. ಹೊಸ ರೂಪಾಯಿ ನಾಣ್ಯದ ರೀತಿಯಲ್ಲಿ ನೋಟು ಇರುವುದು. ಉಳಿದ ಭಾಗಗಳಲ್ಲಿ ಹಿಂದಿನಂತೆ ಇರುವುದು.

ಅಂಚೆ ಬಟವಾಡೆಗಾಗಿ ನಗರದ ಸಂಖ್ಯಾವಾರು ವಿಂಗಡಣೆ

ಬೆಂಗಳೂರು, ಮದ್ರಾಸ್ ಮುಂತಾದ ನಗರಗಳಲ್ಲಿ ಅಂಚೆಗಳ ಬಟವಾಡೆಗಾಗಿ ಅನುಸರಿಸುವ ಸಂಖ್ಯಾವಾರು ವಿಂಗಡಣೆಯಂತೆ ಮೈಸೂರು ನಗರವನ್ನು ಬರುವ ತಿಂಗಳು ೧ ರಿಂದ ವಿಂಗಡಿಸಲಾಗುವುದು. ಅದರ ಪ್ರಕಾರ, ನಗರದ ಪ್ರಧಾನ ಕಛೇರಿಗೆ ಸೇರಿದ ಪ್ರದೇಶಗಳು ೧, ವಾಣಿವಿಲಾಸ ಮೊಹಲ್ಲಾ ಸಬ್ ಆಫೀಸು ಪ್ರದೇಶವು ೨ ಮತ್ತು ಕೃಷ್ಣರಾಜೇಂದ್ರ ಗಿರಣಿ ಸಬ್ ಆಫೀಸಿನ ಪ್ರದೇಶವನ್ನು ೩ನೇ ವಿಭಾಗಗಳಾಗಿ ವಿಂಗಡಿಸಲಾಗುವುದು. ಬಟವಾಡೆಯಲ್ಲಿ ತಡವಾಗದಿರಲು ಮತ್ತು ದಕ್ಷತೆಯು ಹೆಚ್ಚಲು ಈ ವಿಧಾನವನ್ನು ಕೈಗೊಳ್ಳಲಾಗುವುದು.

ಬೆಂಗಳೂರಿನಲ್ಲಿ ಫ್ಲೈಯಿಂಗ್ ಸಾಸರ್ !

ಮೊನ್ನೆ ಸಂಜೆ ೭-೩೦ ಗಂಟೆ ಹೊತ್ತಿನಲ್ಲಿ ಬೆಂಗಳೂರಿನ ಮೇಲೆ ಪಶ್ಚಿಮದಿಂದ ಪೂರ್ವಕ್ಕೆ ಪ್ರಕಾಶಮಾನವಾದ ವಸ್ತುವೊಂದು ಹಾದುಹೋಯಿತೆಂದೂ, ಅದನ್ನು ಸಹಸ್ರಾರು ಜನರು ನೋಡಿದರೆಂದೂ ವರದಿಯಾಗಿದೆ. ಅದು ಹಾಲಿನಷ್ಟು ಬೆಳ್ಳಗಿತ್ತೆಂದೂ, ಹಿಂ[illegible] ಬಾಲವೂ ಇತ್ತೆಂದೂ ಹೇಳಲಾಗಿದೆ. ವಿಮಾನದ ವೇಗದಲ್ಲಿ ಅದು ಹೋಗುತ್ತಿತ್ತು

ರಾಮೋತ್ಸವದ ಕಾರ್ಯಕ್ರಮ

ಮೈಸೂರು

ಶ್ರೀ ರಾಮೋತ್ಸವದ ಅಂಗವಾಗಿ ಕೆಂಪನಂಜಾಂಬಾ ಅಗ್ರಹಾರದ ಶ್ರೀ ರಾಮೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಡೋಲೋತ್ಸವ ಪ್ರಯುಕ್ತ ರಾತ್ರಿ ೮॥ ಗಂಟೆಗೆ ವಿ॥ ಹೆಚ್ ಟಿ ರಾಮಸ್ವಾಮಿಯವರ ಸಂಗೀತ, ನಾಳಿದ್ದು ರಾತ್ರಿ ೮॥ ಗೆ ಕುಮಾರಿ ಇಂದಿರಾರವರ ಗಾಯನ ೧೫ನೇ ತಾರೀಖು ವಸಂತೋತ್ಸವ ಮತ್ತು ಹನುಮಂತೋತ್ಸವ

ರಾಣಿವಿಲಾಸ ಮೊಹಲ್ಲಾ ಭಾರತೀ ಸ್ತ್ರೀ ಸಮಾಜದಲ್ಲಿ ವಿ॥ ಎಂ ಎ ಮಾಲತಿಯವರ ಸಂಗೀತ

ವಿದ್ಯಾರಣ್ಯಪುರಂ ಬಾಲಕರ ರಾಮ ಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ವಿ॥ ಎಂ ಆರ್ ಕೃಷ್ಣರವರಿಂದ ಸಂಗೀತವೂ, ನಾಳೆ ರಾತ್ರಿ ೮ ಗಂಟೆಗೆ ಆಶುಕವಿ ರತ್ನಂ ವೆಂಕಟಸುಬ್ಬಶಾಸ್ತ್ರಿ ಜಾರತಿಯವರಿಂದ ಭಕ್ತ ಕುಚೇಲ ಎಂಬ ಹರಿಕಥೆಯೂ ಸೂಕ್ತ ಪಕ್ಕವಾದ್ಯಗಳೊಡನೆ ಜರುಗುವುವು

ಗೀತಾ ರಸ್ತೆಯಲ್ಲಿರುವ ಪ್ರಸನ್ನ ಬಾಲಕ ಶ್ರೀರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ವೇ॥ ಬ್ರಹ್ಮಶ್ರೀ ಎಚ್ ಟಿ ರಾಮಣ್ಣನವರಿಂದ ಶ್ರೀರಾಮ ಪಟ್ಟಾಭಿಷೇಕ ಎಂಬ ಹರಿಕಥೆಯು ಜರುಗುವುದು.

ಚಲುವಾಂಬಾ ಅಗ್ರಹಾರದ ಬಾಲಕರ ಶ್ರೀರಾಮ ಮಂದಿರದಲ್ಲಿ ಈ ಸಂಜೆ ೭ ಘಂಟೆಗೆ ಶ್ರೀಮತಿ ಕೆ. ಎಲ್. ಸರೋಜಾರವರ ವೀಣಾ ವಾದನವನ್ನು ಏರ್ಪಡಿಸಲಾಗಿದೆ

ನಗರದ ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಈ ರಾತ್ರಿ ೭ ಗಂಟೆಗೆ ಭಕ್ತ ಮಂಡಲಿಯಿಂದ ಸಂಗೀತ ಸಮುದಾಯ ಸೇವೆಯು ಜರುಗುವುದು

ಶ್ರೀರಾಮಪೇಟೆ ಶ್ರೀ ರಾಮಾಭ್ಯುದಯ ಸಭೆಯ ಶ್ರೀರಾಮ ಮಂದಿರದಲ್ಲಿ ನೆನ್ನೆಯಿಂದ ಆರಂಭವಾದ ಉತ್ಸವವು ೨೩ರವರೆಗೆ ಏರ್ಪಾಡಾಗಿದೆ ಅದರ ಅಂಗವಾಗಿ ನಿತ್ಯವೂ ಸಂಜೆ ರಾಮಾಯಣ ಪಾರಾಯಣವು ವಿ॥ ಹೆಚ್ ನಾರಾಯಣ ಜೋಯಿಸರಿಂದ ನಡೆಯುವುದು ಹರಿಕಥೆ ಮತ್ತು ಸಂಗೀತಗಳೂ ಇವೆ

ಚಾಮುಂಡಿ ಬೆಟ್ಟದಲ್ಲಿರುವ ಶ್ರೀ ದತ್ತಾತ್ರೇಯ ರಾಮಮಂದಿರದಲ್ಲಿ ನೆನ್ನೆಯಿಂದ ಉತ್ಸವವು ಆರಂಭವಾಗಿ ಹತ್ತು ದಿನಗಳ ಪರ್ಯಂತ ನಡೆಯಲಿದೆ ಆಸ್ತಿಕ ಮಹನೀಯರು ಯಥಾ ಶಕ್ತಿ ಸೇವೆ ನೀಡಿ ಭಗವದನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರಲಾಗಿದೆ

ನಂಜನಗೂಡಿನ ಶ್ರೀ ಲಕ್ಷ್ಮಿ ಭಜನ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಕೀರ್ತನ ಕೇಸರಿ ಶ್ರೀಪಾದ ಶಾಸ್ತ್ರಿಗಳವರಿಂದ ಹರಿಕಥೆ.

ಗುಂಡ್ಲುಪೇಟೆ ಶ್ರೀರಾಮ ಮಂದಿರದ ಆಶ್ರಯದಲ್ಲಿ ನೆನ್ನೆಯಿಂದ ೯ ದಿನಗಳ ಪರ್ಯಂತ ನಡೆಯುವ ಉತ್ಸವದ ಅಂಗವಾಗಿ ನಿತ್ಯವೂ ಬೆಳಿಗ್ಗೆ ರುದ್ರಾಭಿಷೇಕ, ಸಹಸ್ರ ನಾಮಾರ್ಚನೆ, ರಾಮಾಯಣ, ಪುರುಷ ಸೂಕ್ತ ಸಂಹಿತಾ ಪಾರಾಯಣ ಮತ್ತು ರಾತ್ರಿ ನಕ್ಷತ್ರಮಾಲಾ, ಕುಂಕುಮಾರ್ಚನೆ, ಶಾಸ್ತ್ರೋಕ್ತ ದೀಪಾರಾಧನೆ, ಭಜನೆ ಮತ್ತು ಕೆಲವು ದಿನ ಹರಿಕಥೆಗಳು ನಡೆಯುವುವು

ಮೇ ೬ನೇ ತಾ॥ ರಾಷ್ಟ್ರಾಧ್ಯಕ್ಷರ ಚುನಾವಣೆ

ಬರುವ ತಿಂಗಳು ೬ನೇ ತಾರೀಖು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಚುನಾವಣೆಯು ನಡೆಯುವುದು ಈ ತಿಂಗಳು ೧೬ರಂದು ನಾಮಪತ್ರ ಸ್ವೀಕಾರಕ್ಕೆ ಕಡೆಯ ದಿನ ೨೯ನೇ ತಾರೀಖು ವಾಪಸಾತಿಗೆ ನಿಗದಿ ಗೊತ್ತುಪಡಿಸಲಾಗಿದೆ ಡಾ॥ ರಾಜೇಂದ್ರ ಪ್ರಸಾದರ ಹೆಸರನ್ನು ಕಾಂಗ್ರೆಸ್ ಪಕ್ಷವು ಸೂಚಿಸಿದೆ ಹಿಂದೂ ಮಹಾಸಭಾ [illegible] ಡಾ॥ ಎನ್ ಬಿ ಖರೆಯವರು ಸ್ಪರ್ಧೆ [illegible] ದೃಷ್ಟಿಯಿಂದ ಚುನಾವಣೆ [illegible]

Printed and Published by [illegible] at the Sadhvi Press, [illegible] Mysore

ಕೇರಳ ಸರ್ಕಾರದ ಕೆಲಸಕ್ಕೆ ಅಡ್ಡಿ ಬಂದರೆ ಪುನಃ ರಕ್ತಪಾತ

ಕಮ್ಯೂನಿಸ್ಟ್ ನಾಯಕ ಸುಂದರಯ್ಯನವರ ಬೆದರಿಕೆ

ಕೇಂದ್ರ ಸರ್ಕಾರ ಅಥವಾ ಅವರ ಅಜ್ಞಾನುವರ್ತಿಗಳು ಕೇರಳದಲ್ಲಿ ಸ್ಥಾಪಿತವಾಗಿರುವ ಕಮ್ಯೂನಿಸ್ಟ್ ಸರ್ಕಾರಕ್ಕೆ ಅಡ್ಡಿ ತಂದರೆ, ಕಮ್ಯೂನಿಸ್ಟರಿಗೆ ಚುನಾವಣೆಯಲ್ಲಿ ನಂಬಿಕೆಯು ತಪ್ಪಿಹೋಗಿ ಅವರು ಪುನಃ ತಮ್ಮ ರಕ್ತವನ್ನು ಚೆಲ್ಲಿ ಅಧಿಕಾರಿಗಳ ಸವಾಲನ್ನು ಎದುರಿಸಬೇಕಾಗುವುದೆಂದು ನೆಲ್ಲೂರಿನಲ್ಲಿ ನಡೆದ ಕೇರಳ ದಿನಾಚರಣೆ ಸಂಬಂಧದಲ್ಲಿ ಆಂಧ್ರದ ಕಮ್ಯೂನಿಸ್ಟ್ ನಾಯಕ ಪಿ ಸುಂದರಯ್ಯನವರು ತಿಳಿಸಿರುತ್ತಾರೆ ಕೇರಳ ಸರ್ಕಾರವು ಜನರ ನಾನಾ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಜಯಪ್ರದವಾಗುವುದೆಂದು ಅವರು ಆಶಿಸಿರುತ್ತಾರೆ.

ಸಿಂಹಳದಲ್ಲಿ ೪ ಲಕ್ಷ ಭಾರತೀಯರಿಗೆ "ರಾಜ್ಯಭ್ರಷ್ಟತ್ವ"

ಸಿಂಹಳದಲ್ಲಿ ೪ ಲಕ್ಷ ಮಂದಿ ಭಾರತೀಯ ಬುಡಕಟ್ಟಿನವರಿಗೆ ಆ ದೇಶದ ನಾಗರೀಕತ್ವವನ್ನು ತಪ್ಪಿಸಲಾಗಿದೆಯೆಂದೂ, ಬರುವ ಹಲವು ತಿಂಗಳಲ್ಲಿ ಈ ಸಂಖ್ಯೆಯು ೭॥ ಲಕ್ಷಕ್ಕೆ ಹೆಚ್ಚುವುದೆಂದೂ ವರದಿಯಾಗಿದೆ ನಾಗರೀಕತ್ವದ ಹಕ್ಕಿಗಾಗಿ ೮ ೩೭,೦೦೦ ಮಂದಿ ಅರ್ಜಿಗಳನ್ನು ಹಾಕಿಕೊಂಡು ಅವರುಗಳ ಪೈಕಿ ೪ ಲಕ್ಷ ಮಂದಿಯ ಅರ್ಜಿಗಳನ್ನು ತಿರಸ್ಕರಿಸಲಾಗಿರುವುದೆಂದು ಹೇಳಲಾಗಿದೆ

ನಂಜನಗೂಡಿನಲ್ಲಿ ಕಾರ್ಮಿಕ ಗೃಹ ವಸತಿಗೆ ಕೇಂದ್ರದ ನೆರವು

ನಂಜನಗೂಡಿನಲ್ಲಿ ೬೦ ಕಾರ್ಮಿಕರ ಗೃಹಗಳನ್ನು ನಿರ್ಮಿಸುವ ಸಲುವಾಗಿ ಮೈಸೂರು ಸರ್ಕಾರಕ್ಕೆ ಕೇಂದ್ರದವರು ೧,೬೮,೪೦೦ ರೂ ಗಳನ್ನು ಅರ್ಧ ಸಹಾಯವಾಗಿಯೂ, ಉಳಿದುದನ್ನು ಸಾಲವಾಗಿಯೂ ಕೊಡಲಿರುವರು. ಪ್ರಸಕ್ತ ಸಾಲಿನ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ದೇಶಾದ್ಯಂತ ೧೨,೨೪೦ ಗೃಹಗಳನ್ನು ಏರ್ಪಡಿಸಲು ೩೯,೧೩,೨೮೭ ರೂ ಗಳ ಸಾಲ ಮತ್ತು ಸಹಾಯವನ್ನು ಮಂಜೂರು ಮಾಡಲಾಗಿತ್ತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕೊಳಲು ೭-೧೫ ಮತ್ತು ೮-೧೫ ಸ್ವರ್ಣ ಮಿರ್ಲೆ ದೇವರನಾಮ ೭ ೩೦ ಹಿಂದಿ ವಾರ್ತೆ ಮಧ್ಯಾಹ್ನ ೧೨ ಮತ್ತು ೨ ಎ ಕೃಷ್ಣಮೂರ್ತಿ-ವೀಣೆ ೧೨ ೩೦ ಸ್ವರ್ಣ ಮಿರ್ಲೆ-ಸಂಗೀತ ೧ ಸಿತಾರ್ ೧ ೩೦ ಮತ್ತು ೧-೫೦ ಸಂಗೀತ ಸಂಜೆ ೫ ೩೦ ಡಿ ಓ ಸಂದೇಶಪತ್ರ-ನಾಗಸ್ವರ ೭-೩೦ ನಾವು ಮತ್ತು ನಮ್ಮವರು ೮ ಶ್ರೀರಾಮನವಮಿ ಸಂಗೀತೋತ್ಸವ ೯-೧೫ ಹ್ಯಾಮ್ಲೆಟ್ : ಷೇಕ್ಸ್‌ಪಿಯರ್ ನಾಟಕ

೫,೦೦೦ ಮಂದಿಗೆ ವೃತ್ತಿ ಶಿಕ್ಷಣ

ನಾನಾ ವೃತ್ತಿಗಳಲ್ಲಿ ಅಪ್ರೆಂಟಿಸ್ಸುಗಳಾಗಿ ಕೆಲಸ ಮಾಡಲು ದ್ವಿತೀಯ ಯೋಜನೆಯ ಅವಧಿಯಲ್ಲಿ ಭಾರತ ಸರ್ಕಾರದವರು ೫,೦೦೦ ಮಂದಿಗೆ ಶಿಕ್ಷಣವನ್ನು ಏರ್ಪಡಿಸಲಿರುವರು. ಬೊಂಬಾಯಿ, ಕಲ್ಕತ್ತಾ, ಗ್ವಾಲಿಯರ್ ಮುಂತಾದ ಕಡೆ ಶಿಕ್ಷಣ ನೀಡಲಾಗುವುದು ಯಾವಯಾವ ವೃತ್ತಿಗಳಲ್ಲಿ ಶಿಕ್ಷಣ ನೀಡಬೇಕೆಂಬುದನ್ನು ನಿರ್ಧರಿಸಲು ಪ್ರತಿಯೊಂದು ಸಂಸ್ಥಾನದಲ್ಲೂ ಒಂದೊಂದು ಸಮಿತಿಯನ್ನು ಏರ್ಪಡಿಸಲಾಗುವುದು

೯೩ ಸಾವಿರ ರೂ. ಅನ್ನು ದ್ವಿಗುಣಗೊಳಿಸುವುದಾಗಿ ಹೇಳಿ ಮೋಸ

ರಸಾಯನಿಕ ವಿಧಾನಗಳಿಂದ ನೋಟುಗಳನ್ನು ದ್ವಿಗುಣಗೊಳಿಸುವುದಾಗಿ ಬೊಂಬಾಯಿ ವರ್ತಕನೊಬ್ಬನನ್ನು ಹಲವರು ನಂಬಿಸಿ ಆತನಿಗೆ ಮೋಸ ಮಾಡಿರುವರೆಂದು ವರದಿಯಾಗಿದೆ ಅವರೆಲ್ಲರೂ ಪರಾರಿಯಾಗಿರುವರೆಂದು ಹೇಳಲಾಗಿದೆ. ರಸಾಯನಿಕ ವಸ್ತುಗಳನ್ನು ಕೊಳ್ಳಲು ವರ್ತಕನಿಂದ ೧೮,೦೦೦ ರೂ ಮತ್ತು ನೋಟುಗಳನ್ನು ದ್ವಿಗುಣ ಮಾಡಿಕೊಡಲು ೭೫,೦೦೦ ರೂ ಗಳನ್ನು ಅವರು ಪಡೆದಿದ್ದುದಾಗಿ ಹೇಳಲಾಗಿದೆ ರಸಾಯನಿಕ ವಿಧಾನವನ್ನು ನಡೆಸಿದ ಹಾಗೆ ಅವರುಗಳು ನಟಿಸಿ, ಏಳು ದಿನಗಳನಂತರ ಅವರು ಕಟ್ಟಿದ್ದ ತಾಪೆಗಳನ್ನು ಬಿಚ್ಚಬೇಕೆಂದು ತಿಳಿಸಿದ್ದರೆಂದೂ, ವರ್ತಕನು ಹಾಗೆ ಮಾಡಲಾಗಿ ಅದರಲ್ಲಿ ಬರಿ ಕಾಗದಗಳು ಮಾತ್ರ ಇದ್ದುವೆಂದೂ ಹೇಳಲಾಗಿದೆ

ಕೊಯಮುತ್ತೂರಿನಲ್ಲಿ ಸೈಕಲ್ ತೆರಿಗೆ ವಜಾ

ಕೊಯಮುತ್ತೂರು ಪೌರಸಭೆಯವರು ತಮ್ಮ ಎಲ್ಲೆಯಲ್ಲಿ ಸೈಕಲ್ ತೆರಿಗೆಯನ್ನು ರದ್ದುಗೊಳಿಸಿರುತ್ತಾರೆ. ಅದಕ್ಕಾಗಿ ಅಲ್ಲಿನ ನಾಗರಿಕ ಮತ್ತು ಸಾಮಾಜಿಕ ಕಲ್ಯಾಣ ಸಂಘದವರು ಪೌರಸಭೆಯನ್ನು ಅಭಿನಂದಿಸಿ ನಿರ್ಣಯ ಮಾಡಿರುತ್ತಾರೆ.

ನಯಾ ಪೈಸಾದ ಅವಾಂತರ

ಹೊಸದಾಗಿ ಚಲಾವಣೆಗೆ ಬಂದಿರುವ ನಯಾ ಪೈಸಾದಿಂದ ಸಾರ್ವಜನಿಕ ಗೊಂದಲಕ್ಕೆ ಅವಕಾಶವಾಗಿದೆ. ಸರ್ಕಾರಿ ಇಲಾಖೆಯಾದ ಅಂಚೆ ಕಛೇರಿಯಲ್ಲಿ ಒಂದೊಂದು ಸಾರಿ ಒಂದೊಂದು ರೀತಿಯಲ್ಲಿ ಎಣಿಕೆಯಾಗುತ್ತಿದೆ ಬಸ್ಸುಗಳಲ್ಲೂ ಸಹ ಇದೇ ರೀತಿ ಆಗಿದೆ ಕಳೆದ ೨ನೇ ತಾರೀಖು ಒಂದು ಅಂಚೆ ಕಛೇರಿಗೆ ಹೋಗಿ ಕಾರ್ಡಿಗೆ ೫ ನಯಾ ಪೈಸೆ, ಕವರಿಗೆ ೧೩ ನಯಾ ಪೈಸೆ ಕೊಟ್ಟು ಪಡೆದುದಾಯಿತು ಅನಂತರ ೨ ರೂ. ಮನಿಯಾರ್ಡರಿಗೆ ೨ ಆಣೆ ಕಮಿಷನ್ ಬದಲು ೧೫ ನಯಾ ಪೈಸೆಗಳನ್ನು ತೆಗೆದುಕೊಳ್ಳಲಾಯಿತು ೨ ಆಣೆ ಕವರಿಗೆ ೧೩ ನಯಾ ಪೈಸೆಯಾಗಿ ಅಷ್ಟೇ ಕಮಿಷನ್ ಹಣಕ್ಕೆ ೧೫ ನಯಾ ಪೈಸೆ ಹೇಗೆ ಆಯಿತೋ ಗೊತ್ತಾಗಲಿಲ್ಲ ಈ ವಿಚಾರದಲ್ಲಿ ಅಂಚೆ ಅಧಿಕಾರಿಗಳು ತಮ್ಮ ತಪ್ಪೇನೂ ಇಲ್ಲವೆನ್ನುತ್ತಾರೆ ಮೇಲ್ಪಟ್ಟವರ ಲೆಕ್ಕಾಚಾರವು ಆಶ್ಚರ್ಯಕರವಾಗಿದೆ. ಎಂದು ವಾಚಕರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

ವಿಚಾರಂ ಕೃಷ್ಣಪ್ಪನವರ
ಶ್ರೀ ಪ್ರಸನ್ನ ಸೀತಾರಾಮ ಮಂದಿರ
ಮೈಸೂರು
ಘನವಾದ ಸಂಗೀತ ಕಛೇರಿಗಳು
9-4-57 ನೇ ಮಂಗಳವಾರ ಸಂಜೆ 6 ಘಂಟೆಗೆ
ವಿದ್ವಾಂಸರುಗಳಾದ
ಶ್ರೀ ಸೆಮ್ಮಂಗುಡಿ ಶ್ರೀನಿವಾಸಯ್ಯರ್ ಗಾಯನ
ಸಂಗೀತ ರತ್ನ ಟಿ. ಚೌಡಯ್ಯ ಪಿಟೀಲು
ಶ್ರೀ ಪಳನಿ ಸುಬ್ರಹ್ಮಣ್ಯಂ ಮೃದಂಗ
ಟಿಕೆಟ್ಟು ದರ : ರೂ 2-0-0
10-4-57 ನೇ ಬುಧವಾರ ಸಂಜೆ 6 ಘಂಟೆಗೆ
ವಿದ್ವಾಂಸರುಗಳಾದ
ಶ್ರೀ ಎಮನಿ ಶಂಕರಶಾಸ್ತ್ರಿ ಬಿ ಎ ವೀಣೆ
ಸಂಗೀತ ರತ್ನ ಟಿ ಎಂ ಪುಟ್ಟಸ್ವಾಮಯ್ಯ ಮೃದಂಗ
ಪ್ರವೇಶ ದರ : ರೂ 1-0-0
5 ವರ್ಷಕ್ಕೆ ಕಡಿಮೆ ಇರುವ ಮಕ್ಕಳಿಗೆ ಪ್ರವೇಶವಿಲ್ಲ
ಹುಡುಗರಿಗೆ ಅರ್ಧ ಛಾರ್ಜ್ ಇಲ್ಲ

ಸೂಯೆಜ್ ಕಾಲುವೆ ಭವಿಷ್ಯ ಬಗ್ಗೆ ವಿಶ್ವ ಸಮ್ಮೇಳನ

ಸೂಯೆಜ್ ಕಾಲುವೆ ಭವಿಷ್ಯವನ್ನು ನಿರ್ಧರಿಸಲು ಈಜಿಪ್ಟ್ ಅಂತರ್ರಾಷ್ಟ್ರೀಯ ಸಮ್ಮೇಳನವನ್ನು ಕರೆಯಬೇಕೆಂದು ಈಜಿಪ್ಟ್ [illegible] ಹೆ ಮಾಡಿದೆ ಆ ಬಗ್ಗೆ ಲಂಡನ್, ವಾಷಿಂಗ್ಟನ್ ಮತ್ತು ದೆಹಲಿಗಳ ನಡುವೆ ತುರ್ತು ಸಮಾಲೋಚನೆ ನಡೆಯುತ್ತಿರುವುದಾಗಿ ಹೇಳಲಾಗಿದೆ

ಕೇರಳದಲ್ಲಿ ವಿದೇಶೀ ತೋಟಗಳ ರಾಷ್ಟ್ರೀಕರಣ ಪ್ರಯತ್ನ

ಕೇರಳದಲ್ಲಿ ವಿದೇಶೀಯರು ಹೊಂದಿರುವ ತೋಟಗಳನ್ನು ರಾಷ್ಟ್ರೀಕರಣ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ಆದಷ್ಟು ಬೇಗನೆ ತಾವು ಮಾತುಕತೆಗಳನ್ನು ಆರಂಭಿಸುವುದಾಗಿ ಕೇರಳದ ಮುಖ್ಯ ಮಂತ್ರಿ ನಂಬೂದಿರಿಪಾದ್‌ರವರು ತಿಳಿಸಿರುತ್ತಾರೆ

ಕಲೆ ಮತ್ತು ಸಾಂಸ್ಕೃತಿಕ ವಿದ್ಯಾರ್ಥಿ ವೇತನ

ಯುವಕ ಕಲಾವಿದರು ಮತ್ತು ಇತರ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ [illegible] ಕೇಂದ್ರ ಸರ್ಕಾರದವರ ವಿದ್ಯಾರ್ಥಿ ವೇತನದ ಯೋಜನೆ ಅಂಗವಾಗಿ ನಾಲ್ಕನೇ ಅವರ್ತ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಎಷ್ಟು ಜನರನ್ನು ಶಿಕ್ಷಣಕ್ಕಾಗಿ ಆರಿಸಿಕೊಳ್ಳಲಾಗುವುದೆಂಬುದನ್ನು ಆಯ್ಕೆ ಕಾಲದಲ್ಲಿ ನಿರ್ಧರಿಸಲಾಗುವುದು. ನೃತ್ಯ, ಸಂಗೀತ, ನಾಟಕ, ಫಿಲಂ, ಚಿತ್ರ ಮುಂತಾದ ಕಲೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ವೇತನಗಳನ್ನು ಕಲ್ಪಿಸಲಾಗಿದೆ ೧೮ಕ್ಕೆ ಕಡಿಮೆ ಮತ್ತು ೩೫ ವರ್ಷಕ್ಕೆ ಹೆಚ್ಚು ಇಲ್ಲದೆ ಇರುವವರು ಅರ್ಜಿಯನ್ನು ಈ ತಿಂಗಳು ೧೫ರೊಳಗೆ ಕೇಂದ್ರ ಸರ್ಕಾರದ ವಿದ್ಯಾ ಇಲಾಖೆಯ ವಿದ್ಯಾರ್ಥಿ ವೇತನದ ೬ನೇ ವಿಭಾಗದವರಿಗೆ ಹಾಕಿಕೊಳ್ಳಬಹುದು ತಿಂಗಳಿಗೆ ೨೫೦ ರೂ ಪಂತೆ ೨ ವರ್ಷ ಕಾಲ ವೇತನವು ದೊರೆಯುವುದು ಅಸಾಧಾರಣ ವಿದ್ವಾಂಸರಿಗೆ ಇನ್ನೂ ಒಂದು ವರ್ಷ ಕೊಡಲಾಗುವುದು

SREE GAYATHRI
TALKIES
From 9 4-57 For 2 days
ADVENTURES OF
ROBINSON CRUSOE
(Technicolor)

MECCANO CLUB–MEMBERSHIP

Mysore Meccano Club has pleasure in announcing that admissions will be received from those who are interested in Engineering science and allied subjects. The club programme includes model building sports & games, excursions, hobbies, library, reading room etc There is no age restriction.

For further particulars, apply to

The Secretary,
Mysore Meccano Club
16 Mothikhana Building
Santhepet, Mysore

Life Insurance Corporation of India
Unit - M G. I D

Application having been received for the issue of a duplicate Policy No 1032/4 C. on the life of Sri C A Ramacnandra Setty Jeweller, Asoka Road M[illegible] is hereby notified that the duplicate will be issued unless valid objection therefor is received by the undersigned within one month from this date

(Sd) H V Krishnamurthy
Asst Divisional Manager

Bangalore
9-4-1957

ಅಮೂಲ್ಯ ವಜ್ರ ಕಳೆದು ಹೋಗಿರುತ್ತೆ

ಪತ್ತೆ ಹಚ್ಚಿಕೊಟ್ಟವರಿಗೆ 500 ರೂ. ಬಹುಮಾನ

ವಜ್ರದ ಚಹರೆ – ಗುಂಡು, ಅತ್ಯುತ್ತಮ ಬಿಳಿ ವಜ್ರ, ಇಂಡಿಯನ್ ಕಟಿಂಗ್
ನಾಲ್ಕು ಕ್ಯಾರೆಟ್ ತೂಕ ಇದೆ

ಕಳೆದ ಸೋಮವಾರ ಬೆಳಿಗ್ಗೆ ಮೈಸೂರು ನಗರಕ್ಕೆ ಆಗಮಿಸಿ ಪ್ರಿನ್ಸ್ ರವರು [illegible] ಜಗನ್ಮೋಹನ ಭವನ ಗಂಧದ ಕಾರ್ಖಾನೆ [illegible] ಲಲಿತಮಹಲ್ ಚಾಮುಂಡಿಬೆಟ್ಟಗಳಿಗೆ ಹೋಗಿದ್ದಾಗ ಮಾರ್ಗದಲ್ಲಿ [illegible] ಸುಮಾರು ಐದು ಸಾವಿರ ರೂ ಬೆಲೆ ಬಾಳುವ ಬಿಳಿ ವಜ್ರವು ಕಳೆದು [illegible] ಪತ್ತೆ ಹಚ್ಚಿ [illegible] ಸೆಂಟ್ರಲ್ ಪೊಲೀಸ್ [illegible] 500 ರೂ. ಬಹುಮಾನ ಕೊಡಲಾಗುತ್ತೆ ವಜ್ರವು ಕಳೆದ [illegible] ಎಂದು [illegible]

ಎಸ್ ಕಮಲ್ ಕೆ [illegible], C/o [illegible] ಅಲ್ಲಾ[illegible] ಜುಗಲ್ ಕಿಶೋರ್
[illegible] ಬಜಾರ್, [illegible]

ಟೆಲಿಫೋನ್ ನಂ 792

ಚಂದಾ ದರ
—
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕ್, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ : 446

ಪುಟ : ೦೮] SADHVI : WEDNESDAY 10—4—1957 ಮೈಸೂರು : ಬುಧವಾರ ೧೦—೪—೧೯೫೭ : [ಸಂಚಿಕೆ :

ರಂಗೂನ್ ಬೆಂಕಿ ಅನಾಹುತದಲ್ಲಿ ೫ ಲಕ್ಷ ಜನ ನಿರಾಶ್ರಿತರು

ಂಗೂನಿನಲ್ಲಿ ಭಾರಿ ಬೆಂಕಿಯಿಂದ ೨೦ ಮಂದಿಯ ಮರಣ

೫ ಲಕ್ಷ ಜನರಿಗೆ ನಿರಾಶ್ರಯ

ರಂಗೂನ್ ನಗರದ ಹೊರಪ್ರದೇಶದಲ್ಲಿ ಮೊ ರಾತ್ರಿ ಉಂಟಾದ ಭಾರಿ ಅಗ್ನಿ ಪ್ರಮಾದದಲ್ಲಿ ಪಕ್ಷ ೨೦ ಮಂದಿ ಮೃತಪಟ್ಟು ೫ ಲಕ್ಷ ಜ ಮನೆಮಠಗಳನ್ನು ಕಳೆದುಕೊಂಡಿರುವರೆಂ ಹೇಳಲಾಗಿದೆ. ಜನರ ನೂಕುನುಗ್ಗಲಿನಲ್ಲಿ ಕ್ಕಳು ಮೃತಪಟ್ಟಿವೆ. ಪೆಟ್ರೋಲ್ ಒಲೆ ದ ಗುಡಿಸಿಲೊಂದಕ್ಕೆ ಬೆಂಕಿ ಹತ್ತಿ ಅದು ಸಾವಿರ ಗುಡಿಸಲುಗಳಿಗೂ, ಹಲವು ಮನೆ ಮ ಕೆಲವು ಕಾರ್ಖಾನೆಗಳಿಗೂ ವ್ಯಾಪಿಸಿತು. ಬೆಂ ಆರಿಸಲು ನೀರು ಸಿಗದೆ ತೊಂದರೆ ಆಯಿತು. ಗಂಟೆಯನಂತರ ಬೆಂಕಿಯು ಶಾಂತವಾಗಿಯೇ ತು ೩ ಕೋಟಿ ರೂ ನಷ್ಟ ಸಂಭವಿಸಿರುವು ದು ಅಂದಾಜಾಗಿದೆ

ಹಾರಿನ ನಾಯಕರಾಗಿ ಪುನಃ ಶ್ರೀ ಕೃಷ್ಣಸಿನ್ಹರ ಆಯ್ಕೆ

ಬಿಹಾರಿನ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವದ ಬಗ್ಗೆ ಚುನಾವಣೆ ನಡೆದು ಈಗಿನ ಮುಖ್ಯ ಮಂತ್ರಿ ಶ್ರೀ ಕೃಷ್ಣಸಿನ್ಹರವರೇ ಪುನಃ ಆರಿಸಲ್ಪಟ್ಟಿರುತ್ತಾರೆ ಅವರಿಗೆ ೧೫೫ ಮತ್ತು ಪ್ರತಿಸ್ಪರ್ಧಿಯಾದ ಹಿಂದಿನ ಹಣಕಾಸಿನ ಮಂತ್ರಿ ಗ್ರಹ ನಾರಾಯಣ ಸಿನ್ಹರವರಿಗೆ ೧೧೫ ಓಟುಗಳು ಬಂದಿವೆ ೩ ಓಟುಗಳು ಕುಲಗೆಟ್ಟಿವೆ. ಪೆಟ್ಟಿಗೆಯನ್ನು ಮುನ್ನೆಚ್ಚರಿಕೆಗಾಗಿ ಪಾಟ್ನ ದೆಹಲಿಗೆ ತಂದು ಅಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಸತ್ಯನಾರಾಯಣ ಸಿನ್ಹ, ಸಿ.ಸಿ ಶ್ವಾಸ್, ಶ್ರೀಮತಿ ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಎಂ. ಎಂ. ಧುರಿಯವರ ಸಮ್ಮುಖದಲ್ಲಿ ತೆಗೆದು ಎಣಿಕೆ ಮಾಡಲಾಯಿತು

ಎಂ ಆರ್. ಸಿ ಬಸಪ್ಪನವರ ಮೇಲೆ ಬೀಡಿ ಕಾರ್ಮಿಕರ ಧಾಳಿ

ನಗರದ ಕೆ ಎಸ್. ಬೀಡಿ ಕಾರ್ಖಾನೆ ಮಾಲೀಕರೂ ಮತ್ತು ಕಾಂಗ್ರೆಸ್ ಪ್ರಮುಖರೂ ಆದ ಎಂ ಆರ್ ಸಿ ಬಸಪ್ಪನವರ ಮೇಲೆ ಅವರ ಕಾರ್ಖಾನೆಯ ಕೆಲವು ಕಾರ್ಮಿಕರು ದೊಣ್ಣೆ ಮಾಡಿದ ಸಂಬಂಧವಾಗಿ ಶ್ರೀ ಬಸಪ್ಪನವರಿಗೆ ಪೆಟ್ಟು ಬಿದ್ದು ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಯಿತು ಅವರ ಸ್ಥಿತಿ ಈಗ ಸ್ವಲ್ಪ ಉತ್ತಮಗೊಂಡಿದೆ ಅವರ ಪಕ್ಕೆಗೆ ಒಬ್ಬನು ನಿಂದ ಒದೆದನೆಂದು ಹೇಳಲಾಗಿದೆ ಈ ಸಂಬಂಧದಲ್ಲಿ ಅಬ್ಬಾಸ್ ಮತ್ತು ಇತರ ಆರು ಮಂದಿಯನ್ನು ಪೊಲೀಸರು ಬಂಧಿಸಿರುವರು ಕೆಲವು ದಿನಗಳ ಹಿಂದೆ ಕಾರ್ಖಾನೆಯಲ್ಲಿ ಕಾರ್ಮಿಕರು ಮುಷ್ಕರ ನಡೆಸಿದ್ದರೆಂದೂ ಹೇಳಲಾ

ಅರಮನೆ ನೌಕರರ ಸಭೆ

ಅರಮನೆ ಕೋಟೆ ಮಾರಮ್ಮನ ಗುಡಿ ಮುಂದಿನ ಮೈದಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಅರಮನೆ ನೌಕರರ ಸಂಘದ ಸರ್ವ ಸದಸ್ಯರ ಸಭೆ ನಡೆಯುವುದು ಶ್ರೀ ಬಿ ಶ್ರೀಕಂಠಪ್ಪನ ಧ್ಯಕ್ಷತೆ ವಹಿಸುವರು

ನಂಜನಗೂಡಿನಲ್ಲಿ ವೈಭವದ ಪಂಚ ರಥೋತ್ಸವ

ಸ್ವಂ ಸು ಫೋ] ನಂಜನಗೂಡು ೧೦

ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಪಂಚ ರಥೋತ್ಸವವು ಈ ದಿನ ಬೆಳಗ್ಗೆ ಬಹಳ ವೈಭವದಿಂದ ಬೆಳಿಗ್ಗೆ ೧೧-೧೦ ಘಂಟೆ ಹೊತ್ತಿಗೆ ಸ್ವಾಮಿಯವರ ಮತ್ತು ಗಣಪತಿ ತೇರುಗಳು ನೆಲೆಯನ್ನು ಸೇರಿದವು ಉತ್ಸವಕ್ಕೆ ಮೈಸೂರಿನಿಂದ ಜಿಲ್ಲಾಧಿಕಾರಿಗಳೂ ಮತ್ತು ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರೂ ಆಗಮಿಸಿದ್ದರು ಕಳೆದ ೧೦ ವರ್ಷಗಳಿಂದಲೂ ಇಲ್ಲದಂತಹ ಅಸಾಧ್ಯ ಜನಸಂದಣಿಯು ಈ ಸಾರಿ ಸೇರಿ, ವಿಶೇಷ ರೈಲುಗಳು ಮತ್ತು ಬಸ್ಸುಗಳಲ್ಲಿ ಸುಮಾರು [illegible] ಸಹಸ್ರ ಮಂದಿ ಆಗಮಿಸಿದ್ದರು

ಮಹಿಳಾ ಚೋರರ ಬಂಧನ

ಬೆಂಗಳೂರಿನಿಂದ ಬಂದಿದ್ದ ಮಹಿಳಾ ಕಳ್ಳರ ಗುಂಪಿನವರೆಂದು ಹೇಳಲಾದ ಮೂವರು ಸ್ತ್ರೀಯರನ್ನು ಪೊಲೀಸರು ಅಂಗಡಿ ಬೀದಿಯಲ್ಲಿ ಚಿನ್ನದ ಸರಗಳನ್ನು ಕದಿಯುತ್ತಿದ್ದಾಗ ಬಂಧಿಸಿದರು ಮತ್ತೊಬ್ಬಳು ಬಳೆಯನ್ನು ಕದಿಯುತ್ತಿದ್ದಾಗ ಸಿಕ್ಕಿಬಿದ್ದಳು ಅವರಿಗೂ ಈ ಹಿಂದೆ ಹಲವು ಬಾರಿ ಸಜಾ ಆಗಿತ್ತೆಂದು ಹೇಳಲಾಗಿದೆ

ಆರ್. ಎಂ ಡಿ ಸಿ ಸ್ಪರ್ಧೆಗಳು ಜೂಜಾಟ

ಭಾರತದ ಶ್ರೇಷ್ಠ ನ್ಯಾಯಾಲಯದ ನಿರ್ಧಾರ

ಆರ್ ಎಂ ಡಿ. ಸಿ ಮತ್ತು ಇತರ ಸಂಸ್ಥೆಗಳ ಬಹುಮಾನ ಸ್ಪರ್ಧೆಗಳು ಜೂಜಾಟದ ಸ್ವಭಾವದವೆಂದು ಸುಪ್ರೀಂ ಕೋರ್ಟಿನವರು ತೀರ್ಪಿತ್ತು ಕೇಂದ್ರದ ಬಹುಮಾನ ಸ್ಪರ್ಧೆಗಳ ಶಾಸನ ಮತ್ತು ಬೊಂಬಾಯಿ ಲಾಟರಿ ಮತ್ತು ಬಹುಮಾನ ಸ್ಪರ್ಧೆಗಳ ಹತೋಟಿ ಮತ್ತು ತೆರಿಗೆ ಶಾಸನವು ನ್ಯಾಯಬದ್ಧವಾಗಿರುವುವೆಂದು ತೀರ್ಪಿತ್ತಿದ್ದಾರೆ ಶಾಸನದ ತೆರಿಗೆ ವಿಚಾರವು ಅಕ್ರಮವೆಂದು ಅಭಿಪ್ರಾಯಪಟ್ಟು ಬೊಂಬಾಯಿ ಹೈಕೋರ್ಟಿನವರು ಸಂಸ್ಥಾನದ ಶಾಸನವು ರದ್ದಾಗಿರುವುದೆಂದು ಸಾರಿದ್ದರ ಮೇಲೆ ಅಲ್ಲಿನ ಸರ್ಕಾರದವರು ಸುಪ್ರೀಂ ಕೋರ್ಟಿನಲ್ಲಿ ಅಪೀಲು ಹೂಡಿದ್ದರು. ಅದಲ್ಲದೆ ಕೇಂದ್ರ ಸರ್ಕಾರದ ಶಾಸನದ ಕ್ರಮಬದ್ಧತೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ಆರ್ ಎಂ ಡಿ ಸಿ ಸಂಸ್ಥೆಯವರು ಮತ್ತು ಇತರರು ರಿಟ್ ಅರ್ಜಿಗಳನ್ನು ಹಾಕಿದ್ದರು

ಶ್ರೇಷ್ಠ ನ್ಯಾಯಾಧೀಶ ಎಸ್ ಆರ್. ದಾಸ್ ಮತ್ತು ಜಸ್ಟಿಸ್ ಟಿ ಎಲ್ ವೆಂಕಟರಾಮಯ್ಯರವರು ಪ್ರತ್ಯೇಕವಾದ ಮತ್ತು ಒಮ್ಮತದ ತೀರ್ಪುಗಳನ್ನಿತ್ತು ರಿಟ್ ಅರ್ಜಿಗಳನ್ನು ವಜಾ ಮಾಡಿ, ಬೊಂಬಾಯಿ ಸರ್ಕಾರದ ಅಪೀಲನ್ನು ಪುರಸ್ಕರಿಸಿದ್ದಾರೆ ಸ್ಪರ್ಧೆಗಳು ಜೂಜಾಟದ ಸ್ವಭಾವದವೆಂದೂ, ಅವು ಹತೋಟಿ ಮತ್ತು ತೆರಿಗೆ ವಿಧಾಯಕ ಶಾಸನಕ್ಕೆ ಒಳಪಡುವುದು ಸರಿಯೆಂದು ನ್ಯಾಯಾಧೀಶರುಗಳು ತಿಳಿಸಿದ್ದಾರೆ

ಇದೇ ೨೮ನೇ ತಾ|| ಬೆಳಗ್ಗೆ ಕೋ-ಆಪರೇಟಿವ್ ಸೊಸೈಟಿ ಚುನಾವಣೆ

ಬಿಟ್ಟುಹೋಗಿರುವ ಉಮೇದುವಾರರ ಹೆಸರುಗಳನ್ನು ಸೇರಿಸಲು ಅ|| ರಿಜಿಸ್ಟ್ರಾರರ ಆಜ್ಞೆ

ಮೈಸೂರು ೧೦

ಕಳೆದ ಭಾನುವಾರ ನಡೆಯಬೇಕಾಗಿದ್ದ ನಗರದ ಕೋ ಆಪರೇಟಿವ್ ಸೊಸೈಟಿ ಚುನಾವಣೆಯ ಸಂಬಂಧದಲ್ಲಿ ಶ್ರೀಗಳು ಬಿ ಎಸ್ ದೋಸ್ತ್ರ್ ಕೆ ಸಿ ಯೋಗಾನಂದ್, ಹೆಚ್ ಶ್ರೀನಿವಾಸಮೂರ್ತಿ ಮತ್ತು ಎ ವಿ ರಂಗರಾಯರು ಅ|| ರಿಜಿಸ್ಟ್ರಾರ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಿ ತಮ್ಮ ಉಮೇದುವಾರಿಕೆಯನ್ನು ಅಕ್ರಮವಾಗಿ ನಿರಾಕರಿಸಲಾಗಿದ್ದ ಬಗ್ಗೆ ರಿಜಿಸ್ಟ್ರಾರರು ಈ ದಿನ ಆಜ್ಞೆಮಾಡಿ ಅವರುಗಳ ಹೆಸರನ್ನು ತೆಗೆದಿರುವುದು ಸರಿಯಲ್ಲವೆಂದೂ ಮತ್ತು ಹೀಗೆ ತೆಗೆಯಲಾಗಿರುವ ಇತರರ ಹೆಸರುಗಳನ್ನೂ ಪುನಃ ಪರಿಶೀಲಿಸಿ ಪಟ್ಟಿ ತಯಾರು ಮಾಡಿ ಈ ತಿಂಗಳು ೨೮ನೇ ತಾರೀಕು ಬೆಳಗ್ಗೆ ೯ ಗಂಟೆಗೆ ಚುನಾವಣೆ ನಡೆಸಬೇಕೆಂದೂ ಸೂಚಿಸಿರುತ್ತಾರೆ ಮತ್ತು ಶಾಸನ [illegible] ವಿಧಿಯ ಪ್ರಕಾರ ಸಂಘದ ಆಡಳಿತದ ಬಗ್ಗೆ ತನಿಖೆ ನಡೆಯಬೇಕೆಂದು ಸಹಾ ತಿಳಿಸಿರುತ್ತಾರೆ

○ ಚಲುವಾಂಬಾ ಅಗ್ರಹಾರದ ಬಾಲಕರ ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ಕುಮಾರಿ ಲೀಲಾವತಿಯವರ ಸಂಗೀತವಿದೆ

ಸಂಸ್ಥಾನದ ನೂತನ ಮಂತ್ರಿಮಂಡಲ

ರಾಜ್ಯಪಾಲರೊಡನೆ ನಿಜಲಿಂಗಪ್ಪನವರ ಸಮಾಲೋಚನೆ

ಬೆಂಗಳೂರು ೧೦

ನೂತನ ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಸ್. ನಿಜಲಿಂಗಪ್ಪನವರು ನೆನ್ನೆ ಬೆಳಗ್ಗೆ ಇಲ್ಲಿನ ಅರಮನೆಯಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ, ಹೊಸ ಮಂತ್ರಿಮಂಡಲದ ರಚನೆ ವಿಷಯವನ್ನೂ, ಇತರ ವಿಚಾರಗಳನ್ನೂ ಚರ್ಚಿಸಿದುದಾಗಿ ವರದಿಯಾಗಿದೆ ಹೊಸ ಮಂತ್ರಿಮಂಡಲದ ವಿಚಾರವನ್ನು ಕುರಿತು ಸಮಾಲೋಚನೆ ನಡೆಸಲು ರಾಜ್ಯಪಾಲರು ಮುಖ್ಯ ಮಂತ್ರಿಯವರನ್ನು ಆಹ್ವಾನಿಸಿದ್ದರ ಮೇಲೆ ಅವರಿಬ್ಬರ ಭೇಟಿಯು ನಡೆಯಿತು ದೆಹಲಿಯಿಂದ ವಾಪಸು ಬಂದನಂತರ ಸಚಿವರುಗಳ ಪಟ್ಟಿಯನ್ನು ತಾವು ರಾಜ್ಯಪಾಲರಿಗೆ ಒಪ್ಪಿಸುವುದಾಗಿ ಶ್ರೀ ನಿಜಲಿಂಗಪ್ಪನವರು ತಿಳಿಸಿರುತ್ತಾರೆ

ನಿವೃತ್ತ ಚೀಫ್ ಇಂಜನಿಯರ್ ಶ್ರೀನಿವಾಸಯ್ಯರ್ ನಿಧನ

ಮೈಸೂರು ಸಂಸ್ಥಾನದ ನಿವೃತ್ತ ಚೀಫ್ ಇಂಜನಿಯರ್ ಶ್ರೀ ಎಸ್. ಶ್ರೀನಿವಾಸಯ್ಯರ್‌ರವರು ನೆನ್ನೆ ಬೆಂಗಳೂರಿನಲ್ಲಿ ತಮ್ಮ [illegible]ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಕೃಷ್ಣರಾಜಸಾಗರದ ಸೂಪರಿಂಟೆಂಡಿಂಗ್ ಇಂಜನಿಯರಾಗಿಯೂ, ಭದ್ರಾವತಿ ಕಬ್ಬಿಣದ ಕಾರ್ಖಾನೆ ಜನರಲ್ ಮ್ಯಾನೇಜರಾಗಿಯೂ ಇದ್ದರು

ಪಾಕಿಸ್ತಾನದ ಆಯವ್ಯಯದಲ್ಲಿ ಶೇಕಡ ೪೦ರಷ್ಟು ಅಮೆರಿಕಾ ನೆರವು

ವಿದೇಶಾಂಗ ಮಂತ್ರಿ ನೂನರ ಮೇಲೆ ಆರೋಪಣೆ ಮತ್ತು ಗೊಂದಲ

ಪಾಕಿಸ್ತಾನದ ರಾಷ್ಟ್ರೀಯ ಸಭೆಯಲ್ಲಿ ನೆನ್ನೆ ವಿದೇಶಾಂಗ ಮಂತ್ರಿ ಫಿರೋಜ್‌ಖಾನ್ ನೂನರು ಮಾತನಾಡಿ, ತಮ್ಮ ರಾಷ್ಟ್ರದ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಶೇಕಡ ೪೦ರಷ್ಟು ಭಾಗವು ಅಮೆರಿಕದ ನೆರವನ್ನೊಳಗೊಂಡಿರುವುದೆಂದು ತಿಳಿಸಿ, ಅಲ್ಲಿರುವ ಅಮೆರಿಕದ ರಾಯಭಾರಿ ಹಿಲ್ಡ್ರೆತ್‌ರನ್ನು ಪ್ರಶಂಸಿಸಿದರು ರಾಯಭಾರಿಯು ಪಾಕಿಸ್ತಾನದ ಒಳ ವಿಚಾರಗಳಲ್ಲಿ ಪ್ರವೇಶಿಸುತ್ತಿರುವುದಾಗಿ ಮಿಯಾ ಇಫ್ತಿಕರುದ್ದೀನರು ಹೇಳಿದುದನ್ನು ನೂನರು ಟೀಕಿಸಿದಾಗ ಸಭೆಯಲ್ಲಿ ಗೊಂದಲವಾಯಿತು. ಇಫ್ತಿಕಾರರು ಕಮ್ಯೂನಿಸ್ಟರೆಂದು ನೂನರು ಆಪಾದಿಸಲು ಅವರು ನೂನರನ್ನು ವಿದೇಶೀಯರ ಏಜೆಂಟರೆಂದು ಹೇಳಿದರು ಕೂಗಾಟ, ಚಪ್ಪಾಳೆ ಮತ್ತು ಮೇಜುಗಳ ತಟ್ಟುವಿಕೆಯಲ್ಲೇ ಸಭೆ ಮುಂದುವರಿಯಿತು

ಖೋಟಾ ನಾಣ್ಯದ ಕಾರ್ಖಾನೆ ಪತ್ತೆ ಮತ್ತು ೨೩ ಜನರ ಬಂಧನ

ಉತ್ತರ ಪ್ರದೇಶದ ಗೋರಖಪುರದ ಬಳಿ ಮಜ್‌ಬೆಲಾ ಎಂಬ ಹಳ್ಳಿಯ ಕೆರೆಯೊಂದರಲ್ಲಿ ಖೋಟಾ ನಾಣ್ಯ ತಯಾರಿಕೆಯ ಸಣ್ಣ ಕಾರ್ಖಾನೆಯನ್ನು ಪೊಲೀಸರು ಪತ್ತೆ ಹಚ್ಚಿ, ಮೂವರು ಮಹಿಳೆಯರೂ, ೧೦ ಮಕ್ಕಳೂ ಸೇರಿ ೨೩ ಜನರನ್ನು ಬಂಧಿಸಿರುತ್ತಾರೆ. ಖೋಟಾ ನಾಣ್ಯಗಳ ತಯಾರಿಕೆಗಾಗಿಯೂ ಮತ್ತು ಹೊಂದಿರುವುದಕ್ಕಾಗಿಯೂ ಅವರನ್ನು ಬಂಧಿಸಲಾಗಿದೆ. ಅವರುಗಳಿಂದ ೨೫೦ ರೂಪಾಯಿ ನಾಣ್ಯ ಮತ್ತು ೨೦೦ ಇತರ ನಾಣ್ಯಗಳನ್ನೂ, ಅವುಗಳ ತಯಾರಿಕೆ ಉಪಕರಣಗಳನ್ನೂ ವಶಪಡಿಸಿಕೊಳ್ಳಲಾಗಿದೆ. ದಸ್ತಗಿರಿಯಾದವರು ಅಹಮದಾಬಾದಿನವರೆಂದು ಹೇಳಲಾಗಿದೆ

ಮೂಗು ಕತ್ತರಿಸಿದುದಕ್ಕೆ ೩ ವರ್ಷ ಸಜಾ

ಬಂಟವಾಳದ ಮಣಿನಾಲ್ಕೂರು ಎಂಬಲ್ಲಿ ತಿಮ್ಮಪ್ಪ ಪೂಜಾರಿ ಎಂಬ ಗೇಣಿ ರೈತನೊಬ್ಬನು ಭೂಮಾಲೀಕ ಶ್ರೀ ನಗರ ರಾಮನಾಥ ಶೆಣೈ ಎಂಬುವರ ಮೂಗನ್ನು ಕಳೆದ ಸೆಪ್ಟೆಂಬರಿನಲ್ಲಿ ಕತ್ತರಿಸಿ ಚಿತ್ರಹಿಂಸೆ ಮಾಡಿದನೆಂದು ಅವನಿಗೆ ಮಂಗಳೂರು ನ್ಯಾಯಾಧೀಶರು ೩ ವರ್ಷ ಕಠಿಣ ಸಜಾವನ್ನು ವಿಧಿಸಿರುತ್ತಾರೆ ಶೆಣೈಯವರ ಜೊತೆಯಲ್ಲಿದ್ದ ಶ್ರೀ ರಾಮಕೃಷ್ಣಯ್ಯ ಎಂಬುವರನ್ನು ಇರಿದುದಕ್ಕಾಗಿ ಅಪರಾಧಿಗೆ ಇನ್ನೆರಡು ವರ್ಷ ಸಜಾ ವಿಧಿಸಲಾಗಿದೆ.

ರಾಮೋತ್ಸವ ಕಾರ್ಯಕ್ರಮ

ಸಿವಿಲ್ ಪೊಲೀಸು ಹೆಡ್‌ಕ್ವಾರ್ಟರ್ಸಿನಲ್ಲಿ ಈ ರಾತ್ರಿ ೮ ಗಂಟೆಗೆ ವೇ|| ಬ್ರಹ್ಮಶ್ರೀ ಅಣ್ಣಾಜಿರಾಯರಿಂದ ಶ್ರೀಮತಿ ಪರಿಣಯ ಎಂಬ ಹರಿಕಥೆ ನಡೆಯುವುದು

ರಾಮೋತ್ಸವದ ಕಾರ್ಯಕ್ರಮ

ಮೈಸೂರು ೧೦

ವಾಣೀವಿಲಾಸ ಮೊಹಲ್ಲಾ ಭಾರತೀ ಶ್ರೀ ಸಮಾಜದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ವಿ|| ಅಲಮೇಲು ಪದ್ಮನಾಭರವರ ಗಾಯನ, ನಾಳಿದ್ದು ಸಂಜೆ ೬ ಕ್ಕೆ ಶ್ರೀ ವೈ ಎಂ ಸಿಂಹ ವೃಂದದವರಿಂದ ನೃತ್ಯ

ಕೊತ್ವಾಲ ರಾಮಯ್ಯನವರ ಬೀದಿ ಅನಂತಪ್ಪನವರ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ಸೇವಾ ಸಮಾಜದಲ್ಲಿ ಮೊನ್ನೆಯಿಂದ ೧೭ರವರೆಗೆ ಉತ್ಸವವನ್ನು ಏರ್ಪಡಿಸಲಾಗಿದೆ ೧೭ನೇ ತಾರೀಕು ಪಟ್ಟಾಭಿಷೇಕವು ಜರುಗುವುದು

ಶ್ರೀರಾಮಪೇಟೆ ಶ್ರೀ ರಾಮಚಂದ್ರ ಮಂದಿರದಲ್ಲಿ ಮೊನ್ನೆಲಾಗಾಯಿತು ಇದೇ ತಿಂಗಳು ೨೦ರವರೆಗೆ ಉತ್ಸವವು ನಡೆದು ನಿತ್ಯವೂ ಬೆಳಿಗ್ಗೆ ಶ್ರೀ ರಾಮ ದೇವರಿಗೆ ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ ರಾಮಾಯಣ ಪಾರಾಯಣ ಮತ್ತು ಸಂಜೆ ೬|| ಗಂಟೆಗೆ ಸಂಗೀತ ಮತ್ತು ಹರಿಕಥೆಗಳು ಮತ್ತು ರಾತ್ರಿ ದೀಪೋತ್ಸವಗಳಾಗುವುವು ಒಂದೊಂದು ದಿನವೂ ದೇವರಿಗೆ ದಶಾವತಾರದ ಒಂದೊಂದು ಅಲಂಕಾರವನ್ನು ಏರ್ಪಡಿಸಲಾಗಿದೆ

ಶ್ರೀರಾಮಪೇಟೆ ಶ್ರೀ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯ ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೬|| ಗಂಟೆಗೆ ಕುಮಾರಿಯರು ಎಂ ಎಸ್ ಶ್ರೀರಂಜನಿ ಮತ್ತು ಎಂ ಎಸ್ ಸುದರ್ಶನ ರವರಿಂದ ವೀಣಾವಾದನವು ಏರ್ಪಾಡಾಗಿದೆ ೧೭ನೇ ತಾರೀಕು ಪಟ್ಟಾಭಿಷೇಕವು ಜರುಗುವುದು

ನಂಜನಗೂಡಿನ ಶ್ರೀ ಲಕ್ಷ್ಮೀ ಭಜನ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ಮೈಸೂರಿನ ವಿ| ಎಂ. ನಂಜುಂಡಸ್ವಾಮಿಯವರ ಸಂಗೀತ

ಅಂತರ ರಾಷ್ಟ್ರೀಯ ವಿಚಾರ ಸಂಸ್ಥೆ

ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯು ಮುಖ್ಯಾಂಗವುಳ್ಳ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವ್ಯವಹಾರಗಳ ತಿಳುವಳಿಕೆಯನ್ನು ಹೆಚ್ಚಿಸುವ ಸಲುವಾಗಿ ನಗರದಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಲು ಆಲೋಚಿಸಲಾಗಿದೆ ಭಾರತೀಯ ಸಂಸ್ಕೃತಿಯ ಅಭ್ಯಾಸಕ್ಕೆ ಉತ್ತೇಜನ ಆ ಬಗ್ಗೆ ಕೂಟಗಳ ವ್ಯವಸ್ಥೆ ಮತ್ತು ಅದೇ ವಿಷಯಗಳ ಚರ್ಚೆ, ಅಭಿಪ್ರಾಯಗಳ ವಿನಿಮಯ ಮುಂತಾದುವು ಸಂಸ್ಥೆಯ ಉದ್ದೇಶ ಅದು ರಾಜಕೀಯ ಕೂಟವಲ್ಲ ಅಂತಹ ಸಂಘವನ್ನು ಏರ್ಪಡಿಸಲು ಇದೇ ತಿಂಗಳು ೧೫ನೇ ತಾರೀಕು ಶಾರದಾ ವಿಲಾಸ ಲಾ ಕಾಲೇಜಿನಲ್ಲಿ ಸಭೆಯೊಂದನ್ನು ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಕರೆದಿರುತ್ತಾರೆ

ಕ್ಯಾಲೆಂಡರ್ ಸ್ವೀಕಾರ

ಸಯ್ಯಾಜಿರಾವ್ ರಸ್ತೆಯಲ್ಲಿರುವ ಗಣೇಶ ಭವನದವರು ಕಳುಹಿಸಿಕೊಟ್ಟಿರುವ ಶಿವ ಪಾರ್ವತಿ ಗಣಪತಿಗಳ ಸುಂದರ ಚಿತ್ರವುಳ್ಳ ನೂತನ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ.

ದಿವಾರಂ ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂದಿರ

11-4 57ನೇ ಗುರುವಾರ ಸಂಜೆ 6 ಘಂಟೆಗೆ

ಗಾನ ಸುಧಾಕರ ವಿ|| ಬಾಲಮುರಳಿಕೃಷ್ಣ (ವಿಜಯವಾಡ) ಗಾಯನ

ವಿ| [illegible] ಪಿಟೀಲು

ವಿ|| ಸಂಗೀತ ರತ್ನ ಟಿ ಎಂ ಪುಟ್ಟಸ್ವಾಮಯ್ಯ ಮೃದಂಗ

ಪ್ರವೇಶ ದರ ರೂ 1 (0

ಪುರಾತನ ನಾಣ್ಯಗಳ ಅಕ್ರಮ ಮಾರಾಟಕ್ಕಾಗಿ ಬಂಧನ

ಬಿಜಾಪುರದ ಆದಿಲ್‌ಷಾಹಿ ಮತ್ತು ವಿಜಯನಗರ ರಾಜವಂಶಸ್ಥರ ಕಾಲದ ನಾಣ್ಯಗಳನ್ನು ಅಕ್ರಮವಾಗಿ ಮಾರಾಟ ಮಾಡಿದರೆಂಬ ಕಾರಣಕ್ಕಾಗಿ ಬಿಜಾಪುರದಲ್ಲಿ ಅಗೆನಪ್ಪ ಹೊನ್ನಾಳಿ, ಲಕ್ಷ್ಮಣ್ ಪಾಕಾಲಿ ಮತ್ತು ಭೀಮಪ್ಪ ಹೊನ್ನಾಳಿ ಎಂಬುವರನ್ನು ಬಂಧಿಸಿ ಅವರ ಬಳಿ ಇದ್ದ ಚಿನ್ನದ ನಾಣ್ಯಗಳನ್ನೂ, ಅವರು ಎಲ್ಲ ಆಸ್ತಿಗಳನ್ನೂ ವಶಪಡಿಸಿಕೊಳ್ಳಲಾಗಿದೆ ಬಿಜಾಪುರದಲ್ಲಿ ಒಂದು ಕಡೆ ಅವರು ನೆಲವನ್ನು ಅಗೆಯುತ್ತಿದ್ದಾಗ ಪುರಾತನ ಕಾಲದ ೫೦೦ ತೊಲದ ನಾಣ್ಯಗಳು ದೊರೆತುವೆಂದೂ ಅವನ್ನು ೫೦ ೦೦೦ ರೂಗಳಿಗೆ ಮಾರಿದ್ದರೆಂದೂ ಹೇಳಲಾಗಿದೆ

ಕಮ್ಯೂನಿಸ್ಟೇತರ ನಾಡುಗಳಿಗೆ ೪೪೦ ಕೋಟಿ ಡಾಲರ್ ನೆರವು

ಕಮ್ಯೂನಿಸ್ಟೇತರ ರಾಜ್ಯಗಳಿಗೆ ಅಮೆರಿಕವು ೪೪೦ ಕೋಟಿ ಡಾಲರ್ ನೆರವನ್ನು ನೀಡುವುದೆಂದು ಗೊತ್ತಾಗಿದೆ ಅದರ ಅವಶ್ಯಕತೆಯನ್ನು ಅಮೆರಿಕನ ವಿದೇಶಾಂಗ ಮಂತ್ರಿ ಡಲ್ಲೆಸ್ಸರು ಒತ್ತಿ ಹೇಳಿ ಅಮೆರಿಕವು ಕಮ್ಯೂನಿಸ್ಟೇತರ ರಾಜ್ಯಗಳೊಡನೆ ಆರ್ಥಿಕ ಮತ್ತು ರಾಜಕೀಯ ಸಂಪರ್ಕವನ್ನು ಮುಂದುವರಿಸಿಕೊಂಡುಹೋಗದಿದ್ದರೆ ಅಮೆರಿಕವು ಭಾರಿ ವಿಪತ್ತಿಗೆ ಗುರಿಯಾಗಬೇಕಾಗುವುದೆಂದು ತಿಳಿಸಿರುತ್ತಾರೆ

ನಗರದಲ್ಲಿ ಅಖಿಲ ಭಾರತ ವೃತ್ತಿ ಮತ್ತು ಶಿಕ್ಷಣ ಮಾರ್ಗದರ್ಶನ ಸಂಘದ ಸಭೆ

ಅಖಿಲ ಭಾರತ ವೃತ್ತಿ ಮತ್ತು ಶಿಕ್ಷಣ ಮಾರ್ಗದರ್ಶನ ಸಂಸ್ಥೆಯ ಸಮ್ಮೇಳನ ಮತ್ತು ಎರಡನೇ ವಿದ್ಯಾಭ್ಯಾಸ ಮತ್ತು ವೃತ್ತಿ ಮಾರ್ಗದರ್ಶನ ಗೋಷ್ಠಿಯು ಈ ತಿಂಗಳು ೨೬ ೨೭ ಮತ್ತು ೨೮ರಂದು ನಗರದಲ್ಲಿ ಸೇರುವುವು ಸಂಘವು ಕಳೆದ ವರ್ಷ ಭಾರತ ಸರ್ಕಾರದ ವಿದ್ಯಾ ಇಲಾಖಾ ಸಲಹೆಗಾರರಾದ ಪ್ರೊ|| ಸೈಯದ್ದೀನರವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು ನಾನಾ ಸಂಸ್ಥಾನಗಳಲ್ಲಿರುವ ವೃತ್ತಿ ಶಿಕ್ಷಣ ಸಂಸ್ಥೆಗಳು ಮತ್ತು ಶಿಕ್ಷಣ ಮಾರ್ಗದರ್ಶನ ಸಂಘಗಳ ಡೈರೆಕ್ಟರುಗಳು ಮತ್ತು ವಿಶ್ವವಿದ್ಯಾಲಯಗಳ ಮನಶ್ಶಾಸ್ತ್ರ ಮತ್ತು ಶಿಕ್ಷಣ ವಿಭಾಗದ ಪ್ರೊಫೆಸರುಗಳೂ ಇದರ ಸದಸ್ಯರಾಗಿರುವರು ಇಂತಹ ಕಲಾಪದಲ್ಲಿ ಪ್ರವೃತ್ತರಾಗಿರುವವರು ಒಂದೆಡೆ ಕಲೆತು ಸಮಾಲೋಚನೆ ನಡೆಸಿ ಈ ವಿಷಯಗಳ ಸಂಬಂಧಪಟ್ಟಂತೆ ಕಾರ್ಯಕ್ರಮ ಜರುಗಿಸುವ ಸಲುವಾಗಿ ಸಂಸ್ಥೆಯನ್ನು ಸ್ಥಾಪಿಸಲಾಯಿತು ಈ ಸಂಸ್ಥೆಯು ಭಾರತ ಸರ್ಕಾರಕ್ಕೆ ವೃತ್ತಿ ಶಿಕ್ಷಣ ವಿಚಾರದಲ್ಲಿ ಸಲಹೆಯನ್ನೂ ನೀಡುವುದು ವಿದ್ಯಾ ಪ್ರವೀಣರು ಮತ್ತು ಮನಶ್ಶಾಸ್ತ್ರಜ್ಞರು ಮುಂತಾದವರು ಸಂಸ್ಥೆಯ ಸದಸ್ಯರಾಗಬೇಕೆಂದೂ, ಸಮ್ಮೇಳನಕ್ಕೆ ಬರಬೇಕೆಂದೂ ಮನವಿ ಮಾಡಿಕೊಳ್ಳಲಾಗಿದೆ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್ ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ಗಯಾನಾವು ಸೈಪ್ರಸ್ ದಾರಿ ಹಿಡಿಯುವುದು

ಚೆಡ್ಡಿ ಜಗನ್‌ರವರ ಎಚ್ಚರಿಕೆ

ಬ್ರಿಟಿಷ್ ಗಯಾನಾ ರಾಷ್ಟ್ರೀಯ ಮುಖಂಡರಾದ ಚೆಡ್ಡಿ ಜಗನ್‌ರವರು ಲಂಡನ್ನಿನ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ, ತಮ್ಮ ದೇಶವು ಸೈಪ್ರಸ್ ದ್ವೀಪದ ಹಾದಿಯನ್ನು ಬಹಳ ಬೇಗನೆ ಹಿಡಿಯಲಿದೆಯೆಂದು ಎಚ್ಚರಿಕೆಯಿತ್ತಿರುತ್ತಾರೆ ಅಲ್ಲಿ ಜಾರಿಗೆ ಕೊಡಬೇಕೆಂದಿರುವ ಹೊಸ ರಾಜ್ಯಾಂಗವನ್ನು ಅವರು ಖಂಡಿಸಿ ಅದನ್ನು ತಮ್ಮ ನಾಡಿನ ಎಲ್ಲಾ ಪಕ್ಷಗಳೂ ವಿರೋಧಿಸಿವೆಯೆಂದೂ, ಹೊಸ ರಾಜ್ಯಾಂಗದ ಪ್ರಕಾರ ನಡೆಯುವ ಚುನಾವಣೆಗಳಲ್ಲಿ ಅಲ್ಲಿನ ಪ್ರಜಾ ಪ್ರಗತಿ ಪಕ್ಷ ಮತ್ತು ಇತರ ಪಕ್ಷಗಳು ಗೆದ್ದು ಒಂದು ಸರ್ಕಾರವನ್ನು ರಚಿಸಲು ನಿರಾಕರಿಸುವುವೆಂದೂ ಅವರು ಹೇಳಿರುವರು ಈ ಬಗ್ಗೆ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ಬ್ರಿಟನ್ನು ಕ್ರಮ ಕೈಗೊಳ್ಳದಿರುವುದಕ್ಕಾಗಿ ಅವರು ವ್ಯಸನವನ್ನು ಸೂಚಿಸಿರುವರು

ಪಂಜಾಬಿನ ಹೊಸ ಮಂತ್ರಿ ಮಂಡಲ

ಪಂಜಾಬಿನ ಮುಖ್ಯ ಮಂತ್ರಿ ಪ್ರತಾಪಸಿಂಗ್ ಕೈರಾನರು ೮ ಜನರುಳ್ಳ ಹೊಸ ಮಂತ್ರಿಮಂಡಲವನ್ನು ರಚಿಸಿದ್ದಾರೆ ಅಲ್ಲಿ ಐವರು ಡೆಪ್ಯುಟಿ ಮಂತ್ರಿಗಳೂ ಇರುವರು ಮಂತ್ರಿಗಳಲ್ಲಿ ಮಾಜಿ ಪೆಪ್ಸು ಸಂಸ್ಥಾನದ ಮುಖ್ಯ ಮಂತ್ರಿ ರಾರೇವಾಲಾರವರೂ ಇರುವರು

ನಂಜನಗೂಡು ಮಹಿಳಾ ಸಮಾಜದ ವಾರ್ಷಿಕೋತ್ಸವ

ನಂಜನಗೂಡಿನ ಮಹಿಳಾ ಸಮಾಜದ [illegible]ನೇ ವಾರ್ಷಿಕೋತ್ಸವವು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಬಿ ಸಿ ಚನ್ನರಾಜ ಅರಸರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ಎಸ್ ನಾರಾಯಣರಾಯರು ಬಹುಮಾನಗಳನ್ನು ಹಂಚಿದರು ಶ್ರೀಮತಿ ಲಿಂಗಮ್ಮ ಶಿವೇಗೌಡರು ಸ್ವಾಗತ ಭಾಷಣ ಮಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮಹಿಳೆಯರಿಗೆ ಸರಿಯಾದ ಶಿಕ್ಷಣವು ಸಿಗುತ್ತಿಲ್ಲವೆಂದು ಹೇಳಿದರು ಶ್ರೀಮತಿ ಕಮಲಮ್ಮನವರು ವಂದನಾರ್ಪಣೆ ಮಾಡಿದರು

ಸಂಸ್ಥಾನದಲ್ಲಿ ವ್ಯವಸಾಯೋತ್ಪನ್ನಗಳ ಮೇಲೆ ವರಮಾನ ತೆರಿಗೆ

ಕೊಡಗಿನಲ್ಲಿರುವಂತೆ ಸಂಸ್ಥಾನದಲ್ಲೆಲ್ಲಾ ಕಾಫಿ ಮುಂತಾದ ವ್ಯವಸಾಯೋತ್ಪನ್ನಗಳ ಮೇಲೆ ವರಮಾನ ತೆರಿಗೆ ಹಾಕುವ ವಿಷಯವನ್ನು ಸಂಸ್ಥಾನ ಸರ್ಕಾರದವರು ಪರಿಶೀಲಿಸುತ್ತಿರುವುದಾಗಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿ ಆ ಮೂಲಕ ಸಂಸ್ಥಾನದ ಹುಟ್ಟುವಳಿಯನ್ನು ಆಲೋಚಿಸಲಾಗುತ್ತಿರುವುದೆಂದು ಹೇಳಿರುವರು ಕೊಡಗಿನಲ್ಲಿ ಇಂತಹ ತೆರಿಗೆಯಿಂದ ಕಾಫಿ ಬೆಳೆಗೆ ಹೆಚ್ಚು ಸಹಾಯವಾಗಿರುವುದೆಂದೂ ಅವರು ನುಡಿದಿರುವರು ಭತ್ತ ಮುಂತಾದುವುಗಳ ಮೇಲೆ ಅದನ್ನು ಹಾಕಬಹುದೇ ಎಂಬುವರ ಬಗ್ಗೆ ನಿಖರವಾಗಿ ತಿಳಿಸಿಲ್ಲ.

ಅಮೆರಿಕಾ ಮತ್ತು ಸಾದಿ ಅರೇಬಿಯಾಗಳಿಗೆ ಒಪ್ಪಂದ

ಸಾದಿ ಅರೇಬಿಯದ ನೌಕಾ ಮತ್ತು ವಿಮಾನ ಬಲದವರಿಗೆ ಶಿಕ್ಷಣವೀಯುವ ಸಲುವಾಗಿ ಪ್ರವೀಣರನ್ನು ಕಳುಹಿಸಲು ಮತ್ತು ಸಾಧನಗಳನ್ನು ಒದಗಿಸಲು ಅಮೆರಿಕವು ಒಪ್ಪಿರುವುದೆಂದೂ, ಅಮೆರಿಕವು ಸಾದಿ ಅರೇಬಿಯಾದ ದಹ್ರಾನ್ ವಿಮಾನ ನೆಲೆಯನ್ನು ೫ ವರ್ಷ ಕಾಲ ಉಪಯೋಗಿಸಿಕೊಳ್ಳಲು ಅರೇಬಿಯವು ಸಮ್ಮತಿಸಿರುವುದೆಂದೂ ಗೊತ್ತಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೧೫ ಕೆಲ್ಲಾಕೊತಾದ್ರಿ-ನೇವರನಾಮ ೭-೩೦ ಮತ್ತು ೮-೧೫ ಸರೋಜ ಅನಂತರಾಮಯ್ಯ–ಕಾವ್ಯವಾಚನ. ಮಧ್ಯಾಹ್ನ ೧೨ ಶೆಲ್ಲಾ ಶ್ರೀ [illegible]–ಸಂಗೀತ. ೧೨-೩೦ ಮತ್ತು ೩-೧೫ ಎ ವಿ ವೆಂಕಟರಾಮಯ್ಯ–ಪಿಟೀಲು ೧ ಸಂಗೀತ ೧-೨೦ ಕನ್ನಡ ಗೀತೆ ೧-೫೦ ಮತ್ತು ಸಂಜೆ ೫-೩೦ ಡಿ ಬಿ ಹರೀಂದ್ರ, ಹಿಂದೂಸ್ತಾನಿ ಸಂಗೀತ ೬-೫ ಜಾನಪದ ಗೀತೆ ೭-೩೦ ತಾಳವಾದ್ಯ ಕಛೇರಿ ೮ ರಾಮನವಮಿ ಸಂಗೀತೋತ್ಸವ ೯-೧೫ ಇಂಗ್ಲಿಷ್ ಭಾಷಣ ೯-೩೦ ಮಿತ್ರವೃಂದ ಗೋವಿಂದ : ನಾಟಕ

ವನಿತಾ ಸದನದ ಕಟ್ಟಡದ ಸಹಾಯಕ್ಕಾಗಿ ಮನವಿ

ನಗರದ ವನಿತಾ ಸದನದ ಕಾರ್ಯಕಾರಿ ಮತ್ತು ಸಲಹಾ ಸಮಿತಿಯ ಸದಸ್ಯರು ಸಾರ್ವಜನಿಕರಿಗೆ ಮನವಿಯೊಂದನ್ನು ಮಾಡಿಕೊಂಡು ಕಳೆದ ೧೮ ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಸದನದ ಕಟ್ಟಡ ನಿರ್ಮಾಣಕ್ಕಾಗಿ ಮಹಾಜನರು ಉದಾರ ಸಹಾಯ ಮಾಡುವಂತೆ ಕೋರಿರುತ್ತಾರೆ ಹಿಂದೆ ಪೌರಸಭಾಧ್ಯಕ್ಷರಾಗಿದ್ದ ಶ್ರೀ ಎಂ ಎ ಶ್ರೀನಿವಾಸರವರ ಕಾಲದಲ್ಲಿ ಸಂಸ್ಥೆಯು ಆರಂಭವಾಯಿತೆಂದೂ, ಅದಕ್ಕೆ ಶ್ರೀ ಎಂ ಎಸ್. ತಿರಣ್ಣಯ್ಯನವರ ಸಲಹೆ ಮತ್ತು ಧರ್ಮ ರತ್ನಾಕರ ನಂದಿಬಸಪ್ಪನವರ ಧನ ಸಹಾಯದಿಂದ ಕಟ್ಟಡವನ್ನು ನಿರ್ಮಿಸಲಾರಂಭಿಸಲಾಯಿತೆಂದೂ, ವಿದ್ಯಾ ಇಲಾಖೆಯವರೂ ಸಹ ಸ್ವಲ್ಪಮಟ್ಟಿನ ಸಹಾಯ ಮಾಡಿರುವರೆಂದೂ ತಿಳಿಸಲಾಗಿದೆ ಸದನದ ಆಶ್ರಯದಲ್ಲಿ ಸಂಗೀತ, ಗಮಕ, ಹೊಲಿಗೆ, ಕಸೂತಿ ಮುಂತಾದ ಶಿಕ್ಷಣಗಳು ನಡೆಯುತ್ತಿವೆಯೆಂದೂ, ಹಲವಾರು ಮಹಿಳೆಯರು ಅಲ್ಲಿ ತಮ್ಮ ಜೀವನೋಪಾಯದ ಕಸಬುಗಳನ್ನು ಕಲಿತಿರುವುದಾಗಿಯೂ ತಿಳಿಸಲಾಗಿದೆ

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ–
ನಿರೋಧಕ ನಿವಾರಕ ಸಲಹೆಗಳಿಗೆ ·
'ಲಿವರ್ ಹೌಸ್', ಚಾಮರಾಜಪುರಂ,
ಮೈಸೂರು (ಸುತ್ತೂರು ಹಾಸ್ಟೆಲ್ ಹತ್ತಿರ

Edited, Printed and Publishe
[illegible] Nagarajan at Sadhvi P
[illegible] ubbiah Road, Mysore



ಆಯುರ್ವೇದ ವಿಧಾನ ಬವಿ ಪಂಡಿತರ [illegible]
ಅತ್ಯುತ್ತಮ ಧಾತುವರ್ಧಕ ಸಿದ್ಧೌಷಧ
ದಿ ಸದ್ವೈದ್ಯ ಶಾಲಾ ಪ್ರೈವೇಟ್ ಲಿ. ನಂಜನಗೂಡು
ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್‌ಪೌಡರನ್ನೇ ಉಪಯೋಗಿಸಿರಿ

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
ಎನ್ ಟಿ ರಾಮ ರಾವ್, ಆರ್ ಗಣೇಶನ್ ತಂಗವೇಲು, ಸಾವಿತ್ರಿ ಕರುಣಾನಿಧಿ,
ಎಸ್ [illegible] ಮುತ್ತು[illegible] ಸುಮಾಲ್ಯ ಋಷ್ಯೇಂದ್ರಮಣಿ ಪಾತ್ರವಹಿಸಿರುವ
[illegible] ಎಲ್ಲಾ ವಿಧದಿಂದ
[illegible] ಗಳನ್ನೂ [illegible]

12-4-57ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನಗಳು
ವಿಜಯಾರವರ ತಮಿಳು ಚಿತ್ರ
ಮಾಯಾ ಬಜಾರ್
(ಶಶಿರೇಖಾ ಪರಿಣಯ)

ಟೆಲಿಫೋನ್ ನಂ 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ ೨ ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : THURSDAY 11-4-1957 ಮೈಸೂರು ಗುರುವಾರ ೧೧-೪-೧೯೫೭ [ಸಂಚಿಕೆ : ೨೫೦

ಭದ್ರಾಚಲದ ಬಳಿ ಗೋದಾವರಿಯಲ್ಲಿ ೧೦೦ ಮರಣ

ಫಿಲೋಮಿನಾ ಕಾಲೇಜಿನ ಅಧ್ಯಾಪಕರ ವಜಾ

ಮೈಸೂರು ೧೧

ಇದೇ ತಿಂಗಳು ೯ ಮತ್ತು ೧೦ನೆಯ ತಾರೀಖುಗಳಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯು ಮೈಸೂರು ಸೇಂಟ್ ಫಿಲೋಮಿನಾ ಕಾಲೇಜಿನ ಕೆಲವು ಅಧ್ಯಾಪಕರುಗಳನ್ನು ಅಧಿಕಾರ ವರ್ಗದವರು ವಜಾ ಮಾಡಿರುವ ವಿಷಯವನ್ನು ಪರಿಶೀಲಿಸಿ ವರದಿ ಮಾಡಲು ಶ್ರೀಯುತರುಗಳಾದ ಎಂ ಪಿ ಎಲ್ ಶಾಸ್ತ್ರಿ ಕೆ ವಿ ಶಂಕರೇಗೌಡ ಮತ್ತು ಜನಾಬ್ ಮಹಮದ್ ಷರೀಫ್‌ರವರುಗಳನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಿದೆ ಅಧಿಕಾರ ವರ್ಗದವರು ಕಾಲೇಜಿನ ಹದಿನಾರು ಜನ ಉಪಾಧ್ಯಾಯರುಗಳಿಗೆ ವಜಾ ಮಾಡಿದ ನೋಟೀಸ್ ಕೊಟ್ಟಿರುತ್ತಾರೆಂದು ತಿಳಿದುಬಂದಿದೆ

ರಾಮೋತ್ಸವ ಕಾರ್ಯಕ್ರಮ

ಒಲ್ಲಿ ಮೊಹಲ್ಲಾ ಉತ್ತರಾದಿ ಮಠದ ಬೀದಿ ಶ್ರೀರಾಮಸೇವಾ ಸಮಿತಿಯಲ್ಲಿ ಈ ರಾತ್ರಿ ೭ ಗಂಟೆಗೆ ವಿ| ಶಾರದಮ್ಮನವರ ಗಾಯನವು ನಡೆಯುವುದು

ಸಿವಿಲ್ ಪೋಲೀಸ್ ಹೆಡ್‌ಕ್ವಾರ್ಟರ್ಸಿನಲ್ಲಿ ಈ ರಾತ್ರಿ ೮ ಗಂಟೆಗೆ ವೇ|| ಬ್ರ|| ಸುಬ್ಬರಾಮಯ್ಯನವರಿಂದ "ಮೂರೂವರೆ ವಜ್ರ" ಎಂಬ ಹರಿಕಥೆ ನಡೆಯುತ್ತದೆ

ಸಂತೆಪೇಟೆಯ ಕುಂಚಿಟಿಗರ ರಾಮಮಂದಿರದಲ್ಲಿ ಈ ಸಂಜೆ ೬-೩೦ ಗಂಟೆಗೆ ವಿ|| ಎಸ್. ರಾಮಚಂದ್ರನ್‌ರವರ ಕೊಳಲು ಕಛೇರಿಯೂ ಮತ್ತು ೭-೩೦ಕ್ಕೆ ಅನಂತಪದ್ಮನಾಭ ಭಾಗವತರಿಂದ ಹರಿಕಥೆಯೂ ಏರ್ಪಾಡಾಗಿದೆ

ಮಹಾವೀರ ಜಯಂತ್ಯುತ್ಸವ

ನಗರದ ಎಸ್ ಎಸ್ ಜೈನ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಟೌನ್ ಹಾಲಿನಲ್ಲಿ ಮಹಾವೀರ ಜಯಂತ್ಯುತ್ಸವವು ನೆರವೇರುವುದು ಶ್ರೀಮತಿ ಎಂ ಇಂದಿರಾಬಾಯಿ ಮತ್ತು [illegible]ರ್ಯರವರಿಂದ ಸಂಗೀತ, ಶ್ರೀ ಎಂ ಯಾಮುನಾಚಾರ್ಯ ಮತ್ತು ವಿ|| ಕೆ ಎಂ ರೇವಣಸಿದ್ಧಯ್ಯನವರಿಂದ ಭಾಷಣಗಳಾಗುವುವು ಮೈಸೂರು ಡಿವಿಜನ್ ವಿದ್ಯಾಧಿಕಾರಿಗಳಾದ ಶ್ರೀ ಟಿ ವಾಸುದೇವಯ್ಯನವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಆಹ್ವಾನವಿದೆ.

ಕಾಂಗ್ರೆಸ್ ಶಾಸನಸಭಾ ಸದಸ್ಯನ ಮೇಲೆ ಚುನಾವಣೆ ತಕರಾರು ಮೊಕದ್ದಮೆ

ಶಿರಸಿ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಆರಿಸಿಬಂದಿರುವ ಕಾಂಗ್ರೆಸ್ಸಿನ ಶ್ರೀ ಬಿ ಎಂ ಹೆಗ್ಗಡೆಯವರ ಚುನಾವಣೆಯು ಅಕ್ರಮವೆಂದು [illegible]ವಂತೆ ಕೋರಿ ಪಿ ಎಸ್ ಪಿ ಉಮೇದುವಾರರಾಗಿದ್ದ ಶ್ರೀ ಎಸ್ ಧಾಕಪ್ಪನವರು ತಕರಾರು ಅರ್ಜಿಯನ್ನು ಹೂಡಿದ್ದಾರೆ ಚುನಾವಣೆಯಲ್ಲಿ ಅಕ್ರಮ ನಡವಳಿಕೆಗಳಾಗಿವೆಯೆಂದೂ, ಅಧಿಕಾರಿಗಳೊಬ್ಬರ ಹಸ್ತಾಕ್ಷರವುಳ್ಳ ಪತ್ರಿಕಾ ಪ್ರಕಟಣೆಯಿಂದ ಅವಶ್ಯಕವಾದ ಪ್ರಭಾವ ಬೀರಲಾಗಿತ್ತೆಂದೂ ಕಾರಣ ಕೊಡಲಾ

ಗೋದಾವರಿ ನದಿ ದೋಣಿ ಅಪಘಾತದಲ್ಲಿ ೧೦೦ ಜನರ ಮರಣ

ಭದ್ರಾಚಲದ ಬಳಿ ರಾಮ ನವಮಿ ಯಾತ್ರಿಕರ ದುರಂತ

ಭದ್ರಾಚಲದಲ್ಲಿ ನಡೆದ ಶ್ರೀರಾಮ ನವಮಿ ಉತ್ಸವಕ್ಕಾಗಿ ಹೋಗಿದ್ದ [illegible] ಯಾತ್ರಿಕರ ಪೈಕಿ ೧೦೦ ಜನರು ಗೋದಾವರಿ ನದಿಯನ್ನು ದೋಣಿಯಲ್ಲಿ ದಾಟುತ್ತಿದ್ದಾಗ [illegible] ತಲೆಕೆಳಗಾಗಿ ಕಡೆಯ ಪಕ್ಷ ನೂರು ಜನರಾದರೂ ಮೃತಪಟ್ಟಿರುವರೆ [illegible] ಸಿಕ್ಕಿವೆ [illegible] ದೋಣಿಗಳು ನದಿಯಲ್ಲಿ [illegible] ಗುತ್ತಲೇ ಇ ವ್ಯಕ್ತಿ ಒಂದು [illegible] ಗಳಿಗೆ [illegible] ಮತ್ತೊಂದು ದೋಣಿಗೆ [illegible] ಎರಡು ದೋಣಿ [illegible] ಹೇಳಲಾಗಿದೆ [illegible] ತರವಾದು ನಡೆಯುತ್ತಿದೆ

ಜಾರ್ಡಾನ್ ಮಂತ್ರಿಮಂಡಲದ ರಾಜೀನಾಮೆ

[illegible] ನಬುಲ್ಸಿಯವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಅಲ್ಲಿನ ದೊರೆ ಹುಸೇನರಿಗೆ ಅರ್ಪಿಸಿರುತ್ತಾರೆ ಇದನ್ನು ದೊರೆ ಅಂಗೀಕರಿಸಿರುವರು ಸರ್ಕಾರ ಮತ್ತು ದೊರೆಗಳ ನಡುವೆ ಸಹಕಾರವಿಲ್ಲದಿದ್ದುದೇ ರಾಜೀನಾಮೆಗೆ ಕಾರಣ ಮಂತ್ರಿಮಂಡಲವು ರಾಜೀನಾಮೆಕೊಡಬೇಕೆಂಬ ದೊರೆಯ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಲಾಗಿದ್ದಿತು

ನಗರಕ್ಕೆ ಸೈನ್ಯದ ರಿಕ್ರೂಟಿಂಗ್ ಅಧಿಕಾರಿಯ ಭೇಟಿ

ದಕ್ಷಿಣ ಪ್ರದೇಶದ ಸೇನಾ ರಿಕ್ರೂಟಿಂಗ್ ಅಧಿಕಾರಿಗಳಾದ ಲೆ|| ಎಂ ಎಲ್ ತಂಬಿಯವರು ಇದೇ ೧೫ನೇ ತಾರೀಕು ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿ ೧೮ರ [illegible] ಇರುವರು. ಭಾರತದ ಸೈನ್ಯ ಮತ್ತು ನೌಕಾ ದಳಗಳಿಗೆ ಜನಗಳನ್ನು ಸೇರಿಸಿಕೊಳ್ಳುವ ಸಂಬಂಧವಾಗಿ ಅವರು ಇಲ್ಲಿಗೆ ಬರಲಿದ್ದಾರೆ ವಿವರಗಳಿಗಾಗಿ ನಗರದಲ್ಲಿರುವ ಉದ್ಯೋಗ ವಿನಿಮಯ ಕಛೇರಿ ಅಧಿಕಾರಿಗಳೊಡನೆ ವ್ಯವಹರಿಸಬಹುದು

ಸೆಂಟ್ರಲ್ ಜೈಲಿನಿಂದ ಪರಾರಿಯಾಗಿದ್ದ ಖೈದಿಗಳ ಬಂಧನ

ಬೆಂಗಳೂರು ಸೆಂಟ್ರಲ್ ಜೈಲಿನಿಂದ [illegible] ೨೬ನೇ ತಾರೀಕು ಪರಾರಿಯಾದ ಐವರು ಖೈದಿಗಳ ಪೈಕಿ ಎ ಬಿ ಜಾರ್ಜ್ [illegible] ಮತ್ತು ಅವಿನಾಶ್ ಜಾರ್ಜ್ ಎಂಬುವರನ್ನು [illegible] ಪೋಲೀಸರು ಬಂಧಿಸಿರುತ್ತಾರೆ [illegible] ಗೊತ್ತಾಗಿದೆ ನಂದಿಯಣ್ಣ [illegible] ಖೈದಿಯನ್ನು ಬೆಂಗಳೂರು ಪೋಲೀಸ [illegible] ಲೇ ಬಂಧಿಸಿರುವರು ನಂದಿ [illegible] ಚಿಕ್ಕ ಮುನಿಗ ಎಂಬ ಇನ್ನಿಬ್ಬರು ಇನ್ನೂ ಪತ್ತೆಯಾಗಿಲ್ಲ

ತಿರುವಾಂಕೂರಿನಲ್ಲಿ ೧೧೨ ಖೈದಿಗಳ ಖುಲಾಸೆ

ಕೇರಳ ಕಮ್ಯೂನಿಸ್ಟ್ ಸರ್ಕಾರದವರು ಅಧಿಕಾರಕ್ಕೆ ಬಂದ ನೆನಪಿಗಾಗಿ ತಿರುವನಂತಪುರದ ಸೆಂಟ್ರಲ್ ಜೈಲಿನಿಂದ ೧೧೨ ಖೈದಿಗಳನ್ನು ಖುಲಾಸೆ ಮಾಡಲಾಗಿದೆ ಅಲ್ಲಿನ ಜೈಲುಗಳ ಮಂತ್ರಿ ವಿ ಆರ್. ಕೃಷ್ಣಯ್ಯರವರು ನೆನ್ನೆ ಸೆಂಟ್ರಲ್ ಜೈಲಿಗೆ ಭೇಟಿಯಿತ್ತು ಖೈದಿಗಳ ಕೋಣೆಗಳನ್ನು ಪರಿಶೀಲಿಸಿ ಅವನ್ನು ಉತ್ತಮಪಡಿಸಲು ಹಲವು ಸಲಹೆಗಳನ್ನು ಕೊಟ್ಟರು ಖೈದಿಗಳು ತಮ್ಮ ಜೀವನದಲ್ಲಿ ಸುಧಾರಣೆ ಮಾಡಿಕೊಂಡು, ಉತ್ತಮ ನಾಗರಿಕರಾಗಬೇಕೆಂದು ಸೂಚಿಸಿದರು

ಸಮಾರಂಭಗಳಿಗೆ ಕೇರಳದ ಮಂತ್ರಿಗಳು ಬರುವುದಿಲ್ಲ

ಬರುವ ಮೂರು ತಿಂಗಳ ವರೆಗಾದರೂ ಕೇರಳದ ಮಂತ್ರಿಗಳನ್ನು ಸಾರ್ವಜನಿಕ ಸಭೆ ಅಥವಾ [illegible] ಸಮಾರಂಭಗಳಿಗೆ ಜನರು ಆಹ್ವಾನಿಸ [illegible] ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಮ[illegible] ಗಳಲ್ಲಿ [illegible] ತಮ್ಮ ಕರ್ತವ್ಯವನ್ನು [illegible] ವೆ [illegible]

ಮದರಾಸಿನಲ್ಲಿ ಅತ್ಯಂತ ಚಿಕ್ಕ ಮಂತ್ರಿಮಂಡಲ

ಮದ್ರಾಸಿನಲ್ಲಿ ೮ ಜನ ಸದಸ್ಯರುಳ್ಳ ಮಂತ್ರಿಮಂಡಲವಿರುವುದೆಂದೂ, ಭಾರತದಲ್ಲೆಲ್ಲಾ ಅದು ಅತ್ಯಂತ ಸಣ್ಣದೆಂದೂ ತಿಳಿದುಬಂದಿದೆ. ಅವರಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಅಲ್ಪ ಸಂಖ್ಯಾತರಿರುವರೆಂದು ಹೇಳಲಾಗಿದೆ

ಆಂಧ್ರ ಪ್ರದೇಶದ ನಾಯಕರಾಗಿ ಪುನಃ ಸಂಜೀವರೆಡ್ಡಿಯವರು

ಆಂಧ್ರ ಪ್ರದೇಶ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ನೆನ್ನೆ ಎನ್ ಸಂಜೀವ ರೆಡ್ಡಿಯವರು ಸರ್ವಾನುಮತದಿಂದ ಪುನಃ ಆರಿಸಲ್ಪಟ್ಟರು

ರಹದಾರಿಯಿಲ್ಲದೆ ರೇಡಿಯೋ ಹೊಂದಿದ್ದಕ್ಕೆ ಜುಲ್ಮಾನೆ

ನಗರದ ಮುಳ್ಳಾಜಿ ಚೌಕದಲ್ಲಿನ ರುಕ್ಮಾಜಿರಾವ್ ಎಂಬುವರು ೧೯೫೬ರಲ್ಲಿ ೮ ತಿಂಗಳ ಕಾಲ ರಹದಾರಿಯಿಲ್ಲದೆ ರೇಡಿಯೋ ಇಟ್ಟುಕೊಂಡಿದ್ದರೆಂದು ವೈರ್‌ಲೆಸ್ ಇನ್ಸ್‌ಪೆಕ್ಟರ್ ಶ್ರೀ [illegible] ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರ ನ್ಯಾಯಾಧೀಶರು ರಾಯರಿಗೆ ೧೫ ರೂ ಜುಲ್ಮಾನೆ ವಿಧಿಸಿದರು

ಹೋಟೆಲು ಮಾಲೀಕರಿಗೆ ದಂಡ

ಅಂಗಡಿ ಸಿಬ್ಬಂದಿ ಕಾನೂನು ಪ್ರಕಾರ, ಜಗನ್ಮೋಹನ [illegible] ಶ್ರೀ ವೆಂಕಟೇಶ [illegible] ಶ್ರೀ ಸೀತಾರಾಮ [illegible] ರದ ರಜಾ ಪುಸ್ತಕವನ್ನು [illegible] ದಿನಕ್ಕೆ ೮ ಗಂಟೆಗಿಂತ ಹೆಚ್ಚು ಕಾಲ ಕೆಲಸ ಮಾಡಿಸಿಕೊಂಡರೆಂದು ಅವರಿಗೆ ನಗರದ [illegible] ನ್ಯಾಯಾಧೀಶರು ೧೦ರೂ ದಂಡವನ್ನು ವಿಧಿಸಿರುವರು

ದೆಹಲಿಗೆ ನಿಜಲಿಂಗಪ್ಪನವರ ಪ್ರಯಾಣ

ಮಂತ್ರಿಮಂಡಲದ ಬಗ್ಗೆ ಸಮಾಲೋಚನೆ

ಸ್ವಂ ಸು ತಂತಿ] ಬೆಂಗಳೂರು ೧೧

ಮಂತ್ರಿಮಂಡಲದ ಬಗ್ಗೆ ಸಮಾಲೋಚನೆ ನಡೆಸಲು ಈ ದಿನ ಶ್ರೀ ನಿಜಲಿಂಗಪ್ಪನವರು ದೆಹಲಿಗೆ ತೆರಳಿದರು ೧೮ನೇ ತಾರೀಕು ಅವರು ಹಿಂದಿರುಗುವರು

ಹೈಕೋರ್ಟ್ ನ್ಯಾಯಾಧೀಶರ ನೇಮಕವನ್ನು ಅವರು ಅಲ್ಲಿ ಪ್ರಸ್ತಾಪಿಸುವರು ಶ್ರೀಗಳಾದ ಸದಾನಂದ ಹೆಗ್ಗಡೆ, ಎ ಆರ್. ಸೋಮನಾಥ ಅಯ್ಯರ್ ಮತ್ತು ಇಂದಿನ ರೆವಿನ್ಯೂ ಬೋರ್ಡ್ ಅಧ್ಯಕ್ಷ ಮಾಲೀಮಠ್‌ರವರ ಹೆಸರುಗಳನ್ನು ನ್ಯಾಯಾಧೀಶ ಸ್ಥಾನದ ಬಗ್ಗೆ ಮುಖ್ಯವಾಗಿ ಹೇಳಲಾಗುತ್ತಿದೆ

○ ನಿವೃತ್ತ ಶ್ರೇಷ್ಠ ನ್ಯಾಯಾಧೀಶ ಶ್ರೀ ಕೆ. ಎನ್ ಪದ್ಮನಾಭಯ್ಯನವರನ್ನು ರೆವಿನ್ಯೂ ಬೋರ್ಡ್ ಅಧ್ಯಕ್ಷರನ್ನಾಗಿ ನೇಮಿಸುವ ಸಂಭವವಿದೆ

ಅರ್ಚಕರಿಗೆ ಕೊಡಬೇಕಾದ ಹಣಕ್ಕಾಗಿ ಗುಡಿಯ ಆಸ್ತಿ ಜಪ್ತಿ

ತಿರುತ್ತಣಿಯ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಚಿದಂಬರ ಗುರುಗಳು ಮತ್ತು ಇತರ ೧೬ ಮಂದಿ ಅರ್ಚಕರು ಅರ್ಚನೆ ಮತ್ತು ಆರತಿ ಕಾಣಿಕೆಗಳನ್ನು ಪಡೆಯುವ ಹಕ್ಕಿನ ಬಗ್ಗೆ ದೇವಾಲಯದ ಅಧಿಕಾರಿಗಳು ಪ್ರವೇಶಿಸಕೂಡದೆಂದು ಖಾಯಂ ಇಂಜಕ್ಷನ್ ಕೊಟ್ಟ ಸಂಬಂಧದಲ್ಲಿ ಚಿತ್ತೂರು ನ್ಯಾಯಾಧೀಶರು ಅದನ್ನು ಜಾರಿಗೆ ತರಲು ದೇವಸ್ಥಾನದ ಆಸ್ತಿಗಳನ್ನು ಜಪ್ತಿಗಾಗಿ ಆಜ್ಞೆ ಮಾಡಿರುತ್ತಾರೆ ಆರತಿ ಮತ್ತು ಅರ್ಚನೆ ಕಾಣಿಕೆಯ ಪ್ರಮಾಣವನ್ನು ದೇವಸ್ಥಾನದ ಅಧಿಕಾರಿಗಳು ಪಟ್ಟಿಸಿ ಅರ್ಚಕರಿಗೆ ಸ್ವಲ್ಪ ಭಾಗ ಮಾತ್ರ ಕೊಡುತ್ತಿದ್ದುದರ ಮೇಲೆ ಕೋರ್ಟಿನಲ್ಲಿ ವ್ಯವಹಾರ ಹೂಡಲಾಗಿದ್ದಿತು ಈ ಸಂಬಂಧವಾಗಿ ಹೈ ಕೋರ್ಟಿನಲ್ಲಿ ವ್ಯವಹಾರವು ನಡೆದಿತ್ತು

ಜೂಜಾಟಕ್ಕಾಗಿ ದಂಡ

ಜಲಪುರಿಯ ಚಿಕ್ಕರಂಗ ಮತ್ತು ದೊಡ್ಡರಂಗ ಎಂಬುವರು ನೆನ್ನೆ ರಾತ್ರಿ ರಾಣಿಸಾಲು ಜೂಜಾಡುತ್ತಿದ್ದುದನ್ನು ನರಸಿಂಹರಾಜ ಮೊಹಲ್ಲಾ ಪೋಲೀಸ್ ದಫೇದಾರರು ಪತ್ತೆ ಹಚ್ಚಿ ಹೂಡಿದ್ದ ಮೊಕದ್ದಮೆಯಲ್ಲಿ ಈ ದಿನ ನಗರದ ದ್ವಿತೀಯ ನ್ಯಾಯಾಧೀಶರು ಅಪರಾಧಿಗಳಿಗೆ ತಲಾ ೭ ರೂ ದಂಡವನ್ನು ವಿಧಿಸಿದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ನಿಮಿಷಕ್ಕೆ [illegible] ೭-೧೫ ಗಾಂಧಿಸ್ಮೃತಿ ೭-೩೦ ಹಿಂದಿ ಪಾಠ ೮-೧೫ ಟಿ ಟಿ ಚಂದ್ರಶೇಖರ್-ಗೀತಾವಳಿ ಮಧ್ಯಾಹ್ನ ೧೨ ವೈ ಎನ್ ಶ್ರೀನಿವಾಸಮೂರ್ತಿ-ಸಂಗೀತ ೧೨-೩೦ ವಾದ್ಯವೃಂದ ೧ ಸಂಗೀತ ರೆಕಾರ್ಡ್ ೧-೩೦ [illegible] ನಿಮಿಷ [illegible] ನಿಮಿಷ ವಾರ್ತೆ ಸಂಜೆ ೫-೩೦ ಸಂಗೀತ [illegible] ಭಕ್ತಿಗೀತೆ ೬-೩೦ ಮಹಾವೀರ ಜಯಂತಿ-ಪ್ರಸಂಗ ೬-೪೦ [illegible] ಸಮಾಲೋಚನ [illegible] ದೆಹಲಿ [illegible] ಸಂಗೀತೋತ್ಸವ [illegible] ಗೀತಾವಳಿ.

ರಾಮೋತ್ಸವದ ಕಾರ್ಯಕ್ರಮ

ಮೈಸೂರು ೧೧

ಕೃಷ್ಣರಾಜನಗರದ ಬ್ರಾಹ್ಮಣ ಜಿಕ್ಷ ಮಂಡಲಿಯ ಆಶ್ರಯದಲ್ಲಿ ೧೭ನೇ ತಾರೀಕಿನ ವರೆಗೆ ಉತ್ಸವದ ಅಂಗವಾಗಿ ಬೆಳಗ್ಗೆ ಸೂರ್ಯ ನಮಸ್ಕಾರ, ನವಗ್ರಹ ಜಪ, ಅಭಿಷೇಕ, ಪಾರಾಯಣ ಮತ್ತು ರಾತ್ರಿ ಕುಂಕುಮಾರ್ಚನೆ, ಭಜನೆ, ಸಂಗೀತ ವಿದ್ವಾಂಸರ ಕಚೇರಿಗಳು ಏರ್ಪಾಡಾಗಿವೆ [illegible]ಂದು [illegible]ವಿದೆ. ೧೮, ೧೯ ಮತ್ತು ೨೦ರಂದು ಕ್ರಮವಾಗಿ ವಸಂತೋತ್ಸವ ಮತ್ತು ರಾತ್ರಿ ಹೂವಿನ ಪಲ್ಲಕ್ಕಿ ಉತ್ಸವ, ಉಯ್ಯಾಲೆ ಉತ್ಸವ ಮತ್ತು ಶಯನೋತ್ಸವಗಳಿವೆ.

ನಗರದ ಶ್ರೀರಾಮಪೇಟೆಯಲ್ಲಿರುವ ಶ್ರೀ [illegible] ಮಂಡಲಿಯ ಶ್ರೀರಾಮ ಮಂದಿರದಲ್ಲಿ [illegible] ಗಂಟೆಗೆ ಕುಮಾರಿಯರಾದ [illegible] ಮತ್ತು ಎಂ ಕೆ ಸೀ[illegible] ಆಂಜನೇಯ ಸಂವಾದ [illegible] ನಡೆಯುವುದು

[illegible] ಶ್ರೀರಾಮ ಮಂದಿರದಲ್ಲಿ [illegible] ಗಂಟೆಗೆ ಶ್ರೀಗಳಾದ ಬಿ. [illegible] ಮತ್ತು ಕೆ ವೆಂಕಟಸು[illegible] ಭಾರತವಾಚನವೂ, [illegible] ವಿ॥ [illegible] ಅವರಿಂದ ಸಂಗೀತವೂ ಏರ್ಪಾಡಾಗಿವೆ ನಾಳೆ ರಾತ್ರಿ ೮ ಗಂಟೆಗೆ ವಿ॥ ಆರ್.ಎಸ್ ಜೋರಿಸ್ವಾಮಿಯವರ ವೀಣಾ ವಾದನವಿದೆ

ಶ್ರೀರಾಮಪೇಟೆ ಶ್ರೀರಾಮಾಭ್ಯುದಯ ಸಭೆಯ ಆಶ್ರಯದಲ್ಲಿ ನಾಳೆ ರಾತ್ರಿ ೮ ಗಂಟೆಗೆ ವಿ॥ ಹೆಚ್ ಟಿ ರಾಮಸ್ವಾಮಿಯವರ ಸಂಗೀತವೂ, ನಾಳಿದ್ದು ವಿ॥ ಗಿರಿಜಮ್ಮ ಮತ್ತು ಪಾರ್ಟಿಯವರಿಂದ ಗಾಯನವೂ ಇವೆ.

ಕೃಷ್ಣರಾಜನಗರ ತಾಲ್ಲೂಕು ಚಂದಗಾಲು ಶಾಲೇಗೌಡರ ಶ್ರೀರಾಮ ಮಂದಿರದಲ್ಲಿ ಕಳೆದ [illegible]ವರೆಗೆ ರಾಮೋತ್ಸವದ ಅಂಗವಾಗಿ [illegible] ಗಂಟೆಗೆ ಶ್ರೀ ಸಿ ಕೆ ಪುಟ್ಟ[illegible]ಂದ ರಾಮಾಯಣ ವಾಚನೆ ಮತ್ತು [illegible]ದಿಂದ ವ್ಯಾಖ್ಯಾನವು ನಡೆ[illegible]

[illegible] ಶ್ರೀ ಲಕ್ಷ್ಮಿ ಭಜನ ಮಂದಿರ[illegible] ಡಿ ಆರ್. ಚಂಪಕ [illegible] ಮಾಲತಿಯವರ ಸಂಗೀತ.

[illegible]ದಲ್ಲಿ ಜನಮತಗಣನೆಗೆ ಸಿರಿಯಾ ಮಂತ್ರಿ ವಿರೋಧ

ಸಿರಿಯದ ರಕ್ಷಣಾ ಮಂತ್ರಿ ಖಲಿದ್ ಎಲ್ ಅಜ ರರು [illegible]ದಲ್ಲಿ ಜನಮತಗಣನೆಯು [illegible] ತೆರೆ [illegible]ದಿಂದ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಿಟಸಿವು ಹೆಚ್ಚುವುದೆಂದು [illegible] ವರದಿಯಾಗಿವೆ ಜನಮತ ಗಣನೆಗೆ [illegible]ಯವು ಬೆಂಬಲ ನೀಡಿಲ್ಲವೆಂದು ರಕ್ಷಣಾ ಮಂತ್ರಿಯು ಹೇಳಿರುವುದಾಗಿ ಗೊತ್ತಾಗಿದೆ ಉಭಯ ರಾಷ್ಟ್ರಗಳ ನಡುವೆ ಉತ್ತಮ ಬಾಂಧವ್ಯ [illegible] ಸಣ್ಣ [illegible] ಸರಿಯಲ್ಲವೆಂದೂ ಅವರು [illegible]ರುವುದಾಗಿ ವರದಿಯಾಗಿದೆ

ಕನ್ನಡ ಮತ್ತು ಹಿಂದಿ ಪಂಡಿತರ ಶಿಕ್ಷಣ ತರಗತಿಗಳ ಆರಂಭ

ಮೈಸೂರು ೧೧

ಇಲ್ಲಿನ ವಿಶ್ವವಿದ್ಯಾಲಯ ಉಪಾಧ್ಯಾಯರ ಕಾಲೇಜಿನ ಶಿಕ್ಷಣ ವಿಸ್ತರಣಾ ಶಾಖಾ ಯೋಜನೆ ಅಂಗವಾಗಿ ೮ ವಾರ ಕಾಲ ಕನ್ನಡ ಮತ್ತು ಹಿಂದಿ ಪಂಡಿತರ ತರಗತಿಗಳನ್ನು ನಡೆಸಲು ಏರ್ಪಡಿಸಲಾಗಿದೆ. ನಾನಾ ಪ್ರೌಢಶಾಲೆಗಳ ಸುಮಾರು ೫೦ ಮಂದಿ ಉಪಾಧ್ಯಾಯರು ಅದರಲ್ಲಿ ಭಾಗವಹಿಸಿರುತ್ತಾರೆ. ತರಗತಿಗಳ ಆರಂಭೋತ್ಸವವನ್ನು ಕಳೆದ ೩ನೇ ತಾರೀಖು ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರ್ ಶ್ರೀ ಸಿ. ನರಸಿಂಹಮೂರ್ತಿಯವರು ನೆರವೇರಿಸಿದರು

ವಿ॥ ನಾರಾಯಣ ಅಯ್ಯಂಗಾರ್ಯರಿಂದ ಪ್ರಾರ್ಥನೆಯಾದನಂತರ ಕಾಲೇಜು ಪ್ರಿನ್ಸಿಪಾಲ್ ಶ್ರೀ ಎ ಸಿ. ದೇವೇಗೌಡರು ಸ್ವಾಗತ ಭಾಷಣ ಮಾಡಿ, ಯೋಜನೆಯ ಉದ್ದೇಶ ಮತ್ತು ಕೇಂದ್ರ ಸರ್ಕಾರದವರು ಅದರ ಸಾಧನೆಗಾಗಿ ಕೊಡುತ್ತಿರುವ ನೆರವಿನ ವಿಚಾರಗಳನ್ನು ವಿವರಿಸಿದರು ಯೋಜನೆ ಸಹಾಯಾಧಿಕಾರಿಗಳಾದ ಶ್ರೀ ಎ ಶೇಷಯ್ಯಂಗಾರ್ಯರು ಕಳೆದ ವರ್ಷ ನಡೆದ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು

ಶ್ರೀ ನರಸಿಂಹಮೂರ್ತಿಯವರು ಶಿಕ್ಷಣ ಯೋಜನೆಯನ್ನು ಪ್ರಶಂಸಿಸಿ, ಸಂಸ್ಥಾನ ಸರ್ಕಾರದಿಂದ ಆದಷ್ಟು ನೆರವನ್ನು ಅದಕ್ಕಾಗಿ ಕೊಡುವುದಾಗಿ ಭರವಸೆಯಿತ್ತರು. ಕನ್ನಡ ಮತ್ತು ಹಿಂದಿ ಪಂಡಿತರು ಈಗಿನ ಕಾಲಕ್ಕೆ ತಕ್ಕಂತೆ ವಿದ್ಯಾಭ್ಯಾಸ ಕ್ರಮದಲ್ಲಿ ಆಗಿರುವ ಸುಧಾರಣೆಗಳ ರೀತಿಯಲ್ಲಿ ಪಾಠವನ್ನು ಹೇಳಿಕೊಡಬೇಕೆಂದು ಸೂಚಿಸಿದರು

ಯೋಜನೆಯ ಅಧಿಕಾರಿಗಳಾದ ಶ್ರೀ ಕೆ. ಆರ್. ಎಸ್. ಗುಪ್ತರವರು ವಂದನಾರ್ಪಣೆ ಮಾಡಿದನಂತರ ಸಮಾರಂಭವು ಕೊನೆಗೊಂಡಿತು

ಬಿಳಿಗಿರಿರಂಗನ ಬೆಟ್ಟದಲ್ಲಿ ಕಣಿಯರ ಸಭೆ

ಬಿಳಿಗಿರಿ ರಂಗಸ್ವಾಮಿಯ ರಥೋತ್ಸವದ ಸಂದರ್ಭದಲ್ಲಿ ಇದೇ ತಿಂಗಳು ೧೮ನೇ ತಾರೀಕು ಮಧ್ಯಾಹ್ನ ೩॥ ಗಂಟೆಗೆ ಕಣಿಯರ ಸಭೆಯು ಸೇರಿ ಸಮಾಜಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಗುವುದು ಶ್ರೀ ಕೆ ಮಲ್ಲಪ್ಪನವರು ಅಧ್ಯಕ್ಷತೆವಹಿಸುವರು ಮುಖಂಡರು ಭಾಷಣ ಮಾಡುವರು. ಶ್ರೀಗಳಾದ ಎಸ್. ನಾರಾಯಣಸ್ವಾಮಿ ಮತ್ತು ಚಿನ್ನಸ್ವಾಮಿಯವರುಗಳು ಸಭೆಯ ಚಟುವಟಿಕೆಗಳನ್ನು ತಮ್ಮ ವರದಿಯಲ್ಲಿ ತಿಳಿಸುವರು. ಕಣಿಯರ ಸೇವೆಯಲ್ಲಿ ತೊಡಗಿರುವವರು ಸಭೆಗೆ ದಯಮಾಡಿಸುವಂತೆ ಚಾಮರಾಜನಗರದ ಕಣಿಯರ ಸಂಘದ ಗೌರವ ಕಾರ್ಯದರ್ಶಿ ಶ್ರೀ ಎಸ್. ನಾರಾಯಣಸ್ವಾಮಿಯವರು ಕೋರಿರುತ್ತಾರೆ.

ಸಂಸ್ಥಾನದ ವಕೀಲರ ಸಮ್ಮೇಳನದ ಅಧ್ಯಕ್ಷರು

ಬರುವ ತಿಂಗಳು ನಡೆಯಲಿರುವ ಮೈಸೂರು ಸಂಸ್ಥಾನದ ವಕೀಲರ ಸಮ್ಮೇಳನದ ಸ್ವಾಗತ ಸಮಿತಿ ಸಭೆಯು ಇಂದು ನಡೆದು ಬೆಳಗಾವಿಯ ಶ್ರೀ ಎ. ವಿ ಮಜುಂದಾರರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಲಾಯಿತು.

ಸೂಯೆಜ್ ಕಾಲುವೆಯಲ್ಲಿ ಸಂಚಾರಕ್ಕೆ ಪೂರ್ಣಾವಕಾಶ

ಸೂಯೆಜ್ ಕಾಲುವೆಯಲ್ಲಿ ಹಡಗುಗಳ ಸಂಚಾರಕ್ಕೆ ಇರುವ ಅಡ್ಡಿಗಳನ್ನೆಲ್ಲಾ ತೆಗೆಯಲಾಗಿರುವುದೆಂದು ಮೇ॥ ಜ॥ ರೈಮಂಡ್ ವೀಲರ್‌ರವರು ತಿಳಿಸಿರುತ್ತಾರೆ. ಅವರು ತಮ್ಮ ೪೫೦ ಮಂದಿ ಪ್ರವೀಣರ ಸಹಾಯದೊಡನೆ ಕಾಲುವೆಯಲ್ಲಿ ಮುಳುಗಿದ್ದ ೩೧ ಹಡಗುಗಳನ್ನೂ ತೆಗೆದು ಮಾರ್ಗಾನುಕೂಲ ಮಾಡಿರುತ್ತಾರೆ.

ಆಗಸ್ಟ್ ೧೫ ಮತ್ತು ೧೬ ರಂದು ರಜಾ

ಬರುವ ಆಗಸ್ಟ್ ತಿಂಗಳು ೧೫ ಮತ್ತು ೧೬ರಂದು ದೇಶಾದ್ಯಂತ ರಜಾವನ್ನು ಭಾರತ ಸರ್ಕಾರದವರು ಘೋಷಿಸಿರುವರು. ಭಾರತವು ಸ್ವಾತಂತ್ರ್ಯ ಪಡೆದು ೧೦ ವರ್ಷಗಳಾದುದಕ್ಕಾಗಿಯೂ, ಸ್ವಾತಂತ್ರ್ಯಕ್ಕಾಗಿ ಭಾರತವು ಹೂಡಿದ ಪ್ರಥಮ ಸಂಗ್ರಾಮದ ಶತಮಾನೋತ್ಸವದ ಸಲುವಾಗಿಯೂ ಆ ದಿನಗಳಲ್ಲಿ ರಜಾ ಕೊಡಲಾಗಿದೆ.

ಗಡ್ಡ ಬೋಳಿಸದ ಸಿಖ್ಖನಿಗೆ ಬ್ರಿಟನ್ನಿನಲ್ಲಿ ಉದ್ಯೋಗವಿಲ್ಲ

ಗಡ್ಡವನ್ನು ಬೋಳಿಸಲು ಮತ್ತು ರುಮಾಲನ್ನು ತೆಗೆದುಹಾಕಲು ನಿರಾಕರಿಸಿದ ಗುಲವಂತ್ ಸರ್ದಾರ್ ಸೋಹಲ್ ಎಂಬ ಭಾರತೀಯ ಸಿಖ್ಖನಿಗೆ ಇಂಗ್ಲೆಂಡಿನ ವಾಲ್ಟಿಂಗ್ ಹ್ಯಾಮಿನಲ್ಲಿ ಬಸ್ ಕಂಡಕ್ಟರ್ ಉದ್ಯೋಗವು ದೊರೆಯಲಿಲ್ಲವೆಂದು ವರದಿಯಾಗಿದೆ ಗಡ್ಡ ಬೆಳೆಸಿ ರುಮಾಲು ಧರಿಸಿರುವವರನ್ನು ಕಂಡರೆ ಅಲ್ಲಿನ ಮಹಿಳೆಯರಿಗೆ ಅಗದೆಂದೂ, ಅಲ್ಲದೆ ಮಕ್ಕಳು ದಿಗಿಲು ಬೀಳುವರೆಂದೂ ತಿಳಿಸಿ ಆತನಿಗೆ ಕೆಲಸ ನಿರಾಕರಿಸಲಾಯಿತೆಂದು ಹೇಳಲಾಗಿದೆ ಗಡ್ಡ ಬೆಳೆಸಿ ರುಮಾಲು ಧರಿಸುವವರಿಗೆ ಉದ್ಯೋಗವೀಯಬಾರದೆಂಬ ನಿಯಮವು ಇಲ್ಲವೆಂದೂ, ಈ ಪ್ರಕರಣದ ಬಗ್ಗೆ ತನಿಖೆ ನಡೆಸುವುದಾಗಿಯೂ ಅಲ್ಲಿನ ಬಸ್ ಸಂಸ್ಥೆಯ ಅಧ್ಯಕ್ಷರು ತಿಳಿಸಿರುವರು

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮುಕು		
ಕೊಯಮುತ್ತೂರು	[illegible]	[illegible]
ರಸ್ತಭೂಡಿ	[illegible]	[illegible]
ಕಡ್ಲೆ	[illegible]	[illegible]
ರಾಗಿ	[illegible]	[illegible]
ಜೋಳ	[illegible]	[illegible]
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible] ೦೦	[illegible] ೦೦
ಹರಳುಬೀಜ	[illegible] ೦೦	[illegible] ೦೦
ಹೊಂಗೇಬೀಜ	[illegible]	[illegible]
ಹುರುಳಿ	[illegible]	[illegible]
ಹಬಸಂದೆ	[illegible]	
ಅವರೆ	[illegible] ೦೦	[illegible]
ಧನಿಯ	[illegible]	[illegible]
ಕಡಲೆ	[illegible]	
[illegible]	[illegible]	
ಹುಣಸೆಬೀಜ	[illegible]	
ಹುಣಸೇಹಣ್ಣು	[illegible]	[illegible]
[illegible]	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

ಬಿಳಿಗಿರಿ ರಂಗಸ್ವಾಮಿ ರಥೋತ್ಸವದ ವ್ಯವಸ್ಥೆ

ಯಳಂದೂರು ತಾಲ್ಲೂಕು ಬಿಳಿಗಿರಿ ರಂಗ[illegible]ಮಿ ಬೆಟ್ಟದಲ್ಲಿ ಇದೇ ೧೮ರಂದು ರಥೋತ್ಸ[illegible] ನಡೆಯುವುದಷ್ಟೆ? ಅದರ ವ್ಯವಸ್ಥೆ[illegible] ಸರಿಯಾಗಿ ಮಾಡುವುದು ಅಗತ್ಯವಾಗಿದೆ [illegible] ವರ್ಷ ಆದ ಅಭಾವದಿಂದ ಅಲ್ಲಿ [illegible]ಗಳು ಸಂಭವಿಸಿದ್ದುವು.

ದೇವಸ್ಥಾನದ ರಥವು ಬಹಳ ದೊಡ್ಡದು,[illegible]ಯು ಇಕ್ಕಟ್ಟು. ಎಡ ಬಲ ಪಾರ್ಶ್ವಗಳಲ್ಲಿ [illegible]ಗಡಿಗಳನ್ನಿಡಲು ಅವಕಾಶ ಕೊಟ್ಟಿದ್ದರು. [illegible]ಯು ಸರಿಯಾಗಿಲ್ಲ ತೇರಿನ ಮೇಲೆ ಬಹಳ [illegible] ಹತ್ತಲು ಅವಕಾಶ ಕೊಡಲಾಗುತ್ತಿದೆ [illegible] ಮುಂತಾದ ಕಾರಣಗಳಿಂದ ಕಳೆದ ವರ್ಷದ [illegible] ಹುತಕ್ಕೆ ಅವಕಾಶವಾಯಿತು. ರಥದ [illegible] ಎಳೆಯುವವರು ಸ್ವಲ್ಪ ದೂರದಿಂದ ಎಳೆಯ[illegible]ತೆ ಮಾಡುವುದು ಸೂಕ್ತ. ಹೆಚ್ಚು ಪೋ[illegible] ಬಂದೋಬಸ್ತು ಮಾಡುವುದು ಅಗತ್ಯ – [illegible] ಭಕ್ತರೊಬ್ಬರು ಪತ್ರ ಬರೆದು ತಿಳಿಸಿರುತ್ತಾ[illegible]

ತಲೆ ಬುರುಡೆ ಒಡೆದು ಕೊಲೆ

ಗೌರಿಬಿದನೂರು ತಾಲ್ಲೂಕಿನ ದಾರಿ[illegible] ಕಡಬಾಳ್ಳದ ಕೊಂಡಪ್ಪ ಎಂಬುವನನ್ನು [illegible] ಗುರುವಾರ ರಂಗಪ್ಪ ಎಂಬಾತನು [illegible] ಕೊಲೆ ಮಾಡಿರುವುದಾಗಿ ವರದಿಯಾಗಿ[illegible] ದಿನ ಆಧಾರಕ್ಕೆ ಕೊಂಡಪ್ಪನ ತಲೆ ಬುರುಡೆ[illegible]ಯು ಪ್ರತಿಕ್ರಿಯಿಸಿಯಾಯಿತೆಂದು ಹೇಳಲಾಗಿ[illegible] ಗಿಪ್ಪನೂ, [illegible] ಹಿಂದಿನ ರಾತ್ರಿ ಹುಲಿ ವೇಷದ ಪ್ರದರ್ಶನ[illegible]ಯದಲ್ಲಿ ದೀವಟಿಗೆಯನ್ನು ಆರಿಸಿದ ಬಗ್ಗೆ [illegible] ಎಂಬುದರ ವಿಚಾರಣೆಯು ಅಧ್ಯಕ್ಷತೆ ವ[illegible] ಕೊಂಡಪ್ಪನು ಅಲ್ಲಿಗೆ ಬಂದನೆಂದೂ, [illegible]ನು ಓಡಿಹೋಗಿ ದೊಣ್ಣೆಯಿಂದ ಅವನ [illegible] ಮೇಲೆ ಪ್ರಹಾರ ಮಾಡಲು ಅವನು ಪ್ರಜ್ಞೆ[illegible] ಬಿದ್ದು ಮೃತಪಟ್ಟನೆಂದೂ ಹೇಳಲಾಗಿದೆ [illegible]ಪ್ಪನು ಹಳೇ ವೈರಿಯೆಂದು ಹೇಳಲಾಗಿದೆ.

ಟೆಲಿಫೋನ್ ತಂತಿಯ ಅಕ್ರಮ ಸಾಗ[illegible]ಗಾಗಿ ೫೦ ರೂ. ದಂಡ

ನಗರದ ಹಳ್ಳದಕೇರಿ ಹಿತ್ತಾಳೆ ಪಾತ್ರೆ [illegible]ದಿ ಮಾಲೀಕರಾದ ಶ್ರೀ ಅನಂತಶೆಟ್ಟರು [illegible] ಬಾಯಿಗೆ ಟೆಲಿಫೋನ್ ತಂತಿಯನ್ನು ಲಾ[illegible]ಲಕ ಅಕ್ರಮವಾಗಿ ಸಾಗಿಸುತ್ತಿದ್ದರೆಂಬ [illegible]ಕ್ಕಾಗಿ ಅವರಿಗೆ ಮೊನ್ನೆ ನಗರದ ಪ್ರಥಮ [illegible]ಯಾಧೀಶರು ೫೦ ರೂ. ದಂಡವನ್ನು ವಿಧಿ[illegible] ಅಕ್ರಮ ಸಾಗಾಣಿಕೆಯನ್ನು ಬೆಂಗಳ[illegible] ಪತ್ತೆ ಮಾಡಲಾಯಿತೆಂದು ಹೇಳಲಾಗಿದೆ.

ಬಿಡಾರಂ ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂ[illegible]

12-4-57ನೇ ಶುಕ್ರವಾರ ಸಂಜೆ [illegible]

ಶ್ರೀಮತಿ ಗೌರಿ ಅಯ್ಯಸ್ವಾಮಿಯವರ: [illegible]

ವಿ॥ ಚಿತ್ತೂರು ಗೋಪಾಲಕೃಷ್ಣ [illegible]

ವಿ॥ ನಾರಾಯಣಶೆಟ್ಟಿ [illegible]

ಪ್ರವೇಶ ದರ : ರೂ. 1-0-0

Edited, Printed and Publis[illegible]
A. R. Nagarajan at Sadhvi [illegible]
D. Subbiah Road, Mysore

ಪ್ರಭುದೇವಾ ಥಿಯೇಟರ್ ★
(ಪದ್ಮಾ ಟಾಕೀಸ್)
12—4—57ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನಗಳು
ಎ. [illegible] ರಾಮರಾವ್, ಎಸ್. ಆರ್. ಗಣೇಶ್, ತಂಗವೇಲು, ಸಾವಿತ್ರಿ, ಕರುಣಾನಿಧಿ, ಎಸ್ ವಿ ರಂಗರಾವ್, ಮುತ್ತುಲಕ್ಷ್ಮಿ, ವಿಳುಮಾಳ್ಳೆ, ಸೂರ್ಯಕಾಂತಮಣಿ ಮುಂತಾದವರು ಪಾತ್ರವಹಿಸಿರುವ
★ ಮಾಯಾ ಬಜಾರ್ ★
(ಶಶಿರೇಖಾ ಪರಿಣಯ)
ವಿಜಯಾರವರ ತಮಿಳು ಚಿತ್ರ
[illegible] ಸಂಗೀತ ಕಾಲ ಎಲ್ಲಾ [illegible] ಶ್ರೀ ಪಾಸುಗಳನ್ನೂ ಮನ್ನಾ ಮಾಡಲಾಗಿದೆ)

[illegible] 792

ಚಂದಾ ದರ

ಊರಿನವರಿಗೆ ಮೂರು ತಿಂಗಳಿಗೆ ಎಂಟಾಣೆ

ಹೊರ ಊರಿನ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ [illegible]

ಪ್ರಗತಿಪರ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹಿರಾತುಗಳನ್ನು

ಕೊಟ್ಟು ಪ್ರಯೋಜನ ಪಡೆಯಿರಿ

ಬರಗಳಿಗೆ ಬರೆಯಿರಿ

ಸಂಪುಟ : ೦೫] SADHVI : FRIDAY 12—4—1957 ಮೈಸೂರು : ಶುಕ್ರವಾರ ೧೨—೪—೧೯೫೭ [ಸಂಚಿಕೆ : [illegible]

ಮೋಸಕ್ಕಾಗಿ ಕಲ್ಕತ್ತಾ ಪೌರಸಭಾಧಿಕಾರಿಗಳ ಬಂಧನ

ಗೋದಾವರಿ ನದಿ ದುರಂತದಲ್ಲಿ ೨೦೦ ಶವಗಳ ಪತ್ತೆ

ಪ್ರಯಾಣಿ ದೋಣಿಗಳ ನಡುವೆ ಗೊಂದಲದಿಂದ ಅಪಘಾತ

ನೆನ್ನೆ ಬೆಳಗ್ಗೆ ಗೋದಾವರಿ ನದಿಯಲ್ಲಿ ಆದ ಅಪಘಾತದಲ್ಲಿ ಇದುವರೆಗೆ ಒಟ್ಟು ೨೦೦ ಮಂದಿ ಸತ್ತಿರುವರೆಂದೂ, ೧೫೨ ಮಂದಿಯ ಶವಗಳ ಪತ್ತೆ ಮಾಡಲಾಗಿದೆಯೆಂದೂ, ಇನ್ನು [illegible] ಮಂದಿ ಪತ್ತೆಯಿಲ್ಲವೆಂದೂ ವರದಿಯಾಗಿದೆ.

ಶ್ರೀರಾಮನವಮಿಯ ದಿನ ಭದ್ರಾಚಲದಲ್ಲಿ ಸುಮಾರು ೪೦ ಸಾವಿರ ಮಂದಿ ಭಕ್ತಾದಿಗಳು ಸೇರಿದ್ದರು. ಅವರ ಪೈಕಿ ಅಂಧ್ರದಿಂದ ಗೋದಾವರಿಯನ್ನು ದಾಟಿಬಂದಿದ್ದ ಅನೇಕರು ಉತ್ಸವ ಮುಗಿದನಂತರ ವಾಪಸು ತೆರಳಲು ಆರಂಭಿಸಿದರು. ಇದಕ್ಕಾಗಿ ಉಂಟಾದ ನೂಕುನುಗ್ಗಲನ್ನು ತಡೆಗಟ್ಟಲು ಪೊಲೀಸರೂ ಶ್ರಮಿಸುತ್ತಿದ್ದರು.

ದೋಣಿಯ ನದಿಯ ಮಧ್ಯಕ್ಕೆ ಬಂದಮೇಲೆ ಚಾಲಕನು ಹುಟ್ಟನ್ನು ನಡೆಸಲು ಮಾಡಲಾರಂಭಿಸಿ ಪ್ರಯಾಣಿಕರ ಸಾಮಾನುಗಳಿಗೂ ಹಣ [illegible]ದಾಗ ಉಂಟಾದ ಗೊಂದಲದಲ್ಲಿ [illegible] ಸಾಗಿ ಕಟ್ಟಲಾಗಿದ್ದ ದೋಣಿಗಳ ಪೈಕಿ ಒಂದು [illegible] ಆದರಲ್ಲಿ ಸ್ವಲ್ಪ ನೀರು ತುಂಬಿತು. [illegible]ಣಿಗಳನ್ನು ಬಂಧಿಸಿ ಕಟ್ಟಿದ್ದ ಹಗ್ಗವೂ [illegible] ಹೋಯಿತು. ಇದರಿಂದ ಗಾಬರಿಗೊಂಡ [illegible] ಮತ್ತೊಂದು ದೋಣಿಗೆ ಹಾರಿದಾಗ ಎರಡೂ ದೋಣಿಗಳೂ ಮುಳುಗಿದವು. ಮುಳುಗಿಹೋದವರಲ್ಲಿ ೧೧೭ ಮಂದಿ ಸ್ತ್ರೀಯರೂ, ೧೮ ಮಕ್ಕಳು [illegible] ಮಂದಿ ಪುರುಷರೂ ಇದ್ದರು. ಸುಮಾರು ೭೦ ಮಂದಿ ಗಂಡಸರು ಈಜಿ ಬಂದು ದಡವನ್ನು ಸೇರಿದರು. ಹಾಗೆ ಸೇರಿದವರ ಪೈಕಿ ಆಸ್ಪತ್ರೆಯಲ್ಲಿದ್ದ ೨೦ ಮಂದಿಯಲ್ಲಿ [illegible] ಆಸ್ಪತ್ರೆಯಲ್ಲಿ ಮೃತರಾದರು.

[illegible]ಸ್ವಾಮಿಗೆ ಪುನಃ ವಿಷ್ಣುರಾಂ [illegible]ಧಿಯವರು ಮುಖ್ಯಮಂತ್ರಿ

[illegible]ಸ್ಥಾನದ ವಿಧಾನ ಸಭಾ ಕಾಂಗ್ರೆಸ್ ಪಕ್ಷ [illegible] ನಾಯಕರಾಗಿ ಹಾಗೂ ಮುಖ್ಯಮಂತ್ರಿ ಪದವಿ [illegible]ರೋಧವಿಲ್ಲದೆ ಆಯ್ಕೆ [illegible]

[illegible] ಆಕಾಶವಾಣಿ ಕಾರ್ಯಕ್ರಮ [illegible] ಬೆಳಗ್ಗೆ ೭-೫ ನಾದಸ್ವರ. ೭-೧೫ ಮತ್ತು [illegible] ಪಿ. ಆರ್. ಕೃಷ್ಣನ್-ದೇವರ ನಾಮ [illegible]. ೭-೩೦ ಟಿ. ಎಸ್. ರಾಜರತ್ನಂಪಿಳ್ಳೆ-ನಾದಸ್ವರ. [illegible] ವಿರಾಮ. ಮಧ್ಯಾಹ್ನ ೧೨ ಪಿ. ಆರ್. [illegible] ಗಾಯನ. ೧೨-೩೦ [illegible] ಗಾಯನ. ೧ ನಾದಸ್ವರ ೧-೨೦ [illegible] ವೀಣೆ-ವಿರಾಮ ೧-೫೦ ನಾದಸ್ವರ. [illegible] ಸಂಜೆ ೫-೩೦ [illegible] ಗಾಯನ. ೬-೨೫ ವಚನ ಗಾನ ೬-೩೦ [illegible] ೭-೩೦ ಪ್ರಸಂಗ [illegible] ಸಂಗೀತೋತ್ಸವ ೮-೩೦ [illegible] ೮-೪೦ ಪ್ರಸಾರ ಗೀತೆ. [illegible] ೯-೩೦ ಅಖಿಲ ಭಾರತ ಸಂ[illegible] ಕಾರ್ಯಕ್ರಮ. ಬಿಪಿಲಿ ರಿಲೇ.

ಅರಮನೆ ನೌಕರರಿಂದ ಪ್ರತಿಭಟನಾ ಪ್ರದರ್ಶನ

ವಜಾ ಆದವರನ್ನು ತೆಗೆದುಕೊಳ್ಳದಿದ್ದರೆ ನೇರ ಕಾರ್ಯಾಚರಣೆ

ಮೈಸೂರು ೧೧

ಅರಮನೆ ನೌಕರರ ಬಹಿರಂಗ ಸಭೆಯೊಂದು ನೆನ್ನೆ ಸಂಜೆ ಗುರುಪಾದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕೋಟೆ ಹೊರಗಿನ ಮೈದಾನದಲ್ಲಿ ಜರುಗಿತು. ಶ್ರೀ [illegible]ರ್ಣನವರೂ ಮತ್ತು ಸಂಘದ ಉಪಾಧ್ಯಕ್ಷ ಶ್ರೀ ವೇದಾಂತ ಹೆಮ್ಮಿಗೆಯವರೂ ಭಾಷಣ ಮಾಡಿ ಅರಮನೆ ಸಿಬ್ಬಂದಿಯಲ್ಲಿ ೫೦೦ ಜನರನ್ನು ಕೆಲಸದಿಂದ ತೆಗೆದ ಬಗ್ಗೆ ಪ್ರತಿಭಟಿಸಿದರು. ಇದರಿಂದ ಉಂಟಾಗಿರುವ ಪರಿಸ್ಥಿತಿಯನ್ನು ನಿವಾರಿಸಿ ಸೌಹಾರ್ದವನ್ನು ಏರ್ಪಡಿಸಲು ರಾಜ್ಯಪಾಲರು ಪ್ರಯತ್ನಿಸಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು. ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ನೌಕರರ ನಿವೃತ್ತಿಯಿಂದ ಅವರಿಗೆ ಉಂಟಾಗಿರುವ ಪರಿಸ್ಥಿತಿಯನ್ನು ವಿವರಿಸುವ ಸಲುವಾಗಿ ಶ್ರೀಗಳಾದ ಶ್ರೀಕಂಠಪ್ಪ, ವೇದಾಂತ ಹೆಮ್ಮಿಗೆ ಮತ್ತು ಇತರ ಮೂವರನ್ನೊಳಗೊಂಡ ಸಮಿತಿಯನ್ನು ರಚಿಸಲೂ ನಿರ್ಧರಿಸಲಾಯಿತು.

ತರುವಾಯ ನಗರದ ಪ್ರಮುಖ ಬೀದಿಗಳಲ್ಲಿ ನೌಕರರ ಮೆರವಣಿಗೆಯೂ ನಡೆಯಿತು. ಅದರಲ್ಲಿ ೫೦೦ ಮಂದಿ ಮಹಿಳೆಯರೂ ಭಾಗವಹಿಸಿದ್ದರು. ಹಳೇ ಅಗ್ರಹಾರದ ತ್ಯಾಗರಾಜಾ ಸರ್ಕಲ್ ಬಳಿ ಮತ್ತೊಂದು ಸಭೆ ನಡೆದು ನೌಕರರಿಗೆ ಆಗಿರುವ ಅನ್ಯಾಯವನ್ನು ಖಂಡಿಸಲಾಯಿತು. ಶ್ರೀ ಶ್ರೀಕಂಠಪ್ಪನವರು ಮಾತನಾಡಿ ಇನ್ನು ೧೫ ದಿನಗಳಲ್ಲಿ ನೌಕರರಿಗೆ ಪರಿಹಾರ ದೊರಕಿಸುವ ಬಗ್ಗೆ ಸೂಕ್ತ ವ್ಯವಸ್ಥೆ ಮಾಡದಿದ್ದಲ್ಲಿ ಉಪವಾಸ ವ್ರತ, ಪೂರ್ಣ ಸತ್ಯಾಗ್ರಹ ಮುಂತಾದ ನೇರ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುವುದೆಂದೂ [illegible] ದರು.

ಕಲ್ಕತ್ತಾ ಕಾರ್ಪೊರೇಷನ್ನಿನ ಉನ್ನತಾಧಿಕಾರಿಗಳ ಬಂಧನ

ಲಕ್ಷಾಂತರ ರೂ. ಮೋಸದ ಆಪಾದನೆ

ಕಲ್ಕತ್ತಾ ಕಾರ್ಪೊರೇಷನ್ನಿನ ಲಕ್ಷಾಂತರ ರೂ. ಬೆಲೆ ಬಾಳುವ ೧,೫೦೦ ಟ್ರಕ್ ಧೂಳಿಗಳನ್ನು ಕೃತಕ ರೀತಿಯಲ್ಲಿ ಮಾರಾಟ ಮಾಡಿದ ಆಪಾದನೆ ಮೇಲೆ ಅಲ್ಲಿನ ಡೆ॥ ಎಕ್ಸಿಕ್ಯೂಟೀವ್ ಆಫೀಸರ್ ಶಿಶಿರ ಕುಮಾರ ದಾಸ್, ಅ॥ ಸೆಕ್ರೆಟರಿ ಅಶೋಕಾನಂದ ಬ್ಯಾನರ್ಜಿ, ಒಬ್ಬ ಮಾಜಿ ಸೂಪರಿಂಟೆಂಡಿಂಗ್ ಇಂಜಿನಿಯರ್, ಇಬ್ಬರು ಹಳೇ ಕಟ್ಟಡದ ವ್ಯಾಪಾರಿಗಳೇ ಮುಂತಾದ ೧೬ ಜನರನ್ನು ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ. ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರದವರು ಕೊಟ್ಟಿದ್ದ ಈ ಸಾಮಾನುಗಳನ್ನು ಮಾರಾಟ ಮಾಡಲು ಇವರು ಸುಳ್ಳು ಲೆಕ್ಕಗಳನ್ನೂ, ಬೇನಾಮಿ ಕಂಪೆನಿಗಳನ್ನೂ ಸೃಷ್ಟಿಸಿದ್ದರೆಂದು ಹೇಳಲಾಗಿದೆ.

ಕೇರಳದಲ್ಲಿ ಗೇಣಿದಾರರ ಉಚ್ಚಾಟನೆ ತಡೆಗೆ ಜರೂರು ಶಾಸನ

ಕೇರಳದಲ್ಲಿ ಭೂ ಸಮಸ್ಯೆಯನ್ನು ಪರಿಶೀಲಿಸಲು ಸಮಿತಿಯನ್ನು ರಚಿಸುವ ಸಂಬಂಧವಾಗಿ ಅಲ್ಲಿನ ಶಾಸನ ಸಭೆಯಲ್ಲಿ ಸದ್ಯದಲ್ಲೇ ನಿರ್ಣಯವೊಂದನ್ನು ತರಲಾಗುವುದು. ಭೂ ಮಾಲೀಕರು ಗೇಣಿದಾರರನ್ನು ಈ ಮಧ್ಯೆ ಜಮೀನು ಬಿಡುವಂತೆ ಮಾಡುವುದನ್ನು ತಡೆಗಟ್ಟಲು ಸಂಸ್ಥಾನದ ಗವರ್ನರು ನೆನ್ನೆ ಒಂದು ತುರ್ತು ಶಾಸನವನ್ನು ಹೊರಡಿಸಿರುವರೆಂದು ವರದಿಯಾಗಿದೆ.

ಲಂಚದ ಆಪಾದನೆಯಿಂದ ಕೇಂದ್ರ ಅಧಿಕಾರಿಯ ಬಿಡುಗಡೆ

ವಿದೇಶಿ ಗೊಬ್ಬರದ ಸರಬರಾಜಿನಲ್ಲಿ ಸರ್ಕಾರಕ್ಕೆ ಮೋಸ ಮಾಡಿದರೆಂದು ದೆಹಲಿಯ ವಿಶೇಷ ನ್ಯಾಯಾಧೀಶ ಗುರುದೇವ ಸಿಂಗ್‌ರವರಿಂದ ಶಿಕ್ಷೆಗೆ ಗುರಿಯಾಗಿದ್ದ ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಇಲಾಖೆಗಳ ಮಾಜಿ ಉಪ ಕಾರ್ಯದರ್ಶಿ ಶ್ರೀ ಎಸ್. ವೈ. ಕೃಷ್ಣಸ್ವಾಮಿ ಮತ್ತಿತರ ಐವರು ಮಂದಿಯನ್ನು ಪಂಜಾಬ್ ಶ್ರೇಷ್ಠ ನ್ಯಾಯಾಲಯವು ನಿರಪರಾಧಿಗಳೆಂದು ನಿರ್ಧರಿಸಿ ಬಿಡುಗಡೆ ಮಾಡುತ್ತಲೇ ಅವರೆ ಶ್ರೀ ಸಿ. ಎಸ್. ಡಿ. ಸ್ವಾಮಿ ಎಂಬುವನೊಬ್ಬರ ಲಂಚದ ಆಪಾದನೆಗಾಗಿ ಪಡೆದಿದ್ದ ಶಿಕ್ಷೆಯನ್ನು ಖಾಯಂ ಮಾಡಲಾಗಿದೆ.

ಸೂಚನೆ

ಸೌರಮಾನ ಯುಗಾದಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

ಬಿ. ಎಸ್. ತಾಂಡವಮೂರ್ತಿಯವರ ಮೇಲಿನ ಪೌರಸಭೆ ಮೊಕದ್ದಮೆ ವಜಾ

ಮೈಸೂರು ೧೧

ನಗರದ ಕಂಟ್ರ್ಯಾಕ್ಟುದಾರರಾದ ಶ್ರೀ ಬಿ. ಎಸ್. ತಾಂಡವಮೂರ್ತಿಯವರು ಕಳೆದ ಜುಲೈ ತಿಂಗಳಲ್ಲಿ ೧೧-೮ ರ ಸುಂಕ ಕೊಡದಿರುವ ಉದ್ದೇಶದಿಂದ ಪಗರಕ್ಕೆ ೯೬॥ ರೂ. ತಪ್ಪು ಮಾಹಿತಿ ಕೊಟ್ಟರೆಂಬ ಆಪಾದನೆ ಮೇಲೆ ಪೌರಸಭೆಯವರು ಹೂಡಿದ್ದ ಮೊಕದ್ದಮೆಯನ್ನು ನಗರದ ಎರಡನೇ ನ್ಯಾಯಾಧೀಶರು ನೆನ್ನೆ ವಜಾ ಮಾಡಿ ಶ್ರೀ ತಾಂಡವಮೂರ್ತಿಯವರು ತಪ್ಪಿತಸ್ಥರಲ್ಲವೆಂದು ತೀರ್ಪಿತ್ತಿದ್ದಾರೆ.

ರಾಮೋತ್ಸವ ಕಾರ್ಯಕ್ರಮ

ಚಾಮುಂಡೀಪುರಂ ಅಗ್ರಹಾರದ ಬಾಲಕರ ರಾಮಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ಶ್ರೀ ಬಿ. ವೆಂಕಟರಾವ್ ರವರಿಂದ "ರಾಮ ಮಹಿಮೆ" ಎಂಬ ವಿಷಯವಾಗಿ ಉಪನ್ಯಾಸ ರಾತ್ರಿ ೮ ಗಂಟೆಗೆ ವಿ॥ ರಾಜಣ್ಣನವರ ಘಟವಾದನದೊಡನೆ ವಿ॥ ಎ. ಎಸ್. ಪನ್ನರವರ ವೀಣಾ ವಾದನ

ವಿದ್ಯಾಪೀಠದ ಉತ್ತರಾದಿ ಮಠದ ಬೀದಿಯ ರಾಮಸೇವಾ ಸಮಿತಿಯಲ್ಲಿ ಈ ರಾತ್ರಿ ೮ ಗಂಟೆಗೆ ಬಿ. ಎಂ. ಮುನಿವೆಂಕಟಪ್ಪನವರ ಗಾನ.

ಆಗಸ್ಟ್ ೧೫-೧೬ ರಂದು ಸ್ವಾತಂತ್ರ್ಯ ಶತಮಾನೋತ್ಸವ

ಸಂಸ್ಥಾನಾದ್ಯಂತ ಆಚರಿಸಲು ಏರ್ಪಾಡು

ಸ್ವಂ ವ ವರದಿ] ಬೆಂಗಳೂರು ೧೧

ಬರುವ ಆಗಸ್ಟ್ ೧೫ ಮತ್ತು ೧೬ರಂದು ಭಾರತ ಸ್ವಾತಂತ್ರ್ಯದ ಶತಮಾನೋತ್ಸವವನ್ನು ಸಂಸ್ಥಾನದಲ್ಲೆಲ್ಲಾ ವೈಭವದಿಂದ ಆಚರಿಸಲು ಏರ್ಪಡಿಸಲಾಗುತ್ತಿದೆ. ಶ್ರೀಗಳು, [illegible]ಗಳು, ಕಾಲೇಜುಗಳಲ್ಲಿ ಸ್ವಾತಂತ್ರ್ಯ [illegible] ಸೂಚನೆ, ಸಿಹಿ ತಿಂಡಿ ವಿತರಣೆ, [illegible] ಸಭೆಗಳು ನಡೆಯುವುದು ಹಾಗೂ, ಸರಕಾರದ ಮುಂತಾದೆಡೆಗಳಲ್ಲಿ ಸ್ವಾತಂತ್ರ್ಯ [illegible] ವುದು. ಇದಕ್ಕಾಗಿ ಸುಮಾರು [illegible] ರೂ. [illegible] ಲಾಗುವುದು. ಜಿಲ್ಲೆಗಳಲ್ಲಿ ಸಮಾರಂಭ [illegible]ಗಳನ್ನು ನೇಮಿಸಲಾಗುವುದು. [illegible] ಸ್ವಾದಿಗಳಿಗೆ ಸ್ಮೃತಿ ನೀಡುವ ವಿಷಯವೂ [illegible]ಲನೆಯಲ್ಲಿದೆ

ಒಬ್ಬ ಪ್ರಜೆ ಉಳಿದಿರುವವರೆಗೂ ಧಾಳಿಯನ್ನೆದುರಿಸಲಾಗುವುದು

ಕಾಶ್ಮೀರದ ನೀತಿಯ ಬಗ್ಗೆ ಕೃಷ್ಣಮೆನನ್ನರ ಹೇಳಿಕೆ

ಕಾಶ್ಮೀರದ ಸಮಸ್ಯೆಯ ಪರಿಹಾರಕ್ಕಾಗಿ ಭಾರತದ ಸಂಧಾನ ಪ್ರಯತ್ನಗಳು ದೌರ್ಬಲ್ಯ ಅಥವಾ ಶರಣಾಗತಿಯೆಂದು ಭಾವಿಸಲಾಗದೆಂದು ಶ್ರೀ ವಿ. ಕೆ. ಕೃಷ್ಣಮೆನನ್ನರು ತಿಳಿಸಿರುವರು. ಕಾಶ್ಮೀರದ ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿ ಪಾಕಿಸ್ತಾನದವರೇ ಆಗಲೀ ಅಥವಾ ಅವರಿಂದ ಪ್ರೇರಿತರಾದ ಬೇರೆ ಯಾರೇ ಆಗಲೀ ಆಕ್ರಮಣ ನಡೆಸಿದರೆ ಈ ರಾಷ್ಟ್ರದಲ್ಲಿ ಒಬ್ಬ ಪ್ರಜೆಯು ಬದುಕಿರುವವರೆಗೂ ಅದನ್ನು ಎದುರಿಸಲಾಗುವುದೆಂದೂ ಅವರು ಘೋಷಿಸಿರುವರು. ಗುಂಡನ್ನು ಹಾರಿಸುವುದಿಲ್ಲ ಮತ್ತು ಸೈನ್ಯವನ್ನು ಎಲ್ಲಿಗೂ ಕಳುಹಿಸುವುದಿಲ್ಲ-ಎಂದಿರುವ ಭಾರತವು ದಿವೋದೀರ [illegible] ಖಂಡಿತ ಕಳೆಯುವುದಿಲ್ಲ. [illegible] ತಪ್ಪಾಗಿ ತಿಳಿಯಬಾರದು. [illegible] ಆಗಿದಾಗ ಯಾವ ರಾಷ್ಟ್ರವೇ ಆಗಲಿ ತನ್ನ [illegible] ಆಯುಧಗಳಿಂದಲೂ [illegible] ಬರ್ಬರ ಎಂಬುದಾಗಿ [illegible] ಹಾಗೆಯೇ [illegible] ಮಡಿಯುವುದಿಲ್ಲ. ಏಕೆಂದರೆ ಒಂದು [illegible] ಮರಾಷ್ಟ್ರವಾಕ್ಕೆ [illegible] ಕೊಟ್ಟರೆ ಅದು ಇನ್ನೊಂದೆಂದಿಗೂ ಮುಗಿಯುವುದಿಲ್ಲ-ಎಂಬುದಾಗಿ ಅವರು ಹೇಳಿರುವರು.

ಶ್ರೀಶೈಲದ ದೇವಸ್ಥಾನದಲ್ಲಿ ಕಳ್ಳನ ಬಂಧನ

ಸ್ವಂ ವ ವರದಿ] ನಂಜನಗೂಡು ೧೧

ಆಂಧ್ರ ದೇಶದ ಶ್ರೀಶೈಲದ ವೀರಭದ್ರ ದೇವಸ್ಥಾನದಲ್ಲಿ ಕದ್ದ ಚಿನ್ನ ಮತ್ತು ಬೆಳ್ಳಿ ಪದಾರ್ಥಗಳನ್ನು ಮಾರುತ್ತಿದ್ದಾಗ ಇಲ್ಲಿನ ಪೊಲೀಸಿನವರು ಶಿವಮೊಗ್ಗದ ಶಿವಲಿಂಗಸ್ವಾಮಿ ಎಂಬುವನನ್ನು ಬಂಧಿಸಿರುತ್ತಾರೆ. ಅವನನ್ನು ಆಂಧ್ರದ ಪೊಲೀಸರಿಗೆ ಒಪ್ಪಿಸಲಾಗುವುದು.

ರಾಮೋತ್ಸವದ ಕಾರ್ಯಕ್ರಮ

ಮೈಸೂರು ೧೧

ನಗರದ ಸಿವಿಲ್ ಪೊಲೀಸ್ ಹೆಡ್ ಕ್ವಾರ್ಟರ್ಸಿನ ರಾಮ ಮಂದಿರದಲ್ಲಿ ಈ ಸಂಜೆ ಶ್ರೀ ಸ [illegible] ನವರಿಂದ ಭಕ್ತ ಮಾರ್ಕಂಡೇಯ ಎಂಬ ಹರಿಕಥೆಯು ಏರ್ಪಡಿಸಲಾಗಿದೆ.

ಸಂತೆಪೇಟೆ [illegible] ಶ್ರೀರಾಮ ಮಂದಿರದಲ್ಲಿ ಈ ದಿನ ಸಂಜೆ [illegible] ರ ವೀಣಾ ವಾದನ ನಂತರ ವಿ॥ ದೇವೇಂದ್ರಪ್ಪನವರಿಂದ [illegible]

ನಂಜನಗೂಡಿನಲ್ಲಿರುವ ಶ್ರೀ ಲಕ್ಷ್ಮೀ ಭಜನ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ನಾಳೆ [illegible] ಸತ್ಯನಾರಾಯಣ ಪೂಜೆ [illegible] ಹರಿಕಥೆಯೂ ಮತ್ತು [illegible] ನಾರಾಯಣ [illegible] ಪಕ್ಕವಾದ್ಯಗಳೊಡನೆ ಏರ್ಪಡಿಸಿದೆ

ಬರುವ ತಿಂಗಳು ೩ನೇ ತಾ॥ ರಾಜ್ಯ ಸಭೆಗೆ ಚುನಾವಣೆ

ಶ್ರೀ ಕೆ ಸಿ ರೆಡ್ಡಿ ಮತ್ತು ಶ್ರೀ ಹೆಚ್ ಸಿ ದಾಸಪ್ಪನವರು ಲೋಕ ಸಭೆಗೆ ಆರಿಸಿಬಂದಿರುವುದರಿಂದ ತೆರವಾದ ರಾಜ್ಯ ಸಭೆಯ ಎರಡು ಸ್ಥಾನಗಳಿಗೆ ಬರುವ ತಿಂಗಳು ೩ನೇ ತಾರೀಕು ಚುನಾವಣೆಯು ನಡೆಯುವುದು ಈ ತಿಂಗಳು ೨೦ನೇ ತಾರೀಕು ನಾಮಪತ್ರ ಅರ್ಪಿಸಲು ಕಡೇ ದಿನ

ಹಿಂದಿ ತರಗತಿಗಳು

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರಾಥಮಿಕದಿಂದ ವಿಶಾರದ ವರೆಗಿನ ಪರೀಕ್ಷೆಗಳಿಗೂ, ಬರುವ ಅಕ್ಟೋಬರ್ ತಿಂಗಳು ನಡೆಯುವ ಮೈಸೂರು ಹಿಂದಿ ಸಾಹಿತ್ಯ ಪರಿಷತ್ತಿನ ಎಲ್ಲ ಪರೀಕ್ಷೆಗಳಿಗೂ ನಗರದ ಮಾದರಿ ಶಾಲೆಯ ಸೇವಾ ಸಂಘದವರು ಹಿಂದಿ ತರಗತಿಗಳನ್ನು ನಿತ್ಯವೂ ಸಂಜೆ ೫॥ ಗಂಟೆಗೆ ಏರ್ಪಡಿಸಿರುವರು ವಿದ್ಯಾರ್ಥಿಗಳು ಬಂದು ಸೇರುವಂತೆ ಕೋರಲಾಗಿದೆ

SREE GANESH
TALKIES
From 13—4—57
ODANGO
([illegible] & Technicolor)
[illegible] Rhonda Flemming [illegible] Donald Corey

[illegible] and Published by [illegible] Sadhvi Press, [illegible] Road, Mysore

---

ದ್ರಾವಿಡ ಸಂಘದ ನಾಯಕರಿಂದ ಪುನಃ ವಿಗ್ರಹ ಭೇದನ ಚಳುವಳಿ

ದ್ರಾವಿಡ ಸಂಘದ ಮುಖಂಡರಾದ ಶ್ರೀ ಇ. ವಿ. ರಾಮಸ್ವಾಮಿ ನಾಯಕರ್‌ರವರು ಪುನಃ ಬ್ರಾಹ್ಮಣ ವಿರೋಧ ಮತ್ತು ಧರ್ಮ ವಿರೋಧ ಚಳುವಳಿಯನ್ನು ಶೀಘ್ರದಲ್ಲೇ ಆರಂಭಿಸುವುದಾಗಿ ತಿಳಿಸಿರುತ್ತಾರೆ ಕಾಮರಾಜನಾಡಾರರು ಪುನಃ ಐದು ವರ್ಷ ಕಾಲ ಯಾವ ಆತಂಕವೂ ಇಲ್ಲದೆ ಮುಖ್ಯ ಮಂತ್ರಿಯಾಗಿ ಮುಂದುವರಿಯುವಂತೆ ತಾವು ಮಾಡಿರುವುದಾಗಿಯೂ, ಈಗ ತಮ್ಮ ಗಮನವನ್ನು ಶ್ರೀರಾಮನ ಪ್ರತಿಮೆ ದಹನ ಮತ್ತು ಹಿಂದೂ ದೈವಗಳ ವಿಗ್ರಹಗಳ ಭೇದನ ಚಳುವಳಿ ಕಡೆಗೆ ತಿರುಗಿಸುವುದಾಗಿಯೂ ತಿಳಿಸಿರುವರು

ಟ್ರೈನಿಂಗ್ ಇಲ್ಲದ ಪ್ರೈಮರಿ ಉಪಾಧ್ಯಾಯರಿಗೆ ಅನ್ಯಾಯ

ನಗರದ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಕಾರ್ಯದರ್ಶಿಯವರು ಈ ರೀತಿ ಬರೆಯುತ್ತಾರೆ.- ೧೯೪೭ನೇ ಜೂನ್ ತಿಂಗಳಿಂದ ೧೯೫೩ರವರೆಗಿನ ಅವಧಿಯಲ್ಲಿ ೪೫ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಟ್ರೈಯಿನ್ಡ್ ಗ್ರೇಡಿನ ಬಗ್ಗೆ ವಿನಾಯಿತಿಯನ್ನು ಕೊಟ್ಟು ಸರ್ಕಾರದವರು [illegible] ಸಂಬಳಗಳನ್ನು ಇದುವರೆಗೆ ಕೊಡುತ್ತಿದ್ದರು. ಆದರೆ ಇತ್ತೀಚೆಗೆ ಸಂಬಳ ಪಟ್ಟಿಗಳನ್ನು ಪರಿಷ್ಕರಿಸಿದಾಗ ಅಂತಹ ಉಪಾಧ್ಯಾಯರುಗಳನ್ನು ಕೆಳಗಿನ ವರ್ಗಕ್ಕೆ ಇಳಿಸಿ ವಿದ್ಯಾಧಿಕಾರಿಗಳು ಆಜ್ಞೆ ಮಾಡಿದ್ದಾರೆ ಇದು ಸರ್ಕಾರದವರ ಹಿಂದಿನ ಆಜ್ಞೆಗೆ ವ್ಯತಿರಿಕ್ತವಾಗಿದ್ದು ಅಂತಹ ಅಧ್ಯಾಪಕರಿಗೆ ಅನ್ಯಾಯ ಮತ್ತು ತೇಜೋವಧೆಯಾಗಿದೆ ಆದ್ದರಿಂದ ಅವರಿಗೆ ಟ್ರೈಯಿನ್ಡ್ ಗ್ರೇಡ್ ಸಂಬಳವನ್ನೇ ಕೊಟ್ಟು ಸಹಾಯ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ

ಬಿಡಾರಂ ಕೃಷ್ಣಪ್ಪನವರ

ಶ್ರೀ ಪ್ರಸನ್ನಸೀತಾರಾಮ ಮಂದಿರ

13 4 57ನೇ ಶನಿವಾರ ಸಂಜೆ 6 ಗಂಟೆಗೆ

ಶ್ರೀಮತಿ ವಿ॥ ಎನ್ [illegible]	ಕೊಳಲು
,, ಟಿ ರುಕ್ಮಿಣಿ ಬಿ ಎಸ್‌ಸಿ	ಪಿಟೀಲು
ವಿ॥ ನಾರಾಯಣಸ್ವಾಮಿಪಿಳ್ಳೆ	ಮೃದಂಗ

14 4 57ನೇ ಭಾನುವಾರ ಸಂಜೆ 6ಕ್ಕೆ

ವಿ॥ ಸಾತನೂರು ಎ.ಜಿ ಸುಬ್ರಹ್ಮಣ್ಯಂ	ಗಾಯನ
ವಿ॥ ಸಿ ಭುವನೇಶ್ವರಯ್ಯ	ಪಿಟೀಲು
ವಿ॥ ಮಧುರೈ ಕೃಷ್ಣಯ್ಯಂಗಾರ್	ಮೃದಂಗ

ಪ್ರವೇಶ ದರ ರೂ 1-0 0

ಕೇರಳದ ಸರ್ಕಾರಿ ಕೈಗಾರಿಕೆಗಳಲ್ಲಿ ಕಾರ್ಮಿಕರಿಗೂ ಆಡಳಿತ ಸ್ಥಾನ

ಕೇರಳದಲ್ಲಿ ಸರ್ಕಾರೀ ಕೈಗಾರಿಕೋದ್ಯಮಗಳ ಆಡಳಿತದಲ್ಲಿ ಕೆಲಸಗಾರರಿಗೂ ಸ್ಥಾನ ಕೊಡುವ ಬಗ್ಗೆ ಅಲ್ಲಿನ ಸರ್ಕಾರವು ನಿರ್ಧರಿಸಿರುತ್ತದೆ ಸರ್ಕಾರೀ ಕೈಗಾರಿಕೆಗಳನ್ನು ನಡೆಸಲು ಸಧ್ಯದಲ್ಲೇ ಆಡಳಿತ ಮಂಡಲಿಯೊಂದನ್ನು ರಚಿಸಲಾಗುವುದು.

ಮೈಸೂರು ಪೇಟೆ ಧಾರಣೆ

ಬಂಗಾರದಪಲ್ಲ ಸುಕು		
ಕೊಯಮುತ್ತೂರು	[illegible]	[illegible]
ರತ್ನಚೂಡಿ	[illegible]	[illegible]
ಕೆಂಬುಡಿ	[illegible]	
ಕಡ್ಡಿ	[illegible]	[illegible]
ಜೀರಿಗೆ ಸಂಬರ್	[illegible]	
ರಾಗಿ	[illegible]	[illegible]
ಜೋಳ	[illegible]	[illegible]
ಕಂಬು	[illegible]	
ಕಡಲೆಕಾಳು	[illegible]	[illegible]
ತೊಗರಿಬೇಳೆ	[illegible]	
ಹೆಸರುಬೇಳೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	
ಅವರೆ	[illegible]	[illegible]
ಮೆಣಸಿನಕಾಯಿ	[illegible]	[illegible]
ಹಿಪ್ಪೆಕಾಯಿ	[illegible]	[illegible]
ಹುಣಸೆಹಣ್ಣು	[illegible]	
ತೆಂಗಿನಕಾಯಿ	[illegible]	[illegible]
ಹೊಗೆಸೊಪ್ಪು	[illegible]	[illegible]

SREE GAYATHRI
TALKIES
Last Day
RETURN TO PARADISE

From 13-4-57 For 4 days
R.K.O's
THE CONQUEROR
(Cinemascope & Technicolor)
Starring - John Wayne and
Susan Hayward

— Morning Shows —
13th & 14th
CAPTAIN BLOOD

ರಷ್ಯದಿಂದ ಮತ್ತೊಂದು ಅಣು ಅಸ್ಫೋಟನ

ಮೊನ್ನೆ ರಷ್ಯವು ಮತ್ತೊಂದು ಅಣು [illegible] ಅಸ್ಫೋಟನೆಯನ್ನು ನಡೆಸಿತೆಂದೂ ಇದು [illegible] ದಿನ ಎಲ್ಲ ಅಸ್ಫೋಟನೆಗಳಿಗಿಂತಲೂ [illegible] ಬಲವಾಗಿತ್ತೆಂದೂ ಅಮೇರಿಕದ ಅಣು [illegible] ಡಲಿಯವರು ಪ್ರಕಟಿಸಿದ್ದಾರೆ

ಪಾಕಿಸ್ತಾನದ ರಾಜಕೀಯ ಪ[illegible] ನಿಷೇಧಕ್ಕಾಗಿ ಮುಸ್ಲಿಂ ಲೀ[illegible]

ಪಾಕಿಸ್ತಾನದಲ್ಲಿರುವ ಎಲ್ಲಾ ರಾಜ[illegible] ಪಕ್ಷಗಳ ಮೇಲೂ ನಿಷೇಧ ಹಾಕಲು [illegible] ಸರ್ದಾರ್ ನಾಯಕ ಅಬ್ದುಲ್ [illegible] ರು ಕೋರಿರುತ್ತಾರೆ ಯಾವ ಪ್ರಾಂ[illegible] ಯಾವ ಪಕ್ಷವೂ ಆಡಳಿತ ನಡೆಸಲು [illegible] ವೀಯಬಾರದೆಂದೂ ಅವರು [illegible] ಪಕ್ಷಗಳ ರಾಜ್ಯಭಾರ ಪದ್ಧತಿ[illegible] ಪಾಕಿಸ್ತಾನದ ಪ್ರಜೆಗಳು ಕಷ್ಟ [illegible] ನ್ನು ಅನುಭವಿಸುತ್ತಿರುವರೆಂದೂ, ಕಳೆದ [illegible] ಗಳಿಂದಲೂ ಅಲ್ಲಿ ಆಡಳಿತ ನಡೆಸಿದವರು [illegible] ನ್ನು ನಿಶ್ಶಕ್ತವನ್ನಾಗಿ ಮಾಡಿರುವರೆಂದೂ [illegible] ಹೇಳಿರುವರು.

[illegible] ಸಂಗೀತ ಸಭಾ
[illegible]
ತಾ॥ 21-4-57ನೇ [illegible]
[illegible]
ಅಮೋಘವಾದ ವೇಣುವಾ[illegible]

ವಿ॥ ಟಿ ಆರ್. ಮಹಾಲಿಂಗಂ	ಕೊಳ[illegible]
ಕುಮಾರಿ ಟಿ ರುಕ್ಮಿಣಿ	ಪಿಟೀಲು
ವಿ॥ ಎಂ. ಎಲ್ ವೀರಭದ್ರಯ್ಯ	ಮೃ[illegible]
ವಿ॥ ಕೆ ಎಸ್ ಮಂಜುನಾಥ್	ಘಟ[illegible]
ವಿ॥ ಸೋಸಲೆ ಶೇಷಗಿರಿದಾಸ್	ಮುಖ[illegible]

ಮೆಂಬರಲ್ಲದವರಿಗೆ ಪ್ರವೇಶ ದರ 2-0-0

ಮೈಸೂರ್ ಸಬಾರ್ಡಿನೇಟ್ ಕೋರ್ಟ್ ಅಪ್ಪಣೆ ಮೇರೆ
ತಾ॥ 14-7-57ನೇ ಭಾನುವಾರ
ಬೆಳಿಗ್ಗೆ 10 ಗಂಟೆಗೆ
ನೂರಡಿ ರಸ್ತೆ ಪ್ರೈಮರಿ ಸ್ಕೂಲ್ ಹಿಂಭಾಗದ 622ನೇ ನಂ ಮನೆಯಲ್ಲಿ
ಕಬ್ಬಿಣದ ಭಾರಿ ಸೇಫ್,
ಪೆಟ್ಟಿಗೆ, ಮಂಚ, ಕುರ್ಚಿ, ಬೆಂಚು,
ಅಡಿಗೆ ಪಾತ್ರೆಗಳು ವಗೈರೆ
— ಹರಾಜು —
ಬಿ. ಎಸ್. ಸುಬ್ಬರಾವ್, ಅಮೀ[illegible]

ಅಮೋಘ ಹರಾಜು ಮಾರಾಟ

14—4—57ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ [illegible]

ಅಂಡರ್‌ವುಡ್ ಪೋರ್ಟಬಲ್ ಟೈಪ್‌ರೈಟರ್, [illegible] ಮನೆಯ [illegible] ಬೇಕಾಗುವ ವಿವಿಧ ಸೈಜುಗಳ ಮೇಜುಗಳು [illegible] ಟೇಬಲ್ಲುಗಳು [illegible] ಗಳು ಬೀರು ಮತ್ತು ಕನ್ನಡಿ ಮರದ ಅಲ್ಮೆರಾಗಳು, ಸಿಂಗಲ್ ಮತ್ತು ಡಬ್ಬಲ್ ಮಂಚಗಳು, [illegible] ಇಲ್ಲದ [illegible] ಗಳು, ಸ್ಪ್ರಿಂಗ್ ಕುಷನ್ ಸೋಫಾ ಸೆಟ್ಟು. [illegible] ಮೊದಲಾದ ಒಳ್ಳೆಯ ಫರ್ನಿಚರುಗಳು ಮತ್ತು ಇತರ ಉಪಯುಕ್ತ ವಸ್ತುಗಳು

13ನೇ ತಾರೀಖು ಶನಿವಾರ ಸಂಜೆ 4ರಿಂದ 6 ಗಂಟೆವರೆಗೆ ಸಾಮಾನುಗಳ [illegible] ನೋಡಬಹುದು.

ಅಬೀದ್ಸ್,
ಹರಾಜು ಮಾರಾಟಗಾರರು, ಸ್ಟ್ಯಾಚ್ಯು ಬಳಿ ಮೈಸೂರು

ಅಮೋಘ ಹರಾಜು ಮಾರಾಟ

14—4—57 ನೇ : ಭಾನುವಾರ : ಬೆಳಿಗ್ಗೆ 10 ಘಂ[illegible]

ಸೋಫಾ ಸೆಟ್ಟುಗಳು, [illegible], [illegible] ಮೇಜುಗಳು, ಆಫೀಸು ಟೇಬಲ್ಲುಗಳು [illegible] ಮತ್ತು ಸಿಂಗಲ್ ಮಂಚಗಳು, [illegible] ಯಂತ್ರ, [illegible] ಮತ್ತು ಇತರ ಗೃಹೋಪಯುಕ್ತ ಸಾಮಾನುಗಳು

ಎಂಪೈರ್ ಆಕ್ಷನೀರ್ಸ್‌ರವರಲ್ಲಿ
581 , ಇರ್ವಿನ್ ರಸ್ತೆ, ಮೈಸೂರು

ಪ್ರಭು ದೇವಾ ಥಿಯೇಟರ್ ★

(ಪದ್ಮಾ ಟಾಕೀಸ್)

12—4—57ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ

ಪ್ರತಿದಿನ ಮೂರು ಪ್ರದರ್ಶನಗಳು

ಎನ್ ಟಿ ರಾಮರಾವ್, ಜೆಮಿನಿ ಗಣೇಶ, ತಂಗವೇಲು, ಸಾವಿತ್ರಿ, ಕರುಣಾನಿಧಿ, ಎಸ್ ವಿ ರಂಗರಾವ್, [illegible], ಋಷ್ಯೇಂದ್ರಮಣಿ ಮುಂತಾದವರು ಪಾತ್ರವಹಿಸಿರುವ

★ ಮಾಯಾ ಬಜಾರ್ ★
(ಶಶಿರೇಖಾ ಪರಿಣಯ)

ವಿಜಯಾರವರ ತಮಿಳು ಚಿತ್ರ

([illegible])

ಟೆಲಿಫೋನ್ ನಂ 792

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕ್, ಧರ್ಮಾವರಂ
ಪೂನಾ, ಭಾಗಲ್ಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ : 446

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ಜಾಹಿರಾತಿಗೆ ಬರೆಯಿರಿ

ಪುಟ : ೦೩] SADHVI · MONDAY 15—4—1957 ಮೈಸೂರು · ಸೋಮವಾರ ೧೫—೪—೧೯೫೭ · [ಸಂಚಿಕೆ : ೨೮೬

೧೮-೧೯ನೇ ತಾ|| ನೂತನ ಮಂತ್ರಿಗಳ ಪ್ರಮಾಣವಚನ

ಅರಮನೆ ನೌಕರರ ಖೋತಾ ಪ್ರಯತ್ನ ನಿಲ್ಲಬೇಕು

ರಾಜ್ಯಪಾಲರಿಗೆ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಮನವಿ

ಮೈಸೂರು ೧೪

ಅರಮನೆಗೆ ಸೇರಿದ ೫೦೦ ನೌಕರರನ್ನು ನಿವೃತ್ತಿ ಮಾಡುವ ಪ್ರಯತ್ನಕ್ಕಾಗಿ ಪ್ರತಿಭಟಿಸಿ ನಗರದ ೧೩ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ನೆನ್ನೆ ನಡೆಸಿ ನಿರ್ಣಯ ಮಾಡಿರುತ್ತಾರೆ. ಅರಮನೆ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಬಿ [illegible]ಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ನೌಕರರ ಖೋತಾ ಬಗ್ಗೆ ಕೊಡಲಾಗಿರುವ ನೋಟೀಸ್ ವಾಪಸು ತೆಗೆದುಕೊಳ್ಳಬೇಕೆಂದು ರಾಜ್ಯಪಾಲರನ್ನು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು. ಸಂಸ್ಥಾನ ಸರ್ಕಾರದವರು ಮಧ್ಯೆ ಪ್ರವೇಶಿಸಿ ನೌಕರರ ಹಿತರಕ್ಷಣೆ ಮಾಡಬೇಕೆಂದೂ ಕೋರಲಾಯಿತು

ಗಾಂಧಿ ವಿಚಾರ ಪರಿಷತ್ತಿನಲ್ಲಿ ವಿಶೇಷ ತರಗತಿಗಳು

ಬೇಸಿಗೆ ರಜದ ವಿಶೇಷ ತರಗತಿಗಳು ೧೬ನೇ ಮಂಗಳವಾರದಿಂದ ಪ್ರಾರಂಭವಾಗಿ ಪ್ರತಿ ಮಂಗಳವಾರ, ಬುಧವಾರ ಮತ್ತು ಗುರುವಾರಗಳಲ್ಲಿ ಸಂಜೆ ೬-೩೦ರಿಂದ ೭-೩೦, ಶನಿವಾರ ಮತ್ತು ಭಾನುವಾರ ಬೆಳಿಗ್ಗೆ ೯ರಿಂದ ೧೧ರವರೆಗೆ ತರಗತಿಗಳು ನಡೆಯುತ್ತವೆ. ಶ್ರೀಗಳಾದ ಎಸ್ ವಿ. ರಂಗಣ್ಣ, ಡಾ|| ವಿ ಕೃಷ್ಣರಾವ್, ಎಂ ಯಾಮುನಾಚಾರ್, ಎಂ. ಮುದ್ದುಲಿಂಗಣ್ಣ ಮುಂತಾದವರು ಪಾಠಗಳನ್ನು ನಡೆಸುತ್ತಾರೆ. ಅಂತರ ರಾಷ್ಟ್ರೀಯ ರಾಜ್ಯಶಾಸ್ತ್ರ, ಸಾಹಿತ್ಯ-ಕಲೆ, ಸಂಸ್ಕೃತಿ, ಭಾರತೀಯ ದರ್ಶನ, ಗಾಂಧಿ ಜೀವನ ತತ್ವಗಳು, ಇತಿಹಾಸ, ಅರ್ಥ ಶಾಸ್ತ್ರ-ಇವುಗಳ ಬಗ್ಗೆ ಪ್ರವಚನಗಳು ಏರ್ಪಟ್ಟಿವೆ. ಸೇರಬಿಚ್ಛಿಸುವವರು ರಾಮವಿಲಾಸ ರಸ್ತೆಯಲ್ಲಿರುವ ಪರಿಷತ್ತಿನ ಕಛೇರಿಯಲ್ಲಿ ಬೆಳಿಗ್ಗೆ ೯ರಿಂದ ೧೧, ಸಂಜೆ ೬ರ ಒಳಗೆ ವಿಚಾರಿಸಬಹುದು

ಉಪನ್ಯಾಸ

ನಗರದ ಶ್ರೀ ಶಂಕರ ಜಯಂತಿ ಮಹೋತ್ಸವದ ಆಶ್ರಯದಲ್ಲಿ ಈ ಸಂಜೆ ೬|| ಗಂಟೆಗೆ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ವೇ|| ಶ್ರೀ ಎಸ್ ವಿಠ್ಠಲಶಾಸ್ತ್ರಿಗಳವರು "[illegible]" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಸ್ವಾಗತವಿದೆ

ಜಾದ್ ಕಾಶ್ಮೀರದಲ್ಲಿ ಅಧಿಕಾರ ಬದಲಾವಣೆ

ಜಾದ್ ಕಾಶ್ಮೀರ ಮುಸ್ಲಿಂ ಸಮ್ಮೇಳನದ [illegible] ಸರ್ದಾರ್ ಇಬ್ರಾಹಿಂರವರು ಅಲ್ಲಿನ [illegible]ದ ಅಧ್ಯಕ್ಷರಾಗಿ ನೆನ್ನೆ ಪ್ರಮಾಣವಚನ ಸ್ವೀಕರಿಸಿದರು. ಅದಕ್ಕೆ ಮುಂಚೆ [illegible]ರ್ ಅಬ್ದುಲ್ ಖಯೂಂರವರ ನೇತೃತ್ವದ [illegible]ಮುಸ್ಲಿಂ ಸರ್ಕಾರವು ರಾಜೀನಾಮೆಯನ್ನು [illegible] ಮುಸ್ಲಿಂ ಸಮ್ಮೇಳನದ ಹಲವು [illegible]ಗಳ ವಿರೋಧವುಂಟಾಗಿ ತಾವು ರಾಜೀನಾಮೆ ಕೊಡಬೇಕಾಗಿ ಬಂದಿತೆಂದು ಖಯೂಂ [illegible] ತಿಳಿಸಿರುತ್ತಾರೆ.

ಗಂಗೆಯಲ್ಲಿ ೭೫ ಜನರ ಮರಣ

ಮುಜಫರಪುರದ ಬಳಿ ಜೇಚರ್‌ಘಟ್ಟ ಎಂಬಲ್ಲಿ ಗಂಗಾ ನದಿಯಲ್ಲಿ ಭಾರಿ ದೋಣಿಯು ಕಳೆದ ಮಂಗಳವಾರ ಮಗುಚಿಕೊಂಡು ೭೫ ಮಂದಿ ಮೃತಪಟ್ಟಿರುತ್ತಾರೆ. ಅವರು ರಾಮನವಮಿ ಉತ್ಸವದಂದು ದೇವಾಲಯದಲ್ಲಿ ಪೂಜೆ ನಡೆಸಲು ಹೋಗಿದ್ದರು

ಕೇರಳದ ಕನ್ನಡ ಶಾಸಕನಿಗೆ ಅನರ್ಹತೆ

ಕೇರಳ ವಿಧಾನಸಭೆಗೆ ಮಂಜೇಶ್ವರ ಕ್ಷೇತ್ರದಿಂದ ಆರಿಸಿಬಂದ ಶ್ರೀ ಉಮೇಶರಾಯರ ಚುನಾವಣಾ ವೆಚ್ಚದ ಪಟ್ಟಿಯನ್ನು ಸರಿ ಅವಧಿಯಲ್ಲಿ ಒಪ್ಪಿಸದಿರುವ ಬಗ್ಗೆ ಅವರ ಚುನಾವಣೆಯನ್ನು ರದ್ದುಗೊಳಿಸಲಾಗಿದೆ. ಅವರು ಕರ್ನಾಟಕ ಏಕೀಕರಣ ಸಮಿತಿಯ ಪರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

ಜೈಲಿನಲ್ಲಿ ಕೃಷ್ಣನಿಂದ ಆತ್ಮಹತ್ಯ ಪ್ರಯತ್ನ

ಬೇಲೂರು ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ಮೊದಲನೇ ಅಪರಾಧಿ ಕೃಷ್ಣನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಕಳೆದ ಸೋಮವಾರ ಬ್ಲೇಡು ಪಟ್ಟಿಯಿಂದ ಹೊಟ್ಟೆಯನ್ನು ಬಗೆದುಕೊಂಡನೆಂದೂ, ಅದನ್ನು ಕೂಡಲೇ ಅವನಿಂದ ಕಿತ್ತುಕೊಳ್ಳಲಾಯಿತೆಂದೂ ವರದಿಯಾಗಿದೆ. ಹೊಟ್ಟೆಯಿಂದ ರಕ್ತವು ಸುರಿಯುತ್ತಿತ್ತು. ಅವನಿಗೆ ಚಿಕಿತ್ಸೆ ನಡೆಸಲಾಯಿತು. ಅವನನ್ನು ಪ್ರತ್ಯೇಕವಾದ ಕೋಣೆಯಲ್ಲಿಟ್ಟು ಇತರರ ಸಂಪರ್ಕವಿಲ್ಲದಂತೆ ಮಾಡಿದ್ದರೂ ಅವನಿಗೆ ಬ್ಲೇಡು ಪಟ್ಟಿ ದೊರೆತ ವಿಚಾರವಾಗಿ ತನಿಖೆ ನಡೆಸಲಾಗುತ್ತಿದೆ. ಕೃಷ್ಣನ ಮೇಲೆ ಈ ಬಗ್ಗೆ ಮೊಕದ್ದಮೆಯನ್ನು ಪೋಲೀಸರು ದಾಖಲು ಮಾಡಿಕೊಂಡಿರುವರು

ವಿಜ್ಞಾಪನೆ

ಕೆಲವು ಅನಿವಾರ್ಯಗಳ ನಿಮಿತ್ತ ನೆನ್ನೆ "ಸಾಧ್ವಿ" ಪತ್ರಿಕೆಯು ಪ್ರಕಟವಾಗದಿದ್ದುದಕ್ಕಾಗಿ ವಿಷಾದಿಸುತ್ತೇವೆ. ಈ ಬಗ್ಗೆ ವಾಚಕರ ಕ್ಷಮೆಯನ್ನು ಬೇಡುತ್ತೇವೆ

— ವ್ಯವಸ್ಥಾಪಕ

ನಿವೃತ್ತ ನೌಕರರ ಸಂಘ

ತಾ|| ೭-೪-೫೭ರಲ್ಲಿ ಸರ್ಕಾರಿ ನಿವೃತ್ತ ನೌಕರರು ನಗರದಲ್ಲಿ ಸಭೆ ಸೇರಿ ಈ ಕೆಳಗೆ ಕಂಡ ಮಹನೀಯರನ್ನು ಅಧಿಕಾರ ವರ್ಗಕ್ಕೆ ಚುನಾಯಿಸಿರುತ್ತಾರೆ - ಅಧ್ಯಕ್ಷರು ಡಾ|| ಬಿ ಜಿ ದಾಸ್ ಉಪಾಧ್ಯಕ್ಷರು ಶ್ರೀ ಎಲ್. ದೇವರಾಜೆ ಅರಸರು ಕಾರ್ಯದರ್ಶಿಗಳು ಶ್ರೀ ಆರ್ ರಾಮಾಚಾರ್‌ರವರು, ಆರ್ ರಂಗರಾಜುರವರು, ಕಾರ್ಯಕಾರಿ ಸಮಿತಿಯ ಸದಸ್ಯರುಗಳು - ಶ್ರೀಗಳಾದ ಎಂ ಬಿ ನಾರಾಯಣ ಅಯ್ಯಂಗಾರ್ಯರು, ಕೃಷ್ಣಮೂರ್ತಿಯವರು, ಸುಂದರರಾಯರು, ಟಿ ಸುಬ್ಬರಾಜೆ ಅರಸರು, ವೆಂಕಟರಾಮಯ್ಯನವರು, ಡಿ ಎಲ್ ಶ್ರೀನಿವಾಸರಾಯರು, ರಾಮಸ್ವಾಮಿಯವರು, ಸುಂದರಸಿಂಗ್‌ರವರು, ಸೀತಾರಾಮಯ್ಯನವರು, ಡಿ ಕೃಷ್ಣಯ್ಯನವರು, ಶ್ರೀಮತಿ ಗೋಪೀದೇವಿಯವರು ಮತ್ತು ಶ್ರೀ ನಾರಾಯಣರಾಯರು.

ಕೇರಳದ ಖಾಸಗಿ ಶಾಲಾ ಅಧ್ಯಾಪಕರಿಗೆ ಉದ್ಯೋಗದ ರಕ್ಷಣೆ

ಕೇರಳ ಸಂಸ್ಥಾನದಲ್ಲಿ ಖಾಸಗಿ ಶಾಲೆಗಳ ಅಧ್ಯಾಪಕರಿಗೆ ಉದ್ಯೋಗದ ರಕ್ಷಣೆ ದೊರಕಿಸಿಕೊಡುವ ಸಂಬಂಧವಾಗಿ, ಬರುವ ಜೂನ್ ತಿಂಗಳಲ್ಲಿ ಸೇರುವ ಶಾಸನಸಭೆಯ ಅಧಿವೇಶನದಲ್ಲಿ ಶಾಸನವೊಂದನ್ನು ತರಲಾಗುವುದೆಂದು ಅಲ್ಲಿನ ವಿದ್ಯಾಸಚಿವರು ತಿಳಿಸಿರುವರು

ನಗರ್ ಹವೇಲಿಯಲ್ಲಿ ಪುನಃ ಪೋರ್ಚುಗೀಸರ ಆಡಳಿತಕ್ಕೆ ವಿರೋಧ

೬ ಸಾವಿರ ಆದಿವಾಸಿಗಳ ದೃಢ ಪ್ರತಿಜ್ಞೆ

ದಾಮನ್ ಬಳಿ ಪೋರ್ಚುಗೀಸ್ ಆಡಳಿತದಿಂದ ವಿಮೋಚನೆಯಾಗಿರುವ ನಗರ ಹವೇಲಿ ಕ್ಷೇತ್ರದಲ್ಲಿ ಪುನಃ ಪೋರ್ಚುಗೀಸರ ಆಡಳಿತವನ್ನು ಸ್ಥಾಪಿಸುವ ಪ್ರಯತ್ನವನ್ನು ಸರ್ವ ವಿಧದಿಂದಲೂ ಪ್ರತಿಭಟಿಸುವುದಾಗಿ ಅಲ್ಲಿನ ೬,೦೦೦ ಆದಿವಾಸಿಗಳು ಮತ್ತು ಗುಡ್ಡಗಾಡಿನವರು ನೆನ್ನೆ ಮಹಾತ್ಮಾ ಗಾಂಧಿಯವರ ಪ್ರತಿಮೆ ಎದುರಿನಲ್ಲಿ ದೃಢ ಪ್ರತಿಜ್ಞೆ ಮಾಡಿದರು. ಅಂತರ ರಾಷ್ಟ್ರೀಯ ನ್ಯಾಯಾಲಯದ ತೀರ್ಪಿನ ಮೂಲಕ, ಪೋರ್ಚುಗೀಸರು ಪುನಃ ಆ ಪ್ರದೇಶದ ಮೇಲೆ ಅಧಿಕಾರ ಹೊಂದುವುದನ್ನು ವಿರೋಧಿಸಲು ಸಭೆ ಸೇರಿದ್ದರು. ಈ ದಿನ ನ್ಯಾಯಾಲಯವು ಪೋರ್ಚುಗಲ್ಲಿನ ದೂರನ್ನು ವಿಚಾರಿಸಲಿದೆ. ಪೋರ್ಚುಗೀಸರು ಪುನಃ ಪ್ರವೇಶಿಸುವ ಮುಂಚೆ ತಾವೆಲ್ಲರೂ ಬಲಿದಾನವಾಗುತ್ತೇವಾಗಿ ಅವರುಗಳು ಶಪಥ ಮಾಡಿರುವರು

ರಾಮೋತ್ಸವ ಕಾರ್ಯಕ್ರಮ

ಕೃಷ್ಣಮೂರ್ತಿಪುರದ ೧೪೯ನೇ ನಂ ಗೃಹದಲ್ಲಿರುವ ಬಾಲಕರ ಶ್ರೀ ಸೀತಾರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ನಾಳೆ ಪಟ್ಟಾಭಿಷೇಕವೂ, ನಾಳಿದ್ದು ಹನುಮಂತೋತ್ಸವವೂ ಏರ್ಪಾಡಾಗಿದೆ

ಚಲುವಾಂಬಾ ಅಗ್ರಹಾರದಲ್ಲಿರುವ ಶ್ರೀರಾಮ ಮಂದಿರದಲ್ಲಿ ಈ ರಾತ್ರಿ ವಿ|| ಡಿ ಕೆ ಲಕ್ಷ್ಮಮ್ಮನವರ ಸಂಗೀತ

ಶ್ರೀರಾಮಪೇಟೆ ಆರ್ಯವೈಶ್ಯ ಬಾಲಕ ಭಕ್ತ ಮಂಡಲಿಯಲ್ಲಿ ಈ ದಿನ ಸಂಜೆ ೬-೩೦ಕ್ಕೆ ಕುಮಾರಿ ಎಂ ಕೆ ಯಶೋದಮ್ಮ ಮತ್ತು ಎಂ ಕೆ ಸೀತಮ್ಮ ಸಹೋದರಿಯರಿಂದ "ಭೃಂಗಿ ಶಾಪ" ಎಂಬ ಕಥೆ

ಕಿಲ್ಲೆ ಮೊಹಲ್ಲಾ ಶ್ರೀರಾಮಾ ಬೀದಿಯಲ್ಲಿರುವ ಆನಂದ ರಾಮ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ದಳವಾಯ್ ಪ್ರೌಢ ಶಾಲೆಯ ಅಧ್ಯಾಪಕರಾದ ಶ್ರೀ ವೆಂಕಟರಾಮರವರು ಸತ್ಯಮೂರ್ತಿ ರಾಮ ಎಂಬ ಬಗ್ಗೆ ಉಪನ್ಯಾಸ ಮಾಡುವರು

ಮೂರನೇ ರಾಮಚಂದ್ರ ಅಗ್ರಹಾರದ ಬಾಲಕರ ರಾಮ ಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ನಾರಾಯಣ ಶಾಸ್ತ್ರಿಗಳಿಂದ "ಶ್ರೀರಾಮ ಪಟ್ಟಾಭಿಷೇಕ" ಎಂಬ ಹರಿಕಥೆ

೧೮ ಅಥವಾ ೧೯ನೇ ತಾ|| ನೂತನ ಮಂತ್ರಿಮಂಡಲದ ಪ್ರಮಾಣ ವಚನ

೧೦ ರಿಂದ ೧೧ ಮಂದಿ ಸಚಿವರೂ, ೬-೭ ಮಂದಿ ಉಪಸಚಿವರೂ ಇರುವ ಸಂಭವ

ಬೆಂಗಳೂರು ೧೪

ಮೈಸೂರು ಸಂಸ್ಥಾನದ ಮಂತ್ರಿಮಂಡಲದಲ್ಲಿ ೧೦-೧೧ ಮಂದಿ ಸಚಿವರಿರಲಿರುವರೆಂದು ತಿಳಿದು ಬಂದಿದೆ. ದೆಹಲಿಯಲ್ಲಿ ಪ್ರಧಾನ ಮಂತ್ರಿಯೊಡನೆ ಚರ್ಚೆ ನಡೆಸಿ ಈ ದಿನ ನಾಯಕ ಶ್ರೀ ಎಸ್. ನಿಜಲಿಂಗಪ್ಪನವರು ಬೆಂಗಳೂರಿಗೆ ಹಿಂದಿರುಗಿದರು. ಚುನಾವಣೆಯಲ್ಲಿ ಗೆದ್ದು ಬಂದಿರುವ ಸದಸ್ಯರುಗಳಲ್ಲಿ ಹತ್ತು ಮಂದಿ ಮಂತ್ರಿಯೂ ಇರುವರೆಂದು ಹೇಳಲಾಗಿದೆ. ಈ ತಿಂಗಳು ೧೮ ಅಥವಾ ೧೯ರಂದು ಸಚಿವರುಗಳ ಪ್ರಮಾಣವಚನ ಸ್ವೀಕಾರವಾಗುವುದೆಂದು ಗೊತ್ತಾಗಿದೆ. ಆರು ಅಥವಾ ಏಳು ಮಂದಿ ಉಪಸಚಿವರೂ ನೇಮಿಸಲ್ಪಡಲಿರುವರೆಂದು ತಿಳಿದುಬಂದಿದೆ

ಹುಬ್ಬಳ್ಳಿಯಲ್ಲಿ ಉಕ್ಕಿನ ರೋಲಿಂಗ್ ಕಾರ್ಖಾನೆ

ಸ್ವಂ ಮು ತಂತಿ] ಬೆಂಗಳೂರು ೧೪

ಉಕ್ಕಿನ ಪಟ್ಟಿ, ಸಲಾಕಿ ಮುಂತಾದವುಗಳನ್ನು ತಯಾರಿಸಲು ೧೦ ಲಕ್ಷ ರೂ ಬಂಡವಾಳದಿಂದ ಹುಬ್ಬಳ್ಳಿಯಲ್ಲಿ ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರದವರು ಮಂಜೂರು ಮಾಡಿರುತ್ತಾರೆ

ಎಸ್ ವಿ ರಾಮರಾಯರ ನಿಧನ

ವಿದ್ಯುಚ್ಛಕ್ತಿ ಇಲಾಖೆಯ ರಿ|| ಸೂಪರಿಂಟೆಂಡೆಂಟ್ ಶ್ರೀ ಎಸ್ ವಿ. ರಾಮರಾಯರು ಬೌರಿಂಗ್ ಆಸ್ಪತ್ರೆಯಲ್ಲಿ ಈ ದಿನ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಹದಿನೈದು ದಿನಗಳಿಂದಲೂ ಅವರು ಅಸ್ವಸ್ಥರಾಗಿದ್ದರು.

○ ಘಟಪ್ರಭಾ ನದಿಗೆ ಅಣೆಕಟ್ಟನ್ನು ಕಟ್ಟುವ ವಿಷಯವು ಬರುವ ತಿಂಗಳು ೨ನೇ ತಾ|| ಬೊಂಬಾಯಿನಲ್ಲಿ ನಡೆಯುವ ಜೋನಲ್ ಕೌನ್ಸಿಲಿನ ಪ್ರಥಮ ಸಭೆಯಲ್ಲಿ ಪರಿಶೀಲನೆಗೆ ಬರಲಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ಕೊಳಲು. ೬-೧೫ ಎಲ್ ವಿ ಅನಸೂಯ ಮತ್ತು ಎಲ್ ವಿ ರಾಜೇಶ್ವರಿ-ದೇವರ ನಾಮ ೬-೩೦ ಗಾನ ವಿಹಾರ. ೮-೧೫ ಉದಯ ಸಂಗೀತ ಮಧ್ಯಾಹ್ನ ೧೨ ಜೆ ಆರ್. ನಾಗರತ್ನಾಬಾಯಿ ಸಂಗೀತ. ೧೨-೩೦ ಆರ್ ಎಸ್ ದೊರೆಸ್ವಾಮಿ-ವೀಣೆ ೧ ರಿಂದ [illegible] ೧-೩೦ ಹಿಂದೂಸ್ತಾನಿ ಸಂಗೀತ ೧-೫೦ ಕೊಳಲು ೩ ವನಿತಾ ವಿಹಾರ ಸಂಜೆ ೫-೩೦ ಆರ್ ಎಸ್ ದೊರೆಸ್ವಾಮಿ ವೀಣೆ ೬-೪ ಸಿ ಎಸ್ ಸೀತಮ್ಮ ಕಾವ್ಯ ವಾಚನ. ೬ ೩೦ ಪ್ರಸಂಗ ಮತ್ತು ೯-೧೫ ರಾಮನವಮಿ ಸಂಗೀತ ಉತ್ಸವ ೯-೪೫ ಸಂಗೀತ ೧೦ ವಿಶೇಷ [illegible] ೧೧ ಮುಕ್ತಾಯ ಗೀತೆ

ದಾವಣಗೆರೆಗೆ ಭದ್ರಾ ನದಿಯ ನೀರಿನ ಸರಬರಾಜು

೨॥ ಮೈಲಿ ಉದ್ದದ ಸುರಂಗದ ನಿರ್ಮಾಣ

ದಾವಣಗೆರೆ ನಗರಕ್ಕೆ ಭದ್ರಾ ನದಿಯ ನೀರನ್ನು ಸರಬರಾಜು ಮಾಡುವ ಸಲುವಾಗಿ ಚನ್ನಗಿರಿ ತಾಲ್ಲೂಕಿನ ಒಂದು ದಿಣ್ಣೆಯ ಕೆಳಗೆ ೨॥ ಮೈಲಿ ಸುರಂಗವನ್ನು ತೋಡೆಯಲು ಮೈಸೂರು ಸರ್ಕಾರದವರು [illegible] ಕೋಟಿ ರೂ. ಯೋಜನೆಯನ್ನು ಕಾರ್ಯಗತ ಮಾಡಲಿರುವರು. ಇಂತಹ ಸುರಂಗವು ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡದಾಗುವುದೆಂದು ಹೇಳಲಾಗಿದೆ. ಸೂಳೆಕೆರೆ ಸುರಂಗದ ಮೂಲಕ ಹಾಯಿಸುವ ನೀರನ್ನು ಎರಡು ಕವಲಾಗಿ ಮಾಡಿ ಒಂದು ದಾವಣಗೆರೆಗೂ ಮತ್ತೊಂದು ಮಲೆಬೆನ್ನೂರಿಗೂ ಹೋಗುವಂತೆ ಮಾಡಲಾಗುವುದು

ರೇಡಿಯೊ ಶಕ್ತಿಯಿಂದ ಚಲಿಸುವ ರಾಕೆಟ್ಟು ವಿಮಾನಗಳು

ಪಶ್ಚಿಮ ಜರ್ಮನಿಯ ವೈಜ್ಞಾನಿಕರು ರೇಡಿಯೊ ಶಕ್ತಿಯಿಂದ ಚಲಿಸಬಲ್ಲ ರಾಕೆಟ್ಟು ವಿಮಾನಗಳನ್ನು ನಿರ್ಮಿಸುತ್ತಲಿರುವರೆಂದು ವರದಿಯಾಗಿದೆ. ಅವು ಆಕಾಶಕ್ಕೆ ೧,೬೪,೦೦೦ ಅಡಿ ಎತ್ತರದವರೆಗೂ ಹೋಗಿ ನಂತರ ಸುರಕ್ಷಿತವಾಗಿ ಇಳಿಯಬಲ್ಲವೆಂದು ಹೇಳಲಾಗಿದೆ

City Municipal Council

Mysore Dated 10-4-1957

Regarding Quotation for Supply of Horse Gram for the Year 1957 58

Notice is hereby given that sealed tenders will be received at this office for the supply of Horse Gram for the year 1957 58 by the undersigned on or before 18-4-57 up to 4 P.M

1 Each tender must be accompanied by the Municipal Treasury challan for having credited a sum of Rs 500 as earnest money

2 The final acceptance of any tender will rest with the Municipal Commissioner who does not bind himself to accept the lowest or any tender, or to assign any reason whatever for the rejection of any tender.

3. The earnest money of the successful tenderer will be retained as security deposit for the fulfilment of the contract (the earnest money will not carry any interest) The earnest money of those, whose tenders are not accepted will be refunded on application after the acceptance of the final tender.

4 For supply of 600 pallas of Horse Gram within one month

5. The supply should be made at the Municipal Offices, Mysore City

6. Samples must be sent along with the tender, else the tender will not be accepted

(Sd) A VISWANATH
Municipal Commissioner

Ed [illegible] Printed and Published by A. R. Nagarajan at Sadhvi Press, D. Subbaiah Road, Mysore

ಗೋದಾವರಿ ನದಿ ದುರಂತದ ಬಗ್ಗೆ ಐವರ ಬಂಧನ

ಭದ್ರಾಚಲದ ಬಳಿ ಗೋದಾವರಿ ನದಿಯಲ್ಲಿ ಕೆಲವು ದಿನಗಳ ಹಿಂದೆ ಆದ ದೋಣಿ ಅನಾಹುತದಲ್ಲಿ ಅನೇಕರು ಮಡಿದ ಸಂಬಂಧದಲ್ಲಿ ೫ ಜನರನ್ನು ಬಂಧಿಸಲಾಗಿದೆ. ಅವರುಗಳು ಕರ್ತವ್ಯ ಪಾಲನೆ ಮಾಡದೆ ಅಲಕ್ಷ್ಯದಿಂದ ಇದ್ದು ಅನೇಕರ ಮರಣಕ್ಕೆ ಕಾರಣರಾದರೆಂದು ಆರೋಪಿಸಲಾಗಿದೆ. ದೋಣಿಯು ನದಿಯ ಮಧ್ಯ ಭಾಗದಲ್ಲಿ ಹೋಗುತ್ತಿದ್ದಾಗ ಪ್ರಯಾಣಿಕರಿಂದ ರುಸುಂ ವಸೂಲು ಮಾಡಿದುದು, ಒಂದು ದೋಣಿಯಲ್ಲಿ ರಂಧ್ರವಿದ್ದುದು ಇವೇ ಮೊದಲಾದುವು ಅನಾಹುತಕ್ಕೆ ಕಾರಣವಾದುವೆಂದು ಅಲ್ಲಿನ ಮಂತ್ರಿ ಪಟ್ಟಾಭಿರಾಮರಾಯರು ತಿಳಿಸಿರುತ್ತಾರೆ.

ಅಮೆರಿಕಕ್ಕೆ ಈಜಿಪ್ಟಿನ ಪ್ರತಿಭಟನೆ

ಅಕಾಬಾ ಖಾರಿಯ ಮೂಲಕ ಇಸ್ರೇಲಿನ ಇಲಾತ್ ಬಂದರಿಗೆ ಅಮೆರಿಕದ ಹಡಗೊಂದು ಕಳೆದ ೭ನೇ ತಾರೀಖು ಹೋಗಿ ಈಜಿಪ್ಟಿನ ಪ್ರಾದೇಶಿಕ ಸಮುದ್ರ ನಿಯಮವನ್ನು ಉಲ್ಲಂಘಿಸಿರುವುದಾಗಿ ಈಜಿಪ್ಟು ಅಮೆರಿಕಾ ಸರ್ಕಾರಕ್ಕೆ ಪ್ರತಿಭಟಿಸುತ್ತದೆ

ಫಿಲೋಮಿನಾ ಕಾಲೇಜಿನ ಅಧ್ಯಾಪಕರನ್ನು ವಜಾ ಮಾಡಿಲ್ಲವೆಂದು ಹೇಳಿಕೆ

ನಗರದ ಸೆಂಟ್ ಫಿಲೋಮಿನಾ ಕಾಲೇಜು ಪ್ರಿನ್ಸಿಪಾಲರಾದ ರೆ॥ ಫಾ॥ ಆಡಿಯೋರವರು ಹೇಳಿಕೆಯೊಂದನ್ನಿತ್ತು, ತಮ್ಮ ಕಾಲೇಜಿನ ಉಪಾಧ್ಯಾಯರ ಪೈಕಿ ಒಪ್ಪಂದದ ಪ್ರಕಾರ ಯಾರ ಕೆಲಸದ ಅವಧಿಯು ಮುಗಿದಿದೆಯೋ ಅವರಿಗೆ ಮಾತ್ರ ಆ ಬಗ್ಗೆ ತಿಳುವಳಿಕೆಯನ್ನು ಯಾವ ತಾರತಮ್ಯವೂ ಇಲ್ಲದ ಕೊಡಲಾಗಿದೆಯೆಂದೂ ಆದ್ದರಿಂದ ಅವರನ್ನು ವಜಾ ಮಾಡಿರುವುದಾಗಿ ಹೇಳುವುದು ಸರಿಯಲ್ಲವೆಂದೂ ತಿಳಿಸಿರುತ್ತಾರೆ

ಹರಿಕಥೆ

ನಂಜನಗೂಡಿನ ಶ್ರೀ ಲಕ್ಷ್ಮೀ ಭಜನ ಮಂದಿರದ ಆಶ್ರಯದಲ್ಲಿ ರಾಮೋತ್ಸವದ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಲಕ್ಷ್ಮೀಪತಿ ಮತ್ತು ವಾಟರ್‌ರವರಿಂದ ಹರಿಕಥೆಯು ನಡೆಯುವುದು

[illegible]

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-
ನಿರೋಧಕ ನಿವಾರಕ ಸಲಹೆಗಳಿಗೆ :-
'ಲಿವರ್ ಹೌಸ್', ಚಾಮುಂಡಿಪುರಂ,
ಮೈಸೂರು (ಸುಶ್ರುತ ಹಾಸ್ಟೆಲ್ ಹತ್ತಿರ)

ಶವೀರ ಬೋಧಕ ವಿದ್ಯಾನಿಲಯ

(U G T College)

ಚಾಮುಂಡಿಪುರಂ, ಮೈಸೂರು

ಪ್ರಾಥಮಿಕ ಶಾಲಾ ಉಪಾಧ್ಯಾಯ ವೃತ್ತಿಗೆ ಅವಶ್ಯಕವಾದ T C Higher ಶಿಕ್ಷಣವನ್ನು ಪಡೆಯಲು ಇಲ್ಲಿ ಉತ್ತಮವಾದ ಅವಕಾಶ ಎದೆ ದೀರ್ಘ ಕಾಲದ ಅನುಭವಿಗಳಾದ ಅಧ್ಯಾಪಕರಿಂದ ಈ ಶಾಲೆಯು ಕೂಡಿರುತ್ತದೆ ಈ ಶಿಕ್ಷಣವನ್ನು ಪಡೆಯಲು ಇಷ್ಟವುಳ್ಳವರು S S L C. ಪರೀಕ್ಷೆಯ ಫಲಿತಾಂಶಗಳು ಹೊರಬಿದ್ದ 10 ದಿವಸಗಳೊಳಗಾಗಿ ತಮ್ಮ ಅರ್ಜಿಗಳನ್ನು ಹಾಕಿಕೊಳ್ಳಬಹುದು ಇದಕ್ಕೆ ಗೊತ್ತಾದ ಫಾರಂ ಅನ್ನು 0-6-3 ಪೋಸ್ಟ್ ಸ್ಟಾಂಪನ್ನು ಪ್ರಿನ್ಸಿಪಾಲರಿಗೆ ಕಳುಹಿಸಿ ಪಡೆಯಬಹುದು

ಕೆ. ಕೃಷ್ಣರಾವ್,
ಪ್ರಿನ್ಸಿಪಾಲ್

ಹುಡುಗ ತಪ್ಪಿಸಿಕೊಂಡಿದ್ದಾನೆ

ಕಳೆದ ಶುಕ್ರವಾರ ನಂಜನಗೂಡಿನಲ್ಲಿ ಸುಮಾರು 13 ವಯಸ್ಸಿನ ಹುಡುಗ ತಪ್ಪಿಸಿಕೊಂಡಿದ್ದಾನೆ ತಂದೆ ಹೆಸರು ಜ್ಯೋತಿ (ತಿರುಗಣಿ) ಮಠದ ಶೆಟ್ಟಪ್ಪ ಕೆ ಆರ್ ಮಿಲ್ಲಿನಲ್ಲಿ [illegible]ಕರ. ಹುಡುಗನ ಬಣ್ಣ ಎಣ್ಣೆಗೆಂಪು ಬಟ್ಟೆ ಮಾಸಿ, ಕ್ರಾಪ್ ಬಿಟ್ಟಿದ್ದಾನೆ ಕಂಡವರು ಕೆಳಗಿನ ವಿಳಾಸಕ್ಕೆ ತಿಳಿಸಿದರೆ ಸೂಕ್ತ ಬಹುಮಾನ ಕೊಡಲಾಗುತ್ತೆ.

ಬಿ ಎಂ ಶಿವಪ್ಪ,
491. ಗುಂಡಾ ಜೋಯಿಸ್ ಬೀದಿ,
ಕೆ ಆರ್ ಮೊಹಲ್ಲಾ, ಮೈಸೂರು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಸಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಒಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಅಯ್ಯರ್
ಅಂಡ್ ಸನ್ಸ್,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ಬಿದಾರಂ ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂದಿರ

16-4-57ನೇ ಮಂಗಳವಾರ ಸಂಜೆ ೬ ಗಂಟೆಗೆ
ಸಂಗೀತ ರತ್ನಾಕರ, ಸಂಗೀತ ಕಲಾನಿಧಿ
ಶ್ರೀ ಅರಿಯಾಕುಡಿ ರಾಮಾನುಜಯ್ಯಂಗಾರ್ ರವರ ಗಾಯನ
ವಿ॥ ಲಾಲ್‌ಗುಡಿ ಜಯರಾಮ್‌ರವರ ಪಿಟೀಲು
ತಿರುವಾಂಕೂರು ಆಸ್ಥಾನವಿದ್ವಾನ್ ಪಾಲಘಾಟ್
ಶ್ರೀ ಟಿ ಎಸ್ ಮಣಿ ಅಯ್ಯರ್‌ರವರ ಮೃದಂಗ
ಪ್ರವೇಶ ದರ: 2 0-0

17-4-57ನೇ ಬುಧವಾರ ಸಂಜೆ ೬ ಗಂಟೆಗೆ
ತಿರುವಾಂಕೂರು ಸಂಸ್ಥಾನ ವಿದ್ವಾಂಸರು
ಶ್ರೀ ಆಲತ್ತೂರು ಸಹೋದರರ ಗಾಯನ
ವಿ॥ ಲಾಲ್‌ಗುಡಿ ಜಯರಾಮ್‌ರವರ ಪಿಟೀಲು
ವಿ॥ ಮುರುಗಭೂಪತಿಯವರ ಮೃದಂಗ
ಪ್ರವೇಶ ದರ ರೂ 2-0-0

ಶುಭಾಶಯ ಸ್ವೀಕಾರ

ಕಾಶಿ ವಿಶ್ವವಿದ್ಯಾನಿಲಯದ ಎಂ.[illegible] ಯಲ್ಲಿ ಓದುತ್ತಿರುವ ಮೈಸೂರಿನ ಶ್ರೀ [illegible] [illegible] ಶುಭಾಶಯವನ್ನು ಕೃತಜ್ಞತೆ[illegible] ಅರ್ಪಿಸಿದ್ದೇವೆ

ಮೈಸೂರಿನಲ್ಲಿ ಪ್ರತಿ ತಿಂಗ 17 ನೇ ತಾರೀಖು

ವಿಶ್ವವಿಖ್ಯಾತರಾ

ನವರತ್ನ ಕ

ವಿಖ್ಯಾತರನ್ನು
[illegible]
ಕವಿರಾಜ ಪಂ
ದುರ್ಗಾದತ್ತ
ವೈದ್ಯ ವಾಚಸ್ಪತಿ
ಪ್ರತಿ ತಿಂಗಳು 17ನೇ ತಾರೀ
ಮೈಸೂರಿಗೆ ಬರುವರು
[illegible]
[illegible]
[illegible]
—: ಭೇಟಿಯ ಕಾಲ :—
ಬೆಳಿಗ್ಗೆ 7-30ರಿಂದ 12.30 ಮತ್ತು
ಮಧ್ಯಾಹ್ನ 4ರಿಂದ 7-30
[illegible]
[illegible]
[illegible]
[illegible]
[illegible]

ನವರತ್ನ — ಕಲ್ಪ

[illegible]

[illegible] 9 [illegible]

NAVRATNA KALPA PHARM
JULLUNDUR CITY (Indi

HAND BOOK OF TYPEWRITING MECHANISM (For Senior & Junior Grades) Second Edition Contains over 145 questions with answers An invaluable guide for the Examination going students Price 37 Nave paise. Copies can be had of THE NATIONAL INSTITUTE OF COMMERCE, Bank Road Mysore

ಸುವರ್ಣ ಮಹೋತ್ಸವದ ವರ್ಷದಲ್ಲಿ

ಶೀಘ್ರವಾದ ಪ್ರಗತಿ

	1956	1955
ಅಧಿಕೃತ ಬಂಡವಾಳ	50,00,000	50,00,000
ಇಷ್ಯೂ ಆದ, ಚಂದಾ ಆದ ಮತ್ತು ಪಾವತಿಯಾದ ಬಂಡವಾಳ	29,00,000	29,00,000
ಕ್ಷೇಮ ನಿಧಿಗಳು	32,00,000	29,00,000
ಡಿಪಾಜಿಟ್ಟುಗಳು	14,32,06 000	11,95,57,000

ಒಟ್ಟು ಸಾಧಕ ಸಂಪತ್ತು 20 ಕೋಟಿ ರೂ.ಗಳನ್ನು ಮೀರಿದೆ

★ ★ ★ ★

ವಿದೇಶದ ವಿನಿಮಯ ವ್ಯವಹಾರ ನಡೆಯಿಸಲಾಗುವುದು

★ ★ ★ ★

ವಿಶ್ವವ್ಯಾಪ್ತ ಕರೆಸ್ಪಾಂಡೆಂಟುಗಳು

★ ★ ★ ★

ನಿಮ್ಮ ಸೇವೆಗಾಗಿ 52 ಶಾಖೆಗಳು

ಮೈಸೂರು ರಾಜ್ಯ	23
ಆಂಧ್ರ ಪ್ರದೇಶ	3
ಬೊಂಬಾಯಿ ರಾಜ್ಯ	11
ಕೇರಳ ರಾಜ್ಯ	7
ಮದರಾಸು ರಾಜ್ಯ	7
ಪಾಕಿಸ್ತಾನ	1

ಆಡಳಿತ ಕಚೇರಿ
ಬೆಂಗಳೂರು

ಜನರಲ್ ಮ್ಯಾನೇಜರರ ಕಚೇರಿ
ಬೊಂಬಾಯಿ

ವಿದೇಶದ ಇಲಾಖೆಗಳು : ಬೊಂಬಾಯಿ ಮತ್ತು ಮದರಾಸು

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

— ಸರ್ವ ಜನತೆಯ ಬ್ಯಾಂಕ್ —

ರಿಜಿಸ್ಟರ್ ನಂ. 394

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ 2 ನಯಾ ಪೈಸೆ

ಇಂದಿನ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೧೭] SADHVI : TUESDAY 16—4—1957 ಮೈಸೂರು : ಮಂಗಳವಾರ ೧೬—೪—೧೯೫೭ : [ಸಂಪುಟ : [illegible]

ಈ ಸಂಜೆ ಮೈಸೂರಿನ ಹೊಸ ಮಂತ್ರಿಗಳ ಪಟ್ಟಿ ಪ್ರಕಟಣೆ

ರಸಭೆಯ ಆಡಳಿತ ವರದಿ

ಶೇಷ ಅಧಿವೇಶನದಲ್ಲಿ ಪರಿಶೀಲನೆ

ಮೈಸೂರು ೧೬

ನ್ನೆ ಪುರಸಭೆಯ ವಿಶೇಷ ಅಧಿವೇಶನದಲ್ಲಿ ೫೬ನೇ ಸಾಲಿನ ಆಡಳಿತ ವರದಿಯನ್ನು ತು ಚರ್ಚಿಸಲಾಯಿತು. ಶ್ರೀ ಎಸ್. ಸಂ ಯ್ಯನವರು ಅಧ್ಯಕ್ಷತೆ ವಹಿಸಿದ್ದರು ಪ್ರಸಾದನವರು ವರದಿಯನ್ನು ಸಭೆಯ ಮುಂ ಮಂಡಿಸಿದರು ಆ ಸಾಲಿನಲ್ಲಿ ಅದರ ಹಿಂದಿ ವರ್ಷಕ್ಕಿಂತ ಪುರಸಭೆಯ ಆದಾಯ ೩,೦೯೪ ರೂ ನಷ್ಟು ಕಮ್ಮಿಯಾದರೂ [illegible] ರೂ ಗಳಷ್ಟು ಹೆಚ್ಚು ಜನೋಪ ಕಾರ್ಯಗಳನ್ನು ನಡೆಸಲಾಯಿತು ಆ ವ್ವೇರಿ ತೆರಿಗೆಯು ಹಿಂದಿನ ವರ್ಷ ಕಲಿಗೆ [illegible] ಇದ್ದುದು [illegible] ಆಯಿತು ಒಟ್ಟು ಕಟ್ಟಡಗಳಿಗೆ ಕಂದಾಯದ ವಿನಾಯಿತಿ ಕಲಿಸಿತ್ತು ನಾನಾ ಸರ್ಕಾರಿ ಇಲಾಖೆಗಳ ಕಟ್ಟಡಗಳ ಕಂದಾಯದ ಬಾಬ್ತು [illegible] ರೂ ಬಾಕಿ ಇದ್ದಿತು [illegible] ರೂ ಖರ್ಚಿನಲ್ಲಿ ೧೦೪ ಬೀದಿ ದೀಪಗಳನ್ನು ಹಾಕಿಸಲಾಯಿತು ೧,೮೯,೩೦೪ ವೆಚ್ಚದಲ್ಲಿ ೬॥ ಮೈಲಿ ಉದ್ದದ [illegible] ರಸ್ತೆಗ [illegible] ಹಾಕಲಾಯಿತು. [illegible] ರೂ. ವಹಿಸಿಕೊಂಡು ೫ ಫರ್ಲಾಂಗಿನಷ್ಟು ರಸ್ತೆ ಸಿಮೆಂಟ್ ಕಾಂಕ್ರೀಟ್ ಹಾಕಲಾಯಿತು ಹೊಸ ಬೀದಿ ನಲ್ಲಿಗಳನ್ನು ಹಾಕಲ್ಪಟ್ಟಿವೆ

ಜನಾರೋಗ್ಯ ರಕ್ಷಣೆಗಾಗಿ ೮,೯೩,೧೪೦ ರೂ. [illegible] ೧೧,೮೯೩ ಮಂದಿಗೆ ದೇವಿ ಹಾಕಲಾ [illegible] ೧೦೯೧ ಪ್ಲೇಗ್ ಪ್ರತಿರೋಧಕ, [illegible] ಪ್ರತಿರೋಧಕ ಮತ್ತು [illegible] ಪ್ರತಿರೋಧಕ ಇಂಜೆಕ್ಷನ್‌ಗಳನ್ನು ಕಲಾಯಿತು. ೨೯,೮೪೭ ಮನೆಗಳನ್ನು [illegible]ಸಲಾಯಿತು. ಮಲೇರಿಯಾ ನಿರೋ ಅಂಗವಾಗಿ ೧೬೫ [illegible]ಗಳು, ೧೬೭೨ ಮನೆ ಮತ್ತು ೧೦,೪೦೪ ಬಚ್ಚಲುಗಳನ್ನು ಸ್ವಚ್ಛ ಸಲಾಯಿತು ನಗರದ ನಾನಾ ಆಸ್ಪತ್ರೆ ಲ್ಲಿ ೧೦,೨೯,೪೪೭ ಮಂದಿಗೆ ಚಿಕಿತ್ಸೆ ನೀಡ ಯಿತು ಆ ವರ್ಷ ೭೮೯೪ ಜನನಗಳೂ, [illegible] ಮರಣಗಳೂ ಆದುವು ೧೬೧ ಮಂದಿ [illegible]ಸುವವರಿಗೆ ವಸತಿ ಸೌಕರ್ಯವನ್ನು ಕಲ್ಪಿಸ ಯಿತು ಮತ್ತು ಬಟ್ಟೆ ತೆಗೆಯುವುದ ಆರಂಭಿಸಲಾಯಿತು

ನಗರದಲ್ಲಿ ನೀರು ಸರಬರಾಜು ಸಾಮಾನ್ಯ ತೃಪ್ತಿಕರವಾಗಿದ್ದಿತು ಆದರೂ ೧೪೭೧ [illegible]ಲುಗಳು ಬಂದಿದ್ದುವು ೧,೫೫೦ ಅಡಿಗಳ ಹೊಸ ನಲ್ಲಿ ಪೈಪುಗಳನ್ನು ಹಾಕಲಾಯಿತು ಮನೆಗಳಿಗೆ ನೀರಿನ ಕನೆಕ್ಷನ್ ಕೊಡಲಾಯಿ ದಿನಕ್ಕೆ ಪ್ರಜೆಗೆ ತಲಾ ೨೦ ಗ್ಯಾಲನ್ನಿನಂತೆ ದಿನಕ್ಕೆ ೩೩ ಲಕ್ಷ ಗ್ಯಾಲನ್ ನೀರು ಸರಬರಾಜಾ ತ್ತು

ಆ ವರ್ಷ ನಗರದಲ್ಲಿ ೧೩,೯೨೨ ಸೈಕಲ್ಲುಗಳು ಜೋಡೆತ್ತಿನ ೩೦ ಒಂಟೆತ್ತಿನ ಗಾಡಿಗ ೪೭೭ ಟಾಂಗಾಗಳೂ ೨೪೦ ಇತರ ವಾ ಗಳೂ, ಇದ್ದುವು ೬೧೩೦ ಹಾಲು ಮನೆಗ

ನು, ೨೪,೪೯೧ ಹೆಂಚಿನ ಮನೆಗಳು, ೧೩೦ ಗುಡಿಸಲುಗಳೂ ಮತ್ತು ೩೧೯೭ ಖಾಲಿ ನಿವೇಶನಗಳೂ ಇದ್ದುವು ನಗರದಲ್ಲಿ ೩೦೦೧ ಬೀದಿ ದೀಪಗಳು ಇದ್ದುವು. ೪೦ ಮೈಲಿ ಮಣ್ಣಿನ, ೬೦॥ ಮೈಲಿ ಜಲ್ಲಿಯ ರಸ್ತೆ, ೪೭ ಮೈಲಿ ಟಾರ್ ರಸ್ತೆ ಮತ್ತು ೧॥ ಮೈಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಇದ್ದುವು ನಗರದ ರಸ್ತೆಗಳ ಒಟ್ಟು ಉದ್ದ ೧೪೯ ಮೈಲಿ

ನಗರದಲ್ಲಿ ಹೋಟೆಲುಗಳ ಸಂಖ್ಯೆ ೪೧೬ ರಿಂದ ೪೭೬ಕ್ಕೆ, ಮಿಠಾಯಿ ಅಂಗಡಿಗಳ ಸಂಖ್ಯೆ ೩೪ರಿಂದ ೩೮ಕ್ಕೆ ಇಳಿಯಿತು ಆದರೆ ಆಯುಷ್ಯ [illegible] ಕಾಲಿಗಳು ೨೨೫ರಿಂದ ೨೧೩ಕ್ಕೆ ಹೆಚ್ಚಿ ಮತ್ತು ಬೀದಿ ವ್ಯಾಪಾರಿಗಳ ಸಂಖ್ಯೆಯು ೧೦೪೦ರಿಂದ ೧೩೪೦ಕ್ಕೆ ಹೆಚ್ಚಿತು

ಹಲವಾರು ಸದಸ್ಯರು ವರದಿಯ ಮೇಲೆ ಮಾತನಾಡಿ ಉಪಯುಕ್ತ ಸೂಚನೆಗಳನ್ನಿತ್ತನಂತರ ಸಭೆಯು ವರದಿಯನ್ನು ಅಂಗೀಕರಿಸಿತು.

ಜಾರ್ಡಾನ್ ದೊರೆಯಿಂದ ಸೈನ್ಯದ ದಂಗೆಯ ದಮನ

ಹೊಸ ಸರ್ಕಾರದ ರಚನೆ

ಜಾರ್ಡಾನ್ ದೊರೆ ಹುಸೇನರು ತಮ್ಮ ಸೈನ್ಯದ ಹಲವರು ನಡೆಸಿದ ದಂಗೆಯನ್ನು ಬಹಳ ಚಾತುರ್ಯದಿಂದ ಅಡಗಿಸಿರುತ್ತಾರೆ ರಾಜಧಾನಿ ಅಮ್ಮಾನ್ ನಗರದ ಮೇಲೂ, ಅರಮನೆ ಮೇಲೂ ಫಿರಂಗಿ ಧಾಳಿ ಮಾಡುವಂತೆ ಸೈನ್ಯದ ಮುಖ್ಯಾಧಿಕಾರಿ ಆಲಿ ಅಬೂ ನವಾರರವರ ತಮ್ಮ ಅನುಯಾಯಿಗಳಿಗೆ ಆಜ್ಞೆ ಮಾಡಿದ್ದರೆಂದೂ, ಒಂದು ರಾಯಲ್ [illegible] ಮೊನ್ನೆ ಘರ್ಷಣೆ [illegible]ಗಿ ೧೩ ಮಂದಿ ಮೃತಪಟ್ಟರೆಂದೂ ವರದಿಯಾಗಿದೆ ಅದಾದಮೇಲೆ ಮುಖ್ಯಾಧಿಕಾರಿಯ [illegible] ಅವರನ್ನು ಬಂಧಿಸಲಾಯಿತು

ಆರು ದಿನಗಳ ಬಿಕ್ಕಟ್ಟಿನನಂತರ ಧೋರಣೆಯುಳ್ಳ [illegible] ಪ್ರಧಾನಿ ಡಾ|| ಹುಸೇನ್ ಖಲೀದಿಯವರು ಮಂತ್ರಿಮಂಡಲವನ್ನು ರಚಿಸಿರುತ್ತಾರೆ ಅವರಲ್ಲಿ ರಾಜನ [illegible] ಸಮಾಜವಾದಿ ಪ್ರಧಾನಿ ನಾಬುಲ್ಸಿಯವರೂ ಇದ್ದಾರೆ

ದೊರೆಯ ಮುಖಂಡತ್ವದಲ್ಲಿ ಈಗ [illegible] ಸೈನ್ಯದ ಪೂರ್ಣ ಹತೋಟಿಯಲ್ಲಿದೆ ೧೭ ಜನ ಮಿಲಿಟರಿ ಅಧಿಕಾರಿಗಳೂ ಸೇರಿ ೩೮ ಜನ ಪ್ರಮುಖರನ್ನು ಬಂಧಿಸಲಾಗಿದೆ ಅವರ ಪೈಕಿ ಮಾಜಿ ಮಂತ್ರಿಗಳಿಬ್ಬರೂ, ಇತರ ರಾಜಕಾರಣಿಗಳೂ ಇರುವರು

ಅರಮನೆ ಮುಂದೆ ನೆನ್ನೆ ಸೇರಿದ ಜನಸ್ತೋಮವನ್ನುದ್ದೇಶಿಸಿ ದೊರೆಯು ಮಾತನಾಡಿ ಅರಬ್ಬರ ಏಕೀಭವನಾ ನೀತಿಯು ಬದಲಾಗಿಲ್ಲವೆಂದೂ, ತಾವು ಸಿಂಹಾಸನ ತ್ಯಾಗ ಮಾಡುವುದರಿಂದ ರಾಷ್ಟ್ರಕ್ಕೆ ಒಳ್ಳೆಯದಾಗುವುದಾದರೆ ತಾವು ಅದರಂತೆ ಮಾಡುವುದಾಗಿಯೂ, ಆದರೆ ಜನರು ಬುಡಮೇಲು ಚಳುವಳಿಯ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದೂ ತಿಳಿಸಿದರು.

ಮಂತ್ರಿಮಂಡಲದಲ್ಲಿ ಕರ್ನಾಟಕ ಮತ್ತು ಮೈಸೂರಿಗೆ ಸಮಾನ ಪ್ರಾತಿನಿಧ್ಯ

ಈ ಸಂಜೆ ಸಚಿವರ ಪಟ್ಟಿ ಪ್ರಕಟಣೆ

ಬೆಂಗಳೂರು ೧೬

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ನೆನ್ನೆ ಮಧ್ಯಾಹ್ನ ಮದ್ರಾಸಿನಿಂದ ಇಲ್ಲಿಗೆ ಆಗಮಿಸಿದಾಗ ವಿಮಾನ ನಿಲ್ದಾಣದಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಈ ಸಂಜೆ ೫ ಗಂಟೆಯ ಹೊತ್ತಿಗೆ ನೂತನ ಮಂತ್ರಿಮಂಡಲದ ಸಚಿವರ ಹೆಸರುಗಳನ್ನು ಪ್ರಕಟಿಸುವುದಾಗಿ ತಿಳಿಸಿದರು ಒಟ್ಟು ೧೧ ಮಂದಿ ಸಚಿವರ ಪೈಕಿ ಹಳೇ ಮೈಸೂರು ಪ್ರದೇಶದ ೫ ಜನ ಮತ್ತು ಉಳಿದ ಕರ್ನಾಟಕದಿಂದ ೫ ಮಂದಿ ಸಚಿವರನ್ನು ತೆಗೆದುಕೊಳ್ಳಲಾಗುವುದೆಂದೂ, ತಾವು ಎರಡು ಪ್ರದೇಶಕ್ಕೂ ಸೇರಿದವರು ಅಥವಾ ಸೇರದವರೆಂದೂ ಮುಖ್ಯ ಮಂತ್ರಿಯವರು ಹೇಳಿದರು.

ಹಿಂದಿನ ಮಂತ್ರಿಮಂಡಲದಲ್ಲಿ ಹಳೇ ಮೈಸೂರಿಗೆ ಹೆಚ್ಚು ಪ್ರಾತಿನಿಧ್ಯವಿರುವುದೆಂಬ ಬಗ್ಗೆ ಹಲವರು ಆಕ್ಷೇಪಿಸಿದ್ದ ವಿಚಾರವನ್ನು ಅವರು ಪ್ರಸ್ತಾಪಿಸಿ, ಎರಡು ಪ್ರದೇಶಗಳಿಗೂ ಸಮನಾದ ಪ್ರಾತಿನಿಧ್ಯವೀಯಬೇಕಾಗಿರುವುದೆಂದೂ ತಿಳಿಸಿದರು

ಈಗ ಸದ್ಯಕ್ಕೆ ಒಬ್ಬಿಬ್ಬರು ಉಪ ಮಂತ್ರಿಗಳುವರೆಂದೂ, ನಂತರ ೩-೪ ಮಂದಿಯನ್ನು ತೆಗೆದುಕೊಳ್ಳಲಾಗುವುದೆಂದೂ ಸೂಚಿಸಿದರು, ಮಂತ್ರಿಮಂಡಲದಲ್ಲಿ ಮಹಿಳೆಯರು ಇರುವುದಿಲ್ಲವೆಂದೂ, ಉಪ ಮಂತ್ರಿಯಾಗಿ ಒಬ್ಬ ಮಹಿಳೆ ಇರಬಹುದೆಂದೂ ಅವರು ನುಡಿದರು

ಮಂತ್ರಿಮಂಡಲವು ೧೮ ಅಥವಾ ೧೯ ರಂದು ಮಧ್ಯಾಹ್ನದಲ್ಲಿ ಪ್ರಮಾಣವಚನ ಕೈಗೊಳ್ಳುವುದಾಗಿ ಅವರು ಸೂಚಿಸಿದರು

ಬೊಂಬಾಯಿ ಮಂತ್ರಿಗಳಿಂದ ಮಾನಪತ್ರ ಸ್ವೀಕಾರವಿಲ್ಲ

ಮಂತ್ರಿಗಳು ಮಾನಪತ್ರಗಳನ್ನು ಸ್ವೀಕರಿಸ ಕೂಡದೆಂದು ಬೊಂಬಾಯಿ ಮಂತ್ರಿಮಂಡಲವು ನಿರ್ಧರಿಸಿದೆ ಅಲ್ಲಿನ ಮಂತ್ರಿಗಳು ಪ್ರಮಾಣ ವಚನ ಸ್ವೀಕರಿಸಿದ ನಂತರ ಸಭೆ ನಡೆಸಿ ಕೈಗೊಂಡ ಪ್ರಥಮ ಕಾರ್ಯವು ಇದೇ ಆಗಿದೆ

ಜೂಜಾಟಕ್ಕೆ ಜುಲ್ಮಾನೆ

ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀನಿವಾಸ [illegible] ಛತ್ರದ ಮಹಡಿಯಲ್ಲಿ ಕಳೆದ ೧೦ನೇ ತಾರೀಖು ಇಸ್ಪೀಟ್ ಜೂಜಾಡುತ್ತಿದ್ದುದನ್ನು ಲಷ್ಕರ್ ಪೊಲೀಸರು ಪತ್ತೆ ಹಚ್ಚಿ ಮೊಕದ್ದಮೆ ಹೂಡಲಾಗಿ ಎರಡನೇ ನ್ಯಾಯಾಧೀಶರು ಶ್ರೀನಿವಾಸ ಶೆಟ್ಟರಿಗೆ ೧೦೦ ರೂ ಮತ್ತು ಕೋರ್ಟು ಏಳುವವರೆಗೆ ಸಜಾ, ವಸಂತ ಮತ್ತು ಪುಟ್ಟಸ್ವಾಮಿ ಎಂಬುವರಿಗೆ ತಲಾ ೨೫ ರೂ ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಸಜಾ ವಿಧಿಸಿರುತ್ತಾರೆ

ಎ. ಶಂಬಯ್ಯನವರ ನಿಧನ

ನಗರದ ದೇವರಾಜ ಮಾರ್ಕೆಟ್ಟಿನ ಜನರಲ್ ಮರ್ಚೆಂಟ್ ಶ್ರೀ ಎ. ಶಂಬಯ್ಯನವರು ನೆನ್ನೆ ರಾತ್ರಿ ೧೦ ಗಂಟೆ ಸಮಯದಲ್ಲಿ ಹೃದಯ ಬೇನೆಯಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ರಾಮೋತ್ಸವ ಕಾರ್ಯಕ್ರಮ

ಮೈಸೂರು ೧೬

ರಾಮಚಂದ್ರ ಅಗ್ರಹಾರದ ಶ್ರೀರಾಮಮಂದಿರದಲ್ಲಿ ನಾಳೆ ಸಂಜೆ ೬॥ ಗಂಟೆಗೆ [illegible] ಎಲ್ [illegible]ರವರ ಗಾಯನ

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀರಾಮ ಸೇವಾ ಸಮಿತಿಯಲ್ಲಿ ಈ ರಾತ್ರಿ ೮ ಗಂಟೆಗೆ ವಿದ್ವಾನ್ ಶ್ರೀಕಂಠಯ್ಯನವರಿಂದ ವೀಣಾವಾದನ.

ಚಲುವಾಂಬಾ ಅಗ್ರಹಾರದ [illegible] ರಾಮಮಂದಿರದಲ್ಲಿ ಈ ರಾತ್ರಿ ೬॥ ಗಂಟೆಗೆ [illegible] ವಿ. ಶೃಂಗಾರಮ್ಮನವರಿಂದ ಗಾಯನ

ಶ್ರೀರಾಮಸೇವಾ [illegible] ಬಾಲಕ ಭಕ್ತ ಮಂಡಲಿಯ ರಾಮಮಂದಿರದಲ್ಲಿ ಈ ಸಂಜೆ ೬॥ ಗಂಟೆಗೆ [illegible] ಬಾಲಕಿಯರಿಂದ ಗೀತಾಪಠಣ ನಾಳೆ ಮಧ್ಯಾಹ್ನ ಪಟ್ಟಾಭಿಷೇಕ ಮತ್ತು ಸಂಜೆ ಮಂಗಳಾರತಿ

ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದ

ಹನುಮಂತೋತ್ಸವದಲ್ಲಿ ನಾಗಸ್ವರ

ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಡೆಯುತ್ತಿರುವ ರಾಮೋತ್ಸವದ ಅಂಗವಾಗಿ ಇದೇ ೧೮ನೇ ತಾರೀಖು ಗುರುವಾರ ರಾತ್ರಿ ೮ ಗಂಟೆಗೆ ಹನುಮಂತೋತ್ಸವ ನಡೆಯುತ್ತದೆ ತಿರುಕೊಡಾಹಳ್ಳಿಯ ವಿ.ಪಿ. ಕೃಷ್ಣಮೂರ್ತಿ ಮತ್ತು ಎಸ್ ಗಾಂಧಿಯವರ ನಾಗಸ್ವರವು ವಿದ್ವಾಂಸರುಗಳಾದ ಆರ್ ರಂಗಸ್ವಾಮಿ ಮತ್ತು ತಿರುಚನಾಪಳ್ಳಿಯ ಪುಟ್ಟಸ್ವಾಮಿ ಪಿಳ್ಳೆಯವರ ತವಿಲ್‌ನೊಡನೆ ನಗರದ ಮುಖ್ಯ ಬೀದಿಗಳಲ್ಲಿ ನಡೆಯುತ್ತದೆ

ಮಾರಿಷಸ್ ದ್ವೀಪಕ್ಕೆ ಮೈಸೂರಿನ ಮಹಿಳೆ

ಮೈಸೂರು ವಿದ್ಯಾಭ್ಯಾಸ ಇಲಾಖಾ [illegible]ರಾದ ಶ್ರೀಮತಿ ಬಿ. ಭಾಗೀರಥಿಬಾಯಿಯವರನ್ನು ಮಾರಿಷಸ್ ದ್ವೀಪದ ರಾಜಧಾನಿಯ [illegible] ಬಾಲಿಕೆಯರ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ನೇಮಿಸಲಾಗಿದೆ ಅವರು ನಾಳೆ ಬೆಂಗಳೂರಿನಿಂದ ಅಲ್ಲಿಗೆ ವಿಮಾನದಲ್ಲಿ ತೆರಳುವರು.

“ಮುಶ್ಕಾಳ ಗ್ರಾಮ” ಎಂಬ ಹೆಸರನ್ನು ಬದಲಾಯಿಸಲು ಯತ್ನ

ಅಹಮದಾಬಾದಿಗೆ ಸ್ವಲ್ಪ ದೂರದಲ್ಲಿರುವ ಒಂದು ಹಳ್ಳಿಯ ಜನರು ತಮ್ಮ ಊರಿಗೆ ಬೇರೆ ಹೆಸರಿಡಲು ನಿರ್ಧರಿಸಿ ಅದಕ್ಕಾಗಿ ಒಂದು ಆಂದೋಲನವನ್ನು ನಡೆಸಲಿದ್ದಾರೆ ಆ ಊರಿಗೆ ಈಗ [illegible] ಶಲ್ (ಮುಶ್ಕಾಳ) ಎಂಬ ಹೆಸರು ಇದ್ದು [illegible] ನಡೆಯುವವರಿಗೂ ಯಾರೂ ಊರಿನ ಹೆಸರನ್ನು ಉಚ್ಛರಿಸುವುದಿಲ್ಲ. ದೂರಗಳಿಂದ ಬಂದವರು ಕೇಳಿದರೆ ಕಾಗದದಲ್ಲಿ ಊರಿನ ಹೆಸರನ್ನು ಬರೆದುಕೊಡುವರು ಅದಕ್ಕೆ ಅಂಬಾಪುರ ಎಂದು ಮುಂದೆ ಹೆಸರಿಡಲಾಗುವುದು

○ [illegible]ಯಲ್ಲಿ ನೆನ್ನೆ [illegible]ನ ರಾಷ್ಟ್ರೀಯ ಸಭಾ ಭವನದ ಹೊರಗಡೆ [illegible] ಲಸಿಗಾರರು ಪ್ರದರ್ಶನ ನಡೆಸಿದಾಗ ಅವರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡ [illegible] ಮಂದಿಗೆ ಗಾಯವಾಯಿತೆಂದು ವರದಿಯಾಗಿದೆ.

ನಗರದ ಮಾಧ್ಯಮಿಕ ವಿದ್ಯಾಭ್ಯಾಸದ ಆಲಯದ ಆರಂಭೋತ್ಸವ

[illegible]

ಭಾರತವರ್ಷದಲ್ಲಿರುವ ಅಮೆರಿಕದ ವಿದ್ಯಾಭ್ಯಾಸ ಸಂಸ್ಥೆಯು [illegible] ಕಳೆದ ವಾರ [illegible] ಶಾಲೆಯಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸದ ಆಲಯವನ್ನು [illegible] ಯುವರಾಜ ಕಾಲೇಜಿನ ಪ್ರಿನ್ಸಿಪಲ್ ಶ್ರೀ [illegible] ದೇವೇಗೌಡರು ಆರಂಭೋತ್ಸವವನ್ನು ನೆರವೇರಿಸಿ ದೇಶದಲ್ಲಿ ಭಾರತೀಯ [illegible] ಕೇಂದ್ರ [illegible] ಬೇಕೆಂದೂ [illegible] ವಿವಿಧ ಭಾಗಗಳಲ್ಲಿ [illegible] ದೇಶಗಳಲ್ಲಿ ವಿದ್ಯಾರ್ಥಿಗೆ ಅವಕಾಶ ಬರುವ ಸನ್ನಿವೇಶವುಂಟಾಗಿರುವುದೆಂದೂ ತಿಳಿಸಿದರು. ಉಪಾಧ್ಯಾಯರು ರಾಷ್ಟ್ರದ ಐಕ್ಯತೆಯನ್ನು ಕಾಪಾಡುವುದರಲ್ಲಿ ಹೆಚ್ಚು ಜವಾಬ್ದಾರಿ ವಹಿಸಬೇಕೆಂದು ಅವರು ನುಡಿದರು.

ವಿದ್ಯಾಭ್ಯಾಸದ ಡಪ್ಯುಟಿ ಡೈರೆಕ್ಟರ್ ಶ್ರೀ ಟಿ. ವಾಸುದೇವಯ್ಯ ಮತ್ತು ಅಮೆರಿಕಾ ವಿದ್ಯಾಸಂಸ್ಥೆಯ ಡಾ|| [illegible] ರವರು ಭಾಷಣ ಮಾಡಿ ಇಂತಹ ಶಿಕ್ಷಣಾಲಯಗಳ ಅವಶ್ಯಕತೆ ಮತ್ತು ಕೆಲಸಕಾರ್ಯಗಳನ್ನು ವಿವರಿಸಿದರು.

ಮೈಸೂರು ಮದ್ರಾಸು ಬೊಂಬಾಯಿ ಮತ್ತು [illegible] ದಿಂದ ಪ್ರತಿನಿಧಿಗಳು ಭಾಗವಹಿಸಿರುವ [illegible] ನಡೆಯುವುದು

ಶ್ರೀ ಗಾಯತ್ರಿ ಲಲಿತಕಲಾ ಸಂಘ

ಮೇಲ್ಕಂಡ ಸಂಘದ [illegible] ಕಳೆದ [illegible] ಶ್ರೀ [illegible] ವಾರ್ಷಿಕೋತ್ಸವ [illegible] ವಿವಿಧ ವಿನೋದ [illegible] ಶ್ರೀ ಹೆಚ್ ಎಸ್ [illegible] ಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎನ್ ಎಸ್ [illegible] ಯವರು ಸ್ವಾಗತ ಭಾಷಣ ಮಾಡಿದನಂತರ ಶ್ರೀಮತಿ [illegible] ದೇವಿಯವರಿಂದ [illegible] ಸಂಗೀತ [illegible] ಎಂಬ ನಾಟಕ ಪ್ರದರ್ಶನ ಅಧ್ಯಕ್ಷರ ಭಾಷಣ ಮುಂತಾದುವುಗಳ ನಂತರ ಕಾರ್ಯದರ್ಶಿ ಶ್ರೀ ಕೇಶವಮೂರ್ತಿಯವರಿಂದ ವಂದನೆ ಸಮರ್ಪಣೆಯಾದ ಮೇಲೆ ಸಮಾರಂಭ ಮುಕ್ತಾಯವಾಯಿತು.

ಮೈಸೂರು ಪೇಟೆ ಧಾರಣೆ

ಬೆಂಗಾಡ [illegible]		
ಕೊಯಮುತ್ತೂರು	[illegible] ೦೦	[illegible]
[illegible]	[illegible]	[illegible]
[illegible]	[illegible]	[illegible]
ಅಕ್ಕಿ	[illegible] ೦೦	[illegible]
ರಾಗಿ	[illegible] ೦೦	[illegible]
ಜೋಳ	[illegible]	
ಸಜ್ಜೆ	[illegible]	
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	[illegible]
[illegible]	[illegible]	
ಮದ್ರಾಸಿನ ಸಿನಿಮಾನಟರಾದ ಟಿ ಆರ್ ರಾಮಚಂದ್ರರವರು ಮೈಸೂರಿನ ಹಾಸ್ಯ ನಟರಾದ ಡಿಕ್ಕಿ ಮಾಧವರಾಯರೊಡನೆ ಮೋಟಾರಿನಲ್ಲಿ ಮೊನ್ನೆ ಬಾಣಾವರದ ಬಳಿ ಹೋಗುತ್ತಿದ್ದಾಗ ಶಾಲಾಪುರದ ಕೆರೆ ಕೋಡಿ ಬಳಿ ಮೋಟಾರಿಗೆ ಅಪಘಾತವಾಗಿ ಡ್ರೈವರನ ಮೂಗಿಗೆ ಪೆಟ್ಟು ಬಿದ್ದಿತೆಂದೂ, ಅವನನ್ನು ಅರಸೀಕೆರೆ ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ. ಸಿನಿಮಾ ನಟರು ಶಿವಮೊಗ್ಗದಲ್ಲಿ ನಡೆಯುತ್ತಿರುವ ರಕ್ತಗಿರಿ ರಹಸ್ಯ ಚಿತ್ರದ ಮಂದಿರಕ್ಕೆ ಭೇಟಿ ಕೊಡಲು ಅಲ್ಲಿಗೆ ಹೋಗುತ್ತಿದ್ದರು.

ನೂತನ ಮಂತ್ರಿಮಂಡಲದ ಮುಂದೆ ಇರುವ ಸಮಸ್ಯೆಗಳು

ಹೆಚ್ಚು ಹಣಕಾಸಿನ ವ್ಯವಸ್ಥೆಗೆ ಏರ್ಪಾಟು

ಮೈಸೂರು ೨೦

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಅರಮನೆಯಲ್ಲಿ ಪ್ರಮಾಣವಚನ ಸ್ವೀಕರಿಸಿದನಂತರ ಜಲದರ್ಶಿನಿಯಲ್ಲಿ ಸೇರಿದ್ದ ಪತ್ರಿಕಾ ಪ್ರತಿನಿಧಿಗಳನ್ನು ಸಂದರ್ಶಿಸಿ ನೂತನ ಮಂತ್ರಿಮಂಡಲವು ಮುಖ್ಯವಾಗಿ ಹಣಕಾಸಿನ ತೊಂದರೆಯನ್ನು ಎದುರಿಸಬೇಕಾಗಿರುವುದೆಂದೂ, [illegible] ಸಂಸ್ಥಾನದ ಮುಖ್ಯವಳಿಯನ್ನು [illegible]ಬೇಕಾಗಿರುವುದೆಂದೂ ನುಡಿದರು. ಕೇಂದ್ರದಿಂದ ಬರಬೇಕಾದ ಹಣವನ್ನೂ ಸಹ ತರಿಸಿಕೊಳ್ಳಲು ಪ್ರಯತ್ನಿಸುವುದಾಗಿ ತಿಳಿಸಿದರು.

ಮೈಸೂರು ನಗರದ ಪ್ರಾಮುಖ್ಯತೆಯನ್ನು ಅವರು ಪ್ರಸ್ತಾಪಿಸಿ, ಈ ವಿಷಯವನ್ನು ಸದಾ ಗಮನದಲ್ಲಿಡಲಾಗುವುದೆಂದೂ, ಚಾಮರಾಜನಗರ-ಸತ್ಯಮಂಗಲ ರೈಲ್ವೆ ಏರ್ಪಾಡಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೇಂದ್ರದವರು ಕೊಡುವರೆಂದೂ ನುಡಿದರು. ಸಂಸ್ಥಾನದಲ್ಲಿ ಇನ್ನೆರಡು ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಗೊಳ್ಳಲಾಗುವುದೆಂದೂ ಅವರು ಹೇಳಿದರು. ಸಂಡೂರಿನ ಕಬ್ಬಿಣ ಗಣಿ ಸಂಪತ್ತನ್ನು ಸರಿಯಾಗಿ ಉಪಯೋಗಿಸುವ ವ್ಯವಸ್ಥೆ ಮಾಡಬೇಕಾಗಿರುವುದೆಂದು ತಿಳಿಸಿದರು.

ಉಪನ್ಯಾಸ

ನರಸಿಂಹರಾಜ ಮೊಹಲ್ಲಾ ನ್ಯೂ ಕೆಸರೆ ಬ್ಲಾಕಿನ ಕಣಿಯರ ಸೇವಾ ಸಮಾಜದ ಶ್ರೀ ವೆಂಕಟೇಶ ಭಜನಾ ಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ಹನುಮಂತೋತ್ಸವದ ಪ್ರಯುಕ್ತ, ಶ್ರೀ ಎಂ ಯಾಮುನಾಚಾರ್ಯರು ಉಪನ್ಯಾಸ ಮಾಡುವರು. ವಿಧಾನಸಭಾ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿ

ಮೇಲ್ಕಂಡ ಮಂಡಲಿಯು ಶ್ರೀರಾಮಮಂದಿರದಲ್ಲಿ ಈ ದಿನ ಸಂಜೆ ೭ ಗಂಟೆಗೆ ನೃತ್ಯ ಕಥಾ ವಿಶಾರದ ಮಾಧವರಾವ್ ಮತ್ತು ಪಾರ್ಟಿಯವರಿಂದ (ಚಿಕ್ಕ ಬಾಲಕರುಗಳಿಂದ) ನೃತ್ಯ ಪ್ರದರ್ಶನವನ್ನು ಏರ್ಪಡಿಸಿರುತ್ತೆ ಮತ್ತು ನಾಳೆ ಸಂಜೆ ೭ ಗಂಟೆಗೆ ಶಯನೋತ್ಸವದ ಅಂಗವಾಗಿ ನಂಜನಗೂಡಿನ [illegible] ಸಾಹಿತಿಗಳಾದ ಶ್ರೀ ಸುಬ್ರಹ್ಮಣ್ಯಂ ಮತ್ತು ಪಾರ್ಟಿಯವರಿಂದ ಚಿತ್ರಗೀತೆಗಳು ಮತ್ತು ಆರ್ಕೆಸ್ಟ್ರಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಪ್ರಶ್ನೆಗಳು ಕಠಿಣವಾಗಿದ್ದುವೆಂದು ವಿದ್ಯಾರ್ಥಿಗಳಿಂದ ಪರೀಕ್ಷಾ ಭವನದ ತ್ಯಾಗ

ಗಣಿತ ಪ್ರಶ್ನಪತ್ರಿಕೆಯು ಬಹಳ ಕಠಿಣವಾಗಿತ್ತೆಂದು ಆಲಿಘಡದ ಎರಡನೆ ಡಿಪ್ಲೊಮಾ ವಿದ್ಯುಚ್ಛಕ್ತಿ, ಸಿವಿಲ್ ಮತ್ತು ಮೆಕ್ಯಾನಿಕಲ್ ಇಂಜನಿಯರಿಂಗಿನ ವಿದ್ಯಾರ್ಥಿಗಳು ಪರೀಕ್ಷಾಭವನದಿಂದ ಕಳೆದ ಬುಧವಾರ ಹೊರಬಂದರು.

ರಾಮೋತ್ಸವ ಕಾರ್ಯಕ್ರಮ

ಮೈಸೂರು ೨೦

ಹಳ್ಳದಕೇರಿಯ ಶ್ರೀ ಪ್ರಸನ್ನ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ವಿ॥ ಹೆಚ್. ಟಿ. ರಾಮಸ್ವಾಮಿಯವರ ಸಂಗೀತ ಮತ್ತು ಮಂದಿರದ ವಾರ್ಷಿಕೋತ್ಸವ. ನಾಳೆ ಸಂಜೆ ಶಯನೋತ್ಸವ

ಹಳೇ ಬಂಡಿಕೇರಿಯ ಬಾಲಕರ ವಿನಾಯಕ ಭಕ್ತ ಮಂಡಲಿಯಲ್ಲಿ ನಾಳೆ ಸಂಜೆ ೬ ಗಂಟೆಗೆ ಸುಂದರ್ ಮತ್ತು ಪಾರ್ಟಿಯವರಿಂದ ಚಿತ್ರಗೀತೆ ಮತ್ತು ೭ಕ್ಕೆ ವಿ॥ ಎಲ್ ನಂಜುಂಡಸ್ವಾಮಿಯವರ ಗಾಯನ.

ಮಂಡ್ಯದ ಶ್ರೀ ಸದ್ಗುರು ಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ವಿ॥ ವಿ. ಶ್ರೀಕಂಠಯ್ಯನವರ ವೀಣಾ ವಾದನ

ಕೈಲಾಸಂ ಸ್ಮಾರಕ ಕನ್ನಡ ನಾಟಕ ಸ್ಪರ್ಧೆ

ಕೃಷ್ಣರಾಜನಗರದ ಚಿತ್ರಕಲಾ ಮಂದಿರದ ಆಶ್ರಯದಲ್ಲಿ ಇದೇ ಮೇ ೧೬ರಿಂದ ಕೈಲಾಸಂ ಸ್ಮಾರಕ ವಿಶಾಲ ಮೈಸೂರಿನ ತೃತೀಯ ಕನ್ನಡ ನಾಟಕ ಸ್ಪರ್ಧೆಯು ಜರುಗುವುದು. ಎಲ್ಲಾ ಅಮೆಚೂರ್ ನಾಟಕ ಸಂಸ್ಥೆಯವರೂ ಪ್ರತಿ ನಾಟಕಕ್ಕೂ ಪ್ರವೇಶ ಧನ ೧೦ ರೂ ಕೊಟ್ಟು ಭಾಗವಹಿಸಬಹುದು ಒಂದು ಸಂಸ್ಥೆಯವರು ಎಷ್ಟು ನಾಟಕಗಳನ್ನು ಅಭಿನಯಿಸಿದರೂ, ಒಂದು ಬಹುಮಾನವನ್ನುಮಾತ್ರ ಕೊಡಲಾಗುವುದು ಸಾಮಾಜಿಕ, ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳನ್ನು ಅಭಿನಯಿಸಬೇಕು ಈ ತಿಂಗಳು ೨೦ರೊಳಗೆ ಅರ್ಜಿ ಸಲ್ಲಿಸಬೇಕು.

ಬೆಂಗಳೂರಿನಲ್ಲಿ ಶಿಕ್ಷಣ ಕಾಲೇಜು ಪ್ರಿನ್ಸಿಪಾಲರುಗಳ ಸಮ್ಮೇಳನ

ಬರುವ ತಿಂಗಳು ೬ರಿಂದ ೧೧ರವರೆಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಶಿಕ್ಷಣ ಕಾಲೇಜುಗಳ ಪ್ರಿನ್ಸಿಪಾಲರ ಸಮ್ಮೇಳನವು ನಡೆಯುವುದು ಬರೋಡಾ ವೈಸ್ ಛಾನ್ಸೆಲರ್ ಶ್ರೀಮತಿ ಹನ್ಸಾ ಮೆಹತಾರವರು ಅದರ ಆರಂಭೋತ್ಸವವನ್ನು ನೆರವೇರಿಸುವರು ಕೇಂದ್ರ ವಿದ್ಯಾ ಇಲಾಖೆಯವರು ಸಿದ್ಧಗೊಳಿಸಿರುವ ಮಾಧ್ಯಮಿಕ ಉಪಾಧ್ಯಾಯರ ಶಿಕ್ಷಣ ಯೋಜನೆಯನ್ನು ಅಲ್ಲಿ ಪರಿಶೀಲಿಸಲಾಗುವುದು.

ಕೇರಳದಲ್ಲಿ ಆಚಾರ್ಯ ವಿನೋಬಾ ಭಾವೆ

ಭೂದಾನ ಯಜ್ಞದ ಮೂಲಪುರುಷರಾದ ಆಚಾರ್ಯ ವಿನೋಬಾಭಾವೆಯವರು ಮೊನ್ನೆ ಕೇರಳ ಪ್ರಾಂತಕ್ಕೆ ಪ್ರವೇಶಿಸಿದರು ಅವರನ್ನು ಪ್ರಾಂತದ ಗವರ್ನರ್ ಶ್ರೀ ಬಿ.ರಾಮಕೃಷ್ಣರಾಯರು ಮತ್ತು ಮುಖ್ಯಮಂತ್ರಿ ನಂಬೂದರಿಪಾಡ್‌ರವರು ಸ್ವಾಗತಿಸಿದರು. ಭೂದಾನದ ನಾಯಕರ ಮಾರ್ಗವನ್ನು ಕೇರಳದ ಪ್ರಜೆಗಳು ಅನುಸರಿಸುವಂತಾಗಲೆಂದು ಗವರ್ನರರು ಹಾರೈಸಿದರು. ಭಾವೆಯವರ ಜೊತೆಯಲ್ಲಿ ಹೆರಾಲ್ಡ್ ಲಿಷ್ಪರ್ ಎಂಬ ಅಮೆರಿಕನ್ನರೂ ಇರುವರು.

"ರೆಂಟಿನ ರಗಳೆ ಅಥವಾ ಬಾಡಿಗೆ ಬಾಬತ್ತು"

ಬೆಂಗಳೂರಿನ ಶ್ರೀ ಸಿ. ಆರ್ ವಿ. ಆಚಾರ್ಯರು ಮೇಲ್ಕಂಡ ಶಿರೋನಾಮೆಯುಳ್ಳ ನಾಟಕವನ್ನು ರಚಿಸಿರುತ್ತಾರೆ. ಅದನ್ನು ಚಾಮರಾಜಪೇಟೆ ೬ನೇ ರಸ್ತೆ ೨೩ನೇ ನಂಬರ್ ಮನೆಯಲ್ಲಿರುವ ವಿಕ್ರಮ ಪ್ರಕಾಶನದವರು ಪ್ರಕಟಿಸಿರುತ್ತಾರೆ. ಮೈಸೂರು, ಬೆಂಗಳೂರು ಮುಂತಾದ ಪಟ್ಟಣಗಳಲ್ಲಿ ಬಾಡಿಗೆ ಮನೆ ಕಷ್ಟವನ್ನೂ, ಬಾಡಿಗೆದಾರ ಮತ್ತು ಮಾಲೀಕರ ನಡುವೆ ವಿರಸವನ್ನೂ ಕುರಿತು ಈ ನಾಟಕವನ್ನು ರಚಿಸಲಾಗಿದೆ ಒಟ್ಟಿನಲ್ಲಿ ಉಭಯರೂ ಕೋರ್ಟು ಕಛೇರಿಗೆ ಹೋಗದೆ ಪರಸ್ಪರ ಹೊಂದಿಕೊಂಡುಹೋಗಬೇಕೆಂಬುದೇ ಗ್ರಂಥಕರ್ತರ ತಾತ್ಪರ್ಯ. ಬಾಡಿಗೆದಾರರನೇಕರು ಬಾಡಿಗೆ ತೆರದೆ ಮಾಲೀಕರೊಡನೆ ಜಗಳವಾಡಿ ಕೋರ್ಟು ಫೈಸಲಾತಿನಂತರ ಮನೆ ಬಿಡಬೇಕಾದ ವಿಚಾರವನ್ನು ಸ್ವಾರಸ್ಯವಾಗಿ ವಿವರಿಸಲಾಗಿದೆ ಬಾಡಿಗೆದಾರರೂ, ಮನೆಯವರೂ ಮತ್ತು ಸಮಸ್ಯೆಯಲ್ಲಿ ಆಸಕ್ತರೂ ಗ್ರಂಥವನ್ನೋದಿ ಅದರ ಸ್ವಾರಸ್ಯವನ್ನು ಸವಿಯಬಹುದು ಬೆಲೆ ೧೨ ಆಣೆ.

ಕಾಲಡಿಯಲ್ಲಿ ಸರ್ವೋದಯ ಮೇಳ

ಅಖಿಲ ಭಾರತ ಸರ್ವೋದಯ ಸಮ್ಮೇಳನವು ಬರುವ ಮೇ ೯ನೇ ತಾರೀಕಿನಿಂದ ೮ ದಿನಗಳ ಕಾಲ, ಆದಿ ಶಂಕರರ ಜನ್ಮಸ್ಥಳವಾದ ಕಾಲಡಿಯಲ್ಲಿ ನಡೆಯುವುದು. ರಾಜೇಂದ್ರಪ್ರಸಾದ್, ಪಂಡಿತ ನೆಹರೂ ಇವರೇ ಮುಂತಾದ ಸರ್ವೋದಯ ಕಾರ್ಯಕರ್ತರು ಅದರಲ್ಲಿ ಭಾಗವಹಿಸುವರು. ಅದಕ್ಕೆ ಒಂದುಸಣ್ಣ ಗ್ರಾಮವನ್ನೇ ನಿರ್ಮಿಸಲಾಗುವುದು. ಖಾದಿ ಮತ್ತು ಗ್ರಾಮ ಕೈಗಾರಿಕಾ ವಸ್ತುಪ್ರದರ್ಶನವೂ ನಡೆಯುವುದು ವಿನೋಬಾಜಿಯವರು ಅಲ್ಲಿಗೆ ೮ನೇ ತಾರೀಕು ಆಗಮಿಸಿ ೧೩ರ ವರೆಗೆ ಇರುವರು.

ಜಾರ್ಡಾನ್ ವ್ಯಾಜ್ಯದಲ್ಲಿ ಪ್ರವೇಶಿಸಲು ಅಮೆರಿಕದ ಹಕ್ಕು

ಆಕ್ರಮಣ ಕಾರ್ಯದ ವಿರುದ್ಧವಾಗಿ ಜಾರ್ಡಾನನ್ನು ರಕ್ಷಣೆ ಮಾಡಲು ಐಸೆನ್‌ಹೋವರರ ಮಧ್ಯಪೂರ್ವ ಸಹಾಯ ಯೋಜನೆ ಮತ್ತು ಬ್ರಿಟಿಷ್, ಫ್ರೆಂಚ್ ಮತ್ತು ಅಮೆರಿಕಗಳ ೧೯೫೦ರ ಜಂಟಿ ಹೇಳಿಕೆಗಳ ಪ್ರಕಾರ ಅವಕಾಶವಿರುವುದೆಂದು ಅಧ್ಯಕ್ಷ ಐಸೆನ್‌ಹೋವರರು ತಿಳಿಸಿರುತ್ತಾರೆ. ೧೯೫೦ರ ಘೋಷಣೆಯು ಇಸ್ರೇಲ್ ಮತ್ತು ಅರಬ್ ರಾಜ್ಯಗಳಿಗೆ ಸಂಬಂಧಿಸಿರುವುದು

ಫ್ರಾನ್ಸಿನಲ್ಲಿ ೩ ಲಕ್ಷ ರೈಲ್ವೆ ಕಾರ್ಮಿಕರ ಮುಷ್ಕರ

ಫ್ರಾನ್ಸಿನಾದ್ಯಂತ ೩ ಲಕ್ಷ ಮಂದಿ ರೈಲ್ವೆ ಕೆಲಸಗಾರರು ತಮ್ಮ ವೇತನಗಳನ್ನು ಹೆಚ್ಚಿಸಬೇಕೆಂಬ ಬೇಡಿಕೆಯನ್ನಿಟ್ಟು ಮುಷ್ಕರ ಹೂಡಿರುತ್ತಾರೆ. ಅವರೊಡನೆ ಪ್ಯಾರಿಸ್ ನಗರದ ಸಂಚಾರ ಶಾಖೆಯ ಕೆಲಸಗಾರರೂ ಮುಷ್ಕರ ಹೂಡಲಾಗಿ ೩,೦೦೦ ಬಸ್ಸುಗಳ ಪೈಕಿ ಮೊನ್ನೆ ೧೨೦ ಮಾತ್ರ ಓಡಾಡಿದುವು ಬಸ್ಸುಗಳಿಲ್ಲದೆ ಜನರು ನಡೆದು ಅಥವಾ ಸೈಕಲ್ ಮೇಲೆ ಹೋಗಬೇಕಾಯಿತು. ರೈಲು ನಿಲ್ದಾಣಗಳೆಲ್ಲವೂ ಮುಚ್ಚಲ್ಪಟ್ಟವೆ.

ವಿವಾಹ ಮಹೋತ್ಸವಗಳು

ನಗರದ ಅಡ್ವೊಕೇಟರಾದ ಶ್ರೀ ಎ. ಸೀತಾರಾಮಯ್ಯನವರು ತಮ್ಮ ಮಗಳ ಮಕ್ಕಳೂ, ಶ್ರೀ ಕೆ. ಎಲ್ ಶ್ರೀಕಂಠಯ್ಯನವರ ಪುತ್ರರೂ ಆದ ಶ್ರೀ ಸೋಮಸುಂದರರವರಿಗೆ ಹೊಳೆನರಸೀಪುರ ತಾಲ್ಲೂಕು ಹಳ್ಳಿ ಮೈಸೂರಿನ ಶ್ರೀ ಹೆಚ್. ಆರ್ ನಂಜುಂಡಯ್ಯನವರ ಪುತ್ರಿ ಸೌ॥ ನಾಗರತ್ನಮ್ಮನನ್ನು ತಂದುಕೊಂಡು ನೆನ್ನೆ ವಿವಾಹವನ್ನು ನೆರವೇರಿಸಿದರು.

ಶ್ರೀ ಎ ಎಲ್ ಕೃಷ್ಣಶೆಟ್ಟರು ತಮ್ಮ ಕುಮಾರಿ ಸೌ॥ ನಾಗರತ್ನಮ್ಮನನ್ನು ಸತ್ಯಾಗಾಲಂ ವೆಂಕಟಾಚಲಪತಿ ಗುಪ್ತರವರ ಸಹೋದರ ಶ್ರೀ ಎಸ್. ಟಿ. ಪಾಂಡುರಂಗ ಗುಪ್ತರಿಗೆ ಕೊಟ್ಟು ನೆನ್ನೆ ವಿವಾಹವನ್ನು ಜರುಗಿಸಿದರು

ಯಡಹಳ್ಳಿ ಜಹಗೀರ್‌ದಾರ್ ಶ್ರೀ ಎ. ಆರ್ ವೆಂಕಟೇಶ ಶ್ರೇಷ್ಠಿಯವರ ಮಕ್ಕಳು ಶ್ರೀ ಎ. ವಿ ನಂಜುಂಡಶ್ರೇಷ್ಠಿಯವರು ತಮ್ಮ ಕುಮಾರಿ ಸೌ॥ ಲೀಲಾವತಮ್ಮನವನ್ನು ಕೊಳ್ಳೇಗಾಲದ ಶ್ರೀ ಎಸ್. ಪಿ. ರಾಮಕೃಷ್ಣ ಶ್ರೇಷ್ಠಿಯವರ ಕುಮಾರ ಶ್ರೀ ಎಸ್. ಆರ್ ಸುಂದರರಾಜರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನಡೆಸಿದರು

ನಿಟ್ಟೂರು ಶ್ರೀನಿವಾಸರಾಯರಿಂದ ವಕೀಲರ ಸಮ್ಮೇಳನಾರಂಭ

ಬರುವ ತಿಂಗಳು ನಗರದಲ್ಲಿ ನಡೆಯುವ ಸಂಸ್ಥಾನದ ವಕೀಲರ ಸಮ್ಮೇಳನದ ಆರಂಭೋತ್ಸವವನ್ನು ಹೈಕೋರ್ಟು ನ್ಯಾಯಾಧೀಶರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ನೆರವೇರಿಸುವರೆಂದು ತಿಳಿದುಬಂದಿದೆ ಸಮ್ಮೇಳನದಲ್ಲಿ ಕರ್ನಾಟಕ ಲಾ ಜರ್ನಲ್ ಎಂಬ ಮಾಸ ಪತ್ರಿಕೆಯೊಂದನ್ನು ಉದ್ಘಾಟಿಸಲಾಗುವುದು ಬೆಂಗಳೂರಿನ ವಕೀಲರಾದ ಶ್ರೀ ಕೆ. ಪಿ ರಾಯರು ಅದರ ಸಂಪಾದಕ ಮತ್ತು ಪ್ರಕಾಶಕರಾಗಿ ಡಿಕ್ಲೇರ್ ಮಾಡಿಕೊಂಡಿರುವರು.

Edited, Printed and Published by
A. R. Nagarajan at Sadhvi Press,
D. Subbiah Road, Mysore

ಪಾಕಿಸ್ತಾನದಲ್ಲೆಲ್ಲಾ ಜಂಟಿ ಚುನಾವಣೆ ಪದ್ಧತಿ

ಪಾಕಿಸ್ತಾನದಲ್ಲೆಲ್ಲಾ ಜಂಟಿ ಚುನಾವಣೆ ಪದ್ಧತಿಯನ್ನು ಜಾರಿಗೆ ತರಲು ಆಲೋಚಿಸಲಾಗಿರುವುದೆಂದು ಪಾಕಿಸ್ತಾನ ಸರ್ಕಾರದವರು ಘೋಷಿಸಿರುತ್ತಾರೆ ಈ ಬಗ್ಗೆ ಅಲ್ಲಿನ ರಾಷ್ಟ್ರೀಯ ಸಭೆಯ ಈಗಿನ ಅಧಿವೇಶನದಲ್ಲಿ ಮಸೂದೆಯನ್ನು ತರಲಾಗುವುದು. ಕಳೆದ ವರ್ಷದ ಚುನಾವಣೆ ಶಾಸನದ ಪ್ರಕಾರ ಪಶ್ಚಿಮ ಪಾಕಿಸ್ತಾನದಲ್ಲಿ ಪ್ರತ್ಯೇಕ ಚುನಾವಣೆ ಮತ್ತು ಪೂರ್ವ ಪಾಕಿಸ್ತಾನದಲ್ಲಿ ಜಂಟಿ ಚುನಾವಣೆ ಪದ್ಧತಿಗಳಿದ್ದುವು. ಒಂದೇ ವಿಧದ ಚುನಾವಣೆ ಪದ್ಧತಿಯಿಂದ ಕ್ಷೇತ್ರಗಳ ವಿಂಗಡಣೆ ಕಾರ್ಯವು ಸುಲಭವಾಗುವುದಲ್ಲದೆ, ಪಾಕಿಸ್ತಾನದ ಎರಡು ವಿಭಾಗಗಳಲ್ಲೂ ಚುನಾವಣೆ ಕಾನೂನು ಒಂದೇ ಸಮನಾಗಿರುವುದೆಂದು ತಿಳಿಸಲಾಗಿದೆ

ಕೇರಳದಲ್ಲಿ ಲೆನಿನ್ನರಿಗೆ ಗಾಂಧಿಜಿಯವರೊಡನೆ ಸಮಾನ ಸ್ಥಾನ

ಕೇರಳದ ಮುಖ್ಯ ಮಂತ್ರಿ ನಂಬೂದಿರಿ ಪಾದ್‌ರವರ ಕಛೇರಿಯಲ್ಲಿ ಮಹಾತ್ಮಾ ಗಾಂಧಿಯವರ ಭಾವಚಿತ್ರದ ಜೊತೆಗೆ ರಷ್ಯದ ಕ್ರಾಂತಿ ಪುರುಷ ಲೆನಿನ್ನರ ಚಿತ್ರವನ್ನು ಸಧ್ಯದಲ್ಲೇ ಹಾಕಲಾಗುವುದೆಂದು ಹೇಳಲಾಗಿದೆ

ಭೂದಾನ ಯಜ್ಞಕ್ಕೆ ಕೇರಳ ಕಮ್ಯೂನಿಸ್ಟ್ ಸರ್ಕಾರದ ಸಹಾಯ

ಭೂದಾನ ಯಜ್ಞಕ್ಕೆ ಸಾಧ್ಯವಾದ ಸಹಾಯವನ್ನೆಲ್ಲಾ ಒದಗಿಸಲಾಗುವುದೆಂದು ಕೇರಳದ ಮುಖ್ಯ ಮಂತ್ರಿ ನಂಬೂದಿರಿ ಪಾದ್‌ರವರು ತಿಳಿಸಿರುತ್ತಾರೆ ಆ ಪ್ರಾಂತಕ್ಕೆ ಆಚಾರ್ಯ ವಿನೋಬಾ ಭಾವೆಯವರು ಮೊನ್ನೆ ತಾನೆ ಪ್ರವೇಶಿಸಿದರು

ಬರೋಡಾ ಮಹಾರಾಜರಿಗೆ ರಾಜಧನಕ್ಕಿಂತ ಪ್ರಜಾ ಸೇವೆ ಮುಖ್ಯ

ಲೋಕ ಸಭೆಗೆ ಕಾಂಗ್ರೆಸ್ಸಿನ ಪರವಾಗಿ ಸ್ಪರ್ಧಿಸಿ ಆರಿಸಿಬಂದಿರುವ ಬರೋಡೆಯ ಮಾಜಿ ರಾಜರಾದ ಫತೆಸಿಂಗ್‌ರವರು ಬೊಂಬಾಯಿಯಲ್ಲಿ ಮಾತನಾಡುತ್ತಾ, ವರ್ಷಕ್ಕೆ ೧೦ ಲಕ್ಷ ರೂ ವರಮಾನವನ್ನು ಬಿಟ್ಟುಕೊಟ್ಟು ತಾವು ಕಾಂಗ್ರೆಸ್ಸಿಗೆ ಸೇರಿದುದಾಗಿ ತಿಳಿಸಿರುತ್ತಾರೆ. ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು ಅಥವಾ ಭಾರಿ ವರಮಾನವನ್ನು ಪಡೆಯುವುದು, ಈ ಎರಡರಲ್ಲಿ ತಾವು ಸೇವಾ ಕ್ಷೇತ್ರವನ್ನೇ ಆರಿಸಿಕೊಂಡಿರುವುದಾಗಿ ಅವರು ತಿಳಿಸಿರುತ್ತಾರೆ.

ಬೆಂಗಳೂರು ರೇಡಿಯೊ ನಾಳಿನ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ. ೭-೧೫ ಮತ್ತು ೮-೧೫ ಎಚ್ ಉಮಾದೇವಿ- ಕನ್ನಡ ಗೀತೆ. ೭-೩೦ ಬಿಸ್ಮಿಲ್ಲಾ ಪಾರ್ಟಿ-ಷಹನಾಯ್. ೮-೩೦ ಸಂಗೀತ. ೯-೩೦ ಬಾಲಜಗತ್. ಮಧ್ಯಾಹ್ನ ೧೨ ಮತ್ತು ೨-೧೫ ಹೆಚ್. ಟಿ. ರಾಮಸ್ವಾಮಿ-ಸಂಗೀತ. ೧೨-೩೦ ವಾದ್ಯ ವೃಂದ. ೧ ಸಂಗೀತ ೧-೨೦ ರಿಕಾರ್ಡು. ಸಂಜೆ ೫ ಪಾಶ್ಚಾತ್ಯ ಸಂಗೀತ. ೫-೩೦ ಬಿ ಆರ್. ಛಾಯಾಚಾರ್-ವೇಣುವಾದನ ೬-೫ ದೇವರನಾಮ ೭-೩೦ ಪಕ್ಷಿ ನೋಟ. ೮ ಮತ್ತು ೯-೩೦ ರಾಮನವಮಿ ಸಂಗೀತೋತ್ಸವ. ೯-೧೫ ಚಿತ್ರ ಸಂಗೀತ.

ನಾದಬ್ರಹ್ಮ ಸಂಗೀತ ಸಭಾ,

ಮೈಸೂರು
ತಾ॥ 21-4-57ನೇ ಭಾನುವಾರ
ಸಂಜೆ 5-30ಕ್ಕೆ
ಸದ್ವಿದ್ಯಾ ಪಾಠಶಾಲೆಯಲ್ಲಿ
ವಿ॥ ಟಿ. ಆರ್. ಮಹಾಲಿಂಗಂರವರ
ಅಮೋಘವಾದ ವೇಣುವಾದನ
ಕುಮಾರಿ ಟಿ ರುಕ್ಮಿಣಿಯವರ ಪಿಟೀಲು
ವಿ॥ ಎಂ. ಎಲ್. ವೀರಭದ್ರಯ್ಯ ಮೃದಂಗ
ವಿ॥ ಕೆ. ಎಸ್. ಮಂಜುನಾಥ್ ಘಟಂ
ವಿ॥ ಸೋಸಲೆ ಶೇಷಗಿರಿದಾಸ್ ಖಂಜರಿ
ಮೆಂಬರಲ್ಲದವರಿಗೆ ಪ್ರವೇಶ ದರ 2-0-0

ನೂತನ ಮಂತ್ರಿಮಂಡಲದ ಹೊಸ ಸಚಿವರುಗಳ ವ್ಯಕ್ತಿ ಪರಿಚಯ

ಮೈಸೂರು

ನೂತನ ಮೈಸೂರು ಸಚಿವ ಸಂಪುಟದಲ್ಲಿರುವ ಹೊಸ ಮಂತ್ರಿಗಳ ಸಂಕ್ಷಿಪ್ತ ಜೀವನ ಪರಿಚಯವನ್ನು ಕೆಳಗೆ ಕೊಡಲಾಗಿದೆ:—

ಶ್ರೀ ಆರ್ ಎಂ. ಪಾಟೀಲ್—ಧಾರವಾಡದ ಲಗುಂದ ಕ್ಷೇತ್ರದಿಂದ ಉಬಾರಿ ಚುನಾಯಿ ದಿರುವ ಶ್ರೀ ಆರ್. ಎಂ. ಪಾಟೀಲರು ೧೯೦ ಜನಿಸಿದರು. ಸಾಂಗ್ಲಿಯ ವೆಲ್ಲಿಂಗ್ಟನ್ ಕಾ ಜಿನಲ್ಲಿ ಪದವೀಧರ ಮತ್ತು ಕೊಲ್ಲಾಪುರ ಕಾಲೇಜಿನಲ್ಲಿ ಲಾ ಪರೀಕ್ಷೆಗಳಲ್ಲಿ ಉತ್ತೀರ್ಣ ಗಿ ೩ಲಕಲ್ಲಿ ಬೊಂಬಾಯಿ ಹೈಕೋರ್ಟು ಅ ಕೇಟರಾದರು ೧೯೩೦ರಿಂದಲೂ ಅವರು ಗ್ರೆಸ್ ಸದಸ್ಯರಾಗಿರುವರು. ಧಾರವಾ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದು, ಮಹಾ ವಣೆಗಳಲ್ಲಿ ಭಾಗವಹಿಸುವ ಸಲುವಾಗಿ ಆ ಸ್ಥಾ ಕ್ಕೆ ರಾಜೀನಾಮೆಯಿತ್ತರು.

ಶ್ರೀ ವೈಕುಂಠ ಬಾಳಿಗ- ದಕ್ಷಿಣ ಕನ್ನಡ ಜಿಲ್ಲೆ ಹಿರಿಯ ಕಾಂಗ್ರೆಸ್ ಪ್ರಮುಖರು ಅವರಿಗೆ ವರ್ಷ ವಯಸ್ಸು. ಮದ್ರಾಸು ವಿಧಾನ ಸಭೆ ಸದಸ್ಯರಾಗಿದ್ದರು ಮಂಗಳೂರಿನ ಗಾಂಧಿಸ್ಮಾ ವೆ ಡಿಕಲ್ ಕಾಲೇಜು ಮುಂತಾದ ನಾನಾ ಧ್ಯಾ ಸಂಸ್ಥೆಗಳನ್ನು ಸ್ಥಾಪಿಸಿದವರಲ್ಲೊಬ್ಬ ಅಲ್ಲಿನ ಸುಪ್ರಸಿದ್ಧ ಅಡ್ವೊಕೇಟರಾಗಿರುವರು ನೇಕ ಸಾಮಾಜಿಕ ಸೇವಾ ಸಂಸ್ಥೆಗಳಲ್ಲೂ ಇ ವರು

ಶ್ರೀ ಮಹಮದ್ ಅಲಿ ಮೆಹಬೂಬ್ ಅಲಿ—ನೂತನ ಮಂತ್ರಿಮಂಡಲದ ಅತ್ಯಂತ ಕಿರಿಯವ ಸ್ಸಿನವರು ಅವರಿಗೆ ಈಗ ೩೮ ವರ್ಷ ಹೈದ ಬಾದು ಹೈಕೋರ್ಟಿನ ಅಡ್ವೊಕೇಟರಾಗಿದ್ದು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಓದಿದ್ದ ಗುಲ್ಬರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಾಗಿದ್ದರು

ಶರೀರ ರಚನಾ ಶಾಸ್ತ್ರದ ಪಿಹೆಚ್ ಡಿ ಪ್ರಶಸ್ತಿ

ಮೈಸೂರು ಮೆಡಿಕಲ್ ಕಾಲೇಜು ಅಧ್ಯಾಪಕರಾದ ಶ್ರೀ ಎಂ. ಡಿ. ರಾಜಗೋಪಾಲ್‌ರವರಿಗೆ ಮದ್ರಾಸು ವಿಶ್ವವಿದ್ಯಾಲಯದಲ್ಲಿ ಶರೀರ ರಚನಾ ಶಾಸ್ತ್ರದ ಪಿಹೆಚ್. ಡಿ. ಪ್ರಶಸ್ತಿಯನ್ನು ದೊರೆತಿರುವುದಾಗಿ ತಿಳಿದುಬಂದಿದೆ. ಆ ವಿಶ್ವವಿದ್ಯಾಲಯದಲ್ಲಿ ಈ ಪ್ರಶಸ್ತಿಯನ್ನು ಪಡೆದವರಲ್ಲಿ ಇವರೇ ಮೊದಲನೆಯವರೆಂದು ಗೊತ್ತಾಗಿದೆ

ಫುಟ್‌ಬಾಲ್ ಪಂದ್ಯ

ಕೃಷ್ಣರಾಜೇಂದ್ರ ಗಿರಣಿಯ ಟೀಮಿಗೂ ಲೈ ಇನ್‌ಸ್ಟಿಟ್ಯೂಟ್ ಟೀಮಿಗೂ ನೆನ್ನೆ ಫುಟ್‌ಬಾಲ್ ಪಂದ್ಯವು ೧-೧ ಗೋಲಿನಿಂದ ವಾಯಿತು. ಉಭಯ ಕಡೆಯೂ ಆಟವು ರಾಗಿತ್ತು.

ಅಣು ಪ್ರಯೋಗದಿಂದ ವಾತಾವರಣವನ್ನು ಕೆಡಿಸಲು ಯಾವ ರಾಷ್ಟ್ರಕ್ಕೂ ಹಕ್ಕಿಲ್ಲ

ಏಷ್ಯಾ ನ್ಯಾಯವಾದಿಗಳ ಸಭೆಯಲ್ಲಿ ನೆಹರೂ ಭಾಷಣ

ಪ್ರಧಾನಿ ನೆಹರೂರವರು ಮೊನ್ನೆ ದೆಹಲಿಯಲ್ಲಿ ನಡೆದ ಏಷ್ಯಾ ನ್ಯಾಯವಾದಿಗಳ ಸಲಹಾ ಸಮಿತಿಯಲ್ಲಿ ಮಾತನಾಡಿ ಅಣು ಶಸ್ತ್ರಪ್ರಯೋಗ ಸಿಡಿತದಿಂದ ವಾತಾವರಣವನ್ನು ಹಾಳು ಮಾಡಲು ಯಾವ ರಾಷ್ಟ್ರಕ್ಕೂ ಅಂತರಾಷ್ಟ್ರೀಯ ಅಥವಾ ನೈತಿಕ ಹಕ್ಕಿಲ್ಲವೆಂದರು. ಹಿಂದೆ ಅಂತರ ರಾಷ್ಟ್ರೀಯ ನೀತಿಯು ಯೂರೋಪು ರಾಷ್ಟ್ರಗಳ ಅಭಿಪ್ರಾಯದ ಮೇಲೆ ನಿಂತಿತ್ತೆಂದೂ, ಏಷ್ಯಾ-ಆಫ್ರಿಕಾ ರಾಷ್ಟ್ರಗಳು ಅದರ ಅಡಿಯಲ್ಲಿ ತೊಳಲುತ್ತಿದ್ದವೆಂದೂ, ಈಗ ಅವುಗಳು ಸ್ವತಂತ್ರವಾಗಿರುವುದರಿಂದ ಅಂತರ ರಾಷ್ಟ್ರೀಯ ನ್ಯಾಯದ ದೃಷ್ಟಿ ಇನ್ನೂ ವಿಶಾಲವಾಗಬೇಕಾಗಿರುವುದೆಂದು ನುಡಿದರು. ಪಂಚ ಶೀಲ ತತ್ವವನ್ನು ಅನುಸರಿಸಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು. ಸಮಿತಿಯಲ್ಲಿ ಜಪಾನ್, ಬರ್ಮಾ, ಸಿಂಹಳ, ಇಂಡೋನೇಷ್ಯಾ, ಇರಾಕ್ ರಿಯಗಳು ಭಾಗವಹಿಸಿವೆ.

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾ ಪೈಸೆ



ಬಿಡಿ ಪತ್ರಿಕೆ 2 ನಯಾ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ : 446

ಪುಸ್ತಕ : ೧೫] SADHVI : SUNDAY 21-4-1957 ಮೈಸೂರು : ಭಾನುವಾರ ೨೧-೪-೧೯೫೭ : [ಸಂಚಿಕೆ : [illegible]

ಜಾರ್ಡಾನಿನಲ್ಲಿ ಪುನಃ ಬಿಕ್ಕಟ್ಟು; ಸೇನಾಪತಿ ಪಲಾಯನ

ಜಾರ್ಡಾನಿನಲ್ಲಿ ಪುನಃ ಬಿಕ್ಕಟ್ಟು

ಪ್ರಧಾನ ಸೇನಾನಿಯ ರಾಜೀನಾಮೆ ಮತ್ತು ಪಲಾಯನ

ಜಾರ್ಡಾನಿನ ಹೊಸ ದಂಡ ನಾಯಕ ಮೇಜರ್ ಜನರಲ್ ಹಿಯಾರಿಯವರು ರಾಜೀನಾಮೆಯನ್ನು ಕೊಟ್ಟು, ಆ ದೇಶದಿಂದ ಪಲಾಯನ ಮಾಡಿರುವರೆಂದು ವರದಿಯಾಗಿದೆ. ತಮ್ಮನ್ನು ಕೇಳದೆ ದೊರೆಯೂ ಮತ್ತು ಇತರರೂ ಸೈನ್ಯದ ೭೦ ಮಂದಿ ಅಧಿಕಾರಿಗಳನ್ನು ವಜಾ ಮಾಡಿ ಅವರ ಸ್ಥಾನದಲ್ಲಿ ಬಾದಾಯಿ ವರ್ಗದ ಅಧಿಕಾರಿಗಳನ್ನು ನೇಮಿಸಿಕೊಂಡುದೇ ಅವರ ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ. ದೊರೆ ಹುಸೇನರು ಪರಿಸ್ಥಿತಿಯನ್ನು ಕುರಿತು ನೆನ್ನೆ ಮಂತ್ರಿಮಂಡಲದೊಡನೆ ೩ ಗಂಟೆ ಕಾಲ ಚರ್ಚಿಸಿದರು. ಇದಲ್ಲದೆ ಪ್ರಸಕ್ತ ಮಂತ್ರಿಮಂಡಲದಲ್ಲಿರುವ ಮಾಜಿ ಪ್ರಧಾನಿ ನಾಬುಲ್ಸಿಯವರ ರಾಜೀನಾಮೆಗಾಗಿ ಒತ್ತಾಯಪಡಿಸಲಾಗುತ್ತಿರುವುದೆಂದೂ, ಇದರಿಂದ ಇನ್ನೂ ತೀವ್ರ ಬಿಕ್ಕಟ್ಟು ಪ್ರಾಪ್ತವಾಗಬಹುದೆಂದೂ ಹೇಳಲಾಗಿದೆ.

ಸಿಡಿಲು ರಭಸಕ್ಕೆ ಮಹಿಳೆಯ ಮೂರ್ಛೆ

ಹೊಳೇನರಸೀಪುರದಲ್ಲಿ ಕಳೆದ ಸೋಮವಾರ ಅದ್ಭುತ ಮಿಂಚು ಬಂದನಂತರ ಭಾರಿ ಸಿಡಿಲು ಹೊಡೆಯಲು ಅದರ ಶಬ್ದ ಕೇಳಿ ಒಬ್ಬ ಹೆಂಗಸಿಗೆ ಮೂರ್ಛೆ ಬಂದಿತೆಂದೂ, ಅದರ ರಭಸದಿಂದ ವರ್ಷದ ಬಾಲಕಿಯ ಶರೀರದ ಕೊಂಚ ಭಾಗ ಸುಟ್ಟಿತೆಂದೂ ವರದಿಯಾಗಿದೆ. ಒಂದು ತೆಂಗಿನ ಮರವು ಉದ್ದಕ್ಕೂ ಸೀಳಿ ಮುರಿದುಬಿತ್ತು. ಹುಡುಗಿಯು ಈಗ ಚೇತರಿಸಿಕೊಳ್ಳುತ್ತಿರುವಳು

ಹಿಂದಿ ಶಬ್ದಕೋಶದ ಸಭೆ

ಕೇಂದ್ರ ಸರ್ಕಾರದ ವಿದ್ಯಾಶಾಖೆಯವರು ರಚಿಸಿರುವ ಹಿಂದಿ ಶಬ್ದಕೋಶದ ಪ್ರವೀಣರ ಸಮಿತಿಯ ಸಭೆಯು ದೆಹಲಿಯಲ್ಲಿ ಕಳೆದ ೬ನೇ ತಾರೀಕಿನಿಂದ ೧೨ರವರೆಗೆ ನಡೆಯಿತು. ಮೈಸೂರಿನ ಶ್ರೀ ಜಿ. ಆರ್. ಜೋಸ್ಯರ್‌ರವರು ಅದರಲ್ಲಿ ಭಾಗವಹಿಸಿದ್ದರು. ಸಮಿತಿಯಲ್ಲಿ ಕಾಶಿ ವಿದ್ಯಾಪೀಠದ ಡಾ|| ಸೂರ್ಯಕಾಂತ್, ದೆಹಲಿ, ಮದ್ರಾಸು ವಿಶ್ವವಿದ್ಯಾಲಯಗಳ ಡಾ|| ವಿಶ್ವೇಶ್ವರಪ್ರಸಾದ್ ಮತ್ತು ಡಾ|| ನೀಲಕಂಠಶಾಸ್ತ್ರಿ, ಗ್ವಾಲಿಯರಿನ ಶ್ರೀ ಹೆಚ್. ಕೆ. ಶರ್ಮ ಮತ್ತು ವಿದ್ಯಾಶಾಖೆಯ ವಿಶೇಷ ಅಧಿಕಾರಿ ಡಾ|| ಯದುವಂಶಿಯವರು ಭಾಗವಹಿಸಿದ್ದರು. ಶ್ರೀ ಜೋಸ್ಯರ್‌ರವರು ಕಳೆದ ೧೬ನೇ ತಾರೀಕು ನಗರಕ್ಕೆ ವಾಪಸು ಬಂದರು.

ಅ|| ಭಾ|| ಮಲೇರಿಯಾ ಸಮ್ಮೇಳನ

ಬರುವ ತಿಂಗಳು ೧೮ರಿಂದ ೩ ದಿನಗಳವರೆಗೆ ಉತ್ತರ ಕರ್ನಾಟಕದ ಸಿರಸಿಯಲ್ಲಿ ಅಖಿಲ ಭಾರತ ಮಲೇರಿಯಾ ಸಮ್ಮೇಳನವು ಜರುಗುವುದು. ಭಾರತದ ಯೋಜನಾ ಮಂಡಲಿಯ ಉಪಾಧ್ಯಕ್ಷರಾದ ಶ್ರೀ ವಿ. ಟಿ. ಕೃಷ್ಣಮಾಚಾರಿಯವರು ಇದರ ಆರಂಭೋತ್ಸವವನ್ನು ನೆರವೇರಿಸುವರು. ಮೈಸೂರು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು.

ಪಶ್ಚಿಮ ಪಾಕಿಸ್ತಾನದಲ್ಲಿ ಜಂಟಿ ಚುನಾವಣೆ ಮಸೂದೆಗೆ ತಡೆ

ಪ್ರಧಾನಿಯವರ ತಿದ್ದುಪಡಿಗೆ ಸಭಾಧ್ಯಕ್ಷರ ಅಡ್ಡಿ

ಪಶ್ಚಿಮ ಪಾಕಿಸ್ತಾನದಲ್ಲೂ ಜಂಟಿ ಚುನಾವಣೆ ಪದ್ಧತಿಯನ್ನು ಜಾರಿಗೆ ತರುವ ಸಲುವಾಗಿ ಕಳೆದ ವರ್ಷದ ಮತದಾರರ ಶಾಸನಕ್ಕೆ ಪ್ರಧಾನಿ ಸುಹ್ರಾವರ್ದಿಯವರು ನೆನ್ನೆ ತಂದ ತಿದ್ದುಪಡಿಯನ್ನು ಪಾಕಿಸ್ತಾನದ ರಾಷ್ಟ್ರೀಯ ಸಭೆಯಲ್ಲಿ ಮಂಡಿಸಲು ಸಭಾಧ್ಯಕ್ಷತೆ ವಹಿಸಿದ್ದ ಉಪಾಧ್ಯಕ್ಷ ಸಿ. ಇ. ಗಿಬ್ಬನ್‌ರವರು ಅವಕಾಶವೀಯಲಿಲ್ಲ. ಇಂತಹ ಮಸೂದೆಯನ್ನು ತರಲು ಕನಿಷ್ಠ ಪಕ್ಷ ಮೂರು ದಿನಗಳ ನೋಟೀಸನ್ನಾದರೂ ಸಭೆಗೆ ಕೊಡಬೇಕೆಂದು ವಿರೋಧ ಪಕ್ಷದ ನಾಯಕರಾದ ಐ. ಐ. ಚುಂದ್ರಿಗರ್‌ರವರು ಕ್ರಿಯಾಲೋಪವೆತ್ತಿದರು. ಕ್ರಮ ಲೋಪವಿದ್ದರೆ ವಿರೋಧಿಗಳು ಕೋರ್ಟುಗಳಿಗೆ ಹೋಗಬಹುದೆಂದು ಅರ್ಥ ಬರುವಂತೆ ಸುಹ್ರಾವರ್ದಿಯವರು ಹೇಳಿದರು. ನ್ಯಾಯಾಂಗ ಮಂತ್ರಿ ಅಮೀರ್ ಅಜೀಂರವರು ಮಾತನಾಡಿ, ಅಧ್ಯಕ್ಷರು ಸಭಾ ನಡವಳಿಕೆಯನ್ನು ಕಟ್ಟುನಿಟ್ಟಾಗಿ ಅನುಸರಿಸದೆ ಮಸೂದೆಗೆ ಅವಕಾಶವೀಯಬೇಕೆಂದು ಬೇಡಿದರು ಅದರೆ ಅಧ್ಯಕ್ಷರು ಅದಕ್ಕೊಪ್ಪಲಿಲ್ಲ.

ಅಣುಶಸ್ತ್ರ ಪರೀಕ್ಷೆಯಿಂದ ೧೦ ವರ್ಷಗಳಲ್ಲಿ ಘೋರ ಅಪಾಯ

ಜಪಾನ್ ವೈಜ್ಞಾನಿಕರೊಬ್ಬರ ಎಚ್ಚರಿಕೆ

ರಷ್ಯ ಮತ್ತು ಪಶ್ಚಿಮ ರಾಷ್ಟ್ರಗಳ ಅಣುಶಸ್ತ್ರ ಪರೀಕ್ಷಾ ಸಿಡಿತಗಳು ಮುಂದುವರಿದರೆ ಇನ್ನು ಹತ್ತು ವರ್ಷದೊಳಗೆ ಪ್ರಪಂಚದ ವಾತಾವರಣವು ಜೀವನಕ್ಕೆ ಅಪಾಯ ತರುವಷ್ಟುಮಟ್ಟಿಗೆ ಕೆಡುವುದೆಂದು ಜಪಾನಿನ ವೈಜ್ಞಾನಿಕ ಡಾ|| ಮುಕಿ ನಿಶಿವಾಕಿಯವರು ತಿಳಿಸಿರುತ್ತಾರೆ ಅಪಾಯದ ಮಟ್ಟವು ಮುಟ್ಟುತ್ತಲೇ ಮೂಳೆಯ ವ್ರಣ, ಲ್ಯುಕೇಮಿಯಾ, ವಿಚಿತ್ರಮಕ್ಕಳ ಜನನ ಮುಂತಾದುವು ಹೆಚ್ಚುಹೆಚ್ಚು ಆಗುವುವೆಂದೂ, ಅಪಾಯದ ಕಾಲವು ೫-೧೦ ವರ್ಷಗಳೊಳಗೆ ಸಂಭವಿಸುವುದೆಂದೂ ಅವರು ಎಚ್ಚರಿಸಿರುತ್ತಾರೆ ೩೦-೫೦ ವರ್ಷಗಳೊಳಗೆ ಇಡೀ ಮಾನವಕೋಟಿಯೇ ಈ ಕಲುಷಿತ ವಾತಾವರಣಕ್ಕೆ ಸಿಕ್ಕಬಹುದೆಂದೂ ಅವರು ನುಡಿದಿರುವರು

ಮನುಷ್ಯನಂತಹ ಆಡಿನ ಮರಿ

ಕಲ್ಕತ್ತೆಯ ಒಂದು ಮನೆಯಲ್ಲಿ ನೆನ್ನೆ ಆಡೊಂದು ಹಾಕಿದ ಎರಡು ಮರಿಗಳಲ್ಲಿ ಒಂದು ಮನುಷ್ಯನಿಗೆ ಹೋಲುವಂತೆ ಇತ್ತೆಂದೂ, ಅದು ಹುಟ್ಟಿದ ಸ್ವಲ್ಪ ಹೊತ್ತಿನಲ್ಲೇ ಮೃತಪಟ್ಟಿತೆಂದೂ ವರದಿಯಾಗಿದೆ. ಅದಕ್ಕೆ ಮನುಷ್ಯನಂತೆ ಕೈ-ಕಾಲುಗಳಿದ್ದುವೆಂದೂ, ಅದರ ತಲೆಯು ಆಡಿನ ಮರಿಯಂತಿತ್ತೆಂದೂ ಹೇಳಲಾಗಿದೆ. ಈ ವಿಚಿತ್ರವನ್ನು ನೋಡಲು ವಿಪರೀತ ಜನಸಂದಣಿ ಸೇರಿ, ಕಡೆಗೆ ಜನಸಂಚಾರದ ವ್ಯವಸ್ಥೆಗೆ ಪೋಲೀಸರನ್ನು ಕರೆಸಬೇಕಾಯಿತು

ಜೀವವಿಮೆ ನೌಕರರ ವೇತನದ ಬದಲಾವಣೆ ಬಗ್ಗೆ ರಾಷ್ಟ್ರಾಧ್ಯಕ್ಷರ ವಿಶೇಷಾಜ್ಞೆ

ಜೀವ ವಿಮಾ ಕಾರ್ಪೊರೇಷನ್ನಿನ ನೌಕರರ ವೇತನಗಳಲ್ಲಿ ಬದಲಾವಣೆ ಮಾಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರವೀಯುವ ಬಗ್ಗೆ ರಾಷ್ಟ್ರಾಧ್ಯಕ್ಷರು ನೆನ್ನೆ ವಿಶೇಷಾಜ್ಞೆಯೊಂದನ್ನು ಹೊರಡಿಸಿದರು. ನೌಕರರ ವೇತನ ಮತ್ತು ಸೇವಾ ಷರತ್ತುಗಳನ್ನು ಬದಲಾಯಿಸುವುದು ಅವಶ್ಯಕವಾಗುವುದೆಂದು ಕೇಂದ್ರ ಸರ್ಕಾರವು ಹಿಂದೆಯೇ ಮನಗಂಡಿತ್ತು. ಆದರೆ ಬೊಂಬಾಯಿ ಹೈಕೋರ್ಟಿನವರು ಇತ್ತೀಚೆಗೆ ತೀರ್ಪಿತ್ತು ಕೇಂದ್ರ ಸರ್ಕಾರದವರು ನೌಕರರ ಸಂಬಳ ಮತ್ತು ಸೇವಾ ಷರತ್ತನ್ನು ಬದಲಾಯಿಸಲು ಅಧಿಕಾರ ಹೊಂದಿಲ್ಲವೆಂದು ತಿಳಿಸಿದ್ದರು. ಆದುದರಿಂದ ಈಗ ಶಾಸನದ ಮೂಲಕ ಸರ್ಕಾರದವರು ಈ ಅಧಿಕಾರವನ್ನು ಪಡೆದಿದ್ದಾರೆ

ರಾಷ್ಟ್ರಾಧ್ಯಕ್ಷತೆಗೆ ಚುನಾವಣೆ

ರಾಷ್ಟ್ರಾಧ್ಯಕ್ಷತೆಗಾಗಿ ಬರುವ ತಿಂಗಳು ೬ನೇ ತಾರೀಖು ಚುನಾವಣೆಯು ನಡೆಯುವುದು ಸ್ಪರ್ಧಿಸಿರುವ ಮೂವರು ಉಮೇದುವಾರರ ಪೈಕಿ ಯಾರೂ ತಮ್ಮ ಹೆಸರನ್ನು ವಾಪಸು ತೆಗೆದುಕೊಂಡಿಲ್ಲ. ಉಪಾಧ್ಯಕ್ಷ ಸ್ಥಾನಕ್ಕೆ ಡಾ|| ರಾಧಾಕೃಷ್ಣರವರ ಹೆಸರು ಒಂದೇ ಇರುವುದರಿಂದ ಅವರು ಆರಿಸಲ್ಪಟ್ಟರೆಂದು ನಾಳಿದ್ದು ಅಧಿಕೃತ ಪ್ರಕಟನೆ ಹೊರಡಿಸಲಾಗುವುದು.

ಹಿಂದಿ ತರಗತಿಗಳು

ಬರುವ ಆಗಸ್ಟಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರಾಥಮಿಕದಿಂದ ವಿಶಾರದ ಪರೀಕ್ಷೆಗಳವರೆಗೂ ಸಿ ಸುಬ್ಬಯ್ಯ ಬಸ್ತಿಯಲ್ಲಿರುವ "ಸುಗುಣಾ ಹಿಂದಿ ಸಮಾಜ"ದಲ್ಲಿ ಶಿಕ್ಷಣವನ್ನು ಕೊಡಲಾಗುವುದು. ಅಪೇಕ್ಷೆಯುಳ್ಳವರು ಕೂಡಲೇ ಸೇರಬೇಕೆಂದು ಕೋರಲಾಗಿದೆ.

ಮೈಸೂರಿನಿಂದ ರಾಜ್ಯಸಭೆಗೆ ಅವಿರೋಧ ಆಯ್ಕೆ

ಮೈಸೂರಿನಿಂದ ರಾಜ್ಯ ಸಭೆಗೆ ಶ್ರೀಗಳಾದ ಬೆನಗಲ್ ಶಿವರಾವ್ ಮತ್ತು ಬಿ. ಸಿ. ನಂಜುಂಡಯ್ಯನವರ ಹೆಸರಲ್ಲದೆ ಬೇರೆ ಯಾರ ನಾಮಪತ್ರಗಳೂ ಬಂದಿಲ್ಲ. ನೆನ್ನೆ ಮಧ್ಯಾಹ್ನ ೩ ಗಂಟೆಯೇ ನಾಮ ಪತ್ರ ಸ್ವೀಕಾರಕ್ಕೆ ಅಖೈರು ಕಾಲವಾಗಿತ್ತು. ಆದ್ದರಿಂದ ಅವರೇ ಅವಿರೋಧವಾಗಿ ಆಯ್ಕೆಯಾಗುವುದು ಖಚಿತವಾಗಿದೆ

ಸಂಸ್ಥಾನದಲ್ಲಿ ಮತ್ತೆರಡು ಸಕ್ಕರೆ ಕಾರ್ಖಾನೆ

ರಾಯಚೂರು ಜಿಲ್ಲೆಯ ಗಂಗಾವತಿ ಮತ್ತು ಸಿಂಧನೂರ್ ಅಥವಾ ಮಸ್ಕಿ ಯೋಜನೆ ಪ್ರದೇಶಗಳಲ್ಲಿ ಒಂದೊಂದು ಹೊಸ ಸಕ್ಕರೆ ಕಾರ್ಖಾನೆಗಳನ್ನು ನಿರ್ಮಿಸಲಾಗುವುದೆಂದು ವರದಿಯಾಗಿದೆ. ಈಗಾಗಲೇ ಕಂಪ್ಲಿ, ಸಂಕೇಶ್ವರ ಮತ್ತು ಪಾಂಡವಪುರಗಳಲ್ಲಿ ೩ ಹೊಸ ಕಾರ್ಖಾನೆಗಳಾಗಿವೆ.

ರಂ. ಶ್ರೀ ಮುಗಳಿಯವರಿಗೆ ಸನ್ಮಾನ

ಬೆಂಗಳೂರು ೨೧

ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ ರಂಗನಾಥ ಶ್ರೀನಿವಾಸ ಮುಗಳಿಯವರು ಭಾರತ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದುದಕ್ಕಾಗಿ ಅವರನ್ನು ಗೌರವಿಸಲು ಅಖಿಲ ಕನ್ನಡ ಸಾಹಿತ್ಯ ಪರಿಷತ್ತಿನವರು ನೆನ್ನೆ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಶ್ರೀ ಕೆ. ಗೋಪಾಲಕೃಷ್ಣರಾಯರು ಪರಿಷತ್ತಿನ ಪರವಾಗಿ ಅವರಿಗೆ ಸನ್ಮಾನ ಪತ್ರವನ್ನು ಅರ್ಪಿಸಿ, ಕನ್ನಡ ಸಾಹಿತ್ಯದ ಇತಿಹಾಸವನ್ನು ರಚಿಸಬೇಕೆಂದು ಅವರನ್ನು ಪ್ರಾರ್ಥಿಸಿದರು. ಶ್ರೀಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿಟ್ಟೂರು ಶ್ರೀನಿವಾಸರಾವ್ ಮತ್ತು ಕೆ ಎಸ್. ಪಾಟೀಲ್‌ರವರು ಭಾಷಣ ಮಾಡಿ, ಕನ್ನಡ ಸಾಹಿತ್ಯಕ್ಕೆ ಶ್ರೀ ಮುಗಳಿಯವರ ಸೇವೆಯನ್ನು ಪ್ರಶಂಸಿಸಿದರು. ಪರಿಷತ್ತಿನ ಅಧ್ಯಕ್ಷ ಅ|| ನ|| ಬಿ. ಶಿವಮೂರ್ತಿ ಶಾಸ್ತ್ರಿಯವರಿಂದ ಸ್ವಾಗತ ಮತ್ತು ಕಾರ್ಯದರ್ಶಿ ಶ್ರೀ ಡಿ ಆರ್. ರಾಮಯ್ಯನವರಿಂದ ವಂದನಾರ್ಪಣೆಗಳಾದುವು

ಮಾಜಿ ನೌಕಾದಳದವನ ಮರಣಕ್ಕಾಗಿ ಬಾಕ್ಸಿಂಗ್ ಪ್ರವೀಣನ ಬಂಧನ

ಬೆಂಗಳೂರಿನಲ್ಲಿ ರೆಜಿನಾಲ್ಡ್ ಓಕಾಫರ್ ಎಂಬ ಮಾಜಿ ನೌಕಾ ದಳದವನೊಬ್ಬನು ಮೊನ್ನೆ ಮೃತಪಟ್ಟ ಸಂಬಂಧವಾಗಿ ಸೈನ್ಯದ ನಾಯಕ ಆಂತೋನಿ ಜಾರ್ಜ್ ಎಂಬುವನನ್ನು ಬಂಧಿಸಲಾಯಿತು. ಜಾರ್ಜನು ಪ್ರಸಿದ್ಧ ಬಾಕ್ಸಿಂಗ್ ಚಾಂಪಿಯನ್. ಅವನಿಗೂ, ಮೃತನಿಗೂ ಮೊನ್ನೆ ಮಧ್ಯಾಹ್ನ ಸಿವಿಲ್ ಪ್ರದೇಶದಲ್ಲಿ ಹಲವು ಕಡೆಯರ ವಿಷಯವಾಗಿ ಮಾತು ಬೆಳೆದು ಜಗಳವಾಗಿ ಜಾರ್ಜನು ಮಕೊಟ್ಟನ ದವಡೆ ಮೇಲೆ ಹೊಡೆದನೆಂದೂ, ಅದರಿಂದ ಅವನು ಪ್ರಜ್ಞೆ ತಪ್ಪಿ ಬಿದ್ದು ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟನೆಂದೂ ಹೇಳಲಾಗಿದೆ ಮೃತನು ಆರ್. ಎಂ. ಪಿ. ಸಿ. ಯಲ್ಲಿ ಕೆಲಸಕ್ಕಿದ್ದನೆಂದು ತಿಳಿದುಬಂದಿದೆ.

ಪ್ರತಿ ಸಂಸ್ಥಾನಕ್ಕೂ ಒಂದೇ ಪ್ರದೇಶ ಕಾಂಗ್ರೆಸ್ಸಿನ ಸಂಸ್ಥೆ

ಪ್ರತಿಯೊಂದು ಸಂಸ್ಥಾನಕ್ಕೂ ಒಂದೇ ಪ್ರದೇಶ ಕಾಂಗ್ರೆಸ್ ಸಂಸ್ಥೆಯಿರಬೇಕೆಂಬ ಅಖೈರು ನಿರ್ಧಾರವನ್ನು ಕಾಂಗ್ರೆಸ್ ಹೈಕಮಾಂಡಿನವರು ತೆಗೆದುಕೊಂಡಿರುವರೆಂದು ವರದಿಯಾಗಿದೆ. ಒಂದಕ್ಕಿಂತ ಹೆಚ್ಚು ಪ್ರದೇಶ ಸಮಿತಿಗಳು ಒಟ್ಟುಗೂಡಲು ಅಕ್ಟೋಬರ್‌ವರೆಗೆ ಅವಕಾಶವಿರುವುದು. ಮೈಸೂರಿನಲ್ಲಿ ಈಗಾಗಲೇ ಒಂದೇ ಪ್ರದೇಶ ಕಾಂಗ್ರೆಸ್ಸು ಇದೆ. ಬೊಂಬಾಯಿಯಲ್ಲಿ ೬ ಪ್ರಾಂತ ಸಮಿತಿಗಳಿವೆ.

○ [illegible]ದಲ್ಲಿ ಚುನಾವಣೆ ವೆಚ್ಚದ ಪಟ್ಟಿಯನ್ನು ಒಪ್ಪಿಸದಿದ್ದುದಕ್ಕಾಗಿ ವಿಧಾನ ಸಭಾ ಸ್ಥಾನಗಳು [illegible] ಅನರ್ಹಗೊಳಿಸಬಾರದೇಕೆಂದು [illegible] ಶ್ರೀ [illegible] ಕೇಂದ್ರ ಚುನಾವಣಾ ಮಂಡಲಿಯವರು ಅವರ ಸಮಜಾಯಿಷಿಯನ್ನು [illegible] [illegible].

ವಾರ ಭವಿಷ್ಯ

ತಾ|| ೨೧-೪-೫೭ರಿಂದ ೨೭-೪-೫೭ರ ವರೆಗೆ

ಮೇಷ :—ಕೆಲಸಕಾರ್ಯದಲ್ಲಿ ಜಯ ಮತ್ತು ಲಾಭ, ಶತ್ರು ನಿಗ್ರಹ, ಮಹಿಳೆಯರಿಗೆ ವಸ್ತ್ರಾಭರಣ ಪ್ರಾಪ್ತಿ, ಆರೋಗ್ಯ ಉತ್ತಮ, ವಿಶೇಷ ವೆಚ್ಚ.

ವೃಷಭ —ಒಂದಕ್ಕೆ ಎರಡು ಖರ್ಚು, ಮನಸ್ಸಿನ ಅಶಾಂತಿ, ವ್ಯಾಪಾರವ್ಯವಹಾರದಲ್ಲಿ ನಷ್ಟ, ಸ್ತ್ರೀಯರಿಗೆ ಚಿಂತೆ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಾಮಾನ್ಯ ಫಲ, ಅನಿರೀಕ್ಷಿತ ಧನಾಗಮ

ಮಿಥುನ —ನಾನಾ ರೀತಿಯಲ್ಲಿ ಧನಲಾಭ, ಜವಳಿ ವ್ಯಾಪಾರಿಗಳಿಗೆ ಉತ್ತಮ, ನೌಕರರಿಗೆ ಬಡ್ತಿ, ಪ್ರವಾಸದಲ್ಲಿ ಜಯ, ವ್ಯವಸಾಯಗಾರರಿಗೆ ಹೆಚ್ಚು ಲಾಭ, ಸ್ತ್ರೀಯರಿಗೆ ಸಾಮಾಜಿಕ ಕಾರ್ಯದಲ್ಲಿ ಆಸಕ್ತಿ, ಮನರಂಜನೆಗಾಗಿ ವಿಶೇಷ ವೆಚ್ಚ

ಕರ್ಕ —ಹಿಡಿದ ಕಾರ್ಯದಲ್ಲಿ ಜಯ ಜವಾಹಿರಿ ವ್ಯಾಪಾರಿಗಳಿಗೂ ವ್ಯವಸಾಯಗಾರರಿಗೂ ಸುಯೋಗ, ಪ್ರವಾಸದಲ್ಲಿ ಕೀರ್ತಿ ವಿದ್ಯಾಭ್ಯಾಸದಲ್ಲಿ ಯಶೋಲಾಭ. ವಿಶೇಷ ಖರ್ಚು

ಸಿಂಹ —ಸಕಲ ಕಾರ್ಯಗಳಲ್ಲೂ ಜಯ ಅಲಂಕಾರ ವಸ್ತು ಮತ್ತು ಜವಳಿ ವ್ಯಾಪಾರಿಗೂ, ಬೇಸಾಯಗಾರರಿಗೂ ಉತ್ತಮ ಫಲ ಪ್ರವಾಸದಲ್ಲಿ ಲಾಭ ಹಲವರಿಗೆ ದೂರದ ಪ್ರವಾಸ

ಕನ್ಯಾ —ಕಾರ್ಯ ಹಾನಿ ಕಲಹ ವ್ಯಾಪಾರಿಗಳಿಗೆ ಮತ್ತು ವ್ಯವಸಾಯಗಾರರಿಗೆ ನಷ್ಟ ಸ್ತ್ರೀಯರಿಗೆ ಚಿಂತೆ ಗುರು ಹಿರಿಯರ ಸಂದರ್ಶನ

ತುಲಾ — ತೊಂದರೆಗಳ ನಿವಾರಣೆ ಜವಾಹಿರಿ ವ್ಯಾಪಾರಿಗಳಿಗೆ ವಿಶೇಷ ಲಾಭ ಪ್ರವಾಸ ಫಲವಿಲ್ಲ ಗೃಹದಲ್ಲಿ ಮಂಗಳ ಕಾರ್ಯ ವ್ಯವಸಾಯಗಾರರಿಗೆ ಕಾಳ್ಕೆ ಅವಶ್ಯಕ ಸ್ತ್ರೀಯರಿಗೆ ವಸ್ತ್ರಾಭರಣ ಪ್ರಾಪ್ತಿ.

ವೃಶ್ಚಿಕ — ಕಾರ್ಯ ಜಯ. ವಿಶೇಷ ಧನಾಗಮ ವ್ಯಾಪಾರಿಗಳಿಗೆ ಸಾಮಾನ್ಯ ವ್ಯವಸಾಯಗಾರರಿಗೆ ಲಾಭ ಪ್ರವಾಸದಲ್ಲಿ ಸಾಮಾನ್ಯ ಸ[illegible] ಅನೂರಾಧಾ ನಕ್ಷತ್ರದವರಿಗೆ ಗೃಹದಲ್ಲಿ ಅನಿರೀಕ್ಷಿತ ಕಲಹ

ಧನು.— ಮಾನ ಸನ್ಮಾನ ಮುದ್ರಣ, ಹತ್ತಿರಣೆ, ಯಂತ್ರಗಳ ಮಾಲೀಕರಿಗೆ ವಿಶೇಷ ಲಾಭ ಪ್ರವಾಸದಲ್ಲಿ ಜಯ ವ್ಯವಸಾಯಗಾರರಿಗೆ ಉತ್ತಮ ಸ್ತ್ರೀಯರಿಗೆ ಗಡಿಬಿಡಿ

ಮಕರ —ಎಲ್ಲಾ ಭಾಗದಲ್ಲೂ ಮಾನಸ ಹಾನಿ ಮತ್ತು ಧನಾಗಮನಕ್ಕೆ ಧಕ್ಕೆಯುಂಟು ಸತ್ಕಾರ್ಯಕ್ಕೆ ಅವಕಾಶವಿಲ್ಲ ಉಳಿದ ವಿಚಾರವೆಲ್ಲವೂ ಉತ್ತಮ ವ್ಯಾಪಾರಿಗಳಿಗೆ ಲಾಭ ಪ್ರವಾಸದಲ್ಲಿ ಜಯ

ಕುಂಭ —ಕಾರ್ಯದಲ್ಲಿ ಯಶಸ್ಸು ಕಲಾಭಿಮಾನಿಗಳಿಗೆ ಸುಯೋಗ, ಪ್ರವಾಸದಲ್ಲಿ ಲಾಭ

ಮೀನ :—ಅಶುಭ ಫಲಾಧಿಕ್ಯ. ವ್ಯಾಪಾರಿಗಳಿಗೆ ಅಂತಸ್ತಿಗೆ ತಕ್ಕಂತೆ ಲಾಭ ಆದಾಯ ವ್ಯಯ ಸಮ ಪ್ರವಾಸ ಸುಖಪ್ರದ ವ್ಯವಸಾಯಗಾರರಿಗೆ ಸಾಮಾನ್ಯ ಲಾಭ ಮಹಿಳೆಯರಿಗೆ ಕಲಹ.

ಅಡಿಕೆ ಸಂಶೋಧನೆ ಬಗ್ಗೆ ಚರ್ಚೆ

ನಗರದ ಆಹಾರ ಸಂಶೋಧನಾಲಯದಲ್ಲಿ ಕೇಂದ್ರ ಅಡಿಕೆ ಸಮಿತಿಯ ಸಂಶೋಧನಾ ಉಪಸಮಿತಿ ಸಭೆಯು ಆಲಯದ ಡೈರೆಕ್ಟರ್ ಡಾ|| ವಿ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸೇರಿ ಅಡಿಕೆ ಬೆಳೆಗಾರರು ಮತ್ತು ಬಳಕೆಗಾರರಿಗೆ ಸಂಶೋಧನೆಯಿಂದ ಎಷ್ಟುಮಟ್ಟಿನ ಉಪಯೋಗವಾಗಬೇಕೆಂಬುದನ್ನು ಮೂರು ದಿನಗಳ ಸಭೆಯಲ್ಲಿ ಚರ್ಚಿಸಿತು

ತಾಲ್ಲೂಕು ಕಸಬಾ ಕೈಗಾರಿಕಾ ಸಹಕಾರಿ ಸಂಘ

ಮೈಸೂರು ತಾಲ್ಲೂಕು ಕಸಬಾದ ಕೈಗಾರಿಕಾ ಸಹಕಾರ ಸಂಘದ ಸಭೆಯು ಮೊನ್ನೆ ನಡೆಯಿತು. ಶ್ರೀ ಎಸ್ ಕೆ ಶ್ರೀನಿವಾಸರಾಯರು ಅಧ್ಯಕ್ಷತೆ ವಹಿಸಿದ್ದರು ಅವರನ್ನೇ ಸಂಘದ ಅಧ್ಯಕ್ಷರನ್ನಾಗಿಯೂ ಆರಿಸಲಾಯಿತು. ಶ್ರೀ ಎಂ ಜಿ ನರಸಿಂಹಮೂರ್ತಿಯವರನ್ನು ಕಾರ್ಯದರ್ಶಿಯಾಗಿ ನೇಮಿಸಲಾಯಿತು

ಪಾಕಿಸ್ತಾನದ ಪ್ರಭುತ್ವದ ಬಗ್ಗೆ ಅಲ್ಲಿನ ಜನರಿಗೆ ಬೇಸರ

ದುರಾಡಳಿತದ ಪರಿಣಾಮವೆಂದು ಮಾಜಿ ಮಂತ್ರಿಯ ಹೇಳಿಕೆ

ಪಾಕಿಸ್ತಾನದ ರಾಷ್ಟ್ರೀಯ ಸಭೆಯಲ್ಲಿ ಅಲ್ಲಿನ ಮಾಜಿ ಮಂತ್ರಿ ಪೀರ್ ಅಲಿ ಮಹಮದ್ ರಷೀದಿಯವರು ಮಾತನಾಡಿ, ಪಶ್ಚಿಮ ಪಾಕಿಸ್ತಾನದಲ್ಲಿ ಆಗುತ್ತಿರುವ ದುರಾಡಳಿತದಿಂದ ಪಾಕಿಸ್ತಾನ ರಾಜ್ಯದ ಬಗ್ಗೆ ಜನರಿಗೆ ಬೇಸರವಾಗಿರುವುದೆಂದು ತಿಳಿಸಿರುತ್ತಾರೆ. ಪಶ್ಚಿಮ ಪಾಕಿಸ್ತಾನವನ್ನು ಏಕ ಸಂಸ್ಥಾನ ಮಾಡಿರುವುದನ್ನು ಅವರು ಟೀಕಿಸಿ, ಅದರಿಂದ ವಿವಿಧ ಪ್ರಾಂತಗಳ ಜನರಲ್ಲಿ ಏಕಮತ್ಯದ ಮನೋಭಾವನೆಯು ಮೂಡಿಲ್ಲವೆಂದು ಹೇಳಿರುತ್ತಾರೆ. ರಾಷ್ಟ್ರವನ್ನು ಮೋಸ, ವಂಚನೆ ಮತ್ತು ಜನರ ಗಾಢ ನಂಬಿಕೆ ಮೇಲೆ ಸುಭದ್ರಗೊಳಿಸುವುದಕ್ಕಾಗುವುದಿಲ್ಲವೆಂದೂ, ಪಾಕಿಸ್ತಾನದ ಪ್ರಜೆಯು ಸ್ವಾತಂತ್ರ್ಯದ ಫಲವನ್ನು ಅನುಭವಿಸುತ್ತಿಲ್ಲವೆಂದೂ ಅವರು ಹೇಳಿ, ಅಲ್ಲಿ ಅಧಿಕಾರಿಗಳ ದರ್ಪವು ವಿಪರೀತ ಹೆಚ್ಚಿ ಅವರು ಉನ್ಮತ್ತರಾಗಿರುವರೆಂದು ಅವರು ತಿಳಿಸಿದರು

ಆಲ್ಜೀರಿಯದಲ್ಲಿ ಭಾರಿ ಹತ್ಯಾಕಾಂಡ

ಆಲ್ಜೀರಿಯದಲ್ಲಿ ಐದು ದಿನಗಳಿಂದಲೂ ನಡೆದ ಹೋರಾಟಗಳಲ್ಲಿ ೩೦೦ಕ್ಕಿಂತಲೂ ಹೆಚ್ಚು ಮಂದಿ ಭಯೋತ್ಪಾದಕರೂ, ೫೯ ಮಂದಿ ಫ್ರೆಂಚ್ ರಕ್ಷಣಾ ದಳದವರೂ ಹತರಾಗಿರುವರು ಭಯೋತ್ಪಾದಕರು ಶಸ್ತ್ರಾಸ್ತ್ರಗಳನ್ನು ಕೆಳಗಿಳಿಸಬೇಕೆಂದು ಫ್ರಾನ್ಸಿನ ಸರ್ಕಾರವು ಇತ್ತ ಎಚ್ಚರಿಕೆಯ ಸಂಬಂಧವಾಗಿ ಹೋರಾಟಗಳು ನಡೆದಿವೆ ೨೦-೫೫ ವರ್ಷ ವಯಸ್ಸಿನವರಾಗಿದ್ದು ಶಸ್ತ್ರಾಸ್ತ್ರ ಧರಿಸಬಲ್ಲ ಜನರ ಗಣತಿ ತೆಗೆದುಕೊಳ್ಳಲು ಭಯೋತ್ಪಾದಕರಿಗೆ ಬೆಂಬಲರಾಗಿರುವರೆಂದು ಹೇಳಲಾದ ಅಲ್ಲಿನ ರಾಷ್ಟ್ರೀಯ ವಿಮೋಚನಾ ರಂಗ ಎಂಬ ಸಂಸ್ಥೆಯು ನಿರ್ಧರಿಸಿದೆ

ಮದರಾಸಿನಲ್ಲಿ ಕೃಷ್ಣ ಸಂಘದ ಸ್ಥಾಪನೆ

ಮದ್ರಾಸಿನ ತಿರುವಲ್ಲಿಕ್ಕೇಣಿಯಲ್ಲಿ ಕಳೆದ ೧೩ನೇ ತಾರೀಖು ತತ್ತ್ವ ಜ್ಞಾನ ಪ್ರಚಾರಕ್ಕಾಗಿ ಕೃಷ್ಣ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು ರೈಲ್ವೆ ಸರ್ವೀಸ್ ಕಮಿಷನ್ನಿನ ಅಧ್ಯಕ್ಷರಾದ ಶ್ರೀ ಕೆ ಎಸ್ ರಂಗರಾಯರು ಅದರ ಅಧ್ಯಕ್ಷರು ಅವರು ಸಂಘದ ಉದ್ದೇಶಗಳನ್ನು ವಿವರಿಸಿದನಂತರ ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ಶ್ರೀ ವಿಶ್ವಜ್ಞ ತೀರ್ಥ ಶ್ರೀಪಾದಂಗಳವರು ಅದರ ಆರಂಭೋತ್ಸವವನ್ನು ನೆರವೇರಿಸಿದರು ಶ್ರೀ ಶ್ರೀಗಳವರಿಗೆ ಬಿನ್ನವತ್ತಳೆಯನ್ನೂ, ಶ್ರೀಗಳಾದ ಕೆ ಸೀತಾರಾಮರಾವ್, ಡಾ|| ನಾಗರಾಜಶರ್ಮ ಮತ್ತು ಕೆ ಎಲ್ ವ್ಯಾಸರಾಯಶಾಸ್ತ್ರಿಗಳು ಪಡೆದಿರುವ ಧರ್ಮ ಭೂಷಣ, ಮಾಧ್ವ ಭೂಷಣ ಮತ್ತು ವಿದ್ಯಾ ಭೂಷಣ ಪ್ರಶಸ್ತಿಗಳಿಗಾಗಿ ಅವರಿಗೆ ಮಾನಪತ್ರಗಳನ್ನೂ ಸಮರ್ಪಿಸಲಾಯಿತು ಸಂಗೀತ ಕಲಾನಿಧಿ ಕೆ ವಾಸುದೇವಾಚಾರ್ ಮುಂತಾದವರು ಮಾತನಾಡಿ, ಅವರುಗಳನ್ನು ಪ್ರಶಂಸಿಸಿದರು ಅತಿಥಿಗಳು ಉತ್ತರವಿತ್ತನಂತರ ಧನ್ಯವಾದಗಳೊಡನೆ ಸಮಾರಂಭವು ಮುಕ್ತಾಯಗೊಂಡಿತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ನಾಗಸ್ವರ ೭ ೧೫ ಆರ್ ಶಾರದಾ ಮತ್ತು ಆರ್ ಸರಸ್ವತಿ-ದೇವರ ನಾಮ. ೭-೩೦ ಗಾನ ವಿಹಾರ ೮-೧೫ ರಿಕಾರ್ಡು ಮಧ್ಯಾಹ್ನ ೧೨ ಆರ್. ಶಾರದಾ ಮತ್ತು ಆರ್. ಸರಸ್ವತಿ-ಸಂಗೀತ. ೧೨-೩೦ ಆರ್ ಕೆ ಸೂರ್ಯನಾರಾಯಣ-ವೀಣೆ ೧ ರಿಕಾರ್ಡು-ಸಂಗೀತ ೧-೫೦ ಕ್ಲಾರಿಯೊನೆಟ್. ೨-೧೫ ಸುಕನ್ಯ ಸ್ವಾಮಿನಾಥನ್-ಸಂಗೀತ ಸಂಜೆ ೫ ೩೦ ಆರ್. ಕೆ. ಸೂರ್ಯನಾರಾಯಣ-ವೀಣೆ ೬-೫ ಜಾನಪದ ಗೀತೆ ೬-೩೦ ಹೆಚ್. ಆರ್ ಲೀಲಾವತಿ-ಹಿಂದಿ ಗೀತೆ ೮ ಹೊಸ ಕನ್ನಡ ಪಿತಾಮಹರು ೮-೩೦ ಸುಕನ್ಯಾ ಸ್ವಾಮಿನಾಥನ್-ಸಂಗೀತ ೯-೧೫ ಜನಾಭಿಪ್ರಾಯ ಚರ್ಚೆ ೯-೩೦ ನಾದಸ್ವರ ಸಂಸ್ಕೃತ ಕಾರ್ಯಕ್ರಮ. ೯-೫೦ ಹೆಚ್ ಆರ್ ಲೀಲಾವತಿ-ಹಿಂದಿ ಭಜನೆ

ಜಪಾನ್ ಪ್ರಜೆಗಳಿಗೆ ಅಣು ಪ್ರಸರಣದ ಬಗ್ಗೆ ಎಚ್ಚರಿಕೆ

ಜಪಾನಿನ ಅಧಿಕಾರಿಗಳು ರಾಷ್ಟ್ರಾದ್ಯಂತ ಅಣು ಕಿರಣಗಳ ಪ್ರಸರಣದಿಂದ ಆಗುವ ಅಪಾಯದ ಬಗ್ಗೆ ಪ್ರಜೆಗಳಿಗೆ ಎಚ್ಚರಿಕೆಯನ್ನು ಪ್ರಸಾರ ಸಾಧನಗಳ ಮೂಲಕ ಕೊಡುತ್ತಿರುವರು. ರಷ್ಯದಲ್ಲಿ ಇತ್ತೀಚೆಗೆ ಆದ ಹಲವಾರು ಅಣು ಶಸ್ತ್ರ ಸ್ಫೋಟನೆಗಳ ಪರಿಣಾಮವಾಗಿ ಜಪಾನಿನಲ್ಲಿ ವಾಯುಗುಣವು ವೇಗವಾಗಿ ಕೆಡುತ್ತಾಬಂದಿರುವುದೆಂದು ತಿಳಿಸಲಾಗಿದೆ ಅಲ್ಲಿನ ಪೋಲೀಸು ಠಾಣೆಗಳ ಮುಂದೆಯೂ, ಪತ್ರಿಕೆಗಳಲ್ಲೂ ಈ ಬಗ್ಗೆ ದಪ್ಪಕ್ಷರಗಳಲ್ಲಿ ಎಚ್ಚರಿಕೆಯಾಯಲಾಗುತ್ತಿದೆ ಜಪಾನಿನ ಪ್ರಧಾನಿಯವರು ಭಾರತಕ್ಕೆ ಭೇಟಿ ಕೊಡುವಾಗ ನೆಹರೂರವರೊಡನೆ ಅಣು ಪ್ರಯೋಗ ಪರೀಕ್ಷಾ ಸಿಡಿತ ನಿಲ್ಲಿಸುವುದರ ಬಗ್ಗೆ ಚರ್ಚಿಸುವರು

ಸಚ್ಚಿದಾನಂದ ಸರಸ್ವತಿ ಸ್ವಾಮಿಗಳವರ ಉಪದೇಶ ಭಾಷಣ

ಹೊಳೇನರಸೀಪುರದ ಆಧ್ಯಾತ್ಮ ಪ್ರಕಾಶ ಕಾರ್ಯಾಲಯದ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮಿಗಳವರು ಈ ಸಂಜೆ ೭ ಗಂಟೆಗೆ ಚಾಮರಾಜಪುರದಲ್ಲಿರುವ ಅಡ್ವೊಕೇಟ್ ಶ್ರೀ ಕೆ ಪುಟ್ಟರಾಯರ ನಿವಾಸದಲ್ಲಿ ' ಸಾರ್ವತ್ರಿಕ ಧರ್ಮಕ್ಕೆ ಆಧಾರವಾದ ವೇದಾಂತ'' ಎಂಬ ವಿಚಾರವಾಗಿ ಉಪದೇಶ ಭಾಷಣ ಮಾಡುವರು ಆಸ್ತಿಕ ಮಹನೀಯರು ದಯಮಾಡಿಸುವಂತೆ ಕೋರಲಾಗಿದೆ

ಕೃಷ್ಣಾಪುರದಲ್ಲಿ ರಥೋತ್ಸವ

ಟಿ ನರಸೀಪುರ ತಾಲ್ಲೂಕು ಕೃಷ್ಣಾಪುರದಲ್ಲಿರುವ ಶ್ರೀ ಸಂತಾನ ಗೋಪಾಲಕೃಷ್ಣಸ್ವಾಮಿಯವರ ರಥೋತ್ಸವವು ಇದೇ ತಿಂಗಳು ೩೦ನೇ ತಾರೀಖು ನೆರವೇರುವುದು. ಅದರ ಅಂಗವಾಗಿ [illegible]ನಿಂದ ೩ನೇ ತಾರೀಕಿನವರೆಗೆ ವಿವಿಧ ಉತ್ಸವಗಳು ಜರುಗುವುವು

ಶಾರದಾ ಪೂಜೆ

ಚಾಮರಾಜನಗರದ ಶ್ರೀ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಮತ್ತು ಅರವಿಂದ ಹಿಂದಿ ವಿದ್ಯಾ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಅಲ್ಲಿನ ಚಾಮರಾಜೇಶ್ವರ ಧರ್ಮ ಶಾಲೆಯಲ್ಲಿ ಶಾರದಾ ಪೂಜೆಯನ್ನು ಏರ್ಪಡಿಸಲಾಗಿದೆ ಮೈಸೂರು ಟ್ರೈನಿಂಗ್ ಕಾಲೇಜಿನ ಶ್ರೀ ಎ ಟಿ ಶ್ರೀನಿವಾಸರಾಘವಾಚಾರ್ಯರು ತುಳಸೀ ರಾಮಾಯಣದ ವಿಷಯವಾಗಿ ಉಪನ್ಯಾಸ ಮಾಡುವರು. ಪುರಸಭಾ ಸದಸ್ಯರಾದ ಶ್ರೀ ಸಿ ವಿ ವೆಂಕಟೇಶ್‌ರವರು ಅಧ್ಯಕ್ಷತೆ ವಹಿಸುವರು

ದಕ್ಷಿಣ ಭಾರತ ಮಹಿಳಾ ಶಾಸಕ ಸಭಾಸದಸ್ಯರ ಗೋಷ್ಠಿ

ದಕ್ಷಿಣ ಭಾರತದ ನಾನಾ ವಿಧಾನ ಸಭೆಗಳಲ್ಲಿರುವ ಮಹಿಳಾ ಸದಸ್ಯರ ಗೋಷ್ಠಿಯು ಬರುವ ೧ನೇ ತಾರೀಕಿನಿಂದ ೭ರವರೆಗೆ ಬೆಂಗಳೂರಿನಲ್ಲಿ ನಡೆಯುವುದು

ಶಿಶು ಜೀವಿ

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-
ರೋಗ ನಿವಾರಕ ಸಲಹೆಗಳಿಗೆ :-
'ಲಿವರ್ ಹೌಸ್', ಚಾಮರಾಜಪುರಂ,
ಮೈಸೂರು (ಸುಕ್ರು ಹಾಸ್ಟಲ್ ಹತ್ತಿರ)

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಸಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

Edit d, Printed and Published by
A R Nagarajan at Sadhvi Press,

ವರ್ತಕರ ಸಂಘದಿಂದ ಸರ್ಕಾ ಪರವಾಗಿ ಮಾರಾಟ ತೆರಿ ವಸೂಲಿ

ಆಂಧ್ರ ವಿಧಾನ ಸಭೆಯಲ್ಲಿ ಮುಂದಿ ರುವ ಮಾರಾಟ ತೆರಿಗೆ ಶಾಸನದ ಬಗ್ಗೆ ಕಳಾ ವೆಂಕಟರಾಯರು ಮಾತನಾಡಿ, ವರದ ವರ್ತಕರ ಸಂಘದವರು ವ್ಯಾಪಾರಿ ಮಾರಾಟ ತೆರಿಗೆಯನ್ನು ವಸೂಲಿ ಮಾಡಿ ಕಳುಹಿಸುತ್ತಿರುವರೆಂದೂ, ಈ ಆದರ್ಶವನ್ನು ಸಂಸ್ಥೆಗಳೂ ಅನುಸರಿಸಬೇಕೆಂದೂ ತಿಳಿ ರೆ. ಕರಾರುವಾಕ್ಕಾದ ಲೆಕ್ಕಪತ್ರಗಳನ್ನು ಕೊಳ್ಳುವ ಜವಾಬ್ದಾರಿಯನ್ನು ಸಂಘವೇ ಕೊಂಡಿರುವುದೆಂದೂ, ತೆರಿಗೆ ಕೊಡದವ ಲೆ ಸಂಘವು ಕ್ರಮ ಜರುಗಿಸುವುದೆಂದೂ ಹೇಳಿರುವರು.

ಮಹಿಳೆಯ ಆಭರಣದ ಅಪ ರಕ್ಕಾಗಿ ಪೋಲೀಸಿನವನ ಬಂಧ

ಹಂಪಿಯ ಜಾತ್ರೆಯಲ್ಲಿ ಪಹರೆ ಕೆಲಸ ನಿಯಮಿಸಲ್ಪಟ್ಟಿದ್ದ ಕೂಡ್ಲಿಗಿ ತಾಲ್ಲೂಕು ಕೋಟೆ ಠಾಣೆಯ ಪೋಲೀಸ್ ಕಾನ್ಸ್ ಪೋತಪ್ಪ ಎಂಬುವವನು ಕಳೆದ ೧೫ನೇ ತಾ ಹಂಪಿಯ ಒಂದು ಗುಡಿ ಬಳಿ ಮಲಗಿದ್ದ ಮಹಿಳೆಯ ಬಂಗಾರದ ಒಡವೆಗಳನ್ನು ಅಪ ಸಿ, ತಲೆಯಲ್ಲಿದ್ದ ನಾಗರವನ್ನು ಕಿತ್ತುಕೊಳ್ಳ ಸಿದಾಗ ಆಕೆಗೆ ಎಚ್ಚರವಾಗಿ ಕೂಗಿಕೊಂ ದೂ, ಇತರರು ಅವನನ್ನು ಮಾಲು ಸಮೇತ ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿದರೆಂದೂ ಯಾಗಿದೆ ಅವನನ್ನು ಸಸ್ಪೆಂಡ್ ಮಾಡಿರು ಲ್ಲದೆ ದಸ್ತಗಿರಿ ಮಾಡಿ ರಿಮಾಂಡಿನಲ್ಲಿಡಲಾ ೨೫೦ ರೂ ಬೆಲೆಯ ಒಡವೆಗಳನ್ನು ಅವನು ಹರಿಸಿದ್ದನೆಂದು ಹೇಳಲಾಗಿದೆ

ನೀರಿನ ವ್ಯಾಜ್ಯದಲ್ಲಿ ಪೌರಸಭಾ ಸದ ಬಂಧನ ಮತ್ತು ಜಾಮೀನು

ಬೆಂಗಳೂರು ಸಿವಿಲ್ ಪ್ರದೇಶದಲ್ಲಿರುವ ತ್ಯಾಲಮ್ಮನ ರಥೋತ್ಸವ ಸಮಯದಲ್ಲಿ ಕಳೆ ಬುಧವಾರ ಭಕ್ತರಿಗೆ ಕುಡಿಯುವುದಕ್ಕೆ ನೀ ಇಲ್ಲದೆ ಒಬ್ಬ ಯುವಕನು ಆ ಪ್ರದೇಶದ ಪೌ ಸಭಾ ಸದಸ್ಯನನ್ನು ಆಕ್ಷೇಪಿಸಲಾಗಿ, ಯುವ ನ್ನು ಸದಸ್ಯನು ಹೊಡೆಯಲು ಪ್ರಯತ್ನಿಸಿ ಪೋಲೀಸರು ಅತನನ್ನು ಬಂಧಿಸಿ ನಂತರ ಜಾಮೀನು ಮೇಲೆ ಬಿಡುಗಡೆ ಮಾಡಿದರು ಮೇಲೆ ಮೊಕದ್ದಮೆಯನ್ನು ದಾಖಲು ಮಾ ಕೊಳ್ಳಲಾಗಿದೆ

ಮಂಡ್ಯದಲ್ಲಿ ಟಿ. ರುಕ್ಮಿಣಿಯವ ಪಿಟೀಲು ವಾದನ

ಮಂಡ್ಯದ ಶ್ರೀ ಸದ್ಗುರು ಮಂದಿರದಲ್ಲಿ ಸಂಜೆ ೭ ಗಂಟೆಗೆ ವಿದುಷಿ ಟಿ. ರುಕ್ಮಿಣಿಯವರ ಪಿಟೀಲು ವಾದನವು ಏರ್ಪಾಡಾಗಿದೆ.

ಮಾಧ್ವ ಮಂಡಲದ ಸಮ್ಮೇಳನ

ಅಖಿಲ ಭಾರತ ಮಾಧ್ವ ಮಂಡಲದ ವಾರ್ಷಿಕ ಸಮ್ಮೇಳನವು ಈ ತಿಂಗಳು ೯ನೇ ರ ಗದಗಿನಲ್ಲಿ ಸೇರಲಿದೆ



ಒಲಂಪಿಯಾ
18—4—57 ನೇ ಗುರುವಾರದಿಂ
ಪ್ರತಿ ದಿನ 3 ಪ್ರದರ್ಶನ
ಗುರುದತ್ ಸಿ. ಐ. ಡಿ
ಹ. ಪ್ರ.—ದೇವಾನಂದ್, ಶಕೀ
ಮತ್ತು ವಹಿದಾ ರಹಮಾನ್

ರಿಜಿಸ್ಟರ್ ನಂ 792

ಚಂದಾ ದರ

[illegible] ತಿಂಗಳಿಗೆ [illegible]

[illegible] ತಿಂಗಳಿಗೆ [illegible] ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ [illegible] ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ಪುಟ : ೧೫] SADHVI : MONDAY 22—4—1957 ಮೈಸೂರು : ಸೋಮವಾರ ೨೨—೪—೧೯೫೭ : [ಸಂಚಿಕೆ : ೫೦

ಬಿಹಾರಿನಲ್ಲಿ ಭೀಕರ ಕ್ಷಾಮ ಮತ್ತು ಬೆಂಕಿ ಪ್ರಮಾದಗಳು

ಬಿಹಾರಿನಲ್ಲಿ ಕ್ಷಾಮದ ಬೇಗೆ

ಲಕ್ಷಕ್ಕೂ ಮಿಕ್ಕಿ ಪಶುಗಳಿಗೆ ಸಾವು; ಗೋಧಿ ಮುಂತಾದ ಬೆಳೆಗಳ ನಾಶ

ಬಿಹಾರಿನ ಹಲವು ಜಿಲ್ಲೆಗಳಲ್ಲಿ ಕ್ಷಾಮವನ್ನು ಹೋಲುವಂತಹ ಪರಿಸ್ಥಿತಿಯು ಪ್ರಾಪ್ತವಾಗಿರುವುದೆಂದೂ ಅಲ್ಲಿ ಆಹಾರದ ಸ್ಥಿತಿಯು ಕೆಟ್ಟಿರುವುದೆಂದೂ ವರದಿಯಾಗಿದೆ. ಕಳೆದ ವರ್ಷದ ಪ್ರವಾಹಗಳು ಮತ್ತು ಅಕಾಲಿಕವಾದ ಬಿರುಗಾಳಿ ಮತ್ತು ಆಲಿಕಲ್ಲು ಮಳೆಗಳ ಪರಿಣಾಮವಾಗಿ ಬೆಳೆಗಳು ನಷ್ಟವಾಗಿವೆ. ಗೋಧಿ, ಬಾರ್ಲಿ, [illegible], ಮೆಣಸಿನಕಾಯಿ, ಮತ್ತು ಹೊಗೆಸೊಪ್ಪು ಬೆಳೆಗಳು ನಾಶವಾಗಿವೆ. ಅಲ್ಲದೆ ಲಕ್ಷಕ್ಕೂ ಮೀರಿ ದನಕರು ಮಡಿದಿವೆ. ಗೋಧಿ ಶೇಕಡ ೬೦-೭೦ರಷ್ಟು ನಷ್ಟವಾಗಿದೆ. ನಾಲ್ಕು ಜಿಲ್ಲೆಗಳಲ್ಲಿ ಅಭಾವವಿರುವುದೆಂದು ಸಾರುವಂತೆ ಅಲ್ಲಿಯ ಜಿಲ್ಲಾಧಿಕಾರಿಗಳು ಸರ್ಕಾರವನ್ನು ಕೋರಿದ್ದಾರೆ. ಆಹಾರದ ಬೆಲೆಗಳು ತುಂಬಾ ಏರಿಹೋಗಿವೆ.

ಬರುವ ತಿಂಗಳು ೧ರಿಂದ ಅಲ್ಲಿರುವ ೧೭೦ ಫೇರ್ ಪ್ರೈಸ್ ಡಿಪೋಗಳನ್ನು ಮುಚ್ಚುವಂತೆ ಆಗಿದ್ದ ಆಜ್ಞೆಯನ್ನು ಕೇಂದ್ರ ಸರ್ಕಾರದವರು ರದ್ದುಗೊಳಿಸಿರುವುದಾಗಿ ಗೊತ್ತಾಗಿದೆ. ಆ ಡಿಪೋಗಳನ್ನು ಇನ್ನೂ ಹೆಚ್ಚಿಸಲಾಗುವುದು. [illegible] ಆಹಾರ ಧಾನ್ಯ ಸರಬರಾಜು ೮೦೦೦ ಟನ್ನಿನಿಂದ ೧೫೦೦೦ಕ್ಕೆ ಹೆಚ್ಚಿಸಬೇಕೆಂದು ಕೇಂದ್ರವನ್ನು ಕೋರಲಾಗಿದೆ. ಕೇಂದ್ರ ಆಹಾರ ಮಂತ್ರಿ ಎ. ಪಿ. ಜೈನರು ಸ್ಥಳಕ್ಕೆ ಭೇಟಿಕೊಟ್ಟು ಖುದ್ದು ಪರಿಶೀಲನೆ ನಡೆಸುವರು. ಬೇಕಾದ ಎಲ್ಲಾ ಸಹಾಯವನ್ನೂ ಕೇಂದ್ರದವರು ನೀಡುವುದಾಗಿ ಅವರು ಭರವಸೆಯಿತ್ತಿರುವರು.

ಉತ್ತರ ಪ್ರದೇಶದಲ್ಲಿ ಸಮಾಜವಾದಿಗಳ ಸತ್ಯಾಗ್ರಹದ ಬೆದರಿಕೆ

ಈಗಿನ ಅಧಿವೇಶನದಲ್ಲಿರುವ ಲಂಚ ಮತ್ತು [illegible] ನೀತಿಗಳ ವಿರುದ್ಧವಾಗಿ ಸತ್ಯಾಗ್ರಹವನ್ನು ನಡೆಸಲು ಭಾರತದ ಸಮಾಜವಾದಿ ಪಕ್ಷದವರು ನಿರ್ಧರಿಸಿರುವರೆಂದೂ, ಅದರ ಅಂಗವಾಗಿ ಬರುವ ತಿಂಗಳು ೧೧ನೇ ತಾರೀಕಿನಿಂದ ಉತ್ತರ ಪ್ರದೇಶದಲ್ಲಿ ಸತ್ಯಾಗ್ರಹವು ಆರಂಭವಾಗುವುದೆಂದೂ ಗೊತ್ತಾಗಿದೆ. ಈ ವಿಚಾರವನ್ನು ಡಾ|| ರಾಮ ಮನೋಹರ ಲೋಹಿಯಾರವರು ತಿಳಿಸುತ್ತಾ, ಮುಂದೆ ಇದೇ ರೀತಿಯ ಸತ್ಯಾಗ್ರಹವನ್ನು ಆಂಧ್ರ, ಒರಿಸ್ಸಾ, ಬಿಹಾರ್ ಮತ್ತು [illegible] ಸಂಸ್ಥಾನಗಳಲ್ಲಿ ನಡೆಸಲಾಗುವುದೆಂದು ಹೇಳಿರುತ್ತಾರೆ.

ಶ್ರೀರಾಮ ಪಟ್ಟಾಭಿಷೇಕ

ನಗರದ ಸುಪ್ರಸಿದ್ಧ [illegible] [illegible] ಕಾಶಯ್ಯ ಮತ್ತು ಕುಟುಂಬದವರು ನೆನ್ನೆ [illegible] ಛತ್ರದಲ್ಲಿ ಶ್ರೀರಾಮ ಪಟ್ಟಾಭಿಷೇಕೋತ್ಸವವನ್ನು ನೆರವೇರಿಸಿದರು. ಬೆಳಿಗ್ಗೆ ಪೂಜೆ [illegible] ಮಧ್ಯಾಹ್ನ ೫೦೦ ಮಂದಿ ಬ್ರಾಹ್ಮಣರಿಗೆ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ಅನೇಕ ಅತಿಥಿಗಳನ್ನು ಬರಮಾಡಿಕೊಂಡು ತಾಂಬೂಲಗಳನ್ನು ಕೊಟ್ಟು ಸತ್ಕರಿಸಲಾ

ಬಿಹಾರಿನಲ್ಲೆಲ್ಲಾ ಭಾರಿ ಬೆಂಕಿ ಅನಾಹುತ

ಬಿಹಾರ್ ಪ್ರಾಂತದಲ್ಲೆಲ್ಲಾ ಅನೇಕ ಕಡೆ ಪದೇ ಪದೇ ಭಾರಿ ಬೆಂಕಿ ಅನಾಹುತಗಳು ಸಂಭವಿಸುತ್ತಿರುವುದಾಗಿ ವರದಿಯಾಗಿದೆ. ಕಳೆದ ಶನಿವಾರ ಏಳು ಜಿಲ್ಲೆಗಳಲ್ಲಿ ಅಗ್ನಿ ಪ್ರಮಾದಗಳಾಗಿ ೧೧೨೫ ಮನೆಗಳು ಸುಟ್ಟು ಲಕ್ಷಾಂತರ ರೂ ಬೆಲೆಬಾಳುವ ಧಾನ್ಯವು ನಷ್ಟವಾಯಿತು. ೫ ಮಕ್ಕಳು, ಅನೇಕ ದನಕರುಗಳು ಮತ್ತು [illegible] ಸುಟ್ಟುಹೋದುವು. ಹಜ್ರಾ ಎಂಬ ಹಳ್ಳಿಯಲ್ಲಿ ಬೆಂಕಿಯಿಂದ ೩೦೦ ಮನೆ ಸುಟ್ಟು ಒಬ್ಬ ಹುಡುಗಿ ಮತ್ತು ಅನೇಕ ದನಕರುಗಳು ಜೀವಸಹಿತ ಬೆಂದುಹೋದುವಲ್ಲದೆ, ಧಾನ್ಯ [illegible] ಮತ್ತು ಇತರ ೧ ಲಕ್ಷ ರೂ ಬೆಲೆಯ ಸಾಮಾನುಗಳು ನಾಶವಾಗಿ ೩,೦೦೦ ಹಳ್ಳಿಗರು ನಿರಾಶ್ರಿತರಾದರು. ಒಂದು ಕಡೆ ೫೪ ದೋಣಿಗಳು ನಾಶವಾದುವು. ಒಂದು ಹಳ್ಳಿಯ ಅರ್ಧ ಪ್ರದೇಶವು ಬೆಂದುಹೋಯಿತು.

೩ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಶಿಸ್ತಿನ ಕ್ರಮ

ಹೈದರಾಬಾದು ಕರ್ನಾಟಕ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಎಸ್. ರುದ್ರಪ್ಪ, ರಾಯಚೂರು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಸ್. ಟಿ. ದೇವರು ಮತ್ತು [illegible] ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಸಿದ್ದಪ್ಪನವರು ಕಳೆದ ಮಹಾಚುನಾವಣೆಯಲ್ಲಿ ಹಲವು ಕಾಂಗ್ರೆಸ್ಸಿನವರ ವಿರುದ್ಧವಾಗಿ ಕೆಲಸ ಮಾಡಿದರೆಂದು ಅವರನ್ನು ಸದಸ್ಯತ್ವದಿಂದ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಅಣ್ಣಾರಾವ್ ಗಣಮುಖಿಯವರು ಸಸ್ಪೆಂಡ್ ಮಾಡಿರುತ್ತಾರೆ.

ಜಾರ್ಡಾನ್ ಗಡಿ ಬಳಿ ಇರಾಕ್ ಸೈನ್ಯ

ಜಾರ್ಡಾನ್ ಗಡಿ ಬಳಿ ಇರಾಕಿನ ಸೈನ್ಯಗಳು ಜಮಾವಣೆಯಾಗಿರುತ್ತವೆಂದೂ, ಆದರೆ ಗಡಿಯೊಳಗೆ ಪ್ರವೇಶಿಸಿಲ್ಲವೆಂದೂ ತಿಳಿದುಬಂದಿದೆ. ಜಾರ್ಡಾನ್ ರಾಜಧಾನಿ ಅಮ್ಮಾನಿಗೆ ೧೭ ಮೈಲಿ ದೂರವಿರುವ ಜರ್ಕಾ ಎಂಬಲ್ಲಿ ತನಿಖೆ ನಡೆಸಿ ೨೨ ಮಂದಿ ಜಾರ್ಡಾನ್ ಸೈನ್ಯಾಧಿಕಾರಿಗಳನ್ನು ಬಂಧಿಸಲಾಯಿತು.

ಪತ್ರಿಕೋದ್ಯೋಗಿಗಳಿಂದ ಹೊಸ ಮಂತ್ರಿಮಂಡಲಕ್ಕೆ ಅಭಿನಂದನೆ

ನಗರದ ಪತ್ರಿಕೋದ್ಯೋಗಿ ಸಂಘದ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಶ್ರೀ ಎಂ. ಎ. ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ನೂತನ ಮಂತ್ರಿಮಂಡಲಕ್ಕೆ ಸ್ವಾಗತ ಬಯಸುವ ನಿರ್ಣಯವನ್ನು ಮಾಡಲಾಯಿತು. ನಗರದಲ್ಲಿ ಬೇಗನೆ ಸರ್ಕಾರದ ವಾರ್ತಾ ಉಪ ಕಛೇರಿಯನ್ನು ತೆರೆಯಲು ಒತ್ತಾಯಪಡಿಸಲಾಯಿತು. ಈ ಸಂಬಂಧವಾಗಿ ಶ್ರೀಗಳಾದ ಎಂ. ಎ. ತಿಮ್ಮಯ್ಯ, ಎ. ರಾಮಣ್ಣ ಮತ್ತು ಕೆ. ಎಂ. [illegible] ಆರ್. ವಿ. ಶಾಸ್ತ್ರಿಯವರ ನಿಯೋಗವೊಂದನ್ನು ಸಂಬಂಧಪಟ್ಟವರೊಡನೆ ಮಾತುಕತೆ ನಡೆಸಲು ಕಳುಹಬೇಕೆಂದು ನಿರ್ಧರಿಸಲಾಯಿತು.

ತುಂಗಭದ್ರಾ ಅಣೆಕಟ್ಟು ಯೋಜನಾ ಸಮಿತಿಯ ಸಭೆ

ಸ್ವಂ ಸು. ತಂತಿ] ಬೆಂಗಳೂರು ೨೨

ತುಂಗಭದ್ರಾ ಅಣೆಕಟ್ಟು ಯೋಜನಾ ಮಂಡಲಿಯ ಸಭೆಯು ಬರುವ ತಿಂಗಳು ಮೂರನೇ ವಾರದಲ್ಲಿ ಇಲ್ಲಿ ಸಮಾವೇಶಗೊಂಡು ಇದುವರೆಗೆ ನಡೆದಿರುವ ಕೆಲಸಕಾರ್ಯಗಳನ್ನು ಪರಿಶೀಲಿಸಿ ಮುಂದಿನ [illegible] ಬಗ್ಗೆ ಚರ್ಚೆ ನಡೆಸುವುದು. ಸಭೆಯಲ್ಲಿ ಕೇಂದ್ರ, ಆಂಧ್ರ ಪ್ರದೇಶ ಮತ್ತು ಮೈಸೂರುಗಳ ಪ್ರತಿನಿಧಿಗಳು ಭಾಗವಹಿಸುವರು.

ಸಂಸ್ಥಾನದ ಆರ್ಥಿಕ ಅಭಿವೃದ್ಧಿಯನ್ನು ಕುರಿತು ಸರ್ಕಾರದವರು ಒಂದು ಮನವಿಯನ್ನು ಸಿದ್ಧಪಡಿಸಿ ಕೇಂದ್ರ ಆರ್ಥಿಕ ಸಮಿತಿಗೆ ಸಲ್ಲಿಸಿರುವರು. ಸಂಸ್ಥಾನದ ಆರ್ಥಿಕಾಭಿವೃದ್ಧಿಯ ವಿವರಗಳನ್ನೂ, ವಿಲೀನಗೊಂಡಿರುವ ಹೈದರಾಬಾದ್ ಮತ್ತು ಉತ್ತರ ಕರ್ನಾಟಕಗಳ ವಿಶೇಷ ಅವಶ್ಯಕತೆಗಳನ್ನೂ ಮನವಿಯಲ್ಲಿ ನಮೂದಿಸಲಾಗಿದೆ. ಆರ್ಥಿಕ [illegible] ಇದೇ ೨೬ನೇ ತಾರೀಕು ಇಲ್ಲಿಗೆ ಆಗಮಿಸಿ ಮಂತ್ರಿಮಂಡಲದವರೊಡನೆಯೂ ಮತ್ತು ಅಧಿಕಾರಿಗಳೊಡನೆಯೂ ಮಾತುಕತೆ ನಡೆಸುವರು.

ಕೇರಳದ ೨ ಲಕ್ಷ ತೋಟ ಕಾರ್ಮಿಕರ ಮುಷ್ಕರ?

ತಮ್ಮ ಅತ್ಯವಸರದ ಕನಿಷ್ಠ ಬೇಡಿಕೆಗಳನ್ನು ಮೂರು ವಾರದೊಳಗೆ ಈಡೇರಿಸದಿದ್ದರೆ ಕೇರಳಾದ್ಯಂತ ೨ ಲಕ್ಷ ಮಂದಿ ತೋಟದ ಕೆಲಸಗಾರರು ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆ. ಆ ಬೇಡಿಕೆಗಳ ಪೈಕಿ ೧೯೫೫ನೇ ಸಾಲಿನ ಬೋನಸ್ಸಿನ ವಿಷಯವೂ ಸೇರಿದೆ. ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಬಗ್ಗೆ ಈ ಮೊದಲು ನಡೆದ ಸಂಧಾನಗಳು ಸಫಲವಾಗಲಿಲ್ಲವೆಂದು ಹೇಳಲಾಗಿದೆ.

ದ್ರಾವಕದಿಂದ ೭ ಜನರ ಮರಣ

ದ್ರಾವಕ ಮತ್ತು ಇತರ ಆಸ್ಫೋಟಕ ವಸ್ತುಗಳು ತುಂಬಿದ್ದ ಲಾರಿಯೊಂದು ಅಂಬಾಲಾದಲ್ಲಿ ಮೊನ್ನೆ ಮರವೊಂದಕ್ಕೆ ತಾಕಿ ಹೊಡೆಯಲಾಗಿ ದ್ರಾವಕವೆಲ್ಲಾ ಬೆಂಕಿ ಹತ್ತಿ ಲಾರಿಯಲ್ಲಿದ್ದ ಏಳು ಜನರ ಪೈಕಿ ಮೂವರು ಸ್ಥಳದಲ್ಲೂ, ಉಳಿದವರು ಆಸ್ಪತ್ರೆಯಲ್ಲೂ ಮೃತಪಟ್ಟರು.

ಕೇರಳದಲ್ಲಿ ವಿನೋಬಾರವರಿಗೆ ೧೧ ಗ್ರಾಮಗಳ ದಾನ

ಕೇರಳದ ೫೭ ಸಂಸಾರಗಳಿರುವ ೧೧ ಸಣ್ಣ ಗ್ರಾಮಗಳನ್ನು ನೆನ್ನೆ [illegible] ಗ್ರಾಮದಲ್ಲಿ ಆಚಾರ್ಯ ವಿನೋಬಾಭಾವೆಯವರಿಗೆ ದಾನವಾಗಿ ಕೊಡಲಾಯಿತು. ಹಳ್ಳಿಗಳು ೨೨೫ ಎಕರೆಯಷ್ಟು ವಿಸ್ತೀರ್ಣವಾಗಿದೆ.

ನಗರದಲ್ಲಿ ಮಳೆ

ನೆನ್ನೆ ಸಂಜೆ ನಗರದಲ್ಲಿ ಒಂದು ಹದ ಮಳೆಯಾಗಿ ವಾತಾವರಣವು ತಂಪಾಯಿತು. ಇಂದು ಮಧ್ಯಾಹ್ನದ ಮೇಲೆ ಪುನಃ [illegible] ಕು. ನೆನ್ನೆ ಆದುದು ೦.೨ ಸೆಂಟು ಮಳೆ. ನಂಜನಗೂಡಿನಲ್ಲೂ ನೆನ್ನೆ ಚೆನ್ನಾಗಿ ಮಳೆ ಆಯಿತೆಂದು ತಿಳಿದುಬಂದಿದೆ.

LATEST NEWS

೧೨ನೇ ಸಚಿವರಾಗಿ ಭೀಮಪ್ಪ ನಾಯಕರ ನೇಮಕ

ಈ ಸಂಜೆ ಅಧಿಕಾರ ಸ್ವೀಕಾರದ ನಿರೀಕ್ಷೆ

ಸ್ವಂ ಸು ತಂತಿ] ಬೆಂಗಳೂರು ೨೨

ಮಂತ್ರಿಮಂಡಲದ ೧೨ನೇ ಸಚಿವರಾಗಿ ಶ್ರೀ ಎ. ಭೀಮಪ್ಪನಾಯಕರು ಈ ಸಂಜೆ ನೇಮಿಸಲ್ಪಡುವ ನಿರೀಕ್ಷೆಯಿದೆ.

ಮಂತ್ರಿಗಳ ಪೋರ್ಟ್‌ಫೋಲಿಯೋಗಳು

ಈ ಕೆಳಗೆ ಕಂಡಂತೆ ಮಂತ್ರಿಗಳ [illegible] ಖಾತೆಗಳ ಹಂಚಿಕೆಯಾಗುವುದೆಂದು ಖಚಿತವಾಗಿ ತಿಳಿದುಬಂದಿದೆ:- ಶ್ರೀಗಳು ವಿ. ವೆಂಕಟಪ್ಪ- ವಿದ್ಯಾಭ್ಯಾಸ, ಟಿ. ಮರಿಯಪ್ಪ- ಹಣಕಾಸು ಮತ್ತು ನ್ಯಾಯಾಂಗ, ಸಿ. ಎಂ. ಪೂಣಚ್ಚ- ಕೈಗಾರಿಕೆ ಮತ್ತು ಗೃಹ ಖಾತೆ; ಶ್ರೀ ಆರ್. ಎಂ. ಪಾಟೀಲ್- ಆರೋಗ್ಯ, ಮುನಿಸಿಪಲ್ ಆಡಳಿತ, [illegible] ವೈಕುಂಠ ಬಾಳಿಗ- ಕಾನೂನು; [illegible] ಹಂಚಿಕೆಯೇ

ವಿಧಾನ ಸೌಧದ ಇಂಜನಿಯರುಗಳ ವಿಚಾರಣೆಗೆ ಸಮಿತಿ

ಸ್ವಂ ಸು. ತಂತಿ] ಬೆಂಗಳೂರು ೨೨

ವಿಧಾನ ಸೌಧ ತನಿಖೆ ಸಮಿತಿಯ ವರದಿಯಲ್ಲಿ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಸೂಚಿಸಲ್ಪಟ್ಟಿರುವ ಅಕ್ರಮ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸಲು ಸರ್ಕಾರದವರು [illegible] ದರ್ಶಿ ಶ್ರೀ ಪಿ. ವಿ. ಆರ್. [illegible] ಮತ್ತು ಉತ್ತರ ಭಾಗದ ಚೀಫ್ ಇಂಜನಿಯರ್ ಶ್ರೀ ಟಿ. ಎಸ್. ಮೂರ್ತಿಯವರನ್ನು ನೇಮಿಸಿರುತ್ತಾರೆ. ವಿಚಾರಣೆಗೆ ಒಳಗಾಗಿರುವ ೬ ಮಂದಿ ಇಂಜನಿಯರುಗಳ ಪೈಕಿ ದಕ್ಷಿಣ ಭಾಗದ ಚೀಫ್ ಇಂಜನಿಯರ್ ಶ್ರೀ ಕೆ. [illegible] ಈ ದಿನ [illegible] ಮಾಡಿದರು.

ಬರ್ಮಾದಲ್ಲಿ ಅಕ್ರಮ ವಲಸೆಗಾಗಿ ೨,೦೦೦ ಪಾಕಿಸ್ತಾನಿಗಳ ಬಂಧನ

ನೌಕಾ, ಸೈನ್ಯ ಮತ್ತು ಆಡಳಿತ ಅಧಿಕಾರಿಗಳ ಕ್ರಮ

ಬರ್ಮಾ ಮತ್ತು ಪೂರ್ವ ಪಾಕಿಸ್ತಾನದ ಗಡಿ ಬಳಿಯಿರುವ ಅಕ್ಯಾಬ್ ಜಿಲ್ಲೆಗೆ ಅಕ್ರಮವಾಗಿ ನುಗ್ಗಿ ಪ್ರವೇಶಿಸಿದ್ದ ೨,೦೦೦ ಜನ ಪಾಕಿಸ್ತಾನಿಗಳನ್ನು ಕಳೆದ ವಾರ ಬರ್ಮಾದ ವಲಸೆ ಅಧಿಕಾರಿಗಳು ಸೈನ್ಯ, ನೌಕಾ ಬಲ ಮತ್ತು ಪೋಲೀಸರ ಸಹಾಯದೊಡನೆ ಬಂಧಿಸಿದರು. ಅವರನ್ನು ಅಕ್ಯಾಬ್ ಜೈಲಿನಲ್ಲಿಯೂ ಸ್ಥಳೀಯ ಶಾಲೆ, ಮತ್ತು ಬೇಲಿ ಹಾಕಿದ ಸ್ಥಳದಲ್ಲಿ ಇಡಲಾಯಿತು. ಅಧಿಕಾರಿಗಳು ಆ ಕ್ಯಾಂಪ್ ಜಿಲ್ಲೆಯಲ್ಲಿ ಅನೇಕ ಕಡೆ [illegible] ಮನೆಮನೆಗಳಿಗೂ ಪ್ರವೇಶಿಸಿ ತನಿಖೆ ನಡೆಸಿದರೆಂದೂ, ಗಡಿ ಬಳಿ ಹಳ್ಳಿಗಳಿಗೆ ಯಾರೂ ಬರದಂತೆ ಅಥವಾ ಹೋಗದಂತೆ ಕಾವಲು ಮಾಡಿದರೆಂದೂ ಹೇಳಲಾಗಿದೆ.

ಮಹಾಲಿಂಗಂರವರಿಂದ ಸಂಗೀತ ಕಲೆಗೆ ಕಳಂಕ

ಸುಪ್ರಸಿದ್ಧ ವೇಣುಗಾನ ವಿದ್ವಾಂಸರೆಂದು ಹೆಸರು ಪಡೆದಿರುವ ಶ್ರೀ ಟಿ. ಆರ್ ಮಹಾಲಿಂಗಂರವರಿಂದ ಸಂಗೀತ ಕಲೆಗೆ ದೊಡ್ಡ ಕಳಂಕವುಂಟಾಗುತ್ತಿದೆ ನೆನ್ನೆ ಇವರು ನಗರದಲ್ಲಿ ಕಛೇರಿ ನಡೆಸಲು ಒಪ್ಪಿಕೊಂಡು ಯಾವ ತಿಳವಳಿಕೆಯನ್ನೂ ಕೊಡದೆ, ಸಭೆಗೆ ಬಾರದೆ ಸಾವಿರಾರು ಜನ ಕಲಾವಿದರಿಗೆ ನಿರಾಶೆಗಿಂತಲೂ ಹೆಚ್ಚಿನ ಜಿಗುಪ್ಸೆಯನ್ನುಂಟುಮಾಡಿದರು. ವ್ಯವಸ್ಥಾಪಕರು ಉತ್ಸಾಹದಿಂದ ಮಾಡಿದ್ದ ಏರ್ಪಾಡುಗಳಿಗೆ ಭಂಗವುಂಟಾಯಿತು.

ಕಛೇರಿಗೆ ಒಪ್ಪಿಕೊಂಡು, ಮುಂಗಡವನ್ನೂ ತೆಗೆದುಕೊಂಡು ಆಸಾಮಿಯೇ ಪತ್ತೆಯಿಲ್ಲವಾಗಿದ್ದರು ಅವರನ್ನು ಹುಡುಕಿಕೊಂಡು ಸಂಚಾಲಕರು ಮದರಾಸು, ಬೆಂಗಳೂರು ಮುಂತಾದ ಕಡೆಗಳಿಗೆ ಮೂರು ದಿನಗಳಿಂದಲೂ ಅಲೆದು ವಿಫಲರಾದರು ಸಂಗೀತ ಕಛೇರಿಯನ್ನು ಏರ್ಪಡಿಸಿ, ಸಂಗೀತಗಾರರನ್ನು ಹುಡುಕಿಕೊಂಡು ಅಲೆಯುವ ದುಸ್ಥಿತಿಯು ವ್ಯವಸ್ಥಾಪಕರಿಗೆ ಉಂಟಾಗುವುದು ದುರ್ದೈವವೇ ಸರಿ ತಂತಿ, ಟೆಲಿಫೋನ್ ಮುಂತಾದ ಅನೇಕ ಸೌಲಭ್ಯಗಳಿರುವ ಈ ಕಾಲದಲ್ಲಿ ತಾವು ಬರುವುದಿಲ್ಲವೆಂದಾದರೂ ಅವರು ಮುಂಚಿತವಾಗಿ ತಿಳಿಸಿದ್ದರೆ ಸಾವಿರಾರು ಜನ ಕಲಾಭಿಮಾನಿಗಳು ಸ್ಥಳಪರಸ್ಥಳಗಳಿಂದ ಬರುವುದನ್ನಾದರೂ ತಪ್ಪಿಸಬಹುದಾಗಿತ್ತು ಹಾಗೆ ಮಾಡದಿದ್ದುದು ಅಕ್ಷಮ್ಯ ಅಪರಾಧವಾಗಿದೆ ಹೀಗೆ ಒಬ್ಬಿಬ್ಬರು ಮಾಡುವುದರಿಂದ ಇಡೀ ವಿದ್ವಾಂಸರುಗಳ ಗೋಷ್ಠಿಗೆ ಅಪಮಾನವುಂಟಾಗುತ್ತದೆ ಸಭೆಗೆ ಬಂದಿದ್ದ ಜನರಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡುತ್ತಿದ್ದರು ಅವರ ಮೇಲೆ ನಷ್ಟಕ್ಕೆ ದಾವಾ ಹಾಕಬೇಕು, ಅವರಿಗೆ ಎಲ್ಲರೂ ಬಹಿಷ್ಕಾರ ಹಾಕಬೇಕು–ಇತ್ಯಾದಿ

ಕಳೆದ ಶುಕ್ರವಾರ ಬೆಂಗಳೂರಿನಲ್ಲಿಯೂ ಇದೇ ರೀತಿ ಅವರು ಮಾಡಿದರೆಂದು ಗೊತ್ತಾಗಿದೆ ಇನ್ನು ಮುಂದೆ ಇಂತಹವರ ಕಛೇರಿಗಳನ್ನು ಏರ್ಪಡಿಸುವವರು ಸಾವಿರ ಬಾರಿ ಯೋಚಿಸಬೇಕು, ಅಥವಾ ಅವರಿಂದಲೇ ಮುಂಗಡವಾಗಿ ಭರವಸೆಯ ಹಣವನ್ನು ಡಿಪಾಜಿಟ್ಟಾಗಿ ಪಡೆಯಬೇಕು

ಬರೀ ವಿದ್ಯೆಯೊಂದಿದ್ದರೆ ಏನು ಪ್ರಯೋಜನ? ಅವಕ್ಕೆ ತಕ್ಕ ನಯ, ವಿನಯ. ಘನತೆ, ಗಾಂಭೀರ್ಯಗಳು ಬೇಕು ವೇಣುಗಾನ ಲೋಲನಾದ ಶ್ರೀ ಕೃಷ್ಣನೇ ಇಂತಹವರಿಗೆ ಸದ್ಬುದ್ಧಿಯನ್ನು ಕೊಟ್ಟು ವಿಹಿತವಾಗಿ ವರ್ತಿಸುವಂತೆ ಮಾಡಲೆಂದು ಹಾರೈಸಬೇಕಾಗಿದೆ

— ಗಾನ ಕಲಾಭಿಮಾನಿ

ಆತ್ಮ ಶುದ್ಧಿಗಾಗಿ ಬೊಂಬಾಯಿ ಶಾಸನ ಸಭಾ ಸದಸ್ಯರ ಉಪವಾಸ

ಅಹಮದಾಬಾದು ಜಿಲ್ಲೆಯ ಮುಖಂಡರೂ, ಬೊಂಬಾಯಿ ವಿಧಾನಸಭಾ ಸದಸ್ಯರೂ ಆದ ಭವಾನಿ ಶಂಕರ ಮೆಹತಾರವರು ತಮ್ಮ ಮನೆಯಲ್ಲಿ ೧೦ ದಿನಗಳ ಉಪವಾಸವನ್ನು ಆರಂಭಿಸಿದ್ದಾರೆ. ಅವರಿಗೆ ಈಗ ೬೯ ವರ್ಷ ವಯಸ್ಸು ಗಾಂಧಿಜಿಯವರ ನಾಯಕತ್ವದಲ್ಲಿ ಕೆಲಸ ಮಾಡಿರುವ ತಮಗೆ ಆ ಜಿಲ್ಲೆಯಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಬೇಸರವಾಗಿರುವುದೆಂದೂ, ಜನರಲ್ಲಿ ದ್ವೇಷ ವೈಷಮ್ಯಗಳು ಹೆಚ್ಚಿರುವುದೆಂದೂ ಅವರು ತಿಳಿಸಿ, ಈ ಪರಿಸ್ಥಿತಿಯಲ್ಲಿ ತಾವು ಆತ್ಮಪರಿಶೋಧನಾ ಉಪವಾಸವನ್ನು ನಡೆಸಬೇಕಾಗಿರುವುದೆಂದೂ ಹೇಳಿರುತ್ತಾರೆ

ಸಂಸ್ಥಾನದಲ್ಲಿ ೨೦ ರಾಷ್ಟ್ರೀಯ ವಿಸ್ತರಣ ಕೇಂದ್ರಗಳು

ಕೇಂದ್ರ ಸರ್ಕಾರದವರು ಈ ತಿಂಗಳಿಂದ ಮೈಸೂರು ಸಂಸ್ಥಾನದಲ್ಲಿ ೨೦ ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳನ್ನು ತೆರೆಯಲು ಅಂಗೀಕಾರವಿತ್ತಿರುವರು. ಆ ಪೈಕಿ ಚಾಮರಾಜನಗರ, ಕೃಷ್ಣರಾಜಪೇಟೆ, ಮಂಡ್ಯ, ಚಿಕ್ಕಮಗಳೂರು, ರಾಮನಗರ ಮುಂತಾದುವು ಇವೆ.

ಹಂಗೇರಿ ಮಾಜಿ ಪ್ರಧಾನಿಯವರ ವಿಚಾರಣೆ

ಹಂಗೇರಿಯ ಮಾಜಿ ಪ್ರಧಾನಿ ಇಮ್ರಿ ನಾಗಿಯವರನ್ನು ಈಗಿನ ಸರ್ಕಾರದವರು ವಿಚಾರಣೆಗೆ ಗುರಿಪಡಿಸಿ ಅವರಿಗೆ ಪ್ರಾಯಶಃ ಮರಣ ದಂಡನೆಯನ್ನು ವಿಧಿಸಲಿರುವರೆಂದು ನ್ಯೂಯಾರ್ಕಿನಲ್ಲಿರುವ ಹಂಗೇರಿಯ ಮಾಜಿ ಮಂತ್ರಿ ಅನಾ ಕೆತ್ಲಿ ಎಂಬಾಕೆಯು ತಿಳಿಸಿರುತ್ತಾರೆ ಈ ಬಗ್ಗೆ ತಮಗೆ ರಹಸ್ಯದ ವರದಿಗಳು ಬಂದಿರುವುದಾಗಿಯೂ ಅವರು ಹೇಳಿರುವರು ಅವರ ವಿಚಾರಣೆಗೆ ಸಿದ್ಧತೆಗಳಾಗುತ್ತಿವೆಯೆಂದೂ, ದಿನವನ್ನು ಬೇಗನೆ ಪ್ರಕಟಿಸಲಾಗುವುದೆಂದೂ ಹೇಳಲಾಗಿದೆ

ಕ್ಷಾಮಡಾಮರಗಳನ್ನೆದುರಿಸಲು ಅಧಿಕಾರಿಗಳಿಗೆ ತರಪೇತು

ಕ್ಷಾಮ, ಭೂಕಂಪ, ಪ್ರವಾಹ ಮುಂತಾದ ಪ್ರಕೃತಿ ಸಂಬಂಧವಾದ ವಿಕೋಪಗಳಿಂದ ಉಂಟಾಗುವ ಜರೂರು ಪರಿಸ್ಥಿತಿಗಳನ್ನೆದುರಿಸಲು ಸಾಧ್ಯವಾಗುವಂತೆ ಭಾರತ ಸರ್ಕಾರದವರು ಹಲವು ಆರಿಸಿದ ಅಧಿಕಾರಿಗಳಿಗೆ ತರಪೇತು ನೀಡಲು ಬರುವ ತಿಂಗಳ ಮೊದಲ ವಾರದಿಂದ ೫ ವಾರಗಳ ಶಿಕ್ಷಣವನ್ನು ನಾಗಪುರದಲ್ಲಿ ಕೊಡುವಂತೆ ವ್ಯವಸ್ಥೆ ಮಾಡಿರುವರು. ಮೈಸೂರು ಸಂಸ್ಥಾನದ ಪರವಾಗಿ ಕೋಲಾರದ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಕೆ ಲಕ್ಷ್ಮಣರಾಯರನ್ನು ಆರಿಸಲಾಗಿದೆ

ಕರಾಚಿ ಮಾರ್ಕೆಟ್ಟುಗಳಲ್ಲಿ ಕೋರ್ಟುಗಳು

ವ್ಯಾಜ್ಯಗಳಲ್ಲಿ ಬೇಗನೆ ನ್ಯಾಯಾನ್ಯಾಯವನ್ನು ಕಂಡುಹಿಡಿದು ತೀರ್ಮಾನವೀಯಲು ಕರಾಚಿಯ ಮೂರು ಮುಖ್ಯ ಮಾರ್ಕೆಟ್ಟುಗಳಲ್ಲೂ ಮೂವರು ಮ್ಯಾಜಿಸ್ಟ್ರೇಟರ ಕೋರ್ಟುಗಳನ್ನು ಸ್ಥಾಪಿಸಲಾಗಿದೆ ವರ್ತಕರು ಅತಿ ಲಾಭದಾಸೆಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಅಲ್ಲಿ ವಿಚಾರಿಸಲಾಗುವುದು ಪಕೋಟಿ ಬೆಲೆಗಳಿಗಿಂತಲೂ ಹೆಚ್ಚಾಗಿ ವರ್ತಕರು ಮಾರುತ್ತಿದ್ದರೆಂಬ ದೂರು ಬಂದ ಕಾರಣ ಮೂವರು ನ್ಯಾಯಾಧೀಶರನ್ನು ನೇಮಿಸಲಾಗಿದೆ

ಐಸೆನ್‌ಹೋವರರ ಯೋಜನೆಗೆ ೮ ಮುಸ್ಲಿಂ ರಾಷ್ಟ್ರಗಳ ಒಪ್ಪಿಗೆ

ಮಧ್ಯ ಪೂರ್ವಕ್ಕೆ ಮಿಲಿಟರಿ ಮತ್ತು ಆರ್ಥಿಕ ಸಹಾಯವನ್ನು ನೀಡುವ ಬಗ್ಗೆ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರು ಸಿದ್ಧಗೊಳಿಸಿರುವ ಯೋಜನೆಯನ್ನು ಲೆಬನಾನ್, ಲಿಬ್ಯಾ, ಟರ್ಕಿ, ಪರ್ಷಿಯಾ, ಪಾಕಿಸ್ತಾನ, ಅಫ್ಘಾನಿಸ್ತಾನ, ಇರಾಕ್ ಮತ್ತು ಸಾದಿ ಅರೇಬಿಯಾಗಳು ಒಪ್ಪಿರುವುದಾಗಿ ಹೇಳಲಾಗಿದೆ

ವಿವಾಹ ಮಹೋತ್ಸವ

ನಿವೃತ್ತ ಸಬ್ ರಿಜಿಸ್ಟ್ರಾರ್ ಶ್ರೀ ಬಿ. ನರಸಿಂಹಯ್ಯಂಗಾರ್ಯರ ಮಕ್ಕಳು ಶ್ರೀ ಬಿ ನಾರಾಯಣಸ್ವಾಮಿಯವರು ತಮ್ಮ ಕುಮಾರ ಚಿ|| ಬಿ. ಎನ್. ಮುತ್ತಣ್ಣನಿಗೆ ಶಾಂತಿ ಗ್ರಾಮದ ಶ್ರೀ ಜಿ ಕೆ ಕಸ್ತೂರಿರಂಗಾಚಾರ್ಯರ ಪುತ್ರಿ ಸೌ|| ತಿರುಮಲೆಯನ್ನು ತಂದುಕೊಂಡು ನೆನ್ನೆ ಪಶ್ಚಿಮವಾಹಿನಿಯಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಿದರು

ಹಿಂದಿ ಪರೀಕ್ಷಾ ಫಲಿತಾಂಶ

ನಂಜನಗೂಡು ಹಿಂದಿ ಪ್ರಚಾರ ಸಭೆಯಿಂದ ವಿದ್ಯಾರ್ಥಿಗಳು ಕುಳಿತಿದ್ದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪರೀಕ್ಷಾ ಫಲಿತಾಂಶಗಳು ಈ ರೀತಿ ಇವೆ:— ಪ್ರಾಥಮಿಕ ೧೭ರ ಪೈಕಿ ೧೪ ತೇರ್ಗಡೆ. ಅದರಲ್ಲಿ ೫ ಪ್ರಥಮ ಶ್ರೇಣಿ ಮಧ್ಯಮಾ ೧೩ಕ್ಕೆ ೯ ತೇರ್ಗಡೆ, ೧ ಪ್ರಥಮ ಶ್ರೇಣಿ. ರಾಷ್ಟ್ರ ಭಾಷೆ ೭ರ ಪೈಕಿ ೫ ಜನ ತೇರ್ಗಡೆ. ವಿಶಾರದ ೭ರಲ್ಲಿ ೫ ಮಂದಿಯು ತೇರ್ಗಡೆ.

ಸಂಗೀತ ಕಛೇರಿ

ಮಂಡ್ಯದ ಶ್ರೀ ಸದ್ಗುರು ಮಂದಿರದಲ್ಲಿ ನಡೆಯುತ್ತಿರುವ ರಾಮೋತ್ಸವದ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ವಿ|| ಆರ್. ಕೆ. ಶ್ರೀಕಂಠರವರ ಸಂಗೀತವು ಏರ್ಪಾಡಾಗಿದೆ.

ಮತ್ತೊಬ್ಬ "ತೋಳ ಬಾಲಕ"ನ ಪತ್ತೆ

೪|| ವರ್ಷಗಳ ಕಾಲ ತೋಳಗಳ ಸಮೂಹದಲ್ಲಿ ಬೆಳೆದ ೭ ವರ್ಷದ ಬಾಲಕನು ತನ್ನ ಮಾತಾಪಿತೃಗಳನ್ನು ಮತ್ತೆ ಸೇರಿರುವ ವಾರ್ತೆಯು ಆಗ್ರಾದಿಂದ ಬಂದಿದೆ. ಅಲ್ಲಿಗೆ ಸಮೀಪದ ಹಳ್ಳಿಯೊಂದರಲ್ಲಿ ೪|| ವರ್ಷಗಳ ಹಿಂದೆ ತೋಳಗಳು ನುಗ್ಗಿ ಕಾಂಚೆ ಜಾದವ್ ಎಂಬಾತನ ಮನೆಯಿಂದ ೧೮ ತಿಂಗಳ ಗಂಡು ಮಗುವನ್ನು ಹೊತ್ತುಕೊಂಡುಹೋಗಿದ್ದುವು ಕೆಲವು ದಿನಗಳ ಹಿಂದೆ ಬೇಟೆಗಾರರ ಗುಂಪೊಂದು ಎರಡು ತೋಳಗಳನ್ನು ಅಟ್ಟಿಸಿಕೊಂಡುಹೋದಾಗ ಅವುಗಳೊಡನೆ ಮನುಷ್ಯಾಕೃತಿಯ ತೋಳವೊಂದು ಅಂಬೆಗಾಲಿಟ್ಟು ಓಡುತ್ತಿದ್ದುದು ಕಂಡುಬಂದು, ಅವರು ಅದನ್ನು ಹಿಡಿದು ಊರಿಗೆ ತಂದರು ಆಗ ಮಾತಾಪಿತೃಗಳು ಬಾಲಕನು ತಮ್ಮವನೆಂದು ಗುರ್ತು ಹಿಡಿದರು. ಬಾಲಕನನ್ನು ಸಾಕುತ್ತಿದ್ದ ಹೆಣ್ಣು ತೋಳವು ಬಹಳ ದೂರದವರೆಗೆ ಬೇಟೆಗಾರರೊಡನೆ ಇದ್ದ ಮಗುವನ್ನು ಹಿಂಬಾಲಿಸಿತು ಹುಡುಗನು ಹಸಿ ಮಾಂಸವನ್ನೇ ತಿನ್ನುತ್ತಾನೆ ಅವನು ಜನರನ್ನು ಹಿಂಸಿಸಿ ಓಡಿಹೋಗುವ ಸ್ಥಿತಿಯಲ್ಲಿರುವುದರಿಂದ ಅವನನ್ನು ಪ್ರತ್ಯೇಕ ಕೊಠಡಿಯಲ್ಲಿಡಲಾಗಿದೆ

ತರುಣನ ಲಿಂಗ ಪರಿವರ್ತನೆ

ಝಾನ್ಸಿಯ ೧೭ ವರ್ಷದ ಹುಡುಗನೊಬ್ಬನ ಲಿಂಗ ವ್ಯತ್ಯಾಸವಾಗುತ್ತಿರುವುದಕ್ಕಾಗಿ ಅವನನ್ನು ಅಲ್ಲಿನ ಆಸ್ಪತ್ರೆಗೆ ಸೇರಿಸಲಾಗಿದೆ ೧೫ ವರ್ಷದವರೆಗೂ ಅವನಲ್ಲಿ ಗಂಡಸಿನ ಲಕ್ಷಣಗಳಿದ್ದುವು ಈಚೆಗೆ ಹೆಣ್ಣಿನ ಸ್ವರೂಪವು ಮೂಡುತ್ತಿರುವುದಾಗಿಯೂ ಆತನು ಪೂರ್ತಿಯಾಗಿ ಹೆಂಗಸಾಗಲು ಶಸ್ತ್ರ ಚಿಕಿತ್ಸೆ ನಡೆಸುವುದಾಗಿಯೂ ಹೇಳಲಾಗಿದೆ

ಪ್ರವೇಶ ಕಾಂಗ್ರೆಸ್ಸಿನ ಅಂಗರಚನೆಯ ಅಂಗೀಕಾರ

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಶ್ರೀ ವಿ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನೆನ್ನೆ ನಡೆದು ಪ್ರದೇಶ ಸಂಸ್ಥೆಯ ಅಂಗರಚನೆಯನ್ನು ಅಂಗೀಕರಿಸಿತು ಅದಕ್ಕೆ ಪ್ರದೇಶ ಸಮಿತಿಯ ಒಪ್ಪಿಗೆ ಪಡೆಯಲು ಆದಷ್ಟು ಬೇಗನೆ ಸಮಿತಿ ಸಭೆಯನ್ನು ಕರೆಯಲು ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು

ಬೇಕಾಗಿದೆ

ನಂಜನಗೂಡಿನಲ್ಲಿ ಪತ್ರಿಕೆ ಹಂಚುವವರು ಬೇಕಾಗಿದ್ದಾರೆ ನಗದು ಠೇವಣಿ ಕೊಡಲು ಶಕ್ತರಾದ ಸ್ಥಳೀಯರು ವಿಚಾರಿಸಿ

X C/o. ಸಾಧ್ವಿ, ಮೈಸೂರು

ಗೃಹಕೃತ್ಯದ ನೋಟೀಸು

ನಂಜನಗೂಡು ತಾಲ್ಲೂಕು ಹೆಗ್ಗಡಹಳ್ಳಿ ಗ್ರಾಮದ ಶಿವನಮ್ಮನು ಈ ಮೂಲಕ ಸಮಸ್ತ ಜನರಿಗೂ ತಿಳಿಸುವುದೇನೆಂದರೆ.–

ನನ್ನ ತಂದೆ, ಹಾಲಿ ಮೃತ ಅಪ್ಪಾಜಿ ಸಿದ್ದೇಗೌಡನಿಗೆ ಸೇರಿದ ನನ್ನ ತಾಯಿ ಮೃತ ಲಿಂಗಮ್ಮನ ಹೆಸರಿನಲ್ಲೂ ಹೆಗ್ಗಡಹಳ್ಳಿ ಗ್ರಾಮದಲ್ಲಿ ಸ್ಥಿರ ಸ್ವತ್ತು ಮತ್ತು ಲೇವಾದೇವಿ ಪತ್ರಗಳು ಇರುತ್ತವೆ ಇವುಗಳಲ್ಲೂ ಮತ್ತು ಹೆಗ್ಗಡಹಳ್ಳಿ ಮನೆಯಲ್ಲಿರುವ ಚರ ಸ್ವತ್ತುಗಳಲ್ಲೂ ಸಹ ನನಗೆ ಐದನೇ ಒಂದು ಭಾಗದ ಹಕ್ಕು ಇರುತ್ತದೆ ಈ ಆಸ್ತಿ ಆಡಳಿತವನ್ನು ಆಕ್ರಮಿಸಿಕೊಂಡಿರುವ, ನನ್ನ ಅಕ್ಕನಾದ ಸಣ್ಣಮ್ಮನಿಂದಾಗಲೀ, ಅಥವಾ ಮತ್ತಾವ ಅಕ್ಕನಿಂದಾಗಲೀ ಮೇಲ್ಕಂಡ ಸ್ವತ್ತುಗಳನ್ನು ಪರಭಾರೆ ಮಾಡಿಸಿಕೊಂಡು ಯಾರೂ ಏನೇ ಕಾಗದ ಪತ್ರ ಬರೆಸಿಕೊಂಡರೂ ಅವುಗಳು ಊರ್ಜಿತವಾಗುವುದಿಲ್ಲವೆಂತಲೂ ಮತ್ತು ಅವುಗಳು ನನ್ನ ಹಿಸ್ಸೆಯನ್ನು ಬದ್ಧಪಡಿಸುವುದಿಲ್ಲವೆಂತಲೂ ಈ ಮೂಲಕ ತಿಳಿಸಿರುತ್ತದೆ.

⌒ ಶಿವನಮ್ಮನ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು.

Edited, Printed and Published by
A. R. Nagarajan at Sadhvi Press,
D. Subbiah Road, Mysore

ಚೀಣದಲ್ಲೂ ಅಣು ಶಸ್ತ್ರ ಸಂಗ್ರಹ

ಚೀಣವು ಈಗ ಅಣು ಶಸ್ತ್ರಗಳನ್ನು ಹೊ ರುವುದೆಂದು ಹಾಂಕಾಂಗ್ ಟೈಮ್ಸ್ ಪತ್ರಿ ತಿಳಿಸಿದೆ ರಷ್ಯವು ಅವನ್ನು ಚೀಣಕ್ಕೆ ಕೊ ವುದಾಗಿಯೂ ಹೇಳಲಾಗಿದೆ. ಈ ಅಸ್ತ್ರಗಳ ಸ ಯದಿಂದ ಚೀಣವು ಫಾರ್ಮೋಸಾ ಮೇಲೆ ಧಾ ಮಾಡುವ ಶಕ್ತಿ ಹೊಂದಿರುವುದೆಂದು ರಾಷ್ಟ್ರೀ ಯ ಚೀಣದ ಅಧಿಕಾರಿಯೊಬ್ಬರು ಹೇಳಿ

ಗಾಂಧಿ ವಿಚಾರ ಪರಿಷತ್ತಿನ ವ್ಯಾಸ ಗೋಷ್ಠಿ

ನಗರದ ಗಾಂಧಿ ವಿಚಾರ ಪರಿಷತ್ತಿನ ಯದಲ್ಲಿ ಏರ್ಪಟ್ಟಿರುವ ವಿಶೇಷ ವ್ಯಾಸಂಗ ಷ್ಠಿಯ ಅಂಗವಾಗಿ ನಾಳೆ ಸಂಜೆ ೬|| ಗಂಟೆ ಎಸ್ ವಿ ರಂಗಣ್ಣನವರಿಂದ ಸಾಹಿತ್ಯ- ತತ್ವಜ್ಞಾನ ಮತ್ತು ನಾಳಿದ್ದು ಸಂಜೆ ೬||ಗೆ ಎಂ ವಿ ಕೃಷ್ಣರಾಯರಿಂದ ರಾಜ್ಯ ಶಾಸ್ತ್ರ ಹಾಸ ಎಂಬ ವಿಚಾರವಾಗಿ ಉಪನ್ಯಾಸಗಳು ಪಾಡಾಗಿವೆ.

ಹರಿಕಥೆ

ಶ್ರೀರಾಮಪೇಟೆ ಶ್ರೀ ಆರ್ಯವೈಶ್ಯ ಭಕ್ತ ಮಂಡಲಿಯ ಶ್ರೀರಾಮ ಮಂದಿರದಲ್ಲಿ ಸಂಜೆ ೬|| ಗಂಟೆಗೆ ಶ್ರೀ ಎಂ. ಎಲ್. ಯಣದಾಸರಿಂದ ಕೃಷ್ಣಗಾರುಡಿ ಎಂಬ ಥೆಯನ್ನು ಏರ್ಪಡಿಸಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರ

ಬೆಳಗ್ಗೆ ೭-೫ ಸೌಂದರ ಕೃಷ್ಣಮೂ ದೇವರ ನಾಮ ೭ ೩೦ ಗಾನ ವಿಹಾರ ರಿಕಾರ್ಡು. ಮಧ್ಯಾಹ್ನ ೧೨ ವಿ ನಾರಾಯ ರಾವ್–ಸಂಗೀತ ೧೨-೩೦ ರಾಧಾ ಮತ್ತು ಯಲಕ್ಷ್ಮಿ-ಸಂಗೀತ. ೧ ಮತ್ತು ೧-೫೦ ವೀಣೆ ೧-೩೦ ರಿಕಾರ್ಡು. ೩ ವನಿತಾ ವಿ ಸಂಜೆ ೫-೩೦ ವಿ ನಾರಾಯಣರಾವ್. ತ ೭ ರಾಘವೇಂದ್ರರಾವ್ ಕಾವ್ಯ ವಾ ೭ ೩೦ ಕಾವ್ಯಾವಲೋಕನ. ೮ ಹರಿನಾಭ ನಾಟಕ ೯-೧೫ ಟಿ ಚೌಡಯ್ಯ-ಪಿಟೀ ೧೦ ರಿಕಾರ್ಡು

ASTRO-PALMISTRY
Consult :-
H S VENKATA RAO,
B A., B.L., B.E
1329. K M Puram, Mysore.

ಜೀವನದ ಹರ್ಷವನ್ನು ಸವಿಯ
ಷಂಡರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ

ಆರೋಗ್ಯ, ಐಶ್ವರ್ಯ ದೇಹದಾರ್ಢ್ಯ ಲವಲವಿಕೆಯನ್ನು ಹೊಂದಿ ದೀರ್ಘ ಜೀವ ಲ್ಲಾ ಆನಂದಗಳನ್ನೂ ಅನುಭವಿಸಬೇಕೆ ಮಾನವರ ಮಹತ್ತರವಾದ ಆ ಮನುಷ್ಯ ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿ ಷಂಡತ್ವ, ವ್ಯಾಪಕ ಶಕ್ತಿಯ ಅಭಾವ, ಮುಟ್ಟಿ ನ, ಸ್ವಪ್ನಸ್ಖಲನ, ಮೂಲವ್ಯಾಧಿ, ನರದ ಬಲ್ಯ, ಸಿಫ್ಲಿಸ್, ಗೊನೋರಿಯಾ, ಯು, ಅಂಡ ವಾಯು ಮತ್ತು ಎಲ್ಲ ವಿಧ ತೆಯ ಮೂತ್ರ ರೋಗಗಳಿಗೂ ಕಾರಣ ಇವುಗಳನ್ನು ಕೂಡಲೇ ಗುಣಪಡಿಸಲು ಪ್ರಸಿ ಕರಾಗಿರುವ ಡಾ|| ರಾಜಾರಾವರನ್ನು (ಕ್ಲೀ ನೀಕ) ಪ್ರತಿದಿನ ಬೆಳಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿ ರು ಸ್ತ್ರೀ ಪುರುಷರಿಬ್ಬರ ಗುಪ್ತ ರೋಗ ಬಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಕೊಡುವರು ನೂರಕ್ಕೆ ನೂರು ಖಾತರಿ ಕೊಡ ವುದು.

ಅವರ ಸಲಹೆ ಪಡೆಯುವುದೆಂದರೆ ಹೊಸ ನವನ್ನು ಪಡೆದಂತೆಯೇ. ಚಿತ್ರಗಳನ್ನು ಗೌಪ್ಯ ಡಲಾಗುವುದು. ಕೆಳಗಿನ ವಿಳಾಸದಲ್ಲಿ ಕಾಣಿ ರಿ.

ರಾಣಾ ಮೆಡಿಕಲ್ ಹಾಲ್
ಲೇನ್ ನಂ. 1745. ಅಶೋಕಾ ರಸ್ತೆ
(ಮೈಸೂರು ಬ್ಯಾಂಕ್ ಬಳಿ ಹಾಗೂ
ಮೂರನೇ ಕಟ್ಟಡ),
ಮೈ ಸೂ ರು.

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರ್ತಕರಿಗೆ ಅನುಕೂಲ

ಸಂಪುಟ : ೨೫] SADHVI : TUESDAY 23—4—1957 ಮೈಸೂರು : ಮಂಗಳವಾರ ೨೩—೪—೧೯೫೭ : [ಸಂಚಿಕೆ : ೨೩೦

ಜಾರ್ಡಾನಿನಲ್ಲಿ ಸಿರಿಯಾ-ಇರಾಕ್ ಸೈನ್ಯಗಳಿಗೆ ಘರ್ಷಣೆ?

ಜಾರ್ಡಾನಿನೊಳಗೆ ಇರಾಕಿ ಸೈನ್ಯಗಳ ಪ್ರವೇಶ?

ರಿಯಾ-ಇರಾಕ್ ಸೈನ್ಯಗಳ ಘರ್ಷಣೆ ಸಂಭವ?

ಅರಬ್ ರಾಷ್ಟ್ರಗಳ ಪತ್ರಿಕೆಗಳು ನೆನ್ನೆ ವ ತ್ರಗಳಲ್ಲಿ ಇರಾಕಿ ಸೈನ್ಯಗಳು ಜಾರ್ಡಾನ್ ರಾ ವನ್ನು ಪ್ರವೇಶಿಸಿರುವುವೆಂದು ಪ್ರಕಟಿಸಿದುವು ದರೆ ಜಾರ್ಡಾನ್ ಸರ್ಕಾರಿ ಅಧಿಕಾರಿಯು ಸುದ್ದಿಯನ್ನು ಅಧಿಕೃತವಾಗಿ ನಿರಾಕರಿಸಿ, ಮಿಥ್ಯಾಕಥನವೆಂದು ತಿಳಿಸಿರುತ್ತಾರೆ. ಗಡಿಯನ್ನು ಟಿರುವ ಇರಾಕಿ ಸೈನ್ಯಗಳು ಮಫ್ರಾಕ್ ನಗರವನ್ನು ಸಮೀಪಿಸಿವೆಯೆಂದೂ, ಆ ಸ್ಥಳದ ಬಳಿ ಯಾ ಸೈನ್ಯಗಳು ಸಜ್ಜಾಗಿ ನಿಂತಿರುವುವೆಂದೂ ತ್ರಿಕಾ ವರದಿಗಳು ತಿಳಿಸಿದ್ದುವು. ಎರಡು ಸೈನ್ಯಗಳಿಗೂ ಘರ್ಷಣೆಯಾಗುವ ಭಯದ ನಿವಾರಣೆಗಾಗಿ ಗಮನವೀಯಬೇಕೆಂದು ಸಿರಿಯಾ ಅಧ್ಯ ಕುವಾಟ್ಲಿಯವರು ಜಾರ್ಡಾನ್ ದೊರೆ ಹು ನರನ್ನು ಕೋರಿದ್ದಾರೆ. ಜಾರ್ಡಾನ್ ಪಟ್ಟಣದಲ್ಲಿ ಹಲವು ವಿದೇಶಗಳ ಕೈವಾಡವಿರುವುದೆಂ ಬೈರೂಟಿನ ಅಲ್ಬೈರ್ ಪತ್ರಿಕೆ ತಿಳಿಸಿದೆ. ಇಂ ಗಿವಿಗಿಯುವ ೨೪ ಗಂಟೆಗಳೊಳಗೆ ಅಲ್ಲಿ ಆ ತಂಕ ಮುಖ್ಯ ಘಟನೆಗಳಾಗುವುವೆಂದು ನಿರೀಕ್ಷಿಸಲಾಗಿದೆ

ಶಾಸನಸಭಾ ಸದಸ್ಯರಿಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನವಿಲ್ಲ

ಬರುವ ಅಕ್ಟೋಬರ್ ತಿಂಗಳಿನನಂತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಲು ಪಾರ್ಲಿಮೆಂಟ್ ಅಥವಾ ಸಂಸ್ಥಾನ ವಿಧಾನ ಸಭಾ ಕಾಂಗ್ರೆಸ್ ಸದಸ್ಯರಿಗೆ ಅವಕಾಶ ಕೊಡಲಾಗುವುದಿಲ್ಲ ಎಂದು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಮನ್ನಾರಾಯಣ್‌ರವರು ತಿಳಿಸಿರುತ್ತಾರೆ.

ನಗರಳ್ಳಿ ಪಂಜಾಬು ಪಿ. ಎಸ್. ಪಿ. ಯು. ಪಿ. ಮುಖಂಡರ ಭೇಟಿ

ಪಂಜಾಬಿನ ಪಿ. ಎಸ್. ಪಿ. ಯು. ಪಿ. ಮುಖಂಡರೂ, ಅಲ್ಲಿನ ಬಳ್ಳಿ ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಡಾ. ಚಂದ್ ವೈದ್ಯರವರು ಬಳ್ಳಿ ವಿಚಾರಣಾ ಸಮಿತಿ ಸದಸ್ಯರೊಡನೆ ನೆನ್ನೆ ನಗರಳ್ಳಿಗೆ ಆಗಮಿಸಿ, ಅಲ್ಲಿನ ಪಿ. ಎಸ್. ಪಿ. ಯು ಕಾರ್ಯಕರ್ತರನ್ನು ಭೇಟಿ ಮಾಡಿ, ಕಾರ್ಯಕರು ರಾಜಕೀಯ ಪಕ್ಷಗಳ ಗೊಂದಲಕ್ಕೆ ಬಾರದೆಂದು ತಿಳಿಸಿದರು. ಶ್ರೀ ಎ. ರಾಮಣ್ಣ ಅವರನ್ನು ಕಾರ್ಯಕರ್ತರ ಪರವಾಗಿ ಸ್ವಾಗತಿಸಿದರು

ಮಂತ್ರಿಗಳಿಂದ ಕೆಲಸದ ಆರಂಭ

ಮೈಸೂರು ಮಂತ್ರಿಮಂಡಲದ ೧೧ ಮಂದಿ ರು ಮತ್ತು ಮೂವರು ಉಪ ಸಚಿವರು ಇದೇ ಮೊದಲಾಗಿ ವಿಧಾನ ಸೌಧದಲ್ಲಿ ಕಛೇರಿಗಳಿಗೆ ಹೋಗಿ ಕೆಲಸದಲ್ಲಿ ತೊಡಗಿದರು. ಶ್ರೇಷ್ಠ ಕಾರ್ಯದರ್ಶಿ ಶ್ರೀ ಪಿ ವಿ ರಾಯರು ಇಲಾಖಾ ಕಾರ್ಯದರ್ಶಿಗಳಿಗೆ ಮಂತ್ರಿಗಳು ಮತ್ತು ಉಪ ಮಂತ್ರಿಗಳ ಪರಿಚಯ ಮಾಡಿಸಿದರು.

ಕರಾಚಿಯಲ್ಲಿ ಪ್ರತಿಭಟನಾ ಪ್ರದರ್ಶನ

ಪ್ರಧಾನಿ ಸುಹ್ರಾವರ್ದಿಯವರ ಪ್ರತಿಮೆಯ ದಹನ

ಪಶ್ಚಿಮ ಪಾಕಿಸ್ತಾನದಲ್ಲಿ ಸಂಯುಕ್ತ ಚುನಾವಣೆ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಪ್ರತಿಭಟಿಸಲು ಪಾಕಿಸ್ತಾನದ ಮುಸ್ಲಿಂ ಲೀಗಿನವರು ನೆನ್ನೆ ಕರಾಚಿಯಲ್ಲಿ ಭಾರಿ ಪ್ರದರ್ಶನ ನಡೆಸಿ, ಅಲ್ಲಿನ ರಾಷ್ಟ್ರೀಯ ಸಭಾಭವನದ ಎದುರಿನಲ್ಲಿ ಪ್ರಧಾನಿ ಮಹಮುದಾಲಿ ಸುವರ ಪ್ರತಿಮೆಯನ್ನು ಸುಟ್ಟರು. ಪಾಕಿಸ್ತಾನದ ಮೂಲಭೂತ ತತ್ವಕ್ಕೆ ಜಂಟಿ ಚುನಾವಣಾ ಪದ್ಧತಿಯು ವಿರುದ್ಧವಾಗಿರುವುದೆಂದು ಮುಸ್ಲಿಂ ಲೀಗಿನವರು ಭಾವಿಸಿರುವರು. ಪ್ರದರ್ಶನಕಾರರು ಘೋಷಣೆಗಳನ್ನು ಕೂಗುತ್ತಾ ಬಂದಾಗ ಸಭಾಭವನದ ಕಟ್ಟಡಕ್ಕೆ ಅವರು ನುಗ್ಗದಂತೆ ಮಾಡಲು ಪೋಲೀಸರು ಮುಳ್ಳುತಂತಿ ಬೇಲಿಹಾಕಿ ದೊಣ್ಣೆ ಹಿಡಿದು ಕಾವಲು ನಿಂತಿದ್ದರು.

ಲೀಗಿನ ಪ್ರಮುಖ ನಾಯಕರಾದ ಚೌಧುರಿ ಖಲಿಕ್ ಉಜ್ಜಮಾನರು ಜನಸಮೂಹವನ್ನು ಉದ್ದೇಶಿಸಿ ಭಾಷಣ ಮಾಡಿ ಸುಹ್ರಾವರ್ದಿಯವರಿಂದ ಪಾಕಿಸ್ತಾನಕ್ಕೆ ಕೇಡು ಸಂಭವಿಸುತ್ತಿರುವುದೆಂದು ತಿಳಿಸಿದರು. ನೆನ್ನೆ ದಿನ ಹರತಾಳ ನಡೆಸಬೇಕೆಂದು ಮುಸ್ಲಿಂ ಲೀಗ್ ಅಧ್ಯಕ್ಷ ರಬ್ ನಿಷ್ತಾರರು ಕರೆಯಿತ್ತಿದ್ದರೂ ಕರಾಚಿಯ ಅಂಗಡಿಗಳೂ, ಮಾರುಕಟ್ಟೆಗಳೂ ಮುಚ್ಚಿರಲಿಲ್ಲ

ಜಾರ್ಡಾನಿಗೆ ಇಸ್ರೇಲಿಗಳ ಅಕ್ರಮ ಪ್ರವೇಶ ಮತ್ತು ಧಾಳಿ

ಜಾರ್ಡಾನಿನೊಳಗೆ ಮೊನ್ನೆ ಇಸ್ರೇಲಿ ಸೈನ್ಯಗಳು ಎರಡು ಬಾರಿ ಅತಿಕ್ರಮ ಪ್ರವೇಶ ಮಾಡಿ ಜಾರ್ಡಾನ್ ಸೈನ್ಯ ಮತ್ತು ಅಲ್ಲಿನ ಕುರುಬರ ಮೇಲೆ ಗುಂಡು ಹಾರಿಸಿದುವೆಂದು ವಂದಿಯಾಗಿದೆ. ಈ ಬಗ್ಗೆ ವಿಶ್ವಸಂಸ್ಥೆಯ ವೀಕ್ಷಕರಿಗೆ ಜಾರ್ಡಾನು ದೂರು ಕೊಟ್ಟಿದೆ ಮತ್ತು ಈ ಬಗ್ಗೆ ಅಲ್ಲಿ ತನಿಖೆಯಾಗುತ್ತಿದೆ.

ಎರಡು ವಿಧದ ನಯಾ ಪೈಸಾ ನಾಣ್ಯ ಚಲಾವಣೆ?

ಕಳೆದ ೨೨ ದಿನಗಳಿಂದಲೂ ಜಾರಿಗೆ ಬಂದಿರುವ ನಯ ಪೈಸೆ ಪದ್ಧತಿಯಲ್ಲಿ ಎರಡು ವಿಧದ ನಾಣ್ಯಗಳು ಚಲಾವಣೆಯಾಗಿರುವ ಸಂಶಯ ಬಂದು ಈ ಬಗ್ಗೆ ರಿಸರ್ವ್ ಬ್ಯಾಂಕಿನವರು ಬೊಂಬಾಯಿ ಮತ್ತು ಕಲ್ಕತ್ತದ ಅಲಿಪುರ ಟಂಕಸಾಲೆಗಳಿಂದ ಹೊರಬಂದ ನಾಣ್ಯಗಳನ್ನು ತನಿಖೆ ಮಾಡಲು ವ್ಯವಸ್ಥೆ ಮಾಡುತ್ತಿರುವರು. ಬೊಂಬಾಯಿಯಲ್ಲಿ ತಯಾರಾದ ೧ ನಯಾ ಪೈಸಾದಲ್ಲಿ ೧೯೫೭ ಇಸವಿಯ ಕೆಳಗೆ ಚುಕ್ಕಿ ಇದ್ದು ಅಲಿಪುರದಲ್ಲಿ ಅಚ್ಚಾದ ಅದೇ ವರ್ಗದ ನಾಣ್ಯಗಳಲ್ಲಿ ಇಲ್ಲವೆಂದೂ ಹೇಳಲಾಗಿದೆ. ಚುಕ್ಕಿ ಇರದ ನಾಣ್ಯಗಳನ್ನು ಸ್ವೀಕರಿಸಲು ಮದ್ರಾಸಿನ ಜನರು ನಿರಾಕರಿಸಿ ಈ ಬಗ್ಗೆ ಸಂಶಯ ನಿವಾರಣೆಗಾಗಿ ಅಧಿಕಾರಿಗಳನ್ನು ಪ್ರಶ್ನಿಸಿದ್ದರು. ಕೇಂದ್ರ ಸರ್ಕಾರದವರು ಪ್ರಕಟಿಸಿರುವ ನಾಣ್ಯದ ಮುದ್ರಿಕೆಯಲ್ಲಿ ಚುಕ್ಕಿ ಇದ್ದಿತು.

ಭಾರತದ ವಿಭಜನೆ ಅನಿವಾರ್ಯವಾಗಿರಲಿಲ್ಲ

ಪಾಕ್ ಪ್ರಧಾನಿ ಸುಹ್ರಾವರ್ದಿಯವರ ವ್ಯಾಖ್ಯಾನ

ಭಾರತ ಮತ್ತು ಪಾಕಿಸ್ತಾನ ರಾಜ್ಯಗಳನ್ನಾಗಿ ಈ ಉಪ ಖಂಡದ ವಿಂಗಡನೆಯು ಅನಿವಾರ್ಯವಾಗಿರಲಿಲ್ಲವೆಂದು ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ನೆನ್ನೆ ಅಲ್ಲಿನ ರಾಷ್ಟ್ರೀಯ ಸಭೆಯಲ್ಲಿ ತಿಳಿಸಿದರು. ಕೇವಲ ರಾಜಕೀಯ ವಿಚಾರಗಳೇ ವಿಭಜನೆಗೆ ಕಾರಣವೆಂದೂ ಅವರು ಅಭಿಪ್ರಾಯಪಟ್ಟರು. ಅವಿಭಕ್ತ ದೇಶದಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಮರಿಗೆ ಅವರ ಮತಾನುಸರಣೆ ಮಾಡಲು ಸ್ವಾತಂತ್ರ್ಯವಿದ್ದಿದ್ದರೆ ವಿಭಜನೆ ಆಗುತ್ತಲೇ ಇರಲಿಲ್ಲವೆಂದು ಅವರು ಅಭಿಪ್ರಾಯಪಟ್ಟರು

ಪುನಃ ನಕ್ಷತ್ರಲಾಲನ ಬಂಧನ?

ಇತ್ತೀಚೆಗೆ ಲಕ್ನೊ ಜೈಲಿನಿಂದ ಪರಾರಿಯಾಗಿದ್ದ ಭಾರಿ ಮೋಸಗಾರನೆಂದು ಪ್ರಸಿದ್ಧನಾಗಿರುವ ನಕ್ಷತ್ರಲಾಲನಂತೆ ಹೋಲುವ ಯುವಕನೊಬ್ಬನನ್ನು ಪೋಲೀಸರು ಅಲಹಾಬಾದು ಬಳಿ ಮಿರ್ಜಾಪುರದಲ್ಲಿ ಬಂಧಿಸಿರುವುದಾಗಿಯೂ, ಅವನ ಮುಖಭಾವವು ನಕ್ಷತ್ರಲಾಲನದಂತೆಯೇ ಇರುವುದೆಂದೂ, ಅವನ್ನು ಖಚಿತಪಡಿಸಿಕೊಳ್ಳಲು ಈ ದಿನ ಅಲ್ಲಿಗೆ ಲಕ್ನೊ ಸಿ ಐ ಡಿ ಗಳು ಹೋಗುವರೆಂದೂ ಗೊತ್ತಾಗಿದೆ

ಸಿಂಹಳಕ್ಕೆ ನೆಹರೂರವರ ಭೇಟಿ

ಪ್ರಧಾನಿ ನೆಹರೂರವರು ಬರುವ ತಿಂಗಳು ೧೭ ರಿಂದ ೩ ದಿನಗಳ ಕಾಲ ಸಿಂಹಳಕ್ಕೆ ಭೇಟಿ ಕೊಡುವರು. ಅಲ್ಲಿ ನಡೆಯುವ ಬುದ್ಧ ಜಯಂತಿಯ ೨,೫೦೦ನೇ ವರ್ಷಂತಿ ಸಮಾರಂಭದ ಅಖೈರು ಉತ್ಸವದಲ್ಲಿ ಅವರು ಭಾಗವಹಿಸುವರು.

ಕೋರ್ಟಿಗೆ ಹಾಜರಾಗಲು ಡಾಲ್ಮಿಯರವರಿಗೆ ಸೂಚನೆ

ಭಾರತ್ ವಿಮಾ ಸಂಸ್ಥೆಗೆ ಸೇರಿದ ೨೨ ಕೋಟಿ ರೂ ಬಗ್ಗೆ ವಂಚನೆಗಾಗಿ ರಾಮಕೃಷ್ಣ ಡಾಲ್ಮಿಯಾರವರ ಮೇಲೆ ಹೂಡಿರುವ ಮೊಕದ್ದಮೆಯಲ್ಲಿ ಆಪಾದಿತರು ಹಿಯರಿಂಗ್ ದಿನ ಖುದ್ದು ಹಾಜರಾಗಬೇಕೆಂದು ವಿಚಾರಣೆ ನಡೆಸುತ್ತಿರುವ ದೆಹಲಿ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಡಿ. ಡಿ ಶರ್ಮರವರು ಆಜ್ಞೆ ಮಾಡಿ ಮೊಕದ್ದಮೆಯನ್ನು ಬರುವ ತಿಂಗಳು ೩ನೇ ತಾರೀಕಿಗೆ ಹಾಕಿದ್ದಾರೆ.

ಕರ್ನೂಲಿನಲ್ಲಿ ಬಿರುಗಾಳಿ ಮಳೆಯಿಂದ ಇಬ್ಬರ ಮರಣ

ಆಂಧ್ರ ಸಂಸ್ಥಾನದ ಹಿಂದಿನ ರಾಜಧಾನಿ ಕರ್ನೂಲಿನಲ್ಲಿ ಮೊನ್ನೆ ಬಿರುಗಾಳಿ ಮತ್ತು ಭಾರಿ ಮಳೆಯ ಪರಿಣಾಮವಾಗಿ ಅಲ್ಲಿನ ಆಸ್ಪತ್ರೆಯ ಪತ್ತು ಕುಸಿದು ಇಬ್ಬರು ಮೃತಪಟ್ಟರೆಂದೂ, ಅನೇಕ ಮರಗಳು ಬುಡಸಹಿತ ಕಿತ್ತುಬಂದುವಲ್ಲದೆ, ಸರ್ಕಾರಿ ಕಾಲೋನಿಯಲ್ಲಿ ಹಾಕಿದ್ದ ೩೦೦ ಗುಡಾರಗಳೂ ಹಾರಿಹೋದುವೆಂದೂ ವರದಿಯಾಗಿದೆ. ಅವುಗಳ ಪೈಕಿ ೧೧೦ರಲ್ಲಿ ಜನರು ವಾಸಿಸುತ್ತಿದ್ದು ೮ ಮಂದಿ ಗಂಡಸರಿಗೂ, ಐವರು ಹೆಂಗಸರಿಗೆ ಗಾಯಗಳಾದುವು.

ಹಿರಿಯ ಅಧಿಕಾರಿಗಳ ವರ್ಗಾವರ್ಗಿ

ಪುದುಚೇರಿ ಶ್ರೇಷ್ಠ ಕಾರ್ಯದರ್ಶಿಯಾಗಿ ಜಿ. ಎಸ್. ಶ್ರೀನಿವಾಸ ನೇಮಕ

ಸ್ವಂ.ಪ್ರ ಫೋನ್] ಬೆಂಗಳೂರು ೨೨

ಸರ್ಕಾರದವರು ಕೆಳಗೆ ಕಂಡ ಹಿರಿಯ ಅಧಿಕಾರಿಗಳ ವರ್ಗಾವರ್ಗಿಯನ್ನು ಈ ರೀತಿ ಮಾಡಿರುತ್ತಾರೆ:—

ಗುಲ್ಬರ್ಗಾ ಡಿವಿಜನ್ ಕಮಿಷನರಾದ ಶ್ರೀ ಎ. ಎಸ್. ಹಿರಣ್ಣಯ್ಯನವರಿಗೆ ಅನುಭೋಗಿಸಿಕೊಳ್ಳುವ ದಿನದಿಂದ ೩೦ ದಿನಗಳ ರಜಾ.

ಗುಲ್ಬರ್ಗಾ ಕಲೆಕ್ಟರ್ ಶ್ರೀ ಜಿ. ಎಸ್. ಶ್ರೀನಿವಾಸರವರನ್ನು ಪುದುಚೇರಿ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯಾಗಿ ನೇಮಿಸಲು ಕೇಂದ್ರ ಸರ್ಕಾರಕ್ಕೆ ಎರವಲು. ಅವರ ಸ್ಥಾನಕ್ಕೆ ಅಡಿಷನಲ್ ಕೈಗಾರಿಕಾ ಡೈರೆಕ್ಟರ್ ಶ್ರೀ ಎಂ. ಎಸ್. ಪಾರ್ಥಸಾರಥಿಯವರನ್ನು ನೇಮಿಸಿ ಅವರೇ ಸದ್ಯಕ್ಕೆ ಡಿವಿಜನಲ್ ಕಮಿಷನರ್ ಕೆಲಸ ನೋಡಿಕೊಳ್ಳಲು ಸೂಚಿಸಲಾಗಿದೆ.

ಬೆಂಗಳೂರು ಮತ್ತು ಕೋಲಾರ ಇನಾಂ ರದ್ದಿಯಾತಿ ಡೆಪ್ಯುಟಿ ಕಮಿಷನರಾದ ಶ್ರೀ ಎಂ. ಮಲ್ಲೇಶಯ್ಯನವರು ಶ್ರೀ ಪಾರ್ಥಸಾರಥಿಯವರ ಸ್ಥಾನಕ್ಕೆ. ಬಿದರೆಯ ಕಲೆಕ್ಟರ್ ಶ್ರೀ ಶಾಮದೇವರಾವ್ ಬೆಂಗಳೂರು ಮತ್ತು ಕೋಲಾರ ಇನಾಂ ರದ್ದಿಯಾತಿ ಕಮಿಷನರ್; ತುಮಕೂರು ಸಬ್ ಡಿವಿಜನ್ ಅಧಿಕಾರಿ ಶ್ರೀ ಎಂ. ಕೆ. ವೆಂಕಟೇಶ್ ಬಿದರೆಯ ಕಲೆಕ್ಟರ್.

ಕೇಂದ್ರಕ್ಕೆ ಡಿ. ಜಿ. ಬಾಲರಾಜ್

ಚಿತ್ರದುರ್ಗದ ಜಿಲ್ಲಾಧಿಕಾರಿ ಶ್ರೀ ಡಿ. ಜಿ. ಬಾಲರಾಜ್‌ರವರು ಕೇಂದ್ರ ಸರ್ಕಾರದ ಆರೋಗ್ಯ ಇಲಾಖಾ ಡೆಪ್ಯುಟಿ ಕಾರ್ಯದರ್ಶಿಯಾಗಿ ನೇಮಿಸಲು ಎರವಲು; ರಜಾ ಮೇಲಿರುವ ಶ್ರೀ ಎಂ. ಎಸ್. ರಂಗರಾಜುರವರು ಚಿತ್ರದುರ್ಗದ ಜಿಲ್ಲಾಧಿಕಾರಿಗಳು; ಶ್ರೀ ಸಿ. ಬಿ. ರಂಗಸ್ವಾಮಿಯವರು ಹಾಫ್ ಮೋಟಾರ್ ಅಧಿಕಾರಿಗಳು. ಚೀಫ್ ಮಾರ್ಕೆಟಿಂಗ್ ಅಧಿಕಾರಿಗಳಾದ ಶ್ರೀ ಕೆ. ಆರ್. ಮುದಿಗೌಡರು ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರ್ ಆಗಿ ಮತ್ತು ವಕ್ಫ್ ರಿಜಿಸ್ಟ್ರಾರ್ ಶ್ರೀ ಬಿ. ಎ ಹುದ್ದೆಯನ್ನು ನಿರ್ವಹಿಸಬೇಕು.

ಜಾತ್ರೆಯಲ್ಲಿ ತಲೆ ಮೇಲೆ ತೆಂಗಿನಕಾಯಿ ಒಡೆದ ಪ್ರಸಂಗ

ಬೆಂಗಳೂರಿನಲ್ಲಿ ಕುರುಬರ ಕುಲದೈವವಾದ ಬೀರೇಶ್ವರನ ದೊಡ್ಡ ಜಾತ್ರೆಯು ನೆನ್ನೆ ನಡೆಯಿತು. ಕಳೆದ ೮೮ ವರ್ಷಗಳಿಂದಲೂ ಇದು ನಡೆದಿರಲಿಲ್ಲ. ಪೂಜಾರಿಗಳು ತಮ್ಮ ತಲೆಗಳ ಮೇಲೆ ತೆಂಗಿನಕಾಯಿಗಳನ್ನು ಒಡೆಸಿಕೊಂಡು ಅಲ್ಲಿ ಸೇರಿದ್ದ ಜನರನ್ನು ಆಶ್ಚರ್ಯಗೊಳಿಸಿದರು. ಈ ರೀತಿ ೫೦ ತೆಂಗಿನಕಾಯಿಗಳನ್ನು ಒಡೆಯಲಾಯಿತು. ತೆಂಗಿನಕಾಯಿ ಚೂರುಗಳನ್ನು ಮಹಾ ಪ್ರಸಾದವೆಂದು ಜನರು ತೆಗೆದುಕೊಂಡು ಹೋದರು. ಜಾತ್ರೆ ಅಂಗವಾಗಿ ೧೧೦ ದೇವರುಗಳ ಮೆರವಣಿಗೆಯಾಯಿತು.

ಮಂತ್ರಿಗಳಿಗೆ ಇಲಾಖೆಗಳ ಹಂಚಿಕೆ

ಪೂಣಚ್ಚನವರಿಗೆ ಗೃಹ ಶಾಖೆ; ವೆಂಕಟಪ್ಪನವರಿಗೆ ವಿದ್ಯಾಭ್ಯಾಸ

ಹಿಂದಿನ ಏರ್ಪಾಡಿನಲ್ಲಿ ಸ್ವಲ್ಪ ಬದಲಾವಣೆ

ಬೆಂಗಳೂರು ೨೨.

ನೂತನ ಮೈಸೂರು ಮಂತ್ರಿಮಂಡಲದ ಸದಸ್ಯರಿಗೆ ಈ ಕೆಳಗೆ ಕಂಡಂತೆ ಇಲಾಖೆಗಳನ್ನು ಹಂಚಲಾಗಿದೆ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ-ಸಾಮಾನ್ಯ ಆಡಳಿತ, ರಾಜಕೀಯ, ಸರ್ವಿಸಸ್, ಹೈಕೋರ್ಟು, ಪಬ್ಲಿಕ್ ಸರ್ವಿಸ್ ಕಮಿಷನ್, ಕನ್ನಡ [illegible], ಯೋಜನೆ ಮತ್ತು ಅಭಿವೃದ್ಧಿ, ರಾಜ್ಯದ ವಿಸ್ತರಣೆ ಮತ್ತು ಸಾಮೂಹಿಕ ಯೋಜನೆ, ಮಲೆನಾಡು ಅಭಿವೃದ್ಧಿ, ಅಳತೆ ಮತ್ತು ತೂಕ, ಗ್ರಾಮಾಂತರ ಸಾಲ, ಲೇವಾದೇವಿಗಾರರು ಮತ್ತು ಸಾಲ ಕೊಡುವ ಪದ್ಧತಿ ಮತ್ತು ಸರ್ವೋದಯ

ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ. ಪಾಟೀಲ್-ಭೂ ಸಮಸ್ಯೆಗಳು, ರೆವಿನ್ಯೂ, ಜಾಗೀರು-ಇನಾಂಗಳು, ಮುದ್ರಾಂಕ, ಸ್ಟಾಂಪು ಮತ್ತು ರಿಜಿಸ್ಟ್ರೇಷನ್, ಮೋಟಾರ್ ತೆರಿಗೆ, ಬೆಟ್ಟಿಂಗ್ ತೆರಿಗೆ, [illegible] ವ್ಯವಸಾಯ ವರಮಾನ ತೆರಿಗೆ, ನಿರಾಶ್ರಿತರು, ಮನೆ ಬಾಡಿಗೆ ಹತೋಟಿ ಇತ್ಯಾದಿ

[illegible] ಕೈಗಾರಿಕಾ ಮಂತ್ರಿ ಶ್ರೀ [illegible] ಪೂಣಚ್ಚ-ಗೃಹ, ವಾಣಿಜ್ಯ ಕೈಗಾರಿಕೆ [illegible] ವಾಣಿಜ್ಯ

ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪ-ವ್ಯವಸಾಯ, ಅರಣ್ಯ, ಆಹಾರ ಉತ್ಪಾದನೆ, ಪಶು ವೈದ್ಯ ಶಾಲೆಗಳು, ಪಶು ಪಾಲನೆ, [illegible] ತೋಟ, ಶಿಕಾರಿ ಪ್ರದೇಶ ಮತ್ತು ವನ್ಯಮೃಗ ರಕ್ಷಣೆ

ಹಣಕಾಸು ಮತ್ತು ನ್ಯಾಯಾಂಗ ಮಂತ್ರಿ ಶ್ರೀ ಟಿ. ಮರಿಯಪ್ಪ-ಹಣಕಾಸು, ನ್ಯಾಯಾಂಗ, ಹಿಂದುಳಿದ ಪಂಗಡದ ಯೋಗಕ್ಷೇಮ ಮತ್ತು [illegible] ಸಮಾಜ ಕಲ್ಯಾಣ ಸಮಿತಿ

ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಆರ್. [illegible]ರಾಮಯ್ಯ-ಸ್ಥಳೀಯ ಸಂಸ್ಥೆಗಳು, ಟ್ರಾನ್ಸ್‌ಪೋರ್ಟುಗಳು, ಗ್ರಾಮ ಪಂಚಾಯಿತಿಗಳು, ಗೃಹ ವಸತಿ, ನಿಮ್ನ ವರ್ಗದ ಅಭಿವೃದ್ಧಿ ಮತ್ತು ನಗರಗಳ ಪ್ಲಾನಿಂಗ್

[illegible] ಮತ್ತು ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡ-ಮುಜರಾಯಿ ಮತ್ತು ವಿದ್ಯುಚ್ಛಕ್ತಿ

ವಿದ್ಯಾ ಮಂತ್ರಿ ಶ್ರೀ ಎ. ವಿ. ವೆಂಕಟಪ್ಪ-ವಿದ್ಯಾಭ್ಯಾಸ

ಕಾರ್ಮಿಕ ಮಂತ್ರಿ ಶ್ರೀ ವೈಕುಂಠ ಬಾಳಿಗ-ಕಾರ್ಮಿಕರು, [illegible], ಚಿಕ್ಕ ವಯಸ್ಸಿನ ಅಪರಾಧಿಗಳು, ಪ್ರೊಬೇಷನರಿ ಅಧಿಕಾರಿಗಳು, ಭಿಕ್ಷುಕರು ಮತ್ತು ಅವರ ಪರಿಹಾರ

ಆರೋಗ್ಯ ಮಂತ್ರಿ ಶ್ರೀ ಆರ್. ಎಂ. ಪಾಟೀಲ್-ಸಾರ್ವಜನಿಕ ಆರೋಗ್ಯ, ಆಯುರ್ವೇದ ಮತ್ತು ಯುನಾನಿ, ಗ್ರಾಮಾಂತರ ನೀರು ಸರಬರಾಜು, ಆಹಾರದ ಕಲಬೆರಕೆ

ಅಬ್ಕಾರಿ ಮಂತ್ರಿ ಶ್ರೀ ಮಹಮದ್ ಅಲಿ ಮೆಹಬೂಬ್ ಅಲಿ-ಅಬ್ಕಾರಿ ಮತ್ತು ಪಾನ ನಿರೋಧ, ಸಣ್ಣ ಕೈಗಾರಿಕೆಗಳು ಮತ್ತು ಗ್ರಾಮಾಂತರ ಕೈಗಾರಿಕೆ

ಚೀಣದಲ್ಲಿ ಬಟ್ಟೆ ಪಡಿತರದ ಖೋತಾ

ಚೀಣದಲ್ಲಿ ಹತ್ತಿಯ ಅಭಾವದ ಪರಿಣಾಮವಾಗಿ ಬಟ್ಟೆಗಳ ಪಡಿತರವನ್ನು ಈ ಬೇಸಿಗೆಯಲ್ಲಿ ಅರ್ಧದಷ್ಟು ಕಡಿಮೆ ಮಾಡಲಾಗಿದೆ. ಕಳೆದ ವರ್ಷ ಹತ್ತಿ ಬೆಳೆಗೆ ಕೆಟ್ಟ ಹವಾಗುಣದಿಂದ ಆದ ತೊಂದರೆಯೇ ಇದಕ್ಕೆ ಕಾರಣ

ಸಂಗೀತ ಕಛೇರಿಗಳು

ಮಂಡ್ಯದ ಸದ್ಗುರು ಮಂದಿರದಲ್ಲಿ ರಾಮೋತ್ಸವದ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ಮಾಸ್ಟರುಗಳಾದ ಆರ್. ಎ. ತ್ಯಾಗರಾಜ್ ಮತ್ತು [illegible]ರವರಿಂದಲೂ, ರಾತ್ರಿ ೮ ಗಂಟೆಗೆ [illegible] ಎ. [illegible]ಸ್ವಾಮಿಯವರಿಂದಲೂ ಗಾಯನ ಕಛೇರಿಗಳು ನಡೆಯುವುವು.

ಭಾರತೀಯ ಉಕ್ಕಿನ ಇಂಜನಿಯರುಗಳಿಗೆ ಅಮೆರಿಕದಲ್ಲಿ ತರಪೇತು

ಉಕ್ಕಿನ ತಯಾರಿಕೆ ಮತ್ತು ಕಾರ್ಖಾನೆಯ ವ್ಯವಸ್ಥೆ ಬಗ್ಗೆ ಭಾರತೀಯ ಉಕ್ಕಿನ ಇಂಜನಿಯರುಗಳಿಗೆ ಈ ವರ್ಷ ಅಮೆರಿಕದಲ್ಲಿ ೧೨ ತಿಂಗಳ ಶಿಕ್ಷಣವನ್ನು ಕೊಡಲಾಗುವುದು. ಬರುವ ಸೆಪ್ಟೆಂಬರ್ ೧ರಿಂದ ಆರಂಭವಾಗುವ ಈ ಶಿಕ್ಷಣದಲ್ಲಿ ೧೧೫ ಮಂದಿ ಭಾರತೀಯರ ಪ್ರಥಮ ತಂಡವು ಭಾಗವಹಿಸುವುದು. ಮೂರನೇ ತಿಂಗಳಲ್ಲಿ ೮೫ ಜನರು ಹೋಗುವರು. ವಾಪಸು ಬಂದನಂತರ ಅವರನ್ನು ರೂರ್ಕೆಲ, ಭಿಲೈ ಮತ್ತು ದುರ್ಗಾಪುರ ಕಾರ್ಖಾನೆಗಳಿಗೆ ತೆಗೆದುಕೊಳ್ಳಲಾಗುವುದು. ಈ ತರಪೇತಿಗಾಗಿ ಅಮೆರಿಕದ ಫೋರ್ಡ್ ಫೌಂಡೇಷನ್ನಿನವರು ೧೫ ಲಕ್ಷ ಡಾಲರನ್ನು ಭಾರತ ಸರ್ಕಾರಕ್ಕೆ ಕೊಟ್ಟಿರುತ್ತಾರೆ.

ರಷ್ಯದಿಂದ ಹೊಸ ಬಗೆಯ ಬಾಂಬು ಆಸ್ಫೋಟನೆ

ರಷ್ಯವು ಇತ್ತೀಚೆಗೆ ನಡೆಸಿರುವ ಅಣು ಬಾಂಬು ಆಸ್ಫೋಟನೆಗಳ ಪೈಕಿ ಹೊಸ ವಿಧದ ಭೂಮಿ ಬಾಂಬನ್ನು ಸಿಡಿಸಿತೆಂದು ಜಪಾನಿನ ವೈಜ್ಞಾನಿಕ ಪ್ರೊ|| ಟಕಾನೊಬು ಶಿಯುಕೊವಾರವರು ಹೇಳಿರುತ್ತಾರೆ. ಕಳೆದ ವಾರ ಜಪಾನಿನ ಮೇಲೆ ಬಿದ್ದ ಅಣು ಕಿರಣ ಧೂಳನ್ನು ಪರೀಕ್ಷಿಸಿ ಮೇಲ್ಕಂಡ ಸಿದ್ಧಾಂತಕ್ಕೆ ಬಂದಿರುತ್ತಾರೆ. ಅದರಲ್ಲಿ [illegible]ನೇ ನೆಪ್ಚೂನಿಯಂ ಮತ್ತು ಪ್ಲುಟೋನಿಯಂ ಲೋಹದ ಅಂಶವಿತ್ತೆಂದೂ, ಪ್ಲುಟೋನಿಯಂ ಅಂಶವು ಮಾನವ ಕೋಟಿಗೆ ಅಪಾಯಕಾರಿಯೆಂದೂ ಅವರು ಹೇಳಿರುವರು

ಕಾಶ್ಮೀರದಲ್ಲಿ ಪಕ್ಷಗಳ ಬಲಾಬಲ

ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪಕ್ಷಗಳ ಬಲಾಬಲವು ಈ ರೀತಿ ಇದೆ:— ರಾಷ್ಟ್ರೀಯ ಸಮ್ಮೇಳನ ೬೧, ಪ್ರಜಾಪರಿಷತ್ತು ೫, ಹರಿಜನ ಮಂಡಲ ೧ ಮತ್ತು ಸ್ವತಂತ್ರರು ೧. ಪ್ರಕಟವಾಗಬೇಕಾದ ೭ ಸ್ಥಾನಗಳು ಇನ್ನೂ ಇವೆ.

ರೈಲ್ವೆ ಕೆಲಸಗಾರರ ಸಮ್ಮೇಳನ

ಮೈಸೂರು-ಅರಸೀಕೆರೆ ವಿಭಾಗದ ರೈಲು ಕೆಲಸಗಾರರ ಸಮ್ಮೇಳನವು ಮೊನ್ನೆ ಮಂದಗೆರೆಯಲ್ಲಿ ಶ್ರೀ ಹೆಚ್. ಬಿ. ರಾಘವರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ೩೫೦ಕ್ಕಿಂತಲೂ ಹೆಚ್ಚು ಮಂದಿ ಭಾಗವಹಿಸಿದ್ದರು. ನಾಲ್ಕನೇ ವರ್ಗದವರಿಗೆ ೪೦-೯೦ ಮತ್ತು ೩ನೇ ವರ್ಗದವರಿಗೆ ೬೦-೩೭೫ ಪ್ರಮಾಣದ ಸಂಬಳ ಕೊಡುವಂತೆ ಸೂಚಿಸಲಾದ ಬ್ಯಾಂಕು ಅವಾರ್ಡನ್ನು ಜಾರಿಗೆ ಕೊಡಬೇಕೆಂದೂ, ಜೀವನದ ವೆಚ್ಚವು ಹೆಚ್ಚುತ್ತಿರುವುದಕ್ಕೆ ತಕ್ಕಂತೆ ತುಟ್ಟಿಭತ್ಯವನ್ನು ಹೆಚ್ಚಿಸಬೇಕೆಂದೂ ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು. ಸಮ್ಮೇಳನದಲ್ಲಿ ಶ್ರೀಗಳಾದ ಎ. ಆರ್. ನಾಗರಾಜ್, ಆರ್. ಎ. ಪಾರ್ಥಸಾರಥಿ, ಎಂ. ಸಂಜೀವಯ್ಯ ಮತ್ತು ಕೆ. ಎ. ಎಸ್. ಮೂರ್ತಿಯವರು ಭಾಷಣ ಮಾಡಿದರು

ರಾಮ ಪಟ್ಟಾಭಿಷೇಕ ಮತ್ತು ಅನ್ನದಾನ

ಮೈಸೂರು ಸೌತ್ ರೈಲ್ವೆ ವರ್ಕ್‌ಷಾಪ್ ಕಾಲೊನಿಯ ಶ್ರೀರಾಮ ದೇವಸ್ಥಾನದಲ್ಲಿ ಕಳೆದ ೧೮ ರಂದು ವರ್ಕ್ಸ್ ಮ್ಯಾನೇಜರ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ನೇತೃತ್ವದಲ್ಲಿ ಪಟ್ಟಾಭಿಷೇಕವನ್ನೂ, ಅದೇ ಸಂಜೆ ರಾಜಧಾನಿಯ ಮುಖ್ಯಮಾರ್ಗಗಳಲ್ಲಿ ಉತ್ಸವವನ್ನೂ ವಿಜೃಂಭಣೆಯಿಂದ ನೆರವೇರಿಸಲಾಯಿತು. ಮಾರನೇ ದಿನ ದೇವಸ್ಥಾನದಲ್ಲಿ ಮಂಡ್ಯದ ಶ್ರೀ ಕಾಳೇಗೌಡರು ಮತ್ತು ಅವರ ಕುಟುಂಬ ಶ್ರೀಮತಿ ಕೆಂಪಮ್ಮನವರು ಬಡಬಗ್ಗರಿಗೆ ಅನ್ನದಾನವನ್ನೇರ್ಪಡಿಸಿದ್ದರು

ಮಾಧ್ವ ಮಂಡಲದ ನಗರ ಶಾಖಾ ಸಭೆ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ನಗರ ಶಾಖಾ ಸಭೆಯು ನಾಳೆ ಮಧ್ಯಾಹ್ನ ೪ ಗಂಟೆಗೆ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ವ್ಯಾಸರಾಜಸ್ವಾಮಿಗಳವರ ವಿದ್ಯಾಪ್ರಸನ್ನ ಮಂದಿರದಲ್ಲಿ ನಡೆಯುವುದು. ಮಹಾ ಮಂಡಲದ ಘಟಕ, ಕಳೆದ ವರ್ಷದ ವರದಿ ಅಂಗೀಕಾರ, ಕಾರ್ಯನಿರ್ವಾಹಕ ಮಂಡಲಿಯ ಚುನಾವಣೆ ಮುಂತಾದ ಕಾರ್ಯಕ್ರಮಗಳು ಇವೆ

ಮೂವರು ಉಪಮಂತ್ರಿಗಳಿಂದ ಪ್ರಮಾಣ ವಚನ

ಬೆಂಗಳೂರು ೨೨.

ಶ್ರೀಮತಿ ಗ್ರೇಸ್ ಟಕ್ಕರ್, ಶ್ರೀ ರಾಮಕೃಷ್ಣ ಹೆಗ್ಡೆ ಮತ್ತು ಶ್ರೀ ವೀರೇಂದ್ರ ಪಾಟೀಲ್‌ರವರು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಸಮ್ಮುಖದಲ್ಲಿ ನೆನ್ನೆ ಪ್ರಮಾಣ ವಚನವನ್ನು ಸ್ವೀಕರಿಸಿ ಅಧಿಕಾರ ವಹಿಸಿಕೊಂಡರು. ಎಲ್ಲಾ ಮಂತ್ರಿಗಳೂ, ಶ್ರೇಷ್ಠ ಕಾರ್ಯದರ್ಶಿ ಮತ್ತು ಇತರ ಕಾರ್ಯದರ್ಶಿಗಳೂ ಸಮಾರಂಭದಲ್ಲಿ ಭಾಗವಹಿಸಿದ್ದರು.

ಶ್ರೀಮತಿ ಗ್ರೇಸ್ ಟಕ್ಕರ್‌ರವರು ವಿದ್ಯಾಭ್ಯಾಸ, ಶ್ರೀ ಹೆಗ್ಡೆಯವರು ಯೋಜನೆ ಮತ್ತು ಅಭಿವೃದ್ಧಿ ಮತ್ತು ಶ್ರೀ ವೀರೇಂದ್ರ ಪಾಟೀಲರು ಗೃಹ ಇಲಾಖೆಗಳಲ್ಲಿ ಆಯಾ ಮಂತ್ರಿಗಳ ಕೆಳಗೆ ಕೆಲಸ ಮಾಡುವರು

ಗುಲ್ಬರ್ಗದಲ್ಲಿ ಡಕಾಯಿತರ ಬಂಧನ

ಗುಲ್ಬರ್ಗ, [illegible] ಮತ್ತು [illegible]ಗಳಲ್ಲಿ ಮಹಮದ್ ಪಟೇಲ್, ಹುಸೇನ್ ಪಟೇಲ್, ಮಹಬೂಬ್ ಪಟೇಲ್, ರುಕ್ನುದ್ದೀನ್ ಮತ್ತು ಮಹಮದ್ ಇಸ್ಮಾಯಿಲ್ ಎಂಬ ಐದು ಮಂದಿ ಡಕಾಯಿತರನ್ನು ಪೊಲೀಸರು ಬಂಧಿಸಿರುತ್ತಾರೆ. ಅವರುಗಳು ಹಿಂದೆ ಅನೇಕ ಕೊಲೆ ಮತ್ತು ಕಳ್ಳತನಗಳನ್ನು ಮಾಡಿ ಭಾರಿ ಸಜಾಕ್ಕೆ ಗುರಿಯಾಗಿರುವ ಲಾಲ್ಮಿಪಟೇಲ್ ಎಂಬ ಡಕಾಯಿತನ ಅನುಚರರೆಂದು ಹೇಳಲಾಗಿದೆ. ಅವರಿಂದ ಎರಡು ಸೀರೆ, ಎರಡು ಕೊಲು ಚಿನ್ನ ಮತ್ತು ಸ್ವಲ್ಪ ಮದ್ದುಗುಂಡನ್ನು ವಶಪಡಿಸಿಕೊಳ್ಳಲಾಗಿದೆ. ಈ ತಂಡದ ಇನ್ನೂ ಹಲವರು ಪತ್ತೆಯಿಲ್ಲವಾಗಿದ್ದಾರೆ. ಅವರ ಬಂಧನದಿಂದ ಆ ಪ್ರದೇಶದ ಜನರು ಸ್ವಸ್ಥಚಿತ್ತರಾಗಿರುವರೆಂದು ಹೇಳಲಾಗಿದೆ.

ಚಂದಗಾಲು ಗ್ರಾಮದಲ್ಲಿ ರಾಮೋತ್ಸವ

ಕೃಷ್ಣರಾಜನಗರದ ತಾಲ್ಲೂಕು ಚಂದಗಾಲು ಗ್ರಾಮದ ಶ್ರೀ ಕಾಳೇಗೌಡರ ಶ್ರೀ ರಾಮ ಮಂದಿರದಲ್ಲಿ ಕಳೆದ ೮ರಿಂದ ೧೭ನೇ ತಾರೀಖು ಪ್ರಕಾರ ಶ್ರೀ ರಾಮೋತ್ಸವದ ಅಂಗವಾಗಿ ರಾಮಾಯಣ ವಾಚನ, ಭಜನೆಗಳು ಆಗಿ, ಶ್ರೀ ರಾಮ ಪಟ್ಟಾಭಿಷೇಕವು ವಿಜೃಂಭಣೆಯಿಂದ ನಡೆಯಿತು. ಆ ಸಂದರ್ಭದಲ್ಲಿ ವಾಚನ ಮಾಡಿದ ವಿದ್ವಾನ್ ಶ್ರೀ ಸಿ. ಕೆ. ಪುಟ್ಟಣ್ಣಯ್ಯನವರಿಗೆ ಒಂದು ವಾಲ್ಮೀಕಿ ರಾಮಾಯಣ ಪುಸ್ತಕ ಮತ್ತು ಒಂದು ಧೋತ್ರಗಳನ್ನೂ, ವ್ಯಾಖ್ಯಾನ ಮಾಡಿದ ವಿದ್ವಾನ್ ಶ್ರೀ ಸಿ. ಎ. ರಾಮೇಗೌಡರಿಗೆ ಒಂದು ಧೋತ್ರವನ್ನೂ ಬಹುಮಾನವಾಗಿ ಕೊಟ್ಟು ಸನ್ಮಾನ ಮಾಡಲಾಯಿತು. ಇದಲ್ಲದೆ ಬಡಬಗ್ಗರಿಗೆ ವಸ್ತ್ರದಾನ ಮತ್ತು ಮಹಾ ಸಂತರ್ಪಣೆಯೂ ಆಯಿತು. ರಾತ್ರಿ ಉತ್ಸವವು ನಡೆದ ಮೇಲೆ 'ಸುಭದ್ರಾ ವಿಲಾಸ'ವೆಂಬ ನಾಟಕವನ್ನು ಶ್ರೀಮತಿ ಮುನಿಯಮ್ಮ ಹನುಮಂತರಾವ್ ಪಾರ್ಟಿಯವರು ಅಭಿನಯಿಸಿದರು.

ನಾಗರತ್ನಮ್ಮ ಸುಬ್ಬಣ್ಣನವರಿಗೆ ಸತ್ಕಾರ

ವಿಧಾನ ಸಭೆಗೆ ಗುಂಡ್ಲುಪೇಟೆ ಕ್ಷೇತ್ರದಿಂದ ಆರಿಸಿಬಂದಿರುವ ಶ್ರೀಮತಿ ನಾಗರತ್ನಮ್ಮ ಸುಬ್ಬಣ್ಣನವರ ಗೌರವಾರ್ಥವಾಗಿ ಕಳೆದ ಶುಕ್ರವಾರ [illegible] ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಸಮಾರಂಭವೊಂದನ್ನು ಏರ್ಪಡಿಸಿದ್ದರು. ಗುಂಡ್ಲುಪೇಟೆಯ ಶ್ರೀ ಮುದ್ದುಮಾದಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿಯವರನ್ನು ಪ್ರಶಂಸಿಸಿ ಭಾಷಣಗಳಾದುವು. ವಿದ್ಯಾರ್ಥಿ ಶ್ರೀ ಮಹೇಶರವರಿಂದ ವಂದನಾರ್ಪಣೆಯಾದಮೇಲೆ ಸಮಾರಂಭವು ಮುಗಿಯಿತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ. ೭-೧೫ ಮತ್ತು ೮-೧೫ ಪಿ. ಕೆ. ಲಕ್ಷ್ಮಮ್ಮ-ದೇವರನಾಮ. ೭-೩೦ ಹಿಂದಿ ಪಾಠ. ಮಧ್ಯಾಹ್ನ ೧೨ ಎಂ. ಎ. ಕೃಷ್ಣಪ್ಪ-ಪಿಟೀಲು ೧೨-೩೦ ಪಿ. ಕೆ. ಲಕ್ಷ್ಮಮ್ಮ ಸಂಗೀತ. ೧ ರೆಕಾರ್ಡು ೧ ೫೦ ವೀಣೆ ೨-೧೫ ಸಂಗೀತ ಸಂಜೆ ೫-೩೦ ಮತ್ತು ೮ ಎ. ನಾರದಮುನಿ ನಾಗಸ್ವರ. ೬-೫ ರೆಕಾರ್ಡು ೭-೩೦ ಹಾಡು ಮತ್ತು [illegible]. ೮-೩೦ ರಾಷ್ಟ್ರೀಯ ಕಾರ್ಯಕ್ರಮ-ಭಾಷಣ. ೯ ೫೦ [illegible]-ಸಂಗೀತ ೯-೧೫ ಬಿ. ಎಸ್. ರಾಮಚಂದ್ರ-ಗಾಯನ

ಅಣ್ಣಾರಾವ್ ಗಣಮುಖಿಯವರಲ್ಲಿ ಅವಿಶ್ವಾಸದ ಪ್ರಕರಣ

ಕೇವಲ ಅಪಪ್ರಚಾರವೆಂದು ಅವರ ಹೇಳಿಕೆ

ಬೆಂಗಳೂರು ೨

ಹೈದರಾಬಾದು ಪ್ರಾದೇಶಿಕ ಕಾಂಗ್ರೆಸ್ ಪಕ್ಷದ ಶ್ರೀ ಅಣ್ಣಾರಾವ್ ಗಣಮುಖಿಯವರಲ್ಲಿ ಪ್ರದೇಶ ಕಾಂಗ್ರೆಸ್ಸಿನ ೧೪ ಮಂದಿ ಸದಸ್ಯರು ಅವಿಶ್ವಾಸ ಸೂಚಿಸಿದ್ದರೆಂದು ಪ್ರಕಟವಾಗಿದ್ದು ಈ ಬಗ್ಗೆ ಶ್ರೀ ಗಣಮುಖಿಯವರು ಹೇಳಿಕೆ[illegible]ತ್ತ ಮಂತ್ರಿಮಂಡಲದ ರಚನೆಯ ಹಿಂದೆ [illegible]ತ ತಮ್ಮ ಬಗ್ಗೆ ವೈಯಕ್ತಿಕ ಅಪಪ್ರಚಾರ [illegible]ಯುವ ದೃಷ್ಟಿಯಿಂದಲೇ ತಮ್ಮ ಮೇಲೆ [illegible]ನೆಗಳನ್ನು ಹೊರಿಸಲಾಯಿತೆಂದೂ, [illegible]ವಿರುವುದೆಂದು ಸೂಚಿಸಲಾದ ಪತ್ರವು [illegible]ಮಗೆ ತಲುಪಿಯೇ ಇಲ್ಲವೆಂದೂ, ಈ ಬಗ್ಗೆ [illegible]ಕಾ ವರದಿಯನ್ನು ಮಾತ್ರ ನಾವು ನೋಡಿ[illegible]ದಾಗಿಯೂ ತಿಳಿಸಿರುತ್ತಾರೆ. ಪ್ರಾದೇಶಿಕ [illegible]ಗ್ರೆಸ್ ಅಧ್ಯಕ್ಷರಿಗೆ ಕೆಟ್ಟ ಹೆಸರು ತರುವ [illegible]ಶ್ಯದಿಂದ ಆ ದ ಪತ್ರ ಮಾಡಲಾಗಿರುವುದೆಂದು [illegible] ಚುನಾವಣೆಯಲ್ಲಿ ಪಕ್ಷದ ಉಮೇದುವಾರಿ[illegible]ರಿಯುದಿದ್ದವರೇ ಈ ಪ್ರಯತ್ನಕ್ಕೆ ಮುಖ್ಯ [illegible]ರೆಂದೂ ಅವರು ಸೂಚಿಸಿರುವರು. ತಮ್ಮ[illegible] ಅವಿಶ್ವಾಸವಿದ್ದದ್ದರೆ ತಮಗಾಗಲೀ ಅಥವಾ [illegible]ಗಾಗಲೀ ನೇರವಾಗಿ ಪತ್ರ ಬರೆ[illegible]ಬಹುದಾಗಿತ್ತೆಂದು ಅವರು ವ್ಯಕ್ತಪಡಿಸಿರು[illegible] ಪ್ರಾದೇಶಿಕ ಸಮಿತಿಯಲ್ಲಿ ಒಟ್ಟು ೨೬ ಸದ[illegible]ರುವರು.

ಅಣು ಬಾಂಬಿಗೆ ಸಿದ್ಧಮಂತ್ರ ಕಂಡುಹಿಡಿದವನ ಬಂಧನ

ಅಣು ಬಾಂಬು, ಜಲಜನಕ ಬಾಂಬು, ಕ್ರಿ[illegible] ಬಾಂಬು ಮುಂತಾದ ಎಲ್ಲಾ ವಿಧದ ಮಾರಕ[illegible]ಗಳೂ ಮನುಷ್ಯನಿಗೆ ತೊಂದರೆಯುಂಟು[illegible]ದಂತೆ ಮಾಡುವ "ಮಂತ್ರ"ವನ್ನು ಕಂಡು[illegible]ವನೊಬ್ಬನನ್ನು ವಿಯಟ್ನಾಂ ಪೋಲೀಸರು ಬ[illegible]ರುತ್ತಾರೆ. ಆತನು ಒಬ್ಬ ಚಿತ್ರ ಬರಹಗಾ[illegible] ಮಾರಕಾಸ್ತ್ರಗಳಿಗೆ ಸಿದ್ಧಮಂತ್ರವಿರುವ ಪತ್ರಿಕೆಗಳನ್ನು ಅವನು ಸಹಸ್ರಾರುಗಟ್ಟಲೆ [illegible]ರಾಟ ಮಾಡಿದನೆಂದೂ, ಅವನ್ನು ಪಡೆಯು[illegible]ಹುರಳಾದ ಒಬ್ಬ ಹೆಂಗಸು ಪೋಲೀಸರಿ[illegible] ಬಗ್ಗೆ ಪ್ರಶ್ನೆ ಮಾಡಲಾಗಿ ಆಗಿ ಅವನ ಬ[illegible]ವಾಯಿತೆಂದೂ ಹೇಳಲಾಗಿದೆ

ರಾಮ ಪಟ್ಟಾಭಿಷೇಕ

ಕಾಶೀಪತಿ ಅಗ್ರಹಾರದ ಶ್ರೀ ವಿದ್ಯಾ[illegible] ರಾಮ ಸೇವಾ ಮಂಡಲಿಯ ಆಶ್ರಯದಲ್ಲಿ [illegible] ರಾತ್ರಿ ೭|| ಗಂಟೆಗೆ ರಾಮಪಟ್ಟಾಭಿಷೇಕ[illegible]ಹೋತ್ಸವವು ನಡೆಯುವುದು. ವಿದ್ಯಾ[illegible] ಮಂದಿರದ ಮಾಜಿ ಕಾರ್ಯದರ್ಶಿ ಶ್ರೀ ಸಿ.[illegible]ಮಂತಯ್ಯನವರು ಅಧ್ಯಕ್ಷತೆ ವಹಿಸುವರು [illegible] ಎ. ಎಸ್. ನಾರಾಯಣಸ್ವಾಮಿಯವರ[illegible]ಣ, ಶ್ರೀ ರಾಮರಾಜೇಶ್ವರಿ ಆರ್ಕೆಸ್ಟ್ರಾ[illegible]ದ್ಯ ಗೋಷ್ಠಿಗಳಿವೆ

SRI [illegible]
CO-OPERATIVE SOCIETY [illegible]
MYSORE
TENDER NOTIFICATION

SEALED TENDERS will [illegible] received upto 6 p. m. on [illegible] April 1957, from licensed San[illegible] and Water Supply Contractors [illegible] providing Sanitary Fittings [illegible] Water Supply to the Society's [illegible] Premises at New Statue Ci[illegible] Mysore.

For copies of the plan, the [illegible]fications and conditions, [illegible] contact the Secretary during office hours.

P [illegible]
President

Edited, Printed and Publish[illegible]
A. R. Nagaraja at Sadhvi P[illegible]
D. Subbiah Road, Mysore

ಟೆಲಿಫೋನ್ ನಂ. 792

ಚಂದಾ ದರ
ವಿಶೇಷಾಂಕಗಳ ಹೊರತು
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ 2 ನಯಾ ಪೈಸೆ

ಬಿಡಿ ಪ್ರತಿಗೆ 2 ನಯಾ ಪೈಸೆ
ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಖಂಡಿತ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : [illegible]] SADHVI : WEDNESDAY 24—4—1957 ಮೈಸೂರು : ಬುಧವಾರ ೨೪—೪—೧೯೫೭ : [ಸಂಚಿಕೆ : [illegible]

ಪಾಕಿಸ್ತಾನದ ಮುಸ್ಲಿಂ ಲೀಗಿನವರಿಂದ ಕಾನೂನುಭಂಗ

ಪಾಕಿಸ್ತಾನ ಮುಸ್ಲಿಂ ಲೀಗಿನಿಂದ ಕಾನೂನು ಭಂಗ ಚಳುವಳಿ ?

ಪಶ್ಚಿಮ ಪಾಕಿಸ್ತಾನದಲ್ಲಿ ಜಂಟಿ ಚುನಾವಣೆ ಪದ್ಧತಿಯನ್ನು ಜಾರಿಗೆ ತರುತ್ತಿರುವುದನ್ನು ಪ್ರತಿಭಟಿಸಿ ಮುಸ್ಲಿಂ ಲೀಗಿನವರು ದೇಶಾದ್ಯಂತ ಕಾನೂನು ಭಂಗ ಚಳುವಳಿಯನ್ನು ನಡೆಸಲು ಸಿದ್ಧರಾಗುತ್ತಿರುವುದಾಗಿ ಗೊತ್ತಾಗಿದೆ. ಇದಕ್ಕಾಗಿ ಈಗಾಗಲೇ ೩,೦೦೦ ಸ್ವಯಂಸೇವಕರು ಸೇರಿರುವರೆಂದೂ, ಈ ಸಂಖ್ಯೆಯು ೫೦ ಸಾವಿರವಾಗುತ್ತಲೇ ಚಳುವಳಿಯನ್ನಾರಂಭಿಸಲಾಗುವುದೆಂದೂ ಹೇಳಲಾಗಿದೆ.

ಸಿಂಹಳದಲ್ಲಿ ಬ್ರಿಟಿಷರ ನೆಲೆಗಳ ಬಗ್ಗೆ ಒಪ್ಪಂದ

ಸಿಂಹಳದ ಟ್ರಿಂಕಾಮಲಿ ಮತ್ತು ಕಟುನಾಯಕೆ ಈ ಎರಡು ನೌಕಾ ಮತ್ತು ವಿಮಾನ ನೆಲೆಗಳಲ್ಲಿ ಎಣ್ಣೆ ಮತ್ತು ಮದ್ದುಗುಂಡುಗಳ ಶೇಖರಣೆ ಮಾಡಿಕೊಳ್ಳಲೂ, ಅವುಗಳನ್ನು ಮಾರ್ಗ [illegible]ಕಾಲಕ್ಕೆ ಉಪಯೋಗಿಸಿಕೊಳ್ಳಲೂ ಬ್ರಿಟನ್ನಿಗೆ [illegible]ರಿಂದ ೫ ವರ್ಷ ಕಾಲ ಅವಕಾಶವೀಯುವ ಬಗ್ಗೆ ಸಿಂಹಳ ಮತ್ತು ಬ್ರಿಟನ್ನುಗಳಿಗೆ ಒಪ್ಪಂದವಾಗಿರುತ್ತದೆ. ಈ ಅವಧಿಯಲ್ಲಿ ಸಿಂಹಳ ಸರ್ಕಾರದವರು ಕೊಡುವ ಸೂಚನೆಗಳನ್ನು ಪಾಲಿಸಲು ಬ್ರಿಟನ್ನು ಒಪ್ಪಿರುತ್ತದೆ. ಸಿಂಹಳವು ಕಾಮನ್ವೆಲ್ತ್ ಸದಸ್ಯವಾಗಿ ಉಳಿಯುವುದಕ್ಕೆ ಅಪ್ರೋತ್ಸಾಹ ಬರುವ [illegible]ದಲ್ಲಿ ಬ್ರಿಟನ್ನು ವರ್ತಿಸಿದರೆ ಸಿಂಹಳವು ಮುಂದೇನು ಕ್ರಮ ಜರುಗಿಸುವುದೆಂಬ ಬಗ್ಗೆ ಈಗಲೇ ನಿರ್ದಿಷ್ಟವಾದ ನೀತಿಯನ್ನು ಹೇಳಲು ತಾವು ಸಿದ್ಧವಾಗಿಲ್ಲವೆಂದು ಸಿಂಹಳದ ಪ್ರಧಾನಿಯವರು ಬ್ರಿಟನಿಗೆ ತಿಳುವಳಿಕೆ ಕೊಟ್ಟಿರುತ್ತಾರೆ.

ಕೋರ್ಟು ಅವಹೇಳನಕ್ಕಾಗಿ ರಾಮಸ್ವಾಮಿನಾಯಕರಿಗೆ ದಂಡ

ದ್ರಾವಿಡ ಸಂಘದ ಮುಖಂಡರಾದ ಇ. ವಿ. ರಾಮಸ್ವಾಮಿ ನಾಯಕರ್ ಮತ್ತು ಅವರ ಪತ್ನಿ, ವಿಡುದಲೈ ಪತ್ರಿಕೆಯ ಸಂಪಾದಕಿ ಶ್ರೀಮತಿ ಮಣಿಯಮ್ಮಾಳ್‌ರವರು ಕೋರ್ಟು ಅವಹೇಳನ ಮಾಡಿದರೆಂಬ ಕಾರಣಕ್ಕಾಗಿ ಮದ್ರಾಸು ಹೈಕೋರ್ಟಿನವರು ನೆನ್ನೆ ನಾಯಕರ್‌ರವರಿಗೆ ೧೦೦ ರೂ. ದಂಡವನ್ನು ವಿಧಿಸಿ ಅವರ ಪತ್ನಿಗೆ ಎಚ್ಚರಿಕೆ ಕೊಟ್ಟು ಕಳುಹಿಸಿದರು. ಕಳೆದ ಅಕ್ಟೋಬರಿನಲ್ಲಿ ನಾಯಕರ್‌ರವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದುದನ್ನು ವರದಿ ಮಾಡಿದುದಲ್ಲದೆ ಅದರ ಮೇಲೆ ವಿಡುದಲೈ ಪತ್ರಿಕೆಯಲ್ಲಿ ಅಗ್ರಲೇಖನ ಬರೆದುದು ಕೋರ್ಟು ಅವಹೇಳನವೆಂದು ಹೈಕೋರ್ಟಿನವರು ಭಾವಿಸಿರುವರು. ನಾಯಕರ್‌ರವರು ೩೦ ಪುಟಗಳ ಹೇಳಿಕೆಯನ್ನಿತ್ತು, ಬ್ರಾಹ್ಮಣ-ಬ್ರಾಹ್ಮಣೇತರ ಮತ್ತು ಆರ್ಯ ಮತ್ತು ದ್ರಾವಿಡರ ಸಂಬಂಧವನ್ನು ಪ್ರಸ್ತಾಪಿಸಿ, ನ್ಯಾಯಾಧೀಶರುಗಳನ್ನು ವೈಯಕ್ತಿಕವಾಗಿ ತಾವು ದೂಷಿಸಲಿಲ್ಲವೆಂದು ತಿಳಿಸಿದ್ದರು. ಶ್ರೇಷ್ಠ ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ನಾಯಕರ್‌ರವರು [illegible] ವರ್ಣದ ನ್ಯಾಯಾಧೀಶರಿಂದ ಇತರರಿಗೆ ನ್ಯಾಯ ಸಿಕ್ಕುವುದಿಲ್ಲವೆಂದು ಹೇಳಿರುವುದನ್ನು ಕೋರ್ಟು ನಿಂದನೆಯೆಂದು ತಿಳಿಸಿ

ಡಾ|| ಸರ್ವಪಲ್ಲಿ ರಾಧಾಕೃಷ್ಣನ್

ಪುನಃ ಅವಿರೋಧವಾಗಿ ಉಪ ರಾಷ್ಟ್ರಪತಿಗೆ
ಆರಿಸಲ್ಪಟ್ಟಿರುವರು

ಉಪಾಧ್ಯಕ್ಷರಾಗಿ ರಾಧಾಕೃಷ್ಣನ್ನರ ಚುನಾವಣೆ

ಭಾರತದ ಉಪಾಧ್ಯಕ್ಷರಾಗಿ ಡಾ|| ರಾಧಾಕೃಷ್ಣನ್‌ರವರು ಮತ್ತೆ ಅವಿರೋಧವಾಗಿ ಚುನಾಯಿತರಾಗಿರುವರು. ಈ ಬಗ್ಗೆ ಚುನಾವಣಾಧಿಕಾರಿಗಳಾದ ಎಂ. ಎನ್. ಕೌಲ್‌ರವರು ಪ್ರಕಟಣೆಯೊಂದನ್ನು ಹೊರಡಿಸಿರುವರು.

೧೩ ವರ್ಷದ ಬಾಲಕಿಯ ದೀರ್ಘ ತಪಸ್ಸು

ನಿಂತುಕೊಂಡು ಮೌನದಿಂದ ೪೦ ದಿನಗಳ ಕಾಲ ಧ್ಯಾನ

ದೆಹಲಿ ಬಳಿ [illegible] ಎಂಬ ಗ್ರಾಮದಲ್ಲಿ ಭಗವತಿ ಎಂಬ ೧೩ ವರ್ಷದ ಬಾಲಕಿಯೊಬ್ಬಳು ಕಳೆದ ತಿಂಗಳು ೨೭ರಿಂದ ನಿಂತುಕೊಂಡು ೪೦ ದಿನಗಳ ತಪಸ್ಸನ್ನು ಮಾಡುತ್ತಿರುವಳೆಂದು ವರದಿಯಾಗಿದೆ. ಆಕೆಯು ಒಂದು ತೊಟ್ಟಿಲ ಪಕ್ಕದಲ್ಲಿ ನಿಂತಿರುತ್ತಾಳೆ. ಆಕೆ ಆಯಾಸವಾದರೆ ತೊಟ್ಟಿಲಿಗೆ ಒರಗಿರುವಳೇ ಹೊರತು ದೇಹಕ್ಕೆ ವಿಶ್ರಾಂತಿ ಕೊಡುವುದಿಲ್ಲ. ಈ ತಪಸ್ಸು ಬರುವ ೬ನೇ ತಾರೀಖು ಮುಕ್ತಾಯವಾಗುತ್ತದೆ. ಅಲ್ಲದೆ ಆಕೆಯು ಮೌನವ್ರತಧಾರಣೆ ಮಾಡಿರುವಳೆಂದೂ, ಕಳೆದ ಐದು ತಿಂಗಳಿಂದಲೂ ಸಾಮಾನ್ಯ ಆಹಾರವನ್ನು ಸೇವಿಸದೆ ಕೇವಲ ಹಾಲು, ಕಬ್ಬಿನ ರಸ ಮತ್ತು ಕಿತ್ತಳೆ ಹಣ್ಣನ್ನು ಸೇವಿಸುತ್ತಿರುವಳೆಂದೂ ಹೇಳಲಾಗಿದೆ. ಆಕೆಯು ಎರಡು ತಿಂಗಳ ಹಿಂದೆ ೪೦ ದಿನ ಕುಳಿತು ತಪಸ್ಸು ಮಾಡಿದಳೆಂದೂ ಹೇಳಲಾಗಿದೆ. ಆಕೆಯು ರಾಮನಾಮವನ್ನು ಜಪಿಸುತ್ತಾಳೆ. ೬ ವರ್ಷವಾಗಿದ್ದಾಗ ಅವಳು ತಾಯಿಯೊಡನೆ ಹರಿದ್ವಾರಕ್ಕೆ ಹೋಗಿದ್ದಳೆಂದೂ, ಆ ಪ್ರದೇಶವು ಆಕೆಯ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತೆಂದೂ ಹೇಳಲಾಗಿದೆ. ಹಿಂದೆ ತಾಯಿಯೊಡನೆ ೯ ದಿನಗಳ ಕಾಲ ಉಪವಾಸ ಮಾಡಿದ್ದಳು. ಹಳ್ಳಿಯವರು ಅಭಿಪ್ರಾಯಪಟ್ಟಿದ್ದ [illegible] ಆಕೆಯ ಮೇಲೆ ಪ್ರಭಾವ [illegible] ಹೇಳಲ್ ? [illegible] ಆಕೆಯು [illegible]

ಸಂಸ್ಥಾನದಲ್ಲಿ ಬಸ್ ಸಂಚಾರದ ದರದ ನಿಗದಿ

ಮೈಸೂರು ಸರ್ಕಾರದ ನಿರ್ಧಾರ

ಸ್ವಂ ವ ಫೋ] ಬೆಂಗಳೂರು ೨೪

ಮೈಸೂರು ಸರ್ಕಾರದವರು ಸಂಸ್ಥಾನದ ಎಲ್ಲಾ ಬಸ್ಸು ಮಾರ್ಗಗಳಿಗೂ ಪ್ರಯಾಣದ ದರವನ್ನು ಹೊಸದಾಗಿ ಗೊತ್ತುಪಡಿಸಿದ್ದಾರೆ. ಅದರ ಪ್ರಕಾರ ಸಾಮಾನ್ಯವಾದ ಮತ್ತು [illegible]ಸಾದ ರಸ್ತೆಗಳಲ್ಲಿ ಮೈಲಿಗೆ ೫ ನಯಾ ಪೈಸೆ, ಘಾಟಿ ಮುಂತಾದ ಕಠಿಣ ತರದ ರಸ್ತೆಗಳಲ್ಲಿ ಮೈಲಿಗೆ ಆರು ನಯಾ ಪೈಸೆಗಳಾಗುವುವು.

ಮೈಸೂರು ಬೆಂಗಳೂರು, ಹುಬ್ಬಳ್ಳಿ ಮುಂತಾದ ೧ ಲಕ್ಷಕ್ಕೆ ಮೀರಿ ಪ್ರಜೆಗಳಿರುವ ಊರುಗಳಲ್ಲಿ ಸಿಟಿ ಬಸ್ಸುಗಳಿಗೆ ಮೊದಲನೇ ಮೈಲಿಗೆ ಆರು ನಯಾ ಪೈಸೆ, ಎರಡನೇ ಮೈಲಿಗೆ ೪ ಮತ್ತು ಮೂರನೇ ಮೈಲಿಗೆ ೩ ನಯಾ ಪೈಸೆಗಳನ್ನು ಗೊತ್ತುಮಾಡಲಾಗಿದೆ.

ಅಲ್ಲಾಮಾ ಮಶ್ರಿಕಿ ಮತ್ತು ೪೭ ಅನುಯಾಯಿಗಳ ಬಂಧನ

ಭಾರತದ ಮೇಲೆ ನುಗ್ಗುವುದಾಗಿ ಹೇಳುತ್ತಿದ್ದವರು

ಪಾಕಿಸ್ತಾನದ ಖಾಕ್ಸಾರ್ ಸಂಘದ ಮಾಜಿ ನಾಯಕ ಅಲ್ಲಾಮಾ ಮಶ್ರಿಕಿ ಮತ್ತು ಅವರ ೪೭ ಮಂದಿ ಹಿಂಬಾಲಕರನ್ನು ಪೋಲೀಸರು ಮೊನ್ನೆ ಭಾರತ-ಪಾಕಿಸ್ತಾನದ ಗಡಿ ಬಳಿ ವಾಗಾ ಎಂಬಲ್ಲಿ ಬಂಧಿಸಿದರು. ಆ ಸ್ಥಳದಲ್ಲಿ ಮಶ್ರಿಕಿಯವರು ಶಿಬಿರವೊಂದನ್ನು ಏರ್ಪಡಿಸಿದ್ದರು. ಕಾಶ್ಮೀರದ ವಿಮೋಚನೆಗಾಗಿ ಭಾರತದ ಮೇಲೆ ದಂಡಯಾತ್ರೆ ನಡೆಸುವುದೇ ತಮ್ಮ ಉದ್ದೇಶವೆಂದು ಮಶ್ರಿಕಿಯವರು ಈಗಾಗಲೇ ತಿಳಿಸಿದ್ದಾರೆ. ಬಂಧಿತರಾದವರ ಬಳಿ ರಿವಾಲ್ವರುಗಳು, ಕತ್ತಿಗಳೇ ಮುಂತಾದುವು ದೊರೆತುವೆಂದೂ, ಒಬ್ಬ ಸಬ್ ಇನ್ಸ್‌ಪೆಕ್ಟರನ್ನು ಅವರು ತಮ್ಮ ಶಿಬಿರದಲ್ಲಿ ಅಕ್ರಮವಾಗಿ ಬಂಧಿಸಲ್ಪಟ್ಟಿದ್ದುದಲ್ಲದೆ ಪೋಲೀಸರಿಂದ ಬಲಾತ್ಕಾರದ ಹೇಳಿಕೆಯನ್ನೂ ಮಶ್ರಿಕಿಯವರು ತೆಗೆದುಕೊಂಡಿದ್ದರೆಂದೂ ಗೊತ್ತಾಗಿದೆ.

ಸುಳ್ಳು ಸಾಕ್ಷ್ಯ ನುಡಿದ ಮಾಜಿ ಲೋಕ ಸಭಾಸದಸ್ಯನಿಗೆ ಸಜಾ

ಲೋಕ ಸಭಾ ಸದಸ್ಯತ್ವ ಪಡೆಯುವ ಸಲುವಾಗಿ ತಾವು ಹರಿಜನ ಕೋಮಿಗೆ ಸೇರಿದವರೆಂದು ಸುಳ್ಳು ಹೇಳಿಕೆಯನ್ನಿತ್ತಿದ್ದರೆಂಬ ಕಾರಣಕ್ಕಾಗಿ ಮಾಜಿ ಲೋಕ ಸಭಾ ಸದಸ್ಯ ವೀರೇಂದ್ರಕುಮಾರ್ ಸತ್ಯವಾದಿ ಎಂಬುವರಿಗೆ ಅಂಬಾಲಾ ಜಿಲ್ಲಾ ಮ್ಯಾಜಿಸ್ಟ್ರೇಟರು ೬ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ. ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ [illegible] ೫ ವರ್ಷ ಕಾಲ ಪೂರ್ಣವಾಗಿ ಪಾರ್ಲಿಮೆಂಟ್ ಸದಸ್ಯರಾಗಿದ್ದರೆಂದೂ, ಸುಳ್ಳು ಸಾಕ್ಷ್ಯದ ಆಧಾರದಿಂದ ಅವರಿಗೆ ಅಷ್ಟು [illegible] ಶಾಸನ ಮಾಡುವ [illegible] ಲಭಿಸಿತ್ತೆಂದೂ, ಈ ಸಂದರ್ಭದಲ್ಲಿ ಸಾಮಾನ್ಯ ಶಿಕ್ಷೆ ಕೊಡುವುದು ಸರಿಯಲ್ಲವೆಂ

೨೦

ಸರ್ಕಾರಿ ನೌಕರರುಗಳಿಗೆ ಅಧಿಕಾರಾವಧಿ ಹೆಚ್ಚಿಸುವುದಿಲ್ಲ

ಮಂತ್ರಿಮಂಡಲದ ಪ್ರಥಮ ಸಭೆಯಲ್ಲಿ ನಿರ್ಧಾರ

ಸ್ವಂ ವ ಫೋ] ಬೆಂಗಳೂರು ೨೪

ಮೈಸೂರಿನ ನೂತನ ಮಂತ್ರಿಮಂಡಲದ ಪ್ರಥಮ ಸಭೆಯು ಈ ದಿನ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಹಲವು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಅಧಿಕಾರಿಗಳು ಮತ್ತು ನೌಕರರಿಗೆ ಯಾವ ಸಂದರ್ಭದಲ್ಲೇ ಆದರೂ ಅಧಿಕಾರಾವಧಿಯನ್ನು ಹೆಚ್ಚಿಸಕೂಡದೆಂದು ತೀರ್ಮಾನಿಸಲಾಯಿತು. ಸಂಸ್ಥಾನದ ಹಿತದೃಷ್ಟಿಯಿಂದ ಹೆಚ್ಚಿಸಬೇಕಾದ ಸಂದರ್ಭದಲ್ಲಿ ನಿವೃತ್ತರಾಗುವವರನ್ನು ಪುನರ್ನೇಮಕ ಮಾಡಬೇಕೆಂದು ನಿರ್ಧರಿಸಲಾಯಿತು.

ಮೈಸೂರಿಗೆ ಸೇರಿರುವ ಇತರ ಪ್ರಾಂತ ಭಾಗಗಳಿಂದ ಬಂದ ನೌಕರರಿಗೆ ಈಗ ಸಿಕ್ಕುತ್ತಿರುವ ಸಂಬಳ ಮತ್ತು ಭತ್ಯವನ್ನೇ ಮುಂದುವರಿಸುವಂತೆ ನಿರ್ಧರಿಸಲಾಯಿತು. ಇದು ಅಫಿಷಿಯೇಟಿಂಗ್ ನೌಕರರಿಗೂ ಅನ್ವಯಿಸುತ್ತದೆ.

ಆದರೆ ತಾವು ಬಂದಿರುವ ಪ್ರದೇಶಗಳಲ್ಲಿ ಯಾವ ಬಡ್ತಿ ಸ್ಕೇಲು ಇದ್ದಿತೋ ಅದನ್ನು ಮೊದಲನೇ ಬಡ್ತಿಯಲ್ಲಿ ನೌಕರರು ಪಡೆಯಬೇಕೆಂದೂ, ಎರಡನೆಯದರಲ್ಲಿ ಮೈಸೂರಿನಲ್ಲಿ ಗೊತ್ತುಪಡಿಸಿರುವ ಬಡ್ತಿ ಪಡೆಯಬೇಕೆಂದೂ ತೀರ್ಮಾನಿಸಲಾಗಿದೆ.

ರೈತರುಗಳ [illegible]

ಸಂಸ್ಥಾನದ ಸಣ್ಣ ಸಣ್ಣ ರೈತರುಗಳ [illegible]ಕ್ಕೆ ಸಂಬಂಧಪಟ್ಟಂತೆ ಒಂದು [illegible]ವನ್ನು ಏರ್ಪಡಿಸಲು ಮಂತ್ರಿಮಂಡಲವು ನಿರ್ಧರಿಸಿತು. ಅದರ ಮುಖ್ಯಾಧಿಕಾರಿಯಾಗಿ ಶ್ರೀ [illegible]ಯವರನ್ನು ನೇಮಿಸಲಾಯಿತು.

ಅಭಾವಗ್ರಸ್ತ ಬಿಹಾರ್ ಹಳ್ಳಿಗರಿಂದ ಪ್ರದರ್ಶನ

ಬಿಹಾರಿನ ಪೂರ್ಣಿಯಾ ಜಿಲ್ಲೆಯ [illegible] ಮತ್ತು [illegible] ತಾಲ್ಲೂಕುಗಳಲ್ಲಿ ಅಭಾವಗ್ರಸ್ತ ರೈತರು ಕಳೆದ ವಾರ ಪ್ರದರ್ಶನಗಳನ್ನು ನಡೆಸಿದರೆಂದು ವರದಿಯಾಗಿದೆ. ಆ ಪ್ರದೇಶದಲ್ಲಿ ವಿಪರೀತ ಕ್ಷಾಮವುಂಟಾಗಿದೆ. ರೈತರುಗಳು ತಮಗೆ ಕೂಡಲೆ ಸರ್ಕಾರ [illegible] ಒದಗಿಸಬೇಕೆಂದು [illegible]ತ್ತಿರುವರು. [illegible] ಬೇರುಗಳನ್ನು ತಿನ್ನುತ್ತಿರುವುದಾಗಿ ಹೇಳಲಾಗಿದೆ. ಆ ಜಿಲ್ಲೆಯಲ್ಲಿ ೮ ಲಕ್ಷ [illegible] ಕಾರ್ಮಿಕರು ಉಪವಾಸದಿಂದ [illegible]ವರೆಂದು ಅಲ್ಲಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ತಿಳಿಸಿರುವರು.

○ ಪಾಕಿಸ್ತಾನದಲ್ಲಿ ಈಗ ಹೊಸದಾಗಿ ಸ್ಥಾಪಿತವಾಗಿದ್ದ ಮಂತ್ರಿಮಂಡಲವು ರಾಜೀನಾಮೆಯನ್ನಿತ್ತಿರುವುದಾಗಿ ಕರಾಚಿ ರೇಡಿಯೋವು ಪ್ರಸಾರ ಮಾಡಿದೆ. [illegible]ರವರಿಂದ ನೇಮಿಸಲ್ಪಟ್ಟಿದ್ದ ಪ್ರಧಾನಿ [illegible]ಯವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ನೆನ್ನೆ [illegible] ಸಲ್ಲಿಸಿರುವುದಾಗಿ ಹೇಳಲಾಗಿದೆ.

ಖಾಯಂ ಆದ ಅರಮನೆ ನೌಕರರಿಗೂ ಕತ್ತರಿ ಪ್ರಯೋಗ

ನೌಕರರ ಸಂಘದ ಕಾರ್ಯದರ್ಶಿಯವರ ಹೇಳಿಕೆ

ಮೈಸೂರು ೨೪

ಅರಮನೆ ನೌಕರರ ಖೋತಾ ಸಂಬಂಧವಾಗಿ ಹುಜೂರು ಕಾರ್ಯದರ್ಶಿಯವರು ಇತ್ತಿರುವ ಹೇಳಿಕೆಗೆ ಪ್ರತಿಯಾಗಿ ನೌಕರರ ಸಂಘದ ಕಾರ್ಯದರ್ಶಿ ಶ್ರೀ ವೇದಾಂತ ಹೆಮ್ಮಿಗೆಯವರು ಬೇರೊಂದು ಹೇಳಿಕೆಯಿತ್ತು, ನಿವೃತ್ತಿಯಾಗುವ ೩೯೨ ನೌಕರರಲ್ಲಿ ೧೧ರಿಂದ ೫ ವರ್ಷಗಳ ನೌಕರಿ ಮಾಡಿದವರಲ್ಲದೆ ಖಾಯಂ ಆದವರೂ ಇರುವರೆಂದು ತಿಳಿಸಿದ್ದಾರೆ. ಅನಾವಶ್ಯಕ ಕೆಲಸಗಾರರ ಸಂಖ್ಯೆ ತೆಗೆಯುವ ನೆಪದಲ್ಲಿ ನೌಕರರ ಹೊಟ್ಟೆಮೇಲೆ ಹೊಡೆಯುವುದು ಧರ್ಮವಲ್ಲವೆಂದೂ ಅವರು ಸೂಚಿಸಿದ್ದಾರೆ. ಮಹಾರಾಜರ ಸ್ಥಾನಮಾನದಲ್ಲಿ ಬದಲಾವಣೆ ಆಗುವಾಗ ಅರಮನೆ ಆಸ್ತಿಗಳ ಜೊತೆ ನೌಕರರ ಭದ್ರತೆಯನ್ನೂ ಅ ಲೋಚಿಸಬೇಕಾಗಿತ್ತೆಂದು ಅವರು ತಿಳಿಸಿ, ನಿವೃತ್ತರಾಗುವವರಿಗೆ ಬೇರೆ ಉದ್ಯೋಗ ಕಲ್ಪಿಸಲು ಕೇಂದ್ರ ಮತ್ತು ಪ್ರಾಂತ ಸರ್ಕಾರಗಳೊಡನೆ ಸಂಧಾನ ನಡೆಸಬೇಕೆಂದಾಗಿ ಸೂಚಿಸಿರುವರು. ಮಹಾರಾಜರಿಗೆ ಬರುತ್ತಿರುವ ರಾಜವೇತನ ಮತ್ತು ಇತರ ಮಾನಗಳಿಂದ ೩೦ ಲಕ್ಷ ರೂ ಬರುತ್ತದೆ. ಅದರಲ್ಲಿ ನೌಕರರಿಗಾಗಿ ೯ ಲಕ್ಷ ವೆಚ್ಚವಾಗುತ್ತದೆ. ನೌಕರರಿಗೆ ಗ್ರ್ಯಾಚುಯಿಟಿ ಪರಿಹಾರ ಕೊಡುವುದರಿಂದ ಪ್ರಯೋಜನವಿಲ್ಲ. ೯-೧೦ರೂ ಸಂಬಳ ಪಡೆಯುತ್ತಿರುವವರಿಗೆ ೫೦ ಅಥವಾ ೬೦ ರೂ ಪರಿಹಾರವು ಇದರಿಂದ ಬರುವುದು—ಎಂದು ಕಾರ್ಯದರ್ಶಿಯವರು ತಿಳಿಸಿ, ಮಹಾರಾಣಿಯವರು ಈ ಸಮಸ್ಯೆಯನ್ನು ಬಿಡಿಸಲು ನೌಕರರ ಸಂಘದವರೊಡನೆ ಮಾತುಕತೆ ನಡೆಸಬೇಕೆಂದು ಸೂಚಿಸಿದ್ದಾರೆ

ಗಂಗಾ ಸಮಾರಾಧನೆ

ನಗರದ ಶ್ರೀ ವರಲಕ್ಷ್ಮಿ ಸಂಗೀತ ಕಲಾ ಮಂದಿರ ವ್ಯವಸ್ಥಾಪಕರಾದ ಶ್ರೀ ಆರ್. ಚಂದ್ರಶೇಖರ ಮತ್ತು ಅವರ ಮಾತೃಶ್ರೀಯವರಾದ ಶ್ರೀ ವರಲಕ್ಷ್ಮಮ್ಮನವರು ಕಾಶಿ, ಗಯಾ ಮುಂತಾದ ತೀರ್ಥ ಕ್ಷೇತ್ರಗಳ ಯಾತ್ರೆ ಮಾಡಿದ ಸಂಬಂಧವಾಗಿ ಕಳೆದ ಭಾನುವಾರ ಗಂಗಾ ಸಮಾರಾಧನೆಯನ್ನು ನಡೆಸಿ ಅನೇಕರನ್ನು ಭೋಜನಕ್ಕೆ ಆಹ್ವಾನಿಸಿದ್ದರು

ಹರಿಕಥೆ

ಶಿವ ಪೇಟೆ ಶ್ರೀ ಆಂಜನೇಯ ಬಾಲ ಭಕ್ತ ಮಂಡಲಿಯು ಶ್ರೀರಾಮ ಮಂದಿರದಲ್ಲಿ ಈ ಸಂಜೆ ೬॥ ಗಂಟೆಗೆ ಶ್ರೀ ಆರ್. ಎಸ್. ಶೇಷಗಿರಿ ರಾಯರು ಭಕ್ತ ದಾಮಾಜಿ ಪಂತ್ ಎಂಬ ಹರಿಕಥೆಯನ್ನು ನಡೆಸುವರು.

ಸಂಗೀತ ಕಛೇರಿ

ಶ್ರೀರಾಮಪೇಟೆ ಶ್ರೀ ರಾಮಾಭ್ಯುದಯ ಸಭೆಯಲ್ಲಿ ರಾಮೋತ್ಸವದ ಅಂಗವಾಗಿ ನಾಳೆ ಸಂಜೆ ೬॥ ವಿ॥ ಸ್ವರಮೂರ್ತಿ ವಿ. ಎನ್. ರಾಯರಿಂದ ಸಂಗೀತವು ನಡೆಯುವುದು

ನಂಜನಗೂಡಿನ ಶ್ರೀ ಪನ್ನಗರು ಮಂದಿರದಲ್ಲಿ ರಾಮೋತ್ಸವದ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ವಿ॥ ಪುತ್ತೂರು ರಾಮಸ್ವಾಮಿಯವರ ಸಂಗೀತ ಕಛೇರಿಯು ನಡೆಯುವುದು

ಬಿಳಿಗಿರಿ ರಂಗಸ್ವಾಮಿ ಬೆಟ್ಟದಲ್ಲಿ ಯಾತ್ರಿಕರಿಗೆ ಅನಾನುಕೂಲ

ಬಿಳಿಗಿರಿ ರಂಗಸ್ವಾಮಿಯವರ ರಥೋತ್ಸವವು ಇತ್ತೀಚೆಗೆ ನಡೆಯಿತಷ್ಟೆ. ಸಾಮಾನ್ಯವಾಗಿ ಈ ರಥೋತ್ಸವಕ್ಕೆ ೫,೦೦೦ ಜನಕ್ಕಿಂತಲೂ ಹೆಚ್ಚಾಗಿ ಸೇರಿ ದೇವರ ದರ್ಶನ ಮಾಡುವರು. ಆದರೆ ಬೆಟ್ಟದ ಮೇಲೆ ಜನರಿಗೆ ಸ್ಥಳ ಸಂಕೋಚವೇ ಎದುರಾಗಿರುತ್ತದೆ. ರಥೋತ್ಸವ ನಡೆಯುವ ಬೀದಿಯು ಇಕ್ಕಟ್ಟಾಗಿ ಸ್ಥಳಾವಕಾಶವಿಲ್ಲದೆ ಎಲ್ಲ ಜನರು ಬಂಡೆಗಳಲ್ಲಿರುವ ಕಲ್ಲಿನ ಮೆಟ್ಟಿಲುಗಳ ಮೇಲೆ ನಿಲ್ಲಬೇಕಾಗುತ್ತದೆ. ಪಕ್ಕದಲ್ಲಿರುವ ಪೊದೆಗಳನ್ನು ತೆಗೆಸಿ ನೆಲವನ್ನು ಸಮಮಾಡಿ ಜನರಿಗೆ ಹೆಚ್ಚು ಅವಕಾಶ ಕಲ್ಪಿಸುವ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಬೇಕು, ಎಂಬುದಾಗಿ ಯಾತ್ರಿಕರು ತಿಳಿಸುತ್ತಾರೆ

ಸ್ನೇಹಿತನ ಅಂತ್ಯಕ್ರಿಯೆ ನೋಡುತ್ತಿದ್ದವನ ಮರಣ

ಸೂರತ್ತಿನ ನಾನಾಭಾಯಿ ಮೇವಾವಾಲ ಎಂಬ ಪ್ರಸಿದ್ಧ ವ್ಯಾಪಾರಿಯೊಬ್ಬನು ಕಳೆದ ೨೦ರಂದು ಮರಣ ಹೊಂದಿ ಅವನ ಅಂತ್ಯಕ್ರಿಯೆಯು ನಡೆಯುತ್ತಿದ್ದಾಗ ಆ ಸ್ಥಳಕ್ಕೆ ಹೋಗಿದ್ದ ಆತನ ಸ್ನೇಹಿತ ನಾನಾಭಾಯಿ ಘೀವಾಲ ಎಂಬ ಮತ್ತೊಬ್ಬ ವರ್ತಕನಿಗೆ ಅಲ್ಲೇ ಹೃದಯ ಕ್ರಿಯೆ ನಿಂತು ಅವನು ನಿಧನ ಹೊಂದಿದನೆಂದು ವರದಿಯಾಗಿದೆ

ರಷ್ಯದ ೧,೧೦,೦೦೦ ಕೆಲಸಗಾರರಿಗೆ ಪ್ರಶಸ್ತಿ

ರಷ್ಯದ ೧,೧೦,೦೦೦ ಮಂದಿ ಸಾಮೂಹಿಕ ಜಮೀನು ಸರ್ಕಾರಿ ಜಮೀನು, ರೈತರು ಮತ್ತು ಟ್ರಾಕ್ಟರು ನಡೆಸುವವರು, ಕಾಮಾಟಿಗಳು, ವ್ಯವಸ್ಥಾಪಕರು ಮತ್ತು ಪ್ರವೀಣರುಗಳಿಗೆ ಸರ್ಕಾರಿ ಪ್ರಶಸ್ತಿ ಪತ್ರಗಳನ್ನು ಕೊಡಲಾಗಿದೆ ಬಂಜರು ಜಮೀನನ್ನು ಪುನಃ ಬೆಳೆ ತೆಗೆಯಲು ಇವರುಗಳು ಅನುಕೂಲಪಡಿಸಿದರೆಂದು ಹೇಳಲಾಗಿದೆ

ರೈಲ್ವೆ ವಾರಾಚರಣೆ

ಕಳೆದ ೧೦ನೇ ತಾರೀಕಿನಿಂದ ೧ ವಾರ ಕಾಲ ಭಾರತಾದ್ಯಂತ ನಡೆದ ರೈಲ್ವೆ ಸಪ್ತಾಹದ ಅಂಗವಾಗಿ ಮೈಸೂರು ಸ್ಟೇಷನ್ನಲ್ಲಿ ಸಮಾರಂಭವೊಂದು ಏರ್ಪಾಡಾಗಿತ್ತು. ಕಡೆಯ ದಿನ ನೌಕರರ ಬಾಲಕ ಬಾಲಕಿಯರ ಸಂತೋಷ ಕೂಟವನ್ನು ನಡೆಸಲಾಯಿತು. ಅವರುಗಳಿಗಾಗಿ ನಡೆಸಿದ ಬೇಸಿಗೆ ಹಿಂದಿ ಶಿಕ್ಷಣ ಶಿಬಿರದ ಅಧ್ಯಾಪಕಿ ಶ್ರೀಮತಿ ನಾಗಲಕ್ಷ್ಮಮ್ಮನವರು ಅವರುಗಳನ್ನು ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಕರೆದುಕೊಂಡು ಹೋಗಿ ಅಲ್ಲಿನ ಕೆಲಸಕಾರ್ಯಗಳನ್ನು ತೋರಿಸಿದರು

ಗಾಂಧಿ ವಿಚಾರ ವ್ಯಾಸಂಗ ಗೋಷ್ಠಿ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿರುವ ವಿಶೇಷ ವ್ಯಾಸಂಗ ಗೋಷ್ಠಿ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ಶ್ರೀ ಖಾದ್ರಿ ಶಾಮಣ್ಣನವರು "ಗಾಂಧಿ ಯುಗ" ಎಂಬ ವಿಚಾರವಾಗಿ ಉಪನ್ಯಾಸ ಮಾಡುವರು

ಹೆಬ್ಬೂರಿನಲ್ಲಿ ಶಂಕರ ಜಯಂತಿ ಉತ್ಸವ

ತುಮಕೂರು ಜಿಲ್ಲಾ ಹೆಬ್ಬೂರಿನ ಶ್ರೀ ಕೋದಂಡಾಶ್ರಮದಲ್ಲಿ ಶಂಕರ ಜಯಂತಿ ಅಂಗವಾಗಿ ಈ ತಿಂಗಳು ೩೦ರಿಂದ ಬರುವ ೯ನೇ ತಾರೀಕಿನವರೆಗೆ ಉತ್ಸವವು ಜರುಗುವುದು ಪ್ರತಿ ನಿತ್ಯವೂ ಬೆಳಿಗ್ಗೆ ಅರುಣಪೂರ್ವಕ, ಸೂರ್ಯ ನಮಸ್ಕಾರ, ನವಗ್ರಹ ಜಪ, ಸಪ್ತಶತಿ ಪಾರಾಯಣ ಕಾಮಾಕ್ಷಿ, ಚಂದ್ರಮೌಳೀಶ್ವರರಿಗೆ ಅಭಿಷೇಕ ಅರ್ಚನೆಗಳೂ; ಮಧ್ಯಾಹ್ನ ಧರ್ಮ ಬೋಧಕ ಉಪನ್ಯಾಸ, ಸಂಜೆ ಆಚಾರ್ಯರ ಚರಿತ್ರೆ ಕುರಿತು ಹರಿಕಥೆ ಮುಂತಾದುವೂ ಜರುಗುವುವು ಭಕ್ತರು ಸೂಕ್ತ ರೀತಿಯಲ್ಲಿ ಉದಾರ ಸಹಾಯ ಮಾಡಬೇಕೆಂದು ಕೋರಲಾಗಿದೆ

ಮೈಸೂರು ಪೇಟೆ ಧಾರಣೆ

ಬಂಗಾರದ ಸಿಕ್ಕ ತೂಕ

ಕೊಯಮುತ್ತೂರು	[illegible]	[illegible]
ರತ್ನಚೂಡಿ	[illegible]	[illegible]
ಕಡ್ಡಿ	[illegible]	[illegible]
ಕೆಂಪುಕಡ್ಡಿ	[illegible]	
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible]
ತೊಗರೀಬೇಳೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಹರಳುಬೀಜ	[illegible]	
ಹುರುಳಿ	[illegible]	[illegible]
ಹಲಸಂದೆ	[illegible]	[illegible]
ಅವರೆ	[illegible]	[illegible]
ಕಡಲೆ	[illegible]	[illegible]
ಧನಿಯ	[illegible]	[illegible]
ಹುಣಸೇಬೀಜ	[illegible]	[illegible]
ಕೆಂಬಿನ ಬೀಜ	[illegible]	
ಹುಣಸೇಹಣ್ಣು	[illegible]	[illegible]
ಗೆಡ್ಡೆ	[illegible]	[illegible]
ಹುರುಳಿಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

ಗ್ರಾಮಾಧಿಕಾರಿಗಳಿಂದ ಕಪ್ಪು ಬ್ಯಾಡ್ಜುಗಳ ಧಾರಣೆ

ಮದ್ರಾಸಿನ ಕೋವಿಲ್ಪಟ್ಟಿ ತಾಲ್ಲೂಕಿನಲ್ಲಿ ಜಮಾಬಂದಿ ನಡೆಸಲು ಅಲ್ಲಿಗೆ ಸಬ್ ಡಿವಿಜನ್ ಅಧಿಕಾರಿಗಳು ಕಳೆದ ೨೧ರಂದು ಹೋಗಿದ್ದಾಗ, ಅವರ ಗಮನಕ್ಕೆ ತಮ್ಮ ಕುಂದುಕೊರತೆಗಳನ್ನು ತರಲು ಗ್ರಾಮಾಧಿಕಾರಿಗಳು ಕಪ್ಪು ಬ್ಯಾಡ್ಜುಗಳನ್ನು ಧರಿಸಿದ್ದರೆಂದು ಹೇಳಲಾಗಿದೆ.

ಟಿ. ಸುಬ್ರಹ್ಮಣ್ಯರವರಿಗೆ ಪತ್ನೀ ವಿಯೋಗ

ವಿಧಾನ ಪರಿಷತ್ತಿನ ಮಾಜಿ ಅಧ್ಯಕ್ಷರೂ, ಸಂಸ್ಥಾನದ ಹಿರಿಯ ಕಾಂಗ್ರೆಸ್ ಮುಂದಾಳುಗಳೂ ಆದ ಶ್ರೀ ಟಿ. ಸುಬ್ರಹ್ಮಣ್ಯರವರ ಪತ್ನಿ ಶ್ರೀಮತಿ ಸುಶೀಲಮ್ಮನವರು ಮೊನ್ನೆ ರಾತ್ರಿ ಬೆಂಗಳೂರು ಬೌರಿಂಗ್ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಒಂದು ತಿಂಗಳಿಂದಲೂ ಅಸ್ವಸ್ಥರಾಗಿದ್ದರು ಅವರಿಗೆ ೪೮ ವರ್ಷ ವಯಸ್ಸಾಗಿತ್ತು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೇ ಆದಿಯಾಗಿ ಅನೇಕ ಸ್ನೇಹಿತರು ಶ್ರೀ ಸುಬ್ರಹ್ಮಣ್ಯರವರಿಗೆ ಸಂತಾಪವನ್ನು ಸೂಚಿಸಿದರು.

ಗೋ ವಧೆಗಾಗಿ ದಂಡ

ಕಸಾಬಗೇರಿಯಲ್ಲಿ ಗೋ ವಧೆ ನಡೆಸಿದರೆಂದು ಖಾಸಿಂ ಮತ್ತು ಇನ್ನೊಬ್ಬನಿಗೆ ಇಲ್ಲಿನ ದ್ವಿತೀಯ ನಗರ ನ್ಯಾಯಾಧೀಶರು ತಲಾ ೫೦ ರೂ. ದಂಡವನ್ನು ವಿಧಿಸಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ಸಿತಾರ್. ೬-೧೫ ಕೆ. ಜಿ. ಆದಿಲಕ್ಷ್ಮೀದೇವರ ಹಾಡು ೬-೩೦ ಮತ್ತು ೮-೧೫ ಸಿ. ವಿ. ವೀರಭದ್ರಶೆಟ್ಟಿ–ಕಾವ್ಯ ವಾಚನ ಮಧ್ಯಾಹ್ನ ೧೨ ಸಂಗೀತ ೧೨-೩೦ ಹೆಚ್ ವಿ ಕೃಷ್ಣರಾವ್–ಪಿಟೀಲು ೧ ರಿಕಾರ್ಡ್. ೧-೫೦ ಕೊಳಲು ೨-೧೫ ಮತ್ತು ಸಂಜೆ ೫-೩೦ ೬ ಬಿ ತಾ ರಾಮಾನುಜಂ–ಹಿಂದೂಸ್ತಾನಿ ಗಾತ್ರ, ಸಂಗೀತ ೬ ೫ ಜಾನಪದ ಗೀತೆ ೬-೩೦ ತಾಳವಾದ್ಯ ಕಛೇರಿ ೮ ಎಚ್ ವಿ ಕೃಷ್ಣರಾವ್–ಪಿಟೀಲು ೮-೩೦ ನಿಮ್ಮ ಮೆಚ್ಚಿನ ಗೀತೆಗಳು ೯-೧೫ ಸರ್ಕಾರದ ಅಭಿವೃದ್ಧಿ ಯೋಜನೆ-ಚರ್ಚೆ. ೯-೩೦ ನಾಟಕ ಚಂದ್ರಗುಪ್ತ ೧೦-೧೫ ರಿಕಾರ್ಡ್

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

Edited, Printed and Published by A. R. Nagarajan at Sadhvi Press, D. Subbiah Road, Mysore

ಅರಮನೆ ಕೋಟೆ ಶ್ರೀ ವರಾಹಸ್ವಾಮಿ ರಥೋತ್ಸವ

ಶ್ರೀ ಹೇವಿಳಂಬಿ ಸಂವತ್ಸರದ ಚೈತ್ರ ಬಹುಳ ದ್ವಾದಶಿ ಶುಕ್ರವಾರ ಬೆಳಿಗ್ಗೆ ೮-೫೫ರಿಂದ ೯-೧೫ರೊಳಗೆ ಅರಮನೆ ಕೋಟೆಯಲ್ಲಿರುವ ಶ್ರೀ ಶ್ವೇತ ವರಾಹಸ್ವಾಮಿಯವರ ರಥೋತ್ಸವವು ನಡೆಯುತ್ತದೆ.

ಕ್ಯಾಲೆಂಡರ್ ಸ್ವೀಕಾರ

ಶ್ರೀ ರಾಘವೇಂದ್ರ ಸ್ವಾಮಿಗಳ ಶ್ರೀ ಮಠದವರು ಕಳುಹಿಸಿಕೊಟ್ಟಿರುವ ಶ್ರೀಸುಜ್ಞಾನೇಂದ್ರ ಯೋಗ ಚಿತ್ರದಿಂದ ಕೂಡಿರುವ ಹೊಸ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಕಾವ್ಯ ವಾಚನ

ಜಯನಗರದಲ್ಲಿರುವ ಶ್ರೀ ಹೇರಾಳೆ ಶ್ರೀನಿವಾಸ ಶಾಸ್ತ್ರಿಗಳ ಮನೆಯಲ್ಲಿ ನಾಳೆ ಏಕಾದಶಿ ಪ್ರಯುಕ್ತ ಸಾಯಂಕಾಲ ೬ ಗಂಟೆಗೆ ಶ್ರೀ ವಾಲ್ಮೀಕಿ ಮಹಿಳಾ ಪಾಠಶಾಲೆಯ ವಿದ್ಯಾರ್ಥಿನಿ ಕುಮಾರಿ ಎಸ್. ಎ. ಹರಿಮತಿಯವರಿಂದ ಭರತ ಧಾತ್ರ ಕಾವ್ಯದಲ್ಲಿನ "ವಿಭೀಷಣ ಶರಣಾಗತಿ" ಎಂಬ ಭಾಗದ ವಾಚನವನ್ನೂ, ಶ್ರೀ ಕೃಷ್ಣ ಶಾಸ್ತ್ರಿಗಳಿಂದ ವ್ಯಾಖ್ಯಾನವನ್ನೂ ಏರ್ಪಡಿಸಲಾಗಿದೆ.

[illegible]
ಮಕ್ಕಳ ಆರೋಗ್ಯಕ್ಕೆ ಶಾಸ್ತ್ರೀಯ ಔಷಧ
ರೋಗಗಳ ನಿವಾರಕ ತಯಾರಕರು:-
'ಅಜಿತ್ ಹೌಸ್', ಚಾಮುಂಡಿಪುರಂ,
ಮೈಸೂರು (ಸುತ್ತೂರು ಛತ್ರದ ಹತ್ತಿರ)

ಸಮೀರ ಬೋಧಕ ವಿದ್ಯಾನಿಲಯ

ಮೈಸೂರು

1956ರ ಸಂವತ್ಸರದ T.C.H ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರ ಸರ್ಟಿಫಿಕೇಟುಗಳು ಶಾಲೆಗೆ ಬಂದಿರುತ್ತವೆ. ಅವರುಗಳು ಬಾಕಿ ಇರುವ ಫೀಜ್ ಮತ್ತು ಲೈಬ್ರರಿ ಪುಸ್ತಕಗಳನ್ನು ಹಿಂತಿರುಗಿಸಿ ಸರ್ಟಿಫಿಕೇಟನ್ನು ಪಡೆಯಬಹುದು. ಅಥವಾ ತಮ್ಮ ಅಡ್ರೆಸ್ಸಿನ ಕವರನ್ನು ಇಲ್ಲಿಗೆ ಕಳುಹಿಸುವುದರ ಮೂಲಕವಾಗಲಿ ತರಿಸಿಕೊಳ್ಳಬಹುದು

ಕೆ. ಕೃಷ್ಣರಾವ್
ಪ್ರಿನ್ಸಿಪಾಲ್

SREE GAYATHRI
TALKIES
Show extended for two days on req
Dial M For Murder
With:- Grace Kelly and
Ray Milland
—Next Change:—
D'E S I R E S
With:- Jean Simmons



CHAMUNDESWARI TALKIES
Gala Release : On 24-4-57 : Daily 3 Sh
THE SPECTACULAR PICTURE THAT CREATED WORLD SENSATION
GODZILLA - (ಗಾಡ್ ಜಿಲ್ಲ
RAGING THROUGH THE WORLD ON A RAMPAGE
DESTRUCTION ! INCREDIBLE, UNSTOPPABLE TITAN OF
TERROR ! Don't miss to see this MIGHTY MELO-DRAMA

ರಿಜಿಸ್ಟರ್ಡ್ ನಂ. 793

ಚಂದಾ ದರ

[illegible]

ತಿಂಗಳಿಗೆ ಒಂದು ರೂ.

ಪ್ರತಿಗೆ 2 ನಯಾ ಪೈಸೆ

ಬಿಡಿ ಪ್ರತಿಗೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೦೪] SADHVI : THURSDAY 25—4—1957 ಮೈಸೂರು : ಗುರುವಾರ ೨೫—೪—೧೯೫೭ : [ಸಂಚಿಕೆ : ೨೬೩

ಜಾರ್ಡಾನ್-ಸಿರಿಯಾ ಗಡಿ ಬಂದ್; ಅಮ್ಮಾನಿನಲ್ಲಿ ಹರತಾಳ

ಿಯಾ-ಜಾರ್ಡಾನ್ ಗಡಿಯು ಬಂದ್

ಜಾರ್ಡಾನ್ ಗಡಿ ಬಳಿ ಇಸ್ರೇಲ್ ಮತ್ತು ಇರಾಕ್ ಸೈನ್ಯಗಳ ಪ್ರವೇಶದ ಸಿದ್ಧತೆ

ಸಿರಿಯಾ ಮತ್ತು ಜಾರ್ಡಾನುಗಳ ನಡುವೆ ಇರುವ ಗಡಿಯನ್ನು ಮುಚ್ಚಲಾಗಿರುವುದು ವರದಿಯಾಗಿದೆ. ಇರಾಕ್ ಮತ್ತು ಇ ಲಿನ ಭಾರಿ ಸೈನ್ಯ ತಂಡಗಳು ಜಾರ್ಡಾನ್ ಬಳಿ ಕೇಂದ್ರೀಕರಿಸಲ್ಪಟ್ಟಿರುವುವೆಂದೂ, ಜಾರ್ಡಾ ಒಳ ವಿಚಾರಗಳಲ್ಲಿ ನೇರವಾಗಿ ಪ್ರವೇಶಿಸಲು ಬಾಗ್ದಾದ್ ಒಪ್ಪಂದಕ್ಕೆ ಸೇರಿರುವ ಆಕ್ರಮಣ ಮನೋಭಾವದ ರಾಷ್ಟ್ರಗಳು ಮತ್ತು ಇ ಸಿದ್ಧಮಾಡಿಕೊಳ್ಳುತ್ತಿರುವುವೆಂದೂ ರ ದ ಪ್ರಾವ್ದಾ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ

ಂಟಿ ಚುನಾವಣೆ ಪದ್ಧತಿ ಮಸೂ ಗೆ ಪಾಕಿಸ್ತಾನ ಸಭೆಯ ಒಪ್ಪಿಗೆ

ಪಾಕಿಸ್ತಾನದ ಎರಡು ವಿಭಾಗಗಳಲ್ಲೂ ಜಂ ಚುನಾವಣೆ ಪದ್ಧತಿಯನ್ನು ಜಾರಿಗೆ ತರಬೇ ಯ ಸೂಚಿಸಲಾಗಿರುವ ಮಸೂದೆಗೆ ಅಲ್ಲಿನ ಸಭೆಯು ನೆನ್ನೆ ಅಂಗೀಕಾರವಿತ್ತಿ ಈ ವಿಚಾರದಲ್ಲಿ ಸಾರ್ವಜನಿಕಾಭಿಪ್ರಾಯ ನ್ನು ತೆಗೆದುಕೊಳ್ಳಬೇಕೆಂದು ಮುಸ್ಲಿಂ ಲೀಗ್ ಸಂಯುಕ್ತ ರಂಗದವರ ಸಭೆಯಲ್ಲಿ ಒ ಸೂಚಿಸಿದುದು ನಿರರ್ಥಕವಾಯಿತು ವಿ ಪಕ್ಷದ ಮುಖಂಡರಾದ ಮಿರ್ಯಾ ಇಫ್ತಿಕ ರುದ್ದೀನರು ಮಾತನಾಡಿ ಮುಸ್ಲಿಂಲೀಗಿನವ ಪ್ರತ್ಯೇಕ ಚುನಾವಣೆ ಪದ್ಧತಿಗೆ ಒತ್ತಾಯಿಸಿ ಪಾಕಿಸ್ತಾನದಲ್ಲೊಂದು ಹಿಂದೂಸ್ತಾನದ ತನಗೆ ದಾರಿ ಮಾಡಬಾರದೆಂದು ಹೇಳಿ

ರ್ಡಾನ್ ದೊರೆಗೆ ಅಮೆರಿಕದ ಬೆಂಬಲ

ಜಾರ್ಡಾನಿನ ದೊರೆ ಹುಸೇನರು ಬಹು ಕಷ್ಟ ದಲ್ಲಿದ್ದರೂ ತಮ್ಮ ದೇಶದ ಸ್ವಾತಂತ್ರ್ಯವ ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ರಿಕದ ವಿದೇಶಾಂಗ ಮಂತ್ರಿ ಡಲೆಸ್‌ರವರು ತಿಳಿಸುತ್ತಾರೆ ದೊರೆಯು ತಮ್ಮ ದೇಶವ ರರ ಅಧಿಪತ್ಯಕ್ಕೆ ಒಳಗಾಗದಿರುವಂತೆ ಪ ನ ಪ್ರಯತ್ನಕ್ಕೆ ಅಮೆರಿಕದ ಬೆಂಬಲ ಇ ದೆಂದೂ ಹೇಳಿರುತ್ತಾರೆ.

ಗಳಿಗೊಂದು ದಿನ ಬಡವರಿಗೆ ಉಚಿತ ಕ್ಷೌರ

ರಾ ಸಮುದ್ರದ ಕ್ಷೌರದ ಅಂಗಡಿಯ ಶ್ರೀ ಪಿ ಕೃಷ್ಣ ಎಂಬುವರು ಪ್ರತಿ ತಿಂ ಗಳ ಶನಿವಾರಗಳಲ್ಲಿ ಬಡವರಿಗೆ ಉಚಿತವಾಗಿ ಕ್ಷೌರ ಮಾಡುವುದಾಗಿ ತಿಳಿಸಿ ದೆ

ಹರಿಕಥೆ

ಶದ ಕೃಷ್ಣಮೂರ್ತಿಪುರದ ಶ್ರೀ ರಾಮ ದಲ್ಲಿ ಶ್ರೀಮತಿ ಲಕ್ಷ್ಮೀಬಾಯಿ ಹೇಳರ ವರಿಂದ ಈ ಸಂಜೆ ೬-೩೦ಕ್ಕೆ "ಮೋಹಿನೀ ಸ್ಮ" ಮತ್ತು ನಾಳೆ ಸಂಜೆ "ಚಂದ್ರಹಾ ಎಂಬ ಹರಿಕಥೆಗಳು ನಡೆಯುವುವು

ಜಾರ್ಡಾನಿನಲ್ಲಿ ಡಾ|| ಖಲೀದಿ ಮಂತ್ರಿಮಂಡಲದ ರಾಜೀನಾಮೆ

ದೊರೆಯ ಚಿಕ್ಕಪ್ಪನ ಗಡೀಪಾರಿಗಾಗಿ ಸರ್ಕಾರಕ್ಕೆ ವಿರೋಧ ಪಕ್ಷದ ಒತ್ತಾಯ

ಜಾರ್ಡಾನಿನ ಪ್ರಧಾನಿ ಡಾ|| ಖಲೀದಿಯವರ ಸರ್ಕಾರವು ರಾಜೀನಾಮೆ ಕೊಟ್ಟಿರುವುದಾಗಿ ಕೈರೋ ರೇಡಿಯೋ ವರ್ತಮಾನ ಪ್ರಸಾರ ಮಾಡಿತು ದೊರೆಗೆ ಡಾ|| ಖಲೀದಿಯವರು ರಾಜೀನಾಮೆ ಒಪ್ಪಿಸುವ ಮುಂಚೆ ವಿರೋಧ ಪಕ್ಷಗಳ ಸಮಿತಿಯು ೧೪ ಅಂಶಗಳ ಬೇಡಿಕೆಗಳನ್ನು ಪ್ರಧಾನಿಯವರಿಗೆ ಸಲ್ಲಿಸಿತು ಸಮಿತಿಯಲ್ಲಿ [illegible] ಪಾರ್ಲಿಮೆಂಟಿನ ಅಧ್ಯಕ್ಷರೂ ಇರುವರು ಐಸೆನ್‌ಹೋವರರ ಸಹಾಯ ಯೋಜನೆಯ ತಿರಸ್ಕಾರ, ಜಾರ್ಡಾನು ಸಿರಿಯಾ ಮತ್ತು ಈಜಿಪ್ಟುಗಳ ಒಕ್ಕೂಟ, ತಟಸ್ಥ ನೀತಿಯ ಅನುಸರಣೆ, ದೊರೆ ಹುಸೇನರ ಚಿಕ್ಕಪ್ಪ ಷರೀಫ್ ನಾಸಿರ್‌ರವರ ಗಡೀಪಾರು, ಜಾರ್ಡಾನಿನಲ್ಲಿರುವ ಅಮೆರಿಕಾ ರಾಯಭಾರಿಯನ್ನು ವಾಪಸು ಕಳುಹಿಸುವುದು-ಇವೇ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಲಾಗಿದೆ

ಬೆಂಕಿಯಿಂದ ೭ ಜನರು ಭಸ್ಮ

ಉತ್ತರ ಪ್ರದೇಶದ ಷಹಾನ್ಪುರ ಎಂಬ ಹಳ್ಳಿಯಲ್ಲಿ ನೆನ್ನೆ ಒಬ್ಬ ಹೆಂಗಸು ಅಡಿಗೆ ಮಾಡುತ್ತಿದ್ದಾಗ ಬೆಂಕಿಯು ಹರಡಿ ಬಲವಾದ ಗಾಳಿಯ ಸಹಾಯದಿಂದ ೨೪ ಗುಡಿಸಲುಗಳಿಗೆ ವ್ಯಾಪಿಸಲಾಗಿ ಅವೆಲ್ಲವೂ ಸುಟ್ಟುಹೋದುವೆಂದೂ, ೭ ಜನರು ಜೀವಸಹಿತ ಬೆಂದುಹೋದರೆಂದೂ ವರದಿಯಾಗಿದೆ ೨೦೦ ಜನರು ನಿರಾಶ್ರಿತರಾಗಿದ್ದಾರೆ ಬೆಂಕಿಯು ಹತ್ತಿರದ ಬೆಳೆಗೆ ವ್ಯಾಪಿಸುವುದನ್ನು ತಡೆಯಲಾಯಿತು

ಸಹಕಾರ ಸಂಘದ ಚುನಾವಣೆಗೆ ಮತ್ತೆ ತಡೆಯಾಜ್ಞೆ

ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆಯು ಅಸಿಸ್ಟೆಂಟ್ ರಿಜಿಸ್ಟ್ರಾರರ ಆಜ್ಞೆ ಮೂಲಕ ಈ ತಿಂಗಳು ೨೮ನೇ ತಾರೀಖು ನಡೆಯಬೇಕಾಗಿದ್ದುದು, ಈಗ ರಿಜಿಸ್ಟ್ರಾರರ ಹೊಸ ಆಜ್ಞೆಯ ಮೇಲೆ ಮುಂದೆ ಹೋಗಿದೆ ಡೈರೆಕ್ಟರುಗಳ ಸ್ಥಾನಕ್ಕೆ ಸ್ಪರ್ಧಿಸಿದ್ದ ಹಲವರ ಹೆಸರುಗಳನ್ನು ತೆಗೆದುಹಾಕಿದ್ದ ಬಗ್ಗೆ ಅವರನ್ನು ಉಮೇದುವಾರರ ಪಟ್ಟಿಯಲ್ಲಿ ಸೇರಿಸಿ ಚುನಾವಣೆ ನಡೆಸುವಂತೆ ಅಸಿಸ್ಟೆಂಟ್ ರಿಜಿಸ್ಟ್ರಾರರು ಕೊಟ್ಟಿದ್ದ ಆಜ್ಞೆಯ ವಿರುದ್ಧವಾಗಿ ರಿಜಿಸ್ಟ್ರಾರರು ಕೋರ್ಟಿನಲ್ಲಿ ಅಪೀಲು ಹೂಡಲಾಗಿ, ಈ ವ್ಯವಹಾರವನ್ನು ಇತ್ಯರ್ಥ ಮಾಡುವವರೆಗೆ ಚುನಾವಣೆಗಳನ್ನು ನಡೆಸಕೂಡದೆಂದು ರಿಜಿಸ್ಟ್ರಾರರು ಹೊಸ ಆಜ್ಞೆ ಮಾಡಿರುತ್ತಾರೆ ಡೈರೆಕ್ಟರು ಸ್ಥಾನಕ್ಕೆ ಸ್ಪರ್ಧಿಸುವವರು ಸಂಘದಿಂದ ಸಾಲ ಪಡೆದಿರಬಾರದೆಂಬ ಕಾರಣಕ್ಕಾಗಿ ಹಲವರ ಹೆಸರುಗಳನ್ನು ತೆಗೆದುಹಾಕಲಾಗಿತ್ತು

ಮೋಸೆಸ್ಸನವರ ಅಧಿಕಾರಾವಧಿ ಹೆಚ್ಚಳ

ಎ. ಜಿ. ಪಿ ಶ್ರೀ ಪಿ ಕೆ ಮೋಸೆಸ್ಸನವರ ಅಧಿಕಾರಾವಧಿಯನ್ನು ಕಳೆದ ಡಿಸೆಂಬರಿಂದ ೧ ವರ್ಷ ಕಾಲ ಹೆಚ್ಚಿಸಲಾಗಿದೆಯೆಂದು ವರದಿಯಾಗಿದೆ

ಬೌದ್ಧರಾಗಿ ಪರಿವರ್ತಿತರಾದವರಿಗೂ ಪೋಲೀಸರಿಗೂ ಘರ್ಷಣೆ

ಅಲಿಘಡದಲ್ಲಿ ಕಳೆದ ವಾರ ಹೊಸದಾಗಿ ಬೌದ್ಧ ಮತಕ್ಕೆ ಪರಿವರ್ತಿತರಾದ ಜಾಟವಾ ಕುಲದವರಿಗೂ, ಪೋಲೀಸರಿಗೂ ನಡೆದ ಘರ್ಷಣೆಯಲ್ಲಿ ಒಬ್ಬ ಇನ್ಸ್‌ಪೆಕ್ಟರೂ ಮತ್ತು ೯ ಮಂದಿ ಪೋಲೀಸರಿಗೆ ಕಲ್ಲಿನೇಟುಗಳಿಂದ ಗಾಯಗಳಾದುವೆಂದೂ, ೧೩ ಜನರನ್ನು ಬಂಧಿಸಲಾಯಿತೆಂದೂ ವರದಿಯಾಗಿದೆ ನೂತನ ಮತಾವಲಂಬಿಗಳು ಅಲ್ಲಿನ ಒಂದು ದೇವಾಲಯದಲ್ಲಿ ರಾಮ ಮತ್ತು ಸೀತೆಯ ವಿಗ್ರಹಗಳನ್ನು ಕಿತ್ತು ಅವುಗಳ ಸ್ಥಾನದಲ್ಲಿ ಬುದ್ಧನ ವಿಗ್ರಹವನ್ನು ಸ್ಥಾಪಿಸಲು ಪ್ರಯತ್ನಿಸಿದರೆಂದೂ, ಅದಕ್ಕೆ ಇತರ ಜಾಟವರು ಅಡ್ಡಿಬಂದಾಗ ಘರ್ಷಣೆಗೆ ಕಾರಣವಾಯಿತೆಂದೂ ಹೇಳಲಾಗಿದೆ ಅಲ್ಲಿಗೆ ಬಂದ ಪೋಲೀಸು ವ್ಯಾನಿನ ಮೇಲೆ ಉದ್ರಿಕ್ತ ಜನರು ನುಗ್ಗಲಾಗಿ, ಜನರನ್ನು ಚದುರಿಸಲು ಆಜ್ಞೆ ಕೊಡಲಾಯಿತು ಜನರು ಕಲ್ಲು ಬೀರಿದಾಗ ಪೋಲೀಸರು ಅಶ್ರುವಾಯು ಮತ್ತು ಲಾಠಿ ಪ್ರಯೋಗ ಮಾಡಿದರು. ಗುಂಪಿನ ೧೨ ಮಂದಿಗೆ ಗಾಯಗಳಾದುವು

ಜಾರ್ಡಾನ್ ರಾಜಧಾನಿಯಲ್ಲಿ ಹರತಾಳ

ಜಾರ್ಡಾನಿನ ವಾಮ ರಾಜಕೀಯ ಪಕ್ಷಗಳು ಮುಷ್ಕರ ನಡೆಸಬೇಕೆಂಬ ಕರೆಯಿತ್ತ ಸಂದರ್ಭದಲ್ಲಿ ನೆನ್ನೆ ಅಲ್ಲಿನ ರಾಜಧಾನಿ ಅಮ್ಮಾನಿನಲ್ಲಿ ಯುವಕರು "ಐಸೆನ್‌ಹೋವರರ ಯೋಜನೆ ಮುರಿದು ಬೀಳಲಿ" ಎಂದು ಕೂಗುತ್ತಾ ಬೀದಿಗಳಲ್ಲಿ ಪ್ರದರ್ಶನ ನಡೆಸಿದರು ಪ್ರದರ್ಶಕರ ಒಂದು ತಂಡವನ್ನು ಭದ್ರತಾ ಅಧಿಕಾರಿಗಳು ಚದುರಿಸಿದರು ಆದರೆ ಯುವಕರು ೨೦-೩೦ ಜನರ ತಂಡಗಳನ್ನು ಮಾಡಿಕೊಂಡು ತಿರುಗಾಡುತ್ತಾ "ಅಮೆರಿಕದವರೇ ಇಲ್ಲಿಗೆ ಬರಬೇಡಿ, ಬಂದರೆ ರಕ್ಷಕರು ನಿಮ್ಮನ್ನು ತಡೆಯುವರು" ಎಂದು ಕೂಗುತ್ತಿದ್ದರು ಊರಿನ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು ಈ ಮುಷ್ಕರವು ಅರಸನ ಮತ್ತು ಡಾ|| ಖಲೀದಿ ಸರ್ಕಾರದ ಬಲಾಬಲಗಳನ್ನು ಗೊತ್ತುಪಡಿಸುವ ಲಕ್ಷ್ಯವಾಗಿ ಪರಿಣಮಿಸುವುದೆಂದು ಹೇಳಲಾಗಿದೆ

ಇಲಾಖಾ ಸಿಬ್ಬಂದಿ ಮಂಡಲಿಗಳ ಸ್ಥಾಪನೆ

ಬೊಂಬಾಯಿ ಮತ್ತು ಮದ್ರಾಸು ಸಂಸ್ಥಾನಗಳಲ್ಲಿರುವಂತೆ ಮೈಸೂರಿನಲ್ಲೂ ನಾನಾ ಇಲಾಖೆಗಳ ಸಿಬ್ಬಂದಿ ಮಂಡಲಿಯನ್ನು ನೇಮಿಸಲು ಸರ್ಕಾರದವರು ಆಲೋಚಿಸಿರುತ್ತಾರೆ ಈ ವಿಚಾರವನ್ನು ಇದೇ ೩೦ನೇ ತಾರೀಖು ಬೆಂಗಳೂರಿನಲ್ಲಿ ಸೇರುವ ಡಿವಿಜನಲ್ ಕಮಿಷನರುಗಳ ಸಮ್ಮೇಳನದಲ್ಲಿ ಪರಿಶೀಲಿಸಲಾಗುವುದು ನೌಕರರ ಕುಂದುಕೊರತೆ ಪರಿಶೀಲನೆ, ನೌಕರರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಮುಂತಾದ ಕಾರ್ಯಗಳನ್ನು ನಡೆಸಿ, ಆ ಮೂಲಕ ಇಲಾಖೆಗಳಲ್ಲಿ ಕೆಲಸದ ದಕ್ಷತೆ ಹೆಚ್ಚಿಸುವುದಕ್ಕಾಗಿ ಸಿಬ್ಬಂದಿ ಮಂಡಲಿಯನ್ನು ಏರ್ಪಡಿಸಲಾಗುವುದು. ರೈಲು ಮತ್ತು ಪೋಲೀಸು ಇಲಾಖೆಗಳಿಗೆ ಸಂಬಂಧಪಟ್ಟಂತೆ ಇಂಥದ ಮಂಡಲಿಗಳನ್ನು ರಚಿಸಲಾಗುವು

ಸೂಯೆಜ್ ಕಾಲುವೆ ಮೇಲ್ವಿಚಾರಣೆ ಮತ್ತು ದರದ ನಿಗದಿ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗೆ ಈಜಿಪ್ಟಿನ ಪತ್ರ

ಈಜಿಪ್ಟಿನ ವಿದೇಶಾಂಗ ಮಂತ್ರಿ ಡಾ|| ಫೌಜಿಯವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರಿಗೆ ಪತ್ರ ಬರೆದು ಸೂಯೆಜ್ ಕಾಲುವೆ ಸಂಚಾರದ ದರವನ್ನು, ಸಂಘಾತದಲ್ಲಿದ್ದ ಶೇಕಡ [illegible]ಕ್ಕಿಂತ ಮಿಗಿಲಾಗಿ ಹೆಚ್ಚಿಸುವುದಿಲ್ಲವೆಂದು ಭರವಸೆಯಿತ್ತಿರುವರು ಕಾಲುವೆಯ ಮೇಲ್ವಿಚಾರಣೆಯನ್ನು ಸ್ವತಂತ್ರವಾದ ಮಂಡಳಿಯು ನಡೆಸುವುದೆಂದೂ ತಿಳಿಸಲಾಗಿದೆ ಕಾಲುವೆ ದರದ ಬಗ್ಗೆ ಸಂಬಂಧಪಟ್ಟವರಿಗೆ ಒಪ್ಪಂದವಾಗದಿದ್ದರೆ ಅಂತರ ರಾಷ್ಟ್ರ ನ್ಯಾಯಾಲಯದಲ್ಲಿ ವ್ಯವಹರಿಸಬಹುದೆಂದು ಸೂಚಿಸಲಾಗಿದೆ

ಹೆಂಡತಿ ಮತ್ತು ಅತ್ತೆ ಕಿವಿ-ಮೂಗು ಕುಯ್ದ ಪ್ರಸಂಗ

ಬೆಳಗಾವಿ ಬಳಿ ಚಿಕ್ಕಗೋಡಹಳ್ಳಿ ಹೋಬಳಿಗೆ ಸೇರಿದ ಕೊಡಗಳ್ಳಿ ಗ್ರಾಮದಲ್ಲಿ ಕಳೆದ ೨೦ನೇ ತಾರೀಖು ಒಬ್ಬನು ತನ್ನ ಹೆಂಡತಿ ಮತ್ತು ಅತ್ತೆಯರ ಮೂಗು ಮತ್ತು ಕಿವಿಗಳನ್ನು ಕುಯ್ದುಹಾಕಿರುವುದಾಗಿಯೂ, ಅವರುಗಳನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದೂ ವರದಿಯಾಗಿದೆ. ಬೆಳಗಾವಿ ಪೋಲೀಸರು ತನಿಖೆ ನಡೆಸುತ್ತಿರುವರು

ಸಂಸ್ಥಾನದ ಸಹಕಾರ ಮಾರ್ಕೆಟಿಂಗ್ ಸಂಘಕ್ಕೆ ನಾಮಕರಣ

ಮೈಸೂರು ಸಂಸ್ಥಾನದ ಸಹಕಾರ ಮಾರ್ಕೆಟಿಂಗ್ ಸಂಘಕ್ಕೆ ಒಂದು ವರ್ಷದ ಅವಧಿಗಾಗಿ ಸರ್ಕಾರದವರು ಈ ರೀತಿ ನಾಮಕರಣ ಮಾಡಿರುತ್ತಾರೆ:— ಅಧ್ಯಕ್ಷರು : ಶ್ರೀ ಜೆ. ಕೆ ಕುಮಾರಸ್ವಾಮಿ ಸದಸ್ಯರು : ಶ್ರೀಗಳಾದ ಹೆಚ್. ಬಿ. ಪಾಟೀಲ್, ಕೆ ಆರ್. ಶ್ರೀಕಂಠೇಶ್ವರ್, ವ್ಯವಸಾಯ ಇಲಾಖಾ ಡೆಪ್ಯುಟಿ ಡೈರೆಕ್ಟರು, ಸಹಕಾರ ಶಾಖಾ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಸೀನಿಯರ್ ಮಾರ್ಕೆಟಿಂಗ್ ಅಧಿಕಾರಿಗಳು.

ಇಸ್ಪೀಟ್ ಜೂಜಾಡುತ್ತಿದ್ದವರಿಗೆ ದಂಡ

ನಗರದ ರೈಲ್ವೆ ಸ್ಟೇಷನ್ ಪ್ರದೇಶದಲ್ಲಿ ಇಸ್ಪೀಟ್ ಜೂಜಾಡುತ್ತಿದ್ದ ನಾಗರಾಜು, ಅಬ್ದುಲ್ ಅಜೀಜ್, ಮಹಮದ್ ಹನೀಫ್, ಮಾದಶೆಟ್ಟಿ ಮತ್ತು ಸಿದ್ದಯ್ಯ ಎಂಬುವರ ಮೇಲೆ ದಫೇದಾರ್ ಶ್ರೀ ರಾಮಯ್ಯ ಎಂಬುವರು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತರಿಗೆ ತಲಾ ೫ ರೂ. ದಂಡ ವಿಧಿಸಲಾಯಿತು.

ಹರಿಕಥೆ

ನಗರದ ಸಿವಿಲ್ ಪೋಲೀಸ್ ಹೆಡ್ ಕ್ವಾರ್ಟರ್ಸಿನ ಶ್ರೀ ರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ವಿ|| ಎಸ್. ಎಸ್ ಸುಬ್ಬರಾಮಯ್ಯನವರು ಈ ಸಂಜೆ ಭಕ್ತ ಮಾರ್ಕಂಡೇಯ ಎಂಬ ಕಥೆಯನ್ನೂ, ನಾಳೆ ಗರುಡ ಗರ್ವ ಭಂಗ ಎಂಬ ಕಥೆಯನ್ನೂ ಮಾಡುವರು.

ಸಂಸ್ಥಾನದಲ್ಲಿ ಮತ್ತೊಂದು ಡಿ. ಐ. ಜಿ. ಹುದ್ದೆ

ಬೆಂಗಳೂರು ೨೫

ಸಂಸ್ಥಾನದ ಪೋಲೀಸು ಇಲಾಖಾ ಮುಖ್ಯಾಧಿಕಾರಿಯಾದ ಶ್ರೀ ಪಿ ಕೆ ಮೋನಪ್ಪನವರ ಶಿಫಾರಸಿನಂತೆ ಸರ್ಕಾರದವರು ಮತ್ತೊಂದು ಡೆಪ್ಯುಟಿ ಪೋಲೀಸು ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯನ್ನೇರ್ಪಡಿಸಲು ಒಪ್ಪಿರುತ್ತಾರೆ ಅದಕ್ಕೆ ಶ್ರೀ ಸಿ ಚಾಂಡಿಯವರನ್ನು ನೇಮಿಸಲಾಗಿದೆ ಅವರು ಬೆಂಗಳೂರು ನಗರ, ಜಿಲ್ಲೆ ಕೋಲಾರ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಮೇಲೆ ಅಧಿಕಾರ ಹೊಂದಿರುವರು

ಬೆಂಗಳೂರು ನಗರದಲ್ಲಿ ಮದ್ರಾಸಿನಲ್ಲಿರುವಂತೆ ಒಬ್ಬ ಪೋಲೀಸು ಕಮಿಷನರರನ್ನು ನೇಮಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ತಿಳಿದುಬಂದಿದೆ

ವಿಧಾನ ಸೌಧ ತನಿಖೆ ಸಮಿತಿಯ ವರದಿ ಪರಿಶೀಲನೆ

ನೂತನ ಮಂತ್ರಿಮಂಡಲವು ನೆನ್ನೆ ವಿಧಾನ ಸೌಧ ಸಮಿತಿಯ ವರದಿಯನ್ನು ಪರಿಶೀಲಿಸಿ, ಸಮಿತಿಯವರು ಮಾಡಿರುವ ಶಿಫಾರಸಿನಲ್ಲಿ ಇಲಾಖಾ [illegible] ಕೈಗೊಳ್ಳಬೇಕಾದ ಕ್ರಮಗಳನ್ನು ಜರುಗಿಸಬೇಕೆಂದು ನಿರ್ಧರಿಸಿತು

ಏಲಕ್ಕಿ ಬೆಳೆಗಾರರಿಗೆ ಕೇಂದ್ರ ಸರ್ಕಾರದ ಸಾಲ

ಏಲಕ್ಕಿಯನ್ನು ಬೆಳೆಯುವ ಸಂಸ್ಥಾನಗಳ ತೋಟಗಳಿಗೆ ಸಸಿ ಒದಗಿಸಲು ಕೇಂದ್ರ ಸರ್ಕಾರದ ವ್ಯವಸಾಯ ಸಂಶೋಧನಾ ಮಂಡಲಿಯವರು ಹಲವಾರು ಏಲಕ್ಕಿ ಸಸಿಗಳ ತೋಟಗಳನ್ನು ಏರ್ಪಡಿಸುವರೆಂದು ವರದಿಯಾಗಿದೆ ಈ ಬಗ್ಗೆ ತಗಲುವ ವೆಚ್ಚವನ್ನು ಕೇಂದ್ರ ಮತ್ತು ಪ್ರಾಂತ ಸರ್ಕಾರಗಳು ಸಮನಾಗಿ ಹಂಚಿಕೊಳ್ಳುವುವು ಎಕರೆಗೆ ೧೫೦ ರೂ ನಂತೆ ಏಲಕ್ಕಿ ಬೆಳೆಗಾರರಿಗೆ [illegible]ವಧಿಯಾಗಿ ಸಾಲವನ್ನು ಕೊಡಲಾಗುವುದೆಂದು ಹೇಳಲಾಗಿದೆ

ಅಮೇರಿಕವು ಅಣು ಬಾಂಬುಗಳ ಪರೀಕ್ಷಾ ಸಿಡಿತ ನಿಲ್ಲಿಸುವುದಿಲ್ಲ

ಅಣು ಶಸ್ತ್ರಾಸ್ತ್ರ ಪರೀಕ್ಷಾ ಸಿಡಿತವನ್ನು ಅಮೇರಿಕ ನಿಲ್ಲಿಸುವುದಿಲ್ಲವೆಂದು ಅಲ್ಲಿನ ಸರ್ಕಾರದ ಪರ [illegible] ಅಣು ದೂತರೆಂದು ಪ್ರಸಿದ್ಧರಾದ ಡಾ || ಎಸ ಬೋಷಿ ಮತ್ತು ಪಿಟಾರವರಿಗೆ ತಿಳಿಸಿರುತ್ತಾರೆ ಕಳೆದ ವಾರ ಮುಟ್ಸ್ ಪಿಟ ರವರು ಅಮೇರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರೊಡನೆ ಈ ಬಗ್ಗೆ ಮಾತುಕತೆ ನಡೆಸಿದ್ದು ಸರ್ವರೂ ಒಪ್ಪುವ ಅಂತರ ರಾಷ್ಟ್ರೀಯ ಶಸ್ತ್ರ ಸನ್ಯಾಸ ಕೌಲು ಆದರೆ ಅಮೇರಿಕವು ಈ ಪರೀಕ್ಷಾ ಸಿಡಿತಗಳನ್ನು ನಿಲ್ಲಿಸುವುದೆಂದು ಡಲ್ಲೆಸರು ಅವರಿಗೆ ಹೇಳಿದ್ದರೆಂದು ವರದಿಯಾಗಿದೆ

ಕಛೇರಿಗಳಲ್ಲಿ ಕೆಲಸದ ಆಲಸ್ಯ

ಸರ್ಕಾರಿ ನೌಕರರು ತಮ್ಮ ಕೆಲಸವನ್ನು ನಿಧಾನವಾಗಿ ಮಾಡಬಾರದೆಂದು ಪ್ರಧಾನಿ ನೆಹರೂರವರು ಹೇಳುವಂತೆ ನಡೆದರೆ ದೇಶದಲ್ಲಿ ರಾಮರಾಜ್ಯ ಬರುವುದು ಸಂದೇಹವಿಲ್ಲ ನೆಹರೂರವರ ಸೂಚನೆಯನ್ನು ಮೈಸೂರು ಅಧಿಕಾರಿಗಳು ಗಮನಕ್ಕೆ ತೆಗೆದುಕೊಳ್ಳುವುದು ಲೇಸು ಇಲ್ಲಿ ಕೆಲಸದ ಸಾವಕಾಶಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಅನೇಕರು ವಿಧಿ ಪ್ರಕಾರ ೧ ರೂ ಅನ್ನು ಸರ್ಕಾರಕ್ಕೆ ಕಟ್ಟಿ ಅರ್ಜಿ ಕಳುಹಿಸಿದ್ದರೂ ಉತ್ತರ ಬಾರದಿರುವುದೇ ನಿದರ್ಶನವಾಗಿದೆ ಅರ್ಜಿದಾರರು ಸಂಬಂಧಪಟ್ಟ ಗುಮಾಸ್ತರನ್ನು ನೋಡಹೋದರೆ ಸಹಜವಾಗಿಯೇ ಅಸಹಜವಾಗಿಯೋ ನಾಳೆ, ನಾಳಿದ್ದು ಬನ್ನಿ ಎಂದು ಹೇಳುತ್ತಾರೆ ವಿದ್ಯಾ ಇಲಾಖೆಯಲ್ಲೂ ಸಹ ಈ ಪರಿಯ ನಿಧಾನವು ಎದ್ದು ಕಾಣುತ್ತದೆ ಎಂಬುದಾಗಿ ನಗರದ ವಾಚಕರೊಬ್ಬರು ಪತ್ರ ಬರೆದು ತಿಳಿಸಿರುವಲ್ಲದೆ ತಮ್ಮ ಮೊಮ್ಮಗಳು ೮ ವರ್ಷಗಳ ಹಿಂದೆ ಪಾಸಾಗಿ ಕಳೆದ ವರ್ಷ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ರಿಜಿಸ್ಟರ್ ಪತ್ರ ಕಳುಹಿಸಿದ್ದರೂ ಇನ್ನೂ ಉತ್ತರ ಬಂದಿಲ್ಲವೆಂದು ಹೇಳುತ್ತಾರೆ

ಟ

ಅಂಚೆ ಬಟವಾಡೆ ಬಗ್ಗೆ ನಗರದ ವಿಂಗಡಣೆ ವ್ಯವಸ್ಥೆ

ಬರುವ ತಿಂಗಳು ೧ರಿಂದ ಅಂಚೆ ಬಟವಾಡೆ ಬಗ್ಗೆ ನಗರವನ್ನು ಮೂರು ವಿಭಾಗವಾಗಿ ವಿಂಗಡಿಸಲಾಗುವುದಷ್ಟೆ ಅದರ ಪ್ರಕಾರ ಮೈಸೂರು ನಗರವೆಲ್ಲಾ ೧, ವಾಣಿವಿಲಾಸ ಮೊಹಲ್ಲಾ ಸಬ್ ಆಫೀಸು ಪ್ರದೇಶ ೨ ಮತ್ತು ಕೃಷ್ಣರಾಜೇಂದ್ರ ಗಿರಣಿ ಪ್ರದೇಶ ೩. ಹೀಗೆ ಮೂರು ವಿಭಾಗಗಳಾಗಿ ಗೊತ್ತುಪಡಿಸಲಾಗಿದೆ —

ಅಂಚೆ ಬಟವಾಡೆ ಕೆಲಸವು ಇತ್ತೀಚೆಗೆ ಬಹಳ ಸಾವಕಾಶವಾಗುತ್ತಿರುವುದು ಸರ್ವರಿಗೂ ತಿಳಿದ ವಿಷಯ ಅದು ತಪ್ಪಲು ಬೆಂಗಳೂರು ಮುಂತಾದ ಕಡೆಗಳಂತೆ ಇಲ್ಲೂ ನಗರದ ವಿಂಗಡಣೆ ಮಾಡುವುದೇನೋ ಸರಿ ಆದರೆ ಅದನ್ನು ಸಮರ್ಪಕವಾಗಿ ಮಾಡುವುದು ಲೇಸು ಈಗಾಗಲೇ ಮೇಲ್ಕಂಡ ಮೂರು ಸ್ಥಳಗಳಲ್ಲಿ ಪ್ರತ್ಯೇಕ ಬಟವಾಡೆ ಏರ್ಪಾಡು ಇದ್ದೇ ಇದೆ ಅದನ್ನು ಹೊಸದಾಗಿ ಸಂಖ್ಯೆಗಳ ಮೂಲಕ ಜಾರಿಗೆ ಕೊಡಲಾಗುವುದು. ಇದರಿಂದ ಬಟವಾಡೆಯಲ್ಲಿ ಆಗುವ ವಿಳಂಬವೇನೂ ತಪ್ಪುವುದಿಲ್ಲ

ಅದರ ಬದಲು ೧ನೇ ಭಾಗವನ್ನು ಮೂರು ಭಾಗವನ್ನಾಗಿಯಾದರೂ ವಿಂಗಡಿಸುವುದು ಸೂಕ್ತ ಮೈಸೂರು ನಗರವನ್ನು ಒಟ್ಟು ಐದು ಶಾಖೆಗಳಾಗಿ ವಿಂಗಡಿಸಲು ಅವಕಾಶವಿದೆ

೫೦ ಸಾವಿರ ಪ್ರಜಾ ಸಂಖ್ಯೆಗೆ ಒಂದರಂತೆ ಬಟವಾಡೆ ಕಛೇರಿಯನ್ನು ತೆಗೆದರೂ ಐದು ಕಛೇರಿಗಳ ಅಗತ್ಯವಿದೆ ಕೃಷ್ಣರಾಜೇಂದ್ರ ಗಿರಣಿ, ವಾಣಿವಿಲಾಸ ಮೊಹಲ್ಲಾಗಳಿಗಿಂತ ಮೈಸೂರು ನಗರದ ವ್ಯಾಪ್ತಿಯು ಅನೇಕ ಪಾಲು ಹೆಚ್ಚಾಗಿರುತ್ತದೆ ಹೀಗಿರುವಲ್ಲಿ ಈ ಮೂರು ಕಡೆಗಳಿಗೂ ಒಂದೇ ಸಮನಾದ ಏರ್ಪಾಡು ಮಾಡುವುದು ಸರಿಯಲ್ಲ

ನಗರದ ಚಾಮರಾಜಪುರಂ ಮತ್ತು ಕೋಟೆ ಕಛೇರಿಗಳಲ್ಲಿಯೂ ಬಟವಾಡೆ ವ್ಯವಸ್ಥೆಯನ್ನು ಮಾಡಿದರೆ ಈಗಿರುವ ನ್ಯೂನತೆಯು ತಪ್ಪಿ ಕೆಲಸವು ಸಮರ್ಪಕವಾಗಿ ಆಗಬಹುದು

ಈ ವಿಷಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಗಮನ ಕೊಟ್ಟು ತಕ್ಕ ಏರ್ಪಾಡು ಮಾಡುವರೆಂದು ಕೋರಲಾಗಿದೆ

— ಪುರನಿವಾಸಿ

ತೀರ್ಥಹಳ್ಳಿ ಬಳಿ ಸೇತುವೆ ಕುಸಿದು ಐವರ ಮರಣ

ತೀರ್ಥಹಳ್ಳಿ ಟವನ್ನಿನ ಹೊಸಭಾಗದಲ್ಲಿ ಕುಶಾವತಿ ನದಿಗೆ ಕಟ್ಟುತ್ತಿರುವ ಸೇತುವೆಯು ನೆನ್ನೆ ಬೆಳಿಗ್ಗೆ ಕುಸಿಯಲಾಗಿ ೫ ಜನರು ಮಡಿದು ಹಲವರಿಗೆ ಗಾಯಗಳಾದುವೆಂದು ವರದಿಯಾಗಿದೆ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ ೪ ಶವಗಳು ದೊರೆತುವು

ಸೇಲಂ ಬ್ಯಾಂಕಿನಿಂದ ೧೫ ಲಕ್ಷ ರೂ. ಮಾಯ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸೇಲಂ ಶಾಖೆಯಲ್ಲಿ ೧,೬೦,೦೦೦ ರೂ ಮಾಯವಾಗಿರುವುದೆಂದೂ, ಈ ಬಗ್ಗೆ ತನಿಖೆ ನಡೆಯುತ್ತಿರುವುದೆಂದೂ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಹುಟ

ಕೊಯಮುತ್ತೂರು	೪೦ ೬೦	೪೧ ೭೫
ರತ್ನಚೂಡಿ	೩೯ ೭೫	೪೧ ೦೦
ಕಡ್ಡಿ	೩೯ ೭೫	೪೩ ೬೩
ಕೇಸರಿ	೪೦ ೬೩	
ರಾಗಿ	೪೨ ೧೨	೪೪ ೦೦
ಕಡಲೆಕಾಯಿ	೩೧ ೨೫	೩೪ ೦೦
ಹರಳುಬೀಜ	೪೧ ೫೦	
ಹುಚ್ಚೆಳ್ಳು	೪೪ ೧೨	೪೪ ೪೭
ಹೊಂಗೇಬೀಜ	೩೧ ೪೭	೩೭ ೪೭
ಹುರುಳಿ	೪೦ ೦೦	೪೧ ೫೦
ಹರಳೆಂಡಿ	೪೪ ೨೫	
ಧನಿಯ	೨೪ ೪೨	೨೫ ೬೩
ಸೆಣಬಿನ ಬೀಜ	೬೪ ೨೫	೪೪ ೪೭
ಹುಣಸೆಬೀಜ	೫ ೬೩	೫ ೭೭
ಹುಣಸೇಹಣ್ಣು	೯ ೫೦	೪ ೬೩
ಶೇಂಗಾ [illegible]	೪ ೨೫	
ಹೊಂಗೆಎಣ್ಣೆ	೧೨ ೫೦	
ತೆಂಗಿನಕಾಯಿ	೧೧೩೪ ೦೦	೧೬೪ ೦೦

ಸ್ವೀಡನ್ ಮಂತ್ರಿಯೊಬ್ಬರ ಆತ್ಮಹತ್ಯೆ

ಸ್ವೀಡನ್ನಿನ ಸಂಪರ್ಕ ಶಾಖಾ ಮಂತ್ರಿ ಹಾರ್ವಿಕ್ ಹೆನ್ರಿಕ್‌ಸನ್‌ರವರು ನೆನ್ನೆ ತಮ್ಮ ಗೃಹದಲ್ಲಿ ಆತ್ಮಹತ್ಯ ಮಾಡಿಕೊಂಡರು ಅವರ ಮರಣದ ಬಗ್ಗೆ ತನಿಖೆಗಾಗಿ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ವಯೊಲೆಟ್ ಆಲ್ವಾರಿಂದ ಪ್ರಮಾಣವಚನ

ಕೇಂದ್ರ ಸರ್ಕಾರದ ಉಪ ಮಂತ್ರಿಯಾಗಿ ಶ್ರೀಮತಿ ವಯೊಲೆಟ್ ಆಲ್ವಾರವರು ನೆನ್ನೆ ರಾಜ್ಯಾಧ್ಯಕ್ಷರ ಸಮ್ಮುಖದಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದರು ಶ್ರೀಮತಿಯವರು ಕಾರವಾರದವರು ಅವರು ಗೃಹ ಇಲಾಖಾ ಉಪಮಂತ್ರಿಯಾಗಿ ಮೊನ್ನೆಯೇ ಅಧಿಕಾರ ವಹಿಸಿಕೊಂಡರು

ಮದ್ರಾಸ್ ಪೌರಸಭೆಯವರಿಂದ ತಮಿಳಿನಲ್ಲಿ ಪತ್ರ ವ್ಯವಹಾರ

ಮದ್ರಾಸ್ ಸರ್ಕಾರದ ನೀತಿಗನುಸಾರವಾಗಿ ಮದ್ರಾಸ್ ಪೌರಸಭಾಧಿಕಾರಿಗಳು ಅಲ್ಲಿನ ಪೌರಸಭಾ ಸದಸ್ಯರೊಡನೆ ತಮಿಳು ಭಾಷೆಯಲ್ಲಿ ಪತ್ರ ವ್ಯವಹಾರ ನಡೆಸಬೇಕೆಂದು ಅಲ್ಲಿನ ಕಮಿಷನರರು ಸೂಚಿಸಿರುತ್ತಾರೆ

ಶಂಕರ ಜಯಂತಿ ಉತ್ಸವ ನಡೆಸುವವರಿಗೆ ಸೂಚನೆ

ಬರುವ ತಿಂಗಳು ೪ನೇ ತಾರೀಕು ಶನಿವಾರ ಶಂಕರ ಜಯಂತಿ ಉತ್ಸವವು ದೇಶದ್ಯಂತ ನೆರವೇರುವುದು ಉತ್ಸವ ನಡೆಸುವ ಭಕ್ತರು ಕಾಂಚೀಪುರದ ಕಾಮಕೋಟಿ ಪೀಠದ ಶ್ರೀ ಶಂಕರ ಮಠಕ್ಕೆ ಮುಂಚೆಯೇ ಬರೆದರೆ ಉತ್ಸವ ನಡೆಸುವ ವಿಧಾನವನ್ನು ಸೂಚಿಸುವ ಸಾಹಿತ್ಯವನ್ನು ಕಳುಹಿಸಲಾಗುವುದೆಂದು ಮಠದವರು ತಿಳಿಸಿರುತ್ತಾರೆ

ಮಂಡಿ ಮೊಹಲ್ಲಾ ಕಛೇರಿ

ನಗರದ ಪೌರಸಭೆಯವರು ನಾಳೆ ದಿನ ಮಂಡಿ ಮಾರ್ಕೆಟ್ಟಿನಲ್ಲಿ ಮೊಹಲ್ಲಾ ಕಛೇರಿಯನ್ನು ನಡೆಸುವರು ಇದಕ್ಕೆ ಮುಂಚೆ ಆ ಪ್ರದೇಶದ ಪರಿಶೀಲನೆಯನ್ನು ಬೆಳಿಗ್ಗೆ ೮|| ಗಂಟೆಯಿಂದ ೯||ವರೆಗೆ ಮಾಡಲಾಗುವುದು ನಾಗರಿಕರು ತಮ್ಮ ಕುಂದುಕೊರತೆಗಳನ್ನು [illegible]ಯಾಗಲೀ ಅರ್ಜಿಗಳ ಮೂಲಕವಾಗಲೀ ತಿಳಿಸಬಹುದು

ಸಂಗೀತ ಕಚೇರಿಗಳು

ಮುಖ್ಯದ ಶ್ರೀ [illegible] ಮಂದಿರದಲ್ಲಿ [illegible]ವೋತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ವಿ|| ಬಳ್ಳಾರಿ ಸಹೋದರರ ಮತ್ತು ನಾಳಿದ್ದು ವಿ|| ಹೆಚ್ ಆರ್ ಸೀತಾರಾಮಶಾಸ್ತ್ರಿಯವರ ಸಂಗೀತವು ನಡೆಯುವುದು

ಶಾರದಾ ಪೂಜೆ

ಚಾಮರಾಜನಗರದ ಶ್ರೀ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಮತ್ತು ಅರವಿಂದ ಹಿಂದಿ ಮಂದಿರದ ಆಶ್ರಯದಲ್ಲಿ ಕಳೆದ ಸೋಮವಾರ ಶಾರದಾ ಪೂಜೆಯು ಅಲ್ಲಿನ ಪೌರಸಭಾ ಸದಸ್ಯರಾದ ಶ್ರೀ ಸಿ ವಿ ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ದೇವತಾ ಪ್ರಾರ್ಥನೆಯಾದನಂತರ ಶ್ರೀ ಟಿ ವಿ. ವೆಂಕಟಕೃಷ್ಣಯ್ಯನವರಿಂದ ಸ್ವಾಗತ, ಶ್ರೀ ಎ ಎಸ್ ನಾಗಪ್ಪನವರಿಂದ ವರದಿಗಳಾದುವು. ಮೈಸೂರು ಸರ್ಕಾರಿ ಟ್ರೈನಿಂಗ್ ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ಎ ಟಿ ಶ್ರೀನಿವಾಸರಾಘವಾಚಾರ್ಯರು ತುಳಸಿ ರಾಮಾಯಣದ ಹಿರಿಮೆ ಬಗ್ಗೆ ಉಪನ್ಯಾಸ ಮಾಡಿದರು ವಿದ್ಯಾರ್ಥಿ ಶ್ರೀ ಕೆ ಎಸ್ ಅನಂತನಾರಾಯಣರಿಂದ ಭಾಷಣವಾದಮೇಲೆ ಅಧ್ಯಕ್ಷರು ವಿವಿಧ ಹಿಂದಿ ಮತ್ತು ಕಾಮರ್ಸ್ ಪರೀಕ್ಷೆಗಳಲ್ಲಿ ಗೆದ್ದವರಿಗೆ ಪ್ರಮಾಣ ಪತ್ರಗಳನ್ನೂ, ಹೊಸ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನೂ ಹಂಚಿದರು ಶ್ರೀ ಎ ನಾಗರಾಜ್‌ರವರಿಂದ ವಂದನಾರ್ಪಣೆಯಾದಮೇಲೆ ಮಂಗಳಾರತಿ ಮತ್ತು ರಾಷ್ಟ್ರಗೀತೆಗಳಿಂದ ಸಮಾರಂಭವು ಮುಕ್ತಾಯವಾಯಿತು ಮನರಂಜನೆ ಅಂಗವಾಗಿ ಶ್ರೀ ಗೋಪಾಲ್‌ರವರ ಸಂಗೀತವು ನಡೆಯಿತು

ಹಾರುತ್ತಿದ್ದ ವಿಮಾನದಿಂದ ಬಿದ್ದು ಮರಣ

ಫ್ರಾನ್ಸಿನ ವಿಮಾನವೊಂದು ಕಳೆದ ಶುಕ್ರವಾರ ದಕ್ಷಿಣ ಇಂಗ್ಲೆಂಡಿನಲ್ಲಿ ೧೮ ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿದ್ದಾಗ ಅದರ ಒಂದು ಬಾಗಿಲು ಮುರಿದು ಒಳಗೆ ಕುಳಿತಿದ್ದ ಅಮೇರಿಕದ [illegible] ಆರ್ [illegible] ಎಂಬುವವನು ವಾಯುವಿನ ರಭಸಕ್ಕೆ ಹೊರಗೆ ಸೆಳೆಯಲ್ಪಟ್ಟು ಕೆಳಗೆ ಬಿದ್ದು ಮೃತಪಟ್ಟುದಾಗಿ ವರದಿಯಾಗಿದೆ

ಕೊಲೆಗಾಗಿ ವಕೀಲರ ಬಂಧನ

ಹೈದರಾಬಾದು ಬಳಿ ವಿಕಾರಾಬಾದಿನ ವಕೀಲರಾದ ರಾಮರಾವ್ ಎಂಬುವರನ್ನು ಸಂಗರೆಡ್ಡಿ ಎಂಬ ಪಟ್ವಾರಿಯೊಬ್ಬನ ಕೊಲೆ ಸಂಬಂಧದಲ್ಲಿ ಬಂಧಿಸಲಾಗಿದೆ

ಹಿಂದೀ ತರಗತಿಗಳು

ಬೆಂಗಳೂರಿನಲ್ಲಿರುವ ಮೈಸೂರು ಹಿಂದಿ ಸಾಹಿತ್ಯ ಪರಿಷತ್ತಿನವರು ಬರುವ ಜೂನ್ ೨ರಂದು ಪ್ರಾಥಮಿಕ ವಿಶೇಷ ಪರೀಕ್ಷೆಯನ್ನು ನಡೆಸುವರು ಅದಕ್ಕೆ ತರಗತಿಗಳನ್ನು ಇಂದಿನಿಂದ, ಸೀತಾರಾಮರಾವ್ ರಸ್ತೆಯಲ್ಲಿರುವ ಹಿಂದಿ ಸಾಹಿತ್ಯ ಸಮಿತಿ ಕಾರ್ಯಾಲಯದಲ್ಲೂ ಮತ್ತು ಮಾದರಿ ಶಾಲಾ ಸೇವಾ ಸಂಘದಲ್ಲೂ ನಡೆಸಲಾಗುವುದು ಹೈಸ್ಕೂಲು ವಿದ್ಯಾರ್ಥಿಗಳು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದೆಂದು ಕೋರಲಾಗಿದೆ

ಅಖಿಲ ಭಾರತ ವೃತ್ತಿ ಮತ್ತು ವಿದ್ಯಾಭ್ಯಾಸ ಮಾರ್ಗದರ್ಶನ ಸಮ್ಮೇಳನ

ಅಖಿಲ ಭಾರತ ವೃತ್ತಿ ಮತ್ತು ವಿದ್ಯಾಭ್ಯಾಸ ಮಾರ್ಗದರ್ಶನ ಸಂಘದ ಸಮ್ಮೇಳನವು ನಾಳೆ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ನೆರವೇರುವುದು ವೈಸ್ ಛಾನ್ಸೆಲರ್ ಡಾ|| ಕೆ ವಿ ಪುಟ್ಟಪ್ಪನವರು ಅದರ ಆರಂಭೋತ್ಸವವನ್ನು ನೆರವೇರಿಸುವರು ಸಮ್ಮೇಳನವು ೨೭ ಮತ್ತು ೨೮ರಂದೂ ಸೇರುವುದು

ಯಕ್ಷಗಾನ

ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶೀ ಪ್ರಯುಕ್ತ ಈ ರಾತ್ರಿ ೮ ಗಂಟೆಗೆ ಶ್ರೀ ಚಾಮುಂಡೇಶ್ವರಿ ಯಕ್ಷಗಾನ ಕಲಾ ಮಂಡಲಿಯವರಿಂದ ದ್ರೌಪದಿ ಪ್ರತಾಪ ಎಂಬ ಕಥೆಯು ನಡೆಯುತ್ತದೆ ಸರ್ವರಿಗೂ ಸ್ವಾಗತವಿದೆ

ಮಲ್ಲಾರಾಧ್ಯರಿಂದ ಕೃತಜ್ಞತೆ ಸೂಚನೆ

ವಿಶ್ವವಿದ್ಯಾಲಯದ ಸೆನೆಟ್ ಸಭೆಗೆ ಹೆಚ್ಚು ಮತಗಳಿಸಿ ಆರಿಸಲ್ಪಟ್ಟಿರುವ ಶ್ರೀ ಜಿ ಬಿ ಮಲ್ಲಾರಾಧ್ಯರು ತಮಗೆ ಓಟು ಕೊಟ್ಟ ರಿಜಿಸ್ಟರ್ಡ್ ಪದವೀಧರರೂ ಮತ್ತು ಅಭಿನಂದನೆಗಳನ್ನು ಸಲ್ಲಿಸಿರುವವರೆಲ್ಲರಿಗೂ ಈ ಮೂಲಕ ಕೃತಜ್ಞತೆಯನ್ನು ಸೂಚಿಸಿರುತ್ತಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೧೫ ಗಾಂಧಿ ಸ್ಮೃತಿ ೭.೩೦ ಹಿಂದಿ ಪಾಠ ೮-೧೫ ಕೆ ಎಸ್ ಇಂದಿರಾ- ದೇವರನಾಮ ಮಧ್ಯಾಹ್ನ ೧೨ ಮತ್ತು ಸಂಜೆ ೫ ೩೦ ಚಿನ್ನಮ್ಮ ಸಂಗೀತ ೧೨-೩೦ ವಾದ್ಯವೃಂದ ೧ ಗಾತ್ರ ಸಂಗೀತ ೧-೫೦ [illegible] ೩ ವನಿತಾವಿಹಾರ ೬-೫ ನೃತ್ಯಗೀತೆ ೭ ೩೦ ಕನ್ನಡ ಭಾಷಣ ೮ [illegible] ವ್ಯಾಸ್-ಸಂಗೀತ ಮದ್ರಾಸಿನಿಂದ ಪ್ರಸಾರ. ೯-೧೫ ತರಂಗರಂಗ. ೧೦ ಇಂಗ್ಲಿಷ್-ಹಿಂದಿಯಲ್ಲಿ ವಿನೋದ ಕಾರ್ಯಕ್ರಮ

SREE GAYATHRI
TALKIES
On 25-4-57 One day only
Warner's adventurous picture
THE SEARCHERS
With - John Wayne, Jeffry Hunters & Vera Miles
From 26 4-57 For 2 days
DESIREE
Morning shows on Sat & Sun
SARATOGA TRUNK

Edited Printed and Published by
A. R Nagarajau at Sadhvi Press,
D Subbiah Road Mysore

[illegible] ನಂ. 791

ಚಂದಾ ದರ
[illegible]
ತಿಂಗಳಿಗೆ [illegible]
[illegible]
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಬಿಡಿ ಪತ್ರಿಕೆ 2 ನಯೆ ಪೈಸೆ

[illegible]
[illegible]
ಸಾಧ್ವಿ ದಿನ ಪತ್ರಿಕೆಗೆ
[illegible]
[illegible]
[illegible]

ಸಂಪುಟ : [illegible]] SADHVI : FRIDAY 26—4—1957 ಮೈಸೂರು : ಶುಕ್ರವಾರ ೨೬—೪—೧೯೫೭ : [ಸಂಚಿಕೆ : [illegible]

ಜಾರ್ಡಾನಿನಲ್ಲಿ ಮಾರ್ಷಲ್ ಲಾ; ಮಾಜಿ ಪ್ರಧಾನಿ ಬಂಧನ

ಜಾರ್ಡಾನಿನಲ್ಲಿ ಮಾರ್ಷಲ್ ಲಾ ಜಾರಿ

ರಾಜಕೀಯ ಪಕ್ಷಗಳ ವಿಸರ್ಜನೆಗೆ ದೊರೆ ಹುಸೇನರ ಆಜ್ಞೆ

ಜಾರ್ಡಾನ್ ದೊರೆ ಹುಸೇನರು ನೆನ್ನೆ ತಮ್ಮ ದೇಶಾದ್ಯಂತ ಮಾರ್ಷಲ್ ಲಾ ವನ್ನು ಜಾರಿಗೆ ತರಲು ಆಜ್ಞೆ ಮಾಡಿದರು ಪ್ರದರ್ಶನಕಾರರನ್ನು ಹತ್ತಿಕ್ಕಲು ಹಗಲೂ ರಾತ್ರಿ ಕರ್ಫ್ಯೂವನ್ನು ವಿಧಿಸಲಾಗಿದೆ ತಮ್ಮ ಸಿಂಹಾಸನಕ್ಕೆ ಚ್ಯುತಿ ತರಲೆತ್ನಿಸಿದ ರಾಜಕೀಯ ಶಕ್ತಿಗಳನ್ನು ಎದುರಿಸಲು ದೊರೆಯು ಈ ಕ್ರಮಗಳನ್ನು ಕೈಗೊಂಡು, ಎಲ್ಲಾ ರಾಜಕೀಯ ಪಕ್ಷಗಳ ವಿಸರ್ಜನೆಗೂ ಆಜ್ಞೆ ಕೊಟ್ಟರು

ರಾಜಧಾನಿ ಅಮ್ಮಾನಿನಲ್ಲಿ ಗಸ್ತಿನ ಪೋಲೀಸರು ಮತ್ತು ಸೈನಿಕರು ವಿಶೇಷ ಎಚ್ಚರ[illegible] ಗುತ್ತಿಲ್ಲ ಸೈನಿಕರು ಬಂದೂಕಗಳನ್ನು ಹಿಡಿದು ಬೀದಿಗಳಲ್ಲಿ ತಿರುಗಾಡುತ್ತಿರುವರು

ಇತರ ರಾಷ್ಟ್ರಗಳೊಡನೆ ಎಲ್ಲಾ ಸಂಪರ್ಕವನ್ನು ಕಡಿದುಹಾಕಲಾಗಿದೆ ಅಂಶಿಕವಾಗಿ ಕೆಲವು ಟೆಲಿಫೋನುಗಳಿಗೆ ಮಾತ್ರ ಅವಕಾಶವಿದೆ

ಜಾರ್ಡಾನಿನಲ್ಲಿ ಹೊಸ ಮಂತ್ರಿಮಂಡಲ

ಡಾ|| ಹುಸೇನ್ ಖಲೀದಿಯವರ ಸರ್ಕಾರಕ್ಕೆ ರಾಜಕೀಯ ಪಕ್ಷಗಳು ಪ್ರಬಲ ಬೆದರಿಕೆಯನ್ನು ಹಾಕಿದ ಪರಿಣಾಮವಾಗಿ ಅವರ ಮಂತ್ರಿಮಂಡಲವು ಇತ್ತ ರಾಜೀನಾಮೆಯನ್ನು ದೊರೆ ಹುಸೇನರು ಅಂಗೀಕರಿಸಿ ಇಬ್ರಾಹಿಂ ಹಾಷಿಮ್‌ರವರ ಪ್ರಧಾನಿಗಿರಿಯಲ್ಲಿ ೭ ಜನ ಸ್ವತಂತ್ರ ಸದಸ್ಯರುಳ್ಳ ಮಂತ್ರಿಮಂಡಲದ ರಚನೆಗೆ ಒಪ್ಪಿದ್ದಾರೆ

ಜಾರ್ಡಾನ್ ನಾಯಕ ನಾಬುಲ್ಸಿ ಮತ್ತು ಸೈನ್ಯಾಧಿಕಾರಿಗಳ ಬಂಧನ

ಜಾರ್ಡಾನಿನ ಪ್ರಧಾನಿಯೂ ಮತ್ತು ಈಗ ತಾನೆ ರಾಜೀನಾಮೆಯಿತ್ತ ಡಾ|| ಖಲೀದಿ ಮಂತ್ರಿಮಂಡಲದ ವಿದೇಶಾಂಗ ಮಂತ್ರಿಯೂ ಆಗಿದ್ದ ಸುಲೇಮಾನ್ ನಾಬುಲ್ಸಿಯವರನ್ನು ದೊರೆ ಹುಸೇನರು ದಸ್ತಗಿರಿ ಮಾಡಿಸಿರುತ್ತಾರೆ ಅನೇಕ ಸೈನ್ಯಾಧಿಕಾರಿಗಳನ್ನೂ ಬಂಧಿಸಲಾಗಿದೆ ದೇಶದಲ್ಲಿ ಅರಾಜಕತೆ ಮತ್ತು ರಾಜದ್ರೋಹಗಳನ್ನು ನಡೆಸಲು ಪ್ರಚಾರ ಮಾಡುತ್ತಿದ್ದುದಕ್ಕಾಗಿ ಅನೇಕ ಕಮ್ಯೂನಿಸ್ಟರನ್ನೂ ದಸ್ತಗಿರಿ ಮಾಡಲಾಗಿದೆ

ದೊರೆ ಹುಸೇನರು ಹೊಸ [illegible] ಭಾಷಣ ಮಾಡಿ, [illegible] ತಮ್ಮ [illegible] ಪ್ರಜಾಜನವನ್ನು [illegible] ತಮ್ಮ, ಅದು ಅಸಾಧ್ಯವೆಂದೂ ತಿಳಿಸಿ, ರಾಷ್ಟ್ರದ ವಿನಾಶಕ್ಕಾಗಿ ಹೋರಾಡುವ ಬುಡಮೇಲು ಚಳುವಳಿಗಾರರಿಗೆ ಎಚ್ಚರಿಕೆಯಿತ್ತರು ಹಿಂದಿನ ನಾಬುಲ್ಸಿ ಸರ್ಕಾರವು ತಮ್ಮ [illegible] ಕುಂದಿಸಲು ಪ್ರಯತ್ನಿಸಿದುದಾಗಿಯೂ ದೊರೆಯು ತಿಳಿಸಿದರು

○ ದಕ್ಷಿಣ ಟರ್ಕಿಯ [illegible] ಎಂಬಲ್ಲಿ ನೆನ್ನೆ ರಾತ್ರಿ ಘೋರವಾದ ಭೂಕಂಪವಾಗಿ ೧೦ ಜನ ಸತ್ತಿರುವರೆಂದೂ ೮೦ ಮಂದಿಗೆ ಗಾಯಗಳಾದುವೆಂದೂ ವರದಿಯಾಗಿದೆ ಊರಿನ ಮುಕ್ಕಾಲು ಭಾಗದ ಕಟ್ಟಡಗಳು ಕುಸಿದುಬಿದ್ದುವು

ಮಧ್ಯ ಪೂರ್ವಕ್ಕೆ ಅಮೆರಿಕದ ೬ನೇ ನೌಕಾ ತಂಡ

ಜಾರ್ಡಾನ್ ಬಿಕ್ಕಟ್ಟಿನ ಸಂಬಂಧವಾಗಿ ಹಠಾತ್ತನೆ ಪ್ರಯಾಣ

ಜಾರ್ಡಾನಿನ ಬಿಕ್ಕಟ್ಟಿನ ಫಲವಾಗಿ ಪೂರ್ವ ಭೂಮಧ್ಯ ಸಮುದ್ರ ಪ್ರದೇಶಕ್ಕೆ ಅಮೆರಿಕದ ೬ನೇ ನೌಕಾ ತಂಡವು ಹಠಾತ್ತಾಗಿ ನೆನ್ನೆ ಹೊರಟಿತು ಅದರಲ್ಲಿ ವಿಶ್ವದಲ್ಲೇ ಅತ್ಯಂತ ಭಾರಿಯಾದ ಫಾರೆಸ್ಟಲ್ ಎಂಬ ವಿಮಾನ ವಾಹಕ ನೌಕೆ ಮತ್ತು ಇತರ ೧೮ ಹಡಗುಗಳಿವೆ ಅವು ಇಟಲಿ ಮತ್ತು ಫ್ರೆಂಚ್ ತೀರಗಳಲ್ಲಿದ್ದು ಈಗತಾನೆ ಯುದ್ಧ ಶಿಕ್ಷಣದಲ್ಲಿ ತೊಡಗಲು ಉದ್ದೇಶವಿದ್ದಿತು ಈ ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆ

ಜಾರ್ಡಾನಿನ ಪರಿಸ್ಥಿತಿಯನ್ನು ಎದುರಿಸಲು ದೊರೆ ಹುಸೇನರು ಅಮೆರಿಕದ ಮಿಲಿಟರಿ ಮತ್ತು ಆರ್ಥಿಕ ಸಹಾಯವನ್ನಪೇಕ್ಷಿಸುವರೇ—ಎಂಬುದನ್ನು ತಿಳಿಯಲು ಜಾರ್ಡಾನಿನಲ್ಲಿರುವ ಅಮೆರಿಕಾ ರಾಯಭಾರಿಗೆ ಸೂಚಿಸಲಾಗಿರುವುದೆಂದು ಹೇಳಲಾಗಿದೆ

ಜಾರ್ಡಾನಿನಲ್ಲಿ ಇತ್ತೀಚಿಗೆ ನಡೆದಿರುವ ಘಟನೆಗಳಿಗೆಲ್ಲ ಆ ದೇಶದ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕದ ಪ್ರವೇಶವೇ ಕಾರಣವೆಂದು ಮಾಸ್ಕೋ ರೇಡಿಯೊವು ಆಪಾದಿಸಿದೆ

ಜಾರ್ಡಾನ್ ಘಟನೆಗಳನ್ನು ಕುರಿತು ಈಜಿಪ್ಟಿನ ಅಧ್ಯಕ್ಷರೊಡನೆ ತ್ವರಿತ ಸಮಾಲೋಚನೆಗಾಗಿ ಸಿರಿಯಾ ಅಧ್ಯಕ್ಷ ಕುವಾಟ್ಲಿಯವರು ಕೈರೋವಿಗೆ ಆಗಮಿಸಿದ್ದಾರೆ ಉಭಯ ನಾಯಕರೂ ಈಗ ಸಮಾಲೋಚನೆಯಲ್ಲಿದ್ದಾರೆ

ಮುಕ್ಕಡಹಳ್ಳಿ ಬಸವಯ್ಯನವರಿಂದ ಚುನಾವಣಾ ತಕರಾರು ಅರ್ಜಿ

ಮೈಸೂರು ವಿಧಾನ ಸಭೆಗೆ ಚಾಮರಾಜನಗರದ ದ್ವಿಸದಸ್ಯ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಹಲವಾರು ಅಕ್ರಮಗಳು ನಡೆದಿರುವ ಕಾರಣ ಅದನ್ನು ವಿಚಾರಿಸಲು ಆ ಕ್ಷೇತ್ರದ ಮೀಸಲು ಸ್ಥಾನದಿಂದ ಪಿ ಎಸ್ ಪಿ ಪಕ್ಷದ ಪರವಾಗಿ ಸ್ಪರ್ಧಿಸಿದ್ದ ಶ್ರೀ ಎಂ ಬಿ ಬಸವಯ್ಯನವರು ಚುನಾವಣಾ ಮಂಡಲಿಗೆ ತಕರಾರು ಅರ್ಜಿ ಸಲ್ಲಿಸಿದ್ದಾರೆ

ನಗರದ ಆಸ್ಪತ್ರೆಯಲ್ಲಿ ಕಿವಿ ಮತ್ತು ಮೂಗು ಕುಯ್ಯಿಸಿಕೊಂಡವರಿಗೆ ಚಿಕಿತ್ಸೆ

ಮಳವಳ್ಳಿ ತಾಲ್ಲೂಕು [illegible] ಹೋಬಳಿಯ ಕೊಡಗಳ್ಳಿ ಗ್ರಾಮದಲ್ಲಿ ಒಬ್ಬಾತನು ತನ್ನ ಹೆಂಡತಿ ಮತ್ತು ಅತ್ತೆಗೆ ಕಿವಿ ಮೂಗು ಕುಯ್ದು ಗಾಯಗೊಳಿಸಿದ್ದನಷ್ಟೆ ಗಾಯಗೊಂಡವರನ್ನು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನಡೆಸಲಾಗುತ್ತಿದೆ ಹೆಂಡತಿ ಬಸಮ್ಮನು ತೌರು ಮನೆಗೆ ಹೋಗಬಾರದೆಂದು, ಗಂಡ ದೊಡ್ಡೇಗೌಡನು ಎಷ್ಟು ಹೇಳಿದರೂ ಕೇಳದೆ ಅಲ್ಲಿಗೆ ಹೋದುದಲ್ಲದೆ ಸುಳ್ಳು ಹೇಳಿದಳೆಂಬ ಸಿಟ್ಟಿಗಾಗಿ ಆತನು ಹೆಂಡತಿಯ ಕಿವಿ ಮತ್ತು ಮೂಗನ್ನು ಮಚ್ಚಿನಿಂದ ಕುಯ್ದು ಹಾಕಿದನೆಂದೂ, ಅತ್ತೆಯ ಕೈಬೆರಳುಗಳನ್ನು ಕತ್ತರಿಸಿದನೆಂದೂ ಹೇಳಲಾಗಿದೆ

ಬೆಂಗಳೂರಿನಲ್ಲಿ ಸೈಕಲ್ ತೆರಿಗೆ ರದ್ದು

ಪೌರಸಭಾ ಸದಸ್ಯರಿಗೆ ಟೆಲಿಫೋನ್ ಸೌಕರ್ಯಕ್ಕಾಗಿ ಶಿಫಾರಸು

ಬೆಂಗಳೂರು ೨೫

ಬಡವರ ವಾಹನವೆಂದು ಪರಿಗಣಿಸಲ್ಪಟ್ಟಿರುವ ಬೈಸಿಕಲ್ ಮೇಲಿನ ರಹದಾರಿ ಶುಲ್ಕವನ್ನು ರದ್ದುಗೊಳಿಸಬೇಕೆಂದು ಇಲ್ಲಿನ ಪೌರಸಭೆಯು ನೆನ್ನೆ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿತು ಅದನ್ನು ಸರ್ಕಾರದವರು ಒಪ್ಪಿದರೆ ೧೬,೬೧೦ ಸೈಕಲ್ ಮಾಲೀಕರು ತೆರಿಗೆ ಕೊಡಬೇಕಾಗುವುದಿಲ್ಲ ತೆರಿಗೆ ರದ್ದಿಯಿಂದ ಪೌರಸಭೆಗೆ ೧ ೩೦ ಲಕ್ಷರೂ [illegible] ವರಮಾನವು ತಪ್ಪುವುದು

ನಗರದಲ್ಲಿ ಒಟ್ಟು ೩೨ ಸಾವಿರ ಸೈಕಲ್‌ಗಳಿರುವುವೆಂದೂ, ಆ ಪೈಕಿ ೫ ಸಾವಿರಕ್ಕೆ ಉಚಿತ ಬ್ಯಾಡ್ಜನ್ನು ಕೊಡಲಾಗಿರುವುದೆಂದೂ ಹೇಳಲಾಗಿದೆ ಸೈಕಲ್ ಒಂದಕ್ಕೆ ಈಗ ಮೂರು ರೂ. ಶುಲ್ಕವನ್ನು ವಿಧಿಸಲಾಗುತ್ತಿದೆ

ಪೌರಸಭೆಯ ವೆಚ್ಚದಲ್ಲಿ ಸದಸ್ಯರಿಗೆ ಟೆಲಿಫೋನುಗಳನ್ನು ಒದಗಿಸಬೇಕೆಂದೂ ನಿರ್ಧರಿಸಲಾಯಿತು ಅದಕ್ಕಾಗಿ ೧೦ ೦೦೦ ರೂ ಅನ್ನು ಒದಗಿಸಲಾಗುವುದು

ಹನುಮಂತರಾವ್ ಮೊಹರೆಯವರ ತೊಡೆಗೆ ಪೆಟ್ಟು

ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಪತ್ರಿಕಾ ಸಂಪಾದಕರೂ, ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ ಅಧ್ಯಕ್ಷರೂ ಆದ ಶ್ರೀ ಹನುಮಂತರಾವ್ ಮೊಹರೆಯವರು ಪಾಟ್ನದಲ್ಲಿ ಅಕಸ್ಮಾತ್ ಬಿದ್ದು ತೊಡೆ ಮೂಳೆ ಮುರಿದು, ಅಲ್ಲಿನ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರೆಂದು ವರದಿಯಾಗಿದೆ

ಹಂಗೇರಿಯ ಮಾಜಿ ಮಂತ್ರಿಗೆ ೧೬ ವರ್ಷ ಸಜಾ

ಹಂಗೇರಿಯ ರಕ್ಷಣಾ ಮಂತ್ರಿಯೂ, ಅತ್ಯಂತ ಪ್ರಭಾವಶಾಲಿ ಕಮ್ಯೂನಿಸ್ಟರಲ್ಲಿ ಒಬ್ಬರೂ ಆಗಿದ್ದ ಮಿಹೇರಿ ಫಾರ್ಕಾಸ್‌ರವರಿಗೆ ೧೬ ವರ್ಷ ಸಜಾ ವಿಧಿಸಲಾಗಿದೆ ಅಧಿಕಾರದಲ್ಲಿದ್ದಾಗ [illegible] ಅವರ ಮೇಲಿನ ಆಪಾದನೆ

ಬೆಂಗಳೂರು ಕೇಂದ್ರದ [illegible] ಕಾರ್ಯಕ್ರಮ

ಬೆಳಗ್ಗೆ ೭-೫ ದಿಲ್ರುಬಾ ಮತ್ತು ಸಿತಾರ್ ೭-೧೫ ಮತ್ತು ೮-೧೫ ಚಿಂತನದಲ್ಲಿ ಕೃಷ್ಣಮೂರ್ತಿ—ದೇವರ ನಾಮ ೭ ೩೦ ವಾರ್ತೆಗಳು. ಮ[illegible] ೧೨ ಚಿಂತನದಲ್ಲಿ ಕೃಷ್ಣಮೂರ್ತಿ—ಸಂಗೀತ ೧೨-೩೦ ರಿಕಾರ್ಡ್ ೧ ದಿಲ್ರುಬಾ ಮತ್ತು ಸಿತಾರ್ ೧-೫೦ ರಿಕಾರ್ಡ್ ೩ ಬಾಲಜಗತ್ ಸಂಜೆ ೫ ೩೦ ಮತ್ತು ೮ [illegible] ೧೦ [illegible]—ಸಂಗೀತ ೭ ೫ ವಚನ ಗಾಯನ ೭ ೩೦ ತಿಂಗಳ ಸಮಾಲೋಚನೆ ಪ್ರಸಂಗ, ೮ ೩೦ [illegible] ನ್ಯೂಸ್ ರೀಲ್ ೯-೧೫ ರಿಕಾರ್ಡ್ ೯ ೩೦ ರಾಷ್ಟ್ರೀಯ ಕಾರ್ಯಕ್ರಮ

ಆಡಂಬರಗಳನ್ನು ತ್ಯಜಿಸಲು ಮಂತ್ರಿಗಳಿಗೆ ನೆಹರೂ ಸೂಚನೆ

ಮಂತ್ರಿಗಳು ಅಧಿಕಾರದ ಆಡಂಬರ ಮತ್ತು ಅಟ್ಟಹಾಸದ ಪ್ರದರ್ಶನವನ್ನು ಬಿಡಬೇಕೆಂದು ನೆಹರೂರವರು ಸೂಚಿಸಿರುತ್ತಾರೆ. ಅವರ ಸೂಚನೆ [illegible] ಮಂತ್ರಿಗಳು [illegible] ಸಂಬಳವನ್ನು [illegible] ಎಂದೂ [illegible] ಮಾತ್ರ [illegible] ಕಾರನ್ನು [illegible] ಇಟ್ಟುಕೊಂಡು [illegible] ಮಾಡಬೇಕೆಂದೂ ಸೂಚಿಸಿರುತ್ತಾರೆ. [illegible] ಮಾಡಬೇಕೆಂದು ಅವರು ತಿಳಿಸಿರುವರು. [illegible] ಕಡಿಮೆ ಮಾಡಿಕೊಳ್ಳಬೇಕೆಂದೂ ಅವರು ಹೇಳಿರುವರು

ಕೇರಳ ಕಾಲೇಜು ಅಧ್ಯಾಪಕರ ಸಂಬಳದ ಪುನರ್ವಿಮರ್ಶೆಗೆ [illegible]

ಕೇರಳ ವಿಶ್ವವಿದ್ಯಾಲಯ ಮತ್ತು ಸರ್ಕಾರಿ ಕಾಲೇಜು ಅಧ್ಯಾಪಕರುಗಳ ಸಂಬಳದ ಪುನರ್ವಿಮರ್ಶೆಗೆ [illegible] ವಿಶ್ವವಿದ್ಯಾಲಯಗಳ ಗ್ರಾಂಟ್ ಕಮಿಷನ್ [illegible] ಹೊಸ ಮಂತ್ರಿಮಂಡಲವು ಅಧಿಕಾರಕ್ಕೆ ಬರುವ [illegible]

ಗೌಹಾತಿ ಬಳಿ ಮುಂದಿನ ಕಾಂಗ್ರೆಸ್ ಅಧಿವೇಶನ

ಬರುವ ಜನವರಿಯಲ್ಲಿ ಕಾಂಗ್ರೆಸ್ ಮಹಾಧಿವೇಶನವು ಅಸ್ಸಾಮಿನ ಗೌಹಾತಿ [illegible] ಗೌಹಾತಿ [illegible] ೩೦,೦೦೦ [illegible]

[illegible] ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ

[illegible] ಪ್ರದೇಶ ಕಾಂಗ್ರೆಸ್ [illegible] ಪ್ರದೇಶ ಕಾಂಗ್ರೆಸ್ ಅಧ್ಯಕ್ಷ [illegible] ಶ್ರೀ ವಿ. ವೆಂಕಟಪ್ಪ [illegible] ಪ್ರದೇಶ ಅಧ್ಯಕ್ಷ [illegible] ಹೇಳಲಾಗಿದೆ

○ ಬ್ರಿಟಿಷ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ತಮ್ಮ [illegible] ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ [illegible] ಸೇರಿದ್ದಾರೆ.

ಸಂಸ್ಥಾನ ಪುನರ್ವಿಂಗಡಣೆ ಚಳುವಳಿಯಲ್ಲಿ ನೊಂದವರಿಗೆ ಪರಿಹಾರ

ಸಂಸ್ಥಾನದ ಪುನರ್ವಿಂಗಡಣೆ ಶಾಸನದ ವಿರುದ್ಧವಾಗಿ ಬೊಂಬಾಯಿ ಸಂಸ್ಥಾನದಲ್ಲಿ ಕಳೆದ ವರ್ಷ ನಡೆದ ಚಳುವಳಿಯಲ್ಲಿ ಪುಂಡರಿಂದ ನಷ್ಟಹೊಂದಿದವರಿಗೆ ಪರಿಹಾರ ಕೊಡಲು ಬೊಂಬಾಯಿ ಸರ್ಕಾರದವರು ನಿರ್ಧರಿಸಿರುತ್ತಾರೆ ೨೦೦೦ ರೂ ವರೆಗೆ ನಗದು ಹಣವನ್ನು ಕೊಡಲಾಗುವುದು ಸ್ಥಿರ ಸ್ವತ್ತುಗಳ ಆಧಾರದ ಮೇಲೆ [illegible] ರೂ.ಗಳವರೆಗೂ ಸಾಲವೀಯಲಾಗುವುದು

ಗೋಕಾಕ್ ಬಳಿ ಭಾರಿ ಆಲಿಕಲ್ಲು

ಗೋಕಾಕಿನ ಬಳಿ ಕಳೆದ [illegible]ನೇ ತಾರೀಕಿನಿಂದ [illegible] ೩ ದಿನಗಳ ಕಾಲ ಆಲಿಕಲ್ಲು ಮಳೆ ಬಿದ್ದು ಒಂದು ಹಳ್ಳಿಯು ಅದರಿಂದಲೇ ಮುಚ್ಚಿಹೋಗಿತ್ತೆಂದೂ, ಒಂದೊಂದು ಕಲ್ಲೂ ಸೀಬೆ ಹಣ್ಣಿನ ಗಾತ್ರವಿತ್ತೆಂದೂ ವರದಿಯಾಗಿದೆ. ಆಲಿಕಲ್ಲಿನೇಟಿನಿಂದ ಅನೇಕ ಮಕ್ಕಳಿಗೆ ಗಾಯಗಳಾದವು. ಹಳ್ಳಿ ಬಳಿ ಜಮೀನಿನಲ್ಲಿ [illegible] ಅಡಿ ಉದ್ದ ಮತ್ತು ೩ ಅಡಿ ದಪ್ಪದ ಆಲಿಕಲ್ಲು ಬಿದ್ದಿತೆಂದೂ ಹೇಳಲಾಗಿದೆ

ವಸಂತ ಸಾಹಿತ್ಯೋತ್ಸವ

ನಗರದ ರಮಾವಿಲಾಸ ಅಗ್ರಹಾರದಲ್ಲಿರುವ [illegible] ಸಂಘದ ಆಶ್ರಯದಲ್ಲಿ ನಾಳೆ ಮತ್ತು ನಾಳಿದ್ದು ವಸಂತ ಸಾಹಿತ್ಯೋತ್ಸವವು ಜರುಗುವುದು ನಾಳೆ ಸಂಜೆ ೬ ಗಂಟೆಗೆ ಅದರ ಆರಂಭೋತ್ಸವವನ್ನು ಶ್ರೀ ಜಿ. ಪಿ. ರಾಜರತ್ನಂರವರು ನೆರವೇರಿಸುವರು. ಶ್ರೀ ಅಗರಂ ರಂಗಯ್ಯನವರು ಅಧ್ಯಕ್ಷತೆ ವಹಿಸುವರು

ಕ್ಲಬ್ಬುಗಳ ಹೆಸರಿನಲ್ಲಿ ನಡೆಯುವ ಜೂಜುಗಳನ್ನು ತಡೆಗಟ್ಟಲು ಮನವಿ

ಮೈಸೂರು ಪುರಜನ ಸೇವಾ ಸಂಘದ ಗೌರವ ಕಾರ್ಯದರ್ಶಿಯವರಾದ ಶ್ರೀ ಬಿ ಸುಬ್ಬಸಿಂಗ್‌ರವರು ಮುಖ್ಯ ಮಂತ್ರಿಯವರಿಗೆ ಮನವಿಯನ್ನು ಮಾಡಿ ನಗರದಲ್ಲಿ ಕ್ಲಬ್ಬುಗಳ ಹೆಸರಿನಲ್ಲಿ ರಹದಾರಿ ಪಡೆದು, ಜೂಜಾಡುತ್ತಿರುವುದನ್ನು ತಪ್ಪಿಸಬೇಕೆಂದೂ, ಜೂಜಾಡುವ ಕ್ಲಬ್ಬುಗಳ [illegible]ಗಳನ್ನು ವಜಾ ಮಾಡಬೇಕೆಂದೂ [illegible]ಸಿರುತ್ತಾರೆ ಮೈಸೂರು ನಗರದಲ್ಲಿ [illegible] ಕ್ಲಬ್ಬುಗಳಿಗೆ ರಹದಾರಿಯನ್ನು ಕೊಡಲಾಗಿರುವುದೆಂದೂ, ಅಲ್ಲಿ ಹಣಕ್ಕೆ ಬದಲು ಹಲವು ಸಂಕೇತಗಳನ್ನಿಟ್ಟುಕೊಂಡು ಜೂಜು ನಡೆಸಲಾಗುತ್ತಿರುವುದೆಂದೂ ಅವರು ತಿಳಿಸಿರುತ್ತಾರೆ ರಹದಾರಿಯು ದೊರೆತಿರುವುದರಿಂದ ಲೈಸೆನ್ಸಿನ ರಕ್ಷಣೆ ದೊರೆತಿರುವುದೆಂಬ ಭಾವನೆ ಮೇಲೆ ಹಣ ತೊಟ್ಟು ಆಡುತ್ತಿರುವ ಜೂಜುಗಳಲ್ಲಿ ಚಿಕ್ಕಚಿಕ್ಕ ವ್ಯಾಪಾರಿಗಳೂ, ಕೂಲಿಗಾರರೂ, ವಿದ್ಯಾರ್ಥಿಗಳೂ ಸೇರಿ ಹಾಳಾಗುತ್ತಿರುವರೆಂದೂ ಅವರು ಹೇಳಿ, ಇಂತಹವರ ರಹದಾರಿಯನ್ನು ರದ್ದುಗೊಳಿಸುವಂತೆ ಕೋರಿರುವರು

ಒಲಂಪಿಯಾ
21—4—57ರಿಂದ ಅಮೋಘ 2 ನೇ ವಾರ
ಪ್ರತಿ ದಿನ 3 ಪ್ರದರ್ಶನ
ಗುರುದತ್ ರವರ ★ ಸಿ. ಐ. ಡಿ.
ಪಾತ್ರ:-ದೇವಾನಂದ್, ಜಾನಿ ವಾಕರ್ ಮತ್ತು ವಹಿದಾ ರಹಮಾನ್

ಭಾರತದಲ್ಲಿ ವ್ಯವಸಾಯಕ್ಕೆ ಅಣು ಶಕ್ತಿ ಪ್ರಯೋಗ

ಭಾರತದಲ್ಲಿ ವ್ಯವಸಾಯಕ್ಕೆ ಸಹಾಯವಾಗುವಂತೆ ಅಣು ಶಕ್ತಿಯ ರೇಡಿಯೊ ಟ್ರೇಸರ್ ಪ್ರಯೋಗ ಶಾಲೆಯನ್ನು ದೆಹಲಿಯ ವ್ಯವಸಾಯ ಸಂಶೋಧನಾ ಸಂಸ್ಥೆಯವರು ಪೂರ್ಣ ಸಾಧನಗಳ ಸಮೇತ ಸ್ಥಾಪಿಸಿರುತ್ತಾರೆ ಜಮೀನು ಮತ್ತು ಗೊಬ್ಬರಗಳಲ್ಲಿ ರೇಡಿಯೊ ವಸ್ತುಗಳನ್ನು ಉಪಯೋಗಿಸಿ ಸಂಶೋಧನೆ ನಡೆಸಲಾಗುವುದು

ಖಾನ್ ಸಾಹೇಬರ ಮಗನ ಮೇಲೆ ಗುಂಡು

ಪಶ್ಚಿಮ ಪಾಕಿಸ್ತಾನದ ಮಾಜಿ ಮುಖ್ಯ ಮಂತ್ರಿ ಡಾ|| ಖಾನ್ ಸಾಹೇಬರ ಮಗ ಒಬೆಯದುಲ್ಲಾ ಖಾನರ ಮೇಲೆ ಮೊನ್ನೆ ಪೆಷಾವರಿನಲ್ಲಿ ಯಾರೋ ಗುಂಡು ಹಾರಿಸಿದರೆಂದೂ, ಆದರೆ ಅವರು ಪಾರಾದರೆಂದೂ ಕರಾಚಿಗೆ ವರದಿ ಬಂದಿದೆ.

ಭಾರತೀ ವಿದ್ಯಾ ಭವನದ ಸಂಸ್ಕೃತ ಪರೀಕ್ಷೆಗಳು

ಬೊಂಬಾಯಿಯ ಭಾರತೀ ವಿದ್ಯಾ ಭವನದವರು ಸಂಸ್ಕೃತ ಪ್ರೇಮಿಗಳಿಗೆ ಸಂಸ್ಕೃತದ ಸ್ಥೂಲ ಪರಿಚಯ ಮಾಡಿಕೊಡುವ ಉದ್ದೇಶದಿಂದ ಕೆಲವು ಸಂಸ್ಕೃತ ಪರೀಕ್ಷೆಗಳನ್ನು ವರ್ಷಕ್ಕೆ ಎರಡಾವರ್ತಿ, ಅಂದರೆ ಮಾರ್ಚಿ ಮತ್ತು ಸೆಪ್ಟೆಂಬರ್‌ಗಳಲ್ಲಿ ನಡೆಸುವರು ಈ ಪರೀಕ್ಷೆಗಳಿಗೆ ಕೂರಲು ಬಯಸುವ ಸಂಸ್ಕೃತಾಭಿಮಾನಿಗಳಿಗೆ ಮೈಸೂರಿನ ಕೃಷ್ಣಮೂರ್ತಿಪುರದ ಶ್ರೀ ಸೀತಾರಾಮ ಮಂದಿರದಲ್ಲಿ ಶಿಕ್ಷಣವೀಯಲಾಗುವುದು ಅಗತ್ಯವೊದಗಿ ಸ್ಥಳಾವಕಾಶ ದೊರೆತರೆ ಬೇರೆ ಕಡೆಗಳಲ್ಲೂ ಶಿಕ್ಷಣ ತರಗತಿಗಳನ್ನು ಏರ್ಪಡಿಸಲಾಗುವುದು ಆಸಕ್ತಿಯುಳ್ಳವರು ತಮ್ಮನ್ನು ಬೆಳಗ್ಗೆ ೭-೩೦ರಿಂದ ೯-೩೦ರೊಳಗೆ ಕಂಡು ವಿವರಗಳನ್ನರಿಯಬಹುದೆಂದು ಶ್ರೀ ಬಿ ಎಸ್ ಕೃಷ್ಣಪ್ಪ ಸಾಹಿತ್ಯ ವಿದ್ವಾನ್, [illegible]. ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ ಮೈಸೂರು-ಇವರು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮುತ್ತು

ಕೊಯಮುತ್ತೂರು	[illegible]	
ರಸ್ತಾಳಿ	[illegible]	[illegible]
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible] ೦೦
ಹೊಂಗೇಬೀಜ	[illegible]	[illegible]
ಹುಚ್ಚೆಳ್ಳು	[illegible]	[illegible] ೦೦
ಹುರುಳಿ	[illegible] ೦೦	[illegible]
ಕಡಲೆ	[illegible]	
ಧನಿಯ	[illegible]	[illegible]
ಹುಣಸೆಬೀಜ	[illegible]	[illegible]
ಸೆಣಬಿನ ಬೀಜ	[illegible]	[illegible]
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	[illegible]
ಮೆಣಸಿನಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ	[illegible] ೦೦	[illegible]

1OR IMMEDIATE SALE
FLOWER POTS AND AQUARIUM
Contact- SRINIVAS
2915|1. Viceroy Road,
Chamundipuram
(Bus Stand Circle)
MYSORE

ಜರ್ಮನ್ ಗಾಯಕನೊಡನೆ ಭಾರತದ ಟೆನಿಸ್ ಆಟಗಾರಳ ವಿವಾಹ

ಭಾರತದ ಪ್ರಥಮ ಶ್ರೇಣಿ ಟೆನಿಸ್ ಆಟಗಾರಳಾದ ರೀಟಾ ಡಾವರ್‌ರವರು ಪಶ್ಚಿಮ ಜರ್ಮನಿಯ ಪಿಯಾನೊ ವಾದ್ಯಗಾರರಾದ ರಾಲ್ಫ್ ಮುಲ್ಲರ್‌ರವರೊಡನೆ ವಿವಾಹವಾಗಿರುತ್ತಾರೆ

ವ್ಯಾಯಾಮ ಶಿಕ್ಷಣಕ್ಕಾಗಿ ೪ ಶಾಲೆಗಳ ಸ್ಥಾಪನೆ

ಅಂಗಸಾಧನೆಗೆ ಉತ್ತೇಜನವೀಯುವ ಸಲುವಾಗಿ ದ್ವಿತೀಯ ಯೋಜನೆ ಅವಧಿಯಲ್ಲಿ ಸಂಸ್ಥಾನ ಸರ್ಕಾರದವರು ಬೆಂಗಳೂರು, ಮೈಸೂರು, ತುಮಕೂರು ಮತ್ತು ಶಿವಮೊಗ್ಗಗಳಲ್ಲಿ ಒಂದೊಂದು ಶಿಕ್ಷಣ ಶಾಲೆಯನ್ನು ತೆರೆಯಲು ಮಂಜೂರಾತಿ ಕೊಟ್ಟಿರುವರೆಂದು ವರದಿಯಾಗಿದೆ ಪ್ರತಿಯೊಂದು ಶಾಲೆಗೂ ಸಾಧನಸಂಪತ್ತಿಗಾಗಿ ೩,೫೦೦ ರೂ ಗಳನ್ನು ಮಂಜೂರು ಮಾಡಲಾಗಿರುವುದೆಂದು ಗೊತ್ತಾಗಿದೆ.

ರಾಮೋತ್ಸವ ಸಂಗೀತ

ಕೃಷ್ಣರಾಜ ಮೊಹಲ್ಲಾ ಹೊಸಕೇರಿ ರಾಮ ಮಂದಿರದಲ್ಲಿ ಈ ದಿನ ಸಂಜೆ ೬.೩೦ ಗಂಟೆಗೆ ವಿದ್ವಾನ್ ಶ್ರೀ ಟಿ ಆರ್ ಶ್ರೀನಿವಾಸನ್ ಮತ್ತು ಪಾರ್ಟಿಯವರಿಂದ ಸಂಗೀತ ಕಛೇರಿಯನ್ನು ಏರ್ಪಡಿಸಲಾಗಿದೆ

ವಿ. ಟಿ ಶ್ರೀನಿವಾಸನ್ನರಿಗೆ ಹೊಸ ಹುದ್ದೆ

ಸಂಸ್ಥಾನದ ನಿವೃತ್ತ ಅಕೌಂಟೆಂಟ್ ಜನರಲ್ಲರಾದ ಶ್ರೀ ವಿ ಟಿ. ಶ್ರೀನಿವಾಸನ್ನರು ಬೆಂಗಳೂರಿನಲ್ಲಿರುವ ಟೆಲಿಫೋನ್ ಕಾರ್ಖಾನೆಯ ಹಣಕಾಸು ಮತ್ತು ಅಕೌಂಟಿಂಗ್ ಮ್ಯಾನೇಜರಾಗಿ ನೇಮಿಸಲ್ಪಟ್ಟಿರುವರೆಂದು ವರದಿಯಾಗಿದೆ.

ದೇವಸ್ಥಾನದ ಪ್ರದೇಶದಲ್ಲಿ ಕಟ್ಟಡ ಕಟ್ಟಲು ಖಾಸಗಿಯವರಿಗೆ ರಹದಾರಿ ?

ಕೃಷ್ಣರಾಜ ಮೊಹಲ್ಲಾ ಸೊಪ್ಪಿನಕೊಳದ ಬೀದಿಯಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಸೇರಿದ ಪ್ರದೇಶದಲ್ಲಿ ಕಟ್ಟಡ ಕಟ್ಟಿಕೊಳ್ಳಲು ಪೌರಸಭಾಧಿಕಾರಿಗಳು ಮರಾಮತ್ತು ಇಲಾಖಾ ಡ್ರೈವರ್ ಶ್ರೀ ಮರಿಯಪ್ಪ ಎಂಬುವರಿಗೆ ಕೊಟ್ಟಿರುವ ರಹದಾರಿಯನ್ನು ಜಾರಿಗೆ ಕೊಡಬಾರದೆಂದು ದೇವಸ್ಥಾನದ ಭಕ್ತಾದಿಗಳ ಪರವಾಗಿ ವಕೀಲರಾದ ಶ್ರೀ ಎಸ್ ಕೆ ಮೃತ್ಯುಂಜಯರವರು ಕೋರಿ ಪೌರಸಭಾಧ್ಯಕ್ಷರಿಗೆ ಅರ್ಜಿ ಬರೆದಿರುತ್ತಾರೆ ಕಟ್ಟಡ ಕಟ್ಟುವುದಕ್ಕೆ ಕೂಡಲೇ ತಡೆ ಆಜ್ಞೆಯನ್ನು ಕೊಡಬೇಕೆಂದೂ ಕೋರಲಾಗಿದೆ

ಬೇಕಾಗಿದೆ
ನಂಜನಗೂಡಿನಲ್ಲಿ ಪತ್ರಿಕೆ ಹಂಚುವವರು ಬೇಕಾಗಿದ್ದಾರೆ ನಗದು ಅಥವಾ ಗಣ್ಯರೊಬ್ಬರ ಷ್ಯೂರಿಟಿ ಕೊಡಲು ಶಕ್ತರಾದ ಸ್ಥಳೀಯರು ಬರೆಯಿರಿ —
X, C/o ಸಾಧ್ವಿ, ಮೈಸೂರು

ಕಲಾನಿಕೇತನದ ಶಾಲೆಯ ವಾರ್ಷಿಕೋತ್ಸವ

ನೂರಡಿ ರಸ್ತೆಯಲ್ಲಿರುವ ಕಲಾ ನಿಕೇತನ ಕಮರ್ಷಿಯಲ್ ಆರ್ಟ್ಸ್ ಶಾಲೆಯ ವಾರ್ಷಿಕೋತ್ಸವವು ಮೊನ್ನೆ ಪುರಸಭಾಧ್ಯಕ್ಷ, ಶ್ರೀ ಎಸ್ ಸಂಜೀವಯ್ಯನವರ ನೇತೃತ್ವದಲ್ಲಿ ಜರುಗಿತು ಸಂಸ್ಥೆಯ ಅಧ್ಯಕ್ಷ ಶ್ರೀ ಗೋಪಾಲಸ್ವಾಮಿ [illegible]ಯವರು ಸ್ವಾಗತ ಬಯಸಿದರು. ಕಾರ್ಯದರ್ಶಿಗಳಾದ ಶ್ರೀ ಎಸ್ ಗೋಪಾಲರವರು ಚಿತ್ರಕಲೆಯ ವಿಚಾರವಾಗಿ ಮಾತನಾಡಿದರು ಶ್ರೀ ನೀಲಕಂಠಯ್ಯನವರು ರಚಿಸಿದ್ದ "ವೀರ ಸೇನೆ" ಎಂಬ ಕವನವನ್ನು ಓದಲಾಯಿತು ಪುರಸಭಾಧ್ಯಕ್ಷರು ಭಾಷಣ ಮಾಡಿ ಕಲಾ ಶಾಲೆಯನ್ನು ಶ್ರಮಪಟ್ಟು ನಡೆಸುತ್ತಿರುವುದಕ್ಕಾಗಿ ವ್ಯವಸ್ಥಾಪಕರನ್ನು ಅಭಿನಂದಿಸಿ ಕಲೆಯ ಉದ್ಧಾರಕ್ಕೆ ಸರ್ಕಾರದ ನೆರವು ಅಗತ್ಯವೆಂದು ತಿಳಿಸಿದರು

ರಾಮ ಪಟ್ಟಾಭಿಷೇಕ

ಇಲವಾಲ ರಸ್ತೆಯ ಎಂ ಕೆ ಹಾಸ್ಟೆಲ್ ಪಕ್ಕದಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ನಾಳೆ ರಾಮ ಪಟ್ಟಾಭಿಷೇಕವು ನೆರವೇರುವುದು ಬೆಳಗ್ಗೆ ಮತ್ತು ರಾತ್ರಿ ಎರಡು ಹೊತ್ತು ಪೂಜೆ ನಡೆಯುವುದು. ಬರುವ ೧ನೇ ತಾರೀಖು ವಸಂತೋತ್ಸವವು ಜರುಗುವುದು

ವಿವಾಹ ಮಹೋತ್ಸವ

ನಗರದ ಕುಂಚಿಟಿಗರ ಸಂಘದ ಗೌರವ ಕಾರ್ಯದರ್ಶಿಯವರಾದ ಶ್ರೀ ಎಂ ಸಿ ನರಸಿಂಹಯ್ಯನವರು ಗುಂಡ್ಲುಪೇಟೆಯ ಶ್ರೀ ಜಿ ಎಲ್ ಬೋರಯ್ಯನವರ ಮಗಳು ಸೌ|| ಶಾಂತಮ್ಮನವರನ್ನು ಸಂತೆಪೇಟೆ ವರ್ತಕರಾದ ಶ್ರೀ ಎಂ ರಂಗಪ್ಪನವರ ಪುತ್ರ ಶ್ರೀ ಆರ್ ಶ್ರೀನಿವಾಸರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು ಸುಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿತ್ತು

ಉಚಿತ ವಾಚನಾಲಯ

ಇಟ್ಟಿಗೆಗೂಡಿನ ಮಿತ್ರ ಸಂಘದವರು ತಮ್ಮ ಕಟ್ಟಡದಲ್ಲಿ ಉಚಿತ ವಾಚನಾಲಯವನ್ನು ಶೀಘ್ರದಲ್ಲೇ ತೆರೆಯಲಿದ್ದಾರೆ. ಕಳೆದ ಫೆಬ್ರವರಿ ತಿಂಗಳಿಂದ ತೆರೆದಿರುವ ಪುಸ್ತಕ ಭಂಡಾರಕ್ಕೆ ಸದಸ್ಯರಾಗಬಯಸುವವರು ಗೌರವ ಕಾರ್ಯದರ್ಶಿಯವರಿಂದ ವಿವರಗಳನ್ನು ಪಡೆಯಬಹುದು

ರಣಜಿತ್ ★ 27-4 57ನೆ ಶನಿವಾರದಿಂದ
ಅಮೋಘ ಪ್ರಾರಂಭ · ದಿನವಹಿ 3 ಆಟಗಳು
ಅಶೋಕ್ ಕುಮಾರ್ ನಳಿನಿ ಜಯವಂತ್
ನಟಿಸಿರುವ
ಸುಶೀಲಾ ಪಿಕ್ಚರ್ಸ್ ರವರ ಹಿಂದಿ ಚಿತ್ರ ★ ಲಕೀರೆ
ಸಹಾಯಕ ನಟರು:-ಪ್ರಾಣ್, ತಿವಾರಿ, ಕಮಲ್,
ದುರ್ಗಾ ಖೋಟೆ, ಸುಲೋಚನಾ ಚಟರ್ಜಿ

Edited, Printed and Published by
A. R. Nagarajan at Sadhvi Press,
Subbiah Road, Mysore

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
26-4-57ನೇ ಶುಕ್ರವಾರದಿಂದ : ಅಮೋಘವಾದ 3 ನೆಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು
★ ಮಾಯಾ ಬಜಾರ್ ★
(ಶಶಿರೇಖಾ ಪರಿಣಯ)
ಪಾತ್ರ.— ಆರ್ ಗಣೇಶ್, ಸಾವಿತ್ರಿ, ಎನ್. ಟಿ ರಾಮರಾವ್, ಎಸ್. ವಿ. ರಂಗರಾವ್, ತಂಗವೇಲು, ಮುತ್ತುಲಕ್ಷ್ಮಿ, ಕರುಣಾನಿಧಿ, [illegible], ಋಷ್ಯೇಂದ್ರಮಣಿ

ರಾಜಕಮಲ್ ಟಾಕೀಸ್ ★ 24—4—57 ರಿಂದ : ಅಮೋಘ 9ನೇ ವಾರ : ದಿನವಹಿ 3 ಆಟಗಳು
ಬಿ. ಆರ್ ಪಂತುಲು, ಎಂ ವಿ ರಾಜಮ್ಮ, ಉದಯಕುಮಾರ್, ಜಮುನ,
ಟಿ ಆರ್. ರಾಮಚಂದ್ರ, ಸಾಹುಕಾರ್ ಜಾನಕಿ, ಚಿಕ್ಕ ಮಾಧವರಾವ್
ಮುಂತಾದವರು ಪಾತ್ರವಹಿಸಿರುವ,
★ ರತ್ನಗಿರಿ ರಹಸ್ಯ ★
(ಕನ್ನಡ)

ಲಕ್ಷ್ಮಿ ಥಿಯೇಟರ್ ★ 26—4—57 ರಿಂದ : ಜಯಪ್ರದ 2ನೇ ವಾರ
ಪ್ರತಿ ದಿನ ಮೂರು ಪ್ರದರ್ಶನಗಳು
ಶಿವಾಜಿ ಗಣೇಶ್, ಸಾವಿತ್ರಿ, ನಾಗಯ್ಯ, [illegible], ಎಂ ಎನ್ ನಂಬಿಯಾರ್,
ತಂಗವೇಲು ನಟಿಸಿರುವ, [illegible] ತಮಿಳು ಚಿತ್ರ
★ ವಣಂಗಾಮುಡಿ ★

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ



ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : SATURDAY 27—4—1957 ಮೈಸೂರು : ಶನಿವಾರ ೨೭—೪—೧೯೫೭ : [ಸಂಚಿಕೆ : ೨೩೫

- ಮೈಸೂರಿನಲ್ಲಿ ಮತ್ತೊಬ್ಬ ಸಚಿವರ ನೇಮಕವಿಲ್ಲ -

ಅರಮನೆ ಕಛೇರಿಯಲ್ಲಿ ಬಿಲ್ಲೆ ಧರಿಸಿದ ನೌಕರರು

ಹುಜೂರು ಕಾರ್ಯದರ್ಶಿಯವರ ಕೋರಿಕೆ ಮೇಲೆ ಬಿಲ್ಲೆ ತೆಗೆದರು

ಮೈಸೂರು ೨೭

ಇಲ್ಲಿನ ಅರಮನೆ ನೌಕರರ ಸಂಘದ ಸದಸ್ಯರು ನಿನ್ನೆ ಕೋಟೆ ಮಾರಮ್ಮನ ಗುಡಿ ಮೈದಾನದಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಕೆ. ಎಸ್. ಸೀತಾರಾಂರವರ ಅಧ್ಯಕ್ಷತೆಯಲ್ಲಿ ಸೇರಿ, ನೌಕರರ ನಿವೃತ್ತಿಯ ನೋಟೀಸು ಮತ್ತು ಅವರ ಬೇಡಿಕೆ ವಿಚಾರಗಳನ್ನು ಪರಿಶೀಲಿಸಿದರು. ಬೇಡಿಕೆಗಳನ್ನೆಲ್ಲಾ ಅತಿ ಶೀಘ್ರದಲ್ಲೇ ಅರಮನೆಯ ಅಧಿಕಾರಿಗಳು ಪರಿಶೀಲಿಸಬೇಕೆಂದೂ, ಅದುವರೆಗೆ "ನೌಕರರ ನ್ಯಾಯಬದ್ಧವಾದ ಹೋರಾಟಕ್ಕೆ ಬೆಂಬಲ ನೀಡಿ" ಎಂದು ಸೂಚಿಸುವ ಬಿಲ್ಲೆಗಳನ್ನು ಧರಿಸಬೇಕೆಂದೂ ನಿರ್ಧರಿಸಲಾಯಿತು.

ಅದರಂತೆ ನಿನ್ನೆ ನೌಕರರು ಬಿಲ್ಲೆಗಳನ್ನು ಧರಿಸಿ ಕಛೇರಿಗೆ ಕೆಲಸಕ್ಕಾಗಿ ಹೋದಾಗ, ಅವುಗಳನ್ನು ಹಾಕಿಕೊಳ್ಳಕೂಡದೆಂದೂ ಅವನ್ನು ಧರಿಸಿ ಕಛೇರಿಗೆ ಬರಕೂಡದೆಂದೂ ಅವರುಗಳಿಗೆ ಸೂಚಿಸಲಾಯಿತೆಂದು ಹೇಳಲಾಗಿದೆ. ಈ ವಿಚಾರದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ವೇದಾಂತಮಯ್ಯಂಗಾರ್ಯವರು ಹುಜೂರು ಕಾರ್ಯದರ್ಶಿಗಳೊಡನೆ ಸಂಭಾಷಣೆ ನಡೆಸಲಾಗಿ, ನೌಕರರ ಬೇಡಿಕೆಗಳ ಬಗ್ಗೆ ಬರುವ ೩ನೇ ತಾರೀಕು ಉಭಯತರೊಡನೆ ಚರ್ಚಿಸಬಹುದೆಂದೂ, ಅಲ್ಲಿಯವರೆಗೂ ನೌಕರರು ಬಿಲ್ಲೆಗಳನ್ನು ತೆಗೆಯಬೇಕೆಂದೂ ಹುಜೂರು ಕಾರ್ಯದರ್ಶಿಗಳು ಕೋರಲಾಗಿ ಅದರಂತೆಯೇ ಮಾಡಲಾಯಿತು.

ಖಾಕ್ಸಾರ್ ನಾಯಕರ ಶಿಬಿರಗಳ ಬಂದ್

ಕಾಶ್ಮೀರದ ವಿಮೋಚನೆಯ ಉದ್ದಿಶ್ಯದಿಂದ ಭಾರತದ ಮೇಲೆ ಜನರನ್ನು ನುಗ್ಗಿಸಲು ಪಾಕಿಸ್ತಾನದ ಖಾಕ್ಸಾರ್ ಸಂಘದ ಮಾಜಿ ನಾಯಕ ಅಲ್ಲಾಮಾ ಮಷ್ರೀಕಿಯವರು ಜನರ ಜಮಾವಣೆಗಾಗಿ ತೆರೆದಿದ್ದ ೧೯ ಶಿಬಿರಗಳನ್ನು ಮುಚ್ಚಲಾಗಿದೆ. ಮಷ್ರೀಕಿ ಮತ್ತು ಅವರ ೪೭ ಅನುಯಾಯಿಗಳನ್ನು ಈಗಾಗಲೇ ಬಂಧಿಸಲಾಗಿದೆ.

ಅಮೃತ ಕೌರ್‌ರವರಿಂದ ಗವರ್ನರ್ ಹುದ್ದೆ ನಿರಾಕರಣೆ

ಕೇಂದ್ರ ಸರ್ಕಾರದ ಮಾಜಿ ಮಂತ್ರಿ ರಾಜಕುಮಾರಿ ಅಮೃತ ಕೌರ್‌ರವರಿಗೆ ಆಂಧ್ರ ಪ್ರದೇಶ ಗವರ್ನರ್‌ಗಿರಿಯನ್ನು ಕೊಡುತ್ತೇವೆಂದು ತಿಳಿಸಲಾಗಿತ್ತೆಂದೂ, ಆದರೆ ಅವರು ಅದಕ್ಕೊಪ್ಪಿಲ್ಲವೆಂದೂ ವರದಿಯಾಗಿದೆ.

ಪಿ. ಎಸ್. ಪಿ. ಪಕ್ಷಕ್ಕೆ ಜಯಪ್ರಕಾಶರ ರಾಜೀನಾಮೆ

ಜಯಪ್ರಕಾಶ ನಾರಾಯಣರವರು ಪ್ರಜಾಸಮಾಜವಾದಿ ಪಕ್ಷದ ಸಾಮಾನ್ಯ ಸದಸ್ಯತ್ವಕ್ಕೆ ರಾಜೀನಾಮೆಯನ್ನೊಪ್ಪಿಸುವರೆಂದು ವರದಿಯಾಗಿದೆ. ಯಾವ ರಾಜಕೀಯ ಪಕ್ಷದೊಡನೆ ಸೇರಿದ್ದರೂ, ಸರ್ವೋದಯ ಧ್ಯೇಯವನ್ನು ಸಾಧಿಸಲು ಸಾಧ್ಯವಿಲ್ಲವೆಂಬುದು ಅವರಿಗೆ ಮನವರಿಕೆಯಾಗಿ ಅದರಿಂದ ಪಕ್ಷವನ್ನು ಅವರು ಬಿಡುವರು.

ಜಾರ್ಡಾನಿನ ಮಿಲಿಟರಿ ಗವರ್ನರರಾಗಿ ರಕ್ಷಣಾ ಮಂತ್ರಿ ನೇಮಕ

ಇದುವರೆಗೆ ೨೦೦ ಜನರ ಬಂಧನ

ಜಾರ್ಡಾನಿನ [illegible] ನೋಡಿಕೊಳ್ಳುವುದು [illegible] ವಾಗಿದೆ [illegible] ಮಾರ್ಷಲ್ [illegible] ಅಧ್ಯಕ್ಷ [illegible]

ಮಾಜಿ ಪ್ರಧಾನಿ [illegible] ಬಂಧಿಸಲಾಗಿದೆ [illegible] ನಿಕಟವರ್ತಿಗಳು [illegible]

ಜಿಲ್ಲೆಯ [illegible] ಮಂತ್ರಿ [illegible] ವರನ್ನು ರಾಜ್ಯದ ಮಿಲಿಟರಿ ಗವರ್ನರನ್ನಾಗಿ ಹೊಸ ಮಂತ್ರಿಮಂಡಲವು [illegible] ವರ ಅಧಿಕಾರವ್ಯಾಪ್ತಿಯು [illegible] ನಗರದ ಮೇಲೂ ಇರುವುದು.

ಹೊಸ ಮಂತ್ರಿಮಂಡಲವು [illegible] ವಿಸರ್ಜಿಸಲಾಗುವುದೆಂದು ಹೇಳಲಾಗಿದೆ.

ಜೋರ್ಡಾನ್ ದೊರೆ [illegible] ಕೊಟ್ಟಕ್ಕೆ [illegible] ಗುಮಂತೆ [illegible] ಬಳಿ ಸಿರಿಯಾ ಈಜಿಪ್ಟ್ ಮತ್ತು ಸೌದಿ ಅರೇಬಿಯಾ [illegible] ಸೈನ್ಯವನ್ನು ಕಳುಹಲಾಗುವುದೆಂದು ಗೊತ್ತಾಗಿದೆ.

ಅಮ್ಮಾನ್ ನಗರದಲ್ಲಿ ಕಾಳಗದ ಸಿದ್ಧತೆಯಿಂದ ಸೈನ್ಯ ಮತ್ತು ಪೋಲೀಸು ದಳಗಳು ರಸ್ತೆಗಳಲ್ಲಿ ತಿರುಗಾಡುತ್ತಿವೆ. ಅಲ್ಲಿ ಮುಳ್ಳು ತಂತಿಗಳನ್ನು ಹಾಕಿ ಜನ ಸಂಚಾರವನ್ನು ತಡೆಯಲಾಗಿದೆ.

ಕುಂಭಕೋಣಕ್ಕೆ ಬೇರೆ ಹೆಸರು

ಕುಂಭಕೋಣದ ಪೌರಸಭೆಯು ಊರಿನ ಹೆಸರನ್ನು ಬದಲಾಯಿಸಲು ನಿರ್ಧರಿಸಿದೆ. ಅದನ್ನು ತಿರು ಕುಡಂದೈ ಎಂದು ಕರೆಯಲು ನಿರ್ಧರಿಸಲಾಗಿದೆ. ಕುಂಭಕೋಣ ಎಂಬ ಹೆಸರಿನ ದುರುಪಯೋಗದಿಂದ ಆ ಊರಿನ ಜನರಿಗೆ ಅಗೌರವವಾಗುತ್ತಿದ್ದ ವಿಚಾರವನ್ನು ಸಭಾ ಸದಸ್ಯರು ಪ್ರಸ್ತಾಪಿಸಿ, ಹೆಸರಿನ ಬದಲಾವಣೆ ಅಗತ್ಯವೆಂದು ಸೂಚಿಸಿದ್ದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕೊಳಲು ೭-೧೫ ಮತ್ತು ೮-೧೫ ಎಂ. ಶ್ರೀನಿವಾಸಮೂರ್ತಿ-ದೇವರನಾಮ ೭-೩೦ ರಿಕಾರ್ಡ್ ೮-೩೦ ಬಿ ವಿ ಸೀತ-ಸಂಗೀತ ೯-೩೦ ಬಾಲಜಗತ್ ಮಧ್ಯಾಹ್ನ ೧೨ ಮತ್ತು ೨-೧೫ ಎ. ಚನ್ನಕೇಶವಯ್ಯ ಸಂಗೀತ ೧೨ ೩೦ ವಾದ್ಯವೃಂದ ೧ ರಿಕಾರ್ಡ್ ಸಂಜೆ ೧-೫೦ ಎಂ ವಿ ರಾಮಯ್ಯ-ಕೊಳಲು ಸಂಜೆ ೬-೧೦ ಭಕ್ತಿ ಗೀತಾವಳಿ ೭-೩೦ ಸ್ಟುಡಿಯೋ ರಿಕಾರ್ಡ್ ೮ ಮತ್ತು ೧೦ ಸೀತಾಲಕ್ಷ್ಮಿ ವೆಂಕಟೇಶ್-ಸಂಗೀತ ೮-೩೦ ಚಲನವಲನ ಸುದ್ದಿಗಳು ೮ ೪೫ ರಿಕಾರ್ಡ್ ೯-೧೫ ಚಿತ್ರ ಸಂಗೀತ ೯-೩೦ ವಿಚಿತ್ರ ವಿ ವಾ ಹ-ನಾಟಕ ೧೦ ೩೦ ಎ. ವಿ ನಾರಾಯಣಪ್ಪ-ನಾದಸ್ವರ

ಮಂತ್ರಿಮಂಡಲಕ್ಕೆ ಮತ್ತೊಬ್ಬ ಸಚಿವರ ನೇಮಕವಿಲ್ಲ

ಹನ್ನೆರಡನೇ ಮಂತ್ರಿಯ ನೇಮಕಕ್ಕೆ ಕೇಂದ್ರ ಕಾಂಗ್ರೆಸ್ ನಾಯಕರ ಅಸಮ್ಮತಿ

ಬೆಂಗಳೂರು ೨೭

ತಮ್ಮ ಮಂತ್ರಿಮಂಡಲಕ್ಕೆ ಮತ್ತೊಬ್ಬ ಸಚಿವರನ್ನು ತೆಗೆದುಕೊಳ್ಳುವ ವಿಚಾರವನ್ನು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಕೈಬಿಟ್ಟಿರುವುದಾಗಿ ತಿಳಿದು ಬಂದಿದೆ. ೧೨ನೇ ಸಚಿವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ಶ್ರೀ ನಿಜಲಿಂಗಪ್ಪನವರು ಹೈ ಕಮಾಂಡಿನವರನ್ನು ಕೋರಿದ್ದರೆಂದೂ ಆದರೆ ಅವರು ಅದಕ್ಕೆ ಒಪ್ಪಲಿಲ್ಲವೆಂದೂ ಗೊತ್ತಾಗಿದೆ. ಆದ್ದರಿಂದ ಮಂತ್ರಿಮಂಡಲದಲ್ಲಿ ೧೧ ಮಂದಿ ಮಾತ್ರ ಇರುವರು.

ನಿರ್ದಿಷ್ಟ ಅವಧಿಗಾದರೂ ಅಣು ಬಾಂಬು ಪರೀಕ್ಷೆಯ ನಿಷೇಧ

ಪಶ್ಚಿಮ ರಾಷ್ಟ್ರಗಳಿಗೆ ರಷ್ಯಾ ಪ್ರಧಾನಿ ಬುಲ್ಗಾನಿನ್ನರ ಸೂಚನೆ

ರಷ್ಯಾದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ನರು ಬ್ರಿಟಿಷ್ ಪ್ರಧಾನಿಯವರಿಗೆ ಪತ್ರ ಬರೆದು, ಅಣು ಶಸ್ತ್ರಾಸ್ತ್ರಕ್ಕೆ ಸಂಬಂಧಿಸಿದಂತೆ ಒಪ್ಪಂದದ ಮೊದಲ ಹಂತವಾಗಿ ಅಣು ಬಾಂಬು ಮತ್ತು ಜಲಜನಕ ಬಾಂಬುಗಳ ಪರೀಕ್ಷೆಗಳನ್ನು ನಿರ್ದಿಷ್ಟ ಅವಧಿಗಾದರೂ ನಿಷೇಧಿಸುವುದರ ಬಗ್ಗೆ ಒಡಂಬಡಿಕೆಯಾಗಬೇಕೆಂದು ಸಲಹೆ ಮಾಡಿರುತ್ತಾರೆ. ಶಸ್ತ್ರಾಸ್ತ್ರ ಕಮಿಟಿಯಲ್ಲಿ ಪೈಪೋಟಿ ಮತ್ತು ಅಣುಶಸ್ತ್ರ ಯುದ್ಧದ ಭೀತಿಯನ್ನು ಪ್ರಸ್ತಾಪಿಸಿ, ಭಾರಿ ರಾಷ್ಟ್ರಗಳು ಅತ್ಯಾಧುನಿಕವಾದ ವಿನಾಶಕಾರಿ ಶಸ್ತ್ರಗಳನ್ನು ಹಿಡಿದು ಪರಸ್ಪರ ಎದುರಿಸಿ ನಿಂತಿರುವುದು ಅಪಾಯಕಾರಿ ಪರಿಸ್ಥಿತಿಯನ್ನು ತಂದೊಡ್ಡುತ್ತದೆಂದು ತಿಳಿಸಿ, ಬ್ರಿಟನ್ನಿನಂತಹ ಸಣ್ಣ ಮತ್ತು ಬಹಳ ಜನನಿಬಿಡವಾದ ರಾಷ್ಟ್ರದ ಮೇಲೆ ಅಣು ಬಾಂಬು ಧಾಳಿಯಾದರೆ ಅದರ ಪರಿಣಾಮವನ್ನು ಮನಗಾಣಬೇಕೆಂದು ಹೇಳಿರುತ್ತಾರೆ. ಮಧ್ಯಪೂರ್ವದಲ್ಲಿ ಬಲಪ್ರಯೋಗದಿಂದ ಸಮಸ್ಯೆಗಳ ಇತ್ಯರ್ಥವನ್ನು ಅವರು ಖಂಡಿಸಿರುತ್ತಾರೆ.

ಪಾಕಿಸ್ತಾನಕ್ಕೆ ಅರಬ್ಬರ ಬೆಂಬಲಗಳಿಸಲು ವಿಫಲ ಯತ್ನ

ಕಾಶ್ಮೀರದ ವ್ಯಾಜ್ಯದಲ್ಲಿ ಪಾಕಿಸ್ತಾನದ ನಿಲುವಿಗೆ ಬೆಂಬಲ ನೀಡಬೇಕೆಂದು ಇರಾಕು ಅರಬ್ ಲೀಗಿನಲ್ಲಿ ಪಟ್ಟ ಪ್ರಯತ್ನವು ವಿಫಲವಾಗಿರುವುದೆಂದು ಗೊತ್ತಾಗಿದೆ. ಈ ವಿಚಾರವನ್ನು ಆಯಾ ಅರಬ್ ಸರ್ಕಾರಗಳೇ ನಿರ್ಧರಿಸಬೇಕೆಂದು ಅರಬ್ ಲೀಗು ತಿಳಿಸಿದೆ.

ಕಣಿಯರ ಸೇವಾ ಸಮಾಜದ ವಾರ್ಷಿಕೋತ್ಸವ

ನರಸಿಂಹರಾಜ ಮೊಹಲ್ಲಾ ಹೊಸಕೇರಿ ಬ್ಲಾಕಿನಲ್ಲಿರುವ ಕಣಿಯರ ಸೇವಾ ಸಮಾಜದ ಶಾಲಾ ಕಟ್ಟಡದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ ಸಂಘದ ವಾರ್ಷಿಕೋತ್ಸವವು ಜರಗುವುದು. ಸಮಾಜದ ಅಧ್ಯಕ್ಷ ಶ್ರೀ ಎ. ಸಿ. ಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು. ಸದಸ್ಯರುಗಳು ಭಾಗವಹಿಸುವಂತೆ ಕೇಳಲಾಗಿದೆ.

ಪ್ರಿ-ಯೂನಿವರ್ಸಿಟಿ ಮತ್ತು ೩ ವರ್ಷದ ಡಿಗ್ರಿ ಶಿಕ್ಷಣದ ವ್ಯವಸ್ಥೆ

ಅಕೆಡೆಮಿಕ್ ಕೌನ್ಸಿಲಿನಲ್ಲಿ ನಿರ್ಧಾರ

ಮೈಸೂರು ೨೭

ವಿಶ್ವವಿದ್ಯಾಲಯದ ಅಕೆಡೆಮಿಕ್ ಕೌನ್ಸಿಲಿನ ವಿಶೇಷ ಸಭೆಯು ಈ ದಿನ ಬೆಳಗ್ಗೆ ಉಪಕುಲಪತಿ ಡಾ|| ಕೆ ವಿ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಭಾರತದ ಇತರ ವಿಶ್ವವಿದ್ಯಾಲಯಗಳಲ್ಲಿ ಜಾರಿಗೆ ತರಲಾಗಿರುವಂತೆ ಪ್ರಿ-ಯೂನಿವರ್ಸಿಟಿ ಶಿಕ್ಷಣ ಮತ್ತು ಮೂರು ವರ್ಷದ ಪದವೀ ಶಿಕ್ಷಣ ವ್ಯವಸ್ಥೆಯನ್ನು ಇಲ್ಲಿಯೂ ಏರ್ಪಡಿಸಲು ಪ್ರೊ|| ಸಿ ಡಿ ನರಸಿಂಹಯ್ಯನವರು ನಿರ್ಣಯವೊಂದನ್ನು ಮಂಡಿಸಿದರು. ಸ್ವಲ್ಪ ಚರ್ಚೆಯ ನಂತರ ಅದನ್ನು ತತ್ವಶಃ ಅಂಗೀಕರಿಸಲಾಯಿತು.

ಈ ಯೋಜನೆಯನ್ನು ವಿಶ್ವವಿದ್ಯಾಲಯದ ಸಿಂಡಿಕೇಟು ಈಗಾಗಲೇ ಅಂಗೀಕರಿಸಿರುತ್ತದೆ.

ಶ್ರೀರಂಗಪಟ್ಟಣದ ಬಳಿ ರೈಲು ಸೇತುವೆ ಕಂಬದಲ್ಲಿ ಬಿರುಕು

ರೈಲು ಸಂಚಾರಕ್ಕೆ ತಾತ್ಕಾಲಿಕ ಅಡಚಣೆ

ಮೈಸೂರು ೨೭

ಶ್ರೀರಂಗಪಟ್ಟಣ ಮತ್ತು ಪಾಂಡವಪುರದ ನಡುವೆ ಕಾವೇರಿ ನದಿ ಮೇಲಿರುವ ಸೇತುವೆಯ ಒಂದು ಕಂಬದಲ್ಲಿ ಬಿರುಕು ಕಾಣಿಸಿಕೊಂಡು ಸಂಚಾರಕ್ಕೆ ತೊಂದರೆಯಾಗಬಹುದೆಂದು ತಿಳಿದುಬಂದ ಕಾರಣ ನಿನ್ನೆ ರೈಲುಗಳ ಸಂಚಾರವು ಹಲವು ಗಂಟೆಗಳ ಕಾಲ ತಡವಾಯಿತು. ಇಲ್ಲಿಂದ ನಿನ್ನೆ ಮಧ್ಯಾಹ್ನ ಹೊರಡಬೇಕಾಗಿದ್ದ ಮೇಲ್ ಗಾಡಿಯು ರಾತ್ರಿ ಹೊರಟಿತು. ಹೊರಗಿನ ರೈಲುಗಳೂ ತಡವಾಗಿ ಬಂದುವು. ಸೇತುವೆಯಿಂದ ಅಪಾಯವೇನೂ ಇಲ್ಲವೆಂದು ತಿಳಿದುಬಂದಿರುವುದರಿಂದ ಈಗ ರೈಲು ಸಂಚಾರಗಳು ಎಂದಿನಂತೆ ನಡೆಯುತ್ತಿವೆ.

ಅರ್ಕೆಸ್ಟ್ರಾ ವಾದನ

ಶ್ರೀರಾಂಪೇಟೆಯಲ್ಲಿರುವ ಆರ್ಯ ವೈಶ್ಯ ಬಾಲಕ ಭಕ್ತಮಂಡಲಿಯು ಶ್ರೀರಾಮ ಮಂದಿರದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ ವಸಂತೋತ್ಸವವು ನಡೆಯುವುದು. ಅದರ ಅಂಗವಾಗಿ ಬಾಜಾಬಜಂತ್ರಿಯೂ, ಸಂಜೆ ೭ ಗಂಟೆಗೆ ಶ್ರೀ ಶೆಟ್ಟಿ ಮತ್ತು ಪಾರ್ಟಿಯವರಿಂದ ಅರ್ಕೆಸ್ಟ್ರಾ ವಾದನವೂ ಏರ್ಪಾಡಾಗಿವೆ.

ರಾಷ್ಟ್ರೀಯ ವಿಸ್ತರಣೆ ಯೋಜನೆ ಚರ್ಚಾ ಗೋಷ್ಠಿ

ರಾಷ್ಟ್ರೀಯ ವಿಸ್ತರಣೆ ಯೋಜನೆಯ ಅಂಗವಾಗಿ ಏರ್ಪಡಿಸಿರುವ ಚರ್ಚಾ ಗೋಷ್ಠಿಯನ್ನು ಮೈಸೂರು ಡಿವಿಷನಲ್ ಕಮಿಷನರ್ ಶ್ರೀ ಶೇಷಗಿರಿರಾಯರು ನಾಳೆ ಬೆಳಿಗ್ಗೆ ೧೦ ಗಂಟೆಗೆ ಟೌನ್‌ಹಾಲಿನಲ್ಲಿ ಆರಂಭಿಸುವರು. ಡಾ|| ಕೃಷ್ಣಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಗೋಷ್ಠಿಯ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ನಾಳೆ ಮಧ್ಯಾಹ್ನ ೧೨ ಗಂಟೆಗೆ, ಜಿಲ್ಲಾಧಿಕಾರಿಗಳಾದ ಶ್ರೀ ಡಿ ಆರ್ ಚನ್ನರಾಜಯ್ಯನವರು ವಹಿಸುವರು.

ಬೆಂಗಳೂರಿನಂತೆ ಮೈಸೂರಿನಲ್ಲೂ ಬೈಸಿಕಲ್ ತೆರಿಗೆ ರದ್ದಾಗಲಿ

ಬೈಸಿಕಲ್ ತೆರಿಗೆಯನ್ನು ರದ್ದು ಮಾಡುವಂತೆ ಬೆಂಗಳೂರು ಕಾರ್ಪೊರೇಷನ್ ಸಭೆಯು ಸರ್ವಾನುಮತದಿಂದ ನಿರ್ಣಯ ಮಾಡಿರುತ್ತದೆ ಮೊದಲು ಈ ತೆರಿಗೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬೇಕೆಂಬ ಸಲಹೆಯು ಬಂದು ಅನಂತರ ಸಂಪೂರ್ಣ ವಿಮರ್ಶೆಯಾದಮೇಲೆ ಅದನ್ನು ಪೂರ್ಣವಾಗಿ ತೆಗೆದುಹಾಕುವ ನಿರ್ಧಾರವು ಆಯಿತು ಈ ತೀರ್ಮಾನವು ಕಾಲಾನುಗುಣ್ಯವೂ ಸರ್ವ ಸಮ್ಮತವೂ ಆಗಿರುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ

ಬೈಸಿಕಲ್ಲು ಬಡವರ ವಾಹನವೆಂಬುದು ಸುಪ್ರಸಿದ್ಧವಾದ ವಿಷಯ ನಗರಗಳು ವಿಶೇಷವಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ ಇವು ಅತ್ಯಂತ ಅವಶ್ಯಕವೂ ಆಗಿವೆ ಇಲ್ಲದಿದ್ದರೆ ಜನಸಾಮಾನ್ಯರು ಸಕಾಲಕ್ಕೆ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಲು ಸಾಧ್ಯವೇ ಇಲ್ಲ ದೊಡ್ಡ ನಗರಗಳೊಳಗಿನ ಜನಸಂದಣಿಯನ್ನು ಕಡಿಮೆ ಮಾಡಿ, ಊರಿನ ಹೊರಗೆ ವಾಸಿಸಲು ಜನರನ್ನು ಪ್ರೇರೇಪಿಸುವುದಕ್ಕೂ ಸಹ ಇದು ಸಹಕಾರಿಯಾಗಿರುತ್ತದೆ ಬೈಸಿಕಲ್ಲುಗಳಿಂದ ರಸ್ತೆಗಳಿಗೆ ಯಾವ ವಿಧವಾದ ನಷ್ಟವೂ ಉಂಟಾಗುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು ಆದುದರಿಂದ ಇಂತಹ ವಾಹನಗಳನ್ನಿಟ್ಟುಕೊಳ್ಳುವವರಿಗೆ ಎಲ್ಲ ವಿಧವಾದ ಪ್ರೋತ್ಸಾಹಗಳನ್ನೂ ನೀಡುವುದಲ್ಲದೆ ಅದರ ಮೇಲೆ ಯಾವ ಬಗೆಯ ಹೊರೆಯನ್ನೂ ಹಾಕದಿರುವುದು ನ್ಯಾಯವಾಗಿಯೇ ಇದೆ

ಬಡವರಿಗೆ ಸಂಚಾರದ ಸೌಲಭ್ಯವನ್ನು ಸುಲಭ ಮಾಡುವುದಕ್ಕಾಗಿಯೇ ಇತ್ತೀಚೆಗೆ ಬೈಸಿಕಲ್ಲುಗಳ ಮೇಲೆ ಇಬ್ಬರು ಏಕಕಾಲದಲ್ಲಿ ಹೋಗಬಹುದೆಂಬ ಅವಕಾಶವನ್ನೂ ಕಲ್ಪಿಸಲಾಗಿದೆ ದೆಹಲಿ ಮುಂತಾದ ಕಡೆಗಳಲ್ಲಿ ಇಡೀ ಸಂಸಾರದವರೆಲ್ಲರೂ, ಒಂದೇ ಬೈಸಿಕಲ್ಲಿನ ಮೇಲೆ ಹೋಗುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ ನಮ್ಮಲ್ಲಿಯೂ ಇಂತಹ ಅವಕಾಶವನ್ನು ಸರ್ಕಾರದವರು ಕಲ್ಪಿಸಿರುವುದು ಉಚಿತವಾಗಿಯೇ ಇರುತ್ತದೆ

ಮದರಾಸು ನಗರದಲ್ಲಿ ಬೈಸಿಕಲ್ ತೆರಿಗೆಯನ್ನು ರದ್ದು ಮಾಡಿ, ಇತರರಿಗೆ ಮಾರ್ಗದರ್ಶನ ಮಾಡಲಾಯಿತು ಈಚೆಗೆ ಅಲ್ಲಿನ ಅನೇಕ ಸಣ್ಣ ಪುಟ್ಟ ಊರುಗಳಲ್ಲಿಯೂ ಈ ತೆರಿಗೆ ರದ್ದಾಗಿರುತ್ತದೆ ಲಂಡನ್ ಮುಂತಾದ ಪಾಶ್ಚಿಮಾತ್ಯ ನಗರಗಳಲ್ಲಿ ಬೈಸಿಕಲ್ ಮೇಲೆ ಯಾವ ತೆರಿಗೆಯೂ ಇರುವುದಿಲ್ಲ ಇದನ್ನೆಲ್ಲಾ ಅರಿತು ಬೆಂಗಳೂರು ಪೌರಸಭೆಯವರೂ ಸೂಕ್ತ ನಿರ್ಧಾರಕ್ಕೆ ಬಂದಿರುವುದಕ್ಕಾಗಿ ಬಡ ಸೈಕಲ್ ಮಾಲೀಕರುಗಳು ಅವರನ್ನು ಅಭಿನಂದಿಸುವರು

ಬೈಸಿಕಲ್ ತೆರಿಗೆ ರದ್ದಿನ ಪ್ರಶ್ನೆಯು ನಮ್ಮಲ್ಲಿ ಕೆಲವು ವರ್ಷಗಳಿಂದ ಚರ್ಚಿಸಲ್ಪಡುತ್ತಿದೆ ಅದರ ಸೂಕ್ತತೆಯ ತತ್ವವನ್ನು ಎಲ್ಲರೂ ಅಂಗೀಕರಿಸಿದರೂ, ಆರ್ಥಿಕ ಕಾರಣಗಳ ಮೇಲೆ ಈ ವಿಷಯವನ್ನು ತಳ್ಳಿಹಾಕಲಾಗುತ್ತಿತ್ತು ಆರ್ಥಿಕ ಕೊರತೆಯು ಸ್ಥಳೀಯ ಸಂಸ್ಥೆಗಳ ಒಂದು ನಿರಂತರ ವ್ಯಾಧಿಯೆಂದು ಹೇಳಬಹುದು. ಇದನ್ನು ಸರಿಪಡಿಸಲು ನ್ಯಾಯವಾದ ಮಾರ್ಗಗಳನ್ನು ಹುಡುಕಬೇಕು ಅತ್ಯಗತ್ಯ ವಸ್ತುಗಳ ಮೇಲೆ ಹೇರಿಕೆಯನ್ನು ಹೊರಿಸಬಾರದು ಸಾಲದುದಕ್ಕೆ ಬೈಸಿಕಲ್ ತೆರಿಗೆ ಮೇಲೆ ರೂಪಾಯಿಗೆ ಎರಡಾಣೆಯಂತೆ ಆರೋಗ್ಯ ತೆರಿಗೆಯನ್ನೂ ಸಹ ಹೇರಿ, ಇದನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ ಬೈಸಿಕಲ್ಲುಗಳಿಗೂ ಆರೋಗ್ಯ ತೆರಿಗೆಗೂ ಏನ ಸಂಬಂಧವೆಂಬುದನ್ನು ಊಹಿಸಲೂ ಸಾಧ್ಯವಿಲ್ಲ

ಕೆಲವು ದಿನಗಳ ಹಿಂದೆ ಬೈಸಿಕಲ್ ತೆರಿಗೆಯ ರದ್ದಿನ ವಿಷಯವು ನಮ್ಮ ಪೌರಸಭೆಯಲ್ಲಿ ಬಂದು ಬಿದ್ದುಹೋಯಿತು ಅದಕ್ಕೆ ಕಾರಣವು ಏನೇ ಇರಲಿ, ಮೇಲ್ಕಂಡ ವಿದ್ಯಮಾನಗಳೆಲ್ಲವನ್ನೂ ಗಮನಿಸಿ ನಮ್ಮ ನಗರ ಪಿತೃಗಳು ಈ ಅನುಚಿತವೂ, ಜನಸಂಕಟವೂ, ಅತೃಪ್ತಿಕರವೂ ಆದ ತೆರಿಗೆಯನ್ನು ರದ್ದು ಮಾಡಲು ಕ್ರಮ ಕೈಗೊಳ್ಳುವುದು ಹಿತವಾಗಿದೆ

— ಬೈಸಿಕಲ್ ಸವಾರಿ

ವಿದ್ಯಾರ್ಥಿಗಳು ಬಹು ಸಂಖ್ಯೆಯಲ್ಲಿ ತೇರ್ಗಡೆಯಾಗದಿರಲು ಕಾರಣ

ಅ|| ಭಾ|| ಔದ್ಯೋಗಿಕ ಮತ್ತು ಶೈಕ್ಷಣಿಕ ಸಮ್ಮೇಳನದಲ್ಲಿ ಡಾ|| ಪುಟ್ಟಪ್ಪನವರ ವಿಮರ್ಶೆ

ಮೈಸೂರು ೨೭

ಅಖಿಲ ಭಾರತ ಔದ್ಯೋಗಿಕ ಮತ್ತು ಶೈಕ್ಷಣಿಕ ಮಾರ್ಗದರ್ಶನ ಸಂಸ್ಥೆಯ ಸಮ್ಮೇಳನವನ್ನು ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಕೆ ವಿ ಪುಟ್ಟಪ್ಪನವರು ನೆನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಆರಂಭಗೊಳಿಸಿದರು

ಶ್ರೀ ಸತ್ಯಾಗಾಲಂ ಪಾಚುರವರಿಂದ ಪ್ರಾರ್ಥನೆಯಾದನಂತರ ಉಪಾಧ್ಯಾಯರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎ ಸಿ ದೇವೇಗೌಡರು ಸ್ವಾಗತ ಭಾಷಣ ಮಾಡಿ, ಔದ್ಯೋಗಿಕ ಮತ್ತು ಶಿಕ್ಷಣ ಸಮಸ್ಯೆಗಳ ಬಗ್ಗೆ ಸಂಶೋಧನೆ ನಡೆಸಿ ಸೂಕ್ತ ಮಾರ್ಗದರ್ಶನ ನೀಡಲು ಇರುವ ಆಗತ್ಯವನ್ನು ಕೇಂದ್ರ ಸರ್ಕಾರವು ಮನಗಂಡು ಪ್ರಾಂತಗಳಲ್ಲಿ ಇದಕ್ಕಾಗಿ ಮಾರ್ಗದರ್ಶನ ಸಮಿತಿಗಳನ್ನು ಏರ್ಪಡಿಸಲು ಸೂಚನೆಯಿತ್ತಿದ್ದಾರೆ ಮೈಸೂರಿನಲ್ಲಿ ಆದಷ್ಟು ಬೇಗನೆ ಈ ಸಂಸ್ಥೆಯೊಂದರ ಸ್ಥಾಪನೆಯಾಗಬೇಕೆಂದೂ ನುಡಿದರು ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳು ತಮ್ಮ ಇದುವರೆಗಿನ ಕಾರ್ಯಸಾಧನೆಗಳ ಬಗ್ಗೆ ವರದಿಗಳನ್ನು ಓದಿದರು ಕಾರ್ಯದರ್ಶಿ ಶ್ರೀ ಎಲ್ ಜೆ ಭಟ್‌ನವರು ಮಾತನಾಡಿ ಈ ಚಳುವಳಿಯನ್ನು ಬಲಗೊಳಿಸಲು ಅಮೆರಿಕದ ಫೋರ್ಡ್ ಮತ್ತು ಫುಲ್‌ಬ್ರೈಟ್ ಸಂಸ್ಥೆಗಳ ಸಹಾಯಕ್ಕಾಗಿ ಯತ್ನಿಸಲಾಗುತ್ತಿದೆಯೆಂದು ತಿಳಿಸಿದರು

ಡಾ|| ಪುಟ್ಟಪ್ಪನವರು ಭಾಷಣ ಮಾಡಿ ಮೇಲ್ಕಂಡ ಚಳುವಳಿಯು ಇತ್ತೀಚೆಗೆ ಆರಂಭವಾದರೂ ವಿಶ್ವವ್ಯಾಪ್ತಿಯನ್ನು ಬಹುಬೇಗನೆ ಪಡೆದಿರುವುದನ್ನು ಪ್ರಶಂಸಿಸಿದರು ಇಂದಿನ ವಿದ್ಯಾಭ್ಯಾಸದ ಹಲವು ಸಮಸ್ಯೆಗಳನ್ನು ಚರ್ಚಿಸಿ, ಅವುಗಳ ಪರಿಹಾರಕ್ಕಾಗಿ ಮೇಲ್ಕಂಡ ಚಳುವಳಿಯು ಉಪಯೋಗವಾದೀತೆಂದು ಅಭಿಪ್ರಾಯಪಟ್ಟರು

ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಫೇಲಾಗುತ್ತಿರುವುದಕ್ಕೆ ಮುಖ್ಯವಾಗಿ ಅನರ್ಹರಾದವರು ವ್ಯಾಸಂಗಕ್ಕೆ ತೊಡಗುವುದು, ಒಂದುವೇಳೆ ಅರ್ಹರಾದವರು ವ್ಯಾಸಂಗ ಮಾಡಿದರೂ ತಮ್ಮ ಮನಸ್ಸಿಗೆ ಹೊಂದಿದ ವಿದ್ಯೆಯನ್ನು ಪಡೆಯದೆ ನಿರಾಶರಾಗುವುದು ಮುಂತಾದವು ಕಾರಣಗಳಾಗಿವೆ ಆದ್ದರಿಂದ ವಿದ್ಯಾರ್ಥಿಗಳ ಬುದ್ಧಿಮಟ್ಟವನ್ನು ಗೊತ್ತುಹಚ್ಚಲು ಮನಶ್ಶಾಸ್ತ್ರಜ್ಞರು ಯತ್ನಿಸಬೇಕು, ವಿದ್ಯಾರ್ಥಿಗಳನ್ನು ಅವರ ಬುದ್ಧಿಶಕ್ತಿಗನುಸಾರವಾಗಿ ವಿಂಗಡಿಸುವವರೆಗೂ ಉಪಾಧ್ಯಾಯರು ತಮ್ಮ ಬೋಧನಾ ಕ್ರಮವನ್ನು ಬದಲಾಯಿಸುತ್ತಲೇ ಇರಬೇಕು

ವಿಶೇಷ ಚಟುವಟಿಕೆಗಳನ್ನು ಇತ್ತೀಚೆಗೆ ಹೆಚ್ಚಿಸುತ್ತಾ ಬಂದಿರುವ ಕಾರಣ ಮುಖ್ಯವಾದ ವ್ಯಾಸಂಗದಿಂದ ವಿದ್ಯಾರ್ಥಿಗಳನ್ನು ವಿಮುಖರನ್ನಾಗಿ ಮಾಡಲಾಗುತ್ತಿದೆ ಇಂದು ಅವರುಗಳಲ್ಲಿ ಬೆಳೆದಿರುವ ಅಶಿಸ್ತಿಗೆ ಉಪಾಧ್ಯಾಯರೊಡನೆ ಅವರ ಸಂಬಂಧದಲ್ಲಿ ಲೋಪವಿದೆಯೇ ಅಥವಾ ವಿದ್ಯಾರ್ಥಿಗಳ ವಿಚಿತ್ರವಾದ ಮನೋಭಾವವು ಕಾರಣವೇ ಎಂಬುದನ್ನೂ ಮತ್ತು ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿದರೆ ವಿದ್ಯಾರ್ಥಿಗಳ ದಕ್ಷತೆಯು ಕುಂದುವುದೇ ಎಂಬುದನ್ನೂ ಪೂರ್ಣವಾಗಿ ಪರಿಶೀಲಿಸಬೇಕು- ಎಂಬುದಾಗಿ ಹೇಳಿ, ಅವರು ಮೇಲ್ಕಂಡ ಚಳುವಳಿಯು ಭಾರತದಲ್ಲಿ ಯಶಸ್ವಿಯಾಗಲೆಂದು ಹಾರೈಸಿದರು

ಡಾ|| ಬಿ ಕುಪ್ಪಸ್ವಾಮಿಯವರು ವಂದನಾರ್ಪಣ ಮಾಡಿದರು ಸಮ್ಮೇಳನವು ಇಂದು ಮತ್ತು ನಾಳೆ ನಡೆಯುವುದು

ಬಡಬಗ್ಗರಿಗೆ ಅನ್ನದಾನ

ತಮ್ಮ ತಂದೆ ಧರ್ಮಪ್ರವರ್ತ ಬೆಂಗಳೂರು ಸುಬ್ಬಣ್ಣನವರು ಕಳೆದ ೩ನೇ ತಾರೀಕು ಶಿವೈಕ್ಯರಾದ ಸಂಬಂಧವಾಗಿ ನಗರದ ಸಂತೆಪೇಟೆ ವ್ಯಾಪಾರಿಗಳಾದ ಬಿ ಎಸ್. ಬಸವಣ್ಣ ಅಂಡ್ ಸನ್ಸ್‌ರವರು ನಾಳೆ ಬೆಳಿಗ್ಗೆ ೧೦ ಗಂಟೆಗೆ ಸಂತೆಪೇಟೆ ಬಜಾರ್ ಬಡಬಗ್ಗರಿಗೆ ಅನ್ನದಾನ ಮಾಡುವರು

ದಕ್ಷಿಣ ಆಫ್ರಿಕಾ ಪ್ರಧಾನಿಯ ದುರಭಿಮಾನ

ಆಫ್ರಿಕಾ ಖಂಡಕ್ಕೆ ಸೇರಿರುವ ಘಾನಾ ರಾಜ್ಯದ ಪ್ರಧಾನಿ ನ್ಕ್ರೂಮಾರವರ ಜೊತೆಯಲ್ಲಿ ತಾವೂ ಕುಳಿತುಕೊಳ್ಳಬೇಕಾಗುವ ಸಂದರ್ಭವಿರುವುದನ್ನು ಗಮನಿಸಿ, ದಕ್ಷಿಣ ಆಫ್ರಿಕಾ ಪ್ರಧಾನಿ ಸ್ಟ್ರಿಜಂಡರವರು ಲಂಡನ್ನಿನಲ್ಲಿ ಬರುವ ಜೂನ್ ತಿಂಗಳು ಸೇರುವ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ತಾವು ಭಾಗವಹಿಸುವುದಿಲ್ಲವೆಂದು ತಿಳಿಸಿರುತ್ತಾರೆ

ಸಹಯೋಗಿಗಳೆಂದು ಕರೆಯಲು ಜವಾನರುಗಳ ಬೇಡಿಕೆ

ಅಲಹಾಬಾದು ಕಲಾ ಕಾಲೇಜುಗಳ ಜವಾನರು ಸಭೆ ಸೇರಿ ನಿರ್ಣಯವನ್ನು ಅಂಗೀಕರಿಸಿ, ತಮ್ಮನ್ನು ಇನ್ನುಮುಂದೆ ಸಹಯೋಗಿಗಳೆಂದು ಕರೆಯಲು ಒತ್ತಾಯ ಮಾಡಿರುತ್ತಾರೆ. ಚಪರಾಸಿ (ಜವಾನ) ಗಳೆಂದು ಅವರುಗಳನ್ನು ಈಗ ಕರೆಯಲಾಗುತ್ತಿದೆ ಸ್ವತಂತ್ರ ಭಾರತದಲ್ಲಿ ಈ ಹೆಸರು ಅಪಮಾನಕರವಾದುದೆಂದು ಅವರು ತಿಳಿಸಿರುತ್ತಾರೆ. ಜವಾನರು ಕರ್ಮಚಾರಿ ಎಂಬ ಒಂದು ಸಂಘವನ್ನು ಸ್ಥಾಪಿಸಿರುವರು ಅದರಲ್ಲಿ ಅನೇಕ ಮಹಿಳೆಯರೂ ಇರುವರು

ಮೇ ದಿನಾಚರಣೆ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಮೈಸೂರು ಜಿಲ್ಲಾ ಸಮಿತಿ, ನಗರದ ಪೌರಸಭಾ ಕೆಲಸಗಾರರ ಸಂಘ ಮತ್ತು ಮೈಸೂರು ಚರ್ಮದ ಕೆಲಸಗಾರರ ಸಂಘ ಇವುಗಳ ಆಶ್ರಯದಲ್ಲಿ ಬರುವ ೧ನೇ ತಾರೀಕು ಬುಧವಾರ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ "ಮೇ" ದಿನವನ್ನು ಆಚರಿಸಲಾಗುವುದು. ಇದರ ಅಂಗವಾಗಿ ನಗರದ ಬೀದಿಗಳಲ್ಲಿ ಮೆರವಣಿಗೆಯೂ, ಸಂಜೆ ೬-೩೦ಕ್ಕೆ ಬಹಿರಂಗ ಸಭೆ ಮತ್ತು ಕಲಾ ಪ್ರದರ್ಶನಗಳೂ ನಡೆಯುವುವು ಮೈಸೂರು ನಗರದ ಕಾರ್ಮಿಕರು ಮತ್ತಿತರರು ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ

ವಸಂತ ಸಾಹಿತ್ಯೋತ್ಸವದ ವಿಚಾರ ಗೋಷ್ಠಿ

ನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ಏರ್ಪಟ್ಟಿರುವ ವಸಂತ ಸಾಹಿತ್ಯೋತ್ಸವದ ಅಂಗವಾಗಿ ನಾಳೆ ಬೆಳಿಗ್ಗೆ ೯ ಗಂಟೆಗೆ ಇಂದಿನ ಭಾರತದ ಸಮಸ್ಯೆಗಳು ಎಂಬ ವಿಚಾರವಾಗಿ ಗೋಷ್ಠಿಯು ನಡೆಯುವುದು ಡಾ|| ಎಂ ವಿ ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು ಶ್ರೀ ಕೆ. ಸಂಪದ್ಗಿರಿರಾಯರು ಉಪನ್ಯಾಸ ಮಾಡುವರು ವಿ|| ಗೌರಮ್ಮ ನಾಗರಾಜ್‌ರವರಿಂದ ಕಾವ್ಯ ವಾಚನ ಮತ್ತು ಶ್ರೀ ಆರ್. ತಾತಾಚಾರ್ಯರಿಂದ ರಾಮಾಯಣ ವಾಚನಗಳಿವೆ. ಸಂಜೆ ೬ ಗಂಟೆಗೆ ಉತ್ಸವದ ಮುಕ್ತಾಯ ಸಮಾರಂಭವು ನಡೆಯುವುದು ಶ್ರೀ ತ ರಾ ಸುಬ್ಬರಾಯರ ಉಪನ್ಯಾಸ, ಕುಮಾರಿ ಪಿ ಕೆ ಲೀಲಾ ಮತ್ತು ವೃಂದದವರಿಂದ ಸಂಗೀತ ಮತ್ತು ಶ್ರೀಮತಿ ಕೆ ಲಲಿತಾರವರಿಂದ ಕನ್ನಡ ಗೀತೆಗಳೂ ನಡೆಯುವುವು

ಸ್ಕೂಲ್ ಫೈನಲ್ ವಿದ್ಯಾರ್ಥಿಗಳಿಗೆ ಗ್ರೇಸ್‌ಮಾರ್ಕ್ಸ್ ಬಗ್ಗೆ ಪಕ್ಷಪಾತಕೂಡದು

ಎಸ್ ಎಸ್ ಎಲ್. ಸಿ ಪರೀಕ್ಷೆಗಳಿಗೆ ಕುಳಿತುಕೊಂಡವರಿಗೆ ಇ ಸಿ ಓ ಎಸ್ ಕೊಡುವುದಕ್ಕಾಗಿ ವಿಶ್ವವಿದ್ಯಾನಿಲಯದವರು ಗ್ರೇಸ್ ಮಾರ್ಕ್ಸ್ ಕೊಡುತ್ತಿರುವುದು ಸರಿಯಷ್ಟೆ. ಇದರಲ್ಲಿ ಒಂದೊಂದು ವಿಷಯದಲ್ಲೂ ಪಕ್ಷಪಾತ ತೋರಲಾಗುತ್ತಿದೆ ಕಳೆದ ವರ್ಷ ಇಂಗ್ಲೀಷಿಗೆ ಮಾತ್ರ ಹೆಚ್ಚು ನಂಬರನ್ನು ಕೊಡಲಾಗಿತ್ತು. ಇತರ ವಿಷಯಗಳಿಗೆ ಕೊಡಲಾಗಲಿಲ್ಲ ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಯು ನಾಳೆ ನಗರದಲ್ಲಿ ಸೇರಿ ಗ್ರೇಸ್ ಮಾರ್ಕ್ಸ್ ಕೊಡುವುದನ್ನು ಪರಿಶೀಲಿಸಲಿದೆ. ಅದರ ಸದಸ್ಯರು ಪಕ್ಷಪಾತವನ್ನು ತೋರದೆ ಎಲ್ಲಾ ವಿಷಯಗಳಿಗೂ ಒಂದೇ ರೀತಿಯಲ್ಲಿ ಗ್ರೇಸ್ ಮಾರ್ಕ್ಸ್ ಕೊಡುವುದು ಸೂಕ್ತ ಈ ಸಾರಿಯ ಚರಿತ್ರೆ ಮತ್ತು ಭೂಗೋಳ ಪ್ರಶ್ನೆ ಪತ್ರಿಕೆಗಳು ಕಷ್ಟವಾಗಿದ್ದುವು

— ವಿದ್ಯಾರ್ಥಿ ಹಿತೈಷಿ

ಜನತಾ ವಿಮಾ ವಿಸ್ತಾರ

ಭಾರತದ ಜೀವ ವಿಮಾ ಸಂಸ್ಥೆಯವರು ಜನತಾ ವಿಮಾ ಯೋಜನೆಯೊಂದನ್ನು ಸಿದ್ಧ ಸಿರುತ್ತಾರೆ ೫೦೦ರಿಂದ ೧,೦೦೦ ರೂ ವರೆ ಎಂಡೋಮೆಂಟ್ ಪಾಲಿಸಿಗಳನ್ನು ಜಾರಿಗೆ ಲು ಆಲೋಚಿಸಲಾಗಿದೆ. ಈ ಬಗ್ಗೆ ಪ್ರೀ ಯಂ ವಸೂಲಿಗಾಗಿ ಎರಡು ವಿಧದ ಕ್ರಮ ಗೊಳ್ಳಲಾಗುವುದು ಪ್ರೀಮಿಯಂ ಹಣವಾ ಷ್ಟು ಸ್ಟಾಂಪುಗಳನ್ನು ಖರೀದಿಸಿದಾರನು ಬಹುದು ಪ್ರೀಮಿಯಂ ಅನ್ನು ವಾರ್ಷಿಕ, ವರ್ಷ ಮತ್ತು ತ್ರೈಮಾಸಿಕವಾಗಿ ಕೊಡಬಹು ಮಾಸಿಕ ಪ್ರೀಮಿಯಂ ಅನ್ನು ತೆಗೆದು ಳ್ಳಲಾಗುವುದಿಲ್ಲ ಮೊದಲನೇ ಪ್ರೀಮಿ ಅನ್ನು ನಗದಾಗಿ ಕೊಡಬೇಕು, ಏಜೆಂಟರ ರೂ ಪ್ರೀಮಿಯಂ ಹಣವನ್ನು ಕೊಡಬಹು ಬರುವ ತಿಂಗಳು ಅಕ್ಟೋಬರಿನಲ್ಲಿ ದಕ್ಷಿಣ ಭಾರ ಲ್ಲಿ ಈ ಪದ್ಧತಿಯು ಜಾರಿಗೆ ಬರಲಿದೆ

ಪಾಕೆಟ್ ಅಣು ರಿಯಾಕ್ಟರ್ ಯಂತ್ರ

ಅಮೆರಿಕದ ಸೈನ್ಯದವರು ಇದೇ ಮೊದಲ ಅತ್ಯಂತ ಸಣ್ಣದಾದ "ಪಾಕೆಟ್" ಅಣು ರಿಯಾ ಕ್ಟರ್ ಒಂದನ್ನು ತಯಾರಿಸಿದ್ದಾರೆ ಅದು ಟೆಗೆ ೨,೦೦೦ ಕಿಲೊವಾಟ್ ವಿದ್ಯುಚ್ಛಕ್ತಿಯ ತಯಾರಿಸುವುದು ಅದು ೨,೦೦೦ ಜನರ ಅ ಕತೆಗೆ ಸಾಕಾಗುವುದೆಂದು ಹೇಳಲಾಗಿದೆ. ಈ ಯಾಕ್ಟರನ್ನು ವಿಮಾನದಲ್ಲೂ ಸಾಗಿಸಬಹುದು.

೪೩ ಸಾವಿರ ರೂ. ದರೋಡೆ

೩ ಜನರಿಗೆ ಸಜಾ

ಬೊಂಬಾಯಿಯ ರಿಸರ್ವ್ ಬ್ಯಾಂಕ್ ಯಲ್ಲಿ ಮಧ್ಯ ರೈಲ್ವೆಯ ಒಬ್ಬ ನೌಕರನು ಹೆಯ ೪೩,೨೪೮ ರೂ. ಅನ್ನು ತೆಗೆದುಕೊಳ್ಳು ದ್ದಾಗ ಅವನಿಗೆ ರಿವಾಲ್ವರ್ ತೋರಿಸಿ ಅವ ದ ಹಣವನ್ನು ಅಪಹರಿಸಿದುದಕ್ಕಾಗಿ ವಿಶ್ವನಾಥ ರಾಮ, ವೇಲೂಸ್ವಾಮಿ ಮತ್ತು ರಾಘವ ಬಿ ರೆಸ್ವಾಮಿ ಎಂಬ ಮೂವರಿಗೆ ಬೊಂಬಾಯಿಯ ಅ|| ಸೆಷನ್ಸ್ ನ್ಯಾಯಾಧೀಶರು ತಲಾ ೫ ವರ್ಷ ಆ ಸಜಾ ವಿಧಿಸಿರುತ್ತಾರೆ. ಮಾರ್ಚಿ ೧ ೧೩,೩೬ರಂದು. ಸಮೇತ ವಿಶ್ವನಾಥ್ ಮತ್ತು ಮರವರನ್ನು ಬಂಧಿಸಲಾಯಿತು ರಾಘವ ಲಂ ಬಳಿ ಒಂದು ಹಳ್ಳಿಯಲ್ಲಿ ಸಿಕ್ಕಿಬಿದ್ದನು

ರಾಮ ಪಟ್ಟಾಭಿಷೇಕ ಮತ್ತು ಸಂಗೀತ

ಹೊಸಕೇರಿಯ ಸೀತಾರಾಮರಾವ್ ರಸ್ತೆ ಯಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ನಾ ಶ್ರೀರಾಮ ಪಟ್ಟಾಭಿಷೇಕವು ನಡೆಯುವುದು ಜೆ ೭|| ಗಂಟೆಗೆ ಗಮಕಿ ಹೆಚ್ ಆರ್ ಶಾಸ್ತ್ರಿ ಯವರಿಂದ ಸಂಗೀತವು ಏರ್ಪಾಡಾಗಿದೆ.

ಮಂಡ್ಯದ ಶ್ರೀ ಸದ್ಗುರು ಮಂದಿರದಲ್ಲಿ ನಾ ಪಟ್ಟಾಭಿಷೇಕದ ಸಂಬಂಧವಾಗಿ ಮಂತ್ರ ಕೋಟಿ ರಾಮನಾಮ ಲೇಖನ ಮತ್ತು ಸಂ ಗಂಟೆಗೆ ವಿ|| ಹೆಚ್ ರಾಮಕೃಷ್ಣಶಾಸ್ತ್ರಿ ಕಥಾ ಕಾಲಕ್ಷೇಪಗಳು ನಡೆಯುವುವು. ೭|| ಗಂಟೆಗೆ ಶ್ರೀರಂಗಪಟ್ಟಣದ ವಿದ್ವಾನ್ ಯ್ಯ ಮತ್ತು ಪಾರ್ಟಿಯವರಿಂದ ನಾಗಸ್ವರ ಡೆಯುವುದು.

ಸಂಗೀತ ಕಛೇರಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ರ ಭವನದಲ್ಲಿ ವಿದುಷಿ ಸಿ ಎ ಜಗನ್ನಾ ವರ ಗಾಯನವು ವಿ|| ಕೆ ಜೆ ವೆಂಕಟಾ ರವರ ಪಿಟೀಲು ಮತ್ತು ವಿ|| ಎಂ. ಆರ್. ಪ್ಪನವರ ಮೃದಂಗದೊಡನೆ ಏರ್ಪಾಡಾಗಿ

ಆಗಸ್ಟ್ ೧೫ರಂದೂ ರಜಾ

ಭಾರತಕ್ಕೆ ಸ್ವಾತಂತ್ರ್ಯ ಬಂದು ೧೦ ವ ಗಳಾದುದಕ್ಕಾಗಿಯೂ, ಸ್ವಾತಂತ್ರ್ಯಕ್ಕಾಗಿ ದ ಪ್ರಥಮ ಹೋರಾಟದ ಶತಮಾನೋತ್ಸವ ಗಿಯೂ ಬರುವ ಆಗಸ್ಟ್ ೧೫ರಂದು ಸರ್ಕಾ ವರು ಸಾರ್ವತ್ರಿಕ ರಜಾವನ್ನು ಘೋಷಿಸಿ ರೆ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನೇ ತಾರೀಕೂ ರಜವಿರುತ್ತದೆ

Edited, Printed and Published
A. R. Nagarajan at Sadhvi Pre
Subbiah Road, Mysore

[illegible] ನಂ. 792

ಚಂದಾ ದರ

[illegible]

[illegible]

ಅಂಚೆ ಮೂಲಕ

ತಿಂಗಳಿಗೆ ಒಂದು ರೂ.

ಬಿಡಿ ಪ್ರತಿಗೆ 2 ನಯೆ ಪೈಸೆ



ಬಿಡಿ ಪ್ರತಿಗೆ 2 ನಯೆ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, [illegible]
[illegible]
[illegible]
M.T. ಭೋಜಯ್ಯ
[illegible]
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : ೧೮] SADHVI : SUNDAY 28–4–1957 ಮೈಸೂರು : ಭಾನುವಾರ ೨೮–೪–೧೯೫೭ : [ಸಂಚಿಕೆ : [illegible]

- ಜಾರ್ಡಾನಿನಲ್ಲಿ ಸುಮಾರು ಸಾವಿರ ಜನರ ಬಂಧನ -

ಜಾರ್ಡಾನಿನಲ್ಲಿ ಸುಮಾರು ೧,೦೦೦ ಜನರ ಬಂಧನ

[illegible] ಕಮ್ಯೂನಿಸ್ಟರ ವಿರೋಧದ

ಕಾ ರ್ಯಾ ಚ ರ ಣೆ

ಜಾರ್ಡಾನಿನಲ್ಲಿ ಶೀಘ್ರ ಶಾಂತಿ ನೆಲೆಸುತ್ತಿದೆಯೆಂದು ವರದಿಯಾಗಿದೆ. ೨೧ ವರ್ಷದ ದೊರೆ ಹುಸೇನರು ಕಮ್ಯೂನಿಸ್ಟರ ವಿರೋಧವಾಗಿ ಬಲವಾದ ಕಾರ್ಯಕ್ರಮಗಳನ್ನು ಕೈಗೊಂಡು, ಹಳೆಯ ಕಮ್ಯೂನಿಸ್ಟ್ ವಿರೋಧದ ಶಾಸನವನ್ನು ಪುನಃ ಜಾರಿ ಮಾಡುತ್ತಿರುವರು. ದೊರೆಯು [illegible] ಮತ್ತು ಜಾರ್ಡಾನ್ ವಿರುದ್ಧದ ಅಪಪ್ರಚಾರವನ್ನು ಖಂಡಿಸಿದ್ದಾರೆ.

ನೆನ್ನೆ ಅಮ್ಮಾನಿನಲ್ಲಿ ೪ ಗಂಟೆ ಕಾಲ ಕರ್ಫ್ಯೂ ಆಜ್ಞೆಯನ್ನು ಸಡಿಲಿಸಲಾಗಿತ್ತು. ರಾಷ್ಟ್ರಕ್ಕೆಲ್ಲಾ ಒಬ್ಬ ಮಿಲಿಟರಿ ಗವರ್ನರರಲ್ಲದೆ, ಅಮ್ಮಾನ ನಗರಕ್ಕೆ ಒಬ್ಬರು ಮತ್ತು [illegible] ಇಬ್ಬರು ಮಿಲಿಟರಿ ಗವರ್ನರರನ್ನು ನೇಮಿಸಲಾಗಿದೆ. ಇವರು [illegible] ಮಾಡಿದವರನ್ನು ವಿಚಾರಣೆಗೆ ಗುರಿಪಡಿಸಲು ಮಿಲಿಟರಿ ಕೋರ್ಟುಗಳನ್ನು ಸ್ಥಾಪಿಸಲಾಗುವುದು.

ವಸಾಹತು ಪ್ರಧಾನಿ [illegible] ಯವರೂ ಸೇರಿ ಇದುವರೆಗೆ ೯೭೪ ಜನರನ್ನು ಬಂಧಿಸಲಾಗಿದೆ. ಕಮ್ಯೂನಿಸ್ಟರ ವಿರೋಧಿ ಕ್ರಮ ಕೈಗೊಂಡಾಗಿನಿಂದ ಪಶ್ಚಿಮ ಜಾರ್ಡಾನ್ ಪ್ರದೇಶದಿಂದ ಇಸ್ರೇಲಿಗೆ ಹಲವಾರು ಕಮ್ಯೂನಿಸ್ಟರು ಪರಾರಿಯಾಗಿದ್ದಾರೆ. ಇಸ್ರೇಲ್ ಕಮ್ಯೂನಿಸ್ಟರ ಕೇಂದ್ರ ಕಛೇರಿಯಿಂದ ಜಾರ್ಡಾನ್ ಕಮ್ಯೂನಿಸ್ಟರು ಆಜ್ಞೆ ಪಡೆಯುತ್ತಿರುವರೆಂದು ದೊರೆಯು ಆಪಾದಿಸಿರುವರು.

ಸಿರಿಯಾ ಅಧ್ಯಕ್ಷ ಕುವಾಟ್ಲಿಯವರು ಸಾದಿ ಅರೇಬಿಯಾ ದೊರೆಯೊಡನೆ ಜಾರ್ಡಾನ್ ಪರಿಸ್ಥಿತಿಯನ್ನು ಕುರಿತು ಮಾತುಕತೆ ನಡೆಸಿ, ಈಗ [illegible] ಅಧ್ಯಕ್ಷ ನಾಸೆರ್‌ರವರೊಡನೆ ಪುನಃ ಚರ್ಚೆ ನಡೆಸುತ್ತಿರುವರು. ಜಾರ್ಡಾನ್, ಈಜಿಪ್ಟ್, ಸಿರಿಯಾ ಮತ್ತು ಸಾದಿ ಅರೇಬಿಯಾ ದೇಶದ ಮಂತ್ರಿಗಳಿರುವ [illegible] ಸಮ್ಮೇಳನವೊಂದನ್ನು [illegible] ಪ್ರಯತ್ನಿಸಲಾಗುತ್ತಿದೆಯೆಂದು ಹೇಳಲಾಗಿದೆ.

ಕೇರಳದ ಸಚಿವರಿಗೆ ೫೦೦ ರೂ. ವೇತನ

ಕೇರಳ ಸರ್ಕಾರವು ಸಚಿವರ ಮತ್ತು ವಿಧಾನ ಸಭಾಧ್ಯಕ್ಷರ ಸಂಬಳಗಳನ್ನು [illegible] ೫೦೦ ರೂ. [illegible] ೬೦೦ ರೂ. [illegible] ಸಂಬಳ [illegible] ೩೫೦ ರ ಬದಲು [illegible] ರೂ. [illegible]

ಹ ರಿ ಕ ಥೆ

ನಗರದ ಸಿವಿಲ್ ಪೊಲೀಸ್ ಹೆಡ್ ಕ್ವಾರ್ಟರ್ಸ್ ರಾಮ ಮಂದಿರದಲ್ಲಿ ಈ ಸಂಜೆ ೮ ಗಂಟೆಗೆ [illegible] ಸುಬ್ಬರಾಮಯ್ಯನವರಿಂದ ಧ್ರುವ ಚರಿತ್ರೆ ಹರಿಕಥೆಯನ್ನು ಏರ್ಪಡಿಸಲಾಗಿದೆ.

ಅಬ್ಕಾರಿ ಇಲಾಖೆಯವರಿಂದಲೇ ಈಚಲು ಮರದ ಕಳ್ಳ ಮಾರಾಟ?

ಸ್ವಂ ವ ಪ್ರೋ] ನಂಜನಗೂಡು ೨೮

ಈ ತಾಲ್ಲೂಕಿನ ಸಿಂಧುವಳ್ಳಿ ಗ್ರಾಮದ ಈಚಲು ವನದಲ್ಲಿ ಅಬ್ಕಾರಿ ಇಲಾಖಾ ನೌಕರರೇ ಅಕ್ರಮವಾಗಿ ಈಚಲು ಮರಗಳನ್ನು ಮಾರುತ್ತಿರುವರೆಂಬ ದೂರಿನ ಮೇಲೆ [illegible] ಇಲಾಖೆಯವರು ಮತ್ತು ಸ್ಥಳೀಯ ಪೊಲೀಸರೂ ನೆನ್ನೆ ರಾತ್ರಿ [illegible] ಬಂಧಿಸಿ ಮರಗಳನ್ನು ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿರುವರು.

ಕೇರಳದಲ್ಲಿ ಭೂಸುಧಾರಣೆಗೆ ಹೆಚ್ಚಿನ ಪ್ರಾಶಸ್ತ್ಯ

ವಿಧಾನ ಸಭೆಯಲ್ಲಿ ಗವರ್ನರರಿಂದ ಸರ್ಕಾರದ ನೀತಿಯ ನಿರೂಪಣೆ

ಹೊಸದಾಗಿ ಸ್ಥಾಪಿತವಾದ ಕೇರಳ ವಿಧಾನ ಸಭೆಯನ್ನು ಉದ್ದೇಶಿಸಿ ನೆನ್ನೆ ಗವರ್ನರ್ ಬಿ. ರಾಮಕೃಷ್ಣರಾಯರು ಭಾಷಣ ಮಾಡಿ ತಮ್ಮ ಸರ್ಕಾರದವರು ಬರುವ ಹಲವಾರು ತಿಂಗಳಲ್ಲಿ ಭೂ ಸುಧಾರಣೆ ಪ್ರಶ್ನೆಗೆ ಅತ್ಯಂತ ಹೆಚ್ಚಿನ ಮಹತ್ವವೀಯುವರೆಂದು ತಿಳಿಸಿದರು. ಆದಕಾರಣ ಸರ್ಕಾರದವರು ತಾವೇ ಕರಡು ಮಸೂದೆಗಳನ್ನು ಸಿದ್ಧಗೊಳಿಸಿ ಬೇಗನೆ ವಿಧಾನಸಭೆಯ ಮುಂದೆ ತರಲೆತ್ನಿಸುವರೆಂದೂ ಗವರ್ನರರು ಹೇಳಿದರು. ಭೂ ಸುಧಾರಣೆಯಲ್ಲದೆ ಆಡಳಿತ ವಿಧಾನದಲ್ಲಿ ಸುಧಾರಣೆ ತರುವ ವಿಷಯವನ್ನು ಸರ್ಕಾರದವರು ಪ್ರಾಮುಖ್ಯವೆಂದು ಭಾವಿಸಿ, ಆದಕ್ಕಾಗಿ ಅನುಭವಸ್ಥರಾದ ಅಧಿಕಾರಿಗಳು ಮತ್ತು ಪ್ರಮುಖ ಶಾಸಕರುಳ್ಳ ಸಮಿತಿಯೊಂದನ್ನು ರಚಿಸುವರೆಂದೂ ಗವರ್ನರರು ತಿಳಿಯಪಡಿಸಿದರು.

ಔಷಧಿಗಳ ಬಗ್ಗೆ ಚಲನಚಿತ್ರ ಪ್ರದರ್ಶನ

ಭಾರತೀಯ ವೈದ್ಯ ಸಂಘದ ಮೈಸೂರು ಶಾಖೆಯ ಆಶ್ರಯದಲ್ಲಿ ಮೆ|| ಲೆಡರ್ಲೆ ಲ್ಯಾಬೊರೇಟರೀಸ್ ಲಿಮಿಟೆಡ್‌ರವರ ಪರವಾಗಿ ನಾಳೆ ಸಂಜೆ ೬|| ಗಂಟೆಗೆ ಮೆಡಿಕಲ್ ಕಾಲೇಜಿನಲ್ಲಿ [illegible] ಮತ್ತು [illegible] ಹಲವು ಹೊಸ ಸಂಶೋಧನೆಗಳ ಚಲನ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ನಗರದಲ್ಲಿರುವ ವೈದ್ಯರುಗಳೆಲ್ಲರನ್ನೂ ಆಹ್ವಾನಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ [illegible] ೬-೧೫ ಕೆ. ಪಿ. ಸುಶೀಲ-ಕನ್ನಡ ಗೀತೆ ೭-೩೦ [illegible] ೮-೧೫ [illegible] ೧೨-೩೦ [illegible]-ವೀಣೆ ೧೨-೩೦ ವಿಜಯಲಕ್ಷ್ಮಿ [illegible]-ಸಂಗೀತ ೧ [illegible] ೧-೩೦ [illegible] ಗೀತೆಗಳು ಸಂಜೆ ೬-೧೦ [illegible] ೬-೩೦ ವಿಜಯ [illegible]-ಹಿಂದಿ ಭಜನೆ ೮ ಸಂಗೀತ ೮-೧೫ ಕ್ರೀಡಾ ರಂಗದಿಂದ ೮-೩೦ ವಿಜಯಲಕ್ಷ್ಮಿ ವಾಸುದೇವ-ಸಂಗೀತ ೯-೧೫ ಮೈಸೂರಿನ ಫಲಪುಷ್ಪ-ಭಾಷಣ, ೯-೩೦ ಎಸ್. ಕೆ. ಅನಂತಪದ್ಮನಾಭ ಭಾಗವತ [illegible] ೧೦-೩೦ ಎ. ಅನಂತರಾಮು-ವೀಣೆ

ಕೇರಳ ಶಾಸನ ಸಭೆ ಮುಂದೆ ಕಪ್ಪು ಬಾವುಟ ಪ್ರದರ್ಶನ

ಕೇರಳದ ಗವರ್ನರರು [illegible] ಎಂಬುವರನ್ನು ಆಲ್ಲಿನ ವಿಧಾನ ಸಭೆಗೆ ನಾಮಕರಣ ಮಾಡಿರುವುದಕ್ಕಾಗಿ ಪ್ರತಿಭಟಿಸಿ ನೆನ್ನೆ ಅಖಿಲ ಆಂಗ್ಲೋ-ಇಂಡಿಯನ್ ಸಂಘದವರು ಶಾಸನಸಭಾ ಭವನದ ಮುಂದೆ ಕಪ್ಪು ಬಾವುಟ ಪ್ರದರ್ಶನವನ್ನು ನಡೆಸಿದರು. ಆದಾದ ನಂತರ ಅವರ ಪ್ರತಿನಿಧಿಗಳು ಗವರ್ನರರ ಬಳಿ ನಿಯೋಗ ಹೋಗಿದ್ದರು. ಅವರುಗಳು ಒಪ್ಪಿಸಿದ [illegible] ಆಂಗ್ಲೋ ಇಂಡಿಯನ್ನರನ್ನು [illegible] ರಾಗಿ ನಾಮಕರಣ ಮಾಡಲು ಅಭ್ಯಂತರವಿಲ್ಲವೆಂದು ಅವರಿಗೆ ಗವರ್ನರರು ತಿಳಿಸಿರುವುದಾಗಿ ವರದಿಯಾಗಿದೆ.

ಸಿಂಹಳದಲ್ಲಿ ೪ ಲಕ್ಷ ರೂ.-ಕಳ್ಳ ಸಾಗಾಣೆ ಚಿನ್ನ ಮತ್ತು ವಜ್ರದ ಪತ್ತೆ

ಮಧ್ಯ ಪ್ರಾಚ್ಯದಿಂದ ಸಿಂಗಪುರಕ್ಕೆ [illegible] ದಲ್ಲಿ ಇಬ್ಬರು ವಿದೇಶೀಯರು ರವಾನಿಸುತ್ತಿದ್ದ ೪ ಲಕ್ಷ ರೂ. ಬೆಲೆಯ ಸುಮಾರು ೧೬೦ ತೊಲ ತೂಕದ ಚಿನ್ನ ಮತ್ತು ೧೭೦ ಗ್ರಾಂ ತೂಕದ ವಜ್ರಗಳನ್ನು ಸಿಂಹಳದ ಸುಂಕದ ಅಧಿಕಾರಿಗಳು ರತ್ಮಲಾನಾ ವಿಮಾನ ನಿಲ್ದಾಣದಲ್ಲಿ ಪತ್ತೆ ಹಚ್ಚಿ ವಶಪಡಿಸಿಕೊಂಡಿರುತ್ತಾರೆ. ಆ ದೇಶದಲ್ಲಿ ಇದೇ ಅತ್ಯಂತ ಭಾರಿ ಪ್ರಮಾಣದ ಕಳ್ಳ ಸಾಗಾಣೆ ಪತ್ತೆಯೆಂದು ಹೇಳಲಾಗಿದೆ.

ಹೋಟೇಲುಗಳಲ್ಲಿ ಬ್ರಾಹ್ಮಣ ಜಾತಿ ಹೆಸರಿನ ಬಗ್ಗೆ ಚಳುವಳಿ

ಹೋಟೇಲು ಮತ್ತು ಉಪಾಹಾರ ಮಂದಿರಗಳಲ್ಲಿ "ಬ್ರಾಹ್ಮಣ" ಎಂಬ [illegible] ದಕ್ಕಾಗಿ [illegible] ಸಂಘದವರು [illegible] ರಿಂದ [illegible] ವರೆಂದು [illegible] ಹೇಳಿದ್ದಾರೆ.

-೯೦೦ ಮಂದಿ [illegible] ಕಾರ್ಮಿಕರ ಉಪವಾಸ ಸತ್ಯಾಗ್ರಹ

[illegible] ೧೧ [illegible] ಕಾರ್ಮಿಕರು [illegible] ಸತ್ಯಾಗ್ರಹವನ್ನು ನಡೆಸುವರು.

ಬುದ್ಧಿ ಭ್ರಮಣೆಯಿಂದ ೩ ಮಕ್ಕಳ ಕೊಲೆ

ಕಾನ್ಪುರದಲ್ಲಿ ಒಬ್ಬ ಗಿರಣಿ [illegible] ಮೊನ್ನೆ ಇದ್ದಕ್ಕಿದ್ದಂತೆಯೇ [illegible] ವನು ಕೊಡಲಿಯಿಂದ ಮೂವರು ಮಕ್ಕಳನ್ನು ಕೊಂದು ಐವರನ್ನು ಗಾಯಗೊಳಿಸಿರುವನು ಎಂದು ಹೇಳಲಾಗಿದೆ. ಗಾಯಗೊಂಡವರಲ್ಲಿ ಇಬ್ಬರು [illegible] ಅವನನ್ನು ಬಂಧಿಸಲಾಗಿದೆ.

[illegible] ನೋಟುಗಳ [illegible]

[illegible]

[illegible] ಪರಿಯುವರ [illegible]

[illegible]

ಗೋವಾದಿಂದ ಪೋರ್ಚುಗೀಸರು ಹಿಂದೆ ಸರಿಯುವುದಿಲ್ಲ

ಗೋವಾ ಗವರ್ನರ್ ಜನರಲ್‌ರ ಪ್ರಕಟಣೆ

ಗೋವಾ ಗವರ್ನರ್ ಜನರಲ್‌ರು [illegible] ನೇ ತಾರೀಖು [illegible] ಯೊಂದರಲ್ಲಿ [illegible]

ತಿರುಪತಿಯಲ್ಲಿ [illegible] ೧೦೦-ಜನರ ಮರಣ

ತಿರುಪತಿ [illegible] ೧೦೦ ಜನರು [illegible] ವರದಿಯಾಗಿದೆ.

ಕಾಲರಾ [illegible]

[illegible]

[illegible] ಕಾಲರಾ [illegible]

ವಾರ ಭವಿಷ್ಯ

ತಾ|| ೨೮-೪-೫೭ರಿಂದ ೫-೫-೫೭ರ ವರೆಗೆ

ಮೇಷ:—ಗ್ರಹಮಾನ ಶೆಟ್ಟಿಗೆ, ವ್ಯಾಪಾರಿಗಳು ಮತ್ತು ವ್ಯವಸಾಯಗಾರರಿಗೆ ಸುಯೋಗ, ಕ್ರಯ ವಿಕ್ರಯಕ್ಕೆ ಸುಸಮಯ, ಪ್ರವಾಸ ಜಯಪ್ರದ, ಸ್ತ್ರೀಯರಿಗೆ ವಸ್ತ್ರಾಭರಣ ಪ್ರಾಪ್ತಿ.

ವೃಷಭ:—ಗುರು ಮತ್ತು ಶನಿಗಳ ಬಲ ಸಾಲದು, ವ್ಯಾಪಾರಿಗಳು ಮತ್ತು ವ್ಯವಸಾಯಗಾರರಿಗೆ ನಷ್ಟ ಪ್ರವಾಸ ಸುಖಕರವಲ್ಲ, ಸ್ತ್ರೀಯರಿಗೆ ಗೃಹದಲ್ಲಿ ಕಲಹ.

ಮಿಥುನ:—ಅಂಗಾರಕ ವಿನಹ ಮಿಕ್ಕ ಗ್ರಹಗಳು ಅನುಕೂಲ, ಸಕಲ ಕಾರ್ಯಗಳಲ್ಲೂ ಯಶೋಲಾಭ ವ್ಯಾಪಾರಿಗಳು ಮತ್ತು ವ್ಯವಸಾಯಗಾರರಿಗೆ ಉತ್ತಮ ಫಲ, ಪ್ರವಾಸದಿಂದ ಲಾಭ

ಕಟಕ:—ಸರ್ವ ಕಾರ್ಯಗಳಲ್ಲೂ ವಿಜಯ. ಜವಾಹಿರಿ, ಚಿನ್ನ ಬೆಳ್ಳಿ ವ್ಯಾಪಾರಿಗಳಿಗೂ, ವ್ಯವಸಾಯಗಾರರಿಗೂ ವಿಶೇಷ ಲಾಭ ಪ್ರವಾಸದಲ್ಲಿ ಹಾನಿ, ಗುರುಹಿರಿಯರಿಂದ ಸನ್ಮಾನ.

ಸಿಂಹ:—ಕೆಲಸಕಾರ್ಯಗಳಲ್ಲಿ ಶೀಘ್ರ ವಿಜಯ ಮತ್ತು ಲಾಭ ಕೃಷಿ, ವಾಣಿಜ್ಯ, ಯಂತ್ರದ ವ್ಯಾಪಾರಿಗಳಿಗೂ, ವ್ಯವಸಾಯಗಾರರಿಗೂ ವಿಶೇಷ ಲಾಭ. ಪ್ರವಾಸ ಜಯಪ್ರದ.

ಕನ್ಯಾ:—ಸುಖಕ್ಕಿಂತ ಕಷ್ಟವನ್ನು ನಿರೀಕ್ಷಿಸುವ ಸ್ಥಿತಿ, ಕಾರ್ಯ ನಷ್ಟ, ಕಲಹ ಮತ್ತು ಚಿಂತೆ. ಪ್ರವಾಸ ಸಾಮಾನ್ಯ. ಹಸ್ತಾ ನಕ್ಷತ್ರದವರಿಗೆ ಅನಿರೀಕ್ಷಿತ ಧನಲಾಭ.

ತುಲಾ:—ಹಿಡಿದ ಕಾರ್ಯ ಜಯ, ಹತ್ತಿ ಗಿರಣಿ, ಎಣ್ಣೆ ಗಿರಣಿ, ವಿಮಾ ಕಂಪೆನಿಯವರಿಗೆ ವಿಶೇಷ ಲಾಭ. ಪ್ರವಾಸದಿಂದ ಕೀರ್ತಿ. ಕೃಷಿಕರಿಗೆ ಸುಯೋಗ.

ವೃಶ್ಚಿಕ:—ಮರ್ಯಾದೆಗೆ ಕುಂದಿಲ್ಲ, ಕಾರ್ಯ ಹಾನಿ. ಚಿಂತೆ, ದೇಹಾಲಸ್ಯ. ವರಮಾನ ಹೆಚ್ಚು ವ್ಯಾಪಾರಿಗಳು ಮತ್ತು ಕೃಷಿಗಾರರಿಗೆ ನಷ್ಟ, ಪ್ರವಾಸದಲ್ಲಿ ಸುಖವಿಲ್ಲ

ಧನುಸ್ಸು:—ಸಕಲ ಕಾರ್ಯಗಳಲ್ಲೂ ಯಶಸ್ಸು ಪ್ರವಾಸದಲ್ಲಿ ಲಾಭ ಮತ್ತು ಸನ್ಮಾನ ಕೃಷಿ ಮತ್ತು ವಾಣಿಜ್ಯ ವೃತ್ತಿಯವರಿಗೆ ವಿಶೇಷ ಲಾಭ. ಸ್ತ್ರೀಯರಿಗೆ ಕೀರ್ತಿ

ಮಕರ:—ಅಸಾಧ್ಯ ಕಾರ್ಯಗಳಲ್ಲೂ ಜಯ ಮನೆ, ಭೂಮಿ ಮತ್ತು ವಾಹನ ಲಭ್ಯ. ವ್ಯಾಪಾರಿಗಳಿಗೆ ಅಧಿಕ ಲಾಭ, ವ್ಯವಸಾಯಗಾರರಿಗೆ ಸುಯೋಗ ಪ್ರವಾಸದಲ್ಲಿ ಸುಖ.

ಕುಂಭ.—ಸುಯೋಗ, ಉದ್ಯೋಗಿಗಳಿಗೆ ಬಡ್ತಿ, ಪ್ರವಾಸದಲ್ಲಿ ಜಯ, ಸ್ತ್ರೀಯರಿಗೆ ಗಡಿಬಿಡಿ, ಹೆಚ್ಚು ಸಂತೋಷ ಕಾರ್ಯ

ಮೀನ:—ಮನೆಯವರ ಹಗೆತನ ಪ್ರಾಪ್ತಿ, ಧನಾಗಮನಕ್ಕೆ ತೊಂದರೆ ಇಲ್ಲ, ಕಲಹ ಮತ್ತು ಚಿಂತೆ ಹೆಚ್ಚು. ವ್ಯಾಪಾರಿಗಳಿಗೆ ಸುಖವಿಲ್ಲ, ಪ್ರವಾಸ ಬೇಡ, ಕೃಷಿಕಾರರಿಗೆ ನಷ್ಟ, ಸ್ತ್ರೀಯರಿಗೆ ಚಿಂತೆ.

ಬೆಂಕಿಯಿಂದ ಇಡೀ ಹಳ್ಳಿಯ ನಾಶ

ನಾಗಪುರ ಜಿಲ್ಲೆಯ ಹಿವ್ರಾ ಎಂಬ ಹಳ್ಳಿಯಲ್ಲಿ ಕಳೆದ ವಾರ ಬೆಂಕಿಯುಂಟಾಗಿ ಇಡೀ ಗ್ರಾಮವೇ ಅದಕ್ಕೆ ಆಹುತಿಯಾಗಿ, ೧|| ಲಕ್ಷ ರೂ ಆಸ್ತಿ ನಾಶವಾಯಿತೆಂದು ವರದಿಯಾಗಿದೆ. ಅಲ್ಲಿನ ೭೨೨ ಜನರು ನಿರಾಶ್ರಿತರಾಗಿರುತ್ತಾರೆ ೧೬,೦೦೦ ರೂ. ನಷ್ಟು ನೋಟುಗಳೂ ಭಸ್ಮವಾಗಿವೆ.

ನೂನರು ಪಾಕಿಸ್ತಾನದ ರಿಪಬ್ಲಿಕನ್ ಪಕ್ಷದ ನಾಯಕರು

ಪಾಕಿಸ್ತಾನದ ರಿಪಬ್ಲಿಕನ್ ಪಕ್ಷದ ನಾಯಕರಾಗಿ ಅಲ್ಲಿನ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರನ್ನು ಅವಿರೋಧವಾಗಿ ಆರಿಸಲಾಗಿದೆ ಆ ಪಕ್ಷವನ್ನು ಸ್ಥಾಪಿಸಿದ್ದ ಡಾ|| ಖಾನ್ ಸಾಹೇಬರೇ ಇದುವರೆಗೆ ನಾಯಕರಾಗಿದ್ದರು. ಖಾನ್ ಸಾಹೇಬರು ನಾಯಕತ್ವದಲ್ಲಿ ಸ್ಪರ್ಧಿಸಲಿಲ್ಲವೆಂದು ಹೇಳಲಾಗಿದೆ.

ಇಂಟರ್ ಮತ್ತು ಆನರ್ಸ್ ಪದವಿ ತರಗತಿಗಳ ರದ್ದು

ಪ್ರೀ-ಯೂನಿವರ್ಸಿಟಿ ಮತ್ತು ಮೂರು ವರ್ಷದ ಪದವಿ ತರಗತಿಗಳ ರಚನೆ

ಅಕೆಡೆಮಿಕ್ ಕೌನ್ಸಿಲ್ ಸಭೆಯ ನಿರ್ಧಾರ

ಮೈಸೂರು ೨೭

ನೆನ್ನೆ ಅಕೆಡೆಮಿಕ್ ಕೌನ್ಸಿಲ್ಲು ಒಪ್ಪಿಗೆಯಿತ್ತ ರೀತಿಯಂತೆ ಇನ್ನು ಮುಂದೆ ಇಂಟರ್‌ಮೀಡಿಯೆಟ್ ಮತ್ತು ಆನರ್ಸ್ ಪದವಿ ತರಗತಿಗಳು ರದ್ದಾಗಿ ಅವುಗಳ ಬದಲು ಒಂದು ವರ್ಷದ ಪ್ರೀ-ಯೂನಿವರ್ಸಿಟಿ ಮತ್ತು ಮೂರು ವರ್ಷದ ಪದವಿ ತರಗತಿಗಳು ಜಾರಿಗೆ ಬರುವುವು. ಹೊಸ ಶಿಕ್ಷಣ ಸುಧಾರಣಾಕ್ರಮಗಳು ಸಂಪೂರ್ಣವಾಗಿ ಜಾರಿಗೆ ಬಂದನಂತರ ಅದರ ಪ್ರಕಾರವಾಗಿ ಹೈಯರ್ ಸೆಕೆಂಡರಿ ತರಗತಿಗಳು ಏರ್ಪಟ್ಟಮೇಲೆ ೧೯೬೦ರ ವೇಳೆಗೆ ಪ್ರೀ-ಯೂನಿವರ್ಸಿಟಿ ತರಗತಿಯೂ ರದ್ದಾಗುವುದು

ಆ ತರಗತಿಯಲ್ಲಿ ಪಾಠಕ್ರಮವು ಇಂಗ್ಲೀಷ್ ಪ್ರಾದೇಶಿಕ ಅಥವಾ ಇತರ ಭಾಷೆಗಳು ಮತ್ತು ಆರ್ಟ್ಸ್ ಅಥವಾ ವಿಜ್ಞಾನದ ಐಚ್ಛಿಕ ವಿಷಯಗಳಲ್ಲದೆ ಸಮಾಜಶಾಸ್ತ್ರ ಸಾಮಾನ್ಯ ವಿಜ್ಞಾನಗಳನ್ನೊಳಗೊಂಡ ಒಟ್ಟು ೪ ಭಾಗಗಳಿಂದ ಕೂಡಿರುವುದು ವಿದ್ಯಾರ್ಥಿಗಳು ಐಚ್ಛಿಕ ವಿಜ್ಞಾನದೊಡನೆ ಸಮಾಜಶಾಸ್ತ್ರ, ಅಥವಾ ಐಚ್ಛಿಕ ಆರ್ಟ್ಸ್‌ನೊಡನೆ ಸಾಮಾನ್ಯ ವಿಜ್ಞಾನವನ್ನು ವ್ಯಾಸಂಗ ಮಾಡಬೇಕು.

ಪದವೀಧರ ತರಗತಿಯ ಪಾಠಕ್ರಮವು ಈಗಿನಂತೆ ಇಂಗ್ಲೀಷ್ ಮತ್ತು ಪ್ರಾದೇಶಿಕ, ಮತ್ತಿತರ ಭಾಷೆಗಳನ್ನೊಳಗೊಂಡ ಎರಡು ಭಾಗಗಳೂ ಅಲ್ಲದೆ ಈಗ ೩ನೇ ಭಾಗದಲ್ಲಿ ಐಚ್ಛಿಕ ವಿಷಯಗಳನ್ನೂ ಸರಿಸಮವಾದ ವ್ಯಾಸಂಗ ಮಾಡುವಂತಿರದೆ ಮೇಜರ್, ಮೈನರ್ ಮತ್ತು ಸಹಾಯಕವೆಂಬ ಮೂರು ವಿಷಯಗಳು ಇರುತ್ತವೆ ಈಗ ಆನರ್ಸ್ ತರಗತಿಗಳಲ್ಲಿ ಈ ಪದ್ಧತಿ ಇದೆ. ಇವಲ್ಲದೆ ನಾಲ್ಕನೇ ಭಾಗವೆಂಬುದರಲ್ಲಿ ವಿಜ್ಞಾನ ಪದವೀಧರರು ಸಮಾಜಶಾಸ್ತ್ರ ಮತ್ತು ಆರ್ಟ್ಸ್ ಪದವೀಧರರು ಸಾಮಾನ್ಯ ವಿಜ್ಞಾನವನ್ನೂ ಆರಿಸಿಕೊಂಡು ಓದಬೇಕು

ಈ ವಿಷಯದ ಮೇಲೆ ವಿಪುಲವಾದ ಚರ್ಚೆಯಾಯಿತು. ಪ್ರೀ-ಯೂನಿವರ್ಸಿಟಿ ತರಗತಿಯಲ್ಲಿ ವಾರಕ್ಕೆ ೨೭ ಗಂಟೆಗಳ ಕೆಲಸವನ್ನು ನಿಗದಿ ಮಾಡಿದ ಬಗ್ಗೆಯೂ ಮತ್ತು ಪದವಿ ತರಗತಿಯ ಐಚ್ಛಿಕ ವಿಷಯಗಳಲ್ಲಿ ಎಷ್ಟು ಪಾಠವನ್ನು ನಿಗದಿ ಮಾಡಬೇಕೆಂಬ ಬಗ್ಗೆಯೂ ಭಿನ್ನಾಭಿಪ್ರಾಯವು ತಲೆದೋರಿ ಆ ಬಗ್ಗೆ ಮತ್ತೆ ಪರಿಶೀಲನೆ ಮಾಡಿ ಮೇ ೧೫ನೇ ತಾರೀಕಿನೊಳಗೆ ವರದಿ ಮಾಡಲು ಒಂದು ಸಮಿತಿಯನ್ನು ರಚಿಸಲಾಯಿತು.

ಪವರ್ ಆಫ್ ಲೈಟ್ ಫ್ಲ್ಯಾಷ್‌ನ ಚಿತ್ರದ ಆರಂಭೋತ್ಸವ

ನಗರದ ಪವರ್ ಆಫ್ ಲೈಟ್ ಫ್ಲ್ಯಾಷ್‌ನ ಚಿತ್ರದ ಆರಂಭೋತ್ಸವವನ್ನು ನೆನ್ನೆ [illegible] [illegible] ಚೀಫ್ ಇಂಜಿನಿಯರ್ ಶ್ರೀ ಕೆ. ನಾರಣರು ನೆರವೇರಿಸಿದರು. ಕಾರ್ಯದರ್ಶಿ ಶ್ರೀ ಸಿ. ಕೆ. [illegible] ಅವರಿಗೆ ಬಿನ್ನವತ್ತಳೆಯನ್ನು ಒಪ್ಪಿಸಿದರು. ಶ್ರೀ ಕೆ. ನಾರಣರು ಮಾತನಾಡಿ ಮೈಸೂರಿಗೆ ಸೇರಿದ ಹೊಸ ಭಾಗಗಳಲ್ಲಿ ವಿದ್ಯುಚ್ಛಕ್ತಿ ಕೆಲಸ ಪ್ರಗತಿಯ ಬಗ್ಗೆ ಅಧಿಕಾರಿಗಳು ಎದುರಿಸಬೇಕಾದ ಕಷ್ಟಗಳನ್ನು ವಿವರಿಸಿದರು. ಕೈಗಾರಿಕೆಗಳಿಗೆ ಅವಶ್ಯಕವಾದ [illegible] ಒದಗಿಸಲು ಸಾಧ್ಯ ಪ್ರಯತ್ನ [illegible] ದಾಗಿ ಅವರು ತಿಳಿಸಿದರು.

೬೨ನೇ ವಯಸ್ಸಿನಲ್ಲಿ ೧೦ನೇ ವಿವಾಹಕ್ಕೆ ಸಿದ್ಧತೆ

ಕಳೆದ ೨೦ ವರ್ಷಗಳಲ್ಲಿ ೯ ಸಲ ವಿವಾಹವಾದ ಅಮೆರಿಕದ ಲಕ್ಷಾಧೀಶ್ವರ ಟಾಮಿ ಮಾನ್ವಿಲ್ ಎಂಬ ೬೨ ವರ್ಷದವನು ಹತ್ತನೇ ವಿವಾಹಕ್ಕೆ ಸಿದ್ಧನಾಗುತ್ತಿರುವುದಾಗಿ ಗೊತ್ತಾಗಿದೆ. ಅವನ ಭಾವೀ ಪತ್ನಿಯು ಪ್ರಥಮ ಪತ್ನಿಯನ್ನು ಹೋಲುತ್ತಿರುವಳೆಂದು ಹೇಳಲಾಗಿದೆ ಪತ್ನಿ [illegible] ಪತ್ನಿಯಂತಿರುವ ಮತ್ತೊಬ್ಬಳು ಸಿಕ್ಕಿದರೂ ಅವಳನ್ನು ಅವನು ವಿವಾಹವಾಗಲು ಸಿದ್ಧನಾಗಿರುವನು

ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವದ ಸಿದ್ಧತೆಗಳು

ಬೆಂಗಳೂರು ೨೭

ರಾಷ್ಟ್ರದ ಇತರ ಕಡೆಗಳಂತೆಯೇ ಸಂಸ್ಥಾನದಲ್ಲೂ ಬರುವ ಆಗಸ್ಟ್ ೧೫ ಮತ್ತು ೧೬ನೇ ತಾರೀಕುಗಳಲ್ಲಿ ಸ್ವಾತಂತ್ರ್ಯ ಶತಮಾನೋತ್ಸವವನ್ನು ನಡೆಸಲಾಗುವುದು ಅದಕ್ಕಾಗಿ ಪ್ರತಿಯೊಂದು ಜಿಲ್ಲೆಗೂ ಸರ್ಕಾರದವರು ೧,೦೦೦ರೂ ಗಳ ಸಾಂಕೇತಿಕವಾದ ಧನ ಸಹಾಯ ನೀಡುವರು. ಉತ್ಸವವನ್ನು ಸೂಕ್ತ ರೀತಿ ನಡೆಸಲು ಒಂದೊಂದು ಪರಾಮರ್ಶಕ ಸಮಿತಿಯನ್ನು ರಚಿಸಲಾಗುತ್ತಿದೆ. ಸಾರ್ವಜನಿಕರಿಂದ ಬರುವ ಸಹಾಯ ದ್ರವ್ಯವನ್ನು ಸಮಿತಿಯವರು ಶೇಖರಿಸಬಹುದು.

ಧ್ವಜ ವಂದನೆ, ಪ್ರಭಾತ್ ಫೇರಿ, ಸಭೆ, ಕ್ರೀಡಾ ಸ್ಪರ್ಧೆ ಮುಂತಾದುವು ಸಾಮಾನ್ಯ ಕಾರ್ಯಕ್ರಮಗಳಾಗಿವೆ. ಶಾಲಾ ಕಾಲೇಜುಗಳಲ್ಲಿ ಸಭೆಗಳನ್ನು ನಡೆಸಿ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯನ್ನು ವಿವರಿಸಲಾಗುವುದು ಮಕ್ಕಳಿಗೆ ಮಿಠಾಯಿ ವಿನಿಯೋಗವಾಗುವುದು.

ಪ್ರಥಮ ಹೋರಾಟಕ್ಕೆ ಸಂಬಂಧಪಟ್ಟ ಸ್ಥಳಗಳಲ್ಲಿ ಸೂಕ್ತ ಸ್ಮಾರಕಗಳನ್ನು ನಿರ್ಮಿಸಲು ಸರ್ಕಾರದವರು ನಿರ್ಧರಿಸಿರುವರು. ಸ್ವಾತಂತ್ರ್ಯ ದಿನದಂದು ಅವುಗಳ ಆರಂಭೋತ್ಸವವನ್ನು ನೆರವೇರಿಸಲಾಗುವುದು.

ಪಶುವೈದ್ಯ ಪದವೀಧರರ ಅಭಾವ ತಗ್ಗಿಸಲು ಕ್ರಮ

ರಾಷ್ಟ್ರದಲ್ಲಿ ನುರಿತ ಪಶು ವೈದ್ಯ ಪದವೀಧರರ ಅಭಾವವನ್ನು ಎದುರಿಸಲು ಭಾರತ ಸರ್ಕಾರದವರು ಬರುವ ವರ್ಷ ಸಂಸ್ಥಾನಗಳಿಗೆ ೫೪ ಲಕ್ಷ ರೂ ಗಳ 'ಗ್ರಾಂಟನ್ನು ಕೊಡಲಿರುವರು ೪ ವೆಟರಿನರಿ ಕಾಲೇಜುಗಳನ್ನು ಹೊಸದಾಗಿ ಏರ್ಪಡಿಸಲಾಗುವುದು; ಈಗಿರುವ ಕಾಲೇಜುಗಳನ್ನೂ ವಿಸ್ತರಿಸಲಾಗುವುದು ಮತ್ತು ಪಶು ವೈದ್ಯ ವಿಜ್ಞಾನದ ಶಿಕ್ಷಣಕ್ಕಾಗಿ ೩ ವರ್ಷಗಳ ತರಗತಿಯನ್ನು ತೆರೆಯಲಾಗುವುದು.

ತಂದೆ ಮಕ್ಕಳ ವ್ಯಾಜ್ಯದಲ್ಲಿ ಉಭಯರ ಆತ್ಮಹತ್ಯೆ

ಅಹಮದಾಬಾದು ಬಳಿ ಕೊಯ್ದರಿ ಎಂಬ ಹಳ್ಳಿಯಲ್ಲಿ ತಂದೆ ಮಕ್ಕಳಿಬ್ಬರಿಗೆ ವ್ಯಾಜ್ಯವಾಗಿ ಮಗನು ಆತ್ಮಹತ್ಯೆ ಮಾಡಿಕೊಂಡನೆಂದೂ, ಈ ಸುದ್ದಿ ಕೇಳಿದ ತಂದೆಗೂ ಎದೆಯೊಡೆದು ಅತನೂ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡುದಾಗಿಯೂ ವರದಿಯಾಗಿದೆ.

ರಾಮ ನವಮಿ ಸಮಾರಂಭ

ದೇವರಾಜ ಮೊಹಲ್ಲಾ ಮಹಿಳಾ ಸದನದ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ಶ್ರೀರಾಮ ನವಮಿ ಸಮಾರಂಭವನ್ನು ನಡೆಸಲಾಗುವುದು. ಶ್ರೀಮತಿ ಬಿ. ಇಂದಿರಮ್ಮನವರು ಅಧ್ಯಕ್ಷತೆ ವಹಿಸುವರು ವಿ|| ಎನ್. [illegible]ಸ್ವಾಮಿಯವರ ಗಾಯನವೂ ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಾಡಾಗಿದೆ.

[illegible]

ಮಕ್ಕಳ [illegible] [illegible] [illegible]

[illegible] [illegible]. [illegible]:-

"[illegible]", [illegible],

ಮೈಸೂರು ([illegible])

Edited, Printed and Published by
A. R. Nagarajan at Sadhvi Press,
D. Subbiah Road, Mysore

ಸಿರಿಯಾ, ಈಜಿಪ್ಟ್ ಮತ್ತು ಇಸ್ರೇಲಿಗೆ ಅಮೆರಿಕದ ಎಚ್ಚರಿ

ಜೋರ್ಡಾನ್ ಬಗ್ಗೆ ವಿವೇಕದ ವರ್ತನೆಗಾ ಕರೆ

ಜೋರ್ಡಾನಿನ ಬಿಕ್ಕಟ್ಟಿನ ಬಗ್ಗೆ ಜಾಗರೂ ಮತ್ತು ವಿವೇಕದಿಂದ ವರ್ತಿಸಬೇಕೆಂದು ಈಜಿಪ್ಟ್, ಸಿರಿಯಾ, ಇಸ್ರೇಲ್ ಮುಂತಾದ ಮಧ್ಯ ಪ್ರಾ ರಾಷ್ಟ್ರಗಳಿಗೆ ಅಮೆರಿಕವು ಎಚ್ಚರಿಕೆಯಿತ್ತಿ ದಾಗಿ ಅಮೆರಿಕಾ ವಿದೇಶಾಂಗ ಇಲಾಖೆ ಪ್ರಕ ಸಿದೆ ಈ ಸಂದರ್ಭದಲ್ಲಿ ಅಮೆರಿಕವು ಕೈಗೊಳ್ಳ ಹುದಾದ ಕ್ರಮಗಳ ಬಗ್ಗೆ ರಾಷ್ಟ್ರಗಳಿಗೆ ಸ್ಪಷ್ಟ ಡಿಸಿರುವುದಾಗಿಯೂ ಇಲಾಖಾಧಿಕಾರಿ ಲಿಂ ವೈಟ್‌ರವರು ತಿಳಿಸಿರುವರು.

ಜೋರ್ಡಾನ್ ಪರಿಸ್ಥಿತಿ ವಿಚಾರವಾಗಿ ಈಜಿ ಅಧ್ಯಕ್ಷರೊಡನೆ ಸಂಭಾಷಣೆ ನಡೆಸಿದ ಸಿರಿ ಅಧ್ಯಕ್ಷ ಕುವಾಟ್ಲಿಯವರು ಸಾದಿ ಅರೇಬಿ ದೊರೆಯೊಡನೆ ಸಮಾಲೋಚನೆಗಾಗಿ ೮ ರಿಯ ಕ್ಕೆ ತೆರಳಿರುವರು.

ಕೋರ್ಟಿನಲ್ಲಿ ಪ್ರಾಸಿಕ್ಯೂಟರ್ ಮೇಲೆ ಮಡಿಕೆಯಿಂದ ಪೆಟ್ಟು

ಚಿನ್ನದ ಗಣಿಯ ಪ್ರಥಮ ದರ್ಜೆ ನ್ಯಾಯಾ ಧೀಶರ ಕೋರ್ಟಿನಲ್ಲಿ ಕಳೆದ ೨೦ನೇ ತಾರೀ ಕೋಲಾರದ ಕೇಶಿ ಬ್ಯಾರೂ ಉರುಫ್ ಗು ಕೋಶರ್ ಎಂಬುವನು ಪ್ರಾಸಿಕ್ಯೂಟಿಂಗ್ ಇ ಸ್ಪೆಕ್ಟರ್ ಶ್ರೀ ಗೋವಿಂದರಾಜುರವರನ್ನು ಮ ಯಿಂದ ಹೊಡೆದುಗಾಯಗೊಳಿಸಿದನೆಂದು ತ ಯಾಗಿದೆ. ಅವನು ಬಂಗಾರಪೇಟೆ ಕೈಕ್ಕೋ ರರಾದ ಶ್ರೀ ವೆಂಕಟರಾಮಯ್ಯರವರ ಮನೆ ೬೦೦ ರೂ. ಬೆಲೆಯ ಜರತಾರಿ ಸೀರೆಗಳು ಮ ತ್ತು ೩೫೦ ರೂ. ನಗದನ್ನು ಕಳುವು ಮಾ ನೆಂದು ಕೋರ್ಟಿನಲ್ಲಿ ವಿಚಾರಣೆಯಾಗುತ್ತಿ

ಕನ್ನಡ ಸಾಹಿತ್ಯ ಸಮ್ಮೇಳನದ ತಾರೀ ಬದಲಾವಣೆ

ಧಾರವಾಡದಲ್ಲಿ ಸೇರಲಿರುವ ೩೯ನೇ ಕ ಸಾಹಿತ್ಯ ಸಮ್ಮೇಳನವು ಮೇ ೬,೭ ಮತ್ತು ನೇ ತಾರೀಕುಗಳ ಬದಲು ೭,೮,೯ ಮತ್ತು ೧ ನೇ ತಾರೀಕುಗಳಲ್ಲಿ ನಡೆಯುವುದೆಂದು ಪ್ರಕ ಲಾಗಿದೆ

ಸ್ಟ್ಯಾಂಡರ್ಡ್ ಮಿಲ್ಕ್ ಡೈ
ಕಾಲೇಜು ರಸ್ತೆ, ಮೈಸೂರು

ನಮ್ಮಲ್ಲಿ ತಾ|| 1-5-57ರಿಂದ 10-5-5
ವರೆವಿಗೆ ಕೂಪನ್ ಕೊಳ್ಳುವವರಿ
ಆಗ ತಾನೆ ಕರೆದ
ಅಪ್ಪಟ ಹಸುವಿನ ಹಾಲನ್ನು
ಪೌಂಡು ಒಂದಕ್ಕೆ
ರೂ. 0-3-3ರಂತೆ ಕೊಡಲಾಗು
ಮತ್ತು ಮನೆಗಳಿಗೂ ಸಹ
ಸಪ್ಲೈ ಮಾಡಲಾಗುತ್ತ
ಶ್ರೀ ಶಿ ಪಾ
ಪ್ರೊಪ್ರೈ

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಬಗೆಯ ಶ್ರೇಷ್ಠ ತರದ
ಹೊಸ ಸರಕುಗಳ
ಗಡಿಯಾರಗಳು ಮತ್ತು ಕನ್ನಡಕಗಳ
[illegible]
[illegible]
ಕೆ. ಎಸ್. ಲಕ್ಷ್ಮಣ ಐಯ್ಯ
[illegible]
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾ
ಅಶೋಕ ರಸ್ತೆ, ಮೈಸೂರು (Estd 191

SREE GAYATI
TALKIES
From 28-4-57 : For 2
CROSSED SWOR
(Technicolor)
With:-Errol Flyan and
Gena Lollobrigids

ರಿಜಿಸ್ಟ್ರೀ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ

ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೮] SADHVI । MONDAY 29-4-1957 ಮೈಸೂರು । ಸೋಮವಾರ ೨೯-೪-೧೯೫೭ [ಸಂಚಿಕೆ : [illegible]

ಪಶ್ಚಿಮ ಜರ್ಮನಿಗೆ ರಷ್ಯಾ ಸರ್ಕಾರದ ಪ್ರಬಲ ಎಚ್ಚರಿಕೆ

ರಷ್ಯದೊಡನೆ ಜಾರ್ಡಾನಿನ ರಾಜತಾಂತ್ರಿಕ ಸಂಬಂಧವಿಲ್ಲ

ದೊರೆ ಹುಸೇನರಿಂದ ನಾಬುಲ್ಸಿ ಸರ್ಕಾರದ ತೀರ್ಮಾನದ ರದ್ದು

ರಷ್ಯದೊಡನೆ ಜಾರ್ಡಾನು ರಾಜತಾಂತ್ರಿಕ ಸಂಬಂಧವನ್ನು ಹೊಂದಬೇಕೆಂಬ, ಈಚೆಗೆ ರಾಜೀನಾಮೆಯಿತ್ತ ನಾಬುಲ್ಸಿ ಸರ್ಕಾರವು ಮಾಡಿದ್ದ ತೀರ್ಮಾನವನ್ನು ಅಂಗೀಕರಿಸಲು ದೊರೆ ಹುಸೇನರು ನಿರಾಕರಿಸಿರುತ್ತಾರೆ. ಕಳೆದ ೩ನೇ ತಾರೀಖು ಆ ಸರ್ಕಾರವು ಈ ಬಗ್ಗೆ ನಿರ್ಧಾರ ಮಾಡಿತು. ಕಮ್ಯೂನಿಸಂ ಮತ್ತು ಇತರ ವಾಮ ಪಕ್ಷಗಳ ತತ್ವಾನುಸರಣೆಗಳನ್ನು ವಿರೋಧಿಸುವ ಮಾತಿನ ಸಂಬಂಧವಾಗಿ ದೊರೆಯು ಈ ಕ್ರಮವನ್ನು ಕೈಗೊಂಡಿರುತ್ತಾರೆ.

ಅಲ್ಲಿನ ಹೊಸ ಸರ್ಕಾರವು ನಾಬುಲ್ಸಿ ಸರ್ಕಾರದ ವಜಾ ಆದ ೧೫ ಅಧಿಕಾರಿಗಳನ್ನು ಪುನಃ ಅಧಿಕಾರಕ್ಕೆ ತೆಗೆದುಕೊಂಡಿದೆ. ಅಮ್ಮಾನಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಕಛೇರಿಗಳನ್ನೂ ಬಂದು ಮಾಡಿ, ಮೊಹರ್ ಮಾಡಲಾಗಿದೆ. ಅವುಗಳ ಬೋರ್ಡುಗಳನ್ನು ತೆಗೆದುಹಾಕಲಾಗಿದೆ.

ಕಳೆದ ಮಾರ್ಚಿಯಲ್ಲಿ ದೇಶದ ಆಯವ್ಯಯ ಪರಿಶೀಲನೆಗಾಗಿ ಕರೆಯಲಾಗಿದ್ದ ವಿಶೇಷ ಪಾರ್ಲಿಮೆಂಟ್ ಅಧಿವೇಶನವನ್ನು ದೊರೆಯು ಮುಕ್ತಾಯಗೊಳಿಸಿರುವರು. ಸಾಮಾನ್ಯ ಚುನಾವಣೆ ಆರು ತಿಂಗಳನಂತರ ನಡೆಯಲಿದೆ.

ಜಾರ್ಡಾನಿನ ಪ್ರಚಾರ ಇಲಾಖೆ ಡೈರೆಕ್ಟರ್ ಜನರಲ್ ಕಫೀಜ್ ಅಟ್ಟಿಲ್ ಹಾದಿ ಮತ್ತು ಇಬ್ಬರು ಸಹಾಯಕರು ಮಾರ್ಷಲ್ ಲಾ ವಿಧಿಸುವ ಮುಂಚೆ ಕೋರಿದ ವರ್ಗಾವಣೆಗಾಗಿ ಅವರನ್ನು ವಜಾ ಮಾಡಲಾಗಿದೆ.

ಜಾರ್ಡಾನಿನ ಮಿಲಿಟರಿ ಗವರ್ನರರು ತನ್ನ ಕೈಕೆಳಗೆ ಇನ್ನಾರು ಗವರ್ನರರನ್ನು ನೇಮಿಸುತ್ತಾರೆ. ಯಾರನ್ನಾದರೂ ಬಂಧಿಸಲು ಅವರುಗಳಿಗೆ ವಿಶೇಷಾಧಿಕಾರವೀಯಲಾಗಿದೆ. ಹಲವು ಅಪರಾಧಗಳಿಗೆ ಮರಣದಂಡನೆ ವಿಧಿಸಲೂ ಅಧಿಕಾರ ಕೊಡಲಾಗಿದೆ.

ಹನುಮಂತೋತ್ಸವ

ಮೈಸೂರು ಹೊಸಕೇರಿಯ ಶ್ರೀ ಸೀತಾರಾಮ ಮಂದಿರದಲ್ಲಿ ಈ ಸಂಜೆ ೭-೩೦ ಘಂಟೆಗೆ, ಹನುಮಂತೋತ್ಸವದ ಅಂಗವಾಗಿ ಗಾಯಕ ಶ್ರೀ ನಂಜಪ್ಪನವರ ಸಂಗೀತವು ಹಾಗೂ ಪಕ್ಕವಾದ್ಯದೊಡನೆ ಏರ್ಪಾಡಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೊನೆಟ್. ೭-೧೫ ಎಂ. ಕೆ. ಶೇಷಮ್ಮ-ದೇವರ ನಾಮ ೭-೩೦ ಗಾನವಾಹಿನಿ. ೮-೧೫ ಸುಗಮ ಸಂಗೀತ. ಮಧ್ಯಾಹ್ನ ೧೨ ಎಂ. ಆರ್. ಶೇಷಮ್ಮ-[illegible] ೧೨-೩೦ ವನಿತಾ ವಿಹಾರ ೧-೨೦ ರಿಕಾರ್ಡು. ೫ ಡಿ. ಪಿ. [illegible]-ಹಿಂದೂಸ್ತಾನಿ ಸಂಜೆ ೬-೧೦ ಕಾವ್ಯ ವಾಚನ ೭-೩೦ ಪ್ರಪಂಚ ವಾರ್ತೆ [illegible] ೮ ಮತ್ತು ೧೦-೧೫ [illegible] ಕೃಷ್ಣ ಅಯ್ಯಂಗಾರ್-ಸಂಗೀತ, ಆರ್. ಆರ್. [illegible] ಪಿಟೀಲು ೮ ೩೦ ಕ್ಲಾರಿಯೊನೆಟ್ [illegible] ಚಿತ್ರ ಸಂಗೀತ. ೯-೩೦ ನವ ಲೋಕದಲ್ಲಿ [illegible] : ರೂಪಕ ೧೦ ಭಾರ್ಗ ಗೀತೆ.

ಆಹಾರ ಪರಿಸ್ಥಿತಿ ಬಗ್ಗೆ ಕಳವಳಕ್ಕೆ ಕಾರಣವಿಲ್ಲ

ಕೇಂದ್ರ ಮಂತ್ರಿ ಅಜಿತ್ ಪ್ರಸಾದ್ ಜೈನರ ಹೇಳಿಕೆ

ದೇಶದಲ್ಲಿ ಆಹಾರ ಪರಿಸ್ಥಿತಿಯು ಸಂತೋಷಕರವಾಗಿರುವುದರಿಂದ, ಕಳವಳ ಪಡಲು ಕಾರಣವೇನೂ ಇಲ್ಲವೆಂದೂ ನೆನ್ನೆ ಕೇಂದ್ರ ಆಹಾರ ಮಂತ್ರಿ ಅಜಿತ್ ಪ್ರಸಾದ ಜೈನರವರು ತಿಳಿಸಿದರು. ಹಲವು ಪ್ರಾಂತಗಳಲ್ಲಿ ಆಹಾರದ ಅಭಾವವು ತೀವ್ರವಾಗಿ, ಕ್ಷಾಮದ ಸ್ಥಿತಿಯೊದಗಿರುವುದೆಂಬ ವರದಿಗಳು ಉತ್ಪ್ರೇಕ್ಷೆಯೆಂದು ಹೇಳಿದರು. ದೇಶದ ಯಾವ ಭಾಗದಲ್ಲೇ ಆಗಲಿ ಆಹಾರದ ಬಗ್ಗೆ ಜರೂರು ಪರಿಸ್ಥಿತಿಯೊದಗಿದರೆ ಅದನ್ನು ಎದುರಿಸಲು ಕೇಂದ್ರ ಸರ್ಕಾರದ ಬಳಿ ಭಾರಿ ಪ್ರಮಾಣದ ಧಾನ್ಯವಿರುವುದೆಂದೂ ಅವರು ಆಶ್ವಾಸನೆಯಿತ್ತರು. ಬೊಂಬಾಯಿ, ಬಿಹಾರ್ ಮತ್ತು ಉತ್ತರ ಪ್ರದೇಶಗಳಿಂದ ಆಹಾರಾಭಾವದ ಪರಿಹಾರಕ್ಕಾಗಿ ಬೇಡಿಕೆಗಳು ಬಂದಿದ್ದುವೆಂದೂ, ಅವುಗಳಿಗೆ ಹೆಚ್ಚಿನ ಧಾನ್ಯ ಸರಬರಾಜು ಮಾಡಲಾಗುವುದೆಂದೂ ಅವರು ತಿಳಿಸಿ, ಬರುವ ಸೆಪ್ಟೆಂಬರಿನಲ್ಲಿ ಭಾರತವು ಅಮೆರಿಕದಿಂದ ೧೪ ಲಕ್ಷ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳುವುದೆಂದು ನುಡಿದರು.

ಕಳ್ಳತನದಲ್ಲಿ ಸಾಗುವಾನಿ ಮರ ಸಾಗಿಸಿದ್ದಕ್ಕೆ ಶಿಕ್ಷೆ

ಕುಂದವಾಳು ಮರಿಯಪ್ಪ, ಮುತ್ತೊಟ್ಟಪ್ಪರಿಗೆ ಸಜಾ ಮತ್ತು ದಂಡ

ಮೈಸೂರು ೨೮

ಪಿರಿಯಾಪಟ್ಟಣದ ತಾಲ್ಲೂಕು ಚಿಕ್ಕಮುತ್ತನಹಳ್ಳಿ ಕಾಡಿನಲ್ಲಿ ಸಾಗುವಾನಿ ಮರಗಳನ್ನು ಸಾಗಿಸುತ್ತಿದ್ದರೆಂದು ಆಪಾದಿಸಿ ಸರ್ಕಾರದವರು ಶ್ರೀ ಎಸ್. ಎಂ. ಮರಿಯಪ್ಪ ಮತ್ತು ಇತರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎ. ಎ. ಮಜೀದ್‌ರವರು ಈ ದಿನ ತೀರ್ಪಿತ್ತು ಶ್ರೀ ಮರಿಯಪ್ಪನವರಿಗೆ ೭ ತಪ್ಪುಗಳಿಗಾಗಿ ೭ ತಿಂಗಳು ಕಠಿಣ ಸಜಾ ಮತ್ತು ೧,೮೦೦ ರೂ ದಂಡ, ತಪ್ಪಿದರೆ ೭ ವಾರ ಕಠಿಣ ಸಜಾವನ್ನು ವಿಧಿಸಿರುತ್ತಾರೆ.

ಮುತ್ತೊಟ್ಟು ಆಪಾದಿತರಾದ [illegible] ಶ್ರೀ ಬಾಳಪ್ಪಾಚಾರಿ ಎಂಬುವರಿಗೆ ೫ ತಿಂಗಳು ಕಠಿಣ ಸಜಾ ಮತ್ತು ೧೫೦ ರೂ. ದಂಡ, ತಪ್ಪಿದರೆ ಐದು ವಾರ ಕಠಿಣ ಸಜಾ ವಿಧಿಸಲಾಗಿದೆ. ಇತರ [illegible] ಖುಲಾಸೆ ಮಾಡಲಾಗಿದೆ.

ಶಂಕರ ಜಯಂತಿ ಉತ್ಸವ

ನಗರದ ಅಭಿನವ ಶಂಕರಾಲಯದಲ್ಲಿ ನಾಳೆಯಿಂದ ಬರುವ ಶನಿವಾರದವರೆಗೆ ಶಂಕರ ಜಯಂತಿ ಉತ್ಸವವನ್ನು ಆಚರಿಸಲಾಗುವುದು. ಇದರ ಅಂಗವಾಗಿ ನಿತ್ಯವೂ ಪ್ರಾತಃಕಾಲ ರುದ್ರಾಭಿಷೇಕ, ಸಹಸ್ರನಾಮ, ಪ್ರಸ್ಥಾನತ್ರಯ ಭಾಷ್ಯ ಪಾರಾಯಣ ಮತ್ತು [illegible] ಯುವಕರು ಆಸ್ತಿಕ ಮಹಾಜನರು ಈ ಉತ್ಸವದಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ಸ್ವಾತಂತ್ರ್ಯೋತ್ಸವಕ್ಕಾಗಿ ಕೇರಳಕ್ಕೆ ರಾಷ್ಟ್ರಾಧ್ಯಕ್ಷರು

ಈ ವರ್ಷದ ಸ್ವಾತಂತ್ರ್ಯ ದಿನೋತ್ಸವಕ್ಕಾಗಿ ರಾಷ್ಟ್ರಾಧ್ಯಕ್ಷರು ಕೇರಳದ ರಾಜಧಾನಿ ತಿರುವನಂತಪುರಕ್ಕೆ ಹೋಗುವರು. ಒಂದೊಂದು ವರ್ಷ ದಕ್ಷಿಣ ಭಾರತದ ಒಂದೊಂದು ಸಂಸ್ಥಾನದಲ್ಲಿ ಅವರು ಈ ಉತ್ಸವದಲ್ಲಿ ಭಾಗವಹಿಸುತ್ತಿರುವರು.

ಕುದುರೆ ಜೂಜಿನಲ್ಲಿ ೪ ಷಿಲಿಂಗ್ ಹಣಕ್ಕೆ ೩೨,೫೦೦ ಪೌಂಡು ಲಾಭ

ಪ್ಯಾರಿಸ್ಸಿನ ಕುದುರೆ ಜೂಜಿನ ಟ್ರಿಬಲ್ ಇವೆಂಟಿನಲ್ಲಿ ಒಬ್ಬ ಅಪರಿಚಿತ ವ್ಯಕ್ತಿಯು ೪ ಷಿಲಿಂಗುಗಳ ಹಣದಿಂದ ೩೨।। ಸಾವಿರ ಪೌಂಡುಗಳನ್ನು ಗೆದ್ದಿರುವನೆಂದು ವರದಿಯಾಗಿದೆ. ಅವನು ತನ್ನ ಹೆಸರನ್ನು ತಿಳಿಸಿಲ್ಲ.

ವಿನೋಬಾ ಭಾವೆಯವರಿಂದ ಜಪಾನಿ ಭಾಷೆಯ ಅಭ್ಯಾಸ

ಆಚಾರ್ಯ ವಿನೋಬಾ ಭಾವೆಯವರು ಜಪಾನಿ ಭಾಷೆಯನ್ನು ಕಲಿಯುತ್ತಿರುವರು. ಈ ವಿಚಾರವನ್ನು ಅವರು ಪ್ರಾರ್ಥನಾ ಸಭೆಯೊಂದರಲ್ಲಿ ತಿಳಿಸುತ್ತಾ, ತಮ್ಮೊಡನೆ ೩ ತಿಂಗಳಿಂದ ಪಾದಯಾತ್ರೆ ಪ್ರವಾಸ ಮಾಡುತ್ತಿರುವ ಜಪಾನಿನ ಒಬ್ಬ ಭಿಕ್ಷುವಿನಿಂದ ತಾನು ಆ ಭಾಷೆಯನ್ನು ಕಲಿಯುತ್ತಿರುವುದಾಗಿ ತಿಳಿಸಿ ಸಭೆಗೆ ಅವರ ಪರಿಚಯ ಮಾಡಿಕೊಟ್ಟರು.

ಬೆಸ್ತರ ಸಮ್ಮೇಳನ

ಮಹಾ ಮೈಸೂರಿನ ಬೆಸ್ತರ ಸಮ್ಮೇಳನವು ಬರುವ ತಿಂಗಳು ೧೧ ಮತ್ತು ೧೨ ರಂದು ಮಂಗಳೂರಿನಲ್ಲಿ ಸೇರಿ ಮೀನು ಕೈಗಾರಿಕೆಯ ಅಭಿವೃದ್ಧಿ ಕಾರ್ಯಕ್ರಮವನ್ನು ಸಿದ್ಧಗೊಳಿಸುವುದು. ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಆರಂಭೋತ್ಸವವನ್ನು ನೆರವೇರಿಸುವರು. ಕಾರ್ಮಿಕ ಮಂತ್ರಿ ಶ್ರೀ ವೈಕುಂಠ ಬಾಳಿಗರವರು ಈ ಸಂಬಂಧದ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು. ದ್ವಿತೀಯ ಯೋಜನೆಯಲ್ಲಿ ಈ ಕೈಗಾರಿಕೆಗೆ ಸಂಸ್ಥಾನ ಸರ್ಕಾರದವರು ೬೫ ಲಕ್ಷ ರೂ ಒದಗಿಸುವರು. ಮಲ್ಪೆಯಲ್ಲಿ ಮೀನು ಕೈಗಾರಿಕಾ ತಾಂತ್ರಿಕ ಶಾಲೆಯೊಂದನ್ನು ಏರ್ಪಡಿಸುವ ವಿಷಯವನ್ನು ಸಮ್ಮೇಳನವು ಪರಿಶೀಲಿಸುವುದು.

ರಾಜ್ಯಪಾಲರಿಂದ ಉಪನಿಷತ್ತು ಪಾಠಗಳ ಆರಂಭೋತ್ಸವ

ಬೆಂಗಳೂರಿನಲ್ಲಿ ಉತ್ತರ ಕಾಶಿಯ ಸ್ವಾಮಿ ಚಿನ್ಮಯಾನಂದಜಿಯವರು ನಡೆಸಲಿರುವ ಮುಂಡಕೋಪನಿಷತ್ತಿನ ಜ್ಞಾನಯಜ್ಞದ ಆರಂಭೋತ್ಸವವನ್ನು ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್‌ರು ನಾಳೆ ನೆರವೇರಿಸುವರು. ೧ ತಿಂಗಳ ಕಾಲ ಉಪನಿಷತ್ ಪ್ರವಚನವು ನಡೆಯುವುದು. ಮೈಸೂರು ಸಂಸ್ಥಾನದಲ್ಲಿ ವೇದ ಪಾಠಶಾಲೆಗಳನ್ನು ಸ್ಥಾಪಿಸಲು ಸ್ವಾಮೀಜಿಯವರು ವ್ಯವಸ್ಥೆ ಮಾಡುತ್ತಿರುವರು. ಅಲ್ಲಿ ಈ ವರ್ಷ ೧,೦೦೦ ವಿದ್ಯಾರ್ಥಿಗಳಿಗೆ ಉಪನಿಷತ್ತಿನ ಸಂಸ್ಕೃತ ಪಾಠವನ್ನು ಹೇಳಿಕೊಡಲಾಗುವುದು.

ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಬಗ್ಗೆ ಸಮಾಲೋಚನೆ

ಕೇಂದ್ರ ಹಣಕಾಸಿನ ಮಂಡಳಿಗೆ ಮೈಸೂರು ಸರ್ಕಾರದ ಮನವಿ ಪತ್ರ

[ಸ್ವಂತ ತಂತಿ] ಬೆಂಗಳೂರು ೨೮

ಕೇಂದ್ರ ಸರ್ಕಾರದ ಹಣಕಾಸಿನ ಮಂಡಲಿಯು ನೆನ್ನೆ ಇಲ್ಲಿಗೆ ಆಗಮಿಸಿತು. ಇಂದು ಮೈಸೂರು ಸರ್ಕಾರದವರು ಸಮರ್ಪಿಸಿದ ಮನವಿಯ ಆಧಾರದ ಮೇಲೆ ಮಂಡಲಿಯ ಸದಸ್ಯರು ಮಂತ್ರಿಮಂಡಲದೊಡನೆ ಚರ್ಚಿಸಿದರು. ಅನಂತರ ಮಂಡಲಿಯವರು ವರಮಾನ, ತೆರಿಗೆ ಮುಂತಾದ ವಿಷಯಗಳ ಬಗ್ಗೆ ಸಂಸ್ಥಾನ ಪುನರ್ವಿಂಗಡಣಾ ಕಾರ್ಯದರ್ಶಿಗಳು, ಫೈನಾನ್ಶಿಯಲ್ ಕಮಿಷನರುಗಳು, ಅಬ್ಕಾರಿ ಕಮಿಷನರ್ ಮುಂತಾದವರ ಸಾಕ್ಷ್ಯಗಳನ್ನು ತೆಗೆದುಕೊಂಡರು.

ಸರ್ಕಾರದವರು ಒಪ್ಪಿಸಿರುವ ಮನವಿಯಲ್ಲಿ ಸಂಸ್ಥಾನಕ್ಕೆ ವರಮಾನ ತೆರಿಗೆ, ಕೇಂದ್ರದ ಅಬ್ಕಾರಿ ಸುಂಕ, ರೆವಿನ್ಯೂ ಬಾಬುಗಳಿಂದ ಹೆಚ್ಚು ಹಣವು ಬರಬೇಕೆಂದೂ, ಸಂಸ್ಥಾನಕ್ಕೆ ಹೆಚ್ಚಿನ ಗ್ರಾಂಟನ್ನು ಮಂಜೂರು ಮಾಡಬೇಕೆಂದೂ ಕೇಳಲಾಗಿದೆ.

ಪಶ್ಚಿಮ ಜರ್ಮನಿಗೆ ರಷ್ಯದ ಪ್ರಬಲ ಎಚ್ಚರಿಕೆ

ಅಣು ಬಾಂಬು ನೆಲೆಗಳಿಗೆ ಅವಕಾಶ ಕೊಟ್ಟರೆ ಪಶ್ಚಿಮ ಜರ್ಮನಿಯ ನಾಶ ಸಿದ್ಧ

ಪಶ್ಚಿಮ ಜರ್ಮನಿಯಲ್ಲಿ ಅಣು ಶಸ್ತ್ರಗಳನ್ನಿಡಲು ಅವಕಾಶವಿತ್ತರೆ, ಅದರಿಂದ ಆ ರಾಷ್ಟ್ರದ ಜನರು ಹಿಂದೆ ಅನುಭವಿಸಿದ ಅನಾಹುತಗಳನ್ನು ಮೀರಿಸಬಹುದಾದಂತಹ ಭಾರಿ ವಿಪತ್ತಿಗೆ ಗುರಿಯಾಗುವರೆಂದು ರಷ್ಯವು ತೀವ್ರವಾದ ಎಚ್ಚರಿಕೆಯಿತ್ತಿರುತ್ತದೆ. ಒಂದೇ ಒಂದು ಅಧುನಿಕ ಜಲಜನಕ ಬಾಂಬಿನಿಂದ ಪಶ್ಚಿಮ ಜರ್ಮನಿಯ ಮುಖ್ಯ ಕೇಂದ್ರಗಳನ್ನು ನಿರ್ನಾಮ ಮಾಡಬಹುದೆಂದೂ, ಇಡೀ ರಾಷ್ಟ್ರವೇ ಧೂಳಿಯಿಂದ ಭಾರಿ ರುದ್ರ ಭೂಮಿಯಾಗುವುದೆಂದೂ ತಿಳಿಸಲಾಗಿದೆ.

ಪಶ್ಚಿಮ ಜರ್ಮನಿಯು ಉತ್ತರ ಅಟ್ಲಾಂಟಿಕ್ ಕೌಲು ರಾಷ್ಟ್ರಗಳ ಅಣುಶಸ್ತ್ರಗಳ ನೆಲೆಯಾದರೆ, ಯುದ್ಧಕಾಲದಲ್ಲಿ ಆ ನಾಡು ಎಲ್ಲಾ ಅಧುನಿಕ ಅಣುಶಸ್ತ್ರಾಸ್ತ್ರಗಳ ಧಾಳಿಗೆ ಗುರಿಯಾಗಬೇಕಾಗುವುದೆಂದು ತಿಳಿಸಿ ಪಶ್ಚಿಮ ಜರ್ಮನಿಯು ಶಾಂತಿಯೊಡನೆ ಸಹಕರಿಸಬೇಕೆಂದೂ ರಷ್ಯವು ಎಚ್ಚರಿಸಿದೆ.

ಚಲನಚಿತ್ರಗಳಿಗೆ ರಾಷ್ಟ್ರಾಧ್ಯಕ್ಷರಿಂದ ಬಹುಮಾನ ವಿನಿಯೋಗ

ಕಳೆದ ಸಾಲಿನ ಅತ್ಯುತ್ತಮ ಚಿತ್ರಗಳಿಗೆ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆನ್ನೆ ದೆಹಲಿಯಲ್ಲಿ ಪ್ರಶಸ್ತಿ ಪತ್ರಗಳನ್ನೂ, ಪದಕಗಳನ್ನೂ ವಿನಿಯೋಗಿಸಿದರು. ಬಂಗಾಳಿ ಭಾಷೆಯ ಕಾಬೂಲಿವಾಲಾ ಚಿತ್ರಕ್ಕೆ ಚಿನ್ನದ ಪದಕ ಮತ್ತು ಬೆಳ್ಳಿಯ ಪದಕಗಳನ್ನು ಕೊಡಲಾಯಿತು. ಭಕ್ತ ವಿಜಯ ಎಂಬ ಕನ್ನಡ ಚಿತ್ರಕ್ಕೆ ಯೋಗ್ಯತಾ ಪತ್ರ ದೊರೆತಿದೆ.

ರಾಷ್ಟ್ರೀಯ ವಿಸ್ತರಣಾ ಯೋಜನೆಯ ಪ್ರಗತಿ

ಚರ್ಚಾ ಗೋಷ್ಠಿಯಲ್ಲಿ ಪರಿಶೀಲನೆ

ಮೈಸೂರು ೨೮

ಮೈಸೂರು ಜಿಲ್ಲಾ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಂಗವಾಗಿ ಏರ್ಪಾಡಾಗಿರುವ ಚರ್ಚಾಗೋಷ್ಠಿಯನ್ನು ಡಿವಿಜನಲ್ ಕಮಿಷನರ್ ಶ್ರೀ ಕೆ. ಶೇಷಗಿರಿರಾಯರು ನೆನ್ನೆ ಬೆಳಿಗ್ಗೆ ಟೌನ್‌ಹಾಲ್ ಭವನದಲ್ಲಿ ಆರಂಭಗೊಳಿಸಿದರು. ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಬಿ ಕುಪ್ಪುಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು

ಪ್ರಾರ್ಥನೆಯಾದನಂತರ ನಂಜನಗೂಡು ಸಬ್ ಡಿವಿಜನ್ ಅಧಿಕಾರಿ ಶ್ರೀ ಚನ್ನರಾಜ ಅರಸರು ಸ್ವಾಗತ ಭಾಷಣ ಮಾಡಿದರು ಗುಂಡ್ಲುಪೇಟೆ, ಪಿರಿಯಾಪಟ್ಟಣ, ಹುಣಸೂರು ಮತ್ತು ಚಾಮರಾಜನಗರ ಕೇಂದ್ರಗಳ ಅಭಿವೃದ್ಧಿ ಅಧಿಕಾರಿಗಳು ತಮ್ಮ ಕ್ಷೇತ್ರಗಳಲ್ಲಿ ಇದುವರೆಗೆ ಆಗಿರುವ ಸಾಧನೆಯ ಬಗ್ಗೆ ವರದಿಗಳನ್ನು ಒಪ್ಪಿಸಿದರು

ಶ್ರೀ ಶೇಷಗಿರಿರಾಯರು ಭಾಷಣ ಮಾಡಿ ವಿಸ್ತರಣಾ ಯೋಜನೆಗಳ ಉದ್ದೇಶವನ್ನು ವಿವರಿಸಿ ಸರ್ಕಾರವು ಇದಕ್ಕಾಗಿ ಹಣ ಕೊಟ್ಟ ಮಾತ್ರಕ್ಕೇ ಯೋಜನೆಯು ಸಂಪೂರ್ಣ ಫಲಕಾರಿಯಾಗಲಾರದೆಂದೂ ಹಳ್ಳಿಗರ ಜೀವನ ಮಟ್ಟವನ್ನು ಏರಿಸಿ [illegible] ಸೌಕರ್ಯಗಳನ್ನು ಒದಗಿಸಿಕೊಡುವ ಈ ಯೋಜನೆಯ ಯಶಸ್ಸು ಅವರಲ್ಲಿ ಗ್ರಾಮಸ್ಥರು ವಹಿಸುವ ಪಾತ್ರದ ಮೇಲೆ ಅವಲಂಬಿಸಿದೆಯೆಂದೂ, ಯೋಜನೆಗಳಲ್ಲಿ ಉತ್ಸಾಹವು ಕ್ಷಣಿಕವಾಗಿರದೆ [illegible] ಇರಬೇಕೆಂದೂ ಸೂಚಿಸಿದರು

ರಾಜ್ಯ ಶಾಸನಸಭಾ ಸದಸ್ಯ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಮಾತನಾಡಿ ಇದುವರೆಗೆ ಆಗಿರುವ ಕೆಲಸಗಳು ಉತ್ಪತ್ತಿಕಾರಕವಾಗಿಲ್ಲದೆ ಕೇವಲ ತಾತ್ಕಾಲಿಕ ಅವಶ್ಯಕತೆಗಳನ್ನು ಪೂರೈಸಿವೆಯೆಂದೂ ವಿಸ್ತರಣಾ ತತ್ವದ ಅನುಷ್ಠಾನಕ್ಕೆ ಯೋಜನೆಗಳಲ್ಲಿ ಗ್ರಾಮಸ್ಥರ ಪಾತ್ರವು ಹೆಚ್ಚಬೇಕೆಂದೂ, ಆದರೆ ಈಗ ಅಧಿಕಾರಿಗಳದೇ [illegible] ಜನರಿಗೆ ಅವಕಾಶವಿಲ್ಲದೆ ಹೋಗಿದೆಯೆಂದೂ ಹೇಳಿದರು ಜನರು ಈ ಕಾರ್ಯಗಳಲ್ಲಿ ತಮ್ಮ ಪಾತ್ರವನ್ನು ವಹಿಸಲು ಮುಂದೆ [illegible] ಅವರು ನುಡಿದು, ಯೋಜನೆಗಳ [illegible] ಜನರ ಶ್ರದ್ಧೆಯು ಅವಶ್ಯಕವೆಂದು ತಿಳಿಸಿದರು

ಶಾಸನಸಭಾ ಸದಸ್ಯ ಶ್ರೀ ಕೆ ಪುಟ್ಟಸ್ವಾಮಿಯವರು ಮಾತನಾಡಿ ಹಿಂದೆ ಹಳ್ಳಿಗರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರೆಂದೂ, ಆದರೆ ಕಾಲಗತಿಯು ಬದಲಾಯಿಸಿದಾಗ [illegible] ಈ ರೂಢಿಯು ತಪ್ಪಿ ಈಗ ಅವುಗಳನ್ನು ಸರ್ಕಾರವೇ ಮಾಡಬೇಕಾದ ಸ್ಥಿತಿಯೊದಗಿ, ಅದನ್ನು ಸಂಪೂರ್ಣವಾಗಿ ಮಾಡಲಾಗದೆ ಹಳ್ಳಿಗಳು ಹೀನಸ್ಥಿತಿಯಲ್ಲಿವೆಯೆಂದೂ, ಕಾಲಕ್ರಮೇಣ ಈ ಸ್ಥಿತಿಯು ಹರಿಹೋಗಬಹುದೆಂದೂ ನುಡಿದರು

ಶ್ರೀಮತಿ ಕಾಮೇಶ್ವರಮ್ಮ ಕುಪ್ಪುಸ್ವಾಮಿಯವರು ಮಾತನಾಡಿ ವಿಸ್ತರಣಾ ಯೋಜನೆಗಳ ಅಂಗವಾಗಿ ಸ್ತ್ರೀಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಆಗಿರುವ ಕೆಲಸವು ಸಾಲದೆಂದೂ, ಇದಕ್ಕೆ ಜೀವನದ ನಾನಾ ಜವಾಬ್ದಾರಿಗಳಿಗೆ ಗುರಿಯಾಗಿರುವ ಮಹಿಳೆಯರ ನಿರುತ್ಸಾಹವೇ ಕಾರಣವೆಂದೂ ಹೇಳಿದರು. ಸೋಷಿಯಲ್ ವೆಲ್‌ಫೇರ್ ಬೋರ್ಡಿನವರ ಆಶ್ರಯದಲ್ಲಿ ಇದುವರೆಗೆ ಯೋಜನಾ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿರುವ ಕಾರ್ಯಗಳನ್ನು ವಿವರಿಸಿದರು ಉತ್ತಮ ಜೀವನದ ಬಗ್ಗೆ ಹಳ್ಳಿಗಳಲ್ಲಿ ಪ್ರಚಾರ ನಡೆಸಲು ಮಾದರಿ ಮನೆಗಳ ನಿರ್ಮಾಣ ಮತ್ತು ಚಲನಚಿತ್ರ ಪ್ರದರ್ಶನಗಳು ನಡೆಯಬೇಕೆಂದು ಸೂಚಿಸಿದರು.

ಅಧ್ಯಕ್ಷರು ಭಾಷಣ ಮಾಡಿ, ವಿಜ್ಞಾನದಿಂದ ಆಗಿರುವ ಪ್ರಗತಿಯ ಉಪಯೋಗವು ಗ್ರಾಮಗಳಿಗೂ ವಿಸ್ತರಿಸಲು ಅವಕಾಶವಾಗುವುದೇ ಈ ವಿಸ್ತರಣಾ ಯೋಜನೆಗಳ ಉದ್ದೇಶವೆಂದು ಅಭಿಪ್ರಾಯಪಟ್ಟು, ಈ ಕಾರ್ಯದಲ್ಲಿ ಗ್ರಾಮ ಸೇವಕರ [illegible] ಮಹತ್ವಪೂರಿತವಾದುದೆಂದು ತಿಳಿಸಿ[illegible] ಸಬ್ ಡಿವಿಜನ್ ಅಧಿಕಾರಿ ಶ್ರೀ [illegible] ವಂದನಾರ್ಪಣೆ ಮಾಡಿದರು

ಖೋತಾ ಆದ ಕೆಲಸಗಾರರಿಗೆ ಪರಿಹಾರಕ್ಕಾಗಿ ರಾಷ್ಟ್ರಾಧ್ಯಕ್ಷರ ವಿಶೇಷಾಜ್ಞೆ

ಸದುದ್ದೇಶದಿಂದ ಮುಚ್ಚಲ್ಪಡುವ ಅಥವಾ ಬೇರೊಬ್ಬರಿಗೆ ವರ್ಗವಾಗುವ ಸಂಸ್ಥೆಗಳ ಕೆಲಸಗಾರರನ್ನು ಖೋತಾ ಮಾಡಿದರೆ ಅಂತಹವರಿಗೆ ಪರಿಹಾರ ಒದಗಿಸುವುದು ಅಗತ್ಯವೆಂದು ಸೂಚಿಸುವ ವಿಶೇಷಾಜ್ಞೆಯೊಂದನ್ನು ಕೇಂದ್ರ ಸರ್ಕಾರದವರು ಹೊರಡಿಸಿರುತ್ತಾರೆ. ಕೆಲಸಗಾರರಿಗೆ ತೊಂದರೆಯಾಗುವ ಪರಿಸ್ಥಿತಿಯೊದಗಿದ ಪರಿಣಾಮವಾಗಿ ವಿಶೇಷಾಜ್ಞೆಯನ್ನು ಮಾಡಲಾಗಿದೆ ಒಂದು ವ್ಯವಹಾರದಲ್ಲಿ ಪರಿಹಾರ ಕೊಡಬೇಕಾಗಿಲ್ಲವೆಂದು ಸುಪ್ರೀಂ ಕೋರ್ಟಿನವರು ತೀರ್ಪಿತ್ತರು ಅದರ ಪರಿಣಾಮವಾಗಿ ಅಹಮದಾಬಾದು, ಕಾನ್ಪುರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಅನೇಕ ಕೈಗಾರಿಕಾ ಸಂಸ್ಥೆಗಳು ಮುಚ್ಚಲ್ಪಡುವುವೆಂದು ಕೆಲಸಗಾರರಿಗೆ ನೋಟೀಸು ಕೊಟ್ಟು, ಅನೇಕರಿಗೆ ನಿರುದ್ಯೋಗ ಪ್ರಾಪ್ತಿಯಾಯಿತು

ಕರ್ನಾಟಕದಲ್ಲಿ ಅಭಾವ ಪರಿಹಾರಕ್ಕಾಗಿ ೩ ಲಕ್ಷ ರೂ.

ಕರ್ನಾಟಕದ ಬಿಜಾಪುರ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಅಭಾವ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದವರು ೩ ಲಕ್ಷ ರೂ ತಕ್ಕಾವಿ ಸಾಲವನ್ನು ಮಂಜೂರು ಮಾಡಿರುತ್ತಾರೆ ೧॥ ಲಕ್ಷ ರೂ ಅನ್ನು ಬಿಜಾಪುರ ಜಿಲ್ಲೆಗೂ, ೭೫,೦೦೦ ರೂ ನಂತೆ ಉಳಿದ ಎರಡು ಜಿಲ್ಲೆಗಳಿಗೂ ಹಂಚಲಾಗುವುದು. ಅಲ್ಲಿನ ಪರಿಸ್ಥಿತಿಯನ್ನು ಖುದ್ದಾಗಿ ಅರಿಯಲು ಕೇಂದ್ರ ಆಹಾರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಬರುವ ತಿಂಗಳು ಮೊದಲನೇ ವಾರ ಅಲ್ಲಿಗೆ ಭೇಟಿ ಕೊಡುವರು.

ವೇದಶಾಸ್ತ್ರ ಪೋಷಿಣಿ ಸಭೆಯ ವಾರ್ಷಿಕ ಸಮ್ಮೇಳನ

ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳಿದ್ದು ಸಂಜೆ ೫ ಗಂಟೆಗೆ ಶ್ರೀ ವೇದಶಾಸ್ತ್ರ ಪೋಷಿಣಿ ಸಭೆಯ ವಾರ್ಷಿಕ ಸಮ್ಮೇಳನವು ಜರುಗುವುದು ಕಾರ್ಯ ನಿರ್ವಾಹಕ ಮಂಡಲಿಯ ಚುನಾವಣೆ ಮುಂತಾದ ವಿಷಯಗಳನ್ನು ಪರಿಶೀಲಿಸಲಾಗುವುದು.

ಅರಮನೆ ನೌಕರರು ಸಂಧಾನದ ಬಗ್ಗೆ ಎಚ್ಚರಿಕೆ ವಹಿಸಲು ಕರೆ

ಅರಮನೆ ನೌಕರರ ನಿವೃತ್ತಿ ಸಂಬಂಧವಾಗಿ ಬರುವ ೨ನೇ ತಾರೀಕು ನೌಕರರ ಸಂಘದವರಿಗೂ, ಅಧಿಕಾರಿಗಳಿಗೂ ನಡೆಯುವ ಸಂಧಾನದ ಬಗ್ಗೆ ನೌಕರರು ಎಚ್ಚರಿಕೆಯಿಂದ ವರ್ತಿಸಬೇಕೆಂದೂ, ತಾವು ಧರಿಸಿದ್ದ ಬಿಲ್ಲೆಗಳನ್ನು ಪುನಃ ಧರಿಸಬೇಕೆಂದೂ ಇಲ್ಲಿನ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಶ್ರೀ ಟಿ. ವಿ ಶ್ರೀನಿವಾಸರಾಯರು ತಿಳಿಸಿರುತ್ತಾರೆ ನಿವೃತ್ತಿಯು ನಾಳಿದ್ದೇ ಆಗುವುದರಿಂದ ೨ನೇ ತಾರೀಕು ಸಂಧಾನವಿಟ್ಟುಕೊಂಡಿರುವುದಕ್ಕಾಗಿ ಅವರು ಟೀಕಿಸಿರುತ್ತಾರೆ ನೌಕರರು ತಮ್ಮ ದಿಟ್ಟತನವನ್ನು ಬಿಡಬಾರದೆಂದು ತಿಳಿಸಿ, ಅವರುಗಳು ಬಿಲ್ಲೆ ತೆಗೆಯುವಂತೆ ಆಗಲು ಸುಳ್ಳು ಆಶ್ವಾಸನೆಯಿತ್ತುದುದಕ್ಕಾಗಿ ವಿಷಾದಿಸಿರುತ್ತಾರೆ. ಅವರ ಚಳುವಳಿಯನ್ನು ದಮನ ಮಾಡುವ ಉದ್ದೇಶದಿಂದ ಸಂಘದ ಇಬ್ಬರು ಕಾರ್ಯನಿರ್ವಾಹಕರಾದ ಶ್ರೀ ದೊಡ್ಡಯ್ಯ ಮತ್ತು ಶ್ರೀ ಚಂದ್ರಶೇಖರರವರನ್ನು ನೀಲಗಿರಿಗೆ ವರ್ಗ ಮಾಡಿ, ಅವರು ಹೋಗದಿದ್ದರೆ ಅವರನ್ನೂ ನಿವೃತ್ತಿಗೊಳಿಸಲಾಗುವುದೆಂದು ಬೆದರಿಸಿರುವುದನ್ನು ಶ್ರೀನಿವಾಸರಾಯರು ಖಂಡಿಸಿ, ಸರ್ಕಾರದವರು ಈ ವಿಷಯವಾಗಿ ಪ್ರವೇಶಿಸಬೇಕೆಂದೂ ಕೋರಿರುತ್ತಾರೆ.

ಸತ್ಕಾರ ಕೂಟ

ಅಖಿಲ ಭಾರತ ಔದ್ಯೋಗಿಕ ಮತ್ತು ವಿದ್ಯಾಭ್ಯಾಸ ಮಾರ್ಗದರ್ಶನ ಸಮ್ಮೇಳನಕ್ಕೆ ಆಗಮಿಸುವ ಪ್ರತಿನಿಧಿಗಳ ಗೌರವಾರ್ಥವಾಗಿ ಉಪಕುಲಪತಿಗಳಾದ ಡಾ॥ ಕೆ. ವಿ ಪುಟ್ಟಪ್ಪನವರು ಮೊನ್ನೆ ಸಂಜೆ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

○ [illegible] ಮತ್ತು ಸಿರಿಯಸಳ ಗಣಿಯನ್ನು ಈಗ ಪುನಃ ತೆರೆಯಲಾಗಿದೆ ಕಳೆದ ೨೫ನೇ ತಾರೀಕು ಅದನ್ನು ಮುಚ್ಚಲಾಗಿದ್ದಿತು.

ವಿಧಾನ ಸಭಾ ಸದಸ್ಯರ ತಂದೆಯನ್ನು ಹೊಡೆದುದಕ್ಕಾಗಿ ೬ ಜನರ ಬಂಧನ

ಹರಿಹರ ಕ್ಷೇತ್ರದಿಂದ ವಿಧಾನ ಸಭೆಗೆ ಸದಸ್ಯರಾಗಿ ಆರಿಸಿಬಂದಿರುವ ಶ್ರೀ ಎಂ. ರಾಮಪ್ಪನವರ ತಂದೆ ಶ್ರೀ ಟಿ. ಹನುಮಂತಪ್ಪನವರನ್ನು ಮನೆಗೆ ನುಗ್ಗಿ ಹೊಡೆದರೆಂಬ ಕಾರಣಕ್ಕಾಗಿ ಹಾಲಪ್ಪ ಕರಿಯಪ್ಪ, ಭೀಮಪ್ಪ, ಓಬಪ್ಪ, ಹನುಮಂತ ಮತ್ತು ವೀರಪ್ಪ ಎಂಬುವರನ್ನು ಬಂಧಿಸಲಾಗಿದೆ ಅವರುಗಳು ಅಕ್ರಮಕೂಟ ಸೇರಿ ಮಳಲಕೆರೆ ಎಂಬ ಗ್ರಾಮದಲ್ಲಿ ಶ್ರೀ ಹನುಮಂತಪ್ಪನವರನ್ನು ಹೊಡೆದರೆಂದೂ, ಅವರು ಓಡಿಹೋಗಿ ಒಂದು ಮನೆಯಲ್ಲಿ ಆಶ್ರಯ ಪಡೆದಾಗ, ಕಲ್ಲು ಬೀರಿ ಹೆಂಚನ್ನು ಒಡೆದರೆಂದೂ ಹೇಳಲಾಗಿದೆ

ಚಾಕು ಇರಿತದಿಂದ ಇಬ್ಬರ ಮರಣ

ಬಂಗಾರಪೇಟೆ ತಾಲ್ಲೂಕು ಕಾಮಸಮುದ್ರದ ಒಂದು ಗ್ರಾಮದ ಬಳಿ ಇಸ್ಮಾಯಿಲ್, ಸಾಬ್ಜಾನ್ ಮತ್ತು ಜಾಫರ್ ಎಂಬುವರನ್ನು ಕಳೆದ ೨೧ನೇ ತಾರೀಕು ರಾತ್ರಿ ಯಾರೋ ಚಾಕುವಿನಿಂದ ಇರಿದರೆಂದೂ, ಇಸ್ಮಾಯಿಲನು ಸ್ಥಳದಲ್ಲೂ, ಸಾಬ್ಜಾನನು ಆಸ್ಪತ್ರೆಗೆ ಸಾಗಿಸುವಾಗ ದಾರಿಯಲ್ಲೂ ಮೃತಪಟ್ಟರೆಂದು ವರದಿಯಾಗಿದೆ ಮತ್ತೊಬ್ಬನ ಸ್ಥಿತಿ ಚಿಂತಾಜನಕವಾಗಿದೆ. ಈ ಸಂಬಂಧದಲ್ಲಿ ಜಬ್ಬಾರ್ ಮತ್ತು ಸತ್ತಾರ್ ಎಂಬುವರನ್ನು ಬಂಧಿಸಲಾಗಿದೆ

೧೧ ರೂಪಾಯಿಗೊಂದು ಮದುವೆ

ಕೈರಾ ಜಿಲ್ಲೆಯ ಸೋನಿಕುಲದ ಪ್ರತಿನಿಧಿಗಳು ಸಮ್ಮೇಳನ ನಡೆಸಿ ವಿವಾಹಗಳ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ ವರ್ಷದ ಒಂದು ನಿರ್ದಿಷ್ಟ ದಿನ ಮತ್ತು ಜಾಗದಲ್ಲಿ ವಿವಾಹಗಳನ್ನು ನಡೆಸಬೇಕೆಂದು ನಿರ್ಧರಿಸಿರುತ್ತಾರೆ. ಒಂದು ವಿವಾಹಕ್ಕೆ ೧೧ ರೂ.ಗಳಿಗಿಂತ ಹೆಚ್ಚು ವೆಚ್ಚವು ತಗಲಬಾರದೆಂದು ಅವರು ತೀರ್ಮಾನಿಸಿರುತ್ತಾರೆ ದುಂದು ವೆಚ್ಚದ ಆಡಂಬರಗಳನ್ನು ಕೈಬಿಡಲು ಅವರು ನಿರ್ಧರಿಸಿರುತ್ತಾರೆ.

ಕೇರಳದ ಶಾಸನ ಸಭಾಧ್ಯಕ್ಷರು

ಆರ್ ಶಂಕರನಾರಾಯಣನ್ ತಂಪಿಯವರು ಕೇರಳದ ವಿಧಾನ ಸಭಾಧ್ಯಕ್ಷರಾಗಿ ವಿರೋಧವಿಲ್ಲದೆ ಆರಿಸಲ್ಪಟ್ಟಿರುತ್ತಾರೆ ಅವರು ಕಮ್ಯೂನಿಸ್ಟ್ ಪಕ್ಷದ ಸದಸ್ಯರು

[illegible] Printed and Published by
A. R. Nagarajan at Sadhvi Press,
D. Subbiah Road, Mysore

ಕೇರಳ ಶಾಸನ ಸಭೆಯಲ್ಲಿ ಅನಕ್ಷರಸ್ಥ ಸದಸ್ಯ

ಕೇರಳ ವಿಧಾನ ಸಭೆಯಲ್ಲಿ ಮೊನ್ನೆ ಪ್ರಮಾಣ ವಚನ ಸ್ವೀಕಾರ ಸಮಯದಲ್ಲಿ ಕಾಂಗ್ರೆಸ್ ಪಕ್ಷದ ಮಥುರ್ ಎಂಬ ಸದಸ್ಯನು ತನಗೆ ಪ್ರಮಾಣವಚನ ಪತ್ರವನ್ನು ಓದಲು ಬಾರದೆಂದು ತಿಳಿಸಲಾಗಿ, ಶಾಸನಸಭಾಧ್ಯಕ್ಷರು ಅದನ್ನು ತಾವೇ ಓದಿ ಆತನು ಉಚ್ಚರಿಸುವಂತೆ ಮಾಡಿದರು.

ಅರಮನೆ ನೌಕರರಿಗೆ ಕಿರುಕುಳ ತಪ್ಪಿಸುವಂತೆ ಸಂಘದ ಕರೆ

ಅರಮನೆ ನೌಕರರ ಸಂಘದ ಸದಸ್ಯರ ಸಭೆಯು ನೆನ್ನೆ ಕೋಟೆ ಮಾರಮ್ಮನಗುಡಿ ಆವರಣದಲ್ಲಿ ಶ್ರೀ ಕೆ. [illegible] ಸೀತಾರಾಂರವರ ಅಧ್ಯಕ್ಷತೆಯಲ್ಲಿ ನಡೆದು ನೌಕರರಿಗೆ ಆಡಳಿತ ವರ್ಗದವರು ಕೊಡುತ್ತಿರುವ ಕಿರುಕುಳಕ್ಕಾಗಿ ಖಂಡಿಸಲಾಯಿತು. "ಈ ವರ್ತನೆಯನ್ನು ನಿಲ್ಲಿಸಬೇಕೆಂದೂ, ಹಾಗೆ ಮಾಡದಿದ್ದರೆ ಸಂಘದವರು ಅನಿವಾರ್ಯವಾಗಿ ಉಗ್ರ ಕ್ರಮ ಕೈಗೊಳ್ಳಬೇಕಾಗುವುದೆಂದೂ ಎಚ್ಚರಿಸಲಾಯಿತು. ನೌಕರರ ಬೇಡಿಕೆಗಳ ವಿಚಾರವಾಗಿ ಸಂಘದ ಪ್ರತಿನಿಧಿಗಳನ್ನು ಅಧಿಕಾರಿಗಳು ಕೂಡಲೇ ಬರಮಾಡಿಕೊಂಡು ಒಪ್ಪಂದಕ್ಕೆ ದಾರಿ ಮಾಡಬೇಕೆಂದು ಒತ್ತಾಯ ಮಾಡಲಾಯಿತು

ಹರಿಕಥೆ

ನಗರದ ಸಿವಿಲ್ ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲಿರುವ ಶ್ರೀ ರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ಈ ಸಂಜೆ ೮ ಘಂಟೆಗೆ ವಿ॥ ಸುಬ್ಬರಾಮಯ್ಯನವರಿಂದ ಗೋಕರ್ಣ ಕ್ಷೇತ್ರ ಹಿರಿಮೆ ಎಂಬ ಕಥೆಯನ್ನು ಏರ್ಪಡಿಸಲಾಗಿದೆ.

ನಂಜನಗೂಡಿನಲ್ಲಿ ರಾಮೋತ್ಸವ

ನಂಜನಗೂಡಿನ ಶ್ರೀ ಸಂಜೀವ ಪೂರ್ಣಾಚಾರ್ಯರ ಬಾಲ ರಾಮ ಮಂದಿರದಲ್ಲಿ ಕಳೆದ ಹದಿನೈದು ದಿನಗಳಿಂದ ರಾಮೋತ್ಸವವನ್ನು ನಡೆಸಲಾಯಿತು ಅದರ ಅಂಗವಾಗಿ ಸಂಗೀತ, ಹರಿಕಥೆ, ಭಾರತ ವಾಚನ, ಭಜನ ಮುಂತಾದುವು ಜರುಗಿ, ಕಳೆದ ಸೋಮವಾರ ಪಟ್ಟಾಭಿಷೇಕ ನಡೆಯಿತು. ಸಂಜೆ ಉತ್ಸವವೂ ನಡೆಯಿತು ಅದೇ ಸಂದರ್ಭದಲ್ಲಿ ಮಂದಿರದ ಸದಸ್ಯರು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನದ ವೇ॥ ಬ್ರ॥ ಶ್ರೀ ಸದಾಶಿವ ದೀಕ್ಷಿತರು ಮಂದಿರಕ್ಕೆ ಸಲ್ಲಿಸಿರುವ ಸೇವೆಗಾಗಿ ಅವರಿಗೆ ರಾಮದೇವರ ವಿಗ್ರಹವನ್ನು ಕೆತ್ತಿರುವ ಚಿನ್ನದ ಪದಕವನ್ನು ಬಹುಮಾನವಾಗಿ ಕೊಟ್ಟರು ಅದನ್ನು ಶ್ರೀ ಬಿ ವಿ ಪಂಡಿತರು ದೀಕ್ಷಿತರಿಗೆ ಒಪ್ಪಿಸಿದರು

ಸ್ಟ್ಯಾಂಡರ್ಡ್ ಮಿಲ್ಕ್ ಡೈರಿ
ಕಾಲೇಜು ರಸ್ತೆ, ಮೈಸೂರು
ನಮ್ಮಲ್ಲಿ ತಾ॥ 1-5-57ರಿಂದ 10-5-57ರ ವರೆವಿಗೆ ಕೂಪನ್ ಕೊಳ್ಳುವವರಿಗೆ
[illegible]
ಅಪ್ಪಟ ಹಸುವಿನ ಹಾಲನ್ನು
ಪೌಂಡ್ ಒಂದಕ್ಕೆ ರೂ. 0-3-3ರಂತೆ ಕೊಡಲಾಗುತ್ತೆ
ಮತ್ತು ಮನೆಗಳಿಗೂ ಸಹ ಸಪ್ಲೈ ಮಾಡಲಾಗುತ್ತೆ
ಪ್ರೊಪ್ರೈಟರ್ : ಶ್ರೀ [illegible]

ವಿಶೇಷ ಪ್ರಕಟಣೆ
ಚಿತ್ರ ಪ್ರಪಂಚದಲ್ಲಿ ಹಿಂದೆಂದೂ ಕಾಣದಿದ್ದಂತಹ
ಅಭಿಪ್ರಾಯ ಹಾಗೂ
ಪ್ರಶಂಸನಾ ಘೋಷಣೆ !!! ಪ್ಯಾಸಾ
ಗುರುದತ್ತರ
ನಟ, ನಿರ್ದೇಶಕ, ನಿರ್ಮಾಪಕ, ಪ್ರಮುಖ ಕಾರ್ಯ ರೂಪಿಸಿದ ಗುರುದತ್ತರ ಕಲ್ಪನಾ ಚತುರತೆ ಪ್ಯಾಸಾ
ಎಸ್ ಡಿ ಬರ್ಮನ್‌ರವರ ಸಂಗೀತ, ಸಾಹಿರ್‌ರವರ ಸಾಹಿತ್ಯ—ಮಾಲಾ ಸಿನ್ಹ, ವಹೀದಾ ರೆಹಮಾನ್, ಗುರುದತ್ ರವರ ನಟನೆಗಳ ಕೌಶಲ್ಯ. ಪ್ಯಾಸಾ
ಅತ್ಯುನ್ನತ ಯೋಗ್ಯತೆಯ ಚಿತ್ರ ಮಹತ್ಕಾರ್ಯ

ಒಲಂಪಿಯಾ ● ಇದೇ 2.5.57ರಿಂದ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
೪ ವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ, ಫ್ರೀ ಪಾಸು ಮನಾ ಮಾಡಲಾಗಿದೆ.

ರಿಜಿಸ್ಟ್ರೀ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ



ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪುಟ : ೧೫] SADHVI : TUESDAY 30—4—1957 ಮೈಸೂರು : ಮಂಗಳವಾರ ೩೦—೪—೧೯೫೭ : [ಸಂಚಿಕೆ : ೨೩೪

ಜೋರ್ಡಾನಿನಲ್ಲಿ ಪ್ರವೇಶಿಸದಂತೆ ಅಮೆರಿಕಕ್ಕೆ ರಷ್ಯಾ ಎಚ್ಚರಿಕೆ

ಅರಮನೆ ನೌಕರರಿಗೆ ೫-೧೦ ರೂ.ನಂತೆ ಹೆಚ್ಚಿನ ವೇತನ

ನಿವೃತ್ತರಾಗುವವರಿಗೆ ಉದ್ಯೋಗ ದೊರಕಿಸಲು ಪ್ರಯತ್ನ

ಮೈಸೂರು ೩೦

ನಾಳೆ ನಿವೃತ್ತರಾಗುವ ೫೦೦ ನೌಕರರನ್ನುಳಿದು ಇತರ ೨೦೦ ಮಂದಿ ಅರಮನೆ ಗುಮಾಸ್ತರೇ ಮುಂತಾದ ಉದ್ಯೋಗಿಗಳಿಗೆ ತಲಾ ೧೦ ರೂ ನಂತೆಯೂ, ಜವಾನರೇ ಮುಂತಾದ ೬೦೦ ಮಂದಿ ಕೆಳ ದರ್ಜೆ ನೌಕರರಿಗೆ ತಲಾ ೫ ರೂ ನಂತೆಯೂ ಸಂಬಳವನ್ನು ಅರಮನೆಯವರು ಹೆಚ್ಚಿಸಿರುವರೆಂದೂ ಇದು ನಾಳೆಯಿಂದಲೇ ಜಾರಿಗೆ ಬರುವುದೆಂದೂ ಗೊತ್ತಾಗಿದೆ

ನಿವೃತ್ತಿಗೊಳಿಸಲಾಗುವ ನೌಕರರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಹಿಂದೂಸ್ಥಾನ ವಿಮಾನ ಕಾರ್ಖಾನೆ, ಸರ್ಕಾರದ ನಾನಾ ಇಲಾಖಾಧಿಕಾರಿಗಳು ಮತ್ತಿತರ ಸಂಸ್ಥೆಗಳವರನ್ನು ಅರಮನೆಯವರು ಕೋರಿದ್ದಾರೆಂದೂ ತಿಳಿದುಬಂದಿದೆ.

ಮೈಸೂರು ವಕೀಲರ ಸಂಘದ ಸುವರ್ಣೋತ್ಸವ

ಮೈಸೂರು ವಕೀಲರ ಸಂಘದ ಸುವರ್ಣೋತ್ಸವವು ಬರುವ ತಿಂಗಳು ೧೦ನೇ ತಾರೀಕು ನಡೆಯುವುದು. ಡಾ|| ಸಿ ಪಿ ರಾಮಸ್ವಾಮಿ ಅಯ್ಯರವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸಲು ಒಪ್ಪಿರುವರೆಂದು ತಿಳಿದುಬಂದಿದೆ

ಹರಿಕಥೆ

ನಗರದ ಸಿವಿಲ್ ಪೋಲೀಸ್ ಹೆಡ್ ಕ್ವಾರ್ಟರ್ಸಿನಲ್ಲಿರುವ ಶ್ರೀ ರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ಈ ಸಂಜೆ ೮ ಘಂಟೆಗೆ ವಿ|| ಸುಬ್ರಾಮಯ್ಯನವರಿಂದ ಭಕ್ತ ಶಕುಂತಲ ಎಂಬ ಕಥೆಯನ್ನು ಏರ್ಪಡಿಸಲಾಗಿದೆ.

ಸಂಸ್ಥಾನದಲ್ಲಿ ಬಸ್ ದರವನ್ನು ಇಳಿಸಲು ಸರ್ಕಾರಕ್ಕೆ ಮನವಿ

ನಂಜನಗೂಡು ಪುರಸಭೆಯ ನಿರ್ಣಯ

ಸ್ವಂ ಸು ಪೋ|] ನಂಜನಗೂಡು ೩೦

ಇಲ್ಲಿನ ಪುರಸಭೆಯ ಮಾಹೆಯಾನಾ ಅಧಿವೇಶನವು ಶ್ರೀ ಕೆ. ವೆಂಕಟಸುಬ್ಬೈರವರ ಅಧ್ಯಕ್ಷತೆಯಲ್ಲಿ ನೆನ್ನೆ ಸೇರಿ, ಸಂಸ್ಥಾನದಲ್ಲಿ ಬಸ್ ಪ್ರಯಾಣದ ದರವನ್ನು ಇತ್ತೀಚೆಗೆ ಹೆಚ್ಚಿಸಲು ನಿರ್ಧರಿಸಿರುವುದರಿಂದ ಬಡವರಿಗೆ ತುಂಬಾ ತೊಂದರೆಯಾಗಿದೆಯೆಂದೂ, ಅದರ ಬದಲು ಈಗಿನ ದರವನ್ನೇ ಕಡಿಮೆ ಮಾಡಬೇಕೆಂದೂ ಸರ್ಕಾರವನ್ನು ಕೋರುವ ನಿರ್ಣಯವನ್ನು ಮಾಡಲಾಯಿತು

ಅಧ್ಯಕ್ಷರಿಗೆ ಮಾಹೆಯಾನ ೧೦೦ ರೂ. ಮತ್ತು ಉಪಾಧ್ಯಕ್ಷರಿಗೆ ೫೦ ರೂ ನಂತೆ ಭತ್ಯವನ್ನು ಕೊಡಬೇಕೆಂಬ ಸೂಚನೆಯನ್ನು ವಿರೋಧಿಸಿ ಸದಸ್ಯರಾದ ಬಿ ಎನ್ ಎಸ್. ಆರಾಧ್ಯರು ಮಾತನಾಡಿ, ಪುರಸಭೆಗೆ ಉಪಾಧ್ಯಕ್ಷ ಸ್ಥಾನವೇ ಅನಾವಶ್ಯಕವೆಂದೂ ಮತ್ತು ಪುರಸಭೆಯ ಆರ್ಥಿಕ ಪರಿಸ್ಥಿತಿಯು ಚೆನ್ನಾಗಿಲ್ಲದಿರುವಾಗ ಉಪಾಧ್ಯಕ್ಷರಿಗೆ ಭತ್ಯವನ್ನು ಕೊಡಲಾಗದೆಂದೂ ತಿಳಿಸಿದರು ಅಧ್ಯಕ್ಷರಿಗೆ ಭತ್ಯ ಕೊಟ್ಟು ಉಪಾಧ್ಯಕ್ಷರಿಗೆ ಕೊಡದಿರುವುದು ಉಚಿತವಲ್ಲವೆಂದು ಅಧ್ಯಕ್ಷರು ಪ್ರತಿಪಾದಿಸಿದ ಮೇಲೆ ಸೂಚನೆಯನ್ನು ಒಪ್ಪಲಾಯಿತು.

ಪಿರಿಯಾಪಟ್ಟಣದಲ್ಲಿ ಅರಣ್ಯ ಸಂಪತ್ತಿನ ಕಳ್ಳ ರವಾನೆ ಆಪಾದನೆ

ಮಾಜಿ ಶಾಸನ ಸಭಾ ಸದಸ್ಯ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರರಿಗೆ ಶಿಕ್ಷೆ

ಮೈಸೂರು ೩೦

ಪಿರಿಯಾಪಟ್ಟಣ ತಾಲ್ಲೂಕು ಆಳಲೂರು, ಚಿಕ್ಕಮಾದನದಲ್ಲಿ ಸರ್ಕಾರಿ ಅರಣ್ಯಗಳಿಂದ ಸುಮಾರು ೧೬,೩೦೦ ರೂ ಬೆಲೆ ಬಾಳುವ ಮರದ ದಿಮ್ಮಿ ಮುಂತಾದ ಸಾಮಾನುಗಳನ್ನು ಕಳೆದ ೫೦-೫೧ನೇ ಇಸವಿಯಲ್ಲಿ ಅಕ್ರಮವಾಗಿ ಸಾಗಿಸಿದ್ದರೆಂಬ ಕಾರಣಕ್ಕಾಗಿ ವಿಧಾನ ಸಭೆಯ ಮಾಜಿ ಸದಸ್ಯ ಸಂಘಮಾಳು ಶ್ರೀ ಎಸ್ ಎಂ ಮರಿಯಪ್ಪ, ಜೋಗೇಗೌಡ ರೆವಿನ್ಯೂ ಇನ್ಸ್‌ಪೆಕ್ಟರ್ ಬಾಲಪ್ಪಾಚಾರಿ, ಪುಟ್ಟರಾಮಯ್ಯ, ಟಿ ವಿ. ನಾಥ ಮತ್ತು ಸಿಂಗಪ್ಪನವರ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ನಮ್ಮ ಸಿವಿಲ್ ನ್ಯಾಯಾಧೀಶರಾದ ಶ್ರೀ ಅಬ್ದುಲ್ ಮಜೀದ್ ರವರು ಶ್ರೀ ಮರಿಯಪ್ಪನವರಿಗೆ ೭ ಕಲ್ಪಿತಗಳಿಗಾಗಿ ೭ ತಿಂಗಳ ಕಠಿಣ ಸಜಾ ಮತ್ತು ೧,೪೦೦ ರೂ. ದಂಡವನ್ನೂ, ಶ್ರೀ ಬಾಲಪ್ಪಾಚಾರ್ಯರಿಗೆ ೫ ತಿಂಗಳ ಕಠಿಣ ಸಜಾ ಮತ್ತು ೧೨೫ ರೂ. ದಂಡವನ್ನೂ ವಿಧಿಸಿದರು ಉಳಿದವರನ್ನು ಖುಲಾಸೆ ಮಾಡಲಾಯಿತು. ಮೊಕದ್ದಮೆ [illegible] ೧೯೫೦ರಲ್ಲಿ ಹೂಡಲ್ಪಟ್ಟಿತ್ತು ೧೯೫೦ರಲ್ಲಿ ಆಪಾದಿತರನ್ನು ಸೆಷನ್ಸಿಗೆ ಗುರಿಪಡಿಸಲಾಗಿತ್ತು

ಶಿಕ್ಷೆಗೆ ಗುರಿಯಾದವರು ಅಪೀಲು ಮಾಡುವರೆಂದು ಕೋರ್ಟಿಗೆ ತಿಳಿಸಿ ಅವರನ್ನು ಜಾಮೀನಿನ ಮೇಲೆ ಬಿಡಲು ಅರ್ಜಿ ಕೊಡಲಾಗಿ ಅದರ ಮೇರೆ ಜಾಮೀನು ಕೊಡಲಾಯಿತು

ಸಂಗೀತ

ಹೊಸಕೇರಿ ಶ್ರೀ ಸೀತಾರಾಮ ಮಂದಿರದಲ್ಲಿ ಜಯಂತ್ಯೋತ್ಸವದ ಪ್ರಯುಕ್ತ ಈ ಸಂಜೆ ೭ ಗಂಟೆಗೆ ಕುಮಾರಿ ಗಿರಿಜಾರವರ ಸಂಗೀತವು ನಡೆಯುವುದು

ಮಧ್ಯ ಪೂರ್ವದಲ್ಲಿ ಕಮ್ಯೂನಿಸ್ಟ ಪ್ರಭಾವಕ್ಕೆಡೆಯಿಲ್ಲ

ಜೋರ್ಡಾನ್ ದೊರೆಯ ಸಂದೇಶ

ಜೋರ್ಡಾನಿನ ದೊರೆ ಹುಸೇನರವರು ತಮ್ಮ ಜನತೆಗೆ ಸಂದೇಶವಿತ್ತು, ಮಧ್ಯ ಪೂರ್ವದಲ್ಲಿ ಕಮ್ಯೂನಿಸ್ಟ್ ಪ್ರಭಾವಕ್ಕೆ ಎಡೆಯೇ ಇಲ್ಲವೆಂದು ತಿಳಿಸಿರುವುದಾಗಿ ಲಂಡನ್ನಿನ ನ್ಯೂಸ್ ಆಫ್ ದಿ ವರ್ಲ್ಡ್ ಪತ್ರಿಕೆಯು ವರದಿ ಮಾಡಿದೆ ದೊರೆಯು ಅರೇಬಿಯದ ಕಾಲೀದ್‌ರವರೊಡನೆ ಸಂಭಾಷಣೆ ನಡೆಸಿ ತಮ್ಮ ರಾಜಧಾನಿಗೆ ಹಿಂದಿರುಗುತ್ತಿದ್ದರೆ ಜೋರ್ಡಾನಿನಲ್ಲಿ ದೊರೆಗೂ, ರಾಜಕೀಯ ಪಕ್ಷಗಳಿಗೂ ನಡುವೆ ಇರುವ ಬಲ ಪರೀಕ್ಷೆಯನ್ನು ಕೊನೆಗಾಣಿಸುವ ಬಗ್ಗೆ ಉಭಯ ದೊರೆಗಳು ಸಂಭಾಷಣೆ ನಡೆಸಿದರೆಂದೂ, ಇಬ್ಬರಿಗೂ ಒಮ್ಮತ ಬಂದುದಾಗಿಯೂ ವರದಿಯಾಗಿದೆ [illegible] ಹುಸೇನರು ತಮ್ಮ ವಿರೋಧ ಪಕ್ಷಗಳಿಗೆ [illegible] ಬದ್ಧರಾಗಿರುವರೆಂದು ಹೇಳಲಾಗಿದೆ

ಜೋರ್ಡಾನಿಗೆ ೧ ಕೋಟಿ ಡಾಲರ್ ಸಹಾಯ ನೀಡಲು ಅಮೆರಿಕವು ಮುಂದೆಬಂದಿದೆ

ಅಮೆರಿಕಾ, ಇಸ್ರೇಲ್ ಮತ್ತು ಇರಾಕುಗಳಿಗೆ ರಷ್ಯಾ ಎಚ್ಚರಿಕೆ

ಜೋರ್ಡಾನ್ ವ್ಯವಹಾರದಲ್ಲಿ ಪ್ರವೇಶಿಸದಿರುವಂತೆ ಸೂಚನೆ

ಪಶ್ಚಿಮ ರಾಷ್ಟ್ರಗಳು, ಮುಖ್ಯವಾಗಿ ಅಮೆರಿಕಾ ಇಸ್ರೇಲ್ ಮತ್ತು ಇರಾಕಿನ ತೀವ್ರವಾದಿಗಳು ಜೋರ್ಡಾನಿನ ವ್ಯವಹಾರಗಳಲ್ಲಿ ಪ್ರವೇಶಿಸಕೂಡದೆಂದು ರಷ್ಯವು ಎಚ್ಚರಿಕೆಯಿತ್ತಿದೆ ಅಮೆರಿಕದ ಆರನೇ ನೌಕಾ ಪಡೆಯ ಭೂಮಧ್ಯ ಸಮುದ್ರ ಸಂಚಾರವನ್ನು ಕುರಿತು, ಇದು ಅರಬ್ ರಾಷ್ಟ್ರಗಳ ಮುಂದೆ ಅಮೆರಿಕದ ಬಲ ಪ್ರದರ್ಶನ ಮಾಡಿದಂತಾಗುವುದೆಂದೂ, ಅದರಿಂದ ಆ ಪ್ರದೇಶದ ಪರಿಸ್ಥಿತಿಯು ಮತ್ತಷ್ಟು ಪ್ರಕ್ಷುಬ್ಧವಾಗುವುದೆಂದೂ ರಷ್ಯವು ತಿಳಿಸಿದೆ

ಶಂಕರ ಜಯಂತಿ ಉತ್ಸವ

ಮೈಸೂರು ೩೦

ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಇಂದಿನಿಂದ ಬರುವ ತಿಂಗಳ ೧೧ನೇ ತಾರೀಕು ಪೂರ್ತಾ ಜಯಂತಿ ಉತ್ಸವವನ್ನು ನಡೆಸಲಾಗುವುದು ೮ನೇ ತಾರೀಕಿನವರೆಗೆ ನಿತ್ಯವೂ ಪ್ರಾತಃಕಾಲ ೮ ಗಂಟೆಗೆ ಶ್ರೀ ನಯನೇಶ್ವರಸ್ವಾಮಿ ದೇವಸ್ಥಾನದಲ್ಲಿ ಏಕಾದಶವಾರ ರುದ್ರಾಭಿಷೇಕ, ವೇದ, ಪ್ರಸ್ಥಾನತ್ರಯ ಭಾಷ್ಯ, ಶಂಕರ ವಿಜಯ ಪಾರಾಯಣಗಳಿವೆ. ಶ್ರೀಮನ್ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಈ ಸಂಜೆ ೬-೩೦ಕ್ಕೆ ಆ|| ವಿ|| ಎಸ್. ವಿಠ್ಠಲ ಶಾಸ್ತ್ರಿಗಳವರಿಂದ ಬ್ರಹ್ಮ ಕಾರಣತ್ವ ಮತ್ತು ನಾಳೆ ಸಂಜೆ ೬||ಗೆ ಆ|| ವಿ|| ಎ. ಎಸ್ ರಾಮಚಂದ್ರ ಶಾಸ್ತ್ರಿಗಳವರಿಂದ ಜೀವ ಬ್ರಹ್ಮೈಕ್ಯ ಎಂಬ ವಿಚಾರವಾಗಿ ಉಪನ್ಯಾಸಗಳು ಇವೆ.

ಚಾಮುಂಡಿಪುರದಲ್ಲಿರುವ ಶ್ರೀ ಪ್ರಸನ್ನ ವಿಶ್ವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಮೇ ತಿಂಗಳು ೧೧ನೇ ತಾರೀಕು ಪೂರ್ತಾ ಜಯಂತಿ ಮಹೋತ್ಸವವನ್ನು ಏರ್ಪಡಿಸಲಾಗಿದೆ. ನಿತ್ಯವೂ ಬೆಳಿಗ್ಗೆ ಅಭಿಷೇಕ, ಅರ್ಚನೆ, ಮಹಾ ಮಂಗಳಾರತಿಗಳೂ, ಇಂದಿನಿಂದ ೮ನೇ ತಾರೀಕಿನವರೆಗೆ ಪ್ರತಿದಿನ ಬೆಳಿಗ್ಗೆ ೮ ಗಂಟೆಗೆ ಆ|| ವಿ|| ಪಾರಸೂಕರ ಚಂದ್ರಶೇಖರ ಭಟ್ಟರಿಂದ ಭಾಷ್ಯಪ್ರವಚನವೂ ಅಲ್ಲದೆ ನಿತ್ಯವೂ ಸಂಜೆ ೭ ಗಂಟೆಗೆ ವಿ|| ಲಕ್ಷ್ಮೀಪತಿ ಶಾಸ್ತ್ರಿಗಳು ಶಂಕರವಿಜಯ ಕಥಾನುವಾದ ಮಾಡುವರು ೮ನೇ ತಾರೀಕು ಬೆಳಿಗ್ಗೆ ೮|| ಗಂಟೆಗೆ ಶ್ರೀ ಆಚಾರ್ಯರ ಉತ್ಸವವೂ, ೧೧ನೇ ತಾರೀಕು ಆರಾಧನೆಯೂ ಇವೆ ಆಸ್ತಿಕ ಮಹಾಜನರು ಭಾಗವಹಿಸುವಂತೆ ಕೋರಲಾಗಿದೆ.

ಸಂಸ್ಥಾನದ ಆಹಾರದ "ಬಜೆಟ್ಟು"

ಕೇಂದ್ರ ಸರ್ಕಾರಕ್ಕೆ ವಿವರಣೆ

ಬೆಂಗಳೂರು ೩೦

ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಸದ್ಯದಲ್ಲೇ ಇದೇ ಮೊಟ್ಟ ಮೊದಲಾಗಿ ಆಹಾರದ ಬಜೆಟ್ಟ'ನ್ನು ಒಪ್ಪಿಸುವರೆಂದು ತಿಳಿದುಬಂದಿದೆ ಪುನರ್ರಚಿತವಾದ ಸಂಸ್ಥಾನದಲ್ಲಿ ಆಹಾರದ ಸರಬರಾಜು, ಬೆಳೆ ಮತ್ತು ಬೇಡಿಕೆಗಳ ಬಗ್ಗೆ ವಿವರಣೆಗಳನ್ನು ಅದರಲ್ಲಿ ತಿಳಿಸಲಾಗುವುದೆಂದು ಗೊತ್ತಾಗಿದೆ

ಮೇ ೪ರಂದು ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ

ಮೈಸೂರು ೩೦

ಈ ವರ್ಷದ ಎಸ್ ಎಸ್ ಎಲ್. ಸಿ ಪರೀಕ್ಷೆಯ ಫಲಿತಾಂಶಗಳು ಮೇ ತಿಂಗಳು ೪ನೇ ತಾರೀಕು ಬೆಳಿಗ್ಗೆ ೯|| ಗಂಟೆಗೆ ಪ್ರಕಟವಾಗುವುವು.

ಡಿವಿಜನಲ್ ಕಮೀಷನರುಗಳ ಸಮ್ಮೇಳನ

ಅಭಾವ ಕ್ಷೇತ್ರಗಳ ಪರಿಸ್ಥಿತಿಯ ಪರಿಶೀಲನೆ

ಸ್ವಂ ಸು. ಸಂ] ಬೆಂಗಳೂರು ೩೦

ಸಂಸ್ಥಾನದ ಡಿವಿಜನಲ್ ಕಮೀಷನರುಗಳ ಸಭೆಯು ಈ ದಿನ ರೆವಿನ್ಯೂ ಸಚಿವ ಶ್ರೀ ಎಂ. ಸಿ. ಪಾಟೀಲರ ನೇತೃತ್ವದಲ್ಲಿ ಸೇರಿ ಬೆಳಗಾಂ, ಬಿಜಾಪುರ ಮತ್ತು ಗುಲ್ಬರ್ಗಾ ಪ್ರದೇಶಗಳಲ್ಲಿ ಮಳೆಯ ಅಭಾವದಿಂದ ಉಂಟಾಗಿರುವ ಪರಿಸ್ಥಿತಿ ಮತ್ತು ರೆವಿನ್ಯೂ ವಸೂಲಿಯನ್ನು ಕುರಿತು ಚರ್ಚಿಸಲಾಯಿತು. ಕೇಂದ್ರ ಸರ್ಕಾರದವರು ಸಂಸ್ಥಾನಕ್ಕೆ ಸರಬರಾಜು ಮಾಡಿರುವ ಆಹಾರ ಧಾನ್ಯವನ್ನು ಮಾರುವ ಬಗ್ಗೆ ಸಂಸ್ಥೆಗಳನ್ನು ಸ್ಥಾಪಿಸುವ ವಿಷಯವೂ ಚರ್ಚಿಸಲ್ಪಟ್ಟಿತು.

ಸಾಹಿತ್ಯಾಕಾಂಕ್ಷಿ ಮಿತ್ರ ವರ್ಗದ ವಾರ್ಷಿಕೋತ್ಸವ

ಚಾಮುಂಡಿಪುರದಲ್ಲಿರುವ ಸಾಹಿತ್ಯಾಕಾಂಕ್ಷಿ ಮಿತ್ರವರ್ಗದ ೬ನೇ ವಾರ್ಷಿಕೋತ್ಸವವು ನಾಳೆ ಸಂಜೆ ೬|| ಗಂಟೆಗೆ ಕನ್ನಡ ಕವಿಗಳಾದ ಶ್ರೀ ಎಂ. ಗೋಪಾಲಕೃಷ್ಣ ಅಡಿಗರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಸುಪ್ರಸಿದ್ಧ ಲೇಖಕಿ ಶ್ರೀಮತಿ ತ್ರಿವೇಣಿಯವರು ಭಾಷಣ ಮಾಡುವರು.

ಅಮೆರಿಕದಲ್ಲಿ ಪ್ರವಾಹದ ನಷ್ಟ

ಅಮೆರಿಕದ ಟೆಕ್ಸಾಸ್ ನದಿಯ ಪ್ರದೇಶದಲ್ಲಿ ಭಾರಿ ಮಳೆಯಾಗಿ ಮೊದಲೇ ತುಂಬಿ ಹರಿಯುತ್ತಿದ್ದ ನದಿಗೆ ಮತ್ತಷ್ಟು ಪ್ರವಾಹವು ಬಂದು ಆ ಪ್ರದೇಶದ ಜನರಿಗೆ ೧೫೦ ಲಕ್ಷ ಡಾಲರಿನ ನಷ್ಟವು ಸಂಭವಿಸಿರುವುದಾಗಿ ವರದಿಯಾಗಿದೆ.

ರಷ್ಯದ ಅಧಿಕಾರಿಯ ಉಚ್ಚಾಟನೆ

ರಷ್ಯದ ಜನತಾ ಸಾಂಸ್ಕೃತಿಕ ಇಲಾಖೆಯ ಮುಖ್ಯಾಧಿಕಾರಿ ಅಂತ್ರಿ ತೆನಿಸಾವ್‌ರವರನ್ನು ಆ ಪದ ಸ್ಥಾನದಿಂದ ತೆಗೆಯಲಾಗಿದೆ ಆ ಸ್ಥಾನಕ್ಕೆ ಮಾನ ಪೊಪಾವ ಎಂಬ ಮಹಿಳೆಯನ್ನು ನೇಮಿಸಲಾಗಿದೆ ತೆನಿಸಾವ್‌ರವರು ನ್ಯಾಯ ಶಾಸ್ತ್ರದಲ್ಲಿ ಪಾರಂಗತರೆಂದೂ, ಅನೇಕ ವರ್ಷ ಕಾಲ ಆ ಸಂಸ್ಥೆಯ ಅಧ್ಯಕ್ಷರಾಗಿದ್ದರೆಂದೂ ಹೇಳಲಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ ೭-೧೫ ಮತ್ತು ೮-೧೫ ರಾಜಮ್ಮ ಕೇಶವಮೂರ್ತಿ—ದೇವರ ನಾಮ. ೭-೩೦ ಹಿಂದಿ ಪಾಠ ಮಧ್ಯಾಹ್ನ ೧೨ ಮತ್ತು ೧-೫೦ ಎಂ ಸಿ. ಪುಟ್ಟಣ್ಣ—ಪಿಟೀಲು. ೧೨-೩೦ ರಾಜಮ್ಮ ಕೇಶವಮೂರ್ತಿ— ಸಂಗೀತ. ೧ [illegible] ಸಂಗೀತ. ಸಂಜೆ ೬-೧೦ ಕನ್ನಡ ಗೀತೆಗಳು. ೭-೩೦,೮ ಮತ್ತು ೮-೫೦ ಎಸ್. ಶ್ರೀನಿವಾಸ— ನಾಗಸ್ವರ. ೮-೩೦ ರಾಷ್ಟ್ರೀಯ ಕಾರ್ಯಕ್ರಮ. ೯-೧೫ ನಾವು ಮತ್ತು ನಮ್ಮವರು. ೯-೩೦ ವಿ ರಾಮರತ್ನಂ-ಸಂಗೀತ.

ನಗರದಲ್ಲಿ ಸೊಳ್ಳೆಗಳ ಕಾಟ ತಪ್ಪಿಸಲು ಪೌರಸಭೆಗೆ ಒತ್ತಾಯ

ಸತ್ಯಾಗ್ರಹ ನಡೆಸುವುದಾಗಿಯೂ ಮಾಜಿ ಪೌರಸಭಾಧ್ಯಕ್ಷರ ಹೇಳಿಕೆ

ಮೈಸೂರು ೩೦

ಪುರಸಭೆಯ ಸಾಧಾರಣ ಅಧಿವೇಶನವು ನೆನ್ನೆ ಮಧ್ಯಾಹ್ನ ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಪ್ರಾರಂಭದಲ್ಲಿ ಹಲವಾರು ಸದಸ್ಯರು ನಾನಾ ಕುಂದುಕೊರತೆಗಳನ್ನು ಅಧ್ಯಕ್ಷರ ಗಮನಕ್ಕೆ ತಂದು ಪುರಸಭೆಯ ಅನೇಕ ಮೊಕದ್ದಮೆಗಳು ಕೆಟ್ಟುಹೋಗಿರುವುದರಿಂದ ಕಾನೂನುಗಳನ್ನು ಬಿಗಿಗೊಳಿಸುವುದರಲ್ಲೇ ಮೂಲಭೂತ ವಿವ ತಪ್ಪಿರಬೇಕೆಂದೂ, ಅವುಗಳನ್ನು ಸರಿಪಡಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದೂ ಶ್ರೀ ಶ್ರೀಕಂಠಕುಮಾರರವರು ಸಲಹೆ ಮಾಡಿದರು.

ಮಹಾ ಚುನಾವಣೆಗಳ ಪ್ರಯುಕ್ತ ಕಾಲಾವಕಾಶವಿಲ್ಲದಿದ್ದುದರಿಂದ ಬೈಲಾ ಸಮಿತಿಯವರು ಸಭೆ ಸೇರಲಾಗಿರಲಿಲ್ಲವೆಂದೂ, ಇನ್ನು ಮುಂದೆ ಈ ಕಾರ್ಯವನ್ನು ಆರಂಭಿಸಲಾಗುವುದೆಂದೂ ಅಧ್ಯಕ್ಷರು ಉತ್ತರವಾಗಿ ತಿಳಿಸಿದರು

ಅರಮನೆಯಲ್ಲಿ ೩೦೦ ಮಂದಿ ನೌಕರರನ್ನು ನಿವೃತ್ತಿ ಮಾಡುವುದನ್ನು ತಪ್ಪಿಸುವ ಬಗ್ಗೆ ಪುರಸಭೆಯು ಏನಾದರೂ ಕ್ರಮ ಕೈಗೊಳ್ಳಬೇಕೆಂದು ಶ್ರೀ ವಾರ್‌ನೂರ್ ಹುಸೇನರು ಸಲಹೆ ಮಾಡಿದರು. ಸರ್ಕಾರದವರು ಈ ಬಗ್ಗೆ ಭರವಸೆಯಿತ್ತಿದ್ದಾರೆಂದೂ, ಆದ್ದರಿಂದ ಈ ವಿಷಯದಲ್ಲಿ ಪುರಸಭೆಯ ಪ್ರವೇಶವು ಅನಾವಶ್ಯಕವೆಂದೂ ಅಧ್ಯಕ್ಷರು ತಿಳಿಸಿದರು.

ಶ್ರೀ ಎಂ. ಕೆ. ಲಿಂಗಯ್ಯನವರು ಮಾತನಾಡಿ, ಮನೆಗಳನ್ನು ಕಟ್ಟಲು ರಹದಾರಿ ಪಡೆದ ಮೇಲೆ ಪುರಸಭೆಯಿಂದ ಸಿಮೆಂಟ್ ಪಡೆಯಲು ಜಿಲ್ಲಾಧಿಕಾರಿಗಳಿಂದ ರಹದಾರಿ ಪಡೆಯಬೇಕಾಗಿರುವುದರಿಂದ ಉಂಟಾಗಿರುವ ತೊಂದರೆಯನ್ನು ತಪ್ಪಿಸಿ ಪುರಸಭೆಯವರೇ ನೇರವಾಗಿ ಸಿಮೆಂಟನ್ನು ಹಂಚಬೇಕೆಂದು ಮಾಡಿದ ಸಲಹೆಯನ್ನು ಕಮಿಷನರು ಒಪ್ಪಿದರು.

ಬಡವರ ವಾಹನವಾದ ಸೈಕಲ್ಲಿನ ಮೇಲೆ ತೆರಿಗೆಯನ್ನು ರದ್ದುಗೊಳಿಸಬೇಕೆಂದು ಶ್ರೀ ಅಜೀಜ್ ಸೇಟರು ಸೂಚಿಸಿದಾಗ, ಆ ವಿಷಯವನ್ನು ಈಗಲೇ ಒಂದು ಬಾರಿ ಪರಿಶೀಲಿಸಿ ಹಾಗೆ ಮಾಡುವುದು ಸಾಧ್ಯವಿಲ್ಲವೆಂದು ತಿಳಿಸಿರುವ ಅಂಶವನ್ನು ಅಧ್ಯಕ್ಷರು ಸದಸ್ಯರ ಗಮನಕ್ಕೆ ತಂದರು.

ಅನಂತರ ಸಭೆಯು ಸಾಮಾನ್ಯ ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಂಡಿತು. ನಗರದಲ್ಲಿ ಇನ್ನೂ ಸೊಳ್ಳೆ ಕಾಟವು ನಿವಾರಣೆಯಾಗದಿರುವ ಬಗ್ಗೆ ಸದಸ್ಯರು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು ಮಾಜಿ ಅಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಮಾತನಾಡಿ ಸೊಳ್ಳೆಗಳ ಕಾಟವನ್ನು ನಿವಾರಿಸಲು ಬಹಳ ಕಾಲದಿಂದಲೂ ತಮ್ಮ ಮೊಹಲ್ಲಾ ನಿವಾಸಿಗಳು ಪುರಸಭೆಯನ್ನು ಬೇಡಿಬೇಡಿ ಬೇಸರಪಟ್ಟುಕೊಂಡಿರುವರೆಂದೂ, ಅವರಿಗೆ ಸರಿಯಾದ ಸೌಕರ್ಯವನ್ನು ಒದಗಿಸದಿರುವ ಪುರಸಭೆಗೆ ಕಂದಾಯವನ್ನು ಏಕೆ ಕೊಡಬೇಕೆಂದು ಕೇಳಲಾರಂಭಿಸಿದ್ದಾರೆಂದೂ, ಅವರ ಬೇಡಿಕೆಯು ಈಡೇರದಿದ್ದರೆ ಕರ ನಿರಾಕರಣ ಚಳುವಳಿಯನ್ನೇ ಸಂಘಟಿತವಾಗಿ ಆರಂಭಿಸಲಾಗುವುದೆಂದೂ, ಯಾರಾದರೂ ಬರಲಿ ಅಥವಾ ಬಿಡಲಿ, ತಾವು ಅದರ ನಾಯಕತ್ವವನ್ನು ವಹಿಸುವುದಾಗಿಯೂ ಅವರು ಹೇಳಿದರು. ಅವರು ಯಾವಾಗ ಚಳುವಳಿಯನ್ನು ಆರಂಭಿಸುತ್ತಾರೆಂದು ತಿಳಿದರೆ ತಾವೂ ಅದಕ್ಕೆ ಸೇರುವುದಾಗಿ ಡಾ|| ಬಿ ಜಿ ದಾಸರು ತಿಳಿಸಿದಾಗ ಸಭೆಯು ನಗೆಯಲ್ಲಿ ಮುಳುಗಿತು "ಇದು ಶ್ರೀ ದಾಸರ ಸತ್ಯಾಗ್ರಹದಂತಲ್ಲ" ಎಂದು ಶ್ರೀ ರಾಯರು ಪ್ರತಿ ಜವಾಬು ಕೊಟ್ಟರು

ಮಂಡಿ ಮತ್ತು ಲಷ್ಕರ್ ಮೊಹಲ್ಲೆಯ ಹೆಣ್ಣು ಮಕ್ಕಳಿಗೆ ಅನುಕೂಲವಾಗುವಂತೆ ಒಂದು ಮಾಧ್ಯಮಿಕ ಶಾಲೆಯನ್ನು ಕೂಡಲೇ ತೆರೆಯಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯವೊಂದನ್ನು ಶ್ರೀ ಹೆಚ್. ಎಸ್. ಮುದ್ದಯ್ಯನವರು ಮಂಡಿಸಿದರು ಶ್ರೀ ಗೋವಿಂದಯ್ಯನವರು ಅನುಮೋದಿಸಿದರು ಶಾಲೆಯನ್ನು ಮಂಡಿ ಮೊಹಲ್ಲೆಯಲ್ಲಿ ತೆರೆಯಬೇಕೆಂಬ ಶ್ರೀ ಎಂ ಕೆ ಲಿಂಗಯ್ಯನವರ ತಿದ್ದುಪಡಿಯೊಡನೆ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಹೊಸ ಸ್ಟ್ಯಾಚ್ಯು ಚೌಕಕ್ಕೆ ಸಿಮೆಂಟ್ ಕಾಂಕ್ರೀಟ್ ಮಾಡಿಸಲು ೪೯೩೦೦ ರೂ ಖರ್ಚಿನ ಅಂದಾಜೊಂದನ್ನು ಸಭೆಯು ಒಪ್ಪಿ, ಸರ್ಕಾರದವರೂ ಮತ್ತು ನಗರಾಭಿವೃದ್ಧಿ ಸಮಿತಿಯವರೂ ಆ ಖರ್ಚಿನಲ್ಲಿ ಒಂದೊಂದು ಭಾಗವನ್ನು ವಹಿಸಲು ಕೋರಬೇಕೆಂದು ತೀರ್ಮಾನಿಸಲಾಯಿತು

ಭಾರತದ ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವವನ್ನು ಆಚರಿಸಬೇಕಾದ ರೀತಿಯ ಬಗ್ಗೆ ಸಲಹೆ ಮಾಡಲು ಅಧ್ಯಕ್ಷರ ನೇತೃತ್ವದಲ್ಲಿ ಶ್ರೀಗಳಾದ ಟಿ ನರಸಿಂಹಯ್ಯಂಗಾರ್, ಎ ಕೃಷ್ಣಮೂರ್ತಿರಾವ್, ಕೆಂಪೇಗೌಡ, ಬಿ. ಕೆ. ರಾಮಕೃಷ್ಣಯ್ಯ ಮತ್ತು ಬಿ ಕೆ. ಪುಟ್ಟಯ್ಯನವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು.

ಇತ್ತೀಚೆಗೆ ರಾಷ್ಟ್ರಾಧ್ಯಕ್ಷರಿಂದ ಪ್ರಶಸ್ತಿ ಪಡೆದ ಸಂಗೀತರತ್ನ ಶ್ರೀ ಟಿ. ಚೌಡಯ್ಯನವರನ್ನು ಸನ್ಮಾನಿಸಲು ನಡೆಸುವ ಸಮಾರಂಭಕ್ಕಾಗಿ ೮೦೦ ರೂ. ಗಳನ್ನು ಮಂಜೂರು ಮಾಡಲಾಯಿತು.

ಪಾಕಿಸ್ತಾನ ಭದ್ರತಾ ಶಾಸನದ ಅವಧಿಯ ವಿಸ್ತರಣೆ

ಪಾಕಿಸ್ತಾನದಲ್ಲಿ ಜಾರಿಯಲ್ಲಿರುವ ಭದ್ರತಾ ಶಾಸನವನ್ನು ಈ ದಿನದಿಂದ ಇನ್ನೂ ಒಂದು ವರ್ಷ ಕಾಲ ಜಾರಿಯಲ್ಲಿರುವಂತೆ ಅಲ್ಲಿನ ಅಧ್ಯಕ್ಷರು ಆಜ್ಞೆ ಮಾಡಿರುತ್ತಾರೆ ಶಾಸನದ ಪ್ರಕಾರ ಯಾವ ಮನುಷ್ಯನನ್ನಾದರೂ ವಿಚಾರಣೆಯಿಲ್ಲದೆ ಬಂಧಿಸಲು ಅವಕಾಶವಿದೆ

ಪೂನಾ ಮರಾಠಿಯವರಿಂದ "ಬೆಳಗಾಂ" ದಿನಾಚರಣೆ

ಪೂನಾ ನಗರದಲ್ಲಿ ನೆನ್ನೆ ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ಬೆಳಗಾಂ ಕಾರವಾರ ದಿನಾಚರಣೆಯನ್ನು ನಡೆಸಿದರು. ಬೆಳಗಾಂ, ಕಾರವಾರ, ನಿಪ್ಪಾಣಿ ಮತ್ತು ಇತರ ಮರಾಠಿ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸುವ ವಿಚಾರವನ್ನು ಪಶ್ಚಿಮ ವಲಯ ಮಂಡಲವು ನಿರ್ಧರಿಸಬೇಕೆಂದೂ, ಅದಕ್ಕೆ ಹಳ್ಳಿಯನ್ನೇ ಆಧಾರವಾಗಿಟ್ಟುಕೊಳ್ಳಬೇಕೆಂದೂ ನಿರ್ಣಯ ಮಾಡಲಾಯಿತು

ಮದ್ರಾಸು ಗ್ರಾಮಾಧಿಕಾರಿಗಳಿಂದ ನೇರ ಕಾರ್ಯಾಚರಣೆ

ಹತ್ತು ದಿನಗಳಲ್ಲಿ ಸರ್ಕಾರದವರು ತಮ್ಮ ಕುಂದುಕೊರತೆಗಳನ್ನು ಈಡೇರಿಸದಿದ್ದಲ್ಲಿ ಮೇ ೧೫ರಿಂದ ನೇರ ಕಾರ್ಯಾಚರಣೆ ನಡೆಸಬೇಕೆಂದು ಮೊನ್ನೆ ತಿರುಚ್ಚಿಯಲ್ಲಿ ಸೇರಿದ್ದ ಮದ್ರಾಸು ಗ್ರಾಮಾಧಿಕಾರಿಗಳ ಸಭೆಯಲ್ಲಿ ನಿರ್ಧರಿಸಲಾಯಿತು. ಆರುನೂರು ಮಂದಿ ಗ್ರಾಮಾಧಿಕಾರಿಗಳು ಭಾಗವಹಿಸಿದ್ದರು. ಜಮಾಬಂದಿಗಳಲ್ಲಿ ಭಾಗವಹಿಸದಿದ್ದ ಗ್ರಾಮಾಧಿಕಾರಿಗಳ ಮೇಲೆ ಕೈಗೊಳ್ಳಲಾಗಿರುವ ಕ್ರಮಗಳನ್ನು ವಾಪಸು ಪಡೆಯಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಲಾಯಿತು ಒಬ್ಬ ಗ್ರಾಮಾಧಿಕಾರಿಯ ಅಧಿಕಾರಕ್ಕೆ ನಾಲ್ಕೈದು ಗ್ರಾಮಗಳನ್ನು ಕೊಡಬೇಕೆಂದು ರೆವಿನ್ಯೂ ಮಂತ್ರಿಯವರು ಮಾಡಿರುವ ಸಲಹೆಯನ್ನು ಜಾರಿಗೆ ತಂದರೆ ಗ್ರಾಮಾಡಳಿತವು ಹಾಳಾಗುವುದೆಂದು ಸಭೆಯು ಅಭಿಪ್ರಾಯಪಟ್ಟಿತು

ಜಯಪುರದ ಮಹಾರಾಜರಿಗೆ ಗವರ್ನರ್‌ಗಿರಿ

ಜಯಪುರದ ಮಹಾರಾಜರನ್ನು ಉತ್ತರ ಪ್ರದೇಶದ ಗವರ್ನರರನ್ನಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ ಈ ಬಗ್ಗೆ ಮಹಾರಾಜರನ್ನು ಒಪ್ಪಿಸಲಾಗುವುದೆಂದೂ ಹೇಳಲಾಗಿದೆ ಅಲ್ಲಿನ ಗವರ್ನರ್ ಕೆ. ಎಂ ಮುನ್ಷಿಯವರಿಗೆ ಬೇರೆ ಹುದ್ದೆಯನ್ನು ಕೊಡಲಾಗುವುದೆಂದು ವರದಿಯಾಗಿದೆ

ಕೊಕ್ಕೊ ಪಂದ್ಯ

ನಗರದ ಕೃಷ್ಣಮೂರ್ತಿಪುರದ ಕ್ರೀಡಾ ಕೇಂದ್ರದ ಆಶ್ರಯದಲ್ಲಿ ಮೊನ್ನೆ ನರಸಿಂಹರಾಜ ಮೊಹಲ್ಲಾ ಕೇಂದ್ರ ಮತ್ತು ಕೃಷ್ಣಮೂರ್ತಿಪುರದ ಕೇಂದ್ರಗಳ ನಡುವೆ ಕೊಕ್ಕೊ ಪಂದ್ಯವು ನಡೆದು ಕೃಷ್ಣಮೂರ್ತಿಪುರದವರು ಜಯಗಳಿಸಿದರು ಬಾಲಕಿಯರ ವಿಭಾಗದ ಕೋಡಿ ಪಂದ್ಯದಲ್ಲಿಯೂ ಕೃಷ್ಣಮೂರ್ತಿಪುರದವರು ಜಯಪಡೆದಿರುವರು. ಕೊಕ್ಕೊ ಪಂದ್ಯಕ್ಕಾಗಿ ರಜತ ಪದಕವನ್ನು ಇಡಲಾಗಿತ್ತು.

ದತ್ತಾತ್ರೆಯ ದೇವಸ್ಥಾನಕ್ಕೆ ಮಹಾರಾಜರ ಸಹಾಯ

ನಂಜನಗೂಡು ಕಪಿಲಾ ನದಿ ತೀರದಲ್ಲಿರುವ ದತ್ತಾತ್ರೆಯಸ್ವಾಮಿ ದೇವಸ್ಥಾನದ ಕಟ್ಟಡಕ್ಕಾಗಿ ೩೦೦ ರೂ. ಗಳನ್ನು ದಯಪಾಲಿಸಿರುವುದಕ್ಕಾಗಿ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರಿಗೆ ಕಟ್ಟಡದ ಸಮಿತಿ ಕಾರ್ಯದರ್ಶಿಯವರು ವಂದನೆಗಳನ್ನು ಸಲ್ಲಿಸಿ, ಮಹಾ ಜನರೂ ಇದೇ ರೀತಿ ಉದಾರ ಸಹಾಯ ಮಾಡಬೇಕೆಂದು ಕೋರಿದ್ದಾರೆ.

ಅಣು ಬಾಂಬು ವಿರೋಧದ ಸಮ್ಮೇಳನ

ಅಣು ಮತ್ತು ಜಲಜನಕ-ಬಾಂಬುಗಳ ವಿರೋಧದ ವಿಶ್ವ ಸಮ್ಮೇಳನವನ್ನು ಬರುವ ಆಗಸ್ಟ್ ೧೨ರಿಂದ ೧೮ರವರೆಗೆ ಟೋಕಿಯೊ ನಗರದಲ್ಲಿ ನಡೆಸಲಾಗುವುದು. ಅದರಲ್ಲಿ ಭಾರತವು ಭಾಗವಹಿಸಬೇಕೆಂದು ನವದೆಹಲಿಗೆ ಆಗಮಿಸಿರುವ ಜಪಾನಿನ ವೈಜ್ಞಾನಿಕ ಪ್ರೊ|| ಕೈ. ಹಿರಾಸೆರವರು ಹೇಳಿರುತ್ತಾರೆ. ಅಣು ಬಾಂಬುಗಳ ಸಿಡಿತವನ್ನು ನಿಲ್ಲಿಸುವಂತೆ ಭಾರತವು ಮೊದಲು ಒತ್ತಾಯಪಡಿಸಿತೆಂದೂ, ಆದ್ದರಿಂದ ಭಾರತದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರೆ ಅದಕ್ಕೆ ಹೆಚ್ಚಿನ ಮಹತ್ವವಿರುವುದೆಂದೂ ಅವರು ಹೇಳಿರುತ್ತಾರೆ ಅಣು ಸಿಡಿತಗಳನ್ನು [illegible] ದೇಶದಲ್ಲಿ ಮಾಡುತ್ತಿರುವುದರಿಂದ ಈ ದೇಶದ ಪ್ರಜೆಗಳು ಕಷ್ಟಪಡಬೇಕಾಗಿರುವುದೆಂದೂ ಅವರು ತಿಳಿಸಿರುವರು.

ಚಿಂತಾಮಣಿ ಚುನಾವಣೆ ಬಗ್ಗೆ ತಕರಾರು

ಚಿಂತಾಮಣಿ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿರುವ ಟಿ. ಕೆ. ಗಂಗಿರೆಡ್ಡಿಯವರ ಚುನಾವಣೆಯು ಕ್ರಮಬದ್ಧವಾಗಿ ನಡೆದಿಲ್ಲವೆಂದು ಚುನಾವಣೆಯಲ್ಲಿ ಸೋತಿದ್ದ ಶ್ರೀ ಎಂ. ಸಿ ಆಂಜನೇಯರೆಡ್ಡಿಯವರು ಚುನಾವಣೆ ಕಮಿಷನ್ನಿನ ಮುಂದೆ ತಕರಾರು ಅರ್ಜಿಯನ್ನು ಹಾಕಿರುತ್ತಾರೆ.

ಬ್ರಹ್ಮಪುತ್ರ ನದಿಯಲ್ಲಿ ವಿಶೇಷ ಪ್ರವಾಹ

ಅಸ್ಸಾಂ ಪ್ರದೇಶದಲ್ಲಿ ಎಂಟು ದಿನಗಳಿಂದ ಒಂದೇ ಸಮನೆ ವಿಪರೀತ ಮಳೆ ಬಂದು ಬ್ರಹ್ಮಪುತ್ರಾ ನದಿಯಲ್ಲಿ ೭ ಅಂಗುಲದಷ್ಟು ನೀರು ಹೆಚ್ಚಿದೆ ಮೊನ್ನೆ ರಾತ್ರಿ ಶಿಲಾಂಗ್ ಎಂಬಲ್ಲಿ ನಿಂಬೆ ಹಣ್ಣು ಗಾತ್ರದ ಆಲಿಕಲ್ಲಿನಿಂದ ಕೂಡಿದ ಮಳೆಯಾಯಿತು

ಮೂರ್ಛೆ (ಅಪಸ್ಮಾರ) ರೋಗಕ್ಕೆ
ಖಾತರಿಯಾದ ಔಷಧ
ಅಪಸ್ಮಾರ ವಿಧ್ವಂಸಕ
ಈ ಔಷಧದಲ್ಲಿ ಗುಣವಿಲ್ಲವೆಂದು
ತೋರಿಸಿಕೊಟ್ಟವರಿಗೆ
500 ರೂ. ಬಹುಮಾನ
ಶ್ರೀ ವಿಶ್ವೇಶ್ವರ ಆಯುರ್ವೇದ ವೈದ್ಯಶಾಲಾ,
(ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್ ಪಕ್ಕ)
ನ್ಯೂ ಸ್ಟ್ಯಾಚ್ಯು ಸ್ಕ್ವೇರ್, ಮೈಸೂರು

Edited, Printed and Published by
A. B. Nagarajan at Sadhvi Press,
D. Subbiah Road, Mysore

THE CHAMPION METROPOLITAN COLLEGE OF COMMERCE
Co-operators' Home 100' Road. Mysore
FOR
FURTHER EDUCATION in Commerce, Business, Cost Accounts, Shorthand and Typewriting.
M S. PUTTANNA, *Vice-Principal.*
P. SUBBARAYA SASTRY, *Principal*

ಚಾಮುಂಡೇಶ್ವರಿ ಟಾಕೀಸ್
1-5-57ರಿಂದ : ವಿಶೇಷ ಆಕರ್ಷಣೆ : ಪ್ರತಿದಿನ 3 ಪ್ರದರ್ಶನಗಳು
ಟಿ. ಆರ್. ಆರ್. ಪಿಕ್ಚರ್ಸ್‌ರವರ ತಮಿಳು ಚಿತ್ರ
ಗೋಮತಿಯಿನ್ ಕಾದಲನ್
ಭೂಮಿಕೆ :- ಸಾವಿತ್ರಿ, ಪಮುತ್ತುಲಕ್ಷ್ಮಿ, ಟಿ. ಆರ್. ರಾಮಚಂದ್ರನ್, ಕೆ ಸಾರಂಗಪಾಣಿ,
ಕೆ. ಎ ತಂಗವೇಲು, ಫ್ರೆಂಡ್ ರಾಮಸ್ವಾಮಿ ಮತ್ತು ಪಿ ಬಾಲಸುಬ್ರಹ್ಮಣ್ಯಂ
ಶೀಘ್ರದಲ್ಲೇ ನಿರೀಕ್ಷಿಸಿರಿ : ಪುದಯಲ್, ಯಾರ್ ಪೈಯ್ಯನ್ ಮತ್ತು ಭಾಗ್ಯವತಿ

ಭಾರತ್ ಮಿಲ್ಕ್ ಡೈರಿ
ಸೂರಿ ರಕ್ಷಿ ಕ್ಯಾಸ್, ಮೈಸೂರು
ನಮ್ಮಲ್ಲಿ ಆಗತಾನೆ ಕರೆದ ಅಪ್ಪಟ ಹಸುವಿನ ಹಾಲನ್ನು
ಪೌಂಡ್ ಒಂದಕ್ಕೆ ರೂ. 0-3-3ರಂತೆ ಕೊಡಲಾಗುತ್ತೆ
ಕೂಪನ್ನುಗಳ ಮೇಲೂ ಬಿಕರಿ ವ್ಯವಸ್ಥೆ ಮಾಡಲಾಗಿದೆ
ಮತ್ತು ಮನೆಗಳಿಗೂ ಸಹ ಸಪ್ಲೈ ಮಾಡಲಾಗುತ್ತೆ
ಪ್ರೊಪ್ರೈಟರ್ : ಎ. ಎಸ್. ದಾವೂದ್

SRI GAYATHRI TALKIES ★
Grand Gala Opening : On 2-5-57 : the Academy Winner
THE KING AND I
From 30-4-57 : For 2 days Daily 3 Shows 20th Century Fox's Cinemascope in Color
HOW TO BE VERY VERY POPULAR
Starring.— Betty Grable and Sheree North

[illegible] ನಂ. 792

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕ್, ಧರ್ಮಾವರಂ
ಪೂನಾ, ನಾಗಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446



ಇಂದಿನ ಪತ್ರಿಕೆ 2 ಪುಟ ಪೈಸೆ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೦೫] SADHVI : WEDNESDAY 1—5—1957 ಮೈಸೂರು : ಬುಧವಾರ ೧—೫—೧೯೫೭ : [ಸಂಚಿಕೆ : [illegible]

ಕಾಶ್ಮೀರ ವಿವಾದದ ಬಗ್ಗೆ ಜಾರಿಂಗರ ಸಂಧಾನ ವಿಫಲ

ಕಾಶ್ಮೀರದ ವಿವಾದದ ಇತ್ಯರ್ಥಕ್ಕೆ ನಿರ್ದಿಷ್ಟ ಸೂಚನೆ ಸಾಧ್ಯವಿಲ್ಲ

ಭದ್ರತಾ ಸಮಿತಿಗೆ ಜಾರಿಂಗ್‌ರವರ ವರದಿ

ಜನಮತಗಣನೆಯಿಂದ ತೀವ್ರ ಸಮಸ್ಯೆಗಳು ಉದ್ಭವಿಸುವುದಾಗಿ ಅಭಿಪ್ರಾಯ

ಕಾಶ್ಮೀರ ವಿವಾದದಲ್ಲಿ ಭಾರತ ಮತ್ತು ಪಾಕಿ ನ ಸರ್ಕಾರಗಳ ನಡುವೆ ಚರ್ಚೆ ನಡೆಸಲು ಯೋಜಿಸಲ್ಪಟ್ಟಿದ್ದ ಸ್ವೀಡನ್ನಿನ ಪ್ರತಿನಿಧಿ ಗುನ್ನಾರ್ ಜಾರಿಂಗ್‌ರವರು ಭದ್ರತಾ ಸಮಿತಿಗೆ ಮ್ಮ ವರದಿಯನ್ನೊಪ್ಪಿಸಿ, ವಿವಾದದ ಇತ್ಯರ್ಥ ಈ ಸಮಯದಲ್ಲಿ ಯಾವ ನಿರ್ದಿಷ್ಟ ಸೂಚನೆಯನ್ನೂ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಪಶ್ಚಿಮ ಮತ್ತು ದಕ್ಷಿಣ ಏಷ್ಯಾಗಳಲ್ಲಿ ರ್ಕಾರಗಳ ಪರಸ್ಪರ ಸಂಬಂಧದ ವಿಚಾರ ಮತ್ತು ಕಾಶ್ಮೀರದ ಇಡೀ ಪ್ರಶ್ನೆಯಲ್ಲಿ ಅಡಕವಾಗಿರುವ ಮತ್ತು ಬದಲಾವಣೆಯಾಗುತ್ತಿರುವ ನಾನಾ ರಾಜಕೀಯ, ಆರ್ಥಿಕ ಮತ್ತು ಆಯಕಟ್ಟಿನ ಪ್ರಶ್ನೆಗಳನ್ನು ಗಣನೆಗೆ ತಾರದೆ ವಿಧಿಯಿಲ್ಲವೆಂದು ಅವರು ಹೇಳಿರುವರು. ತಾತ್ಕಾಲಿಕವಾಗಿ ಒಪ್ಪಲ್ಪಟ್ಟ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಆ ಸಮಯದಲ್ಲೇ ಜಾರಿಗೆ ತರದೆ ನಿಧಾನವಾಗಿ ತೆಗೆದುಕೊಳ್ಳುತ್ತಿರುವುದರಿಂದ ಉಂಟಾಗುವ ಪರಿಸ್ಥಿತಿಯನ್ನು ಭದ್ರತಾ ಸಮಿತಿಯು ಗಮನಿಸಬೇಕೆಂದೂ ಅವರು ಸೂಚಿಸಿರುವರು.

ಕಾಶ್ಮೀರದಲ್ಲಿ ಜನಮತಗಣನೆಯನ್ನು ತೆಗೆದುಕೊಳ್ಳುವುದರಿಂದ ಅಲ್ಲಿ ಕಳವಳಕರ ಸಮಸ್ಯೆಗಳು ಉದ್ಭವಿಸುವುವೆಂದೂ ಅವರು ಅಭಿಪ್ರಾಯಪಟ್ಟಿರುವರು. ಈ ಸಮಸ್ಯೆಯ ಇತ್ಯರ್ಥಕ್ಕೆ ಪಂಚಾಯಿತಿಯನ್ನು ನೇಮಿಸಬೇಕೆಂದು ತಾವು ಸಲಹೆ ಮಾಡಿದುದಾಗಿಯೂ, ಪಾಕಿಸ್ತಾನವು ಒಪ್ಪಿತೆಂದೂ, ಆದರೆ ಭಾರತವು ಅದನ್ನು ಅಂಗೀಕರಿಸಲಿಲ್ಲವೆಂದೂ ಅವರು ಹೇಳಿರುವರು

ಪಂಚಾಯಿತಿಯಿಂದ ಕಾಶ್ಮೀರದ ಸಾರ್ವಭೌಮತ್ವ, ಕಾಶ್ಮೀರ ಮತ್ತು ಭಾರತದ ಬಾಂಧವ್ಯ ಇತ್ಯಾದಿ ಈ ಪ್ರಶ್ನೆಯಲ್ಲಿ ಪಾಕಿಸ್ತಾನಕ್ಕೆ ಸ್ಥಾನವಿರುವುದೆಂಬ ತಪ್ಪು ತಿಳುವಳಿಕೆ-ಈ ಪ್ರಶ್ನೆಗಳು ಉದ್ಭವಿಸುವುದರಿಂದ ಭಾರತವು ಪಂಚಾಯಿತಿಗೆ ಒಪ್ಪಲಿಲ್ಲವೆಂದು ಅವರು ಸೂಚಿಸಿರುವರು.

೩೦ ಸಾವಿರ ಟನ್ ಆಹಾರಕ್ಕಾಗಿ ಕೇಂದ್ರಕ್ಕೆ ಸಂಸ್ಥಾನದ ಬೇಡಿಕೆ

ಬೆಂಗಳೂರು ೧

ಸಂಸ್ಥಾನಕ್ಕೆ ಬೇಕಾಗುವ ಧಾನ್ಯವನ್ನು ಒದಗಿಸಲು ಕೇಂದ್ರ ಸರ್ಕಾರದವರು ನಿರ್ಧರಿಸಿರುವುದಾಗಿ ವರದಿಯಾಗಿದೆ. ಅಭಾವ ಪ್ರದೇಶಗಳಿಗಾಗಿ ತಿಂಗಳಿಗೆ ೩೦ ಸಾವಿರ ಟನ್ ಧಾನ್ಯವು ಬೇಕಾಗುವುದೆಂದೂ, ಅಷ್ಟನ್ನು ಒದಗಿಸುವಂತೆ ಕೇಂದ್ರದವರನ್ನು ಪ್ರಾರ್ಥಿಸಲಾಗುವುದೆಂದೂ ಗೊತ್ತಾಗಿದೆ. ಈ ಸಂಬಂಧವಾಗಿ ರೆವಿನ್ಯೂ ಮಂತ್ರಿ ಎಂ. ಪಿ. ಪಾಟೀಲರು ಕೇಂದ್ರ ಸರ್ಕಾರದ ಪ್ರಾದೇಶಿಕ ಆಹಾರ ಡೈರೆಕ್ಟರ್ ಶ್ರೀ ಆನಂದ್‌ರೊಡನೆ ಚರ್ಚಿಸಿದರು. ಅದರಲ್ಲಿ ಡಿವಿಜನಲ್ ಕಮಿಷನರುಗಳೂ ಭಾಗವಹಿಸಿದ್ದರು.

ಪಲ್ಲಡಂ ನಾಗರಾಜರಾಯರ ವೇಣು ವಾದನ

ಮೈಸೂರು ೧

ವೇಣುಗಾನ ಪ್ರವೀಣ ಪಲ್ಲಡಂ ನಾಗರಾಜರಾಯರು ನಾಳೆ ಸಂಜೆ ೬॥ ಗಂಟೆಗೆ, ೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ತಮ್ಮ ಅಮೋಘವಾದ ವೇಣು ಗಾನವನ್ನು ಮಾಡುವರು ಆ॥ ವಿ॥ ಹೆಚ್. ವಿ ರಾಮರಾಯರ ಪಿಟೀಲು, ಆ॥ ವಿ॥ ಟಿ ಎಂ. ವೆಂಕಟೇಶದೇವರುರವರ ಮೃದಂಗ ಮತ್ತು ವಿ॥ ವಿ ನಾಗಭೂಷಣಾಚಾರ್ಯರ ಘಟಂ ವಾದನವು ನಡೆಯುವುದು ಸರ್ವರಿಗೂ ಸ್ವಾಗತವಿದೆ

ಶಂಕರ ಜಯಂತಿ ಕಾರ್ಯಕ್ರಮ

ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಯೋಗಾಸನದ ಇನ್ಸ್‌ಪೆಕ್ಟರ್ ಶ್ರೀ ಕೆ ಪಟ್ಟಾಭಿಜೋಯಿಸ್ ಮತ್ತು ಶಿಷ್ಯವೃಂದದಿಂದ ಯೋಗಾಸನ ಪ್ರದರ್ಶನ, ೭॥ ಗಂಟೆಗೆ ವಿದ್ವಾನ್ ಸುಬ್ರಹ್ಮಣ್ಯ ಶಾಸ್ತ್ರಿಗಳು ಮತ್ತು ಶ್ರೀ ಟಿ ಎಸ್ ವೆಂಕಟರಾಮಯ್ಯನವರಿಂದ ಶಂಕರ ವಿಜಯ ವಾಚನವಿದೆ

ನಗರದ ದೊಡ್ಡಕೆರೆ ಮೈದಾನದಲ್ಲಿರುವ ಆದಿ ಶಂಕರ ಮಠದ ಶ್ರೀ ಶ್ರೀ ಬ್ರಹ್ಮವಿದ್ಯಾನಂದ ನಾಥ ಭಾರತೀಸ್ವಾಮಿಗಳವರ ಸಮ್ಮುಖದಲ್ಲಿ ಭಕ್ತಮಂಡಲಿಯವರು ಇದೇ ಆರನೇ ತಾರೀಕು ಶನಿವಾರ ಶಂಕರ ಜಯಂತಿ ಉತ್ಸವವನ್ನು ನೆರವೇರಿಸುವರು ಭಕ್ತಮಹಾಶಯರು ಅದರಲ್ಲಿ ಭಾಗಿಗಳಾಗಿ ಯಥಾಶಕ್ತಿ ಧನಧಾನ್ಯ ಸಹಾಯ ನೀಡುವಂತೆ ಕೋರಲಾಗಿದೆ

ಬಸವ ಜಯಂತಿ ಕಾರ್ಯಕ್ರಮ

ಮೈಸೂರು ವೀರಶೈವ ಸಂಘದ ಆಶ್ರಯದಲ್ಲಿ, ತ್ಯಾಗರಾಜಾ ರಸ್ತೆಯಲ್ಲಿರುವ ಅಕ್ಕನ ಬಳಗ ಕಟ್ಟಡದಲ್ಲಿ ನಾಳೆ ಸಂಜೆ ೬ ಗಂಟೆಗೆ ಬಸವ ಜಯಂತಿ ಅಂಗವಾಗಿ, ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು ಶ್ರೀ ಕೆ ಎಸ್ ಧರಣೇಂದ್ರಯ್ಯನವರು "ಕನ್ನಡ ಸಾಹಿತ್ಯದಲ್ಲಿ ತ್ಯಾಗ ಯುಗ" ಎಂಬ ವಿಚಾರವಾಗಿ ಭಾಷಣ ಮಾಡುವರು ಮೈಸೂರು ಗಮಕ ಸಹೋದರರಿಂದ ಬಸವಣ್ಣನವರ ಜನನ-ಎಂಬ ಕಾವ್ಯ ವಾಚನವೂ ಇದೆ.

ಹರಿಕಥೆ

ನಗರದ ಸಿವಿಲ್ ಪೊಲೀಸ್ ಹೆಡ್ ಕ್ವಾರ್ಟರ್ಸಿನ ರಾಮ ಮಂದಿರದಲ್ಲಿ ಈ ಸಂಜೆ ೮ ಗಂಟೆಗೆ ವಿ॥ ಮಹದೇವದಾಸ್‌ರವರಿಂದ ತಿರುಪಳ್ಳಿ ಸಾಳ್ವ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ. ನಾಳೆ ಬೆಳಗ್ಗೆ ಶ್ರೀರಾಮ ಪಟ್ಟಾಭಿಷೇಕವು ಜರುಗುವುದು

ರಹದಾರಿಯಿಲ್ಲದೆ ರೇಡಿಯೊ ಹೊಂದಿದ್ದಕ್ಕಾಗಿ ದಂಡ

ನಗುವನಹಳ್ಳಿಯ ಶ್ರೀ ಎಸ್. ಕೆ ಜವರೇಗೌಡ ಎಂಬುವರು ೧೯೫೨ ರಿಂದಲೂ, ರಹದಾರಿ ಪಡೆಯದೆ ರೇಡಿಯೋವನ್ನು ಹೊಂದಿದ್ದರೆಂದು ಅಪಾದಿಸಿ ಡಿವಿಜನಲ್ ವೈರ್‌ಲೆಸ್ ಇನ್ಸ್‌ಪೆಕ್ಟರ್ ಶ್ರೀ ಸಾಲ್ಡಾನಾರವರು ಹೂಡಿದ್ದ ಮೊಕದ್ದಮೆಯಲ್ಲಿ ದ್ವಿತೀಯ ನಗರ ನ್ಯಾಯಾಧೀಶರು ಅಪಾದಿತರಿಗೆ ನೆನ್ನೆ ೨೦ ರೂ ದಂಡ ವಿಧಿಸಿದರು.

ಅರಬ್ ರಾಷ್ಟ್ರಗಳ ನಾಯಕರ ಘೋಷಣೆಗೆ ಜೋರ್ಡಾನ್ ಮನ್ನಣೆ

ದೊರೆ ಹುಸೇನ್ ಮತ್ತು ಇಬ್ನ್‌ಸಾದರ ಜಂಟಿ ಘೋಷಣೆ

ಈ ವರ್ಷದ ಆದಿಯಲ್ಲಿ ಸಿರಿಯ ಮತ್ತು ಈಜಿಪ್ಟ್ ನಾಯಕರೊಡನೆ ಜೋರ್ಡಾನ್ ದೊರೆ ಹುಸೇನ್ ಮತ್ತು ಸಾದಿ ಅರೇಬಿಯಾ ದೊರೆ ಇಬ್ನ್ ಸಾದರು ಕೈರೋವಿನಲ್ಲಿ ಹೊರಡಿಸಿದ್ದ ಘೋಷಣೆಯ ನೀತಿಯನ್ನು ತಾವು ಪಾಲಿಸುವುದಾಗಿ ಮೇಲ್ಕಂಡ ಉಭಯರೂ ಜಂಟಿ ಹೇಳಿಕೆ ಹೊರಡಿಸಿರುತ್ತಾರೆ ಎಲ್ಲಾ ಅರಬ್ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವದ ಸಾಧನೆ, ೪ ರಾಷ್ಟ್ರಗಳ ನಡುವೆ ಮಿಲಿಟರಿ ಸಹಕಾರ, ಪ್ಯಾಲಸ್ಟೀನಿನಲ್ಲಿ ಅರಬ್ಬರು ಕಳೆದುಕೊಂಡ ಹಕ್ಕಿನ ಸಾಧನೆ, ವಿದೇಶೀ ಒಪ್ಪಂದಕ್ಕೆ ಸೇರಬಾರದೆಂಬ ಒಡಂಬಡಿಕೆ, ಸಾಮ್ರಾಜ್ಯಶಾಹಿಗಳ ಕೆಳಗೆ ನರಳುತ್ತಿರುವ ಅರಬ್ಬರಿಗೆ ಸಹಾಯ-ಈ ಐದು ತತ್ವಗಳನ್ನು ಘೋಷಣೆಯಲ್ಲಿ ಅಡಕಗೊಳಿಸಲಾಗಿದೆ. ಉಭಯ ದೊರೆಗಳೂ ಈಚೆಗೆ ಮಾತುಕತೆ ನಡೆಸಿದ್ದರು

ಜೋರ್ಡಾನಿಗೆ ಪ್ಯಾರಾಚೂಟ್ ಮೂಲಕ ಅಮೆರಿಕಾ ಸೈನ್ಯ ?

ಅವಶ್ಯಕವಿದ್ದರೆ ಪ್ಯಾರಾಚ್ಯೂಟ್ ಸಹಾಯದಿಂದ ಜೋರ್ಡಾನಿನಲ್ಲಿ ಇಳಿಯಲು ಅಮೆರಿಕಾ ಸೈನ್ಯಗಳು ತಯಾರಾಗಿರುವುವೆಂದು ಅಮೆರಿಕದ ಸೈನ್ಯ ಖಾತೆಯ ಸಚಿವರು ತಿಳಿಸಿರುತ್ತಾರೆ ಜೋರ್ಡಾನಿನೊಳಕ್ಕೆ ಅಮೆರಿಕಾ ಸೈನ್ಯವನ್ನು ಕಳುಹಲು ವಾರ ಅಥವಾ ತಿಂಗಳುಗಳು ಬೇಕಾಗಿಲ್ಲವೆಂದೂ, ಕೆಲವು ದಿನಗಳು ಸಾಕೆಂದೂ ಅವರು ಹೇಳಿ, ಸೈನ್ಯ ರವಾನೆಗೆ ವಿಮಾನಗಳು ಸಿದ್ಧವಾಗಿರುವುವೆಂದೂ ಸೂಚಿಸಿರುವರು.

ಉದ್ರಿಕ್ತ ಗುಂಪಿನಿಂದ ಒಬ್ಬಾತನ ಕೊಲೆ ಮತ್ತು ಮನೆಗೆ ಬೆಂಕಿ

ಧಾರವಾಡ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಕುಲಗೂರು ಗ್ರಾಮದಲ್ಲಿ ಕಳೆದ ೧೬ ರಂದು ನೂರು ಜನರ ಉದ್ರಿಕ್ತ ಗುಂಪೊಂದು ಸಟಿಮಲ್ಲಪ್ಪ ಬೋರಣ್ಣಾವರ ಎಂಬಾತನನ್ನು ಗುಂಡು ಹೊಡೆದು ಕೊಂದು, ಶರೀರವನ್ನು ತುಂಡು ತುಂಡಾಗಿ ಕತ್ತರಿಸಿ, ನಂತರ ಮನೆಗೆ ಬೆಂಕಿ ಹಚ್ಚಿದ ವಿಚಾರವು ವರದಿಯಾಗಿದೆ ಬೆಂಕಿ ಹಚ್ಚುವ ಮುಂಚೆ ಮೃತನ ಪತ್ನಿ ಮತ್ತು ಮಕ್ಕಳನ್ನು ಹೊರಕ್ಕೆ ಗುಂಪಿನವರು ಕರೆತಂದರೆಂದೂ, ಮೃತನ ಸಹೋದರ ಸಿದ್ದಪ್ಪ ಎಂಬಾತನು ಹೇಗೋ ತಪ್ಪಿಸಿಕೊಂಡು ಪೊಲೀಸರಿಗೆ ವರ್ತಮಾನ ಕೊಟ್ಟುದಾಗಿಯೂ ಹೇಳಲಾಗಿದೆ. ಅವರು ಬರುವ ಹೊತ್ತಿಗೆ ಮನೆಯು ಉರಿದುಹೋಗಿತ್ತು ೨೦ ಜನರನ್ನು ಬಂಧಿಸಲಾಗಿದೆ. ಅಲ್ಲಿ ಇತ್ತೀಚೆಗೆ ಆದ ಪಂಚಾಯಿತಿ ಚುನಾವಣೆಯಲ್ಲಿ ಎರಡು ವಿರೋಧ ಗುಂಪುಗಳಾಗಿದ್ದುವು.

ಕ್ಯಾಲೆಂಡರ್ ಸ್ವೀಕಾರ

ಭಾರತ ಟೀ ಬೋರ್ಡ್ ಸಂಸ್ಥೆಯವರು ಕಳುಹಿಸಿಕೊಟ್ಟಿರುವ ಹೊಸ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಇದರಲ್ಲಿ ಟೀ ವ್ಯವಸಾಯ ಮತ್ತು ತಯಾರಿಕೆಗೆ ಸಂಬಂಧಪಟ್ಟ ಸುಂದರವಾದ ಚಿತ್ರಗಳಿವೆ

ವಿಧಾನ ಸೌಧ ನಿರ್ಮಾಣದ ಬಗ್ಗೆ ನ್ಯಾಯಾಂಗ ತನಿಖೆ

ಪ್ರಶ್ನೆಯನ್ನು ಕೈಬಿಟ್ಟಿಲ್ಲವೆಂದು ಸಚಿವ ವೀರಣ್ಣಗೌಡರ ಹೇಳಿಕೆ

ಬೆಂಗಳೂರು ೧

ವಿಧಾನ ಸೌಧ ನಿರ್ಮಾಣದ ಸಂಬಂಧವಾಗಿ ಬಂದಿರುವ ಆರೋಪಣೆಗಳನ್ನು ಕುರಿತು ನ್ಯಾಯಾಂಗ ತನಿಖೆ ನಡೆಸುವ ಪ್ರಶ್ನೆಯನ್ನು ಕೈಬಿಟ್ಟಿಲ್ಲವೆಂದು ಮರಾಮತ್ತು ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು ಜುಡಿಷಿಯಲ್ ಸಮಿತಿ ರಚನೆ, ಅದರ ಅಧಿಕಾರ ವ್ಯಾಪ್ತಿ ಮುಂತಾದ ವಿಚಾರಗಳನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಅವರು ಹೇಳಿ ಈಗ ಇಲಾಖಾ ತನಿಖೆಗೆ ಏರ್ಪಾಡಾಗಿರುವುದೆಂದೂ, ಅಧಿಕಾರಿಗಳ ವಿವರಣೆಗಳನ್ನು ಪಡೆಯಲಾಗುತ್ತಿರುವುದೆಂದೂ ಸೂಚಿಸಿದರು ಹೆಚ್ಚಿನ ತನಿಖೆಯು ಯಾವ ರೂಪ ತಾಳಬೇಕೆಂಬುದನ್ನು ಪರಿಶೀಲಿಸಲಾಗುತ್ತಿರುವುದೆಂದು ಅವರು ವಿವರಣೆಯಿತ್ತರು

ಸೌಧ ನಿರ್ಮಾಣದ ಬಗ್ಗೆ ಶ್ರೀ ಹನುಮಂತಯ್ಯ ಮಂತ್ರಿಮಂಡಲದವರು ನೇಮಿಸಿದ್ದ ಪಿ ಪಿ ದೇವ್‌ರವರ ತನಿಖಾ ಸಮಿತಿಯು ಹೆಚ್ಚಿನ ತನಿಖೆಯಾಗಬೇಕೆಂದು ಸೂಚಿಸಿದ್ದಿತು.

ವೀಣೆ ಶೇಷಣ್ಣನವರಿಗೆ ಸ್ಮಾರಕ

ಬೆಂಗಳೂರು ೨೯

ವೈಣಿಕ ಶಿಖಾಮಣಿ ಶೇಷಣ್ಣನವರ ಹೆಸರಿನಲ್ಲಿ ಸ್ಮಾರಕ ಭವನವೊಂದನ್ನು ನಿರ್ಮಿಸಲು ಅವರ ಶಿಷ್ಯರುಗಳು ಮತ್ತು ಸಂಗೀತ ವಿದ್ವಾಂಸರ ಗೋಷ್ಠಿಯೊಂದರಲ್ಲಿ ನೆನ್ನೆ ನಿರ್ಧರಿಸಲಾಯಿತು. ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಮುದ್ರಣ ಕಲೆಗೆ ಪ್ರೋತ್ಸಾಹ ಅಗತ್ಯ

ಇಡೀ ದೇಶದಲ್ಲಿ ವಿವಿಧ ಕಲೆಗಳ ಪ್ರೋತ್ಸಾಹಕ್ಕಾಗಿಯೂ, ಔದ್ಯೋಗಿಕ ಶಿಕ್ಷಣಾಲಯಗಳ ಅಭಿವೃದ್ಧಿಗಾಗಿಯೂ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳುತ್ತಿರುವುದು ಸರಿಯಷ್ಟೆ? ಪಂಚವಾರ್ಷಿಕ ಯೋಜನೆಗಳಲ್ಲಿ ಅವನ್ನು ಸೇರಿಸಿ ನಡೆಸಲಾಗುತ್ತಿದೆ. ಆದರೆ ಕಲೆ ಮತ್ತು ಕುಶಲ ಕೆಲಸಕ್ಕೆ ಸೇರಿದ ಮುದ್ರಣ ವೃತ್ತಿಗೆ ಪ್ರೋತ್ಸಾಹ ಮಾತ್ರ ಸಿಗುತ್ತಿಲ್ಲ ದೇಶದಲ್ಲಿ ಅನೇಕ ಮುದ್ರಣಾಲಯಗಳಿವೆ, ಕೆಲಸಗಾರರಿದ್ದಾರೆ ಅವರಿಗೆ ಉತ್ತೇಜನವಿಲ್ಲ. ಅಲ್ಲದೆ ಅವರುಗಳಲ್ಲಿ ನಿರುದ್ಯೋಗ ಸಮಸ್ಯೆಯೂ ಪ್ರಾಪ್ತವಾಗಿದೆ ಇತರ ಕಲೆಗಳಿಗೆ ಪ್ರೋತ್ಸಾಹವಿತ್ತು ಈ ಉದ್ಯಮಕ್ಕೆ ಕೊಡದಿರುವುದು ಶೋಚನೀಯ-ಎಂದು ಶ್ರೀ ಆರ್. ನೀಲಕಂಠರವರು ತಿಳಿಸಿರುತ್ತಾರೆ. ಈ ಕುಂದನ್ನು ನಿವಾರಿಸಲು ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದೂ ಅವರು ಮನವಿಮಾಡಿಕೊಂಡು ಆಸಕ್ತರಾದ ವ್ಯಕ್ತಿ [illegible] ನವರು ಸಹಕರಿಸುವಂತೆ ಪ್ರಾರ್ಥಿಸಿರುತ್ತಾರೆ ಅವರ ವಿಳಾಸ-ಸಿನಿ ಆರ್ಟ್ಸ್ ಕಬ್ಬಿನಿಟ್ಟಿ, ಹೊರಡಿ ರಸ್ತೆ, ಮೈಸೂರು

ಕೋಲಾರದ ಚಿನ್ನದ ಗಣಿ ವ್ಯವಹಾರ

ಮಾಜಿ ಮಂತ್ರಿಗಳ ಮೇಲೆ ಅಪಾದನೆ ನಿರಾಧಾರವೆಂದು ಮುಖ್ಯ ಮಂತ್ರಿಯವರು

ಬೆಂಗಳೂರು ೩೦

ಕೋಲಾರದ ಗಣಿ ಚಿನ್ನವನ್ನು ಪಕ್ಕದ ಸಂಸ್ಥಾನಕ್ಕೆ ಕಳ್ಳ ರವಾನೆ ಮಾಡಲಾಗುತ್ತಿದ್ದಿತೆಂದು ಹೇಳಲಾದ ಒಂದು ವ್ಯವಹಾರದಲ್ಲಿ ಇಬ್ಬರು ಮಾಜಿ ಮಂತ್ರಿಗಳು ಇರುವರೆಂಬ ಸುದ್ದಿಯನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಿರಾಕರಿಸುತ್ತಾರೆ ಈ ಆಪಾದನೆಗೂ ಶ್ರೀ ಎ. ಭೀಮಪ್ಪನಾಯಕರನ್ನು ೧೨ನೇ ಮಂತ್ರಿಯಾಗಿ ತೆಗೆದುಕೊಳ್ಳದಿರುವುದಕ್ಕೂ ಸಂಬಂಧವಿಲ್ಲವೆಂದೂ ಅವರು ಸ್ಪಷ್ಟಪಡಿಸಿರುತ್ತಾರೆ.

ಬರ್ಮಾದಲ್ಲಿ ದಂಗೆಕಾರರ ಹಾವಳಿ

ರಂಗೂನಿಗೆ ೧೨೦ ಮೈಲಿ ದೂರದಲ್ಲಿರುವ ಮೌಲ್ಮೀನಿನ ಬಳಿ ಕರೇ ಮತ್ತು ಕಮ್ಯೂನಿಸ್ಟ್ ದಂಗೆಕೋರರ ಗುಂಪಿನ ೬೦ ಜನರು ಒಂದು ಗ್ರಾಮದ ಸಂತೆ ಮೈದಾನಕ್ಕೆ ನುಗ್ಗಿ ೮ ಜನ ಪೋಲೀಸರುಗಳನ್ನೂ, ೬ ಜನ ನಾಗರಿಕರನ್ನೂ ಗುಂಡಿನಿಂದ ಹೊಡೆದು ಕೊಂದಿರುತ್ತಾರೆ.

ಬಿಳಿಗಿರಿರಂಗನ ಬೆಟ್ಟದ ತೆಪ್ಪೋತ್ಸವ ಜೂನ್ ತಿಂಗಳಲ್ಲಿ

ಸೌರಮಾನ ರೀತ್ಯಾ ಈ ಸಾರಿ ಬಿಳಿಗಿರಿರಂಗನ ಬೆಟ್ಟದಲ್ಲಿ ತೆಪ್ಪೋತ್ಸವವು ೧೩-೬-೫೭ನೇ ತಾರೀಕು ನಡೆಯುವುದೆಂದು ದೇವಸ್ಥಾನದ ಅಧಿಕಾರಿಗಳು ತಿಳಿಯಪಡಿಸಿರುತ್ತಾರೆ. ಅದು ಮೇ ತಿಂಗಳಲ್ಲಿ ನಡೆಯುವುದಿಲ್ಲ

ಅಂಟಿಕೊಂಡ ಅವಳಿ ಮಕ್ಕಳ ಜನನ

ಅಮೇರಿಕದ ಓಹಿಯೊ ಪ್ರಾಂತದ ಯಂಗ್ಸ್‌ಟೌನ್ ಎಂಬಲ್ಲಿ ಒಬ್ಬ ಮಹಿಳೆಯು ಹೊಟ್ಟೆಯ ಭಾಗದಲ್ಲಿ ಅಂಟಿಕೊಂಡಿರುವ ಅವಳಿ ಮಕ್ಕಳನ್ನು ಪಡೆದಿರುತ್ತಾಳೆ ಶಸ್ತ್ರ ಚಿಕಿತ್ಸೆ ಮಾಡಿ ಮಕ್ಕಳನ್ನು ಹೊರಕ್ಕೆ ತೆಗೆಯಲಾಗಿದೆ ಎರಡು ಮಕ್ಕಳೂ ಆರೋಗ್ಯವಾಗಿವೆ ಅವುಗಳನ್ನು ಬೇರ್ಪಡಿಸುವುದು ಸಾಧ್ಯವೇ ಎಂಬುದನ್ನು ವೈದ್ಯರು ಪರಿಶೀಲಿಸುತ್ತಿರುವರು

ಸಬ್ ಡಿವಿಜನ್ ಅಧಿಕಾರಿ ಕಛೇರಿ ಮುಂದೆ ರೈತರ ಪ್ರದರ್ಶನ

ಬಿಹಾರಿನ ಸಹರ್ಸಾ ಜಿಲ್ಲೆಯ ಮಧೇಪುರ ಸಬ್ ಡಿವಿಜನ್ ಅಧಿಕಾರಿಗಳ ಕಛೇರಿ ಆವರಣಕ್ಕೆ ೫೨೦೦ ಮಂದಿ ರೈತರು ಕಳೆದ ವಾರ ನುಗ್ಗಿ ಘೋಷಣೆಗಳನ್ನು ಕೂಗುತ್ತಾ ಆ ಸಬ್ ಡಿವಿಜನ್ ಪ್ರದೇಶವನ್ನು ಕ್ಷಾಮದ ನಾಡೆಂದು ಘೋಷಿಸುವಂತೆ ಒತ್ತಾಯಪಡಿಸಿದರು ಅಲ್ಲಿನ ಶಾಸನ ಸಭೆಯ ಸಮಾಜವಾದಿ ಸದಸ್ಯರಾದ ಭೂಪೇಂದ್ರ ನಾರಾಯಣಮಂಡಲರು ನೇತೃತ್ವವನ್ನು ವಹಿಸಿದ್ದರು "ನಮಗೆ ರೊಟ್ಟಿ ಕೊಡಿ, ಇಲ್ಲವೇ ಅಧಿಕಾರ ಬಿಡಿ"—ಎಂದು ಜನರು ಕೂಗುತ್ತಿದ್ದರು ಪ್ರತಿ ಹಳ್ಳಿಯಲ್ಲೂ ಒಂದೊಂದು ಫೇರ್ ಪ್ರೈಸ್ ಡಿಪೊ ತೆರೆಯಲು ಒತ್ತಾಯಪಡಿಸಲಾಯಿತು ನಂತರ ಪ್ರದರ್ಶನಕಾರರು ಸಭೆ ನಡೆಸಿ ಸರ್ಕಾರದವರು ಪರಿಹಾರ ಒದಗಿಸದಿದ್ದರೆ ನಾಳೆಯಿಂದ ಸತ್ಯಾಗ್ರಹ ಹೂಡಲು ನಿರ್ಧರಿಸಲಾಯಿತು

ಬಸವೇಶ್ವರರ ಜಯಂತ್ಯುತ್ಸವ

ತ್ಯಾಗರಾಜಾ ರಸ್ತೆಯಲ್ಲಿರುವ ಶರಣ ಮಂಡಲಿಯ ಆಶ್ರಯದಲ್ಲಿ ನಾಳೆಯಿಂದ ೫ನೇ ತಾರೀಕು ಪೂರ್ತಾ ಬಸವೇಶ್ವರ ಜಯಂತಿ ಉತ್ಸವವನ್ನು ತುಂಟೇರಳಿ ಸಾಹುಕಾರ್ ಸಿದ್ದಪ್ಪನವರ ವಿದ್ಯಾರ್ಥಿ ನಿಲಯದಲ್ಲಿ ನೆರವೇರಿಸಲಾಗುವುದು ಅದರ ಅಂಗವಾಗಿ ನಾಳೆ ಬೆಳಗ್ಗೆ ೧೦|| ಗಂಟೆಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆಗಳೂ, ಸಂಜೆ ೭|| ಗಂಟೆಗೆ ವಿ|| ಶಾರದಮ್ಮನವರ ಸಂಗೀತವೂ ನಡೆಯುವುವು.

ನಂಜನಗೂಡು ವೀರಶೈವ ಸೇವಾ ಮಂಡಲಿಯ ಆಶ್ರಯದಲ್ಲಿ ದಳವಾಯಿಯವರ ಕಟ್ಟಡದಲ್ಲಿ ಜಯಂತಿ ಅಂಗವಾಗಿ ನಾಳೆ ಬೆಳಗ್ಗೆ ರುದ್ರಾಭಿಷೇಕ ಮುಂತಾದುವೂ, ಸಂಜೆ ೭|| ಗಂಟೆಗೆ, ವಿಶೇಷ ಪ್ರಥಮ ದರ್ಜೆ ನ್ಯಾಯಾಧೀಶರಾದ ಶ್ರೀ ಜಿ ಎಂ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀ ಜಿ. ಮರುಳಸಿದ್ದಯ್ಯನವರಿಂದ ಅಣ್ಣನವರ ಕ್ರಿಯಾಶುದ್ಧಿ ಎಂಬ ವಿಚಾರವಾಗಿ ಉಪನ್ಯಾಸ ಮತ್ತು ವಿ|| ಜಲಜಾಕ್ಷಮ್ಮನವರ ಸಂಗೀತಗಳೂ ಏರ್ಪಾಡಾಗಿವೆ

ಕೃಷ್ಣರಾಜನಗರದ ವೀರಶೈವ ಸಂಘದ ಆಶ್ರಯದಲ್ಲಿ ನಾಳೆಯಿಂದ ೫ನೇ ತಾರೀಕಿನವರೆಗೆ ಬಸವೇಶ್ವರರ ದೇವಾಲಯದಲ್ಲಿ ಜಯಂತಿ ಉತ್ಸವವು ನಡೆಯುವುದು ನಾಳೆ ಸಂಜೆ ೬ ಗಂಟೆಗೆ ಜಿಲ್ಲಾಧಿಕಾರಿ ಶ್ರೀ ಡಿ ಆರ್ ಚನ್ನರುದ್ರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು ವಿಧಾನ ಸಭಾ ಸದಸ್ಯೆ ಶ್ರೀಮತಿ ನಾಗರತ್ನಮ್ಮ ಹಿರೇಮಠರವರು ಶಿವಶರಣೆ ಅಕ್ಕ ಮಹಾದೇವಿ ಎಂಬ ವಿಚಾರವಾಗಿಯೂ, ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದ ಶ್ರೀ ಎಂ ಪಿ. ಎಲ್ ಶಾಸ್ತ್ರಿಯವರು ಭಾರತೀಯ ಶಿಕ್ಷಣ ಪದ್ಧತಿಯ ಬಗ್ಗೆಯೂ ಭಾಷಣ ಮಾಡುವರು

ಹಿಂದಿ ಟೆಲಿಪ್ರಿಂಟರ್ ಸರ್ವಿಸ್

ಉತ್ತರ ಪ್ರದೇಶದ ಕಾನ್ಪುರ, ಆಗ್ರಾ, ಅಲಹಾಬಾದು, ಕಾಶಿ ಮತ್ತು ಲಕ್ನೊ ನಗರಗಳಿಗೆ ಹಿಂದಿ ಟೆಲಿಪ್ರಿಂಟರ್ ಸಂಪರ್ಕವನ್ನು ಏರ್ಪಡಿಸುವ ವಿಷಯವನ್ನು ಕೇಂದ್ರ ಸರ್ಕಾರದವರು ಪರಿಶೀಲಿಸುತ್ತಿರುವರು ಹಿಂದಿ ಪತ್ರಿಕೆಗಳಿಗಾಗಿ ಹಿಂದಿಯಲ್ಲಿಯೇ ಸುದ್ದಿಗಳನ್ನು ಒದಗಿಸುವ ಜವಾಬ್ದಾರಿಯನ್ನು ಯಾವ ಸುದ್ದಿ ಸಂಸ್ಥೆಯಾದರೂ ವಹಿಸಿಕೊಂಡರೆ ಅದಕ್ಕೆ ಕೇಂದ್ರ ಸರ್ಕಾರದವರು ಎಲ್ಲ ಅನುಕೂಲಗಳನ್ನೂ ಕಲ್ಪಿಸುವರೆಂದು ಹೇಳಲಾಗಿದೆ

ಮನೆ ಮಾರಾಟಕ್ಕಿದೆ

ಡೋರ್ ನಂ 2788/9 ಚಾಮುಂಡಿ ಬಡಾವಣೆ, ಶಂಕರನಾರಾಯಣಸ್ವಾಮಿ ದೇವಸ್ಥಾನದ ಹತ್ತಿರ ಮೂರು ಕಡೆ ರಸ್ತೆ, ತಾರಸಿ ಮತ್ತು ಮಂಗಳೂರು ಹೆಂಚು, ಸುಮಾರು 2000 ಚದರ ಅಡಿ ಕಟ್ಟಡ ಉಳ್ಳ, ಮೂರು ಸಂಸಾರಗಳಿಗೆ ಅನುಕೂಲವಾಗಿರುವ, ನಲ್ಲಿ ಮತ್ತು ದೀಪ ಇರುವ ಮನೆ ಬೆಲೆ 9000 ರೂ

ವಿವರಗಳಿಗೆ :—

ಜಯ ಅಂಡ್ ಕಂಪೆನಿ,
ಮನೆ ಮತ್ತು ಜಮೀನುಗಳ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು · ಫೋನ್: 520

ಕೇರಳದಲ್ಲಿ ಕಾರ್ಮಿಕರ ಅರ್ಜಿಗಳಿಗೆ ಸ್ಟಾಂಪು ವಿನಾಯಿತಿ

ಕೇರಳದ ಕಾರ್ಮಿಕ ಸಂಸ್ಥೆಗಳು, ಕಾರ್ಮಿಕರು ಕಾರ್ಮಿಕ ಅಧಿಕಾರಿಗಳಿಗೆ ಸಲ್ಲಿಸುವ ಅರ್ಜಿಗಳು, ಮನವಿ ಮುಂತಾದುವುಗಳಿಗೆ ಸ್ಟಾಂಪುಗಳನ್ನು ಅಂಟಿಸಬೇಕಾಗಿಲ್ಲವೆಂದು ತಿಳಿಸಿ ಅಲ್ಲಿನ ಸರ್ಕಾರದವರು ವಿನಾಯಿತಿ ಕೊಟ್ಟಿರುತ್ತಾರೆ

ಕ್ಯಾಲೆಂಡರ್ ಸ್ವೀಕಾರ

ನಗರದ ಶಿವರಾಂಪೇಟೆಯ ಗುಪ್ತ ಕಾಫಿ ವರ್ಕ್ಸ್‌ನವರು ಕಳುಹಿಸಿರುವ ನವ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮುತ್ತು		
ಕೊಯಮತ್ತೂರು	೨೯ ೦೦	೪೧ ೫೦
ರತ್ನಚೂಡಿ	೨೬ ೮೬	೪೦ ೫೦
ಕಡ್ಡಿ	೪೦ ೨೫	
ರಾಗಿ	೪೩ ೦೦	೪೫ ೧೩
ಜೋಳ	೮೧ ೨೫	೮೩ ೬೫
ಕಡಲೆಕಾಯಿ	೧೮ ೮೬	೩೮ ೪೬
ಹುಚ್ಚೆಳ್ಳು	೮೪ ೬೩	೮೬ ೦೦
ಹೊಂಗೇಬೀಜ	೧೬ ೦೦	೨೬ ೬೫
ಹುರುಳಿ	೪೦ ೨೫	೪೩ ೨೫
ಹಲಸಂದೆ	೮೬ ೫೦	೮೮ ೫೦
ಅವರೆ	೪೫ ೫೦	೮೯ ೫೦
ಧನಿಯ	೩೮ ೦೦	೩೬ ೪೬
ಕಡಲೆ	೮೬ ೦೦	
ಸೆಣಬಿನ ಬೀಜ	೮೧ ೮೬	೮೮ ೫೦
ಹುಣಸೆಬೀಜ	೫ ೫೦	೬ ೨೫
ಹುಣಸೇಹಣ್ಣು	೨ ೫೦	೪ ೫೬
ಸೀಗೆಕಾಯಿ	೮ ೦೯	೮ ೨೫
ಮೆಣಸಿನಕಾಯಿ	೧೮ ೮೬	೨೦ ೬೩
ತೆಂಗಿನಕಾಯಿ	೧೮೦ ೦೦	೨೯೬ ೫೦

ಸಂಸ್ಥಾನದಲ್ಲಿ ವಿದ್ಯುತ್ ಸೌಕರ್ಯ ಹೆಚ್ಚಿಸಲು ೧ ಕೋಟಿ ರೂ.

ಮೈಸೂರಿಗೆ ಕೇಂದ್ರ ಸರ್ಕಾರದ ಸಾಲ

೫೬-೫೭ನೇ ಸಾಲಿನಲ್ಲಿ ಮಂಜೂರಾದ ವಿದ್ಯುಚ್ಛಕ್ತಿ ಯೋಜನೆಗಳಿಗೆ ತಗಲಿದ ವೆಚ್ಚಕ್ಕಾಗಿ ಸಂಸ್ಥಾನ ಸರ್ಕಾರಕ್ಕೆ ಕೇಂದ್ರದವರು ೧ ಕೋಟಿ ರೂ ಸಾಲವನ್ನು ಮಂಜೂರು ಮಾಡಿದ್ದಾರೆ ರಾಜ್ಯದ ವಿವಿಧ ಭಾಗಗಳಲ್ಲಿ ಹೆಚ್ಚು ಉದ್ಯೋಗಗಳನ್ನು ಕಲ್ಪಿಸಲೂ ಸಹ ಈ ಪ್ರಯತ್ನ ಕೈಗೊಳ್ಳಲಾಗಿದೆ ಯೋಜನೆಯ ಪ್ರಕಾರ ಬೆಂಗಳೂರು ಜಿಲ್ಲೆಯಲ್ಲಿ ೩೧, ಕೋಲಾರ ೧೧, ತುಮಕೂರು ೮, ಮೈಸೂರು ೨೯, ಮಂಡ್ಯ ೧೮, ಚಿಕ್ಕಮಗಳೂರು ೧೫, ಚಿತ್ರದುರ್ಗ ೩, ಹಾಸನ ೧೩, ಶಿವಮೊಗ್ಗ ೧೧ ಮತ್ತು ಬಳ್ಳಾರಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ಬಸವೇಶ್ವರರ ವಚನ ೬-೫ ಗೋಟುವಾದ್ಯ. ೬-೧೫ ಎ. ನರಸಿಂಹ[illegible] ವರನಾಮ ೬-೩೦ ಮತ್ತು ೮-೧೫ [illegible] ಅನಂತನಾರಾಯಣ ಅಯ್ಯಂಗಾರ್-[illegible]ನ ಮಧ್ಯಾಹ್ನ ೧೨ ರತ್ನ [illegible] ೧೨-೩೦ ಎ ನರಸಿಂಹಮೂರ್ತಿ—ಗಾಯನ. ೧ ರಿಕಾರ್ಡ್ಸ್ ೧-೫೦ ಗೋಟುವಾದ್ಯ ಸಂಜೆ ೬-೧೫ ವಚನಗಾನ. ೬-೩೦ ಈದ್ ಉಲ್-ಫಿತರ್-ಕನ್ನಡ ಭಾಷಣ ೮ ವಚನಗಾನ ೯ [illegible] ಮುತ್ತಿನಹಾರ ಬಸವೇಶ್ವರರ ವಚನ-[illegible]ಡದಂತೆ ೯-೧೫ ವಿಜ್ಞಾನ ವಿಷಯ. ೯-೩೦ ರಾಷ್ಟ್ರೀಯ ನಾಟಕ ಕಾರ್ಯಕ್ರಮ-ದೆಹಲಿ ರಿಲೆ.

ಒಲಂಪಿಯಾ ✱ ಇದೇ 2.5.57ರಿಂದ ಪ್ರಾರಂಭ
ದಿನವಹಿ 3 ಪ್ರದರ್ಶನಗಳು

ಶ್ರೀಮುಖ ಕಾರ್ಯ ರೂಪಿಯಾದ
ಗುರುದತ್ತರ ಕಲ್ಪನಾ ಚತುರತೆ

★ ಪ್ಯಾಸಾ ★

ಎಸ್ ಡಿ ಬರ್ಮನ್‌ರವರ ಸಂಗೀತ, ಸಾಹಿರ್‌ರವರ ಸಾಹಿತ್ಯ, ಮಾಲಾ ಸಿನ್ಹ, ರೆಹಮಾನ್,
ಗುರುದತ್‌ರವರ ನಟನಕಲಾ ಕೌಶಲ್ಯದಿಂದ ಕೂಡಿದ ಅತ್ಯುನ್ನತ ಮಟ್ಟದ ಚಿತ್ರ

ಬೊಂಬಾಯಿಯಲ್ಲಿ ಮೂರು ವಾರಗಳಲ್ಲಿ 1,97,507-15-0 ಈ ಚಿತ್ರ ಗಳಿಸಿದೆ. ದೆಹಲಿಯಲ್ಲಿ 2 ಚಿತ್ರ ಮಂದಿರಗಳಲ್ಲಿ ಈ ಚಿತ್ರವು 1 ಲಕ್ಷಕ್ಕೂ ಹೆಚ್ಚಿನ ಹಣವನ್ನು 2 ವಾರಗಳಲ್ಲಿ ಗಳಿಸಿದೆ

4 ವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ, ಫ್ರೀ ಪಾಸು ಮನ್ನಾ ಮಾಡಲಾಗಿದೆ

ಭಾರತ್ ಮಿಲ್ಕ್ ಡೈರಿ
ನೂರಡಿ ರಸ್ತೆ ಕ್ರಾಸ್, ಮೈಸೂರು

ನಮ್ಮಲ್ಲಿ ಆಗತಾನೆ ಕರೆದ ಅಪ್ಪಟ ಹಸುವಿನ ಹಾಲನ್ನು
ಪೌಂಡ್ ಒಂದಕ್ಕೆ ರೂ. 0-3-3ರಂತೆ ಕೊಡಲಾಗುತ್ತೆ
ಕೂಪನ್ನುಗಳ ಮೇಲೂ ಬಿಕರಿ ವ್ಯವಸ್ಥೆ ಮಾಡಲಾಗಿದೆ
ಮತ್ತು ಮನೆಗಳಿಗೂ ಸಹ ಸಪ್ಲೈ ಮಾಡಲಾಗುತ್ತೆ
ಪ್ರೊಪ್ರೈಟರ್ . ಎ. ಎಸ್. ದಾಸರ್

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ.
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
'ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು'
ಅಶೋಕ ರಸ್ತೆ, ಮೈಸೂರು (Estd 1911)

FOR MARRIAGE AND SPECIAL OCCASIONS

★ We offer all kinds of Provisions, Cleaned and ready for use, at Competitive rates

★ We also offer to take back all the remaining provisions, after such occasions at the same cost.

TRY ONCE AND BE CONVINCED

BOMBAY ANAND BHAVAN STORES.

PHONE No. 645. *NEW STATUE CIRCLE* *MYSORE*

SUNDAY SHOPPING FACILITY AVAILABLE

L[illegible], Printed and Published by
[illegible] at Sadhvi Press,
[illegible] Road, Mysore

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI , THURSDAY 2—5—1957 ಮೈಸೂರು , ಗುರುವಾರ ೨—೫—೧೯೫೭ [ಸಂಚಿಕೆ : ೩೭೦

ಹೊಸ ತೆರಿಗೆಗಳ ಬಗ್ಗೆ ಮುಖ್ಯ ಮಂತ್ರಿಗಳವರ ಸೂಚನೆ

ಹೊಸ ತೆರಿಗೆಗಳ ವಿಧಾಯಕದ ಸಂಭವ

ಧಾರವಾಡ ಜಿಲ್ಲಾ ಬೋರ್ಡು ಸಮಾರಂಭದಲ್ಲಿ ನಿಜಲಿಂಗಪ್ಪನವರ ನುಡಿ

ಧಾರವಾಡ ಜಿಲ್ಲಾ ಬೋರ್ಡಿನವರು ನೆನ್ನೆ ಇತ್ತ ಸನ್ಮಾನ ಪತ್ರಕ್ಕೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಉತ್ತರವೀಯುತ್ತಾ, ಮೈಸೂರಿನ ಪ್ರಜೆಗಳು ಹೊಸ ತೆರಿಗೆಗಳನ್ನು ತೆರಲು ಸಿದ್ಧರಾಗಿರಬೇಕೆಂದು ಸೂಚಿಸಿದರು. ಈ ವಿಚಾರವನ್ನು ಯೋಚಿಸಬೇಕಾಗಿರುವುದೆಂದೂ, ಅದು ಜನರ ಹಿತಕ್ಕಾಗಿಯೇ ಎಂದೂ ಅವರು ನುಡಿದರು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳು ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಕೆಲವು ತೆರಿಗೆಗಳನ್ನು ಹಾಕಲು ಅವಕಾಶವಿರಬೇಕೆಂದು ಅವರು ತಿಳಿಸಿ, ರಾಷ್ಟ್ರ ಪುನರ್ನಿರ್ಮಾಣ ಕಾರ್ಯದಿಂದ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳ ಜವಾಬ್ದಾರಿಯು ಈಗ ಅಧಿಕವಾಗಿ, ಸ್ಥಳೀಯ ಸಂಸ್ಥೆ ಮತ್ತು ಗ್ರಾಮ ಪಂಚಾಯಿತಿಗಳ ಕಾರ್ಯ ಕ್ಷೇತ್ರವನ್ನು ಹೆಚ್ಚಿಸಲು ಅವುಗಳಿಗೆ ಅಧಿಕ ಧನ ಸಹಾಯ ನೀಡಬೇಕಾಗುವುದೆಂದೂ ಅವರು ತಿಳಿಸಿದರು. ತಮ್ಮ ಭೇಟಿಯು ದೀರ್ಘಕಾಲ ಜ್ಞಾಪಕದಲ್ಲಿರಲೆಂದು ಅವರಿಗೆ ಒಪ್ಪಿಸಿದ ರಜತ ಕರಂಡವನ್ನು ಮುಖ್ಯ ಮಂತ್ರಿಗಳು ಬೋರ್ಡಿಗೇ ವಾಪಸು ಕೊಟ್ಟರು.

ಚುನಾವಣೆಯಲ್ಲಿ ಜಯಶೀಲರಾದವರಿಗೆ ಸತ್ಕಾರ

ಮೈಸೂರು ೨

ಮೈಸೂರು ರೀಜನಲ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯ, ಚುನಾವಣೆಯಲ್ಲಿ ಜಯಗಳಿಸಿದ ಕಾಂಗ್ರೆಸ್ ಉಮೇದುವಾರು ಶ್ರೀಗಳಾದ ಪುಟ್ಟಸ್ವಾಮಿ, ಟಿ. ಪಿ. ಬೋರಯ್ಯ, ಎಂ. ಶಂಕರಯ್ಯ, ಕೆ. ಎಸ್. ಸೂರ್ಯನಾರಾಯಣರಾವ್ ಮತ್ತು ಎಸ್. ಎಂ. ಸಿದ್ದಯ್ಯನವರ ಗೌರವಾರ್ಥವಾಗಿ ನಗರದ ಫ್ರೆಂಡ್ಸ್ ಯೂನಿಯನ್ ಫುಟ್‌ಬಾಲ್ ಕ್ಲಬ್ಬಿನವರೂ, ಮತ್ತಿತರ ಹಿತೈಷಿಗಳೂ ಒಂದು ಸತ್ಕಾರ ಕೂಟವನ್ನು ನೆನ್ನೆ ಬಾಲಕೃಷ್ಣಾಚಾರ್ಯರ ಛತ್ರದಲ್ಲಿ ಏರ್ಪಡಿಸಿದ್ದರು.

ಪ್ರಾರಂಭದಲ್ಲಿ ಶ್ರೀ ರಾಮಲಿಂಗಯ್ಯನವರು ಸ್ವಾಗತ ಭಾಷಣ ಮಾಡಿದರು. ಫುಟ್‌ಬಾಲ್ ಕ್ಲಬ್ಬಿನ ಶ್ರೀ ನಾಯ್ಡುರವರು ಮಾತನಾಡಿ, ಕ್ರೀಡೆಗಳಿಗೆ ಸರ್ಕಾರದಿಂದ ಪ್ರೋತ್ಸಾಹ ಸಾಲದೆಂದೂ, ನಗರದಲ್ಲಿ ಕ್ರೀಡಾಂಗಣವೊಂದನ್ನು ನಿರ್ಮಿಸಬೇಕೆಂದೂ ಹೇಳಿದರು.

ಶ್ರೀಗಳಾದ ಕೆ. ಪುಟ್ಟಸ್ವಾಮಿ, ಟಿ. ಪಿ. ಬೋರಯ್ಯ, ಎಂ. ಶಂಕರಯ್ಯ ಮತ್ತು ಕೆ. ಎಸ್. ಸೂರ್ಯನಾರಾಯಣರಾಯರು ಭಾಷಣ ಮಾಡಿ ಸತ್ಕಾರಕ್ಕಾಗಿ ವಂದಿಸಿದರು. ನಗರದ ಸ್ವಾಮ್ಯತೆಯನ್ನು ಉಳಿಸಲು ಸರ್ಕಾರದವರು ಸೂಕ್ತವಾದ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುವರೆಂದೂ ಶ್ರೀ ಚನ್ನಯ್ಯನವರು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ಲಿಂಗಣ್ಣನವರ ಭಾಷಣವಾದನಂತರ ಕಂಟ್ರಾಕ್ಟರ್ ಶ್ರೀ ಪುಟ್ಟಸ್ವಾಮಯ್ಯನವರು ವಂದನಾರ್ಪಣೆ ಮಾಡಿದರು.

ಪಲ್ಲಡಂ ನಾಗರಾಜರಾಯರ ವೇಣು ವಾದನ

ಮೈಸೂರು ೨

ವೇಣುಗಾನ ಪ್ರವೀಣ ಪಲ್ಲಡಂ ನಾಗರಾಜರಾಯರು ಈ ಸಂಜೆ ೬ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಕಟ್ಟಡದಲ್ಲಿ ತಮ್ಮ ಅಪೂರ್ವವಾದ ವೇಣುಗಾನವನ್ನು ಮಾಡುವರು. ಆರ್. ವಿ. ಶೇಷ [illegible] ಪಿಟೀಲು, ಟಿ. ಎಂ. ವೆಂಕಟೇಶದೇವರವರ ಮೃದಂಗ [illegible] ಸಂಗೀತ [illegible] ನಡೆಯುವುದು. ಸರ್ವರಿಗೂ ಸ್ವಾಗತವಿದೆ.

ಅರಮನೆ ನೌಕರರ ಸಭೆಯಲ್ಲಿ ಜೆ. ಬಿ. ಮಲ್ಲಾರಾಧ್ಯರ ಭಾಷಣ

ಅರಮನೆ ನೌಕರರ ಸಭೆ ಆಶ್ರಯದಲ್ಲಿ ಇಂದು ಸಂಜೆ ೬ ಗಂಟೆಗೆ ನಗರದ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ಏರ್ಪಾಡಾಗಿದೆ. ಪ್ರಜಾ ಸಮಾಜವಾದಿ ಪಕ್ಷದ ಮುಖಂಡರಾದ ಶ್ರೀ ಜೆ. ಬಿ. ಮಲ್ಲಾರಾಧ್ಯ ಮತ್ತು ಇತರ ಪ್ರಮುಖರು ಭಾಷಣ ಮಾಡುವರು.

ಕೋಮು ಭಾವನೆ ಕಿತ್ತು ಹಾಕಲು ನಿಜಲಿಂಗಪ್ಪನವರ ದೃಢ ನಿಶ್ಚಯ

ಮುಖ್ಯ ಮಂತ್ರಿತ್ವದ ಬಗ್ಗೆಯೂ ಚಿಂತಿಸುವುದಿಲ್ಲವೆಂದು ಹೇಳಿಕೆ

ಹುಬ್ಬಳ್ಳಿಯಲ್ಲಿ ನೆನ್ನೆ ಸೇರಿದ್ದ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಮಾತನಾಡಿ, ಕಾಂಗ್ರೆಸ್ಸಿನ ರಾಜಕೀಯದಲ್ಲಿ ವಿಪರೀತವಾಗಿರುವ ಕೋಮುವಾರು ಭಾವನೆಯನ್ನು ಬೇರುಸಹಿತ ಕಿತ್ತು ಹಾಕಲು ತಾವು ಪಣತೊಟ್ಟಿರುವುದಾಗಿ ನುಡಿದರು. ತಮ್ಮ ಮುಖ್ಯ ಮಂತ್ರಿತ್ವವು ಹೋದರೂ ಚಿಂತೆಯಿಲ್ಲವೆಂದೂ, ಅಥವಾ ಅದರ ಪರಿಣಾಮವೇನೇ ಆಗಲಿ, ಜಾತೀಯತೆಯನ್ನು ಕಿತ್ತು ಹಾಕಲು ತಾವು ನಿಶ್ಚಯಿಸಿರುವುದಾಗಿಯೂ ಅವರು ನುಡಿದರು.

ಪ್ರತಿ ಕಾಂಗ್ರೆಸ್ಸಿನವನೂ ಬಹಿರಂಗವಾಗಿ ವಿಶಾಲ ಮನೋಭಾವನೆ ತೋರಿಸಿ, ಮನಸ್ಸಿನಲ್ಲಿ ಕೋಮು ಭಾವನೆ ಹೊಂದಿರುತ್ತಾನೆಂಬುದಕ್ಕೆ ಮಂತ್ರಿಮಂಡಲದ ರಚನೆ ಬಗ್ಗೆ ತಾವು ಹೊಂದಿದ ಅನುಭವವೇ ಸಾಕ್ಷಿಯೆಂದು ಅವರು ಹೇಳಿದರು. ಮಂತ್ರಿಮಂಡಲವನ್ನು ಯೋಗ್ಯತೆಯ ದೃಷ್ಟಿಯಿಂದಲೇ ರಚಿಸಲಾಯಿತೆಂದೂ ಅವರು ನುಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ವಿ. ವೆಂಕಟಪ್ಪನವರು ಮಾತನಾಡಿ ಸರ್ಕಾರದ ನಿತ್ಯ ಆಡಳಿತದಲ್ಲಿ ಕಾಂಗ್ರೆಸ್ಸಿನವರು ಕೈಹಾಕುವುದನ್ನು ಉಗ್ರವಾಗಿ ಖಂಡಿಸಿದರು.

ಅಣು ಬಾಂಬಿನ ಭೀತಿಗೆ ಉಪನಿಷನ್ಮಂತ್ರವೇ ಪರಿಹಾರ

ಉಪನಿಷತ್ ಜ್ಞಾನ ಯಜ್ಞದಲ್ಲಿ ರಾಜ್ಯಪಾಲರ ಭಾಷಣ

ಬೆಂಗಳೂರು ೨

ಇಲ್ಲಿ ನೆನ್ನೆ ಆರಂಭವಾದ ಉಪನಿಷತ್ ಯಜ್ಞದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ, ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಭಾಷಣ ಮಾಡಿ, ಅಣು ಬಾಂಬು ಮತ್ತು ಜಲಜನಕ ಬಾಂಬುಗಳ ಭೀತಿಯಿಂದ ತತ್ತರರಾಗಿರುವ ಜಗತ್ತಿನ ಜನರು ತಮ್ಮ ತಮ್ಮಲ್ಲಿರುವ ದುರಾಸೆ ಮತ್ತು ವೈಷಮ್ಯಗಳನ್ನು ಹೋಗಲಾಡಿಸಿಕೊಳ್ಳಲು ಉಪನಿಷತ್ತಿನಲ್ಲಿ ಉಕ್ತವಾಗಿರುವ ಶಾಂತಿ ಸಂದೇಶವೇ ಸೂಕ್ತ ಮಾರ್ಗವೆಂದು ತಿಳಿಸಿದರು. ಭಾರತದ ಆಧ್ಯಾತ್ಮಿಕ ತತ್ವವನ್ನು ಒಳಗೊಂಡಿರುವ ಉಪನಿಷತ್ತಿನಲ್ಲಿರುವ ಅನೇಕ ಸತ್ಯಗಳ ಕಡೆಗೆ ಜನರು ತಮ್ಮ ಗಮನವನ್ನು ಹೊರಳಿಸುವುದು ಅಗತ್ಯವೆಂದು ಅವರು ನುಡಿದರು.

ಉಪನಿಷತ್ತುಗಳು ಉತ್ತರದ ಹಿಮಾಲಯ ಪರ್ವತವೆಂದು ಪಾಶ್ಚಾತ್ಯ ಬರಹಗಾರರೊಬ್ಬರು ತಿಳಿಸಿರುವುದನ್ನು ಅವರು ಉಲ್ಲೇಖಿಸಿ, ಪುರಾತನ ಋಷಿಗಳಿಂದ ಉಕ್ತವಾದ ಉಪನಿಷತ್ತುಗಳನ್ನು ಉಚ್ಚರಿಸುವುದರಿಂದ ದೇವ ಲೋಕದ ತಂಪಾದ ಗಾಳಿಯನ್ನು ಸೇವಿಸಿದಂತಾಗುವುದೆಂದೂ, ಅದರಿಂದ ತೇಜಸ್ಸೂ ವರ್ಚಸ್ಸೂ ಓಜಸ್ಸೂ ಲಭಿಸುವುದೆಂದೂ ಅವರು ಹೇಳಿದರು.

ಉಪನಿಷತ್ ಪಾಠಗಳನ್ನು ನಡೆಸುವ ಸ್ವಾಮಿ ಚಿನ್ಮಯಾನಂದರವರು ಮಾತನಾಡಿ ನಮ್ಮ ಪವಿತ್ರವಾದ ಸಂಸ್ಕೃತಿಯ ಹಿರಿಮೆಯನ್ನರಿಯಲು ಉಪನಿಷತ್ತುಗಳ ವ್ಯಾಸಂಗವು ಅಗತ್ಯವೆಂದು ನುಡಿದರು.

ಜ್ಞಾನ ಯಜ್ಞ ಸಮಿತಿಯ ಅಧ್ಯಕ್ಷರಾದ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿದರು.

ಪಶ್ಚಿಮ ಜರ್ಮನಿಯಲ್ಲಿ ಅಣು ಶಸ್ತ್ರ ಶೇಖರಣೆಯಿಲ್ಲ

ಪಶ್ಚಿಮ ಜರ್ಮನಿಯ ಸೈನ್ಯಗಳಿಗೆ ಅಣು ಶಸ್ತ್ರಗಳನ್ನೊದಗಿಸಲು ಆಲೋಚಿಸಲಾಗಿರುವುದೆಂಬುದನ್ನು ಅಲ್ಲಿನ ವಿದೇಶಾಂಗ ಮಂತ್ರಿ ಹೆನ್ರಿಕ್ ವಾನ್ ಬ್ರೆಂಟಾನೊರವರು ನಿರಾಕರಿಸಿರುತ್ತಾರೆ. ರಷ್ಯವು ಪಶ್ಚಿಮ ಜರ್ಮನಿಗೆ ಅಣು ಶಸ್ತ್ರ ಶೇಖರಣೆ ಬಗ್ಗೆ ಕೊಟ್ಟ ಎಚ್ಚರಿಕೆ ವಿಚಾರವನ್ನು ಅವರು ಪ್ರಸ್ತಾಪಿಸಿ, ರಷ್ಯದ ಭಾವನೆಯು ಸರಿಯಲ್ಲವೆಂದು ತಿಳಿಸಿರುತ್ತಾರೆ.

ಬೆಂಗಳೂರು ರೇಡಿಯೋ ಶಾಲೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಿತಾರ್ ೭-೧೫ ಗಾಂಧಿ ಸ್ಮೃತಿ. ೭-೩೦ ಹಿಂದಿ ಪಾಠ ೮-೧೫ ಆರ್. ರಾಮಮೂರ್ತಿ-ದೇವರನಾಮ. ಮಧ್ಯಾಹ್ನ ೧೨ ಮತ್ತು ರಾತ್ರಿ ೧೦ ಎಲ್. ಎಸ್. ಸಂಪತ್-ಸಂಗೀತ. ೧೨-೩೦ ವನಿತಾವಿಹಾರ. ೧-೩೦ ರೆಕಾರ್ಡು ೧-೫೦ ಸಿತಾರ್ ಸಂಜೆ ೬-೧೦ [illegible] ೭-೨೦ [illegible] ಮಹಿಳೆಯರ ಶಿಕ್ಷಣ—ಭಾಷಣ ೮ ಮದ್ರಾಸಿನಿಂದ ಸಿ. ಸುಬ್ರಹ್ಮಣ್ಯಪಿಳ್ಳೆ—ಸಂಗೀತ ೯-೧೫ ತರಂಗರಂಗ ೧೦-೧೫ ಉರ್ದು ಗೀತೆ

ಅರಮನೆ ಸಿಬ್ಬಂದಿಯವರ ನಿವೃತ್ತಿಗಾಗಿ ಪ್ರತಿಭಟನೆ

೭೫೦ ಜನ ನೌಕರರ ಮೆರವಣಿಗೆ

ಮೈಸೂರು ೨

ಅರಮನೆ ಸಿಬ್ಬಂದಿ ಪೈಕಿ ಸುಮಾರು ೫೦೦ ಮಂದಿ ನೌಕರರನ್ನು ಕೆಲಸದಿಂದ ತೆಗೆದುದಕ್ಕಾಗಿ ಪ್ರತಿಭಟಿಸಲು ನೆನ್ನೆ ಅರಮನೆಯ ೭೫೦ ಜನ ನೌಕರರ ಭಾರಿ ಮೆರವಣಿಗೆಯು ದೊಡ್ಡಪೇಟೆ, ಸಯ್ಯಾಜಿರಾವ್ ರಸ್ತೆ ಮೊದಲಾದ ಪ್ರಮುಖ ಬೀದಿಗಳಲ್ಲಿ ನಡೆಯಿತು. ನಂತರ ಟೌನ್ ಹಾಲ್ ಮೈದಾನದಲ್ಲಿ ಶ್ರೀ ವೇದಾಂತ ಹೆಮ್ಮಿಗೆಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ನಿವೃತ್ತರಾದವರಿಗೆ ಜೀವನೋಪಾಯಕ್ಕಾಗಿ ಪರಿಹಾರ ಕಲ್ಪಿಸದಿದ್ದರೆ ನಾಳಿದ್ದಿನಿಂದ ನೇರ ಕಾರ್ಯಾಚರಣೆ ಕೈಗೊಳ್ಳತಕ್ಕದ್ದೆಂದು ತೀರ್ಮಾನಿಸಲಾಯಿತು.

ಸಂಗೀತ

ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ರಾಮಸೇವಾ ಸಂಘದ ಭಕ್ತಮಂಡಲಿಯವರು ಈ ಸಂಜೆ ೬॥ ಗಂಟೆಗೆ ವಿ॥ ಎಸ್. ವಿಶ್ವನಾಥನ್‌ರವರ ಸಂಗೀತವನ್ನು ಶ್ರೀ ವಿ. ವೆಂಕಟಾಚಾರ್ಯರ ಪಿಟೀಲು ಮತ್ತು ಶ್ರೀ ರಾಜಗೋಪಾಲ್‌ರವರ ಮೃದಂಗದೊಡನೆ ಏರ್ಪಡಿಸಿರುವರು.

ರಾಮ ಪಟ್ಟಾಭಿಷೇಕ

ಮೈಸೂರು ಸಿವಿಲ್ ಪೋಲೀಸು ಲೈನಿನಲ್ಲಿ ಈ ರಾತ್ರಿ ೮ ಗಂಟೆಗೆ ಶ್ರೀರಾಮ ಪಟ್ಟಾಭಿಷೇಕವೂ, ವೇ॥ ಎಸ್. ಕೆ. ಅನಂತಪದ್ಮನಾಭ ಭಾಗವತರಿಂದ ಹರಿಕಥೆಯೂ, ನಾಳೆ ಸಾಯಂಕಾಲ ಉತ್ಸವವೂ ನಡೆಯುವುವು.

ಉತ್ತರ ಪ್ರದೇಶ ಶಾಸನ ಸಭೆಯಲ್ಲಿ ಗೊಂದಲ

ಉತ್ತರ ಪ್ರದೇಶದ ವಿಧಾನ ಸಭೆಯಲ್ಲಿ ಮೊನ್ನೆ ಸದಸ್ಯರಲ್ಲೇ ಬಿಸಿಬಿಸಿ ಮಾತುಗಳು ಬೆಳೆದು ಗೊಂದಲವಾಯಿತೆಂದು ವರದಿಯಾಗಿದೆ. ಸದಸ್ಯರು ಘೋಷಣೆಗಳನ್ನು ಕೂಗುತ್ತಾ ಮೇಜುಗಳನ್ನು ಬಡಿದು ಗದ್ದಲ ಮಾಡಿದುದರಿಂದ ಸಭಾ ಕಾರ್ಯಕ್ರಮವು ಅರ್ಧ ಗಂಟೆ ಕಾಲ ನಿಂತು ಹೋಗಿತ್ತು. ಸಭಾಧ್ಯಕ್ಷರ ಗೈರುಹಾಜರಿ ಸಮಯದಲ್ಲಿ ಯಾರು ಅಧ್ಯಕ್ಷತೆ ವಹಿಸಬೇಕೆಂಬ ಬಗ್ಗೆ ವಿವಾದಗಳು ಆದುವು. ವಿರೋಧಪಕ್ಷದ ನಾಯಕ ತ್ರಿಲೋಕಿ ಸಿಂಗರನ್ನು ಅಧ್ಯಕ್ಷತೆಗೆ ವಿರೋಧ ಗುಂಪಿನವರು ನಾಮಕರಣ ಮಾಡಿದರು. ಅದಕ್ಕೆ ಸರಬರಾಜು ಮಂತ್ರಿ ಅಲಿ ಜಹೀರ್‌ರವರು ಪ್ರತಿಭಟಿಸಿದರು.

ಸಂಬಳ ಕೊಡುವವರೆಗೆ ೧,೦೦೦ ಅಂಚೆ ನೌಕರರ ಮುಷ್ಕರ

ಬೆಂಗಳೂರು ೨

ತಮ್ಮ ಸಂಬಳ ಬಟವಾಡೆಯಾಗುವವರೆಗೂ ಕೆಲಸಕ್ಕೆ ಬರಬಾರದೆಂದು ಇಲ್ಲಿನ ೧,೦೦೦ ಮಂದಿ ಅಂಚೆ ನೌಕರರು ನಿರ್ಧರಿಸಿರುತ್ತಾರೆ. ತಿಂಗಳ ಸಂಬಳವನ್ನು ನೌಕರರಿಗೆ ಬಟವಾಡೆ ಮಾಡಿಲ್ಲವೆಂದೂ, ಅದಕ್ಕೆ ನುರಿತ ಅಕೌಂಟೆಂಟ್ ಸಿಬ್ಬಂದಿಯವರನ್ನು ಬೇರೆ ಕಡೆ ವರ್ಗ ಮಾಡಿರುವುದರಿಂದ ಸಿಬ್ಬಂದಿ ಸಾಲದಾಗಿರುವುದೆಂಬ ಕಾರಣವನ್ನು ಕೊಡಲಾಗಿರುವುದೆಂದೂ ತಿಳಿದಿದೆ.

ಬಸವ ಜಯಂತಿ ಕಾರ್ಯಕ್ರಮ

ಮೈಸೂರು ೨

ತ್ಯಾಗರಾಜರಸ್ತೆ ಅಕ್ಕನ ಬಳಗದ ಕಟ್ಟಡದಲ್ಲಿ ನಾಳೆ ಸಂಜೆ ೬ ಗಂಟೆಗೆ ಉತ್ಸವದ ಅಂಗವಾಗಿ ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರು ಬಸವಣ್ಣನವರ ಸಂದೇಶ ಎಂಬ ವಿಚಾರವಾಗಿ ಭಾಷಣ ಮಾಡುವರು. ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ಅಧ್ಯಕ್ಷತೆ ವಹಿಸುವರು ಶ್ರೀಮತಿ ಗೌರಮ್ಮ ನಾಗರಾಜ್ ಮತ್ತು ವಿ|| ವೆಂಕಟಸುಬ್ಬಯ್ಯನವರಿಂದ ಹರಿಶ್ಚಂದ್ರ ಕಾವ್ಯ ವಾಚನ ಮತ್ತು ವ್ಯಾಖ್ಯಾನಗಳಿವೆ

ಅದೇ ರಸ್ತೆಯಲ್ಲಿರುವ ಶರಣ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ವಿ|| ರಂ. ಮರತ್ನಂರವರ ಸಂಗೀತವು ಜರುಗುವುದು.

ಉತ್ತರಾದಿ ಮಠದ ಬೀದಿಯಲ್ಲಿರುವ ಸಿದ್ಧಪ್ಪಾಜಿ ಗದ್ದುಗೆ ಬಳಿ ಹಾಕಿರುವ ಚಪ್ಪರದಲ್ಲಿ ಜಯಂತಿ ಪ್ರಯುಕ್ತ ಈ ರಾತ್ರಿ ೮|| ಗಂಟೆಗೆ ವಿ|| ಕೊಣನೂರು ಸೀತಾರಾಮಶಾಸ್ತ್ರಿಗಳಿಂದ ಗಿರಿಜಾ ಕಲ್ಯಾಣ ಎಂಬ ಕಥೆಯು ನಡೆಯುವುದು.

ಕೃಷ್ಣರಾಜನಗರದ ವೀರಶೈವ ಮಂಡಲಿ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಿವ್ಯತ್ತ ಬ್ಯಾಂಕ್ ಮ್ಯಾನೇಜರ್ ಶ್ರೀ ಎಸ್ ವಿ ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಜ ನ ಕೃಷ್ಣರಾಯರು ಅಲ್ಲಮ ಪ್ರಭುವಿನ ಮುಕ್ತಿಮಾರ್ಗ ಎಂಬ ವಿಚಾರವಾಗಿ ಭಾಷಣ ಮಾಡುವರು

ನಗರದಲ್ಲಿ ವಾರ್ತಾ ಕಛೇರಿಯ ಶಾಖೆ

ನಗರದ ಪತ್ರಿಕೋದ್ಯೋಗಿಗಳ ಸಂಘದ ಶ್ರೀಯುತ ಎಂ. ಎ ತಿಮ್ಮಯ್ಯ ಎ ರಾಮಣ್ಣ ಮತ್ತು ಕೆ. ಎಂ ಆರ್. ವಿ ಶಾಸ್ತ್ರಿಗಳನ್ನೊಳಗೊಂಡ ನಿಯೋಗವೊಂದುಮೊನ್ನೆ ಸಂಸ್ಥಾನದ ವಾರ್ತಾ ಇಲಾಖಾ ಸಚಿವ ಶ್ರೀ ಸಿ. ಎಂ ಪೂಣಚ್ಚರವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ನಗರದಲ್ಲಿ ಒಂದು ವಾರ್ತಾ ಕಛೇರಿಯನ್ನು ತೆರೆಯುವುದರ ಅವಶ್ಯಕತೆಯನ್ನು ವಿವರಿಸಿತು ಅದಕ್ಕುತ್ತರವಾಗಿ ಮೇ ೧೫ರ ಹೊತ್ತಿಗೆ ಮೈಸೂರು ನಗರದಲ್ಲಿ ಉಪ ವಾರ್ತಾ ಕಛೇರಿಯೊಂದನ್ನು ತೆರೆಯಲಾಗುವುದೆಂದೂ, ಅದಕ್ಕೆ ಮೈಸೂರು, ಮಂಡ್ಯ, ಹಾಸನ, ಕೊಡಗು ಮುಂತಾದ ಜಿಲ್ಲೆಗಳ ವ್ಯಾಪ್ತಿಯಿರುವುದೆಂದೂ ಸಚಿವರು ತಿಳಿಸಿದರು.

ಮಾತೃಮಂಡಲಿಯ ವಾರ್ಷಿಕೋತ್ಸವ

ವಾಣಿವಿಲಾಸ ಮೊಹಲ್ಲಾದಲ್ಲಿರುವ ಮಾತೃಮಂಡಲಿಯ ವಾರ್ಷಿಕಾಧಿವೇಶನವು ಕಳೆದ ಭಾನುವಾರ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಶ್ರೀರಂಗರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಂಡಲಿಯ ಅಧ್ಯಕ್ಷಿಣಿ ಶ್ರೀಮತಿ ಸುನಂದಮ್ಮನವರು ಸ್ವಾಗತ ಭಾಷಣ ಮಾಡಿ ಸಂಘದ ಚಟುವಟಿಕೆಗಳನ್ನು ವಿವರಿಸಿದರು ಶ್ರೀಮತಿ ಪಾರ್ವತಿಬಾಯಿ ರಾಮಯ್ಯಂಗಾರ್ಯರು ವರದಿಯನ್ನು ಒಪ್ಪಿಸಿದರು. ಅಧ್ಯಕ್ಷರು ಭಾಷಣ ಮಾಡಿ ಮಂಡಲಿಯ ಕಾರ್ಯಕ್ರಮಗಳನ್ನು ಪ್ರಶಂಸಿಸಿ, ಅದಕ್ಕೆ ಪ್ರೋತ್ಸಾಹ ನೀಡುವುದು ಅಗತ್ಯವೆಂದು ತಿಳಿಸಿ ಈ ಬಗ್ಗೆ ಸರ್ಕಾರದಿಂದ ಆಗುವ ಸಹಾಯವನ್ನು ಕೊಡಿಸುವುದಾಗಿ ಭರವಸೆಯಿತ್ತರು. ಮಕ್ಕಳಿಂದ ನಾಟಕ, ನೃತ್ಯ, ಸಂಗೀತ ಮುಂತಾದುವು ಅದನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಹರಿಕಥೆ

ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಶಂಕರ ಉತ್ಸವದ ಅಂಗವಾಗಿ ನಾಳೆ ಸಂಜೆ ೬|| ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ವಿ|| ಎಸ್ ಕೆ ಅನಂತಪದ್ಮನಾಭ ಭಾಗವತರು ಭಕ್ತ ಸುಧನ್ವ ಎಂಬ ಹರಿಕಥೆಯನ್ನು ಮಾಡುವರು

ಸಟ್ಟಾ ಜೂಜಿಗಾಗಿ ದಂಡ

ನಗರದ ಕೆ. ಆರ್ ಆಸ್ಪತ್ರೆ ರಸ್ತೆಯಲ್ಲಿ ರುದ್ರಾಚಾರಿ ಮತ್ತು ಗಂಗಾಧರಪ್ಪ ಎಂಬುವರು ಸಟ್ಟಾ ಜೂಜಾಡುತ್ತಿದ್ದುದನ್ನು ಲಷ್ಕರ್ ಪೊಲೀಸರು ಪತ್ತೆಹಚ್ಚಿ ಹೂಡಿದ್ದ ಮೊಕದ್ದಮೆಯಲ್ಲಿ ದ್ವಿತೀಯ ನಗರ ನ್ಯಾಯಾಧೀಶರು ನೆನ್ನೆ ಅಪಾದಿತರಿಗೆ ತಲಾ ೩೫ ರೂ ದಂಡ ವಿಧಿಸಿದರು

ಬಿಳಿಗೆರೆ ಕ್ಷೇತ್ರದ ಚುನಾವಣೆ ಬಗ್ಗೆ ತಕರಾರು ಅರ್ಜಿ

ಮೈಸೂರು ೨

ನಂಜನಗೂಡು ತಾಲ್ಲೂಕು ಬಿಳಿಗೆರೆ ಕ್ಷೇತ್ರದಿಂದ ವಿಧಾನ ಸಭೆಗೆ ಆರಿಸಿಬಂದಿರುವ ಶ್ರೀ ಜಿ ಎಂ. ಚಿನ್ನಸ್ವಾಮಿಯವರ ಚುನಾವಣೆಯ ಕ್ರಮಬದ್ಧತೆಯನ್ನು ಪ್ರಶ್ನಿಸಿ ನಗರ್ಲೆ ಗ್ರಾಮದ ಜಮೀನುದಾರರಾದ ಶ್ರೀ ಎ ಎಸ್ ಮಲ್ಲಪ್ಪ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀ ಎಂ ಸಿದ್ದಪ್ಪನವರು ಚುನಾವಣಾ ಕಮಿಷನ್ನಿಗೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಶ್ರೀ ಚಿನ್ನಸ್ವಾಮಿಯವರು ಲಂಚ [illegible]ಗಳಲ್ಲಿ ತೊಡಗಿದ್ದರೆಂದು ಆಪಾದಿಸಲಾಗಿದೆ. ಆದ್ದರಿಂದ ಅವರ ಚುನಾವಣೆಯನ್ನು ಅಕ್ರಮವೆಂದು ಸಾರುವುದಲ್ಲದೆ, ಚುನಾವಣೆಯಲ್ಲಿ ಹೆಚ್ಚು ಸಂಖ್ಯೆ ಮತಗಳನ್ನು ಗಳಿಸಿದವರಲ್ಲಿ ಎರಡನೆಯವರಾದ ಶ್ರೀ ಜೆ ಬಿ ಮಲ್ಲಾರಾಧ್ಯರು ಗೆದ್ದಿರುವುದಾಗಿ ಘೋಷಿಸಬೇಕೆಂದು ಕೋರಲಾಗಿದೆ.

ಬಂಗಾರುಪೇಟೆ ಕ್ಷೇತ್ರದಿಂದ ವಿಧಾನ ಸಭೆಗೆ ಆರಿಸಿಬಂದಿರುವ ಶ್ರೀ ಇ ನಾರಾಯಣಗೌಡರ ಚುನಾವಣೆಯ ವಿರುದ್ಧವಾಗಿ, ಸೋತ ಉಮೇದುವಾರರಾದ ಶ್ರೀ ಡಿ ವೆಂಕಟರಾಮಯ್ಯನವರು ತಕರಾರು ಅರ್ಜಿಯನ್ನು ಹಾಕಿರುತ್ತಾರೆ ಬೆಂಗಳೂರು ಕಬ್ಬನ್‌ಪೇಟೆ ಚುನಾವಣೆ ವಿರುದ್ಧವಾಗಿ ಶ್ರೀ ಬಿ ನಂಜಪ್ಪನವರೂ, ದಕ್ಷಿಣ ತಾಲ್ಲೂಕಿನ ಚುನಾವಣೆ ವಿರುದ್ಧವಾಗಿ ಶ್ರೀ ರಂಗಪ್ಪ ರೆಡ್ಡಿಯವರೂ ತಕರಾರು ಅರ್ಜಿಗಳನ್ನು ಸಲ್ಲಿಸಿರುವರು ಅವರುಗಳೂ ಸೋತ ಸ್ಪರ್ಧಿಗಳು

ಔಷಧಿಗಳ ಇನ್ಸ್‌ಪೆಕ್ಟರ್

ಮೈಸೂರು ಔಷಧಿ ಶಾಸನದ ಅಂಗವಾಗಿ ನೇಮಿಸಲಾಗಿರುವ ಇನ್ಸ್‌ಪೆಕ್ಟರುಗಳ ಪೈಕಿ ಶ್ರೀ ಕೆ ಪ್ರೇಮಾನಂದಶೆಟ್ಟರನ್ನು ಮೈಸೂರು ನಗರ, ಜಿಲ್ಲೆ, ಹಾಸನ, ಕೊಳ್ಳೆಗಾಲ, ಚಿಕ್ಕಮಗಳೂರು, ಕೊಡಗು ಮತ್ತು ದಕ್ಷಿಣ ಕನ್ನಡ ಪ್ರದೇಶದ ಇನ್ಸ್‌ಪೆಕ್ಟರಾಗಿ ಮೊಕರೂರು ಮಾಡಲಾಗಿದೆ.

ಕೇಂದ್ರ ರೇಷ್ಮೆ ಬೋರ್ಡಿನ ಸಮಿತಿಗಳಿಗೆ ನೇಮಕ

ಬೆಂಗಳೂರಿನಲ್ಲಿ ಸೇರಿರುವ ಕೇಂದ್ರ ರೇಷ್ಮೆ ಬೋರ್ಡು ಸ್ಥಾಯಿ ಸಮಿತಿಗೆ ೫ ಮಂದಿ ಸದಸ್ಯರನ್ನು ಆರಿಸಿರುವ ಪೈಕಿ, ಮೈಸೂರಿನ ಕೈಗಾರಿಕಾ ಮಂತ್ರಿ ಶ್ರೀ ಸಿ ಎಂ ಪೂಣಚ್ಚರವರೂ ಇರುವರು ಬೋರ್ಡಿನ ಅಧ್ಯಕ್ಷರಾದ ಶ್ರೀ ವಿ ನಂಜಪ್ಪನವರು ರೇಷ್ಮೆ ಪಾರಿಭಾಷಿಕ ಅಭಿವೃದ್ಧಿ ಸಮಿತಿಯನ್ನು ೧ ವರ್ಷದ ಅವಧಿಗಾಗಿ ರಚಿಸಿದ್ದಾರೆ ಅದರಲ್ಲಿ ಮೈಸೂರು ಸರ್ಕಾರದ ರೇಷ್ಮೆ ಇಲಾಖೆ ಡೈರೆಕ್ಟರ್ ಶ್ರೀ ಟಿ ಕೆ ಕೃಷ್ಣಮೂರ್ತಿ ಮತ್ತು ವಿಧಾನಸಭಾ ಸದಸ್ಯರಾದ ಶ್ರೀ ಎಂ. ರಾಜಶೇಖರಮೂರ್ತಿಯವರೂ ಸದಸ್ಯರಾಗಿರುವರು

ಝಾನ್ಸಿ ರಾಣಿ ಪ್ರತಿಮೆಯ ಸ್ಥಾಪನೆ

ಸ್ವಾತಂತ್ರ್ಯದ ಪ್ರಥಮ ಹೋರಾಟದ ಜ್ಞಾಪಕಾರ್ಥವಾಗಿ ಝಾನ್ಸಿ ನಗರದಲ್ಲಿ ರಾಣಿ ಲಕ್ಷ್ಮಿಬಾಯಿಯವರ ಪ್ರತಿಮೆಯನ್ನು ಸ್ಥಾಪಿಸಲಾಗುವುದು ೨೧ ಅಡಿ ಎತ್ತರದ ಪೀಠದ ಮೇಲೆ ಅದನ್ನು ಸ್ಥಾಪಿಸಲಾಗಿದೆ ಅದಕ್ಕೆ ತಗಲುವ ೮೫,೦೦೦ ರೂ ವೆಚ್ಚವನ್ನು ಉತ್ತರ ಪ್ರದೇಶ ಸರ್ಕಾರದವರು ವಹಿಸುವರೆಂದೂ ಗೊತ್ತಾಗಿದೆ.

ದಂಗೆಯೆದ್ದ ಬೌದ್ಧ ಭಿಕ್ಷುಗಳಿಂದ ಲ್ಹಾಸಾ-ಚೀಣಾ ರಸ್ತೆಯ ನಾಶ

ಪೂರ್ವ ಟಿಬೆಟ್ಟಿನ ಖಾಂ ಪ್ರದೇಶದಲ್ಲಿ ದಂಗೆಯೆದ್ದಿರುವ ಬೌದ್ಧ ಪಾದ್ರಿಗಳು ಮತ್ತು ಖಾಮಾಂಗ್ ದಂಗೆಕೋರರು ಲ್ಹಾಸಾ ಮತ್ತು ಚೀಣಾಗಳ ನಡುವೆ ಹೊಸದಾಗಿ ಏರ್ಪಡಿಸಿರುವ ರಸ್ತೆಯನ್ನು ನಾಶಪಡಿಸುತ್ತಿರುವರೆಂದು ವರದಿಯಾಗಿದೆ ಅನೇಕ ಕಡೆ ರಸ್ತೆಗಳ ನಡುವೆ ಗುಂಡಿಗಳನ್ನು ತೋಡಲಾಗಿದೆ [illegible]’ ಮಾರ್ಗವನ್ನು ಕಡಿದು ಹಾಕಲಾಗಿದೆ ಖಾಂ ಪ್ರದೇಶದ ಮೂಲಕ ಹೋಗುವ ರಸ್ತೆಯನ್ನು ಬಿಟ್ಟು ಬೇರೊಂದು ಮಾರ್ಗದಲ್ಲಿ ರಸ್ತೆಯನ್ನು ನಿರ್ಮಿಸುವ ವಿಚಾರವನ್ನು ಚೀಣಾ ಸರ್ಕಾರದವರು ಪರಿಶೀಲಿಸುತ್ತಿರುವರು

ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ಜಯಂತಿ

ಮೈಸೂರು ೨

ನಗರದ ರಾಮಕೃಷ್ಣಾಶ್ರಮದಲ್ಲಿ ನಾಳೆ, ನಾಳಿದ್ದು ಮತ್ತು ೫ನೇ ತಾರೀಕು ಕ್ರಮವಾಗಿ ಶ್ರೀ ಶಾರದಾದೇವಿ, ಸ್ವಾಮಿ ವಿವೇಕಾನಂದರು ಮತ್ತು ಶ್ರೀ ರಾಮಕೃಷ್ಣ ಪರಮಹಂಸರ ಜಯಂತಿ ಉತ್ಸವಗಳನ್ನು ನೆರವೇರಿಸಲಾಗುವುದು ವೈಸ್ ಚಾನ್ಸೆಲರ್ ಡಾ|| ಕೆ ವಿ ಪುಟ್ಟಪ್ಪ, ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪ ಮತ್ತು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಆಯಾ ದಿನಗಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು ಸಂಗೀತ, ಉಪನ್ಯಾಸ ಮತ್ತು ಹರಿಕಥೆಗಳನ್ನು ಏರ್ಪಡಿಸಲಾಗಿದೆ ನಾಳೆ ಸಂಜೆ ೫|| ಗಂಟೆಗೆ ವಿ|| ಚೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತ ಮತ್ತು ೬|| ಗಂಟೆಗೆ ಶ್ರೀಮತಿ ಲಕ್ಷಮ್ಮ ಮತ್ತು ಸ್ವಾಮಿ ಸೋಮನಾಥಾನಂದಜಿಯವರ ಭಾಷಣಗಳಿವೆ

ವೇದ ಶಾಸ್ತ್ರ ಪೋಷಿಣೀ ಸಭೆಯ ಕಾರ್ಯಕಾರಿ ಮಂಡಲಿ

ನಗರದ ವೇದಶಾಸ್ತ್ರ ಪೋಷಿಣೀ ಸಭೆಯ ವಾರ್ಷಿಕ ಸಮ್ಮೇಳನವು ನೆನ್ನೆ ನಡೆದು, ಪ್ರಸಕ್ತ ಸಾಲಿನ ಅಧಿಕಾರ ವರ್ಗ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು ಶ್ರೀ ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಪಿ ಸೀತಾರಾಮಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಜಿ ಆರ್. ಜೋಸ್ಯರ್‌ರವರು ಕೋಶಾಧಿಕಾರಿಗಳಾಗಿಯೂ ಮತ್ತು ಮಹಾ ವಿದ್ವಾನ್ ವೈ. ಚಂದ್ರಶೇಖರ ಶಾಸ್ತ್ರಿಗಳು ಮತ್ತು ಶ್ರೀ ಎ ಮಲ್ಲಿಕಾರ್ಜುನ ಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಶ್ರೀಗಳಾದ ಎ. ಕೃಷ್ಣಯ್ಯಂಗಾರ್, ಜಿ ಕೃಷ್ಣಸ್ವಾಮಿ, ಡಾ|| ಎ. ಎ ನರಸಿಂಹಯ್ಯ, ಬಿ ಎಸ್ ವೆಂಕಟರಾಮಯ್ಯನವರು, ಎಂ ಎಸ್ ವೆಂಕಟರಮಣಾಚಾರ್ಯರು, ವಿದ್ವಾಂಸರುಗಳಾದ ಸಿ ರಾಮಚಂದ್ರಾಚಾರ್ಯರು, ಎ ವೆಂಕಟನರಸಿಂಹಾಚಾರ್ಯರು, ಕೆ ಶ್ರೀನಿವಾಸಾಚಾರ್ಯರು, ಟಿ ಆರ್ ಚನ್ನಿಗರಾಯ ಪುರಾಣಿಕರು, ಪಿ ವಿ ವೆಂಕಟಕೃಷ್ಣಭಟ್ಟರು ಮತ್ತು ಎಸ್ ಸುಬ್ರಹ್ಮಣ್ಯ ಶ್ರೌತಿಗಳು ಸದಸ್ಯರಾಗಿರುವರು

ಪೋರ್ಚುಗೀಸರ ಹೊಡೆತದಿಂದ ಗೋವಾದವನ ಮರಣ

ಪೋರ್ಚುಗೀಸ್ ಪೊಲೀಸರು ಕೆಲವು ದಿನಗಳ ಹಿಂದೆ ಗೋವಾದ ಮುಲಿಗಾವ್ ಹಳ್ಳಿಯ ಪಟೇಲರ ತಂದೆ ದತ್ತಾರಾಂ ಮಾಧುಗಾಡ್ ಎಂಬುವರನ್ನು ಹೊಡೆದ ಪರಿಣಾಮವಾಗಿ ಅವರು ಕಳೆದ ೩೦ನೇ ತಾರೀಖು ಮೃತಪಟ್ಟರೆಂದು ತಿಳಿದುಬಂದಿದೆ ಇನ್ನಿಬ್ಬರೂ ಅದೇ ರೀತಿ ಸಾಯುವ ಸ್ಥಿತಿಯಲ್ಲಿರುವರು

ಮನೆ ಮಾರಾಟಕ್ಕಿದೆ

ಡೋರ್ ನಂ 2788/9 ಚಾಮುಂಡಿ ಬಡಾವಣೆ, ಶಂಕರನಾರಾಯಣಸ್ವಾಮಿ ದೇವಸ್ಥಾನದ ಹತ್ತಿರ ಮೂರು ಕಡೆ ರಸ್ತೆ, ತಾರಸಿ ಮತ್ತು ಮಂಗಳೂರು ಹೆಂಚಿನ, ಸುಮಾರು 2000 ಚದುರ ಅಡಿ ಕಟ್ಟಡ ಉಳ್ಳ, ಮೂರು ಸಂಸಾರಗಳಿಗೆ ಅನುಕೂಲವಾಗಿರುವ, ನಲ್ಲಿ ಮತ್ತು ದೀಪ ಇರುವ ಮನೆ ಬೆಲೆ 9000 ರೂ.
ವಿವರಗಳಿಗೆ :—
ಜಯ ಅಂಡ್ ಕಂಪೆನಿ,
ಮನೆ ಮತ್ತು ಜಮೀನುಗಳ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು ಫೋನ್ : 520

ಜಾರ್ಡಾನ್ ತೊಂದರೆಗೆ ಕಮ್ಯೂನಿಸ್ಟರಪ್ರವೇಶವೇ ಕಾರ

ಅಮೆರಿಕಾ ಸರ್ಕಾರದ ಹೇಳಿಕೆ

ಜಾರ್ಡಾನಿನಲ್ಲಿ ಅಂತರ ರಾಷ್ಟ್ರೀಯ ಕಮ್ಯುನಿಸ್ಟರ ಪ್ರವೇಶವಾಗಿರುವುದೆಂದು ಅಮೆರಿಕವು ತಿಳಿಸಿದೆ ಅಮೆರಿಕವು ಪ್ರವೇಶಿಸಿ ಜಾರ್ಡಾನಿನ ಸ್ಥಿತಿಯನ್ನು ಹದಗೆಡಿಸಿರುವುದೆಂದು ರಷ್ಯ ಮಾಡಿರುವ ಅಪಾದನೆಯನ್ನು ಕುರಿತು ಎಲ್ಲ ರಾಷ್ಟ್ರಗಳ ದಾಖಲೆಗಳೂ ಇದಕ್ಕೆ ರುಜುವಾತು ಕೊಡಬಲ್ಲವೆಂದು ಅಮೆರಿಕವು ಟೀಕಿಸಿದೆ

ದ್ವಿತೀಯ ಯೋಜನೆಯ ಪ್ರಥಮ ವರ್ಷದಲ್ಲಿ ೯೦೦ ಕೋಟಿ ರೂ. ವೆಚ್ಚ

ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಪ್ರಥಮ ವರ್ಷದಲ್ಲಿ ೯೦೦ ಕೋಟಿ ರೂ.ಗಳ ಕಾರ್ಯಕ್ರಮವನ್ನು ನಡೆಸಲಾಗುವುದೆಂದು ಗೊತ್ತಾಗಿದೆ ಅದರಲ್ಲಿ ಭಾರತ ಸರ್ಕಾರವು ೪೬೫ ಕೋಟಿ ಮತ್ತು ಸಂಸ್ಥಾನಗಳು ೪೩೫ ಕೋಟಿ ರೂ. ಕೆಲಸಗಳನ್ನು ಕೈಗೊಳ್ಳುವುವು ವ್ಯವಸಾಯ ಪ್ರಶ್ನಕ್ಕೆ ಅದರಲ್ಲಿ ಪ್ರಾಧಾನ್ಯತೆಯಾಯಿತು

ಕಾಂಬೋಡಿಯಾ ಮಾಜಿ ಪ್ರಧಾನಿಗೆ ಸನ್ಯಾಸ ದೀಕ್ಷೆ

ಕಾಂಬೋಡಿಯಾ ದೇಶದ ಮಾಜಿ ಪ್ರಧಾನಿ ಖಿಂಟೆಲ್‌ರವರು ಬೌದ್ಧ ಮತಕ್ಕೆ ಸೇರಿ ಸನ್ಯಾಸ ದೀಕ್ಷೆ ವಹಿಸಿರುವರೆಂದು ವರದಿಯಾಗಿದೆ. ಅವರು ೫ ತಿಂಗಳ ಕಾಲ ಪ್ರಧಾನಿಯಾಗಿದ್ದರು

ಕರ್ನಾಟಕದ ಅಭಾವ ಪ್ರದೇಶಗಳಿಗೆ ರೆಡ್ ಕ್ರಾಸ್ ಸಹಾಯ

ಗುಲ್ಬರ್ಗ, ಬಿದರೆ, ರಾಯಚೂರು ಮತ್ತು ಜಾಪುರಗಳ ಅಭಾವ ಪ್ರದೇಶಗಳಲ್ಲಿ ಹಂಚ ಸಂಸ್ಥಾನದ ರೆಡ್‌ಕ್ರಾಸ್ ಸಂಸ್ಥೆಯವ ೩,೬೦೦ ಸೇರು ಗೋಧಿ ಮತ್ತು ೩೨|| (೬೫ ಪೆಟ್ಟಿ) ಹಣ್ಣುಗಳನ್ನು ಉಚಿತವಾಗಿ ಕಳುಹಿಸಿರುತ್ತಾರೆ

SREE GAYATHRI
TALKIES
From 2-5-57 : Daily 3 show
20th Century Fox's
THE KING AND I
(CINEMASCOPE 55 & Technicolor)
Starring - Deborah Kerr,
Yul Brynner
Six Academy Awards Picture

ನಾದಬ್ರಹ್ಮ ಸಂಗೀತ ಸಭಾ,
ಮೈಸೂರು
ಅಮೋಘ ವೇಣುವಾದನ
ತಾ|| 4 5.1957 ನೇ ಶನಿವಾರ ಸಂಜೆ 5.30
ಸೂರಬಿ ರಸ್ತೆ ಸಹಕಾರ ಭವನ
[illegible]
ವಿ|| ಟಿ. ಆರ್. ಮಹಾಲಿಂಗಂ
ರವರ ವೇಣು
ಕುಮಾರಿ ಶ್ರೀಮತಿ ಟಿ. ರುಕ್ಮಿಣಿ
ವಿದ್ವಾನ್ ಎಂ ಎಲ್ ವೀರಭದ್ರಯ್ಯ
ಮೆಂಬರುಗಳಲ್ಲದವರಿಗೆ ಪ್ರವೇಶ ದರ 2.

Edited, Printed and Publish
A. R. Nagarajan at Sadhvi
D. Subbiah Road, Mysore

ಶಾಶ್ವತವಾದ ನೆನಪಿಗಾಗಿ, ಎಲ್ಲ ಸಮಾರಂಭಗಳಲ್ಲೂ
ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನೇ
ಉಡುಗೊರೆಯನ್ನಾಗಿ ಕೊಡಿರಿ
ಬಾಳಿಕೆ ಬಗ್ಗೆ ಖಾತರಿಯೊಡನೆ ಅವನ್ನು
ಬಾಂಬೆ ಆನಂದ ಭವನ್ ಸ್ಟೋರ್ಸ್
ಫೋನ್ 645 : ನ್ಯೂ ಸ್ಟ್ಯಾಚ್ಯು ಸರ್ಕಲ್ : ಮೈಸೂರು
ಇವರಲ್ಲೇ ಕೊಂಡುಕೊಳ್ಳಿರಿ
ಬಹಳ ರಿಯಾಯಿತಿ ದರ. ಎಲ್ಲ ನಮೂನೆಗಳು ಮತ್ತು ಸೈಜುಗಳಲ್ಲೂ ದೊರೆಯುತ್ತ

ರಿಜಿಸ್ಟ್ರೀ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫ } SADHVI : FRIDAY 3—5—1957 ಮೈಸೂರು : ಶುಕ್ರವಾರ ೩—೫—೧೯೫೭ : [ಸಂಚಿಕೆ : ೨೭೦

ಕಲ್ಕತ್ತಾ ಬಳಿ ನಿರಾಶ್ರಿತರಿಗೂ, ಪೊಲೀಸರಿಗೂ ಘರ್ಷಣೆ

ಸಂಸ್ಥಾನಾದ್ಯಂತ ಭೂ ಕಂದಾಯದ ಬಗ್ಗೆ ಸರ್ವೆ

ಬೆಂಗಳೂರು ೨

ಸಂಸ್ಥಾನದಾದ್ಯಂತ ಭೂ ಕಂದಾಯದ ಬಗ್ಗೆ ರೀಸೆಟಲ್‌ಮೆಂಟ್ ಸರ್ವೆ ನಡೆಸಲು ಸರ್ಕಾರದವರು ಆಲೋಚಿಸಿರುವರೆಂದು ಗೊತ್ತಾಗಿದೆ. ಈ ಕಂದಾಯದ ಪ್ರಮಾಣವನ್ನು ಗೊತ್ತುಪಡಿಸಲು ೩೦ ವರ್ಷಗಳಿಗೊಮ್ಮೆ ಸರ್ವೆ ಸೆಟಲ್‌ಮೆಂಟ್ ಮಾಡಲಾಗುತ್ತದೆ. ಈ ಬಗ್ಗೆ ರೆವಿನ್ಯೂ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿದ್ದ ಡಿವಿಜನಲ್ ಕಮೀಷನರುಗಳ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದು ಅಖೈರಾಗಿ ನಿರ್ಧಾರವಾದ ಮೇಲೆ ಸರ್ಕಾರದವರು ಸರ್ವೆ ಕೆಲಸಕ್ಕಾಗಿ ಅನೇಕರಿಗೆ ತರಪೇತಿ ಕೊಡಲು ಏರ್ಪಡಿಸುವರು.

ಬಾಗಲಕೋಟೆ ಪೊಲೀಸ್ ಅಧಿಕಾರಿಗಳ ಸಸ್ಪೆಂಡ್

ಶಾಂತಿ ಪರಿರಕ್ಷಣ ಕಾರ್ಯವನ್ನು ಜಾರಿಗೆ ತರುವುದರಲ್ಲಿ ಅಸಮರ್ಥರಾಗಿರುವರೆಂದು ನಾಗರಿಕರು ಮಾಡಿರುವ ಆಪಾದನೆಯ ಪ್ರಯುಕ್ತ, ಬೆಳಗಾವಿ ರೇಂಜಿನ ಡಿ. ಐ. ಜಿ. ಯವರಾದ ಶ್ರೀ ಎಸ್. ಜಿ. ವಿಲ್ಲರ್‌ರವರು ಬಾಗಲಕೋಟೆಯ ಸೀನಿಯರ್ ಸಬ್ ಇನ್ಸ್‌ಪೆಕ್ಟರ್ ಡಬ್ಲ್ಯೂ. ಜಿ. ಹಳ್ಳಿ, ಡಿವಿಜನಲ್ ಪೊಲೀಸು ಸಬ್ ಇನ್ಸ್‌ಪೆಕ್ಟರ್ ಎಸ್. ನಿಂಗದಿ ಮತ್ತು ಇಬ್ಬರು ಹೆಡ್ ಕಾನ್ಸ್‌ಟೇಬಲ್ಲುಗಳನ್ನು ಸಸ್ಪೆಂಡ್ ಮಾಡಿರುತ್ತಾರೆ. ಡಿ. ಐ. ಜಿ. ಯವರು ಸ್ವತಃ ಸ್ಥಳಕ್ಕೆ ತೆರಳಿ ಕಳ್ಳಭಟ್ಟಿ ಸಾರಾಯಿ ಪೀಪಾಯಿಗಳನ್ನು ಹೊಂದಿದ್ದ ಅಂಗಡಿಯನ್ನು ಪತ್ತೆ ಹಚ್ಚಿ ೮ ಜನರನ್ನು ಬಂಧಿಸಿರುತ್ತಾರೆ.

ಶಂಕರ ಜಯಂತಿ ಕಾರ್ಯಕ್ರಮ

ಶ್ರೀ ಶಂಕರಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಬೆಳಗ್ಗೆ ೮ ಗಂಟೆಗೆ ರುದ್ರಾಭಿಷೇಕ, ದೇವಸ್ಥಾನದಲ್ಲಿ ಮಂಗಳಾರತಿ ಮತ್ತು ಸಂಜೆ ೬||| ಗಂಟೆಗೆ ಪಾಟೀಲರ್ ಚಂದ್ರಶೇಖರ ಭಟ್ಟರಿಂದ ವಿವರ್ತವಾದ ಎಂಬ ವಿಷಯವಾಗಿ ಉಪನ್ಯಾಸವಿದೆ.

ಅಭಿನವ ಶಂಕರಾಲಯದಲ್ಲಿ ನಾಳೆ ಬೆಳಗ್ಗೆ ಗಂಟೆಗೆ ಶಂಕರಾಚಾರ್ಯರ ಉತ್ಸವವು ಹಳೇ ಅಗ್ರಹಾರದ ಹಲವು ಬೀದಿಗಳಲ್ಲಿ ನಡೆಯುವುದು. ರುದ್ರ ಕ್ರಮಾರ್ಚನೆ ಮತ್ತು ಮೂರು ವೇದ ಸ್ವಸ್ತಿ ವಾಚನವೂ, ದೀಪಾರಾಧನೆಯೂ ಏರ್ಪಾಟಾಗಿದೆ. ಮಹಾಜನರು ಭಾಗವಹಿಸುವಂತೆ ಕೋರಲಾಗಿದೆ.

ವಿವೇಕಾನಂದರ ಜಯಂತಿ

ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ದಿನ ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವವನ್ನು ನೆರವೇರಿಸಲಾಗುವುದು. ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ಅಧ್ಯಕ್ಷತೆ ವಹಿಸುವರು. ಸಂಜೆ ೫.೩೦ ಕ್ಕೆ ಸಂಗೀತ ಭೂಷಣ ನರಸಿಂಹಾಚಾರ್ ಮತ್ತು ಕಾರ್ತಿಯವರ ಸಂಗೀತವೂ, ಶ್ರೀಗಳಾದ ಕಸ್ತೂರಿ ಮತ್ತು ಸ್ವಾಮಿ ಸಿದ್ಧವಾನಂದರವರಿಂದ ಉಪನ್ಯಾಸಗಳೂ ನಡೆಯುವುವು.

ಬಿಹಾರಿನ ಅಭಾವಗ್ರಸ್ತರಿಂದ ಕಣಜದ ಲೂಟಿ

೨೧೦ ಮಣ ಆಹಾರ ಪದಾರ್ಥ ಮತ್ತು ೧೧,೦೦೦ ರೂ. ಅಪಹಾರ

ಬಿಹಾರಿನ ಪೂರ್ಣಿಯಾ ಜಿಲ್ಲೆಯ ವಿಶಾಲ್‌ಪುರ ಎಂಬ ಹಳ್ಳಿಯಲ್ಲಿ ಒಬ್ಬ ಧನಿಕ ವರ್ತಕನ ಧಾನ್ಯದ ಕಣಜವನ್ನು ೩೦೦ ಮಂದಿ ಹಸಿದ ನಿರುದ್ಯೋಗಿ ರೈತ ಕೂಲಿಗಳು ಕಳೆದ ವಾರ ಲೂಟಿ ಮಾಡಿ, ೨೧೦ ಮಣ ಧಾನ್ಯ ಮತ್ತು ೧೧,೦೦೦ ರೂ ನಗದನ್ನು ಅಪಹರಿಸಿರುವುದಾಗಿ ವರದಿಯಾಗಿದೆ. ಇವರನ್ನು ಬಂಧಿಸಲಾಗಿದೆ. ಮೋಂಘೀರ್ ಜಿಲ್ಲೆಯ ತಾರಾಪುರ ಮತ್ತು ಖಗ್ಗಪುರ ಠಾಣಾ ಪ್ರದೇಶಗಳಲ್ಲೂ ಅಭಾವವುಂಟಾಗಿ ಅಪರಾಧಗಳು ಹೆಚ್ಚುತ್ತಿರುವವೆಂದು ಗೊತ್ತಾಗಿದೆ. ಸ್ಥಳೀಯರು ಅಪರಾಧ ತಡೆಗಟ್ಟುವ ಪಡೆಗಳನ್ನು ರಚಿಸಿರುತ್ತಾರೆ.

ಭಾಗಲ್ಪುರ ಜಿಲ್ಲೆಯಲ್ಲಿ ೧,೫೦೦ ಹಳ್ಳಿಗಳು ಅಭಾವಪೀಡಿತವಾಗಿವೆ.

ಕನ್ನಡ ಸಾಹಿತ್ಯ ಸಮ್ಮೇಳನ

ಅಧಿವೇಶನದ ವಿವರಗಳು

ಧಾರವಾಡದಲ್ಲಿ ಈ ತಿಂಗಳ ೬, ೭ ಮತ್ತು ೮ ನೇ ತಾರೀಕು ಸೇರಲಿರುವ ಕನ್ನಡ ಸಾಹಿತ್ಯ ಸಮ್ಮೇಳನವು ಶ್ರೀ ಶಿವರಾಮ ಕಾರಂತರವರ ಅಧ್ಯಕ್ಷತೆಯಲ್ಲಿ ಸೇರುವುದು. ೬ನೇ ತಾರೀಕು ಬೆಳಗ್ಗೆ ೯||| ಗಂಟೆಗೆ ಗ್ರಂಥ ಪ್ರದರ್ಶನದ ಪ್ರಾರಂಭೋತ್ಸವವು ಇದೆ.

೬ನೇ ತಾರೀಕು ಸಂಜೆ ೫ ಗಂಟೆಗೆ ಅಧಿವೇಶನದ ಪ್ರಾರಂಭೋತ್ಸವ, ಮಾರನೇ ದಿನ ಬೆಳಗ್ಗೆ ೯||| ಗಂಟೆಗೆ ಕಾವ್ಯ ಗಾಯನ ಮತ್ತು ಬೆಳಗ್ಗೆ ೧೦ ಗಂಟೆಗೆ ಭಾಷಾಚರ್ಚಾ ಸಮಿತಿ, ಮಧ್ಯಾಹ್ನ ೩ ಸಾಹಿತ್ಯ ಚರ್ಚಾ ಸಮಿತಿ, ಸಂಜೆ ೪ ಗಂಟೆಗೆ ವಿಚಾರ ಸಂಕಿರಣಗಳಿವೆ. ೮ನೇ ತಾರೀಕು ಬೆಳಗ್ಗೆ ೮||| ಗಂಟೆಗೆ ಕುವೆಂಪುರವರ ಅಧ್ಯಕ್ಷತೆಯಲ್ಲಿ ಕಾವ್ಯ ವಾಚನ, ೧೧ ಗಂಟೆಗೆ ಶಾಸ್ತ್ರೀಯ ವಾಙ್ಮಯದ ಚರ್ಚಾ ಸಮಿತಿಗಳಿವೆ. ಸಂಜೆ ೫ ಗಂಟೆಗೆ ಬಹಿರಂಗ ಅಧಿವೇಶನವಿದೆ.

ರಾಮೋತ್ಸವದ ಹಣದ ದುರುಪಯೋಗಕ್ಕಾಗಿ ಸಜಾ

ವಾಣಿವಿಲಾಸ ಮೊಹಲ್ಲದ ಕೇಶವಮೂರ್ತಿ ಎಂಬಾತನು ರಾಮೋತ್ಸವದ ಹಣವನ್ನು ದುರ್ವಿನಿಯೋಗಪಡಿಸಿಕೊಂಡಿದ್ದನೆಂದು ಆತನಿಗೆ ನಗರ ನ್ಯಾಯಾಧೀಶರು ನೆನ್ನೆ ೧೦ ದಿವಸಗಳ ಸಾದಾ ಸಜಾ ವಿಧಿಸಿದರು. ಪ್ರಹ್ಲಾದರಾವ್, ಪಾಪಾಚಾರಿ ಮತ್ತು ವೇಣುಗೋಪಾಲ್‌ರವರಿಗೆ ಎಚ್ಚರಿಕೆಯಿತ್ತು ಕಳುಹಲಾಯಿತು. ಆಪಾದಿತರು ರೂ ೧೧೧-೮-೦ ಗಳನ್ನು ರಾಮೋತ್ಸವಕ್ಕಾಗಿ ವಸೂಲು ಮಾಡಿ, ಉತ್ಸವವನ್ನು ನಡೆಸಲಿಲ್ಲವೆಂದು ಹೇಳಲಾಗಿದೆ. ಅವರ ಬಳಿ ದೊರೆತ ರೂ ೬೩-೧೩-೦ ವನ್ನು ಮಾರ್ಕೆ ಮಂಡಲಿಯ ನಿಧಿಗೆ ಒಪ್ಪಿಸಲಾಜ್ಞೆಯಾಯಿತು.

ಗ್ರಾಮಾಧಿಕಾರಿಗಳ ಮುಷ್ಕರ ಕಾಲದ ಪೋಟಿಗೆ ಜೋಡಾ

ಹೊನ್ನಾಳಿ ತಾಲ್ಲೂಕಿನ ಗ್ರಾಮಾಧಿಕಾರಿಗಳು ನಡೆಸಿದ ೧||| ತಿಂಗಳ ಮುಷ್ಕರಕ್ಕಾಗಿ ೮ ಅವಧಿಯ ಪೋಟಿಗೆಯನ್ನು ಅಲ್ಲಿನ ಅಮಲ್ದಾರರು ಜೋಡಾ ಮಾಡಿರುವರೆಂದು ವರದಿಯಾಗಿದೆ.

ದೆಹಲಿಯಲ್ಲಿ ಮನೆ ಜವಾನರ ಚಳುವಳಿ

ದೆಹಲಿಯಲ್ಲಿ ನೆನ್ನೆ ಪೌರಾಧಿಕಾರಿಯೊಬ್ಬರ ಮನೆ ಕಿಟಕಿ ಗಾಜು ಮತ್ತು ಕುರ್ಚಿಮೇಜು ಮುಂತಾದುವನ್ನು ಒಡೆದು ಗಲಭೆ ಮಾಡಿದರೆಂಬ ಕಾರಣಕ್ಕಾಗಿ ೩೪ ಜನ ಮನೆ ಜವಾನರುಗಳನ್ನು ಬಂಧಿಸಲಾಯಿತು. ಇದನ್ನು ಪ್ರತಿಭಟಿಸಿ ೩೦೦ ಜವಾನರು ನೆನ್ನೆ ಮೆರವಣಿಗೆ ನಡೆಸಿ ಆದಕ್ಕೆ ಅಧಿಕಾರಿಯು ಅವರನ್ನೂ ಸೇರುವಂತೆ ಕರೆಯಲು ಅವರು ಒಪ್ಪಲಿಲ್ಲವಾಗಿ ಅವರುಗಳು ಸಿಟ್ಟುಗೊಂಡು ಅಧಿಕಾರಿಯೊಡನೆ ಜಗಳವಾಡಿದರು. ದಸ್ತಗಿರಿಯಾದವರಿದ್ದ ಪೊಲೀಸು ಠಾಣೆ ಮುಂದೆಯೂ ಅವರುಗಳು ಪ್ರದರ್ಶನ ನಡೆಸಿ, ಕಲ್ಲುಗಳನ್ನು ಬೀರಿದರು. ಅಶ್ರುವಾಯು ಪ್ರಯೋಗವಾದ ವೇಳೆ ಅವರು ಚದುರಿದರು.

ನಿಕರಾಗುವಾ ಮೇಲೆ ಹಾಂಡೂರಾಸ್ ರಾಷ್ಟ್ರದ ಧಾಳಿ

ಮಧ್ಯ ಅಮೆರಿಕದ ನಿಕರಾಗುವ ರಾಷ್ಟ್ರದ ಮೇಲೆ ನೆರೆಯ ಹಾಂಡೂರಾಸ್ ರಾಷ್ಟ್ರದ ಸೈನಿಕರು ಧಾಳಿ ಮಾಡಿ ಮೊರೊಕಾನ್ ಎಂಬ ಊರನ್ನು ಹಿಡಿದುಕೊಂಡಿರುವುದಾಗಿ ನಿಕರಾಗುವ ಅಧ್ಯಕ್ಷ ಲೂಯಿ ಸೊಮೋಜಾರವರು ತಿಳಿಸಿರುತ್ತಾರೆ. ಹಾಂಡೂರಾಸಿನ ೫ ವಿಮಾನಗಳು ತಮ್ಮ ಸೈನಿಕರ ಮೇಲೆ ಮಷೀನ್‌ಗನ್ನುಗಳನ್ನು ಹಾರಿಸಿವೆಯೆಂದೂ, ಒಂದು ರೇಡಿಯೋ ಸ್ಟೇಷನನ್ನು ಶತ್ರುಗಳು ಆಕ್ರಮಿಸಿರುವರೆಂದೂ ಅವರು ಹೇಳಿರುವರು.

ಬಸವ ಜಯಂತಿ ಕಾರ್ಯಕ್ರಮ

ಕಿಲ್ಲೆ ಮೊಹಲ್ಲಾ ಸೇವಾ ಮಂಡಲಿ ಆಶ್ರಯದಲ್ಲಿ ಈ ರಾತ್ರಿ ೮ ಗಂಟೆಗೆ ಶ್ರೀನಿವಾಸ ಅಗ್ರಹಾರದಲ್ಲಿ ಅಮಕವಿ ರತ್ನಂ ಕಾಶಿಯವರಿಂದ ಭಕ್ತ ಕುಚೇಲ ಎಂಬ ಹರಿಕಥೆ.

ಉತ್ತರಾದಿ ಮಠದ ಬೀದಿಯಲ್ಲಿರುವ ಬಸವಜಯಂತಿ ಮಿತ್ರ ಮಂಡಲಿ ಆಶ್ರಯದಲ್ಲಿ ಸಿದ್ದಪ್ಪಾಜಿ ಗದ್ದುಗೆ ಬಳಿ ಚಪ್ಪರದಲ್ಲಿ ಈ ಸಂಜೆ ೬||| ಅಂಜನಪ್ಪನವರ ಹಾಡುಗಾರಿಕೆ.

ಜಮೀನು ಬೇಡಿಕೆಗಾಗಿ ಅರ್ಜಿಗಳ ವಿಲೇವಾರಿಗೆ ಕ್ರಮ

ಜಮೀನು ದರಖಾಸ್ತು ಅರ್ಜಿಗಳನ್ನು ಆದಷ್ಟು ಬೇಗನೆ ವಿಲೇ ಮಾಡಲು ಸೂಕ್ತವಾದ ಕ್ರಮವನ್ನು ಗೊತ್ತುಪಡಿಸುವ ವಿಚಾರವನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದು ವರದಿಯಾಗಿದೆ. ಈ ಬಗ್ಗೆ ನಾನಾ ಅಧಿಕಾರಿಗಳ ಅಧಿಕಾರ ವ್ಯಾಪ್ತಿಯನ್ನು ಗೊತ್ತುಪಡಿಸಲಾಗುವುದು.

ಕಳವಿಗೆ ೨ ವರ್ಷ ಸಜಾ

ಬೆಂಗಳೂರಿನ ಬಾಬುರಾವ್ ಉರುಫ್ ಕೃಷ್ಣ ಎಂಬುವನು ವಾಣಿವಿಲಾಸ ಮೊಹಲ್ಲೆಯ ಎರಡು ಮನೆಗಳಲ್ಲಿ ಕಳ್ಳತನ ನಡೆಸಿದ್ದನೆಂದು ಅವನಿಗೆ ನಗರ ನ್ಯಾಯಾಧೀಶರು ೨ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ. ಅವನಿಗೆ ಹಿಂದೆ ೨ಗ ಬಾರಿ ಶಿಕ್ಷೆಯಾಗಿತ್ತು. ಅವನೊಡನೆ ಸಹಕರಿಸಿದ್ದ ನಂಜಿ ಮೊಹಲ್ಲೆಯ ರಾಮಲಿಂಗ ಎಂಬುವನಿಗೆ ೨ ತಿಂಗಳ ಕಠಿಣ ಸಜಾ ವಿಧಿಸಲಾಗಿದೆ.

ಕಲ್ಕತ್ತಾದಲ್ಲಿ ನಿರಾಶ್ರಿತರಿಗೂ ಪೊಲೀಸರಿಗೂ ಘರ್ಷಣೆ

ಕಲ್ಕತ್ತದ ಬಳಿ ಹೌರಾ ಮೈದಾನದಲ್ಲಿರುವ ಶಿಬಿರದ ನಿರಾಶ್ರಿತರಿಗೂ, ಪೊಲೀಸರಿಗೂ ಅಕ್ಕಿ ಹಂಚಿಕೆ ವಿಚಾರವಾಗಿ ಘರ್ಷಣೆ ನಡೆದು ಮಹಿಳೆಯರೂ ಸೇರಿ ೮೦ ಜನರಿಗೆ ಪೆಟ್ಟು ಬಿದ್ದಿತೆಂದು ಹೇಳಲಾಗಿದೆ. ಪೊಲೀಸರು ಅಶ್ರುವಾಯುವನ್ನು ಪ್ರಯೋಗಿಸಿದನಂತರ ಎರಡು ರೌಂಡು ಗುಂಡು ಹಾರಿಸಿದರು. ಅಲ್ಲಿ ಪ್ರತಿಬಂಧಕಾಜ್ಞೆಯನ್ನು ಜಾರಿಗೆ ತರಲಾಗಿದೆ. ಆ ಪ್ರದೇಶದಲ್ಲಿ ೯,೦೦೦ ನಿರಾಶ್ರಿತರಿರುವರು. ಗಾಯಗೊಂಡವರ ಪೈಕಿ ೩೦ ಜನ ಪೊಲೀಸರೂ, ಪೊಲೀಸು ಸೂಪರಿಂಟೆಂಡೆಂಟರೂ ಇರುವರು. ಜಿಲ್ಲಾ ಮ್ಯಾಜಿಸ್ಟ್ರೇಟರಿಗೂ ಗಾಯವಾಗಿದೆ. ಆರು ಜನರನ್ನು ದಸ್ತಗಿರಿ ಮಾಡಲಾಯಿತು.

ಬಿಹಾರ್ ಪ್ರಾಂತದ ಬೆಟ್ಟಿಯ್ಯ ಎಂಬಲ್ಲಿ ಶಿಬಿರದಲ್ಲಿದ್ದ ಮೇ ೧ ರಂದು ೯,೦೦೦ ನಿರಾಶ್ರಿತರು ಅಲ್ಲಿ ತಮಗೆ ಸಾಕಾದಷ್ಟು ಅಕ್ಕಿಯನ್ನು ಕೊಡುತ್ತಿಲ್ಲವೆಂದು ಪ್ರತಿಭಟಿಸಿ ಕಲ್ಕತ್ತೆಯ ಬಳಿ ಹೌರಾ ಮೈದಾನಕ್ಕೆ ಬಂದು ಬಿಡಾರ ಮಾಡಿದ್ದಾರು. ಅಲ್ಲಿ ಒಂದು ಖಾಸಗಿ ಸಂಸ್ಥೆಯವರು ಅವರುಗಳಿಗೆ ಅಕ್ಕಿಯನ್ನು ಹಂಚುತ್ತಿದ್ದಾಗ ನಿರಾಶ್ರಿತರು ಪಡಿಹಾರ ಕೇಂದ್ರಕ್ಕೆ ಬಲಾತ್ಕಾರವಾಗಿ ನುಗ್ಗಿ ೩ ಚೀಲ ಅಕ್ಕಿಯನ್ನು ಕೊಂಡೊಯ್ದರೆಂದೂ, ಅನಂತರ ಪೊಲೀಸರು ಬರಲಾಗಿ, ಅವರ ಮೇಲೆ ಕಲ್ಲು ಬೀರಿದುದರಿಂದ ಗಲಭೆಯು ಆರಂಭವಾಯಿತೆಂದೂ ಹೇಳಲಾಗಿದೆ.

ಆದಿಜಾಂಬವರ ಅಭಿವೃದ್ಧಿ ಸಮಿತಿ ಸಭೆ

ನಗರದ ಜಲಪುರಿಯಲ್ಲಿರುವ ಆದಿಜಾಂಬವ ಅಭಿವೃದ್ಧಿ ಸಮಿತಿ ಸಭೆಯು ಕಳೆದ ೨೮ನೇ ತಾರೀಕು ನಡೆದು ಶ್ರೀಗಳಾದ ಚಿಕ್ಕಕರಿಯಪ್ಪ, ಬಸವಯ್ಯ, ಸಣ್ಣಯ್ಯ, ಅಲೂರಯ್ಯ, ಕೆ. ತಿಮ್ಮಯ್ಯ, ನರಸಿಂಹಯ್ಯ ಮತ್ತು ಕೃಷ್ಣಮೂರ್ತಯ್ಯನವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು, ಅವರನ್ನು ಕಾರ್ಯಕಾರಿ ಸಮಿತಿಯಿಂದಲೂ ಸಾಮಾನ್ಯ ಸದಸ್ಯತ್ವದಿಂದಲೂ ತೆಗೆದುಹಾಕಲಾಯಿತು. ಅವರುಗಳು ೧ ವರ್ಷಕಾಲ ಸಭೆ ಸದಸ್ಯರಾಗುವಂತಿಲ್ಲ. ಸಂಘದ ನಿಯಮವನ್ನು ಉಲ್ಲಂಘಿಸಿದರೆಂಬುದೇ ಅವರ ಮೇಲಿನ ಆರೋಪಣೆ – ಎಂಬುದಾಗಿ ಸಂಘದ ಕಾರ್ಯದರ್ಶಿ ಶ್ರೀ ಪಿ. ನಾರಾಯಣರವರು ತಿಳಿಸಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಪಿಟೀಲು ೭-೧೫ ರಾಜಮ್ಮ, ಸಿ. ಆರ್. ಗೌಡ ದೇವರನಾಮ ೭-೩೦ ತಿರುವಿಜಯಬಿಲ್ಲೆ ಸಹೋದರರು–ನಾಗಸ್ವರ ೮-೧೫ ಶಂಕರ ಗುರು ಮಹಿಮೆ–ಶಂಕರಾಚಾರ್ಯರ ಸ್ತುತಿ ಮಾಲಿಕೆ ಮಧ್ಯಾಹ್ನ ೧೨ ರಾಜಮ್ಮ ಸಿ. ಆರ್. ಗೌಡ–ಸಂಗೀತ ೧೨-೩೦ ಬಾಲಜಗತ್ ೧-೩೦ ಗಾನಮಂಜರಿ ೧ ೫೦ ಪಿಟೀಲು. ಸಂಜೆ ೬-೧೦ ಪಠನಗಾನ ೭-೩೦ ಶ್ರೀ ಶಂಕರಾಚಾರ್ಯರು–ಪ್ರಸಂಗ ೮ ಮತ್ತು ೯-೧೫ ಹೆಚ್. ಆರ್. ಸೀತಾರಾಮಶಾಸ್ತ್ರಿ–ಸಂಗೀತ ೮-೩೦ ಪ್ರಸಾರಗೀತೆ ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಸಂಸ್ಥಾನದ ವಕೀಲರ ಸಮ್ಮೇಳನ

ಮೈಸೂರು ೩

ಮೈಸೂರು ಸಂಸ್ಥಾನದ ವಕೀಲರ ಸಮ್ಮೇಳನವು ಈ ತಿಂಗಳು ೧೦ ಮತ್ತು ೧೧ ರಂದು ನಗರದಲ್ಲಿ ನೆರವೇರುವುದು ಅದರ ಆರಂಭೋತ್ಸವವನ್ನು ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ೧೦ನೇ ತಾರೀಖು ಬೆಳಿಗ್ಗೆ ೧೦ ಗಂಟೆಗೆ ಕ್ರಾಫರ್ಡ್ ಭವನದಲ್ಲಿ ನೆರವೇರಿಸುವರು ಬೆಳಗಾವಿಯ ವಕೀಲರಾದ ಶ್ರೀ ಎ ಎ ಮಜುಮದಾರರು ಅಧ್ಯಕ್ಷತೆ ವಹಿಸುವರು

ಪ್ರತಿನಿಧಿಗಳನ್ನು ಮಹಾರಾಜಾ ಕಾಲೇಜು ಎತ್ತಿ ಹಾಸ್ಟೆಲ್, ಮತ್ತು ಅರಸು ಬೋರ್ಡಿಂಗ್ ಶಾಲೆಗಳಲ್ಲಿ ಇಳಿಸಲಾಗುವುದು ಅವರುಗಳಿಗೆ ಕಾಲೇಜು ಹಾಸ್ಟೆಲಿನಲ್ಲಿ ಊಟದ ಸೌಕರ್ಯವನ್ನು ಏರ್ಪಡಿಸಲಾಗುವುದು.

ಹೊಸ ಮೈಸೂರಿನ ಭಾಷಾ ವಕೀಲರುಗಳಿಗೆ ಆಹ್ವಾನವನ್ನು ಕಳುಹಲಾಗಿದೆ. ಕಳುಹದಿದ್ದವರು ಈ ಪತ್ರಿಕಾ ಪ್ರಕಟಣೆಯನ್ನು ಆಹ್ವಾನವೆಂದು ಭಾವಿಸಿ ಬರಬೇಕೆಂದು ಕೋರಲಾಗಿದೆ

ಶ್ರೀ ಹೆಚ್ ಸುಬ್ಬರಾಯರು ಸ್ವಾಗತ ಸಮಿತಿ ಅಧ್ಯಕ್ಷರಾಗಿರುತ್ತಾರೆ ಶ್ರೀಗಳಾದ ಎಸ್ ಶ್ರೀರಂಗಾಚಾರ್, ಎಂ ನಾಗರಾಜಪ್ಪ ಮತ್ತು ಬೈರಪ್ಪನವರು ಕಾರ್ಯದರ್ಶಿಗಳು ಮತ್ತು ಆರ್ ಶ್ರೀನಿವಾಸಾಚಾರ್ಯರು ಖಜಾಂಚಿಯಾಗಿರುವರು

ಹರಿಕಥೆ

ರಾಮಕೃಷ್ಣ ಅಗ್ರಹಾರದ ಶ್ರೀ ರಾಮಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೮|| ಗಂಟೆಗೆ ವಿ|| ಎಲ್ ಲಕ್ಷ್ಮೀಪತಿಯವರಿಂದ ಭಕ್ತ [illegible] ಎಂಬ ಹರಿಕಥೆಯು ನಡೆಯುವುದು

ಸಕ್ಕರೆ ಕಾಯಿಲೆಗೆ
ಮಧುಮೂತ್ರ ವಿಧ್ವಂಸಕ
[illegible]ಯಾದ ಔಷಧಿ (48 ದಿವಸಗಳಲ್ಲಿ ಪೂರ್ಣಗುಣ)
ಈ ಔಷಧದಲ್ಲಿ ಗುಣವಿಲ್ಲವೆಂದು
ತೋರಿಸಿಕೊಟ್ಟವರಿಗೆ
500 ರೂ ಬಹುಮಾನ
[illegible] ವಾಯುವಿಗೆ ಉತ್ತಮ ಚಿಕಿತ್ಸೆ
ನಡೆಸಲಾಗುತ್ತೆ
ವಿಶ್ವೇಶ್ವರ ಆಯುರ್ವೇದ ವೈದ್ಯಶಾಲಾ,
(ಶ್ರೀ ಕೃಷ್ಣ [illegible])
ನ್ಯೂ [illegible] ಸ್ಟೋರ್, ಮೈಸೂರು

Printed and Published by
P R Nagarajan at Sadhvi Press,
Subbiah Road, Mysore

ಬಸವೇಶ್ವರರ ಜಯಂತಿ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಶರಣ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೭। ಗಂಟೆಗೆ ವಿ|| ಗೌರಮ್ಮ ನಾಗರಾಜ್‌ರವರಿಂದ ಶಬರ ಶಂಕರ ವಿಲಾಸ ಕಾವ್ಯ ವಾಚನ ಮತ್ತು ಶ್ರೀ ಹಿರಣ್ಣಯ್ಯನವರಿಂದ ವ್ಯಾಖ್ಯಾನ ಮತ್ತು ಮಹಾರಾಣಿ ಕಾಲೇಜಿನ ಉಪ ಪ್ರಾಧ್ಯಾಪಕ ಶ್ರೀ ವಿ ಪುಟ್ಟವಾದಪ್ಪನವರಿಂದ ಭಾಷಣ

ಅದೇ ರಸ್ತೆಯಲ್ಲಿರುವ ಅಕ್ಕನ ಬಳಗ ಕಟ್ಟಡದಲ್ಲಿ ನಾಳೆ ಸಂಜೆ ೬ ಗಂಟೆಗೆ ಜಿಲ್ಲಾಧಿಕಾರಿಯಾದ ಶ್ರೀ ಡಿ ಆರ್ ಚೆನ್ನರುದ್ರಯ್ಯನವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ ಶಿವಮೂರ್ತಿ ಶಾಸ್ತ್ರಿಗಳಿಂದ ಬಸವೇಶ್ವರರ ತತ್ವಗಳೂ, ಭಾರತದ ಅಭ್ಯುದಯವೂ ಎಂಬ ವಿಚಾರವಾಗಿ ಭಾಷಣ ಶ್ರೀಮತಿ ಚೆಲ್ಲಂ ಚಕ್ರವರ್ತಿಯವರಿಂದ ಶಿವಶರಣರ ಕೃತಿಗಳ ವಾಚನ

ಕೃಷ್ಣರಾಜನಗರ ವೀರಶೈವ ಸಂಘದ ಆಲಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಅಲ್ಲಿನ ಮೈಸೂರು ಬ್ಯಾಂಕ್ ಮ್ಯಾನೇಜರ್ ಶ್ರೀ ವಿ ನವರತ್ನರಾಜುರವರ ಅಧ್ಯಕ್ಷತೆಯಲ್ಲಿ ತಾಯಿನಾಡು ಪತ್ರಿಕಾ ಸಹ ಸಂಪಾದಕ ಶ್ರೀ ಹಿ ಮ ನಾಗಯ್ಯನವರಿಂದ ಶರಣರು ಮತ್ತು ಸಮಾಜ ಎಂಬ ವಿಷಯ ವಾಗಿ ಭಾಷಣ

ಭದ್ರಾವತಿಯಲ್ಲಿ ಶ್ರೀ ಟಿ ಆರ್ ಶ್ರೀನಿವಾಸರವರ ಸಂಗೀತ

ನಾಳೆ ಭದ್ರಾವತಿಯಲ್ಲಿ ನಡೆಯುವ [illegible]ನೆ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಗರದ ವಿ|| ಟಿ ಆರ್ ಶ್ರೀನಿವಾಸರವರ ಗಾಯನವು ಜರುಗುವುದು

" ಮಹಾಲಿಂಗಂರವರ ಬಂದಿದ್ದಾರೆ "
ನಾದಬ್ರಹ್ಮ ಸಂಗೀತ ಸಭಾ,
ಮೈಸೂರು

ಅಮೋಘ ವೇಣುವಾದನ
ತಾ|| 4-5-1957ನೇ ಶನಿವಾರ ಸಂಜೆ [illegible]ಕ್ಕೆ
ನೂರಡಿ ರಸ್ತೆ ಸಹಕಾರ ಭವನದಲ್ಲಿ
ನಡೆಯುವುದು
ವಿ|| ಟಿ. ಆರ್ ಮಹಾಲಿಂಗಂ
[illegible]
ಕುಮಾರಿ ಶ್ರೀಮತಿ ಟಿ ರುಕ್ಮಿಣಿಯವರ
ಪಿಟೀಲು
ವಿದ್ವಾನ್ ಎಂ ಎಲ್ ವೀರಭದ್ರಯ್ಯನವ[illegible]
ಮೆಂಬರುಗಳಲ್ಲದವರಿಗೆ ಪ್ರವೇಶ ದರ 0 [illegible]

ವಿವಾಹ ಮಹೋತ್ಸವಗಳು

ನಗರದ ಆರೋಗ್ಯಾಧಿಕಾರಿಗಳಾದ ಶ್ರೀ ಎಸ್ ಪಿ ಅಚಿಕರ್‌ರವರು ತಮ್ಮ ಕುಮಾರಿ ಸೌ|| ಎ ಸರಳಕುಮಾರಿಯನ್ನು ಮಂಡ್ಯದ ಶ್ರೀ ಬಿ ನಾಗೇಂದ್ರಯ್ಯನವರ ಪುತ್ರರೂ, ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕರೂ ಆದ ಶ್ರೀ ವಸಂತಕುಮಾರ್‌ರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ನಗರದ ಸುಪ್ರಸಿದ್ಧ ವಕೀಲರಾದ ಶ್ರೀ ಎಂ ಎಸ್ ರಂಗನಾರ್ಧನರವರು ತಮ್ಮ ಕುಮಾರಿ ಸೌ|| ಚಂಚಲಾರವರನ್ನು ನಂಜನಗೂಡಿನಲ್ಲಿರುವ ಲಾಯರ್ ಶ್ರೀ ಜಿ ಗೋವಿಂದರಾಜರವರ ಪುತ್ರ ಶ್ರೀ ಕೆ ಜಿ ರಾಮಮೂರ್ತಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

[illegible] ಕಛೇರಿ ಮ್ಯಾನೇಜರರಾದ ಶ್ರೀ ಜಿ ಎಂ ಮಾಧವರಾಯರವರು ತಮ್ಮ ಕುಮಾರ ಶ್ರೀ ಎಸ್ ಗೋಪಾಲಕೃಷ್ಣರವರಿಗೆ ಕೊಯಮತ್ತೂರು ಜಿಲ್ಲೆ ಸೆಷಂಟ್ಟಿಯ ವೈದ್ಯಾಧಿಕಾರಿಗಳಾದ ಡಾ|| ವಿ ಸುಬ್ಬರಾಯರ ಪುತ್ರಿ ಸೌ|| ಪ್ರೇಮಕುಮಾರಿಯನ್ನು ತಂದುಕೊಂಡು ನೆನ್ನೆ ವಿವಾಹವನ್ನು ನಡೆಸಿದರು

ನಂಜನಗೂಡು ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಸಿ ಕೃಷ್ಣಪ್ಪನವರು ತಮ್ಮ ಕುಮಾರಿ ಸೌ|| ಅನಸೂಯಳನ್ನು ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಟಿ ಎಲ್ ರಾಮಸ್ವಾಮಯ್ಯನವರ ಕುಮಾರ ಶ್ರೀ ಟಿ ಆರ್ ರಂಗಸ್ವಾಮಿಯವರಿಗೆ ಕೊಟ್ಟು ಇಂದು ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

SREE GANESH
TALKIES
From 4-5-57 Daily 3 shows
THE BLACK TENT
(Vistavision Technicolor)
Starring, Anthony Steel and
Donald Sinden
A Thrill Filled adventure story
set amid the Torrid Deserts of
North At

ಅಧಿಕಾರಿಗಳ ವಾರ್ಷಿಕ ಸಮ್ಮೇಳ

ಆಡಳಿತ ಸಮಸ್ಯೆಗಳನ್ನು ಚರ್ಚಿಸಿ ಅ ಪ್ರಾಯ ವಿನಿಮಯ ಮಾಡಿಕೊಳ್ಳುವ ಸಲು ಗಿ ಸಂಸ್ಥಾನದ ಮುಖ್ಯ ಅಧಿಕಾರಿಗಳು ಸಮ್ಮೇಳನ ಸೇರುವ ಪದ್ಧತಿಯನ್ನು ಪುನಃ ಜಾರಿಗೆ ಲು ಸರ್ಕಾರದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ ಪ್ರತಿ ವರ್ಷ ಜನವರಿ ಫೆಬ್ರವರಿಯಲ್ಲಿ ಅದನ್ನು ನಡೆಸಬೇಕೆಂದು ಚಿಸಲಾಗಿದೆ

LIFE INSURANCE CORPORATION
INDIA
Unit · New India Assurance Compa

Notice having been given of th loss of Policy Numbered 560547 the life of Mr KULLIAH of S Krishnarajendra Mills Ltd Mysore, Duplicate Policy will issued unless objection is lodg with the above Unit within month from this date

D S. MEHTA
BOMBAY Zonal Man
3-5-1957 Western Z

ಮನೆ ಮಾರಾಟಕ್ಕಿದೆ

ಡೋರ್ ನಂ 2788/9 ಚಾಮುಂಡಿ ವಣಿ, ಶಂಕರನಾರಾಯಣಸ್ವಾಮಿ ದೇವಸ್ಥಾ ಹತ್ತಿರ ಮೂರು ಕಡೆ ರಸ್ತೆ, ತಾರಸಿ ಮಂಗಳೂರು ಹೆಂಚಿನ, ಸುಮಾರು 2000 ರ ಅಡಿ ಕಟ್ಟಿದ ಉಳ್ಳ, ಮೂರು ಸಂಸಾ ಅನುಕೂಲವಾಗಿರುವ, ನಲ್ಲಿ ಮತ್ತು ದೀಪ ವ ಮನೆ ಬೆಲೆ 9000 ರೂ
ವಿವರಗಳಿಗೆ —
ಜಯ ಅಂಡ್ ಕಂಪೆನಿ,
ಮನೆ ಮತ್ತು ಜಮೀನುಗಳ ಏಜೆಂ
ಹಳೇ ಮೈಸೂರು ಬ್ಯಾಂಕ್ ರಸ್ತೆ
ಮೈಸೂರು ಫೋನ್

ANNOUNCEMENT
THE VIJAYA BANK Ltd.,
H O. MANGALORE

A Branch of our Bank will be opened shortly in Mysore Applications are invited for a few clerical and subordinate posts Personal interview by the undersigned at "Dasprakash" Hotel, Mysore on any day before 6-5-1957 between 3 to 4 P M

P. J SHETTY, M A B L, C A I I B
Superintendent

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್‌ರವರ ಆಫೀಸಿನಿಂದ

ಇಸ್ತಿಹಾರು, ತಾರೀಖು 25-3-57

ಹರಾಜು ಇಸ್ತಿಹಾರು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ — ನಂಜನಗೂ ಶ್ರೀ ಕಂಠೇಶ್ವರಸ್ವಾಮಿಯವರ ದೇವಸ್ಥಾನದ ಹರಕೆ ಗೋಲಕಗಳಲ್ಲಿ ದೊರೆತಿರತಕ್ಕ ಚಿನ್ನ ಗಳನ್ನು ಮೈಸೂರು ಸೀಮೆಯ ಮುಜರಾಯಿ ಕಮೀಷನರ್ ಸಾಹೇಬರವರ 30 7- ಮಾರ್ಚ್ ನಂ 1 Dis M 4-98/56 5 ನೇ ನಂಬರು ಆರ್ಡರ್ ಪ್ರಕಾರ ಮೈ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಸಾಹೇಬರಿಂದ ಅಥವಾ ಅವರಿಂದ ಅಧಿಕಾರ ಪಡೆದ ಅಸಿಸ್ಟೆಂಟ್ ಕಮೀಷನರವರಿಂದಾಗಲೀ 8-5-1957ನೇ ಬುಧವಾರ ದಿವ 2 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪ ಇಷ್ಟವುಳ್ಳವರು ಹಾಜರಾಗಿ ಭರವಸಾಲು ಮೂಲಕ ಮಾಲುಗಳನ್ನು ಪಡೆಯಬಹುದು. ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟಿರುತ್ತೆ ಹರಾಜು ಮಾಡುವ ಬೆಳ್ಳಿ ಮತ್ತು ಸಾಮಾನುಗಳನ್ನು ಹರಾಜು ಕಾಲದಲ್ಲಿ ನೋಡಬಹುದು.

ಬೆಳ್ಳಿ ತೂಕ ರೂ 18430-0-0 — ಚಿನ್ನ ತೂಕ ರೂ 133-

ಷರತ್ತುಗಳು

1 ಹರಾಜು ಕೈದಾದ ಕೂಡಲೇ ಕಡೆಯ ಬಿಡ್‌ದಾರರು ಬಿಡ್ ಮೊಬಲಗು ಜಮಾ ಮಾಡತಕ್ಕದ್ದು. ತಪ್ಪಿದಲ್ಲಿ ಮರು ಹರಾಜಿಗೆ ಗುರಿಪಡಿಸಿ ಉಂಟಾಗುವ ಮೊದಲು ಬಿಡ್‌ದಾರರಿಂದ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ ಬಂದಲ್ಲಿ ಹೊಂದಲು ಅಧಿಕಾರವಿರುವುದಿಲ್ಲ

2, ಹರಾಜು ಮೈಸೂರು ಸೀಮೆಯ ಛಾರಿಟಬಲ್ ಎಂಡೋಮೆಂಟ್ ಕಮಿ ರವರ ಮಂಜೂರಾತಿ ನಿರೀಕ್ಷಣೆ ಮೇಲೆ ಹರಾಜಾದ ಮಾಲುಗಳನ್ನು ಬಿಡ್ ಪೂರ್ತಾ ಜಮಾ ಮಾಡಿದ ಕೂಡಲೆ ಬಿಡ್‌ದಾರರಿಗೆ ಸುಫರ್ದು ಕೊಡಲಾಗುತ್ತೆ.

3 ಚಿನ್ನ ಬೆಳ್ಳಿ ಸಾಮಾನುಗಳನ್ನು ಒಟ್ಟಿಗೆಯಾಗಲೀ ಅಥವಾ ಅನೇಕ ಗ್ರೂಪ್ ಮಾಡಿಯಾಗಲೀ ಹರಾಜು ಮಾಡಲ್ಪಡುತ್ತೆ.

4. ಎಲ್ಲರೂ ಹರಾಜು ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು

(Sd) D R CHANNARUDRIAH
Deputy Commissioner Mysore District

ಪ್ರಭುದೇವಾ ಥಿಯೇಟರ್
(ಸಿದ್ದಾ ಟಾಕೀಸ್)
3-5-57ನೇ ಶುಕ್ರವಾರದಿಂದ : ಅಮೋಘ 4 ನೆಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು
★ ಮಾಯಾ ಬಜಾರ್ ★
(ಶಶಿರೇಖಾ ಪರಿಣಯ)
ಪಾತ್ರ — ಆರ್. ಗಣೇಶ್, ಸಾವಿತ್ರಿ, ಎನ್. ಟಿ ರಾಮರಾವ್, ಎಸ್ ವಿ ರಂಗರಾವ್, [illegible]ಂಗವೇಲು, ಮುತ್ತುಲಕ್ಷ್ಮಿ, ಕರುಣಾನಿಧಿ, ನಳುಮಲೈ, ಮಿಸ್ಸೇಂದ್ರಮಣಿ

ಲಕ್ಷ್ಮಿ ಥಿಯೇಟರ್
ಶಿವಾಜಿ ಗಣೇಶ, ಸಾವಿತ್ರಿ, ನಾಗಯ್ಯ, ಕಣ್ಣಾಂಬ ಎಂ ಎನ್ ನಂಬಿಯಾರ್
3—5—57 ರಿಂದ : ಅಮೋಘ 3ನೇ ವಾ
ಪ್ರತಿ ದಿನ ಮೂರು ಪ್ರದರ್ಶನಗಳು
★ ವಣಂಗಾಮುಡಿ ★
Raghave
Rele

[illegible] ನಂ. 192

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾ ಪೈಸೆ

ಬಿಡಿ ಪತ್ರಿಕೆ 2 ನಯಾ ಪೈಸೆ

[illegible]
[illegible]
[illegible]
[illegible]
ಎ. ಎಗ್. ಭಾಸ್ಕರ ಶೆಟ್ಟಿ
[illegible]
ಸಯ್ಯಾಜಿ ರಾವ್ ರಸ್ತೆ,
ಮೈಸೂರು

[ಸಂಪುಟ : ೦೫] SADHVI SATURDAY 4–5–1957 ಮೈಸೂರು ಶನಿವಾರ ೪–೫–೧೯೫೭ [ಸಂಚಿಕೆ : [illegible]

ಸಂಸ್ಥಾನದಲ್ಲಿ ಬಡವರಿಗೆ ಲಕ್ಷ ಎಕರೆ ಜಮೀನು ಹಂಚಿಕೆ

ಸಂಸ್ಥಾನದಲ್ಲಿ ಬಡವರಿಗಾಗಿ ಲಕ್ಷ ಎಕರೆ ಜಮೀನು ಹಂಚಿಕೆ

ಗೇರು ಬೀಜದ ಬೇಸಾಯಕ್ಕೆ ವಿಶೇಷ ಪ್ರಾಮುಖ್ಯತೆ

ಮೈಸೂರು ಸರ್ಕಾರದವರು ಈ ವರ್ಷ ಬೇಸಾಯಗಾರರಿಗೆ ಸುಮಾರು ೧ ಲಕ್ಷ ಎಕರೆ ಬಂಜರು ಜಮೀನನ್ನು ವ್ಯವಸಾಯಕ್ಕಾಗಿ ಕೊಡಲು ನಿರ್ಧರಿಸಿರುವುದಾಗಿ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರು ಮಂಗಳೂರಲ್ಲಿ ತಿಳಿಸಿರುತ್ತಾರೆ. ಗೇರು ಬೀಜದ ವ್ಯವಸಾಯಕ್ಕೆ ಮುಖ್ಯವಾಗಿ ಗಮನಕೊಡಲಾಗುವುದೆಂದೂ ಅವರು ತಿಳಿಸಿರುತ್ತಾರೆ. ಅಲ್ಲಿನ [illegible] ಕೇಳುವರ [illegible] ಅವರು ಉತ್ತರಕೊಡುತ್ತಾ, ಜಮೀನಿಲ್ಲದ ಬಡವರಿಗೆ ಭೂಮಿಯನ್ನು ಕೊಡುವ ಬಗ್ಗೆ ಪ್ರಾಶಸ್ತ್ಯ ನೀಡಲಾಗುವುದೆಂದೂ ಸಚಿವರು ತಿಳಿಸಿದರು.

ವಯಸ್ಕರ ಶಿಕ್ಷಣ ಸಮಿತಿ ಕಛೇರಿಗೆ ವಿದ್ಯಾ ಸಚಿವರ ಭೇಟಿ

ಮೈಸೂರು ೪

ವಿದ್ಯಾ ಮಂತ್ರಿ ಶ್ರೀ ಎ. ವೆಂಕಟಪ್ಪನವರು [illegible] ದಿನ ಬೆಳಗ್ಗೆ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಕಛೇರಿಗೆ ಭೇಟಿಯಿತ್ತು ಪರಿಶೀಲನೆ ನಡೆಸಿದರು. ಸಚಿವರ ಗೌರವಾರ್ಥವಾಗಿ ಸಮಿತಿಯವರು ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಕಾರ್ಯದರ್ಶಿ ಶ್ರೀ ಕೆ. ಎಸ್. [illegible] ನಾರಾಯಣರಾಯರು ಸ್ವಾಗತ ಭಾಷಣ ಮಾಡಿ, ಸ್ಥಾಪನೆಯ ಕಾಲದಿಂದ ಇಂದಿನವರೆಗೂ ಸಂಸ್ಥೆಯ ಪ್ರಗತಿಯನ್ನು ವಿವರಿಸಿ ಈಗ ವಯಸ್ಕರ ವಿದ್ಯಾಭ್ಯಾಸವನ್ನು ಹರಡಲು ಕೈಗೊಳ್ಳಲಾಗಿರುವ ಪುಸ್ತಕ ಭಂಡಾರಗಳ ವಿಸ್ತರಣೆ, ಚಲನಚಿತ್ರ ಪ್ರದರ್ಶನ ಮುಂತಾದ ಕ್ರಮಗಳನ್ನು ತಿಳಿಸಿದರು. ಸರ್ಕಾರದ ಸಹಾಯದಿಂದ ಇತ್ತೀಚೆಗೆ ಹೊಸದಾಗಿ ಪುಸ್ತಕಗಳನ್ನು ಬರೆಸಿ ಪ್ರಕಟಿಸುತ್ತಿರುವುದಾಗಿಯೂ ಸಹ ಹೇಳಿದರು.

ಸಚಿವರು ಉತ್ತರವಿತ್ತು, ಸಂಸ್ಥೆಯ ಬಗ್ಗೆ [illegible] ಸಾಧನೆಯನ್ನು [illegible] ಅಧ್ಯಕ್ಷರಾದ ಶ್ರೀ ಬಿ. ಎಂ. [illegible] ನ್ನು ಶ್ಲಾಘಿಸಿದರು. ಸಂಸ್ಥೆಯ ಕಾರ್ಯ [illegible] ಗ್ರಾಮಾಂತರದ ಜನರಿಗೆ ಎಷ್ಟು ಉಪಯೋಗವಾಗುವುದೆಂಬುದನ್ನು ತಾವು ಅರಿಯಲು ಇಚ್ಛಿಸುವುದಾಗಿಯೂ ತಿಳಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಪಿಟೀಲು. [illegible] ಮತ್ತು [illegible] ಪಿ. ಕಾಳಿಂಗರಾವ್ ದೇವರ ನಾಮ [illegible] ಎ. [illegible]-ಕೊಳಲು [illegible] ಎಸ್. [illegible] ಕೃಷ್ಣಮ್ಮ-ಸಂಗೀತ [illegible] ಬಾಲಜಗತ್. ಮಧ್ಯಾಹ್ನ [illegible] ಮತ್ತು [illegible] ವಿ. ಕಾ. ಲಂ. [illegible]-ಸಂಗೀತ [illegible] ವಾದ್ಯ ವೃಂದ [illegible] ಕನ್ನಡ [illegible] ಬಿ. ಶಂಕರರಾವ್-ಕೊಳಲು ಸಂಜೆ [illegible] ದೇವರನಾಮ [illegible] ಪಕ್ಷಿ ನೋಟ [illegible] ಮತ್ತು [illegible] ಆರ್. ಕೆ. ನಾರಾಯಣಸ್ವಾಮಿ-ಸಂಗೀತ [illegible] ದೇಶ [illegible] ರಿಕಾರ್ಡ [illegible] ಚಿತ್ರ ಸಂ[illegible] ಹಾರ್ಮೋನಿ [illegible] ಪಿಟೀಲು

ದಕ್ಷಿಣ ರೈಲ್ವೆ ವಿರುದ್ಧವಾಗಿ ಮಾಜಿ ನೌಕರರ ರಿಟ್ ಅರ್ಜಿ

ಮೈಸೂರು ೪

ದಕ್ಷಿಣ ರೈಲ್ವೆಯವರು ತಮ್ಮನ್ನು ಕೆಲಸದಿಂದ ತೆಗೆದ ಬಗ್ಗೆ ಮಾಡಿರುವ ಆಜ್ಞೆಯನ್ನು ರದ್ದುಗೊಳಿಸುವಂತೆ ಮಾಜಿ ಮೈಸೂರು ರೈಲ್ವೆಯ ಸ್ಟೆನೋಗ್ರಾಫರ್ ಶ್ರೀ ಎಂ. ಹೆಚ್. ಬಾಲಾಜಿಸಿಂಗ್‌ರವರು ಮದ್ರಾಸು ಹೈಕೋರ್ಟಿನಲ್ಲಿ ಹೂಡಿದ್ದ ರಿಟ್ ಅರ್ಜಿಯನ್ನು ನ್ಯಾಯಾಧೀಶರಾದ ಶ್ರೀ ಪಿ. ರಾಜಗೋಪಾಲನ್‌ರವರು ಪರಿಶೀಲನೆಗೆ ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ದಕ್ಷಿಣ ರೈಲ್ವೆ ಮ್ಯಾನೇಜರರಿಗೆ ನೋಟೀಸು ಕೊಡಲು ಆಜ್ಞೆಯಾಗಿದೆ. ದಕ್ಷಿಣ ರೈಲ್ವೆಯಲ್ಲಿ ಮೈಸೂರು ರೈಲ್ವೆಯು ಐಕ್ಯಗೊಂಡನಂತರ ಕಡಿಮೆ ಗ್ರೇಡಿನ ಕೆಲಸಕ್ಕೆ ಹೋಗಲು ಶ್ರೀ ಸಿಂಗ್‌ರವರು ನಿರಾಕರಿಸಿದ್ದರಿಂದ ಅವರನ್ನು ತೆಗೆಯಲಾಗಿತ್ತು. [illegible] ರಿಟ್ ಅರ್ಜಿ ಕೊಟ್ಟು ತಮ್ಮನ್ನು ಕೆಲಸಕ್ಕೆ ತೆಗೆದುಕೊಂಡು [illegible] ಏಪ್ರಿಲ್ ೧ [illegible] ೨೦೦ ರೂ ಗ್ರೇಡಿನಲ್ಲಿ ಕೆಲಸ ಕೇಳಿದ್ದಾರೆ.

ಹೋಟೇಲು ಬೋರ್ಡುಗಳಲ್ಲಿ "ಬ್ರಾಹ್ಮಣ" ಪದ ಅಳಿಸಲೆತ್ನ

ಮದ್ರಾಸಿನ ಹೋಟೇಲುಗಳ ಬೋರ್ಡಿನ ಮೇಲಿರುವ ಬ್ರಾಹ್ಮಣ ಎಂಬ ಪದವನ್ನು ತೆಗೆಯುವ [illegible] ದ್ರಾವಿಡ ಸಂಘದವರು ಹೋಟೇಲು ಮಾಲೀಕರ ಸಂಘಕ್ಕೆ ಪತ್ರ ಬರೆದಿರುವರು. ಆ ಪದವನ್ನು ಅಳಿಸದಿದ್ದರೆ ಸಂಘದವರೇ ಅಳಿಸುವರೆಂದೂ ತಿಳಿಸಲಾಗಿದೆ. ಪತ್ರವನ್ನು ಹೋಟೇಲು ಸಂಘದವರು ಪರಿಶೀಲಿಸಿ, ಶಾಂತತೆ ಕಾಪಾಡುವುದು ಅವಶ್ಯಕವೆಂದು ಅಭಿಪ್ರಾಯಪಟ್ಟು ಹೋಟೇಲು ಮಾಲೀಕರಿಗೆ ತೊಂದರೆಯನ್ನು ತಪ್ಪಿಸಲು ಸರ್ಕಾರದವರು ಎಚ್ಚರ ಕ್ರಮ ಜರುಗಿಸಬೇಕೆಂದು ಪ್ರಾರ್ಥಿಸಿರುತ್ತಾರೆ. ಈ ಚಳವಳಿಯು ಒಂದು ಭಾಗದ ಜನರ ಮೂಲಭೂತ ಹಕ್ಕಿನ ಮೇಲೆ ಮತ್ತೊಂದು ಭಾಗದವರು ನಡೆಸುವ ಧಾಳಿಯೆಂದು ಹೋಟೇಲು ಸಂಘವು ಅಭಿಪ್ರಾಯಪಟ್ಟಿದೆ.

ಸಚಿವರಿಂದ ಪೌರಸಭೆ ಕಛೇರಿಯ ಹಠಾತ್ತಾಗಿ ಪರಿಶೀಲನೆ

ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್. ಚನ್ನಿಗರಾಮಯ್ಯನವರು ಕಳೆದ ೩೦ನೇ ತಾರೀಖು ಶ್ರೀನಿವಾಸಪುರ ಪೌರಸಭೆಗೆ ಹಠಾತ್ತನೆ ಭೇಟಿಯಿತ್ತು ಪೌರಸಭೆಯ ಹಣದ ವಿನಿಯೋಗದ ಬಗ್ಗೆ ಹಲವು ಅಕ್ರಮಗಳನ್ನು ಪತ್ತೆ ಹಚ್ಚಿ ಮುಂದಿನ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆಯಿತ್ತರು. ಪೌರಸಭೆಯ ವಿರುದ್ಧವಾಗಿ ಹಲವು ದೂರುಗಳು ಬಂದಿದ್ದುವು.

[illegible] ಶ್ರೀ ಟಿ. [illegible] ರವರಿಗೆ [illegible] ಅವರ [illegible] ವಿಜಯ [illegible] ಕಾರ್ಯ [illegible] ಬರುತ್ತಿದ್ದಾಗ [illegible] ಉತ್ಸಾಹಗೊಳ್ಳ [illegible] ತೊಂದರೆಯಾಯಿತು [illegible]

ಪಲ್ಲಡಂ ನಾಗರಾಜ ರಾಯರ ಘನವಾದ ವೇಣುವಾದನ

ಮೈಸೂರು ೪

ಇದೇ ೨ನೇ ತಾರೀಖು ಗುರುವಾರ ಸಾಧ್ವಿ ಪತ್ರಿಕಾಲಯದಲ್ಲಿ ಸುಮಾರು ಮೂರೂವರೆ ಘಂಟೆ ಕಾಲ ಒಳ್ಳೆಯ ಕೊಳಲು ಕಛೇರಿಯನ್ನು ನಡೆಸಿದ ವಿದ್ವಾನ್ ಪಲ್ಲಡಂ ನಾಗರಾಜರಾಯರು, ವೇಣುವಾದನದಲ್ಲಿ ಸುಪ್ರಸಿದ್ಧರಾದ ವಿದ್ವಾನ್ ಪಲ್ಲಡಂ ಸಂಜೀವರಾಯರ ಸೋದರಳಿಯಂದಿರು. ಭೈರವಿ ರಾಗದ ಸುಪ್ರಸಿದ್ಧ 'ವಿರಿಬೋಣಿ' ವರ್ಣದಿಂದ ಪ್ರಾರಂಭಿಸಲ್ಪಟ್ಟು [illegible] 'ನಾಗಸ್ವರ' ಜೊತೆ ಮುಕ್ತಾಯವಾದ ಇವರ ಕಛೇರಿಯಲ್ಲಿ ರಾಯರು ತಮ್ಮ ಸೋದರಮಾವಂದಿರ ಶೈಲಿ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದುದು ಕಂಡುಬರುತ್ತಿದ್ದಿತು. ರಾಯರ ವಾದನದಲ್ಲಿ ಕಮಾಚ್, ಕಲ್ಯಾಣಿ ಯದುಕುಲಕಾಂಭೋಜಿ ರಾಗಗಳು ಜನಪ್ರಿಯವಾದ ಶೈಲಿಯಲ್ಲಿ ನಿರೂಪಿಸಲ್ಪಟ್ಟು ಶ್ಲಾಘನೀಯವಾಗಿದ್ದುವು. ರಾಯರಿಗೆ ಪಿಟೀಲು ವಾದನವನ್ನು ನೀಡಿದ ಆಸ್ಥಾನ ವಿದ್ವಾನ್ ಹೆಚ್. ವಿ. [illegible] ರಾಯರು ಸೂಕ್ತವಾದ ಸಹಕಾರವನ್ನು ನೀಡಿದುದೇ ಅಲ್ಲದೆ ಅವರ [illegible] ರಾಗಾಲಾಪನೆಯು ಹಿತವಾಗಿದ್ದಿತು. ತಾಳವಾದ್ಯಗಳ ಸಹವಾದನವನ್ನು ನೀಡಿದ ವಿ|| ವಿ|| ವೆಂಕಟೇಶದೇವರು ಮತ್ತು ವಿ|| ನಾಗಭೂಷಣ [illegible] ರುಗಳ ವಾದನವೂ ಹಿತಕರವಾಗಿದ್ದಿತು. ತನಿಯಾಗಿ ಒಂದು ಸಲವೂ ನುಡಿಸದಿದ್ದುದರಿಂದ ಅದನ್ನೇ ಕೇಳಲಪೇಕ್ಷಿಸುತ್ತಿದ್ದ ಅನೇಕ ಸಭಿಕರಿಗೆ ನಿರಾಶೆಯಾಯಿತು. ಒಟ್ಟಿನಲ್ಲಿ ಪರಿಶೀಲಿಸಿದಲ್ಲಿ ಕಛೇರಿಯು ಜನಾದರಣೀಯವೂ ಶ್ಲಾಘನೀಯವೂ ಆಗಿದ್ದಿತೆನ್ನಬಹುದು.

ಶಂಕರ ಜಯಂತಿ ಕಾರ್ಯಕ್ರಮ

ನಗರದ ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ವಿ|| ಎಸ್. [illegible] ರಿಂದ "ಗಿರಿಜಾ ಕಲ್ಯಾಣ" ಎಂಬ ಹರಿಕಥೆಯು ನಡೆಯುವುದು.

ನಗರದ ಕೃಷ್ಣಮೂರ್ತಿಪುರಂ ಶ್ರೀ ರಾಮ ಮಂದಿರದಲ್ಲಿ ಶಂಕರ ಜಯಂತಿ ಪ್ರಯುಕ್ತ ಸಂಜೆ ೬ ಗಂಟೆಗೆ ವಿ|| ಬಿ|| [illegible] ಶಂಕರಾಚಾರ್ಯರ ಜೀವನ ಚರಿತ್ರೆಯ ಮೇಲೆ ಉಪನ್ಯಾಸ, ೭ ಗಂಟೆಗೆ ಶ್ರೀಮತಿ ಲಕ್ಷ್ಮೀಬಾಯಿ [illegible] ರಿಂದ "ಶಂಕರ ವಿಜಯ" ಎಂಬ ಹರಿಕಥೆ, ೮ ಗಂಟೆಗೆ ಶ್ರೀ ಸಿ. ಎಸ್. ರಾಮದಾಸರಿಂದ ಭಜನೆ.

ರಾಮಾನುಜಾಚಾರ್ಯರ ಬಗ್ಗೆ ಉಪನ್ಯಾಸ

ನಗರದ ಕೃಷ್ಣಮೂರ್ತಿಪುರಂ ಶ್ರೀ ರಾಮ ಮಂದಿರದಲ್ಲಿ [illegible] ಶ್ರೀ ಕೆ. [illegible] ಆಚಾರ್ಯರ ಜೀವನ ಚರಿತ್ರೆ [illegible] ಉಪನ್ಯಾಸ ನೀಡುವರು.

[illegible] ಲಲಿತಕಲಾ ಸಂಘದವರು [illegible] ಸಂಜೆ ೬|| ಗಂಟೆಗೆ [illegible] ಮಿಸ್ ಚಂಚಲ ಎಂಬ ನಾಟಕವನ್ನು ಸಹಾಯಾರ್ಥವಾಗಿ ಅಭಿನಯಿಸುವರು.

ಎಸ್. ಎಸ್. ಎಲ್. ಸಿ. ಯಲ್ಲಿ ಪ್ರಥಮ ೧೦ ರ್‍ಯಾಂಕುಗಳು

ಸ್ವಂ. ಸು. ಫೋ.] ಬೆಂಗಳೂರು ೪

ಈ ಸಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಥಮ ೧೦ ರ್‍ಯಾಂಕುಗಳು ಕೆಳಗಿನಂತಿವೆ.—

೧ ಬೆಂಗಳೂರು [illegible] ಹೈಸ್ಕೂಲಿನ [illegible].

೨ [illegible] ಹೈಸ್ಕೂಲಿನ [illegible]

೩ [illegible] ಎಸ್. ಶ್ರೀನಿವಾಸ [illegible] ಹೈಸ್ಕೂಲಿನ [illegible]

೪ [illegible] ಹೈಸ್ಕೂಲಿನ [illegible], [illegible]

೫ ಬೆಂಗಳೂರು ಬಿ. [illegible]

೬ ಶಾರದಾ ವಿಲಾಸ ಹೈಸ್ಕೂಲಿನ [illegible]

೭ ಎಸ್. ಎ. ಪ್ರಕಾಶ್, [illegible] ವಿದ್ಯಾಲಯ, ಬೆಂಗಳೂರು

೮ ಬೆಂಗಳೂರು ಆರ್. ಬಿ. ಎ. ಎಂ. ಹೈಸ್ಕೂಲಿನ ಮಹದೇವರಾವ್, ಮೈಸೂರು ಶಾರದಾ ವಿಲಾಸ ಹೈಸ್ಕೂಲಿನ ಬಿ. ಎ. [illegible] ಮತ್ತು ಶಿವಮೊಗ್ಗದ [illegible]

೯ ಸಂತ [illegible], [illegible] ಹೈಸ್ಕೂಲ್, ಮೈಸೂರು

೧೦ ಎಸ್. ಎ. ಸಿಂಹಾದ್ರಿ, [illegible] ಶಾಲಾ, ಬೆಂಗಳೂರು.

ಈ ಸಾರಿಯ ಪರೀಕ್ಷೆಗೆ [illegible] ಮಂದಿ ಕುಳಿತು [illegible] ಮಂದಿ [illegible] ಹೊಂದಿರುತ್ತಾರೆ. [illegible] ಶೇಕಡ [illegible] ಮಂದಿ ಉತ್ತೀರ್ಣರಾಗಿ [illegible] ಶೇಕಡ [illegible] ಮಂದಿ [illegible] ಎಸ್. [illegible]

ಅರಮನೆ ನೌಕರರ ಬೇಡಿಕೆಗಳ ಬಗ್ಗೆ ಚರ್ಚೆ

ಮೈಸೂರು ೪

ಅರಮನೆ ನೌಕರರ ಸಂಘದ [illegible] ಗಳಾದ ಶ್ರೀ [illegible] [illegible] ಶ್ರೀ [illegible] ಕಾರ್ಯದರ್ಶಿ ಶ್ರೀ [illegible] [illegible] ಪಡಿಸಿದರು. [illegible] ನ್ನು ಬಿಟ್ಟು [illegible] ಗೆ ಕೊಡಿಸುವ ಬಗ್ಗೆ ಒತ್ತಾಯ [illegible] ಅವರುಗಳಿಗೆ ಬೇರೆ ಕೆಲಸ ಒದಗಿಸಲು ಪ್ರಯತ್ನಿಸುತ್ತಿರುವ ವಿಷಯವನ್ನು ತಿಳಿಸಿ [illegible] ನೌಕರರಿಗೆ ವ್ಯವಸಾಯಕ್ಕಾಗಿ ಜಮೀನು [illegible] ಸಿದ್ಧವಿರುವುದಾಗಿ ಹೇಳಿದರು. ಸಂಘದವರು [illegible] ನೌಕರರಿಗೆ ತಾತ್ಕಾಲಿಕ ಪರಿಹಾರ [illegible] ಮುಂತಾದ ಬೇಡಿಕೆಗಳ ಬಗ್ಗೆ ಪ್ರಸ್ತಾಪ [illegible] ಉತ್ತರವೀಯುವುದಾಗಿ ಭರವಸೆಯಿತ್ತರು.

ಸಂಸ್ಥಾನದಲ್ಲಿ ಹೆಚ್ಚಿನ ತೆರಿಗೆ ವಿಧಿಸಲು ಸೂಚನೆ

ಮೈಸೂರು ಸರ್ಕಾರಕ್ಕೆ ಕೇಂದ್ರ ಹಣಕಾಸಿನ ಮಂಡಲಿಯ ಸಲಹೆ

ಬೆಂಗಳೂರು ೪

ಕೇಂದ್ರ ಹಣಕಾಸಿನ ಮಂಡಲದ ಅಧ್ಯಕ್ಷರಾದ ಶ್ರೀ ಕೆ ಸಂತಾನಂರವರು ಮೊನ್ನೆ ಪತ್ರಿಕಾಗೋಷ್ಠಿಯನ್ನ ನಡೆಸಿ, ಸಂಸ್ಥಾನ ಸರ್ಕಾರವು ಎದುರಿಸುತ್ತಿರುವ ಕಷ್ಟಗಳ ಬಗ್ಗೆ ಮಂಡಲವು [illegible] ಸಹಾನುಭೂತಿ ಹೊಂದಿರುವುದೆಂದೂ, ಆದರೆ ಸಂಸ್ಥಾನದಲ್ಲಿ ಹೊಸ ತೆರಿಗೆಗಳನ್ನು ವಿಧಿಸುವ ಆವಶ್ಯಕತೆಯನ್ನು ಸರ್ಕಾರಕ್ಕೆ ಮನದಟ್ಟು ಮಾಡಿರುವುದಾಗಿಯೂ ನುಡಿದರು. ಈ ಸಲಹೆಗೆ ಸರ್ಕಾರದಿಂದ ಒಳ್ಳೆಯ ಪ್ರತಿಕ್ರಿಯೆಯೂ ಲಭಿಸಿತೆಂದು ಅವರು ಹೇಳಿದರು.

ಸಂಸ್ಥಾನ ಪುನರ್ವಿಂಗಡನೆಯ ಪರಿಣಾಮವಾಗಿ ಉಂಟಾಗಿರುವ ಹೆಚ್ಚಿನ ಕಷ್ಟಗಳನ್ನು ಸರ್ಕಾರದವರು ಮಂಡಲಕ್ಕೆ ಅರಿಕೆ ಮಾಡಿ ಮೈಸೂರಿನ ಎಲ್ಲೆಯು ಈಗ ಎರಡರಷ್ಟಾಗಿ, ಸಂಸ್ಥಾನವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದರಿಂದ ಮೈಸೂರಿನ ಬಗ್ಗೆ ಕೇಂದ್ರವು ಉದಾರವಾಗಿ ವರ್ತಿಸುವಂತೆಯೂ ಕೋರಲಾಗಿದೆ. ಮೈಸೂರಿಗೆ ಕೊಡಲಾಗಿರುವ ಸಾಲಗಳ ಬಗ್ಗೆ ಹೆಚ್ಚಿನ ರಿಯಾಯಿತಿಗಳನ್ನೂ ಕೇಳಲಾಗಿದೆ ಎಂದು ಶ್ರೀ ಸಂತಾನಂರವರು ನುಡಿದರು.

ಕೇಂದ್ರ ಮತ್ತು ಸಂಸ್ಥಾನ ನೌಕರರುಗಳ ಸಂಬಳದ ವ್ಯತ್ಯಾಸದ ವಿಷಯವನ್ನು ಕುರಿತು ಮಾಡಲಾದ ಪ್ರಶ್ನೆಗೆ ಅವರು ಉತ್ತರವಿತ್ತು ಕೇಂದ್ರ ಸರ್ಕಾರದವರು ಸಂಬಳ ಸಮಿತಿಯನ್ನು ರಚಿಸಿದಾಗ ಈ ವಿಚಾರವನ್ನು ಪರಿಶೀಲಿಸಲಿಲ್ಲವೆಂದೂ, ಕೇಂದ್ರ ಸರ್ಕಾರದ ವರಮಾನಕ್ಕೆ ತಕ್ಕಂತೆ ಆ ನೌಕರರ ಸಂಬಳವನ್ನು ಪುನರ್ವಿಮರ್ಶಿಸಲಾಯಿತೆಂದೂ ಅವರು ಹೇಳಿದರು. ಸಂಸ್ಥಾನ ನೌಕರರ ಸಂಬಳದ ವಿಚಾರವು ಆಯಾ ಸರ್ಕಾರಗಳ ಹಣಕಾಸಿನ ಸ್ಥಿತಿಯನ್ನವಲಂಬಿಸಿರುವುದೆಂದೂ ಅವರು ತಿಳಿಸಿದರು

[illegible] 30ಗೆ ಹಾಕುವುದರಿಂದ ಭಾರಿ ಹೊರೆ [illegible] ಗುವುದಿಲ್ಲವೆಂದೂ, ಈಗ ರಾಷ್ಟ್ರೀ[illegible] ನದಲ್ಲಿ ಕೇವಲ ಅರಷ್ಟು ಮಾತ್ರ ಹಣವನ್ನು ತೆರಿಗೆಯಾಗಿ ವಸೂಲಾಗುತ್ತಿರುವುದೆಂದೂ, ಹೆಚ್ಚಿನ ತೆರಿಗೆಯನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿ ರಾಷ್ಟ್ರೀಯ ವರಮಾನವನ್ನು ಹೆಚ್ಚಿಸಲಾಗುವುದೆಂದೂ ಅವರು ನುಡಿದರು.

ಲಂಡನ್ ಬಳಿ ವಿಮಾನ ಅಪಘಾತದಲ್ಲಿ ೩೧ ಜನರ ಮರಣ

ಲಂಡನ್ ಬಳಿ ಬ್ಲಾಕ್ ಬುಷ್ ಎಂಬ ಊರಿನಲ್ಲಿ ನೆನ್ನೆ ಎರಡು ಇಂಜಿನ್ನಿನ ವಿಮಾನವೊಂದು ಮುರಿದುಬಿದ್ದು ಉರಿದುಹೋಗಿ, ಅದರಲ್ಲಿದ್ದ ೩೫ ಜನರ ಪೈಕಿ ೩೧ ಮಂದಿ ಮೃತಪಟ್ಟರು. ನಾಲ್ವರು ರಕ್ಷಿಸಲ್ಪಟ್ಟರು.

ಕಾವ್ಯವಾಚನ

ಶಂಕರ ಜಯಂತಿ ಪ್ರಯುಕ್ತ, ಅಗ್ರಹಾರದಲ್ಲಿರುವ ಪೌರಾಣಿಕ ಸಾರ್ವಭೌಮ ಶ್ರೀ ವೆಂಕಟಾದ್ರಿಗಳವರ ಮನೆಯಲ್ಲಿ ಈ ಸಂಜೆ ೬॥ ಗಂಟೆಗೆ ಶ್ರೀ ಟಿ ಎ ಗಿರಿಧರಮೂರ್ತಿಯವರಿಂದ "ಶಂಕರ [illegible]" ಎಂಬ ಭಾಗದ ವಾಚನವನ್ನೂ, ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವನ್ನೂ ಏರ್ಪಡಿಸಲಾಗಿದೆ.

ಜನ ಸಂಘದವರಿಂದ ಸ್ವಾತಂತ್ರ್ಯದ ಶತಮಾನೋತ್ಸವ

ಭಾರತೀಯ ಜನ ಸಂಘದ ನಗರ ಶಾಖೆಯ ಕಾರ್ಯಕಾರೀ ಸಮಿತಿ ಸಭೆಯು ಮೊನ್ನೆ ಸೇರಿ [illegible] ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವವನ್ನು ಈ ತಿಂಗಳು ೧೦ನೇ [illegible] ನೆರವೇರಿಸಬೇಕೆಂದು ನಿರ್ಧರಿಸಲಾ[illegible] ದರ ಸಂಬಂಧವಾಗಿ ಅಂದು ಸಾರ್ವ[illegible] ದಲ್ಲಿ ಸಾರ್ವಜನಿಕ ಸಭೆ ನಡೆ[illegible] ಯುತ್ತವೆ ಮೈಸೂರು ಅರಮನೆ ನೌಕರರ ಬೇಡಿಕೆಗಳ ಬಗ್ಗೆ ಸಹಾನುಭೂತಿಯನ್ನೂ ವ್ಯಕ್ತಪಡಿಸಲಾಯಿತು.

ಬಸವೇಶ್ವರರ ಜಯಂತಿ

ತ್ಯಾಗರಾಜಾ ರಸ್ತೆ ಅಕ್ಕನ ಬಳಗದ ಕಟ್ಟಡದಲ್ಲಿ ಬಸವೇಶ್ವರ ಜಯಂತಿ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಅ॥ ವಿ॥ ಬಿ. ದೇವೇಂದ್ರಪ್ಪನವರಿಂದ ಶಿವಶರಣರ ಕೃತಿಗಳ ಹಾಡುಗಾರಿಕೆ.

ಅದೇ ರಸ್ತೆಯಲ್ಲಿರುವ ತುಂಬೇರಲೆ ಸಾಹುಕಾರ್ ಸಿದ್ದಪ್ಪನವರ ವಿದ್ಯಾರ್ಥಿನಿಲಯದಲ್ಲಿ ಕಲಾ ಮಂಡಲಿಯ ಆಶ್ರಯದಲ್ಲಿ ನಾಳೆ ರಾತ್ರಿ ೮ ಗಂಟೆಗೆ ಶ್ರೀ ಕೆ. ಗುಂಡೂರಾಯರಿಂದ "ಶ್ರೀ ಜಗಜ್ಯೋತಿ ಬಸವೇಶ್ವರ" ಎಂಬ ಶಿವಕಥೆ

ಕೃಷ್ಣರಾಜನಗರದ ವೀರಶೈವ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಡಾ॥ [illegible] ಮಠರವರ ಅಧ್ಯಕ್ಷತೆಯಲ್ಲಿ ಶ್ರೀ [illegible] ಲ್ಲಾರಾಧ್ಯರಿಂದ "ಜಗಜ್ಯೋತಿ ಬಸವೇಶ್ವರರು" ಎಂಬ ವಿಷಯವಾಗಿ ಭಾಷಣ

ಮೇ ದಿನಾಚರಣೆ

ನಗರದಲ್ಲಿರುವ ಸೌತ್ ಬ್ರಾಂಚ್ ರೈಲ್ವೆ ನೌಕರರ ಸಂಘದವರು ಮೊನ್ನೆ ಮೇ ದಿನಾಚರಣೆಯನ್ನು ನೆರವೇರಿಸಿದರು ಶ್ರೀ ಡಿ ಪಾರ್ಥಸಾರಥಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ ಎನ್. ಎಸ್ ಮೂರ್ತಿ, ಕೆ. ಎಸ್ ರಾಮಸ್ವಾಮಿ, ಜಿ ಎಸ್ ಭೈರೋಜಿರಾವ್‌ರವರುಗಳು ಮೇ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಕೆಲಸಗಾರರಿಗೆ ವಾರಕ್ಕೆ ೪೦ ಗಂಟೆ ಕಾಲ ಮಾತ್ರ ಕೆಲಸ ಕೊಡಬೇಕೆಂದೂ, ನೌಕರರ ಸಂಬಳ ಹೆಚ್ಚಿಸಲು ಪೇ ಕಮಿಷನ್ ರಚಿಸಬೇಕೆಂದೂ, ರೈಲ್ವೆಯಲ್ಲಿ ಕೆಲಸ ಮಾಡುವ ಎಲ್ಲಾ ನೌಕರರಿಗೂ ಬಟ್ಟೆಯನ್ನು ಉಚಿತವಾಗಿ ಒದಗಿಸಬೇಕೆಂದೂ ಮತ್ತು ವಾರಕ್ಕೊಮ್ಮೆ ಸಂಬಳ ಬಟವಾಡೆ ಮಾಡಬೇಕೆಂದೂ ಕೋರುವ ನಿರ್ಣಯಗಳನ್ನು ಮಾಡಲಾಯಿತು

ಛತ್ರಪತಿ ಶಿವಾಜಿಯವರ ಜಯಂತಿ

ನಗರದ ಶಿವ ಛತ್ರಪತಿ ಕೋ-ಆಪರೇಟಿವ್ ಸೊಸೈಟಿಯವರು ನಾಳೆ ಸಂಜೆ ೫ ಗಂಟೆಗೆ ಸಹಕಾರ ಭವನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವವನ್ನು ನೆರವೇರಿಸುವರು. ಬೆಂಗಳೂರು ಶ್ರೀ ರ ಸ ಥಾ ಉಪಾಧ್ಯಕ್ಷರಾದ ಶ್ರೀ ಎಸ್. ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು. ಶಿವಾಜಿ ಮಹಾರಾಜರ ಜೀವನ ಚರಿತ್ರೆ ವಿಚಾರವಾಗಿ ಶ್ರೀಮತಿ ಉಷಾ ದೇವಿಯವರು ಮಹಾರಾಷ್ಟ್ರ ಭಾಷೆಯಲ್ಲೂ, ಮೈಸೂರು ವಿಶ್ವವಿದ್ಯಾಲಯದ ಹಿಂದಿ ಅಧ್ಯಾಪಕರಾದ ಕುಮಾರಿ ಶೆ ಸರೋಜಾಬಾಯಿ ಕದಂರವರು ಹಿಂದಿಯಲ್ಲೂ, ನಿವೃತ್ತ ಅ॥ ಪ್ರೊಫೆಸರ್ ಯಂ. ಯಾಮುನಾಚಾರ್ಯರು ಕನ್ನಡದಲ್ಲೂ ಭಾಷಣ ಮಾಡುವರು

ಶೇಕದಾರರ ಸಭೆ

ನಗರದ ಸರ್ಕಾರಿ ಶೇಕದಾರರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಡಿ. ಬನುಮಯ್ಯ ಪ್ರೌಢಶಾಲೆಯಲ್ಲಿ ಸಂಘದ ಸಾಧಾರಣ ಸಭೆಯು ಜರುಗುವುದು. ಪೌರಸಭಾ ಸದಸ್ಯರಾದ ಶ್ರೀ ಬಿ ಜಿ ದಾಸ್‌ರವರು ಅಧ್ಯಕ್ಷತೆ ವಹಿಸುವರು. ಸರ್ವರೂ ದಯಮಾಡಿಸುವಂತೆ ಕೋರಲಾಗಿದೆ.

ಹೃದಯದ ಪರೀಕ್ಷೆಗಾಗಿ ಎದೆ ಕುಯ್ದುಕೊಂಡ ಪ್ರಸಂಗ

ತನ್ನ ಹೃದಯವು ಹೇಗೆ ಕೆಲಸ ಮಾಡುವುದೆಂಬುದನ್ನು ಅರಿತುಕೊಳ್ಳಲು ಫ್ರಾನ್ಸಿನ ಬೋರ್ಜಸ್ ಎಂಬ ಊರಿನ ಜೋಸೆಫ್ ಬಾಕರ್ ಎಂಬ ಕಾರ್ಮಿಕನು ತನ್ನ ಎದೆಯ ಎಡಭಾಗವನ್ನು ಕುಯ್ದುಕೊಂಡನೆಂದೂ, ಅವನನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ.

ರಾಮಕೃಷ್ಣ ಪರಮಹಂಸರ ಜಯಂತಿ

ವಾಣಿವಿಲಾಸ ಮೊಹಲ್ಲಾ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಶ್ರೀ ರಾಮಕೃಷ್ಣ ಪರಮಹಂಸರ ಜಯಂತಿಯನ್ನು ನೆರವೇರಿಸಲಾಗುವುದು. ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಶ್ರೀ ವಾಣಿ [illegible] ದೇವಿಯವರಿಂದ ಸಂಗೀತವೂ, ಪ್ರೊ॥ ಡಿ ಎಲ್ ನರಸಿಂಹಾಚಾರ್ ಮತ್ತು ಸ್ವಾಮಿ ಕೈಲಾಸಾನಂದಜಿಯವರಿಂದ ಭಾಷಣಗಳೂ ಇವೆ

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮತ್ತು		
ಕೊಯಮತ್ತೂರು	[illegible] ೦೦	[illegible]
ರತ್ನಚೂಡಿ	[illegible]	[illegible]
ಕಡ್ಡಿ	[illegible]	[illegible] ೦೦
ಕಾರ್ ಸಣ್ಣ	[illegible] ೦೦	
ರಾಗಿ	[illegible]	[illegible] ೦೦
ಜೋಳ	[illegible]	
ನವಣೆ	[illegible]	
ಕಡಲೆಕಾಯಿ	[illegible]	[illegible] ೦೦
ಹುಚ್ಚೆಳ್ಳು	[illegible]	[illegible]
ಹೊಂಗೇಬೀಜ	[illegible]	[illegible]
ಹರಳುಬೀಜ	[illegible] ೦೦	
ಎಳ್ಳು	[illegible]	
ಹುರುಳಿ	[illegible] ೦೦	[illegible]
ಹಲಸಂದೆ	[illegible]	[illegible]
ಅವರೆ	[illegible]	[illegible] ೦೦
ಧನಿಯ	[illegible]	[illegible]
ಉಪ್ಪು	[illegible]	
ಕಡಲೆ	[illegible]	[illegible]
ಸೆಣಬಿನ ಬೀಜ	[illegible]	[illegible]
ಹುಣಸೆಬೀಜ	[illegible]	[illegible]
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ	[illegible] ೦೦	[illegible] ೦೦

" ಮಹಾಲಿಂಗಂರವರು ಬಂದಿದ್ದಾರೆ "
ನಾದಬ್ರಹ್ಮ ಸಂಗೀತ ಸಭಾ,
ಮೈಸೂರು
ಅಮೋಘ ವೇಣುವಾದನ
ತಾ॥ 4-5-1957ನೇ ಶನಿವಾರ ಸಂಜೆ 5.30ಕ್ಕೆ
ನೂರಡಿ ರಸ್ತೆ ಸಹಕಾರ ಭವನದಲ್ಲಿ
ನಡೆಯುವುದು
ವಿ॥ ಟಿ. ಆರ್. ಮಹಾಲಿಂಗಂ
ರವರ ವೇಣುವಾದನ
ಕುಮಾರಿ ಶ್ರೀಮತಿ ಟಿ. ರುಕ್ಮಿಣಿಯವರ
ಪಿಟೀಲು
ವಿದ್ವಾನ್ ಎಂ ಎಲ್ ವೀರಭದ್ರಯ್ಯನವರ
ಮೃದಂಗ
ಮೆಂಬರುಗಳಲ್ಲದವರಿಗೆ ಪ್ರವೇಶ ದರ 2-0-0

ವಿಧವಾ ವಿವಾಹದ ಪ್ರತಿಜ್ಞಾ ಚಳುವಳಿಗೆ ನೆಹರೂ ವಿರೋಧ

ಯಾವ ಸಮಸ್ಯೆಯನ್ನೇ ಆಗಲೀ ಒತ್ತಾಯದ ವಿಧಾನದಿಂದ ಬಗೆಹರಿಸಬಾರದೆಂದು ನೆಹ[illegible] ರವರು ತಿಳಿಸಿರುತ್ತಾರೆ. ಕೇಂಬ್ರಿಡ್ಜಿನಲ್ಲಿ [illegible] ವಿದ್ಯಾರ್ಥಿ ದೆಸೆಯಲ್ಲಿ ವಿಧವಾ ವಿವಾಹಕ್ಕೆ [illegible] ಕ್ಷಿಪಡಿಯುವ ಚಳುವಳಿಯು ನಡೆಯು[illegible] ದೂ, ವಿಧವೆಯರನ್ನೇ ವಿವಾಹವಾಗುವುದಾ[illegible] ಶಿಜ್ಞೆ ಕೊಡುವ ಪತ್ರಕ್ಕೆ ರುಜು ಹಾಕಿಸಿಕೊ[illegible] ಗುತ್ತಿತ್ತೆಂದೂ, ತಾವು ಅದಕ್ಕೆ ರುಜು ಮಾ[illegible] ನಿರಾಕರಿಸಿದ್ದುದಾಗಿಯೂ ಅವರು ತಿಳಿಸಿ[illegible] ರೆ ವಿಧವೆಯರ ಪುನರ್ವಿವಾಹಕ್ಕೆ ತಾವು [illegible] ವುದಾದರೂ ನಕಾರಾತ್ಮಕವಾದ ಈ ವರ್ತನೆ[illegible] ನ್ನು ತಾವು ಮನ್ನಿಸುವುದಿಲ್ಲವೆಂದು ಹೇಳಿರು[illegible]

ಅರಮನೆ ನೌಕರರ ಬೇಡಿಕೆಗಳು

ಅರಮನೆ ನೌಕರರ ಸಂಘದವರು ಕೆಳಗಿ[illegible] ನ ಬೇಡಿಕೆಗಳನ್ನು ಮಹಾರಾಜರ ಪರಿಶೀ[illegible] ಗಾಗಿ ಒಪ್ಪಿಸಲಿರುತ್ತಾರೆ:—ನೌಕರರ ಸಂಘ[illegible] ಮನ್ನಣೆ ಕೊಡುವುದು; ಸಿಬ್ಬಂದಿ ಮೊ[illegible] ನೋಟೀಸನ್ನು ವಾಪಸು ಪಡೆದು, ಎಲ್ಲರನ್ನು ಕೆಲಸಕ್ಕೆ ಕರೆಸುವುದು ಅಥವಾ ಅವರುಗಳ[illegible] ಬೇರೊಂದು ಉದ್ಯೋಗ ದೊರೆಯ ಕಲ್ಪಿಸುವುದು; ಸಂಘದ ಅಧಿಕಾರಿ ವರ್ಗದವರ ವರ್ಗಾವ[illegible] ಆಜ್ಞೆ ರದ್ದು ಮಾಡುವುದು; ನೌಕರರಿಗೆ [illegible] ಹಿಂದಿನಿಂದಲೂ ತಾತ್ಕಾಲಿಕ ಭತ್ಯವೀಯು[illegible] ದು, ಸರ್ಕಾರೀ ನೌಕರರಿಗಿರುವ ದರದಲ್ಲಿ [illegible] ತ್ತಿಭತ್ಯ ಕೊಡುವುದು; ಸರ್ಕಾರಿ ಆಸ್ಪತ್ರೆಗಳ[illegible] ನೌಕರರಿಗೆ ವೈದ್ಯ ಸಹಾಯ ಕಲ್ಪಿಸುವುದು, ಸೀನಿಯಾರಿಟಿ ಮತ್ತು ಅರ್ಹತೆ ಮೇರೆ ಬಡ್ತಿ ಕೊಡುವುದು; ಸಂಬಳದ ಮುಂಗಡಕ್ಕೆ ಬಡ್ಡಿ ವಿನಾಯಿತಿ, ಮಹಿಳಾ ನೌಕರರಿಗೆ ಸಂಬಳ ಸಹಿತ ಹೆರಿಗೆ ರಜಾ ಮತ್ತು ಇತರ ಸೌಕರ್ಯ ಕಲ್ಪಿ[illegible] ಸುವುದು, ನೌಕರರ ಸಂಬಳದ ಪುನರ್ವಿಮರ್ಶೆ ಮಾಡುವುದು ಮತ್ತು ಅರಮನೆ[illegible] ಥೇರಿಯಲ್ಲಿ ನೌಕರರ ಸಂಘದ ಕಛೇರಿ [illegible] ಲು ಸೌಲಭ್ಯ ಕಲ್ಪಿಸುವುದು

ಈದ್ ಶುಭಾಶಯ

ಮೈಸೂರು ಅಶೋಕಾ ರಸ್ತೆಯಲ್ಲಿರುವ [illegible] ಪ್ರಿಯಾ ಪುಸ್ತಕದ ಅಂಗಡಿಯ ಶ್ರೀ ಸೈಯ[illegible] ಇಕ್ಬಾಲ್ ಖಾದ್ರಿಯಾರವರು ಕಳುಹಿಸಿದ ಈ[illegible] ದ್ ಶುಭಾಶಯಕ್ಕಾಗಿ ಕೃತಜ್ಞರಾಗಿರುತ್ತೇ[illegible]

ರಾಮಸಮುದ್ರದ ವಿಘ್ನೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಅಗತ್ಯ

ಚಾಮರಾಜನಗರದ ಬಳಿಯಿರುವ ರಾಮ[illegible] ಮುದ್ರದಲ್ಲಿ ೭೦-೮೦ ವರ್ಷಗಳಿಂದಲೂ [illegible] ವಿಘ್ನೇಶ್ವರ ದೇವಸ್ಥಾನದ ಜೀರ್ಣೋದ್ಧಾ[illegible] ಆಗದೆ ಇರುವುದು ತುಂಬಾ ವಿಷಾದಕರವಾ[illegible] ಅಲ್ಲಿ ಪೂಜೆಯು ೩೧ ವರ್ಷಗಳ ಹಿಂದೆ ನಿ[illegible] ಹೋಯಿತು. ಇತ್ತೀಚೆಗೆ ಅಲ್ಲಿ ದೇವಸ್ಥಾ[illegible] ದ ಬಗ್ಗೆ ಆಸಕ್ತಿಯು ಹುಟ್ಟಿ ೪ ವರ್ಷಗಳ[illegible] ದೆ ಪೂಜೆಯನ್ನು ನಡೆಸಲಾಯಿತು ಇನ್ನು [illegible] ದಾದರೂ ಸರಿಯಾದ ರೀತಿಯಲ್ಲಿ ಪೂಜೆಗೆ [illegible] ಸ್ಥೆ ಮಾಡಿ ದೇವಸ್ಥಾನದ ಪುನರುದ್ಧಾರ ಮಾ[illegible] ವುದು ಅಗತ್ಯ-ಎಂಬುದಾಗಿ ವಾಚಕರೊಬ್ಬ[illegible] ರು ಪತ್ರ ಬರೆದು ತಿಳಿಸಿರುತ್ತಾರೆ

THE CHAMPION METROPOLITAN COLLEGE OF COMMERCE
Co-operators' Home 100' Road, Mysore
FOR
FURTHER EDUCATION in Commerce, Business, Cost Accounts, Shorthand and Typewriting.
M S. PUTTANNA, *Vice-Principal.*
P. SUBBARAYA SASTRY, *Principal*

ANNOUNCEMENT
THE VIJAYA BANK Ltd.,
H. O. MANGALORE
A Branch of our Bank will be opened shortly in Mysore. Applications are invited for a few clerical and subordinate posts Personal interview by the undersigned at "Dasprakash" Hotel, Mysore on any day before 6-5-957 between 3 to [illegible] P. M.
P. J SHETTY, M A B L, C.A.I.B.
Superintendent

[illegible]
ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧಿ. ರೋಗದ ನಿವಾರಣೆ. ಸಲಹೆಗಳಿಗೆ:- 'ಲಿವರ್ ಹೌಸ್', ಚಾಮರಾಜಪುರಂ, ಮೈಸೂರು (ಸುಬ್ಬರಾವ್ ಹಾಸ್ಟೆಲ್ ಹತ್ತಿ[illegible]

Admissions received for the
S S.L.C. Coaching Classes:-
a) Supplementary Exams. of S[illegible]
b) Public Exams. of March 58
Please enquire for particulars
CITY TUTORIAL COLLEGE
Old Agrahar, Mysore

Edited, Printed and Publish[illegible]
R. Nagarajan at Sadhvi [illegible]
D. Subbiah Road, Mysore

ರಿಜಿಸ್ಟರ್ಡ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕ್, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : ೧೫] SADHVI ; SUNDAY 5—5—1957 ಮೈಸೂರು ; ಭಾನುವಾರ ೫—೫—೧೯೫೭ ; [ಸಂಚಿಕೆ : ೩೬೩

ಬಿಹಾರಿನ ೬,೦೦೦ ಅಭಾವಗ್ರಸ್ತರಿಂದ ಭಾರಿ ಪ್ರದರ್ಶನ

ಬಿಹಾರಿನಲ್ಲಿ ೬,೦೦೦ ಹಸಿದ ಜನರ ಪ್ರದರ್ಶನ

ಅಭಾವಗ್ರಸ್ತರಿಗೆ ರೊಟ್ಟಿ, ಬಟ್ಟೆ ಹಂಚಲು ಒತ್ತಾಯ

ಬಿಹಾರಿನ ಮುಜಫರಪುರ ಜಿಲ್ಲೆಯ ಮಧಿಪುರ ಸಬ್ ಡಿವಿಜನ್ನಿನ ಸುಮಾರು ೬,೦೦೦ ಹಳ್ಳಿಗರು ನೆನ್ನೆ ಅಲ್ಲಿನ ಸಬ್ ಡಿವಿಜನ್ ಅಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರದರ್ಶನ ನಡೆಸಿ, ಆಹಾರಕ್ಕಾಗಿ ಒತ್ತಾಯಪಡಿಸಿದರು. "ನಾವು ಹಸಿದಿದ್ದೇವೆ, ರೊಟ್ಟಿ, ಬಟ್ಟೆ ಕೊಡಿ ಇಲ್ಲವೇ ಅಧಿಕಾರ ಬಿಡಿ" ಎಂದು ಘೋಷಣೆಗಳನ್ನು ಕೂಗುತ್ತಾ ಹಲವು ಪ್ರದರ್ಶನಕಾರರು ಅಲ್ಲಿನ ಪ್ರಥಮ ದರ್ಜೆ ನ್ಯಾಯಾಧೀಶರ ಕೋರ್ಟಿಗೆ ನುಗ್ಗಿದರು. ನಂತರ ಪ್ರದರ್ಶನಕಾರರು ಸಬ್ ಡಿವಿಜನ್ ಅಧಿಕಾರಿಗಳ ಕಛೇರಿಗೆ ತೆರಳಿ ಅದನ್ನು ಸುತ್ತುಗಟ್ಟಿದರು. ಅವರ ಪ್ರತಿನಿಧಿಗಳು ಅಧಿಕಾರಿಗಳ ಬಳಿ ನಿಯೋಗ ಹೋಗಿ ಆಹಾರದ ಅಭಾವವನ್ನು ನೀಗಿಸಲು ಕೂಡಲೇ ಕೈಗೊಳ್ಳಬೇಕಾದ ಹಲವು ಕ್ರಮಗಳನ್ನು ಸೂಚಿಸಿದರು.

ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ಸಿದ್ಧವಿರುವುದೆಂದು ಅಧಿಕಾರಿಗಳು ಉತ್ತರವಿತ್ತರು. ಜಿಲ್ಲೆಯ ಜನಸಂಘದ ಕಾರ್ಯಕಾರಿ ಸಮಿತಿಯು ನಿರ್ಣಯವನ್ನು ಮಾಡಿ ಸರ್ಕಾರದವರು ಎಲ್ಲ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಸಮಸ್ಯೆಯನ್ನು "ಯುದ್ಧ ಸಮಸ್ಯೆ" ಯನ್ನು ಬಿಡಿಸುವ ರೀತಿಯಲ್ಲಿ ಎದುರಿಸಬೇಕೆಂದು ಸಲಹೆ ಮಾಡಿದೆ.

ಆ ಜಿಲ್ಲೆಯಲ್ಲಿ ಪೂರ್ಣ ಅಭಾವವಿರುವುದೆಂದೂ, ನಿರುದ್ಯೋಗವು ವಿಪರೀತವಾಗಿರುವುದೆಂದೂ, ಬೇಸಾಯದ ಕೆಲಸವು ಪೂರ್ಣವಾಗಿ ನಿಂತುಹೋಗಿರುವುದೆಂದೂ, ಕ್ಷಾಮದ ಸೂಚನೆಗಳು [illegible] ವರಾಗಿಯೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ತಿಳಿಸಿರುವರು

ಕೋಸಿ ನದಿಗೆ ೮ ಮಕ್ಕಳ ಆಹುತಿ

ದರ್ಭಾಂಗ ಜಿಲ್ಲೆಯ ದಾಸಿಯಾರಿ ಎಂಬ ಹಳ್ಳಿ ಬಳಿ ಕೋಸಿ ನದಿಯಲ್ಲಿ ೧೦೦ ಜನರಿದ್ದ ಎರಡು ದೋಣಿಗಳು ತಲೆಕೆಳಗಾಗಿ ೮ ಮಕ್ಕಳು ಮುಳುಗಿಹೋದುವೆಂದು ವರದಿಯಾಗಿದೆ ೧೪ ಮಕ್ಕಳ ಪೈಕಿ ಆರು ಮಕ್ಕಳನ್ನು ದೋಣಿಯವರು ಉಳಿಸಿದರು

ಮೈಸೂರು ರೇಡಿಯೋ ಇಂದಿನ ಕಾರ್ಯಕ್ರಮ

ಬೆಳಿಗ್ಗೆ ೭-೫ ನಾಗಸ್ವರ. ೭-೧೫ ಕೆ ಸತ್ಯ [illegible] ದೇವರ ನಾಮ ೭-೩೦ ಗಾನ ವಿಹಾರ. ೮-೧೫ ರಿಕಾರ್ಡ್ ಮಧ್ಯಾಹ್ನ ೧೨ ಕೆ ಸತ್ಯ [illegible] ಸಂಗೀತ ೧೨-೩೦ ಕಲ್ಪಾಕಂ ಬಾಲಕೃಷ್ಣ-ವೀಣೆ. ೧ ಕನ್ನಡ ಗೀತೆ. ೧ ೨೦ ರಿಕಾರ್ಡ್. ೧ ೪೦ ನಾಗಸ್ವರ ಸಂಜೆ ೭-೧೦ ಜಾನಪದ ಗೀತೆ ೭-೩೦ ಸುನಂದ ಫೋನ್ಸ್-ರವೀಂದ್ರ ಸಂಗೀತ. ೮-೧೫ ನಾವು ಮತ್ತು ನಮ್ಮ [illegible] ೮-೩೦ ಮತ್ತು ೯-೩೦ ಮೋಹನಲಾಲ್ ನೆ [illegible] ಪ್ರಸಂಗ. ೯-೧೫ ಇಂಗ್ಲಿಷ್ ಭಾಷಣ [illegible] ಕೆ. ಟಿ. ರಾಮಣ್ಣ ಕಥಾ ಕಾಲಕ್ಷೇಪ ೧೦ ೩೦ ಕಲ್ಪಾಕಂ ಬಾಲಕೃಷ್ಣ-ವೀಣೆ.

ಸ್ಕೂಲ್ ಫೈನಲ್ ಸಪ್ಲಿಮೆಂಟರಿ ಪರೀಕ್ಷೆ ರದ್ದಾಗುವ ಸಂಭವ

ವಿದ್ಯಾ ಮಂತ್ರಿ ವೆಂಕಟಪ್ಪನವರ ಸೂಚನೆ

ಸ್ವಂ. ವ.] ನಂಜನಗೂಡು ೫

ವಿದ್ಯಾ ಸಚಿವರಾದ ಶ್ರೀ ವಿ ವೆಂಕಟಪ್ಪನವರು ನೆನ್ನೆ ಇಲ್ಲಿಗೆ ಭೇಟಿ ಕೊಟ್ಟಿದ್ದರು [illegible] ಒಂದು [illegible] ಇನ್ನು ಎಸ್. ಎಸ್. ಎಲ್. ಸಿ ಸಪ್ಲಿಮೆಂಟರಿ ಪರೀಕ್ಷೆ ಕೇಂದ್ರ [illegible] ಎಸ್ ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಗಳನ್ನೇ [illegible] ವನ್ನು ಪರಿಶೀಲಿಸಲು [illegible] ದರು [illegible] ಪುಸ್ತಕಗಳನ್ನು [illegible] ಮಾಡಲಾಗುವುದೆಂದೂ [illegible] ತಿಳಿಸಿದರು

ಇಲ್ಲಿ ವಿದ್ಯಾರ್ಥಿನಿಯರ [illegible] ವನ್ನು ಸ್ಥಾಪಿಸುವ ಬಗ್ಗೆ [illegible] ಪರಿಶೀಲಿಸುವುದಾಗಿ ಅವರು ನುಡಿದರು.

ಅವರು ವಿದ್ಯಾ [illegible] ಭೇಟಿಯಿತ್ತು ಅಲ್ಲಿನ ಕೆಲಸ ಕಾರ್ಯಗಳನ್ನು ಪರಿಶೀಲಿಸಿ, ಅದಕ್ಕೆ ಎಲ್ಲಾ ಸಹಾಯವನ್ನೂ ನೀಡುವುದಾಗಿ ತಿಳಿಸಿದರು

ಸಚಿವರು ಸುತ್ತೂರಿಗೆ ಭೇಟಿ ಯಿತ್ತು ಸ್ವಾಮಿಗಳ ದರ್ಶನ ಮಾಡಿ ಹಿಂದಿರುಗಿದರು.

ಸ್ಟೇಷನ್ ಮಾಸ್ತರುಗಳಿಂದ ಮುಷ್ಕರ ನಿರ್ಧಾರ

ಅಖಿಲ ಭಾರತ ರೈಲ್ವೆ ಸ್ಟೇಷನ್ ಮಾಸ್ತರು ಮತ್ತು ಅಸಿಸ್ಟೆಂಟ್ ಮಾಸ್ತರುಗಳ ಸಮ್ಮೇಳನವು ಕಲ್ಕತ್ತಾದಲ್ಲಿ ನಡೆದು, ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಸಪ್ಟೆಂಬರ್ ೧೫ರಿಂದ ಮುಷ್ಕರ ಹೂಡತಕ್ಕದ್ದೆಂದು ನಿರ್ಧರಿಸಲಾಯಿತು ಮಾಸ್ತರುಗಳಿಗೆ ೨೦೦-೩೨೦ ರೂ. ಸಂಬಳ ಮತ್ತು ಅಸಿಸ್ಟೆಂಟ್ ಮಾಸ್ತರುಗಳಿಗೆ ೧೫೦-೨೪೫ ರೂ ಗ್ರೇಡನ್ನು ಕೊಡಬೇಕೆಂದೂ, ಸ್ಟೇಷನ್ ಮಾಸ್ತರು ಸ್ಥಾನಕ್ಕೆ ನೇರವಾಗಿ ಜನರನ್ನು ತೆಗೆದುಕೊಳ್ಳಕೂಡದೆಂದೂ, ಬಾಡಿಗೆ ಇಲ್ಲದ ವಸತಿ ಬೇಕೆಂದೂ ಮುಂತಾಗಿ ಅವರುಗಳು ಬೇಡಿಕೆಯಿತ್ತಿರುತ್ತಾರೆ ಈ ತಿಂಗಳು ೩೧ನೇ ತಾರೀಖು ರೈಲ್ವೆ ಮಂತ್ರಿಯವರಲ್ಲಿ ನಿಯೋಗ ಹೋಗಿ ಬೇಡಿಕೆಗಳನ್ನು ಮಂಡಿಸಬೇಕೆಂದೂ ನಿರ್ಧರಿಸಲಾಗಿದೆ.

ಬೆಂಕಿಯಿಂದ ೬೦೦ ಮನೆ ನಾಶ ಮತ್ತು ೨ ಲಕ್ಷ ರೂ. ಆಸ್ತಿ ನಷ್ಟ

ಬಿಹಾರಿನ ಕೋಸಿ ನದಿ ಪ್ರದೇಶದ ಧ [illegible] ಯಾ, ಪೂರಾಬ್ ಬಿಂಡಾ, ನಾಲುವಾರ್ ಮತ್ತು ತಮಾರಿಯಾ-ಎಂಬ ನಾಲ್ಕು ಹಳ್ಳಿಗಳಲ್ಲಿ ಬೆಂಕಿ ಹರಡಿ ೬೦೦ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ ೧೫೦ಕ್ಕೂ ಹೆಚ್ಚು ದನಗಳು ಬೆಂದುಹೋಗಿವೆ ಒಂದು ಹೇ [illegible] ೨ ಲಕ್ಷ ರೂ ಆಸ್ತಿ ನಷ್ಟವಾಗಿದೆ [illegible] ಯಕ್ಕ ೨ ಮಕ್ಕಳಿಗೂ, ಒಬ್ಬ ಮೊಮ್ಮನಿಗೂ ಸುಟ್ಟ ಗಾಯಗಳಾಗಿವೆ

ಬಸವೇಶ್ವರರ ಜಯಂತಿ

ಮೈಸೂರು ೫

ತ್ಯಾಗರಾಜಾ ರಸ್ತೆಯಲ್ಲಿರುವ ಶರಣಮಂಡಲಿಯ ಆಶ್ರಯದಲ್ಲಿ ನಾಳೆ ರಾತ್ರಿ ೮ ಗಂಟೆಗೆ ತುಂಬೇನಹಳ್ಳಿ ಟಿ ಎಂ ಸಿದ್ದಪ್ಪನವರ ವಿದ್ಯಾರ್ಥಿ ನಿಲಯದಲ್ಲಿ ಶಿವಕಥೆಯನ್ನು ಏರ್ಪಡಿಸಲಾಗಿದೆ.

ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗದಲ್ಲಿ ನಾಳೆ ಸಂಜೆ ೬ ಗಂಟೆಗೆ ಬಸವ ಜಯಂತಿ ಪ್ರಯುಕ್ತ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಶ್ರೀ [illegible] ಸೀತಾರಾಮ ಶಾಸ್ತ್ರಿಯವರಿಂದ ಶಿವಕಥೆ ಮತ್ತು ಮಂಡ್ಯದ ಸರ್ಕಾರಿ [illegible] ಶ್ರೀ ತಿಪ್ಪೆರುದ್ರಸ್ವಾಮಿಯವರಿಂದ "ಶಿವಾನುಭವ" ಎಂಬ ವಿಷಯವಾಗಿ ಭಾಷಣ

ಕಿಲ್ಲೆ ಮೊಹಲ್ಲಾ ಉತ್ತರಾದಿ ಮಠದ ಬೀದಿ ಮಿತ್ರ ಮಂಡಲಿಯ ಆಶ್ರಯದಲ್ಲಿ ಸಿದ್ದಪ್ಪಾಜಿ ಗದ್ದುಗೆ ಬಳಿ ಹಾಕಿರುವ ಚಪ್ಪರದಲ್ಲಿ ಈ ರಾತ್ರಿ ೮ ಗಂಟೆಗೆ ವಿ॥ ಗುರುರಾಜದಾಸರಿಂದ [illegible] ಹರಿಕಥೆ

ಕೃಷ್ಣರಾಜನಗರದ ವೀರಶೈವ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಬಸವೇಶ್ವರರ ಭಾವಚಿತ್ರದ ಉತ್ಸವವನ್ನು ನಡೆಸಲಾಗುವುದು

ಸತ್ಕಾರ ಕೂಟ

ಇಲ್ಲಿಂದ ವರ್ಗವಾಗಿ ತೆರಳಲಿರುವ ನಗರದ ಕೆನರಾ ಬ್ಯಾಂಕಿನ ಮ್ಯಾನೇಜರ್ ಶ್ರೀ [illegible] ಶೆಣೈ ಮತ್ತು ಹೊಸ ಮ್ಯಾನೇಜರ್ ಶ್ರೀ ಎಂ ಎಸ್ [illegible] ರವರ ಗೌರವಾರ್ಥವಾಗಿ ನಗರದ ಸಂತೆಪೇಟೆ ವರ್ತಕರು ದಾಸಪ್ರಕಾಶದಲ್ಲಿ ನೆನ್ನೆ ಸಂಜೆ ಸತ್ಕಾರಕೂಟವೊಂದನ್ನೇರ್ಪಡಿಸಿದ್ದರು. ಶ್ರೀ ನಂಜಪ್ಪನವರಿಂದ ಸ್ವಾಗತವಾದನಂತರ ಶ್ರೀ ಸುಬ್ಬರಾಯಪ್ಪನವರು ಶ್ರೀ ಶೆಣೈಯವರಿಗೆ ಮಾನಪತ್ರವನ್ನು ಓದಿ ಸಮರ್ಪಿಸಿದರು ಸನ್ಮಾನಕ್ಕೆ ಶ್ರೀ ಶೆಣೈಯವರು ಕೃತಜ್ಞತೆಯನ್ನು ಸೂಚಿಸಿ ವರ್ತಕರು ತಮ್ಮ ಸಂಸ್ಥೆಯೊಡನೆ ಸಹಕಾರವನ್ನು ಹೆಚ್ಚಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡರು. ಶ್ರೀ ಕಾಮತ್ ರವರು ಮಾತನಾಡಿ, ವರ್ತಕರಿಗೆ ಮತ್ತೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ಭರವಸೆಯಿತ್ತರು ಶ್ರೀ ಬಿ ಎಸ್ ಸುಬ್ಬಣ್ಣನವರು ಮಾತನಾಡಿ ಮುಖ್ಯ ಅತಿಥಿಗಳ ಗುಣಗಾನ ಮಾಡಿದರು. ಶ್ರೀ ಚೌಡಯ್ಯನವರು ವಂದನಾರ್ಪಣೆ ಮಾಡಿದರು.

ಸೂಯೆಜ್ ಕಾಲುವೆ ಮೂಲಕ ಇಸ್ರೇಲಿಗೆ ಹೋಗುವ ಹಡಗುಗಳಿಗೆ ಅವಕಾಶ

ಇಸ್ರೇಲಿನಾಗಿ ಕೊಬ್ಬರಿಯನ್ನು ತುಂಬಿಕೊಂಡು ಡೆನ್ಮಾರ್ಕಿನ ಒಂದು ಹಡಗು ಸೂಯೆಜ್ ಕಾಲುವೆ ಮೂಲಕ ಹಾದುಹೋಗಲು ಅವಕಾಶ ಕೊಡಲಾಗಿದೆ ಕಾಲುವೆಯನ್ನು ಪುನಃ ತೆರೆದಾಗಿನಿಂದ ಇದೇ ಮೊದಲಬಾರಿಗೆ ಇಸ್ರೇಲಿನ ತೀರ ನಗರಕ್ಕೆ ಇತರ ಮಾಲ್ ಹಡಗು ಹೋಗಲು ವ್ಯವಸ್ಥೆಯಾಗಿದೆ ಇಸ್ರೇಲಿಗೆ ಹೋಗುವ ಯಾವ ಹಡಗಿಗೂ ಅವಕಾಶ ಕೊಡುವುದಿಲ್ಲವೆಂದು ಈಜಿಪ್ಟ್ ವಾದಿಸುತ್ತಿತ್ತು.

ಭಾರತದಲ್ಲಿ ಭಾರಿ ಯಂತ್ರ ತಯಾರಿಕಾ ಕಾರ್ಖಾನೆ ಸ್ಥಾಪನೆ

ಉಕ್ಕು, ಸಿಮೆಂಟ್, ರಸಾಯನಿಕ ವಸ್ತು ತಯಾರಿಕಾ ಯಂತ್ರಗಳು, ಖನಿಜ ಉತ್ಪತ್ತಿ ಸಾಧನ, ಮಧ್ಯಮ ವರ್ಗ ಮತ್ತು ಭಾರಿ ಯಂತ್ರ ಸಾಮಗ್ರಿಗಳ ಉತ್ಪತ್ತಿಗಾಗಿ ಭಾರಿ ಸಂಯೋಜಿತ ಕಾರ್ಖಾನೆಯೊಂದನ್ನು ಭಾರತದಲ್ಲಿ ಸ್ಥಾಪಿಸಲಾಗುವುದೆಂದು ಕೇಂದ್ರ ಕೈಗಾರಿಕಾ ಖಾತಾ ಮಂತ್ರಿ ಎಂ ಎಂ ಷಾರವರು ತಿಳಿಸಿರುತ್ತಾರೆ. ೮೦ ಕೋಟಿ ರೂ ವೆಚ್ಚದಲ್ಲಿ ಸ್ಥಾಪಿಸಲ್ಪಡುವ ಈ ಕಾರ್ಖಾನೆಯಲ್ಲಿ ವರ್ಷಕ್ಕೆ ೮೦ ಸಾವಿರ ಟನ್ ಸಾಮಗ್ರಿ ಉತ್ಪನ್ನ ಮಾಡಬಹುದೆಂದೂ, ದ್ವಿತೀಯ ಯೋಜನೆ ಅವಧಿಯಲ್ಲಿ ೪೫,೦೦೦ ಟನ್ನಿನಷ್ಟು ತಯಾರಿಸಬಹುದೆಂದೂ ಅವರು ಹೇಳಿರುವರು. ಖನಿಜ ಕೈಗಾರಿಕೆಗಳಿಗೆ ಸಾಧನವನ್ನು ಒದಗಿಸುವುದಲ್ಲದೆ ಪ್ರತಿ ೨-೩ ವರ್ಷಗಳಿಗೊಮ್ಮೆ ಒಂದು ಉಕ್ಕಿನ ಪೂರ್ಣ ಯಂತ್ರವನ್ನೂ ಇದರಲ್ಲಿ ನಿರ್ಮಾಣ ಮಾಡಬಹುದೆಂದು ಸಚಿವರು ನುಡಿದಿರುವರು

ಬಿಹಾರ್ ಮಂತ್ರಿಮಂಡಲದಲ್ಲಿ ೧೧ ಮಂದಿ ಸಚಿವರು

ಬಿಹಾರಿನ ಮುಖ್ಯ ಮಂತ್ರಿ ಶ್ರೀ ಕೃಷ್ಣ ಸಿನ್ಹರವರು ದೆಹಲಿಯಲ್ಲಿ ಕೇಂದ್ರ ಕಾಂಗ್ರೆಸ್ ನಾಯಕರೊಡನೆ ದೀರ್ಘ ಕಾಲದ ಚರ್ಚೆ ನಡೆಸಿ ೧೧ ಜನ ಸಚಿವರುಳ್ಳ ಮಂತ್ರಿಮಂಡಲದ ರಚನೆಗೆ ಒಪ್ಪಿರುತ್ತಾರೆ ಇನ್ನು ೧೫ ಮಂದಿ ಉಪ ಮಂತ್ರಿಗಳೂ ಇರುವರು ಸಚಿವರ ಪೈಕಿ ಹಲವರು ಹೊಸಬರಾಗಿ ಇರುವರೆಂದು ಹೇಳಲಾಗಿದೆ.

೧೨೦ ಮೈಲಿ ಎತ್ತರಕ್ಕೆ ರಾಕೆಟ್ಟಿನ ಪ್ರಯೋಗ

ಅಮೇರಿಕದ ನೌಕಾ ದಳದವರು ಗಂಟೆಗೆ ೩॥ ಸಾವಿರ ಮೈಲಿ ವೇಗದಿಂದ ೧೨೦ ಮೈಲಿ ಎತ್ತರಕ್ಕೆ ಆಕಾಶದಲ್ಲಿ ಒಂದು ರಾಕೆಟ್ಟನ್ನು ಹಾರಿಸಿರುತ್ತಾರೆ ಭೂಮಿಯ ಸುತ್ತಲೂ ಸುತ್ತುವ ಉಪಗ್ರಹವನ್ನು ಬಿಡುವ ಸಂಬಂಧವಾಗಿ ಈ ರಾಕೆಟ್ಟಿನ ಪ್ರಯೋಗ ಪರೀಕ್ಷೆಯನ್ನು ನಡೆಸಲಾಗಿದೆ.

ಶಿಕ್ಷಣ ಕಾಲೇಜುಗಳ ಪ್ರಿನ್ಸಿಪಾಲರ ಸಮ್ಮೇಳನ

ಅಖಿಲ ಭಾರತ ಶಿಕ್ಷಣ-ಕಾಲೇಜುಗಳ ಪ್ರಿನ್ಸಿಪಾಲರ ಸಮ್ಮೇಳನವು ನಾಳೆ ಬೆಂಗಳೂರಿನಲ್ಲಿ ಸೇರಿ ಒಂದು ವಾರ ನಡೆಯುವುದು ಬರೋಡಾ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಶ್ರೀಮತಿ ಹನ್ಸಾ ಮೆಹತಾರವರು ಅಧ್ಯಕ್ಷತೆ ವಹಿಸುವರು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಆರಂಭೋತ್ಸವವನ್ನು ನೆರವೇರಿಸುವರು. ೬೦ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಬಿ ಇಡಿ. ಸಿಲಬಸ್ ಸಮಿತಿ ವರದಿ, ಉದ್ಯೋಗಿಕ ಶಿಕ್ಷಣದ ಮಾರ್ಗದರ್ಶನ, ಶಿಕ್ಷಣ ಕಾಲೇಜುಗಳಲ್ಲಿ ವಿಸ್ತರಣಾ ಸೇವೆ ಮುಂತಾದುವನ್ನು ಚರ್ಚಿಸಲಾಗುವುದು. ಮೇ ೧೧ ಮತ್ತು ೧೨ರಂದು ಸಂಶೋಧನಾ ಯೋಜನೆ ಗೋಷ್ಠಿಯೂ ಸೇರಲಿದೆ.

ವಾರ ಭವಿಷ್ಯ

ತಾ|| ೫-೫-೫೭ರಿಂದ ೧೧-೫-೫೭ರ ವರೆಗೆ

ಮೇಷ :—ಅನಾರೋಗ್ಯ ಸಂಭವ. ಮಾನ ಸನ್ಮಾನ. ಯಂತ್ರ, ಎಣ್ಣೆ ಕಂಪನಿಯವರಿಗೆ ವಿಶೇಷ ಲಾಭ. ಪ್ರವಾಸದಲ್ಲಿ ಜಯ. ವ್ಯವಸಾಯಗಾರರಿಗೆ ಲಾಭ.

ವೃಷಭ :—ಮಂಕು ಕವಿದಂತಾಗುವುದು. ವ್ಯಾಪಾರಿಗಳಿಗೆ ನಷ್ಟ. ಪ್ರವಾಸ ಬೇಡ. ಸ್ತ್ರೀಯರಿಗೆ ಸಾಮಾನ್ಯ ಫಲ. ಅನಿರೀಕ್ಷಿತ ಧನಾಗಮ.

ಮಿಥುನ :- ಎಲ್ಲಾ ಕಾರ್ಯಗಳಲ್ಲೂ ಜಯ. [illegible] ವರ್ತಕರಿಗೆ ವಿಶೇಷ ಲಾಭ. ಗೃಹದಲ್ಲಿ ಸತ್ಕಾರ್ಯ. ಪ್ರವಾಸದಲ್ಲಿ ಲಾಭ ಮತ್ತು ಸನ್ಮಾನ. ವ್ಯವಸಾಯಗಾರರಿಗೆ ಸುಯೋಗ.

ಕಟಕ :- ಸಕಲ ಕಾರ್ಯ ಜಯ. ವ್ಯಾಪಾರಿಗಳು, ವ್ಯವಸಾಯಗಾರರಿಗೆ ಒಳ್ಳೆಯ ಲಾಭ. ಸಾಧು ಸತ್ಪುರುಷರ ಆಗಮನ. ಪ್ರವಾಸದಿಂದ ಸನ್ಮಾನ, ಲಾಭ. ಸ್ತ್ರೀಯರಿಗೆ ವಸ್ತ್ರಾಭರಣ ಪ್ರಾಪ್ತಿ.

ಸಿಂಹ: ಸಕಲ ಕಾರ್ಯಗಳಲ್ಲೂ ಯಶಸ್ಸು. ಮನೆ, ಭೂಮಿ ಮೂಲಕ ವಿಶೇಷ ಲಾಭ. ಪ್ರವಾಸದಲ್ಲಿ ಲಾಭ, ಸನ್ಮಾನ. ವ್ಯವಸಾಯಗಾರರಿಗೆ ಉತ್ತಮ

ಕನ್ಯಾ :- ಪತ್ನೀ ಪುತ್ರರಿಗೆ ಅನಾರೋಗ್ಯ. ಆದಾಯಕ್ಕಿಂತ ವೆಚ್ಚ ಹೆಚ್ಚು. ವ್ಯಾಪಾರ ವ್ಯವಸಾಯಕ್ಕೆ ನಷ್ಟ. ಪ್ರವಾಸದಲ್ಲಿ ಅಲ್ಪ ಲಾಭ. ಸ್ತ್ರೀಯರಿಗೆ ಚಿಂತೆ.

ತುಲಾ :- ಹಿಡಿದ ಕಾರ್ಯ ಜಯ, ಸಮಾಜದಲ್ಲಿ ಉತ್ತಮ ಸ್ಥಾನ. ವ್ಯಾಪಾರವ್ಯವಸಾಯದಲ್ಲಿ ವಿಶೇಷ ಲಾಭ, ಮನೆಯಲ್ಲಿ ಮಂಗಳ ಕಾರ್ಯ. ಪ್ರವಾಸದಲ್ಲಿ ಲಾಭ, ಸನ್ಮಾನ

ವೃಶ್ಚಿಕ :- ಈ ವಾರ ರಾಜಗ್ರಹವಾದ ರವಿಯ ಅನುಗ್ರಹ, ಮುಂದೆ ಉತ್ತಮ ಸುಯೋಗವಿರದು, ವ್ಯಾಪಾರಿಗಳಿಗೆ ಲಾಭ, ಪ್ರವಾಸ ಬೇಡ, ಸ್ತ್ರೀಯರಿಗೆ ಅನಾರೋಗ್ಯ

ಧನು : ಸಮಾಜದಲ್ಲಿ ಮರ್ಯಾದೆ, ಬಂಧು ಕ್ಲೇಶ [illegible], ವ್ಯವಸಾಯಗಾರರಿಗೆ ವಿಶೇಷ ಲಾಭ. ಪ್ರವಾಸದಲ್ಲಿ ಲಾಭವಿಲ್ಲ, ಸ್ತ್ರೀಯರಿಗೆ [illegible] ಪ್ರಾಪ್ತಿ.

ಮಕರ :- ಯಶೋಲಾಭ. ಮನೆ-ಭೂಮಿ [illegible] ಮೂಲಕ ಹೆಚ್ಚಿನ ಲಾಭ, ಶತ್ರುಗಳು ಮಿತ್ರರಾಗುವರು. ಪ್ರವಾಸದಲ್ಲಿ ಲಾಭ, ವ್ಯವಸಾಯಗಾರರಿಗೆ ಉತ್ತಮ

ಕುಂಭ : ಕೀರ್ತಿ ಲಭ್ಯ, ಮಂಗಳ ಕಾರ್ಯ, ಕಲಾವಿದರುಗಳಿಗೆ ಸುಯೋಗ, ವ್ಯವಸಾಯಗಾರರಿಗೆ ಉತ್ತಮ, ಸ್ತ್ರೀಯರಿಗೆ ಗಡಿಬಿಡಿ

ಮೀನ :- ಶತ್ರು ಭಯ,ನಷ್ಟ, ವ್ಯಾಪಾರಿಗಳಿಗೆ ಸಾಮಾನ್ಯ ಫಲ, ಪ್ರವಾಸ ಬೇಡ, ಬೇಸಾಯಗಾರರಿಗೆ ನಷ್ಟ, ಚಿಂತೆ. ವಾರ ಶುಭ ಪ್ರದವಲ್ಲ.

ವನಿತಾ ಸದನದ ತರಗತಿಗಳು

ಜಯನಗರದಲ್ಲಿರುವ ವನಿತಾ ಸದನದಲ್ಲಿ ಗಮಕ, ಸಂಗೀತ, ಮಿಷನ್ ಎಂಬ್ರಾಯಡರಿ ಮತ್ತು ಹಿಂದಿ ತರಗತಿಗಳು ಪ್ರಾರಂಭವಾಗಿವೆ. ಸ್ಕೂಲ್ ಫೈನಲ್ ಪರೀಕ್ಷೆಗೂ ತರಪೇತು ಕೊಡಲಾಗುವುದು. ವಿದ್ಯಾರ್ಥಿಗಳು ಮತ್ತು ಮಹಿಳೆಯರು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಕೋರಲಾಗಿದೆ.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ.
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

Edited, Printed and Published by
[illegible] Nagarajan at Sadhvi Press,
D. Subbiah Road, Mysore

ಅರಮನೆ ನೌಕರರ ಖೋತಾ ಬಗ್ಗೆ ಖಂಡನೆ

ಸಾರ್ವಜನಿಕ ಸಭೆಯಲ್ಲಿ ನಿರ್ಣಯ

ಮೈಸೂರು ೫

ನಗರದ ಟೌನ್ ಹಾಲ್ ಮೈದಾನದಲ್ಲಿ ಮೊನ್ನೆ ಸಂಜೆ ಅರಮನೆ ನೌಕರರ ಸಂಘದ ಆಶ್ರಯದಲ್ಲಿ ಸಭೆ ನಡೆಯಿತು ಸಂಘದ ಉಪಾಧ್ಯಕ್ಷರಾದ ಶ್ರೀ ಸೀತಾರಾಂರವರು ಅಧ್ಯಕ್ಷತೆ ವಹಿಸಿದ್ದರು.

ಕಮ್ಯೂನಿಸ್ಟ್, ಜನಸಂಘ, ಪ್ರಜಾ ಸಮಾಜವಾದಿ ಮತ್ತು ಸಮಾಜವಾದಿ ಪಕ್ಷಗಳ ಪ್ರತಿನಿಧಿಗಳು ಭಾಷಣ ಮಾಡಿ ಅರಮನೆ ನೌಕರರ ಬೇಡಿಕೆಗಳಿಗೆ ಬೆಂಬಲವಿತ್ತು ಅವರ ಹೋರಾಟದಲ್ಲಿ ಸಹಾನುಭೂತಿ ವ್ಯಕ್ತಪಡಿಸಿದರು

ನೌಕರರ ಖೋತಾ ಬಗ್ಗೆ ಖಂಡನೆಯನ್ನು ವ್ಯಕ್ತಪಡಿಸಿ, ಕೂಡಲೇ ಖೋತಾ ನೋಟೀಸನ್ನು ಹಿಂತೆಗೆದುಕೊಳ್ಳಬೇಕೆಂದು ಸಭೆ ನಿರ್ಣಯ ಮಾಡಿತು ಮಹಾರಾಜರು ಸಂಘದ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿ ಇತ್ಯರ್ಥಕ್ಕೆ ಬರುವಂತೆ ಒತ್ತಾಯ ಪಡಿಸಲಾಯಿತು. ಬೇರೊಂದು ನಿರ್ಣಯದಲ್ಲಿ ಸರ್ಕಾರದವರು ಈ ವಿಚಾರದಲ್ಲಿ ಮಧ್ಯೆ ಪ್ರವೇಶಿಸಬೇಕೆಂದು ಕೋರಲಾಯಿತು

ಹರಿಕಥೆ

ವಾಣಿವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೫|| ಗಂಟೆಗೆ ಹರಿಕಥಾ ರತ್ನಾಕರ ಟಿ. ವಿ. ಗೋಪಿನಾಥ ದಾಸರು ಮತ್ತು ಸಹೋದರರಿಂದ ಮಹರ್ಷಿ ಗಾಲವ ಎಂಬ ಹರಿಕಥೆಯು ನಡೆಯುವುದು

ವೀಣಾ ವಾದನ

ಶಂಕರ ಜಯಂತಿ ಮಹೋತ್ಸವದ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ವಿ|| ಆರ್. ಎಸ್. ಕೇಶವಮೂರ್ತಿಯವರ ವೀಣಾವಾದನವು ಅ||ವಿ|| ವೆಂಕಟೇಶದೇವರುರವರ ಮೃದಂಗದೊಡನೆ ಜರುಗುವುದು

ರಾಮ ಪಟ್ಟಾಭಿಷೇಕ

ಶ್ರೀರಾಮಪೇಟೆ ಶ್ರೀರಾಮಾಭ್ಯುದಯ ಸಭೆಯಲ್ಲಿ ರಾಮೋತ್ಸವದ ಅಂಗವಾಗಿ ನಾಳೆ ಮಧ್ಯಾಹ್ನ ೧೨ ಗಂಟೆಗೆ ಪಟ್ಟಾಭಿಷೇಕವು ನಡೆಯುವುದು ೯ನೇ ತಾರೀಕು ಹನುಮಂತೋತ್ಸವವನ್ನು ಏರ್ಪಡಿಸಲಾಗಿದೆ

ಶ್ರೀರಂಗಪಟ್ಟಣದ ರಂಗನಾಥಸ್ವಾಮಿಗೆ ಅಭಿಷೇಕ ಮತ್ತು ರಂಗಮುಡಿ ಉತ್ಸವ

ಶ್ರೀರಂಗಪಟ್ಟಣದ ಮೂಲ ಶ್ರೀರಂಗನಾಥಸ್ವಾಮಿ ಅವರಿಗೆ ನಾಳೆ ಬೆಳಗ್ಗೆ ೬ ಗಂಟೆಗೆ ಅಭಿಷೇಕವೂ, ೭ ಗಂಟೆಗೆ ಅರಿಸಿನ ಸೇವೆಯೂ, ಮಧ್ಯಾಹ್ನ ಸಂತರ್ಪಣೆಯೂ ಮತ್ತು ಸಂಜೆ ೬ ಗಂಟೆಗೆ ರಂಗಮುಡಿ ಉತ್ಸವವೂ ಏರ್ಪಡಾಗಿವೆ

ಅಖಿಲ ಭಾರತ ಕೈಮಗ್ಗದ ಸಪ್ತಾಹ

ಮೈಸೂರು ೫

ಅಖಿಲ ಭಾರತ ಕೈಮಗ್ಗದ ಸಪ್ತಾಹದ ಅಂಗವಾಗಿ ಈ ದಿನದಿಂದ ೧೧ನೇ ತಾರೀಕಿನವರೆಗೆ ನಗರ ಮತ್ತು ಜಿಲ್ಲೆಯಲ್ಲಿ ದಿನಾಚರಣೆಯನ್ನು ನಡೆಸಲಾಗುವುದು. ಈ ವಾರದಲ್ಲಿ ಕೈಮಗ್ಗದ ಬಟ್ಟೆ ಕೊಳ್ಳುವವರಿಗೆ ರೂ. ಗೆ ೩ ಆಣೆಯ ವಿಶೇಷ ರಿಯಾಯಿತಿಯನ್ನು ಕೊಡಲಾಗುವುದು. ಈ ಸಂಜೆ ಡಿವಿಜನಲ್ ಕಮೀಷನರ್ ಶ್ರೀ ಕೆ. ಶೇಷಗಿರಿರಾಯರು ಇಲ್ಲಿನ ಉಮಾ ಟಾಕೀಸಿನಲ್ಲಿ ಅದರ ಆರಂಭೋತ್ಸವವನ್ನು ನೆರವೇರಿಸುವರು. ನಾಳೆ ಬೆಳಗ್ಗೆ ೧೦ ಗಂಟೆಗೆ ಚಾಮರಾಜನಗರದಲ್ಲಿ, ಮೈಸೂರಿನ ವಕೀಲರಾದ ಶ್ರೀ ಎಸ್. ಕೆ. ಲಕ್ಷ್ಮೀನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸಪ್ತಾಹವು ನೆರವೇರುವುದು.

ರಾಷ್ಟ್ರಾಧ್ಯಕ್ಷರ ಚುನಾವಣೆ ವಿರುದ್ಧ ಅರ್ಜಿಗಳ ವಜಾ

ರಾಷ್ಟ್ರಾಧ್ಯಕ್ಷರ ಚುನಾವಣೆಯನ್ನು ಈಗ ನಡೆಸುವುದರ ಕ್ರಮಬದ್ಧತೆಯನ್ನು ಪ್ರಶ್ನಿಸಿ ಹಿಂದೂ ಮಹಾ ಸಭೆಯ ಮಾಜಿ ಅಧ್ಯಕ್ಷ ಎನ್. ಬಿ. ಖರೆ ಮತ್ತು ಕಾಂಗ್ರಾದ ರಾಮನಾಥ್ ಕಾಳಿಯರವರು ಹೂಡಿದ್ದ ಎರಡು ಅರ್ಜಿಗಳನ್ನು ಸುಪ್ರೀಂ ಕೋರ್ಟಿನವರು ತಿರಸ್ಕರಿಸಿರುತ್ತಾರೆ. ಅವು ಸಕಾಲಿಕವಲ್ಲವೆಂದು ಕೋರ್ಟಿನವರು ಅಭಿಪ್ರಾಯಪಟ್ಟಿರುತ್ತಾರೆ ಹಿಮಾಚಲ ಪ್ರದೇಶ ಮತ್ತು ಪಂಜಾಬಿನ ಹಲವು ಭಾಗಗಳಿಂದ ಲೋಕ ಸಭೆ ಮತ್ತು ಶಾಸನ ಸಭೆಗಳಿಗೆ ಚುನಾವಣೆಗಳಾಗದೆ, ಆ ಸದಸ್ಯರು ಆರಿಸಬೇಕಾಗುವ ರಾಷ್ಟ್ರಾಧ್ಯಕ್ಷರ ಚುನಾವಣೆಯನ್ನು ನಡೆಸುವುದು ಅಕ್ರಮವೆಂದು ಅರ್ಜಿಗಳಲ್ಲಿ ತಿಳಿಸಲಾಗಿತ್ತು.

ವೀರ ನಾರಾಯಣ ಪ್ರತಿಜ್ಞೆ

ಹುಣಸೂರು ತಾಲ್ಲೂಕು ಚಿಲ್ಕುಂದದ ವೇದ ಪಾಠಶಾಲೆಯ ಉಪಾಧ್ಯಾಯರಾದ ಶ್ರೀ ಸಿ. ಕೆ. ನಾಗಪ್ಪಶಾಸ್ತ್ರಿಯವರು ಮೇಲ್ಕಂಡ ಶಿರೋನಾಮೆಯ ಪುಸ್ತಕವನ್ನು ರಚಿಸಿ ಪ್ರಕಟಿಸಿರುತ್ತಾರೆ. ಕುಮಾರ ವ್ಯಾಸ ಭಾರತದಲ್ಲಿರುವ ಮೊದಲನೇ ಪದ್ಯದ ಪ್ರತಿ ಪದಕ್ಕೂ ಆರು ರೀತಿಯ ಅರ್ಥ ಮಾಡಿರುತ್ತಾರೆ ವಿಷ್ಣು, ರಾಮ, ಬ್ರಹ್ಮ, ಗಣಪತಿ, ಕರ್ಣ, ಭೀಷ್ಮರಿಗೆ ಅನ್ವಯಿಸಿ ಆರು ಮುಖದ ವ್ಯಾಸ ಹೃದಯವನ್ನು ವಿವರಿಸಿರುವರು. ಶ್ರೀಯುತರು ತಮ್ಮ ಬುದ್ಧಿ ಕೌಶಲ್ಯವನ್ನು ಬಹಳ ಉತ್ತಮವಾಗಿ ಪ್ರದರ್ಶಿಸಿದ್ದಾರೆ

Admissions received for the
S S.L.C. Coaching Classes :-
a) Supplementary Examn. of Sept 57
b) Public Examn. of March 58
Please enquire for particulars
CITY TUTORIAL COLLEGE,
Old Agrahar, Mysore

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ

6-5-1957ನೇ ಸೋಮವಾರ ರಾತ್ರಿ 8 ಗಂಟೆಗೆ ವಿದ್ಯುದ್ದೀಪಗಳಿಂದ ಅಲಂಕೃತವಾದ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಪುಷ್ಪ ಮಂಟಪೋತ್ಸವವನ್ನು ಏರ್ಪಡಿಸಲಾಗಿರುವುದರಿಂದ ಆಸ್ತಿಕ ಮಹನೀಯರುಗಳು ಭಾಗವಹಿಸಿ ಶ್ರೀಯವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥನೆ.

ಯು. ಮಧ್ವರಾವ್ ಸಹೋದರರು,
ಜನಾರ್ಧನ ಭವನ್, ನಂಜನಗೂಡು

Golden Opportunity For S. S. L. C. Students
For Efficient Coaching, Excellent Tuition & Best Guidance, Join at once
NATIONAL LEAGUE
Anathalaya Buildings, Mysore
Timings : 8 A. M. to 10 A. M. and 6 P. M. to 8 P. M

ಒಲಂಪಿಯಾ ✱ ಇದೇ 2.5-57ರಿಂದ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ತ್ರಿಮುಖ ಕಾರ್ಯ ರೂಪಿಯಾದ
ಗುರುದತ್ತರ ಕಲ್ಪನಾ ಚತುರತೆ ★ ಪ್ಯಾಸಾ ★
ಎಸ್. ಡಿ ಬರ್ಮನ್‌ರವರ ಸಂಗೀತ, ಸಾಹಿರ್‌ರವರ ಸಾಹಿತ್ಯ; ಮಾಲಾ ಸಿನ್ಹ, ರಿಹಮಾನ್, ಗುರುದತ್‌ರವರ ನಟನಕಲಾ ಕೌಶಲ್ಯದಿಂದ ಕೂಡಿದ ಅತ್ಯುನ್ನತ ಮಟ್ಟದ ಚಿತ್ರ
ಬೊಂಬಾಯಿಯಲ್ಲಿ ಮೂರು ವಾರಗಳಲ್ಲಿ 1,97,507-15-0 ಈ ಚಿತ್ರ ಗಳಿಸಿದೆ. ದೆಹಲಿಯಲ್ಲಿ 2 ಚಿತ್ರ ಮಂದಿರಗಳಲ್ಲಿ ಈ ಚಿತ್ರವು 1 ಲಕ್ಷಕ್ಕೂ ಹೆಚ್ಚಿನ ಹಣವನ್ನು 2 ವಾರಗಳಲ್ಲಿ ಗಳಿಸಿದೆ
4 ವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ, ಫ್ರೀ ಪಾಸು ಮನ್ನಾ ಮಾಡಲಾಗಿದೆ.

ಬೆಳಗಾವಿನಲ್ಲಿ ಕೋಮುವಾ ಘರ್ಷಣೆ

೪ ದಿನಗಳ ಕರ್ಫ್ಯೂ ಆಜ್ಞೆ ಜಾ

ಬೆಳಗಾವಿನಲ್ಲಿ ಬಸವ ಜಯಂತಿಯ ಮೆ ಣಿಗೆಕಾರರಿಗೂ, ಇತರರಿಗೂ ಒಂದು ಮ ಬಳಿ ಮೊನ್ನೆ ಸಂಜೆ ಘರ್ಷಣೆಯಾಗಿ ೩೬ ಮಂ ಗೆ ಗಾಯವಾಯಿತೆಂದು ವರದಿಯಾಗಿ ಮಸೀದಿ ಬಳಿ ಮೆರವಣಿಗೆ ಸಮೀಪಿಸಿದಾಗ ದ್ಯವನ್ನು ನಿಲ್ಲಿಸುವಂತೆ ಸೂಚಿಸಿ, ಲಾಠಿಗ ಎಸೆಯಲಾಯಿತೆಂದು ಹೇಳಲಾಗಿದೆ. ೯ ಜ ದಿಗೆ ಇರಿತವಾಯಿತು. ಪೋಲೀಸರು ಮ ಪಕ್ಕದ ಮನೆಗೆ ನುಗ್ಗಿ ಶೋಧನೆ ನಡೆಸಿ, ಲಾಠಿಗಳನ್ನು ವಶಪಡಿಸಿಕೊಂಡರು. ಒಂದ ಅಂಗಡಿಗಳ ಲೂಟಿಯೂ ಆಗಿರುವುದೆಂ ದಿಯಾಗಿದೆ ನಗರದಲ್ಲಿ ನೆನ್ನೆ ಬೆಳಗ್ಗೆ ೬ ಗ ಯಿಂದ ೭೨ ಗಂಟೆಗಳ ಕರ್ಫ್ಯೂ ಆಜ್ಞೆ ವಿಧಿ ಲಾಗಿದೆ ೩೬ ಜನರನ್ನು ಬಂಧಿಸಲಾಗಿದೆ.

ಮೇ ದಿನಾಚರಣೆಯ ಮೆರವಣಿಗೆ

ನಗರದ ಪೌರಸಭಾ ಕೆಲಸಗಾರರ ಸ ಚರ್ಮದ ಕೆಲಸಗಾರರ ಸಂಘ ಮತ್ತು ಕಮ ನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ಆಶ್ರಯ ಕಳೆದ ೧ನೇ ತಾರೀಕು ಮೇ ದಿನಾಚರಣೆ ನಡೆಯಿತು ಅಂದು ಮಧ್ಯಾಹ್ನ ಕಾರ್ಮಿಕ ತಮಟೆ ವಾದನ, ಹುಲಿ ವೇಷ ಧಾರಣ ಮು ಘೋಷಣೆಗಳೊಡನೆ ಮುಖ್ಯ ಬೀದಿಗಳಲ್ಲಿ ಮೆ ರವಣಿಗೆ ನಡೆಸಿದರು. ಸಂಜೆ ಟೌನ್‌ಹಾಲ್ ದಾನದಲ್ಲಿ ಶ್ರೀ ಸೋಮಸುಂದರ ಶರ್ಮ ಅಧ್ಯಕ್ಷತೆಯಲ್ಲಿ ಸಭೆಯು ನಡೆದು, ಶ್ರೀಗಳ ಎಂ. ಎನ್ ಉಗ್ರಪ್ಪ, ಸಿ. ಕೆ. ಮೋಹನ್ ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಕಾರ್ಯ ಶ್ರೀ ಎನ್ ಎಲ್ ಉಪಾಧ್ಯಾಯರು ಭಾ ಮಾಡಿ ಮೇ ದಿನಾಚರಣೆಯ ಮಹತ್ವವನ್ನು ವರಿಸಿ ಕಾರ್ಮಿಕರು ಸುಸಂಘಟಿತರಾಗಬೇ ದು ತಿಳಿಸಿದರು. ಅಣು ಮತ್ತು ಜಲಜನಕ ಬು ಪ್ರಯೋಗ ಪರೀಕ್ಷೆಗಳನ್ನು ನಿಲ್ಲಿಸುವ ಒತ್ತಾಯಪಡಿಸಲಾಯಿತು.

ದಿನಾಚರಣೆ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮವೂ ಏರ್ಪಾಡಾಗಿತ್ತು.

ಕುಮಾರಿಯರು ನಾಗರತ್ನ, ಸುಬ್ಬಲಕ್ಷ್ಮಿ ಲಲಿತ, ಕಾವೇರಿ, ಬೇಬಿ ನಳಿನಿ, ಕುಸುಮ ತ್ತು ಶ್ರೀ ನಾರಾಯಣ ಮತ್ತು ಕುಮಾರಿ ವಸುಂಧರ ಮತ್ತು ರಾಜಮಣಿಯವರ ಭ ನಾಟ್ಯಗಳು ನಡೆದುವು.

ಬೇಕಾಗಿದೆ
ಎಂಬ್ರಾಯಡರಿ, ನಿಟ್ಟಿಂಗ್ ಮುಂತಾದ ಕೆಲಸದಲ್ಲಿ ತರಪೇತು ಪಡೆದಿರುವ ಅನು ರಾದ ಉಪಾಧ್ಯಾಯಿನಿ ಬೇಕಾಗಿದೆ. ಳಗೆ ಕಾರ್ಯದರ್ಶಿಗಳನ್ನು ನೋಡಬಹುದು.
ಎಸ್. ಕೆ. ಸುರಮಾ ಬಾಯಿ.
ಗೌರವ ಕಾರ್ಯದರ್ಶಿ,
ಭಗಿನೀ ಸೇವಾ ಸಮಾಜ,
920. ಲಕ್ಷ್ಮೀಪುರಂ, ಮೈಸೂರು

ಸಕ್ಕರೆ ಖಾಯಿಲೆಗೆ
ಮಧುಮೂತ್ರ ವಿಧ್ವಂಸಕ
ಖಾತರಿಯಾದ ಔಷಧಿ (48 ದಿನಗಳಲ್ಲಿ ಗುಣ
ಈ ಔಷಧದಲ್ಲಿ ಗುಣವಿಲ್ಲವೆಂದು
ತೋರಿಸಿಕೊಟ್ಟವರಿಗೆ
500 ರೂ. ಬಹುಮಾನ
ವಾಸ್ತ್ರ ವಾಯುವಿಗೆ ಉತ್ತಮ ಚಿಕಿ
ನಡೆಸಲಾಗುತ್ತೆ
ಶ್ರೀ ವಿಶ್ವೇಶ್ವರ ಆಯುರ್ವೇದ ವೈದ್ಯ
(ಶ್ರೀ ಕೃಷ್ಣಾ ಟ್ಯುಟೋರಿಯಲ್ ಹಾಲ್
ನ್ಯೂ ಸ್ಟ್ಯಾಚ್ಯು ಸ್ಕ್ವೇರ್, ಮೈಸೂ

ರಿಜಿಸ್ಟರ್ಡ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 3 ನಯಾ ಪೈಸೆ

ಇಂದಿನ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೮ } SADHVI · MONDAY 6—5—1957 ಮೈಸೂರು : ಸೋಮವಾರ ೬—೫—೧೯೫೭ : [ಸಂಚಿಕೆ : [illegible]

ಹಿಮಾಚಲ ಪ್ರದೇಶ ಸರ್ಕಾರಿ ಕಛೇರಿ ಬೆಂಕಿಯಲ್ಲಿ ನಾಶ

ಬೆಂಕಿಯಿಂದ ಹಿಮಾಚಲ ಪ್ರದೇಶದ ಸರ್ಕಾರಿ ಭವನ ನಾಶ

ಪುಂಡರ ಕೃತ್ಯವೆಂದು ಸಂಶಯ

ಸಿಂಲಾ ನಗರದಲ್ಲಿ ಹಿಂದೆಂದೂ ಕಾಣದಂತ ಭಾರಿ ಅಗ್ನಿ ಪ್ರಮಾದವು ನೆನ್ನೆ ಘಟಿಸಿ, ಹಿಮಾಚಲ ಪ್ರದೇಶ ಸರ್ಕಾರದ ಕಛೇರಿ ಕಟ್ಟಡವು, ಕಾಗದಪತ್ರಗಳು, ಕುರ್ಚಿ ಮೇಜು ಮುಂತಾದ ಸಾಮಾನು ಸಮೇತ ಪೂರ್ಣವಾಗಿ ನಾಶವಾಯಿತೆಂದು ವರದಿಯಾಗಿದೆ. ೩ ಗಂಟೆ ಕಾಲ ಬೆಂಕಿಯು ಜಾಜ್ವಲ್ಯಮಾನವಾಗಿ ಉರಿಯುತ್ತಿದ್ದಕ್ಕೆ ಕಾರಣವೇನೆಂಬುದು ಗೊತ್ತಿಲ್ಲವಾದರೂ, ಹಿಂದೆ ಎರಡು ಬಾರಿ ಬೆಂಕಿ ಹತ್ತಿಸುವ ಪ್ರಯತ್ನ ಮಾಡಿದ ಪುಂಡರಿಂದ ಅದು ನಡೆದಿರಬೇಕೆಂದು ಹಿರಿಯ ಅಧಿಕಾರಿಗಳು ಸಂಶಯ ಪಟ್ಟಿರುತ್ತಾರೆ

ಬೆಂಕಿ ಜ್ವಾಲೆಯು ಮೈಲಿ ಗಟ್ಟಲೆ ದೂರಕ್ಕೆ ಕಾಣುತ್ತಿತ್ತೆಂದು ಹೇಳಲಾಗಿದೆ. ಭವನಕ್ಕೆ ವ್ಯಾಪಿಸಿದ ಜ್ವಾಲೆಯನ್ನು ಕಂಡು ಹೆದರಿದ ನೆರೆಯ ನಿವಾಸಿಗಳು ಮನೆಗಳನ್ನು ಬಿಟ್ಟು ಹೊರಕ್ಕೆ ಓಡಿಬಂದರು.

ಬ್ರಿಟಿಷರ ಆಳ್ವಿಕೆಯಲ್ಲಿ ಈ ಕಟ್ಟಡವು ಭಾರತ ಸರ್ಕಾರದ ವಿದೇಶಾಂಗ ಇಲಾಖಾ ಕಛೇರಿಯಾಗಿತ್ತು. ಸಿಂಲಾಕ್ಕೆ ಬಂದಿದ್ದ ಪ್ರವಾಸಿಗರು ಹತ್ತಿರದ ಸಿಸಿಲ್ ಹೋಟೇಲಿನಿಂದ ತಮ್ಮ ಸಾಮಾನುಗಳನ್ನು ಕಟ್ಟಿಕೊಂಡು ಓಡಿದರು

ಜೆಕ್ ನಾಡಿನಲ್ಲಿ ಬ್ರಿಟಿಷ್ ಮತ್ತು ಅಮೆರಿಕಾ ರಾಜದೂತರ ಬಂಧನ

ಜೆಕೊಸ್ಲೊವೇಕಿಯದ ರಾಜಧಾನಿ ಪ್ರಾಗ್ ನಗರದ ಬಳಿ ಪ್ರತಿಬಂಧಿಸಲ್ಪಟ್ಟಿದ್ದ ಮಿಲಿಟರಿ ಪ್ರದೇಶಕ್ಕೆ ಹೋಗಿದ್ದರೆಂಬ ಕಾರಣಕ್ಕಾಗಿ ಬ್ರಿಟನ್ ಮತ್ತು ಅಮೆರಿಕಾ ರಾಯಭಾರಿಗಳ ಮಿಲಿಟರಿ ಸಹಕಾರಿಗಳಿಬ್ಬರನ್ನು ಬಂಧಿಸಲಾಗಿದೆಯೆಂದು ವರದಿಯಾಗಿದೆ. ಈ ಅಧಿಕಾರಿಗಳ ಚಟುವಟಿಕೆ ಬಗ್ಗೆ ಆಯಾ ರಾಯಭಾರಿಗಳಿಗೆ ಜೆಕೊಸ್ಲೊವೇಕಿಯದ ವಿದೇಶಾಂಗ ಮಂತ್ರಿಯವರು ಪ್ರತಿಭಟಿಸಿ, ಮುಂದೆ ಇಂತಹ ಘಟನೆಗಳಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿರುತ್ತಾರೆ

ಟೆಕ್ಸಾಸ್ ಪ್ರವಾಹದಲ್ಲಿ ೨,೦೦೦ ಗೃಹಗಳ ನಾಶ

ಅಮೆರಿಕದ ಟೆಕ್ಸಾಸ್ ಪಟ್ಟಣದಲ್ಲಿ ೧೮ ದಿನಗಳಿಂದ ಬರುತ್ತಿರುವ ಪ್ರವಾಹಕ್ಕೆ ಭೀತಿಗೊಂಡು ೫ ಸಾವಿರ ಜನರು ಮನೆಗಳನ್ನು ಬಿಟ್ಟು ಪರಾರಿಯಾಗಿರುವರೆಂದೂ, ೨,೦೦೦ ಗೃಹಗಳು ನಾಶವಾಗಿ, ಬೆಳೆ ಮತ್ತು ಜಾನುವಾರುಗಳು ಹಾಳಾಗಿರುವವೆಂದೂ ವರದಿಯಾಗಿದೆ. ಒಟ್ಟು ನಷ್ಟವೇನೆಂಬುದು ಗೊತ್ತಾಗದಿದ್ದರೂ, ಸರ್ಕಾರಿ ಆಸ್ತಿಗಳಿಗೆ ೫೦ ಲಕ್ಷ ಡಾಲರಿನಷ್ಟು ನಷ್ಟವಾಗಿದೆ.

ಬಸವೇಶ್ವರ ಜಯಂತಿ

ಉತ್ತರಾದಿ ಮಠದ ಬೀದಿಯಲ್ಲಿರುವ ಬಸವ [illegible] ಜಯಂತಿ ಮಿತ್ರ ಮಂಡಲಿಯ ಆಶ್ರಯದಲ್ಲಿ [illegible] ಗಂಟೆಗೆ ಬಳಿ ಈ ಸಂಜೆ ಶ್ರೀ ಶಂಕರ ಸಿದ್ಧಪ್ಪಶಾಸ್ತ್ರಿಗಳಿಂದ ಮಾರ್ಗದರ್ಶ್ಯ ಎಂಬ [illegible] ನಡೆಯುವುದು.

ಜಾರ್ಡಾನಿನ ಮಾಜಿ ಪ್ರಧಾನಿ ನಾಬುಲ್ಸಿಯವರ ವಿಚಾರಣೆ

ರಾಜಕೀಯ ಚಟುವಟಿಕೆಗಳ ಮೇಲೆ ನಿರ್ಬಂಧ

ಜಾರ್ಡಾನಿನ ಮಾಜಿ ಪ್ರಧಾನಿ ನಾಬುಲ್ಸಿ ಮತ್ತು ಅವರ ಮಂತ್ರಿಮಂಡಲದ ಸದಸ್ಯರನ್ನು ಅಮ್ಮಾನ್ ನಗರದಲ್ಲಿ ಮಿಲಿಟರಿ ವಿಚಾರಣೆಗೆ ಗುರಿಪಡಿಸಲಾಗುವುದೆಂದು ಈಜಿಪ್ಟಿನ ಪತ್ರಿಕೆಗಳು ವರದಿ ಮಾಡಿವೆ. ಹೊಸ ಸರ್ಕಾರದವರು ಅಲ್ಲಿನ ಪಾರ್ಲಿಮೆಂಟಿನ ಹಲವು ಸದಸ್ಯರನ್ನು ಬಂಧಿಸಿರುತ್ತಾರೆ

ಆ ರಾಜ್ಯದಲ್ಲಿ ರಾಜಕೀಯ ಚಟುವಟಿಕೆಗಳ ಮೇಲೆ ಹೊಸ ನಿರ್ಬಂಧಗಳನ್ನು ಹಾಕಲಾಗಿದೆ. ತೀವ್ರ ವಾಮ ಪಕ್ಷವೆಂದು ಕರೆಯಲ್ಪಡುವ ಅರಬ್ ವಿದ್ಯಾರ್ಥಿ ಕಾಂಗ್ರೆಸಿನ ಸಭೆ ನಡೆಸ [illegible] ಬ್ಬ ಮಾಡಲಾಗಿದೆ ರಾಷ್ಟ್ರೀಯ [illegible] ದಿ. ಕಮ್ಯೂನಿಸ್ಟ್, [illegible] ಪಕ್ಷಗಳ ಪತ್ರಿಕೆಗಳಿಗೆ [illegible] ದೆ ರಾಜಕೀಯ ಪಕ್ಷಗಳ [illegible] ಅಧಿಕಾರಿಗಳನ್ನು [illegible] ಮಾಡಬೇಕೆಂದು [illegible] ಹೇಳಲಾಗಿದೆ

ಕೇಂದ್ರದಿಂದ ಬಿಹಾರಿಗೆ ೬೦,೦೦೦ ಟನ್ ಧಾನ್ಯ

ಬಿಹಾರಿನ ಒಟ್ಟು ೫ ಜಿಲ್ಲೆಗಳ ೩೬-೬೦ ಲಕ್ಷ ಜನರಿರುವ ೫,೬೦೦ ಗ್ರಾಮಗಳಿಗಿಂತಲೂ ಹೆಚ್ಚು ಪ್ರದೇಶದಲ್ಲಿ ತೀವ್ರ ಅಭಾವವಾಗಿರುವುದೆಂದು ಕೇಂದ್ರ ಆಹಾರ ಮಂತ್ರಿ ಅಜಿತ ಪ್ರಸಾದ ಜೈನರವರು ತಿಳಿಸಿರುತ್ತಾರೆ ಅವರು ಅಲ್ಲಿ ಎರಡು ದಿನಗಳ ಪ್ರವಾಸ ಮಾಡಿ ದೆಹಲಿಗೆ ಹಿಂದಿರುಗಿರುತ್ತಾರೆ ಬಿಹಾರಿಗೆ ೬೦,೦೦೦ ಟನ್ ಗೋಧಿಯನ್ನು ಬರುವ ಮೂರು ತಿಂಗಳಲ್ಲಿ ಕೇಂದ್ರ ಸರ್ಕಾರದವರು ಒದಗಿಸುವರು ೨॥ ಸಾವಿರ ಫೇರ್ ಪ್ರೈಸ್ ಡಿಪೋಗಳನ್ನು ೫॥ ಸಾವಿರಕ್ಕೆ ಹೆಚ್ಚಿಸಲಾಗುವುದು. ಮುಂದೆ ಪ್ರವಾಹ ಬಂದಾಗ ಉಂಟಾಗಬಹುದಾದ ಅನಾಹುತವನ್ನೆದುರಿಸಲು ಉತ್ತರ ಬಿಹಾರಿನಲ್ಲಿ ಸಾಕಾದಷ್ಟು ಧಾನ್ಯವನ್ನು ಕೇಂದ್ರದವರು ಇಡುವರು.

ಅಖಿಲ ಭಾರತ ಕೈಮಗ್ಗದ ವಾರಾಚರಣೆ

ಅಖಿಲ ಭಾರತ ಕೈ ಮಗ್ಗದ ವಾರಾಚರಣೆಯು ನೆನ್ನೆ ರಾಷ್ಟ್ರಾದ್ಯಂತ ಆರಂಭವಾಯಿತು ಸಂಸ್ಥಾನಗಳ ಮುಖ್ಯ ಮಂತ್ರಿಗಳು ತಮ್ಮ ಪ್ರಾಂತಗಳಲ್ಲಿ ಇದನ್ನು ಆರಂಭಗೊಳಿಸಿದರು ಕೇಂದ್ರ ವಾಣಿಜ್ಯ ಮಂತ್ರಿ ಮೊರಾರ್ಜಿ ದೇಸಾಯಿಯವರು ಅದರ ಆರಂಭೋತ್ಸವವನ್ನು ನೆರವೇರಿಸಿ ಕೈಮಗ್ಗದವರು ತಮ್ಮದೇ ಆದ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಳ್ಳಬೇಕೆಂದು ತಿಳಿಸಿದರು

ಬೆಂಗಳೂರಿನಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅದನ್ನು ಆರಂಭಗೊಳಿಸಿದರು. ಮೈಸೂರು ನಗರದಲ್ಲಿ ಡಿವಿಜನಲ್ ಕಮಿಷನರ್ ಶ್ರೀ ಕೆ ಶೇಷಗಿರಿರಾಯರು ಅದರ ಆರಂಭ ಮಾಡಿದರು.

ಜಾರ್ಡಾನಿನಲ್ಲಿ ಪಾರ್ಲಿಮೆಂಟರಿ ಸರ್ಕಾರದ ಸ್ಥಾಪನೆಗೆ ಚಳುವಳಿ

ಸರ್ಕಾರದ ವಿರೋಧ ಪಕ್ಷಗಳವರಿಂದ ಹೊಸ ರಂಗದ ಸ್ಥಾಪನೆ

ಜಾರ್ಡಾನಿನಲ್ಲಿ ಪಾರ್ಲಿಮೆಂಟರಿ ಪದ್ಧತಿಯ ಆಳ್ವಿಕೆಯನ್ನು ಪುನಃ ಸ್ಥಾಪಿಸಲೂ, ಜನರ ನಾಗರಿಕ ಸ್ವಾತಂತ್ರ್ಯವನ್ನು ಸಾಧಿಸಲೂ ಚಳುವಳಿ ನಡೆಸುವುದಕ್ಕಾಗಿ ಜಾರ್ಡಾನಿನ ರಾಷ್ಟ್ರೀಯ ಮತ್ತು ಇತರ ವಾಮ ಪಕ್ಷಗಳವರು ಮಧ್ಯ ಪೂರ್ವದಲ್ಲಿ ಒಂದು ಹೊಸ ಸ್ವತಂತ್ರ ಅರಬ್ ರಂಗವೆಂಬ ಪಕ್ಷವನ್ನು ಸ್ಥಾಪಿಸಿರುವರು ಈ ಅರಬ್ ರಂಗ ಚಳುವಳಿಯವರು ಸಹಸ್ರಾರು ಹಸ್ತ ಪತ್ರಿಕೆಗಳನ್ನು ಹಂಚಿ ಜಾರ್ಡಾನಿನಲ್ಲಿ ಈಗಿನ ರಾಜ್ಯಭಾರದ ವಿರುದ್ಧವಾಗಿ ಚಳುವಳಿ ನಡೆಸುವಂತೆ ಜನರನ್ನು ಪ್ರೋತ್ಸಾಹಿಸಿರುತ್ತಾರೆ

ಈ ಮಧ್ಯೆ ಮುಸ್ಲಿಂ ಸಹೋದರತ್ವ ಎಂಬ ಸಂಸ್ಥೆ ಮತ್ತು ಕಮ್ಯೂನಿಸ್ಟ್ ವಿರೋಧವಾಗಿ [illegible] ಸಂಸ್ಥೆ ಎಂಬ ಎರಡು ಪಕ್ಷಗಳು [illegible] ಜನ್ [illegible] ಮಾಡುತ್ತಿವೆ

[illegible] ಇಬ್ಬರು ಮಾಜಿ ಸೇನಾನಾಯಕರು [illegible] ಗಡೀಪಾರು ಮಾಡಿದ್ದಾರೆ. ಅವರ ಪೈಕಿ ಒಬ್ಬರು ದೊರೆ ವಿರುದ್ಧವಾಗಿ ಸೈನ್ಯವು ದಂಗೆ ನಡೆಸುವಂತೆ ಪ್ರಯತ್ನಿಸಿ ವಿಫಲವಾಗಿದ್ದವರು. ಮತ್ತೊಬ್ಬರು ಅವರ ಹಿಂಬಾಲಕರು

೭೦ ಸೀರೆಯುಟ್ಟಿದ್ದ ತರುಣಿ

ಮದ್ರಾಸಿನ ಮೀನಂಬಾಕಂ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಒಬ್ಬ ತರುಣಿಯ ಶರೀರದ ಗಾತ್ರವು ವಿಪರೀತವಾಗಿದ್ದು, ಅಧಿಕಾರಿಗಳಿಗೆ ಸಂಶಯ ಬರಲಾಗಿ ಆಕೆಯನ್ನು ಮಹಿಳಾ ನೌಕರರೊಬ್ಬಳು ಶೋಧಿಸಿದಾಗ, ತರುಣಿಯು ೭೦ ನೈಲಾನ್ ಸೀರೆಗಳನ್ನುಟ್ಟಿದ್ದುದು ಪತ್ತೆಯಾಯಿತು ಅಷ್ಟೇ ಅಲ್ಲದೆ, ೪೦ ಸೀರೆಗಳನ್ನೂ ಆಕೆಯು ತನ್ನ ಸೂಟ್ ಕೇಸಿನಲ್ಲಿಟ್ಟುಕೊಂಡಿದ್ದಳು ಅವೆಲ್ಲವನ್ನೂ ಆಕೆಯಿಂದ ವಶಪಡಿಸಿಕೊಳ್ಳಲಾಯಿತು

ಅರಮನೆ ಇಲಾಖಾ ನೌಕರರಿಂದ ಸಹಾನುಭೂತಿ ಮುಷ್ಕರ

ಮೈಸೂರು ೬

ಕಳೆದ ೧ನೇ ತಾರೀಕಿನಿಂದ ನಿವೃತ್ತಿ ಮಾಡಲ್ಪಟ್ಟಿರುವ ನೌಕರರ ಬೇಡಿಕೆಗಳಿಗೆ ಸಹಾನುಭೂತಿ ತೋರಲು ಈ ದಿನ ಅರಮನೆ ಇಲಾಖೆಗಳ ಇತರ ನೌಕರರುಗಳು ಕಛೇರಿಗೆ ಹೋಗಿ ಹಾಜರಿಯನ್ನು ಮಾತ್ರ ಹಾಕಿ ಕೆಲಸ ಮಾಡದೆ ಮೌನವಾಗಿ ಕುಳಿತಿದ್ದರೆಂದು ತಿಳಿದುಬಂದಿದೆ.

ಶ್ರೀವೈಷ್ಣವ ವಿದ್ಯಾರ್ಥಿ ಸಂಘದಲ್ಲಿ

ರಾಮಾನುಜಾಚಾರ್ಯರ ಜಯಂತಿ

ಮೇಲ್ಕಂಡ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ರಮಾವಿಲಾಸ ಅಗ್ರಹಾರದಲ್ಲಿರುವ ಅಹೋಬಿಲ ಮಠದಲ್ಲಿ ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರದ ಅಂಗವಾಗಿ "ಯತಿರಾಜ ವೈಭವಂ" ಎಂಬ ವಿಷಯವಾಗಿ ಉಪನ್ಯಾಸವನ್ನು ಶ್ರೀ ಎಂ. ಯಾಮುನಾಚಾರ್ಯರು ಮಾಡುತ್ತಾರೆ ವಿದ್ವಾನ್ ಬಿ ಎಸ್. ಶ್ರೀನಿವಾಸಯ್ಯಂಗಾರ್ಯರ ಗಾಯನವನ್ನೂ ಏರ್ಪಡಿಸಲಾಗಿದೆ.

ಈ ವರ್ಷ ರಿಕಾರ್ಡು ಭತ್ತದ ಬೆಳೆ

ಸಂಸ್ಥಾನಕ್ಕೆ ೪೮ ಸಾವಿರ ಟನ್ ಧಾನ್ಯ ಒದಗಿಸಿರುವುದಾಗಿ ಕೇಂದ್ರ ಉಪ ಮಂತ್ರಿ

ಸ್ವಂ ಸು. ಪ್ರೋ] ಬೆಂಗಳೂರು ೬

ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ.ವಿ. ಕೃಷ್ಣಪ್ಪನವರು ಈ ದಿನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ವರ್ಷ ದೇಶದಲ್ಲಿ ರಿಕಾರ್ಡು ಭತ್ತದ ಬೆಳೆಯಾಗಿ, ೨೮೧ ಲಕ್ಷ ಟನ್ ಉತ್ಪತ್ತಿಯಾಗಿರುವುದೆಂದು ನುಡಿದರು. ಮೈಸೂರು ಸಂಸ್ಥಾನದವರು ಕೇಳಿರುವ ೧೫,೦೦೦ ಟನ್ ಧಾನ್ಯದ ಬದಲು ೪೮ ೦೦೦ ಟನ್ ಧಾನ್ಯವನ್ನು ಕೇಂದ್ರವು ಒದಗಿಸುತ್ತದೆಂದಾಗಿ ಅವರು ಹೇಳಿ, ಉತ್ತರ ಕರ್ನಾಟಕದ ಅಭಾವ ಪ್ರದೇಶಗಳಿಗಾಗಿ ಎಷ್ಟು ಧಾನ್ಯ ಬೇಕಾದರೂ ನೀಡಲು ಕೇಂದ್ರದವರು ಸಿದ್ಧವೆಂದು ತಿಳಿಸಿದರು. ಆ ಪ್ರದೇಶದಲ್ಲಿ ೩ ಕೇಂದ್ರ ಆಹಾರ ಸಂಗ್ರಹಾಲಯಗಳನ್ನು ತೆರೆಯಲಾಗುವುದೆಂದೂ ನುಡಿದರು

ಹೋಟೇಲುಗಳ "ಬ್ರಾಹ್ಮಣ" ಪದದ ವಿರುದ್ಧ ಚಳುವಳಿ ಆರಂಭ

ಮದುರೆಯಲ್ಲಿ ೧೨ ಜನರ ಬಂಧನ

ಮದ್ರಾಸಿನಲ್ಲಿ ಹೋಟೇಲುಗಳ ಬೋರ್ಡಿನ ಮೇಲಿರುವ "ಬ್ರಾಹ್ಮಣ" ಪದವನ್ನು ಅಳಿಸಬೇಕೆಂಬ ಚಳುವಳಿಯನ್ನು ನೆನ್ನೆ ದ್ರಾವಿಡ ಕಳಗದವರು ಆರಂಭಿಸಿದರು ಸಂಘದ ಮುಖಂಡರಾದ ರಾಮಸ್ವಾಮಿ ನಾಯಕರ್‌ರವರು ತಿರುವಲ್ಲಿಕ್ಕೇಣಿ ಹೋಟೇಲೊಂದಕ್ಕೆ ಹೋಗಿ ಕಾರಿನಿಂದ ಪದವನ್ನಳಿಸಲೆತ್ನಿಸಿ, ವಿಫಲರಾದರು. ಅವರಿಗೆ ಹೋಟೇಲು ಮಾಲೀಕರು ಅವಕಾಶವೀಯಲಿಲ್ಲ. ಮಾಲೀಕರ ಹೃದಯ ಪರಿವರ್ತನೆಯಾಗುವವರೆಗೆ ಹೋಟೇಲು ಮುಂದೆ ನಿತ್ಯವೂ ಸಂಚಿ ಪಿಕೆಟಿಂಗ್ ನಡೆಸಲಾಗುವುದೆಂದು ನಾಯಕರ್‌ರವರು ತಿಳಿಸಿದರು ಅವರ ಜೊತೆಗೆ ಅವರ ಪತ್ನಿ ಮತ್ತು ೧೨ ಮಂದಿ ಸ್ವಯಂಸೇವಕರು ಇದ್ದರು.

ಇತರ ಕಡೆಗಳಲ್ಲಿ ಮಾಲೀಕರು ಪ್ರತಿಭಟಿಸಿದರೂ ಲೆಕ್ಕಿಸದೆ ದ್ರಾವಿಡ ಸಂಘದ ಸ್ವಯಂಸೇವಕರು ಆ ಪದವನ್ನು ಅಳಿಸಿದರು.

ಮದುರೆಯಲ್ಲಿ ನೆನ್ನೆ ರಾತ್ರಿ ಇದೇ ಚಳುವಳಿಯು ನಡೆದು ೧೨ ಜನರನ್ನು ಬಂಧಿಸಲಾಗಿದೆ.

ಸರ್ವೋದಯ ಸಮ್ಮೇಳನದ ಖಾದಿ ಪ್ರದರ್ಶನ

ಕಾಲಡಿಯಲ್ಲಿ ನಾಳೆಯಿಂದ ಆರಂಭವಾಗಲಿರುವ ಒಂಭತ್ತನೇ ಅಖಿಲ ಭಾರತ ಸರ್ವೋದಯ ಸಮ್ಮೇಳನದ ಅಂಗವಾಗಿ ನೆನ್ನೆ ಖಾದಿ ಮತ್ತು ಗ್ರಾಮ ಕೈಗಾರಿಕಾ ಪ್ರದರ್ಶನವನ್ನು ಕೇರಳದ ಗವರ್ನರ್ ಬಿ ರಾಮಕೃಷ್ಣರಾಯರು ಆರಂಭಗೊಳಿಸಿದರು ಅವರು ಭಾಷಣ ಮಾಡಿ ಸರ್ವೋದಯ ತತ್ವವು ಯಾವುದೇನೂ ಅಲ್ಲವೆಂದೂ, ನಾವೂ ಬಾಳಿ, ಇತರರನ್ನೂ ಬಾಳಗೊಡಬೇಕೆಂಬುದೇ ಅದರಲ್ಲಿಹುದುವ ಧ್ಯೇಯವೆಂದೂ ತಿಳಿಸಿದರು ಪ್ರಾಪಂಚಿಕ ಸುಖಸಾಧನೆಗಳನ್ನು ಒಬ್ಬನೇ ಅನುಭವಿಸಲು ಯಾರಿಗೂ ಹಕ್ಕಿಲ್ಲವೆಂದೂ, ಆ ವ್ಯಕ್ತಿಯು ತನ್ನ ಸಹೋದರರೊಡನೆ ಸಮಾನನಾಗಿ ಅವನ್ನನುಭವಿಸಬೇಕೆಂದೂ ಅವರು ತಿಳಿಸಿದರು. ಸಮ್ಮೇಳನಕ್ಕೆ ೧೨,೦೦೦ ಪ್ರತಿನಿಧಿಗಳು ಬರುವ ನಿರೀಕ್ಷೆಯಿದೆ.

ಕಲ್ಕತ್ತದಲ್ಲಿ ನಿರಾಶ್ರಿತರ ಸತ್ಯಾಗ್ರಹ: ೧೫೬ ಜನರ ಬಂಧನ

ಬಿಹಾರಿನ ಬೆಟ್ಟಿಯಾ ಶಿಬಿರವನ್ನು ತ್ಯಜಿಸಿ ಬಂಗಾಳಕ್ಕೆ ಬಂದಿರುವ ನಿರಾಶ್ರಿತರ ಗುಂಪೊಂದು ನಿನ್ನೆ ಕಲ್ಕತ್ತಾದಲ್ಲಿ ಮೆರವಣಿಗೆ ನಡೆಸುತ್ತಾ ಪ್ರತಿಬಂಧಕಾಜ್ಞೆಯನ್ನು ಮುರಿಯಲೆತ್ನಿಸಿದಾಗ ಅವರ ಪೈಕಿ ೧೫೬ ಮಂದಿಯನ್ನು ಬಂಧಿಸಲಾಯಿತೆಂದು ವರದಿಯಾಗಿವೆ ಹೌರಾ ಮತ್ತು ಸೀಲ್ಡಾ ಮೈದಾನಗಳಲ್ಲಿ ತಂಗಿರುವ ೧೦ ೦೦೦ ನಿರಾಶ್ರಿತರಿಗೆ ಸರ್ಕಾರದವರು ಆಹಾರ ಮತ್ತು ವಸತಿಯನ್ನು ಕಲ್ಪಿಸದಿರುವುದಕ್ಕಾಗಿ ಅವರು ಸತ್ಯಾಗ್ರಹವನ್ನು ಆರಂಭಿಸಿರುತ್ತಾರೆ ಪ್ರತಿಬಂಧಕಾಜ್ಞೆಯನ್ನು ಮುರಿಯಲು ನಿತ್ಯವೂ ಒಂದೊಂದು ತಂಡವನ್ನೂ ಕಲ್ಕತ್ತಕ್ಕೆ ಕಳುಹಲಾಗುವುದೆಂದು ಹೇಳಲಾಗಿದೆ

ಮತ್ತೊಂದು ಯಂತ್ರ ಸಾಮಗ್ರಿ ಕಾರ್ಖಾನೆ

ದ್ವಿತೀಯ ಯೋಜನೆಯಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಮತ್ತೊಂದು ಯಂತ್ರ ಸಾಮಗ್ರಿ ಕಾರ್ಖಾನೆಯನ್ನು ನಿರ್ಮಿಸಲಾಗುವುದೆಂದು ಗೊತ್ತಾಗಿದೆ ಬೆಂಗಳೂರಿನಲ್ಲಿ ಈಗಾಗಲೇ ಅಂತಹ ಕಾರ್ಖಾನೆಯೊಂದು ಕೆಲಸ ನಡೆಸುತ್ತಿದೆ

ಕಾವ್ಯವಾಚನ ಮತ್ತು ಹರಿಕಥೆ

ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬| ಗಂಟೆಗೆ ಮೈಸೂರು ಗಮಕಸಹೋದರರಾದ ಬಿ ಎಸ್ ಎಸ್ ಕೌಶಿಕ್ ಮತ್ತು ಕೆ ವೆಂಕಟಸುಬ್ಬಯ್ಯನವರಿಂದ ಮಹೇಶ್ವರ ಸಾಕ್ಷಾತ್ಕಾರ ಎಂಬ ವಿಷಯವಾಗಿ ಕಾವ್ಯ ವಾಚನವೂ, ೮ ಗಂಟೆಗೆ ವಿ|| ನದೀಪುರಂ ಶ್ರೀನಿವಾಸರಂಗಾಚಾರ್ಯರಿಂದ ಕಿರಾತಾರ್ಜುನೀಯ ಎಂಬ ಹರಿಕಥೆಯೂ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯುವುವು

ಕೈ ಮಗ್ಗದ ಸಪ್ತಾಹ

ಕೈ ಮಗ್ಗದ ಸಪ್ತಾಹದ ಅಂಗವಾಗಿ ನಾಳೆ ಬೆಳಗ್ಗೆ ೯|| ಗಂಟೆಗೆ ಕೊಳ್ಳೇಗಾಲದಲ್ಲಿ ಮೈಸೂರು ವಿಭಾಗದ ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಜಿ ಗಿರಿಯಪ್ಪನವರ ಅಧ್ಯಕ್ಷತೆಯಲ್ಲೂ ಸಾಯಂಕಾಲ ೫ ಗಂಟೆಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷ ಶ್ರೀ ಬಂಗಾರಶೆಟ್ಟರ ಅಧ್ಯಕ್ಷತೆಯಲ್ಲೂ ಸಭೆ ನಡೆಯುವುವು

ಫುಟ್‌ಬಾಲ್ ಪಂದ್ಯ

ಆಂಧ್ರ ಪ್ರಾಂತಕ್ಕೆ ಸೇರಿರುವ ಆದವಾನಿಯಲ್ಲಿ ನಡೆಯುತ್ತಿರುವ ಶ್ರೀ ಸಾಯಿಬಾಬಾ ಸೆವೆನ್ ಎ ಸೈಡ್ ಫುಟ್ ಬಾಲ್ ಪಂದ್ಯದಲ್ಲಿ ಮೈಸೂರಿನ ಫ್ರೆಂಡ್ಸ್ ಯೂನಿಯನ್ನಿನವರು ಭಾಗವಹಿಸಿ ಬಳ್ಳಾರಿಯ ಬ್ಲ್ಯೂಸ್ ಟೀಮನ್ನು ೩-೧ ಗೋಲುಗಳಿಂದ ಸೋಲಿಸಿ ಜಯ ಪಡೆದಿದ್ದಾರೆ

D. Banumiah's College of Commerce
MYSORE

Applications for admission to the Pre University Course* or the Junior Intermediate class in Arts, Science and Commerce will be received from students who have passed the S S L C Examination and have been declared E C & P S Forms of application can be obtained from the office of the College on payment of Re 1 in person or Rs 1-13 Np by post

* it is proposed to provide the following subjects in the Pre-University course —
I ysi s (hemistry, Mathema tany Zoology, tory Economics, Logic, vcl ology Geography, m erce

ಸಿರಿಯಾ ಗಡಿ ಬಳಿ ತುರ್ಕಿ ಸೈನ್ಯಗಳ ಶೇಖರಣೆ

ಸಿರಿಯಾ ಗಡಿ ಬಳಿ ತುರ್ಕಿ ದೇಶದ ಸೈನ್ಯಗಳ ಶೇಖರಣೆಯಾಗುತ್ತಿರುವುದೆಂದೂ ಈ ಬಗ್ಗೆ ತಮ್ಮ ಸರ್ಕಾರದವರು ತನಿಖೆ ನಡೆಸುತ್ತಿರುವುದಾಗಿಯೂ ಸಿರಿಯಾ ವಿದೇಶಾಂಗ ಮಂತ್ರಿ ಸಾಲಾ ಎಲ್ ಬಿತರ್‌ರವರು ತಿಳಿಸಿರುತ್ತಾರೆ ತುರ್ಕಿಯ ಸೈನಿಕರು ಭೂ ಜಲ ಮತ್ತು ಮಿಲಿಟರಿ ಕವಾಯಿತು ಪ್ರದರ್ಶನಗಳನ್ನು ನಡೆಸುತ್ತಿರುವುದಾಗಿಯೂ, ಈ ಸುದ್ದಿ ಬಗ್ಗೆ ತುರ್ಕಿಯ ರಾಜಧಾನಿಯಲ್ಲಿರುವ ಸಿರಿಯಾ ರಾಯಭಾರಿಯು ನಿಖರವಾದ ವಿಚಾರವನ್ನು ತಮ್ಮ ಸರ್ಕಾರಕ್ಕೆ ತಿಳಿಸಲಿರುವರೆಂದೂ ವರದಿಯಾಗಿದೆ

ಬಸವೇಶ್ವರರ ಜಯಂತಿ

ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗದ ಕಟ್ಟಡದಲ್ಲಿ ಬಸವೇಶ್ವರ ಜಯಂತಿ ಉತ್ಸವದ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ಬಳ್ಳಾರಿಯ ಶ್ರೀ ಶಿ ವ ಚನ್ನಬಸವೇಶ್ವರರವರು ಬಸವಣ್ಣನವರ ಪೂರ್ಣ ಯೋಗ ಎಂಬ ವಿಷಯವಾಗಿ ಭಾಷಣ ಮಾಡುವರು ಬೆಂಗಳೂರಿನ ಅರವಿಂದ ಸಂಗೀತ ವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಆರ್ ವಿ ಶೇಷಾದ್ರಿಯವರು ಶಿವಶರಣರ ಕೃತಿಗಳ ವಾಚನ ಮಾಡುವರು ಆರೋಗ್ಯ ಸಚಿವ ಶ್ರೀ ಆರ್ ಎಂ ಪಾಟೀಲರು ಅಧ್ಯಕ್ಷತೆ ವಹಿಸುವರು

ಕಮಲಾದೇವಿಯವರ ಭೇಟಿ

ಅಖಿಲ ಭಾರತ ಕೈ ಕಸಬು ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಕಮಲಾದೇವಿ ಉಪಾಧ್ಯಕ್ಷ ಶ್ರೀ ಯು ಶ್ರೀನಿವಾಸ ಮಲ್ಯ ಮತ್ತು ಸದಸ್ಯರಾದ ಜಿ ವೆಂಕಟಾಚಲಂರವರು ಕಳೆದ ೪ನೇ ತಾರೀಕು ನಗರದ ಶ್ರೀ ಎಂ ವೀರಪ್ಪನವರ ಮೈಸೂರು ಆಟದ ಸಾಮಾನು ಕಾರ್ಖಾನೆ ಮತ್ತು ಕಲಾಶಾಲೆಗಳಿಗೆ ಭೇಟಿಯಿತ್ತು ಪರಿಶೀಲನೆ ನಡೆಸಿ, ಅಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಮೆಚ್ಚಿ ಹಲವಾರು ಉಪಯುಕ್ತ ಸಲಹೆಯನ್ನು ಕೊಟ್ಟರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಗೋಟುವಾದ್ಯ ೭ ೧೫ ಜೆ ಶಿ ಸರೋಜಮ್ಮ-ದೇವರನಾಮ ೭ ೩೦ ಗಾನವಿಹಾರ ೮-೧೫ ರೆಕಾರ್ಡು ಮಧ್ಯಾಹ್ನ ೧೨ ಹೆಚ್ ರಾಮಾನುಜಾಚಾರ್ ಸಂಗೀತ ೧೨-೩೦ ವನಿತಾವಿಹಾರ ೧ ೨೦ ರೆಕಾರ್ಡು ೧-೫೦ ಗೋಟುವಾದ್ಯ ಸಂಜೆ ೬ ೧೦ ಎ ರಾಮಯ್ಯ ಕಾವ್ಯವಾಚನ ೭ ೩೦ ಯೋಜನೆಯ ಸಾಧನೆ ಪ್ರಸಂಗ ೮ ಮತ್ತು ೧೦-೧೫ ಕೆ ಎಸ್ ವಿಶ್ವನಾಥಶಾಸ್ತ್ರಿ ಸಂಗೀತ ೮ ೩೦ ಗುರುದೇವ ರೂಪಕ ಧಾರವಾಡದ ರಿಲೆ ೯-೧೫ ರಂಗಭೂಮಿಯಿಂದ ಸಂಸ್ಕೃತ ಕಾರ್ಯಕ್ರಮ

ಸಚಿವರೊಡನೆ ಅರಮನೆ ನೌಕರರ ಸಂಘದವರ ಭೇಟಿ

ಸಂಸ್ಥಾನದ ವ್ಯವಸಾಯ ಸಚಿವ ಶ್ರೀ ಹೆಚ್ ಎಸ್ ರುದ್ರಪ್ಪನವರನ್ನು ಅರಮನೆ ನೌಕರರ ಸಂಘದ ಪರವಾಗಿ ಶ್ರೀಗಳಾದ ವೇದಾಂತ ಹೆಮ್ಮಿಗೆ ಮತ್ತು ಕೆ ಎಲ್ ಸೀತಾರಾಂರವರು ನಗರದಲ್ಲಿ ನೆನ್ನೆ ರಾತ್ರಿ ಭೇಟಿ ಮಾಡಿ ನಿವೃತ್ತರಾದ ಅರಮನೆ ನೌಕರರ ಕಷ್ಟಗಳನ್ನು ವಿವರಿಸಿ ಅವರ ಪೈಕಿ ಪಟ್ಟಣವಾಸಿಗಳಾದವರಿಗೆ ಜಮೀನು ಕೊಡುವುದರಿಂದ ಉಪಯೋಗವೇನೂ ಆಗುವುದಿಲ್ಲವೆಂದೂ ಬೇರೆ ಉದ್ಯೋಗಗಳನ್ನು ಕಲ್ಪಿಸಬೇಕೆಂದೂ ಕೋರಿದರು ಸಚಿವರು ಉತ್ತರವಿತ್ತು ಸೂಕ್ತವಾದ ವಿವರಗಳನ್ನು ಕಳುಹಿಸಿಕೊಟ್ಟರೆ ಸರ್ಕಾರದ ನಾನಾ ಇಲಾಖೆಗಳಲ್ಲಿ ಸಾಧ್ಯವಾದಷ್ಟು ಮಂದಿ ನೌಕರರಿಗೆ ಕೆಲಸ ದೊರಕಿಸಲು ಯತ್ನಿಸುವುದಾಗಿ ಭರವಸೆಯಿತ್ತರೆಂದು ತಿಳಿದುಬಂದಿದೆ

CENTRAL INSTITUTE OF COMMERCE
I an l las Market Buildings
MYSORE

Applications for admission to D Com Dip in Sten Shorthand and Type writing will be received on all working days
Join Immediately

ವಸಂತ ಕಾಲದ ಆಕರ್ಷಣೆ
ನಿಮ್ಮ ಮಕ್ಕಳ ಅಂದವಾದ
ಕಾರ್ಡ್ ಸೈಜ್ ಭಾವ ಚಿತ್ರಕ್ಕೆ
ಒಂದು ರೂಪಾಯಿ ಮಾತ್ರ
ಪ್ರಭಾತ್ ಟಾಕೀಸ್ ಬಳಿ ಇರುವ
ಶ್ರೀಕಾಂತ್ ಸ್ಟುಡಿಯೊವಿಗೆ
ಭೇಟಿ ಕೊಡಿ
ರೋಲ್ ಫಿಲ್ಮ್ ಡೆವಲಪಿಂಗ್
ಪ್ರಿಂಟಿಂಗ್ ಎನ್‌ಲಾರ್ಜಿಂಗ್ ಸಹ
ಮಾಡುತ್ತೇವೆ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ

6 5 1957ನೇ ಸೋಮವಾರ ರಾತ್ರಿ 8 ಗಂಟೆಗೆ ವಿದ್ಯುದ್ದೀಪಗಳಿಂದ ಅಲಂಕೃತವಾದ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಪುಷ್ಪ ಮಂಟಪೋತ್ಸವವನ್ನು ಏರ್ಪಡಿಸಲಾಗಿರುವುದರಿಂದ ಆಸ್ತಿಕ ಮಹಾಶಯರುಗಳು ಭಾಗವಹಿಸಿ ಶ್ರೀಯವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥನೆ

ಯು ಮಾಧ್ವರಾವ್ ಸಹೋದರರು,
ಜನಾರ್ಧನ ಭವನ್ ನಂಜನಗೂಡು

Edited Printed and Published by A R Nagarajan at Sadhvi Press, D Subbaiah Road Mysore

ಗಾಂಧಿ ವಿಚಾರ ಪರಿಷತ್ತಿನ ವಿಶೇಷ ತರಗತಿ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿರುವ ವಿಶೇಷ ತರಗತಿ ಕಾರ್ಯಕ್ರಮದ ಅಂಗವಾಗಿ ನಾಳೆ ಸಂಜೆ ೬| ಗಂಟೆಗೆ ಶ್ರೀ ಎಂ ನಾಚಾರ್ಯರು ಸಂಸ್ಕೃತಿಯ ಮುನ್ನಡೆ ವಿಚಾರವಾಗಿ ಉಪನ್ಯಾಸ ಮಾಡುವರು

Estd 19

CITY TUTORIAL COLLEGE
Admissions received for the
S S L C Coaching Classes
a) Supplementary Examn of Sept
b) Public Examn of March 58
★ Separate section for g l students
★ Efficient & experienced staff
★ Spl attention to English Optional
★ Equipped with Library & Laboratory
C T C is the oldest & the best
B K Satyabodhachar, M A B
Principal

D. Banumiah's Educational Institutions
MYSORE
NOTIFICATION
Dated 1st May 1957

Applications are invited from duly qualified candidates for appointments in the several sections of the Institution

I College
I M Sc in Physics
II M Sc Chemistry (Minor Subj Botany & Zoology preferred)
III M Sc in Statistics (Minor Subj Economics & Mathematics prefe
Scales of pay as in the Government Colleges

II High School
I B A with optionals History, Geog or English (B T or B Ed pref
II B Sc with optionals P C M (B or B Ed preferred)
Scales of pay as approved by the Department of Public Instruction

III Middle School
S S L C with U G T qualifi
Scales of pay as approved by the Department of Public Instruction

Applications must be addressed to the Secretary D Banumiah sEducational Institutions Mysore, so as to reach him or before 20-5-1957

B V Banu
Hon Secre

Golden Opportunity For S. S. L. C. Students
For Efficient Coaching, Excellent Tuition & Best Guidance, Join at once
NATIONAL LEAGUE
Anathalaya Buildings, Mysore
Timings 8 A M to 10 A M and 6 P M to 8 P M

ವಿವಾಹ ಮತ್ತು ವಿಶೇಷ ಸಮಾರಂಭಗಳಿಗಾಗಿ

★ ನಾವು ಎಲ್ಲಾ ವಿಧವಾದ ದಿನಸಿ ಪದಾರ್ಥಗಳನ್ನು ಶುದ್ಧ ಮಾಡಿ ಸಿದ್ಧಪಡಿಸಿ, ಹೋಲ್‌ಸೇಲ್ ದರದಲ್ಲಿ ಒದಗಿಸಲು ಸಿದ್ಧವಾಗಿರುತ್ತೇವೆ
★ ಅಂತಹ ಸಮಾರಂಭಗಳಾದ ಮೇಲೆ ಉಳಿಯುವ ದಿನಸಿ ಪದಾರ್ಥಗಳನ್ನೆಲ್ಲಾ ಅದೇ ಬೆಲೆಗೆ ವಾಪಸು ಕೊಳ್ಳಲು ಸಹ ಏರ್ಪಡಿಸಿರುತ್ತೆ

ಒಂದು ಸಾರಿ ಪರೀಕ್ಷಿಸಿ ತೃಪ್ತಿಪಡಿರಿ
ಬಾಂಬೆ ಆನಂದ ಭವನ್ ಸ್ಟೋರ್ಸ್,
ಫೋನ್ ನಂ 645 ನ್ಯೂ ಸ್ಟ್ಯಾಚ್ಯು ಸರ್ಕಲ್ ಮೈಸೂರು
ಭಾನುವಾರವೂ ಮಾರಾಟದ ಸೌಕರ್ಯವುಂಟು.

ಟೆಲಿಫೋನ್ ನಂ 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

[illegible]
ಸಾಧ್ವಿ ದಿನ ಪತ್ರಿಕೆಗೆ
[illegible]

ಸಂಪುಟ : ೧೫] SADHVI : TUESDAY 7—5—1957 ಮೈಸೂರು : ಮಂಗಳವಾರ ೭—೫—೧೯೫೭ : [ಸಂಚಿಕೆ : [illegible]

ಗ್ರಾಮಾಧಿಕಾರಿಗಳ ಆನುವಂಶಿಕ ಪದ್ಧತಿಯ ಮಾರ್ಪಾಡು

ಗ್ರಾಮಾಧಿಕಾರಿಗಳ ಅನುವಂಶಿಕ ಪದ್ಧತಿಯಲ್ಲಿ ಬದಲಾವಣೆ

ಬೆಂಗಳೂರು ೬

ಅನುವಂಶಿಕ ಗ್ರಾಮಾಧಿಕಾರಿ ಪದ್ಧತಿಯನ್ನು ಮುಂದುವರಿಸುವ, ಅಥವಾ ಅದರ ಬದಲು ಬೇರೊಂದು ಸೂಕ್ತವಾದ ಪದ್ಧತಿಯನ್ನು ಏರ್ಪಡಿಸುವ ವಿಚಾರವನ್ನು ಸರ್ಕಾರದವರು ಕ್ರಿಯಾತ್ಮಕವಾಗಿ ಪರಿಶೀಲಿಸುತ್ತಿರುವರೆಂದು ವರದಿಯಾಗಿದೆ ಮೊದಲು ಸಣ್ಣ ಗ್ರಾಮ ನೌಕರರುಗಳ ಪದ್ಧತಿ ಬದಲಾವಣೆಗೆ ಸರ್ಕಾರದವರು ಗಮನವೀಯುವರೆಂದು ಹೇಳಲಾಗಿದೆ ಹಳೇ ಮೈಸೂರಿನಲ್ಲಿ ಅನುವಂಶಿಕ ಪದ್ಧತಿ ಜಾರಿಯಲ್ಲಿದೆ ಹೊಸ ಮೈಸೂರಿನಲ್ಲಿ ವಿವಿಧ ಪದ್ಧತಿಗಳಿವೆ ಇವೆಲ್ಲವನ್ನು ಸಮನ್ವಯಗೊಳಿಸುವ ಕಾರ್ಯದಲ್ಲಿ ಸರ್ಕಾರದವರು ತೊಡಗಿರುವರು. ನೂತನ ಸಂಸ್ಥಾನದಲ್ಲಿ ಈಗ ೩೦ ಸಾವಿರ ಗ್ರಾಮಾಧಿಕಾರಿಗಳಿರುವರು

ಸಂಸ್ಥಾನಕ್ಕೆಲ್ಲಾ ಒಂದೇ ವಿಧದ ಭೂ ಶಾಸನ

ಬೆಂಗಳೂರು ೬

ಜಮೀನು ಮತ್ತು ಗೇಣಿ ಶಾಸನಗಳನ್ನು ಪರಿಶೀಲಿಸಿ ಸಂಸ್ಥಾನಕ್ಕೆಲ್ಲಾ ಒಂದೇ ರೀತಿಯ ಕಾನೂನನ್ನು ತರುವ ಬಗ್ಗೆ ಸೂಕ್ತ ಶಿಫಾರಸು ಮಾಡುವುದಕ್ಕಾಗಿ ಸರ್ಕಾರದವರು [illegible] ಮಾಜಿ ಡೆಪ್ಯುಟಿ ಮಂತ್ರಿ ಶ್ರೀ [illegible] ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲು ನಿರ್ಧರಿಸಿರುತ್ತಾರೆ ಆದಾಯ [illegible] ಕಾರ್ಯದರ್ಶಿ ಶ್ರೀ ಕೆ ಬಾಲಸುಬ್ರಹ್ಮಣ್ಯಂರವರು ಕಾರ್ಯದರ್ಶಿಗಳಾಗುವರು

ಯೋಗಾಸನ ಪ್ರದರ್ಶನ ಮತ್ತು ಉಪನ್ಯಾಸ

ಮೈಸೂರು ೬

ಚಾಮರಾಜ ಮೊಹಲ್ಲಾ ಗೀತಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಸ್ಥಾನದಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಶಂಕರಜಯಂತಿ [illegible]ರವರಿಂದ ಯೋಗಾಸನ ಪ್ರದರ್ಶನವೂ [illegible] ಗಂಟೆಗೆ ಪಂಡಿತ ರತ್ನಂ ನವೀನಂ ವೆಂಕಟೇಶ ಶಾಸ್ತ್ರಿಗಳಿಂದ "ಶ್ರೀ ಶಂಕರರು ಅವತರಿಸಿದ ಉದ್ದೇಶ" ಎಂಬ ವಿಚಾರವಾಗಿ ಉಪನ್ಯಾಸವೂ [illegible] ನಾಳೆಯಿಂದ ದ್ವಾದಶಿ ಪರ್ಯಂತ [illegible] ಮೇರೆ ಶಂಕರವಿಜಯ ಕಥಾಪ್ರವಚನವ[illegible] ವೇ|| ಬ್ರ|| ಲಕ್ಷ್ಮಿ ಶಾಸ್ತ್ರಿಯವರು ನಡೆಸುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ ಬೆಳಗ್ಗೆ ೭ [illegible] ಕೇಳಲು ೭-೧೫ ಮತ್ತು [illegible] ಸುಶೀಲ-ದೇವರನಾಮ [illegible] ಮಧ್ಯಾಹ್ನ ೧೨ ಮತ್ತು ರಾತ್ರಿ [illegible] ಮುನಿವೆಂಕಟಪ್ಪ-ನಾಗಸ್ವರ [illegible] ಸುಶೀಲ-ಸಂಗೀತ [illegible] ಕೇಳಲು ಸಂಜೆ ೬-೧೦ [illegible] ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ದಿನ-ಪರಿಚಯ ಪ್ರಸಂಗ [illegible] ಸಂಗೀತ [illegible] ಶ್ರೀಕಂಠ [illegible] ಶಿಕ್ಷಣ ಪದ್ಧತಿಯಲ್ಲಿ [illegible] ದೆಹಲಿ ರಿಲೆ [illegible] ವಾದ್ಯ ಸಂಗೀತ [illegible] ರವೀಂದ್ರರ ನಾಟಕ ರಿಲೆ

ಸಂಸ್ಥಾನದಲ್ಲಿ ಗ್ರಾಮಾಧಿಕಾರಿಗಳಿಗೆ ಹೆಚ್ಚು ಪೋಟಿಗೆ

ಬೆಂಗಳೂರು ೬

[illegible] ದಪ್ಪ ಹೆಚ್ಚಲಿವೆ

[illegible] ಲಾಗಿದೆ

ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ [illegible] ಕೋರ್ಟುಗಳು

ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ಒಂದೊಂದು [illegible] ನ್ಯಾಯಾಲಯವನ್ನು ಸರ್ಕಾರದವರು ಸ್ಥಾಪಿಸಿರುತ್ತಾರೆ ಗುಲ್ಬರ್ಗ ಜಿಲ್ಲೆಯ [illegible] ಮ್ಯಾಜಿಸ್ಟ್ರೇಟರು ಬೆಂಗಳೂರಿನ [illegible] ಮಂಗಳೂರಿನ ಜಿಲ್ಲಾ [illegible] ಶ್ರೀ ವಿಠ್ಠಲ [illegible]ರವರು ಹುಬ್ಬಳ್ಳಿಯ ನ್ಯಾಯಾಧೀಶರಾಗಿ ನೇಮಕವಾಗಿರುವರು ಬೆಂಗಳೂರು ಕೋರ್ಟಿನ ವ್ಯಾಪ್ತಿಯು ಹಳೇ ಮೈಸೂರ ಕೊಡಗು ಮತ್ತು ಮಂಗಳೂರು ಮೇಲೂ ಹುಬ್ಬಳ್ಳಿ ಕೋರ್ಟಿನದು ಉಳಿದ ಕನ್ನಡ ಭಾಗ ಮತ್ತು ಬಳ್ಳಾರಿಯ ಮೇಲೂ ಇರುವುದು

ಕೇರಳದ ಉಪಾಧ್ಯಾಯರುಗಳಿಗೆ ವಸತಿ ಸೌಕರ್ಯ

ಕೇರಳ ಸರ್ಕಾರದವರು ಉಪಾಧ್ಯಾಯರುಗಳಿಗಾಗಿ ವಸತಿ ಸೌಲಭ್ಯಗಳನ್ನು ಕಲ್ಪಿಸುವ ಯೋಜನೆಯನ್ನು ಮಂಜೂರು ಮಾಡಿರುತ್ತಾರೆ ಅದಕ್ಕಾಗಿ ಈ ವರ್ಷ ೨ ಲಕ್ಷ ರೂ ಅನ್ನು ಒದಗಿಸಲಾಗುವುದು

ಅರಮನೆ ನೌಕರರಿಂದ ಪುನಃ ಬ್ಯಾಡ್ಜುಗಳ ಧಾರಣೆ

ಅರಮನೆಯ ಕೆಲವು ನೌಕರರುಗಳನ್ನು ನಿವೃತ್ತಿಗೊಳಿಸಿದ ವಿಚಾರದಲ್ಲಿ ಸಂಧಾನವು ಫಲಕಾರಿಯಾಗಿಲ್ಲದಿರುವುದರಿಂದ ಎಲ್ಲಾ ನೌಕರರುಗಳೂ ಇದಿನಿಂದ ಪುನಃ ಬ್ಯಾಡ್ಜುಗಳನ್ನು ಧರಿಸುತ್ತಿರುವರು "ನಮ್ಮ ನ್ಯಾಯವಾದ [illegible] ಕೊಡಿ"-ಎಂದು ಅದರ [illegible] ನಮೂದಿಸಲಾಗಿದೆ ಅರಮನೆ ಕಛೇರಿ ಕೆಲ [illegible] ವಿಶೇಷ ಪೊಲೀಸು [illegible] ಇಂದು ನಡೆಯುತ್ತದೆ [illegible] ಇದೆ

ವಿದ್ಯಾಭ್ಯಾಸ ಪುನರ್ವ್ಯವಸ್ಥೆಯಲ್ಲಿ ಶಿಕ್ಷಣ ಕಾಲೇಜುಗಳ ಪಾತ್ರ

ಶಿಕ್ಷಣ ಕಾಲೇಜು ಪ್ರಿನ್ಸಿಪಾಲರ ಸಮ್ಮೇಳನದಲ್ಲಿ ನಿಜಲಿಂಗಪ್ಪನವರ ಭಾಷಣ

ಬೆಂಗಳೂರು ೬

ಅಖಿಲ ಭಾರತ ಶಿಕ್ಷಣ ಕಾಲೇಜುಗಳ ಪ್ರಿನ್ಸಿಪಾಲರ ಸಮ್ಮೇಳನವು ಇಂದು ಇಲ್ಲಿ ಆರಂಭವಾಯಿತು ೩೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು ಬರೋಡಾ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಶ್ರೀಮತಿ ಹನ್ಸಾ ಮೆಹತಾರವರು ಅಧ್ಯಕ್ಷತೆ ವಹಿಸಿದ್ದರು

ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಆರಂಭೋತ್ಸವವನ್ನು ನೆರವೇರಿಸಿ, ಇಂದಿನ ವಿದ್ಯಾಭ್ಯಾಸವು ಮನುಷ್ಯರಲ್ಲಿ [illegible]ಗಳನ್ನುಂಟುಮಾಡುವುದೆಂದೂ ಆದರೆ ಅವನ್ನು ಸಾಧಿಸಲು ಶಕ್ತಿಸಾಮರ್ಥ್ಯಗಳನ್ನೀಯುವುದಿಲ್ಲವೆಂದೂ [illegible] ಜ್ಞಾನಕ್ಕಾಗಿ ವಿದ್ಯಾಭ್ಯಾಸ ಮತ್ತು ನಡತೆಗಾಗಿ ವಿದ್ಯಾಭ್ಯಾಸ ಇವೆರಡೂ ಒಟ್ಟಿಗೆ ಹೊಂದಿಕೊಳ್ಳಬೇಕೆಂದೂ, ಉಪಾಧ್ಯಾಯ ಮತ್ತು ಶಿಷ್ಯರ ನಡುವೆ ಉತ್ತಮ ಸ್ನೇಹಪೂರಿತ ಬಾಂಧವ್ಯವು ಇರಬೇಕೆಂದೂ [illegible] ಕೆಲಸ ಮಾಡುವುದರಲ್ಲಿ ವಿದ್ಯಾರ್ಥಿಗೆ [illegible] ಇವೆಲ್ಲವನ್ನೂ [illegible] ಮಾಡಬೇಕಾಗಿರುವುದೆಂದೂ ಮುಖ್ಯ ಮಂತ್ರಿಗಳು ತಿಳಿಸಿದರು [illegible] ವಿದ್ಯಾಭ್ಯಾಸದಲ್ಲಿ ಸಂಶೋಧನೆಗಳೂ ಆಗಬೇಕೆಂದು ಅವರು ಸೂಚಿಸಿದರು

ಅಧ್ಯಕ್ಷರು ಮಾತನಾಡಿ [illegible] ಸೇವೆಯಲ್ಲಿ ಬಹುಮಟ್ಟಿನ ಸುಧಾರಣೆಗಳಾಗಬೇಕೆಂದು ತಿಳಿಸಿದರು ವಿದ್ಯಾಭ್ಯಾಸದ "ರೋಗ"ಗಳಲ್ಲಿ ಫ್ರಾಂಕೇನ್‌ಸ್ಟೀನ್‌ನಂತಿರುವ ಪರೀಕ್ಷಾ ಪದ್ಧತಿಯನ್ನು ಅವರು ಟೀಕಿಸಿ, ಈ ಬಗ್ಗೆ ಸರಿಯಾದ ಸುಧಾರಣೆಗಳಾಗಬೇಕೆಂದು ಸಲಹೆ ಮಾಡಿದರು.

ಅಣ್ಣತಮ್ಮಂದಿರ ವ್ಯಾಜ್ಯದಲ್ಲಿ ಬಂದೂಕಿನ ಪ್ರಯೋಗ

ಬೆಂಗಳೂರಿನಲ್ಲಿ ನಿನ್ನೆ ಅಣ್ಣತಮ್ಮಂದಿರಿಬ್ಬರಿಗೆ ಜಗಳವಾಗಿ ೨೧ ವರ್ಷದ ಫಿರೋಜ್ ಎಂಬುವನು ತನ್ನ ಅಣ್ಣ ರಫೀಕ್ ಅಹಮದ್ ನ ಮೇಲೆ ಗುಂಡು ಹಾರಿಸಿ, ಅವನ ಗಲ್ಲ, ಎಡ ಭುಜ ಮತ್ತು ಹೊಟ್ಟೆಯಮೇಲೆ ಗಾಯಗೊಳಿಸಿದನೆಂದೂ ಆಸ್ಪತ್ರೆಗೆ ಅಣ್ಣನನ್ನು ಸಾಗಿಸಲಾಗಿರುವುದೆಂದೂ ವರದಿಯಾಗಿದೆ. ಅವನ ಸ್ಥಿತಿ ತೀವ್ರವಾಗಿದೆ [illegible]ನನ್ನು ಬಂಧಿಸಲಾಗಿದೆ ಇವರಿಬ್ಬರೂ [illegible] ಅರಣ್ಯಾಧಿಕಾರಿಗಳಾದ ಶ್ರೀ ಮಹಮದ್ [illegible]ರವರ ಮಕ್ಕಳು

ನೂತನ ಜಿಲ್ಲಾ ಪೊಲೀಸು ಅಧಿಕಾರಿಗಳು

ಕೊಡಗಿನ ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರಾದ ಶ್ರೀ ಎಂ ಸಿ ಮುತ್ತಣ್ಣನವರನ್ನು ಮೈಸೂರು ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರಾಗಿ ನೇಮಿಸಲಾಗಿದೆ ಮೈಸೂರಿನ [illegible] ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಶ್ರೀ ಎಸ್ ಜಿ ಶೆಟ್ಟಿಯವರನ್ನು ಶ್ರೀ ಮುತ್ತಣ್ಣನವರ ಸ್ಥಾನಕ್ಕೆ ನೇಮಕ ಮಾಡಲಾಗಿದೆ

ರಾಷ್ಟ್ರಾಧ್ಯಕ್ಷರ ಚುನಾವಣೆ

[illegible] ವಿರೋಧ ಪಕ್ಷಗಳ [illegible]

[illegible]

ರಾಷ್ಟ್ರಾಧ್ಯಕ್ಷರ [illegible] ಚುನಾವಣೆ [illegible] ರಾಜ್ಯಸಭೆಗಳ ಸದಸ್ಯರು ಮತ್ತು [illegible] ಗಳ ವಿಧಾನ ಸಭಾ ಸದಸ್ಯರು [illegible]

ಪಾರ್ಲಿಮೆಂಟ್ ಭವನದಲ್ಲಿ [illegible] ಮತ್ತು [illegible] ಒಟ್ಟು ೩,೮೯೬ ಮಂದಿ ಮತದಾರರಾಗಿರುವರು

ಕೇರಳ, ಒರಿಸ್ಸಾ, ಬೊಂಬಾಯಿ ಪ್ರಾಂತ್ಯಗಳ ವಿಧಾನ ಸಭೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ವಿರೋಧ ಸದಸ್ಯರುಗಳು ಚುನಾವಣೆಯಲ್ಲಿ ಭಾಗವಹಿಸಲಿಲ್ಲ ಹಿಂದಿ ಭಾಷೆಗೆ ವಿರೋಧ, ಒಬ್ಬರೇ ವ್ಯಕ್ತಿಯನ್ನು ಎರಡನೇ ಬಾರಿಗೂ [illegible] ಕಾರಣಕ್ಕಾಗಿ ನಿಲ್ಲಿಸಿರುವುದು, ಮತ್ತು ಕಾಂಗ್ರೆಸ್ಸು ಈ ವಿಚಾರವನ್ನು ಪಕ್ಷದ ವಿಷಯವಾಗಿ ಪರಿಗಣಿಸಿರುವುದು ಈ ಬಹಿಷ್ಕಾರಕ್ಕೆ ಕಾರಣವೆಂದು ಹೇಳಲಾಗಿದೆ

ಕೇರಳದ ಮಂತ್ರಿಗಳೂ, ಕಮ್ಯೂನಿಸ್ಟ್, ಪಿ ಎಸ್ ಪಿ ಸದಸ್ಯರುಗಳೂ, ಒರಿಸ್ಸಾದ ಗಣತಂತ್ರ ಪರಿಷತ್ತು, ಪಿ ಎಸ್. ಪಿ ಮತ್ತು [illegible] ಬೊಂಬಾಯಿಯಲ್ಲಿ [illegible] ಮಂದಿ ವಿರೋಧಿಗಳೂ ಭಾಗವಹಿಸಲಿಲ್ಲ [illegible] ಹೇಳಲಾಗಿದೆ

ಫಾರ್ಮೋಸಾದಲ್ಲಿ ಅಮೆರಿಕದ ಅಣು ಶಸ್ತ್ರಗಳ ನೆಲೆ

[illegible] ಅವರು ಹೇಳುತ್ತಾರೆ

ರಾಮರತ್ನಂರವರ ಸಂಗೀತ

ಶ್ರೀ ಶಂಕರಜಯಂತಿ ಮಹೋತ್ಸವದ ಸಭೆಯ ಆಶ್ರಯದಲ್ಲಿ ೯-೫ ಸಂಜೆ ೬|| ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಮಿ ವಿ. ರಾಮರತ್ನಂರವರ ಸಂಗೀತವು ವಿ|| ಎಸ್ ಸುಬ್ರಹ್ಮಣ್ಯನವರ ಪಿಟೀಲು ಮತ್ತು ವಿ|| ಟಿ ಎಂ ವೆಂಕಟೇಶದೇವರವರ ಮೃದಂಗದೊಡನೆ ನಡೆಯುವುದು

ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರದಲ್ಲಿ ಪರಕಾಲ ಸ್ವಾಮಿಗಳ ಉಪದೇಶ

ಮೈಸೂರು ೬

ಕಳೆದ ರವಿವಾರ ನಡೆದ ಭಗವದ್ರಾಮಾನುಜಾಚಾರ್ಯರ ತಿರುನಕ್ಷತ್ರದ ಅಂಗವಾಗಿ ಶ್ರೀ ಪರಕಾಲ ಮಠದ ಸ್ವಾಮಿಗಳವರು ಅನುಗ್ರಹಿಸಿದ ಉಪದೇಶದ ಸಾರಾಂಶವು ಈ ರೀತಿ ಇದೆ:—

ವೇದವು ಅನಾದಿ, ಕ್ರಿಸ್ತ ಪೂರ್ವಕ್ಕೂ ಬಹಳ ಹಿಂದಿನದೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಅದರ ಭಾಷೆ ಬಹಳ ಹಿಂದಿನದು. ಅದರ ಅರ್ಥವನ್ನು ಸೂಕ್ಷ್ಮವಾಗಿ ಸೂತ್ರಗಳು ವಿವರಿಸುತ್ತವೆ. ಅದಕ್ಕೆ ವ್ಯಾಖ್ಯಾನ ರೂಪವಾಗಿ "ಬೋಧಾಯನ" ಅಥವಾ "ಉಪವರ್ಷ" ಎಂದು ಕರೆಯಲ್ಪಡುವ ವೃತ್ತಿಕಾರರ ವಿಸ್ತಾರವಾದ ವೃತ್ತಿಯಿದೆ. ಅದನ್ನು ಪೂರ್ವ ಮೀಮಾಂಸಾ ಭಾಷ್ಯಕಾರರಾದ ಶಬರಸ್ವಾಮಿಗಳೂ ಮತ್ತು ಭಗವತ್ಪಾದರಾದ ಶಂಕರರೂ ತಮ್ಮ ಭಾಷ್ಯದಲ್ಲಿ ಕೆಲವಾರು ವಾಕ್ಯಗಳಲ್ಲಿ ಉದಹರಿಸಿರುತ್ತಾರೆ. ಬೌದ್ಧಮತವು ಬಹಳ ಪ್ರಾಚೀನ. ಅದರಲ್ಲಿ ನಾಗಾರ್ಜುನರು ಮಾಧ್ಯಮಿಕ ಮತಕ್ಕೆ ಪುಷ್ಟಿದಾತರು. ಅಕಳಂಕ ಮತ್ತು ನಿಕಳಂಕ ಎಂಬ ಜೈನ ವಿದ್ವಾಂಸರು ಬುದ್ಧ ಮತದವರಲ್ಲಿ ಅಧ್ಯಯನ ಮಾಡಿದರು. ಬುದ್ಧಮತವು ಮಾಗಧೀ ಮತ್ತು ಪಾಳೀ ಭಾಷೆಯ ಮೂಲಕ ಪ್ರಚಾರವಾಯಿತು. 'ಲಂಕಾವತಾರ ಸೂತ್ರ' ಎಂಬುದು ಪ್ರಮುಖವಾದ ಗ್ರಂಥ. ಭರ್ತೃಹರಿಯು ಶಬ್ದ ವಿವರ್ತಕ್ಕೆ ಪ್ರವರ್ತಕರು. ಅದರಿಂದ ವಿವರ್ತಾದ್ವೈತವು (ಬ್ರಹ್ಮಾದ್ವೈತ) ಆರಂಭವಾಯಿತು. ಗೌಡಪಾದರು ಸೂಕ್ಷ್ಮವಾಗಿ ಅದನ್ನು ಸೂಚಿಸಿರುತ್ತಾರೆ. ಶಂಕರರು ಅದನ್ನು ಲೋಕಕ್ಕೆ ಪ್ರಚಾರ ಮಾಡಿದರು. ಅಪ್ಪಯ್ಯ ದೀಕ್ಷಿತರ ಕಾಲದಲ್ಲಿ ಶೈವ ಮತದ ಪ್ರಭಾವ ಹೆಚ್ಚಿತು. ವೃತ್ತಿಕಾರರ ಅಭಿಪ್ರಾಯವನ್ನು ರಾಮಾನುಜರು ತಮ್ಮ ಗುರುಗಳಾದ ಯಾಮುನಾಚಾರ್ಯರ ಇಂಗಿತದಂತೆ ತಮ್ಮ ಶ್ರೀಭಾಷ್ಯದಲ್ಲಿ ಸೇರಿಸಿದ್ದಾರೆ. ಪೂರ್ವೋತ್ತರ ಮೀಮಾಂಸೆಗಳು ಒಂದನ್ನೇ ಆದ ಪರಮಾತ್ಮನನ್ನು ಪ್ರತಿಪಾದಿಸುತ್ತವೆ. ವಿಮರ್ಶೆಯ ದೃಷ್ಟಿಯಿಂದ ಮತ್ತು ಪ್ರಾಮಾಣಿಕತನದೊಂದಿಗೆ ಭಿನ್ನ ಮತಗಳನ್ನು ಪರಿಶೀಲಿಸಬೇಕು. ಅಸೂಯೆಯಿಂದ ಖಂಡನೆಯನ್ನು ಅವಸರದಲ್ಲಿ ಮಾಡುವುದು ಅಷ್ಟು ಒಳಿತಲ್ಲ. ಹಿಂದಿನವರ ದೃಷ್ಟಿ ಹೀಗಿದ್ದಿತು. ಐತರೇಯ ಅರಣ್ಯಕದಲ್ಲಿ 'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್' ಏತತ್ ಕರ್ಮ, ಏತತ್ ಪಂಥಾ, ಏತತ್ ಬ್ರಹ್ಮ ಏತತ್ಸತ್ಯಂ.' ಬ್ರಹ್ಮ, ಕರ್ಮ ಮತ್ತು ಅದರ ಮಾರ್ಗ—ಇವೆಲ್ಲಾ ಸತ್ಯ. ಯಾವ ಸೂಕ್ತಿ ರೂಪವಾದ ಅಮೃತವು ಶ್ರುತಿಯನ್ನು ಸಾರ್ಥಕವನ್ನಾಗಿ ಮಾಡಿತೋ, ಅಂತಹ ರಾಮಾನುಜ ಮುನಿಗಳಿಗೆ ನಮಸ್ಕಾರ.

ಶ್ರೀ ಗಾಯತ್ರಿ ಲಲಿತ ಕಲಾ ಸಂಘದ ಅಧಿಕಾರ ವರ್ಗ

ನಗರದ ಶ್ರೀ ಗಾಯತ್ರಿ ಲಲಿತ ಕಲಾ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಗುರುವಾರ ಶ್ರೀ ಎ. ಎಸ್. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಹಿಂದಿನ ವರ್ಷಗಳಲ್ಲಿ ನಡೆದ ಕಾರ್ಯಚಟುವಟಿಕೆಗಳನ್ನು ವಿಮರ್ಶಿಸಿ ಅಂಗೀಕರಿಸಿದಮೇಲೆ ನೂತನ ಸಾಲಿಗೆ ಅಧಿಕಾರ ವರ್ಗದ ಚುನಾವಣೆ ನಡೆಯಿತು. ಪುರಸಭಾ ಸದಸ್ಯರಾದ ಶ್ರೀ ಹೆಚ್. ಎ. ಮುದ್ದಣ್ಣನವರು ಅಧ್ಯಕ್ಷರು, ಶ್ರೀ ಎ. ಎಸ್. ನಾರಾಯಣಸ್ವಾಮಿಯವರು ಉಪಾಧ್ಯಕ್ಷರು, ಶ್ರೀ ಎಂ. ವಿ. ಅರುಣ್‌ಕುಮಾರ್‌ರವರು ಖಜಾಂಚಿ, ಶ್ರೀ ಎಂ. ಸಿ. ಸುದರ್ಶನ್‌ರವರು ಪ್ರಧಾನ ಕಾರ್ಯದರ್ಶಿ, ಶ್ರೀಗಳಾದ ಎಂ. ಎ. ತಾಂಡವಮೂರ್ತಿ ಮತ್ತು ಆರ್. ಗೋಪಾಲ್‌ರಾಜುರವರು ಸಹ ಕಾರ್ಯದರ್ಶಿಗಳು, ಶ್ರೀ ಎ. ಕೃಷ್ಣಪ್ಪನವರು ಕ್ರೀಡಾ ಕಾರ್ಯದರ್ಶಿ, ಶ್ರೀಗಳಾದ ಮಹಮದ್ ಫಜಲ್, ಎ. ವಿ. ಕೃಷ್ಣಮೂರ್ತಿ, ಎಂ. ನಾಗರಾಜ್, ಎಂ. ವೀರಯ್ಯ, ಬಿ. ರಾಮರಾವ್, ಕೇಶವಮೂರ್ತಿ, ತಮ್ಮಯ್ಯ ಮತ್ತು ಶ್ರೀ ಎಂ. ವಿ. ಶೈಲಜರವರು ಸದಸ್ಯರು.

ಇನಾಂದಾರರಿಗೆ ಬೇಗನೆ ಪರಿಹಾರ ಒದಗಿಸುವುದು ಅಗತ್ಯ

ಪಿರಿಯಾಪಟ್ಟಣದ ಶ್ರೀ ಸಿ. ವೆಂಕಟಸುಬ್ಬಯ್ಯನವರು ಪತ್ರ ಬರೆದು ಈ ರೀತಿ ತಿಳಿಸಿರುತ್ತಾರೆ:—

ಬಹು ಕಾಲದ ಹಿಂದೆಯೇ ಸರ್ವೇ ಸೆಟಲ್‌ಮೆಂಟಾದ ಅನೇಕ ಇನಾಂ ಗ್ರಾಮಗಳನ್ನು ಬಿಟ್ಟು, ನಿರ್ದಿಷ್ಟ ಕ್ರಮವೂ ಇಲ್ಲದೆ ಕೆಲವು ಗ್ರಾಮಗಳನ್ನು ಮಾತ್ರ ಅನಿರೀಕ್ಷಿತವಾಗಿ ಮಂತ್ರಿಮಂಡಲ ಕೊನೆಗಾಣುವ ಕಾಲದಲ್ಲಿ, ಅಶುಭವಾದ ಪಿತೃಪಕ್ಷ, ಅಮಾವಾಸ್ಯೆ, ಮಂಗಳವಾರದ ಮುಂದೆ ತಾ|| ೨-೧೦-೫೬ರಲ್ಲಿ ಸರ್ಕಾರಕ್ಕೆ ಸೇರಿದಂತೆ ತಕ್ಕಷ್ಟು ವ್ಯವಧಾನವೂ ಇಲ್ಲದೆ ಏಕಾಏಕಿ ಗೆಜೆಟ್‌ನಲ್ಲಿ ಪ್ರಕಟಿಸಿ ತೊಂದರೆ ಮಾಡಿದ ಸರ್ಕಾರದ ನಡವಳಿಕೆ ವಿಹಿತವಾದುದಲ್ಲವೆಂದೂ, ಒಳ್ಳೆಯ ದಿನ ಗೊತ್ತುಮಾಡಿ, ಒಂದು ತಿಂಗಳಾದರೂ ಕಾಲಾವಕಾಶ ಕೊಟ್ಟು, ಕ್ರಮವಾದ ರೀತಿಯಲ್ಲಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಏರ್ಪಾಡು ಮಾಡಿ, ಈ ದೆಸೆಯಿಂದ ಉಂಟಾಗಿರುವ ತೊಂದರೆಯನ್ನು ತಪ್ಪಿಸಬೇಕೆಂದೂ ಇನಾಂದಾರರ ಸಂಘದಿಂದಲೂ, ಇತರರಿಂದಲೂ ಸರ್ಕಾರಕ್ಕೆ ಪ್ರತಿಭಟನೆಯನ್ನು ಮನವಿಯ ಮೂಲಕ ಆಗಲೇ ಸಲ್ಲಿಸಿದ್ದರ ಮೇಲೆ ಕಳೆದ ನವೆಂಬರಿನಲ್ಲಿ ರೆವಿನ್ಯೂ ಮಂತ್ರಿಗಳೂ, ಡಿಸೆಂಬರಿನಲ್ಲಿ ಮುಖ್ಯಮಂತ್ರಿಗಳೂ ಸಂಘದ ಪ್ರತಿನಿಧಿಗಳನ್ನು ಭೇಟಿಮಾಡಿ ಈ ವಿಷಯಗಳನ್ನು ಪರಿಶೀಲಿಸಿ ಜಾಗ್ರತೆ ತೀರ್ಮಾನ ಮಾಡುವುದಾಗಿ ಹೇಳಿ ನಾಲ್ಕು ತಿಂಗಳಾದಾಗ್ಯೂ ಈವರೆಗೂ ಮಾಡಿರುವುದಿಲ್ಲ.

ಕಂದಾಯದ ವಸೂಲಿಯಿಂದಲೇ ಜೀವನ ಮಾಡುತ್ತಿದ್ದವರಿಗೆ ವಸೂಲಿಯೂ ಇಲ್ಲದೆ, ಪರಿಹಾರ ದ್ರವ್ಯವೂ ಇಲ್ಲದೆ ಬಹಳ ತೊಂದರೆಯಾಗಿದೆ.

ಸಮತಾವಾದ ಸರ್ಕಾರವೆಂದು ಹೇಳಿಕೊಳ್ಳುವವರು ಈ ರೀತಿ ತೊಂದರೆ ಮಾಡುವುದು ನ್ಯಾಯವಲ್ಲ. ಮೊದಲೇ ಅವಶ್ಯಕವಾದ ವಿಚಾರಣೆ ನಡೆಸಿ ಸ್ವಾಧೀನ ತೆಗೆದುಕೊಂಡಿದ್ದರೆ ಸರ್ಕಾರಕ್ಕೆ ಕೀರ್ತಿ ಬರುತ್ತಿತ್ತು, ಇನಾಂದಾರರುಗಳಿಗೂ ತೊಂದರೆಯಾಗುತ್ತಿರಲಿಲ್ಲ.

ತಾತ್ಕಾಲಿಕ ಪರಿಹಾರ ಕೊಡುವುದಕ್ಕೂ ತಕ್ಕಷ್ಟು ಹಣ ಮಂಜೂರು ಮಾಡಿಲ್ಲ. ಈ ಭಾಗದಲ್ಲೂ ತೊಂದರೆಯಾಗಿದೆ. ಈಗಲಾದರೂ ಕೂಡಲೇ ಈ ಬಗ್ಗೆ ತಕ್ಕಷ್ಟು ಹಣ ಮಂಜೂರು ಮಾಡುವುದಲ್ಲದೆ ಮನವಿಯಲ್ಲಿ ಕಂಡ ವಿಷಯಗಳನ್ನು ಬೇಗನೆ ತೀರ್ಮಾನ ಮಾಡಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯವಾಗಿದೆ

ಪೌರರ ಓಟರು ಪಟ್ಟಿ ತಯಾರಿಕೆ ಬಗ್ಗೆ ಸಾರ್ವಜನಿಕರಿಗೆ ಮನವಿ

ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ಪುರಸಭಾ ಸದಸ್ಯರ ಚುನಾವಣೆಗೆ ಸಂಬಂಧವಾಗಿ ಪರಿಷ್ಕಾರದ ಮತದಾರರ ಪಟ್ಟಿಯನ್ನು ತಯಾರಿಸಲು ಪುರಸಭೆಯ ನೌಕರರು ಈ ತಿಂಗಳು ೧೫ನೇ ತಾರೀಕಿನಿಂದ ಮೊಹಲ್ಲಾಗಳ ಪ್ರತಿ ಮನೆಗೂ ಹೋಗಿ, ಕಾನೂನು ಪ್ರಕಾರ ಮತದಾನಕ್ಕೆ ಅರ್ಹರಾದ ಜನರ ಹೆಸರುಗಳನ್ನು ಬರೆದುಕೊಂಡು ಬರುವರು. ಈ ಕೆಲಸವು ಸಾಂಗವಾಗಿ ನಡೆಯಬೇಕಾದರೆ ಪುರಜನರ ಸಹಕಾರ ಅತಿ ಮುಖ್ಯ. ಆದುದರಿಂದ ಪುರಜನರು ನೌಕರರು ಕೇಳುವ ಪ್ರಶ್ನೆಗಳಿಗೆ ಸದುತ್ತರವನ್ನು ಕೊಟ್ಟು, ಅವರು ಬರೆದುಕೊಂಡ ಪಟ್ಟಿಯನ್ನು ಪರಿಶೀಲಿಸಿ ಅದರಲ್ಲಿ ಬರೆದಿರುವ ಅಂಶಗಳು ಸರಿಯಾಗಿವೆಯೆಂಬ ಬಗ್ಗೆ ತಮ್ಮ ರುಜು ಅಥವಾ ಹೆಬ್ಬೆಟ್ಟಿನ ಗುರುತು ಹಾಕಬೇಕೆಂದು ಪೌರಸಭಾ ಕಮಿಷನರರಾದ ಶ್ರೀ ಎ. ವಿಶ್ವನಾಥ್‌ರವರು ವಿನಂತಿ ಮಾಡಿರುತ್ತಾರೆ.

ಬಸ್ ಚಾರ್ಜಿನಲ್ಲಿ ನಯೆಪೈಸೆ ಹಾವಳಿ

ಮೈಸೂರು ನಗರದ ಬಸ್ಸುಗಳಲ್ಲಿ ನಾಲ್ಕಾಣೆ ಮತ್ತು ಎಂಟಾಣೆ ನಾಣ್ಯಗಳಿಗೆ ಕ್ರಮವಾಗಿ ೨೫ ಮತ್ತು ೫೦ ನಯೆಪೈಸೆಯ ಬೆಲೆ ಕೊಡುತ್ತಿಲ್ಲ. ಒಂದು ಸ್ಥಳಕ್ಕೆ ಟಿಕೆಟ್ಟಿನ ಮೇಲೆ ೧೦ ನಯೆಪೈಸೆ ಅಥವಾ ೦-೧-೯ ಅಚ್ಚು ಹಾಕಿದ್ದಾರೆ. ಒಬ್ಬನು ೨|| ಅಥವಾ ೫ ಟಿಕೆಟ್ಟುಗಳಿಗೆ ಆಗುವ ೨೫ ಮತ್ತು ೫೦ ನಯೆಪೈಸೆಗಳ ಬದಲು ನಾಲ್ಕು ಅಥವಾ ಎಂಟಾಣೆ ನಾಣ್ಯಗಳನ್ನು ಕೊಟ್ಟರೆ ಸ್ವೀಕರಿಸುವುದಿಲ್ಲ. ಇದಕ್ಕೆ ಅವರು ಟಿಕೆಟ್ಟು ೧ಕ್ಕೆ ೦-೧-೯ ಅಂತೆ ಲೆಕ್ಕ ಹಾಕಿ ೪| ಆಣೆ ಅಥವಾ ೮||| ಆಣೆ ಕೊಡಬೇಕೆಂದು ಬಲಾತ್ಕರಿಸುತ್ತಾರೆ. ಅವರಿಗೆ ೨೫ ಅಥವಾ ೫೦ ನಯೆಪೈಸೆಗಳಲ್ಲಿ ಹಣ ಕೊಡಬೇಕಂತೆ. ನಾಲ್ಕಾಣೆ ಮತ್ತು ಎಂಟಾಣೆ ನಾಣ್ಯಗಳ ಬೆಲೆ ನಯೆಪೈಸೆಗಳಲ್ಲಿ ಎಷ್ಟು ಎನ್ನುವುದನ್ನು ಸರ್ಕಾರದವರು ನಿರ್ಧಾರ ಮಾಡಿ ಬಸ್ಸುಗಳಲ್ಲಿ ಬೋರ್ಡುಗಳನ್ನು ಸಹ ಹಾಕಿದ್ದಾರೆ. ರೋಡ್ ಟ್ರಾನ್ಸ್‌ಪೋರ್ಟ್‌ನವರು ಬಸ್ಸು ಕಂಡಕ್ಟರುಗಳಿಗೆ ಇದನ್ನು ವಿವರಿಸಿ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲಿ—ಎಂಬುದಾಗಿ ಕೋರಿ ಪ್ರಯಾಣಿಕರೊಬ್ಬರು ಪತ್ರ ಬರೆದಿದ್ದಾರೆ.

ಸ್ಥಳೀಯ ಸಂಸ್ಥೆಗಳ ಸಚಿವರಿಂದ ಒಳಚರಂಡಿ ಕೆಲಸದ ಆರಂಭ

ಇಲ್ಲಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಮುಂಭಾಗದ ರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ಕೆಲಸದ ಆರಂಭೋತ್ಸವವನ್ನು ನಾಳೆ ಸಂಜೆ ೫ ಗಂಟೆಗೆ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಆರ್. ಚನ್ನಿಗರಾಮಯ್ಯನವರು ನೆರವೇರಿಸುವರು.

ರಾಮೋತ್ಸವ ಕಾರ್ಯಕ್ರಮ

ಮಂಡಿ ಮೊಹಲ್ಲಾ ಕಬೀರ್ ದೇವಸ್ಥಾನದ ರಸ್ತೆಯಲ್ಲಿರುವ ಶ್ರೀ ಸದ್ಗುರು ಸಮರ್ಥ ಕಬೀರ್ ರಾಮ ಮಂದಿರದಲ್ಲಿ ಕಳೆದ ೩ನೇ ತಾರೀಕಿನಿಂದ ಆರಂಭವಾದ ರಾಮ ಸಪ್ತಾಹವು ೧೧ನೇ ತಾರೀಕಿನವರೆಗೆ ನಡೆಯುವುದು. ಅದರ ಅಂಗವಾಗಿ ಪ್ರತಿನಿತ್ಯವೂ ಬೆಳಿಗ್ಗೆ ಅಖಂಡ ಭಜನೆ, ಸೂರ್ಯನಮಸ್ಕಾರ, ನವಗ್ರಹ ಜಪ, ರಾಮಾಯಣ ಮತ್ತು ಗುರು ಚರಿತ್ರೆ ಪಾರಾಯಣ ಮತ್ತು ಸಂಜೆ ೬ ಗಂಟೆಗೆ ಶ್ರೀ ಎಂ. ಎಲ್. ನಾರಾಯಣದಾಸರಿಂದ ಹರಿಕಥೆಯೂ ನಡೆಯುವುವು

ರಹದಾರಿ ಇಲ್ಲದೆ ರೇಡಿಯೊ ಹೊಂದಿದ್ದಕ್ಕೆ ದಂಡ

ಕಳೆದ ೧ನೇ ತಾರೀಖು ಸಾಧ್ವಿ ಪತ್ರಿಕೆಯಲ್ಲಿ ರಹದಾರಿ ಇಲ್ಲದೆ ರೇಡಿಯೊ ಹೊಂದಿದ್ದಕ್ಕಾಗಿ ನಗುವನಹಳ್ಳಿ ಗ್ರಾಮದ ಶ್ರೀ ಎ. ಕೆ. ಜವರೇಗೌಡರಿಗೆ ದಂಡ ವಿಧಿಸಲಾಗಿರುವುದೆಂದು ಪ್ರಕಟವಾಗಿದ್ದು ತಪ್ಪು. ದಂಡವನ್ನು ವಿಧಿಸಿರುವುದು ಮೈಸೂರು ತಾಲ್ಲೂಕು ನಾಗನಹಳ್ಳಿಯ ಪಟೇಲ್ ಎ. ಕೆ. ಜವರೇಗೌಡರಿಗೆ ಎಂದು ಓದಿಕೊಳ್ಳಬೇಕಾಗಿ ವಿನಂತಿ

Estd. : 1948

CITY TUTORIAL COLLEGE.

Admissions received for the

S S L.C. Coaching Classes :-

a) Supplementary Examn. of Sept 57

b) Public Examn. of March 58

★ Separate section forgirl students

★ Efficient & experienced staff

★ Spl. attention to English & Optionals

★ Equipped with Library & Laboratory

C. T. C is the oldest & the best

B.K.Satyabodhachar, M.A.,B.T.

Principal

ವಿವಾಹ ಮಹೋತ್ಸವಗಳು

ಸಂಸ್ಥಾನದ ವಿದ್ಯಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ಟಿ. ಎಸ್. ಕೃಷ್ಣಯ್ಯಂಗಾರ್ಯರು ತಮ್ಮ ಕುಮಾರಿ ಸೌ|| ಸುಲೋಚನರವರನ್ನು ಕೊಳ್ಳೇಗಾಲದ ಶ್ರೀ ಎಸ್. ಆರ್. ಕೃಷ್ಣಯ್ಯಂಗಾರ್ಯರ ಕುಮಾರರಾದ ಶ್ರೀ ಎಸ್. ಕೆ. ವರದರಾಜರವರಿಗೆ ಕೊಟ್ಟು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು.

ನಗರದ ವಜ್ರದ ವ್ಯಾಪಾರಿಗಳಾದ ಶ್ರೀ ಟಿ. ನಾರಾಯಣ ಶೆಟ್ಟರ ಮಕ್ಕಳು ಶ್ರೀ ಟಿ. ಎ. ಎಸ್. ರಾಜುರವರು ತಮ್ಮ ಕುಮಾರಿ ಸೌ|| ಸುಕನ್ಯಾದೇವಿಯನ್ನು ಈರೋಡಿನ ವಕೀಲರಾದ ಶ್ರೀ ಎಂ. ಗೋಪಾಲ ಚೆಟ್ಟಿಯಾರರ ಮಕ್ಕಳು ಶ್ರೀ ಜಿ. ದ್ವಾರಕನಾಥ್‌ರವರಿಗೆ ಕೊಟ್ಟು ವಿವಾಹವನ್ನೂ, ತಮ್ಮ ಕುಮಾರ ಚಿ|| ರಾಜಾ ಅಶ್ವಿನಿರಂಜನನಿಗೆ ಉಪನಯನವನ್ನೂ ನೆನ್ನೆ ನೆರವೇರಿಸಿದರು.

ವಿಧಾನ ಸಭಾ ಸದಸ್ಯರಾದ ಶ್ರೀ ಎ. ರಾಜಯ್ಯನವರು ತಮ್ಮ ಸಹೋದರರಾದ ಶ್ರೀ ಬಿ. ಎ. ನರಸಿಂಹಮೂರ್ತಿಯವರಿಗೆ ಜಲಪುರಿಯಲ್ಲಿರುವ ಅಬ್ಕಾರಿ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಶ್ರೀ ಡಿ. ಚಿಕ್ಕರಂಗಯ್ಯನವರ ಕುಮಾರಿ ಸೌ|| ಡಿ. ಸಿ. ಚಂದ್ರಮ್ಮನನ್ನು ತಂದುಕೊಂಡು ಮೊನ್ನೆ ಟಿ. ನರಸೀಪುರದಲ್ಲಿ ವಿವಾಹವನ್ನು ನೆರವೇರಿಸಿದರು.

ಗಾಂಧಿ ವಿಚಾರ ಪರಿಷತ್ತಿನ ವಿಶೇಷ ತರಗತಿ

ಗಾಂಧಿ ವಿಚಾರ ಪರಿಷತ್ತಿನ ವಿಶೇಷ ತರಗ ಅಂಗವಾಗಿ ನಾಳೆ ಸಂಜೆ ೬|| ಗಂಟೆಗೆ, ರಮಾವಿಲಾಸ ಅಗ್ರಹಾರದಲ್ಲಿರುವ ಪರಿಷತ್ತಿನ ಕಾರ್ಯಾಲಯದಲ್ಲಿ ಶ್ರೀ ಕೆ. ಕೃಷ್ಣಯ್ಯಂಗಾರ್ಯರು ವ ಪ್ರಸಿದ್ಧ ಸಾಹಿತಿಗಳು ಎಂಬ ವಿಚಾರವಾ ಉಪನ್ಯಾಸ ಮಾಡುವರು.

ಬಸವೇಶ್ವರರ ಜಯಂತಿ

ತ್ಯಾಗರಾಜಾ ರಸ್ತೆಯಲ್ಲಿರುವ ಅಕ್ಕನ ಬಳ ದ ಕಟ್ಟಡದಲ್ಲಿ ಬಸವೇಶ್ವರರ ಜಯಂತಿ ಕಾ ವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾ ಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ಎಂ. ರಾಜೇ ಶ್ವರಯ್ಯನವರು ಬುದ್ಧ-ಬಸವ-ಗಾಂಧಿ ಎಂಬ ಷಯವಾಗಿ ಭಾಷಣ ಮಾಡುವರು. ಸ್ಥಳೀ ಸಂಸ್ಥೆಗಳ ಮಂತ್ರಿ ಶ್ರೀ ಆರ್. ಚನ್ನಿಗರಾಮ ನವರು ಅಧ್ಯಕ್ಷತೆ ವಹಿಸುವರು.

ಅಮೆರಿಕಾ ಸುದ್ದಿ ಸಂಸ್ಥೆಯ ಅಧಿಕಾರಿಗಳಿಗೆ ಸತ್ಕಾರ

ಮೈಸೂರು ಮಹಾರಾಜಾ ಕಾಲೇಜಿನ ಕೋದ್ಯಮ ವಿಭಾಗದ ಮುಖ್ಯಾಧಿಕಾರಿಗಳ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಮದ್ರಾ ನಲ್ಲಿರುವ ಅಮೆರಿಕಾ ಸುದ್ದಿ ಸಂಸ್ಥೆಯ ನಾ ಧಿಕಾರಿ ಶ್ರೀ ಹೆರಾಲ್ಡ್ ಜೆ. ಟಿಕ್ಸಿಯವರ ಗೌ ರವಾರ್ಥವಾಗಿ ನೆನ್ನೆ ರಾತ್ರಿ ಮಾಡರ್ನ್ ಹಿಂ ಹೋಟೇಲಿನಲ್ಲಿ ಭೋಜನಕೂಟವನ್ನು ಏರ್ಪ ಸಿದ್ದರು. ಶ್ರೀ ಟಿಕ್ಸಿಯವರು ಮಾತನಾಡಿ, ಜಕೀಯ ಮತ್ತು ಇತರ ರಂಗಗಳಲ್ಲಿ ಅಮೆ ವು ಅನುಸರಿಸುತ್ತಿರುವ ನೀತಿಯನ್ನು ವಿವ ದರು

CENTRAL INSTITUTE OF COMME

Vani Vilas Market Buildin

MYSORE

Applications for admis to D.Com, Dip-in-Sten, Sho hand and Type-writing will received on all working day

Join Immediately

GLOBE TUTORIAL COLL

Sadvidya Patasala Building

MYSORE

Offers efficient coaching

For S. S. L. C. Stude

Timings:-7-30 to 11 A.M.

& 5 to 8 P.M.

Golden Opportunity For S. S. L. C. Students

For Efficient Coaching, Excellent Tuition & Best Guidance, Join at once

NATIONAL LEAGUE

Anathalaya Buildings, Mysore

Timings : 8 A. M. to 10 A. M. and 6 P. M. to 8 P. M.

Edited, Printed and Publis
A. R. Nagarajan at Sadhvi
D. Subbiah Road, Mysore

ಇಂದಿನ ಪತ್ರಿಕೆ 2 ಪುಟ [illegible]

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖ್ಯಾತಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈ ಸೂ ರು

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರನಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : ೦೫] SADHVI WEDNESDAY 8—5—1957 ಮೈಸೂರು ಬುಧವಾರ ೮—೫—೧೯೫೭ [ಸಂಚಿಕೆ : [illegible]

ಬೊಂಬಾಯಲ್ಲಿ ಟ್ಯಾಕ್ಸಿ ತಡೆದು ೫೦,೦೦೦ ರೂ. ದರೋಡೆ

ಕನ್ನಡ ಸಂಸ್ಕೃತಿಯ ಆಧಾರದ ಮೇಲೆ ಆದರ್ಶ ರಾಜ್ಯದ ಸ್ಥಾಪನೆ

ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡಿಗರ ಮುಂದಿನ ಗುರಿಯನ್ನು ಕುರಿತು ಕುವೆಂಪುರವರ ಭಾಷಣ

ಧಾರವಾಡ ೮

ಕನ್ನಡ ಜನರ ಆಶೋತ್ತರದ ಮತ್ತು ಕರ್ನಾಟಕ ಸಂಸ್ಕೃತಿಯ ಪ್ರತಿನಿಧಿಯಾದ ಕನ್ನಡ ಸಾಹಿತ್ಯ ಪರಿಷತ್ತು ಸದ್ಯಕ್ಕೆ ನಮ್ಮ ಭೌಗೋಲಿಕ ಚೌಕಟ್ಟನ್ನು ಸಾಧಿಸಿದೆ. ನವ ಮೈಸೂರು ರಾಜ್ಯದ ಈ ಚೌಕಟ್ಟಿನ ಮೇಲೆ ನಮ್ಮ ಸಂಸ್ಕೃತಿಯ ಆದರ್ಶದ 'ಕರ್ನಾಟಕ'ವನ್ನು ಕಟ್ಟಬೇಕಾಗಿದೆ. ಇದುವರೆಗೆ ಪರಿಷತ್ತಿನ ವಾರ್ಷಿಕ ಸಮ್ಮೇಳನ ಸ್ವಲ್ಪ ಹೆಚ್ಚು ಕಡಿಮೆ ಉತ್ಸವ ರೂಪದ ಪ್ರಚ್ಛನ್ನ ರಾಜಕೀಯ ಚಳುವಳಿಯಾಗಿಯೇ ಸಾಗುತ್ತಿತ್ತು. ಇನ್ನುಮೇಲೆ ಈ ವಾರ್ಷಿಕ ಸಮ್ಮೇಳನವು ಉತ್ಸವ ರೂಪ ಮಾತ್ರವಾಗಿ ಪರ್ಯವಸಾನಗೊಂಡುವುದರಲ್ಲಿ ಔಚಿತ್ಯವಿಲ್ಲ. ಇದು ಸಾಹಿತ್ಯ ಕ್ಷೇತ್ರದ ಶ್ರಮ ಜೀವಿಗಳ ಮತ್ತು ಕಲಾ ಸಾಧಕರ ವಾರ್ಷಿಕ ಸಾಹಸ ಸಿದ್ಧಿಗಳ ಪರೀಕ್ಷೆಯ ಶಿಷ್ಟ ವೇದಿಕೆಯಾಗಿ ಪರಿಣಮಿಸಬೇಕು. ನಮ್ಮ ನೆರೆಯ ಸೋದರ ಭಾಷಾ ಸಾಹಿತ್ಯಗಳೊಡನೆ ನಿಚ್ಚ ಸಂಪರ್ಕ ಬೆಳೆಸಲು ಪರಸ್ಪರ ಹೃದಯ ಅರಿಯುವ ಮತ್ತು ಮೈತ್ರಿ ಸಾಧನೆಯ ರಂಗವಾಗಿ ಪರಿವರ್ತಿತವಾಗಬೇಕು—ಎಂದು ನೆನ್ನೆ ಇಲ್ಲಿ ಡಾ|| ಕೆ. ವಿ. ಪುಟ್ಟಪ್ಪನವರು ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ನಿಜಲಿಂಗಪ್ಪನವರ ಆರಂಭ ಭಾಷಣ

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಆರಂಭೋತ್ಸವವನ್ನು ನೆರವೇರಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಇನ್ನುಮುಂದೆ ಸಾಹಿತ್ಯ ಕ್ಷೇತ್ರವೊಂದಕ್ಕೆ ಹೆಚ್ಚು ಗಮನವಿತ್ತು, ಅದರಲ್ಲಿ ಆಳವಾದ ಪರಿಶೋಧನೆ ನಡೆಸಬೇಕು. ಈಗ ಪರಿಷತ್ತಿಗೆ ಬೇಕಾದವರು ವಾಗ್ಮಿಗಳಲ್ಲ-ಸಂಶೋಧಕರು—ಎಂದು ಮುಖ್ಯ ಮಂತ್ರಿಯವರು ತಿಳಿಸಿದರು. ಇಂದಿನ ಕನ್ನಡ ಭಾಷೆಯಲ್ಲಿ ವಿಚಾರ ಸಾಹಿತ್ಯವು ಸಾಕಷ್ಟು ಬೆಳೆಯದಿರುವುದು, ಬರವಣಿಗೆ ಹೆಚ್ಚಿದರೂ ಪಾಂಡಿತ್ಯವು ಹೆಚ್ಚಿಲ್ಲದಿರುವುದು, ಸಾಹಿತ್ಯ ವಿಮರ್ಶೆಯು ಸಾಕಾದಷ್ಟು ಬೆಳೆಯದಿರುವುದು ಮತ್ತು ಸಂಸ್ಕೃತ, ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳ ಸಾಹಿತ್ಯ ಜ್ಞಾನವನ್ನು ಪಡೆದುಕೊಳ್ಳದಿರುವುದು- ಈ ನಾಲ್ಕು ಕೊರತೆಗಳಿರುವುವೆಂದು ಅವರು ಹೇಳಿ ಇವನ್ನು ತಪ್ಪಿಸಬೇಕೆಂದು ಸೂಚಿಸಿದರು. ಕನ್ನಡ ರಾಜ್ಯದಲ್ಲಿ ಎಲ್ಲ ಸಂಪತ್ತುಗಳೂ ಇವೆಯೆಂದೂ, ಅವು ಜನ ಜಾಗೃತಿಯಾಗಬೇಕೆಂದೂ, ಜಾತೀಯತೆಯನ್ನು ಅಳಿಸಬೇಕಾಗಿರುವುದೆಂದೂ, ಈ ಕಾರ್ಯದಲ್ಲಿ ಗಾಂಧೀಜಿಯವರ ಆದರ್ಶ [illegible] ಸಾಹಿತ್ಯವು [illegible] ಬೇಕಾಗಿರುವುದೆಂದೂ ಅವರು ನುಡಿದರು.

ಜನತೆಯನ್ನು ಸರ್ವತೋಮುಖವಾಗಿ ಏರಿಸುವ ಸಾಹಿತ್ಯವನ್ನು ಪ್ರೋತ್ಸಾಹಿಸಲು ಪ್ರತಿ ವರ್ಷವೂ ಅತ್ಯುತ್ತಮ ಕನ್ನಡ ಕೃತಿಗಳನ್ನಾರಿಸಿ ಅದನ್ನು ರಚಿಸಿದವರಿಗೆ ಬಹುಮಾನವಿತ್ತು ಗೌರವಿಸುವ ವ್ಯವಸ್ಥೆ ಮಾಡಲಾಗುವುದೆಂದೂ ಮುಖ್ಯ ಮಂತ್ರಿಗಳು ಸೂಚಿಸಿದರು

ಶ್ರೀ ಪುಟ್ಟಪ್ಪನವರು ತಮ್ಮ ಭಾಷಣದಲ್ಲಿ ರಾಷ್ಟ್ರದ ಸ್ವಾತಂತ್ರ್ಯ ಸಾಧನೆ, ಕರ್ನಾಟಕ ರಾಜ್ಯ ಸ್ಥಾಪನೆ, ಮುಂತಾದುವನ್ನು ಪ್ರಸ್ತಾಪಿಸಿ, ಕನ್ನಡ ನಾಡಿನ ಹೆಸರಿನ ಬಗ್ಗೆ ಮನಸ್ಸಿನ ವ್ಯಾಕುಲತೆ ಬೇಕಿಲ್ಲವೆಂದು ನುಡಿದರು

ಇಂಗ್ಲಿಷ್ ಭಾಷೆಯ ಸ್ಥಾನವನ್ನು ವಿಮರ್ಶಿಸುತ್ತಾ, "ಪರಕೀಯರು ಹೇರಿಟ್ಟು ಹೋಗಿರುವ ಹೆಚ್ಚುಭಾರದ ಹೊರ ಭಾಷೆಯ ಚಪ್ಪಡಿಯನ್ನು ಕಿತ್ತೊಗೆಯಬೇಕು" ನುಡಿದರು.

ಕೇಂದ್ರದಲ್ಲಿ [illegible] ತೆಲುಗು ಮತ್ತು ತಮಿಳುನಾಡಿನಲ್ಲಿ [illegible] ಕರ್ನಾಟಕದಲ್ಲಿ ಕನ್ನಡವು ಪ್ರಥಮ [illegible] ಬೇಕೆಂದೂ, ಆದಾಗದಿದ್ದರೆ ಕನ್ನಡಿಗರ ಬಾಳು ಕುಂಠಿತವಾಗುವುದೆಂದೂ ತಿಳಿಸಿದರು "ನಮ್ಮ ತಾಯಿಗೆ ನಮ್ಮ ಮನೆಯಲ್ಲಿಯೇ [illegible] ದಲ್ಲಿ ಮಲಗಿಕೊಳ್ಳಲು ತಾಣವಿಲ್ಲ [illegible] ಬೇಕಾಗುತ್ತದೆ; ಅಂತಹ ದುಃಖದ [illegible] ದುರಂತದ ಸೃಷ್ಟಿಗೆ ಕಾರಣರಾಗುವವರೆಲ್ಲರೂ ಶಾಪಗ್ರಸ್ತರಾಗುತ್ತಾರೆ" ಎಂದು ಹೇಳಿ, ಹಾಗೆ ಆಗಲು ಬಿಡಬಾರದೆಂದು ಸೂಚಿಸಿದರು.

ಕನ್ನಡಿಗರಿಗೆ ಬೇಕಾಗುವ ಸಾಹಿತ್ಯವನ್ನು [illegible] ನಿರೂಪಿಸಿ, ಮತ ಸಹಿಷ್ಣುತೆ ಮತ್ತು ಮೈತ್ರಿ, ಜನರಲ್ಲಿ ಸಹೋದರತ್ವ ಬೆಳೆಸುವುದು, ರಿಪಬ್ಲಿಕ್ ರಾಜ್ಯವಾಗಿರುವ ಭಾರತದಲ್ಲಿ ಸರ್ವರೂ ಸಮರೆಂಬ ಭಾವನೆ ಬೇರೂರುವುದು, ಸನಾತನ ಬ್ರಾಹ್ಮೀ ಪ್ರಜ್ಞಾ ವಿಕಾಸಕ್ಕೆ ಪೂರ್ವಭಿತ್ತಿರೂಪವಾಗಿರುವ ಪ್ರಾಣ ದೃಷ್ಟಿ ತಂದುಕೊಡುವುದು— ಇವುಗಳನ್ನೊಳಗೊಂಡ ಸಾಹಿತ್ಯವು ಬೇಕಾಗಿರುವುದೆಂದು ನುಡಿದರು. ಎಲ್ಲ ವಿಧವಾದ ಲೋಕಾನುಭವವನ್ನೂ ಗ್ರಂಥದಲ್ಲಿ ರಚಿಸುವ ಸಾಹಿತ್ಯಕಾರನು ತನ್ನನ್ನು ತಾನೇ ಮೊದಲು ರಚಿಸಿಕೊಳ್ಳುವುದು ಅಗತ್ಯವೆಂದು ಅವರು ಹೇಳಿದರು. ನಮ್ಮ ತರುಣರು ಅನಿವಾರ್ಯವಾಗಿ ಕನ್ನಡ, ಅವಶ್ಯಕವಾಗಿ ಸಂಸ್ಕೃತ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಮುಖ್ಯವಾದ ಇಂಗ್ಲಿಷ್ ಈ ಭಾಷೆಗಳನ್ನಾದರೂ ಕನಿಷ್ಠ ಪಕ್ಷ ಕಲಿತಿರಬೇಕೆಂದು ಸೂಚಿಸಿದರು

ಕನ್ನಡ ಭಾಷೆಯು ವಿದ್ಯಾಭ್ಯಾಸದ ಅತ್ಯುನ್ನತ ಮಟ್ಟಗಳಲ್ಲೂ ಶಿಕ್ಷಣ ಮಾಧ್ಯಮವಾಗಲು ಸಮರ್ಥವಾಗಿದೆಯೆನ್ನುವುದರಲ್ಲಿ ಸಂದೇಹಪಡಬೇಕಾಗಿಲ್ಲವೆಂದು ಅವರು ಸ್ಪಷ್ಟಪಡಿಸಿದರು.

ಮಂಡ್ಯದ ಡಿ. ಎಸ್. ಪಿ.

ಬೆಂಗಳೂರಿನ ಎ. ಎ ಆರ್. ಪಿ ಸೂಪರಿಂಟೆಂಡೆಂಟರಾದ ಶ್ರೀ ಎಸ್. ವಿ. ಪಂಡಿತರನ್ನು ಮಂಡ್ಯದ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರನ್ನಾಗಿ ನೇಮಿಸಲಾಗಿದೆ ಅಲ್ಲಿರುವ ಶ್ರೀ ಪಿ. ಎಸ್. ನರಸಿಂಹಾಚಾರ್ಯರನ್ನು ಕೋಲಾರದ ಡಿ. ಎಸ್. ಪಿ ಯಾಗಿ ವರ್ಗಾಯಿಸಲಾಗಿದೆ

ಜೂನ್ ೧೦ ರಿಂದ ಶಾಸನ ಸಭೆ ಅಧಿವೇಶನ

ಬರುವ ತಿಂಗಳು ೧೦ ರಿಂದ ಸಂಸ್ಥಾನ ವಿಧಾನ ಸಭೆ ಮತ್ತು ಪರಿಷತ್ತುಗಳ [illegible] ಅಧಿವೇಶನವು ನಡೆಯುವುದು

ಪಾಕಿಸ್ತಾನದ ಅಧ್ಯಕ್ಷರು ಮತ್ತು ಪ್ರಧಾನಿ ವಿರುದ್ಧ ಪ್ರದರ್ಶನ

ಲೀಗಿನವರಿಂದ ಕಾನೂನು ಭಂಗ ಚಳುವಳಿ ಬೆದರಿಕೆ

ಕರಾಚಿಯ ಮುಸ್ಲಿಂ ಲೀಗಿನವರು ನೆನ್ನೆ ಬಹಿರಂಗ ಸಭೆ ನಡೆಸಿ ಪಾಕಿಸ್ತಾನದಲ್ಲಿ ಜಂಟಿ ಚುನಾವಣೆ ಪದ್ಧತಿ ತರುವುದನ್ನು ನಿಲ್ಲಿಸದಿದ್ದರೆ ಅಥವಾ ಸುಹ್ರಾವರ್ದಿ ಸರ್ಕಾರವು ಅಧಿಕಾರ ಬಿಡದಿದ್ದರೆ ಲೀಗಿನವರು ಕಾನೂನು ಭಂಗ ಚಳುವಳಿಯನ್ನು ನಡೆಸಬೇಕೆಂದು ನಿರ್ಣಯ ಮಾಡಿರುತ್ತಾರೆ. ಅದಕ್ಕೆ ಮುಂಚೆ ಅವರು ಮೆರವಣಿಗೆ ನಡೆಸಿ "ಸುಹ್ರಾವರ್ದಿ ಮತ್ತು ಅಧ್ಯಕ್ಷ ಮಿರ್ಜಾ ಉರುಳಲಿ" ಎಂದು ಘೋಷಣೆಗಳನ್ನು ಕೂಗಿದರು. ರಾಷ್ಟ್ರದ ಅಧ್ಯಕ್ಷರ ವಿರುದ್ಧವಾಗಿ ಅಲ್ಲಿ ಘೋಷಣೆ ಮಾಡಿರುವುದು ಇದೇ ಮೊದಲು.

ಸಿನಿಮಾ ನೋಡಿ ಅರಮನೆಗೆ ಬೆಂಕಿ ಹತ್ತಿಸುವ ಪ್ರಯತ್ನ

ಟೋಕಿಯೋ ನಗರದಲ್ಲಿ ಚಿಕ್ಕ ವಯಸ್ಸಿನ ಹುಡುಗನೊಬ್ಬನು ಸಿನಿಮಾದಲ್ಲಿ ಅರಮನೆ ಸುಟ್ಟು ಭಸ್ಮವಾಗುತ್ತಿರುವ ಒಂದು ದೃಶ್ಯವನ್ನು ಕಂಡು ಹೊರಗೆ ಬಂದಮೇಲೆ ನಿಜವಾಗಿಯೂ ಅರಮನೆಯು ಸುಟ್ಟು ಭಸ್ಮವಾಗುವುದನ್ನು ನೋಡಬೇಕೆಂಬ ಕುತೂಹಲದಿಂದ ಸಮಯ ಕಾದು [illegible] ಅರಮನೆಯ ಮರಮುಟ್ಟುಗಳನ್ನು ಇಡುವ ಸ್ಥಳಕ್ಕೆ ಬೆಂಕಿ ಹತ್ತಿಸಿದನೆಂದೂ, ರಕ್ಷಕದಳದವರು ಅದನ್ನು ಆರಿಸಿದರೆಂದೂ ವರದಿಯಾಗಿದೆ

ಕೆರೆಯಲ್ಲಿ ಬಿದ್ದು ಮರಣ

ನಗರದ ನಂಜನಗೂಡು ಅಗ್ರಹಾರದಲ್ಲಿ ನೌಕರರಾಗಿರುವ ಶ್ರೀ ಅಂಕಯ್ಯನವರ ಮಗ ೧೫ ವರ್ಷದ ಮಲ್ಲಿಕಾರ್ಜುನ ಎಂಬ ಬಾಲಕನು ನೆನ್ನೆ ಸಂಜೆ ಕಾರಂಜಿಕೆರೆಯಲ್ಲಿ ಬಟ್ಟೆ ಒಗೆಯಲು ಹೋಗಿ ಅಕಸ್ಮಾತ್ ಕಾಲು ಜಾರಿ ನೀರಿನಲ್ಲಿ ಮುಳುಗಿ ಪ್ರಾಣ ಬಿಟ್ಟನೆಂದು ವರದಿಯಾಗಿದೆ. ಬಟ್ಟೆಯೊಂದು ಕೈತಪ್ಪಿ ನೀರಿಗೆ ಬಿದ್ದುದನ್ನು ತೆಗೆದುಕೊಳ್ಳಲು ಹೋಗಿ ಯುವಕನು ಮುಳುಗಿದುದನ್ನು ಅವನ ಸಹಾಯಕ್ಕಾಗಿ ಬಂದ ಸಹೋದರ ಸದಾಶಿವನೂ ನೀರಿಗೆ ಬಿದ್ದನೆಂದೂ, ಆದರೆ ಅವನನ್ನು ದಾರಿಯಲ್ಲಿ ಹೋಗುತ್ತಿದ್ದವರು ರಕ್ಷಿಸಿದರೆಂದೂ ಹೇಳಲಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕ್ಲಾರಿಯೊನೆಟ್. ೭-೧೫ ಎಂ. ಎಲ್. ಶಿವಯ್ಯ-ದೇವರ ನಾಮ. ೭-೩೦ ಮತ್ತು ೮-೧೫ ಕೆ. ಎಸ್. ನಾರಾಯಣಾಚಾರ್-ಕಾವ್ಯ ವಾಚನ. ಮಧ್ಯಾಹ್ನ ೧೨ ಕುಮಾರಿ ಎಸ್. ಪರಿಣಿತ-ಹಿಂದೂಸ್ಥಾನಿ ಗಾತ್ರ ಸಂಗೀತ. ೧೨ ೩೦ ಎಂ. ಎಲ್. ಶಿವಯ್ಯ-ಸಂಗೀತ. ೧ ಸಿ ಆಳಿಂಗರಾವ್ [illegible]. ೧-೫೫ ಕ್ಲಾರಿಯೊನೆಟ್. ಸಂಜೆ ೬-೧೦ ಜಾನಪದ ಗೀತೆ. ೭-೩೦ ಗೋಪಾಲಕೃಷ್ಣ ಗೋಖಲೆ: ಪ್ರಸಂಗ. ೮ ಕುಮಾರಿ ಎಸ್. ಪರಿಣಿತ-ಹಿಂದೂಸ್ಥಾನಿ ಗಾತ್ರ ಸಂಗೀತ. ೯ ೧೫ ಭಾರತದಲ್ಲಿ ಧರ್ಮದ ಭವಿಷ್ಯ-ಎಂ. ಯಾಮುನಾಚಾರ್ : ಭಾಷಣ. ೯-೩೦ ಪರಿವರ್ತನೆ-ನಾಟಕ. ೧೦-೧೫ ರೆಕಾರ್ಡ್. ೧೦-೩೦ ಗೀತಾ ಗುಚ್ಛ.

ಬೊಂಬಾಯಿನಲ್ಲಿ ಟ್ಯಾಕ್ಸಿ ತಡೆದು ೫೦ ಸಾವಿರ ರೂ. ಅಪಹಾರ

ಬೊಂಬಾಯಿಯ ಜನನಿಬಿಡ ಪ್ರದೇಶದಲ್ಲಿ ನೆನ್ನೆ ನಡು ಹಗಲಿನಲ್ಲಿ ಮೂವರು ಶಸ್ತ್ರಧಾರಿಗಳು ಒಂದು ಟ್ಯಾಕ್ಸಿಯನ್ನು ತಡೆದು ಅದರಲ್ಲಿದ್ದವರನ್ನು ಹೊರಕ್ಕೆ ಎತ್ತಿಹಾಕಿ ಅವರ ಬಳಿ ಇದ್ದ ೫೦ ಸಾವಿರ ರೂ ಅನ್ನು ಅಪಹರಿಸಿ ಟ್ಯಾಕ್ಸಿಯಲ್ಲಿ ಪರಾರಿಯಾದರೆಂದೂ, ರಾತ್ರಿ ಬಹಳ ಹೊತ್ತಿನ ಮೇಲೆ ೪೦,೦೦೦ ರೂ ಸಮೇತ ೪ ಜನರನ್ನು ಬಂಧಿಸಿದರೆಂದು ವರದಿಯಾಗಿದೆ. ಊರಿನ ಹೊರಗೆ ಒಂದು ಗುಡಿಸಲಿನಲ್ಲಿ ಈ ಹಣವನ್ನು ಹೂಳಲಾಗಿತ್ತೆಂದು ಹೇಳಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಜನರಿಗೆ ಎಲೆಯೇ ಆಹಾರ

ಪಶ್ಚಿಮ ಬಂಗಾಳದ ಬಹುಭಾಗದ ಪ್ರದೇಶಗಳಲ್ಲಿ ವಿಪರೀತ ಅಭಾವ ಪರಿಸ್ಥಿತಿಯುಂಟಾಗಿರುವುದೆಂದೂ, ಅಲ್ಲಿ ಅಕ್ಕಿ ಧಾರಣೆಯು [illegible] ಏರಿರುವುದೆಂದೂ ವರದಿಯಾಗಿದೆ. ಹಸಿವಿನ ಬಾಧೆ ತಡೆಯದೆ ಜನರು ತಮ್ಮ ಪಾತ್ರೆಪದಾರ್ಥಗಳನ್ನೂ ದನಕರುಗಳನ್ನೂ ಮಾರಿ ಜೀವಿಸುತ್ತಿರುವರೆಂದೂ, ಸಾಲ ಕೊಡುವವರಿಗೆ ಸುಗ್ಗಿಯಾಗಿರುವುದೆಂದೂ ಹೇಳಲಾಗಿದೆ. ಒಬ್ಬಾತನು ಹಸಿವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡುದಾಗಿ ತಿಳಿದುಬಂದಿದೆ. ಜನರು ವಾರಕ್ಕೆ ೩-೪ ದಿನ ಊಟವಿಲ್ಲದೆ ಇರುವರೆಂದೂ, ಹಲವರು ಎಲೆ ಮತ್ತು ಜೊಂಡುಗಳನ್ನು ತಿನ್ನುತ್ತಿರುವರೆಂದೂ ವರದಿಯಾಗಿದೆ.

ಬೊಂಬಾಯಿನಲ್ಲಿ ಶಬ್ದ ವೇಗವನ್ನು ಮೀರಿಸಿದ ಜೆಟ್ ವಿಮಾನಗಳು

ಬೊಂಬಾಯಿಯಲ್ಲಿ ನೆನ್ನೆ ಭಾರತ ವಿಮಾನ ಬಲಕ್ಕೆ ಸೇರಿದ ಜೆಟ್ ವಿಮಾನಗಳು ಭಾರತೀಯ ಚಾಲಕರಿಂದ ನಡೆಸಲ್ಪಟ್ಟು ಶಬ್ದ ವೇಗಕ್ಕಿಂತಲೂ ಜೋರಾಗಿ ಹೋದುವೆಂದು ವರದಿಯಾಗಿದೆ. ೫೦ ಸಾವಿರ ಅಡಿ ಎತ್ತರದಿಂದ ಕೆಳಗೆ ಇಳಿಯುವಾಗ ಅವು ಈ ರೀತಿ ಶಬ್ದ ಮಾಡಿದುವು. ಇಂತಹ ವಿಮಾನಗಳನ್ನು ಈಗ ತಾನೆ ಭಾರತ ಸರ್ಕಾರದವರು ಫ್ರಾನ್ಸಿನಿಂದ ಪಡೆದುಕೊಂಡಿರುತ್ತಾರೆ.

ಗಾಂಧಿ ವಿಚಾರ ಪರಿಷತ್ತಿನ ವಿಶೇಷ ತರಗತಿ

ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿರುವ ವಿಶೇಷ ತರಗತಿಯಲ್ಲಿ ನಾಳೆ ಸಂಜೆ ೬| ಗಂಟೆಗೆ ಶ್ರೀ ವಿ. ಮುದ್ದುಲಿಂಗಪ್ಪನವರು ಗ್ರಾಮ ಸಮಾಜದ ಸ್ವರೂಪ ಮತ್ತು ೧೧ನೇ ತಾರೀಖು ಸಂಜೆ ೬ಕ್ಕೆ ಡಾ|| ಎಂ. ವಿ ಕೃಷ್ಣರಾಯರು ರಾಜ್ಯ ಶಾಸ್ತ್ರ-ಇತಿಹಾಸ ಎಂಬ ವಿಚಾರವಾಗಿ ಉಪನ್ಯಾಸಗಳನ್ನು ಮಾಡುವರು

ಭರತ ನಾಟ್ಯ

[illegible] ಬೀದಿಯಲ್ಲಿರುವ ಬಸವ ಜಯಂತಿ ಮಿತ್ರ ಮಂಡಲಿ ಆಶ್ರಯದಲ್ಲಿ ಈ ಸಂಜೆ ಸಿದ್ದಪ್ಪಾಜಿ ಗದ್ದುಗೆ ಬಳಿ ಹಾಕಿರುವ ಚಪ್ಪರದಲ್ಲಿ ಕುಮಾರಿಯರು ಶಕುಂತಲ, ಕೃಷ್ಣವೇಣಿ ಮತ್ತು ನಾಗರತ್ನರವರಿಂದ ಭರತ ನಾಟ್ಯ ಇದೆ.

ಶಂಕರಾಚಾರ್ಯರಿಗೆ ಕನಕಾಭಿಷೇಕ

ಕಾಂಚಿಪುರ ಕಾಮಾಕ್ಷಿ ದೇವಸ್ಥಾನದಲ್ಲಿ ಕಳೆದ ಶನಿವಾರ ಕಾಮಕೋಟಿ ಪೀಠದ ಶ್ರೀ ಶಂಕರಾಚಾರ್ಯರ ಸಮ್ಮುಖದಲ್ಲಿ ಶ್ರೀ ಆದಿಶಂಕರ ಭಗವತ್ಪಾದರ ವಿಗ್ರಹಕ್ಕೆ ಕನಕಾಭಿಷೇಕವು ನಡೆಯಿತು. ಸಹಸ್ರಾರು ಮಂದಿ ಭಕ್ತರು ಅದರಲ್ಲಿ ಭಾಗವಹಿಸಿದ್ದರು ಆ ಬೆಳಿಗ್ಗೆ ಆರು ಗಂಟೆಗೆ ಸರಿಯಾಗಿ ಗಂಗಾ ಮತ್ತು ಭಾರತದ ಇತರ ೬ ಪವಿತ್ರ ನದಿಗಳಿಂದ ತಂದಿದ್ದ ಜಲದಲ್ಲಿ ಚಿನ್ನದ ಪುಡಿಯನ್ನು ಬೆರೆಸಿ ಅಭಿಷೇಕ ಮಾಡಲಾಯಿತು. ಶಂಕರ ಆಚಾರ್ಯರ ವಿಗ್ರಹಕ್ಕೆ ಚಿನ್ನದ ಎಲೆಗಳನ್ನು ಧರಿಸಲಾಯಿತು

ಸರ್ವೋದಯದ ಬಗ್ಗೆ ಉಪನ್ಯಾಸ

ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಮಹಾರಾಜಾ ಕಾಲೇಜಿನ ಡಾ॥ ಎಸ್. ಶ್ರೀಕಂಠ ಶಾಸ್ತ್ರಿಗಳು ಸರ್ವೋದಯದ ವಿಚಾರವಾಗಿ ಉಪನ್ಯಾಸ ಮಾಡುವರು.

ನಂಜನಗೂಡಿನಲ್ಲಿ ಶಂಕರಜಯಂತಿ ಮಹೋತ್ಸವ

ನಂಜನಗೂಡಿನ ಶಂಕರಮಠದ ವೇದ ಪಾಠಶಾಲೆಯಲ್ಲಿ ಕಳೆದ ೩ನೇ ತಾರೀಕಿನಿಂದ ಈ ತಿಂಗಳು ೬ನೇ ತಾರೀಕಿನವರೆಗೆ ಶಂಕರಜಯಂತಿ ಮಹೋತ್ಸವವು ನೆರವೇರಿತು. ನಿತ್ಯವೂ ಬೆಳಿಗ್ಗೆ ಏಕಾದಶವಾರ ರುದ್ರಾಭಿಷೇಕವೂ, ವೇದ ಪಾರಾಯಣವೂ, ಪ್ರಸ್ಥಾನತ್ರಯಭಾಷ್ಯ, ರಾಮಾಯಣ ಮತ್ತು ಶಂಕರ ವಿಜಯ ಪಾರಾಯಣವೂ, ಸಂಜೆ ಶ್ರೀ ಕೆ. ಎಸ್. ಲಕ್ಷ್ಮೀನಾರಾಯಣರವರಿಂದ ಶಂಕರ ಭಗವತ್ಪಾದ ವಿರಚಿತ ಸ್ತೋತ್ರಗಾನವೂ ನಡೆದುವು ವೇ॥ ಶ್ರೀಗಳಾದ ದಕ್ಷಿಣಾಮೂರ್ತಿ ನಾರಾಯಣಶಾಸ್ತ್ರಿ, ಪುರಾಣಿಕ ಸುಬ್ರಹ್ಮಣ್ಯಶಾಸ್ತ್ರಿ, ಮೈಸೂರು ಮಹಾರಾಜಾ ಕಾಲೇಜಿನ ಶ್ರೀ ಎ. ಬಾಲಸುಬ್ರಹ್ಮಣ್ಯರವರಿಂದ ಉಪನ್ಯಾಸಗಳು ನಡೆದುವು. ೬ನೇ ತಾರೀಕು ಶ್ರೀಮದಾಚಾರ್ಯರ ಉತ್ಸವವು ವೇದ ಘೋಷಣೆಗಳೊಡನೆ ವಿಜೃಂಭಣೆಯಿಂದ ನಡೆಯಿತು ಮೊನ್ನೆ ಶ್ರೀ ಬಿ ವಿ ಪಂಡಿತರ ಅಧ್ಯಕ್ಷತೆಯಲ್ಲಿ ಶ್ರೀ ಎಲ್ ಸತ್ಯನಾರಾಯಣಮೂರ್ತಿಯವರಿಂದ ಹರಿಕಥೆಯೂ, ನಂತರ ಶ್ರೀ ಮಠದ ವಿದ್ಯಾರ್ಥಿಗಳಿಗೆ ಬಹುಮಾನ ವಿನಿಯೋಗಗಳೂ ಆದುವು

CENTRAL INSTITUTE OF COMMERCE
Vani Vilas Market Buildings,
MYSORE
Applications for admission to D-Com, Dip In-Sten, Shorthand and Type-writing will be received on all working days
Join Immediately

ಒಂದೇ ಕಟ್ಟಡದಲ್ಲಿ ೧೨ ಗಂಟೆ ಅವಧಿಯಲ್ಲಿ ೧೧ ಸಲ ಬೆಂಕಿ

ಅಲಹಾಬಾದು ವಿಶ್ವವಿದ್ಯಾಲಯದ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಭವನದಲ್ಲಿ ಕಳೆದ ೨ನೇ ತಾರೀಕು ೧೨ ಗಂಟೆಗಳ ಅವಧಿಯಲ್ಲಿ ೧೧ ಸಲ ಬೆಂಕಿಯುಂಟಾದ ಪ್ರಸಂಗವು ವರದಿಯಾಗಿದೆ. ಮೊದಲು ಅವರ ಪುಸ್ತಕಗಳ ಗೂಡಿನಲ್ಲಿ ಬೆಂಕಿಯುಂಟಾಯಿತು ನಂತರ ಬಾಗಿಲು ಬಳಿಯೂ, ಸ್ನಾನದಲ್ಲಿಯೂ ಹೀಗೆ ಒಂದೊಂದು ಕಡೆಯೂ ಕಾಣಿಸಿ, ಬೆಂಕಿ ಆರಿಸುವವರು ರಾತ್ರಿಯೆಲ್ಲಾ ಕಾಯಬೇಕಾಯಿತು ಇದರ ರಹಸ್ಯವೇನೆಂಬುದು ಗೊತ್ತಾಗಿಲ್ಲ ಅಧಿಕಾರಿಗಳು ಆ ಮನೆಯ ಹಲವು ವಸ್ತುಗಳನ್ನು ರಸಾಯನಿಕಪರೀಕ್ಷೆಗಾಗಿ ತೆಗೆದುಕೊಂಡುಹೋಗಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮತ್ತು ಕೊಯಮುತ್ತೂರು	[illegible]	[illegible]
ರತ್ನಚೂಡಿ	[illegible]	[illegible]
ಕಡ್ಡಿ	[illegible]	[illegible]
ಕೆಂಬೂತಿ	[illegible]	
ಸೇಲಂ ಸಣ್ಣ	[illegible]	
ಕಾರ್ ಸಣ್ಣ	[illegible]	
ರಾಗಿ	[illegible]	[illegible]
ಜೋಳ	[illegible]	
ಕಂಬು	[illegible]	
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	
ಹೊಂಗೇಬೀಜ	[illegible]	[illegible]
ಹುರುಳಿ	[illegible]	[illegible]
ಹಲಸಂದೆ	[illegible]	[illegible]
ಅವರೆ	[illegible]	[illegible]
ಧನಿಯ	[illegible]	[illegible]
ಕಡಲೆ	[illegible]	
ಕಣಬಿನ ಬೀಜ	[illegible]	[illegible]
ಹುಣಸೆಬೀಜ	[illegible]	[illegible]
ಹುಣಸೇಹಣ್ಣು	[illegible]	[illegible]
ಒಣಗಿಕಾಯಿ	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

GLOBE TUTORIAL COLLEGE
Sadvidya Patasala Buildings,
Excellent coaching for S S L C Students
Office Hours:-7-30 to 11 A. M. & 5 to 8 P. M.

ಶಿಶು ಸ್ನೇಹಿ-
ಮಕ್ಕಳ ರೋಗಗಳಿಗೆ ಶಾಸ್ತ್ರೀಯ ಔಷಧ. ರೋಗಗಳ ನಿವಾರಕ. ಸಿಗುವ ಸ್ಥಳ:-
'ಆರ್ಯ ಫಾರ್ಮ', ಚಾಮರಾಜಪುರಂ, ಮೈಸೂರು (ಸುಬ್ಬರಾಯ ಹಾಸ್ಪಿಟಲ್ ಹತ್ತಿರ)

ಅಲಕನಂದಾ ನದಿಯ ಮೇಲೆ ಭಾರಿ ತೂಗು ಸೇತುವೆ

ಹಿಮಾಲಯದಲ್ಲಿ ಅಲಕನಂದಾ ನದಿಗೆ ೭ ಲಕ್ಷ ರೂ. ವೆಚ್ಚದಲ್ಲಿ ಕಟ್ಟಲಾಗಿರುವ ಭಾರಿ ತೂಗು ಸೇತುವೆಯನ್ನು ಕಳೆದ ಶನಿವಾರ ಉತ್ತರ ಪ್ರದೇಶದ ಮರಾಮತ್ತು ಮಂತ್ರಿಯವರು ತೆರೆದರು. ಇದು ಭಾರತದಲ್ಲೇ ಅತ್ಯಂತ ಭಾರಿ ತೂಗು ಸೇತುವೆ. ಇದು ಶ್ರೀನಗರದ ಬಳಿ ಹರಿದ್ವಾರ - ಬದರಿನಾಥ ಯಾತ್ರಾ ಮಾರ್ಗದಲ್ಲಿದೆ ಹಿಮಾಲಯ ಪ್ರದೇಶದ ಖನಿಜಸಂಪತ್ತನ್ನು ಉಪಯೋಗಿಸಿಕೊಳ್ಳುವುದಕ್ಕೆ ಈ ಸೇತುವೆಯಿಂದ ವಿಶೇಷ ಅನುಕೂಲವಿದೆ.

ಬಸವೇಶ್ವರರ ಜಯಂತಿ

ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗದ ಆಶ್ರಯದಲ್ಲಿ ಬಸವೇಶ್ವರರಜಯಂತಿ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ಗೃಹ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರ ಅಧ್ಯಕ್ಷತೆಯಲ್ಲಿ ಶ್ರೀ ತ. ರಾ. ಸುಬ್ಬರಾಯರು "ದೃಷ್ಟಿದಾನಿ ಬಸವಣ್ಣ" ಎಂಬ ವಿಷಯವಾಗಿ ಭಾಷಣ ಮಾಡುವರು ಪಂಡಿತ ಹೆಚ್. ಎಂ. ರಾಮಾರಾಧ್ಯರಿಂದ 'ಸುಲಭ ಮುಕ್ತಿ' ಎಂಬ ವಿಚಾರವಾಗಿ ಕಥಾಕಾಲಕ್ಷೇಪವು ನಡೆಯುವುದು.

ಕೈ ಮಗ್ಗದ ಸಪ್ತಾಹ

ಅಖಿಲ ಭಾರತ ಕೈಮಗ್ಗದ ಸಪ್ತಾಹದ ಅಂಗವಾಗಿ ನಾಳೆ ಬೆಳಿಗ್ಗೆ ೧೦ ಗಂಟೆಗೆ ಕೊಳ್ಳೇಗಾಲದಲ್ಲಿ ಶ್ರೀ ಎಸ್. ಕೆ ಲಕ್ಷ್ಮೀನರಸಿಂಹಯ್ಯನವರ ಅಧ್ಯಕ್ಷತೆಯಲ್ಲೂ, ಸಂತೆಸರಗೂರಿನಲ್ಲಿ ನಾಳಿದ್ದು ಬೆಳಿಗ್ಗೆ ೧೦ ಗಂಟೆಗೆ ಹೆಗ್ಗಡದೇವನಕೋಟೆ ಅಮಲ್ದಾರ್ ಶ್ರೀ ಬಿ ಚನ್ನಪ್ಪನವರ ಅಧ್ಯಕ್ಷತೆಯಲ್ಲೂ ಸಭೆಗಳು ಏರ್ಪಾಡಾಗಿವೆ.

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ.
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

SREE GAYATHRI TALKIES
To-day : Last day
THE KING & I
From 9-5-57 : For 2 days
THE DEEP BLUE SEA
With:- Vivien Leigh and Kenneth More
Morning shows on Sat. & Sun.
RHAPSODY

ರಾಮಾಭ್ಯುದಯ ಸಭೆಗೆ ಕಾಣಿಕೆ

ಶ್ರೀರಾಮಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭೆಯ ಕಟ್ಟಡದ ನಿಧಿಗಾಗಿ ಕೆಳಗಿನ ಮಹನೀಯರು ಉದಾರವಾಗಿ ಸಹಾಯ ನೀಡಿರುತ್ತಾರೆ:- ಶ್ರೀಗಳಾದ ಬೊಂಬಾಯಿ ಎಂ. ಆರ್. ವರದರಾಜ, ಚಾಮರಾಜನಗರದ ಶ್ರೀ ಡಿ. ಕೃಷ್ಣಪ್ಪ, ಬೆಂಗಳೂರಿನ ಶ್ರೀ ಎ. ಎಸ್. ರಾಮಣ್ಣ, ಮೈಸೂರಿನ ಎಂ. ಸುಬ್ಬರಾಯರು, ಮತ್ತು ಊಟಿಯಲ್ಲಿರುವ ಮೈಸೂರು ಮಹಾರಾಜರ ಛತ್ರದ ಶ್ರೀ ಎಂ. ಸುಬ್ರಹ್ಮಣ್ಯರವರು ತಲಾ ೧೦೧ ರೂ ಶ್ರೀಮತಿ ಅಚ್ಚಮ್ಮನವರು ೨೫ ರೂ. ಪೌರಸಭಾ ಸದಸ್ಯ ಶ್ರೀ ಎಸ್. ಚೌಡಯ್ಯ ಮತ್ತು ಎಲೆಕ್ಟ್ರಿಕ್ ಕಂಟ್ರಾಕ್ಟರ್ ಶ್ರೀ ಸಿದ್ದಲಿಂಗಯ್ಯನವರು ೨೫೦ ರೂ. ವೆಚ್ಚದಲ್ಲಿ ಮಂದಿರಕ್ಕೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸಿಕೊಟ್ಟಿರುತ್ತಾರೆ.

ಮಿ ಲಾ ಸೆ

5-4-1955ರ ಸಾಧ್ವಿ ಪತ್ರಿಕೆಯಲ್ಲಿ ಮೈಸೂರು ಮಂಡಿ ಮೊಹಲ್ಲಾ ನಿವಾಸಿ ತಂಬಾಕು ವ್ಯಾಪಾರಿ ಶ್ರೀ ಎಂ. ಘೌಸ್ ಖಾನ್ ಎಂಬುವರಿಗೆ ಮೈಸೂರು ಸಿಟಿ 2 ನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ C. C 4196/54 ರಲ್ಲಿ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಹೂಡಿದ್ದ ಫಿರ್ಯಾದಿನಂತೆ ಸದರಿ ಘೌಸ್ ಖಾನರು ಬಗರ್‌ಲೈಸೆನ್ಸಿನ ಮಹಡಿ ಮೆಟ್ಟಲು ಕಟ್ಟಿಸಿದ್ದರೆಂಬ ಆಪಾದನೆ ಮೇಲೆ 100 ರೂ. ಜುಲ್ಮಾನೆ ಆಗಿದ್ದ ವಿಚಾರ ಪ್ರಕಟವಾಗಿತ್ತು. ಆದರೆ ಸದರಿ ಘೌಸ್ ಖಾನರು ಮೇಲ್ಕಂಡ ತೀರ್ಮಾನದ ಮೇಲೆ ಮೈಸೂರು ಹೈಕೋರ್ಟ್ C. R. P. 241-1955 ರಲ್ಲಿ ಅರ್ಜಿ ಹಾಕಿದ್ದರು. ಅದರ ತೀರ್ಪಿನಲ್ಲಿ ತಾರೀಖು 22-3-1957 ರಲ್ಲೂ ಜುಲ್ಮಾನೆ ವಜಾ ಆಗಿ ಅವರಿಗೆ ಖುಲಾಸೆ ಆಗಿರುತ್ತೆ ಮತ್ತು ಅವರ ಮೇಲಿನ ಆಪಾದನೆ ಸಾಬೀತಾಗಿಲ್ಲವೆಂತ ತೀರ್ಮಾನವಾಗಿರುತ್ತೆ. ಈ ವಿಚಾರ ಸರ್ವಜನರ ಗಮನಕ್ಕೆ ತರಲು ಈ ಮೂಲಕ ಪ್ರಚುರಪಡಿಸಿರುತ್ತೆ.

ಎಂ ಘೌಸ್ ಖಾನ್

ವಸಂತ ಕಾಲದ ಆಕರ್ಷಣೆ
ನಿಮ್ಮ ಮಕ್ಕಳ ಅಂದವಾದ
ಪೋಸ್ಟ್ ಕಾರ್ಡ್ ಸೈಜ್ ಭಾವಚಿತ್ರ
ಒಂದು ರೂಪಾಯಿ ಮಾತ್ರ
ಪ್ರಭಾ ಟಾಕೀಸ್ ಬಳಿ ಇರುವ
ಶ್ರೀಕಾಂತ್ ಸ್ಟುಡಿಯೊವಿಗೆ
ಭೇಟಿ ಕೊಡಿ
ರೋಲ್ ಫಿಲಮ್ಸ್, ಡೆವಲಪಿಂಗ್, ಪ್ರಿಂಟಿಂಗ್, ಎನ್ಲಾರ್ಜಿಂಗ್ ಸಹ
ಮಾಡುತ್ತೇವೆ

Edited, Printed and Published by A. R. Nagarajan at Sadhvi Press D. Subbiah Road, Mysore

ಸಿಟಿ ಟ್ಯುಟೋರಿಯಲ್ ಕಾಲೇಜ್, ಮೈಸೂರು
(ಸ್ಥಾಪನೆ 1948)
ಉತ್ತಮ ಸಲಕರಣೆ - ಅನುಭವಸ್ಥರಾದ ಉಪಾಧ್ಯಾಯರು
ಪುಸ್ತಕ ಭಂಡಾರ ಮತ್ತು ಪ್ರಯೋಗ ಶಾಲೆಗಳೊಡನೆ
1957 ನೇ ಸೆಪ್ಟೆಂಬರ್ ಮತ್ತು 1958 ನೇ ಮಾರ್ಚ್ S S. L. C ಪರೀಕ್ಷೆಗೆ
ತರಬೇತು ಮಾಡುವ ತರಗತಿಗಳನ್ನು ಪ್ರಾರಂಭಿಸಲಾಗಿದೆ
ವಿದ್ಯಾರ್ಥಿನಿಯರಿಗೇ ಪ್ರತ್ಯೇಕವಾದ ತರಗತಿಗಳು
ಹೈಸ್ಕೂಲ್ ಮೊದಲನೇ ತರಗತಿಯಿಂದ ಪಾಸಾದ ಅಥವಾ ಹೈಸ್ಕೂಲ್ ಎರಡನೇ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳನ್ನು S. S. L. C. ತರಗತಿಗೆ ಸೇರಿಸಲಾಗುವುದು
— MADRAS MATRICULATION EXAMN. —
IV ಫಾರಂ ಪಾಸಾದವರು 1 ವರ್ಷದಲ್ಲೂ - ಇತರ ಪಾಸಾಗದವರು 2 ವರ್ಷಗಳಲ್ಲೂ ಈ ಪರೀಕ್ಷೆಗೆ ಕುಳಿತುಕೊಳ್ಳಬಹುದು
B K ಸತ್ಯೋಪಾಧ್ಯಾಯ, M A., B. T
ಪ್ರಿನ್ಸಿಪಾಲರು


ಆಯುರ್ವೇದದ ವಿಧಾನ ಬಿ ವಿ ಪಂಡಿತ
ಬಿಜೋಲಿ
ಧಾತುವರ್ಧಕ
ವಿಶ್ವಾಸದ ಶಾಲಾ ನಂಜನಗೂಡು
ಯಾವಾಗಲೂ ನಂಜನಗೂಡು ಔಷಧಗಳನ್ನೇ ಉಪಯೋಗಿಸಿ.

Golden Opportunity For S. S. L. C. Students
For Efficient Coaching, Excellent Tuition & Best Guidance, Join at once
NATIONAL LEAGUE
Anathalaya Buildings, Mysore
Timings : 8 A. M. to 10 A. M. and 6 P. M. to 8 P. M

THE CHAMPION METROPOLITAN COLLEGE OF COMMERCE
Co-operators' Home, 100' Road, Mysore
APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography, COST & WORKS ACCOUNTANCY, Banking, Shorthand, Type-writing etc.
Estd. 1917 — Fully qualified full-time staff — Educational atmosphere — Fine building and up-to-date equipment — Decent Library and Reading Room — Western Business education in the East — Good results — College's Own Diploma also.
M. S. PUTTANNA, *Vice-Principal,*
P. SUBBARAYA SASTRY, *Principal*

ಟೆಲಿಫೋನ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 2 ನಯಾ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಪುಟ : ೧೫] SADHVI ; THURSDAY 9—5—1957 ಮೈಸೂರು ; ಗುರುವಾರ ೯—೫—೧೯೫೭ ; [ಸಂಚಿಕೆ ; [illegible]

ಬರ್ಮಾ ನಗರಕ್ಕೆ ಬೆಂಕಿ; ೫೦,೦೦೦ ಜನರಿಗೆ ನಿರಾಶ್ರಯ

ಮೋಟಾರು ಬಸ್ಸು ಮಾಲೀಕರ ಕುಂದುಕೊರತೆಗಳು

ಪ್ರಾದೇಶಿಕ ಕಮಿಷನರ್ ಮತ್ತು ಸಮಿತಿ ಸದಸ್ಯರೊಡನೆ ಸಮಾಲೋಚನೆ

ಮೈಸೂರು ೯

ಮೈಸೂರು ಪ್ರಾದೇಶಿಕ ಕಮಿಷನರ್ ಶ್ರೀ ಶೇಷಗಿರಿರಾಯರು ಮತ್ತು ರಸ್ತೆ ಸಂಚಾರ ಸಮಿತಿಯ ಸದಸ್ಯರ ಗೌರವಾರ್ಥವಾಗಿ ನೆನ್ನೆ ಜಿಲ್ಲಾ ಮೋಟಾರು ಮಾಲೀಕರ ಸಂಘದವರು ಚಾರ ಭವನದಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು. ವಿದ್ವಾನ್ ಪಲ್ಲಡಂ ನಾಗರಾಜ ಅಯ್ಯರ ವೇಣು ವಾದನವೂ, ಭೋಜನ ಕೂಟವೂ ಆದುವು.

ಶ್ರೀ ಜಿ ಆರ್. ರಾಮಯ್ಯನವರು ಅತಿಥಿಗಳನ್ನು ಸ್ವಾಗತಿಸಿ ಬಸ್ಸುಗಳ ತೆರಿಗೆ ದರ, ರಿಜಿಸ್ಟ್ರೇಷನ್ ಮತ್ತು ಇತರ ಬಾಬುಗಳಲ್ಲಿರುವ ತೊಂದರೆಗಳನ್ನು ನಿರೂಪಿಸಿ, ಅವುಗಳನ್ನು ಸಮಿತಿಯವರು ಪರಿಹರಿಸಬೇಕೆಂದು ಕೋರಿದರು. ಮತ್ತು ಸರ್ಕಾರದ ಏರ್ಪಾಡುಗಳಲ್ಲಿ ಬಸ್ಸಿನವರು ಸಂಪೂರ್ಣವಾಗಿ ಸಹಕರಿಸುವುದಾಗಿಯೂ ತಿಳಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಜಿ ಆರ್. ಜೋಗಿರವರು ಭಾಷಣ ಮಾಡಿ, ಬಸ್ಸು ಮಾಲೀಕರುಗಳಿಗೆ ಇರುವ ಅನೇಕ ತೊಂದರೆಗಳನ್ನು ವಿವರವಾಗಿ ನಿರೂಪಿಸಿ, ಪ್ರಜಾಪ್ರಭುತ್ವದ ಈ ಕಾಲದಲ್ಲಿ ಇವುಗಳನ್ನು ಅಧಿಕಾರಿಗಳು ನಿವಾರಿಸುವುದು ಅವಶ್ಯಕವೆಂದು ನುಡಿದರು.

ಸಮಿತಿಯ ಸದಸ್ಯರುಗಳಾದ ಶ್ರೀಗಳು ಟಿ ವೆಂಕಟರಮಣಯ್ಯ, ಬಿ ಚಿನ್ನಸ್ವಾಮಿ ಮತ್ತು ಎಸ್ ಧ್ರುವರವರು ಮಾತನಾಡಿ, ಬಸ್ ಸಂಚಾರದಲ್ಲಿರುವ ಅನಿವಾರ್ಯಗಳನ್ನು ಪರಿಹರಿಸಿ ಸೂಕ್ತವಾದ ಸೌಲಭ್ಯಗಳನ್ನು ನೀಡಲು ತಾವು ಸಕಲ ಪ್ರಯತ್ನಗಳನ್ನೂ ಮಾಡುವುದಾಗಿ ತಿಳಿಸಿದರು.

ಶ್ರೀ ಕೆ. ಶೇಷಗಿರಿರಾಯರು ತಮ್ಮ ಭಾಷಣದಲ್ಲಿ ಇಂತಹ ಸಂಘಗಳ ಮೂಲಕ ಸಮಸ್ಯೆಗಳ ಪರಿಹರಿಸಲು ಇರುವ ಸೌಲಭ್ಯಗಳನ್ನು ವಿವರಿಸಿ ಬಸ್ಸು ಮಾಲೀಕರುಗಳಿಗೂ, ಸರ್ಕಾರದವರಿಗೂ, ಸಾರ್ವಜನಿಕರಿಗೂ ಸಮರ್ಪಕವಾದ ರೀತಿಯಲ್ಲಿ ವ್ಯವಸ್ಥೆಗಳನ್ನು ಮಾಡಲು ತಾವು ಪ್ರಯತ್ನಿಸುವುದಾಗಿ ಹೇಳಿದರು. ಸಾರ್ವಜನಿಕ ಹಿತವೇ ಎಲ್ಲಾ ವ್ಯವಸ್ಥೆಗಳಿಗೂ ಮೂಲಾಧಾರವಾಗಿರಬೇಕೆಂದು ಅವರು ನುಡಿದರು

ಶ್ರೀ ನರಸಿಂಹಯ್ಯಂಗಾರ್ಯರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು.

ಶ್ರೀ ಗಾಯತ್ರಿ ಲಲಿತಕಲಾ ಸಂಘ

ಈ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ನಡೆದು ರಾಷ್ಟ್ರಾಧ್ಯಕ್ಷರಿಂದ ಪ್ರಶಸ್ತಿ ಗಳಿಸಿರುವ ಸಂಗೀತರತ್ನ ಟಿ. ಚೌಡಯ್ಯನವರನ್ನು ಅಭಿನಂದಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ಶ್ರೀಗಳಾದ ಬಿ. ಪಿ. ಸತೀಶ್ ಎಂ. ಕೆ. ಶಂಕರಯ್ಯನವರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ತೆಗೆದುಕೊಳ್ಳಲಾ

ಮುಖ್ಯಮಂತ್ರಿಗಳ ವಿರುದ್ಧವಾಗಿ ಮಹಾರಾಷ್ಟ್ರರ ಕಪ್ಪು ಬಾವುಟ ಪ್ರದರ್ಶನ

ಭಾಷಾವಾದಿಗಳಿಗೆ ನಿಜಲಿಂಗಪ್ಪನವರ ಎಚ್ಚರಿಕೆ

ಬೆಳಗಾವಿಯಲ್ಲಿ ಅಖಿಲ ಭಾರತ ಕೈಮಗ್ಗದ ಪ್ರದರ್ಶನವನ್ನು ಆರಂಭಗೊಳಿಸಲು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಸ್ಟೇಷನ್ನಿಂದ ಹೊರಗೆ ಬಂದಾಗ ರಸ್ತೆಯ ಎರಡು ಪಕ್ಕಗಳಲ್ಲೂ ೬ ಸಾವಿರಕ್ಕೂ ಹೆಚ್ಚು ಮಂದಿ ಸಂಯುಕ್ತ ಮಹಾರಾಷ್ಟ್ರವಾದಿಗಳು, ಕಪ್ಪು ಬಾವುಟಗಳನ್ನು ಪ್ರದರ್ಶನ ಮಾಡಿದರು ಅವರುಗಳು ಕಪ್ಪು ಪಟ್ಟಿಗಳನ್ನು ಧರಿಸಿದ್ದರು ಅವರ ಮೌನವನ್ನು ತಾಳಿದರು.

ಮುಖ್ಯಮಂತ್ರಿಯವರ ಅಲ್ಲಿನ ಕಾಂಗ್ರೆಸ್ ಕಛೇರಿಯಲ್ಲಿ ಮಾತನಾಡಿ, ಬೆಳಗಾವಿ ನಗರವು ಮೈಸೂರಿನ ಭಾಗವಾಗಿರುವುದೆಂದೂ, ಅದನ್ನು ಮಹಾರಾಷ್ಟ್ರದಲ್ಲಿ ಐಕ್ಯಗೊಳಿಸುವ ಚಳುವಳಿಯು [illegible] ಅರ್ಥಶೂನ್ಯವಾಗಿರುವುದೆಂದೂ ಸೂಚಿಸಿದರು ಅವರು ಭಾಷಾವಾದಿ ಚಳುವಳಿಗಾರರಿಗೆ ಎಚ್ಚರಿಕೆಯನ್ನಿತ್ತು ಕೆಲವರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಪರಿಸ್ಥಿತಿಯನ್ನು ದುರುಪಯೋಗಪಡಿಸುತ್ತಿರುವರೆಂದೂ, ರಾಷ್ಟ್ರವು ಈಗ ವಿಂಗಡಣೆ ಮಾಡುವುದು [illegible] ಬಲವಾದ ಕೇಂದ್ರ ಸರ್ಕಾರವೇ ಇಡೀ ನಾಡನ್ನು ಆಳುವ ಕಾಲವು ಬರಬಹುದೆಂದೂ ಸೂಚಿಸಿದರು

ನಗರದ ಉತ್ತರ ಭಾಗದ ಗ್ರಾಮಸಾರದ ವಿಲೇವಾರಿ ವ್ಯವಸ್ಥೆ

ಮೈಸೂರು ೯

ನಗರದ ಉತ್ತರಭಾಗದ ಒಳಚರಂಡಿ ಗ್ರಾಮಸಾರದ ನೀರಿನ ವಿಲೇವಾರಿಗಾಗಿ ಕೆಸರೆಯಲ್ಲಿ ಸುಮಾರು ೩ ಲಕ್ಷ ೩೦ ಸಾವಿರ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಶುದ್ಧಾಗಾರದ ಕೆಲಸವನ್ನು ನೆನ್ನೆ ನಗರದ ಹಲವಾರು ಗಣ್ಯರು ಮತ್ತು ಪತ್ರಿಕಾ ಪ್ರತಿನಿಧಿಗಳಿಗೆ ನಗರಾಭಿವೃದ್ಧಿ ಸಮಿತಿಯವರು ತೋರಿಸಿದರು. ಈಗ ಶುದ್ಧಾಗಾರಕ್ಕೆ ಬೇಕಾಗುವ ಟ್ಯಾಂಕ್, ಬಚ್ಚಲು ಮುಂತಾದವುಗಳ ನಿರ್ಮಾಣವು ಮುಗಿದಿದೆ. ಯಾದವಗಿರಿ, ಜಲಪುರಿ ಮತ್ತು ಮಂಡಿ ಮೊಹಲ್ಲಾಗಳಿಂದ ಚರಂಡಿ ಪೈಪುಗಳನ್ನು ೩ ಲಕ್ಷ ೭೩ ಸಾವಿರ ರೂ. ವೆಚ್ಚದಲ್ಲಿ ಹಾಕಲಾಗಿದೆ ಅತಿಥಿಗಳನ್ನು ನಗರಾಭಿವೃದ್ಧಿ ಸಮಿತಿಯ ಇಂಜನಿಯರ್ ರಾಜರತ್ನಂ ಮತ್ತು ನಿರ್ಮಾಣ ಕಾರ್ಯದ ಕಂಟ್ರಾಕ್ಟರುಗಳಾದ ಮೆ॥ ಡಂಕರ್ ಅಂಡ್ [illegible] ಕಂಪೆನಿಯ ಪ್ರತಿನಿಧಿಗಳೂ ಸ್ವಾಗತಿಸಿ ಕಾರ್ಯಕ್ರಮವನ್ನು ವಿವರಿಸಿದರು. ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರು ಮಾತನಾಡಿ ನಗರದ ಅಭಿವೃದ್ಧಿಯ ಕಾರ್ಯಗಳಲ್ಲಿ ಪುರಸಭೆ ಮತ್ತು ತಮ್ಮ ಸಂಸ್ಥೆಗಳ ಪರಸ್ಪರ ಸಹಕಾರವನ್ನು ಒತ್ತಿ ಹೇಳಿದರು.

ಮೈಸೂರು ತಾಲ್ಲೂಕಿಗೆ ಹಳ್ಳಿಗಳ ಸೇರ್ಪಡೆ

ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಹೋಬಳಿಯ ನೋರಗಹಳ್ಳಿ ಮತ್ತು ಮರಿಯಪ್ಪನಹಳ್ಳಿಗಳನ್ನು ಮೈಸೂರು ತಾಲ್ಲೂಕಿಗೆ ವರ್ಗಾಯಿಸಲಾಗಿದೆ

ವಿರಾಮ ವೇತನದವರಿಗೆ ಹೆಚ್ಚು ತುಟ್ಟಿ ಭತ್ಯ

ಬೆಂಗಳೂರು ೯

೪೦ ರೂ ಮತ್ತು ಕಡಿಮೆ ವಿರಾಮ ವೇತನ ಪಡೆಯುವ ಪೆನ್ಷನ್‌ದಾರರುಗಳಿಗೆ ತುಟ್ಟಿಭತ್ಯವನ್ನು ಇನ್ನು ೩ ರೂ. ನಷ್ಟು ಹೆಚ್ಚಿಸುವ ವಿಚಾರವನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ, ಇದರಿಂದ ಸಂಸ್ಥಾನಕ್ಕೆ ಪ್ರತಿ ವರ್ಷವೂ ಇನ್ನೂ ೫ ಲಕ್ಷ ರೂ. ಹೆಚ್ಚು ವೆಚ್ಚವಾಗುವುದಾಗಿಯೂ ತಿಳಿದುಬಂದಿದೆ.

ಮದ್ರಾಸಿನಲ್ಲಿ ಹೊಟೇಲುಗಳ ಪಿಕೆಟಿಂಗಿಗೆ ನಿಷೇಧ

ರಾಮಸ್ವಾಮಿನಾಯಕರ ಪತ್ನಿಯ ಬಂಧನ

ಮದ್ರಾಸು ನಗರದಲ್ಲಿ ಹೊಟೇಲುಗಳ ಮುಂದೆ ಪಿಕೆಟಿಂಗ್ ನಡೆಸುವ ಸಲುವಾಗಿ ಸೇರುವ ಸಭೆ ಮತ್ತು ಮೆರವಣಿಗೆಗಳನ್ನು ನಿಷೇಧಿಸಲಾಗಿದೆ ದ್ರಾವಿಡ ಸಂಘದ ಕೆಲವರು ನಡೆಸಿದ ಆಂದೋಳನವನ್ನು ತಡೆಯಲು ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದೆ ದ್ರಾವಿಡ ಸಂಘದ ಮುಖಂಡರಾದ ಇ ವಿ ರಾಮಸ್ವಾಮಿನಾಯಕರ ಪತ್ನಿ ಮಣಿಅಮ್ಮೈಯ್ಯಾರರನ್ನು, ಇನ್ನಿಬ್ಬರನ್ನೂ ಹೊಟೇಲ್ ಪಿಕೆಟಿಂಗಿಗಾಗಿ ಬಂಧಿಸಲಾಗಿದೆ.

ಆಸ್ತಿಗೆಯಲ್ಲ ಪ್ರೇಮವೇ ಅಣ್ಣತಮ್ಮಂದಿರ ವ್ಯಾಜ್ಯಕ್ಕೆ ಕಾರಣ

ಬಳ್ಳಾರಿಯ ಅರಣ್ಯಾಧಿಕಾರಿಗಳಾದ ಶ್ರೀ ಮಹಮದ್ ಅಹಮದ್‌ರವರ ಕಿರಿಯ ಮಗ ಸಿರಾಜನು ಹೊಡೆದ ಗುಂಡಿನೇಟಿನಿಂದ ಅವನ ಅಣ್ಣ ರಫೀಕ್ ಅಹಮದನು ನೆನ್ನೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟನು. ರಫೀಕನು ಸುಂದರಳಾದ ಯುವತಿಯನ್ನು ವಿವಾಹವಾಗಿ ಅವರಿಬ್ಬರಿಗೂ ೨ ಮಕ್ಕಳಿದ್ದರೆಂದೂ, ಈಚೆಗೆ ಸಿರಾಜ್ ಮತ್ತು ಆಕೆಯ ಸಂಬಂಧವಾಗಿ ಗೃಹಕೃತ್ಯದಲ್ಲಿ ಭಾರಿ ಗಲಾಟೆಯೇ ನಡೆದಿತ್ತೆಂದೂ ಹೇಳಲಾಗಿದೆ ಕೃತ್ಯ ನಡೆದ ದಿನ ರಫೀಕನು ತನ್ನ ಕಛೇರಿ ಕೆಲಸ ಮುಗಿಸಿಕೊಂಡು ಮನೆಗೆ ಬಂದು ಹೆಂಡತಿಯ ವರ್ತನೆಗಾಗಿ ಬೈದಾಗ ಸಿರಾಜನಿಗೆ ಸಿಟ್ಟು ಬಂದು ಕೂಡಲೇ ನಾಲ್ಕು ರೌಂಡು ಗುಂಡು ಹಾರಿಸಿದನೆಂದೂ, ಅವನ ತಾಯಿಯು ಓಡಿಬಂದಾಗ ಆಕೆಯನ್ನೂ ಹೊಡೆಯುವುದಾಗಿ ಸಿರಾಜನು ಹೆದರಿಸಿದನೆಂದೂ ಹೇಳಲಾಗಿದೆ.

ಗುರು ಪಾದುಕಾ ಪೂಜಾ ಮಂಗಳ ಮಹೋತ್ಸವ

ನಗರದ ಶ್ರೀರಾಮಪೇಟೆಯಲ್ಲಿರುವ ಸಾಮ್ರಾಜ್ಯಂ ಮುದ್ರಣಾಲಯದಲ್ಲಿ ಶ್ರೀಮತಿ ಹೆಚ್. ಕೆ. ಲಕ್ಷ್ಮಿ (ರತ್ನ) ಯವರು ಕಳೆದ [illegible] ತಿಂಗಳಿಂದ ನಡೆಸುತ್ತಿದ್ದ ಶ್ರೀ ಗಣೇಶ ಪುರಾಣ ಪ್ರವಚನ ಮತ್ತು ಶಂಕರ ವಿಜಯ ಕಾವ್ಯವಾಚನದ ಅಂಗವಾಗಿ ಶ್ರೀ ಗಣೇಶ ಗುರು ಶಂಕರ ಭಗವತ್ಪಾದ ಪಾದುಕಾ ಪೂಜಾ ಮಂಗಳವು ಕಳೆದ ಸೋಮವಾರ ನಡೆಯಿತು. ಅದರ ಜೊತೆಯಲ್ಲಿ ಮುದ್ರಣಾಲಯಕ್ಕೆ ವಿದ್ಯುಚ್ಛಕ್ತಿಯನ್ನು ಜೋಡಿಸಿ ಅದರಿಂದ ಮುದ್ರಣ ಕಾರ್ಯವನ್ನು ಆರಂಭಿಸಲಾಯಿತು

ಬೆಂಕಿಗೆ ಬರ್ಮಾ ನಗರ ಆಹುತಿ : ೫೦ ಸಾವಿರ ಜನರಿಗೆ ನಿರಾಶ್ರಯ

೫ ಕೋಟಿ ರೂ. ನಷ್ಟ

ಉತ್ತರ ಬರ್ಮಾದ ಮಾಂಡಲೆ ನಗರಕ್ಕೆ ೮೦ ಮೈಲಿ ದೂರದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಮೊಘೀವಾ ಎಂಬ ಪಟ್ಟಣವು ಬೆಂಕಿಯಿಂದ ಪೂರ್ತಿ ನಾಶವಾಗಿ, ಊರಿನ ೫೦,೦೦೦ ಪ್ರಜೆಗಳು ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ಊರಿನ ಐದನೇ ನಾಲ್ಕು ಭಾಗವು ನೆಲ ಸಮವಾಗಿದೆ. ೫ ಕೋಟಿ ರೂ. ನಷ್ಟವೆಂದಂದಾಜಾಗಿದೆ. ಹಲವಾರು ಜನರೂ, ಜಾನುವಾರುಗಳೂ ಸುಟ್ಟಿರುವುದಾಗಿ ಹೇಳಲಾಗಿದೆ. ಅಕ್ಕಿ, ಎಣ್ಣೆ, ಮುಂತಾದ ಗಿರಣಿಗಳೂ; ಮಾರ್ಕೆಟ್ಟು, ಸಿನಿಮಾ ಮಂದಿರ, ಶಾಲೆ ಮತ್ತು ಮಠಗಳೂ ನಾಶವಾಗಿವೆ. ಅಕ್ಕಪಕ್ಕದ ಊರುಗಳಿಂದ ಬಂದ ಅಗ್ನಿಶಾಮಕ ದಳದವರ ಪ್ರಯತ್ನ ಯಶಸ್ವಿಯಾಗಲಿಲ್ಲ. ಬೆಂಕಿ ಹರಡುತ್ತಲೇ ಜನರು ಮನೆಗಳನ್ನು ಬಿಟ್ಟು ಊರಿನ ಆಚೆಗೆ ಓಡಿದರು. ಅವರಾರೂ ತಮ್ಮ ಸಾಮಾನು ಸರಂಜಾಮನ್ನೂ ತೆಗೆದುಕೊಂಡು ಹೋಗಲು ಸಾಧ್ಯವಾಗಲಿಲ್ಲ.

ಸುಬ್ರಹ್ಮಣ್ಯ ಮಠಾಧೀಶರ ಭೇಟಿ

ಸುಬ್ರಹ್ಮಣ್ಯ ಮಠದ ಶ್ರೀ [illegible] ತೀರ್ಥ ಶ್ರೀಪಾದಂಗಳವರು ಬದರಿ ಮುಂತಾದ ಕ್ಷೇತ್ರಗಳ ಯಾತ್ರೆಯನ್ನು ಮುಗಿಸಿಕೊಂಡು ಬೆಂಗಳೂರು, ಮಂಡ್ಯಗಳ ಮಾರ್ಗವಾಗಿ ನೆನ್ನೆ ನಗರಕ್ಕೆ ಬಂದು ಶ್ರೀ ಕೆ ಗೋಪಾಲಾಚಾರ್ಯರ ಗೃಹದಲ್ಲಿ ಭಿಕ್ಷೆಯನ್ನು ಸ್ವೀಕರಿಸಿ ಈ ದಿನ ಬೆಳಿಗ್ಗೆ ಸುಬ್ರಹ್ಮಣ್ಯಕ್ಕೆ ತೆರಳಿದರು.

ಪೆನ್ಷನ್‌ದಾರರ ಸಭೆ

ನಗರದಲ್ಲಿ ಸ್ಥಾಪಿತವಾಗಿರುವ ಪೆನ್ಷನ್‌ದಾರರ ಸಂಸ್ಥೆಯ ಸಭೆಯು ಕಳೆದ ಭಾನುವಾರ ಡಿ. ಬನುಮಯ್ಯ ಶಾಲೆಯಲ್ಲಿ ನಡೆದು ೧೦೦ ರೂ. ಒಳಗೆ ವಿರಾಮ ವೇತನ ಪಡೆಯುವ ಅಧಿಕಾರಿಗಳಿಗೂ ತುಟ್ಟಿ ಭತ್ಯವನ್ನು ಕೊಡಬೇಕೆಂದು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಸಂಘದ ನಿಯಮಾವಳಿಗಳನ್ನು ಅನುಮೋದಿಸಲಾಯಿತು ಸಂಘವನ್ನು ರಿಜಿಸ್ಟರ್ ಮಾಡಿಸಲು ತೀರ್ಮಾನಿಸಲಾಯಿತು ಶ್ರೀ ಬಿ [illegible] ಅಧ್ಯಕ್ಷತೆ ವಹಿಸಿದ್ದರು.

ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಹೆಚ್ಚಿನ ವೇತನ

ಸರ್ಕಾರದವರ ಪರ್ಯಾಲೋಚನೆ

ಸ್ವಂ. ವ. ಕಂ.] ಬೆಂಗಳೂರು ೯

ವಿಶ್ವವಿದ್ಯಾಲಯದ ಸಿಂಡಿಕೇಟಿನವರು ಸಲಹೆ ಮಾಡಿರುವಂತೆ ಅಧ್ಯಾಪಕರುಗಳ ವೇತನವನ್ನು ಜಾರಿಗೆ ತರಲು ಸರ್ಕಾರದವರು ತೀವ್ರವಾಗಿ ಪರ್ಯಾಲೋಚನೆ ಮಾಡುತ್ತಿರುವರೆಂದು ತಿಳಿದುಬಂದಿದೆ.

○ ಜುಲೈ ತಿಂಗಳಲ್ಲಿ ವಿದ್ಯುಚ್ಛಕ್ತಿ ಬೋರ್ಡು ರಚಿತವಾಗುವ ಸಂಭವವಿದೆ.

○ ಶಾಸನಸಭಾಧ್ಯಕ್ಷ [illegible]ರವರು ಕಾರ್ಯದರ್ಶಿ ಶ್ರೀ ವೆಂಕಟರಮಣಯ್ಯನವರೊಡನೆ ನಾಳೆ ದೆಹಲಿಗೆ ತೆರಳಿ ಒಂದು ವಾರವಿದ್ದು ಪಾರ್ಲಿಮೆಂಟಿನ ಕಾರ್ಯಕಲಾಪಗಳನ್ನು ತಿಳಿಯುವರು.

ವಿದ್ಯುಚ್ಛಕ್ತಿ ಇಲಾಖೆಯ ಅಕ್ರಮ ನಡವಳಿಕೆ

ಫ್ಯಾಕ್ಟರಿ ಲೈಟಿಂಗ್ ರಿಯಾಯಿತಿ ರದ್ದಾಗುವುದೇ ?

ಕಳೆದ ಸುಮಾರು ಒಂದು ವರ್ಷದಿಂದಲೂ ವಿದ್ಯುಚ್ಛಕ್ತಿ ದರಗಳ ಸಂಬಂಧವಾಗಿ ಆಗುತ್ತಿದ್ದ ಮಾರ್ಪಾಡುಗಳು ಹಲವಾರು ರೂಪಗಳನ್ನು ತಾಳಿ ಇನ್ನೂ ಅಂತಿಮ ಘಟ್ಟವನ್ನು ಮುಟ್ಟಿಲ್ಲವೆಂದೇ ಕಾಣುತ್ತದೆ ಥ್ಯಾಕರ್ ಸಮಿತಿಯ ವರದಿಯ ಆಧಾರದ ಮೇಲೆ ಮಾಡಿದ ಸರ್ಕಾರಿ ಆಜ್ಞೆಯಲ್ಲಿ ಅನೇಕ ಲೋಪದೋಷಗಳಿದ್ದುದರಿಂದ ಅದನ್ನು ಹಲವು ಬಾರಿ ಬದಲಾಯಿಸಲಾಯಿತು ಇಷ್ಟಾದರೂ ವಿದ್ಯುಚ್ಛಕ್ತಿ ಬಳಸುವವರಿಗೆ ಇನ್ನೂ ತೃಪ್ತಿಕರವಾದ ಏರ್ಪಾಡನ್ನು ಮಾಡಲಾಗಿರುವುದಿಲ್ಲ

ಈ ಮಧ್ಯೆ ಕೈಗಾರಿಕೆಗಳಿಗೆ ದೀಪದ ಬಾಬಿಗಾಗಿ ಕೊಡುತ್ತಿದ್ದ ಶೇಕಡ ೧೫ರಷ್ಟರ ರಿಯಾಯಿತಿ ದರವನ್ನು ರದ್ದುಮಾಡುವಂತೆ ಇಲಾಖೆಯ ಚೀಫ್ ಎಂಜನಿಯರ್‌ರವರು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಸೂಚನೆಯಿತ್ತಿರುವುದಾಗಿ ಗೊತ್ತಾಗಿದೆ ಅದರಂತೆ ಈ ಸಾರಿ ಕೈಗಾರಿಕೆಗಳ ವಿದ್ಯುಚ್ಛಕ್ತಿ ಬಳಕೆಗಾಗಿ ಬಂದಿರುವ ಬಿಲ್ಲುಗಳಲ್ಲಿ ಈ ರಿಯಾಯಿತಿಯನ್ನು ರದ್ದು ಮಾಡಲಾಗಿದೆ ಈ ಒಕ್ಕಪಾರ್ಶ್ವಿಯಾಗಿ ಬಳಕೆಗಾರರಿಗೆ ತಿಳುವಳಿಕೆ ಕೊಟ್ಟಿಲ್ಲ ಪತ್ರಿಕಾ ಪ್ರಕಟಣೆಯನ್ನಾಗಲೀ ಹೊರಡಿಸಿಲ್ಲ ಸರ್ಕಾರದವರ ಆಜ್ಞೆಯೂ ಸಹ ಆಗಿರುವುದಿಲ್ಲವೆಂದು ಗೊತ್ತಾಗಿದೆ ಈ ರೀತಿ ಸಾರ್ವಜನಿಕರಿಗೆ ಪೂರ್ವಭಾವಿಯಾದ ತಿಳುವಳಿಕೆಯನ್ನು ಕೊಡದೆ ಅನೇಕ ವರ್ಷಗಳಿಂದ ಜಾರಿಯಲ್ಲಿದ್ದ ಒಂದು ಸೌಲಭ್ಯವನ್ನು ತೊಡೆದು ಹಾಕಲು ತೊಡಗಿರುವುದು ಕೇವಲ ಅಕ್ರಮ ಪ್ರವರ್ತನೆಯೇ ಸರಿ

ಕೈಗಾರಿಕೆಗಳಿಗಾಗಿ ಉಪಯೋಗಿಸುವ ದೀಪಗಳ ಬಗ್ಗೆ ಈ ರಿಯಾಯಿತಿಯನ್ನು ಕೊಡಬೇಕೆಂದು ಸರ್ಕಾರದಿಂದ ನೇಮಿತವಾಗಿದ್ದ ಥ್ಯಾಕರ್ ಸಮಿತಿಯವರೇ ಸಲಹೆ ಮಾಡಿದ್ದರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ಅನೇಕ ಕೈಗಾರಿಕೆಗಳವರು ನೂರಾರು ರೂಪಾಯಿ ವೆಚ್ಚದಲ್ಲಿ ಪ್ರತ್ಯೇಕವಾದ ವಿದ್ಯುಚ್ಛಕ್ತಿ ಲೈನುಗಳನ್ನು ಹಾಕಿಸಿಕೊಂಡಿರುವರು ಈ ರಿಯಾಯಿತಿಯನ್ನು ತಪ್ಪಿಸಿದರೆ ಇದಕ್ಕಾಗಿ ಸಂಸ್ಥಾನದ್ಯಂತ ಮಾಲೀಕರು ಹಾಕಿರುವ ಲಕ್ಷಾಂತರ ರೂ ನ ಬಂಡವಾಳವು ನಿರರ್ಥಕವಾದಂತಾಗುತ್ತದೆ

ಈಗಾಗಲೇ ಸರ್ಕಾರದವರ ಹಲವಾರು ವಿನೂತನ ಆಜ್ಞೆಗಳಿಂದ ಕೈಗಾರಿಕಾ ಮಾಲೀಕರುಗಳು ತಮ್ಮ ಮೋಟಾರುಗಳನ್ನು ಬದಲಾಯಿಸುವುದರಲ್ಲಿಯೂ, ಹೆಚ್ಚಿನ ದರವನ್ನು ತೆರುವುದರಲ್ಲಿಯೂ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ ಈ ಅಧ್ಯಾಯವೇ ಇನ್ನೂ ಪರಿಸಮಾಪ್ತಿಗೊಂಡಿಲ್ಲ.

ಹೀಗಿರುವಲ್ಲಿ ಸರ್ಕಾರದವರ ಅಪ್ಪಣೆ ಇಲ್ಲದೆ, ಸಾರ್ವಜನಿಕರಿಗೆ ತಿಳಿಯಪಡಿಸದೆ, ಶಾಸನ ಸಭೆಗಳಲ್ಲಿ ಪರಿಶೀಲನೆಗೆ ತಾರದೆ ಮತ್ತು ಸಂಬಂಧಪಟ್ಟವರ ಅಭಿಪ್ರಾಯವನ್ನೂ ಕೇಳದೆ ಈ ರೀತಿ ಒಬ್ಬ ಇಲಾಖಾಧಿಕಾರಿಗಳು ಪ್ರವರ್ತಿಸಿರುವುದು ಇಂದಿನ ಪ್ರಜಾಪ್ರಭುತ್ವ ನೀತಿಗೆ ಸಂಪೂರ್ಣ ವ್ಯತಿರೇಕವಾಗಿರುತ್ತದೆ ಕಾಲವು ಮಿಂಚುವುದಕ್ಕೆ ಮುಂಚೆಯೇ ಸರ್ಕಾರದವರು ಈ ವಿಷಯವನ್ನು ಪರಿಶೀಲಿಸಿ ಇಂತಹ ಅಕ್ರಮ ನಡವಳಿಕೆಗಳನ್ನು ತಡೆಗಟ್ಟುವುದು ವಿಹಿತವಾಗಿದೆ.

— ವಿದ್ಯುಚ್ಛಕ್ತಿ ಬಳಕೆಗಾರರು

ಅಣು ಕಣದ ಮಳೆಯಿಂದ ಬಾಲಕಿಯ ಮರಣ

ಸಯಾಮಿನ ರಾಜಧಾನಿ ಬಾಂಕಾಕಿನಲ್ಲಿ ಕಳೆದ ೩ನೇ ತಾರೀಕು ಅಣು ಕಣಗಳಿಂದ ಕೂಡಿದ ಮಳೆಯಲ್ಲಿ ನೆನೆದು ೫ ವರ್ಷದ ಬಾಲಕಿಯೊಬ್ಬಳು ಮೈಸುಟ್ಟು ಮೃತಪಟ್ಟಿರುವುದಾಗಿ ವರದಿಯಾಗಿದೆ ಮಳೆಯಲ್ಲಿ ನೆನೆದಮೇಲೆ ಆಕೆಯ ಶರೀರದಲ್ಲಿ ಸುಟ್ಟ ಗಾಯಗಳಾದಾಗ, ಆಸ್ಪತ್ರೆಗೆ ಹುಡುಗಿಯನ್ನು ಸೇರಿಸಲಾಗಿ, ಅಲ್ಲಿ ಆಕೆಯು ಆಹಾರವನ್ನು ಸೇವಿಸಲು ನಿರಾಕರಿಸಿದಳೆಂದು ಹೇಳಲಾಗಿದೆ ಇದೇ ಬಗೆಯ ಚಿಕಿತ್ಸೆಯನ್ನು ಇನ್ನೂ ಅನೇಕರು ಪಡೆಯುತ್ತಿರುವರು.

ಮಾರಿಯಮ್ಮ ಮತ್ತು ಚಾಮುಂಡೇಶ್ವರಿಯಮ್ಮನ ಕರಗ

ಇಟ್ಟಿಗೆಗೂಡಿನ ಭಕ್ತ ಮಂಡಲಿಯವರು ಪ್ರತಿ ವರ್ಷದಂತೆ ಈ ಸಾರಿಯೂ ನಾಳೆ ಮತ್ತು ನಾಳಿದ್ದು ಶ್ರೀ ಮಾರಿಯಮ್ಮ ಮತ್ತು ಶ್ರೀ ಚಾಮುಂಡೇಶ್ವರಿಯಮ್ಮನವರ ಕರಗ ಮಹೋತ್ಸವವನ್ನು ಏರ್ಪಡಿಸಿರುತ್ತಾರೆ ಶನಿವಾರ ಸಂಜೆ ೭ ಗಂಟೆಗೆ ಹೊರಡುವ ಉತ್ಸವವು ಅರಮನೆ ಕಛೇರಿ, ನೂರಡಿ, ನಾರಾಯಣಶಾಸ್ತ್ರಿ, ನಲ್ಲಪ್ಪನರಾಣ, ಇಲವಾಲ, ಸಯ್ಯಾಜಿರಾವ್, ಮಿರ್ಜಾ ಆಸ್ಪತ್ರೆ, ಕಬೀರ್, ಕಾಳಮ್ಮನಗುಡಿ, ಇರ್ವಿನ್, ಅಶೋಕಾ ರಸ್ತೆಗಳ ಮೂಲಕ ನಜರ್‌ಬಾದು ಮಾರ್ಗವಾಗಿ ದೇವಸ್ಥಾನಕ್ಕೆ ಸೇರುವುದು. ೧೧ನೇ ತಾರೀಕು ಬೆಳಿಗ್ಗೆ ಮತ್ತು ಸಂಜೆ ಇಟ್ಟಿಗೆಗೂಡಿನಲ್ಲಿ ಉತ್ಸವವು ಜರುಗುವುದು

ಶ್ರೀ ಡಿ ವಿ ಗುಂಡಪ್ಪನವರ ಪ್ರಸಾರ ಭಾಷಣ

ನಾಳೆ ರಾತ್ರಿ ೭.೩೦ ಗಂಟೆಗೆ ಬೆಂಗಳೂರು ಆಕಾಶವಾಣಿ ಕೇಂದ್ರದಿಂದ "ಸಂಸ್ಕೃತಿಯ ರಂಗದಲ್ಲಿ ಈ ಐವತ್ತು ವರ್ಷಗಳು" ಎಂಬ ವಿಷಯವಾಗಿ ಶ್ರೀ ಡಿ ವಿ ಗುಂಡಪ್ಪನವರು ಭಾಷಣ ಮಾಡುವರು

ಕ್ವಿಮೊಯ್ ದ್ವೀಪದ ಮೇಲೆ ಫಿರಂಗಿ ಗುಂಡು

ರಾಷ್ಟ್ರೀಯ ಚೀಣರ ವಶದಲ್ಲಿರುವ ಕ್ವಿಮೊಯ್ ದ್ವೀಪದ ಮೇಲೆ ಮೊನ್ನೆ ಕಮ್ಯೂನಿಸ್ಟ್ ಚೀಣದವರು ಟಾಕ್ ದ್ವೀಪದಿಂದ ಫಿರಂಗಿ ಗುಂಡುಗಳನ್ನು ಹಾರಿಸಿದರೆಂದೂ, ಸಾವುನೋವುಗಳೇನೆಂಬುದು ಗೊತ್ತಿಲ್ಲವೆಂದೂ ವರದಿಯಾಗಿದೆ

ಸಂಗೀತ

ಶ್ರೀ ಶಂಕರಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ವಿ॥ ಟಿ. ಕೃಷ್ಣಸ್ವಾಮಯ್ಯನವರ ಸಂಗೀತವು ವಿ॥ ಎಸ್. ಮಹದೇವಪ್ಪನವರ ಪಿಟೀಲು ಮತ್ತು ವಿ॥ ರಾಜಗೋಪಾಲ್‌ರವರ ಮೃದಂಗದೊಡನೆ ನಡೆಯುವುದು.

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮತ್ತು ಕೊಯಮುತ್ತೂರು	೪೦ ೦೦	೪೪ ೧೨
ರತ್ನಚೂಡಿ	೪೦ ೫೦	೪೧ ೬೦
ಕಡ್ಡಿ	೪೦ ೫೦	೪೨ ೫೦
ಕಾರ್ ಸಣ್ಣ	೪೦ ೦೦	
ರಾಗಿ	೪೪ ೧೨	೪೩ ೪೬
ಕಂಬು	೬೦ ೧೨	
ಕಡಲೆಕಾಯಿ	೧೯ ೧೨	೨೯ ೨೫
ಹುಚ್ಚೆಳ್ಳು	೬೯ ೪೭	
ಹರಳುಬೀಜ	೬೩ ೦೦	
ಹೊಂಗೆಬೀಜ	೨೬ ೦೦	೨೬ ೫೦
ಹುರುಳಿ	೪೧ ೦೦	೪೧ ೫೦
ಹೆಸರು	೫೩ ೪೭	೫೬ ೭೫
ಹಲಸಂದೆ	೬೫ ೦೦	೫೬ ೦೦
ಅವರೆ	೬೭ ೫೭	೫೦ ೪೭
ಧನಿಯ	೨೯ ೬೨	೨೯ ೭೫
ಕಡಲೆ	೬೫ ೫೭	
ಉದ್ದು	೫೯ ೨೫	೬೧ ೨೯
ತೊಗರಿ ಬೇಳೆ	೬೫ ೦೦	೬೫ ೬೬
ಹುಣಸೆಬೀಜ	೯ ೫೦	೬ ೧೨
ಹುಣಸೇಹಣ್ಣು	೧ ೫೧	೯ ೬೧
ಸೀಗೆಕಾಯಿ	೭ ೭೯	೮ ೧೯
ಮೆಣಸಿನಕಾಯಿ	೧೬ ೫೭	೧೮ ೦೦
ತೆಂಗಿನಕಾಯಿ	೧೫೦ ೦೦	೨೩೯ ೦೦

ದ್ರಾವಿಡ ಸಂಘದವರ ಚಳುವಳಿಯಲ್ಲಿ ದೌರ್ಜನ್ಯ

ಮದ್ರಾಸಿನಲ್ಲಿ ದ್ರಾವಿಡ ಸಂಘದವರು ಇರುವ ಹೆಸರು ಅಳಿಸುವ ಚಳುವಳಿಯು ಹಿಂಸಾತ್ಮಕ ಸ್ವರೂಪವನ್ನು ತಾಳಿ ತ್ತಾಗಿದೆ. ಮುರಳಿ ಕೆಫೆ ಎಂಬ ಹೋ ಮಾಲೀಕರ ಸ್ನೇಹಿತರೊಬ್ಬರನ್ನು ದ್ರಾವಿಡ ಸಂಘದವರು ಹೊಡೆದರೆಂದೂ, ಮತ್ತೊಂದು ಹೋಟೇಲಿನಲ್ಲಿ ಮಾಲೀಕ ಮತ್ತು ಅತನ ಸ್ನೇ ಮೇಲೆ ಟಾರನ್ನು ಬಳಿಯಲಾಯಿತೆಂದು ವ ಯಾಗಿದೆ ಒಂದು ರಸ್ತೆಯಲ್ಲಿ ಅಂಗಡಿಗಳ ಬೇಗಬೇಗನೆ ಮುಚ್ಚಲಾಯಿತು ನಡೆಸುತ್ತಿರುವ ಸ್ವಯಂಸೇವಕರು, ಬ್ರಾ ಹೋಟೇಲಿಗೆ ಹೋಗಬಾರದೆಂದು ತಿಳಿಸು ಸಂಘದವರ ಚಟುವಟಿಕೆಗಳನ್ನು ನೋಡು ನಿಂತಿದ್ದ ಪೊಲೀಸರ ವರ್ತನೆಯನ್ನು ಹೋಟೇಲಿನ ಮಾಲೀಕರ ಬೆಂಬಲಿಗರು ಕೊಂಡರು

ಹರಿಕಥೆ

ಕೃಷ್ಣಮೂರ್ತಿಪುರದ ವೇಣುಗೋಪಾಲ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ನಾಳೆ ರಾತ್ರಿ ಟಿಗೆ ಶ್ರೀ ಹರಿನಾರಾಯಣ ದಾಸರಿಂದ ಸೀತಾ ಜನನಂ" ಎಂಬ ಹರಿಕಥೆಯು ಏರ್ಪಾಡಾಗಿದೆ

ಕಾವ್ಯ ವಾಚನ

ಜಯನಗರದಲ್ಲಿರುವ ಪೌರಾಣಿಕ ಸಾ ಮದ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ನಾಳೆ ೬॥ ಗಂಟೆಗೆ ಏಕಾದಶಿ ಪ್ರಯುಕ್ತ, ಶ್ರೀ ವಿ ಗಿರಿಧರಮೂರ್ತಿಯವರಿಂದ 'ಸಮುದ್ರಲ್ಲಂಘನ' ಎಂಬ ಭಾಗದ ವಾಚನವೂ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವೂ ಏರ್ಪಡಿಸಲಾಗಿದೆ

೧೯೫೭-೫೮ರಲ್ಲಿ ಗೃಹ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ೨೦ ಲಕ್ಷರೂ ವೆಚ್ಚ ಮಾಡಲು ನಿರ್ಧರಿಸಲಾಗಿದೆ.

GLOBE TUTORIAL COLLEGE
Sadvidya Patasala Buildings,
Excellent coaching for S S L C Students
Office Hours:-7-30 to 11 A M
& 5 to 8 P M.

CENTRAL INSTITUTE OF COMM
Vani Vilas Market Buildin
MYSORE
Applications for admissio to D-Com, Dip in Sten, Shor hand and Type-writing will received on all working days
Join Immediately

ಮನೆ ಮಾರಾಟಕ್ಕಿದೆ

ಡೋರ್ ನಂ. 2788/9 ಚಾಮುಂಡಿ ವಣಿ, ಶಂಕರನಾರಾಯಣಸ್ವಾಮಿ ದೇವಸ್ಥಾ ಹತ್ತಿರ ಮೂರು ಕಡೆ ರಸ್ತೆ, ಕಾರಿಡ ಮತ್ತು ಗಳುಳ್ಳ ಹೆಂಚಿನ, ಸುಮಾರು 2000 ಅಡಿ ಕಟ್ಟಡ ಉಳ್ಳ, ಮೂರು ಸಂಸಾರಗಳಿ ಅನುಕೂಲವಾಗಿರುವ, ನಲ್ಲಿ ಮತ್ತು ದೀಪ ಮನೆ ಬೆಲೆ 9000 ರೂ

ವಿವರಗಳಿಗೆ :—

ಜಯ ಅಂಡ್ ಕಂಪೆನಿ,
ಮನೆ ಮತ್ತು ಜಮೀನುಗಳ ಏಜೆಂಟರು
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು : ಫೋನ್ 5

ಒಲಂಪಿಯಾ ✱ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿದೆ
9 5—57ರಿಂದ : ಅಮೋಘ 2ನೇ ವಾರ . ಪ್ರತಿದಿನ 3 ಆಟಗಳು
ಗುರುದತ್ ರವರ ★ ಪ್ಯಾಸಾ ★ ನಿರ್ದೇಶನ : ಗುರುದತ್ ಸಂಗೀತ : ಎಸ್ ಡಿ ಬರ್ಮನ್
ಪಾತ್ರ:— ಗುರುದತ್, ಜಾನಿವಾಕರ್, ಮಾಲಾ ಸಿನ್ಹ, ಮತ್ತು ವಹೀದಾ ರೆಹಮಾನ್

ಚಾಮುಂಡೇಶ್ವರಿ ಟಾಕೀಸ್
10-5-57ರಿಂದ ಅಮೋಘ ಪ್ರಾರಂಭ ಪ್ರದರ್ಶನ ಕಾಲ : 2-45, 6-30 ಮತ್ತು ರಾತ್ರಿ 10
ಕಮಾಲ್ ಬ್ರದರ್ಸ್‌ರವರ ತಮಿಳು ಚಿತ್ರ ★ ಪುದೈಯಲ್ ★
ನಟವರ್ಗ — ಶಿವಾಜಿಗಣೇಶ, ಪದ್ಮಿನಿ, ಚಂದ್ರಬಾಬು ಮತ್ತು ಬಾಲಯ್ಯ
ಕಥೆ ಸಂಭಾಷಣೆ . ಕರುಣಾನಿಧಿ ದಿಗ್ದರ್ಶನ · ಕೃಷ್ಣನ್ ಪಂಜು · [ಸೆಲ್ಲಂ ರಿಲೀಸ್
3 ವಾರ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ವಿವಾಹ ಮತ್ತು ವಿಶೇಷ ಸಮಾರಂಭಗಳಿಗಾಗಿ
★ ನಾವು ಎಲ್ಲಾ ವಿಧವಾದ ದಿನಸಿ ಪದಾರ್ಥಗಳನ್ನು ಶುದ್ಧ ಮಾಡಿ ಸಿದ್ಧಪಡಿಸಿ, ಹೋಲ್‌ಸೇಲ್ ದರದಲ್ಲಿ ಒದಗಿಸಲು ಸಿದ್ಧವಾಗಿರುತ್ತೇವೆ
★ ಅಂತಹ ಸಮಾರಂಭಗಳಾದ ಮೇಲೆ ಉಳಿಯುವ ದಿನಸಿ ಪದಾರ್ಥಗಳನ್ನೆಲ್ಲಾ ಅದೇ ಬೆಲೆಗೆ ವಾಪಸು ಕೊಳ್ಳಲು ಸಹ ಏರ್ಪಡಿಸಿರುತ್ತೆ.
ಒಂದು ಸಾರಿ ಪರೀಕ್ಷಿಸಿ ತೃಪ್ತಿಪಡಿರಿ
ಬಾಂಬೆ ಆನಂದ ಭವನ್ ಸ್ಟೋರ್ಸ್,
ಫೋನ್ ನಂ 645 : ಚಿಕ್ಕ ಗಡ್ಯಾರ ಸರ್ಕಲ್ : ಮೈಸೂರು
ಭಾನುವಾರವೂ ಮಾರಾಟದ ಕಾರ್ಯವುಂಟು.

Model Tutorial Institute
D Banumiah's High School Buildings,
MYSORE
Coaching classes for the benefit of S. S. L. C students appearing for the NEXT Public Examination have been opened Particulars regarding admission etc, can be had at the office between 9 and 11 A M
B Seshagiri Rao,
Organiser

Edited, Printed and Published by A. R. Nagarajan at Sadhvi Press, D. Subbiah Road, Mysore

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ನಯೆ ಪೈಸೆ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ುಟ ೦೫] SADHVI ; SATURDAY 11—5—1957 ಮೈಸೂರು ; ಶನಿವಾರ ೧೧—೫—೧೯೫೭ ; [ಸಂಚಿಕೆ : ೨೬೮

ೇಶದಲ್ಲೆಲ್ಲಾ ಸ್ವಾತಂತ್ರ್ಯಸಂಗ್ರಾಮದ ಶತಮಾನೋತ್ಸವ.

ವೇದದ ಸಂಸ್ಕೃತಿಯಿಂದ ಭಾರತದ ಒಗ್ಗಟ್ಟಿನ ರಕ್ಷಣೆ

್ರಹ್ಮಣ ಧರ್ಮ ಸಹಾಯ ಸಭೆಯಲ್ಲಿ
ರಾಮಸ್ವಾಮಿ ಅಯ್ಯರ್ ಭಾಷಣ

ಮೈಸೂರು ೧೧

11 ಸಿ ರಾಮಸ್ವಾಮಿ ಅಯ್ಯರ್‌ರವರು ಲ್ಲಿನ ಬ್ರಾಹ್ಮಣ ಧರ್ಮ ಸಹಾಯ ಸಭೆ ಟ್ಟಿದ ಸ್ವಾಗ ಅದರ ಕೆಲಸಕಾರ್ಯಗಳ ಯ ಮಾಡಿಕೊಂಡರು ಮೊದಲು ಪಂಡಿ ಘೋಷದಿಂದ ವೇದೋಕ್ತ ಆಶೀರ್ವಾದವಾ ದ ವೇ|| ಪ್ರಣತಾರ್ಥಿಹರ ಶಾಸ್ತ್ರಿಗಳವರು ರಚಿಸಿದ ಮಂಗಳಾಶಂಸನ ಪದ್ಯ ಮಾಲಿಕೆ ನ್ನು ಓದಿ ಅರ್ಪಿಸಿದರು ಸಭೆಯ ಅಧ್ಯಕ್ಷ ಶ್ರೀ ಎಂ ರಾಮಸ್ವಾಮಿಯವರು ಸ್ವಾಗತ ನ ಮಾಡಿದರು ಕಾರ್ಯದರ್ಶಿ ಶ್ರೀ ಕೆ ದ್ರಿಯವರು ಸಂಘದ ಚಟುವಟಿಕೆಗಳ ವ ರವನ್ನು ಸೂಕ್ಷ್ಮವಾಗಿ ಓದಿದರು

ಶ್ರೀ ರಾಮಸ್ವಾಮಿ ಅಯ್ಯರ್‌ರವರು, ಪುರಾ ವಾದ ವೇದ ಸಂಸ್ಕೃತಿಯು ವಿಶ್ವ ಸಮೂಹ ದೆ ಇಡೀ ಭಾರತದ ಒಗ್ಗಟ್ಟನ್ನು ರಕ್ಷಿಸಿ ದೆ ಅದು ಅನೇಕಾನೇಕ ನಿತ್ಯ ಸತ್ಯ ಜೀವನದ ಮುಖ್ಯ ಅಂಶಗಳನ್ನೊಳಗೊಂ ಡಿದೆ ಎಂದು ನುಡಿದರು ಬ್ರಾಹ್ಮಣ ಧರ್ಮ ಯ ಸಭೆಯವರು ನಡೆಸುತ್ತಿರುವ ಕಾರ್ಯ ಪ್ರಶಂಸಿಸಿ, ಸಂಸ್ಥೆಗೆ ೨೫೦ ರೂ ಕಾಣಿಕೆ ನ್ನು ಸಮರ್ಪಿಸಿದರು

ೋಬಿಲ ಮಠದಲ್ಲಿ ನರಸಿಂಹ ಜಯಂತಿ

ನಗರ, ಶ್ರೀ ಅಹೋಬಿಲ ಮಠದಲ್ಲಿ ನಾಳೆ ಗಂಟೆಗೆ ನರಸಿಂಹ ಜಯಂತಿ ಉತ್ಸವ ಸುತ್ತದೆ ಭಕ್ತಾದಿಗಳು ದಯಮಾಡಿಸಬೇ ಕಾರ್ಯದರ್ಶಿ ಶ್ರೀ ಶೇಷಾದ್ರಿ ಅಯ್ಯಂಗಾ ರು ಪ್ರಾರ್ಥಿಸಿರುತ್ತಾರೆ.

ಅಂಚೆ ನೌಕರರ ಸಮ್ಮೇಳನ

ಮೈಸೂರು ಶಾಖಾ ಅಂಚೆ ನೌಕರರ ೩ನೇ ಕ ಸಮ್ಮೇಳನವು ನಾಳೆ ಬೆಳಿಗ್ಗೆ ೧೦ ಗಂ ವೆಲ್ಲಿಂಗ್ಟನ್ ಲಾಡ್ಜಿನಲ್ಲಿ ನಡೆಯುವುದು ಸಂ ಅಧ್ಯಕ್ಷರಾದ ಶ್ರೀ ಬಿ ಎಂ. ಕೆಂಗೇಗೌಡ ಗ್ರಾಸನವನ್ನು ವಹಿಸುವರು, ಡಿವಿಜನಲ್ ಸೂಪರಿಂಟೆಂಡೆಂಟರಾದ ಶ್ರೀ ಎಸ್. ಸೆಲ್ವರಾಜ ಆರಂಭೋತ್ಸವವನ್ನು ನೆರವೇರಿಸುವರು

ಯಾದವ ವಿದ್ಯಾರ್ಥಿನಿಲಯದ ಆರಂಭೋತ್ಸವ

ಗರದ ಯಾದವ ವಿದ್ಯಾರ್ಥಿನಿಲಯದ ಪ್ರಾ ರಂಭೋತ್ಸವವನ್ನು ನಾಳೆ ಮಧ್ಯಾಹ್ನ ೩ ಗಂಟೆಗೆ ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ಪ್ರಾಧ್ಯಾ ಪಕರಾದ ಶ್ರೀ ಬಿ ಕುಪ್ಪುಸ್ವಾಮಿಯವರು ಸಭ್ಯ ಪ್ರಾರ್ಥನೆಯಲ್ಲಿ ನೆರವೇರಿಸುವರು ಯಾ ದವ ಸಂಘದ ಸಾಮಾನ್ಯ ಸಭೆಯು, ಶ್ರೀ ಡಿ ಯ್ಯನವರ ಅಧ್ಯಕ್ಷತೆಯಲ್ಲಿ ಜರುಗುವುದು.

ಪಾದುಕಾ ಪಲ್ಲಕ್ಕಿ ಉತ್ಸವ

ವಿರಾ ಬಡಾವಣೆಯಲ್ಲಿರುವ ಶ್ರೀ ಸಮರ್ಥ ರ್ ದೇವಸ್ಥಾನದಲ್ಲಿ ನಾಳೆ ಬೆಳಿಗ್ಗೆ ೮ ಗಂ ಪ್ರತಿಷ್ಠಾಪನ ಮಾರುತಿ ಉತ್ಸವವೂ, ಸಮರ್ಥ ರ ಪಾದುಕಾ ಪಲ್ಲಕ್ಕಿ ಉತ್ಸವವೂ ಜರು ತೆ ಬಡಬಗ್ಗರಿಗೆ ಅನ್ನದಾನವನ್ನು ಏರ್ಪ ಡಿಸಲಾಗಿದೆ

ಸ್ಕೂಲ್ ಫೈನಲ್ ಸಪ್ಲಿಮೆಂಟರಿ ಪರೀಕ್ಷೆ ರದ್ದಿಲ್ಲ

ವಿದ್ಯಾ ಸಚಿವ ವೆಂಕಟಪ್ಪನವರ ಹೇಳಿಕೆ

ಬೆಂಗಳೂರು ೧೧

ಎಸ್ ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಯನ್ನು ರದ್ದುಗೊಳಿಸುವ ವಿಚಾರವಾಗಿ ಸರ್ಕಾರದ ಮಟ್ಟದಲ್ಲಾಗಲಿ ವಿದ್ಯಾ ಇಲಾಖೆಯ ಮಟ್ಟದಲ್ಲಾಗಲಿ ಪರಿಶೀಲನೆ ನಡೆಸುತ್ತಿಲ್ಲವೆಂದು ವಿದ್ಯಾ ಮಂತ್ರಿ ಶ್ರೀ ಎ ವೆಂಕಟಪ್ಪನವರು ತಿಳಿಸಿ, ಸಂಜನಗು ದಿನದಲ್ಲಿ ಇಷ್ಟಿಯೇ, ಅದು ರದ್ದಾಗುವದೆಂದು [illegible] ಎಂದು ಹೇಳಿರುವರು

ರಾಷ್ಟ್ರಾಧ್ಯಕ್ಷರಾಗಿ ಡಾ|| ರಾಜೇಂದ್ರಪ್ರಸಾದರ ಚುನಾವಣೆ

ಡಾ|| ರಾಜೇಂದ್ರ ಪ್ರಸಾದರು ರಾಷ್ಟ್ರಾಧ್ಯಕ್ಷತೆಗೆ ನೆನ್ನೆ ಅತ್ಯಧಿಕ ಬಹುಮತದಿಂದ ಪುನಃ ಆರಿಸಿಬಂದರು ಅಧ್ಯಕ್ಷರ ಆಯ್ಕೆಗೆ ಬೇಕಾದ [illegible] ಓಟುಗಳಿಗೆ ಸುಮಾರು ಎರಡರಷ್ಟು [illegible] ಓಟುಗಳನ್ನು ಅವರು ಪಡೆದರು ಪ್ರತಿಸ್ಪರ್ಧಿಗಳಾದ [illegible] ನಾಗೇಂದ್ರ ನಾರಾಯಣ ದಾಸರಿಗೆ ೨೦೦೦ ಮತ್ತು ಪಂಜಾಬಿನ ಹರಿರಾಂ ಅವರಿಗೆ [illegible] ಓಟುಗಳು ಬಂದುವು

ರಾಮ ಪಟ್ಟಾಭಿಷೇಕ ಮತ್ತು ಹನುಮಂತೋತ್ಸವ

ಚಾಮುಂಡಿಬೆಟ್ಟದಲ್ಲಿರುವ ಪೂರ್ಣಿಮಾ ಪ್ರಸಾದ ಶ್ರೀ ರಾಮ ಮಂದಿರದಲ್ಲಿ ನಾಳೆ ಬೆಳಿಗ್ಗೆ ಪಟ್ಟಾಭಿಷೇಕವೂ, ಸಂಜೆ ೭|| ಗಂಟೆಗೆ ಹನುಮಂತೋತ್ಸವವೂ ಜರುಗುವುವು ಅಲ್ಲದೆ ಅರ್ಚಕ ದೊಡ್ಡ ನಾರಾಯಣಭಟ್ಟರು ಸ್ಥಾಪಿಸಿದ ಶ್ರೀ ರಾಮರ ೩೦ನೇ ವರ್ಷ ವಾರ್ಷಿಕೋತ್ಸವವೂ ಆ|| ನಾಗೇಶ್ವರ ವಿ|| ಪುಟ್ಟರಾಜು ಮತ್ತು ಆ|| ತೋಲು ವಿ|| ರಾಮುರವರ ಮಂಗಳ ವಾದ್ಯದೊಡನೆ ಬೆಳೆಯುವುದು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಚಲನ ಚಿತ್ರ ಪ್ರದರ್ಶನ

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಚಲನ ಚಿತ್ರ ಪ್ರದರ್ಶನ ಶಾಖೆಯವರು ಹಂಗಾಮಿ ಮೈಸೂರು ಪ್ರಾಂತ್ಯಾಧಿಕಾರಿಗಳಾದ ಶ್ರೀ ಟಿ ಆರ್. ನಾಗಪ್ಪನವರ ನೇತೃತ್ವದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಏಪ್ರಿಲ್ ೩೦ನೇ ತಾರೀಖಿನವರೆಗೆ ಗ್ರಾಮಾಂತರಗಳಲ್ಲಿ ಚಲನ ಚಿತ್ರ ಪ್ರದರ್ಶನಗಳನ್ನು ಏರ್ಪಡಿಸಿದ್ದರು ವೀರನಪುರ, ಹಂಗಳದ ಹೊಸಹಳ್ಳಿ, ಹಂಗಳ, ಭೋಗಯ್ಯನಹುಂಡಿ, ಕೋಟೆಕೆರೆ, ಕಲ್ಲಹಳ್ಳಿ, ಗುಂಡ್ಲುಪೇಟೆ ಟೌನ್ ಮತ್ತು ದೊಡ್ಡಹುಂಡಿ ಗ್ರಾಮಗಳಲ್ಲಿ ಅವನ್ನು ಏರ್ಪಡಿಸಲಾಗಿತ್ತು ಹೈಸ್ಕೂಲ್ ಮುಖ್ಯೋಪಾಧ್ಯಾಯರು, ಶ್ರೀ [illegible] ರಾವ್, ಹೈಸ್ಕೂಲ್ ಉಪಾಧ್ಯಾಯರು, ಸಮಾಜ ಶಿಕ್ಷಣ ವ್ಯವಸ್ಥಾಪಕರು, ರಾಷ್ಟ್ರೀಯ ವಿಸ್ತರಣಾ ಯೋಜನೆ, ತಾಲ್ಲೂಕು ವಿದ್ಯಾಧಿಕಾರಿಗಳೂ ಮತ್ತು ಶಿಕ್ಷಣ ಸಮಿತಿಯ ಪ್ರಾಂತ್ಯಾಧಿಕಾರಿಗಳೂ ವಯಸ್ಕರ ಶಿಕ್ಷಣದ ವಿಚಾರವಾಗಿ ಪ್ರಸಂಗ ಭಾಷಣ ಮಾಡಿದರು.

ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವ

ಬ್ರಿಟಿಷರ ಆಳ್ವಿಕೆಯನ್ನು ಕೊನೆಗಾಣಿಸಲು ೧೮೫೭ರಲ್ಲಿ ನಡೆಸಿದ ಪ್ರಥಮ ಸಿಪಾಯಿ ದಂಗೆಯ ಹೆಸರಿನ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವವನ್ನು ನೆನ್ನೆ ದೇಶಾದ್ಯಂತ ಆಚರಿಸಲಾಯಿತು. ಭಾರತೀಯ ಸಿಪಾಯಿಗಳ ಮೂರು ಪಡೆಗಳು ದಂಗೆಯೆದ್ದು ದೆಹಲಿಗೆ ನುಗ್ಗಿದ ದಿನದ ಸ್ಮಾರಕಾರ್ಥವಾಗಿ ನೆನ್ನೆ ಈ ಉತ್ಸವವನ್ನು ದೆಹಲಿಯಲ್ಲಿ ಆಚರಿಸಲಾಯಿತು ಪ್ರಭಾತಭೇರಿ, ಬಹಿರಂಗ ಸಭೆ, ಮತ್ತು ರಾಷ್ಟ್ರಧ್ವಜಾರೋಹಣಗಳಾದುವು ದೆಹಲಿಯ ಕಡೇ ಚಕ್ರವರ್ತಿ ಬಹದ್ದೂರ್ ಷಾ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ತಾಂತ್ಯಾ ಟೋಪಿ ಮತ್ತು ನಾನಾ ಸಾಹೇಬ್ ಮುಂತಾದವರ ಚಿತ್ರಪಟಗಳ ಮೆರವಣಿಗೆಯಾಗಿ ಹುತಾತ್ಮರಿಗೆ ಪ್ರಣಾಮಗಳನ್ನು ಸಲ್ಲಿಸಲಾಯಿತು

ದೆಹಲಿಯಲ್ಲಿ ಪಿ ಎಸ್. ಪಿ ಪಕ್ಷದವರು ಭಾರಿ ಮೆರವಣಿಗೆ ನಡೆಸಿ ಖೂನಿ ದರ್ವಾಜಾ ಬಳಿ ಭಾರತೀಯ ಹುತಾತ್ಮರಿಗೆ ಮಾಲೆಗಳನ್ನು ಅರ್ಪಿಸಿದರು ಕಮ್ಯೂನಿಸ್ಟರು ಕೆಂಪುಕೋಟೆಯಿಂದ ಚಾಂದ್ನಿ ಚೌಕಕ್ಕೆ ಮೆರವಣಿಗೆ ಹೋಗಿ ಅಲ್ಲಿ ಕ್ರಾಂತಿವೀರರಿಗೆ ಹೂ ಮಾಲೆಗಳನ್ನು ಅರ್ಪಿಸಿದರು

ಸಹಾಯ ಪಡೆವ ಶಾಲೆಗಳ ಸಮ್ಮೇಳನ

ನೂತನ ಮೈಸೂರು ಸಂಸ್ಥಾನದ ಸಹಾಯ ಪಡೆವ ವಿದ್ಯಾ ಸಂಸ್ಥೆಗಳ ಸಮ್ಮೇಳನವು ಇದೇ ತಿಂಗಳು ೧೭ ಮತ್ತು ೧೮ ರಂದು ಬೆಂಗಳೂರಿನಲ್ಲಿ ಸೇರುವುದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅದರ ಆರಂಭೋತ್ಸವವನ್ನು ನೆರವೇರಿಸುವರು ಬೊಂಬಾಯಿ ವಿಧಾನ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಆರ್ ಎಸ್ ಹುಕ್ಕೇರಿಕರ್‌ರವರು ಅಧ್ಯಕ್ಷತೆ ವಹಿಸುವರು. ನೆರವು ಪಡೆವ ಶಾಲೆಗಳು ಎದುರಿಸಬೇಕಾದ ಸಮಸ್ಯೆಗಳನ್ನು ಸಮ್ಮೇಳನವು ಚರ್ಚಿಸಲಿದೆ. ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ ವಿದ್ಯಾ ಮಂತ್ರಿ ಶ್ರೀ ಎ ವೆಂಕಟಪ್ಪನವರು ಮುಕ್ತಾಯ ಸಮಾರಂಭದ ಅಧ್ಯಕ್ಷತೆ ವಹಿಸುವರು. ವಿದ್ಯಾಭ್ಯಾಸದ ಮಟ್ಟ "ಇಳಿಮುಖ" ಎಂಬ ವಿಚಾರದಲ್ಲಿ ಗೋಷ್ಠಿಯೊಂದನ್ನು ಏರ್ಪಡಿಸಲಾಗಿದೆ ಭಾರತ ವಿಜ್ಞಾನ ಶಾಲೆಯ ಡಾ|| ಭಗವಂತಂರವರು ಅದರ ಅಧ್ಯಕ್ಷತೆ ವಹಿಸುವರು ನೃತ್ಯ, ನಾಟಕ, ಸಂಗೀತ, ಜನಪದ ಸಾಹಿತ್ಯ ಇತ್ಯಾದಿಗಳೂ ಜರುಗುವುವು

ಬಸವೇಶ್ವರರ ಜಯಂತಿ ಕಾರ್ಯಕ್ರಮ

ನಗರದ ವೀರಶೈವ ಸಂಘದ ಆಶ್ರಯದಲ್ಲಿ, ತ್ಯಾಗರಾಜಾ ರಸ್ತೆಯಲ್ಲಿರುವ ಅಕ್ಕನ ಬಳಗ ಕಟ್ಟಡದಲ್ಲಿ ನಾಳೆ ಸಂಜೆ ೬ ಗಂಟೆಗೆ ಬಸವಣ್ಣನವರ ಜಯಂತಿ ಉತ್ಸವದ ಮುಕ್ತಾಯ ಸಮಾರಂಭವು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರುವುದು. ಶ್ರೀ ಅ. ನ ಕೃಷ್ಣರಾಯರು ಅಲ್ಲಮ ಪ್ರಭುವಿನ ಪ್ರಭೆ ಎಂಬ ವಿಷಯವಾಗಿ ಭಾಷಣ ಮಾಡುವರು. ಶ್ರೀ ಜಿ ಕೋದಂಡರಾಮಯ್ಯನವರಿಂದ ಲಾವಣಿ ಹಾಡು, ಶ್ರೀಮತಿ ಎಲ್ [illegible]ನವರಿಂದ ಸಂಗೀತವೂ ಏರ್ಪಾಡಾಗಿವೆ.

ಭಾರತದ ಆಡಳಿತ ಸರ್ವಿಸ್ ಸಿಬ್ಬಂದಿ ಕಾಲೇಜಿನಲ್ಲಿ ತರಬೇತು

ಮೈಸೂರಿನಿಂದ ಇಬ್ಬರು ಅಧಿಕಾರಿಗಳ ಆಯ್ಕೆ

ಸ್ವಂ ಸು ತಂತಿ] ಬೆಂಗಳೂರು ೧೧

ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಎಂ ಎಸ್. ಶಿವನಂಜಪ್ಪ ಮತ್ತು ಬೆಂಗಳೂರು ವಿಭಾಗದ ಮಾರಾಟ ತೆರಿಗೆ ಡೆಪ್ಯುಟಿ ಕಮಿಷನರ್ ಶ್ರೀ ವೈ ಸಿ ತೋಂಟದಾರ್ಯನವರನ್ನು ಸರ್ಕಾರದವರು ಸಿಮ್ಲಾ ನಗರದಲ್ಲಿರುವ ಭಾರತದ ಆಡಳಿತ ಸರ್ವಿಸ್ ಸಿಬ್ಬಂದಿ ಕಾಲೇಜಿನಲ್ಲಿ ಶಿಕ್ಷಣ ಪಡೆಯಲು ನಿಯೋಜಿಸಿರುತ್ತಾರೆ ದಾವಣಗೆರೆಯ ಪೌರಸಭಾ ಕಮಿಷನರ್ ಶ್ರೀ ರಾಘವೇಂದ್ರಾಚಾರ್ಯರನ್ನು ಶ್ರೀ ತೋಂಟದಾರ್ಯನವರ ಸ್ಥಾನದಲ್ಲಿ ಕೆಲಸ ಮಾಡಲು ನೇಮಿಸಲಾಗಿದೆ ಸರ್ಕಾರದ ಉಪ ಕಾರ್ಯದರ್ಶಿ ಶ್ರೀ ಸ್ಯಾಮ್ಯುಯಲ್ ಅಪ್ಪಾಜಿಯವರನ್ನು ಶ್ರೀ ರಾಘವೇಂದ್ರಾಚಾರ್ಯರ ಸ್ಥಾನಕ್ಕೆ ವರ್ಗಾಯಿಸಲಾಗಿದೆ

ಭಾರತದ ಸ್ವಾತಂತ್ರ್ಯ ರಕ್ಷಣೆಗೆ ಸರ್ವ ಪ್ರಯತ್ನ ಅಗತ್ಯ

೧೮೫೭ರ ಸಂಗ್ರಾಮದ ಬಗ್ಗೆ
ನೆಹರೂರವರ ಭಾಷಣ

೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವದ ಸಂಬಂಧವಾಗಿ ನೆನ್ನೆ ದೆಹಲಿಯಲ್ಲಿ ಏರ್ಪಾಡಾಗಿದ್ದ ಪ್ರಚಂಡ ಸಭೆಯಲ್ಲಿ ಪ್ರಧಾನಿ ನೆಹರೂರವರು ಭಾಷಣ ಮಾಡಿ, ಜಲಜನಕ ಬಾಂಬಿನ ದೌರ್ಜನ್ಯದಿಂದ ಪಾರಾಗಲು ವಿಶ್ವವು ಗೌತಮ ಬುದ್ಧ ಮತ್ತು ಮಹಾತ್ಮಾ ಗಾಂಧಿಯವರ ಮಾರ್ಗವನ್ನು ಅನುಸರಿಸಬೇಕೆಂದು ತಿಳಿಸಿದರು ಹಿಂಸೆಯಿಂದ ಹಿಂಸೆಯನ್ನು ಗೆಲ್ಲಲು ಸಾಧ್ಯವಿಲ್ಲವೆಂದು ಅವರು ಹೇಳಿದರು

೧೮೫೭ರ ಹೋರಾಟವನ್ನು ಪ್ರಸ್ತಾಪಿಸಿ, ಅದು ಯೋಜನಾಬದ್ಧವಾದ ಕಾರ್ಯವಾಗದಿದ್ದರೂ ಅಖಿಲ ಭಾರತ ಸ್ವರೂಪವನ್ನು ತಾಳಿತ್ತೆಂದು ನುಡಿದರು ಹಿಂದಿನ ಚರಿತ್ರಕಾರರು ಅದಕ್ಕೆ ಬಣ್ಣ ಕಟ್ಟಿ ಬರೆದಿರುವುದನ್ನು ಟೀಕಿಸಿದರು ಈ ಸಂಗ್ರಾಮದಲ್ಲಿ ಬ್ರಿಟಿಷರೊಡನೆ ಸೇರಿಕೊಂಡ ಭಾರತೀಯರ ದ್ರೋಹವೇ ಕ್ರಾಂತಿಯ ಸೋಲಿಗೆ ಕಾರಣವೆಂದು ಅವರು ಹೇಳಿ, ಭಾರತವು ತನ್ನ ಸ್ವಾತಂತ್ರ್ಯ ರಕ್ಷಣೆಗೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ನುಡಿದರು

ಕೃಷ್ಣರಾಜಸಾಗರದ ಟೋಲ್ ದರದ ಪುನರ್ವಿಮರ್ಶೆ

ಕೃಷ್ಣರಾಜಸಾಗರದ ಆಣೆಕಟ್ಟಿನ ಟೋಲ್ ದರವನ್ನು ಸರ್ಕಾರದವರು ಪುನರ್ವಿಮರ್ಶಿಸಿ ಪ್ರತಿಯೊಬ್ಬ ಮನುಷ್ಯನಿಗೂ ೩ ಆಣೆ ಅಥವಾ ೧೯ ನಯೇ ಪೈಸೆ ಕೊಡಬೇಕೆಂದು ನಿಗದಿ ಮಾಡಿರುತ್ತಾರೆ ಕಾರುಗಳಿಗೆ ೫ ರೂ ಗೊತ್ತುಪಡಿಸಿದೆ . ಮೈಲಿ ಫಾಸಲೆಯೊಳಗಿನ ಬರುವ ಜನರು, ಸೈಕಲ್ ಮತ್ತು ಎತ್ತಿನಗಾಡಿಗಳಿಗೆ ದೀಪೋತ್ಸವವಿಲ್ಲದ ದಿನಗಳಲ್ಲಿ [illegible] ಮಾತ್ರ ವಿನಾಯಿತಿ ತೋರಲಾಗುವುದು ಬೃಂದಾವನವನ್ನು ಸರಿಯಾದ ರೀತಿಯಲ್ಲಿಡುವುದಕ್ಕಾಗಿ ಈ ಶುಲ್ಕವನ್ನು ಜಾರಿಗೆ ತರಲಾಗುವುದೆಂದು ಗೊತ್ತಾಗಿದೆ

ಪ್ರಜಾ ಸತ್ತಾತ್ಮಕ ಆಡಳಿತಕ್ಕೆ ನ್ಯಾಯ ನಿರ್ವಹಣೆಯೇ ಆಧಾರ

ವಕೀಲರ ಸಮ್ಮೇಳನದಲ್ಲಿ ಅಧ್ಯಕ್ಷ ಮುಜುಮುದಾರರ ಭಾಷಣ

ಮೈಸೂರು ೧೧

ಮೈಸೂರು ಸಂಸ್ಥಾನದ ವಕೀಲರ ಸಮ್ಮೇಳನವು ನೆನ್ನೆ ಇಲ್ಲಿ ಸೇರಿದಾಗ ಅಧ್ಯಕ್ಷತೆ ವಹಿಸಿದ್ದ ಬೆಳಗಾವಿಯ ಅಡ್ವೊಕೇಟರಾದ ಶ್ರೀ ಪಿ ಮುಜುಮುದಾರರು ತಮ್ಮ ಭಾಷಣದಲ್ಲಿ ನ್ಯಾಯಾಂಗದ ಸ್ವಾತಂತ್ರ್ಯದಲ್ಲಿ ಜನರ ವಿಶ್ವಾಸವನ್ನು ಶಿಥಿಲಗೊಳಿಸುವಂತಹ ರೀತಿಯಲ್ಲಿ ನ್ಯಾಯ ಸುಧಾರಣೆಗಳನ್ನು ಮಾಡಕೂಡದೆಂದು ಆಡಳಿತದವರಿಗೆ ಎಚ್ಚರಿಕೆಯಾಯುವುದು ಅಗತ್ಯವೆಂದು ತಿಳಿಸಿದರು ರಾಷ್ಟ್ರದ ಎಲ್ಲಾ ಹೈಕೋರ್ಟುಗಳೂ ಸರ್ಕಾರದಿಂದ ಸ್ವತಂತ್ರವಾಗಿ ವರ್ತಿಸುತ್ತಿರುವುವೆಂದೂ, ಅವುಗಳ ತೀರ್ಮಾನಗಳ ಮೇಲೆ ಸರ್ಕಾರಗಳ ಕಾರ್ಯಾಂಗಗಳ ಪ್ರಭಾವವು ಬೀರಿಲ್ಲವೆಂದೂ ಅವರು ಹೇಳಿದರು ಆದರೆ ಸರ್ಕಾರಗಳು ಕೋರ್ಟುಗಳ ತೀರ್ಮಾನವನ್ನು ಗೌರವಿಸದೆ ವಿಶೇಷಾಜ್ಞೆಯನ್ನು ಮಾಡುತ್ತಿರುವುದನ್ನು ಅವರು ಸಭೆಯ ಗಮನಕ್ಕೆ ತಂದರು ಹೆಚ್ಚಿನ ಕಾನೂನುಗಳನ್ನು ಮಾಡುವ ಮುನ್ನ ಸುಪ್ರೀಂ ಮತ್ತು ಹೈಕೋರ್ಟುಗಳ ತೀರ್ಮಾನಗಳನ್ನು ಪೂರ್ಣವಾಗಿ ಪರಿಶೀಲಿಸಬೇಕೆಂದೂ, ಇಲ್ಲದಿದ್ದರೆ ಅವುಗಳ ಅಧಿಕಾರಕ್ಕೆ ಚ್ಯುತಿ ಬರುವುದೆಂದೂ ನುಡಿದರು

ಅಧ್ಯಕ್ಷರನ್ನು ಮಹಾರಾಜಾ ಕಾಲೇಜು ಹಾಸ್ಟಲಿನಿಂದ ಮೆರವಣಿಗೆಯಲ್ಲಿ ಕ್ರಾಫರ್ಡ್ ಭವನಕ್ಕೆ ಕರೆತರಲಾಯಿತು ಶ್ರೀಮತಿ ಲೀಲಾವತಿಯವರಿಂದ ಪ್ರಾರ್ಥನೆಯಾದನಂತರ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಹೆಚ್ ಸುಬ್ಬರಾಯರು ಸ್ವಾಗತ ಭಾಷಣ ಮಾಡಿದರು ಮದ್ರಾಸ್ ಬಾರ್ ಕೌನ್ಸಿಲಿನ ಪರವಾಗಿ ಇಬ್ಬರು ವಕೀಲರು ಸಮ್ಮೇಳನಕ್ಕೆ ಶುಭವನ್ನು ಕೋರಿದರು ಮೈಸೂರಿನ ರಾಜ್ಯಪಾಲರು, ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್ ವೆಂಕಟರಾಮಯ್ಯ, ಅಡ್ವೊಕೇಟ್ ಜನರಲ್ ಶ್ರೀ ಯತಿರಾಜುಲುನಾಯ್ಡು ಮುಂತಾದವರು ಸಮ್ಮೇಳನಕ್ಕೆ ಶುಭಸಂದೇಶವನ್ನು ಕಳುಹಿಸಿದ್ದರು

ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಆರಂಭೋತ್ಸವವನ್ನು ನೆರವೇರಿಸಿ ನೂತನ ಸಂಸ್ಥಾನದ ವಿವಿಧ ಪ್ರದೇಶಗಳಲ್ಲಿರುವ ಶಾಸನಗಳನ್ನು ಸಮನ್ವಯಗೊಳಿಸಬೇಕಾಗಿರುವುದೆಂದೂ, ನ್ಯಾಯಾಂಗ ಸರ್ವಿಸ್ಸಿನ ಐಕ್ಯವೂ ಆಗಬೇಕಾಗಿರುವುದೆಂದೂ ನುಡಿದರು. ವಕೀಲರು ಸಾರ್ವಜನಿಕ ಜೀವನದಲ್ಲಿ ಹೆಚ್ಚು ಪಾತ್ರವಹಿಸಲು ಅವಕಾಶವಿರುವುದೆಂದೂ ನುಡಿದರು. ಶಾಸನಗಳ ರಚನೆಯಲ್ಲಿ ವಕೀಲರ ಪಾತ್ರವು ಬಹಳವಾಗಿರುವುದೆಂದೂ, ಅವರುಗಳು ಶಾಸನ ಸಭೆಗಳ ಕೆಲಸವನ್ನು ಸ್ನೇಹಪರವಾಗಿ ಟೀಕಿಸಬಹುದೆಂದೂ ಸೂಚಿಸಿದರು

ವರದಿಯನ್ನು ಓದಿ ಅರ್ಪಣೆ ಮಾಡಿದನಂತರ ಅಧ್ಯಕ್ಷರು ಭಾಷಣ ಮಾಡಿ, ಪ್ರಜಾ ಸತ್ತಾತ್ಮಕ ರಾಜ್ಯಭಾರವು ನ್ಯಾಯದ ಆಡಳಿತದ ಆಧಾರದ ಮೇಲೆಯೇ ಸ್ಥಿರವಾಗಿ ನಿಂತಿರುವುದೆಂದು ಹೇಳಿ ರಾಜ್ಯಾಂಗದ ವಿರೋಧವಾಗಿರುವ ಶಾಸನಗಳ ರಚನೆಗೆ ಅವಕಾಶ ಕೊಡಬಾರದೆಂದು ಸೂಚಿಸಿದರು ಆತುರದಿಂದ ಶಾಸನ ಮಾಡುವುದನ್ನು ಅವರು ಟೀಕಿಸಿದರು ವಕೀಲರುಗಳು ಶಾಸನಗಳನ್ನು ರಚಿಸುವಾಗಲೇ ಅದನ್ನು ಪರಿಶೀಲಿಸಬೇಕೆಂದೂ, ನ್ಯಾಯಾಂಗ ನಿರ್ವಹಣೆಯಲ್ಲಿ ಅವರು ಮುಖ್ಯ ಪಾತ್ರವಹಿಸಬೇಕೆಂದೂ ಸೂಚಿಸಿದರು. ಭೂ ಶಾಸನವು ನ್ಯಾಯಸಮ್ಮತವಾಗಿಲ್ಲವೆಂದೂ, ಆದರಿಂದ ಮಧ್ಯಮ ವರ್ಗದ ಜನ ಪೂರ್ಣವಾಗಿ ನಿರ್ನಾಮವಾಗುವರೆಂದೂ ಅವರು ಅಭಿಪ್ರಾಯಪಟ್ಟರು ಮೊಕದ್ದಮೆಗಳಲ್ಲಿ ತೀರ್ಪು ಕೊಡಲು ನಿಧಾನವಾದರೆ ನ್ಯಾಯಾಧೀಶರು ಸಮಜಾಯಿಷಿ ಕೊಡಬೇಕೆಂದೂ ಅವರು ಸೂಚಿಸಿದರು

ಎಲ್ಲಾ ಇಲಾಖೆಗಳಲ್ಲೂ ಉನ್ನತಾಧಿಕಾರಿಗಳಲ್ಲಿ ಲಂಚವು ತಾಂಡವವಾಡುತ್ತಿರುವ ಕಾಲದಲ್ಲಿ, ನ್ಯಾಯಾಂಗವು ಅಂತಹ ದುಷ್ಪ್ರವೃತ್ತಿಯಿಂದ ದೂರವಾಗಿರುವುದು ಸಂತೋಷದಾಯಕವೆಂದು ಹೇಳಿದರು ವಕೀಲರು ತಮ್ಮ ಕಕ್ಷಿಗಾರರೊಡನೆ ಉತ್ತಮ ಬಾಂಧವ್ಯವನ್ನಿಟ್ಟುಕೊಳ್ಳಬೇಕೆಂದು ಅವರು ಸೂಚಿಸಿದರು. ಖಾಯಂ ಲಾ ಕಮಿಷನ್ನು ಅಗತ್ಯವೆಂದು ನುಡಿದರು ಶ್ರೀ ಎಸ್ ಶ್ರೀರಂಗಾಚಾರ್ಯರಿಂದ ವಂದನಾರ್ಪಣೆಯಾದನಂತರ ಸಭೆ ಮುಗಿಯಿತು

CENTRAL INSTITUTE OF COMMERCE
Van Vilas Market Buildings,
MYSORE

Applications for admission to D-Com, Dip-in Sten, Shorthand and Type-writing will be received on all working days

Join Immediately

SREE GAYATHRI
TALKIES
From 11-5-57 For 3 days
20th Century Fox s
THE TALL MEN
(In cinemascope-Technicolor)
With -Clark Gable, Jane Russel and Robert Ryan

Morning show on Sun
RHAPSODY

From 16 5.57
SEVEN YEAR ITCH

Edited, Printed and Published by A K. Nagarajan at Sadhvi Press, D. Subbiah Road, Mysore

ಹುಡುಗರಿಗೆ ಹೊಸ ರೀತಿಯ ಶಿಕ್ಷೆ

ಸಣ್ಣ ಅಪರಾಧಗಳಿಗಾಗಿ ಬಾಲಕರುಗಳಿಗೆ ಶಿಕ್ಷೆ ವಿಧಿಸಲು ನ್ಯೂಯಾರ್ಕಿನ ನ್ಯಾಯಾಧೀಶರು ಹೊಸ ವಿಧಾನವನ್ನು ಅನುಸರಿಸುತ್ತಾರೆ ಅವರುಗಳಿಗೆ ಸಜಾ ಅಥವಾ ದಂಡ ವಿಧಿಸಲು ಅವರು ನಿರಾಕರಿಸಿ, ಅಮೆರಿಕದ ಕ್ರಾಂತಿಗೆ ಸಂಬಂಧಿಸಿದಂತೆ ೫ ೦೦೦ ಪದವಿರುವ ಪ್ರಬಂಧವನ್ನು ಬರೆಯುವಂತೆ ಅಪರಾಧಿಗಳಿಗೆ ಶಿಕ್ಷೆ ವಿಧಿಸುತ್ತಿರುವರು

ಬೇಕಾಗಿದೆ

ವಾಣೀವಿಲಾಸ ಮೊಹಲ್ಲಾದ ಪೂರ್ಣ ಮಂಡಲಿಯ ಪ್ರಾಥಮಿಕ ತರಗತಿಗಳಿಗೆ ಎಸ್ ಎಸ್ ಎಲ್ ಸಿ ಮತ್ತು ಯು. ಜ. ಟಿ ಆದ ಉಪಾಧ್ಯಾಯನಿಯರು ಬೇಕಾಗಿದ್ದಾರೆ ಇದೇ ತಿಂಗಳು 15ನೇ ತಾರೀಖಿನೊಳಗೆ ಅರ್ಜಿ ಹಾಕಿಕೊಳ್ಳಬಹುದು.

ಸುನಂದಮ್ಮ,
ಅಧ್ಯಕ್ಷೆ

ವಿವಾಹ ಮಹೋತ್ಸವಗಳು

ಯಳಂದೂರು ತಾಲ್ಲೂಕು ಬಿಳಿಗಿರಿ ರಂಗಸ್ವಾಮಿ ಬೆಟ್ಟದಲ್ಲಿರುವ ಶ್ರೀ ಉಡುಪಿ ಗೋವಿಂದರಾಯರು ತಮ್ಮ ಕಿರಿಯ ಮಗ ಚಿ॥ ಸ॥ ನಾಗರಾಜನಿಗೆ ಮೊನ್ನೆ ಬ್ರಹ್ಮೋಪದೇಶವನ್ನೂ; ತಮ್ಮ ಬಾಲ್ಯನೇ ಪುತ್ರ ಶ್ರೀ ಶೇಷಾದ್ರಿಗೆ ಕೊಳ್ಳೆಗೆಮನೆ ರಾಮಕೃಷ್ಣಯ್ಯನವರ ದ್ವಿತೀಯ ಪುತ್ರಿ ಸೌ॥ ಸುಲೋಚನಾರವರನ್ನು ತಂದುಕೊಂಡು ಮೊನ್ನೆ ವಿವಾಹವನ್ನೂ ಬಿಳಿಗಿರಿರಂಗನ ಬೆಟ್ಟದಲ್ಲಿ ನೆರವೇರಿಸಿದರು

ಲಷ್ಕರ್ ಮೊಹಲ್ಲೆಯ ಶ್ರೀ ಚನ್ನಶೆಟ್ಟರು ತಮ್ಮ ಕುಮಾರ ಶ್ರೀ ಚಿಕ್ಕಯ್ಯ ಉರುಫ್ ಚನ್ನಯ್ಯನವರಿಗೆ ಟಿ ನರಸೀಪುರ ತಾಲ್ಲೂಕು ಕಳ್ಳಿಪುರಗ್ರಾಮದ ಶ್ರೀ ವೆಂಕಟರಮಣ ಶೆಟ್ಟರ ಕುಮಾರಿ ಸೌ॥ ಪುಟ್ಟಜಯಮ್ಮನನ್ನು ತಂದುಕೊಂಡು ಮೊನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಭತ್ತ				
ಕೊರ್ಗುಮತ್ತೂರು	೩೧	೦೦	೩೩	೦೦
ರಕ್ತಚೂಡಿ	೩೧	೦೦	೩೧	೫೦
ಕಡ್ಡಿ	೩೦	೦೦	೩೧	೫೦
ಹಲುಬ್ಬು	೩೦	೫೦	೩೨	೦೦
ರಾಗಿ	೩೪	೫೦	೩೬	[illegible]
ಜೋಳ	೩೧	೦೦	[illegible]	[illegible]
ಕಡಲೆಕಾಯಿ	೨೧	೦೦	[illegible]	[illegible]
ಹರಳುಬೀಜ	೪೧	[illegible]	೪೨	೦೦
ಹೊಂಗೇಬೀಜ	೨೬	[illegible]	೨೮	[illegible]
ಹುಚ್ಚೆಳ್ಳು	೪೨	೦೦	[illegible]	[illegible]
ಹುರುಳಿ	೩೦	೦೦	೩೨	[illegible]
ಹೆಸರು	[illegible]	೩೭	[illegible]	[illegible]
ಅಲಸಂದೆ	೩೦	೭೫	[illegible]	[illegible]
ಅವರೆ	೪೬	೧೨	[illegible]	[illegible]
ಸೆಣಬಿನ ಬೀಜ	೪೬	೦೨		
ಹುಣಸೆಬೀಜ	೮	೫೦	೬	೦೦
ಹುಣಸೇಹಣ್ಣು	೩	೩೭	೪	೦೦
ಸೀಗೆಕಾಯಿ	೩	೫೦	೩	೭೫
ಮೆಣಸಿನಕಾಯಿ	೧೬	೬೨	೧೭	೫೦
ತೆಂಗಿನಕಾಯಿ	೧೯೬	೫೦	೨೦೪	೫೦

Model Tutorial Institute
D. Banumiah's High School Buildings.
MYSORE

Coaching classes for the benefit of S S. L C students appearing for the NEXT Public Examination have been opened Particulars regarding admission etc , can be had at the office between 9 and 11 A. M

B Seshagiri Rao,
Organiser

ಶಾಶ್ವತವಾದ ನೆನಪಿಗಾಗಿ, ಎಲ್ಲ ಸಮಾರಂಭಗಳಲ್ಲೂ
ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನೇ
ಉಡುಗೊರೆಯಾಗಿ ಕೊಡಿರಿ
ಬಾಳಿಕೆ ಬಗ್ಗೆ ಖಾತರಿಯೊಡನೆ ಅವನ್ನು
ಬಾಂಬೆ ಆನಂದ ಭವನ್ ಸ್ಟೋರ್ಸ್,
ಫೋನ್ 645 : ನ್ಯೂ ಸ್ಟ್ಯಾಚ್ಯು ಸರ್ಕಲ್ : ಮೈಸೂರು
ಇವರಲ್ಲೀ ಕೊಂಡುಕೊಳ್ಳಿರಿ
ಬಹಳ ರಿಯಾಯತಿ ದರ, ಎಲ್ಲ ನಮೂನೆಗಳು ಮತ್ತು ಸೈಜುಗಳಲ್ಲೂ ದೊರೆಯುತ್ತವೆ

THE CHAMPION METROPOLITAN COLLEGE OF COMMERCE
Co-operators' Home, 100' Road, Mysore

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography, COST & WORKS ACCOUNTANCY, Banking, Shorthand, Type-writing etc

Estd 1917 — Fully qualified full-time staff — Educational atmosphere – Fine building and up-to-date equipment — Decent Library and Reading Room — Western Busines education in the East — Good results — College's Own Diploma also.

M S PUTTANNA, *Vice-Principal,*
P SUBBARAYA SASTRY, *Principal*

ಒಂದೇ ವಿಧದ ಭೂ ಶಾಸನಕ್ಕಾಗಿ ಸಮಿ

ಒಂದೇ ವಿಧವಾದ ಜಮೀನು ಮತ್ತು ಗೇಣಿ ಶಾಸನವನ್ನು ಸಂಸ್ಥಾನದಲ್ಲೆಲ್ಲಾ ಜಾರಿಗೆ ತರುವ ಸಂಬಂಧವಾಗಿ ಪರಿಶೀಲನೆ ನಡೆಸಿ ಶಿಫಾರಸು ಮಾಡಲು ಸರ್ಕಾರದವರು ಶ್ರೀ ಬಿ ಡಿ ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿರುತ್ತಾರೆ. ಅದರಲ್ಲಿ ಶ್ರೀಗಳಾದ ಹುಬ್ಬಳ್ಳಿಯ ಎಂ. ಆರ್. ಪಾಟೀಲ್, ರಾಯಚೂರು ಬಿ ಎ. ದೇಸಾಯ್, ಕುಣಿಗಲಿನ ಎ. ಹುಚ್ಚಮಾಸ್ತಿಗೌಡ, ಎಣ್ಣೆಕೊಪ್ಪದ ಮಲ್ಲಿಕಾರ್ಜುನಗೌಡ, ಬೆಂಗಳೂರಿನ ಬಿ ಬಸವಲಿಂಗಪ್ಪ, ಕೊಡಗಿನ ಸಿ ಎ. ಮಂದಣ್ಣ, ಮಂಗಳೂರಿನ ಡಿ ಆರ್ ಕರ್ಕೇರಾರವರು ಮತ್ತು ಕಾರವಾರ ಜಿಲ್ಲೆಯ ಕಲೆಕ್ಟರ್ ವಿ ಎಸ್. ಹಿರೇಮಠರವರು ಸದಸ್ಯರಾಗಿರುವರು ಶ್ರೀ ಕೆ ಬಾಲಸುಬ್ರಹ್ಮಣ್ಯಂರವರು ಕಾರ್ಯದರ್ಶಿಯಾಗಿರುತ್ತಾರೆ.

GLOBE TUTORIAL COLLE
Sadvidya Patasala Buildings,
Excellent coaching for S S L C Stu
Office Hours -7-30 to 11 A
& 5 to 8 P M

ಶಿಶು [illegible]
ಮಕ್ಕಳ ರೋಗಗಳಿಗೆ ಶಾಸ್ತ್ರೀಯ ಔಷಧ
ನಿರೋಧಕ, ನಿವಾರಕ ಸಲಹೆಗಳಿಗೆ -
'ಲವರ್ ಹೌಸ್', ಚಾಮರಾಜಪುರಂ,
ಮೈಸೂರು (ಸುಬ್ಬರು ಹಾಸ್ಟೆಲ್ ಹತ್ತಿರ)

SARADA TUTORIAL INSTITUTE
Sarada Vilas High School Buildings
MYSORE

Coaching classes for the benefit of failed S S L C students will commence work from 20-5-1957 The classes will work all the seven days in the week. Admissions will be received in the office between 9-30 and 11 A M on working days

K V Naraya
Organiser

The Cauvery Valley Paper Mills Ltd.,
(In Liquidation)
Statue Square,
Mysore, 9th May 57
SALE NOTICE

OFFERS ARE INVITED FOR PURCHASE OF THE FOLLOWING MATERIALS FROM THE INTENDING BUYERS UPTO 5 P M ON 29TH MAY 1957.

Please contact the undersigned for condition of sale and further particulars

Pumps, cable wire, galvanised wire, beltings (V belts, Rubber, Hair & canvas), coloured rags and waste paper pipe couplings, ball bearings, V. Grooved pulleys, china clay, Rosin, Sulphuric acid jars, Zinc sheets, 10 K. V. A transformer, O C.B. & Asbestos packing rope

S. SANJEEVIAH, B.A., B Com., B.L
Y. S. LINGIAH, B.A., B.L
Official Liquidators.

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 2 ನಯ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರಸಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಪುಸ್ತಕ : ೨೮] SADHVI : SUNDAY 12—5—1957 ಮೈಸೂರು ಭಾನುವಾರ ೧೨—೫—೧೯೫೭ : [ಸಂಚಿಕೆ : ೨೩೯

ಉತ್ತರ ಪ್ರದೇಶದಲ್ಲಿ ೩೬೦ ಸಮಾಜವಾದಿಗಳ ಬಂಧನ

ಮರಣ ದಂಡನೆಯು ರದ್ದಿಗೆ ವಿರೋಧ

ವಕೀಲರ ಸಮ್ಮೇಳನದಲ್ಲಿ ನಿರ್ಣಯ

ಮೈಸೂರು ೧೧

ನಗರದಲ್ಲಿ ನಡೆದ ಸಂಸ್ಥಾನದ ವಕೀಲರ ಸಮ್ಮೇಳನದಲ್ಲಿ ಹಲವಾರು ನಿರ್ಣಯಗಳು ಅಂಗೀಕೃತವಾದುವು

ಅಪರಾಧಗಳಿಗಾಗಿ ಮರಣ ದಂಡನೆಯನ್ನು ವಿಧಿಸುವುದು ಅನಾಗರಿಕ ಕಾಲದ ಅವಶೇಷವೆಂದೂ, ಅದನ್ನು ಪೀನಲ್ ಕೋಡಿನಿಂದ ರದ್ದುಪಡಿಸಬೇಕೆಂದೂ ಶ್ರೀ ಎಂ ಸಿ ಗುರುರವರು ಮಂಡಿಸಿದ ನಿರ್ಣಯವು ಚರ್ಚಿಸಲ್ಪಟ್ಟು ಬಿದ್ದುಹೋಯಿತು

ಬೆಳಗಾಂ, ಕಾರವಾರ, ನಿಪ್ಪಾಣಿ ಮುಂತಾದ ಪ್ರದೇಶಗಳನ್ನು ಕರ್ನಾಟಕ ಪ್ರಾಂತದಲ್ಲಿ ಸೇರಿಸುವ ನಿರ್ಧಾರವು ಅಂತಿಮವಾದುದೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಕೊಟ್ಟಿರುವ ಹೇಳಿಕೆಗೆ ಸಮ್ಮೇಳನವು ಸಂಪೂರ್ಣ ಬೆಂಬಲವಿತ್ತು ಆ ಪ್ರಶ್ನೆಯನ್ನು ಮತ್ತೆ ಕೆದಕಲಾಗದೆಂದು ನಿರ್ಧರಿಸಲಾಯಿತು ಸಮ್ಮೇಳನದಲ್ಲಿ ಅಂಗೀಕೃತವಾದ ಇನ್ನು ಕೆಲವು ನಿರ್ಣಯಗಳು ಈ ರೀತಿ ಇವೆ —

ಅಣು ಮತ್ತು ಜಲಜನಕ ಬಾಂಬ್ ಪರೀಕ್ಷಾ ಪ್ರಯೋಗವು ಮಾನವ ಕುಲಕ್ಕೆ ಅಪಾಯಕಾರಿಯಾಗಿರುವುದರಿಂದ ವಿಶ್ವಸಂಸ್ಥೆಯವರು ಅದನ್ನು ಕೂಡಲೇ ನಿಷೇಧಿಸಬೇಕು,

ಹೊಸ ನಾಣ್ಯ ಪದ್ಧತಿಯಿಂದ ಉಂಟಾಗಿರುವ ತೊಡಕುಗಳನ್ನು ನಿವಾರಿಸಲು ಸ್ವಲ್ಪ ಕಾಲದವರೆಗೆ ಅರ್ಧ ನಯಾ ಪೈಸವನ್ನು ಜಾರಿಗೆ ತರಬೇಕು

ಹೈಕೋರ್ಟಿನ ಇತರ ನ್ಯಾಯಾಧೀಶರುಗಳನ್ನು ನೇಮಿಸದೆ ಅಲ್ಲಿನ ಕೆಲಸಕ್ಕೆ ಅಡಚಣೆಯಾಗುವುದರಿಂದ ಕೂಡಲೇ ಅವರನ್ನು ನೇಮಕಮಾಡಬೇಕು,

ನ್ಯಾಯಾಂಗ ಮತ್ತು ಆಡಳಿತಾಂಗಗಳ ಬೇರೆಯಾದಮೇಲೂ ಪ್ರಾಸಿಕ್ಯೂಟರ್ ಸ್ಥಾನಗಳಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸುತ್ತಿರುವ ಪದ್ಧತಿಯು ತಪ್ಪು, ವಕೀಲರನ್ನೇ ನೇಮಿಸಬೇಕು,

[illegible] ಶಾಸನದ ಪ್ರಕಾರ ರಚಿತವಾಗಿರುವ [illegible]ಗಳು ಮತ್ತು ವಿಶೇಷ ನ್ಯಾಯಮಂಡಲಿಗಳಲ್ಲಿ ವಕೀಲರು ವಾದ ಮಾಡಲು ನಿಷೇಧಿಸಿರುವುದು ತಪ್ಪಬೇಕು,

ವಕೀಲರ [illegible] ಅನ್ನು ಶೇಕಡ ೫ ರಿಂದ [illegible] ಹೆಚ್ಚಿಸಬೇಕು

ನರಸಿಂಹ ಜಯಂತಿ

ಮೈಸೂರು ಜಯನಗರ ಬಡಾವಣೆಯಲ್ಲಿರುವ ಪೌರಾಣಿಕ [illegible] ಶ್ರೀ ಶಂಕರಶಾಸ್ತ್ರಿಗಳ ಮನೆಯಲ್ಲಿ ಇಂದು ಸಂಜೆ ೭ ೩೦ಕ್ಕೆ ನರಸಿಂಹ ಜಯಂತಿ ಪ್ರಯುಕ್ತ ನರಸಿಂಹಾವತಾರದ ಹರಿಕಥೆಯನ್ನು ಶ್ರೀನಿವಾಸ ಕೃ. ಲಕ್ಷ್ಮೀನರಸಿಂಹ [illegible] ಶ್ರೀ ಕೃಷ್ಣಗಿರಿ ಕೃಷ್ಣರಾಯರ [illegible]ವನ್ನು ಏರ್ಪಡಿಸಿದ್ದಾರೆ.

ಕೈಮಗ್ಗದ ಸಪ್ತಾಹದ ಮುಕ್ತಾಯ ಸಮಾರಂಭ

- ಮೈಸೂರು ೧೧

ನಾಲ್ಕನೇ ಅಖಿಲ ಭಾರತ ಕೈಮಗ್ಗದ ಸಪ್ತಾಹದ ಮುಕ್ತಾಯ ಸಮಾರಂಭವು ನೆನ್ನೆ ಸಂಜೆ ಟೌನ್ ಹಾಲಿನಲ್ಲಿ ಗ್ರಾಮ ಕೈಗಾರಿಕಾ ಮಂತ್ರಿ ಶ್ರೀ ಮಹಮದ್ ಅಲಿ ಮೆಹಬೂಬ್ ಅಲಿ ಖಾನರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ನಾಗರಾಜ್‌ರವರಿಂದ ಪ್ರಾರ್ಥನೆ, ಶ್ರೀ [illegible] ಮತ್ತು ಗೋಷ್ಠಿಯವರಿಂದ ವಾದ್ಯಗಾನ ಮತ್ತು ಶ್ರೀ [illegible] ಸಿಂಹ ಮತ್ತು ತಂಡದವರಿಂದ ನೃತ್ಯಗಳಾದುವು ಶ್ರೀ ಎಸ್ ಕೆ ಲಕ್ಷ್ಮೀನರಸಿಂಹಯ್ಯನವರು ಸ್ವಾಗತ ಭಾಷಣ ಮಾಡಿ ಸಪ್ತಾಹದ ಉದ್ದೇಶವನ್ನು ವಿವರಿಸಿದರು ಶ್ರೀಗಳಾದ ಪಿ ಗೋಪಾಲಕೃಷ್ಣಶೆಟ್ಟಿ, ಟಿ ಎಸ್ ರಂಗಗೋಪಾಲಯ್ಯಂಗಾರ್ ಮತ್ತು ಜಿ ಎಸ್ ರಾಮಕೃಷ್ಣಯ್ಯನವರು ಭಾಷಣ ಮಾಡಿ ಕೈಮಗ್ಗದ ಕೈಗಾರಿಕೆಯು ನಮ್ಮ ದೇಶದಲ್ಲಿ ಎಷ್ಟು ಉಚ್ಛ್ರಾಯ ಸ್ಥಿತಿಯಲ್ಲಿದ್ದಿತೆಂಬುದನ್ನೂ ಕ್ರಮೇಣ ಅದು ಕ್ಷೀಣ ದೆಸೆಗೆ ಬಂದುದನ್ನೂ ವಿವರಿಸಿ ಸರ್ಕಾರದವರೂ ಸಾರ್ವಜನಿಕರೂ ಅದರ ಪುನರುಜ್ಜೀವನಕ್ಕೆ ಮಾಡಬೇಕಾದ ಕರ್ತವ್ಯವನ್ನು ಒತ್ತಿ ಹೇಳಿದರು

ಸಚಿವರು ತಮ್ಮ ಭಾಷಣದಲ್ಲಿ ಕೈಮಗ್ಗದವರಿಗೆ ನೂಲನ್ನು ಒದಗಿಸುವುದಕ್ಕಾಗಿಯೇ ಭಾರತದಲ್ಲಿ ಒಂದು ಗಿರಣಿಯನ್ನು ಸ್ಥಾಪಿಸಲಾಗುವುದೆಂದೂ, ಇತರ ಎಲ್ಲ ಬಗೆಯ ಸಹಾಯಗಳನ್ನೂ ನೀಡಲಾಗುವುದೆಂದೂ ತಿಳಿಸಿ, ಸಾರ್ವಜನಿಕರು ಈ ಕೈಗಾರಿಕೆಗೆ ಸಂಪೂರ್ಣ ನೆರವನ್ನು ನೀಡಬೇಕೆಂದು ಕೋರಿದರು ಉತ್ತಮ ವಸ್ತುಗಳನ್ನು ತಯಾರಿಸಿದ್ದವರಿಗೆ ಬಹುಮಾನಗಳನ್ನೂ ಸಹ ಅಧ್ಯಕ್ಷರು ಹಂಚಿದರು

ವಂದನಾರ್ಪಣೆ ಮತ್ತು ರಾಷ್ಟ್ರ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಸೂಚನೆ

ಬುದ್ಧ ಜಯಂತಿ ಮತ್ತು ಚಂದ್ರಗ್ರಹಣದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

ವಿದ್ಯಾಪೀಠಗಳಲ್ಲಿ ವಿದ್ಯಾರ್ಥಿಗಳ ಶಿಕ್ಷಣ

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ನಡೆಯುತ್ತಿರುವ ವಿದ್ಯಾಪೀಠಗಳಲ್ಲಿ ವ್ಯವಸಾಯ, ಹೊಲಿಗೆ, ನೇಯ್ಗೆ, ಕೋಳಿ ಸಾಕುವುದು, ಮರಗೆಲಸ ಮುಂತಾದ ವೃತ್ತಿಗಳ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ ವ್ಯವಸಾಯ ಶಿಕ್ಷಣವನ್ನು ನಿರ್ಬಂಧ ಪಡಿಸಲಾಗುವುದು [illegible] ಕಾಲೇಜುಗಳ ಅಧ್ಯಾಪಕರೂ ಸಂಸ್ಥೆಗಳಿಗೆ ಆಗಾಗ್ಗೆ ಬಂದು ವಿದ್ಯಾರ್ಥಿಗಳೊಡನೆ ಚರ್ಚಿಸುವರು ಶಿಕ್ಷಣವನ್ನು ೭ ತಿಂಗಳ ಕಾಲ ಕೊಡಲಾಗುವುದು ವಿದ್ಯಾರ್ಥಿಗಳಿಗೆ ೨೫ ರೂ ವೇತನ ಕೊಡಲಾಗುವುದು ಸೇರಬಯಸುವವರು ಈ ತಿಂಗಳು ೧೫ರೊಳಗೆ ವಿದ್ಯಾಪೀಠಗಳಿಗಾಗಲೀ, ಕೇಂದ್ರ ವಯಸ್ಕರ ಶಿಕ್ಷಣ ಸಮಿತಿ ಕಛೇರಿಗಾಗಲೀ ಬರೆದುಕೊಳ್ಳಬಹುದು

ಉತ್ತರ ಪ್ರದೇಶ ಸಂಸ್ಥಾನದಲ್ಲಿ ಸಮಾಜವಾದಿಗಳ ಸತ್ಯಾಗ್ರಹ

೩೬೦ ಜನರ ಬಂಧನ

ಉತ್ತರ ಪ್ರದೇಶ ಪ್ರಾಂತದಲ್ಲಿ ಮೊನ್ನೆಯಿಂದ ಸಮಾಜವಾದಿ ಪಕ್ಷದವರು, ಮೊದಲೇ ಗೊತ್ತಾಗಿದ್ದ ಕಾರ್ಯಕ್ರಮದಂತೆ ಚಳವಳಿಯನ್ನು ಹೂಡಿ, ಕೋರ್ಟು, ಪೊಲೀಸು ಠಾಣೆ ಮತ್ತು ಇತರ ಸರ್ಕಾರಿ ಕಟ್ಟಡಗಳ ಮುಂದೆ ಸತ್ಯಾಗ್ರಹವನ್ನು ಆರಂಭಿಸಿದರು ನೆನ್ನೆ ಎಟಾವಾ, ಲಕ್ನೋ, ಕಾಶಿ, ಬಾರಾಬಂಕಿ, ಕಾನ್ಪುರ, ಷಹಜಹಾನ್‌ಪುರ ಮುಂತಾದ ಕಡೆಗಳಲ್ಲಿ ೩೬೦ ಜನರನ್ನು ಬಂಧಿಸಲಾಯಿತು ಎಟಾವಾದಲ್ಲಿ ೧೯೯ ಜನರನ್ನು ದಸ್ತಗಿರಿ ಮಾಡಿರುವುದಾಗಿ ಹೇಳಲಾಗಿದೆ ಆ ಪೈಕಿ ಇಬ್ಬರು ಶಾಸನಸಭಾ ಸದಸ್ಯರು ಅಲ್ಲಿ ಸಮಾಜವಾದಿಗಳು ವಿಕ್ಟೋರಿಯಾ ಸ್ಮಾರಕ ಭವನದ ಮೇಲೆ ರಾಣಿ ಲಕ್ಷ್ಮೀಬಾಯಿ ಭವನ ಎಂದು ಹೆಸರನ್ನು ಬರೆದರು

ಇಂಗ್ಲೀಷಿನ ಬದಲು ಹಿಂದಿಯನ್ನು ಜಾರಿಗೆ ತರಬೇಕೆಂದೂ ಬ್ರಿಟಿಷ್ ಅಧಿಕಾರಿಗಳ ಪ್ರತಿಮೆಗಳನ್ನು ತೆಗೆಯಬೇಕೆಂದೂ ಸಮಾಜವಾದಿಗಳು ಒತ್ತಾಯ ಮಾಡುತ್ತಿರುವರು. ಅಲ್ಲದೆ ಅಲ್ಪ ವರಮಾನದ ಜಮೀನುಗಳ ಮೇಲೆ ತೆರಿಗೆ ಹಾಕಕೂಡದೆಂದೂ ಅವರು ಕೇಳುತ್ತಾರೆ ಕಾನ್ಪುರದಲ್ಲಿ ಪ್ರತಿಬಂಧಕಾಜ್ಞೆಯ ಉಲ್ಲಂಘನೆಗಾಗಿ ೭ ಜನರೂ, ಅಲಹಾಬಾದಿನಲ್ಲಿ ಕೋರ್ಟು ಕೊಠಡಿಯಲ್ಲಿ [illegible]ದಕ್ಕಾಗಿ ಇಬ್ಬರೂ ದಸ್ತಗಿರಿಯಾದರು ಆ ಇಬ್ಬರಿಗೆ ಕೋರ್ಟ್ ಅವಹೇಳನಕ್ಕಾಗಿ ೩ ತಿಂಗಳ ಸಜಾ ವಿಧಿಸಲಾಯಿತು ಮತ್ತೊಂದು ಕಡೆ ಸಬ್ ಡಿವಿಜನ್ ಆಫೀಸರ ಕೋರ್ಟಿನ ಮುಂದೆ ಪಿಕೆಟಿಂಗ್ ನಡೆಯಿತು

ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿವೀರರ ದಿನಾಚರಣೆ

ನಗರದ ಜನಸಂಘ ಶಾಖೆಯ ಆಶ್ರಯದಲ್ಲಿ, ಮಾಧವರಾವ್ ಸರ್ಕಲ್ಲಿನಲ್ಲಿರುವ ಸಂಘದ ಕಛೇರಿ ಮುಂಭಾಗದಲ್ಲಿ ಮೊನ್ನೆ ಭಾರತ ಸ್ವಾತಂತ್ರ್ಯದ ಪ್ರಥಮ ಸಂಗ್ರಾಮದ ಕ್ರಾಂತಿವೀರರ ದಿನಾಚರಣೆಯನ್ನು ನೆರವೇರಿಸಲಾಯಿತು ಡಾ|| ವೆಂಕಟಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು ಮಂಗಳೂರಿನ ಶ್ರೀ ವಿನಾಯಕ ಶೆಣೈಯವರು ಭಾಷಣ ಮಾಡಿ ಈಸ್ಟ್ ಇಂಡಿಯಾ ಕಂಪೆನಿ ಆಳ್ವಿಕೆಯಿಂದ ಭಾರತದ ವಿಮೋಚನೆಗೆ ನಡೆದ ಸಂಗ್ರಾಮದ ವಿಚಾರವನ್ನು ವಿವರಿಸಿದರು. ನಗರದ ಸಾರ್ವಜನಿಕ ಸ್ಥಳಗಳಲ್ಲಿರುವ ವಿದೇಶೀ ಹೆಸರುಗಳನ್ನು ತೆಗೆದು, ಅವುಗಳ ಬದಲು ಕ್ರಾಂತಿವೀರರ ಹೆಸರುಗಳನ್ನಿಡಬೇಕೆಂದು ಪೌರಸಭೆಯನ್ನು ಕೋರುವ ನಿರ್ಣಯವನ್ನು ಮಾಡಲಾಯಿತು ಪ್ರತಿ ವರ್ಷವೂ ಮೇ ೧೦ನೇ ತಾರೀಕು ಹುತಾತ್ಮರ ಸ್ಮರಣ ದಿನವಾಗಿ ಸಾರ್ವತ್ರಿಕ ರಜಾವನ್ನು ಘೋಷಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಪಡಿಸಲಾಯಿತು ಹುತಾತ್ಮರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಸಂಘದ ಕಾರ್ಯದರ್ಶಿ ಶ್ರೀ ಎಂ ಕೃಷ್ಣಪ್ಪನವರು ಸ್ವಾಗತ ಬಯಸಿದರು ಶ್ರೀ ಹ ರಾ. ಶ್ರೀಕಂಠಮೂರ್ತಿಯವರು ವಂದನಾರ್ಪಣೆ ಮಾಡಿದರು

ಭದ್ರಾವತಿಯಲ್ಲಿ ಬಿರುಗಾಳಿಯಿಂದ ವಿದ್ಯುತ್ಪ್ರವಾಹಕ್ಕೆ ಅಡ್ಡಿ

ಮೈಸೂರು, ಬೆಂಗಳೂರುಗಳಲ್ಲಿ ಸ್ವಲ್ಪ ಕಾಲ ಕತ್ತಲು

ಮೈಸೂರು ೧೧

ನೆನ್ನೆ ಸಂಜೆ ಮೈಸೂರು, ಬೆಂಗಳೂರು ಮತ್ತು ಇತರ ಕಡೆಗಳಲ್ಲಿ ಏಕಾಏಕಿ ವಿದ್ಯುಚ್ಛಕ್ತಿ ತಪ್ಪಿ ಸ್ವಲ್ಪ ಕಾಲ ಕತ್ತಲು ಕವಿದಿತ್ತು ಭದ್ರಾವತಿಯಲ್ಲಿ ನೆನ್ನೆ ಸಂಜೆ ಭಾರಿ ಬಿರುಗಾಳಿ ಮಳೆಯಿಂದ ಅಲ್ಲಿನ ಕಬ್ಬಿಣದ ಕಾರ್ಖಾನೆಯ ಒಂದು ಕಟ್ಟಡದ ಮೇಲಿದ್ದ ೧೦ ಜಿಂಕ್‌ಶೀಟುಗಳು ಹಾರಿ ವಿದ್ಯುಚ್ಛಕ್ತಿ ಯಂತ್ರದ ಮೇಲೆ ಬಿದ್ದು ಅದನ್ನು ಜಖಂಗೊಳಿಸಿದುದರಿಂದ ವಿದ್ಯುತ್ ಪ್ರವಾಹಕ್ಕೆ ಅಡಚಣೆಯಾಯಿತು. ಅದನ್ನು ಸಂಜೆ ೭॥ ಗಂಟೆಗೆ ಸರಿಪಡಿಸಲಾಯಿತು ಅವಶ್ಯಕವಾದ ಕಾರ್ಖಾನೆಗಳಿಗೆ ಶಿವನಸಮುದ್ರದಿಂದ ವಿದ್ಯುಚ್ಛಕ್ತಿಯನ್ನು ಒದಗಿಸಲಾಯಿತು.

ಹನುಮಂತೋತ್ಸವ

ಚಾಮರಾಜ ಮೊಹಲ್ಲಾ ಗೊಲ್ಲಗೇರಿಯಲ್ಲಿರುವ ಶ್ರೀ ಜಾನಕೀ ರಾಮ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ನಂಜನಗೂಡಿನ ಶ್ರೀ ನಂಜುಂಡೇಶ್ವರ ಸಾ ಮಿಲ್ಲಿನ ಮಾಲೀಕರಾದ ಶ್ರೀ ಪಿ ಆರ್. ರಂಗವೇಲು ಮುದಲಿಯಾರರ ಅಧ್ಯಕ್ಷತೆಯಲ್ಲಿ ಹನುಮಂತೋತ್ಸವದ ಅಂಗವಾಗಿ ನಂಜನಗೂಡಿನ ಶ್ರೀ ಸುಬ್ರಹ್ಮಣ್ಯ ಮತ್ತು ಪಾರ್ಟಿಯವರಿಂದ [illegible] ವಾದನ ಮತ್ತು ಸಂಗೀತವು ಏರ್ಪಾಡಾಗಿದೆ ಸರ್ವರಿಗೂ ಸ್ವಾಗತವಿದೆ

೧೮೫೭ರ ಸಂಗ್ರಾಮದ ಗ್ರಂಥದ ಅರ್ಪಣೆ

೧೮೫೭ರ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವ ಸಮಾರಂಭವು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಮೊನ್ನೆ ಸರಳವಾಗಿ ನಡೆಯಿತು ಪ್ರಸಿದ್ಧ ಇತಿಹಾಸಜ್ಞರಾದ ಡಾ॥ ಸುರೇಂದ್ರನಾಥ ಸೇನರವರು ರಚಿಸಿರುವ ೧೮೫೭ ಎಂಬ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯನ್ನು [illegible] ರಾಷ್ಟ್ರಪತಿಗಳಿಗೆ ಸಮರ್ಪಿಸಿದರು. ಅದನ್ನು ಸ್ವೀಕರಿಸುತ್ತಾ ಅಂದಿನ ಸಂಗ್ರಾಮವು [illegible]ವೆಂದು ರಾಷ್ಟ್ರಪತಿಗಳು ತಿಳಿಸಿದರು ಪುಸ್ತಕಕ್ಕೆ ಮೌಲಾನ ಅಜಾದರು ಮುನ್ನುಡಿ ಬರೆದಿರುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ನಾದಸ್ವರ ೭-೧೫ ಪ್ರಾರ್ಥನಾ [illegible] ವಾದ್ಯ ಸಮ್ಮೇಳನ ೭ ೩೦ ಬುದ್ಧ ಸ್ತವಂ ೮ ೧೫ ಗಾನವಿಹಾರ ಮಧ್ಯಾಹ್ನ [illegible] ಮತ್ತು ೧-೫೦ ಕ ಪಿ ವೆಂಕಟೇಶಮೂರ್ತಿ-ಸಂಗೀತ ೧೨-೩೦ ಎ ಶಾರದಂಬಾ ವೀಣೆ ೧ ಹಿಂದಿ ಗೀತೆ ಸಂಜೆ ೬ ೧೦ ಜನಪದ ಗೀತೆ ೭-೩೦ ಬುದ್ಧದೇವ ಪ್ರಸಂಗ-ಷ ಪಿ ರಾಜ[illegible] ಸಮಾಚಾರ ದರ್ಶನ ವಿಶೇಷ ವಾರ್ತೆ [illegible] ೮-೩೦ ಬುದ್ಧ ಗಯಾ ಉತ್ಸವ [illegible] ನ-ದೆಹಲಿ ರಿಲೆ ೯-೧೫ [illegible] ಕರ್ನಾಟಕದ [illegible] ಆರ್ ಆರ್ ದಿವಾಕರರಿಂದ ೯ ೩೦ ಧರ್ಮವೀಕ್ಷೆ ನಾಟಕ ೧೦-೩೦ ಬುದ್ಧ ಜಯಂತಿ-ವಿಶೇಷ ರೂಪಕ

ವಾರ ಭವಿಷ್ಯ

ತಾ|| ೧೨-೫-೫೭ ರಿಂದ ೧೮-೫-೫೭ ರ ವರೆಗೆ

ಮೇಷ:— ಶತ್ರು ನಾಶ, ಶುಭ ಸಂಚಾರ [illegible] ಹೊಸ [illegible], ವ್ಯಾಪಾರ ವ್ಯವಹಾರ [illegible] ಮಿತ್ರ ಸಹಾಯ

ವೃಷಭ:— [illegible] ಲಾಭ, ಮಂಗಳ ಕಾರ್ಯ [illegible] ಸಾಧನೆ, ಶತ್ರು [illegible] ವಿವಾಹ ಪ್ರಯತ್ನದ ಸಿದ್ಧಿ [illegible] ಫಸಲ [illegible]

ಮಿಥುನ:— ಅತ್ಯುತ್ಸಾಹದಿಂದ [illegible], ಧನ [illegible], ಆಯುಷ್ಯ ಸಮ, ಅಲ್ಪ ಶ್ರಮದಿಂದ ಕಾರ್ಯ ಸಿದ್ಧಿ ಹೊಸ ವ್ಯವಹಾರಂಗಳು ಬೇಡ, ಉದ್ಯೋಗಿಗಳಿಗೆ ಅಪವಾದ

ಕಟಕ — ಉತ್ತಮ ವಾರ, ಮಿತ್ರ ಸಹಾಯ, ಮಾನ ಸನ್ಮಾನ, ಧನಲಾಭ ಪ್ರವಾಸದಲ್ಲಿ ಜಯ, ಅಧಿಕ ವ್ಯಯ

ಸಿಂಹ:— ವ್ಯಾಪಾರ ವ್ಯವಹಾರಗಳಲ್ಲಿ ಅಭಿವೃದ್ಧಿ, ಮನೆಯಲ್ಲಿ ಶುಭ ಕಾರ್ಯ ಉತ್ತಮ ವಾರ ಸಂಪದಭಿವೃದ್ಧಿ, ಪ್ರವಾಸದಲ್ಲಿ ಜಯ ಆರೋಗ್ಯ ಉತ್ತಮ

ಕನ್ಯಾ:— ಅತಿ ಕಡಿಮೆ ಇಷ್ಟ ಕಾರ್ಯ ಸಿದ್ಧಿ, ಧನ [illegible], [illegible], ಅಪರಿಚಿತ ಜನರ ಭೇಟಿ [illegible]ಗಳಿಗೆ ಉತ್ಸಾಹ, ಶತ್ರುಗಳ [illegible]

ತುಲಾ:— ವ್ಯಾಪಾರ [illegible] ಸಾಮಾನ್ಯ, [illegible] ಉದ್ಯೋಗಿಗಳಿಗೆ ಸಾಮಾನ್ಯ [illegible] ವ್ಯಾಜ್ಯದಲ್ಲಿ ಜಯ, ನೂತನ ಉದ್ಯಮಕ್ಕೆ ತಕ್ಕ ಕಾಲ

ವೃಶ್ಚಿಕ:— ಹಣದ ಮುಗ್ಗಟ್ಟು, ಸ್ನೇಹಿತರಿಂದ [illegible], ಪರಾಪೇಕ್ಷ ಸಹಾಯ [illegible] ವರಿಗೆ ಸಂಸಾರದಲ್ಲಿ ಸುಖವಿಲ್ಲ, ಲಾಭಕ್ಕಿಂತ ಅಧಿಕ ವ್ಯಯ

ಧನುಸ್ಸು:— ಪ್ರಯತ್ನದಿಂದ ಕಾರ್ಯ ಸಿದ್ಧಿ, ಧನ [illegible] ಆರೋಗ್ಯ ನೆಟ್ಟಗೆ, ವ್ಯಾಪಾರ [illegible] ಎಚ್ಚರಿಕೆ, ಮನಸ್ಸಿಗೆ ಅಶಾಂತಿ, ಪ್ರವಾಸ [illegible] ಲಾಭ

ಮಕರ:— [illegible] ಆರೋಗ್ಯ, ಅತೃಪ್ತಿಕರ, [illegible] ಅಲ್ಪ ಧನ ಲಾಭ, ಉದ್ಯೋಗಿಗಳಿಗೆ [illegible] ವೆಚ್ಚದ ಸಂಭವ, ಪ್ರವಾಸದಲ್ಲಿ ಎಚ್ಚರಿಕೆ ಬೇಕು

ಕುಂಭ:— [illegible] ಅನಾರೋಗ್ಯ, ಪ್ರವಾಸದಲ್ಲಿ ಎಚ್ಚರಿಕೆ ಅಕಾಲ ಭೋಜನ, ಶ್ರಮದಿಂದ ಕಾರ್ಯ ಸಿದ್ಧಿ, ಆರ್ಥಿಕ ಪರಿಸ್ಥಿತಿ ಕೊಂಚ ಮಟ್ಟಿಗೆ ಉತ್ತಮ

ಮೀನ —ಎಲ್ಲ ವಿಧದಲ್ಲೂ ಅನುಕೂಲ, ಆರೋಗ್ಯ ನೆಟ್ಟಗೆ, ವ್ಯಾಪಾರವ್ಯವಹಾರಗಳಲ್ಲಿ ಉತ್ತಮ, ಪ್ರವಾಸದಲ್ಲಿ ಯಶ, ಮಂಗಳ ಕಾರ್ಯ, ನೌಕರರಿಗೆ ಮೇಲ್ಪಟ್ಟವರಿಂದ ಪ್ರಶಂಸೆ

ಕನ್ನಡ ನಿಘಂಟಿನ ರಚನೆ

ಕನ್ನಡ ಸಾಹಿತ್ಯ ಸಮ್ಮೇಳನದ ನಿರ್ಣಯ

ಧಾರವಾಡದಲ್ಲಿ ಸೇರಿದ್ದ ಕನ್ನಡ ಸಾಹಿತ್ಯ ಸಮ್ಮೇಳನವು ಕಳೆದ ಬುಧವಾರ ಮುಕ್ತಾಯವಾಯಿತು ಸಮ್ಮೇಳನವು ಒಟ್ಟು ೨೩ ನಿರ್ಣಯಗಳನ್ನು ಅಂಗೀಕರಿಸಿತು ಪೂರ್ಣವಾದ ಕನ್ನಡ ನಿಘಂಟಿನ ರಚನೆಯಾಗಬೇಕೆಂದೂ, ವಿವಿಧ ಭಾಷಾ ನಿಘಂಟಿನ ರಚನೆಯು ಅಗತ್ಯವೆಂದೂ ಸೂಚಿಸಲಾಯಿತು. ಪರಿಷತ್ತಿನ ಆಶ್ರಯದಲ್ಲಿ ಕೇಂದ್ರ ಸಂಶೋಧನಾ ಶಾಲೆಯನ್ನು ಏರ್ಪಡಿಸಬೇಕೆಂದು ಸಮ್ಮೇಳನವು ನಿರ್ಣಯ ಮಾಡಿತು

ಡಾ|| ಪುಟ್ಟಪ್ಪನವರು ಮುಕ್ತಾಯ ಭಾಷಣ ಮಾಡಿ, ಸಮ್ಮೇಳನವು ಮುಂದೆ ನಿರ್ದಿಷ್ಟ ಕೆಲಸಗಳನ್ನು ನಡೆಸಬೇಕೆಂದು ತಿಳಿಸಿದರು ಕನ್ನಡ ಪ್ರದೇಶಗಳ ಭವಿಷ್ಯವನ್ನು ಶಾಂತಿ ಮತ್ತು ಕಾನೂನುಬದ್ಧ ರೀತಿಯಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕೆಂದು ಸಲಹೆ ಮಾಡಿದರು

ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ ಶಿವಮೂರ್ತಿ ಶಾಸ್ತ್ರಿಯವರು ಮಾತನಾಡಿ, ಮುಂದಿನ ಸಮ್ಮೇಳನಕ್ಕೆ ಸಾಗರ, ಬಳ್ಳಾರಿ ಮತ್ತು ಉಡುಪಿಗಳಿಂದ ಆಹ್ವಾನ ಬಂದಿರುವುದೆಂದು ತಿಳಿಸಿದರು

ಸಮ್ಮೇಳನದ ಅಂಗವಾಗಿ ಕವಿಗಳ ಗೋಷ್ಠಿಯು ನಡೆಯಿತು ಶ್ರೀ ಪುಟ್ಟಪ್ಪನವರು ಮಾತನಾಡಿ, ಕಳೆದ ಎರಡು ಶತಕಗಳಲ್ಲಿ ಕನ್ನಡ ಕವಿಗಳು ಸೃಷ್ಟಿಸಿದ ಕಾವ್ಯಗಳ ಬಗ್ಗೆ ಹೆಮ್ಮೆಪಡಬಹುದೆಂದು ತಿಳಿಸಿದರು ಅವರುಗಳು ಹೊಸಹೊಸ ಮಾರ್ಗವನ್ನು ಹಿಡಿದು ತಮ್ಮ ಕೀರ್ತಿಯನ್ನು ಕಟ್ಟಿಸಿಕೊಳ್ಳಬೇಕೆಂದು ಹೇಳಿದರು

೩೩ ಕವಿಗಳು ತಮ್ಮ ಕವನಗಳನ್ನು ಓದಿದರು ಶ್ರೀ ಪುಟ್ಟಪ್ಪನವರು ಮುಂದೆ ಪ್ರಕಟಿಸಲಿರುವ ಗಂಗೋತ್ರಿ ಎಂಬ ಕಾವ್ಯ ಗ್ರಂಥದಿಂದ [illegible] ತಪಸ್ವಿನಿ ಎಂಬ ಕವನವನ್ನು ಓದಿದರು

ಚಾಮುಂಡಾಂಬಿಕಾ ವಿದ್ಯಾಸದನ

ರಾಮಾನುಜಾ ರಸ್ತೆಯಲ್ಲಿರುವ ಶ್ರೀ ಚಾಮುಂಡಾಂಬಿಕಾ ವಿದ್ಯಾ ಸದನದಲ್ಲಿ ವ್ಯಾಸಂಗ ಮಾಡಿ ಸ್ಕೂಲ್ ಫೈನಲ್ ಪರೀಕ್ಷೆಗೆ ಕುಳಿತಿದ್ದ ೩೦ ವಿದ್ಯಾರ್ಥಿಗಳ ಪೈಕಿ ೧೮ ಮಂದಿ ಉತ್ತೀರ್ಣರಾಗಿರುವರು ಆ ಪೈಕಿ ೩ ಜನರಿಗೆ ಪ್ರಥಮ ದರ್ಜೆ ಬಂದಿದೆ

GLOBE TUTORIAL COLLEGE
Sadvidya Patasala Buildings,
Excellent coaching for S S L C Students
Office Hours -7-30 to 11 A M
& 5 to 8 P M

Edited Printed and Published by
A. R. Nagarajan at Sadhvi Press,
D. Subbiah Road, Mysore

ಲೋಕಸಭಾಧ್ಯಕ್ಷರಾಗಿ ಅನಂತಶಯನಂರವರ ಆಯ್ಕೆ

ಚುನಾವಣೆಗಳನಂತರ ರಚಿಸಲ್ಪಟ್ಟ ನೂತನ ಲೋಕ ಸಭೆಯ ಅಧ್ಯಕ್ಷರಾಗಿ ನೆನ್ನೆ ಅನಂತಶಯನಂ ಅಯ್ಯಂಗಾರ್ಯರು ಆರಿಸಲ್ಪಟ್ಟರು.

ನಗರದಲ್ಲಿ ಸೊಳ್ಳೆಗಳ ಕಾಟ

ನಗರದಲ್ಲಿ, ಮುಖ್ಯವಾಗಿ ತೋಟಗಳ ಪಕ್ಕ ಮತ್ತು ಇತರ ಕೊಳಕು ಪ್ರದೇಶಗಳಲ್ಲಿ ಅಸಂಖ್ಯಾತವಾಗಿರುವ ಸೊಳ್ಳೆಗಳ ಉಪದ್ರವವನ್ನು ಎಷ್ಟು ಹೇಳಿದರೂ ತೀರದು. ಅಲ್ಲದೆ ತೋಟಗಳಿಂದ ಕೊಳಗಿನಿಂದ ದುರ್ವಾಸನೆ ಗಾಳಿಯು ಆಗಾಗ್ಗೆ ಬೀಸುತ್ತಾ ಅಲ್ಲಿನ ನಿವಾಸಿಗಳ ಅನಾರೋಗ್ಯಕ್ಕೂ ಕಾರಣವಾಗಿದೆ. ಇದನ್ನು ಪರಿಹರಿಸಿಕೊಡಬೇಕೆಂದು ಪುರಸಭೆಯನ್ನು ಎಷ್ಟು ಪ್ರಾರ್ಥಿಸಿದರೂ ಪ್ರಯೋಜನವಾಗಿಲ್ಲ. ಈ ವಿಷಯವನ್ನು ಚೆನ್ನಾಗಿ ಮನಗಂಡು, ನಿವಾಸಿಗಳ ಕಷ್ಟವನ್ನು ಅರಿತ ಮಾಜಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಕಳೆದ ಪುರಸಭಾ ಅಧಿವೇಶನದಲ್ಲಿ ಈ ವಿಷಯವಾಗಿ ಕೊಟ್ಟಿರುವ ವಿವರಣೆಯು ಅಕ್ಷರಶಃ ಸತ್ಯವಾಗಿದೆ ಪುರಸಭಾಧಿಕಾರಿಗಳು ಪ್ರಜೆಗಳ ಕಷ್ಟ ನಿವಾರಣೆಗಾಗಿ ಅದೇ ರೀತಿಯಾದ ಕರುಣೆಯುಳ್ಳವರಾಗಿರಬೇಕೆಂಬುದೇ ನಮ್ಮ ಹಾರೈಕೆ ಪ್ರಜಾ ಸರ್ಕಾರದ ಆಡಳಿತದಲ್ಲಿರುವ ಮೈಸೂರು ಮಾದರಿ ನಗರವಾಗಿದ್ದು ಇನ್ನೂ ಇದೇ ರೀತಿ ಮುಂದುವರಿಸಬಹುದೇ? ಎಂಬ ಶಂಕೆಯುಂಟಾಗಿದೆ "ನರಿಯ ಕೂಗು ಗಿರಿ ಮುಟ್ಟೀತೇ" ಎನ್ನುವ ಹಾಗೆ ಬಡವರ ಸಂಕಟ ಮತ್ತು ಬೇಡಿಕೆಗಳು ಗಿರಿಯ ತುದಿಯನ್ನು ಮುಟ್ಟದೇ ಇರಬಹುದು ಗಣ್ಯ ವ್ಯಕ್ತಿಗಳ ಅಭಿಪ್ರಾಯ [illegible] ಸಂಬಂಧಪಟ್ಟ ಅಧಿಕಾರಿಗಳು [illegible] ಇಂತಹ ತೊಂದರೆಗಳನ್ನು ಪರಿಹರಿಸಿಕೊಡಬೇಕಾಗಿ ಪ್ರಾರ್ಥಿಸಲಾಗಿದೆ.

— ಪ್ರದೇಶದ ನಿವಾಸಿ

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ಜೀವನದ ಹರ್ಷವನ್ನು ಸವಿಯಿರಿ
ಷಂಡರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!
ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಶೆ ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟು ಹೋದ ಗ್ರಂಥಿಗಳು ಷಂಡತ್ವ, ವ್ಯಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ, ಸಿಫಿಲಿಸ್, ಗೊನೋರಿಯಾ, ಪಾರ್ಶ್ವ ವಾಯು, ಅಂಡ ವಾಯು ಮತ್ತು ಎಲ್ಲ ವಿಧವಾದ ಹ[illegible]ಯ ಮೂತ್ರ ರೋಗಗಳಿಗೂ ಕಾರಣವಾಗಿವೆ. ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ|| ರಾಜಾರವರನ್ನು (ಲೈಂಗಿಕ ಪ್ರವೀಣ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆಯ ಕಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು [illegible] ಕೊಡಲಾಗುವುದು.
ಅವರ ಸಲಹೆ ಪಡೆಯುವುದರಿಂದ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿ ಡಲಾಗುವುವು. ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ.
ರಾಜಾ ಮೆಡಿಕಲ್ ಹಾಲ್,
ಲೇನ್ ನಂ 1715. ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ [illegible]
ಮೊದಲನೇ ಕಟ್ಟಡ),
ಮೈಸೂರು

ರಕ್ತರಹಿತ ಕ್ರಾಂತಿಯಿಂದ ಕೊಲಂಬಿಯಾ ಸರ್ಕಾರದ ಪತನ

ದಕ್ಷಿಣ ಅಮೆರಿಕದ ಕೊಲಂಬಿಯಾ ರಾಜ್ಯದಲ್ಲಿ ನೆನ್ನೆ ರಕ್ತರಹಿತ ಮಿಲಿಟರಿ ಕ್ರಾಂತಿ ನಡೆದು ಅಲ್ಲಿನ ಅಧ್ಯಕ್ಷ ಗುಸ್ತಾವೊ ರೋಜಾಸ್ ಪಿನಿಲಾ ಮತ್ತು ಅವರ ಸರ್ಕಾರವನ್ನು ಉರುಳಿಸಿದುದಾಗಿ ವರದಿಯಾಗಿದೆ.

ವಸಂತ ಕಾಲದ ಆಕರ್ಷಣೆ
ನಿಮ್ಮ ಮಕ್ಕಳ ಅಂದವಾದ
ಕಾರ್ಡ್ ಸೈಜ್ ಛಾಯಾಚಿತ್ರಕ್ಕೆ
ಒಂದು ರೂಪಾಯಿ ಮಾತ್ರ
ಪ್ರಭಾ ಟಾಕೀಸ್ ಬಳಿ ಇರುವ
ಶ್ರೀಕಾಂತ್ ಸ್ಟುಡಿಯೋವಿಗೆ
ಭೇಟಿ ಕೊಡಿ
ರೋಲ್ ಫಿಲಮ್ಸ್, ಡೆವಲಪಿಂಗ್,
ಪ್ರಿಂಟಿಂಗ್, ಎನ್ಲಾರ್ಜಿಂಗ್ ಸಹ
ಮಾಡುತ್ತೇವೆ

ದಿ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್,
ಭದ್ರಾವತಿ

ಮಾರಾಟಕ್ಕಿದೆ

ಭದ್ರಾವತಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಸೇರಿದ ಮೈಸೂರು ನಗರದಲ್ಲಿ ಇರುವ ಎರಡು ವಾಸದ ಕಟ್ಟಡಗಳು 17 6-1957 ನೇ ತಾರೀಖು ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜಿನಲ್ಲಿ ಸ್ಥಳದ ಬಳಿ ಮಾರಲ್ಪಡುವುವು ಬನ್ನಿಮಂಟಪದ ರಸ್ತೆಯಲ್ಲಿ ಹೊಸ ಸಂತೆಪೇಟೆ ಹತ್ತಿರ ಇರುವುವು ವಾಸಮಾಡಲು ಮತ್ತು ಕಛೇರಿಗಳಿಗೆ ಬಹು ಉಪಯುಕ್ತವಾದುವು. ವಿವರಗಳು, ಮಾರಾಟದ ನಿಯಮಗಳು ಮತ್ತು ಷರತ್ತುಗಳನ್ನು ಕೆಳಗೆ ರುಜು ಮಾಡಿರುವವರಿಂದ ತಮ್ಮ ವಿಳಾಸವಿರುವ ಸ್ಟಾಂಪು ಹಚ್ಚಿದ ಕವರಿನೊಂದಿಗೆ ಬರೆದು ತಿಳಿದುಕೊಳ್ಳಬಹುದು

ಹೆಚ್ ಎಲ್ ನಾಗೇಗೌಡ, ಸೆಕ್ರೆಟರಿ

ರೈಲ್ವೆ ನೋಟೀಸುಗಳು

ದಕ್ಷಿಣ ರೈಲ್ವೆ

ನೋಟೀಸು

ಶಿವಮೊಗ್ಗಾ ಟೌನ್ ರೈಲ್ವೆ ನಿಲ್ದಾಣದಲ್ಲಿ ಪದಾರ್ಥಗಳ ಮಾರಾಟದ ಕಂಟ್ರಾಕ್ಟು

ಶಿವಮೊಗ್ಗಾ ಟೌನ್ ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಮ್ಮಿನಲ್ಲಿ 3 ವರ್ಷಗಳ ಅವಧಿಗಾಗಿ ಬ್ರೆಡ್ಡು, ಹಣ್ಣುಗಳು, ಸೋಡಾ, ಬೀಡಿಗಳು, ಸಿಗರೇಟುಗಳು ಮತ್ತು ಮಿಠಾಯಿಗಳನ್ನು ಮಾರಾಟ ಮಾಡುವ ಬಗ್ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ಮುಖ್ಯವಾಗಿ ಶಿವಮೊಗ್ಗಾ ನಿವಾಸಿಗಳಾಗಿರಬೇಕು ಮತ್ತು ವ್ಯಾಪಾರದಲ್ಲಿ ಅನುಭವ ಪಡೆದವರಾಗಿರಬೇಕು.

2. ಈ ಸ್ಟಾಲನ್ನು ನಡೆಸಲು ರಹದಾರಿ ಶುಲ್ಕವು ವರ್ಷಕ್ಕೆ 1,200 ರೂ. (ರೂಪಾಯಿ ಗಳು ಒಂದು ಸಾವಿರದ ಇನ್ನೂರು ಮಾತ್ರ) ಆ ವುದು. ಮತ್ತು ಅದನ್ನು ಒಂದೇ ಕಂತಿ ಮುಂಗಡವಾಗಿ ಪಾವತಿ ಮಾಡಬೇಕು. ಕೃತವಾದ ಕಂಟ್ರಾಕ್ಟರನು ಶಿವಮೊಗ್ಗಾ ಟೌ ನಲ್ಲಿರುವ ಹಣ್ಣಿನ ಮಳಿಗೆಯಲ್ಲಿ ಅಂಗಡಿ ಲು ಅವಕಾಶವೀಯಲಾಗುವುದು. ರಹದಾರಿ ಲ್ಯವನ್ನು ಪುನರ್ವಿಮರ್ಶಿಸುವ ವಿಚಾರವು ರೈ ಆಡಳಿತದವರ ವಿವೇಚನೆಗೆ ಒಳಪಟ್ಟಿದೆ.

3. ಇದಲ್ಲದೆ ಅಂಗೀಕೃತವಾದ ಅರ್ಜಿ ನು ಬಳಸುವ [illegible] ಆಡಳಿತದವರು ಕಾಲಕಾಲಕ್ಕೆ ನಿಗದಿ ಮಾ ದರದಂತೆ ಕೊಡಬೇಕು.

4. ಅರ್ಜಿಗಳನ್ನು "ಶಿವಮೊಗ್ಗಾ ಟೌ ಲ್ವೆ ಸ್ಟೇಷನ್ನಿನಲ್ಲಿ ಅಂಗಡಿ ನಡೆಸುವ ಕಾಂ ಕ್ಟಿನ ಬಗ್ಗೆ ಅರ್ಜಿ". ಎಂದು ಮೇಲೆ ಬರೆ ದ ಕವರಿನಲ್ಲಿಟ್ಟು, ಡಿವಿಜನಲ್ ಸೂಪರಿಂ ಡೆಂಟ್ (ಕಮರ್ಷಿಯಲ್), ದಕ್ಷಿಣ ರೈಲ್ವೆ, ಮೈ ಸೂರು—ಈ ವಿಳಾಸಕ್ಕೆ 1957ನೇ ಮೇ 25 ತಾರೀಖು ಅಥವಾ ಅದಕ್ಕೆ ಮುಂಚೆ, ವರ ತೆರಿಗೆ ಪಾವತಿ ಸರ್ಟಿಫಿಕೇಟಿನೊಡನೆ ತಲು ತೆ ಕಳುಹಿಸತಕ್ಕದ್ದು

ಪಿ ಟಿ. ಪದ್ಮನಾಭನ್,
ಡಿವಿಜನಲ್ ಸೂಪರಿಂಟೆಂ



ನವೀನ ಮಾದರಿ
ಗಡಿಯಾರಗಳಿಗೆ
ಫೇವರ್ ಲ್ಯೂಬಾ, ವೆಸ್ಟೆಂಡ್,
ಸೈಮಾ, ರೋಮರ್
ಇತ್ಯಾದಿ, ಇತ್ಯಾದಿ
ರಾಂ ಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್, ಮೈಸೂರು

ಸಿಟಿ ಟ್ಯುಟೋರಿಯಲ್ ಕಾಲೇಜ್, ಮೈಸೂರು
(ಸ್ಥಾಪನೆ 1948)
ಉತ್ತಮ ಸಲಕರಣೆ – ಅನುಭವಸ್ಥರಾದ ಉಪಾಧ್ಯಾಯರು
ಪುಸ್ತಕ ಭಂಡಾರ ಮತ್ತು ಪ್ರಯೋಗ ಶಾಲೆಗಳೊಡನೆ
1957 ನೇ ಸೆಪ್ಟೆಂಬರ್ ಮತ್ತು 1958 ನೇ ಮಾರ್ಚಿ S S L C ಪರೀಕ್ಷೆಗೆ
ತಯಾರು ಮಾಡುವ ತರಗತಿಗಳನ್ನು ಪ್ರಾರಂಭಿಸಲಾಗಿದೆ
ವಿದ್ಯಾರ್ಥಿನಿಯರಿಗೇ ಪ್ರತ್ಯೇಕವಾದ ತರಗತಿಗಳು
[illegible] ತರಗತಿಯ [illegible] ಎರಡನೇ ತರಗತಿಯಲ್ಲಿ
[illegible] S S L C ತರಗತಿಗಳಿಗೆ ಸೇರಿಸಲಾಗುವುದು
- MADRAS MATRICULATION EXAMN —
[illegible] 2 ವರ್ಷಗಳಲ್ಲೂ
ಈ ಪರೀಕ್ಷೆಗೆ ಕುಳಿತುಕೊಳ್ಳಬಹುದು
B K ಸತ್ಯಬೋಧಾಚಾರ್, M A , B. T
ಪ್ರಿನ್ಸಿಪಾಲರು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ



ಬಿಡಿ ಪತ್ರಿಕೆ 2 ನಯೆ ಪೈಸೆ

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಪುಟ : ೧೫] SADHVI : TUESDAY 14—5—1957 ಮೈಸೂರು : ಮಂಗಳವಾರ ೧೪—೫—೧೯೫೭ : [ಸಂಚಿಕೆ : ೨೮೦

ವಿದ್ಯುಚ್ಛಕ್ತಿ ತಗಲಿ ನಗರದಲ್ಲಿ ಇಬ್ಬರು ಸ್ತ್ರೀಯರ ಮರಣ

ಮೈಸೂರು ವಕೀಲರ ಸಂಘದ ಸುವರ್ಣ ಮಹೋತ್ಸವ

ಸಿ ಪಿ ರಾಮಸ್ವಾಮಯ್ಯರವರ ಭಾಷಣ

ಮೈಸೂರು ೧೪

ಇಲ್ಲಿನ ವಕೀಲರ ಸಂಘದ ಸುವರ್ಣ ಮಹೋತ್ಸವವು ಕಳೆದ ಶುಕ್ರವಾರ ಡಾ|| ಸಿ ಪಿ ರಾಮಸ್ವಾಮಿ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು

ಶ್ರೀಮತಿ ಇಂದಿರಮ್ಮನವರಿಂದ ಪ್ರಾರ್ಥನೆ ಆದನಂತರ ಸಂಘದ ಅಧ್ಯಕ್ಷರಾದ ಶ್ರೀ ಜೆಹೆಚ್. ಬ್ಬರಾಯರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಎಲ್. ನಾಗರಾಜಪ್ಪನವರು ವರದಿಯನ್ನೊಪ್ಪಿಸಿದರು. ಶ್ರೀಮತಿ ಚೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತವು ಏರ್ಪಾಡಾಗಿತ್ತು.

ವಕೀಲರ ವೃತ್ತಿಯ ಘನತೆ ಮತ್ತು ಗೌರವವನ್ನು ಕಾಪಾಡಲು ಅಖಿಲ ಭಾರತ ಬಾರ್ ಕೌನ್ಸಿಲ್ ಏರ್ಪಡಬೇಕೆಂದು ಶ್ರೀ ರಾಮಸ್ವಾಮಿ ಅಯ್ಯರ್‌ರವರು ಒತ್ತಾಯಪಡಿಸಿದರು ಕೆಟ್ಟ ವರ್ತನೆಗಾಗಿ ವಕೀಲರುಗಳ ಮೇಲೆ ನ್ಯಾಯಾಂಗದವರು ಶಿಸ್ತಿನ ಕ್ರಮ ತೆಗೆದುಕೊಳ್ಳುವುದರ ಬದಲು ಬಾರ್ ಕೌನ್ಸಿಲ್ಲು ಹಾಗೆ ಮಾಡಬೇಕೆಂದು ತಿಳಿಸಿದರು.

ನ್ಯಾಯ ನಿರ್ವಹಣೆಯು ಇತ್ತೀಚೆಗೆ ಬಹಳ ತೊಡಕಿನಿಂದ ಕೂಡಿರುವುದರಿಂದ ವಕೀಲರುಗಳು ಹಿಂದಿನಂತೆ ದೇಶದ ಸಮಸ್ಯೆಗಳ ಪರಿಹಾರದಲ್ಲಿ ನಿರತರಾಗಲು ಅವಕಾಶವಿರುವುದಿಲ್ಲವೆಂದು ಅವರು ನುಡಿದರು.

ಪಂಚಾಯಿತಿಗಳ ಮೂಲಕ ವ್ಯವಹಾರಗಳನ್ನು ಇತ್ಯರ್ಥಪಡಿಸುವ ಪದ್ಧತಿಯು ಇಂದಿನ ಕೈಗಾರಿಕಾ ಯುಗದಲ್ಲಿ ಯಶಸ್ವಿಯಾಗುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು. ದಿನೇದಿನೇ ಹೆಚ್ಚುತ್ತಿರುವ ಕಾನೂನುಕಟ್ಟಳೆಗಳನ್ನು ಸರಿಯಾಗಿ ವಿವರಿಸಲು, ಅರ್ಹರಾದ ವಕೀಲರುಗಳ ಅವಶ್ಯವಿರುತ್ತದೆ. ಶಾಸನ ಸಭೆಗಳಲ್ಲಿ ಅತುರದಿಂದ ಮಾಡುವ ಕಾಯಿದೆಗಳ ಪರಿಣಾಮವಾಗಿ ನ್ಯಾಯಾಲಯಗಳಲ್ಲಿ ಅಸಂಖ್ಯಾತ ರಿಟ್ ಅರ್ಜಿಗಳು ಬರುತ್ತಿದ್ದು ಅವುಗಳ ವಿಚಾರಣೆಯಲ್ಲಿಯೇ ವಿಶೇಷ ಕಾಲವು ವ್ಯಯವಾಗುತ್ತಿದೆ. ಮಾಮೂಲು ಕೆಲಸಗಳಿಗೆ ಇದರಿಂದ ಅಡಚಣೆಯಾಗಿರುತ್ತದೆ ಇದು ತಪ್ಪಬೇಕಾದರೆ ಶಾಸನವನ್ನು ಮಾಡುವವರು ನಿಪುಣರೂ, ಮೇಧಾವಿಗಳೂ, ದೂರಾಲೋಚನೆಯುಳ್ಳವರೂ ಆಗಬೇಕು.

ಕಾನೂನುಗಳನ್ನು ಕ್ರೋಢೀಕರಿಸಿ ಪರಿಷ್ಕರಿಸುವ ಕೆಲಸವನ್ನು ಕೇಂದ್ರ ಮಂತ್ರಿಶಾಖೆಗೆ ವಹಿಸುವುದು ಅಗತ್ಯ. ವಕೀಲರುಗಳ ಪೈಕಿ ಹಿರಿಯರು ಮತ್ತು ಕಿರಿಯರೆಂಬ ಪ್ರತ್ಯೇಕ ವರ್ಗಗಳಿರುವುದರಿಂದ ಪ್ರಯೋಜನವುಂಟು. ಕಿರಿಯರು ಹಿರಿಯರಿಂದ ಅನೇಕ ಅನುಭವಗಳನ್ನು ಪಡೆಯುವುದಲ್ಲದೆ ಶತಮಾನಗಳ ಮೂಲಭೂತವಾದ ಅಂಶಅಂಶಗಳನ್ನು ಶಾಸ್ತ್ರ ಸಾಹಿತ್ಯಗಳನ್ನು ಸಂಗ್ರಹಿಸುವುದರಲ್ಲಿ ಸಹಕಾರಿಗಳಾಗುವರು ಹಿರಿಯರು ಅವರಿಗೆ ಮಾರ್ಗದರ್ಶನ ಮಾಡುವುದಲ್ಲದೆ ಕಾನೂನಿನ ತತ್ವಗಳನ್ನು ನಿರೂಪಣೆಮಾಡುವುದಕ್ಕೆ ಮುಖ್ಯ ಗಮನ ಕೊಡುವರು – ಎಂದು ಅವರು ತಿಳಿಸಿದರು

ವಿದ್ಯುಚ್ಛಕ್ತಿ ಹರಿದು ಇಬ್ಬರು ಮಹಿಳೆಯರ ಮರಣ

ಮೈಸೂರು ೧೪

ನಗರದ ಎ. ರಾಮಣ್ಣನವರ ಬೀದಿಯಲ್ಲಿ ಈ ದಿನ ಬೆಳಗ್ಗೆ ಒಬ್ಬರ ಮನೆಯಲ್ಲಿ ವಿದ್ಯುಚ್ಛಕ್ತಿ ತಗಲಿ ಇಬ್ಬರು ಮಹಿಳೆಯರು ಮೃತಪಟ್ಟರು ಅವರಿಬ್ಬರೂ ಮನೆ ಕೆಲಸದವರೆಂದು ಹೇಳಲಾಗಿದೆ ಈ ಬೆಳಗ್ಗೆ ಅವರು ಬಟ್ಟೆ ಒಗೆಯುತ್ತಾ ತೊಯ್ದ ಬಟ್ಟೆಯನ್ನು ಒಣಗಿಸಲು ತಂತಿಯ ಮೇಲೆ ಹಾಕಿದಾಗ ಅದರಲ್ಲಿ ವಿದ್ಯುಚ್ಛಕ್ತಿಯು ಪ್ರವಹಿಸಿ ಈ ದುರಂತವು ನಡೆಯಿತು ಸುಮಾರು ೧೪ ೧೫ ವರ್ಷದ ಯಶೋದಮ್ಮನು ಮೊದಲೂ, ನಂತರ ಆಕೆಯ ಸಹಾಯಕ್ಕಾಗಿ ಬಂದ ಚನ್ನವೆಂಕಟಮ್ಮನೂ ಮೃತಪಟ್ಟರು ಹುಡುಗಿಗೆ ಸಧ್ಯದಲ್ಲೇ ವಿವಾಹವಾಗುವುದರಲ್ಲಿತ್ತು. ಅವರ ಶರೀರಗಳನ್ನು ಆಸ್ಪತ್ರೆಗೆ ಪರೀಕ್ಷೆಗಾಗಿ ಒಯ್ಯಲಾಯಿತು ದುರಂತವನ್ನು ನೋಡಲು ಅನೇಕರು ಸ್ಥಳಕ್ಕೆ ಬಂದು ಹೋಗುತ್ತಿದ್ದರು

ಮೈಸೂರು ತಾಲ್ಲೂಕಿನಲ್ಲಿ ಮಳೆ ಅಭಾವ

ಈ ವರ್ಷ ಇನ್ನೂ ಮಳೆ ಬೀಳದೆ ಈ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಜೋಳದ ಬಿತ್ತನೆ ಮಾಡಿಲ್ಲವೆಂದೂ, ಹಾಕಿದ್ದ ಪೈರು ಒಣಗಿ ನಿಂತಿರುವುದೆಂದೂ, ಕಳೆದ ವರ್ಷವೂ ಸಹ ಮಳೆಯಾಗದೆ ಅಭಾವವುಂಟಾಗಿತ್ತೆಂದೂ ಶ್ರೀ ಬಸವೇಗೌಡರು ಪತ್ರ ಬರೆದು ತಿಳಿಸಿರುತ್ತಾರೆ ಜನ ಮತ್ತು ದನಕರುಗಳಿಗೆ ಸರ್ಕಾರದವರು ಆಹಾರವನ್ನು ಸರಬರಾಜು ಮಾಡಿ, ರೆವಿನ್ಯೂ ಕಂದಾಯ ವಸೂಲಿಯನ್ನು ನಿಲ್ಲಿಸಬೇಕೆಂದೂ ಅವರು ಕೋರಿರುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೀತಾವಳಿ ೭-೧೫ ಹೆಚ್ ಎಸ್. ತಮ್ಮಯ್ಯ-ನಾದಸ್ವರ ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨ ಎಸ್. ಆರ್. ಪದ್ಮ-ಸಂಗೀತ. ೧೨-೩೦ ಮತ್ತು ೧-೫೦ ಟಿ ಶಕುಂತಲ-ಪಿಟೀಲು. ೧ ರಿಕಾರ್ಡು. ಸಂಜೆ ೬-೧೦ ಗೀತಾವಳಿ. ೭-೩೦ ವಚನಗಾನ ೮ ಹೆಚ್ ಎಸ್ ತಮ್ಮಯ್ಯ ನಾದಸ್ವರ ೮-೩೦ ರಾಷ್ಟ್ರೀಯ ಕಾರ್ಯಕ್ರಮ-ದೆಹಲಿ ರಿಲೆ ೮-೫೦ ಸಿತಾರ್ ೯-೧೫ ಆರ್. ಕೆ. ರಾಮನಾಥ-ಸಂಗೀತ.

ನ್ಯಾಯ ನಿರ್ವಹಣೆಯಿಂದ ಲಾಭ ಪಡೆಯುವ ಉದ್ದೇಶವು ಯಾವ ರಾಜ್ಯಕ್ಕೂ ಇರಬಾರದು. ಬಡವರಾಗಲೀ, ಬಲ್ಲಿದರಾಗಲೀ ಎಲ್ಲರಿಗೂ ಸುಲಭ ರೀತಿಯಲ್ಲಿ ನ್ಯಾಯವು ದೊರೆಯಲು ಅವಕಾಶವಾಗಬೇಕು ನಮ್ಮ ವಕೀಲರುಗಳ ಸಂಘಗಳೂ, ಲಾ ಕಾಲೇಜುಗಳೂ ನ್ಯಾಯ ನಿರ್ವಹಣೆಯ ಉದಾತ್ತ ದರ್ಶನವನ್ನು ಸಾಧಿಸುವ ಬಗ್ಗೆ ಗಮನ ಕೊಡದಿರುವುದು ಶೋಚನೀಯವಾಗಿದೆ. ನಮ್ಮ ದೇಶದ ಪುರಾತನ ಧರ್ಮಕರ್ತರಾದ ಮನು ಮುಂತಾದ ಮಹರ್ಷಿಯರುಗಳು ಈ ಬಗ್ಗೆ ಮುಖ್ಯ ಗಮನ ಕೊಟ್ಟಿದ್ದರು. ಅವರ ಆದರ್ಶವನ್ನು ನಮ್ಮ ಇಂದಿನ ವಕೀಲರುಗಳು ಅನುಸರಿಸುವುದು ಸೂಕ್ತವಾಗಿದೆ–ಎಂದು ಅವರು ಹೇಳಿ ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು.

ಕೇರಳದಲ್ಲಿ ಪ್ರಜಾಪ್ರಭುತ್ವ

ಕಮ್ಯೂನಿಸ್ಟ್ ಸಚಿವ ಕೆ ಸಿ ಜಾರ್ಜರ ಭಾಷಣ

ಮೈಸೂರು ೧೪

ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದ ಸಂಘದವರು ನೆನ್ನೆ ಕೇರಳದ ಆಹಾರ ಮಂತ್ರಿ ಶ್ರೀ ಕೆ ಸಿ. ಜಾರ್ಜ್ ಮತ್ತು ಭಾರತ ಸರ್ಕಾರದ ವೈಜ್ಞಾನಿಕ ಸಂಶೋಧನಾ ವಿಭಾಗದ ಡೈರೆಕ್ಟರ್ ಜನರಲ್ ಪ್ರೊಫೆಸರ್ ಎಂ. ಎಸ್ ಥ್ಯಾಕರ್‌ರವರ ಗೌರವಾರ್ಥವಾಗಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಸಂಶೋಧನಾಲಯದ ಡಾ|| ವಿ ಸುಬ್ರಹ್ಮಣ್ಯಂರವರು ಸ್ವಾಗತ ಭಾಷಣ ಮಾಡಿ,ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು

ಶ್ರೀ ಕೆ ಸಿ. ಜಾರ್ಜರು ಭಾಷಣ ಮಾಡಿ, ಕೇರಳದಲ್ಲಿ ಆಹಾರ ಪರಿಸ್ಥಿತಿಯು ಕಷ್ಟವಾಗಿರುವುದೆಂದೂ, ಸಂಶೋಧನಾಲಯದವರು ತಯಾರಿಸುವ ಕೃತಕ ಅಕ್ಕಿಯನ್ನು ಪಡೆಯಲು ತಾವು ಬಂದಿರುವುದಾಗಿಯೂ ತಿಳಿಸಿದರು. ಕೇರಳದಲ್ಲಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದಿರುವ ಬಗ್ಗೆ ಆಶ್ಚರ್ಯ ಪಡಬೇಕಾದುದೇನೂ ಇಲ್ಲವೆಂದೂ, ಚುನಾವಣೆ ಮೂಲಕ ತಾವು ಅಧಿಕಾರವನ್ನು ಪಡೆದಿರುವುದಾಗಿಯೂ, ಪ್ರಜಾಪ್ರಭುತ್ವ ರೀತಿಯಲ್ಲೇ ತಾವು ಕಾರ್ಯಸಾಧನೆ ಮಾಡುವುದಾಗಿಯೂ ಅವರು ಹೇಳಿದರು. ತಮ್ಮ ಸರ್ಕಾರದವರು ಕೈಗೊಳ್ಳಲಿರುವ ಕಾರ್ಯಕ್ರಮಗಳನ್ನು ಅವರು ವಿವರಿಸಿದರು.

ಪ್ರೊ|| ಥ್ಯಾಕರ್‌ರವರು ತಮ್ಮ ಭಾಷಣದಲ್ಲಿ ಸಂಶೋಧನಾ ಕೇಂದ್ರವು ಚೆನ್ನಾಗಿ ಕೆಲಸ ನಿರ್ವಹಿಸುತ್ತಿರುವುದೆಂದೂ, ಅದರ ಕೆಲಸಕಾರ್ಯವನ್ನು ಕಮ್ಯೂನಿಸ್ಟ್ ಸಚಿವರು ಹೊಗಳಿರುವುದೇ ಅದಕ್ಕೆ ನಿದರ್ಶನವೆಂದೂ ಹೇಳಿದರು ಕುಮಾರಿ ನಂದಿನಿಯ ನೃತ್ಯ ಮತ್ತು ಷೇಕ್ಸ್‌ಪಿಯರನ ನಾಟಕ ಪ್ರದರ್ಶನಗಳಾದುವು.

ಟಿಬೆಟ್ಟಿನಿಂದ ಚೀಣಾದ ಸೈನಿಕರ ವಾಪಸು

ಚೀಣಾದ ಸೈನ್ಯಗಳು ಟಿಬೆಟ್ಟಿನಿಂದ ಕ್ರಮಕ್ರಮವಾಗಿ ವಾಪಸಾಗಲು ಆರಂಭವಾಗಿರುವುದೆಂದು ನೇಪಾಳದ ರಾಜಧಾನಿ ಖಟ್ಮಂಡುವಿಗೆ ವಾರ್ತೆ ಬಂದಿದೆ. ಟಿಬೆಟ್ಟನ್ನು ಸ್ವಪ್ರಭುತ್ವ ಪ್ರದೇಶವೆಂದು ಅಂಗೀಕರಿಸಿದ ಮೇಲೆ ಈ ಕ್ರಮವು ಕೈಗೊಳ್ಳಲ್ಪಟ್ಟಿದೆ. ಚೀಣರು ಬಿಟ್ಟುಹೋದ ಸ್ಥಳಗಳಲ್ಲಿ ಟಿಬೆಟ್ ಜನರ ಸೈನ್ಯಗಳನ್ನು ಏರ್ಪಡಿಸಲಾಗುತ್ತಿದೆ.

ತಂಜಾವೂರು ಬಳಿ ಹೋಟೇಲು ಪಿಕೆಟಿಂಗ್

ತಂಜಾವೂರು ಬಳಿ ಪಾಪನಾಶಂನಲ್ಲಿರುವ ವಸಂತ ಹೋಟೇಲು ಮುಂಭಾಗದಲ್ಲಿ ಹಲವಾರು ದಿನಗಳಿಂದ ದ್ರಾವಿಡ ಸಂಘದವರು ಪಿಕೆಟಿಂಗ್ ನಡೆಸುತ್ತಿರುವರು. ಹೋಟೇಲಿನ ಮೇಲೆ ಬರೆದಿರುವ ಬ್ರಾಹ್ಮಣ ಎಂಬ ಪದವನ್ನು ಅಳಿಸುವುದೇ ಅವರ ಉದ್ದೇಶ. ಹೋಟೇಲು ಮಾಲೀಕರಾದ ಶ್ರೀ ಚಟ್ಟಿಯಾರ್ ಎಂಬುವರು ಹೆಸರನ್ನು ತೆಗೆಯಲು ಸಮ್ಮತಿಸಲಿಲ್ಲ ಅಲ್ಲಿ ಪೋಲೀಸು ಕಾವಲು ಹಾಕಲ್ಪಟ್ಟಿದೆ

ದ್ವಿತೀಯ ಯೋಜನೆ ಸಾರ್ಥಕವಾಗಲು ಸಾಧನ ಸಂಪತ್ತುಗಳ ಶೇಖರಣೆ

ಪಾರ್ಲಿಮೆಂಟಿನಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ನೆನ್ನೆ ಪಾರ್ಲಿಮೆಂಟಿನ ಜಂಟಿ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿ, ದ್ವಿತೀಯ ಯೋಜನೆಯ ಸಾಫಲ್ಯಕ್ಕಾಗಿ ಸಾಧನ ಸಂಪತ್ತುಗಳನ್ನು ಕ್ರಮವಾಗಿ ಶೇಖರಿಸಬೇಕೆಂದೂ, ಅವಶ್ಯಕವಿದ್ದರೆ ಯೋಜನೆಯನ್ನು ಪುನರ್ವಿಮರ್ಶಿಸಬೇಕೆಂದೂ ತಿಳಿಸಿದರು ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಕಳವಳವಾಗಿಲ್ಲವಾದರೂ ತೀವ್ರವಾಗಿರುವುದೆಂದೂ, ಅದರ ಪರಿಹಾರಕ್ಕೆ ಸರ್ಕಾರದವರು ಕೈಗೊಳ್ಳುವ ಪ್ರಯತ್ನದಲ್ಲಿ ಸಾರ್ವಜನಿಕರ ಸಹಕಾರವು ಅಗತ್ಯವೆಂದೂ ಅವರು ನುಡಿದರು. ಆಹಾರ ಅಭಾವದ ಬಗ್ಗೆ ಅನವಶ್ಯಕವಾದ ಭಯ, ಸಂಶಯಗಳು ಇರಬಾರದೆಂದೂ ನುಡಿದರು.

ಅಣು ಶಸ್ತ್ರಗಳ ಪರೀಕ್ಷೆಗಳನ್ನು ನಿಷೇಧಿಸುವುದರ ಅಗತ್ಯವನ್ನು ಅವರು ಒತ್ತಿಹೇಳಿದರು ಸೂಯೆಜ್ ಕಾಲುವೆಯು ಹಡಗು ಸಂಚಾರಕ್ಕೆ ಪುನಃ ಅನುಕೂಲವಾದ ಬಗ್ಗೆ ಅವರು ಹರ್ಷವನ್ನು ಸೂಚಿಸಿದರು

ಉಪಾಧ್ಯಕ್ಷ ಡಾ||ರಾಧಾಕೃಷ್ಣನ್‌ರವರು ರಾಜ್ಯಸಭೆಯಲ್ಲಿ ಮಾತನಾಡಿ, ರಾಷ್ಟ್ರಕ್ಕೆ ಧೈರ್ಯ, ಸಾಹಸ ಮತ್ತು ದೂರದೃಷ್ಟಿಯುಳ್ಳ ನಾಯಕತ್ವವು ಅಗತ್ಯವೆಂದು ಸೂಚಿಸಿದರು

ರಾಷ್ಟ್ರಾಧ್ಯಕ್ಷ-ಉಪಾಧ್ಯಕ್ಷರಿಂದ ಪ್ರಮಾಣ ವಚನ ಸ್ವೀಕಾರ

ಡಾ|| ರಾಜೇಂದ್ರ ಪ್ರಸಾದರು ಎರಡನೇ ಬಾರಿ ರಾಷ್ಟ್ರಾಧ್ಯಕ್ಷತೆಯನ್ನು ವಹಿಸಿಕೊಳ್ಳುವ ಮೊದಲು ನೆನ್ನೆ ದೆಹಲಿಯಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದರು. ಸುಪ್ರೀಂ ಕೋರ್ಟ್ ಪ್ರಧಾನ ನ್ಯಾಯಾಧೀಶ ಶ್ರೀ ಸುಧಿ ರಂಜನ ದಾಸರಮುಂದೆ ಅವರು ಪ್ರಮಾಣ ವಚನವನ್ನು ತೆಗೆದುಕೊಂಡರು. ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು.

ಈ ಸಮಾರಂಭವಾದನಂತರ, ಅವಿರೋಧವಾಗಿ ಉಪಾಧ್ಯಕ್ಷತೆಗೆ ಆರಿಸಲ್ಪಟ್ಟಿರುವ ಡಾ||ರಾಧಾಕೃಷ್ಣನ್‌ರವರು ರಾಷ್ಟ್ರಾಧ್ಯಕ್ಷರ ಮುಂದೆ ಪ್ರಮಾಣ ವಚನ ಕೈಗೊಂಡರು. ಸಮಾರಂಭಕ್ಕಾಗಿ ರಾಷ್ಟ್ರಾಧ್ಯಕ್ಷರು ಸಾರೋಟು ಗಾಡಿಯಲ್ಲಿ ಪಾರ್ಲಿಮೆಂಟ್ ಭವನಕ್ಕೆ ಆಗಮಿಸಿದರು.

ಬ್ರಿಟನ್ನಿನ ಸೂಯೆಜ್ ಕಾಲುವೆ ಬಹಿಷ್ಕಾರ ಮುಕ್ತಾಯ

ಬ್ರಿಟಿಷ್ ಹಡಗುಗಳು ಸೂಯೆಜ್ ಕಾಲುವೆ ಮೂಲಕ ಹೋಗಬಾರದೆಂದು ಅಲ್ಲಿನ ಸರ್ಕಾರದವರು ಹಾಕಿದ್ದ ಬಹಿಷ್ಕಾರವು ಈಗ ಮುಕ್ತಾಯವಾಗಿದೆ. ನೆನ್ನೆ ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್‌ಮಿಲನ್‌ರವರು ಪಾರ್ಲಿಮೆಂಟಿನಲ್ಲಿ ಮಾತನಾಡಿ ಇನ್ನುಮುಂದೆ ಬ್ರಿಟಿಷ್ ಹಡಗುಗಳು ಕಾಲುವೆ ಮೂಲಕ ಹೋಗುವುವೆಂದು ತಿಳಿಸಿದರು ಈ ಕಾಲುವೆ ಸುಂಕವನ್ನು ಬ್ರಿಟಿಷ್ ನಾಣ್ಯಗಳಲ್ಲಿ ಕೊಡಲಾಗುವುದೆಂದೂ ಅವರು ಹೇಳಿದರು

ಅಣು ಶಸ್ತ್ರ ಪರೀಕ್ಷೆಯ ವಿರೋಧಕ್ಕಾಗಿ ಮಹಿಳೆಯರ ಯಾತ್ರೆ

ಬ್ರಿಟನ್ನು ಅಣು ಶಸ್ತ್ರ ಪರೀಕ್ಷೆಗಳನ್ನು ನಿಲ್ಲಿಸುವಂತೆ ಒತ್ತಾಯಪಡಿಸಲು ಬ್ರಿಟನ್ನಿನ ೨೫೦ ಮಂದಿ ಮಹಿಳೆಯರು ಶೋಕ ಸೂಚಕ ಕಪ್ಪು ಉಡುಪುಗಳನ್ನು ಧರಿಸಿ ಬ್ರಿಟನ್ನಿನ ಪ್ರಧಾನಿಯವರ ಅಧಿಕೃತ ನಿವಾಸಕ್ಕೆ ಕಳೆದ ೮ನೇ ತಾರೀಕು ಹೋಗಿದ್ದರು ಅವರು ಮನವಿ ಪತ್ರವೊಂದನ್ನು ಒಪ್ಪಿಸಲು ಉದ್ದೇಶಿಸಿದ್ದರು ಬ್ರಿಟಿಷ್ ಜನಾಂಗವು ಉಳಿಯಲು ಅಣು ಶಸ್ತ್ರಗಳ ಸನ್ಯಾಸವು ಅವಶ್ಯಕವೆಂದೂ, ಈ ಅಸ್ತ್ರಗಳ ಪರೀಕ್ಷೆಯಿಂದ ಮಹಿಳೆಯರಿಗೆ ದಂಗು ಬಡಿದಂತಾಗಿದೆಯೆಂದೂ ಮನವಿಯಲ್ಲಿ ತಿಳಿಸಲಾಗಿದೆ

ಆಲಿಕಲ್ಲು ಮಳೆಯಿಂದ ೧,೮೦೦ ಎಕರೆ ಭತ್ತದ ಪೈರು ನಾಶ

ಚಳ್ಳಕೆರೆ ತಾಲ್ಲೂಕಿನ ರಾಣಿಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಕಳೆದ ಶುಕ್ರವಾರ ೨೦ ನಿಮಿಷ ಆಲಿಕಲ್ಲು ಮಳೆಯಾಗಿ ೧,೮೦೦ ಎಕರೆ ಜಮೀನಿನಲ್ಲಿ ಭತ್ತದ ಪೈರು ನಾಶವಾಗಿರುವುದೆಂದೂ, ೩-೪ ಲಕ್ಷ ರೂ ನಷ್ಟವಾಗಿರಬಹುದೆಂದೂ ವರದಿಯಾಗಿದೆ

ಬ್ಯಾಡ್ಮಿಂಟನ್ ಪಂದ್ಯ

ಮೊನ್ನೆ ಪೋಲೀಸ್ ಶಿಕ್ಷಣಶಾಲಾ ಕ್ರೀಡಾ ಕ್ಲಬ್ಬಿನವರಿಗೂ ಮತ್ತು ಅಗ್ರಹಾರದ ಜಾಲಿ ಯೂನಿಯರ್ ಕ್ಲಬ್ಬಿನವರಿಗೂ ನಡೆದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಪೋಲೀಸು ಕ್ಲಬ್ಬಿನವರು ಜಯಗಳಿಸಿರುತ್ತಾರೆ

ಶ್ರೀರಾಮಾ ಲೀಗ್ ತರಗತಿಗಳು

ರಾಜಧಾನಿಯಲ್ಲಿರುವ ಶ್ರೀರಾಮಾ ಲೀಗಿನಲ್ಲಿ ಮಾಮೂಲಿನಂತೆ ಇದೇ ಮಾಹೇ ೧೫ನೇ ತಾರೀಕಿನಿಂದ ಪಾಠಪ್ರವಚನಗಳು ಪ್ರಾರಂಭವಾಗುತ್ತವೆ ಸೇರಬಯಸುವವರು ಸಂಸ್ಥೆಯ ಅಧ್ಯಕ್ಷರನ್ನು ವಾಣಿವಿಲಾಸ ರೋಡಿನಲ್ಲಿರುವ ೮೭೭ನೇ ನಂಬರು ಮನೆಯಲ್ಲಿ ವಿಚಾರಿಸಬಹುದು ಹಿಂದಿ ತರಗತಿಗಳನ್ನೂ ಸಹ ನಡೆಸಲಾಗುವುದು.

ಅಖಿಲ ಭಾರತ ಆಯುರ್ವೇದ ಸಮ್ಮೇಳನ

ಬೆಂಗಳೂರಿನಲ್ಲಿ ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ೪೩ನೇ ಸಮ್ಮೇಳನವು ಬರುವ ತಿಂಗಳು ೧೫, ೧೬ ಮತ್ತು ೧೭ನೇ ತಾರೀಕು ನಡೆಯುವುದು ಅದಕ್ಕಾಗಿ ಮಾಜಿ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ ೧೪ನೇ ತಾರೀಕು ಕರ್ನಾಟಕಪ್ರಾದೇಶಿಕ ಆಯುರ್ವೇದ ಸಮ್ಮೇಳನವೂ ಏರ್ಪಾಡಾಗಿದೆ ೧೩ನೇ ತಾರೀಕಿನಿಂದ ಆಯುರ್ವೇದ ವಸ್ತು ಪ್ರದರ್ಶನವೂ ಜರುಗುವುದು ಸಮ್ಮೇಳನಕ್ಕೆ ಸಂಸ್ಥಾನದ ಹಲವಾರು ಪೌರಸಭೆಗಳು ಸಹಾಯ ನೀಡುತ್ತಿವೆ ಸುಮಾರು ೬,೦೦೦ಮಂದಿ ವೈದ್ಯರು ಭಾಗವಹಿಸುವ ನಿರೀಕ್ಷೆಯಿದೆ ಪ್ರತಿನಿಧಿಗಳಿಗೆ ಅರ್ಧ ರೈಲು ಚಾರ್ಜಿನ ರಿಯಾಯಿತಿಯಿದೆ ಸಮ್ಮೇಳನಕ್ಕೆ ಬರುವವರು ೫ ರೂ ಗಳನ್ನು ಸ್ವಾಗತ ಸಮಿತಿಯವರಿಗೆ ಕಳುಹಿಸಿದರೆ ಅವರಿಗೆ ರೈಲ್ವೆ ರಿಯಾಯಿತಿ ಫಾರಂಗಳನ್ನು ಕಳುಹಿಸಿಕೊಡಲಾಗುವುದು

SARADA TUTORIAL INSTITUTE

Sarada Vilas High School Buildings
MYSORE

Coaching classes for the benefit of failed S S L C. students will commence work from 20-5-1957 The classes will work all the seven days in the week. Admissions will be received in the office between 9-30 and 11 A M on working days

K V Narayan,
Organiser

Edited, Printed and Published by
A. R. Nagarajan at Sadhvi Press,
D Subbiah Road, Mysore

ಒಂದೇ ದಿನದಲ್ಲಿ ರಷ್ಯದ ಅಸ್ತ್ರಗಳಿಂದ ಅಮೆರಿಕದ ನಾಶ ಸಾಧ್ಯ

ಒಂದೇ ದಿನ ಅಮೆರಿಕವನ್ನು ನಾಶಮಾಡುವಷ್ಟು ಶಕ್ತಿಯು ರಷ್ಯಕ್ಕೆ ಇರುವುದೆಂದು ಅಮೆರಿಕದ ರಕ್ಷಣಾ ಇಲಾಖೆಯ ಹೇಳಿಕೆಯೊಂದು ತಿಳಿಸಿದೆ ಈ ಭಯವನ್ನು ನಿವಾರಿಸಲು ಅಮೆರಿಕದ ವಾಯುಮಂಡಲದ ಶಕ್ತಿಯನ್ನು ಹೆಚ್ಚಿಸಲಾಗುತ್ತಿರುವುದೆಂದೂ, ರಷ್ಯದ ದೂರಗಾಮಿ ಶಸ್ತ್ರಗಳ ಭೀತಿಯೂ ಹಾಗೆಯೇ ಹೆಚ್ಚುತ್ತಿರುವುದಾಗಿಯೂ ಹೇಳಲಾಗಿದೆ

ಮಾಧ್ವ ಮಂಡಲದ ಸಭೆ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ನಗರ ಶಾಖೆಯ ಸರ್ವ ಸದಸ್ಯರ ಸಭೆಯು ಇದೇ ೧೯ನೇ ತಾರೀಕು ಭಾನುವಾರ ಬೆಳಗ್ಗೆ ೮॥ ಗಂಟೆಗೆ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ವ್ಯಾಸರಾಜಸ್ವಾಮಿಗಳವರ ವಿದ್ಯಾ ಪ್ರಸನ್ನ ಮಂದಿರದಲ್ಲಿ ನಡೆಯುವುದು. ಮಂಡಲದ ಘಟನೆ, ಉಪನಿಬಂಧನೆಗಳನ್ನು ಪರಿಶೀಲಿಸುವುದು, ಅಧಿಕಾರ ವರ್ಗ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸುವುದು ಮುಂತಾದ ಕಾರ್ಯಕ್ರಮಗಳಿವೆ

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮತ್ತು ಕೊಯಮತ್ತೂರು	೪೦	೦೦	೪೪	೭೫
ರತ್ನಚೂಡಿ	೩೯	೪೬	೪೧	೬೨
ಕಡ್ಡಿ	೪೧	೦೦	೪೩	೭೫
ರಾಗಿ	೪೪	೧೨	೪೬	೪೬
ಜೋಳ	೪೧	೬೨	೪೪	೧೨
ನವಣೆ	೨೬	೧೨		
ಕಡಲೆಕಾಯಿ	೧೯	೬೨	೨೪	೫೦
ಹುಚ್ಚೆಳ್ಳು	೪೮	೭೫	೪೬	೦೦
ಹೊಂಗೇಬೀಜ	೨೯	೦೦	೨೬	೭೫
ತೊಗರಿ	೪೦	೮೭	೪೪	೫೦
ಹೆಸರು	೪೯	೬೨	೫೧	೬೨
ಹಲಸಂದೆ	೫೫	೦೦	೫೬	೭೫
ಅವರೆ	೪೦	೦೦	೫೦	೧೨
ಧನಿಯ	೨೫	೦೦		
ಕಡಲೆ	೪೪	೩೭		
ಹರಳಿನ ಬೀಜ	೩೬	೧೨		
ಹುಣಸೆಬೀಜ	೫	೦೦	೫	೫೬
ಹುಣಸೇಹಣ್ಣು	೨	೪೬	೪	೫೦
ಸೀಗೆಕಾಯಿ	೬	೭೫		
ಮೆಣಸಿನಕಾಯಿ	೧೫	೬೨	೨೦	೪೬
ತೆಂಗಿನಕಾಯಿ	೧೫೦	೫೦	೨೭೬	೦೦

ನೋಟೀಸು

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ.—

ಮೈಸೂರು ಅರಮನೆ ರಾಯಸಕಛೇರಿ ಡೈರಿ ಫಾರಮ್ಮಿಗೆ ಸೇರಿದ ಸುಮಾರು 130 ರಾಸು (ಹಸುಗಳು, ಕರುಗಳು, ಹೆಂಗರುಮತ್ತು ಹೋರಿಗರುಗಳು, ಮುರಾ ಜಾತಿಯ ಕೋಣಗಳು, ಕರುಗಳು ಮತ್ತು ಕಲಹೀರಿ ಆಕುಗಳು)ಗಳನ್ನು ಅರಮನೆ ಹರಾಜು ಷರತ್ತುಗಳಿಗೆ ಒಳಪಡಿಸಿ ತಾರೀಖು 19-5-57 ಮತ್ತು 20-5-57ನೇ ಬೆಳಗ್ಗೆ 9-30 ಘಂಟೆಗೆ ಅರಮನೆ ಬಳಿ ಇರುವ ಶ್ರೀ ಕೃಷ್ಣರಾಜೇಂದ್ರ ಧರ್ಮ ಶಾಲೆ (ಕರೋ ಹಟ್ಟಿ)ಯಲ್ಲಿ ಹರಾಜು ಮಾಡಲಾಗುವುದು. ಇಷ್ಟಪಟ್ಟವರು ಬಿಡ್ ಮಾಡಿ ರಾಸುಗಳನ್ನು ಪಡೆಯಬಹುದು. ಇತರ ವಿವರಗಳನ್ನು ಈ ಕೆಳಗೆ ರುಜು ಮಾಡಿರುವವರಿಂದ ತಿಳಿಯಬಹುದು.

(ಸಹಿ) ಎಂ ನಾಗಭೂಷಣ್,
ಮ್ಯಾನೇಜರ್,
ಅರಮನೆ ರಾಯಸಕಛೇರಿ ಡೈರಿ ಫಾರಂ

ಬದರೀನಾಥಕ್ಕೆ ಮೈಸೂರಿನವರ ಯಾತ್ರೆ

ದೇವಪ್ರಯಾಗ ೧೩

ಬದರೀನಾಥನ ದರ್ಶನಕ್ಕಾಗಿ ಕಳೆದ ವಾರ ನಗರದಿಂದ ಯಾತ್ರೆ ಹೊರಟ ಸೌಭಾಗ್ಯ ಸ್ಟೋರ್ಸಿನ ಶ್ರೀ ಎಂ. ಗೋಪಾಲರಾವ್, ಸಂತೇಪೇಟೆ ವರ್ತಕರಾದ ಶ್ರೀ ಹುಲಿಯಪ್ಪ ಮತ್ತು ಇತರ ೪ ಮಹನೀಯರು ಋಷೀಕೇಶದ ಗೌರಿಕುಂಡ, ಗೀತಾ ಭವನ ಕಂಕಲ್‌ಗಳಿಗೆ ಭೇಟಿಯಿತ್ತರು ಅವರುಗಳು ಋಷೀಕೇಶದ ಶಿವಾನಂದ ಸ್ವಾಮಿಗಳ ದರ್ಶನ ಮಾಡಿ ಅವರ ಆಶೀರ್ವಾದವನ್ನು ಪಡೆದರು ಮೈಸೂರು ಸಂಸ್ಥಾನದಿಂದ ಅನೇಕ ಮಂದಿ ಯಾತ್ರಿಕರು ಆಗಮಿಸಿರುತ್ತಾರೆ

ಬಸ್ಸು ಕಾಲುವೆಗೆ ಮಗುಚಿಕೊಂಡು ಇಬ್ಬರ ಮರಣ

ಭೀಮಾವರದ ಬಳಿ ಜಾಮೆರ್ರು ಮತ್ತು ಉಪ್ಪುಕೆರು ಎಂಬ ಗ್ರಾಮದ ನಡುವೆ ಕಳೆದ ಮಂಗಳವಾರ ಸಂಚರಿಸುತ್ತಿದ್ದ ಒಂದು ಪ್ರಯಾಣಿಕರ ಬಸ್ಸು ಉಪ್ಪುಕೆರು ಗ್ರಾಮದ ಬಳಿ ಒಂದು ಸೇತುವೆ ಕೊನೆಯಲ್ಲಿ ನಿಲ್ಲಲಾಗಿ, ಅಲ್ಲಿಂದ ಅದನ್ನು ಬಿಡಲು ಪ್ರಯತ್ನಿಸಿದಾಗ ಬಸ್ಸು ಕಾಲುವೆಗೆ ಮಗುಚಿಕೊಂಡಿತು ಅದರಲ್ಲಿದ್ದ ಪ್ರಯಾಣಿಕರ ಪೈಕಿ ಹಲವರು ಕೆಳಕ್ಕೆ ಹಾರಿ ಬದುಕಿಕೊಂಡರು. ಇತರರು ನೀರಿನಲ್ಲಿ ಮುಳುಗಿ ಮೃತಪಟ್ಟರೆಂದೂ, ಇಬ್ಬರ 'ಶವಗಳನ್ನು ಪತ್ತೆಹಚ್ಚಲಾಯಿತೆಂದೂ ವರದಿಯಾಗಿದೆ.

ಮೈಸೂರಿನಲ್ಲಿ ಪ್ರತಿ ತಿಂಗಳು 17 ನೇ ತಾರೀಕು

ವಿಶ್ವ ವಿಖ್ಯಾತವಾಗಿರುವ

ನವರತ್ನಕಲ್ಪ
ದಿವ್ಯೌಷಧವನ್ನು ಕಂಡು ಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17 ನೇ ತಾರೀಕು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಬೆಳಗ್ಗೆ 7-30 ರಿಂದ ಸಂಜೆ 5 ಗಂಟೆಯವರೆಗೆ
ಭೇಟಿ ಮಾಡಬಹುದು ಫೋನ್ ನಂ 590
ಮೇಲ್ಕಂಡ ವಿಷಯವನ್ನು ಗಮನಿಸಿ ಅವರ ಪರಿಣತ
ವೈದ್ಯಕೀಯ ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು

ನವರತ್ನಕಲ್ಪ—ಉಪಯೋಗಿಸಿರಿ

ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪುಷ್ಯರಾಗ ಮತ್ತು ವೈಢೂರ್ಯ—ಈ 9 ಅಮೂಲ್ಯ ಹರಳುಗಳ ಸಂಯೋಗ ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಸಂಬಂಧದ ವ್ಯಾಧಿಗಳು, ಬಿಳಿ ತೊನ್ನು, ರಕ್ತ ದೋಷ, ಮೂಲವ್ಯಾಧಿ, ನಾಳವ್ರಣ, ಬಹುಮೂತ್ರ, ಅಸ್ತಮಾ ಮತ್ತು ಇನ್ನು ಇತರೆ ಎಲ್ಲಾ ಸಾಮಾನ್ಯ, ಹಾಗೂ ತೀವ್ರವಾದ ಕಾಯಿಲೆಗಳೂ ಸಂಪೂರ್ಣವಾಗಿ ಗುಣಹೊಂದುವುವು. ಅಮೃತಕ್ಕೂ ಔಷಧಿ ಇದೊಂದೇ. ಉಚಿತ ಸಾಹಿತ್ಯಗಳಿಗಾಗಿ ಬರೆಯಿರಿ.

NAVRATNA KALPA PHARMACY,
JULLUNDUR CITY (India)

ನೆಹರೂರವರ ವಿದೇಶ ಯಾತ್ರೆ

ಬರುವ ತಿಂಗಳು ನೆಹರೂರವರು ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಹೋಗುವಾಗ ಅವರು ನಾರ್ವೇ, ಸ್ವೀಡನ್, ಡೆನ್ಮಾರ್ಕ್, ಹಾಲೆಂಡ್, ಈಜಿಪ್ಟ್ ಮತ್ತು ಇ ರಾಷ್ಟ್ರಗಳಿಗೆ ಭೇಟಿಯೀಯುವರು

SREE GAYATHRI TALKIES

From 14-5-57 : For 2 days

THE GIRL IN THE RED VELVET SWING

(Cinemascope in Colour)
Starring :-Ray Milland & Joan Collins

—: NEXT CHANGE :—

Rains of Ranchipur

With : Lana Turner

ಸದರನ್ ರೈಲ್ವೆ

ನೋಟೀಸು

ಮೈಸೂರು ರೈಲ್ವೆ ವಿಭಾಗದಲ್ಲಿ ಪದಾರ್ಥಗಳ ಮಾರಾಟದ ಕಂಟ್ರಾಕ್ಟು

ಮೈಸೂರು ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಮ್ಮಿನಲ್ಲಿ 3 ವರ್ಷಗಳ ಅವಧಿಗಾಗಿ ಬ್ರೆಡ್ಡು, ಹಣ್ಣುಗಳು, ಸೋಡಾ ಮುಂತಾದ ಪಾನೀಯಗಳು, ಬೀಡಿಗಳು, ಸಿಗರೇಟುಗಳು ಮತ್ತು ಮಿಠಾಯಿಗಳನ್ನು ಮಾರಾಟ ಮಾಡುವ ಬಗ್ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ಮುಖ್ಯವಾಗಿ ಮೈಸೂರು ನಿವಾಸಿಗಳಾಗಿರಬೇಕು ಮತ್ತು ವ್ಯಾಪಾರದಲ್ಲಿ ಅನುಭವ ಪಡೆದವರಾಗಿರಬೇಕು

2 ಈ ಸ್ಟಾಲನ್ನು ನಡೆಸಲು ರಹದಾರಿ ಶುಲ್ಕವು ವರ್ಷಕ್ಕೆ 2,400 ರೂ (ರೂಪಾಯಿಗಳು ಎರಡು ಸಾವಿರದ ನಾನೂರು ಮಾತ್ರ) ಆಗುವುದು ಮತ್ತು ಅದನ್ನು ತಲಾ 800 ರೂ (ಮೂರು ಸಮ ಕಂತುಗಳಲ್ಲಿ ಪಾವತಿ ಮಾಡಬೇಕು ಅಂಗೀಕೃತವಾದ ಕಂಟ್ರಾಕ್ಟರನು ಮೈಸೂರಿನಲ್ಲಿರುವ ಹಣ್ಣಿನ ಮಳಿಗೆಯಲ್ಲಿ ಅಂಗಡಿ ನಡೆಸಲು ಅವಕಾಶವೀಯಲಾಗುವುದು ರಹದಾರಿ ಶುಲ್ಕವನ್ನು ಪುನರ್ವಿಮರ್ಶಿಸುವ ವಿಚಾರವು ರೈಲ್ವೆ ಆಡಳಿತದವರ ವಿವೇಚನೆಗೆ ಒಳಪಟ್ಟಿದೆ

3. ಇದಲ್ಲದೆ ಅಂಗೀಕೃತವಾದ ಅರ್ಜಿದಾ ನು ಬಳಸುವವಿದ್ಯುಚ್ಛಕ್ತಿ ರುಸುಂ ಅನ್ನು ರೈಲ್ವೆ ಆಡಳಿತದವರು ಕಾಲಕಾಲಕ್ಕೆ ನಿಗದಿ ಮಾಡುವ ದರದಂತೆ ಕೊಡಬೇಕು

4. ಅರ್ಜಿಗಳನ್ನು "ಮೈಸೂರು ರೈಲ್ವೆ ಸ್ಟೇಷನ್ನಿನಲ್ಲಿ ಅಂಗಡಿ ನಡೆಸುವ ಕಾಂಟ್ರಾಕ್ಟಿನ ಬಗ್ಗೆ ಅರ್ಜಿ"-ಎಂದು ಮೇಲೆ ಬರೆದ ಲಕೋಟೆಯಲ್ಲಿಟ್ಟು, ಡಿವಿಜನಲ್ ಸೂಪರಿಂಟೆಂಡೆಂಟ್ (ಕಮ್ಮರ್ಷಿಯಲ್), ದಕ್ಷಿಣ ರೈಲ್ವೆ, ಮೈಸೂರು-ಈ ವಿಳಾಸಕ್ಕೆ 1957ನೇ ಮೇ 31 ತಾರೀಕು ಅಥವಾ ಅದಕ್ಕೆ ಮುಂಚೆ, ವರ ತಿಂಗಳ ಪಾವತಿ ಸರ್ಟಿಫಿಕೇಟಿನೊಡನೆ ಕಳುಹಿಸತಕ್ಕದ್ದು

ಪಿ ಬಿ. ಪದ್ಮನಾಭ,
ಮೈಸೂರು ಡಿವಿಜನಲ್ ಸೂಪರಿಂಟೆಂಡೆಂಟ್
7-5-1957

ವಿವಾಹ ಮತ್ತು ವಿಶೇಷ ಸಮಾರಂಭಗಳಿಗಾಗಿ

★ ನಾವು ಎಲ್ಲಾ ವಿಧವಾದ ದಿನಸಿಪದಾರ್ಥಗಳನ್ನು ಶುದ್ಧ ಮಾಡಿ ಸಿದ್ಧಪಡಿಸಿ, ಹೋಲ್‌ಸೇಲ್ ದರದಲ್ಲಿ ಒದಗಿಸಲು ಸಿದ್ಧವಾಗಿರುತ್ತೇವೆ

★ ಅಂತಹ ಸಮಾರಂಭಗಳಾದ ಮೇಲೆ ಉಳಿಯುವ ದಿನಸಿಪದಾರ್ಥಗಳನ್ನೆಲ್ಲಾ ಅದೇ ಬೆಲೆಗೆ ವಾಪಸು ಕೊಳ್ಳಲು ಸಹ ಏರ್ಪಡಿಸಿರುತ್ತೇವೆ.

ಒಂದು ಸಾರಿ ಪರೀಕ್ಷಿಸಿ ತೃಪ್ತಿಪಡಿರಿ.

ಬಾಂಬೆ ಆನಂದ ಭರ್ವ ಸ್ಟೋರ್ಸ್,

ಫೋನ್ ನಂ. 645 : ಕೃಷ್ಣರಾಜ ಸರ್ಕಲ್ : ಮೈಸೂರು

ವಾಪಸು ಸಾರವೂ ಮಾರಾಟದ ಸೌಕರ್ಯವುಂಟು.

ಟೆಲಿಫೋನ್ ನಂ. 792

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರಣಿ
ಸೀರೆಗಳು [illegible]
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್. 446

[illegible]

[illegible]
[illegible]
ಚಿನ್ನ ಬೆಳ್ಳಿ ಒಡವೆಗಳಿಗೆ
[illegible]
ಎ. ಎನ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೦೫] SADHVI WEDNESDAY 15—5—1957 ಮೈಸೂರು ಬುಧವಾರ ೧೫—೫—೧೯೫೭ [ಸಂಚಿಕೆ : ೨೬೦

ರೈಲ್ವೆ ಗೂಡ್ಸ್ ಮತ್ತು ಪಾರ್ಸಲ್ಲುಗಳ ಮೇಲೆ ಅಧಿಕ ದರ

ಜುಲೈ ೧ರಿಂದ ರೈಲ್ವೆ ಸಾರಿಗೆ ದರ ಹೆಚ್ಚಾಗುವುದು

ಲೋಕ ಸಭೆಯಲ್ಲಿ ರೈಲ್ವೆಮಂತ್ರಿಯವರ ಬಜೆಟ್ ಮಂಡನೆ

ರೈಲ್ವೆ ಮಂತ್ರಿ ಜಗಜೀವನರಾಂರವರು ನೆನ್ನೆ ಲೋಕ ಸಭೆಯಲ್ಲಿ ೫೭-೫೮ನೇ ಸಾಲಿನ ರೈಲ್ವೆ ಆಯವ್ಯಯ ಪಟ್ಟಿಯನ್ನು ಮಂಡಿಸಿ, ಪಂಚವಾರ್ಷಿಕ ಯೋಜನೆಯ ಅಂಗವಾಗಿ ವಿಸ್ತರಣೆ ಕಾರ್ಯವನ್ನು ವಿಶೇಷವಾಗಿ ಮಾಡಬೇಕಾಗಿರುವುದರಿಂದ, ಅದಕ್ಕಾಗಿ ೨೫೦ ಕೋಟಿ ರೂ ಗಳನ್ನು ದ್ವಿತೀಯ ಯೋಜನೆ ಅವಧಿಯಲ್ಲಿ ಹೆಚ್ಚಾಗಿ ಪಡೆಯಬೇಕಾಗಿರುವುದೆಂದು ತಿಳಿಸಿದರು. ಗೂಡ್ಸ್ ಮತ್ತು ಪಾರ್ಸಲ್‌ಗಳ ಸಾಗಾಣಿಕೆ ಮೇಲೆ ಇರುವ ಸಪ್ಲಿಮೆಂಟರಿ ದರವನ್ನು ಶೇಕಡ ೧೦ರಿಂದ ೧೨ಕ್ಕೆ ಬರುವ ಜುಲೈ ೧ರಿಂದ ಹೆಚ್ಚಿಸಲಾಗುವುದೆಂದು ಅವರು ಹೇಳಿದರು. ಹಲವು ವರ್ಗಗಳಿಗೆ ಕೊಡಲಾಗಿರುವ ರಿಯಾಯಿತಿಯು ಮುಂದುವರಿಯುವುದೆಂದೂ ಸೂಚಿಸಿದರು.

ಕೇಂದ್ರ ಹಣಕಾಸಿನ ಮಂತ್ರಿಯವರು ರೈಲ್ವೆ ಪ್ರಯಾಣದ ದರದ ವಿಷಯವನ್ನು ಪರಿಶೀಲಿಸುತ್ತಿರುವುದರಿಂದ ತಾವು ಅದರಲ್ಲಿ ಬದಲಾವಣೆಗಳೇನನ್ನೂ ಸೂಚಿಸಿಲ್ಲವೆಂದೂ ಜಗಜೀವನರಾಂರವರು ತಿಳಿಸಿದರು.

ಆಹಾರ ಧಾನ್ಯ ಮತ್ತು ದ್ವಿದಳ ಧಾನ್ಯ, ಗೊಬ್ಬರ, ಖಾದಿ ಬಟ್ಟೆ, ವೃತ್ತ ಪತ್ರಿಕೆಗಳು, ನ್ಯೂಸ್ ಪ್ರಿಂಟ್ ಮತ್ತು ಪುಸ್ತಕಗಳಿಗೆ ವಿನಾಯಿತಿ ಇದೆ.

ಕಮ್ಯೂನಿಸಮ್ಮಿಗೆ ಇರಾಕ್-ಸಾದಿ ಅರೇಬಿಯಾಗಳ ವಿರೋಧ

ಸಾದಿ ಅರೇಬಿಯಾ ಮತ್ತು ಇರಾಕುಗಳಿಗೆ ರಾಜಕೀಯ ಮತ್ತು ಆರ್ಥಿಕ ವಿಚಾರಗಳಲ್ಲಿ ಪೂರ್ಣ ಒಪ್ಪಂದವಾಗಿರುವುದೆಂದು ವರದಿಯಾಗಿದೆ. ಈ ಸಂಬಂಧವಾಗಿ ಅರೇಬಿಯಾ ದೊರೆ ಇಬ್ನ್ ಸಾದ್‌ರವರು ಇರಾಕಿನ ದೊರೆ ಫೈಸಲ್‌ರವರೊಡನೆ ಸಂಭಾಷಣೆ ನಡೆಸಿರುತ್ತಾರೆ. ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಶಾಹಿಯನ್ನು ನಿರ್ಮೂಲ ಮಾಡುವುದು ಮತ್ತು ಮಧ್ಯಪೂರ್ವಕ್ಕೆ ಒದಗಿರುವ ಅಪಾಯಗಳನ್ನು ನಿವಾರಿಸುವುದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಲು ಉಭಯ ದೊರೆಗಳೂ ಒಪ್ಪಿರುತ್ತಾರೆ. ಅರಬ್ ರಾಷ್ಟ್ರಗಳ ಮುಖಂಡರಲ್ಲಿರುವ ಭಿನ್ನಾಭಿಪ್ರಾಯವನ್ನು ಪರಿಹರಿಸಲೂ, ಅಮೇರಿಕದ ಸಹಾಯ ಯೋಜನೆಯನ್ನು ಒಪ್ಪಲೂ ದೊರೆಗಳು ತೀರ್ಮಾನಿಸಿರುವರು.

"ಹಸಿವಿನ ಬಾಧೆಗೆ" ಅವಾಮಿ ಲೀಗ್ ನಾಯಕ ತುತ್ತು

ಪೂರ್ವ ಪಾಕಿಸ್ತಾನದ ಮುನ್ಷಿಗಂಜ್ ಸಬ್ ಡಿವಿಷನ್ನಿನ ಅವಾಮಿ ಲೀಗ್ ಕಾರ್ಯದರ್ಶಿ ಅಬ್ದುಲ್ ಹಲೀಂರವರು ಹಸಿವಿನ ಬಾಧೆಯಿಂದ ಮೃತಪಟ್ಟಿರುವುದಾಗಿ ಢಾಕಾ ಮುಸ್ಲಿಂಲೀಗ್ ಪತ್ರಿಕೆಯೊಂದು ತಿಳಿಸಿದೆ. ಅವರು ದೊಡ್ಡ ಕುಟುಂಬಿಗಳೆಂದೂ, ಮನೆಯಲ್ಲಿರುವವರೆಲ್ಲರೂ ಅರೆ ಹೊಟ್ಟೆ ಊಟ ಮಾಡುತ್ತಿರುವರೆಂದೂ ಹೇಳಲಾಗಿದೆ.

ಆಹಾರದ ಬೆಲೆ ಹೆಚ್ಚಿರುವುದರ ತನಿಖೆಗಾಗಿ ಸಮಿತಿ

ದಾಸ್ತಾನಿನ ವಿರುದ್ಧ ಕ್ರಮದ ಬಗ್ಗೆ ಕೇಂದ್ರ ಆಹಾರ ಮಂತ್ರಿಯ ಹೇಳಿಕೆ

ಕೇಂದ್ರ ಆಹಾರ ಮಂತ್ರಿ ಅಜಿತ್ ಪ್ರಸಾದ ಜೈನರವರು ನೆನ್ನೆ ಲೋಕಸಭೆಯಲ್ಲಿ ಹೇಳಿಕೆಯೊಂದನ್ನಿತ್ತು ಆಹಾರ ಧಾನ್ಯದ ಸರಬರಾಜು ಪರಿಸ್ಥಿತಿಯಲ್ಲಿ ತೀವ್ರವಾದ ಕಷ್ಟಗಳೇನೂ ಆಗುವುದಿಲ್ಲವೆಂದು ಭರವಸೆಯಿತ್ತರು. ಹೆಚ್ಚು ಉತ್ಪತ್ತಿಯಾದರೂ, ಪದಾರ್ಥಗಳ ಬೆಲೆ ಏರುತ್ತಿರುವುದರ ಕಾರಣವನ್ನು ಕುರಿತು ತನಿಖೆ ನಡೆಸಲು ವಿಶೇಷ ಅಧಿಕಾರವುಳ್ಳ ಸಮಿತಿಯೊಂದನ್ನು ನೇಮಿಸಲಾಗುವುದೆಂದು ಅವರು ಸೂಚಿಸಿದರು. ಹೆಚ್ಚಿನ ಬೆಲೆ ಸಿಗುವುದೆಂಬ ಆಸೆಯಿಂದ ದಾಸ್ತಾನು ಮಾಡುವುದನ್ನೂ ಮತ್ತು ಬೆಲೆಯು ಅಸ್ವಾಭಾವಿಕವಾಗಿ ಏರುವುದನ್ನೂ ತಪ್ಪಿಸಲು ಸಮಿತಿಯವರು ಈ ಕೂಡಲೇ ಮತ್ತು ಕಾಲಕಾಲಕ್ಕೆ ತಮ್ಮ ಶಿಫಾರಸು ಮಾಡುವರೆಂದೂ ಸಚಿವರು ಹೇಳಿದರು. ಈ ವರ್ಷ ೨.೮೧ ಕೋಟಿ ಟನ್ ಅಕ್ಕಿಯನ್ನು ಬೆಳೆಯಲಾಗಿರುವುದೆಂದೂ, ಇದು ಹಿಂದಿನ ಎಲ್ಲಾ ಉತ್ಪನ್ನಗಳಿಗಿಂತಲೂ ಹೆಚ್ಚಿನದೆಂದೂ ಅವರು ನುಡಿದರು.

ರೈಲ್ವೆಯಲ್ಲಿ ಕುರುಡರು ಮತ್ತು ಕ್ಷಯ ರೋಗಿಗಳಿಗೆ ರಿಯಾಯಿತಿ

ಪ್ರಯಾಣಿಕರ ಹೆಚ್ಚಿನ ಸೌಕರ್ಯಕ್ಕಾಗಿ ೩ ಕೋಟಿ ರೂ ವೆಚ್ಚ

ಭಾರತದ ರೈಲ್ವೆಗಳಲ್ಲಿ ಕುರುಡರು ಒಬ್ಬೊಬ್ಬ ಸಹಾಯಕರೊಡನೆ ಒಂದೇ ಚಾರ್ಜ್ ಕೊಟ್ಟು ಪ್ರಯಾಣ ಮಾಡಲು ರಿಯಾಯಿತಿ ಕೊಡಲಾಗುವುದೆಂದು ಲೋಕಸಭೆಯಲ್ಲಿ ರೈಲ್ವೆ ಮಂತ್ರಿ ಜಗಜೀವನರಾಂರವರು ತಿಳಿಸಿರುತ್ತಾರೆ. ಕ್ಷಯ ರೋಗಿಗಳೂ ಸಹ ಆಸ್ಪತ್ರೆ ಮತ್ತು ಸ್ಯಾನಿಟೋರಿಯಮ್ಮುಗಳಿಗೆ ಹೋಗಲೂ, ವಾಪಸು ಬರಲೂ ಇದೇ ರಿಯಾಯಿತಿಯನ್ನು ಪಡೆಯುವರೆಂದೂ ಅವರು ಹೇಳಿರುವರು.

ಪ್ರಯಾಣಿಕರ ಸೌಕರ್ಯವನ್ನು ಹೆಚ್ಚಿಸಲು ೩.೯೭ ಕೋಟಿ ರೂ ಗಳನ್ನು ಒದಗಿಸಲಾಗಿರುವುದೆಂದೂ, ಪ್ರಯಾಣವನ್ನು ಸಂತೋಷಪ್ರದ ಮತ್ತು ಸುಖಕರವಾಗಿ ಮಾಡಲು ಪ್ರಯತ್ನಿಸಲಾಗುವುದೆಂದೂ ಅವರು ಹೇಳಿರುವರು. ಎಲ್ಲಾ ರೈಲ್ವೆ ನಿಲ್ದಾಣಗಳಲ್ಲೂ ಕುಡಿಯುವ ನೀರಿನ ಸೌಕರ್ಯ ಮಾಡಿ, ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ [illegible] ಗಮನ ಕೊಡಲಾಗುವುದೆಂದೂ ಅವರು ಸೂಚಿಸಿರುವರು.

ಬೆಂಗಳೂರಿನಲ್ಲಿ ಡಾ|| ಮೋದಿಯವರ ನೇತ್ರ ಚಿಕಿತ್ಸಾ ಶಿಬಿರ

ಪದ್ಮಶ್ರೀ ಡಾ|| ಎಂ. ಸಿ. ಮೋದಿಯವರು, ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿನ ಆವರಣದಲ್ಲಿ ನಾಳಿದ್ದಿನಿಂದ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸುವರು. ಅವರು ಬೆಂಗಳೂರು ಜಿಲ್ಲೆಯಲ್ಲಿ ಸಂಚಾರ ಮಾಡಿ, ಸುಮಾರು ೫೦೦ ಮಂದಿ ನೇತ್ರ-ರೋಗಿಗಳನ್ನು ಪರೀಕ್ಷೆ ಮಾಡಿರುವರು.

ಸಂಯುಕ್ತ ಮಹಾರಾಷ್ಟ್ರ ಗುರಿ ಸಾಧನೆಗೆ ಸತ್ಯಾಗ್ರಹ-ಮುಷ್ಕರ

ಲೋಕಸಭೆಯಲ್ಲಿ ಡಾಂಗೆಯವರ ಹೇಳಿಕೆ

ಲೋಕಸಭೆಯಲ್ಲಿ ನೆನ್ನೆ ಎಸ್. ಎ. ಡಾಂಗೆಯವರು ರಾಷ್ಟ್ರಾಧ್ಯಕ್ಷರ ಭಾಷಣದ ಚರ್ಚೆಯಲ್ಲಿ ಮಾತನಾಡಿ ಸಂಯುಕ್ತ ಮಹಾರಾಷ್ಟ್ರದ ಸ್ಥಾಪನೆ ಗುರಿಯನ್ನು ಮನ್ನಿಸದಿದ್ದರೆ ಸತ್ಯಾಗ್ರಹ, ಸಾರ್ವತ್ರಿಕ ಮುಷ್ಕರ ಮತ್ತು ಹರತಾಳಗಳನ್ನು ಮಹಾರಾಷ್ಟ್ರದಲ್ಲೂ ಮತ್ತು ಬೊಂಬಾಯಿ ನಗರದಲ್ಲೂ ಮತ್ತೆ ಆರಂಭಿಸಲಾಗುವುದೆಂದು ತಿಳಿಸಿದರು. ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಪರವಾಗಿ ಅವರು ಲೋಕಸಭೆಗೆ ಆರಿಸಲ್ಪಟ್ಟಿರುವರು. ತಮ್ಮ ಸಮಿತಿಯು ಚುನಾವಣೆಗಳಲ್ಲಿ ಗಳಿಸಿರುವ ಯಶಸ್ಸನ್ನು ಅವರು ತಿಳಿಸಿ ಪ್ರಜಾಸತ್ತೆಯ ತೀರ್ಮಾನವನ್ನು ಗೌರವಿಸುವುದು ಅಗತ್ಯವೆಂದು ನುಡಿದರು. ಬೊಂಬಾಯಿ ನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸುವ ಪ್ರಶ್ನೆಯನ್ನು ಎಷ್ಟು ಗುಂಡು ಹಾರಿಸಿದರೂ ತಡೆಯಲು ಸಾಧ್ಯವಿಲ್ಲವೆಂದು ಅವರು ಹೇಳಿದರು. ಪ್ರಜಾಶಕ್ತಿಯನ್ನು ಗೌರವಿಸದೆ, ಅದನ್ನು ಬಂದೂಕಿನಿಂದ ದಮನ ಮಾಡಿದರೆ ಅದಕ್ಕೆ ಇನ್ನೂ ಬಲವಾದ ಉತ್ತರ ಕೊಡಬೇಕಾದೀತೆಂದು ಅವರು ಎಚ್ಚರಿಕೆಯಿತ್ತರು.

ರಾಷ್ಟ್ರಾಧ್ಯಕ್ಷರ ಚುನಾವಣೆ ಕ್ರಮಬದ್ಧತೆ ಬಗ್ಗೆ ಪುನಃ ರಿಟ್ ಅರ್ಜಿ

ಹಿಮಾಚಲ ಪ್ರದೇಶ ಮತ್ತು ಪಂಜಾಬಿನ ಭಾಗಗಳಲ್ಲಿ ಮಹಾ ಚುನಾವಣೆಗಳು ಆಗುವ ಮುಂಚೆ ರಾಷ್ಟ್ರಾಧ್ಯಕ್ಷರ ಚುನಾವಣೆಯನ್ನು ನಡೆಸುವುದರ ಕ್ರಮಬದ್ಧತೆಯನ್ನು ಪ್ರಶ್ನಿಸಿ ಹಿಂದೂ ಮಹಾ ಸಭೆಯ ಮಾಜಿ ಅಧ್ಯಕ್ಷ ಡಾ|| ಎನ್. ಬಿ. ಖರೆಯವರು ಸುಪ್ರೀಂ ಕೋರ್ಟಿನಲ್ಲಿ ನೆನ್ನೆ ಹೊಸ ಅರ್ಜಿಯೊಂದನ್ನು ಸಲ್ಲಿಸಿದರು. ಇವರ ಮೊದಲನೇ ಅರ್ಜಿಯನ್ನು ಅಕಾಲಿಕವೆಂದು ತಿರಸ್ಕರಿಸಲಾಗಿತ್ತು.

ದೊಡ್ಡರಾಯಪೇಟೆಯಲ್ಲಿ ಬಸವೇಶ್ವರ ಜಯಂತಿ

ಚಾಮರಾಜನಗರ ತಾಲ್ಲೂಕು ದೊಡ್ಡರಾಯಪೇಟೆಯಲ್ಲಿ ಕಣ್ಣೂರ ಸೇವಾ ಸಮಾಜದ ಆಶ್ರಯದಲ್ಲಿ ಕಳೆದ ಬುಧವಾರ ಬಸವೇಶ್ವರರ ಜಯಂತ್ಯುತ್ಸವದ ಅಂಗವಾಗಿ ಶ್ರೀ [illegible]ರವರ ಅಧ್ಯಕ್ಷತೆಯಲ್ಲಿ ಬಸವೇಶ್ವರರ ಮಹಿಮೆಯನ್ನು ಉಪನ್ಯಾಸದ ಮೂಲಕ ತಿಳಿಸಲಾಯಿತು.

ಬೆಂಗಳೂರು ರೇಡಿಯೋ ಕಾರ್ಯಕ್ರಮ

ಬೆಳಗ್ಗೆ ೭-೫ ಸಿತಾರ್ ೭ ೧೫ ಕನ್ನಡ ಗೀತೆಗಳು. ೭ ೩೦ ಮತ್ತು ೮-೧೫ ದೇವರ ನಾಮ ಮಧ್ಯಾಹ್ನ ೧೨ ಹೆಚ್ ಟಿ ಪುಟ್ಟಸ್ವಾಮಯ್ಯ-ಪಿಟೀಲು ೧೨-೩೦ ಮತ್ತು ೧-೩೦ ಗಾಯತ್ರಿ ಸುಬ್ಬರಾವ್-ಸಂಗೀತ. ೧ ರಿಕಾರ್ಡ್. ಸಂಜೆ ೬-೧೦ ದಾಸಪದ ಗೀತೆ ೬-೩೦ ಭಕ್ತಿ ಗೀತೆ ೭ ಲಘು ಗೀತಾಗುಚ್ಛ ೮-೩೦ [illegible] ೯. ೯-೧೫ ರಾಷ್ಟ್ರೀಯ ಪ್ರಸಂಗ ೧೦ ರಿಕಾರ್ಡ್. ೧೦-೩೦ ಹೆಚ್ ಟಿ ಪುಟ್ಟಸ್ವಾಮಯ್ಯ-ಪಿಟೀಲು.

ವಿನಾಶಕರ ಅಸ್ತ್ರ ತಯಾರಿಕೆಗೆ ಸಹಾಯ ಮಾಡಬಾರದು

ಜಗತ್ತಿನ ವಿಜ್ಞಾನಿಗಳಿಗೆ ಸಿ. ವಿ. ರಾಮನ್‌ರವರ ಮನವಿ

ಬೆಂಗಳೂರು ೧೫

ಬುದ್ಧ ಜಯಂತಿ ಸಮಾರಂಭದಲ್ಲಿ ಭಾಷಣ ಮಾಡುತ್ತಾ ಡಾ|| ಸಿ. ವಿ. ರಾಮನ್‌ರವರು ಜಗತ್ತಿನ ವಿಜ್ಞಾನಿಗಳಿಗೆ ಮನವಿ ಮಾಡಿ ಅವರುಗಳು ವಿನಾಶಕಾರಕ ಅಸ್ತ್ರಗಳನ್ನು ತಯಾರಿಸಲು ಸಹಾಯಕರಾಗಬಾರದೆಂದು ಹೇಳಿದರು. ಈ ಉದ್ಯಮವನ್ನು ಬಿಟ್ಟು ಶಾಂತಿ, ಯಾವುದಾದರೂ ವೃತ್ತಿಯನ್ನು ಅವರುಗಳು ಅವಲಂಬಿಸಬೇಕೆಂದೂ ಹೇಳಿದರು. ಪಶ್ಚಿಮ ಜರ್ಮನಿಯ ವಿಜ್ಞಾನಿಗಳ ಆದರ್ಶವನ್ನು ಅವರು ಪ್ರಶಂಸಿಸಿದರು.

ದೇವಸ್ಥಾನಕ್ಕೆ ಸಿಡಿಲು ಬಡಿದು ಒಬ್ಬನ ಮರಣ

ಶಿವಮೊಗ್ಗಾ ತಾಲ್ಲೂಕು ಬಸವಾಪುರದ ಗುಡ್ಡದ ಹತ್ತಿರವಿರುವ ಅಮೃತೇಶ್ವರ ದೇವಸ್ಥಾನದಲ್ಲಿ ಕಳೆದ ಭಾನುವಾರ ಸಿಡಿಲು ಬಡಿದು ೨೫ ವರ್ಷದ ಭೀಮೇಶ್ವರಪ್ಪ ಎಂಬಾತನು ಮೃತಪಟ್ಟಿರುತ್ತಾನೆ. ಇಬ್ಬರು ಹಳ್ಳಿಯವರಿಗೆ ಗಾಯವಾಗಿ ಅವರನ್ನು ಶಿವಮೊಗ್ಗಾ ಆಸ್ಪತ್ರೆಗೆ ಸೇರಿಸಲಾಗಿದೆ.

ನಗರದಲ್ಲಿ ಎನ್ ಸಿ ಸಿ ಸಮಾಜ ಸೇವಾ ಶಿಬಿರ

ನಗರದಲ್ಲಿ ಇಂದಿನಿಂದ ಎನ್ ಸಿ ಸಿ. ದಳದ ಸಮಾಜಸೇವಾ ಶಿಬಿರವು ಆರಂಭವಾಗಿದೆ. ಅದು ೧೪ ದಿನಗಳ ವರೆಗೆ ನಡೆಯುವುದು. ಮಹಾರಾಜಾ ಕಾಲೇಜಿನ ಮುಂಭಾಗದಲ್ಲಿರುವ ಪ್ರದೇಶವನ್ನು ಸಮಗೊಳಿಸುವುದು ಮತ್ತು ಯುವರಾಜಾ ಕಾಲೇಜು ಕ್ರೀಡಾಂಗಣದಲ್ಲಿ ಎರಡು ಟೆನ್ನಿಸ್ ಕೋರ್ಟುಗಳನ್ನು ನಿರ್ಮಿಸುವುದರಲ್ಲಿ ಶಿಬಿರದಲ್ಲಿ ೪೦೦ ಮಂದಿ ಭಾಗವಹಿಸಿರುತ್ತಾರೆ. ಇದುವರೆಗೆ ಗ್ರಾಮಾಂತರದಲ್ಲಿ ಮಾತ್ರ ಎನ್. ಸಿ. ಸಿ. ಸೇವಾ ಶಿಬಿರಗಳು ನಡೆಯುತ್ತಿದ್ದುವು. ಕ್ವಾರ್ಟರ್ ಮಾಸ್ಟರ್ ಜಿ. ಆರ್. ಮಲ್ಲಿಕಾರ್ಜುನರವರು ಅದರ ನಾಯಕರಾಗಿರುವರು.

ಸೊಪ್ಪಿನಕೊಳದ [illegible]

ಸೊಪ್ಪಿನಕೊಳದ [illegible] ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಶ್ರೀ ಮರಿಯಪ್ಪ ಎಂಬ [illegible]ರೊಬ್ಬರು ಕಾಂಪೌಂಡ್ ಕಟ್ಟಿಸುವ ಬಗ್ಗೆ [illegible] ಅವರಿಗೆ ನೋಟೀಸು [illegible] ಪರಿಶೀಲಿಸಲು ಪೌರಸಭಾ ಕಮೀಷನರು ಮತ್ತು ಇಂಜನಿಯರು ಸ್ಥಳಕ್ಕೆ ಭೇಟಿಯಿತ್ತು, ಸಂಬಂಧಪಟ್ಟವರ ದಸ್ತಾವೇಜುಗಳನ್ನು ಅಜಮಾಯಿಷಿ ಮಾಡಿದರು. ದೇವಸ್ಥಾನದ ಜಾಗವನ್ನು ಒತ್ತುವರಿ ಮಾಡಿಕೊಂಡ ಬಗ್ಗೆ ಟ್ರಸ್ಟ್ ಬೋರ್ಡ್ ಇಂಜನಿಯರ್‌ರವರು ಸಂಬಂಧಪಟ್ಟ ದಾಖಲೆಗಳನ್ನು ತಮಗೆ ಒದಗಿಸುವಂತೆ ಕಮೀಷನರು ಸೂಚಿಸಿರುವರೆಂದು ಗೊತ್ತಾಗಿದೆ.

ಬಾಗೆಪಲ್ಲಿಯಲ್ಲಿ ಪೋಲೀಸರಿಗೂ ಜನರಿಗೂ ಘರ್ಷಣೆ

ಬಾಗೆಪಲ್ಲಿ ಜನಪ್ರಿಯ ಪೌರಸಭಾ ಸದಸ್ಯರಾದ ಶ್ರಿ ಅಬ್ದುಲ್ ಘನಿ ಎಂಬುವರನ್ನು ಹೊಡೆದ ಪೋಲೀಸರ ಮೇಲೆ ಸಿಟ್ಟುಗೊಂಡ ಊರಿನ ಜನರು ಕಳೆದ ೯ನೇ ತಾರೀಕು ಅಲ್ಲಿನ ಪೋಲೀಸು ಠಾಣೆಗೆ ನುಗ್ಗಿ ಹೊಡೆದವರನ್ನು ಹಿಡಿಯಲು ಹೋದಾಗ ಅವರಿಗೂ ಪೋಲೀಸರಿಗೂ ಘರ್ಷಣೆಯಾಯಿತೆಂದೂ, ಹಲವರಿಗೆ ಗಾಯಗಳಾದುವೆಂದೂ ವರದಿಯಾಗಿದೆ ಅಂದು ಶ್ರಿ ಘನಿಯವರು ಅಲ್ಲಿನ ಸಹಕಾರಸಂಸ್ಥೆಗೆ ವ್ಯಾಪಾರಕ್ಕಾಗಿ ಹೋಗಿದ್ದಾಗ ಅಲ್ಲಿ ಹನುಮಯ್ಯ ಎಂಬ ಪೋಲೀಸನು ಚಾಕರಿ ಮಾಡುತ್ತಿದ್ದನೆಂದೂ, ಸೊಸೈಟಿಯಲ್ಲಿ ಹಾಗೆ ಮಾಡಬಾರದೆಂದು ತಿಳಿಸಲಾಗಿ, ಪೋಲೀಸನು ಪೌರಸಭಾ ಸದಸ್ಯರನ್ನು ಬೀದಿಯಲ್ಲಿ ಪಾದರಕ್ಷೆಯಿಂದ ಹೊಡೆದನೆಂದೂ ಹೇಳಲಾಗಿದೆ ಈ ಬಗ್ಗೆ ಶ್ರಿ ಘನಿಯವರು ಠಾಣೆಗೆ ದೂರು ಕೊಡಲು ಹೋದಾಗ ಅಲ್ಲಿದ್ದ ಇತರ ಪೋಲೀಸರೂ ಅವರನ್ನು ಹೊಡೆದರೆಂದು ತಿಳಿದುಬಂದಿದೆ

ಬ್ರಿಟಿಷ್ ಕಡಲ್ಗಾಲುವೆ ಕೆಳಗೆ ಸುರಂಗ

ಇಂಗ್ಲಿಷ್ ಕಡಲ್ಗಾಲುವೆಯ ಕೆಳಗೆ ಸುರಂಗ ಮಾರ್ಗವೊಂದನ್ನು ನಿರ್ಮಿಸಬೇಕೆಂಬ ಹಳೆಯ ಕನಸು ಈಗ ನನಸಾಗುವ ಸ್ಥಿತಿಯಲ್ಲಿರುವುದೆಂದು ವರದಿಯಾಗಿದೆ ಫ್ರಾನ್ಸ್ ಮತ್ತು ಬ್ರಿಟನ್ನುಗಳ ನಡುವೆ ಸುರಂಗದ ಮೂಲಕ ಸಂಪರ್ಕ ಏರ್ಪಡಿಸುವ ವಿಚಾರವನ್ನು ಸೂಯೆಜ್ ಕಾಲುವೆ ಕಂಪೆನಿಯವರು ಪರಿಶೀಲಿಸುತ್ತಿರುವರೆಂದೂ ಫ್ರಾನ್ಸೂ ಮತ್ತು ಅಮೇರಿಕವೂ ಇದರಲ್ಲಿ ಭಾಗವಹಿಸಲವಕಾಶವಿರುವುದೆಂದೂ ಗೊತ್ತಾಗಿದೆ ಸುರಂಗ ಮಾರ್ಗವು ಒಟ್ಟು ೩೬ ಮೈಲಿ ಉದ್ದವಿರುವುದು ಸಮುದ್ರದ ಕೆಳಗೆ ೨೨ ಮೈಲಿ ಚಾಚಿರುವುದು

ಹಿಂದಿ ಅಧ್ಯಾಪಕಿಯರಿಗೆ ಸಂಭಾವನೆ

ಸಂಸ್ಥಾನದ ಮಹಿಳಾ ಸಮಾಜಗಳು ಶಿಶುವಿಹಾರಗಳಲ್ಲಿಯೂ ಮತ್ತು ಖಾಸಗಿಯಾಗಿಯೂ ಹಿಂದಿ ಪ್ರಚಾರ ಮಾಡುವ ಅಧ್ಯಾಪಕಿಯರಿಗೆ ಇದೇ ಜೂನ್ ೧ರಿಂದ ೮ ತಿಂಗಳು ಮಾಹೆಯಾನಾ ಸಹಾಯ ದ್ರವ್ಯವನ್ನು ಕೊಡಲು ಬೆಂಗಳೂರಿನಲ್ಲಿರುವ ಕರ್ನಾಟಕ ಮಹಿಳಾ ಹಿಂದೀ ಸೇವಾ ಸಮಿತಿಯು ತೀರ್ಮಾನಿಸಿದೆ ವಿದ್ಯಾರ್ಥಿ ಮತ್ತು ತರಗತಿಗಳ ಸಂಖ್ಯೆಯ ಮೇಲೆ ಸಂಭಾವನೆಯನ್ನು ನಿಗದಿ ಮಾಡಲಾಗಿದೆ ಮೇಲೆ ಹೇಳಿದಂತೆ ಕೆಲಸ ಮಾಡಲು ಇಷ್ಟವುಳ್ಳ ಮಹಿಳಾ ಅಧ್ಯಾಪಕಿಯರು ಅಥವಾ ಸಮಾಜ ಹಾಗೂ ಶಿಶು ವಿಹಾರಗಳ ಕಾರ್ಯದರ್ಶಿಗಳು ಕಾರ್ಯದರ್ಶಿನಿ ನಂ ೧೨೭ ೬ನೇ ರೋಡ್ ಚಾಮರಾಜಪೇಟೆ, ಬೆಂಗಳೂರು ೨ ಇವರಿಗೆ ಈ ತಿಂಗಳು ೨೦ರೊಳಗೆ ಪತ್ರ ಬರೆಯಬೇಕೆಂದು ಕಾರ್ಯದರ್ಶಿನಿ ಶ್ರೀಮತಿ ಎಂ ಕೆ ಅಹಲ್ಯಾರವರು ತಿಳಿಸುತ್ತಾರೆ.

ಶಿಶು ಸ್ನೇಹಿ—
ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-
ನಿರೋಧಕ, ನಿವಾರಕ ಸಲಹೆಗಳಿಗೆ –
'ಲಿವರ್ ಹೌಸ್', ಚಾಮರಾಜಪುರಂ,
ಮೈಸೂರು (ಸುತ್ತೂರು ಹಾಸ್ಟೆಲ್ ಹತ್ತಿರ)

Edited Printed and Published by
A. R. Nagarajan at Sadhvi Press,
D. Subbiah Road Mysore

ಮಹಿಳೆಯರು ಮತ್ತು ಮಕ್ಕಳ ದಿನಾಚರಣೆ

ಕಲ್ಕತ್ತ ೮

ಕಲ್ಕತ್ತೆಯ ಕರ್ನಾಟಕ ಸಂಘದವರು ಕಳೆದ ೫ರಂದು ಇಲ್ಲಿನ ನ್ಯಾಷನಲ್ ಹೈಸ್ಕೂಲ್ ಆವರಣದಲ್ಲಿ ಮಹಿಳೆಯರು ಮತ್ತು ಮಕ್ಕಳ ದಿನವನ್ನು ಆಚರಿಸಿದರು ಸಮಾರಂಭದ ಅಂಗವಾಗಿ ಮಕ್ಕಳಿಗಾಗಿ ವಿವಿಧ ವೇಷ ಸ್ಪರ್ಧೆ, ನೃತ್ಯ ಪ್ರದರ್ಶನ ಹಾಗೂ ಸಂಗೀತ ಕಾರ್ಯಕ್ರಮಗಳು ಏರ್ಪಟ್ಟಿದ್ದುವು ಮಕ್ಕಳು "ಸಂಪೂರ್ಣ ರಾಮಾಯಣ' ಎಂಬ ನಾಟಕವನ್ನೂ, ಮಹಿಳೆಯರು 'ಮಂಕುಬೂದಿ' ಎಂಬ ನಾಟಕವನ್ನೂ ಯಶಸ್ವಿಯಾಗಿ ಅಭಿನಯಿಸಿದರು

ಹಳ್ಳದಕೇರಿ ಪ್ರಸನ್ನ ರಾಮಮಂದಿರದ ಸಭೆ

ಮೈಸೂರು ಹಳ್ಳದಕೇರಿಯಲ್ಲಿರುವ ಶ್ರೀ ಪ್ರಸನ್ನ ರಾಮಮಂದಿರದ ಸರ್ವ ಸದಸ್ಯರ ಸಭೆಯು ಸೇರಿ ಈ ವರ್ಷದ ಕಾರ್ಯಕ್ರಮಗಳನ್ನೂ ಮತ್ತು ರಾಮನವಮಿಯ ಜಮಾ ಖರ್ಚನ್ನೂ ಸೂಕ್ತವಾಗಿ ವಿಮರ್ಶಿಸಿ ಅಂಗೀಕರಿಸಿತು ನೂತನ ಸಾಲಿಗೆ ಶ್ರೀ ನಾಗಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಜನಾರ್ಧನ ಐಯ್ಯಂಗಾರ್‌ರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರಿ ಎಂ ಆರ್ ನಂಜುಂಡಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ ಶ್ರೀಗಳಾದ ಎಂ ಎಸ್ ಚಂದ್ರಶೇಖರ ಜೋಯಿಸ್, ಎಂ ಎ ಪ್ರಹ್ಲಾದರಾವ್ ಆರ್ ಶ್ರೀನಿವಾಸಮೂರ್ತಿ, ಆರ್ ರಾಮಣ್ಣ ಎಂ ಆರ್ ನರಸಿಂಹಮೂರ್ತಿ, ಎ ಶ್ರೀನಿವಾಸಮೂರ್ತಿ, ಆರ್ ರಾಮಣ್ಣ ಆರ್ ನಾರಣಪ್ಪ ಎಂ ಜಿ ವೆಂಕಟರಾಯರು, ಡಿ ವೆಂಕಟರಾಯರು ವೈ ಆರ್ ಮಹಾಬಲಪ್ಪ ಎ ಎ ಹೊನ್ನಪ್ಪಶೆಟ್ಟರು ಮತ್ತು ಎ ಸುಬ್ರಹ್ಮಣ್ಯಂರವರನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಚುನಾಯಿಸಲಾಯಿತು

ಬೆಂಕಿನವಾಬರ ಬೀದಿಯಲ್ಲಿ ದೀಪ ಬೇಕು

ಮಂಡಿ ಮೊಹಲ್ಲಾ ಬೆಂಕಿನವಾಬರ ಬೀದಿಯಲ್ಲಿ ಅತ್ತಿಗುಪ್ಪೆ ಸೂರ್ಯನಾರಾಯಣಶೆಟ್ಟರ ಛತ್ರದ ಮೂಲೆಯಿಂದ ಮಸೀದಿವರೆಗೆ ಒಂದೇ ಒಂದು ದೀಪವಿದೆ ರಾತ್ರಿ ೧೦ ಗಂಟೆಯನಂತರ ಅಲ್ಲಿ ತುಂಬಾ ಕತ್ತಲು ಕವಿದಿರುತ್ತದೆ ಅಲ್ಲದೆ ಹಳ್ಳಗಳೂ ಇವೆ ಇದರಿಂದ ಜನರಿಗೂ ವಾಹನಗಳಿಗೂ ತೊಂದರೆಯಾಗುತ್ತಿದೆ ಪೌರಸಭಾಧಿಕಾರಿಗಳು, ಸದಸ್ಯರು ಈ ವಿಚಾರವನ್ನು ಪರಿಶೀಲಿಸಿ, ಆ ಪ್ರದೇಶದಲ್ಲಿ ಸಾಕಷ್ಟು ಬೆಳಕುಂಟಾಗುವಂತೆ ಮಾಡುವುದು ಅಗತ್ಯ— ಎಂಬುದಾಗಿ ಶ್ರೀ ಆರ್ ಎಸ್ ಶೇಷಗಿರಿದಾಸರು ತಿಳಿಸಿರುತ್ತಾರೆ

NATIONAL LEAGUE
Anathalaya Buildings
MYSORE

Offers excellent coaching for
S S L C. students
Timings 8 to 10 A M, 5 to 8 P M

ವಸಂತ ಕಾಲದ ಆಕರ್ಷಣೆ
ನಿಮ್ಮ ಮಕ್ಕಳ ಅಂದವಾದ
ಕಾರ್ಡ್ ಸೈಜ್ ಛಾಯಾಚಿತ್ರಕ್ಕೆ
ಒಂದು ರೂಪಾಯಿ ಮಾತ್ರ
ಪ್ರಭಾ ಟಾಕೀಸ್ ಬಳಿ ಇರುವ
ಶ್ರೀಕಾಂತ್ ಸ್ಟುಡಿಯೋವಿಗೆ
ಭೇಟಿ ಕೊಡಿ
ರೋಲ್ ಫಿಲಮ್ಸ್, ಡೆವಲಪಿಂಗ್,
ಪ್ರಿಂಟಿಂಗ್, ಎನ್ಲಾರ್ಜಿಂಗ್ ಸಹ
ಮಾಡುತ್ತೇವೆ

ಅಣು ಶಸ್ತ್ರದ ಅಪಾಯದ ಬಗ್ಗೆ ವಿಮೆ ಏರ್ಪಾಡು

ಬ್ರಿಟನ್ನಿನ ಒಂದು ವಿಮಾ ಸಂಸ್ಥೆಯು ಅಣು ಶಸ್ತ್ರಾಸ್ತ್ರಗಳ ಧಾಳಿಯ ಪರಿಹಾರಕ್ಕಾಗಿ ವಿಮಾ ಪದ್ಧತಿಯನ್ನು ಏರ್ಪಡಿಸುವ ಬಗ್ಗೆ ಯೋಜನೆಯನ್ನು ಸಿದ್ಧಗೊಳಿಸುತ್ತಿದೆ ಅದಕ್ಕಾಗಿ ೫ ಲಕ್ಷ ಪೌಂಡನ್ನು ಈಗಲೇ ತೆಗೆದಿಡಲಾಗಿದೆ

ಗುಂಡ್ಲುಪೇಟೆ ಹೈಸ್ಕೂಲಿನಲ್ಲಿ ಫಲಿತಾಂಶಗಳು

ಈ ಸಲದ ಎಸ್ ಎಸ್ ಎಲ್. ಸಿ ಪರೀಕ್ಷೆಗೆ ಕುಳಿತಿದ್ದ ಗುಂಡ್ಲುಪೇಟೆ ಮುನಿಸಿಪಲ್ ಹೈಸ್ಕೂಲಿನ ೬೯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪೈಕಿ ೫೪ ಮಂದಿ(ಶೇಕಡ ೭೮ರಷ್ಟು) ಉತ್ತೀರ್ಣರಾಗಿದ್ದಾರೆ ಇದರಲ್ಲಿ ೧೪ ಮಂದಿಗೆ ಪ್ರಥಮ ದರ್ಜೆ ಸಿಕ್ಕಿದೆ ಈ ಪೈಕಿ ಇಬ್ಬರು ವಿದ್ಯಾರ್ಥಿನಿಯರೂ ಇದ್ದಾರೆ ಇತರ ಎಲ್ಲಾ ವಿದ್ಯಾರ್ಥಿನಿಯರೂ ಉತ್ತೀರ್ಣರಾಗಿದ್ದಾರೆ. ಒಟ್ಟು ಸಂಖ್ಯೆಯಲ್ಲಿ ೪೯ ಮಂದಿಗೆ ಪಿ ಸಿ ಪಿ ಎಸ್ ಮತ್ತು ೫ ಮಂದಿಗೆ ಪಿ ಎಸ್ ಬಂದಿದೆ

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಮತ್ತು ಕೊಯಮತ್ತೂರು	೪೧ ೬೨	೪೪ ೮೧
ರತ್ನಚೂಡಿ	೪೧ ೧೨	೪೦ ೪೭
ಕಡ್ಡಿ	೨೯ ೬೨	೪೨ [illegible]
ಕಾರ್ ಸಣ್ಣ	೪೦ ೧೧	
ರಾಗಿ	೪೪ ೫೦	೪೬ [illegible]
ಜೋಳ	೨೯ ೦೦	೪೧ [illegible]
ಕಡಲೆಕಾಯಿ	೩೦ ೬೨	[illegible] ೦೦
ಹರಳುಬೀಜ	೪೫ ೨೫	೪೨ ೦೦
ಹುಚ್ಚೆಳ್ಳು	೪೪ ೦೦	೪೬ [illegible]
ಹೊಂಗೆಬೀಜ	[illegible]	೨೬ [illegible]
ಹುರುಳಿ	೪೧ ೪೭	೪೪ ೫೦
ಹೆಸರು	೫೬ ೦೦	
ಹಲಸಂದೆ	೪೬ ೧೮	೫೬ ೦೦
ಅವರೆ	೪೨ ೧೨	೪೭ [illegible]
ಸೆಣಬಿನ ಬೀಜ	೪೦ ೦೦	೪೧ ೧೧
ಹುಣಸೆಬೀಜ	೪ [illegible]	೫ ೫೦
ಹುಣಸೇಹಣ್ಣು	೨ ೪೧	೪ ೬೧
ಸೀಗೆಕಾಯಿ	೬ ೪೭	೬ [illegible]
ಮೆಣಸಿನಕಾಯಿ	೧೬ [illegible]	೧೯ [illegible]
ತೆಂಗಿನಕಾಯಿ	೧೨೯ ೦೦	೨೪೭ ೫೦

THE CITY TUTORIAL
COLLEGE
Old Agrahar Mysore

S S L C Classes for the Suppl Exams have been started under the able guidance of Sri B K SATYABODHACHAR M A, B T
- JOIN AT ONCE -
C T C is the oldest and the best Institution

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಮಾದರಿಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಸ್ಥರು
ಅಶೋಕ ರಸ್ತೆ, ಮೈಸೂರು (Estd 1911)

ಆಯುರ್ವೇದ ಆಸ್ಪತ್ರೆಯಲ್ಲಿ ಔಷ
ವಿನಿಯೋಗದ ಬಗ್ಗೆ ದೂರು

ನಗರದ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯಲ್ಲಿ ಜನರ ಸೌಕರ್ಯಕ್ಕಾಗಿ ಸರ್ಕಾರದವರು ಹೇರಳವಾಗಿ ಮಾಡಿಸಿಟ್ಟಿರುತ್ತಾರೆ ರೋಗಿಗಳಿಗೆ ಕೊಡತಕ್ಕ ಔಷಧಿಗಳ ಬಗ್ಗೆ ವೈದ್ಯರು ಚೀಟಿ ಬರೆದುಕೊಟ್ಟರೂ ಕಾಂಪೌಂಡರುಗಳು [illegible] ಗಳಿಲ್ಲವೆಂದು ಹೇಳಕಳುಹಿಸಿಬಿಡುತ್ತಾರೆ ಈ ವಿಚಾರವನ್ನು ಸಂಬಂಧಪಟ್ಟವರು ಪರಿಶೀಲಿಸುವುದು ಅಗತ್ಯ-ಎಂಬುದಾಗಿ ನೊಂದವರೊಬ್ಬರು ತಿಳಿಸಿರುತ್ತಾರೆ.

ರಣಜಿತ್ ಟಾಕೀಸ್
16-5-57 ನೇ ಗುರುವಾರದಿಂದ
[illegible] ಪ್ರಾರಂಭ ಪ್ರತಿ ದಿನ 3 ಆಟಗ
ನಗರವೇ ದಿಗ್ಭ್ರಾಂತಿಗೊಂಡಿದೆ! ಈ ಭಯಾ
ವ್ಯಕ್ತಿ ಇಲ್ಲಿದ್ದಾನೆ! ಈತನು ಜೋಕ-
ಯೋಧ-ಪ್ರೇಮಿ'!-ಈ ವ್ಯಕ್ತಿ
ಯಾರು?
ಈತನ ಕೆಲಸವೇನು? ಈತನು ನಿಮ್ಮ ಕಣ್ಣಿ
ಗೋಚರವಾಗುವುದಿಲ್ಲ ಇವನೇ
ಸಿಪ್ಪಿ ಫಿಲಂಸ್‌ರವರ
ಮಿಸ್ಟರ್ X
ಪಾತ್ರ - ಅಶೋಕ ಕುಮಾರ್, ನಳಿ
ಜಯವಂತ್, ಪ್ರಾಣ್, ಜಾನಿ ವಾಕರ್
ಹೆಲೆನ್ ಮತ್ತು ಇತರರು
ಸಂಗೀತ ಎನ್ ದತ್ತ
(ನಿಮ್ಮ ಸೀಟುಗಳನ್ನು ಮುಂಚಿತವಾಗಿ ಕಾದಿ

ಮೈಸೂರಿನಲ್ಲಿ ಪ್ರತಿ ತಿಂಗಳು
17 ನೇ ತಾರೀಕು
ವಿಶ್ವ ವಿಖ್ಯಾತವಾಗಿ

ನವರತ್ನಕಲ್ಪ
ದಿವ್ಯೌಷಧವನ್ನು ಕಂ
ಹಿಡಿದರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ
ವೈದ್ಯ ವಾಚಸ್ಪತಿಯವ
ಪ್ರತಿ ತಿಂಗಳು 17 ನೇ ತಾರೀಕು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಬೆಳಿಗ್ಗೆ 7 30 ರಿಂದ ಸಂಜೆ 5 ಗಂಟೆಯವರೆಗೆ
ಭೇಟಿ ಮಾಡಬಹುದು ಫೋನ್ ನಂ 59
[illegible]
ವೈದ್ಯಕೀಯ ಸಲಹೆಯನ್ನು ಪಡೆಯಿರಿ
[illegible]
ವಿಮಾನದಲ್ಲಿ ಸಂಚರಿಸುವರು
ನಿಮ್ಮ ಸಾಮಾನ್ಯವಾದ ಹಾಗೂ ತೀವ್ರವಾದ ಕಾಯಿಲೆಗಳಿಗೆ ಚಿನ್ನ, ಬೆಳ್ಳಿ, ಮುತ್ತು, ಹವಳ, ಗೋಮೇಧಿಕ, [illegible] ಮುಂತಾದ 9 ಅಮೂಲ್ಯ ಪದಾರ್ಥಗಳ ಯೋಗವಾದ
ನವರತ್ನಕಲ್ಪ—ಉಪಯೋಗಿಸಿರಿ
ಅತ್ಯಂತ ಆರೋಗ್ಯದಾಯಕವಾದ
ಇದೊಂದೇ ಉಚಿತ ಸಾಹಿತ್ಯಗಳಿಗಾಗಿ ಬರೆಯಿ
NAVRATNA KALPA PHARMACY,
JULLUNDUR CITY (India)

THE CHAMPION METROPOLITAN COLLEGE OF COMMERCE
Co-operators' Home 100' Road Mysore

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE Diploma in Stenography COST & WORKS ACCOUNTANCY Banking, Shorthand, Typewriting etc

Estd 1917 — Fully qualified full-time staff — Educational atmosphere — Fine building and up to-date equipment — Decent Library and Reading Room — Western Business education in the East — Good results — College s Own Diploma also.

M S PUTTANNA, Vice-Principal,
P SUBBARAYA SASTRY, Principal

ರಿಜಿಸ್ಟರ್ ನಂ. 192

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಮುಖವಾದುದು

ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೮] SADHVI : THURSDAY 16—5—1957 ಮೈಸೂರು : ಗುರುವಾರ ೧೬—೫—೧೯೫೭ : [ಸಂಚಿಕೆ : ೨೮೨

ಕೇಂದ್ರ ಸರ್ಕಾರದಿಂದ ೭೮ ಕೋಟಿ ರೂ. ಅಧಿಕ ತೆರಿಗೆ

ಈ ವರ್ಷ ೭೮ ಕೋಟಿ ರೂ. ಗಳ ಅಧಿಕ ತೆರಿಗೆ

ಸಕ್ಕರೆ, ಸೀಮೆ ಎಣ್ಣೆ, ಬೆಂಕಿಪೊಟ್ಟಣ, ಕಾಫಿ, ಟೀ ಮತ್ತು ಅಂಚೆ ಕಾರ್ಡಿಗೆ ಹೆಚ್ಚು ಬೆಲೆ

ಲೋಕ ಸಭೆಯಲ್ಲಿ ಕೇಂದ್ರ ಸರ್ಕಾರದ ಆಯವ್ಯಯ ಪಟ್ಟಿ ಮಂಡನೆ

ಲೋಕ ಸಭೆಯಲ್ಲಿ ನೆನ್ನೆ ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ೫೭-೫೮ ನೇ ಸಾಲಿನ ಉಳಿಕೆ ಭಾಗದ ಆಯವ್ಯಯ ಅಂದಾಜು ಪಟ್ಟಿಯನ್ನು ಮಂಡಿಸಿ, ಹೊಸ ತೆರಿಗೆ ಸಲಹೆಗಳನ್ನು ಮಾಡಿದರು ಅದರಿಂದ ೬೭.೮೫ ಕೋಟಿ ರೂ ಗಳು ಕೇಂದ್ರಕ್ಕೂ, ೧೫ ಕೋಟಿ ರೂ ಸಂಸ್ಥಾನಗಳಿಗೂ ಹುಟ್ಟುವಳಿಯಾಗುವುದೆಂದು ಹೇಳಿದರು

ಒಟ್ಟು ೯೦ ವಸ್ತು ಮತ್ತು ಬಾಬುಗಳ ಮೇಲೆ ಆಸುದು ತೆರಿಗೆಯನ್ನು ಅಧಿಕಗೊಳಿಸಲಾಗುವುದು ನಿರೀಕ್ಷಿಸಲಾಗಿರುವ ಒಟ್ಟು ೩೬೭ ೮೭ ಕೋಟಿ ರೂ ಕೊರತೆಯು ಇದರಿಂದ ೨೭೦ ಕೋಟಿಗೆ ಇಳಿಯುವುದೆಂದು ಭಾವಿಸಲಾಗಿದೆ

ತೆರಿಗೆ ವಿವರಗಳು

ಅಬಕಾರಿ ಸುಂಕ ಪೆಟ್ರೋಲ್ ಮೇಲೆ ಇಂಪೀರಿಯಲ್ ಗ್ಯಾಲನ್ನಿಗೆ ೯೮ ನಯಾ ಪೈಸೆಯಿಂದ ೧೫೫ ನಯಾ ಪೈಸೆ, ಇದರಿಂದ ೬.೮೫ ಕೋಟಿ ರೂ ಉತ್ಪತ್ತಿ,

ಶುದ್ಧಗೊಳಿಸಿದ ಲಘು ಡೀಸೆಲ್ ಆಯಿಲ್ ೯-೨೫ ನಯಾಪೈಸೆ, ೧.೯ ಕೋಟಿ ರೂ ಉತ್ಪತ್ತಿ

ಡೀಸೆಲ್ ಎಣ್ಣೆ ಟನ್ನಿಗೆ ೩೦ ರೂ.ನಿಂದ ೪೦ ರೂ -೨೫ ಲಕ್ಷ ಉತ್ಪತ್ತಿ,

ಸೀಮೆಯೆಣ್ಣೆ ಗ್ಯಾಲನ್ನಿಗೆ ೧೮.೭೫ ನಯಾ ಪೈಸೆ ೯೦ ಲಕ್ಷ ರೂ ಉತ್ಪತ್ತಿ,

ಸಿಮೆಂಟ್ : ಟನ್ನಿಗೆ ೫ ರೂ ನಿಂದ ೨೦ ರೂ ೬.೭ ಕೋಟಿ ರೂ ಆದಾಯ,

ಉಕ್ಕಿನ ಗಟ್ಟಿಗಳು . ಟನ್ನಿಗೆ ೪ ರೂ ನಿಂದ ೪೦ ರೂ -೫ ೭ ಕೋಟಿ ರೂ ಆದಾಯ,

ಸಕ್ಕರೆ . ಪ್ರತಿ ೧೧೨ ಪೌಂಡಿಗೆ ೫.೬೨ ರೂ ನಿಂದ ೧೧-೨೫ ರೂ ೧೮.೫೫ ಕೋಟಿ ರೂ ಆದಾಯ

ವನಸ್ಪತಿ ಮತ್ತು ಇತರ ಅವಶ್ಯಕವಲ್ಲದ ಎಣ್ಣೆ ಟನ್ನಿಗೆ ೭೦ ರೂ.ನಿಂದ ೧೧೨ ರೂ ೧.೫ ಕೋಟಿ ರೂ ಹುಟ್ಟುವಳಿ,

ಚಹಾ ಚಿಲ್ಲರೆ ಬಳಕೆಯದು ಪೌಂಡಿಗೆ ೨೫ ನಯಾಪೈಸೆಯಿಂದ ೧೦ ನಯಾಪೈಸೆ, ಪ್ಯಾಕ್ ಆದದ್ದು (ಚಿಲ್ಲರೆ ಬಳಕೆಯದು) ೧೮.೭೫ ನಯಾಪೈಸೆ ಮತ್ತು ಪ್ಯಾಕೇಜು ಆದದ್ದು ೨೫ ನಯಾಪೈಸೆಯಿಂದ ೪೮ ನಯಾ ಪೈಸೆ ೨.೫ ಕೋಟಿ ರೂ ಹುಟ್ಟುವಳಿ,

ಕಾಫಿ ಪೌಂಡಿಗೆ ೧೮.೭೫ ನಯಾಪೈಸೆಯಿಂದ ೩೫ ನಯಾಪೈಸೆ-೭೦ ಲಕ್ಷ ರೂ ಉತ್ಪತ್ತಿ,

ಹೊಗೆಸೊಪ್ಪು: ಸಿಗರೇಟುಗಳು ತಯಾರಿಸುವುದು-ಪೌಂಡಿಗೆ ೫೬ ನಯಾಪೈಸೆಯಿಂದ ೭೫ ಕ್ಕೆ ಹುಡ್ಡ ಮಾಡಿದ ಎಲೆ : ೩೭ ನಯಾಪೈಸೆಯಿಂದ ೫೦ ನಯಾ ಪೈಸೆ ಇತರವುಗಳಿಗೆ ೮೭ ನಯಾಪೈಸೆಯಿಂದ ೧೦೦ ನಯಾಪೈಸೆ,೭ ೧೫ ಕೋಟಿ ರೂ. ಹುಟ್ಟುವಳಿ

ನೇರವಾದ ತೆರಿಗೆಗಳು

ವರಮಾನ ತೆರಿಗೆಯ ಮಟ್ಟವನ್ನು ೪,೨೦೦ ರೂ ನಿಂದ ೩,೦೦೦ಕ್ಕೆ ಇಳಿಸಲಾಗಿದೆ ಆದರೆ ವಿವಾಹಿತರಿಗೆ ತೆರಿಗೆ ಉಚಿತ ಮಟ್ಟವನ್ನು ೧ ೦೦೦ ರೂ. ನಿಂದ ೨ ೦೦೦ಕ್ಕೆ ಹೆಚ್ಚಿಸಿದೆ ಇದರಿಂದ ೫ ಕೋಟಿ ರೂ ಹುಟ್ಟುವಳಿ

ಕಂಪೆನಿ ಮೇಲೆ ವರಮಾನ ತೆರಿಗೆ ರೂಪಾಯಿಗೆ ೪ ಆಣೆಯಿಂದ ಶೇಕಡ ೩೦ಕ್ಕೆ ಕಾರ್ಪೊರೇಷನ್ ತೆರಿಗೆ ೨ ಆಣೆ ೯ ಕಾಸಿನಿಂದ ರೂಪಾಯಿಯಲ್ಲಿ ಶೇಕಡ ೨೦ ರಷ್ಟಕ್ಕೆ

ಬೆಂಕಿಪೊಟ್ಟಣ ೬೦ ಕಡ್ಡಿ ಇರುವುದರ ಬೆಲೆ ೬ ನಯಾಪೈಸೆ (೧ ಆಣೆ) ಮತ್ತು ೪೦ ಕಡ್ಡಿಗಳದಕ್ಕೆ ೪ ನಯಾ ಪೈಸೆ ಆಗುವುದು ೬.೨ ಕೋಟಿ ರೂ. ಹುಟ್ಟುವಳಿ

ದಾನದ ೨ ಕೋಟಿ ರೂ ಹುಟ್ಟುವಳಿಯಾಗುವಂತೆ ಹೆಚ್ಚಿನ ತೆರಿಗೆ

ಆಸ್ತಿ ಮೇಲೆ ತೆರಿಗೆ

ಇದೇ ಮೊಟ್ಟಮೊದಲಾಗಿ ಆಸ್ತಿ ಮೇಲೆ ತೆರಿಗೆ ವಿಧಿಸಲಾಗುವುದು ೨ ಲಕ್ಷ ರೂ ವರೆಗೆ ಇರುವ ವೈಯಕ್ತಿಕ ಆಸ್ತಿ ಮತ್ತು ೩ ಲಕ್ಷ ರೂ ಇರುವ ಅವಿಭಕ್ತ ಹಿಂದೂ ಕುಟುಂಬಗಳಿಗೆ ವಿನಾಯಿತಿ ಇದೆ ಉಳಿದವರಿಗೆ ಪ್ರಥಮ ೧೦ ಲಕ್ಷ ರೂ ವರೆಗೆ ಶೇಕಡ ಅರ್ಧ, ಮುಂದಿನ ೧೦ ಲಕ್ಷಕ್ಕೆ ಶೇಕಡ ೧, ಉಳಿದುದರ ಮೇಲೆ ಶೇಕಡ ೧½ ಯಂತೆ ವಿಧಿಸಲಾಗುವುದು

ಅಂಚೆ ಮತ್ತು ತಂತಿ ದರ

ಅಂಚೆ ಕಾರ್ಡ್ ಬೆಲೆಯು ಇನ್ನು ಮುಂದೆ ೬ ನಯಾ ಪೈಸೆ ಮತ್ತು ರಿಪ್ಲೈ ಕಾರ್ಡಿಗೆ ೧೨ ನಯಾ ಪೈಸೆ ಆಗುವುದು ಲೋಕಲ್ ಕಾರ್ಡಿಗೆ ೪ ನಯಾ ಪೈಸೆ ಮತ್ತು ರಿಪ್ಲೈ ಕಾರ್ಡಿಗೆ ೮ ನಯಾ ಪೈಸೆ. ಕೊಡಬೇಕಾಗುವುದು

ಒಳನಾಡಿನ ತಂತಿ ದರ (ಸಾಮಾನ್ಯದ್ದು) ಪ್ರಥಮ ೮ ಪದಗಳನಂತರ ಬರುವ ಪ್ರತಿ ಪದಕ್ಕೆ ೭ ರಿಂದ ೮ ನಯಾ ಪೈಸೆಗೂ, (ಎಕ್ಸ್‌ಪ್ರೆಸ್) ೧೪ ನಯಾ ಪೈಸೆಯಿಂದ ೧೬ಕ್ಕೂ ಹೆಚ್ಚಿಸಲಾಗಿದೆ.

ಅಂಚೆ ಕಛೇರಿ ಸೇವಿಂಗ್ಸ್ ಬ್ಯಾಂಕಿನ ಬಡ್ಡಿ ದರವನ್ನು ಶೇಕಡ ಅರ್ಧದಷ್ಟು ಹೆಚ್ಚಿಸಲಾಗುವುದು ಮತ್ತು ೧೨ ವರ್ಷದ ಅವಧಿಯ ಹೊಸ ರಾಷ್ಟ್ರೀಯ ಯೋಜನೆ ಸರ್ಟಿಫಿಕೇಟುಗಳ ಮೇಲೆ ಶೇಕಡ ೪.೨೫ ಚಕ್ರಬಡ್ಡಿಯನ್ನು ಕೊಡಲಾಗುವುದು

ಬ್ಯಾಂಕಿನ ಬಡ್ಡಿ ದರದಲ್ಲಿ ಏರಿಕೆ

ರಿಸರ್ವ್ ಬ್ಯಾಂಕಿನವರು ಬಡ್ಡಿ ದರವನ್ನು ಶೇಕಡ ೩½ ರೂ ನಿಂದ ೪ ರೂ ಗೆ ಹೆಚ್ಚಿಸಿರುತ್ತಾರೆ ಈ ದಿನದಿಂದ ಇದು ಜಾರಿಗೆ ಬಂದಿದೆ ಕಳೆದ ನವೆಂಬರಿನಲ್ಲಿ ೩ರಿಂದ ೩½ ಗೆ ಹೆಚ್ಚಿಸಲಾಗಿತ್ತು

ಕಥಾ ಕಾಲಕ್ಷೇಪ

ಸಿಲ್ಕ್ ಮೊಹಲ್ಲಾ ಸೇವಾ ಮಂಡಲಿಯ ಆಶ್ರಯದಲ್ಲಿ ಬಸವಣ್ಣನವರ ಜಯಂತಿ ಅಂಗವಾಗಿ ಈ ರಾತ್ರಿ ೯ ಗಂಟೆಗೆ ವಿ|| ವೆಂಕಟೇಶದಾಸರಿಂದ ಭೃಂಗಿ ಚರಿತ್ರೆ ಎಂಬ ಕಥೆಯು ಏರ್ಪಾಡಾಗಿದೆ

ಪಾನ ನಿರೋಧ ಪ್ರದೇಶದಲ್ಲಿ ಹೆಂಡ ಇಳಿಸಲು ಅವಕಾಶವಿಲ್ಲ

ಬೆಂಗಳೂರು ೧೬

ಸಂಸ್ಥಾನದ ಪಾನನಿರೋಧ ಪ್ರದೇಶಗಳಲ್ಲಿರುವ ಈಚಲು ಮರಗಳಿಂದ ಹೆಂಡವನ್ನು ಇಳಿಸಲು ಅವಕಾಶ ಕೊಡಬಾರದೆಂದು ಸರ್ಕಾರದವರು ನಿರ್ಧರಿಸಿರುತ್ತಾರೆ ಮಂತ್ರಿಮಂಡಲವು ನೆನ್ನೆ ಈ ವಿಚಾರವನ್ನು ಪರಿಶೀಲಿಸಿ, ಸರ್ಕಾರದ ಪಾನ ನಿರೋಧ ನೀತಿಯ ಅನುಸಾರವಾಗಿ ನಿರೋಧವಿಲ್ಲದ ಪ್ರದೇಶಗಳ ಜನರ ಅನುಕೂಲಕ್ಕಾಗಿ ಇತರ ಕಡೆಗಳಲ್ಲಿ ಹೆಂಡ ಇಳಿಸುವುದಕ್ಕೆ ಅವಕಾಶವೀಯುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟಿತು

ಕಾರ್ಮಿಕರ ವಿಮಾ ಯೋಜನೆ

ಸರ್ಕಾರದವರು ಈ ವರ್ಷ ಬೆಂಗಳೂರಿನಲ್ಲಿ ಕಾರ್ಮಿಕರ ರಾಷ್ಟ್ರೀಯ ವಿಮಾ ಯೋಜನೆಯನ್ನು ಜಾರಿಗೆ ತರಲು ನಿರ್ಧರಿಸಿರುವರು ಇದಕ್ಕಾಗಿ ೩೪೪ ಸಾವಿರ ರೂ.ಗಳನ್ನು ಒದಗಿಸಲಾಗಿದೆ ಮೊದಲು ಬೆಂಗಳೂರಿನಲ್ಲೂ, ಅನಂತರ ಇತರ ಕಡೆಗಳಲ್ಲೂ ಈ ಯೋಜನೆಯನ್ನು ಜಾರಿಗೆ ತರಲಾಗುವುದು

ಕೇರಳದಲ್ಲಿ ಹರಿಜನರಿಗೆ ಉಚಿತ ವಕೀಲಿ ಸೌಕರ್ಯ

ಕೇರಳದಲ್ಲಿ ಹರಿಜನರಿಗೆ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲೂ ಉಚಿತ ವಕೀಲಿ ಸೌಲಭ್ಯವನ್ನು ಒದಗಿಸುವ ವಿಚಾರವನ್ನು ಅಲ್ಲಿನ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ವರದಿಯಾಗಿದೆ ಇದು ಯಶಸ್ವಿಯಾದರೆ ಇತರ ಬಡವರಿಗೆಲ್ಲಾ ಇದನ್ನು ಅನ್ವಯಿಸಲಾಗುವುದೆಂದೂ ಹೇಳಲಾಗಿದೆ

ರೈಲು ಪ್ರಯಾಣದ ದರ ಹೆಚ್ಚುವುದು

ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಸೂಚಿಸಿರುವ ಪ್ರಕಾರ ರೈಲು ಪ್ರಯಾಣ ದರ ೩೦ ಮೈಲಿ ವರೆಗೆ ಶೇಕಡ ೫ ರಷ್ಟು, ೩೧ ಮೈಲಿಯಿಂದ ೫೦೦ ಮೈಲಿ ವರೆಗೆ ಶೇಕಡ ೧೫ ರಷ್ಟು ಮತ್ತು ಮುಂದಕ್ಕೆ ಶೇಕಡ ೧೦ ರಷ್ಟು ಹೆಚ್ಚುವುದು ಇದರಿಂದ ಕೇಂದ್ರ ಸರ್ಕಾರಕ್ಕೆ ೧೪ ಕೋಟಿ ರೂ ವರಮಾನ ಬರುವುದೆಂದು ನಿರೀಕ್ಷಿಸಲಾಗಿದೆ ಸೀಸನ್ ಟಿಕೆಟ್ಟುಗಳಿಗೆ ದರ ಹೆಚ್ಚುವುದಿಲ್ಲ

ಕೊಳಲು ಕಛೇರಿ

ನಾಳೆ ಸಂಜೆ ೭ ಗಂಟೆಗೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ರಾಮೋತ್ಸವದ ಪ್ರಯುಕ್ತ ವಿ|| ಎಂ ಪಿ ಸೂರ್ಯನಾರಾಯಣರಾಯರ ವೇಣು ವಾದನವು ನಡೆಯಲು ಏರ್ಪಾಡಾಗಿದೆ

ಬುದ್ಧ ಜಯಂತಿ ಉತ್ಸವ

ನಗರದ ಪೀವಾಂಜ ಮೊಹಲ್ಲಾ ಮಹಿಳಾ ಸದನದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಬುದ್ಧ ಜಯಂತಿಯನ್ನು ನೆರವೇರಿಸಲಾಗುವುದು ಶ್ರೀಮತಿ ಎಂ ಎಸ್ ಸಾವಿತ್ರಮ್ಮನವರು ಅಧ್ಯಕ್ಷತೆ ವಹಿಸುವರು ಸ್ತ್ರೀಯರಿಗೆ ಸ್ವಾಗತವಿದೆ

ವಿಶ್ವವಿದ್ಯಾಲಯದ ಅಧ್ಯಾಪಕರ ವೇತನದ ಪುನರ್ವಿಮರ್ಶೆ

೧೯ನೇ ತಾ|| ವಿದ್ಯಾ ಮಂತ್ರಿಗಳೊಡನೆ ವೈಸ್ ಛಾನ್ಸಲರುಗಳ ಸಮಾಲೋಚನೆ

ಸ್ವಂ ಸು ತಂತಿ] ಬೆಂಗಳೂರು ೧೬

ವಿದ್ಯಾ ಮಂತ್ರಿ ಶ್ರೀ ಎ ವೆಂಕಟಪ್ಪನವರು ಇದೇ ತಿಂಗಳು ೧೯ನೇ ತಾರೀಖು ಎರಡು ವಿಶ್ವವಿದ್ಯಾಲಯಗಳ ವೈಸ್ ಛಾನ್ಸಲರೊಡನೆ ಅಧ್ಯಾಪಕರ ವೇತನದ ವಿಷಯವಾಗಿ, ಮುಖ್ಯವಾಗಿ, ತಾತ್ಕಾಲಿಕ ಪರಿಹಾರವನ್ನು ಕುರಿತು, ಮಾತುಕತೆ ನಡೆಸುವರು ಸರ್ಕಾರದ ಹಣಕಾಸಿನ ಕಾರ್ಯದರ್ಶಿ ಶ್ರೀ ಮಾಥಿಯಾಸ್‌ರವರು ಭಾಗವಹಿಸುವರು

ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಾಗಿ ೩೨ ೯೪ ಕೋಟಿ ರೂ

ಇದೇ ಸಂಸ್ಥಾನಕ್ಕೆ ದ್ವಿತೀಯ ಯೋಜನೆಯ ಅಂಗವಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಕಾರ್ಯಗಳಿಗಾಗಿ ೩೨ ೯೪ ಕೋಟಿ ರೂ ಅನ್ನು ಒದಗಿಸಲಾಗಿರುವುದೆಂದೂ, ಅದರಲ್ಲಿ ೫ ಕೋಟಿ ರೂ ಅನ್ನು ಹಳೇ ಮೈಸೂರಿಗೆ ಸೇರಿಕೊಂಡ ಪ್ರದೇಶಕ್ಕಾಗಿ ಉಪಯೋಗಿಸಲಾಗುವುದೆಂದೂ ಸಂಸ್ಥಾನದ ಚೀಫ್ ಇಂಜನಿಯರ್ ಶ್ರೀ [illegible] ಈ ದಿನ ತಿಳಿಸಿದರು

ಕಾಸರಗೋಡು ಶಾಲೆಗಳಲ್ಲಿ ಮಲೆಯಾಳಿ ಶಿಕ್ಷಣ ಮಾಧ್ಯಮ

ಕಾಸರಗೋಡು ತಾಲ್ಲೂಕಿನಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗಿರುವ ಶಾಲೆಗಳಲ್ಲಿ ಹತ್ತು ಮಲೆಯಾಳಿ ವಿದ್ಯಾರ್ಥಿಗಳು ಸಿಕ್ಕಿದರೆ ಅಂತಹ ಶಾಲೆಯಲ್ಲೂ ಕನ್ನಡದ ಜೊತೆಗೆ ಮಲೆಯಾಳಿಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವಂತೆ ಕೇರಳ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಟೆನಿಸ್ ಪಂದ್ಯಗಳು

ನಗರದ ಗಾಸ್ಪಾಡಾಲಿಟಿ ಕ್ಲಬ್ಬಿನ ಆಶ್ರಯದಲ್ಲಿ ನಾನ್ ಮೆಡಲಿಸ್ಟ್ ಮತ್ತು ಓಪನ್ ಟೆನಿಸ್ ಪಂದ್ಯಗಳು ಈ ತಿಂಗಳು ೨೫ರಿಂದ ಜೂನ್ ೯ರ ವರೆಗೆ ನಡೆಯುವುವು ನಾನ್ ಮೆಡಲಿಸ್ಟ್ ಪಂದ್ಯದಲ್ಲಿ ಸಿಂಗಲ್ಸಿಗೆ ೫ ರೂ ಮತ್ತು ಡಬ್ಬಲ್ಸಿಗೆ ೮ ರೂ ಪಂತ ಪ್ರವೇಶಧನ ಕೊಟ್ಟು ಸೇರಬಹುದು ಈ ಪಂದ್ಯಗಳು ೨೫ರಿಂದ ೨ನೇ ತಾರೀಖು ಪೂರ್ತಿ ಇವೆ ಗೆದ್ದವರಿಗೂ ಫೈನಲ್ಲಿನಲ್ಲಿ ಸೋತ ಪ್ರತಿಸ್ಪರ್ಧಿಗೂ ಬಹುಮಾನಗಳನ್ನು ಕೊಡಲಾಗುವುದು ಓಪನ್ ಚಾಂಪಿಯನ್‌ಷಿಪ್ ಪಂದ್ಯಗಳು ೩ರಿಂದ ೯ರ ವರೆಗೆ ಇವೆ. ಪಂದ್ಯಕ್ಕೆ ೨೯ನೇ ತಾರೀಖು ಕಡೆಯ ಪ್ರವೇಶ ದಿನ ಮತ್ತು ನಾನ್ ಮೆಡಲಿಸ್ಟ್ ಪಂದ್ಯಕ್ಕೆ ೨೨ನೇ ತಾರೀಖು ಕಡೆಯ ದಿನ

ನಗರದಲ್ಲಿ ವಾರ್ತಾ ಪ್ರಚಾರ ಕಛೇರಿ

ದಸರಾ ವಸ್ತು ಪ್ರದರ್ಶನದ ಕಟ್ಟಡದಲ್ಲಿ ಇಂದಿನಿಂದ ಸರ್ಕಾರಿ ವಾರ್ತಾ ಪ್ರಚಾರ ಕಛೇರಿ ಮತ್ತು ಪ್ರವಾಸಿ ಕಛೇರಿಯನ್ನು ಆರಂಭಿಸಲಾಯಿತು ಈ ಬೆಳಿಗ್ಗೆ ಪೂಜೆಯನ್ನು ನೆರವೇರಿಸಲಾಯಿತು.

೨ ಕವರುಗಳ ನಾಶಕ್ಕಾಗಿ ಅಂಚೆ ನೌಕರನಿಗೆ ೮ ತಿಂಗಳ ಸಜಾ

ಎರಡು ಅಂಚೆ ಕವರುಗಳ ಗೈರುವಿಲೆ ಸಂಬಂಧವಾಗಿ ಕಾರವಾರದ ಅಂಚೆ ಕಛೇರಿಯ ಸಾರ್ಟಿಂಗ್ ಗುಮಾಸ್ತೆಯೊಬ್ಬನಿಗೆ ಅಲ್ಲಿನ ಸೆಷನ್ಸ್ ನ್ಯಾಯಾಧೀಶರು ೮ ತಿಂಗಳು ಕಠಿಣ ಸಜಾ ಮತ್ತು ೨೫೦ ರೂ. ದಂಡ, ತಪ್ಪಿದರೆ ೩ ತಿಂಗಳ ಕಠಿಣ ಸಜಾವನ್ನು ವಿಧಿಸಿರುತ್ತಾರೆ.

ಪುಲ್ಲಾರೆಡ್ಡಿಯವರು ಕೇಂದ್ರ ರಕ್ಷಣಾ ಕಾರ್ಯದರ್ಶಿ

ನಿವೃತ್ತರಾಗಲಿರುವ ಎಂ.ಕೆ. ವೆಲ್ಲೋಡಿಯವರ ಸ್ಥಾನದಲ್ಲಿ ಆಂಧ್ರ ಪ್ರದೇಶ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಓ ಪುಲ್ಲಾರೆಡ್ಡಿಯವರನ್ನು ಕೇಂದ್ರ ರಕ್ಷಣಾ ಕಾರ್ಯದರ್ಶಿಯಾಗಿ ನೇಮಿಸಲಾಗುವುದು.

ಮೈಸೂರು ರೈಲ್ವೆ ಮಾರ್ಗಗಳ ಸರ್ವೆ ಪೂರ್ಣ

೫೫ ೫೬ರಲ್ಲಿ ಮಂಜೂರಾದ ೧೦ ರೈಲು ಸರ್ವೆಗಳು ಪೂರೈಸಿರುವವೆಂದು ಮೊನ್ನೆ ಲೋಕಸಭೆಯಲ್ಲಿ ರೈಲ್ವೆ ಮಂತ್ರಿ ಜಗಜೀವನರಾಂರವರು ತಿಳಿಸುತ್ತಾ, ಮಂಗಳೂರು-ಹಾಸನ ರೈಲು ರಸ್ತೆ ಸರ್ವೆಯು ಮುಗಿದಿರುವುದೆಂದೂ, ಕಡೂರು-ಚಿಕ್ಕಮಗಳೂರು-ಸಕಲೇಶಪುರ ರಸ್ತೆ ಸರ್ವೆಯು ಮುಗಿಯಲಿರುವುದೆಂದೂ ಹೇಳಿರುತ್ತಾರೆ. ಬೆಂಗಳೂರು-ಸೇಲಂ ರಸ್ತೆಯ ಸರ್ವೆ ನಡೆಯುತ್ತಿರುವುದೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ ೭-೧೫ ಗಾಂಧಿ ಸ್ಮೃತಿ. ೭-೩೦ ಉದಯ ಸಂಗೀತ. ೮-೧೫ ಹಿಂದಿ ಪಾಠ. ಮಧ್ಯಾಹ್ನ ೧೨ ಆರ್. ಎಸ್. ಕೇಶವಮೂರ್ತಿ-ವೀಣೆ. ೧೨-೩೦ ವನಿತಾ ವಿಹಾರ. ೧-೨೦ ರೆಕಾರ್ಡು. ೧-೫೦ ಗೋಟುವಾದ್ಯ. ಸಂಜೆ ೬-೧೦ ನೃತ್ಯ ಗೀತೆ. ೭-೩೦ ಗೀತಾವಳಿ. ೮ ರಾಮನಾಥಪುರಂ ಕೃಷ್ಣನ್-ಮದ್ರಾಸಿನಂತೆ. ೯-೧೫ ರಾಷ್ಟ್ರಾಭಿವೃದ್ಧಿ ಕಾರ್ಯಕ್ರಮ. ೯-೩೦ ಹೊಸಗನ್ನಡ ಪಿತಾಮಹ-ಪಂಜೆ ಮಂಗೇಶರಾವ್ ಪಾರ್ಟಿ ೧೦ ಉರ್ದು ಗೀತೆ ೧೦-೧೫ ಆರ್. ಎಸ್. ಕೇಶವಮೂರ್ತಿ-ವೀಣೆ

ಸೆಪ್ಟೆಂಬರ್ ೧೦ಕ್ಕೆ ಮೈಸೂರಿಗೆ ವಿನೋಬಾರವರ ಆಗಮನ

ಆಚಾರ್ಯ ವಿನೋಬಾ ಭಾವೆಯವರು ೨ನೇ ಸೆಪ್ಟೆಂಬರ್ ೧೦ ರವರೆಗೆ ಕೇರಳದಲ್ಲಿ ಪ್ರವಾಸ ಮಾಡಿ ಮಾರನೇ ದಿನ ಮೈಸೂರು ಸಂಸ್ಥಾನವನ್ನು ಕಾಸರಗೋಡು ಮೂಲಕ ಪ್ರವೇಶಿಸುವರು ಆ ಸಂಸ್ಥಾನದಲ್ಲಿ ಖಾಸಗಿಯವರ ಜಮೀನು ಮಾಲೀಕತ್ವವನ್ನು ಕೊನೆಗಾಣಿಸಿ, ಭೂಮಿಯ ಸಾಮಾಜೀಕರಣ ಮಾಡಲು ವಿನೋಬಾಜಿಯವರೂ, ಸರ್ವೋದಯ ಕಾರ್ಯಕರ್ತರೂ ನಿರ್ಧರಿಸಿರುತ್ತಾರೆ.

ಶಿಶು ಸಾಹಿತ್ಯ ಸಂಘ ಕೇಂದ್ರದಲ್ಲಿ ಕ್ರೀಡಾ ಸ್ಪರ್ಧೆ

ಶಿಶು ಸಾಹಿತ್ಯ ಸಂಘದ ಆಶ್ರಯದಲ್ಲಿ ನರಸಿಂಹರಾಜ ಮೊಹಲ್ಲಾದಲ್ಲಿ ನಡೆಯುತ್ತಿರುವ ಉದಯ ರವಿ ಕ್ರೀಡಾಕೇಂದ್ರದ ವಾರ್ಷಿಕೋತ್ಸವದ ಅಂಗವಾಗಿ ಕ್ರೀಡಾ ಸ್ಪರ್ಧೆಗಳನ್ನು ಶ್ರೀ ಎಂ. ರಾಮುಲ್‌ಸಿಂಗ್‌ರವರ ಅಧ್ಯಕ್ಷತೆಯಲ್ಲಿ ೯ ಮತ್ತು ೧೦ನೇ ತಾರೀಕು ಏರ್ಪಡಿಸಲಾಗಿದ್ದಿತು ಬಾಲಕರಲ್ಲಿ ಶ್ರೀ ಎನ್. ಭಟ್ಟಾಚಾರ್ ಮತ್ತು ಬಾಲಕಿಯರಲ್ಲಿ ಶ್ರೀಮತಿ ಎ. ಸುಕನ್ಯರವರು ಹೆಚ್ಚಿನ ಅಂಕಗಳನ್ನು ಗಳಿಸಿ ಚಾಂಪಿಯನ್‌ಷಿಪ್ ಪಡೆದರು.

ಥಿಯೊಬಾಲ್ಡ್ ನರ್ಸರಿ ಸ್ಕೂಲ್

ಇದುವರೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿದ್ದ ಥಿಯೋಬಾಲ್ಡ್ ನರ್ಸರಿ ಮತ್ತು ಪ್ರೈಮರಿ ಶಾಲೆಯನ್ನು ಇನ್ನು ಮುಂದೆ ಜಗನ್ಮೋಹನ ಭವನದಲ್ಲಿ ನಡೆಸಲು ಏರ್ಪಡಿಸಲಾಗಿದೆ

THE LIFE INSURANCE CORPORATION OF INDIA

Unit ..Mysore Government Life Insurance Department (Public Branch)

Application having been received for the issue of a duplicate of Policy No. 27018 C on the life of Sri K S. Nanjundiah, it is hereby notified that the duplicate will be issued unless Valid objection therefor is received by the undersigned within one month from this date.

Bangalore
16-5-57

H V Krishnamurthy,
Secretary

ಭಾರತಕ್ಕೆ ಚಿನ್ನದ ಕಳ್ಳ ರವಾನೆ ಮಾಡಲು ಪಿತೂರಿ

ರಾಜ್ಯಸಭೆಯಲ್ಲಿ ಮೊನ್ನೆ ಯಶವಂತಸಿಂಗ್‌ರವರು ಪ್ರಶ್ನೋತ್ತರ ಕಾಲದಲ್ಲಿ ಮಾತನಾಡಿ, ಭಾರತಕ್ಕೆ ಚಿನ್ನವನ್ನು ಯಥೇಚ್ಛವಾಗಿ ಕಳ್ಳ ರವಾನೆಯಿಂದ ತರುತ್ತಿರುವುದಕ್ಕೆ ಭಾರತದ ಆರ್ಥಿಕ ವ್ಯವಸ್ಥೆಯನ್ನು ನಾಶಗೊಳಿಸುವ ಅಂತರ ರಾಷ್ಟ್ರೀಯ ಪಿತೂರಿಯೇ ಕಾರಣವೆಂದು ತಿಳಿಸಿದರು ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ಮಾತನಾಡಿ ಇಂತಹ ವರದಿಗಳನ್ನು ತಾವೂ ಕೇಳಿರುವುದಾಗಿಯೂ, ಆದರೆ ಅದರ ನಿಜಾಂಶವು ತಿಳಿಯುವವರೆಗೆ ಸರ್ಕಾರದವರು ಉತ್ತರವೀಯಲು ಸಾಧ್ಯವಿಲ್ಲವೆಂದೂ ಹೇಳಿದರು.

ಮೈಸೂರು ಮತ್ತು ಬೆಂಗಳೂರು ಆಸ್ಪತ್ರೆಗಳಲ್ಲಿ ಗೌರವ ವೈದ್ಯರ ನೇಮಕ

ಸರ್ಕಾರದ ಆಸ್ಪತ್ರೆಗಳಲ್ಲಿ ಗೌರವ ವೈದ್ಯರನ್ನು ನೇಮಿಸಲು ನಿರ್ಧರಿಸಲಾಗಿರುವುದೆಂದೂ, ಮೈಸೂರು ಮತ್ತು ಬೆಂಗಳೂರಿನ ದೊಡ್ಡ ಆಸ್ಪತ್ರೆಗಳಲ್ಲಿ ಮೊದಲು ಈ ನೇಮಕಗಳು ಆರಂಭವಾಗುವುವೆಂದೂ ತಿಳಿದುಬಂದಿದೆ. ಈ ಪದ್ಧತಿಯು ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಈಗ ಜಾರಿಯಲ್ಲಿದೆ.

ದಿ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್,
ಭದ್ರಾವತಿ

ಮಾರಾಟಕ್ಕಿದೆ

ಭದ್ರಾವತಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಸೇರಿದ, ಮೈಸೂರು ನಗರದಲ್ಲಿ ಇರುವ ಎರಡು ವಾಸದ ಕಟ್ಟಡಗಳು 17 6-1957ನೇ ತಾರೀಖು ಬೆಳಗ್ಗೆ 11 ಗಂಟೆಗೆ ಬಹಿರಂಗ ಹರಾಜಿನಲ್ಲಿ ಸ್ಥಳದ ಬಳಿ ಮಾರಲ್ಪಡುವುವು. ಬನ್ನಿಮಂಟಪದ ರಸ್ತೆಯಲ್ಲಿ ಹೊಸ ಸಂತೆಪೇಟೆ ಹತ್ತಿರ ಇರುವುವು ವಾಸಮಾಡಲು ಮತ್ತು ಕಛೇರಿಗಳಿಗೆ ಬಹು ಉಪಯುಕ್ತವಾದುವು. ವಿವರಗಳು, ಮಾರಾಟದ ನಿಯಮಗಳು ಮತ್ತು ಷರತ್ತುಗಳನ್ನು ಕೆಳಗೆ ರುಜು ಮಾಡಿರುವವರಿಂದ ತಮ್ಮ ವಿಳಾಸವಿರುವ ಸ್ಟಾಂಪ್ ಹಚ್ಚಿದ ಕವರಿನೊಂದಿಗೆ ಬರೆದು ತಿಳಿದುಕೊಳ್ಳಬಹುದು

ಹೆಚ್. ಎಲ್. ನಾಗೇಗೌಡ, ಸೆಕ್ರೆಟರಿ

FOR THE INSTALLATION OF
RECORDS MHF & LOUDSPEAKERS
AT YOUR DOORS
PLEASE CONTACT
H S RAMACHANDRAN'S
EVERGREEN ACOUSTICS
"TREASURE HOUSE OF RECORDS"
28 SONAR STREET MYSORE

ಮೈಸೂರು ಪೇಟೆ ಧಾರಣೆ

ರಸ್ತಪುಡಿ	೩೦ [illegible]	೩೧ ೦೦
ಅಕ್ಕಿ	೩೧ ೦೦	[illegible]
ಕಾರ್ ಸಣ್ಣ	೩೦ [illegible]	
ಕಾಯಿಬುಲ್ಲು	೩೧ ೦೦	
ರಾಗಿ	೩೧ [illegible]	[illegible]
ಜೋಳ	[illegible]	[illegible]
ಕಡಲೆಕಾಯಿ	[illegible]	[illegible]
ತೊಗರಿಬೇಳೆ	[illegible] ೦೦	[illegible]
ಹುರುಳಿ	೩೧ [illegible]	[illegible]
ಹೆಸರು	[illegible] ೦೦	
ಹಲಸಂದೆ	[illegible]	[illegible] ೦೦
ಧನಿಯ	[illegible]	
ಹುಣಸೆಬೀಜ	[illegible] ೦೦	[illegible]
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	[illegible] ೦೦
ಮೆಣಸಿನಕಾಯಿ	[illegible] ೦೦	[illegible]
ತೆಂಗಿನಕಾಯಿ	[illegible]	[illegible]

GLOBE TUTORIAL COLLEGE
Sadvidya Patasala Buildings,
S. S. L. C. Classes
In Full Swing : Join at once

ಮೈಸೂರಿನಲ್ಲಿ ಪ್ರತಿ ತಿಂಗಳು
17 ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನಕಲ್ಪ
ದಿವ್ಯೌಷಧವನ್ನು ಕಂಡು
ಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17 ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಬೆಳಗ್ಗೆ 7-30 ರಿಂದ ಸಂಜೆ 5 ಗಂಟೆಯವರೆಗೆ
ಭೇಟಿ ಮಾಡಬಹುದು : ಫೋನ್ ನಂ. 590
ಮೇಲ್ಕಂಡ ವಿಷಯವನ್ನು ಗಮನಿಸಿ ಅವರ ಪರಿಣತ
ವೈದ್ಯಕೀಯ ಸಲಹೆಯನ್ನು ಪಡೆಯಿರಿ
ಇವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನಕಲ್ಪ—ಉಪಯೋಗಿಸಿರಿ
ಇದು ವಜ್ರ, ಚಿನ್ನ, ಮುತ್ತು, ಹವಳ, ಬೆಳ್ಳಿ, ಗೋಮೇಧಿಕ, ಪಚ್ಚೆ, ಪದ್ಮರಾಗಿಣಿ ಮತ್ತು ಪ್ರಶಸ್ತ ಶಿಲೆ—ಈ 9 ಅಮೂಲ್ಯ ಹರಳುಗಳ ಸಂಯೋಗ. ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಸಂಬಂಧದ ವ್ಯಾಧಿಗಳು, ಪಿತ್ತಕೋಶ, ರಕ್ತ ದೋಷ, ಮೂಲವ್ಯಾಧಿ, ಸಾಕ್ರಣ, ಬಹುಮೂತ್ರ, ಅಸ್ತಮಾ ಮತ್ತು ಇನ್ನು ಇತರ ಎಲ್ಲಾ ಸಾಮಾನ್ಯ ಹಾಗೂ ತೀವ್ರವಾದ ವ್ಯಾಧಿಗಳೂ ಸಂಪೂರ್ಣವಾಗಿ ಗುಣಹೊಂದುವುವು ಅತ್ಯುತ್ತಮ ಔಷಧಿ ಇದೊಂದೇ. ಉಚಿತ ಸಾಹಿತ್ಯಗಳಿಗಾಗಿ ಬರೆಯಿರಿ.
NAVRATNA KALPA PHARMACY,
JULLUNDUR CITY (India)

D. Banumiah's College of Commerce
MYSORE

Applications for admission to the Pre-University Course* or the Junior Intermediate class in Arts, Science and Commerce will be received from students who have passed the S.S L.C. Examination and have been declared E.C. & P S. Forms of application can be obtained from the office of the College on payment of Re. 1 in person or Rs. 1-13 Np by post.

* It is proposed to provide the following subjects in the Pre-University course :—
Physics, Chemistry, Mathematics, Botany, Zoology, History, Economics, Logic, Psychology, Geography, Commerce

ಚಾಮುಂಡೇಶ್ವರಿ ಟಾಕೀಸ್
17-5-57 ನೇ : ಶುಕ್ರವಾರದಿಂದ : ಯಶಸ್ವೀ 2 ನೇ ವಾರ
★ ಪುದೈಯಲ್ ★
ಶಿವಾಜಿ ಗಣೇಶನ್, ಪದ್ಮಿನಿ, ಚಂದ್ರಬಾಬು ಮತ್ತು ಬಾಲಯ್ಯ ಮುಂತಾದವರು ಪಾತ್ರ ವಹಿಸಿರುವ ತಮಿಳು ಚಿತ್ರ [ಸೆಲ್ಲಂ ರಿಲೀಸ್]

ವಿವಾಹ ಮತ್ತು ವಿಶೇಷ ಸಮಾರಂಭಗಳಿಗಾಗಿ
★ ನಾವು ಎಲ್ಲಾ ವಿಧವಾದ ದಿನಸಿಪದಾರ್ಥಗಳನ್ನು ಶುದ್ಧ ಮಾಡಿ ಸಿದ್ಧಪಡಿಸಿ, ಹೋಲ್‌ಸೇಲ್ ದರದಲ್ಲಿ ಒದಗಿಸಲು ಸಿದ್ಧವಾಗಿರುತ್ತೇವೆ
★ ಅಂತಹ ಸಮಾರಂಭಗಳಾದ ನಂತರ ಉಳಿಯುವ ದಿನಸಿಪದಾರ್ಥಗಳನ್ನೆಲ್ಲಾ ಅದೇ ಬೆಲೆಗೆ ವಾಪಸು ಕೊಳ್ಳಲು ಸಹ ಏರ್ಪಡಿಸಿರುತ್ತೆ.
ಒಂದು ಸಾರಿ ಪರೀಕ್ಷಿಸಿ ತೃಪ್ತಿಪಡಿರಿ.
ಬಾಂಬೆ ಆನಂದ ಭವನ್ ಸ್ಟೋರ್ಸ್,
ಫೋನ್ ನಂ 645 : ನ್ಯೂ ಸ್ಟ್ಯಾಚ್ಯು ಸರ್ಕಲ್ : ಮೈಸೂರು
ಭಾನುವಾರವೂ ಮಾರಾಟದ ಸೌಕರ್ಯವುಂಟು.

Edited, Printed and Published by
A. R. Nagarajan at Sadhvi Press,
D. Subbiah Road, Mysore

ರಣಜಿತ್ ★
16-5-57 ನೇ ಗುರುವಾರದಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಆಟಗಳು
ಅಶೋಕ ಕುಮಾರ್, ನಳಿನಿ ಜಯವಂತ್, ಪ್ರಾಣ್, ಜಾನಿ ವಾಕರ್, ಹೆಲೆನ್ ಮತ್ತು ಇತರರು ಪಾತ್ರವಹಿಸಿರುವ,
ನಗರವೇ ದಿಗ್ಭ್ರಾಂತಗೊಂಡಿದೆ! ಈ ಭಯಾನಕ ವ್ಯಕ್ತಿ ಇಲ್ಲಿದ್ದಾನೆ! ಈತನು ಚೋರ-ಯೋಧ-ಪ್ರೇಮಿ!!—ಈ ವ್ಯಕ್ತಿ ಯಾರು? ಈತನ ಕೆಲಸವೇನು? ಈತನು ನಿಮ್ಮ ಕಣ್ಣಿಗೆ ಗೋಚರವಾಗುವುದಿಲ್ಲ. ಇವರೇ ಸಿಪ್ಪಿ ಫಿಲಂಸ್‌ರವರ,
★ ಮಿಸ್ಟರ್ X ★
ಸಂಗೀತ : ಎನ್. ದತ್ತ
(ನಿಮ್ಮ ಸೀಟುಗಳನ್ನು ಮುಂಚಿತವಾಗಿ ಕಾದಿರಿಸಿ)

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ



ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI , FRIDAY 17—5—1957 ಮೈಸೂರು , ಶುಕ್ರವಾರ ೧೭—೫—೧೯೫೭ , [ಸಂಚಿಕೆ : ೨೮೭

ಹೊಸ ತೆರಿಗೆಗಳ ಬಗ್ಗೆ ರಾಜಾಜಿಯವರ ತೀವ್ರ ಖಂಡನೆ

ಮುಂದೆಯೂ ದಸರಾ ಉತ್ಸವ ನಡೆಯುವುದು

ಮಂತ್ರಿ ಮಂಡಲದ ನಿರ್ಧಾರ

ಬೆಂಗಳೂರು ೧೬

ಮೈಸೂರಿನಲ್ಲಿ ಪ್ರತಿ ವರ್ಷವೂ ಬಹಳ ಕಾಲದಿಂದಲೂ ನಡೆದುಬರುತ್ತಿರುವ ದಸರಾ ಮಹೋತ್ಸವವು ರಾಜಪ್ರಮುಖರ ಹುದ್ದೆ ರದ್ದಿಯಾತಿಯು ವಿಶಾಲವಾಗಿ ಈಗಿನ ರಾಜ್ಯ ವ್ಯವಸ್ಥೆಗೆ ತಕ್ಕಂತೆ ಸಲಕೆಲವು ಬದಲಾವಣೆಗಳೊಡನೆ ಮುಂದುವರಿಸಲ್ಪಡಬೇಕೆಂದು ಮೈಸೂರು ಮಂತ್ರಿಮಂಡಲವು ನಿರ್ಧರಿಸಿರುವುದಾಗಿ ನೆನ್ನೆ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿದರು. ಮಾಜಿ ಮಂತ್ರಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದ್ದ ಸಮಿತಿಯು ಈ ಉತ್ಸವವನ್ನು ಎಂದಿನಂತೆ ನಡೆಸುವುದು ಸೂಕ್ತವೆಂದು ವರದಿ ಮಾಡಿದ್ದಿತು.

ಶ್ರೀ ಜಿ. ವಿಜಯರಾಘವರೆಡ್ಡಿಯವರು ಕೇಂದ್ರ ಸರ್ಕಾರಕ್ಕೆ

ಮೈಸೂರು ಸರ್ಕಾರದ ಸಿವಿಲ್ ಸರ್ವಿಸ್ ಅಧಿಕಾರಿಗಳಾದ ಶ್ರೀ ಜೆ. ಜಿ. ವಿಜಯ ರಾಘವ ರೆಡ್ಡಿಯವರ ಸೇವೆಯನ್ನು ಕೇಂದ್ರ ಸರ್ಕಾರದ ಪ್ರಾದೇಶಿಕ ಆಹಾರ ಕಮಿಷನರ್ ಕಛೇರಿಯಲ್ಲಿ ಉಪ ಡೈರೆಕ್ಟರಾಗಿ ನೇಮಿಸಲು ಎರವಲು ಕೊಡಲಾಗಿದೆ.

○ ಕೇಂದ್ರ ಕೈಮಗ್ಗದ ಬೋರ್ಡಿನವರು ಇಲ್ಲಿ ಒಂದು ಪ್ರಾದೇಶಿಕ ಕಛೇರಿಯನ್ನು ತೆರೆದು ಕೈಮಗ್ಗಗಳ ಉತ್ಪತ್ತಿ ಚಟುವಟಿಕೆಗಳನ್ನು ಸಂಯೋಜಿಸಲು ನಿರ್ಧರಿಸಿರುತ್ತಾರೆ.

ಬ್ರಿಟನ್ನಿನ ಪ್ರಥಮ ಜಲಜನಕ ಬಾಂಬಿನ ಸ್ಫೋಟನೆ

ಮಧ್ಯ ಪೆಸಿಫಿಕ್ಕಿನಲ್ಲಿ ನೆನ್ನೆ ಬೆಳಗ್ಗೆ ಬ್ರಿಟನ್ನು ತನ್ನ ಪ್ರಥಮ ಜಲಜನಕ ಬಾಂಬಿನ ಪ್ರಯೋಗಾರ್ಥ ಸಿಡಿತವನ್ನು ನಡೆಸಿತು. ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ. ಬ್ರಿಟಿಷ್ ವಿಮಾನವೊಂದು ಬಾಂಬನ್ನು ಎತ್ತಿ ಹಾಕಿತು. ಜಪಾನ್ ಸರ್ಕಾರವು ಈ ಬಗ್ಗೆ ಬ್ರಿಟಿಷ್ ಸರ್ಕಾರಕ್ಕೆ ಪ್ರತಿಭಟನೆಯನ್ನು ಸೂಚಿಸಿದೆ.

ಕೆಂಚನಗೂಡು ಸರ್ಕಾರಿ ಬಾಲಕಿಯರ ಪ್ರೌಢಶಾಲೆ

ಬಹು ದಿನಗಳ ಪ್ರಯತ್ನದ ಪರಿಣಾಮವಾಗಿ ಕೆಂಚನಗೂಡಿನಲ್ಲಿ ಪ್ರಸಕ್ತ ವರ್ಷದಿಂದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯು ಆರಂಭವಾಗಲಿದೆಯೆಂದು ಗೊತ್ತಾಗಿದೆ. ಈ ಶಾಲೆಯನ್ನು ಈಗ ಮಿಡ್ಲ್ ಶಾಲೆಯು ನಡೆಯುತ್ತಿರುವ ಕಟ್ಟಡದಲ್ಲಿ ನಿರ್ವಹಿಸಿ, ಮಿಡ್ಲ್ ಶಾಲೆಯನ್ನು ಬೇರೊಂದು ಬಾಡಿಗೆ ಕಟ್ಟಡಕ್ಕೆ ವರ್ಗಾಯಿಸುವ ಯೋಜನೆಯಿರುವುದೆಂದೂ, ಬಾಲಕಿಯರ ಶಾಲೆಗೆ ಈಗ ಗೊತ್ತುಮಾಡಿರುವ ಸ್ಥಳವು ಪ್ರಶಸ್ತವಾಗಿಲ್ಲವೆಂದು ಸಾರ್ವಜನಿಕರು ಅಭಿಪ್ರಾಯಪಡುತ್ತಿರುವರೆಂದೂ ಹೇಳಲಾಗಿದೆ. ಈ ಕಾರಣ ಸಂಬಂಧಪಟ್ಟವರು ಬಾಲಕಿಯರ ಶಾಲೆಯನ್ನು ಊರಿನ ಬಡಾವಣೆಯಲ್ಲಿರುವ ಕಟ್ಟಡವೊಂದರಲ್ಲಿ ಏರ್ಪಡಿಸುವುದು ಸೂಕ್ತ—ಎಂಬುದಾಗಿ ಕೆಂಚನಗೂಡಿನ ವಿದ್ಯಾಭಿಮಾನಿಯೊಬ್ಬರು ಪತ್ರ ಬರೆದು ತಿಳಿಸುತ್ತಾರೆ.

ಸಂಸ್ಥಾನದಲ್ಲಿ ವೈದ್ಯ ಸಹಾಯದ ವಿಸ್ತರಣೆ

ಆರೋಗ್ಯ ಸಚಿವರ ವಿವರಣೆ

ಬೆಂಗಳೂರು ೧೬

ಆರೋಗ್ಯ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಹಳೇ ಮೈಸೂರಿನಲ್ಲಿರುವ ಮಟ್ಟಕ್ಕೆ ಇತರ ಐಕ್ಯಗೊಂಡ ಕನ್ನಡ ಭಾಗಗಳಲ್ಲಿರುವ ವೈದ್ಯ ಮತ್ತು ಆರೋಗ್ಯ ಸೌಲಭ್ಯಗಳನ್ನು ದ್ವಿತೀಯ ಯೋಜನೆ ಅವಧಿಯಲ್ಲಿ ತರಲಾಗುವುದೆಂದು ತಿಳಿಸಿದರು. ಇತರ ಕಡೆಗಳು ಬಹಳ ಹಿಂದುಳಿದಿರುವುವೆಂದು ಅವರು ಹೇಳಿ ಹಳೇ ಮೈಸೂರಿನಲ್ಲಿ ೧೫,೦೦೦ ನಿವಾಸಿಗಳಿಗೆ ಒಬ್ಬ ವೈದ್ಯನಿದ್ದರೆ, ಹೈದರಾಬಾದ್ ಕರ್ನಾಟಕದ ೪೭,೦೦೦; ಬೊಂಬಾಯಿ ಕರ್ನಾಟಕದ ೬೩,೦೦೦; ಮಂಗಳೂರಿನ ೩೭,೦೦೦ಕ್ಕೆ ಒಬ್ಬೊಬ್ಬರಿರುವರೆಂದು ನುಡಿದರು.

ಹೊಸದಾಗಿ ೧೧೦ ಆಸ್ಪತ್ರೆಗಳನ್ನು ತೆರೆಯಲಾಗುವುದು. ಆ ಪೈಕಿ ೭೦ ಅನ್ನು ಐಕ್ಯಗೊಂಡ ಪ್ರದೇಶಗಳಲ್ಲಿ ಸ್ಥಾಪಿಸಲಾಗುವುದು.

ದ್ವಿತೀಯ ಯೋಜನೆಯಲ್ಲಿ ದೊಡ್ಡ ಆಸ್ಪತ್ರೆಗಳಿಗೆ ೧೫-೨೦ ಲಕ್ಷ ರೂ.ಗಳ ಸಾಧನ ಒದಗಿಸುವುದು; ಮೈಸೂರು ಚಲುವಾಂಬಾ ಆಸ್ಪತ್ರೆಯಲ್ಲಿ ೧ ಲಕ್ಷ ರೂ. ವೆಚ್ಚದಿಂದ ಅಭಿವೃದ್ಧಿ ಕ್ರಮ ಕೈಗೊಳ್ಳುವುದು; ೫ ಲಕ್ಷ ರೂ ವೆಚ್ಚದಿಂದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಹೆಚ್ಚು ವಾರ್ಡುಗಳನ್ನು ಕಟ್ಟಿಸುವುದು ವಿವಿಧ ಆಸ್ಪತ್ರೆಗಳ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ಜಿಲ್ಲಾ ಕೇಂದ್ರಗಳಲ್ಲಿ ಕ್ಷಯರೋಗದ ಚಿಕಿತ್ಸಾಲಯಗಳನ್ನು ೧-೫೦ ಲಕ್ಷ ರೂ ವೆಚ್ಚದಿಂದ ತೆರೆಯಲಾಗುವುದು.

ಆಸ್ಪತ್ರೆಗಳಲ್ಲಿ ಖಾದಿ ಮತ್ತು ಕೈಮಗ್ಗದ ವಸ್ತ್ರಗಳನ್ನೇ ಉಪಯೋಗಿಸಲಾಗುವುದು-ಎಂಬುದಾಗಿ ಸಚಿವರು ತಿಳಿಸಿದರು.

ಹೊಸ ತೆರಿಗೆಗಳಿಂದ ಧಾರಣೆವಾಸಿಗಳ ಏರಿಕೆ

ಮೈಸೂರು ೧೬

ಹೊಸ ತೆರಿಗೆಗಳ ಪರಿಣಾಮವಾಗಿ ಸರ್ವರಿಗೂ ಉಪಯುಕ್ತವಾದ ಪದಾರ್ಥಗಳ ಧಾರಣೆಗಳೆಲ್ಲವೂ ನೆನ್ನೆಯಿಂದಲೇ ಹೆಚ್ಚುತ್ತಿವೆ. ನಗರದಲ್ಲಿ ಸಕ್ಕರೆಯನ್ನು ವೀಸೆಗೆ ರೂ. ೧-೯-೬ ರಂತೆ ಮಾರಲಾಗುತ್ತಿದೆ. ಕಾಫಿ ಮತ್ತು ಟೀ ಬೆಲೆಯು ಪೌಂಡಿಗೆ ೧ ಆಣೆಯಷ್ಟು ಏರಿದೆ. ಸಿಗರೇಟು ಮತ್ತು ಇತರ ಪದಾರ್ಥಗಳ ಬೆಲೆಯೂ ಏರಿ ಅವು ಸಿಗುತ್ತಿಲ್ಲ. ಪೆಟ್ರೋಲು ಬೆಲೆಯು ೩ ರೂಪಾಯಿಗೂ ಹೆಚ್ಚಾಗಿದೆ. ಸೀಮೆಯೆಣ್ಣೆಯ ಬೆಲೆಯೂ ಏರಿದೆ. ಮಧ್ಯಮ ವರ್ಗದವರೂ, ಬಡಜನರೂ ಈ ಪರಿಸ್ಥಿತಿಯಿಂದ ಪರಿತಪಿಸುವಂತೆ ಆಗಿದೆ.

ಕ್ರಿಕೆಟ್ ಪಂದ್ಯ

ನಗರದ ಲಕ್ಕಿ ಬಾಯ್ಸ್ ಕ್ಲಬ್ಬಿಗೂ ಮತ್ತು ಕ್ಯಾಪಿಟಲ್ ಕ್ರಿಕೆಟ್ ಕ್ಲಬ್ಬಿಗೂ ನೆನ್ನೆ ನಡೆದ ಪಂದ್ಯದಲ್ಲಿ ಲಕ್ಕಿ ಬಾಯ್ಸ್ ಕ್ಲಬ್ಬಿನವರು ಜಯಗಳಿಸಿರುವರು.

ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಪದ್ಮನಾಭಯ್ಯನವರು ಅಧ್ಯಕ್ಷರು

ಬೆಂಗಳೂರು ೧೬

ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಕೆ. ಎಸ್. ಪದ್ಮನಾಭಯ್ಯನವರನ್ನು ಸದ್ಯದಲ್ಲೇ ನಿವೃತ್ತರಾಗಲಿರುವ ಶ್ರೀ ಜೆ. ಬಿ. ಗುಂಡಪ್ಪಗೌಡರ ಸ್ಥಾನದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಧ್ಯಕ್ಷರಾಗಿ ನೇಮಿಸಲಾಗಿದೆ. ನಿವೃತ್ತರಾಗಲಿರುವ ಶ್ರೀ ಜಾರ್ಜ್‌ಮ್ಯಾಥನ್ನರ ಜಾಗದಲ್ಲಿ ಗೃಹ ವಸತಿ ಸಮಿತಿ ಅಧ್ಯಕ್ಷ ಶ್ರೀ ಎಂ. ಕೆ. ಅಪ್ಪಾಜಪ್ಪನವರನ್ನು ಸದಸ್ಯರಾಗಿ ನೇಮಕ ಮಾಡಲು ನಿರ್ಧರಿಸಲಾಗಿದೆ.

ನಗರದಲ್ಲಿ ಸರ್ಕಾರಿ ವಾರ್ತಾ ಕಛೇರಿಯ ಶಾಖೆ

ಮೈಸೂರು ೧೬

ವಸ್ತು ಪ್ರದರ್ಶನದ ಕಟ್ಟಡದಲ್ಲಿ ನೆನ್ನೆಯಿಂದ ಸರ್ಕಾರಿ ಉಪ ವಾರ್ತಾ ಕಛೇರಿಯು ಆರಂಭವಾಗಿದೆ. ಸಹಾಯಕ ವಾರ್ತಾಧಿಕಾರಿಗಳಾದ ಶ್ರೀ ಡಿ. ಎಸ್. ಪಾಳೇಗಾರರು ಅದರ ಮೇಲ್ವಿಚಾರಣೆಯಲ್ಲಿರುವರು. ವಾರ್ತಾ ಕಛೇರಿಯು ಪ್ರವಾಸೀ ವಾರ್ತಾ ಕೇಂದ್ರವೂ ಆಗಿದೆ.

ಶ್ರೀ ಪಾಳೇಗಾರರು ನೆನ್ನೆ ಸಂಜೆ ನಗರದ ಪತ್ರಿಕಾ ಪ್ರತಿನಿಧಿಗಳನ್ನು ಬರಮಾಡಿಕೊಂಡು ಸತ್ಕರಿಸಿದರು. ಹೊಸ ಕಛೇರಿಯು ಉಪಯುಕ್ತವಾಗುವ ಬಗ್ಗೆ ಪತ್ರಿಕಾಕರ್ತರ ಸಹಕಾರವನ್ನು ಅವರು ಕೋರಿದರು.

ಶ್ರೀಗಳಾದ ಅಗರಂ ರಂಗಯ್ಯ ಮತ್ತು ಎ. ರಾಮಣ್ಣನವರು ಪತ್ರಿಕಾ ಪ್ರತಿನಿಧಿಗಳ ಪರವಾಗಿ ಮಾತನಾಡಿ, ನಗರದಲ್ಲಿರುವ ೧೦ ಪತ್ರಿಕೆಗಳಿಗಾಗಿ ಇಲ್ಲೊಂದು ಸರ್ಕಾರಿ ವಾರ್ತಾ ಕಛೇರಿಯನ್ನು ಏರ್ಪಡಿಸಬೇಕೆಂದು ಹಲವಾರು ವರ್ಷಗಳಿಂದ ಸಲ್ಲಿಸುತ್ತಿದ್ದ ಬೇಡಿಕೆಯು ಈಗ ಫಲಪ್ರದವಾದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿ, ಈ ಕಛೇರಿಯ ಸೌಲಭ್ಯವನ್ನು ಎಲ್ಲ ಪತ್ರಿಕೆಗಳವರೂ ಪಡೆದು ಅದು ಯಶಸ್ವಿಯಾಗಬೇಕೆಂದು ಕೋರಿ, ಸರ್ಕಾರಕ್ಕಾಗಿ ಶ್ರೀ ಪಾಳೇಗಾರರಿಗೆ ಧನ್ಯವಾದವನ್ನು ಅರ್ಪಿಸಿದರು.

ಭಾಗವತ ಪುರಾಣ ಪ್ರವಚನ

ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನೆನ್ನೆಯಿಂದ ಪ್ರತಿಸಂಜೆ ೬॥ ಗಂಟೆಗೆ ಬ್ರಹ್ಮಶ್ರೀ ಪಾಟೀಲರ ಚಂದ್ರಶೇಖರ ಭಟ್ಟರಿಂದ ಶ್ರೀಮದ್ಭಾಗವತ ಪುರಾಣ ಪ್ರವಚನವು ಶ್ರೀ ಸದ್ಗುರು ಸೇವಾ ಮಂಡಲಿಯ ಆಶ್ರಯದಲ್ಲಿ ನಡೆಯುವುದು.

ಉಪನ್ಯಾಸ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ವಿಶೇಷ ತರಗತಿ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ಡಾ॥ ಎಂ. ವಿ. ಕೃಷ್ಣರಾಯರು ರಾಜ್ಯಶಾಸ್ತ್ರದ ಬಗ್ಗೆ ಮೂರನೇ ಉಪನ್ಯಾಸ ಮಾಡುವರು.

ನಾಳಿದ್ದು ನೀರು ಸರಬರಾಜಿಲ್ಲ

ವಿದ್ಯುಚ್ಛಕ್ತಿ ಸರಬರಾಜು ಇಲ್ಲದಿರುವ ಪ್ರಯುಕ್ತ ನಾಳಿದ್ದು ಭಾನುವಾರ ಬೆಳಿಗ್ಗೆ ೭ರಿಂದ ಮಧ್ಯಾಹ್ನ ೩ ಗಂಟೆವರೆಗೆ ನಗರದಲ್ಲಿ ನೀರು ಸರಬರಾಜು ಇರುವುದಿಲ್ಲ.

ಹೊಸ ತೆರಿಗೆಗಳಿಂದ ರಾಷ್ಟ್ರದ ಸರ್ವನಾಶಕ್ಕೆ ದಾರಿ

ಜನತೆ ಮತ್ತು ಶಾಸನಸಭಾ ಸದಸ್ಯರಿಗೆ ರಾಜಾಜಿಯವರ ಎಚ್ಚರಿಕೆ

ಲೋಕ ಸಭೆಯಲ್ಲಿ ನೆನ್ನೆ ಕೇಂದ್ರ ಮಂತ್ರಿ ಟಿ.ಟಿ. ಕೃಷ್ಣಮಾಚಾರಿಯವರು ಸೂಚಿಸಿದ ಹೊಸ ತೆರಿಗೆಗಳ ಬಗ್ಗೆ ಮಾಜಿ ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರು ಪ್ರಜಾವರ್ಗ ಮತ್ತು ಶಾಸನ ಸಭಾಸದಸ್ಯರುಗಳಿಗೆ ಎಚ್ಚರಿಕೆಯಿತ್ತು, ರಾಷ್ಟ್ರೀಯ ಸಮಾಜವಾದದ ಪ್ರಯೋಗದ ಪರಿಣಾಮವಿದೆಂದು ನುಡಿದಿರುತ್ತಾರೆ. ಐಶ್ವರ್ಯ ಮತ್ತು ವೆಚ್ಚದ ಮೇಲೆ ತೆರಿಗೆ ಹಾಕುವುದು ಭಾರಿ ದಬ್ಬಾಳಿಕೆ, ಅತ್ಯಂತ ದುರಾವಸ್ಥೆ ಮತ್ತು ಸಾರ್ವತ್ರಿಕ ನೀತಿಪತನಕ್ಕೆ ದಾರಿ-ಎಂದು ಅವರು ಹೇಳಿರುತ್ತಾರೆ. ಭಾರತದಲ್ಲಿ ರಾಷ್ಟ್ರೀಯ ಸಮಾಜವಾದದ ದುಃಖಪೂರ್ಣ ಅನುಭವದಿಂದ ಜಗತ್ತಿನ ಇತರ ಸರ್ಕಾರಗಳು ಪ್ರಯೋಜನ ಪಡೆಯಬಹುದೆಂದು ಅವರು ಅಭಿಪ್ರಾಯಪಟ್ಟಿರುವರು.

ಐಶ್ವರ್ಯ ಮತ್ತು ವೆಚ್ಚದ ತೆರಿಗೆಯನ್ನು ಅವರು ಕಟುವಾಗಿ ಟೀಕಿಸಿ, ಇದರಿಂದ ಮನೆ, ಆಸ್ತಿಪಾಸ್ತಿ, ಮಹಿಳೆಯರ ಆಭರಣ ಮತ್ತು ಒಡವೆಗಳು ಬಂದ ಬಗೆ, ಮುಂತಾಗಿ ಸಂಸಾರದ ಎಲ್ಲಾ ಪವಿತ್ರ ರಹಸ್ಯಗಳೂ ಹೊರಕ್ಕೆ ಬರಬೇಕಾಗುವುವೆಂದು ಅವರು ಹೇಳಿರುತ್ತಾರೆ. ಪ್ರತಿಯೊಬ್ಬನೂ ತನ್ನ ನಿತ್ಯದ ವೆಚ್ಚದ ಬಗ್ಗೆ ಸರಿಯಾದ ಲೆಖ್ಖಗಳನ್ನಿಡಬೇಕು, ಇಲ್ಲವಾದರೆ ಪ್ರಾಸಿಕ್ಯೂಷನ್ನಿಗೆ ಗುರಿಯಾಗಿ ಭಾರಿ ದಂಡ ತೆರಬೇಕಾಗುವುದು. ಎಲ್ಲಾ ಪ್ರಮುಖ ಘಟ್ಟಗಳಲ್ಲಿಯೂ ಪ್ರಜೆಗಳು ಅಧಿಕಾರ ವರ್ಗದ ಅಡಿಯಾಳುಗಳಾಗಲು ಶಕ್ಯವಾಗುವುದೆಂದೂ ಸಹ ಅವರು ಅಭಿಪ್ರಾಯಪಟ್ಟಿರುವರು. ಈ ವಿಧಾನದ ಜೀವನದ ಬದಲು ನೇರವಾದ ಕಮ್ಯೂನಿಸ್ಟ್ ರಾಜ್ಯ ಪದ್ಧತಿಯು ಉತ್ತಮವಾದುದು. ಈ ತೆರಿಗೆಗಳಿಂದ ರಾಷ್ಟ್ರದಲ್ಲಿ ವಿಶೇಷ ಲಂಚಗುಳಿತನಕ್ಕೆ ಕಾರಣವಾಗುವುದು. ಇವನ್ನು ಬಿಟ್ಟುಬಿಡುವುದು ಒಳ್ಳೆಯದು-ಎಂದು ಅವರು ಸೂಚಿಸಿರುವರು.

ಯೋಜನೆಗಳ ಪೂರ್ತಿಗೆ ಹಣವು ಸಾಲದಿದ್ದರೆ ಈ ವಿನಾಶಕರ ಮಾರ್ಗ ಹಿಡಿಯುವುದರ ಬದಲು ಯೋಜನೆ ಕಾರ್ಯಗಳನ್ನೇ ಕಡಿತ ಮಾಡಬೇಕೆಂದು ಅವರು ಸಲಹೆ ಮಾಡಿರುತ್ತಾರೆ. ಹಾಗಾಗದಿದ್ದರೆ ವಿದೇಶಗಳಿಗೆ ಭಾರತವು ತೆರಬೇಕಾದ ಹಣ ಮತ್ತು ಒಳನಾಡಿನಲ್ಲಿ ಅಸಹನೀಯವಾದ ಲಂಚಗುಳಿತನಗಳಿಂದ ಭಾರತದ ಪ್ರಜಾಸತ್ತೆಯು ನೈತಿಕವಾಗಿ ಕ್ಷೀಣದೆಸೆಯನ್ನು ಹೊಂದಿ ಸರ್ವನಾಶಕ್ಕೆ ಆಸ್ಪದವಿತ್ತಂತಾಗುವುದೆಂದು ಅವರು ನುಡಿದಿರುವರು. ಈಗಲೇ ಜನರು ಸುಖಿಗಳಾಗಿಲ್ಲವೆಂದೂ, ಈ ಆಸ್ತಿ ಮತ್ತು ವೆಚ್ಚದ ತೆರಿಗೆಗಳನ್ನು ಶಾಸನ ಸಭೆ ಅಂಗೀಕರಿಸಿದರೆ ಇನ್ನೂ ಕಷ್ಟಕ್ಕೆ ಅವರು ಗುರಿಯಾಗಬೇಕಾಗುವುದೆಂದೂ ರಾಜಾಜಿಯವರು ಹೇಳಿರುವರು.

○ ವಿಶ್ವವಿದ್ಯಾಲಯಗಳ ಗ್ರಾಂಟ್ಸ್ ಕಮಿಟಿ ಅಧ್ಯಕ್ಷರಾದ ಶ್ರೀ ಸಿ. ಡಿ. ದೇಶಮುಖ್‌ರವರು ಇದೇ ೨೪ನೇ ತಾರೀಖು ಬೆಂಗಳೂರಿಗೆ ಆಗಮಿಸಿ, ೨ ದಿನಗಳನಂತರ ಮೈಸೂರಿಗೆ ಬರುವರು.

ಹನುಮಂತಯ್ಯನವರ ಮೇಲೆ ಶಿಸ್ತಿನ ಕ್ರಮಕ್ಕಾಗಿ ಶಿಫಾರಸು

ಗೌರಿಬಿದನೂರು ತಾಲ್ಲೂಕಿನ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಹಿತೈಷಿಗಳ ಸಭೆಯು ಇತ್ತೀಚಿಗೆ ನಡೆದು, ಮಹಾಚುನಾವಣೆಯಲ್ಲಿ ಅಧಿಕೃತ ಕಾಂಗ್ರೆಸ್ ಉಮೇದುವಾರರ ವಿರುದ್ಧವಾಗಿ ಕೆಲಸ ಮಾಡಿದರೆಂದು ಹೇಳಲಾದ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ, ಮಾಜಿ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯ ಮತ್ತು ಶ್ರೀಗಳಾದ ಆರ್ ಎಲ್ ಲಕ್ಷ್ಮೀಪತಿ, ಪಿ. ದಶರಥರಾಮಯ್ಯ ಮತ್ತು ಶ್ರೀಮತಿ ಗೌರಮ್ಮನವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗೆ ಶಿಫಾರಸು ಮಾಡಲಾಯಿತು

ನಾಯಿಗೆ ಮಹಿಳೆಯ ೫೦ ಸಾವಿರ ಡಾಲರ್ ಆಸ್ತಿ

ಅಮೆರಿಕದ ಪೆನ್ಸಿಲ್ವೇನಿಯಾ ಪ್ರಾಂತದ ರೀಡಿಂಗ್ ಎಂಬ ಸ್ಥಳದಲ್ಲಿರೂತ್ ಮೌರೀನ್ ಎಂಬ ಮಹಿಳೆಯೊಬ್ಬಳು ತನ್ನ ೮ ವರ್ಷದ ನಾಯಿಗೆ ೫೦,೦೦೦ ಡಾಲರ್ ಆಸ್ತಿಯನ್ನು ಬಿಟ್ಟು ಹೋಗಿದ್ದಾಳೆ. ಆಕೆಯ ಮರಣ ಶಾಸನದಲ್ಲಿ ನಾಯಿಯು ಆಕೆಯ ಮಲಗುವ ಕೊಠಡಿಯನ್ನು ಉಪಯೋಗಿಸಬಹುದೆಂದೂ, ಅದಕ್ಕೆ ಅತ್ಯುತ್ತಮ ಆಹಾರವನ್ನು ಕೊಡಬೇಕೆಂದೂ ಸೂಚಿಸಲಾಗಿದೆ. ನಾಯಿಯ ಮರಣಾನಂತರ ಉಳಿಯುವ ಆಸ್ತಿಯನ್ನು ಆಕೆಯ ಸೋದರ ಸೊಸೆ, ಇಬ್ಬರು ಸಹೋದರರು ಮತ್ತು ಒಬ್ಬ ತಂಗಿಯು ಹಂಚಿಕೊಳ್ಳಬಹುದೆಂದೂ ನಮೂದಿಸಲಾಗಿದೆ.

ಜೂಜಾಟಕ್ಕಾಗಿ ಜುಲ್ಮಾನೆ

ಮಂಡಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಪ್ರೇಂಚಂದ್ ಮತ್ತು ಪಾರ್ಟಿಯವರು ಕಳೆದ ಮಂಗಳವಾರ ರಾತ್ರಿ ೧೨-೩೦ ಗಂಟೆಯಲ್ಲಿ ಕಾಳಮ್ಮನಗುಡಿ ಬೀದಿ ನರಸಿಂಹಾಚಾರ್ಯರ ಮನೆಯಲ್ಲಿ ನಡೆಯುತ್ತಿದ್ದ ರಾಣಿಸಾಲು ಜೂಜಾಟವನ್ನು ಬಹಳ ಮೆಹನತ್ತಿನಿಂದ ಪತ್ತೆ ಹಚ್ಚಿ ಮೊಕದ್ದಮೆ ಹೂಡಿದ್ದರ ಮೇಲೆ ನೆನ್ನೆ ದಿನ ನಗರದ ಎರಡನೆಯ ಮ್ಯಾಜಿಸ್ಟ್ರೇಟರು ನರಸಿಂಹಾಚಾರ್ ಮತ್ತು ಇತರ ಎಂಟು ಮಂದಿಗೆ ತಲಾ ೧೦ ರೂ. ಜುಲ್ಮಾನೆ ವಿಧಿಸಿದರು ಪೋಲೀಸಿನವರ ಮೆಹನತ್ತಿಗಾಗಿ ೪೦ ರೂ. ಬಹುಮಾನ ಕೊಡುವಂತೆಯೂ ಆಜ್ಞೆ ಮಾಡಿದರು

ಮನೆ ಮಾರಾಟಕ್ಕಿದೆ
ಡೋರ್ ನಂ. 793 ಕಿಲ್ಲೆ ಮೊಹಲ್ಲಾ
ಪ್ರಭುದೇವ ಸಿನಿಮಾ ಹತ್ತಿರ
ವಿವರಗಳಿಗೆ :—
ಜಯ ಅಂಡ್ ಕಂಪನಿ,
ಹಳೆ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

ನೋಟೀಸು

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಅರಮನೆ ರಾಯನಕೆರೆ ಡೈರಿ ಫಾರಮ್ಮಿಗೆ ಸೇರಿದ ಸುಮಾರು 130 ರಾಸು (ಹಸುಗಳು, ಕರುಗಳು, ಹೆಂಗರುಮತ್ತು ಹೋರಿಗರುಗಳು, ಮುರಾ ಜಾತಿಯ ಕೋಣಗಳು, ಕುರಿಗಳು ಮತ್ತು ತಲಚೇರಿ ಆಡುಗಳು)ಗಳನ್ನು ಅರಮನೆ ಹರಾಜು ಷರತ್ತುಗಳಿಗೆ ಒಳಪಡಿಸಿ ತಾರೀಖು 19-5-57 ಮತ್ತು 20-5-57ನೇ ಬೆಳಿಗ್ಗೆ 9-30 ಘಂಟೆಗೆ ಅರಮನೆ ಬಳಿ ಇರುವ ಶ್ರೀ ಕೃಷ್ಣರಾಜೇಂದ್ರ ಧರ್ಮ ಶಾಲೆ (ಕರೋ ಹಟ್ಟಿ)ಯಲ್ಲಿ ಹರಾಜು ಮಾಡಲಾಗುವುದು. ಇಚ್ಛೆಯುಳ್ಳವರು ಬಿಡ್ ಮಾಡಿ ರಾಸುಗಳನ್ನು ಪಡೆಯಬಹುದು. ಇತರೆ ವಿವರಗಳನ್ನು ಈ ಕೆಳಗೆ ರುಜು ಮಾಡಿರುವವರಿಂದ ತಿಳಿಯಬಹುದು.

(ಸಹಿ) ಎಸ್. ನಾಗೇಶನ್,
ಮ್ಯಾನೇಜರ್,
ಅರಮನೆ ರಾಯನಕೆರೆ ಡೈರಿ ಫಾರಂ

Edited, Printed and Published by
[illegible] R. Nagarajan at Sadhvi Press,
[illegible] Road, Mysore

ಬರ್ಮಾ ಫಕೀರನಿಂದ ಪುನಃ ದೀರ್ಘ ಉಪವಾಸ

ಫ್ರಾನ್ಸಿನ ನಾನ್ಸಿ ಎಂಬ ಊರಿನಲ್ಲಿ ಬರ್ಮಾ ಫಕೀರ್ ಎಂಬ ೪೬ ವರ್ಷದವನೊಬ್ಬನು ತಾನು ಹಿಂದೆ ಮಾಡಿದ್ದ ೯೯ ದಿನಗಳ ಉಪವಾಸದ ರೆಕಾರ್ಡನ್ನು ಮುರಿಯುವ ಸಲುವಾಗಿ ಪುನಃ ಕಳೆದ ಮಾರ್ಚಿ ೭ರಿಂದ ಉಪವಾಸವನ್ನು ಆರಂಭಿಸಿ, ಈಗಾಗಲೇ ೪೭ ಪೌಂಡು ತೂಕವನ್ನು ಕಳೆದುಕೊಂಡಿರುವನು. ಅವನು ಗಾಜಿನ ಪೆಟ್ಟಿಗೆಯೊಂದರಲ್ಲಿ ಮಲಗಿರುವನು. ಅಲ್ಲದೆ ತನ್ನೊಡನೆ ೧೦೦ ಹಾವುಗಳನ್ನು ಇಟ್ಟುಕೊಂಡಿರುವನು. ಒಂದು ಬಾರಿ ಅವನನ್ನು ಹಾವು ಕಡಿದಿತ್ತೆಂದೂ ಹೇಳಲಾಗಿದೆ ಅವನ ಜೊತೆಗೆ ಇದ್ದ ಹಲವು ಹಾವುಗಳು ಮಡಿದುವೆಂದೂ, ಬೇರೆ ಹಾವುಗಳನ್ನು ಅವನು ತರಿಸಿಟ್ಟುಕೊಂಡಿರುವನೆಂದೂ ಹೇಳಲಾಗಿದೆ. ಅವನ ತಂದೆ ಫ್ರೆಂಚ್‌ರವನು ಮತ್ತು ತಾಯಿ ಭಾರತೀಯಳು.

ಗಾನವಾಹಿನಿ ವಿಶೇಷ ಸಂಚಿಕೆ

ಮಂಡ್ಯದ ಶ್ರೀ ಕೆ ಎಸ್. ಚಂದ್ರಶೇಖರಯ್ಯನವರ ಪ್ರಧಾನ ಸಂಪಾದಕತ್ವದಲ್ಲಿ ಹೊರಡುತ್ತಿರುವ ಗಾನವಾಹಿನಿ ಪತ್ರಿಕೆಯ ನೂತನ ವರ್ಷದ ವಿಶೇಷ ಸಂಚಿಕೆಯೊಂದನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಪತ್ರಿಕೆಯು ಜನ್ಮತಾಳಿ ೬ ವರ್ಷಗಳಾದುವು ಸಂಗೀತ ಕಲೆಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಸ್ಥಾಪಿತವಾಗಿರುವ ಈ ಪತ್ರಿಕೆಯು ಇತೋಪ್ಯತಿಶಯವಾಗಿ ಬೆಳೆದು ಸಂಗೀತಗಾರರು, ಕಲಾಭಿಮಾನಿಗಳು ಮತ್ತು ಸಾರ್ವಜನಿಕರ ಮನ್ನಣೆಗೆ ಪಾತ್ರವಾಗಲೆಂದು ಹಾರೈಸುತ್ತೇವೆ

ಈ ವಿಶೇಷ ಸಂಚಿಕೆಯಲ್ಲಿ ಸಂಗೀತ ಕಲೆ ಮತ್ತು ನಾದೋಪಾಸಕರಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರೇ ಮುಂತಾದವರ ವಿಷಯವಾಗಿ ಕನ್ನಡ, ಇಂಗ್ಲಿಷ್ ಮತ್ತು ತೆಲುಗು ಭಾಷೆಯಲ್ಲಿ ಸ್ವಾರಸ್ಯವಾದ ಲೇಖನಗಳಿವೆ.

ಕಥಾ ಕಾಲಕ್ಷೇಪ

ಕಿಲ್ಲೆ ಮೊಹಲ್ಲಾ ಸೇವಾ ಮಂಡಲಿಯ ಆಶ್ರಯದಲ್ಲಿ ಬಸವಜಯಂತಿಯ ಅಂಗವಾಗಿ ಶ್ರೀನಿವಾಸ ಅಗ್ರಹಾರದಲ್ಲಿ ಶ್ರೀ ವೆಂಕಟೇಶ ದಾಸರಿಂದ ಈ ರಾತ್ರಿ ೯ ಗಂಟೆಗೆ ಹೇಮರೆಡ್ಡಿ ಮಲ್ಲಮ್ಮ ಮತ್ತು ನಾಳೆ ರಾತ್ರಿ ೯ಕ್ಕೆ ಭಕ್ತ ಶಿರಿಯಾಳ ಎಂಬ ಕಥೆಗಳು ನಡೆಯುವುವು.

WANTED immediately a Lady Receptionist. Must be very good in English Knowledge of Typing preferred Decent salary Apply to :—
TOURIST BUREAU.
J. M. Palace Road,
MYSORE
Phone No 574.

ಮೋಟಾರು ಅಪಘಾತದಲ್ಲಿ ಅಬಿಸೀನಿಯಾ ರಾಜಪುತ್ರನ ಮರಣ

ಅಬಿಸೀನಿಯಾ ರಾಜ್ಯದ ಚಕ್ರವರ್ತಿ ಹೇಲಿ ಸಲಾಸಿಯವರ ಎರಡನೇ ಮಗ ರಾಜಕುಮಾರ ಮೊಕೋನೇನರವರು ಮೋಟಾರು ಅಪಘಾತದಿಂದ ಮೃತಪಟ್ಟಿರುತ್ತಾರೆ ಅದರಲ್ಲಿದ್ದ ಒಬ್ಬಾತನ ಮಂತ್ರಿಯವರಿಗೆ ತೀವ್ರ ಗಾಯವಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಮುಖವೀಣೆ. ೭-೧೫ ಮತ್ತು ೮-೧೫ ದೇವರನಾಮ. ೭-೩೦ ರೆಕಾರ್ಡು. ಮಧ್ಯಾಹ್ನ ೧೨ ಮತ್ತು ರಾತ್ರಿ ೮ ಎಂ. ಸರೋಜಿನಿ ದೇವಿ-ಸಂಗೀತ. ೧೨-೩೦ ಬಾಲ ಜಗತ್. ೧-೨೦ ರೆಕಾರ್ಡು. ೧-೫೦ ಮುಖವೀಣೆ ಸಂಜೆ ೬ ೧೦ ವಚನಗಾನ. ೬-೩೦ ನಮ್ಮ ಸಂಸ್ಕೃತಿಯಲ್ಲಿ ಕೃಷ್ಣನ ಪಾತ್ರ-ಭಾಷಣ. ೮-೩೦ ರೇಡಿಯೊ ನ್ಯೂಸ್ ರೀಲ್. ೮ ೪೦ ಪ್ರಸಾರಗೀತೆ. ೯-೧೫ ಕರುಳಿನ ಕರೆ-ಕಿರುಗತೆ. ೯-೩೦ ರಾಷ್ಟ್ರೀಯ ಕಾರ್ಯಕ್ರಮ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು ಕೊಯಮುತ್ತೂರು	೩೩ ೨೫	೩೩ ೫೦
ರಸ್ತಪೂರಿ	೩೦ ೦೦	೩೧ ೭೫
ಕಡ್ಡಿ	೩೨ ೫೦	೩೨ ೭೫
ಸೀತಾಲ್ ಸಣ್ಣ	೩೧ ೦೦	
ರಾಗಿ	೩೧ ೩೭	೩೪ ೨೫
ಕಡಲೆಕಾಯಿ	೨೦ ೦೦	೨೩ ೫೦
ಹೊಂಗೇಬೀಜ	೨೩ ೫೦	೨೭ ೧೨
ಹುರುಳಿ	೩೧ ೩೭	೩೩ ೦೦
ಹಳಸಂದೆ	೪೮ ೧೨	೫೫ ೩೭
ಅವರೆ	೨೪ ೬೨	
ಧನಿಯ	೨೩ ೬೨	೨೪ ೫೦
ಹುಣಸೆಬೀಜ	೮ ೧೨	೮ ೬೨
ಹುಣಸೇಹಣ್ಣು	೨ ೮೭	೪ ೦೦
ಸೀಗೆಕಾಯಿ	೬ ೩೭	೭ ೦೦
ಮೆಣಸಿನಕಾಯಿ	೧೬ ೫೦	೧೯ ೦೦
ಬೆಲ್ಲ	೩ ೫೦	
ತೆಂಗಿನಕಾಯಿ	೧೩೩ ೫೦	೨೧೯ ೫೦

ಶ್ರೀ ಜಗದಂಬಾ ಶಿಶು ವಿಹಾರ

ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶುವಿಹಾರದ ತರಗತಿಗಳು ಇದೇ ೧೫ನೇ ತಾರೀಖಿನಿಂದ ಆರಂಭವಾಗಿವೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

ಒಲಂಪಿಯಾ 16-5-57ರಿಂದ ಅಮೋಘ 2ನೇವಾರ
ಗುರುದತ್‌ರವರ ಅತ್ಯುನ್ನತ ಸಾಮಾಜಿಕಚಿತ್ರ ★ ಪ್ಯಾಸಾ
ಪಾತ್ರ:- ಗುರುದತ್, ಮಾಲಾ ಸಿನ್ಹ, ವಹೀದಾ ರೆಹಮಾನ್

THE CITY TUTORIAL COLLEGE ★ Old Agrahar, Mysore
S. S. L. C Classes for the Suppl Exams have been started under the able guidance of Sri B K SATYABODHACHAR M A, B. T. Join at once
C. T. C. is the oldest and the best Institution

ಲಕ್ಷ್ಮಿ ★ 17-5-57 ರಿಂದ : ಜಯಪ್ರದ 5ನೇ ವಾರ
ಶಿವಾಜಿಗಣೇಶನ ಮತ್ತು ಸಾವಿತ್ರಿಯವರ ತಮಿಳು ಚಿತ್ರ
ವಣಂಗಾಮುಡಿ ★ (ರಾಘವೇಂದ್ರ ರಿಲೀಸ್)

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
17-5-57ನೇ ಶುಕ್ರವಾರದಿಂದ : ಅಮೋಘವಾದ 6ನೇ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು
★ ಮಾಯಾ ಬಜಾರ್ ★
(ಶಶಿರೇಖಾ ಪರಿಣಯ)
ಪಾತ್ರ:—ಆರ್. ಗಣೇಶ್, ಸಾವಿತ್ರಿ, ಎನ್. ಟಿ. ರಾಮರಾವ್, ಎಸ್ ವಿ. ರಂಗರಾವ್, ತಂಗವೇಲು, ಮುತ್ತುಲಕ್ಷ್ಮಿ, ಕರುಣಾನಿಧಿ, ಎಳುಮಲೈ, ಪುಷ್ಪೇಂದ್ರಮಣಿ

ದೇವನೂರು ಮಠದ ವ್ಯವಹಾರಗಳು

ಪ.ವ.] ನಂಜನಗೂಡು ೧೬

ನಂಜನಗೂಡು ತಾಲ್ಲೂಕು ದೇವನೂರು ಶ್ರೀ ಗುರುಮಲ್ಲೇಶ್ವರಸ್ವಾಮಿ ಗದ್ದುಗೆ ಮ್ಯಾನೇಜರಾದ ಶ್ರೀ ಡಿ. ಎಂ. ಸಿದ್ದಯ್ಯನವರು, ಸದರಿ ಗದ್ದುಗೆಯ ಆಡಳಿತದ ವಿಷಯದಲ್ಲಿ ಸರಿಯಾದ ಲೆಖ್ಖಾಚಾರ ಮತ್ತು ವ್ಯವಹಾರಗಳನ್ನು ಇಡದೆ ಅಧಿಕಾರವನ್ನು ದುರುಪಯೋಗಪಡಿಸಿದ್ದಾರೆಂದು ನಂಜನಗೂಡು ಮೊದಲನೇ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿ ತಾ|| ೧೧-೫-೫೭ನೇ ಶನಿವಾರ ಪೋಲೀಸಿನವರು ಸದರಿ ಗದ್ದುಗೆಯ ಮ್ಯಾನೇಜರ್ ಶ್ರೀ ಡಿ. ಎಂ. ಸಿದ್ದಯ್ಯನವರ ಮನೆಯನ್ನು ಜಪ್ತಿ ಮಾಡಿ, ಹಲವು ಕಾಗದಪತ್ರಗಳನ್ನು ವಶಪಡಿಸಿಕೊಂಡಿರುತ್ತಾರೆ.

ಮೈಕ್ ಮತ್ತು ಲೌಡ್ ಸ್ಪೀಕರುಗಳು
ಬಾಡಿಗೆಗೆ ದೊರೆಯುತ್ತವೆ ವಿವರಗಳಿಗೆ
ಎವರ್‌ಗ್ರೀನ್ ಅಕೌಸ್ಟಿಕ್ಸ್,
28. ಸೂನಾರ್ ಬೀದಿ, ಮೈಸೂರು

ಶ್ರೀ ಗಾಯತ್ರಿ ಟಾಕೀಸ್
ದಿನಕ್ಕೆ 3 ಪ್ರದರ್ಶನಗಳು
ಕಡೇ ದಿನ
ರೈನ್ಸ್ ಆಫ್ ರಾಂಚಿಪುರ್
18-5-57ರಿಂದ : ಅಮೋಘ ಪ್ರಾರಂಭ
ಗ್ರಿಗರಿ ಪೆಕ್ ಪಾತ್ರವಹಿಸಿರುವ
ಮೋಬಿ ಡಿಕ್
(MOBY DICK)
ಸಮುದ್ರರಾಜ ತಿಮಿಂಗಿಲದೊಡನೆ ಮಾನವರ ಹೋರಾಟ ಮತ್ತು ಕೋಪಗೊಂಡ ತಿಮಿಂಗಿಲವು ಹಡಗನ್ನು ಉರುಳಿಸುವ ರೋಮಾಂಚಕರ ದೃಶ್ಯಗಳನ್ನು ನೋಡಲು ತಪ್ಪಬೇಡಿರಿ!
—: ಬೆಳಗಿನ ಪ್ರದರ್ಶನ :—
18 ಮತ್ತು 19ನೇ ತಾ|| ಮಾತ್ರ
ಅಣು ಬಾಂಬು ಸ್ಫೋಟನೆಯ ಅಪಾಯಕರ ಪರಿಣಾಮಗಳನ್ನೊಳಗೊಂಡ ಚಿತ್ರ.
(ದೆಮ್—THEM)

ಮೈಸೂರಿನಲ್ಲಿ ಪ್ರತಿ ತಿಂಗಳು
17 ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ



ನವರತ್ನಕಲ್ಪ
ದಿವ್ಯೌಷಧವನ್ನು ಕಂಡು ಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17 ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಬೆಳಿಗ್ಗೆ 7-30 ರಿಂದ ಸಂಜೆ 5 ಗಂಟೆಯವರೆಗೆ
ಭೇಟಿ ಮಾಡಬಹುದು : ಫೋನ್ ನಂ. 590
ಮುಖ್ಯಂತ ವಿಷಯವನ್ನು ಗಮನಿಸಿ ಅವರ ಪರಿಪಕ್ವ ವೈದ್ಯಕೀಯ ಸಲಹೆಯನ್ನು ಪಡೆಯಿರಿ ಇವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ವಿಮಾನದಲ್ಲಿ ಸಂಚರಿಸುವರು
ನಿಮ್ಮ ಸಾಮಾನ್ಯವಾದ ಹಾಗೂ ತೀವ್ರವಾದ ಕಾಯಿಲೆಗಳಿಗೆ ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪದ್ಮರಾಗಿಣಿ ಮತ್ತು ಪ್ರಶಸ್ತಿಗಳು 9 ಅಮೂಲ್ಯ ಹರಳುಗಳ ಸಂಯೋಗವಾದ
ನವರತ್ನಕಲ್ಪ—ಉಪಯೋಗಿಸಿರಿ
ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ. ಉಚಿತ ಸಾಹಿತ್ಯಗಳಿಗಾಗಿ ಬರೆಯಿರಿ.
NAVRATNA KALPA PHARMACY,
JULLUNDUR CITY (India)

ರಿಜಿಸ್ಟರ್ಡ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೫] SADHVI । SATURDAY 18—5—1957 ಮೈಸೂರು । ಶನಿವಾರ ೧೮—೫—೧೯೫೭ । [ಸಂಚಿಕೆ : ೨೬೪

ಬ್ರಿ|| ರಾಯಭಾರ ಕಛೇರಿಗೆ ೧೦ ಸಹಸ್ರ ಜಪಾನರ ಮುತ್ತಿಗೆ

ಸಹಾಯ ಪಡೆವ ಶಾಲೆಗಳಿಗೆ ನ್ಯಾಯ ಸಲ್ಲಬೇಕು

ಸರ್ಕಾರಕ್ಕೆ ಆರ್. ಎಸ್. ಹುಕ್ಕೇರಿಕರ್ ರವರ ಸಲಹೆ

ಬೆಂಗಳೂರು ೧೮

ಸಂಸ್ಥಾನದ ಸಹಾಯ ಪಡೆವ ಶಾಲೆಗಳ ಅಧ್ಯಾಪಕರ ಸಮ್ಮೇಳನವು ನೆನ್ನೆ ಇಲ್ಲಿ ಸೇರಿತ್ತು. ಮುಂಬಾಯಿ ವಿಧಾನ ಪರಿಷತ್ತಿನ ಮಾಜಿ ಅಧ್ಯಕ್ಷ ಶ್ರೀ ಆರ್. ಎಸ್. ಹುಕ್ಕೇರಿಕರ್‌ರವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಆರಂಭೋತ್ಸವವನ್ನು ನೆರವೇರಿಸಿದರು. ಸುಮಾರು ೨೦೦ ಮಂದಿ ಪ್ರತಿನಿಧಿಗಳು ಆಗಮಿಸಿರುವರು.

ಮೇಯರ್ ಶ್ರೀ ಜಹಾಭಾಯಿ ದೇವೀದಾಸರವರು ಸ್ವಾಗತ ಭಾಷಣ ಮಾಡಿ ಸಂಸ್ಥಾನದಲ್ಲಿರುವ ೫೦೦ ಹೈಸ್ಕೂಲು ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಸಹಾಯ ಪಡೆವ ೩೦೦ ಶಾಲೆಗಳಿರುವವೆಂದೂ ಅವುಗಳಿಗೆ ಉದಾರವಾಗಿ ನೆರವು ನೀಡಬೇಕೆಂದೂ ತಿಳಿಸಿದರು

ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ಸರ್ಕಾರದವರು ಎದುರಿಸಬೇಕಾಗಿರುವ ಅತ್ಯಂತ ಭಾರಿ ಮತ್ತು ಕಠಿಣವಾದ ಸಮಸ್ಯೆಯು ಸಹಾಯ ಪಡೆವ ಶಾಲೆಗಳ ಪ್ರಶ್ನೆಯಾಗಿರುವುದೆಂದು ತಿಳಿಸಿ ಸಮ್ಮೇಳನದ ಅಭಿಪ್ರಾಯಗಳನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರು. ಈ ಶಾಲೆಗಳ ಬಗ್ಗೆ ಸಮಗ್ರವಾದ ಯೋಜನೆಯೊಂದನ್ನು ಸಿದ್ಧಗೊಳಿಸಬೇಕೆಂದು ಸಲಹೆ ಮಾಡಿದರು. ಪ್ರತಿ ಉಪಾಧ್ಯಾಯರೂ ತಿಂಗಳಿಗೆ ೧೦೦ ರೂ. ಗಳನ್ನಾದರೂ ಪಡೆಯಬೇಕೆಂಬುದೇ ತಮ್ಮ ಅಭಿಲಾಷೆಯೆಂದು ಅವರು ತಿಳಿಸಿದರು.

ಅಧ್ಯಕ್ಷರು ಭಾಷಣ ಮಾಡಿ, ಸಹಾಯ ಪಡೆವ ಶಾಲೆಗಳಿಂದ ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಅತ್ಯುತ್ತಮ ಸಹಾಯವಾಗಿರುವುದೆಂದೂ, ಅವುಗಳಿಗೆ ನ್ಯಾಯವು ಸಲ್ಲುವುದು ಅಗತ್ಯವೆಂದೂ ತಿಳಿಸಿದರು. ನಿಯುಕ್ತಾವಳಿಗಳಲ್ಲಿ ತೀವ್ರ ಬದಲಾವಣೆಗಳಾಗಬೇಕೆಂದೂ ಅವರು ಸೂಚಿಸಿದರು. ಸರ್ಕಾರದವರೇ ಪಠ್ಯಪುಸ್ತಕಗಳನ್ನು ಪ್ರಕಟಿಸಬೇಕೆಂದೂ, ವಿದ್ಯಾ ಸಂಸ್ಥೆಗಳಲ್ಲಿ ಕೋಮುವಾದಿ ಮನೋಭಾವವನ್ನು ಬಿಡಬೇಕೆಂದೂ ಹೇಳಿದರು.

ತೆರಿಗೆ ವಿರುದ್ಧವಾಗಿ ದೆಹಲಿ ಕಮ್ಯೂನಿಸ್ಟರ ಚಳುವಳಿ

ನಿತ್ಯವೂ ಬಳಸುವ ವಸ್ತುಗಳ ಮೇಲೆ ವಿಧಿಸಿದ ತೆರಿಗೆಗಳನ್ನು ಪ್ರತಿಭಟಿಸಲು ಸಾಮೂಹಿಕ ಚಳುವಳಿ ನಡೆಸಲು ದೆಹಲಿಯ ಕಮ್ಯೂನಿಸ್ಟ್ ಪಕ್ಷ ನಿರ್ಧರಿಸಿರುತ್ತದೆ. ಸಭೆ, ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸಲಾಗುವುದು. ಮೊನ್ನೆ ಪಕ್ಷವು ಬಹಿರಂಗ ಸಭೆ ನಡೆಸಿ ಹೊಸ ತೆರಿಗೆಗಳನ್ನು ಉಗ್ರವಾಗಿ ವಿರೋಧಿಸಿತಲ್ಲದೆ ಅವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿ, ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸಲು ತೆರಿಗೆ ಹಾಕುವ ಮಾರ್ಗವು ಇದಲ್ಲವೆಂದು ಅಭಿಪ್ರಾಯಪಟ್ಟಿದೆ

ಸಿಂಹಳಕ್ಕೆ ನೆಹರೂರವರ ಭೇಟಿ

ಜಲಜನಕ ಬಾಂಬಿನ ಅಪಾಯದ ಬಗ್ಗೆ ಪ್ರಧಾನಿಯ ಎಚ್ಚರಿಕೆ

ಪ್ರಧಾನಿ ನೆಹರೂರವರು ನೆನ್ನೆ ಸಿಂಹಳದ ರಾಜಧಾನಿ ಕೊಲಂಬೊವನ್ನು ತಲುಪಿದರು. ಅವರಿಗೆ ಅಲ್ಲಿ ಅದ್ಭುತ ಸ್ವಾಗತವನ್ನು ನೀಡಲಾಯಿತು. ಅವರು ಅಲ್ಲಿ ನಡೆಯುವ ಬುದ್ಧ ಜಯಂತಿಯಲ್ಲಿ ಭಾಗವಹಿಸುವರು. ಕೊಲಂಬೊ ಪೌರಸಭೆಯವರಿತ್ತ ಮಾನಪತ್ರಕ್ಕೆ ಉತ್ತರವಿತ್ತು ಅವರು ಜಲಜನಕ ಬಾಂಬಿನ ಅಪಾಯದ ಬಗ್ಗೆ ವಿಶ್ವಕ್ಕೆ ಎಚ್ಚರಿಕೆಯಿತ್ತರು

ಅಂಚೆ ಮತ್ತು ತಂತಿ ನೌಕರರಿಂದ "ಸಾವಕಾಶದ ಕೆಲಸ"

ಅಖಿಲ ಭಾರತ ತಂತಿ ನೌಕರರ ಸಂಘದವರ ನಿರ್ಧಾರದ ಪ್ರಕಾರ ನೆನ್ನೆ ದೇಶಾದ್ಯಂತ ತಂತಿ ನೌಕರರು ನಿಧಾನವಾಗಿ ಕೆಲಸ ಮಾಡುವ ನೀತಿಯನ್ನು ಅವಲಂಬಿಸಿದುದರಿಂದ ತಂತಿ ಸುದ್ದಿಗಳ ರವಾನೆಯಲ್ಲಿದೆ ತುಂಬಾ ವಿಳಂಬವಾಗಿರುವುದೆಂದು ಭಾರತದ ತಂತಿ ಇಲಾಖಾ ಡೈರೆಕ್ಟರ್ ಜನರಲ್ಲರು ತಿಳಿಸಿರುತ್ತಾರೆ. ಮೈಸೂರಿನಲ್ಲೂ ನೆನ್ನೆ ಇದೇ ಅನುಭವವಾಗಿ ತಂತಿ ಕೊಡಲು ಹೋದವರು ಅವನ್ನು ವಾಪಸು ತಂದರು

ಮಧ್ಯ ಪೂರ್ವದಲ್ಲಿ ೩೦ ಕೋಟಿ ಪೌಂಡಿನ ಎಣ್ಣೆ ಪೈಪು ಲೈನು

ಮಧ್ಯ ಪೂರ್ವದಲ್ಲಿ ೩೦ಕೋಟಿ ಪೌಂಡ್ ವೆಚ್ಚದಿಂದ ಹೊಸ ಎಣ್ಣೆ ಪೈಪು ಲೈನ್ ಹಾಕಲು ಪಶ್ಚಿಮದ ಮುಖ್ಯ ಎಣ್ಣೆ ಕಂಪೆನಿಗಳು ಒಪ್ಪಿರುತ್ತವೆ. ಪರ್ಷಿಯಾ ಖಾರಿಯಿಂದ ಭೂಮಧ್ಯ ಸಮುದ್ರ ತೀರಕ್ಕೆ ಅದನ್ನು ಹಾಕಲಾಗುವುದು. ವರ್ಷಕ್ಕೆ ೭ ಕೋಟಿ ಟನ್ ಎಣ್ಣೆಯನ್ನು ಆ ಮೂಲಕ ಸಾಗಿಸಲಾಗುವುದೆಂದು ಹೇಳಲಾಗಿದೆ

ಹನುಮಂತೋತ್ಸವ

ನಗರದ ಸೀತಾವಿಲಾಸ ಧರ್ಮ ಶಾಲೆಯಲ್ಲಿರುವ ಪೌರ ಸಾಮಾಜಿಕ ಪ್ರಗತಿ ಸಂಸ್ಥೆಯಲ್ಲಿ ಶ್ರೀ ಹನುಮಾನ್ ಸಂಘದ ಆಶ್ರಯದಲ್ಲಿ ಹನುಮಂತೋತ್ಸವವು ನಾಳೆ ಸಂಜೆ ೫|| ಗಂಟೆಗೆ ನೆರವೇರಿಸಲ್ಪಡುವುದು. ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ಅಧ್ಯಕ್ಷತೆ ವಹಿಸುವರು. ಡಾ|| ಬಿ. ಜಿ. ದಾಸ್‌ರವರಿಂದ ಭಾಷಣವೂ ಮತ್ತು ವಿ|| ರಾಮರತ್ನಂರವರಿಂದ ಸಂಗೀತವೂ ಏರ್ಪಾಡಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗೋಟುವಾದ್ಯ. ೭-೧೫ ಮತ್ತು ೮-೧೫ ಎಂ. ಎಲ್. ರತ್ನ-ದೇವರನಾಮ. ೭-೩೦ ರಿಕಾರ್ಡ್. ೮-೩೦ ರಾಗಂ ಶೇಷಾದ್ರಿ ಸಂಗೀತ. ೯-೩೦ ಬಾಲಜಗತ್ ಮಧ್ಯಾಹ್ನ ೧೨ ಎಂ. ಎಸ್. ಕಲ್ಪಸಿಲ್ಕಿ ಅಯ್ಯಂಗಾರ್-ಸಂಗೀತ. ೧-೩೦ ವಾದ್ಯವೃಂದ. ೧ ರಿಕಾರ್ಡ್ ೧-೫೦ ಪದ್ಮ ಶಿವರಾಂ-ವೀಣೆ. ೬-೧೫ ನಿಮ್ಮ ರುಚಿನ ಗೀತೆಗಳು. ಸಂಜೆ ೬-೧೦ ಕನ್ನಡ ಗೀತೆಗಳು ೬ ೩೦ ಪಕ್ಷಿನೋಟ. ೮ ಮತ್ತು ೧೦ ಎಂ. ಎಸ್. ಗೋವಿಂದಸ್ವಾಮಿ-ನಾದಸ್ವರ ೮ ೩೦ ಗೋಟುವಾದ್ಯ. ೯-೧೫ ಚಿತ್ರ ಸಂಗೀತ. ೯-೩೦ ರೂಪಕ [illegible] ೧೦-೨೦ [illegible]

ಬ್ರಿಟಿಷ್ ಕಛೇರಿಗೆ ೧೦ ಸಾವಿರ ಜಪಾನ್ ವಿದ್ಯಾರ್ಥಿಗಳ ಮುತ್ತಿಗೆ

ಪೆಸಿಫಿಕ್ ಸಾಗರದ ಕ್ರಿಸ್‌ಮಸ್ ದ್ವೀಪದಲ್ಲಿ ಮೊನ್ನೆ ಬ್ರಿಟನ್ನು ಜಲಜನಕ ಬಾಂಬನ್ನು ಸಿಡಿಸಿದುದಕ್ಕಾಗಿ ಪ್ರತಿಭಟಿಸಲು ಟೋಕಿಯೊದಲ್ಲಿ ನೆನ್ನೆ ೧೦ ಸಾವಿರ ಕಾಲೇಜು ವಿದ್ಯಾರ್ಥಿಗಳು ಅಲ್ಲಿರುವ ಬ್ರಿಟಿಷ್ ರಾಯಭಾರ ಕಛೇರಿಗೆ ಮುತ್ತಿಗೆ ಹಾಕಿದ್ದರು. ಪೋಲೀಸರ ಕಾವಲನ್ನೂ ಲೆಕ್ಕಿಸದೆ ರಾಯಭಾರ ಕಛೇರಿ ಹೆಬ್ಬಾಗಿಲಿಗೆ ಹೋಗಿ ಅದಕ್ಕೆ ಬೀಗ ಹಾಕಿದರೆಂದೂ ಹೇಳಲಾಗಿದೆ.

೧೯೬೨ರ ಫೆಬ್ರವರಿ ೫ ಜಗತ್ತಿಗೆ ಅತ್ಯಂತ ಕ್ರೂರ ದಿನ

ಬೆಂಗಳೂರಿಗೆ ಆಗಮಿಸಿರುವ ವಿಶ್ವವಿಖ್ಯಾತ ಜ್ಯೋತಿಷ್ಯಶಾಸ್ತ್ರಜ್ಞರಾದ ಮದ್ರಾಸಿನ ಶ್ರೀ ಭಾಸ್ಕರ ಜೋಯಿಸರು ೧೯೬೨ನೇ ಫೆಬ್ರವರಿ ೫ನೇ ತಾರೀಕು ಸೋಮವಾರ ಇಡೀ ವಿಶ್ವಕ್ಕೆ ಅತ್ಯಂತ ಅಶುಭವಾದ ದಿನವೆಂದು ಭವಿಷ್ಯ ನುಡಿದಿರುತ್ತಾರೆ. ಅಂದು ಮಕರ ರಾಶಿಯಲ್ಲಿ ರಾಹು ಒಬ್ಬನು ಬಿಟ್ಟು ಮಿಕ್ಕೆಲ್ಲ ಗ್ರಹಗಳೂ ಸೇರುವುವೆಂದೂ ಅವರು ತಿಳಿಸಿ, ಹಿಂದೆ ರಾಮ-ರಾವಣರ ಯುದ್ಧವಾದಾಗಲೂ ಸಹ ಒಂದೇ ರಾಶಿಯಲ್ಲಿ ಎಂಟು ಗ್ರಹಗಳು ಸೇರಿದ್ದುವೆಂಬ ನಿದರ್ಶನವಿತ್ತರು. ಅವರು ಭಾರತದ ಸ್ವಾತಂತ್ರ್ಯ ದಿನ ಮತ್ತು ಇತರ ಮುಖ್ಯ ಘಟನೆಗಳ ಬಗ್ಗೆ ಕರಾರುವಾಕ್ಕಾಗಿ ಹಿಂದೆ ಭವಿಷ್ಯ ನುಡಿದಿದ್ದರು.

ಕೇಂದ್ರ ಸರ್ಕಾರಕ್ಕೆ ಇಬ್ಬರು ಹೊಸ ಉಪ ಮಂತ್ರಿಗಳ ನೇಮಕ

ಆಂಧ್ರದ ಕೊತ್ತ ರಘುರಾಮಯ್ಯ ಮತ್ತು ಕೇರಳದ ಎ. ಎಂ. ಥಾಮಸ್ ಎಂಬ ಇಬ್ಬರು ಲೋಕಸಭಾ ಸದಸ್ಯರನ್ನು ರಾಷ್ಟ್ರಾಧ್ಯಕ್ಷರು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆ ಮತ್ತು ಆಹಾರ ಮತ್ತು ವ್ಯವಸಾಯ ಇಲಾಖೆ ಉಪ ಮಂತ್ರಿಗಳಾಗಿ ನೇಮಿಸಿರುತ್ತಾರೆ

ಲೋಕ ಸಭಾ ಉಪಾಧ್ಯಕ್ಷರಾಗಿ ಹುಕುಂ ಸಿಂಗರ ಆಯ್ಕೆ

ಅಕಾಲಿ ಮುಖಂಡರಾದ ಸರ್ದಾರ್ ಹುಕುಂ ಸಿಂಗ್‌ರವರನ್ನು ಲೋಕ ಸಭೆಯ ಉಪಾಧ್ಯಕ್ಷರಾಗಿ ಮತ್ತೆ ಸರ್ವಾನುಮತದಿಂದ ನೆನ್ನೆ ಚುನಾಯಿಸಲಾಯಿತು.

ಹೊಸ ತೆರಿಗೆಗಳ ಬಗ್ಗೆ ಕೇಂದ್ರ ಹಣಕಾಸಿನ ಮಂತ್ರಿಗೆ ಪ್ರತಿಭಟನಾ ತಂತಿ

ನಗರದ ಪ್ರಜಾರಂಗದ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಸ್ವಾಮಿದಾಸರು ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರಿಗೆ ನೆನ್ನೆ ತಂತಿಯೊಂದನ್ನು ಕಳುಹಿಸಿ ಅವರ ಮಂಡಿಸಿರುವ ಆಯವ್ಯಯ ಪಟ್ಟಿಯು, ಕೆಳಗಿನ, ನಿಮ್ನ [illegible] ಮತ್ತು ಅನಾಗರಿಕ ರೀತಿಯ [illegible] ಸಾಮಾನ್ಯ ಮನುಷ್ಯನ [illegible] ಹೇತುವಾಗಿರುವುದೆಂದು ಸೂಚಿಸಿರುವರು.

ನಿಧನ

ನಗರದ [illegible] ಮೊಹಲ್ಲಾದಲ್ಲಿದ್ದ ಸರ್ಕಾರಿ ಕಂಟ್ರಾಕ್ಟರ್ ಶ್ರೀ ಪುಟ್ಟಸ್ವಾಮಿಯವರು ಕಳೆದ ಬುಧವಾರ ಹೃದಯಾಘಾತದಿಂದ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಜೂನ್ ೧೦ ರಂದು ಶಾಸನಸಭೆಯ ಜಂಟಿ ಅಧಿವೇಶನ

ಮಧ್ಯಾಹ್ನ ರಾಜ್ಯಪಾಲರ ಭಾಷಣ

ಸ್ವಂ ಸು ತಂತಿ] ಬೆಂಗಳೂರು ೧೮

ಬರುವ ತಿಂಗಳು ೧೦ನೇ ತಾರೀಕು ಸಂಜೆ ವಿಧಾನ ಸಭೆ ಮತ್ತು ಪರಿಷತ್ತುಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವರು. ಅದಕ್ಕೆ ಮುಂಚೆ ಬೆಳಿಗ್ಗೆ ೧೦ ಗಂಟೆಗೆ ಮತ್ತು ಮಧ್ಯಾಹ್ನ ೧ ಗಂಟೆಗೆ ಸಭೆಗಳು ಸೇರಿ ಪ್ರಮಾಣವಚನ ಸ್ವೀಕಾರವಾಗುವುದು.

○ ಪಬ್ಲಿಕ್ ಸರ್ವಿಸ್ ಕಮಿಷನ್ ಅಧ್ಯಕ್ಷರಾಗಿ ಶ್ರೀ ಕೆ. ಎಸ್. ಪದ್ಮನಾಭಯ್ಯನವರು ನಾಳೆ ಅಧಿಕಾರ ವಹಿಸಿಕೊಳ್ಳುವರು. ಶ್ರೀ ತಿಪ್ಪಾಜಪ್ಪನವರು ೨೦ನೇ ತಾರೀಕು ಕಮಿಷನ್ನಿನ ಸದಸ್ಯರಾಗುವರು.

ನಾಳಿದ್ದು ಉತ್ತರ ಪ್ರದೇಶದಲ್ಲಿ ಉಪವಾಸಿಗಳ ಮೆರವಣಿಗೆ

ಉತ್ತರ ಪ್ರದೇಶದ ೯ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಬಗ್ಗೆ ಸರ್ಕಾರದ ಅನಾದರಣೆಯನ್ನು ಪ್ರತಿಭಟಿಸಲು ನಾಳಿದ್ದು ಆ ಜಿಲ್ಲೆಗಳ ಉಪವಾಸಿಗಳ ಮೆರವಣಿಗೆ ನಡೆಸಲು ಪ್ರಜಾ ಸಮಾಜವಾದಿ ಪಕ್ಷದ ಪ್ರಾಂತೀಯ ಶಾಖೆಯವರು ನಿರ್ಧರಿಸಿರುತ್ತಾರೆ.

ತಲಕಾವೇರಿಗೆ ರಸ್ತೆ

ಭಾರತದ ಪುಣ್ಯ ಕ್ಷೇತ್ರಗಳಲ್ಲೊಂದಾದ ಮತ್ತು ಕಾವೇರಿ ನದಿಯ ಜನ್ಮ ಸ್ಥಳವಾದ ತಲಕಾವೇರಿಗೆ ವಾಹನ ಸಂಚಾರಕ್ಕನುಕೂಲವಾಗುವಂತಹ ೧೦ ಮೈಲಿ ರಸ್ತೆಯೊಂದನ್ನು ಇತ್ತೀಚೆಗೆ ೧,೬೦,೦೦೦ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದಕ್ಕೆ ಭಕ್ತಿ ಮಾರ್ಗವೆಂದು ಹೆಸರಿಟ್ಟು ಮರಾಮತ್ತು ಕಾನೂನು ಮಂತ್ರಿ ಶ್ರೀ ಎಚ್. ಕೆ. ವೀರಣ್ಣಗೌಡರು ಆರಂಭಗೊಳಿಸಿದರು.

ಪ್ರವೀಣ್ ಶಿಕ್ಷಣ ತರಗತಿ

ನಗರದ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಬರುವ ಬುಧವಾರದಿಂದ ಆಗಸ್ಟ್ ತಿಂಗಳ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರವೀಣ್ ಪರೀಕ್ಷೆಗೆ ತರಗತಿಗಳನ್ನು ನಡೆಸಲಾಗುವುದು. ಇಚ್ಛಿಸುವವರು ಕೂಡಲೇ ಸೇರಬೇಕಾಗಿ ಕೋರಲಾಗಿದೆ. ವಿವರಗಳನ್ನು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾರ್ಯಾಲಯದಲ್ಲಿ ಪಡೆಯಬಹುದು.

ಅರಮನೆ ನೌಕರರ ಕುಂದುಕೊರತೆ ಬಗ್ಗೆ ಕ್ರಮ

ನಗರದ ಅರಮನೆ ನೌಕರರ ಸಂಘದ ಅಧ್ಯಕ್ಷ ಶ್ರೀ ಸೀತಾರಾಂ ಮತ್ತು ಕಾರ್ಯದರ್ಶಿ ಶ್ರೀ ವೆಂಕಟೇಶ ಹೆಮ್ಮಿಗೆಯವರು ಮೊನ್ನೆ ಬೆಂಗಳೂರಿನಲ್ಲಿ ಮುಖ್ಯ ಮಂತ್ರಿ ಮತ್ತು ಕಾರ್ಮಿಕ ಮಂತ್ರಿಗಳನ್ನು ಭೇಟಿ ಮಾಡಿ ನಿವೃತ್ತರಾದ ನೌಕರರಿಗೆ ಉದ್ಯೋಗ ಕಲ್ಪಿಸುವ ವಿಚಾರವಾಗಿ ಮಾತುಕತೆ ನಡೆಸಿದರು. ವ್ಯವಸಾಯದಲ್ಲಿ ನಿರತರಾಗಲಿಚ್ಛಿಸುವ ಮಾಜಿ ನೌಕರರ ಪಟ್ಟಿಯನ್ನು ಮೈಸೂರು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುವುದೆಂದೂ, ಕಾರ್ಖಾನೆಗಳಲ್ಲಿ ಕೆಲಸ ಮಾಡಲಿಚ್ಛಿಸುವ ನೌಕರರ ಪಟ್ಟಿಯನ್ನು ಕಾರ್ಮಿಕ ಸಚಿವರು ಕೇಳಿರುವರೆಂದೂ ತಿಳಿಸಲಾಗಿದೆ.

ಮೈಸೂರು ಪ್ರಾಂತಕ್ಕೆ ವಿನೋಬಾರವರ ಭೇಟಿ

ಭಾವೆಯವರ ಭೂದಾನ ಯಜ್ಞದ ಯಶಸ್ಸಿಗಾಗಿ ಕರೆ

ಕಾಲಡಿಯ ಸರ್ವೋದಯ ಸಮ್ಮೇಳನದಲ್ಲಿ ಕರ್ನಾಟಕದ ಸುಮಾರು ೧೦೦ ಮಂದಿ ಭೂದಾನ ಕಾರ್ಯಕರ್ತರೂ, ಹಿತೈಷಿಗಳೂ ವಿನೋಬಾಜಿಯವರನ್ನು ಭೇಟಿ ಮಾಡಿದ್ದರು. ಶೀಘ್ರದಲ್ಲಿಯೇ ಮೈಸೂರು ಪ್ರಾಂತ್ಯಕ್ಕೆ ಮೈಸೂರು ಜಿಲ್ಲೆಯ ಮೂಲಕ ತಾವು ಪ್ರವೇಶ ಮಾಡುವುದಾಗಿ ವಿನೋಬಾರವರು ತಿಳಿಸಿರುತ್ತಾರೆ. ಅವರು ಬರುವ ಮೊದಲೇ ಮೈಸೂರು ಜಿಲ್ಲೆಯಿಂದ ಮೊದಲು ಮಾಡಿ ಎಲ್ಲ ಜಿಲ್ಲೆಗಳಲ್ಲೂ ಗ್ರಾಮ ದಾನದ ಸಂದೇಶವನ್ನು ಎಲ್ಲ ಹಳ್ಳಿಗಳಲ್ಲೂ ಹರಡಿ ಒಂದು ಸಾವಿರ ಗ್ರಾಮದಾನದ ಸಂಕಲ್ಪವನ್ನು ಕೈಗೊಳ್ಳಬೇಕೆಂದು ಕನ್ನಡಿಗರೆಲ್ಲರಿಗೂ ವಿನೋಬಾರವರು ಕರೆ ನೀಡಿದ್ದಾರೆ.

ಗುಂಡ್ಲುಪೇಟೆ ಮತ್ತು ಹುಣಸೂರು ತಾಲ್ಲೂಕಿನಲ್ಲಿ ಸಾಮೂಹಿಕ ಪಾದಯಾತ್ರೆ

ವಿನೋಬಾರವರ ಅಪೇಕ್ಷೆಯಂತೆ ಈ ಜಿಲ್ಲೆಯಲ್ಲಿ ಗ್ರಾಮ ದಾನ ಸಂದೇಶವನ್ನು ಹರಡಲು ಮತ್ತು ಗ್ರಾಮ ದಾನ ಪ್ರಾಪ್ತಿಯ ಅಂಗವಾಗಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇದೇ ಮೇ ೨೫ನೇ ತಾರೀಖಿನಿಂದ ೩೦ರವರೆಗೂ, ಹುಣಸೂರು ತಾಲ್ಲೂಕಿನಲ್ಲಿ ಮೇ ೨೬ರಿಂದ ೩೧ರವರೆಗೂ ಗ್ರಾಮ ದಾನ ಶಿಬಿರ ಮತ್ತು ಸಾಮೂಹಿಕ ಪಾದ ಯಾತ್ರೆಗಳು ಏರ್ಪಟ್ಟಿವೆ. ಶಿಬಿರಗಳನಂತರ ಅನೇಕ ತಂಡಗಳಲ್ಲಿ ಎರಡು ತಾಲ್ಲೂಕುಗಳ ಎಲ್ಲ ಹಳ್ಳಿಗಳಿಗೂ ಪಾದ ಯಾತ್ರೆ ನಡೆಯಲಿದೆ

ಈ ಕಾರ್ಯಕ್ರಮದಲ್ಲಿ ಕರ್ನಾಟಕದ ಭೂದಾನ ಸೇವಕರುಗಳಾದ ೪೦ ಮಂದಿ ಕಾರ್ಯಕರ್ತರೂ ಮತ್ತು ಅನೇಕ ಸ್ಥಳೀಯ ಕಾರ್ಯಕರ್ತರೂ ಭಾಗವಹಿಸಲಿರುವರು.

ಸಂಸ್ಥಾನದ ಎಲ್ಲ ಜಿಲ್ಲೆಗಳಿಂದಲೂ ಉತ್ಸಾಹಿ ತರುಣರೂ, ಭೂದಾನ ಪ್ರೇಮಿಗಳೂ, ರಚನಾತ್ಮಕಸಂಸ್ಥೆಗಳವರೂ ಈ ಗ್ರಾಮ ದಾನ ಶಿಬಿರ ಮತ್ತು ಪಾದಯಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕೆಂದು ಪ್ರಾರ್ಥಿಸಲಾಗಿದೆ.

ಗುಂಡ್ಲುಪೇಟೆಯ ಶಿಬಿರವು ಮತ್ತು ಪಾದ ಯಾತ್ರೆಗೆ ಆಗಮಿಸುವವರು ‘ಶ್ರೀ ಮಂಜುನಾಥನ್, ಕರ್ನಾಟಕ ಸಾಮೂಹಿಕ ಪಾದಯಾತ್ರೆ, ಗುಂಡ್ಲುಪೇಟೆ,” ಈ ವಿಳಾಸಕ್ಕೂ, ಹುಣಸೂರು ಶಿಬಿರ ಮತ್ತು ಪಾದಯಾತ್ರೆಗೆ ಆಗಮಿಸುವವರು “ಶ್ರೀ ಮಂಜುನಾಥನ್, ಕರ್ನಾಟಕ ಸಾಮೂಹಿಕ ಪಾದಯಾತ್ರೆ, C/o ಶ್ರೀ ಎಂ ಎ ಶ್ರೀನಿವಾಸ ಅಯ್ಯಂಗಾರ್, ಅಡ್ವೋಕೇಟ್, ಹುಣಸೂರು,” ಈ ವಿಳಾಸಕ್ಕೂ ಬರೆಯಬೇಕಾಗಿ ಕೋರಲಾಗಿದೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮುತ್ತು

ಕೊಡುಮಾಸಣ್ಣದು	೪೦ ೦೦	೪೯ ೨೯
ರತ್ನಚೂಡಿ	೪೦ ೫೦	೪೩ ೦೦
ಕಡ್ಡಿ	೪೧ ೧೨	೪೪ ೧೨
[illegible]	೪೮ ೨೯	
[illegible] ಸಣ್ಣ	೩೭ ೦೦	
ರಾಗಿ	೪೩ ೪೭	೪೫ ೬೨
ಜೋಳ	೯೧ ೫೦	೯೪ ೫೦
ಕಡಲೆಕಾಯಿ	೮೮ ೧೨	೫೫ ೧೨
ಹುಚ್ಚೆಳ್ಳು	೯೯ ೨೯	೯೬ ೦೦
ಹೊಂಗೇಬೀಜ	೨೪ ೧೨	೨೭ ೫೦
ಹುರುಳಿ	೪೦ ೦೦	೪೪ ೪೭
ಹೆಸರು	೫೯ ೪೭	
[illegible]	೯೭ ೨೯	೫೬ ೫೦
ಅವರೆ	೪೫ ೦೦	೫೮ ೬೨
ಧನಿಯ	೩೯ ೮೭	
ಉದ್ದು	೯೯ ೧೨	೬೯ ೦೦
ಕಡಲೆ	೯೬ ೫೦	
[illegible] ಬೀಜ	೪೯ ೦೦	೪೭ ೦೦
[illegible]	೯ ೬೭	೫ ೬೨
[illegible]	೧ ೫೦	೪ ೫೬
[illegible]	೭ ೫೮	೭ ೭೯
[illegible]	೧೧ ೦೦	೧೨ ೧೨
[illegible]	೧೫೫ ೦	೨೯೭ ೫೦

ಇನ್‌ಫ್ಲುಯೆಂಜಾ ಹರಡುವ ಬಗ್ಗೆ ಎಚ್ಚರಿಕೆ

ಸಿಂಗಪುರದಲ್ಲಿ ಉಂಟಾಗಿರುವ ಇನ್‌ಫ್ಲುಯೆಂಜಾ ಜಾಡ್ಯವು ಭಾರತಕ್ಕೆ ಹಬ್ಬಬಹುದೆಂದು ಕೇಂದ್ರ ಸರ್ಕಾರದ ಡೈರೆಕ್ಟರ್ ಜನರಲ್ಲರು ಸಂಸ್ಥಾನಗಳಿಗೆ ಸೂಚಿಸಿರುತ್ತಾರೆ. ೧೯೧೮ರಲ್ಲಿ ಆದಂತೆಯೇ ಈಗಲೂ ವ್ಯಾಧಿಯು ಹರಡುವ ಸಂಭವವಿರುವುದೆಂದು ಹೇಳಲಾಗಿದೆ. ಈ ವ್ಯಾಧಿಯು ಹರಡದಂತೆ ಸಂಸ್ಥಾನದಲ್ಲಿ ಕ್ರಮ ಕೈಗೊಳ್ಳಲಾಗುತ್ತಿರುವುದೆಂದು ಇಲ್ಲಿನ ಆರೋಗ್ಯ ಡೈರೆಕ್ಟರು ತಿಳಿಸಿರುತ್ತಾರೆ ಸಾರ್ವಜನಿಕರು ಈ ಬಗೆಯ ಜಾಡ್ಯದ ಸೋಂಕನ್ನು ಕೂಡಲೇ ಸ್ಥಳೀಯ ಆರೋಗ್ಯ ಅಧಿಕಾರಿಗಳಿಗೆ ತಿಳಿಸುವಂತೆ ಸೂಚಿಸಿರುವರು.

ಎರಡನೇ ಸಂಬಳ ಸಮಿತಿ ರಚನೆಗೆ ಕೇಂದ್ರ ಸರ್ಕಾರಿ ನೌಕರರ ಒತ್ತಾಯ

ನಗರದಲ್ಲಿ ಮೊನ್ನೆ ಕೇಂದ್ರ ಸರ್ಕಾರದ ನೌಕರರು ೨ನೇ ಸಂಬಳ ಸಮಿತಿ ದಿನಾಚರಣೆಯನ್ನು ಟೆಲಿಫೋನ್ ಕಛೇರಿಯಲ್ಲಿ ನಡೆಸಿದರು ಅದರಲ್ಲಿ ಅಂಚೆ, ಆರ್ ಎಂ. ಎಸ್ ತಂತಿ, ಕಛೇರಿ, ಟೆಲಿಫೋನ್ ಮತ್ತು ಕೇಂದ್ರ ಅಬ್ಕಾರಿ ಸುಂಕದ ಇಲಾಖೆ ನೌಕರರು ಭಾಗವಹಿಸಿದ್ದರು ಎರಡನೇ ಸಂಬಳ ಸಮಿತಿಯನ್ನು ರಚಿಸುವಂತೆಯೂ ಮತ್ತು ಈಗಿನ ಜೀವನದ ಮಟ್ಟಕ್ಕೆ ಸರಿಯಾಗಿ ತುಟ್ಟಿಭತ್ಯವನ್ನೂ ಏರಿಸಬೇಕೆಂದು ಪ್ರಧಾನಿಯವರನ್ನು ಕೋರುವ ನಿರ್ಣಯ ಮಾಡಲಾಯಿತು.

ಮೂಲ ಶಿಕ್ಷಣದ ವಿದ್ಯಾರ್ಥಿಗಳಿಗೆ ಸೌಕರ್ಯ

ವಾರ್ಧಾ ಸೇವಾ ಗ್ರಾಮದ ತಾಲಿಮಿ ಸಂಘದಲ್ಲಿ ಮೂಲ ಶಿಕ್ಷಣ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳನ್ನು ಗಾಂಧಿ ಸ್ಮಾರಕ ನಿಧಿಯ ಸಂಸ್ಥಾನ ಶಾಖೆಯು ಪರವಾಗಿ ಕಳುಹಿಸಲಾಗುವುದು ಇದೇ ಆಗಸ್ಟ್ ೧ನೇ ತಾರೀಖಿನಿಂದ ಆರಂಭವಾಗುವ ಈ ಶಿಕ್ಷಣವು ೧೦ ತಿಂಗಳ ಕಾಲ ನಡೆಯುವುದು ಈ ಅವಧಿಯಲ್ಲಿ ಊಟ, ವಸತಿ ಮತ್ತು ಶಿಕ್ಷಣ ಶುಲ್ಕದ ವೆಚ್ಚವನ್ನು ಗಾಂಧಿ ಸ್ಮಾರಕ ನಿಧಿಯವರು ವಹಿಸುವರು ಅಭ್ಯರ್ಥಿಗಳು ಪದವೀಧರರಾಗಿರಬೇಕು ಮತ್ತು ಹಿಂದಿ ಭಾಷೆಯ ಜ್ಞಾನವನ್ನು ಹೊಂದಿರಬೇಕು ಹಾಗೆ ಹೋಗಲಿಚ್ಛಿಸುವವರು ಇದೇ ತಿಂಗಳು ೩೧ನೇ ತಾರೀಕಿನೊಳಗಾಗಿ ಶ್ರೀ ಬಿ ಆರ್. ಪ್ರಾಣೇಶರಾವ್, ಪ್ರತಿನಿಧಿ, ಗಾಂಧಿ ಸ್ಮಾರಕ ನಿಧಿ, “ಪ್ರಭಾ”, ಎರಡನೇ ಮೇನ್ ರಸ್ತೆ, ವಾಣಿವಿಲಾಸ ಮೊಹಲ್ಲಾ ಮೈಸೂರು-ಈ ವಿಳಾಸಕ್ಕೆ ಬರೆದುಕೊಳ್ಳಬೇಕೆಂದು ಕೋರಲಾಗಿದೆ.

ಗೋವಾ ಬಗ್ಗೆ ಎಲ್ಲ ಪಂಗಡಗಳ ಸದಸ್ಯರೊಡನೆ ಸಮಾಲೋಚನೆ

ಗೋವಾ ವಿಮೋಚನೆಗಾಗಿ ಯಾವ ವಿಧವಾದ ಬಲಪ್ರಯೋಗವನ್ನೂ ಮಾಡಬಾರದೆಂಬ ಸರ್ಕಾರದ ನೀತಿಯ ಚೌಕಟ್ಟಿನೊಳಗೆ ಸರ್ಕಾರದವರು ಪಾರ್ಲಿಮೆಂಟ್ ಸಭೆಯ ಎಲ್ಲ ಪಂಗಡಗಳ ಸದಸ್ಯರೊಡನೆ ಈ ತಿಂಗಳ ಅಖೈರಿನೊಳಗೆ ಸಮಾಲೋಚನೆ ನಡೆಸುವುದಾಗಿ ಪ್ರಧಾನಿ ನೆಹರೂರವರು ಹೇಳಿರುವರು

“ಪ್ಯಾಸಾ”

ನಗರದ ಒಲಂಪಿಯಾ ಚಿತ್ರ ಮಂದಿರದಲ್ಲಿ ಪ್ರದರ್ಶಿತವಾಗುತ್ತಿರುವ ಮೇಲ್ಕಂಡ ಚಿತ್ರವು ಕವಿಯೊಬ್ಬನ ನಿರಾಶಾಭರಿತ ಜೀವನವನ್ನು ಮನಮುಟ್ಟುವಂತೆ ನಿರೂಪಿಸುತ್ತದೆ ವಿಜಯನ ಪಾತ್ರದಲ್ಲಿ ಗುರುದತ್‌ರವರೂ, ಪ್ರತಿಫಲಾಪೇಕ್ಷೆಯಿಲ್ಲದೆ ಕಷ್ಟದಲ್ಲಿದ್ದ ಕವಿಗೆ ಸಹಾಯ ನೀಡಿದ ವೇಶ್ಯೆ ಗುಲಾಬಳ ಪಾತ್ರದಲ್ಲಿ ವಹೀದಾ ರೆಹಮಾನಳೂ ಉತ್ತಮ ಅಭಿನಯ ನೀಡಿದ್ದಾರೆ. ಚಿತ್ರದಲ್ಲಿ ಹಲವು ಗೀತೆಗಳು ಸಹ ಇಂಪಾಗಿವೆ ಛಾಯಾಗ್ರಹಣ ದೃಶ್ಯ. ಜೋಡಣೆಗಳು ಸಮರ್ಪಕವಾಗಿದ್ದು ಚಿತ್ರವು ಒಮ್ಮೆ ಸಂದರ್ಶಿಸಲು ಅರ್ಹವಾಗಿದೆ

ಶಂಕರ ಜಯಂತೀ ಮಹೋತ್ಸವ ಸಭೆ

ನಗರದಲ್ಲಿರುವ ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯು ನಾಳೆ ಮಧ್ಯಾಹ್ನ ೪ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಸೇರುವುದು. ನಿವೃತ್ತ ಇಂಜನಿಯರ್ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಅಧ್ಯಕ್ಷತೆ ವಹಿಸುವರು ಸಮಿತಿಯ ಚುನಾವಣೆ ಮುಂತಾದ ಕಾರ್ಯಕ್ರಮಗಳಿವೆ ಸದಸ್ಯರು ದಯಮಾಡಿಸುವಂತೆ ಕೋರಲಾಗಿದೆ.

ಸಂಗೀತ ಕಛೇರಿ ಮತ್ತು ತ್ಯಾಗರಾಜರ ಬಗ್ಗೆ ಭಾಷಣ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ವಿ|| ಬೆಳಕವಾಡಿ ವರದರಾಜಯ್ಯಂಗಾರ್ಯರ ಸಂಗೀತ ಕಛೇರಿಯು ವಿ|| ಬಿ ಎಸ್ ಶಿವರಾಮಯ್ಯನವರ ಪಿಟೀಲು ಮತ್ತು ವಿ|| ಶ್ರೀ ಟಿ.ಕೆ. ವಯ್ಯಾಪುರಿ ದೇವರುರವರ ಮೃದಂಗದೊಡನೆ ಶ್ರೀಮನ್ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಡೆಯುವುದು ಮದರಾಸಿನಿಂದ ಇಲ್ಲಿಗೆ ದಯಮಾಡಿಸಿರುವ ಶ್ರೀ ತ್ಯಾಗರಾಜರ ಶಿಷ್ಯಸ್ಥಾನಂ ಶಿಷ್ಯ ಪರಂಪರೆಗೆ ಸೇರಿದ ಶ್ರೀ ಎಸ್. ಪಾರ್ಥಸಾರಥಿಯವರು ತ್ಯಾಗರಾಜರ ವಿಷಯವಾಗಿ ಭಾಷಣ ಮಾಡುವರು.

THE CHAMPION METROPOLITAN COLLEGE OF COMMERCE

Co-operators' Home, 100' Road Mysore

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography, COST & WORKS ACCOUNTANCY Banking, Shorthand, Typewriting etc.

Estd. 1917 — Fully qualified full-time staff — Educational atmosphere – Fine building and up-to-date equipment — Decent Library and Reading Room — Western Business education in the East — Good results — College s Own Diploma also.

M S. PUTTANNA, *Vice-Principal.*

P. SUBBARAYA SASTRY, *Principal*

Central Food Technological Research Institute

TENDER NOTICE

Tenders are invited for running a Canteen in the Institute premises for a period of one year from the date of award of the contract. The tender in prescribed form obtainable from the Administrative Officer, Central Food Technological Research Institute, Cheluvamba Mansion, V. V. Mohalla (P O.), Mysore, should reach him on or before 3-6-1957. The Institute reserves the right not to a ept the lowest or any tender

Mysore,
Dated17-5-1957

A W. De SOUZA,
Administrative Officer

ಆಹಾರದ ಉತ್ಪತ್ತಿ ಬಗ್ಗೆ ನೆಹರೂರವರ ಅಸಮಾಧಾನ

ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ಮಾತನಾಡಿ, ಎಲ್ಲಾ ಸಂಸ್ಥಾನ ಸರ್ಕಾರಗಳೂ ತಮ್ಮ ಭೂಮಿತಿ ನೀತಿಗಳನ್ನು, ಮುಖ್ಯವಾಗಿ ಆಹಾರದ ನೀತಿಯನ್ನು ಕಾರ್ಯಗತ ಮಾಡದಿರುವುದಕ್ಕಾಗಿ ವಿಷಾದವನ್ನು ಸೂಚಿಸಿದರು. ಈ ವಿಚಾರವಾಗಿ ತನಿಖೆ ಮಾಡಲಾಗುವುದೆಂದೂ, ಪ್ರತಿಯೊಂದು ಸಂಸ್ಥಾನದಲ್ಲೂ ಈ ಗುರಿಯನ್ನು ಸಾಧಿಸುವಂತೆ ಎಲ್ಲಾ ಪ್ರಯತ್ನವನ್ನೂ ನಡೆಸುವುದಾಗಿಯೂ ಅವರು ತಿಳಿಸಿದರು.

ಸಹಾಯಾರ್ಥ ಪ್ರದರ್ಶನ

ನಗರದ “ಶ್ರೀ ಆರ್ಟಿಸ್ಟ್ಸ್” ಮತ್ತು “ಸೆಲೆಕ್ಟ್ ಆರ್ಟಿಸ್ಟ್ಸ್” ಸಂಸ್ಥೆಗಳವರ ಸಹಾಯಾರ್ಥವಾಗಿ ನಾಳೆ ಸಂಜೆ ೬-೩೦ಕ್ಕೆ ಟೌನ್ ಹಾಲಿನಲ್ಲಿ “ಕೊಹಿನೂರ್ ರತ್ನ” ಮತ್ತು “ಶ್ರೀ ಸೋಮನಾಥ” ಎಂಬ ನಾಟಕಗಳನ್ನು ಅಭಿನಯಿಸುವರು. ವಿಖ್ಯಾತ ಹಾಸ್ಯನಟ ಡಿಕ್ಕಿ ಮಾಧವರಾಯರು ಅಧ್ಯಕ್ಷತೆ ವಹಿಸುವರು.

ವಿವಾಹ ಮಹೋತ್ಸವ

ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಂ. ಆರ್. ವೆಂಕಟಸುಬ್ಬಶಾಸ್ತ್ರಿಗಳು ತಮ್ಮ ತಮ್ಮಂದಿರಾದ ಶ್ರೀ ಎಂ. ಆರ್. ಸಂಕರನಾರಾಯಣರಾಯರ ಪುತ್ರಿ ಸೌ|| ನಾಗರತ್ನಳನ್ನು ಕೆ. ಆರ್ ಮಿಲ್ಸ್ ಕಾಲೋನಿ ಮಿಡಲ್ ಸ್ಕೂಲ್ ಹೆಡ್ಮಾಸ್ಟರ್ ಶ್ರೀ ಸಿ. ಎಸ್. ಶ್ರೀನಿವಾಸಯ್ಯನವರ ಪುತ್ರ ಚಿ|| ಎಸ್ ಎಸ್ ಜಯರಾಂರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹ ಮಹೋತ್ಸವವನ್ನು ಜರುಗಿಸಿದರು.

WANTED an experienced Arts Graduate to work as part-time teacher. Contact:-Manager,
GLOBE TUTORIAL COLLEGE,
Mysore.

ಮನೆ ಮಾರಾಟಕ್ಕಿದೆ
ಡೋರ್ ನಂ 733 ಹಳ್ಳಿ ಮೊಹಲ್ಲಾ
ಪ್ರಭುದೇವ ಸಿನಿಮಾ ಹತ್ತಿರ
ವಿವರಗಳಿಗೆ :—
ಜಯ ಅಂಡ್ ಕಂಪನಿ,
ಹಳೆ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

ಶ್ರೀ ಜಗದಂಬಾ ಶಿಶು ವಿಹಾರ
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶುವಿಹಾರದ ತರಗತಿಗಳು ಇದೇ ೧೫ನೇ ತಾರೀಖಿನಿಂದ ಆರಂಭವಾಗಿವೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

[illegible]

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ- ನಿರೋಧಕ, ನಿವಾರಕ. ಸಲಹೆಗಳಿಗೆ :- ‘ಲಿವರ್ ಹೌಸ್’, ಚಾಮರಾಜಪುರಂ, ಮೈಸೂರು (ಸುಬ್ಬರಾಯ [illegible] ಹತ್ತಿರ)

COACHING SECTION,
DALVOY HIGH SCHOOL,
MYSORE

Excellent coaching for S. S. L. C. students taking Supplementary Examination 1957, by Experienced Experts. Charges very moderate Join Immediately.

Enquiries between 9 and 11 30 A M. and 4 and 5 P M

Secretary.

Edited Printed and Published by A. [illegible] Nagarajan at Sadhvi Press D. Subbiah Road, Mysore

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಬಿಡಿ ಪತ್ರಿಕೆ 2 ನಯೆ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : [illegible]] SADHVI : SUNDAY 19—5—1957 ಮೈಸೂರು : ಭಾನುವಾರ ೧೯—೫—೧೯೫೭ : [ಸಂಚಿಕೆ : [illegible]

ನಗರದ ಬಳಿ ಸರ್ಕಾರಿ ಬಸ್ಸು ಉರುಳಿ ಇಬ್ಬರಿಗೆ ಗಾಯ

ಖಾಸಗೀ ಶಾಲೆಗಳಲ್ಲಿ ಶಿಕ್ಷಣ ಉತ್ತಮ

ವಿದ್ಯಾ ಮಂತ್ರಿ ಶ್ರೀ ವೆಂಕಟಪ್ಪನವರ ಭಾಷಣ

ಬೆಂಗಳೂರು ೧೯

ಸಂಸ್ಥಾನದ ಸಹಾಯ ಪಡೆವ ಶಾಲಾ ಸಮ್ಮೇಳನವು ನೆನ್ನೆ ಮುಕ್ತಾಯಗೊಂಡಿತು. ವಿದ್ಯಾ ಮಂತ್ರಿ ಶ್ರೀ ಏ. ವೆಂಕಟಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿ ಭಾಷಣ ಮಾಡಿ, ಖಾಸಗೀ ಶಾಲೆಗಳಲ್ಲಿ ಸಿಗುತ್ತಿರುವ ಶಿಕ್ಷಣವು ಸರ್ಕಾರಿ ಶಾಲೆಗಳಲ್ಲಿ ದೊರೆಯುವುದಿಲ್ಲವೆಂದು ತಿಳಿಸಿದರು. ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಈಗ ತೊಂದರೆ ಬಂದಿರಬಹುದೆಂದೂ, ಆದರೆ ಆ ಶಾಲೆಗಳನ್ನು ಸರ್ಕಾರದವರು ವಹಿಸಿಕೊಳ್ಳುವುದು ತಮಗೆ ಇಚ್ಛೆ ಇಲ್ಲವೆಂದೂ, ಖಾಸಗೀ ಶಾಲೆಗಳ ಉಪಾಧ್ಯಾಯರ ಸಂಬಳಸಾರಿಗೆಗಳ ಬಗ್ಗೆ ಸಾಧ್ಯವಾದಷ್ಟು ಸಹಾಯವನ್ನು ಸರ್ಕಾರದವರು ಕೊಡುವರೆಂದೂ ತಿಳಿಸಿದರು.

ಶಿಕ್ಷಣ ಶಾಖಾ ಕಾರ್ಯದರ್ಶಿ ಶ್ರೀ ಆರ್. ಶ್ರೀನಿವಾಸರವರು ಮಾತನಾಡಿ ಈ ಸಂಸ್ಥೆಗಳ ಉಪಾಧ್ಯಾಯರುಗಳಿಗೆ ಪ್ರಾವಿಡೆಂಟ್ ನಿಧಿ, ತುಟ್ಟಿಭತ್ಯ, ಸಂಬಳ ದರ್ಜೆ ಮುಂತಾದುವನ್ನು ಏರ್ಪಡಿಸಲು ವರ್ಷಕ್ಕೆ ೧ ಕೋಟಿ, ೯೦ ಲಕ್ಷ ರೂ. [illegible] ಹಣಬೇಕಾಗುವುದೆಂದೂ ಉಪಾಧ್ಯಾಯರಿಗೆ ಉತ್ತಮ ತರಪೇತು ಕೊಡಲೂ ಮತ್ತು ಈಗಿನ ಶಿಕ್ಷಣ ಮಟ್ಟವನ್ನು ಹೆಚ್ಚಿಸಲೂ ಅಗತ್ಯ ಕ್ರಮ ಜರುಗಿಸಲಾಗುವುದೆಂದೂ ನುಡಿದರು.

ಸಮ್ಮೇಳನವು ನಂತರ ಕೆಳಗೆ ಕಂಡ ನಿರ್ಣಯಗಳನ್ನು ಮಾಡಿತು:—

ಏಕರೀತಿ ವೇತನ ಮತ್ತು ಕಡ್ಡಾಯದ [illegible]ವನ್ನು ಖಾಸಗಿ ಶಾಲಾ ಉಪಾಧ್ಯಾಯರುಗಳಿಗಾಗಿ ಏರ್ಪಡಿಸಬೇಕು; ಅವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಕಲ್ಪಿಸಬೇಕು; ಸರ್ಕಾರಿ ವಿದ್ಯಾ ಸಂಸ್ಥೆ ಅಧ್ಯಾಪಕರಿಗೆ ದೊರೆಯುತ್ತಿರುವ ಸಂಬಳವನ್ನು ಖಾಸಗೀ ಸಂಸ್ಥೆಗಳ ಅಧ್ಯಾಪಕರಿಗೆ ಕೊಡುವಂತಾಗಬೇಕು, ಅವರುಗಳ ನಿವೃತ್ತಿ ವಯಸ್ಸನ್ನು ೬೦ ವರ್ಷಕ್ಕೆ [illegible] [illegible] ವರ್ಷ ಸರ್ವಿಸ್ ಆದವರು ಖಾಸಗಿಯಾಗಿ ಪಬ್ಲಿಕ್ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅವಕಾಶ ಬೇಕು, ಕೇಂದ್ರ ಸರ್ಕಾರದ ನೌಕರರ ತುಟ್ಟಿಭತ್ಯವನ್ನು ಖಾಸಗೀ ಶಾಲಾ ಉಪಾಧ್ಯಾಯರಿಗೆ ಕೊಡುವಂತಾಗಿ, ಸರ್ಕಾರದವರು ತುಟ್ಟಿಭತ್ಯದಲ್ಲಿ ಶೇಕಡ ಅರ್ಧದಷ್ಟು ವೆಚ್ಚವನ್ನು ನೀಡಬೇಕು, ಮತ್ತು ಶಾಲೆಗಳ ಸಹಾಯ[illegible] ಕೊಡುತ್ತಿರುವ ಶೇಕಡ [illegible]ರಷ್ಟು ಹಣವನ್ನು [illegible]ಕ್ಕೆ ಹೆಚ್ಚಿಸಬೇಕು.

ಸಿಕಿಂದ್ರಾಬಾದಲ್ಲಿ [illegible] ವಿಚಾರಣೆಗೆ [illegible] ಕೋರ್ಟ್

ಸಿಕಂದರಾಬಾದಿನಲ್ಲಿ [illegible] [illegible] ಸಂದರ್ಭದಲ್ಲಿ [illegible] ನ್ನು ವಿಚಾರಿಸಲಾಗಿದೆ. [illegible] ಕೋರ್ಟಿನವರು [illegible] ಮಂದಿಯನ್ನು [illegible] ದಂಡವನ್ನು ವಿಧಿಸಿದರು

ಸರ್ಕಾರಿ ಬಸ್ಸು ತಲೆಕೆಳಗಾಗಿ ಇಬ್ಬರಿಗೆ ಗಾಯ

ಮೈಸೂರು ೧೯

ಈ ಬೆಳಿಗ್ಗೆ ನಗರದಿಂದ ಬೆಂಗಳೂರಿಗೆ ಹೊರಟ ಸರ್ಕಾರದ ಎಕ್ಸ್‌ಪ್ರೆಸ್ ಬಸ್ಸು ಕೃಷ್ಣರಾಜೇಂದ್ರ ಗಿರಣಿ ಸಮೀಪದಲ್ಲಿ ತಲೆಕೆಳಗಾಗಿ ಅದರಲ್ಲಿದ್ದ ಒಬ್ಬ ಮಹಿಳೆಗೆ ತೀವ್ರವಾಗಿಯೂ, ಇನ್ನೊಬ್ಬರಿಗೆ ಸ್ವಲ್ಪವೂ ಗಾಯವಾಗಿರುವುದೆಂದು ವರದಿಯಾಗಿದೆ. ಅವರುಗಳನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ. ಬಸ್ಸಿನ ಹಿಂಭಾಗಕ್ಕೂ ಲಾರಿಯೊಂದಕ್ಕೂ ಡಿಕ್ಕಿಯಾಗಿ ಬಸ್ಸಿಗೆ ಅಪಘಾತವಾಯಿತೆಂದೂ, ಲಾರಿಗೆ ಜಖಂ ಆಗಿಲ್ಲವೆಂದೂ ಹೇಳಲಾಗಿದೆ. ಸರ್ಕಾರಿ ಬಸ್ಸನ್ನು ವಾಪಸು ಕರೆತರಲಾಯಿತು. ತಾಲ್ಲೂಕು ಪೋಲೀಸರು ತನಿಖೆ ನಡೆಸುತ್ತಿರುವರು.

ಸಿಂಹಳದ ಭಾರತೀಯರ ಭವಿಷ್ಯದ ಬಗ್ಗೆ ನೆಹರೂ ಮಾತುಕತೆ

ಬಂಡಾರ ನಾಯಕೆಯೊಡನೆ ವಿಶ್ವಸಮಸ್ಯೆಗಳ ಚರ್ಚೆ

ಪ್ರಧಾನಿ ನೆಹರೂರವರು ಸಿಂಹಳದ ಪುರಾತನ ನಗರವಾಗಿದ್ದ ಅನೂರಾಧಪುರದ ಹೊಸ ನಗರದ ಆರಂಭೋತ್ಸವವನ್ನು ನೆರವೇರಿಸಿದರು. ಒಂದು [illegible] [illegible] ಈ ಊರು ಲಂಕಾ ದ್ವೀಪದ ಚರಿತ್ರೆಯನ್ನು ಸಾರುವುದೆಂದು ಅವರು ಹೇಳಿದರು.

ನೆಹರೂ ಮತ್ತು ಸಿಂಹಳದ ಪ್ರಧಾನಿಯವರು ಸಿಂಹಳದಲ್ಲಿರುವ ಭಾರತೀಯರ ನಾಗರಿಕತ್ವದ ಸಮಸ್ಯೆಯನ್ನು ಕುರಿತು ಸಂಭಾಷಣೆ ನಡೆಸಿದರು. ಅಣು ಮತ್ತು ಜಲಜನಕ ಬಾಂಬುಗಳಿಂದ ವಿಶ್ವಕ್ಕೆ ಅಪಾಯ, ಏಷ್ಯಾ ಸಮಸ್ಯೆಗಳು, ಕಾಶ್ಮೀರ ಮತ್ತು ಪಶ್ಚಿಮ ಏಷ್ಯಾ ವಿಷಯಗಳನ್ನು ಅವರುಗಳು ಚರ್ಚಿಸಿದರು. ಈ ದಿನ ಉಭಯ ಪ್ರಧಾನಿಗಳೂ ಜಂಟಿ ಹೇಳಿಕೆ ಹೊರಡಿಸುವರು

ಸೀಮೆಯೆಣ್ಣೆ ಮತ್ತು ನ್ಯೂಸ್ ಪ್ರಿಂಟಿಗೆ ಆಮದು ಸುಂಕವಿಲ್ಲ

ಕಳೆದ ೧೬ನೇ ತಾರೀಖಿನಿಂದ ಸೀಮೆಯೆಣ್ಣೆ ಮತ್ತು ನ್ಯೂಸ್‌ಪ್ರಿಂಟ್ ಮೇಲೆ ವಿಧಿಸಲಾಗಿದ್ದ ಆಮದು ಸುಂಕವನ್ನು ನೆನ್ನೆಯಿಂದ ತೆಗೆಯಲಾಗಿದೆಯೆಂದು ಕೇಂದ್ರ ಹಣಕಾಸಿನ ಮಂತ್ರಿ ಇಲಾಖಾ ಪ್ರಕಟಣೆಯೊಂದು ತಿಳಿಸಿರುತ್ತದೆ. ಸೀಮೆಯೆಣ್ಣೆ ತೆರಿಗೆಯಿಂದ ೫೦ ಲಕ್ಷ ರೂ ಆದಾಯ ಬರುವುದೆಂದು ನಿರೀಕ್ಷಿಸಲಾಗಿತ್ತು. ನ್ಯೂಸ್ ಪ್ರಿಂಟಿಗೆ ೧ ಟನ್ನಿಗೆ ೫೦-೦-೦ ರೂ. ನಿಂದ ೧೦೦ ರೂ.ಗೆ ಹೆಚ್ಚಿಸಲಾಗಿತ್ತು.

ಒಲೆಯಿಂದ ಆನೆಯ ಮರಣ

ಆಫ್ರಿಕದ ಉಗಾಂಡಾ ದೇಶದ ಅರಣ್ಯದಲ್ಲಿ ಒಂದು ಭಾರಿ ಹೆಣ್ಣಾನೆಯು ಸೊಂಡಲಿನೊಳಗೆ [illegible] [illegible] [illegible] ಆನೆಯು ಸತ್ತಿತೆಂದೂ. ಅದು ತನ್ನ ಗಂಡು ಮರಿ ಮೇಲೆ ಉರುಳಿದ್ದರಿಂದ, ಆ ಮರಿಯೂ ಸತ್ತಿತೆಂದು ವರದಿಯಾಗಿದೆ.

ಹೊಸ ತೆರಿಗೆಗಳಲ್ಲಿ ಬದಲಾವಣೆ ಇಲ್ಲ

ಕುಟುಂಬ ನಿರ್ವಹಣೆಗೆ ಹೆಚ್ಚು ಕಷ್ಟವಿಲ್ಲವೆಂದು ಟಿ. ಟಿ. ಕೆ. ಹೇಳಿಕೆ

ಕೇಂದ್ರ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ನೆನ್ನೆ ದೆಹಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ತಮ್ಮ ತೆರಿಗೆ ಸಲಹೆಗಳಲ್ಲಿ ಬದಲಾವಣೆಗಳಾಗುವುವೆಂದು ನಿರೀಕ್ಷಿಸಬಾರದೆಂದು ತಿಳಿಸಿದರು. ಹೊಸ ತೆರಿಗೆಗಳಿಂದ ಸಂಸಾರಗಳ ಆದಾಯ ವೆಚ್ಚಗಳಲ್ಲಿ ಅತ್ಯಲ್ಪ ಪರಿಣಾಮವಾಗುವುದೆಂದು ಅವರು ಅಭಿಪ್ರಾಯಪಟ್ಟರು.

ಇವುಗಳಿಂದ ಜೀವನ ಮಟ್ಟವು ಗ್ರಾಮಾಂತರದಲ್ಲಿ ಶೇಕಡ ೨ರಿಂದ ೩ ರಷ್ಟೂ, ನಗರಗಳಲ್ಲಿ ೩ರಿಂದ ೪ರಷ್ಟೂ ಹೆಚ್ಚಬಹುದೆಂದು ಅವರು ಅಂದಾಜು ಮಾಡಿದರು. ಟೀ, ಕಾಫಿ, ಬೆಂಕಿಪೊಟ್ಟಣಗಳ ಮೇಲೆ ಹೊಸ ಅಬ್ಕಾರಿ ಸುಂಕದಿಂದ ಜೀವನದ ಮಟ್ಟ ಹೆಚ್ಚುವುದಿಲ್ಲವೆಂದೂ, ಆದರೆ ಸಕ್ಕರೆ ಮೇಲಿನ ತೆರಿಗೆಯಿಂದ ಅದು ಹೆಚ್ಚುವುದೆಂದೂ ಅವರು ನಿರೂಪಿಸಿ, ಸಕ್ಕರೆ ಬಳಕೆಯನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ತಾವು ಹಾಗೆ ಮಾಡಿರುವುದಾಗಿ ತಿಳಿಸಿದರು. ಸಕ್ಕರೆ ಬಳಕೆಗಾರರ ಪ್ರತಿಭಟನಾ ಶಕ್ತಿಯು ಬೆಳೆದಂತೆಲ್ಲಾ ವ್ಯಾಪಾರಗಾರರು ಹೆಚ್ಚು ತೆರಿಗೆಯನ್ನು ಜನರ ಮೇಲೆ ಹಾಕದೆ ತಾವೇ ಕೊಡುವರೆಂಬ ನಂಬಿಕೆಯನ್ನು ವ್ಯಕ್ತಪಡಿಸಿದರು.

ಪರೋಕ್ಷ ತೆರಿಗೆಗಳಿಂದ ೫೦ ಕೋಟಿ ರೂ. ಪಡೆಯಲಾಗುವುದೆಂದೂ, ೨೫ ಕೋಟಿ ರೂ. ಅನ್ನು ಆಹಾರದ ಸಹಾಯ ನಿಧಿಗಾಗಿ ಇಡಲಾಗುವುದೆಂದೂ ಅವರು ಸೂಚಿಸಿದರು. ಆಹಾರದ ವಸ್ತುಗಳ ಬೆಲೆ ಹೆಚ್ಚಿದಾಗ ಮಾತ್ರ ಜೀವನ ಮಟ್ಟವು ಏರುವುದೆಂದೂ ನುಡಿದರು. ತೆರಿಗೆಗಳನ್ನು ಹಾಕಿದುದು ನ್ಯಾಯವೆಂಬುದು ೫ ವರ್ಷಗಳ ನಂತರ ವ್ಯಕ್ತವಾಗುವುದಾಗಿ ಅವರು ಭರವಸೆಯಿತ್ತರು.

ತೆರಿಗೆಗಳ ಬಗ್ಗೆ ರಾಜಾಜಿಯವರು ಮಾಡಿರುವ ಟೀಕೆ ಬಗ್ಗೆ ಅವರು ವ್ಯಾಖ್ಯಾನ ಮಾಡದೆ, ತಾವು ರಾಜಾಜಿಯವರೊಡನೆ "ಏಕಮತ್ಯದಿಂದಿಲ್ಲ" ವೆಂದು ಹೇಳಿದರು

ಹಿಂದೂ ಸಮಾಜವಾದ ಗುರಿ ಸಾಧನೆಯೇ ಮಹಾ ಸಭೆಯ ಧ್ಯೇಯ

ಹಿಂದೂ ಸಮಾಜವಾದದ ಆಧಾರದ ಮೇಲೆ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮವನ್ನು ಸಿದ್ಧಗೊಳಿಸುವ ಸಲುವಾಗಿ ಅಖಿಲ ಭಾರತ ಹಿಂದೂ ಮಹಾ ಸಭೆಯ ಕಾರ್ಯಕಾರಿ ಸಮಿತಿಯು ೬ ಜನ ಸದಸ್ಯರುಳ್ಳ ಸಮಿತಿಯೊಂದನ್ನು ನೇಮಿಸಿದೆ. ಈ ಕಾರ್ಯಕ್ರಮದ ಆಧಾರದ ಮೇಲೆ ಇಡೀ ದೇಶದ ವ್ಯವಸ್ಥೆಗೆ ಸಭೆಯು ಉದ್ದೇಶಿಸಿದೆ. ನಮ್ಮ ಋಷಿಮುನಿಗಳಿಂದ ಬೋಧಿಸಲ್ಪಟ್ಟಿರುವ ಜೀವನ ತತ್ವದ ಕಾರಣ ಹಿಂದೂ ಸಮಾಜವಾದವೇ ಮಹಾಸಭೆಯ ಅಭಿಪ್ರಾಯದಲ್ಲಿ ಪ್ರಜಾಸತ್ತಾತ್ಮಕ ಸಮಾಜವಾದವೂ ಆದರ್ಶವಾಗಿರುವುದೆಂದು ಸೂಚಿಸಿದೆ

ಗಫಾರ್ ಖಾನರಿಗೆ ವಿಧಿಸಲಾಗಿದ್ದ ದಂಡದ ವಸೂಲಿ ಕ್ರಮ

ಗಡಿನಾಡಿನ ಕೆಂಪು ಅಂಗಿಯವರ ನಾಯಕರಾದ ಖಾನ್ ಅಬ್ದುಲ್ ಗಫಾರ್ ಖಾನರಿಗೆ [illegible] ಹೈಕೋರ್ಟಿನವರು ವಿಧಿಸಿದ ೧೪,೦೦೦ ರೂ ದಂಡದ ವಸೂಲಿಗಾಗಿ ಅವರ ಜಮೀನಿನಲ್ಲಿ ಆಗುವ ಬೆಳೆಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಪಶ್ಚಿಮ ಪಾಕಿಸ್ತಾನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಖಾನ್ ಅಬ್ದುಲ್ ಗಫಾರ್ ಖಾನರ ಹೆಸರಿನಲ್ಲಿ ಜಮೀನು ಏನೂ ಇಲ್ಲ. ಆದರೆ ಹಿಂದೆಯೇ ಅವರ ಜಮೀನುಗಳನ್ನು ಮಕ್ಕಳ ಹೆಸರಿಗೆ ವರ್ಗಾಯಿಸಲಾಗಿತ್ತು.

ಅಮೆರಿಕಾ ರಾಜಧಾನಿಯಲ್ಲಿ ಅಣು ಕಣದ ಮಳೆ

ರಷ್ಯಾದಲ್ಲಿ ಅಣು ಸಿಡಿತದ ಪರಿಣಾಮ

ಅಮೆರಿಕದ ರಾಜಧಾನಿ ವಾಷಿಂಗ್ಟನ್ನಿನಲ್ಲಿ ಕಳೆದ ಮಂಗಳವಾರ ರಾತ್ರಿ ಅಣು ಕಣಗಳಿಂದ ಕೂಡಿದ್ದ ಬಿಸಿ ಮಳೆಯು ಬಂದಿತೆಂದು ವರದಿಯಾಗಿದೆ. ರಷ್ಯದಲ್ಲಿ ಕಳೆದ ತಿಂಗಳು ೧೩ ರಿಂದ ೧೭ ರವರೆಗೆ ಆದ ಅಣು ಶಸ್ತ್ರ ಪ್ರಯೋಗದಿಂದ ಉಂಟಾದ ಅಣುಕಣಗಳು ವಾಷಿಂಗ್ಟನ್ನಿನಲ್ಲಿ ಬಿದ್ದುದಾಗಿ ಅಂದಾಜು ಮಾಡಲಾಗಿದೆ. ಇದರಿಂದ ಅಮೆರಿಕದಲ್ಲಿ ತೀವ್ರ ಕಳವಳವುಂಟಾಗಿದೆ

ಪ್ರಾಥಮಿಕ ಶಾಲಾ ಅಧ್ಯಾಪಕರ ವೇತನ ಹೆಚ್ಚಿಸಲು ೩ ಕೋಟಿ ರೂ.

ದೇಶಾದ್ಯಂತ ಪ್ರಾಥಮಿಕ ಶಾಲಾ ಅಧ್ಯಾಪಕರ ವೇತನವನ್ನು ಪುನರ್ವಿಮರ್ಶಿಸಲು ಈ ವರ್ಷ ಕೇಂದ್ರ ಸರ್ಕಾರದವರು ೩ ಕೋಟಿ ರೂ. ಅನ್ನು ತೆಗೆದಿಟ್ಟಿರುತ್ತಾರೆ. ವಿದ್ಯಾವಂತ ನಿರುದ್ಯೋಗಿಗಳಿಗೆ ಪರಿಹಾರವೀಯಲಾಗುವುದು. ಮಾಧ್ಯಮಿಕ ಮತ್ತು ಗ್ರಾಮಾಂತರ ಪ್ರೌಢ ಶಾಲಾ ವಿದ್ಯಾಭ್ಯಾಸಕ್ಕಾಗಿ ೪.೫ ಕೋಟಿ ರೂ. ಖರ್ಚಾಗುವುದು.

ನಾಲ್ಕು ಕಾಲಿನ ಕೋಳಿಮರಿ

ಹೊಳೇನರಸೀಪುರಕ್ಕೆ ಸ್ವಲ್ಪ ದೂರವಿರುವ ಆನೆಕನ್ನಂಬಾಡಿ ಗ್ರಾಮದಲ್ಲಿ ನಾಲ್ಕು ಕಾಲುಗಳುಳ್ಳ ಕೋಳಿ ಮರಿಯೊಂದು ಹುಟ್ಟಿದೆ. ಇತರ ಕೋಳಿ ಮರಿಗಳಿಗೆ ಇರುವಂತೆ ಎರಡು ಕಾಲುಗಳ ಜೊತೆಗೆ ಹೊಟ್ಟೆಯ ಮಧ್ಯ ಭಾಗದಲ್ಲೊಂದು ಮತ್ತು ರೆಕ್ಕೆಯ ಮೇಲ್ಗಡೆ ಮತ್ತೊಂದು ಕಾಲುಗಳಿವೆ. ಕೋಳಿ ಮರಿಯು ಜೀವಂತವಾಗಿದೆ

ಡಿ. ಬಿ. ರಾಮಕೃಷ್ಣನವರ ನಿಧನ

ಧರ್ಮಪ್ರಕಾಶ ಡಿ. ಬನುಮಯ್ಯನವರ ಮಕ್ಕಳು ಶ್ರೀ ಡಿ. ಬಿ. ರಾಮಕೃಷ್ಣನವರು ನೆನ್ನೆ ಮಧ್ಯರಾತ್ರಿಯಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ನೆನ್ನೆ ಇದ್ದಕ್ಕಿದ್ದಂತೆಯೇ [illegible] ದಾಗಿ, ಕೆಳಗೆ ಬಿದ್ದುಬಿಟ್ಟರೆಂದು ಹೇಳಲಾಗಿದೆ. ಮೃತರಿಗೆ ಇಬ್ಬರು ಗಂಡು ಮಕ್ಕಳೂ, [illegible] ಹೆಣ್ಣು ಮಕ್ಕಳೂ ಇರುವರು.

ಉತ್ತರ ಜಪಾನಿನಲ್ಲಿ ಎಕ್ಸ್‌ಪ್ರೆಸ್ ರೈಲೊಂದು ಮೊನ್ನೆ ರಾತ್ರಿ ಕಂಬಿ ತಪ್ಪಿದ ಪರಿಣಾಮವಾಗಿ [illegible] ಜನರು ಸತ್ತಿರುತ್ತಾರೆ.

ವಾರಭವಿಷ್ಯ

ತಾ॥ ೧೯-೫-೫೭ ರಿಂದ ೨೬-೫-೫೭ ರ ವರೆಗೆ

ಮೇಷ: ಕಾರ್ಯ ಸಿದ್ಧಿ, ಆಪ್ತೇಷ್ಟರಿಂದ ಸಹಾಯ, ಶತ್ರು ವರ್ಗದವರಿಂದ ಸಖ್ಯ, ವ್ಯಾಪಾರವ್ಯವಹಾರಗಳಲ್ಲಿ ಜಯ, ಕೋರ್ಟು ಕಾರ್ಯ[illegible] ಪ್ರಗತಿ

ವೃಷಭ: ಮಾನಸಿಕ ಶಾಂತಿ, ಆರ್ಥಿಕ ಸ್ಥಿತಿ ತೃಪ್ತಿಕರವಿಲ್ಲ, ಶುಭ ಕಾರ್ಯಗಳಿಗೆ ಧನ ವ್ಯಯ, ಉದ್ಯೋಗಿಗಳಿಗೆ ಸನ್ಮಾನ, ಕೋರ್ಟು ಕಾರ್ಯ ಮುಂದೆ ಹಾಕುವುದು ಸೂಕ್ತ

ಮಿಥುನ:—ಆರ್ಥಿಕ ಭಾಗದಲ್ಲಿ ಬಹು ಮಟ್ಟಿನ ಸುಧಾರಣೆ, ಆರೋಗ್ಯ ಸಾಮಾನ್ಯ, ಬಂಧು ಮಿತ್ರರ ವಿರೋಧ, ಅಧಿಕ ಧನ ವ್ಯಯ, ಹೊಸಬರೊಡನೆ ಎಚ್ಚರಿಕೆಯಿಂದ ಇರಬೇಕು.

ಕಟಕ:—ಪ್ರವಾಸ, ಪತ್ರ ವ್ಯವಹಾರ ಮತ್ತು ವ್ಯಾಪಾರಗಳಿಂದ ಲಾಭ, ಧನ ಲಾಭ; ಅನಿರೀಕ್ಷಿತ ಘಟನೆಗಳಿಂದ ಮನಸ್ಸಿನ ಶಾಂತಿ, ಆರೋಗ್ಯ ತೃಪ್ತಿಕರ.

ಸಿಂಹ:—ಕಾರ್ಯ ಸಿದ್ಧಿ, ಸಾಂಪತ್ತಿಕ ಸ್ಥಿತಿ ಉತ್ತಮ, ಆರೋಗ್ಯ ನೆಟ್ಟಗೆ, ಆಪ್ತರಿಂದ ಶುಭ ಸಮಾಚಾರ, ನೌಕರರ ಪ್ರಶಂಸೆ, ಶತ್ರು ನಾಶ

ಕನ್ಯಾ: ಇಷ್ಟ ಕಾರ್ಯ ಸಿದ್ಧಿ, ಅನಿರೀಕ್ಷಿತ ಜನರ ಭೇಟಿ, ಶುಭ ಕಾರ್ಯಕ್ಕೆ ಧನ ವ್ಯಯ, ಎಲ್ಲ ಕಾರ್ಯಗಳಲ್ಲೂ ಜಯ, ಬಡ್ತಿಗಾಗಿ ಶಿಫಾರಸು

ತುಲಾ — ವಿಘ್ನಗಳಿಂದ ಕಾರ್ಯ ಜಯ, ವಿಶೇಷ ಜವಾಬ್ದಾರಿಯುತ ಕೆಲಸದ ನಿರ್ವಹಣೆ, ದೈಹಿಕ ಮಾನಸಿಕ ಸಂಪತ್ತು ವೃದ್ಧಿ, ಖರ್ಚಿಗೆ ತಕ್ಕ ಆದಾಯ ಸಂಚಾರದಿಂದ ಲಾಭ, ಶತ್ರುಗಳ ಸೋಲು

ವೃಶ್ಚಿಕ:—ಪ್ರಯತ್ನಕ್ಕೆ ತಕ್ಕ ಫಲ, ವ್ಯಾಪಾರದಲ್ಲಿ ಜಯ ಧನಲಾಭ ಕುಟುಂಬದಲ್ಲಿ ಸೌಖ್ಯ ಉದ್ಯೋಗಿಗಳಿಗೆ ಶ್ರೇಯಸ್ಸು, ಸಂತೋಷವಾರ್ತೆ

ಧನು: ಸ್ತ್ರೀಕಲಹ ಸಂಭವ, ಆದರಿಂದ [illegible] ವ್ಯಾಪಾರ ವ್ಯವಹಾರಗಳಲ್ಲಿ ಸ್ಥಿತಿ ಸಮ [illegible] ಪ್ರಗತಿ ಮತ್ತು [illegible]

[illegible] —ಸಾಂಸಾರಿಕ ತಾಪತ್ರಯ, ದೈವ [illegible]ದ ಕಾರ್ಯ ಸಿದ್ಧಿ ಆರ್ಥಿಕ ಸ್ಥಿತಿ ಉತ್ತಮ, ನೌಕರರಿಗೆ ಉತ್ತೇಜನ

ಕುಂಭ:—ಕುಟುಂಬಸೌಖ್ಯ ಉತ್ತಮ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಮಿತ್ರ ಸಹಾಯ ಇಷ್ಟ ಕಾರ್ಯ ಸಿದ್ಧಿ ವಿರೋಧಿಗಳಿಂದ ಮಿತ್ರತ್ವ. ವ್ಯಾಪಾರಾದಿಗಳಲ್ಲಿ ಲಾಭ.

ಮೀನ:—ಕೋರ್ಟು ಕಾರ್ಯ ಜಯ, ಸಂಪದಭಿವೃದ್ಧಿ, ಶತ್ರು ಪರಾಭವ. ಉತ್ತಮ ಸಹವಾಸ. ಗೃಹ ತಾಪತ್ರಯ ಕಡಿಮೆ. ಉತ್ಸಾಹ ನೌಕರರಿಗೆ ಪುರಸ್ಕಾರ

GLOBE TUTORIAL COLLEGE
Sadvidya Patasala Buildings,
S. S. L. C. Classes
In Full Swing : Join at once

Edited, Printed and Published by A R. Nagarajan at Sadhvi Press, D. Subhash Road, Mysore

ದ್ರಾವಿಡರ ಚಳುವಳಿ ವಿರುದ್ಧ ಸುಣ್ಣ ತೊಡೆಯುವ ಕ್ರಮ

ದ್ರಾವಿಡ ಸಂಘದವರು ಹೆಸರುಗಳನ್ನು ಅಳಿಸುವ ಚಳುವಳಿ ನಡೆಸುತ್ತಿರುವುದರ ವಿರುದ್ಧವಾಗಿ ತಿರುಚ್ಚಿಯ ರಾಷ್ಟ್ರೀಯ ಸುಧಾರಣೆಗಾರರ ಸಂಘದವರು ಸುಣ್ಣ ತೊಡೆಯುವ ಚಳುವಳಿಯನ್ನು ಆರಂಭಿಸಲಿರುವರೆಂದು ವರದಿಯಾಗಿದೆ. ದ್ರಾವಿಡ ಸಂಘದವರ ಬೋರ್ಡುಗಳು ಮತ್ತು ಕಪ್ಪು ಬಾವುಟಗಳಿಗೆ ಅವರ ಸ್ವಯಂಸೇವಕರು ಸುಣ್ಣ ಹಚ್ಚುವರೆಂದು ಹೇಳಲಾಗಿದೆ. ಸುಧಾರಣೆಗಾರರ ಸಂಘದ ಪ್ರತಿನಿಧಿ ವೀರಭದ್ರರವರು ಮಾತನಾಡಿ ಕಳೆದ ೩೦ ವರ್ಷಗಳಿಂದಲೂ ರಾಮಸ್ವಾಮಿ ನಾಯಕರ್‌ರವರು ಅವ್ಯಾಹತವಾಗಿ ಒಂದು ಕೋಮಿನ ವಿರುದ್ಧ ಚಳುವಳಿ ನಡೆಸುತ್ತಿರುವರೆಂದೂ, ಅಲ್ಲದೆ ವರ್ಣ ದ್ವೇಷವನ್ನುಂಟು ಮಾಡುತ್ತಿರುವರೆಂದೂ, ಅದನ್ನು ತಡೆಗಟ್ಟದಿದ್ದರೆ ರಕ್ತಪಾತ ಮತ್ತು ಕ್ರಾಂತಿಯಾಗುವುದೆಂದೂ ಹೇಳಿರುವರು.

ಹಡಗಿಗೆ ಬೆಂಕಿಯಿಂದ ೧೦೦ ಜನರ ಮರಣ

ಚೀಣದ ಯಾಂಗ್ಟ್‌ಸಿಕಿಯಾಂಗ್ ನದಿಯಲ್ಲಿ ಕಳೆದ ತಿಂಗಳು ಹಡಗೊಂದಕ್ಕೆ ಬೆಂಕಿ ಹತ್ತಿದ ಪರಿಣಾಮವಾಗಿ ೧೦೦ ಜನರು ಮಡಿದಿರುವುದಾಗಿ ಚೀಣಾ ವಾರ್ತಾ ಪ್ರಸಾರ ಸಂಸ್ಥೆಯು ನೆನ್ನೆ ತಿಳಿಸಿತು. ಹಡಗಿನಲ್ಲಿ ೨೮೧ ಜನರಿದ್ದರೆಂದು ಹೇಳಲಾಗಿದೆ.

ಮರದ ಗಾಣದ ಎಣ್ಣೆ ಕೈಗಾರಿಕಾಗಾರರ ಸಂಘದ ವಾರ್ಷಿಕೋತ್ಸವ

ನಗರದಲ್ಲಿರುವ ಮರದ ಗಾಣದ ಎಣ್ಣೆ ಕೈಗಾರಿಕೆಗಾರರ ಸಹಕಾರ ಸಂಘದ ಪ್ರಥಮ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಸಹಕಾರ ಭವನದಲ್ಲಿ ನೆರವೇರುವುದು ವಿಧಾನ ಪರಿಷತ್ತಿನ ಮಾಜಿ ಉಪಾಧ್ಯಕ್ಷ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಅಧ್ಯಕ್ಷತೆ ವಹಿಸುವರು

ಮನೆ ಮಾರಾಟಕ್ಕಿದೆ
ಡೋರ್ ನಂ 7೨3 ಖಿಲ್ಲೆ ಮೊಹಲ್ಲಾ
ಪ್ರಭಾದೇವ ಸಿನಿಮಾ ಹತ್ತಿರ
ವಿವರಗಳಿಗೆ --
ಜಯ ಅಂಡ್ ಕಂಪನಿ,
ಹಳೆ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

COACHING SECTION,
DALVOY HIGH SCHOOL,
MYSORE

Excellent coaching for S. S. L. C. students taking Supplementary Examination 1957, by Experienced Experts. Charges very moderate Join Immediately.

Enquiries between 9 and 11 30 A M. and 4 and 5 P M

Secretary

ಯಂತ್ರದ ಲೋಪದಿಂದ ಸರ್ಕಾರದ ವಿರುದ್ಧ ಮಂತ್ರಿಯ ಓಟು

ಲೋಕಸಭೆಯಲ್ಲಿ ೪॥ ಲಕ್ಷ ರೂ ವೆಚ್ಚದಿಂದ ಸ್ಥಾಪಿಸಲಾಗಿರುವ ಓಟು ಎಣಿಸುವ ಯಂತ್ರದ ಪರೀಕ್ಷೆಯು ಮೊನ್ನೆ ನಡೆಯಿತು ಅದು ಸೂಚಿಸಿರುವ ಪ್ರಕಾರ ಸರ್ಕಾರದ ವಿರುದ್ಧವಾಗಿ ಯೋಜನಾ ಮಂತ್ರಿ ಗುಲ್ಜಾರಿ ಲಾಲ್ ನಂದಾರವರು ಓಟು ಕೊಟ್ಟರೆಂದು ಗೊತ್ತಾಗಿದೆ ಮಂತ್ರಿಯು ತಪ್ಪು ಗುಂಡಿಯನ್ನು ಒತ್ತಲಾಗಿ ಅದು ವಿರೋಧವನ್ನು ಸೂಚಿಸಿತು ಇವಲ್ಲದೆ ಸಾಧನದಲ್ಲಿ ಇನ್ನೂ ಹಲವು ಕೊರತೆಗಳು ಕಂಡುಬಂದುವು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕೊಳಲು ೭-೧೫ ಎಸ್ ರಾಮಚಂದ್ರರಾವ್ ದೇವರನಾಮ ೮-೧೫ ಗಾನವಿಹಾರ ಮಧ್ಯಾಹ್ನ ೧೨ ಮತ್ತು ೧ ೫೦ ಬ್ಯಾಟಪ್ಪ-ಸಂಗೀತ ೧೨-೩೦ ಮತ್ತು ರಾತ್ರಿ ೧೦-೩೦ ವಿ ಶ್ರೀನಿವಾಸಯ್ಯಂಗಾರ್-ಗೋಟುವಾದ್ಯ ೧ ಮತ್ತು ೧-೨೦ ಅಬ್ದುಲ್‌ಗಫೂರ್-ಸಂಗೀತ ಸಂಜೆ ೬-೧೦ ಜಾನಪದಗೀತೆ, ೭ ೩೦ ಹಿಂದಿ ಗೀತೆ ೮-೧೫ ಸಾವು ಮತ್ತು ನಮ್ಮವರು ೮-೩೦ ಸಂಗೀತ ೯-೧೫ ಮತ ಧರ್ಮದಲ್ಲಿ ಬಿಕ್ಕಟ್ಟು-ಭಾಷಣ ೯-೩೦ ವಿ. ನಾರಾಯಣಶಾಸ್ತ್ರಿ-ಕಥಾ ಕಾಲಕ್ಷೇಪ.

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ಶ್ರೀ ಜಗದಂಬಾ ಶಿಶು ವಿಹಾರ
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶು ವಿಹಾರದ ತರಗತಿಗಳು ಇದೇ [illegible]ನಿಂದ ಆರಂಭವಾಗಿವೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

NATIONAL LEAGUE
Anathalaya Buildings
MYSORE
Offers excellent coaching for
S. S L C. students
Timings .8 to 10 A.M; 5 to 8 P.M.

WANTED immediately a Lady Receptionist. Must be very good in English Knowledge of Typing preferred Decent salary. Apply to:—
TOURIST BUREAU,
J M. Palace Road,
MYSORE
Phone No 574.

ವಸಂತ **ಕಾಲದ ಆಕರ್ಷಣೆ**
ನಿಮ್ಮ ಮಕ್ಕಳ ಅಂದವಾದ
ಕಾರ್ಡ್ ಸೈಜ್ ಛಾಯಾಚಿತ್ರ
ಒಂದು ರೂಪಾಯಿ ಮಾತ್ರ
ಪ್ರಭಾ ಟಾಕೀಸ್ ಬಳಿ ಇರುವ
ಶ್ರೀಕಾಂತ್ ಸ್ಟುಡಿಯೋವಿಗೆ
ಭೇಟಿ ಕೊಡಿ
ರೋಲ್ ಫಿಲಮ್ಸ್, ಡೆವಲಪಿಂಗ್,
ಪ್ರಿಂಟಿಂಗ್, ಎನ್ಲಾರ್ಜಿಂಗ್ ಸಹ
ಮಾಡುತ್ತೇವೆ



ನವೀನ ಮಾದರಿ
ಗಡಿಯಾರಗಳಿಗೆ
ಫೇವರ್ ಲ್ಯೂಬಾ, ವೆಸ್ಟೆಂಡ್,
ಸೈಮಾ, ರೋಮರ್
ಇತ್ಯಾದಿ, ಇತ್ಯಾದಿ
ರಾಂಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್, ಮೈಸೂರು

THE CITY TUTORIAL COLLEGE ★ Old Agrahar, Mysore
S S L C Classes for the Suppl Exams. have been started under the able guidance of Sri B K SATYABODHACHAR M A, B T Join at once
C T C. is the oldest and the best Institution

ಭಾರಿ ಹರಾಜು ಮಾರಾಟ
22-5-57ನೇ ಬುಧವಾರದಿಂದ
ಮೈಸೂರು ಜಗನ್ಮೋಹನ ಭವನದ
ಆವರಣದಲ್ಲಿ
ಮೆಸರ್ಸ್ ದಿ ಎಂಪೈರ್ ಆಕ್ಷನೀರ್ಸ್
ಇರ್ವಿನ್ ರೋಡ್, ಮೈಸೂರು

ಮೈಸೂರು ನ್ಯೂ ಅಪೇರಾ
18—5—57ರಿಂದ : ಅಮೋಘ ಪ್ರಾರಂಭ : ದಿನಪೂ 3 ಆಟಗಳು
★ ಸತೀ ಸಾವಿತ್ರಿ ★
(ಕನ್ನಡ)

ಬೆಂಗಳೂರು-ನಾಜ್

ದಾವಣಗೆರೆ	ಚಿತ್ರದುರ್ಗ	ಮಂಗಳೂರು
ಗಾಂತಿ ಪಿಕ್ಚರ್ ಹೌಸ್	ರೂಪವಾಣಿ	ನ್ಯೂ ಚಿತ್ರ

ಹಾಸನ	ಚಿಕ್ಕಮಗಳೂರು	ತುಮಕೂರು	ಚಾಮರಾಜನಗರ
ಪಿಕ್ಚರ್ ಪ್ಯಾಲೆಸ್	ಗುರುನಾಥ	ಶ್ರೀ	[illegible]

ಮುಂದಿನ ಬಿಡುಗಡೆ : [illegible] — [illegible]
[A CHAMRIA RELEASE

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ



ಬಿಡಿ ಪತ್ರಿಕೆ 2 ನಯೆ ಪೈಸೆ

Remember to Contact
"EVERGREEN —
— ACOUSTICS"
For
the Best Installation
OF
MIKE & LOUD SPEAKERS

ಸಂಪುಟ : ೧೫] SADHVI : MONDAY 20—5—1957 ಮೈಸೂರು : ಸೋಮವಾರ ೨೦—೫—೧೯೫೭ : [ಸಂಚಿಕೆ : ೩೮೭

ಅಣು ಸಿಡಿತ ನಿಲ್ಲಿಸಲು ನೆಹ್ರೂ-ಬಂಡಾರನಾಯಕೆ ಕರೆ

ಜಿಲ್ಲೆಯಲ್ಲಿ ಮಳೆಬೆಳೆಗಳಿಲ್ಲದೆ ಅಭಾವ ಪರಿಸ್ಥಿತಿ

ಪತ್ರಿಕಾ ನಿಯೋಗದವರಿಂದ ಪರಿಶೀಲನೆ

ಮೈಸೂರು ೨೦

ಮೈಸೂರು ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಮಳೆಬೆಳೆಗಳಿಲ್ಲದ ಪರಿಣಾಮವಾಗಿ ಪ್ರಜೆಗಳಿಗೆ ಉಂಟಾಗಿರುವ ಕಷ್ಟ ಪರಿಸ್ಥಿತಿಯನ್ನು ಪರಿಶೀಲಿಸಲು ನಿನ್ನೆ ಪತ್ರಿಕಾ ಪ್ರತಿನಿಧಿಗಳ ನಿಯೋಗವೊಂದು ತೆರಳಿತ್ತು. ವಿಧಾನಸಭಾ ಸದಸ್ಯರಾದ ಶ್ರೀ ಎಂ. ರಾಜಶೇಖರಮೂರ್ತಿಯವರೂ ಅವರೊಡನೆ ಬಂದಿದ್ದರು. ಅವರುಗಳು ಬೆಳಗ್ಗೆ ಮೈಸೂರಿನಿಂದ ಹೊರಟು, ಕೀಳನಪುರ, ಗರ್ಗೇಶ್ವರಿ, ನರಸೀಪುರ, ಕುರುಬೂರು, ಮೂಗೂರು, ಕುಂತೂರು, ಉತ್ತಂಬಳ್ಳಿ, ಕೊಳ್ಳೇಗಾಲ, ಮಧುವನಹಳ್ಳಿ, ಅಗರ-ಮಾಂಬಳ್ಳಿ, ಯಳಂದೂರು, ಮರಹಳ್ಳಿ, ಚಾಮರಾಜನಗರಗಳಿಗೆ ಭೇಟಿಯಿತ್ತು ರಾತ್ರಿ ೯ ಗಂಟೆಗೆ ನಗರಕ್ಕೆ ಹಿಂದಿರುಗಿದರು

ಕಳೆದ ಎರಡು ಮೂರು ಸಾಲುಗಳಿಂದಲೂ ಮಳೆ ಸರಿಯಾಗಿ ಬಾರದೆ, ಫಸಲು ನಷ್ಟವಾಗಿರುವುದಲ್ಲದೆ ಈ ಸಾರಿಯೂ ಸಹ ಮಳೆಯಿಲ್ಲದೆ ಅನೇಕ ಕಡೆ ಜೋಳವನ್ನೇ ಬಿತ್ತಿರುವುದಿಲ್ಲ. ಕೆಲವು ಭಾಗಗಳಲ್ಲಿ ಬಿತ್ತಿದ್ದ ಜೋಳವೂ ಸಹ ವ್ಯರ್ಥವಾಗಿರುತ್ತದೆ. ದಾರಿಯುದ್ದಕ್ಕೂ ಜಮೀನುಗಳು ಪಾಳು ಬಿದ್ದಿದ್ದ ದೃಶ್ಯವು ಕರುಣಾಜನಕವಾಗಿದ್ದಿತು. ವ್ಯವಸಾಯವು ತಪ್ಪಿರುವುದಲ್ಲದೆ ಬೇರೆ ಕೂಲಿ ಕೆಲಸಗಳೂ ಸಹ ದೊರೆಯದೆ ಹಲವು ಕಡೆಗಳಲ್ಲಿ ಜನರಿಗೆ ತೊಂದರೆಯಾಗಿದೆ. ದನಗಳಿಗೆ ಸಹಾ ಮೇವು ಸಾಲದಷ್ಟು ಇರುವುದಿಲ್ಲ. ಚಾಮರಾಜನಗರ ತಾಲ್ಲೂಕಿನಲ್ಲಿ ಸಾಲುಮರದ ಎಲೆಗಳನ್ನು ಕತ್ತರಿಸಿ, ದನಗಳ ಮೇವಿಗಾಗಿ ಉಪಯೋಗಿಸುವ ದೃಶ್ಯವು ಅನೇಕ ಕಡೆ ಕಂಡುಬಂದಿತು

ಕಳೆದ ವರ್ಷ ಅಭಾವ ಒದಗಿದ್ದ ಸಮಯದಲ್ಲಿ ಕೈಗೊಳ್ಳಲಾಗಿದ್ದ ಕಾಮಗಾರಿಗಳನ್ನು ಮುಂದುವರಿಸಿ ರಸ್ತೆ, ನಾಲೆ, ಕೆರೆ ಮುಂತಾದುವುಗಳನ್ನು ಮರಮತ್ತು ಮಾಡಿ ರೈತರಿಗೆ ಉದ್ಯೋಗವನ್ನು, ಜೀವನವನ್ನೂ ಕಲ್ಪಿಸಿಕೊಡಬೇಕೆಂದು ಎಲ್ಲಾ ಕಡೆಯಲ್ಲಿಯೂ ಮುಖಂಡರು ಸಲಹೆ ನೀಡಿದರು. ಆಹಾರದ ಡಿಪೋಗಳನ್ನು ಪ್ರತಿಯೊಂದು ಪಂಚಾಯಿತಿಯಲ್ಲಿಯೂ ಏರ್ಪಡಿಸುವುದಲ್ಲದೆ ತಾಲ್ಲೂಕು ಕೇಂದ್ರಗಳಲ್ಲಿ ದಾಸ್ತಾನು ಇಟ್ಟು ಧಾನ್ಯವು ಸುಲಭವಾಗಿ ಗ್ರಾಮಗಳಿಗೆ ದೊರೆಯುವಂತೆ ಸಲಹೆ ಮಾಡಲಾಯಿತು

ಟಿ ನರಸೀಪುರದ ಬಳಿ ಇರುವ ಹಲವು ಗ್ರಾಮಗಳ ಜಮೀನುಗಳಿಗೆ ಕೂಡಲೆ ಒಂದು ತಿಂಗಳ ಕಾಲ ನಾಲೆಯ ಮೂಲಕ ನೀರನ್ನು ಒದಗಿಸಿದರೆ ನೂರಾರು ಎಕರೆ ಜಮೀನಿನಲ್ಲಿ ಫಸಲು ಉಳಿಯುವುದೆಂದೂ, ಇಲ್ಲವಾದರೆ ಎಲ್ಲವೂ ಒಣಗಿ ಹೋಗುವುದೆಂದೂ ತಿಳಿಸಲಾಯಿತು

ಜೀವನಕ್ಕೆ ಮಾರ್ಗವಿಲ್ಲದೆ ಕೆಲವು ಗ್ರಾಮಸ್ಥರು ಕಾಫಿ ತೋಟಗಳಿಗೆ ಹೋಗುತ್ತಿರುವರೆಂದೂ ದನಕರುಗಳನ್ನು ಸಂತೆಗಳಲ್ಲಿ ಮಾರಲಾಗುತ್ತಿದೆಯೆಂದೂ ತಿಳಿದುಬಂದಿತು. ಈ ಪ್ರಾಂತದಲ್ಲಿ ಮುಖ್ಯ ವ್ಯವಸಾಯವಾದ ಹಿಪ್ಪುನೇರಳೆ ಫಸಲೂ ಸಹ ಒಣಗಿ ಹೋಗುತ್ತಿರುವುದರಿಂದ ನಿರುದ್ಯೋಗವು ಹೆಚ್ಚಲು ಅವಕಾಶವಾಗಿದೆ. ಇನ್ನು ಕೆಲವು ದಿನಗಳ ಕಾಲ ಇದೇ ರೀತಿ ಮುಂದುವರಿದರೆ ಪರಿಸ್ಥಿತಿಯು ಉಲ್ಬಣವಾಗಬಹುದು.

ಸರ್ಕಾರದವರು ಕೂಡಲೇ ಇದಕ್ಕೆ ಗಮನ ಕೊಟ್ಟು, ತಾತ್ಕಾಲಿಕವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಲ್ಲದೆ ಇದುವರೆಗೆ ಗೊತ್ತು ಮಾಡಲಾಗಿರುವ ದೀರ್ಘಾವಧಿ ಯೋಜನೆಗಳನ್ನು ಕಾರ್ಯಗತಮಾಡಲು ಉದ್ಯುಕ್ತರಾಗಿ ಜನರಿಗೆ ಉಂಟಾಗಿರುವ ಆತಂಕವನ್ನು ನಿವಾರಿಸುವರೆಂದು ನಿರೀಕ್ಷಿಸಲಾಗಿದೆ.

ಆಯಾ ಸ್ಥಳದ ವಿದ್ಯಮಾನಗಳಿಗೆ ಅನುಗುಣವಾಗಿ ಸ್ಥಳೀಯ ಮುಖಂಡರು ಕೊಟ್ಟಿರುವ ಸಲಹೆಗಳನ್ನೂ ಮುಂದೆ ಕ್ರಮೇಣ ಪ್ರಕಟಿಸಲಾಗುವುದು.

ಗುರುತಿಸಲಾಗದ ರೀತಿಯಲ್ಲಿ ಗಾಯವಾಗಿದ್ದ ಶವದ ಪತ್ತೆ

ಮೈಸೂರು ೨೦

ನಗರದ ಜಯಲಕ್ಷ್ಮೀಪುರಂ ಬಡಾವಣೆಯಲ್ಲಿನ ವೆಂಕಟರೆಡ್ಡಿ ಕಾರ್ಖಾನೆಯ ಬಳಿ ಬಚ್ಚಲೊಂದರಲ್ಲಿ ಗುರುತಿಸಲಾಗದಂತಹ ರೀತಿಯಲ್ಲಿ ಗಾಯಪಡಿಸಲಾಗಿದ್ದ ವ್ಯಕ್ತಿಯೊಬ್ಬನ ಶವವು ನೆನ್ನೆ ಬೆಳಗ್ಗೆ ಪತ್ತೆಯಾಯಿತು. ಆತನ ಕಿವಿಯನ್ನು ಕತ್ತರಿಸಿಹಾಕಲಾಗಿತ್ತು. ಅಲ್ಲದೆ ಗಲ್ಲದ ಕೆಳಭಾಗದಿಂದ ಎದೆಯ ಅರ್ಧ ಭಾಗದವರೆಗೂ ಅರ್ಧಚಂದ್ರಾಕೃತಿಯಲ್ಲಿ ದೇಹವನ್ನು ಕೊರೆಯಲಾಗಿತ್ತು. ಒಂಟಿಕೊಪ್ಪಲು ಪೋಲೀಸರು ತನಿಖೆ ನಡೆಸುತ್ತಿರುವರು

ಬಹಿರಂಗ ಸಭೆ

ನಗರದ ಪ್ರಜಾ ಮಂಡಲಿಯ ಆಶ್ರಯದಲ್ಲಿ ಈ ಸಂಜೆ ೬॥ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ಏರ್ಪಾಡಾಗಿದೆ. ತೆರಿಗೆಗಳನ್ನು ಹೆಚ್ಚಿಸಿದ ಕಾರಣವಾಗಿ ಪದಾರ್ಥಗಳ ಬೆಲೆ ಏರಿರುವುದರ ಬಗ್ಗೆ ಭಾಷಣಗಳನ್ನು ಮಾಡಲಾಗುವುದು

ಅಣು ಶಸ್ತ್ರ ಪ್ರಯೋಗದ ಸತ್ಯಾಗ್ರಹಕ್ಕೆ ಭಾರತೀಯ ಪಡೆ

ರಾಷ್ಟ್ರಾಧ್ಯಕ್ಷರೂ ಸೇರಬೇಕೆಂದು ಜೆ. ಸಿ. ಕುಮಾರಪ್ಪನವರ ಸಲಹೆ

ಅಣು ಶಸ್ತ್ರಗಳ ಪ್ರಯೋಗವನ್ನು ಪ್ರತಿಭಟಿಸಲು ಅವನ್ನು ನಡೆಸುವ ಪ್ರದೇಶಗಳಿಗೆ ಭಾರತೀಯ ಸತ್ಯಾಗ್ರಹಿಗಳ ತಂಡವನ್ನು ಕಳುಹಿಸಬೇಕೆಂದು ಈ ತಿಂಗಳು ಬೆಂಗಳೂರಿನಲ್ಲಿ ಸೇರುವ ಅಖಿಲ ಭಾರತ ಶಾಂತಿ ಸಮ್ಮೇಳನದಲ್ಲಿ ನಿರ್ಣಯ ತರಲಾಗುವುದು. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಪ್ರಥಮ ಸತ್ಯಾಗ್ರಹಿಗಳಾಗಬೇಕೆಂದು ಶ್ರೀ ಜೆ. ಸಿ. ಕುಮಾರಪ್ಪನವರು ಅಭಿಪ್ರಾಯಪಟ್ಟಿರುವರೆಂದು ಹೇಳಲಾಗಿದೆ

ಬಿರುಗಾಳಿಯಿಂದ ಐವರ ಮರಣ

ಅಸ್ಸಾಮಿನ ದಿಬ್ರುಗಢ ಪ್ರದೇಶದಲ್ಲಿ ಮೊನ್ನೆ ಬಿರುಗಾಳಿಯಿಂದ ೫ ಜನರು ಮಡಿದಿರುವರೆಂದು ತಿಳಿದುಬಂದಿದೆ. ೮ ಜನರು ಸತ್ತರೆಂದು ಅನಧಿಕೃತ ವಾರ್ತೆ ತಿಳಿಸಿದೆ. ದಿಹಿಂಗ್ ನದಿಯಲ್ಲಿ ಪ್ರವಾಹ ಬಂದು ೨೫೦೦ ಕುಟುಂಬಗಳಿಗೆ ಆಹಾರ ಕಷ್ಟವಾಗಿದೆ.

ಅಣು ಮತ್ತು ಜಲಜನಕ ಅಸ್ತ್ರಗಳ ಪ್ರಯೋಗ ಸಿಡಿತ ನಿಲ್ಲಬೇಕು

ಹಿರಿಯ ರಾಷ್ಟ್ರಗಳಿಗೆ ನೆಹರೂ ಮತ್ತು ಬಂಡಾರನಾಯಕೆಯರ ಜಂಟಿ ಮನವಿ

ಸಿಂಹಳದ ಪ್ರಧಾನಿ ಬಂಡಾರನಾಯಕೆಯವರೊಡನೆ ನೆಹರೂರವರು ಮಾತುಕತೆ ನಡೆಸಿ ಜಂಟಿ ಮನವಿಯೊಂದನ್ನು ಹೊರಡಿಸಿ, ಹಿರಿಯ ರಾಷ್ಟ್ರಗಳು ಅಣು ಮತ್ತು ಜಲಜನಕ ಅಸ್ತ್ರಗಳ ಪ್ರಯೋಗ ಸಿಡಿತವನ್ನು ಕೂಡಲೇ ನಿಲ್ಲಿಸಬೇಕೆಂದು ಕೋರಿರುತ್ತಾರೆ. ಇಂತಹ ವಿನಾಶಕಾರಕ ಉದ್ಯಮಗಳನ್ನು ಅವರು ನಿಲ್ಲಿಸದಿರುವುದಕ್ಕಾಗಿ ಉಭಯ ಪ್ರಧಾನಿಗಳೂ ವ್ಯಸನವನ್ನು ಸೂಚಿಸಿದ್ದಾರೆ. ಅಂತರ ರಾಷ್ಟ್ರೀಯ ಸಹಕಾರ, ತಿಳುವಳಿಕೆ ಮತ್ತು ಸ್ನೇಹಗಳು ಪಂಚಶೀಲ ತತ್ವದ ಆಧಾರದ ಮೇಲೆ ಬೆಳೆಯಬೇಕೆಂಬ ನಂಬಿಕೆಯನ್ನು ಅವರು ದೃಢೀಕರಿಸಿರುವರು. ವಸಾಹತುಶಾಹಿಯನ್ನು ಮತ್ತೆ ತರಲು ನಡೆಸುವ ಎಲ್ಲ ಬಗೆಯ ಆಕ್ರಮಣದ ಖಂಡನೆ, ಸೂಯೆಜ್ ಕಾಲುವೆಯ ಸಂಚಾರದ ಪುನರೇರ್ಪಾಡಿಗಾಗಿ ಹರ್ಷ ಸೂಚನೆ ಮತ್ತು ಚೀಣಕ್ಕೆ ವಿಶ್ವಸಂಸ್ಥೆ ಸದಸ್ಯತ್ವದ ಒತ್ತಾಯದ ಬಗ್ಗೆ ಒಪ್ಪಲಾಯಿತು. ಪಶ್ಚಿಮ ಏಷ್ಯಾ ರಾಷ್ಟ್ರಗಳ ಪ್ರಜೆಗಳು ತಮ್ಮ ಭವಿಷ್ಯವನ್ನು ಸಾಧಿಸಿಕೊಳ್ಳಲು ಸ್ವಾತಂತ್ರ್ಯವಿರಬೇಕೆಂದೂ ಸೂಚಿಸಲಾಯಿತು. ಸಿಂಹಳ ಮತ್ತು ಭಾರತದ ಸ್ನೇಹ ಸಂಬಂಧದಲ್ಲಿ ಉಭಯರೂ ವಿಶ್ವಾಸ ತೋರಿಸಿ, ಸಿಂಹಳದಲ್ಲಿರುವ ಭಾರತೀಯರ ನಾಗರಿಕತ್ವ ಮುಂತಾದ ಎಲ್ಲ ಸಮಸ್ಯೆಗಳೂ ಸಹಕಾರ ಮನೋಭಾವದಿಂದ ಉಭಯ ಪಕ್ಷದವರಿಗೂ ತೃಪ್ತಿಕರವಾಗಿ ಇತ್ಯರ್ಥವಾಗಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಲಾಯಿತು

ಬಸ್ ಅಪಘಾತದಲ್ಲಿ ಗಾಯ ಹೊಂದಿದ ಮಹಿಳೆಯ ಮರಣ

ಮೈಸೂರು ೨೦

ನೆನ್ನೆ ಕೃಷ್ಣರಾಜೇಂದ್ರ ಗಿರಣಿಯ ಬಳಿ ಸರ್ಕಾರಿ ಬಸ್ಸಿಗೆ ಆದ ಅಪಘಾತದಲ್ಲಿ ಗಾಯಗೊಂಡ ಮಹಿಳೆ ಡಾ॥ ಸಿ.ಆರ್. ಪಿಳ್ಳೆ ಎಂಬಾಕೆಯು ನೆನ್ನೆ ಸಂಜೆ ಆಸ್ಪತ್ರೆಯಲ್ಲಿ ಮೃತರಾದರು. ಆಕೆಯು ಚಾಮರಾಜನಗರದ ಖಾಸಗೀ ಡಾಕ್ಟರ್ ಶ್ರೀ ಬಿ. ಕೆ. ಪಿಳ್ಳೆಯವರ ಪತ್ನಿ. ಕೆಲವು ದಿನಗಳ ಹಿಂದೆ ಸರ್ಕಾರಿ ಸೇವೆಯಿಂದ ನಿವೃತ್ತರಾಗಿದ್ದರು. ಆಕೆಯೊಂದಿಗೆ ಆಸ್ಪತ್ರೆಗೆ ದಾಖಲಾದ ಯುವಕನು ಗುಣಮುಖನಾಗುತ್ತಿದ್ದಾನೆ.

ಬಸ್ಸು ಸಿದ್ಧಲಿಂಗಪುರದ ಬಳಿ ಹೋಗುತ್ತಿದ್ದಾಗ ಎದುರಾಗಿ ಎತ್ತಿನ ಗಾಡಿಗಳು ಬರುತ್ತಿದ್ದವೆಂದೂ, ಹಿಂದಿನಿಂದ ಬರುತ್ತಿದ್ದ ಲಾರಿಯ ಡ್ರೈವರನು ಗಾಡಿ ಮತ್ತು ಬಸ್ಸಿನ ಮಧ್ಯೆ ನುಗ್ಗಿ ಮುಂದೆ ಹೋಗಲು ಪ್ರಯತ್ನಿಸಿದಾಗ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿಯಾಗಿ ಅಲ್ಲಿ ಕುಳಿತಿದ್ದವರಿಬ್ಬರು [illegible] ಗಾಯಗೊಂಡರೆಂದೂ, ಆದರೆ ಬಸ್ಸು ತಲೆಕೆಳಗಾಗಲಿಲ್ಲವೆಂದೂ ತಿಳಿದುಬಂದಿದೆ. ಲಾರಿಯ ಡ್ರೈವರನನ್ನು ಪೋಲೀಸರು ಬಂಧಿಸಿದ್ದಾರೆ.

ಕಾರವಾರ ಅಥವಾ ಭಟ್ಕಳದಲ್ಲಿ ಹಡಗು ನಿರ್ಮಾಣ ಕೇಂದ್ರ

ಮಲೆನಾಡು ಸಮ್ಮೇಳನದಲ್ಲಿ ಕೆ. ಸಿ. ರೆಡ್ಡಿಯವರ ಆರಂಭ ಭಾಷಣ

ಕಾರವಾರ ಜಿಲ್ಲೆಯ ಶಿರಸಿಯಲ್ಲಿ ನೆನ್ನೆ ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅಖಿಲ ಭಾರತ ಮಲೆನಾಡು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಕಾರವಾರ ಅಥವಾ ಭಟ್ಕಳದಲ್ಲಿ ಒಂದು ಹಡಗು ನಿರ್ಮಾಣ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ತಿಳಿಸಿದರು. ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ರೆಡ್ಡಿಯವರು ಮಾತನಾಡಿ, [illegible] ಯೋಜನೆಗಳ ಮೂಲಕ ದೇಶದ ಏಳಿಗೆಯನ್ನು ಸಾಧಿಸಲಾಗುತ್ತಿರುವುದೆಂದೂ, ಅವುಗಳಿಂದ ಮಲೆನಾಡಿಗೂ ಪ್ರಯೋಜನ ಉಂಟೆಂದೂ ಹೇಳಿದರು. ಮಲೆನಾಡು ಪ್ರದೇಶದ ಬಹು ಭಾಗವು ಒಂದು ಸಂಸ್ಥಾನದಲ್ಲಿರುವುದರಿಂದ ಅಭಿವೃದ್ಧಿ ಕಾರ್ಯವು ಈಗ ಸುಲಭವಾಗಿರುವುದೆಂದೂ ಸೂಚಿಸಿ, ಮಲೆನಾಡಿನ ಗೃಹ ಮತ್ತು ಅರಣ್ಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲಾಗುವುದೆಂದು ಭರವಸೆಯಿತ್ತರು.

ಮಲೆನಾಡು ಅಭಿವೃದ್ಧಿಗಾಗಿ ಯೋಜನಾ ಮಂಡಲಿಗೆ ಸಲಹೆ ನೀಡಲು ಸಮಿತಿಯೊಂದನ್ನು ರಚಿಸಬೇಕೆಂದು ನಿರ್ಣಯ ಮಾಡಲಾಯಿತು. ಮಲೆನಾಡನ್ನು ಹಿಂದುಳಿದ ಪ್ರದೇಶವೆಂದು ಸಾರಬೇಕೆಂದು ಭಾರತ ಸರ್ಕಾರವನ್ನು ಕೋರಲಾಯಿತು. ಇಡೀ ಮಲೆನಾಡಿನ ಪ್ರಕೃತಿ ಸಂಪತ್ತಿನ ಬಗ್ಗೆ ಸರ್ವೆ ನಡೆಯಬೇಕೆಂದೂ ಒತ್ತಾಯಪಡಿಸಲಾಯಿತು.

ಪಾಕಿಸ್ತಾನದ ಆಕ್ರಮಣ ತಪ್ಪಿದ ನಂತರ ಕಾಶ್ಮೀರದ ಮಾತುಕತೆ

ಕೊಲಂಬೋವಿನಲ್ಲಿ ನೆಹರೂರವರ ಹೇಳಿಕೆ

ಪಾಕಿಸ್ತಾನವು ಕಾಶ್ಮೀರದಲ್ಲಿ ನಡೆಸಿರುವ ಆಕ್ರಮಣವನ್ನು ಕೊನೆಗಾಣಿಸುವವರೆಗೂ ಆ ಸಂಸ್ಥಾನದ ವಿಚಾರವಾದ ಇತರ ಪ್ರಶ್ನೆಗಳು ಉದ್ಭವಿಸುವುದಿಲ್ಲವೆಂದು ನೆನ್ನೆ ಕೊಲಂಬೊ ಪತ್ರಿಕಾ ಸಮ್ಮೇಳನದಲ್ಲಿ ನೆಹರೂರವರು ತಿಳಿಸಿದರು. ಜಾರಿಂಗ್‌ರವರ ವರದಿಯ ಪರಿಣಾಮವಾಗಿ ಆ ಸಮಸ್ಯೆಯ ಬಗ್ಗೆ ಪರಿಹಾರವೇನೆಂದು ಕೇಳಿದಾಗ ಅವರು ಭಾರತವು ತನ್ನ ನಿಲುವನ್ನು ಭದ್ರತಾ ಸಮಿತಿಗೆ ಸ್ಪಷ್ಟವಾಗಿ ತಿಳಿಸಿರುವುದೆಂದೂ, ಸಮಿತಿಯಾಗಲೀ ಅಥವಾ ಇತರರಾಗಲೀ ಏನು ಹೇಳುವರೆಂಬುದು ಗೊತ್ತಿಲ್ಲವೆಂದೂ ತಿಳಿಸಿದರು. ಸಾಮಾನ್ಯ ಘಟನೆಗಳ ಕ್ರಮದಲ್ಲಿ ಕಾಶ್ಮೀರವು ಭಾರತದಲ್ಲಿ ಐಕ್ಯಗೊಂಡಿರುವುದೆಂದೇ ಭಾರತದ ಅಭಿಪ್ರಾಯವೆಂದು ಅವರು ನುಡಿದು, ಪಾಕಿಸ್ತಾನವು ಕಾಶ್ಮೀರದಲ್ಲಿ ಆಕ್ರಮಣವನ್ನು ಮುಂದುವರಿಸುತ್ತಿರುವುದೆಂದೂ ಅದನ್ನು ಕೊನೆಗಾಣಿಸುವವರೆಗೆ ಇತರ ಪ್ರಶ್ನೆಗಳಿಗೆ ಅವಕಾಶವಿಲ್ಲವೆಂದೂ ಅವರು ಹೇಳಿರುವರು.

○ ದೆಹಲಿಯಲ್ಲಿ ಅಧಿಕಾರಿಯೊಬ್ಬರು ಅನೇಕರ ಎದುರಿನಲ್ಲಿ ಆರು ಆಣೆಯನ್ನು ಲಂಚವಾಗಿ ಸ್ವೀಕರಿಸಿದುದು ಗೊತ್ತಾಗಿ ಅವರನ್ನು ವಜಾ ಮಾಡಲಾಯಿತೆಂದು ಗೊತ್ತಾಗಿದೆ.

ಪೌರಸಭಾ ಕಂದಾಯದ ಪುನರ್ವಿಮರ್ಶೆ ಬಗ್ಗೆ ಪ್ರತಿಭಟನೆ

ಸ್ವಂ.ಸು.] ಅಗರ-ಮಾಂಬಳ್ಳಿ ೨೦

ಇಲ್ಲಿನ ಪೌರಸಭೆಯವರು ಮನೆಗಳ ಕಂದಾಯವನ್ನು ಪುನರ್ವಿಮರ್ಶಿಸಲು ನೇಮಿಸಿದ್ದ ಅಧಿಕಾರಿಗಳು ಹೊಸದಾಗಿ ದಾಖಲು ಮಾಡಿರುವ ಕಂದಾಯದ ಅಂದಾಜುಗಳ ಬಗ್ಗೆ ಜನರಲ್ಲಿ ವಿಶೇಷ ಅಸಮಾಧಾನವುಂಟಾಗಿದೆ. ಹಲವು ಸಂದರ್ಭಗಳಲ್ಲಿ ಶೇಕಡಾ ನೂರು-ಇನ್ನೂರರಷ್ಟು ಹೆಚ್ಚಾಗಿ ಕಂದಾಯಗಳನ್ನು ಹೆಚ್ಚಿಸಲಾಗಿದೆ. ಇದರ ಮೇಲೆ ದಾಮಾಷಾ ಪ್ರಕಾರ ಬೀಳುವ ಇತರ ಸೆಸ್ಸುಗಳು ಶೇಕಡ ೫೦ರಷ್ಟು ಆಗುತ್ತವೆ. ಇಲ್ಲಿ ಯಾವ ಬಗೆಯ ವ್ಯಾಪಾರ, ಕೈಗಾರಿಕೆ ಮುಂತಾದ ಅಭಿವೃದ್ಧಿ ಕಾರ್ಯಗಳೂ ಹೊಸದಾಗಿ ಆಗದೆ ಇರುವುದರಿಂದ ಮನೆಗಳ ಬಾಡಿಗೆ ಅಂದಾಜು ಅಥವ ಬೆಲೆಯು ಹೆಚ್ಚಲು ಕಾರಣವೇ ಇರುವುದಿಲ್ಲ. ಹೀಗಿರುವಲ್ಲಿ ಮೇಲ್ಕಂಡಂತೆ ಕಂದಾಯವನ್ನು ಹೆಚ್ಚಿಸಿರುವುದರಲ್ಲಿ ಅರ್ಥವಿಲ್ಲ ಇದಕ್ಕೆ ಪ್ರತಿಭಟಿಸಿ ಈಗಾಗಲೇ ನೂರಾರು ಜನರು ಪೌರಸಭೆಗೆ ಅರ್ಜಿಗಳನ್ನು ಸಲ್ಲಿಸಿರುವರು. ಜನರ ಪ್ರತಿನಿಧಿಗಳಾದ ಪೌರಸಭಾ ಸದಸ್ಯರುಗಳು ವಿದ್ಯಮಾನಗಳನ್ನು ಸರಿಯಾಗಿ ಪರಿಶೀಲಿಸಿ ಸೂಕ್ತವಾದ ಮಾರ್ಪಾಡುಗಳನ್ನು ಮಾಡಿ ಜನರ ತೊಂದರೆಯನ್ನು ನಿವಾರಿಸುವರೆಂದು ಆಶಿಸಲಾಗಿದೆ

ಸ್ವತಂತ್ರ ಮಲಯದಲ್ಲಿ ಇಸ್ಲಾಂ ರಾಜ್ಯಧರ್ಮ

ಮಲಯವು ಸ್ವತಂತ್ರ ರಾಷ್ಟ್ರವಾದ ಮೇಲೆ ರಾಜ್ಯ ಧರ್ಮವು ಇಸ್ಲಾಂ ಆಗುವುದೆಂದು ಹೇಳಲಾಗಿದೆ ಈ ವಿಚಾರವನ್ನು ಮಲಯಾ ರಾಜ್ಯಾಂಗದಲ್ಲಿ ಲಾರ್ಡ್ ರೀಡ್ ಸಮಿತಿಯವರು ಸೇರಿಸಿರುವುದಾಗಿ ಗೊತ್ತಾಗಿದೆ

ಭಾವಸಾರ ಕ್ಷತ್ರಿಯ ವಿದ್ಯಾರ್ಥಿನಿಲಯ

ಮೇಲ್ಕಂಡ ವಿದ್ಯಾರ್ಥಿನಿಲಯವು ಬರುವ ಜುಲೈ ಮಾಹೆಯಲ್ಲಿ ತೆರೆಯಲ್ಪಡುವುದು ಹೈಸ್ಕೂಲಿನಲ್ಲಿ ಓದುವ ಬಡವರೂ, ಯೋಗ್ಯರೂ ಆದ ಭಾವಸಾರ ಕ್ಷತ್ರಿಯ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವುದು. ವಿದ್ಯಾರ್ಥಿ ನಿಲಯಕ್ಕೆ ಸೇರಲಿಚ್ಛಿಸುವವರು ಬರುವ ತಿಂಗಳು ೫ನೇ ತಾರೀಕಿನೊಳಗೆ ಸದರಿ ವಿದ್ಯಾರ್ಥಿನಿಲಯದ ಅಧ್ಯಕ್ಷರಾದ ಶ್ರೀ ಯು. ಎಲ್. ರಾಮಚಂದ್ರರಾವ್, ಮಾಲೀಕರು, ಶ್ರೀ ರಾಜರಾಜೇಶ್ವರಿ ಹಾಲ್, ಮೈಸೂರು ಇವರಿಗೆ, ವಿಧಾಯಕವಾದ ನಮೂನೆಯಲ್ಲಿ ಅರ್ಜಿ ಹಾಕಿಕೊಳ್ಳಬಹುದು ಅಪೇಕ್ಷೆ ಪಟ್ಟವರಿಗೆ ಅಪ್ಲಿಕೇಷನ್ ಫಾರಂ ಕಳುಹಿಸಲಾಗುವುದು.

ದೇವಸ್ಥಾನದ ವಾರ್ಷಿಕೋತ್ಸವ

ಸುಬ್ಬರಾಯನ ಕೆರೆ ಉತ್ತರ ಪಾರ್ಶ್ವದಲ್ಲಿ ಪುಸ್ತಕಂ ತಿರುಮಲಾಚಾರ್ಯರಿಂದ ಸ್ಥಾಪಿತವಾದ ಶ್ರೀ ಗೋಪಾಲಕೃಷ್ಣಸ್ವಾಮಿಯವರ ದೇವಸ್ಥಾನದ ೬ನೇ ವಾರ್ಷಿಕೋತ್ಸವವು ನಾಳೆ ಜರುಗುತ್ತದೆ. ಭಕ್ತಾದಿಗಳು ಸಾಯಂಕಾಲ ೬ ಗಂಟೆಗೆ ಬಂದು ತೀರ್ಥ ಪ್ರಸಾದಗಳನ್ನು ಸ್ವೀಕರಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಮನೆ ಮಾರಾಟಕ್ಕಿದೆ
ಡೋರ್ ನಂ. 733 ವಿಲ್ಲೆ ಮೊಹಲ್ಲಾ
ಪ್ರಭುದೇವ ಸಿನಿಮಾ ಹತ್ತಿರ
ವಿವರಗಳಿಗೆ:-
ಜಯ ಅಂಡ್ ಕಂಪನಿ,
ಹಳೆ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

ಶ್ರೀ ಜಗದಂಬಾ ಶಿಶು ವಿಹಾರ

ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶುವಿಹಾರದ ತರಗತಿಗಳು ಇದೇ ೧೫ನೇ ತಾರೀಕಿನಿಂದ ಆರಂಭವಾಗಿವೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ

Edited, Printed and Published by
A. R. Nagarajan at Sadhvi Press,
L Subbiah Road, Mysore.

ವಾಯಿದೆ ಕೊಟ್ಟ ಕಂದಾಯಕ್ಕೆ ಬಡ್ಡಿ ವಸೂಲಿಯೇ ?

ಚಾಮರಾಜನಗರ ೨೦

ಕಳೆದ ವರ್ಷ ಅಭಾವದ ಪ್ರಯುಕ್ತ ರೈತರು ಕಂದಾಯವನ್ನು ಕೊಡಲು ಕಷ್ಟವಾಗಿದ್ದುದರಿಂದ ಅವರುಗಳಿಗೆ ವಾಯಿದೆ ಕೊಡಲಾಗಿದ್ದಿತಷ್ಟೆ. ಸದರಿ ಬಾಕಿ ಕಂದಾಯಕ್ಕೆ ಬಡ್ಡಿಯನ್ನು ಕೊಡಬೇಕೆಂದು ಇಲ್ಲಿನ ಅಧಿಕಾರಿಗಳು ಒತ್ತಾಯ ಮಾಡಿ ಅದರಂತೆ ಈ ಸಾರಿ ವಸೂಲುಮಾಡುತ್ತಿರುವುದಾಗಿ ತಿಳಿದುಬಂದಿದೆ. ಹೀಗೆ ಮಾಡುವುದರಿಂದ ವಾಯಿದೆ ಕೊಟ್ಟ ಉದ್ದೇಶವು ಈಡೇರುವುದಿಲ್ಲ ಮತ್ತು ಈ ವರ್ಷವೂ ಪರಿಸ್ಥಿತಿಯು ಬಹಳ ಕಠಿಣವಾಗಿರುವುದರಿಂದ ಪ್ರಜೆಗಳಿಗೆ ಇದರಿಂದ ತುಂಬಾ ತೊಂದರೆಯಾಗುತ್ತದೆ. ಸರ್ಕಾರದವರು ಇದನ್ನು ವಿಚಾರಿಸಿ ಬಡ್ಡಿ ವಸೂಲಿ ಕ್ರಮವನ್ನು ತಪ್ಪಿಸಬೇಕೆಂದು ಇಲ್ಲಿನ ನಿವಾಸಿಗಳು ಕೋರುತ್ತಾರೆ.

ಮದ್ರಾಸಿನಲ್ಲಿ ಗ್ರಾಮದಾನ ಭೂಮಿ ಉಳುಮೆಗೆ ೨೦ ಲಕ್ಷ

ಮದ್ರಾಸಿನಲ್ಲಿ ಗ್ರಾಮದಾನವಾಗಿ ಬಂದಿರುವ ೨೦೦ ಹಳ್ಳಿಗಳ ೪೦,೦೦೦ ಎಕರೆ ಜಮೀನಿನ ಉಳುಮೆಗಾಗಿ ಅಲ್ಲಿನ ಸರ್ಕಾರದವರು ೨೦ ಲಕ್ಷ ರೂ ಸಾಲ ಕೊಡಲಿರುವರೆಂದು ಗೊತ್ತಾಗಿದೆ.

ಎಂ. ಎನ್. ವಿಶ್ವನಾಥಯ್ಯನವರಿಗೆ ಸತ್ಕಾರ

ಉಚ್ಚಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ತೆರಳಲಿರುವ ಮೈಸೂರು ವಿಶ್ವವಿದ್ಯಾಲಯದ ಭೂಗರ್ಭ ಶಾಸ್ತ್ರ ಇಲಾಖೆಯ ಶ್ರೀ ಎಂ ಎನ್ ವಿಶ್ವನಾಥಯ್ಯನವರ ಗೌರವಾರ್ಥವಾಗಿ ಅವರ ಸ್ನೇಹಿತರು ನೆನ್ನೆ ಸಂಜೆ ದಾಸಪ್ರಕಾಶದಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು ಪೌರಸಭಾಧ್ಯಕ್ಷ ಶ್ರೀ ಎಸ್ ನಂಜೀವಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಶಿವಲಿಂಗೇಗೌಡರು ಸ್ವಾಗತ ಭಾಷಣ ಮಾಡಿದರು ಮಾಜಿ ಪ್ರೊಫೆಸರ್ ಶ್ರೀ ಎಲ್ ಶ್ರೀಕಂಠಯ್ಯ, ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಸಿ ಡಿ ನರಸಿಂಹಯ್ಯ, ಶ್ರೀ ಕೆ ಪುಟ್ಟಸ್ವಾಮಿ ಮತ್ತು ಅಧ್ಯಕ್ಷರು ಶ್ರೀ ವಿಶ್ವನಾಥಯ್ಯನವರಿಗೆ ಶುಭಾಶಯವನ್ನು ಕೋರಿದರು. ಮುಖ್ಯ ಅತಿಥಿಗಳು ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ, ತಮ್ಮ ವ್ಯಾಸಂಗದನಂತರ ತಮ್ಮ ಸೇವೆಯು ನಾಡಿಗೆ ಮುಡುಪಾಗುವುದೆಂದು ತಿಳಿಸಿದರು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ತಗಡೂರಿನಲ್ಲಿ ಕಿಸಾನ್ ಪಂಚಾಯಿತಿಯ ಆರಂಭ

ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದಲ್ಲಿ ಕಳೆದ ಶುಕ್ರವಾರ ಶ್ರೀ ಟಿ ಎ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ರೈತರ ಸಭೆ ನಡೆದು, ಕಿಸಾನ್ ಪಂಚಾಯಿತಿಯನ್ನು ಆರಂಭಿಸಲಾಯಿತು. ಶ್ರೀ ಶ್ರೀನಿವಾಸರಾಯರನ್ನು ಅಧ್ಯಕ್ಷರನ್ನಾಗಿ ಒಳಗೊಂಡ ೯ ಜನರ ಸಮಿತಿಯನ್ನು ರಚಿಸಲಾಯಿತು ಅಖಿಲ ಭಾರತ ಹಿಂದ್ ಕಿಸಾನ್ ಪಂಚಾಯಿತಿಗೆ ಈ ಸಂಸ್ಥೆಯನ್ನು ಸೇರಿಸಬೇಕೆಂದು ನಿರ್ಧರಿಸಲಾಯಿತು. ಈ ಸಂದರ್ಭದಲ್ಲಿ ಬರುವ ಶನಿವಾರ ಸಂಜೆ ತಗಡೂರಿನಲ್ಲಿ ಬಹಿರಂಗ ಸಭೆಯನ್ನೇರ್ಪಡಿಸಲಾಗಿದೆ.

NATIONAL LEAGUE
Anathalaya Buildings
MYSORE
Offers excellent coaching for
S. S. L. C. students
Timings: 8 to 10 A.M; 5 to 8 P.M.

ಮದ್ರಾಸಿನಲ್ಲಿ ಡ್ರೈವರ್ ಇಲ್ಲದ ಇಂಜನ್ನಿನ ಓಟ

ಮದ್ರಾಸಿನಲ್ಲಿ ಮೊನ್ನೆ ರಾತ್ರಿ ಬೇಸಿನ್ ಸೇತುವೆ ಬಳಿ ನೀರು ತೆಗೆದುಕೊಳ್ಳಲಿಕ್ಕಾಗಿ ನಿಲ್ಲಿಸಿದ್ದ ರೈಲು ಇಂಜನ್ನು ಇದ್ದಕ್ಕಿದ್ದಂತೆಯೇ ಡ್ರೈವರ್ ಇಲ್ಲದೆ ೧ ಮೈಲಿ ಪ್ರಯಾಣ ಮಾಡಿ ಒಂದು ಬಫ್ಫರಿಗೆ ಹೊಡೆದು ನಿಂತಿತೆಂದು ಹೇಳಲಾಗಿದೆ. ಯಾರಿಗೂ ಅಪಾಯವಾಗಲಿಲ್ಲ. ಏಕಾಏಕಿ ಅದು ಹೊರಟು ಮಾರ್ಗದಲ್ಲಿ ವೇಗದಿಂದ ಓಡಿತೆಂದೂ, ದೂರದಲ್ಲಿದ್ದ ರೈಲ್ವೆ ನೌಕರನೊಬ್ಬನು ಅದನ್ನು ನೋಡಿ ಬೇರೆ ಪಾಯಿಂಟ್ ಹಾಕಲು ಇಂಜನ್ನು ಸ್ಟೇಷನ್ ಪ್ಲಾಟ್‌ಫಾರಂ ಕಡೆ ಹೋಗದೆ ಬಫ್ಫರ್ ಬಳಿ ಹೋಯಿತೆಂದೂ, ಬಫ್ಫರು ಚೂರುಚೂರಾಯಿತೆಂದೂ ಹೇಳಲಾಗಿದೆ. ರೈಲಿನ ಓಟವನ್ನು ನೋಡಿದ ಚಾಲಕನು ಅದನ್ನು ಹತ್ತಿ ತಡೆಯಲು ಸಾಧ್ಯವಾಗದೆ ಕೆಳಗೆ ಬಿದ್ದು ಆಸ್ಪತ್ರೆಗೆ ಸೇರಿಸಲ್ಪಟ್ಟಿರುವನು

ಹನುಮಂತೋತ್ಸವ

ಶ್ರೀ ಹನುಮಾನ್ ಸಂಘದ ಆಶ್ರಯದಲ್ಲಿ ನಿನ್ನೆ ಹನುಮಂತೋತ್ಸವವು ಬಹು ವಿಜೃಂಭಣೆಯಿಂದ ಪೌರಸಭಾಧ್ಯಕ್ಷ ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕುಮಾರಿ ಪದ್ಮರವರಿಂದ ಪ್ರಾರ್ಥನೆಯಾದನಂತರ, ಸಂಘದ ಅಧ್ಯಕ್ಷರಾದ ಶ್ರೀ ಪಿ ವಿ ಗೋಪಾಲರಾಯರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ರಾಮಸ್ವಾಮಿ ಅಯ್ಯಂಗಾರ್ಯರಿಂದ ಭರತ ಭಕ್ತಿ ಕಾವ್ಯ ವಾಚನವಾದ ಮೇಲೆ ಮಿ॥ ರಾಮರತ್ನಂರವರಿಂದ ಸುಶ್ರಾವ್ಯವಾದ ಸಂಗೀತವಾಯಿತು ಸಂಘದ ಉಪಾಧ್ಯಕ್ಷರಾದ ಡಾ॥ ಬಿ.ಜಿ.ದಾಸ್‌ರವರು "ಭಕ್ತ ಹನುಮಾನ್" ಎಂಬ ವಿಷಯವಾಗಿ ಭಾಷಣ ಮಾಡಿ ಮಾರುತಿಯ ಮಹಿಮೆಯನ್ನು ಕೊಂಡಾಡಿದರು ಶ್ರೀ ಟಿ. ಎಸ್. ನಾಗರಾಜರಾಯರು ಸಂಘದ ಪರಿಚಯ ಮಾಡಿಕೊಟ್ಟರು ಅಧ್ಯಕ್ಷರು ಸಂಘದ ನಿಷ್ಕಾಮಂತ ಸೇವೆಯನ್ನು ಪ್ರಶಂಸಿಸಿ ಯಶಸ್ಸನ್ನು ಕೋರಿದರು ಶ್ರೀ ಎನ್. ನಾಗರಾಜರಾಯರು ವಂದನಾರ್ಪಣೆ ಮಾಡಿದ ಮೇಲೆ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಸಮಾರಂಭ ಮುಕ್ತಾಯವಾಯಿತು

ಚಾಮುಂಡಿಪುರಕ್ಕೆ ಪ್ರತ್ಯೇಕ ಅಂಚೆ ಬಟವಾಡೆ ಕಛೇರಿಗಾಗಿ ಒತ್ತಾಯ

ಅಂಚೆ ಬಟವಾಡೆಯು ಬೇಗನೆ ಆಗುವಂತೆ ಮಾಡುವುದಕ್ಕಾಗಿ ಚಾಮುಂಡಿಪುರದಲ್ಲಿರುವ ಕಛೇರಿಯಲ್ಲಿ ಅಂಚೆ ಬಟವಾಡೆ ಕೇಂದ್ರವನ್ನು ಏರ್ಪಡಿಸುವಂತೆ ಶ್ರೀ ಬಿ. ಎಸ್. ಸುಬ್ಬರಾಯರು ಇಲಾಖೆಯವರಲ್ಲಿ ಒತ್ತಾಯ ಮಾಡಿರುತ್ತಾರೆ ಈ ವಿಚಾರವು ಪರಿಶೀಲನೆಯಲ್ಲಿದೆ. ಸಧ್ಯದಲ್ಲೇ ಈ ಬಗ್ಗೆ ನಿರ್ಧರಿಸಲಾಗುವುದು.

COACHING SECTION,
DALVOY HIGH SCHOOL,
MYSORE

Excellent coaching for S. S. L. C. students taking Supplementary Examination 1957, by Experienced Experts. Charges very moderate Join Immediately.

Enquiries between 9 and 11 30 A.M. and 4 and 5 P.M.

Secretary.

ಅಯ್ಯನಾರ್ ಸಂಗೀತ ಕಲಾ ಶಾಲಾ,
ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರ, ಮೈಸೂರು.
(ಮೈಸೂರು ಸರ್ಕಾರ ಮತ್ತು ದೆಹಲಿ ಮತ್ತು ಮೈಸೂರು ನಾಟಕ ಅಕಾಡೆಮಿಗಳ ಮನ್ನಣೆ ಪಡೆದಿರುತ್ತೆ)

ಮೇಲ್ಕಂಡ ಕಲಾ ಶಾಲೆಯಲ್ಲಿ, ಪ್ರಿನ್ಸಿಪಾಲರಾದ ಸಂಗೀತರತ್ನ ಟಿ ಚೌಡಯ್ಯನವರು ಪಲ್ಲವಿ ಮತ್ತು ಸ್ವರ ಕಲ್ಪನೆ ವಿಚಾರಗಳಲ್ಲಿ ಪ್ರೌಢ ರೀತಿಯಲ್ಲಿ ಹಾಡುವ ಪದ್ಧತಿ ಮತ್ತು ಅದಕ್ಕೆ ಸಂಬಂಧಪಟ್ಟ ಶಾಸ್ತ್ರ ವಿಚಾರಗಳಲ್ಲಿ ಶಿಕ್ಷಣ ಕೊಡಲು ತಿಂಗಳಲ್ಲಿ 12 ದಿವಸ ತರಗತಿಗಳನ್ನು ತೆಗೆದುಕೊಳ್ಳುವರು. ಮಾಹೆಯಾನಾ ಶುಲ್ಕ ರೂ. 25. ಅಪೇಕ್ಷಿಸುವವರು ಕಲಾ ಶಾಲೆಯಲ್ಲಿ ವಿವರಗಳನ್ನು ತಿಳಿಯಬಹುದು.

ವಿವಾಹ ಮಹೋತ್ಸವಗಳು

ಲಕ್ಷ್ಮೀನರಸಿಂಹ ಪ್ರೆಸ್ ಮಾಲೀಕರಾದ ಶ್ರೀ ಡಿ. ಅಣ್ಣಾಜಿರಾಯರ ಸಹೋದರರಾದ ಶ್ರೀ ಡಿ. ಆನಂದರಾಯರು ತಮ್ಮ ಕುಮಾರಿ ಸೌ॥ ರೋಹಿಣಿಯನ್ನು ಬೆಂಗಳೂರಿನ ಶ್ರೀ ಆರ್. ಎಸ್. ರಾಯರ ಕುಮಾರ ಶ್ರೀ ಅರವಿಂದರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಶ್ರೀ ನೆಲಮಂಗಲಂ ನಾಗರಾಜಶೆಟ್ಟರು ತಮ್ಮ ಕುಮಾರಿ ಸೌ॥ ಪದ್ಮದೇವಿಯನ್ನು ಬೆಂಗಳೂರಿನ ಶ್ರೀ ಡಿ. ಅಡಪ್ಪಶೆಟ್ಟರ ಮಕ್ಕಳು ಶ್ರೀ ಪಾಂಡುರಂಗಶೆಟ್ಟಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ಜರುಗಿಸಿದರು

ಉಪನಯನ

ಲಕ್ಷ್ಮೀನರಸಿಂಹ ಪ್ರೆಸ್ಸಿನ ಮಾಲೀಕರಾದ ಶ್ರೀ ಡಿ. ಅಣ್ಣಾಜಿರಾಯರ ಪುತ್ರ ಶ್ರೀ ಡಿ. ಎ. ಗೋವಿಂದರಾಯರು ನೆನ್ನೆ ತಮ್ಮ ಕುಮಾರ ಚಿ॥ ಪ್ರಹ್ಲಾದನಿಗೆ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ತೆರಿಗೆ ವಿರುದ್ಧ ಪ್ರತಿಭಟನಾ ಸಭೆ

ಜನ ಸಾಮಾನ್ಯರು ಉಪಯೋಗಿಸುವ ಅನೇಕ ಪದಾರ್ಥಗಳಮೇಲೆ ಕೇಂದ್ರ ಸರ್ಕಾರದವರು ವಿಧಿಸಿರುವ ಹೊಸ ತೆರಿಗೆಗಳಿಂದ ಆಗಿರುವ ಕಷ್ಟ, ಅನ್ಯಾಯ, ಮುಂತಾದವುಗಳ ಕಾರಣವನ್ನು ವಿಮರ್ಶಿಸಿ ಹೊಸ ತೆರಿಗೆ ಬಗ್ಗೆ ಪ್ರತಿಭಟನೆ ಸೂಚಿಸಲು ನಾಳಿದ್ದು ಸಂಜೆ ೬॥ ಗಂಟೆಗೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆಯೊಂದನ್ನು ನಗರದ ಜನತಾ ರಂಗದವರು ಏರ್ಪಡಿಸುತ್ತಾರೆ ಪೌರಸಭಾ ಸದಸ್ಯ ಶ್ರೀ ಬಿ. ಜಿ. ದಾಸ್‌ರವರು ಅಧ್ಯಕ್ಷತೆ ವಹಿಸುವರು ವಿಧಾನ ಸಭಾ ಸದಸ್ಯ ಶ್ರೀ ಎ. ಮಹಮುದ್ ಸೇಟ್, ಪೌರಸಭಾ ಸದಸ್ಯರಾದ ಶ್ರೀ ಹೆಚ್. ಎನ್ ಮುದ್ದಯ್ಯ ಮತ್ತು ಶ್ರೀಗಳಾದ ಕೆ ಶೇಷಾದ್ರಿ, ಎಂ. ಎಸ್ ಚಂದ್ರಶೇಖರ ಜೋಯಿಸ್, ಟಿ ಸಿ ಹೊನ್ನಪ್ಪ ಮತ್ತು ಎಸ್. ಕೆ. ಅನಂತಶೆಟ್ಟರು ಮುಂತಾದವರು ಭಾಷಣ ಮಾಡುವರು.

ಮಾಧ್ಯಮಿಕ ವಿದ್ಯಾಭ್ಯಾಸ ಕಾರ್ಯಾಲಯದ ಮುಕ್ತಾಯ ಸಮಾರಂಭ

ಅಮೆರಿಕದ ವಿದ್ಯಾ ಸಂಸ್ಥೆ, ಅಖಿಲ ಭಾರತ ಮಾಧ್ಯಮಿಕ ವಿದ್ಯಾಭ್ಯಾಸ ಸಮಿತಿ ಮತ್ತು ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಜಂಟಿಯಾಗಿ ನಗರದಲ್ಲಿ ನಡೆಸುತ್ತಿರುವ ವಿದ್ಯಾಭ್ಯಾಸ ಕಾರ್ಯಾಲಯದ ಮುಕ್ತಾಯ ಸಮಾರಂಭವು ನಾಳೆ ಬೆಳಿಗ್ಗೆ ೧೦ ಗಂಟೆಗೆ ಹಾರ್ಡ್ವಿಕ್ ಪ್ರೌಢಶಾಲೆಯಲ್ಲಿ ನೆರವೇರುವುದು ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಬಿ ಎಂ ಕೃಷ್ಣರವರು ಭಾಷಣ ಮಾಡುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೊನೆಟ್ ೭-೧೫ ಹೆಚ್. ಕೆ. ವೆಂಕಟರಮಣ-ದೇವರ ನಾಮ. ೮-೧೫ ಗಾನ ವಿಹಾರ. ಮಧ್ಯಾಹ್ನ ೧೨ ಹೆಚ್. ಕೆ. ವೆಂಕಟರಮಣ-ಸಂಗೀತ. ೧೨-೩೦ ವನಿತಾ ವಿಹಾರ ೧-೨೦ ರಿಕಾರ್ಡು. ೧-೫೦ ಕ್ಲಾರಿಯೊನೆಟ್. ಸಂಜೆ ೬ ೧೦ ಎಂ. ಆರ್. ರಾಮಕೃಷ್ಣ-ಕಾವ್ಯ ವಾಚನ ೭-೩೦ [illegible] ವ್ಯವಹಾರ ಕಾಯಿದೆ [illegible]. ೮ ಸಂಗೀತ ಸಾಮ್ರಾಜ್ಯ-ಸಂಗೀತ [illegible] ೯-೧೫ ಧಾರಾವಾಹಿದಂತೆ: [illegible] ರಾಮಕೃಷ್ಣ ಪಾಠ-ಸಂಗೀತ ೧೦-೩೦ ಪಾಶ್ಚಾತ್ಯ ಸಂಗೀತ

ಮಹಿಳಾ ಸಮಾಜದ ಶಿಶುವಿಹಾರ

ಮಹಿಳಾ ಸಮಾಜದಲ್ಲಿ ಶಿಶುವಿಹಾರವು ಬೇಸಿಗೆ ರಜಾ ಮುಗಿದು ೨೨-೫-೫೭ ನೇ ಬುಧವಾರ ಪುನಃ ತೆರೆಯಲ್ಪಡುತ್ತದೆ. ಮಕ್ಕಳ ತಾಯಿತಂದೆಗಳು ತಮ್ಮ ಮಕ್ಕಳುಗಳನ್ನು ಶಿಶುವಿಹಾರಕ್ಕೆ ಸೇರಿಸಲು ಅವಕಾಶವಿದೆ. ಒಂದು ಮಗುವಿಗೆ ಮಾಹೆಯಾನ ಫೀ ಒಂದು ರೂಪಾಯಿ ಮಾತ್ರ. ವಿವರವನ್ನು ಕಾರ್ಯದರ್ಶಿಯವರಲ್ಲಿ ವಿಚಾರಿಸಬಹುದು.

ವಿಶಾಲಾಕ್ಷಮ್ಮ,
ಗೌ॥ ಕಾರ್ಯದರ್ಶಿ

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ



ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI : TUESDAY 21—5—1957 ಮೈಸೂರು : ಮಂಗಳವಾರ ೨೧—೫—೧೯೫೭ : [ಸಂಚಿಕೆ : ೨೮೮

೧೧,೬೦೦ ರೂ. ನೊಡನೆ ಪರಾರಿಯಾಗಿದ್ದವನ ಬಂಧನ

ಆಂಧ್ರ ಕೇಸರಿ ಟಿ. ಪ್ರಕಾಶಂರವರ ನಿಧನ

ಅತ್ಯಂತ ಹಿರಿಯ ದೇಶಸೇವಕರು

ಆಂಧ್ರದ ಪ್ರಮುಖ ನಾಯಕರೂ, ದೇಶದ ಹಿರಿಯ ರಾಜಕಾರಣಿಯೂ ಆದ ಆಂಧ್ರ ಕೇಸರಿ ಟಿ ಪ್ರಕಾಶಂರವರು ನೆನ್ನೆ ರಾತ್ರಿ ಹೈದರಾಬಾದಿನ ಉಸ್ಮಾನಿಯಾ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೮೫ ವರ್ಷ ವಯಸ್ಸಾಗಿತ್ತು. ಇಂದು ಸರ್ಕಾರದ ಮರ್ಯಾದೆಯೊಡನೆ ಅಂತ್ಯ ಸಂಸ್ಕಾರವು ಜರುಗುವುದು.

ಅವರು ಕಳೆದ ೨ನೇ ತಾರೀಕು ವಿಜಯವಾಡದಿಂದ ಬರುತ್ತಿದ್ದಾಗ ಮಾರ್ಗದಲ್ಲಿ ಬಿಸಿಲಿನ ತಾಪದಿಂದ ಬಳಲಿ ವಿಪರೀತ ಆಯಾಸದಿಂದ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದರು. ಮೊನ್ನೆ ಅವರ ಶ್ವಾಸಕೋಶದಲ್ಲಿ ದೋಷವುಂಟಾಗಿ ಅವರ ಸ್ಥಿತಿ ಕೆಟ್ಟಿತು.

ಅವರು ೧೮೭೨ರಲ್ಲಿ ಗುಂಟೂರು ಜಿಲ್ಲೆಯ [illegible]ಯಲ್ಲಿ ಹುಟ್ಟಿದರು. ೧೧ನೇ ವಯಸ್ಸಿನಲ್ಲಿಯೇ ಅವರ ತಂದೆಯು ಕಾಲವಾಗಿ ಅವರ ತಾಯಿಯವರೇ ಅವರ ಪುರೋಭಿವೃದ್ಧಿಗೆ ಕಾರಣರಾದರು. ಅವರು ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆ ಪಾಸು ಮಾಡಿ ಮದ್ರಾಸಿನಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು.

೧೯೨೧ರಲ್ಲಿ ಅವರು ಕಾಂಗ್ರೆಸ್ಸಿಗೆ ಸೇರಿ ವಕೀಲಿ ವೃತ್ತಿಗೆ ತಿಲಾಂಜಲಿಯಿತ್ತು, ಸತ್ಯಾಗ್ರಹಕ್ಕೆ ಸೇರಿದರು. ೧೯೨೮ರಲ್ಲಿ ಮದ್ರಾಸಿಗೆ ಸೈಮನ್ ಸಮಿತಿ ಬಂದಿದ್ದಾಗ ಅವರು ಕಪ್ಪು ಬಾವುಟ ಪ್ರದರ್ಶನದ ಮುಖ್ಯಸ್ಥರಾಗಿದ್ದರು. ಸ್ವರಾಜ್ಯ ಪತ್ರಿಕೆಯನ್ನು ಸ್ಥಾಪಿಸಿ ೧೪ ವರ್ಷಕಾಲ ನಡೆಸಿದರು.

೧೯೩೭ರಲ್ಲಿ ಪ್ರಾಂತ ಸ್ವಾತಂತ್ರ್ಯ ಬಂದಾಗ ಅವರು ರಾಜಾಜಿ ಮಂತ್ರಿಮಂಡಲಕ್ಕೆ ಸೇರಿದ್ದರು. ನಂತರ ೧೯೪೬ರಲ್ಲಿ ತಾವೇ ಮುಖ್ಯ ಮಂತ್ರಿಗಳಾದ[illegible] ೫೧ರಲ್ಲಿ ಕಾಂಗ್ರೆಸ್ಸನ್ನು ತ್ಯಜಿಸಿ ನಂತರ ಕೆ. ಎಂ. ಪಿ., ಪಿ. ಎಸ್. ಪಿ. ಪಕ್ಷಗಳನ್ನು ಸೇರಿದರು. ಆಂಧ್ರ ಪ್ರಾಂತ ರಚನೆಯಾದಾಗ ಅವರು ಪ್ರಥಮ ಮುಖ್ಯ ಮಂತ್ರಿಗಳಾಗಿ ೧೩ ತಿಂಗಳವರೆಗೆ ಅಧಿಕಾರ ನಡೆಸಿದರು.

ಉತ್ತರ ಪ್ರದೇಶದಲ್ಲಿ ತೆರಿಗೆ ವಿರೋಧದ ದಿನಾಚರಣೆ

ಈ ತಿಂಗಳು ೨೬ನೇ ತಾರೀಕು ಉತ್ತರ ಪ್ರದೇಶದಲ್ಲಿ ತೆರಿಗೆಗಳ ವಿರೋಧದ ದಿನಾಚರಣೆ ನಡೆಸುವಂತೆ ಅಲ್ಲಿನ ಭಾರತೀಯ ಜನಸಂಘ ಶಾಖೆಯು ಸೂಚನೆಯಿತ್ತಿರುತ್ತದೆ.

ಅಣ್ಣನ ಕೊಲೆಗಾಗಿ ಸಿರಾಜನ ಮೇಲೆ ಮೊಕದ್ದಮೆ

ಕಳೆದ ೬ನೇ ತಾರೀಕು ತನ್ನ ಅಣ್ಣ ರಫೀಕ್ ಅಹಮದನನ್ನು ಗುಂಡಿನಿಂದ ಹೊಡೆದು ಕೊಂದ ಸಿರಾಜ್ ಅಹಮದ್ದನ ಮೇಲೆ ಬೆಂಗಳೂರಿನ ಪೊಲೀಸರು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಇದೇ ೨೯ನೇ ತಾರೀಕು ವಿಚಾರಣೆ ನಡೆಯುವುದು. ಇವರಿಬ್ಬರೂ ಬಳ್ಳಾರಿ ಅರಣ್ಯಾಧಿಕಾರಿಗಳಾಗಿದ್ದ ಶ್ರೀ ಮಹಮದ್ ಅಹಮದ್‌ರವರ ಮಕ್ಕಳು.

೧೧,೬೫೦ ರೂ. ನೊಡನೆ ಪರಾರಿಯಾದ ಹುಬ್ಬಳ್ಳಿಯವನ ಬಂಧನ

ನಗರದ ಟ್ರಾಫಿಕ್ ಪೊಲೀಸರಿಂದ ಪತ್ತೆ

ಮೈಸೂರು ೨೧

೧೧,೬೫೦ ರೂ ಗಳನ್ನು ಅಕ್ರಮವಾಗಿ ತೆಗೆದುಕೊಂಡು ಪರಾರಿಯಾಗಿ ಬಂದಿದ್ದನೆಂದು ಹೇಳಲಾದ ಹುಬ್ಬಳ್ಳಿಯ ಪ್ರಮುಖ ವರ್ತಕರೊಬ್ಬರ ಗುಮಾಸ್ತನನ್ನು [illegible] ಠಾಣೆ ಪೊಲೀಸರು ನೆನ್ನೆ ಪತ್ತೆ ಮಾಡಿ ದೇವರಾಜ ಪೊಲೀಸರ ವಶಪಡಿಸಿದರೆಂದೂ, ಅವನನ್ನು ಬಂಧಿಸಲಾಯಿತೆಂದೂ ವರದಿಯಾಗಿದೆ. ಹುಬ್ಬಳ್ಳಿಯ ವ್ಯಾಪಾರಿಗಳಾದ ಮೆಸರ್ಸ್ ವೀರಭದ್ರಪ್ಪ ಅಂದಾನಪ್ಪ ಬೆಳ್ಳಿಯವರ ಬಳಿ ಕೆಲಸಕ್ಕಿದ್ದ ಆತನ ಹೆಸರು ಕನಕನಗೌಡ ಉರುಫ್ ಮಲ್ಲನಗೌಡ. ಆತನು ತನ್ನ ಮಾಲೀಕರಿಗೆ ಬರಬೇಕಾದ ಹಣವನ್ನು ವಸೂಲು ಮಾಡಿಕೊಂಡು ಕಳೆದ ೨ನೇ ತಾರೀಕು ಪರಾರಿಯಾದನೆಂದು ಹೇಳಲಾಗಿದೆ. ವ್ಯಾಪಾರಿಗಳು ಅವನ ಪತ್ತೆ ತರುವುದಿಗಾಗಿ ಮತ್ತೊಬ್ಬ ಗುಮಾಸ್ತನನ್ನು ಕಳುಹಿಸಿದ್ದರೆಂದೂ, ಆತನು ಬೆಂಗಳೂರಿಗೂ ಮತ್ತು ಇಲ್ಲಿಗೂ ಬಂದು ಪೊಲೀಸರಿಗೆ ಇತ್ತ ವರ್ತಮಾನದ ಮೇಲೆ ಅವನನ್ನು ಶಿವರಾಂಪೇಟೆಯ ಐದನೇ ಕ್ರಾಸಿನ ಅವರ ಬಂಧುಗಳೊಬ್ಬರ ಮನೆಯಲ್ಲಿ ಪತ್ತೆ ಮಾಡಿ ಅವನಿಂದ ೯,೫೧೦ ರೂ. ೬ ಆಣೆ ಮತ್ತು ೪ ನಯೆಪೈಸೆಗಳನ್ನು ವಶಪಡಿಸಿಕೊಳ್ಳಲಾಯಿತೆಂದೂ ಹೇಳಲಾಗಿದೆ. ದೇವರಾಜ ಪೊಲೀಸರು ಹುಬ್ಬಳ್ಳಿ ಪೊಲೀಸರಿಗೆ ವರ್ತಮಾನ ಕಳುಹಿಸಿರುತ್ತಾರೆ. ಅಲ್ಲಿಂದ ಸೂಚನೆ ಬಂದಮೇಲೆ ಮುಂದಿನ ಕ್ರಮ ಜರುಗಿಸಲಾಗುವುದು.

ಟಿ. ಟಿ. ಕೃಷ್ಣಮಾಚಾರಿಯವರಿಗೆ ಬೆದರಿಕೆ ಪತ್ರ

ಹೊಸ ತೆರಿಗೆಗಳ ವಿಧಾಯಕದ ಬಗ್ಗೆ ಲೋಕ ಸಭೆಯಲ್ಲಿ ಕೇಂದ್ರ ಮಂತ್ರಿ ಟಿ. ಟಿ ಕೃಷ್ಣಮಾಚಾರಿಯವರು ಮಂಡಿಸಿದ ಸಲಹೆಗಳಿಗಾಗಿ ಅವರಿಗೆ ಅನೇಕ ಪತ್ರಗಳು ಬಂದಿವೆಯೆಂದೂ, ಆ ಪೈಕಿ ಒಂದು ಪತ್ರದಲ್ಲಿ ಅವರನ್ನು ಗುಂಡಿನಿಂದ ಹೊಡೆಯುವುದಾಗಿ ತಿಳಿಸಲಾಗಿತ್ತೆಂದೂ ಗೊತ್ತಾಗಿದೆ. ಈ ವಿಚಾರವನ್ನು ಅವರು ತಿಳಿಸಿ, ಒಬ್ಬ 'ಸಾಮಾನ್ಯ ಮನುಷ್ಯನು' ತೆರಿಗೆಗಳನ್ನು ಸ್ವಾಗತಿಸಿರುವುದಾಗಿ ಬರೆದಿರುವನೆಂದೂ ಹೇಳಿರುತ್ತಾರೆ.

ತಂತಿ ನೌಕರರಿಂದ "ಸಾವಕಾಶ" ಕೆಲಸದ ನೀತಿಯ ತ್ಯಾಗ

ಅಖಿಲ ಭಾರತ ೩ನೇ ವರ್ಗದ ತಂತಿ ನೌಕರರ ಸಂಘದ ಪ್ರತಿನಿಧಿಗಳಿಗೂ, ಕೇಂದ್ರ ಮಾರ್ಗಾನುಕೂಲ ಇಲಾಖಾ ಮಂತ್ರಿ ರಾಜಬಹದ್ದೂರರಿಗೂ ನಡೆದ ಸಂಧಾನವು ಫಲಪ್ರದವಾಗಿ ಸಾವಕಾಶದಿಂದ ಕೆಲಸ ನಡೆಸಬೇಕೆಂಬ ನೀತಿಯನ್ನು ನೌಕರರು ಬಿಡಲು ನಿರ್ಧರಿಸಿರುತ್ತಾರೆ. ಎಲ್ಲ ನೌಕರರೂ ಕೂಡಲೇ ಮೊದಲಿನಂತೆ ಕೆಲಸ ನಡೆಸಬೇಕೆಂದು ಸೂಚಿಸಲ್ಪಟ್ಟಿರುತ್ತಾರೆ. ಅವರುಗಳ ಹೆಚ್ಚಿನ ಸಂಬಳವೊಂದನ್ನು ಬಿಟ್ಟು ಮಿಕ್ಕೆಲ್ಲ ಬೇಡಿಕೆಗಳನ್ನೂ ಒಪ್ಪಲಾಗಿದೆ.

ಹಿರಾಕುಡ್ ಜೀಪು ಅಪಘಾತದಲ್ಲಿ ಮೈಸೂರಿನವರ ಮರಣ

ಹಿರಾಕುಡದಲ್ಲಿ ಕಳೆದ ೫ನೇ ತಾರೀಕು ಜೀಪು ಕಾರು ಅಪಘಾತ ಸಂಭವಿಸಿ ಅಲ್ಲಿದ್ದ ಮೈಸೂರಿನ ಇಂಜನಿಯರ್ ಶ್ರೀ ಕೆ ರಾಜಗೋಪಾಲ್‌ರವರು ಮೃತಪಟ್ಟಿರುತ್ತಾರೆ. ಅವರು ಮೈಸೂರು ಬ್ಯಾಂಕಿನ ಚೀಫ್ ಅಕೌಂಟೆಂಟರಾದ ಶ್ರೀ ಕೆ. ವಿ ಕೃಷ್ಣಯ್ಯನವರ ಮಕ್ಕಳು.

ಬಾಗ್ದಾದ್ ಒಪ್ಪಂದ ರಾಷ್ಟ್ರಗಳಲ್ಲಿ ಅಣು ಶಕ್ತಿ ಉತ್ಪಾದನೆ ಶಿಕ್ಷಣ

ಬಾಗ್ದಾದ್ ಒಪ್ಪಂದ ರಾಷ್ಟ್ರಗಳವರಿಗೆ ಅಣುಶಕ್ತಿ ತಯಾರಿಕೆ ಶಿಕ್ಷಣ, ಮಾರ್ಗಾನುಕೂಲದ ಅಭಿವೃದ್ಧಿ ಮತ್ತು ವ್ಯವಸಾಯ ಸಹಕಾರದ ವಿಸ್ತರಣೆಗಳ ಬಗ್ಗೆ ಕರಾಚಿಯಲ್ಲಿ ಸೇರಿರುವ ಬಾಗ್ದಾದ್ ಒಪ್ಪಂದ ರಾಷ್ಟ್ರ ಕೂಟದ ಆರ್ಥಿಕ ಸಮಿತಿಯು ನಿರ್ಣಯವನ್ನು ಮಾಡಿದೆ. ಅದರ ಪ್ರಕಾರ ಬಾಗ್ದಾದಿನಲ್ಲಿ ಅಣುಶಕ್ತಿ ಕೇಂದ್ರವನ್ನು ಸ್ಥಾಪಿಸಲಾಗುವುದು. ಅದಕ್ಕೆ ತಗಲುವ ಹಣವನ್ನು ಬ್ರಿಟನ್ನು ಒದಗಿಸುವುದು ಮತ್ತು ಮುಂದಿನ ವೆಚ್ಚವನ್ನು ಮಧ್ಯ ಪೂರ್ವದೇಶ ಸದಸ್ಯ ರಾಷ್ಟ್ರಗಳು ವಹಿಸಿಕೊಳ್ಳಬೇಕಾಗುವುದು.

ಪಾನ ನಿರೋಧದ ರದ್ದಿಗಾಗಿ ಅಮೃತ ಕೌರರ ಕರೆ

ರಾಜಕುಮಾರಿ ಅಮೃತ ಕೌರ್‌ರವರು ನೆನ್ನೆ ರಾಜ್ಯ ಸಭೆಯಲ್ಲಿ ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ. ಕೃಷ್ಣಮಾಚಾರಿಯವರ ಆಯವ್ಯಯ ಅಂದಾಜನ್ನು ಟೀಕಿಸಿ, ಸರ್ಕಾರವು ಪಾನ ನಿರೋಧವನ್ನು ರದ್ದು ಮಾಡಬೇಕೆಂದೂ, ಶಾಸನದ ಮೂಲಕ ಕುಡಿಯುವುದನ್ನು ತಪ್ಪಿಸುವುದರ ಬದಲು ಜನರು ಆ ಮಾರ್ಗವನ್ನು ತ್ಯಜಿಸುವಂತೆ ಮಾಡಲು ಬೇರೆ ವಿಧಾನಗಳನ್ನು ಅನುಸರಿಸಬೇಕೆಂದೂ ತಿಳಿಸಿದರು. ಸರ್ಕಾರಕ್ಕೆ ಬರಬೇಕಾದ ಹಣವು ಕಳ್ಳ ವ್ಯಾಪಾರಿಗಳಿಗೆ ಹೋಗುತ್ತಿರುವುದಾಗಿ ಅವರು ಹೇಳಿ, ಅಮೆರಿಕಾ, ರಷ್ಯಾ ಮತ್ತು ತುರ್ಕಿಗಳಲ್ಲಿ ಪಾನ ನಿರೋಧವು ವಿಫಲವಾಗಿರುವುದನ್ನು ಉದಹರಿಸಿದರು. ಗಾಂಧೀಜಿಯವರು ಬದುಕಿದ್ದರೆ ಪಾನ ನಿರೋಧದ ರದ್ದಿಗೆ ಬೆಂಬಲ ನೀಡುತ್ತಿದ್ದರಲ್ಲದೆ, ಉಪ್ಪಿನ ಮೇಲೆ ತೆರಿಗೆಯನ್ನು ವಿಧಿಸಲೂ ಒಪ್ಪುತ್ತಿದ್ದರೆಂದು ಅವರು ಹೇಳಿದರು. ಆಯವ್ಯಯ ಅಂದಾಜು ಪಟ್ಟಿಯಿಂದ ಜನಜೀವನವು ಇನ್ನೂ ಕಷ್ಟತಮವಾಗುವುದಲ್ಲದೆ, ಬಡವರು ಬದುಕುವುದಕ್ಕೂ ಆಗುವುದಿಲ್ಲವೆಂದು ಅವರು ಟೀಕಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೇದ ಪಾಠ. ೭.೧೫ ಎಂ ಪುಟ್ಟರಾಜು-ನಾದಸ್ವರ. ೮-೧೫ ಹಿಂದಿ ಪಾಠ. ಮಧ್ಯಾಹ್ನ ೧೨ ಬಿ. ಪರಶುರಾಂ-ಸಂಗೀತ, ೧೨-೩೦ ಮತ್ತು ೧-೫೦ ಸಿ. ಕೃಷ್ಣಮೂರ್ತಿ-ವೀಣೆ. ೧ ರೆಕಾರ್ಡು. ೧-೩೦ ಗಾನ ಮಂಜರಿ. ಸಂಜೆ ೬-೧೦ ಭಕ್ತಿ ಗೀತೆ. ೬-೩೦ ವಚನ ಗಾನ. ೮ ಎಂ ಪುಟ್ಟರಾಜು-ನಾದಸ್ವರ. ೮-೩೦ ರಾಷ್ಟ್ರೀಯ ಕಾರ್ಯಕ್ರಮ-ದೆಹಲಿ ರಿಲೆ. ೮-೫೦ ವಾದ್ಯ ವೃಂದ. ೯-೧೫ ಉರ್ದು ಗೀತೆ. ೯-೩೦ ಆರ್. ಕೆ ಶ್ರೀಕಂಠನ್-ಸಂಗೀತ.

ನರಸಪ್ಪಯ್ಯನವರು ವಿಧಾನ ಪರಿಷತ್ತಿನ ತಾತ್ಕಾಲಿಕ ಅಧ್ಯಕ್ಷರು

ಸ್ವಂ. ಸು ತಂತಿ] ಬೆಂಗಳೂರು ೨೧

ಸಂಸ್ಥಾನ ವಿಧಾನ ಪರಿಷತ್ತಿನ ಮಂಗಳೂರಿನ ಸದಸ್ಯ ಶ್ರೀ ನರಸಪ್ಪಯ್ಯನವರು ಪರಿಷತ್ತಿನ ಪ್ರ[illegible]ವರೆಗೆ ಹಂಗಾಮಿ ಅಧ್ಯಕ್ಷರಾಗುವ ಸಂಭವವಿದೆ.

ಬೆಂಗಳೂರಿಗೆ ಕೇರಳದ ನ್ಯಾಯಾಂಗ ಮಂತ್ರಿಯ ಭೇಟಿ

ಇದೇ ೨೪ನೇ ತಾರೀಕಿನಿಂದ ೩ ದಿನಗಳ ಕಾಲ ಇಲ್ಲಿ ನಡೆಯುವ ಅಖಿಲ ಭಾರತ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗಿ ಕೇರಳದ ನ್ಯಾಯಾಂಗ ಸಚಿವ ಶ್ರೀ ಕೃಷ್ಣ ಅಯ್ಯರ್‌ರವರು ಬರುವ ಶುಕ್ರವಾರ ಇಲ್ಲಿಗೆ ಆಗಮಿಸುವರು. ಶ್ರೀ ಸಿ. ರಾಜಗೋಪಾಲಾಚಾರಿಯವರು ಸಮ್ಮೇಳನದ ಉದ್ಘಾಟನೆ ಮಾಡುವರು. ಶ್ರೀ ಕೃಷ್ಣ ಅಯ್ಯರ್‌ರವರು, ಮೈಸೂರು ಮತ್ತು ಕೇರಳ ಸಂಸ್ಥಾನಗಳಲ್ಲಿ ವಿದ್ಯುಚ್ಛಕ್ತಿ ಯೋಜನೆಗಳ ಸ್ಥಾಪನೆಗೆ ಸಂಬಂಧಪಟ್ಟಂತೆ ನ್ಯಾಯಾಂಗ ವಿಷಯಗಳನ್ನು ಕುರಿತು ಸಂಸ್ಥಾನ ಸರ್ಕಾರದವರೊಡನೆ ಮಾತುಕತೆ ನಡೆಸುವರು.

ಮಧ್ಯ ಪೂರ್ವದಲ್ಲಿ ಶಾಂತಿ ಘೋಷಣೆಗಾಗಿ ರಷ್ಯದ ಕರೆ

ಫ್ರಾನ್ಸಿನ ಪ್ರಧಾನಿಗೆ ಬುಲ್ಗಾನಿನ್ನರ ವಿಶೇಷ ಸಂದೇಶ

ರಷ್ಯಾ ಪ್ರಧಾನಿ ಬುಲ್ಗಾನಿನ್ನರು ಫ್ರಾನ್ಸಿನ ಪ್ರಧಾನಿ ಗೈ ಮೋಲೆಯವರಿಗೆ ವಿಶೇಷ ಸಂದೇಶವೊಂದನ್ನು ಕಳುಹಿಸಿ, ಫ್ರಾನ್ಸು, ಅಮೆರಿಕಾ, ರಷ್ಯಾ ಮತ್ತು ಬ್ರಿಟನ್ ಮುಂತಾದ ಭದ್ರತಾ ಸಮಿತಿಯ ಸದಸ್ಯ ರಾಷ್ಟ್ರಗಳು ಮಧ್ಯ ಪೂರ್ವದಲ್ಲಿ ಶಾಂತಿ ಪಾಲನೆ ಬಗ್ಗೆ ಘೋಷಣೆಯೊಂದನ್ನು ಹೊರಡಿಸಬೇಕೆಂದು ಸೂಚಿಸಿರುತ್ತಾರೆ. ಮಧ್ಯ ಪೂರ್ವದಲ್ಲಿ ಬಲ ಪ್ರಯೋಗವನ್ನು ವರ್ಜಿಸಿದರೆ ಪರಿಸ್ಥಿತಿಯು ಬಹುಮಟ್ಟಿಗೆ ಸುಗಮವಾಗುವುದೆಂದೂ, ಈ ಬಗ್ಗೆ ಕಳೆದ ೨೪ನೇ ತಾರೀಕು ಈಜಿಪ್ಟ್ ಸರ್ಕಾರವು ಸೂಯಜ್ ಸಮಸ್ಯೆ ವಿಷಯವಾಗಿ ಮಾಡಿರುವ ಘೋಷಣೆಯು ಆಧಾರವಾಗಿರು_........ ಅವರು ಹೇಳಿರುತ್ತಾರೆ. ಐರೋಪ್ಯ ಭದ್ರತಾ ಪಾಲನೆಯಲ್ಲೂ, ಯೂರೋಪಿನ ರಾಷ್ಟ್ರಗಳಾದ ಫ್ರಾನ್ಸು ಮತ್ತು ರಷ್ಯಗಳು ಹೆಚ್ಚು ಆಸಕ್ತವಾಗಿರುವುವೆಂದೂ ಅವರು ನುಡಿದಿರುವರು.

ಗುಂಡ್ಲುಪೇಟೆ ಬಳಿ ಲಾರಿ ತಲೆಕೆಳಗಾಗಿ ಡ್ರೈವರನ ಮರಣ

ಸ್ವಂ ಸು ಫೋನ್] ನಂಜನಗೂಡು ೨೧

ಕೊಬ್ಬರಿ ತುಂಬಿದ ಭರ್ತಿ ಲಾರಿಯೊಂದು ಕಳೆದ ಶುಕ್ರವಾರ ಗುಂಡ್ಲುಪೇಟೆ-ಕಲ್ಲಿಕೋಟೆ ನಡುವೆ ೧೪ನೇ ಮೈಲಿ ಕಲ್ಲಿನ ಬಳಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ತಲೆಕೆಳಗಾಗಿ ಡ್ರೈವರ್ ನಾರಾಯಣನಾಯರ್ ಎಂಬಾತನು ಸ್ಥಳದಲ್ಲೇ ಮೃತಪಟ್ಟನು. ಗುಂಡ್ಲುಪೇಟೆಯ ಪೊಲೀಸ್ ಇನ್ಸ್‌ಪೆಕ್ಟರಾದ ಶ್ರೀ ವೆಂಕಟಾಚಾರ್ಯರು ತನಿಖೆ ನಡೆಸುತ್ತಿರುವರು.

ಪುಸ್ತಕ ವಿಮರ್ಶೆ

"ಭರತ ಭಕ್ತಿ ಕಾವ್ಯಂ"

ಶ್ರೀಮದ್ರಾಮಾಯಣದಲ್ಲಿ ಭರತನ ಅಪಾರವಾದ ಭಕ್ತಿಯನ್ನೇ ಪ್ರಧಾನವಾಗಿಟ್ಟುಕೊಂಡು ಶ್ರೀ ಕೆ. ರಾಮಸ್ವಾಮಯ್ಯಂಗಾರ್ (ಆಸೂರಿ) ರವರು ಕನ್ನಡ ವಾರ್ಧಿಕ ಷಟ್ಪದಿಯಲ್ಲಿ ರಚಿಸಿರುವ ಈ ಗ್ರಂಥವು ಅತ್ಯಂತ ಅಮೂಲ್ಯವೂ, ರಸಭರಿತವೂ ಮತ್ತು ಭಾವಪೂರಿತವೂ ಆಗಿರುತ್ತದೆ. ಶ್ರೀರಾಮನಲ್ಲಿ ಭರತನು ಇಟ್ಟಿದ್ದ ಭಕ್ತಿಯನ್ನು ಪ್ರಧಾನವಾಗಿ ಸೂಚಿಸುವುದಾದರೂ, ಈ ಗ್ರಂಥವು ಇಡೀ ರಾಮಾಯಣವನ್ನೇ ಸಂಗ್ರಹವಾಗಿ ನಿರೂಪಿಸುತ್ತದೆ. ಇದರ ಶೈಲಿಯೂ, ಭಾವಗಳೂ ಮತ್ತು ಭಕ್ತಿರಸವೂ ವಾಚಕರ ಮನಸ್ಸನ್ನು ಕರಗಿಸುವಂತಿವೆ. ಅನೇಕ ಕಡೆಗಳಲ್ಲಿ ಮಹಾಕವಿಗಳಾದ ಜೈಮಿನಿ,-ಷಡಕ್ಷರಿ ಮುಂತಾದವರ ಸರಣಿಯನ್ನು ಹೋಲುತ್ತದೆ.

ಓದುವವರ ಮನಸ್ಸಿನಲ್ಲಿ ವಿಕಲ್ಪ ಮತ್ತು ವಿಕಾರಗಳನ್ನುಂಟುಮಾಡುವ ಬಗೆಬಗೆಯ ಲಘು ಸಾಹಿತ್ಯವೆಂಬ ಪ್ರಕಟಣೆಗಳು ಹೇರಳವಾಗಿ ಹೊರಬೀಳುತ್ತಿರುವ ಈ ಕಾಲದಲ್ಲಿ, ಉದಾತ್ತ ಧ್ಯೇಯದಿಂದಲೂ, ಉತ್ತಮ ಆದರ್ಶಗಳಿಂದಲೂ, ಮನೋರಂಜಕ ಶೈಲಿಯಿಂದಲೂ, ಆಹ್ಲಾದಕರವಾದ ಭಾವಗಳಿಂದಲೂ ಕೂಡಿರುವ ಇಂತಹ ಗ್ರಂಥಗಳ ಪ್ರಕಟಣೆಯು ವಿರಳವೆಂದೇ ಹೇಳಬೇಕು. ಇದನ್ನು ಕನ್ನಡ ಸಾಹಿತ್ಯದ ಮಹಾಕಾವ್ಯಗಳ ಶ್ರೇಣಿಗೆ ಸೇರಿಸಲು ಯಾವ ಅಭ್ಯಂತರವೂ ಇರಲಾರದು

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ॥ ವಿ॥ ಬಿ. ಶಿವಮೂರ್ತಿ ಶಾಸ್ತ್ರಿಯವರೂ ಮತ್ತು ಇತರ ಹೆಸರಾಂತ ಕನ್ನಡ ಸಾಹಿತಿಗಳೂ ಇದನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಅವನಿ ಪೀಠದ ಜಗದ್ಗುರುಗಳು ಇದನ್ನು ಆಸಕ್ತಿಯಿಂದ ಆಲಿಸಿ ಅನುಗ್ರಹ ಮಾಡಿರುತ್ತಾರೆ

ಗ್ರಂಥಕರ್ತರಿಂದಲೇ ಇದನ್ನು ಪಠಣ ಮಾಡಿಸಿ ಆಮೂಲಾಗ್ರವಾಗಿ ಕೇಳುವ ಸುಯೋಗವು ನಮಗೆ ದೊರಕಿತ್ತು. ಸುಪ್ರಸಿದ್ಧ ಪಂಡಿತರುಗಳ ಅಭಿಪ್ರಾಯವನ್ನೇ ನಾವೂ ಪುಷ್ಟೀಕರಿಸುವುದಲ್ಲದೆ ಇದನ್ನು ಮತ್ತೆಮತ್ತೆ ಓದಿ, ಓದಿಸಿ ಕೇಳುವ ಅಭಿಲಾಷೆಯು ಬೆಳೆಯುತ್ತಾ ಬಂದಿದೆಯೆಂದು ಮಾತ್ರ ಹೇಳಬಲ್ಲೆವು

ತ್ರಿಮೂರ್ತಿಗಳ ಅಭೇದ, ಭಗವಂತನ ಏಕತ್ವ, ಭಕ್ತಿಭಾವದ ಪರಾಕಾಷ್ಠತೆ ಮತ್ತು ಕಾವ್ಯಾನಂದದ ಮಾಧುರ್ಯವನ್ನು ನಾವು ಆದರದಿಂದ ಆಸ್ವಾದಿಸಿದ್ದೇವೆ. ವಾಲ್ಮೀಕಿ ರಾಮಾಯಣದಲ್ಲಿ ಇಲ್ಲದ ಅನೇಕ ಅಪೂರ್ವವಾದ ಅಂಶಗಳನ್ನು ತುಳಸಿದಾಸ್, ಕಂಬರ್, ಯೋಗವಾಸಿಷ್ಠ ಮುಂತಾದ ಇತರ ರಾಮಾಯಣಗಳಿಂದ ಸಂಗ್ರಹಿಸಿಕೊಟ್ಟಿರುವುದು ಒಂದು ವೈಶಿಷ್ಟ್ಯವಾಗಿದೆ. ಉದಾಹರಣೆಗಾಗಿ ಅಹಲ್ಯೆಯು ಮುನಿ ಶಾಪಕ್ಕೆ ಗುರಿಯಾದಳೆಂಬ ಅಂಶವನ್ನು ಮಾರ್ಪಡಿಸಿ ಇಂದ್ರನ ಸ್ಪರ್ಶವನ್ನು ನಿವಾರಿಸಲು ತಾನೇ ಕಲ್ಲಾದಳೆಂದು ವರ್ಣಿಸಲಾಗಿದೆ. ರಾವಣನು ಮುಟ್ಟುವ ಮೊದಲೇ ಸೀತೆಯು ಅಗ್ನಿಯಲ್ಲಿ ಲೀನಳಾಗಿ ಮಾಯಾ ಸ್ವರೂಪದಿಂದ ರಾವಣ ವಧೆಯವರೆಗೆ ವರ್ತಿಸಿದ ಬಗೆಯನ್ನು ಚಿತ್ರಿಸಲಾಗಿದೆ.

ಈ ಗ್ರಂಥವು ಎಲ್ಲಾ ಕನ್ನಡಿಗರಿಂದಲೂ ಪ್ರತಿನಿತ್ಯವೂ ಪಾರಾಯಣ ಮಾಡಲು ಯೋಗ್ಯವಾಗಿದೆ. ಇದನ್ನು ಶಾಲೆಗಳಲ್ಲಿ ಪಠ್ಯಪುಸ್ತಕವಾಗಿ ಇಟ್ಟರೆ ವಿಶೇಷ ಪ್ರಯೋಜನವುಂಟು. ಅಕ್ಷರ ಪ್ರಚಾರ ಸಮಿತಿಯವರೂ, ಸಾರ್ವಜನಿಕ ಪುಸ್ತಕಾಲಯಗಳವರೂ, ಗಮಕ ಶಿಕ್ಷಕರೂ, ಆಕಾಶವಾಣಿಯವರೂ ಇದನ್ನು ಅವಶ್ಯಕವಾಗಿ ಉಪಯೋಗಿಸತಕ್ಕದ್ದಾಗಿದೆ.

ಭಕ್ತಿರಸ ಪ್ರಧಾನವಾದ ಅನೇಕ ಕೀರ್ತನೆಗಳನ್ನೂ ಮತ್ತು ಸ್ತೋತ್ರಗಳನ್ನೂ ರಚಿಸಿರುವುದಲ್ಲದೆ, ನೀತಿ ಬೋಧಕವಾದ ಹಲವು ನಾಟಕಗಳನ್ನೂ ಸಹ ಗ್ರಂಥಕರ್ತರು ಬರೆದಿರುತ್ತಾರೆ. ಇವುಗಳಲ್ಲಿ ಕೆಲವು ಮಾತ್ರ ಪ್ರಕಟವಾಗಿವೆ. ಇನ್ನೂ ಕೆಲವು ಬೆಳಕಿಗೆ ಬರಬೇಕಾಗಿವೆ.

ಕನ್ನಡನಾಡಿನ ನವೋದಯದ ಈ ಸಮಯದಲ್ಲಿ ಇಂತಹ ಗ್ರಂಥಗಳಿಗೆ ವಿಶೇಷವಾದ ಪುರಸ್ಕಾರವು ದೊರೆತು ನಾಡು, ನುಡಿ ಮತ್ತು ಸಮಾಜದ ಶ್ರೇಯಸ್ಸಾಧನೆಗೆ ಸಹಕಾರಿಯಾಗಲೆಂದು ಹಾರೈಸುತ್ತೇವೆ.

ಬೆಲೆ ಮೂರು ರೂಪಾಯಿ. ಮೈಸೂರು ದಿವಾನರ ರಸ್ತೆಯಲ್ಲಿರುವ ಗ್ರಂಥಕರ್ತರಲ್ಲಿಯೂ, ಪುಸ್ತಕ ಪ್ರಚಾರಕರಲ್ಲಿಯೂ ದೊರೆಯುತ್ತದೆ

ವಿವಾಹ ಮಹೋತ್ಸವಗಳು

ಬಂಡಿಕೇರಿಯಲ್ಲಿರುವ ಶ್ರೀ ಎಂ. ನಾರಾಯಣ ಜೋಯಿಸರ ಅಳಿಯಂದಿರಾದ ಶ್ರೀ ಎ. ಸುಬ್ರಹ್ಮಣ್ಯರವರು ತಮ್ಮ ಪುತ್ರ ಶ್ರೀ ಅನಂತಕೃಷ್ಣರವರಿಗೆ ಡಾ॥ ವೆಂಕಟಸುಬ್ಬಯ್ಯನವರ ತಮ್ಮಂದಿರಾದ ಶ್ರೀ ಶಂಕರನಾರಾಯಣರವರ ಪುತ್ರಿ ಸೌ॥ ಪಾರ್ವತಿಯನ್ನು ತಂದುಕೊಂಡು ನೆನ್ನೆ ವಿವಾಹವನ್ನು ನೆರವೇರಿಸಿದರು.

ಮಂಡ್ಯದ ಶ್ರೀ ಎಸ್. ರಾಘವೇಂದ್ರಯ್ಯನವರು ತಮ್ಮ ಮೊಮ್ಮಗಳೂ, ಹವಸೋಗೆ ಶ್ರೀ ನಾರಾಯಣರಾಯರ ಪುತ್ರಿಯೂ ಆದ ಸೌ॥ ದಾಕ್ಷಾಯಣಿಯನ್ನು ಚನ್ನಪಟ್ಟಣದ ಶ್ರೀ ವಿ. ರಾಜಾರಾಯರ ಪುತ್ರ ಶ್ರೀ ರಾಮರಾಯರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು.

ಜಮೀನುದಾರ್ ಮತ್ತು ಸ್ಟ್ಯಾಂಪ್ ವೆಂಡರ್ ಆದ ಶ್ರೀ ಸಿ. ಎಸ್. ವಿ ಶೆಟ್ಟರು ತಮ್ಮ ಕುಮಾರಿ ಸೌ॥ ವೆಂಕಟಲಕ್ಷ್ಮಮ್ಮನನ್ನು ಸೇಲಂ ಜಿಲ್ಲೆ ಹೊಸೂರಿನ ಬಟ್ಟೆ ವರ್ತಕರಾದ ಶ್ರೀ ಎ ಎಸ್. ನರಸಿಂಹಶೆಟ್ಟರ ಪುತ್ರ ಶ್ರೀ ಎ. ಎನ್. ಅಶ್ವತ್ಥನಾರಾಯಣಶೆಟ್ಟರಿಗೆ ಕೊಟ್ಟು ನೆನ್ನೆ ವಿವಾಹವನ್ನು ನಡೆಸಿದರು.

ಜವಳಿ ಅಂಗಡಿ ಶ್ರೀ ಎಲ್. ಕಾಡಯ್ಯನವರ ಶ್ರೀ ಎಲ್. ಎಸ್. ಶೇಷರಂಗಯ್ಯನವರು ತಮ್ಮ ಕುಮಾರಿ ಸೌ॥ ನಾಗರತ್ನಮ್ಮನನ್ನು ಬೆಂಗಳೂರಿನ ಶ್ರೀ ಬಿ ಆರ್. ರಂಗಧಾಮಯ್ಯನವರ ಕುಮಾರರಾದ ಶ್ರೀ ಬಿ. ಆರ್. ರಂಗದಾಸ್‌ರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ಬೆಳೆಸಿದರು.

ಕನ್ನೇಗೌಡನಕೊಪ್ಪಲಿನ ಶ್ರೀ ಸಿದ್ದೇಗೌಡರು ತಮ್ಮ ಅಣ್ಣಂದಿರು ಶ್ರೀ ಬಸವೇಗೌಡರ ಪುತ್ರ ಶ್ರೀ ಎಂ ಬಿ ಬಸವಯ್ಯನವರ ಮಗಳು ಸೌ॥ ಲಕ್ಷ್ಮಿಯನ್ನು ಸಾಲಿಗ್ರಾಮದ ಶ್ರೀ ತಮ್ಮಯ್ಯನವರ ಪುತ್ರ ಶ್ರೀ ಎಸ್. ಟಿ ಕೃಷ್ಣಪ್ಪನವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಭಾರತ ಸರ್ಕಾರಕ್ಕೆ ಬಾಲಕಿಯಿಂದ ಚಿನ್ನದ ಬಳೆ ದಾನ

ಮಹಿಳೆಯರು ತಮ್ಮ ಆಭರಣಗಳನ್ನು ರಾಷ್ಟ್ರದ ಅಭ್ಯುದಯಕ್ಕಾಗಿ ಮಾರಬೇಕೆಂದು ನೆಹರೂರವರು ಮಾಡಿರುವ ಪ್ರಾರ್ಥನೆಯನ್ನು ಕೇಳಿ ಬೊಂಬಾಯಿಯ ೧೭ ವರ್ಷದ ಬಾಲಕಿಯೊಬ್ಬಳು ೯೮ ರೂ. ಬೆಲೆಯ ತನ್ನ ಚಿನ್ನದ ಬಳೆಯನ್ನು ಪ್ರತಿಫಲ ಕೇಳದೆ ಒಪ್ಪಿಸಿರುವುದಾಗಿ ವರದಿಯಾಗಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	[illegible]	[illegible]
ರತ್ನಚೂಡಿ	[illegible]	[illegible]
ಕಡ್ಡಿ	[illegible]	[illegible]
ಕಾರ್ ಸಣ್ಣ	[illegible]	[illegible]
ರಾಗಿ	[illegible]	[illegible]
ಜೋಳ	[illegible] ೦೦	[illegible]
ಕಡಲೆಕಾಯಿ	[illegible]	[illegible] ೦೦
ಹುಚ್ಚೆಳ್ಳು	[illegible] ೦೦	[illegible]
ಹರಳುಬೀಜ	[illegible] ೦೦	
ಹೊಂಗೇಬೀಜ	[illegible] ೦೦	[illegible]
ಹುರುಳಿ	[illegible]	[illegible]
ಹೆಸರು	[illegible] ೦೦	
ಅಲಸಂದೆ	[illegible]	[illegible]
ಅವರೆ	[illegible] ೦೦	[illegible]
ಧನಿಯ	[illegible] ೦೦	[illegible]
ಉದ್ದು	[illegible]	[illegible]
ಕಡಲೆ	[illegible] ೦೦	
[illegible]	[illegible]	
ಹುಣಿಸೆಬೀಜ	[illegible]	[illegible]
ಹುಣಿಸೆಹಣ್ಣು	[illegible]	[illegible] ೦೦
[illegible]	[illegible]	[illegible] ೦೦
ಮೆಣಸಿನಕಾಯಿ	[illegible]	[illegible]
ಬೆಲ್ಲ	[illegible] ೦೦	
ತೆಂಗಿನಕಾಯಿ	[illegible] ೦೦	[illegible]

ಮರಣ ದಂಡನೆ ಶಿಕ್ಷೆ ರದ್ದಾದರೂ ಗಲ್ಲಿಗೇರಿಸಿದ ಪ್ರಸಂಗ

ಆಡಳಿತ ಲೋಪದೋಷದ ಬಗ್ಗೆ ಕಾಂಗ್ರೆಸ್ ಕಾರ್ಯದರ್ಶಿಯವರ ಟೀಕೆ

ಆಡಳಿತದ ವಿರುದ್ಧವಾಗಿ ಪ್ರಜೆಗಳು ಕೊಡುವ ದೂರುಗಳ ಪೈಕಿ ಶೇಕಡ ೭೫ ರಷ್ಟು ಅಧಿಕಾರಿಗಳ ಲೋಪದೋಷಗಳಿಂದಲೇ ಆಗಿರುವುದಾಗಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ತಿಳಿಸಿರುತ್ತಾರೆ. ಒಬ್ಬ ಗವರ್ನರು ಮರಣದಂಡನೆ ಶಿಕ್ಷೆಯನ್ನು ರದ್ದುಮಾಡಿದ್ದರೂ, ಆ ವ್ಯಕ್ತಿಯನ್ನು ಅಧಿಕಾರಿಗಳು ಗಲ್ಲಿಗೇರಿಸಿರುವ ಪ್ರಸಂಗವೊಂದು ನಡೆದಿರುವುದಾಗಿ ಅವರು ಹೇಳಿದರು. ಜನರ ದೂರುಗಳನ್ನು ಇತರ ರಾಜಕೀಯ ಪಕ್ಷಗಳು ಉಪಯೋಗಿಸಿಕೊಳ್ಳುತ್ತಿರುವುವೆಂದೂ, ಕಾಂಗ್ರೆಸ್ಸಿಗರು ಮಾತ್ರ ಮೂಕ ಪ್ರೇಕ್ಷಕರಾಗಿರುವರೆಂದೂ ಅವರು ವಿಷಾದದಿಂದ ಸೂಚಿಸಿದರು.

ರಹದಾರಿಯಿಲ್ಲದೆ ರೇಡಿಯೋ ಹೊಂದಿದ್ದಕ್ಕೆ ಜುಲ್ಮಾನೆ

ನಗರದ ಆಸ್ಪತ್ರೆ ರಸ್ತೆಯ ಭವಾನಿ ಮಿಲಿಟರಿ ಹೋಟೇಲಿನ ಮಾಲೀಕರಾದ ಶ್ರೀ ಎಸ್. ಸುಬ್ಬರಾಯರು ರಹದಾರಿಯಿಲ್ಲದೆ ರೇಡಿಯೋ ಹೊಂದಿದ್ದರೆಂಬುದಾಗಿ ಆಪಾದಿಸಿ ಅವರ ಮೇಲೆ ವೈರ್‌ಲೆಸ್ ಇನ್ಸ್‌ಪೆಕ್ಟರ್ ಶ್ರೀ ಎಸ್. ಸಾಲ್ಡಾನರವರು ಹೂಡಿದ್ದ ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ಆಪಾದಿತರಿಗೆ ೩೦ ರೂ ದಂಡವನ್ನು ನೆನ್ನೆ ವಿಧಿಸಿದರು.

ನಗರ್ಲೆಯಲ್ಲಿ ಅಂಬರ್ ಚರಕ ಶಿಕ್ಷಣಾಲಯದ ಮುಕ್ತಾಯ ಸಮಾರಂಭ

ನಂಜನಗೂಡು ತಾಲ್ಲೂಕು ನಗರ್ಲೆಯಲ್ಲಿ ತಗಡೂರು ಖಾದಿ ಕೇಂದ್ರದವರು ನಡೆಸುತ್ತಿದ್ದ ಅಂಬರ್ ಚರಕ ಶಿಕ್ಷಣಾಲಯವು ಮೊನ್ನೆ ಮುಕ್ತಾಯವಾಯಿತು. ಗ್ರಾಮದ ಛೇರ್ಮನ್ ಶ್ರೀ ಸಿದ್ದಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ತಗಡೂರು ರಾಮಚಂದ್ರರಾಯರು ಅಂಬರ್ ಚರಕದಿಂದ ಕ್ಷೇತ್ರ ಸ್ವಾವಲಂಬನೆ ಮತ್ತು ಗ್ರಾಮಾಂತರ ನಿರುದ್ಯೋಗ ನಿವಾರಣೆ, ಗ್ರಾಮದಾನ ಇವುಗಳ ವಿಷಯವಾಗಿ ಭಾಷಣ ಮಾಡಿದರು. ಅಧ್ಯಕ್ಷರು ಶಿಕ್ಷಣ-ಲಯಕ್ಕೆ ನೆರವಾದ ಮಹನೀಯರಿಗೆ ವಂದನಾರ್ಪಣೆ ಮಾಡಿದರು. ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಅಂಬರ್ ಚರಕವನ್ನು ಮನೆಗಳಿಗೆ ತೆಗೆದುಕೊಂಡುಹೋಗಲು ಅನುಮತಿ ಕೊಡಲಾಯಿತು,

ಗ್ರಾಮಾಂತರದ ಜನರಿಗೆ ಕೊತ್ತಿ ಗೆಡ್ಡೆಯೇ ಆಹಾರ

ಚಾಮರಾಜನಗರ ೨೦

ಮಳೆಬೆಳೆಗಳಿಲ್ಲದೆ ಆಹಾರಕ್ಕೆ ತೀವ್ರ ಅಭಾವುಂಟಾಗಿರುವುದರಿಂದ ಈ ತಾಲ್ಲೂಕಿನ ಕಾಮ ನಾಥಿ, ಕರಿ ಪಂಚನಪುರ, ದೊಡ್ಡರಾಯಪೇ ಮುಂತಾದ ಕಡೆಗಳಲ್ಲಿ [illegible] ದಿನಗಳ ಲೂ ಬಡ ಜನರು ಕೋಡಿಹೋಳೆ ಕೆರೆಯ ಕೊತ್ತಿ ಗೆಡ್ಡೆಗಳನ್ನು ಅಗೆದು ತಂದು ತಿನ್ನುತ್ತಿ ವ ಅಂಶವನ್ನು ಪತ್ರಿಕಾ ಪ್ರತಿನಿಧಿಗಳಿಗೆ ಇಲ್ಲಿ ಪ್ರಮುಖರು ವಿವರಿಸಿದರು. ಉರಿಯುವ ಬಿಸಿಲಿ ಲ್ಲಿ ಹೆಂಗಸರೂ ಸೇರಿ ನೂರಾರು ಜನರು ಗಂ ಗಟ್ಟಲೆ ಕೆರೆಯಲ್ಲಿ ಭೂಮಿಯನ್ನು ಅಗೆದು ಹೊಟ್ಟೆಗೆ ಸ್ವಲ್ಪ ಗೆಡ್ಡೆಯನ್ನು ಸಂಗ್ರಹಿಸು ದೃಶ್ಯವು ಹೃದಯವಿದ್ರಾವಕವಾಗಿದ್ದಿತೆಂದು ಸಲಾಯಿತು ಈ ಕೂಡಲೇ ಈ ಪ್ರದೇಶದಲ್ಲಿ ರಿಹಾರ ಕಾರ್ಯಗಳನ್ನು ಕೈಗೊಳ್ಳುವುದಲ್ಲದೆ ಹಾರ ಧಾನ್ಯದ ಡಿಪೋಗಳನ್ನು ಏರ್ಪಡಿಸದೇ ದೂ ಸಹ ಒತ್ತಾಯ ಮಾಡಲಾಯಿತು.

ಹಾವು ಹಿಡಿಯುತ್ತಿದ್ದವನಿಗೆ ಹಾವಿನಿಂದಲೇ ಮರಣ

ಅಂಬಾಸಮುದ್ರದ ಬಳಿ ವಿಕ್ರಮಸಿಂಹಪು ದಲ್ಲಿ ಹಾವು ಹಿಡಿಯುವುದರಲ್ಲಿ ಪ್ರಸಿದ್ಧನಾಗಿ ಸೆಬಾಸ್ಟಿಯನ್ ಎಂಬಾತನು ಮೊನ್ನೆ ಹಿಡಿಯು ವಾಗ ಹಾವಿನಿಂದ ಕಡಿಸಲ್ಪಟ್ಟು ಮೃತಪ ಟ್ಟಿರುತ್ತಾನೆ. ಹಾವಿನಿಂದ ಕೋಳಿಮರಿಗಳು ಸಾ ವಾಗುತ್ತಿರುವುದನ್ನು ತಪ್ಪಿಸಲು ಅವನು ಹಾ ನ್ನು ಹಿಡಿಯಲೆತ್ನಿಸಿ ವಿಫಲನಾದನೆಂದೂ, ಅ ಅವನನ್ನು ಕಡಿದಮೇಲೆ ಅದನ್ನು ಅವನು ಹಿ ದು ಕೊಂದುಹಾಕಿದನೆಂದೂ, ನಂತರ ತಾನ ಮಡಿದನೆಂದೂ ಹೇಳಲಾಗಿದೆ

GLOBE TUTORIAL COLLEGE
Sadvidya Patasala Buildings,
S. S. L. C. Classes
In Full Swing : Join at once

NATIONAL LEAGUE
Anathalaya Buildings
MYSORE
Offers excellent coaching for
S. S. L. C. students
Timings :8 to 10 A.M; 5 to 8 P.M.

SREE GAYATHRI
TALKIES
To-day : Last day
MOBY DICK
From 22-5-57 : For 2 days
Warner's
CRY IN THE NIGHT
(For adults only)
With :–Edmund O'Brien,
Brian Donlevy

ಶ್ರೀ ಜಗದಂಬಾ ಶಿಶು ವಿಹಾರ
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿ ವಿಹಾರದ ತರಗತಿಗಳು ಇದೇ ೧೫ನೇ ತಾ ನಿಂದ ಆರಂಭವಾಗಿವೆ ಮಾತಾಪಿತೃಗಳು ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋ ಹೊಂದುವುದರ ಮೂಲಕ ಪ್ರೋತ್ಸಾಹ ನೀ ಡಬೇಕಾಗಿ ಕೋರಲಾಗಿದೆ.

Edited, Printed and Published
A. R. Nagarajan at Sadhvi Pre
Subbiah Road, Mysore



Consult :
H. S. Venkata Rao,
B A., B L., B.Ed
"ASTRO-PALM"
1329 K. M. Puram.
Mysore.

ಭಾರಿ ಹರಾಜು ಮಾರಾಟ
22-5-57ನೇ ಬುಧವಾರದಿಂದ
ಮೈಸೂರು ಜಗನ್ಮೋಹನ ಭವನದ
ಆವರಣದಲ್ಲಿ
ಮೆಸರ್ಸ್ ದಿ ಎಂಪೈರ್ ಆಕ್ಷನೀರ್ಸ್
ಸಯ್ಯಾಜಿರಾವ್ ರೋಡ್, ಮೈಸೂರು.

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ



ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈ ಸೂ ರು

ಸಂಪುಟ : ೧೩] SADHVI : WEDNESDAY 22—5—1957 ಮೈಸೂರು : ಬುಧವಾರ ೨೨—೫—೧೯೫೭ : [ಸಂಚಿಕೆ : ೨೪೯

ಆಜಾದ್ ಕಾಶ್ಮೀರದಲ್ಲಿ ಅಶಾಂತಿ : ೬೨ ಜನರ ಬಂಧನ

ನೇಪಾಳದ ಕಮ್ಯೂನಿಸ್ಟರಿಂದ ಪ್ರತಿ ಸರ್ಕಾರದ ಸ್ಥಾಪನೆ

ನೇಪಾಳದ ದಕ್ಷಿಣ ಪ್ರದೇಶದಲ್ಲಿ ಅಲ್ಲಿನ ಕಮ್ಯೂನಿಸ್ಟರು ಪ್ರತಿ ಸರ್ಕಾರವನ್ನು ರಚಿಸಿರುವರೆಂದೂ, ಅವರದೇ ಜೈಲು, ಕೋರ್ಟು ಮತ್ತು ಅಧಿಕಾರಿಗಳನ್ನು ಏರ್ಪಡಿಸಲಾಗಿರುವುದೆಂದೂ ವರದಿಯಾಗಿದೆ. ಅಲ್ಲಿನ ಪರಿಸ್ಥಿತಿಯನ್ನು ಹತೋಟಿಗೆ ತರಲು ಸರ್ಕಾರದವರು ವಿಶೇಷ ಪೊಲೀಸು ಅಧಿಕಾರಿಗಳನ್ನು ಸಿಬ್ಬಂದಿಯೊಡನೆ ಕಳುಹಿಸಿರುತ್ತಾರೆ. ಆ ಪ್ರದೇಶದಲ್ಲಿ ಕಮ್ಯೂನಿಸ್ಟರ ಆಜ್ಞೆಗಳನ್ನು ಉಲ್ಲಂಘಿಸುವ ಜಮೀನುದಾರರ ಮೇಲೆ ದಂಡವನ್ನು ಹಾಕಿಸಲಾಗುತ್ತಿರುವುದೆಂದು ಹೇಳಲಾಗಿದೆ. ಕಳೆದ ೧೫ನೇ ತಾರೀಖು ಗುಂಡಿನೇಟಿನಲ್ಲಿ ಇಬ್ಬರು ರೈತರು ಮಡಿದು, ೬ ಮಂದಿಗೆ ಗಾಯವಾಗಿರುವುದೆಂದು ವರದಿಯಾಗಿದೆ.

ಹಿಮಾಲಯದಲ್ಲಿ ಬಸ್ ಅಪಘಾತದಿಂದ ೩೪ ಯಾತ್ರಿಕರ ಮರಣ

ಕಳೆದ ಶನಿವಾರ ಪೌರಿ ಘರ್ವಾಲ್ ಜಿಲ್ಲೆಯ ಋಷಿಕೇಶ-ಶ್ರೀನಗರ ರಸ್ತೆಯಲ್ಲಿ ಬಸ್ ಅಪಘಾತವಾಗಿ ೩೩ ಮಂದಿ ಯಾತ್ರಿಕರೂ ಸೇರಿ ೩೪ ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ. ಬಸ್ಸು ೩೦೦ ಅಡಿ ಆಳದ ಕೊರಕಲಿಗೆ ಉರುಳಿ ಎಲ್ಲರೂ ಮಡಿದರೆಂದು ಹೇಳಲಾಗಿದೆ. ಬಸ್ ಓವರ್‌ಲೋಡ್ ಆಗಿದ್ದುದೇ ಅಪಘಾತಕ್ಕೆ ಕಾರಣವೆಂದು ತಿಳಿದುಬಂದಿದೆ. ಯಾತ್ರಿಕರು ಬಿಹಾರ್ ಮತ್ತು ಉತ್ತರಪ್ರದೇಶದವರು

ಲೋಕಸಭೆಯಲ್ಲಿ ೫ ವರ್ಷದಿಂದ ಮಾತನಾಡದವರ ಸಂಖ್ಯೆ ೭೯

ಪಾರ್ಲಿಮೆಂಟಿನ ಒಟ್ಟು ೫೦೦ ಮಂದಿ ಸದಸ್ಯರಲ್ಲಿ ಕಳೆದ ಐದು ವರ್ಷಗಳಿಂದ ಒಂದು ಬಾರಿಯಾದರೂ ಮಾತನಾಡದೆ ೭೯ ಮಂದಿ ಮೌನವಾಗಿದ್ದರೆಂದು ಹೇಳಲಾಗಿದೆ. ೪೬ ಜನರು ಒಂದು ಸಾರಿ ಮಾತನಾಡಿದವರು. ೨೨ ಮಂದಿ ಮಹಿಳೆಯರಲ್ಲಿ ಒಬ್ಬಾಕೆಯು ಮಾತ್ರ ಐದು ವರ್ಷದಿಂದ ಮೌನವಾಗಿದ್ದರು.

ಜಗನ್ನಾಥ ವಿಜಯದ ಮೇಲೆ ಭಾಷಣ

ಇದೇ ೨೪ನೇ ತಾರೀಖು ರಾತ್ರಿ ೯-೧೫ ರಿಂದ ೧೦ ಗಂಟೆ ವರೆಗೆ ಬೆಂಗಳೂರಿನ ಅಖಿಲ ಭಾರತ ಆಕಾಶವಾಣಿಯಲ್ಲಿ "ಜಗನ್ನಾಥ ವಿಜಯ" ವೆಂಬ ಕಾವ್ಯವನ್ನು ಕುರಿತು ಆಸ್ಥಾನ ವಿದ್ವಾನ್ ಕೆ. ಚನ್ನಕೇಶವಯ್ಯಂಗಾರ್ಯರು ಮಾತನಾಡುವರು.

ತೆರಿಗೆ ಹೆಸರಿನಲ್ಲಿ ಬೆಲೆ ಹೆಚ್ಚಿಸುವುದನ್ನು ತಡೆಗಟ್ಟಲು ಒತ್ತಾಯ

ನಗರದ ಪ್ರಜಾ ಮಂಡಲಿಯ ಆಶ್ರಯದಲ್ಲಿ ಪೇಟೆ ಟೌನ್‌ಹಾಲ್ ಮೈದಾನದಲ್ಲಿ ಸಭೆ ನಡೆದು ಹೊಸ ತೆರಿಗೆಗಳ ನೆಪದಲ್ಲಿ ಪದಾರ್ಥಗಳ ಬೆಲೆ ಹೆಚ್ಚಿಸುವುದನ್ನು ತಡೆಗಟ್ಟಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಸೂಚಿಸುವ ನಿರ್ಣಯವನ್ನು ಮಾಡಲಾಯಿತು. ಅಗ್ಗದ ಬೆಲೆಯಲ್ಲಿ ಆಹಾರ ಪದಾರ್ಥಗಳನ್ನು ಒದಗಿಸಲು ಸರ್ಕಾರ ಸರ್ಕಾರಿ ಡಿಪೋಗಳನ್ನು ತೆರೆಯಬೇಕೆಂದೂ ಒತ್ತಾಯಿಸಲಾಯಿತು.

ಮರಣ ದಂಡನೆ ಶಿಕ್ಷೆ ಇಳಿಸಲು ಕೇರಳ ಸರ್ಕಾರಕ್ಕೆ ಅಧಿಕಾರವಿಲ್ಲ

ರಾಷ್ಟ್ರಾಧ್ಯಕ್ಷರಿಗೆ ಮಾತ್ರ ಕ್ಷಮಾದಾನದ ಅಧಿಕಾರವೆಂದು ಪಂತರ ಹೇಳಿಕೆ

ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರು ನೆನ್ನೆ ಲೋಕ ಸಭೆಯಲ್ಲಿ ಮಾತನಾಡಿ, ಕೇರಳ ಸರ್ಕಾರದವರು ಮರಣ ದಂಡನೆ ಶಿಕ್ಷೆಯನ್ನು ಇಳಿಸಲು ಅಧಿಕಾರ ಹೊಂದಿಲ್ಲವೆಂದು ತಿಳಿಸಿದರು.

ಕೇರಳ ಸರ್ಕಾರದವರು ರಾಜಕೀಯ ಖೈದಿಗಳಿಗೆ ಇತ್ತೀಚೆಗೆ ತೋರಿಸಿದ ಕ್ಷಮೆಯ ಪರಿಣಾಮವಾಗಿ ಅಲ್ಲಿ ಕಾಂಗ್ರೆಸ್ ಕಾರ್ಯಕರ್ತನೊಬ್ಬನನ್ನು ಕೊಲೆ ಮಾಡಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ವಾಸುಪಿಳ್ಳೆಯ ಶಿಕ್ಷೆಯನ್ನು ಜೀವಾವಧಿ ಸಜಕ್ಕೆ ಕಡಿಮೆ ಮಾಡಲಾಗಿತ್ತು. ಕ್ಷಮಾದಾನದ ಬಗ್ಗೆ ರಾಷ್ಟ್ರಾಧ್ಯಕ್ಷರಿಗೆ ಅಪರಾಧಿಯ ಪರವಾಗಿ ಸಲ್ಲಿಸಿರುವ ಅರ್ಜಿಯು ಇನ್ನೂ ಇತ್ಯರ್ಥವಾಗಿಲ್ಲ. ರಾಷ್ಟ್ರಾಧ್ಯಕ್ಷರು ಮಾತ್ರ ಮರಣ ದಂಡನೆಯನ್ನು ಇಳಿಸಲು ಅಧಿಕಾರ ಹೊಂದಿರುವರೆಂದು ಪಂಡಿತ ಪಂತ್ ಹೇಳಿದರು.

ಕೇಂದ್ರ ಗೃಹ ಶಾಖಾ ಮಂತ್ರಿ ಬಿ. ಎನ್. ದಾತಾರ್‌ರವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸದೆ ಮರಣದಂಡನೆಯನ್ನು ಕೇರಳ ಸರ್ಕಾರದವರು ಇಳಿಸಿ ಹಲವು ರಾಜಕೀಯ ಖೈದಿಗಳಿಗೆ ಕ್ಷಮೆ ತೋರಿಸಿರುವರೆಂದೂ, ಕೇರಳ ಸರ್ಕಾರದವರು ಇತರ ಹಲವರ ಮರಣ ದಂಡನೆಯನ್ನು ಇಳಿಸಲು ಕಳುಹಿಸಿರುವ ಶಿಫಾರಸನ್ನು ಕೇಂದ್ರ ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ ಹೇಳಿದರು

ಬೆಂಗಳೂರು ಬಳಿ ಬಸ್ ಮಗುಚಿ ಹೆಂಗಸಿನ ಮರಣ

ಮಾಗಡಿಯಿಂದ ಬೆಂಗಳೂರಿಗೆ ಮೊನ್ನೆ ಮಧ್ಯ ರಾತ್ರಿ ಹೋಗುತ್ತಿದ್ದ ಬಸ್ಸೊಂದು ಬೆಂಗಳೂರಿನ ಸಮೀಪದಲ್ಲಿ ರೈಲ್ವೆ ಕ್ವಾರ್ಟರ್ಸ್ ಹತ್ತಿರ ತಿರುಗುವಾಗ ಮಗುಚಿಕೊಂಡು ೫೦ ವರ್ಷದ ವೆಂಕಟಮ್ಮ ಎಂಬಾಕೆಯು ಮಡಿದು, ೨೨ ಜನರಿಗೆ ಗಾಯವಾದುದಾಗಿ ಗೊತ್ತಾಗಿದೆ. ಅದರಲ್ಲಿ ಮದುವೆಯ ಗುಂಪಿನ ಸುಮಾರು ೩೫ ಜನರಿದ್ದರೆಂದೂ ಹೇಳಲಾಗಿದೆ. ಗಾಯಗೊಂಡವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿದೆ. ಡ್ರೈವರನನ್ನು ಬಂಧಿಸಲಾಗಿದೆ.

ಡಾ|| ನಾಗನಗೌಡರು ವಿಧಾನ ಸಭೆಯ ಹಂಗಾಮಿ ಅಧ್ಯಕ್ಷರು

ಬರುವ ೧೦ನೇ ತಾರೀಖಿನಿಂದ ಆರಂಭವಾಗುವ ವಿಧಾನ ಸಭೆಯ ಹಂಗಾಮಿ ಅಧ್ಯಕ್ಷರಾಗಿ ಮಾಜಿ ಮಂತ್ರಿ, ಡಾ|| ಆರ್. ನಾಗನಗೌಡರನ್ನು ನೇಮಿಸಲಾಗಿದೆ.

ಬಹಿರಂಗ ಸಭೆ ಮುಂದಕ್ಕೆ

ಹೊಸ ತೆರಿಗೆಗಳನ್ನು ಪ್ರತಿಭಟಿಸಲು ಈ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ನಡೆಸಬೇಕೆಂದಿದ್ದ ಬಹಿರಂಗ ಸಭೆಯನ್ನು ಮಳೆಯ ದೆಸೆಯಿಂದ ಮುಂದೆ ಹಾಕಿರುವುದಾಗಿ ಗೊತ್ತಾಗಿದೆ.

ಆಜಾದ್ ಕಾಶ್ಮೀರದಲ್ಲಿ ಅಶಾಂತಿ; ಅನೇಕರ ಬಂಧನ

ಪಾಕಿಸ್ತಾನದವರಿಂದ ಆಕ್ರಮಿತವಾಗಿರುವ ಆಜಾದ್ ಕಾಶ್ಮೀರದಲ್ಲಿ ದಿನೇದಿನೇ ಅಶಾಂತಿಯು ಬೆಳೆಯುತ್ತಿದೆ. ಕಳೆದ ವಾರದಲ್ಲಿ ೬೨ ಜನರನ್ನು ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಬಂಧಿಸಲಾಗಿದೆ. ಆ ಪೈಕಿ ಮುಜಫರಾಬಾದಿನ ಮುಸ್ಲಿಂ ಸಮ್ಮೇಳನದ ಕಾರ್ಯದರ್ಶಿ ರಜ್ವಿಖಾನ್ ಮತ್ತು ಪ್ರಮುಖ ಸಮಾಜ ಕಾರ್ಯಕರ್ತ ಖಾನ್ ಫಕೀರ್ ಮಹಮದ್‌ರವರೂ ಇರುವರು. ಆಜಾದ್ ಪ್ರದೇಶದಲ್ಲಿ ಜನರಿಗೆ ಹೆಚ್ಚು ಸ್ವಾತಂತ್ರ್ಯ ಬೇಕೆಂದೂ, ಚುನಾವಣೆಗಳನ್ನು ನಡೆಸಬೇಕೆಂದೂ ಒತ್ತಾಯ ಮಾಡಲಾಗುತ್ತಿದೆ. ಅಲ್ಲಿ ರಾಜಕೀಯ ಕಾರಣಗಳಿಗಾಗಿ ಒಟ್ಟು ೧೬೭ ಜನರನ್ನು ಬಂಧಿಸಲಾಗಿದೆ. ಹಲವರು ೧೯೫೪ ರಿಂದಲೂ ಜೈಲಿನಲ್ಲಿರುವರು

ಗುಮಾಸ್ತರು ಮಾಯವಾದ ಬಗ್ಗೆ ಸಚಿವರಿಗೆ ಪತ್ನಿಯ ದೂರು

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಪೌರಸಭೆಯ ಹೆಡ್ ಗುಮಾಸ್ತರಾದ ಶ್ರೀ ಶ್ರೀರಾಮ ದೇಶಿಕರ್‌ರವರು ಕಳೆದ ೧೫ ದಿನಗಳಿಂದ ಪತ್ತೆಯಿಲ್ಲದಿರುವ ಬಗ್ಗೆ ಅವರ ಪತ್ನಿಯು ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಆರ್. ಚನ್ನಿಗರಾಮಯ್ಯನವರಿಗೆ ಅರ್ಜಿಯೊಂದನ್ನು ಕೊಟ್ಟು ತಮ್ಮ ಯಜಮಾನರನ್ನು ಪತ್ತೆಹಚ್ಚಿಕೊಡುವಂತೆ ಕೋರಿರುತ್ತಾರೆ. ಸಚಿವರು ಪೌರಸಭೆಗೆ ಕೆಲವು ದಿನಗಳ ಹಿಂದೆ ಹಠಾತ್ತನೆ ಭೇಟಿಯಿತ್ತು ಪರಿಶೀಲನೆ ನಡೆಸಿದಾಗ ಹಲವು ಲೋಪದೋಷಗಳು ಕಂಡುಬಂದು ಹೆಡ್ ಗುಮಾಸ್ತರನ್ನು ಕೋಲಾರಕ್ಕೆ ವರ್ಗ ಮಾಡಲಾಯಿತೆಂದೂ, ಸಂಸಾರವನ್ನು ಅವರು ಅಲ್ಲಿಗೆ ಕಳುಹಿಸಿ ಹಲವು ಅಗತ್ಯವಾದ ಸರ್ಟಿಫಿಕೇಟುಗಳನ್ನು ತರುವುದಾಗಿ ಹೇಳಿ, ಶ್ರೀನಿವಾಸಪುರಕ್ಕೆ ಮತ್ತೆ ಹೋಗಿ ಮನೆಗೆ ಹಿಂದಿರುಗಲಿಲ್ಲವೆಂದೂ ಅರ್ಜಿಯಲ್ಲಿ ತಿಳಿಸಲಾಗಿದೆ. ಕೋಲಾರದ ಡಿ. ಎಸ್. ಪಿ. ಯವರು ಈ ಸಂಬಂಧದಲ್ಲಿ ಶ್ರೀನಿವಾಸಪುರಕ್ಕೆ ಭೇಟಿಯಿತ್ತಿದ್ದರೆಂದು ಹೇಳಲಾಗಿದೆ.

ಕಲ್ಕತ್ತಾ-ಮಂಗಳೂರುಗಳಿಗೆ ಜಲ ಮಾರ್ಗ ಸಂಪರ್ಕ

ಕಲ್ಕತ್ತ ಮತ್ತು ಮಂಗಳೂರುಗಳಿಗೆ ಜಲ ಮಾರ್ಗ ಸಂಪರ್ಕವನ್ನು ಏರ್ಪಡಿಸುವ ವಿಚಾರವನ್ನು ಸರ್ಕಾರದಿಂದ ರಚಿತವಾಗಿರುವ ಸಮಿತಿಯು ಪರಿಶೀಲಿಸುತ್ತಿರುವುದಾಗಿಯೂ, ಈಗಿರುವ ಕಾಲುವೆಗಳ ಜೊತೆಗೆ ಹೊಸವನ್ನು ನಿರ್ಮಿಸಿ ಸಂಪರ್ಕ ಬೆಳೆಸಲಾಗುವುದೆಂದೂ ವರದಿಯಾಗಿದೆ.

ತೆರಿಗೆಗಳ ವಿರುದ್ಧ ಕಮ್ಯೂನಿಸ್ಟರ ಚಳುವಳಿ

ಹೊಸ ತೆರಿಗೆಗಳ ಬಗ್ಗೆ ಪ್ರತಿಭಟನೆ ಸೂಚಿಸಲು ದೇಶದಲ್ಲೆಲ್ಲಾ ಚಳುವಳಿ ನಡೆಸುವಂತೆ ಭಾರತದ ಕಮ್ಯೂನಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ.

ನಗರದಲ್ಲಿ ಭಾರಿ ಮಳೆ

ಮೈಸೂರು ೨೧

ನಗರದಲ್ಲೂ, ಸುತ್ತಮುತ್ತಲೂ ಈ ದಿನ ಬೆಳಿಗ್ಗೆ ಭಾರಿ ಮಳೆಯಾಯಿತು. ಬಲವಾದ [illegible] ಕವಿದು ಸುಮಾರು ೧|| ಗಂಟೆ ಧಾರಾಕಾರವಾಗಿ ಮಳೆ ಬಿದ್ದು ಊರಿನ ರಸ್ತೆ ಮತ್ತು ಚರಂಡಿಗಳಲ್ಲಿ ನೀರು ಪ್ರವಾಹೋಪಾದಿಯಲ್ಲಿ ಹರಿಯಿತು. ಬಹು ದಿನಗಳಿಂದಲೂ ಮಳೆಯಾಗದೆ ಶಖೆಯು ವಿಪರೀತವಾಗಿದ್ದುದು ಈಗ ಶಾಂತವಾಗಿದೆ.

ಮಳೆಯ ಪರಿಣಾಮವಾಗಿ ಕೆ. ರಾಮಣ್ಣನವರ ಬೀದಿಯಲ್ಲಿ ಒಂದು ಕಡೆ ವಿದ್ಯುಚ್ಛಕ್ತಿಯ ಕಂಭದಿಂದ ಇಳಿದು ನಾಯಿಯನ್ನು ಹಿಡಿದುಕೊಂಡು ಬರುತ್ತಿದ್ದ ಬಾಲಕಿಯೊಬ್ಬಳು ಆಕಸ್ಮಾತ್ ಪಾರಾದಳು. ನಾಯಿಯು ಮಾತ್ರ ಮೃತಪಟ್ಟಿತು. ಚರಂಡಿಯ ನೀರು ಮೇಲಕ್ಕೆ ಹರಿದು ಮನೆಯೊಳಗೆ ನುಗ್ಗಿ, ತುಂಬಾ ತೊಂದರೆಯಾಯಿತು.

ನೆನ್ನೆ ಸಂಜೆಯಿಂದ ಮಳೆಯು ಸ್ವಲ್ಪಸ್ವಲ್ಪ ಆರಂಭವಾಗಿ ರಾತ್ರಿಯೆಲ್ಲವೂ ಸುರಿಯಿತು. ಇನ್ನೂ ಬೀಳುತ್ತಲೇ ಇದೆ. ಈ ಬೆಳಿಗ್ಗೆ ೭ ಗಂಟೆ ಹೊತ್ತಿಗೆ ೨೪ ಗಂಟೆಗಳಲ್ಲಿ ೧-೨೦ ಅಂಗುಲದಷ್ಟು ಮಳೆ ಆಗಿದ್ದಿತು. ಮೊನ್ನೆ ೯೦ ಸೆಂಟು ಆಗಿರುತ್ತದೆ

ಮಲಯದ ಸ್ವಾತಂತ್ರ್ಯದ ಬಗ್ಗೆ ಒಪ್ಪಂದ

ಮಲಯದ ಸ್ವಾತಂತ್ರ್ಯದ ಬಗ್ಗೆ ಅಷ್ಟೂ ವಿವರಗಳನ್ನು ಕುರಿತು ಬ್ರಿಟನ್ ಮತ್ತು ಮಲಯಾಗಳಿಗೆ ಒಪ್ಪಂದವಾಗಿರುವುದೆಂದೂ, ಬರುವ ಆಗಸ್ಟ್ ೧ ರಲ್ಲಿ ಮಲಯವು ಕಾಮನ್‌ವೆಲ್ತ್ ರಾಷ್ಟ್ರವಾಗುವುದೆಂದೂ ಗೊತ್ತಾಗಿದೆ. ಒಪ್ಪಂದದ ಪ್ರಕಾರ ಸ್ವತಂತ್ರ ಮಲಯಾ ಫೆಡರೇಶನ್ನು ಸ್ಥಾಪಿಸಲಾಗುವುದು.

ಲಂಡನ್ ಗಡಿಯಾರದ ಅಂಗಡಿಯಲ್ಲಿ ಅಣು ಕಣಗಳ ಅಪಾಯ

ಲಂಡನ್ನಿನಲ್ಲಿ ಗಡಿಯಾರಗಳ ಭಾಗಗಳನ್ನು ತಯಾರಿಸುವ ಒಂದು ಕಂಪೆನಿಯಲ್ಲಿ ಅಣು ಸಂಬಂಧದ ರೀತಿಯ ಕಣಗಳು ವ್ಯಾಪಿಸಿರುವುದರಿಂದ ಜನರನ್ನು ಅದರ ಅಪಾಯದಿಂದ ಪಾರುಮಾಡಲು ನಾಗರಿಕ ರಕ್ಷಣಾ ದಳದವರು ಅಂಗಡಿಯ ಸಾಮಾನುಗಳನ್ನು ಮತ್ತು ಧೂಳಿಯನ್ನು ಬೇರೆ ಕಡೆಗೆ ಸಾಗಿಸಿರುತ್ತಾರೆ.

ಶ್ರೀರಂಗಪಟ್ಟಣದ ಶ್ರೀ ಕೋದಂಡ ರಾಮಸ್ವಾಮಿಯ ಕುಂಭಾಭಿಷೇಕ

ಶ್ರೀರಂಗಪಟ್ಟಣದ ಶ್ರೀ ಕೋದಂಡ ರಾಮಸ್ವಾಮಿಯವರ ಕುಂಭಾಭಿಷೇಕವು ಈ ೯ ರ ಮಧ್ಯಾಹ್ನ ೧|| ಗಂಟೆಗೆ ನಡೆಯುವುದು. ಅದಲ್ಲದೆ ಪೂರ್ಣಾಹುತಿ ಮತ್ತು ಶಾತ್ತುಮೊರೈಗಳೂ, ರಾತ್ರಿ ೧೦ ಗಂಟೆಗೆ ಬೀದಿಗಳಲ್ಲಿ ಉತ್ಸವವೂ ನಡೆಯುವುವು. ಈ ದಿನ ಅದರ ಅಂಗವಾಗಿ ಸಂಜೆ ಅಂಕುರಾರ್ಪಣ ಮತ್ತು ನಾಳೆ ಬೆಳಿಗ್ಗೆ ೧೦ ಗಂಟೆಗೆ ಪ್ರತಿಷ್ಠಾಂಗ ಅಧಿವಾಸರ ಮತ್ತು ಹೋಮಾದಿಗಳಿವೆ. ಸಂಗೀತ ಮತ್ತು ನಾಗಸ್ವರ ಕಚೇರಿಗಳೂ ಏರ್ಪಾಡಾಗಿವೆ. ಮಹಾಜನರ ಉದಾರ ಸಹಾಯವನ್ನು ಕೋರಲಾಗಿದೆ.

ಖಾದಿ ಶಿಕ್ಷಣ ಶಾಲೆಯ ಆರಂಭ

ನಂಜನಗೂಡು ೨೨

ಬದನವಾಳ್ ಖಾದಿ ಕೇಂದ್ರದವರು ಕಳೆದ ಭಾನುವಾರ ಅಂಬರ್ ಚರಖಾ ಶಿಕ್ಷಣ ಶಾಲೆಯನ್ನು ಆರಂಭಿಸಿದರು. ಅಲ್ಲಿ ಮೂರು ತಿಂಗಳ ಕಾಲ ಶಿಕ್ಷಣ ಕೊಟ್ಟನಂತರ ಅಂಬರ್ ಚರಖಾಗಳನ್ನು ವಿದ್ಯಾರ್ಥಿಗಳಿಗೇ ಬಹುಮಾನವಾಗಿ ಕೊಡಲಾಗುವುದು. ಶಿಕ್ಷಣ ಪಡೆಯಲು ಅಪೇಕ್ಷಿಸುವವರು ಇದೇ ೩೧ನೇ ತಾರೀಖಿನೊಳಗೆ ಬದನವಾಳು ಖಾದಿ ಕೇಂದ್ರದ ಕಾರ್ಯದರ್ಶಿಯವರಿಗೆ ಬರೆಯಬಹುದೆಂದು ತಿಳಿಸಲಾಗಿದೆ.

ಸೇಂದಿ ಹರಾಜು ಮುಂದಕ್ಕೆ

ಮೈಸೂರು ಜಿಲ್ಲಾಧಿಕಾರಿಗಳು ಮೊನ್ನೆ ಇಲ್ಲಿ ಸೇಂದಿ ಹರಾಜು ನಡೆಸಿ, ಕಳೆದ ವರ್ಷ ಇದ್ದುದಕ್ಕಿಂತಲೂ ಒಂದು ಲಕ್ಷ ರೂ.ಗಳಷ್ಟು ಕಡಿಮೆಯಾಗಿ ಬಿಡ್ ಬಂದುದರಿಂದ ಹರಾಜನ್ನು ಮುಂದುವರಿಸಿದರು ಅಫೀಮು ಮತ್ತು ಗಾಂಜಾಗಳ ಹರಾಜು ನಡೆದು ಶ್ರೀ ಹಾಲಪ್ಪ ಎಂಬುವರು ಮಾಹೆಯಾನಾ ೯೦೦ ರೂ ಗಳಿಗೆ ಬಿಡ್ ಮಾಡಿ ಕಂಟ್ರಾಕ್ಟು ಪಡೆದರು ಈ ಬಾಬಿನಲ್ಲೂ ಕಳೆದ ಸಾಲಿಗಿಂತ ಈಸಾರಿ ಮಾಹೆಯಾನಾ ೨೦೦ರೂ ಖೋತಾ ಬಿದ್ದಿದೆ

ನೆಹರೂರವರಿಂದ ನೈವೇಲಿ ಗಣಿ ಕೆಲಸದ ಆರಂಭ

ಪ್ರಧಾನಿ ನೆಹ್ರೂರವರು ಮೊನ್ನೆ ದಕ್ಷಿಣ ಆರ್ಕಾಟ್ ಜಿಲ್ಲೆಯ ನೈವೇಲಿಯಲ್ಲಿ ೬೮-೯ ಕೋಟಿ ರೂ ವಿನ ಲಿಗ್ನೈಟ್ ಯೋಜನೆಯಲ್ಲಿ ಗಣಿ ಕೆಲಸದ ಆರಂಭೋತ್ಸವವನ್ನು ನೆರವೇರಿಸಿದರು ಅವರು ಗುಂಡಿಯೊಂದನ್ನು ಒತ್ತಿದಾಗ, ಭೂಮಿಯಿಂದ ಅಗಾಧವಾಗಿ ಮಣ್ಣನ್ನು ಎತ್ತಿಹಾಕುವ ಯಂತ್ರವು ಕೆಲಸ ಮಾಡತೊಡಗಿತು ಆಗ ಶಂಖನಾದವೂ, ಫಿರಂಗಿ ಗುಂಡುಗಳೂ ಕೇಳಿಬಂದುವು

ಯೋಜನೆಯ ಪ್ರಕಾರ ವರ್ಷಕ್ಕೆ ೩೫ ಲಕ್ಷ ಟನ್ ಲಿಗ್ನೈಟನ್ನು ತೆಗೆಯಲಾಗುವುದೆಂದೂ, ೧೯೬೨ ರೊಳಗೆ ೨ ಲಕ್ಷ ಕಿಲೊವಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದಲ್ಲದೆ, ೭೦ ಸಾವಿರ ಟನ್ ಸಾರಜನಕದ ಗೊಬ್ಬರವೂ ತಯಾರಾಗುವುದೆಂದೂ ಗೊತ್ತಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಿಟೀಲು ೭-೧೫ ರಿಕಾರ್ಡ್ ೭.೩೦ ಮತ್ತು ೮-೧೫ ಆರ್ ಚಂದ್ರ-ಕಾವ್ಯ ವಾಚನ. ಮಧ್ಯಾಹ್ನ ೧೨ ವಿಶ್ವಂಭರ ಕೋಟಾರಾಂ-ಸಂಗೀತ ೧೨-೩೦ ರಿಕಾರ್ಡ್. ೧-೫೦ ಸಂಗೀತ ಸಂಜೆ ೬-೧೦ ಜಾನಪದ ಗೀತೆ ೬.೩೦ ರಿಕಾರ್ಡ್. ೮ ಗೀತಾ ಗುಚ್ಛ ೮-೩೦ ರಿಕಾರ್ಡ್. ೯-೧೫ ಇಂಗ್ಲಿಷ್ ಭಾಷಣ. ೯-೩೦ ಕನ್ನಡ ನಾಟಕ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು

ಕೊಯಮುತ್ತೂರು	೪೧ ೦೦	೪೪ ೬೨
ರತ್ನಚೂಡಿ	೪೦ ೨೫	೪೧ ೬೨
ಕಡ್ಡಿ	೪೧ ೦೦	೪೧ ೮೪
ಸೇಲಮ್ ಸಣ್ಣ	೪೧ ೪೭	
ರಾಗಿ	೪೪ ೦೦	೪೪ ೫೬
ಜೋಳ	೨೫ ೫೦	೪೪ ೪೭
ಕಡಲೆಕಾಯಿ	೧೯ ೪೭	೨೪ ೫೦
ಹುಚ್ಚೆಳ್ಳು	೪೪ ೫೦	೪೭ ೦೦
ಎಳ್ಳು	೯೪ ೦೦	೯೬ ೨೪
ಹರಳುಬೀಜ	೪೨ ೦೦	
ಹೊಂಗೇಬೀಜ	೨೬ ೫೦	೨೭ ೫೦
ಹುರುಳಿ	೪೦ ೧೨	೪೨ ೬೨
ಹೆಸರು	೩೫ ೦೦	೩೬ ೨೪
ಕಲಸಂದೆ	೩೨ ೪೭	೩೭ ೪೭
ಅವರೆ	೪೪ ೧೨	೫೭ ೭೫
ಉದ್ದು	೭೪ ೫೦	೬೫ ೨೪
ಸಣಬಿನ ಬೀಜ	೪೪ ೧೧	
ಹುಣಸೆಬೀಜ	೫ ೨೫	೫ ೭೪
ಹುಣಸೇಹಣ್ಣು	೨ ೫೦	೪ ೦೦
ಸೀಗೆಕಾಯಿ	೭ ೬೨	೬ ೮೭
ಮೆಣಸಿನಕಾಯಿ	೧೬ ೪೭	೨೦ ೧೧
ಬೆಲ್ಲ	೯ ೦೦	
ತೆಂಗಿನಕಾಯಿ	೧೬೪ ೦೦	೨೪೯ ೦೦

Edited, Printed and Published by
A. R. Nagarajan at Sadhvi Press,
D Subbiah Road, Mysore

ನೀರಿಲ್ಲದೆ ಫಸಲು ಒಣಗುತ್ತಿದೆ

ಟಿ. ನರಸೀಪುರ ೨೦

ಈ ತಾಲ್ಲೂಕಿನ ಬೆಗರವಳ್ಳಿ, ಹೊಸಕೆರೆ, ಅಜೂಕೆರೆ ಮುಂತಾದ ಕಡೆಗಳ ಕೆರೆಗಳಲ್ಲಿ ಮಳೆಯಿಲ್ಲದೆ ನೀರು ಬತ್ತಿಹೋಗಿ ಆಸರೆಯಲ್ಲಿರುವ ಸುಮಾರು ೨೦೦ ಎಕರೆ ಜಮೀನಿನಲ್ಲಿ ಪೈರು ಒಣಗುತ್ತಿದೆ ೮ ದಿನಗಳಿಂದ ನೀರಿಲ್ಲದೆ ಬಹಳ ತೊಂದರೆಯಾಗಿದೆ ಕುರುಗನೂರು ನಾಲಾ ಶಾಖೆಯಿಂದ ಇದಕ್ಕೆ ೧ ತಿಂಗಳಷ್ಟು ನೀರನ್ನು ಬಿಡಲು ಸರ್ಕಾರದವರು ಏರ್ಪಡಿಸಿದರೆ ಮೇಲ್ಕಂಡ ಜಮೀನುಗಳಲ್ಲಿ ಕೈಗೆ ಬಂದಿರುವ ಫಸಲು ಸಾರ್ಥಕವಾಗುತ್ತದೆ

ಇದೇ ರೀತಿ ಗರ್ಗೇಶ್ವರಿಯಲ್ಲಿಯೂ ಸಹ ಆಗಿರುತ್ತದೆ ಪಕ್ಕದಲ್ಲಿರುವ ಬನ್ನೂರು ಹೋಬಳಿ ಗ್ರಾಮಗಳ ಜಮೀನುಗಳಿಗೆ ನಾಲೆಯಿಂದ ನೀರನ್ನೊದಗಿಸಲು ಇಲಾಖೆಯವರು ಏರ್ಪಡಿಸಿರುವಂತೆ ಇಲ್ಲಿಗೂ ಸುಮಾರು ೧೫ ದಿನಗಳ ಕಾಲ ನೀರನ್ನು ಕೊಟ್ಟರೆ ಸೊಪ್ಪನ್ನೂ, ದನಗಳಿಗೆ ಮೇವನ್ನೂ ಬೆಳೆದುಕೊಳ್ಳಲು ಅನುಕೂಲವಾಗುವುದು

ಈ ವಿಷಯಕ್ಕೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಡಬೇಕೆಂದು ಅಲ್ಲಿನ ನಿವಾಸಿಗಳು ಕೋರಿರುತ್ತಾರೆ

ನಾಟಕಾಭಿನಯ

ನಗರದ ಸೆಲೆಕ್ಟ್ ಆರ್ಟಿಸ್ಟ್ಸ್ ಮತ್ತು ಶ್ರೀ ಆರ್ಟಿಸ್ಟ್ಸ್ ಸಂಸ್ಥೆಗಳವರು ಕಳೆದ ಭಾನುವಾರ ಟೌನ್ ಹಾಲಿನಲ್ಲಿ ಕೊಹಿನೂರು ರತ್ನ ಮತ್ತು ಜೈಸೋಮನಾಥ ಎಂಬ ನಾಟಕಗಳನ್ನು ಅಭಿನಯಿಸಿದರು ಹಾಸ್ಯ ಚಲನ ಚಿತ್ರ ನಟ ಶ್ರೀ ಡಿಕ್ಕಿ ಮಾಧವರಾಯರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಕೆ ರಾಮಣ್ಣನವರೂ ಮತ್ತು ಅಧ್ಯಕ್ಷರೂ ಮಾತನಾಡಿ ಕಲಾವಿದರಿಗೆ ಪ್ರೋತ್ಸಾಹವು ಅಗತ್ಯವೆಂದೂ, ಸರ್ಕಾರದವರೂ, ಸ್ಥಳೀಯ ಸಂಸ್ಥೆಗಳೂ ಉತ್ತೇಜನವೀಯಬೇಕೆಂದೂ ಕೋರಿದರು ಶ್ರೀಗಳಾದ ಟಿ. ಎನ್. ಸಿಂಗ್ ಮತ್ತು ಎಂ ಎಸ್ ಅನಂತರಾಯರು ಧನ್ಯವಾದವನ್ನರ್ಪಿಸಿದರು.

ಹೊಡೆದಾಟದಲ್ಲಿ ಒಬ್ಬನ ಮರಣ

ಹುಣಸೂರು ಬಳಿ ಮಂಚೆಬೋಯನಹಳ್ಳಿಯಲ್ಲಿ ಎರಡು ಪಂಗಡಗಳಿಗೆ ಮೊನ್ನೆ ಘರ್ಷಣೆಯಾಗಿ ಮೊಲನಾಯಕ ಎಂಬುವನು ಕೊಲೆಯಾಗಿರುವನೆಂದೂ, ಮೂವರಿಗೆ ಗಾಯಗಳಾದುದಾಗಿಯೂ ವರದಿಯಾಗಿದೆ. ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ದೇವರಾಜಾ ಮಾರ್ಕೆಟ್ಟಿನಲ್ಲಿ ಕಶ್ಮಲ

ದೇವರಾಜಾ ಮಾರ್ಕೆಟ್ಟಿನಲ್ಲಿ ನಿರ್ಮಲೀಕರಣ ಕೆಲಸವು ತೃಪ್ತಿಕರವಾಗಿ ನಡೆಯುತ್ತಿಲ್ಲ. ಬಾಳೆಹಣ್ಣು, ಮಾವಿನ ಹಣ್ಣುಗಳ ಸಿಪ್ಪೆಗಳು ಅಲ್ಲಲ್ಲೇ ಬಿದ್ದು ಜನರು ಕಾಲು ಜಾರಿ ಬೀಳುತ್ತಿರುವ ದೃಶ್ಯಗಳು ಕಾಣಬರುತ್ತಿವೆ ಮಾರ್ಕೆಟ್ ಅಧಿಕಾರಿಗಳು ಈ ವಿಚಾರದಲ್ಲಿ ಗಮನ ಕೊಟ್ಟಂತೆ ಕಂಡುಬಂದಿಲ್ಲ. ಕುಂದುಕೊರತೆಗಳನ್ನಾಗಲೀ, ಅಥವಾ ದೂರುಗಳನ್ನಾಗಲೀ ಬರೆಯಲು ಮಾರ್ಕೆಟ್ ಕಛೇರಿಯಲ್ಲಿ ಪುಸ್ತಕವಿಲ್ಲ. ಪಶ್ಚಿಮ ಭಾಗದ ಮಧ್ಯದ ಬಾಗಲು ಬಳಿ ವಿಪರೀತ ಅಸಹ್ಯವಾಗಿರುತ್ತದೆ-ಎಂಬುದಾಗಿ ಪಾಠಕರೊಬ್ಬರು ತಿಳಿಸುತ್ತಾರೆ.

ಶಿಶು ಸ್ನೇಹಿ
ಮಕ್ಕಳ ಆರೋಗ್ಯ ಶಾಸ್ತ್ರೀಯ ಔಷಧ-
ನಿರೋಧಕ, ನಿವಾರಕ ಸಂಬಂಧಗಳಿಗೆ :-
‘ಔಷಧ್ ಹೌಸ್’, ಚಾಮರಾಜಪುರಂ,
ಮೈಸೂರು (ಸುಬ್ಬರಾಯ [illegible] ಹತ್ತಿರ)

ಕಾಂಗ್ರೆಸ್ ಚುನಾವಣಾ ವೇಳಾ ಪಟ್ಟಿ

ಕಾಂಗ್ರೆಸ್ ಸಂಸ್ಥೆಯ ಪ್ರಾಥಮಿಕ ತಾಲ್ಲೂಕು, ಟೌನ್ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳು, ಪ್ರದೇಶ ಮತ್ತು ಎ ಐ ಸಿ. ಸಿ ಗಳು ಮತ್ತು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಗಳ ಕಾರ್ಯಕ್ರಮ ಪಟ್ಟಿಯನ್ನು ಎ ಐ. ಸಿ ಸಿ ಯವರು ಸಿದ್ಧಗೊಳಿಸಿರುತ್ತಾರೆ. ಅದರ ಪ್ರಕಾರ ಕಾಂಗ್ರೆಸ್ ಅಧ್ಯಕ್ಷರ ಸ್ಥಾನಕ್ಕೆ ನಾಮ ಪತ್ರವನ್ನು ನವೆಂಬರ್ ೮ರೊಳಗೆ ಸಲ್ಲಿಸಬೇಕು ೩೦ನೇ ತಾರೀಕು ಚುನಾವಣೆ ನಡೆದು, ಡಿಸೆಂಬರ್ ೫ ರಂದು ಫಲಿತಾಂಶದ ಪ್ರಕಟಣೆಯಾಗುವುದು.

ಇತರ ಪ್ರಾಥಮಿಕ ಸದಸ್ಯರ ಪಟ್ಟಿಯ ಪ್ರಕಟಣೆಯು ಇದೇ ಜುಲೈ ೧೫ರಂದೂ, ಅಸ್ಸೈರು ಪಟ್ಟಿಯು ಸೆಪ್ಟೆಂಬರ್ ೧೫ರಂದೂ ಪ್ರಕಟವಾಗುವುವು ಅಧಿವೇಶನದ ಪ್ರತಿನಿಧಿಗಳ ಚುನಾವಣೆಗೆ ನಾಮಪತ್ರಗಳನ್ನು ಸೆಪ್ಟೆಂಬರ್ ೨೨ರಂದು ತೆಗೆದುಕೊಳ್ಳಲಾಗುವುದು ಚುನಾವಣೆಯು ಅಕ್ಟೋಬರ್ ೧೫ರಂದು ನಡೆಯುವುದು

ಜಿಲ್ಲಾ ಕಾಂಗ್ರೆಸ್ ಸಮಿತಿಗಳನ್ನು ಅಕ್ಟೋಬರ್ ೩೦ ರಂದು ರಚಿಸಬೇಕು; ಅವುಗಳ ಅಧಿಕಾರ ವರ್ಗಕ್ಕೆ ನವೆಂಬರ್ ೪ ರಂದು ಚುನಾವಣೆ ನಡೆಯುವುದು ಮತ್ತು ಪ್ರದೇಶ ಕಾಂಗ್ರೆಸ್ ಅಧಿಕಾರ ವರ್ಗಕ್ಕೆ ನವೆಂಬರ್ ೩೦ ರಂದು ಚುನಾವಣೆಗಳಾಗುವುವು.

ಕಲ್ಕತ್ತದಲ್ಲಿ ೧೨೦ ಜನ ಸೆಣಬು ಕಾರ್ಮಿಕರ ಬಂಧನ

ಪಶ್ಚಿಮ ಬಂಗಾಳದ ಸರ್ಕಾರದ ಕಛೇರಿ ಬಳಿ ಪ್ರತಿಬಂಧಕಾಜ್ಞೆಯ ಉಲ್ಲಂಘನೆ ಪ್ರಯತ್ನಕ್ಕಾಗಿ ಕಳೆದ ಭಾನುವಾರ ಕಲ್ಕತ್ತಾ ಪೊಲೀಸರು ೧೨೦ ಸೆಣಬು ಕಾರ್ಮಿಕರನ್ನು ಬಂಧಿಸಿದರು ತಮ್ಮ ಮಾಲೀಕರುಗಳು ಪ್ರಾವಿಡೆಂಟ್ ನಿಧಿ ಹಣವನ್ನು ಕೊಡಲಿಲ್ಲವೆಂಬ ಅಹವಾಲನ್ನು ತಿಳಿಸುವುದಕ್ಕಾಗಿ ಅವರು ಅಲ್ಲಿಗೆ ಬಂದಿದ್ದರು. ಪಶ್ಚಿಮ ಬಂಗಾಳದಲ್ಲಿ ೪ ಸೆಣಬು ಗಿರಣಿಗಳು ಮುಚ್ಚಿ ೧೧,೦೦೦ ಕಾರ್ಮಿಕರಿಗೆ ನಿರುದ್ಯೋಗ ಉಂಟಾಗಿದೆ.

ಸತ್ಯನಾರಾಯಣ ಪೂಜೆ

ಜನವಾಣಿ ಮತ್ತು ಪ್ರಜಾಮತ ಪತ್ರಿಕೆಯ ಏಜೆಂಟರಾದ ಶ್ರೀ ಡಿ. ಎ. ಗೋವಿಂದರಾಯರು ತಮ್ಮ ಕುಮಾರ ಶ್ರೀ ಪ್ರಹ್ಲಾದನ ಉಪನಯನದ ಸಂಬಂಧವಾಗಿ ನೆನ್ನೆ ತಮ್ಮ ನಿವಾಸದಲ್ಲಿ ಸತ್ಯನಾರಾಯಣ ಪೂಜೆಯನ್ನು ನೆರವೇರಿಸಿದರು ಇಷ್ಟ ಮಿತ್ರರನ್ನು ಭೋಜನಕೂಟಕ್ಕೆ ಆಹ್ವಾನಿಸಿದ್ದರು.

ಉಪಾಧ್ಯಾಯರ ಸಂಬಳದ ವ್ಯತ್ಯಾಸದ ಬಗ್ಗೆ ತನಿಖೆ ಸಮಿತಿ

ಉಪಾಧ್ಯಾಯರ ಸಂಬಳ, ಸೇವಾ ನಿಯಮಗಳಲ್ಲಿ ವ್ಯತ್ಯಾಸ, ಶಾಲೆಗಳ ಆಡಳಿತಗಳಲ್ಲಿ ಭಿನ್ನತೆ ಮುಂತಾದುವನ್ನು ಪರಿಶೀಲಿಸಲು ಸರ್ಕಾರದವರು ಸಮಿತಿಯೊಂದನ್ನು ರಚಿಸಿರುವರೆಂದು ತಿಳಿದುಬಂದಿದೆ

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd.1911)



ಹೊಸ ತೆರಿಗೆಯಿಂದ ೪ ಲಕ್ಷ ಹೆಚ್ಚು ವರಮಾನ ತೆರಿಗೆದಾರ

ದೇಶದಲ್ಲಿ ವರಮಾನ ತೆರಿಗೆ ಕೊಡುತ್ತಿರು ರ ಸಂಖ್ಯೆಯು ಈಗ ೫ ಲಕ್ಷವಿರುವುದೆಂದೂ ೪,೩೦೦ ರೂ.ನಿಂದ ೩,೦೦೦ ರೂ ಗೆ ತೆರಿಗೆ ಟ್ಟವನ್ನು ಇಳಿಸಿದರೆ ಇನ್ನೂ ೪ ಲಕ್ಷ ಜನ ದಾರರು ಹೆಚ್ಚುವರೆಂದೂ ಕೇಂದ್ರ ಮಂತ್ರಿ ಟಿ.ಟಿ. ಕೃಷ್ಣಮಾಚಾರಿಯವರು ತಿಳಿಸಿರು

ಬೆಂಗಳೂರು-ಸೇಲಂ ರೈಲು ಮು ಕಾರ್ಯ

ಬೆಂಗಳೂರು-ಸೇಲಂಗಳ ನಡುವೆ ರೈಲು ಹಾಕುವ ಸಂಬಂಧವಾಗಿ ನಡೆಯುತ್ತಿರುವ ರ್ಯವು ಈ ತಿಂಗಳೊಳಗೆ ಪೂರ್ತಿಯಾಗುವುದೆಂ ರೈಲ್ವೆ ಉಪ ಮಂತ್ರಿ ಷಾ ನವಾಜ್ ಖಾ ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ ದ್ವಿತೀಯ ಯೋಜನೆಯಲ್ಲಿ ಈ ಕಾರ್ಯವನ್ನು ಕೈಗೊ ವುದು ಅಸಂಭವವೆಂದು ಹೇಳಲಾಗಿದೆ

ಆಂಧ್ರ ಪ್ರದೇಶದ ಪ್ರಾಣಿದಯಾ ಸಮ್ಮೇಳನ

ಆಂಧ್ರ ಪ್ರದೇಶದ ಪ್ರಾಣಿದಯಾ ಸಮ್ಮೇಳನವು ನಾಳೆಯು ಮತ್ತು ೧೫ನೇ ತಾರೀಖು ಅದ ನಿಯಲ್ಲಿ ಸೇರುವುದು. ಪದ್ಮಶ್ರೀ ರುಕ್ಮಿಣಿದೇ ಯವರು ಅಧ್ಯಕ್ಷತೆ ವಹಿಸುವರು ಆಂಧ್ರ ಪ್ರ ಶ ಮಂತ್ರಿ ಕಳಾ ವೆಂಕಟರಾಯರು ಆರಂಭೋ ತ್ಸವವನ್ನು ನೆರವೇರಿಸುವರು. ಮತ ಧರ್ಮ ಹಾರ, ವಿಜ್ಞಾನ, ಕ್ರೀಡೆ ಮುಂತಾದುವುಗಳ ಗಿ ಪ್ರಾಣಿಗಳನ್ನಾಗಲೀ, ಪಕ್ಷಿಗಳನ್ನಾಗಲಿ ಬ ಕೊಡಬಾರದೆಂದೂ, ಜನ ಸಾಮಾನ್ಯರು ಸಸ್ಯಾ ರವನ್ನು ತೆಗೆದುಕೊಳ್ಳುವ ಪದ್ಧತಿಯನ್ನು ಪ್ರೋ ತ್ಸಾಹಿಸಬೇಕೆಂದೂ, ದನಕರುಗಳ ವಧೆ ಬೇಕೆಂದೂ ಸಮ್ಮೇಳನವು ಧ್ಯೇಯವನ್ನಾಗಿ ಟ್ಟುಕೊಂಡಿದೆ.

ಭೂ ಸುಧಾರಣೆ ಸಮಿತಿಯ ಪ್ರವಾಸ

ಭೂ ಮತ್ತು ಗೇಣಿ ವಿಚಾರಗಳ ಶಾಸನ ಸಮನ್ವಯಕ್ಕಾಗಿ ರಚಿಸಲಾಗಿರುವ ಸಮಿತಿ ಪ್ರಥಮ ಸಭೆಯು ಮೊನ್ನೆ ವಿಧಾನ ಸೌಧ ನಡೆಯಿತು ಸಮಿತಿಯವರು ಈ ತಿಂಗಳು ರಿಂದ ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವ ಮೊದಲು ಅವರು ದಕ್ಷಿಣ ಕನ್ನಡ ಮತ್ತು ಉ ರ ಕನ್ನಡ ಜಿಲ್ಲೆಗಳಲ್ಲಿ ಸಂಚರಿಸಿ ರೈತರ ಮ ಜಮೀನುದಾರರ ಅಹವಾಲುಗಳನ್ನು ಕೇ ರು ಸ್ಥಳೀಯ ಸ್ಥಿತಿಗಳನ್ನು ಅರಿಯಲು ರು ಹಲವು ಹಳ್ಳಿಗಳಿಗೆ ಭೇಟಿ ಕೊಡುವರು

ಮನೆ ಮಾರಾಟಕ್ಕಿದೆ
ಡೋರ್ ನಂ 733. ಚಿಕ್ಕ ಮೊಹಲ್ಲಾ
ಪ್ರಭುದೇವ ಸಿನಿಮಾ ಹತ್ತಿರ
ವಿವರಗಳಿಗೆ :-
ಜಯ ಅಂಡ್ ಕಂಪನಿ,
ಹಳೆ ಮೈಸೂರು ಬ್ಯಾಂಕ್ ರಸ್ತೆ, ಮೈಸೂ

ವಸಂತ ಕಾಲದ ಆಕರ್ಷಣೆ
ನಿಮ್ಮ ಮಕ್ಕಳ ಅಂದವಾದ
ಕಾರ್ಡ್ ಸೈಜ್ ಭಾವಚಿತ್ರ
ಒಂದು ರೂಪಾಯಿ ಮಾತ್ರ
ಪ್ರಭಾ ಟಾಕೀಸ್ ಬಳಿ ಇರುವ
ಶ್ರೀಕಾಂತ್ ಸ್ಟುಡಿಯೊವಿಗೆ
ಭೇಟಿ ಕೊಡಿ
ರೋಲ್ ಫಿಲಮ್, ಡೆವಲಪಿಂಗ್,
ಪ್ರಿಂಟಿಂಗ್, ಎನ್ಲಾರ್ಜಿಂಗ್ ಸಹ
ಮಾಡುತ್ತೇವೆ

CLASSES IN FULL SWING
★ S S. L C Suppl. Exam
7.30 a. m. to 11-30 a. m. da
Separate classes for girls
★ MADRAS MATRICULATION
Any person above 19 years
may join
C. T. C, Old Agrahar, Mysore
(With the best staff & equipme
B. K. Satyabodha
M.A., B
Princip

ರಿಜಿಸ್ಟ್ರೀ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ



ಇಂದಿನ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

ಸಂಪುಟ : ೧೫] SADHVI , THURSDAY 23—5—1957 ಮೈಸೂರು : ಗುರುವಾರ ೨೩—೫—೧೯೫೭ : [ಸಂಚಿಕೆ : ೨೯೦

ವಿಶ್ವಾಸದ ಓಟು ಸಿಗದೆ ಫ್ರೆಂಚ್ ಸರ್ಕಾರದ ಪತನ

ನೆನ್ನೆ ನಗರದಲ್ಲಿ ೭। ಅಂಗುಲ ಮಳೆ

ನವಜ್ಯೋತಿ ಸ್ಟುಡಿಯೊ ಮತ್ತು ಮೃಗಾಲಯ ಕಟ್ಟಡಗಳಿಗೆ ಜಖಂ

ಮೈಸೂರು ೨೩

ನಗರದಲ್ಲಿ ನೆನ್ನೆ ದಿನ ೭-೩೫ ಅಂಗುಲ ಮಳೆ ಬಿದ್ದಿತು. ಕಳೆದ ಎರಡು ದಿನಗಳ ಸತತವಾದ ಮಳೆಯಿಂದ ಹಲವಾರು ಗುಡಿಸಲುಗಳು ಕುಸಿದವು. ಮೃಗಾಲಯದ ನೈಋತ್ಯ ಭಾಗದಲ್ಲಿ ಎರಡು ಕಡೆ ಸುಮಾರು ೭೫ ಅಡಿಗಳಷ್ಟು ಉದ್ದದ ಗೋಡೆಯು ಉರುಳಿತು. ನವಜ್ಯೋತಿ ಸ್ಟುಡಿಯೋವಿನ ಉತ್ತರದ ಅರ್ಧ ಭಾಗ ಕಟ್ಟಡವು ಕುಸಿಯಿತು. ಜಲಪುರಿಯಲ್ಲಿ ಹಲವಾರು ಮಾದರಿ ಮನೆಗಳ ಚಾವಣಿ ಭಾವಣಿಗಳು ಶೈತ್ಯದಿಂದ ಬಿರುಕು ಬಿಟ್ಟು ಗಾರೆಯು ಬಿದ್ದುಹೋಯಿತು. ಕೊತ್ವಾಲ ರಾಮಯ್ಯನವರ ಬೀದಿಯಲ್ಲಿ ಮಳೆಯ ನೀರಿನಲ್ಲಿ ಕೊಚ್ಚಿಕೊಂಡು ಬಂದಿದ್ದ ಮಣ್ಣು ಒಚ್ಚಲನ್ನು ತುಂಬಿದುದರಿಂದ ಅದು ತಿಳಿಯದೆ ಒಂದು ಕಾರು ಮಗುಚಿಕೊಂಡಿತು. ಈ ದಿನವೂ ಮಳೆ ಬೀಳುತ್ತಲೇ ಇದೆ. ಅನೇಕ ವರ್ಷಗಳಿಂದ ಇಷ್ಟು ಭಾರಿ ಮಳೆಯಾಗಿರಲಿಲ್ಲವೆಂದು ಗೊತ್ತಾಗಿದೆ

ಭಾರತದಲ್ಲಿ ಅಣುಶಸ್ತ್ರ ಶೇಖರಣೆ ಅನಿವಾರ್ಯ

ರಾಜ್ಯಸಭೆಯಲ್ಲಿ ಕುಂಜ್ರುರವರ ಹೇಳಿಕೆ

ರಾಜ್ಯಸಭೆಯಲ್ಲಿ ನೆನ್ನೆ ಪಂಡಿತ ಹೃದಯನಾಥ ಕುಂಜ್ರುರವರು ಮಾತನಾಡಿ ಪಕ್ಕದ ರಾಷ್ಟ್ರಗಳು ಅಣು ಅಸ್ತ್ರಗಳನ್ನು ಇಟ್ಟುಕೊಂಡರೆ ಭಾರತವೂ ತನ್ನ ಸೈನ್ಯಗಳಿಗೆ ಅವನ್ನು ಒದಗಿಸಬೇಕಾಗುವುದೆಂದು ತಿಳಿಸಿದರು. ನಾವು ಅಣುಶಸ್ತ್ರ ಪ್ರೇಮಿಗಳಲ್ಲವಾದರೂ ಮತ್ತು ಅವನ್ನು ತ್ಯಜಿಸಬೇಕೆಂದು ಹೇಳುವುದಾದರೂ, ವಾಸ್ತವಿಕಾಂಶವನ್ನು ದೃಷ್ಟಿಸಿ ಅದರಂತೆ ನಡೆದುಕೊಳ್ಳುವುದು ಅಗತ್ಯವೆಂದು ಅವರು ಹೇಳಿದರು.

ಮೂವರು ನೂತನ ಗವರ್ನರರ ನೇಮಕ

ಮಾಜಿ ಕೇಂದ್ರ ಮಂತ್ರಿ ವಿ. ವಿ. ಗಿರಿ, ಆಲಿಘರ ವಿಶ್ವವಿದ್ಯಾಲಯದ ವೈಸ್‌ಛಾನ್ಸೆಲರ್ ಡಾ|| ಜಕೀರ್‌ಹುಸೇನ್ ಮತ್ತು ಮಾಜಿ ಕೇಂದ್ರ ನ್ಯಾಯಾಂಗ ಮಂತ್ರಿ ಹೆಚ್. ವಿ. ಪಾಟಸ್ಕರ್‌ರವರನ್ನು ಉತ್ತರ ಪ್ರದೇಶ, ಬಿಹಾರ್ ಮತ್ತು ಮಧ್ಯಪ್ರದೇಶಗಳ ಗವರ್ನರುಗಳನ್ನಾಗಿ ನೇಮಿಸಲಾಗಿದೆ. ಗಿರಿ ಮತ್ತು ಪಾಟಸ್ಕರ್‌ರವರು ಬರುವ ತಿಂಗಳ ಪ್ರಥಮ ವಾರದಲ್ಲಿ ಅಧಿಕಾರ ವಹಿಸಿಕೊಳ್ಳುವರು. ಜಕೀರ್ ಹುಸೇನರು ಜುಲೈ ಪ್ರಥಮ ವಾರದಲ್ಲಿ ಅಧಿಕಾರಕ್ಕೆ ಬರುವವರು. ಅವರು ಬರುವವರೆಗೆ ಶ್ರೀ ಆರ್. ಆರ್. ದಿವಾಕರರ ಅಧಿಕಾರಾವಧಿಯನ್ನು ಹೆಚ್ಚಿಸಲಾಗಿದೆ.

ಕಾನ್ಸಾಸಿನಲ್ಲಿ ಬಿರುಗಾಳಿಯಿಂದ ೩೨ ಜನರ ಮರಣ

ಅಮೆರಿಕದ ಕಾನ್ಸಾಸ್ ಪ್ರಾಂತದಲ್ಲಿ ಮೊನ್ನೆ ರಾತ್ರಿ ಬಿರುಗಾಳಿ ಬೀಸಿದ ಪರಿಣಾಮವಾಗಿ ೩೨ ಜನರು ಮಡಿದು ೨೦೦ ಮಂದಿಗೆ ಗಾಯವಾಗಿದೆ

ಹೆಚ್ಚು ಆಹಾರ ಬೆಳೆಗಾಗಿ ೧೪॥ ಕೋಟಿ ರೂ. ವೆಚ್ಚ

ವ್ಯವಸಾಯ ಮಂತ್ರಿ ರುದ್ರಪ್ಪನವರ ಹೇಳಿಕೆ

ಬೆಂಗಳೂರು ೨೩

ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯ ಆಖೈರಿನಲ್ಲಿ ಇನ್ನೂ ೮ ಲಕ್ಷ ಟನ್ ಧಾನ್ಯವನ್ನು ಹೆಚ್ಚಾಗಿ ಬೆಳೆಯಲಾಗುವುದೆಂದು ತಿಳಿಸಿದರು. ಸಂಸ್ಥಾನದಲ್ಲಿ ಈಗ ೧,೩೫,೭೭,೬೯೨ ಎಕರೆ ಜಮೀನು ಸಾಗುವಳಿಯಾಗಿ, ೩೮ ಲಕ್ಷ ಟನ್ ಧಾನ್ಯವು ಬೆಳೆಯುತ್ತಿರುವುದೆಂದೂ, ೬೦-೬೧ ರ ಹೊತ್ತಿಗೆ ೪೬ ಲಕ್ಷ ಟನ್ ಗುರಿಯನ್ನು ಸಾಧಿಸಬೇಕಾಗಿರುವುದೆಂದೂ ಅವರು ಹೇಳಿದರು.

ಸಹಕಾರ ರೀತ್ಯಾ ನಡೆಯುತ್ತಿರುವ ವ್ಯವಸಾಯವು ಫಲಪ್ರದವಾಗಲಿಲ್ಲವೆಂದು ಅವರು ಅಭಿಪ್ರಾಯಪಟ್ಟರು

ಹೆಚ್ಚು ಆಹಾರ ಬೆಳೆ ಯೋಜನೆಯು ಜಾರಿಯಾದಾಗಿನಿಂದ ಶೇಕಡ ೨೫ರಷ್ಟು ಉತ್ಪತ್ತಿಯು ಹಳೇ ಮೈಸೂರಿನಲ್ಲಿ ಆಗಿರುವುದೆಂದು ಅವರು ಹೇಳಿ, ಈ ಯೋಜನೆಯನ್ನು ಮುಂದುವರಿಸಲಾಗುವುದೆಂದೂ, ಅದಕ್ಕಾಗಿ ೧ ಕೋಟಿ, ೮೮ ಲಕ್ಷ, ೭೯ ಸಹಸ್ರ ರೂ. ಗಳನ್ನು ವೆಚ್ಚ ಮಾಡಲಾಗುವುದೆಂದೂ ಹೇಳಿದರು. ಇದಕ್ಕಾಗಿ ಕೇಂದ್ರ ಸರ್ಕಾರದವರು ೧,೦೩,೩೭,೦೦೦ ರೂ ಗಳನ್ನು ಒದಗಿಸುವರೆಂದೂ, ಆ ಪೈಕಿ ೮೮-೮೭ ಲಕ್ಷವು ಸಾಲವಾಗಿಯೂ, ಉಳಿದುದು ಸಹಾಯವಾಗಿಯೂ ಬರುವುದೆಂದೂ ನುಡಿದರು.

ಈ ಸಾಲಿನಲ್ಲಿ ೫೫,೭೭೫ ಎಕರೆ ಬಂಜರು ಜಮೀನು ಮತ್ತು ೬೩೦ ಎಕರೆ ಕುರುಚಲು ಪ್ರದೇಶವನ್ನು ಬುಲ್‌ಡೋಜರ್ ಸಹಾಯದಿಂದ ವ್ಯವಸಾಯಕ್ಕೆ ಅನುಕೂಲಗೊಳಿಸಲಾಗುವುದು. ೧೩। ಲಕ್ಷ ರೂ. ವೆಚ್ಚದಿಂದ ಬಿತ್ತನೆ ಬೀಜದ ಜಮೀನುಗಳ ಅಭಿವೃದ್ಧಿ ಮಾಡಲಾಗುವುದು. ೩॥ ಲಕ್ಷ ಎಕರೆ ಜಮೀನಿಗೆ ೯೮ ಸಾವಿರ ಮಣ ಬೀಜದ ಧಾನ್ಯವನ್ನು ಬಿತ್ತನೆಗಾಗಿ ಒದಗಿಸಲಾಗುವುದು. ೨,೭೬,೦೦೦ ರೂ. ವೆಚ್ಚದಿಂದ ೩,೯೮೩ ಟನ್ ಫಾಸ್ಫೇಟ್ ಗೊಬ್ಬರ ಮತ್ತು ೫೦೦ ಟನ್ ಮೂಳೆ ಗೊಬ್ಬರವನ್ನು ಹಂಚಲಾಗುವುದು. ಅಲ್ಲದೆ ೫೦,೦೦೦ ಟನ್ ಸಾರಜನಕದ ಗೊಬ್ಬರವನ್ನೂ ಕೊಡಲಾಗುವುದು.

ಈ ವರ್ಷದಲ್ಲಿ ೬,೦೭,೦೦೦ ರೂ. ವೆಚ್ಚದಿಂದ ೧,೧೦೮ ನೀರಾವರಿ ಟ್ಯೂಬ್ ಬಾವಿಗಳನ್ನು ಮಳೆಯಿಲ್ಲದ ಕಡೆ ತೆಗೆಯಲಾಗುವುದು. ಪ್ರತಿ ಬಾವಿಗೂ ೨೫೦ ರೂ ಸಹಾಯ ಮತ್ತು ೭೫೦ ರೂ ಸಾಲವನ್ನು ಕೊಡಲಾಗುವುದು. ಇದಕ್ಕಾಗಿ ಭಾರತ ಸರ್ಕಾರದವರು ೧,೩೮,೫೦೦ ರೂ. ಸಹಾಯ ಮತ್ತು ೩,೩೦,೦೦೦ ರೂ. ಸಾಲ ಕೊಡುವರು.

ಜಪಾನ್ ಮಾದರಿ ಬೆಳೆ ತೆಗೆಯುವ ವಿಧಾನವನ್ನು ಈ ವರ್ಷ ೩ ಲಕ್ಷ ಎಕರೆಗಳಲ್ಲಿ ಜಾರಿಗೆ ತರಲಾಗುವುದು. ವಿದ್ಯುಚ್ಛಕ್ತಿ ನೀರಾವರಿ ಯೋಜನೆಯ ವೆಚ್ಚವು ಈ ಸಾರಿ ೩೪ ಲಕ್ಷ ರೂ. ಗಳಾಗುವುದು. ಅದರ ಪ್ರಕಾರ ೩॥ ಸಾವಿರ ಎಕರೆಯಲ್ಲಿ ೬೦೦ ಪಂಪು ಸೆಟ್ಟನ್ನು ಸ್ಥಾಪಿಸಲಾಗುವುದು. ಈ ಹಣವನ್ನು ಕೇಂದ್ರ ಸರ್ಕಾರದವರು ಸಾಲವಾಗಿ ಕೊಡುವರು--ಎಂದು ಸಚಿವರು ಹೇಳಿದರು.

ಈಗ ಮೈಸೂರು ಸಂಸ್ಥಾನವು ಭತ್ತದ ವಿಚಾರದಲ್ಲಿ ಮಾತ್ರ ಸ್ವಸಂಪೂರ್ಣತೆ ಪಡೆದಿಲ್ಲವೆಂದೂ, ಅದರಲ್ಲಿ ಶೇಕಡ ೫ ರಿಂದ ೧೦ ರಷ್ಟು ಕೊರತೆ ಬರಬಹುದೆಂದೂ, ಆಹಾರದ ವಿಚಾರದಲ್ಲಿ ಸ್ವಸಂಪೂರ್ಣತೆಯನ್ನು ಸಾಧಿಸಲಾಗುವುದೆಂದೂ ಅವರು ಹೇಳಿದರು

ಫ್ರಾನ್ಸಿನ ಮಂತ್ರಿಮಂಡಲದ ಪತನ

ಫ್ರಾನ್ಸಿನ ಪ್ರಧಾನಿ ಗೈ ಮೋಲೆಯವರ ಮಂತ್ರಿಮಂಡಲವು ವಿಶ್ವಾಸ ಸೂಚನೆ ನಿರ್ಣಯದ ಸೋಲಿನ ಪರಿಣಾಮವಾಗಿ ನೆನ್ನೆ ಪತನವಾಯಿತು. ಅದರ ಪರವಾಗಿ ೨೧೩ ಮತ್ತು ವಿರೋಧವಾಗಿ ೨೫೦ ಓಟುಗಳು ಬಂದುವು. ಎರಡನೇ ಮಹಾ ಯುದ್ಧದಿಂದೀಚೆಗೆ ಫ್ರಾನ್ಸಿನಲ್ಲಿ ಸ್ಥಾಪಿತವಾದ ಮಂತ್ರಿಮಂಡಲಗಳ ಪೈಕಿ ಮೋಲೆಯವರ ಸರ್ಕಾರವೇ ಅತ್ಯಂತ ದೀರ್ಘಕಾಲ ಬಾಳಿದ್ದಿತು

ಅವರ ಸರ್ಕಾರದ ಪತನವಾದರೂ ಅಧ್ಯಕ್ಷ ರೀನೆ ಕೋಟಿಯವರು ಮಂತ್ರಿಗಳ ರಾಜೀನಾಮೆಯನ್ನು ಸ್ವೀಕರಿಸಲು ಸಮ್ಮತಿಸಿಲ್ಲ. ಇತರ ಪಕ್ಷಗಳೊಡನೆ ಅಧ್ಯಕ್ಷರು ಸಮಾಲೋಚನೆ ನಡೆಸುತ್ತಿರುವರು. ಮೋಲೆಯವರ ಮಂತ್ರಿಮಂಡಲವು ೧೫ ತಿಂಗಳು ೨೦ ದಿನಗಳವರೆಗೆ ಅಧಿಕಾರ ನಡೆಸಿತು. ಆಲ್ಜೀರಿಯದಲ್ಲಿ ಫ್ರಾನ್ಸಿನ ಆಧಿಪತ್ಯವನ್ನುಳಿಸಿಕೊಂಡುಬರಲು ತಗಲುವ ವೆಚ್ಚವನ್ನು ಹುಟ್ಟುವಳಿ ಮಾಡುವ ವಿಚಾರವಾಗಿ ವಿಶ್ವಾಸ ನಿರ್ಣಯವನ್ನು ತರಲಾಗಿತ್ತು

ಹಿಂದೂಸ್ಥಾನ್ ವಿಮಾನ ಕಾರ್ಖಾನೆಗೆ ೧೮ ಕೋಟಿ ರೂ. ಬಂಡವಾಳ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಷೇರು ಮೊತ್ತವನ್ನು ೮ ಕೋಟಿ ರೂ.ನಿಂದ ೧೮ ಕೋಟಿ ರೂ. ಗೆ ಹೆಚ್ಚಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ಇದರ ಷೇರ್ ಪಾಲುದಾರರಾಗಿರುವ ಮೈಸೂರು ಸರ್ಕಾರದವರು ಹೆಚ್ಚು ಷೇರುಗಳನ್ನು ತೆಗೆದುಕೊಳ್ಳುತ್ತಿಲ್ಲವಾದುದರಿಂದ ಉಳಿದ ೧೮ ಕೋಟಿ ರೂ ಗಳನ್ನೂ ಭಾರತ ಸರ್ಕಾರದವರೇ ಹಾಕುವರು. ಈಗಿನ ವ್ಯಾಂಪೈರ್ ವಿಮಾನಗಳ ಬದಲು ಅಧುನಿಕ ಕಾದಾಟ ವಿಮಾನವನ್ನು ಅಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ. ಅಲ್ಲದೆ ಮೂರನೇ ತರಗತಿ ರೈಲು ಗಾಡಿಗಳನ್ನೂ ತಯಾರಿಸಲಾಗುವುದು

ಭಾರತದಲ್ಲಿ ಅಣು ಕಣಗಳ ವ್ಯಾಪ್ತಿ

ಕಳೆದ ಎರಡು ವರ್ಷಗಳಿಂದ ಭಾರತದ ಅಣುಕಣಗಳ ವ್ಯಾಪ್ತಿಯು ಹೆಚ್ಚುತ್ತಿರುವುದೆಂದು ಪ್ರಧಾನಿ ನೆಹರೂರವರು ಲೋಕಸಭೆಯಲ್ಲಿ ತಿಳಿಸಿದ್ದಾರೆ. ಕಳೆದ ೨೩ರಲ್ಲಿ ಅವುಗಳು ವಿಶೇಷವಾಗಿದ್ದುದನ್ನು ಬೊಂಬಾಯಿಯಲ್ಲಿ ರಿಕಾರ್ಡು ಮಾಡಲಾಯಿತೆಂದು ಅವರು ಹೇಳಿದರು.

ಜಲಜನಕ ಬಾಂಬಿನ ಪರೀಕ್ಷೆ ಕೂಡಲೇ ನಿಲ್ಲಬೇಕು

ಲೋಕಸಭೆಯಲ್ಲಿ ಸರ್ಕಾರದ ನಿರ್ಣಯ

ಅಣು ಶಸ್ತ್ರ ಮತ್ತು ಜಲಜನಕ ಬಾಂಬುಗಳ ಪರೀಕ್ಷಾ ಪ್ರಯೋಗಗಳನ್ನು ಕೂಡಲೇ ನಿಲ್ಲಿಸಬೇಕೆಂದು ಜಗತ್ತಿನ ಹಿರಿಯ ರಾಷ್ಟ್ರಗಳಿಗೆ ಲೋಕಸಭೆಯು ಸರ್ವಾನುಮತದ ನಿರ್ಣಯದ ಮೂಲಕ ನೆನ್ನೆ ಸೂಚಿಸಿತು. ನಿರ್ಣಯವನ್ನು ರಕ್ಷಣಾ ಮಂತ್ರಿ ವಿ. ಕೆ. ಕೃಷ್ಣಮೆನನ್‌ರು ಮಂಡಿಸಿದರು. ಅವರು ಮಾತನಾಡಿ ಇದುವರೆಗೆ ಆಗಿರುವ ೧೧೦ ಪರೀಕ್ಷಾ ಪ್ರಯೋಗಗಳ ಪೈಕಿ ಅಮೆರಿಕವು ೫೦, ರಷ್ಯವು ೩೦ ಮತ್ತು ಬ್ರಿಟನ್ನು ೧೦ ಸಿಡಿತಗಳನ್ನು ನಡೆಸಿರುವುದಾಗಿ ಹೇಳಿ ಇಡೀ ಪ್ರಪಂಚವನ್ನೇ ನಾಶ ಮಾಡುವಷ್ಟು ಶಸ್ತ್ರಗಳನ್ನು ಈ ರಾಷ್ಟ್ರಗಳು ಹೊಂದಿರುವುದಾಗಿ ತಿಳಿಸಿದರು. ಈ ಪರೀಕ್ಷೆಗಳಿಂದ [illegible] ಕಣಗಳು ಹರಡಿ ಮುಖ್ಯವಾಗಿ ಏಷ್ಯಾ ರಾಷ್ಟ್ರಗಳಿಗೆ ಅಪಾಯವಾಗುವುದೆಂದು ಸೂಚಿಸಿದರು

ಮದ್ರಾಸಿನಲ್ಲಿ ಇನ್‌ಫ್ಲುಯೆಂಜಾ ವ್ಯಾಧಿ

ಮದ್ರಾಸಿನಲ್ಲಿ ಆಸ್ಪತ್ರೆಗಳಿಗೆ ಇನ್‌ಫ್ಲುಯೆಂಜಾ ರೋಗದ ಆಕ್ರಮಣಕ್ಕೆ ಒಳಗಾದ ಅನೇಕ ಜನರು ಬರುತ್ತಿರುತ್ತಾರೆ. ಸಿಂಗಪೂರಿನಿಂದ ೨,೦೦೦ ಮಂದಿ ಪ್ರಯಾಣಿಕರಿದ್ದ [illegible] ಎಂಬ ಹಡಗು ಮದ್ರಾಸ್ ನಗರದ ಬಂದರಿಗೆ ಕಳೆದ ವಾರ ಬಂದಾಗಿನಿಂದ ಈ ವ್ಯಾಧಿಯು ಈ ನಗರದಲ್ಲಿ ಕಾಣಿಸಿಕೊಂಡಿದೆ. ಮೊನ್ನೆ ೮೦ ಜನರಿಗೆ ಚಿಕಿತ್ಸೆ ನಡೆಸಲಾಯಿತು. ನೆನ್ನೆ ೫೦ ಮಂದಿ ಚಿಕಿತ್ಸೆ ಪಡೆದರು. ೧೩ ಮಂದಿಯನ್ನು ಆಸ್ಪತ್ರೆಯಲ್ಲಿಟ್ಟುಕೊಳ್ಳಲಾಗಿದೆ. ಅಲ್ಲಿನ ಜನರಲ್ ಆಸ್ಪತ್ರೆಯ ವೈದ್ಯರೂ ಮತ್ತು ಹಡಗನ್ನು ಹತ್ತಿ ವಾಪಸು ಬಂದ ಅನೇಕ ದಾದಿಯರೂ ರೋಗಪೀಡಿತರಾಗಿರುವರು. ಹಡಗನ್ನು [illegible] ತಂದು ಅಲ್ಲಿದ್ದವರನ್ನು ಪ್ರತ್ಯೇಕವಾಗಿ ಇಡಲಾಗಿದೆ

ಮಹಾರಾಜಾ ಸಂಸ್ಕೃತ ಕಾಲೇಜು ಸಮಿತಿ

ನಗರದಲ್ಲಿರುವ ಮಹಾರಾಜಾ ಸಂಸ್ಕೃತ ಕಾಲೇಜಿನ ಆಡಳಿತ ಸಮಿತಿಯನ್ನು ಮೂರು ವರ್ಷದ ಅವಧಿಗಾಗಿ ಈ ರೀತಿ ಪುನರ್ರಚಿಸಲಾಗಿದೆ:- ಶಿಕ್ಷಣ ಇಲಾಖಾ ಮುಖ್ಯಾಧಿಕಾರಿಗಳು ಅಧ್ಯಕ್ಷರು. ಕಾಲೇಜಿನ ಪ್ರಿನ್ಸಿಪಾಲರು ಕಾರ್ಯದರ್ಶಿ. ಶ್ರೀಗಳವರಾದ ಶಿವಕುಮಾರ ಸ್ವಾಮಿಗಳು, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಮಹಾರಾಜಾ ಕಾಲೇಜು ಸಂಸ್ಕೃತ ಪ್ರೊಫೆಸರ್, ಮೇಲ್ಕೋಟೆ ಸಂಸ್ಕೃತ ಕಾಲೇಜು ಅಧ್ಯಕ್ಷರು, ಎಂ. ಪಿ. ಎಲ್. ಶಾಸ್ತ್ರಿಗಳು, ಬೆಂಗಳೂರು ಸಂಸ್ಕೃತ ಕಾಲೇಜು ಪ್ರಿನ್ಸಿಪಾಲರು, ಎಂ. ರಾಮಸ್ವಾಮಿ, ಟಿ. ಗೋಪಾಲಕೃಷ್ಣಶೆಟ್ಟಿ, ಎಂ. ವಿ. ರಾಮರಾಜು, ಎ. ಎಸ್. ನರಸಿಂಹಯ್ಯ ಮತ್ತು ಎಂ. ಎ. ದೊರೆಸ್ವಾಮಿ ಅಯ್ಯಂಗಾರ್-ಸದಸ್ಯರು.

ವೇದಾಂತ ದೇಶಿಕ ವಿಹಾರ ಸಭೆಯ ವಾರ್ಷಿಕೋತ್ಸವ

ಶ್ರೀ ಪರಕಾಲ ಸ್ವಾಮಿಗಳವರ ಉಪದೇಶ ಭಾಷಣ

ಮೈಸೂರು ೨೨

ಕಳೆದ ಸೋಮವಾರ ನಡೆದ ವೇದಾಂತ ದೇಶಿಕ ವಿಹಾರ ಸಭೆಯ ೩೦ನೆಯ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಶ್ರೀ ಶ್ರೀ ಪರಕಾಲ ಸ್ವಾಮಿಗಳವರು ಅಪ್ಪಣೆ ಕೊಡಿಸಿದ ಉಪದೇಶ ಸಾರಾಂಶವನ್ನು ಕೆಳಗೆ ಕೊಡಲಾಗಿದೆ —

ರಾಮಾನುಜ ದರ್ಶನವು ವೈದಿಕವಾದುದು. ವೇದವು ಸತ್ಯ ಮತ್ತು ಅಪೌರುಷೇಯ ಮಹಾಭಾರತದಲ್ಲಿರುವ ಗೀತೆ ಮತ್ತು ಪಾಂಚರಾತ್ರವು ಸಂಗ್ರಹ, ವಿಸ್ತಾರರೂಪವಾದುದು ಪರವಾಸುದೇವನೇ ಪ್ರತಿಪಾದ್ಯನಾದವನು ಬುದ್ಧ ಮತದಲ್ಲಿ ಬುದ್ಧ, ಧರ್ಮ ಮತ್ತು ಸಂಘಕ್ಕೆ ಶರಣು ಹೋಗುವಂತೆ, ಮತ್ತು ಜೈನ ಮತದಲ್ಲಿ 'ಣಮೋ ಅರ್ಹಂತಾಣಂ' ಎಂಬುವಂತೆ ರಹಸ್ಯತ್ರಯಗಳಾದ ಅಷ್ಟಾಕ್ಷರ, ಚರಮ ಶ್ಲೋಕದ್ವಯಕ್ಕೆ ಪ್ರಾಮುಖ್ಯತೆಯಿದೆ ಪರಮಾತ್ಮನಿಗೆ ವಿಗ್ರಹ ಉಂಟೆಂದೂ, ಉಪಾಸನೆಗೆ ಆಲಂಬನವೆಂದೂ ಛಾಂದೋಗ್ಯ ಭಾಷ್ಯಕಾರರಾದ ದ್ರಾವಿಡಾಚಾರ್ಯರು ಹೇಳಿರುತ್ತಾರೆ ಅವರನ್ನು ಸಂಪ್ರದಾಯದವರೆಂದು ಶಂಕರರು ಹೇಳಿ 'ರಾಜಪುಮಾನ್ ನ್ಯಾಯವನ್ನು' ಉದಹರಿಸಿರುತ್ತಾರೆ ಆದುದರಿಂದ ಮೂರ್ತಿ ಪೂಜೆ ವೈದಿಕವಾದುದು

ವೇದದಲ್ಲಿ ಕರ್ಮ ಕಾಂಡ, ಜ್ಞಾನಕಾಂಡ, (ಉಪಾಸನಾಕಾಂಡ) ಸತ್ಯವಾದುದು ಅದಕ್ಕೆ ವಿಸ್ತಾರವಾಗಿ ದ್ವಾಪರಯುಗದಲ್ಲಿ ಬೋಧಾಯನ ವೃತ್ತಿಯಿದ್ದಿತು. ಸುಷುಪ್ತಿ ಕಾಲದಲ್ಲಿ ಜೀವನಿಗೆ ಬಾಹ್ಯೇಂದ್ರಿಯ ವ್ಯಾಪಾರಗಳು ನಿಂತುಹೋಗಿ ಅಂತರ್ಯಾಮಿಯೊಡನೆ ಸಂಪರ್ಕ ಬೆಳೆಯುತ್ತದೆ ಸೃಷ್ಟಿಯು ಸತ್ಯ ಮತ್ತು ಶರೀರೇಂದ್ರಿಯ ದ್ವಾರಾ ಜ್ಞಾನ ವಿಕಾಸಹೊಂದುತ್ತದೆ. ಇದು ಪರಮಾತ್ಮನ ಲೀಲೆ ಜೀವನು ಕೌಸ್ತುಭ ಮಣಿಯಂತೆ ಪರಮಾತ್ಮನಲ್ಲಿ ಸಮರ್ಪಿತನಾಗಿದ್ದಾನೆ

ಉಪನಿಷತ್ತುಗಳು ಪರಬ್ರಹ್ಮನನ್ನು ರಾಜನೆಂದು ಹೇಳುತ್ತವೆ ಅನಾದಿಯಾದ, ಕರ್ಮದಿಂದ ಜೀವನಿಗೆ ಸ್ವರೂಪದ ಅರಿವು ಕಾಣದಾಗಿಹೋಗಿರುತ್ತದೆ. ನಿಗ್ರಹರೂಪವಾದ ಸಂಸಾರ ಬಂಧನ ಇಂದ್ರಿಯ ಜಯದಿಂದ ಯೋಗವು ಕಷ್ಟಸಾಧ್ಯ ಅದಕ್ಕಿಂತ ಸುಲಭವಾದುದು ಮತ್ತು ಉತ್ತಮತರವಾದುದು ದೇವರ ಪೂಜೆ ಪ್ರಪತ್ತಿಯೇ ಮೋಕ್ಷೋಪಾಯ ಐತಿಹ್ಯಕ್ಕೆ ಎಡೆಕೊಡದೆ ವಿಮರ್ಶಕನು ಭಿನ್ನಮತಗಳನ್ನು ಸಂಶೋಧಿಸಬೇಕು.

ಮರದ ಗಾಣದ ಎಣ್ಣೆ ಕೈಗಾರಿಕಾ ಸಹಕಾರ ಸಂಘದ ವಾರ್ಷಿಕೋತ್ಸವ

ನಗರದ ಮರದ ಗಾಣದ ಎಣ್ಣೆ ಕೈಗಾರಿಕಾಗಾರರ ಸಹಕಾರ ಸಂಘದ ಪ್ರಥಮ ವಾರ್ಷಿಕೋತ್ಸವವು ಕಳೆದ ಸೋಮವಾರ ಸಹಕಾರ ಭವನದಲ್ಲಿ ವಿಧಾನ ಪರಿಷತ್ತಿನ ಮಾಜಿ ಉಪಾಧ್ಯಕ್ಷ ಶ್ರೀ ಪಿ ಗೋಪಾಲಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು ಕುಮಾರಿ ಆರ್ ಪದ್ಮಾ ಮತ್ತು ಪಾರ್ಟಿಯವರಿಂದ ಸಂಗೀತವನ್ನು ಏರ್ಪಡಿಸಲಾಗಿತ್ತು ಈ ಸಂಘದ ಗೌರವ ಕಾರ್ಯದರ್ಶಿ ಶ್ರೀ ಎ. ದೇವರಾಜ್‌ರವರು ವಾರ್ಷಿಕ ವರದಿಯನ್ನೊಪ್ಪಿಸಿ, ಸಂಸ್ಥೆಗೆ ಸಾರ್ವಜನಿಕರಿಂದ ದೊರೆತಿರುವ ಪ್ರೋತ್ಸಾಹಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಸಂಘವು ಇನ್ನೂ ಹೆಚ್ಚು ಸೇವೆ ಸಲ್ಲಿಸಲು ಪ್ರಯತ್ನಿಸುತ್ತಿರುವುದೆಂದು ನುಡಿದರು. ಅಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ಸಹಕಾರ ಸಂಘಗಳ ಮಹತ್ವವನ್ನು ವಿಶದವಾಗಿ ತಿಳಿಸಿ ಈ ಸಂಸ್ಥೆಗಳ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆಯನ್ನು ಸೂಚಿಸಿದರು ನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

Edited, Printed and Published by
A R Nagarajan at Sadhvi Press,
D Subbiah Road, Mysore

೫೬-೫೭ರಲ್ಲಿ ೭೪ ಲಕ್ಷ ಮಂದಿ ಟಿಕೆಟ್ ಇಲ್ಲದವರ ಪ್ರಯಾಣ

೧·೫೦ ಕೋಟಿ ರೂ ವಸೂಲಿ

೧೯೫೬-೫೭ರಲ್ಲಿ ಟಿಕೆಟ್ ಇಲ್ಲದೆ ರೈಲು ಪ್ರಯಾಣ ಮಾಡಿದವರ ಸಂಖ್ಯೆ ೭೩,೫೫,೩೪೦. ಇವರಿಂದ ಇಲಾಖೆಯವರು ೧,೫೪,೯೬,೯೧೮ ರೂ ಗಳನ್ನು ವಸೂಲು ಮಾಡಿರುವರು-ಎಂಬುದಾಗಿ ತಿಳಿದುಬಂದಿದೆ

ಇನ್ನುಮೇಲೆ ಮಂತ್ರಿಗಳಿಗೆ ಸತ್ಕಾರ ಕೂಟಗಳಿಲ್ಲ

ಮಂತ್ರಿಗಳು ಮತ್ತು ಅಧಿಕಾರಿಗಳು ಸಾರ್ವಜನಿಕರಿಂದ ಕೊಡಲ್ಪಡುವ ಸ್ವಾಗತ ಸಮಾರಂಭ ಮತ್ತು ಸತ್ಕಾರ ಕೂಟಗಳಿಗೆ ಒಪ್ಪಬಾರದೆಂದು ಸೂಚಿಸುವ ವಿಚಾರವನ್ನು ಕಾಂಗ್ರೆಸ್ ಹೈಕಮಾಂಡಿನವರು ಪರಿಶೀಲಿಸುತ್ತಿರುವುದಾಗಿ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ಮಾಡಿದ ಒಂದು ಭಾಷಣದಲ್ಲಿ ತಿಳಿಸಿರುವರು ಮಂತ್ರಿಗಳು ಪ್ರವಾಸ ಕಾಲದಲ್ಲಿ ಜಿಲ್ಲಾ ಕಾಂಗ್ರೆಸ್ ಕಛೇರಿಗಳಿಗೆ ಭೇಟಿ ಕೊಡುವಂತೆಯೂ ಸೂಚಿಸಲಾಗುವುದೆಂದು ಅವರು ಹೇಳಿರುವರು ಕಾಂಗ್ರೆಸ್ ಸಂಸ್ಥೆಗಳಿಗೂ, ಪಾರ್ಲಿಮೆಂಟರಿ ವ್ಯವಸ್ಥೆಗೂ ನಿಕಟ ಸಂಬಂಧವಿರಬೇಕೆಂದು ಅವರು ನುಡಿದಿರುವರು

ಕರಾಚಿ-ಬಾಸ್ರಾ ಹೆದ್ದಾರಿಯ ನಿರ್ಮಾಣ

ಪಾಕಿಸ್ತಾನದ ರಾಜಧಾನಿಯಾದ ಕರಾಚಿ ಮತ್ತು ಇರಾಕಿನ ರೇವುನಗರವಾದ ಬಾಸ್ರಾಗಳ ನಡುವೆ ತೀರದ ಹೆದ್ದಾರಿಯೊಂದನ್ನು ನಿರ್ಮಿಸಲು ಬಾಗ್ದಾದ್ ರಾಷ್ಟ್ರಗಳ ಕೂಟದ ಆರ್ಥಿಕ ಸಮಿತಿಯು ನಿರ್ಧರಿಸಿದೆ. ಅದಲ್ಲದೆ ಪರ್ಷಿಯದ ರಾಜಧಾನಿ ಟೆಹರಾನಿಗೂ,ಕರಾಚಿಗೂ ರೈಲು ರಸ್ತೆಯನ್ನು ಸಂಪರ್ಕಿಸಲಾಗುವುದು ಈ ಪ್ರದೇಶಗಳಲ್ಲಿ ತಂತಿ ಸಂಪರ್ಕಗಳನ್ನು ಏರ್ಪಡಿಸುವುದಕ್ಕೆ ವಿಶೇಷ ಪ್ರಾಶಸ್ತ್ಯವನ್ನೀಯಲಾಗುವುದು

ಬಾಗ್ದಾದ್ ರಾಷ್ಟ್ರಗಳೊಡನೆ ಅಮೆರಿಕದ ಪ್ರತ್ಯೇಕ ಒಪ್ಪಂದ

ಬಾಗ್ದಾದ್ ಕೂಟ ಪ್ರದೇಶದಲ್ಲಿ ೧। ಕೋಟಿ ಡಾಲರ್ ವೆಚ್ಚದಿಂದ ರಸ್ತೆ, ರೈಲು ಮತ್ತು ತಂತಿ ಸಮಾಚಾರಗಳ ಸೌಕರ್ಯಗಳನ್ನು ಕಲ್ಪಿಸುವುದರ ಸಂಬಂಧವಾಗಿ ಅಮೆರಿಕವು ಪಾಕಿಸ್ತಾನ, ಇರಾಕ್ ಮತ್ತು ತುರ್ಕಿಗಳೊಡನೆ ೮ ಒಪ್ಪಂದಗಳನ್ನು ಮಾಡಿಕೊಂಡಿರುತ್ತದೆ ಇರಾನೂ ಸಹ ಒಪ್ಪಂದ ಮಾಡಿಕೊಳ್ಳಲಿದೆ.

ಉತ್ತರ ಪ್ರದೇಶದಲ್ಲಿ ೧೪೪೦ ಸತ್ಯಾಗ್ರಹಿಗಳ ಬಂಧನ

ಉತ್ತರ ಪ್ರದೇಶದಲ್ಲಿ ಸಮಾಜವಾದಿಗಳು ನಡೆಸುತ್ತಿರುವ ಸತ್ಯಾಗ್ರಹದ ಸಂಬಂಧವಾಗಿ ೧೪೪೦ ಸ್ವಯಂಸೇವಕರು ಬಂಧಿತರಾಗಿರುವರು. ಆರು ಜನರು ಕ್ಷಮಾಪಣೆ ಕೇಳಲಾಗಿ ಅವರನ್ನು ಬಿಡುಗಡೆ ಮಾಡಲಾಗಿದೆ. ಲಕ್ನೋದಲ್ಲಿ ಐದನೇ ಜಾರ್ಜರ ವಿಗ್ರಹದ ಮುಂದೆಯೂ, ಅಲ್ಲಿದ್ದ ಅಂಚೆ ಕಛೇರಿ ಮುಂದೆಯೂ ಅವರು ಸತ್ಯಾಗ್ರಹವನ್ನು ನಡೆಸಿರುತ್ತಾರೆ

ಸ್ಥಳೀಯ ಸಂಸ್ಥೆಗಳ ಕಮಿಷನರ ಹುದ್ದೆ

ಕೆಲವು ತಿಂಗಳ ಹಿಂದೆ ರದ್ದುಗೊಳಿಸಲಾದ ಸ್ಥಳೀಯ ಸಂಸ್ಥೆ ಕಮಿಷನರರ ಹುದ್ದೆಯನ್ನು ಪುನಃ ಏರ್ಪಡಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ಗೊತ್ತಾಗಿದೆ. ಅವರ ಅಧಿಕಾರವನ್ನು ಡಿವಿಜನಲ್ ಕಮಿಷನರುಗಳು ನಿರ್ವಹಿಸುತ್ತಿದ್ದರು ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳ ಗೋಷ್ಠಿಯಲ್ಲಿ ಪುನಃ ಹುದ್ದೆಯು ಏರ್ಪಾಡಾಗಬೇಕೆಂದು ಅಭಿಪ್ರಾಯಪಡಲಾಗಿತ್ತು.

ಮಲೆನಾಡಿನಲ್ಲಿ ೧೭ ಲಕ್ಷ ಎಕರೆ ಜಮೀನು ಸಾಗುವಳಿಗೆ

ಮಲೆನಾಡಿನಲ್ಲಿ ವ್ಯವಸಾಯ ಯೋಗ್ಯವಾದ ೧೭ ಲಕ್ಷ ಎಕರೆ ಜಮೀನು [illegible], ಅಲ್ಲಿ ಉಳುಮೆಗೆ ಜನರು ಮುಂದೆ ಬಂದರೆ ಸರ್ಕಾರದವರು ಸಹಾಯ ಮಾಡಲು ಸಿದ್ಧರಾಗಿರುವರೆಂದೂ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರು ತಿಳಿಸಿರುತ್ತಾರೆ

ನಗರದ ಆಯುರ್ವೇದ ಕಾಲೇಜಿನ ಮಟ್ಟ ಹೆಚ್ಚಿಸಲು ನಿರ್ಧಾರ

ಬೆಂಗಳೂರು ೨೨.

ಮೈಸೂರಿನಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಮಟ್ಟವನ್ನು ಹೆಚ್ಚಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಕಾಲೇಜಿನಲ್ಲಿ ಶಿಕ್ಷಣ ಮಟ್ಟವನ್ನು ಹೆಚ್ಚಿಸುವುದೇ ಇದರ ಉದ್ದೇಶ. ಪ್ರಥಮ ವರ್ಷದಲ್ಲಿ ೫೦ ಮಂದಿ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವುದು. ಅದಕ್ಕೆ ಸೇರುವವರಿಗೆ ಕಡ್ಡಾಯವಾಗಿ ಇಂಟರ್‌ಮೀಡಿಯೆಟ್ ಸೈನ್ಸ್ ಪರೀಕ್ಷೆ ಆಗಬೇಕೆಂದು ಗೊತ್ತುಮಾಡಲಾಗಿದೆ

ಕಾಂಗ್ರೆಸ್ ಸಂಸ್ಥೆಯಲ್ಲಿ ಹೊಸ ಚೇತನವುಂಟುಮಾಡಲು ಯತ್ನ

ಕಾಂಗ್ರೆಸ್ ಸಂಸ್ಥೆಯು ಚೈತನ್ಯ ಹೊಂದುವ ಬಗ್ಗೆ ಹೈ ಕಮಾಂಡಿನವರು ಕ್ರಮ ಕೈಗೊಳ್ಳಲಿರುವರೆಂದು ಹೇಳಲಾಗಿದೆ. ಪ್ರದೇಶ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧಿಕಾರವರ್ಗದಲ್ಲಿರುವವರು ಶಾಸನ ಸಭಾ ಸದಸ್ಯರಾಗಕೂಡದೆಂದೂ, ಒಬ್ಬರೇ ಎರಡು ಸ್ಥಾನಗಳಲ್ಲಿರಲು ಒಪ್ಪುವುದಿಲ್ಲವೆಂದೂ ಹೇಳಲಾಗಿದೆ. ಚುನಾವಣೆಗಳಲ್ಲಿ ಕಾಂಗ್ರೆಸ್ಸು ಶಕ್ತಿಗುಂದಿದುದಕ್ಕೆ ಇದೂ ಒಂದು ಕಾರಣವೆಂದು ಹೇಳಲಾಗಿದೆ.

ವಾಣಿವಿಲಾಸ ಮಾರ್ಕೆಟ್ ಹಿಂಭಾಗದಲ್ಲಿ ಮಾಂಸದ ಅಂಗಡಿ ತೆರೆಯಲು ವಿರೋಧ

ನಗರದ ಕೃಷ್ಣರಾಜ ಮೊಹಲ್ಲಾ ಸ್ಯಾನಿಟರಿ ಸರ್ಕಲ್ ಮತ್ತು ವಾಣಿವಿಲಾಸ ಮಾರ್ಕೆಟ್ಟಿನ ಹಿಂಭಾಗದಲ್ಲಿ ಮಾಂಸದ ಅಂಗಡಿಯೊಂದನ್ನು ತೆರೆಯಲು ಪೌರಸಭೆಯವರು ಮಾಡುತ್ತಿರುವ ಏರ್ಪಾಡನ್ನು ನಿಲ್ಲಿಸಬೇಕೆಂದು ಕೋರಿ ಆ ಪ್ರದೇಶದ ನಿವಾಸಿಗಳು ಪೌರಸಭಾ ಕಮಿಷನರ್ ಮತ್ತು ಇತರ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತಾರೆ. ಪುರಸಭೆಯವರ ಏರ್ಪಾಡಿನಿಂದ, ಪಕ್ಕದಲ್ಲಿರುವ ನವಗ್ರಹ ಗುಡಿಗೆ ಬರುವ ಭಕ್ತಾದಿಗಳಿಗೂ, ಇತರರಿಗೂ ತೊಂದರೆಯಾಗುವುದಲ್ಲದೆ, ಅಕ್ಕಪಕ್ಕದ ಮನೆಗಳವರಿಗೆ ತುಂಬಾ ಅನಾನುಕೂಲವಾಗುತ್ತದೆ ಪೌರಸಭೆಯವರು ಅದನ್ನು ಸುಣ್ಣದಕೇರಿಗಾಗಲೀ, ಇತರ ಕಡೆಗಾಗಲೀ ವರ್ಗಾಯಿಸುವುದು ಸೂಕ್ತವಾಗಿದೆಯೆಂದು ಅವರುಗಳು ಅರಿಕೆ ಮಾಡಿರುತ್ತಾರೆ

ಮೋಟಾರು ಅಪಘಾತದಲ್ಲಿ ಮಹಿಳೆಯ ಮರಣ

ನಂಜನಗೂಡು ೨೨

ನೀಲಗಿರಿಯಿಂದ ಬರುತ್ತಿದ್ದ ಮೋಟಾರೊಂದು ಕಳಲೆ ಗ್ರಾಮದ ಬಳಿ ಮಲ್ಲಮ್ಮ ಎಂಬ ೫೦ ವರ್ಷದ ಮಹಿಳೆಯ ಮೇಲೆ ಹರಿದು ಆಕೆಯು ಮೃತಪಟ್ಟವಳಾಗಿ ವರದಿಯಾಗಿದೆ ಮಾಲಯ್ಯ ಎಂಬಾತನಿಗೆ ಗಾಯವಾಗಿದೆ.

ಗುಂಡ್ಲು ನದಿಯಲ್ಲಿ ಗಾಡಿ ಕೊಚ್ಚಿಹೋದ ಪ್ರಸಂಗ

ಕಪಿನಿಯ ಉಪನದಿಯಾದ ಗುಂಡ್ಲುಹೊಳೆಯು ಮಳೆ ದೆಸೆಯಿಂದ ರಭಸವಾಗಿ ಹರಿಯುತ್ತಿದೆಯೆಂದೂ, ತೆಂಗಿನಕಾಯಿ ತುಂಬಿದ ಒಂದು ಎತ್ತಿನ ಗಾಡಿಯು ಕೊಚ್ಚಿಹೋಯಿತೆಂದೂ ಹೇಳಲಾಗಿದೆ ಗಾಡಿಯವನೂ,ಎತ್ತುಗಳೂ ಪಾರಾದರು ನದಿ ದಡದಲ್ಲಿರುವ ಅನೇಕ ಮನೆಗಳು ಕುಸಿದಿವೆ.

○ ಭಾರತಕ್ಕೆ ೫೦ ಸಾವಿರ ಬೇಲು ಹತ್ತಿಯನ್ನು ಕಳುಹಿಸಲು ಅಮೇರಿಕನ ವ್ಯವಸಾಯ ಇಲಾಖೆಯವರು ಆಜ್ಞೆ ಮಾಡಿರುತ್ತಾರೆ ಅದರ ಬೆಲೆ ೮೬,೬೬,೦೦೦ ಡಾಲರ್ ಆಗುವುದು

ಡಾಲ್ಮಿಯಾ ಸಂಸ್ಥೆ ವ್ಯವಹಾರದ ತನಿಖೆಗೆ ತಡೆ ಆಜ್ಞೆ

ಡಾಲ್ಮಿಯಾ-ಜೈನ್ ವ್ಯಾಪಾರಸಂಸ್ಥೆಗಳ ವ್ಯವಹಾರವನ್ನು ಕುರಿತು ತನಿಖೆ ಸಮಿತಿಯು ಪರಿಶೀಲನೆ ನಡೆಸಬಾರದೆಂದು ಸುಪ್ರೀಂ ಕೋರ್ಟಿನವರು ತಡೆ ಆಜ್ಞೆ ಹಾಕಿರುತ್ತಾರೆ. ಆದರೆ ೧೯೫೭ರ ಜೂನ್ ೭ರ ವರೆಗೆ ದಾಖಲೆಗಳು, ರಶೀತಿಗಳು ಮುಂತಾದುವನ್ನು ಪರಿಶೀಲಿಸಿಯೂ, ನೋಟೀಸು ಕೊಡಲಾಗಿರುವವರಿಂದಲೂ ಬೇಕಾದ ವಿವರಗಳನ್ನು ಪಡೆಯಬಹುದೆಂದೂ ಕೋರ್ಟಿನವರು ತಿಳಿಸಿರುತ್ತಾರೆ. ಸಾರ್ವಜನಿಕ ಮೂಲಗಳಿಂದಲೂ ದಾಖಲೆಗಳನ್ನು ಪಡೆಯಬಹುದೆಂದು ಕೋರ್ಟಿನವರು ಸೂಚಿಸಿರುವರು ಸಂಸ್ಥೆಯ ದಾಖಲೆ ಪತ್ರಗಳನ್ನು ಉಭಯ ಪಕ್ಷಗಳ ವಕೀಲರ ಸಮ್ಮುಖದಲ್ಲಿ ಪಡೆಯಬೇಕೆಂದು ಸೂಚಿಸಲಾಗಿದೆ.

ಸ್ವಾತಂತ್ರ್ಯೋತ್ಸವಕ್ಕಾಗಿ ಸಂಸ್ಥಾನದ ಕೈದಿಗಳಿಗೆ ಕ್ಷಮಾದಾನ

ಭಾರತ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವದ ಜ್ಞಾಪಕಾರ್ಥವಾಗಿ ಮೈಸೂರು ಸರ್ಕಾರದವರು ಜಾಸ್ತಿ ಅವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ಕೈದಿಗಳಿಗೆ ಕ್ಷಮಾದಾನ ಮಾಡಲು ನಿರ್ಧರಿಸಿರುತ್ತಾರೆಂದು ಗೊತ್ತಾಗಿದೆ. ಎಷ್ಟು ಜನರಿಗೆ ಇದು ಅನ್ವಯಿಸುವುದೆಂಬುದರ ವಿವರಗಳನ್ನು ಸಿದ್ಧಗೊಳಿಸಲಾಗುತ್ತಿರುವುದೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರ ನಾಮ. ೭-೧೫ ಗಾಂಧಿ ಸ್ಮೃತಿ ೭-೩೦ ರಿಕಾರ್ಡು. ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨ ಪಿ ಭುವನೇಶ್ವರಯ್ಯ-ಪಿಟೀಲು. ೧-೩೦ ರಿಕಾರ್ಡು ೧-೪೦ ಸಂಗೀತ ಸಂಜೆ ೬-೧೦ ನೃತ್ಯ ಗೀತೆ ೭-೩೦ ಕಾವ್ಯಾವಲೋಕನ ೮ ಮದ್ರಾಸಿನಿಂದ-ಟಿ ಬೃಂದಾ ಮತ್ತು ಟಿ. ಮುಕ್ತಾ : ಸಂಗೀತ ೯-೧೫ ವೃಂದಗಾನ. ೯-೩೦ ಕವಿ ಕಾವ್ಯ ಪರಿಚಯ ೧೦ ಉರ್ದು ಗೀತೆ ೧೦-೧೫ ಪಿ. ಭುವನೇಶ್ವರಯ್ಯ-ಪಿಟೀಲು

ಒಲಂಪಿಯಾ 23-5-57ರಿಂದ ಅಮೋಘ 4ನೇವಾರ
ಗುರುದತ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ ★ ಪ್ಯಾಸಾ
ಪಾತ್ರ:— ಗುರುದತ್, ಮಾಲಾ ಸಿನ್ಹ,
ವಹೀದಾ ರೆಹಮಾನ್, ಜಾನಿ ವಾಕರ್

ಶ್ರೀ ಜಗದಂಬಾ ಶಿಶು ವಿಹಾರ
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶುವಿಹಾರದ ತರಗತಿಗಳು ಇದೇ ೧೫ನೇ ತಾರೀಖಿನಿಂದ ಆರಂಭವಾಗಿವೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

ಮನೆ ಮಾರಾಟಕ್ಕಿದೆ
ಚಾಮರಾಜ ಅಗ್ರಹಾರದಲ್ಲಿ
ವಿಶಾಲವಾದ ಕಾಂಪೌಂಡ್ ಇರುವ ದೊಡ್ಡ
ಮನೆ ಕಾಲೇಜು, ಕೋರ್ಟಿಗೆ ಸಮೀಪ
ಕೂಡಲೇ ವಿಚಾರಿಸಿ:—
ಜಯ ಅಂಡ್ ಕೋ.,
ಮನೆ ಮತ್ತು ಜಮೀನು ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಫೋನ್ 520 : ಮೈಸೂರು

ಚಾಮುಂಡೇಶ್ವರಿ ಟಾಕೀಸ್
24-5-57 ರಿಂದ : ಜಯಪ್ರದವಾದ : 3 ನೇ ವಾರ
★ ಪುದೈಯಲ್ ★
ಶಿವಾಜಿ ಗಣೇಶ, ಪದ್ಮಿನಿ, ಚಂದ್ರಬಾಬು ಮತ್ತು ಬಾಲಯ್ಯ ಮುಂತಾದವರು ಪಾತ್ರ
ವಹಿಸಿರುವ ತಮಿಳು ಚಿತ್ರ [ಕಲ್ಲಂ ರಿಲೀಸ್]

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾ ಪೈಸೆ

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಥಮಸ್ಥಾನ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : FRIDAY 24—5—1957 ಮೈಸೂರು : ಶುಕ್ರವಾರ ೨೪—೫—೧೯೫೭ : [ಸಂಚಿಕೆ : ೩೯೦

- ಕಾರ್ಡು-ರೈಲು-ವರಮಾನ ತೆರಿಗೆ ರಿಯಾಯಿತಿ ? -

ಮಳೆಯಿಂದ ಗೋಡೆ ಕುಸಿದು ಒಬ್ಬನ ಮರಣ

ನೆನ್ನೆ ನಗರದಲ್ಲಿ ೮.೩ ಅಂಗುಲ ಮಳೆ

ಮೈಸೂರು ೨೪

ನಗರದಲ್ಲಿ ನೆನ್ನೆಯೆಲ್ಲಾ ಕೆಟ್ಟ ಮಳೆಯಾಗಿ ಒಟ್ಟು ೮.೩೪ ಅಂಗುಲ ರೆಕಾರ್ಡು ಆಯಿತು. ಊರೆಲ್ಲಾ ನೀರಿನ ಮಯವಾಗಿ ಎಲ್ಲೆಲ್ಲೂ ಕೆಲಸ ಕಾರ್ಯಗಳು ಸ್ತಬ್ಧವಾಗಿದ್ದುವು. ಇಂದು ಬೆಳಗ್ಗೆ ೧೧ ಗಂಟೆಯ ಮೇಲೆ ಮಳೆಯು ನಿಂತು ಜನಸಂಚಾರ ಮತ್ತು ವ್ಯವಹಾರಗಳಿಗೆ ಅವಕಾಶವಾಯಿತು.

ಮಂಡಿ ಮೊಹಲ್ಲಿಯ ಒಂದು ಮನೆಯು ಕುಸಿದು ಅದರ ಅಡಿಯಲ್ಲಿ ಸಿಕ್ಕಿದ ಒಬ್ಬಾತನು ಮೃತಪಟ್ಟನೆಂದು ವರದಿಯಾಗಿದೆ.

ಮೂರು ದಿನಗಳ ಸತತ ಮಳೆ ಪರಿಣಾಮವಾಗಿ ವಿದ್ಯುಚ್ಛಕ್ತಿ ಸೌಕರ್ಯದಲ್ಲಿ ಅಡಚಣೆಯಾಗಿ ರಾತ್ರಿ ವೇಳೆ ರಸ್ತೆಗಳಲ್ಲಿ ದೀಪವಿಲ್ಲದೆ ತೊಂದರೆಯಾಯಿತು. ಮೋಟಾರು ಕಾರೊಂದು ಮತ್ತು ಲಾರಿಯೊಂದು [illegible] ರಸ್ತೆಯ ಗುಂಡಿಯಲ್ಲಿ ಹೂತುಕೊಂಡಿದ್ದುವು.

ನಗರದ ಹಲವಾರು ಕಡೆಗಳಲ್ಲಿ ಮರದ ಕೊಂಬೆಗಳು ಬಿದ್ದು ವಿದ್ಯುತ್ ತಂತಿಗಳು ಕಡಿದು ಹೋಗಿವೆ. ಸುಮಾರು ೬-೭ ಕಂಬಗಳು ಉರುಳಿದುವು. ವಿದ್ಯುತ್ ವ್ಯವಸ್ಥೆಯ ರಿಪೇರಿಗಾಗಿ ಇಲಾಖೆಯ ಲಾರಿಗಳು ದಿನವೆಲ್ಲ ಓಡಾಡುತ್ತಿವೆ.

ಮನೆಗಳಲ್ಲಿ ದೀಪಗಳು ಕೆಟ್ಟು ಸುಮಾರು ೬೦೦ ಗೃಹಗಳಿಗೆ ತೊಂದರೆಯಾಯಿತು. ಇಲಾಖೆಯವರು ಅವನ್ನು ಸರಿಪಡಿಸುವುದರಲ್ಲಿ ಉದ್ಯುಕ್ತರಾಗಿರುತ್ತಾರೆ.

ಶನಿವಾರದ ಬೆಳಗ್ಗೆವರೆಗೆ ಕೊಡಗು, ಮೈಸೂರು, ಹಾಸನ, ಮಂಡ್ಯ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಾಮಾನ್ಯದಿಂದ ಭಾರಿಯಾಗಿಯೂ, ಹಲವು ಕಡೆ ಸಿಡಿಲು ಮಿಂಚಿನ ಮಳೆಯೂ ಆಗುವುವು. ನಾಳೆ ದಿನ ಎಲ್ಲ ಕಡೆಯೂ ಮಳೆ ಕಡಿಮೆಯಾಗುವುದು

ದಕ್ಷಿಣ ರೈಲ್ವೆಗಳಲ್ಲಿ ನಿಧಾನವಾದ ಸಂಚಾರ

ಕಳೆದ ನವೆಂಬರಿನಲ್ಲಿ ಆರಿಯಲೂರಿನಲ್ಲಾದ ರೈಲು ದುರಂತದಿಂದ ಈಚೆಗೆ ದಕ್ಷಿಣ ರೈಲ್ವೆಗೆ ಸೇರಿದ ಎಲ್ಲಾ ಕಡೆಗಳಲ್ಲೂ ರೈಲುಗಳನ್ನು ನಿಧಾನವಾಗಿ ಓಡಿಸಲಾಗುತ್ತಿರುವುದೆಂದು ದಕ್ಷಿಣ ರೈಲ್ವೆಯ ಜನರಲ್ ಮ್ಯಾನೇಜರ್ ಥಾಮಸ್‌ರವರು ತಿಳಿಸಿರುತ್ತಾರೆ. ಸೇತುವೆಗಳ ಮೇಲೆ ರೈಲುಗಳು ನಿಧಾನವಾಗಿ ಬಿಡುವುದರಿಂದ ರೈಲುಗಳು ತಡವಾಗಲು ಕಾರಣವಾಗಿರುವುದಾಗಿಯೂ ಅವರು ಹೇಳಿರುತ್ತಾರೆ. ದಕ್ಷಿಣದಲ್ಲಿ ರೈಲು ಸೇತುವೆಗಳನ್ನು ದುರಸ್ತು ಪಡಿಸುವುದು ದೀರ್ಘ ಕಾಲ ಹಿಡಿಯುವುದೆಂದೂ, ಒಟ್ಟು ೨೧,೦೦೦ ಸೇತುವೆಗಳಿರುತ್ತದಾಗಿಯೂ, ಅವನ್ನು ಸರಿಪಡಿಸುವವರೆಗೆ ಸೇತುವೆಗಳ ಪುನರ್ನಿರ್ಮಾಣವೇ ಆಗಬೇಕೆಂದು ಸೂಚಿಸಿರುತ್ತಾರೆ. ದ್ವಿತೀಯ ಯೋಜನೆಯಲ್ಲಿ ಪ್ರಯಾಣಿಕರ ಸಂಚಾರಕ್ಕಿಂತ ಸಾಮಾನು ಸಾಗಾಣಿಕೆಗೆ ಹೆಚ್ಚು ಪ್ರಾಶಸ್ತ್ಯವೀಯಲಾಗುವುದೆಂದೂ ಅವರು ಹೇಳಿರುವರು

ಅಲ್ಪ ದೂರದ ರೈಲು ಪ್ರಯಾಣಕ್ಕೆ ತೆರಿಗೆ ರಿಯಾಯಿತಿ ?

ರೈಲ್ವೆ ದರಗಳ ಮೇಲೆ ವಿಧಿಸಲಾಗುವ ತೆರಿಗೆಯ ವಿಚಾರವನ್ನು ಲೋಕ ಸಭೆಯಲ್ಲಿ ರೈಲ್ವೆ ಮಂತ್ರಿ ಜಗಜೀವನರಾಂರವರು ಪ್ರಸ್ತಾಪಿಸಿ, ತೆರಿಗೆಯಲ್ಲಿ ಅಲ್ಪಸ್ವಲ್ಪ ರಿಯಾಯಿತಿ ತೋರಿಸಬಹುದೆಂಬ ಸೂಚನೆಯಿತ್ತರು. ಅಲ್ಪ ದೂರದ ಪ್ರಯಾಣದವರಿಗೆ ಈ ರಿಯಾಯಿತಿಯು ದೊರೆಯಬಹುದೆಂದು ಅವರು ಹೇಳಿದರು. ೩೦ ಮೈಲಿ ಪ್ರಯಾಣದವರಿಗೆ ತೆರಿಗೆಯನ್ನು ಹಾಕಕೂಡದೆಂದು ಸದಸ್ಯರು ಒತ್ತಾಯ ಮಾಡಿದ್ದರು

ಕರ್ನಾಟಕದಲ್ಲಿ ಅಭಾವ ಪರಿಹಾರಕ್ಕಾಗಿ ಹೆಚ್ಚು ಹಣ

ಸಂಸ್ಥಾನದ ಉತ್ತರ ಭಾಗದಲ್ಲಿರುವ ಪ್ರದೇಶಗಳಲ್ಲಿ ಅಭಾವ ಪರಿಹಾರಕ್ಕಾಗಿ ಸರ್ಕಾರದವರು ೧೧½ ಲಕ್ಷ ರೂ ಗಳನ್ನು ಮಂಜೂರು ಮಾಡಿರುವರೆಂದೂ, ಆ ಪೈಕಿ ೮½ ಲಕ್ಷ ರೂ ಗಳನ್ನು ಬಿಜಾಪುರಕ್ಕೆ ಕೊಡಲಾಗುವುದೆಂದೂ ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಸ್ ರುದ್ರಪ್ಪನವರು ತಿಳಿಸಿರುತ್ತಾರೆ. ವಿಪರೀತ ಮಳೆಯ ಪರಿಣಾಮವಾಗಿ ಅಲ್ಲಿ ಅಭಾವವುಂಟಾಗಿರುವುದೆಂದು ಅವರು ಹೇಳಿ, ಬಿಜಾಪುರದ ೨೭೪ ಹಳ್ಳಿಗಳಲ್ಲಿ ಭೂ ಕಂದಾಯದ ವಸೂಲಿಯನ್ನು ನಿಲ್ಲಿಸಲಾಗಿರುವುದೆಂದು ತಿಳಿಸಿರುವರು. ಒಟ್ಟು ೬೬೩ ಹಳ್ಳಿಗಳಲ್ಲಿ ಕಂದಾಯವನ್ನು ಅಲ್ಪಸ್ವಲ್ಪ ನಿಲ್ಲಿಸಲಾಗಿದೆ. ಬಿಜಾಪುರದಲ್ಲಿ ೭,೪೦,೨೯೪ ಜನರು ಅಭಾವ ಪ್ರದೇಶಗಳಲ್ಲಿರುವರೆಂದು ಗೊತ್ತಾಗಿದೆ

ಹೊಸ ವರಮಾನ ತೆರಿಗೆದಾರರಿಗೆ ರಿಯಾಯಿತಿ

ರಾಜ್ಯ ಸಭೆಯಲ್ಲಿ ಕೇಂದ್ರ ಹಣಕಾಸಿನ ಸಚಿವರ ಸೂಚನೆ

ರಾಜ್ಯ ಸಭೆಯಲ್ಲಿ ನೆನ್ನೆ ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಆಯವ್ಯಯ ಅಂದಾಜು ಪಟ್ಟಿ ಬಗ್ಗೆ ಟೀಕೆಗಳಿಗೆ ಉತ್ತರವಿತ್ತು, ಹೊಸದಾಗಿ ಸೂಚಿಸಲ್ಪಟ್ಟಿರುವ ವರಮಾನ ತೆರಿಗೆದಾರರ ಬಗ್ಗೆ ಹಲವು ರಿಯಾಯಿತಿಗಳನ್ನು ತೋರಲು ತಾವು ಸಿದ್ಧವಾಗಿರುವುದಾಗಿ ತಿಳಿಸಿದರು. ವಿವಾಹಿತರಾದವರಿಗೆ ಈ ರಿಯಾಯಿತಿ ಕೊಡಬಹುದೆಂದು ಅವರು ಹೇಳಿದರು. ಬೇರೆ ಅಂಚೆ ಪದಾರ್ಥಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಲು ಸಾಧ್ಯವಾದರೆ ಆ ಮೂಲಕ ಅಂಚೆ ಕಾರ್ಡುಗಳ ಬೆಲೆಯನ್ನು ಇಳಿಸಬಹುದೆಂದು ಅವರು ಸೂಚಿಸಿದರು. ಆಸ್ತಿ ಮತ್ತು ವೆಚ್ಚದ ತೆರಿಗೆಗಳನ್ನು ಮುಂದಿನ ವರ್ಷದಿಂದ ಹಾಕಲಾಗುವುದೆಂದು ಅವರು ಸ್ಪಷ್ಟಪಡಿಸಿದರು.

ಬಂಡೀಪುರಕ್ಕೆ ರಾಜ್ಯಪಾಲರ ಪ್ರಯಾಣ

ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಈ ದಿನ ಬಂಡೀಪುರಕ್ಕೆ ತೆರಳಿದರು. ಅಲ್ಲಿ ಅವರು ಹಲವು ದಿನಗಳವರೆಗೆ ಇರುವರು.

ನಗರಕ್ಕೆ ವಿದ್ಯಾ ಉಪ ಮಂತ್ರಿಯ ಭೇಟಿ

ವಿದ್ಯಾ ಇಲಾಖೆಯ ಉಪ ಮಂತ್ರಿ ಶ್ರೀಮತಿ ಗ್ರೇಸ್ ಟಕ್ಕರ್‌ರವರು ನಗರಕ್ಕೆ ಆಗಮಿಸಿ ಇಲ್ಲಿನ ಹಲವಾರು ವಿದ್ಯಾ ಸಂಸ್ಥೆಗಳಿಗೆ ಭೇಟಿಯಿತ್ತರು. ಸಂಜೆ ವಾಪಸು ಬೆಂಗಳೂರಿಗೆ ತೆರಳುವರು

ಮಳೆಯಿಂದ ವಿಧಾನಸೌಧದಲ್ಲಿ ಬಿರುಕು

ಬೆಂಗಳೂರು ೨೪

ಇಲ್ಲಿ ಮೊನ್ನೆ ಭಾರಿ ಮಳೆಯ ಪರಿಣಾಮವಾಗಿ ವಿಧಾನಸೌಧದಲ್ಲಿ ನೀರು ಇಳಿಯಲು ಪ್ರಾರಂಭಿಸಿದೆ. ಗ್ರಾನೈಟ್, ಸಿಮೆಂಟು ಮತ್ತು ಗಾರೆಗಳಿಂದ ಕಟ್ಟಿರುವ ಭಾರಿ ಕಟ್ಟಡದಲ್ಲಿ ಗೋಡೆಯಲ್ಲಿ ಬಿರುಕು ಕಾಣಿಸಿಕೊಂಡಿದೆ. ಅಭಿವೃದ್ಧಿ ಶಾಖಾ ಕಾರ್ಯದರ್ಶಿ ಕಛೇರಿಯಲ್ಲಿ ಸಿಮೆಂಟ್ ಕೊಠಡಿಯಿಂದ ನೀರು ಇಳಿದಿದೆ. ಅಲ್ಲದೆ ಸುರಕ್ಷಿತವಾಗಿಲ್ಲವೆಂದೂ ಹೇಳಲಾಗಿದೆ.

ದೆಹಲಿಗೆ ಜಪಾನ್ ಪ್ರಧಾನಿಯ ಆಗಮನ

ಭಾರತ ಸರ್ಕಾರದ ಆಹ್ವಾನದ ಮೇಲೆ ಎರಡು ದಿನಗಳ ಭೇಟಿಗಾಗಿ ಜಪಾನಿನ ಪ್ರಧಾನಿ ನೊಬುಸುಕೆ ಕಿಷಿಯವರು ನೆನ್ನೆ ದೆಹಲಿಗೆ ಆಗಮಿಸಿದರು. ಅವರು ಸಂಜೆ ನೆಹರೂರವರೊಡನೆ ೧ ಗಂಟೆ ಕಾಲ ಮಾತುಕತೆ ನಡೆಸಿದರು. ಈ ದಿನವೂ ನಡೆಸುವರು. ಕಿಷಿಯವರು ಹೇಳಿಕೆಯೊಂದನ್ನಿತ್ತು ಎರಡು ರಾಷ್ಟ್ರಗಳ ಪ್ರಜೆಗಳೂ ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯ ಧ್ಯೇಯಗಳನ್ನು ಪ್ರತಿಪಾದಿಸುವರೆಂದೂ, ಜಗತ್ತಿನ ಶಾಂತಿಗಾಗಿ ಸಹಕರಿಸುವರೆಂದೂ ಹೇಳಿದರು. ಎರಡು ರಾಷ್ಟ್ರಗಳ ಪ್ರಾಚೀನ ಇತಿಹಾಸ ಮತ್ತು ಪರಂಪರೆಯನ್ನು ಅವರು ಪ್ರಸ್ತಾಪಿಸಿ, ಭಾರತದ ವೈಭವಯುತ ನಾಗರಿಕತೆಯು ಜಪಾನಿನ ಮೇಲೆ ಪ್ರಭಾವ ಬೀರಿದೆಯೆಂದು ಹೇಳಿದರು

ಕರಾಚಿಯಲ್ಲಿ ಜೆಟ್ ವಿಮಾನ ಮುರಿದು ಐವರ ಮರಣ

ಪಾಕಿಸ್ತಾನ ವಿಮಾನ ದಳದ ಜೆಟ್ ವಿಮಾನವೊಂದು ಕರಾಚಿಯ ಹೊರ ಭಾಗದಲ್ಲಿ ಸೇನಾ ಸರಂಜಾಮು ಕೋಠಿಗೆ ಬಿದ್ದು ಅಪಘಾತಕ್ಕೀಡಾಗಿ ೫ ಜನರು ಮೃತಪಟ್ಟಿರುತ್ತಾರೆ.

ಜೋರ್ಡಾನಿನಿಂದ ಸಿರಿಯಾ ಸೈನ್ಯದ ವಾಪಸಿಗೆ ಕರೆ

ಜೋರ್ಡಾನಿನಲ್ಲಿಟ್ಟಿರುವ ಸಿರಿಯಾ ಸೈನ್ಯವನ್ನು ವಾಪಸು ಕರೆಸಬೇಕೆಂದು ಅಲ್ಲಿನ ಸರ್ಕಾರವು ಸಿರಿಯಕ್ಕೆ ಸೂಚಿಸಿರುವುದಾಗಿ ವರದಿಯಾಗಿದೆ.

ಕೇರಳದ ಸಚಿವರೊಡನೆ ಮಹಿಳಾ ಸಚಿವರ ವಿವಾಹ

ಕೇರಳ ಸರ್ಕಾರದ ಕಾರ್ಮಿಕ ಸಚಿವರಾಗಿರುವ ಶ್ರೀ ಟಿ. ವಿ ಥಾಮಸ್‌ರವರು, ಅಲ್ಲಿನ ರೆವಿನ್ಯೂ ಸಚಿವರಾದ ಶ್ರೀಮತಿ ಕೆ. ಆರ್ ಗೌರಿಯವರನ್ನು ಇದೇ ೩೦ನೇ ತಾರೀಖು ವಿವಾಹವಾಗುವರೆಂದೂ, ವಿವಾಹದ ನಂತರವೂ ಅವರುಗಳು ಮಂತ್ರಿಗಳಾಗಿರುವರೆಂದೂ ವರದಿಯಾಗಿದೆ.

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ

ಕೃಷ್ಣರಾಜಸಾಗರದಲ್ಲಿ ನೆನ್ನೆ ೮.೦೩ ಅಂಗುಲ ಮಳೆಯಾಯಿತು. ಕನ್ನಂಬಾಡಿ ಕಟ್ಟೆಯಲ್ಲಿ ನೀರಿನ ಮಟ್ಟವು ನೆನ್ನೆ ೧೧೨.೨೮ ಇದ್ದುದು ಈ ದಿನ ೧೧೩.೨೭ಕ್ಕೆ ಏರಿದೆ.

ಹಂಪೆಯ ಬಳಿ ೨ ಹೊಸ ವಿದ್ಯುದುತ್ಪಾದನಾ ಕೇಂದ್ರಗಳು

ತುಂಗಭದ್ರಾ ಸಮಿತಿ ಅಧ್ಯಕ್ಷರ ಹೇಳಿಕೆ

(ಸ್ವಂ. ವ. ನಂದ)] ಬೆಂಗಳೂರು ೨೪

ತುಂಗಭದ್ರಾ, ಅಣೆಕಟ್ಟು ಸಮಿತಿಯು ನಿನ್ನೆ [illegible] ಮೂರು ದಿನಗಳಿಂದ [illegible] ಸಾಧ್ಯತೆಗಳ [illegible] ಪ್ರಗತಿಯನ್ನು ವಿಚಾರಿಸಿತು. ಸಮಿತಿಯ ಅಧ್ಯಕ್ಷ ಶ್ರೀ ಗೋಪಾಲರೆಡ್ಡಿ [illegible] ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಅಣೆಕಟ್ಟಿಗೆ ಸಂಬಂಧಿಸಿದ ನೀರಾವರಿ [illegible] ಕಾಲುವೆಗಳು [illegible] ಮತ್ತು ವಿದ್ಯುದುತ್ಪಾದನಾ ಭಾಗದಲ್ಲಿ ೯,೦೦೦ ಕಿಲೋವಾಟ್ ಶಕ್ತಿಯನ್ನು [illegible] ಸಿದ್ಧವಾಗಿ [illegible] ವಿದ್ಯುಚ್ಛಕ್ತಿ [illegible] ತಿಳಿಸಿದರು. ಹಂಪೆಯ ಬಳಿ ಇನ್ನೆರಡು ವಿದ್ಯುದುತ್ಪಾದನಾ ಕೇಂದ್ರಗಳ [illegible] ತಿಳಿಸಿದರು.

ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ [illegible] ನಾರಾಯಣರಾಜುರವರು ಈ ದಿನ ಇಲ್ಲಿಗೆ ಆಗಮಿಸಿದರು. ಅವರು ಮೂರು ದಿನಗಳು ಇಲ್ಲಿರುವರು

ವಿದ್ಯಾ ಸಚಿವರೊಡನೆ ಮೈಸೂರು ಮತ್ತು ಕರ್ನಾಟಕ ಉಪಕುಲಪತಿಗಳ ಭೇಟಿ

ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಉಪ ಕುಲಪತಿಗಳು ಈ ದಿನ ವಿದ್ಯಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರವರನ್ನು ಭೇಟಿ ಮಾಡಿ [illegible] ವಿಶ್ವವಿದ್ಯಾಲಯಗಳ [illegible] ಸಂಬಂಧಪಟ್ಟ ವಿಷಯಗಳನ್ನು ಮತ್ತು ಅಭ್ಯಾಸಕ್ರಮಗಳ ಸಂಬಂಧ ಮಾತುಕತೆ ನಡೆಸಿದರು.

ಭಾರತದ ಅಭಿವೃದ್ಧಿ ಯೋಜನೆಗೆ ಫ್ರಾನ್ಸಿನ ಸಹಾಯ

ಭಾರತದ [illegible] ಯೋಜನೆಯಲ್ಲಿ ಫ್ರಾನ್ಸ್ ಭಾಗವಹಿಸುವ ಬಗ್ಗೆ ಭಾರತ ಮತ್ತು ಫ್ರಾನ್ಸಿಗಳ [illegible] ಒಪ್ಪಂದವಾಗಿದೆ. [illegible] ಫ್ರಾನ್ಸಿನಿಂದ [illegible] ಯಂತ್ರೋಪಕರಣಗಳನ್ನು [illegible] ಫ್ರಾನ್ಸ್ [illegible] ಭಾರತದ [illegible] ಕೇಂದ್ರ ಮತ್ತು [illegible] ಫ್ರಾನ್ಸ್ ಸಹಾಯ ಮಾಡಲಿದೆ.

ಮಿರಜ್-ಬೆಳಗಾಂ ನಡುವೆ ಗೂಡ್ಸ್ ರೈಲು ಕಂಬಿ ತಪ್ಪಿತು

ಬೆಳಗಾಂ-ಮಿರಜ್ ರೈಲು ರಸ್ತೆಯಲ್ಲಿ [illegible] ಮಧ್ಯೆ [illegible] ರಾತ್ರಿ ಗೂಡ್ಸ್ ರೈಲೊಂದು ಕಂಬಿ ತಪ್ಪಿ ಸಂಚಾರಕ್ಕೆ ಅಡಚಣೆಯಾಗಿದೆ. ಈ ಕಾರಣದಿಂದ [illegible] ಬೆಳಗಾಂ-ಪೂನಾ ರೈಲು ಸಂಚಾರ ತಡವಾಗುತ್ತಿದೆ.

ಅಂಚೆ ಮತ್ತು ತಂತಿ ನೌಕರರ ಸಾರ್ವತ್ರಿಕ ಮುಷ್ಕರವೇ?

ಅಂಚೆ ಮತ್ತು ತಂತಿ ನೌಕರರುಗಳ ೩೦ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾರ್ವತ್ರಿಕ ಮುಷ್ಕರವು ನಡೆಯುವುದು ಅಗತ್ಯವೆಂದು ನೌಕರರ ಸಂಸ್ಥೆಯ ಕಾರ್ಯಕಾರಿ ಮಂಡಲಿಯು ತಿಳಿಸುತ್ತದೆ ಈ ಬಗ್ಗೆ ಎಲ್ಲಾ ಅಂಗ ಸಂಸ್ಥೆಗಳೂ ತಮ್ಮ ಅಭಿಪ್ರಾಯಗಳನ್ನು ಸೂಚಿಸುವಂತೆ ತಿಳಿಸಲಾಗಿದೆ ನೌಕರರಲ್ಲಿ ಅತೃಪ್ತಿಯು ಹೆಚ್ಚುತ್ತಿರುವುದೆಂದೂ ಹೊಸ ತೆರಿಗೆಗಳ ವಿಧಾಯಕದಿಂದ ನೌಕರರ ಆರ್ಥಿಕ ಸ್ಥಿತಿಯು ಇನ್ನೂ ಕೆಡುವುದೆಂದೂ ಸಮಿತಿಯು ಅಭಿಪ್ರಾಯಪಟ್ಟಿದೆ.

ಪರೀಕ್ಷೆಯಲ್ಲಿ ೭೫ ವರ್ಷದ ಮಹಿಳೆಯು ತೇರ್ಗಡೆ

ಕಾಶಿಯ ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ಆಚಾರ್ಯ ಪರೀಕ್ಷೆಗೆ ೭೫ ವರ್ಷ ವಯಸ್ಸಿನ ಶ್ರೀಮತಿ ಲಕ್ಷ್ಮೀದೇವಿ ಅಯ್ಯರ್ ಎಂಬಾಕೆಯು ಕುಳಿತು ಉತ್ತೀರ್ಣರಾಗಿರುತ್ತಾರೆ. ಆಕೆಯ ಕುಮಾರಿ ಪೂರ್ಣಿಮಾ ಅಯ್ಯರ್‌ರವರು ಹಿಂದೂ ವಿಶ್ವವಿದ್ಯಾಲಯದ ಮಹಿಳಾ ಕಾಲೇಜಿನ ಅಧ್ಯಾಪಕಿಯಾಗಿರುವರು.

ವಿದ್ಯಾ ಸಚಿವರಲ್ಲಿ ಸ್ಕೌಟು ಸಂಸ್ಥೆಯ ಅಧಿಕಾರಿಗಳ ನಿಯೋಗ

ಸಂಸ್ಥಾನದ ಸ್ಕೌಟ್ ಸಂಸ್ಥೆಯ ಚೀಫ್ ಕಮಿಷನರ್ ಶ್ರೀ ಜೆ. ಬಿ ಮಲ್ಲಾರಾಧ್ಯರ ನೇತೃತ್ವದಲ್ಲಿ ಕಳೆದ ಶನಿವಾರ ಸ್ಕೌಟ್ ನಿಯೋಗವು ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರ ಬಳಿ ನಿಯೋಗ ಹೋಗಿ ಸ್ಕೌಟ್ ಚಳುವಳಿಗೆ ೩ ಲಕ್ಷ ರೂ ಗ್ರಾಂಟನ್ನು ಹೆಚ್ಚಿಸಿಕೊಡಬೇಕೆಂದೂ, ಗರ್ಲ್ ಗೈಡ್ಸ್ ಚಳುವಳಿಗೆ ೭೫ ಸಾವಿರ ರೂ ಅನ್ನು ಒದಗಿಸಬೇಕೆಂದೂ ಅರಿಕೆ ಮಾಡಿದರು. ಸ್ಕೌಟ್ ಕಮಿಷನರುಗಳ ಪ್ರಯಾಣ ಮತ್ತು ದಿನ ಭತ್ಯಗಳ ಪ್ರಮಾಣವನ್ನು ಪುನರ್ವಿಮರ್ಶಿಸಬೇಕೆಂದು ಕೋರಲಾಯಿತು. ದೊಡ್ಡಬಳ್ಳಾಪುರದಲ್ಲಿ ವಿವಿಧೋದ್ದೇಶ ಶಾಲೆಯನ್ನು ಏರ್ಪಡಿಸಲು ದಯಮಾಡಬೇಕೆಂದು ಕೋರಲಾಯಿತು. ಸಚಿವರು ತಮ್ಮ ಕೈಲಾದ ಸಹಾಯ ಮಾಡುವುದಾಗಿ ಭರವಸೆಯಿತ್ತರು

೬ ತಿಂಗಳ ಮುಷ್ಕರ ಮುಕ್ತಾಯ

ಬೆಂಗಳೂರಿನ ಕೆ ಹೆಚ್. ಶಾಮರಾವ್ ಅಂಡ್ ಸನ್ಸ್ ಉಡುಪು ತಯಾರಕ ಕಂಪೆನಿಯಲ್ಲಿ ಕೆಲಸಗಾರರು ಹೂಡಿದ್ದ ೬ ತಿಂಗಳ ಮುಷ್ಕರವು ಕೊನೆಗೊಂಡಿರುತ್ತದೆ. ಉಭಯ ಪಕ್ಷಗಳಿಗೂ ಒಪ್ಪಂದವಾಗಿದೆ. ಕಾರ್ಮಿಕ ಕಮಿಷನರ್ ಶ್ರೀ ಬಾಬೂಬೇಕರ್‌ರವರು ನ್ಯಾಯವನ್ನು ತೀರ್ಮಾನಿಸಿರುತ್ತಾರೆ ಅದರ ಪ್ರಕಾರ ಕನಿಷ್ಠ ಕೂಲಿ ದಿನಕ್ಕೆ ೧।। ರೂ. ಎಂದು ಗೊತ್ತುಮಾಡಿ ೩ ರೂ ನಿಂದ ೪ರವರೆಗೆ ತುಟ್ಟಿ ಭತ್ಯ ಕೊಡಲು ಒಪ್ಪಲಾಗಿದೆ. ಖಾಯಂ ಕೆಲಸಗಾರರ ಸಂಖ್ಯೆಯನ್ನು ೨೦ರಿಂದ ೫೬ಕ್ಕೆ ಹೆಚ್ಚಿಸಲು ಕಂಪೆನಿಯವರು ಒಪ್ಪಿರುತ್ತಾರೆ. ಅವರುಗಳಿಗೆ ಪ್ರಾವಿಡೆಂಟ್ ನಿಧಿಯನ್ನು ಏರ್ಪಡಿಸಲಾಗುವುದು ಮುಷ್ಕರ ಕಾಲದಲ್ಲಿ ಒಟ್ಟು ೫೫ ದಿನಗಳ ಕೂಲಿಯನ್ನು ಕೊಡಲಾಗುವುದು ಮೈಸೂರು ಸಂಸ್ಥಾನದಲ್ಲಿ ಹಿಂದೆ ಯಾವಾಗಲೂ ಇಷ್ಟು ದೀರ್ಘ ಕಾಲದ ಮುಷ್ಕರ ನಡೆದಿರಲಿಲ್ಲ.

ಕಾವ್ಯ ವಾಚನ

ಏಕಾದಶಿ ಪ್ರಯುಕ್ತ ಜಯನಗರದಲ್ಲಿರುವ [illegible] ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಪಿ. ಎ. ಗಿರಿಧರಮೂರ್ತಿಯವರಿಂದ "ಅಂಗದನ ರಾಯಭಾರ" ಎಂಬ ಕಾವ್ಯ ವಾಚನ ಮತ್ತು ಶ್ರೀ ಎಸ್. ಲಕ್ಷ್ಮೀನರಸಿಂಹರವರಿಂದ ವ್ಯಾಖ್ಯಾನಗಳನ್ನು ಶ್ರೀ ಕೃಷ್ಣಮೂರ್ತಿ, ಕೃಷ್ಣರಾಯರ ನೇತೃತ್ವದಲ್ಲಿ ಏರ್ಪಡಿಸಲಾಗಿದೆ.

ಹರಿಕಥೆ

ಮೈಸೂರು ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ, ನಾಳೆ ರಾತ್ರಿ ೮ ಗಂಟೆಗೆ "ಭಕ್ತ ಪುಂಡಲೀಕ" ಎಂಬ ಕಥೆಯನ್ನು ಹರಿದಾಸ್ ಶ್ರೀ ಪಿ ಆರ್. ಸುಬ್ರಹ್ಮಣ್ಯನವರಿಂದ ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ.

ನಂಜನಗೂಡಿನಲ್ಲಿ ಮಳೆಯಿಂದ ಕೆರೆಗಳು ಒಡೆದಿವೆ

ನಂಜನಗೂಡು ೨೩.

ಮೂರು ದಿನಗಳ ಭಾರಿ ಮಳೆಯ ಪರಿಣಾಮವಾಗಿ ಈ ಪ್ರದೇಶದಲ್ಲಿರುವ ಅನೇಕ ದೊಡ್ಡ ಮತ್ತು ಚಿಕ್ಕ ಕೆರೆಗಳು ಒಡೆದಿವೆ ರಸ್ತೆಗಳಲ್ಲಿ ಸಂಚಾರಕ್ಕೆ ಅಡಚಣೆಯಾಗಿದೆ.

ಟಿ ನರಸೀಪುರದಲ್ಲೂ ಮಳೆಯು ಜಾಸ್ತಿಯಾಗಿ ಮೊನ್ನೆ ದಿನ ೫ ಅಂಗುಲದಷ್ಟು ರಿಕಾರ್ಡು ಆಯಿತು. ಅಲ್ಲಿಯೂ ಕೆರೆಗಳು ಒಡೆದಿವೆಯೆಂದು ವರದಿಯಾಗಿದೆ

ನಯಾ ಪೈಸಾ ವ್ಯಾಜ್ಯದಲ್ಲಿ ಬಾಲಕನ ಕೊಲೆ

ಕೋವಿಲ್ಪಟ್ಟಿ ಬಳಿ ವಿಲಾಠಿಕುಲಂ ಎಂಬಲ್ಲಿ ೧೨ ವರ್ಷದ ಮುತ್ತಯ್ಯ ಎಂಬ ಬಾಲಕನನ್ನು ನಯಾಪೈಸಾ ವ್ಯಾಜ್ಯದಲ್ಲಿ ೧೦ ಮತ್ತು ೧೩ ವರ್ಷದ ಇಬ್ಬರು ಹುಡುಗರು ಕೊಲೆ ಮಾಡಿರುವುದಾಗಿ ಗೊತ್ತಾಗಿದೆ. ಅವರಿಬ್ಬರನ್ನೂ ನ್ಯಾಯಾಧೀಶರ ಮುಂದೆ ತಂದು ನಿಲ್ಲಿಸಲಾಗಿತ್ತು ಅವರನ್ನು ಮಾತಾಪಿತೃಗಳ ವಶಕ್ಕೆ ಒಪ್ಪಿಸಿ ನ್ಯಾಯಾಧೀಶರು ಮೊಕದ್ದಮೆಯನ್ನು ಮುಂದುವರಿಸಿರುತ್ತಾರೆ.

ಜಾರ್ಡಾನಿನಲ್ಲಿ ಬಹಿರಂಗವಾಗಿ ನಾಲ್ಕು ಜನರಿಗೆ ಗಲ್ಲು

ಜಾರ್ಡಾನಿನ ರಾಜಧಾನಿ ಅಮ್ಮಾನ್, ನಾಬ್ಲುಸ್, ಹೆಬ್ರಾನ್ ಮತ್ತು ತುಲ್ಕಾರೆಂ ಎಂಬ ನಾಲ್ಕು ಊರುಗಳಲ್ಲಿ ಮೊನ್ನೆ ೪ ಜನರನ್ನು ಬಹಿರಂಗವಾಗಿ ಗಲ್ಲಿಗೇರಿಸಲಾಯಿತೆಂದು ವರದಿಯಾಗಿದೆ ಅವರು ಇಸ್ರೇಲಿಗೆ ಮಿಲಿಟರಿ ರಹಸ್ಯವನ್ನು ಕೊಟ್ಟರೆಂದು ಹೇಳಲಾಗಿದೆ.

ಉಪನಯನ ಮಹೋತ್ಸವ

ಅರಮನೆ ಜನಾನಾ ಸಮ್ಮುಖದ ಮೊಹ್ತೇಸರ್ ಶ್ರೀ ಎ. ಎಸ್ ಅನಂತನಾರಾಯಣಶಾಸ್ತ್ರಿಗಳ ಸಹೋದರರಾದ ಶ್ರೀ ಎ. ಎಸ್ ದೊರೆಸ್ವಾಮಿಯವರು ತಮ್ಮ ಕುಮಾರ ಚಿ|| ಶ್ರೀನಿವಾಸನಿಗೆ ಈ ದಿನ ನಗರದಲ್ಲಿ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ಬೆಂಗಳೂರಿನಲ್ಲಿ ಗೃಹ ನಿರ್ಮಾಣ ಖಾತೆಯ ಸಚಿವರುಗಳ ಸಭೆ

ಮುಂದಿನ ತಿಂಗಳ ಅಂತ್ಯಭಾಗದಲ್ಲಿ ಬೆಂಗಳೂರಿನಲ್ಲಿ ನಾನಾ ಸಂಸ್ಥಾನಗಳ ನಿರ್ಮಾಣ ಇಲಾಖಾ ಮಂತ್ರಿಗಳ ಸಭೆಯು ಕೇಂದ್ರ ವಸತಿಖಾತಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು. ಗ್ರಾಮಾಂತರದಲ್ಲಿ ವಸತಿ ಯೋಜನೆ ಕೈಗೊಳ್ಳುವುದು, ಕಾರ್ಮಿಕರು ಮತ್ತು ಕಡಿಮೆ ವರಮಾನದವರ ವಸತಿ ಏರ್ಪಾಟಿನ ಪ್ರಗತಿ ಮುಂತಾದ ವಿಷಯಗಳನ್ನು ಚರ್ಚಿಸಲಾಗುವುದು.

ಬೆಂಗಳೂರಿನಲ್ಲಿ ಸಂಗೀತ ಘಟಿಕೋತ್ಸವ

ಬರುವ ತಿಂಗಳು ೩ನೇ ತಾರೀಕು ಬೆಂಗಳೂರಿನಲ್ಲಿ ಸಂಗೀತ ಘಟಿಕೋತ್ಸವವು ಜರುಗುವುದು. ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಅಧ್ಯಕ್ಷತೆ ವಹಿಸಿ, ಮಾಧ್ಯಮಿಕ ವಿದ್ಯಾಭ್ಯಾಸ ಸಮಿತಿಯವರ ಈ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಶಸ್ತಿ ಪತ್ರಗಳನ್ನು ವಿನಿಯೋಗಿಸುವರು. ಸುಪ್ರಸಿದ್ಧ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ವಿ ರಾಜಮನ್ನಾರರು ಭಾಷಣ ಮಾಡುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮತ್ತು ೧-೫೦ ಸಿತಾರ್ [illegible]. ೭-೧೫ ಮತ್ತು ೮-೧೫ ಎಸ್ ಪಿ. ಗೋಪಾಲಕೃಷ್ಣ-ಕನ್ನಡ ಗೀತೆಗಳು ೭-೩೦ ರಿಕಾರ್ಡು. ಮಧ್ಯಾಹ್ನ ೧೨ ಮತ್ತು ೪ ಆರ್. ಇಂದಿರಾ ಮತ್ತು ಆರ್. ಲೀಲಾ-ಸಂಗೀತ. ೧೨-೩೦ ಬಾಲಜಗತ್. ಸಂಜೆ ೬-೧೦ ಜಾನಪದ ಗಾನ. ೭-೩೦ ನಮ್ಮ ಸಂಸ್ಕೃತಿಯಲ್ಲಿ ಕೃಷ್ಣನ ಪಾತ್ರ-ಭಾಷಣ. ೮-೩೦ ರೇಡಿಯೋ ನ್ಯೂಸ್ ರೀಲ್. ೮-೪೦ ಪ್ರಹಸನ; ೯-೧೫ ಕಾವ್ಯ ಧಾರೆ. ೯-೩೦ ರಾಷ್ಟ್ರೀಯ ಸಂಗೀತ.

ಮೈಸೂರು ಪೇಟೆ ಧಾರಣೆ

[illegible]	೫೫ ೦೦	
[illegible]	೧೯೯ ೦೦	೨೨೭ ೫೦

ತೂತ್ತುಕುಡಿಯಲ್ಲಿ ದ್ರಾವಿಡ ಮುನ್ನೇತ್ರ ಸಂಘದವನ ಕೊಲೆ

ತೂತ್ತುಕುಡಿಯ ದ್ರಾವಿಡ ಮುನ್ನೇತ್ರ ಸಂಘದ ನಾಯಕರೊಬ್ಬರಾದ ಶಕ್ತಿಮುತ್ತುರವರನ್ನು ಮೊನ್ನೆ ಹಲವರು ಕತ್ತಿಗಳಿಂದ ಹೊಡೆದು ಕೊಲೆ ಮಾಡಿದರೆಂದು ಹೇಳಲಾಗಿದೆ. ಅವರ ಜೊತೆ ಇದ್ದ ರಾಜು ಎಂಬಾತನಿಗೂ ಪೆಟ್ಟು ಬಿದ್ದಿದೆ. ಅದಾದ ೧೫ ನಿಮಿಷಗಳನಂತರ ಬೇರೊಂದು ಗುಂಪು ಸಂಸ್ಥೆಯಿಂದ ಓಡಿಸಲ್ಪಟ್ಟಿದ್ದ ರತ್ನಂ ಎಂಬಾತನ ಮೇಲೆ ಬಿದ್ದು ಅವನನ್ನು ಕೊಲೆ ಮಾಡಿರುವುದಾಗಿ ಗೊತ್ತಾಗಿದೆ. ಇನ್ನಿಬ್ಬರಿಗೆ ಕುಡುಗೋಲಿನಿಂದ ಹೊಡೆದು ಗಾಯಪಡಿಸಲಾಗಿದೆ ಆದರೆ ಯಾರನ್ನೂ ದಸ್ತಗಿರಿ ಮಾಡಿಲ್ಲ. ಊರಿನಲ್ಲಿ ಜನರಿಗೆ ವಿಪರೀತ ಗಾಬರಿಯುಂಟಾಗಿದೆ.

ನೆಲ್ಲೂರು ಜಿಲ್ಲೆಯ ೪೦೦ ಗ್ರಾಮಾಧಿಕಾರಿಗಳ ರಾಜೀನಾಮೆ

ಆಂಧ್ರ ಪ್ರದೇಶ ಗ್ರಾಮಾಧಿಕಾರಿಗಳ ಸಂಘದ ಅಧ್ಯಕ್ಷರ ಸೂಚನೆ ಮೇರೆ ನೆಲ್ಲೂರು ಜಿಲ್ಲೆಯ ಗ್ರಾಮಾಧಿಕಾರಿಗಳು ಮುಷ್ಕರವನ್ನಾರಂಭಿಸಿರುತ್ತಾರೆ ೪೦೦ ಮಂದಿ ಅಧಿಕಾರಿಗಳು ಈಗಾಗಲೇ ರಾಜೀನಾಮೆಯಿತ್ತಿರುವರೆಂದೂ, ಇನ್ನೂ ೧,೦೦೦ ಮಂದಿ ಕೊಡಲಿರುವರೆಂದೂ ಹೇಳಲಾಗಿದೆ.

೬,೦೦೦ ಹರಿಜನರಿಂದ ಬೌದ್ಧ ಮತಾವಲಂಬನೆ

ಔರಂಗಾಬಾದಿನಲ್ಲಿ ಮೊನ್ನೆ ೩,೦೦೦ ಮಹಿಳೆಯರೂ ಸೇರಿ ೬,೦೦೦ ಹರಿಜನರು ಬೌದ್ಧಮತವನ್ನವಲಂಬಿಸಿದರು ಅದಕ್ಕಾಗಿ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ನಿಮ್ನವರ್ಗದವರ ಮುಖಂಡರಾದ ಭಾವುಸಾಹೆಬ್ ಮೋರೆಯವರು ಬೌದ್ಧ ಮಂತ್ರಗಳನ್ನುಚ್ಚರಿಸಿ ಡಾ|| ಅಂಬೇಡ್ಕರರು ತಗೆದುಕೊಂಡ ಪ್ರತಿಜ್ಞಾವಚನ ಸ್ವೀಕರಿಸಿ, ಎಲ್ಲರಿಗೂ ಬೌದ್ಧ ದೀಕ್ಷೆಯನ್ನಿತ್ತರು.

ಅಖಿಲ ಭಾರತ ಸೈಕಲ್ ಸವಾರಿ ಸ್ಪರ್ಧೆ

ಬರುವ ತಿಂಗಳು ೩ನೇ ತಾರೀಕು ಭೋಪಾಲಿನಲ್ಲಿ ಅಖಿಲ ಭಾರತ ಸೈಕಲ್ ಸವಾರಿ ಸ್ಪರ್ಧೆಯು ಜರುಗುವುದು

ಆಲ್ಬೇನಿಯಾ ಮಂತ್ರಿಯ ಪಲಾಯನ

ಆಲ್ಬೇನಿಯ ಸರ್ಕಾರದ ಮಂತ್ರಿ ಪನಯೋಟ್ ಪ್ಲಿಮಾಕುರವರು ಯುಗೋಸ್ಲೇವಿಯಕ್ಕೆ ಪಲಾಯನವಾಗಿ, ಆ ಸರ್ಕಾರದ ಆಶ್ರಯವನ್ನು ಕೋರಿದ್ದಾರೆ ಅವರು ಅಲ್ಲಿನ ಕಾರ್ಮಿಕ ಸಂಸ್ಥೆಯ ಕೇಂದ್ರ ಸಮಿತಿಯ ಸದಸ್ಯರು.

ವಿವಾಹ ಮಹೋತ್ಸವ

ನಗರದ ಆಯುರ್ವೇದ ಪಂಡಿತರಾದ ಶ್ರೀ ಪಿ ಹೆಚ್ ಚಂದ್ರಭಾನುಸಿಂಗ್‌ರವರು ತಮ್ಮ ಕುಮಾರಿ ಸೌ|| ನಿರ್ಮಲಾಬಾಯಿಯನ್ನು ನಗರದ ರಜಪೂತ್ ಬ್ಲಾಕಿನಲ್ಲಿರುವ ಶ್ರೀ ಜಯಸಿಂಗ್‌ರವರ ಮಕ್ಕಳು ಶ್ರೀ ಜೆ ಗೋವಿಂದಸಿಂಗ್‌ರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಮನೆ ಮಾರಾಟಕ್ಕಿದೆ
ಡೋರ್ ನಂ. 733 ಬಿಲ್ಲೆ ಮೊಹಲ್ಲಾ
ಪ್ರಭುದೇವ ಸಿನಿಮಾ ಹತ್ತಿರ
ವಿವರಗಳಿಗೆ:-
ಜಯ ಅಂಡ್ ಕಂಪನಿ,
ಹಳೆ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

ಚಾಕು ತೋರಿಸಿ ೩,೬೦೦ ರೂ. ದರೋಡೆ

ಪೂನಾ ಶಾಸನ ಸಭಾ ಸದಸ್ಯರ ಅನುಭವ

ಬೆಂಗಳೂರು ೨೩

ಪೂನಾ ವಿಧಾನಸಭಾ ಸದಸ್ಯ ಶ್ರೀ ಆರ್. [illegible] ಶಿಸ್ತ್ಯಾಮಾಪ್ಪನವರು ಮೊನ್ನೆ ರಾತ್ರಿ ತಮ್ಮ ಮನೆಗೆ ಹಿಂದಿರುಗುತ್ತಿದ್ದಾಗ ಆರು ಮಂದಿ ಯುವಕರು ಚಾಕು ತೋರಿ ಹೆದರಿಸಿ ಅವರ ಬಳಿ ಇದ್ದ ೩,೬೦೦ ರೂ ಗಳನ್ನು ಕಸಿದುಕೊಂಡು ಪರಾರಿಯಾದರೆಂದು ವರದಿಯಾಗಿದೆ. ಆ ಹಣವನ್ನು ಮೈಸೂರು ಬ್ಯಾಂಕಿಗೆ ಕಟ್ಟಲು ಹೊರಟು ಕಾರಣಾಂತರದಿಂದ ಕಟ್ಟದೆ ವಾಪಸು ತಂದರೆಂದೂ, ಅದನ್ನು ನೋಡುತ್ತಿದ್ದ ಒಬ್ಬ ಯುವಕನು ಅವರನ್ನು ಕೆಲಸ ಕೇಳಿದನೆಂದೂ, ನಾಳೆ ಬರುವಂತೆ ಅವನಿಗೆ ಇವರು ತಿಳಿಸಿದರೆಂದೂ ಅವರು ಹಿಂದಿರುಗಿ ರಾತ್ರಿ ಪುನಃ [illegible] ಜನ ಬಂದು [illegible] ತೋರಿಸಿ ಹಣವನ್ನು ಕಿತ್ತುಕೊಂಡರೆಂದೂ ಹೇಳಲಾಗಿದೆ.

ಫಿನ್ಲೆಂಡ್ ಸರ್ಕಾರದ ರಾಜೀನಾಮೆ

ಫಿನ್ಲೆಂಡಿನಲ್ಲಿ ಕಳೆದ ೧೫ ತಿಂಗಳಿಂದ ಅಧಿಕಾರದಲ್ಲಿದ್ದ ಸಮ್ಮಿಶ್ರ ಮಂತ್ರಿಮಂಡಲವು ರಾಜೀನಾಮೆಯಿತ್ತಿದೆ. [illegible] ಹೊಸ [illegible] ಮಂತ್ರಿಮಂಡಲದ [illegible] ಬಂದಿರುವುದಿಲ್ಲ. ಅಲ್ಲಿ ೧ ತಿಂಗಳಲ್ಲಿ [illegible].

[illegible] ಪ್ರಶಸ್ತಿ

ಅಯೋಧ್ಯೆಯ ಸಂಸ್ಕೃತ [illegible] ಬೆಂಗಳೂರಿನ [illegible] ಶ್ರೀ [illegible] ಗ್ರಂಥಗಳನ್ನು [illegible] ಅವರಿಗೆ ವಿದ್ಯಾ[illegible] ಎಂಬ ಬಿರುದನ್ನು ಕೊಟ್ಟಿರುತ್ತಾರೆ. [illegible] ಗೋಕಕ್ಕದ [illegible] ಪ್ರಶಸ್ತಿಗಳು ಬಂದಿವೆ.

ಶ್ರೀ ಜಗದಂಬಾ ಶಿಶು ವಿಹಾರ
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ [illegible] ಶಿಶು ವಿಹಾರದ ತರಗತಿಗಳು ಇದೇ ೧೫ನೇ ತಾರೀಖಿನಿಂದ ಆರಂಭವಾಗಿವೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

SREE GAYATHRI
TALKIES
On 24-5-57 : One day only
A Star is Born
(Cinemascope & Warner color)
From 25-5-57 : For 3 day
HELL ON FRISCO BAY
(Cinemascope & Technicolor)
Starring :—Alan Ladd, Edward G. Robinson & Joanne Dru
Morning shows on 25th & 26th
DUEL IN THE JUNGLE

Edited, Printed and Published
A. R. Nagaraja at Sadhvi,
D. Subbiah Road, Mysore

ಪ್ರಭುದೇವಾ ಥಿಯೇಟರ್
([illegible] ಟಾಕೀಸ್)
24-5-57ನೇ ಶುಕ್ರವಾರದಿಂದ : ಅಮೋಘವಾದ 7ನೇಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು
★ ಮಾಯಾಬಜಾರ್ ★
(ಶಶಿರೇಖಾ ಪರಿಣಯ)
ಪಾತ್ರ:—ಎಸ್ ಗಣೇಶನ್, ಸಾವಿತ್ರಿ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ತಂಗವೇಲು, ಮುತ್ತುಲಕ್ಷ್ಮಿ, ಕರುಣಾನಿಧಿ, ಏಳುಮಲೈ, [illegible]

ರಿಜಿಸ್ಟರ್ಡ್ ನಂ. 792

ಚಂದಾ ದರ

ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ



ಬಿಡಿ ಪತ್ರಿಕೆ 2 ನಯಾ ಪೈಸೆ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೨] SADHVI : SATURDAY 25—5—1957 ಮೈಸೂರು : ಶನಿವಾರ ೨೫—೫—೧೯೫೭ : [ಸಂಚಿಕೆ : [illegible]

ಅಣು ಸಿಡಿತ ನಿಲ್ಲಿಸುವಂತೆ ಭಾರತ-ಜಪಾನುಗಳ ಕರೆ

ಅಣು ಶಸ್ತ್ರ ಪ್ರಯೋಗ ನಿಲ್ಲಿಸಲು ಭಾರತ ಮತ್ತು ಜಪಾನ್ ಕರೆ

ನೆಹರೂ–ಕಿಷಿಯವರ ಜಂಟಿ ಪ್ರಕಟಣೆ

ದೆಹಲಿಗೆ ಆಗಮಿಸಿರುವ ಜಪಾನಿನ ಪ್ರಧಾನಿ ನೊಬುಸುಕೆ ಕಿಷಿ ಮತ್ತು ಪ್ರಧಾನಿ ನೆಹರೂರವ [illegible] ಮಾತುಕತೆಗಳನಂತರ ಹೊರಡಿಸಿರುವ ಜಂಟಿ ಪ್ರಕಟಣೆಯಲ್ಲಿ ಅಣು ಶಸ್ತ್ರ ಮತ್ತು ಜಲಜನಕ ಅಸ್ತ್ರಗಳ ಪ್ರಯೋಗವು ಕೂಡಲೇ ನಿಲ್ಲಬೇಕೆಂದು ತಿಳಿಸಿರುತ್ತಾರೆ. ಪ್ರಯೋಗ ಪರೀಕ್ಷೆಗಳು ಅಸ್ಥಿರರಾಗಿ ನಿಲ್ಲುವುದಕ್ಕೆ ತಕ್ಕ ಒಪ್ಪಂದವನ್ನು ಹಿರಿಯ ರಾಷ್ಟ್ರಗಳು ಮಾಡಿಕೊಳ್ಳುವಂತೆಯೂ ಉಭಯ ಪ್ರಧಾನಿಗಳು ಸೂಚಿಸಿರುತ್ತಾರೆ. ವಿಶ್ವಸಂಸ್ಥೆಯ ಪ್ರಣಾಳಿಕೆ ಮತ್ತು ಬಾಂಡುಂಗ್ ಸೂತ್ರಗಳಲ್ಲಿ ಅವರು ನಂಬಿಕೆಯನ್ನು ವ್ಯಕ್ತಪಡಿಸಿ, ಅವು ಅಂತರ ರಾಷ್ಟ್ರೀಯ ವ್ಯಾಜ್ಯಗಳಿಗೆ ಪರಿಹಾರದ ಮಾರ್ಗಗಳೆಂದು ಹೇಳಿರುವರು. ಉಭಯ ರಾಷ್ಟ್ರಗಳೂ ಶಾಂತಿ ಪಾಲನೆಗೆ ಶ್ರಮ ಕೊಡುವುದಾಗಿಯೂ ಪ್ರಕಟಣೆಯು ತಿಳಿಸಿದೆ. ಭಾರತದ ಪಂಚವಾರ್ಷಿಕ ಯೋಜನೆಯಲ್ಲಿ ಜಪಾನು ಸಂಪೂರ್ಣ ಸಹಕಾರವನ್ನು ತೋರುವುದೆಂದೂ ತಿಳಿಸಲಾಗಿದೆ

ಹಾಂಕಾಂಗಿನಲ್ಲಿ ಭಾರಿ ಮಳೆಯಿಂದ ೬೩ ಜನರ ಮರಣ

೭,೦೦೦ ಮಂದಿಗೆ ನಿರಾಶ್ರಯ

ಹಾಂಕಾಂಗಿನಲ್ಲಿ ಕಳೆದ ೬೮ ವರ್ಷದಿಂದ ಅನುಭವಿಸದಂತಹ ಅನಾಥ ಮಳೆಯು ಸುರಿದು ಭೂಕುಸಿತ, ಮನೆಗಳ ಕುಸಿಯುವಿಕೆ ಮುಂತಾದುವುಗಳಿಂದ ಒಟ್ಟು ೬೩ ಜನರು ಮೃತಪಟ್ಟರೆಂದು ವರದಿಯಾಗಿದೆ. ೭,೦೦೦ ಜನರು ನಿರಾಶ್ರಿತರಾಗಿರುವರು. ಅವರುಗಳು ಪ್ರಜಾ ಚೀಣದಿಂದ ಬಂದು ಹಾಂಕಾಂಗಿನಲ್ಲಿ ಆಶ್ರಯಪಡೆದಿರುವವರು. ಚೀಣದ ಕ್ವಾಂಗ್ಟುಂಗ್ ತೀರ ಪ್ರಾಂತದಲ್ಲಿ ೩೦,೦೦೦ ಎಕರೆ ಭತ್ತದ ಗದ್ದೆಗಳಿಗೆ ನೀರು ನುಗ್ಗಿದೆ

ಕೇರಳದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಭಾಗಗಳ ಏರ್ಪಾಡು

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಭಾಗಗಳ ಪದ್ಧತಿಯನ್ನು ಜಾರಿಗೆ ತರುವಂತೆ ಕೇರಳ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಈ ವರ್ಷದಿಂದ ಅದು ಜಾರಿಗೆ ಬರುವುದು. ಆದರೆ ಭಾಗಗಳಲ್ಲಿ ಉತ್ತೀರ್ಣರಾದವರು ಕಾಲೇಜುಗಳಿಗೆ ಸೇರಲು ಅರ್ಹತೆ ಪಡೆಯುವುದಿಲ್ಲ. ಅವರು ಸರ್ಕಾರಿ ಕೆಲಸಗಳಿಗೆ ಮಾತ್ರ ಸೇರಲು ಅವಕಾಶವಿದೆ

ಸಂಗೀತ ಕಛೇರಿ

ಆಂಧ್ರ ದೇಶದ ರಾಜಮಹೇಂದ್ರಿಯಿಂದ ಬಂದಿರುವ ವಿದ್ವಾನ್ ಕಲ್ಲೂರಿ ಸುಬ್ಬರಾವ್‌ರವರು ಇದೇ ಸಂಜೆ ೬॥ ಗಂಟೆಗೆ ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ ಸೂಕ್ತ ಪಕ್ಕವಾದ್ಯಗಳೊಡನೆ ಸಂಗೀತ ಕಛೇರಿಯನ್ನು ನಡೆಸುವರು. ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ಇವರು ಗಾಯನ ಮಾಡುವರು. ಸರ್ವರಿಗೂ ಸ್ವಾಗತವಿದೆ

ಅಮೆರಿಕಾ ರಾಯಭಾರಿ ಕಛೇರಿ ಮೇಲೆ ಚೀಣಿಯರ ಧಾಳಿ

ಫಾರ್ಮೋಸಾ ರಾಜಧಾನಿ ಟೈಪೆಯಲ್ಲಿ ಮಾರ್ಷಲ್ ಲಾ

ರಾಷ್ಟ್ರೀಯ ಚೀಣರಿರುವ ಫಾರ್ಮೋಸಾ ದ್ವೀಪದ ರಾಜಧಾನಿ ಟೈಪೆಯಲ್ಲಿ ಅಮೆರಿಕಾ ಸೈನ್ಯದ ಸಾರ್ಜೆಂಟೊಬ್ಬನನ್ನು ಅಲ್ಲಿನ ಕೋರ್ಟಿನವರು ಖುಲಾಸೆ ಮಾಡಿದುದಕ್ಕಾಗಿ ಸಿಟ್ಟುಗೊಂಡ ಜನರು ಅಮೆರಿಕಾ ರಾಯಭಾರಿ ಕಛೇರಿ ಮೇಲೆ ಧಾಳಿ ನಡೆಸಿ ಬಾಗಿಲು ಕಿಟಕಿ ಮುಂತಾದುವನ್ನು ಒಡೆದು ಅವರ ಧ್ವಜವನ್ನು ಹರಿದುಹಾಕಿದರೆಂದೂ, ನಂತರ ಪೌರಸಭಾ ಭವನದ ಮುಂದೆ ಗಲಭೆಗಳಾಗಿ ೮ ಜನ ಪ್ರದರ್ಶನಕಾರರು ಮಡಿದು ಇಬ್ಬರು ಪೋಲೀಸರಿಗೆ ಪೆಟ್ಟಾಯಿತೆಂದೂ ವರದಿಯಾಗಿದೆ. ಗಲಭೆಯ ಪರಿಣಾಮವಾಗಿ ಊರಿನಲ್ಲಿ ಮಾರ್ಷಲ್ ಲಾವನ್ನು ಘೋಷಿಸಲಾಗಿದೆ

ರಾಷ್ಟ್ರೀಯ ಚೀಣರ ನಾಯಕರಲ್ಲೊಬ್ಬರು ಸಾರ್ಜೆಂಟನ ಹೆಂಡತಿ ಮಲಗುವ ಕೊಠಡಿಯೊಳಗೆ ಇಣಕಿನೋಡಿದರೆಂದೂ, ಆಗ ಆತ್ಮ ರಕ್ಷಣೆಗಾಗಿ ಸಾರ್ಜೆಂಟನು ಗುಂಡು ಹಾರಿಸಿದನೆಂದೂ ಹೇಳಲಾಗಿದೆ. ಅವನ ವಾದವನ್ನು ಎತ್ತಿ ಹಿಡಿದು ಕೋರ್ಟಿನವರು ಅವನನ್ನು ಖುಲಾಸೆ ಮಾಡಿದರು.

ಇದಕ್ಕಾಗಿ ಪ್ರತಿಭಟನೆ ನಡೆದು ಅಮೆರಿಕಾ ರಾಯಭಾರಿ ಕಛೇರಿಯ ೫ ಜನರನ್ನು ಹೊಡೆಯಲಾಯಿತಲ್ಲದೆ, ಅಲ್ಲಿದ್ದ ರಹಸ್ಯ ಕಾಗದಪತ್ರಗಳನ್ನು ಬೀದಿಗೆ ಬಿಸಾಡಲಾಯಿತು. ರಾಷ್ಟ್ರೀಯ ಚೀಣದ ಸೈನ್ಯದವರು ಕೂಡಲೇ ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದರು. ಗಲಭೆಯಿಂದ ೧೦ ಕಾರುಗಳು ನಾಶವಾದುವು.

ದ್ವಿತೀಯ ವಿವಾಹಕ್ಕೆ ಪ್ರಯತ್ನಿಸಿದವನ ಬಂಧನ

ಮೈಸೂರು ೨೫

ಮೊದಲನೇ ಹೆಂಡತಿಯು ಜೀವಂತಳಾಗಿರುವಾಗ ಮತ್ತೊಬ್ಬಳನ್ನು ವಿವಾಹವಾಗಕೂಡದೆಂಬ ಶಾಸನ ವಿದ್ದರೂ ಸಹ, ಮತ್ತೊಬ್ಬಳನ್ನು ವಿವಾಹ ಮಾಡಿಕೊಳ್ಳಲೆತ್ನಿಸಿದುದಕ್ಕಾಗಿ ನಗರಕ್ಕೆ ಸೇರಿರುವ ಕುರುಬಾರಹಳ್ಳಿಯ ಜವರೇಗೌಡ ಎಂಬುವನು ದಸ್ತಗಿರಿ ಮಾಡಲ್ಪಟ್ಟು, ಜಾಮೀನು ಮೇಲೆ ಬಿಡುಗಡೆಯಾಗಿರುತ್ತಾನೆ. ಆತನ ತಂದೆ ತಮ್ಮಣ್ಣಗೌಡ ಎಂಬಾತನನ್ನೂ ಬಂಧಿಸಿ ಜಾಮೀನು ಮೇಲೆ ಬಿಡಲಾಗಿದೆ

ಮೊದಲನೇ ಹೆಂಡತಿ ಪುಟ್ಟರಾಮಮ್ಮನು ಎರಡನೇ ವಿವಾಹವನ್ನು ತಡೆಗಟ್ಟುವಂತೆ ನಗರದ ಪ್ರಥಮ ನ್ಯಾಯಾಧೀಶರ ಕೋರ್ಟಿಗೆ ಫಿರ್ಯಾದನ್ನು ಕೊಟ್ಟಿದ್ದಳು. ನ್ಯಾಯಾಧೀಶರು ಆಕೆಯ ಪ್ರಾರ್ಥನೆಯನ್ನು ಮನ್ನಿಸಿ ಅವರಿಬ್ಬರನ್ನೂ ದಸ್ತಗಿರಿ ಮಾಡಿ ಕೋರ್ಟಿನ ಮುಂದೆ ಹಾಜರುಪಡಿಸಬೇಕೆಂದು ಆಜ್ಞೆ ಹೊರಡಿಸಿದ್ದರ ಮೇಲೆ ಅವರ ದಸ್ತಗಿರಿಯಾಯಿತು. ವಿವಾಹವು ಇದರಿಂದ ನಿಂತಿತು. ಜವರೇಗೌಡನು ಒಬ್ಬರ ಮನೆಯಲ್ಲಿ ಕೆಲಸಕ್ಕಿರುವನೆಂದು ಹೇಳಲಾಗಿದೆ.

ಶೀತ ಯುದ್ಧದಲ್ಲಿ ತಾಟಸ್ಥ್ಯ ವಹಿಸುವಂತೆ ಬ್ರಿಟನ್ನಿಗೆ ಕರೆ

ಅಖಿಲ ಭಾರತ ಶಾಂತಿ ಸಮ್ಮೇಳನದಲ್ಲಿ ರಾಜಾಜಿಯವರ ಭಾಷಣ

ಬೆಂಗಳೂರು ೨೫

ಭಾರತದ ಹಿರಿಯ ರಾಜಕಾರಣಿ ನೇತೃರಾದ ಸಿ. ರಾಜಗೋಪಾಲಾಚಾರಿಯವರು ನೆನ್ನೆ ಸಂಜೆ ಇಲ್ಲಿ ಸೇರಿದ್ದ ಅಖಿಲ ಭಾರತ ಶಾಂತಿ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಭಾಷಣ ಮಾಡಿ "ಬಿಸಿ" ಯುದ್ಧಕ್ಕಿಂತಲೂ ಹೆಚ್ಚು ಕೇಡಿನದಾದ ಶೀತ ಯುದ್ಧದಲ್ಲಿ ಬ್ರಿಟನ್ನು ತಾಟಸ್ಥ್ಯ ವಹಿಸುವಂತೆ ಕರೆಯಿತ್ತರು. ಬ್ರಿಟನ್ನು ಹಾಗೆ ಮಾಡಿದರೆ ಶೀತ ಯುದ್ಧವು ತಾನಾಗಿಯೇ ಸಾಯುವುದೆಂದೂ, ಆಗ ಜಗತ್ತಿನ ಅತ್ಯಂತ ಭಾರಿ ಯುದ್ಧವನ್ನು ಗೆದ್ದಂತಾಗುವುದೆಂದೂ ಅವರು ಹೇಳಿದರು

ಸಮ್ಮೇಳನದ ಅಧ್ಯಕ್ಷತೆಯನ್ನು ಪಂಡಿತ ಸುಂದರಲಾಲರು ವಹಿಸಿದ್ದರು. ೫೦೦ ಮಂದಿ ಪ್ರತಿನಿಧಿಗಳು ಆಗಮಿಸಿದ್ದರು. ರಾಜಾಜಿಯವರು ತಮ್ಮ ಭಾಷಣದಲ್ಲಿ ಅಣು ಶಸ್ತ್ರ ಪ್ರಯೋಗಗಳು ನಿಲ್ಲಬೇಕೆಂದೂ ಅದಕ್ಕಾಗಿ ತಾಟಸ್ಥ್ಯ ವಹಿಸಿರುವ ಎಲ್ಲಾ ರಾಷ್ಟ್ರಗಳೂ ಒಂದಾಗಬೇಕೆಂದೂ ಹೇಳಿದರು. ಅಮೆರಿಕದ ಶೀತ ಯುದ್ಧ ನೀತಿಯಿಂದ ಆ ರಾಷ್ಟ್ರದ ನೀತಿ ಪತನವಾಗಿರುವುದೆಂದು ಅಭಿಪ್ರಾಯಪಟ್ಟರು

ಜಪಾನಿಗೆ ನೆಹರೂ ಭೇಟಿ

ಜಪಾನಿನ ಪ್ರಧಾನಿಯವರ ಒತ್ತಾಯ ಪೂರ್ವಕವಾದ ಆಹ್ವಾನದ ಮೇಲೆ ಪ್ರಧಾನಿ ನೆಹರೂರವರು ಜಪಾನಿಗೆ ಭೇಟಿ ಕೊಡಲು ಒಪ್ಪಿರುವರೆಂದು ತಿಳಿದುಬಂದಿದೆ

ಮೋಟಾರಿಗೆ ಮರಾಮತ್ತು ಇಲಾಖೆ ಲಾರಿ ಡಿಕ್ಕಿ

ಗಾಯಗೊಂಡವರಿಗೆ ಭರತಪುರದ ಮಹಾರಾಜರ ಸಹಾಯ

ಮೈಸೂರು ೨೫

ಮಂಡ್ಯದ ಬಳಿ ೭೫ನೇ ಮೈಲಿ ಕಲ್ಲಿನ ಹತ್ತಿರ ನೆನ್ನೆ ರಸ್ತೆಯಲ್ಲಿ ನಿಂತಿದ್ದ ಮೋಟಾರು ಕಾರಿಗೆ ಬೆಂಗಳೂರಿನಿಂದ ಆಗಮಿಸಿದ್ದ ಮರಾಮತ್ತು ಇಲಾಖೆಯ ಲಾರಿಯು ಡಿಕ್ಕಿ ಹೊಡೆದ ಪರಿಣಾಮವಾಗಿ ಅದರಲ್ಲಿದ್ದ ಬ್ಯಾಂಕಿಂಗ್ ಉದ್ಯೋಗದ ಶ್ರೀ ಎ. ಎಸ್. ರಾವ್, ಅವರ ಪತ್ನಿ ಮತ್ತು ಮಕ್ಕಳಿಗೆ ಗಾಯವಾಯಿತೆಂದು ತಿಳಿದುಬಂದಿದೆ. ಕಾರಿನ ಹಿಂಭಾಗವು ಜಜ್ಜಿದಂತಾಗಿ, ಡಿಕ್ಕಿ ಹೊಡೆದ ರಭಸಕ್ಕೆ ಮೋಟಾರು ಪಕ್ಕದ ಗದ್ದೆಯಲ್ಲಿ ಸುಮಾರು ೧ ಫರ್ಲಾಂಗ್ ದೂರದವರೆಗೆ ಹೋಗಿ ನಿಂತಿತು.

ಅದೇ ಸಮಯದಲ್ಲಿ ಆ ಕಡೆ ಬರುತ್ತಿದ್ದ ಭರತಪುರದ ಮಹಾರಾಜರು ತಮ್ಮ ಮೋಟಾರನ್ನು ನಿಲ್ಲಿಸಿ ಕಾರಿನವರಿಗೆ ಸಹಾಯ ಮಾಡಿ ಅವರನ್ನು ಬೇರೊಂದು ಮೋಟಾರಿನಲ್ಲಿ ಮೈಸೂರಿಗೆ ಕಳುಹಿಸಿಕೊಟ್ಟರು. ಗಾಯಗೊಂಡವರು ರಾತ್ರಿ ಒಂದು ಗಂಟೆಗೆ ಮೈಸೂರಿಗೆ ಬಂದು ತಲುಪಿದರು. ಮರಾಮತ್ತು ಲಾರಿಯ ನಂಬರು ೬೬೧೩ ಎಂ. ವೈ. ಸಿ. ಎಂದು ಹೇಳಲಾಗಿದೆ.

ನೀರು-ದೀಪಗಳಿಲ್ಲದೆ ಪುರನಿವಾಸಿಗಳಿಗೆ ಅಪಾರ ತೊಂದರೆ

ವಿದ್ಯುಚ್ಛಕ್ತಿ ಕಂಭ ಹತ್ತಿಕೊಂಡುರಿದ ಪರಿಣಾಮ

ಮೈಸೂರು ೨೫

ಕಳೆದ ಮೂರು ದಿನಗಳಿಂದಲೂ ಹಿಂದೆಂದೂ ಕಂಡುಕೇಳದ ಭಾರಿ ಮಳೆಯು ಪರಿಣಾಮವಾಗಿ ಪರಿತಪಿಸುತ್ತಿದ್ದ ನಗರ ನಿವಾಸಿಗಳು ನಿನ್ನೆ ರಾತ್ರಿಯಿಂದ ಇನ್ನೂ ತೀವ್ರವಾದ ತೊಂದರೆಗಳಿಗೆ ಈಡಾಗಿರುವ ಶೋಚನೀಯ ಸ್ಥಿತಿಯುಂಟಾಗಿದೆ. ನೆನ್ನೆ ಬೆಳಗಿನಿಂದ ಮಳೆಯು ನಿಂತು ಸೂರ್ಯನ ಬೆಳಕು ಕಂಡು ಜನರು ಹಾಯಾಗಿರುವ ಭಾವನೆಯನ್ನು ಹೊಂದುತ್ತಿರುವಲ್ಲಿಯೇ ರಾತ್ರಿ ಸುಮಾರು ೮ ಗಂಟೆಯಲ್ಲಿ ಇದ್ದಕ್ಕಿದ್ದಂತೆ ವಿದ್ಯುಚ್ಛಕ್ತಿ ದೀಪಗಳು ನಂದಿಹೋದುವು. ೨೫ ಸೈಕಲ್ಲಿನ ದೀಪಗಳು ಮಾತ್ರ ಉರಿದುದಾಗಿ ಗೊತ್ತಾಗಿದೆ.

ಹೊಸ ಸಂತೇಪೇಟೆ ಬಳಿ ಮರದ ದೊಡ್ಡ ಕಂಬವೊಂದರಮೇಲಿದ್ದ ಟ್ರಾನ್ಸ್‌ಫಾರ್ಮರ್ ಹತ್ತಿಕೊಂಡು ಕಂಬವು ಉರಿದುಹೋದುದರಿಂದ ಈ ಅವಸ್ಥೆಯುಂಟಾಯಿತು. ಸಕಾಲದಲ್ಲಿ ವಿದ್ಯುಚ್ಛಕ್ತಿ ನಿಲ್ಲಿಸದಿದ್ದರೆ ತಂತಿಗಳು ನೆಲಕ್ಕೆ ಮುಟ್ಟಿ ಅನೇಕರ ಪ್ರಾಣಾಪಾಯಕ್ಕೆ ಆಸ್ಪದವಾಗುತ್ತಿತ್ತೆಂದು ಹೇಳಲಾಗಿದೆ. ರಾತ್ರಿಯಿಂದ ಬೆಳಗಿನವರೆಗೂ ಇಲಾಖೆಯವರು ಇದನ್ನು ದುರಸ್ತು ಮಾಡಿ ಬೇರೆ ಕಂಬವನ್ನು ಸ್ಥಾಪಿಸಿದ್ದಾರೆ.

ವಿದ್ಯುಚ್ಛಕ್ತಿ ಇಲ್ಲದೆ ನಗರದ ನೀರು ಸರಬರಾಜು ವ್ಯವಸ್ಥೆಗೂ ಸಂಪೂರ್ಣವಾಗಿ ಧಕ್ಕೆಯುಂಟಾಯಿತು. ಬೆಳಗಿನಿಂದ ನೀರಿಗಾಗಿ ಹೆಂಗಸರು ಮಕ್ಕಳೇ ಆದಿಯಾಗಿ ಪರದಾಡುವ ದೃಶ್ಯವು ಕರುಣಾಜನಕವಾಗಿತ್ತು. ವಿದ್ಯುಚ್ಛಕ್ತಿಯನ್ನೇ ಅವಲಂಬಿಸಿರುವ ನೀರಿನ ಇಲಾಖೆಯವರು ನಿಸ್ಸಹಾಯಕತೆಯನ್ನು ಸೂಚಿಸುತ್ತಿದ್ದಾರೆ

ನಿನ್ನೆ ನಗರದಲ್ಲಿ ನಡೆದ ಅನೇಕ ವಿವಾಹದ ಅಂಗವಾದ ಸಮಾರಂಭಗಳಿಗೆ ಭಾರಿ ಭಂಗವುಂಟಾಯಿತು. ಇಷ್ಟು ದೀರ್ಘಕಾಲ ನಗರದಲ್ಲಿ ನೀರು ಮತ್ತು ದೀಪಗಳಿಗೆ ಅಭಾವವು ಹಿಂದೆಂದೂ ಉಂಟಾಗಿರಲಿಲ್ಲವೆಂದೂ, ಭಗವಂತನೇ ಜನರ ಕಷ್ಟವನ್ನು ನಿವಾರಿಸಬೇಕೆಂದೂ ಜನರು ಹೇಳಿಕೊಳ್ಳುತ್ತಿರುತ್ತಾರೆ

[ಮಧ್ಯಾಹ್ನ ೨ ಗಂಟೆಗೆ ವಿದ್ಯುಚ್ಛಕ್ತಿ ಬಂದು ಸಂಜೆ ವೇಳೆಗೆ ನೀರಿನ ಸರಬರಾಜು ಆರಂಭವಾಯಿತು.]

ತುಂಗಭದ್ರಾ ಜಲಾಶಯಕ್ಕೆ "ಪಂಪಾಸಾಗರ" ಎಂಬ ಹೆಸರು

ಬೆಂಗಳೂರು ೨೫

ತುಂಗಭದ್ರಾ ಜಲಾಶಯಕ್ಕೆ ಪಂಪಾಸಾಗರ ಎಂದು ಹೆಸರಿಡಲು ಸೂಚಿಸಲ್ಪಟ್ಟಿರುವುದೆಂದು ತುಂಗಭದ್ರಾ ಸಮಿತಿಯ ಅಧ್ಯಕ್ಷ ಶ್ರೀ ಬಿ. ಕೆ. ಗೋಖಲೆಯವರು ತಿಳಿಸಿರುತ್ತಾರೆ. ಹಂಪೆ ಪುಣ್ಯ ಕ್ಷೇತ್ರದ ಬಳಿ ಪಂಪಾ ಸರೋವರ ಎಂಬ ಕೆರೆಯು ಇರುವುದರಿಂದ ಜಲಾಶಯವನ್ನು ಪಂಪಾಸಾಗರ ಎಂದು ಕರೆಯುವುದು ಸೂಕ್ತವೆಂದೂ ಅವರು ಹೇಳಿರುವರು

ವಿವಾಹ ಮಹೋತ್ಸವಗಳು

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಮ್ಮ ಕುಮಾರಿ ಸೌ|| ವಿಜಯಲಕ್ಷ್ಮಿಯನ್ನು ಶ್ರೀ ಸಿಟ್ಟಿಹಳ್ಳಿ ತಿಮ್ಮೇಗೌಡರ ಮಕ್ಕಳು ಡಾ|| ಟಿ ತಿಮ್ಮಯ್ಯನವರಿಗೆ ಕೊಟ್ಟು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು. ಶ್ರೀ ಸಿ ರಾಜಗೋಪಾಲಾಚಾರಿಯವರು ಲಗ್ನದ ಕಾಲದಲ್ಲಿ ಹಾಜರಿದ್ದು ವಧೂವರರನ್ನು ಆಶೀರ್ವದಿಸಿದರು ಭರತಪುರದ ಮಹಾರಾಜರು ಬಂದಿದ್ದರು. ರಾಜ್ಯಪಾಲರು ಶುಭ ಸಂದೇಶವನ್ನೂ, ವಧುವಿಗೆ ಸುಂದರವಾದ ಸೀರೆಯನ್ನೂ, ವರನಿಗೆ ಉಂಗುರವನ್ನೂ ಕಳುಹಿಸಿದ್ದರು. ಸ್ವಾಗತ ಸಮಾರಂಭಕ್ಕೆ ಡಾ|| ವಿಶ್ವೇಶ್ವರಯ್ಯ, ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ, ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯ ಮತ್ತು ಸಚಿವರುಗಳೇ ಮುಂತಾದವರು ಬಂದಿದ್ದರು.

ಬೆಂಗಳೂರಿನಲ್ಲಿರುವ ಕಾಂಗ್ರೆಸ್ ಪ್ರಮುಖರಾದ ಶ್ರೀ ಜಿ. ಆರ್ ಸ್ವಾಮಿಯವರು ತಮ್ಮ ಕುಮಾರ ಎಸ್ ವಿ. ಸಿಂಹರವರಿಗೆ ಯಶವಂತಪುರದ ಆ|| ಸ್ಟೇಷನ್ ಮಾಸ್ಟರ್ ಶ್ರೀ ಎಂ. ಎಸ್ ಅಶ್ವತ್ಥನಾರಾಯಣರಾವರ ಪುತ್ರಿ ಸೌ|| ಯಮುನಾರವರನ್ನು ತಂದುಕೊಂಡು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಮೈಸೂರಿನ ಅಡ್ವೊಕೇಟರಾದ ಶ್ರೀ ಎ ವಿ. ಶ್ರೀಕಂಠಯ್ಯನವರು ತಮ್ಮ ಕುಮಾರಿ ಸೌ|| ವಿಮಲಾಳನ್ನು ಬ್ಯಾಲದಕೆರೆಯ ಶ್ರೀ ಬಿ ಎಸ್ ಸೂರ್ಯನಾರಾಯಣಶಾಸ್ತ್ರಿಗಳ ಮಕ್ಕಳು ಶ್ರೀ ಬಿ. ನಾಗರಾಜ್‌ರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ವಿಮಾ ಏಜೆಂಟರಾದ ಶ್ರೀ ಜಿ ವಿ ದೇಶಿಕಾಚಾರ್ಯರು ತಮ್ಮ ಕುಮಾರ ಶ್ರೀ ಡಿ ಗೋಪಾಲ್‌ರವರಿಗೆ ಬಳ್ಳಾರಿಯ ಅಸಿಸ್ಟೆಂಟ್ ಕಮಿಷನರ್ ಶ್ರೀ ಎಸ್ ಆರ್ ಅಯ್ಯಂಗಾರ್ಯರ ಪುತ್ರಿ ಸೌ|| ರಮಾಮಣಿಯನ್ನು ತಂದುಕೊಂಡು ಬೆಂಗಳೂರಿನಲ್ಲಿ ನೆನ್ನೆ ವಿವಾಹವನ್ನು ಬೆಳೆಸಿದರು

ಪಂಡಿತ ಪಿ.ಹೆಚ್ ಚಂದ್ರಭಾನಸಿಂಗ್‌ರವರು ತಮ್ಮ ಕುಮಾರರಾದ ಶ್ರೀ ಎಂ ಸಿ ಶಾರ್ದೂಲಸಿಂಗ್‌ರವರಿಗೆ ರಾಮನಗರದ ಶ್ರೀ ಅಂಜನಿರಾಂ ಸಿಂಗ್‌ರವರ ಮಗಳು ಸೌ|| ಅನಸೂಯಾಬಾಯಿಯನ್ನು ತಂದುಕೊಂಡು ರಾಮನಗರದಲ್ಲಿ ನೆನ್ನೆ ವಿವಾಹವನ್ನು ನಡೆಸಿದರು

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಪುಸ್ತಕ ಭಂಡಾರದ ಅಧಿಕಾರಿಗಳಾದ ಶ್ರೀ ಕೆ. ರಂಗಾಶಾಸ್ತ್ರಿಯವರು ತಮ್ಮ ಕುಮಾರಿ ಸೌ|| ವಿಶಾಲಕ್ಷ್ಮಿಯನ್ನು ಅಡ್ವೊಕೇಟ್ ಶ್ರೀ ಸಿ ನಾಗಪ್ಪನವರ ಪುತ್ರ ಶ್ರೀ ಸಿ ಎನ್ ರಾಮನಾಥ್‌ರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನೆನ್ನೆ ನೆರವೇರಿಸಿದರು.

ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ|| ಎಸ್. ಶ್ರೀಕಂಠಶಾಸ್ತ್ರಿಯವರು ತಮ್ಮ ಕುಮಾರಿ ಸೌ|| ಬಾಲಾಂಬನನ್ನು ಪಿರಿಯಾಪಟ್ಟಣದ ಶ್ರೀ ಸಿ ಆರ್ ಲಕ್ಷ್ಮೀನರಸಿಂಹಯ್ಯನವರ ಸಹೋದರರಾದ ಶ್ರೀ ಪಿ. ಆರ್. ಸೀತಾರಾಮಯ್ಯನವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನಡೆಸಿದರು.

ನೀರು ಸರಬರಾಜು ಇಲಾಖೆಯ ಶ್ರೀ ಗಿರಿಯಪ್ಪನವರ ಮಗಳು ಸೌ|| ಸಿಂಗಮ್ಮನನ್ನು ಕಂದಿಬೆಟ್ಟ ಗ್ರಾಮದ ಶ್ರೀ ಲಕ್ಕೇಗೌಡರ ಪುತ್ರ ಶ್ರೀ ರಂಗೇಗೌಡರಿಗೆ ಕೊಟ್ಟು ನೆನ್ನೆ ಹೊಂಬಾಳೆ ರಂಗಯ್ಯನವರ ಧರ್ಮ ಛತ್ರದಲ್ಲಿ ವಿವಾಹವನ್ನು ಜರುಗಿಸಲಾಯಿತು

ಪ್ರಾಚ್ಯ ಸಂಶೋಧನಾಲಯಕ್ಕೆ ಜರ್ಮನ್ ವೈಸ್ ಚಾನ್ಸಲ್‌ರವರ ಭೇಟಿ

ಬೊಂಬಾಯಿ ಜರ್ಮನ್ ರಾಯಭಾರ ಕಛೇರಿಯ ವೈಸ್ ಚಾನ್ಸಲ್‌ರವರಾದ ವರ್ನರ್ ಅಂಗ್ರರ್‌ರವರು ನೆನ್ನೆ ಪ್ರಾಚ್ಯ ಸಂಶೋಧನಾಲಯಕ್ಕೆ ಭೇಟಿಯಿತ್ತು ಅಲ್ಲಿಯ ಅಪೂರ್ವ ಕೈಬರಹದ ಪ್ರತಿಗಳ ಸಂಗ್ರಹವನ್ನು ಕಂಡು ಮೆಚ್ಚಿಗೆಯನ್ನು ಸೂಚಿಸಿದರು ನಿಲಯದ ಅಧಿಕಾರಿ ಶ್ರೀ ದೇವೀರಪ್ಪನವರು ಹಲವು ಗ್ರಂಥಗಳ ಪ್ರತಿಗಳನ್ನು ಅವರಿಗೆ ಸಮರ್ಪಿಸಿದರು

ಬಾಲಕನಿಂದ ತಾಯಿ ಮತ್ತು ಅಕ್ಕನಿಗೆ ಗುಂಡಿನೇಟು

ಪರೀಕ್ಷೆಗಾಗಿ ಆಸ್ಪತ್ರೆಗೆ ಬಾಲಕನ ದಾಖಲು

ನ್ಯೂಯಾರ್ಕಿನ ಆಂಡ್ರೂ ಕೇಸಿ ಎಂಬ ೧೪ ವರ್ಷದ ಒಬ್ಬ ಬಾಲಕನು ತನ್ನ ತಾಯಿ ಮತ್ತು ಅಕ್ಕನನ್ನು ಗುಂಡಿನಿಂದ ಹೊಡೆದು ಕೊಂದು, ತಂದೆ ಮತ್ತು ತಮ್ಮನ ಕೊಲೆ ಪ್ರಯತ್ನದಲ್ಲಿ ವಿಫಲನಾದ ಪ್ರಸಂಗವು ವರದಿಯಾಗಿದೆ ಬಾಲಕನ ಮೆದುಳಿನ ಪರೀಕ್ಷೆ ನಡೆಸುವ ಉದ್ದಿಶ್ಯದಿಂದ ಅವನನ್ನು ಈಗ ಆಸ್ಪತ್ರೆಗೆ ಸೇರಿಸಲಾಗಿದೆ ಅವನು ಶಾಲೆಯಲ್ಲಿ ಓದುತ್ತಾ ಒಳ್ಳೆಯ ಬುದ್ಧಿಶಾಲಿಯಾಗಿದ್ದನೆಂದೂ, ಮೂರು ತಿಂಗಳಿಂದೀಚೆಗೆ ಅವನಲ್ಲಿ ಸ್ವಲ್ಪ ಬದಲಾವಣೆಯುಂಟಾಗಿ ಅಗ್ನಿಯಿಂದಲೂ ವಿನಾಶ ಕೃತ್ಯಕ್ಕಾಗಿ ಹವಣಿಸುತ್ತಿದ್ದನೆಂದೂ ಹೇಳಲಾಗಿದೆ

ಭಾರತದಲ್ಲಿ ಸಸಿ ಪೋಷಣೆಗೆ ಅಣು ಶಕ್ತಿ

ಭಾರತದಲ್ಲಿ ಸಸಿಗಳ ಪೋಷಣೆಗೆ ಅಣುಶಕ್ತಿಯನ್ನು ಉಪಯೋಗಿಸಲಾಗುವುದೆಂದು ಕೇಂದ್ರ ಆಹಾರ ಮತ್ತು ವ್ಯವಸಾಯ ಮಂತ್ರಿ ಅಜಿತ್ ಪ್ರಸಾದ್ ಜೈನ್‌ರವರು ತಿಳಿಸಿರುತ್ತಾರೆ ಬೊಂಬಾಯಿಯಲ್ಲೂ, ಕಲ್ಕತ್ತದ ಸೆಣಬು ಸಂಶೋಧನೆ ಕಾರ್ಯಾಲಯದಲ್ಲೂ ಅದನ್ನು ಬಳಸಲಾಗುವುದೆಂದೂ ಅವರು ಹೇಳಿರುವರು

ವಿದ್ಯಾರಣ್ಯಪುರದಲ್ಲಿ ಸಾರ್ವಜನಿಕ ಪ್ರೌಢ ಶಾಲೆ

ನಗರದ ರೇಷ್ಮೆ ಕಾರ್ಖಾನೆಯ ಹಿಂಭಾಗದಲ್ಲಿರುವ ಸಾರ್ವಜನಿಕ ವಿದ್ಯಾರ್ಥಿನಿಲಯದ ಆಶ್ರಯದಲ್ಲಿ ಪ್ರೌಢಶಾಲೆಯೊಂದನ್ನು ಜೂನ್ ತಿಂಗಳಿಂದ ಪ್ರಾರಂಭಗೊಳಿಸಲು ವ್ಯವಸ್ಥೆ ಮಾಡಲಾಗಿದೆ. ಈ ವರ್ಷ ಮೊದಲನೇ ತರಗತಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು. ರೈಲ್ವೆ ವರ್ಕ್‌ಷಾಪ್ ಕಾಲೊನಿ, ವಿದ್ಯಾರಣ್ಯಪುರ, ಅಶೋಕಪುರ ಮತ್ತು ಚಾಮುಂಡಿಪುರಂ ಬಡಾವಣೆಗಳ ಮಹಾಜನರು, ಹೈಸ್ಕೂಲ್ ಒಂದನೇ ತರಗತಿಯಲ್ಲಿ ವ್ಯಾಸಂಗ ಮಾಡಬೇಕಾಗಿರುವ ತಮ್ಮ ಮಕ್ಕಳನ್ನು ಈ ಶಾಲೆಗೆ ಕಳುಹಿಸಿ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ ಶಾಲಾ ಕಾರ್ಯದರ್ಶಿ ಶ್ರೀ ಬಿ ಕೃಷ್ಣಮೂರ್ತಿಯವರಿಂದ ಅರ್ಜಿ ನಮೂನೆಗಳನ್ನು ಪಡೆಯಬಹುದು.

ಉಪನಯನ ಮಹೋತ್ಸವ

ಚಿಟ್ಟದಪುರದಲ್ಲಿರುವ ಶ್ರೀ ಜೋಗನಹಳ್ಳಿ ಶ್ರೀಕಂಠಯ್ಯನವರ ತಮ್ಮಂದಿರಾದ ಶ್ರೀ ಕೃಷ್ಣಪ್ಪನವರು ತಮ್ಮ ಕುಮಾರ ಚಿ|| ಸ|| ಬಿ ಕೆ ಶ್ರೀವತ್ಸನಿಗೆ ನೆನ್ನೆ ಚಿಟ್ಟದಪುರದಲ್ಲಿ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ಟೆನಿಸ್ ಪಂದ್ಯ

ಕಾಸ್ಮಾಪಾಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ನಡೆಯುವ ಜಾನ್ ಮೆಡಲಿಸ್ಟ್ ಪಂದ್ಯಕ್ಕೆ ಸೇರಬಯಸುವವರು ಈ ತಿಂಗಳು ೨೭ನೇ ತಾರೀಕು ಸಂಜೆ ೫ ಗಂಟೆವರೆಗೂ ಪ್ರವೇಶದ ಅರ್ಜಿ ಕಳುಹಬಹುದೆಂದು ತಿಳಿಸಲಾಗಿದೆ ೬ ಗಂಟೆಗೆ ಡ್ರಾ ತೆಗೆಯಲಾಗುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೧೫ ನಾಗಸ್ವರ ೭-೩೧ ವಲ್ಲಭಂ ಕಲ್ಯಾಣ ಸುಂದರಂ-ದೇವರ ನಾಮ ೮-೧೫ ಸುಗಮ ಸಂಗೀತ, ಎಸ್. ಕೆ ಪಶುಪತಿ-ಕನ್ನಡ ಗೀತೆಗಳು. ೮.೩೦ ದೆಹಲಿಯಿಂದ ೯ ಪಿ ಕಾಳಿಂಗರಾವ್-ಕನ್ನಡ ಗೀತೆಗಳು ೯-೩೦ ಬಾಲ ಜಗತ್. ಮಧ್ಯಾಹ್ನ ೧೨ ವಲ್ಲಭಂ ಕಲ್ಯಾಣ ಸುಂದರಂ-ಗಾಯನ. ೧೨-೩೦ ಲಘು ಸಂಗೀತ. ೧-೨೦ [illegible] ೧ ೫೦ ಕೆ ಎಸ್ ಚಂದ್ರಶೇಖರಯ್ಯ-ಗಾಯನ ೨-೧೫ ಕೋಟೆ ಮರಾಜ್ ವೆಂಕಟೇಶ್-ಹಾಡುಗಾರಿಕೆ. ಸಂಜೆ ೬-೧೦ ಭಕ್ತಿ ಗೀತ. ೬-೩೦ ಗ್ರಾಮಸ್ಥರಿಗಾಗಿ ೭-೩೦ ಪಕ್ಷಿ ನೋಟ ೮ ಕೋಟೆಮರಾಜ್ ವೆಂಕಟೇಶ್-ಗಾಯನ ೮ ೩೦ ದೆಹಲಿಯಿಂದ. ೮-೪೫ ಕೆ. ಎಸ್ ಚಂದ್ರಶೇಖರಯ್ಯ-ಗಾಯನ ೯ ೩೦ ಕನ್ನಡ ನಾಟಕ. ೧೦ ಆರ್ ಕೆ. ಶ್ರೀಕಂಠ ದೇವರ ನಾಮ, ಟಿ ರುಕ್ಮಿಣಿ ಹಾಡುಗಾರಿಕೆ

ಈ ವರ್ಷದಿಂದ ಪ್ರಿ-ಯೂನಿವರ್ಸಿಟಿ ತರಗತಿ

ವಿದ್ಯಾ ಸಚಿವರೊಡನೆ ವೈಸ್ ಛಾನ್ಸಲರ ಭೇಟಿಯಲ್ಲಿ ನಿರ್ಧಾರ

ಸ್ವಂ.ಸು ತಂತಿ] ಬೆಂಗಳೂರು ೨೫

ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಿ-ಯೂನಿವರ್ಸಿಟಿ ಶಿಕ್ಷಣವನ್ನು ಬರುವ ತಿಂಗಳಿಂದ ಏರ್ಪಡಿಸಲಾಗುವುದು ಈ ಬಗ್ಗೆ ವಿದ್ಯಾ ಮಂತ್ರಿಗಳೊಡನೆ ನೆನ್ನೆ ವೈಸ್ ಚಾನ್ಸೆಲರುಗಳು ನಡೆಸಿದ ಭೇಟಿಯ ಪರಿಣಾಮವಾಗಿ ನಿರ್ಧರಿಸಲಾಯಿತು.

ಪ್ರೀ ಪ್ರೊಫೆಷನಲ್ ಕೋರ್ಸ್ ಪ್ರಥಮ ಮತ್ತು ತೃತೀಯ ಪದವೀ ತರಗತಿಗಳನ್ನು ೫೮-೫೯ ರಲ್ಲಿ ಜಾರಿಗೆ ತರಲಾಗುವುದು.

ಆದರೆ ಮೈಸೂರಿನಲ್ಲಿ ಐಕ್ಯವಾಗಿರುವ ಪ್ರದೇಶಗಳಲ್ಲಿ ಅವನ್ನು ಬರುವ ತಿಂಗಳಿಂದಲೇ ಏರ್ಪಡಿಸಲಾಗುವುದು, ಕರ್ನಾಟಕ ವಿಶ್ವವಿದ್ಯಾಲಯದವರು ಈಗಾಗಲೇ ಪ್ರಿ ಯೂನಿವರ್ಸಿಟಿ ಕೋರ್ಸ್ ಮತ್ತು ಪ್ರಥಮ ಪದವಿ ತರಗತಿಗಳನ್ನು ಜಾರಿಗೆ ತಂದಿರುವರು

ಪ್ರೀಪ್ರೊಫೆಷನಲ್ ಕೋರ್ಸನ್ನು ಬರುವ ತಿಂಗಳು ತೆರೆಯಲಾಗದಿರುವುದರಿಂದ ಎರಡು ವಿಶ್ವವಿದ್ಯಾಲಯಗಳವರೂ ಸೀನಿಯರ್ ಇಂಟರ್‌ಮೀಡಿಯಟ್ಟಿಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವರು.

ಪೋರ್ಟ್ ಫೋಲಿಯೊಗಳಲ್ಲಿ ಅಲ್ಪ ಬದಲಾವಣೆ

ಮಂತ್ರಿಗಳ ಪೋರ್ಟ್ ಫೋಲಿಯೊಗಳಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಮಾಡಲಾಗಿದೆ. ಅದರ ಪ್ರಕಾರ ಕಾರ್ಮಿಕ ಸಚಿವ ವೈಕುಂಠಬಾಳಿಗರವರಿಗೆ ನ್ಯಾಯಾಂಗ ಮತ್ತು ವಾರ್ತಾ ಇಲಾಖೆಗಳೂ, ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರಿಗೆ ಎಲ್ಲಾ ತೆರಿಗೆ ಇಲಾಖೆಗಳೂ ವಹಿಸಲ್ಪಟ್ಟಿವೆ

ಇಂಟರ್ ಕಾಲೇಜುಗಳ ಮಟ್ಟ ಹೆಚ್ಚಿಸಲು ಸಮಿತಿ

ಇಂಟರ್ ಕಾಲೇಜುಗಳನ್ನು ಪ್ರಥಮ ದರ್ಜೆ ಕಾಲೇಜುಗಳಾಗಿ ಪರಿವರ್ತಿಸುವ ಬಗ್ಗೆ ವಿವರಗಳನ್ನು ಗೊತ್ತುಪಡಿಸಲು ಮೈಸೂರು ವಿಶ್ವವಿದ್ಯಾಲಯದವರು ಸಮಿತಿಯೊಂದನ್ನು ರಚಿಸಿರುತ್ತಾರೆ

ವಾಣೀವಿಲಾಸ ವಾಟರ್ ವರ್ಕ್ಸ್ ಸೂಪರಿಂಟೆಂಡೆಂಟರ ವರ್ಗ

ನಗರದ ವಾಣೀವಿಲಾಸ ವಾಟರ್ ವರ್ಕ್ಸಿನ ಸೂಪರಿಂಟೆಂಡೆಂಟರಾದ ಶ್ರೀ ಜಿ.ಎಸ್. ಶಿವಣ್ಣನವರನ್ನು ಸಂಸ್ಥಾನದ ಚೀಫ್ ಇಂಜನಿಯರರ ಟೆಕ್ನಿಕಲ್ ಅಸಿಸ್ಟೆಂಟರನ್ನಾಗಿ ವರ್ಗಾಯಿಸಲಾಗಿದೆ

ಆಯುರ್ವೇದ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರುಗಳ ಸನ್ಮಾನ ಸಮಾರಂಭ

ಬರುವ ತಿಂಗಳ ೧೫ನೇ ದಿನದಿಂದ ಬೆಂಗಳೂರಿನಲ್ಲಿ ನಡೆಯಲಿರುವ, ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ೪೩ ನೇ ಸಮ್ಮೇಳನ ಕಾಲದಲ್ಲಿ, ಮಾಜಿ ಅಧ್ಯಕ್ಷರುಗಳನ್ನೆಲ್ಲಾ ಸನ್ಮಾನಿಸುವ ಸಮಾರಂಭವನ್ನು ನಡೆಸಬೇಕೆಂದು ಸ್ವಾಗತ ಸಮಿತಿಯವರು ನಿರ್ಧರಿಸಿರುತ್ತಾರೆ.

೩೦೬೩ — ೩೦೬೩
ತೀವ್ರದಲ್ಲೇ ತೆರೆಯಲಾಗುತ್ತದೆ
ಶ್ರೀ ಶಾರದಾ ಭಂಡಾರ
ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು
ವಾಣಿವಿಲಾಸ ಮಾರ್ಕೆಟ್, ಮೈಸೂರು

[illegible]
ಮಕ್ಕಳ ಉಡುಗೆ [illegible]
[illegible], [illegible]. ವಿಳಾಸಗಳಿಗೆ:-
'ಲವರ್ ಹೌಸ್', ಚಾಮರಾಜಪುರಂ,
ಮೈಸೂರು (ಸುಬ್ಬರಾವು [illegible] ಹತ್ತಿರ)

Edited, Printed and Published by
A. R. Nagarajan at 'Sadhvi Press,
D.Subbiah Road, Mysore

ಟಿ. ಟಿ. ಕೃಷ್ಣಮಾಚಾರಿ ತಮ್ಮ ಸ್ನೇಹಿತನೆಂದು ರಾಜಾಜಿ ಹೇಳಿಕೆ

ಸಿ. ರಾಜಗೋಪಾಲಾಚಾರಿಯವರು ಮದ್ರಾಸಿನಲ್ಲಿ ನಡೆದ ಒಂದು ಗೋಷ್ಠಿಯಲ್ಲಿ ಕೇಂದ್ರ ಸರ್ಕಾರದವರ ಹೊಸ ತೆರಿಗೆಗಳನ್ನು ಪ್ರಸ್ತಾಪಿಸುತ್ತಾ ತಮ್ಮೊಡನೆ ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ಸ್ನೇಹದಿಂದ ಇಲ್ಲವೆಂದು ತಿಳಿಸಿರುವುದನ್ನು ಕುರಿತು ಮಾತನಾಡಿ, ಅವರ ಅಭಿಪ್ರಾಯವು ಹೇಗೇ ಇರಲಿ, ತಾವು ಟಿ ಟಿ ಕೃಷ್ಣಮಾಚಾರಿಯವರ ಸ್ನೇಹಿತರಾಗಿರುವುದಾಗಿ ಹೇಳುತ್ತಾರೆ. ತಾವು ಅವರ ಸ್ನೇಹಿತರಾಗಿರುವುದರಿಂದಲೇ ತೆರಿಗೆ ವಿಚಾರದಲ್ಲಿ ಅವರು ನಡೆಸಿರುವ ಕೆಲಸವು ಒಳ್ಳೆಯದಲ್ಲವೆಂದು ಹೇಳುವುದು ತಮ್ಮ ಕರ್ತವ್ಯವೆಂದು ಭಾವಿಸಿ, ತಾವು ತೆರಿಗೆಗಳ ವಿಚಾರವನ್ನು ಟೀಕಿಸಿದುದಾಗಿ ರಾಜಾಜಿ ತಿಳಿಸಿರುತ್ತಾರೆ.

ಮದ್ರಾಸಿನಲ್ಲಿ ಮಹಿಳಾ ಪೊಲೀಸರ ನೇಮಕ

ಮದ್ರಾಸು ಸಂಸ್ಥಾನದಲ್ಲಿ ಮಹಿಳಾ ಪೊಲೀಸರನ್ನು ನೇಮಿಸಲು [illegible] ಸೀನಿಯರ್ ಪೊಲೀಸ್ ಅಧಿಕಾರಿಗಳ ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ. ಮೊದಲು ಸಣ್ಣ ಪ್ರಮಾಣದಲ್ಲಿ ಈ ಕ್ರಮವನ್ನು ಆರಂಭಿಸಲಾಗುವುದು ಮದ್ರಾಸಿನ ಸೆಂಟ್ರಲ್ ಮತ್ತು ಎಗ್ಮೋರ್ ರೈಲು ನಿಲ್ದಾಣಗಳಲ್ಲಿ ೨ ಮಹಿಳಾ ಪೊಲೀಸು ದಳವನ್ನು ಏರ್ಪಡಿಸಲಾಗುವುದು. ಒಂದೊಂದರಲ್ಲಿ ಒಬ್ಬ ಹೆಡ್ ಕಾನ್ಸ್‌ಟೇಬಲ್ ಮತ್ತು ೬ ಪೊಲೀಸರಿರುವರು.

ಚಿನ್ನದ ಕಳ್ಳ ರವಾನೆಗಾಗಿ ಅಮೆರಿಕದವನಿಗೆ ೧ ವರ್ಷ ಸಜಾ

ಭಾರತಕ್ಕೆ ೧,೫೦,೯೦೦ ರೂ. ಬೆಲೆಯ ಚಿನ್ನವನ್ನು ಕಳ್ಳತನದಲ್ಲಿ ರವಾನೆ ಮಾಡಿದುದಕ್ಕೆ ಫ್ರಾಂಕ್ ಜೆ. ಸ್ಮಿತ್ ಎಂಬ ಅಮೆರಿಕನನಿಗೆ ಬೊಂಬಾಯಿ ನ್ಯಾಯಾಧೀಶರು ೧ ವರ್ಷ ಸಜಾ ವಿಧಿಸಿರುತ್ತಾರೆ. ಅವನು ಅಮೆರಿಕ ಟಿ ಡಬ್ಲ್ಯು ಎ ವಿಮಾನ ಸಂಸ್ಥೆಯ [illegible] ಯಗನೆಂದು ಹೇಳಲಾಗಿದೆ ಅವನ ಬಳಿ ೧,೭೧೪ ತೊಲದ ೩೦ ಚಿನ್ನದ ಗಟ್ಟಿಗಳಿದ್ದುವು ಅವನ್ನು ಅಂಗಿಯೊಳಗೆ ಬಚ್ಚಿಟ್ಟುಕೊಂಡಿದ್ದನೆಂದು ಹೇಳಲಾಗಿದೆ.

ಗೋಪಾಲಾಚಾರ್ಯರ ಸ್ಮಾರಕ ಸ್ಪರ್ಧೆ ಬಹುಮಾನ ವಿತರಣೆ

ನಗರದ ಮಹಿಳಾ ಸದನದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ, ಸ್ನಾತಕರಾದ ಶ್ರೀ ಎಂ. ಡಿ ಗೋಪಾಲಾಚಾರ್ಯರ ಸ್ಮಾರಕ ಸ್ಪರ್ಧೆಯ ಬಹುಮಾನ ವಿತರಣೆ ನೆರವೇರುವುದು ಪೌರಸಭಾಧ್ಯಕ್ಷ ಶ್ರೀ ಸಂಜೀವಯ್ಯನವರು ಅಗ್ರಾಸನವನ್ನು ವಹಿಸುವರು.

ಶ್ರೀ ಜಗದಂಬಾ ಶಿಶು ವಿಹಾರ
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೊಂಟಿಸೊರಿ ವಿಹಾರದ ತರಗತಿಗಳು ಜೂನ್ ೧೫ನೇ ತಾರೀ ನಿಂದ ಆರಂಭವಾಗಿವೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋ ಹೊಂದುವುದರ ಮೂಲಕ ಪ್ರೋತ್ಸಾಹ ನೀ ಡಾಗಿ ಕೋರಲಾಗಿದೆ.

SITES FOR SALE

In Vanivilas Road,
Lakshmipuram

Site No	1	755 Sq.y
"	2	568 "
"	3	656 "

Enquire at:-
Srikant Medical & Gen
Supplies,
Dhanvanthri Road
MYSORE

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಬಿಡಿ ಪತ್ರಿಕೆ 2 ನಯಾ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರಕು
ಸೀರೆಗಳು ಇಂಡಿಕೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : ೦೫] SADHVI । SUNDAY 26—5—1957 ಮೈಸೂರು ಭಾನುವಾರ ೨೬—೫—೧೯೫೭ । [ಸಂಚಿಕೆ : ೨೯೪

ಫಾರ್ಮೋಸಾ ಗಲಭೆ ಬಗ್ಗೆ ಅಮೆರಿಕದವರ ಆತಂಕ

ಫಾರ್ಮೋಸಾ ಗಲಭೆ ಬಗ್ಗೆ ಅಮೆರಿಕದ ಆತಂಕ

ಫಾರ್ಮೋಸಾ ದ್ವೀಪದ ರಾಜಧಾನಿ ತೈಪೆಯಲ್ಲಿ ಮೊನ್ನೆ ಅಮೆರಿಕದ ರಾಯಭಾರ ಕಛೇರಿ ಮುಂದೆ ಗಲಭೆಯಾದ ಬಗ್ಗೆ ಅಮೆರಿಕದ ಅಧಿಕಾರಿಗಳು ಆತಂಕವನ್ನು ವ್ಯಕ್ತಪಡಿಸಿರುತ್ತಾರೆ ಇದರಿಂದ ಏಷ್ಯದ ಇತರ ಭಾಗಗಳ ಮೇಲೂ ಪ್ರಭಾವ ಬೀಳಬಹುದೆಂದು ಹೇಳಲಾಗಿದೆ ಗಲಭೆಯಲ್ಲಿ ೫ ಜನ ರಾಯಭಾರ ಕಛೇರಿಯವರಿಗೆ ಪೆಟ್ಟು ಬಿದ್ದಿದೆ. ಇದಕ್ಕಾಗಿ ಪೂರ್ಣ ಪರಿಹಾರ ಮತ್ತು ಸೂಕ್ತ ಕ್ಷಮಾಪಣೆಯನ್ನು ಅಮೆರಿಕಾ ವಿದೇಶಾಂಗ ಇಲಾಖೆಯವರು ಕೇಳಿರುತ್ತಾರೆ. ಫಾರ್ಮೋಸಾ—ಅಮೆರಿಕಾಗಳ ಬಾಂಧವ್ಯಕ್ಕೆ ಇದರಿಂದ ಧಕ್ಕೆಯಾಗುವುದೆಂದು ಹೇಳಲಾಗಿದೆ ಆದರೆ ರಾಷ್ಟ್ರೀಯ ಚೀನಕ್ಕೆ ಅಮೆರಿಕವು ಸಹಾಯ ಮಾಡುವುದರಲ್ಲಿ ಲೋಪ ಮಾಡುವುದಿಲ್ಲವೆಂದೂ ತಿಳಿಸಲಾಗಿದೆ

ಒಳ ಚರಂಡಿಯಲ್ಲಿ ಉಸಿರು ಕಟ್ಟಿ ೭ ಜನ ಕೆಲಸಗಾರರ ಮರಣ

ಹಳೇ ದೆಹಲಿಯ ಒಂದು ಸೂಯೆಜ್ ಟ್ಯಾಂಕಿನಲ್ಲಿ ಉಸಿರು ಸಿಕ್ಕಿಕೊಂಡು ಇಬ್ಬರು ಇಂಜನಿಯರು, ಇಬ್ಬರು ಮೆಕ್ಯಾನಿಕ್ಕುಗಳು ಮತ್ತು ಮೂರು ಮಂದಿ ಕೆಲಸಗಾರರು ನೆನ್ನೆ ಮೃತಪಟ್ಟರು ಟ್ಯಾಂಕಿನೊಳಗೆ ರಿಪೇರಿ ಕೆಲಸಕ್ಕಾಗಿ ಒಬ್ಬ ಕೆಲಸದವನು ಇಳಿದನೆಂದೂ, ಅವನು ಮೇಲೆ ಬರಲಿಲ್ಲವಾದ ಪ್ರಯುಕ್ತ ಮತ್ತೊಬ್ಬನು ಹೋಗಿ ಅವನನ್ನು ಇನ್ನೊಬ್ಬನು ಹಿಂಬಾಲಿಸಿದನೆಂದೂ ಹೇಳಲಾಗಿದೆ ಹಾಗೆಯೇ ಇಂಜನಿಯರರೂ, ಮೆಕ್ಯಾನಿಕ್ಕುಗಳೂ ಹೋಗಿ ಈಚೆಗೆ ಬರಲಿಲ್ಲ ಅದನ್ನು ಕಂಡು ಜನರು ಕೂಗಿಕೊಳ್ಳಲು ಅಗ್ನಿಶಾಮಕ ದಳದವರೂ, ಮಿಲಿಟರಿಯವರೂ ಬಂದು ಶವಗಳನ್ನು ತೆಗೆದರು.

ರೈಲ್ವೆಯಲ್ಲಿ ಸಾಮಾನು ಕಳುವು ತಪ್ಪಿಸಲು ಕ್ರಮ

ರೈಲ್ವೆ ಆಸ್ತಿಪಾಸ್ತಿ ಮತ್ತು ಸಾಗಾಣಿಕೆ ಸಾಮಾನುಗಳನ್ನು ರಕ್ಷಿಸುವ ಸಲುವಾಗಿ ರೈಲ್ವೆ ರಕ್ಷಣಾ ದಳವೊಂದನ್ನು ನಿರ್ಮಿಸುವ ಬಗ್ಗೆ ರಾಜ್ಯಸಭೆಯಲ್ಲಿ ಮಸೂದೆಯೊಂದನ್ನು ತರಲಾಗಿದೆ. ಇದನ್ನು ಸಭೆಯ ಎಲ್ಲ ಪಕ್ಷಗಳವರೂ ಸ್ವಾಗತಿಸಿರುತ್ತಾರೆ. ದಳದವರು ವಾರಂಟ್ ಇಲ್ಲದೆ ದಸ್ತಗಿರಿ ಮತ್ತು ಶೋಧನೆ ನಡೆಸಲು ಅಧಿಕಾರ ಹೊಂದಿರುವರು

ವ್ಯವಸಾಯ ಅಧಿಕಾರಿಗಳಿಗೆ ಹೊಸ ಹೆಸರುಗಳು

ಸಂಸ್ಥಾನದ ವ್ಯವಸಾಯ ಇಲಾಖೆಯ ಅಧಿಕಾರಿಗಳ ಹುದ್ದೆಗಳನ್ನು ಒಂದೇ ಸಮನಾಗಿರುವಂತೆ ಮಾಡಲು ಜಿಲ್ಲಾ ವ್ಯವಸಾಯ ಆಫೀಸನ್ನು ನಡೆಸುತ್ತಿರುವ ಅಸಿಸ್ಟೆಂಟ್ ಡೈರೆಕ್ಟರನ್ನು ಜಿಲ್ಲಾ ವ್ಯವಸಾಯಾಧಿಕಾರಿಗಳೆಂದು ಕರೆಯುವಂತೆ ಸರ್ಕಾರದವರು ಸೂಚಿಸಿರುತ್ತಾರೆ ವ್ಯವಸಾಯ ಇನ್ಸ್‌ಪೆಕ್ಟರುಗಳನ್ನು ವ್ಯವಸಾಯ ಪ್ರದರ್ಶಕರೆಂದೂ ಕರೆಯಲಾಗುವುದು.

ಜಿಲ್ಲೆಯಲ್ಲಿ ಮಳೆಯ ಅನಾಹುತ

ಅನೇಕ ಮನೆಗಳು ನೆಲಸಮ, ಸಂಚಾರಕ್ಕೆ ನಿರ್ಬಂಧ

ಮೈಸೂರು ೨೫

ಕಳೆದ ೩ ದಿನಗಳು ಜಿಲ್ಲೆಯಾದ್ಯಂತ ಸತತವಾಗಿ ಬಿದ್ದ ಮಳೆಯಿಂದ ನಂಜನಗೂಡು, ಕೊಳ್ಳೆಗಾಲ, ಚಾಮರಾಜನಗರ ಮುಂತಾದ ಕಡೆಗಳಲ್ಲಿ ಅನೇಕ ಕೆರೆಗಳು ಒಡೆದು ನದಿಗಳಲ್ಲಿ ವಿಪರೀತ ಪ್ರವಾಹಗಳು ಉಂಟಾಗಿ ಸಂಚಾರ ಸಂಪರ್ಕಗಳು ಬಂದಾಗಿವೆ

ನಂಜನಗೂಡಿನಲ್ಲಿ ೧೫ ಮತ್ತು ಕೊಳ್ಳೆಗಾಲದಲ್ಲಿ ೧೨॥ ಅಂಗುಲಗಳ ಮಳೆಯಾಯಿತು ನಂಜನಗೂಡಿನ ಕಪಿಲಾ ಮತ್ತು ಗುಂಡ್ಲು ನದಿಗಳಲ್ಲಿ ಪ್ರವಾಹಗಳು ಬಂದಿವೆ ಯಳಂದೂರಿನ ಸುವರ್ಣಾವತಿ ನದಿಯ ಪ್ರವಾಹವು ಅಗರ-ಮಾಂಬಳ್ಳಿಗಳಿಗೆ ನುಗ್ಗಿದೆ

ಯಳಂದೂರಿನ ನಾಗಹಟ್ಟಿ, ಮಾಲಗಳ್ಳಿ ಕೆರೆಗಳು ಒಡೆದು ಕಂದಹಳ್ಳಿ ಗ್ರಾಮದ ಬೀದಿಗಳಲ್ಲಿ ಸೊಂಟದವರೆಗೆ ನೀರು ನಿಂತಿತ್ತು ಪ್ರವಾಹದಿಂದ ಮನೆಗಳು ಮತ್ತು ಸಾಗುವಳಿ ಜಮೀನುಗಳಿಗೆ ವಿಪರೀತ ನಷ್ಟವಾಗಿ ಹುಲ್ಲು ಮೆದೆಗಳು, ಸೌದೆ ಮುಂತಾದುವು ಕೊಚ್ಚಿಹೋಗಿವೆ.

ನಂಜನಗೂಡಿನಿಂದ ಅನೇಕ ಕಡೆಗಳಿಗೂ, ಕೊಳ್ಳೆಗಾಲದಿಂದ ಚಾಮರಾಜನಗರ, ಕೊಯಮತ್ತೂರು, ಮೈಸೂರು ಕಡೆಗಳಿಗೂ ಬಸ್ ಸಂಚಾರವು ತಾತ್ಕಾಲಿಕವಾಗಿ ಬಂದಾಗಿದೆ

ರೀಟಾ ಹೇವರ್ತ್-ಆಲಿಖಾನರ ದಾಂಪತ್ಯ ವಿಚ್ಛೇದನ

ಅಮೆರಿಕದ ನೆವಾಡಾದಲ್ಲಿ ಆದ ದಾಂಪತ್ಯ ವಿಚ್ಛೇದನವನ್ನು ಸ್ವಿಟ್ಸರ್ಲೆಂಡಿನಲ್ಲಿ ಅಂಗೀಕರಿಸುವುದಿಲ್ಲವಾದ ಪ್ರಯುಕ್ತ ರಾಜಕುಮಾರ ಆಲಿಖಾನರು ಮತ್ತು ಅಮೆರಿಕದ ನಟಿ ರೀಟಾ ಹೇವರ್ತರ ವಿವಾಹ ವಿಚ್ಛೇದನದ ಬಗ್ಗೆ ಜಿನೀವಾ ನಗರದಲ್ಲಿ ಕೋರ್ಟಿನವರು ಅನುಮತಿಯಿತ್ತಿರುತ್ತಾರೆ. ಜಿನೀವಾದಲ್ಲಿ ಆಲಿಖಾನರು ವಾಸಿಸುತ್ತಿರುವರು. ಅವರಿಬ್ಬರ ಹೆಣ್ಣು ಮಗು ಯಾಸ್ಮಿನ್ನಳನ್ನು ತಾಯಿಯ ವಶಕ್ಕೆ ಒಪ್ಪಿಸಲಾಗಿದೆ ಬಾಲಕಿಯ ಭವಿಷ್ಯತ್ತಿನ ಮುಖ್ಯ ವಿಚಾರಗಳಲ್ಲಿ ಆಕೆಯು ಆಲಿಖಾನರನ್ನು ಕೇಳಬೇಕಾಗಿದೆ. ತಮ್ಮ ಮಗಳನ್ನು ನೋಡಲು ಆಲಿಖಾನರಿಗೆ ಅಧಿಕಾರವಿದೆ. ಮಗಳ ವಿದ್ಯಾಭ್ಯಾಸ ಮತ್ತು ಪೋಷಣೆಗೆ ಆಲಿಖಾನರು ಹಣವನ್ನು ಒದಗಿಸಬೇಕೆಂದು ಕೋರ್ಟಿನ ಆಜ್ಞೆಯಾಗಿದೆ.

ಜಪಾನು ಅಣು ಶಸ್ತ್ರ ಸ್ವೀಕರಿಸುವುದಿಲ್ಲ

ಜಪಾನಿನ ಪ್ರಧಾನಿ ನೊಬುಸುಕೆ ಕಿಶಿಯವರು ದೆಹಲಿಯಲ್ಲಿ ಮೊನ್ನೆ ಮಾತನಾಡುತ್ತಾ, ತಮ್ಮ ಸರ್ಕಾರವು ಅಣು ಶಸ್ತ್ರ ಪರೀಕ್ಷೆಗಳಿಗೆ ವಿರೋಧವಾಗಿರುವುದೆಂದು ತಿಳಿಸಿರುವರಲ್ಲದೆ, ತಮ್ಮ ರಾಷ್ಟ್ರದ ಸೈನ್ಯಗಳಿಗಾಗಿ ಅಮೆರಿಕವು ಅಣು ಶಸ್ತ್ರಗಳನ್ನು ಒದಗಿಸಿದರೂ ಅವನ್ನು ಸ್ವೀಕರಿಸುವುದಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ.

ಜಮೀನಿಲ್ಲದವರಿಗೆ ಕಡಿಮೆ ದರದಲ್ಲಿ ಭೂಮಿ

ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯವರ ಸೂಚನೆ

ಬೆಂಗಳೂರು ೨೫

ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಪಿ. ವಿ ಆರ್ ರಾಯರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ಜಮೀನು ಇಲ್ಲದವರಿಗೆ ಭೂಮಿಯನ್ನು ಅಪ್ಸೆಟ್ ಪ್ರೈಸಿಗೆ ಸರ್ಕಾರದವರು ಕೊಡಲು ನಿರ್ಧರಿಸಿರುವುದಾಗಿ ತಿಳಿಸಿದರು ಹಾಗೆ ಪಡೆಯುವವರು ತಾವೇ ವ್ಯಕ್ತಿಶಃವಾಗಿ ಸ್ವತಃ ಉಳುಮೆ ಮಾಡಬೇಕೆಂಬ ಷರತ್ತನ್ನು ಹಾಕಲಾಗುವುದೆಂದೂ ಅವರು ತಿಳಿಸಿದರು

ಮೊದಲು ೩ ವರ್ಷ ಕಾಲ ಭೂಮಿಯನ್ನು ಹಂಚಲಾಗುವುದೆಂದೂ, ಆ ಅವಧಿಯಲ್ಲಿ ಪಡೆದವರು ಸ್ವತಃ ತೃಪ್ತಿಕರವಾಗಿ ಸಾಗುವಳಿ ಮಾಡಿದರೆ ಅವರಿಗೆ ಖಾಯಂ ಆಗಿ ಒಪ್ಪಿಸಲಾಗುವುದೆಂದೂ ಅವರು ಸೂಚಿಸಿದರು ಸಾಮಾನ್ಯವಾಗಿ ಹರಾಜು ಮೂಲಕ ಜಮೀನಿನ ವಿಲೇ ಮಾಡುವುದೇ ಸರ್ಕಾರದ ನೀತಿಯೆಂದು ಅವರು ಹೇಳಿದರು.

ಸಹಕಾರ ಸಂಘಗಳಿಂದ ಅಲ್ಪಾವಧಿ ಸಾಲ ಪಡೆಯುವ ರೈತರು ಸರ್ಕಾರಿ [illegible]ಗಳನ್ನು ತಮ್ಮ ಕೆಲಸಕ್ಕೆ ಬಳಸಿದರೆ ಕೊಡಬೇಕಾಗುವ ರುಸುಮಿಗೆ ಇನ್ನೂ ಎರಡು ವರ್ಷ ಕಾಲ ವಿನಾಯಿತಿ ಕೊಡಲಾಗಿರುವುದೆಂದೂ ಅವರು ಹೇಳಿದರು

ಶಾಸನ ಸಭೆಗಳಲ್ಲಿ ರಾಜ್ಯಪಾಲರ ಭಾಷಣ

ರಾಜ್ಯಪಾಲರು ಬರುವ ತಿಂಗಳು ೧೧ನೇ ತಾರೀಖು ಮಧ್ಯಾಹ್ನ ೩ ಗಂಟೆಗೆ ವಿಧಾನ ಸಭೆ ಮತ್ತು ಪರಿಷತ್ತುಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವರು ಹಿಂದಿನ ದಿನ ಸಭೆಗಳಲ್ಲಿ ಪ್ರಮಾಣ ವಚನ ಸ್ವೀಕಾರವಾಗುವುದು.

ಜೂನ್ ೩ರಂದು ವಿಶ್ವವಿದ್ಯಾಲಯ ಪರೀಕ್ಷೆಗಳ ಫಲಿತಾಂಶ

ಮೈಸೂರು ೨೫

ಬರುವ ತಿಂಗಳು ೩ನೇ ತಾರೀಖು ಇಂಟರ್ಮೀಡಿಯಟ್, ಬಿ. ಎ., ಬಿ. ಎಸ್‌ಸಿ ಮತ್ತು ವಿಶ್ವವಿದ್ಯಾಲಯದ ಇತರ ಹಲವು ಪರೀಕ್ಷೆಗಳ ಫಲಿತಾಂಶಗಳು ಪ್ರಕಟವಾಗುವುವೆಂದು ಗೊತ್ತಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ "ರಷ್ಯಾ" ಜಾಡ್ಯ

ರಷ್ಯದಲ್ಲಿ ಬೇಸಿಗೆ ಕಾಲದ ಎನ್ಸೆಫಲೈಟಿಸ್ ರೋಗವು ಶಿವಮೊಗ್ಗ ಜಿಲ್ಲೆಯ ಹಲವು ಭಾಗಗಳಲ್ಲಿ ಹರಡಿರುವುದೆಂದು ಹೇಳಲಾಗಿದೆ. ಮೊದಲು ಕೋತಿಗಳಿಗೆ ಇದು ಬಂದಿದ್ದಾಗಿಯೂ, ಈಗ ಮನುಷ್ಯರಿಗೂ ವ್ಯಾಪಿಸಿ ಜನರು ಸಾಯುತ್ತಿರುವರೆಂದೂ ಸಂಸ್ಥಾನದ ಆರೋಗ್ಯ ಡೈರೆಕ್ಟರ್ ಶ್ರೀ ಕೆ ಶೇಷಗಿರಿರಾಯರು ತಿಳಿಸುತ್ತಾರೆ. ಕಾಡುಗಳಿಗೆ ಹೋದವರಿಗೆ ಮಾತ್ರ ಇದು ಅಂಟುತ್ತಿದೆಯೆಂದೂ, ಇದರಿಂದ [illegible] ಮಡಿಯುತೆಂದೂ ಹೇಳಲಾಗಿದೆ ರೋಗವು ಬಹು ನಿಧಾನವಾಗಿ ಚಲಿಸುವ ಕ್ರಿಮಿಕೀಟಗಳಿಂದ ಹಬ್ಬುವುದೆಂದೂ, ಈಗ ಅದನ್ನು ತಡೆಗಟ್ಟಲಾಗುತ್ತಿರುವುದೆಂದೂ ಹೇಳಲಾಗಿದೆ

ಅಣು ಶಸ್ತ್ರ ಪ್ರಯೋಗ ಮಾನವ ಕೋಟಿ ವಿರುದ್ಧ ಅದ ಅಪರಾಧ

ಭಾರತೀಯರು ವಿಶ್ವವ್ಯಾಪಿ ಪ್ರತಿಭಟನಾ ಚಳುವಳಿಗೆ ಸೇರಲು ಕರೆ

ಬೆಂಗಳೂರು ೨೫

ಮೊನ್ನೆ ಇಲ್ಲಿ ಸೇರಿದ ಭಾರತ ರಾಷ್ಟ್ರೀಯ ಶಾಂತಿ ಸಮ್ಮೇಳನವು ನಿರ್ಣಯವೊಂದನ್ನು ಅಂಗೀಕರಿಸಿ ರಾಷ್ಟ್ರವು ಅಣು ಶಸ್ತ್ರ ಮತ್ತು ಜಲಜನಕ ಅಸ್ತ್ರಗಳ ಪರೀಕ್ಷಾ ಪ್ರಯೋಗಗಳ ನಿಲುಗಡೆ ಬಗ್ಗೆ ತಾತ್ಕಾಲಿಕ ಒಪ್ಪಂದಕ್ಕೆ ಬರಬೇಕೆಂದು ಒತ್ತಾಯಪಡಿಸುವ ಜಗತ್ತಿನ ಚಳುವಳಿಗೆ ಭಾರತೀಯರೂ ಸೇರಬೇಕೆಂದು ಕರೆಯಿತ್ತಿತು. ಪೃಥ್ವಿಯ ಭೂ, ಜಲ ಮತ್ತು ವಾಯು ಮಂಡಲವನ್ನು ವಿಷಮಯವಾಗಿ ಮಾಡುವ ಪ್ರಯೋಗಗಳನ್ನು ಪ್ರತಿ ಭಾರತೀಯನೂ ವಿರೋಧಿಸಬೇಕೆಂದೂ ತಿಳಿಸಲಾಯಿತು. ಜಗತ್ತಿನ ರಾಷ್ಟ್ರಗಳಿಗೆ ಪ್ರಯೋಗಗಳ ಬಗ್ಗೆ ತಾತ್ಕಾಲಿಕ ಒಪ್ಪಂದವು ಅವಶ್ಯಕ ಅಗತ್ಯ ನಿಜವಾದ ಶಾಂತಿ ಸಾಧನೆಗಾಗಿ ಅದು ಸಹಾಯವಾಗುವುದೆಂದು ಸಮ್ಮೇಳನವು ನಂಬಿಕೆ ಸೂಚಿಸಿತು ಈ ಅಸ್ತ್ರಗಳ ಪ್ರಯೋಗ ಪರೀಕ್ಷೆಯು ಇಡೀ ಮಾನವ ಕೋಟಿಗೆ ಅದ ಅಪರಾಧವೆಂದು ನಿರ್ಣಯವು ಸೂಚಿಸಿ, ಜಗತ್ತಿನ ಬಹುಜನ ವಿಜ್ಞಾನಿಗಳು ಇದರಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಿರುವುದನ್ನು ಉಲ್ಲೇಖಿಸಿತು. ನಿರ್ಣಯವನ್ನು ಶ್ರೀ ಚತುರ್ನಾರಾಯಣ ಮಾಳವೀಯರವರು ಮಂಡಿಸಿ, ಕೇರಳ ಮಂತ್ರಿ ಕೃಷ್ಣಯ್ಯರ್‌ರವರು ಸಮರ್ಥಿಸಿದರು

ದಕ್ಷಿಣ ಆಫ್ರಿಕಾ ಸರ್ಕಾರಕ್ಕೆ ಪ್ರತಿಯಾಗಿ ಇನ್ನೊಂದು ಸರ್ಕಾರ?

ದಕ್ಷಿಣ ಆಫ್ರಿಕಾ ಸರ್ಕಾರದ ವರ್ಣಭೇದ ನೀತಿಯನ್ನು ಪ್ರತಿಭಟಿಸಲು ನೇಟಾಲಿನಲ್ಲಿ ಜನತಾ ಸರ್ಕಾರವೊಂದನ್ನು ಸ್ಥಾಪಿಸಲಾಗುವುದೆಂದು ಬೆದರಿಕೆ ಹಾಕಲಾಗಿರುವುದಾಗಿ ವರದಿಯಾಗಿದೆ ಬಹಳ ಪ್ರಭಾವಶಾಲಿಯಾದ-ಬಹುರೂಪವಾದ ಜಂಟಿ ರಿಪಬ್ಲಿಕನ್ ಲೀಗಿನವರು ಈ ಕಾರ್ಯದಲ್ಲಿ ತೊಡಗಿರುವುದಾಗಿ ಹೇಳಲಾಗಿದೆ. ಡರ್ಬಾನಿನಲ್ಲಿ ಭಾರಿ ಪ್ರದರ್ಶನ ನಡೆಸಿ, ಸರ್ಕಾರವನ್ನು ವಿರೋಧಿಸುವಂತೆ ಲೀಗಿನವರು ತಿಳಿಸುವರು. ಚರ್ಚುಗಳು, ರಾಜಕೀಯ ಪಕ್ಷಗಳು, ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಮುಂತಾದವರಿಗೆ ಸೂಚನೆಯಿತ್ತು ಸರ್ಕಾರದ ಬಗ್ಗೆ [illegible] ಮೀರಿರುವುದೆಂದು ಈ ಜಂಟಿ ಲೀಗಿನವರು ತಿಳಿಸಿರುವರು

ಗಮಕ ತರಗತಿಗಳು

ಶ್ರೀ ವಾಲ್ಮೀಕಿ ಗಮಕ ಶಾಲೆಯ [illegible] ಪ್ರವಚನಗಳು, ನಾಳೆಯಿಂದ ಪ್ರಾತಃಕಾಲ ೮ರಿಂದ ೯ ಘಂಟೆ ವರವಿಗೆ ಮಹಾರಾಜ ಪಾಠಶಾಲೆಯಲ್ಲಿ ನಡೆಯುತ್ತವೆ ಎಂದಿನಂತೆ ವಿದ್ಯಾರ್ಥಿನಿಯರು ತರಗತಿಗೆ ಹಾಜರಾಗಬೇಕು ಹೊಸದಾಗಿ ಸೇರಲಪೇಕ್ಷಿಸುವವರು, ಬೆಳಗ್ಗೆ ೮॥ ಘಂಟೆ ಮೇಲೆ ಬಂದು ಹೆಚ್ಚಿನ ವಿಷಯ ತಿಳಿದುಕೊಳ್ಳಬಹುದು

ವಾರ ಭವಿಷ್ಯ

ತಾ|| ೨೬-೫-೫೭ ರಿಂದ ೨-೬-೫೭ ರ ವರೆಗೆ

ಮೇಷ — ಗ್ರಹಮಾನ ನೆಟ್ಟಗೆ, ಕ್ರಮದಿಂದ ಸುಖಯೋಗ ಲಭ್ಯ, ಮನೆಯಲ್ಲಿ ಮಂಗಳ ಕಾರ್ಯ, ವ್ಯಾಪಾರವ್ಯವಸಾಯಗಾರರಿಗೆ ಲಾಭ, ಪ್ರವಾಸದಲ್ಲಿ ಜಯ, ಸತ್ಕಾರ್ಯದಲ್ಲಿ ಪಾತ್ರ.

ವೃಷಭ — ಸಹನೆ ಬೇಕು, ಮುಂದಿನ ವಾರ ಉತ್ತಮ ಫಲ, ಈಗ ಕಾರ್ಯ ನಷ್ಟ, ಕಲಹ ಮಸ್ತಿ ಮನಸ್ತಾಪ, ವ್ಯಾಪಾರವ್ಯವಹಾರಗಳಲ್ಲಿ ನಷ್ಟ, ಪ್ರವಾಸದಲ್ಲಿ ಹಾನಿ

ಮಿಥುನ — ರವಿ ಬಲ ಸಾಲದು, ಅಂಗಾರಕನ ವಿರೋಧ, ತಾಳ್ಮೆ ಬೇಕು, ವ್ಯಾಪಾರವ್ಯವಹಾರಗಾರರಿಗೆ ನಷ್ಟ, ಪ್ರವಾಸದಲ್ಲಿ ಅಪಾಯ, ಮಂಗಳ ಕಾರ್ಯಕ್ಕೆ ತಕ್ಕ ಕಾಲವಲ್ಲ, ಸ್ತ್ರೀಯರಿಗೆ ಚಿಂತೆ

ಕಟಕ — ರಾಜ ಗ್ರಹಗಳಾದ ರವಿ, ಬುಧ ಶುಕ್ರ ಮತ್ತು ಗುರುಗಳ ಅನುಗ್ರಹ, ಸುಖ ಸಂಪತ್ತಿನ ಯೋಗ, ಗೃಹದಲ್ಲಿ ಮಂಗಳ ಕಾರ್ಯ, ಅಲಂಕಾರ ವಸ್ತು ಮಾರಾಟ ಮತ್ತು ವ್ಯವಸಾಯಗಾರರಿಗೆ ವಿಶೇಷ ಲಾಭ, ಪ್ರವಾಸದಿಂದ ನಷ್ಟ, ಸ್ತ್ರೀಯರಿಗೆ ಸಂತೋಷ ಕಾಲ

ಸಿಂಹ — ಮನೆ, ಭೂಮಿ, ವಾಹನಗಳ ಮೂಲಕ ವಿಶೇಷ ಲಾಭ, ಮಂಗಳ ಕಾರ್ಯ, ಪ್ರವಾಸದಿಂದ ಲಾಭ, ಸ್ತ್ರೀಯರಿಗೆ ಗಡಿಬಿಡಿ, ವ್ಯವಸಾಯಗಾರರಿಗೆ ಲಾಭ, ಸಮಾಜದಲ್ಲಿ ಸನ್ಮಾನ

ಕನ್ಯಾ — ಕೆಲಸ ಕಾರ್ಯ ಲಾಭಕರ, ಗಿರಣಿ ಮಾಲೀಕರಿಗೆ ವಿಶೇಷ ಲಾಭ, ಆದರೆ ವಿಪರೀತ ಖರ್ಚು ಪ್ರವಾಸದಲ್ಲಿ ಜಯ, ವ್ಯವಸಾಯಗಾರರಿಗೆ ಉತ್ಸಾಹ, ಸ್ತ್ರೀಯರಿಗೆ ಚಿಂತೆ

ತುಲಾ — ಮರ್ಯಾದೆಗೆ ಕುಂದಕವಿಲ್ಲ, ಹಣಕಾಸಿನ ತೊಂದರೆ ವ್ಯಾಪಾರಿಗಳಿಗೆ ನಷ್ಟ, ಪ್ರವಾಸ ಮಾಡಬಹುದು, ವ್ಯವಸಾಯಗಾರರಿಗೆ ಸಾಮಾನ್ಯ ಫಲ, ಮಹಿಳೆಯರ ಆರೋಗ್ಯ ನೆಟ್ಟಗಿರುವುದಿಲ್ಲ.

ವೃಶ್ಚಿಕ — ಗ್ರಹ ಬಲ ಸಾಲದು, ಪತ್ನಿ ಪುತ್ರರ ದೇಹಾಲಸ್ಯ ವ್ಯಾಪಾರ ವ್ಯವಸಾಯಗಾರರಿಗೆ ಸಾಮಾನ್ಯ ಫಲ ಪ್ರವಾಸದಲ್ಲಿ ಹಾನಿ, ಸ್ತ್ರೀಯರಿಗೆ ಸಂಸಾರದಲ್ಲಿ ಕಲಹ.

ಧನು — ಕ್ರಮದಿಂದ ಎಲ್ಲ ಕಾರ್ಯಗಳೂ ಜಯ, ಮಂಗಳ ಕಾರ್ಯ, ಪ್ರವಾಸದಲ್ಲಿ ಲಾಭ, ಕೃಷಿ ವಾಣಿಜ್ಯದವರಿಗೆ ವಿಶೇಷ ಲಾಭ ಸ್ತ್ರೀಯರಿಗೆ ವಸ್ತ್ರಾಭರಣ ಪ್ರಾಪ್ತಿ

ಮಕರ — ಅನಿರೀಕ್ಷಿತ ಧನಾಗಮ ಯಂತ್ರ-ಸಿನಿಮಾ ವ್ಯಾಪಾರದಿಂದ ಲಾಭ, ಸಮಾಜ ಸೇವೆ, ಮಂಗಳ ಕಾರ್ಯಕ್ಕೆ ಅವಕಾಶವಿಲ್ಲ, ಸ್ತ್ರೀಯರಿಗೆ ವಸ್ತ್ರಾಭರಣ ಪ್ರಾಪ್ತಿ

ಕುಂಭ — ಗಂಡಾಂತರದಿಂದ ಪಾರಾಗುವ ಸಂಭವ, ಸಿನಿಮಾ ನಟನಟಿಯರಿಗೆ ಸುಯೋಗ, ಪ್ರವಾಸದಲ್ಲಿ ಲಾಭ, ವ್ಯವಸಾಯಗಾರರಿಗೆ ವಿಶೇಷ ಲಾಭ, ಸ್ತ್ರೀಯರಿಗೆ ಸುಯೋಗ

ಮೀನ — ಧನಾಗಮಕ್ಕೆ ಧಕ್ಕೆಯಿಲ್ಲ, ವ್ಯಾಪಾರಿಗಳಿಗೆ ಮಧ್ಯಮ ಲಾಭ, ಪ್ರವಾಸದಲ್ಲಿ ಸಾಮಾನ್ಯ ಫಲ, ವ್ಯವಸಾಯಗಾರರಿಗೆ ಜಯ, ಸ್ತ್ರೀಯರಿಗೆ ಸಾಮಾನ್ಯ ಫಲ

ಹೈದರಾಬಾದಿನಲ್ಲಿ ರಾಷ್ಟ್ರಾಧ್ಯಕ್ಷರ ಬಿಡಾರ

ಜುಲೈ-ಆಗಸ್ಟ್ ತಿಂಗಳಲ್ಲಿ ಒಂದು ತಿಂಗಳ ಕಾಲ ಹೈದರಾಬಾದಿನಲ್ಲಿ ರಾಷ್ಟ್ರಾಧ್ಯಕ್ಷರು ಬಿಡಾರ ಮಾಡುವರೆಂದು ಗೊತ್ತಾಗಿದೆ

ರೈಲ್ವೆ ವರ್ಕ್ಸ್ ಇನ್ಸ್‌ಪೆಕ್ಟರುಗಳ ಸಮ್ಮೇಳನ

ದಕ್ಷಿಣ ರೈಲ್ವೆಯ ಮೈಸೂರು ವಿಭಾಗದ ವರ್ಕ್ಸ್ ಇನ್ಸ್‌ಪೆಕ್ಟರ್ ಮತ್ತು ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳ ಸಮ್ಮೇಳನವು ಕಳೆದ ೧೮ನೇ ತಾರೀಕು ನಡೆಯಿತು ಮೈಸೂರು ಶಾಖಾ ಸಂಘದ ಅಧ್ಯಕ್ಷ ಶ್ರೀ ಎನ್ ಆರ್ ನಾಗರಾಜರವರು ಅಗ್ರಾಸನ ವಹಿಸಿದ್ದರು ಶ್ರೀ ಹೆಚ್. ಡಿ ರಾಜ್‌ರವರು ಆರಂಭೋತ್ಸವವನ್ನು ನೆರವೇರಿಸಿದರು ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಬಂದಿದ್ದರು ಇನ್ಸ್‌ಪೆಕ್ಟರ ಗಳ ಕೆಲಸಕಾರ್ಯಕ್ಕೆ ಸಂಬಂಧಪಟ್ಟಂತೆ ಅವರುಗಳ ಕುಂದುಕೊರತೆಗಳನ್ನು ಪರಿಹರಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ತೂತ್ತುಕುಡಿ ಕೊಲೆ ಬಗ್ಗೆ ಕೆಲ ಜನರ ಬಂಧನ

ತೂತ್ತುಕುಡಿಯಲ್ಲಿ ದ್ರಾವಿಡ ಮುನ್ನೇತ್ರ ಸಂಘದ ನಾಯಕ ತಲೈಮುತ್ತು ಮತ್ತು ಇನ್ನೊಬ್ಬರ ಕೊಲೆ ಸಂಬಂಧವಾಗಿ ಪೋಲೀಸರು ಸ್ಥಳೀಯ ಸಂಘದ ಕಾರ್ಯದರ್ಶಿ ಎ ಜೋಸೆಫ್‌ರವರೂ ಸೇರಿ ಒಟ್ಟು ೬೮ ಮಂದಿಯನ್ನು ಬಂಧಿಸಿರುತ್ತಾರೆ ಕೆ ಪಿ ಕೆ ಸ್ವಾಮಿ ಎಂಬುವರ ಕೊಲೆ ಮೊಕದ್ದಮೆಯಲ್ಲಿ ಪೋಲೀಸರಿಗೆ ತಾವು ಸಹಾಯ ಮಾಡಿದ ಬಗ್ಗೆ ತಮ್ಮನ್ನು ಕೊಲೆ ಮಾಡಲು ಪ್ರಯತ್ನಿಸಿದುದಾಗಿ ತಲೈಮುತ್ತುವು ಮರಣ ಪೂರ್ವದ ಹೇಳಿಕೆಯಲ್ಲಿ ತಿಳಿಸಿರುವುದಾಗಿ ಗೊತ್ತಾಗಿದೆ.

ವಿದುಷಿ ವಸಂತಕುಮಾರಿಯ ಆಭರಣಗಳ ಅಪಹಾರ

ಮದ್ರಾಸಿನ ಸುಪ್ರಸಿದ್ಧ ಗಾಯಕಿ ಎಂ. ಎಲ್ ವಸಂತಕುಮಾರಿಯವರು ದಾವಣಗೆರೆಯಲ್ಲಿ ನಡೆದ ವಿವಾಹ ಸಮಾರಂಭವೊಂದರಲ್ಲಿ ಸಂಗೀತಕ್ಕಾಗಿ ಹೋಗಿದ್ದಾಗ ಅವರು ಇಳಿದುಕೊಂಡಿದ್ದ ಹೋಟೇಲಿನ ಕೊಠಡಿಗೆ ಯಾರೋ ನುಗ್ಗಿ ಸುಮಾರು ೯೦೦ ರೂ. ಬೆಲೆ ಬಾಳುವ ಒಡವೆ, ಕೈ ಗಡಿಯಾರ ಮುಂತಾದುವನ್ನು ಅಪಹರಿಸಿದುದಾಗಿ ವರದಿಯಾಗಿದೆ

ಅಣು ಶಸ್ತ್ರಗಳ ನಿಷೇಧಕ್ಕಾಗಿ ಜಪಾನರ "ಧರ್ಮಯುದ್ಧ"

ಜಲಜನಕ ಬಾಂಬುಗಳ ನಿಷೇಧಕ್ಕಾಗಿ ಜಗತ್ತಿನಾದ್ಯಂತ ಧರ್ಮ ಯುದ್ಧ ಚಳುವಳಿಯನ್ನು ಹೂಡಲು ಜಪಾನಿನ ಸಮಾಜವಾದಿ ಪಕ್ಷವು ನಿರ್ಧರಿಸಿರುವುದಾಗಿ ವರದಿಯಾಗಿದೆ ಅದು ಬ್ರಿಟನ್, ಅಮೆರಿಕಾ ಮತ್ತು ರಷ್ಯಗಳಿಗೆ ಬರುವ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಪ್ರತಿಭಟನಾ ನಿಯೋಗಗಳನ್ನು ಕಳುಹಲಿದೆ

ವಿದ್ಯಾ ಮಂತ್ರಿಗಳ ಪ್ರವಾಸ

ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ಬರುವ ತಿಂಗಳು ೨ನೇ ತಾರೀಕು ಬೆಳಿಗ್ಗೆ ಬೆಂಗಳೂರಿನಿಂದ ಹೊರಟು ೧೦ ೩೦ ಗಂಟೆಗೆ ಕೃಷ್ಣರಾಜಸಾಗರಕ್ಕೆ ಭೇಟಿ ಕೊಡುವರು ಪರಿಶೀಲನೆಗಳಾದನಂತರ ಮಧ್ಯಾಹ್ನ ೩ ಗಂಟೆಗೆ ಮಂಡ್ಯವನ್ನು ತಲಪಿ ಅಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸುವರು ಕಲ್ಲಹಳ್ಳಿ ಮತ್ತು ಇಂಡುವಾಳಿಗೂ ಹೋಗುವರು

ಪರೀಕ್ಷೆಯಲ್ಲಿ ಪಡೆದ ನಂಬರುಗಳ ಸರಬರಾಜು

ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದಿರುವ ನಂಬರುಗಳನ್ನು ಕೂಡಲೇ ಒದಗಿಸುವ ಸಲುವಾಗಿ ಅವನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ ಒದಗಿಸಲಾಗುವುದೆಂದು ಸರ್ಕಾರದ ಪ್ರಕಟನೆಯೊಂದು ತಿಳಿಸಿದೆ ವಿದ್ಯಾರ್ಥಿಗಳು ೨ ರೂ ಕೊಟ್ಟು ಅವನ್ನು ಪಡೆಯಬಹುದು ಜೂನ್ ೫ರ ಹೊತ್ತಿಗೆ ನಂಬರುಗಳನ್ನು ಶಾಲೆಗಳಿಗೆ ಕಳುಹಲೇರ್ಪಾಡಾಗುತ್ತದೆ ಪ್ರತಿ ವಿಷಯದಲ್ಲೂ ವಿದ್ಯಾರ್ಥಿಯು ಪಡೆದಿರುವ ಅಂಕಗಳನ್ನು ನಮೂದಿಸಲಾಗುವುದು ಆದರೆ ಪ್ರತಿ ವಿಷಯದ ವಿಭಾಗಗಳಲ್ಲಿ ನಂಬರು ತಿಳಿಯಲಪೇಕ್ಷಿಸುವವರು ೫ ರೂ. ಅನ್ನು ಪರೀಕ್ಷಾ ಮಂಡಲ ಕಛೇರಿಗೆ ಕಳುಹಿಸಿದರೆ ಅವನ್ನು ಒದಗಿಸಲಾಗುವುದು

ಕರಾಚಿಯಲ್ಲಿ ಪ್ರತಿ ಸರ್ಕಾರ ಸ್ಥಾಪನೆಯೇ?

ಕರಾಚಿಯಲ್ಲಿ ಅಜ್ಞಾತವಾಗಿ ಸ್ಥಾಪಿಸಲ್ಪಟ್ಟಿರುವ ಪ್ರತಿ ಸರ್ಕಾರವೊಂದನ್ನು ಅಲ್ಲಿನ ಪೊಲೀಸರು ಪತ್ತೆಹಚ್ಚಿರುತ್ತಾರೆ ಈ ಸರ್ಕಾರದಲ್ಲಿ ಪ್ರಧಾನಿ, ಮಂತ್ರಿಮಂಡಲದ ಸದಸ್ಯರು ಮತ್ತು ಒಬ್ಬ ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರು ಇರುವರೆಂದು ಹೇಳಲಾಗಿದೆ ಹಲವಾರು ವರ್ಷಗಳಿಂದಲೂ ಅದು ಇದೆಯೆಂದೂ, ದರೋಡೆ, ಕಳ್ಳತನ ಮುಂತಾದುವನ್ನು ನಡೆಸಿ ಬಂದ ಫಲವನ್ನು 'ಪ್ರಧಾನಿ' ಯ ಸೂಚನೆ ಪ್ರಕಾರ ಹಂಚಿಕೊಳ್ಳುವುದೇ ಅದರ ಉದ್ದೇಶವೆಂದೂ ಹೇಳಲಾಗಿದೆ. ಈಗ 'ಪ್ರಧಾನಿ' ಮಿಸ್ಕೀನಿಯಾ ಪರಾರಿಯಾಗಿರುವರು ಅವರ ಮೂವರು ಸಹೋದ್ಯೋಗಿಗಳನ್ನು ಬಂಧಿಸಲಾಗಿದೆ ಅಲ್ಲದೆ ಪೋಲೀಸು ವಿ ಜಿ ಯನ್ನು ಹಿಡಿಯಲಾಗಿದೆ ಅಲ್ಲಿನ ರೈಲ್ವೆ ಕಾಲೊನಿಯ ಪೊಲೀಸು ಠಾಣೆ ಹಿಂಭಾಗದಲ್ಲಿ ಪ್ರತಿ ಸರ್ಕಾರದ ಕೇಂದ್ರವಿದ್ದಿತು

ಸಿಂಹಳದ ಯುವಕರಿಂದ ಜಟಾಧಾರಣೆ

ಪೌರ್ವಾತ್ಯ ರೀತಿಯಂತೆ ಶಿರಸ್ಸಿನಲ್ಲಿ ಕೇಶವನ್ನು ಬೆಳೆಸುವ ಚಳುವಳಿಯನ್ನು ಸಿಂಹಳದ ಗ್ರಾಮವೊಂದರಲ್ಲಿ ೨೫೦ ಮಂದಿ ಯುವಕರು ಆರಂಭಿಸಿರುತ್ತಾರೆ. ತಮ್ಮ ಪ್ರಾಚೀನರ ಮಾದರಿಯಲ್ಲಿ ಜುಂಡಿಕೆಯನ್ನು ಬೆಳೆಸಬೇಕೆಂಬುದೇ ಅವರ ಅಭಿಲಾಷೆ ಪಾಶ್ಚಾತ್ಯರ ವಿಧಾನಕ್ಕಿಂತ ಪ್ರಾಚೀನರ ವಿಧಾನವೇ ಸರಿಯೆಂದು ಅವರು ಭಾವಿಸಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಸಂಗೀತ ೭-೧೫ ಹೆಚ್. ಎಸ್ ಅನಸೂಯ.ದೇವರ ನಾಮ ೮-೧೫ ಗಾನ ವಿಹಾರ ಮಧ್ಯಾಹ್ನ ೧೨ ಮತ್ತು ೧-೫೦ ಎಂ ವಿ ಲಲಿತ-ಸಂಗೀತ ೧೨-೩೦ ಎಂ ಶ್ರೀನಿವಾಸಮೂರ್ತಿ ದೇವರ ನಾಮ ೧ ಹಿಂದಿ ಗೀತೆ ೧-೨೦ ಎಂ ಶಾರದಾಬಾಯಿ-ಗಾಯನ ಸಂಜೆ ೬-೧೦ ಜಾನಪದ ಗೀತೆ ೭-೩೦ ಹಿಂದಿ ಗೀತೆ, ೮ ಕ್ರೀಡಾ ವಿಮರ್ಶೆ ಎನ್ ಎನ್ ಶಾಸ್ತ್ರಿ ೮ ೧೫ ನಾವು ಮತ್ತು ನಮ್ಮವರು ೮-೩೦ ಸಂಗೀತ ೮ ೪೫ ರೆಕಾರ್ಡು ೯-೧೫ ಭವಿಷ್ಯ ಭಾರತದಲ್ಲಿ ಮತ ಧರ್ಮ ಭಾಷಣ ೯-೩೦ ಎಂ ಎಸ್. ನಾಗಲಿಂಗಾಚಾರ್-ಕಥಾ ಕಾಲಕ್ಷೇಪ ೧೦ ಹೆಚ್ ಆರ್ ಲೀಲಾವತಿ ಕನ್ನಡ ಗೀತೆ

ದೊಡ್ಡದೊಡ್ಡ ಕಟ್ಟಡಗಳ ನಿರ್ಮಾಣವಿಲ್ಲ

ರೈಲ್ವೆ ಇಲಾಖೆಗೆ ಮಂತ್ರಿಯವರ ಸೂಚ

ಸಿಮೆಂಟ್ ಮತ್ತು ಉಕ್ಕನ್ನು ಆದಷ್ಟು ಉ ಸುವ ಸಲುವಾಗಿ ಭಾರಿಭಾರಿ ಕಟ್ಟಡಗಳ ರ್ಮಾಣವನ್ನು ನಿಲ್ಲಿಸುವಂತೆ ಸೂಚಿಸಲಾಗಿರು ದೆಂದು ರೈಲ್ವೆ ಮಂತ್ರಿ ಜಗಜೀವನರಾಂರವರು ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ ಮದ್ರಾ ನಲ್ಲಿ ಕಟ್ಟಲಾಗುತ್ತಿದ್ದ ಹಲವಾರು ಅಂತಸ್ತುಗ ಮತ್ತು ಹವಾಮಾನಕ್ಕೆ ತಕ್ಕಂತೆ ಸಜ್ಜಾಗು ಭವನದ ಕೆಲಸವನ್ನು ಈಗ ತಡೆಯಲಾಗಿರು ದೆಂದೂ ಅವರು ಹೇಳಿರುವರು

GLOBE TUTORIAL COLLEGE
Sadvidya Patasala Buildings,
S. S. L. C. Classes
In Full Swing : Join at once

ಮೈಸೂರಿನ ಪ್ರಮುಖ ವ್ಯಾಪಾರ ರಸ್ತೆಯಲ್ಲಿ
ಸ್ಟೇಷನರಿ ಪುಸ್ತಕ ಇವುಗಳ ವ್ಯಾಪಾರ
ಮತ್ತು ಮುದ್ರಣಾಲಯ
ಇವುಗಳಲ್ಲಿ ಪಾಲುಗಾರರಾಗಿ ಕೆಲಸ ಮಾಡಲು
ಇಚ್ಛೆಯುಳ್ಳವರು ದಯವಿಟ್ಟು ವಿವರಗಳಿಗೆ
ವಿಚಾರಿಸಬಹುದು
'S', C/o SADHVI,
MYSORE

ವಸಂತ ಕಾಲದ ಆಕರ್ಷಣೆ
ನಿಮ್ಮ ಮುಖದ ಅಂದವಾದ
ಕಾರ್ಡ್ ಸೈಜ್ ಭಾವಚಿತ್ರಕ್ಕೆ
ಒಂದು ರೂಪಾಯಿ ಮಾತ್ರ
ಪ್ರಭಾ ಟಾಕೀಸ್ ಬಳಿ ಇರುವ
ಶ್ರೀಕಾಂತ್ ಸ್ಟುಡಿಯೊವಿಗೆ
ಭೇಟಿ ಕೊಡಿ
ರೋಲ್ ಫಿಲಮ್, ಡೆವಲಪಿಂಗ್, ಪ್ರಿಂಟಿಂಗ್,
ಎನ್ಲಾರ್ಜಿಂಗ್ ಸಹ ಮಾಡುತ್ತೇವೆ



ನವೀನ ಮಾದರಿ
ಗಡಿಯಾರಗಳಿಗೆ
ಫೇವರ್ ಲ್ಯೂಬಾ, ವೆಸ್ಟೆಂಡ್,
ಸೈಮಾ, ರೋಮರ್
ಇತ್ಯಾದಿ, ಇತ್ಯಾದಿ
ರಾಂ ಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ಹರಾಜು ಮಾರಾಟ
ಜಗನ್ಮೋಹನ ಭವನದಲ್ಲಿ
27—5—57 ನೇ ಸೋಮವಾರ
ಬೆಳಿಗ್ಗೆ 9-30 ಘಂಟೆಗೆ
ಉತ್ತಮವಾದ ಫರ್ನೀಚರ್‌ಗಳು ಹೊಸದರಂತೆಯೇ ಇರುವ ಕಬ್ಬಿಣದ ಪೆಟಾರಿಗಳು, ರೇಡಿಯೋಗಳು, ಜಂಖಾನೆಗಳು. ಪಿಂಗಾ ಸಾಮಾನು, ಆರ್. ಸಿ ಎ ರೇಡಿಯೊ ಗ್ರಾಂ ಇತ್ಯಾದಿ, ಇತ್ಯಾದಿ.
ಎಂಪೈರ್ಸ್ ಆಕ್ಷನೀಯರ್ಸ್,
ಮೈಸೂರು

SITES FOR SALE
In Vanivilas Road,
Lakshmipuram

Site No	1	755 Sq yds
"	2	588 "
"	3	656 "

Enquire at -
Srikant Medical & General
Supplies,
Dhanvanthri Road,
MYSORE

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ಮಾದರಿಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ.
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

CLASSES IN FULL SWING
★ S S. L C Suppl. Exams.
7.30 a m. to 11-30 a. m daily
Separate classes for girls
★ MADRAS MATRICULATION
Any person above 19 years
may join
C T C, Old Agrahar, Mysore
(With the best staff & equipment)
B. K Satyabodhachar,
M.A., B.T
Principal

ಶ್ರೀ ಜಗದಂಬಾ ಶಿಶು ವಿಹಾರ
ದಿವಾನ್ಸ್ ರೋಡ್, ಮೈಸೂರು
ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶುವಿಹಾರದ ತರಗತಿಗಳು ಇದೇ ೧೫ನೇ ತಾರೀಕಿನಿಂದ ಆರಂಭವಾಗಿವೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

Edited, Printed and Published by
A R Nagarajan at Sadhvi Press
7 Subbiah Road, Mysore

ರಿಜಿಸ್ಟರ್ಡ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI : MONDAY 27—5—1957 ಮೈಸೂರು : ಸೋಮವಾರ ೨೭—೫—೧೯೫೭ : [ಸಂಚಿಕೆ : ೨೯೧

ಅಣು ಸಿಡಿತದ ವಿರುದ್ಧ ರಾಜಾಜಿ ನೇತೃತ್ವದಲ್ಲಿ ಚಳುವಳಿ

ತೋಟಗಳ ಮಾಲೀಕರು ಮತ್ತು ಕಾರ್ಮಿಕರಿಗೆ ಶಾಂತಿ ಒಪ್ಪಂದ

ಬೆಂಗಳೂರು ೨೬

ಹಳೇ ಮೈಸೂರು ಮತ್ತು ಕೊಡಗು ಪ್ರದೇಶದಲ್ಲಿರುವ ಟೀ, ಕಾಫಿ ಮತ್ತು ರಬ್ಬರ್ ತೋಟಗಳ ಆಡಳಿತ ವರ್ಗದವರಿಗೂ, ಕಾರ್ಮಿಕರ ಪ್ರತಿನಿಧಿಗಳಿಗೂ ನೆನ್ನೆ ೩ ವರ್ಷದ ಕೈಗಾರಿಕಾ ಶಾಂತಿ ಒಪ್ಪಂದವು ಸಂಸ್ಥಾನದ ಕಾರ್ಮಿಕ ಕಮಿಷನರ್ ಶ್ರೀ ಬಿ ಎಂ ಅಬೂಬೇಕರ್‌ರವರ ಎದುರಿನಲ್ಲಿ ಆಯಿತು ಅದರ ಪ್ರಕಾರ ೧ ಲಕ್ಷದ ೩೦ ಸಾವಿರ ಕಾರ್ಮಿಕರಿಗೆ ಶೇಕಡ ೪೦ರಷ್ಟು ಹೆಚ್ಚು ವೇತನವು ಕಳೆದ ಏಪ್ರಿಲ್ ೧ರಿಂದ ದೊರೆಯುವುದು. ಈ ತಿಂಗಳಿಂದ ಕಾರ್ಮಿಕರಿಗಾಗಿ ಪ್ರಾವಿಡೆಂಟ್ ನಿಧಿಯನ್ನು ಏರ್ಪಡಿಸಲಾಗುವುದು ಹಳೇ ಮೈಸೂರಿನಲ್ಲಿ ದಿನಕ್ಕೆ ೧ ರೂ ಕೂಲಿ ಪಡೆಯುತ್ತಿದ್ದ ಗಂಡಸಿಗೆ ಇನ್ನುಮುಂದೆ ೧ ರೂ ೪೦ ನಯೆ ಪೈಸೆಗಳೂ, ಕೊಡಗಿನಲ್ಲಿ ರೂ ೧-೩-೯ ಪಡೆಯುತ್ತಿದ್ದ ಕಾರ್ಮಿಕರಿಗೆ ೧ ರೂ ದಿನಗೂಲಿಯೂ ಸಿಗುವುವು. ಇದೇ ರೀತಿ ಹೆಂಗಸರು ಮತ್ತು ಮಕ್ಕಳಿಗೂ ವೇತನ ಹೆಚ್ಚುವುದು. ಈ ಬಗ್ಗೆ ಆರು ವಾರಗಳ ಸಂಧಾನ ನಡೆಯಿತು ಕಾರ್ಮಿಕ ಮಂತ್ರಿ ಶ್ರೀ ವೈಕುಂಠ ಬಾಳಿಗರವರೂ ಉಭಯ ಪ್ರತಿನಿಧಿಗಳೊಡನೆ ಚರ್ಚೆ ನಡೆಸಿದ್ದರು ಈ ಒಪ್ಪಂದವು ಹೆಚ್ಚು ಉತ್ಪತ್ತಿಗೆ ಸಹಕಾರಿಯಾಗುವುದಾಗಿ ಶ್ರೀ ಬಾಳಿಗರವರು ಹೇಳಿ ಅದರ ಬಗ್ಗೆ ತೃಪ್ತಿಯನ್ನು ಸೂಚಿಸಿರುವರು

ಚಿಲ್ಲರೆ ಕೇಳಲು ಬಂದು ಸಾವಿರ ರೂ ಅಪಹಾರ

ಬೆಂಗಳೂರಿನ ಶ್ರೀ ರಾಜಶೇಖರಯ್ಯ ಎಂಬ ಅಕ್ಕಿ ವರ್ತಕರ ಅಂಗಡಿಗೆ ಮೊನ್ನೆ ಮಧ್ಯಾಹ್ನ ಇಬ್ಬರು ಆಗಂತುಕರು ನುಗ್ಗಿ ೧೦ ರೂ ಚಿಲ್ಲರೆ ಕೇಳುವ ನೆಪದಲ್ಲಿ ೧,೦೦೦ ರೂ. ಅಪಹರಿಸಿದುದಾಗಿ ವರದಿಯಾಗಿದೆ ಅಕ್ಕಿ ಕೊಳ್ಳಲು ಬಂದಿದ್ದವರೊಬ್ಬರು ಚಿಲ್ಲರೆ ಕೊಡುತ್ತಿದ್ದಾಗ ಆಗಂತುಕರ ಪೈಕಿ ಒಬ್ಬನು ಚಿಲ್ಲರೆಯನ್ನು ಕೆಳಕ್ಕೆ ಕೆಡವಿ ಎಲ್ಲರ ಗಮನವೂ ಬಿದ್ದ ಚಿಲ್ಲರೆ ಕಡೆ ಇದ್ದಾಗ ಅಂಗಡಿಯವರು ಎಣಿಸಿಟ್ಟಿದ್ದ ೧,೦೦೦ ರೂ. ನೋಟಿನ ಕಂತೆಯೊಡನೆ ಆಗಂತುಕರು ಪರಾರಿಯಾದರೆಂದು ಹೇಳಲಾಗಿದೆ

ಪ್ರಧಾನಿಗಿರಿ ಬಿಟ್ಟು ನೆಹರೂ ಕಾಂಗ್ರೆಸ್ ನಾಯಕತ್ವ ವಹಿಸಲಿ

ಎ ಐ ಸಿ ಸಿ ಗೆ ಸದಸ್ಯರ ನಿರ್ಣಯ

ಮುಂದೆ ಬರಲಿರುವ ಎ. ಐ ಸಿ ಸಿ. ಸಭೆಯಲ್ಲಿ ಚರ್ಚೆಗಾಗಿ ಉತ್ತರ ಪ್ರದೇಶದ ಕಾಂಗ್ರೆಸ್ ಸದಸ್ಯರೊಬ್ಬರು ನಿರ್ಣಯವನ್ನು ಮಂಡಿಸಿ, ನೆಹರೂರವರು ಪ್ರಧಾನಿಗಿರಿಗೆ ರಾಜೀನಾಮೆಯಿತ್ತು ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ವಹಿಸಿಕೊಳ್ಳಬೇಕೆಂದು ಕೋರಲಿರುವರೆಂದು ವರದಿಯಾಗಿದೆ ಈ ನಿರ್ಣಯವನ್ನು ತರಲು ಎ ಐ ಸಿ ಸಿ ಸರಿಯಾದ ವೇದಿಕೆಯಲ್ಲವೆಂದು ಕಾರ್ಯಕಾರಿ ಸಮಿತಿಯ ಅಭಿಪ್ರಾಯವಿರುವುದಾಗಿ ಗೊತ್ತಾಗಿದೆ

ಬೆಂಗಳೂರು-ಹುಬ್ಬಳ್ಳಿ ನಡುವೆ ಮತ್ತೊಂದು ವೇಗದ ರೈಲು

ಹುಬ್ಬಳ್ಳಿ-ಬೆಂಗಳೂರುಗಳ ನಡುವೆ ಮತ್ತೊಂದು ವೇಗವಾಗಿ ಓಡುವ ರೈಲನ್ನು ಬಿಡಲು ದಕ್ಷಿಣ ರೈಲ್ವೆಯವರು ಆಲೋಚಿಸಿರುತ್ತಾರೆ ಅದರಲ್ಲಿ ಮೂರು ತರಗತಿಗಳೂ ಇರುವುವು. ಹುಬ್ಬಳ್ಳಿಯಿಂದ ರಾತ್ರಿ ೧೦॥ ಗೆ ಹೊರಡುವ ರೈಲು ಮಾರನೇ ಬೆಳಗ್ಗೆ ೧೦-೨೦ಕ್ಕೆ ಬೆಂಗಳೂರನ್ನು ತಲುಪುವಂತೆ ಏರ್ಪಾಡು ಮಾಡುವ ಯೋಚನೆಯಿದೆ

ಮದರಾಸಿನಲ್ಲಿ ಭಾರಿ ವ್ಯಾಪಾರದ ನೆಪದಲ್ಲಿ ಜೂಜಾಟ

ಮದ್ರಾಸಿನ ಒಂದು ದೊಡ್ಡ ಸುಸಜ್ಜಿತವಾದ ಕಟ್ಟಡದಲ್ಲಿ ಭಾರಿ ವ್ಯಾಪಾರದ ನೆಪದಲ್ಲಿ ಜೂಜಾಟ ನಡೆಸುತ್ತಿದ್ದ ಹೊರಗಿನ ಆರು ಜನರನ್ನು ಪೋಲೀಸರು ಬಂಧಿಸಿರುತ್ತಾರೆ ಅವರ ಪೈಕಿ ಕಲ್ಕತ್ತಾ, ಪೂನಾ, ಮಂಗಳೂರಿನವರೂ ಬೆಂಗಳೂರಿನ ಅಶ್ವತ್ಥಕುಮಾರ್ ಎಂಬ ಒಬ್ಬನೂ ಇರುವರು ಜೇಮ್ಸ್ ಅಂಡ್ ಚಟರ್ಜಿ ಕಂಪೆನಿ ಎಂಬ ಹೆಸರಿನಲ್ಲಿ ಅವರುಗಳು ಮದ್ರಾಸಿನಲ್ಲಿ ವ್ಯಾಪಾರಿಗಳನ್ನು ಸಂಧಿಸಿ, ಅವರಿಗೆ ಭಾರಿ ಭಾರಿ ಆರ್ಡರ್‌ಗಳನ್ನು ಕೊಟ್ಟು ತಮ್ಮ ಕಂಪೆನಿ ಮಾಲೀಕರೊಡನೆ ಮಾತುಕತೆಗಾಗಿ ಆಹ್ವಾನಿಸುತ್ತಿದ್ದರೆಂದೂ ಅವರ ಪೈಕಿ ಒಬ್ಬನು ಮಾಲೀಕನಂತೆಯೂ ಮತ್ತೊಬ್ಬನು ವ್ಯಾಪಾರಿಯಂತೆಯೂ ನಟಿಸುತ್ತಿದ್ದರೆಂದೂ ಹೇಳಲಾಗಿದೆ ಆರ್ಡರ್ ಪಡೆದನಂತರ ವರ್ತಕನನ್ನು ಜೂಜಿಗೆ ಕರೆದು, ಅವನೆದುರಿನಲ್ಲಿ ನೋಟುಗಳ ಕಂತೆಯನ್ನು ಎಸೆಯಲಾಗುತ್ತಿತ್ತೆಂದೂ ವರದಿಯಾಗಿದೆ ನೋಟುಗಳ ಮಧ್ಯೆ ಬರೀ ಕಾಗದಗಳಿದ್ದುವೆಂದೂ, ಈ ತರಹದ ಆಟದಿಂದ ಅನೇಕರನ್ನು ಮೋಸಗೊಳಿಸಲಾಗುತ್ತಿತ್ತೆಂದೂ ತಿಳಿದುಬಂದಿದೆ

ಗದಗಿನಲ್ಲಿ ಆರ್ಟ್ಸ್ ಕಾಲೇಜು ಸ್ಥಾಪನೆ

ಗದಗ್ ಪೌರಸಭೆಯವರು ಬರುವ ತಿಂಗಳಲ್ಲಿ ಆರ್ಟ್ಸ್ ಕಾಲೇಜನ್ನು ತೆರೆಯುವರು ಕರ್ನಾಟಕ ವಿಶ್ವವಿದ್ಯಾಲಯದವರು ಈಗಾಗಲೇ ಅದಕ್ಕೆ ಮಂಜೂರಾತಿ ಇತ್ತಿರುವರು ಅಲ್ಲಿ ಈ ವರ್ಷ ಪ್ರೀ ಯೂನಿವರ್ಸಿಟಿ ತರಗತಿಯನ್ನು ತೆರೆಯಲಾಗುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಿಟೀಲು. ೭-೧೫ ಬಿ ಎಸ್ ರಾಮಾಚಾರ್-ಕನ್ನಡ ಗೀತೆ ೮ ೧೫ ಗಾನ ವಿಹಾರ ಮಧ್ಯಾಹ್ನ ೧೨ ಎಂ ವಿ ಮಾಲತಿ ಕನ್ನಡ ಗೀತೆ ೧೨ ೩೦ ವನಿತಾ ವಿಹಾರ ೧ ೩೦ ರಿಕಾರ್ಡ್ ೧-೫೦ ಸಿಟೀಲು ಸಂಜೆ ೬-೧೦ ಕಾವ್ಯ ವಾಚನ ೬-೩೦ ತಿಂಗಳ ಸಮಾಲೋಚನೆ ಅಗರಂ ರಂಗಯ್ಯ ೮ ಇಂದ್ರ ಧನುಸ್-ಹಿಂದಿ ವಿವಿಧ ಕಾರ್ಯಕ್ರಮ ೮-೩೦ ಬಸವರಾಜ ರಾಜಗುರು-ಸಂಗೀತ ೯ ೧೫ ಸುಶೀಲಾ ತೆಂಬೆ, ಎ ಜಿ ರಾಮನಾಥ್, ಆರ್ ಪದ್ಮ, ಎಂ ವಿ ಗೋಪೀನಾಥ್ ಮತ್ತು ಎಲ್. ಜಿ. ಸುಮಿತ್ರ-ಲಘು ಸಂಗೀತ

ಫಾರ್ಮೋಸಾದಲ್ಲಿ ಮೂವರು ಸೈನ್ಯಾಧಿಕಾರಿಗಳ ವಜಾ

ಅಮೆರಿಕದವರ ವಿರುದ್ಧವಾಗಿ ನಡೆದ ಗಲಭೆ ಬಗ್ಗೆ ಚಿಯಾಂಗರ ಕ್ರಮ

ಟೈಪೆಯಲ್ಲಿ ಕಳೆದ ಶುಕ್ರವಾರ ಅಮೆರಿಕದ ವಿರುದ್ಧವಾಗಿ ನಡೆದ ಗಲಭೆಗಳ ಬಗ್ಗೆ ಸರಿಯಾಗಿ ವರ್ತಿಸದಿದ್ದುದಕ್ಕಾಗಿ ಮೂವರು ಸೈನ್ಯಾಧಿಕಾರಿಗಳನ್ನು ರಾಷ್ಟ್ರೀಯ ಚೀಣದ ಅಧ್ಯಕ್ಷ ಚಿಯಾಂಗ್ ಕೈಷೇಕರು ವಜಾ ಮಾಡಿರುತ್ತಾರೆ ಗಲಭೆಗಳನ್ನು ವೀಕ್ಷಿಸಿದ ಹಲವು ಅಮೆರಿಕನ್ನರು ಹೇಳುವ ಪ್ರಕಾರ ಜನರು ಅಮೆರಿಕಾ ರಾಯಭಾರಿ ಕಛೇರಿ ಮೇಲೆ ಧಾಳಿ ನಡೆಸಿ ನಷ್ಟಪಡಿಸುತ್ತಿದ್ದಾಗ ರಾಷ್ಟ್ರೀಯ ಚೀನಾ ಪೋಲೀಸರು ಸುಮ್ಮನಿದ್ದರೆಂದು ಹೇಳಲಾಗಿದೆ ಫಾರ್ಮೋಸಾದಲ್ಲೆಲ್ಲಾ ಪರಿಸ್ಥಿತಿಯು ಶಾಂತವಾಗಿದೆ ಆದರೆ ಟೈಪೆಯಲ್ಲಿ ಮಾತ್ರ ಮಾರ್ಷಲ್ ಲಾವನ್ನು ತೆಗೆದಿಲ್ಲ

ಪ್ಯಾರಿಸ್ಸಿನಲ್ಲಿ ಅಲ್ಜೀರಿಯಾ ನಾಯಕನ ಕೊಲೆ

ಪ್ಯಾರಿಸ್ ನಗರದಲ್ಲಿ ನೆನ್ನೆ ಕಪ್ ಫೈನಲ್ ಫುಟ್‌ಬಾಲ್ ಪಂದ್ಯ ನಡೆದಾಗ ಅದನ್ನು ನೋಡುತ್ತಿದ್ದ ಅಲ್ಜೀರಿಯದ ಶಾಸನ ಸಭಾ ಮಾಜಿ ಉಪಾಧ್ಯಕ್ಷ ಎಂ ಚಕ್ಕಾಲ್ ಎಂಬವರನ್ನು ಗುಂಡಿನಿಂದ ಹೊಡೆದು ಕೊಲ್ಲಲಾಯಿತೆಂದು ವರದಿಯಾಗಿದೆ

ಕಾಶ್ಮೀರ ಕಣಿವೆಯಲ್ಲಿ ಮಳೆಯಿಂದ ಭಾರಿ ನಷ್ಟ; ಅಂಟುಜಾಡ್ಯ

ಕಳೆದ ಮೂರು ದಿನಗಳಿಂದ ಕಾಶ್ಮೀರ ಕಣಿವೆಯಲ್ಲಿ ಅಸಾಧಾರಣ ಮತ್ತು ಅಕಾಲದ ಮಳೆಯು ಆಗಿ ಆ ಪ್ರದೇಶದಲ್ಲಿ ಕ್ಷಾಮ ಮತ್ತು ಅಂಟು ಜಾಡ್ಯ ತಲೆದೋರುವ ತೀವ್ರ ಬೆದರಿಕೆಯುಂಟಾಗಿರುವುದೆಂದು ವರದಿಯಾಗಿದೆ ೧೫ ಅಂಗುಲ ಮಳೆಯಾಗಿರುತ್ತದೆ ಇದು ಸಾಮಾನ್ಯ ಕಾಲದಲ್ಲಿ ಆಗುವ ಮಳೆಗಿಂತ ೯ ಅಂಗುಲ ಹೆಚ್ಚಾಗಿದೆ ಇದೇ ಮೊಟ್ಟಮೊದಲಬಾರಿ ಆ ಪ್ರದೇಶದಲ್ಲಿ ಮಂಜೂ ಸಹ ಬಿದ್ದಿದೆ ಮಳೆಯ ಪರಿಣಾಮವಾಗಿ ೫೦,೦೦೦ ಎಕರೆ ಜಮೀನು ಹಾಳಾಗಿದೆ ವಿಶ್ವದಲ್ಲೇ ಅತ್ಯಂತ ಭಾರಿಯಾದ ಸಿಹಿನೀರಿನ ವುಲಾರ್ ಸರೋವರದಸುತ್ತಲೂ ೩೫ ಪ್ರದೇಶದಲ್ಲಿರುವ ಹಳ್ಳಿಗಳು ಪ್ರತ್ಯೇಕಿಸಲ್ಪಟ್ಟಿವೆ ಸಂಸ್ಥಾನ ಸರ್ಕಾರದವರು ದೋಣಿಗಳಲ್ಲಿ ಸಹಾಯ ಒದಗಿಸುತ್ತಿರುವರು

ಅಣು ಶಸ್ತ್ರದ ವಿರುದ್ಧ ಸತ್ಯಾಗ್ರಹಕ್ಕೆ ಪಂಡಿತ ಸುಂದರಲಾಲ್

ಕ್ರಿಸ್ಮಸ್ ದ್ವೀಪಗಳಲ್ಲಿ ಬ್ರಿಟನ್ನು ನಡೆಸುವ ಅಣುಶಸ್ತ್ರ ಹೆಚ್ ಬಾಂಬ್ ಸಿಡಿತಗಳ ವಿರುದ್ಧವಾಗಿ ತಾವು ಸತ್ಯಾಗ್ರಹ ನಡೆಸಲು ಅಲ್ಲಿಗೆ ಹೋಗುವುದಾಗಿ ಪಂಡಿತ ಸುಂದರಲಾಲ್‌ರವರು ತಿಳಿಸಿರುತ್ತಾರೆ ಈ ವಿಚಾರವಾಗಿ ಅವರು ಜೆ. ಸಿ ಕುಮಾರಪ್ಪನವರೊಡನೆ ವ್ಯವಹಾರ ನಡೆಸುತ್ತಿರುವರೆಂದೂ, ಕುಮಾರಪ್ಪನವರು ಅವರ ಪ್ರಯತ್ನವನ್ನು ಆಶೀರ್ವದಿಸಿರುವುದಾಗಿಯೂ ವರದಿಯಾಗಿದೆ.

ಅಣು ಶಸ್ತ್ರ ಸಿಡಿತದ ವಿರುದ್ಧ ರಾಜಾಜಿ ನೇತೃತ್ವದಲ್ಲಿ ಚಳುವಳಿ

ಭಾರತದ ಶಾಂತಿ ಸಮ್ಮೇಳನದಲ್ಲಿ ನಿರ್ಣಯ

ಬೆಂಗಳೂರು ೨೬

ಅಣು ಶಸ್ತ್ರ ಪರೀಕ್ಷಾ ಸಿಡಿತಗಳ ವಿರುದ್ಧವಾಗಿ ರಾಷ್ಟ್ರವ್ಯಾಪ್ತ ಚಳುವಳಿಯನ್ನು ನಡೆಸಲು ಇಲ್ಲಿ ಸೇರಿದ್ದ ರಾಷ್ಟ್ರೀಯ ಶಾಂತಿ ಸಮ್ಮೇಳನವು ಕ್ರಿಯಾ ಸಮಿತಿಯೊಂದನ್ನು ರಚಿಸಿತು. ಅದಕ್ಕೆ ಶ್ರೀ ಸಿ ರಾಜಗೋಪಾಲಾಚಾರಿಯವರು ಮಾರ್ಗದರ್ಶನವೀಯುವರು ಸಮಿತಿಯಲ್ಲಿ ಡಾ॥ ಸೈಫುದ್ದೀನ್ ಕಿಚಲೂ, ಪಂಡಿತ ಸುಂದರಲಾಲ್, ಕೆ ಧಾಮ್ಸಂ, ಪ್ರೊ॥ ಕೊಸಾಂಬಿ, ಡಾ॥ ಆರ್ ಸಿ ಅಧಿಕಾರಿ ಮುಂತಾದವರು ಇರುವರು

ರಷ್ಯದ ಸುಪ್ರೀಂ ಸೋವಿಯಟ್ ಸಭೆಯು ನಿರ್ಣಯವೊಂದನ್ನು ಮಾಡಿ ಅಣು ಶಸ್ತ್ರ ಸಿಡಿತದ ಬಗ್ಗೆ ಅಮೆರಿಕಾ ಮತ್ತು ಬ್ರಿಟನ್ನುಗಳೊಡನೆ ತಾತ್ಕಾಲಿಕ ಒಪ್ಪಂದ ಮಾಡಿಕೊಳ್ಳಲು ರಷ್ಯವು ಸಿದ್ಧವಾಗಿದೆಯೆಂದು ಸೂಚಿಸಿರುವುದನ್ನು ಸಮ್ಮೇಳನವು ಸ್ವಾಗತಿಸಿತು ಜರ್ಮನಿಯ ವಿಜ್ಞಾನಿಗಳು ಅಣು ಶಸ್ತ್ರ ತಯಾರಿಕೆಗೆ ಸಹಕರಿಸುವುದಿಲ್ಲವೆಂದು ಹೇಳಿರುವುದನ್ನು ಪ್ರಶಂಸಿಸಲಾಯಿತು ಜಪಾನಿನ ಶಾಂತಿ ಸಮಿತಿಯು ನಡೆಸುತ್ತಿರುವ ಪ್ರಯತ್ನವನ್ನೂ, ಭಾರತದ ಲೋಕ ಸಭೆಯ ನಿರ್ಣಯವನ್ನೂ ಸಮ್ಮೇಳನವು ಮೆಚ್ಚಿತು

ಅಮೆರಿಕಾ ರಾಯಭಾರಿ ಕಛೇರಿ ನೌಕರರ ಸಂಖ್ಯೆ ಇಳಿಸಲು ಕರೆ

ಬುಡಾಪೆಸ್ಟಿನಲ್ಲಿರುವ ಅಮೆರಿಕದ ಉಪ ರಾಯಭಾರಿ ಕಛೇರಿಯಲ್ಲಿರುವ ಅಧಿಕಾರಿಗಳ ಸಂಖ್ಯೆಯನ್ನು ಆರು ವಾರಗಳಲ್ಲಿ ಮೂರನೇ ಒಂದರಷ್ಟು ಕಡಿಮೆ ಮಾಡಿಕೊಳ್ಳುವಂತೆ ಹಂಗೇರಿ ಸರ್ಕಾರದವರು ಆಜ್ಞೆ ಮಾಡಿರುವುದಾಗಿ ವರದಿಯಾಗಿದೆ ಅಲ್ಲಿ ೩೮ ಮಂದಿ ನೌಕರರು ಇರುವರು. ಕಳೆದ ೬ ತಿಂಗಳಿಂದಲೂ ಉಪ ರಾಯಭಾರಿ ಕಛೇರಿಗೂ,ಹಂಗೇರಿ ಸರ್ಕಾರಕ್ಕೂ ಸಾಕಾದಷ್ಟು ಸಂಪರ್ಕವಿರಲಿಲ್ಲವೆಂದೂ ಹೇಳಲಾಗಿದೆ ೬ ವಾರಗಳ ಕೆಳಗೆ ಹಂಗೇರಿಯಲ್ಲಿ ಅಮೆರಿಕಾ ರಾಯಭಾರಿ ಕಛೇರಿಯಲ್ಲಿದ್ದ ಮಿಲಿಟರಿ ಅಧಿಕಾರಿಯು ಗೂಢಚರ್ಯೆ ನಡೆಸಿದ್ದರೆಂದು ಅವರನ್ನು ಹೊರದೂಡಲಾಗಿತ್ತು

ಭಾರತಕ್ಕೆ ರಷ್ಯದಿಂದ ಶಸ್ತ್ರಾಸ್ತ್ರಗಳ ಸಾಲ

ಭಾರತದ ರಕ್ಷಣಾ ಮಂತ್ರಿ ಕೃಷ್ಣಮೇನನ್ನರು ನೆನ್ನೆ ಲಂಡನ್ ನಗರವನ್ನು ತಲುಪಿದಾಗ, ಅಲ್ಲಿನ ಪತ್ರಿಕಾ ಪ್ರತಿನಿಧಿಗಳು ಅವರನ್ನು ಪ್ರಶ್ನಿಸಿ, ಭಾರತಕ್ಕೆ ರಷ್ಯವು ಸಾಲದ ಮೇಲೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವುದೇ-ಎಂದು ಕೇಳಿದರು ಮೇನನ್ನರು ಉತ್ತರವೀಯಲಿಲ್ಲ.

೧೯೪೫ರಲ್ಲಿ ಹಿರೋಷಿಮಾ ಮೇಲೆ ಹಾಕಲಾದ ಅಣು ಬಾಂಬಿನ ೧,೦೦೦ ಪ್ರಮಾಣದ ಶಕ್ತಿಯ ಅಧುನಿಕ ಅಣು ಬಾಂಬನ್ನು ಅಮೆರಿಕವು ತಯಾರಿಸುತ್ತಿರುವುದೆಂದೂ, ಅದು ೨ ಕೋಟಿ ಟನ್‌ಗಳ ಟಿ ಎನ್ ಟಿ ಯ ಸ್ಫೋಟನದಷ್ಟು ಶಕ್ತಿಯುಳ್ಳದ್ದಾಗಿರುವುದೆಂದೂ ಹೇಳಲಾಗಿದೆ.

ಮೈಸೂರು ಮತ್ತು ಇತರ ೪ ಕಡೆಗಳಲ್ಲಿ ರಕ್ತ ಕ್ರಿಮಿ ಪರೀಕ್ಷಾಶಾಲೆ

ಆರೋಗ್ಯ ಮಂತ್ರಿ ಆರ್.ಎಂ ಪಾಟೀಲರ ವಿವರಣೆ

ಬೆಂಗಳೂರು ೨೬

ಆರೋಗ್ಯ ಮಂತ್ರಿ ಶ್ರೀ ಆರ್. ಎಂ ಪಾಟೀ ರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ ತೀಯ ಯೋಜನೆ ಅವಧಿಯಲ್ಲಿ ಕೈಗೊಳ್ಳಲಾ ುವ ಆರೋಗ್ಯ ಮತ್ತು ವೈದ್ಯಕೀಯ ಅಭಿವೃದ್ಧಿ ಕ್ರಮಗಳನ್ನು ವಿವರಿಸಿದರು. ಹಳೇ ಮೈಸೂರು ಪ್ರದೇಶಕ್ಕೆ ತೊಂದರೆಯಾಗದಂತೆ, ಐಕ್ಯವಾದ ಇತರ ಕನ್ನಡ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸ ಡೆಸಲಾಗುವುದೆಂದು ಅವರು ಹೇಳಿ ಮಲೇರಿಯಾ ಹತೋಟಿಗಾಗಿಯೇ ೧೨೪ ಲಕ್ಷ ರೂ. ಚ್ಚ ಮಾಡಲಾಗುವುದೆಂದು ತಿಳಿಸಿದರು.

ಮಕ್ಕಳ ಆರೋಗ್ಯ ಮತ್ತು ಹೆರಿಗೆ ಯೋಜನೆ ಅಂಗವಾಗಿ ಮಂಡ್ಯ ಮತ್ತು ಹಾಸನಗಳಲ್ಲಿ ಎರಡು ಪ್ರಯೋಗ ಶಾಲೆಗಳನ್ನು ಏರ್ಪಡಿಸಲಾಗುವುದೆಂದು ಅವರು ಸೂಚಿಸಿದರು. ಆರೋಗ್ಯ ಯೂನಿಟ್ಟಿನ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಪ್ರಮಾಣವನ್ನು ೨೫೦ರಿಂದ ಹೆಚ್ಚಿಸಲಾಗುವುದೆಂದು ುಡಿದರು. ಮೈಸೂರು, ಚಿಕ್ಕಮಗಳೂರು, ಚಿ ದುರ್ಗ, ಕೋಲಾರ ಮತ್ತು ತುಮಕೂರುಗಳ ಕ್ರಿಮಿ, ರಕ್ತ ಮತ್ತು ರಸಾಯನಿಕ ಪರೀಕ್ಷಾ ಪ್ರಯೋಗ ಶಾಲೆಗಳನ್ನು ಏರ್ಪಡಿಸಲಾಗುವುದೆಂ ಬಿ. ಸಿ. ಜಿ. ಯೂನಿಟ್ಟುಗಳನ್ನು ಮುಂದುವರಿಸಲಾಗುವುದೆಂದೂ ಅವರು ಹೇಳಿದರು.

ದ್ವಿತೀಯ ಯೋಜನೆಯಲ್ಲಿ ಮೂಲ ಶಿಕ್ಷಣಕ್ಕಾಗಿ ೧೬೦ ಲಕ್ಷ ರೂ

ದ್ವಿತೀಯ ಯೋಜನೆಯಲ್ಲಿ ಮೂಲ ಶಿಕ್ಷಣಕ್ಕಾಗಿ ಸಂಸ್ಥಾನ ಸರ್ಕಾರದವರು ೧೬೦ ಲಕ್ಷ ರೂ.ಗಳನ್ನು ಒದಗಿಸುವರೆಂದೂ, ಪ್ರಸಕ್ತ ಸಾಲಿನಲ್ಲಿ ೩೦ ಲಕ್ಷವನ್ನು ವೆಚ್ಚ ಮಾಡಲಾಗುವುದೆಂದು ಗೊತ್ತಾಗಿದೆ ಆ ಪೈಕಿ ೧೦ ಲಕ್ಷವನ್ನು ಉಪಾಧ್ಯಾಯರ ತರಪೇತಿಗಾಗಿ ಒದಗಿಸಲಾಗುವುದು. ಎಲ್ಲಾ ಮೂಲ ಶಿಕ್ಷಣ ಶಾಲೆಗಳಲ್ಲೂ ನೂಲುವುದು ಮತ್ತು ನೆಯ್ಗೆಯನ್ನು ಜಾರಿಗೆ ತರಲಾಗಿರುವುದೆಂದೂ, ವ್ಯವಸಾಯ ಶಿಕ್ಷಣವನ್ನೂ ಸಾಧ್ಯವಾದ ಕಡೆಗಳಲ್ಲಿ ಏರ್ಪಡಿಸಲಾಗುವುದೆಂದೂ ಗೊತ್ತಾಗಿದೆ.

ಭಾರತಕ್ಕೆ ಮತ್ತೊಮ್ಮೆ ಟಿಟೋರವರ ಭೇಟಿ

ಯುಗೋಸ್ಲೇವಿಯಾ ಅಧ್ಯಕ್ಷ ಮಾರ್ಷಲ್ ಟಿಟೋರವರು ಭಾರತ ಮತ್ತು ಈಜಿಪ್ಟುಗಳಿಗೆ ನಧಿಕೃತ ಭೇಟಿ ಕೊಡುವ ಸಂಭವವಿರುವುದೆಂ ಗೊತ್ತಾಗಿದೆ. ಅವರು ಇಂಡೋನೇಷ್ಯಾ, ಲೆಬನಾನ್, ಸಿರಿಯಾ, ಪಾಕಿಸ್ತಾನ, ಕಾಂಬೋಡಿಯಾ, ಸಿಂಹಳ ಮತ್ತು ಸಯಾಮುಗಳಿಗೂ ಹೋಗುವರು. ಭಾರತದಲ್ಲಿ ನೆಹರೂ ಮತ್ತು ಈಜಿಪ್ಟಿನಲ್ಲಿ ನಾಸೆರ್‌ರವರೊಡನೆ ಸಂಭಾಷಣೆ ನಡೆಯಬಹುದು.

ಗಂಗೋತ್ರಿ ಯಾತ್ರಿಕರ ಮರಣ

ವಿಪರೀತ ಮಂಜುಗೆಡ್ಡೆ ಬಿದ್ದುದರಿಂದ ಗಂಗೋತ್ರಿಗೆ ತೆರಳುತ್ತಿದ್ದ ೬ ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ. ಟೆಹ್ರಿ ಘರ್ವಾಲಿನ ಪ್ರದೇಶದಲ್ಲಿ ಮಂಜಿನಿಂದ ಕೂಡಿದ ಬಿರುಗಾಳಿಯು ಕೆಲವಾರು ದಿನಗಳಿಂದ ವಿಪರೀತವಾಗಿ ಎಲ್ಲಾ ವಿಧವಾದ ಸಂಚಾರಕ್ಕೂ ಅಡ್ಡಿಯಾಗಿರುವುದಾಗಿ ಗೊತ್ತಾಗಿದೆ.

ಹಿಮದ ಗೆಡ್ಡೆಗಳಿಂದ ಬದರಿನಾಥ ಯಾತ್ರಿಕರಿಗೆ ಅಡ್ಡಿ

ಬದರಿನಾಥ ಮತ್ತು ಕೇದಾರನಾಥಗಳಿಗೆ ಹೋಗುವ ಯಾತ್ರಿಕರಿಗೆ ಹಿಮದ ಗೆಡ್ಡೆಗಳಿಂದಲೂ, ಭಾರಿ ಮಳೆಯಿಂದಲೂ ತೊಂದರೆಯಾಗಿರುವುದೆಂದು ವರದಿಯಾಗಿದೆ ಗೌರಿ ಕುಂಡ ಮತ್ತು ಹನುಮಾನ್ ಚಟ್ಟಿಯ ಮುಂದೆ ರಸ್ತೆಯು ಸಂಚಾರಕ್ಕೆ ಅನುಕೂಲವಾಗಿಲ್ಲ. ಅಲ್ಲಿ ಹವಾ ಪರಿಸ್ಥಿತಿಯು ಶೀತವಾಗಿಲ್ಲ. ಮುಂದೆಯೂ ಮಳೆ ಮತ್ತು ಹಿಮ ಗೆಡ್ಡೆ ಬೀಳುವ ಸಂಭವವಿದೆ. ರಸ್ತೆಯನ್ನು ಸರಿಪಡಿಸುವುದರಲ್ಲಿ ಅಧಿಕಾರಿಗಳು ತೊಡಗಿರುವ ದೆ, ಯಾತ್ರಿಕರಿಗೆ ಪಡಿತರ ಮತ್ತು ವೈದ್ಯ ಯ ಸಹಾಯವನ್ನು ಒದಗಿಸುತ್ತಿರುವರು

ಸರ್ಕಾರಿ ಕೈಗಾರಿಕಾ ಕಾರ್ಮಿಕರ ಬೇಡಿಕೆಗಳ ಇತ್ಯರ್ಥಕ್ಕೆ ಕರೆ

ಕಾರ್ಮಿಕ ಸಂಘಗಳ ಫೆಡರೇಷನ್ನಿನ ನಿರ್ಧಾರ

ಮೈಸೂರು ೨೬

ಬೆಂಗಳೂರಿನಲ್ಲಿರುವ ವಿದ್ಯುಚ್ಛಕ್ತಿ ಕಾರ್ಖಾನೆ, ಪಿಂಗಾಣಿ ಕಾರ್ಖಾನೆ, ಸಾಬೂನು ಕಾರ್ಖಾನೆ, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್; ಮೈಸೂರಿನಲ್ಲಿರುವ ರೇಷ್ಮೆ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ; ಹಾಸನದ ಯಂತ್ರ ಸಾಮಗ್ರಿ ಕಾರ್ಖಾನೆ; ಶಿವಮೊಗ್ಗದ ಗಂಧದೆಣ್ಣೆ ಕಾರ್ಖಾನೆಗಳ ಕಾರ್ಮಿಕರ ಪ್ರತಿನಿಧಿಗಳ ಸಭೆಯು ನೆನ್ನೆ ನಗರದಲ್ಲಿ ಸೇರಿ, ಸರ್ಕಾರದ ಕೈಗಾರಿಕೆಗಳಲ್ಲಿರುವ ೧೦,೦೦೦ ಕಾರ್ಮಿಕರಿಗೆ ಕೊಡುವ ವೇತನ ಮತ್ತು ತುಟ್ಟಿ ಭತ್ಯಗಳ ಬಗ್ಗೆ ಸರ್ಕಾರದವರು ಇತ್ಯರ್ಥ ಮಾಡುವುದರಲ್ಲಿ ನಿಧಾನವಾಗುತ್ತಿರುವುದರಿಂದ ಆತಂಕವಾಗಿದೆಯೆಂದು ಸೂಚಿಸಲಾಯಿತು. ಜೀವನದ ವೆಚ್ಚವು ಹೆಚ್ಚುತ್ತಿರುವಾಗ ಈ ಪ್ರಶ್ನೆಯನ್ನು ಬೇಗನೆ ಇತ್ಯರ್ಥ ಮಾಡಬೇಕೆಂದೂ, ಕೈಗಾರಿಕಾ ಶಾಸನದ ಪ್ರಕಾರ ನ್ಯಾಯ ದೊರಕಿಸಿಕೊಳ್ಳಲು ಇರುವ ಅವಕಾಶವನ್ನು ಕಾರ್ಮಿಕರಿಗೆ ತಪ್ಪಿಸಲಾಗಿದೆಯೆಂದೂ ತಿಳಿಸಲಾಯಿತು.

ಈ ಕಾರಣದಿಂದ ಕೆಲಸಗಾರರು ಅಸಮಾಧಾನ ಸೂಚಿಸಲು ಒಂದು ಗೊತ್ತಾದ ದಿನ ಕೆಲಸಕ್ಕೆ ಹೋಗಬಾರದೆಂದೂ ಸಭೆಯು ಸೂಚಿಸಿತು. ಈ ವಿಚಾರವನ್ನು ಸರ್ಕಾರದವರೇ ಇತ್ಯರ್ಥ ಮಾಡಬೇಕು, ಅಥವಾ ಕೈಗಾರಿಕಾ ಕೋರ್ಟಿಗೆ ಹೋಗಲು ಅವಕಾಶವೀಯಬೇಕೆಂದು ಒತ್ತಾಯಪಡಿಸಲಾಯಿತು ಕಳೆದ ೩೦ ವರ್ಷಗಳಿಂದಲೂ ಈ ಕೆಲಸಗಾರರು ಅತ್ಯಂತ ಕಡಿಮೆ ಸಂಬಳವನ್ನು ಪಡೆಯುತ್ತಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಾಯಿತು

ಬೆಂಗಳೂರಿನ ಶ್ರೀ ಜಿ ವಿ. ರಾಮಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ವಿವಾಹ ಮಹೋತ್ಸವ

ಅರಮನೆ ಜಹದಕಟ್ಟೆ ಮಠದ ಶ್ರೀ ಗುರುಪಾದಪ್ಪನವರ ಮಕ್ಕಳು ಶ್ರೀ ಎಂ. ಜಿ. ಮಹದೇವಪ್ಪನವರಿಗೆ ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಯ ಶ್ರೀ ಹೆಚ್ ಎಂ ಎಸ್. ಮಹದೇವಪ್ಪನವರ ಪುತ್ರಿ ಸೌ॥ ನಾಗರತ್ನಾಂಬನನ್ನು ತಂದುಕೊಂಡು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಲಾಯಿತು

ಹೊಸ ತೆರಿಗೆಗಳ ಬಗ್ಗೆ ಕಲ್ಕತ್ತಾ ಪೌರಸಭೆಯ ಕಳವಳ

ಹೊಸ ತೆರಿಗೆಗಳ ವಿಧಾಯಕದ ಬಗ್ಗೆ ತನಗೆ ಆಗಿರುವ ಕಳವಳ ಮತ್ತು ಆತಂಕವನ್ನು ಕಲ್ಕತ್ತಾ ಪೌರಸಭೆಯು ಕೇಂದ್ರ ಸರ್ಕಾರಕ್ಕೆ ತಿಳಿಸಲು ನಿರ್ಧರಿಸಿರುತ್ತದೆ. ತೆರಿಗೆಗಳಿಂದ ಮಧ್ಯಮ ವರ್ಗ ಮತ್ತು ಬಡಜನರಿಗೆ ತುಂಬಾ ತೊಂದರೆಯಾಗುವುದೆಂದೂ, ಆದರಿಂದ ಅವರ ಜೀವನದ ವೆಚ್ಚವು ಹೆಚ್ಚುವುದೆಂದೂ ಪೌರಸಭೆಯು ನಿರ್ಣಯ ಮಾಡಿರುತ್ತದೆ.

ಮಧ್ಯಮ ವರ್ಗದವರಿಗೆ ತೆರಿಗೆ. ವಿಧಾಯಕದಲ್ಲಿ ರಿಯಾಯಿತಿ?

ಹೊಸ ತೆರಿಗೆಗಳ ಬಗ್ಗೆ ಲೋಕ ಸಭೆಯಲ್ಲಿ ಅನೇಕ ಸದಸ್ಯರು ಟೀಕೆ ಮಾಡಿರುವರಷ್ಟೆ. ಕಾಂಗ್ರೆಸ್ ಪಕ್ಷದ ಅನೇಕರೂ ಟೀಕಿಸಿರುವರು. ತೆರಿಗೆ ವಿಧಾಯಕದಲ್ಲಿ ವ್ಯತ್ಯಾಸಗಳನ್ನೇನೂ ಮಾಡಲಾಗುವುದಿಲ್ಲವಾದರೂ ಮಧ್ಯಮ ವರ್ಗದವರ ಮೇಲೆ ಆದರಿಂದ ಆಗುವ ಪರಿಣಾಮಗಳನ್ನು ಹೋಗಲಾಡಿಸಲು ಪ್ರಯತ್ನಿಸಲಾಗುವುದೆಂದೂ, ಈ ಸಂಬಂಧವಾಗಿ ನಾಳೆಯಿಂದ ಕೇಂದ್ರ ಮಂ. ಶ್ರೀ ಟಿ. ಟಿ. ಕೃಷ್ಣಮಾಚಾರಿಯವರೊಡನೆ ಕಾಂಗ್ರೆಸ್ ಪಕ್ಷದ ವಿವಿಧ ಪಂಗಡಗಳವರು ಮಾತುಕತೆ ನಡೆಸುವರೆಂದೂ ಗೊತ್ತಾಗಿದೆ

ಅಕ್ಟೋಬರಿನಲ್ಲಿ ಜಪಾನಿಗೆ ನೆಹರೂ ಭೇಟಿ

ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ಜಪಾನಿಗೆ ಪ್ರಧಾನಿ ನೆಹರೂರವರು ಭೇಟಿ ಕೊಡಲಿರುವರೆಂದು ತಿಳಿದುಬಂದಿದೆ.

ಭಾರತದ ಬಗ್ಗೆ ಜಪಾನ್ ಪ್ರಧಾನಿಯ ಪ್ರಶಂಸೆ

ವಿಶ್ವದಲ್ಲಿ ನ್ಯಾಯವನ್ನು ಎತ್ತಿಹಿಡಿಯುವ ರಾಷ್ಟ್ರ

ದೆಹಲಿಯ ಪೌರಸಭೆಯವರು ಇತ್ತ ಮಾನಪತ್ರಕ್ಕೆ ಜಪಾನಿನ ಪ್ರಧಾನಿ ನೊಬುಸೂಕೆ ಕಿಷಿಯವರು ಉತ್ತರವೀಯುತ್ತಾ, ವಿಶ್ವದಲ್ಲಿ ನ್ಯಾಯವನ್ನು ಭಾರತವು ಎತ್ತಿ ಹಿಡಿಯುವ ಮುಂದಾಳು ರಾಷ್ಟ್ರವಾಗಿರುವುದೆಂದೂ, ಅಧೀನ ರಾಷ್ಟ್ರಗಳು ಸ್ವಯಂನಿರ್ಣಯಾಧಿಕಾರ ಪಡೆಯಲು ಭಾರತವು ಬಹಳ ಸಹಾಯ ಮಾಡಿರುವುದೆಂದೂ ತಿಳಿಸಿರುತ್ತಾರೆ. ಭಾರತ ಮತ್ತು ಜಪಾನುಗಳ ನಡುವೆ ಉತ್ತಮ ಬಾಂಧವ್ಯವಿರುವುದೆಂದು ಅವರು ಹೇಳಿ,ವಿಶ್ವ ಸಂಸ್ಥೆಯಲ್ಲೂ ಸಹ ಎರಡು ರಾಷ್ಟ್ರಗಳು ಸಹಕರಿಸುವುವೆಂಬ ನಂಬಿಕೆಯನ್ನು ವ್ಯಕ್ತಪಡಿಸಿರುತ್ತಾರೆ. ಮಹಾತ್ಮಾ ಗಾಂಧಿಯವರು ಭಾರತಕ್ಕಲ್ಲದೆ ಇಡೀವಿಶ್ವಕ್ಕೆ ಆಧ್ಯಾತ್ಮಿಕ ಆಸ್ತಿಯನ್ನು ಬಿಟ್ಟುಹೋಗಿರುವರೆಂದು ಅವರು ಹೇಳಿರುವರು. ಜಗತ್ತಿನಲ್ಲಿ ಈಗ "ಅಧಿಕಾರದ" ಆಡಳಿತವಿರುವುದೆಂದೂ, ನ್ಯಾಯ ದೇವತೆಯು ಪ್ರಭುತ್ವ ನಡೆಸುವವರೆಗೆ ಜಗತ್ತಿನಲ್ಲಿ ಶಾಂತಿಯಿರುವುದಿಲ್ಲವೆಂದೂ ಹೇಳಿ ಅವರು ವ್ಯಸನವನ್ನು ವ್ಯಕ್ತಪಡಿಸಿರುವರು. ವಿಶ್ವವು ಒಂದಾಗುತ್ತಿರುವುದರ ಬಗ್ಗೆ ಅವರು ಹರ್ಷ ಸೂಚಿಸಿರುವರು.

ಮಾಸ್ಕೋ-ಪೀಕಿಂಗ್ ರೈಲು ಮಾರ್ಗದ ಪ್ರಯಾಣಾರಂಭ

ರಷ್ಯದ ರಾಜಧಾನಿ ಮಾಸ್ಕೋವಿನಿಂದ ಪೀಕಿಂಗಿಗೆ ೫,೦೦೦ ಮೈಲಿ ದೂರ ಹಾಕಿರುವ ರೈಲು ಮಾರ್ಗದಲ್ಲಿ ಸಂಚಾರವು ಆರಂಭವಾಗಿದೆ. ಮೊದಲನೇ ರೈಲು ಕಳೆದ ಮಂಗಳವಾರ ಮಾಸ್ಕೋವಿನಿಂದ ಪೀಕಿಂಗಿಗೆ ತೆರಳಿತು. ಮಂಗೋಲಿಯವನ್ನು ದಾಟಿಹೋಗುವ ಈ ರಸ್ತೆಯಲ್ಲಿ ಪ್ರಯಾಣ ಮಾಡಲು ೧೦ ದಿನಗಳಾಗುವುವು. ಈ ಭಾರಿ ಉದ್ಯಮವನ್ನು ಪೂರೈಸಲು ರಷ್ಯಾ ಮತ್ತು ಚೀನಾ ಇಂಜನಿಯರುಗಳು ಸಹಕರಿಸಿದ್ದರು. ಈ ರೈಲು ಆಯಕಟ್ಟಿನಲ್ಲಿದ್ದು ಆರ್ಥಿಕ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ.

ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಅತಿವೃಷ್ಟಿ

ಹರಿಹರ, ದಾವಣಗೆರೆ ಮತ್ತು ಚನ್ನಗಿರಿ ತಾಲ್ಲೂಕುಗಳಲ್ಲಿ ಕಳೆದ ವಾರ ವಿಪರೀತ ಮಳೆಯಿಂದ ಪ್ರವಾಹವುಂಟಾಗಿ ಅನೇಕ ರಸ್ತೆ ಮತ್ತು ಸಣ್ಣ ಸಣ್ಣ ಸೇತುವೆಗಳಿಗೆ ಅಪಾಯವೊದಗಿದೆ. ಸೂಳೆಕೆರೆಯು ಹಳ್ಳವು ತುಂಬಿ ಪ್ರವಾಹದಿಂದ ಅನೇಕ ವೀಳ್ಯದೆಲೆ ತೋಟಗಳು ಕೊಚ್ಚಿಹೋಗಿವೆ. ಬೆಳ್ಳೂಡಿ ಗ್ರಾಮದಲ್ಲಿ ಹಲವು ಮನೆಗಳು ನಾಶವಾಗಿವೆ. ನೀರಾವರಿ ಕೆಲಸದ ವಿದ್ಯುಚ್ಛಕ್ತಿ ಪಂಪುಗಳು ನೀರಿನಲ್ಲಿ ಮುಳುಗಿವೆ. ಜಮೀನುಗಳಲ್ಲಿ ಫಲವತ್ತಾದ ಮಣ್ಣನ್ನೂ, ವ್ಯವಸಾಯದ ಮುಟ್ಟುಗಳನ್ನೂ ಪ್ರವಾಹವು ಕೊಚ್ಚಿತೆಂದೂ ಹೇಳಲಾಗಿದೆ. ಸುಮಾರು ೫ ಲಕ್ಷ ರೂ. ನಷ್ಟ ಸಂಭವಿಸಿದೆಯೆಂದು ಅಂದಾಜು ಮಾಡಲಾಗಿದೆ.

ಗ್ರಾಮಾಧಿಕಾರಿಗಳಿಗೆ ಆಂಧ್ರ ಮುಖ್ಯಮಂತ್ರಿಯ ಷರತ್ತು

ಆಂಧ್ರ ಪ್ರದೇಶದ ಮುಖ್ಯಮಂತ್ರಿ ನೀಲಂ ಸಂಜೀವ ರೆಡ್ಡಿಯವರು ಅಲ್ಲಿನ ಗ್ರಾಮಾಧಿಕಾರಿಗಳಿಗೆ ಷರತ್ತೊಂದನ್ನು ಹಾಕಿ ಅವರುಗಳಿಗೆ ಆನುವಂಶಿಕ ಹಕ್ಕು ಅಥವಾ ಎನ್. ಜಿ. ಓ.ಗಳ ಸಂಬಳಗಳನ್ನು ಕೊಡಲಾಗುವುದೆಂದು ತಿಳಿಸಿರುತ್ತಾರೆ. ಅವರುಗಳು ಆನುವಂಶಿಕ ಹಕ್ಕನ್ನು ಕೇಳದರೆ ಎನ್ ಜಿ. ಓಗಳ ಸಂಬಳವನ್ನು ಕೇಳಬಾರದೆಂದು ಅವರು ಸೂಚಿಸಿರುವರು:

ಶ್ರೀ ಜಗದಂಬಾ ಶಿಶು ವಿಹಾರ:
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶು ವಿಹಾರದ ತರಗತಿಗಳು ಇದೇ ೧ನೇ ತಾರೀಕಿನಿಂದ ಆರಂಭವಾಗಿವೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

ಸಂತಾನ ಸಂಯಮ ಯೋಜನಾಧಿಕಾರಿಗಳ ನೇಮಕ

ಕೇಂದ್ರ ಆರೋಗ್ಯ ಮಂತ್ರಿ ಡಿ. ಪಿ. ಕರ್ಮಾರ್‌ಕರ್‌ರವರ ಸೂಚನೆ

ಕೇಂದ್ರ ಕುಟುಂಬ ಯೋಜನೆ. ಸಮಿತಿಯಲ್ಲಿ ನೆನ್ನೆ ಆರೋಗ್ಯ ಮಂತ್ರಿ ಡಿ. ಪಿ. ಕರ್ಮಾರ್‌ಕರ್‌ರವರು ಭಾಷಣ ಮಾಡಿ, ಸಂಸ್ಥಾನ ಸರ್ಕಾರಗಳು ಸಂತಾನ ಸಂಯಮ ಅಧಿಕಾರಿಗಳನ್ನು ನೇಮಿಸಬೇಕೆಂದೂ, ಕುಟುಂಬ ಯೋಜನಾ ಸಮಿತಿಗಳನ್ನು ರಚಿಸಬೇಕೆಂದೂ ಸೂಚಿಸಿದರು. ನೆಹರೂರವರು ಮಾತನಾಡಿ ರಾಜಕೀಯ, ಆರ್ಥಿಕ, ಸಾಮಾಜಿಕ ಮುಂತಾದ ಎಲ್ಲಾ ಸಮಸ್ಯೆಗಳೂ ಕುಟುಂಬ ಯೋಜನೆಯನ್ನು ಕೈಗೊಳ್ಳುವುದು ಅವಶ್ಯಕವೆಂಬ ನಿರ್ಧಾರಕ್ಕೆ ತರುತ್ತವೆಯೆಂದು ಹೇಳಿದರು ರಾಷ್ಟ್ರದ ಏರಿಗೆಟ್ಟಿನ ಜನಸಂಖ್ಯೆಯು ಅಧಿಕವಾಗಿರುವುದೆಂದು ಅವರು ಸೂಚಿಸಿದರು. ದೇಶದ ಬಹುಸಂಖ್ಯಾತ ಜನರು ಈ ಯೋಜನೆಯನ್ನು ಸ್ವಾಗತಿಸುವರೆಂದು ಅವರು ನಂಬಿಕೆಯನ್ನು ವ್ಯಕ್ತಪಡಿಸಿ, ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವಂತಹ ಭಾಷೆಯನ್ನು ಈ ಕೆಲಸದಲ್ಲಿ ಉಪಯೋಗಿಸಬೇಕೆಂದು ಸಲಹೆ ಮಾಡಿದರು.

ಹೆಚ್. ಸಿ. ದಾಸಪ್ಪನವರಿಗೆ ಕೇಂದ್ರ ಮಂತ್ರಿ ಪದವಿಯೇ?

ಕೇಂದ್ರ ಸರ್ಕಾರಕ್ಕೆ ಹೆಚ್ಚು ಮಂದಿ ಮಂತ್ರಿಗಳು ಮತ್ತು ಉಪ ಮಂತ್ರಿಗಳನ್ನು ತೆಗೆದುಕೊಳ್ಳಲಾಗುವುದೆಂದು ಪಾರ್ಲಿಮೆಂಟಿನ ಲಾಬಿ ಸುದ್ದಿಯು ತಿಳಿಸುತ್ತದೆ. ಶ್ರೀ ಹೆಚ್. ಸಿ. ದಾಸಪ್ಪನವರು ರಾಜ್ಯ ಮಂತ್ರಿಯಾಗುವ ಸಂಭವವಿದೆ. ಕೇರಳದ ಕುಟ್ಟಿಕೃಷ್ಣ ನಾಯರ್‌ರವರು ಉಪ ಮಂತ್ರಿಯಾಗುವರೆಂದು ಹೇಳಲಾಗಿದೆ.

ANANDA TUTORIAL INSTITUTE
(Sri Vyasaraya Mutt Buildings)
Krishnamurthipuram,
MYSORE

S. S. L. C., Inter, B. A. and B.Sc. students coached up. Work commences from 1-6-57 under the guidance of experienced professors and lecturers Admissions received between 9 and 10 A.M.

Prof V. Raghavendra Rao, M. A., B. T.,
Principal

Model Tutorial Institute
D. Banumiah's High School
Buildings, Mysore
NOTIFICATION

The Coaching Class for the S. S. L. C. Supplementary Examination has started working. Fees for the whole term is Rs 18 only.

Join immediately.

D. Subbaraya Rao,
Organiser

SREE GAYATHRI
TALKIES
To-day : Last day
Bell of Frisco Bay

From 28-5-57 : For 2 days
The Great adventure filled with action.
King Richard and The Crusaders
(Cinemascope & Technicolor)
With:- Rex Harrison, Virginia Mayo, George Sanders, Laurence Harvey

Edited, Printed and Published by A. R. Nagarajan at Sadhvi Press, D.Subbiah Road, Mysore

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ



ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : [illegible}] SADHVI : TUESDAY :28—5—1957 ಮೈಸೂರು : ಮಂಗಳವಾರ ೨೮—೫—೧೯೫೭ : [ಸಂಚಿಕೆ : [illegible]

ಐಸೆನ್‌ಹೋವರ್ ಯೋಜನೆಗೆ ಪಾಕಿಸ್ತಾನದ ಒಪ್ಪಿಗೆ

ಸಂಸ್ಥಾನದಲ್ಲಿ ಇನ್‍ಫ್ಲುಯೆಂಜಾ ವ್ಯಾಧಿ ಬಗ್ಗೆ ಎಚ್ಚರಿಕೆ

ಮಹಾಜನರಿಗೆ ಸರ್ಕಾರದ ತಿಳುವಳಿಕೆ

ಬೆಂಗಳೂರು ೨೮

ಸಿಂಗಪುರದ ಇನ್‍ಫ್ಲುಯೆಂಜಾ (ಶೀತ ಜ್ವರ) ವು ಸಂಸ್ಥಾನದಲ್ಲೂ ಹರಡಬಹುದೆಂಬ ಸಾಧ್ಯತೆಯನ್ನು ಕುರಿತು ಸರ್ಕಾರದವರು ಮಹಾಜನರಿಗೆ ಸೂಚನೆ ಕೊಟ್ಟು, ಅದರ ಬಗ್ಗೆ ಎಚ್ಚರಿಕೆ ವಹಿಸುವಂತೆ ತಿಳಿಸಿರುತ್ತಾರೆ. ಈ ವ್ಯಾಧಿಯನ್ನು ಇನ್ನೂ ಪೂರ್ಣವಾಗಿ ನಿವಾರಿಸಲು ಸಾಧ್ಯವಾಗಿಲ್ಲವೆಂದೂ, ಈಗ ಅದು ಸಾಮಾನ್ಯವಾಗಿದ್ದರೂ, ವಿಪರೀತ ಆರ್ಥಿಕ ನಷ್ಟ ಮತ್ತು ಇತರ ತೊಂದರೆಗಳಿಗೆ ಕಾರಣವಾಗುವುದೆಂದೂ ತಿಳಿಸಲಾಗಿದೆ. ಇದರ ಕೆಟ್ಟ ಪರಿಣಾಮಗಳು ಹಲವು ವಾರಗಳ [illegible] ಆಗುವುವೆಂದು ಗೊತ್ತಾಗಿದೆ. ಅಲ್ಲದೆ ಅನೇಕ ಮರಣಗಳಿಗೂ ಕಾರಣವಾಗುವುದೆಂದು ಸೂಚಿಸಲಾಗಿದೆ.

೧೯೪೫ರಲ್ಲಿ ಹಾಲೆಂಡಿನಲ್ಲಿ ಈ ವ್ಯಾಧಿಯಿಂದ ೩,೨೦೦ ಜನರೂ, ೧೯೧೮-೧೯ರಲ್ಲಿ ಈ ರೋಗದಿಂದ ಜಗತ್ತಿನ ೧½ ಕೋಟಿ ಜನರೂ ಮಡಿದರೆಂದು ತಿಳಿಸಲಾಗಿದೆ.

ಕಾಯಿಲೆಯು ವಿಷಮಿಸಿ, ಶ್ವಾಸಕೋಶ ಸಂಬಂಧ ವ್ಯಾಧಿಗಳು ಉಲ್ಬಣಿಸಿ ಹೆಚ್ಚು ಮರಣಗಳಿಗೆ ಕಾರಣವಾಗುವ ಸಂಭವವಿರುವುದೆಂದು ಹೇಳಲಾಗಿದೆ.

ಈಗ ಸರ್ಕಾರದ ಬಳಿ ಸೂಕ್ತವಾದ ಔಷಧಗಳು ಇರುವುದರಿಂದ ಮರಣ ಸಂಖ್ಯೆಯನ್ನು ಇಳಿಸಲು ಅವಕಾಶವಿದೆ. ಆದರೆ, ವ್ಯಾಧಿಯು ಹಲವಾರು ಬಾರಿ ಹರಡುವ ಪ್ರಮೇಯವಿರುವುದರಿಂದ ಜನಸಾಮಾನ್ಯರು ಎಚ್ಚರಿಕೆ ವಹಿಸಿ ಈ ವಿಚಾರವನ್ನು ಕೂಡಲೇ ಅಧಿಕಾರಿಗಳಿಗೆ ತಿಳಿಸಬೇಕು-ಎಂದು ಪ್ರಕಟಣೆಯು ಸೂಚಿಸಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆಗೆ ವಿ. ವೆಂಕಟಪ್ಪನವರ ರಾಜೀನಾಮೆ

ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುತ್ತಾರೆ. ಬರುವ ತಿಂಗಳು ೯ನೇ ತಾರೀಕು ಬೆಳಗ್ಗೆ ೧೧½ ಗಂಟೆಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆ ನಡೆದು ಹೊಸ ಅಧ್ಯಕ್ಷರ ಆಯ್ಕೆಯಾಗಲಿದೆ.

ಪ್ರಪಂಚದಲ್ಲಿ ನಿಮಿಷಕ್ಕೆ ೧೭೦ ಮಕ್ಕಳ ಜನನ

ವಿಶ್ವ ಸಂಸ್ಥೆಯ ಅಂಕಿಅಂಶಗಳ ಇಲಾಖೆಯು ಸಂಗ್ರಹಿಸಿರುವ ಪಟ್ಟಿ ಪ್ರಕಾರ, ಜಗತ್ತಿನಲ್ಲಿ ಪ್ರತಿ ನಿಮಿಷಕ್ಕೂ ೧೭೦ ಮಕ್ಕಳು ಜನಿಸುತ್ತಿರುವರೆಂದೂ, ೯೦ ಜನರು ಸಾಯುತ್ತಿರುವರೆಂದೂ ಗೊತ್ತಾಗಿದೆ. ಈ ಬಗ್ಗೆ ೨೦೦ ರಾಷ್ಟ್ರಗಳಲ್ಲಿ ಖಾನೇಷುಮಾರಿ ಲೆಕ್ಕ ಪಡೆಯಲಾಗಿದೆ. ಇದರಿಂದ ವಿಶ್ವದ ಜನಸಂಖ್ಯೆಯು ೧,೨೦,೦೦೦ದಷ್ಟು ಹೆಚ್ಚಿ ಈ ಶತಮಾನದ ಕೊನೆಯಲ್ಲಿ ಜನಸಂಖ್ಯೆಯು ದ್ವಿಗುಣವಾಗುವುದೆಂದು ತಿಳಿಸಲಾಗಿದೆ. ಈಗ ಜಗತ್ತಿನಲ್ಲಿ ೨೭೦ ಕೋಟಿ ಜನರು ಇರುವರು. ಚೀನಾದಲ್ಲಿ ೫೮ ಕೋಟಿ ಮತ್ತು ಭಾರತದಲ್ಲಿ ೩೮ ಕೋಟಿ ಜನರಿರುವರು.

ಮಧ್ಯ ಪೂರ್ವಕ್ಕೆ ಐಕರ ಸಹಾಯ ಯೋಜನೆಗೆ ಪಾಕಿಸ್ತಾನ ?

ಲೋಕಸಭೆಯಲ್ಲಿ ಪ್ರಶ್ನೆಗೆ ನೆಹರೂರವರ ಉತ್ತರ

ಲೋಕ ಸಭೆಯಲ್ಲಿ ನೆನ್ನೆ ಎನ್. ಸಿ. ಗುಪ್ತರವರು ಮಾಡಿದ ಪ್ರಶ್ನೆಗೆ ನೆಹರೂರವರು ಉತ್ತರವಿತ್ತು, ಪಾಕಿಸ್ತಾನವು ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರ ಮಧ್ಯ ಪೂರ್ವದ ಮಿಲಿಟರಿ ಮತ್ತು ಆರ್ಥಿಕ ಸಹಾಯ ಯೋಜನೆಯನ್ನು ಅಂಗೀಕರಿಸಿರುವಂತೆ ಕಾಣಬರುವುದಾಗಿ ತಿಳಿಸಿದರು. ಈ ಸಂಬಂಧದಲ್ಲಿ ಕರಾಚಿಗೆ ಅಮೆರಿಕಾ ಪ್ರತಿನಿಧಿಯು ಬಂದಿದ್ದ ವಿಷಯವು ಸರ್ಕಾರಕ್ಕೆ ತಿಳಿಯದೆಂದು ಹೇಳಿದರು. ಪಾಕಿಸ್ತಾನಕ್ಕೆ ಅಮೇರಿಕದವರ ಮಿಲಿಟರಿ ಸಹಾಯದ ವಿಚಾರವಾಗಿ ಭಾರತ ಸರ್ಕಾರದವರು ಅಮೆರಿಕದೊಡನೆ ಚರ್ಚಿಸುತ್ತಿರುವರೆಂದೂ ನೆಹರೂರವರು ನುಡಿದರು. ಐಸೆನ್‌ಹೋವರರ ಯೋಜನೆಯು ಪಾಕಿಸ್ತಾನಕ್ಕೆ ವಿಸ್ತರಿಸಿದರೆ ಭಾರತಕ್ಕೆ ಅದರಿಂದ ಭೀತಿಯೊದಗುವುದಿಲ್ಲವೇ ಎಂದು ಸದಸ್ಯರು ಕೇಳಿದರು. ಅದಕ್ಕೆ ಲಕ್ಷ್ಮಿ ಮೆನನ್ನರು ಉತ್ತರವಿತ್ತು, ಈ ಯೋಜನೆಯು ಪಾಕಿಸ್ತಾನಕ್ಕೆ ಅನ್ವಯಿಸುವುದೆಂದು ಅಮೆರಿಕವು ತಿಳಿಸಿರುವ ವಿಚಾರವು ತಮ್ಮ ಸರ್ಕಾರಕ್ಕೆ ಗೊತ್ತಿಲ್ಲವೆಂದು ಹೇಳಿದರು

ಭಾರತದ ರಾಣಾ ಕುಲದವರಿಗೆ ನೇಪಾಳ ಸರ್ಕಾರದ ಎಚ್ಚರಿಕೆ

ನೇಪಾಳದ ಪ್ರಧಾನಿ ಟಂಕ ಪ್ರಸಾದ ಆಚಾರ್ಯರವರು ಭಾರತದಲ್ಲಿರುವ ರಾಣಾ ವಂಶಜರು ಮತ್ತು ಇತರ ನೇಪಾಳಿ ಪ್ರಜೆಗಳಿಗೆ ಸೂಚನೆಯಿತ್ತು ಅವರುಗಳು ತಮ್ಮ ಸಮಸ್ತ ಐಶ್ವರ್ಯದೊಡನೆ ಸ್ವದೇಶಕ್ಕೆ ಹಿಂದಿರುಗಿ ರಾಷ್ಟ್ರವು ಕೈಗೊಂಡಿರುವ ಅಭಿವೃದ್ಧಿ ಯೋಜನೆಯಲ್ಲಿ ಸಹಕಾರಿಗಳಾಗುವಂತೆ ತಿಳಿಸಿರುತ್ತಾರೆ. ಹಾಗೆ ಮಾಡದಿದ್ದರೆ ಅವರುಗಳಿಗೆ ಸ್ವದೇಶದ ನಾಗರಿಕತ್ವವು ತಪ್ಪುವುದೆಂದೂ ಎಚ್ಚರಿಸಲಾಗಿದೆ.

ಅಹಮದಾಬಾದ್ ಮತ್ತು ಕಲ್ಕತ್ತಗಳಲ್ಲಿ ಬಿರುಗಾಳಿ

ಅಹಮದಾಬಾದಿನಲ್ಲಿ ನೆನ್ನೆ ಗಂಟೆಗೆ ೪೨ ಮೈಲಿ ವೇಗದ ಬಿರುಗಾಳಿ ಮುಕ್ಕಾಲು ಗಂಟೆ ಬೀಸಿದುದರಿಂದ ಹಲವಾರು ಗುಡಿಸಲುಗಳು ಉರುಳಿ, ಒಬ್ಬ ಕಾರ್ಮಿಕನು ಮನೆ ಚಾವಣಿ ಸರಿಮಾಡುತ್ತಿದ್ದಾಗ ಕೆಳಗೆ ಬಿದ್ದು ಮೃತಪಟ್ಟನೆಂದು ವರದಿಯಾಗಿದೆ. ಮರಗಳೂ, ಚಾವಣಿಗಳೂ ಹಾರಿಹೋದುವು. ಅಹಮದಾಬಾದು ರೇಡಿಯೋ ಸ್ಟೇಷನ್ನು ೧½ ಗಂಟೆಕಾಲ ಕೆಲಸ ಮಾಡಲಿಲ್ಲ. ಧೂಳು ವಿಪರೀತವಿದ್ದು ಯಾವುದೂ ಕಾಣುತ್ತಿರಲಿಲ್ಲ.

ಕಲ್ಕತ್ತದಲ್ಲಿ ೭೭ ಮೈಲಿ ವೇಗದ ಗಾಳಿ ದೆಸೆಯಿಂದ ೧೬ ಮನೆಗಳು ಕುಸಿದು, ೧೫ ಮಂದಿಗೆ ಗಾಯವಾಯಿತು. ಅಲ್ಲಿನ ಕ್ಷಯರೋಗದ ಆಸ್ಪತ್ರೆ ಭಾಗವು ಉರುಳಿ ಇಬ್ಬರಿಗೆ ಗಾಯವಾಯಿತು. ೨೫೦ ಮೂಟೆ ಅಡಿಕೆ ತುಂಬಿದ್ದ ದೋಣಿಯು ತಲೆಕೆಳಗಾಗಿ ಅಂಬಿಗನು ಕಷ್ಟದಿಂದ ಪಾರಾದನು. ವಿದ್ಯುಚ್ಛಕ್ತಿ ಕಡಿದು ಊರಿನ ಬಹುಭಾಗದಲ್ಲಿ ಕತ್ತಲು ಕವಿದಿತ್ತು.

ಒಬ್ಬರೇ ಅಧ್ಯಾಪಕರಿರುವ ೩೭೭೫ ಪ್ರಾಥಮಿಕ ಶಾಲೆಗಳು

ಬೆಂಗಳೂರು ೨೮

೫೭-೫೮ರ ಸಾಲಿನಲ್ಲಿ ೩,೭೫,೯೮೦ ರೂ. ವಾರ್ಷಿಕ ವೆಚ್ಚದಲ್ಲಿ, ಏಕ ಉಪಾಧ್ಯಾಯರಿರುವ ೩೭೭೫ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸರ್ಕಾರದವರು ಮಂಜೂರಾತಿ ಕೊಟ್ಟಿರುತ್ತಾರೆ. ಆದಷ್ಟುಮಟ್ಟಿಗೆ ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲೂ ಈಗಿರುವುವೂ ಸೇರಿ ಶಾಲೆಗಳ ಸಂಖ್ಯೆಯು ಸಮನಾಗಿರಬೇಕೆಂದು ಸರ್ಕಾರದವರು ಸೂಚಿಸಿರುತ್ತಾರೆ. ಸ್ಕೂಲ್ ಫೈನಲ್ ಆದವರನ್ನು ಉಪಾಧ್ಯಾಯರಾಗಿ ತೆಗೆದುಕೊಳ್ಳಲಾಗುವುದು

ಮಾಸ್ಕೋವಿಗೆ ಮಾವೋರವರ ಭೇಟಿ

ಚೀನಾದ ಅಧ್ಯಕ್ಷ ಮಾವೋತ್ಸೆ ಟುಂಗ್‌ರವರು ಈ ಬೇಸಿಗೆಯಲ್ಲಿ ರಷ್ಯದ ರಾಜಧಾನಿ ಮಾಸ್ಕೋವಿಗೆ ಭೇಟಿ ಕೊಡುವರೆಂದು ವರದಿಯಾಗಿದೆ.

ಶೀತಜ್ವರದ ಬಗ್ಗೆ ಆರೋಗ್ಯಾಧಿಕಾರಿಗಳ ಸಮಾಲೋಚನೆ

ಸಿಂಗಪುರದ ಶೀತಜ್ವರದ ವಿಚಾರವಾಗಿ ಸಂಸ್ಥಾನದ ಆರೋಗ್ಯ ಮತ್ತು ವೈದ್ಯಾಧಿಕಾರಿಗಳು, ಇತರ ಹಿರಿಯ ವೈದ್ಯಾಧಿಕಾರಿಗಳು ನೆನ್ನೆ ಚರ್ಚಿಸಿದರು. ಹೊರಗಿನಿಂದ ಬರುವ ಪ್ರಯಾಣಿಕರಿಂದ ರೋಗ ಹಬ್ಬುವ ಕಾರಣ ನಗರಕ್ಕೆ ಬರುವವರೆಲ್ಲರನ್ನೂ ಪರೀಕ್ಷಿಸಲೂ, ರೋಗಪೀಡಿತರಾದವರನ್ನು ಪ್ರತ್ಯೇಕ ಸ್ಥಳದಲ್ಲಿಡಲೂ ನಿರ್ಧರಿಸಲಾಯಿತು. ಬೆಂಗಳೂರಿನ ಒಬ್ಬಾತನೂ ಮಂಗಳೂರಿನ ಒಬ್ಬನೂ ಸಿಂಗಪುರದಿಂದ ಬಂದಿರುವ ರಾಜೂಲಾ ಹಡಗಿನಲ್ಲಿರುವರೆಂದೂ ಹೇಳಲಾಗಿದೆ.

ಎನ್. ಸಿ. ಸಿ. ದಳದ ಮುಕ್ತಾಯ ಸಮಾರಂಭ

ಎನ್. ಸಿ. ಸಿ. ದಳದವರು ನಗರದಲ್ಲಿ ಏರ್ಪಡಿಸಿದ್ದ ಕಂಬೈಂಡ್ ಕೇಡರ್ ಮತ್ತು ಸಮಾಜ ಸೇವಾ ಶಿಬಿರವು ನೆನ್ನೆ ಮುಕ್ತಾಯಗೊಂಡಿತು. ಈ ಸಂಬಂಧವಾಗಿ ಯುವರಾಜಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಲ್. ಸೀಬಯ್ಯನವರ ಅಧ್ಯಕ್ಷತೆಯಲ್ಲಿ ಸಮಾರಂಭವೊಂದು ನಡೆಯಿತು. ಸ್ಕ್ವಾಡ್ರನ್ ಲೀಡರ್ ಬಿ ಮಲ್ಲಿಕಾರ್ಜುನ್ನರವರಿಂದ ಸ್ವಾಗತವಾದಮೇಲೆ ಕಾರ್ಪೊರಲ್ ಕೇಡೆಟ್ ಆರ್. ಸಿ. ಬಾಲಚಂದರ್‌ರವರಿಂದ ಹಿಂದಿ ಗೀತೆಗಳಾದುವು. ಆರ್ಕೆಸ್ಟ್ರಾ ವಾದನವಾದನಂತರ ಶಿಬಿರವು ನಡೆಸಿದ ಚಟುವಟಿಕೆಗಳನ್ನು ವಿವರಿಸಲಾಯಿತು.

ಶ್ರೀಮತಿ ಎಲ್. ಸೀಬಯ್ಯನವರು ಬಹುಮಾನಗಳನ್ನು ಹಂಚಿದರು. ಪರ್ಯಾಯ ಪಾರಿತೋಷಕವು ೯ನೇ ಮೈಸೂರು ಇಂಜನಿಯರಿಂಗ್ ಪ್ಲಟೂನಿಗೆ ಬಂದಿತು. ಮಹಾರಾಜಾ ಕಾಲೇಜು ಪ್ರಿನ್ಸಿಪಾಲರ ಕಪ್ಪು ೧ನೇ ಮೈಸೂರು ಬೆಟಾಲಿಯನ್ನಿನ ೧ನೇ ಕಂಪೆನಿಗೂ, ಕಮಾಂಡೆಂಟರ ವಿಶೇಷ ಬಟ್ಟಲು ೯ನೇ ಇಂಜನಿಯರಿಂಗ್ ಬೆಟಾಲಿಯನ್ನಿಗೂ ದೊರೆತುವು. ಅಧ್ಯಕ್ಷರು ಮಾತನಾಡಿ ನಾಡಿನ ಐಶ್ವರ್ಯವು ನೋಟು ಮತ್ತು ನಗದಿನಲ್ಲಿಲ್ಲವೆಂದೂ, ದೇಹಶ್ರಮದಲ್ಲಿರುವುದೆಂದೂ ಸೂಚಿಸಿ, ಎನ್. ಸಿ. ಸಿ. ದಳದವರು ಈ ತತ್ವವನ್ನು ಅನುಷ್ಠಾನಕ್ಕೆ ತಂದಿರುವುದಕ್ಕಾಗಿ ಪ್ರಶಂಸಿಸಿದರು.

ಹಿನಕಲ್ ಬಳಿ ಕೊಲೆ ಸಂಬಂಧದಲ್ಲಿ ಇಬ್ಬರ ಬಂಧನ

ಮೈಸೂರು ೨೮

ಕೆಲವು ದಿನಗಳ ಹಿಂದೆ [illegible] ಬಳಿ ಕೊರಕಲೊಂದರಲ್ಲಿ ಹಾಕಲಾಗಿದ್ದ ಶವದ ಪತ್ತೆ ಸಂಬಂಧವಾಗಿ ಹಿನಕಲ್ ಪೋಲೀಸರು ಅಲ್ಲಿರುವ ಚಿಕ್ಕಮಾದ ಮತ್ತು ಪುಟ್ಟನಂಜ ಎಂಬುವರಿಬ್ಬರನ್ನು ಬಂಧಿಸಿರುತ್ತಾರೆ. ಇನ್ನೂ ಹಲವರನ್ನು ಪೋಲೀಸರು ಪ್ರಶ್ನಿಸುತ್ತಿರುವರು. ಸತ್ತವನ ಹೆಸರು ಲಿಂಗನೆಂದು ಹೇಳಲಾಗಿದೆ. ಅವನು ಒಬ್ಬ ಹೆಂಗಸನ್ನು ಬಲಾತ್ಕರಿಸಿದುದೇ ಅವನ ಕೊಲೆಗೆ ಕಾರಣವೆಂದು ಗೊತ್ತಾಗಿದೆ.

ಅನೀತಿ ವ್ಯಾಪಾರಕ್ಕಾಗಿ ೨೦೦ ರೂ. ದಂಡ

ಕೊಡುಮುತ್ತೂರಿನ ಜಯ ಎಂಬುವಳು ನೆನ್ನೆ ರಾತ್ರಿ ನಗರದ ಗಾರ್ಡನ್ ಹೋಟೇಲಿನಲ್ಲಿ ಅನೀತಿ ವ್ಯಾಪಾರದಲ್ಲಿ ನಿರತಳಾಗಿದ್ದುದನ್ನು ಪೋಲೀಸರು ಪತ್ತೆ ಹಚ್ಚಿ ಹೂಡಿದ್ದ ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ಅವಳಿಗೆ ೨೦೦ ರೂ. ದಂಡ ವಿಧಿಸಿದರು.

ಮದ್ರಾಸಿಗೆ ಮತ್ತೊಂದು "ಇನ್‍ಫ್ಲುಯೆಂಜಾ" ಹಡಗು

ಸಿಂಗಪುರದಿಂದ ೧,೩೦೦ ಮಂದಿ ಪ್ರಯಾಣಿಕರನ್ನು ಕರೆದುಕೊಂಡು ಮದ್ರಾಸಿಗೆ ಇನ್ನೊಂದು ಹಡಗು ಈ ದಿನ ಬರಲಿದೆ. ಅದರಲ್ಲಿ ಇನ್‍ಫ್ಲುಯೆಂಜಾ ಇರುವವರೂ ಇದ್ದಾರೆ. ಮತ್ತೊಂದು ಹಡಗು "ರಾಜೂಲಾವನ್ನು" ಮದ್ರಾಸು ರೇವಿನಲ್ಲಿ ಪ್ರತ್ಯೇಕಿಸಿಡಲಾಗಿದೆ. ಮದ್ರಾಸು ನಗರದ ಅನೇಕ ಮನೆಗಳಲ್ಲಿ ಈ ವ್ಯಾಧಿಯು ಹರಡಿದೆ. ೪೦ ಮಂದಿ ಹೋಟೇಲು ಕೆಲಸಗಾರರನ್ನು ಅಂಟುಜಾಡ್ಯದ ಆಸ್ಪತ್ರೆಗೆ ಸೇರಿಸಲಾಗಿದೆ. ವೆಲ್ಲೂರಿನಲ್ಲೂ ಸಹ ವ್ಯಾಧಿಯು ಹರಡಿರುವುದಾಗಿ ಹೇಳಲಾಗಿದೆ.

ತೆರಿಗೆ ಪರ ಚಳುವಳಿಗೆ ಕರೆ

ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡಾರರು ಮಾತನಾಡಿ, ವಿರೋಧ ಪಂಗಡದವರು ನಡೆಸುತ್ತಿರುವ ತೆರಿಗೆ ವಿರೋಧ ಚಳುವಳಿಯನ್ನು ದಮನಿಸಲು ತೆರಿಗೆ ಪರವಾಗಿ ಚಳುವಳಿ ನಡೆಸಬೇಕಾಗುವುದೆಂದು ಹೇಳಿರುವರು. ಕಾಂಗ್ರೆಸ್ಸಿನವರು ಈ ಕೆಲಸ ಮಾಡಬೇಕೆಂದು ಅವರು ಅಭಿಪ್ರಾಯಪಟ್ಟರು.

ತೆರಿಗೆ ವಿರುದ್ಧವಾಗಿ ವಾಣಿಜ್ಯ ಸಂಘದವರ ಪ್ರತಿಭಟನೆ

ಬೆಂಗಳೂರು ವಾಣಿಜ್ಯ ಸಂಘದ ಆಶ್ರಯದಲ್ಲಿ ನೆನ್ನೆ ವ್ಯಾಪಾರಿಗಳ ಸಭೆಯು ನಡೆದು ಹೊಸ ತೆರಿಗೆಗಳ ವಿಧಾಯಕವನ್ನು ಟೀಕಿಸಲಾಯಿತು. ಹಲವರು ಸತ್ಯಾಗ್ರಹ ಮತ್ತು ಹರತಾಳಗಳನ್ನು ನಡೆಸಬೇಕೆಂದು ಸೂಚಿಸಿದರು. ಒಬ್ಬರು ತೆರಿಗೆ ಪರವಾಗಿ ಮಾತನಾಡಿದರು. ಸರ್ಕಾರಕ್ಕೆ ವರ್ತಕರ ಅಭಿಪ್ರಾಯವನ್ನು ಸೂಚಿಸುವ ಬಗ್ಗೆ ನಿರ್ಣಯವನ್ನು ಮಾಡಲು ಸಮಿತಿಯ ರಚನೆಗೆ ಸಂಘದ ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು.

ರಾಜೇಂದ್ರ ಪ್ರಸಾದರಿಂದ ೧,೦೦೦ ರೂ. ಸಂಬಳದ ಖೋತಾ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ತಮಗೆ ಈಗ ದೊರೆಯುತ್ತಿರುವ ಸಂಬಳದಲ್ಲಿ ತಿಂಗಳಿಗೆ ೧,೦೦೦ ರೂ ಖೋತಾ ಮಾಡಿಕೊಂಡಿರುವ ನಿರ್ಧಾರವನ್ನು ಸರ್ಕಾರಕ್ಕೆ ತಿಳಿಯಪಡಿಸಿರುತ್ತಾರೆ ರಾಷ್ಟ್ರಾದ್ಯಂತ ಮಿತವ್ಯಯ ಮತ್ತು ವೆಚ್ಚದ ಸಂಯಮ ಮಾಡುವ ಸಂಬಂಧದಲ್ಲಿ ರಾಷ್ಟ್ರಾಧ್ಯಕ್ಷರು ಈ ಕ್ರಮ ಕೈಗೊಂಡಿರುವರು

ತೆರಿಗೆ ವಿರುದ್ಧದ ಪ್ರತಿಭಟನೆಗಾಗಿ ಪ್ರತಿಮೆಗಳ ದಹನ

ಉತ್ತರ ಪ್ರದೇಶದ ಗೋರಖಪುರದಲ್ಲಿ ಮೊನ್ನೆ ಹೊಸ ತೆರಿಗೆಗಳನ್ನು ವಿರೋಧಿಸಲು ಅಲ್ಲಿನ ಜನಸಂಘ ಮತ್ತು ಕಿಸಾನ್ ಮಜದೂರು ಪ್ರಜಾಪಕ್ಷದವರು ತೆರಿಗೆಗಳನ್ನು ಸೂಚಿಸುವ ಪ್ರತಿಮೆಯನ್ನು ಮಾಡಿ ಬಹಿರಂಗವಾಗಿ ಸುಟ್ಟರು ಹಲವರು ವರ್ತಕರು ಅಂಗಡಿಗಳನ್ನು ೩ ಗಂಟೆ ಕಾಲ ಮುಚ್ಚಿ ತೆರಿಗೆಗಳ ಬಗ್ಗೆ ವಿರೋಧವನ್ನು ಸೂಚಿಸಿದರು

ತುರ್ಕಿಯಲ್ಲಿ ಭೂಕಂಪ

ತುರ್ಕಿಯ ಹಲವು ಭಾಗಗಳಲ್ಲಿ ಮೊನ್ನೆ ಬಲವಾದ ಭೂಕಂಪವಾಯಿತು. ಅದರಿಂದ ೫೦ ಜನರು ಮೃತಪಟ್ಟು, ಅನೇಕ ಭವನಗಳು ನಷ್ಟವಾದುವು ರಾಜಧಾನಿ ಅಂಕಾರಾಕ್ಕೆ ೧೩೦ ಮೈಲಿ ದೂರದ ಬೋಲು ಎಂಬಲ್ಲಿ ಭೂಕಂಪದ ಜೋರು ವಿಪರೀತವಾಗಿ ನೀರಿನ ಯಂತ್ರವು ಹಾಳಾಯಿತು

ಆಗಾಖಾನರ ಮತ್ತೊಬ್ಬ ಮಗನ ವಿವಾಹ

ಆಗಾಖಾನರ ಕಿರಿಯ ಮಗ ರಾಜಕುಮಾರ ಸದ್ರುದ್ದೀನರವರು ಜರ್ಮನಿಯ ಶ್ರೀಮಂತ ಬಾರನ್ ವಾನ್ ಥೈಸೆನ್ ಎಂಬುವರ ಮಾಜಿ ಪತ್ನಿ ನೀನಾ ಡೈಯರ್ ಎಂಬ ೨೬ ವರ್ಷದ ತರುಣಿಯನ್ನು ವಿವಾಹವಾಗಲಿರುವರು ರಾಜಕುಮಾರನಿಗೆ ಈಗ ೨೪ ವರ್ಷ ವಯಸ್ಸು. ವಿವಾಹವು ಜುಲೈ ತಿಂಗಳಲ್ಲಿ ಜಿನೀವಾದಲ್ಲಿ ನೆರವೇರುವುದು

ಶ್ರೀ ವರಲಕ್ಷ್ಮಿ ಸಂಗೀತ ಮಂದಿರಕ್ಕೆ ಜರ್ಮನಿಯ ವೈಸ್ ಕಾನ್ಸಲ್‌ರವರ ಭೇಟಿ

ಭಾರತದಲ್ಲಿರುವ ಜರ್ಮನಿಯ ಉಪ ರಾಯಭಾರಿ ಶ್ರೀ ವರ್ನರ್ ಅಂಗರ್‌ರವರು ಕಳೆದ ಶನಿವಾರ ಶ್ರೀ ವರಲಕ್ಷ್ಮಿ ಅಕೇಡಮೀಸ್ ಆಫ್ ಫೈನ್‌ಆರ್ಟ್ಸ್ ಕೇಂದ್ರ ಸಂಸ್ಥೆಗೆ ಭೇಟಿಯಿತ್ತು, ಮಂದಿರದ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು ಮಂದಿರದ ಸಂಸ್ಥಾಪಕರಾದ ಮೈಸೂರು ಸಹೋದರರು, ಅವರ ಅಪೇಕ್ಷೆಯ ಮೇರೆಗೆ ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತಗಳಿಗೆ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಉದಹರಿಸಿದರು ಭಾರತೀಯ ಸಂಗೀತದ ದಾಕ್ಷಿಣಾತ್ಯ ಮತ್ತು ಔತ್ತರೇಯ ಪದ್ಧತಿಗಳನ್ನು ಉದಹರಿಸಿದರು ಶ್ರೀ ಅಂಗರ್‌ರವರು ತಮಗಿರುವ ಪಾಶ್ಚಾತ್ಯ ಸಂಗೀತದ ಪ್ರಾವೀಣ್ಯತೆಯನ್ನೂ, ಆಳವಾದ ಶಾಸ್ತ್ರ ಜ್ಞಾನವನ್ನೂ ಹೊರಗೆಡಹಿದರು. ವಿದ್ವಾನ್ ವಿಶ್ವೇಶ್ವರನ್‌ರವರಿಂದ ವೀಣಾ ವಾದನ ಮತ್ತು ಹಾಡುಗಾರಿಕೆ ಕಛೇರಿ ಆಯಿತು

ಹರಿಕಥೆ

ನಗರದ ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ, ಅಮಾವಾಸ್ಯೆ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಶ್ರೀ ಪಿ ಆರ್ ಸುಬ್ಬರಾಮಯ್ಯನವರಿಂದ ಭಕ್ತ ಪುಂಡಲೀಕ ಎಂಬ ಹರಿಕಥೆಯು ನಡೆಯುತ್ತದೆ

ಹಿಂದಿ ಪರೀಕ್ಷೆಗಳಿಗೆ ಆವೇದನ ಪತ್ರ

ಬರುವ ಆಗಸ್ಟ್ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರವೇಶಿಕಾ, ವಿಶಾರದ್ ಮತ್ತು ಪ್ರವೀಣ್ ಪರೀಕ್ಷೆಗಳಿಗೆ ಆವೇದನ ಪತ್ರಗಳನ್ನು ಸ್ವೀಕರಿಸಲು ೫-೬-೫೭ ನೇ ಬುಧವಾರ ಕೊನೆಯ ದಿನ. ವಿಲಂಬಶುಲ್ಕದೊಡನೆ ತಾರೀಖು ೧೯-೬-೫೭ ನೇ ಬುಧವಾರದವರೆಗೆ ಸ್ವೀಕರಿಸಲಾಗುವುದು. ಆವೇದನ ಪತ್ರಗಳನ್ನು ಹೊಸ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾರ್ಯಾಲಯದಲ್ಲಿ ಪಡೆಯಬಹುದು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಗ್ರಾಮದಾನ ಪಾದಯಾತ್ರೆ

ಕರ್ನಾಟಕದ ೩೦ ಮಂದಿ ಸಾಮೂಹಿಕ ಗ್ರಾಮದಾನ ಪಾದ ಯಾತ್ರಿಕರು ಕಳೆದ ೨೦ನೇ ತಾರೀಕು ಗುಂಡ್ಲುಪೇಟೆಗೆ ಆಗಮಿಸಿ ಅಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಭೂದಾನ ಶಿಬಿರವನ್ನು ತೆರೆದರು ಸಂಜೆ ಬಹಿರಂಗ ಸಭೆಯಲ್ಲಿ ಗ್ರಾಮದಾನದ ಬಗ್ಗೆ ಭಾಷಣಗಳಾದುವು ಸಾಮೂಹಿಕ ಪ್ರಾರ್ಥನೆ, ಭೂದಾನ ಸೇವಕ ಶ್ರೀ ಎಸ್ ವಿ ಮಂಜುನಾಥರವರಿಂದ ಸ್ವಾಗತವಾದನಂತರ, ಕರ್ನಾಟಕದ ಶ್ರೀ ಸಂಗೂರ ಕರಿಯಪ್ಪನವರೂ, ಹೊದಿಕೆ ಮಾಸ್ತರ್‌ರವರೂ ಮತ್ತು ಶ್ರೀ ಅನಂತ ರಂಗಾಚಾರ್ಯರೂ ಭಾಷಣ ಮಾಡಿ ಗ್ರಾಮದಾನದ ಉದ್ದೇಶವನ್ನು ವಿವರಿಸಿದರು

ತಾಲ್ಲೂಕಿನ ಐವತ್ತು ಹಳ್ಳಿಗಳಲ್ಲಿ ಗ್ರಾಮದಾನಕ್ಕಾಗಿ ಹತ್ತು ಮಂದಿ ಭೂದಾನ ಕಾರ್ಯಕರ್ತರು ಕಳೆದ ೨೧ನೇ ತಾರೀಕು ಹೊರಟು ೧ನೇ ತಾರೀಕಿನವರೆಗೆ ಸಂಚರಿಸುವರು

ಬಿಸಿಲು ತಾಪದಿಂದ ೧೧ ಮಂದಿಯ ಮರಣ

ಬಿಸಿಲಿನ ತಾಪದಿಂದ ರಾಜಾಸ್ಥಾನದ ಜೈಸಾಲ್ಮೇರಿನಲ್ಲಿ ಏಳು ಜನರೂ, ಜೋಧಪುರ ಇಬ್ಬರೂ ಮೃತಪಟ್ಟಿರುತ್ತಾರೆ. ಜೋಧಪುರ ಜಿಲ್ಲೆಯಲ್ಲಿ ನೀರಿನ ಅಭಾವದಿಂದ ಭಾವಿಗಳ ಬಳಿ ಜನರಿಗೆ ಹೊಡೆದಾಟವಾಗುತ್ತಿದೆಯೆಂದು ಹೇಳಲಾಗಿದೆ ಅದೇ ಅಲ್ಲದೆ ಜೋಧಪುರದಲ್ಲಿ ಬಿರುಗಾಳಿ ಬೀಸಿ ಒಬ್ಬ ವಯಸ್ಸಾದ ಮಹಿಳೆಯು ಮಹಡಿಯಿಂದ ಕೆಳಗೆ ಬಿದ್ದು ತಕ್ಷಣವೇ ಮೃತಪಟ್ಟಳೆಂದು ಹೇಳಲಾಗಿದೆ

ಕಾಸ್ಮಾಪಾಲಿಟನ್ ಕ್ಲಬ್ ಟೆನಿಸ್ ಪಂದ್ಯಗಳು

ಕಾಸ್ಮಾಪಾಲಿಟನ್ ಕ್ಲಬ್ಬಿನ ಫಾರ್ ಮೊಫಲಿಸ್ಟ್ ಪಂದ್ಯಕ್ಕೆ ಪ್ರವೇಶವನ್ನು ನಾಳೆ ಸಂಜೆ ೫ ಗಂಟೆವರೆಗೆ ಸ್ವೀಕರಿಸಲಾಗುವುದು ೭ ಗಂಟೆಗೆ ಡ್ರಾ ತೆಗೆಯಲಾಗುವುದು ಓಪನ್ ಈವೆಂಟ್ಸ್ ಪಂದ್ಯಗಳ ಪ್ರವೇಶವು ಜೂನ್ ತಿಂಗಳು ೧ ನೇ ತಾರೀಕು ಸಂಜೆ ೫ ಗಂಟೆಗೆ ಮುಕ್ತಾಯವಾಗುವುದು ೭ ಗಂಟೆಗೆ ಡ್ರಾ ತೆಗೆಯಲಾಗುವುದು ಮತ್ತು ಪಂದ್ಯವು ೩ ನೇ ತಾರೀಕಿನಿಂದ ಆರಂಭಿಸಲಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರ ನಾಮ ೭ ೧೫ ಟಿ ಪಾಪಯ್ಯ-ನಾದಸ್ವರ ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨ ಮತ್ತು ೧-೫೦ ಕೆ ಎಸ್ ವಿಶಾಲಾಕ್ಷಿ ಮತ್ತು ಕೆ ಎಸ್ ವಿಜಯಲಕ್ಷ್ಮಿ-ಸಂಗೀತ ೧೨-೩೦ ವಿ ಮುನಿಸ್ವಾಮಯ್ಯ-ಪಿಟೀಲು. ೧ ಗಾನ ಮಂಜರಿ ೧-೩೦ ವಾದ್ಯ ಸಂಗೀತ ಸಂಜೆ ೬-೧೦ ದೇವರ ನಾಮ ೬-೩೦ ವಚನ ಗಾಥ ೮ ಟಿ ಪಾಪಯ್ಯ-ನಾದಸ್ವರ ೮ ೩೦ ರಾಷ್ಟ್ರೀಯ ಕಾರ್ಯಕ್ರಮ ದೆಹಲಿ ರಿಲೆ ೮ ೫೦ ವಾದ್ಯ ವೃಂದ ೯-೧೫ ಸಂಗೀತ ಸಭೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು ಕೊಯಮುತ್ತೂರು	೪೧ ೫೯	೪೪ ೭೯
ದಪ್ಪ ಸೂಡಿ	೪೦ ೫೭	೪೨ ೫೦
ಅಕ್ಕಿ	೪೦ ೫೦	೪೧ ೬೯
ಗೆಂಬಾರಾ	೪೦ ೫೦	೪೦ ೬೯
ಕಾರ್ ಸಣ್ಣ	೪೦ ೦೦	
ರಾಗಿ	೪೨ ೬೯	೪೬ ೦೦
ಜೋಳ	೪೯ ೬೬	೯೧ ೫೦
ಕಡಲೆಕಾಯಿ	೧೯ ೫೯	೫೯ ೫೦
ಹುಚ್ಚೆಳ್ಳು	೯೫ ೦೦	೯೯ ೬೧
ಹರಳುಬೀಜ	೯೧ ೪೬	೯೨ ೦೦
ಹೊಂಗೆಬೀಜ	೨೨ ೫೯	೨೬ ೦೦
ಎಳ್ಳು	೯೦ ೦೦	೯೧ ೬೯
ತೊಗರಿ	೪೦ ೧೧	೪೨ ೪೬
ಕಡಲೆ	೫೯ ೧೨	೯೬ ೯೬
ಹುರುಳಿ	೪೯ ೫೦	೫೬ ೦೦
ಅವರೆ	೪೬ ೫೦	೫೬ ೫೦
ಧನಿಯ	೨೧ ೯೬	೨೫ ೯೬
ಉದ್ದು	೬೨ ೨೫	೬೯ ೯೬
ಸೂರ್ಯಕಾಂತಿ	೫ ೨೫	೬ ೦೦
ಹುಣಸೇಹಣ್ಣು	೨ ೪೧	೪ ೫೦
ಹಿಂಗೆಕಾಯಿ	೬ ೫೬	೬ ೬೯
ಮೆಣಸಿನಕಾಯಿ	೧೧ ೬೨	೨೦ ೫೦
ತೆಂಗಿನಕಾಯಿ	೧೯೦ ೦೦	[illegible] ೦೦

೧,೮೦,೦೦೦ ಅಂಬರ್ ಚರಖಾ ತಯಾರಿಕೆಗೆ ನಿರ್ಧಾರ

೫೭-೫೮ರಲ್ಲಿ ೧,೮೦,೦೦೦ ಅಂಬರ್ ಚರಖಾಗಳ ತಯಾರಿಕೆಯಾಗಬೇಕೆಂದು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಆ ಪೈಕಿ ೧,೫೦,೦೦೦ ಚರಖಗಳನ್ನು ಮಾರಾಟದ ನೂಲನ್ನು ತೆಗೆಯಲು ಶಿಕ್ಷಣ ಪಡೆದವರಿಗೆ ಕೊಡಲಾಗುವುದು ತರಬೇತು ಕೊಡಲು ೩೦,೦೦೦ ಚರಖಗಳನ್ನು ಉಪಯೋಗಿಸಲಾಗುವುದು ೫೬-೫೭ರಿಂದ ೭೫,೦೦೦ ಚರಖಗಳನ್ನು ಉಪಯೋಗಿಸಲಾಗುತ್ತಿದೆ ಈ ವರ್ಷದಲ್ಲಿ ೭॥ ಕೋಟಿ ಗಜ ಬಟ್ಟೆಯನ್ನು ನೇಯಲು ಉದ್ದೇಶಿಸಲಾಗಿದೆ.

ಗುಂಡ್ಲುಪೇಟೆ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷತೆ

ಗುಂಡ್ಲುಪೇಟೆ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾಗಿರುವ ಶ್ರೀ ಜಿ ವಿ ಕೃಷ್ಣಮೂರ್ತಿಯವರು ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧವಾಗಿ ಕೆಲಸ ಮಾಡಿದರೆಂದು ದೂರು ಬಂದಿರುವ ಸಂದರ್ಭದಲ್ಲಿ ಉಪಾಧ್ಯಕ್ಷ ಶ್ರೀ ಜಿ ಎಂ. ಕಾಳಯ್ಯನವರನ್ನು ತಾತ್ಕಾಲಿಕ ಅಧ್ಯಕ್ಷರಾಗಿ ಸಮಿತಿಯು ಸರ್ವಾನುಮತದಿಂದ ಆರಿಸಿರುವುದಾಗಿ ಕಾರ್ಯದರ್ಶಿ ಶ್ರೀ ಜಿ. ಬಿ ಚಿಕ್ಕಣ್ಣನವರು ತಿಳಿಸಿರುತ್ತಾರೆ

ಗೋವಾದಲ್ಲಿ ಬಂದೂಕದ ಕಾಳಗ

ಗೋವಾದಲ್ಲಿ ಪೋರ್ಚುಗೀಸ್ ಸೈನಿಕರಿಗೂ, ಅಂತರಂಗ ಚಳುವಳಿಗಾರರಿಗೂ ಮಹಿಲುಂಗ ಎಂಬಲ್ಲಿ ಕಳೆದ ಗುರುವಾರ ಗುಂಡಿನ ಕಾಳಗವಾಯಿತೆಂದು ವರದಿಯಾಗಿದೆ

ಹಳದಿ ವರ್ಣದ ಮಳೆ

ತಂಜಾವೂರು ಬಳಿ ಕರುಪಟ್ಟಿನಗುಡಿ ಎಂಬಲ್ಲಿ ಕಳೆದ ೨೨ನೇ ತಾರೀಕು ಹಳದಿ ಬಣ್ಣದ ಮಳೆಯು ಬಿದ್ದಿತು ಅದು ಉರಿಯುವ ಗಂಧಕದ ವಾಸನೆಯಿಂದ ಕೂಡಿತ್ತೆಂದು ಹೇಳಲಾಗಿದೆ ಇಂತಹ ಮಳೆ ಬಿದ್ದ ಕಾರಣವು ವ್ಯಕ್ತವಾಗಿಲ್ಲ

ನಿರೀಕ್ಷಿಸಿ — ನಿರೀಕ್ಷಿಸಿ
ಶೀಘ್ರದಲ್ಲೇ ತೆರೆಯಲಾಗುತ್ತದೆ
ಶ್ರೀ ಶಾರದಾ ಭಂಡಾರ
ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು
ವಾಣಿವಿಲಾಸ ಮಾರ್ಕೆಟ್ ಮೈಸೂರು

ಕೂಡಲೇ ಮಾರಾಟಕ್ಕಿದೆ
ಮೈಸೂರಿನ ಊಟಿ ಎನಿಸಿದ 'ಯಾದವಗಿರಿ' ಯಲ್ಲಿ 48'x130' ಬಂಗ್ಲೆ ಸೈಟು
ರೂ 1,750
ವಿದ್ಯಾರಣ್ಯಪುರದ 9ನೇ ಕ್ರಾಸಿನಲ್ಲಿ 45'x60' ಸೈಟು ರೂ 1,300
ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಕೂಡಲೇ ಮಾರಾಟಕ್ಕಿದೆ
ಫಿಲಿಪ್ಸ್ (ಇಂಗ್ಲಿಷ್) ರೇಡಿಯೊ
ಗ್ಯಾರಂಟಿ ಅವಧಿ ಕ್ಲಿಯರ್. ಎ ಸಿ. (ಇಂಗ್ಲಿಷ್) ಟೇಬಲ್ ಫ್ಯಾನ್, ರೆಮಿಂಗ್ಟನ್ ಟೈಪ್‌ರೈಟರ್, ಫಿಲಿಪ್ಸ್ ಸ್ಟ್ರಾ ಬ್ಯಾಟರಿ ಸೆಟ್ಟು, ಸ್ಟಾಂಡಿಗೆ ಹೋಗಿರುವ [illegible] ಮತ್ತು ಉತ್ತಮವಾದ ಆರಿಸಿ ಮನೆ ಸಾಮಾನುಗಳು
ಆಬಿಡ್ಸ್,
ಫೋನ್ 473 · ಸಯ್ಯಾಜಿ ರೋಡ್ · ಮೈಸೂರು

Edited, Printed and Published by
A. R. Nagarajan at Sadhvi Press,
D.Subbiah Road, Mysore

ಸ್ವಾಗತ ಸಮಾರಂಭಗಳು

ಅರಮನೆ ಆಸ್ಥಾನ ವಿದ್ವಾಂಸರ ಮೃ
ರ್ ಶ್ರೀ ಎ. ಎಸ್. ಅನಂತಸ್ವಾಮಿ
ಗಳ ಸಹೋದರರಾದ ಶ್ರೀ ಎ. ಎಸ್.
ರಿಸ್ವಾಮಿಯವರು ತಮ್ಮ ಕುಮಾರ ಚಿ॥
ವಾಸಕ್ಕಾಗಿ ಕಳೆದ ಶುಕ್ರವಾರ ಏರ್ಪಡಿಸಿದ
ಮಹೋತ್ಸವದ ಅಂಗವಾಗಿ ನೆನ್ನೆ ವಿ॥ ಎ.
ದಸ್ವಾಮಿಯವರ ಸಂಗೀತವು ವಿ॥ ಕಾಟ್ಯ
ರು ಕೃಷ್ಣಮೂರ್ತಿಯವರ ಪಿಟೀಲು ಮತ್ತು
ಅನಂತರಾಯರ ಮೃದಂಗದೊಡನೆ ಜರು
ಶ್ರೀ ಪಿ. ಕೆ. ಚಂದ್ರಶೇಖರಸಿಂಗ್‌ರ
ಮಾರಿ ಮತ್ತು ಕುಮಾರರ ವಿವಾಹ ಸಂ
ಲ್ಲಿ ಮೊನ್ನೆ ಸಂಜೆ ಸ್ವಾಗತ ಸಮಾರಂಭವು
ಹಾಗು ಜಿಲ್ಲಾಧಿಕಾರಿಗಳ ಕಛೇರಿ ಗುಮಾ
ರಾದ ಶ್ರೀ ಪಿ. ಎಸ್. ನರಸಿಂಹಮೂರ್ತಿ
ಕುಮಾರಿ [illegible] ಅವರ
ನಡೆಯಿತು.

Sarada Tutorial Instit
Sarada Vilas High School
Buildings, Mysore

Coaching classes for benefit of students appea for the ensuing S. S L supplementary examina have commenced work T classes work all the seven d in the week.

K V. NARAYA
Organiser

ಶ್ರೀ ಜಗದಂಬಾ ಶಿಶು ವಿಹಾ
ವಿಶಾಲ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ
ವಿಹಾರದ ತರಗತಿಗಳು ಇದೇ ೧೫ನೇ ತಾ
ಯಿಂದ ಆರಂಭವಾಗಿದೆ ಮಾತಾಪಿತೃಗಳು
ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋ
ಹೊಂದುವುದರ ಮೂಲಕ ಪ್ರೋತ್ಸಾಹ ನೀ
ಬೇಕಾಗಿ ಕೋರಲಾಗಿದೆ

ನಗರಾಭಿವೃದ್ಧಿ ಸಮಿತಿ, ಮೈಸೂರು

ತಾರೀಖು 21-5-57

ಪ್ರಕಟಣೆ

ಇದರಿಂದ ಸಮಸ್ತ ಜನಗಳಿಗೂ ತಿಳಿ
ಸುವುದೇನೆಂದರೆ :-

ಮೈಸೂರು ಸಿಟಿ ಮಂಡಿ ಮೊಹಲ್ಲಾ
ಲಾಕ್‌ಗೇರಿಯಲ್ಲಿ [illegible]
ಮತ್ತು 103-A ಸೈಟುಗಳ ಮೇಲೆ ಕಟ್ಟಿ
ಎರಡು ಮಹಡಿಯ [illegible]
ಧಾಯಕವಾದ ಅರ್ಜಿ [illegible]
ಕು 18-6-57 [illegible]
[illegible] ಮೈಸೂರು [illegible] ಮನೆ
ಸೈಟುಗಳಲ್ಲಿರುವ [illegible]
1000 ರೂಪಾಯಿ, [illegible]
[illegible] ಅರ್ಜಿ ಹಾಕಿಕೊಳ್ಳಬಹುದು.
[illegible] 3320 ಮತ್ತು 3250.
[illegible] ಮನೆ [illegible]
ರು ತಮಗೆ ತಿಳವಳಿಕೆ ಕೊಟ್ಟ [illegible]
ದಿವಸಗಳಲ್ಲಿ [illegible]
ತಿ ಮನೆ ಸ್ವಾಧೀನ ಪಡೆಯಬಹುದು [illegible]
ಮುಂಗಡದ ಡಿಪಾಜಿಟ್ ಹಣವನ್ನು
ಗೋಲು ಹಾಕಿಕೊಳ್ಳಲಾಗುವುದು [illegible]
ಅರ್ಜಿ ಹಾಕುವವರು ಸಹ, [illegible]
ಯಲ್ಲಿ ಅರ್ಜಿ ಹಾಕಿಕೊಳ್ಳಬೇಕು.

(ರುಜು) ಎಸ್. [illegible]
ಅಧ್ಯಕ್ಷ

ಮರ್ಫಿ ರೇಡಿಯೊ ★ [illegible]
ಅತ್ಯಾಧುನಿಕ ಮಾದರಿಯಲ್ಲಿ ಬಂದಿವೆ. ಒಮ್ಮೆ ವೀಕ್ಷಿಸಿರಿ
ಆಬಿಡ್ಸ್,
ಫೋನ್ 473 : ಸಯ್ಯಾಜಿ ರೋಡ್ : ಮೈ

ಟೆಲಿಫೋನ್ ನಂ. 792

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಲ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈ ಸೂ ರು



[illegible] ಪತ್ರಿಕೆ 2 [illegible]

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕ್, ಪೀತಾಂಬರ
[illegible], [illegible], [illegible]
ಸೀರೆಗಳು [illegible]
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : ೦೫] SADHVI : WEDNESDAY 29—5—1957 ಮೈಸೂರು ಬುಧವಾರ ೨೯—೫—೧೯೫೭ । [ಸಂಚಿಕೆ : ೨೯೬

ಜಾರ್ಡಾನ್ ಪ್ರಭುತ್ವ ಉರುಳಿಸಲು ಸಿರಿಯಾ ಸೈನ್ಯದ ಸಂಚು

ಜಾರ್ಡಾನ್ ಪ್ರಭುತ್ವ ಉರುಳಿಸಲು ಸಿರಿಯಾ ಸೈನ್ಯದ ಸಂಚು

ಜಾರ್ಡಾನಿನ ಪ್ರಭುತ್ವವನ್ನು ಉರುಳಿಸಲು ಇತ್ತೀಚೆಗೆ ನಡೆದ ಒಳಸಂಚಿನಲ್ಲಿ ಸಿರಿಯಾ ಸೈನ್ಯಗಳು ಭಾಗವಹಿಸಿದ್ದುವೆಂದು ಜಾರ್ಡಾನು ಆಪಾದಿಸಿರುತ್ತದೆ ಸಿರಿಯಾ ರಾಜಧಾನಿ ಡಮಾಸ್ಕಸ್ಸಿನಲ್ಲಿರುವ ಸಿ ಐ ಡಿ ಇಲಾಖೆಯ ಆಫೀಸರ್ ಅಬ್ದುಲ್ ಹಮೀದ್ ಸಿರಾಜ್‌ರವರು ಈ ಕೆಲಸದಲ್ಲಿ ತೊಡಗಿದ್ದರೆಂದಾಗಿ ಜಾರ್ಡಾನ್ ರೇಡಿಯೋ ತಿಳಿಸಿದೆ ಸಿರಿಯಕ್ಕೆ ಜಾರ್ಡಾನಿನ ಒಳಸಂಚುಗಾರರು ಪರಾರಿಯಾಗಲು ಸಿರಿಯಾ ಅಧಿಕಾರಿಗಳು ಸಹಾಯ ಮಾಡಿದರೆಂದೂ ಸೂಚಿಸಲಾಗಿದೆ ಕಳೆದ ನವೆಂಬರಿನಿಂದ ಸಿರಿಯಾ ಸೈನ್ಯಗಳು ಜಾರ್ಡಾನಿನಲ್ಲಿದ್ದುವು.

ಕೇಂದ್ರ ಸರ್ಕಾರಕ್ಕೆ ೫ ಜನ ಪಾರ್ಲಿಮೆಂಟರಿ ಕಾರ್ಯದರ್ಶಿಗಳು

ಕೇಂದ್ರ ಸರ್ಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ಜಿ ರಾಜಗೋಪಾಲ (ವಾರ್ತೆ ಮತ್ತು ಪ್ರಸಾರ), ಸಾದತ್ ಅಲಿಖಾನ್ ಮತ್ತು ಜೋಗೇಂದ್ರನಾಥ ಹಜಾರಿಕ (ವಿದೇಶಾಂಗ ಇಲಾಖೆ) ಪೂರ್ಣೇಂದು ಶೇಖರ ನಾಸ್ಕರ್ (ಪುನರ್ವಸತಿ ಮತ್ತು ಅಲ್ಪ ಸಂಖ್ಯಾತರ ಖಾತೆ) ಮತ್ತು ಲಲಿತ ನಾರಾಯಣ ಮಿಶ್ರ (ಯೋಜನಾ ಖಾತೆ) ರವರನ್ನು ನೇಮಿಸಲಾಗಿದೆ

ದೊಡ್ಡಕೆರೆ ಏರಿ ಮೇಲಿದ್ದ ಅರಳಿ ಮರ ಬಿತ್ತು

ದೊಡ್ಡಕೆರೆ ಮೇಲೆ ಬಹು ದಿನಗಳಿಂದಲೂ ವಿಹಾರ ಮಾಡಿರುವ ಶ್ರೀ ಶ್ರೀ ಬ್ರಹ್ಮವಿದ್ಯಾನಂದ ಭಾರತೀ ಸ್ವಾಮಿಗಳವರ ಮಠದ ಮೇಲೆ ಬೆಳೆದಿದ್ದ ಪುರಾತನ ಕಾಲದ ಭಾರಿ ಅರಳಿ ಮರ ನೆನ್ನೆ ಮಧ್ಯಾಹ್ನ ಇದ್ದಕ್ಕಿದ್ದಂತೆಯೇ ಉರುಳಿತು ಅದು ಮಠದ ಮೇಲೆ ಬೀಳದೆ ಇದ್ದುದರಿಂದ ಸ್ವಾಮಿಗಳವರು ಪಾರಾದರು. ಪಕ್ಕದ ಈಶ್ವರನ ದೇವಾಲಯದ ಗೋಪುರ ಮತ್ತು ಇತರ ಕಟ್ಟಡಕ್ಕೆ ಜಖಂ ಆಗಿದೆ ಪೌರಸಭಾ ಕಮೀಷನರವರು ಮತ್ತು ಇತರ ಅಧಿಕಾರಿಗಳು ಅಲ್ಲಿಗೆ ಭೇಟಿಯಿತ್ತು ಸ್ವಾಮಿಗಳು ಪಾರಾದ ಬಗ್ಗೆ ಅತ್ಯಂತ ಹರ್ಷವನ್ನು ವ್ಯಕ್ತಪಡಿಸಿದರು. ಸಹಸ್ರಾರು ಜನರು ಅದನ್ನು ನೋಡಲು ಹೋಗಿಬರುತ್ತಿದ್ದರು

ನಗರದ ಹೊಸ ನೀರು ಸರಬರಾಜು ಅಧಿಕಾರಿಗಳು

ಚಿತ್ರದುರ್ಗ ಸ್ಯಾನಿಟರಿ ಸಬ್ ಡಿವಿಜನ್ನಿನ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಆರ್ ಎಸ್. ವೆಂಕಟೇಶ್‌ರವರನ್ನು ನಗರದ ವಾಣೀವಿಲಾಸ ವಾಟರ್ ವರ್ಕ್ಸ್ ಸೂಪರಿಂಟೆಂಡೆಂಟರಾಗಿ ಶ್ರೀ ಎ. ಎಸ್ ಶಿವಣ್ಣನವರ ಸ್ಥಾನದಲ್ಲಿ ನೇಮಿಸಲಾಗಿದೆ

ಮಿಲಿಟರಿ ಲಾರಿ ಡಿಕ್ಕಿಯಿಂದ ಸೈಕಲ್ ಸವಾರರ ಮರಣ

ಬೆಂಗಳೂರಿನಲ್ಲಿ ಕಳೆದ ಶುಕ್ರವಾರ ಮಿಲಿಟರಿ ಲಾರಿಯೊಂದಕ್ಕೂ, ಸೈಕಲ್ಲಿಗೂ ಡಿಕ್ಕಿಯಾಗಿ ಎಂ ಡಿ ರೊಜೇರಿಯೊ ಎಂಬ ಸೈಕಲ್ ಸವಾರ ಗಾಯಗೊಂಡು ಆಸ್ಪತ್ರೆಯಲ್ಲಿ ೨೦ ದಿ [illegible] ಮೃತಪಟ್ಟರು

ಆಹಾರ ಧಾನ್ಯ ಬೆಲೆ ಏರದಂತೆ ಸರ್ಕಾರದ ತೀವ್ರ ಕ್ರಮ

ಸರ್ಕಾರದಿಂದ ದಾಸ್ತಾನಿನ ವಶ

ಆಹಾರ ಧಾನ್ಯದ ಬೆಲೆಯು ಇನ್ನೂ ಹೆಚ್ಚದಿರುವಂತೆ ಮಾಡಲು ಸರ್ಕಾರದವರು ಅವಶ್ಯಕ ಸರಕುಗಳ ಶಾಸನವನ್ನು ತಿದ್ದುಪಡಿ ಮಾಡಿ, ಸೂಕ್ತ ತೋರಿದರೆ ಆಹಾರ ಧಾನ್ಯವನ್ನು ಗೊತ್ತಾದ ಅವಧಿಯ ಸರಾಸರಿ ಬೆಲೆ ಕೊಟ್ಟು ವಶಪಡಿಸಿಕೊಳ್ಳಲು ಆಲೋಚಿಸಿರುವುದಾಗಿ ವರದಿಯಾಗಿದೆ ಈಗಿರುವ ಶಾಸನದ ಪ್ರಕಾರ ಪ್ರಸಕ್ತ ಧಾರಣೆಯಂತೆ ಸರ್ಕಾರದವರು ಆಹಾರ ಧಾನ್ಯವನ್ನು ಕೊಂಡುಕೊಳ್ಳಬೇಕಾಗಿದೆ ದಾಸ್ತಾನನ್ನು ಈಚೆಗೆ ತೆಗೆದು ಮಾರಾಟಕ್ಕೆ ಕೊಡಲೂ ಸಹ ಹೊಸ ಶಾಸನವು ಸಹಕಾರಿಯಾಗಿದೆಯೆಂದು ಹೇಳಲಾಗಿದೆ

ಮೊದಲು ಅಕ್ಕಿಗೆ ಈ ಶಾಸನವು ಅನ್ವಯವಾಗಲಿದೆ ಬೆಳೆಗಾರರಿಂದ ವ್ಯಾಪಾರಿಗಳಿಗೆ ವಿಶೇಷವಾಗಿ ಈ ಧಾನ್ಯವು ಸೇರಿಹೋಗಿದೆಯೆಂದು ಸರ್ಕಾರದ ಅಭಿಪ್ರಾಯವಾಗಿದೆ ಬ್ಯಾಂಕುಗಳಲ್ಲಿ ಧಾನ್ಯದ ಮೇಲೆ ದೊರೆಯುವ ಸಾಲದ ಷರತ್ತುಗಳನ್ನು ಇನ್ನೂ ಕಠಿಣಗೊಳಿಸಲೂ ಆಲೋಚಿಸಲಾಗಿದೆ.

ಮಂತ್ರಿಗಳಿಂದ ಸಂಬಳದ ಖೋತಾ

ರಾಷ್ಟ್ರಾಧ್ಯಕ್ಷರು ತಮ್ಮ ಸಂಬಳದಲ್ಲಿ ಇನ್ನೂ ೧,೦೦೦ ರೂ. ಖೋತಾ ಮಾಡಿಕೊಂಡಿರುವುದನ್ನು ಅನುಸರಿಸಿ, ಕೇಂದ್ರ ಮಂತ್ರಿಗಳು ತಮ್ಮ ವೇತನಗಳನ್ನು ಖೋತಾ ಮಾಡಿಕೊಳ್ಳಬಹುದೆಂದು ಹೇಳಲಾಗಿದೆ. ಈ ಬಗ್ಗೆ ನೆಹರೂರವರು ಸಹೋದ್ಯೋಗಿಗಳೊಡನೆ ಚರ್ಚಿಸುವರು ರಾಷ್ಟ್ರಾಧ್ಯಕ್ಷರ ಕ್ರಮದಿಂದ ಅವರ ಸಂಬಳಕ್ಕಿಂತಲೂ ಇನ್ನುಮುಂದೆ ಗವರ್ನರುಗಳಿಗೆ ಹೆಚ್ಚು ಸಂಬಳ ಬರುವ ಸ್ಥಿತಿಯುಂಟಾಗಿ ಈ ವಿಚಾರದ ಬಗ್ಗೆಯೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪರಿಶೀಲನೆ ನಡೆಸುತ್ತಿದೆ

ನದಿಯಲ್ಲಿ ಗಾಡಿ ಮತ್ತು ೮ ಜನ ಕೊಚ್ಚಿಹೋದ ಪ್ರಸಂಗ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಬಳಿ ಸಣ್ಣ ನದಿಯೊಂದನ್ನು ಕಳೆದ ಶನಿವಾರ ಸಂಜೆ ೮ ಜನರು ಎತ್ತಿನ ಗಾಡಿಯಲ್ಲಿ ಕುಳಿತು ದಾಟುತ್ತಿದ್ದಾಗ ಕೊಚ್ಚಿಹೋದರೆಂದೂ,೬ ಶವಗಳು ದೊರೆತಿವೆಯೆಂದೂ ವರದಿಯಾಗಿದೆ

ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಯಾತ್ರೆ

ನಂಜನಗೂಡಿನ ವಿದ್ಯಾಪೀಠದ ಭೂದಾನ ಶಿಬಿರವನ್ನು ಬರುವ ಶನಿವಾರ ತೆರೆಯಲಾಗುವುದು ಅಂದಿನಿಂದ ೧೫ನೇ ತಾರೀಖಿನವರೆಗೆ ತಾಲ್ಲೂಕಿನಲ್ಲಿ ಗ್ರಾಮದಾನ ಪಾದಯಾತ್ರೆಯು ಏರ್ಪಾಡಾಗಿದೆ ಶಿಬಿರ ಮತ್ತು ಪಾದಯಾತ್ರೆಯಲ್ಲಿ ಹೆಚ್ಚಾಗಿ ಆಸಕ್ತಿಯುಳ್ಳವರು ಸೇರುವಂತೆ ಪ್ರಾರ್ಥಿಸಲಾಗಿದೆ ಶ್ರೀ ಎಸ್ ವಿ ಮಂಜುನಾಥ್ C/o ಶ್ರೀ ಎಸ್ ನಾರಾಯಣರಾವ್, ಅಡ್ವೊಕೇಟ್, ನಂಜನಗೂಡು ಈ ವಿಳಾಸಕ್ಕೆ ತಿಳಿಸುವಂತೆ ಕೋರಲಾಗಿದೆ

ಸ್ಕೌಟು ಮತ್ತು ಎನ್. ಸಿ. ಸಿ. ದಳಕ್ಕೆ ಸಂಚಾರ ಹತೋಟಿ ಕೆಲಸ

ನೀಲಗಿರಿಯಲ್ಲಿ ಸೇರಿದ್ದ ಪೊಲೀಸು ಅಧಿಕಾರಿಗಳ ಸಮ್ಮೇಳನವು ಸಾರ್ವಜನಿಕರಲ್ಲಿ ರಸ್ತೆ ಸಂಚಾರದ ಬಗ್ಗೆ ಉತ್ತಮ ತಿಳುವಳಿಕೆಯನ್ನುಂಟು ಮಾಡಲು ಟ್ರಾಫಿಕ್ ಹತೋಟಿ ಕೆಲಸವನ್ನು ಸ್ಕೌಟು ಮತ್ತು ಎನ್ ಸಿ ಸಿ ದಳದವರಿಗೆ ವಹಿಸುವಂತೆ ಸೂಚಿಸಿರುತ್ತದೆ. ಗೆಜೆಟೆಡ್ ಅಧಿಕಾರಿಗಳು ಟ್ರಾಫಿಕ್ ನಿಬಂಧನೆಗಳನ್ನು ಪಾಲಿಸುತ್ತಿರುವ ವಿಚಾರವನ್ನು ತಿಂಗಳಿಗೊಮ್ಮೆಯಾದರೂ ಪರಿಶೀಲಿಸುವಂತೆಯೂ ಸಮ್ಮೇಳನವು ಸಲಹೆ ಮಾಡಿರುತ್ತದೆ ಅಪರಾಧಗಳನ್ನು ಪತ್ತೆ ಮಾಡುವುದರಲ್ಲಿ ಕೆಳ ಅಧಿಕಾರಿಗಳು ವಿಫಲರಾದರೆ ಒಂದು ತಿಂಗಳನಂತರ ಅಂತಹ ವಿದ್ಯಮಾನಗಳನ್ನು ಹಿರಿಯ ಅಧಿಕಾರಿಗಳು ವಹಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

ಒರಿಸ್ಸಾ ಗವರ್ನರರ ಭಾಷಣಕ್ಕೆ ವಿರೋಧ ಪಕ್ಷದವರ ಬಹಿಷ್ಕಾರ

ಒರಿಸ್ಸಾ ಶಾಸನಸಭೆಯಲ್ಲಿ ನೆನ್ನೆ ಗವರ್ನರರು ಭಾಷಣ ಮಾಡಿದಾಗ ವಿರೋಧ ಪಕ್ಷದ ಸದಸ್ಯರೆಲ್ಲರೂ ಅದಕ್ಕೆ ಬಹಿಷ್ಕಾರ ಹಾಕಿದರು ಕಾಂಗ್ರೆಸ್ ಮಂತ್ರಿಮಂಡಲದ ರಚನೆಯಲ್ಲಿ ಗವರ್ನರರು ಪಕ್ಷಪಾತವಹಿಸಿದರೆಂಬುದೇ ಅದಕ್ಕೆ ಕಾರಣ ಕಾಂಗ್ರೆಸ್ಸಿನ ಬಲವನ್ನು ನಿಖರಗೊಳಿಸಿಕೊಳ್ಳದೆ ಗವರ್ನರರು ಕಾಂಗ್ರೆಸ್ ನಾಯಕರನ್ನು ಮಂತ್ರಿಮಂಡಲ ರಚಿಸಲು ಆಹ್ವಾನಿಸಿದ್ದರೆಂದು ವಿರೋಧ ಪಕ್ಷದವರು ತಿಳಿಸಿರುತ್ತಾರೆ

ಬೊಂಬಾಯಿಯಲ್ಲೂ ಇನ್‌ಫ್ಲುಯೆಂಜಾ

ಬೊಂಬಾಯಿ ನಗರದಲ್ಲೂ ಇನ್‌ಫ್ಲುಯೆಂಜಾ ವ್ಯಾಧಿಯು ಹರಡಿರುವುದಾಗಿ ಗೊತ್ತಾಗಿದೆ. ಅಲ್ಲಿ ಕಳೆದ ೩೧ ರಿಂದ ೪೬೦ ಜನರನ್ನು ಅಂಟು ಜಾಡ್ಯಗಳ ಆಸ್ಪತ್ರೆಗೆ ಸೇರಿಸಲಾಗಿದೆ ೩೬೦ ಮಂದಿ ಇನ್ನೂ ಆಸ್ಪತ್ರೆಯಲ್ಲಿರುವರು ವ್ಯಾಧಿಯು ಸಾಧಾರಣವಾದುದೆಂದು ಹೇಳಲಾಗಿದೆ

ನಿ ಧ ನ

ನಂಜನಗೂಡು ಪೌರಸಭೆಯ ಅಧ್ಯಕ್ಷರಾದ ಶ್ರೀ ಕೆ ಎನ್ ವೆಂಕಟಸುಬ್ಬೀರವರ ಮಾತೋಶ್ರೀ ಅಳಗಮ್ಮನವರು ಕಳೆದ ಬುಧವಾರ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೭೫ ವರ್ಷವಾಗಿತ್ತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ ೭-೧೫ [illegible]. ೭-೩೦ ಮತ್ತು ೮-೧೫ ಟಿ ರಾಮಸ್ವಾಮಿ ಅಯ್ಯಂಗಾರ್–ಕಾವ್ಯವಾಚನ. ಮಧ್ಯಾಹ್ನ ೧೨ ಮತ್ತು ೮-೩೦ ಆರ್. [illegible]–ಹಿಂದಿ ಸಂಗೀತ ೧೨-೩೦ ಮತ್ತು ೧-೫೦ ಎಸ್ ಇಂದಿರಾ–ಸಂಗೀತ ೧ ಮತ್ತು ೧-೨೦ ರಿಕಾರ್ಡು, ಸಂಜೆ ೬. ೧೦ ಜಾನಪದಗೀತೆ ೭-೩೦ ಕನ್ನಡ ಗೀತೆಗಳು ೮ ಗೀತಾಗುಚ್ಛ ೯-೧೫ ಮೈಸೂರಿನ ಅಭಿವೃದ್ಧಿ ಯೋಜನೆ ಇಂಗ್ಲಿಷ್ ಭಾಷಣ. ೯-೩೦ ಅಖಿಲ ಭಾರತ ಸಂಗೀತ ಕಾರ್ಯಕ್ರಮ– ದೆಹಲಿ ರಿಲೆ

ರೈಲಿನಲ್ಲಿ ಹಾಲು ಸಾಗಾಣಿಕೆಗೆ ರುಸುಂ ವಿನಾಯಿತಿ

ಲೋಕಸಭೆಯಲ್ಲಿ ನೆನ್ನೆ ರೈಲ್ವೆ ಮಂತ್ರಿ ಜಗಜೀವನರಾಂರವರು ಮಾತನಾಡಿ [illegible] ಕ್ರಯವಿಕ್ರಯಿಗಳಿಗೆ ತೋರಿಸಲಾಗುವ ರಿಯಾಯಿತಿಯನ್ನು ಇನ್ನಷ್ಟು ಹೆಚ್ಚಿಸಿ ಅವರುಗಳು ಒಂಟಿಯಾಗಿ ಹೋಗುವಾಗಲೂ ಬರುವಾಗಲೂ ನಾಲ್ಕನೆ ಭಾಗ ದರವನ್ನು ತೆಗೆಯಬಹುದೆಂದು ಸೂಚಿಸಿರುತ್ತಾರೆ ಹಾಲು ಸಾಗಾಣಿಕೆಗೆ ಯಾವ ರುಸುಂ ಇನ್ನೂ ವಿಧಿಸುತ್ತಿಲ್ಲವೆಂದು ಅವರು ಸೂಚಿಸಿರುತ್ತಾರೆ

ಅಂಟಿಕೊಂಡ ಅವಳಿ ಮಕ್ಕಳ ಜನನ

ಕೃಷ್ಣರಾಜನಗರ ತಾಲ್ಲೂಕಿನ [illegible]ಹಳ್ಳಿಯ ಶ್ರೀ ಕೆಂಚೇಗೌಡ ಎಂಬುವರ ಪತ್ನಿ ಶ್ರೀಮತಿ ಹೊನ್ನಮ್ಮ ಎಂಬಾಕೆಯು ಕಳೆದ ಭಾನುವಾರ, ಸೊಂಟದ ಭಾಗದಲ್ಲಿ ಹೊಕ್ಕಳ ಹತ್ತಿರ ಅಂಟಿಕೊಂಡಿರುವ ಅವಳಿ ಮಕ್ಕಳನ್ನು ಪ್ರಸವಿಸಿರುತ್ತಾರೆ. ಅವುಗಳಿಗೆ ಕ್ರಮವಾಗಿ ಎರಡು ತಲೆ, ನಾಲ್ಕು ಕೈ, ನಾಲ್ಕು ಕಾಲುಗಳಿವೆ ಮಕ್ಕಳನ್ನೂ ತಾಯಿಯನ್ನೂ ಕೃಷ್ಣರಾಜನಗರದ ಆಸ್ಪತ್ರೆಗೆ ಸೇರಿಸಲಾಗಿದೆ ತಾಯಿಯು ಆರೋಗ್ಯವಾಗಿರುವರು ಮಕ್ಕಳು ಮೃತವಾಗಿವೆ.

ಉದಕಮಂಡಲದಲ್ಲಿ ಮಕ್ಕಳ ಕೂಟ

ಉದಕಮಂಡಲದಲ್ಲಿರುವ ದಾಸಪ್ರಕಾಶ ಹೋಟೆಲಿನಲ್ಲಿ ಕಳೆದ ೧೯ ಮತ್ತು ೨೦ರಂದು ೧೧ನೇ ವಾರ್ಷಿಕ ಮಕ್ಕಳ ಕೂಟವನ್ನು ನೆರವೇರಿಸಲಾಯಿತು ೩೫ ವಿಧದ ಪಂದ್ಯಗಳನ್ನು ಏರ್ಪಡಿಸಲಾಗಿತ್ತು ೨೦೦ ಬಾಲಕಬಾಲಕಿಯರು ಭಾಗವಹಿಸಿದ್ದರು ಪೋರ್ಬಂದರಿನ ಮಹಾರಾಣಿಯು ಅಧ್ಯಕ್ಷತೆ ವಹಿಸಿದ್ದರು ಹೋಟೆಲಿನ ಮಾಲೀಕರಾದ ಶ್ರೀ ಕೆ ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಮಕ್ಕಳ ಕೂಟ ಸಮಿತಿಯ ಅಧ್ಯಕ್ಷರಾದ ಮ. ರಾ. ಸಿ ಪ ಶ್ರೀ ಟಿ. ಬಿ. ಜೋಗ್‌ರವರು ಮಕ್ಕಳ ಕೂಟಗಳನ್ನು ಏರ್ಪಡಿಸುತ್ತಿರುವ ಔಚಿತ್ಯವನ್ನು ಪ್ರಶಂಸಿಸಿದರು ಅಧ್ಯಕ್ಷರು ಮಾತನಾಡಿ ದೇಶದಲ್ಲಿ [illegible] ಚಟುವಟಿಕೆಯು ವಿಶೇಷವಾಗಿದ್ದು ಪ್ರವಾಸಿಗರ ಸೌಕರ್ಯಕ್ಕಾಗಿ ವಿಶೇಷವಾದ ಎಲ್ಲ [illegible] ಕ್ರಮಗಳನ್ನು ಸ್ವಾಗತಿಸಿದರು. ಅಧ್ಯಕ್ಷರಿಗೆ ಶ್ರೀ ಸೀತಾರಾಮರಾಯರವರು ಅಭಿನಂದಿಸಿದರು. ಪೋರ್ಬಂದರಿನ ಮಹಾರಾಣಿಯವರು ಜಯಶೀಲರಾದ ಮಕ್ಕಳಿಗೆ ಬಹುಮಾನಗಳನ್ನು ಹಂಚಿದರು. ಬಾಲಕಬಾಲಕಿಯರ ಚಾಂಪಿಯನ್ ಕಪ್ಪುಗಳು ಶ್ರೀ ಕೆ. ರಾಮನಾಥ್ ಮತ್ತು ಕು ಮಾ ರಿ [illegible] ಮುದ್ದಪ್ಪ ಇವರುಗಳಿಗೆ ದೊರೆತವು. ಶ್ರೀ ಬಿ ಕೆ. ಸರ್ವೋತ್ತಮರಾಯರು ಧನ್ಯವಾದವನ್ನು ಅರ್ಪಿಸಿದರು.

○ಪೂರ್ವ ಪಾಕಿಸ್ತಾನದ ಪಾಬ್ನಾ ಜಿಲ್ಲೆಯ ಸೂಜಾನಗರ ಠಾಣೆಯ ಪ್ರದೇಶದಲ್ಲಿ ಮೊನ್ನೆ ಭಯಂಕರ ಬಿರುಗಾಳಿ ಬೀಸಿಯಿಂದ ೫ ಜನರು ಮೃತಪಟ್ಟು, ೧೦೦ ಮಂದಿಗೆ ಗಾಯವಾಗಿದೆ. ೩೦೦೦ ಜನರಿಗೆ ಮನೆಮಠವಿಲ್ಲದಂತಾಗಿದೆ.

ಕಳ್ಳತನಕ್ಕಾಗಿ ೨ ವರ್ಷ ಕಠಿಣ ಶಿಕ್ಷೆ

ಮೈಸೂರು ೨೯

ಬೆಂಗಳೂರಿನ ಬಾಬುರಾವ್ ಉರುಫ್ ಗೋಪಾಲರಾವ್ ಎಂಬುವನು ನಗರದ ಬೆಳ್ಳಿಕಟ್ಟೆಗೆ ಮಿಸಲಿನ ಎಂ ಮಲ್ಲಯ್ಯ ಎಂಬುವರ ಮನೆಯಲ್ಲಿ ಕಳೆದ ೧೩ನೇ ತಾರೀಕು ೧೨೭ ರೂ ಬೆಲೆಯ ಬಟ್ಟೆ ಮತ್ತು ನಗಗಳನ್ನೂ; ಮಕ್ಕಾಜಿ ಚೌಕದ ಎ ಅಬ್ದುಲ್ ಮಜೀದ್‌ರವರ ಮನೆ ಮತ್ತು ಕೊತ್ವಾಲ್ ರಾಮಯ್ಯನವರ ಬೀದಿಯ ಎಸ್.ಎ. ಸುಬ್ರಹ್ಮಣ್ಯರಾಯರ ಮನೆಗಳಿಗೆ ಬೀಗ ಒಡೆದು ನುಗ್ಗಿ ಒಟ್ಟು ೯೮ ರೂ. ಬೆಲೆ ಬಾಳುವ ಸಾಮಾನುಗಳನ್ನೂ ಕದ್ದುದಕ್ಕಾಗಿ ಪ್ರತಿ ತಪ್ಪಿಗೂ ೨ ವರ್ಷ ಕಠಿಣ ಶಿಕ್ಷೆಯನ್ನು ನಗರದ ಪ್ರಥಮ ನ್ಯಾಯಾಧೀಶರು ನೆನ್ನೆ ವಿಧಿಸಿ ಅವೆಲ್ಲವನ್ನೂ ಒಟ್ಟಿಗೆ ಅನುಭವಿಸುವಂತೆ ಆಜ್ಞೆ ಮಾಡಿದರು ಕಳ್ಳ ಮಾಲನ್ನು ಮಾರಾಟ ಮಾಡುವುದರಲ್ಲಿ ಅವನಿಗೆ ಸಹಾಯಕನಾಗಿದ್ದ ರಾಮಲಿಂಗಂ ಉರುಫ್ ಮಳವಾಲ್ ಪಾಷಾ ಎಂಬಾತನಿಗೆ ಎರಡು ತಿಂಗಳು ಸಜಾ ವಿಧಿಸಲಾಯಿತು.

ಖಾಸಗಿ ಕಾರಿನಲ್ಲಿ ಪ್ರಯಾಣಿಕರನ್ನು ಕೊಂಡೊಯ್ದುದಕ್ಕೆ ಶಿಕ್ಷೆ

ಬೆಂಗಳೂರಿನ ಖುದ್ದೂಸ್‌ಬೇಗ್ ಎಂಬಾತನು ಕಳೆದ ಭಾನುವಾರ ತನ್ನ ಸ್ವಂತ ವ್ಯಾನಿನಲ್ಲಿ ನಗರದಿಂದ ಬೆಂಗಳೂರಿಗೆ ೫ ಜನರನ್ನು ಪರ್ಮಿಟ್ ಇಲ್ಲದೆ ಕೂರಿಸಿಕೊಂಡುಹೋಗಿ ಅವರಿಂದ ೬೫ರೂ ವಸೂಲುಮಾಡಿದುದಕ್ಕಾಗಿ ೨೦೦ ರೂ. ಜುಲ್ಮಾನೆ, ತಪ್ಪಿದರೆ ೧ ತಿಂಗಳ ಸಜವನ್ನೂ, ತುಮಕೂರಿನ ಸೈಯದ್ ಅಹಮದ್ ಎಂಬಾತನು ನಗರದ ಬಸ್ ಸ್ಟ್ಯಾಂಡಿನಿಂದ ೫ ರೂ ಗೆ ೫ ಮಂದಿ ಪ್ರಯಾಣಿಕರನ್ನು ಪರ್ಮಿಟ್ ಇಲ್ಲದೆ ತನ್ನ ವ್ಯಾನಿನಲ್ಲಿ ಕಳೆದ ೨೫ ನೇ ತಾರೀಕು ಕೊಂಡೊಯ್ದುದಕ್ಕಾಗಿ ೫೦ ರೂ. ದಂಡ, ತಪ್ಪಿದರೆ ೧ ತಿಂಗಳ ಸಾದಾ ಸಜವನ್ನೂ ನೆನ್ನೆ ನಗರದ ಪ್ರಥಮ ನ್ಯಾಯಾಧೀಶರಾದ ಶ್ರೀ ಮಹಾಂತಯ್ಯನವರು ವಿಧಿಸಿದರು.

ಕಮ್ಯೂನಿಸ್ಟ್ ರಾಜ್ಯಗಳಲ್ಲಿ ನಾಯಕರಿಗೂ ಪ್ರಜೆಗಳಿಗೂ ಘರ್ಷಣೆ ಸಂಭವ

ಮಾರ್ಕ್ಸ್ ಸಿದ್ಧಾಂತದ ಹೊಸ ರೂಪದ ಬಗ್ಗೆ ಮಾವೋತ್ಸೆ ಟುಂಗರ ಅಭಿಪ್ರಾಯ

ಚೀಣದ ಅಧ್ಯಕ್ಷ ಮಾವೋತ್ಸೆ ಟುಂಗರು ಮಾರ್ಕ್ಸ್‌ರವರ ಸಿದ್ಧಾಂತದ ಬಗ್ಗೆ ಹೊಸ ರೀತಿಯನ್ನು ಪ್ರತಿಪಾದಿಸಿ, ಕಮ್ಯೂನಿಸ್ಟ್ ರಾಜ್ಯಗಳಲ್ಲಿ ಪ್ರಜೆಗಳಿಗೂ, ನಾಯಕರಿಗೂ ಘರ್ಷಣೆಗೆ ಅವಕಾಶವಿರುವುದೆಂದು ತಿಳಿಸಿರುತ್ತಾರೆ ಮಾವೋರವರ ಸಿದ್ಧಾಂತದ ಬಗ್ಗೆ ವಿಶ್ವಸಂಸ್ಥೆ ಮತ್ತು ಅಮೆರಿಕಾ ರಾಜಧಾನಿಗಳಲ್ಲಿ ಉತ್ಸುಕತೆಯುಂಟಾಗಿದೆ. ಮಾವೋರವರ ಹೊಸ ಸಿದ್ಧಾಂತವನ್ನು ರಷ್ಯವು ಒಪ್ಪುವುದೇ ಎಂದು ಪ್ರಶ್ನಿಸಲಾಗಿದೆ. ರಷ್ಯದಲ್ಲಿ ನಾಯಕರಿಗೂ, ಪ್ರಜೆಗಳಿಗೂ ಘರ್ಷಣೆಗೆ ಅವಕಾಶವೇ ಇಲ್ಲವೆಂಬ ಅಭಿಪ್ರಾಯವು ರೂಢಮೂಲವಾಗಿದೆ.

ರಕ್ಷಣಾದಳದವರಿಂದಲೇ ಲೂಟಿ ಮತ್ತು ೧೭ ಮಂದಿಯ ಕೊಲೆ

ಬರ್ಮದ ಟೆನಾಸರಿಂ ತೀರದಲ್ಲಿ ಹಳ್ಳಿಯೊಂದರ ರಕ್ಷಣಾ ದಳಕ್ಕೆ ಸೇರಿದವರು ಸಣ್ಣ ಹಡಗೊಂದನ್ನು ಲೂಟಿ ಮಾಡಿ, ೧೭ ಜನರನ್ನು ಕೊಂದುಹಾಕಿರುವರೆಂದು ವರದಿಯಾಗಿದೆ. ಹಡಗಿನಲ್ಲಿ ರಬ್ಬರು, ಎಣ್ಣೆ ಮತ್ತು ದಿನಸಿ ಪದಾರ್ಥಗಳಿದ್ದುವು. ೭ ಜನ ನಾವಿಕರು ಮೃತಪಟ್ಟಂತೆ ನಟಿಸಿ ಅವರ ಕ್ರೌರ್ಯದಿಂದ ಪಾರಾಗಿರುತ್ತಾರೆ

ಅಜರ್‌ಬೈಜಾನಿನಲ್ಲಿ ಅನೇಕ ಶತಾಯುಸ್ಸಿನವರು

ರಷ್ಯದ ಅಜರ್‌ಬೈಜಾನ್ ಪ್ರಾಂತ್ಯದಲ್ಲಿ ಅನೇಕ ಶತಾಯುಸ್ಸಿನವರಾಗಿರುವರೆ, ಅಲ್ಲಿ ೧೫೦ ವರ್ಷ ವಯಸ್ಸಿನವರೂ ಇರುವರೆಂದೂ, ಅಲ್ಲಿ ದೀರ್ಘ ಜೀವಿಗಳಿರುವುದರ ಕಾರಣವನ್ನು ತಿಳಿಯಲು ರಷ್ಯದ ವಿಜ್ಞಾನಿಗಳ ತಂಡವೊಂದು ಆ ಪ್ರದೇಶಕ್ಕೆ ಹೋಗಲಿರುವುದಾಗಿಯೂ ಗೊತ್ತಾಗಿದೆ.

ದಕ್ಷಿಣ ಪ್ರದೇಶದ ಮಹಿಳಾ ಶಾಸಕರ ಗೋಷ್ಠಿ

ಆಂಧ್ರ, ಕೇರಳ, ಮದ್ರಾಸು ಮತ್ತು ಮೈಸೂರು ಸಂಸ್ಥಾನಗಳ ವಿಧಾನ ಸಭೆಗಳ ಮಹಿಳಾ ಸದಸ್ಯರ ಗೋಷ್ಠಿಯು ಬೆಂಗಳೂರಿನಲ್ಲಿ ಜೂನ್ ೯ ರಿಂದ ೧೫ ರ ವರೆಗೆ ಸೇರಲಿದೆ ಮಾಜಿ ಕೇಂದ್ರ ಉಪಮಂತ್ರಿ ಮರಕತಂ ಚಂದ್ರಶೇಖರ್‌ರವರು ಈ ಸಮ್ಮೇಳನವನ್ನು ಕರೆದಿರುವರು. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹಿಳಾ ಪ್ರತಿನಿಧಿಗಳ ಜವಾಬ್ದಾರಿಯನ್ನು ಕುರಿತು ಅಲ್ಲಿ ಚರ್ಚಿಸಲಾಗುವುದು ಇಂತಹ ಗೋಷ್ಠಿಯು ನಡೆಯುವುದು ಇದೇ ಮೊದಲು

ಅಮೆರಿಕದ ೧೧ ಸಂಸ್ಥಾನಗಳಲ್ಲಿ ಬಿರುಗಾಳಿ

ಅಮೆರಿಕದ ೧೧ ಸಂಸ್ಥಾನಗಳಲ್ಲಿ ನೆನ್ನೆ ಬಲವಾದ ಬಿರುಗಾಳಿಯುಂಟಾದುದಾಗಿ ವರದಿಯಾಗಿದೆ. ಅಲ್ಲಿ ಹವಾಮಾನ ಇಲಾಖೆಯು ಸ್ಥಾಪನೆಯಾದಾಗಿನಿಂದ ಇಂತಹ ಬಿರುಗಾಳಿಯು ಬೀಸಿರಲಿಲ್ಲ.

ಹರಿಜನಾಭಿವೃದ್ಧಿ ಕಾರ್ಯಕ್ಕೆ ಅಧಿಕಾರಿಗಳ ಅಡ್ಡಿಯೇ?

ಸರ್ಕಾರದವರು ಹರಿಜನರ ಏಳಿಗೆಯನ್ನು ಸಾಧಿಸಲು ಪ್ರಯತ್ನಪಡುತ್ತಲಿದ್ದಾರೆ. ಆದರೆ ಆ ಗುರಿಯು ಫಲಕಾರಿಯಾಗುವ ರೀತಿಯಲ್ಲಿಲ್ಲವೆಂದು ಕಾಣುತ್ತದೆ. ನಂಜನಗೂಡು ತಾಲ್ಲೂಕಿಗೆ ೫೭ನೇ ಸಾಲಿಗೆ ಮಂಜೂರಾದ ಕಟ್ಟಡಗಳಿಗಾಗಿ ಗ್ರಾಂಟಿನ ರೂಪದಲ್ಲಿ ಬಂದ ೪,೦೦೦ ರೂಪಾಯಿಗಳನ್ನು ತಾಲ್ಲೂಕು ಅಧಿಕಾರಿಗಳು ಉಳಿತಾಯ ಮಾಡಿದ್ದಾರೆ ಆದೇ ಸಾಲಿಗೆ ಮಂಜೂರಾಗಿದ್ದ ಆರ್ಥಿಕ ಸಹಾಯದ ಗ್ರಾಂಟಿನಲ್ಲಿ ೪೦೦ ರೂಪಾಯಿಗಳನ್ನು ಉಳಿತಾಯ ಮಾಡಿದೆ. ೫೬ನೇ ಸಾಲಿನ ಕಟ್ಟಡದ ಗ್ರಾಂಟಿನಲ್ಲಿ ಕೊಂಡು ಕೂಡಿಟ್ಟಿರುವ ಸಾಮಾನುಗಳನ್ನು ಇನ್ನೂ ಹಂಚಿಕೆ ಮಾಡಿಲ್ಲ. ಮನೆ ಕಟ್ಟಲು ಸಾಮಾನುಗಳನ್ನು ಕೊಡುತ್ತಾರೆಂದು ಅನೇಕ ಬಡ ಹರಿಜನರು ಮನೆ ಗೋಡೆಗಳನ್ನು ಹಾಕಿಕೊಂಡು ಕಾದಿದ್ದಾರೆ. ಮತ್ತು ಕೆಲಸಕಾರ್ಯಗಳನ್ನು ಬಿಟ್ಟು ತಾಲ್ಲೂಕು ಕಛೇರಿಗೆ ತಿರುಗುತ್ತಲಿದ್ದಾರೆ ಕೆಲವು ದಿನಗಳ ಹಿಂದೆ ವಿಪರೀತವಾಗಿ ಬಿದ್ದ ಮಳೆಯಿಂದ ಅನೇಕ ಹೊಸ ಗೋಡೆಗಳು ನೆಲಸಮವಾಗಿವೆ ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಗಳಿಗೆ ಹರಿಜನರ ಏಳಿಗೆ ವಿಚಾರದಲ್ಲಿ ಆಸಕ್ತಿಯಿಲ್ಲವೆಂದು ಕಾಣುತ್ತಲಿದೆ. ಮೇಲ್ಪಟ್ಟ ಅಧಿಕಾರಿಗಳು ಈ ಕಡೆ ಗಮನ ಕೊಟ್ಟು ಸರಿಪಡಿಸದಿದ್ದರೆ ಹರಿಜನರ ಏಳಿಗೆಯು ದೂರದ ಮಾತಾಗುವುದು ಮಹಾತ್ಮ ಗಾಂಧಿಯವರು ಹರಿಜನರಲ್ಲಿ ಮೊದಲಿನ ಹರಿಜನರಾಗಿ ಅವರ ಏಳಿಗೆಯನ್ನು ಸಾರಿದರು ಕಾಂಗ್ರೆಸ್ ಸರ್ಕಾರವು ಹರಿಜನರ ಏಳಿಗೆಯನ್ನು ಸಾಧಿಸಲು ಕಂಕಣ ತೊಟ್ಟಿದೆ. ಆದರೆ ಅಧಿಕಾರಿಗಳು ಹರಿಜನರ ಏಳಿಗೆಯ ವಿಚಾರದಲ್ಲಿ ತಿರಸ್ಕಾರದಿಂದಿರುವುದಾದರೆ ಅವರ ಏಳಿಗೆಯು ಎಂತು ಸಾಧ್ಯ?–ಎಂಬುದಾಗಿ ನಂಜನಗೂಡಿನ ವಕೀಲರಾದ ಶ್ರೀ ಸಿ ದೇವಯ್ಯನವರು ತಿಳಿಸಿರುತ್ತಾರೆ.

ಶಿಶ್ಲೋ ಸ್ಕ್ವಾಷ್–
ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ–
ನಿರೋಧಕ, ನಿವಾರಕ. ಸಲಹೆಗಳಿಗೆ :–
'ಲಿವರ್ ಹೌಸ್', ಚಾಮರಾಜಪುರಂ,
ಮೈಸೂರು (ಮುತ್ತೂರು ಹಾಸ್ಟೆಲ್ ಹತ್ತಿರ)

Edited, Printed and Published by
A. R. Nagarajan at Sadhvi Press,
D Subbiah Road, Mysore

ಬೆಂಗಳೂರಿನಲ್ಲಿ ನಾಲ್ವರಿಗೆ ಶೀತಜ್ವರ

ಬೆಂಗಳೂರು ೨೯

ಮದ್ರಾಸಿಗೆ ಇತ್ತೀಚೆಗೆ ಭೇಟಿ ಕೊಟ್ಟಿದ್ದ ಇಲ್ಲಿನ ನಾಲ್ವರಿಗೆ ಶೀತಜ್ವರ (ಇನ್‌ಫ್ಲುಯೆಂಜಾ)ವು ತಗುಲಿರಬಹುದೆಂದು ಪೌರಸಭಾ ಆರೋಗ್ಯಾಧಿಕಾರಿಗಳು ವರದಿ ಮಾಡಿರುತ್ತಾರೆ. ಚಾಮರಾಜಪೇಟೆ, ಡೇವಿಸ್ ರಸ್ತೆ, ಕಲಾಸಿಪಾಳ್ಯ ಮತ್ತು ಬಸವನಗುಡಿಯ ಶ್ರೀರಾಮ ಮಂದಿರ ರಸ್ತೆಗಳಲ್ಲಿ ಅವರುಗಳು ಇರುವರು ಮದ್ರಾಸಿಗೆ ಆಗಮಿಸಿರುವ ರಾಜೂಲಾ ಹಡಗಿನಲ್ಲಿ ಬಂದವರಿಂದ ಇವರಿಗೆ ವ್ಯಾಧಿಯು ಹರಡಿರುವುದೇ ಎಂಬುದನ್ನು ಪರೀಕ್ಷಿಸಲಾಗುತ್ತಿದೆ

ವಿಧಾನ ಸಭೆಗಳ ಕಾರ್ಯಕ್ರಮ

ವಿಧಾನ ಸಭೆಯು ಬರುವ ತಿಂಗಳು ೧೦ ರಿಂದ ಆರಂಭವಾಗಿ ಜುಲೈ ೧೧ ರವರೆಗೆ ನಡೆಯುವುದು. ವಿಧಾನ ಪರಿಷತ್ತು ಜೂನ್ ೧೦ ರಿಂದ ೧೮ ಮತ್ತು ಜುಲೈ ೧೧ ರಿಂದ ೧೫ ರವರೆಗೆ ಸೇರಲಿದೆ ಜೂನ್ ೧೦ ರಂದು ಉಭಯ ಸಭೆಗಳ ಅಧ್ಯಕ್ಷರ ಚುನಾವಣೆ ನಡೆಯುವುದು. ಮಾರನೇ ದಿನ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣವಿದೆ. ಜೂನ್ ೧೫ ರಂದು ಆಯವ್ಯಯ ಅಂದಾಜು ಪಟ್ಟಿಯನ್ನು ಮಂಡಿಸಲಾಗುವುದು. ೧೭ ರವರೆಗೆ ಮಸೂದೆಗಳ ಪರಿಶೀಲನೆ ಇದೆ ೨೧ ಮತ್ತು ಜುಲೈ ೧೬ ಖಾಸಗಿ ಕಾರ್ಯಕ್ರಮವಿದೆ. ಮೇಲ್ಮನೆಯಲ್ಲಿ ಜೂನ್ ೧೭ಕ್ಕೆ ಆಯವ್ಯಯದ ಮೇಲೆ ಚರ್ಚೆಯಾಗುವುದು ಅಪ್ರೋಪ್ರಿಯೇಷನ್ ಮಸೂದೆ ಬಗ್ಗೆ ಜುಲೈ ೧೩ ರಿಂದ ೧೫ರವರೆಗೆ ಚರ್ಚೆಯಾಗಲಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು ಕೊಯಮುತ್ತೂರು	೪೨ ೫೦	೪೩ ೭೫
ರತ್ನಚೂಡಿ	೪೦ ೦೦	೪೨ ೫೭
ಕಡ್ಡಿ	೪೧ ೬೦	
ರಾಗಿ	೪೭ ೫೦	೪೮ ೧೨
ಜೋಳ	೪೮ ೦೦	೪೭ ೦೦
ಕಡಲೆಕಾಯಿ	೧೯ ೫೭	೨೫ ೬೨
ಹರಳುಬೀಜ	೪೦ ೨೦	೪೪ ೦೦
ಹೊಂಗೇಬೀಜ	೨೬ ೧೨	೨೭ ೫೦
ಹುಚ್ಚೆಳ್ಳು	೪೪ ೦೦	
ಹುರುಳಿ	೪೦ ೨೪	೪೨ ೯೭
ಹೆಸರು	೫೪ ೧೨	೫೬ ೭೫
ಹಲಸಂದೆ	೪೦ ೧೨	೫೦ ೬೨
ಧನಿಯ.	೨೪ ೫೭	
ಅವರೆ	೫೪ ೬೨	೫೭ ೫೦
ಉದ್ದು	೬೪ ೫೦	
ಕಡಲೆ	೪೬ ೧೨	
ಸೆಣಬಿನ ಬೀಜ	೪೬ ೭೫	೪೧ ೫೦
ಹುಣಸೇಹಣ್ಣು	೨ ೫೭	೪ ೦೯
ಸೀಗೆಕಾಯಿ	೭ ೬೯	೯ ೦೦
ಮೆಣಸಿನಕಾಯಿ	೧೫ ೫೭	೧೯ ೦೦
ಬೆಲ್ಲ	೭ ೫೦	
ತೆಂಗಿನಕಾಯಿ	೧೭೦ ೫೦	೨೫೦ ೦೦

Model Tutorial Institute
D. Banumiah's High School
Buildings, Mysore
NOTIFICATION
The Coaching Class for the S. S. L. C. Supplementary Examination has started working. Fees for the whole term is Rs. 18 only.
Join immediately
B. Seshagiri Rao,
Organiser

ಮದ್ರಾಸಿನ ಮಂತ್ರಿಯೊಬ್ಬರಿಗೆ ಶೀತಜ್ವರ

ಮದ್ರಾಸಿನ ಕೈಗಾರಿಕಾ ಮಂತ್ರಿ ಆರ್. ವೆಂಕಟರಾಮನ್‌ರವರಿಗೆ ಸಾಮಾನ್ಯ ಶೀತ ಜ್ವರವಾಗಿ ಅವರು ತಮ್ಮ ಕಾರ್ಯಕ್ರಮಗಳನ್ನು ರದ್ದುಗೊಳಿಸಿರುವರು. ಮಂತ್ರಿ ಸಿ. ಸುಬ್ರಹ್ಮಣ್ಯಂರವರ ಮಗುವಿಗೆ ಶೀತ ಜ್ವರವು ಬಂದು ವಾಸಿಯಾಗಿದೆ. ನೆನ್ನೆ ಮದ್ರಾಸ್ ತೀರಕ್ಕೆ ಸಿಂಗಪುರದಿಂದ ಸ್ಟೇಟ್ ಆಫ್ ಮದ್ರಾಸ್ ಎಂಬ ಮತ್ತೊಂದು ಹಡಗು ಬಂದಿತು. ಅದರಲ್ಲಿ ಬಂದ ೧೦೭೫ ಜನರ ಪೈಕಿ ೬೯ ಮಂದಿಗೆ ವ್ಯಾಧಿ ತಗಲಿದೆ. ಮದ್ರಾಸಿನಲ್ಲಿ ಇದುವರೆಗೆ ೩೦೦ ಮಂದಿಯನ್ನು ಆಸ್ಪತ್ರೆಗೆ ಸೇರಿಸಿ ಒಟ್ಟು ೧,೩೦೦ ಜನಕ್ಕೆ ಚಿಕಿತ್ಸೆ ಮಾಡಲಾಗಿದೆ ೮೦೦ ಜನರಿಗೆ ಗುಣವಾಗಿದೆ. ವ್ಯಾಧಿಯು ಹರಡುವ ಸ್ಥಿತಿ ಇದ್ದರೆ ಅಲ್ಲಿ ಶಾಲೆಗಳನ್ನು ತೆರೆಯುವುದನ್ನು ಮುಂದೆ ಹಾಕಲು ಯೋಚಿಸಲಾಗುತ್ತಿದೆ.

ಹರಾಜು ಮಾರಾಟ
ಜಗನ್ಮೋಹನ ಭವನದಲ್ಲಿ
ಅಪೂರ್ವ ಅವಕಾಶ
30-5-57ನೇ ತಾ|| ಬೆಳಿಗ್ಗೆ ೧೦ ಗಂಟೆಗೆ
(ಹರಾಜಿನ [illegible] ದಿನವಾಗಬಹುದು)
★
ಅತ್ಯುತ್ತಮ ಸಮಾನುಗಳು.- ಫಿಲ್ಕೋ, ಪೈ, ಹೆಚ್. ಎಂ. ವಿ. ಮುಂತಾದ ರೇಡಿಯೋಗಳು, ಫರ್ನಿಚರುಗಳು ಇತ್ಯಾದಿ
★
ಎಂಪೈರ್ ಆಕ್ಷನಿಯರ್ಸ್,
ಮೈಸೂರು

ಶ್ರೀ ಜಗದಂಬಾ ಶಿಶು ವಿಹಾರ
ಡಿವಾನ್ಸ್ ರೋಡ್, ಮೈಸೂರು
ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶು ವಿಹಾರದ ತರಗತಿಗಳು ಇದೇ ೧೫ನೇ ತಾರೀಖಿನಿಂದ ಆರಂಭವಾಗಿವೆ. ಮಹಾಪೋಷಕರುಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ

ANANDA TUTORIAL INSTITUTE
(Sri Vyasaraya Mutt Buildings)
Krishnamurthipuram
MYSORE
S. S. L. C., Inter, B. A. and B.Sc. students coached up. Work commences from 1-6-57 under the guidance of experienced professors and lecturers. Admissions received between 9 and 10 A.M.
Prof V. Raghavendra Rao, M A., B. T.,
Principal

ವಸಂತ ಕಾಲದ [illegible]
ನಿಮ್ಮ ಮಕ್ಕಳ ಅಂದವಾದ
ಕಾರ್ಡ್ ಸೈಜ್ ಛಾಯಾಚಿತ್ರಕ್ಕೆ
ಒಂದು ರೂಪಾಯಿ ಮಾತ್ರ
[illegible]
ಶ್ರೀಕಾಂತ್ ಸ್ಟುಡಿಯೋವಿಗೆ
ಭೇಟಿ ಕೊಡಿ
ರೋಲ್ ಫಿಲಮ್, ಡೆವಲಪಿಂಗ್, ಪ್ರಿಂಟಿಂಗ್,
ಎನ್ಲಾರ್ಜಿಂಗ್ ಸಹ ಮಾಡುತ್ತೇವೆ

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಅಯ್ಯರ್
ಅಂಡ್ ಕೋ.,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)



ರಜಿಸ್ಟರ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಒಂದು ಪತ್ರಿಕೆ 2 ನಯೆ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಒಂದೂವರೆ
ಅಂಚೆ ಮೂಲಕ
ತಿಂಗಳಿಗೆ ಎರಡು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಂಪುಟ : ೧೮] SADHVI : THURSDAY 30—5—1957 ಮೈಸೂರು : ಗುರುವಾರ ೩೦—೫—೧೯೫೭ : [ಸಂಚಿಕೆ : ೨೯೬

ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ಈ ವರ್ಷ ೧೪ ಕೋಟಿ ರೂ.

ೋಕಸಭೆಯಲ್ಲಿ ಪ್ರಥಮ ಬಾರಿ ಸಭಾ ತ್ಯಾಗ

ಜೆಟ್ಟಿನ ಪೂರ್ವಭಾವಿ ಸುದ್ದಿ ಬಗ್ಗೆ ಅಧ್ಯಕ್ಷರ ರೂಲಿಂಗಿಗೆ ಪ್ರತಿಭಟನೆ

ಮಹಾ ಚುನಾವಣೆಗಳಾದನಂತರ ಲೋಕಸಭೆಯಲ್ಲಿ ಇದೇ ಮೊದಲಾಗಿ ನೆನ್ನೆ ಸಭಾ ತ್ಯಾಗ ಪ್ರಕರಣವು ನಡೆಯಿತು. ಪ್ರತಿಯೊಬ್ಬ ಸದಸ್ಯನ ಹಕ್ಕುಬಾಧ್ಯತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುವುದು ಅಧ್ಯಕ್ಷರ ಕರ್ತವ್ಯವಲ್ಲವೆಂದು ಸಭಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್ಯರು ರೂಲಿಂಗ್ ಇತ್ತ ಬಗ್ಗೆ ಹಿಯಾರವರ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಸದಸ್ಯರುಗಳು ಸಭಾ ತ್ಯಾಗ ಮಾಡಿದರು ಒಬ್ಬಿಬ್ಬರು ಪ್ರಜಾ ಸಮಾಜವಾದಿಗಳು ಅದರಲ್ಲಿ ಸೇರಲೆತ್ನಿಸಿದಾಗ ಅವರ ನಾಯಕ ಕೃಪಲಾನಿಯವರು ಅವರನ್ನು ತಡೆದರು. ಆಯವ್ಯಯ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುವ ಮುಂಚೆ ಅದರ ಸುದ್ದಿಯು ಪ್ರಕಟವಾಗಿ ಸಭಾ ಬಾಧ್ಯತೆಗೆ ಲೋಪ ಬಂದಿರುವುದನ್ನು ತಿಳಿಸಲು ಸಮಾಜವಾದಿ ಸದಸ್ಯರೊಬ್ಬರು ಪ್ರಯತ್ನಪಟ್ಟಿದ್ದರೆಂದು ಹೇಳಲಾಗಿದೆ.

ಅಮೆರಿಕದಲ್ಲಿ ಮತ್ತೆ ಅಣು ಶಸ್ತ್ರ ಸಿಡಿತದ ಆರಂಭ

ಜಪಾನು ಪ್ರತಿಭಟನೆ ಮತ್ತು ಪ್ರಾರ್ಥನೆಗಳನ್ನು ಮಾಡುತ್ತಿದ್ದರೂ ಲಕ್ಷ್ಯಸದೆ ಅಮೆರಿಕಾ ಸರ್ಕಾರದವರು ನೆವಾಡಾ ಮರುಭೂಮಿಯಲ್ಲಿ ನೆನ್ನೆ ರಾತ್ರಿ ಅಣು ಶಸ್ತ್ರವನ್ನು ಸಿಡಿಸಿದರು. ಇದೆಂದೂ ಕಾಣದಂತಹ ಅತ್ಯಗಾಧ ಬೆಳಕು ದುಬಂದು ನಾಯು ಕೊಡೆಯಂತಿರುವ ಧೂಳಿ ಮೋಡವು ಎದ್ದಿತು ಈ ಅಣು ಶಸ್ತ್ರವು ೧೦ ಕಿಲೊಟನ್ ತೂಕವುಳ್ಳ ಮತ್ತು ೧೧,೦೦೦ ಟಿ ಎನ್ ಟಿ. ಸ್ಫೋಟಕದಷ್ಟು ಶಕ್ತಿಯುಳ್ಳದ್ದಾಗಿತ್ತೆಂದೂ ಹೇಳಲಾಗಿದೆ. ಅದು ಹಿರೋಷಿಮಾ ಮತ್ತು ನಾಗಸಾಕಿಯಲ್ಲಿ ಹಾಕಿದ ಬಾಂಬುಗಳ ಶಕ್ತಿಯಲ್ಲಿ ಅರ್ಧದಷ್ಟಿತ್ತು.

ಸರ್ವೋದಯ ಪ್ರೇಮಿಗಳ ಸಭೆ

ನಗರದ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸರ್ವೋದಯ ಪ್ರೇಮಿಗಳ ಸಭೆಯೊಂದು ನಡೆಯುವುದು ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ನಡೆಯುತ್ತಿರುವ ಗ್ರಾಮದಾನ ಪಾದ ಯಾತ್ರಿಕರು ಬರುವ ತಿಂಗಳ ೧೧ ರಂದು ನಗರಕ್ಕೆ ಆಗಮಿಸಿ ನಾಲ್ಕು ದಿನಗಳ ಕಾಲ ಪ್ರಚಾರ ಕೈಗೊಳ್ಳುವ ಸಂಬಂಧದಲ್ಲಿ ಅವರಿಗೆ ನೆರವು ನೀಡಲು ಸಭೆಯನ್ನು ಕರೆಯಲಾಗಿದೆ ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ.

ನಾಳೆ ವಿಶ್ವವಿದ್ಯಾಲಯದ ಕೆಲವು ಪರೀಕ್ಷಾ ಫಲಿತಾಂಶಗಳ ಪ್ರಕಟಣೆ

ವಿಶ್ವವಿದ್ಯಾಲಯದ ಎಫ್.ಎಲ್,ಬಿ.ಎಲ್., ಇಂಟರ್ ಕಾಮರ್ಸ್, ಬಿ. ಕಾಂ, ಬಿ.ಎಸ್‌ಸಿ. ಅಗ್ರಿಕಲ್ಚರ್ ಮತ್ತು ಬಿ.ಎಸ್‌ಸಿ. ಟೆಕ್ಸ್‌ಟೈಲ್ಸ್ ಈ ವರ್ಷದ ಪರೀಕ್ಷಾ ಫಲಿತಾಂಶಗಳನ್ನು ನಾಳೆ ಮಧ್ಯಾಹ್ನ ೧೧ ಗಂಟೆಗೆ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಪ್ರಕಟಿಸಲಾಗುವುದು.

ಫಾರ್ಮೋಸಾದಲ್ಲಿ ಮುತ್ತಿಗೆ ಪರಿಸ್ಥಿತಿ

ಫಾರ್ಮೋಸಾದಲ್ಲೆಲ್ಲಾ ಸಭೆ, ಪ್ರದರ್ಶನ, ಅರ್ಜಿ ಗುಜರಾಯಿಸುವುದು ಮತ್ತು ಮುಷ್ಕರಗಳನ್ನು ಅಲ್ಲಿಯ ರಾಷ್ಟ್ರೀಯ ಸರ್ಕಾರದವರು ನಿಷೇಧಿಸಿರುತ್ತಾರೆ ಅಲ್ಲಿ ೬ ದಿನಗಳಿಂದ ಮಾರ್ಷಲ್ ಲಾವನ್ನು ಘೋಷಿಸಲಾಗಿದೆ. ರಾಜಧಾನಿ ಟೈಪೆಯಲ್ಲಿ ಕರ್ಫ್ಯೂವನ್ನು ವಿಧಿಸಲಾಗಿದೆ ನಗರದ ಮುಖ್ಯ ಭಾಗಗಳಲ್ಲಿ ಸೈನ್ಯಗಳನ್ನು ಕಾವಲಿಡಲಾಗಿದೆ ಅಲ್ಲಿ ಮುತ್ತಿಗೆ ಪರಿಸ್ಥಿತಿಯನ್ನು ಘೋಷಿಸಲಾಗಿದೆ

ಗೋವಾ ಸ್ವಾತಂತ್ರ್ಯದಳದವರೊಡನೆ ಪೋರ್ಚುಗೀಸರ ಘರ್ಷಣೆ

ಗೋವಾ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಆಜಾದ್ ಗೋಮಾಂತಕ ದಳದ ಅಂತರಂಗ ಕಾರ್ಯಕರ್ತರ ಮೇಲೆ ೨೦೦ ಜನ ಪೋರ್ಚುಗೀಸ್ ಪೊಲೀಸರು ಕಳೆದ ಸೋಮವಾರ ಧಾಳಿ ನಡೆಸಿ, ಗುಂಡು ಹಾರಿಸಿದರೆಂದು ವರದಿಯಾಗಿದೆ ಘರ್ಷಣೆಯಲ್ಲಿ ಒಬ್ಬ ಪೋರ್ಚುಗೀಸ್ ಪೊಲೀಸನು ಮೃತಪಟ್ಟು, ಮೂವರು ರಾಷ್ಟ್ರೀಯರಿಗೆ ಗಾಯಗಳಾದುವೆಂದು ಹೇಳಲಾಗಿದೆ.

ಬರ್ಮಾದಲ್ಲಿ ರಕ್ತ ಹೀರುವವನ ಹಾವಳಿ

ಈಶಾನ್ಯ ಬರ್ಮದಲ್ಲಿ ಅರಣ್ಯದ ಪೊಲೀಸರು ರಕ್ತ ಹೀರುವ ಮನುಷ್ಯನೊಬ್ಬನನ್ನು ಹುಡುಕುತ್ತಿರುವರೆಂದು ಹೇಳಲಾಗಿದೆ ಅವನು ಮೂರು ಜನರ ಕುತ್ತಿಗೆಯನ್ನು ಕತ್ತರಿಸಿ, ರಕ್ತವನ್ನು ಹೀರಿರುವುದಾಗಿ ವರದಿಯಾಗಿದೆ ಇದರಿಂದ ಭೀತಿಗೊಂಡಿರುವ ಆ ಪ್ರದೇಶದ ಹಳ್ಳಿಗರು ಶಸ್ತ್ರಧಾರಿಗಳಾಗಿ ತಿರುಗುತ್ತಿರುವರು ಹೆಂಗಸರು ಮನೆಗಳಿಂದ ಹೊರಗೆ ಬರುತ್ತಿಲ್ಲ. ಬಂದೂಕದ ಪೆಟ್ಟು ಬಿದ್ದರೂ ತನಗೆ ತೊಂದರೆಯಾಗದಂತೆ ದೃಢಕಾಯನಾಗಲು ಅವನು ಜನರ ರಕ್ತವನ್ನು ಹೀರುತ್ತಿರುವುದಾಗಿ ಹೇಳಲಾಗಿದೆ ಮಂತ್ರದ ಮಾಯದಿಂದ ಅವನು ಕ್ಷಣಾರ್ಧದಲ್ಲಿ ಅದೃಶ್ಯನಾಗುವನೆಂದು ವರದಿಯಾಗಿದೆ.

ಹರಿಕಥೆ

ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ನಾಳೆಯಿಂದ ಪ್ರತಿ ದಿನವೂ ಸಂಜೆ ೬-೩೦ ಘಂಟೆಗೆ ವಿದ್ವಾನ್ ಲಕ್ಷ್ಮೀಪತಿಯವರು ಭಾರತವನ್ನು ಕಥಾ ರೂಪವಾಗಿ ಹೇಳುತ್ತಾರೆ. ಸರ್ವರಿಗೂ ಆಹ್ವಾನವುಂಟು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರ ನಾಮ ೭-೧೫ ಗಾಂಧಿ ಸ್ಮೃತಿ. ೭-೩೦ ರಿಕಾರ್ಡ್. ೮-೧೫ ಹಿಂದಿ ಪಾಠ. ಮಧ್ಯಾಹ್ನ ೧೨ ವಿ. ನಾರಾಯಣ ಅಯ್ಯರ್-ವೀಣೆ. ೧೨-೩೦ ವನಿತಾ ವಿಹಾರ ೧-೩೦ ರಿಕಾರ್ಡ್. ೧-೪೫ ಸಂಗೀತ. ಸಂಜೆ ೬-೧೦ ಕೃಷ್ಣ ಗೀತೆ. ೭-೩೦ ಪ್ರಪಂಚ ವಾರ್ತೆ. ೮ ಮದ್ರಾಸಿನಿಂದ-ಮದುರೆ ಮಣಿ ಅಯ್ಯರ್ ಸಂಗೀತ ೯-೧೫ ಉರ್ದು ಗೀತೆ. ೯-೩೦ ನವಲೋಕದಲ್ಲಿ ನಾರದರು: ನಾಟಕ. ೧೦ ಟಿ ಚೌಡಯ್ಯ- ಪಿಟೀಲು.

ತೆರಿಗೆಗಳನ್ನು ಇಳಿಸಿದರೆ ಉತ್ಪತ್ತಿಗೆ ಧಕ್ಕೆ

ಸಮಾಜವಾದಿ ಧ್ಯೇಯ ಸಾಧನೆಗೆ ಸಕಲರ ತ್ಯಾಗಗಳಿಗೂ ನೆಹರೂರವರ ಕರೆ

ಪ್ರಧಾನಿ ನೆಹರೂರವರು ನೆನ್ನೆ ಶಾಸನ ಸಭೆಗಳ ಕ್ರೈಸ್ತ ಸದಸ್ಯರ ಗೋಷ್ಠಿಯೊಂದರಲ್ಲಿ ಮಾತನಾಡಿ ತೆರಿಗೆಗಳನ್ನು ಕಡಿಮೆ ಮಾಡಿದರೆ ಹಲವು ಯೋಜನೆಗಳನ್ನು ಕೈ ಬಿಡಬೇಕಾಗುವುದೆಂದೂ, ಇದರಿಂದ ಸಹಸ್ರಾರು ಇತರ ಸಮಸ್ಯೆಗಳು ಉದ್ಭವಿಸುವುವೆಂದೂ ತಿಳಿಸಿದರು. ತೆರಿಗೆಗಳ ಕಡಿತದಿಂದ ಕೆಲಕೆಲವರ ಪ್ರಶಂಸೆ ದೊರೆತರೂ, ಉತ್ಪತ್ತಿಯ ಪ್ರಮಾಣಕ್ಕೆ ಅಡ್ಡಿಯಾಗುವುದೆಂದು ಅವರು ಹೇಳಿದರು. ಇದರಿಂದ ಪದಾರ್ಥಗಳ ಅಭಾವವುಂಟಾಗಿ ರೂಪಾಯಿ ಮೌಲ್ಯದ ಬೆಲೆಯು ಕಡಿಮೆಯಾಗುವುದೆಂದು ಅಭಿಪ್ರಾಯಪಟ್ಟರು. ಸಮಾಜವಾದದ ಸಾಧನೆಗಾಗಿ ಎಲ್ಲರೂ ಹೊರೆಯನ್ನು ಹೊರಬೇಕಾಗುವುದೆಂದೂ, ಉತ್ಪತ್ತಿಯ ಗುರಿಯನ್ನು ಸಾಧಿಸುವುದು ಅಗತ್ಯವೆಂದೂ ಅವರು ಒತ್ತಿ ಹೇಳಿದರು

ಪೌರಸಭಾ ಗುಮಾಸ್ತರ ಕೊಲೆಯೇ ?

ಕೋಲಾರ ಜಿಲ್ಲಾ ಶ್ರೀನಿವಾಸಪುರ ಟೌನಿನ ಪೌರಸಭೆಯ ಮುಖ್ಯ ಗುಮಾಸ್ತರಾದ ಶ್ರೀನಿವಾಸ ದೇಶಿಕಾಚಾರರವರು ಪತ್ತೆಯಿಲ್ಲವೆಂದೂ, ಅವರನ್ನು ಹುಡುಕಿಸಿಕೊಡಬೇಕೆಂದೂ ಅವರ ಪತ್ನಿಯು ಸ್ಥಳೀಯ ಸಂಸ್ಥೆ ಸಚಿವರಿಗೆ ಅರ್ಜಿ ಕೊಟ್ಟಿದ್ದರಷ್ಟೆ ? ಅಲ್ಲಿನ ಪೊಲೀಸರು ಕೊಲೆ ಮೊಕದ್ದಮೆಯೊಂದನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ತನಿಖೆ ನಡೆಯುತ್ತಿದೆ. ಸಚಿವರು ಕೆಲವು ದಿನಗಳ ಹಿಂದೆ ಪೌರಸಭೆಯ ಲೆಕ್ಕಪತ್ರಗಳನ್ನು ಪರಿಶೀಲಿಸಿ ಹಲವು ಅಕ್ರಮಗಳನ್ನು ಕಂಡುಹಿಡಿದಿದ್ದರಮೇಲೆ ಸದರಿ ಗುಮಾಸ್ತರ ವರ್ಗವಾಗಿ ಆಗಿನಿಂದ ಅವರ ಪತ್ತೆಯಿಲ್ಲವಾಗಿದೆ

ಕೈಕಾಲಿಲ್ಲದ ವಿದ್ವಾಂಸರ ಗಾಯನ ಮತ್ತು ಹಾರ್ಮೋನಿಯಂ ವಾದನ

ಶ್ರೀರಾಂಪೇಟೆ ಶ್ರೀಮತ್ಕನ್ಯಕಾಪರಮೇಶ್ವರೀ ದೇವಸ್ಥಾನದಲ್ಲಿ ಶ್ರೀ ವಾಸವೀ ಜಯಂತಿ ಅಂಗವಾಗಿ ನಾಳೆ ರಾತ್ರಿ ೯ ಗಂಟೆಗೆ, ಮದ್ರಾಸಿನಿಂದ ಬಂದಿರುವ ಗಾನವಿಶಾರದ ಸಂಗೀತ ವಿದ್ವಾನ್ ಶ್ರೀ ಅಲ್ಲ ಪಾಟಿ ಸಭಾಪತಿ ಶ್ರೇಷ್ಠಿಯವರಿಂದ ಸಂಗೀತ ಕಛೇರಿ ಏರ್ಪಡಿಸಿರುತ್ತೆ. ಅವರು ಬಾಯಿ ಹಾರ್ಮೋನಿಯಂ ನುಡಿಸುತ್ತಾ ಇಂಗ್ಲೀಷ್, ತೆಲುಗು ಮುಂತಾದ ಭಾಷೆಗಳಲ್ಲಿ ಕಛೇರಿ ನಡೆಸುವರು. ಈ ವಿದ್ವಾಂಸರಿಗೆ ಕೈಕಾಲುಗಳು ಇಲ್ಲ. ದೊಡ್ಡ ಕುಟುಂಬಿಗಳಾಗಿರುತ್ತಾರೆ. ಸರ್ವರೂ ದಯಮಾಡಿಸಿ, ಅಂಗಹೀನರಾದ ವಿದ್ವಾಂಸರಿಗೆ ಧನಸಹಾಯ ಮಾಡಿ ಪುಣ್ಯಭಾಗಿಗಳಾಗಬೇಕಾಗಿ ಕೋರಿದೆ. ಕೇವಲ ೧೧ ವರ್ಷದ ಚಿ॥ ಸೀತಾಲಕ್ಷ್ಮಿಯು ಸಿನಿಮಾ ಹಾಡುಗಳನ್ನು ಹಾಡುವರು

ಪಿ. ಎಸ್. ಪಿ. ಸಭೆ

ನಗರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ನಾಳೆ ಸಂಜೆ ೬॥ ಗಂಟೆಗೆ ಪಕ್ಷದ ಕಾರ್ಯಾಲಯದಲ್ಲಿ ಸೇರುವುದು.

ಈ ವರ್ಷ ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ೧೪ ಕೋಟಿ ರೂ.

ಸ್ವಂ.ಸು ಪ್ರೋ॥] ಬೆಂಗಳೂರು ೩೦

ಮಂತ್ರಿಮಂಡಲದವರು ನೂತನ ಸಂಸ್ಥಾನದ ಆಯವ್ಯಯ ಅಂದಾಜು ಪಟ್ಟಿಯನ್ನು ಪರಿಶೀಲಿಸುತ್ತಿರುವರು ೫೭-೫೮ನೇ ಸಾಲಿಗೆ ಸಮಗ್ರ ಸಂಸ್ಥಾನಕ್ಕೆ ವಿದ್ಯಾಭ್ಯಾಸಕ್ಕಾಗಿ ೧೪ ಕೋಟಿ ರೂ. ಅಷ್ಟು ಒದಗಿಸಲಾಗುವುದೆಂದು ಗೊತ್ತಾಗಿದೆ.

ನಿಮ್ನ ವರ್ಗದ ಅಭಿವೃದ್ಧಿ ಸಮಿತಿಯ ಪುನರ್ರಚನೆ

ನಿಮ್ನ ವರ್ಗದ ಹಿತ ರಕ್ಷಣಾ ಸಮಿತಿಯನ್ನು ವಿಸ್ತರಿಸಿ ಸರ್ಕಾರದವರು ೫ ವರ್ಷ ಕಾಲಕ್ಕೆ ಪುನರ್ರಚಿಸಿರುತ್ತಾರೆ. ಅದರ ಹೆಸರನ್ನು ಕೇಂದ್ರ ಹರಿಜನ ಕ್ಷೇಮ ಮತ್ತು ವರ್ಗದವರ ಸಮಿತಿಯೆಂದು ಕರೆಯಲಾಗಿದೆ. ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಆರ್. ಚನ್ನಿಗರಾಮಯ್ಯನವರು ಅದರ ಅಧ್ಯಕ್ಷರು ೮ ಜನ ಇಲಾಖಾಧಿಕಾರಿಗಳೂ ಸೇರಿ ಒಟ್ಟು ೨೫ ಮಂದಿ ಸದಸ್ಯರಿರುವರು. ಚಾಮರಾಜನಗರದ ಶ್ರೀ ಬಿ ರಾಚಯ್ಯನವರೂ ಅದರಲ್ಲಿರುವರು.

ಕಾಗದಪತ್ರ ವಿಲೇವಾರಿ ವಿಳಂಬದ ಬಗ್ಗೆ ಸಚಿವರ ಎಚ್ಚರಿಕೆ

ಕಾಗದಪತ್ರಗಳ ವಿಲೇವಾರಿಯಲ್ಲಿ ಅಲಕ್ಷ್ಯ, ಸಾವಕಾಶ ಮತ್ತು ಅನಾದರಣೆ ತೋರುವವರ ಮೇಲೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಅಧಿಕಾರಿಗಳಿಗೆ ಎಚ್ಚರಿಕೆಯಿತ್ತಿರುವರೆಂದು ವರದಿಯಾಗಿದೆ. ಅವರು ತುಮಕೂರು ಜಿಲ್ಲಾ ಕಛೇರಿಗೂ, ಗುಬ್ಬಿ ತಾಲ್ಲೂಕು ಕಛೇರಿಗೂ ಭೇಟಿಯಿತ್ತು ಕೆಲಸವನ್ನು ನಿಧಾನ ಮಾಡಕೂಡದೆಂದು ಸೂಚಿಸಿರುವರು.

○ ಶ್ರೀ ನಫಿ ದಾರಾಷಾರವರನ್ನು [illegible] ಬ್ಯಾಂಕಿನ ಎಕ್ಸ್ ಅಫಿಷಿಯೊ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಸೀಮೆಯೆಣ್ಣೆ ಲಾರಿಗೆ ಬೆಂಕಿಬಿದ್ದು ೩೦,೦೦೦ ರೂ. ನಷ್ಟ

ಬೆಳಗಾಂ ಬಳಿ ನಿಪ್ಪಾಣಿ ಹತ್ತಿರ ೮೦ ಬ್ಯಾರಲ್ ಸೀಮೆಯೆಣ್ಣೆ ತುಂಬಿದ್ದ ಲಾರಿಗೆ ವಿದ್ಯುಚ್ಛಕ್ತಿ ಷಾರ್ಟ್ ಸರ್ಕ್ಯೂಟಿನ ಪರಿಣಾಮವಾಗಿ ಬೆಂಕಿ ಹತ್ತಿ ಅದು ಸುಟ್ಟು ಬೂದಿಯಾಯಿತು. ೩೦,೦೦೦ ರೂ.ಗಳಷ್ಟು ನಷ್ಟವಾಗಿದೆ. ಲಾರಿಯ ಮಾಲೀಕರು ಮತ್ತು ಡ್ರೈವರು ಪಾರಾಗಿರುತ್ತಾರೆ.

ಅಭಿವೃದ್ಧಿ ಯೋಜನೆಗೆ ರಾಜಧನದಿಂದ ಸಹಾಯ

ಸರ್ಕಾರದ ಅಭಿವೃದ್ಧಿ ಯೋಜನೆಗಾಗಿ ಸಾಲದ ರೂಪದಲ್ಲಿ ತಮ್ಮ ರಾಜಧನದ ಭಾಗಗಳನ್ನು ಕೊಡಬೇಕೆಂದು ಪ್ರಧಾನಿ ನೆಹರೂರವರು ಮಾಡಿರುವ ಪ್ರಾರ್ಥನೆಯನ್ನು ಅಂಗೀಕರಿಸಿ ಹಲವು ಮಾಜಿ ಅರಸರು ತಮ್ಮ ಹಣವನ್ನು ಕೊಡಲು ಒಪ್ಪಿರುವುದಾಗಿ ವರದಿಯಾಗಿದೆ.

ಟಿ ಪ್ರಕಾಶಂರವರಿಗೆ ಸ್ಮಾರಕ

ಆಂಧ್ರ ಕೇಸರಿ ಟಿ. ಪ್ರಕಾಶಂರವರ ನೆನಪಿಗೆ ಸೂಕ್ತ ಸ್ಮಾರಕವನ್ನು ಏರ್ಪಡಿಸಲು ಆಂಧ್ರ ದೇಶದ ಮುಖ್ಯ ಮಂತ್ರಿ ನೀಲಂ ಸಂಜೀವ ರೆಡ್ಡಿಯವರು ಮನವಿ ಮಾಡಿರುತ್ತಾರೆ ನಿಧಿಗೆ [illegible]ಗದವರೂ ಹಣವನ್ನು ಒದಗಿಸುವರೆಂದು [illegible]ರು ಹೇಳಿರುವರು ಪ್ರಕಾಶಂರವರ ಭಾವ ಚಿತ್ರವನ್ನು ಪ್ರತಿಯೊಬ್ಬ ನ [illegible] ಗೆಜೆಟೆಡ್ ನೌಕರ [illegible] ತಮ್ಮ ಮನೆಯಲ್ಲಿಡುವಂತೆ ಅವರುಗಳಿಗೆ ಸಂಪುಟ ಸೂಚಿಸಿರುತ್ತದೆ

[illegible]ರಂಗಾಬಾದಿನಲ್ಲಿ ಹಳೇ ಕೋಟೆ ಗೋಡೆ ಬಿದ್ದು ೯ ಸ್ತ್ರೀಯರ ಸಾವು

[illegible]ರಂಗಾಬಾದ್ ಜಿಲ್ಲೆಯ ನೇಲ್‌ದಂಗ್ ಎಂಬ ಹಳ್ಳಿಯಲ್ಲಿ ಹಳೇ ಕೋಟೆಯ ಗೋಡೆ [illegible] ಮಂದಿ ಸ್ತ್ರೀಯರು ಮೃತಪಟ್ಟಿರುತ್ತಾರೆ

೧೭॥ ಗಂಟೆಯಲ್ಲಿ ೬,೦೧೧ ಮೈಲಿ ವಿಮಾನ ಯಾನ

ಬ್ರಿಟನ್ನಿನ ವಿಮಾನ ಬಲದ ಜೆಟ್ ಬಾಂಬರೊಂದು ಟೋಕಿಯೋವಿನಿಂದ ಹೊರಟು ೧೭॥ ಗಂಟೆಯಲ್ಲಿ ೬,೦೧೧ ಮೈಲಿ ಪ್ರಯಾಣ ಮಾಡಿ ೨೦ ವರ್ಷಗಳ ಹಿಂದೆ ಜಪಾನ್ ವೈಮಾನಿಕರು ಸ್ಥಾಪಿಸಿದ್ದ ರಿಕಾರ್ಡನ್ನು ಮುರಿದಿದೆ ಅದು ಉತ್ತರ ಧ್ರುವದ ಮೇಲೆ ಹಾರಿ ಬಂದಿತೆಂದು ಗೊತ್ತಾದೆ

ನಿಮ್ನ ವರ್ಗದ ವಿದ್ಯಾರ್ಥಿಗಳಿಗೆ ೨ ಕೋಟಿ ರೂ ವೇತನ

ಪರಿಶಿಷ್ಟ ಕೋಮಿನವರು ಗುಡ್ಡಗಾಡಿನವರು ಮತ್ತು ಇಂತಹ ಇತರ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಈ ವರ್ಷ ವೇತನವನ್ನು ೧। ಕೋಟಿ ರೂ ನಿಂದ ೨ ಕೋಟಿಗೆ ಕೇಂದ್ರ ಸರ್ಕಾರದವರು ಹೆಚ್ಚಿಸಿರುತ್ತಾರೆ ಮೆಟ್ರಿಕ್ಯುಲೇಷನ್ ಆದವರಿಗೆ ಇದನ್ನು ಹಂಚಲಾಗುವುದು

ವೆಂಕಟೇಶ ಕಲ್ಯಾಣ ವಾಚನ ಮತ್ತು ಪುರಾಣ ಶ್ರವಣ

ಜಯನಗರದಲ್ಲಿರುವ ಪೌರಾಣಿಕ ಶಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರು ಭಾಮಿನಿ ಷಟ್ಪದಿಯಲ್ಲಿ ರಚಿಸಿರುವ ವೆಂಕಟೇಶ ಕಲ್ಯಾಣ ಎಂಬ ಕಾವ್ಯವನ್ನು ಅವರ ಮನೆಯಲ್ಲಿ ನಾಳೆಯಿಂದ ನಿತ್ಯವೂ ಸಂಜೆ ೬॥ ಗಂಟೆಗೆ ಶ್ರೀ ವಿ ಎ ಗಿರಿಧರಮೂರ್ತಿಯವರು ವಾಚನ ಮಾಡುವರು ಶ್ರೀ ಎಸ್ ಲಕ್ಷ್ಮೀನರಸಿಂಹರವರು ಅನುವಾದ ಮಾಡುವರು ಪ್ರತಿ ಸಂಜೆ ಪುರಾಣವೂ ಏರ್ಪಾಡಾಗಿದೆ

SREE GAYATHRI
TALKIES
From 30-5-57 For 2 days
THE SEA CHASE
(Cinemascope & Warner Color)
With John Wayne Lana Turner

ಶ್ರೀ
ಕೃಷ್ಣ ಮಿಲ್ಕ್ ಡೈರಿ
ತಾ॥ 1-6-57ನೇ ಶನಿವಾರದಿಂದ
[illegible]
ಇಲ್ಲಿ ಅಪ್ಪಟವಾದ
ಹಸುವಿನ ಹಾಲು
ದಿನ 6 [illegible]
ಪೌಂಡು 1ಕ್ಕೆ 0-3-6
ಶ್ರೀ ಕೃಷ್ಣ ಮಿಲ್ಕ್ ಡೈರಿ,
94 ಕಲ್ಯಾಣ ಭವನ ಬಿಲ್ಡಿಂಗ್ಸ್,
ತ್ಯಾಗರಾಜಾ ರೋಡ್, ಮೈಸೂರು
ಮನೆಗಳಿಗೂ ಉಚಿತ ಸರಬರಾಜು ಉಂಟು

Edited, Printed and Published by
A. R. Nagarajan at Sadhvi Press,
D Subbaiah Road Mysore

THE NATIONAL INSTITUTE OF COMMERCE,
Old Mysore Bank Road Mysore

NEW ADMISSIONS for TYPEWRITING SHORTHAND ACCOUNTANCY Etc leading to Mysore Govt Commercial Exam [illegible] mornings and evenings The Institute [illegible] heart of the city and is equipped [illegible] and furniture [illegible] Individual attention [illegible] features of this Institution Particulars in person

THE INSTITUTE OF EDUCATION,
59 NAZARBAD MYSORE

The above Institute located in D Banumiah's Educational Buildings Mysore has since been shifted to an **INDEPENDENT BUILDING IN NAZARBAD**

(A) B Ed SECTION

Applications for admission to the B Ed Class opening on [illegible] will be received up to 15 6 1957

Application Form and Prospectus may be had from the Office on all working days between 1 and 4 P M on payment of Re one for each form or by post from the Principal on requisition together with a remittance of Re 1 per form and 3 n p towards postal charges

(B) H T C SECTION

Applications are also invited from students who have passed the S S L C Examination for admission to the Under Graduate Teachers Training Class (T C Higher Examination of the Department of Public Instruction Mysore which will be opened this School year with our experienced staff

Applications for the T C Higher Class are to be sent to the Principal in the prescribed forms on or before 15 6 19[illegible] which can be had on payment of Re one per application form and 13 n p for postage charges

(C WANTED

Wanted experienced B Ed and M Eds to handle the H T C and B Ed Classes Salary according to qualification Applicants must, if called for, be prepared to come for an interview at their own expense Apply before 15 6 1957 with testimonials and a postal order for Rs two or two-anna stamps worth rupees two

(D) Also wanted an experienced and efficient typist cum clerk Apply before 15-6 1957 with testimonials

K S Suryanarayana Rao,
Secretary,
Institute of Education, Mysore

ಚಾಮುಂಡೇಶ್ವರಿ ಟಾಕೀಸ್
31 5 57 ರಿಂದ ಜಯಪ್ರದವಾದ : 4ನೇ ವಾರ
★ ಪುದೈಯಲ್ ★
ಶಿವಾಜಿ ಗಣೇಶನ್ ಪದ್ಮಿನಿ, ಚಂದ್ರಬಾಬು ಮತ್ತು ಬಾಲಯ್ಯ ಮುಂತಾದವರು ಪಾತ್ರ ವಹಿಸಿರುವ ತಮಿಳು ಚಿತ್ರ [ಕಲ್ಲಂ ಪಿಕ್ಚರ್ಸ್]
ಮುಂದಿನ ಬದಲಾವಣೆ "ಸತಿ [illegible]" (ಕನ್ನಡ)

ಲಕ್ಷ್ಮಿ ★
31—5—57ನೇ ಶುಕ್ರವಾರದಿಂದ
ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು

ನೀಲಾ ಪ್ರೊಡಕ್ಷನ್ಸ್‌ರವರ ಅತ್ಯಂತ ಸಾಹಸಮಯ, ರೋಮಾಂಚಕಾರಿ ಸನ್ನಿವೇಶಗಳನ್ನೊಳಗೊಂಡ ತಮಿಳು ಚಿತ್ರ
★ ರಾಜರಾಜನ್ ★
ಭೂಮಿಕೆ — ಪದ್ಮಿನಿ, ಎಂ ಜಿ ರಾಮಚಂದ್ರನ್, ಲಲಿತ, ವೀರಪ್ಪ, ನಂಬಿಯಾರ್, ಫ್ರೆಂಡ್ ರಾಮಸ್ವಾಮಿ, ಎಂ. ಜಿ. ಚಕ್ರಪಾಣಿ ಮತ್ತು ಇತರರು
[ಜೆನಿತ್ ಮೂವೀ ಪಿಕ್ಚರ್ಸ್

ರಾಜಕಮಲ್ ✱ —: ಮುಂದಿನ ಬದಲಾವಣೆ :— ಈಗಾಗಲೇ ಆಂಧ್ರ ಪ್ರದೇಶದಲ್ಲಿ ಜಯಭೇರಿ ಹೊಡೆಯುತ್ತಿರುವ,
12 ಲಕ್ಷ ರೂ ಗಳ ವೆಚ್ಚದಲ್ಲಿ ತಯಾರಿಸಿರುವ ಅಂಜಲಿ ಪಿಕ್ಚರ್ಸ್‌ರವರ ಮಹೋನ್ನತ ಜಾನಪದ ಕಲಾಕೃತಿ
ಅಂಜಲಿ ದೇವಿ, ನಾಗೇಶ್ವರ, ರಾಜಸುಲೋಚನ, ಗಿರಿಜ, ಸೂರ್ಯಕಲಾ ಮುಂತಾದವರು ಪಾತ್ರವಹಿಸಿರುವ,
★ ಮಣಾಳನೇ ಮಂಗಯಿನ್ ಭಾಗ್ಯಂ
[14ನೇ ಕಡೇ ವಾರ ★ ರತ್ನಗಿರಿ ರಹಸ್ಯ ★] — ನಿರ್ದೇಶಕ : ವೇದಾಂತಂ ರಾಘವಯ್ಯ — ಸಂಗೀತ ಆದಿನಾರಾಯಣ [ಶ್ರೀ ರಾಘವೇಂದ್ರ ಪಿಕ್ಚರ್ಸ್

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವುಳ್ಳದ್ದು
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ನಯೆ ಪೈಸೆ

ಚಂದಾ ದರ
ಏಜಂಟರುಗಳಿಗೆ ಮೂರು
ತಿಂಗಳಿಗೆ [illegible]
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಪುಟ : ೦೫] SADHVI । FRIDAY 31—5—1957 ಮೈಸೂರು । ಶುಕ್ರವಾರ ೩೧—೫—೧೯೫೭ । [ಸಂಚಿಕೆ : [illegible]

ಬೆಲೆ ಮತ್ತು ತೆರಿಗೆ ಏರಿಕೆ ಬಗ್ಗೆ ಕಲ್ಕತ್ತದಲ್ಲಿ ಹರತಾಳ

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ವಾರ್ಡುಗಳನ್ನು ಹೆಚ್ಚಿಸಲು ಒತ್ತಾಯ

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೩೧

ಪುರಸಭೆಯ ಸಾಧಾರಣ ಅಧಿವೇಶನವು ನೆನ್ನೆ ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಪ್ರಾರಂಭದಲ್ಲಿ ಡಾ॥ ಬಿ ಜಿ ದಾಸರು ಮಾರಕವಾಗಿ ದೇಶದಲ್ಲಿ ತಲೆದೋರಿರುವ ಇನ್‌ಫ್ಲುಯೆಂಜಾ ಖಾಯಿಲೆಯನ್ನು ತಡೆಯಲು ನಗರದಲ್ಲಿ ಸೂಕ್ತ ನಿರೋಧ ಕ್ರಮಗಳ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ನೀಡಬೇಕೆಂದೂ, ರೋಗವು ಸಾಮಾನ್ಯವಾದುದೆಂದು ಅದನ್ನು ಉಪೇಕ್ಷೆ ಮಾಡಕೂಡದೆಂದೂ ತಿಳಿಸಿದರು ಇತ್ತೀಚೆಗೆ ಹೆಚ್ಚಿಸಿರುವ ತೆರಿಗೆಗಳ ವಿರುದ್ಧವಾಗಿ ಸಭೆಯು ಹೋರಾಡಬೇಕೆಂದು ಅವರು ಹೇಳಿ, ಸೊಳ್ಳೆ ಕಾಟದ ಬಗ್ಗೆ ಸತ್ಯಾಗ್ರಹ ಹೂಡಲು ಸಿದ್ಧವಾಗಿರುವವರು ಇದಕ್ಕಾದರೂ ಸತ್ಯಾಗ್ರಹ ಕೈಗೊಳ್ಳಲಿ ಎಂದು ನುಡಿದರು.

ಶ್ರೀ ಸಿ ಎಸ್ ನಾರಾಯಣರಾಯರು ಮಾತನಾಡಿ ಇತ್ತೀಚೆಗೆ ನಗರದಲ್ಲಿ ಅತಿವೃಷ್ಟಿಯಿಂದ ನೊಂದವರಿಗೆ ಪರಿಹಾರ ನೀಡುವ ಬಗ್ಗೆ ಪುರಸಭೆಯು ಸೂಕ್ತ ಪರಿಶೀಲನೆ ನಡೆಸಿ ಬೆಂಗಳೂರಿನಲ್ಲಿ ಮಾಡಿದಂತೆ ಇಲ್ಲಿಯೂ ಪರಿಹಾರ ನೀಡಿ ಅದಕ್ಕೆ ಸರ್ಕಾರದಿಂದಲೂ ಸಹಾಯ ಪಡೆಯಬೇಕೆಂದು ಸೂಚಿಸಿದರು ಇನ್‌ಫ್ಲುಯೆಂಜಾ ಖಾಯಿಲೆ ಬಂದವರಿಗೆ ಕೂಡಲೇ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕೆಂದು ಶ್ರೀ ಎಂ ಕೆ ಲಿಂಗಯ್ಯನವರು ತಿಳಿಸಿದರು

ಇತ್ತೀಚಿಗೆ ವಿಪರೀತ ಮಳೆಯಿಂದ ಕೇವಲ ಬಡವರೇ ಹೆಚ್ಚಾಗಿರುವ ಪ್ರದೇಶಗಳಾದ ಅರಮನೆ ಪದಾತಿ ದಳದ ಕ್ವಾರ್ಟರ್ಸ್ ಮುಂತಾದ ಕಡೆಗಳಲ್ಲಿ ಭಾರಿ ನಷ್ಟವಾಗಿದೆಯೆಂದೂ, ಕರುಣಾಪುರದಲ್ಲಿ ನಗರಾಭಿವೃದ್ಧಿ ಸಮಿತಿಯವರು ಕಟ್ಟಿಸಿದ ಮನೆಗಳಲ್ಲಿ ತಾರಸಿ ಛಾವಣಿಗಳು ಬಿರುಕು ಬಿಟ್ಟು ತೊಂದರೆಯಾಗಿದೆಯೆಂದೂ ಶ್ರೀ ಅಜೀಜ್ ಸೇಟರು ತಿಳಿಸಿದರು- ಅರಮನೆ ಪದಾತಿ ದಳದ ನಿವಾಸ ಗೃಹಗಳು ಪೌರಸಭೆಯ ಜವಾಬ್ದಾರಿಯಲ್ಲವೆಂದೂ, ಕರುಣಾಪುರದಲ್ಲಿ ಎಂಟು ವರ್ಷಗಳ ಹಿಂದೆ ಕಟ್ಟಿದ ಮಾದರಿ ಮನೆಗಳನ್ನು ಸರಿಯಾಗಿ ನೋಡಿಕೊಳ್ಳುವುದು ಮನೆಗಳನ್ನು ಕೊಂಡವರ ಜವಾಬ್ದಾರಿಯೆಂದೂ, ನಗರಾಭಿವೃದ್ಧಿ ಸಮಿತಿಯದಲ್ಲವೆಂದೂ ಶ್ರೀ ಎಸ್ ಲಿಂಗಣ್ಣನವರು ತಿಳಿಸಿದರು

ಹಲವಾರು ವರ್ಷಗಳಿಂದಲೂ ನಗರದಲ್ಲಿರುವ ಸರ್ಕಾರಿ ಕಟ್ಟಡಗಳ ಕಂದಾಯವು ವಸೂಲಾಗದಿರುವುದನ್ನು ಸದಸ್ಯರು ಟೀಕಿಸಿದರು ಕಂದಾಯವನ್ನು ಸರ್ಕಾರದವರು ಕೊಡದಿದ್ದರೆ ಪುರಸಭೆಯು ಅವರ ಕಟ್ಟಡಗಳನ್ನು ಜಪ್ತಿಮಾಡಬೇಕೆಂದು ಅಜೀಜ್ ಸೇಟರು ಸೂಚಿಸಿದರು ಅವುಗಳಿಗೆ ನೀರು ಮುಂತಾದ ಸೌಕರ್ಯಗಳನ್ನು ನಿಲ್ಲಿಸಬೇಕೆಂದು ಶ್ರೀ ಎಂ. ಕೆ. ಲಿಂಗಯ್ಯನವರು ಸಲಹೆಯಿತ್ತರು

ಕಮಿಷನರು ಮಾತನಾಡಿ-ಈ ಕಟ್ಟಡಗಳ ಮೇಲೂ ಕಂದಾಯ ವಿಧಿಸುವ ಅಧಿಕಾರವನ್ನು ಪುರಸಭೆಗೆ ಕೊಡಲು ಅನುಕೂಲವಾಗುವಂತೆ ೫೦ರಲ್ಲಿ ಕಾನೂನನ್ನು ತಿದ್ದುಪಡಿ ಮಾಡಲಾಯಿತು ಈಗ ಸರ್ಕಾರಿ ಇಲಾಖೆಗಳವರು ಅಂದಿನಿಂದ ಮಾತ್ರ ಕಂದಾಯ ಕೊಡುವುದಾಗಿ ಹೇಳುತ್ತಿದ್ದಾರೆ ಆದರೆ ೫೧ರಿಂದಲೂ ಕೊಡಬೇಕೆಂದು ಅವರನ್ನು ಒತ್ತಾಯಪಡಿಸಲಾಗುತ್ತಿದೆ ಈ ಬಗ್ಗೆ ಸದ್ಯದಲ್ಲಿಯೇ ತೀರ್ಮಾನವಾಗಬಹುದು ಎಂದು ತಿಳಿಸಿದರು

ಕಾನೂನುಬದ್ಧವಾಗಿ ರಹದಾರಿ ಪಡೆದು ಕಟ್ಟಡವನ್ನು ನಿರ್ಮಿಸಿದ್ದ ಬಡವರೊಬ್ಬರ ನಿವೇಶನಕ್ಕೆ ಪುರಸಭಾಧಿಕಾರಿಗಳು ನಗರ ದುಂಡಾವರ್ತಿಯಿಂದ ಗೋಡೆ ಕೆಡವಿಸಿದುದನ್ನು ಶ್ರೀಗಳಾದ ಶ್ರೀಕಂಠಶರ್ಮ ಮತ್ತು ಎ ಕೃಷ್ಣಮೂರ್ತಿರಾಯರು ಟೀಕಿಸಿದರು.

ಸಯ್ಯಾಜಿರಾವ್ ರಸ್ತೆಯಲ್ಲಿರುವ ವಿಕ್ಟೋರಿಯಾ ಬಾಲಿಕಾ ಪಾಠಶಾಲೆಯನ್ನು ಪುರಸಭೆಯು ವಹಿಸಿಕೊಳ್ಳುವ ಬಗೆ ಒಪ್ಪಿಗೆಯನ್ನು ನಿರಾಕರಿಸಿ ಸರ್ಕಾರದವರು ಬರೆದಿದ್ದ ಪತ್ರವನ್ನು ರಿಕಾರ್ಡು ಮಾಡಲಾಯಿತು

ಪ್ರಶ್ನೋತ್ತರ ಕಾಲದಲ್ಲಿ ಅಧ್ಯಕ್ಷರು ಮಾತನಾಡಿ, ಕಳೆದ ಅಕ್ಟೋಬರಿನಿಂದ ಏಪ್ರಿಲ್‌ವರೆಗೆ ಸುಮಾರು ೬೦೧ ಪಲ್ಲ ಅಕ್ಕಿಯನ್ನು ೧೫ ಫೇರ್ ಪ್ರೈಸ್ ಡಿಪೋಗಳ ಮೂಲಕ ಮಾರಾಟ ಮಾಡಲಾಯಿತೆಂದೂ ಇದರಿಂದ ಪುರಸಭೆಗೆ [illegible] ೧೧೪೦ ರೂ ಸಿಬ್ಬಂದಿ ವೆಚ್ಚ ಹೊರತು, ಒಟ್ಟು ೧೦,೪೬೭ ರೂ ಲಾಭ ಬಂದಿತೆಂದೂ ತಿಳಿಸಿದರು

ಕೃಷ್ಣರಾಜೇಂದ್ರ ಆಸ್ಪತ್ರೆಯ ಜನರಲ್ ವಾರ್ಡುಗಳಲ್ಲಿ ಸ್ಥಳಾವಕಾಶವಿಲ್ಲದೆ ಜನರಿಗೆ ತೊಂದರೆಯಾಗಿರುವುದನ್ನು ನಿವಾರಿಸಲು ಕೆಲವು ಹೊಸ ವಾರ್ಡುಗಳನ್ನು ಕಟ್ಟಿಸಬೇಕೆಂದು ಸರ್ಕಾರವನ್ನು ಕೋರುವ ಶ್ರೀ ದೊಡ್ಡತಿಮ್ಮಯ್ಯನವರ ಮತ್ತು ಪಡುವಾರಹಳ್ಳಿಯ ಬಚ್ಚಲಿನ ನೀರು ಕುಕ್ಕರಹಳ್ಳಿಕೆರೆಗೆ ಹೋಗುವುದನ್ನು ತಪ್ಪಿಸಲು ನಗರಾಭಿವೃದ್ಧಿ ಸಮಿತಿಯನ್ನು ಕೋರುವ ಶ್ರೀ ಶ್ರೀ ಚೌಡಯ್ಯನವರ ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದುವು

ದಸರಾ ಹಬ್ಬವನ್ನು ಆಚರಿಸಬೇಕೆಂಬ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿ ಅದನ್ನು ನಡೆಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು

ಇನ್ನುಮುಂದೆ ಪುರಸಭೆಯ ಸತ್ಕಾರ ಸಮಾರಂಭಗಳ ಖರ್ಚನ್ನು ೨೦೦ ರೂ ಗಳಿಗೆ ಮಿತಿಗೊಳಿಸಬೇಕೆಂಬ ಸರ್ಕಾರದ ಸೂಚನೆಯು ಪರಿಶೀಲನೆಗೆ ಬಂದಾಗ ಪುರಸಭೆಯ ಘನತೆಗೆ ತಕ್ಕಂತೆ ನಡೆಸಲು ಈ ಮೊತ್ತವು ಸ್ವಲ್ಪವೂ ಸಾಲದೆಂದೂ, ಆದ್ದರಿಂದ ಅದನ್ನೊಪ್ಪಲು ಸಾಧ್ಯವಿಲ್ಲವೆಂದೂ ಶ್ರೀ ಲಿಂಗಣ್ಣನವರು ಹೇಳಿದರು ಅದರಂತೆ ಸರ್ಕಾರಕ್ಕೆ ಬರೆಯಲು ನಿರ್ಧರಿಸಲಾಯಿತು

ರೆವಿನ್ಯೂ ಅಧಿಕಾರಿಗಳನ್ನಾಗಿ ಅಮಲ್ದಾರ್ ಶ್ರೀ ಎಂ ಬಂಗಾರಯ್ಯನವರನ್ನು ನೇಮಕ ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡಲಾಯಿತು

ವೈಸ್‌ರಾಯ್ ರಸ್ತೆಯ ಪೋಸ್ಟಾಫೀಸಿನಿಂದ ಪುರಸಭೆಯ ಈಜುವ ಕೊಳಕ್ಕೆ ನೀರು ಸರಬರಾಜಿಗಾಗಿ ಒಂದು ಪೈಪು ಹಾಕಲು ೪೦,೪೦೦ ರೂ ಅಂದಾಜನ್ನು ಸರ್ಕಾರಿ ಮಂಜೂರಾತಿಗಾಗಿ ಶಿಫಾರಸು ಮಾಡಲಾಯಿತು

ಪುರಸಭೆಯ ಮುಂದೆ ನೌಕರರ ಪ್ರದರ್ಶನ

ಬೇಡಿಕೆಗಳಿಗಾಗಿ ಒತ್ತಾಯ

ಮೈಸೂರು ೩೧

ನೆನ್ನೆ ಪುರಸಭಾಧಿವೇಶನವು ನಡೆಯುತ್ತಿದ್ದಾಗ ಹೊರಗಡೆ ಸುಮಾರು ೩೦೦ ಮಂದಿ ಗುಡಿಸುವವರೇ ಮುಂತಾದ ಪುರಸಭಾ ನೌಕರರು ಗ್ರಾಚ್ಯುಯಿಟಿ, ಹೆಚ್ಚು ಸಂಬಳ ಮುಂತಾದುವಕ್ಕಾಗಿ ಘೋಷಣೆಗಳನ್ನು ಮಾಡಿದರು ಅಧ್ಯಕ್ಷರು ಇನ್ನೊಂದ್ ತಿಂಗಳಿನಲ್ಲಿ ಅವರ ಬೇಡಿಕೆಗಳನ್ನು ಈಡೇರಿಸುವುದಾಗಿ ನುಡಿದರು ಕಮಿಷನರರು ಹೊರಗೆ ಹೋಗಿ ಪ್ರದರ್ಶನಕಾರರ ಬೇಡಿಕೆಗಳನ್ನು ಪರಿಶೀಲಿಸಲಾಗುತ್ತಿದೆಯೆಂದೂ, ಈಗ ಅವರು ಈ ರೀತಿಯ ಬಲಾತ್ಕಾರದಲ್ಲಿ ತೊಡಗಬಾರದೆಂದೂ ಸೂಚಿಸಿದ ಮೇಲೆ ಪ್ರದರ್ಶನಕಾರರು ಶಾಂತಿಯುತವಾಗಿ ಚದುರಿದರು

೩ ನೇ ತಾ॥ ಇಂಟರ್ ಮತ್ತು ಬಿ ಎ. ಪರೀಕ್ಷಾ ಫಲಿತಾಂಶ ಪ್ರಕಟಣೆ

ಬರುವ ತಿಂಗಳು ೩ ನೇ ತಾ॥ ಬೆಳಿಗ್ಗೆ ೯॥ ಗಂಟೆಗೆ ಇಂಟರ್‌ಮೀಡಿಯೆಟ್ ಆರ್ಟ್ಸ್, ಇಂಟರ್ ಸೈನ್ಸ್ ಮತ್ತು ಬಿ ಎ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸಲಾಗುವುದು

ಬೆಲೆ ಏರಿಕೆ ಮತ್ತು ಹೆಚ್ಚು ತೆರಿಗೆ ವಿರುದ್ಧ ಕಲ್ಕತ್ತದಲ್ಲಿ ಹರತಾಳ

ಪದಾರ್ಥಗಳ ಹೆಚ್ಚು ಬೆಲೆ ಮತ್ತು ಹೆಚ್ಚಿನ ತೆರಿಗೆಗಳನ್ನು ವಿರೋಧಿಸಲು ಪಶ್ಚಿಮ ಬಂಗಾಳದಲ್ಲೆಲ್ಲಾ ೨೪ ಗಂಟೆಗಳ ಶಾಂತಿಯುತ ಹರತಾಳ ನಡೆಸುವಂತೆ ವಾಮ ಪಕ್ಷಗಳು ಇತ್ತ ಕರೆಯ ಮೇರೆ ಕಲ್ಕತ್ತದಲ್ಲಿ ನೆನ್ನೆ ಹರತಾಳವನ್ನು ಆಚರಿಸಲಾಯಿತು ಎಲ್ಲಾ ವಾಹನ ಸಂಚಾರಗಳೂ ಬೆಳಗಿನಿಂದ ಬಂದಾಗಿದ್ದುವು ಟ್ರಾಂಗಳೂ ಕೆಲಸ ಮಾಡಲಿಲ್ಲ ಸಂಜೆ ೫ರ ಹೊತ್ತಿಗೆ ಸರ್ಕಾರಿ ಬಸ್ಸುಗಳು ಹೊರಟುವು ರೈಲುಗಳನ್ನು ಹಲವು ಕಡೆಗಳಲ್ಲಿ ತಡೆಯಲಾಯಿತು ರೇವು ಕೆಲಸಗಾರರೂ ಕೆಲಸಕ್ಕೆ ಹೋಗಲಿಲ್ಲ ನೀರು ಸರಬರಾಜು, ಅಗ್ನಿಶಾಮಕ ದಳ ಮತ್ತು ಆಸ್ಪತ್ರೆ ಕೆಲಸಗಾರರಿಗೆ ಹರತಾಳದಲ್ಲಿ ಭಾಗವಹಿಸದಿರಲು ಅವಕಾಶವಿತ್ತು ಮಾರ್ಕೆಟ್ಟುಗಳೆಲ್ಲವೂ ಬಂದಾಗಿದ್ದುವು ಮುಖ್ಯ ಸ್ಥಳಗಳಲ್ಲಿ ಪೊಲೀಸು ಕಾವಲನ್ನು ಹಾಕಲಾಗಿತ್ತು

ಹಾಲ್ಟ್ ಬೋರ್ಡ್ ಬಳಿ ಮೋಟಾರು ನಿಲ್ಲಿಸಿದ್ದಕ್ಕೆ ೨೦ ರೂ ದಂಡ

ಸೈಯದ್ ಅಬ್ರಾರ್ ಎಂಬುವನು ಹಾಲ್ಟ್ ಬೋರ್ಡ್ ಬಳಿ ಲಾರಿಯನ್ನು ನಿಲ್ಲಿಸಿದ್ದುದಕ್ಕಾಗಿ ಅವನಿಗೆ ನಗರದ ಪ್ರಥಮ ನ್ಯಾಯಾಧೀಶರು ನೆನ್ನೆ ೨೦ ರೂ ದಂಡವನ್ನು ವಿಧಿಸಿದರು

ಶ್ರೀರಂಗಪಟ್ಟಣದ ಒಕ್ಕಲಿಗರ ವಿದ್ಯಾರ್ಥಿನಿಲಯಕ್ಕೆ ಪ್ರವೇಶ

ಶ್ರೀರಂಗಪಟ್ಟಣದಲ್ಲಿರುವ ಕೆ ಎಚ್ ರಾಮಯ್ಯನವರ ಸ್ಮಾರಕ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಸೇರಬಯಸುವ ವಿದ್ಯಾರ್ಥಿಗಳು ಜೂನ್ ೮ನೇ ತಾರೀಕಿನೊಳಗೆ ನಿಲಯದ ಅಧ್ಯಕ್ಷ ಶ್ರೀ ಸಿ ಪರಸೇಗೌಡರಿಗೆ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ.

ಸಂಸ್ಥಾನಕ್ಕೆ ಕರ್ನಾಟಕವೆಂದು ಹೆಸರಿಡಬೇಕು

ಶಾಸನ ಸಭೆಗೆ ಖಾಸಗೀ ನಿರ್ಣಯ

ಸ್ವಂ ಸು ಸಂತೆ] ಬೆಂಗಳೂರು ೩೧

ಸಂಸ್ಥಾನಕ್ಕೆ ಕರ್ನಾಟಕ ಎಂಬ ಹೆಸರನ್ನಿಡಬೇಕೆಂದು ಹಲವು ಉತ್ತರ ಕರ್ನಾಟಕದ ಸದಸ್ಯರು ವಿಧಾನ ಸಭೆಗೆ ನಿರ್ಣಯವನ್ನು ಕಳುಹಿಸಿರುತ್ತಾರೆ. ಮತ್ತೊಬ್ಬ ಸದಸ್ಯರು ಕಳುಹಿಸಿರುವ ನಿರ್ಣಯದಲ್ಲಿ ವಿಧಾನ ಸೌಧದ ಮೇಲೆ ಬರೆದಿರುವ "ಸರ್ಕಾರಿ ಕೆಲಸವು ದೇವರ ಕೆಲಸ" ಎಂಬುವನ್ನು ತೆಗೆದುಹಾಕಬೇಕೆಂದು ತಿಳಿಸಲಾಗಿದೆ ೭೦೦ ಪ್ರಶ್ನೆಗಳನ್ನೂ ಮತ್ತು ೮೦ ನಿರ್ಣಯಗಳನ್ನೂ ಕಳುಹಿಸಲಾಗಿದೆ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ದಿನ ದೆಹಲಿಗೆ ತೆರಳಿದರು ಅವರು ರಾಷ್ಟ್ರೀಯ ಅಭಿವೃದ್ಧಿ ಮಂಡಲದ ಸಭೆಯಲ್ಲಿ ಭಾಗವಹಿಸುವರು

ದೆಹಲಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸ್ಮಾರಕ ವಸ್ತು ಪ್ರದರ್ಶನ

೧೮೫೭ರ ಸ್ವಾತಂತ್ರ್ಯ ಸಮರದ ಶತಮಾನೋತ್ಸವದ ಕೇಂದ್ರ ಸಮಿತಿಯು ಈ ವರ್ಷ ಆಗಸ್ಟ್ ತಿಂಗಳಲ್ಲಿ ಸಂಗ್ರಾಮಕ್ಕೆ ಸಂಬಂಧಿಸಿದ ಸ್ಮಾರಕ ವಸ್ತುಗಳ ಪ್ರದರ್ಶನವೊಂದನ್ನು ದೆಹಲಿಯಲ್ಲಿ ಏರ್ಪಡಿಸಲಿದೆ

ವಿಧಾನ ಪರಿಷತ್ತು ಮತ್ತು ಗವರ್ನರುಗಳ ರದ್ದಿಗಾಗಿ ಕರೆ

ಆಚಾರ್ಯ ಕೃಪಲಾನಿಯವರು ಲೋಕಸಭೆಯಲ್ಲಿ ಆಯವ್ಯಯ ಪಟ್ಟಿ ಬಗ್ಗೆ ಮಾತನಾಡುತ್ತಾ, ಸಂಸ್ಥಾನಗಳಲ್ಲಿ ಗವರ್ನರುಗಳ ಹುದ್ದೆಗಳನ್ನು ಮಿತವ್ಯಯದ ದೃಷ್ಟಿಯಿಂದ ರದ್ದು ಮಾಡಬೇಕೆಂದೂ, ವಿಧಾನ ಪರಿಷತ್ತುಗಳನ್ನು ವಿಸರ್ಜಿಸಬೇಕೆಂದೂ ಸಲಹೆ ಮಾಡಿದ್ದಾರೆ ಹಾಗೆ ಮಾಡದಿದ್ದರೆ ದಿನಕ್ಕೆ ಎರಡು ಹೊತ್ತು ಊಟ ಸಿಗದ ಬಡವರಿಗೆ ಹೆಚ್ಚಿನ ತೆರಿಗೆ ಹೊರಿಸಬೇಕಾಗುವುದೆಂದೂ ಹೇಳಿರುವರು.

ಚಾಮರಾಜ ಮೊಹಲ್ಲಾ [illegible]

ಕೃಷ್ಣಮೂರ್ತಿಪುರದಲ್ಲಿರುವ ಮೇಲ್ಕಂಡ ಸಭೆಗೆ ಸೇರಿದ ಶ್ರೀರಾಮ ಮಂದಿರದಲ್ಲಿ ಪ್ರತಿನಿತ್ಯವೂ ಸಂಜೆ ೫ ಗಂಟೆಯಿಂದ ೬-ಗಂಟೆಯವರೆವಿಗೂ ವೇ॥ ಬ್ರ॥ ಅಸ್ಥಾನ ಮಹಾವಿದ್ವಾನ್ [illegible] ದೀಕ್ಷಾಚಾರ್ಯರವರಿಂದ [illegible] ಪ್ರಬಂಧ ಪ್ರವಚನ ನಡೆಯುತ್ತಿದೆ ಈ ದಿವಸ ೬ ಗಂಟೆಯಿಂದ ೮-೩೦ ಘಂಟೆಯವರೆಗೂ ಶ್ರೀ ಪಿ ಆರ್ ಸುಬ್ಬರಾಮಯ್ಯನವರಿಂದ " [illegible] " ಎಂಬ ಹರಿಕಥಾ ಕಾಲಕ್ಷೇಪ ನಡೆಯುತ್ತದೆ.

ಅಲ್ಪ ಆದಾಯದವರ ವಸತಿ ಸೌಕರ್ಯಕ್ಕಾಗಿ ಸಂಸ್ಥಾನಕ್ಕೆ ೨ ಕೋಟಿ ರೂ

೧೯೫೭ನೇ ಮಾರ್ಚಿ ಕೊನೆಯವರೆಗೆ ಮೈಸೂರು ಸಂಸ್ಥಾನಕ್ಕೆ ೧ ಕೋಟಿ ೪ ಲಕ್ಷ ರೂ ಅನ್ನು ಕೇಂದ್ರ ಸರ್ಕಾರದವರು ಕಡಿಮೆ ವರಮಾನದ ವರ್ಗದವರ ವಸತಿ ಸೌಕರ್ಯಕ್ಕಾಗಿ ಸಾಲ ಕೊಟ್ಟಿರುತ್ತಾರೆ

ಹಿಂದುಳಿದ ವರ್ಗದವರ ಹಿತರಕ್ಷಣೆಗೆ ೯೧ ಕೋಟಿ ರೂ

ಹಿಂದುಳಿದ ವರ್ಗದವರ ಹಿತರಕ್ಷಣೆಗಾಗಿ ಸಿದ್ಧಗೊಳಿಸಲಾಗಿರುವ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೯೧ ಕೋಟಿ ರೂ ಗಳನ್ನು ಒದಗಿಸಲಾಗಿದೆ ಇದರಲ್ಲಿ ರಾಜ್ಯ ಸರ್ಕಾರಗಳು ಈ ಬಗ್ಗೆ ನಡೆಸುವ ಕಾರ್ಯಕ್ರಮಗಳಿಗಾಗಿ ೫೯ ಕೋಟಿ ರೂ , ಕೇಂದ್ರ ಸರ್ಕಾರದವರು ನಿರೂಪಿಸಿದ ಕಾರ್ಯಕ್ರಮಗಳಿಗಾಗಿ ಸುಮಾರು ೩೨ ಕೋಟಿ ರೂ ಗಳೂ ಸೇರಿವೆ

ಅಂಚೆ ಕಛೇರಿ ಹಣದೊಡನೆ ಪೋಸ್ಟ್ ಮಾಸ್ಟರ ಪರಾರಿ

ಗುಡಿಬಂಡೆ ಶಾಖಾ ಕಛೇರಿಯ ಪೋಸ್ಟ್ ಮಾಸ್ಟರ್ ಜಿ ಎಸ್ ರಾಯಪ್ಪ ಎಂಬಾತನು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ ೬೦೫ ರೂ ಗಳನ್ನು, ಮನಿಯಾರ್ಡರುಗಳ ೩೮೪ ರೂ ಗಳನ್ನೂ ತೆಗೆದುಕೊಂಡು ಪರಾರಿಯಾಗಿರುವುದಾಗಿ ಕೋಲಾರದ ಅಂಚೆ ಇನ್ಸ್ಪೆಕ್ಟರ್ ಶ್ರೀ ಜೀವರತ್ನಂರವರು ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ ಲೆಕ್ಕಪತ್ರಗಳನ್ನು ತಿದ್ದಿರುವುದಾಗಿ ವರದಿಯಾಗಿದೆ

ಖಾಸಗಿ ಕಾರನ್ನು ಬಾಡಿಗೆಗಾಗಿ ಓಡಿಸಿದುದಕ್ಕೆ ಜುಲ್ಮಾನೆ

ನಗರದ ಮಹಮದ್ ಜಾಫರ್ ಎಂಬಾತನು ತನ್ನ ಸ್ವಂತ ಕಾರಿನಲ್ಲಿ ಪ್ರಯಾಣಿಕರನ್ನು ಅನುಮತಿಯಿಲ್ಲದೆ ಕೊಂಡೊಯ್ದುದಕ್ಕಾಗಿ ಆತನಿಗೆ ೧೦೦ ರೂ ಜುಲ್ಮಾನೆಯನ್ನೂ ಅದೇ ರೀತಿಯ ಎರಡು ಅಪರಾಧಗಳಿಗಾಗಿ ಮಾಘು ಅಲಿಯಾಸ್ ಮಾದಯ್ಯ ಎಂಬಾತನಿಗೆ ಒಂದೊಂದು ಅಪರಾಧಕ್ಕೂ ತಲಾ ೫೦ ರೂ ದಂಡವನ್ನೂ ನೆನ್ನೆ ನಗರದ ಪ್ರಥಮ ನ್ಯಾಯಾಧೀಶರು ವಿಧಿಸಿದರು

ಸಿನಿಮಾದಲ್ಲಿ ಧೂಮಪಾನಕ್ಕಾಗಿ ೧೦ ರೂ ದಂಡ

ನಗರದ ಮೋತಿಲಾಲ್ ಚಿತ್ರಮಂದಿರದಲ್ಲಿ ಬೀಡಿ ಸೇದಿದರೆಂಬ ಆಪಾದನೆ ಮೇಲೆ ನಗರದ ಪ್ರಥಮ ನ್ಯಾಯಾಧೀಶರು ನೆನ್ನೆ ಮಹಮದ್ ಮತ್ತು ಹಮೀದ್ ಎಂಬುವರಿಗೆ ತಲಾ ೧೦ರೂ ಜುಲ್ಮಾನೆಯನ್ನು ವಿಧಿಸಿದರು

ವಿವಾಹ ಮಹೋತ್ಸವ

ವೈದ್ಯಬಂಧು ಪತ್ರಿಕಾ ಸಂಪಾದಕರೂ ಆಯುರ್ವೇದ ವೈದ್ಯರೂ ಆದ ಪಂಡಿತ ಕೆ ಪಿ ಪುಟ್ಟಣಿಕರ ಕುಮಾರಿ ಸೌ|| ಸರೋಜಿನಿಯನ್ನು ಲಕ್ಷ್ಮೀನರಸಿಂಹ ಪ್ರೆಸ್ಸಿನ ಮಾಲೀಕರಾದ ಶ್ರೀ ಡಿ ನಂದರಾಯರ ಪುತ್ರ ಶ್ರೀ ಎ. ಗುರುರಾಜರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವು ಜರುಗಿತು

GREE GAYATHRI
TALKIES
Grand Gala Opening
On 1—6- 1957
Alfred Hitchcock's
THE WRONG MAN
Starring - Henry Fonda &
Vera Miles

ಅಂಚೆ ಕಾರ್ಡಿಗೆ ಪುನಃ ೯ ಕಾಸು?

ಕೇಂದ್ರ ಸರ್ಕಾರದವರು ವಿಧಿಸಲಾಲೋಚಿಸಿರುವ ಹೊಸ ತೆರಿಗೆಗಳ ಪೈಕಿ ಹಲವುಗಳಲ್ಲಿ ರಿಯಾಯಿತಿ ತೋರಲಾಗುವುದೆಂದು ವರದಿಯಾಗಿದೆ ಅಂಚೆ ಕಾರ್ಡಿನ ಬೆಲೆಯು ೧ ಆಣೆ ಬದಲು ಮೊದಲು ಇದ್ದಂತೆಯೇ ೯ ಕಾಸು ಆಗುವುದೆಂದು ಹೇಳಲಾಗಿದೆ ೩೦ ಮೈಲಿ ರೈಲು ಪ್ರಯಾಣಕ್ಕೆ ತೆರಿಗೆ ವಿಧಾಯಕ ಮಾಡುವುದಿಲ್ಲವೆಂದೂ, ೩೧ ಮೈಲಿಗಿಂತ ಹೆಚ್ಚಿನ ದೂರದ ಪ್ರಯಾಣಕ್ಕೆ ಶೇಕಡ ೧೦ ರಂತೆ ವಿಧಿಸಲಾಗುವುದೆಂದೂ ಹೇಳಲಾಗಿದೆ ವರಮಾನ ತೆರಿಗೆಯಲ್ಲೂ ಸ್ವಲ್ಪ ರಿಯಾಯಿತಿ ಕೊಡಬಹುದು

ಶೀತ ಜ್ವರ ತಡೆಯಲು ಎಲ್ಲಾ ಕ್ರಮ

ರಾಜ್ಯ ಸಭೆಯಲ್ಲಿ ಮೊನ್ನೆ ಆರೋಗ್ಯ ಮಂತ್ರಿ ಡಿ ಪಿ ಕರ್ಮಾರ್ಕರ್‌ರವರು ಮಾತನಾಡಿ, ಶೀತ ಜ್ವರವನ್ನು ತಡೆಯಲು ಎಲ್ಲಾ ಕ್ರಮಗಳನ್ನೂ ಕೈಗೊಂಡಿರುವುದಾಗಿ ತಿಳಿಸಿದರು ಇದುವರೆಗೆ ತೆಗೆದುಕೊಂಡ ಕ್ರಮಗಳು ಯಶಸ್ವಿಯಾಗಿರುವುದಾಗಿಯೂ ಅವರು ಹೇಳಿದರು ಕಲ್ಕತ್ತಾ ಮತ್ತು ಇತರ ಪಟ್ಟಣಗಳಲ್ಲೂ ಎಚ್ಚರಿಕೆ ಕ್ರಮವನ್ನು ಪಶ್ಚಿಮ ಬಂಗಾಳಾ ಸರ್ಕಾರದವರು ತೆಗೆದುಕೊಂಡಿರುವುದಾಗಿಯೂ ಅವರು ನುಡಿದರು

ರಾಣಾ ಪ್ರತಾಪ ಸಿಂಹರ ಜಯಂತಿ

ಮೈಸೂರಿನಲ್ಲಿರುವ ರಾಜಪುತ್ರ ಸಭಾ ಶಾಖೆಯವರು ನಾಳೆ ಸಂಜೆ ೬ ಗಂಟೆಗೆ ನಜರ್‌ಬಾದಿನ ರಾಮಮಂದಿರದಲ್ಲಿ ಮಹಾರಾಣಾ ಪ್ರತಾಪ ಸಿಂಹರವರ ಜಯಂತಿಯನ್ನು ನೆರವೇರಿಸುವರು ಪೌರಸಭಾ ಸದಸ್ಯರಾದ ಡಾ|| ಬಿ ಜಿ ದಾಸರು ಅಧ್ಯಕ್ಷತೆ ವಹಿಸುವರು ರಾಜಪುತ್ರ ಮಹಾಶಯರು ಇದನ್ನೇ ಆಹ್ವಾನವೆಂದು ಮನ್ನಿಸಿ ಅದರಲ್ಲಿ ಭಾಗವಹಿಸುವಂತೆ ಕೋರಲಾಗಿದೆ

ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರ ಸಭೆ

ನಗರದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರ ಸಭೆಯು ನಾಳಿದ್ದು ಸಂತೆಪೇಟೆ ಮೋತಿಖಾನೆ ಕಟ್ಟಡದಲ್ಲಿ ನಡೆಯುತ್ತದೆ ಕಾರ್ಯಕರ್ತರು ಇದೇ ಆಹ್ವಾನವೆಂದು ತಿಳಿದು ಬರಬೇಕಾಗಿ ಕೋರಲಾಗಿದೆ

ಪರೀಕ್ಷೆ ! — ಪರೀಕ್ಷೆ !
ವಿದ್ಯಾರ್ಥಿಗಳ ಅವಶ್ಯಕತೆಗಳನ್ನೆಲ್ಲಾ
ಸುಲಭ ದರದಲ್ಲೇ ಒದಗಿಸಲೋಸುಗ
ಶೀಘ್ರದಲ್ಲೇ ತೆರೆಯಲಾಗುವ
ಶ್ರೀ ಶಾರದಾ ಭಂಡಾರ

Model Tutorial Institute
D Banumiah s High School
Buildings Mysore
NOTIFICATION

The Coaching Class for the S S L C Supplementary Examination has started working Fees for the whole term is Rs 18 only

Join immediately

B Seshagiri Rao,
Organiser

ಆರು ಜಲಜನಕ ಬಾಂಬುಗಳಿಂದ ಬ್ರಿಟನ್ನಿನ ನಾಶ ಸಾಧ್ಯ

ಬ್ರಿಟನ್ನಿನ ಕಾರ್ಮಿಕ ನಾಯಕ ಅನೂರಿನ್ ಬಿವಾನರು ಅಣುಶಸ್ತ್ರಗಳ ನಿಷೇಧವಾಗಬೇಕೆಂದು ಮನವಿ ಮಾಡುತ್ತಾ, ಆರು ಜಲಜನಕ ಬಾಂಬು ಹಾಕಿದರೆ ಅರ್ಧ ಗಂಟೆಯಲ್ಲಿ ಇಡೀ ಬ್ರಿಟನ್ನು ನಿರ್ನಾಮವಾಗುವುದೆಂದು ತಿಳಿಸಿರುತ್ತಾರೆ. ಅದೇ ಕಾಲದಲ್ಲಿ ರಷ್ಯವನ್ನು ನಾಶಪಡಿಸಬಹುದಲ್ಲವೇ ಎಂದು ಅವರನ್ನು ಪ್ರಶ್ನಿಸಿದಾಗ " ಅದು ಸ್ವಲ್ಪಮಟ್ಟಿನ ಸಮಾಧಾನ " ತಂದೀತೆಂದು ವ್ಯಂಗ್ಯವಾಗಿ ನುಡಿದರು

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೪೯ ೦೦	೪೬ ೦೦
ರತ್ನಚೂಡಿ	೪೩ ೭೫	
ರಾಗಿ	೬೩ ೫೦	೪೯ ೭೫
ಜೋಳ	೪೯ ೧೨	೪೯ ೬೭
ಕಡಲೆಕಾಯಿ	೧೫ ೬೨	೨೩ ೦೦
ಹುಚ್ಚೆಳ್ಳು	೪೬ ೫೦	
ಹೊಂಗೇಬೀಜ	೨೬ ೧೨	೨೭ ೫೦
ಎಳ್ಳು	೯೦ ೪೭	
ಹುರುಳಿ	೪೧ ೨೫	೪೩ ೫೦
ಹೆಸರು	೫೩ ೧೨	೫೭ ೦೦
ಹಲಸಂದೆ	೪೬ ೦೦	೫೧ ೪೭
ಅವರೆ	೪೭ ೪೭	೫೩ ೧೨
ಉದ್ದು	೬೪ ೨೫	
ಸೊಣದಿನ ಬೀಜ	೪೧ ೦೦	
ಹುಣಸೇಬೀಜ	೫ ೦೦	೬ ೨೫
ಹುಣಸೇಹಣ್ಣು	೨ ೭೫	೩ ೮೭
ಮೆಣಸಿನಕಾಯಿ	೧೭ ೦೦	
ತೆಂಗಿನಕಾಯಿ	೧೯೦ ೫೦	೨೫೧ ೫೦

ಶ್ರೀ
ಕೃಷ್ಣ ಮಿಲ್ಕ್ ಡೈರಿ
ತಾ|| 1-6-57ನೇ ಶನಿವಾರದಿಂದ
ತೆರೆಯಲಾಗುವುದು
ಇಲ್ಲಿ ಅಪ್ಪಟವಾದ
ಹಸುವಿನ ಹಾಲು
ದೊರೆಯುತ್ತೆ
ಪೌಂಡು 1ಕ್ಕೆ 0-3 6
ಶ್ರೀ ಕೃಷ್ಣ ಮಿಲ್ಕ್ ಡೈರಿ,
94 ಕಲ್ಯಾಣ ಭವನ ಬಿಲ್ಡಿಂಗ್ಸ್
[illegible] ರೋಡ್ ಮೈಸೂರು
ಮನೆಗಳಿಗೂ ಉಚಿತ ಸರಬರಾಜು ಉಂಟು

Edited Printed and Published by
A. R. Nagarajan at Sadhvi Press,
[illegible] Road, Mysore

ವೆಂಕಟನಾರಾಯಣಶಾಸ್ತ್ರಿಗಳ ನಿಧನ

ಡಿ. ಬನುಮಯ್ಯ ಪ್ರೌಢಶಾಲೆಯ ಹೆಡ್ಮಾಸ್ಟರ್ ಶ್ರೀ ಎನ್ ವೆಂಕಟನಾರಾಯಣಶಾಸ್ತ್ರಿಗಳವರು ಪಾರ್ಶ್ವವಾಯು ರೋಗದ ಪರಿಣಾಮವಾಗಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಹೊಯ್ಸಳ ಕರ್ನಾಟಕ ಸಂಘದ ಕಾರ್ಯದರ್ಶಿಗಳೂ, ಕೃಷ್ಣರಾಜೇಂದ್ರ ಸೊಸೈಟಿ ಡೈರೆಕ್ಟರೂ ಆಗಿದ್ದರು. ಅವರಿಗೆ ಮೂವರು ಗಂಡು ಮತ್ತು ಮೂವರು ಹೆಣ್ಣು ಮಕ್ಕಳಿರುವರು

THE NATIONAL INSTITUTE OF COMMERCE, Old Mysore Bank Rd Mysore CLASSES in TYPEWRITING & SHORT-HAND in full swing Join Now

Sarada Vilas College,
MYSORE

Pending sanction by the University, applications for seats in the Pre-University class in Arts and Commerce also will be received In case these new courses are not introduced the registration fee will be refunded

Honorary Secretary

The Mysore Silk Filatures, Limited
T. Narasipur

NOTICE is hereby given that those ex employees of the Company who have amounts to their credit in the Provident Fund Account of the Company may notify to the Company applying for return of the amounts to them on, or before 30th June 1957 and receive payments

For the Mysore Silk Filatures Ltd
A Samba Murthy,
Managing Director

T Narasipur,
29th May 1957

VIDYA TUTORIAL COLLEGE
Dalvoy High School Buildings Mysore
THE BEST INSTITUTE IN MYSORE
Efficient Coaching — Record Results
SPECIAL SECTION FOR
PRE-UNIVERSITY COURSE OF 1958
AND
INTER, B A , B Sc , B COM : All Parts - All Subjects
For Supplementary Examination of September 1957
LADIES ALSO ADMITTED
Enquiries 9 to 10 30 A M & 5-30 to 8-30 P M

ಪ್ರಭು ದೇವಾ ಥಿಯೇಟರ್
(ಪದ್ಮಾ ಟಾಕೀಸ್)
31 5 57ನೇ ಶುಕ್ರವಾರ : ಅಮೋಘವಾದ 50 ನೆಯ ದಿನ : ಪ್ರತಿ ದಿನ ಮೂರು ಪ್ರದರ್ಶನಗಳು
★ **ಮಾಯಾ ಬಜಾರ್** ★
(ಶಶಿರೇಖಾ ಪರಿಣಯ)
ಪಾತ್ರ —ಆರ್ ಗಣೇಶ್, ಸಾವಿತ್ರಿ, ಎನ್ ಟಿ. ರಾಮರಾವ್, ಎಸ್. ವಿ. ರಂಗರಾವ್,
ತಂಗವೇಲು, ಮುತ್ತುಲಕ್ಷ್ಮಿ, ಕರುಣಾನಿಧಿ, ಏಳುಮಲೈ, ಋಷ್ಯೇಂದ್ರಮಣಿ

ಸ್ಟ್ಯಾಂಡರ್ಡ್ ಮಿಲ್ಕ್ ಡೈರಿ
ಕಾಲೇಜ್ ಪಕ್ಕ, ([illegible]) ನಾರಾಯಣಶಾಸ್ತ್ರಿ ರೋಡ್, ಮೈಸೂರು
1-6-57 ರಿಂದ 10-6-57 ರಲ್ಲಿ ಕೂಪನ್ ಕೊಳ್ಳುವವರಿಗೆ ಪೌಂಡು ಒಂದಕ್ಕೆ 0-3-3 ರಂತೆ ಅಪ್ಪಟ ಹಸುವಿನ ಹಾಲನ್ನು (ಆಗತಾನೆ ಕರೆದ ಹಾಲು) ಕೊಡಲಾಗುತ್ತೆ ಅನೇಕರು ಮತ್ತು, ಹೇಳ ಬಹಳ ಜಾಸ್ತಿ ಬೆಲೆಯನ್ನು ತೆಗೆದುಕೊಳ್ಳುತ್ತಾರೆ
ನಮ್ಮಲ್ಲಿ ಪ್ರತಿಯೊಂದು ವಿಚಾರದಲ್ಲೂ ಪರೀಕ್ಷಿಸಿ ಕೂಪನ್ನುಗಳನ್ನು
ಮೊದಲೆ ಕೊಂಡು [illegible]

ಲಕ್ಷ್ಮಿ ★ 31—5—57 ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ · ಪ್ರತಿದಿನ ಮೂರು ಆಟಗಳು
ಪದ್ಮಿನಿ, ಎಂ ಜಿ ರಾಮಚಂದ್ರನ್, ಲಲಿತ, ವೀರಪ್ಪ, ನಂಬಿಯಾರ್, ಫ್ರೆಂಡ್ ರಾಮಸ್ವಾಮಿ, ಎಂ ಜಿ ಚಕ್ರಪಾಣಿ ಮತ್ತು ಇತರರು ನಟಿಸಿರುವ
ನೀಲ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ ★ **ರಾಜ ರಾಜನ್** ★ ಅತ್ಯಂತ ಸಾಹಸಮಯ ಮತ್ತು ರೋಮಾಂಚಕಾರಿ ಚಿತ್ರ (ಜೆನಿತ್ ಮೂವೀ ರಿಲೀಸ್)